

ಸಂಪುಟ ೩೭

ಇತಿಹಾಸ ದರ್ಶನ ೨೦೨೨

ಸಂಪಾದಕರು

ರಾಜಶೇಖರ್ ಕೆ.ಎಲ್.

ಸಂಧ್ಯಾ ವಿ.

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಬೆಂಗಳೂರು

ಪಿಎಚ್.ಡಿ. ಪ್ರಶಸ್ತಿ ಪುರಸ್ಕೃತ ಅಕಾದೆಮಿಯ ಸದಸ್ಯರು–೨೦೨೧, ಬೆಂಗಳೂರು



ಡಾ. ಮಹೇಶ ಬ. ಅಂಗಡಿ, ಡಾ. ಮಂಜುನಾಥ ಕೆ, ಡಾ. ಸ್ಮಿತಾರೆಡ್ಡಿ ಡಿ, ಡಾ. ಮಂಜುಳಾ ಎ.ಸಿ, ಡಾ. ಶಿವರಾಜ ಜಿ.ಓ, ಡಾ. ದೇವರಾಜು ಎಸ್.ಎಂ., ಡಾ. ಆರ್. ಶೇಜೇಶ್ವರ, ಡಾ. ರಾಜಾರಾಮ್ ಬಿ.ಸಿ, ಡಾ. ಪ್ರಸನ್ನಕುಮಾರ್ ಎಸ್.ಆರ್, ಡಾ. ಓಜರಾಬಿ ಶರೀಫಸಾಬ ನದಾಫ, ಡಾ. ವಿಜಯಕುಮಾರ್ ಎಸ್, ಡಾ. ಸೀತಾರಾಮ ಪಿ., ಡಾ. ಯುವರಾಜು ಆರ್, ಡಾ. ಮಮತರಾಣಿ, ಡಾ. ವೇದಾವತಿ ಎಸ್, ಡಾ. ಗಂಗಾಂಬಿಕೆ ಎಸ್, ಡಾ. ಎಸ್. ಎಚ್. ಗೋವರ್ಧನ, ಡಾ. ಎಚ್.ಜಿ. ರಾಜೇಶ್, ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕುಳಿತವರು: ಡಾ. ದೇವರಕೊಂಡಾರೆಡ್ಡಿ, ಡಾ. ಗುರುಮೂರ್ತಿ ಪೆಂಡಕೂರು, ಡಾ. ಆರ್. ಗೋಪಾಲ್, ಶ್ರೀ ವಿ. ನಾಗರಾಜ್, ಡಾ. ಕೆ.ಆರ್. ಗಣೇಶ

ಇತಿಹಾಸ ದರ್ಶನ

ITIHASA DARSANA - *Volume 37* / 2022

ಸಂಪುಟ ೩೭ / ೨೦೨೨

೨೦೨೨ರ ಫೆಬ್ರವರಿಯಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೆಯ ವಾರ್ಷಿಕ ಸಮ್ಮೇಳನವನ್ನು ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ಸಂದರ್ಭದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ರಾಜಶೇಖರ್ ಕೆ.ಎಲ್.

ಸಂಧ್ಯಾ ವಿ.

KARNATAKA ITIHASA ACADEMY
कर्नाटक इतिहास अकादमी

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - ***Volume 37* / 2022**

The volume of the scholarly papers presented and
Proceedings of the 35th Annual Conference
held at bengaluru on 19th to 21th February 2022

The Karnataka Ithihasa Academy (Regd.,)
B.M. Sri Pratistana, 3rd Main Road,
Narasimharaja Colony, Bengaluru - 560 019.

Published by : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

karnatakaitihasaacademy25@gmail.com

www.karnatakaitihasaacademy.org

Edited by : **Rajashekar K.L.**
Sandhya V.

ಪ್ರಕಟಣೆ: ೨೦೨೨

ಪುಟಗಳು : xxviii+ 572 + Col. Photos xvi

Pages : xxviii+ 572 + Col. Photos xvi

Price : ₹ **900**

ಬೆಲೆ : ₹ ೯೦೦

ISBN No. 978-81-950402-0-9

ಆರ್ಥಿಕ ನೆರವು

* ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
* ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.
* ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ಸಂಸ್ಥಾನಮಠ, ಹೊಸಪೇಟೆ.

Printed at

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



॥ ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು ॥



ಮಾನವ ಧರ್ಮಕ್ಕೆ ಜಯವಾಗಲಿ ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥



ಸಾಹಿತ್ಯ-ಸಂಸ್ಕೃತಿ ಸಂವರ್ಧಿಸಲಿ ।
ಶಾಂತಿ-ಸಮೃದ್ಧಿ ಸರ್ವರಿಗಾಗಲಿ ॥



ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೆಹೊನ್ನೂರು-೫೭೭೧೧೨ ಚಿಕ್ಕಮಗಳೂರು ಜಿಲ್ಲೆ ಕರ್ನಾಟಕ ರಾಜ್ಯ

ದಿನಾಂಕ : 08.11.2022 **ವಾಸ್ತವ್ಯ : ಬಾಳೆಹೊನ್ನೂರು**

ಶುಭಾಶೀರ್ವಾದ ಸಂದೇಶ

ಜೀವನಾಧಾರಕ್ಕೆ ನೀರು, ಅನ್ನ, ಗಾಳಿ ಮತ್ತು ಒಳ್ಳೆಯ ಮಾತು ಮುಖ್ಯ. ಉತ್ತಮ ಚಿಂತನೆಗಳು ನಮ್ಮ ಬದುಕಿನ ಜೊತೆಗೆ ಪರರ ಬದುಕಿಗೂ ಬೆಳಕಾಗಬಲ್ಲವು. ಅನಾರೋಗ್ಯಕರ ಸಮಾಜಕ್ಕೆ ಅಡಿಗಲ್ಲು ಇಡುವ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಮನುಷ್ಯ ಜಾಗೃತಗೊಂಡು ಆದರ್ಶ ಸಂಸ್ಕೃತಿ ಉಳಿಸಲು ಶ್ರಮಿಸಬೇಕಾಗುತ್ತದೆ. ಸ್ವಾರ್ಥಕ್ಕಾಗಿ ಆದರ್ಶ ಮೌಲ್ಯಗಳನ್ನು ನಾಶ ಮಾಡಬಾರದು. ಒಳ್ಳೆಯದಕ್ಕಿಂತ ಕೆಟ್ಟದ್ದು ಬಹು ಬೇಗ ಬೆಳೆಯುತ್ತದೆ. ಅಷ್ಟೇ ಬೇಗನೇ ನಾಶವಾಗುತ್ತದೆ. ಜೀವನದಲ್ಲಿ ಮನುಷ್ಯ ನಂಬಿಕೆ ವಿಶ್ವಾಸಗಳನ್ನು ಕಳೆದುಕೊಳ್ಳಬಾರದು. ಯಾವ ಸಂಪತ್ತಿಗಾಗಿ ಜೀವಜಗತ್ತು ಬದುಕುತ್ತಿದೆಯೋ ಆ ಸಂಪತ್ತಿನ ಪ್ರಾಪ್ತಿಗಾಗಿ ಶ್ರಮಿಸಬೇಕಾಗುತ್ತದೆ. ಜನ ಸಮುದಾಯದಲ್ಲಿ ಧರ್ಮಪ್ರಜ್ಞೆ, ಸ್ವಾಭಿಮಾನ, ಕರ್ತವ್ಯನಿಷ್ಠೆ, ಸಾಮರಸ್ಯ ಶಾಂತಿಯ ಸ್ಥಾಪನೆಗಾಗಿ ನಿರಂತರ ಶ್ರಮಿಸುವ ಮನೋಭಾವ ಬೆಳೆದುಕೊಂಡು ಬರುವಂತಾಗಬೇಕು. ಈಶ ನಿರ್ಮಿತವಾದ ಈ ಪ್ರಪಂಚದಲ್ಲಿ ಇರುವುದೆಲ್ಲವೂ ಅಮೂಲ್ಯ ಸಂಪತ್ತು. ಚಿನ್ನವಿಲ್ಲದೇ ಮನುಷ್ಯ ಬದುಕಬಹುದು. ಆದರೆ ಅನ್ನವಿಲ್ಲದೇ ಬದುಕಲು ಸಾಧ್ಯವಾಗದು. ಶ್ರದ್ಧಾವಂತರಾದ ಭಾರತೀಯರು ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಶಿಲೆಯಲ್ಲಿ ದೇವರನ್ನು ಕಂಡು ಪೂಜಿಸಿದವರು. ದೇಹ ಮನ ಬುದ್ಧಿ ಕೈಕಾಲು ಇವುಗಳೆಲ್ಲವೂ ನಿಜವಾದ ಸಂಪತ್ತು. ಕೈ ಬೆರಳುಗಳು ಇಲ್ಲದಿದ್ದರೆ ಉಂಗುರ ಇಡಲು ಹೇಗೆ ಸಾಧ್ಯ. ಕಿಡಕಿ ಬಾಗಿಲುಗಳನ್ನು ತೆರೆದಾಗ ಶುದ್ಧವಾದ ಗಾಳಿ ಬೆಳಕು ಬೀಳುವಂತೆ ಮನದ ಬಾಗಿಲು ಕಿಡಕಿ ತೆರೆದರೆ ದೇವರ ಕಾರುಣ್ಯದ ಬೆಳಕು ಬೀಳುತ್ತದೆ. ಮನುಷ್ಯನ ಮನಸ್ಸೆಂಬ ಚಂಚಲ ಅಲೆಯುಳ್ಳ ಹೊಯ್ದಾಟವನ್ನು ಶಾಂತ ಪ್ರಶಾಂತಗೊಳಿಸುವ ಮಾರ್ಗವೇ ಆಧ್ಯಾತ್ಮವಾಗಿದೆ.

ಜೀವನದಲ್ಲಿ ನಿರ್ದಿಷ್ಟ ಗುರಿಯಿದ್ದು ಅದರ ಸಾಧನೆಗಾಗಿ ನಿರಂತರ ಶ್ರಮಿಸಬೇಕು. ಸಹನೆ ಶಾಂತಿ ಸಾವಧಾನವಿಲ್ಲದ ಮನುಷ್ಯ ಏನನ್ನೂ ಸಾಧಿಸಲಾರ. ಕಷ್ಟದಲ್ಲಿರುವಾಗ ತಾಳ್ಮೆ, ಸುಖದಲ್ಲಿರುವಾಗ ವಿನಯವು ಅವಶ್ಯಕ. ಸುಂದರ ಬದುಕಿಗೆ ಬೇಕಾದ ತಾಳ್ಮೆ ವಿನಯಗಳನ್ನು ಗಳಿಸಿಕೊಂಡು ಬಾಳಿದರೆ ಜೀವನ ಸಾರ್ಥಕಗೊಳ್ಳುತ್ತದೆ. ಸಾಧಿಸುವ ಉತ್ಕಟ ಬಯಕೆಯಿದ್ದರೆ ಸಾಕು. ಆ ಹಾದಿಯಲ್ಲಿ ಬರುವ ಮುಳ್ಳುಗಳು ಹೂವಾಗುತ್ತವೆ. ಕಠಿಣ ಶ್ರಮ ಶ್ರದ್ಧೆ ಮತ್ತು ಸಾಮಾನ್ಯ ಜ್ಞಾನಗಳು ಸುಗಮ ಜೀವನದ ಯಶಸ್ವಿ ಸೂತ್ರಗಳು. ಸತ್ಯವನ್ನು ಯಾರು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಸತ್ಯ ನಮ್ಮನ್ನು ಬದಲಾಯಿಸುತ್ತದೆ ಎಂಬುದನ್ನು ಮರೆಯಬಾರದು. ಕರ್ನಾಟಕ ಇತಿಹಾಸ ಅಕಾದೆಮಿ(ರಿ.) ಕಳೆದ ೩೭ ವರುಷಗಳಿಂದ ಇತಿಹಾಸ ಮತ್ತು ಸಂಸ್ಕೃತಿಯ ಸಂವರ್ಧನೆಗೆ ಸದಾ ಶ್ರಮಿಸುತ್ತಾ ಬಂದಿದೆ. ಆಧುನಿಕತೆ ಮತ್ತು ವೈಚಾರಿಕತೆಯ ಇಂದಿನ ಯಾಂತ್ರಿಕ ಬದುಕಿನಲ್ಲಿ ಮನುಷ್ಯ ಇತಿಹಾಸ ಮತ್ತು ಸಂಸ್ಕೃತಿ ಮರೆತು ನಡೆಯುತ್ತಿರುವ ಕಾರಣ ಅನೇಕ ಆತಂಕಗಳಿಗೆ ಬಲಿಯಾಗುತ್ತಿದ್ದಾನೆ. ಮನುಷ್ಯ ಎಷ್ಟೇ ಬೆಳೆದು ಬಲಗೊಂಡರೂ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ ಮರೆಯಬಾರದು. ಇದುವರೆಗೆ ೩೬ ಸಂಪುಟಗಳು ಪ್ರಕಟಗೊಂಡು ಜನ ಮನ್ನಣೆಗೆ ಕಾರಣವಾಗಿವೆ. ಉದಯೋನ್ಮುಖ ಸಾಹಿತ್ಯ ಇತಿಹಾಸ ಸಂಶೋಧಕರ ಕ್ರಿಯಾಶೀಲತೆಯನ್ನು ಹೆಚ್ಚಿಸಿದೆ. ಇಂತಹ ಅಮೂಲ್ಯ ಸಂಪುಟ ಹೊರತರಲಿರುವ ಕರ್ನಾಟಕ ಇತಿಹಾಸ ಅಕಾದೆಮಿಗೆ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ ಪ್ರತಿ ವರ್ಷ ೨೫,೦೦೦/- ರೂಪಾಯಿಗಳನ್ನು ೨೦೦೫ರಿಂದ ಆಶೀರ್ವಾದ ಮಾಡುತ್ತಲೇ ಬಂದಿದೆ. ಈ ವರ್ಷದ ಇತಿಹಾಸ ಸಂಪುಟಕ್ಕೆ ೨೫,೦೦೦/- ರೂಪಾಯಿಗಳನ್ನು ಅನುಗ್ರಹಿಸಿದೆ. ಅಕಾದೆಮಿ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಉಪಾಧ್ಯಕ್ಷರಾದ ಡಾ. ಎಂ.ಜಿ. ನಾಗರಾಜ್ ಹಾಗೂ ಇನ್ನಿತರರ ಪ್ರಾಮಾಣಿಕ ಪ್ರಯತ್ನವನ್ನು ಎಂದೆಂದಿಗೂ ಮರೆಯಲಾಗದು. ಅವರು ಕೈಕೊಂಡ ಕರ್ನಾಟಕ ಇತಿಹಾಸ ಸಂಸ್ಕೃತಿಯ ಸಂವರ್ಧನಾ ಕಾರ್ಯ ನಿರಂತರ ಸಾಗಿಕೊಂಡು ಬರುವಂತಾಗಲಿ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ

ಶ್ರೀ ರಂಭಾಪುರಿ ಜಗದ್ಗುರುಗಳು, ಬಾಳೆಹೊನ್ನೂರು

ಬಾಳೆಹೊನ್ನೂರು 577 112

ವಾರ್ಷಿಕ ನಿಧಿ ರೂ. ಇಪ್ಪತ್ತೈದು ಸಾವಿರ ಕೊಡುಗೆ ಆರಂಭಿಸಿದ ವರ್ಷ - 2005



ಇತಿಹಾಸ ದರ್ಶನ ಸಂಪುಟ ೩೬ರ ಬಿಡುಗಡೆ ಸಮಾರಂಭ, ದಿ ಮಿಥಿಕ್ ಸೊಸೈಟಿ, ಬೆಂಗಳೂರು

ಎಡದಿಂದ ಬಲಕ್ಕೆ : ಡಾ. ದೇವರಕೊಂಡಾರೆಡ್ಡಿ, ಡಾ. ಆರ್. ಗೋಪಾಲ್, ಶ್ರೀ ವಿ. ನಾಗರಾಜ್, ಡಾ. ಗುರುಮೂರ್ತಿ ಪೆಂಡಕೂರು, ಡಾ. ಕೆ.ಆರ್. ಗಣೇಶ್, ಪ್ರೊ. ಜಿ.ಕೆ. ದೇವರಾಜಸ್ವಾಮಿ



ಶ್ರೀ ಗುರು ಬಸವಲಿಂಗಾಯ ನಮಃ

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ

ಹೊಸಪೇಟೆ-೫೮೩ ೨೦೧ ವಿಜಯನಗರ ಜಿಲ್ಲೆ.

SHRI JAGADGURU KOTTURUSWAMY SAMSTHANAMATH

HOSAPETE-583 201, DIST- VIJAYANAGAR

Ph No : 08394-228462 E-mail : kotturuswamymath@gmail.com



ಹಂಪಿಹೇಮಕೂಟ ಶೂನ್ಯಸಿಂಹಾಸನಾಧೀಶ್ವರ

ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರು

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ-ಬಳ್ಳಾರಿ-ಹಾಲಕೆರೆ

ಪೂಜ್ಯರ ಶುಭಸಂದೇಶ

***

ಓರ್ವ ಆಂಗ್ಲ ವಿಮರ್ಶಕ ಹೇಳುವ ಹಾಗೆ 'ಸೃಜನ ಸಾಮರ್ಥ್ಯವುಳ್ಳ 'ಕವಿ', ಕವಿ ಕೃತಿಯನ್ನು ಆನಂದಿಸುವ ಸಹೃದಯ, ಅದನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ವಿಮರ್ಶಕ'ಯಿದ್ದಾಗ ಒಂದು ಕಾವ್ಯ ಚಟುವಟಿಕೆ ಆರಂಭವಾಗಿ, ಮುಕ್ತಾಯವಾಗುವಂತೆ, ಕರ್ನಾಟಕ ಇತಿಹಾಸ ಅಕಾದೆಮಿಯು ಮೂವತ್ತೇಳು ವರ್ಷಗಳಿಂದ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಮುಂತಾದ ಕ್ಷೇತ್ರಗಳ ಅಧ್ಯಯನ ಮತ್ತು ಸಂಶೋಧನೆ ಉದ್ದೇಶದಿಂದ ಸ್ಥಾಪಿತಗೊಂಡು, ವಿದ್ವಾಂಸರಲ್ಲಿ, ಇತಿಹಾಸಕ್ತಿಯುಳ್ಳ ಸಾಮಾನ್ಯರಲ್ಲಿ ಮತ್ತು ಯುವ ಸಂಶೋಧಕರಲ್ಲಿ ಸಂಶೋಧನಾ ಮನೋಭಾವವನ್ನು ಮೇಳೈಸಿ, ಹೊಸ ಹೊಸ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಐದುನೂರು ವರ್ಷಗಳ (ಕ್ರಿ.ಶ.೧೫೧೮) ಭವ್ಯ ಇತಿಹಾಸವನ್ನು ಹೊಂದಿರುವ ನಮ್ಮ ಹೊಸಪೇಟೆ-ಬಳ್ಳಾರಿ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠವು ಕನ್ನಡ ನಾಡಿನ ಜಾಗೃತ ಪೀಠಗಳಲ್ಲೊಂದು. **'ಹಂಡೆ ಅರಸರ ರಾಜಗುರು'ಗಳಾಗಿದ್ದ** ಶ್ರೀಮಠದ ಹಿಂದಿನ ಪೂಜ್ಯರು, ಕಳೆದ ವರ್ಷ ಲಿಂಗೈಕ್ಯರಾದ ನಮ್ಮ ಗುರುಗಳಾದ ಪೂಜ್ಯಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರು ಸಮಾಜೋ-ಧಾರ್ಮಿಕ, ಸಮಾಜೋ-ಶೈಕ್ಷಣಿಕ, ಸಮಾಜೋ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಜಾತ್ಯಾತೀತ ನೆಲೆಯಲ್ಲಿ ಅನುಪಮವಾದ ಸೇವೆಯನ್ನು ಸಲ್ಲಿಸಿದವರು.

ಇತಿಹಾಸ ಅಕಾದೆಮಿಯ ೩೨ನೆಯ ವಾರ್ಷಿಕ ಸಮ್ಮೇಳನವು ಬಾದಾಮಿ ತಾಲೂಕಿನ ಶಿವಯೋಗಮಂದಿರ ಸಂಸ್ಥೆಯಲ್ಲಿ ಜರುಗಿದ ಸಂದರ್ಭದಲ್ಲಿ ನಮ್ಮ ಗುರುಗಳು ಅಕಾದೆಮಿಗೆ ಪ್ರತಿವರ್ಷ ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನು ನೀಡುವ ವಾಗ್ದಾನವನ್ನು ಮಾಡಿ, ಪ್ರತಿವರ್ಷವೂ ಅದರಂತೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು ಕಾಲವಾದ ಬಳಿಕ ಈ ವರ್ಷ ನಾವು ಪೂಜ್ಯ ಗುರುಗಳ ಸಂಕಲ್ಪದಂತೆ ಅವರ ವಾಗ್ದಾನವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ, ಉಪಾಧ್ಯಕ್ಷರಾದ ಡಾ. ಎಂ.ಜಿ. ನಾಗರಾಜ್ ಹಾಗೂ ಉಳಿದೆಲ್ಲ ಪದಾಧಿಕಾರಿಗಳ ಸೇವೆ ನಿರಂತರವಾಗಿ ಜರುಗಲು, ಬಸವಾದಿ ಶಿವಶರಣರ ಹಾಗೂ ಶ್ರೀ ಕೊಟ್ಟೂರೇಶ್ವರರ ಆಶೀರ್ವಾದ ಇರಲೆಂದು ಶುಭಹಾರೈಸುತ್ತೇವೆ.

ಸ್ಥಳ : ಹೊಸಪೇಟೆ

ದಿನಾಂಕ : 04.11.2022

ಇಂತಿ ಶಿವಂ

ಕಾಯಕಯೋಗಿ, ತ್ರಿವಿಧದಾಸೋಹಿ

ಲಿಂ. ಪೂಜ್ಯಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರ ಸ್ಮರಣಾರ್ಥ

ಕರ್ನಾಟಕ ಇತಿಹಾಸ ಅಕಾದೆಮಿ(ರಿ) ಬೆಂಗಳೂರು ಇವರಿಗೆ ಒಂದು ಲಕ್ಷ ರೂಪಾಯಿಗಳ ದೇಣಿಗೆ



ಇತಿಹಾಸ ದರ್ಶನ ಸಂಪುಟ ೩೬ರ ಬಿಡುಗಡೆ (ONLINE) ಸಮಾರಂಭ, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

ಎಡದಿಂದ ಬಲಕ್ಕೆ : ಡಾ. ವಿ. ಸಂಧ್ಯಾ, ಪ್ರೊ. ಜಿ.ಕೆ. ದೇವರಾಜಸ್ವಾಮಿ, ಡಾ. ಸಿ.ಬಿ. ಪಾಟೀಲ, ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ
ಡಾ. ದೇವರಕೊಂಡಾರೆಡ್ಡಿ, ಶ್ರೀ ಬಿ.ಎಸ್. ಗುರುಪ್ರಸಾದ್



ಡಾ. ಗುರುಮೂರ್ತಿ ಪೆಂಡಕೂರು

ಕರ್ನಾಟಕ ಇತಿಹಾಸ ಅಕಾದೆಮಿಯ
ಮೂವತ್ತೈದನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು
ದಿ ಮಿಥಿಕ್ ಸೊಸೈಟಿ, ಬೆಂಗಳೂರು
೨೦೨೧

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
ಆನ್‌ಲೈನ್ ಕಾರ್ಯಕ್ರಮ ಉದ್ಘಾಟನೆ



ಡಾ. ನಳಿನಿ ವೆಂಕಟೇಶ್ ಅವರಿಂದ ಪ್ರಾರ್ಥನೆ



ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರಿಗೆ ಸನ್ಮಾನ



ಡಾ. ಸಿ.ಬಿ. ಪಾಟೀಲ್ ಅವರಿಗೆ ಸನ್ಮಾನ



ಡಾ. ಸಿ.ಬಿ. ಪಾಟೀಲ್ ಅವರಿಂದ ಭಾಷಣ



ಶ್ರೀ ಕೆ.ಎಲ್. ರಾಜಶೇಖರ್ ಅವರಿಂದ ಸ್ವಾಗತ



ಡಾ. ಸಂಧ್ಯಾ ವಿ. ಅವರಿಂದ ನಿರ್ವಹಣೆ

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಶ್ರೀಮತಿ ವರಲಕ್ಷ್ಮಿ ಮತ್ತು ಶ್ರೀ ಅಶೋಕ್‌ಕುಮಾರ್ ಅವರು ತಮ್ಮ ತಾಯಿ-ತಂದೆಯವರಾದ
ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ನೆನಪಿನ 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿ ಪ್ರದಾನ
ಡಾ. ಪಿ.ವಿ. ಕೃಷ್ಣಮೂರ್ತಿ, ಬೆಂಗಳೂರು ಮತ್ತು ಡಾ. ರಾಜಾರಾಮ ಹೆಗಡೆ ಶಿರಸಿ



'ಡಾ. ಬಾ.ರಾ. ಗೋಪಾಲ್ ಶಾಸನ' ದತ್ತಿ ಪ್ರಶಸ್ತಿ ಪ್ರದಾನ
ಡಾ. ಕೃಷ್ಣವೇಣಿ ಅವರ ಪರವಾಗಿ ಅವರ ಸಹೋದರ ಅಮರ್ ಮೈಸೂರು

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಶ್ರೀಮತಿ ವಿ. ಗೌರಮ್ಮ ಶ್ರೀ ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು ಸ್ಥಾಪಿಸಿರುವ ದತ್ತಿಯಿಂದ 'ಸಂಶೋಧನಶ್ರೀ' ಪ್ರಶಸ್ತಿ ಪ್ರದಾನ. ಡಾ. ಕೆ. ರವೀಂದ್ರನಾಥ, ಹಂಪಿ ಮತ್ತು ಡಾ. ಮೀನಾಕ್ಷಿ ಎಂ.ಎಂ., ಕೊಡಗು



ಕರ್ನಾಟಕ ನಾಯಕ ಅರಸರ ಇತಿಹಾಸ ಮತ್ತು ಸಂಸ್ಕೃತಿ ಸಂಶೋಧನೆಯಲ್ಲಿ ಸಾಧನೆಗೈದ ವಿದ್ವಾಂಸರಿಗೆ ಡಾ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ ದತ್ತಿಯಿಂದ 'ನಾಯಕಶ್ರೀ' ಪ್ರಶಸ್ತಿ ಪ್ರದಾನ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಹಂಪಿ ಮತ್ತು ಡಾ. ಅಮರೇಶ ಯತಗಲ್, ಹಂಪಿ

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಅರಸೀಕರೆ ಮೇಲಣಮಠದ ಶ್ರೀ ಎಸ್. ಸಿದ್ಧಣ್ಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟಿನ 'ನೊಳಂಬಶ್ರೀ' ಪ್ರಶಸ್ತಿ ಪ್ರದಾನ
ಡಾ. ಸುಂಕಂ ಗೋವರ್ಧನ, ಬೆಂಗಳೂರು ಮತ್ತು ಡಾ. ನಂದೀಶ್ವರ ಎನ್., ಸಿರಾ



ಮುಂಬೈನ ಡಾ. ಸಿ.ಆರ್. ಶ್ಯಾಮಲ ಅವರು ಸ್ಥಾಪಿಸಿರುವ 'ಡಾ. ಶ್ರೀನಿವಾಸ ಹಾವನೂರ' ಸ್ಮರಣಾರ್ಥ ಪ್ರಶಸ್ತಿ ಪ್ರದಾನ
ಡಾ. ಕೂ.ಸ. ಅಪರ್ಣ, ಬೆಂಗಳೂರು ಮತ್ತು ಡಾ. ಎಸ್.ಕೆ. ಅರುಣಿ, ಬೆಂಗಳೂರು

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಡಾ. ಅರ್ಚನಾ ಕಾಮತ್ ಹಾಗೂ ಕುಟುಂಬದವರು ಸ್ಥಾಪಿಸಿರುವ ಡಾ. ಸೂರ್ಯನಾಥ್ ಕಾಮತ್ ಅವರ ನೆನಪಿನ
'ಸೂರ್ಯಕೀರ್ತಿ' ಪ್ರಶಸ್ತಿ ಪ್ರದಾನ
ಶ್ರೀ ಎಸ್. ರಾಜೇಂದ್ರಪ್ಪ, ಮೈಸೂರು ಮತ್ತು ಶ್ರೀ ಎಂ. ನಿತ್ಯಾನಂದ ಪೈ, ಕಾರ್ಕಳ



ಕೊಪ್ಪಳದ ಬಿ.ಸಿ. ಪಾಟೀಲ ಟ್ರಸ್ಟ್ ಅವರು ಸ್ಥಾಪಿಸಿರುವ 'ಶ್ರೀಮತಿ ಸುಮಂಗಲ ಪಾಟೀಲ ಮಹಿಳಾ' ಪ್ರಶಸ್ತಿ ಪ್ರದಾನ
ಡಾ. ಎಚ್.ಎಸ್. ಉಷಾರಾಣಿ, ಮೈಸೂರು ಮತ್ತು ಡಾ. ವಿ. ಶೋಭಾ, ಮೈಸೂರು

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಡಾ. ಬೆಂ.ಶಾ.ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿರುವ 'ಡಾ. ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ' ಪ್ರಶಸ್ತಿ ಪ್ರದಾನ
ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಕಲಬುರಗಿ



ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)
ಶ್ರೀ ರೇಣುಕಸ್ವಾಮಿ ಒಡೆಯರ್ ಬಿ.ಈ. ಸಂಶೋಧನ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನದ
೨೦೨೦ ಮತ್ತು ೨೦೨೧ರ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭ



ಡಾ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ ಇತಿಹಾಸ ಸಂಶೋಧನ ಪ್ರಸಕ್ತ
'ಹಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಅತ್ಯುತ್ತಮ ಗ್ರಂಥಪ್ರಶಸ್ತಿ' ಪ್ರಧಾನ
ಕದಂಬರು ಲೇ: ಡಾ. ಎಸ್. ಗುರುಮೂರ್ತಿ, ಬೆಂಗಳೂರು
ಕೆಂಪೇಗೌಡರು ಮತ್ತು ಅವರ ವಂಶೀಯರು ಲೇ: ಡಾ. ಎಸ್. ಗಂಗಾಂಬಿಕೆ ಗೋವರ್ಧನ್, ಬೆಂಗಳೂರು



ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಟ್ರಸ್ಟಿನ ಶ್ರೀ ಅಶೋಕ ಕುಮಾರ್ ಮತ್ತು ಶ್ರೀಮತಿ ವರಲಕ್ಷ್ಮಿ ದಂಪತಿಗಳಿಗೆ
ಕರ್ನಾಟಕ ಇತಿಹಾಸ ಅಕಾದೆಮಿ ವತಿಯಿಂದ ಗೌರವಾರ್ಪಣೆ

ಪ್ರಶಸ್ತಿ ಸಮಾರಂಭ



ಡಾ. ಆರ್. ಗೋಪಾಲ್ ಅವರಿಂದ ಉದ್ಘಾಟನ ಭಾಷಣ



ಮುಖ್ಯ ಅತಿಥಿಗಳಾದ ಶ್ರೀ ವಿ. ನಾಗರಾಜ್ ಅವರಿಂದ ಭಾಷಣ



ಇತಿಹಾಸ ದರ್ಶನ ಬಿಡುಗಡೆ ಮಾಡಿದ ಡಾ. ಕೆ.ಆರ್. ಗಣೇಶ
ಅವರಿಗೆ ಶ್ರೀ ವಿ. ನಾಗರಾಜ್ ಅವರಿಂದ ಗೌರವಾರ್ಪಣೆ



ಮುಖ್ಯ ಅತಿಥಿಗಳಾದ ಶ್ರೀ ವಿ. ನಾಗರಾಜ್ ಅವರಿಗೆ
ಡಾ. ಆರ್. ಗೋಪಾಲ್ ಅವರಿಂದ ಗೌರವಾರ್ಪಣೆ



ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಟ್ರಸ್ಟಿನ ವತಿಯಿಂದ ಅಧ್ಯಕ್ಷರಾದ ಡಾ. ಗುರುಮೂರ್ತಿ ಪೆಂಡಕೂರು ಅವರಿಗೆ ಗೌರವಾರ್ಪಣೆ

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ - ೧೪-೦೯-೨೦೨೨
ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಾಗಮಂಗಲ, ಮಂಡ್ಯ ಜಿಲ್ಲೆ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಉದ್ಘಾಟನೆ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರಾದ ಶ್ರೀ ಕೆ.ಆರ್. ನರಸಿಂಹನ್ ಅವರಿಗೆ ಸನ್ಮಾನ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ - ೨೦೨೨ರ ಭಿತ್ತಿಪತ್ರ ಬಿಡುಗಡೆ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ನಾಗಮಂಗಲದ ಸೌಮ್ಯಕೇಶವ ದೇವಾಲಯ ಕುರಿತ ಕರಪತ್ರ ಬಿಡುಗಡೆ
ಶ್ರೀ ಮಹಮ್ಮದ್ ಕಲೀಂಉಲ್ಲಾ, ಡಾ. ರವೀಂದ್ರ, ಪ್ರೊ. ಪುಟ್ಟರಂಗಪ್ಪ, ಡಾ. ದೇವರಕೊಂಡಾರೆಡ್ಡಿ, ಪ್ರೊ. ಕೆ. ಆರ್. ನರಸಿಂಹನ್
ಶ್ರೀ ಎಂ. ಎನ್. ಪ್ರಭಾಕರ್, ಪ್ರೊ. ಜಿ. ಕೆ. ದೇವರಾಜಸ್ವಾಮಿ

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ - ೧೪-೦೯-೨೦೨೨
ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಾಗಮಂಗಲ, ಮಂಡ್ಯ ಜಿಲ್ಲೆ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ
ಶ್ರೀ ಎಂ.ಎನ್. ಪ್ರಭಾಕರ್ ಅವರಿಗೆ ಸನ್ಮಾನ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ
ಶ್ರೀ ಮಹಮ್ಮದ್ ಕಲೀಂಉಲ್ಲಾ ಅವರಿಗೆ ಸನ್ಮಾನ



ಆದಿಚುಂಚನಗಿರಿ ಕಾಲೇಜಿನ ಸಿಬ್ಬಂದಿ ವರ್ಗ, ನಾಗಮಂಗಲ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಸಭಿಕರು





ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ
ಪ್ರೊ. ಪುಟ್ಟರಂಗಪ್ಪ, ಅವರಿಗೆ ಸನ್ಮಾನ



ನಾಗಮಂಗಲದ ಸೌಮ್ಯಕೇಶವ ದೇವಾಲಯದ
ಆವರಣದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ



ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಯು ೩೫ ಸಂವತ್ಸರಗಳನ್ನು ಪೂರೈಸಿ ಇದೀಗ ೩೬ನೆಯ ಸಂವತ್ಸರಕ್ಕೆ ಕಾಲಿಟ್ಟಿದೆ. ೩೫ ವರ್ಷಗಳಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ ಪ್ರಸರಣದಲ್ಲಿ ತೊಡಗಿದೆ. ಇಂತಹ ಪ್ರಸರಣ ಕಾರ್ಯದಲ್ಲಿ ನಮ್ಮೊಡನೆ ಕೈ ಜೋಡಿಸಿದ ಮಠಮಾನ್ಯಗಳಿಗೆ, ಸಂಘ ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ನಮ್ಮೆಲ್ಲರ ನಮನಗಳು.

ಕಳೆದ ವರ್ಷದಿಂದ ಕೋವಿಡ್ ಸಾಂಕ್ರಾಮಿಕ ರೋಗದ ಪ್ರಭಾವ ಕುಂಠಿತವಾಗಿತ್ತಾದರೂ ನೇರವಾಗಿ ಕೆಲವು ಕಾರ್ಯಕ್ರಮಗಳನ್ನು ಮಾಡಲಾಗಲಿಲ್ಲ. ಹೀಗಾಗಿ ಇದೇ ವರ್ಷ ಕನ್ನಡ ಲಿಪಿ ಕಲಿಕೆಯ ಆನ್‌ಲೈನ್ ಕಾರ್ಯಕ್ರಮವನ್ನು ಮುಂದುವರಿಸಿ ಎರಡನೆಯ ತಂಡದ ವಿದ್ಯಾರ್ಥಿಗಳಿಗೆ ಬೋಧಿಸಲಾಯಿತು. ಈ ವರ್ಷವೂ ಮೂರನೆಯ ತಂಡದ ಲಿಪಿಕಲಿಕಾ ಕಾರ್ಯಕ್ರಮ ನಡೆಯುತ್ತಿದೆ. ಅನೇಕ ಉತ್ಸಾಹಿಗಳು ಆನ್‌ಲೈನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅನೇಕ ಕಡೆಗಳಿಂದ ಈ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಕರ್ನಾಟಕ ಇತಿಹಾಸ ಅಕಾದೆಮಿಯ ೩೫ನೇ ವಾರ್ಷಿಕ ಸಮ್ಮೇಳನವನ್ನು ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದಲ್ಲಿ ಆಯೋಜಿಸಲಾಗಿತ್ತು. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಿಥಿಕ್ ಸೊಸೈಟಿಯ ಶತಮಾನೋತ್ಸವ ಭವನದಲ್ಲಿ ಇರಿಸಿಕೊಳ್ಳಲಾಗಿತ್ತು. ಆದರೆ ಪ್ರಬಂಧ ಮಂಡನೆಯ ಸಮ್ಮೇಳನವನ್ನು ಆನ್‌ಲೈನ್ ಮೂಲಕ ನಡೆಸಲಾಯಿತು. ಸುಮಾರು ೧೨೦ ಪ್ರಬಂಧಗಳು ಮಂಡನೆಯಾದವು. ೨೦೨೨ರ ಫೆಬ್ರವರಿ ತಿಂಗಳಲ್ಲಿ ನಡೆದ ಈ ಆನ್‌ಲೈನ್ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳಲ್ಲಿ ಸ್ವೀಕೃತವಾದ ೧೧೯ ಲೇಖನಗಳನ್ನು ಸೇರಿಸಿ ಇತಿಹಾಸ ದರ್ಶನ ಸಂಪುಟ ೩೭ ಹೊರಬರುತ್ತಿದೆ. ಪ್ರಬಂಧಗಳನ್ನು ಮಂಡಿಸಿ ಅವುಗಳನ್ನು ಮುದ್ರಣಕ್ಕೆ ನೀಡಿ ಸಹಕರಿಸಿದ ಪ್ರಬಂಧಕಾರರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ.

ಇತಿಹಾಸ ದರ್ಶನದ ಪ್ರಕಟಣೆಗಾಗಿ ಬಾಳೆಹೊನ್ನೂರು ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಈ ವರ್ಷವೂ ರೂ. ೨೫,೦೦೦ಗಳನ್ನು ಆಶೀರ್ವಾದಪೂರ್ವಕವಾಗಿ ನೀಡಿದ್ದಾರೆ. ಶ್ರೀಗಳು ಕಳೆದ ೧೮ ವರ್ಷಗಳಿಂದ ಈ ಸಹಾಯವನ್ನು ಮಾಡುತ್ತಾ ಬಂದಿದ್ದಾರೆ. ಇವರಿಗೆ ನಮ್ಮ ನಮನಗಳನ್ನು ಸಲ್ಲಿಸುತ್ತೇವೆ. ಹಾಗೆಯೇ ಹೊಸಪೇಟೆಯ ಕೊಟ್ಟೂರು ಮಠದ ಪಟ್ಟಾಧ್ಯಕ್ಷರಾದ ಶಿವಗಣ ಪದವಿ ಪಡೆದ ಜಗದ್ಗುರು ಶ್ರೀ ಸಂಗನ ಬಸವಸ್ವಾಮಿಗಳ ಶಿಷ್ಯರೂ ಆದ ಶ್ರೀ ಬಸವಲಿಂಗ ಮಹಾಸ್ವಾಮಿಗಳು ತಮ್ಮ ಗುರುಗಳ ಇಚ್ಛೆಯಂತೆ ಈ ವರ್ಷವೂ ೧,೦೦,೦೦೦ ರೂ. ಗಳನ್ನು ಅಕಾದೆಮಿಗೆ ನೀಡಿ ಆಶೀರ್ವದಿಸಿದ್ದಾರೆ. ಈ ಪೂಜ್ಯರಿಗೆ ನಮ್ಮ ನಮನಗಳು.

ಕರ್ನಾಟಕ ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆಯ ಇಲಾಖೆಯು ಕರ್ನಾಟಕ ಇತಿಹಾಸ ಅಕಾದೆಮಿಯ ಕಳೆದ ಎರಡು ಸಾಲಿನ ಬಾಕಿ ಹಣವಾಗಿ ಕಳೆದ ವರ್ಷ ರೂ. 6,00,000ಗಳನ್ನು ನೀಡಿ ಅಕಾದೆಮಿಯ ಚಟುವಟಿಕೆಗಳನ್ನು ನಡೆಸಲು ಪ್ರೋತ್ಸಾಹಿಸಿದೆ. ಅದಕ್ಕಾಗಿ ಇಲಾಖೆಯ ಅಧಿಕಾರ ವೃಂದಕ್ಕೆ ನಮ್ಮ ನಮನಗಳು.

ಪ್ರಸಕ್ತ ಸಾಲಿನಿಂದ 'ಇತಿಹಾಸ ದರ್ಶನ' ಸಂಪುಟದ ಸಂಪಾದಕರಾಗಿ ಶ್ರೀ ರಾಜಶೇಖರ್ ಕೆ.ಎಲ್. ಮತ್ತು ಡಾ. ಸಂಧ್ಯಾ ವಿ. ಅವರನ್ನು ಕಾರ್ಯನಿರ್ವಹಿಸಲು ನೇಮಿಸಿದ್ದೇವೆ. ಬಹು ಜವಾಬ್ದಾರಿಯಿಂದ ಹಾಗೂ ಶ್ರಮದಾಯಕವಾಗಿ ಸಂಪಾದನಾ ಕಾರ್ಯವನ್ನು ನಿರ್ವಹಿಸಿ ಸಂಪುಟವನ್ನು ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಅದಕ್ಕಾಗಿ ಅವರಿಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

೩೫ನೆಯ ವಾರ್ಷಿಕ ಸಮ್ಮೇಳನ ನಡೆಸುವಾಗ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ವಿ. ನಾಗರಾಜ್ ಅವರು ಮಿಥಿಕ್ ಸೊಸೈಟಿಯ ಶತಮಾನೋತ್ಸವ ಭವನವನ್ನು ಅಕಾದೆಮಿಯ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಉಚಿತವಾಗಿ ನೀಡಿದ್ದರು. ಇವರಿಗೆ ಅಕಾದೆಮಿಯ ಕಾರ್ಯಕಾರಿ ಸಮಿತಿ ಸದಸ್ಯರ ಸಹಕಾರಕ್ಕೆ ಹಾಗೂ ಅಕಾದೆಮಿಯ ಶ್ರೇಯೋಭಿವೃದ್ಧಿ ಬಯಸುವ ಎಲ್ಲರಿಗೂ ತುಂಬುಹೃದಯದ ನಮನಗಳನ್ನು ಸಲ್ಲಿಸುತ್ತೇವೆ.

೧೬-೧೧-೨೦೨೨
ಗುರುವಾರ, ಮಾರ್ಗಶಿರ ಶುದ್ಧ ಪಾಡ್ಯಮಿ

ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಸಂಪಾದಕರ ಮಾತು

ಇತಿಹಾಸ ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಸ್ಥಾಪಿತವಾದ ಕರ್ನಾಟಕ ಇತಿಹಾಸ ಅಕಾದೆಮಿಯು ಇದೀಗ ೩೫ ವಸಂತಗಳನ್ನು ಪೂರೈಸಿ ೩೬ನೆಯ ವರ್ಷಕ್ಕೆ ಕಾಲಿಡುತ್ತಿದೆ. ಪ್ರತಿ ವರ್ಷವೂ ನಡೆಯುವ ವಾರ್ಷಿಕ ಸಮ್ಮೇಳನಗಳಲ್ಲಿ ಸದಸ್ಯರು ಮಂಡಿಸುವ ಸಂಶೋಧನಾ ಪ್ರಬಂಧಗಳು 'ಇತಿಹಾಸ ದರ್ಶನ' ಸಂಪುಟಗಳಲ್ಲಿ ಪ್ರಕಟವಾಗುತ್ತಿವೆ. ವರ್ಷದಿಂದ ವರ್ಷಕ್ಕೆ ಸಂಪುಟದಲ್ಲಿ ಹೆಚ್ಚುತ್ತಿರುವ ಲೇಖನಗಳ ಸಂಖ್ಯೆ ಹಾಗೂ ಓದುಗರ ಸಂಖ್ಯೆಯು ಇದರ ಮಹತ್ವ, ಘನತೆ ಹಾಗೂ ಜನಪ್ರಿಯತೆಯನ್ನು ಕುರಿತು ತಿಳಿಸುತ್ತಿದೆ. ಇದರ ಬಹುಪಾಲು ಹಿರಿಮೆಯು ಕಳೆದ ೩೬ ಸಂಪುಟಗಳನ್ನು ಯಶಸ್ವಿಯಾಗಿ ಸಂಪಾದಿಸಿಕೊಟ್ಟಿರುವ ಸಂಪಾದಕರಿಗೆ ಸಲ್ಲುತ್ತದೆ. ಕಳೆದ ಎಂಟು ವರ್ಷಗಳಿಂದ ಡಾ. ದೇವರಕೊಂಡಾರೆಡ್ಡಿ ಹಾಗೂ ಪ್ರೊ. ಜಿ.ಕೆ. ದೇವರಾಜಸ್ವಾಮಿಯವರ ಸಂಪಾದಕತ್ವದಲ್ಲಿ ಸಂಪುಟಗಳು ಸಮರ್ಥವಾಗಿ ಮೂಡಿಬಂದಿದೆ. ಪ್ರಸಕ್ತ ಸಾಲಿನಿಂದ ಸಂಪಾದಕತ್ವದ ಜವಾಬ್ದಾರಿಯನ್ನು ನಮಗೆ ವಹಿಸಿದ್ದಾರೆ. ಇದು ನಮ್ಮ ಪಾಲಿನ ಬಹುದೊಡ್ಡ ಕರ್ತವ್ಯ ಹಾಗೂ ಅಕಾದೆಮಿಗೆ ಸಲ್ಲಿಸುವ ಸೇವೆಯ ಸೌಭಾಗ್ಯವೆಂದೇ ಭಾವಿಸಿದ್ದೇವೆ.

ಕಳೆದೆರಡು ವರ್ಷಗಳಲ್ಲಿ ಕರೋನ ಸಾಂಕ್ರಾಮಿಕ ಕಾಯಿಲೆಯ ಕಾರಣದಿಂದ ಸಾರ್ವಜನಿಕ ಸಭೆಗಳನ್ನು ನಡೆಸಲು ನಿರ್ಬಂಧವಿತ್ತು. ಆದರೂ ಅಧ್ಯಕ್ಷರ ಮಾರ್ಗದರ್ಶನ ಹಾಗೂ ಸದಸ್ಯರ ಬೆಂಬಲದೊಂದಿಗೆ ಸಮ್ಮೇಳನದ ಬಹುಮುಖ್ಯ ಭಾಗವಾದ ಸದಸ್ಯರ ಸಂಶೋಧನಾ ಪ್ರಬಂಧ ಮಂಡನೆಯನ್ನು ಕಳೆದ ೧೯-೨೧ ಫೆಬ್ರವರಿ ೨೦೨೨ರಲ್ಲಿ ಮೂರು ದಿನಗಳ ಕಾಲ ಅಕಾದೆಮಿಯ ಬೆಂಗಳೂರಿನ ಕಚೇರಿಯಲ್ಲಿ (ಬಿ.ಎಂ.ಶ್ರೀ. ಕಲಾಭವನ) ಹಮ್ಮಿಕೊಳ್ಳಲಾಯಿತು. ಸುಮಾರು ೧೨೦ಕ್ಕೂ ಹೆಚ್ಚಿನ ಸದಸ್ಯರು ತಮ್ಮ ತಮ್ಮ ಸ್ಥಳಗಳಿಂದಲೇ ಆನ್‌ಲೈನ್ ಮೂಲಕ ಪತ್ರಿಕೆಗಳನ್ನು ಮಂಡಿಸಿ ಕಾರ್ಯಕ್ರಮವು ಯಶಸ್ವಿಯಾಗಲು ಸಹಕರಿಸಿದರು. ಸದಸ್ಯರು ಮಂಡಿಸಿದ ಒಟ್ಟು ೧೧೯ ಲೇಖನಗಳನ್ನು ಸಂಪಾದಿಸಿ 'ಇತಿಹಾಸ ದರ್ಶನ ಸಂಪುಟ ೩೭' ನ್ನು ನಿಮ್ಮ ಕೈಗಿಡುತ್ತಿದ್ದೇವೆ. ಕರ್ನಾಟಕ ಇತಿಹಾಸ ಅಕಾದೆಮಿಯು ಈ ಮೂಲಕ ತನ್ನ ಅಸ್ತಿತ್ವದೊಂದಿಗೆ ನಾಡಿನ ಇತಿಹಾಸ, ಸಂಸ್ಕೃತಿ ಪರಂಪರೆಯ ಶೋಧನೆ ಮತ್ತು ಕಟ್ಟುವಿಕೆಗೆ ಉತ್ತಮ ಕೊಡುಗೆ ನೀಡಿದೆ. ಅನೇಕ ಮಠಮಾನ್ಯಗಳು, ಸಂಘ ಸಂಸ್ಥೆಗಳು, ಸರ್ಕಾರದ ಇಲಾಖೆಗಳು, ಮುಖ್ಯವಾಗಿ ಅಕಾದೆಮಿಯ ಸದಸ್ಯರುಗಳು ಇದಕ್ಕೆ ಕಾರಣರಾಗಿದ್ದು, ಅದರ ಫಲವಾಗಿ ಈ ಸಂಪುಟವು ಅಕಾದೆಮಿಯಿಂದ ಪ್ರಕಟಗೊಂಡಿದೆ.

ಅಕಾದೆಮಿಯು ಮೂವತ್ತಾರನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಾ ತನ್ನ ಸಾಧನೆಯನ್ನು ಸಾಬೀತು ಪಡಿಸಿದೆ. ಕೇವಲ ವಿದ್ವಾಂಸರಿಗಷ್ಟೇ ಅಲ್ಲದೆ ಸಾಮಾನ್ಯ ಆಸಕ್ತಿಯ ಸಂಶೋಧಕರನ್ನೂ ಬೆಳೆಸುವ ಧ್ಯೇಯೋದ್ದೇಶವನ್ನು ಹೊಂದಿದೆ. ಐತಿಹಾಸಿಕ ಪರಂಪರೆ ಉಳಿಸುವ, ಸಾಂಸ್ಕೃತಿಕ ಮಹತ್ವವನ್ನು ಸಾರುವ ಕಾರ್ಯಕ್ರಮಗಳನ್ನು ಶಾಲಾ-ಕಾಲೇಜು ಮಟ್ಟದಿಂದಲೇ ನಡೆಸುವ ಅಭಿಯಾನವನ್ನು ಯಶಸ್ವಿಯಾಗಿ ಹಮ್ಮಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ವ್ಯಾಪಿಸುವಲ್ಲಿ ಸದಸ್ಯರ ಸಹಕಾರ ಕೋರುತ್ತಾ ಅದರ ದಾಖಲೀಕರಣಕ್ಕೂ ಈ ಸಂಪುಟಗಳಲ್ಲಿ ಅವಕಾಶ ಮಾಡಿಕೊಡಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಸ್ಮಾರಕಗಳನ್ನು ಶೋಧಿಸುವುದರ ಜೊತೆಗೆ ಸಂರಕ್ಷಿಸುವ ಹಾಗೂ ಸ್ಥಳೀಯರಿಗೆ ಅದರ ಮಹತ್ವ ತಿಳಿಸಿಕೊಡುವ ಸದಸ್ಯರಿಗೆ ಪ್ರೇರಣೆಯನ್ನೊದಗಿಸುವಲ್ಲಿ ಕಾರ್ಯೋನ್ಮುಖವಾಗಿದ್ದೇವೆ. ಈ ಮೂಲಕ ಸಾಕಷ್ಟು ಕೊಡುಗೆ ನಾಡಿಗೆ ದಕ್ಕಿದೆ. ಸಂಶೋಧನೆಯಲ್ಲಿ ಆಸಕ್ತಿ ಮೂಡಿಸಿ ಯುವ ಸಂಶೋಧಕರನ್ನು ಪ್ರೇರೇಪಿಸಿದೆ. ಆಸಕ್ತ ಸಂಶೋಧಕರಿಗೆ ನಾಡಿನಲ್ಲಿ ಏಕಮಾತ್ರ ಸಂಸ್ಥೆಯಾಗಿ ಹೊಸ ಮಾಹಿತಿ ಹಾಗೂ ವಿಚಾರಗಳ ವಿನಿಮಯಕ್ಕೆ, ಸಂಶೋಧನಾ ಸಂದರ್ಭಗಳಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ರೀತಿಯಲ್ಲಿ ಅಕಾದೆಮಿಯು ಸ್ಪಂದಿಸಿ ಸಹಕಾರ ನೀಡುತ್ತಿದೆ. ಪ್ರಸಕ್ತ ಕನ್ನಡ ನಾಡಿನ ಇತಿಹಾಸ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನೆಗಳನ್ನು ಮಾಡುವ ಸಂಶೋಧಕರು 'ಇತಿಹಾಸ ದರ್ಶನ' ಸಂಪುಟಗಳನ್ನು ಆಕರವಾಗಿ ಗಮನಿಸದಿದ್ದಲ್ಲಿ ಆ ಸಂಶೋಧನೆಯು ಪರಿಪೂರ್ಣವಲ್ಲ ಎನ್ನುವಷ್ಟರ ಮಟ್ಟಿಗೆ ಪರಾಮರ್ಶನ ಸಂಪುಟವಾಗಿ ರೂಪಿಸಲು ಯತ್ನಿಸಿದ್ದೇವೆ.

'ಸಂಪೂರ್ಣ ದೋಷಮುಕ್ತವಾಗಿ ಯಾವುದೂ ಪರಿಪೂರ್ಣತೆ ಸಾಧಿಸಲು ಸಾಧ್ಯವಿಲ್ಲ' ಎಂಬ ಹೇಳಿಕೆಯಂತೆ, ಈ ಸಂಚಿಕೆಯ ಕೆಲವು ಲೇಖನಗಳಲ್ಲಿ ಅರೆಕೊರೆಗಳು ಸೇರಿಕೊಂಡಿವೆ. ಅತ್ಯುತ್ಸಾಹದ ಭರದಲ್ಲಿ ಕೆಲವು ಯುವ ಸಂಶೋಧಕರ ಉತ್ಪ್ರೇಕ್ಷೆ, ಅತಿಶಯೋಕ್ತಿ ಒಂದು ಕಡೆಯಾದರೆ, ವಿಷಯ ಮಂಡನೆ, ನಿರೂಪಣೆಗಳಲ್ಲಿ ಸ್ಪಷ್ಟತೆ ಇಲ್ಲದಿರುವುದು ಮತ್ತೊಂದು ಸಮಸ್ಯೆಯಾಗಿ ತೋರಿಬಂದಿದೆ. ತಾಳ್ಮೆಯ ಕೊರತೆ ಎದ್ದು ಕಾಣುತ್ತಿದೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಶೋಧಿಸುವ–ಹುಡುಕುವ ಅಭೀಪ್ಸೆಯ ಅಭಿರುಚಿ 'ಸಂಶೋಧನೆ'ಯ ಹೆಸರಿನಲ್ಲಿ ತೀವ್ರವಾಗುತ್ತಿರುವುದು ಆರೋಗ್ಯಕರ ಲಕ್ಷಣವೆನಿಸಿದರೂ ಅಭಿವ್ಯಕ್ತಿಯ ನೆಲೆಯಲ್ಲಿ ಅವಸರದ ನಿರ್ಣಯಗಳಿಗೆ ಯುವ ಸಂಶೋಧಕರು ಒಳಗಾಗುತ್ತಿದ್ದಾರೆ. ಇದರಿಂದ ಹೊರಬರಬೇಕಿದೆ. ಶೋಧನೆಗೊಂಡ ಗತಕಾಲದ ಭೌತಿಕ ವಸ್ತುಗಳನ್ನು ವರ್ತಮಾನ ಕಾಲದಲ್ಲಿ ವಿಶ್ಲೇಷಿಸುವಾಗ ಬಹು ಎಚ್ಚರಿಕೆಯಿಂದ ಅಕಾಡೆಮಿಕ್ ಆಗಿ ವರ್ತಿಸಬೇಕಾಗಿದೆ. ತಾಂತ್ರಿಕ ಪರಿಣಿತಿಯ ಜೊತೆಗೆ ತಾತ್ವಿಕ ವಿಮರ್ಶೆಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಈ ದಿಕ್ಕಿನತ್ತ ಸಂಶೋಧಕರು ಗಮನ ಹರಿಸುವ ಅಗತ್ಯವಿದೆ. ಮತ್ತೊಬ್ಬರ ಸಾಧನೆಯನ್ನು, ಯಶಸ್ಸನ್ನು ಕಸಿಯುವ ಪ್ರಯತ್ನ ಮಾಡದೆ, ಸಾಧನೆಯ ಮಾರ್ಗ ತೋರಿದ ಹಿರಿಯರಿಗೆ, ಹಿಂದಿನ ವಿದ್ವಾಂಸರಿಗೆ ಗೌರವ ತೋರುವ, ಸೌಜನ್ಯತೆ, ಸಹನೆಯನ್ನು ಬೇಡುವ ಕ್ಷೇತ್ರ ಇದಾಗಿದೆ. ಹಿಂದಣ ಸಂಶೋಧನೆಯ ಹೆಜ್ಜೆಗುರುತುಗಳನ್ನು ಗಮನಿಸಿ ಮುಂದಣ ಶೋಧಕಾರ್ಯವನ್ನು ಕೈಗೊಳ್ಳುವ ಅಗತ್ಯವಿದೆ. ಇಂತಹ ಕೆಲವು ಮೌಲ್ಯಗಳನ್ನು ರೂಢಿಸಿಕೊಂಡು ಮುಂದಿನ ಪೀಳಿಗೆಗೆ ಉತ್ತಮ ಕೊಡುಗೆ ನೀಡುವ ಸಂಶೋಧನೆಗಳು ಹೆಚ್ಚು ಬರಲೆಂಬ ಆಶಯ ನಮ್ಮದಾಗಿದೆ. ಆ ಮೂಲಕ ನಾಡಿನ ಇತಿಹಾಸ ಮತ್ತು ಸಂಸ್ಕೃತಿಗೆ ಹೊಸ ಕೊಡುಗೆಗಳು ದೊರೆಯುವುದೆಂಬ ಹಂಬಲ ನಮ್ಮದು.

ಇತಿಹಾಸ ದರ್ಶನ ಸಂಪುಟಗಳು ವರ್ಷದಿಂದ ವರ್ಷಕ್ಕೆ ಗಾತ್ರ ಹಾಗೂ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿದೆ. ಅಕಾದೆಮಿಯ ಇತರೆ ಕಾರ್ಯಕ್ರಮಗಳು ಕೂಡಾ ಯಶಸ್ವಿಯಾಗಿ ಜರುಗುತ್ತಿದೆ. ಈ ಹಿಂದಿನಂತೆ ಸಹೃದಯ ವಿದ್ವತ್‌ವಲಯ ಈ ಸಂಪುಟವನ್ನು ಎಂದಿನಂತೆ ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇವೆ. ಇತಿಹಾಸ ದರ್ಶನದ ಈವರೆಗಿನ ೩೪ ಸಂಪುಟಗಳಲ್ಲಿನ ಎಲ್ಲಾ ಸಂಶೋಧನಾ ಪ್ರಬಂಧಗಳನ್ನು ಅಕಾದೆಮಿಯ ಫಇಃಖಖಖಇನಲ್ಲಿ ನೋಡಬಹುದಾಗಿದೆ. ಈ ಲೇಖನಗಳು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗುತ್ತಿವೆ. ನೂರಾರು ಸಂಶೋಧಕರು ಹಾಗೂ ಸಂಸ್ಕೃತಿ ಚಿಂತಕರು ಇದನ್ನು ಬಳಸಿಕೊಳ್ಳುತ್ತಿರುವುದು ಸಂತೋಷದಾಯಕ. ಆದರೆ ಆಕರವನ್ನು ಪಡೆದ ಮೂಲದ ಬಗ್ಗೆ ಸ್ಮರಿಸದಿರುವುದು ಮತ್ತು ಸಣ್ಣದೊಂದು ಕೃತಜ್ಞತೆ ಹೇಳದಿರುವುದು ವಿಷಾದಕರ ಸಂಗತಿಯಾಗಿದೆ.

ಇತಿಹಾಸ ದರ್ಶನ ಸಂಪುಟ ೩೭ ಹೊರಬರಲು ಸಹಕಾರ ನೀಡಿದ ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಸಂಪುಟ ಸಂಪಾದನೆಯ ಸಂದರ್ಭದಲ್ಲಿ ವಿಶೇಷ ಆಸ್ಥೆ ತೋರಿ ಮಾರ್ಗದರ್ಶನ ಮಾಡಿದ್ದಾರೆ. ನಮ್ಮ ಸಂಪಾದಕತ್ವದ ಒತ್ತಡವನ್ನು ಹಗುರಗೊಳಿಸಿದ್ದಾರೆ. ಅವರೀರ್ವರಿಗೆ ವಿಶೇಷ ನಮನಗಳನ್ನು ಸಲ್ಲಿಸುತ್ತಿದ್ದೇವೆ. ಹಾಗೆಯೇ ಉಪಾಧ್ಯಕ್ಷರಾದ ಡಾ. ಎಂ.ಜಿ. ನಾಗರಾಜ್, ಡಾ. ಲಕ್ಷ್ಮಣ್ ತೆಲಗಾವಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ನೀಡಿರುವ ಸಹಕಾರಕ್ಕೆ ಕೃತಜ್ಞರಾಗಿದ್ದೇವೆ. ಉಳಿದಂತೆ ನಮ್ಮೊಂದಿಗೆ ಈ ಕಾರ್ಯದಲ್ಲಿ ಸಹಕರಿಸಿದ ಶ್ರೀಮತಿ ಎಸ್.ವೈ. ನಿರ್ಮಲಾ, ಶ್ರೀ ರೇಣುಕಾಸ್ವಾಮಿ ಒಡೆಯರ್ ಅವರಿಗೆ, ಸಂಪುಟವನ್ನು ಅಂದವಾಗಿ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೆ, ಡಿಟಿಪಿ ಮಾಡಿ ಚಿತ್ರಗಳನ್ನು ಸಂಯೋಜಿಸಿದ ಪಿ.ಎಸ್. ಸುಬ್ರಮಣಿ ಬಾಬು, ವಿನ್ಯಾಸಕಾರರಾದ ಶ್ರೀಮತಿ ಮಾಲಾ ಎಂ., ವಿ.ಎಸ್. ಪ್ರಸನ್ನಕುಮಾರ್ ಹಾಗೂ ಸಿಬ್ಬಂದಿ ವರ್ಗಕ್ಕೆ ನಮ್ಮ ಕೃತಜ್ಞತೆಗಳು.

೧೬–೧೧–೨೦೨೨ **ರಾಜಶೇಖರ್ ಕೆ.ಎಲ್.**
ಬೆಂಗಳೂರು **ಸಂಧ್ಯಾ ವಿ.**

ಪರಿವಿಡಿ

೧.	ಅರ್ಕಾವತಿ ನದಿಕಣಿವೆಯ ನವಶೋಧಿತ ಬೃಹತ್‌ಶಿಲಾಯುಗ ಸಮಾಧಿಗಳ ನಿರ್ಮಾಣದ ತಂತ್ರಗಾರಿಕೆ	ಪ್ರವೀಣ್‌ಕುಮಾರ್ ಕೆ.	೧
೨.	ಕೊಪ್ಪಳದ ಗುನ್ನಳ್ಳಿಯಲ್ಲಿ ಗವಿಚಿತ್ರಗಳು ಹಾಗೂ ಬ್ರಾಹ್ಮಿಬರಹ ಶೋಧನೆ	ಶರಣಬಸಪ್ಪ ಕೋಲ್ಕಾರ	೯
೩.	ಏಳುಗುಡ್ಡ ಸಾಲಿನ ಹಿರೇಬೆಣಕಲ್ ಪ್ರದೇಶ: ಮುಂದುವರೆದ ಪುರಾತತ್ವ ಶೋಧನೆ	ಮೋಹನ ಆರ್.	೧೪
೪.	ಕಲಬುರ್ಗಿ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅವಲೋಕನ	ಅರುಣಿ ಎಸ್.ಕೆ.	೧೯
೫.	ಚಾರಿತ್ರಿಕ ಗುಳೇದಗುಡ್ಡ	ವೀಣಾ ಕಲ್ಮಠ	೩೨
೬.	ಶಿವನಿ ಪರಿಸರದ ಬೃಹತ್‌ಶಿಲಾಯುಗ ಸಂಸ್ಕೃತಿಯ ಸಮಾಧಿ ನೆಲೆಗಳು	ಮಂಜುನಾಥ ಟಿ.	೩೬
೭.	ಪುರಾತತ್ವೀಯ ನೆಲೆಯಾಗಿ 'ಕಣಿವೆ ತಿಮ್ಲಾಪುರ'	ಮಂಜನಾಯ್ಕ ಆರ್.	೪೧
೮.	ಬಂಗಾರಿಗೊಲ್ಲರಹಟ್ಟಿ ಪ್ರದೇಶದ ಪ್ರಾಗೈತಿಹಾಸಿಕ ಕುರುಹುಗಳು	ಶಶಿಕುಮಾರ ನಾಯ್ಕ ಕೆ.ಸಿ.	೪೫
೯.	ಇಂದೂರುಕೊಪ್ಪದ ಪ್ರಾಚ್ಯಾವಶೇಷಗಳು	ಮಲ್ಲಿಗವಾಡ ಕೆ.ಸಿ.	೪೮
೧೦.	ಬಾಗೇಪಲ್ಲಿ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳು	ಕೃಷ್ಣ ಬಿ.ಆರ್.	೫೧
೧೧.	ದೇವರಕಾಡುಗಳ ಸುಟ್ಟಮಣ್ಣಿನ ಹರಕೆ ಗೊಂಬೆಗಳು	ದೀಪಕ್‌ಕುಮಾರ ಕೆ.ಜೆ.	೫೭
೧೨.	ಮಧುಗಿರಿ ತಾಲ್ಲೂಕಿನ ನವಶೋಧಿತ ಪ್ರಾಗೈತಿಹಾಸಿಕ ನೆಲೆಗಳು	ರಂಗನಾಥ್ ಬಿ.ಆರ್.	೬೨
೧೩.	ಕದಂಬ ರವಿವರ್ಮನ ಅಪ್ರಕಟಿತ ಶಾಸನ	ಶೇಜೇಶ್ವರ ಆರ್.	೬೫
೧೪.	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಪ್ರಕಟಿತ ಶಾಸನಗಳು	ಯುವರಾಜು ಆರ್.	೭೧
೧೫.	ಸಿಂಧನೂರು ಪರಿಸರದ ಅಪ್ರಕಟಿತ ಶಾಸನಗಳು	ಚನ್ನಬಸಪ್ಪ ಮಲ್ಕಂದಿನ್ನಿ	೮೦
೧೬.	ಆನೆಗುಂದಿ ಮಠದ ಜಯರೇಖಾ ಪತ್ರ	ರವೀಂದ್ರನಾಥ ಕೆ.	೯೫
೧೭.	ಕುದ್ರಿಗಿಯ ಅಪ್ರಕಟಿತ ಜೈನಶಾಸನಗಳು	ನಿತಿನ್ ಹೆಚ್.ಪಿ.	೯೭
೧೮.	ಮರಕಲಘಟ್ಟದ ಅಪ್ರಕಟಿತ ಶಾಸನ	ವಸುಧ ವಿದ್ಯಾಧೀಶ	೧೦೪
೧೯.	ಚಂದಾವರ ಕಾದಂಬರ ಅಪ್ರಕಟಿತ ಶಾಸನಗಳು	ಶ್ಯಾಮಸುಂದರ ಗೌಡ	೧೦೭
೨೦.	ಹೊಯ್ಸಳ ವಿನಯಾದಿತ್ಯನ ಹೊಸ ಶಾಸನ	ರೇಣುಕಸ್ವಾಮಿ ಒಡೆಯರ್ ಬಿ.ಈ.	೧೧೩
೨೧.	ಹೊನ್ನಾವರದ ತಟ್ಟಿಹಕ್ಕಲ ಶಾಸನ	ಗಣಪತಿ ಗೌಡ ಎಸ್.	೧೧೭
೨೨.	ಸಂಡ ಗ್ರಾಮದ ಶಾಸನಗಳ ಪುನರಾವಲೋಕನ	ಜಗದೀಶ	೧೨೨
೨೩.	ಕಾಮನದುರ್ಗ ಪ್ರದೇಶದ ಅಪ್ರಕಟಿತ ಶಾಸನ ಮತ್ತು ಸ್ಮಾರಕ ಶಿಲ್ಪಗಳು	ರಮೇಶಬಾಬು ಬಿ.ವಿ.	೧೨೫
೨೪.	ವಿಜಯನಗರ ಕಾಲದ ಕೂಟ ತಾಮ್ರಶಾಸನ	ನಾಗರಾಜು ಹೊ.ಮ.	೧೨೮
೨೫.	ಶಾಸನೋಕ್ತ ಬಾಗಡಿಗೆ : ಒಂದು ವಿವೇಚನೆ	ಬಸವರಾಜ ವೀ. ಖೋತ	೧೩೩
೨೬.	ಬೆಂಗಳೂರು ಜಿಲ್ಲೆಯ ಶಾಸನಗಳ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಪಾತ್ರ	ಮಧುಸೂದನ ಎಂ.ಎಸ್. ಯುವರಾಜು ಆರ್.	೧೩೬

೨೭.	ನಾಲ್ಕು ಅಪ್ರಕಟಿತ ತಮಿಳು ಶಾಸನಗಳು	ಧನಪಾಲ್ ಕೆ.	೧೪೨
೨೮.	ಸಾಲಗುಂದ ಪರಿಸರದ ವೀರಗಲ್ಲುಗಳು	ರಡ್ಡೆಪ್ಪ	೧೪೮
೨೯.	ಕಳಸ ಸೀಮೆ-ಸಂಸೆ ಮೂರುನಾಡಿನ ಅಪ್ರಕಟಿತ ವೀರಗಲ್ಲುಗಳು	ಪಾಂಡುರಂಗ ಹೆಚ್.ಆರ್.	೧೫೪
೩೦.	ಕಳೆದ ಶತಮಾನದ ಹುಲಿಬೇಟೆ ಸ್ಮಾರಕಶಾಸನ	ಹೊನ್ನೂರಸ್ವಾಮಿ ಹೆಚ್.	೧೬೧
೩೧.	ಕುಣಿಗಲ್ ನಾಡಿನ ಹುಲಿಬೇಟೆಯ ವೀರಗಲ್ಲು ಶಿಲ್ಪಗಳು	ರೇವಣಸಿದ್ದಯ್ಯ ಕೆ.	೧೬೩
೩೨.	ಹೊದ್ಲುರು ಗ್ರಾಮದ ವೀರಗಲ್ಲುಗಳು	ಅಶೋಕ ಕಂದಗಲ್	೧೬೮
೩೩.	ಅಳವಂಡಿ ಶಾಸನಗಳ ಅವಲೋಕನ	ನಾಗವೇಣಿ ಎ.	೧೭೧
೩೪.	ಹೊಯ್ಸಳರ ಶಾಸನ ಸಾಹಿತ್ಯ : ಹೊಸ ನೋಟಗಳು	ಗಂಗಾಂಬಿಕೆ ಗೋವರ್ಧನ ಎಸ್.	೧೭೮
೩೫.	ಕೊಪ್ಪಳ ಜಿಲ್ಲೆಯ ವಿಶಿಷ್ಟ ವೀರಗಲ್ಲುಗಳು	ಗೀತಾ ಪಾಟೀಲ	೧೭೯
೩೬.	ಕೊಂಗುನಾಡಿನ ಜೈನಶಾಸನಗಳು : ಒಂದು ಅವಲೋಕನ	ವಿಜಯಕುಮಾರ್ ಪಿ.	೧೮೪
೩೭.	ಇಡಗೂರು ಪರಿಸರದ ಸ್ಮಾರಕ ಶಿಲ್ಪಗಳು	ಶ್ರೀನಿವಾಸ ಎ.ಜಿ.	೨೦೧
೩೮.	ಕಡೂರು ಶಾಸನಗಳಲ್ಲಿ ದಾನಿಗಳ ವ್ಯಕ್ತಿತ್ವ	ಭಾರತಿ ನಾಗೇಂದ್ರ	೨೦೫
೩೯.	ಉತ್ತರಾದಿಮಠದ ಸ್ವಾಮಿಗಳು ಜಂಗಮನಿಗೆ ಮಠ ಕಟ್ಟಿಸಿಕೊಟ್ಟ ಶಿಲಾಶಾಸನ	ನಂಜುಂಡಸ್ವಾಮಿ ಬಿ.	೨೧೧
೪೦.	ಪ್ರಾಚೀನ ಪುನ್ನಾಟ ಪ್ರದೇಶದ ಶಾಸನೋಕ್ತ ನಾಡುಗಳು	ಸುರೇಶ ಎ.ಎನ್.	೨೧೩
೪೧.	ಚಿಕ್ಕಮಗಳೂರು ಜಿಲ್ಲೆಯ ಶಾಸನೋಕ್ತ ಮಹಿಳೆಯರ ಕೈಂಕರ್ಯ	ಉಷಾರಾಣಿ ಎಚ್.ಎಸ್.	೨೧೬
೪೨.	ಮಾವನೂರು ಶಾಸನ : ಒಂದು ಅವಲೋಕನ	ನಳಿನಿ ವೆಂಕಟೇಶ್	೨೨೨
೪೩.	ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಕೆರೆಗಳು	ನಾಗರಾಜು ಡಿ.ಎಂ.	೨೨೫
೪೪.	ದೇವಗಿರಿ ಯಾದವರ ಕಾಲದ ಶಾಸನೋಕ್ತ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು	ಮಹಾಂತೇಶ ಮ. ಅಕ್ಕಿ	೨೨೮
೪೫.	ಶಾಸನಗಳಲ್ಲಿ 'ರೋಣ'	ಮಲ್ಲಿಕಾರ್ಜುನ ಕುಂಬಾರ	೨೩೧
೪೬.	ಢಕ್ಕೆಬಲಿ : ಶಾಸನೋಕ್ತ ಪೂಜಾಚರಣೆ	ನಿರ್ಮಲಾ ಎಸ್.ವೈ.	೨೩೩
೪೭.	ಹಾವೇರಿ ಜಿಲ್ಲೆಯ ಶಾಸನ ಸಾಹಿತ್ಯ	ಸಿದ್ಧಲಿಂಗಮ್ಮ ಕೊಂಡಜ್ಜಿ	೨೩೭
೪೮.	ಶಾಸನಗಳಲ್ಲಿ ಮಹಿಳೆ ಮತ್ತು ಪರಿಸರ	ರಾಜೇಶ್ ಪ್ರಸಾದ್	೨೪೨
೪೯.	ರಾಣಿ ಪಂಪಾದೇವಿಯರ ಕುರಿತ ಕೆಲವು ಗೊಂದಲಗಳು	ಸಂಧ್ಯಾ ವಿ.	೨೪೫
೫೦.	ಹನುಮನ ಮೂಲನೆಲೆ : ಅಂಜನಾದ್ರಿ ಪರಿಸರ	ವಿರೂಪಾಕ್ಷಿ ಪೂಜಾರಹಳ್ಳಿ	೨೫೦
೫೧.	ಫಾಂಸನಾ ಶೈಲಿ : ಆರಂಭ ಮತ್ತು ಬೆಳವಣಿಗೆ	ಪ್ರಭಾಕರ್ ಎಂ.ಎನ್.	೨೬೧
೫೨.	ಎಲೆಬೇತೂರಿನ ಮಹಿಷಮರ್ದಿನಿ ಶಿಲ್ಪ	ಶಕುಂತಲ ಎನ್.	೨೬೬
೫೩.	ಜಂತ್ಲಿ ಶಿರೂರಿನ ಶ್ರೀಕೃಷ್ಣ ದೇವಾಲಯದ ಕಥಾನಿರೂಪಕ ಶಿಲ್ಪಗಳು	ದತ್ತಪ್ರಸನ್ನ ಪಾಟೀಲ	೨೬೯
೫೪.	ಶಿಕಾರಿಪುರ ತಾಲ್ಲೂಕಿನ ಬೋಗಿ ಗ್ರಾಮದ ಅವಶೇಷಗಳು	ರಮೇಶ ಬಿ. ಹಿರೇಜಂಬೂರು	೨೭೪
೫೫.	ನ್ಯಾಮತಿ ತಾಲ್ಲೂಕಿನ ಕುಂಕೋವಾದ ವೀರಭದ್ರ ದೇವಸ್ಥಾನದ ಉಬ್ಬುಶಿಲ್ಪಗಳು	ಸಂತೇಬೆನ್ನೂರು ಸುಮತೀಂದ್ರ ನಾಡಿಗ್	೨೭೬

೫೬.	ಕೇವಲ ನರಸಿಂಹಶಿಲ್ಪ : ಗಿರಿಜಾ ನರಸಿಂಹಶಿಲ್ಪ	ಪದ್ಮಜಾ ದೇಸಾಯಿ	೨೭೯
೫೭.	ತ್ರಿಯಂಬಕೇಶ್ವರ ದೇವಾಲಯ : ಇತಿಹಾಸ ಮತ್ತು ವಾಸ್ತು ವೈಶಿಷ್ಟ್ಯತೆ	ಮಂಜುಳ ಎ.ಸಿ.	೨೮೨
೫೮.	ಸುರಪುರದ ಶ್ರೀವೇಣುಗೋಪಾಲಸ್ವಾಮಿ ದೇವಾಲಯದ ಭಿತ್ತಿಶಿಲ್ಪಗಳು	ನಿಂಗನಗೌಡ ಹ. ದೇಸಾಯಿ	೨೮೬
೫೯.	ಶೃಂಗೇರಿಯ ಚತುರ್ವಿದ್ಯೇಶ್ವರ ಮೂರ್ತಿಶಿಲ್ಪದ ವೈಶಿಷ್ಟ್ಯತೆ	ಅಜಯ್‌ಕುಮಾರ್ ಶರ್ಮ	೨೯೦
೬೦.	ಅರೆಬಿಳಿಚಿಯ ಅವಶೇಷಗಳ ಶೋಧ	ಪ್ರವೀಣ್ ದೊಡ್ಡಗೌಡ್ರ	೨೯೪
೬೧.	ಗಂಗಾಬಾಬಳಗಾಂವ್‌ನ ಚಿದಂಬರೇಶ್ವರ ದೇವಾಲಯ	ಕುಮಾರ್ ಎ.ಸಿ.	೨೯೮
೬೨.	ಎಕ್ಕೋಟಿ ಮತ್ತು ಬ್ರಹ್ಮ ಜಿನಾಲಯಗಳು	ಸ್ಮಿತಾ ರೆಡ್ಡಿ ಡಿ.	೩೦೨
೬೩.	ಹೂಲಿಯ ಕಾಶ್ಮೀರಶೈಲಿಯ ವೈಕುಂಠ ವಿಷ್ಣುಶಿಲ್ಪ	ಸೀತಾಲಕ್ಷ್ಮಿ ರಾವ್	೩೧೨
೬೪.	ತಳಗವಾರ ಗ್ರಾಮದ ಐತಿಹಾಸಿಕ ಕುರುಹುಗಳು	ನಾಗರಾಜ ಟಿ.ವಿ.	೩೧೭
೬೫.	ಕೋಲಾರ ಜಿಲ್ಲೆಯನ್ನಾಳಿದ ಶಿವಾಜಿಯ ಸೊಸೆ ಜಯತಾಬಾಯಿ	ನಾಗೇಂದ್ರ	೩೨೩
೬೬.	ದೋರಸಮುದ್ರ – ಹಳೇಬೀಡು ಕೆಲವು ಹೊಸ ವಿಚಾರಗಳು	ಯೋಗೇಶ್ವರಿ ಎಂ.	೩೨೫
೬೭.	ವೀರಬಲ್ಲಾಳನ ನೆಲವೀಡು ಹಳ್ಳೂರು	ಗುಜ್ಜಾರಪ್ಪ ಎಚ್.	೩೩೧
೬೮.	ಐತಿಹಾಸಿಕ ನೆಲೆಯಾಗಿ ಉದ್ರಿ	ಮಹಾದೇವಪ್ಪ ರಂಗಣ್ಣನವರ	೩೩೫
೬೯.	'ಮಹಾರಾಜವಾಡಿ–ಎಟುಸಾಸಿರ'ದ ಭಾಗವಾಗಿ 'ಕೊಯ್ಯಕೊಜುನಾಡು –೩೦೦' ಮತ್ತು ಅದರ ಪ್ರಭುಗಳು	ಕೃಷ್ಣಮೂರ್ತಿ ಪಿ.ವಿ.	೩೩೮
೭೦.	ಪು(ಪೊ)ದಲ್ನಾಡು : ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಮೀಕ್ಷೆ	ನರಸಿಂಹನ್ ಕೆ.ಆರ್.	೩೪೭
೭೧.	ಜಿಡ್ಡುಳಿಗೆ ನಾಡು : ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯ	ಸುಂಕಂ ಗೋವರ್ಧನ	೩೫೫
೭೨.	ರಾಮನಾಥನ ಆಡಳಿತಾಧಿಕಾರಿ ಹೊನ್ನಮಾರಗೌಡನ ವಂಶಸ್ಥರು	ನಂದೀಶ್ವರ ಎನ್.	೩೬೪
೭೩.	ಚೋಳರ ನೆಲೆವೀಡಾದ 'ವಿಕ್ರಮ ಚೋಳಪುರಂ'ನ ಹುಡುಕಾಟ	ಕುಮಾರಸ್ವಾಮಿ ತಾ.ನಂ.	೩೬೭
೭೪.	ಕೋತಾ ಗ್ರಾಮದ ಅವಶೇಷಗಳು	ಸುಜಾತ ಎಸ್. ನೇಟೇಕಲ್	೩೭೧
೭೫.	ಬಿನ್ನಾಹ ಪದ್ಧತಿ ಕೃತಿಯಲ್ಲಿ ಕದಂಬ ಇತಿಹಾಸದ ಉಲ್ಲೇಖಗಳು	ಕೆಳದಿ ಗುಂಡಾಜೋಯಿಸ್	೩೭೩
೭೬.	ಹಾವೇರಿ ಜಿಲ್ಲೆಯ ಸ್ಮಾರಕಶಿಲ್ಪಗಳಲ್ಲಿ ಆಭರಣಗಳು	ಮದ್ದಾನಸ್ವಾಮಿ ವೈ.	೩೭೭
೭೭.	ನಾಯಕನಹಟ್ಟಿ ಶ್ರೀತಿಪ್ಪೇಸ್ವಾಮಿಮಠ(ದೇವಸ್ಥಾನ)ದ ಜಮಾ–ಖರ್ಚಿನ ದಾಖಲೆ : ೧೮೦೦–೧೮೦೧	ಲಕ್ಷ್ಮಣ್ ತೆಲಗಾವಿ	೩೮೬
೭೮.	ಶಿವಪ್ಪ ಒಪ್ಪಿತವುಳ್ಳ ಓಲೆಗರಿ ಸನ್ನದು	ಕಾವ್ಯಶ್ರೀ ಎಂ., ಕಾರ್ತಿಕ್ ಎಸ್.	೩೯೩
೭೯.	ಪ್ರಾಚೀನ ಬೆಂಗಳೂರು ಯಾವುದು?	ರಾಜೇಶ್ ಹಂ.ಗು.	೪೦೨
೮೦.	ಕರಾವಳಿ ಕರ್ನಾಟಕದಲ್ಲಿ ಮಧ್ಯಕಾಲೀನ ಕಂದಾಯ ಪದ್ಧತಿ	ಮಧುರಾಜ್, ಭರತ್ ಎ.ಸಿ.	೪೦೭
೮೧.	ಡಾಬ್ಸ್ ಪ್ರಸ್ತಾಪಿಸಿದ ಚಿತ್ರದುರ್ಗದ ವಶಕ್ಕಾಗಿ ನಡೆದ ವಿಫಲ ದಂಗೆ	ರಾಜಶೇಖರಪ್ಪ ಬಿ.	೪೧೩
೮೨.	ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನ : ಅಮರೇಶ್ವರ ದೈವ	ಅಮರೇಶ ಯತಗಲ್	೪೨೨
೮೩.	ನಂದಿಗುಡಿ ಬಸವೇಶ್ವರ ದೇವಾಲಯದ ಆಚರಣೆಗಳು	ರಾಕೇಶ್ ಬಿ.ಸಿ.	೪೨೬
೮೪.	ಬಳ್ಳಾರಿ ಜಿಲ್ಲೆಯ ಬಂಗಾಳಿ ಪಂಡಿತರು	ಧನುಷ್ ಹೆಚ್. ಶೇಖರ್	೪೨೯

೮೫.	ಕೈಫಿಯತ್ತುಗಳಲ್ಲಿ ಹಂಡೆ ಹನುಮಪ್ಪನಾಯಕ	ಪಾಟೀಲ ಎಸ್.ಸಿ.	೪೩೩
೮೬.	ಗಳಗನಾಥದ ಗಳಗೇಶ್ವರ ದೇವಸ್ಥಾನ : ಒಂದು ಅಭಿಯಾಂತ್ರಿಕ ವಿಶ್ಲೇಷಣೆ	ಕಾರ್ತೀಕ ಕಾಮಣ್ಣ	೪೩೬
೮೭.	ತಮಿಳುನಾಡಿನ ಗಡಿಭಾಗದ ವೀರಶೈವ ಮಠಗಳು	ಜಯಣ್ಣ ಬಿ.ಆರ್.	೪೪೦
೮೮.	ಕೂಲಹಳ್ಳಿ ಶರಣ ಗೋಣಿಬಸಪ್ಪ	ಐರಣಿ ಹನುಮಂತಪ್ಪ	೪೪೪
೮೯.	ಗಂಟೆಬಟ್ಲು ಹಾಗೂ ನಾಡುದೇಶ ಮುದ್ರೆ ಆಚರಣೆಗಳು	ರಘು ಆರ್.	೪೪೯
೯೦.	ದೇವರಾಯಪಟ್ಟಣದ ಪಾಳೆಯಗಾರರು	ಆದಪ್ಪ ಪಾಸೋಡಿ	೪೫೫
೯೧.	ಗುಬ್ಬಿ ತಾಲ್ಲೂಕಿನ ಬಿಡಿಶಿಲ್ಪಗಳು	ಪ್ರಸನ್ನಕುಮಾರ್ ಎಸ್.ಆರ್.	೪೬೩
೯೨.	ಚಿತ್ರಕಲಾವಿದ ಸಾಗರ ಕವಿ ಲಿಂಗಣ್ಣಯ್ಯ	ಕೆಳದಿ ವೆಂಕಟೇಶ್ ಜೋಯಿಸ್	೪೬೬
೯೩.	ಧಾರ್ಮಿಕ ಶ್ರದ್ಧಾಕೇಂದ್ರಗಳ ರಕ್ಷಣಾವ್ಯವಸ್ಥೆ ಮತ್ತು ನಿಶಸ್ತ್ರೀಕರಣ ಕಾಯಿದೆ	ಲಲಿತಾಂಬ ಎನ್.ಆರ್.	೪೭೩
೯೪.	ರಸ್ತಾಪುರ ಮನೆಯಲ್ಲಿನ ಭಿತ್ತಿ ಚಿತ್ರಗಳು	ಮಲ್ಲಿಕಾರ್ಜುನ ಸಿ. ಬಾಗೋಡಿ	೪೭೭
೯೫.	ಮೈಸೂರು ಸ್ಟೇಟ್ ಕಾಂಗ್ರೆಸ್ ಮತ್ತು ಮಿರ್ಜಾ ಇಸ್ಮಾಯಿಲ್	ಬೋರೇಗೌಡ ಎಸ್.ಬಿ.	೪೮೦
೯೬.	ಉತ್ತರಾದಿ ಸಂಗೀತಕ್ಕೆ ಮೈಸೂರು ನಗರ ಮತ್ತು ಮೈಸೂರು ಅರಮನೆಯ ಕೊಡುಗೆ	ಕೃಷ್ಣಪ್ಪ ಎಚ್.ಜಿ.	೪೮೭
೯೭.	ವಚನಗಳ ಭಾಷಾಂತರ ಇತಿಹಾಸ	ಬಸವರಾಜಪ್ಪ ಟಿ.ಎಚ್.ಎಂ.	೪೯೬
೯೮.	ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾರಿಗೆ-ಸಂಪರ್ಕಗಳ ಬೆಳವಣಿಗೆ	ನಾಗರಾಜ ಸಿ.ಎಸ್.	೫೦೨
೯೯.	ಬೆಳಗಾವಿಯ ವ್ಯಾಕ್ಸಿನ್ ಡಿಪೊ ಇನ್‌ಸ್ಟಿಟ್ಯೂಟ್	ಸ್ಮೀತಾ ಸುರೇಬಾನಕರ	೫೦೫
೧೦೦.	ಮಾಧವಮಂತ್ರಿ ಅಣೆಕಟ್ಟು : ಒಂದು ಚಾರಿತ್ರಿಕ ಅವಲೋಕನ	ವೀಣಾ ಪಿ.	೫೦೭
೧೦೧.	ಇರ್ವಿನ್‌ನಾಲಾ ಬಯಲುಪ್ರದೇಶದಲ್ಲಿ ಮಲೇರಿಯಾ ಅಂಟುಜಾಡ್ಯಗಳು	ಶಿವರಾಮು ಎಸ್.	೫೧೪
೧೦೨.	ಎಂ.ಎನ್. ಲಿಂಗಪ್ಪ : ಹಾಲುಮತ ಸಮಾಜ ಸಂಸ್ಕೃತಿ ಚಿಂತಕ	ಹಳ್ಳಿಕೇರಿ ಎಫ್.ಟಿ.	೫೨೧
೧೦೩.	೧೮೬೨ರ ಇಂಡಿಯಾ ಮತ್ತು ಅನ್ಯ ದೇಶದ ವಾರ್ತಿಕ ಪತ್ರಿಕೆ	ಸೀತಾರಾಮ ಪಿ.	೫೨೫
೧೦೪.	ಅಂದಾನಪ್ಪ ದೊಡ್ಡಮೇಟಿಯವರ ಶೈಕ್ಷಣಿಕ ಚರ್ಚೆಗಳು	ನದಾಫ ಎಸ್.ಆರ್.	೫೩೦
೧೦೫.	ಸ್ಕೌಟ್ ಮತ್ತು ಗೈಡ್ಸ್ ಚಳವಳಿಯ ಬೆಳವಣಿಗೆಯಲ್ಲಿ ಮೈಸೂರು ಒಡೆಯರ ಪಾತ್ರ	ಮಹಾಂತೇಶ ಕುತನಿ	೫೩೬
೧೦೬.	ಜೋಸಯಾ ವೆಬ್ಬ್ ಸ್ಮಾರಕ ಕಂಬದ ಸಾಗಣೆ ಬಂಡಿ	ನಿಧಿನ್ ಜಿ. ಒಲಿಕಾರ	೫೪೦
೧೦೭.	ಗೊಂಬೆರಾಮ ವಂಶಸ್ಥರಿಗೆ ಸಂಬಂಧಿಸಿದ ಕೆಲಿಗೆರೆ 'ಹದ್ದುಸ್ತಿನಕಲ್ಲು'	ಕೃಷ್ಣಯ್ಯ ಎಸ್.ಎ.	೫೪೨
೧೦೮.	ವಿಜಯಪುರದ ಅಜಾದ್ ಹಿಂದ್ ಫೌಜ	ಬಸವರಾಜ್ ಮಠ	೫೪೪
೧೦೯.	ಅಣ್ಣಿಗೇರಿಯ ತಲೆಬುರುಡೆಗಳು ಹಾಗೂ ರೇಡಿಯೋ ಕಾರ್ಬನ್‌ಡೇಟಿಂಗ್	ಸೈಯ್ಯದ್ ಜಲಾಲುದ್ದೀನ್	೫೪೬
*	ವಾರ್ಷಿಕ ವರದಿ		೫೫೧

ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು

ಸರ್ವಾಧ್ಯಕ್ಷರು, ದಿನಾಂಕ-ವರ್ಷ/ಸ್ಥಳ, ಆಶ್ರಯ/ಸಹಯೋಗ

೧. **ಡಾ|| ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು

೨. **ಡಾ|| ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು, ತುಮಕೂರು

೩. **ಡಾ|| ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ

೪. **ಡಾ|| ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ

೫. **ಡಾ|| ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

೬. **ಡಾ|| ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ
ರಾಯಚೂರು

೭. **ಡಾ|| ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜೆ. ಎಸ್. ಎಸ್. ಸಂಸ್ಥೆ, ಮೈಸೂರು

೮. **ಡಾ|| ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ
ಸೊಂಡೂರು

೯. **ಡಾ|| ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ
ಬೆಳಗಾವಿ

೧೦. **ಡಾ|| ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ
ಧಾರವಾಡ

೧೧. **ಪ್ರೊ|| ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ
ಶಿರಸಿ

೧೨. **ಡಾ|| ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ ದಿ ಮಿಥಿಕ್ ಸೊಸೈಟಿ, ಬೆಂಗಳೂರು

೧೩. **ಡಾ|| ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ ಸ್ವಾಗತ ಸಮಿತಿ, ಹರಪನಹಳ್ಳಿ

೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ
ಹಂಪಿ

೧೫. **ಡಾ|| ಜ್ಯೋತ್ಸ್ನಾ ಕಾಮತ್**
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಪೇಜಾವರ ಮಠಾಧೀಶರು, ಉಡುಪಿ

೧೬. **ಡಾ. ಎ.ಕೆ. ಶಾಸ್ತ್ರಿ**
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಶ್ರೀ ರಾಮಚಂದ್ರಾಪುರ ಮಠ
ಹೊಸನಗರ

೧೭. **ಡಾ. ಎಸ್. ರಾಜಶೇಖರ್**
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ

೧೮. **ಶ್ರೀ ಕೆಳದಿ ಗುಂಡಾ ಜೋಯಿಸ್**
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ
ಹೊನ್ನಾಳಿ

೧೯. **ಡಾ. ಬಿ.ವ್ಹಿ. ಶಿರೂರ**
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ

೨೦. **ಡಾ. ಸೂರ್ಯನಾಥ ಕಾಮತ್**
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು

೨೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ ರಾಮನಗರ, ಹಗರಿಬೊಮ್ಮನಹಳ್ಳಿ ಶ್ರೀರಾಮ ಯುವಕ ಸಂಘ

೨೨. ***ಡಾ. ವಸುಂಧರಾ ಫಿಲಿಯೋಜಾ***
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ

೨೩. ***ಡಾ. ಎಂ.ಜಿ. ನಾಗರಾಜ್***
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು

೨೪. ***ಡಾ. ಎಂ.ಎಸ್. ಕೃಷ್ಣಮೂರ್ತಿ***
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ

೨೫. ***ಡಾ. ಎಚ್.ಎಸ್. ಗೋಪಾಲರಾವ್***
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು

೨೬. ***ಡಾ. ಎಸ್.ವಿ. ವೆಂಕಟೇಶಯ್ಯ***
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ

೨೭. ***ಡಾ. ಎಸ್.ಕೆ. ಜೋಷಿ***
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು

೨೮. ***ಡಾ. ಕೆ.ಜಿ. ವಸಂತ ಮಾಧವ***
೨೬-೨೮ ಸೆಪ್ಟೆಂಬರ್ ೨೦೧೪
ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು
ಶಿರ್ವ, ಉಡುಪಿ ಜಿಲ್ಲೆ
ಉಡುಪಿ

೨೯. ***ನಾಡೋಜ ಡಾ. ಹಂಪ ನಾಗರಾಜಯ್ಯ***
೨೯-೩೧ ಅಕ್ಟೋಬರ್ ೨೦೧೫
ಕರ್ನಾಟಕ ಸಂಘ (ರಿ.) ಮಂಡ್ಯ
ಮಂಡ್ಯ ಜಿಲ್ಲೆ

೩೦. ***ಪ್ರೊ. ಕೆ. ಪದ್ದಯ್ಯ***
೨೨-೨೪ ಅಕ್ಟೋಬರ್ ೨೦೧೬
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ., ಧಾರವಾಡ

೩೧. ***ಡಾ. ಪಿ.ಎನ್. ನರಸಿಂಹಮೂರ್ತಿ***
೨೮-೩೦ ಅಕ್ಟೋಬರ್ ೨೦೧೭
ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ
ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ
ಮತ್ತು ಶ್ರೀ ಬಿ.ಸಿ. ಪಾಟೀಲ ಟ್ರಸ್ಟ್
ಕೊಪ್ಪಳ

೩೨. ***ಡಾ. ಬಿ. ರಾಜಶೇಖರಪ್ಪ***
೨೬-೨೮ ಅಕ್ಟೋಬರ್ ೨೦೧೮
ಶ್ರೀಮದ್ವೀರಶೈವ ಶಿವಯೋಗಮಂದಿರ
ಸಂಸ್ಥೆ, ಶಿವಯೋಗಮಂದಿರ, ಬಾದಾಮಿ
ತಾಲ್ಲೂಕು, ಬಾಗಲಕೋಟೆ ಜಿಲ್ಲೆ

೩೩. ***ಡಾ. ಟಿ.ವಿ. ವೆಂಕಟಚಾಲಶಾಸ್ತ್ರೀ***
೧೮-೨೦ ಅಕ್ಟೋಬರ್ ೨೦೧೯
ಶ್ರೀ ಹೊಂಬುಜ ಜೈನಮಠ, ಹುಂಚ,
ಹೊಸನಗರ ತಾ॥ ಶಿವಮೊಗ್ಗ ಜಿಲ್ಲೆ.

೩೪. ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೪-೨೮ ಡಿಸೆಂಬರ್ ೨೦೨೦
ಬೆಂಗಳೂರು.

೩೫. ***ಡಾ. ಗುರುಮೂರ್ತಿ ಪೆಂಡಕೂರು***
೧೯-೨೧ ಫೆಬ್ರವರಿ ೨೦೨೨
ಬೆಂಗಳೂರು.

೩೬. ***ಡಾ. ಕೆ.ಆರ್. ಗಣೇಶ***
೨೪-೨೬ ನವೆಂಬರ್ ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ
ಶ್ರೀಕ್ಷೇತ್ರ ಹೊರನಾಡು.



ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

[ಪ್ರಾರಂಭ : ೨೦೦೧ ರಿಂದ ನಗದು ಹತ್ತು ಸಾವಿರ ರೂಪಾಯಿಗಳು]

---

೧ ***ಡಾ. ಕೆ.ವಿ. ರಮೇಶ***
೧೫ನೇ ವಾರ್ಷಿಕ ಸಮ್ಮೇಳನ
ಅಕ್ಟೋಬರ್ ೨೦೦೧
ಉಡುಪಿ

೨ ***ಡಾ. ಶ್ರೀನಿವಾಸ ರಿತ್ತಿ***
೧೬ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೨
ಹೊಸನಗರ

೩ ***ಡಾ. ದೇವರಕೊಂಡಾರೆಡ್ಡಿ***
೧೭ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೩
ಬಾದಾಮಿ

೪ ***ಡಾ. ಬಿ. ರಾಜಶೇಖರಪ್ಪ***
೧೮ನೇ ಸಮ್ಮೇಳನ
ಸೆಪ್ಟಂಬರ್ ೨೦೦೪
ಹೊನ್ನಾಳಿ

೫ ***ಡಾ. ಕೆ.ಆರ್. ಗಣೇಶ್***
೧೯ನೇ ಸಮ್ಮೇಳನ
ಸೆಪ್ಟಂಬರ್ ೨೦೦೫
ಸೇಡಂ

೬ ***ಡಾ. ಎಂ.ಜಿ. ನಾಗರಾಜ್***
೨೦ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೬
ನಂಜನಗೂಡು

೭ ***ಡಾ. ಎಚ್.ಎಸ್. ಗೋಪಾಲರಾವ್***
೨೧ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿ

೮ ***ಡಾ. ಪಿ.ಎನ್. ನರಸಿಂಹಮೂರ್ತಿ***
೨೨ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೮
ಧರ್ಮಸ್ಥಳ

೯ ***ಶ್ರೀಮತಿ ಹನುಮಾಕ್ಷಿ ಗೋಗಿ***
೨೩ನೇ ಸಮ್ಮೇಳನ
ಅಕ್ಟೋಬರ್ ೨೦೦೯
ಬಾಳೇಹೊನ್ನೂರು

೧೦ ***ಡಾ. ಪಿ.ವಿ. ಕೃಷ್ಣಮೂರ್ತಿ***
೨೪ನೇ ಸಮ್ಮೇಳನ
ನವೆಂಬರ್ ೨೦೧೦
ಆದಿಚುಂಚನಗಿರಿ

೧೧ ***ಶ್ರೀ ಕೆ. ಮೊಹಮ್ಮದ್ ಶರೀಫ್***
೨೫ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೧
ಬೆಂಗಳೂರು

೧೨ ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೬ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೨
ಶೃಂಗೇರಿ

೧೩ ***ಡಾ. ಆರ್. ಶೇಷಶಾಸ್ತ್ರಿ***
೨೭ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೩
ಬೆಂಗಳೂರು

೧೪ ***ಶ್ರೀ ಎಚ್.ಎಂ. ನಾಗರಾಜರಾವ್***
೨೮ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೪
ಶಿರ್ವ, ಉಡುಪಿ ಜಿಲ್ಲೆ.

೧೫ ***ಡಾ. ಡಿ.ವಿ. ಪರಮಶಿವಮೂರ್ತಿ***
೨೯ನೇ ಸಮ್ಮೇಳನ
ಅಕ್ಟೋಬರ್ ೨೦೧೫
ಮಂಡ್ಯ

೧೬ ***ಡಾ. ಎಸ್.ವಿ. ಪಾಡಿಗರ್***
೩೦ನೇ ಸಮ್ಮೇಳನ
ಅಕ್ಟೋಬರ್ ೨೦೧೬
ಕ.ವಿ.ವಿ., ಧಾರವಾಡ

೧೭ ***ಡಾ. ಎಂ.ಜಿ. ಮಂಜುನಾಥ್***
೩೧ನೇ ಸಮ್ಮೇಳನ
ಅಕ್ಟೋಬರ್ ೨೦೧೭
ಗವಿಮಠ, ಕೊಪ್ಪಳ


೧೮ ***ಶ್ರೀ ಆನಂದ ಎಸ್. ಕುಂಬಾರ***
೩೨ನೇ ಸಮ್ಮೇಳನ
ಅಕ್ಟೋಬರ್ ೨೦೧೮
ಶಿವಯೋಗಮಂದಿರ, ಬಾದಾಮಿ

೧೯ ***ಡಾ. ಜಿ.ಎಂ. ನಾಗಯ್ಯ***
೩೩ನೇ ಸಮ್ಮೇಳನ
ಅಕ್ಟೋಬರ್ ೨೦೧೯
ಶ್ರೀ ಹೊಂಬುಜ ಶಿವಮೊಗ್ಗ ಜಿಲ್ಲೆ.

೨೦ ***ಪ್ರೊ. ಜಿ.ಎನ್. ಉಪಾಧ್ಯ***
೩೪ನೇ ಸಮ್ಮೇಳನ – ೨೦೨೦
ಬೆಂಗಳೂರು

೨೧ ***ಡಾ. ಕೃಷ್ಣವೇಣಿ***
೩೫ನೇ ಸಮ್ಮೇಳನ – ೨೦೨೧
ಬೆಂಗಳೂರು

೨೨ ***ಡಾ. ಡಿ.ಎಂ. ನಾಗರಾಜು***
೩೬ನೇ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಶ್ರೇಷ್ಠ ಇತಿಹಾಸತಜ್ಞರಿಗಾಗಿ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಸನ್ಮಾನ್ಯ
ಶ್ರೀಮತಿ ವರಲಕ್ಷ್ಮೀ ಮತ್ತು ಶ್ರೀ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿ

[ಪ್ರಾರಂಭ : ೨೦೧೨ ರಿಂದ, ನಗದು ಒಂದು ಲಕ್ಷ ರೂಪಾಯಿಗಳು]

೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೨೬ನೆಯ ಸಮ್ಮೇಳನ
೨೨.೦೯.೨೦೧೨, ಶೃಂಗೇರಿ

೨. **ಡಾ. ಸೂರ್ಯನಾಥ ಕಾಮತ್**
೨೭ನೆಯ ಸಮ್ಮೇಳನ
೨೧.೦೯.೨೦೧೩, ಬೆಂಗಳೂರು

೩. **ಡಾ. ಅ. ಸುಂದರ**
೨೮ನೆಯ ಸಮ್ಮೇಳನ
೨೬.೦೯.೨೦೧೪, ಶಿರ್ವ, ಉಡುಪಿ.

೪. **ಡಾ. ಎಂ.ಜಿ. ನಾಗರಾಜ್**
೨೯ನೆಯ ಸಮ್ಮೇಳನ
೨೯.೧೦.೨೦೧೫, ಮಂಡ್ಯ

೫. **ಡಾ. ಎಸ್. ರಾಜಶೇಖರ್**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ

೬. **ಡಾ. ಶ್ರೀನಿವಾಸ ರಿತ್ತಿ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೭. **ಡಾ. ಕೆಳದಿ ಗುಂಡಾಜೋಯಿಸ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೮. **ಡಾ. ವಸುಂಧರಾ ಫಿಲಿಯೋಜ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ


೯. **ಡಾ. ರಾಜರಾಮ ಹೆಗಡೆ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು

೧೦. **ಡಾ. ಪಿ.ವಿ. ಕೃಷ್ಣಮೂರ್ತಿ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

೧೧. **ನಾಡೋಜ ಡಾ. ಹಂಪ ನಾಗರಾಜಯ್ಯ**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



೧೨. **ಡಾ. ಎಚ್.ಎಸ್. ಗೋಪಾಲರಾವ್**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಮೇಲಣಮಠದ ಶ್ರೀ ಎಸ್. ಸಿದ್ದಣ್ಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ).
ಅರಸೀಕೆರೆ, ಇವರು ಸ್ಥಾಪಿಸಿರುವ ದತ್ತಿಯಿಂದ

'ನೊಳಂಬಶ್ರೀ' ಪ್ರಶಸ್ತಿ

[ಪ್ರಾರಂಭ : ೨೦೧೫ ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಡಾ. ಎಂ.ಎಸ್. ಕೃಷ್ಣಮೂರ್ತಿ**
೨೯ನೆಯ ಸಮ್ಮೇಳನ
೨೯.೧೦.೨೦೧೫, ಮಂಡ್ಯ

೨. **ಡಾ. ಎಚ್. ಜಯಮ್ಮ ಕರಿಯಣ್ಣ**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ

೩. **ಪ್ರೊ. ಕೆ.ಆರ್. ಬಸವರಾಜು**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೪. **ಡಾ. ಬಿ. ನಂಜುಂಡ ಸ್ವಾಮಿ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೫. **ಡಾ. ಡಿ.ವಿ. ಪರಮಶಿವಮೂರ್ತಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೬. **ಡಾ. ಸುಂಕಂ ಗೋವರ್ಧನ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು

೭. **ಡಾ. ಎನ್. ನಂದೀಶ್ವರ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

೮. **ಡಾ. ಡಿ.ಎನ್. ಯೋಗೀಶ್ವರಪ್ಪ**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಶ್ರೀಮತಿ ವಿ. ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ
ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು
ಸ್ಥಾಪಿಸಿರುವ ದತ್ತಿಯಿಂದ

'ಸಂಶೋಧನಶ್ರೀ' ಪ್ರಶಸ್ತಿ

[ಪ್ರಾರಂಭ : ೨೦೧೬ ರಿಂದ, ನಗದು ಇಪ್ಪತ್ತೈದು ಸಾವಿರ ರೂಪಾಯಿಗಳು]

೧. **ಡಾ. ಬಿ. ರಾಜಶೇಖರಪ್ಪ**
೩೦ನೆಯ ಸಮ್ಮೇಳನ
೨೨.೧೦.೨೦೧೬, ಧಾರವಾಡ

೨. **ಪ್ರೊ. ಲಕ್ಷ್ಮಣ್ ತೆಲಗಾವಿ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ


೩. **ಡಾ. ಕೆ. ಬಿ. ಶಿವತಾರಕ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೪. **ಡಾ. ಶೀಲಾಕಾಂತ ಪತ್ತಾರ್**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೫. **ಡಾ. ಕೆ. ರವೀಂದ್ರನಾಥ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು

೬. **ಡಾ. ಮೀನಾಕ್ಷಿ ಎಂ.ಎಂ.**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

೭. **ಡಾ. ಆರ್. ಗೋಪಾಲ್**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ ದತ್ತಿಯಿಂದ

'ನಾಯಕಶ್ರೀ' ಪ್ರಶಸ್ತಿ

[ಪ್ರಾರಂಭ : ೨೦೧೭ ರಿಂದ, ನಗದು ಹದಿನೈದು ಸಾವಿರ ರೂಪಾಯಿಗಳು]

೧. **ಡಾ. ಸಿ.ಆರ್. ಶಾಮಲ, ಮುಂಬೈ**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ


೨. **ಡಾ. ಡಿ.ಎನ್. ಯೋಗೀಶ್ವರಪ್ಪ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. **ಡಾ. ವಿರೂಪಾಕ್ಷಿ ಪೂಜಾರಹಳ್ಳಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. **ಡಾ. ಮೀರಾಸಾಬಿಹಳ್ಳಿ ಶಿವಣ್ಣ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು

೫. **ಡಾ. ಅಮರೇಶ ಯತಗಲ್**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

೬. **ಡಾ. ಎಂ.ಕೆ. ದುರುಗಪ್ಪ**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಮುಂಬೈನ ಡಾ. ಸಿ.ಆರ್. ಶ್ಯಾಮಲ ಅವರು ಸ್ಥಾಪಿಸಿರುವ

'ಡಾ ಶ್ರೀನಿವಾಸ ಹಾವನೂರ ಸ್ಮರಣಾರ್ಥ' ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಡಾ. ಬೆಂ. ಶಾ. ಶ್ಯಾಮಲಾ ರತ್ನಕುಮಾರಿ**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೨. **ಡಾ. ಕೆ. ವಸಂತಲಕ್ಷ್ಮಿ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೩. **ಡಾ. ಕೂ.ಸ. ಅಪರ್ಣಾ**
೩೪ನೆಯ ಸಮ್ಮೇಳನ – ೨೦೨೦
ಬೆಂಗಳೂರು

೪. **ಡಾ. ಎಸ್.ಕೆ. ಅರುಣಿ**
೩೫ನೆಯ ಸಮ್ಮೇಳನ – ೨೦೨೧
ಬೆಂಗಳೂರು

೫. **ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ**
೩೬ನೆಯ ಸಮ್ಮೇಳನ – ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ, ಇವರು ಮಹಿಳಾ ಸಂಶೋಧಕಿಯರಿಗೆ ನೀಡುವ

'ಸುಮಂಗಲಾ ಪಾಟೀಲ ಮಹಿಳಾ' ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಶ್ರೀಮತಿ ಸೀತಾಲಕ್ಷ್ಮೀರಾವ್**
೩೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೨. **ಡಾ. ಸ್ಮಿತಾ ಸುರೇಬಾನಕರ್**
೩೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. **ಡಾ. ಸಿದ್ಧಲಿಂಗಮ್ಮ**
೩೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. **ಡಾ. ಎಚ್.ಎಸ್. ಉಷಾರಾಣಿ**
೩೪ನೆಯ ಸಮ್ಮೇಳನ, ೨೦೨೦,
ಬೆಂಗಳೂರು

೫. **ಡಾ. ವಿ. ಶೋಭಾ**
೩೫ನೆಯ ಸಮ್ಮೇಳನ, ೨೦೨೧
ಬೆಂಗಳೂರು

೬. **ಡಾ. ಎನ್.ಆರ್. ಲಲಿತಾಂಬ**
೩೬ನೆಯ ಸಮ್ಮೇಳನ, ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಡಾ. ಸೂರ್ಯನಾಥ ಯು. ಕಾಮತ್ ಅವರ ಹೆಸರಿನಲ್ಲಿ ಸ್ಥಾಪಿಸಿರುವ

'ಸೂರ್ಯಕೀರ್ತಿ' ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]


೧. **ಡಾ. ಎಚ್. ಚಂದ್ರಶೇಖರ್**
೮೨ನೆಯ ಸಮ್ಮೇಳನ
೨೬.೧೧.೨೦೧೮, ಬಾದಾಮಿ

೨. **ಶ್ರೀ ಎಂ.ಬಿ. ಪಾಟೀಲ**
೮೩ನೆಯ ಸಮ್ಮೇಳನ
೧೮.೧೧.೨೦೧೯, ಹೊಂಬುಜ

೩. **ಶ್ರೀ ಎಸ್. ರಾಜೇಂದ್ರಪ್ಪ**
೮೪ನೆಯ ಸಮ್ಮೇಳನ, ೨೦೨೦
ಬೆಂಗಳೂರು

೪. **ಶ್ರೀ ಎಂ. ನಿತ್ಯಾನಂದ ಪೈ**
೮೫ನೆಯ ಸಮ್ಮೇಳನ, ೨೦೨೧
ಬೆಂಗಳೂರು

೫. **ಡಾ. ಜಗದೀಶ ಅಗಸಿಬಾಗಿಲವರ**
೮೬ನೆಯ ಸಮ್ಮೇಳನ, ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.




ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿರುವ

'ಡಾ. ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ' ಪ್ರಶಸ್ತಿ

[ಪ್ರಾರಂಭ : ೨೦೨೧ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ**
ಽ೫ನೆಯ ಸಮ್ಮೇಳನ
೨೦೨೧



೧. **ಶ್ರೀ ಎಂ.ಎನ್. ಪ್ರಭಾಕರ್**
೩೬ನೆಯ ಸಮ್ಮೇಳನ-೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ
ಶ್ರೀಕ್ಷೇತ್ರ ಹೊರನಾಡು.

ಪ್ರೊ. ಕೆ. ಪದ್ದಯ್ಯ, ಡೆಕ್ಕನ್ ಕಾಲೇಜು, ಪುಣೆ ಇವರು ಸ್ಥಾಪಿಸಿರುವ

'ಡಾ. ಎಂ.ಎಚ್. ಕೃಷ್ಣ ಮೆರಿಟ್' ಅವಾರ್ಡ್

[ಪ್ರಾರಂಭ: ೨೦೧೭ರಿಂದ, ನಗದು ಎರಡು ಸಾವಿರ ರೂಪಾಯಿಗಳು - ಪ್ರಾಗೈತಿಹಾಸಿಕ ಸಂಶೋಧನ ಲೇಖನಕ್ಕೆ]

೧. **ಡಾ. ಎಸ್.ವೈ. ಸೋಮಶೇಖರ್**
ಷ೧ನೆಯ ಸಮ್ಮೇಳನ
೨೮.೧೦.೨೦೧೭, ಕೊಪ್ಪಳ

೨. **ಶ್ರೀ ಕೆ. ರೇವಣಸಿದ್ಧಯ್ಯ**
ಷ೨ನೆಯ ಸಮ್ಮೇಳನ
೨೬.೧೦.೨೦೧೮, ಬಾದಾಮಿ

೩. **ಡಾ. ಮೋಹನ ಆರ್.**
ಷ೩ನೆಯ ಸಮ್ಮೇಳನ
೧೮.೧೦.೨೦೧೯, ಹೊಂಬುಜ

೪. **ಶ್ರೀ ಬಿ.ಈ. ರೇಣುಕಾಸ್ವಾಮಿ ಒಡೆಯರ್**
ಷ೪ನೆಯ ಸಮ್ಮೇಳನ
೨೦೨೦, ಬೆಂಗಳೂರು

೫. **ಶ್ರೀ ಪ್ರವೀಣ್‌ಕುಮಾರ್ ಕೆ.**
ಷ೬ನೆಯ ಸಮ್ಮೇಳನ, ೨೦೨೨
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ
ದೇವಸ್ಥಾನ, ಶ್ರೀಕ್ಷೇತ್ರ ಹೊರನಾಡು.



ಡಾ. ದೇವರಕೊಂಡಾರೆಡ್ಡಿ ಅವರ ಅಭಿನಂದನಾ ಸಮಿತಿಯು ಸ್ಥಾಪಿಸಿರುವ ದತ್ತಿಯಿಂದ ಬರುವ ಬಡ್ಡಿಯಲ್ಲಿ
ಕರ್ನಾಟಕ ಇತಿಹಾಸ ಅಕಾದೆಮಿಯ

ಅಂತರ್ಜಾಲ ನಿರ್ವಹಣೆ

[ಪ್ರಾರಂಭ : ೨೦೧೬ರಿಂದ, ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು]

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ


ಇತಿಹಾಸ ಸಂಶೋಧನ ಪ್ರಸಕ್ತ
ಹಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಅತ್ಯುತ್ತಮ ಗ್ರಂಥ ಪ್ರಶಸ್ತಿ

[ಪ್ರಾರಂಭ : ೨೦೨೦ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. **ಡಾ. ಎಸ್. ಗುರುಮೂರ್ತಿ**
ಖಳನೆಯ ಸಮ್ಮೇಳನ – ೨೦೨೦
ಬೆಂಗಳೂರು
ಕದಂಬರು: ಸಮಗ್ರ ಅವಲೋಕನ



೨. **ಡಾ. ಎಸ್. ಗಂಗಾಂಬಿಕೆ**
ಖಜನೆಯ ಸಮ್ಮೇಳನ – ೨೦೨೧
ಬೆಂಗಳೂರು
ಕೆಂಪೇಗೌಡರು ಮತ್ತು ಅವರ ವಂಶೀಯರು



ಕರ್ನಾಟಕ ಇತಿಹಾಸ ಅಕಾದೆಮಿ ೩೫ನೆಯ ವಾರ್ಷಿಕ ಸಮ್ಮೇಳನ

ಸಮ್ಮೇಳನಾಧ್ಯಕ್ಷರು : **ಡಾ. ಗುರುಮೂರ್ತಿ ಪೆಂಡಕೂರು**

ಅಧ್ಯಕ್ಷೀಯ ಭಾಷಣ

ಕರ್ನಾಟಕ ಇತಿಹಾಸ ಅಕಾದೆಮಿಯ ಮೂವತ್ತೈದನೇ ಅಧಿವೇಶನಕ್ಕೆ ಸಮಾವರಣಗೊಂಡಿರುವ ನಾಡಿನ ವಿದ್ವಜ್ಜನರೇ, ಈ ಅಧಿವೇಶನವನ್ನು ಉದ್ಘಾಟಿಸಿದ ಡಾ. ಆರ್. ಗೋಪಾಲ್ ಅವರೆ, ಇತಿಹಾಸ ದರ್ಶನ ೩೬ರ ಸಂಪುಟ ಬಿಡುಗಡೆ ಮಾಡಿದ ಡಾ. ಕೆ.ಆರ್. ಗಣೇಶ ಅವರೆ, ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ವಿ. ನಾಗರಾಜ್ ಅವರೆ, ಅಕಾದೆಮಿಯ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಹಿರಿಯರೇ, ಈ ಪ್ರಶಸ್ತಿಗಳನ್ನು ನೀಡಿದ ಪುಣ್ಯಾತ್ಮರೇ, ಅಕಾದೆಮಿಯ ಅಧ್ಯಕ್ಷರೂ ಶಾಸನಶಾಸ್ತ್ರ ಮತ್ತು ಲಿಪಿಶಾಸ್ತ್ರ ಪರಿಣತರೂ, ನನಗೆ ಶಾಸನಶಾಸ್ತ್ರದ ಮೊದಲ ಪಾಠ ಹೇಳಿಕೊಟ್ಟ ಡಾ. ದೇವರಕೊಂಡಾರೆಡ್ಡಿ ಅವರೇ, ಸದಾ ನನ್ನ ಬೆನ್ನು ತಟ್ಟುವ ಮತ್ತು ಮಾರ್ಗದರ್ಶನ ಮಾಡುವ ಹಿರಿಯರಾದ ಡಾ. ಎಂ.ಜಿ. ನಾಗರಾಜ್ ಅವರೆ, ನನ್ನನ್ನು ಈ ಅಧಿವೇಶನದ ಸರ್ವಾಧ್ಯಕ್ಷ ಸ್ಥಾನಕ್ಕೆ ಒಮ್ಮತದಿಂದ ಆಯ್ಕೆ ಮಾಡಿದ ಉಪಾಧ್ಯಕ್ಷರಾದ ಡಾ. ಲಕ್ಷ್ಮಣ್ ತೆಲಗಾವಿ ಅವರೆ, ಪ್ರಧಾನ ಕಾರ್ಯದರ್ಶಿಯಾದ ಪ್ರೊ. ಜಿ.ಕೆ. ದೇವರಾಜಸ್ವಾಮಿ, ಕಾರ್ಯದರ್ಶಿಗಳಾದ ಶ್ರೀ ಕೆ.ಎಲ್. ರಾಜಶೇಖರ್ ಅವರೆ, ಡಾ. ಸಂಧ್ಯಾ ವಿ. ಅವರೆ ಮತ್ತು ಕಾರ್ಯಕಾರಿ ಸಮಿತಿಯ ಸಮಸ್ತ ಸದಸ್ಯರೆ, ನನ್ನ ಬಗೆಗೆ ತೋರಿದ ವಿಶ್ವಾಸಕ್ಕಾಗಿ ವಂದಿಸುತ್ತೇನೆ.

ಕಳೆದ ಮೂವತ್ತೈದು ವರುಷಗಳಲ್ಲಿ ನಡೆದ ಹಲವಾರು ಸಮ್ಮೇಳನಗಳಿಗೆ ಗೆಳೆಯ ಕುಂ.ಬಾ. ಸದಾಶಿವಪ್ಪ ಮತ್ತಿತರ ಹಿರಿಯರೊಂದಿಗೆ ಭಾಗವಹಿಸಿ ಮಾರ್ಗದರ್ಶನ ಪಡೆದಿದ್ದೇನೆ. ಇಂತಹ ಒಂದು ಸಂಸ್ಥೆಯನ್ನು ಕಟ್ಟಿ ನಾಡಿನ ಗೌಡ, ಕುಲಕರ್ಣಿ, ರೈತ, ವ್ಯಾಪಾರಿ, ಶಾಲಾಮಾಸ್ತರ್ ಮುಂತಾದವರಿಗೆ ಇತಿಹಾಸದ ಆಸಕ್ತಿ, ಪರಂಪರೆಯ ರಕ್ಷಣೆಯ ಬಗ್ಗೆ ಕಾಳಜಿ, ಚಿಂತನೆ ಮಾಡಲು ಅವಕಾಶ ಕಲ್ಪಿಸಿದ ಪ್ರಾತಃಸ್ಮರಣೀಯರಾದ ಡಾ. ಜಿ.ಎಸ್. ದೀಕ್ಷಿತರೂ, ಡಾ. ಕಾಮತರೂ ಆದಿಯಾಗಿ ಅನೇಕ ಹಿರಿಯರ ಕೈಂಕರ್ಯಕ್ಕೆ ಶಿರಬಾಗಿ ನಮಿಸುತ್ತೇನೆ.

ನಾನು ಇತಿಹಾಸದ ಅಧ್ಯಾಪಕನಲ್ಲ, ಪರಂಪರಾಗತವಾಗಿ ಬಂದ ವ್ಯಾಪಾರವನ್ನು ತಂದೆಯವರೊಂದಿಗೆ ಮಾಡಿದವನು. ವಿದ್ಯಾಪಕ್ಷಪಾತಿಗಳಾದ ತಂದೆಯವರ ಬೆಂಬಲ ಮತ್ತು ಪ್ರೋತ್ಸಾಹಗಳು ನನ್ನ ಅಧ್ಯಯನಕ್ಕೆ ಸದಾ ಒತ್ತಾಸೆಯಾಗಿತ್ತು. ಹಂಪೆಯ ಪರಿಸರದಲ್ಲಿ ಹುಟ್ಟಿ ಬೆಳೆದ ನನಗೆ ಕನ್ನಡ ಸಾಹಿತ್ಯ ಮತ್ತು ಇತಿಹಾಸದಲ್ಲಿ ವಿಶೇಷ ಆಸಕ್ತಿ ಇತ್ತು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ, ಅಲ್ಲಿಯ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದಾಗ ಡಾ. ಸಾಲೆತೊರೆ, ಡಾ. ಪಾಂಡುರಂಗ ರಾವ್ ದೇಸಾಯಿ, ಕರ್ನಾಟಕ ಕುಲಪುರೋಹಿತರಾದ ಆಲೂರು ವೆಂಕಟರಾಯರು, ಪೂಜ್ಯ ಶಂ.ಬಾ. ಜೋಷಿ, ವರಕವಿ ದ.ರಾ. ಬೇಂದ್ರೆ ಮುಂತಾದ ಹಿರಿಯರನ್ನು ಕಂಡಾಗ ಮತ್ತು ಅವರ ಭಾಷಣಗಳನ್ನು ಕೇಳಿದಾಗ ಆಸಕ್ತಿ ಬೆಳೆಯಿತು. ಕರ್ನಾಟಕ ಏಕೀಕರಣ ಹೋರಾಟದ ಸಮಯದಲ್ಲಿ ಬಳ್ಳಾರಿಗೆ ಬರುತ್ತಿದ್ದ ಶ್ರೀ ಅ.ನ. ಕೃಷ್ಣರಾಯರು, ಶ್ರೀ ಅಳವಂಡಿ ಶಿವಮೂರ್ತಿಸ್ವಾಮಿಗಳು, ನಮ್ಮವರಾದ ಜೋಳದರಾಶಿ ದೊಡ್ಡನಗೌಡರ ಭಾಷಣಗಳು ಉತ್ತೇಜಕವಾಗಿದ್ದವು. ನನ್ನ ಎಂ.ಎ. ಅಭ್ಯಾಸಕ್ಕಾಗಿ ಮೈಸೂರಿನಲ್ಲಿದ್ದಾಗ ಡಾ. ಕೆ.ವಿ. ರಮೇಶ್, ಡಾ. ಎ.ವಿ. ನರಸಿಂಹಮೂರ್ತಿ, ಡಾ. ಮಾಧವ ನಾ. ಕಟ್ಟಿ ಮತ್ತು ಡಾ. ಶ್ರೀನಿವಾಸ ರಿತ್ತಿ ಮುಂತಾದ ದಿಗ್ಗಜರ ಪರಿಚಯವಾಯಿತು. ಭಾರತೀಯ ಸ್ಥಳನಾಮ ಪರಿಷತ್ತು, ಭಾರತೀಯ ಪುರಾಭಿಲೇಖ ಪರಿಷತ್ತು, ಸೌತ್ ಇಂಡಿಯನ್ ನ್ಯೂಮಿಸ್ಮ್ಯಾಟಿಕ್ ಸೊಸೈಟಿಯ ಸದಸ್ಯನಾಗಿ ಅನೇಕ ವಾರ್ಷಿಕ ಸಮ್ಮೇಳನಗಳಲ್ಲಿ ಭಾಗವಹಿಸುವುದರ ಮೂಲಕ ನನ್ನ ಆಸಕ್ತಿ ಇಮ್ಮಡಿಯಾಯಿತು.

ವಿಜಯನಗರದ ಪ್ರಸಿದ್ಧ ಅರಸು ಕನ್ನಡ ರಮಾರಮಣ ಶ್ರೀ ಕೃಷ್ಣದೇವರಾಯರ ಬಗ್ಗೆ ಸಂಶೋಧನೆ ಮಾಡಲು ವಿದ್ವಾಂಸರಾದ ಡಾ. ತಾರಾನಾಥರ ಮಾರ್ಗದರ್ಶನ ದಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಚೇತೋಹಾರಿ ಅನುಭವಗಳಾದವು. ಕೃಷ್ಣದೇವರಾಯರ ಬಗ್ಗೆ ತಮಿಳು, ತೆಲುಗು ವಿದ್ವಾಂಸರು ಮಾಡಿದ ಕೆಲಸವನ್ನು ಕಂಡು ಬೆರಗಾದೆನು. ಕನ್ನಡ ವಿದ್ವತ್‌ಲೋಕದ ಗಮನಕ್ಕೆ ತರಲೆಂದು ಡಾ. ನೇಲಟೂರು ವೆಂಕಟರಮಣಯ್ಯ, ಕುಂದೂರಿ ಈಶ್ವರದತ್ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದೆ. ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮತ್ತು ಕುವೆಂಪು

* ನಂ. ಬಿ–೨೦೧, ಆರ್.ಎಂ.ಆರ್. ಅಪಾರ್ಟಮೆಂಟ್ಸ, ಸ್ಕೈಲಾರ್ಕ ಗ್ರೀನ್ಸ ಎದುರು, ರಾಮಗೊಂಡನಹಳ್ಳಿ, ಬೆಂಗಳೂರು–೬೬. ಮೊ: ೯೬೧೧೨೧೩೫೮೮

ಭಾಷಾಭಾರತಿ ಪ್ರಾಧಿಕಾರದವರು ಪ್ರಕಟಿಸಿದರು. ಈ ಕೆಲಸದಲ್ಲಿ ಡಾ. ಆರ್. ಶೇಷಶಾಸ್ತ್ರಿ, ಡಾ. ಕೆ.ಜಿ. ಗೋಪಾಲಕೃಷ್ಣರಾಯರೂ, ಡಾ. ತಂಗಿರಾಲ ವೆಂಕಟಸುಬ್ಬರಾಯರೂ, ಹೈದರಾಬಾದಿನ ಗುತ್ತಿ ಚಂದ್ರಶೇಖರ ರೆಡ್ಡಿಯವರು ನೆರವಾದರು.

ಕರ್ನಾಟಕದಲ್ಲಿ ವಿಜಯನಗರ ಚರಿತ್ರೆಯ ಬಗ್ಗೆ ಬೇರೆ ಬೇರೆ ರೀತಿಯ ಅಭಿಪ್ರಾಯಗಳಿದ್ದವು. ನಮ್ಮ ಜಿಲ್ಲೆ – ಹಂಪಿ – ಮದ್ರಾಸ್ ಪ್ರಾಂತದಲ್ಲಿದ್ದಾಗ ಮದ್ರಾಸ್ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ವಿಜಯನಗರದ ಬಗ್ಗೆ ಸಾಕಷ್ಟು ಸಂಶೋಧನೆ ಮತ್ತು ಪ್ರಕಟನೆಗಳು ಆಗಿದ್ದವು. ಅವೆಲ್ಲಾ ಕರ್ನಾಟಕದವರ ಗಮನಕ್ಕೆ ಬಂದಂತೆ ತೋರಲಿಲ್ಲ. ನಮ್ಮೂರು ನಾರಾಯಣದೇವರ ಕೆರೆ. ತುಂಗಭದ್ರಾ ತೀರದ ಸಮೃದ್ಧ ಸಾಂಸ್ಕೃತಿಕ ಜನಪದವೆನಿಸಿತ್ತು. ಹರಪನಹಳ್ಳಿಯ ನಾಯಕ ಸೋಮಶೇಖರನಾಯಕನ ಬೇಸಿಗೆ ರಾಜಧಾನಿಯಾಗಿತ್ತು. ಆತನ ಅರಮನೆಯೇ ನಮ್ಮೂರ ಸರಕಾರಿ ಶಾಲೆ ಆಗಿತ್ತು. ಪುರಾತನವಾದ ಆಂಜನೇಯ ಮತ್ತು ಲಕ್ಷ್ಮೀನಾರಾಯಣ ದೇವಸ್ಥಾನವಿತ್ತು. ನಮ್ಮೂರ ಕೆರೆಯ ಮದಗದಲ್ಲೊಂದು, ಆಂಜನೇಯ ದೇವಾಲಯದಲ್ಲೊಂದು ಶಾಸನಗಳಿದ್ದವು. ಆದರೆ ಈ ಶಾಸನಗಳು ಶಾಸನ ಸಂಪುಟದಲ್ಲಿ ದಾಖಲಾಗಿಲ್ಲ. ೧೯೫೦ರಲ್ಲಿ ನಮ್ಮೂರು ತುಂಗಭದ್ರಾ ಜಲಾಶಯದಲ್ಲಿ ಮುಳುಗಿದ ನಂತರ ಮರುವಸತಿಗೊಂಡ ಗ್ರಾಮಗಳಿಗೆ ದೇವರು ಬಂದರು. ಆದರೆ ಶಾಸನಗಳು ಬರಲಿಲ್ಲ. ರಾಯಲಸೀಮೆಯ ಅಭಿವೃದ್ಧಿಗಾಗಿ ತುಂಗಭದ್ರಾ ಜಲಾಶಯದ ಒಡಲು ಸೇರಿದ ಸುಮಾರು ೭೬ ಹಳ್ಳಿಗಳ ವಿವರಗಳು ಈಗ ಲಭ್ಯವಿಲ್ಲ. ೧೯೫೩ರಲ್ಲಿ ಮದ್ರಾಸ ಪ್ರಾಂತದಿಂದ ನಮ್ಮ ಜಿಲ್ಲೆಯು ಮೈಸೂರು ಸೇರುವಾಗ ನಮ್ಮ ದಾಖಲೆಗಳು ಎಲ್ಲಿ ಹೋದವೋ?

ನಾಡಿನ ವ್ಯವಸಾಯ, ಉದ್ಯೋಗ ಮತ್ತು ಹಲವಿಧ ಅಭಿವೃದ್ಧಿಗಾಗಿ ಜಲಾಶಯ ನಿರ್ಮಿಸಿದಾಗ, ಕಾರ್ಖಾನೆಗಳು ಸ್ಥಾಪಿತವಾದಾಗ, ಆಯಾ ಪ್ರದೇಶದಲ್ಲಿದ್ದ ಐತಿಹಾಸಿಕ ಪರಂಪರೆಯ ಗುರುತುಗಳನ್ನು ಎಚ್ಚರದಿಂದ ರಕ್ಷಿಸಬೇಕು. ನನ್ನ ಅಧ್ಯಯನದಿಂದ ನನಗೆ ಕೆಲವಿಷಯಗಳ ಬಗ್ಗೆ ಸ್ಪಷ್ಟ ಅಭಿಪ್ರಾಯ ಮೂಡಿದವು.

೧. ಇತಿಹಾಸವೆಂದರೆ ಕೇವಲ ಯುದ್ಧಗಳಲ್ಲ. ಕ್ಷತ್ರಿಯರೇ ಅರಸರಾಗಬೇಕಾಗಿಲ್ಲ. ಅವರು ಯಾವ ಕುಲದವರಾದರೇನು? ಅವರ ಆಡಳಿತ, ಜನೋಪಯೋಗಿ ಕಾರ್ಯಕ್ರಮಗಳು, ಶಿಲ್ಪ, ಸಾಹಿತ್ಯ ಲಲಿತಕಲೆಗಳು ಮತ್ತು ಧಾರ್ಮಿಕ ಪುನರುತ್ಥಾನ ಹಾಗೂ ರಕ್ಷಣೆಗೆ ಅವರ ಯೋಜನೆಗಳು ಮುಖ್ಯ. ೨. ನಾಡಿನ ಜೀವನಾಧಾರವಾದ ವ್ಯವಸಾಯ, ನೀರಾವರಿ ಯೋಜನೆ ಮತ್ತು ವ್ಯಾಪಾರದ ಅಭಿವೃದ್ಧಿ, ಸ್ಥಳೀಯ ಆಡಳಿತ, ನ್ಯಾಯಪದ್ಧತಿಗಳು ಪ್ರಮುಖವಲ್ಲವೇ? ೩. ನಮ್ಮ ಭಾಗದಲ್ಲಿ ಕೃಷ್ಣರಾಯರು ನಿರ್ಮಿಸಿದ ರಾಯರ ಕೆರೆ. ವಲ್ಲಭಾಪುರದ ಅಣೆಕಟ್ಟುಗಳು, ಬಯಕಾರ ರಾಮಪ್ಪಯ್ಯನೊಬ್ಬನೇ ನಿರ್ಮಿಸಿದ ೧೬ ಕೆರೆಗಳು ಈಗಲೂ ವ್ಯವಸಾಯಕ್ಕೆ ಆಧಾರವಾಗಿವೆ. ಅಂದಿನ ತುರ್ತಾಕಾಲುವೆ, ರಾಯರ ಕಾಲುವೆ, ಬಸವನ ಕಾಲುವೆ, ರಾಮಸಾಗರ ಕಾಲುವೆ ಮುಂತಾದ ಸುಮಾರು ೩೫೦ ಮೈಲುದ್ದದ ಕಾಲುವೆಗಳು ಇಂದಿಗೂ ಜೀವನಾಧಾರವಾಗಿವೆ.

ಕೃಷ್ಣದೇವರಾಯರು ನಿರ್ಮಿಸಿದ ದರೋಜಿಯ ಕೆರೆ, ಅವರ ರಾಣಿ ತುಕ್ಕಾ ನಿರ್ಮಿಸಿದ ಕಂಭಂಕೆರೆ, ಮುಂತಾದ ಜಲನಿಧಿಗಳು ಅಮೂಲ್ಯವಾಗಿವೆ. ಅವರ ಬಗ್ಗೆ ಕುಲ, ಭಾಷೆ ಆಧಾರದಿಂದ ಟೀಕಿಸುವುದು ಸರಿಯಲ್ಲ. ಅವರು ತಿರುಪತಿ ಸಂಸ್ಕೃತಿಯನ್ನು ಪೋಷಿಸಿದರು. ವಿರೂಪಾಕ್ಷ ಸಂಸ್ಕೃತಿಯನ್ನು ಹಿಂದೆ ಸರಿಸಿದರು ಎಂಬ ಮಾತು ಸರಿಯಲ್ಲ. ವಿಜಯನಗರ ಆಡಳಿತವೆಲ್ಲಾ ಶ್ರೀ ವಿರೂಪಾಕ್ಷನ ಅಂಕಿತದಲ್ಲೇ ನಡೆಯಿತು. ರಾಯರು ಪಟ್ಟಕ್ಕೆ ಬಂದೊಡನೆ ಅನೇಕ ಶಿವಾಲಯಗಳನ್ನು ಪುನರುದ್ಧರಿಸಿದರು. ಹಂಪೆಯರಸ ಪಂಪಾಪತಿಗೆ ಸುವರ್ಣಮುಖವನ್ನು ಮಾಡಿಸಿದರು. ರಾಯರ ರಾಯ ಶ್ರೀ ಕೃಷ್ಣದೇವರಾಯರ ಬಗ್ಗೆ ಆಧಾರರಹಿತ ಆರೋಪ ಮಾಡಬಾರದು. ವಿಜಯನಗರ ಸಾಮ್ರಾಜ್ಯ (ಕರ್ನಾಟಕ ಸಾಮ್ರಾಜ್ಯ)ದ ಆಡಳಿತವೆಲ್ಲಾ ಕನ್ನಡದಲ್ಲಿಯೇ ನಡೆಯುತ್ತಿತ್ತು. ತೆಲುಗು–ತಮಿಳು ನಾಡಿನ ಅನೇಕ ಕಡೆ ಶಾಸನಗಳು ಕನ್ನಡದಲ್ಲಿವೆ – ಅಲ್ಲಲ್ಲಿಯ ಭಾಷೆಯಲ್ಲಿ ಅನುವಾದಗಳೂ ಇವೆ. ತಿರುಮಲ ದೇವಸ್ಥಾನದಲ್ಲಿರುವ ಕೃಷ್ಣರಾಯ, ತಿರುಮಲದೇವಿ ಮತ್ತು ಚಿನ್ನಾದೇವಿಯರ ಕಂಚಿನ ಪುತ್ಥಳಿಗಳ ಪಾದಪೀಠದಲ್ಲಿ ಕನ್ನಡದಲ್ಲಿ – ಶ್ರೀ ಕೃಷ್ಣದೇವರಾಯ ಮಹಾರಾಯರು ಎಂದೂ ಅವರ ಅರಸಿಯರ ಹೆಸರುಗಳು ಕನ್ನಡದಲ್ಲಿವೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದಲ್ಲಿ ಶ್ರೀ ಕಾಳಹಸ್ತಿಯ ದೇವಾಲಯದಲ್ಲಿ ಮತ್ತು ಉತ್ತರಾಂಧ್ರದ ಸಿಂಹಾಚಲದ ನರಸಿಂಹಸ್ವಾಮಿಯ ದೇವಾಲಯದಲ್ಲಿ ಕನ್ನಡ ಶಾಸನಗಳಿವೆ.

ಕನ್ನಡ ಅರಸರು ಎಂದೆಂದೂ ಕನ್ನಡ ಭಾಷೆಯನ್ನು ಅಲಕ್ಷಿಸಲಿಲ್ಲ. ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಸೋದರ ಕುಬ್ಜ ವಿಷ್ಣುವರ್ಧನನು ತೆಲಂಗಾಣದ ವೆಂಗಿಯಲ್ಲಿ ರಾಜ್ಯಸ್ಥಾಪನೆ ಮಾಡಿದಾಗ ಅಧಿಕಾರಿಗಳೂ, ಚತುರಂಗಬಲವೂ, ವಂದಿಮಾಗಧರೂ, ಬಾಣಸಿಗರೂ ಮುಂತಾದ ಪರಿವಾರವೆಲ್ಲ ಬಾದಾಮಿಯಿಂದಲೇ ಬಂದರು. ರಾಜ್ಯದ ಸಮಸ್ತ ವ್ಯವಹಾರವೂ ಕನ್ನಡಮಯವಾಗಿತ್ತು. ತೆಲುಗು ವಿದ್ವಾಂಸರ ಪ್ರಕಾರ ಆಗ ತೆಲುಗು ಭಾಷೆಯ ಮೇಲೆ ಕನ್ನಡವು ಗಾಢವಾದ ಪ್ರಭಾವ ಬೀರಿತು. ವೇಮುಲವಾಡ, ವೆಂಗಿ ಮತ್ತು ಮುದಿಗೊಂಡ ಚಾಲುಕ್ಯ ಅರಸರು ಕನ್ನಡಕ್ಕೆ, ಕನ್ನಡ ಕವಿಗಳಿಗೆ ಆಶ್ರಯ

ನೀಡಿದರು. ವೇಮುಲವಾಡದ ಅರಿಕೇಸರಿಯ ಸೇನಾಪತಿ–ನಮ್ಮ ಆದಿಕವಿ ಪಂಪ. ವೇಮುಲವಾಡದ ಭೀಮಕವಿಯ 'ಬಸವಪುರಾಣ' ಸರ್ವವಿದಿತ.

ಪಂಪನ ಸೋದರ ಜಿನವಲ್ಲಭನ ಕುರಿಕ್ಯಾಲದ ಬಂಡೆಶಾಸನದಲ್ಲಿ ಕೇವಲ ಮೂರು ಕಂದಪದ್ಯಗಳು ಮಾತ್ರ ತೆಲುಗಾದರೆ, ಉಳಿದೆಲ್ಲ ಕನ್ನಡದ ಶಾಸನ. ಹೊಯ್ಸಳ ನಾಡಿನಿಂದ ಬಂದ ರಾಮಪ್ಪಯ್ಯನೆಂಬ ಶಿಲ್ಪಿ ನಿರ್ಮಿಸಿದ ಪಾಲಂಪೇಟೆಯ ಸನಿಹದ ರಾಮಪ್ಪಯ್ಯ ದೇವಾಲಯ ಮತ್ತು ಬೃಹತ್ ರಾಮಪ್ಪಯ್ಯ ತಟಾಕಗಳು ಸಾಕ್ಷಿ ಆಗಿವೆ. ವಿಜಯನಗರದ ನೀರಾವರಿ ಯೋಜನೆಗಳಿಗೆ ಮತ್ತು ಆಲಯ ಶಿಲ್ಪಕ್ಕೆ ಕಾಕತೀಯರ ದೇವಾಲಯಗಳೇ ಮೂಲಾಧಾರ. ನನ್ನ ಪ್ರವಾಸ, ಓದಿನಿಂದ ನನಗನಿಸುವುದೇನೆಂದರೆ ಕರ್ನಾಟಕ–ಇತಿಹಾಸ–ಪರಂಪರೆಯನ್ನು ತಿಳಿಯಲು ನಾವು ರಾಷ್ಟ್ರಕೂಟ, ಚಾಲುಕ್ಯ, ಗಂಗರನ್ನು ಅಭ್ಯಾಸ ಮಾಡಿದಂತೆ ಪಲ್ಲವರನ್ನು, ಚೋಳರನ್ನು ಅಭ್ಯಾಸ ಮಾಡಬೇಕು. ಪರಸ್ಪರ ಕೊಡು–ಕೊಳ್ಳುವುದರ ಗತಿಯನ್ನು ತಿಳಿಯದೇ ಕರ್ನಾಟಕದ ಮಹತ್ತು ಕನ್ನಡದ ಗರಿಮೆ ಮತ್ತು ಸಾಹಿತ್ಯದ ಹಿರಿಮೆಗಳು ಅರ್ಥವಾಗಲಾರವು. ತೆಲುಗಿನ ಭಾರತವನ್ನು ರಚಿಸಿದ ನನ್ನಯ್ಯನ ಸಹಾಯಕನು ಕನ್ನಡದ ನಾರಾಯಣಭಟ್ಟ. ಈ ನಾರಾಯಣಭಟ್ಟನೇ ಕರ್ನಾಟಕ ಚಕ್ರವರ್ತಿ ಆಹವಮಲ್ಲ ಸೋಮೇಶ್ವರನ ಪ್ರಧಾನಿ. ತೆಲುಗು ನಾಡಿನಲ್ಲಿ ಕನ್ನಡಿಗರ ಆಡಳಿತದ ಪರಿಣಾಮದಿಂದ ತೆಲುಗು ವ್ಯಾಕರಣವು ಕನ್ನಡದಿಂದ ಶಕ್ತಿ ಪಡೆಯಿತು. ತೆಲುಗು ಕಾವ್ಯಕ್ಕೆ ಕನ್ನಡ ಕಾವ್ಯಗಳೇ ಮೇಲ್ಪಂಕ್ತಿಯಾದವು. ಪಾಲ್ಕುರಿಕೆ ಸೋಮನಾಥನ ನಂತರ ಉಭಯ ಭಾಷಾಕವಿಗಳು ಬಂದರು. ಅದರಿಂದ ಕರ್ನಾಟಕದ ಸಮಗ್ರ ಇತಿಹಾಸದ ರಚನೆಗೆ ದಕ್ಷಿಣದ ಇತರ ಭಾಷೆಗಳ ಮತ್ತು ರಾಜಕೀಯ ಅಧ್ಯಯನ ಅಗತ್ಯ. ಭಾರತದ ಪ್ರಾಚ್ಯವಸ್ತು ಇಲಾಖೆ ಮತ್ತು ರಾಜ್ಯಗಳ ಪುರಾತತ್ವ ಇಲಾಖೆಗಳು ತುಂಬಾ ಮಹತ್ವದ ಕೆಲಸ ಮಾಡುತ್ತಿವೆ. ನಾಡಿನೆಲ್ಲಾ ಕಡೆಗಿರುವ ಅಸಂಖ್ಯಾತ ಊರು, ಕೆರೆ, ಕೋಟೆ, ದೇಗುಲ ಮತ್ತು ಅರಣ್ಯಗಳಲ್ಲಿ ಅನಾಥವಾಗಿ ನೆಲೆಸಿರುವ ಪರಂಪರೆಯ ಸಾಕ್ಷಿಗಳನ್ನು ರಕ್ಷಿಸುವ ಗುರುತರವಾದ ಹೊಣೆ ಇವರದಾಗಿದೆ. ಇದೆಲ್ಲದರ ಜತೆಗೆ ಶಾಸನಗಳ, ತಾಳೇಗರಿ ಗ್ರಂಥಗಳ ಮಹತ್ವವನ್ನು ಅರಿಯದ ಜನರು ಮೂಢನಂಬಿಕೆಯಿಂದ ಪ್ರೇರಿತರಾಗಿ ಈ ಹೆಗ್ಗುರುತುಗಳನ್ನು ನಾಶ ಮಾಡುವ ಪ್ರಸಂಗಗಳೇ ಅಧಿಕ. ಗುಪ್ತನಿಧಿಯ ಹುಡುಕಾಟದಲ್ಲಿ, ಕಲಾವಸ್ತುಗಳಿಗಾಗಿ ವಿದೇಶೀಯರು ನೀಡುವ ಹಣದ ಪ್ರಲೋಭನೆಯಿಂದ ಅನೇಕ ಅಮೂಲ್ಯ ವಸ್ತುಗಳು ಎಲ್ಲೆಲ್ಲೋ ಹೋಗಿವೆ. ನಮ್ಮ ಅಕಾದೆಮಿಯು ಪ್ರತಿವರುಷ ನಡೆಸುವ ಐತಿಹಾಸಿಕ ಪರಂಪರೆ ಉಳಿಸಿ ಎಂಬ ಕಾರ್ಯಕ್ರಮ ಮಹತ್ವದ್ದಾಗಿದೆ.

ಕರ್ನಾಟಕ ಪುರಾತತ್ವ ಇಲಾಖೆಯ ಮುಖ್ಯಸ್ಥರಾಗಿದ್ದ ಶ್ರೀ ದೇವರಾಜ್ ಅವರೊಂದಿಗೆ ನಾನು ನಮ್ಮ ಭಾಗದ ಬೆಣಕಲ್ಲು, ಹೊಳಗುಂದಿ, ಹಡಗಲಿ, ಹೊಳಲು ಮುಂತಾದ ಕಡೆಗೆ ಹೋದಾಗ ದೇವಾಲಯಗಳು ದನದ ಮನೆಗಳಾದದ್ದು ಉಗ್ರಾಣಗಳಾದದ್ದು ಕಂಡುಬಂತು. ಅಲ್ಲಲ್ಲಿಯ ಮುಖಂಡರೇ ಆಕ್ರಮಿಸಿದ್ದ ವಿಷಯ ತಿಳಿಯಿತು. ತಕ್ಷಣಕ್ಕೆ ಹೇಳಿದ್ದಕ್ಕೆಲ್ಲಾ ಅವರು ಅಂಗೀಕರಿಸಿದರೂ ಯಥಾಸ್ಥಿತಿ ಮುಂದುವರೆದದ್ದು ಸತ್ಯಸಂಗತಿ. ನಮ್ಮ ಅಕಾದೆಮಿಯು ನಡೆಸುವ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಅಲ್ಲಲ್ಲಿಯ ಲೇಖಕರು, ಉಪಾಧ್ಯಾಯರು, ಆಸಕ್ತರೂ ಪ್ರಭಾವಯುತರಾಗಿ ವಿವರಿಸುತ್ತಿದ್ದರು. ತತ್ಪರಿಣಾಮವಾಗಿ ವಲ್ಲಭಾಪುರ ಗ್ರಾಮದ ಕೆರೆಯ ದಂಡೆಗಿದ್ದ ಕನ್ಯೆ ವೀರಮ್ಮ ಅಥವಾ ಶನಿ ವೀರಮ್ಮನ ಪ್ರತಿಮೆಯನ್ನು ಸರಕಾರಕ್ಕೆ ನೀಡಲು ಊರವರು ನಿರಾಕರಿಸಿದರು. ಬಾಚಿಗೊಂಡನಹಳ್ಳಿಯ ಜನರೂ ಕೆಲವಸ್ತುಗಳನ್ನು ನೀಡಲು ನಿರಾಕರಿಸಿದರು. ಕಡಲತೀರದ ಭಾರ್ಗವ ಶ್ರೀ ಶಿವರಾಮ ಕಾರಂತರ 'ಆ ಪೂರ್ವ ಪಶ್ಚಿಮ', ವಿ.ಕೃ. ಗೋಕಾಕರ 'ಸಮುದ್ರದಾಚೆಯಿಂದ' ಮುಂತಾದ ಪ್ರವಾಸಕಥನಗಳಿಂದ ಪ್ರೇರಿತನಾದ ನಾನು ಅನೇಕ ದೇಶಗಳನ್ನು ಸುತ್ತಿ ಸಂತೋಷಪಟ್ಟೆ.

ಇರಾನ್ ದೇಶದ ತೆಹರಾನ್‌ನ ಸರಕಾರದ ಬ್ಯಾಂಕಿನಲ್ಲಿ ಭದ್ರವಾಗಿದ್ದ ಸಂಪತ್ತು. ನಾದಿರ್‌ಷಾ ಭಾರತದಿಂದ ಲೂಟಿ ಮಾಡಿದ ಅಮೂಲ್ಯ ಸಂಪತ್ತು ಎಂದು ಭದ್ರಪಡಿಸಲ್ಪಟ್ಟಿತ್ತು. ಅದರಲ್ಲಿ ಮೊಘಲರ 'ಮಯೂರ ಸಿಂಹಾಸನ', ಕೊಹಿನೂರ್ ವಜ್ರಕ್ಕಿಂತ ದೊಡ್ಡದಾದ 'ದರ್ಯಾಯೆ ನೂರ್' ಎಂಬ ಸಾಮ್ರಾಟನ ಸೊಂಟ ಪಟ್ಟಿ, ರಾಶಿ ರಾಶಿಯಾಗಿ ಸುರಿದ ನವರತ್ನಗಳು. ಹೀಗೆ ಒಂದೇ ಎರಡೇ ನೋಡಿದಂತೆಲ್ಲಾ ಹೃದಯ ಹಿಂಡುತ್ತಿತ್ತು. ಇಂಗ್ಲೆಂಡಿನಲ್ಲಿ – ಲಂಡನ್ ಮ್ಯೂಜಿಯಂನ ಒಂದು ದೊಡ್ಡಭವನದ ತುಂಬಾ ಆಂಧ್ರದ ಅಮರಾವತಿ ಸ್ತೂಪ ಕುಳಿತಿತ್ತು. ಆಂಗ್ಲೇಯರು ಲೂಟಿ ಮಾಡಿದ ಝಾನ್ಸಿರಾಣಿಯ, ಟೀಪುಸುಲ್ತಾನನ, ಔಂಧದ ನವಾಬನ ವಸ್ತುಗಳೇ ಅಲ್ಲಿ ತುಂಬಿದ್ದವು. ರಾಬರ್ಟ್ ಕ್ಲೈವ್‌ನ ಮನೆಯ ತುಂಬಾ ನಮ್ಮ ರಾಜರಿಂದ ಕಿತ್ತುಕೊಂಡ ಅಮೂಲ್ಯ ವಸ್ತುಗಳೇ ಇದ್ದವು. ನಮ್ಮ ಸಾಹಿತಿ ಕಲಾವಿದರ ಮನೆಗಳ ರಕ್ಷಣೆಯ ವಿಷಯ ದೂರವಾಯಿತು.

ನಮ್ಮ ಅಕಾದೆಮಿಯ ಮತ್ತೊಂದು ಮಹತ್ತರ ಕೆಲಸವೆಂದರೆ 'ಇತಿಹಾಸ ದರ್ಶನ' ಸಂಪುಟದ ಮುದ್ರಣ. ದೇಶದಲ್ಲಿ ಅನೇಕಾನೇಕ ವಿಚಾರ ಸಂಕಿರಣಗಳು ನಡೆಯುತ್ತವೆ. ಅನೇಕರು ತಮ್ಮ ಲೇಖನಗಳನ್ನು ಬರೆದು ತರುವುದಿಲ್ಲ. ಅವು ಅಚ್ಚಾಗುವುದಿಲ್ಲ. ನಮ್ಮ ಅಕಾದೆಮಿಯ ನಿಯಮ ಸ್ಪಷ್ಟವಾಗಿದೆ. ಪ್ರಬಂಧವನ್ನು ಬರೆದು ತರಬೇಕು ಮತ್ತು ಅದು ಅಚ್ಚಾಗಬೇಕು. ಆಡಿದ ಮಾತು, ಅಭಿಪ್ರಾಯ ಗಾಳಿಯ ಮಾತಾಗಬಾರದು. ಅದು ಸಂಶೋಧನೆಗೆ ನೆರವಾಗಬೇಕು. ಇಂತಹ ಉದಾತ್ತ ಸಂಪ್ರದಾಯ ಹಾಕಿದ ಆದ್ಯರಿಗೆ ನಮಿಸೋಣ. ನಾನು ಪ್ರಪಂಚದ ಮತ್ತು ಭಾರತದ ನಾನಾ ಕ್ಷೇತ್ರಗಳನ್ನು, ನಗರಗಳನ್ನು ಸುತ್ತಿದ್ದೇನೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅವರ ಇತಿಹಾಸವನ್ನು ಸ್ಮಾರಕಗಳನ್ನು ರಕ್ಷಿಸುವ ರೀತಿ, ಅಧ್ಯಯನ ಮಾಡುವ ರೀತಿ ಉನ್ನತ ಮಟ್ಟದ್ದು ಎಲ್ಲ ಕಡೆ ಪುಸ್ತಕ, ವಿಡಿಯೋ, ಕಾರ್ಡು ವಿಶೇಷವಾಗಿ ದೊರೆಯುತ್ತವೆ. ಅಲ್ಲಲ್ಲಿ ವಿಡಿಯೋ ಫಿಲಂ ಪ್ರದರ್ಶನಗಳೂ ಇರುತ್ತವೆ.

ಅದರಂತೆ ಇಂಡೋನೇಶಿಯಾದ ಜಾವಾ, ಬಾಲಿ, ಥಾಯ್‌ಲ್ಯಾಂಡಿನ ಅನೇಕ ಊರುಗಳು, ಕಾಂಬೋಡಿಯಾದ ಆ್ಯಂಕರ್ ಮುಂತಾದ ಕಡೆ ತುಂಬಾ ಅಚ್ಚುಕಟ್ಟುತನ ಕಾಣಬರುತ್ತವೆ. ಸ್ಮಾರಕಗಳ ರಕ್ಷಣೆಯಂತೂ ಶ್ರದ್ಧೆಯಿಂದ ಮಾಡಲಾಗುತ್ತದೆ. ಇಂಡೋನೇಶಿಯಾ ಮುಸ್ಲಿಂ ರಾಜ್ಯವಾದರೂ ಜಾವಾದಲ್ಲಿರುವ ಬೋರೋಬುದುರ್, ಪ್ರಾಂಬಣಂ ಮತ್ತು ಬಾಲಿ ದ್ವೀಪದ ಅನೇಕಾನೇಕ ಗುಡಿಗುಂಡಾರಗಳ ರಕ್ಷಣೆ, ಪ್ರವಾಸಿಗಳಿಗೆ ನೀಡುವ ಅನುಕೂಲಗಳೂ ಮೆಚ್ಚುವಂತಿವೆ. ಅಲ್ಲಿ ಸ್ವಚ್ಛತೆ, ಶೌಚಾಲಯ ವ್ಯವಸ್ಥೆ, ತಿಂಡಿತೀರ್ಥಗಳ ಲಭ್ಯತೆ, ಎಷ್ಟೋ ಮೇಲು. ಥಾಯ್‌ಲ್ಯಾಂಡ್‌ನ ಅಯೋಧ್ಯೆ ಮತ್ತಿತರ ಪಟ್ಟಣಗಳನ್ನು ನೋಡಿದರೆ ಆನಂದವಾಗುತ್ತದೆ. ಕಾಂಬೋಡಿಯಾದ ಜನರಂತೂ ಆ್ಯಂಕರ್‌ವಾಟ್‌ನ ಸ್ಥಾವರಗಳನ್ನು ಎದೆಗೊತ್ತಿಕೊಂಡು ಕಾಪಾಡಿದ್ದಾರೆ. ದಶಕಗಳ ಕಾಲ ನಡೆದ ವಿಯೆಟ್ನಾಂ ಯುದ್ಧಕಾಲದಲ್ಲೂ ಕಾಂಬೋಡಿಯಾ ಅಮೂಲ್ಯವಾದ ಈ ಸ್ಥಾವರಗಳನ್ನು ಕಾಪಾಡಿತು. ಅಲ್ಪಸ್ವಲ್ಪ ಹಾಳಾದ ದೇಗುಲಗಳನ್ನು ನಮ್ಮ ದೇಶದ ಪ್ರಾಚ್ಯವಸ್ತುತಜ್ಞರು ಸಾಕಷ್ಟು ಶ್ರಮದಿಂದ ಸರಿಪಡಿಸಿದ್ದಾರೆ. ಹಿರಿಯರಾದ ಡಾ. ಕೆ.ವಿ. ರಮೇಶ್ ಅವರು ಅಲ್ಲಿಯ ಸಂಸ್ಕೃತ ಶಾಸನಗಳು ಸಂಕಲಿಸಿ, ಅರ್ಥೈಸಿ ಕೊಟ್ಟಿರುವುದಾಗಿ ತಿಳಿಸಿದ್ದರು. ನಮ್ಮ ದೇಶದಲ್ಲಿ ಒಂದೊಂದು ವಲಯದಲ್ಲಿ ಸಾವಿರಾರು ಸ್ಮಾರಕ ಶಾಸನ, ದೇಗುಲ, ಕೋಟೆ, ಸರೋವರಗಳಿರುವುದರಿಂದ, ಸರಕಾರದಿಂದ ದೊರೆಯುವ ಹಣಕಾಸು, ನುರಿತ ಕೆಲಸಗಾರರ ಲಭ್ಯತೆಯ ಕಾರಣ ಎಷ್ಟು ಮಾಡಿದರೂ ಕಡಿಮೆ ಎನಿಸುತ್ತದೆ. ಆದರೆ ಪುರಾತತ್ವ ಇಲಾಖೆಯವರಲ್ಲಿ ನನ್ನದೊಂದು ಬಿನ್ನಹ.

೧. ನಮ್ಮ ಸ್ಮಾರಕಗಳು ಸ್ವಚ್ಛವಾಗಿರುವಂತೆಯೂ ಹಾಳಾಗದಂತೆಯೂ ನೋಡಿಕೊಳ್ಳಬೇಕು.

೨. ಪ್ರಮುಖ ಸ್ಥಳಗಳ ಬಗ್ಗೆ ತಾವು ಸುಂದರವಾದ ಪುಸ್ತಿಕೆಗಳನ್ನು ಪ್ರಕಟಿಸುತ್ತೀರಿ. ಇದು ಮುಂದುವರೆಯಲಿ. ಆದರೆ ಈ ಪುಸ್ತಿಕೆಗಳು ಎಲ್ಲಾ ಕಡೆ ದೊರೆಯಲಿ. ಅಂದರೆ ಹಂಪಿಯ ಬಗ್ಗೆ ಪುಸ್ತಿಕೆ ಹಂಪಿಯಲ್ಲಿ ದೊರೆಯಲಿ ಮತ್ತು ಕರ್ನಾಟಕದ ಎಲ್ಲಾ ಕಡೆ ದೊರೆಯಲಿ. ಚಿತ್ರಮಯ ಅಂಚೆಕಾರ್ಡು, ಅಥವಾ ಕಪ್ಪು ಬಿಳುಪಿನ ಕಾರ್ಡು ಎಲ್ಲೆಡೆಯು ದೊರೆಯಬೇಕು.

೩. ಸ್ಮಾರಕ ಪ್ರದೇಶದಲ್ಲಿ ಕನಿಷ್ಠ ಶೌಚಾಲಯ, ಕಾಫಿ ಷಾಪ್, ಕೂಡಲು, ವಿಶ್ರಮಿಸಲೂ ವ್ಯವಸ್ಥೆ ಇರಲಿ.

೪. ಅಲ್ಲಲ್ಲಿ ಇರುವ ವಸ್ತುಪ್ರದರ್ಶನಗಳು, ವಸ್ತುಗಳ ತಜ್ಞರ ಪರಿಶೀಲನೆಗೆ ಒಳಪಟ್ಟಿರಲಿ. ಈ ಬಗ್ಗೆ ಒಂದು ವಿವರಣೆ–

ವಿಜಯಪುರದ ಗೋಲ್‌ಗುಂಬಜ್ ವಸ್ತುಸಂಗ್ರಹಾಲಯದಲ್ಲಿ ಒಂದು ರಾಕ್ಷಸಾಕಾರದ ರಾಕ್ಷಸರೂಪಿಯಾದ ಕಲ್ಲಿನ ರುಂಡವಿದೆ. ಅದರ ಕೆಳಗೆ The head of Ramaraya, the king of Vijayanagara ಎಂಬ ವಿವರವಿದೆ. ಇದಕ್ಕೆ ಆಧಾರವೇನು? ಎಂದರೆ ಅಲ್ಲಿಯ ವ್ಯವಸ್ಥಾಪಕರು – "ಇದು ನಮ್ಮೂರ ತಾಜ್‌ಬಾವಡಿಯಲ್ಲಿ ದೊರಕಿದೆ. ರಾಮರಾಯನ ತಲೆಯನ್ನು ರಕ್ಕಸ ತಂಗಡಿ ಕಾಳಗದ ನಂತರ ತಂದು ತಾಜ್‌ಬಾವಡಿಯಲ್ಲಿ ಹಾಕಿದರು" ಎಂದು ಹೇಳಿಕೆ ಇದೆ – ಎಂದರು. ಇದು ನಿರಾಧಾರ ಎಂದು ನಾನು ವಿವರಿಸಿದೆ. ಪ್ರಕಾರ ಅದರ ಕತೆ ಬೇರೆ ಇದೆ. ಅದೇನೇ ಇರಲಿ – ರಾಮರಾಯ ಮನುಷ್ಯ ಅವನ ತಲೆಬುರುಡೆ ಆಗಬೇಕು. ಕಲ್ಲಿನ ರಾಕ್ಷಸಾಕಾರ ರೂಪ ಹೇಗಾಯಿತು? ಎಂದೆ. ಅದಕ್ಕವರು ನಮಗೆ ತಿಳಿದದ್ದು ನಾವು ಬರೆದಿದ್ದೇವೆ. ನಿಮ್ಮ ಅಭಿಪ್ರಾಯ ನೀವು ಬರೆಯಿರಿ ಎಂದರು. ಈ ದಿನ ರಾಮರಾಯ ಮತ್ತೊಂದು ಕಡೆ ಇನ್ನೊಬ್ಬ ರಾಯ, ರಾಜ, ಅಥವಾ ನವಾಬ ಆಗಬಹುದು. ಇಲಾಖೆಯವರಲ್ಲಿ ನನ್ನ ಪ್ರಾರ್ಥನೆ – ದಯಮಾಡಿ ಪರಿಶೀಲಿಸಿ, ಶೋಧಿಸಿ, ವಸ್ತುಗಳನ್ನು ಪ್ರದರ್ಶನಕ್ಕೆ ಇಡಬಹುದು. ಮದ್ರಾಸ್ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದವರು ವಿಜಯನಗರ ಚರಿತ್ರೆಯ ಆಕರಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ತಮಿಳು ವಿದ್ವಾಂಸರಾದ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್, ತೆಲುಗು ವಿದ್ವಾಂಸರಾದ ಡಾ. ನೇಲಟೂರು ವೆಂಕಟರಮಣಯ್ಯನವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಶಾಸನ ಸಂಪುಟಗಳು,

ಕೈಫಿಯತ್ತುಗಳು, ಬಖೈರುಗಳೂ, ಕಡತಗಳೂ ವಿಜಯನಗರ ಚರಿತ್ರೆಯನ್ನು ಕಟ್ಟಲು ನೆರವಾಗಿವೆ. ವಸ್ತುಪ್ರದರ್ಶನ ಸಮಿತಿಯವರು ಸಂಶಯಾಸ್ಪದ ವಿಷಯಗಳ ಬಗ್ಗೆ ಈ ಮಾಹಿತಿಗಳಲ್ಲಿ ಪರಿಶೀಲಿಸಬೇಕು.

ಅಕಾದೆಮಿಯ ಅಧ್ಯಕ್ಷರಾಗಿದ್ದ ಡಾ. ಸೂರ್ಯನಾಥ ಕಾಮತರನ್ನು ಕಾಡಿಬೇಡಿ ನಮ್ಮೂರಲ್ಲಿ ಡಾ. ಲಕ್ಷ್ಮಣ್ ತೆಲಗಾವಿ ಅವರ ಅಧ್ಯಕ್ಷತೆಯಲ್ಲಿ ೨೧ನೇ ಸಮ್ಮೇಳನವನ್ನು ನಡೆಸಿದ ಸಂತೋಷ ನಮ್ಮದು. ಮಿತ್ರರಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶರ ನೆರವು ಮರೆಯಲು ಸಾಧ್ಯವೇ? ಭಾರತದ ಇತಿಹಾಸವನ್ನು ರಚಿಸುವಲ್ಲಿ ಮಾರ್ಷಲ್ ಅವರೂ, ಮೆಕೆಂಜೆ, ಕನ್ನಿಂಗ್‌ಹ್ಯಾಮ್ ಮತ್ತು ವೀಲ್ಹರ್ ಅವರೂ, ರಾಬರ್ಟ್ ಸಿವೆಲ್, ಮಜುಂದಾರ್ ಮುಂತಾದ ಹಲವರ ಶ್ರಮವನ್ನು ಮರೆಯುವಂತಿಲ್ಲ. ಸಂಶೋಧಕರು ಶಿಲಾಶಾಸನ, ತಾಮ್ರಶಾಸನ, ಕಡತಗಳನ್ನು ನಂಬಿದಷ್ಟು ಸಾಹಿತ್ಯದ ಆಧಾರಗಳನ್ನು ನಂಬುತ್ತಿಲ್ಲ. ಸ್ವತಃ ಆ ಕ್ಷೇತ್ರದಲ್ಲಿ ಆ ಸಮಯದಲ್ಲಿ ಅಲ್ಲಿದ್ದ ಪಂಪನು ಅರಿಕೇಸರಿಯ ಬಗ್ಗೆಯಾಗಲೀ, ರನ್ನನಾಗಲೀ, ಜನ್ನನಾಗಲೀ, ಆಗಿನ ಕಾಲದ ಬಗ್ಗೆ ಆಡಳಿತದ ಬಗ್ಗೆ ಹೇಳಿದ ಮಾತುಗಳು ವಾಸ್ತವಿಕ ಸಂಗತಿಗಳು. ಕೃಷ್ಣರಾಯರ ಬಗ್ಗೆ ಮುಕ್ಕುತಿಮ್ಮನ, ಅಲ್ಲಸಾನಿಪೆದ್ದನ ಅಥವಾ ಕೃಷ್ಣರಾಯರ ಮಗಳು ಮೋಹನಾಂಗಿಯು ಹೇಳಿದ ವಿಷಯಗಳನ್ನು ವಾಸ್ತವವೆಂದು ಪರಿಗಣಿಸಬೇಕಲ್ಲವೇ? ಈ ಮುಂಚೆ ಸರ್ವಾಧ್ಯಕ್ಷರಾಗಿದ್ದ ಸನ್ಮಾನ್ಯ ಡಾ. ಬಿ. ರಾಜಶೇಖರಪ್ಪನವರು ಸೂಚಿಸಿದಂತೆ ಇತಿಹಾಸದ ಕೆಲ ಸಂಗತಿಗಳನ್ನು ಸಂಶೋಧನೆಯ ಒರೆಗಲ್ಲಿಗೆ ಹಚ್ಚಿ ತೀರ್ಮಾನಿಸಿದ ಮೇಲೆ, ಆ ವಿಷಯಗಳನ್ನು ತದನಂತರ ಬಂದ ಪಠ್ಯಗಳಲ್ಲಿ ತಿದ್ದುಪಡಿ ಮಾಡಬೇಕಾದದ್ದು ಅವಶ್ಯ.

ಡಾ. ಡಿ.ವಿ. ಪರಮಶಿವಮೂರ್ತಿಯವರು ಕಾಮಿಡಿಹಳ್ಳಿಯಲ್ಲಿ ಇತ್ತೀಚೆಗೆ ದೊರೆತ ಶಾಸನದ ಆಧಾರದ ಮೇಲೆ ವಿಜಯನಗರದ ಅರಸು ಶ್ರೀ ಕೃಷ್ಣದೇವರಾಯರ ಪತ್ನಿ ಚಿನ್ನಾದೇವಿ ವೇಶ್ಯೆ ಅಲ್ಲವೆಂದೂ, ಗೌರವಾನ್ವಿತ ಕುಟುಂಬದ ಮಗಳೆಂದು ಪ್ರತಿಪಾಧಿಸಿದ್ದಾರೆ. ಆದರೆ ಇದುವರೆಗೆ ಕರ್ನಾಟಕ–ಆಂಧ್ರದ ಪಂಡಿತರು, ಕವಿ–ನಾಟಕಕಾರರೂ ಈ ವಿಷಯವನ್ನು ಅಂಗೀಕರಿಸಿದ್ದಾರೆಯೇ? ತಿಳಿಯದು. ಕಾಲಾನುಕಾಲಕ್ಕೆ ನಡೆದ ಸಂಶೋಧನೆಗಳೂ ಮತ್ತು ದೊರಕಿದ ಶಾಸನಗಳ ಆಧಾರದ ಮೇಲೆ ನಾಡಿನ ಚರಿತ್ರೆ ಹೊಸ ರೂಪ ತಳೆಯಬೇಕು. ಹಾಗಾದರೆ ಮಾತ್ರ ಸಂಶೋಧನೆ ಮತ್ತು ಅಧ್ಯಯನಗಳಿಗೆ ಮಹತ್ವವಿರುತ್ತದೆ. ಇಡೀ ಪ್ರಪಂಚವನ್ನು ಕಾಡುತ್ತಿರುವ ಮಹಾಮಾರಿಗೆ (ಕೋವಿಡ್, ಡೆಲ್ಟಾ ಪ್ಲೆಸ್, ಇತ್ಯಾದಿ) ಗುರಿಯಾಗಿ ಪ್ರಪಂಚವೆಲ್ಲಾ ಕಂಗಾಲಾಗಿ ಹಲಬುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯು ತನ್ನ ಕೆಲಸವನ್ನು ತಪಸ್ಸಿನಂತೆ ಮಾಡುತ್ತಿರುವುದು ನಮ್ಮ ಭಾಗ್ಯ. ಈ ಕೆಲಸದಲ್ಲಿ ವ್ರತನಿರತರಾಗಿರುವ ಎಲ್ಲರಿಗೂ ಮತ್ತು ನನಗೆ ಸರ್ವಾಧ್ಯಕ್ಷ ಪದ ನೀಡಿ ಗೌರವಿಸುತ್ತಿರುವ ಸಮಸ್ತರಿಗೆ ನಮಿಸುತ್ತಾ ನನ್ನ ನುಡಿಗಳನ್ನು ಮುಗಿಸುತ್ತೇನೆ.

◆◆

ಡಾ. ಗುರುಮೂರ್ತಿ ಪೆಂಡಕೂರು – ಒಂದು ಪರಿಚಯ

ಕನ್ನಡ ಮತ್ತು ತೆಲುಗು ದ್ವಿಭಾಷಾ ಕ್ಷೇತ್ರದಲ್ಲಿ ಸಾಹಿತ್ಯದ ಮಣಿದೀಪವಾಗಿರುವವರು ಡಾ. ಗುರುಮೂರ್ತಿ ಪೆಂಡಕೂರು ಅವರು. ಬಳ್ಳಾರಿ ಜಿಲ್ಲೆಯ ನಾರಾಯಣದೇವರಕೆರೆಯಲ್ಲಿ ದಿನಾಂಕ ೯–೬–೧೯೩೮ರಲ್ಲಿ ಜನಿಸಿದ ಇವರು ಬಿ.ಎ. ಹಾಗೂ ಬಿ.ಕಾಂ. ಪದವಿಯಲ್ಲಿ ದ್ವಿಪದವೀಧರರು. ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಕನ್ನಡ (೧೯೯೯)ದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವುದರೊಂದಿಗೆ ಅದೇ ವಿಶ್ವವಿದ್ಯಾನಿಲಯದಿಂದ 'ಕೃಷ್ಣದೇವರಾಯನ ಕಾಲದ ಕನ್ನಡ ಶಾಸನಗಳು' ಎಂಬ ವಿಷಯದಲ್ಲಿ ಪಿಎಚ್.ಡಿ. ಗೌರವವನ್ನು ಗಳಿಸಿಕೊಂಡಿರುವರು. ತಮ್ಮ ಬದುಕಿನುದ್ದಕ್ಕೂ ಸಾಹಿತ್ಯ, ಸಂಸ್ಕೃತಿ, ಸಂಗೀತ, ಜನಪದ, ಸಂಘಟನೆ ಹೀಗೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಪೆಂಡಕೂರರ ಸಾಧನೆ ಬಹುಮುಖ ಪ್ರತಿಭೆಯಿಂದ ಕೂಡಿದ್ದು ಇತರರಿಗೆ ಪ್ರೇರಣೆ ನೀಡುವಂತಹದು. ಸಾಹಿತ್ಯದ ಪ್ರಕಾರಗಳಾದ ಪತ್ರಸಾಹಿತ್ಯ, ಪ್ರವಾಸಸಾಹಿತ್ಯ, ಕಾವ್ಯ, ಅನುವಾದ, ಸಂಪಾದನೆ, ಸಂಶೋಧನಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಚಿರಸ್ಥಾಯಿಯಾಗಿರುವಂತಹದು.

೩೦ಕ್ಕೂ ಹೆಚ್ಚು ಸ್ವತಂತ್ರ ಕೃತಿಗಳನ್ನು ಹಾಗೂ ಅಷ್ಟೇ ಪ್ರಮಾಣದ ಅನುವಾದ ಕೃತಿಯನ್ನು ಪ್ರಕಟಿಸಿರುವ ಪೆಂಡಕೂರರ ಸಾಹಿತ್ಯ ಕೃತಿಗಳು ಕನ್ನಡ–ತೆಲುಗು ನಾಡಿನ ಸಾಂಸ್ಕೃತಿಕ ಸಂಪತ್ತಿನ ಸಿರಿಯನ್ನು ಹೆಚ್ಚಿಸಿವೆ ಎಂದೇ ಹೇಳಬೇಕು. ಇವರ ಒಂದು ಕೈಯಲ್ಲಿ ಸಾಹಿತ್ಯದ ಮಣಿದೀಪ, ಇನ್ನೊಂದು ಕೈಯಲ್ಲಿ ಸಂಘಟನೆಯ ಶಕ್ತಿಯಾಗಿದ್ದಾರೆ. ಹತ್ತಾರು ಕೃತಿಗಳ ಸಂಪಾದಕರಾಗಿಯೂ ಗುರುತಿಸಿಕೊಂಡಿದ್ದಾರೆ. ಬಳ್ಳಾರಿ ನೆಲೆ ಇವರ ಕರ್ಮಭೂಮಿಯಾದರೂ ಅದನ್ನು ಇಡೀ ಕರ್ನಾಟಕಕ್ಕೆ ವಿಸ್ತಾರ ಮಾಡಿದ್ದಾರೆ. ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಸಂಗೀತ ವಿದ್ಯಾಲಯ ಸ್ಥಾಪನೆ, ಪ್ರಕಾಶನ ಸಂಸ್ಥೆ ಸ್ಥಾಪನೆ ಮಾಡುವುದರೊಂದಿಗೆ ಅನೇಕ ಹಿರಿಯ–ಕಿರಿಯರ ಪುಸ್ತಕಗಳನ್ನು ಪ್ರಕಟಿಸುವುದರೊಂದಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಉತ್ತಮ ಪ್ರಕಾಶನ ಸಂಸ್ಥೆ ಎಂಬ ಮನ್ನಣೆಗೆ ಪಾತ್ರರಾಗಿದ್ದಾರೆ. ಸಂಘಟನಾಕಾರರಾಗಿ ಜಾನಪದ ಮೇಳ, ಬಾಲಸಂಗಮ, ಸಂಗೀತ ಕಛೇರಿಗಳು, ನಾಟಕಗಳು, ಸಮ್ಮೇಳನಗಳು, ಚಲನಚಿತ್ರ ಶಿಬಿರಗಳನ್ನಲ್ಲದೆ, ಕರ್ನಾಟಕ ಇತಿಹಾಸ ಅಕಾದೆಮಿಯ ೨೧ನೇ ಸಮ್ಮೇಳನವನ್ನು ಆಯೋಜಿಸಿದ ಕೀರ್ತಿ ಇವರಿಗೆ ಸಲ್ಲಬೇಕು.

ಪ್ರವಾಸ ಮಾಡುವುದು ಇವರ ಬಹುಪ್ರಿಯ ಹವ್ಯಾಸವಾಗಿದ್ದು ಯುರೋಪ್, ಮಧ್ಯಪ್ರಾಚ್ಯ, ದಕ್ಷಿಣ ಏಷಿಯಾ, ಅಮೆರಿಕಾ, ಕೆನಡಾ, ಜಪಾನ್, ಇಂಡೋನೇಷಿಯಾ, ಶ್ರೀಲಂಕಾಗಳಲ್ಲಿ ತಾವು ಕಂಡುಕೊಂಡ ಅನುಭವವನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಇಂಡೋನೇಷಿಯಾ ಪ್ರವಾಸ ಕಥನಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಗೌರವ, ಸಮಿಶ್ರ ದಿಗಂಬರ ಕಾವ್ಯ ಕೃತಿಗೆ ಗೊರೂರು ಪ್ರಶಸ್ತಿ, ಕರ್ನಾಟಕಶ್ರೀ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಮಾಜಸೇವಾಭೂಷಣ ಪ್ರಶಸ್ತಿ, ಭರಣಿ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೃಷ್ಣದೇವರಾಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಪ್ರಶಸ್ತಿ, ಅಷ್ಟದಿಗ್ಗಜ ಪ್ರಶಸ್ತಿ ಹೀಗೆ ೨೫ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿರುವ ಪೆಂಡಕೂರರಿಗೆ ಅವರ ಅಭಿಮಾನ ವಲಯ 'ಹಗರಿಸಾಲಿನ ಸಾಧಕ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದೆ. ಇಂತಹ ಮಹಾನ್ ಸಾಧಕರಾದ ಡಾ. ಗುರುಮೂರ್ತಿ ಪೆಂಡಕೂರರಿಗೆ ಪ್ರಸ್ತುತ ಕರ್ನಾಟಕ ಇತಿಹಾಸ ಅಕಾದೆಮಿಯು ತನ್ನ ೩೫ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡುವುದರ ಮೂಲಕ ತನ್ನ ಗೌರವವನ್ನು ಅರ್ಪಿಸುತ್ತಿದೆ.

೧

ಪ್ರವೀಣ್‌ಕುಮಾರ್ ಕೆ.

ಅರ್ಕಾವತಿ ನದಿ ಕಣಿವೆಯ ನವಶೋಧಿತ ಬೃಹತ್ ಶಿಲಾಯುಗ ಸಮಾಧಿ ನಿರ್ಮಾಣದ ತಂತ್ರಗಾರಿಕೆ

ಪ್ರಸ್ತುತ ಲೇಖನವು ಅರ್ಕಾವತಿ ನದಿ ಕಣಿವೆಯಲ್ಲಿ ನಡೆಸಿದ ಕ್ಷೇತ್ರಕಾರ್ಯದ ಹೊಸ ಸಂಶೋಧನೆಯಾಗಿದೆ. ಆದಿ ಕಬ್ಬಿಣಯುಗದ ಮಾನವನು ಬೆಂಕಿಯ ತಂತ್ರಗಾರಿಕೆಯನ್ನು ಕಂಡುಕೊಂಡಿದ್ದನು. ಕ್ರಮೇಣ ಕಲ್ಲುಗಣಿಗಾರಿಕೆ ಮಾಡಿ ಸಮಾಧಿಗೆ ಬಳಸುವ ಕಲ್ಲುಗಳನ್ನು ಬೆಂಕಿ ತಂತ್ರಗಾರಿಕೆಯ ಜೊತೆಗೆ ಹೊಸದಾಗಿ ಕಬ್ಬಿಣದ ಉಪಕರಣಗಳನ್ನು ಬಳಸಿ ಕಲ್ಲನ್ನು ಬೇರ್ಪಡಿಸುವ ತಂತ್ರಗಾರಿಕೆಯನ್ನು ಕಂಡುಕೊಂಡನು. ಈ ಕಾಲದಲ್ಲಾದ ಕಬ್ಬಿಣ ತಯಾರಿಕೆ ದೊಡ್ಡ ಕ್ರಾಂತಿಯನ್ನೇ ಸೃಷ್ಟಿಸಿತು ಎಂದರೆ ತಪ್ಪಾಗಲಾರದು. ಇಂದಿಗೂ ಎಲ್ಲಾ ವಲಯದಲ್ಲೂ ಕಬ್ಬಿಣಲೋಹವನ್ನು ಹೆಚ್ಚು ಬಳಸುತ್ತಿರುವುದನ್ನು ಉದಾಹರಿಸಬಹುದು. ಪ್ರಸ್ತುತ ಅರ್ಕಾವತಿ ನದಿಕಣಿವೆಯಲ್ಲಿ ಬೃಹತ್ ಶಿಲಾಯುಗದ ಮಾನವನ ಜೀವನೋಪಾಯ ವಿಧಾನವು ವೈವಿಧ್ಯ ಚಟುವಟಿಕೆಗಳಿಂದ ಕೂಡಿದ್ದುದಕ್ಕೆ ಅನೇಕ ಕುರುಹುಗಳು ಸಿಕ್ಕಿವೆ. ಬೃಹತ್‌ಕಲ್ಲುಗಳನ್ನು ಬಂಡೆಯಿಂದ ಬೇರ್ಪಡಿಸುವ ತಂತ್ರಗಾರಿಕೆ, ಸತ್ತವರಿಗಾಗಿ ಸಮಾಧಿಗಳನ್ನು ನಿರ್ಮಿಸುವ ವಿಧಾನ, ಕೃಷಿಗೆ ಬಳಸುವ ಉಪಕರಣಗಳು, ಮೀನುಗಾರಿಕೆ ಇತ್ಯಾದಿ ಚಟುವಟಿಕೆಗಳು ಬೃಹತ್ ಶಿಲಾಯುಗದ ಜನಪದರ ಜೀವನ ಕ್ರಮಗಳನ್ನು ಅಧ್ಯಯನ ಮಾಡಲು ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಪ್ರಸ್ತುತ ಅಧ್ಯಯನವು ಬೃಹತ್‌ಶಿಲಾಯುಗದ ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯ ಭಾಗವಾಗಿ ಸಮಾಧಿಗಳಿಗೆ ಬಳಸುತ್ತಿದ್ದ ಕಲ್ಲುಗಳ ಕ್ವಾರಿ ತಂತ್ರಜ್ಞಾನದ ವಿಧಾನದ ಮೇಲೆ ಬೆಳಕು ಚೆಲ್ಲುತ್ತದೆ.

ಅರ್ಕಾವತಿ ನದಿ ಕಣಿವೆಯ ಭೌಗೋಳಿಕ ಲಕ್ಷಣ

ಅರ್ಕಾವತಿ ಕಣಿವೆಯು ದಕ್ಷಿಣ ಮೈದಾನದಲ್ಲಿ ನೆಲೆಗೊಂಡಿದೆ. ಇದು ಪ್ರಸ್ತುತ ಬೆಂಗಳೂರು, ಮತ್ತು ರಾಮನಗರ ಜಿಲ್ಲೆಗಳನ್ನು (೧೭,೩೧೪ ಚ.ಕಿ.) ಒಳಗೊಳ್ಳುವ ವಿಶಾಲ ಪ್ರದೇಶವಾಗಿದೆ. ವರ್ಷಕ್ಕೆ ೬೫೦–೯೦೦ ಮಿ.ಮೀ ಮಧ್ಯಮ ಮಳೆಯಾಗುತ್ತದೆ. ಭೌಗೋಳಿಕವಾಗಿ ಈ ಪ್ರದೇಶವನ್ನು ನೀರಾವರಿ ಬಯಲು ಪ್ರದೇಶಗಳು (ನದಿ ನೀರು–ಅವಲಂಬಿತ), ನೀರಾವರಿ ಅಲ್ಲದ ಗುಡ್ಡಗಾಡು ಪ್ರದೇಶಗಳಾಗಿ ವರ್ಗೀಕರಿಸಬಹುದು. ಅರ್ಕಾವತಿ ನದಿಯಲ್ಲದೇ, ಇದರ ಉಪ ನದಿಗಳು, ತೊರೆಗಳಾದ ಕುಮುದಾವತಿ, ಭಾರ್ಗವತಿ, ಬಿಳಗುಂಬ ತೊರೆ ಇವು ಈ ಪ್ರದೇಶದ ನೀರಿನ ಮೂಲಗಳಾಗಿವೆ. ಈ ಪ್ರಸ್ಥಭೂಮಿಯು ಉಷ್ಣವಲಯದ ಒಣಪತನಶೀಲ ಕಾಡುಗಳಿಂದ

Ph.D.Scholar
Deccan College
PUNE-411006
Maharashtra State
Mob:9844782235

ಆವೃತವಾದ ಎತ್ತರದ ಗ್ರಾನೈಟ್ ಬಂಡೆಗಳು ಮತ್ತು ಬೆಟ್ಟದ ಸಾಲುಗಳನ್ನು ಒಳಗೊಂಡಿದೆ. ಅಲ್ಲದೇ ದಟ್ಟಕಾಡು ಪ್ರದೇಶಗಳಿಂದ ಸುತ್ತುವರೆಯಲ್ಪಟ್ಟ ಭೂಭಾಗವಾಗಿದ್ದು, ಅನೇಕ ಪ್ರಾಚೀನ ನೆಲೆಗಳು ಅರಣ್ಯ ಪ್ರದೇಶದಲ್ಲಿಯೇ ಕಂಡುಬಂದಿವೆ.

ಭೂರೂಪ ಶಾಸ್ತ್ರೀಯವಾಗಿ, ಅರ್ಕಾವತಿ ಕಣಿವೆಯ ಬೆಟ್ಟದ ಸಾಲುಗಳು ಎತ್ತರದ ಮತ್ತು ರೋಲಿಂಗ್ ಟೋಪೋಗ್ರಫಿಯೊಂದಿಗೆ ಪೆಡಿಪ್ಲೈನ್ ಭೂದೃಶ್ಯಗಳಿಂದ ನಿರೂಪಿಸಲ್ಪಟ್ಟಿದೆ. ಇಂತಹ ಕಣಿವೆ ಭಾಗಗಳು ದಕ್ಷಿಣಮುಖಿಯಾಗಿ ಹರಿಯುವ ನದಿಗಳು ಹಾಗೂ ಹೊಳೆಗಳಿಂದ ವಿಭಜಿಸಲ್ಪಟ್ಟಿವೆ.

ಅರ್ಕಾವತಿ ಕಣಿವೆಯಲ್ಲಿ ಕಬ್ಬಿಣ ಯುಗದ ಸಂಸ್ಕೃತಿ

ಪ್ರಸ್ತುತ ಅರ್ಕಾವತಿ ಕಣಿವೆಯಲ್ಲಿ ಹೆಚ್ಚು ಆಕರ್ಷಿತವಾದ ಹಾಗೂ ಏಷ್ಯಾ ಖಂಡದಲ್ಲೆ ಅತೀ ದೊಡ್ಡ ಏಕಶಿಲಾ ಬೆಟ್ಟಗಳಲ್ಲಿ ಒಂದು ಎಂದು ಪ್ರಸಿದ್ಧಿ ಪಡೆದಿರುವ ಸಾವನದುರ್ಗ ಬೆಟ್ಟದ ತಪ್ಪಲಿನ ಈಶಾನ್ಯಕ್ಕೆ ಇಟ್ಟಿಗೆ ಬೈಲು ಪ್ರದೇಶದಲ್ಲಿ ೧೮೭೬-೧೮೮೧ರಲ್ಲಿ ಬ್ರಿಟಿಷ್ ಸರ್ವೇಕ್ಷಣ ಅಧಿಕಾರಿಯಾದ ಬ್ರಾನ್‌ಫಿಲ್‌ನಿಂದ ಉತ್ಖನನ ಮಾಡಲಾದ ಮೊದಲ ನೆಲೆಗಳಲ್ಲಿ ಇದು ಒಂದಾಗಿದೆ (ದಕ್ಷಿಣ ಭಾರತದಲ್ಲಿ). ಇದು ಕಂಡಿಕೋಣೆ ಸಮಾಧಿಗಳು, ಡಾಲ್ಮೆನಾಯ್ಡ್ ಸಿಸ್ಟ್ ಹಾಗೂ ಕಲ್ಲಿನ ವೃತ್ತಗಳಿಂದ ಕೂಡಿದ ನೆಲೆಯಾಗಿದೆ. ಉತ್ಖನನದಲ್ಲಿ ಬಹಳ ವಿಶೇಷ ಎನಿಸುವ ಮಾನವನ ಮೂಳೆಯ ಕುರುಹುಗಳು, ಕಬ್ಬಿಣದ ಬಾಣದ ಹೆಡ್‌ಗಳು, ಚಾಕು, ಕಠಾರಿಗಳು, ಎರಡು ಅಂಚುಳ್ಳ ಮೊನಚಾದ ಬ್ಲೇಡ್‌ಗಳು, ಉಳಿ, ಬೆಣೆ, ಮಣ್ ಪಾತ್ರೆಗಳಲ್ಲಿ, ಗೀಚು ಬರಹ ಗುರುತುಗಳೊಂದಿಗೆ ಕಪ್ಪು-ಕೆಂಪು ಪಾತ್ರೆಗಳು, ಎತ್ತರದ ಕುತ್ತಿಗೆಯ ಮೂರು ಕಾಲಿನ ಜಾಡಿಗಳು, ಹಸುವಿನ ಕೊಂಬಿನಾಕಾರದ ಮಣ್ಣಿನ ವಸ್ತುಗಳು, ಮತ್ತು ರಾಗಿಯ ಕುರುಹುಗಳನ್ನು ವರದಿ ಮಾಡಿದ್ದಾರೆ. ಅರ್ಕಾವತಿ ಕಣಿವೆಯಲ್ಲಿನ ಕಬ್ಬಿಣಯುಗ ಸಂಸ್ಕೃತಿಯು ಉತ್ತರಕರ್ನಾಟಕ ಭಾಗದ ಹಿರೇಬೆಣಕಲ್, ಬ್ರಹ್ಮಗಿರಿ, ಮತ್ತು ತಮಿಳುನಾಡಿನ ಸಾನೂರು ಬೃಹತ್‌ಶಿಲಾಯುಗ ಸಂಸ್ಕೃತಿಯ ಅವಶೇಷಗಳಿಗೆ ಸಾಮ್ಯತೆಯನ್ನು ಹೊಂದಿದೆ. ಅದೇ ಹೋಲಿಕೆಯನ್ನು ಪ್ರದರ್ಶಿಸುವ ಮಣ್ ಪಾತ್ರೆಗಳ ಮೇಲಿನ ಗೀಚು ಬರಹಗಳ ಕುರುಹುಗಳಲ್ಲಿ ಹೋಲಿಕೆಗಳನ್ನು ಗಮನಿಸಲಾಗಿದೆ. ಅರ್ಕಾವತಿ ನದಿ ಕಣಿವೆಯಲ್ಲಿನ ಬೃಹತ್‌ಶಿಲಾ ಸಂಸ್ಕೃತಿಯ ಮುಖ್ಯ ಗುಣಲಕ್ಷಣಗಳೆಂದರೆ, ಸಮಾಧಿಗಳ ವಿಧಗಳಲ್ಲಿ, ಡಾಲ್ಮೆನಾಯ್ಡ್ ಸಿಸ್ಟ್‌ಗಳು, ಶಿಲಾವೃತ್ತ ಸಮಾಧಿಗಳು, ಗೀಚುಬರಹಗಳು, ರಾಗಿ ಮತ್ತು ಭತ್ತದ ಕುರುಹುಗಳು, ಕಬ್ಬಿಣ ತಯಾರಿಸುವ ತಂತ್ರಜ್ಞಾನ, ಕಬ್ಬಿಣದ ಕೃಷಿ ಉಪಕರಣಗಳು, ಮತ್ತು ವಿವಿಧ ಬಗೆಯ ಮಣ್‌ಪಾತ್ರೆಗಳು.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಮಾಗಡಿ, ರಾಮನಗರ, ಕನಕಪುರ, ಚನ್ನಪಟ್ಟಣ ಪರಿಸರದಲ್ಲಿ ಅನೇಕರಿಂದ ಪುರಾತತ್ವ ನೆಲೆಗಳನ್ನು ಶೋಧಿಸಲಾಗಿದ್ದು ಆವಿಷ್ಕಾರಗಳ ಯಾವುದೇ ವಿವರವಾದ ಮತ್ತು ವ್ಯವಸ್ಥಿತವಾದ ಅಧ್ಯಯನಗಳನ್ನು ಪ್ರಕಟಿಸಲಾಗಿಲ್ಲ ಹಾಗೂ ಅರ್ಕಾವತಿ ಕಣಿವೆಯಲ್ಲಿ ಕಬ್ಬಿಣಯುಗದ ಸಂಸ್ಕೃತಿಯ ವೈಶಿಷ್ಟ್ಯಗಳ ಬಗ್ಗೆ ಯಾವುದೇ ವ್ಯವಸ್ಥಿತ ಸಮೀಕ್ಷೆಗಳನ್ನು ನಡೆಸದ ಕಾರಣ ಇಲ್ಲಿನ ಬೃಹತ್ ಶಿಲಾಯುಗದ ಇತಿಹಾಸವು ಅಸಮರ್ಪಕವಾಗಿ ತಿಳಿದಿದೆ. ಪ್ರಸ್ತುತ ಲೇಖಕರು ೨೦೧೫ರಿಂದ ನಡೆಸಿದ ಸಮೀಕ್ಷೆಗಳಿಂದ ಸುಮಾರು ೬೦ ನೆಲೆಗಳನ್ನು ಹೊಸದಾಗಿ ಶೋಧಿಸಿ ವ್ಯವಸ್ಥಿತವಾಗಿ ದಾಖಲಿಸುತ್ತ ಬಂದಿದ್ದಾರೆ. ಆದಾಗ್ಯೂ, ಈ ಪ್ರದೇಶದಲ್ಲಿ ಪತ್ತೆಯಾದ ನೆಲೆಗಳು ಅರ್ಕಾವತಿ ಕಣಿವೆಯಲ್ಲಿ ಕಬ್ಬಿಣಯುಗದ ಸಂಸ್ಕೃತಿಯ ಅಧ್ಯಯನದ ಶ್ರೀಮಂತಿಕೆಯನ್ನು ಸೂಚಿಸುತ್ತವೆ. ೨೦೧೫ರಿಂದ ಪ್ರಸ್ತುತ ಲೇಖಕರು ಕ್ಷೇತ್ರಕಾರ್ಯದಲ್ಲಿ ದೊರೆತ ಅನೇಕ ಶೋಧಗಳನ್ನು ವಿವಿಧ ಮಜಲಿನಲ್ಲಿ ಅಧ್ಯಯನ ಮಾಡುತ್ತಿದ್ದು ಪ್ರಸ್ತುತ ಲೇಖನವು ಈ ಪ್ರದೇಶದಲ್ಲಿ ಸಮೀಕ್ಷೆ ಮಾಡಲಾದ ಕಬ್ಬಿಣಯುಗದ ಸಮಾಧಿ ನೆಲೆಗಳಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆಯಬಹುದಾದ ಎರಡು ಪ್ರಮುಖ ನೆಲೆಗಳ ಅಧ್ಯಯನವಾಗಿದೆ. ವಿಶೇಷವಾಗಿ ಗವಿನಾಗಮಂಗಲ ಮತ್ತು ಕಾಟಮಾನದೊಡ್ಡಿ ನೆಲೆಗಳಲ್ಲಿ ಕಂಡುಬಂದ ಕಬ್ಬಿಣದ ಉಪಕರಣಗಳು ಮತ್ತು ಸಮಾಧಿಗಳ ಮೇಲೆ ಕಂಡುಬಂದಿರುವ ಕಬ್ಬಿಣದ ಬೆಣೆಯ ಗುರುತುಗಳು ಕಬ್ಬಿಣದ ಉಪಕರಣಗಳನ್ನು ಬಳಸಿ ಬೃಹತ್ ಬಂಡೆಯಿಂದ ಕಲ್ಲನ್ನು ಬೇರ್ಪಡಿಸಲು ಬಳಸುತ್ತಿದ್ದ ತಂತ್ರಗಾರಿಕೆಯ ಪುರಾವೆಗಳ ಈ ಸಂಶೋಧನೆಯು ಮುಂದಿನ ಅಧ್ಯಯನಗಳಿಗೆ ಹೊಸ ಆಯಾಮವನ್ನು ನೀಡುತ್ತದೆ ಎಂದು ಭಾವಿಸಲಾಗಿದೆ. ಈ ಲೇಖನದಲ್ಲಿ, ಅರ್ಕಾವತಿ ಕಣಿವೆಯ ಕಬ್ಬಿಣಯುಗ ಸಂಸ್ಕೃತಿಗೆ ಸಂಬಂಧಿಸಿದ ಪ್ರಕಟಿತ ಮತ್ತು ಅಪ್ರಕಟಿತ ದತ್ತಾಂಶಗಳ ಸಣ್ಣ ಮತ್ತು ಸಂಕೀರ್ಣವಾದ ಅಧ್ಯಯನದ ಮೂಲಕ ಅವುಗಳನ್ನು ಸಂಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಗವಿನಾಗಮಂಗಲ

ಈ ನೆಲೆಯು ಮಾಗಡಿ ಪಟ್ಟಣದಿಂದ ನೈರುತ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಪಶ್ಚಿಮಕ್ಕೆ ಭಾರ್ಗವತಿ ಹೊಳೆ ಮತ್ತು ಪೂರ್ವಕ್ಕೆ ಅರ್ಕಾವತಿ ನದಿಗಳು ಇಲ್ಲಿನ ನೀರಿನ ಮೂಲಗಳಾಗಿವೆ. ಒಟ್ಟು ೫ ಪ್ರದೇಶಗಳಲ್ಲಿ ಸಮಾಧಿಗಳು ಕಂಡುಬಂದಿದ್ದು

ಕಿವುಡನ ಸೆಣೆ ಎಂಬ ನೆಲೆಯಲ್ಲಿ ಸು. ೬೫ ಸಮಾಧಿಗಳ ಸಂಕೀರ್ಣ ಬೆಳಕಿಗೆ ಬಂದಿದೆ. ಈ ನೆಲೆಯು ಅಧ್ಯಯನದ ದೃಷ್ಟಿಯಿಂದ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ವ್ಯವಸ್ಥಿತವಾಗಿ ನಿರ್ಮಿಸಲಾದ ಕಂಡಿ ಕೋಣೆ ಸಮಾಧಿಗಳು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲುಗಳನ್ನು ಬಳಸಿ ನಿರ್ಮಿಸಲ್ಪಟ್ಟವುಗಳಾಗಿವೆ. ವಿಶೇಷವೆಂದರೆ ನಿಧಿಗಳ್ಳರಿಂದ ಹಾನಿಗೊಳಗಾದ ಸಮಾಧಿಗಳಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳಲ್ಲಿ ಕೃಷಿ ಉಪಕರಣಗಳು, ಮಾನವನ ಮೂಳೆಚೂರುಗಳು, ವಿಶೇಷವಾದ ಮಣ್ಣಿನ ಪಾತ್ರೆಗಳು ಹಾಗೂ ರಾಗಿಯ ಅವಶೇಷಗಳು ದೊರೆತಿವೆ.

ಕಾಟಮಾನದೊಡ್ಡಿ

ಈ ನೆಲೆಯು ರಾಮನಗರದ ಆಗ್ನೇಯಕ್ಕೆ ೧೨ ಕಿ.ಮೀ. ಮಂಚನಬೆಲೆ ಮಾರ್ಗದಲ್ಲಿ ಕಂಡುಬರುತ್ತದೆ. ೬೫೦ ಮೀ. ಪಶ್ಚಿಮಕ್ಕೆ ಅರ್ಕಾವತಿ ನೆಲೆಯ ದಂಡೆಯ ಮೇಲೆ ಸಮಾಧಿ ನೆಲೆಯು ಕಂಡುಬಂದಿದೆ. ಗ್ರಾಮದ ಪಶ್ಚಿಮಕ್ಕೆ ಪಾಂಡವರ ಬಯಲು ಎಂದು ಕರೆಯಲ್ಪಡುವ ಪ್ರದೇಶದಲ್ಲಿ ಸು. ೩೦ ಕಂಡಿಕೋಣೆ ಮತ್ತು ನೆಲಕೋಣೆ ಸಮಾಧಿಗಳು ಕಂಡುಬಂದಿವೆ. ಅನಿಯಮಿತ ಭೂದೃಶ್ಯ ಲಕ್ಷಣಗಳನ್ನು ಹೊಂದಿದ್ದು, ಬೃಹತ್ ಬಂಡೆಗೆ ಹೊಂದಿಕೊಂಡಂತೆ ವಿಶಾಲ ಪ್ರದೇಶದಲ್ಲಿ ಸಮಾಧಿಗಳು ಕಂಡು ಬಂದಿವೆ. ಈ ನೆಲೆಯು ಕೂಡ ಅಧ್ಯಯನದ ದೃಷ್ಟಿಯಿಂದ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಬೃಹತ್ ಹಾಸುಗಲ್ಲಿನ ಮೇಲೆ ಉಳಿ ಮತ್ತು ಬೆಣೆಯ ಗುರುತುಗಳಿರುವ ಹಾಗೂ ಹಾನಿಗೊಳಗಾಗದ ಸಮಾಧಿಗಳು ಕಂಡುಬಂದಿವೆ.

ಸಂಶೋಧನೆಯ ಫಲಿತಾಂಶ

ಇಲ್ಲಿಯವರೆಗೆ ವರದಿಯಾಗಿರುವ ಪುರಾತತ್ವ ಶಾಸ್ತ್ರದ ಪುರಾವೆಗಳು ಪೂರ್ವಇತಿಹಾಸ ಕಾಲದಲ್ಲಿ ಮಾನವ ವಸಾಹತುಗಳಿಗೆ ಗಣನೀಯ ಪುರಾವೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಸೂಚಿಸುತ್ತವೆ. ಪ್ರಸ್ತುತ ಅರ್ಕಾವತಿ ನದಿ ಕಣಿವೆ ಪ್ರದೇಶದ ಆರ್ಥಿಕತೆಯ ಶ್ರೀಮಂತಿಕೆಗೆ ಪೂರಕವಾದ ಕಬ್ಬಿಣದ ನಿಕ್ಷೇಪಗಳು, ಅರಣ್ಯ ಸಂಪತ್ತು, ನೈಸರ್ಗಿಕ ಬೆಟ್ಟಗುಡ್ಡಗಳು, ಹೇರಳವಾಗಿ ಕಂಡುಬಂದಿವೆ. ಬೃಹತ್‌ಶಿಲಾಯುಗ ಕಾಲದಲ್ಲಿ ಇದೆಲ್ಲದರ ಉಪಯೋಗದ ಬಗ್ಗೆ ಆಳವಾದ ಅಧ್ಯಯನ ಮಾಡಿದಾಗ ಇಂತಹ ಸಂಪತ್ತುಗಳು ಇತಿಹಾಸಪೂರ್ವ ಮತ್ತು ಆದಿಇತಿಹಾಸ ಕಾಲದಲ್ಲಿ ಜನರು ವಾಸಿಸಲು ಕಬ್ಬಿಣಯುಗದ ಸಮಾಜಕ್ಕೆ ಅನೂಕೂಲಕರವಾದ ವಾತಾವರಣವಿತ್ತು ಎಂಬುದು ತಿಳಿದುಬರುತ್ತದೆ.

ಪ್ರಸ್ತುತ ಮೇಲೆ ಉಲ್ಲೇಖಿಸಿರುವ ಎರಡು ನೆಲೆಗಳು ಹಾಗೂ ಇನ್ನೂ ಕೆಲವು ನೆಲೆಗಳಲ್ಲಿ ಕಬ್ಬಿಣಯುಗದ ಗುಂಪುಗಳು ನೀರಾವರಿ, ಕಲ್ಲುಗಣಿಗಾರಿಕೆ, ಕಬ್ಬಿಣ ತಯಾರಿಸುವ, ಸಣ್ಣಬೇಟೆ ಮತ್ತು ಮೀನುಗಾರಿಕೆ ಇತ್ಯಾದಿಗಳಂತಹ ಅಭಿವೃದ್ಧಿ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ. ಪ್ರಸ್ತುತ ನಾಗಮಂಗಲ ಮತ್ತು ಕಾಟಮಾನದೊಡ್ಡಿಯಲ್ಲಿ ಕಂಡುಬಂದಿರುವ ಹೊಸ ಉಪಕರಣದ ಅನ್ವಯಿಕೆಗಳ ಹೊಸ ಪರಿಚಯ ಕೈಗಾರಿಕೆ ಮತ್ತು ಅವರ ಸಾಮಾಜಿಕ ಕ್ಷೇತ್ರಗಳ ಬಗ್ಗೆ ಹೊಸಬೆಳಕು ಚೆಲ್ಲುವ ಆಧಾರಗಳಾಗಿವೆ. ಇವೆಲ್ಲವೂ ಮುಖ್ಯವಾಗಿ ಸ್ಥಳೀಯ ರಚನೆಯಿಂದ ರೂಪುಗೊಂಡಿವೆ. ಇಲ್ಲಿ ಕಂಡುಬಂದಿರುವ ಬಹುತೇಕ ಸಮಾಧಿನೆಲೆಗಳು ಬೆಟ್ಟದ ತಪ್ಪಲಿನಲ್ಲಿ, ಬೆಟ್ಟದ ತುದಿಯಲ್ಲಿ, ಅಥವಾ ಅರ್ಕಾವತಿ ನದಿಯನ್ನು ಒಳಗೊಂಡಂತೆ ಅದರ ಉಪನದಿ ತೊರೆಗಳ ಸಮೀಪದಲ್ಲಿ ಕಂಡುಬಂದಿವೆ. ವಿಶೇಷವಾಗಿ ಗ್ರಾನೈಟ್ ಬೆಟ್ಟದ ಹಾಗೂ ಅತಿ ಎತ್ತರವಲ್ಲದ ಬಂಡೆಗಳ ಬಳಿ ಮತ್ತು ಪ್ರಸ್ತುತ ನೀರಿನ ಮೂಲದಿಂದ ಸ್ವಲ್ಪದೂರದಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಎತೀ ಎತ್ತರದ ಬೆಟ್ಟಗಳಲ್ಲಿ ಸಮಾಧಿಗಳನ್ನು ನಿರ್ಮಿಸುವುದನ್ನು ತಪ್ಪಿಸಲು ಎಂದು ಸೂಚಿಸುತ್ತದೆ. ಬಹುಶಃ ಕಚ್ಚಾವಸ್ತುಗಳ ಲಭ್ಯತೆ ಮತ್ತು ಅವುಗಳ ಸುಲಭ ಸಾಗಾಣಿಕೆಗೆ ಸ್ಥಳೀಯವಾದ ಸಂಪತ್ತನ್ನೇ ಅವಲಂಬಿಸಿದ್ದರು ಎಂದು ನಿಸ್ಸಂದೇಹವಾಗಿ ಹೇಳಬಹುದು.

ದಕ್ಷಿಣಭಾರತದಲ್ಲಿ, ವಿಶೇಷವಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಭೌಗೋಳಿಕ ಪ್ರದೇಶಗಳಲ್ಲಿ ಕಬ್ಬಿಣಯುಗ/ಬೃಹತ್‌ಶಿಲಾಯುಗ ಕಾಲಘಟ್ಟದಲ್ಲಿ ನಿರ್ಮಿಸಲಾದ ಸಿಸ್ಟ್ ಸಮಾಧಿಗಳು, ಕಂಡಿಕೋಣೆ ಸಮಾಧಿಗಳು, ಮತ್ತು ಇತರೆ ಸಮಾಧಿ ಸ್ಮಾರಕಗಳನ್ನು ನೋಡಿದಾಗ, ಸಮಾಧಿಗಳ ನಿರ್ಮಾಣದಲ್ಲಿ ಗ್ರಾನೈಟ್ ಕಲ್ಲಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಕೇರಳ (ಗ್ರಾನೈಟ್ ಮತ್ತು ಲ್ಯಾಟರೈಟ್) ಮತ್ತು ವಿಧರ್ಭ (ಲ್ಯಾಟರೈಟ್ ಮತ್ತು ಬಸಾಲ್ಟ್)ನಂತಹ ಭೌಗೋಳಿಕ ಪ್ರದೇಶಗಳನ್ನು ಹೊರತುಪಡಿಸಿ ಗ್ರಾನೈಟ್ ಕಲ್ಲನ್ನು ಸರ್ವೇಸಾಮಾನ್ಯವಾಗಿ ಬಳಸಲಾಗಿದ್ದು ವಿಶೇಷವಾಗಿ ಬೃಹತ್ ಬಂಡೆಗಳಿಂದ ಕ್ವಾರಿ ವಿವಿಧ ಬಗೆಯ ತಂತ್ರಜ್ಞಾನವನ್ನು ಉಪಯೋಗಿಸಿ ಕಲ್ಲಿನ ಮೇಲ್ಮೈಯನ್ನು ಹೊರತೆಗೆಯಲಾಗುತ್ತಿತ್ತು. ಇದುವರೆಗೆ ನಮಗೆ ದೊರೆತಿರುವ ಮತ್ತು ಉತ್ಖನನ ಮಾಡಲಾಗಿರುವ ಸಮಾಧಿಗಳ ಆಂತರಿಕ

ಲಕ್ಷಣಗಳಲ್ಲಿ ಒಂದು ಭೌಗೋಳಿಕ ಪರಿಸರದಿಂದ ಇನ್ನೊಂದು ಪರಿಸರಕ್ಕೆ ಬಹಳ ಭಿನ್ನತೆಯನ್ನು ಕಾಣಬಹುದು. ಬೃಹತ್ ಹಾಸುಗಲ್ಲು ಅಥವಾ ಟೊಪ್ಪಿಗಲ್ಲುಗಳನ್ನು ಮುಖ್ಯವಾಗಿ ಸ್ವಸ್ತಿಕ್ ಆಕಾರದ ಸಮಾಧಿಕೋಣೆಯನ್ನು ಮುಚ್ಚಲು ಬಳಸಲಾಗುತ್ತಿತ್ತು. ಚಿಕ್ಕ ಚಪ್ಪಡಿಗಳನ್ನು ಮತ್ತು ಸಣ್ಣ ಹಾಗೂ ಮಧ್ಯಮಗಾತ್ರದ ಬಂಡೆಗಳನ್ನು ಸಮಾಧಿಕೋಣೆಯ ಸುತ್ತಲೂ ವೃತ್ತವನ್ನು ರಚಿಸಲು ಬಳಸಲಾಗುತ್ತಿತ್ತು. ಇಂತಹ ವೃತ್ತಗಳ ನಿರ್ಮಾಣದಲ್ಲಿ ಎರಡರಿಂದ ಮೂರು ವೃತ್ತಗಳನ್ನು ಸಹ ನೋಡಬಹುದು. ಬ್ರಹ್ಮಗಿರಿ, ಹಳ್ಳೂರು ಮತ್ತಿತರ ಉತ್ಖನನ ನೆಲೆಗಳಲ್ಲಿ ಕೋಣೆಯ ಸುತ್ತ ಮತ್ತು ವೃತ್ತದ ಒಳಗಡೆ ಸಣ್ಣ ಸಣ್ಣ ಕಾಡುಗಲ್ಲುಗಳಿಂದ (ಸ್ಥಳೀಯವಾಗಿ ಕಾಡುಗಲ್ಲು ಎಂದರೆ ಅನಿಯಮಿತ ವೃತ್ತಾಕಾರದ ಸಣ್ಣಕಲ್ಲುಗಳು) ತುಂಬಿ ವೃತ್ತಗಳನ್ನು ನಿರ್ಮಿಸುತ್ತಿದ್ದರು.

ಅರ್ಕಾವತಿ ಕಣಿವೆಯಲ್ಲಿ, ವಿಶೇಷವಾಗಿ ಗವಿನಾಗಮಂಗಲ, ಕಾಟಮಾನದೊಡ್ಡಿ ಮತ್ತು ಸಾವನದುರ್ಗದಲ್ಲಿ ನಿಧಿಗಳ್ಳರು ಹಾಗೂ ಅರಣ್ಯ ಅಭಿವೃದ್ಧಿ ಚಟುವಟಿಕೆಗಳಿಂದ ಹಾನಿಗೊಳಗಾದ ಸಮಾಧಿಗಳ ಅವಲೋಕನದಿಂದ ಸಮಾಧಿಗಳ ನಿರ್ಮಾಣದಲ್ಲಿ ಕಲ್ಲಿನಷ್ಟೇ ಪ್ರಾಮುಖ್ಯತೆಯನ್ನು ಹೊಂದಬಹುದಾದ ಮಣ್ಣಿನಲ್ಲಿಯು ವಿಭಿನ್ನತೆಯನ್ನು ಕಾಣಬಹುದು. ಸಮಾಧಿಯ ಕೋಣೆಗಳಲ್ಲಿ ಬಳಸಲಾದ ಮಣ್ಣಿಗೂ ಹಾಗೂ ಕೋಣೆಯ ಹೊರಭಾಗದ ಅಂದರೆ ವೃತ್ತದ ಒಳಗಡೆ ಬಳಸಲಾದ ಮಣ್ಣಿಗೂ ವ್ಯತ್ಯಾಸಗಳನ್ನು ಗುರುತಿಸಬಹುದು. ಸಮಾಧಿ ಕೋಣೆಗಳಲ್ಲಿ ಬಹಳ ಮೃದುವಾದ ತಿಳಿಕೆಂಪು ಬಣ್ಣದ ಅಥವಾ ಕೆಂಪು ಮಣ್ಣನ್ನು ಉಪಯೋಗಿಸಲಾಗಿದೆ. ಇಂತಹ ಮಣ್ಣನ್ನು ಮೆಕ್ಕಲು ನಿಕ್ಷೇಪಗಳಿಂದ ತೆಗೆಯಲಾದ ಅಥವಾ ಬೆಟ್ಟಗಳ ಕೊರಕಲು ಪ್ರದೇಶದಲ್ಲಿ ಶೇಖರವಾಗಿದ್ದ ಮಣ್ಣನ್ನು ಬಳಸಿರಬಹುದಾದ ಸಾಧ್ಯತೆಗಳು ಕಂಡುಬರುತ್ತದೆ ಅಥವಾ ಸ್ಥಳೀಯವಾಗಿಯೇ ದೊರೆಯುವ ಮಣ್ಣಿನಿಂದ ಘನ ವಸ್ತುಗಳನ್ನು ಹಾಗೂ ಕಲ್ಲುಗಳನ್ನು ಬೇರ್ಪಡಿಸಿ ಉಳಿದ ಮೃದುಮಣ್ಣನ್ನು ಬಳಸಿರುವುದು ಕಂಡುಬರುತ್ತದೆ. ಇನ್ನೂ ಕೋಣೆಯ ಹೊರಭಾಗಕ್ಕೆ ಅಂದರೆ ವೃತ್ತದ ಒಳಗಡೆ ಸ್ಥಳೀಯವಾಗಿ ಮುರುಮ್ ಎಂದು ಕರೆಯಲ್ಪಡುವ ದೊಡ್ಡ ಕಣಗಳ ಮಿಶ್ರಣವಾದ ಕೆಂಪು ಮಣ್ಣನ್ನು ಬಳಸಿರುವುದು ಕಂಡುಬರುತ್ತದೆ.



ಚಿತ್ರ: ೧– ಬೃಹತ್‌ಶಿಲಾ ಸಮಾಧಿಗಳ ಸಂಕೀರ್ಣ, ಮತ್ತು ಸ್ಥಳೀಯವಾಗಿ ಕಲ್ಲನ್ನು ಕ್ವಾರಿ ಮಾಡಲಾದ ಗುರುತುಗಳು, ಗವಿನಾಗಮಂಗಲ

ಮೊದಲೇ ಪ್ರಸ್ತಾಪಿಸಿದಂತೆ ಪ್ರಸ್ತುತ ಟೇಬಲ್ ಲ್ಯಾಂಡ್ ಎಂದು ಕರೆಯಲ್ಪಡುವ ಹಳೇ ಮೈಸೂರು ಭೌಗೋಳಿಕ ಪ್ರದೇಶದಲ್ಲಿ ಗ್ರಾನೈಟ್ ಪ್ರಮುಖ ನೈಸರ್ಗಿಕ ಸಂಪತ್ತಾಗಿದೆ. ಇದು ಈ ಪ್ರದೇಶದಲ್ಲಿ ಭೂವೈಜ್ಞಾನಿಕ ಲಕ್ಷಣಗಳಲ್ಲಿಯೇ ಅತ್ಯಂತ ವಿಶೇಷವಾದ ಶಿಲಾಸಮುಚ್ಛಯಗಳನ್ನು ಒಳಗೊಂಡಿರುವ ಭೂಪ್ರದೇಶವಾಗಿದೆ. ವಿಶೇಷವಾಗಿ ರಾಮನಗರ ಪ್ರದೇಶದಲ್ಲಿ ಗ್ರಾನೈಟ್‌ನ ಸಂಪತ್ತು ಶ್ರೀಮಂತಿಕೆಯಿಂದ ಕೂಡಿದೆ. ಈ ಪ್ರದೇಶವು ಭೂವೈಜ್ಞಾನಿಕವಾಗಿ ಕರೆಯಲ್ಪಡುವ ಹಳೆಯ ಪೆನಿನ್ಸುಲರ್ ನೀಸೆಸ್ ಕಾಂಪ್ಲೆಕ್ಸ್‌ನಿಂದ ಕೂಡಿದೆ. ಮೊದಲೇ ಹೇಳಿದ ಹಾಗೆ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಯಾವುದೇ ವ್ಯವಸ್ಥಿತ ಅಧ್ಯಯನಗಳು ನಡೆದಿಲ್ಲ. ಪ್ರಸ್ತುತ ಗವಿನಾಗಮಂಗಲ ನೆಲೆಯ ಸುತ್ತಲೂ ಮತ್ತು ಸಮಾಧಿಗಳ ಸಂಕೀರ್ಣದ ಬಳಿ ಬೃಹತ್‌ಬಂಡೆಗಳನ್ನು ಕ್ವಾರಿ ಮಾಡಿರುವ ಗುರುತುಗಳು ಸಿಗುತ್ತವೆ. ಪ್ರಸ್ತುತ ಕಾಡಿನ ಭೂಪ್ರದೇಶದಲ್ಲಿ ಕಂಡುಬರುವ ಸ್ಥಳೀಯ ಬೃಹತ್‌ಬಂಡೆಗಳನ್ನು ಕ್ವಾರಿ ಮಾಡಲಾಗಿದೆ (ಚಿತ್ರ ೧). ಇದು ಸಮಾಧಿಗಳನ್ನು ನಿರ್ಮಿಸಲು ಸ್ಥಳೀಯವಾಗಿ ಲಭ್ಯವಿರುವ ಕಲ್ಲಿನ ಸಂಪತ್ತಿನ ಮೇಲೆ ಕೇಂದ್ರೀಕರಿಸಲಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬರುವ ಸಾವನದುರ್ಗ,

ಗವಿನಾಗಮಂಗಲ, ಕಾಟಮಾನದೊಡ್ಡಿ, ಮತ್ತು ತಿರಿಮಳೀ(ಲೇ) ಗೌಡನದೊಡ್ಡಿ ನೆಲೆಗಳ ಸಮಾಧಿಗಳ ನಿರ್ಮಾಣದಲ್ಲಿ ಬಳಸಿದ ಭೌಗೋಳಿಕ ಪರಿಸರದ ಮೇಲೆ ಅಧ್ಯಯನದ ದೃಷ್ಟಿಯಿಂದ ಹೆಸರುವಾಸಿಯಾಗಿವೆ. ಇವುಗಳು ಕನಿಷ್ಠ ೧೦೦ ಮೀ. ಉದ್ದಗಲದ ಮತ್ತು ತಿರುಮಳೇಗೌಡನ ದೊಡ್ಡಿಯು ೧ ರಿಂದ ೨ ಕಿ.ಮೀ. ಉದ್ದಗಲದ ಭೂಪ್ರದೇಶದಲ್ಲಿ ಸಮಾಧಿಗಳನ್ನು ಹೊಂದಿವೆ. ಇವೆಲ್ಲವೂ ಸಹ ಹಲವಾರು ಕಾರ್ಮಿಕರನ್ನು ಬಳಸಿಕೊಂಡು ಸಮಾಧಿಗಳನ್ನು ನಿರ್ಮಿಸಿದ್ದಾರೆ ಎಂಬುದನ್ನು ಊಹಿಸಬಹುದು.

ಅಷ್ಟೊಂದು ಬೃಹತ್ ಗಾತ್ರದ ಟೊಪ್ಪಿಕಲ್ಲುಗಳನ್ನು ಮತ್ತು ಬಂಡೆಗಳನ್ನು ಸಮಾಧಿಗಳನ್ನು ನಿರ್ಮಿಸಲು ಸಾಗಿಸುತ್ತಿದ್ದ ವಿಧಾನ ಹಾಗೂ ಕಲ್ಲುಗಣಿಗಾರಿಕೆಯ ತಂತ್ರಜ್ಞಾನಗಳ ಬಗ್ಗೆ ಇನ್ನೂ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಸಮಾಧಿಗಳನ್ನು ನಿರ್ಮಿಸಲು ಅಂದರೆ ಕಲ್ಲುಗಳನ್ನು ಬೃಹತ್ ಬಂಡೆಯಿಂದ ಬೇರ್ಪಡಿಸಲು ಬಳಸುತ್ತಿದ್ದ ಉಪಕರಣಗಳ ಸ್ವರೂಪವು ಸಹ ಚರ್ಚೆಯ ಭಾಗಗಳೇ ಆಗಿವೆ. ಆದಾಗ್ಯೂ, ಪ್ರಸ್ತುತ ಲೇಖನದ ಕೇಂದ್ರವಾದ ಕ್ವಾರಿತಂತ್ರಜ್ಞಾನ ಮತ್ತು ಕಾರ್ಮಿಕ ಗುಂಪುಗಳ ಬಗೆಗೆ ಪ್ರಾಥಮಿಕ ಅವಲೋಕನಗಳನ್ನು ಒದಗಿಸುವುದೇ ಆಗಿದೆ.

ಇದುವರೆಗಿನ ಅಧ್ಯಯನಗಳು ಪ್ರಮುಖವಾಗಿ ಕಲ್ಲಡಗಿತೀರ, ಬ್ರಹ್ಮಗಿರಿ, ಹಿರೇಬೆಣಕಲ್ ಮತ್ತು ಬೆಂಗಳೂರು ಪರಿಸರದಲ್ಲಿ ನಿರ್ಮಿಸಿರುವ ಶಿಲಾಸಮಾಧಿಗಳನ್ನು ಬೆಂಕಿ ತಂತ್ರಗಾರಿಕೆಯಿಂದ ಬೇರ್ಪಡಿಸಲಾದ ಕಲ್ಲುಗಳಿಂದ ನಿರ್ಮಾಣ ಮಾಡಿರಬಹುದೆಂಬ ಊಹೆಗಳಾಗಿವೆ. ಆದಾಗ್ಯೂ, ಇದರ ಮುಂದುವರೆದ ಭಾಗವಾಗಿ ಕಬ್ಬಿಣಯುಗದ ಮಾನವರು ಬೆಂಕಿ ತಂತ್ರಜ್ಞಾನದ ಜೊತೆಗೆ ಹೊಸ ತಂತ್ರಜ್ಞಾನದ ಪರಿಚಯದೊಂದಿಗೆ ಅಂದರೆ, ಕಬ್ಬಿಣದ ಉಪಕರಣಗಳ ಸಹಾಯದಿಂದ ಬೃಹತ್ ಬಂಡೆಗಳಿಂದ ಕಲ್ಲನ್ನು ಹೊರತೆಗೆಯುವ ಹೊಸ ವಿಧಾನವನ್ನು ಪರಿಚಯಿಸಿದರು. ಇದು ಅವರ ಕೈಗಾರಿಕ ಆರ್ಥಿಕ ಚಟುವಟಿಕೆಗಳ ಭಾಗದಲ್ಲಿ ಒಂದು ಎಂದು ತಿಳಿದುಬರುತ್ತದೆ. (Sundara 1972, 1975, 2001; Moorthy 1990, 1994; Disha 1998; Morrison. 2005).

ಸಮಾಧಿಗಳ ನಿರ್ಮಾಣದಲ್ಲಿ ಕಲ್ಲನ್ನು ಬೇರ್ಪಡಿಸುವ ತಂತ್ರಜ್ಞಾನ

ಸಮಾಧಿಗಳ ನಿರ್ಮಾಣಕ್ಕೆ ಬಳಸುತ್ತಿದ್ದ ಕಲ್ಲನ್ನು ಬೇರ್ಪಡಿಸಿ, ಸುಮಾರು ದೂರಕ್ಕೆ ಸಾಗಿಸಿ ಸಮಾಧಿಗಳನ್ನು ಹೇಗೆ ನಿರ್ಮಿಸುತ್ತಿದ್ದರು ಮತ್ತು ಅವುಗಳನ್ನು ಬೇರ್ಪಡಿಸುವ ತಂತ್ರಜ್ಞಾನವಾದರು ಯಾವುದು? ಎಂಬ ಪ್ರಶ್ನೆ ಮೂಡುತ್ತದೆ. ಅನೇಕ ವಿದ್ವಾಂಸರು ಈ ನಿಟ್ಟಿನಲ್ಲಿ ವ್ಯಾಪಕ ವಿವರಣೆಗಳೊಂದಿಗೆ ಅವಲೋಕನ ಮಾಡಿದ್ದಾರೆ. ಕೆಲವು ವಿದ್ವಾಂಸರು ಕ್ವಾರಿ ಭೂದೃಶ್ಯದ ಅಂಶವನ್ನು ವಿವಿಧ ಮಜಲುಗಳಲ್ಲಿ ಅಧ್ಯಯನ ಮಾಡಿರುವರು. ಟಾಮ್ ಹೆಲ್ಡಲ್ ಮತ್ತು ಎಲಿಜಬತ್ ಬ್ಲೋಕ್ಸಾನಿ(Tom Heldal and Elizabeth Bloxani 2008)ರವರು ಕ್ವಾರಿ ಭೂಪ್ರದೇಶದ ಮೇಲೆ ಮಾಡಿದ ಯೋಜನೆಯು ಕಲ್ಲುಗಣಿ ಉತ್ಪಾದನೆಯನ್ನು ಬೃಹತ್‌ಬಂಡೆಯಿಂದ ಕಲ್ಲನ್ನು ಹೊರತೆಗೆಯುವುದರಿಂದ ಹಿಡಿದು ಅದನ್ನು ಪೂರ್ಣಗೊಳಿಸುವಿಕೆ ಮತ್ತು ಸಾಗಾಣಿಕೆಯವರೆಗೆ ನಾಲ್ಕು ಹಂತಗಳಲ್ಲಿ ವಿವರಿಸುತ್ತಾರೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಅಳಿದುಳಿದ ಅವಶೇಷಗಳ ಅವಲೋಕನಗಳನ್ನು ಸಹ ಪಟ್ಟಿ ಮಾಡಿರುವರು. ಈ ಕ್ವಾರಿ ಪ್ರಕ್ರಿಯೆಯಲ್ಲಿ ಕ್ವಾರಿಯ ಮುಖ್ಯರೂಪ ವಿಜ್ಞಾನದ ಲಕ್ಷಣಗಳ ಆಧಾರದ ಮೇಲೆ ಕ್ವಾರಿಯ ಪ್ರದೇಶ, ಉತ್ಪಾದಿಸಿದ ಕಲ್ಲಿನ ಮೇಲಿನ ಉಪಕರಣಗಳ ಗುರುತುಗಳು, ಕಲ್ಲಿನ ಚಕ್ಕೆಗಳು ಅಥವಾ ಚೂರುಗಳು, ಉತ್ಪಾದಿಸಲು ಬಳಸಿದ ಜಾಗ ಮತ್ತು ಕಲ್ಲನ್ನು ಕ್ವಾರಿ ಮಾಡಲು ಬಳಸುವ ಉಪಕರಣಗಳು ಹೀಗೆ ಪಟ್ಟಿ ಮಾಡಿ ಅಧ್ಯಯನ ಮಾಡುತ್ತಾರೆ (Heldal et al. 2007; Darvill 2010). ಇದು ಭಾರತೀಯ ಸಂದರ್ಭಕ್ಕೆ ಆಕರಗಳಾಗಿ ಪರಿಗಣಿಸುವುದೇ ಆದರೆ ಬೃಹತ್ ಶಿಲಾಸಮಾಧಿಗಳ ನಿರ್ಮಾಣಕ್ಕೆ ಬಳಸಿರುವ ಕಲ್ಲುಗಳ ಉತ್ಪಾದನ ಪ್ರಕ್ರಿಯೆಯನ್ನು ಇದೇ ರೀತಿಯಲ್ಲಿ ಅಧ್ಯಯನ ಮಾಡಬಹುದು.

ಪ್ರಸ್ತುತ ಅರ್ಕಾವತಿ ನದಿ ಕಣಿವೆಯಲ್ಲಿ ಶೋಧಿಸಲಾಗಿರುವ ಮತ್ತು ವರದಿಯಾಗಿರುವ ಅನೇಕ ನೆಲೆಗಳ ಮರು ಸಮೀಕ್ಷೆಯ ಅವಲೋಕನದಿಂದ ನಮಗೆ ಗೋಚರಿಸುವುದೇನೆಂದರೆ, ಕಲ್ಲನ್ನು ಹೊರತೆಗೆಯುವ ಉದ್ಯಮದಲ್ಲಿ ಹೊಸ ತಂತ್ರಜ್ಞಾನವೊಂದನ್ನು ಕಂಡುಕೊಂಡ ಅಂಶ ಬೆಳಕಿಗೆ ಬರುತ್ತದೆ. ಆದಿ ಕಬ್ಬಿಣಯುಗದಲ್ಲಿ ಕಲ್ಲನ್ನು ಬೆಂಕಿಯಿಂದ ಕಾಯಿಸಿ ಬೇರ್ಪಡಿಸುತ್ತಿದ್ದ ತಂತ್ರಜ್ಞಾನದ ಬಳಕೆ ಇತ್ತು. ಕ್ರಮೇಣ ಕಬ್ಬಿಣದ ಬಳಕೆ ಹೆಚ್ಚಾದಂತೆ ಹಾಗೂ ಜನಸಂಖ್ಯೆ ಹೆಚ್ಚಾದಂತೆ (ಬಹುಶಃ) ಅಥವಾ ಕ್ವಾರಿ ಉದ್ಯಮದಲ್ಲಿ ಹೊಸ ಉಪಕರಣಗಳ ಅನ್ವೇಷಣೆಯಿಂದ ಉಳಿ ಮತ್ತು ಬೆಣೆ ಎಂಬ ಉಪಕರಣಗಳು ಬಳಕೆಗೆ ಬಂದಿರಬಹುದು. ಈ ಉಪಕರಣಗಳ ಸಹಾಯದಿಂದ ಸುಲಭವಾಗಿ ಕಲ್ಲುಬಂಡೆಯನ್ನು ಬೇರ್ಪಡಿಸಿ ಸಮಾಧಿಗಳ ನಿರ್ಮಾಣಕ್ಕೆ ಬೇಕಾಗುವ ಚಪ್ಪಡಿಗಳು ಮತ್ತು ಬೃಹತ್ ಆಕಾರದ ಟೊಪ್ಪಿಗಲ್ಲುಗಳನ್ನು ಮಾಡಿಕೊಳ್ಳುತ್ತಿದ್ದರು. ಇಲ್ಲಿ



ಚಿತ್ರ:೨– ಬೃಹತ್ ಹಾಸುಗಲ್ಲನ್ನು ಕ್ವಾರಿ ಮಾಡಲು ಉಳಿಗಳನ್ನು ಬಳಸಿರುವ ಗುರುತುಗಳು, ಗವಿನಾಗಮಂಗಲ

ಗಮನಿಸಬೇಕಾದ ಅಂಶವೇನೆಂದರೆ ಬೆಂಕಿಯಿಂದ ಕಾಯಿಸಿ ತೆಗೆಯಲಾಗುತ್ತಿದ್ದ ತಂತ್ರಜ್ಞಾನದ ಉಳಿವಿನ ಜೊತೆಗೆ ಹೊಸ ತಂತ್ರಜ್ಞಾನವನ್ನು ಕಂಡುಕೊಂಡಿದ್ದರು ಎಂದು ಊಹಿಸಬೇಕಾಗುತ್ತದೆ. ಇಲ್ಲಿ ಬಹಳ ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ ಬೃಹತ್ ಶಿಲಾಯುಗದ ಈ ಕಲ್ಲುಗಣಿಗಾರಿಕೆ ಚಟುವಟಿಕೆಯಲ್ಲಿ ನುರಿತ ವೃತ್ತಿಪರ ಕಾರ್ಮಿಕ ವರ್ಗ ಇತ್ತು ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

ನವಶಿಲಾಯುಗದ ಕೈಗೊಡಲಿಯ ಜೊತೆಗೆ ಅಥವಾ ಅದರ ಬದಲಾಗಿ ಮರವನ್ನು ಕತ್ತರಿಸಲು ಮತ್ತು ಕಲ್ಲುಗಣಿಕಾರಿಕೆಯ ಮುಖಾಂತರ ತಮಗೇ ಬೇಕಾದ ಆಕಾರ ಮತ್ತು ಗಾತ್ರಕ್ಕೆ ಕಲ್ಲುಗಳನ್ನು ತಯಾರಿಸಲು ವಿವಿಧ ಕಬ್ಬಿಣದ ಉಪಕರಣಗಳನ್ನು ಬಳಸಲಾಗುತ್ತಿತ್ತು. ವಿಶೇಷವಾಗಿ ಮಣ್ಣು, ಮರ ಮತ್ತು ಕಲ್ಲುಗಳನ್ನು ಕತ್ತರಿಸುವ ಮತ್ತು ಬೇರ್ಪಡಿಸುವ ತಂತ್ರಜ್ಞಾನದಲ್ಲಿ ಕಬ್ಬಿಣದ ಬಳಕೆ ಬೃಹತ್‌ಶಿಲಾಯುಗದ ಜನಪದರು ಕಂಡುಕೊಂಡು ಮತ್ತು ಅದನ್ನು ರೂಢಿಗೆ ತಂದ ಮತ್ತೊಂದು ಅತ್ಯಂತ ಕೌಶಲ್ಯಪೂರ್ಣ ವೃತ್ತಿಯಾಗಿದೆ.

ಮೃದುವಾದ ಕಲ್ಲು ಅಥವಾ ಸೆಡಿಮೆಂಟರಿ ಬಂಡೆಗಳನ್ನು ಕತ್ತರಿಸುವ ಸಾಧನವಾಗಿ ಕಬ್ಬಿಣದ ಉಳಿಗಳನ್ನು ಹೆಚ್ಚಾಗಿ ಬಳಸಿರುವುದಕ್ಕೆ ಕೆಲವು ಉತ್ಖನನಗಳು ಸಾಕ್ಷ್ಯಗಳನ್ನು ನೀಡುತ್ತವೆ. ಅ. ಸುಂದರ (೧೯೭೫:೨೨೦) ಅವರ ಸಂಶೋಧನೆಯಲ್ಲಿ ಲ್ಯಾಟರೈಟ್ ಬಂಡೆಯನ್ನು ಕತ್ತರಿಸುವಲ್ಲಿ ಉಳಿಗಳನ್ನು ಬಳಸಿರುವುದನ್ನು ಅವಲೋಕಿಸಿದ್ದಾರೆ. ಕೇರಳದಲ್ಲಿ ಕಂಡುಬರುವ (Abhayan, et.al 2021) ವಿಶೇಷ ಮಾದರಿಯ ಬಂಡೆ ಕತ್ತರಿಸಿದ ಕೋಣೆ ಸಮಾಧಿಗಳು (Rock-cut cave) ಮತ್ತು ಮಹಾರಾಷ್ಟ್ರದ ಬೋರ್ಗಾಂವ್‌ನಲ್ಲಿ ಗಮನಿಸಲಾಗಿರುವ ಉಳಿ ಗುರುತುಗಳು ಮತ್ತು ಗೊಡ್ಚಿನ್ಮಲ್ಕಿಯಲ್ಲಿ (Sundara 1975: 220, 2001: 17; Moorthy 1994: 70-73) ಸಮಾಧಿಗಳ ಬಾಹ್ಯ ವೃತ್ತದ ಕಲ್ಲುಗಳ ಮೇಲೆ ಮತ್ತು ಟೊಪ್ಪಿಕಲ್ಲುಗಳ ಮೇಲೆ ಉತ್ತಮವಾಗಿ ಕತ್ತರಿಸಿದ ಗುರುತುಗಳು ಕಂಡುಬಂದಿವೆ.

ಅವಲೋಕನ

ಬೃಹತ್‌ಶಿಲಾಯುಗ ಸಮಾಧಿಯ ಜನಪದರ ಜೀವನ ಮತ್ತು ಅವರ ಸಾವಿನ ನಂತರ ಇದ್ದಂತಹ ಆಚರಣೆಗಳು ಹಾಗೂ ಸತ್ತ ವ್ಯಕ್ತಿಗೆ ಸಲ್ಲಬೇಕಾದ ಗೌರವ ನಂಬಿಕೆಗಳನ್ನು ಅವರು ನಿರ್ಮಿಸಿರುವ ಸಮಾಧಿಗಳ ಅಧ್ಯಯನದಿಂದ

ಅರಿಯಬಹುದು. ಬೃಹತ್ ಕಲ್ಲುಗಳನ್ನು ದೊಡ್ಡ ಪ್ರಮಾಣದಲ್ಲಿ ಕ್ವಾರಿ ಮಾಡಿ ಉತ್ಪಾದಿಸಿದ ಕಲ್ಲುಗಳನ್ನು ಸೂಕ್ತ ಪ್ರದೇಶಕ್ಕೆ ಸಾಗಿಸುವುದು ದೀರ್ಘ ಪ್ರಕ್ರಿಯೆಯೇ ಹೌದು. ಇಂತಹ ವಿಚಾರದಲ್ಲಿ ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ. ಒಂದು ಸತ್ತವ್ಯಕ್ತಿಗೆ ಸಮಾಧಿ ಕಟ್ಟಲು ಅನುಸರಿಸಿದ ವಿಧಾನ ಅವರ ಜೀವನದ ಭಾಗವೇ ಆದರೂ ಸಮಾಧಿಗಳ ನಿರ್ಮಾಣಕ್ಕೆ ಕಲ್ಲುಗಳನ್ನು ಉತ್ಪಾದಿಸುವ ವರ್ಗವು ಕೂಡ ಮಹತ್ವದ ಸ್ಥಾನವನ್ನು ಹೊಂದಿದೆ. ಅಂತೆಯೇ ಸಮಾಧಿಯಲ್ಲಿ ಸಿಗುವ ಇತರೇ ವಿವಿಧ ಅವಶೇಷಗಳನ್ನು ತಯಾರಿಸುವ ವರ್ಗಗಳು ಉದಾಹರಣೆಗೆ– ಮಡಿಕೆ ಮಾಡುವ, ಕಬ್ಬಿಣ ತಯಾರಿಸುವ, ಆಹಾರ ಉತ್ಪಾದಕರು, ಬೇಟೆಗಾರರು ಹೀಗೆ ಎಲ್ಲ ವೃತ್ತಿಪರ ವರ್ಗಗಳ ಕೊಡುಗೆ ಅಪಾರ ಎಂದೇ ಹೇಳಬಹುದು. ಇಂತಹ ಉತ್ಪಾದನೆಗಳೆಲ್ಲವು ಬೃಹತ್ ಶಿಲಾಯುಗದ ಜನಪದದ ಪ್ರಮುಖ ಆರ್ಥಿಕ ಚಟುವಟಿಕೆಗಳೇ ಆಗಿವೆ. ಹಾಗಾಗಿ ಬೃಹತ್ ಶಿಲಾಯುಗ ಜನಪದ ಸಮುದಾಯಗಳಲ್ಲಿ ಕಲ್ಲುಕುಟಿಗರು ಅಥವಾ ವಡ್ಡರು ಎಂದು ಕರೆಯಲ್ಪಡುವ ವೃತ್ತಿಪರ ವರ್ಗವು ಕಲ್ಲುಗಣಿಗಾರಿಕೆ ಮಾಡಲು ಉಳಿ ಅಥವಾ ಬೆಣೆಯಂತಹ ಹೊಸ ತಂತ್ರಜ್ಞಾನಗಳನ್ನು ಬಳಸಿದ್ದಾರೆಂದು ಹೇಳಬಹುದು. ಆದರೆ ಇಂತಹ ಹೊಸ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಂಕಿ ಹೊಂದಿಸುವ ತಂತ್ರಗಾರಿಕೆಯನ್ನು ಉಳಿಸಿಕೊಂಡಿದ್ದರು ಎಂಬುದು ಗಮನಾರ್ಹ. ಈ ಮೊದಲೇ ಉಲ್ಲೇಖಿಸಿದ ಹಾಗೆ ಇಂದಿಗೂ ಬೆಂಕಿ ಹೊಂದಿಸುವ ಪ್ರಕ್ರಿಯೆ ಅಸ್ತಿತ್ವದಲ್ಲಿದೆ.



ಚಿತ್ರ ೩–ಕ್ಯಾಪ್‌ಸ್ಟೋನ್‌ನ ಮೇಲೆ ಕಂಡಬಂದಿರುವ ಉಳಿಯ ಗುರುತುಗಳು, ಕಾಟಮಾನದೊಡ್ಡಿ

ಇದೆಲ್ಲವನ್ನು ಕ್ರೋಢೀಕರಿಸಿ ಹೇಳುವುದಾದರೆ ಬೃಹತ್‌ಶಿಲಾಯುಗ ಜನಪದರ ಜೀವನಶೈಲಿಯು ಮಿಶ್ರ ಆರ್ಥಿಕ ಚಟುವಟಿಕೆಗಳಿಂದ ಒಂದಕ್ಕೊಂದು ಕೊಂಡಿಯೆಂಬಂತೆ ನಡೆಯುತ್ತಿತ್ತು ಎಂದು ನಿಸ್ಸಂದೇಹವಾಗಿ ಹೇಳಬಹುದು. ಇನ್ನೂ ಸಮಾಧಿಗಳ ನಿರ್ಮಾಣ ಮತ್ತು ಅವುಗಳಲ್ಲಿ ಇಡುತ್ತಿದ್ದ ಉಪಕರಣಗಳು, ವಸ್ತುಗಳು ಕೂಡ ಅವರ ಆರ್ಥಿಕ ಪರಿಸ್ಥಿತಿ ಅಥವಾ ಭೂಮಿಯ ಲಭ್ಯತೆ ಅಥವಾ ವಸ್ತುಗಳ ಲಭ್ಯತೆಯ ಮೇಲೆ ನಿರ್ಧರಿಸಲಾಗುತ್ತಿತ್ತು. ಉಳಿದಂತೆ ಪ್ರದೇಶದಿಂದ ಪ್ರದೇಶಕ್ಕೆ ಕಂಡುಬರುವ ವಿವಿಧ ಮಾದರಿಗಳು ಅಥವಾ ಲಕ್ಷಣಗಳು ಅಲ್ಲಿನ ಭೌಗೋಳಿಕ ಅಥವಾ ನೈಸರ್ಗಿಕ ಸಂಪತ್ತನ್ನಾಧರಿಸಿದೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಕಂಡುಬರುವ ಹಾಗೂ ಉತ್ಖನನಕ್ಕೊಳಪಟ್ಟಿರುವ ಸಮಾಧಿಗಳಲ್ಲಿ ಕಬ್ಬಿಣ ಮತ್ತು ಮಡಿಕೆಯ ಅವಶೇಷಗಳು ಸರ್ವೇಸಾಮಾನ್ಯವಾಗಿ ಕಂಡುಬಂದಿವೆ (Cole 1868; Branfill 1881; Sheshadri 1956, 1957, 1971; Leshnik 1974; Subbayya 1990; Moorti 1994; Brubaker 2001; Wheeler 1948; Deo 1973: 24; Moorti 1994: 18-112; Mudhol, 1997).

ಬೃಹತ್‌ಶಿಲಾಯುಗ ಕಾಲದ ಕಬ್ಬಿಣದ ಉಪಕರಣಗಳಾಗಿ ಕಠಾರಿಗಳು, ಚೂರಿಗಳು, ಕುಡಗೋಲು, ಕೊಡಲಿ, ಉಳಿಗಳು, ಉಜ್ಜುಗತ್ತಿ, ಬೆಣೆಗಳು ಹಾಗೂ ಬಾಣದ ತುದಿ ಇತ್ಯಾದಿಗಳು ಕಂಡುಬಂದಿವೆ. ಇವುಗಳನ್ನು ಬೇಟೆ, ಕೃಷಿ ಚಟುವಟಿಕೆಗಳು ರಕ್ಷಣೆ ಮತ್ತು ದೈನಂದಿನ ಅಗತ್ಯಗಳನ್ನು ಒಳಗೊಂಡಂತೆ ವಿವಿಧ ಉದ್ದೇಶಗಳಿಗೆ ವಿವಿಧ ಆಕಾರಗಳಲ್ಲಿ ತಯಾರಿಸಲು ಕಬ್ಬಿಣವನ್ನು ಬಳಸುತ್ತಿದ್ದರು. ಹಾಗಾಗಿ ಕಬ್ಬಿಣವು, ಬೃಹತ್‌ಶಿಲಾ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಪ್ರಮುಖ ವಸ್ತುವಾಗಿ ಕಂಡುಬರುತ್ತದೆ (Deo 1973: 24; Moorti 1994: 18-112).

ಆದಾಗ್ಯೂ, ಆರಂಭಿಕ ಕಬ್ಬಿಣಯುಗ ಕಾಲದಲ್ಲಿ ಈ ಸಮುದಾಯಗಳು ಒಂದೇ ತೆರನಾದ ಬೆಂಕಿಯ ವಿಧಾನವನ್ನು ಬಳಸಿರಬಹುದು (ಸುಂದರ ೧೯೭೨,೧೯೭೫; ಮೂರ್ತಿ ೧೯೯೦, ದಿಶಾ ೧೯೯೮), ಆದರೆ ಕ್ರಮೇಣ ಕಲ್ಲುಗಣಿಗಾರಿಕೆಯಲ್ಲಿ ಕಬ್ಬಿಣದ ಉಪಕರಣಗಳ ಬಳಕೆಯು ಇಂದಿನವರೆಗೂ ಪ್ರಬಲ ತಂತ್ರಜ್ಞಾನವಾಯಿತು ಎಂದೇ ಹೇಳಬಹುದು. ಆದರೂ ಇಂತಹ ಉಪಕರಣಗಳನ್ನು ಮಾರುಕಟ್ಟೆಯ ಮೂಲಕ ವಿತರಿಸಲಾಗುತ್ತಿತ್ತೆ ಅಥವಾ ವೈಯಕ್ತಿಕವಾಗಿ ಉತ್ಪಾದಿಸಿಕೊಳ್ಳಲಾಗುತ್ತಿತ್ತೆ ಎಂಬುದು ಅಸ್ಪಷ್ಟವಾಗಿದೆ. ಆದರೆ ಇಂತಹ ಅಸ್ಪಷ್ಟತೆಯನ್ನು ಅವಲೋಕಿಸಿದರೆ ಅಂದಿನ ಬೃಹತ್‌ಶಿಲಾಯುಗ ಕಾಲದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆ ಇದ್ದು ಹಾಗೂ ವೃತ್ತಿಯಲ್ಲಿ ನಿಪುಣ ವರ್ಗಗಳು ತಾವು ಉತ್ಪಾದಿಸಿದ ವಸ್ತುಗಳಿಗೆ ಭಾಗಶಃ ಮಾರುಕಟ್ಟೆಯ ಮೂಲಕ ವಿತರಿಸುತ್ತಿದ್ದರು ಎಂದು ಊಹಿಸಬಹುದು.

ಉಪಸಂಹಾರ

ಪ್ರಸ್ತುತ ಸಂಶೋಧನೆಯು ಮುಂದಿನ ವಿವಿಧ ಆಯಾಮಗಳ ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತದೆ. ಗವಿನಾಗಮಂಗಲ ಮತ್ತು ಕಾಟಮಾನದೊಡ್ಡಿ ನೆಲೆಗಳಲ್ಲದೇ ಅನೇಕ ನೆಲೆಗಳಲ್ಲಿ ಸಮಾಧಿಗಳ ನಿರ್ಮಾಣ ಹಾಗು ಅಂದಿನ ಜನಪದರ ವಾಸಸ್ಥಳ ಹಾಗೂ ಅವರ ಜೀವನ ಕ್ರಮಗಳನ್ನು ಗುರುತಿಸಬಹುದು. ಒಟ್ಟಾರೆ ಹೇಳುವುದಾದರೆ ಬೃಹತ್ ಶಿಲಾಯುಗದ ಜನರಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿದವರು, ನಿಪುಣ ಕುಶಲ ಕರ್ಮಿಗಳು ತಮ್ಮ ಜೀವನಕ್ಕೆ ವಿವಿಧ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಬಹು ಮುಖ್ಯವಾಗಿ ಸಮಾಧಿಗಳ ಕಟ್ಟುವಿಕೆಯಲ್ಲಿ ಬಳಸುತ್ತಿದ್ದ ತಂತ್ರಜ್ಞಾನ ಮತ್ತು ಉಪಕರಣಗಳ ಹೊಸ ಬಳಕೆ ಇವೆಲ್ಲವು ಬೃಹತ್ ಶಿಲಾಯುಗದ ಜನರ ವೃತ್ತಿ ಮತ್ತು ಆಚರಣೆಯ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ. ಆದರೂ ಇಂದಿನ ಆಧುನಿಕ ನಗರೀಕರಣ, ಅರಣ್ಯ ಚಟುವಟಿಕೆಗಳು, ನಿಧಿಗಳ್ಳರು, ಅಕ್ರಮ ಗಣಿಗಾರಿಕೆ ಪ್ರಕ್ರಿಯೆಯಲ್ಲಿ ಅನೇಕ ಪುರಾತತ್ವ ನೆಲೆಗಳು ನಾಶವಾಗುತ್ತಿವೆ. ಹಾಗಾಗಿ ಇಂತಹ ಅಮೂಲ್ಯವಾದ ಪುರಾತತ್ವ ಸಂಪತ್ತುಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಕರಗ್ರಂಥಗಳು

೧. Abhayan, G.S., S.V. Rajesh, A. Uesugi, P. Nayar, B.S. Mohammed Muhaseen, N.L. Sulal, K.G. Archana, R. Harinarayanan, A.V. Dev, K. Muhammed Fasalu, P. Soorya, K.S. Arun Kumar, R. Haseen Raja, S. Kumbodharan, M.S. Sujanpal, M.S. Sandra (2021) Megalithic Cist Burial Excavation at Enadimangalam in Kerala and its Implications in Cist Burial Architecture and Burial Practices, Archaeological Research in Asia 27: 1-15. https://doi.org/10.1016/j.ara.2021.100293

೨. Branfill, B.R. (1881) On the Savanadurga rude stone cemetery, Central Mysore, Indian Antiquary 10: 1-12.

೩. Brubaker, R. (2001) Aspects of Mortuary Variability in the South Indian Iron Age, Bulletin of the Deccan College Postgraduate Research Institute 60-61: 253-302.

೪. Cole, R.A. (1868) Memorandum on the Cromlechs in Coorg, in Proceedings of the Asiatic Society of Bengal (H. F. Blanford Ed.), pp. 155. Calcutta: Baptist Mission Press.

೫. Darvill, Timoty (2010) Megaliths, Monuments and Materiality. Paper of the European Megalithic Studies Group.

೬ Disha, G (1998) A Study of Megalithic Site of Kannuru (Bangalore District, Karnataka) in the Light of the Living Mortuary Practices of the Kurubas. Unpublished M.A. Dissertation. Pune: Deccan College Post Graduate and Research Institute.

೭. Deo, S.B. (1973) Problem of South Indian Megaliths. Dharwar: Kannada Research Institute, Karnataka University.

೧೦. Kumar, Praveen K. (2016) Archaeological Investigation in the Middle Reaches of Arkavathi Basin, South Karnataka. Unpublished M.Phil. Dissertation. Pune: Deccan College Post Graduate and Research Institute.

೧೧. Kumar, Praveen K. (2019) Kanva Nadi Teeradallina Puratatva Anveshane, Itihasa Darshana 42: 25-40.

೧೨. Moorti, U.S. (1990) Megalithic Karnataka- A Locational Analysis. Archaeology in Karnataka (A. Sundara Ed.), pp. 154-160. Mysore: Directorate of Archaeology and Museums.

೧೪. Morrison, K.D. (2005) Brahmagiri Revisited: A Re-Analysis of the South Indian Sequence in South Asian Archaeology, in RecherchÈ sur les Civilizations (C. Jarrige and V. LeFevre Eds.), pp. 257-261. Paris: ADPF.

೧೫. Mudhol, M.S. (1997) A Technical Study of Megalithic Metal Objects. Mysore: Directorate of Archaeology and Museums, Mysore.

೧೬. Subbayya, K.K. (1990) New Light on the Megalithic Excavations at Heggadehalli and Koppa, in Archaeology in Karnataka (Papers presented at the National Seminar on Archaeology, 1985) (A. Sundara Ed.), pp. 151-153. Mysore: Directorate of Archaeology and Museums, Mysore.

೧೭. Sundara, A. (1972) Megaliths in Hallur: Their Types and Character, JKUS 8: 1-6.

೧೮. Sundara, A. (1975) The Early Chamber Tombs of South India: A Study of the Iron Age Megalithic Monuments of North Karnataka. New Delhi: University Publishers.

♦♦

ಶರಣಬಸಪ್ಪ ಕೋಲ್ಕಾರ

ಕೊಪ್ಪಳದ ಗುನ್ನಳ್ಳಿಯಲ್ಲಿ ಗವಿಚಿತ್ರಗಳು ಹಾಗೂ ಬ್ರಾಹ್ಮಿಬರಹ ಶೋಧನೆ

ಆದಿಮ ಮಾನವನು ನಾಗರಿಕತೆಯತ್ತ ಸಾಗಿಬಂದಿರುವ ಹಾದಿಯನ್ನು ನಿರ್ಧರಿಸುವ ಅಂಶಗಳಲ್ಲಿ ಪ್ರಾಗ್ ಕಲೆಗೆ (Palaeo art) ಮಹತ್ವದ ಸ್ಥಾನವಿರುವುದನ್ನು ಕಂಡುಕೊಳ್ಳಲಾಗಿದೆ. ಪ್ರಾಗ್ ಕಲೆಯ ಕುರಿತ ಪ್ರಾಗ್ ಸಾಂಸ್ಕೃತಿಕ (Palaeo Cultural) ಅಧ್ಯಯನಗಳು ಅದನ್ನು ಸ್ಪಷ್ಟೀಕರಿಸಿವೆ. ಅದರನ್ವಯ ಮಾನವನ ಸಾಂಸ್ಕೃತಿಕ ಆಲೋಚನೆಗಳ ಹೊಳವುಗಳನ್ನು ಕಂಡುಕೊಳ್ಳಬಹುದಾಗಿದೆ. ಅದರಲ್ಲೂ ಪ್ರಾಚೀನ ಮನುಷ್ಯನು ತಾನು ವಾಸಿಸುತ್ತಿದ್ದ ಜಗತ್ತು ಎಂಬ ಭೌತಿಕ ವಸ್ತುವನ್ನು ಹೇಗೆ ಮಾನಸಿಕವಾಗಿ ಕಲ್ಪಿಸಿಕೊಂಡ ಮತ್ತು ಆ ಅಮೂರ್ತ ಕಲ್ಪನೆಯನ್ನು ಹೇಗೆ ಮೂರ್ತವಾಗಿ ಮೂಡಿಸಿದ ಎಂಬುದಕ್ಕೆ ಪ್ರಾಗ್ ಕಲೆಯೇ ಅತ್ಯಂತ ವೈಜ್ಞಾನಿಕ ಪುರಾವೆಯಾಗಿದೆ. ಹಾಗಾಗಿ ಪ್ರಾಗೈತಿಹಾಸಿಕ ಕಲೆಯು ಮಾನವ ಧೀಶಕ್ತಿಯ ಬೆಳವಣಿಗೆಯ ಏಕೈಕ ಸ್ಥಿರರೂಪದ ದಾಖಲೆಯಾಗಿದೆ. ಮಾನವ ಪೂರ್ವಜರು ನಾಗರೀಕ ಮಾನವರಾದ ಬಗೆ ತಿಳಿಯಲು ಅತಿ ಪ್ರಮುಖ ಆಕರವಾಗಿದೆ.

ಪ್ರಾಗ್ ಕಲೆಯಲ್ಲಿ ಗವಿ ಕಲ್ಲಾಸರೆಗಳ ವರ್ಣಚಿತ್ರಗಳು ಬಯಲು ಬಂಡೆಗಳಲ್ಲಿ ಕೊರೆದು ಮೂಡಿಸಿದ, ಕುಟ್ಟಿ ಮೂಡಿಸಿದ ಚಿತ್ರಗಳು ಪ್ರಸ್ತರ ಕಲೆ (Rock art)ಯೆನಿಸಿವೆ. ಗವಿಚಿತ್ರಗಳು ಕೊರೆದ/ಕುಟ್ಟಿದ ಚಿತ್ರಗಳಿಗಿಂತ ಹೆಚ್ಚು ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ. ಇವು ತಮ್ಮ ರಚನೆಕಾರ ಸಮುದಾಯದ, ಆಯಾ ಪ್ರದೇಶದ ಜನಜೀವನದ ಸ್ವರೂಪ, ಮಟ್ಟ ಮತ್ತು ಪರಿಸರದ ಅಂಶಗಳನ್ನು ಸಶಕ್ತವಾಗಿ ಪ್ರತಿಬಿಂಬಿಸುತ್ತವೆ.

ಪ್ರಪಂಚದ ಹಲವಾರು ಭಾಗಗಳಲ್ಲಿ ಪ್ರಸ್ತರ ಕಲೆಯೆನಿಸಿರುವ ವರ್ಣಚಿತ್ರಗಳು, ಬಯಲುಬಂಡೆ ಚಿತ್ರಗಳು ಅಸಂಖ್ಯಾತವಾಗಿ ಬೆಟ್ಟಗುಡ್ಡಗಳಲ್ಲಿವೆ. ಆದರೆ ಬಹುಕಾಲದವರೆಗೂ ಇದರ ಕಡೆಗೆ ತಜ್ಞರ, ಚಿತ್ರಕಲಾಭಿಮಾನಿಗಳ ಗಮನ ಹರಿದಿರಲಿಲ್ಲ. ಆದರೆ ೧೮೩೭ರಲ್ಲಿ ಸರ್ ಜಾರ್ಜ್‌ಗ್ರೇ ಅವರು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವರ್ಣಚಿತ್ರಿತ ಗವಿಗಳನ್ನು ಶೋಧಿಸಿದರೂ ಬಹುಶಃ ೧೮೭೯ರಲ್ಲಿ ಸ್ಪೇನ್ ದೇಶದ ಅಲ್ತಮೀರದ ವರ್ಣಚಿತ್ರಗಳ ಗವಿಯ ಶೋಧನೆ, ಪ್ರಸ್ತರ ಕಲೆಯ ಶೋಧನೆಯ ಇತಿಹಾಸದಲ್ಲಿಯೇ ವಿಶೇಷವಾಗಿದೆ. ಆ ವರ್ಷ ಡಾಸ್ ಮಾರ್ಸೆಲಿನೋದ ಸೌತ್ ಪೋಲನು ಸ್ಪೇನಿನ ಕ್ಯಾಂಟಾಬ್ರೇನ್ ಬೆಟ್ಟದ ಅಲ್ತಮೀರ ಗವಿಯಲ್ಲಿ ಕಪ್ಪುಬಣ್ಣದ ಗೂಳಿಗಳ ಚಿತ್ರಗಳನ್ನು ಆಕಸ್ಮಿಕವಾಗಿ ಶೋಧಿಸಿದನು.[೧] ಹೀಗೆ ಪ್ರಾಗೈತಿಹಾಸಿಕ ಪ್ರಸ್ತರ ಕಲೆಯ ಶೋಧನಾ ಕಾರ್ಯ ಚಾಲನೆಯನ್ನು ಪಡೆದುಕೊಂಡಿತು.

ಪ್ರಾಚಾರ್ಯರು
ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಮಹಾವಿದ್ಯಾಲಯ
ಗಂಗಾವತಿ-೫೮೩ ೨೨೭
ಕೊಪ್ಪಳ ಜಿಲ್ಲೆ
ಮೊ: ೯೮೪೫೨ ೬೭೧೫೫

ಇರ್ವಿನ್ ನ್ಯೂ ಮೇಯರ್ ಗುರುತಿಸುವಂತೆ ಅಲ್ತಮೀರ ಗವಿಯ ಶೋಧಕ್ಕಿಂತ ಹನ್ನೆರಡು ವರ್ಷ ಮೊದಲೇ (೧೮೬೭-೬೮) ಭಾರತದಲ್ಲಿ ಆರ್ಚಿಬಾಲ್ಡ್ ಕಾರ್ಲೈಲ್ ಉತ್ತರ ಪ್ರದೇಶದ ಮಿರ್ಜಾಪುರ್ ಜಿಲ್ಲೆಯ ಶೋಹಗಿ ಘಾಟ್‌ನ ಕಲ್ಲಾಸರೆಯಲ್ಲಿ ಚಿತ್ರಗಳನ್ನು ಕಂಡರು.[೨] ಆದರೆ ಆ ಬಗೆಗೆ ಅವರ ಲೇಖನ ಕೆಲ ವರ್ಷಗಳ ನಂತರ ಪ್ರಕಟವಾಯಿತಾದರೂ ಅವರ ಶೋಧನೆ ಮತ್ತು ಅದೇ ಅವಧಿಯ ಅಂದರೆ ೧೮೮೦ ಕಾಲದಲ್ಲಿ ಹೂಬರ್ಟ್‌ನಾಕ್ಸ್‌ರವರು ಕರ್ನಾಟಕದ ಬಳ್ಳಾರಿಯ ಕಪಗಲ್ಲಿನಲ್ಲಿ ಕುಟ್ಟುಚಿತ್ರಗಳನ್ನು ಶೋಧಿಸಿದರು.[೩] ಈ ಎರಡು ಸಂಗತಿಗಳು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಪ್ರಸ್ತರ ಕಲೆಯ ಕುರುಹುಗಳ ಶೋಧನೆಗೆ ಮೊದಲಾಯಿತು.

೧೯೩೭ ರಲ್ಲಿ ಗಂಗಾವತಿ ತಾಲೂಕಿನ ಹಿರೇಬೆಣಕಲ್ಲಿನಲ್ಲಿ ಹಾಗೂ ಮಲ್ಲಾಪುರದಲ್ಲಿ ಲಿಯೋನಾರ್ಡ್‌ಮನ್‌ರವರು ಪ್ರಥಮ ಬಾರಿಗೆ ಗವಿಚಿತ್ರಗಳನ್ನು ಶೋಧಿಸಿದರು.[೪] ನಂತರ ಡಾ. ಅ. ಸುಂದರ ಅವರು ಈ ಕ್ಷೇತ್ರದಲ್ಲಿ ಗಮನಾರ್ಹ ಶೋಧನೆ ನಡೆಸಿ ಅಧಿಕ ಚಿತ್ರಿತ ಕಲಾ ನೆಲೆಗಳನ್ನು ಶೋಧಿಸಿ ಅಧ್ಯಯನ ನಡೆಸಿದರು.[೫] ನಂತರ ಡಾ. ಶರಣಬಸಪ್ಪ ಕೋಲ್ಕಾರ್[೬], ಡಾ. ಆರ್. ಮೋಹನ್[೭] ಕರ್ನಾಟಕದ ಪ್ರಸ್ತರ ಕಲೆಯ ಶೋಧನಾ ಅಧ್ಯಯನದಲ್ಲಿ ಗಮನಾರ್ಹ ಕಾರ್ಯ ಮಾಡಿದ್ದಾರೆ.

ಕರ್ನಾಟಕದ ಪ್ರಸ್ತರ ಕಲೆಯ ನೆಲೆಗಳನ್ನು ಡಾ. ಅ. ಸುಂದರ ಅವರು ಕೊಪ್ಪಳ-ಹಿರೇಬೆಣಕಲ್-ಹಂಪಿಭಾಗ, ಪಟ್ಟದಕಲ್-ಕುಟಕನಕೇರಿ-ಐಹೊಳೆ ಭಾಗ, ಚಿತ್ರದುರ್ಗ ಪ್ರದೇಶ ಮತ್ತು ಪಶ್ಚಿಮಘಟ್ಟಗಳ ಪ್ರದೇಶಗಳಲ್ಲಿ ವಿಂಗಡಿಸಿ ಗುರುತಿಸಿದ್ದಾರೆ.[೮] ಈ ಭಾಗಗಳಲ್ಲಿ ಕೊಪ್ಪಳ-ಹಿರೇಬೆಣಕಲ್-ಹಂಪಿ ಪ್ರದೇಶ ಮತ್ತು ಐಹೊಳೆ ಪ್ರದೇಶಗಳು ಚಿತ್ರಗಳ ದೃಷ್ಟಿಯಿಂದ ಗಮನಾರ್ಹವೆನಿಸಿವೆ. ಡಾ. ಅ. ಸುಂದರ ಅವರ ನಂತರ ಈ ಎರಡೂ ಭಾಗಗಳನ್ನೇ ಕೇಂದ್ರೀಕರಿಸಿಕೊಂಡು ಡಾ. ಶರಣಬಸಪ್ಪ ಕೋಲ್ಕಾರ್[೯] (ಕೊಪ್ಪಳ-ಹಿರೇಬೆಣಕಲ್-ಹಂಪಿ ಪ್ರದೇಶ), ಡಾ. ಆರ್. ಮೋಹನ್[೧೦], ಪಟ್ಟದಕಲ್-ಕುಟಕನಕೇರಿ-ಐಹೊಳೆಭಾಗ)ರವರು ವಿಸ್ತೃತ ಸಂಶೋಧನೆ ನಡೆಸಿ ಹಲವಾರು ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಕೊಪ್ಪಳ-ಹಂಪಿ ಪ್ರದೇಶದಲ್ಲಿ ಇನ್ನೂ ಹಲವಾರು ಚಿತ್ರಿತ ಗವಿ, ಕಲ್ಲಾಸರೆಗಳು, ಬಯಲು ಬಂಡೆ ಚಿತ್ರಗಳು ಬೆಳಕಿಗೆ ಬರುತ್ತಲಿವೆ. ಇತ್ತೀಚೆಗೆ ನನ್ನ ಕ್ಷೇತ್ರಕಾರ್ಯದಲ್ಲಿ ಶೋಧವಾದ ಹೊಸ ನೆಲೆಯೆಂದರೆ ಕೊಪ್ಪಳ ತಾಲೂಕಿನ ಗುನ್ನಳ್ಳಿ ಗ್ರಾಮದ ಚಿಲಕನಮಟ್ಟಿ ಬೆಟ್ಟದ ಚಿತ್ರಿತ ಕಲ್ಲಾಸರೆಗಳು.[೧೧]

ಗುನ್ನಳ್ಳಿ ಗ್ರಾಮ : ಕೊಪ್ಪಳ ನಗರದಿಂದ ನೈರುತ್ಯಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿ ಗುನ್ನಳ್ಳಿ ಗ್ರಾಮವಿದೆ. ಈ ಗ್ರಾಮದಿಂದ ಒಂದು ಕಿ.ಮೀ ಅಂತರದಲ್ಲಿ ಚಿಲಕನಮಟ್ಟಿ ಹೆಸರಿನ ಶಿಲಾ ಬೆಟ್ಟವಿದೆ. ಇದು ಉತ್ತಮ ದರ್ಜೆಯ ಕಪ್ಪುಚುಕ್ಕೆ ಮಿಶ್ರಿತ ಬಿಳಿ ಕಣಶಿಲೆ (White Granite), ಕಪ್ಪುಚುಕ್ಕೆ ಮಿಶ್ರಿತ ಕೆಂಪು ಕಣಶಿಲೆ (Pink Granite) ಹಾಗೂ ಗಪ್ಪು ಶಿಲೆಗಳಿಂದ ರಚನೆಯಾದ ಬೆಟ್ಟವಾಗಿದೆ. ಸುಮಾರು ೪೦೦ ಮೀಟರ್ ಎತ್ತರವಾಗಿರುವ ಈ ಸ್ವತಂತ್ರ ಬೆಟ್ಟದಲ್ಲಿ ಅಪರೂಪದ ಮಯೂರ ಶಿಕೆ, ಟಕ್ಕಿ ಮುಂತಾದ ವನಸ್ಪತಿ ಸಸ್ಯಗಳಿವೆ ಹಾಗೂ ಇತರ ಅರಣ್ಯ ಸಸ್ಯ, ಮರಗಳು ವಿರಳ ಸಂಖ್ಯೆಯಲ್ಲಿವೆ.

ಚಿತ್ರಿತ ಕಲ್ಲಾಸರೆಗಳು : ಚಿಲಕನಮಟ್ಟಿ ಬೆಟ್ಟದಲ್ಲಿ ಹಲವಾರು ನೈಸರ್ಗಿಕ ಕಲ್ಲಾಸರೆಗಳು ಮತ್ತು ಒಂದೆರಡು ಗವಿಗಳು ಇವೆ. ಇವುಗಳಲ್ಲಿ ಕೇವಲ ಒಂದು ಗವಿ ಮತ್ತು ಇನ್ನೊಂದು ಕಲ್ಲಾಸರೆಯಲ್ಲಿ ಮಾತ್ರ ವರ್ಣಚಿತ್ರಗಳಿವೆ. ಗವಿ, ಕಲ್ಲಾಸರೆಯ ರಚನೆ ಹಾಗೂ ಅಲ್ಲಿಯ ವರ್ಣಚಿತ್ರಗಳ ವಿವರಗಳು ಕೆಳಗಿನಂತಿವೆ.

ಗವಿಯ ಚಿತ್ರಗಳು : ಮೊದಲ ಗವಿಯು ಬೆಟ್ಟದಲ್ಲಿ ಸುಮಾರು ೩೦೦ ಮೀಟರ್ ಎತ್ತರ ಭಾಗದಲ್ಲಿದೆ. ದಕ್ಷಿಣಾಭಿಮುಖವಾಗಿದ್ದು, ೫ ಫೀಟ್ ಅಗಲ, ೭ ಫೀಟ್ ಉದ್ದ ಒಳವಿಸ್ತಾರವನ್ನು ಹೊಂದಿದೆ. ಗವಿಯ ಛಾವಣಿ ವಿಶಿಷ್ಟವಾಗಿದೆ. ಅದು ತ್ರಿಕೋನಾಕಾರದಲ್ಲಿದ್ದು, ಜೋಪಡಿಯ ಛಾವಣಿಯಂತೆ ಎರಡೂ ಬದಿ ಇಳಿಜಾರಾಗಿದೆ. ಗವಿಯ ದ್ವಿಬದಿ ಇಳಿಜಾರು ಛಾವಣಿಯ ವಿನ್ಯಾಸಕ್ಕನುಗುಣವಾಗಿ ಅಲಂಕಾರಿಕ ತೋರಣದ ಚಿತ್ರವನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದೆ. ಛಾವಣಿಯ ಮಧ್ಯದಲ್ಲಿ ತೋರಣದ ಸರವಿದ್ದರೆ, ಅದಕ್ಕಿರುವ ಎಳೆಗಳು ಎರಡೂ ಬದಿಯ ಗೋಡೆಗಳ ಮೇಲೆ ಸಾಲಾಗಿ ಇಳಿಬಿದ್ದಿವೆ. ಇದು ಇಂದಿನ ಮನೆಯ ಬಾಗಿಲುಗಳಿಗೆ ಕಟ್ಟುವ ತೋರಣದಂತಿದೆ.

ತೋರಣದ ಎಳೆಗಳ ಸಾಲು ವಿಶಿಷ್ಟವಾಗಿದೆ. ಸರಕ್ಕೆ ಅರೆವೃತ್ತಾಕಾರದಲ್ಲಿ ಅವು ಸಾಲಾಗಿವೆ. ಪ್ರತಿ ಅರೆವೃತ್ತಾಕಾರ ಕೊನೆಯಲ್ಲಿ ಅಂದರೆ ಪ್ರತಿ ಅರೆವೃತ್ತಗಳು ಸಂಧಿಸುವಲ್ಲಿ ಕೆಳಕ್ಕೆ ಬಾಣದಾಕಾರದ ಮತ್ತೊಂದು ಎಲೆ ಇಳಿಬಿದ್ದಿದೆ. ಬಾಣಗಳಂತಿರುವ ಈ ಎಳೆಗಳು ಒಂದಕ್ಕೊಂದು ಸ್ಪರ್ಶಿಸಿರುವುದರಿಂದ ಮೇಲ್ನೋಟಕ್ಕೆ ಪ್ರಾಗಿತಿಹಾಸ ಕಾಲದ ಮನುಷ್ಯರ ಸಾಲು ಕುಣಿತ (ನೃತ್ಯ)ದ ಚಿತ್ರದಂತೆ ತೋರುತ್ತದೆ.

ಕಲ್ಲಾಸರೆಯ ಚಿತ್ರಗಳು : ಬೆಟ್ಟದ ತೀರ ಮೇಲ್ಭಾಗದಲ್ಲಿ ಈ ಕಲ್ಲಾಸರೆ ಇದೆ. ಇಕ್ಕಟ್ಟಾದ ಕಲ್ಲು ಬಂಡೆಗಳನ್ನು ಏರುತ್ತಾ, ಕಿರು ಹಾದಿಯ ಮೂಲಕ ಈ ಕಲ್ಲಾಸರೆಯ ಸ್ಥಳವನ್ನು ತಲುಪಬೇಕು. ಬೆಟ್ಟದ ಮೇಲ್ಭಾಗದಲ್ಲಿ ತಕ್ಕಮಟ್ಟಿಗೆ ವಿಶಾಲವಾದ ಬಯಲು ಜಾಗವಿದೆ. ಇಲ್ಲಿ ಇರುವ ಪ್ರಸ್ತುತ ಕಲ್ಲಾಸರೆ ಒಂದು ವಿಶಾಲವಾದ ಬಂಡೆಯೊಂದು ವಾರೆಯಾಗಿ ನಿಂತಿರುವುದರಿಂದ ಅದರ ಕೆಳಗೆ ಕಲ್ಲಾಸರೆ ಸೃಷ್ಟಿಯಾಗಿದೆ. ಬೃಹತ್ ಬಂಡೆಯೊಂದಕ್ಕೆ ಮುಂಬದಿಯ ಮತ್ತೊಂದು ಗುಂಡು ಕಂಬದಂತೆ ಆಸರೆ ಕಲ್ಪಿಸಿರುವುದರಿಂದ ಒಳಭಾಗದಲ್ಲಿ ಪ್ರಶಸ್ತವಾದ ಆಸರೆ ಉಂಟಾಗಿದೆ. ಒಳವಿಸ್ತಾರ ಸುಮಾರು ೧೦ ಫೀಟ್ ಅಗಲ, ೧೨ ಫೀಟ್ ಉದ್ದವಿದೆ. ಈ ಕಲ್ಲಾಸರೆಯ ಬಂಡೆ ನೋಡಲು ಪಲ್ಲಕ್ಕಿಯಂತಿರುವುದರಿಂದ ಸ್ಥಳೀಯರು ಇದಕ್ಕೆ ಪಲ್ಲಕ್ಕಿ ಗುಂಡು ಎಂದು ಕರೆಯುತ್ತಾರೆ. ಈಶಾನ್ಯಕ್ಕೆ ತೆರೆದುಕೊಂಡಿರುವ ಈ ಕಲ್ಲಾಸರೆಯ ಛಾವಣಿ ತಳಮಟ್ಟದಿಂದ ವಾರೆಯಾಗಿ ತುದಿಯಲ್ಲಿ ೬ ಫೀಟ್ ಎತ್ತರದಲ್ಲಿದೆ. ಕಲ್ಲಾಸರೆಯ ಛಾವಣಿಯಲ್ಲಿ ಹಲವಾರು ಕೆಂಪು ವರ್ಣದ ಚಿತ್ರಗಳು, ಬರಹಗಳು, ಬಿಳಿ ವರ್ಣದ ಬರಹಗಳು ಇವೆ. ಇವು ಬೇರೆ ಬೇರೆ ಕಾಲದ ರಚನೆಗಳು. ಚಿತ್ರಗಳಲ್ಲಿ ಪ್ರಮುಖವಾಗಿ ಪರಸ್ಪರ ಅಭಿಮುಖವಾಗಿ ನಿಂತಿರುವ ಜೋಡಿ ಎತ್ತುಗಳು, ಗೂಳಿಯ ಚಿತ್ರಗಳು ಮಹತ್ವದ್ದಾಗಿವೆ.

ಜೋಡಿ ಎತ್ತುಗಳು : ಜೋಡಿ ಎತ್ತುಗಳು ಪರಸ್ಪರ ಎದುರುಬದುರಾಗಿವೆ. ನಾಲ್ಕು ಕಾಲುಗಳು ಸಹಜವಾದ ಮುಂಡ, 'ವಿ' ಆಕಾರದ ಕೋಡುಗಳು, ಬಾಲಗಳಿದ್ದು, ಕೆಂಪು ವರ್ಣದ ಚುಕ್ಕೆಗಳನ್ನು ಮುಂಡದ ಮೇಲೆ ಇರಿಸಿ ಅಲಂಕರಣೆಯನ್ನು ಮಾಡಲಾಗಿದೆ.

ಬಲಿಷ್ಠ ಗೂಳಿ : ಬಲಿಷ್ಠವಾಗಿರುವ ಗೂಳಿಯ ಚಿತ್ರ ಗಮನಾರ್ಹವಾಗಿದೆ. ಉದ್ದವಾದ, ದಷ್ಟಪುಷ್ಟವಾದ ಮುಂಡ, ಎತ್ತರವಾದ ಇಣಿ, ಬಲಿಷ್ಠ ಕೊರಳು, ಕಿರಿದಾದ ಚೂಪು ಕೋಡುಗಳು, ಬಲಿಷ್ಠವಾದ ನಾಲ್ಕು ಕಾಲುಗಳು, ಅವುಗಳಲ್ಲಿ ದಪ್ಪದಾದ ತೊಡೆಗಳು, ಕುಚ್ಚು ಸಹಿತ ಬಾಲಗಳಿದ್ದು, ಒಂದು ಅಪರೂಪದ ಗೂಳಿಯ ಚಿತ್ರ ಇದಾಗಿದೆ. ಇಡೀ ಚಿತ್ರವನ್ನು ಛಾಯಾರೂಪದಲ್ಲಿ ಅಂದರೆ ಮೈತುಂಬ ವರ್ಣವನ್ನು ತುಂಬಿ ಇದನ್ನು ರಚಿಸಲಾಗಿದೆ. ಈ ಗೂಳಿಯ ಚಿತ್ರವು ಗಂಗಾವತಿಯ ವಾನಭದ್ರೇಶ್ವರ ಬೆಟ್ಟದ ಕಲ್ಲಾಸರೆಯ ಗೂಳಿಯ ಚಿತ್ರವನ್ನು ಹೋಲುತ್ತದೆ. ಜೊತೆಗೆ ಇಲ್ಲಿಯೇ ಶಿಶ್ನ ನಿಮಿರಿತ ಎತ್ತು, ಕವಲುಕೋಡಿನ ಗಂಡು ಜಿಂಕೆ, ಸಮವಿನ್ಯಾಸದ ವೃತ್ತಾಕೃತಿಗಳು, ವಿವಿಧ ವಿನ್ಯಾಸದ ರಂಗೋಲಿ ಚಿತ್ರಗಳು ಇವೆ.

ಬರಹ (ಶಾಸನ)ಗಳು : ಈ ಕಲ್ಲಾಸರೆಯಲ್ಲಿ ಕೆಂಪು ವರ್ಣದ ಚಿತ್ರಗಳ ಜೊತೆಗೆ ಕೆಲವು ಕೆಂಪು ವರ್ಣದ ಹಾಗೂ ಬಿಳಿ ವರ್ಣದ ಬರಹ (ಶಾಸನ)ಗಳಿವೆ. ಅವುಗಳಲ್ಲಿ ನಾಲ್ಕು ಅಕ್ಷರದ ಬರಹವೊಂದು ಗಮನಾರ್ಹವಾಗಿದೆ.

ಬರಹ ಒಂದು : ಬ್ರಾಹ್ಮಿ ಲಿಪಿಯಲ್ಲಿ 'ಅಸಕಸ' ಎಂದು ಬರೆಯಲಾಗಿದೆ. ಅಕ್ಷರಗಳ ಶೈಲಿಯನ್ನು ಅನುಲಕ್ಷಿಸಿ ಇದು ಕ್ರಿ.ಶ ೧ನೇ ಶತಮಾನದ ಶಾತವಾಹನ ಕಾಲದ ಬ್ರಾಹ್ಮಿ ಲಿಪಿ ಎಂದು ಗುರುತಿಸಬಹುದು.

ಬರಹ ಎರಡು : ಇದೆ ಕಲ್ಲಾಸರೆಯಲ್ಲಿ ಮತ್ತೊಂದು ಕಡೆ ಮಧ್ಯಯುಗೀನ ಕನ್ನಡ ಲಿಪಿಯಲ್ಲಿ ಬಿಳಿ ವರ್ಣದ 'ದಾನವೀರಪ' ಎಂಬ ಬರಹವಿದೆ. ಅಕ್ಷರಗಳು ಬಹಳಷ್ಟು ಮಾಸಿವೆ.

ಚಿತ್ರಗಳ ಸಾಂಸ್ಕೃತಿಕ ಮಹತ್ವ : ಗುನ್ನಳ್ಳಿಯ ಚಿಲಕಮಟ್ಟಿಯ ಗವಿವರ್ಣ ಚಿತ್ರಗಳು ಹಾಗೂ ಪ್ರಾಚೀನ ವರ್ಣದ ಬರಹಗಳು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದಿವೆ. ಈ ಚಿತ್ರಿತ ಗವಿ, ಕಲ್ಲಾಸರೆಗಳು ಸಾಮಾನ್ಯವಾಗಿ ಪ್ರಾಗಿತಿಹಾಸ ಕಾಲದ ಗವಿಚಿತ್ರಗಳಿರುವಂತೆ ಬೆಟ್ಟದ ಎತ್ತರವಾದ ಹಾಗೂ ದುರ್ಗಮವಾದ ಸ್ಥಳಗಳಲ್ಲಿವೆ. ಬೆಟ್ಟದ ನೈಸರ್ಗಿಕ ಗವಿ, ಕಲ್ಲಾಸರೆಗಳಲ್ಲಿ ಸರಳವಾಗಿ ತಲುಪಬಹುದಾದ ಕಲ್ಲಾಸರೆಗಳನ್ನು ಹೊರತುಪಡಿಸಿ ಕೇವಲ ದುರ್ಗಮ ಸ್ಥಳದ ಗವಿಗಳನ್ನು ಚಿತ್ರಗಳ ರಚನೆಗಾಗಿ ಆಯ್ದುಕೊಂಡಿರುವುದು ಇಲ್ಲಿಯ ವಿಶೇಷ ಸಂಗತಿಯಾಗಿದೆ.

ಚಿತ್ರಗಳ ವಿಷಯಗಳನ್ನು ಅನುಲಕ್ಷಿಸಿ ಇವು ಈ ಬೆಟ್ಟ ಪರಿಸರದಲ್ಲಿ ವಾಸವಿದ್ದ ಪಶುಪಾಲಕ ಸಮುದಾಯದ ಜನರು ರಚಿಸಿದ್ದವೆಂದು ತರ್ಕಿಸಬಹುದು. ಅವರಿಗೆ ಪ್ರಿಯವಾದ ಜೋಡಿ ಎತ್ತುಗಳು, ಬಲಿಷ್ಠ ಗೂಳಿ, ಶಿಶ್ನ ನಿಮಿರಿತ ಎತ್ತು ಇಲ್ಲಿ ಪ್ರಧಾನವಾಗಿ ಕಂಡುಬರುತ್ತವೆ.

ಅಲಂಕೃತ ತೋರಣ ಚಿತ್ರವನ್ನು ಒಳಗೊಂಡ ಗವಿಯು ಆದಿಮ ಮಾನವನ ತಾತ್ಕಾಲಿಕ ಮನೆಯಾಗಿದ್ದಿತು. ಆತ ತನ್ನ ವಾಸದ ಮನೆಯನ್ನು ಬಣ್ಣದ ತೋರಣದ ಚಿತ್ರಗಳಿಂದ ಅಲಂಕರಿಸಿಕೊಂಡಿದ್ದಾನೆ. ಆ ಮೂಲಕ ಆ ಜನರ ಸೌಂದರ್ಯ ಪ್ರಜ್ಞೆಯನ್ನು ಗ್ರಹಿಸಬಹುದು. ಗಂಗಾವತಿಯ ಚಿಕ್ಕರಾಂಪುರದ 'ಒನಕೆ ಕಂಡಿ' ಗುಡ್ಡದ ಒಂದನೇ ಗವಿಯೂ ಕೂಡಾ ಆದಿಮ ಮಾನವನ ವಾಸದ ಮನೆಯಾಗಿದ್ದು, ಅಲ್ಲೂ ಇದೇ ರೀತಿ ವಿಭಿನ್ನ ಅಲಂಕರಣೆಯ ಚಿತ್ರಗಳು ಅಲ್ಲಿವೆ. ಕೊಪ್ಪಳ–





ಹಿರೇಬೆಣಕಲ್–ಹಂಪಿ ಭಾಗದಲ್ಲಿ ಈ ರೀತಿ ಅಲಂಕೃತ ಗುಹಾಮನೆ ತೀರಾ ಅಪರೂಪವಾಗಿ ಕಂಡುಬಂದಿವೆ. ಅವುಗಳಲ್ಲಿ ಚಿಲಕನಮಟ್ಟಿಯ ಈ ಗವಿಯೂ ಒಂದಾಗಿದೆ. ಕಲ್ಲಾಸರೆಯ ವಿವಿಧ ರಂಗೋಲಿ ರೀತಿಯ ವೃತ್ತಾಕೃತಿಗಳು ಕೂಡಾ ಅಲಂಕರಣಾತ್ಮಕವಾಗಿವೆ.

ಚಿಲಕನಮಟ್ಟಿಯ ಚಿತ್ರಗಳು ಅಮೂರ್ತದಿಂದ ಮೂರ್ತರೂಪ ಸ್ಪಷ್ಟವಾಗಿ ಮೂಡಿಬಂದ ಹಂತದಲ್ಲಿವೆ. ಕಲ್ಲಾಸರೆಯಲ್ಲಿರುವ ಪರಸ್ಪರ ಅಭಿಮುಖವಾಗಿರುವ ಎತ್ತುಗಳು, ಬಲಿಷ್ಠ ಗೂಳಿ ಇದಕ್ಕೆ ಸಾಕ್ಷಿಯಾಗಿವೆ. ಗೂಳಿಯ ಚಿತ್ರವಂತೂ ಅತ್ಯಂತ ಸ್ಪಷ್ಟವಾಗಿದ್ದು, ಅಂಗಾಂಗಗಳ ಪರಿಪೂರ್ಣತೆಯಿಂದ ಗಮನಾರ್ಹವಾಗಿದೆ. ಗೂಳಿಯ ಸಹಜ ಗಾಂಭೀರ್ಯ ಚಿತ್ರದಲ್ಲಿ ವ್ಯಕ್ತವಾಗಿದೆ. ಹಾಗಾಗಿ ಇದು ಕೊಪ್ಪಳ ಪರಿಸರದ ಪ್ರಾಗಿತಿಹಾಸ ಕಾಲದ ಗೂಳಿ ಚಿತ್ರಗಳಲ್ಲಿ ವಿಶೇಷ ಸ್ಥಾನ ಪಡೆಯುತ್ತದೆ. ಈ ಚಿತ್ರದ ರಚನಾಕಾರನ ರೂಪಣ ಗ್ರಹಿಕೆ ಸಾಮರ್ಥ್ಯ ಹಾಗೂ ಕೌಶಲ್ಯ ಇಲ್ಲಿ ಬಿಂಬಿತವಾಗುತ್ತದೆ.

ಗವಿಯಲ್ಲಿರುವ ಬರಹಗಳಲ್ಲಿ ಬ್ರಾಹ್ಮಿ ಲಿಪಿಯ ಬರಹ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ್ದಾಗಿದೆ. ಕ್ರಿ.ಶ. ೧ನೇ ಶತಮಾನದ ಶಾತವಾಹನಕಾಲದ ಬ್ರಾಹ್ಮಿ ಲಿಪಿಯ ನಾಲ್ಕು ಅಕ್ಷರಗಳ ಈ ಬರಹ 'ಅಸಕಸ' ಎಂದು ಉಲ್ಲೇಖಿಸುತ್ತದೆ. ಕೊಪ್ಪಳ ಸಹಿತ ಕೊಪ್ಪಳಕ್ಕೆ ಸಮೀಪದ 'ಮಸ್ಕಿ' ಹಾಗೂ ನಿಟ್ಟೂರು ಉದೆಗೊಳಂಗಳಲ್ಲಿ ದೊರೆತಿರುವ ಕ್ರಿ.ಪೂ. ೩ನೇ ಶತಮಾನದ ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿಯ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಕೊಪ್ಪಳ ಹೊರತು ಉಳಿದ (ಐದು) ಶಾಸನಗಳಲ್ಲಿ ಅಶೋಕನನ್ನು 'ಅಸೊಕಸ' ಎಂದೇ ಉಲ್ಲೇಖಿಸಲಾಗಿದೆ. ಈ ಉಲ್ಲೇಖದನ್ವಯ ಪ್ರಸ್ತುತ ಬರಹ ಕೂಡಾ ಮೌರ್ಯ ಸಾಮ್ರಾಟ ಅಶೋಕನ ಹೆಸರನ್ನು ಉಲ್ಲೇಖಿಸುತ್ತಿರಬೇಕೆಂದು ತರ್ಕಿಸಬಹುದು. ಶಾತವಾಹನ ಕಾಲದ ಸನ್ನತಿಯ ಬೌದ್ಧ ಸ್ಥೂಪದಲ್ಲಿ ಅಶೋಕನ ಶಿಲ್ಪವೊಂದು ದೊರೆತಿದ್ದು, ಅದರ ಮೇಲೂ 'ರಾಜಾ ಅಸೋಕ' ಎಂದೇ ಬರೆಯಲಾಗಿದೆ. ಈ ಹಿನ್ನೆಲೆಯಲ್ಲಿ ಗುನ್ನಳ್ಳಿಯ 'ಅಸಕಸ' ಎನ್ನುವ ಹೆಸರು 'ಅಸೋಕಸ' ಎಂಬ ಶಬ್ದದ ಇನ್ನೊಂದು ರೂಪ ಎನ್ನಬಹುದು. ಆದರೆ ಈ ಹೆಸರನ್ನು ಯಾವ ಸಂದರ್ಭದಲ್ಲಿ ಬರೆದರೆನ್ನುವುದನ್ನು ಸದ್ಯ ನಿರ್ಧರಿಸುವುದು ಕಷ್ಟ. ಕೊಪ್ಪಳದಲ್ಲಿ ದೊರೆತಿರುವ ಅಶೋಕನ ಶಾಸನಗಳ[೧೨] ಹಿನ್ನೆಲೆಯಲ್ಲಿ ಈ ಬರಹ ಮೌರ್ಯ ಸಾಮ್ರಾಟ ಅಶೋಕನ ಹೆಸರನ್ನೇ ಉಲ್ಲೇಖಿಸುತ್ತದೆ ಎಂದು ಸ್ಪಷ್ಟವಾಗಿ ಹೇಳಬಹುದು. ಕೊಪ್ಪಳ ಜಿಲ್ಲೆಯಲ್ಲಿ ಅಶೋಕನ ಗವಿಮಠ ಹಾಗೂ ಪಾಲ್ಕಿಗುಂಡು ಈ ಎರಡು ಶಾಸನಗಳನ್ನು ಹೊರತುಪಡಿಸಿದರೆ, ಬ್ರಾಹ್ಮಿ ಲಿಪಿಯ ಇತರ ಶಾಸನಗಳು ಲಭ್ಯವಿಲ್ಲ. ಆದರೆ ಕೊಪ್ಪಳ ತಾಲೂಕಿನ ಚಿಕ್ಕಸಿಂಧೋಗಿಯಲ್ಲಿ ದೊರೆತ ಶಾತವಾಹನ ಕಾಲದ ಮುದ್ರಾಂತಿಕ ನಾಣ್ಯಗಳನ್ನು ಹೊಂದಿದ್ದ ತಾಮ್ರದ ಚಂಬಿ (ತಂಬಿಗೆ)ನ ಮೇಲೆ 'ಚಂತಸ' ಎಂದು ಬ್ರಾಹ್ಮಿ ಲಿಪಿಯ ಬರಹ ಮಾತ್ರ ಕಂಡುಬಂದಿದೆ.[೧೩] ಅದನ್ನು ಹೊರತು ಪ್ರಸ್ತುತ 'ಅಸಕಸ' ಎಂಬ ಬರಹವೂ ಕೂಡಾ ಬ್ರಾಹ್ಮಿ ಲಿಪಿಯಲ್ಲಿದ್ದು, ಜಿಲ್ಲೆಯಲ್ಲಿ ಕಂಡುಬಂದ ನಾಲ್ಕನೆಯ ಬ್ರಾಹ್ಮಿ (ಶಾಸನ) ಬರಹವೆಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.

ಇನ್ನು ಇದೇ ಕಲ್ಲಾಸರೆಯಲ್ಲಿ ಮಧ್ಯಯುಗೀನ ಕಾಲಕ್ಕೆ ಸೇರುವ ಬಿಳಿ ವರ್ಣದಲ್ಲಿ ಬರೆದ ಕನ್ನಡ ಲಿಪಿಯ 'ದಾನವೀರಪ' ಎಂಬ ಬರಹ ಅದೇ ಹೆಸರಿನ ವ್ಯಕ್ತಿಯ ಹೆಸರನ್ನು ಸೂಚಿಸುತ್ತದೆನ್ನಬಹುದು. ದಾನವೀರಪ್ಪ ಎನ್ನುವ ವ್ಯಕ್ತಿ, ಈ ಕಲ್ಲಾಸರೆಯ ಸ್ಥಳಕ್ಕೆ ಆಗಮಿಸಿದ್ದು, ಅಲ್ಲಿಯ ಪ್ರಾಚೀನ ಚಿತ್ರ ಹಾಗೂ ಬರಹಗಳಿಂದ ಪ್ರೇರಿತನಾಗಿ ತನ್ನ ಹೆಸರನ್ನು ಬಿಳಿ

ಬಣ್ಣ (ಸುಣ್ಣ)ದಲ್ಲಿ ಬರೆದಿರುವುದನ್ನು ಗ್ರಹಿಸಬಹುದು. ಕೊಪ್ಪಳ ಮಳೆಮಲ್ಲಪ್ಪನ ಬೆಟ್ಟದಲ್ಲಿ ಅಶೋಕನ ಪಾಲ್ಕಿಗುಂಡು ಶಾಸನದ ಸುತ್ತಮುತ್ತಲಿನ ಕಲ್ಲಾಸರೆಗಳಲ್ಲಿ ಇದೇ ರೀತಿ ವ್ಯಕ್ತಿಗಳ ಹೆಸರುಗಳನ್ನು ಉಲ್ಲೇಖಿಸುವ ಸುಮಾರು ೧೫ ರಷ್ಟು ಬರಹಗಳು ಕಂಡುಬಂದಿವೆ.[೧೪]

ಚಿತ್ರಗಳ ಕಾಲಮಾನ : ಗುನ್ನಳ್ಳಿಯ ಚಿಲಕನಮಟ್ಟಿಯ ಚಿತ್ರಗಳಲ್ಲಿ ಬರಹಗಳನ್ನು ಹೊರತುಪಡಿಸಿ, ಉಳಿದವುಗಳ ವಿಷಯ, ವಿನ್ಯಾಸ, ಶೈಲಿ ಹಾಗೂ ಚಿತ್ರ ರಚನಾ ತಂತ್ರಗಳನ್ನು ಅನುಲಕ್ಷಿಸಿ ಹಾಗೂ ಇತರ ನೆಲೆಯ ಕಾಲ ನಿರ್ಧರಿತ ಚಿತ್ರಗಳೊಂದಿಗಿನ ಹೋಲಿಕೆ, ಜೊತೆಗೆ ಕಲ್ಲಾಸರೆಯ ಸಾಂಸ್ಕೃತಿಕ ಪರಿಸರವನ್ನು ಗಮನದಲ್ಲಿರಿಸಿಕೊಂಡು ಇವು ಕ್ರಿ.ಪೂ. ೧೨೦೦ ರಿಂದ ಕ್ರಿ.ಪೂ. ೨೦೦ರ ಕಾಲಘಟ್ಟದವೆಂದು ನಿರ್ಧರಿಸಬಹುದು. ಆ ಕಾಲಘಟ್ಟದಲ್ಲಿದ್ದ ಕಬ್ಬಿಣಯುಗ ಬೃಹತ್ ಶಿಲಾಯುಗ ಕಾಲದ ಪಶುಪಾಲಕ ಸಮುದಾಯದ ಜನರು ಈ ಚಿತ್ರಗಳ ರಚನಾಕಾರರಾಗಿದ್ದಾರೆ. ಬರಹಗಳಲ್ಲಿ 'ಅಸಕಸ' ಎನ್ನುವ ಬ್ರಾಹ್ಮಿ ಲಿಪಿಯ ಬರಹವು ಕ್ರಿ.ಪೂ. ೨ನೇ ಶತಮಾನಕ್ಕೆ ಸೇರುತ್ತಿದ್ದರೆ, 'ದಾನವೀರಪ' ಎನ್ನುವ ಕನ್ನಡ ಬರಹವು ೧೭ನೇ ಶತಮಾನಕ್ಕೆ ಸೇರುತ್ತದೆ.

ಒಟ್ಟಿನಲ್ಲಿ ಗುನ್ನಳ್ಳಿಯ ಪ್ರಾಗಿತಿಹಾಸ ಕಾಲದ ಚಿತ್ರಗಳು ಕೊಪ್ಪಳ ಪರಿಸರದಲ್ಲಿ ಈವರೆಗೆ ಕಂಡುಬಂದ ಅಧಿಕ ಸಂಖ್ಯೆಯ ಗವಿವರ್ಣ ಚಿತ್ರಗಳ ಭಾಗಗಳಾಗಿ ಆ ಪ್ರಕಾರದಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಧಾನ್ಯತೆಗೆ ಮತ್ತಷ್ಟು ಪುಷ್ಟಿ ನೀಡಿವೆ. ಕೊಪ್ಪಳ ಪ್ರದೇಶದ ಪ್ರಾಗಿತಿಹಾಸ ಕಾಲದ ಮಾನವನ ಜೀವನ ಸಂಸ್ಕೃತಿಯನ್ನು ತಿಳಿಯಲು ಇವು ಮತ್ತಷ್ಟು ಸಹಾಯಕವಾಗಿವೆ ಎನ್ನಬಹುದು.

ಅಡಿಟಿಪ್ಪಣಿಗಳು

೧. ಜಾನ್ ಜೂಲಿಯಸ್ ನಾರ್‌ವಿಚ್ (ಸಂ.), ೧೯೯೦, ಆಕ್ಸ್‌ಫರ್ಡ್ ಇಲ್ಲುಸ್ಟ್ರೇಟೆಡ್ ಎನ್‌ಸೈಕ್ಲೋಪಿಡಿಯಾ ಆಫ್ ದಿ ಆರ್ಟ್ಸ್, ಪು. ೮೨.

೨. ಕೂಕ್‌ಬರ್ನ್, ಜೆ., ೧೯೮೩, ಆನ್ ದಿ ರೀಸೆಂಟ್ ಎಕ್ಸಿಸ್ಟನ್ಸ್ ಆಫ್ ರೈನೊಸಾರಸ್ ಇಂಡಿಕಸ್ ಇನ್ ದಿ ನಾರ್ಥ್‌ವೆಸ್ಟರ್ನ್ ಪ್ರಾವಿಯನ್ಸ್, ಆ್ಯಂಡ್ ಎ ಡಿಸ್ಟ್ರಿನ್‌ಷನ್ ಆಫ್ ಎ ಟ್ರೇಸಿಂಗ್ ಆಫ್ ಆ್ಯನ್ ಆರ್ಕಿಯಾಕ್ ರಾಕ್ ಪೆಯಿಂಟಿಂಗ್ ಪ್ರಾಮ್ ಮಿರ್ಜಾಪುರ ರಿಪ್ರೆಸೆಂಟಿಂಗ್ ದಿ ಹಂಟಿಂಗ್ ಆಫ್ ದಿಸ್ ಆ್ಯನಿಮಲ್, ಜೆಎಎಸ್‌ಬಿ ಸಂ.೫೨, ಪು. ೫೬–೬೪.

೩. ಫೂಟ್ ಆರ್.ಬಿ., ೧೯೧೬, "ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆ್ಯಂಡ್ ಪ್ರೋಟೋ ಹಿಸ್ಟಾರಿಕ್ ಆ್ಯಂಟಿಕ್ವಿಟೀಸ್, ನೋಟ್ಸ್ ಆನ್ ದೇರ್ ವಿಜಸ್ ಆ್ಯಂಡ್ ಡಿಸ್ಟ್ರಿಬ್ಯೂಷನ್" ಪುಟ ೮೭–೮೯.

೪. ಮನ್ ಎಲ್., ೧೯೩೪–೩೫, ಏನಿವಲ್ ರಿಪೋರ್ಟ್ ಆಫ್ ದಿ ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್ ಆಫ್ ದಿ ಫಾರ್ಮರ್ ಹೈದರಾಬಾದ್ ಸ್ಟೇಟ್.

೫. ಐ.ಎ.ಆರ್., ೧೯೬೭–೬೮, ಪು. ೬೭, ೧೯೬೮–೬೯ ಪು. ೬೮, ಸುಂದರ ಅ., ೧೯೭೪, ಫರ್ದರ್ ನೋಟಿಸಸ್ ಆಫ್ ರಾಕ್ ಪೆಯಿಂಟಿಂಗ್ಸ್ ಇನ್ ಬೆನಕಲ್ ರಾಯಚೂರ್ ಡಿಸ್ಟ್ರಿಕ್ಸ್, ಜೆಐಎಚ್ ಸಂ. ೫೨.

೬ ಶರಣಬಸಪ್ಪ ಕೋಲ್ಕಾರ್, ೨೦೦೨, ಕೊಪ್ಪಳ–ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ, ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಮೋಹನ್ ಆರ್., ೨೦೧೫, ರಾಕ್ ಆರ್ಟ್ ಆಫ್ ದಿ ಮಲಪ್ರಭಾ ಬೇಸಿನ್, ಪಿಎಚ್.ಡಿ ಥೀಸಿಸ್, ಡೆಕ್ಕನ್ ಕಾಲೇಜ್, ಪೋಸ್ಟ್ ಗ್ರಾಜ್ಯುಯೇಟ್ ಆ್ಯಂಡ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಪುಣೆ.

೮. ಸುಂದರ ಅ., ೧೯೯೭, ಕರ್ನಾಟಕ ಚರಿತ್ರೆ, ಸಂ. ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ, ಗುಲಬುರ್ಗಾ.

೧೦. ಮೋಹನ್ ಆರ್., ೨೦೨೧, ಆರ್ಕಿಯಾಲಜಿ ಆಫ್ ದ ಮಿಡಲ್ ತುಂಗಭದ್ರಾ ವ್ಯಾಲಿ ಆಫ್ ಕರ್ನಾಟಕ ವಿಥ್ ಸ್ಪೆಷಲ್ ರೆಫರೆನ್ಸ್ ಟು ರಾಕ್ ಆರ್ಟ್, ಪೋಸ್ಟ್ ಡಾಕ್ಟರಲ್ ರಿಪೋರ್ಟ್, ಡೆಕ್ಕನ್ ಕಾಲೇಜ್, ಪೋಸ್ಟ್ ಗ್ರಾಜ್ಯುಯೇಟ್ ಆ್ಯಂಡ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಪುಣೆ.

೧೧. ಶರಣಬಪಪ್ಪ ಕೋಲ್ಕಾರ್, "ಆದಿಮಾನವರ ಗವಿಚಿತ್ರಗಳು ಮತ್ತು ಬ್ರಾಹ್ಮಿಲಿಪಿಯ ವರ್ಣಶಾಸನ ಪತ್ತೆ" ೨೮.೦೬.೨೦೨೧ ರ ಕನ್ನಡ ದಿನಪತ್ರಿಕೆಗಳು.

೧೨. ದೇವರಕೊಂಡಾರೆಡ್ಡಿ (ಸಂ.), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಕೊಪ್ಪಳ ಜಿಲ್ಲೆ, ಶಾಸನ ಸಂ–೨೮, ಪು. ೩೭.

೧೩. ಅದೇ, ಸಂ–೧೬, ಪು. ೨೫.

೧೪. ಅದೇ, ಸಂ–೬೩ ರಿಂದ ೭೭ ರವರೆಗೆ, ಪು. ೬೧.


◆◆

೩

ಮೋಹನ್ ಆರ್.

ಏಳುಗುಡ್ಡ ಸಾಲಿನ ಹಿರೇಬೆಣಕಲ್ ಪ್ರದೇಶ : ಮುಂದುವರೆದ ಪುರಾತತ್ವ ಶೋಧನೆ

ಹಿರೇಬೆಣಕಲ್ ಎಂದಾಕ್ಷಣ ನಮ್ಮ ಕಣ್ಮುಂದೆ ಹಾದುಹೋಗುವುದು ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳ ಚಿತ್ರಣ (ಚಿತ್ರ ೧). ಇದರಿಂದಲ್ಲೇ ೨೦೨೧ ರಲ್ಲಿ ವಿಶ್ವಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆಯಿತು. ಆದರೆ ದುರಾದೃಷ್ಟವಶತ್ ಆ ಸ್ಥಾನದಿಂದ ವಂಚಿತವಾಯಿತು. ಇದರ ಬದಲಾಗಿ ಸಿಂಧೂ ಸಂಸ್ಕೃತಿಯ ಧೋಲವಿರ ಮತ್ತು ಕಾಕತೀಯ ಕಾಲಕ್ಕೆ ಸೇರಿದ ತೆಲಂಗಾಣದ ರಾಮಪ್ಪ ದೇವಾಲಯ ಯುನೆಸ್ಕೋ ವಿಶ್ವಪಾರಂಪರಿಕ ಪಟ್ಟಿಗೆ ಸೇರ್ಪಡೆಯಾದವು. ಪ್ರಸ್ತುತ ನಡೆಯುತ್ತಿರುವ ಕರ್ನಾಟಕದ ಏಳು ಅದ್ಭುತಗಳ ಅಭಿಯಾನದಲ್ಲಿ ಮುಂಚೂಣಿಯಲ್ಲಿದೆ. ಹಾಗೆಯೇ ಈ ನೆಲೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧೀನದಲ್ಲಿದ್ದು, ತಕ್ಕಮಟ್ಟಿಗೆ ಸಂರಕ್ಷಿಸಲಾಗಿದೆ.



ಚಿತ್ರ ೧. ಹಿರೇ ಬೆಣಕಲ್: ಬೃಹತ್ ಶಿಲಾಯುಗ ಸಮಾಧಿಗಳು

Research Executive
Pleach India Foundation
Malaxmi Courtyard
HYDERBAD-500 008
Mob: 99807 74716

ಹಿರೇಬೆಣಕಲ್ ತುಂಗಭದ್ರಾ ನದಿ ತೀರದಲ್ಲಿದ್ದು, ಮೊಟ್ಟಮೊದಲ ಬಾರಿಗೆ ಅಂದರೆ ೧೮೩೫ ರಲ್ಲಿ ಕೆಯಿಸ್‌ರವರು ಇಲ್ಲಿನ ಬೃಹತ್ ಶಿಲಾಯುಗ ನೆಲೆಯನ್ನು ಶೋಧಿಸಿದರು ಎಂಬ ಮಾಹಿತಿಯನ್ನು ಕೆ. ಮೆಡೂಸ್ ಟೈಲರ್ ಅವರು ಪ್ರಕಟಿಸಿದ 'ಮೆಗಾಲಿಥಿಕ್ ಟೋಮ್ಸ್ ಅಂಡ್ ಏಶಿಯೆಂಟ್ ರಿಮೈನ್ಸ್ ಇನ್ ದ ಡೆಕ್ಕನ್' ಲೇಖನದಲ್ಲಿ ನಮೂದಿಸಿದ್ದಾರೆ (Taylor 1941, reprint). ಈ ನೆಲೆಯು ದಕ್ಷಿಣ ಭಾರತೀಯ ಪ್ರಮುಖ ಪುರಾತತ್ವ ನೆಲೆಗಳಲ್ಲೊಂದಾಗಿರುವುದರಿಂದ ಅನೇಕ ವಿದ್ವಾಂಸರ ಗಮನ ಸೆಳೆದು ಸಾಕಷ್ಟು ಕ್ರಮಬದ್ಧ ಅಧ್ಯಯನಕ್ಕೆ ನಾಂದಿಯಾಯಿತು (Sundara 1975; ASI. 2001-02 & 2002-03; Bauer & Trivedi 2013).

ಆದಿಮಚಿತ್ರಗಳ ಹಿನ್ನಲೆಯಲ್ಲಿ ಫಾಸೆಟ್ ಅವರು ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ೧೮೯೨ರಲ್ಲಿ ಈ ನದಿ ತೀರದ ಕಪ್ಪಗಲ್ಲು ನೆಲೆಯಲ್ಲಿ ಕುಟ್ಟು ಚಿತ್ರಗಳನ್ನು ಶೋಧಿಸಿದರು (Fawcett 1892), ನಂತರ ಈ ಚಿತ್ರಗಳು ರಾಬರ್ಟ್ ಬ್ರೂಸ್ ಫೂಟ್ ಅವರ ಗಮನ ಸೆಳೆದವು (Foote 1916). ಪ್ರಮುಖವಾಗಿ ಲಿಯೋನಾರ್ಡ್ ಮನ್ ಅವರು ೧೯೧೫ ರಲ್ಲಿ ಹಿರೇ ಬೆಣಕಲ್‌ನ ವರ್ಣಚಿತ್ರಗಳನ್ನು ಶೋಧಿಸಿದರು (Munn 1934, 1935). ಇದರ ಜೊತೆಗೆ ಬಿಲ್ಲಮರಾಯನಗುಡ್ಡ ನೆಲೆಯನ್ನು ಶೋಧಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ, ಗೊರ್ಡನ್ ಮತ್ತು ಆಲ್ಚಿನ್‌ರವರು ೧೯೫೦ರ ದಶಕದಲ್ಲಿ ಕಪ್ಪಗಲ್ಲು, ಹಿರೇ ಬೆಣಕಲ್-ಮಲ್ಲಾಪುರದ ಚಿತ್ರಗಳನ್ನು ಪುನರ್ ಪರಿಶೀಲಿಸಿ ಪ್ರಕಟಿಸಿದ್ದಾರೆ (Gordon 1951; Gordon & Allchin 1955). ಪಾಶ್ಚಿಮಾತ್ಯರ ಹೊರತಾಗಿ ಹೆಚ್ಚು ಗಮನ ಸೆಳೆದಿದ್ದು ಸುಂದರ ಅಡಿಗ ಅವರ ಸಂಶೋಧನೆಗಳು. ಇವರು ಇದುವರೆಗೂ ೧೬ ಪುಸ್ತಕಗಳು, ೨ ವಿಶ್ವಕೋಶಗಳು ಮತ್ತು ೪೦೦ಕ್ಕೂ ಹೆಚ್ಚು ಲೇಖನಗಳನ್ನು ನಮ್ಮ ಸಂಸ್ಕೃತಿ ಕುರಿತಾಗಿ ಪ್ರಕಟಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಆದಿಮಚಿತ್ರಗಳ ಅಧ್ಯಯನಕ್ಕೂ ಬುನಾದಿಯನ್ನು ಹಾಕಿಕೊಟ್ಟವರಲ್ಲಿ ಇವರೇ ಮೊದಲಿಗರು. ಇವರು ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆಯ ವ್ಯವಸ್ಥಿತ ಶೋಧನೆ ಮತ್ತು ಅಧ್ಯಯನಕ್ಕೆ ನಾಂದಿಹಾಡಿದರು. ಅವರು ೧೯೬೮ ರಲ್ಲಿ ಲಿಯೋನಾರ್ಡ್ ಮನ್ ಅವರು ಹಿರೇಬೆಣಕಲ್ಲಿನಲ್ಲಿ ಶೋಧಿಸಿದ ಚಿತ್ರಗಳ ಕಲ್ಲಾಸರೆಗಳನ್ನು ಹುಡುಕುವ ಸಂದರ್ಭದಲ್ಲಿ ಇನ್ನೂ ಒಂಬತ್ತು ಹೊಸ ಕಲ್ಲಾಸರೆಗಳನ್ನು ಬೆಳಕಿಗೆ ತಂದರು (Sundara 1985). ತದನಂತರ ಅವರು ಕರ್ನಾಟಕದ ಹಲವಾರು ಭಾಗಗಳಲ್ಲಿ ಭೂ ಅನ್ವೇಷಣೆ ಕಾರ್ಯವನ್ನು ಕೈಗೊಂಡು 'ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ' ಶೀರ್ಷಿಕೆಯಡಿ ೧೯೯೪ರಲ್ಲಿ ಹೊತ್ತಿಗೆಯನ್ನು ಹಾಗೂ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ (ಸುಂದರ ೧೯೭೪, Sundara 1984, 1987, 2006). ಇದರಲ್ಲಿ ಸುಂದರ ಅವರು ೧೯೬೧ ರಲ್ಲಿ ಶೋಧಿಸಿದ ಚಿಕ್ಕರಾಂಪುರದ ಒನಕೆ ಕಂಡಿಯು ಬೃಹತ್ ಶಿಲಾಯುಗದ ಶಿಲಾವೃತ್ತ ವರ್ಣಚಿತ್ರವು ಹೆಚ್ಚು ಆಕರ್ಷಕ ಹಾಗೂ ಸ್ವಾರಸ್ಯಕರವಾಗಿದೆ (Sundara 1987). ಬೃಹತ್ ಶಿಲಾಯುಗ ಸಂಸ್ಕೃತಿಯ ಶಿಲಾವೃತ್ತ ವಿಧಿವಿಧಾನಗಳನ್ನು ಬಿಂಬಿಸುತ್ತದೆ. ಈ ಮಾದರಿಯ ಚಿತ್ರ ಇದುವರೆಗೂ ಪ್ರಪಂಚದ ಇನ್ನ್ಯಾವುದೇ ಸ್ಥಳದಲ್ಲಿ ಕಂಡುಬಂದಿಲ್ಲದ ಕಾರಣ ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ.

ಇವರ ಹಾದಿಯಲ್ಲಿ ಶರಣಬಸಪ್ಪ ಕೋಲ್ಕಾರ ಅವರು ತಮ್ಮ ಡಾಕ್ಟರಲ್ ಅಧ್ಯಯನಕ್ಕೆ ತುಂಗಭದ್ರಾ ನದಿ ತೀರದ ಕೊಪ್ಪಳ-ಹಂಪಿ ಪ್ರದೇಶದ ವರ್ಣಚಿತ್ರಗಳ ಅನ್ವೇಷಣೆಯನ್ನು ಮುಖ್ಯ ಭೂಮಿಕೆಯಾಗಿರಿಸಿಕೊಂಡು ನಡೆಸಿದ ಭೂ ಕಾರ್ಯಾನ್ವೇಷಣೆಯಲ್ಲಿ ೧೭ ಹೊಸ ನೆಲೆಗಳ ಜೊತೆಗೆ ಒಟ್ಟಾರೆ ೭೬ ಹೊಸ ಗವಿ ಮತ್ತು ಕಲ್ಲಾಸರೆಗಳನ್ನು ಶೋಧಿಸಿ 'ಶಿಲಾಯುಗದ ಗವಿಚಿತ್ರಗಳು' ಶೀರ್ಷಿಕೆಯ ಹೊತ್ತಿಗೆಯನ್ನು ಪ್ರಕಟಿಸಿದರು (ಕೋಲ್ಕಾರ ೨೦೧೦).

ಪ್ರಸ್ತುತ ಸಂಶೋಧನೆಯು ಲೇಖಕರ ಪೋಸ್ಟ್ ಡಾಕ್ಟರಲ್‌ನ ಭಾಗವಾಗಿದ್ದು, ಈ ಪ್ರದೇಶದ ಹೆಚ್ಚಿನ ಅಧ್ಯಯನಕ್ಕೆ ದಾರಿಯಾಗಿದೆ. ಲೇಖಕರ ಡಾಕ್ಟರಲ್‌ನ ಉಪ ಮಾರ್ಗದರ್ಶಕರು ಹಾಗೂ ಪೂಜ್ಯ ಗುರುಗಳಾದ ಪ್ರೊ. ಅ. ಸುಂದರ ಅವರು, ೨೦೧೩-೨೦೧೫ರ ಅವಧಿಯಲ್ಲಿ ಮಲಪ್ರಭಾ ನದಿತೀರದ ಸಂಶೋಧನೆಗಳ ದತ್ತಾಂಶಗಳ (Mohana 2015, 2016) ಬಗ್ಗೆ ಚರ್ಚಿಸುತ್ತಿದ್ದಾಗ ಅವರು ಮಲಪ್ರಭಾ ನದಿತೀರದಂತೆಯೇ, ತುಂಗಭದ್ರಾ ನದಿತೀರದಲ್ಲಿ ಅಡಗಿರುವ ಭವ್ಯ ಸಂಸ್ಕೃತಿ ಅದರಲ್ಲೂ ವಿಶೇಷವಾಗಿ ಹೆಚ್ಚು ವರ್ಣಚಿತ್ರಗಳು ಇರುವ ಸಾಧ್ಯತೆ ಮತ್ತು ಅವುಗಳ ಮಹತ್ವವನ್ನು ವಿವರಿಸಿದರು. ಹಾಗೆಯೇ ಇದು ಮಧ್ಯಪ್ರದೇಶದ ವಿಶ್ವ ಪಾರಂಪರಿಕ ವರ್ಣಚಿತ್ರ ತಾಣ ಬೀಂಬೆಟ್ಕ ಪ್ರದೇಶಕ್ಕಿಂತ ಹೆಚ್ಚು ವರ್ಣಚಿತ್ರ ನೆಲೆಗಳಿವೆಂದು ಅವರ ಪೂರ್ವ ಸಂಶೋಧನೆಗಳ ಹಿನ್ನೆಲೆಯಲ್ಲಿನ ಅಭಿಪ್ರಾಯವಾಗಿತ್ತು. ಇದು ನನಗೆ ಸ್ಪೂರ್ತಿಯಾಗಿ, ಇಲ್ಲಿನ ಪೂರ್ವ ಸಂಶೋಧನೆಗಳಲ್ಲಿ, ವಿಶೇಷವಾಗಿ ಡಾ. ಶರಣಬಸಪ್ಪ ಕೋಲ್ಕಾರ ಅವರ 'ಶಿಲಾಯುಗದ ಗವಿಚಿತ್ರಗಳು' ಹೊತ್ತಿಗೆಯು ಹೆಚ್ಚು ಗಮನ ಸೆಳೆಯಿತು. ಇದರ ಪ್ರತಿಫಲವಾಗಿ ನಡೆದ ಇತ್ತೀಚಿನ ಸಂಶೋಧನೆಯು ಸುಂದರ ಅವರ ವಾದಕ್ಕೆ ಪುಷ್ಠಿಯನ್ನು ನೀಡಿದೆ. ಇದು ಬೀಂಬೆಟ್ಕ ಪ್ರದೇಶಕ್ಕಿಂತ ಹೆಚ್ಚು ವರ್ಣಚಿತ್ರ ನೆಲೆಗಳಲ್ಲಿ ಬಹುಸಂಖ್ಯೆಯಲ್ಲಿ ಕಲ್ಲಾಸರೆಗಳನ್ನು ಹೊಂದಿರುವುದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ಇನ್ನು ಸಾಕಷ್ಟು ಅಧ್ಯಯನಗಳು ಚಾಲ್ತಿಯಲ್ಲಿದ್ದು, ಮುಂದಿನ ದಿನಗಳಲ್ಲಿ


ಒಳ್ಳೆಯ ಫಲಿತಾಂಶ ಬರಬಹುದೆಂಬುದು ನನ್ನ ನಂಬಿಕೆ. ವರ್ಣಚಿತ್ರ ನೆಲೆಗಳಲ್ಲಿ ಮನುಷ್ಯ, ಪ್ರಾಣಿ ಮತ್ತು ಜ್ಯಾಮಿತಿ ಚಿತ್ರಗಳು ಸಾಮಾನ್ಯವಾಗಿವೆ. ಆದರೆ ಕರ್ನಾಟಕದ ಇನ್ನುಳಿದ ಭಾಗದ ಚಿತ್ರಗಳಿಗಿಂತ ಭಿನ್ನವಾಗಿವೆ. ಕಲ್ಗುಳಿಗಳು ಅಲ್ಲಲ್ಲಿ ಕಂಡುಬಂದಿವೆ. ಇವುಗಳ ಜೊತೆಜೊತೆಯಲ್ಲಿ ಸೂಕ್ಷ್ಮ ಮತ್ತು ನವಶಿಲಾಯುಗದ ಉಪಕರಣಗಳು, ಬೃಹತ್ ಶಿಲಾಯುದ ಸಮಾಧಿಗಳು ಮತ್ತು ಮಡಿಕೆ ಚೂರುಗಳು ಅತ್ಯಧಿಕ ಸಂಖ್ಯೆಯಲ್ಲಿ ದೊರೆತಿವೆ.

'ಹಿರೇಬೆಣಕಲ್ ಸಾಲು ದಕ್ಷಿಣ ಭಾರತದ ಬೀಂಬೆಟ್ಕ ಎನ್ನುವುದರಲ್ಲಿ ಅನುಮಾನವೇ ಇಲ್ಲ ಆದರೆ ಸಂಶೋಧನೆಗಳ ಕೊರತೆಯಿಂದ ಅದನ್ನು ಹೇಳಲು ಕಷ್ಟಸಾಧ್ಯ' ಎಂದು ಸುಂದರ ಅವರು ಹೇಳಿದ್ದರು. ಬಹುಶಃ ನಮಗೆಲ್ಲ ತಿಳಿದಿರುವಂತೆ ಬೀಂಬೆಟ್ಕ ನೆಲೆಯು ಮಧ್ಯಪ್ರದೇಶದ ವಿಂದ್ಯಶ್ರೇಣಿಯಲ್ಲಿದ್ದು, ಆದಿಮಚಿತ್ರ ನೆಲೆಯಾಗಿದೆ. ಹಾಗೆಯೇ ಭಾರತದ ಏಕೈಕ ಆದಿಮಚಿತ್ರ ವಿಶ್ವಪಾರಂಪರಿಕ ನೆಲೆಯಾಗಿದೆ. ಇಲ್ಲಿ ಒಟ್ಟು ೧೪೩ ಚಿತ್ರಿತ ಕಲ್ಲಾಸರೆಗಳಿದ್ದು ೪೦೦೦ಕ್ಕೂ ಅಧಿಕ ಆದಿಮಚಿತ್ರಗಳನ್ನು ಪುರಾತತ್ವ ಸಂಶೋಧಕರು ೧೯೫೭ರಿಂದ ನಿರಂತರವಾಗಿ ಬೆಳಕಿಗೆ ತಂದಿದ್ದಾರೆ (Wakankar 1975; Mathpal 1984).

ಹಿರೇಬೆಣಕಲ್ ಪ್ರದೇಶವು ಸ್ಥಳೀಯವಾಗಿ ಏಳುಗುಡ್ಡಗಳ ಸಾಲು ಎಂದು ಕರೆಯಲ್ಪಡುವ ಗ್ರಾನೈಟ್ ಗುಡ್ಡಶ್ರೇಣಿ ಪ್ರದೇಶವಾಗಿದ್ದು (ಚಿತ್ರ ೨), ತುಂಗಭದ್ರಾ ನದಿ ಎಡತೀರದಲ್ಲಿದೆ. ಈ ನದಿಪಾತ್ರದುದ್ದಕ್ಕೂ ಆದಿಮಾನವನ ಛಾಯೆಯನ್ನು ೧೯ನೇ ಶತಮಾನದ ಆದಿಭಾಗದಿಂದಲೂ ನಡೆಸಿದ ಸಂಶೋಧನೆ ಹಾಗೂ ಅಧ್ಯಯನಗಳಿಂದ ದೃಢಪಟ್ಟಿದೆ. ಈ ಗುಡ್ಡ ಸಾಲಿನಲ್ಲಿ ಇದುವರೆಗೂ ನಡೆದ ಸಂಶೋಧನೆಗಳಿಂದ ಒಟ್ಟಾರೆಯಾಗಿ ೨೮೩ ಚಿತ್ರಿತ ಕಲ್ಲಾಸರೆಗಳಿದ್ದು (ಚಿತ್ರ ೩), ೪೦೦೦ಕ್ಕೂ ಅಧಿಕ ಆದಿಮಚಿತ್ರಗಳು ಮತ್ತು ೧೨೫೦ ಕಲ್ಗುಳಿಗಳ (ಚಿತ್ರ ೪) ಜೊತೆಗೆ ನವಶಿಲಾಯುಗ ಮತ್ತು ಬೃಹತ್‌ಶಿಲಾಯುಗದ ಬಹುತೇಕ ನೆಲೆಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಪ್ರೊ. ಸುಂದರ ಅವರ ಮಾತು ಅಕ್ಷರಶಃ ನಿಜವೆನಿಸಿತು. ಈ ಪ್ರದೇಶವು ಬಹುಸಂಸ್ಕೃತಿಗಳ ಅಂದರೆ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಕಾಲಘಟ್ಟದಿಂದ ವಿಜಯನಗರ ಕಾಲದವರೆಗಿನ ಸಾಂಸ್ಕೃತಿಕ ಕುರುಹುಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆಂಬುದು ೧೮೩೫ರಿಂದ ನಡೆದ ಪುರಾತತ್ವ ಸಂಶೋಧನೆಗಳಿಂದ ದೃಢಪಟ್ಟಿರುವುದರಿಂದ ವಿಶ್ವ ಪರಂಪರೆ ಪಟ್ಟಿಗೆ ಸೇರುವ ಎಲ್ಲಾ ಅರ್ಹತೆಗಳನ್ನು ಹೊಂದಿದೆ. ಏಳುಗುಡ್ಡ ಸಾಲಿನ ಕೆಲವೊಂದು ಆದಿಮಚಿತ್ರಗಳು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿವೆ. ಅದರಲ್ಲಿ



ಚಿತ್ರ ೨. ಹಿರೇಬೆಣಕಲ್ ನೆಲೆ ಪರಿಸರದ ವಿಹಂಗಮ ನೋಟ




ಚಿತ್ರ ೩. ಏಳು ಗುಡ್ಡ ಸಾಲಿನಲ್ಲಿ ಕಂಡುಬಂದಿರುವ ಚಿತ್ರಿತ ಕಲ್ಲಾಸರೆಗಳು

ಹಿರೇಬೆಣಕಲ್‌ನ ಪ್ರಸವದ ಚಿತ್ರ ಪುರಾತನ ಹೆರಿಗೆ ಪದ್ಧತಿಯನ್ನು ಕಟ್ಟಿಕೊಡುತ್ತದೆ (ಚಿತ್ರ ೫). ಒನಕೆಕಂಡಿಯ ಒಂದು ಚಿತ್ರ ಬೃಹತ್‌ಶಿಲಾಯುಗ ಸಂಸ್ಕೃತಿಯ ಜನರ ಒಂದು ವಿಧದ ಶವಸಂಸ್ಕಾರ ಪದ್ಧತಿಯನ್ನು ಬಿಚ್ಚಿಡುತ್ತದೆ. ಹಾಗೆಯೇ ಕೃಷ್ಣಮೃಗದ ಚಿತ್ರಗಳು ಅಂದಿನ ಪರಿಸರದ ಚಿತ್ರಣವನ್ನು ಒದಗಿಸುತ್ತವೆ. ಹಿರೇಬೆಣಕಲ್ ನೆಲೆಯೊಂದರಲ್ಲಿಯೇ ಒಟ್ಟು ೩೭ ಸ್ಥಳಗಳಲ್ಲಿ ೯೩೦ ವರ್ಣ (ಪಟ್ಟಿ ೧) ಹಾಗೂ ೪೨೬ ಕಲ್ಗುಳಿಗಳು ಕಂಡುಬಂದಿವೆ. ಅದರಲ್ಲಿ ೧೭ ಕಲ್ಲಾಸರೆಗಳು ಪೂರ್ವ ಶೋಧಿತ, ಉಳಿದವು ಪ್ರಸ್ತುತ ಲೇಖಕರಿಂದ ಶೋಧಿಸಲ್ಪಟ್ಟವು (ಮೋಹನ ೨೦೧೭, Mohana 2021). ಈ ಕಲ್ಲಾಸರೆಗಳಿರುವ ಸ್ಥಳಗಳು ದುರ್ಗದ ದಡಿ, ಗಿಡ್ಡ ಕುಟ್ರಿ, ಸಾಪಾದ ಕುಟ್ರಿ, ಗಾಳಿ ದಿಬ್ಬದ ಡಬ್ಬಸ್, ಮೌರ್ಯರ ಮನೆ ಬೆಂಚ್ಚಿ, ದರ್ಗದ ಕಿಲೇವು, ಹಿರೇ ತಳವಾರ್ ಮೂಲೆ, ನಗರಿ ಗುಂಡು, ನಾದ ಗುಂಡು, ಬೋಳಮ್ಮನ ಕೆರೆ, ತಣ್ಣೀರು ಘಡಿ ಕುಟ್ರಿ, ಮೌರ್ಯರ ಬೆಂಚ್ಚಿ ಬಯಲು, ಕರೆಕಲ್ಲು ತಗ್ಗಿನ ಬಂಡೆ, ಮ್ಯಾದರ ಬಂಡೆ ಹೀಗೆ ಹಲವಾರು ಹೆಸರುಗಳಿಂದ ಸ್ಥಳೀಯವಾಗಿ ನಾಮಾಂಕಿತವಾಗಿವೆ. ಇದರಲ್ಲಿ ಪ್ರಮುಖವಾಗಿ ದುರ್ಗದ ದಡಿಯೊಂದರಲ್ಲಿಯೇ ಹತ್ತಕ್ಕೂ ಹೆಚ್ಚು ಕಲ್ಲಾಸರೆಗಳಿದ್ದು, ನೂರಾರು ವರ್ಣಚಿತ್ರಗಳನ್ನು ಕಾಣಬಹುದು. ಈ ನೆಲೆಯಲ್ಲಿ ಪ್ರಮುಖವಾಗಿ ಪ್ರಾಣಿ, ಮಾನವಾಕೃತಿ ಹಾಗೂ ಜ್ಯಾಮಿತಿ



ಚಿತ್ರ ೪. ಹಿರೇಬೆಣಕಲ್: ಕಲ್ಗುಳಿಗಳು



ಚಿತ್ರ ೫. ಹಿರೇಬೆಣಕಲ್‌ದ ಪ್ರಸವನ ಚಿತ್ರ


ಚಿತ್ರಗಳ ಜೊತೆಗೆ ಕಲ್ಗುಳಿಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ. ಮಲ್ಲಾಪುರದ ನೆಲೆಯ ಹಿರೇ ಬೆಣಕಲ್‌ನ ಮುಂದುವರೆದ ಗುಡ್ಡಗಾಡು ಪ್ರದೇಶವಾಗಿದೆ. ದೊಡ್ಡ ಅಳತೆಯ ಬೆತ್ತಲೆ ಮನುಷ್ಯ, ಪ್ರಾಣಿ ಹಾಗೂ ಜ್ಯಾಮಿತಿ ಚಿತ್ರಗಳು ಬಹಳಷ್ಟು ಸಂಖ್ಯೆಯಲ್ಲಿ ಕಂಡುಬಂದಿವೆ. ಇಲ್ಲಿನ ಮನುಷ್ಯರ ಚಿತ್ರಗಳು ಸಾಲುಸಾಲಾಗಿ ಕಂಡುಬರುವುದರ ಜೊತೆಗೆ ಭಾರತದ ಇತರೆ ನೆಲೆಗಳಿಗಿಂತ ಭಿನ್ನವಾಗಿವೆ. ಆದ್ದರಿಂದ 'ಏಳು ಗುಡ್ಡ ಸಾಲಿನ ಮಾದರಿಯ ಮನುಷ್ಯರ ಚಿತ್ರ'ಗಳು ಎಂದು ಲೇಖಕರು ವಿಶ್ಲೇಷಿಸಿದ್ದಾರೆ (ಚಿತ್ರ ೬–೭). ಹೀಗೆ ಹೇಳುತ್ತಾ ಹೋದರೆ ಮುಗಿಯಲಾರದಷ್ಟು ನಮ್ಮ ಸಾಂಸ್ಕೃತಿಕ ಛಾಯೆ ಮರೆಯಾಗುವುದಿಲ್ಲ.

ಪಟ್ಟಿ ೧. ಹಿರೇಬೆಣಕಲ್ ನೆಲೆಯಲ್ಲಿನ ಆದಿಮಚಿತ್ರಗಳು

ಆದಿಮಚಿತ್ರಗಳು	ಒಟ್ಟು ಸಂಖ್ಯೆ
ಪ್ರಾಣಿ	೪೯೫
ಪಕ್ಷಿ	೧೬
ಮನುಷ್ಯರು	೩೨೩
ಉಪಕರಣಗಳು	೧೪
ವಿನ್ಯಾಸ	೭೩
ಚುಕ್ಕೆ	೦೮
ಒಟ್ಟು	೯೩೦



ಚಿತ್ರ ೬. ಹಿರೇಬೆಣಕಲ್: ಏಳುಗುಡ್ಡ ಸಾಲು ಮಾದರಿ ಮನುಷ್ಯರ ಚಿತ್ರಗಳು



ಚಿತ್ರ ೭. ಹಿರೇಬೆಣಕಲ್: ಏಳುಗುಡ್ಡ ಸಾಲು ಮಾದರಿ ಮನುಷ್ಯರ ಚಿತ್ರಗಳು

* ಸಂಶೋಧನೆಯ ಸ್ಫೂರ್ತಿ ನನ್ನ ಪೂಜ್ಯ ಗುರುಗಳಾದ ಪ್ರೊ. ಅ. ಸುಂದರ ಹಾಗೂ ಸುಷಮ ಜಿ. ದೇವ್ ಅವರಿಗೆ ಹೃದಯಪೂರ್ವಕ ನಮಸ್ಕಾರಗಳು. ಸಂಶೋಧನೆಯ ವೇಳೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಡಾ. ಮೋಹನ್ ಪಾರ್ಥಿ, ಡಾ. ಯೋಗೇಶ್ ಮಲ್ಲಿನಾಥ್‌ಪುರ, ಡಾ. ಶರಣಬಸಪ್ಪ ಕೋಲ್ಕಾರ, ಡಾ. ನೀತು ಅಗರವಾಲ್, ಹಲೇಶ್ ಕಂದರಿ, ಹೇಮಂತ್ ದಳವಿ, ಪ್ರದೀಪ್ ಕುಮಾರ್ ಎಸ್, ರೇಣುಕಸ್ವಾಮಿ ಒಡೆಯರ್ ಮತ್ತು ಅನ್ವೇಷಣೆ ವೇಳೆ ನನಗೆ ಸ್ಥಳೀಯವಾಗಿ ಸಹಕಾರ ನೀಡಿದ ರಾಮುಲು (ಆಡಿನ ರಾಮು, ರಾಂಪುರ, ಇವರು ಅನಕ್ಷರಸ್ಥರಾದರೂ ಆಯುರ್ವೇದದ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿರುವ ಜೊತೆಗೆ ಗರಡಿಮನೆಯಲ್ಲಿ ಪಳಗಿ, ಇತಿಹಾಸ ಹಾಗೂ ಕಲಾ ಅಭಿರುಚಿಯನ್ನು ಮೈಗೂಡಿಸಿಕೊಂಡಿದ್ದಾರೆ), ದೇವಪ್ಪ ಯಾದವ್, ನಾಗಪ್ಪ, ಡಿಟಿಪಿ ಮಾಡಿಕೊಟ್ಟ ಡಾ. ಕೆ.ಎನ್. ಸುಪ್ರೀತ, ನನ್ನ ಊಟೋಪಚಾರವನ್ನು ನೋಡಿಕೊಂಡ ಶ್ರೀಮತಿ ಅನ್ನಮ್ಮ ಮಲ್ಲಾಪುರರವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಆಕರಗ್ರಂಥಗಳು

೧. ಕೋಲ್ಕಾರ, ಶರಣಬಸಪ್ಪ, ೨೦೧೦, ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

೨. ಮೋಹನ ಆರ್. ೨೦೧೭, ತುಂಗಭದ್ರಾ ನದಿತೀರದಲ್ಲಿ ಇತ್ತೀಚೆಗೆ ಶೋಧಿಸಿದ ಪ್ರಾಗಿತಿಹಾಸಿಕ ಬಂಡೆಗಲ್ಲು ಚಿತ್ರಗಳು, ಇತಿಹಾಸ ದರ್ಪಣ ೩೫ (ಅಕ್ಟೋಬರ್–ಡಿಸೆಂಬರ್): ೩೫: ೧೧–೨೮.

೩. ಸುಂದರ ಅ., ೧೯೭೪, ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು, ಸವಿಚಂಚಯ (ಶ್ರೀ ಸದಾಶಿವ ಒಡೆಯರ ೫೦ ನೇ ಹುಟ್ಟುಹಬ್ಬ ಉತ್ಸವ ಸಮಿತಿ, ಚೌಡಯ್ಯದಾನಪುರ), ಮನೋಹರ ಪ್ರಿಂಟಿಂಗ್ ಪ್ರೆಸ್, ದಾನಾಪುರ.

೪. ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೫. Bauer A.M. and Trivedi, M., 2013, Contextualizing Megalithic Places: Survey and Surface Documentation in the Environs of Hire Benakal (Koppal District, Karnataka), Man and Environment XXXVIII (2), 46-61.

೬ ASI. 2001-02 & 2002-03. Excavation at Hire Benakal. Indian Archaeology: A Review.

೭. Fawcett, F. 1892, Prehistoric Rock Paintings near Bellary, South India, Asiatic Quarterly Review (New Series) III: 147-157.

೮. Foote, R.B. 1916, The Foote Collection of Indian Prehistoruic and Protohistoric Antiqueties, Notes on their Ages and Distributions. Madras: Govt. of Madras Presidency.

೯. Gordon D.H. 1951, The Rock Engravings of Kupgallu hill, Bellary, Madras, Man LI(204-205): 117-119.

೧೦. Gordon D.H. and F.R. Allchin 1955. Rock Paintings and Engravings in Raichur, Hyderabad, Man LV(114): 97-99.

೧೧. Mohana R., 2015, Reading Rock Art: Interpreting Temporal and Geographic Variability in the Lower Malaprabha Basin, Karnataka. Ph.D. Dissertation. Pune: Deccan College, Post Graduate and Research Institute.

೧೨. Mohana R., 2016, Rock Art Exploration in the Malaprabha Basin: A Holistic Approach. Submitted to Nehru Trust for the Indian Collection at the Victoria and Albert Museum (NTICVA), United Kingdom.

೧೩. Mohana R. 2021, Archaeology of the Middle Tungabhadra Valley of Karnataka with Special Reference to Rock Art, Post Doctoral Report submitted to the Deccan College, PGRI, Pune.

೧೪. Munn L., 1934, Prehistoric and Protohistoric Finds, The Journal Hyderabad Geological Society 1 (2): 121-135.

೧೫. Sundara A., 1964, Painted Rock Shelter and Chalcolithic Site Chickrampur, Disrtict Raichur. Indian Archaeology: A Review 1961-62: 102.

೧೬. Sundara A., 1975, The Early Chamber Tombs of South India: A Study of the Iron Age Megalithic Monuments of North Karnataka.New Delhi: University Publishers.

೧೭. Sundara A., 1984, Some Selected Rock Paintings from North Karnataka, in Rock Art of India (K.K. Chakravarty Ed.), pp. 137-48. New Delhi.

೧೮. Sundara A., 1985, Rock Bruisings in North Karnataka with particular reference to Billamarayanagudda, Studies in Karnataka History and Cultures (Proceeding of Karnataka History Congress) 1: 160-167.

೧೯. Sundara A.,1987, Some Noteworthy Rock Paintings in Chik Rampur (Particularly regarding the painted Megalithic stone circle burial), Journal of Karnataka University (Social Sciences): XXIII: 184-205.

೨೦. Sundara A., 2006, Karnataka Rock Art: Some Distinctive Aspects,Purakala 16: 35-49.

◆◆

೪

ಅರುಣ್ ಎಸ್.ಕೆ.

ಕಲಬುರ್ಗಿ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅವಲೋಕನ

ಕಲಬುರ್ಗಿ ಜಿಲ್ಲೆಯು ಏಳು ತಾಲೂಕುಗಳನ್ನು ಹೊಂದಿರುವ ಜಿಲ್ಲೆ. ಇದರ ಭೌಗೋಳಿಕ ವೈಶಿಷ್ಟ್ಯತೆಯು ಇತಿಹಾಸದ ಕಾಲಘಟ್ಟದಲ್ಲಿ ಮಹತ್ವದ ಪಾತ್ರವಹಿಸಿಕೊಂಡು ಬಂದಿದೆ. ಅಂತರ ರಾಜ್ಯಗಳ ಗಡಿಗಳಾದ ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಿಗೆ ಹೊಂದಿಕೊಂಡಿದೆ. ಸುಮಾರು ಹನ್ನೊಂದು ಸಾವಿರ ಚ. ಕಿ.ಮಿ. ವಿಸ್ತೀರ್ಣತೆಯಿಂದ ಕೂಡಿದ ಈ ಜಿಲ್ಲೆಯಲ್ಲಿ ಸುಮಾರು ೯೫೦ಕ್ಕೂ ಹೆಚ್ಚು ಗ್ರಾಮಗಳಿವೆ. ಸೇಡಂ, ಚಿಂಚೋಳಿ, ಚಿತ್ತಾಪುರ, ಕಲಬುರ್ಗಿ, ಆಳಂದ, ಅಫಜಲಪುರ ಮತ್ತು ಜೇವರ್ಗಿ ತಾಲೂಕುಗಳು ಪ್ರಮುಖವಾದವುಗಳು. ಶಾತವಾಹನರು, ರಾಷ್ಟ್ರಕೂಟರು, ಚಾಲುಕ್ಯರು, ಕಾಕತೀಯರು, ಬಹಮನಿಯರು, ಆದಿಲಶಾಹಿಗಳು ನಂತರ ನಿಜಾಮರು ಈ ಪ್ರದೇಶವನ್ನು ಆಳಿದ ರಾಜಮನೆತಗಳಾಗಿವೆ. ಕನ್ನಡದ ಪ್ರಥಮ ಸಾಹಿತ್ಯ ಕೃತಿಯಾದ 'ಕವಿರಾಜ ಮಾರ್ಗ' ಕಲಬುರ್ಗಿ ಜಿಲ್ಲೆಯ ಕೊಡುಗೆ. ಸನ್ನತಿಯಲ್ಲಿ ಅಶೋಕನ ಬೃಹತ್ ಬಂಡೆ ಶಾಸನ; ಪ್ರಾಚೀನ ಶಿಕ್ಷಣ ಕೇಂದ್ರ ನಾಗಾವಿಯ ಘಟಿಕಾಸ್ಥಾನ; ಜೈನ ಕೇಂದ್ರಗಳಾಗಿ ಸೇಡಂ, ಮಳಖೇಡ ಮತ್ತು ಮಾಧ್ವ ಪರಂಪರೆಯ ಆಚಾರ್ಯರಾದ ಟೀಕಾಚಾರ್ಯರು; ವಚನಕಾರ ಜೇವರ್ಗಿಯ ಷಣ್ಮುಖ ಶಿವಯೋಗಗಳು; ಸೂಫಿ ಸಂತರಾದ ಕಲಬುರ್ಗಿಯ ಖ್ವಾಜಾ ಬಂದೇನವಾಜ; ಆಳಂದದ ಲಾಡ್ಲಾ ಸಾಹೇಬ್ ಮುಂತಾದವರು ಈ ಜಿಲ್ಲೆಯ ಐತಿಹಾಸಿಕ ಮಹತ್ವಕ್ಕೆ ಸಾಕ್ಷಿ. ಆದರೆ ಜಿಲ್ಲೆಯ ಪ್ರಾಚೀನ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಚರಿತ್ರೆಯನ್ನು ರಚಿಸಲು ಮಾಹಿತಿಗಳ ಕೊರತೆ ಕಂಡುಬರುತ್ತದೆ. ನೆರೆಯ ಯಾದಗಿರಿ ಜಿಲ್ಲೆಯ ಸಗರನಾಡು ಅಥವಾ ಶೋರಾಪುರ ದೋ-ಆಬ್ ಪ್ರದೇಶದಲ್ಲಿ ಕೈಕೊಂಡ ನಿರಂತರ ಸಂಶೋಧನೆ ಮತ್ತು ಅಧ್ಯಯನಗಳು ಕಲಬುರ್ಗಿ ಜಿಲ್ಲೆಯಲ್ಲಿ ನಡೆದಿಲ್ಲ ಎಂದು ಹೇಳಬಹುದು. ಭೌಗೋಳಿಕವಾಗಿ ಈ ಜಿಲ್ಲೆ ಅತಿ ಮಹತ್ವದ ಪಾತ್ರ ವಹಿಸಿದ್ದು, ಪ್ರಾಚೀನ ಕಾಲದ ಆದಿಮಾನವರು ತಮ್ಮ ಬದುಕನ್ನು ನಿರಂತರವಾಗಿ ಕಟ್ಟಿಕೊಂಡು ಸಮೃದ್ಧಿಯಾಗಿ ಬೆಳೆದು ಬಂದಿದ್ದನ್ನು ದೊರೆತ ಅವಶೇಷಗಳ ಆಧಾರಗಳಿಂದ ತಿಳಿಯಬಹುದಾಗಿದೆ. ಪ್ರಸ್ತುತ ಲೇಖನ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಕುರಿತಾದ ಅಧ್ಯಯನಗಳ ಅವಲೋಕನ ಮತ್ತು ದೊರೆತ ಅವಶೇಷಗಳ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಚರಿತ್ರೆಯ ಸ್ಥೂಲ ಚಿತ್ರಣವನ್ನು ರಚಿಸುವ ಪ್ರಯತ್ನವಾಗಿದೆ.

ಉಪ ನಿರ್ದೇಶಕರು
ಭಾರತೀಯ ಇತಿಹಾಸ ಅನುಸಂಧಾನ
ಪರಿಷತ್ತು, # ೧, ಮೈಸೂರು ಬ್ಯಾಂಕ್ ವೃತ್ತ
ಅರಮನೆ ರಸ್ತೆ, ಬೆಂಗಳೂರು-೫೬೦೦೦೯
ಮೊ: ೯೪೪೮೩ ೦೮೫೨೧

ಭೌಗೋಳಿಕತೆ

ಪ್ರಾಚೀನ ಆದಿಮಾನವರ ಬದುಕು ಸ್ಥಳೀಯ ನಿಸರ್ಗದ ಸಸ್ಯ, ಜಲ ಮತ್ತು ಭೂಮಿ ಸಂಪತ್ತುಗಳನ್ನು ಆಧರಿಸಿ ನಡೆಯುತ್ತಿತ್ತು. ದಿನನಿತ್ಯದ ಒಡನಾಟ ಸುತ್ತಲಿನ ನೈಸರ್ಗಿಕ ಭೌಗೋಳಿಕತೆಯೊಂದಿಗೆ ಇತ್ತು. ಅದಕ್ಕಾಗಿ ಸ್ಥಳೀಯ ಭೌಗೋಳಿಕತೆಯ ಮುಖ್ಯ ಲಕ್ಷಣಗಳು ಮತ್ತು ಅವುಗಳನ್ನು ಪ್ರಾಗೈತಿಹಾಸಿಕ ಸಂಸ್ಕೃತಿಯ ಜನರು ಬಳಸಿಕೊಂಡ ಬಗೆಯನ್ನು ಅರಿಯುವುದು ಅಗತ್ಯ. ಕಲಬುರ್ಗಿ ಜಿಲ್ಲೆಯು ಸಮುದ್ರಮಟ್ಟದಿಂದ ಸು. ೭೫೦ ಮೀ. ರಿಂದ ೬೦೦ ಮೀ. ಎತ್ತರದಲ್ಲಿ ಹರಡಿಕೊಂಡಿದೆ. ಜಿಲ್ಲೆಯು ದಕ್ಷಿಣಾಭಿಮುಖಿಯಾಗಿ ಇಳುಕಲಾಗಿದೆ. ಚಿಂಚೋಳಿಯ ತಾಲೂಕಿನ ಕುಸುರಾಮಪಲ್ಲಿ, ವೆಂಕಟಾಪುರ, ಒಂಟಿಚಿಂತಾ–ತಾಂಡ ಮತ್ತು ಭಲರಾಮಪಲ್ಲಿ ಪ್ರದೇಶಗಳನ್ನೊಳಗೊಂಡಂತೆ ಇರುವ ದಟ್ಟ ಅರಣ್ಯ ಪ್ರದೇಶ ಹೊರತುಪಡಿಸಿದರೆ ಜಿಲ್ಲೆಯ ಬಹುತೇಕ ಪ್ರದೇಶವು ತಗ್ಗು–ದಿಣ್ಣೆಗಳಾಕಾರದ ಭೂ ಲಕ್ಷಣಗಳಿಂದ ಕೂಡಿದೆ. ಭೀಮೇ, ಕಾಗೀಣಾ, ಉಮರ್ಜಾ, ಬೋರಿ, ಬೆಣ್ಣೆತೊರೆ, ಮುಲ್ಲಾಮಾರಿ ಮತ್ತು ಕಮಲಾವತಿ ಈ ಜಿಲ್ಲೆಯ ಮುಖ್ಯ ನದಿಗಳು. ಇವುಗಳಲ್ಲಿ ಭೀಮೆ ನದಿಯು ಜಿಲ್ಲೆಯ ದೊಡ್ಡ ನದಿ. ಮಹಾರಾಷ್ಟ್ರದ ಭೀಮಾಶಂಕರ ಎಂಬ ಸ್ಥಳದಲ್ಲಿ ಭೀಮೇ ನದಿ ಜನಿಸಿ ಫಂಡರಾಪುರ ಮೂಲಕ ಹರಿದುಕೊಂಡು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಊರಿನ ಮೂಲಕ ಕರ್ನಾಟಕ ರಾಜ್ಯವನ್ನು ಪ್ರವೇಶಿಸುತ್ತದೆ. ಇದು ಅಫಜಲಪುರ ತಾಲೂಕಿನ ಶೇಷಗಿರಿವಾಡ ಗ್ರಾಮದ ಮೂಲಕ ಕಲಬುರ್ಗಿ ಜಿಲ್ಲೆಯ ಪ್ರವೇಶ ಪಡೆಯುತ್ತದೆ. ಅಫಜಲಪುರ, ಗಾಣಗಾಪುರ, ಘತ್ತರಗಿ, ಮೂಲಕ ಜೇವರ್ಗಿ ತಾಲೂಕನ್ನು ಸೇರುತ್ತದೆ. ನೇಲೋಗಿ, ಅರಳಗುಂಡಗಿ, ಕಟ್ಟಿಸಂಗಾವಿ ಇತ್ಯಾದಿ ಸ್ಥಳಗಳ ಮೂಲಕ ಚಿತ್ತಾಪುರ ತಾಲೂಕನ್ನು ಪ್ರವೇಶಿಸುತ್ತದೆ. ನಂತರ ನೈರುತ್ಯ ಮುಖಿಯಾಗಿ ಹರಿದು ಚಿತ್ತಾಪುರ ತಾಲೂಕಿನ ಹೊನಗುಂಟಾ, ಸನ್ನತಿ, ಮಳಖೇಡ, ನಾಗಾವಿ ಪ್ರಮುಖ ಸ್ಥಳಗಳ ಮೂಲಕ ಯಾದಗಿರಿ ಜಿಲ್ಲೆಯನ್ನು ಸೇರುತ್ತದೆ. ಭೀಮೇ ನದಿಯು ಕಲಬುರ್ಗಿ ಜಿಲ್ಲೆಯಲ್ಲಿ ಸು. ೨೦೦ ಕಿ.ಮೀ. ಕ್ರಮಿಸುತ್ತದೆ. ಈ ನದಿಗುಂಟ ಫಲವತ್ತಾದ ಭೂಮಿಯನ್ನು ಹೊಂದಿದೆ. ಅಲ್ಲದೆ, ಅನೇಕ ಧಾರ್ಮಿಕ ಸ್ಥಳಗಳಿವೆ, ಗಾಣಗಾಪುರ, ಫಂಡರಾಪುರ, ಘತ್ತರಿಕಿ, ಅರಳಗುಂಡಗಿ, ಕಟ್ಟಿಸಂಗಾವಿ, ಹೊನಗುಂಟಾ, ಸನ್ನತಿ, ನಾಗಾವಿ ಮುಂತಾದವುಗಳನ್ನು ಉಲ್ಲೇಖಿಸಬಹುದು. ಉಮರ್ಜಾ ನದಿಯು ಈ ಜಿಲ್ಲೆಯ ಮತ್ತೊಂದು ಮಹತ್ವದ ನದಿಯಾಗಿದೆ. ಇದು ಮೂಲತಃ ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ ಜಿಲ್ಲೆಯಲ್ಲಿ ಜನಿಸಿ ಆಳಂದ ತಾಲೂಕಿನ ನೀರಗುಡಿ ಗ್ರಾಮದ ಬಳಿ ಕರ್ನಾಟಕವನ್ನು ಪ್ರವೇಶಿಸುತ್ತದೆ. ಸುಮಾರು ೧೦೦ ಕಿ.ಮೀ. ದೂರ ಕ್ರಮಿಸಿ ಗಾಣಗಾಪುರದ ಬಳಿ ಭೀಮೇ ನದಿಯನ್ನು ಸೇರುತ್ತದೆ. ಆದ್ದರಿಂದ ಇದು ಭೀಮೇ ನದಿಯ ಉಪನದಿ ಎಂದು ಕರೆಯುತ್ತಾರೆ. ಸು. ೧೫೨೪ ಚ. ಕಿ.ಮಿ. ವಿಸ್ತೀಣದ ಜಲಾನಯನ ಕಣಿವೆ ಪ್ರದೇಶ ಇದು ಹೊಂದಿದೆ. ಪ್ರಾಗೈತಿಹಾಸಿಕ ಸೂಕ್ಷ್ಮಶಿಲಾಯುಗದ ಅನೇಕ ಪುರಾತನ ನೆಲೆಗಳು ಈ ನದಿಯ ಪ್ರದೇಶದಲ್ಲಿ ಡಾ. ಎಸ್. ನಾಗರಾಜು ಅವರು ಶೋಧಿಸಿದ್ದಾರೆ. ಅಫಜಲಪುರದ ಬಳಿ ಹರಿಯುವ ಬೋರಿ ನದಿಯು ಜಿಲ್ಲೆಯಲ್ಲಿ ಕೇವಲ ೨೫ ಕಿ.ಮೀ. ಕ್ರಮಿಸಿ ಭೀಮೇ ನದಿಯನ್ನು ಸೇರುತ್ತದೆ. ಅಫಜಲಪುರ ಪಟ್ಟಣವು ಈ ನದಿಯ ದಂಡೆಯ ಮೇಲಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಹರಿಯುವ ಬೋರಿ ನದಿಯ ಕಣಿವೆಯಲ್ಲಿ ಬಹು ಪುರಾತನ ಕಾಲದಲ್ಲಿ ಸಂಭವಿಸಿದ ಜ್ವಾಲಾಮುಖಿಯ ಬೂದಿ ಬಗ್ಗೆ ವಿಶೇಷ ಅಧ್ಯಯನಗಳು ನಡೆದಿವೆ. ದೊರೆತ ಬೂದಿಯ ಸ್ತರಗಳನ್ನು ಆಧರಿಸಿ ಪ್ರಾಗೈತಿಹಾಸಿಕ ಮಾನವನು ರಚಿಸಿದ ಕಲ್ಲಿನ ಆಯುಧಗಳ ಕಾಲವನ್ನು ಗುರುತಿಸಲು ವಿದ್ವಾಂಸರು ಪ್ರಯತ್ನಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಕಾಗೀಣಾ ನದಿಯು ಮೂಲತಃ ತೆಲಂಗಾಣ ರಾಜ್ಯದ ಕೋಹಿರ್ ಎಂಬಲ್ಲಿ ಹುಟ್ಟಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಜೆಟ್ಟೂರು ಗ್ರಾಮದ ಬಳಿ ಕಲಬುರ್ಗಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕಾಗೀಣಾ ನದಿಯು ಭೀಮೇ ನದಿಯ ಉಪನದಿಯಾಗಿದ್ದು, ಇದು ಪಶ್ಚಿಮಮುಖಿಯಾಗಿ ಹರಿದು ಮಳಖೇಡದ ಹತ್ತಿರ ಬೆಣ್ಣೆತೊರೆ ನದಿಯನ್ನು ಮತ್ತು ಕಮಲಾವತಿ ನದಿಯನ್ನು ಸೇಡಂ ಹತ್ತಿರ ತನ್ನೊಳಗೆ ಸೇರಿಸಿಕೊಂಡು ದಕ್ಷಿಣಾಭಿಮುಖಿಯಾಗಿ ತಿರುವು ಪಡೆದು ಹೊನಗುಂಟಾ ಗ್ರಾಮದ ಬಳಿ ಭೀಮೇ ನದಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ಸು. ೬೪ ಮೀ. ಹರಿವು ಇರುವ ಕಾಗೀಣಾ ನದಿಯು ಭೀಮೇ ನದಿಯಂತೆಯೆ ಅತ್ಯಂತ ಮಹತ್ವದ ಪಾತ್ರವಹಿಸಿದೆ. ತನ್ನ ಹರಿವಿನ ಉದ್ದಕ್ಕೂ ಫಲವತ್ತಾದ ಕಪ್ಪು ವರ್ಣದ ಎರೆ ಮಣ್ಣನ್ನು ಹೊಂದಿದೆ. ಪ್ರಾಚೀನದಲ್ಲಿ ಆಳಿದ ರಾಷ್ಟ್ರಕೂಟರ ರಾಜಧಾನಿ ನಗರ ಮಳಖೇಡ ಈ ನದಿಯ ದಂಡೆಯಲ್ಲಿರುವುದು. ಹಾಗೆಯೇ ಟೀಕಾಚಾರ್ಯರ ಪವಿತ್ರ ಕ್ಷೇತ್ರವು ಬೆಣ್ಣೆತೊರೆ ಮತ್ತು ಕಾಗೀಣಾ ನದಿಗಳ ಸಂಗಮದಲ್ಲಿದೆ. ಅದರಂತೆಯೆ ಉಪನದಿಯಾದ ಕಮಲಾವತಿ ನದಿಯ ದಂಡೆಯ ಮೇಲೆ ಪ್ರಾಚೀನ ಜೈನ ಕೇಂದ್ರವಾಗಿದ್ದ ಸೇಡಂ ಕೂಡ ಇರುವುದನ್ನು ಗಮನಿಸಬಹುದು. ಬೆಣ್ಣೆತೊರೆ ನದಿಯು ಜಿಲ್ಲೆಯಲ್ಲಿ ಹರಿಯುವ ಎರಡನೆಯ ಉದ್ದನೆಯ ನದಿಯಾಗಿದೆ. ಇದು ಇಲ್ಲಿಯ ಆಳಂದ, ಕಲಬುರ್ಗಿ ಮತ್ತು ಚಿತ್ತಾಪೂರ ತಾಲೂಕುಗಳಲ್ಲಿ ಸು.೧೦೦ ಕಿ.ಮೀ. ಕ್ರಮಿಸುತ್ತಾ ಕಾಗೀಣಾ ನದಿಯನ್ನು ಸೇರುತ್ತದೆ. ಮಹಾರಾಷ್ಟ್ರ ರಾಜ್ಯದ ಮಲೆಗಾಂವ್ ಗ್ರಾಮದ ಬಳಿ


ಹುಟ್ಟಿ ಆಳಂದ ತಾಲೂಕಿನ ಹಿಪ್ಪರಗಾ ಗ್ರಾಮದ ಬಳಿ ಕಲಬುರ್ಗಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದು ಆಳಂದ ಮತ್ತು ಕಲಬುರ್ಗಿ ತಾಲೂಕುಗಳ ಮೂಲಕ ಚಿತ್ತಾಪುರ ತಾಲೂಕಿನ ಮಳಖೇಡದ ಬಳಿ ಕಾಗೀಣಾ ನದಿಯನ್ನು ಸೇರುತ್ತದೆ. ಮುಲ್ಲಾಮಾರಿ ನದಿಯು ಕಾಗೀಣಾ ನದಿಯ ಉಪನದಿಯಾಗಿದ್ದು ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನಲ್ಲಿ ಜನಿಸಿದರೂ ಅದರ ಹರಿವು ಚಿಕ್ಕದಾಗಿದ್ದು ಚಿಂಚೋಳಿ ಊರಿನ ಬಳಿ ಅದರ ಹರಿವಿನ ವಿಸ್ತಾರ ದ್ವಿಗುಣಗೊಳ್ಳುತ್ತದೆ. ಈ ನದಿಯು ಜಿಲ್ಲೆಯಲ್ಲಿ ೯೦ ಕಿ.ಮೀ. ಕ್ರಮಿಸಿ ಜಟ್ಟೂರು ಬಳಿ ಕಾಗೀಣಾ ನದಿಯನ್ನು ಸೇರುತ್ತದೆ. ಈ ನದಿ ಕ್ರಮಿಸುವ ಪ್ರದೇಶವು ಎರೆಭೂಮಿಯಿಂದ ಕೂಡಿದ್ದು ಫಲವತ್ತಾದ ಮಣ್ಣನ್ನು ಹೊಂದಿದೆ.

ಈ ಮೇಲೆ ಉಲ್ಲೇಖಿಸಿದ ನದಿಗಳ ಈ ಜಿಲ್ಲೆಯು ಬಹಳಷ್ಟು ವೈವಿಧ್ಯಮಯ ಶಿಲಾ ಸಂಪತ್ತನ್ನು ಹೊಂದಿದೆ. ಬಸಾಲ್ಟ್, ಮರಳುಗಲ್ಲು, ಸುಣ್ಣದ ಕಲ್ಲು, ಕ್ವಾರ್ಟಜೈಟ್ ಬಳಪದ ಕಲ್ಲು, ಕರಿಕಲ್ಲು, ಇತ್ಯಾದಿಗಳಾಗಿ ಹೆಸರಿಸಬಹುದು. ಪ್ರಾಗೈತಿಹಾಸಿಕ ಆದಿಮಾನವರು ಈ ಶಿಲೆಗಳನ್ನು ಬಳಸಿಕೊಂಡು ವಿವಿಧ ಕಲ್ಲಿನ ಆಯುಧಗಳನ್ನು ತಯಾರಿಸಿ ಬಳಸಿದ ಉದಾಹರಣೆಗಳಿವೆ. ಜಿಲ್ಲೆಯ ಉತ್ತರದ ಆಳಂದ, ಚಿಂಚೋಳಿ, ಕಲಬುರ್ಗಿ ಮತ್ತು ಪಶ್ಚಿಮದ ಅಫಜಲಪುರ ಪ್ರದೇಶಗಳಲ್ಲಿ ಬಸಾಲ್ಟ್ ಶಿಲೆಗಳು ದೊರೆಯುತ್ತವೆ. ಅದರಂತೆ ಜೇವರ್ಗಿ, ಚಿತ್ತಾಪುರ, ಸೇಡಂ ತಾಲೂಕಿನ ಪ್ರದೇಶಗಳಲ್ಲಿ ಸುಣ್ಣದಕಲ್ಲು ಶಿಲೆಗಳು ದೊರಕುತ್ತವೆ. ಭೀಮೇ ನದಿಯ ಕಣಿವೆ ಪ್ರದೇಶವಾದ ಈ ತಾಲೂಕುಗಳನ್ನು ಭೀಮಾ–ಬೆಸಿನ್ ಪ್ರದೇಶವೆಂದು ಗುರುತಿಸುತ್ತಾರೆ. ಭೂಗರ್ಭಶಾಸ್ತ್ರದ ಹಿನ್ನೆಲೆಯಲ್ಲಿ ಕರೆಯಲ್ಪಡುವ ಭೀಮಾ–ಬೆಸಿನ್ ಪ್ರದೇಶದಲ್ಲಿ ಪದರುಗಳಂತೆ ಕಂಡು ಬರುವ ಸುಣ್ಣದಶಿಲೆಗಳಿವೆ. ಈ ಶಿಲೆಗಳನ್ನು ಪ್ರಾಚೀನ ಕಾಲದಿಂದಲೂ ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ. ಹೆಚ್ಚಿನ ಶ್ರಮ ವಹಿಸದೆ ಪದರು ಪದರುಗಳಾಗಿ ದೊಡ್ಡ ಗಾತ್ರದ ಕಲ್ಲುಬಂಡೆಗಳನ್ನು ತೆಗೆಯಬಹುದಾಗಿದೆ. ಅಲ್ಲದೇ, ಈ ಶಿಲೆಯು ಸ್ವಲ್ಪ ಮೆದುವಾಗಿರುವುದರಿಂದ ಸುಲಭವಾಗಿ ಇವುಗಳನ್ನು ಶಿಲ್ಪಗಳ ತಯಾರಿಕೆಗೆ ಬಳಸಬಹುದಾಗಿದೆ. ಆದ್ದರಿಂದ ಪ್ರಾಚೀನ ಕಾಲದ ಶಾತವಾಹನರ ಕಾಲದಿಂದಲೂ ಆಧುನಿಕ ಕಾಲದವರೆಗೂ ಬೌದ್ಧ ಸ್ತೂಪ, ದೇವಾಲಯಗಳು, ಕೋಟೆಗಳು, ಹುಡೆಗಳು, ದರ್ಗಾಗಳು, ಗೋರಿಗಳು, ಅರಮನೆಗಳು ಇತ್ಯಾದಿಗಳ ನಿರ್ಮಾಣಕ್ಕೆ ಬಳಸಲಾಗಿದೆ. ಪ್ರಾಗೈತಿಹಾಸಿಕ ಕಾಲದ ಆದಿಮಾನವನು ಈ ಶಿಲೆಯನ್ನು ಬಳಸಿಕೊಂಡು ಕೈಕೊಡಲಿಗಳನ್ನು ರಚಿಸಿದ ಉದಾಹರಣೆಗಳು ಪಕ್ಕದ ಜಿಲ್ಲೆ ಯಾದಗಿರಿಯ ಹುಣಸಗಿ, ಎಡೆಯಾಪುರ ಇತ್ಯಾದಿ ಸ್ಥಳಗಳಲ್ಲಿ ದೊರೆತಿವೆ.

ಕಲಬುರ್ಗಿ ಜಿಲ್ಲೆಯ ಉತ್ತರ ಭಾಗ ಮುಖ್ಯವಾಗಿ ಆಳಂದ, ಅಫಜಲಪುರ, ಕಲಬುರ್ಗಿ ತಾಲೂಕುಗಳಲ್ಲಿ ಕಪ್ಪು ಶಿಲೆ ಅಥವಾ ಡೆಕ್ಕನ್–ಟ್ರ್ಯಾಪ್ ಶಿಲೆಗಳು ದೊರಕುತ್ತವೆ. ಜ್ವಾಲಾಮುಖಿಯ ಸಿಡಿತಗಳಿಂದ ಉಂಟಾದ ಈ ಶಿಲೆಗಳು ಮಹಾರಾಷ್ಟ್ರ ಒಳಗೊಂಡಂತೆ ಡೆಕ್ಕನ್ ಪ್ರಸ್ಥಭೂಮಿಯಲ್ಲಿ ಗಣನೀಯವಾಗಿ ಕಂಡುಬರುತ್ತವೆ. ಅಫಜಲಪುರ ಮತ್ತು ಚಿಂಚೋಳಿ ತಾಲೂಕಿನಲ್ಲಿ ಸುಮಾರು ೩೮೦೦೧ ಚದರ ಕಿ.ಮೀ. ಪ್ರದೇಶದಲ್ಲಿ ಡೆಕ್ಕನ್–ಟ್ರ್ಯಾಪ್ ಪ್ರದೇಶ ಹರಡಿಕೊಂಡಿದೆ. ಲಾವಾರಸಗಳಿಂದ ರಚಿತಗೊಂಡ ಕಾರಣ ಇವುಗಳ ಪದರುಗಳಲ್ಲಿ ಆದಿಕಾಲದ ಅನೇಕ ಸಸ್ಯ ಮತ್ತು ಪ್ರಾಣಿಗಳ ಪಳೆಯುಳಿಕೆಗಳು ಕೆಲವು ಸ್ಥಳಗಳಲ್ಲಿ ಕಂಡುಬರುತ್ತವೆ (ಪಾಟೀಲ ೧೯೯೭: ೧೩), ಎಂ.ಬಿ. ಪಾಟೀಲ ಮುಖ್ಯ ಸಂಪಾದಕರು ೧೯೯೭ ಕರ್ನಾಟಕ ಗ್ಯಾಸೇಟಿಯರ್ – ಗುಲಬರ್ಗಾ ಜಿಲ್ಲೆ (ಪರಿಷ್ಕೃತ ಆವೃತ್ತಿ), ಕರ್ನಾಟಕ ಸರ್ಕಾರ, ಬೆಂಗಳೂರು) ಡೆಕ್ಕನ್–ಟ್ರ್ಯಾಪ್ ಹರಡಿದ ಪ್ರದೇಶಗಳಲ್ಲಿ ಕಪ್ಪು ಮಣ್ಣು ಸಾಮಾನ್ಯವಾಗಿ ಕಂಡುಬರುತ್ತದೆ. ಇದನ್ನು ಎರೆ–ಭೂಮಿಯೆಂದು ಕರೆಯುತ್ತಾರೆ. ಇದು ಸಾಕಷ್ಟು ಫಲವತ್ತಾಗಿದ್ದು ಅತಿ ಖನಿಜಯುಕ್ತವಾಗಿದೆ. ಚಿಂಚೋಳಿ ತಾಲೂಕಿನ ಪ್ರದೇಶದಲ್ಲಿ ಬೆಟ್ಟ–ಗುಡ್ಡಗಳಿಂದ ಕೂಡಿದ ಅರಣ್ಯ ಪ್ರದೇಶವಿದೆ. ಪ್ರಾಚೀನ ಕಾಲದ ಬೇಟೆ ಕಸುಬು ಹಿನ್ನೆಲೆಯ ಗಿರಿಜನರ ವಾಸ ಸ್ಥಾನವಾಗಿತ್ತೆಂದು ಅಧ್ಯಯನಗಳಿಂದ ತಿಳಿದುಬರುತ್ತದೆ.

ಅಧ್ಯಯನಗಳ ಅವಲೋಕನ

ಕಲಬುರ್ಗಿಜಿಲ್ಲೆಯ ಪ್ರಾಗೈತಿಹಾಸಿಕ ಅಧ್ಯಯನಗಳು ಬ್ರಿಟೀಷ್ ಅಧಿಕಾರಿ ಮೆಡೋಸ್ ಟೇಲರ್ ಅವರಿಂದ ಆರಂಭಗೊಂಡವು. ಕ್ರಿ.ಶ. ೧೮೪೧ ರಿಂದ ೧೮೫೩ ರವರೆಗೆ ಸುರಪುರ ಸಂಸ್ಥಾನದ ಉಸ್ತುವಾರಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವ ಕಾಲಾವಧಿಯಲ್ಲಿ ಜೇವರ್ಗಿ ಸೇರಿದಂತೆ ಸುರಪುರ; ಶಹಾಪೂರ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಸ್ಥಳಗಳ ಶೋಧನೆ ಹಾಗೂ ಅವುಗಳ ಕುರಿತಾದ ವಿಸ್ತೃತ ಅಧ್ಯಯನಗಳನ್ನು ಕೈಕೊಂಡಿದ್ದರು. ಮುಖ್ಯವಾಗಿ ಜೇವರ್ಗಿಯ ಬಳಿಯ ರದ್ದೆವಾಡಗಿ ಗ್ರಾಮಕ್ಕೆ ತೆರಳುವ ರಸ್ತೆಯ ಕ್ರಾಸಿನಲ್ಲಿ 'ಮರಡಿ ಹೊಲ'ಎಂದು ಕರೆಯಲ್ಪಡುವ ಹಾಳು ಹೊಲದಲ್ಲಿ ಕಬ್ಬಿಣಯುಗಕ್ಕೆ ಸೇರುವ ಅನೇಕ ಕಲ್ಗೋರಿಗಳ ಸಮಾಧಿಗಳನ್ನು ವ್ಯವಸ್ಥಿತವಾಗಿ ಉತ್ಖನನಗಳನ್ನು ಕೈಕೊಂಡು ಅವುಗಳ




ಚಿತ್ರ–೧: ಮೆಡೋಸ್ ಟೇಲರ್ ಕೈಕೊಂಡ ಜೇವರ್ಗಿ ಬಳಿಯ ಕಲ್ಗೋರಿಗಳ ಉತ್ಖನನಗಳ ಪಾರ್ಶ್ವ ರೇಖಾಚಿತ್ರ

ವಿವರಗಳನ್ನು ಅಂತರರಾಷ್ಟ್ರೀಯ ನಿಯತಕಾಲಿಕೆಯಲ್ಲಿ ಪ್ರಕಟಿಸಿದರು. ಇದರೊಂದಿಗೆ ಕಲಬುರ್ಗಿ ಜಿಲ್ಲೆಯ ಪ್ರಾಗೈತಿಹಾಸಿಕ ಅಧ್ಯಯನದ ಆರಂಭವೆಂದು ಗುರುತಿಸಬಹುದು (Taylor 1951-52) Archaeology from the Earth ನಲ್ಲಿ ಬರೆದಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. (ಹೆಚ್ಚಿನ ವಿವರಗಳಿಗೆ ನೋಡಿ (Wheeler 1961:23). ಟೇಲರ್ ಅವರ ನಂತರ ಭೂಗರ್ಭ ಶಾಸ್ತ್ರಜ್ಞರಾದ ಲಿಯೋನಾರ್ಡ ಮನ್ ಎಂಬುವರು ಕಲಬುರ್ಗಿ ಜಿಲ್ಲೆ ಒಳಗೊಂಡಂತೆ ನಿಜಾಮರಾಜ್ಯ ಪ್ರದೇಶಗಳಲ್ಲಿ ಕೈಕೊಂಡ ಪ್ರದೇಶದಲ್ಲಿ ಕಂಡುಬಂದ ಪ್ರಾಗೈತಿಹಾಸಿಕ ಸ್ಥಳಗಳ ಬಗ್ಗೆ ಮಾಹಿತಿಯನ್ನು ವರದಿ ಮಾಡಿದರು (Munn 1915).

೧೯೩೩ರ ಅವಧಿಯಲ್ಲಿ ನಿಜಾಮ್ ಸರ್ಕಾರದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಡಾ. ಗುಲಾಮ್ ಯಾಜ್ದಾನಿ ಅವರು ಕಲಬುರ್ಗಿ ಜಿಲ್ಲೆಯ ಮಹಗಾಂವ, ಉಪಲಾನ, ಕಪೆನೂರು, ಇತ್ಯಾದಿ ಸ್ಥಳಗಳಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅವಶೇಷಗಳ ಶೋಧನೆಗಳನ್ನು ತಮ್ಮ ವರದಿಗಳಲ್ಲಿ ಪ್ರಕಟಿಸಿದರು (Yazdani, 1934-35). ನಿಜಾಮ ಸರ್ಕಾರದ ಇನ್ನೊಬ್ಬ ಭೂಗರ್ಭಶಾಸ್ತ್ರಜ್ಞರಾದ ಎಲ್.ಎಸ್. ಕೃಷ್ಣಮೂರ್ತಿ ಅವರು ಕಲಬುರ್ಗಿ ಜಿಲ್ಲೆಗೆ ಒಳಪಡುವ ಪ್ರದೇಶಗಳಲ್ಲಿ ಭೂಗರ್ಭ ಸರ್ವೇಕ್ಷಣೆ ಮಾಡುವ ಸಂದರ್ಭದಲ್ಲಿ ನೂತನ ಶಿಲಾಯುಗ ಮತ್ತು ಕಬ್ಬಿಣಯುಗ ಕಾಲಕ್ಕೆ ಸೇರುವ ಶಿಲಾಯುಧಗಳು; ಶಿಲಾಸಮಾಧಿಗಳನ್ನು ತಮ್ಮ ವರದಿಗಳಲ್ಲಿ ಪ್ರಕಟಿಸಿದ್ದಾರೆ (Krishna Murthy 1945:55-101).

೧೯೬೦–೬೧ರ ಅವಧಿಯಲ್ಲಿ ಡಾ. ಸುಂದರ ಅವರು ಕೇಂದ್ರ ಪುರಾತತ್ವ ಇಲಾಖೆಯ ಸೇವೆಯಲ್ಲಿದ್ದ ಸಂದರ್ಭದಲ್ಲಿ ಡಾ. ಕೆ.ವಿ. ಸೌಂದರ ರಾಜನ್ ಅವರೊಂದಿಗೆ ಕಲಬುರ್ಗಿ ಜಿಲ್ಲೆಯ ಇದೇ ತಾಲೂಕಿನ ಉಡಚಣ ಎಂಬ ಗ್ರಾಮದ ಬಳಿ ನೂತನ ಶಿಲಾ ಸಂಸ್ಕೃತಿಗೆ ಸೇರುವ ಕಲ್ಲಿನ ಕೊಡಲಿಗಳು, ಹರಿತವಾದ ಶಿಲಾಯುಧಗಳನ್ನು ಶೋಧಿಸಿ ಅವುಗಳ ವರದಿಯನ್ನು ಇಲಾಖೆಯ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದರು (IAR 1960-61: 65). ೧೯೬೩–೬೪ರಲ್ಲಿಯೂ ಸುಂದರ ಅವರು ಶಹಾಬಾದ ಊರಿನ ಬಳಿ ಕಬ್ಬಿಣಯುಗ ಸಂಸ್ಕೃತಿಗೆ ಸೇರುವ ಕಲ್ಗೋರಿಗಳನ್ನು ಶೋಧಿಸಿ ಅವುಗಳನ್ನು ವರದಿ ಮಾಡಿದರು (IAR 1963-64: 23).

ಡಾ. ಎಸ್. ನಾಗರಾಜು ಅವರು ಕಲಬುರ್ಗಿ ಜಿಲ್ಲೆಯ ಮುಖ್ಯ ನದಿಯಾದ ಉಮರ್ಜಾ ನದಿಯ ಕಣಿವೆಯ ಪ್ರದೇಶದಲ್ಲಿ ವ್ಯವಸ್ಥಿತವಾದ ಸರ್ವೇಕ್ಷಣೆ ನಡೆಸಿ ಆದಿ–ಮಧ್ಯಶಿಲಾಯುಗ (Middle Paleolithic culture) ಮತ್ತು ಅಂತ್ಯ–ಹಳೆಶಿಲಾಯುಗ (Upper-Paleolithic culture) ಸಂಸ್ಕೃತಿಗಳ ಹಲವಾರು ನೆಲೆಗಳನ್ನು ಶೋಧಿಸಿದರು. ಇವರು ತಮ್ಮ ಲೇಖನದಲ್ಲಿ ಉಮರ್ಜಾ ನದಿ ಪ್ರದೇಶದಲ್ಲಿ ಆದಿಮಾನವ ಸ್ಥಳೀಯವಾಗಿ ದೊರಕುವ ಕಲ್ಲುಗಳನ್ನು ಬಳಸಿಕೊಂಡು ಹರಿತವಾದ ಆಯುಧಗಳನ್ನು ತಯಾರಿಸಿದ ವಿಧಾನ ಹಾಗೂ ಅವುಗಳ ಬಳಕೆಗಳ ಬಗ್ಗೆ ವೈಜ್ಞಾನಿಕವಾಗಿ ವಿವರಿಸಿದ್ದಾರೆ (Nagaraju 1971: 218-222).



ಚಿತ್ರ–೨ : ಅಂತ್ಯ–ಹಳೆಯ ಶಿಲಾಯುಗದ ಶಿಲಾಯುಧಗಳು

೧೯೬೫ ರಿಂದ ೧೯೬೭ರ ಅವಧಿಯಲ್ಲಿ ಡಾ. ಕೆ. ಪದ್ದಯ್ಯ ಅವರು 'ಶೋರಾಪುರ–ಆಬ್' ಎಂದು ಕರೆಯಲ್ಪಡುವ ಸಗರನಾಡಿನ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅಧ್ಯಯನ ಕುರಿತಾಗಿ ಸಂಶೋಧನೆಯನ್ನು ಪೂನಾ ವಿಶ್ವವಿದ್ಯಾಲಯದಲ್ಲಿ ಕೈಕೊಂಡರು ಇವರು ತಮ್ಮ ಸಂಶೋಧನೆಯ ಅಂಗವಾಗಿ ಈಗಿನ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಪ್ರದೇಶಗಳಲ್ಲಿಯೂ ಪ್ರಾಗೈತಿಹಾಸಿಕ ನೆಲೆಗಳ ಶೋಧನೆಗಳನ್ನು ನಡೆಸಿದರು. ಭೀಮಾ ನದಿಯ ದಂಡೆಯ ಮೇಲಿರುವ ನೆಲೋಗಿ, ಅರಳಗುಂಡಗಿ, ಇತ್ಯಾದಿ ಸ್ಥಳಗಳಲ್ಲಿ ಶಿಲಾಯುಗ ಸಂಸ್ಕೃತಿಯ ಕಾಲದ ಆಯುಧಗಳು, ಪಳೆಯುಳಿಕೆಗಳನ್ನು ಶೋಧಿಸಿದ್ದನ್ನು ದಾಖಲಿಸಿದ್ದಾರೆ (Paddayya, 1967).

ಡಾ. ಬಿ.ಕೆ. ಗುರುರಾಜರಾವ್ ಅವರು ಕಲಬುರ್ಗಿ ಜಿಲ್ಲೆಯಲ್ಲಿ ಹರಿಯುವ ಭೀಮಾ ನದಿಯ ಕಣಿವೆ ಪ್ರದೇಶದಲ್ಲಿ ೧೯೭೬–೭೭ರ ಅವಧಿಯಲ್ಲಿ ಅನ್ವೇಷಣೆಗಳನ್ನು ಕೈಕೊಂಡರು. ಇವರು ಸುಮಾರು ೩೬ ಕಿ.ಮೀ. ವಿಸ್ತೀರ್ಣದ ವಾಡಿ ಪಟ್ಟಣದಿಂದ ಕೃಷ್ಣಾ ನದಿ ಸೇರುವ ಪ್ರದೇಶದವರೆಗೂ ಭೀಮಾ ನದಿಯ ಕಣಿವೆಯಲ್ಲಿ

ಅನ್ವೇಷಣೆ ನಡೆಸಿದರು. ಈ ಸುದೀರ್ಘ ಮತ್ತು ವ್ಯವಸ್ಥಿತ ಅನ್ವೇಷಣೆಯಲ್ಲಿ ಚಿತ್ತಾಪುರ ತಾಲೂಕಿನ ಭೀಮನಹಳ್ಳಿ, ಕೌಲೂರು, ಅಂಗೇರಿ, ಅಂಗದಹಳ್ಳಿ, ತಂಗಡಗಿ ಮತ್ತು ಮಾಚನೂರು ಸ್ಥಳಗಳಲ್ಲಿ ಮಧ್ಯ ಆದಿಶಿಲಾಯುಗ (Middle Paleolithic) ಸಂಸ್ಕೃತಿಯ ಮಾನವರು ತಯಾರಿಸಿ ಬಳಸಿದ ಕಲ್ಲಿನ ಆಯುಧಗಳನ್ನು ಶೋಧಿಸಿದರು. ಈ ಅನ್ವೇಷಣೆಯ ಶೋಧನೆಗಳು ಕಲಬುರ್ಗಿ ಜಿಲ್ಲೆಯು ಮುಖ್ಯವಾಗಿ ಭೀಮಾನದಿಯ ತಳಹಂತದ ಕಣಿವೆ ಪ್ರದೇಶದಲ್ಲಿ ಸು. ೩೫ ಸಾವಿರ ವರ್ಷಗಳ ಪುರಾತನಕಾಲದ ಮಧ್ಯ ಆದಿ ಶಿಲಾಯುಗ ಸಂಸ್ಕೃತಿ ಪುರಾವೆಗಳನ್ನು ಒದಗಿಸಿಕೊಟ್ಟವು. ಇದರಿಂದ ಜಿಲ್ಲೆಯ ಪ್ರಾಗೈತಿಹಾಸಿಕ ಪ್ರಾಚೀನತೆಯು ಸು. ೩೫ ಸಾವಿರ ವರ್ಷಗಳ ಪುರಾತನವೆಂದು ಇವು ಸಾಬೀತು ಪಡಿಸಿದವು.

ಡಾ. ಸುಂದರ ಅವರು ಈ ಹಿಂದೆ ಚಿತ್ತಾಪುರ ಮತ್ತು ಶಹಾಬಾದ ತಾಲೂಕುಗಳಲ್ಲಿ ಅನ್ವೇಷಣೆ ಕೈಕೊಂಡು ಕಬ್ಬಿಣಯುಗ ಸಂಸ್ಕೃತಿಯ ಅನೇಕ ಶಿಲಾಸಮಾಧಿಗಳನ್ನು ಶೋಧಿಸಿದ್ದರು. ಆ ಶೋಧನೆಯ ಮುಂದುವರೆದ ಭಾಗವಾಗಿ ಮತ್ತೆ ೧೯೮೦ರ ದಶಕದಲ್ಲಿ ಇಜೇರಿ, ಶಹಾಬಾದ, ಮಂಬಾಪುರ, ಆಳಂದ, ಶಾಖಾಪುರ, ಇತ್ಯಾದಿ ಸ್ಥಳಗಳಲ್ಲಿ ಕಬ್ಬಿಣಯುಗದ ಶಿಲಾಗೋರಿಗಳನ್ನು ಪತ್ತೆ ಮಾಡಿ ಅವುಗಳನ್ನು ಇಲಾಖೆಯ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದರು. ೧೯೮೮ರಲ್ಲಿ ಕಾಗಿಣಾ ನದಿಯದಂಡೆಯ ಮೇಲಿರುವ ಮಳಖೇಡ ಊರಿನ ಕೋಟೆಯ ಆಸುಪಾಸಿನಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಆಯುಧಗಳು, ಮಡಿಕೆ ಅವಶೇಷಗಳು ಅಲ್ಲದೆ, ಇತಿಹಾಸ ಆರಂಭ ಕಾಲಕ್ಕೆ ಸೇರುವ ಇಟ್ಟಿಗೆಗಳು, ಮಡಿಕೆಗಳು, ಇತ್ಯಾದಿ ಅವಶೇಷಗಳನ್ನು ಪತ್ತೆಹಚ್ಚಿ ಅವುಗಳ ಅಧ್ಯಯನ ಕೈಕೊಂಡರು. ಮಳಖೇಡದಲ್ಲಿ ದೊರೆತ ಅವಶೇಷಗಳ ಬಗ್ಗೆ ವಿವರವಾಗಿ ಒಂದು ಲೇಖನವನ್ನು ೧೯೮೮ರಲ್ಲಿ ಪ್ರಕಟಿಸಿದರು (Sundara 1988: 228-233).

೧೯೯೪–೯೫ ರಿಂದ ಕೆಲವು ವರ್ಷಗಳವರೆಗೆ ಕನ್ನಡ ಸಂಶೋಧನಾ ಸಂಸ್ಥೆಯ ವತಿಯಿಂದ ಕಲಬುರ್ಗಿ ಜಿಲ್ಲೆಯಲ್ಲಿ ಪ್ರತಿ ಹಳ್ಳಿಗಳ ಪುರಾತತ್ವ ಅನ್ವೇಷಣೆಯ ಯೋಜನೆಯನ್ನು ಹಮ್ಮಿಕೊಂಡವರು ಆ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಆರ್.ಎಂ. ಷಡಕ್ಷರಯ್ಯ ಅವರು. ಈ ಯೋಜನೆಯ ಅಡಿಯ ಅನ್ವೇಷಣೆಯಲ್ಲಿ ಜಿಲ್ಲೆಯ ಚಿತ್ತಾಪುರ, ಸೇಡಂ ತಾಲೂಕುಗಳ ಪ್ರದೇಶಗಳಲ್ಲಿ ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅವರ ಅನ್ವೇಷಣೆಗಳಲ್ಲಿ ಕಾಗಿಣಾ ನದಿಯ ಸೀಮೆಯ ಅರೆಬೊಮ್ಮನಹಳ್ಳಿ, ಕೊಂಕನಹಳ್ಳಿ ಮತ್ತು ಬದಗಿನ ಎಂಬ ಸ್ಥಳಗಳಲ್ಲಿ ಮಧ್ಯ ಮತ್ತು ಅಂತ್ಯ ಶಿಲಾಯುಗದ ಕಲ್ಲಿನ ಆಯುಧಗಳನ್ನು ಪತ್ತೆ ಹಚ್ಚಿದರು (ಷಡಕ್ಷರಯ್ಯ ೧೯೯೬:೪೩).

ಸನ್ನತಿಯ ಶೋಧನೆ ಮತ್ತು ಪುರಾತತ್ವ ಉತ್ಖನನಗಳು


ಕಲಬುರ್ಗಿ ಜಿಲ್ಲೆಯ ಪುರಾತತ್ವ ಅಧ್ಯಯನಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಪುರಾತತ್ವದ ಹಿನ್ನೆಲೆಯ ಪ್ರಾಚೀನ ಸನ್ನತಿಯ ಶೋಧನೆ ಮತ್ತು ಅಲ್ಲಿ ಕೈಕೊಂಡ ಉತ್ಖನನಗಳು. ಇಂದು ಸನ್ನತಿಯು ವಿಶ್ವಪ್ರಸಿದ್ಧವಾದ ಒಂದು ಪ್ರಾಚೀನ ಬೌದ್ಧ ನೆಲೆಯಾಗಿ ಗುರುತಿಸಿಕೊಂಡಿದೆ. ಇದರ ಶೋಧನೆ ಆಕಸ್ಮಿಕವಾದದ್ದು. ೧೯೫೪ರ ಅವಧಿಯಲ್ಲಿ ಸುರಪುರ ಊರಿನವರಾದ ಇತಿಹಾಸಕಾರ ಕಪಟರಾಳ ಕೃಷ್ಣರಾಯ ಅವರು ಸನ್ನತಿಗೆ ಬೇಟಿ ನೀಡಿದ ಸಂದರ್ಭದಲ್ಲಿ ದೇವಾಲಯದ ಆವರಣದಲ್ಲಿ ಬ್ರಾಹ್ಮಿ ಲಿಪಿಗಳಿರುವ ಶಿಲ್ಪವನ್ನು ಗುರುತಿಸಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಮಾಹಿತಿಯನ್ನು ಆಧರಿಸಿ ಅಂದಿನ ರಾಜ್ಯ ಪುರಾತತ್ವ ಇಲಾಖೆಯಲ್ಲಿದ್ದ ಡಾ. ಎಸ್. ನಾಗರಾಜು ಅವರು ಸನ್ನತಿಗೆ ಭೇಟಿ ಕೊಟ್ಟರು. ನಾಗರಾಜು ಅವರಿಗೆ ಪ್ರಾಚೀನ ಬೌದ್ಧಕಲೆಯ ಬಗ್ಗೆ ಪರಿಚಯವಿದ್ದರಿಂದ ಸನ್ನತಿಯಲ್ಲಿ ಕಂಡುಬರುವ ವಿವಿಧ ಬೌದ್ಧ ಸ್ಮಾರಕಶಿಲ್ಪಗಳು, ಇಟ್ಟಿಗೆಯ ಕಟ್ಟಡಗಳು, ಇತ್ಯಾದಿಗಳನ್ನು ಗುರುತಿಸಿ ಇದೊಂದು ಶಾತವಾಹನರ ಕಾಲದ ಬೌದ್ಧ ಸ್ಥಳವೆಂದು ಮೊದಲಬಾರಿಗೆ ಸೂಚಿಸಿದರು. ಇಲಾಖೆಯ ಮುಖ್ಯಸ್ಥರಾಗಿದ್ದ ಡಾ. ಎಂ. ಶೇಷಾದ್ರಿ ಅವರು ವಿಸ್ತೃತವಾಗಿ ಅಧ್ಯಯನ ನಡೆಸಿ ೧೯೬೫ರಲ್ಲಿ ಬೆಂಗಳೂರಿನ ಮಿಥಿಕ್ ಸೊಸೈಟಿಯ ನಿಯತಕಾಲಿಕೆಯಲ್ಲಿ ಪ್ರಕಟಿಸಿದರು (Seshadri 1965). ನಂತರ ೧೯೭೫ರ ಅಂತಾರಾಷ್ಟ್ರೀಯ ನಿಯತಕಾಲಿಕೆಯಾದ ಆರ್ಟಿಬುಸ್ ಏಶಿಯ ಪತ್ರಿಕೆಯಲ್ಲಿ ಅನೇಕ ಛಾಯಾಚಿತ್ರಗಳ ಸಮೇತವಾಗಿ ಪ್ರಕಟಿಸಿದರು. ಶೇಷಾದ್ರಿ ಅವರ ಸನ್ನತಿಯ ಕುರಿತಾದ ಲೇಖನಗಳು ದೇಶ ಮತ್ತು ವಿದೇಶದ ವಿದ್ವಾಂಸರ ಗಮನ ಸೆಳೆಯಿತು. ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಪಿ.ಬಿ. ದೇಸಾಯಿ ಅವರು ಸನ್ನತಿಯಲ್ಲಿ ದೊರೆತ ಶಾತವಾಹನರ ಕಾಲದ ಶಾಸನಗಳ ಮತ್ತು ಬೌದ್ಧ ಕಲೆ ಸ್ಮಾರಕ ಶಿಲೆಗಳ ಬಗ್ಗೆ ಕುತೂಹಲಗೊಂಡು ಅವರು ಕೂಡ ಕ್ಷೇತ್ರಕಾರ್ಯ ನಡೆಸಿ ಕರ್ನಾಟಕದಲ್ಲಿ ದೊರೆತ ಒಂದು ಹೊಸ ಬೌದ್ಧ ಕೇಂದ್ರವಾಗಿದೆ ಎಂದು ಅಭಿಪ್ರಾಯಪಟ್ಟರು. ಈ ಕುರಿತು ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಯಲ್ಲಿ ಲೇಖನ ಪ್ರಕಟಿಸಿದರು (Desai 1968). ೧೯೭೦ರ ದಶಕದಲ್ಲಿ ಸನ್ನತಿ ಕುರಿತಂತೆ ಗುರುತರ ಅಧ್ಯಯನಗಳು ಕಾಣುವುದಿಲ್ಲ. ಆದರೆ ೧೯೮೦ರ ದಶಕದಲ್ಲಿ ಕೇಂದ್ರ ಪುರಾತತ್ವ

ಇಲಾಖೆಯು ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಕೃಷ್ಣಾ ನದಿ ಸೀಮೆಯ ಬೌದ್ಧ ಕಲಾಕೇಂದ್ರಗಳಾದ ಅಮರಾವತಿ, ನಾಗಾರ್ಜುನಕೊಂಡ, ಇತ್ಯಾದಿಗಳಂತೆಯೆ ಸನ್ನತಿಯು ಒಂದು ಪ್ರಾಚೀನ ಬೌದ್ಧ ಕೇಂದ್ರವಾಗಿದ್ದು, ಪ್ರಾಚೀನ ಬೌದ್ಧ ಸ್ತೂಪಗಳ ಶೋಧನೆ ಮತ್ತು ಅವುಗಳನ್ನು ಪುರಾತತ್ವದ ಹಿನ್ನೆಲೆಯಲ್ಲಿ ಉತ್ಖನನಗಳನ್ನು ನಡೆಸುವ ಯೋಜನೆಯೊಂದು ರೂಪಿಸಿತು. ೧೯೮೬ ರಿಂದ ೧೯೮೯ರ ಅವಧಿಯಲ್ಲಿ ಕೇಂದ್ರ ಪುರಾತತ್ವ ಇಲಾಖೆಯು ಇಂಗ್ಲೆಂಡಿನ ಸೊಸೈಟಿ ಫಾರ್ ಸೌಥ್ ಏಶಿಯನ್ ಸ್ಟಡೀಸ್ ಸಂಸ್ಥೆಯ ಸಹಯೋಗದೊಂದಿಗೆ ಉತ್ಖನನಗಳನ್ನು ಕೈಕೊಳ್ಳಲಾಯಿತು. ಸೊಸೈಟಿಯ ವತಿಯಿಂದ ಹೆಸರಾಂತ ಪುರಾತತ್ವಜ್ಞ ಜೆ. ಆರ್. ಹಾವೆಲ್ ಅವರು ಉತ್ಖನನಗಳ ನೇತೃತ್ವವನ್ನು ವಹಿಸಿಕೊಂಡು ಸನ್ನತಿಯ ಉತ್ತರಕ್ಕೆ ಇರುವ ಆನೆಗುತ್ತಿ ಎಂದು ಕರೆಯಲ್ಪಡುವ ಬೌದ್ಧ ಸ್ತೂಪದ ಉತ್ಖನನ ಕಾರ್ಯ ಕೈಕೊಂಡರು. ಈ ಉತ್ಖನನಗಳ ವರದಿಯನ್ನು ಕೇಂದ್ರ ಪುರಾತತ್ವ ಇಲಾಖೆಯು ೧೯೯೫ರಲ್ಲಿ ಪ್ರಕಟಿಸಿತು (Howell 1995). ಆನೆಗುತ್ತಿ ಸ್ತೂಪದ ಉತ್ಖನನದಿಂದ ಸನ್ನತಿಯ ಬೌದ್ಧ ನೆಲೆಯ ವಿನ್ಯಾಸ ಮತ್ತು ಸ್ತೂಪ ಮತ್ತು ಶಾತವಾಹನರ ಕಾಲದ ಬೌದ್ಧ ಕಲೆಯ ಬಗ್ಗೆ ಮಾಹಿತಿಯನ್ನು ಒದಗಿಸಿತು. ಇದೇ ವೇಳೆಯಲ್ಲಿ ರಾಜ್ಯ ಪುರಾತತ್ವ ಇಲಾಖೆಯ ಮುಖ್ಯಸ್ಥರಾಗಿ ಡಾ. ಅ. ಸುಂದರ ಅವರು ನೇಮಕವಾಗಿದ್ದರು. ಇವರು ಈಗಾಗಲೇ ಸನ್ನತಿ ಒಳಗೊಂಡಂತೆ ಚಿತ್ತಾಪುರ ತಾಲೂಕಿನ ಪ್ರದೇಶಗಳಲ್ಲಿ ಸಾಕಷ್ಟು ಕ್ಷೇತ್ರಕಾರ್ಯ ಹಿನ್ನೆಲೆಯ ಸಂಶೋಧನೆ ಮಾಡಿದ್ದರು. ಸುಂದರ ಅವರು ಸನ್ನತಿಯ ಪ್ರಾಚೀನತೆಯನ್ನು ಗುರುತಿಸುವುದಕ್ಕಾಗಿ ಊರಿನ ಪೂರ್ವಕ್ಕೆ ಇರುವ ರಣಮಂಡಲ ಎಂದು ಕರೆಯುಲ್ಪಡುವ ಪ್ರಾಚೀನ ಕೋಟೆಯ ಭಾಗದಲ್ಲಿ ಉತ್ಖನನಗಳನ್ನು ಕೈಕೊಳ್ಳಲು ೧೯೮೬–೮೭ರಲ್ಲಿ ಮುಂದಾದರು. ಅಲ್ಲಿ ಅವರು ಪ್ರಾಚೀನ ಕಾಲದ ಇಟ್ಟಿಗೆಗಳಲ್ಲಿ ಕಟ್ಟಿದ ವಿವಿಧ ಕಟ್ಟಡಗಳನ್ನು, ದಪ್ಪ ಇಟ್ಟಿಗೆಗಳಿಂದ ನದಿಯ ದಂಡೆಯ ಮೇಲೆ ಮೆಟ್ಟಲುಗಳುಳ್ಳ ಕಟ್ಟೆಯಾಕಾರದ ಘಾಟ್‌ನ್ನು ಶೋಧಿಸಿದರು. ಅಲ್ಲದೇ ವೃತ್ತಾಕಾರದ ಹಳೆಯ ಬಾವಿಯನ್ನು ಕೂಡ ಅವರ ಉತ್ಖನನಗಳಲ್ಲಿ ಪತ್ತೆ ಹಚ್ಚಿದರು. ಇವರ ಅಧ್ಯಯನಗಳಿಂದ ಸನ್ನತಿಯು ಒಂದು ಪ್ರಾಚೀನ ಬೌದ್ಧ ಕೇಂದ್ರವಲ್ಲದೇ ಇದೊಂದು ವಾಣಿಜ್ಯ ಕೇಂದ್ರವೂ ಆಗಿತ್ತೆಂದು ತಿಳಿದುಬಂದಿತು.

ಸನ್ನತಿಯ ಚಂದ್ರಲಾಂಬ ದೇವಿಯ ದೇವಸ್ಥಾನ ಇಲ್ಲಿಯ ಒಂದು ಧಾರ್ಮಿಕ ಕ್ಷೇತ್ರ. ಇದರ ಆವರಣದಲ್ಲಿ ಮುಖ್ಯ ದೇಗುಲದ ಪಕ್ಕದಲ್ಲಿ ಹಳೆಯ ಕಾಳಿಕಾ ದೇಗುಲ ದುಃಸ್ಥಿತಿಯಲ್ಲಿದ್ದರಿಂದ ಅದನ್ನು ದೇವಾಲಯದ ಆಡಳಿತ ಮಂಡಳಿಯು ಜೀರ್ಣೋದ್ಧಾರ ಕಾರ್ಯವನ್ನು ೧೯೭೦ರ ದಶಕದ ಆರಂಭದಲ್ಲಿ ಕೈಗೆತ್ತಿಕೊಂಡಿತ್ತು. ಕಾಳಿಕಾ ದೇಗುಲದ ಗರ್ಭಗುಡಿಯ ಮುಖ್ಯ ಮೂರ್ತಿಯು ಭಗ್ನಗೊಂಡಿತ್ತು. ಅದನ್ನು ತೆಗೆಯುವ ಸಂದರ್ಭದಲ್ಲಿ ದೇವಿಯ ಪಾಣಿಪೀಠದ ಶಿಲೆಯನ್ನು ಗಮನಿಸಿದಾಗ ಅದರ ಮೇಲೆ ಪ್ರಾಚೀನ ಲಿಪಿಗಳಿರುವುದನ್ನು ಗಮನಿಸಿದ ಆಡಳಿತ ಮಂಡಳಿ ಕೇಂದ್ರ ಪುರಾತತ್ವ ಇಲಾಖೆಗೆ ಸಂದೇಶ ಕಳುಹಿಸಿತು. ಸಂದೇಶದ ಹಿನ್ನೆಲೆಯಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ಪುರಾತತ್ವಜ್ಞರಾಗಿದ್ದ ಡಾ. ವರಪ್ರಸಾದ ರಾವ್ ಅವರು ಇದೊಂದು ಮೌರ್ಯ ಸಾಮ್ರಾಟ ಅಶೋಕನ ಬೃಹತ್ ಬಂಡೆ ಶಾಸನವಾಗಿದೆ ಎಂದು ಗುರುತಿಸಿದರು. ಇದೇ ಇಲಾಖೆಯ ಶಾಸನ ವಿಭಾಗ ಮುಖ್ಯಸ್ಥರಾಗಿದ್ದ ಡಾ. ಐ.ಕೆ. ಶರ್ಮಾ ಅವರೊಂದಿಗೆ ಅಶೋಕನ ಬಂಡೆ ಶಾಸನವನ್ನು ಓದಿ ಅದನ್ನು ಪ್ರಕಟಿಸಿದರು (Sarma & Varaprasad Rao 1993). ಸನ್ನತಿಯಲ್ಲಿ ಅಶೋಕನ ಬಂಡೆ ಶಾಸನ ದೊರಕಿದ ವಿಷಯದಿಂದ ಸನ್ನತಿಯ ಬಗ್ಗೆ ಹಲವಾರು ಅಧ್ಯಯನಗಳಿಗೆ ನಾಂದಿ ಹಾಡಿತು. ರಾಜ್ಯ ಪುರಾತತ್ವ ಇಲಾಖೆಯವರು ಈ ಹಿಂದೆ ಸುಂದರ ಅವರು ಕೈಕೊಂಡಿದ್ದ ರಣಮಂಡಲ ಪ್ರದೇಶದ ಉತ್ಖನನಗಳನ್ನು ಮುಂದುವರೆಸುವ ಯೋಜನೆಯನ್ನು ರೂಪಿಸಿಕೊಂಡು ಇಲಾಖೆಯ ಮುಖ್ಯಸ್ಥರಾಗಿದ್ದ ಡಾ. ಡಿ. ದೇವರಾಜ ಮತ್ತು ಅವರ ಸಹೋದ್ಯೋಗಿ ಡಾ. ತಳವಾರ ಜೊತೆಗೂಡಿ ಉತ್ಖನನಗಳನ್ನು ೧೯೯೩ ರಿಂದ ೧೯೯೫ವರೆಗೆ ನಡೆಸಿದರು. ಇವರ ಉತ್ಖನನಗಳಲ್ಲಿ ಪ್ರಾಚೀನ ಕಾಲದ ಮೌರ್ಯರ ಕಾಲಕ್ಕೆ ಸೇರುವ ಔತ್ತರೇಯ ಕಪ್ಪು ಹೊಳಪಿನ ಮಡಿಕೆಗಳು, ರೋಮನ್ ವಾಣಿಜ್ಯ ಕಾಲಕ್ಕೆ ಸೇರುವ ರೋಮನ್ ಮಡಿಕೆಗಳು, ಆಭರಣಗಳು, ಮತ್ತು ಶಾತವಾಹನರ ಕಾಲದ ನಾಣ್ಯಗಳು, ಮತ್ತು ವಿವಿಧ ಕಟ್ಟಡಗಳನ್ನು ಶೋಧಿಸಲಾಯಿತು. ಈ ಉತ್ಖನನದ ಚಿಕ್ಕ ವರದಿಯನ್ನು ಇಲಾಖೆಯ ವತಿಯಿಂದ ೧೯೯೬ರಲ್ಲಿ ಪ್ರಕಟಿಸಿದರು (Devaraj & Talwar 1996). ಈಗಾಗಲೇ ಸನ್ನತಿಯು ಅಶೋಕ ಬಂಡೆ ಶಾಸನ, ರೋಮನ್ ನಾಣ್ಯಗಳು, ಮಡಿಕೆಗಳು, ಶಾತವಾಹನರ ಕಾಲದ ಬೌದ್ಧ ಕಲೆಯ ವಿವಿಧ ವಾಸ್ತುರಚನೆಗಳು, ಶಿಲ್ಪಗಳು ಇತ್ಯಾದಿಗಳಿಂದ ಕರ್ನಾಟಕ ಮತ್ತು ದಖ್ಖನ್ ಪ್ರದೇಶದಲ್ಲಿಯೇ ಅತ್ಯಂತ ಮಹತ್ವದ ಪ್ರಾಚೀನ ಬೌದ್ಧ ಕೇಂದ್ರವೆಂದು ಗುರುತಿಸಲ್ಪಟ್ಟಿತು. ಅಶೋಕನ ಬಂಡೆ ಶಾಸನ ದೊರೆತಿದ್ದರಿಂದ ಕೇಂದ್ರ ಪುರಾತತ್ವ ಇಲಾಖೆಯವರು ಸನ್ನತಿಯಲ್ಲಿ ವಿಸ್ತೃತ ಅಧ್ಯಯನಕ್ಕಾಗಿ ದೊಡ್ಡ ಪ್ರಮಾಣದ ಉತ್ಖನನಗಳನ್ನು ಕೈಗೆತ್ತಿಕೊಳ್ಳುವ ಯೋಜನೆಯನ್ನು ರೂಪಿಸಿ ಸನ್ನತಿಯ ಬಳಿಯ ಕನಗನಹಳ್ಳಿ ಗ್ರಾಮದ ವ್ಯಾಪ್ತಿಗೆ ಒಳಪಡುವ ಭೀಮಾ ನದಿಯ ದಂಡೆಯ ಮೇಲಿರುವ ಪ್ರಾಚೀನ ವೃತ್ತಾಕಾರದ ಬೌದ್ಧ ಸ್ತೂಪದ ಉತ್ಖನನವನ್ನು ೧೯೯೧ ರಿಂದ ೧೯೯೩ರಲ್ಲಿ ಡಾ. ಕೆ.ಪಿ. ಪೂಣಚ್ಚ

ಅವರ ನೇತೃತ್ವದಲ್ಲಿ ಪ್ರಾರಂಭಿಸಿದರು. ಮತ್ತೆ ೧೯೯೬ ರಿಂದ ೨೦೦೬ ರವರೆಗೆ ಉತ್ಖನನಗಳು ಮುಂದುವರೆದವು. ಈ ದೀರ್ಘವಾದ ಉತ್ಖನನಗಳಲ್ಲಿ ಕನಗನಹಳ್ಳಿಯ ಬೌದ್ಧ ಸ್ಥೂಪವನ್ನು ಸಂಪೂರ್ಣವಾಗಿ ಶೋಧಿಸಲಾಯಿತು. ಇಲ್ಲಿ ದೊರೆತ ಸ್ಥೂಪದ ರಚನೆ ಮತ್ತು ಅದರ ಶಿಲಾಫಲಕಗಳನ್ನು ಗಮನಿಸಲಾಗಿ ದಕ್ಷಿಣ ಭಾರತದಲ್ಲಿಯೇ ಶಾತವಾಹನರ ಕಾಲದ ಅತ್ಯಂತ ದೊಡ್ಡ ಬೌದ್ಧ ಸ್ಥೂಪವೆಂದು ಇದನ್ನು ಗುರುತಿಸಲಾಗಿದೆ. ಯಾವುದೋ ಕಾಲಘಟ್ಟದಲ್ಲಿ ಭೂಕಂಪನದಿಂದಾಗಿ ಈ ಪ್ರಾಚೀನ ಬೌದ್ಧ ಸ್ಥೂಪವು ಕುಸಿದು ಭೂಮಿಯಲ್ಲಿ ಹುದುಗಿದೆ ಎಂದು ಅಧ್ಯಯನ ನಡೆಸಿದ ವಿಜ್ಞಾನಿಗಳ ಅಭಿಪ್ರಾಯ. ಪೂಣಚ್ಚ ಅವರ ನೇತೃತ್ವದಲ್ಲಿ ಸನ್ನತಿಯ ಉತ್ಖನನಗಳಲ್ಲಿ ಭೀಮೇ ನದಿಯ ಪರಿಸರದಲ್ಲಿ ಅನ್ವೇಷಣೆಯನ್ನು ಕೂಡ ನಡೆಸಿದರು. ಅಲ್ಲದೇ ಸನ್ನತಿಯ ಪ್ರಾಚೀನ ಕೋಟೆಯ ಪ್ರದೇಶದಲ್ಲಿ ಈ ನೆಲೆಯ ಪ್ರಾಚೀನತೆಯನ್ನು ಗುರುತಿಸುವುದಕ್ಕಾಗಿ ಲಂಬ ಉತ್ಖನನ ಕೈಕೊಂಡರು. ಇದರಿಂದಾಗಿ ಸು.೮ ಸಾವಿರ ವರ್ಷಗಳಷ್ಟು ಪುರಾತನವಾದ ಸೂಕ್ಷ್ಮ ಶಿಲಾಯುಗದ ಶಿಲಾಯುಧಗಳು ದೊರಕಿದ್ದರಿಂದ ಸನ್ನತಿ ಪ್ರದೇಶದ ಪ್ರಾಚೀನತೆಯನ್ನು ಪ್ರಾಗೈತಿಹಾಸಿಕ ಕಾಲದ ಶಿಲಾಯುಗ ಕಾಲಕ್ಕೆ ಸೇರಿತ್ತು ಎಂಬ ಮಾಹಿತಿ ದೊರೆಯಿತು. ಕನಗನಹಳ್ಳಿಯಲ್ಲಿ ನಡೆಸಿದ ಉತ್ಖನನಗಳ ಮತ್ತು ಭೀಮಾ ನದಿಯ ಅನ್ವೇಷಣೆಗಳ ಪೂಣಚ್ಚ ಅವರ ವರದಿಯನ್ನು ಕೇಂದ್ರ ಪುರಾತತ್ವ ಇಲಾಖೆಯವರು ೨೦೧೧ರಲ್ಲಿ ಪ್ರಕಟಿಸಿದರು (Poonacha 2011). ಇದರೊಂದಿಗೆ ಸನ್ನತಿಯ ಇತಿಹಾಸ ಮತ್ತು ಪ್ರಾಚೀನ ಅವಶೇಷಗಳ ಸ್ಥೂಲ ಚಿತ್ರಣ ದೊರಕಿದಂತಾಗಿದೆ.

ಪ್ರಾಗೈತಿಹಾಸಿಕ ಸಂಸ್ಕೃತಿಗಳು



ಚಿತ್ರ–೩: ಸನ್ನತಿಯ ಉತ್ಖನನದ ವಿವಿಧ ಸಂಸ್ಕೃತಿಗಳ ವಿವರಿಸುವ ಸ್ತರಗಳ ರೇಖಾಚಿತ್ರ [ಕೃಪೆ: ಕೆ.ಪಿ. ಪೂಣಚ್ಚ]

ಈ ಮೇಲೆ ಉಲ್ಲೇಖಿಸಿದ ಕಲಬುರ್ಗಿ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳಿಗಾಗಿ ನಡೆಸಿದ ಅನ್ವೇಷಣೆಗಳು ಮತ್ತು ಉತ್ಖನನಗಳು ಸ್ಥೂಲ ಚಿತ್ರಣವನ್ನು ರೂಪಿಸುವಲ್ಲಿ ಸಹಾಯಕವಾಗುತ್ತವೆ. ರಾರ್ಬಟ್ ಬ್ರೂಸ್ ಪೂಟ್, ಮೇಡೋಸ್ ಟೇಲರ್, ಮಹಾದೇವನ್, ಪದ್ದಯ್ಯನವರುಗಳು ಕೈಕೊಂಡ ವೈಜ್ಞಾನಿಕ ಮತ್ತು ವಸ್ತುನಿಷ್ಠ ಅಧ್ಯಯನಗಳಿಂದಾಗಿ ನೆರೆಯ ಜಿಲ್ಲೆಯಾದ ಯಾದಗಿರ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಚರಿತ್ರೆಯನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಕಲಬುರ್ಗಿ ಜಿಲ್ಲೆಯ ಪ್ರಾಗೈತಿಹಾಸಿಕ ಅನ್ವೇಷಣೆಗಳು ನಡೆದಿವೆಯಾದರೂ ಸಮಗ್ರವಾಗಿ ನಡೆದಿಲ್ಲ. ಅದಕ್ಕಾಗಿ ಶೋಧಿಸಲ್ಪಟ್ಟ ಅವಶೇಷಗಳು ಮತ್ತು ಉತ್ಖನನಗಳ ಆಧಾರಗಳ ಮೇಲೆ ಜಿಲ್ಲೆಯ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಅವಲೋಕನ ಮಾಡುವ ಪ್ರಯತ್ನ ಮಾಡಬಹುದು.

ಜಿಲ್ಲೆಯಲ್ಲಿ ಈವರೆಗೆ ಕೈಕೊಂಡ ಪುರಾತತ್ವ ಅನ್ವೇಷಣೆಗಳು, ಉತ್ಖನನಗಳಲ್ಲಿ ಉಲ್ಲೇಖನಾರ್ಹ ಅಧ್ಯಯನಗಳನ್ನು ಗುರುತಿಸಬಹುದು. ಅವುಗಳಲ್ಲಿ

* ೧೮೫೦ರ ದಶಕದಲ್ಲಿ ಮೇಡೋಸ್ ಟೇಲರ್ ಅವರು ಕೈಕೊಂಡ ಜೇವರ್ಗಿಯ ಕಬ್ಬಿಣಯುಗ ಸಂಸ್ಕೃತಿಯ ಶಿಲಾಸಮಾಧಿಗಳ ದಾಖಲೀಕರಣಗಳು ಮತ್ತು ಉತ್ಖನನಗಳು;


* ಎಸ್. ನಾಗರಾಜು ಅವರ ಉಮರ್ಜಾ ನದಿ ಕಣಿವೆಯ ಮಧ್ಯ-ಆದಿಶಿಲಾಯುಗ ಸಂಸ್ಕೃತಿ (Middle Palaeolithic Culture) ಶಿಲಾಯುಧಗಳ ಶೋಧನೆ ಮತ್ತು ಅವುಗಳ ಅಧ್ಯಯನಗಳು;

* ಸುಂದರ ಅವರ ಕಬ್ಬಿಣಯುಗ ಸಂಸ್ಕೃತಿಗಳ ಅಧ್ಯಯನಗಳು ಮುಖ್ಯವಾಗಿ ಕಾಗೀಣಾ ನದಿಯ ಕಣಿವೆಯ ಮಳಖೇಡದ ಬಳಿಯ ವಿಶೇಷ ಅಧ್ಯಯನಗಳು;

* ಬಿ.ಕೆ. ಗುರುರಾಜ ರಾವ್ ಅವರು ಕಾಗೀಣಾ ನದಿಯ ಬಯಲಿನಲ್ಲಿ ಕೈಕೊಂಡ ಶೋಧಿಸಿದ ಮಧ್ಯ-ಆದಿಶಿಲಾಯುಗ ಕಾಲದ ಶಿಲಾಯುಧಗಳು ಮತ್ತು

* ಕೇಂದ್ರ ಪುರಾತತ್ವ ಇಲಾಖೆಯ ವತಿಯಿಂದ ಕೆ.ಪಿ. ಪೂಣಚ್ಚ ಅವರು ಕೈಕೊಂಡ ಸನ್ನತಿಯ ಪುರಾತತ್ವ ಅಧ್ಯಯನಗಳು ಮುಖ್ಯವಾಗಿ ನೆಲೆಯ ಪ್ರಾಚೀನತೆಯ ಹುಡುಕಾಟದ ಹಿನ್ನೆಲೆಯ ಉತ್ಖನನಗಳಲ್ಲಿ ಶೋಧಿಸಿದ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳು ಜಿಲ್ಲೆಯ ಪ್ರಾಚೀನತೆಯನ್ನು ನಿಖರವಾಗಿ ಗುರುತಿಸುವಲ್ಲಿ ಮಹತ್ವದ ಮಾಹಿತಿಗಳಾಗಿವೆ.

ಜಿಲ್ಲೆಯ ಜೇವರ್ಗಿ ತಾಲೂಕಿನ ಕೂಡಲಗಿ ಗ್ರಾಮದ ಬಳಿ ಮತ್ತು ಚಿತ್ತಾಪುರ ತಾಲೂಕಿನ ಕಲ್ಲೂರು ಗ್ರಾಮದ ಪರಿಸರದಲ್ಲಿ ಆದಿ-ಹಳೆ ಶಿಲಾಯುಗ ಸಂಸ್ಕೃತಿಯ ಆದಿ ಮಾನವರು ಕಲ್ಲಿನಲ್ಲಿ ತಯಾರಿಸಿದ ಕಲ್ಲಿನಲ್ಲಿ ಕೈಕೊಡಲಿಗಳು ದೊರೆತಿರುವ ವರದಿಗಳಿವೆ (IAR 1984-85:30; IAR 1991-92:47). ಇವು ಅನ್ವೇಷಣೆಗಳಲ್ಲಿ ದೊರಕಿದ್ದು, ಪುರಾತತ್ವ ಶಾಸ್ತ್ರದ ಹಿನ್ನೆಲೆಯಲ್ಲಿ ಇವುಗಳ ಕಾಲವನ್ನು ಗುರುತಿಸುವುದು ಕಷ್ಟ. ನೆರೆಯ ಜಿಲ್ಲೆಯಾದ ಯಾದಗಿರಿ ಮತ್ತು ಇತರೆಡೆಗಳಲ್ಲಿ ಆದಿ-ಹಳೆಶಿಲಾಯುಗದ ಅವಶೇಷಗಳು ದೊರೆಕಿದ ಉದಾಹರಣೆಗಳಿವೆ. ಅವುಗಳ ಹಿನ್ನೆಲೆಯಲ್ಲಿ ಕಲಬುರ್ಗಿ



ಚಿತ್ರ-೪: ಜೇವರ್ಗಿ ಸಮೀಪದ ಕಬ್ಬಿಣಯುಗ ಕಾಲದ ಸಮಾಧಿಗಳ ರೇಖಾಚಿತ್ರ

ಜಿಲ್ಲೆಯಲ್ಲಿಯೂ ಆದಿ-ಹಳೆಶಿಲಾಯುಗ ಕಾಲದ ಆದಿಮಾನವನು ಜೀವಿಸಿದ್ದನ್ನು ಗುರುತಿಸಬಹುದು. ಮುಖ್ಯವಾಗಿ ಭೀಮೇ ಮತ್ತು ಕಾಗೀಣಾ ನದಿಗಳ ಕಣಿವೆಗಳ ಪ್ರದೇಶಗಳಲ್ಲಿ ವಿಸ್ತೃತ ಅನ್ವೇಷಣೆಗಳನ್ನು ಕೈಕೊಂಡು ವ್ಯವಸ್ಥಿತ ಅಧ್ಯಯನ ಮಾಡಿದರೆ ಜಿಲ್ಲೆಯಲ್ಲಿಯೂ ಆದಿಮಾನವನ ಜೀವನ ಕ್ರಮವನ್ನು ಅರಿಯಬಹುದಾಗಿದೆ.

ಜಿಲ್ಲೆಯ ವಾಯುವ್ಯ ಭಾಗದಲ್ಲಿ ಚಿಕ್ಕದಾಗಿ ಹರಿಯು ಉಮರ್ಜಾ ನದಿಯ ಪ್ರದೇಶ ಬಯಲು ಸೀಮೇಯಾಗಿದ್ದರೂ ಪ್ರಾಚೀನ ಮಾನವ ಬೇಟೆಯಾಡುತ್ತ ತನ್ನ ಜೀವನ ಕ್ರಮವನ್ನು ರೂಪಿಸಿಕೊಂಡಿದ್ದನು ಎಂದು ಅಧ್ಯಯನಗಳಿಂದ ಗುರುತಿಸಲಾಗಿದೆ. ಎಸ್. ನಾಗರಾಜು ಅವರು ೧೯೬೭ರಲ್ಲಿ ಕೈಕೊಂಡ ವ್ಯವಸ್ಥಿತ ಅನ್ವೇಷಣೆಗಳಲ್ಲಿ ಅಫಜಲಪುರ ತಾಲೂಕಿನ ಗಂಗಾಪುರ; ಆಳಂದ ತಾಲೂಕಿನ ಜವಳಿ, ಶಕಾಪುರ, ಮತ್ತು ಇಕ್ಕಳಗಿ ಗ್ರಾಮಗಳ ಬಳಿ ಮಧ್ಯ-ಆದಿಶಿಲಾಯುಗ (Middle-Palaeolithic Culture) ಜಿಲ್ಲೆಯ ಮತ್ತು ಅಂತ್ಯ-ಹಳೆಶಿಲಾಯುಗ (Upper-Palaeolithic Culture) ಕಾಲದ ಕಲ್ಲಿನಲ್ಲಿ ರಚಿಸಿದ ವಿವಿಧ ಆಕಾರದ ಆಯುಧಗಳನ್ನು ಶೋಧಿಸಿ ಅವುಗಳ ಬಗ್ಗೆ ವಿವರವಾಗಿ ಲೇಖನವನ್ನು ಪ್ರಕಟಿಸಿದ್ದಾರೆ. ಈ ಮೇಲೆ ಹೇಳಿದ ಪುರಾತನ ನೆಲೆಗಳಲ್ಲಿ ಚಕಮಕಿ ಕಲ್ಲು, ಜಾಸ್ಫರ್ ಶಿಲೆ, ಚಾಲ್ಸಿಡೊನಿ ಶಿಲೆ ಇತ್ಯಾದಿ ಮಾದರಿಯ ಕಲ್ಲುಗಳಲ್ಲಿ ಪ್ರಾಣಿಗಳ ಚರ್ಮಗಳನ್ನು ಕೀಳುವುದಕ್ಕೆ ನೀಳಚಕ್ಕೆ, ರಂಧ್ರ ಮಾಡುವುದಕ್ಕೆ ಚೂಪಾದ ಮೊನೆಗಳು, ದ್ವಿಮುಖಿ ಬ್ಲೇಡ್‌ಗಳು ಇತ್ಯಾದಿಗಳನ್ನು ನಾಗರಾಜು ಅವರು ಗುರುತಿಸಿದ್ದಾರೆ. ಮಧ್ಯ-ಆದಿಶಿಲಾಯುಗ (Middle-Palaeolithic Culture) ಹಾಗೂ ಅಂತ್ಯ-ಹಳೆಶಿಲಾಯುಗ (Upper-Palaeolithic Culture) ಸಂಸ್ಕೃತಿಗಳ ಶಿಲಾಯುಧಗಳು ಒಂದೆಡೆ ದೊರೆತಿರುವುದು ಕೂಡ ಮಹತ್ವದ್ದಾಗಿದೆ. ಹಳೆ ಶಿಲಾಯುಗ ಕಾಲಘಟ್ಟದ ಮಾನವರು ಸುಲಭವಾಗಿ ಶಿಲೆಗಳು ದೊರಕುವ ಪ್ರದೇಶವಾದ ಉಮರ್ಜಾ ನದಿ ಬಯಲಿನಲ್ಲಿ ಗುಂಪು ಗುಂಪಾಗಿ ನೆಲೆಸಿ ಜೀವನವನ್ನು ನಡಸಿದ್ದರೆಂದು ಇವುಗಳ ಆಧಾರಗಳಿಂದ ಗುರುತಿಸಬಹುದಾಗಿದೆ. ನಾಗರಾಜು ಅವರು ನಡೆಸಿದ ಉಮರ್ಜಾ ನದಿ ಬಯಲಿನ ಪುರಾತತ್ವ ಅಧ್ಯಯನಗಳು ಜಿಲ್ಲೆಯ ಇತರೆಡೆ ಶೋಧಿಸಿದ ಮಧ್ಯ-ಆದಿಶಿಲಾಯುಗ (Middle-Palaeolithic Culture) ನೆಲೆಗಳ ಅಧ್ಯಯನಗಳಿಗೆ ಮಾದರಿಯಾಗಿವೆ.

ಬಿ.ಕೆ. ಗುರುರಾಜ ರಾವ್ ಅವರು ಚಿತ್ತಾಪುರ ತಾಲೂಕಿನ ಕಾಗೀಣಾ ನದಿಯ ಪ್ರದೇಶದಲ್ಲಿ ಬರುವ ವಾಡಿಯಿಂದ ಕೃಷ್ಣಾ ನದಿಯವರೆಗೂ ಅನ್ವೇಷಣೆಗಳನ್ನು ಕೈಕೊಂಡು ವಿವಿಧ ಪ್ರದೇಶದಲ್ಲಿ ಮಧ್ಯ-ಆದಿಶಿಲಾಯುಗ (Middle Palaeolithic Culture) ಸಂಸ್ಕೃತಿಯ ಶಿಲಾಯುಧಗಳು ಮತ್ತು ವಿವಿಧ ಅವಶೇಷಗಳನ್ನು ಶೋಧಿಸಿದ್ದಾರೆ. ಅವುಗಳು ಚಿತ್ತಾಪುರ ತಾಲೂಕಿನ ಭೀಮನಹಳ್ಳಿ, ಕೌಲೂರು, ಲಿಂಗೇರಿ, ಲಿಂಗದಹಳ್ಳಿ, ತಂಗಡಗಿ, ಮತ್ತು ಮಾಚನೂರು ಗ್ರಾಮಗಳ ಪರಿಸರದಲ್ಲಿ ಶೋಧಿಸಲಾಗಿವೆ. ಈ ಸಂಸ್ಕೃತಿಯ ಕಾಲದ ಶಿಲಾಯುಧಗಳು ನದಿಯ ದಂಡೆಯ ಕೊರಕಲುಗಳ ಸ್ತರಗಳಲ್ಲಿ ದೊರಕಿವೆ (IAR 1967-68) ದೂರದ ಸ್ಥಳಗಳಿಂದ ಪುರಾತನ ಕಾಲದ ಈ ಶಿಲಾಯುಧಗಳು ನೈಸರ್ಗಿಕ ಕಾರಣಗಳಿಂದ ಉರುಳುತ್ತಾ ನದಿಯ ಕೊರಕಲುಗಳಲ್ಲಿ ಬಂದು ಸೇರಿವೆ. ಆ ಕಾರಣಗಳಿಂದಾಗಿ ಶಿಲಾಯುಧಗಳು ಸವಕಲಾಗಿ ಕಂಡುಬರುತ್ತವೆ. ಇವುಗಳ ಮೂಲ ಸ್ಥಾನ ಗುರುತಿಸಲು ಸಾಧ್ಯವಾಗಿಲ್ಲ. ಡಾ. ಸುಂದರ ಅವರು ಮಳಖೇಡ ಪ್ರದೇಶದಲ್ಲಿ ಕಾಗೀಣಾ ನದಿಯ ತಟದಲ್ಲಿ ಕೈಕೊಂಡ ಪುರಾತತ್ವ ಅನ್ವೇಷಣೆಯಲ್ಲಿ ಚಕಮಕಿ ಕಲ್ಲಿನಲ್ಲಿ, ಜಾಸ್ಫರ್ ಶಿಲೆಗಳಲ್ಲಿ ಮಾಡಿದ ಮಧ್ಯ-ಆದಿಶಿಲಾಯುಗದ ಆಯುಧಗಳನ್ನು ಶೋಧಿಸಿದ್ದಾರೆ. ಬೆಣ್ಣೆತೊರೆ ಮತ್ತು ಕಾಗೀಣಾ ನದಿಗಳ ಸಂಗಮದಲ್ಲಿ 'ದುಗ್ಗಮ್ಮನ ಅಣಿ' ಎಂದು ಕರೆಯಲ್ಪಡುವ ಚಿಕ್ಕ ಗುಡ್ಡದಲ್ಲಿ ಗಟ್ಟಿ ಕಲ್ಲುಗಳಲ್ಲಿ ಮಾಡಿದ ಇದೇ ಸಂಸ್ಕೃತಿಯ ಶಿಲಾಯುಧಗಳನ್ನು ಶೋಧಿಸಿದ್ದನ್ನು ಅವರು ದಾಖಲಿಸಿದ್ದಾರೆ (Sundara 1988:228-233). ಜೇವರ್ಗಿ ತಾಲೂಕಿನ ರಾಜೋಳ್, ಹೋತಿನಮಡು (IAR 1991-92), ಚೆನ್ನೂರು (IAR 1982-83) ಕಲಬುರ್ಗಿ ತಾಲೂಕಿನ ಹಾಗರಗುಂಡಗಿ (IAR 1967-68) ಸ್ಥಳಗಳಲ್ಲಿಯೂ ಮಧ್ಯ-ಆದಿಶಿಲಾಯುಗ ಕಾಲದ ಶಿಲಾಯುಧಗಳು ದೊರೆತಿವೆ. ಮಧ್ಯ-ಆದಿಶಿಲಾಯುಗ ಸಂಸ್ಕೃತಿಯ ಕಾಲವನ್ನು ವಿದ್ವಾಂಸರು ಅನೇಕ ಅಧ್ಯಯನಗಳ ಮೂಲಕ ಕಾಲಗಣನೆಯನ್ನು ಸೂಚಿಸಿದ್ದಾರೆ. ಇದು ಸುಮಾರು ೩೫ಸಾವಿರ ವರ್ಷಗಳಷ್ಟು ಪುರಾತನ ಕಾಲಮಾನವೆಂದು ಅಭಿಪ್ರಾಯ ಪಡಲಾಗಿದೆ. ಆ ಹಿನ್ನೆಲೆಯಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ದೊರೆಯುವ ಮಧ್ಯ-ಆದಿಶಿಲಾಯುಗದ ಆಯುಧಗಳು ಕೂಡ ಸು. ೩೫ ಸಾವಿರ ವರ್ಷಗಳಷ್ಟು ಪುರಾತನವೆಂದು ಸೂಚಿಸಬಹುದು.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ : ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಸೂಕ್ಷ್ಮ ಶಿಲಾಯುಗದ ಕಿರುಗಾತ್ರದ ಶಿಲಾಯುಧಗಳು ಅನ್ವೇಷಣೆಗಳಲ್ಲಿ ದೊರೆತಿರುವ ಮಾಹಿತಿಗಳಿವೆ. ಮುಖ್ಯವಾಗಿ ಈ ಕಾಲದ ನೆಲೆಗಳನ್ನು ಚಿತ್ತಾಪುರ ತಾಲೂಕಿನ ಭೀಮೇ ನದಿಯ ಕಣಿವೆಯ ಗ್ರಾಮಗಳಲ್ಲಿ ಸಾಮಾನ್ಯವಾಗಿ ಶೋಧಿಸಲಾಗಿವೆ. ಮುಖ್ಯವಾಗಿ ಸನ್ನತಿಯ ಉತ್ಖನನಗಳಲ್ಲಿಯೂ ಡಾ. ಪೂಣಚ್ಚ ಅವರು ಸ್ತರಗಳಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ. ಕಬ್ಬಿಣಯುಗ ಕಾಲದ ಸ್ತರಗಳ ತಳಭಾಗದಲ್ಲಿ ಕಂಡುಬರುವ ಸೂಕ್ಷ್ಮಶಿಲಾಯುಗದ ಸ್ತರಗಳಲ್ಲಿ ಕಲ್ಲಿನಲ್ಲಿ ಮಾಡಿದ ಶಿಲಾಯುಧಗಳು ದೊರಕಿವೆ. ಆದ್ದರಿಂದ ಜಿಲ್ಲೆಯಲ್ಲಿ ದೊರೆತ

ಸೂಕ್ಷ್ಮಶಿಲಾಯುಗದ ಅವಶೇಷಗಳನ್ನು ಮತ್ತು ಆ ಕಾಲದ ಸಾಂಸ್ಕೃತಿಕ ಚಟುವಟಿಕೆಗಳನ್ನು ಕಬ್ಬಿಣಯುಗ ಪೂರ್ವದ ಕಾಲದ್ದು ಎಂದು ಸ್ಪಷ್ಟವಾಗಿ ಗುರುತಿಸಬಹುದು. ಸೂಕ್ಷ್ಮಶಿಲಾಯುಗ ಮುಕ್ತಾಯದ ನಂತರ ಕೆಲವು ಶತಮಾನಗಳ ಬಳಿಕ ಕಬ್ಬಿಣಯುಗದ ಚಟುವಟಿಕೆಗಳು ಆರಂಭಗೊಂಡವು ಎಂದು ಸನ್ನತಿಯ ಉತ್ಖನನಗಳಲ್ಲಿ ಗುರುತಿಸಲಾಗಿದೆ. ಒಟ್ಟಿನಲ್ಲಿ ಜಿಲ್ಲೆಯಲ್ಲಿ ದೊರೆಯುವ ಸೂಕ್ಷ್ಮಶಿಲಾಯುಗದ ಸಂಸ್ಕೃತಿಯು ಅಲೆಮಾರಿ ಜೀವನ ಕ್ರಮದಿಂದ ಕೂಡಿದ್ದು, ಅಂದಿನ ಜನರು ಅರಣ್ಯಗಳಲ್ಲಿ ಬೇಟೆಯನ್ನು ಮತ್ತು ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾ ದಿನನಿತ್ಯದ ಜೀವನವನ್ನು ಸಾಗಿಸುತ್ತಿದ್ದರೆಂದು ಹೇಳಬಹುದು. ಚಿತ್ತಾಪುರ ತಾಲೂಕಿನ ರಾವೂರು, ಜೇವರ್ಗಿ ತಾಲೂಕಿನ ಚಿಗರಹಳ್ಳಿ, ಚೆನ್ನೂರು, ಆಳಂದ ತಾಲೂಕಿನ ಇಕ್ಕಳ್ಳಿ, ಖಾನಾಪುರ, ಶಾಕಾಪುರ ಇತ್ಯಾದಿ ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗದ ಅವಶೇಷಗಳು ದೊರೆಕಿವೆ.

ನವಶಿಲಾಯುಗ ಸಂಸ್ಕೃತಿ

ನವಶಿಲಾಯುಗವೆಂಬುದು ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತ. ಈ ಹಂತದಲ್ಲಿ ಮಾನವನು ಸ್ವಾವಲಂಬಿಯಾದ ಬದುಕನ್ನು ನಿರ್ಮಿಸಿಕೊಳ್ಳುವ ಕ್ರಮಗಳನ್ನು ಕಂಡುಕೊಂಡನು ಅಲೆಮಾರಿ ಜೀವನ ಕ್ರಮವನ್ನು ತೊರೆದು ಒಂದೆಡೆ ನೆಲೆಸಿ ಜೀವನ ನಡೆಸುವ ಕ್ರಮವನ್ನು ರೂಢಿಸಿಕೊಂಡನು. ಅಲ್ಲಿಯವರೆಗೆ ತನ್ನ ಆಹಾರಕ್ಕಾಗಿ ಅಲೆದಾಡುತ್ತಾ ಆಹಾರ ಸಂಗ್ರಹಣೆಯನ್ನು ಮಾಡುತ್ತಿದ್ದ ಆದರೆ ಈ ಹಂತದಲ್ಲಿ ತನ್ನ ಆಹಾರವನ್ನು ತಾನೇ ಉತ್ಪಾದಿಸುವ ಜ್ಞಾನವನ್ನು ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಂಡನು. ಈ ಹಂತದಲ್ಲಿಯೂ ಶಿಲೆಯನ್ನೇ ಅವಲಂಬಿಸಿ ಅವುಗಳನ್ನು ಆಯುಧಗಳನ್ನಾಗಿ ಮಾಡಿಕೊಂಡನಾದರೂ ತನ್ನ ಪೂರ್ವಜರಿಗಿಂತಲೂ ಭಿನ್ನವಾದ ತಂತ್ರಜ್ಞಾನವನ್ನು ಸಂಪಾದಿಸಿಕೊಂಡನು. ಶಿಲೆಗಳನ್ನು ಉಜ್ಜುವುದರ ಮೂಲಕ ಅವುಗಳನ್ನು ಮೊನಚು ಮಾಡುವುದನ್ನು ಈ ಹಂತದಲ್ಲಿ ಕಾಣುತ್ತೇವೆ. ಇದರಿಂದಾಗಿ ಪದೇ ಪದೇ ಮೊಂಡಾಗುತ್ತಿದ್ದ ಆಯುಧಗಳನ್ನು ಉಜ್ಜಿ ಅವುಗಳನ್ನು ಪುನಃ ಬಳಕೆ ಮಾಡಬಹುದೆಂಬುದನ್ನು ಕಂಡುಕೊಂಡ. ಇದರಿಂದ ಆಯುಧ ತಯಾರಿಕೆಗಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುವುದು ಬೇಕಾಗಲಿಲ್ಲ. ತಾನು ತಿಂದು ಬಿಸಾಕಿದ ಸಸ್ಯದ ಬೀಜಗಳು ಭೂಮಿಯಲ್ಲಿ ಮೊಳಕೆ ಹೊಡೆದು ಮತ್ತೆ ಅವು ಗಿಡಗಳಾಗಿ ಬೆಳೆಯುವ ನೈಸರ್ಗಿಕ ಕ್ರಿಯೆಯನ್ನು ಕಂಡುಕೊಂಡನು. ಇದನ್ನು ತನಗೆ ಆಹಾರ ಧಾನ್ಯಗಳನ್ನು ಬೆಳೆಯುವದಕ್ಕೆ ಮಾಡಿಕೊಳ್ಳುವ ವಿಧಾನವನ್ನು ಅರಿತುಕೊಂಡ. ಅದು ಕೃಷಿ ಜೀವನಕ್ಕೆ ನಾಂದಿ ಹಾಡಿತು. ಕೃಷಿ ಉತ್ಪಾದನೆ ಜ್ಞಾನ ಈ ಸಂಸ್ಕೃತಿಯ ಗಮನಾರ್ಹ ಕ್ರಾಂತಿಯೆಂದು ಹೇಳಬಹುದು. ಉಳಿಮೆ ಮಾಡುವುದಕ್ಕಾಗಿ ತನ್ನ ಸುತ್ತಲಿನ ಮರಗಳನ್ನು ಕಡೆಯುವುದಕ್ಕಾಗಿ ಕಲ್ಲಿನಲ್ಲಿ ಮಾಡಿದ ಕೊಡಲಿಯನ್ನು ಉಜ್ಜಿ ತಯಾರಿಸುವ ಕಲೆಯನ್ನು ಕಂಡುಕೊಂಡಿದ್ದು ಈ ನವಶಿಲಾಯುಗದ ಕಾಲದಲ್ಲಿ. ಗಟ್ಟಿಯಾದ ಶಿಲೆಯ ಮೇಲಿನ ಚಕ್ಕೆಗಳನ್ನು ತೆಗೆದು ಅದನ್ನು ಕೊಡಲಿಯ ರೂಪಕ್ಕೆ ರಚಿಸಿ ಅದರ ಮುಂಭಾಗದ ತುದಿಯನ್ನು ಉಜ್ಜಿ ಮೊನಚುಗೊಳಿಸಿ ಮರದ ಕೋಲಿಗೆ ಕಟ್ಟಿಕೊಂಡು ಗಿಡಗಳನ್ನು ಕಡಿಯಲು ಬಳಸುವ ತಂತ್ರಜ್ಞಾನ ಈ ಹಂತದಲ್ಲಿ ಕಾಣುತ್ತೇವೆ. ಇದರಿಂದಾಗಿ ಉಳಿಮೆ ಮಾಡುವುದಕ್ಕಾಗಿ ಫಲತ್ತಾದ ಭೂಮಿ ಮತ್ತು ನೀರಿನ ಆಸರೆ ಇರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ತನ್ನ ನೆಲೆಗಳನ್ನಾಗಿ ಮಾಡಿಕೊಂಡಿರುವದನ್ನು ಈ ಹಂತದಲ್ಲಿ ಕಾಣುತ್ತೇವೆ. ಈ ಸಂಸ್ಕೃತಿಯು ಅನೇಕ ಆಯಾಮಗಳಿಂದ ಕೂಡಿದ್ದು ವಾಸಕ್ಕೆ ಯೋಗ್ಯವಾದ ಸ್ಥಳಗಳ ಆಯ್ಕೆಯಿಂದ, ಉಳಿಮೆ, ಪಶುಸಂಗೋಪನೆ, ಕೃಷಿಗೆ ಮತ್ತು ಗೃಹ ನಿರ್ವಹಣೆಗೆ ಬೇಕಾದ ಉಪಕರಣಗಳ ತಯಾರಿಕೆ, ವಸ್ತುಗಳ ವಿನಿಮಯದ ವಿಧಾನ, ಇತ್ಯಾದಿಗಳನ್ನು ಈ ಕಾಲದ ಅವಶೇಷಗಳನ್ನು ಕೂಲಂಕಷವಾಗಿ ಅಧ್ಯಯನಗಳಿಗೆ ಅಳವಡಿಸಿ ಅರಿಯಬಹುದಾಗಿದೆ. ಈ ಸಂಸ್ಕೃತಿಯ ಜನರಿಗೆ ಲೋಹ ತಯಾರಿಕೆ ಮತ್ತು ಅಕ್ಷರ ಜ್ಞಾನಗಳು ಇರಲಿಲ್ಲ ಎಂಬುದು ಗಮನಿಸಬೇಕು. ಆದರೆ ನವಶಿಲಾಯುಗದವರು ಒಂದು ಅರ್ಥಪೂರ್ಣ ಜೀವನಕ್ರಮ ಅಥವಾ ಸಂಸ್ಕೃತಿಯನ್ನು ನಿರ್ಮಿಸಿ ಇಂದಿನ ಸಾಮಾಜಿಕ ಜೀವನ ಕ್ರಮಕ್ಕೆ ಬುನಾದಿಯನ್ನು ಹಾಕಿದ್ದಾರೆ ಎಂದು ಹೇಳಬಹುದು.

ಕಲಬುರ್ಗಿ ಜಿಲ್ಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಮತ್ತು ಮಹತ್ವದ ನೆಲೆಗಳ ಶೋಧನೆ ವ್ಯವಸ್ಥಿತವಾಗಿ ನಡೆದಿಲ್ಲ. ಆದ್ದರಿಂದ ನವಶಿಲಾಯುಗ ಕಾಲದ ಪೂರ್ಣ ಚಿತ್ರಣ ಗುರುತಿಸುವುದು ಕಷ್ಟದ ಕೆಲಸವಾಗಿದೆ. ಜಿಲ್ಲೆಯ ಬೋರಿ ನದಿಯ ಬಯಲಿನಲ್ಲಿ ಮೊದಲಬಾರಿಗೆ ಸೌಂದರ ರಾಜನ್ ಮತ್ತು ಸುಂದರ ಅವರು ಅಫಜಲಪುರ ತಾಲೂಕಿನ ಉಡಚಣ ಗ್ರಾಮದ ಬಳಿ ನವಶಿಲಾಯುಗದ ಮಡಿಕೆಗಳ ಅವಶೇಷಗಳು, ಚಕಮಕಿ ಕಲ್ಲುಗಳಲ್ಲಿ ರಚಿಸಿದ ಹರಿತವಾದ ಬ್ಲೇಡ್‌ಗಳು, ೧೯೬೦ರ ದಶಕದಲ್ಲಿಯೇ ಶೋಧಿಸಿದರು. ನವಶಿಲಾಯುಗದ ಶಿಲಾಯುಧಗಳ ಜೊತೆಗೆ ತಾಮ್ರ ಲೋಹದಲ್ಲಿ ಮಾಡಿದ ಒಂದು ಚಿಕ್ಕ ಆಯುಧ ಕೂಡ ಶೋಧಿಸಲಾಗಿತ್ತು. ಆದ್ದರಿಂದ ಸುಂದರ ಅವರು ಇದನ್ನು 'ನವಶಿಲಾ-ತಾಮ್ರಯುಗ ಸಂಸ್ಕೃತಿ'ಯ ನೆಲೆಗಳೆಂದು ವರ್ಗೀಕರಿಸಿದರು. ಕಲಬುರ್ಗಿ, ಬೀದರ, ಸೋಲಾಪುರ, ಬಿಜಾಪುರ

ಜಿಲ್ಲೆಯಲ್ಲಿ ಕಂಡುಬರುವ ತಾಮ್ರ ಲೋಹದ ಪರಿಚಯವಿರುವ ನವಶಿಲಾಯುಗದ ಸಂಸ್ಕೃತಿಯ ವರ್ಗದವರೆಂದು ಅವರು ಗುರುತಿಸಿದ್ದಾರೆ. ಕಲಬುರ್ಗಿ ಜಿಲ್ಲೆಯಲ್ಲಿ ನವಶಿಲಾಯುಗದ ನೆಲೆಗಳನ್ನು ಆಳಂದ ತಾಲೂಕಿನ ಶಕಾಪುರ, ಚಿಂಚೋಳಿ ತಾಲೂಕಿನ ಭೋಮಸಪುರ; ಜೇವರ್ಗಿ ತಾಲೂಕಿನ ಇಜೇರಿ; ಹರನೂರು; ಇತ್ಯಾದಿ ಸ್ಥಳಗಳಲ್ಲಿ ಗುರುತಿಸಲಾಗಿದೆ. ಜಿಲ್ಲೆಯಲ್ಲಿ ನವಶಿಲಾಯುಗದ ಅನೇಕ ನೆಲೆಗಳಿರುವ ಸಾಧ್ಯತೆಗಳಿದ್ದು ಅವುಗಳ ಶೋಧ ಕಾರ್ಯ ನಡೆಯಬೇಕಾಗಿದೆ.

ಕಬ್ಬಿಣಯುಗ ಸಂಸ್ಕೃತಿ

ನವಶಿಲಾಯುಗದ ಸಂಸ್ಕೃತಿಯ ಕೊನೆಯ ಘಟ್ಟದ ಅವಧಿಯಲ್ಲಿ ತಾಮ್ರ ಮತ್ತು ಚಿನ್ನ ಲೋಹಗಳ ಪರಿಚಯವಾಯಿತು. ಕ್ರಮೇಣ ಕಬ್ಬಿಣ ಲೋಹದ ಪರಿಚಯದೊಂದಿಗೆ ಗುರುತರ ಬದಲಾವಣೆಗೆ ನಾಂದಿ ಹಾಡಿತು. ಬಹಳಷ್ಟು ಕಠಿಣ ಅಥವಾ ಗಟ್ಟಿಯಾದ ಲೋಹ ಇದಾಗಿದ್ದರಿಂದ ಒಕ್ಕಲುತನ ಕಾರ್ಯಗಳಿಗೆ ಉಪಯೋಗಿಸಲಾಯಿತು. ಹರಿತವಾಗಿಯೂ ಮತ್ತು ಆಳವಾಗಿಯೂ ನೆಲದಲ್ಲಿ ಸುಲಭವಾಗಿ ಉಪಯೋಗಿಸಬಹುದಾಗಿದ್ದರಿಂದ ನೇಗಿಲು, ಕುರೂಪೆ, ಕೊಡಲಿ, ಇತ್ಯಾದಿ ಕೃಷಿಗೆ ಬೇಕಾಗುವ ಉಪಕರಣಗಳನ್ನು ತಯಾರಿಸಲ್ಪಟ್ಟವು. ಕಬ್ಬಿಣ ಉಪಕರಣಗಳ ಬಳಕೆಯೊಂದಿಗೆ ಕೃಷಿಯಲ್ಲಿ ಬದಲಾವಣೆಗಳು ಕಂಡುಬಂದು ಉತ್ಪಾದನೆ ದ್ವಿಗುಣಗೊಂಡಿತು. ಇದರಿಂದ ಸಾಮಾಜಿಕ ಜೀವನ ಕ್ರಮಗಳಲ್ಲಿ ಬದಲಾವಣೆಗಳು ಕಂಡುಬಂದವು. ದೊಡ್ಡ ಬಂಡೆಗಳನ್ನು ಸುಲಭವಾಗಿ ಕೊರೆದು ಅವುಗಳನ್ನು ಮನೆಗಳ ನಿರ್ಮಾಣಕ್ಕೆ ಬಳಸಲಾಯಿತು. ಆಚರಣೆಯ ರೂಪದಲ್ಲಿ ರೂಢಿಗೆ ಬಂದ ಕಲ್ಗೋರಿ ಅಥವಾ ಬೃಹತ್ ಶಿಲಾಸಮಾಧಿಗಳ ನಿರ್ಮಾಣಗಳು ಈ ಕಾಲದಲ್ಲಿ ಕಾಣಿಸಿಕೊಂಡವು. ರಕ್ಷಣೆಗಾಗಿ ಕಬ್ಬಿಣ ಲೋಹದಲ್ಲಿ ತಯಾರಿಸಿದ ವಿವಿಧ ಮಾದರಿಯ ಖಡ್ಗ, ಕಠಾರಿ, ಇತ್ಯಾದಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದವು. ಅವುಗಳನ್ನು ಬಳಸಿಕೊಂಡು ಸಮಾಜದ ರಕ್ಷಣೆ ಮಾಡುವ ಮತ್ತು ಆಳುವ ವರ್ಗಗಳು ಸೃಷ್ಟಿಯಾದವು. ಇದರೊಂದಿಗೆ ಕಬ್ಬಿಣಯುಗ ಸಂಸ್ಕೃತಿಯು ಸಮಾಜ ಗ್ರಾಮ ಜೀವನಕ್ರಮದಿಂದ ಆಡಳಿತ ನಿರ್ವಹಿಸುವ ಆಳುವ ವರ್ಗಗಳ ಸಮಾಜ ನಿರ್ಮಾಣದೆಡೆಗೆ ಸಾಗಿದ ಕಾಲವೆಂದು ವಿದ್ವಾಂಸರು ಗುರುತಿಸಿದ್ದಾರೆ. ಕಲಬುರ್ಗಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಕಬ್ಬಿಣಯುಗ ಕಾಲದ ಅವಶೇಷಗಳಾದ ಬೃಹತ್ ಶಿಲಾ-ಸಮಾಧಿಗಳ ನೆಲೆಗಳು ದೊರಕಿವೆ. ಕಲಬುರ್ಗಿ ತಾಲೂಕಿನ ಉಪಲಾನ; ಕಪನೂರು, ಬಲ್ವಾಡು, ಮಹಾಗಾಂವ; ಚಿತ್ತಾಪುರ ತಾಲೂಕಿನ ಶಹಾಬಾದ, ರಾವೂರು, ಚಿಂಚೋಳಿ ತಾಲೂಕಿನ ಮಂಬಾಪುರ, ಮೊರನಹಾಳ, ಸೂಲೇಪೇಟ್, ಜೇವರ್ಗಿ ತಾಲೂಕಿನ ಆಂದೋಲ, ಇಜೇರಿ, ಜೇವರ್ಗಿಯ ರದ್ದೇವಾಡಗಿ ಕ್ರಾಸ್ ರಸ್ತೆ, ಸಿಗರ್ಥಹಳ್ಳಿ; ಸೇಡಂ ತಾಲೂಕಿನ ಅನಂತಪುರ, ಅಫಜಲ್‌ಪುರ ತಾಲೂಕಿನ ಮಲ್ಲಾಬಾದ್, ಇತ್ಯಾದಿ ಸ್ಥಳಗಳಲ್ಲಿ ಶೋಧಿಸಲಾಗಿದೆ. ಇವುಗಳಲ್ಲಿ ಜೇವರ್ಗಿಯ ರದ್ದೇವಾಡಗಿ ಕ್ರಾಸ್ ರಸ್ತೆಯ ಮಡ್ಡಿ ಹೊಲ ಎಂದು ಕರೆಯಲ್ಪಡುವ ಸ್ಥಳದಲ್ಲಿ ೧೮೫೦ರ ದಶಕದಲ್ಲಿ ಮೇಡೋಸ್ ಟೇಲರ್ ಅವರು ವಿಶೇಷವಾದ ಅಧ್ಯಯನ ಮತ್ತು ಸಮಾಧಿಗಳ ಚಿತ್ರಣಗಳನ್ನು ಕಂಡುಹಿಡಿಯುವುದಕ್ಕಾಗಿ ಉತ್ಖನನಗಳನ್ನು ಕೈಕೊಂಡರು. ಕಬ್ಬಿಣಯುಗ ಸಂಸ್ಕೃತಿಗೆ ಸೇರುವ ಇಲ್ಲಿಯ ಶಿಲಾಸಮಾಧಿಗಳಲ್ಲಿ ಶವಗಳನ್ನು ಹೂಳಲಾಗಿವೆ. ಕೆಲವು ಸಮಾಧಿಗಳಲ್ಲಿ ಒಂದೇ ಶವಗಳಿದ್ದರೆ, ಕೆಲವು ಸಮಾಧಿಗಳಲ್ಲಿ ಒಂದಕ್ಕೂ ಹೆಚ್ಚು ಶವಗಳನ್ನು ಒಟ್ಟಿಗೆ ಹೂಳಲಾಗಿದೆ. ಶವಗಳ ಜೊತೆಗೆ ಪಾತ್ರೆ, ಮಡಿಕೆಗಳು, ಆಯುಧಗಳು ಇತ್ಯಾದಿಗಳನ್ನು ಕೂಡ ಹೂಳಲಾಗಿದೆ. ಈ ನೆಲೆಯು ಟೇಲರ್ ಅಧ್ಯಯನ ಮಾಡುವ ಕಾಲದಲ್ಲಿ (೧೮೫೦) ೩೩೬ ಯಾರ್ಡ್ ಉದ್ದ ಮತ್ತು ೨೧೬ ಯಾರ್ಡ್ ಅಗಲ ವಿಸ್ತೀರ್ಣತೆಯಿಂದ ಕೂಡಿತ್ತು ಎಂದು ತಿಳಿದುಬರುತ್ತದೆ. ಈ ನೆಲೆಯಲ್ಲಿ ಸು. ೩೦೫ಕ್ಕೂ ಹೆಚ್ಚು ಶಿಲಾಸಮಾಧಿಗಳಿದ್ದವು ಎಂದು ಟೇಲರ್ ಪ್ರಕಟಿಸಿದ ವರದಿಯಿಂದ ತಿಳಿದುಬರುತ್ತದೆ. ಆದರೆ ಈಗ ಈ ನೆಲೆಯಲ್ಲಿ ಬೆರಳೆಣಿಕೆಯಷ್ಟು ಮಾತ್ರ ಉಳಿದಿವೆ.

ಇತಿಹಾಸ ಆರಂಭ ಕಾಲದ ಸಂಸ್ಕೃತಿ : ಈ ಜಿಲ್ಲೆಯಲ್ಲಿ ಇತಿಹಾಸ ಆರಂಭ ಕಾಲದ ಅನೇಕ ನೆಲೆಗಳನ್ನು ಶೋಧಿಸಲಾಗಿದೆ. ಸನ್ನತಿಯಂತಹ ಪ್ರಾಚೀನ ಬೌದ್ಧ ಕೇಂದ್ರಗಳು ಈ ಜಿಲ್ಲೆಯಲ್ಲಿ ಇರುವುದರಿಂದ ಆ ಕಾಲದ ಪುರಾತನ ನೆಲೆಗಳ ಶೋಧನೆಗೆ ಹೆಚ್ಚು ಒತ್ತು ವಿದ್ವಾಂಸರು ನೀಡಿದ್ದಾರೆ. ಭೀಮಾ ನದಿಯ ಕಣಿವೆಯಲ್ಲಿ ಅಸಂಖ್ಯ ನೆಲೆಗಳು ಕಂಡುಬಂದಿವೆ. ಮುಖ್ಯವಾಗಿ ಸನ್ನತಿ, ಕೊಲ್ಲೂರು, ನೇಲೋಗಿ, ಆಂದೋಲ, ರಂಜೋಳ, ಹನುಮನಹಳ್ಳಿ, ಹಂಗನಹಳ್ಳಿ, ಉಡಚಣ, ಚಂದಾಪುರ, ಲಂಬಾಡಿತಾಂಡ, ಹನ್ನೂರು, ಹಿರೆನಂದ್ನೂರು, ಕಾಲಬೆನ್ನೂರು, ಬೋಳೆವಾಡ, ಮಹಾಗಾಂವ, ಶ್ರೀನಿವಾಸ ಸಾರಡಗಿ, ಹಾಗರಗಿ, ಗುಂಡಗುರ್ತಿ, ದಿಗ್ಗಾಂವ, ಮತ್ತಿಮಡ, ಮೊಗ್ಗಹಾಳ, ಗೊಟ್ಟಮಗೊಟ್ಟ, ನಾಗಾವಿ, ಮುಕಾ, ಅರೆಬೊಮ್ಮನಹಳ್ಳಿ, ಆಲಹಳ್ಳಿ, ಇಟ್ಕಲ್ಲು, ಉಡಗಿಹಾಳ, ಕೊಂಕಣಹಳ್ಳಿ, ರಂಜೋಳ, ಹನುಮನಹಳ್ಳಿ, ಹಂಗನಹಳ್ಳಿ, ಇತ್ಯಾದಿ ಸ್ಥಳಗಳಲ್ಲಿ ಇತಿಹಾಸ ಆರಂಭಕಾಲದ ನೆಲಗಳನ್ನು ಶೋಧಿಸಲಾಗಿವೆ. ಇವುಗಳಲ್ಲಿ ಸನ್ನತಿಯಲ್ಲಿ ಪುರಾತತ್ವ ಇಲಾಖೆಯವರು ನಿರಂತರವಾಗಿ

ಅಧ್ಯಯನಗಳು ಮತ್ತು ಉತ್ಖನನಗಳನ್ನು ಕೈಕೊಂಡು ಇತಿಹಾಸ ಆರಂಭಿಕ ಕಾಲದ ಕುರಿತಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಮುಖ್ಯವಾಗಿ ಮೌರ್ಯ ರಾಜ ಮನೆತನದ ಅಶೋಕ ಚಕ್ರವರ್ತಿಯ ಬಂಡೆ ಶಾಸನದ ಹಿನ್ನೆಲೆಯಲ್ಲಿ ಭೀಮೇ ನದಿಯ ಕಣಿವೆಯಲ್ಲಿ ಇತಿಹಾಸ ಆರಂಭದ ಕಾಲದ ಸಂಸ್ಕೃತಿಯನ್ನು ಮತ್ತು ಆನಂತರದ ಶಾತವಾಹನರ ಕಾಲದ ಬೌದ್ಧ ಧರ್ಮದ ಪ್ರಸಾರ ಮತ್ತು ಬೌದ್ಧ ಕಲೆಯ ಬಗ್ಗೆ ಮಾಹಿತಿಗಳು ಲಭ್ಯವಾಗಿವೆ. ಅಶೋಕನ ಬಂಡೆ ಶಾಸನಗಳು ಕರ್ನಾಟಕದಲ್ಲಿ ದೊರೆಕಿದ್ದನ್ನು ವಿಶ್ಲೇಷಿಸಿದ ಪ್ರೊ. ಎಸ್. ಶೆಟ್ಟರ್ ಅವರು ಸನ್ನತಿಯಲ್ಲಿ ವಿಶೇಷ ಬಂಡೆ ಶಾಸನ ಹಾಕಿಸಲು ಕಾರಣವೆಂದರೆ ಭೀಮಾ ನದಿಯವರೆಗೂ ಅಶೋಕನು ಸೇನಾಚರಣೆ ಕೈಕೊಂಡಿದ್ದನು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಸನ್ನತಿಯು ಮೌರ್ಯರ ಪ್ರಧಾನ ಆಡಳಿತ ಮತ್ತು ಧಾರ್ಮಿಕ ಕೇಂದ್ರವಾಗಿತ್ತು ಹೇಳುತ್ತಾ ಶೆಟ್ಟರ್ ಅವರು ಅಶೋಕನ ಹೆಬ್ಬಂಡೆ ಶಾಸನ ಸಂಖ್ಯೆ ೧೩ರಲ್ಲಿ ಉಲ್ಲೇಖಿಸಿದ 'ಅಂದಕ' ಎಂಬ ಮಾತು ಮೌರ್ಯ ಸಾಮ್ರಾಜ್ಯದ ದಕ್ಷಿಣ ಗಡಿಗಳಲ್ಲಿ ನೆಲೆಸಿದ್ದ ಜನಾಂಗದವರನ್ನು ಸೂಚಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ (ಶೆಟ್ಟರ್ ೨೦೦೭:೭೭). ಭೀಮಾ ಮತ್ತು ಕಾಗೀಣಾ ನದಿಗಳ ಪ್ರದೇಶಗಳಲ್ಲಿ ಇತಿಹಾಸ ಆರಂಭ ಕಾಲದ ಶಾತವಾಹನರ ಆಳ್ವಿಕೆಯಲ್ಲಿ ಬೌದ್ಧ ಧರ್ಮ ತನ್ನ ಹಿಡಿತವನ್ನು ಬಿಗಿಗೊಳಿಸಿದ್ದನ್ನು ಜಿಲ್ಲೆಯಲ್ಲಿ ದೊರೆತ ಅಸಂಖ್ಯ ಪ್ರಾಚೀನ ನೆಲೆಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಆಕರಗ್ರಂಥಗಳು

೧. ಪಾಟೀಲ ಎಂ.ಬಿ. (ಸಂ.), ೧೯೯೭, ಕರ್ನಾಟಕ ಗ್ಯಾಸೇಟಿಯರ್: ಗುಲಬರ್ಗಾ ಜಿಲ್ಲೆ (ಪರಿಷ್ಕೃತ ಆವೃತ್ತಿ), ಕರ್ನಾಟಕ ಸರ್ಕಾರ, ಬೆಂಗಳೂರು.

೨. ಶೆಟ್ಟರ್ ಎಸ್., ೨೦೦೭, ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ. ಬೆಂಗಳೂರು: ಅಭಿನವ ಪ್ರಕಾಶನ.

೩. ಷಡಕ್ಷರಯ್ಯ, ಆರ್.ಎಂ., ೧೯೯೬, 'ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಪ್ರಾಚ್ಯಾವಶೇಷಗಳು (ಶೋಧನೆ)' ಇತಿಹಾಸ ದರ್ಶನ, ಸಂಪುಟ-೧೧, ಪು. ೪೯-೫೦.

೪. Howell, J.R. 1995, Excavations at Sannati (1986-89). MASI-93. New Delhi: ASI.

೫. Desai, P.B. 1968, 'A New Buddhis Centre' Journal of the Karnataka University (Social Sciences) Vol-4. Pp.3-8.

೬. Devaraj D.V. & H.T. Talwar, 1996, Interium Report on the Excavations at Sannati 1993-95. Mysore: Directorate of Archaeology & Museum.

೭. Jitendra Das. D., 2001, 'Satavahana Coins from the Maha-stupa Excavation at Kanaganahalli in Karnataka' Studies in South Indian Coins Vol.11. Pp.36-48.

೮. Krishna Murthy, 1945, 'Geology of Mahaboobnagar and Gulbarga Districts' The Journal of Hyderabad Geological Survey, Vol-4. Pp.55-101.

೯. Munn, Leonard, 1915, 'Prehistoric and Protohistoric Finds' The Journal of Hyderabad Geological Survey Vol.1 (Pt.1). Pp. 121-135.

೧೦. Paddayya, 1968, 'Pre and Protohistoric Investigations in Shorapur Doab', Unpublished Ph.D. Thesis, University of Poona.

೧೧. Paddayya, 1973, Investigations into the Neolithic culture of the Shorapur Doab, South India. Leiden: E.L.Brill.

೧೨. Poonacha, K.P., 2011, Excavations at Kanaganahalli (Sannati), Chitapur Taluk, Gulbarga District.Karnataka. New Delhi: A.S.I.

೧೩. Sundara.A., 1975, 'The Early Chamber Tombs of South India: A Study of the Iron Age Megalithic Monuments of North Karnataka' Delhi: University Publishers.

೧೪. Sundara, A., 1988, 'Malkhed-The Rashtrakuta Capital: Its Prehistory' SUDARSHANA- a Roasary of Articles in Honour of Dr. B.R. Gopal Ed. by Srinivas Ritti & K.V. Ramesh. Dharwad: Srihari Prakashana. Pp.228-233.

◆◆

ವೀಣಾ ಕಲ್ಮಠ

ಚಾರಿತ್ರಿಕ ಗುಳೇದಗುಡ್ಡ

ಗುಳೇದಗುಡ್ಡ ಪಟ್ಟಣವು ಬಾದಾಮಿ ಮತ್ತು ಐಹೊಳೆ ಮಾರ್ಗ ಮಧ್ಯದಲ್ಲಿದೆ. ಪಟ್ಟಣವು ಗುಡ್ಡದಿಂದ ಆವೃತವಾಗಿದ್ದು ರಕ್ಷಣೆಯ ದೃಷ್ಟಿಯಿಂದ ವಾಸಕ್ಕೆ ಯೋಗ್ಯವಾದ ಪ್ರದೇಶವಾಗಿದೆ. ಈ ಅಧ್ಯಯನದಲ್ಲಿ

೧. ಪಟ್ಟಣದ ಭೌಗೋಳಿಕ, ಐತಿಹಾಸಿಕ ವಿವರಗಳು ಹಾಗೂ ಸ್ಮಾರಕಗಳು.

೨. ಪಟ್ಟಣದ ಬೆಳವಣಿಗೆಯಲ್ಲಿ ಇಂಗ್ಲೀಷರ ಪ್ರವೇಶ.

೩. ಪೇಟೆ ನಾಮಗಳು ಮತ್ತು ಕುಟುಂಬ ನಾಮಗಳ ಹಿನ್ನೆಲೆಯಲ್ಲಿ ಇತಿಹಾಸದಲ್ಲಿ ಗುಳೇದಗುಡ್ಡದ ಸ್ಥಾನ ಗುರುತಿಸುವುದಾಗಿದೆ.

೧. ಪಟ್ಟಣದ ಭೌಗೋಳಿಕ, ಐತಿಹಾಸಿಕ ವಿವರಗಳು ಹಾಗೂ ಸ್ಮಾರಕಗಳು

ಗುಳೇದಗುಡ್ಡ ಪ್ರದೇಶದಲ್ಲಿ ಪ್ರಾಚೀನ ಬೃಹತ್ ಶಿಲಾಯುಗದ ಕುರುಹುಗಳಿವೆ. ಬೃಹತ್ ಶಿಲಾಯುಗದ ಗೋರಿಗಳ ಮಾದರಿಗಳು ಇಲ್ಲಿದ್ದು ಕಲ್ಮನೆ ಹಾಗೂ ಕಲ್ಲುಗುಪ್ಪೆಗಳು ಕಂಡುಬಂದಿವೆ[೧] ಎಂಬುದನ್ನು ಇತಿಹಾಸ ತಜ್ಞರು ಗುರುತಿಸಿದ್ದಾರೆ. ಗುಳೇದಗುಡ್ಡ ಬೆಟ್ಟದ ಸರಣಿಯ ಮೇಲ್ಮೈ ಸಮಪಾತಳಿಯಿಂದ ಕೂಡಿದ್ದು, ಮರಳುಗಲ್ಲಿನಿಂದ ರಚಿತವಾಗಿದೆ. ಇಲ್ಲಿ ೨೦ ಅಡಿ ಎತ್ತರದ ಬಂಡೆಗಳು ಕಂಡುಬರುತ್ತವೆ. ಬೆಟ್ಟದ ಮೇಲೆ



ಮುಖ್ಯಸ್ಥರು
ಕನ್ನಡ ಸ್ನಾತಕೋತ್ತರ ವಿಭಾಗ
ಬಸವೇಶ್ವರ ಕಲಾ ಮಹಾವಿದ್ಯಾಲಯ
ಬಾಗಲಕೋಟೆ
ಮೊ: ೯೦೦೮೯ ೦೧೨೬೪

ಮತ್ತು ಪಕ್ಕದಲ್ಲಿ ಯಾವುದೇ ರೀತಿಯ ಬೇಸಾಯ ಮಾಡಿದ್ದು ಕಂಡುಬರುವುದಿಲ್ಲ. ಪಟ್ಟಣದ ಐತಿಹಾಸಿಕ ವಿವರಗಳನ್ನು ಗಮನಿಸಿದಾಗ ಈ ಪ್ರದೇಶವು ೨ನೇ ಇಬ್ರಾಹಿಂ ಆದಿಲ್‌ಶಾಹಿ ಕಾಲದಲ್ಲಿ ನಿರ್ಮಾಣಗೊಂಡು ಟಿಪ್ಪುಸುಲ್ತಾನ ಹಾಗೂ ಜನರಲ್ ಮನ್ರೋನ ಆಡಳಿತದಲ್ಲಿ ಆಧೀನ ಪ್ರದೇಶವಾಗಿತ್ತು.

ಜಾನಪದ ಸಮುದಾಯದಲ್ಲಿ ಗುಡ್ಡದ ಮೇಲಿನಿಂದ ಕೆಳಗೆ ಬಂದು ನೆಲೆಸಿದಾಗ ಗುಡ್ಡದಿಂದ ಗುಳೇ ಬಂದು ಊರು ನಿರ್ಮಾಣಗೊಂಡು ಗುಳೇಗಡ>ಗುಳೇಗುಡ್ಡ> ಗುಳೇದಗುಡ್ಡ' ಎಂದು ಕಾಲಾನುಕ್ರಮದಲ್ಲಿ ಬದಲಾಯಿತು ಎಂಬ ಅಭಿಪ್ರಾಯವಿದೆ. ಈ ಊರು ಸ್ಥಾಪನೆಗೊಂಡಿದ್ದು ಬಿಜಾಪುರದ ಇಬ್ರಾಹಿಂ ಆದಿಲ್ ಶಾಹಿ ಕಾಲದಲ್ಲಿ (೧೫೭೯-೧೬೨೬) ಎರಡನೇ ಇಬ್ರಾಹಿಂ ಆದಿಲ್‌ಶಾಹಿಗಳ ಕಾಲದಲ್ಲಿ ಅಧಿಕಾರಿಯಾಗಿದ್ದ ನಿಂಗಪ್ಪ ನಾಯಕ ದೇಸಾಯಿಯವರ ವಶದಲ್ಲಿದ್ದು, ಅವರು ಕ್ರಿ.ಶ.೧೫೮೦ ಗುಡ್ಡದ ಮೇಲಿನ ಪ್ರದೇಶದಲ್ಲಿ ಕೋಟೆಗೋಡೆ ನಿರ್ಮಿಸಿದ. ಈಗಲೂ ಬೆಟ್ಟದ ಮೇಲೆ ಕೋಟೆ ಕಟ್ಟಿದ ಕುರುಹುಗಳಲ್ಲದೇ, ಬೆಟ್ಟದ ಮೇಲೆ ಬಸವಣ್ಣನ ಗುಡ್ಡಿ, ದರ್ಗಾ ಇರುವುದು ಕಂಡುಬರುತ್ತದೆ. ಅಲ್ಲದೇ ಬೆಟ್ಟದ ಮೇಲ್ಭಾಗದಲ್ಲಿ ವೀರಗಲ್ಲು ಕೂಡಾ ಇದ್ದು ಕುದುರೆಯ ಮೇಲೆ ಕುಳಿತಿರುವ ಯೋಧನ ಜೊತೆಗೆ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿರುವ ಸೈನಿಕರ ಶಿಲ್ಪವಿದೆ.

ಇವೆಲ್ಲ ಕುರುಹುಗಳಲ್ಲದೇ ಬೆಟ್ಟದ ಮೇಲೆ ನೀರಿನ ಅನುಕೂಲವಿರುವುದನ್ನು ಗಮನಿಸಿದಾಗ ಒಂದು ಸಂದರ್ಭದಲ್ಲಿ ಜನವಸತಿ ಇದ್ದಿರುವ ಸಾಧ್ಯತೆಗಳನ್ನು ಸ್ಪಷ್ಟಗೊಳಿಸುತ್ತದೆ. ಈಗಿರುವ ಪಟ್ಟಣವು ಕ್ರಿ.ಶ. ೧೭೦೫ರಲ್ಲಿ ಒಣಗಿದ ಕೆರೆಯ ಜಾಗದಲ್ಲಿ ನಿರ್ಮಾಣಗೊಂಡಿತು. ಪ್ರಸ್ತುತ ಪಟ್ಟಣದ ತ್ರ್ಯೈಯಂಬಕೇಶ್ವರ ದೇವಸ್ಥಾನ ಒಣಗಿದ ಕೆರೆಯ ಮಧ್ಯದಲ್ಲಿ ನಿರ್ಮಾಣಗೊಂಡಿರುವುದನ್ನು ನಕ್ಷೆಯಲ್ಲಿ ಗಮನಿಸಬಹುದಾಗಿದೆ.

ಕ್ರಿ.ಶ. ೧೬೭೨ರಲ್ಲಿ ಜಾಲಿಹಾಳ ಸಂಸ್ಥಾನದ ಗುಡ್ಡದ ತಿಮ್ಮಪ್ಪ ನಾಯಕನ ಪುತ್ರ ನರಸಪ್ಪನಾಯಕ ತನ್ನ ತಂದೆಯಂತೆ ಆಳ್ವಿಕೆ ನಡೆಸುತ್ತಿದ್ದಾಗ ಗುಳೇದಗುಡ್ಡದ ಜನರು ಉಪದ್ರವ (ದಂಗೆ ಅಥವಾ ತಕರಾರು) ಮಾಡಿ ಮಾಡಿದರೆಂಬ ಉಲ್ಲೇಖ ದೊರಕುತ್ತದೆ.[೨] ಅವಿಭಿಜಿತ ಬಿಜಾಪುರ ಜಿಲ್ಲೆಯ ಒಂದು ಭಾಗವಾಗಿದ್ದ ಗುಳೇದಗುಡ್ಡವು ಹಿಂದೆ ಸವಣೂರು ನವಾಬರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ. ೧೬೮೬ರಲ್ಲಿ ಅಬ್ದುಲ್ ಕೌಫಖಾನ್‌ನ ಮಗ ಕರೀಂಖಾನ ಔರಂಗಜೇಬನ ಅಧೀನದಲ್ಲಿ ಆಡಳಿತವನ್ನು ಸ್ವೀಕರಿಸಿದ. ಕ್ರಿ.ಶ. ೧೭೨೦ರ ವರೆಗೆ ಈ ಪ್ರದೇಶವು ಮೊಗಲರ ಹಿಡಿತದಲ್ಲಿತ್ತು. ಇವರ ನಂತರ ಟಿಪ್ಪು ಹಾಗೂ ಪೇಶ್ವೆಗಳ ಮಧ್ಯೆ ಈ ಪ್ರದೇಶದ ಒಡೆತನಕ್ಕಾಗಿ ಸಂಘರ್ಷ ಏರ್ಪಟ್ಟಿತು.

೧೭೦೫ರಲ್ಲಿ ಪೇಶ್ವೆ ಬಾಲಾಜಿ ಬಾಜಿರಾವನು ತಾಳಿಕೋಟೆ, ಬಾಗಲಕೋಟೆ, ಬಿಳಗಿಗಳನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡು, ತನ್ನ ಹೆಂಡತಿಯ ತಮ್ಮನಾದ ಆನಂದರಾವ್‌ಗೆ ಬಾಗಲಕೋಟೆಯನ್ನು, ಕೃಷ್ಣಾಜಿ ವಿಶ್ವನಾಥನಿಗೆ ಗುಳೇದಗುಡ್ಡದ ಉಸ್ತುವಾರಿಯನ್ನು ನೇಮಿಸಿದನು.[೩] ೧೭೫೫ರಲ್ಲಿ ಪೇಶ್ವೆಯು ಸವಣೂರ ನವಾಬರಿಂದ ಈ ಪ್ರದೇಶವನ್ನು ಸಂಪೂರ್ಣ ತನ್ನ ಅಧೀನಕ್ಕೆ ಪಡೆದುಕೊಂಡನು. ಈ ಪ್ರದೇಶವನ್ನು ೧೭೫೬ರಲ್ಲಿ ಪೇಶ್ವೆಯು ಮುಧೋಳದ ಘೋರ್ಪಡೆಗಳಿಗೆ ವಹಿಸಿಕೊಟ್ಟನು. ಈ ಅವಧಿಯಲ್ಲಿ ಬಾದಾಮಿಯಲ್ಲಿನ ಮಲ್ಲಾರ ಶಾಹಿ ನಾಣ್ಯ ತಯಾರಿಕೆ ಕುಂಠಿತಗೊಂಡಿತು. ಪರಿಣಾಮವಾಗಿ ಸ್ಥಳೀಯ ಆಡಳಿತದಲ್ಲಿ ಏರುಪೇರಾಗಿ ಪರ್ವತಿ, ಜಾಲಿಹಾಳ, ಕೆರೂರ ಹಾಗೂ ಬಾಗಲಕೋಟೆಯ ದೇಸಾಯಿಗಳು ಹಾಗೂ ರುಸ್ತುಂ ಅಲಿಖಾನರ ಮಧ್ಯೆ ಆಡಳಿತ ಅಧಿಕಾರ ವಿಭಜನೆಗೊಂಡಿತು. ಕಳ್ಳಕಾಕರ ಭಯ ಹೆಚ್ಚಾಯಿತು. ಮರಾಠರು ೧೯೫೭ ರಲ್ಲಿ ಬಾದಾಮಿಯ ಸರದೇಶ ಮುಖಿಯಾಗಿ ಕೃಷ್ಣಾಜಿ ವಿಶ್ವನಾಥರನ್ನು ಡೆಪ್ಯೂಟ್ ಮಾಡಿದರು. ೧೭೫೯ರ ವರೆಗೆ ಈತನು ಕ್ರಿಯಾಶೀಲನಾಗಿ ಆಡಳಿತ ನಡೆಸಿದನು.[೪] ೧೯೫೭ರಲ್ಲಿ ಪೇಶ್ವೆ ಮತ್ತು ನವಾಬರ ಸಂಬಂಧ ಅಸಂತುಷ್ಟಗೊಂಡು, ನಿಜಾಮ ಮತ್ತು ಪೇಶ್ವೆಗಳ ನಡುವೆ ಯುದ್ಧವಾಗಿ, ನಿಜಾಮನ ಸೈನ್ಯ ಸೋತಿತು. ೧೭೬೦ ರಿಂದ ೧೭೭೮ರ ವರೆಗೆ ಈ ಪ್ರದೇಶವು ಪುನಃ ಪೇಶ್ವೆಗಳ ಆಡಳಿತದಲ್ಲಿತ್ತು. ೧೭೭೮ ರಿಂದ ೧೭೮೯ರ ಅವಧಿಯಲ್ಲಿ ಬಿಜಾಪುರದ ದಕ್ಷಿಣ ಭಾಗವು ಹೈದರ ಅಲಿ ಮತ್ತು ಟಿಪ್ಪುವಿನ ಅಧೀನಕ್ಕೊಳಪಟ್ಟಿತು. ೧೭೮೭ರಲ್ಲಿ ಟಿಪ್ಪು ಮತ್ತು ಪೇಶ್ವೆ ನಡುವೆ ಗಜೇಂದ್ರಗಡದಲ್ಲಿ ಯುದ್ಧವಾಗಿ ಈ ಭಾಗ ಟಿಪ್ಪುವಿನ ಅಧೀನವಾಯಿತು. ೧೭೮೭ರಲ್ಲಿ ಯುದ್ಧದಿಂದ ಮರಳುವಾಗ ಮರಾಠರ ಪರಶುರಾಮ ಭಾವೂ ಎಂಬುವವನು ಗುಳೇದಗುಡ್ಡವನ್ನು ಲೂಟಿ ಮಾಡಿದನು. ಮುಂದೆ ೧೭೮೯ ಇಂದ ೧೮೧೮ರ ವರೆಗೆ ಇಲ್ಲಿ ಪೇಶ್ವೆಗಳು ಸಂಪೂರ್ಣ ಆಡಳಿತ ನಿರ್ವಹಿಸಿದರು. ಕ್ರಿ.ಶ. ೧೮೧೮ ರಲ್ಲಿ ಪೇಶ್ವೆಗಳ ಪತನದ ನಂತರ ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ಪ್ರದೇಶಗಳು ಬ್ರಿಟೀಷರ ಅಧೀನವಾದವು.



ಇಂಗ್ಲೀಷರ ಆಡಳಿತವು ೧೮೧೮ ರಿಂದ ೧೮೩೭ರ ವರೆಗೆ ಧಾರವಾಡ (ಕಲೆಕ್ಟರ್) ಜಿಲ್ಲಾಧಿಕಾರಿಯಾದ ಜನರಲ್ ಮನ್ರೋನ ಆಡಳಿತಕ್ಕೊಳಪಟ್ಟವು.[೫] ಇದೇ ಸಮಯದಲ್ಲಿ ನರಸಪ್ಪ ಸೂಳಿಕೇರಿ ಎಂಬುವನು ಕ್ರಿ.ಶ. ೧೮೧೮ರಲ್ಲಿ ಗುಳೇದಗುಡ್ಡದ ಜನರನ್ನು ಮತ್ತೊಮ್ಮೆ ಲೂಟಿ ಮಾಡಿದನು. ಇದರಿಂದ ಹೆದರಿದ ಜನರು ಗುಳೇದಗುಡ್ಡವನ್ನು ಬಿಟ್ಟು ಹೊರಟು ಹೋದರು. ಇಡೀ ಊರು ಖಾಲಿಯಾಗುವ ಸಂದರ್ಭ ಬಂದಾಗ ಧಾರವಾಡದ ಜನರಲ್ ಮನ್ರೋ ಹಾಗೂ ಕೋಟೆಕಲ್ ದೇಸಾಯಿಗಳ ಸಹಕಾರದೊಂದಿಗೆ ಬಿಜಾಪುರ ಧಾರವಾಡದ ಜನರನ್ನು ಕರೆತಂದು ನೆಲೆಸುವಂತೆ ಮಾಡಿದರು. ಜನರಲ್ ಮನ್ರೋ ಗುಳೇದಗುಡ್ಡದ ರಕ್ಷಣೆಗೆ ಸೈನಿಕರನ್ನು ತಂದು ಇರಿಸಿದನು. ಇದೇ ಸಂದರ್ಭದಲ್ಲಿ ಜರುಗಿದ ಬಾದಾಮಿ ಬಂಡಾಯವು[೬] ಇಂಗ್ಲೀಷರ ಆಡಳಿತವನ್ನು ಮತ್ತಷ್ಟು ಗಟ್ಟಿಗೊಳಿಸಿತು. ೧೯೪೧ರಲ್ಲಿ ಬ್ರಿಟಿಷ್‌ರಿಂದ ಪದಚ್ಯುತಗೊಂಡ ನರಸಿಂಹ ದತ್ತಾತ್ರೇಯನು ಪ್ರತಾಪಸಿಂಹನ ೧೦೦೦ ಸೈನ್ಯದ ಸಹಾಯದಿಂದ ಬಾದಾಮಿಯನ್ನು ಮುತ್ತಿದಾಗ, ಬ್ರಿಟಿಷ್‌ರ ಅಧಿಕಾರಿ ಬೆಟ್ಟಿಂಗ್‌ಟನ್‌ನ ನಾಯಕತ್ವದಲ್ಲಿ ಬಾದಾಮಿ ದಂಗೆಯನ್ನು ಅಡಗಿಸಲಾಯಿತು.

ಮುಂದೆ ಈ ಪ್ರದೇಶ ಬ್ರಿಟಿಷ್ ಅಧಿಕಾರಿಗಳ ಅಧಿಕಾರಕ್ಕೊಳಪಟ್ಟಾಗ ಅಭಿವೃದ್ಧಿಯತ್ತ ವಿಶೇಷ ಗಮನಹರಿಸಿದರು. ೧೯೫೦ Bombay Act No. XVIII ಪ್ರಕಾರ ಗುಳೇದಗುಡ್ಡ ಪುರಸಭೆ ರಚನೆಗೆ ಅನ್ವಯವಾಯಿತು. ೧೯೫೪ರಲ್ಲಿ ಬಿಜಾಪುರ ಜಿಲ್ಲೆಯ ಭಾಗವಾಗಿ ಗುಳೇದಗುಡ್ಡದಲ್ಲಿ ಮಿಶನರಿಗಳಿಂದ ಬಾಲಕಿಯರ ಶಾಲೆ ಆರಂಭಗೊಂಡಿತು. ೧೮೯೯ರ ಹೊತ್ತಿಗೆ ಬಿಜಾಪುರ, ಬಾಗಲಕೋಟೆಗಳಲ್ಲಿ ಬಾಲಕಿಯರ ಎರಡು ಶಾಲೆಗಳು ಆರಂಭವಾದವು.[೭] ೧೯೫೮ರಲ್ಲಿ ಬಾಸೆಲ್ ಮಿಶನರಿಗಳಿಂದ ಬಾಲಕರ ಶಾಲೆ ಆರಂಭವಾಯಿತು. ಇದೇ ಸಮಯದಲ್ಲಿ ರೇಷ್ಮೆ ತಯಾರಿಕಾ ಕುಟುಂಬಗಳು (೧೮೪೮) ಬಂದು ಇಲ್ಲಿ ನೆಲೆಸಿದವು. ಇದರಲ್ಲಿ ಮುಸ್ಲಿಂ ಕುಟುಂಬಗಳು ಇದ್ದು, ರೇಷ್ಮೆ ಸೀರೆ, ಕುಪ್ಪಸ ತಯಾರಿಕಾ ಕೇಂದ್ರಗಳಾಗಿ ಇಳಕಲ್, ಗುಳೇದಗುಡ್ಡ, ರಬಕವಿ ಮತ್ತು ಬನಹಟ್ಟಿ ಪ್ರಾಮುಖ್ಯತೆ ಪಡೆದವು. ಇಲ್ಲಿ ತಯಾರಾದ ಬಟ್ಟೆಗಳು ಬಾಂಬೆ, ಪುನಾ, ಅಹಮದನಗರ, ಸೋಲಾಪುರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತಿದ್ದವು.[೮] ಬ್ರಿಟಿಷ್ ಕಾಲದಿಂದ ಗುಳೇದಗುಡ್ಡ ಪ್ರಮುಖ ವ್ಯಾಪಾರಿಕೇಂದ್ರವಾಗಿ ಸ್ಥಾನ ಪಡೆಯಿತು. ಹೀಗೆ ಇಡಿಯಾಗಿ ಗುಳೇದಗುಡ್ಡ ಪಟ್ಟಣದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸುವುದರ ಜೊತೆಗೆ ಪೇಟೆ ನಾಮಗಳು ಮತ್ತು ಕುಟುಂಬ ನಾಮಗಳು ಇತಿಹಾಸದೊಂದಿಗೆ ನಂಟು ಹೊಂದಿರುವುದನ್ನು ಗುರುತಿಸಬಹುದಾಗಿದೆ.

ಪೇಟೆ ನಾಮಗಳು ಹಾಗೂ ಕುಟುಂಬಗಳು

ಗುಳೇದಗುಡ್ಡದಲ್ಲಿ ಮುಖ್ಯವಾಗಿ ಮೇಲಿನ ಪೇಟೆ ಮತ್ತು ಕೆಳಗಿನ ಪೇಟೆ ಎಂದು ವಿಭಾಗ ಈಗ ಪ್ರಚಲಿತದಲ್ಲಿದ್ದು, ಇದಕ್ಕಿಂತ ಪೂರ್ವದಲ್ಲು ರಾಜಂಗಳ ಪೇಟೆ, ನಗರ್ತ ಪೇಟೆ, ಕಂಠಿ ಪೇಟೆ, ಗುಗ್ಗರಿ ಪೇಟೆ, ಹೊಸಪೇಟೆ ಮುಖ್ಯವಾಗಿವೆ. ಗುಡ್ಡಕ್ಕೆ ಅಂಟಿಕೊಂಡು ಕೆಳಭಾಗದಲ್ಲಿ ಅಂದರೆ ಗುಡ್ಡದ ಕೆಳಗೆ ಸಮತಟ್ಟಾದ ಪ್ರದೇಶದಲ್ಲಿ ರಾಜಂಗಳ ಪೇಟೆ ಹಾಗೂ ನಗರ್ತ ಪೇಟೆ ಇದೆ.

* ರಾಜಂಗಳ ಪೇಟೆ ಅಧಿಕಾರ ವಲಯದ ಉನ್ನತ ವರ್ಗದ ಕುಟುಂಬಗಳು ವಾಸಿಸುವ ಪ್ರದೇಶವಾಗಿದೆ.

* ನಗರ್ತ ಪೇಟೆಯ ರಾಜಂಗಳ ಪೇಟೆಯ ರೂಪಿತಗೊಂಡ ಎಡ ಭಾಗದ ಪ್ರದೇಶದಲ್ಲಿ ವಿಸ್ತರಿಸಿದ್ದು, ವ್ಯಾಪಾರಿ ಕುಟುಂಬಗಳು ವಾಸಿಸುವ ಪ್ರದೇಶವಾಗಿದೆ. ಇಂದು ಇದನ್ನು ನಗರಖಾನ್ ಪೇಟೆ ಎಂತಲೂ ಕರೆಯುವರು.

* ಗುಗ್ಗರಿ ಪೇಟೆ ಎಂಬುದು ಇವೆರಡರ ಮಧ್ಯದಲ್ಲಿದ್ದು, ಬಡ ನೇಕಾರ ಕುಟುಂಬಗಳು ವಾಸಿಸುವ ಪ್ರದೇಶವಾಗಿದೆ.

* ಕಂಠಿಪೇಟೆ ಎಂಬುದು ಕಂಠಿ ಎಂಬ ಕುಟುಂಬದಿಂದ ಬಂದುದಾಗಿದ್ದು ದೇವಾಂಗ ಸಮುದಾಯದ ಜನರ ವಾಸವಿಲ್ಲಿದೆ.

* ಪಟ್ಟಣದ ಆಯ್ದ ಕುಟುಂಬ ನಾಮಗಳನ್ನು ಗಮನಿಸಿದಾಗ ಅಂಗಡಿ, ಪಟ್ಟಣಶೆಟ್ಟಿ ಮುಂತಾದವು ಅಧಿಕಾರಿ ವರ್ಗವನ್ನು ಸೂಚಿಸುತ್ತವೆ.

* ಗೌಡರ, ಹೆಗಡೆ, ಗುಡ್ಡದ, ಕವಿಶೆಟ್ಟಿ, (ಕಳೆಲೆ+ಸೆಟ್ಟಿ) ಇವು ಪ್ರಾಚೀನ ಕುಟುಂಬಗಳಾಗಿದ್ದು, ಇಲ್ಲಿ ನೆಲೆ ನಿಂತಿವೆ. ಬಿಜಾಪುರ, ಧಾರವಾಡ, ಪುರುತಗೇರಿ ಕುಟುಂಬಗಳು ಬೇರೆ ಪ್ರದೇಶದಿಂದ ವ್ಯಾಪಾರಿ ಸಮುದಾಯಗಳ ಪ್ರತಿನಿಧಿಗಳಾಗಿವೆ.

ಗುಳೇದಗುಡ್ಡದ ಚಾರಿತ್ರಿಕ, ಜಾನಪದಿ ನೆಲೆಯ ಆಕರಗಳನ್ನು ಆಧರಿಸಿ ಕೆಲ ಅಂಶಗಳನ್ನು ಈ ರೀತಿ ಗುರುತಿಸಲಾಗಿದೆ.

* ಗುಳೇದಗುಡ್ಡ, ಬಾದಾಮಿ ಮತ್ತು ಐಹೊಳೆ ಮಾರ್ಗ ಮಧ್ಯದಲ್ಲಿನ ಪ್ರದೇಶವಾಗಿರುವುದರಿಂದ ಈ ಪ್ರದೇಶ ಪ್ರಾಮುಖ್ಯತೆ ಪಡೆಯುತ್ತದೆ.

* ಗಾವುಂಡ, ಸೆಟ್ಟಿ ಎಂಬುವು ವ್ಯಾಪಾರಿ ಪ್ರಮುಖರನ್ನು ಸೂಚಿಸುತ್ತಿದ್ದು ಅಯ್ಯಾಹೊಳೆ ಚದುರಿದಾಗ ಗುಳೇದಗುಡ್ಡಕ್ಕೆ ಬಂದು ನೆಲೆಸಿದ ಸಾಧ್ಯತೆಗಳಿವೆ.

'ನಗರ್ತ' ಎಂಬುದು ವ್ಯಾಪಾರದ ಕೇಂದ್ರವಾಗಿರುವ, ರಾಜಂಗಳ ಎಂಬುದು ಪ್ರಮುಖ ವ್ಯಾಪಾರಿ ವರ್ಗದ ವಾಸ ಕೇಂದ್ರವೆಂಬುದು ಅಯ್ಯಾಹೊಳೆ ಐನೋರ್ವರಿಗೂ ಸಂಬಂಧವನ್ನು ಸೂಚಿಸುತ್ತವೆ.

ಒಟ್ಟಾರೆ ಗುಳೇದಗುಡ್ಡ ಕ್ರಿ.ಶ. ೧೫ನೇ ಶತಮಾನಕ್ಕಿಂತ ಮೊದಲೇ ಅಸ್ತಿತ್ವ ಪಡೆದಿದ್ದು, ಬಿಜಾಪುರದ ಆದಿಲ್‌ಶಾಹಿ ದೇಸಗತಿ ಅಧೀನಕ್ಕೊಳಪಟ್ಟ ಪ್ರದೇಶವಾಗಿತ್ತು. ಮುಂದೆ ಇಂಗ್ಲೀಷ್‌ರ ಅವಧಿಯಲ್ಲಿ ಪ್ರಮುಖ ಕೇಂದ್ರವಾಗಿ ಸ್ಥಾನ ಪಡೆದಿರುವುದು ಕಂಡು ಬರುತ್ತದೆ. ಐತಿಹಾಸಿಕ ನೆಲೆಯಲ್ಲಿ ಅಯ್ಯಾಹೊಳೆ, ಬಾದಾಮಿಯ ಆಡಳಿತದ ವಿಸ್ತಾರತೆಯನ್ನು ಅಧ್ಯಯನಕ್ಕೊಳಪಡಿಸುವಲ್ಲಿ ಗುಳೇದಗುಡ್ಡದ ಪೂರಕ ಅಧ್ಯಯನಕ್ಕೆ ಎಡೆ ಮಾಡಿಕೊಡುತ್ತದೆ.

ಅಡಿಟಿಪ್ಪಣಿಗಳು

೧. Early chamber Tombs of South India P.No. 35.
೨. ಕ್ಯಾಂಪಬೆಲ್ ಗೆಜೆಟಿಯರ್, ಪು.ಸಂ. ೦೬.
೩. ಆದಿಲ್‌ಶಾಹಿ ಸಾಹಿತ್ಯ-೧೫, ಪು.ಸಂ. ೨೪೧.
೪. ಕ್ಯಾಂಪಬೆಲ್ ಗೆಜೆಟಿಯರ್, ಪು.ಸಂ. ೨೬೨.
೫. ಬಿಜಾಪುರ ಗೆಜೆಟಿಯರ್, ಪು.ಸಂ. ೦೩.
೬. ಬಿಜಾಪುರ ಗೆಜೆಟಿಯರ್, ಪು.ಸಂ. ೧೭೩.
೭. Mysore State Gazetteer, P.No. 400.
೮. Mysore State Gazetteer, P.No. 242.

♦♦

೬

ಮಂಜುನಾಥ ಟಿ.

ಶಿವನಿ ಪರಿಸರದ ಬೃಹತ್‌ಶಿಲಾಯುಗ ಸಂಸ್ಕೃತಿಯ ಸಮಾಧಿ ನೆಲೆಗಳು

ಇತಿಹಾಸಪೂರ್ವ ಕಾಲದ ಮಾನವನ ಸಾಂಸ್ಕೃತಿಕ ಅವಿಚ್ಛಿನ್ನತೆಗೆ ಆಧಾರಗಳು ವಿರಳವಾಗಿ ಕಂಡುಬಂದಿವೆ. ಅಂತಹ ಆಧಾರಗಳನ್ನು ವೈಜ್ಞಾನಿಕವಾಗಿ ಪರಾಮರ್ಶಿಸಿ ಪೂರ್ವಇತಿಹಾಸ ಮಾನವ ಜೀವನಶೈಲಿ, ಸಂಪ್ರದಾಯದ ಬಗ್ಗೆ ತಿಳಿಯಬಹುದು. ಮಾನವನ ಸಾಂಸ್ಕೃತಿಕ ಅನುಪೂರ್ವಿಗಳು ಹಂತ ಹಂತವಾಗಿ ಬೆಳೆದು ಬಂದಿದ್ದು, ಆದಿ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ಸಾಂಸ್ಕೃತಿಕ ವ್ಯತ್ಯಾಸಗಳನ್ನು ಕಾಣಬಹುದು. ಶಿವನಿ ಪರಿಸರವು ಇಂತಹ ಆದಿಮಾನವನ ಬಹು ಸಾಂಸ್ಕೃತಿಕ ಆಯಾಮಗಳನ್ನು ಹೊಂದಿದ್ದು, ಅನುವನಹಳ್ಳಿ,[೧] ಹರಳಹಳ್ಳಿಯಂತಹ[೨] ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ನೆಲೆಗಳನ್ನು ಕಾಣಬಹುದು. ಈ ಭಾಗದಲ್ಲಿ ಇನ್ನಷ್ಟು ಕ್ಷೇತ್ರ ಅನ್ವೇಷಣೆಗೆ ಕೈಗೊಂಡುದರ ಫಲವಾಗಿ ಚೀರನಹಳ್ಳಿ, ಕಾರೇಹಳ್ಳಿ, ದಾಸರಹಟ್ಟಿ, ಶಿವನಿ, ಜಲಧೀಹಳ್ಳಿ ಮತ್ತು ತಿಮ್ಮಾಪುರ ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಇಲ್ಲಿ ಸಿಕ್ಕಿರುವ ಆಧಾರಗಳು ವಿರಳವಾದರೂ ಸಾಂಸ್ಕೃತಿಕ ಲಕ್ಷಣಗಳು ಬೃಹತ್ ಶಿಲಾ ಸಾಂಸ್ಕೃತಿಕ ಕಾಲಕ್ಕೆ ಸೇರಿದವುಗಳು ಎಂದು ದೃಢೀಕರಿಸುತ್ತವೆ.

ಭೌಗೋಳಿಕ ಹಿನ್ನೆಲೆ

ವೈವಿಧ್ಯಮಯ ಪರಿಸರದ ಲಕ್ಷಣಗಳನ್ನು ಹೊಂದಿರುವ ಕರ್ನಾಟಕದ ಸಹ್ಯಾದ್ರಿ ಬೆಟ್ಟಗಳ ಸಾಲಿನ ಪೂರ್ವದ ಅಂಚಿನಲ್ಲಿರುವ ಚಿಕ್ಕಮಗಳೂರು ಜಿಲ್ಲೆಯ ಗಡಿ ಭಾಗವಾದ ಶಿವನಿ ಹೋಬಳಿಯು ಸಮತಟ್ಟಾದ ಬಯಲಿನ ಜೊತೆಗೆ ನೈಸರ್ಗಿಕ ಬೆಟ್ಟ-ಗುಡ್ಡಗಳಿಂದ ಕೂಡಿದೆ. ಹಲವಾರು ಹಳ್ಳಗಳು ಇಲ್ಲಿಂದ ಹುಟ್ಟಿ ಹರಿಯುತ್ತವೆ. ಶಿಲಾಸಮುಚ್ಚಯಗಳು, ಅರಣ್ಯ ಪ್ರದೇಶ, ಬಯಲು ಪ್ರದೇಶ, ಪ್ರಾಣಿ ಸಂಪತ್ತು, ಶಿಲಾಯುಧಗಳನ್ನು ತಯಾರು ಮಾಡಲು ಅವಶ್ಯವಿರುವ ವಿವಿಧ ಬಗೆಯ ಕಲ್ಲುಗಳು ಮುಂತಾದ ಪ್ರಾಕೃತಿಕ ಸಂಪತ್ತಿನಿಂದ ಶಿವನಿ ಪರಿಸರವು ಕೂಡಿದೆ.

ಶಿವನಿ ಹೋಬಳಿಯು ಚಿಕ್ಕಮಗಳೂರು ಜಿಲ್ಲೆಯ ಗಡಿಭಾಗದಲ್ಲಿ ಕಂಡುಬರುವುದರ ಜೊತೆಗೆ ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳೊಂದಿಗೆ ಗಡಿ ಮೇರೆಗಳನ್ನು ಹೊಂದಿವೆ. ತಾಲ್ಲೂಕು ಕೇಂದ್ರವಾದ ಅಜ್ಜಂಪುರದಿಂದ ೧೨ ಕಿ.ಮೀ. ಉತ್ತರಕ್ಕೆ ಶಿವನಿ ಗ್ರಾಮವಿದೆ. ಹೋಬಳಿ ಪರಿಸರವು ಪಶ್ಚಿಮದಿಂದ ಉತ್ತರದವರೆಗೆ ಬೆಟ್ಟ ಗುಡ್ಡಗಳಿಂದ ಕೂಡಿದೆ. ಇಲ್ಲಿಂದ ಹಲವಾರು ನದಿಗಳು ಹುಟ್ಟಿ ಹರಿಯುತ್ತವೆ. ಹವಾಮಾನ ವೈಪರೀತ್ಯದಿಂದ

ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ
ಮೊ: ೯೮೪೪೧ ೨೪೩೩೧

ಕೇವಲ ಮಳೆಗಾಲಕ್ಕೆ ಮಾತ್ರ ಸೀಮಿತವಾಗಿರುವ ಈ ಹಳ್ಳಗಳ ದಂಡೆಯ ಮೇಲೆ ಪೂರ್ವ ಇತಿಹಾಸದ ಮಾನವನ ನೆಲೆಗಳನ್ನು ಕಾಣಬಹುದು. ಈ ಎಲ್ಲಾ ಹಳ್ಳಗಳು ಮುಂದೆ ಒಂದೆಡೆ ಸೇರಿ ಬೇಗೂರು ಹಳ್ಳದ ಮುಖಾಂತರ ಹರಿದು ವೇದಾವತಿ ನದಿಯನ್ನು ಸೇರುತ್ತವೆ.

ಕಬ್ಬಿಣದ ಪರಿಚಯ ಆದ ಮೇಲೆ ಮಾನವನ ಜೀವನದಲ್ಲಿ ಹಲವಾರು ಬದಲಾವಣೆಗಳು ಕಂಡುಬಂದವು. ಕಬ್ಬಿಣದ ಸಹಾಯದಿಂದ ದೊಡ್ಡ ಕಲ್ಲುಗಳನ್ನು ಬಳಸಿ ಸಮಾಧಿ ಮಾಡುವ ಸಂಸ್ಕೃತಿ ಪ್ರಾರಂಭವಾಯಿತು. ಆದ್ದರಿಂದ ಈ ಕಾಲವನ್ನು 'ಬೃಹತ್ ಶಿಲಾಯುಗ ಸಂಸ್ಕೃತಿ', 'ಕಬ್ಬಿಣಯುಗ ಸಂಸ್ಕೃತಿ' ಎಂದು ಕರೆಯಲಾಗಿದೆ. ದಕ್ಷಿಣ ಭಾರತದಲ್ಲಿ ಕಂಡುಬರುವ ಬೃಹತ್ ಶಿಲಾಸಂಸ್ಕೃತಿ ಕಾಲವನ್ನು ಕ್ರಿ.ಪೂ. ೧೦೦೦-೩೦೦ ಅವಧಿಗೆ ಗುರುತಿಸಬಹುದು.[೩] ದಕ್ಷಿಣ ಕರ್ನಾಟಕ ಬೃಹತ್ ಶಿಲಾಸಂಸ್ಕೃತಿಯ ಸಮಾಧಿ ನೆಲೆಗಳಲ್ಲಿ ೧೨ ರೀತಿಯ ಸಮಾಧಿ ನಮೂನೆಗಳನ್ನು ವಿ. ಡಿ. ಕೃಷ್ಣಸ್ವಾಮಿಯವರು ಗುರುತಿಸಿದ್ದಾರೆ.[೪] ಪ್ರಮುಖವಾಗಿ ಶಿವನಿ ಪರಿಸರದಲ್ಲಿ ಮೂರು ರೀತಿಯ ಸಮಾಧಿ ನಮೂನೆಗಳು ಕಂಡುಬಂದಿವೆ.

೧. ನಿಲಿವುಗಲ್ಲುಗಳು: ನೇರವಾಗಿ ನಿಲ್ಲಿಸಿರುವ ಉದ್ದದ ಕಂಬದ ರೀತಿಯ ಕಲ್ಲುಗಳು ಅಥವಾ ಬಂಡೆಗಲ್ಲುಗಳು ಈ ವರ್ಗಕ್ಕೆ ಸೇರುತ್ತವೆ. ಇವುಗಳ ಸುತ್ತಾ ವೃತ್ತಗಳಿರುತ್ತವೆ. ಇವುಗಳಲ್ಲಿ ಸಮಾನಾಂತರ ಪಂಕ್ತಿಯಲ್ಲಿ ಹಾಗೂ ನಿರ್ದಿಷ್ಟ ವಿನ್ಯಾಸದಲ್ಲಿ ನೆಟ್ಟಿರುವ ಕಲ್ಲುಗಳ ಎರಡು ನಮೂನೆಗಳಿವೆ. ಇವುಗಳನ್ನು ಸ್ಥಳೀಯವಾಗಿ ನೆಟ್ಟಕಲ್ಲು, ಆನೆ ಕಟ್ಟುವ ಕಲ್ಲು, ಕುದುರೆ ಕಟ್ಟುವ ಕಲ್ಲು ಎಂದು ಕರೆಯುತ್ತಾರೆ. ಈ ನಮೂನೆಯ ಸಮಾಧಿಗಳು ನಮಗೆ ಅಧ್ಯಯನ ವ್ಯಾಪ್ತಿಯಲ್ಲಿ ಚೀರನಹಳ್ಳಿ, ದಾಸರಹಳ್ಳಿ, ಶಿವನಿ ಹಾಗೂ ತಿಮ್ಮಾಪುರಗಳಲ್ಲಿ ಕಂಡುಬಂದಿವೆ.

ಚೀರನಹಳ್ಳಿ: ಚೀರನಹಳ್ಳಿ ಗ್ರಾಮವು ಹೋಬಳಿ ಕೇಂದ್ರದಿಂದ ೪ ಕಿ.ಮೀ ದೂರದಲ್ಲಿದ್ದು, ೧೩.೮೫' ಅಕ್ಷಾಂಶ ಮತ್ತು ೭೬.೦೨' ರೇಖಾಂಶದಲ್ಲಿದೆ. ಗ್ರಾಮದಿಂದ ನಾಗೇನಹಳ್ಳಿಗೆ ಹೋಗುವ ದಾರಿಯ ಪಕ್ಕದಲ್ಲಿ ತೆಂಗಿನ ತೋಟದಲ್ಲಿ ೨ ನಿಲಿವುಗಲ್ಲುಗಳಿವೆ (ಚಿತ್ರ-೧). ಈ ನೆಲೆಯು ಸಹ ಒಳಗಲ್ಲು ಹಳ್ಳದ ಉಪಶಾಖೆಯ ದಡದಲ್ಲಿದೆ. ಪ್ರಸ್ತುತ ಹರಳಹಳ್ಳಿ ಮತ್ತು ಕಾರೇಹಳ್ಳಿ ನೆಲೆಗಳಿಗೆ ೨ ಕಿ.ಮೀ. ಅಂತರದಲ್ಲಿದೆ. ಸ್ಥಳೀಯರ ಪ್ರಕಾರ ಈ ತರಹದ ನೆಡುಕಲ್ಲುಗಳು ೫ ರಿಂದ ೬ ಇದ್ದು, ಪ್ರಸ್ತುತ ೨ ಮಾತ್ರ ಇವೆ. ಈ ಕಲ್ಲುಗಳು ೨ ಅಡಿ ಅಗಲ ೪ ಅಡಿ ಎತ್ತರ ಇವೆ ತುದಿ ಭಾಗವು ಮುರಿದಿರುವಂತೆ ಕಂಡುಬರುತ್ತವೆ. ಇಲ್ಲಿ ಮಡಕೆಗಳ ಅವಶೇಷಗಳು ಕಂಡುಬಂದಿರುವುದಿಲ್ಲ.


೧

ದಾಸರಹಟ್ಟಿ: ದಾಸರಹಟ್ಟಿ ಗ್ರಾಮವು ಹೋಬಳಿ ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದ್ದು, ೧೩.೮೭' ಅಕ್ಷಾಂಶ ಮತ್ತು ೭೬.೦೬' ರೇಖಾಂಶದಲ್ಲಿದೆ. ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಅರಣ್ಯ ಇಲಾಖೆಯ ನೆಡುತೋಪಿನಲ್ಲಿ ೩ ನಿಲ್ಲಿಸುಗಲ್ಲುಗಳು ಕಂಡುಬರುತ್ತವೆ(ಚಿತ್ರ-೨). ಮೊದಲನೇ ನಿಲಿಸುಗಲ್ಲು ೨ ಅಡಿ ಅಗಲ ೪ ಅಡಿ ಎತ್ತರವಿದ್ದು ಪಶ್ಚಿಮಕ್ಕೆ ೩೦ ಡಿಗ್ರಿಯಷ್ಟು ಓರೆಯಾಗಿದೆ. ಎರಡನೇ ನಿಲಿವುಗಲ್ಲು ೨ ಅಡಿ ಅಗಲವಿದ್ದು ಅರ್ಧಕ್ಕೆ ಮುರಿದಿದೆ. ಮೂರನೇ ನಿಲಿವುಗಲ್ಲು ಸಂಪೂರ್ಣವಾಗಿ ನೆಲದ ಮೇಲೆ ಬಿದ್ದಿದ್ದು ೨ ಅಡಿ ಅಗಲ ೬ ಅಡಿ ಉದ್ದವಾಗಿದೆ.


೨

ತಿಮ್ಮಾಪುರ: ತಿಮ್ಮಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿ ೧೩.೭೭' ಅಕ್ಷಾಂಶ


೩

ಮತ್ತು ೭೫.೯೭ ರೇಖಾಂಶದಲ್ಲಿದೆ. ಬುಕ್ಕಾಂಬುಧಿ ಅಜ್ಜಂಪುರ ಮುಖ್ಯ ರಸ್ತೆಯ ಬಲಭಾಗಕ್ಕೆ ೨೦೦ ಮೀ. ದೂರದಲ್ಲಿರುವ ನೆಟ್ಟಕಲ್ಲು ಸ್ಥಳದಲ್ಲಿ ಆರು ನಿಲಿವುಗಲ್ಲು ಸಮಾಧಿಗಳು ಕಂಡುಬಂದಿವೆ(ಚಿತ್ರ-೩). ಈ ಸ್ಥಳವು ತಿಮ್ಮಾಪುರ ಗ್ರಾಮದ ವ್ಯಾಪ್ತಿಗೆ ಒಳಪಟ್ಟಿದ್ದು, ಗ್ರಾಮದ ಪಶ್ಚಿಮ ದಿಕ್ಕಿಗಿರುವ ಗುಡ್ಡಗಳ ಅಂಚಿನಲ್ಲಿದೆ. ಸ್ಥಳೀಯರು ಈ ಪ್ರದೇಶವನ್ನು ವಿಜಯನಗರ ನಾಯಕರ ಸೈನ್ಯ ಬೀಡು ಬಿಟ್ಟಿದ್ದ ಪ್ರದೇಶವೆಂದು, ಇಲ್ಲಿರುವ ನಿಲಿವುಗಲ್ಲುಗಳನ್ನು ಆನೆ ಕಟ್ಟುವ ಕಲ್ಲು, ಕುದುರೆ ಕಟ್ಟುವ ಕಲ್ಲುಗಳು ಎಂದು ಕರೆಯುತ್ತಾರೆ. ಪ್ರಸ್ತುತ ನಿವೇಶನವು ಬೃಹತ್ ಶಿಲಾ ಸಂಸ್ಕೃತಿಯ ಕಾಲಕ್ಕೆ ಸೇರಿದ್ದು ನಿಲಿವುಗಲ್ಲು ಸಮಾಧಿಗಳನ್ನು ಒಳಗೊಂಡಿದೆ. ಕ್ಷೇತ್ರಾನ್ವೇಷಣೆಯ ಸಂದರ್ಭದಲ್ಲಿ ಆರು ನಿಲಿವುಗಲ್ಲುಗಳು ಕಂಡುಬಂದಿದ್ದು, ಎರಡು ಕಲ್ಲುಗಳು ಮಾತ್ರ ಸುಸ್ಥಿತಿಯಲ್ಲಿವೆ. ಮೊದಲನೇ ನಿಲಿವುಗಲ್ಲು ಮೂರು ಅಡಿ ಅಗಲ ಆರು ಅಡಿ ಎತ್ತರವಾಗಿದ್ದು ಪಶ್ಚಿಮಕ್ಕೆ ಓರೆಯಾಗಿದೆ. ನಿಲಿವುಗಲ್ಲಿನ ಮೇಲ್ಭಾಗದಲ್ಲಿ ಕಲ್ಕುಳಿಗಳಿವೆ ಮತ್ತು ಕಲ್ಲಿನ ಸುತ್ತಲೂ ದಿಬ್ಬವಿದೆ. ಎರಡನೇ ನಿಲಿವುಗಲ್ಲು ಮೂರು ಅಡಿ ಅಗಲ ಆರು ಅಡಿ ಎತ್ತರವಾಗಿದ್ದು ಪೂರ್ವಕ್ಕೆ ಓರೆಯಾಗಿದೆ. ಮೇಲ್ಭಾಗದ ತುಂಬಾ ಕಲ್ಕುಳಿಗಳಿವೆ. ಮತ್ತು ಸಮಾಧಿಯ ಸುತ್ತಲೂ ದಿಬ್ಬವಿದೆ. ಮೂರನೇ ನಿಲಿವುಗಲ್ಲು ಸಂಪೂರ್ಣವಾಗಿ ನೆಲದಲ್ಲಿ ಹೂತು ಹೋಗಿದ್ದು ಎಂಟು ಅಡಿ ಉದ್ದವಿದೆ. ಉಳಿದ ಮೂರು ನಿಲಿವುಗಲ್ಲುಗಳು ಬದುವಿನಲ್ಲಿ ಮುಚ್ಚಿ ಹೋಗಿದ್ದು, ಮೂರು ಅಡಿ ಅಗಲ ಮೂರು ಅಡಿ ಎತ್ತರವಾಗಿದ್ದು ಮುರಿದಿರುವಂತೆ ಕಂಡುಬರುತ್ತವೆ. ಈ ನೆಲೆಯಲ್ಲಿ ಕಂಡುಬಂದಿರುವ ನಿಲಿವುಗಲ್ಲುಗಳು ಪಶ್ಚಿಮ ದಿಕ್ಕಿಗೆ ಬಾಗಿವೆ.


೪

ಶಿವನಿ: ಶಿವನಿ ಗ್ರಾಮದಿಂದ ಪೂರ್ವಕ್ಕೆ ೧ ಕಿ.ಮೀ. ದೂರದಲ್ಲಿರುವ ವೀರಾಪುರ ಗ್ರಾಮವು ೧೩.೮೧' ಅಕ್ಷಾಂಶ ಮತ್ತು ೭೬.೦೪' ರೇಖಾಂಶದಲ್ಲಿದೆ. ವೀರಾಪುರವು ಬೇಚಾರಕ್ ಗ್ರಾಮವಾಗಿದ್ದು, ಈ ನೆಲೆಯಲ್ಲಿ ನಿಲಿವುಗಲ್ಲುಗಳ ೨ ರಚನೆಗಳು ಕಂಡುಬಂದಿದ್ದು(ಚಿತ್ರ-೪), ಪ್ರತಿಯೊಂದು ರಚನೆಯಲ್ಲೂ ೧೨ ನೆಡು ಕಲ್ಲುಗಳು ಕಂಡುಬಂದಿವೆ. ೧ ಸಾಲಿನಲ್ಲಿ ೪ ಕಲ್ಲಿನಂತೆ ೩ ಸಾಲುಗಳಿವೆ, ನೆಲ ಮಟ್ಟದಿಂದ ೨ ಅಡಿ ಎತ್ತರ ಬರುವಂತೆ ಕಲ್ಲುಗಳನ್ನು ಸಾಲಿನಲ್ಲಿ ನೆಡಲಾಗಿದೆ. ಇದು ಸಾಮೂಹಿಕವಾಗಿ ಶವಸಂಸ್ಕಾರ ಮಾಡಿರುವ ಕುರುಹು ಆಗಿರಬಹುದಾಗಿದ್ದು, ಪ್ರವೀಣ್ ಆರ್. ದೊಡ್ಡೇಗೌಡ ಅವರು ತಮ್ಮ ದಾವಣಗೆರೆ ಜಿಲ್ಲೆಯ ಪುರಾತತ್ವ ನೆಲೆಗಳು ಮತ್ತು ಅವಶೇಷಗಳ ಅಧ್ಯಯನ ಸಂಶೋಧನ ಪ್ರಬಂಧದಲ್ಲಿ ಇವುಗಳನ್ನು ಬೃಹತ್ ಶಿಲಾ ಸಂಸ್ಕೃತಿಯ ವಿಸ್ತೃತ ರೂಪ ಎಂದು ಅಭಿಪ್ರಾಯಪಟ್ಟಿದ್ದಾರೆ.

೨. ಕಲ್ಮನೆ: ಇದನ್ನು ಡಾಲ್ಮನ್ ಎಂದು ಕರೆಯುತ್ತಾರೆ. ಭೂಮಟ್ಟದಲ್ಲಿ ಎದುರುಬದಿರಾಗಿ ಕಲ್ಲುಗಳನ್ನು ಗೋಡೆಯ ರೀತಿ ನಿಲ್ಲಿಸಿ, ಮಾಡಿನ ತರಹದಲ್ಲಿ ಹಾಸುಗಲ್ಲುಗಳನ್ನು ಹಾಕಿ ನಿರ್ಮಿಸಿದ ಪುಟ್ಟ ಕೋಣೆಯನ್ನು ಕಲ್ಮನೆ ಎಂದು ಕರೆಯಬಹುದು. ಒಂದು ಬದಿಯ ಗೋಡೆಯಂತಹ ಕಲ್ಲಿನಲ್ಲಿ ವೃತ್ತಾಕಾರದ ಕಂಡಿಯಿರುತ್ತದೆ. ಈ ನಮೂನೆಯ ಸಮಾಧಿಗಳು ಕಾರೇಹಳ್ಳಿ ಹಾಗೂ ಜಲಧೀಹಳ್ಳಿ ಗ್ರಾಮಗಳಲ್ಲಿ ಕಂಡುಬರುತ್ತವೆ.

ಕಾರೇಹಳ್ಳಿ: ಹೋಬಳಿ ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿರುವ ಕಾರೇಹಳ್ಳಿ ಗ್ರಾಮವು ೧೩.೮೬' ಅಕ್ಷಾಂಶ ಮತ್ತು ೭೬.೦೩' ರೇಖಾಂಶದಲ್ಲಿದೆ. ಇದೊಂದು ಪೂರ್ವ ಇತಿಹಾಸ ಕಾಲದ ನೆಲೆಯಾಗಿದೆ. ಇಲ್ಲಿ ೨ ಕಲ್ಲುಮನೆ ಸಮಾಧಿಗಳನ್ನು ಕಾಣಬಹುದಾಗಿದೆ(ಚಿತ್ರ-೫). ಈ ನೆಲೆಯು ಸಹ ಒಳಗಲ್ಲು. ಹಳ್ಳದ ದಡದಲ್ಲಿದ್ದು ಹರಳಹಳ್ಳಿಯ ನೆಲೆಯಿಂದ ೨ ಕಿ.ಮೀ. ದೂರದಲ್ಲಿದೆ. ಮೊದಲನೇ ಕಲ್ಲುಮನೆಯು ೨ ಅಡಿ ಅಗಲ, ೬ ಅಡಿ ಉದ್ದ ಮತ್ತು ೨ ಅಡಿ ಎತ್ತರವಾಗಿದೆ. ಆಯತಾಕಾರದಲ್ಲಿ ಕಲ್ಲುಗಳನ್ನು ಗೋಡೆಯಂತೆ ನಿಲ್ಲಿಸಿ ಮೇಲೆ ಎರಡು ಹಾಸುಗಲ್ಲುಗಳಿಂದ


೫

ಮುಚ್ಚಲಾಗಿದೆ. ಎರಡನೇ ಸಮಾಧಿಯು ೨ ಅಡಿ ಅಗಲ, ೬ ಅಡಿ ಉದ್ದ, ೩ ಅಡಿ ಎತ್ತರವಾಗಿದೆ. ಇಲ್ಲೂ ಸುತ್ತಲೂ ಕಲ್ಲುಗಳನ್ನು ಗೋಡೆಗಳಂತೆ ನಿಲ್ಲಿಸಿ, ಮೇಲೆ ೨ ದೊಡ್ಡದಾದ ಹಾಸುಗಲ್ಲುಗಳಿಂದ ಮುಚ್ಚಲಾಗಿದೆ. ಈ ಹಾಸುಗಲ್ಲುಗಳ ಮೇಲೆ ಕಲ್ಲುಕುಳಿಗಳು ಕಂಡುಬಂದಿವೆ. ೨ನೇ ಕಲ್ಲುಮನೆಯ ಒಳಗೆ ಇತ್ತೀಚೆಗೆ ಭೈರವನ ವಿಗ್ರಹ ಮತ್ತು ಭೈರವನ ಪಾದವನ್ನು ಇಟ್ಟು ಪೂಜಿಸಲಾಗುತ್ತಿದೆ. ಈ ಕಲ್ಲುಮನೆ ಸಮಾಧಿಗಳು ಸ್ವಲ್ಪ ಮಟ್ಟಿಗೆ ಹಾಳಾಗಿವೆ.


೬

ಜಲಧೀಹಳ್ಳಿ: ಜಲಧೀಹಳ್ಳಿ ನೆಲೆಯಲ್ಲಿ ಕಲ್ಮನೆ ಸಮಾಧಿಯ ಅವಶೇಷಗಳು ಕಂಡುಬಂದಿವೆ(ಚಿತ್ರ-೬). ಕಲ್ಮನೆ ಸಮಾಧಿಯು ಹಾಳಾಗಿದ್ದು ಪ್ರಸ್ತುತ ದುಂಡಾದ ಮೂರು ಕಲ್ಲುಗಳ ಮೇಲೆ ಎಂಟು ಅಡಿ ಉದ್ದದ ಆರು ಅಡಿ ಅಗಲದ ಹಾಸುಗಲ್ಲನ್ನು ಇಡಲಾಗಿದೆ. ಈ ಕಲ್ಮನೆಯು ಬೃಹತ್ತಾದ ಬಂಡೆಯ ಮೇಲೆ ಇದೆ. ಕಲ್ಮನೆಯ ಹಿಂದಿನ ಭಾಗವು ಮಣ್ಣಿನಿಂದ ಮುಚ್ಚಲ್ಪಟ್ಟಿದೆ. ಈ ಭಾಗದಲ್ಲಿ ಇನ್ನೂ ಮೂರು ಕಲ್ಮನೆ ಸಮಾಧಿಗಳು ಇದ್ದು ಪ್ರಸ್ತುತ ಹಾಳಾಗಿರುವ ಕುರುಹುಗಳನ್ನು ಗಮನಿಸಬಹುದು.

೩. ಶಿಲಾವೃತ್ತವಿರುವ ನೆಲಕೋಣೆ ಸಮಾಧಿಗಳು: ನೆಲಮಟ್ಟದಿಂದ ಕೆಳಗಡೆ ನಾಲ್ಕು ಕಲ್ಲುಗಳು ಒಂದಕ್ಕೊಂದು ಆನಿಕೆಯಾಗಿರುವಂತೆ ನಿಲ್ಲಿಸಿ ಬೇರೊಂದು ಕಲ್ಲಿನಿಂದ ಮುಚ್ಚಿ ಶವಪಟ್ಟಿಗೆ ರೀತಿಯಲ್ಲಿ ನಿರ್ಮಿಸಿರುತ್ತಾರೆ. ಜೊತೆಗೆ ನೆಲದಿಂದ ಮೇಲೆ ಕಲ್ಲುಗಳನ್ನು ವೃತ್ತಾಕಾರದಲ್ಲಿ ಇಟ್ಟಿರುತ್ತಾರೆ. ಈ ನಮೂನೆಯ ಸಮಾಧಿಗಳು ಜಲಧೀಹಳ್ಳಿ ಹಾಗೂ ಹರಳಹಳ್ಳಿ ನೆಲೆಗಳಲ್ಲಿ ಕಂಡುಬರುತ್ತವೆ.

೪. ಹರಳಹಳ್ಳಿ: ಶಿವನಿ ಹೋಬಳಿಯ ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿರುವ ಹರಳಹಳ್ಳಿ ಗ್ರಾಮವು ೧೩.೮೮' ಅಕ್ಷಾಂಶ ಮತ್ತು ೭೬.೦೩' ರೇಖಾಂಶದಲ್ಲಿದೆ. ಗ್ರಾಮದಲ್ಲಿರುವ ಪಾಂಡವರ ಗುತ್ತಿ ಸ್ಥಳವು ಬೃಹತ್ ಶಿಲಾ ಸಂಸ್ಕೃತಿ ಕಾಲಕ್ಕೆ ಸೇರಿದ ಕಿಂಡಿ ಕೋಣೆ ಹೊಂದಿರುವ ೨೮ ಶಿಲಾವೃತ್ತ ಸಮಾಧಿ ನೆಲೆಯು ಗ್ರಾಮದ ಉತ್ತರಕ್ಕೆ ೧ ಕಿ.ಮೀ. ದೂರದಲ್ಲಿದೆ. ನೆಲೆಯ ಪಕ್ಕದಲ್ಲಿ ಒಳಗಲ್ಲು ಹಳ್ಳವಿದ್ದು, ಇದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಎಲ್ಲಾ ಸಮಾಧಿಗಳು ಒಂದೇ ನಮೂನೆಯಲ್ಲಿದ್ದು ೨೭ ಅಡಿಗಳ ವ್ಯಾಸವನ್ನು ಹೊಂದಿರುವ ಸಮಾಧಿಯ ಮಧ್ಯ ಭಾಗದಲ್ಲಿ ೬ ಅಡಿ ಅಗಲ ೧೦ ಅಡಿ ಉದ್ದದ ದೊಡ್ಡಕಲ್ಲುಗಳು ನೆಲ ಮಟ್ಟದಿಂದ ಕೆಳಭಾಗದಲ್ಲಿ ಸ್ವಸ್ತಿಕ್ ಆಕಾರದಲ್ಲಿ ಜೋಡಿಸಿ ನೆಲಕೋಣೆಯನ್ನು ಸಿದ್ಧಪಡಿಸಲಾಗಿದೆ(ಚಿತ್ರ-೭). ಪೂರ್ವ ಕಲ್ಲಿನಲ್ಲಿ ಕುದುರೆ ಲಾಳಾಕಾರದ ಕಿಂಡಿ (ಪೋರ್ಟ ಹೋಲ್) ನ್ನು ಮಾಡಲಾಗಿದೆ. ಈ ಕೋಣೆಯು ೫ ಅಡಿ ಅಗಲ ೯ ಅಡಿ ಉದ್ದವಾಗಿದ್ದು, ದೊಡ್ಡ ಹಾಸುಗಲ್ಲುಗಳನ್ನು ಇಟ್ಟು ಕೋಣೆಯನ್ನು ಮುಚ್ಚಲಾಗಿದೆ. ಕೋಣೆಯ ಸುತ್ತಲೂ ಮುಷ್ಠಿ ಗಾತ್ರದ ಕಲ್ಲುಗಳನ್ನು ವೃತ್ತಾಕಾರದಲ್ಲಿ ಇಡಲಾಗಿದೆ. ಜೊತೆಗೆ ೨ ರಿಂದ ೩ ಅಡಿ ಗಾತ್ರದ ೨೦ ರಿಂದ ೨೨ ಕಲ್ಲುಗಳನ್ನು ಸಮಾಧಿಯ ಸುತ್ತಲೂ ಇಡಲಾಗಿದೆ.[೫] ಇದೇ ಮಾದರಿಯ ಶಿಲಾವೃತ್ತ ಸಮಾಧಿಯೊಂದು ಈ ನೆಲೆಯ ದಕ್ಷಿಣಕ್ಕೆ ೧ ಕಿ.ಮೀ. ದೂರದಲ್ಲಿ ನಾಯಕರ ಗೋವಿಂದಪ್ಪನವರ ಜಮೀನಿನಲ್ಲಿ ಪತ್ತೆಯಾಗಿದೆ. ಇದು ೨೫ ಅಡಿ ವ್ಯಾಸದ ವಿಸ್ತೀರ್ಣದಲ್ಲಿ ಕಲ್ಲುಗಳನ್ನು ವೃತ್ತಾಕಾರದಲ್ಲಿ ಇಡಲಾಗಿದ್ದು, ಮಣ್ಣಿನಿಂದ ಮುಚ್ಚಲಾಗಿದೆ. ಇಲ್ಲಿ ಇನ್ನಷ್ಟು ಸಮಾಧಿಗಳು ಇದ್ದಿರಬಹುದಾಗಿದ್ದು ನೆಲೆಯು ಕೃಷಿ ಭೂಮಿಯಾಗಿರುವುದರಿಂದ ಸಮಾಧಿಗಳನ್ನು ಹಾಳು ಮಾಡಲಾಗಿದೆ. ಇದರ ಕುರುಹಾಗಿ ಜಮೀನಿನ ಬದುವಿನಲ್ಲಿ ಕಲ್ಲುಗಳನ್ನು ರಾಶಿ ಹಾಕಿರುವುದನ್ನು ಕಾಣಬಹುದು.


೭

ನೆಲೆಯ ಪರಿಸರವು ಬೆಟ್ಟ ಗುಡ್ಡಗಳಿಂದ ಕೂಡಿದ್ದು, ನಿಧಿ ಶೋಧನೆಗಾಗಿ ಕೆಲವು ಸಮಾಧಿಗಳನ್ನು ಹಾಳು ಮಾಡಲಾಗಿದೆ. ನೆಲೆಯಲ್ಲಿ ಕೆಂಪು ಮತ್ತು ಕಪ್ಪು ಹಾಗೂ

ಕಪ್ಪು ಮಣ್ಣಿನ ಮಡಿಕೆಯ ಅವಶೇಷಗಳು ಸಿಕ್ಕಿದ್ದು, (ಚಿತ್ರ-೮) ಇವುಗಳನ್ನು ಹೆಚ್ಚಿನ ಪರೀಕ್ಷೆಗೆ ಒಳಪಡಿಸಬೇಕಾಗಿದೆ. ನೆಲೆಯ ಪಶ್ಚಿಮ ದಿಕ್ಕಿನ ದಿಬ್ಬದಲ್ಲಿ ಸೂಕ್ಷ್ಮ ಉಪಕರಣಗಳನ್ನು ತಯಾರಿಸಲು ಉಂಟಾದ ಚಕ್ಕೆಗಳು ಮತ್ತು ಉಪಕರಣಗಳು ಸಿಕ್ಕಿವೆ. ನೆಲೆಯು ಜನರಿಂದ ಅತಿಕ್ರಮಣಕ್ಕೆ ಒಳಗಾಗಿದ್ದು ಕೃಷಿಗೆ ಒಳಪಟ್ಟಿದೆ. ಇದರಿಂದ ಹಲವಾರು ಸಮಾಧಿಗಳು ನಾಶವಾಗಿರಬಹುದಾಗಿದ್ದು ನೆಲೆಯ ರಕ್ಷಣಾ ಕಾರ್ಯ ಆಗಬೇಕಾಗಿದೆ.



೮

ಜಲಧೀಹಳ್ಳಿ: ಜಲಧೀಹಳ್ಳಿ ಗ್ರಾಮವು ರಾಜ್ಯ ಹೆದ್ದಾರಿ ೭೬ರಲ್ಲಿನ ಹೀರೆಕಾನವಂಗಲ ಗ್ರಾಮದಿಂದ ೧ ಕಿ.ಮೀ. ದೂರದಲ್ಲಿದೆ. ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟಗಳ ಸಾಲಿನ ಬುಡದಲ್ಲಿರುವ ಪಾಂಡವರ ಕಲ್ಲು ಸ್ಥಳವೇ ಬೃಹತ್ ಶಿಲಾಸಂಸ್ಕೃತಿಯ ಜನರ ಸಮಾಧಿನೆಲೆಯಾಗಿದೆ. ಈ ನೆಲೆಯು ೧೩.೭೮' ಅಕ್ಷಾಂಶ ಮತ್ತು ೭೫.೯೪' ರೇಖಾಂಶದಲ್ಲಿದೆ. ನೆಲೆಯು ಬಹುತೇಕ ಹಾಳಾಗಿದ್ದು, ದಟ್ಟವಾದ ಅರಣ್ಯದಿಂದ ಆವೃತವಾಗಿದೆ. ನೆಲೆಯಲ್ಲಿ ಕಲ್ಮನೆ ಹಾಗೂ ನೆಲಕೋಣೆ ಹೊಂದಿರುವ ಶಿಲಾವೃತ್ತ ಸಮಾಧಿಗಳು ಕಂಡುಬಂದಿವೆ. ಶಿಲಾವೃತ್ತದ ಒಳಗೆ ಎರಡು ನೆಲಕೋಣೆಗಳು ಕಂಡುಬಂದಿವೆ. ಒಂದು ಸಮಾಧಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಪ್ರತ್ಯೇಕವಾಗಿ ಎರಡು ಕೋಣೆಗಳನ್ನು ನಿರ್ಮಿಸಿ ಸಮಾಧಿ ಮಾಡಿರಬಹುದು. ಸಮಾಧಿಯ ಪಶ್ಚಿಮ ಭಾಗವು ಮಣ್ಣಿನಿಂದ ಆವೃತ್ತವಾಗಿದ್ದು, ಪೂರ್ವದ ಭಾಗದಲ್ಲಿ ಶಿಲಾವೃತ್ತದ ಕಲ್ಲುಗಳನ್ನು ಕಾಣಬಹುದು. ಇಲ್ಲಿ ಇನ್ನೂ ಸಮಾಧಿಗಳು ಇದ್ದಿರಬಹುದಾಗಿದ್ದು ನಾಶವಾಗಿರುವ ಕುರುಹುಗಳಿವೆ.

ಕಾರೇಹಳ್ಳಿ, ಚೀರನಹಳ್ಳಿ ಮತ್ತು ದಾಸರಹಟ್ಟಿ ನೆಲೆಗಳು ಕಿಂಡಿಕೋಣೆ ಹೊಂದಿರುವ ಶಿಲಾವೃತ್ತ ಸಮಾಧಿ ನೆಲೆಯಾಗಿರುವ ಹರಳಹಳ್ಳಿ ನೆಲೆಯ ಪಕ್ಕದಲ್ಲೆ ಕಂಡುಬಂದಿವೆ ಮತ್ತು ಒಳಗಲ್ಲುಹಳ್ಳ ಮತ್ತು ಅದರ ಉಪ ಶಾಖೆಗಳ ದಡದಲ್ಲಿ ಕಂಡುಬರುತ್ತವೆ. ಸ್ಥಳೀಯರು ಇವುಗಳನ್ನು ನೆಡುಕಲ್ಲುಗಳು ಎಂದು ಕರೆದಿದ್ದು, ನೆಲೆಯ ಭೌಗೋಳಿಕ ಲಕ್ಷಣಗಳೂ ಸಹ ಇವುಗಳನ್ನು ಸಮಾಧಿ ನೆಲೆಗಳೆಂದು ಪುಷ್ಟೀಕರಿಸುತ್ತವೆ. ಶಿವನಿ ಪರಿಸರವು ಬೆಟ್ಟ ಗುಡ್ಡಗಳಿಂದ ಕೂಡಿದ್ದು, ಶಿಲಾಯುಗ ಮಾನವನ ವಾಸಕ್ಕೆ ಯೋಗ್ಯವಾದ ಅಂಶಗಳಿಂದ ಕೂಡಿದೆ. ಬೆಟ್ಟಗಳ ಸಾಲಿನಲ್ಲಿ ಹಲವಾರು ಹಳ್ಳಗಳು ಹುಟ್ಟಿ ಹರಿಯುತ್ತವೆ. ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಎಲ್ಲಾ ನೆಲೆಗಳು ಈ ಬೆಟ್ಟಗಳ ತಪ್ಪಲಿನಲ್ಲಿ, ಹಳ್ಳಗಳ ದಡದಲ್ಲಿ ದೊರೆತಿವೆ. ನೈಸರ್ಗಿಕವಾಗಿ ದೊರೆಯುವ ಶಿಲೆಗಳು, ನೀರಿನ ಮೂಲ, ಕೃಷಿಗೆ ಯೋಗ್ಯವಾದ ಭೂಮಿ ಅವರು ಈ ಭಾಗದಲ್ಲಿ ನೆಲೆ ನಿಲ್ಲಲು ಅವಕಾಶವಾಗಿವೆ. ಒಳಗಲ್ಲುಹಳ್ಳ ಹಾಗೂ ಅವರ ಉಪಶಾಖೆಗಳ ದಡದಲ್ಲಿ ಹರಳಹಳ್ಳಿ, ಚೀರನಹಳ್ಳಿ, ಕಾರೆಹಳ್ಳಿ, ದಾಸರಹಟ್ಟಿ ನೆಲೆಗಳು ವ್ಯವಸ್ಥಿತಗೊಂಡಿವೆ. ದಾಸರಹಟ್ಟಿ ನೆಲೆಯನ್ನು ಹೊರತುಪಡಿಸಿ ಉಳಿದೆಲ್ಲಾ ನೆಲೆಗಳು ದೊರಕಿರುವುದು ಕೃಷಿ ಭೂಮಿಯಲ್ಲಿ. ಕೃಷಿಯಿಂದಾಗಿ ನೆಲೆಗಳು ವಿರೂಪಗೊಂಡಿವೆ. ಸಮಾಧಿಗಳನ್ನು ನಾಶ ಮಾಡಲಾಗಿದೆ. ನಿಧಿ ಹುಡುಕುವವರು ಸಮಾಧಿಗಳನ್ನು ಬಗೆದು ಹಾಳು ಮಾಡಿದ್ದಾರೆ. ಇವುಗಳಷ್ಟೆ ಅಲ್ಲದೇ ಮನುಷ್ಯನು ನೆಲೆಯಲ್ಲಿನ ಕಲ್ಲುಗಳನ್ನು ಬೇರೆ ಬೇರೆ ಉದ್ದೇಶಕ್ಕೆ ಬಳಸಲು ತೆಗೆದುಕೊಂಡು ಹೋಗಿದ್ದಾನೆ. ಜಲಧೀಹಳ್ಳಿ ನೆಲೆಯ ಪಕ್ಕದಲ್ಲಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಿಸಲು ನೆಲೆಯಲ್ಲಿನ ಕಲ್ಲುಗಳನ್ನು ಬಳಸಲಾಗಿದೆ. ಇದರಿಂದ ಆ ನೆಲೆಯಲ್ಲಿನ ಕಲ್ಮನೆಗಳು ನಾಶವಾಗಿದೆ. ಒಟ್ಟಿನಲ್ಲಿ ಮಾನವನ ಚಟುವಟಿಕೆಯಿಂದಾಗಿ ನೆಲೆಗಳು ನಾಶವಾಗುವ ಪರಿಸ್ಥಿತಿ ಎದುರಾಗಿದೆ. ರಕ್ಷಣೆ ಕಾರ್ಯ ನಡೆಯುವ ಅವಶ್ಯಕತೆ ಇದೆ. ಜೊತೆಗೆ ಈ ಭಾಗದಲ್ಲಿ ಇನ್ನಷ್ಟು ಅಧ್ಯಯನವಾಗಬೇಕಿದೆ. ಇನ್ನೂ ಸಾಕಷ್ಟು ನೆಲೆಗಳು ಸಿಗುವ ಸಂಭವವಿದೆ. ನಮಗೆ ಕೇವಲ ಸಮಾಧಿ ನೆಲೆಗಳಷ್ಟೇ ದೊರಕಿವೆ, ವಸತಿ ನೆಲೆಗಳಿಗಾಗಿ ಕ್ಷೇತ್ರ ಅಧ್ಯಯನ ನಡೆಸುವ ಅವಶ್ಯಕತೆ ಇದೆ.

ಅಡಿಟಿಪ್ಪಣಿಗಳು

೧. ಶಿವತಾರಕ್. ಕೆ.ಬಿ., ೨೦೧೧, ಕರ್ನಾಟಕ ಪುರಾತತ್ವ ನೆಲೆಗಳು, ಪು. ೨೫೦.
೨. ಮಂಜುನಾಥ ಟಿ., ೨೦೧೯, ಇತಿಹಾಸ ದರ್ಪಣ ೪೨, ಪು. ೧೫.
೩. ಕೃಷ್ಣಮೋಹನ್ ಶ್ರೀಮಾಲಿ, ೨೦೧೫, ಕಬ್ಬಿಣದ ಯುಗ ಮತ್ತು ಧಾರ್ಮಿಕ ಕ್ರಾಂತಿ, ಪು. ೧೧.
೪. ಅಂಜಳಿಕೆ ಹಿರಿಯಣ್ಣ, ೨೦೦೯, ಕನ್ನಡ ವಿಷಯ ವಿಶ್ವಕೋಶ, ಪುರಾತತ್ವ ಮತ್ತು ಇತಿಹಾಸ, ಪು. ೬೭೦.
೫. ಮಂಜುನಾಥ ಟಿ., ೨೦೧೯, ಇತಿಹಾಸ ದರ್ಪಣ ೪೨, ಪು. ೧೭.

◆◆

೭

ಮಂಜನಾಯ್ಕ ಆರ್.

ಪುರಾತತ್ವೀಯ ನೆಲೆಯಾಗಿ 'ಕಣಿವೆ ತಿಮ್ಲಾಪುರ'


ಕರ್ನಾಟಕ ಇತಿಹಾಸ ಪೂರ್ವಕಾಲದವರೆಗೆ ಅಧ್ಯಯನ ನಡೆಸಿರುವ ವಿದ್ವಾಂಸರುಗಳ ಕೃತಿಗಳನ್ನು ಅವಲೋಕಿಸಿದಾಗ ಶಿಲಾಯುಗದ ನೆಲೆಗಳನ್ನು ಹಾಗೂ ಆ ಜನರು ಬಳಸಿರುವ ವಿವಿಧ ಬಗೆಯ ವಸ್ತುಗಳಾದ ಮಣಿಗಳು, ಬಳೆಗಳು, ಮಡಿಕೆ, ಕುಡಿಕೆಗಳು, ಕಬ್ಬಿಣದ ವಸ್ತುಗಳು, ಕಲ್ಲಿನ ಆಯುಧಗಳು ಮತ್ತು ಕರಕುಶಲ ವಸ್ತುಗಳ ಬಗೆಗೆ ವಿಶೇಷ ಗಮನ ಹರಿಸಲಾಗಿದೆ. ಡಾ. ಪದ್ದಯ್ಯನವರ ಪ್ರಕಾರ, ಕರ್ನಾಟಕದಲ್ಲಿ ಹಳೆಯ ಶಿಲಾಯುಗಕ್ಕೆ ಸೇರಿರುವ ಅವಶೇಷಗಳು ಬಳ್ಳಾರಿ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ವಿಜಯಪುರ (ಬಿಜಾಪುರ), ಕಲಬುರಗಿ (ಗುಲ್ಬರ್ಗ), ಹಾಗೂ ಬೆಳಗಾವಿ ಜಿಲ್ಲೆಗಳಿವೆ. ಇವುಗಳಲ್ಲಿ ಕೆಲವನ್ನು ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ರಾಬರ್ಟ್ ಬ್ರೂಸ್ ಫುಟ್ ಅವರು ಪತ್ತೆ ಮಾಡಿದ್ದರು.

ಕಣಿವೆ ತಿಮ್ಲಾಪುರ ಗ್ರಾಮವು ಬಳ್ಳಾರಿ ಜಿಲ್ಲೆ, ಕಂಪ್ಲಿ ಹೋಬಳಿಯಲ್ಲಿದೆ. ಈ ಗ್ರಾಮದ ಕುರಿತು ವಿಜಯನಗರ ಕಾಲದಲ್ಲಿ ಕೋಟೆಯನ್ನು ಕಾಯಲಿಕ್ಕೆ ತಿಮ್ಮಪ್ಪನಾಯಕ ಎಂಬುವನು ಈ ಭಾಗದಲ್ಲಿ ವಿಜಯನಗರ ಅರಸರಿಂದ ನೇಮಕವಾಗಿದ್ದರಿಂದ ಆತನ ಹೆಸರಿನಲ್ಲಿದ್ದ ತಿಮ್ಮಪ್ಪಪುರ ನಂತರದ ದಿನಗಳಲ್ಲಿ ತಿಮ್ಲಾಪುರ ಆಗಿದೆ. ಈ ಗ್ರಾಮವು ಎರಡು ಕಣಿವೆಗಳ ನಡುವೆ ಇರುವುದರಿಂದ ಇದಕ್ಕೆ ಕಣಿವೆ ತಿಮ್ಲಾಪುರ ಎಂದು ಕರೆಯುತ್ತಾರೆ. ಗ್ರಾಮದ ಪಶ್ಚಿಮ ಭಾಗಕ್ಕೆ ಸುಮಾರು ಒಂದುವರೆ ಕಿಲೋಮೀಟರ್ ದೂರದಲ್ಲಿ ಗುಡ್ಡಗಳ ಶ್ರೇಣಿಯ ತಪ್ಪಲಿನಲ್ಲಿ ರಮಣೀಯವಾದ ಪರಿಸರವಿದೆ. ಸ್ಥಳೀಯರು ಈ ಪ್ರದೇಶದಲ್ಲಿರುವ ಪುರಾತತ್ವ ಅವಶೇಷಗಳಾದ ಶಿಲಾಯುಧಗಳು, ವೀರಮಾಸ್ತಿಗಲ್ಲು, ಒರಳುಕಲ್ಲುಗಳು, ನವಶಿಲಾಯುಗದ ಕೈಗೊಡಲಿ, ಫಿರಂಗಿಗುಂಡುಗಳು, ಮಡಿಕೆ ಕುಡಿಕೆಯ ಚೂರುಗಳು ಹಾಗೂ ಕೋಟೆಯ ಅವಶೇಷಗಳು ಇರುವುದನ್ನು ಗಮನಿಸಿ ಇದು ಹಾಳೂರು ಎಂದು ಹೇಳುತ್ತಾರೆ. ಪ್ರಸ್ತುತದಲ್ಲಿ ಈ ಪ್ರದೇಶವು ದರೋಜಿ ಕರಡಿಧಾಮ ಕಾಯ್ದಿಟ್ಟ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಇರುತ್ತದೆ.

ಈ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಸಸಿ ನೆಡುವ ಸಲುವಾಗಿ ರಸ್ತೆ ಹಾಗೂ ಗುಂಡಿಗಳನ್ನು ತೆಗೆಯುವಾಗ ಅಲ್ಲಿ ಮಡಿಕೆಚೂರುಗಳು, ಒರಳುಕಲ್ಲುಗಳು ಮತ್ತು ಇನ್ನಿತ್ತರ ಪ್ರಾಚ್ಯಾವಶೇಷಗಳು ದೊರಕಿದೆ. ಅರಣ್ಯ ಇಲಾಖೆ ಮತ್ತು ಅಲ್ಲಿಯ ಸ್ಥಳೀಯರು ಮಾಹಿತಿಯನ್ನು ನೀಡಿದರ ಮೇರೆಗೆ ಸದರಿ ಪ್ರದೇಶದ ಸುತ್ತಮುತ್ತಲೂ ಕೈಗೊಂಡ ಅನ್ವೇಷಣೆಯಲ್ಲಿ ದೊರೆತ ಅಪ್ರಕಟಿತ ಪ್ರಾಚ್ಯಾವಶೇಷಗಳ ಕುರಿತು ಬೆಳಕು ಚೆಲ್ಲಿ ದಾಖಲೀಕರಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಪುರಾತತ್ವ ಸಹಾಯಕರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಕಮಲಾಪುರ–ಹಂಪಿ
ಹೊಸಪೇಟೆ ತಾಲ್ಲೂಕು
ವಿಜಯನಗರ ಜಿಲ್ಲೆ–೫೮೩ ೨೨೧
ಮೊ: ೯೯೪೫೪ ೧೫೫೧೮

ನವಶಿಲಾಯುಗದ ಕೈಗೊಡಲಿ : ಡೈಕ್ ಶಿಲೆಯಲ್ಲಿ ತಯಾರಿಸಲಾದ ಈ ಕೈಗೊಡಲಿ(ಶಿಲಾಯುಧ)ಯ ಬಾಯಿ ಭಾಗವನ್ನು ಹರಿತಗೊಳಿಸಿಲ್ಲ ಮತ್ತು ಸುತ್ತಲೂ ಅದನ್ನು ಹೆಚ್ಚಿನ ಮಟ್ಟದಲ್ಲಿ ಉಜ್ಜಿ ನುಣುಪುಗೊಳಿಸಲಾಗಿದೆ. ಇದರ ಉದ್ದ ೩೭ ಸೆಂ.ಮೀ., ಅಗಲ ೨೩ ಸೆಂ.ಮೀ. ಇದ್ದು, ಬಾಯಿಭಾಗ ೫ ಸೆಂ.ಮೀ. ಮತ್ತು ದಪ್ಪವು ೧೮ ಸೆಂ.ಮೀ.ಅನ್ನು ಹೊಂದಿದೆ. ಇದನ್ನು ಆ ಕಾಲದ ಮನುಷ್ಯ ತನ್ನ ನಿತ್ಯದ ಕೆಲಸಗಳಿಗೆ ಬಳಸಿಕೊಂಡಿದ್ದಾನೆಂದು ಹೇಳಬಹುದು.



ನವಶಿಲಾಯುಗದ ಕೈಗೊಡಲಿ

ಬೃಹತ್ ಶಿಲಾಯುಗದ ಮಡಿಕೆ ಚೂರುಗಳು : ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಮಡಿಕೆ ಚೂರುಗಳು ಕಂಡುಬಂದಿದ್ದು ಇದರಿಂದ ಅಂದಿನ ಮಾನವನ ಜೀವನ ಕ್ರಮವನ್ನು ತಿಳಿಯಲು ಮಡಿಕೆ ಚೂರುಗಳು ಪ್ರಮುಖ ಆಕಾರಗಳಾಗಿ ಕಂಡುಬರುತ್ತವೆ. ಇವುಗಳ ಆಕಾರ ಮತ್ತು ರಚನಾ ವಿನ್ಯಾಸದಿಂದ ಅಂದಿನ ಸಮಾಜದ ಸ್ಥಿತಿಗತಿಯನ್ನು ತಿಳಿಯಬಹುದು. ನಿಧಾನವಾಗಿ ತಿರುಗುವ ಚಕ್ರದ ಸಹಾಯದಿಂದ ಮಡಿಕೆಗಳನ್ನು ತಯಾರಿಸುವ ತಂತ್ರಗಾರಿಕೆ ಪಡೆದಿದ್ದರು. ಬೃಹತ್ ಶಿಲಾಯುಗದ ಮಡಿಕೆಗಳು ಸಾಮಾನ್ಯವಾಗಿ ಕಪ್ಪು ಮತ್ತು ಕೆಂಪು ವರ್ಣದ ಮಡಿಕೆಗಳೆಂದು (ಬ್ಲಾಕ್ ಅಂಡ್ ರೆಡ್ ವೇರ್) ಎಂದು ಗುರುತಿಸಲಾಗಿದೆ. ಈ ಮಡಿಕೆಗಳಿಗೆ ಇಂತಹ ವರ್ಣಬರಲು ಮುಖ್ಯ ಕಾರಣವೆಂದರೆ ಅದನ್ನು ಸುಡುವ ಕಾಲದಲ್ಲಿ ಒಂದರ ಮೇಲೆ ಒಂದರಂತೆ ಇಟ್ಟು ಸುಡಲಾಗುತ್ತದೆ. (ಒಪನ್ ಏರ್ ರೇಡಿಯೇಷನ್ ಟೆಕ್ನಿಕ್) ಇದರಿಂದಾಗಿ ಮಡಿಕೆಗಳಿಗೆ ಕಪ್ಪು ಕೆಂಪು ವರ್ಣವು ಮೂಡಿರುತ್ತದೆ. ಈ ರೀತಿಯ ಮಡಿಕೆಗಳ ಚೂರುಗಳು ಈ ಪ್ರದೇಶದಲ್ಲಿ ಕಂಡುಬಂದಿವೆ. ಈ ಮಡಿಕೆಚೂರುಗಳು ಅಲ್ಲದೇ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಅಳಿದುಳಿದ ಶಿಲಾಸಮಾಧಿಗಳ ಅವಶೇಷಗಳು ಸಹ ಅಲ್ಲಲ್ಲಿ ಕಂಡುಬರುತ್ತವೆ.



ಹಾಳಾಗಿರುವ ಬೃಹತ್ ಶಿಲಾಯುಗದ ಸಮಾಧಿ



ವೀರಮಾಸ್ತಿಶಿಲ್ಪ

ವೀರಮಾಸ್ತಿಶಿಲ್ಪ : ನವಶಿಲಾಯುಗದ ಕೈಗೊಡಲಿಯಿರುವ ಜಾಗದಲ್ಲಿ ಈ ಶಿಲ್ಪವಿದ್ದು, ಇದು ಬಿಳಿ ಮಿಶ್ರಿತ ಗ್ರಾನೈಟ್ ಶಿಲೆಯ ಚಪ್ಪಟೆಯಾಕಾರದಲ್ಲಿ ಕೆತ್ತಲಾಗಿದೆ. ಇದು ೧೩೫ ಸೆಂ.ಮೀ. ಎತ್ತರ, ೯೮ ಸೆಂ.ಮೀ. ಅಗಲ ಹಾಗೂ ೨೦ ಸೆಂ.ಮೀ. ದಪ್ಪವಾಗಿದೆ. ಶಿಲ್ಪದಲ್ಲಿ ಇಬ್ಬರು ಸತಿಯರ ಮಧ್ಯ ವೀರನು ಕೈ ಮುಗಿದು (ಅಂಜಲಿ ಮುದ್ರೆ) ನಿಂತಿರುವನು. ಇವನ ಕೈ ಮತ್ತು ಕಾಲುಗಳಿಗೆ ಕಡಗಗಳನ್ನು ಹಾಗೂ ತಲೆಗೆ ತುರುಬನ್ನು ಕಟ್ಟಿದ್ದಾನೆ. ಇವನ ಎಡ ಮತ್ತು ಬಲಭಾಗದಲ್ಲಿರುವ ಇಬ್ಬರು ಸತಿಯರು ಸಹ ಸಮಭಂಗಿಯಲ್ಲಿ ನಿಂತಿದ್ದು, ಮಹಾಸತಿಯರು ಬಲಭಾಗದ ಕೈಗಳನ್ನು ಮೇಲಕ್ಕೆ ಎತ್ತಿದ್ದು ಹಾಗೂ ಎಡಗೈಗಳನ್ನು ಕೆಳಗೆ ಇಳಿಬಿಟ್ಟಿದ್ದಾರೆ.

ಎರಡು ಕೈಗಳಿಗೂ ಬಳೆಯಾಕಾರದ ಆಭರಣವನ್ನು, ಕೊರಳಿಗೆ ಮಣಿಸರದ ಆಭರಣವನ್ನು ಧರಿಸಿದ್ದು, ನೆರಿಗೆ-ನೆರಿಗೆವುಳ್ಳ ಉಡುಪನ್ನು ಧರಿಸಿದ್ದಾರೆ. ಕಿವಿಗೆ ಅಲಂಕಾರಿಕ ಆಭರಣಗಳನ್ನು, ಕಾಲುಗಳಿಗೆ ಕಡಗಗಳನ್ನು ಧರಿಸಿದ್ದು, ತಲೆಗೆ ತುರುಬನ್ನು ಕಟ್ಟಿದ್ದಾರೆ. ಈ ಶಿಲ್ಪದಲ್ಲಿ ವೀರನ ಜೊತೆಗೆ ತನ್ನ ಇಬ್ಬರು ಸತಿಯರು ಸತಿಹೋಗಿರುವುದನ್ನು ತಿಳಿಯಬಹುದು. ಈ ಶಿಲ್ಪದ ಲಕ್ಷಣದ ಆಧಾರದ ಮೇಲೆ ಇದು ಸುಮಾರು ಕ್ರಿ.ಶ. ೧೫-೧೬ನೇ ಶತಮಾನದ ವಿಜಯನಗರ ಕಾಲದ ಶಿಲ್ಪವೆಂದು ಗುರುತಿಸಬಹುದು.

ದೇವಾಲಯ



ದೇವಾಲಯದ ಮುಂಭಾಗ

ತಳವಿನ್ಯಾಸ : ಕಣಶಿಲೆಯಿಂದ ನಿರ್ಮಿಸಿರುವ ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ತೆರೆದ ಮುಖಮಂಟಪವನ್ನು ಹೊಂದಿದೆ. ಏಕಕೂಟ ರಚನೆಯನ್ನು ಹೊಂದಿದ್ದು, ನಿರಂಧಾರ ಮಾದರಿಯನ್ನು ಹೊಂದಿರುತ್ತದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚಚ್ಚೌಕಾಕಾರವಾಗಿದೆ. ಇದು ೨.೦೦ ಮೀಟರ್ ಉದ್ದ ಮತ್ತು ೨.೦೦ ಮೀಟರ್ ಅಗಲವನ್ನು ಹೊಂದಿದೆ. ಇದರ ಮಧ್ಯದಲ್ಲಿ ಇರುವ ಶಿಲ್ಪವನ್ನು ನಿಧಿಗಳ್ಳರು ನಿಧಿಯಾಸೆಗಾಗಿ ಹಾಳುಮಾಡುವುದರಿಂದ ಪ್ರಸ್ತುತದಲ್ಲಿ ಯಾವುದೇ ಶಿಲ್ಪವು ಇಲ್ಲದೆ ಇರುವುದರಿಂದ ಯಾವ ದೇವಾಲಯ ಮತ್ತು ಶಿಲ್ಪವೆಂದು ತಿಳಿಯಲು ಆಗುತ್ತಿಲ್ಲ. ಇಲ್ಲಿ ಭುವನೇಶ್ವರಿಯು ಅಷ್ಟಕೋನಾಕಾರದಲ್ಲಿದ್ದು, ಯಾವುದೇ ಅಲಂಕಾರವನ್ನು ಹೊಂದಿಲ್ಲ. ಪ್ರವೇಶದ್ವಾರವು ಸಾಧಾರಣವಾಗಿದ್ದು, ಯಾವುದೇ ಅಲಂಕರಣೆ ಇರುವುದಿಲ್ಲ.


ಅಂತರಾಳ : ಈ ದೇವಾಲಯದ ಅಂತರಾಳವು ೨ ಮೀಟರ್ ಉದ್ದ ಮತ್ತು ೨ ಮೀಟರ್ ಅಗಲವನ್ನು ಹೊಂದಿದೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು, ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಪ್ರವೇಶದ್ವಾರವು ಸಾಧಾರಣವಾಗಿದೆ.

ತೆರೆದ ಮುಖಮಂಟಪ : ತೆರೆದ ಮುಖಮಂಟಪವು ೩.೨೦ ಮೀಟರ್ ಉದ್ದ ಮತ್ತು ೫.೦೦ ಮೀಟರ್ ಅಗಲವನ್ನು ಹೊಂದಿದೆ. ಇದರಲ್ಲಿ ಎರಡು ಸ್ವತಂತ್ರ ಸರಳ ಕಂಬಗಳಿವೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು, ಕಲ್ಲುಚಪ್ಪಡಿಗಳಿಂದ

ಮಾಡಲ್ಪಟ್ಟಿದೆ. ದೇವಾಲಯದ ನಿರ್ಮಾಣದ ಲಕ್ಷಣದ ಆಧಾರದ ಮೇಲೆ ಇದನ್ನು ಕ್ರಿ.ಶ. ಸುಮಾರು ೧೫–೧೬ನೇ ಶತಮಾನದ ವಿಜಯನಗರ ಕಾಲದ ದೇವಾಲಯವೆಂದು ಸ್ಪಷ್ಟಪಡಿಸಬಹುದು.



ನಾಗಶಿಲ್ಪ



ನಾಗಬಂಧವುಳ್ಳ ಪಾದ

ಈ ನೆಲೆಯಲ್ಲಿ ಮೇಲೆ ತಿಳಿಸಿದ ಅವಶೇಷಗಳಲ್ಲದೆ ಕೋಟೆಯ ಕುರುಹುಗಳು ಹಾಗೂ ಒರಳಕಲ್ಲು ನಾಗಬಂಧವುಳ್ಳ ಪಾದ, ಕಲ್ಲಿನ ಫಿರಂಗಿ ಗುಂಡುಗಳು ಹಾಗೂ ನಾಗಶಿಲ್ಪಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶವು ಪ್ರಾಚೀನ ಮಾನವನ ಕಾಲದಿಂದ ಇಂದಿನವರೆಗೆ ಜನವಸತಿ ಪ್ರದೇಶವಾಗಿತ್ತು ಎಂದು ತಿಳಿಯಬಹುದಾಗಿದೆ.

---

* ಈ ಲೇಖನವನ್ನು ರಚಿಸಲು ಹಾಗೂ ಅನ್ವೇಷಣೆಯಲ್ಲಿ ಸಹಕರಿಸಿದ ಶ್ರೀ ಪ್ರಹ್ಲಾದ್ ಜಿ., ಉಪ ನಿರ್ದೇಶಕರು(ಪ್ರ), ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ–ಹಂಪಿ, ಶ್ರೀ ತಳವಾರ ನರಸಿಂಹ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು ಹಾಗೂ ದರೋಜಿ ಕರಡಿಧಾಮದ ಅರಣ್ಯಾಧಿಕಾರಿಗಳಾದ ಶ್ರೀಮತಿ ಉಷಾ ಇವರುಗಳಿಗೆ ಕೃಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಕರಗ್ರಂಥಗಳು

೧. ಮೆಡೋಸ್ ಟೇಲರ್, ೨೦೧೫, 'ಮೆಗಾಲಿಥಿಕ್ ಟೂಂಬ್ಸ್ ಏನ್ಸಂಟ್ ರಿಮೈನ್ಸ್ ಇನ್ ಡೆಕ್ಕನ್', ದಿ ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟ್ ಆಫ್ ಹೈದರಾಬಾದ್.

೨. ಶೇಷಶಾಸ್ತ್ರಿ ಆರ್., ೨೦೦೪, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ರಾಮಚಂದ್ರರಾವ್ ಎಸ್.ಕೆ., ೨೦೧೨, 'ಮೂರ್ತಿಶಿಲ್ಪ ನೆಲೆ–ಹಿನ್ನೆಲೆ', ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪. ವಾಸುದೇವ ಬಡಿಗೇರ, ೨೦೧೨, 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಸುಂದರ ಅ., ೧೯೯೪, 'ಕರ್ನಾಟಕದ ಪ್ರಾಗಿತಿಹಾಸ ಕಲೆ', ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೬. ಸುರೇಶ ಕೆ.ಎಂ., ಮತ್ತು ಇತರರು., ೧೯೯೯, 'ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಸುಂದರ ಅ. (ಸಂ.), ೧೯೯೭, 'ಕರ್ನಾಟಕ ಚರಿತ್ರೆ' ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

◆◆

೮

ಶಶಿಕುಮಾರ ನಾಯ್ಕ ಕೆ.ಸಿ.

ಬಂಗಾರಿಗೊಲ್ಲರಹಟ್ಟಿ ಪ್ರದೇಶದ ಪ್ರಾಗೈತಿಹಾಸಿಕ ಕುರುಹುಗಳು

ತುಮಕೂರು ಜಿಲ್ಲೆಯು ಪ್ರಾಗೈತಿಹಾಸಿಕತೆಯ ದೃಷ್ಟಿಕೋನದಿಂದ ಬಹು ಪ್ರಾಧಾನ್ಯತೆ ಹೊಂದಿದ ಜಿಲ್ಲೆಯಾಗಿದ್ದು. ಇಲ್ಲಿ ಹಲವು ವಿದ್ವಾಂಸರ ಶೋಧನೆಯ ಫಲವಾಗಿ ಹಲವು ಶಿಲಾಯುಗದ ಅವಶೇಷಗಳು ಸಿಗುತ್ತಿದ್ದು, ಶೋಧಿಸಿದಷ್ಟು ಹೊಸಹೊಸ ಅಂಶಗಳು ಬೆಳಕಿಗೆ ಬರುತ್ತಿವೆ. ಇವುಗಳಲ್ಲಿ ಕೆಲವನ್ನು ಮಾತ್ರ ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿದ್ದು, ಮತ್ತಷ್ಟನ್ನು ಅಧ್ಯಯನ ಮಾಡುವ ಅವಶ್ಯಕತೆಯಿದೆ.

ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿಗೆ ಸೇರಿದ, ತಾವರೆಕೆರೆ ರಸ್ತೆಯಲ್ಲಿ, ಬುಕ್ಕಾಪಟ್ಟಣದಿಂದ ಮೂರು ಕಿಲೋಮೀಟರ್ ದೂರವಿರುವ ಬಂಗಾರಿಗೊಲ್ಲರಹಟ್ಟಿ ಗ್ರಾಮದಲ್ಲಿ ಎರಡು ವರ್ಷದ ಹಿಂದೆ ನೂತನ ಶಿಲಾಯುಗಕ್ಕೆ ಸೇರಿದ ಕೊಡಲಿಗಳನ್ನು ಪತ್ತೆಹಚ್ಚಲಾಯಿತು.[೧] ಹಾಗೂ ಅಲ್ಲಿರುವ ಗೋರಿಗಳ ಬಗ್ಗೆ ಕುತೂಹವಿದ್ದರೂ ಹೆಚ್ಚು ಅಧ್ಯಯನ ಮಾಡಲಾಗಿರಲಿಲ್ಲ. ಆದುದರಿಂದ ಪ್ರಸ್ತುತ ಅಲ್ಲಿರುವ ಗೋರಿಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಪ್ರಾಗೈತಿಹಾಸಿಕ ಕುರುಹುಗಳನ್ನು ಪರಿಚಯ ಮಾಡಲಾಗಿದೆ. ಬಂಗಾರಿಗೊಲ್ಲರಹಟ್ಟಿ ಗ್ರಾಮವು ಹುಣಸೆಕಟ್ಟೆ ಗ್ರಾಮ ಪಂಚಾಯಿತಿಗೆ ಸೇರಿದ ಕುಗ್ರಾಮವಾಗಿದ್ದು, ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಕುರುಹುಗಳಿಲ್ಲದಿದ್ದರೂ ಪ್ರಾಗೈತಿಹಾಸಿಕ ದೃಷ್ಟಿಯಿಂದ ಅಧ್ಯಯನಯೋಗ್ಯ ಪ್ರದೇಶವಾಗಿದೆ.

ಭೌಗೋಳಿಕ ಪರಿಸರ

ಈ ಪ್ರದೇಶವು ಬೆಟ್ಟಗುಡ್ಡ ಹಾಗೂ ಅರಣ್ಯ ಪ್ರದೇಶದಿಂದ ಆವೃತವಾಗಿದ್ದು ಉತ್ತಮ ನೀರಿನಾಶ್ರಿತ ಪ್ರದೇಶವಾಗಿದೆ. ಬುಕ್ಕಾಪಟ್ಟಣದಿಂದ ಹರಿಯುವ ದೊಡ್ಡ ಹಳ್ಳವು ಮುಂದೆ ಗಾಯತ್ರಿ ಜಲಾಶಯದ ಹತ್ತಿರ ಸುವರ್ಣಮುಖಿ ನದಿಗೆ ಸೇರುತ್ತದೆ. ಈ ಹಳ್ಳದ ಎಡಭಾಗದಲ್ಲಿ ಬೂದಿಗುಡ್ಡ ಮತ್ತು ಬುಕ್ಕಾಪಟ್ಟಣ ನೆಲೆಗಳಿದ್ದರೆ ಬಲಭಾಗದಲ್ಲಿ ಬಂಗಾರಿಗೊಲ್ಲರಹಟ್ಟಿ, ಹುಯಿಲದೊರೆ, ಕುರುಬರಹಳ್ಳಿ ಮುಂತಾದ ಶಿಲಾಯುಗದ ನೆಲೆಗಳಿವೆ. ಇದರಿಂದ ಈ ಪ್ರದೇಶವು ಶಿಲಾಯುಗ ಜನರಿಗೆ ನೆಲೆಸಲು ಉತ್ತಮ ಭೂಪ್ರದೇಶವಾಗಿತ್ತೆಂದು ತಿಳಿಯಬಹುದಾಗಿದೆ.

ಬಂಗಾರಿಗೊಲ್ಲರಹಟ್ಟಿ ಗ್ರಾಮದ ಹೊರವಲಯದಲ್ಲಿರುವ ಹಾಗೂ ಬುಕ್ಕಾಪಟ್ಟಣ–ತಾವರೆಕೆರೆ ಹೋಗುವ ರಸ್ತೆಯ ಬಲಬದಿಯಲ್ಲಿ ಸುಮಾರು ಅರ್ಧ ಎಕರೆ ಭೂಪ್ರದೇಶದಲ್ಲಿ ಸುಮಾರು ೩೦–೩೫ ಕಲ್ಮನೆ ಸಮಾಧಿಗಳು ಹಾಗೂ ಕಲ್ಗೋರಿಗಳು ಕಂಡುಬರುತ್ತವೆ.

ಕಮಲಾನಾಯ್ಕನ ತಾಂಡ
ಯರದಕಟ್ಟೆ ಅಂಚೆ
ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ
ಮೊ: ೯೧೪೮೦ ೦೯೯೦೫




ಶಿಲಾಯುಗ ಸಮಾಧಿಯಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳು


ಇವು ಸುಮಾರು ಮೂರು ಅಡಿ ಎತ್ತರ, ಎರಡು ಅಡಿ ಅಗಲ ಹೊಂದಿದ್ದು ಕೆಲವು ಚಿಕ್ಕದಾಗಿವೆ. ಬಹುತೇಕ ಕಲ್ಮನೆಗಳು ಚೌಕಾಕಾರವಾಗಿವೆ. ಕೆಲವಕ್ಕೆ ಕಲ್ಲಿನ ಮುಚ್ಚಳವಿದ್ದರೆ ಕೆಲವು ಹಾಗೆಯೆ ತೆರೆದಿವೆ ಹಾಗೂ ಈ ಕಲ್ಮನೆ ಸಮಾಧಿಗಳಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಕೆಲವುಗಳಲ್ಲಿ ನೂತನ ಶಿಲಾಯುಧಗಳನ್ನಿಟ್ಟು ಪೂಜಿಸುತ್ತಿರುವುದು ಇಂದಿಗೂ ಕಂಡುಬರುತ್ತದೆ. ಈ ಕಲ್ಲಿನ (Stone Axes) ಕೊಡಲಿಗಳು ಶಿಲಾಯುಗ ಮಾನವನಿಗೆ ಹಲವು ಚಟುವಟಿಕೆಗಳಿಗೆ ಬಳಕೆಯಾಗುತ್ತಿದ್ದು, ಬೇಟೆಯಾಡುವುದಕ್ಕೆ, ಮಾಂಸ ಕತ್ತರಿಸಲು ಇನ್ನು ಮುಂತಾದ ಕಾರ್ಯಗಳಿಗೆ ಬಳಕೆಯಾಗುತ್ತಿತ್ತು. ಇಲ್ಲಿನ ಒಂದು ಕಲ್ಮನೆ ಸಮಾಧಿಯಲ್ಲಿ ನಾಲ್ಕು ನವಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಈಗಲೂ ಗಮನಿಸಬಹುದಾಗಿದ್ದು, ಇನ್ನಿತರೆ ಕಲ್ಗೋರಿಗಳಲ್ಲಿಯೂ ಸಹ ಶಿಲಾಕೊಡಲಿಗಳನ್ನು ಕಾಣಬಹುದು.

ಈ ಪ್ರದೇಶದಲ್ಲಿ ಕಬ್ಬಿಣದ ಕಿಟ್ಟ ಕಂಡುಬಂದಿದ್ದು ಇವು ಅಂದಿನ ಜನರು ಸಮೀಪದ ಗುಡ್ಡದಿಂದ ಕಬ್ಬಿಣದ ಅದಿರನ್ನು ತಂದು ಕಬ್ಬಿಣದ ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಪ್ರಮುಖವಾಗಿ ಈ ಪ್ರದೇಶಕ್ಕೆ ಹತ್ತಿರದಲ್ಲಿರುವ ಬುಕ್ಕಾಪಟ್ಟಣ ಕುರುಬರಹಳ್ಳಿ, ಹುಯಿಲದೊರೆ ಗ್ರಾಮಗಳಲ್ಲಿ ಕಬ್ಬಿಣದ ಕಿಟ್ಟ ಹಾಗೂ ಮೂಸೆಗಳು ದೊರೆತಿವೆ. ಆದುದರಿಂದ ಪ್ರಸ್ತುತ ನೆಲೆಯು ಸಾಂಸ್ಕೃತಿಕವಾಗಿ ಈ ನೆಲೆಗೆ ಸಂಬಂಧವಿರಬಹುದು. ಈ ಎಲ್ಲಾ ಆಧಾರಗಳಿಂದ ಈ ಪ್ರದೇಶವೂ ಸಹ ನೂತನ ಶಿಲಾಯುಗ ಹಾಗೂ ಕಬ್ಬಿಣಯುಗದ–ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿ ಪ್ರದೇಶಗಳೆಂದು ಗುರುತಿಸಬಹುದು.[3]

ಸಾಂಸ್ಕೃತಿಕ ಮಹತ್ವ

ಬುಕ್ಕಾಪಟ್ಟಣ ನೆಲೆಯಲ್ಲಿ ವೃತ್ತಾಕಾರದ ಕಲ್ಗೋರಿಗಳು, ನೂತನ ಶಿಲಾಯುಗದ ಕುರುಹುಗಳು ದೊರೆತರೆ, ಹುಯಿಲದೊರೆಯಲ್ಲಿಯೂ ಸಹ ನೂತನ ಶಿಲಾಯುಧ ಹಾಗೂ ಬೃಹತ್ ಶಿಲಾ ಕಬ್ಬಿಣಯುಗಕ್ಕೆ ಸಂಬಂಧಿಸಿದ ನಿಲಸುಗಲ್ಲು ಹಾಗೂ ಕಬ್ಬಿಣದ ಕಿಟ್ಟಗಳು ಯಥೇಚ್ಛವಾಗಿ ದೊರಕುತ್ತದೆ. ಹಾಗೆಯೇ ಕುರುಬರಹಳ್ಳಿ ನೆಲೆಯಲ್ಲಿ ಕಬ್ಬಿಣದ ಕಿಟ್ಟ, ನಿಲಸುಗಲ್ಲುಗಳಿವೆ. ಆದ್ದರಿಂದ ಈ ಎಲಾ ನೆಲೆಗಳು ಪರಸ್ಪರ ಸಾಂಸ್ಕೃತಿಕ ಮಹತ್ವದ ಪ್ರದೇಶವಾಗಿದೆ. ಅಲ್ಲದೇ ನೈಸರ್ಗಿಕವಾಗಿ ಅದಿರು ದೊರಕುವ ಗಣಿಗಳು ಕೂಡ ಹತ್ತಿರದಲ್ಲಿವೆ. ಯರದಕಟ್ಟೆಯಲ್ಲಿ ಕಬ್ಬಿಣದ ಎರಕ ಹೊಯ್ಯುತ್ತಿದ್ದರು. ಇಲ್ಲಿನ ಗುಡ್ಡದಲ್ಲಿ ಯಥೇಚ್ಛವಾಗಿ ಕಬ್ಬಿಣದ ಅದಿರು ಲಭ್ಯವಾಗುತ್ತಿತ್ತು ಎನ್ನಬಹುದು. ಆದುದರಿಂದ ಬಂಗಾರಿಗೊಲ್ಲರಹಟ್ಟಿಯ ನೆಲೆಗೆ ಈ ಎಲ್ಲಾ ಪ್ರದೇಶಗಳು ಉತ್ತಮ ಸಾಂಸ್ಕೃತಿಕ ಮಹತ್ವ ಹೊಂದಿತ್ತು ಎನ್ನಬಹುದು.

ಈ ಗೋರಿಗಳನ್ನು ಸ್ಥಳೀಯರು ಪ್ರತಿಯೊಂದಕ್ಕೂ ಒಂದೊಂದು ಹೆಸರಿಟ್ಟು ಹಾಗೂ ದೊಡ್ಡದಿರುವ ಗೋರಿಗಳಿಗೆ ನಾಯಕನ ಗೋರಿ ಅಥವಾ ಹಿರಿಯನ ಗೋರಿ ಎಂದೆಲ್ಲಾ ಕರೆಯುತ್ತಾರೆ. ದಸರಾ ಸಂದರ್ಭದಲ್ಲಿ ಪೂಜಿಸುವ ರೂಢಿಯಿದೆ. ಜಮೀನಿನಲ್ಲಿ ಚದುರಿದ್ದ ಕಲ್ಲುಗೋರಿಗಳ ಕಲ್ಲುಗಳನ್ನು ತಂದು ಒಟ್ಟುಗೂಡಿಸಿ ಇಲ್ಲಿಡಲಾಗಿದ್ದು, ಕೃಷಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತೆ ಎಲ್ಲ ಕಲ್ಲುಗಳನ್ನು ಒಂದೇ ಕಡೆಯಿಟ್ಟು, ಇವು ತಮ್ಮ ಹಿರಿಯರ ಗೋರಿಗಳೆಂದು ಪೂಜಿಸುತ್ತಿರುವುದಾಗಿ



ಕುಳಿಗಳು

ಹೇಳುತ್ತಾರೆ. ಆದರೆ ಹಿರಿಯರು ಯಾರು ಎಂಬುದು ತಿಳಿದಿಲ್ಲ ಬಹು ಹಿಂದಿನವು ಎಂದು ಮಾತ್ರ ಹೇಳುತ್ತಾರೆ. ಆದುದರಿಂದ ಇವು ಬಹುಶಃ ಬೃಹತ್ ಶಿಲಾಯುಗದ ಕುರುಹುಗಳೆಂದು ಊಹಿಸಲಡ್ಡಿಯಿಲ್ಲ.

ಕಾಲ : ತುಮಕೂರು ಜಿಲ್ಲಾ ಪ್ರದೇಶದಲ್ಲಿ ಶಿಲಾಯುಗಕ್ಕೆ ಅಧ್ಯಯನಗಳ ಆಧಾರದಿಂದ ಬೃಹತ್ ಶಿಲಾಯುಗಕ್ಕೆ ಕ್ರಿ.ಪೂ. ಸುಮಾರು ೧೨೦೦-೨೫೦[3] ಎಂದಿದ್ದು, ನೂತನ ಶಿಲಾಯುಗವು ಕ್ರಿ.ಪೂ. ಸುಮಾರು ೧೭೦೦-೧೦೦೦ ಎಂದಿರುವುದರಿಂದ[4] ಬಹುಶಃ ಇದೇ ಕಾಲಮಾನಗಳು ಬಂಗಾರಿ ಗೊಲ್ಲರಹಟ್ಟಿ ಪ್ರದೇಶಕ್ಕೂ ಅನ್ವಯಿಸುತ್ತದೆ.



ಕಲ್ಮನೆ ಸಮಾಧಿಗಳು

ಒಟ್ಟಾರೆಯಾಗಿ ಬಂಗಾರಿಗೊಲ್ಲರಹಟ್ಟಿ ಪ್ರದೇಶದಲ್ಲಿ ದೊರೆತಿರುವ ಕಲ್ಗೋರಿಗಳು ಅಥವಾ ಕಲ್ಮನೆಗಳು ಇಲ್ಲಿ ವಾಸವಿದ್ದ ಶಿಲಾಯುಗ ಜನರ ಸ್ಥಳೀಯ ಸಭೆ ಸೇರುವ ಸ್ಥಳ ಅಥವಾ ಶಿಲಾಯುಗದ ಜನ ವಾಸವಿದ್ದ ಹಿರಿ-ಕಿರಿಯರ ಸಮಾಧಿಗಳು/ಬುಡಕಟ್ಟು ನಾಯಕರು ಹಾಗೂ ಸಾಮಾನ್ಯ ಜನರ ಸಮಾಧಿಗಳಿರಬಹುದೆಂದು ಊಹಿಸಬಹುದಾಗಿದ್ದು, ಈ ಪ್ರದೇಶವು ಸುಮಾರು ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ಜನವಸತಿ ನೆಲೆಯಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ.

ಅಡಿಟಿಪ್ಪಣಿಗಳು

೧. ಶಶಿಕುಮಾರ ನಾಯ್ಕ ಕೆ.ಸಿ., ೨೦೨೧, ಬುಕ್ಕಾಪಟ್ಟಣ ಪರಿಸರದ ನವಶೋಧಿತ ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ, ಸಂಪುಟ ೩೬, ಪು. ೧೨-೧೪.

೨. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಶಿವತಾರಕ್ ಕೆ.ಬಿ., ೨೦೦೨, ತುಮಕೂರು ಜಿಲ್ಲಾ ಪ್ರದೇಶದ ಬೃಹತ್ ಶಿಲಾಯುಗ ಸಂಸ್ಕೃತಿ, ಇತಿಹಾಸ ದರ್ಶನ, ಸಂಪುಟ ೧೭.

೪. ಅದೇ, ಸಂಪುಟ ೧೬.

◆◆

೬

ಮಲ್ಲಿಗವಾಡ ಕೆ.ಸಿ.

ಇಂದೂರುಕೊಪ್ಪದ ಪ್ರಾಚ್ಯಾವಶೇಷಗಳು

ಸಹ್ಯಾದ್ರಿ ಬೆಟ್ಟಗಳ ಸಾಲಿನ ಮಲೆನಾಡಿನ ಸೆರಗಿನಲ್ಲಿ ನೆಲೆನಿಂತ ಗ್ರಾಮ ಇಂದೂರುಕೊಪ್ಪ. ಇತ್ತೀಚೆಗೆ ಇದನ್ನು ಇಂದಿರಾನಗರ ಕೊಪ್ಪ ಗ್ರಾಮವೆಂದು ಕರೆಯಲಾಗಿದೆ. ಉತ್ತರ ಕನ್ನಡ ಅಥವಾ ಕಾರವಾರ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಕೊನೆಯಂಚಿನ ಹಳ್ಳಿ ಇದಾಗಿದೆ. ಅರಣ್ಯದ ಅಂತರಾಳದಲ್ಲಿ ನೆಲೆಗೊಂಡಿದ್ದು, ಬೇಚಿರಾಕ್ ಹಳ್ಳಿಯಾಗಿದೆ. ಹಳ್ಳದ ದಂಡೆ ಮೇಲೆ ಶ್ರೀ ಕಲ್ಮೇಶ್ವರ ದೇವಾಲಯ ನಿರ್ಮಾಣವಾಗಿದೆ. ಇಲ್ಲಿ ಗೋವಾ ಕದಂಬರು, ಕಲ್ಯಾಣದ ಚಾಲುಕ್ಯರು, ನಾಯಕರು ಆಳ್ವಿಕೆ ನಡೆಸಿದರು. ಈಗಿರುವ ಶ್ರೀ ಕಲ್ಮೇಶ್ವರ ದೇಗುಲವು ಶಿಥಿಲಾವಸ್ಥೆಯಲ್ಲಿದ್ದು, ಮುಂಭಾಗದಲ್ಲಿ ಪ್ರವೇಶದ್ವಾರವು ದುರ್ಬಲಗೊಂಡು ಬಳಲುತ್ತಿರುವುದು ವಿಷಾದನೀಯ ಸಂಗತಿ.

ಅರಣ್ಯ ಮಧ್ಯದಲ್ಲಿ ಹಳ್ಳದ ದಂಡೆ ಮೇಲೆ ವಿಶಾಲವಾದ ಸ್ಥಳದಲ್ಲಿ ದೇಗುಲ ನೆಲೆಗೊಂಡಿದ್ದು, ಇಲ್ಲಿ ಶ್ರೀ ಕಲ್ಮೇಶ್ವರ ದೇವಾಲಯ, ಸುತ್ತಲೂ ಸಂಬಂಧಿಸಿದ ಐತಿಹ್ಯಗಳು, ಪಂಚಲಿಂಗೇಶ್ವರ ವಿಗ್ರಹಗಳು, ಬೃಹತ್ ಪೂಜಾ ಹೊಂಡ, ಮುರಿದ ತೊಲೆ, ಬೋದುಗೆ ಗಡಿಗೆ ಅಲ್ಲಲ್ಲಿ ಚದುರಿದಂತೆ ಬಿದ್ದಿವೆ. ಇಲ್ಲಿ ಹಲವು ಬಾರಿ ನಿಧಿಶೋಧಕರ ಹಾವಳಿ ಯಿಂದಾಗಿ ಗರ್ಭಗೃಹ, ಸಭಾಮಂಟಪಗಳು ಆಳವಾಗಿ ಅಗೆಯಲ್ಪಟ್ಟಿದ್ದು, ದೇಗುಲದ ನಾಶಕ್ಕೆ ಕಾರಣವಾಗಿದೆ. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು, ಶಾಸನಗಳು, ಬೇರೆ ಬೇರೆ ಅವಶೇಷಗಳನ್ನು ಒಡೆದು ಸಣ್ಣ ಸಣ್ಣ ತುಂಡುಗಳನ್ನಾಗಿ ತುಂಡರಿಸಿ ದೇಗುಲದ ಮುಂದೆ ರಾಶಿ ಹಾಕಿ ಬಂದೋಬಸ್ತ್ ಮಾಡಿದ್ದಾರೆ. ಇದನ್ನು ಪ್ರತ್ಯಕ್ಷ ನೋಡಿದರೆ ಎಂತಹವನಿಗೂ ಹೃದಯವಿದ್ರಾವಕ ಸಂಗತಿಯಾಗಿದೆ.



ನಿವೃತ್ತ ಪ್ರಾಚಾರ್ಯರು
ವಿನಾಯಕ ಚೌಕ
ಚೆಸ್ಮಾ ಫ್ಯಾಕ್ಟರಿ ಹಿಂಭಾಗ
ನೇಕಾರ ನಗರ, ಹುಬ್ಬಳ್ಳಿ
ಧಾರವಾಡ ಜಿಲ್ಲೆ
ಮೊ: ೯೯೭೨೯ ೫೩೯೯೭



ಶ್ರೀಕಲ್ಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಪ್ರವೇಶ ದ್ವಾರ, ಸಭಾಮಂಟಪ ಕ್ರಿ.ಶ. ೧೦ನೇ ಶತಮಾನದಿಂದ ೧೧ನೇ ಶತಮಾನದ ಅವಧಿಯಲ್ಲಿ ನಿರ್ಮಿಸಲಾಗಿದೆ. ನವರಂಗ, ಗರ್ಭಗೃಹಗಳಿದ್ದು, ದೇಗುಲದ ಸುತ್ತಲೂ ಪ್ರದಕ್ಷಿಣಾಪಥವು ಚಿತ್ತಾಕರ್ಷಕವಾಗಿದೆ. ಪ್ರಮುಖ ಪ್ರವೇಶದ್ವಾರದಲ್ಲಿ ಎಡಬಲ ಗೋಡೆಗಳು ದುರ್ಬಲಗೊಂಡ ಕಾರಣ ಒಂಟಿ ಬಾಗಿಲು, ಬಾಗಿಲುವಾಡೆ, ಹಣೆಪಟ್ಟಿ ಮೊದಲಾದವುಗಳ ಅವಶೇಷಗಳು ಕಣ್ಣಂಚಿಗೆ ಗೋಚರವಾಗುತ್ತವೆ. ಒಳಗೆ ಪ್ರವೇಶಿಸಿದರೆ ವಿಶಾಲವಾದ ಸ್ಥಳವಿದ್ದು, ಎಡಬಲಗಳಲ್ಲಿ ಜಗುಲಿಗಳಿವೆ. ಸುಮಾರು ೩ ಅಡಿ ಎತ್ತರವಾದ ಕಟ್ಟೆಯ ಮೇಲೆ ಸ್ಥಳ ವಿನ್ಯಾಸವಿದ್ದು ದೇಗುಲಕ್ಕೆ ಮಜಬೂತಾದ ಚರಿಕಲ್ಲಿನಿಂದ ನಿರ್ಮಾಣಗೊಂಡಿದ್ದ ಗೋಡೆ ಅತ್ಯಾಕರ್ಷಕವಾಗಿದೆ. ಸುಮಾರು ೩೦ ಅಡಿ ಉದ್ದ ೧೯.೫ ಅಡಿ ಅಗಲವಾದ ಅಳತೆಯಲ್ಲಿರುವ ದೇಗುಲ ಚಿತ್ತಾಕರ್ಷಕವಾಗಿದೆ.

ದೇಗುಲದ ಒಳಭಾಗದಲ್ಲಿ ನಾಟ್ಯಗೃಹವಿದ್ದು ಸುತ್ತಲೂ ೪ ಅಡಿ ಅಗಲವಾದ ಪ್ರದಕ್ಷಿಣಾ ಪಥವಿದ್ದು ರಾಜಪರಿವಾರದವರು ಹಾಗೂ ಭಕ್ತಾದಿಗಳು ಆಸೀನವಾಗಲು ಅವಕಾಶ ಕಲ್ಪಿಸಲಾಗಿದೆ. ನಾಲ್ಕು ಪ್ರಮುಖ ಕಂಬಗಳ ಮೇಲೆ ನಿರ್ಮಾಣಗೊಂಡ ಶಿಲಾದೇಗುಲ ಇದಾಗಿದೆ. ಇದರ ಸುತ್ತಲೂ ಅಷ್ಟಕಂಬಗಳ ಸಾಲುಗಳಿದ್ದು, ಅವುಗಳು ಮಜಬೂತವಾಗಿದ್ದು, ಇವುಗಳ ಮೇಲೆ ತೊಲೆ ಬೋದುಗೆ ನಿರ್ಮಾಣವಾಗಿದ್ದು, ಅವುಗಳ ಮೇಲೆ ವಿವಿಧ ಕೆತ್ತನೆಗಳು, ಕಲಾಕೃತಿಯನ್ನೊಳಗೊಂಡಿರುವುದು ದೇಗುಲಕ್ಕೆ ಮೆರಗು ತರುವಂತಾಗಿದೆ. ಒಳಭಾಗದಲ್ಲಿರುವ ಸಭಾಮಂಟಪವು ಏಕಶಿಲೆಯಲ್ಲಿ ನಿರ್ಮಾಣಗೊಂಡಿದ್ದು, ವೃತ್ತಾಕಾರವಾದ ಕಲ್ಲಿನ ಸುತ್ತಲೂ ಚಿಕ್ಕ ಚಿಕ್ಕ ಗೂಡಂಚುಗಳನ್ನು ಬಿಡಿಸಲಾಗಿದ್ದು ಸುತ್ತಲೂ ತೃಟಿತ ಗಣಪತಿ ವಿಗ್ರಹ, ಸಪ್ತಮಾತೃಕೆಗಳ ವಿಗ್ರಹಗಳಿದ್ದು ಇವುಗಳು ಸ್ಥಳಾಂತರಗೊಂಡು ಇಲ್ಲಿ ಸೇರಿರುವ ಸಾಧ್ಯತೆಗಳಿವೆ. ಎಡಗೋಡೆಯಲ್ಲಿ ಬೆಳಕು, ಗಾಳಿಗಾಗಿ ಕಿಟಕಿ ಜಾಲಂಧ್ರವನ್ನು ನಿರ್ಮಿಸಲಾಗಿದೆ. ಒಳ ಪ್ರವೇಶಿಸಿದಂತೆ ನವರಂಗವಿದೆ. ಸುಮಾರು ೯ ಅಡಿ ಉದ್ದ, ೫ ಅಡಿ ಅಗಲವಾಗಿದ್ದು, ಎಡಬಲದ ಗೋಡೆಗಳು ಸಪಾಟಾಗಿದ್ದು, ಮೇಲ್ಭಾಗದಲ್ಲಿ ದೊಡ್ಡ ತಾವರೆ ಹೂ ಬಿಡಿಸಿ ಮಧ್ಯದಲ್ಲಿ ರಾತ್ರಿವೇಳೆ ಕಾರ್ಯಕ್ರಮ ನಡೆಸಲು ದೀಪ ಬೆಳಗಿಸಲು ವೃತ್ತಾಕಾರದ ಕಿಂಡಿ ನಿರ್ಮಿಸಲಾಗಿದೆ.

ಎದುರುಗಡೆ ಪಶ್ಚಿಮಭಾಗದಲ್ಲಿ ಗರ್ಭಗೃಹವಿದ್ದು ೬ ಅಡಿ ಎತ್ತರ ೪ ಅಡಿ ಅಗಲವಾದ ಬಾಗಿಲಿದೆ. ಗರ್ಭಗೃಹದ ಎಡಬಲಗಳಲ್ಲಿ ದ್ವಾರಪಾಲಕರಿದ್ದು, ಗದಾಧಾರಿಗಳಾಗಿದ್ದು ಶ್ರೀ ದೇವರ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಬಾಗಿಲುವಾಡಗಳಲ್ಲಿ ಗುಂಡುಸಾಲುಗಳು ಸುರಳಿಗೆತ್ತನೆ, ಲತಾಕುಂಜಗಳನ್ನು ಬಿಡಿಸಲಾಗಿದೆ. ಮೇಲ್ಭಾಗದ ಹಣೆಪಟ್ಟಿಯಲ್ಲಿ ಮಧ್ಯಭಾಗದಲ್ಲಿ ವಿಶಾಲವಾದ ಪುಷ್ಪಗುಚ್ಛವಿದ್ದು ಎಡಬಲಗಳಲ್ಲಿ ಸುಂದರವಾದ ಸೂಕ್ಷ್ಮಾತಿಸೂಕ್ಷ್ಮವಾಗಿ ಸುರಳಿಗೆತ್ತನೆ ದಪ್ಪೆಸಾಲುಗಳನ್ನು ಕೆತ್ತಲಾಗಿದೆ. ಇದರ ಕೆಳಗೆ ಗಜಲಕ್ಷ್ಮೀ ವಿಗ್ರಹವನ್ನು ಗೂಡಿನಾಕಾರದಲ್ಲಿ ಶಿಲಾವಿಗ್ರಹ ನಿರ್ಮಿಸಿದ್ದಾರೆ. ಬಾಗಿಲುವಾಡೆಗಳು ಜನಾಕರ್ಷಣೀಯ ಕೇಂದ್ರಬಿಂದುಗಳಾಗಿ ಹೊರಹೊಮ್ಮಿದೆ. ಗರ್ಭಗೃಹದ ಮಧ್ಯಭಾಗದಲ್ಲಿ ಬೃಹತ್ ಸ್ಥಾವರಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸುಮಾರು ೪ ಅಡಿ ಉದ್ದ ೩ ಅಡಿ ಅಗಲವಾಗಿದ್ದು, ಒಂದು ಅಡಿ ಎತ್ತರದ ಜಗುಲಿ ಮೇಲೆ ನಿರ್ಮಿಸಲಾಗಿದೆ. ವೃತ್ತಾಕಾರವಾದ ಸ್ಥಾವರಲಿಂಗದಲ್ಲಿ ೩ ಅಡಿ ಉದ್ದವಾದ ಜಲಹರಿ ಇದ್ದು, ಶ್ರೀ ಕಲ್ಮೇಶ್ವರನಿಗೆ ಅಭಿಷೇಕ ಮಾಡಿದ ನೀರು ಜಲಹರಿಯ ಮೂಲಕ ಹೊರಹೋಗಲು ಅವಕಾಶ ಕಲ್ಪಿಸಲಾಗಿದೆ. ಒಂದು ಅಡಿ ಎತ್ತರವಾದ ಪೀಠವಿದೆ. ಜಲಾಭಿಷೇಕ ಮಾಡಲು ಪೀಠದ ಮೇಲೆ ಸ್ಥಳವಿದೆ. ಅಭಿಷೇಕದ ನೀರು ಹೊರಹೋಗಲು ಉದ್ದವಾದ ಶಿಲೆಯಿಂದ ಮಾಡಿದ ದೊಡ್ಡ ಜಲಹರಿಯನ್ನು ಗೋಡೆಯ ಹೊರಗೆ ನಿರ್ಮಿಸಿ ಕೆಳಗೆ ೨ ಅಡಿ ವೃತ್ತಾಕಾರವಾದ ಗುಂಡಿ ತೋಡಿ ಸಂಗ್ರಹಿಸಲಾಗಿದೆ. ಪಶ್ಚಿಮದ ಗೋಡೆಯಲ್ಲಿ ಬೆಳಕಿಗಾಗಿ ಜಲಾಂಧ್ರವನ್ನು ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿದ್ದ ವಿಗ್ರಹದ ಸುತ್ತಲೂ ನಿಧಿಶೋಧಕರು

ಅಗೆದು ಹಾಳು ಮಾಡಿದ್ದ ಜಾಗವನ್ನು ಭಕ್ತರು ಸರಿಪಡಿಸಿ ಮತ್ತೆ ಶ್ರೀ ಕಲ್ಮೇಶ್ವರನ ಅಭಿಷೇಕಕ್ಕೆ ಸಜ್ಜುಗೊಳಿಸಲಾಗಿದೆ. ಸೂರ್ಯಕಿರಣಗಳು ನೇರವಾಗಿ ಯುಗಾದಿ ಹಬ್ಬದ ದಿವಸ ಶ್ರೀ ಕಲ್ಮೇಶ್ವರ ದೇವರ ಸ್ಥಾವರ ಲಿಂಗದ ಮೇಲೆ ಬೀಳುವಂತೆ ವ್ಯವಸ್ಥೆ ಮಾಡಿದ್ದಾರೆ. ದೇಗುಲದ ಮುಂಭಾಗದ ಗೋಡೆ ಮೇಲ್ಭಾಗದಲ್ಲಿ ೨ ಬೃಹತ್‌ಕಿಂಡಿ ಬಿಡಲಾಗಿದೆ ಮತ್ತು ೧೨ ಕಿಂಡಿಗಳಿದ್ದು ಇವು ತಿಂಗಳಸೂಚಕಗಳಾಗಿವೆ. ದೊಡ್ಡ ಕಿಂಡಿಗಳು ಅಯನಗಳಾದ ಉತ್ತರಾಯಣ, ದಕ್ಷಿಣಾಯನಗಳನ್ನು ಸೂಚಿಸುತ್ತವೆ. ಅಂದಿನ ಕಾಲದ ದೇಗುಲ ನಿರ್ಮಾಣದ ಶಿಲ್ಪಿಯ ಕಲಾಕೌಶಲ್ಯ ಇಂದಿನ ತಾಂತ್ರಿಕ ಯುಗಕ್ಕೆ ಅಚ್ಚರಿಯನ್ನುಂಟು ಮಾಡಿದೆ.

ಗ್ರಾಮದ ಪ್ರಾಚ್ಯಾವಶೇಷಗಳು: ದೇವಾಲಯದ ಸುತ್ತಲೂ ಹಲವಾರು ತೃಟಿತ ವಿಗ್ರಹಗಳು ಅಲ್ಲಲ್ಲಿ ಚದುರಿದಂತೆ ಬಿದ್ದಿವೆ. ನಂದಿ ವಿಗ್ರಹ ಇದೊಂದು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದು, ಮಲಗಿದ ಭಂಗಿಯಲ್ಲಿದ್ದು ಎಡಗಾಲು ಮುಂದೆ ಚಾಚಿ ಬಲಗಾಲನ್ನು ಮಡಿಸಲಾಗಿದೆ. ಕೊರಳಲ್ಲಿ ಗೆಜ್ಜೆಸರ, ಗಂಟೆ, ಗುಮರಿಗಳಿಂದ ಅಲಂಕರಿಸಲಾಗಿದೆ. ಇಣಿ, ಶಿರಗಳ ಮೇಲೆ ಹಗ್ಗದ ಗಂಟು ಹಾಕಿ ಅಲಂಕಾರಗೊಳಿಸಲಾಗಿದೆ. ಕೋಡುಗಳು ತ್ರುಟಿತಗೊಂಡಿದ್ದು, ಉಳಿದ ಭಾಗವು ಸಹ ಮುಕ್ಕಾಗಿರುವುದು ಗೋಚರಿಸುತ್ತದೆ. ಪ್ರವೇಶದ್ವಾರದ ಬಾಗಿಲುವಾಡೆಗಳು ತ್ರುಟಿತಗೊಂಡಿದ್ದು, ಇಲ್ಲಿಯೂ ವಾಡಿಕೆಯಂತೆ ಬೃಹದಾಕಾರವಾದ ಹೊಸ್ತಿಲ ಮೇಲೆ ಅವುಗಳನ್ನು ಜೋಡಿಸಲಾಗಿದೆ. ಗುಂಡಿನ ಸಾಲು, ಸುರಳಿಗೆತ್ತನೆ, ಸರಪಳಿ ಸಾಲುಗಳನ್ನು ಬಿಡಿಸಿ ಅಂದವನ್ನು ಹೆಚ್ಚಿಸಿದೆ. ಮೇಲಿನ ಹಣೆಪಟ್ಟಿಯಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ಗಜಲಕ್ಷ್ಮೀ ವಿಗ್ರಹವಿದ್ದು ಎಡಬಲಗಳಲ್ಲಿ ಆನೆಗಳು ಸೊಂಡಿಲಿನಿಂದ ಲಕ್ಷ್ಮೀತಾಯಿಗೆ ಅಭಿಷೇಕ ಮಾಡುವ ಭಂಗಿಯಲ್ಲಿರುವುದು ಕಂಡುಬರುತ್ತದೆ. ಶಿಲ್ಪಿ ಸೂಕ್ಷ್ಮ ಕೆಲಸ ನಿರ್ವಹಿಸಿ ದೇಗುಲಕ್ಕೆ ಮೆರಗು ಬರುವಂತೆ ಮಾಡಿದ್ದಾನೆ.

ಅವಶೇಷಗಳ ರಾಶಿ: ಕಳ್ಳಕಾಕರ ದಾಳಿಯಿಂದ ಅವಶೇಷಗಳು ಅನಾಥವಾಗಿದ್ದು, ಶಾಸನ, ವಿಗ್ರಹ ಕಲಾಚೆಲುವಿನಿಂದ ಕೂಡಿದ ಕೆತ್ತನೆಗಳು, ಬಾಗಿಲುವಾಡೆಗಳು ಅಲಂಕಾರಿಕ ಶಿಲಾ ಪ್ರಾಚ್ಯಾವಶೇಷಗಳನ್ನು ಸೇರಿಸಿ ಹಾರೆ, ಸುತ್ತಿಗೆಯಿಂದ ತುಂಡರಿಸಿ ದೇಗುಲದ ಎದುರಿಗೆ ಬೃಹತ್ ರಾಶಿ ಹಾಕಿದ್ದಾರೆ. ಈ ಅವಶೇಷಗಳ ರಾಶಿ ಇತಿಹಾಸಕಾರರಿಗೆ ಮತ್ತು ಸಂಶೋಧಕರಿಗೆ ಅಧ್ಯಯನ ಮಾಡಲಾಗದ ಸ್ಥಿತಿಯಲ್ಲಿದೆ.

ಪಂಚಲಿಂಗಗಳು: ಶ್ರೀ ಕಲ್ಮೇಶ್ವರ ದೇವಾಲಯದಿಂದ ಸುಮಾರು ಅರ್ಧ ಕಿಲೋಮೀಟರ್ ನಡೆದರೆ ಖಾಸಗಿಯವರ ಜಮೀನಿನಲ್ಲಿ ಪಂಚಲಿಂಗಗಳು ಗೋಚರಿಸುತ್ತವೆ. ಇವುಗಳ ದರ್ಶನ ಪಡೆಯಬೇಕಾದರೆ ಮಾಲೀಕನ ಅನುಮತಿ ಪಡೆಯಬೇಕು. ಇದಕ್ಕೆ ಕಾರಣ ಯಾರಾದರೂ ನಿಧಿಶೋಧಕರು ದಾಳಿ ಮಾಡಬಹುದೆನ್ನುವ ಆತಂಕ ಮಾಲೀಕರಲ್ಲಿದೆ. ಒಂದೇ ಸ್ಥಳದಲ್ಲಿ ೧೦ ಮೀಟರ್ ಅಳತೆಯ ಅಂತರದಲ್ಲಿ ಚೌಕಾಕಾರವಾಗಿ ಪಂಚಲಿಂಗೇಶ್ವರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಬಹುಸುಂದರವಾದ ವಿಗ್ರಹಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿವೆ. ಐದು ಲಿಂಗಗಳಿಂದ ನಿರ್ಮಾಣವಾಗಿ ಸರಳ ಸುಂದರ ಶೈಲಿಯಲ್ಲಿದ್ದು ಹಿಂದೆ ಈ ವಿಗ್ರಹಗಳನ್ನು ನಿತ್ಯ ಪೂಜೆ ಸಲ್ಲಿಸುವ ವ್ಯವಸ್ಥೆ ಇತ್ತು. ಕಾಲಾನಂತರದಲ್ಲಿ ಪೂಜಾ ಕೈಂಕರ್ಯ ನಿಂತುಹೋಯಿತು. ಆದರೆ ಈಗ ರಿ.ಸ.ನಂ. ಮಾಲೀಕ ಅಮಾವಾಸ್ಯೆ ಹಬ್ಬಹರಿದಿನಗಳಂದು ಶ್ರೀ ದೇವರುಗಳಿಗೆ ಅಭಿಷೇಕಗೈದು ಪೂಜೆ ಸಲ್ಲಿಸುವುದಲ್ಲದೇ ನೈವೇದ್ಯ ಸಮರ್ಪಿಸುತ್ತಾರೆ.

ಪೂಜಾಹೊಂಡ: ಖಾಸಗಿ ಮಾಲೀಕತ್ವದ ಕ್ಷೇತ್ರದಲ್ಲಿ ಪೂಜಾಹೊಂಡವನ್ನು ನಿರ್ಮಿಸಲಾಗಿದೆ. ಇದಕ್ಕೆ ಸರಕಾರ ರಿ.ಸ.ನಂ. ನೀಡಿದೆಯಾದರೂ ಇಲ್ಲಿ ಬೆಳೆಯುವ ಹುಲ್ಲು, ಕಮಲದ ಹೂ, ತಾವರೆ ಹೂಗಳನ್ನು ಹೊಂಡದ ನೀರನ್ನು ಬೆಳೆಗಳಿಗೆ ಹಾಯಿಸಲು ಮಾಲೀಕರೇ ಉಪಯೋಗಿಸುತ್ತಾರೆ.

ವಿಘ್ನೇಶ್ವರ (ವಿನಾಯಕ) ವಿಗ್ರಹ: ಶ್ರೀ ಕಲ್ಮೇಶ್ವರ ದೇವರ ಪ್ರಾಂಗಣದಲ್ಲಿ ತೃಟಿತಗೊಂಡ ಶ್ರೀ ವಿಘ್ನೇಶ್ವರ ವಿಗ್ರಹವು ಅನಾಥವಾಗಿದ್ದು, ಗೋಡೆಗೆ ಆತುಕೊಂಡ ಭಂಗಿಯಲ್ಲಿ ಕಂಡುಬರುತ್ತದೆ. ನಂದಿ ವಿಗ್ರಹದಂತೆ ಇದು ಸಹ ತೃಟಿತಗೊಂಡಿದೆ. ಬೆಣ್ಣೆ, ಉಂಡಿ ತುಂಬಿದ ತಾಟು ಎಡಗೈಯಲ್ಲಿದ್ದು ಎಡಮುರಿ ಸೊಂಡಿಲು ಎಡಕ್ಕೆ ತಿರುಗಿದೆ. ವಿರಾಜಮಾನದಲ್ಲಿ ಆಸೀನವಾಗಿ ಚತುರ್ಭುಜಗಳನ್ನು ಹೊಂದಿದ್ದು, ತ್ರಿಶೂಲ, ಅಭಯಹಸ್ತ, ಬೆಣ್ಣೆಉಂಡಿ, ಲೇಖನಿ ಧರಿಸಿದೆ. ಸುಮಾರು ೪ ಅಡಿ ಎತ್ತರ, ೩ ಅಡಿ ಅಗಲವಿದೆ. ಒಂದು ಕಾಲದಲ್ಲಿ ಪೂರ್ತಿ ಅರಣ್ಯಾವೃತಗೊಂಡಿದ್ದ ಇಂದೂರುಕೊಪ್ಪ ಗ್ರಾಮ ಈಗ ಬೇಚಿರಾಕ್ ಹಳ್ಳಿಯಾಗಿದೆ. ಗಿಡಮರಗಳೆಲ್ಲವೂ ಮಾಯವಾಗಿ ವ್ಯವಸಾಯಗಾರನ ಕೈಯಲ್ಲಿ ಸಿಲುಕಿ ಭತ್ತ, ಕಬ್ಬು, ಗೋವಿನಜೋಳ ಬೆಳೆ ತುಂಬಿ ನಿಂತಿದೆ. ಆದರೂ ಪರಂಪರೆಯ ದ್ಯೋತಕವಾಗಿ ಪ್ರತಿ ವರ್ಷ ಶ್ರಾವಣ ಮಾಸದ ಕೊನೇ ದಿನ ಜಾತ್ರಾಮಹೋತ್ಸವ ರೂಪದಲ್ಲಿ ಗ್ರಾಮ ಸಂಕೀರ್ತನೆ, ಮೆರವಣಿಗೆ ನಡೆಯುತ್ತವೆ. ನಂತರ ಸಾರ್ವಜನಿಕ ಪ್ರಸಾದ ವಿತರಣೆಯು ನಡೆಯುತ್ತದೆ. ಇದರಲ್ಲಿ ಮುಂಡಗೋಡ, ಹಾನಗಲ್, ಕಲಘಟಗಿ, ಯಲ್ಲಾಪೂರ ತಾಲ್ಲೂಕಿನ ಭಕ್ತರು ಪಾಲ್ಗೊಳ್ಳುತ್ತಾರೆ.

◆◆

೧೦

ಕೃಷ್ಣ ಬಿ.ಆರ್.

ಬಾಗೇಪಲ್ಲಿ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳು

ಬಾಗೇಪಲ್ಲಿ ತಾಲ್ಲೂಕು ಐತಿಹಾಸಿಕ ಮಹತ್ವವುಳ್ಳ ಪ್ರದೇಶ. ಪ್ರಾಚೀನ ಕಾಲದ ಆದಿಮಾನವನು ಇಲ್ಲಿ ನಡೆದಾಡಿರುವ, ಜೀವನ ಮಾಡಿರುವ, ಬೆಟ್ಟಗುಡ್ಡಗಳಲ್ಲಿ ತನ್ನ ಬದುಕನ್ನು ಸವಿದಿರುವ ಕುರುಹುಗಳು ದೊರೆತಿವೆ. ಸೂಕ್ಷ್ಮ ಶಿಲಾಯುಗ, ಬೃಹತ್ ಶಿಲಾಯುಗ ಇತ್ಯಾದಿ ಕಾಲಘಟ್ಟಗಳಿಗೆ ಸೇರಿರುವ ಅಂದಿನ ಮನುಷ್ಯನ ಕಷ್ಟಕರವಾದ ಬದುಕು, ಸಂಪ್ರದಾಯಗಳು, ಆಚಾರವಿಚಾರಗಳು, ರೂಢಿಗಳು ನೈತಿಕ ನಿಯಮಗಳು ಬಾಗೇಪಲ್ಲಿ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಕಂಡುಬರುತ್ತವೆ. ಪ್ರಕೃತಿದತ್ತವಾದ ಕಾಡುಮೇಡುಗಳಿಂದ, ಬೆಟ್ಟಗುಡ್ಡಗಳಿಂದ ಆವೃತ್ತವಾಗಿದ್ದು, ನೂತನ ಶಿಲಾಯುಗ, ಬೃಹತ್ ಶಿಲಾಯುಗ ಸೇರಿದಂತೆ ಅನೇಕ ಪ್ರಾಗೈತಿಹಾಸಿಕ ನೆಲೆಗಳಿವೆ. ಇವುಗಳಲ್ಲಿ ಹಲವು ವಸತಿ ನೆಲೆಗಳು(ಗುಜ್ಜೇಪಲ್ಲಿ ಬೆಟ್ಟದ ಬ್ಲಾಕ್‌ಡೈಕ್ ಕೆಳಗಿನ ಗುಹೆಗಳು) ಹಾಗೂ ಪಾಂಡವರಗುಡಿ, ಪಾಂಡವುಲ ಗುಳ್ಳು, ವಾಲಿವೀಡು, ಮೋರಿಯರ ಮನೆ, ಕಲ್ಮನೆ, ನಿಲಸುಗಲ್ಲು ಎನ್ನಲಾದ ಕಲ್ಲಾವೃತ್ತ ವನ್ನೊಳಗೊಂಡಿರುವ ಶಿಲಾಗೋರಿಗಳು ಮತ್ತು ಮಾನವಾಕೃತಿಗಳ ಬೃಹತ್ ಶಿಲಾಯುಗದ ಕಲ್ಗೋರಿಗಳು ಸೇರಿವೆ.

ಬಾಗೇಪಲ್ಲಿ ತಾಲ್ಲೂಕಿನ ಶಿವಪುರ ಯರ್ರಗುಡಿ, ದೇವರಗುಡಿಪಲ್ಲಿಯ ಬೆಟ್ಟಗಳು, ಬಾಗೇಪಲ್ಲಿ ಪಟ್ಟಣದ ಪೂಲವಾರಪಲ್ಲಿಯ ಜೀಗುಟ್ಟ, ಧರ್ಮಗುರು ಬಿ.ಎಡ್. ಕಾಲೇಜಿನ ಹಿಂಭಾಗದ ಸ್ಥಳದಲ್ಲಿ, ಪಟ್ಟಣದ ಕಡೆಯಿಂದ ಗೂಳೂರಿಗೆ ಹೋಗುವ ಮಾರ್ಗಮಧ್ಯದ ಎಡಭಾಗದ ಪ್ರದೇಶದಲ್ಲಿ, ಕೊಡಿಕೊಂಡೆಗೆ ಹೋಗುವ ಎಡಭಾಗದ ನವಿಲುಗುಟ್ಟ, ಮಸಾಲಮಡಗು ಇತ್ಯಾದಿಗಳಲ್ಲಿ ಈ ಶಿಲಾವೃತ್ತ ಸಮಾಧಿಗಳು ಕಂಡುಬರುತ್ತವೆ.

ಬಾಗೇಪಲ್ಲಿ ಪಟ್ಟಣದ ಸುತ್ತಮುತ್ತಲ ಪ್ರದೇಶದಲ್ಲಿ ಅನೇಕ ಪ್ರಾಗೈತಿಹಾಸಿಕ ನೆಲೆಗಳಿದ್ದು, ಅವು ಪೂರ್ವದಿಂದಲೂ ಜನವಸತಿ ಪ್ರದೇಶಗಳಾಗಿದ್ದವು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಈ ಪ್ರಾಗೈತಿಹಾಸಿಕ ನೆಲೆಗಳು ನೀರಿನ ಆಸರೆಯಲ್ಲಿರುವ ಪ್ರದೇಶಗಳಲ್ಲಿ ಹಾಗೂ ಎತ್ತರವಾದ ಬೆಟ್ಟಗುಡ್ಡಗಳಲ್ಲಿ ಇರುವುದು ಗಮನಾರ್ಹ. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಮಾತ್ರ ತಿಳಿಸಲು ಪ್ರಯತ್ನಿಸಿದ್ದೇನೆ.

ಶಿವಪುರದ ಯರ್ರಗುಡಿಯ ಬೃಹತ್‌ಶಿಲಾಯುಗದ ಕಲ್ಲಾವೃತ್ತ ಕಲ್ಗೋರಿಗಳು (Cairn Circle): ಶಿವಪುರದ ಯರ್ರಗುಡಿಯ ಬಳಿ ಈ ಸಮಾಧಿಗಳನ್ನು ಆಯುತಾಕಾರದ ದಪ್ಪದಾದ ಬಂಡೆಗಳಿಂದ ಮಾಡಲಾಗಿದೆ. ಸುಮಾರು ೬ ಇಂಚು ದಪ್ಪದಾದ ಹಾಗೂ ಕೆಳ ಮತ್ತು ಮೇಲ್ಭಾಗದ ಬಂಡೆಗಳು ಎಂಟು ಅಡಿ ಉದ್ದ, ನಾಲ್ಕು ಅಡಿ ಅಗಲವನ್ನು ಹೊಂದಿವೆ, ಪಾರ್ಶ್ವ ಬಂಡೆಗಳು ಎಂಟು ಅಡಿ ಉದ್ದ ನಾಲ್ಕು ಅಡಿ ಅಗಲವನ್ನು

ಹಿರಿಯ ಪತ್ರಕರ್ತರು
ಹಾಗೂ ಮಾಲೀಕರು
ಕರ್ನಾಟಕ ಪವರ್ ಪ್ರಿಂಟರ್ಸ್
೨೨ನೇ ವಾರ್ಡ್
ಬಾಗೇಪಲ್ಲಿ–೫೬೧೨೦೭
ಚಿಕ್ಕಬಳ್ಳಾಪುರ ಜಿಲ್ಲೆ
ಮೊ: ೯೩೪೫೯ ೫೮೨೨೧

ಹೊಂದಿವೆ. ಉತ್ತರ ದಿಕ್ಕಿಗಿರುವ ಬಂಡೆಗೆ ದೇವಮೂಲೆಯ ಭಾಗದಲ್ಲಿ ಕಿಂಡಿಯನ್ನು ಕೊರೆಯಲಾಗಿದೆ. ಕಿಂಡಿಯನ್ನು ಮುಚ್ಚುವಷ್ಟು ಅಳತೆಯ ಬಂಡೆಯನ್ನು ಮುಚ್ಚಳಿಕೆಯಾಗಿ ಇಡಲಾಗಿದೆ.



ಒಳಗಡೆ ಮೃತ್ಪಾತ್ರೆಗಳು ದೊರೆತಿದ್ದು, ಅದರಲ್ಲಿ ಅಗಲವಾದ ತಟ್ಟೆ, ತಟ್ಟೆಯ ಮೇಲೆ ಊಜಿ, ಆ ಊಜಿಯಲ್ಲಿ ಬೂದಿ, ಜೊತೆಗೆ ಕಬ್ಬಿಣದ ಚೂರು ಹಾಗೂ ಮೂಳೆಯ ಚೂರು ಸಿಕ್ಕಿದ್ದವು. ಜೊತೆಗೆ ಇಲ್ಲಿ ಸಿಕ್ಕಿರುವ ಮೃತ್ಪಾತ್ರೆಗಳು ಕೆಂಪು ಬಣ್ಣದಿಂದ ಇದ್ದು, ದಪ್ಪವಾಗಿವೆ. ಇದೇ ನೆಲೆಯಲ್ಲಿ ಸುಮಾರು ಮುವ್ವತ್ತು ನಲ್ವತ್ತು ಸಂಖ್ಯೆಯಲ್ಲಿ ಕಿಂಡಿಯನ್ನು ಹೊಂದಿರುವ (Dolmens) ಶಿಲಾಗೋರಿಗಳನ್ನು ಕಾಣಬಹುದು. ಆದರೆ ಇವೆಲ್ಲವೂ ನಿಧಿಶೋಧಕರ ಹಾವಳಿಯಿಂದ ಧ್ವಂಸಗೊಂಡಿವೆ. ಅವುಗಳಲ್ಲಿ ದೊರೆಯಬಹುದಾದ ಚಿತಾಭಸ್ಮದ ಮಡಿಕೆಕುಡಿಕೆಗಳನ್ನು ಸಂಪೂರ್ಣವಾಗಿ ಹಾಳುಗೆಡವಲಾಗಿದೆ. ಇಲ್ಲಿ ಸಿಕ್ಕಿದ ಮಡಿಕೆ, ಕುಡಿಕೆಗಳನ್ನು ಸ್ಥಳಿಯ ನ್ಯಾಷನಲ್ ಕಾಲೇಜಿನಲ್ಲಿ ಒಂದಷ್ಟು ದಿನ ಪ್ರದರ್ಶನಕ್ಕೂ ಇಡಲಾಗಿತ್ತು.

ಜೀಗುಟ್ಟ : ಬಾಗೇಪಲ್ಲಿಯಿಂದ ಬೆಂಗಳೂರು ಕಡೆಗೆ ರಾಷ್ಟ್ರೀಯ ಹೆದ್ದಾರಿ ೭ರಲ್ಲಿ ಪ್ರಯಾಣಿಸಬೇಕಾದರೆ ತಾಲ್ಲೂಕಿನ ಪೂಲವಾರಪಲ್ಲಿಯ ಬಳಿ ಎಡಭಾಗಕ್ಕೆ ಕಾಣಿಸುವ ಇರುವ ಗುಡ್ಡಕ್ಕೆ ಜೀಗುಟ್ಟ ಎಂದು ಹೆಸರಿದ್ದು, ಬೃಹತ್‌ಶಿಲಾಯುಗದ ನೆಲೆಯಾಗಿದೆ. ಎತ್ತರವಾದ ಬೆಟ್ಟದ ಮೇಲೆ ಇರುವುದರಿಂದ ಹಾಗೂ ಹಿರಿಯರು ವಾಸಿಸುತ್ತಿದ್ದ ಅಥವಾ ಅವರನ್ನು ಹೂಳಲಾದ ಸ್ಥಳ ಎಂಬುದಾಗಿದೆ. ಜೀ ಎಂದರೆ ಹಿರಿಯರು ಎಂದರ್ಥ. ಈ ಭಾಗದಲ್ಲಿ ಕಲ್ಲಾವೃತ್ತ ಕಲ್ಗೋರಿಗಳನ್ನು ಕಾಣಬಹುದು, ನಿಧಿ ಆಸೆಯಿಂದ ಈ ಕಲ್ಗೋರಿಗಳನ್ನು ಅಗೆದು ನಾಶ ಮಾಡಲಾಗಿದೆ. ಆದಾಗ್ಯೂ ಕೆಲವು ಹಾಗೇಯೆ ಇವೆ.

ರಾಷ್ಟ್ರೀಯ ಹೆದ್ದಾರಿ ೭ಕ್ಕೆ ಹೊಂದಿಕೊಂಡಿರುವ ಶ್ರೀ ಧರ್ಮಗುರು ಬಿ.ಎಡ್. ಕಾಲೇಜಿನ ಹಿಂಭಾಗದಲ್ಲಿ ಕಲ್ಲಾವೃತ್ತ ಕಲ್ಗೋರಿಗಳು ಇವೆ. ನಿಧಿ ಶೋಧಕರಿಂದ ಎಲ್ಲವೂ ಅಗೆದು ನಾಶ ಮಾಡಲಾಗಿದ್ದು, ಇನ್ನೂ ಕೆಲವು ಹಾಗೇಯೆ ಇವೆ.

ಮಸಾಲಮಡುಗು : ಮಸಾಲಮಡುಗು ಎಂಬ ಸ್ಥಳವು ಪಟ್ಟಣದಿಂದ ಕೊಡಿಕೊಂಡೆಗೆ ಹೋಗುವ ರಸ್ತೆಯ ಎಡಭಾಗಕ್ಕೆ ಬರುತ್ತದೆ. ಚಿತ್ರಾವತಿ ನದಿಯ ಸಂಪರ್ಕ ಕಾಲುವೆಯಾದ ಬಾಲಾಜಿ ಬಾಜಿರಾಯನ ಕಾಲುವೆ ಇಲ್ಲಿ ಹರಿಯುತ್ತದೆ. ಈ ಕಾಲುವೆಯಲ್ಲಿ ಸದಾ ಮೀನು ಏಡಿಗಳನ್ನು ಹಿಡಿಯುತ್ತಿದ್ದರು, ಜೊತೆಗೆ ಪಶುಪಕ್ಷಿ ಪ್ರಾಣಿಗಳ ಬೇಟೆಯಾಡಿ ಇಲ್ಲೆ ಮಸಾಲೆ ರುಬ್ಬಿ ಆಹಾರ ತಯಾರು ಮಾಡುತ್ತಿದ್ದರು. ಈ ಪ್ರಕ್ರಿಯೆ ಬಹು ಹಿಂದಿನಿಂದಲೂ ನಡೆದುಕೊಂಡು ಬಂದು ಸದಾ ನಿರಂತರವಾಗಿ ನಡೆಯುತ್ತಿದ್ದರಿಂದ ಈ ಸ್ಥಳಕ್ಕೆ ಮಸಾಲಮಡುಗು ಎಂದು ಕರೆಯಲಾಗುತ್ತದೆ. ಈ ಭಾಗದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಕಲ್ಲಾವೃತ್ತ ಕಲ್ಗೋರಿಗಳನ್ನು ಕಾಣಬಹುದು.

ನವಿಲುಗುಟ್ಟ : ನವಿಲುಗುಟ್ಟ ಎಂಬ ಸ್ಥಳವು ಪಟ್ಟಣದಿಂದ ಕೊಡಿಕೊಂಡೆಗೆ ಹೋಗುವ ರಸ್ತೆಯ ಎಡಭಾಗಕ್ಕೆ ಬರುತ್ತದೆ. ಈ ಭಾಗದಲ್ಲಿ ದೊಡ್ಡದಾದ ಗುಡ್ಡವಿದ್ದು, ನವಿಲುಗಳು ಇಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ನವಿಲುಗುಟ್ಟ ಎಂದು ಕರೆಯಲಾಗುತ್ತದೆ. ಈ ಭಾಗದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಕಲ್ಲಾವೃತ್ತ ಕಲ್ಗೋರಿಗಳನ್ನು ಕಾಣಬಹುದು.

ಕಲ್ಲಿಪಲ್ಲಿ : ತೋಳ್ಳಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಲಿಪಲ್ಲಿಯ ಅವಧೂತ ಆದಿನಾರಾಯಣಸ್ವಾಮಿ ಮಠಕ್ಕೆ ಹೋಗುವ ಮುಖ್ಯರಸ್ತೆಯ ತಿರುವಿನ ಎದುರುಭಾಗದಲ್ಲಿ ಕಲ್ಲಾವೃತ್ತ ಕಲ್ಗೋರಿಗಳನ್ನು ಕಾಣಬಹುದು. ಅದೇ ರೀತಿಯಲ್ಲಿ ಪಟ್ಟಣದ ಕಡೆಯಿಂದ ಗೂಳೂರು ಕಡೆಗೆ ಹೋಗಬೇಕಾದರೆ ರೆಡ್ಡಿಕುಂಟೆಯ ಎಡಭಾಗದಲ್ಲಿ ಇಂತಹ ಕಲ್ಲಾವೃತ್ತ ಕಲ್ಗೋರಿಗಳನ್ನು ಕಾಣಬಹುದು. ಅಷ್ಟೇ ಅಲ್ಲದೆ ಬಾಗೇಪಲ್ಲಿ ತಾಲ್ಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಸ್ಥರಿಂದ ಪಾಂಡವಗುಳ್ಳು ಎಂದು ಕರೆಯಲ್ಪಡುವ ಬೃಹತ್ ಶಿಲಾಯುಗದ ಕಲ್ಗೋರಿಗಳನ್ನು ಕಾಣಬಹುದು. ಒಟ್ಟಾರೆ ಬಾಗೇಪಲ್ಲಿ ತಾಲ್ಲೂಕಿಗೆ ಗುಮ್ಮನಾಯಕನಪಾಳ್ಯದ ಪಾಳೆಗಾರರ ಇತಿಹಾಸದ ನೇಪಥ್ಯವಿರುವಂತೆ, ಪ್ರಾಗ್ಯೆತಿಹಾಸಿಕ ಹಿನ್ನೆಲೆಯೂ ಇದ್ದು, ಇಲ್ಲಿನ ಕೆರೆ, ಕಾಲುವೆ, ನದಿ, ತೊರೆಗಳು, ಬೆಟ್ಟಗುಡ್ಡಗಳು, ಕಾಡುಮೇಡುಗಳು, ಅನೂಕೂಲಕರವಾದ ವಾತಾವರಣ ಇತ್ಯಾದಿ



ಮಾನವನ ಬದುಕಿಗೆ ಆಸರೆಯಾಗುವ ಭೌಗೋಳಿಕ ಅಂಶಗಳಿಂದ ನಮ್ಮ ಮೂಲನಿವಾಸಿಗಳು ಈ ಭಾಗದಲ್ಲಿ ಬದುಕು ಸವಿಸಿದ್ದೇ ಅಲ್ಲದೆ, ವಿವಿಧ ನಾಗರೀಕತೆಗಳನ್ನು ಕಂಡಿತ್ತು ಎಂಬುದು ವೇದ್ಯವಾಗುತ್ತದೆ.

ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಬೃಹತ್ ಶಿಲಾಯುಗದ ಮಾನವಾಕೃತಿಯ ಕಲ್ಗೋರಿಗಳು (Anthropomorphic Figures Megalithic burials) : ತಾಲ್ಲೂಕಿನ ಗುಜ್ಜೇಪಲ್ಲಿ ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಮಾನವಾಕೃತಿಯ ಬೃಹತ್ ಶಿಲಾಯುಗದ ಕಲ್ಗೋರಿಗಳು (Anthropomorphic Figures Megalithic burials) ಇವೆ. ಕಾಡಿನ ನಡುವೆ ಬೆಟ್ಟದ ಮೇಲ್ಭಾಗಕ್ಕೆ ತಲುಪಿದರೆ, ಸಮತಟ್ಟಾದ ವಿಶಾಲವಾದ ಸ್ಥಳವಿದೆ. ಇಲ್ಲಿಂದ ಸುತ್ತಮುತ್ತಲಿನ ಬೆಟ್ಟಗುಡ್ಡಗಳ ವಿಹಂಗಮ ನೋಟ ಕಂಡುಬರುತ್ತದೆ. ಬೆಟ್ಟದ ಮೇಲಿನ ವಿಶಾಲವಾದ ಸ್ಥಳದಲ್ಲಿ ಬೃಹತ್ ಶಿಲಾಯುಗದ ಮಾನವಾಕೃತಿಯ ಕಲ್ಗೋರಿಗಳ ಈ ಒಂದು ನೆಲೆ ಕಂಡುಬರುತ್ತದೆ.

ಈ ನೆಲೆಯಲ್ಲಿ ಬೃಹತ್ ಶಿಲಾಯುಗದ ಮಾನವಾಕೃತಿಗಳ ಕಲ್ಗೋರಿಗಳಿದ್ದು, ವೈವಿಧ್ಯತೆ ಮತ್ತು ವಿಶೇಷತೆಯನ್ನೊಳಗೊಂಡ ಅಪರೂಪವಾದ ನಮೂನೆಗಳಾಗಿವೆ. ಹಲವು ರಚನೆಗಳ ಕಲ್ಗೋರಿಗಳ ಕಲ್ಲುಚಪ್ಪಡಿಗಳನ್ನು ನಾಶ ಮಾಡಲಾಗಿದ್ದು, ಒಂದನೆಯದರಲ್ಲಿ ಬೃಹತ್ ಕಲ್ಲಿನ ಚಪ್ಪಡಿಗಳಿಂದ ಕಿಂಡಿಯಿರುವ ಕಲ್ಲಿನ ಪೆಟ್ಟಿಗೆಯನ್ನು (Port hole cist) ಆಯುತಾಕಾರದಲ್ಲಿ ರಚನೆ ಮಾಡಲಾಗಿದ್ದು, ಎಂಟು ಅಡಿಯ ನಾಲ್ಕು ಬಂಡೆಗಳಿಂದ ರಚಿಸಲಾಗಿದೆ. ಮೇಲೆ ಹೊದಿಸಲಾದ ಬಂಡೆ ಸುಮಾರು ಹತ್ತು ಅಡಿ. ಪ್ರತಿ ಬಂಡೆಯ ದಪ್ಪ ನಾಲ್ಕು ಇಂಚು. ಪೂರ್ವ ದಿಕ್ಕಿಗಿರುವ ಬಂಡೆಗೆ ಸುಮಾರು ಒಂದೂವರೆ ಅಡಿ ಸುತ್ತಳತೆಯ ಕಿಂಡಿಯನ್ನು ಕೊರೆಯಲಾಗಿದೆ. ಈ ಆಯುತಾಕಾರದ ಕಿಂಡಿಯಿರುವ ಕಲ್ಲಿನಪೆಟ್ಟಿಗೆಯ ರಚನೆಯ ಸುತ್ತಲೂ ಹೂವಿನ ದಳಗಳಂತೆ ಬೃಹತ್ ಬಂಡೆಗಳನ್ನು ವರ್ತುಲಾಕಾರದಲ್ಲಿ ಹೂಳಲಾಗಿದ್ದು, ಹೂವಿನ ಮಧ್ಯದಲ್ಲಿ ಮೊಗ್ಗಿನ ದಳಗಳು ಮುಚ್ಚಿಕೊಂಡಿರುವಂತೆ ಸ್ವಲ್ಪ ಓರೆಯಾಗಿವೆ. ಐದು ವರ್ತುಲಾಕಾರದ ಸಾಲುಗಳಲ್ಲಿ ಬಂಡೆಗಳನ್ನು ನಿಲ್ಲಿಸಲಾಗಿದೆ. ವರ್ತುಲಾಕಾರದಲ್ಲಿರುವ ನಿಲಿಸುಬಂಡೆಗಳು ಮೇಲಿನ ಸಾಲಿನಿಂದ ಕೊನೆಯ ಸಾಲಿಗೆ ಕ್ರಮವಾಗಿ ಎತ್ತರ ಕಡಿಮೆಯಾಗುತ್ತಾ ಬಂದಿವೆ. ಬಂಡೆಗಳ ಮೇಲ್ಭಾಗ ಅಗಲವಾಗಿದ್ದು, ಕ್ರಮವಾಗಿ ಕೆಳಭಾಗಭಿಮುಖವಾಗಿ ಅಗಲ ಕಡಿಮೆಯಾಗುತ್ತಾ ಸಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಮಾನವಾಕೃತಿಗಳು ನಮ್ಮ ಮನಸ್ಸಿಗೆ ನಾಟಿ, ಆಯುತಾಕಾರದ ಪೆಟ್ಟಿಗೆಯ ಸುತ್ತಲೂ ಮಾನವರ ಸರಪಳಿಯಂತೆ ಕಂಡುಬರುತ್ತದೆ. ಇದನ್ನು ಆಂಥ್ರೋಪೊಮಾರ್ಫಿಕ್‌ನ (Anthropomorphic) ಒಂದು ಭಾಗ ಎಂದು ಪರಿಗಣಿಸಬಹುದು.

ಇದೇ ಮಾದರಿಯ ನೆಲೆಗಳು ಮಡಿಕೇರಿ ಜಿಲ್ಲೆಯ ಸೋಮವಾರಪೇಟೆ ಹತ್ತಿರದ ಮೋರಿಬೆಟ್ಟ, ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲ್ಲೂಕಿನ ಕುಮತಿ, ಬಿಜಾಪುರದ ಬಾದಾಮಿ, ಐಹೊಳೆ ಪರಿಸರದಲ್ಲಿ ಕಂಡುಬಂದಿದ್ದು, ಈ ಜಡಮಡುಗು ಅಕ್ಕಮ್ಮಬೆಟ್ಟದ ಮಾನವಾಕೃತಿಗಳ ಬೃಹತ್ ಶಿಲಾಯುಗದ ಕಲ್ಗೋರಿಗಳು ನಾಲ್ಕನೆಯದು ಎಂದು ಪರಿಗಣಿಸಬಹುದಾಗಿದೆ. ಒಟ್ಟಾರೆ ಬೇರೆ ಬೇರೆ ನೆಲೆಗಳಿಗೆ ಹೋಲಿಸಿದಾಗ ಈ ನೆಲೆಗಳು ವೈವಿಧ್ಯತೆಯಿಂದ ಕೂಡಿದ್ದು, ಬೃಹತ್ ಶಿಲಾಯುಗದ ಮಾನವಾಕೃತಿಗಳ ಕಲ್ಗೋರಿಗಳಾಗಿವೆ.

ಕಲ್ಲಾವೃತ್ತ ಕಲ್ಗೋರಿಗಳು (Cairn Circle) : ಯರ‍್ರಗುಡಿ, ಅಕ್ಕಮ್ಮಬೆಟ್ಟದಲ್ಲಿ ನೂರಾರು ಸಂಖ್ಯೆಯಲ್ಲಿ ಕಿಂಡಿಯನ್ನು ಹೊಂದಿರುವ (Dolmens) ಶಿಲಾಗೋರಿಗಳನ್ನು ಕಾಣಬಹುದು. ಆದರೆ ಇವೆಲ್ಲವೂ ನಿಧಿಶೋಧಕರ ಹಾವಳಿಯಿಂದ ಧ್ವಂಸಗೊಂಡಿವೆ. ಅವುಗಳಲ್ಲಿ ದೊರೆಯಬಹುದಾದ ಚಿತಾಭಸ್ಮದ ಮಡಿಕೆಕುಡಿಕೆಗಳನ್ನು ಸಂಪೂರ್ಣವಾಗಿ ಹಾಳುಗೆಡವಲಾಗಿದೆ.

ಕೆಂಪು ಬಣ್ಣದ ಮಡಿಕೆ ಚೂರುಗಳು (Red ware) : ಯರ‍್ರಗುಡಿಯ ನನ್ನ ಅನೇಕ ಕ್ಷೇತ್ರ ಭೇಟಿಗಳಲ್ಲಿ ಈ ಡಾಲ್ಮನ್‌ಗಳನ್ನು ಬಹು ಸೂಕ್ಷ್ಮವಾಗಿ ಪರಿಶೋಧಿಸಿದಾಗ ನಸುಗೆಂಪು ಮಡಿಕೆಕುಡಿಕೆ ಚೂರುಗಳು ಲಭ್ಯವಾಗಿದ್ದು, ಇವು ಕಪ್ಪು ಮತ್ತು ಕೆಂಪು ಮಡಿಕೆಕುಡಿಕೆ ಚೂರುಗಳಿಗಿಂತ (Black & Red ware) ದಪ್ಪವಾಗಿವೆ. ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಸಿಕ್ಕಿರುವ ಮಡಿಕೆ ಕುಡಿಕೆಗಳ ಒಳ ಹಾಗೂ ಹೊರಭಾಗ ನಯವಾಗಿದ್ದು, ಕೆಲವು ಚೂರುಗಳ ಮೇಲೆ ಚೌಕಕಾರದಲ್ಲಿ ಗೆರೆಗಳಿವೆ. ಬೇರೆ ಬೇರೆ

ಸ್ಥಳಗಳಲ್ಲಿ ಸಿಕ್ಕಿರುವ ಮಡಿಕೆಕುಡಿಕೆಗಳ ನಮೂನೆಗಳನ್ನು ಆಧರಿಸಿ ವಿದ್ವಾಂಸರು ಹೇಳಿರುವಂತೆ ಅಭಿಪ್ರಾಯಪಡುವುದಾದರೆ, ಇಲ್ಲಿಯೂ ಸಹ ಸತ್ತ ವ್ಯಕ್ತಿಗಳ ಚಿತಾಭಸ್ಮವನ್ನು ಹಾಕಲು ಮತ್ತು ಧಾನ್ಯಗಳನ್ನು ಸಂಗ್ರಹಿಸಲು ಬಳಸುತ್ತಿದ್ದರು ಎನ್ನಬಹುದು.

ಕಪ್ಪು ಬಣ್ಣದ ಮಡಿಕೆ ಚೂರುಗಳು (Black ware) : ಜೊತೆಗೆ ಕಪ್ಪು ಬಣ್ಣದ ಮಡಿಕೆಕುಡಿಕೆಗಳ ಚೂರುಗಳು ಜಡಮಡುಗು ಅಕ್ಕಮ್ಮ ಬೆಟ್ಟದ ನೆಲೆಯಲ್ಲಿ ಲಭ್ಯವಾಗಿವೆ. ಇವುಗಳ ಒಳ ಮತ್ತು ಹೊರ ಭಾಗಗಳೆರಡೂ ಕಪ್ಪು ಬಣ್ಣದಿಂದಲೇ ಕೂಡಿವೆ. ಇವು ಸಹ ತುಂಬಾ ತೆಳುವಾಗಿ, ನಯವಾಗಿ ಹಾಗೂ ಹೊಳಪಿನಿಂದ ಕೂಡಿವೆ.

ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆ ಚೂರುಗಳು (Black & Red ware) : ಒಳಭಾಗ ಕಪ್ಪು ಬಣ್ಣದಿಂದ ಮತ್ತು ಹೊರಭಾಗ ಕೆಂಪು ಬಣ್ಣದಿಂದ ಕೂಡಿರುವ ನಮೂನೆಗಳು ಸಿಕ್ಕಿವೆ. ಹಲವು ಸಾಧಾರಣ ದಪ್ಪದಿಂದ ಇದ್ದರೆ, ಹಲವು ತೆಳುವಾಗಿವೆ. ಈ ಚೂರುಗಳ ಎರಡು ಬದಿಗಳು ಹೊಳಪಿನಿಂದ ಕೂಡಿವೆ. ಸಾಮಾನ್ಯವಾಗಿ ಭಾರತದ ಎಲ್ಲ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಇಂಥ ಪಾತ್ರೆಗಳು ಕಂಡುಬರುತ್ತವೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಬಾಗೇಪಲ್ಲಿ ತಾಲ್ಲೂಕಿನ ಯರ್ರಗುಡಿ, ಪೂಲವಾರಿಪಲ್ಲಿಯ ಜೀಗುಟ್ಟ, ಧರ್ಮಗುರು ಕಾಲೇಜಿನ ಹಿಂಭಾಗ, ಕಲ್ಲಿಪಲ್ಲಿ ಇತ್ಯಾದಿ ವಿವಿಧ ಕಡೆಗಳಲ್ಲಿ ನಾನು ಕಂಡ ಬೃಹತ್ ಶಿಲಾಯುಗದ ಕಲ್ಗೋರಿಗಳಲ್ಲಿ ಕಪ್ಪುಕೆಂಪು ಮಡಿಕೆಗಳ ಮೃತ್ಪಾತ್ರೆಗಳು ದೊರಕ್ಕಿದ್ದು ಅರ್ಧ ಇಂಚಿನಷ್ಟು ದಪ್ಪವಾಗಿವೆ. ಜೊತೆಗೆ ಜಡಮಡುಗು ಅಕ್ಕಮ್ಮ ಬೆಟ್ಟಕ್ಕೆ ಕೊತ್ತೂರು ಕಡೆಯಿಂದ ಪ್ರಾರಂಭವಾಗುವ ಬ್ಲಾಕ್‌ಡೈಕ್ ಶಿಲೆಗಳ ಸಾಲಿನ ಕೆಳಗೆ ಗುಹೆಗಳು ಇದ್ದು ಆ ಗುಹೆಗಳನ್ನು ಪರಿಶೀಲಿಸಿದಾಗ ಅದರಲ್ಲಿ ಬೃಹತ್ ಶಿಲಾಯುಗದ ಲಕ್ಷಣಗಳುಳ್ಳ ಅನೇಕ ಪೂರ್ಣ ಪ್ರಮಾಣದ ಮಡಿಕೆಗಳು ಕಂಡುಬರುತ್ತವೆ ಎನ್ನಬಹುದು.

ಬಣ್ಣದ ಬಂಡೆ ಚಿತ್ರಗಳು : ಪ್ರಾಗೈತಿಹಾಸಿಕ ಕಾಲಘಟದ ಬಂಡೆ ಚಿತ್ರಗಳನ್ನು ಪತ್ತೆಹಚ್ಚುವುದು ಮತ್ತು ಅವುಗಳ ವೈಜ್ಞಾನಿಕ ಅಧ್ಯಯನವು ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೂ ನಡೆದುಬಂದ ಹಾದಿಯ ವಿವಿಧ ಮಜಲುಗಳನ್ನು ತಿಳಿಯಲು ಸಹಕಾರಿಯಾಗುತ್ತವೆ. ಮತ್ತು ಅಂದಿನ ಆದಿಮಾನವನ ಭಾವನೆಗಳನ್ನು ಅಭಿವ್ಯಕ್ತಪಡಿಸುವ ಸಂಕೇತಗಳಾಗಿದ್ದು, ಅಂದಿನ ಜನರ ಜೀವನ ಶೈಲಿಯನ್ನು ತಿಳಿಯಲು ಅನುಕೂಲವಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಇಂತಹ ಬಣ್ಣದ ಬಂಡೆ ಚಿತ್ರಗಳು ತುಂಬಾ ವಿರಳ. ಆದರೆ ಈ ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಬಣ್ಣದ ಬಂಡೆ ಚಿತ್ರಗಳು ಕಂಡುಬಂದಿದ್ದು, ಆಶ್ಚರ್ಯವನ್ನುಂಟು ಮಾಡಿದೆ. ಈ ಬೆಟ್ಟಗುಡ್ಡಗಳ ಸಾಲಿನಲ್ಲಿ ನೂರಾರು ಗುಹೆಗಳು ಹಾಗೂ ಕಲ್ಲಾಸರೆಗಳಿದ್ದು, ಆದಿಮಾನವನ ವಾಸ್ತವ್ಯಕ್ಕೆ ಬಹಳ ಸೂಕ್ತವಾಗಿದ್ದಂತೆ ಕಂಡುಬರುತ್ತದೆ. ಇಲ್ಲೇ ಭೂಮಿಗೆ ಅಭಿಮುಖವಾಗಿ ಬಾಗಿರುವ ಬೃಹತ್ ಕಲ್ಲಾಸರೆಯ ಬಂಡೆಯೊಂದಕ್ಕೆ ಕೆಂಪು ಬಣ್ಣದಿಂದ ಚಿತ್ರಗಳನ್ನು ರಚನೆ ಮಾಡಲಾಗಿದೆ. ಆದರೆ ಅವು ಅಸ್ಪಷ್ಟವಾಗಿದ್ದು, ಕೆಳಭಾಗದಲ್ಲಿ ಕೊಂಬುಳ್ಳ ಯಾವುದೋ ಪ್ರಾಣಿಯ ಚಿತ್ರವಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸಂಶೋಧನೆ ಆದಲ್ಲಿ ಮತ್ತಷ್ಟು ಚಿತ್ರಗಳು ಬೆಳಕಿಗೆ ಬರ ಬಹುದು. ಇಲ್ಲಿ ಕರಡಿ ಹಾಗೂ ಚಿರತೆಗಳ ಭಯ ಸಂಶೋಧನೆಗೆ ಸ್ವಲ್ಪ ಮಟ್ಟಿಗೆ ಹಿನ್ನಡೆಯಾಗಿದೆ.



ಬಿಳಿಯ ಬಣ್ಣದ ಕುಟ್ಟು ಚಿತ್ರಗಳು : ಕೊತ್ತೂರು ಕಡೆ ಯಿಂದ ಪ್ರಾರಂಭವಾಗುವ ಬ್ಲಾಕ್‌ಡೈಕ್ ಶಿಲೆಗಳ ಬೆಟ್ಟದ ಸಾಲಿನ ಆರಂಭದಲ್ಲಿ ಬೃಹತ್ ಬಂಡೆಗಳಿಗೆ ಕಲ್ಲಿನಿಂದ ಕುಟ್ಟಿ ಕುಟ್ಟಿ ರಚನೆ ಮಾಡಲಾದ ಬಿಳಿಯ ಬಣ್ಣದ ಗೂಳಿಯ



ಕುಟ್ಟುಚಿತ್ರಗಳು ಕಂಡು ಬರುತ್ತವೆ.

ನವ ಶಿಲಾಯುಗದ ಆಯುಧಗಳು (Neolithic Axes) : ಈ ಜಡಮಡುಗು ಅಕ್ಕಮ್ಮಬೆಟ್ಟ ನವ ಶಿಲಾಯುಗದ ನೆಲೆಯೂ ಆಗಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳು ಸಾಕ್ಷಿ ದೊರೆಯುತ್ತವೆ. ಇಲ್ಲಿ ನೀರಿನ ಚಿಕ್ಕ ಹೊಂಡವಿದ್ದು, ಅದರ ಮುಂದೆ ಇರುವ ಎತ್ತರವಾದ ಸ್ಥಳದಲ್ಲಿ ಎರಡು ಸಣ್ಣ ಗುಡಿಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ಅಕ್ಕಮ್ಮನವರು ಎಂದು ನಂಬಲಾದ ನವಶಿಲಾಯುಗ ಸಂಸ್ಕೃತಿಯ ಕಪ್ಪು ಕಲ್ಲಿನ ಏಳು ಆಯುಧಗಳನ್ನು ಒಂದು ಗುಡಿಯಲ್ಲೂ, ಮತ್ತೊಂದು ಗುಡಿಯಲ್ಲಿ ಎರಡು ಆಯುಧಗಳನ್ನು ಪೂಜೆಗೆ ಇಡಲಾಗಿದೆ. ಇಂತಹ ನವಶಿಲಾಯುಗದ ಕೊಡಲಿಗಳನ್ನು ಪೂಜೆ ಮಾಡುವ ಪರಿಪಾಠವಿದ್ದು, ಉತ್ತರ ಕರ್ನಾಟಕದಲ್ಲಿ ಬಸವನಕೋಡು ಎಂದೂ, ಉತ್ತರ ಭಾರತದಲ್ಲಿ ವಿಲೇಜ್‌ಮಹಾದೇವ್ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಇವುಗಳನ್ನು ನವಶಿಲಾಯುಗದ ಜನರು ಕತ್ತರಿಸಲು, ಸೀಳಲು ಇತ್ಯಾದಿ ದೈನಂದಿನ ಕೆಲಸಗಳಿಗೆ ಉಪಯೋಗಿಸುತ್ತಿದ್ದರು ಎನ್ನಬಹುದು.

ನವಶಿಲಾಯುಗದ ನಾಗರೀಕತೆಯ ತೊಟ್ಟಿಲು ಹೌದು : ಇಲ್ಲಿ ಇರುವ ಜಡಮಡುಗು ನದಿ ಜೀವ ನದಿಯಲ್ಲದಿದ್ದರೂ, ಮಳೆ ಬಂದಾಗ ರಭಸವಾಗಿ ಹರಿದು ಸುಮ್ಮನಾಗುವ ಒಂದು ಸಣ್ಣ ನದಿ. ಬೆಟ್ಟಗುಡ್ಡಗಳ ಮೇಲೆ ಬೀಳುವ ಮಳೆ, ಮತ್ತಿತರೆ ನೀರಿನ ತೊರೆಗಳೆ ಈ ನದಿಗೆ ಜೀವಾಳ. ವಿವಿಧ ಸಂಸ್ಕೃತಿಗಳ ಮನುಜನಿಗೆ ಈ ನದಿಯ ತೀರ ಪೊರೆವ ತೊಟ್ಟಿಲು ಆಗಿರಬಹುದು ಎಂಬುದಕ್ಕೆ ಇಲ್ಲಿ ಸಿಕ್ಕಿರುವ ಮಡಿಕೆ ಕುಡಿಕೆಗಳು ಸಾಕ್ಷಿ ಹೇಳುತ್ತಿವೆ. ಒಟ್ಟಾರೆಯಾಗಿ ಈ ನೆಲೆಯಲ್ಲಿ ದೊರೆತಿರುವ ಶಿಲಾಯುಧಗಳು, ವರ್ಣಚಿತ್ರಗಳು, ಮೃತ್ಪಾತ್ರೆಗಳ ಚೂರುಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದರೆ, ಈ ಪ್ರದೇಶವು ಇತಿಹಾಸ ಆರಂಭ ಕಾಲದ ಅವಧಿಯ ಸಂಸ್ಕೃತಿಯ ನೆಲೆಯ ಜೊತೆಗೆ, ವಿವಿಧ ಸಂಸ್ಕೃತಿಗಳಿಗೆ ನೆಲೆಯಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎನ್ನಬಹುದು.

ಬೂದಿದಿಬ್ಬಗಳು

ಬೂದಿದಿನ್ನೆಗಳ ಬಗ್ಗೆ ವಿಭಿನ್ನವಾದ ಅಭಿಪ್ರಾಯಗಳು ಇದ್ದರೂ ಅವು ಕಂಡುಬಂದಿರುವ ಭೌಗೋಳಿಕ ಪರಿಸರವನ್ನು ಗಮನಿಸಿದರೆ, ಕಾಡು, ಬೆಟ್ಟಗುಡ್ಡಗಳಿಂದ ಆವೃತ್ತಗೊಂಡ ಈ ಪ್ರದೇಶಗಳಲ್ಲಿ ಒಂದು ಕಾಲಕ್ಕೆ ಕೃಷಿಗೆ ಯೋಗ್ಯವಾದ ಭೂಮಿ ಇರಲಿಲ್ಲವೆಂದು ತೋರುತ್ತದೆ. ಕಾಡುಮೇಡುಗಳನ್ನು ಕಡಿದು, ಕಲ್ಲುಗುಂಡುಗಳಿಂದ ಮುಕ್ತಗೊಳಿಸಿ, ಸಮತಟ್ಟು ಮಾಡಿ ಹೀಗೆ ಬಹಳ ಪ್ರಯತ್ನದ ಮೂಲಕ ಭೂಮಿಯನ್ನು ಬಳಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಇದರಿಂದ ಇಲ್ಲಿನ ಜನವರ್ಗ ಪಶುಪಾಲನೆ ವೃತ್ತಿಯನ್ನು ಪ್ರಮುಖವಾಗಿ ಅವಲಂಬಿಸಿದಂತೆ ಕಾಣುತ್ತದೆ. ಇಂತಹ ಬೆಟ್ಟಗುಡ್ಡಗಳಲ್ಲಿ ನೆಲೆಸಿದ್ದಂತಹ ಜನರು ಕೊಟ್ಟಿಗೆಗಳಲ್ಲಿ ಜಾನುವಾರುಗಳನ್ನು ನಿಲ್ಲಿಸಿರಬೇಕು. ಪ್ರತಿದಿನ ಸಂಗ್ರಹವಾಗುತ್ತಿದ್ದ ಸಗಣಿಯನ್ನು ಪಕ್ಕದಲ್ಲಿ ಒಂದೆಡೆ ಗುಡ್ಡೆ ಹಾಕಿ ಅದು ತ್ಯಾಜ್ಯವಾದ್ದರಿಂದ ಕಾಲದಿಂದ ಕಾಲಕ್ಕೆ ಸುಡುತ್ತಿದ್ದರು. ಇಲ್ಲವೇ ಸಗಣಿಯ ಈ ಗುಡ್ಡೆಗಳನ್ನು ಆಕಸ್ಮಿಕವಾಗಿ ಇಲ್ಲವೇ ಉದ್ದೇಶಪೂರ್ವಕವಾಗಿ ಬೆಂಕಿ ಹಾಕಿ ಸುಡುತ್ತಿರಬಹುದು. ಅದು ಕ್ರಮೇಣವಾಗಿ ದಹಿಸಿದಂತೆಲ್ಲಾ ಬೂದಿ

ದಿನ್ನೆಗಳು ಉಂಟಾಗಿರುವ ಸಾಧ್ಯತೆ ಇದೆ. ಇಂತಹ ಬೂದಿದಿನ್ನೆಗಳ ಕಾಲಮಾನವನ್ನು ವಿದ್ವಾಂಸರು ಸುಮಾರು ಕ್ರಿ.ಪೂ. ೨೦೦೦-೬೦೦ ರವರೆಗೆ ಎಂದು ಅಂದಾಜು ಮಾಡಲಾಗಿದೆ.

ಗುಮ್ಮನಾಯಕನಪಾಳ್ಯದ ಬೂದಿದಿಬ್ಬಗಳಲ್ಲಿ ದೊರೆತಿರುವ ಅವಶೇಷಗಳನ್ನು ಪರಿಶೀಲಿಸಿ ನೂತನ ಶಿಲಾಯುಗ ಸಂಸ್ಕೃತಿಯ ಕಾಲದವೆಂದು ನಿರ್ಧರಿಸಬಹುದಾಗಿದೆ. ನೂತನ ಶಿಲಾಯುಗ ಕಾಲದ ಪಶುಪಾಲಕರ ರಚನೆ ಸ್ಪಷ್ಟವಾಗುತ್ತದೆ. ದಿಬ್ಬದಲ್ಲಿ ದೊರೆತಿರುವ ಮೂಳೆಗಳು, ಮಡಿಕೆ ಕುಡಿಕೆ ಚೂರುಗಳು ಈ ಅಭಿಪ್ರಾಯವನ್ನು ಸ್ಪಷ್ಟೀಕರಿಸುತ್ತವೆ. ಗುಮ್ಮನಾಯಕನಪಾಳ್ಯದ ಪ್ರದೇಶವು ಪ್ರಾಕ್ಚಾರಿತ್ರ್ಯಾವಾಗಿ ಗಮನಾರ್ಹವಾಗಿದೆ. ಬೆಟ್ಟಗುಡ್ಡಗಳ ಸಾಲುಗಳ ಪ್ರದೇಶ ಪ್ರಾಗೈತಿಹಾಸಿಕ ಕಾಲದಿಂದಲೂ ಆದಿಮಾನವನ ಚಟುವಟಿಕೆಯ ಮತ್ತು ವಾಸ್ತವ್ಯದ ತಾಣವಾಗಿದೆ.

ಕುಲುಮೆಗಳು

ನವಶಿಲಾಯುಗದ ಕೊನೆಯ ಹಂತದಲ್ಲಿ ಅದಿರಿನಿಂದ ತಾಮ್ರವನ್ನು ತಯಾರಿಸುವ ಕಲೆಯನ್ನು ಕಂಡುಕೊಂಡರು. ಕ್ರಿ.ಪೂ. ೧೧ನೇ ಶತಮಾನದಿಂದ ಕ್ರಿ.ಪೂ. ೩ನೇ ಶತಮಾನದವರೆಗೆ ಬೃಹತ್ ಶಿಲಾಸಂಸ್ಕೃತಿಯಲ್ಲಿ ಕಬ್ಬಿಣದ ಉತ್ಪಾಧನೆ ಕಂಡುಬಂದಿದೆ. ಗುಮ್ಮನಾಯಕನಪಾಳ್ಯದ ಪರಿಸರದಲ್ಲಿಯೂ ಪಾರಂಪರಿಕವಾಗಿ ಕಬ್ಬಿಣದ ಉತ್ಪಾದನೆಯಾಗುತ್ತಿತ್ತು ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ನೆಲೆಗಳನ್ನು ಗುರ್ತಿಸಿ ಬೆಳಕಿಗೆ ತರಲಾಗಿದೆ. ಕೋಟೆಯ ಪ್ರವೇಶದ್ವಾರದ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ಇತ್ತೀಚಿಗಷ್ಟೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಉತ್ಖನನ ನಡೆಸಿದಾಗ ಕುಲುಮೆಗಳು ಇರುವುದು ಕಂಡುಬಂದಿವೆ. ಕುಲುಮೆಯಲ್ಲಿ ಸಿಗುವ ಕಬ್ಬಿಣದ ಕಿಟ್ಟ, ತಾಮ್ರ ಮತ್ತು ಕಬ್ಬಿಣದ ಪಾಕವನ್ನು ಸಂಗ್ರಹಿಸುವ ಕೊಳವೆಯಾಕಾರದ ಸುಟ್ಟ ಮಣ್ಣಿನ ಮೂಸೆಗಳು, ಪ್ರಾಣಿಯೊಂದರ ಮೂಳೆಗಳು, ಪಾತ್ರೆಗಳು, ಮಣ್ಣಿನ ಅವಶೇಷ ಯಥೇಚ್ಛವಾಗಿ ಕಂಡುಬಂದಿದ್ದು, ಕಬ್ಬಿಣದ ಉತ್ಪಾದನೆಯ ಬಗ್ಗೆ ಸಾಕ್ಷೀಕರಿಸುತ್ತವೆ.

ಈ ಎಲ್ಲಾ ವಿವರಗಳಿಂದ ಬಾಗೇಪಲ್ಲಿ ತಾಲ್ಲೂಕು ಪ್ರಾಗಿತಿಹಾಸ ಕಾಲದಿಂದಲೂ ಜನವಸತಿಯ ನೆಲೆಗಳಾಗಿದ್ದವು ಎಂಬುದು ವೇದ್ಯವಾಗುತ್ತದೆ. ಒಟ್ಟಾರೆ ಬಾಗೇಪಲ್ಲಿ ತಾಲ್ಲೂಕು ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ತಾಮ್ರಯುಗ, ಕಬ್ಬಿಣದ ಬೃಹತ್ ಶಿಲಾಯುಗಗಳ ಆದಿಮಾನವನ ನಿವಾಸಿ ತಾಣವಾಗಿ ಹಂತಹಂತವಾಗಿ ವಿಕಾಸವಾಗುತ್ತಾ, ನಂತರ ಅದರ ಮುಂದುವರೆದ ಭಾಗವಾಗಿ ಗುಮ್ಮನಾಯಕನಪಾಳ್ಯದ ಪಾಳೆಗಾರರ ಆಡಳಿತ ಪ್ರದೇಶವೂ ಆಗಿತ್ತು ಎಂಬುದು ವೇದ್ಯವಾಗುತ್ತದೆ.

ಆಕರಗ್ರಂಥಗಳು

೧. Gururaja Rao B.K., The Megalithic Culture in South India, Page No. 237.

೨. Poonacha K.P., Anthropomorphic Figures and other remains at Kumati, Page No. 118, 119, Published by : PURATATTVA Bulletin of the Indian Archaeological Society, Nov. 1995-96.

೩. Subbayya K.K., 1978, Archaeology of Coorg with special reference to Magaliths.

೪. ಸ್ಮಿತಾ ರೆಡ್ಡಿ ಡಿ, ೨೦೦೯, ಇತಿಹಾಸ ದರ್ಶನ, ಸಂ. ೨೪.

೫. ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೬. ಶರಣಬಸಪ್ಪ ಕೋಲ್ಕಾರ್, ೨೦೧೮, ಇತಿಹಾಸ ದರ್ಶನ, ಸಂ. ೩೩.

೭. ತಿಪ್ಪೇಶ್ ಹೆಚ್.ಎಂ., ೨೦೧೮, ಕೊಂಚಗೇರೆಯ ಬೂದಿದಿಬ್ಬ ಹಾಗೂ ಸಿದ್ದರಾಂಪುರದ ಪ್ರಾಗೈತಿಹಾಸಿಕ ವರ್ಣಚಿತ್ರಗಳು, ಇತಿಹಾಸ ದರ್ಶನ, ಸಂ. ೩೩, ಪು. ೧೦.

೮. ರೇವಣಸಿದ್ದಯ್ಯ ಕೆ, ೨೦೧೮, ಕುಣಿಗಲ್ ಪರಿಸರದ ಕಬ್ಬಿಣದ ಕುಲುಮೆಗಳ ಶೋಧ, ಇತಿಹಾಸ ದರ್ಶನ, ಸಂ. ೩೩, ಪು. ೧.

೯. ಕೃಷ್ಣ ಬಿ.ಆರ್., ೨೦೨೧, ಜಡಮಡುಗು ಅಕ್ಕಮ್ಮಬೆಟ್ಟದ ಮಾನವಾಕೃತಿಯ ಕಲ್ಗೋರಿಗಳು, ಇತಿಹಾಸ ದರ್ಶನ, ಸಂ. ೩೫, ಪು. ೫೯.

೧೦. ಕೃಷ್ಣ ಬಿ.ಆರ್., ಗುಮ್ಮನಾಯಕನಪಾಳ್ಯದ ಪಾಳೆಯಗಾರರು,

೧೧. Allchin F.R., Neolithic cattle-keepers of South India-1963. Page No.1 to 10th.-1st chapter.

ಹಾಗೂ ಜಡಮಡುಗು ಅಕ್ಕಮ್ಮ ಬೆಟ್ಟಕ್ಕೆ ಖುದ್ದು ಭೇಟಿ ನೀಡಿದ ಸಂದರ್ಭದಲ್ಲಿ ದೊರೆತ ಶೋಧಗಳು.

ಕ್ಷೇತ್ರ ಸಂಶೋಧನೆ ಸಂದರ್ಭದಲ್ಲಿ ಸ್ಥಳೀಯರಿಂದ ಪಡೆದುಕೊಂಡ ಮಾಹಿತಿಯ ವಿವರಗಳು.

♦♦

೧೧

ದೀಪಕ್‌ಕುಮಾರ ಕೆ.ಜಿ.

ದೇವರ ಕಾಡುಗಳ ಸುಟ್ಟಮಣ್ಣಿನ ಹರಕೆ ಗೊಂಬೆಗಳು

ಸುಟ್ಟಮಣ್ಣಿನ ಬಳಕೆ ಬಹು ಪ್ರಾಚೀನವಾದುದ್ದು, ಇದು ಮನುಷ್ಯನ ನಾಗರೀಕತೆ ಮತ್ತು ಸಂಸ್ಕೃತಿ ಆರಂಭ ಕಾಲದಿಂದಲೂ ಬಹು ಪ್ರಮುಖವಾದ ಮಾಧ್ಯಮವಾಗಿದ್ದು, ಇದನ್ನು ಆಂಗ್ಲ ಭಾಷೆಯಲ್ಲಿ ಟೆರಾಕೋಟಾ ಎಂದು ಸಂಬೋಧಿಸುವರು, ಅಂದರೆ ಈ ಪದವು ಮೂಲತಃ ಗ್ರೀಕ್-ಲ್ಯಾಟೀನ್ ಭಾಷೆಯದಾಗಿದ್ದು. ಇದರ ಅರ್ಥವು ಟೆರಾ + ಕೋಟಾ ಅಂದರೆ ಸುಟ್ಟ + ಮಣ್ಣು (ಭೂಮಿ) ಎಂಬ ಅರ್ಥವನ್ನು ಪ್ರತಿಬಿಂಬಿಸುತ್ತದೆ (ಶಬ್ದಕೋಶ). ಈ ಮಾಧ್ಯಮವು ಪರಿಸರ ಸ್ನೇಹಿ ಮಾಧ್ಯಮವಾಗಿದ್ದು ಪ್ರಸ್ತುತ ಬಳಕೆಯಲ್ಲಿ ಅವನತಿಯ ಅಂಚಿನಲ್ಲಿದೆ, ಸುಟ್ಟ ಮಣ್ಣಿನ ಮೂರ್ತಿಗಳ ಕುರಿತಾಗಿ ಅಧ್ಯಯನ ನಡೆಸುತ್ತಾ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿರುವ ದೇವರ ಕಾಡುಗಳಲ್ಲಿ ಸಾಮಾನ್ಯವಾಗಿ ಗೋಚರಿಸುವ ಸುಟ್ಟಮಣ್ಣಿನ ಹರಕೆ ಗೊಂಬೆಗಳು ಬಲು ಕುತೂಹಲ ಹುಟ್ಟಿಸುವಂತಹ ಹಾಗೂ ಹೆಚ್ಚಿನ ಅಧ್ಯಯನಕ್ಕೆ ಸೂಕ್ತವಾದ ವಿಷಯವೆಂದೆನಿಸಿ, ವಿರಾಜಪೇಟೆ ತಾಲ್ಲೂಕಿನಲ್ಲಿ ನಡೆಸಿದ ಕ್ಷೇತ್ರಕಾರ್ಯವನ್ನಾದರಿಸಿ ದೊರೆತ ಮಾಹಿತಿಗಳನ್ನು ಹಾಗೂ ಈಗಾಗಲೆ ತಾಲ್ಲೂಕಿನ ಪುರಾತನ ಸ್ಮಾರಕಗಳ ಬಗೆಗಿನ ಲೇಖನಗಳನ್ನು ಆಧರಿಸಿ ರಚಿಸಿದ ಲೇಖನ ಇದಾಗಿದೆ. ಈ ಲೇಖನದಲ್ಲಿ ದೇವರ ಬನದಲ್ಲಿ ಜೋಡಿಸಿದಂತಿರುವ/ ಸುರಿದ ರಾಶಿಯಂತಿರುವ ಸುಟ್ಟ ಮಣ್ಣಿನ ಮೂರ್ತಿಗಳೊಂದಿಗಿನ - ಸಂಪ್ರದಾಯ - ಆಚರಣೆ ಹಾಗೂ ಈ ಮೂರ್ತಿಗಳ ರಚನಾಕ್ರಮ ಹಾಗೂ ಪ್ರಸ್ತುತ ಮತ್ತು ಪ್ರಾಚೀನ ಕಾಲದ ನಡುವಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಅನಾವರಣಗೊಳಿಸುವುದೇ ಇಲ್ಲಿನ ಮುಖ್ಯ ವಿಷಯವಾಗಿದೆ.

ಪ್ರಸ್ತುತ ವಿರಾಜಪೇಟೆ ತಾಲ್ಲೂಕಿನಲ್ಲಿ ಕಾಣಸಿಗುವ ಅಯ್ಯಪ್ಪ ದೇವರ ವಿವಿಧ ಹೆಸರುಗಳನ್ನೊಳಗೊಂಡ ಬನಗಳು ಹಾಗೂ ಭಗವತಿ, ಭದ್ರಕಾಳಿ ದೇವರುಗಳಿಗೆ ಮೀಸಲಿರಿಸಿದ ಬನಗಳಲ್ಲಿ ಸಿಕ್ಕ ಸುಟ್ಟ ಮಣ್ಣಿನ ಮೂರ್ತಿಗಳ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡು ದೊರೆತ ಮಾಹಿತಿಗಳನ್ನು ಇಲ್ಲಿ ಪ್ರಸ್ತುತಪಡಿಸಿರುವೆ.

ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ
ವಿಭಾಗ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-೫೭೦ ೦೦೬
ಮೊ: ೯೦೩೬೧ ೬೪೪೫೩

ಐತಿಹಾಸಿಕ ಹಿನ್ನೆಲೆ

ಕೊಡಗು ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯ ಆಧಾರದ ಮೇಲೆ ದೇವರ ಕಾಡುಗಳನ್ನು ನೋಡುವುದಾದರೆ ಜಿಲ್ಲೆಯ ಅತ್ಯಂತ ಹಳೆಯ ಮತ್ತು ಪುರಾತನ ದೇವರ ಕಾಡು ಕ್ರಿ.ಪೂ. ೧೦೦೦ಕ್ಕೆ ಸೇರಿದುದು, ಇದು ವಿರಾಜಪೇಟೆ ತಾಲ್ಲೂಕಿನ ಹೆತ್ತೂರು-ಕೈಕೇರಿ

ರಸ್ತೆಯ ಮಾರ್ಗದಲ್ಲಿ ಕೋಳತೋಡು-ಬೈಗೋಡು ಎಂಬ ಗ್ರಾಮದಲ್ಲಿದೆ. ಈ ದೇವರ ಕಾಡನ್ನು ಈಶ್ವರ ದೇವರ ಕಾಡು ಎಂದು ಕರೆಯುತ್ತಾರೆ. ಈ ಕಾಡಿನಲ್ಲಿ ಇತಿಹಾಸ ಪೂರ್ವ ಕಾಲದ ಕೋನಾಕಾರದ ಎರಡು ಸ್ಮಾರಕಶಿಲೆ (ಮಾನ್ಹಿರ್) ಗಳಿದ್ದು ಒಂದು ೧೨ ಅಡಿ ಎತ್ತರ ಮತ್ತು ೫ ಅಡಿ ಆಳವಾಗಿದ್ದು ಮತ್ತೊಂದು ೧೦ ಅಡಿ ಎತ್ತರ (ಚಿತ್ರ ೧) ಮತ್ತು ೮ ಅಡಿ ಆಳವಾಗಿದೆ ಹಾಗೂ ಈ ಮಾನ್ಹಿರ್‌ಗಳ ಸಮೀಪದಲ್ಲಿಯೇ ಯು ಆಕಾರದ ಪೋರ್ಟ್‌ಹೋಲ್ ಹೊಂದಿರುವ ನೆಲಕೋಣೆ (ಡಾಲ್ಮೈಡ್) ಇರುವುದನ್ನು ಮತ್ತು ಇತಿಹಾಸ ಪೂರ್ವ ಆಚರಣೆಗಳಾದ ಬಲಿ ಮತ್ತು ಹರಕೆಗಳನ್ನು ಅರ್ಪಿಸುವ ಸಂಪ್ರದಾಯವನ್ನು ಇಲ್ಲಿ ಕಾಣಬಹುದು. ದೇವತೆಗಳನ್ನು ಸಮಾಧಾನಪಡಿಸಲು ಹರಕೆಯ ರೂಪದಲ್ಲಿ ಸುಟ್ಟಮಣ್ಣಿನಲ್ಲಿ ನಾಯಿ, ಕುದುರೆ, ಆನೆ ಮತ್ತು ಇತರ ಸುಟ್ಟಮಣ್ಣಿನ ರೂಪಗಳನ್ನು ಗ್ರಾಮಸ್ಥರು ಇಂದಿಗೂ ಅರ್ಪಿಸುತ್ತಿರುವುದು ಪ್ರಮುಖ ಆಚರಣೆಯಾಗಿದೆ. (ಚಂದ್ರಕಾಂತ್ ಎಂ.ಜಿ, ಎಂ.ಎಸ್. ಅಕವ್ವಾ, ಮಹಾದೇವ್.ಜೆ, ಭಟ್.ಎಂ ಮತ್ತು ಗೈಡೋವ್ಯಾನ್ ಹ್ಯುಲೆನ್ ಬಬ್ರಾಕ್ ೨೦೨೦)



ಚಿತ್ರ ೧

ಉತ್ತರ ಕೊಡಗು ಮತ್ತು ವಿರಾಜಪೇಟೆಯ ಮೋರೆ ಬೆಟ್ಟಗಳಲ್ಲಿ ೧೮೬೮ & ೧೮೬೯ರಲ್ಲಿ ನಡೆದ ಉತ್ಖನನದಲ್ಲಿ ಆರ್.ಎ. ಕೋಲ್‌ರವರು ಸುಟ್ಟಮಣ್ಣಿನ ಕೆಲವು ಪ್ರಾಣಿಗಳ ಸಣ್ಣ ಮೂರ್ತಿಗಳನ್ನು ಸಂಗ್ರಹಿಸಿದ್ದು, ಈ ಮೂರ್ತಿಗಳು ನೋಡಲು ಕೋಣ ಅಥವಾ ಹಂದಿಯ (ಚಿತ್ರ-೨) ರೂಪವನ್ನು ಹೊಂದಿವೆ. ಈ ಮೂರ್ತಿಗಳ ರೂಪಗಳು ಮತ್ತು ತಮಿಳುನಾಡಿನ ನೀಲಗಿರಿಯಲ್ಲಿನ ಉತ್ಖನನದಲ್ಲಿ ಸಿಕ್ಕ ಸುಟ್ಟಮಣ್ಣಿನ ಮೂರ್ತಿಗಳಿಗೆ ಹೋಲಿಕೆ ಮಾಡಿ ನೋಡಬಹುದಾಗಿದೆ ಹಾಗೂ ಈ ಮೂರ್ತಿಗಳು ಪೂರ್ಣ ಘನಾಕೃತಿಗಳಾಗಿದ್ದು ಮೂಗು ಕಣ್ಣುಗಳನ್ನು ವೃತ್ತಾಕಾರದ ಕೊಳವೆಯಿಂದ ಒತ್ತಿ ನಿರ್ಮಿಸಿರುವುದು ಗೋಚರಿಸುತ್ತದೆ.



ಚಿತ್ರ ೨

ನಂತರದಲ್ಲಿ ಸುಟ್ಟಮಣ್ಣಿನ ಉಲ್ಲೇಖಗಳನ್ನು ಪಿ.ಆರ್. ತಿಪ್ಪೇಸ್ವಾಮಿ ಅವರು ಮೈಸೂರಿನ ಜಯಲಕ್ಷ್ಮಿ ವಿಲಾಸ್ ಅರಮನೆಯಲ್ಲಿ ಸಂಗ್ರಹಿಸಿದ್ದು ಸುಟ್ಟಮಣ್ಣಿನ ಅಯ್ಯಪ್ಪ ದೇವರ ಬೇಟೆನಾಯಿಗಳ ಶಿಲ್ಪಗಳಿವೆ. ಈ ಬೇಟೆನಾಯಿಗಳನ್ನು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದ್ದು, ಸುಮಾರು ೨೦೦ ರಿಂದ ೫೦೦ ವರ್ಷ ಹಿಂದಿನವು ಎಂದಿರಬಹುದೆಂದು ಊಹಿಸಲಾಗಿದೆ ಹಾಗೂ ಇವುಗಳ ಕುರಿತಾದ ಯಾವುದೇ ಹೆಚ್ಚಿನ ವಿವರಗಳನ್ನು ನಮೂದಿಸಿರುವುದಿಲ್ಲ ಮತ್ತು ಪ್ರದರ್ಶನಕ್ಕೆ ಇರಿಸಿದ ಹಲವಾರು ಸುಟ್ಟಮಣ್ಣಿನ ಮೂರ್ತಿಗಳಿದ್ದು ಇವುಗಳ ವಿವಿಧ ಆಕಾರ ರೂಪಗಳಿಂದ ಕೂಡಿದ್ದು ಯಾವುದೇ ವಿವರಣೆಗಳು ದೊರಕಿರುವುದಿಲ್ಲ.

ವಿರಾಜಪೇಟೆ ತಾಲ್ಲೂಕಿನಾದ್ಯಾಂತ ಕಾಣಸಿಗುವ ದೇವರ ಕಾಡುಗಳಲ್ಲಿ ಇರುವ ಈ ಸುಟ್ಟಮಣ್ಣಿನ ಮೂರ್ತಿಗಳು ಕೆಲವು ಗ್ರಾಮಗಳಲ್ಲಿ ತುಂಬಾ ಹಿಂದಿನಿಂದಲು ಇವೆ ಎಂದು ಹಾಗೂ ಹಿರಿಯರನ್ನು ಪ್ರಶ್ನಿಸಿದಾಗ ನಮ್ಮ ಹಿಂದಿನ ೨ - ೩ ತಲೆಮಾರಿನ ಹಿಂದಿನಿಂದಲು ಇಲ್ಲಿವೆ ಎಂದು ಮತ್ತು ಇವುಗಳನ್ನು ಪ್ರತಿ ವರ್ಷವು ಪೂಜಿಸುತ್ತಾ ಬರುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಹಾಗೆಯೇ ಇನ್ನು ಕೆಲವು ದೇವರ ಕಾಡುಗಳಲ್ಲಿ ಈ ಸಂಪ್ರದಾಯ ಚಾಲ್ತಿಯಲ್ಲಿದ್ದು ದೇವರ ಕಾಡಿನ ದೇವರಿಗೆ

ಅಂದರೆ ಅಯ್ಯಪ್ಪ, ಭದ್ರಕಾಳಿ, ಈಶ್ವರ ಮುಂತಾದ ದೇವತೆಗಳಿಗೆ ಹರಕೆಯ ರೂಪದಲ್ಲಿ ಈ ಮೂರ್ತಿಗಳನ್ನು ಅರ್ಪಿಸುತ್ತಿದ್ದು ಇವುಗಳ ಇತಿಹಾಸವು ಅಲ್ಲಿನ ಸ್ಥಳೀಯರ ಪೂರ್ವಜರಿಂದ ನಡೆದು ಬರುತ್ತಿದೆ.

ಸಾಂಸ್ಕೃತಿಕ ಉಲ್ಲೇಖ

ಕೊಡಗು ಜಿಲ್ಲೆಯಾದ್ಯಂತ ಕೊಡವರು ಹೆಚ್ಚಾಗಿದ್ದು ಇವರು ಹಿಂದೂ ಧರ್ಮದವರಾಗಿದ್ದಾರೆ ಹಾಗೂ ಜಿಲ್ಲೆಯಲ್ಲಿ ಹೆಗ್ಗಡೆಗಳು, ಐರೀಸ್, ಕೋಯವಾರು, ಕುಂಬಾರರು, ಕುಡಿಯಾರು, ಮಲೆಯರು, ಗೋಲ್ಲರು, ಕನ್ನಿಯಾ, ಪನ್ನಿಕಾ, ಬನ್ನಾ, ಕಾಪ್ಪ, ಕೆಂಬಟ್ಟಿ, ಮಡಿವಾಳ, ಮೇಧಾ, ಅದಿಯಾ, ಕೋಲ್ಯ, ಒಕ್ಕಲಿಗೌಡ, ಗೌಡ, ಯವಾ, ಲಿಂಗಬ್ರಹ್ಮನ್. ಆದಿಕರ್ನಾಟಕ, ಹಾಲುಮತ ಮತ್ತು ಜಮ್ಮಾ ಮ್ಯಾಪಿಳ್ಳ ಸಮುದಾಯದ ಜನರುಗಳಿದ್ದು ಹಿಂದೂ ಧರ್ಮಕ್ಕೆ ಹೊಂದಿ ಕೊಂಡಂತಿರುವ ಸಮಾಜದ ಎಲ್ಲರು ಇಲ್ಲಿನ ಈ ದೇವರ ಕಾಡುಗಳನ್ನು ತಮ್ಮ ಕುಟುಂಬ ದೇವರಾಗಿ ಆರಾಧಿಸಿಕೊಂಡು ಬಂದಿರುತ್ತಾರೆ. ಇವರ ಮುಖ್ಯ ಆಚರಣೆಗಳೆಂದರೆ ಕರಣಕೊಡುಪಾ, ಪುತ್ತಾರಿ. ಕೈಲ್ ಪಾಡ್, ಉಗಾಡಿ, ಮುಪ್ಪತು ಶನಿವಾರ, ಮಕರಸಂಕ್ರಮಣ, ಮತ್ತು ಕಾವೇರಿ ಸಂಕ್ರಮಣ (ತೀರ್ಥೋದ್ಭವ) ಇತ್ಯಾದಿಗಳು. ಈ ಹಬ್ಬಗಳನ್ನು ಎಲ್ಲ ಸಮುದಾಯದವರು ಸೇರಿ ಗ್ರಾಮದ ದೇವತೆಯ ಆವಾಸ ಸ್ಥಾನವೆಂದು ನಂಬಿರುವ ದೇವರ ಕಾಡಿಗೆ ಹೊಂದಿಕೊಂಡಿರುವ ಪವಿತ್ರದೇವಾಲಯದಲ್ಲಿ ಆಚರಿಸುತ್ತ ಬಂದಿದ್ದಾರೆ. ಕೆಲವು ದೇವಾಲಯಗಳು ಕುಟುಂಬಗಳಿಗೆ ಮೀಸಲಿದ್ದರೆ ಕೆಲವು ದೇವಾಲಯಗಳು ಗ್ರಾಮಕ್ಕೆ ಸೇರಿದ ದೇವಾಲಯಗಳಾಗಿವೆ. ಈ ದೇವಾಲಯಗಳನ್ನು ಸಮುದಾಯ ಮತ್ತು ಇದರ ಮುಖಂಡರು ನಿರ್ವಹಣೆ ಮತ್ತು ಆಚರಣೆಗಳನ್ನು ನಡೆಸಿಕೊಂಡು ಹೋಗುತ್ತಿದ್ದು ಕೋಮು ಸೌಹಾರ್ದತೆಗೆ ಪ್ರಮುಖ ಪಾತ್ರವಹಿಸಿದೆ. (ಚಂದ್ರಕಾಂತ್ ಎಮ್. ಜಿ. ಮತ್ತು ಎಮ್. ಜಿ. ನಾಗರಾಜ ೧೯೯೭)

ಆಚರಣೆ ಮತ್ತು ಸಂಪ್ರದಾಯಗಳು ನೆರೆಯ ಕೇರಳ ರಾಜ್ಯದಿಂದ ಪ್ರೇರಣೆಗೆ ಒಳಗಾಗಿರಬಹುದೆಂದು ಭಾವಿಸಬಹುದು. ಕಾರಣ ಈ ದೇವರ ಕಾಡು ಮತ್ತು ಸುಟ್ಟಮಣ್ಣಿನ ಗೊಂಬೆ ಹರಕೆಯನ್ನು ಅರ್ಪಿಸುವ ಸಂಪ್ರದಾಯವು ಕೇರಳ ರಾಜ್ಯದಲ್ಲಿ ಹೆಚ್ಚಿನದಾಗಿ ಕಂಡುಬರುವುದು ಮತ್ತು ಇಲ್ಲಿನ ಕೊಡವ ಭಾಷೆಯು ಕನ್ನಡ, ತುಳು ಮತ್ತು ಮಲೆಯಾಳಂಗಳ ಸಂಯೋಜನೆಯಿಂದ ರೂಪುಗೊಂಡಿದೆ. ಈ ಎಲ್ಲವನ್ನು ಗಮನದಲ್ಲಿರಿಸಿ ಪೂಜಾ ಸಂಸ್ಕೃತಿಗಳು, ಕೇರಳ ಸಂಸ್ಕೃತಿಯಿಂದ ಪ್ರಬಲ ಪ್ರೇರಣೆ ಇರುವುದನ್ನು ನಿರೂಪಿಸುತ್ತದೆ (ಕುಶಲಪ್ಪ ಸಿ.ಜಿ. ಮತ್ತು ಎಸ್. ರಾಘವೇಂದ್ರ ೨೦೧೨)

ಆಚರಣೆಗಳು ದೇವರಕಾಡುಗಳ ಸುತ್ತಲು ಬೆಳೆದುಕೊಂಡಿದ್ದು, ದೇವರಕಾಡು ಎಂದರೆ ಪ್ರಕೃತಿಯ ಆರಾಧನೆ, ಮರಗಳ ಪವಿತ್ರ ಪೂಜೆ, ಜೀವವೈವಿಧ್ಯಗಳಿಗೆ ಕಾರಣೀಭೂತನಾದ, ಆಶ್ರಯ ಸ್ಥಾನವಾದ ಪ್ರಕೃತಿಯ ಪೂಜೆ ಇದರಿಂದ ದೈವಿಕ ಆರಾಧನೆಯ ಜೊತೆಗೆ ಪ್ರಕೃತಿ ಸಂರಕ್ಷಣೆಯ ಮೂಲ ಉದ್ದೇಶವಾಗಿದೆ. ಇದರಿಂದ ದೇವರಿಗೆಂದು ಮೀಸಲಿರಿಸಿದ ಅರಣ್ಯದ ಬಗ್ಗೆ ಗೌರವ, ಭಯಗಳನ್ನುಳಿಸಿ, ಭಕ್ತಿಯ ಸಂಕೇತವಾಗಿ ನಿರೂಪಿತಗೊಂಡು, ದೇವರಕಾಡು, ದೇವರ ಅರಣ್ಯಗಳೆಂಬ ಹೆಸರಿನಿಂದ ಉಳಿದು ಬೆಳೆದು ಬರುತ್ತಿವೆ. (ಕಲಾಂ. ಎ.ಎ. ೧೯೯೬) ಮರಗಳ ಆರಾಧನೆ ಬರಿಯ ವಾಸ್ತವಿಕತೆಯನ್ನಲ್ಲದೆ ವೇದಗಳ ಬೇರಿನಲ್ಲಿಯು ಪ್ರತೀತಗೊಂಡಿದೆ. ಮರಗಳು, ಗಂಧರ್ವರು, ಅಪ್ಸರೆಯರು ಮತ್ತು ಶಕ್ತಿಯ ಆವಾಸಸ್ಥಾನವೆಂದು ತಿಳಿಸಿರುವುದನ್ನು ಕಾಣಬಹುದು.

ಕೊಡಗು ಜಿಲ್ಲೆಯಲ್ಲಿನ ೧೨೧೪ ಪವಿತ್ರ ತೋಪುಗಳಲ್ಲಿ, ವಿರಾಜಪೇಟೆ ತಾಲ್ಲೂಕಿನಲ್ಲಿ ೫೦೮, ಮಡಿಕೇರಿಯಲ್ಲಿ ೩೦೬ ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ ೪೦೦ ದೇವರಕಾಡುಗಳಿವೆ. ವಿರಾಜಪೇಟೆಯ ೫೦೮ ಪವಿತ್ರ ತೋಪುಗಳಲ್ಲಿ ೧೭೧ ಕಾಡುಗಳು ಭಗವಾನ್ ಅಯ್ಯಪ್ಪ ದೇವರಿಗೆ (ಬೇಟೆ ದೇವರು), ೬೨ ಭಗವತಿ ದೇವರಿಗೆ, ೩೩ ಭದ್ರಕಾಳಿ ದೇವರಿಗೆ, ೨೫ ಮಹದೇವ ದೇವರಿಗೆ, ೨೦ ಚಾಮುಂಡಿ ದೇವರಿಗೆ, ೧೯ ಬುಡಕಟ್ಟು ದೇವರಿಗೆ, ೧೪ ವಿಷ್ಣು ಮೂರ್ತಿ ದೇವರಿಗೆ ಹಾಗೂ ಹೆಚ್ಚುವರಿಯಾಗಿ ೧೩೬ ಪರ್ವತ ತೋಪುಗಳು ಇತರ ಅನೇಕ ದೇವತೆಗಳಿಗೆ ಮೀಸಲಿರಿಸಲಾಗಿದೆ (ಕುಶಲಪ್ಪ. ಸಿ.ಜಿ. ಮತ್ತು ಎಸ್. ರಾಘವೇಂದ್ರ ೨೦೧೨). ಜಿಲ್ಲೆಯ ಪ್ರಮುಖ ಮತ್ತು ಮುಖ್ಯವಾದ ದೇವತೆ ಎಂದರೆ ಅಯ್ಯಪ್ಪ ಮತ್ತು ಅಯ್ಯಪ್ಪ ದೇವರಕಾಡುಗಳು (ಶ್ರೀನಿವಾಸ್ ಎಮ್.ಎನ್. ೧೯೫೨) ಕಾರಣ ಇಲ್ಲಿನ ಜನರು ಹೆಚ್ಚಿನದಾಗಿ ಅರಣ್ಯಗಳನ್ನು ಹೊಂದಿಕೊಂಡಿದ್ದು, ವ್ಯವಸಾಯ, ತೋಟಗಾರಿಕೆ ಇವರು ಮುಖ್ಯ ಕಸುಬುಗಳಾಗಿವೆ ಹಾಗೂ ಅರಣ್ಯದ ಪ್ರಾಣಿಗಳಿಂದ ಆಗಬಹುದಾದ ತೊಂದರೆಗಳನ್ನು ನಿವಾರಿಸಲು ಬೇಟೆಯು ಮಹತ್ತರ ಪಾತ್ರವಹಿಸುತ್ತದೆ. ಹಾಗಾಗಿ ಬೇಟೆಯ ಮೂಲ ದೈವವಾದ ಅಯ್ಯಪ್ಪ ದೇವರು ಪ್ರಮುಖ ದೇವರಾಗಿರುವುದು ಸಮಂಜಸವಾಗಿದೆ. ಆದರೆ ಪ್ರಸ್ತುತ ಸಮಯದಲ್ಲಿ ವನ್ಯಜೀವಿ ಸಂರಕ್ಷಣೆಗಳು ನಡೆಯುತಿದ್ದು ಯಾವುದೇ ಬೇಟೆಯ ನಿದರ್ಶನಗಳು ಕಾಣಸಿಗುವುದಿಲ್ಲ.

ಕ್ಷೇತ್ರಕಾರ್ಯ

ವಿರಾಜಪೇಟೆ ತಾಲ್ಲೂಕಿನಲ್ಲಿ ಪ್ರಮುಖವಾಗಿ ೧೦ ಗ್ರಾಮಗಳನ್ನು ಸಂದರ್ಶಿಸಲಾಗಿದ್ದು, ಈ ಗ್ರಾಮಗಳಲ್ಲಿನ ಆಚರಣೆ ಸಂಪ್ರದಾಯಗಳನ್ನು ಮತ್ತು ಸುಟ್ಟಮಣ್ಣಿನ ಮೂರ್ತಿಗಳ ಕುರಿತು ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ಮಾಹಿತಿಗಳು ಕೇಳಕಂಡಂತಿವೆ. ಈ ದೇವರಕಾಡುಗಳನ್ನು ನಾಯಿದೇವರ ಬನ ಎಂತಲು ಸ್ಥಳೀಯವಾಗಿ ಕರೆಯುವುದುಂಟು. ಏಕೆಂದರೆ ನಾಯಿಗಳನ್ನು ಹರಕೆ ರೂಪದಲ್ಲಿ ಅರ್ಪಿಸುವುದರಿಂದ ಹಾಗೂ ಬೇಟೆ ನಾಯಿಗಳಿಗೆ ಅಧಿದೈವವಾದ ಅಯ್ಯಪ್ಪ ದೇವರ ದೇವಾಲಯ ಇರುವುದರಿಂದ ಹೀಗೆ ಕರೆಯುವುದುಂಟು. ಕ್ಷೇತ್ರಕಾರ್ಯದಲ್ಲಿ ೧) ದೇವರಾಪುರ (ಅಯ್ಯಪ್ಪ ದೇವರ ಕಾಡು) ೨) ಹೆಬ್ಬಾಲೆ (ಬೇಟೆಕುರುಬರ ಅಯ್ಯಪ್ಪ ದೇವರ ಕಾಡು) ೩) ಮೈಥಾಡಿ (ಅಯ್ಯಪ್ಪ ದೇವರ ಕಾಡು) ೪) ಕಾಡನೂರ (ವನ ಭದ್ರಕಾಳಿ ದೇವಸ್ಥಾನ) ೫) ಕೊಳತೋಡು – ಬೈಗೋಡು (ಈಶ್ವರ / ಅಯ್ಯಪ್ಪ ದೇವರ ಕಾಡು) ೬) ಬಾವಲಿ (ಶ್ರೀ ಪುಟ್ಟುಮಡು ಅಯ್ಯಪ್ಪ ದೇವರ ಕಾಡು) ೭. ಕುಂಜಲಗೇರಿ ಬೆಟ್ಟಗಳು (ಅಯ್ಯಪ್ಪ ದೇವರ ಕಾಡು) ೮) ಬೇತು (ಮಕ್ಕಿ ಶಾರ್ತವು ಅಯ್ಯಪ್ಪ ದೇವರ ಕಾಡು) ೯) ಬರಡಿ (ಬರಡಿ ಅಯ್ಯಪ್ಪ ದೇವರ ಕಾಡು) ಮತ್ತು ೧೦) ಮರಗತ್ತೂರು ಅಯ್ಯಪ್ಪ ದೇವರ ಕಾಡು – ಸಕಲೇಶಪುರ). ಸ್ಥಳಗಳನ್ನು ಸಂದರ್ಶಿಸಿ ಅಲ್ಲಿನ ಸಂಪ್ರದಾಯ, ವಾರ್ಷಿಕಾಚರಣೆ ಮತ್ತು ಅರ್ಪಿಸುವ ಹರಕೆ ಮೂರ್ತಿ ವಿವರ ಕೆಳಕಂಡಂತಿದೆ.

ಸುಟ್ಟಮಣ್ಣಿನ ಹರಕೆ ಒಪ್ಪಿಸುವ ದೇವರಕಾಡು ಹಾಗೂ ದೇವಾಲಯಗಳು, ವಾರ್ಷಿಕಾಚರಣೆ/ಹಬ್ಬ ಮತ್ತು ಅರ್ಪಿಸುವ ಹರಕೆ ಮೂರ್ತಿ ಮಾದರಿ

ಕ್ರಸಂ.	ದೇವರಕಾಡು ಹಾಗೂ ದೇವಾಲಯಗಳು	ವಾರ್ಷಿಕಾಚರಣೆ/ಹಬ್ಬ	ಹರಕೆ ಮೂರ್ತಿ ಮಾದರಿ
೧.	ಅಯ್ಯಪ್ಪ ದೇವರ ಕಾಡು – ದೇವರಾಪುರ	ಮಕರಸಂಕ್ರಮಣ (ಜನವರಿ)	ಬೇಟೆನಾಯಿ ಮತ್ತು ಕುದುರೆ
೨.	ಬೇಟೆಕುರುಬರ ಅಯ್ಯಪ್ಪ ದೇವರ ಕಾಡು – ಹೆಬ್ಬಾಲೆ	ಮಕರಸಂಕ್ರಮಣ (ಜನವರಿ)	ಬೇಟೆನಾಯಿ
೩.	ಅಯ್ಯಪ್ಪ ದೇವರ ಕಾಡು – ಮೈಥಾಡಿ	ಮುಪಟ್ಟು ಶನಿವಾರ (ನವಂಬರ್)	ಬೇಟೆನಾಯಿ
೪.	ವನ ಭದ್ರಕಾಳಿ ದೇವಸ್ಥಾನ – ಕಾಡನೂರ	ಯುಗಾದಿ (ಮಾರ್ಚ್)	ಬೇಟೆನಾಯಿ
೫.	ಈಶ್ವರ / ಅಯ್ಯಪ್ಪ ದೇವರ ಕಾಡು – ಕೊಳತೋಡು – ಬೈಗೋಡು	ಮಕರಸಂಕ್ರಮಣ (ಜನವರಿ)	ಬೇಟೆನಾಯಿ
೬.	ಶ್ರೀ ಪುಟ್ಟುಮಡು ಅಯ್ಯಪ್ಪ ದೇವರ ಕಾಡು –ಬಾವಲಿ	ಯುಗಾದಿ (ಮಾರ್ಚ್)	ಬೇಟೆನಾಯಿ
೭.	ಅಯ್ಯಪ್ಪ ದೇವರ ಕಾಡು – ಕುಂಜಲಗೇರಿ ಬೆಟ್ಟಗಳು	ಈಶ್ವರಪ್ಪ ಬೇಟ್ಟಲಪ್ಪ ದೇವರ ಹಬ್ಬ –ಮಕರಸಂಕ್ರಮಣ (ಜನವರಿ)	ಬೇಟೆನಾಯಿ, ಕುದುರೆ ಮತ್ತು ಮಾನವಾಕೃತಿ
೮.	ಮಕ್ಕಿ ಶಾರ್ತವು ಅಯ್ಯಪ್ಪ ದೇವರ ಕಾಡು – ಬೇತು	ಧನುರ್ಮಾಸದ ಪ್ರಾರಂಭದ ನಾಲ್ಕನೇ ದಿನ (ಡಿಸಂಬರ್)	ಬೇಟೆನಾಯಿ
೯.	ಬರಡಿ ಅಯ್ಯಪ್ಪ ದೇವರ ಕಾಡು – ಬರಡಿ	ಯುಗಾದಿ (ಮಾರ್ಚ್)	ಬೇಟೆನಾಯಿ, ಹಸು, ಹಂದಿ ಇತ್ಯಾದಿ
೧೦.	ಅಯ್ಯಪ್ಪ ದೇವರ ಕಾಡು – ಮರಗತ್ತೂರು (ಸಕಲೇಶಪುರ)	ಆರಿಧ್ರ ನಕ್ಷತ್ರ ಮಳೆಯ ಎಂಟನೇ ದಿನ (ಜೂನ್) ಎರಡು ವರ್ಷಕ್ಕೆ ಒಮ್ಮೆ	ಬೇಟೆನಾಯಿ ಮತ್ತು ನೀರಿನ ಕುಡಿಕೆ

ಈ ಸುಟ್ಟಮಣ್ಣಿನ ಹರಕೆ ಒಪ್ಪಿಸುವ ದೇವರಕಾಡು ಹಾಗೂ ದೇವಾಲಯಗಳ ಕುರಿತು ಸ್ಥಳೀಕರು ಅಯ್ಯಪ್ಪ ದೇವರ ಕುರಿತು ಧಾರ್ಮಿಕ ಕಥೆಯಾದ ಪಂದಳವಂಶದ ಕಥೆಯನ್ನು ನಂಬುತ್ತಾರೆ. ಈ ಕಥೆಯಲ್ಲಿ ಬಾಲಕನಾಗಿದ್ದ ಅಯ್ಯಪ/ ಮಣಿಕಂಠನು ಮಾತೆಯ ಔಷಧಿಗಾಗಿ ಹುಲಿಯ ಹಾಲನ್ನು ತರಲು ಕಾಡಿಗೆ ಬರುತ್ತಾನೆ. ಈ ಸಂದರ್ಭದಲ್ಲಿ ಇಲ್ಲಿನ ದೇವರ ಕಾಡುಗಳಲ್ಲಿ ಉಳಿದು ಕೊಂಡಿದ್ದ ಹಾಗೂ ಬೇಟೆಯ ಸಹಾಯಕ್ಕೆ ನಾಯಿಗಳನ್ನು ಬಳಸಿದ್ದ ಎಂಬ ನಂಬಿಕೆಯಿದೆ. ಹಾಗಾಗಿ ಅಯ್ಯಪ್ಪ ದೇವರಿಗೆ ಬೇಟೆನಾಯಿಗಳನ್ನು ಮತ್ತು ವಾಜಿವಾಹನ(ಕುದುರೆ ವಾಹನ)ನಾದ ಕಾರಣ ಕುದುರೆಯನ್ನು ಹರಿಕೆ ರೂಪದಲ್ಲಿ ಅರ್ಪಿಸುವುದುಂಟು. ಅಂತೆಯೇ ಕೆಲವರು ಅವರವರ ನಂಬಿಕೆಗೆ ಅನುಗುಣವಾಗಿ ವಿವಿಧ ಮೂರ್ತಿಗಳನ್ನು ಅರ್ಪಿಸುವುದುಂಟು. ಎಲ್ಲ ದೇವರಕಾಡುಗಳು ಸಾಮಾನ್ಯವಾಗಿ ಒಂದು ಕಲ್ಲನ್ನು ಮೂರ್ತಿಯನ್ನಾಗಿಸಿಕೊಂಡು ಯಾವುದಾದ ರೊಂದು ವೃಕ್ಷದ ಕೆಳಗೆ ಸ್ಥಾಪಿಸಲ್ಪಟ್ಟಿರುತ್ತದೆ ಹಾಗೂ ಇದರ ಸುತ್ತಲು ಕಬ್ಬಿಣದ ತ್ರಿಶೂಲ ಗಳನ್ನು ನಿಲ್ಲಿಸಲಾಗಿರುತ್ತದೆ. (ಚಿತ್ರ ೩) ಈ ಶೂಲಗಳು ಶೈವಧರ್ಮವನ್ನು ಪ್ರತಿಪಾದಿಸುತ್ತಾ ಕೆಲವು ದೇವರಕಾಡುಗಳಿಗೆ ಈಶ್ವರದೇವರಕಾಡು, ಮಹದೇವರಕಾಡು



ಚಿತ್ರ ೩

ಮತ್ತು ಭದ್ರಕಾಳಿ ಬನಗಳೆಂಬ ಹೆಸರುಗಳನ್ನು ಪ್ರತೀತಗೊಳಿಸುತ್ತದೆ. ದೇವರ ಮೂರ್ತಿ ಸುತ್ತಲು ಹರಕೆರೂಪದಲ್ಲಿ ಅರ್ಪಿತವಾದ ಸುಟ್ಟ ಮಣ್ಣಿನ ಮೂರ್ತಿಗಳನ್ನು ಜೋಡಿಸಲಾಗಿರುತ್ತದೆ, ಇವುಗಳನ್ನು ಹಬ್ಬದ ಸಂದರ್ಭದಲ್ಲಿ ಸ್ವಚ್ಛಗೊಳಿಸಿದಾಗ ಅಥಾವ ಬೇಸಿಗೆ ಕಾಲದಲ್ಲಿ ಬಹುಸ್ಪಷ್ಟವಾಗಿ ಕಾಣಬಹುದಾಗಿದೆ. ಮಳೆಗಾಲದಲ್ಲಿ ಹಸಿರುಪೊದೆ-ಪಾಚಿಗಳಿಂದಲೂ ಮುಚ್ಚಿಹೋಗಿರುತ್ತವೆ. ದೇವರಾಪುರ ಮತ್ತು ಹೆಬ್ಬಾಲೆಗಳಲ್ಲಿ ಸುಟ್ಟಮಣ್ಣಿನ ಮೂರ್ತಿ ಜೊತೆಗೆ ಕಲ್ಲಿನ ನಿಂತಭಂಗಿಯಲ್ಲಿರುವ ನಾಯಿಯ ಮೂರ್ತಿ ಇರುವುದು ವಿಶೇಷ. ಹರಕೆಗಾಗಿ ರಚಿಸುವ ಸುಟ್ಟಮಣ್ಣಿನ ಮೂರ್ತಿಗಳನ್ನು ಸ್ಥಳೀಯವಾಗಿ ೧. ನಾಪೋಕ್ಲು ಬಳಿಯ ಬೇತುಗ್ರಾಮ, ೨. ನೆಲ್ಲಿಹುದಿಕೇರಿ ಬಳಿಯ ಕುಂಬಾರಕೇರಿ ಮತ್ತು ೩. ಮಾಯಿಮುಡಿ ಬಳಿಯ ಮಡಿಕೆಬೀಡಿನಲ್ಲಿ ಕಾಣಬಹುದು ಹಾಗೂ ೪. ನೆರೆಯ ಹಾಸನ ಜಿಲ್ಲೆಯ ಕೊಣನೂರಿನಿಂದಲೂ ಈ ಮೂರ್ತಿಗಳು ವಿರಾಜಪೇಟೆಗೆ ಕಳುಹಿಸಿ ಕೊಡುವುದುಂಟು. ಈ ಮೂರ್ತಿನಿರ್ಮಾಣವು ಸಾಮಾನ್ಯವಾಗಿ ಮಡಿಕೆತಯಾರಿಕ ಕ್ರಮದಂತಿದ್ದು ಇವುಗಳನ್ನು ಮಡಿಕೆತಯಾರಿಕರೇ(ಕುಂಬಾರರು) ಮಾಡುವುದುಂಟು. ಮೂರ್ತಿನಿರ್ಮಾಣದ ಮೂಲವಾದ ಮಣ್ಣು ಈ ಪ್ರದೇಶದಲ್ಲಿ ನೈಸರ್ಗಿಕವಾಗಿ ಕಪ್ಪು ಮತ್ತು ಬೂದು ಬಣ್ಣದಾಗಿದ್ದು ಸ್ಥಳೀಯ ಕೆರೆ, ನದಿ ಮತ್ತು ಗದ್ದೆಯಿಂದ ತಂದು ಹದವಾಗಿ ತಯಾರಿಸಲಾಗುತ್ತದೆ. ನಂತರದಲ್ಲಿ ಬೇಡಿಕೆಗೆ ಅನುಗುಣವಾಗಿ ನಿಂತಿರುವ ಹಾಗೂ ಕುಳಿತಿರುವ ನಾಯಿ ಮೂರ್ತಿಗಳನ್ನು ಕೈಗಳಿಂದ ಟೊಳ್ಳಾಗಿ ಮತ್ತು ಘನವಾಗಿ ತಯಾರಿಸಿ ನೆರಳು-ಬಿಸಿಲಿನಲ್ಲಿ ಒಣಗಿಸುತ್ತಾರೆ. ಇವುಗಳು ಪ್ರತ್ಯೇಕವಾಗಿ ಒಂದೊಂದಾಗಿ ನಿರ್ಮಿತವಾದವುಗಳಾಗಿದ್ದು ದಿನಕ್ಕೆ ಸುಮಾರು ನಾಲ್ಕರಿಂದ ಐದು ಮೂರ್ತಿಗಳನ್ನು ರಚಿಸಬಹುದಾಗಿರುತ್ತದೆ. ನಂತರದಲ್ಲಿ ಮಡಿಕೆ ಬೇಯಿಸುವ ಕ್ರಮದಲ್ಲಿ ಇವುಗಳನ್ನು ಬೇಯಿಸುವರು, ಬೆಂದನಂತರ ಇವುಗಳು ಕಡು ಕೆಂಪು (ಕಂದು) ಬಣ್ಣವಾಗಿ ಬದಲಾಗುತ್ತವೆ ಹಾಗೂ ನೀರಿನಲ್ಲಿ ಕರಗದ ಗುಣವನ್ನು ಹೊಂದುತ್ತದೆ. ಇವುಗಳ ತಯಾರಿಕೆ ಆಯಾ ಪ್ರಾಂತ್ಯಕ್ಕೆ ಹೊಂದಿಕೊಂಡಂತೆ ನಡೆಯುವ ಹಬ್ಬ ಆಚರಣೆ ಸಮಯಕ್ಕೆ ಸೀಮಿತವಾಗಿದೆ.

ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಾಣ ಸಿಗುವ ಈ ಸುಟ್ಟಮಣ್ಣಿನ ಮೂರ್ತಿಗಳು ಐತಿಹಾಸಿಕ ಪರಂಪರೆಯನ್ನು ಹೊಂದಿದ್ದು ಈ ಕುರಿತು ಹಲವು ಸಂಶೋಧಕರು ಪವಿತ್ರ ಕಾಡಿನ (ದೇವರಕಾಡಿನ) ಬಗ್ಗೆ ಜೀವವೈವಿಧ್ಯತೆಯ ತಾಣವೆಂದು ಇದರ ಸಾಂಪ್ರದಾಯಿಕ ಭಾಗವಾಗಿ ಆಚರಣೆ ಮತ್ತು ಸುಟ್ಟಮಣ್ಣಿನ ಮೂರ್ತಿಗಳನ್ನು ವಿವರಿಸಿರುವರೇ ಹೊರತು, ಈ ಮೂರ್ತಿಗಳ ಪುರಾತನ ಮತ್ತು ಪ್ರಾಚೀನತೆ ಕುರಿತು ಚರ್ಚಿಸಿಲ್ಲ. ಹಾಗೂ ದೇವರಕಾಡುಗಳಲ್ಲಿ ಕೆಲವು ಪೂರ್ವ ಐತಿಹಾಸಿಕ ತಾಣಗಳಾಗಿದ್ದು ಇದು ಪುರಾತನ ಮತ್ತು ಪ್ರಾಚೀನ ಸಂಬಂಧದ ಕುರಿತು ಸ್ಥೂಲವಾಗಿ ಚಿಂತಿಸುವಂತೆ ಮಾಡುತ್ತದೆ. ಈ ಕುರಿತಂತೆ ಇನ್ನು ಹೆಚ್ಚಿನ ಸಂಶೋಧನೆಗಳು ನಡೆದು ಹಲವು ವಿಷಯಗಳ ಅನಾವರಣವಾಗಬೇಕಿದೆ.

---

* ಮೈಸೂರಿನ ಜಯಲಕ್ಷ್ಮೀ ವಿಲಾಸ ಅರಮನೆಯ ಜಾನಪದ ಸಂಗ್ರಹಾಲಯದಲ್ಲಿ ಸಂಗ್ರಹಿಸಿರುವ ಕೊಡಗು ಜಿಲ್ಲೆಯ ಸುಟ್ಟಮಣ್ಣಿನ ಮೂರ್ತಿಗಳೇ ಈ ಲೇಖನಕ್ಕೆ ಮುಖ್ಯ ಪ್ರೇರಣೆಯಾಗಿದ್ದು ಇವುಗಳ ಸಂಗ್ರಹಕಾರರಾದ ಶ್ರೀ ಪಿ.ಆರ್. ತಿಪ್ಪೇಸ್ವಾಮಿಯವರಿಗೆ ಗೌರವ ನಮನಗಳು, ಸಂದೇಹಗಳನ್ನು ತಾರ್ಕಿಕವಾಗಿ ಸಂವಾದಿಸಿದ ನನ್ನ ಮಾರ್ಗದರ್ಶಕರಾದ ಶ್ರೀಮತಿ ಶೋಭ ವಿ. ರವರಿಗೆ ಆಭಾರಿಯಾಗಿರುತ್ತೇನೆ.

ಆಕರಗ್ರಂಥಗಳು

೧. ಚಂದ್ರಕಾಂತ್ ಎಂ.ಜಿ. ಮತ್ತು ನಾಗರಾಜ್ ಎಂ.ಜಿ., ೧೯೯೩, ಕೊಡಗಿನ ದೇವರ ಕಾಡುಗಳು, ಇತಿಹಾಸ ದರ್ಶನ ೮, ೧೫೬-೧೬೩.

೨. Kalam, M. A. 1998. Sacred groves in Coorg, Karnataka, in The Social Construction of India Forests, 41-54.

೩. Kushalappa. C.G. and Raghavendra S., 2012, Community-linked conservation using Devakad (sacred groves) in the Kodagu Model Forest, India. in The Forestry Chronicle Vol. 88(3): 266-273

೪. Prajna. G.R., 2018, Karnataka: God's own forests watch over Kodagu. Karnataka: The New Indian Express.

೫. Shushma, Shashi. B., Dwarakish G.S. and Kiran K.B., 2015, GIS for Conservation of Sacred Groves of Kodagu District –A Traditional Culture, in International Journal of Earth Sciences and Engineering 08: 377-385.

೬ Srinivas M.N., 1952, Religion and Society among the Coorgs of South India, Oxford University Press.

ರಂಗನಾಥ್ ಬಿ.ಆರ್.

ಮಧುಗಿರಿ ತಾಲ್ಲೂಕಿನ ನವಶೋಧಿತ ಪ್ರಾಗೈತಿಹಾಸಿಕ ನೆಲೆಗಳು

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಪ್ರಾಗೈತಿಹಾಸಿಕ ನೆಲೆಗಳಲ್ಲಿ ಪ್ರಮುಖ ಸ್ಥಾನ ಹೊಂದಿದ್ದು, ಈ ತಾಲ್ಲೂಕಿನಲ್ಲಿ ಪ್ರಮುಖವಾಗಿ ಕತ್ತಿರಾಜನಹಳ್ಳಿ ದೆಬ್ಬೇಘಟ್ಟ ಚಂದ್ರಗಿರಿ ಗುಟ್ಟೆ ಮುಂತಾದ ನೆಲೆಗಳನ್ನು ಗುರುತಿಸಲಾಗಿದೆ. ಮಧುಗಿರಿ ತಾಲೂಕಿನ ದೊಡ್ಡೇರಿ ಹೋಬಳಿಯಲ್ಲಿ ಬಡವನಹಳ್ಳಿ ಹಾಗೂ ಬಡವನಹಳ್ಳಿ ಅರಣ್ಯ ವಲಯದಲ್ಲಿ ರಂಗಾಪುರದಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿವೆ. ಬಡವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮಕ್ಕೆ ೧೬ ಕಿಲೋಮೀಟರ್ ದೂರದಲ್ಲಿದೆ. ಬಡವನಹಳ್ಳಿ ಗ್ರಾಮದ ದಕ್ಷಿಣದಿಕ್ಕಿಗೆ ಗುಟ್ಟೆಗಳ ಸಾಲು ಕಂಡುಬರುತ್ತದೆ. ಈ ಗುಟ್ಟೆಗಳ ಸಾಲಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಬ್ಬಿಣ ತಯಾರಿಕಾ ನೆಲೆ ಕಂಡುಬರುತ್ತದೆ.

ಕಬ್ಬಿಣ ತಯಾರಿಕಾ ನೆಲೆ

ಕಬ್ಬಿಣ ತಯಾರಿಕಾ ಕಲೆಯೂ ಪ್ರಾಚೀನವಾಗಿದ್ದು. ಕಬ್ಬಿಣದ ಬಳಕೆಯು ಕ್ರಿಸ್ತಪೂರ್ವ ೪೦೦೦ ವರ್ಷದ ಹಿಂದೆಯೇ ಕಾಣಬಹುದಾಗಿದೆ. ಭಾರತದಲ್ಲಿ ಕ್ರಿಸ್ತಪೂರ್ವ ೧೫೦೦-೧೪೦೦ರ ಹೊತ್ತಿಗೆ ಕಬ್ಬಿಣ ಲೋಹವನ್ನು ತಯಾರಿಸಲಾಗುತ್ತಿತ್ತು ಎಂದು ಕೆಲವು ಆಧಾರಗಳಿಂದ ತಿಳಿಯಬಹುದಾಗಿದೆ.

ಮಾರ್ಟಿಮರ್ ವೀಲರ್ ನಡೆಸಿದ ಬ್ರಹ್ಮಗಿರಿ ಉತ್ಖನನದಲ್ಲಿ ಹರಳೂರು ಹಿರೇಕಲ್ ಕುಮಾರಹಳ್ಳಿಯ ಬೃಹತ್ ಶಿಲಾಯುಗ ಸಂಸ್ಕೃತಿಯಲ್ಲಿ ಕಬ್ಬಿಣ ಉತ್ಪಾದನೆ ಕಂಡುಬಂದಿವೆ. ತುಮಕೂರು ಜಿಲ್ಲೆಯ ಯರದಕಟ್ಟೆ ಕಾವಲಹಟ್ಟಿಗಳಲ್ಲಿ ಕಬ್ಬಿಣ ತಯಾರಿಕಾ ನೆಲೆಗಳು ಕಂಡುಬಂದಿವೆ. ಕಬ್ಬಿಣವನ್ನು ತಯಾರಿಸಲು ೧೮೦೦ ಡಿಗ್ರಿ ಸೆಲ್ಷಿಯಸ್ ಉಷ್ಣತೆ ಬೇಕಾಗುತ್ತದೆ. ಕಬ್ಬಿಣವನ್ನು ಅದಿರಿನಿಂದ ಬೇರ್ಪಡಿಸಲು ಕುಲುಮೆ ಮತ್ತು ಮೂಸೆ ವಿಧಾನ ತಂತ್ರವನ್ನು ಬಳಸಿಕೊಂಡು ಕಬ್ಬಿಣದ ಅದಿರು ಹಾಗೂ ಇದ್ದಿಲನ್ನು ಮಿಶ್ರಮಾಡಿ ಈ ರಾಶಿಯ ಮೂಲಕ ಗಾಳಿ ಬೀಸುವಂತೆ ತಳಭಾಗದಲ್ಲಿ ೧ ರಂಧ್ರ ಮೇಲ್ಭಾಗದಲ್ಲಿ ೧ ರಂಧ್ರವನ್ನು ಮಾಡಿ ಆನಂತರ ಇದ್ದಿಲನ್ನು ಹೊತ್ತಿಸುತ್ತಿದ್ದರು. ೧ ಭಾಗ ಇದ್ದಿಲು ಉರಿದು ಕಾರ್ಬನ್ ಡೈ ಆಕ್ಸೈಡ್ ಆಗುತ್ತಿತ್ತು. ಇದು ಮೇಲೇರಿ ಇದ್ದಿಲಿನಿಂದ ಆಕರ್ಷಕವಾಗಿ ಕಾರ್ಬನ್ ಮೊನಾಕ್ಸೈಡ್ ಆಗಿ ಕಬ್ಬಿಣದಿಂದ ಆಕ್ಸೈಡನ್ನು ಕಬ್ಬಿಣವಾಗಿ ಪರಿವರ್ತಿಸುತ್ತಿತ್ತು.

ಈ ಬಾಣದ ಗುಟ್ಟೆಯಲ್ಲಿ ಕಬ್ಬಿಣ ತಯಾರಿಕ ನೆಲೆ ಕಂಡುಬಂದಿದ್ದು, ಗುಟ್ಟೆಗಳ ಮಧ್ಯದಲ್ಲಿ ಅರ್ಧ ಎಕರೆ ಪ್ರದೇಶದಲ್ಲಿ ಕಬ್ಬಿಣದ ಕಿಟ್ಟಗಳು, ಕುಲುಮೆಯ ಚೂರುಗಳು

ಜನತಾ ಕಾಲೋನಿ
ಬಡವನಹಳ್ಳಿ-೫೭೨೧೧೨
ಮಧುಗಿರಿ ತಾಲ್ಲೂಕು
ತುಮಕೂರು ಜಿಲ್ಲೆ
ಮೊ: ೭೦೨೬೨ ೨೪೭೭೦

ಹರಡಿವೆ, ಈ ಪ್ರದೇಶದಲ್ಲಿ ಕೆದಕಿ ನೋಡಿದರೆ ಕಬ್ಬಿಣ ತಯಾರಿಸಿದ ಕುಲುಮೆಗಳು ಹಾಗೂ ಚೂರುಗಳು, ಕಬ್ಬಿಣದ ಕಿಟ್ಟಗಳು ಕಂಡುಬರುತ್ತವೆ, ಇದಕ್ಕೆ ಆಧಾರವಾಗಿ ಕುಲುಮೆಗಳು ಕಬ್ಬಿಣದ ಕಿಟ್ಟಗಳು, ಕೆಂಪು ಮತ್ತು ಕಪ್ಪುವರ್ಣದ ಚುರುಗಳು ದೊರೆತಿವೆ. ಈ ಕುಲುಮೆಗಳನ್ನು ಮಣ್ಣಿನಿಂದ ತಯಾರಿಸಲಾಗಿದೆ. ಈ ಪ್ರದೇಶದಲ್ಲಿ ದೊರೆತಿರುವ ಒಂದು ಕುಲುಮೆಯು ೮ ಸೆ.ಮೀ. ಉದ್ದ ೪.೩ ಸೆ.ಮೀ. ರಷ್ಟು ಅಗಲವಿದೆ. ಹಾಗೂ ತಳಭಾಗದ ಕುಲುಮೆಯ ಚೂರುಗಳು ಈ ಪ್ರದೇಶದಲ್ಲಿ ದೊರೆತಿದ್ದು ಇವುಗಳು ೪ ಸೆ.ಮೀ. ಅಗಲ ಇವೆ ಕುಲುಮೆಯ ಮುಚ್ಚಳಗಳು ಹೆಚ್ಚಾಗಿದ್ದು ೩ ಸೆ.ಮೀ. ಅಗಲ ೧.೩ರಷ್ಟು ದಪ್ಪ ಇವೆ. ಈ ಪ್ರದೇಶದ ಕಬ್ಬಿಣ ತಯಾರಿಕ ನೆಲೆಯಾಗಿತ್ತು ಎಂದು ತಿಳಿಯಬರುತ್ತದೆ. ಇದರಿಂದಾಗಿ ಈ ಗುಟ್ಟೆಯನ್ನು ಬಾಣದ ಗುಟ್ಟೆ ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಈಗ ಮಣ್ಣಿನ ಗಣಿಗಾರಿಕೆ ನಡೆಯುತ್ತಿದ್ದು, ಅಳಿವಿನಂಚಿನಲ್ಲಿದೆ.

ಕಲ್ಮನೆ

ಗುಟ್ಟೆ ಸಾಲುಗಳಲ್ಲಿ ಮುಂದೆ ಸಾಗಿದರೆ ಒಂದು ಗುಟ್ಟೆಯ ಮೇಲೆ ಕಲ್ಮನೆ ಅಥವಾ dalmena ಕಂಡುಬರುತ್ತದೆ (ಮೌರ್ಯರ ಮನೆ). ಇದರ ಎರಡೂ ಭಾಗಗಳಲ್ಲಿ ಕಲ್ಲುಚಪ್ಪಡಿ ಇದ್ದು. ಪೂರ್ವ ಮತ್ತು ಪಶ್ಚಿಮದ ಭಾಗ ತೆರೆದುಕೊಂಡಿದೆ. ಸುಮಾರು ೨ ಅಡಿ ಎತ್ತರವಿರುವ ಇದರ ಮೇಲೆ ಬೃಹತ್ ಚಪ್ಪಡಿಯನ್ನು ಹಾಸಲಾಗಿದೆ.



ಕಲ್ಮನೆ

ಕಲ್ಗುಳಿ

ಕಲ್ಮನೆಯ ಬಳಿಯಲ್ಲಿ ಒಂದು ಕಲ್ಗುಳಿ ಕಂಡುಬಂದಿದ್ದು, ಹುಟ್ಟು ಬಂಡೆಯ ಮೇಲೆ ಇರುವ ಕಲ್ಗುಳಿಯು ವೃತ್ತಾಕಾರದ ವಿನ್ಯಾಸ ಹೊಂದಿದೆ. ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಸಮಯದಲ್ಲಿ ಕೆಂಪು ವರ್ಣದ ಮಡಿಕೆ ಚೂರುಗಳು ದೊರೆತಿವೆ.



ಕಲ್ಗುಳಿ

ವೃತ್ತಾಕಾರದ ಸಮಾಧಿ (ಏಳು ಸುತ್ತಿನ ಕರೆಕಲ್)

ಬಡವನಹಳ್ಳಿಯ ಅರಣ್ಯ ಪ್ರದೇಶದಲ್ಲಿ ವೃತ್ತಾಕಾರದ ಸಮಾಧಿ ಇದ್ದು ಇದನ್ನು ಸ್ಥಳೀಯರು ಏಳು ಸುತ್ತಿನ ಕರೆಕಲ್ಲು ಕರೆಯುತ್ತಾರೆ. ಸಣ್ಣ ಗುಂಡುಕಲ್ಲಿನಿಂದ ಭೂಮಿಯ ಮೇಲೆ ಏಳುಸುತ್ತು ಇಡಲಾಗಿದೆ. ಇದು ೧೦ ಮೀಟರ್ ಅಗಲವಿದೆ. ಏಳು ಸುತ್ತಿನ ರಚನೆಯಾಗಿದ್ದು, ಸುರುಳಿ ಆಕಾರದಲ್ಲಿದೆ ಪೂರ್ವದ ಕಡೆಯಿಂದ ಮಧ್ಯಕ್ಕೆ ಪ್ರವೇಶಿಸಿ ಹಾಗೆಯೇ ಹಿಂತಿರುಗುವುದು ಇನ್ನೊಂದು ಕಡೆಗೆ ಹೋಗಲು ಸಾಧ್ಯವಿಲ್ಲ. ಮಧ್ಯದಲ್ಲಿ ಸಣ್ಣ ಗುಡಿಯನ್ನು ನೋಡಬಹುದಾಗಿದೆ. ಇದರಲ್ಲಿ ಗಿಡಗಳು ಬೆಳೆದುಕೊಂಡಿದ್ದು, ಸರಿಯಾಗಿ ಕಾಣುವುದಿಲ್ಲ. ಬೃಹತ್ ಶಿಲಾಯುಗ ಸಂಸ್ಕೃತಿಯ ವೃತ್ತಾಕಾರದ ಸಮಾಧಿಯಾಗಿದ್ದು ಸುಮಾರು ೩೫೦೦ ವರ್ಷ ಹಳೆಯದ್ದಾಗಿದೆ. ಮಹಾಭಾರತದ ಚಕ್ರವ್ಯೂಹದ ರೀತಿಯಲ್ಲಿದೆ. ಇಂತಹ ರಚನೆಗಳು ಕರ್ನಾಟಕದ ಬನ್ನೇರುಘಟ್ಟ, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ಕುಂದುಕೊಟ್ಟೆ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿದೆ.

ಆಚರಣೆ

ಶಿರಾ ತಾಲೂಕಿನ ಮೂಗನಹಳ್ಳಿ ಗ್ರಾಮದೇವತೆ ಅಮ್ಮಾಜಿ ಕಾವಲೇಶ್ವರಿ ದೇವಿಯ ಶ್ರಾವಣ ಮಾಸದ ಪೂಜೆಗೆ ಸಿದ್ದರ ಬೆಟ್ಟದಿಂದ ತೀರ್ಥ ತೆಗೆದುಕೊಂಡು ಕಾಲುನಡಿಗೆಯಲ್ಲಿ ಬರುವಾಗ ಇಲ್ಲಿಗೆ ಪೂಜೆ ಸಲ್ಲಿಸುತ್ತಿದ್ದರು. ಬಡವನಹಳ್ಳಿ ಅರಣ್ಯ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಕಾಲದ ಆಯತಾಕಾರದ ಸಮಾಧಿಗಳು ಕಂಡುಬರುತ್ತವೆ. ಈ ಸಮಾಧಿಗಳು ೧೦ ಅಡಿ

ಉದ್ದ ೪ ರಿಂದ ೫ ಅಡಿ ಅಗಲ ಇವೆ. ಸರಳವಾದ ಗುಂಡುಕಲ್ಲುಗಳಿಂದ ಕಟ್ಟಲಾಗಿದ್ದು ಸುಮಾರು ೨ ಅಡಿ ಎತ್ತರ ಇವೆ. ಇವುಗಳು ಈ ಜೋಗಿಮಂಡಪ ಬಳಿ ೩ ಅರಣ್ಯವಲಯದಲ್ಲಿ ಎರಡು ಇವೆ. ಶಿಲಾಯುಗ ಕಾಲದ ಕಲ್ಗೋರಿಗಳಾಗಿರುವ ಇವುಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ಬ್ರಿಟಿಷರ ಕಾಲದ ಕೈರನ್‌ಗಳು ಎಂದು ಕರೆಯುತ್ತಾರೆ.







ನಿಲಿವುಗಲ್ಲು

ರಂಗಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನಿಂದ ಹದಿನೆಂಟು ಕಿಲೋ ಮೀಟರ್ ದೂರದಲ್ಲಿ ಬಡವನಹಳ್ಳಿ ಗ್ರಾಮದಿಂದ ೨ ಕಿಲೋ ಮೀಟರ್ ದೂರದಲ್ಲಿದೆ. ಈ ಗ್ರಾಮದಲ್ಲಿ ೧ ನಿಲಿವುಗಲ್ಲು ಕಾಣಬಹುದಾಗಿದ್ದು. ರಂಗಾಪುರ ಗ್ರಾಮದ ಗೊಲ್ಲರಹಟ್ಟಿಗೆ ಹೋಗುವ ರಸ್ತೆಯಲ್ಲಿ ಸುಮಾರು ೫.೬ ಅಡಿ ಎತ್ತರ ೧.೫ ಅಡಿ ಅಗಲವಿದೆ. ಈ ನಿಲಿಸುಗಲ್ಲು ಭೂಮಿಯಲ್ಲಿ ಸ್ವಲ್ಪ ಹುದುಗಿದ್ದು, ಮೇಲ್ಭಾಗದಲ್ಲಿ ಹೊರೆಯಾಗಿದೆ. ನಿಲಿವುಗಲ್ಲುಗಳು ಬೃಹತ್ ಶಿಲಾಯುಗದ ಗೋರಿಗಳ ಒಂದು ಮಾದರಿಯಾಗಿದೆ. ಸಮಯಮಾಪನ ಕಲ್ಲುಗಳಾಗಿ ಕಂಡುಬಂದಿವೆ.

ಆಕರಗ್ರಂಥಗಳು

೧. ದೇವರಕೊಂಡಾರೆಡ್ಡಿ, ೧೯೯೩, ಬನ್ನೇರುಘಟ್ಟ–ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ, ಇತಿಹಾಸ ದರ್ಶನ, ಸಂ. ೮, ಪು. ೧–೫.

೨. ಶಿವತಾರಕ್ ಕೆ.ಬಿ., ೨೦೦೨, ಕರ್ನಾಟಕದ ಪುರಾತತ್ತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವಾವಿದ್ಯಾಲಯ ಹಂಪಿ, ಪು. ೨೮೭–೨೭೮.

೩. ಕೊಟ್ರೇಶ್ ಎಂ., ೨೦೦೬, ನೂತನ ಶಿಲಾಯುಗ ನೆಲೆ, ಇತಿಹಾಸ ದರ್ಶನ, ಸಂ. ೨೧, ಪು. ೨೨–೨೩.

೪. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ತ್ವ, ೨೦೦೯, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೫. ಶಶಿಕುಮಾರ್ ನಾಯ್ಕ ಕೆ.ಸಿ., ೨೦೨೦, ತುಮಕೂರು ಜಿಲ್ಲೆಯ ಕೆಲವು ಪ್ರಾಚೀನ ಕಬ್ಬಿಣ ತಯಾರಿಕಾ ನೆಲೆಗಳು, ಇತಿಹಾಸ ದರ್ಶನ, ಸಂ. ೩೫, ಪು. ೪೪–೪೬.

೬. facebook ಜಾಲತಾಣದಿಂದ ಪಡೆಯಲಾದ ಮಾಹಿತಿ.

◆◆

ಶೇಜೇಶ್ವರ ಆರ್.

ಕದಂಬ ರವಿವರ್ಮನ ಅಪ್ರಕಟಿತ ಶಾಸನ

ಕದಂಬರ ಇತಿಹಾಸವನ್ನು ಮೊದಲು ಕ್ರಮಬದ್ಧವಾಗಿ ರಚಿಸಿದ ಕೀರ್ತಿ ಜೆ.ಎಫ್. ಫ್ಲೀಟ್‌ರವರದ್ದು, ೧೮೯೬ರ ಮುಂಬಯಿ ಗೆಜೆಟಿಯರ್‌ನಲ್ಲಿ ಮೊದಲ ಬಾರಿಗೆ ಕನ್ನಡ ಜಿಲ್ಲೆಗಳ ಅರಸುಮನೆತನಗಳು ಎಂಬ ಭಾಗದಲ್ಲಿ 'ಬನವಾಸಿ ಕದಂಬರ ಇತಿಹಾಸ' ಪ್ರಕಟಿತವಾಯಿತು. ನಂತರ ಜಾರ್ಜ್ ಮೊರೇಸ್‌ರವರ 'ಕದಂಬ ಕುಲ'ವೆಂಬ ಗ್ರಂಥ ಪ್ರಕಟಣೆಗೊಂಡಿತು. ನಂತರ ಡಿ.ಸಿ. ಸರ್ಕಾರರವರ 'ಸಾತವಾಹನರ ಉತ್ತರಾಧಿಕಾರಿಗಳು' ಎಂಬ ಗ್ರಂಥದಲ್ಲಿ ಕದಂಬರ ಇತಿಹಾಸ ಕುರಿತು ವಿವರವಾಗಿ ಬರೆದಿದ್ದಾರೆ. ನಂತರ ಬಿ.ಎಲ್. ರೈಸ್‌ರವರು ಎಪಿಗ್ರಾಫಿಯಾ ಕರ್ನಾಟಿಕದ ಪೀಠಿಕಾ ಭಾಗಗಳಲ್ಲಿ ಆಗ ಲಭಿಸಿದ ಕದಂಬರ ಶಾಸನಗಳ ಮಹತ್ವವನ್ನು ತಿಳಿಸಿದ್ದಾರೆ. ಎನ್. ಲಕ್ಷ್ಮೀನಾರಾಯಣರಾವ್ ಹಾಗೂ ಆರ್.ಎಸ್. ಪಂಚಮುಖಿ ಇವರುಗಳು 'ಕರ್ನಾಟಕದ ಅರಸು ಮನೆತನಗಳು' ಗ್ರಂಥದಲ್ಲಿ ಶಾಸನಗಳ ಆಧಾರದಲ್ಲಿ ಕದಂಬರ ಇತಿಹಾಸವನ್ನು ಚಿತ್ರಿಸಿದ್ದಾರೆ. ಇದರ ಆಧಾರದ ಮೇಲೆಯೇ ಆರ್.ಎಸ್. ಪಂಚಮುಖಿಯವರು ಬನವಾಸಿ ಕದಂಬರ ಬಗೆಗೆ ಕರ್ನಾಟಕ ಇತಿಹಾಸದಲ್ಲಿ ನಿರೂಪಣೆಯನ್ನು ಕೊಟ್ಟಿರುವುದು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಸಂಶೋಧನೆ ಸಂಸ್ಥೆ ಪ್ರಕಟಿಸಿದ ಕರ್ನಾಟಕ ಚರಿತ್ರೆಯಲ್ಲಿ ಕದಂಬರ ಇತಿಹಾಸದ ಸ್ಥೂಲ ವಿವೇಚನೆಯಿದೆ. ವಿ.ಕೃಷ್ಣರಾವ್ ಹಾಗೂ ಟಿ.ಕೇಶವಭಟ್ಟರ ಕರ್ನಾಟಕ ಇತಿಹಾಸ ದರ್ಶನದಲ್ಲಿ ಕದಂಬರ ಇತಿಹಾಸ, ಪಿ.ಕೆ.ಮಿಶ್ರರವರ ಕದಂಬರ ಕುರಿತ ಪುಸ್ತಕ, ಗೋವಿಂದ ಪೈಗಳರವರ ಕದಂಬ ವಂಶಾವಳಿಯ ಕುರಿತ ಲೇಖನಗಳು,[೧] ಬಾ.ರಾ. ಗೋಪಾಲ್‌ರವರ 'ಬನವಾಸಿ ಕದಂಬರು' ಗ್ರಂಥ ಹಾಗೂ ಆಳ್ವಿಕೆ ಬಗೆಗಿನ ಲೇಖನಗಳು, ರಾಜ್ಯ ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕದಂಬ ಅಧ್ಯಯನ ಗ್ರಂಥ, ದೇವರಕೊಂಡಾರೆಡ್ಡಿ ಹಾಗೂ ಇತರರ ಇತಿಹಾಸ ದರ್ಶನದ ಲೇಖನಗಳು, ಡಾ. ಜಗದೀಶ, ಡಾ.ಎಸ್.ಜಿ.ಸಾಮಕ್ ಹಾಗೂ ಎಂ.ವಿ. ರಮೇಶ ಜೋಯಿಸ್‌ರವರ ಕದಂಬರ 'ಅರೆತಲಗದ್ದೆಯ ಅಪೂರ್ವ ತಾಮ್ರಶಾಸನಗಳ ಭಂಡಾರ ಗ್ರಂಥ' ಹಾಗೂ ಡಾ. ಎಸ್. ಗುರುಮೂರ್ತಿಯವರ 'ಕದಂಬರು ಸಮಗ್ರ ಅವಲೋಕನ ಗ್ರಂಥ', ಲಕ್ಷ್ಮೀಶ ಹೆಗಡೆ ಸೋಂದಾರವರ 'ಬನವಾಸಿ ಕದಂಬರ ಇತಿಹಾಸ', ಕೇಂದ್ರ ಪುರಾತತ್ತ್ವ ಇಲಾಖೆಯ ಗುಡ್ನಾಪುರ, ಬನವಾಸಿ ಹಾಗೂ ತಾಳಗುಂದದ ಉತ್ಖನನ ವರದಿಗಳು ಬನವಾಸಿ ಕದಂಬರ ಕುರಿತು ಇಲ್ಲಿಯವರೆಗೂ ಪ್ರಕಟಣೆಗೊಂಡ ಗ್ರಂಥಗಳು ಹಾಗೂ ಲೇಖನಗಳಾಗಿವೆ. ಕದಂಬರ ಆಡಳಿತದ ಕುರಿತು ಹೊರಡಿಸಲಾದ ನಾಣ್ಯಗಳು, ದೇವಾಲಯಗಳು, ಸ್ಮಾರಕಗಳು ಹಾಗೂ ಕೆಲವು ಪ್ರಾಚ್ಯಾವಶೇಷಗಳಿಂದ ಕದಂಬರ ಇತಿಹಾಸವನ್ನು ತಿಳಿಯಬಹುದಾಗಿದೆ. ಕದಂಬರ ಇತಿಹಾಸವನ್ನು ರಚಿಸುವಲ್ಲಿ ಶಾಸನಗಳೇ

ಸಹಾಯಕ ನಿರ್ದೇಶಕರು
ಪುರಾತತ್ವ ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಶಿವಪ್ಪ ನಾಯಕ
ಅರಮನೆ, ಶಿವಮೊಗ್ಗ
ಮೊ: ೯೧೬೪೫ ೬೦೫೦೭

ಪ್ರಮುಖ ಆಧಾರಗಳಾಗಿವೆ. ಆದರೆ ಕದಂಬರ ಸಮಕಾಲೀನ ರಾಜವಂಶಗಳಿಗೆ ಹೋಲಿಸಿದರೆ ದೊರಕಿರುವ ಕದಂಬರ ಶಾಸನಗಳು ಅತಿ ಕಡಿಮೆಯೇ, ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಇದುವರೆಗೂ ಸುಮಾರು ೬೩ ಶಾಸನಗಳು ಮಾತ್ರ ದೊರೆತಿವೆ.

ಬನವಾಸಿಯು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಐತಿಹಾಸಿಕ ಹಾಗೂ ಪುರಾಣ ಪ್ರಸಿದ್ಧವಾದ ಸ್ಥಳವಾಗಿದ್ದು, ಭಾರತಭೂಮಿಯೊಳಗಣ ಕುಂತಳ ದೇಶಕ್ಕೆ ಬನವಾಸಿ ಒಂದು ಆಭರಣವಿದ್ದಂತೆ ಎಂದು ಹೊಗಳಲಾಗಿದೆ.[೨] ಸಿಂಹಳದ ಬೌದ್ಧ ಗ್ರಂಥಗಳಾದ ಮಹಾವಂಶ ದೀಪವಂಶದಲ್ಲಿ ಅಶೋಕನು ಧರ್ಮ ರಕ್ಷಣೆ ಹಾಗೂ ಪ್ರಚಾರಕ್ಕೆ ಬೌದ್ಧ ಬಿಕ್ಷುಗಳನ್ನು ಬನವಾಸಿಗೆ ಕಳುಹಿಸಿದ್ದು ಇದನ್ನು ವನವಾಸಿ ಎಂದು ಕರೆದಿರುವುದು, ಹಾಗೂ ಸಿಂಹಳ ಅರಸ ಕಟ್ಟಿಸಿದ ಮಹಾಸ್ತೂಪದ ಪ್ರಾರಂಭೋತ್ಸವಕ್ಕೆ ಬನವಾಸಿ ದೇಶದವರು ಹೋಗಿದ್ದು ಇದನ್ನು ಬನವಾಸಿ ದೇಶವೆಂದು ಕರೆದಿರುವುದು, ಟಾಲೆಮಿಯು ಬನವಾಸಿಯನ್ನು ಬನೌಸಿ ಎಂದು ಕರೆದು ಇದನ್ನು ಗುಜರಾತಿನ ಬಾರಿಗಾಜಕ್ಕೆ ಆಗ್ನೇಯಕ್ಕಿರುವ ನಗರ ಎಂದು ಹಾಗೂ ಹುಯ್ಯನ್‌ತ್ಸಾಂಗ್ ಇಲ್ಲಿಗೆ ಭೇಟಿ ನೀಡಿದ್ದ ಎಂದು, ಬನವಾಸಿಗೆ ವೈಜಯಂತಿ ಎಂಬ ಹೆಸರಿರುವುದು ಸಾತವಾಹನರ ಶಾಸನದಲ್ಲಿ ಮತ್ತು ಕ್ರಿ.ಶ. ೨ನೇ ಶತಮಾನದ ಬನವಾಸಿಯ ನಾಗಪ್ರತಿಮೆಯ ಮೇಲಿರುವ ಶಾಸನದಲ್ಲಿ ಸಂಜಯತೀ ನಗರ ಅಂದರೆ ಬನವಾಸಿ ಎಂದು,[೩] ನಂತರ ಕದಂಬರ ಶಾಸನಗಳಲ್ಲಿ ಬನವಾಸಿ ವೈಜಯಂತಿ ಎಂದು ಕರೆದಿರುವುದು ಉಲ್ಲೇಖಿತವಾಗಿದೆ.

ರವಿವರ್ಮ: ಕದಂಬ ಅರಸರ ರವಿವರ್ಮನು ಮೃಗೇಶವರ್ಮನ ಹಿರಿಯ ಮಗನಾಗಿದ್ದು ಕ್ರಿ.ಶ. ೪೮೫ ರಿಂದ ಕ್ರಿ.ಶ. ೫೧೯ರ ವರೆಗೆ ಸುಮಾರು ೩೫ ವರ್ಷಗಳ ಕಾಲ ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದು, ಕದಂಬ ಅರಸರಲ್ಲಿಯೇ ಅತಿ ಹೆಚ್ಚು ವರ್ಷಗಳ ಕಾಲ ಆಳ್ವಿಕೆ ಮಾಡಿದ ಅರಸನಾಗಿದ್ದಾನೆ. ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಸುಮಾರು-೧೨ ಶಾಸನಗಳು ಮಾತ್ರ ಕಂಡುಬಂದಿದ್ದು ಅದರಲ್ಲಿ ಶಿಲಾ ಶಾಸನಗಳು-೩, ತಾಮ್ರ ಶಾಸನಗಳು-೯. ಕದಂಬ ಅರಸರಲ್ಲೇ ಅತಿ ಹೆಚ್ಚು ಶಾಸನಗಳು ದೊರೆತಿರುವುದು ರವಿವರ್ಮನ ಕಾಲದಲ್ಲಿಯೇ ಎನ್ನಬಹುದು.

ಇಲ್ಲಿಯವರೆಗೂ ಪ್ರಕಟಿತವಾಗಿರುವ ಬನವಾಸಿ ಕದಂಬರ ಶಾಸನಗಳು

ಕ್ರಸಂ.	ಗ್ರಾಮ	ತಾಲ್ಲೂಕು	ಜಿಲ್ಲೆ	ಶಾಸನಗಳು	ರಾಜ	ಕಾಲ (ಆಳ್ವಿಕೆ ವರ್ಷ)	ಉಲ್ಲೇಖಗಳು
೧	ಮಳವಳ್ಳಿ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಶಿವಸ್ಕಂದವರ್ಮ	ಕ್ರಿ.ಶ.೩-೪ನೇ.ಶ.	ಎ.ಕ.೭. ಶಿ.ಕಾ.೨೬೪.
೨	ಚಂದ್ರವಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ಶಿಲಾ	ಮಯೂರವರ್ಮ	ಕ್ರಿ.ಶ.೪ನೇ.ಶ.	ಎಂ.ಎ.ಆರ್.೧೯೨೯
೩	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಮಯೂರವರ್ಮ?	ಕ್ರಿ.ಶ.೩೮೦	ಇ.ದರ್ಪಣ. ೨೦೧೬-೧೭.
೪	ಅರೆತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ಪ್ರಿಯವ್ರತವರ್ಮ	೧೨ನೇ ವರ್ಷ	ಕ.ಅ.ತಾ.ಶಾ.೨.
೫	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ಕಾಕುಸ್ಥವರ್ಮ	ವಿಜಯದ ೮೦ನೇ ವರ್ಷ	ಜೆ.ಬಿ.ಬಿ.ಆರ್. ಎ.ಎಸ್.ಸಂ.೯
೬	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಕಾಕುಸ್ಥವರ್ಮ	ಕ್ರಿ.ಶ.೫ನೇ.ಶ.	ಎಂ.ಎ.ಆರ್.೧೯೧೧
೭	ಹಲ್ಮಿಡಿ	ಬೇಲೂರು	ಹಾಸನ	ಶಿಲಾ	ಕಾಕುಸ್ಥವರ್ಮ	ಕ್ರಿ.ಶ.೪೫೦	ಕಾ.ಕ.ಇಂ.ಸಂ.೫.
೮	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಭಟಾರಿ ಕಾಕುಸ್ಥ	ಕ್ರಿ.ಶ.೪-೫ನೇ.ಶ.	ಎಂ.ಎ.ಆರ್. ೧೯೧೧
೯	ಅರೆತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ಕೃಷ್ಣವರ್ಮ	೧೫ನೇ ವರ್ಷ	ಕ.ಅ.ತಾ.ಶಾ.೫.
೧೦	ಅರೆತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ಶಾಂತಿವರ್ಮ	೫ನೇ ವರ್ಷ	ಕ.ಅ.ತಾ.ಶಾ.೧೨.
೧೧	ಮೈಸೂರು ರಾಜ್ಯ	?	?	ತಾಮ್ರ	ವಿಜಯ ಶಿವಮೃಗೇಶವರ್ಮ	೨ನೇ ವರ್ಷ	ಎ.ಇ.೩೫.
೧೨	ದೇವಗಿರಿ	ಹಾವೇರಿ	ಹಾವೇರಿ	ತಾಮ್ರ	ಮೃಗೇಶವರ್ಮ	೩ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್. ಸಂ.೧೨.ಇಂ.ಆಂ.೭.
೧೩	ದೇವಗಿರಿ	ಹಾವೇರಿ	ಹಾವೇರಿ	ತಾಮ್ರ	ವಿಜಯ ಶಿವಮೃಗೇಶವರ್ಮ	೪ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್. ಸಂ.೧೨.ಇಂ.ಆಂ.೭.

೧೪	ಹೊಸನಗರ	ಹೊಸನಗರ	ಶಿವಮೊಗ್ಗ	ತಾಮ್ರ	ವಿಜಯ ಶಿವಮೃಗೇಶವರ್ಮ	೬ನೇ ವರ್ಷ	ಎ.ಇ.೨೬.
೧೫	ಹಿಟ್ಟ ಹೆಬ್ಬಾಗಿಲು	ಹುಣಸೂರು	ಮೈಸೂರು	ತಾಮ್ರ	ವಿಜಯ ಶಿವಮೃಗೇಶವರ್ಮ	೭ನೇ ವರ್ಷ	ಎ.ಕ.೪.ಹಾ.೧೮.
೧೬	ಹಿರೆಶಕುನ	ಸೊರಬ	ಶಿವಮೊಗ್ಗ	ತಾಮ್ರ	ಮೃಗೇಶವರ್ಮ	೮ನೇ ವರ್ಷ	ಎ.ಕ.೮. ಸೊ.೩೩
೧೭	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ಮೃಗೇಶವರ್ಮ	೮ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್. ಸರ್೯,ಇ.ಆ.೬
೧೮	ಬನವಾಸಿ	ಶಿರಸಿ	ಉತ್ತರ ಕನ್ನಡ	ಶಿಲಾ	ಮೃಗೇಶವರ್ಮ	ಕ್ರಿ.ಶ.೫ನೇ.ಶ.	ಕಾ.ಕ.ಇ.ಸಂ.೧೪.
೧೯	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಮೃಗೇಶವರ್ಮ	ಕ್ರಿ.ಶ.೫ನೇ.ಶ.	ಎಂ.ಎ.ಆರ್.೧೯೧೧
೨೦	ಕೊಡಗೆರೆ	ಶಿಕಾರಿಪುರ	ಶಿವಮೊಗ್ಗ	ತಾಮ್ರ	ಶಿವಮಾಂಧಾತೃವರ್ಮ	೨ನೇ ವರ್ಷ	ಎ.ಕ.೭.
							ಶಿ.ಕಾ.೨೯. ಇ.ಆ.೬
೨೧	ಅರೇತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ರವಿವರ್ಮ	೧ನೇ ವರ್ಷ	ಕ.ಅ.ತಾ.ಶಾ.೧೫.
೨೨	ನೀಲಂಬೂರು	ನೀಲಂ ಬೂರು	ಕಲಪ್ಪುರಂ (ಕೇರಳ)	ತಾಮ್ರ	ರವಿವರ್ಮ	೫ನೇ ವರ್ಷ	ಇ.ಆ.೮.
೨೩	ಹಲಸಿ	ಖಾನಾಪುರ	ಬೆಳಗಾಂ	ತಾಮ್ರ	ರವಿವರ್ಮ	೧೧ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್, ಸಂ.೯.ಐ.ಎ.೬
೨೪	ಕುಂಟಗಣಿ	ಅಂಕೋಲ	ಕಾರವಾರ	ತಾಮ್ರ	ರವಿವರ್ಮ	೧೨ನೇ ವರ್ಷ	ಇ.ಆ.೧೪.ಎ.ಇ. (ಹೊಸ),೩೨.
೨೫	ದಾವಣಗೆರೆ	ದಾವಣಗೆರೆ	ದಾವಣಗೆರೆ	ತಾಮ್ರ	ರವಿವರ್ಮ	೩೪ನೇ ವರ್ಷ	ಎಂ.ಎ.ಆರ್.೧೯೩೩. ಇ.ಆ.೩೩
೨೬	ಅಜ್ಜಿಬಾಳ	ಶಿರಸಿ	ಉತ್ತರ ಕನ್ನಡ	ತಾಮ್ರ	ರವಿವರ್ಮ	೩೫ನೇ ವರ್ಷ	ಇ.ಆ.೧೬.
೨೭	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ರವಿವರ್ಮ	ಕ್ರಿ.ಶ. ೪೮೫	ಜೆಬಿಬಿಆರ್‌ಎಎಸ್, ಸರ್೯.ಇ.ಆ.೦೬.
೨೮	ಗುಡ್ನಾಪುರ	ಶಿರಸಿ	ಉತ್ತರ ಕನ್ನಡ	ಶಿಲಾ	ರವಿವರ್ಮ	ಕ್ರಿ.ಶ. ೪೮೫	ಶ್ರೀಕಣ್ಠಿಕಾ.
೨೯	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ರವಿವರ್ಮ	ಕ್ರಿ.ಶ.೫–೬ನೇ.ಶ.	ಜೆ.ಬಿ.ಬಿ.ಆರ್.ಎ.ಎಸ್, ಸರ್೯.ಐ.ಎ.೬.
೩೦	ಕವಡಿ	ಸೊರಬ	ಶಿವಮೊಗ್ಗ	ಶಿಲಾ	ರವಿವರ್ಮ	ಕ್ರಿ.ಶ.೫–೬ನೇ.ಶ.	ಎ.ಕ.೮.ಸೊ.೫೨೩.
೩೧	ಕೆಲ್ಲಗುಂದಿ	ಸೊರಬ	ಶಿವಮೊಗ್ಗ	ಶಿಲಾ	ರವಿವರ್ಮ	ಕ್ರಿ.ಶ.೫–೬ನೇ.ಶ.	ಕಾ.ಕ.ಇ.ಸಂ.೨೮.
೩೨	ಕಾಶಿಪುರ	ದಾವಣಗೆರೆ	ದಾವಣಗೆರೆ	ತಾಮ್ರ	ದೂರ್ಮ್ಯಾ ರವಿಮಹಾರಾಜ	೬ನೇ.ಶ.	ಎಂ.ಎ.ಆರ್.೧೯೪೩
೩೩	ಹೊನ್ನಾವರ	ಹೊನ್ನಾವರ	ಉತ್ತರ ಕನ್ನಡ	ತಾಮ್ರ	ಕೈಕೇಯ ಚಿತ್ರಸೇನ	೫–೬ನೇ.ಶ.	ಇ.ಆ.೩೭
೩೪	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ಹರಿವರ್ಮ	೪ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್, ಸರ್೯.ಇ.ಆ.೬
೩೫	ಹಲಸಿ	ಖಾನಪುರ	ಬೆಳಗಾಂ	ತಾಮ್ರ	ಹರಿವರ್ಮ	೫ನೇ ವರ್ಷ	ಜೆ.ಬಿ.ಬಿ.ಆರ್.ಎ.ಎಸ್, ಸರ್೯.ಇ.ಆ.೬
೩೬	ಅರೆತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ಹರಿವರ್ಮ	೭ನೇ ವರ್ಷ	ಕ.ಅ.ತಾ.ಶಾ.೧೮.
೩೭	ಸಂಗೋಳ್ಳಿ	ಬೈಲ ಹೊಂಗಲ	ಬೆಳಗಾವಿ	ತಾಮ್ರ	ಹರಿವರ್ಮ	೮ನೇ ವರ್ಷ	ಇ.ಆ.೧೪
೩೮	ಮಹಾ ಮಳವಳ್ಳಿ	ಶಿಕಾರಿಪುರ	ಶಿವಮೊಗ್ಗ	ತಾಮ್ರ?	ಹರಿವರ್ಮ	ಕ್ರಿ.ಶ.೬ನೇ.ಶ.	ಕಾ.ಕ.ಇ.ಸಂ.೩೨.
೩೯	ಅರೆತಲಗದ್ದೆ	ಸೊರಬ	ಶಿವಮೊಗ್ಗ	ತಾಮ್ರ	ಪುಳಿಂದವರ್ಮ	ಕ್ರಿ.ಶ.೫೦೦–೫೨೦	ಕ.ಅ.ತಾ.ಶಾ.೨೧.

೪೦	ಹಾನಗಲ್	ಹಾನಗಲ್	ಹಾವೇರಿ	ತಾಮ್ರ	?	ಕ್ರಿ.ಶ.೫೦೦–೫೨೦	ಇ.ದ.೨೮.
೪೧	ಆಣಜಿ	ದಾವಣಗೆರೆ	ದಾವಣಗೆರೆ	ಶಿಲಾ	ಶಿವಾನಂದವರ್ಮ	ಕ್ರಿ.ಶ.೫ನೇ.ಶ.	ಎ.ಕ.೧೧.ದಾ.೧೬೧.
೪೨	ಬಿರೂರು	ಕಡೂರು	ಚಿಕ್ಕ ಮಗಳೂರು	ತಾಮ್ರ (ಕೃತಕ)	ವಿಷ್ಣುವರ್ಮ	೫ನೇ ವರ್ಷ	ಎ.ಕ.೬.ಕ.೧೬೨.
೪೩	ಕೋರಗ್ರಾಮ (ಹೆರ್ಬಟ)	ತುಮಕೂರು	ತುಮಕೂರು	ತಾಮ್ರ	ವಿಷ್ಣುವರ್ಮ	೫ನೇ ವರ್ಷ	ಎಂ.ಎ.ಆರ್.೧೯೨೫
೪೪	ದೇವಗಿರಿ	ಹಾವೇರಿ	ಹಾವೇರಿ	ತಾಮ್ರ	ದೇವವರ್ಮ	ಕ್ರಿ.ಶ.೫ನೇ.ಶ.	ಜೆ.ಬಿ.ಬಿ.ಆರ್.ಎ.ಎಸ್, ಸಂ.೧೨.ಇ.ಆ.೭.
೪೫	ಮೂಡಿಗೆರೆ	ಕಡೂರು	ಚಿಕ್ಕ ಮಗಳೂರು	ತಾಮ್ರ	ವಿಷ್ಣುವರ್ಮ	ಕ್ರಿ.ಶ.೫ನೇ.ಶ.	ಕಾ.ಕ.ಇ.ಸಂ.೩೬.
೪೬	ದೇವಗಿರಿ	ಹಾವೇರಿ	ಹಾವೇರಿ	ತಾಮ್ರ	ದೇವವರ್ಮ	ಕ್ರಿ.ಶ.೫ನೇ.ಶ.	ಜೆ.ಬಿ.ಬಿ.ಆರ್.ಎ.ಎಸ್. ಸಂ.೧೨.ಇ.ಆ.೭.
೪೭	ಮರುವಸೆ (ಮೃಗವಧೆ)	ತೀರ್ಥಹಳ್ಳಿ	ಶಿವಮೊಗ್ಗ	ಶಿಲಾ	?	ಕ್ರಿ.ಶ.೫ನೇ.ಶ.	ಇ.ದ.೨೯.
೪೮	ಮೂಡಿಗೆರೆ	ಮೂಡಿಗೆರೆ	ಚಿಕ್ಕ ಮಗಳೂರು	ತಾಮ್ರ	ಸಿಂಹವರ್ಮ	ಕ್ರಿ.ಶ.೬ನೇ.ಶ.	ಕಾ.ಕ.ಇ.ಸಂ.೩೮.
೪೯	ಶಿವಳ್ಳಿ	ಶಿಕಾರಿಪುರ	ಶಿವಮೊಗ್ಗ	ತಾಮ್ರ	ಕೃಷ್ಣವರ್ಮ(ಇ)	ಕ್ರಿ.ಶ.೫೧೬	ಕಾ.ಕ.ಇ.ಸಂ.೩೯.
೫೦	ಶಿವಳ್ಳಿ	ಶಿಕಾರಿಪುರ	ಶಿವಮೊಗ್ಗ	ತಾಮ್ರ	ಕೃಷ್ಣವರ್ಮ(ಇ)	ಕ್ರಿ.ಶ. ೬ನೇ.ಶ	ಕಾ.ಕ.ಇ.ಸಂ.೪೧.
೫೧	ಅಜ್ಜಿಬಾಳು	ಸಿರಸಿ	ಉತ್ತರ ಕನ್ನಡ	ತಾಮ್ರ	ಕೃಷ್ಣವರ್ಮ	೧೯ನೇ ವರ್ಷ	ಇ.ಆ.೧೬.
೫೨	ಬನ್ನಹಳ್ಳಿ (ಬೆಣ್ಣೂರು)	ಬೇಲೂರು	ಚಿಕ್ಕ ಮಗಳೂರು	ತಾಮ್ರ	ಕೃಷ್ಣವರ್ಮ	೭ನೇ ವರ್ಷ	ಎ.ಕ.೫.ಬೇ.೨೪೫.
೫೩	ಕಂಪ್ಲಿ	ಹೊಸಪೇಟೆ	ಬಳ್ಳಾರಿ	ತಾಮ್ರ	ಅಜವರ್ಮ	ಕ್ರಿ.ಶ.೬ನೇ.ಶ.	ಇ.ಆ.೩೯.
೫೪	ತಗರೆ	ಬೇಲೂರು	ಹಾಸನ	ತಾಮ್ರ	ಭೋಗಿವರ್ಮ	ಕ್ರಿ.ಶ.೬ನೇ.ಶ.	ಎಂ.ಎ.ಆರ್.೧೯೧೮
೫೫	ಶಿವಮೊಗ್ಗ	ಶಿವಮೊಗ್ಗ	ಶಿವಮೊಗ್ಗ	ತಾಮ್ರ	ಮಾಂಧಾತೃ	ಕ್ರಿ.ಶ.೬ನೇ.ಶ.	ಎಂ.ಎ.ಆರ್.೧೯೧೧
೫೬	ತಡಗಣಿ	ಶಿಕಾರಿಪುರ	ಶಿವಮೊಗ್ಗ	ಶಿಲಾ	ಮಧುವರ್ಮ	ಕ್ರಿ.ಶ. ೬ನೇ.ಶ.	ಎ.ಕ.೭.ಶಿ.ಕಾ.೬೬.
೫೭	ಕೊಣ್ಣೂರು	ಗೋಕಾಕ್	ಬೆಳಗಾವಿ	ಶಿಲಾ	ದಾಮೋದರನೃಪ	ಕ್ರಿ.ಶ. ೬ನೇ.ಶ.	ಇ.ಆ.೨೧.
೫೮	ಅರವೇಳಂ (ಗೋವಾ)	ಬಿಚ ಹೊಲಿಮ್	ಉತ್ತರ ಗೋವಾ	ಶಿಲಾ	ಮೃಗೇಶ?	ಕ್ರಿ.ಶ. ೬ನೇ.ಶ.	ಇ.ಆ.೪೭.ಜೆ.ಇ.ಎಸ್. ಐ.೭.
೫೯	ಎಡಕಲ್ಲು (ಕೇರಳ)		ವೈನಾಡು	?	?	ಕ್ರಿ.ಶ. ೬ನೇ.ಶ.	ಇ.ಆ.೩೦.
೬೦	ಬೇಡ್ಕಿಹಾಳ್	ನಿಪ್ಪಾಣಿ	ಬೆಳಗಾಂ	?	ಶಾನ್ತಿವರ್ಮ	ಕ್ರಿ.ಶ. ೬ನೇ.ಶ.	ಕ.ಇ.೩.ಸಂ.೫೧.
೬೧	ಹಾರ್ನಹಳ್ಳಿ	ಶಿವಮೊಗ್ಗ	ಶಿವಮೊಗ್ಗ	ತಾಮ್ರ	ಮೃಗೇಶವರ್ಮ	ಕ್ರಿ.ಶ. ೬ನೇ.ಶ.	ಶಾ.ಅ.ಸ.೧.ಸ.೧
೬೨	ಮತ್ತೂರು	ಬ್ಯಾಡಗಿ	ಹಾವೇರಿ	ತಾಮ್ರ	ಶಿವಮಾಂಧಾತೃ ವರ್ಮ	೧೩ನೇ ವರ್ಷ	ಇ.ದ.೧೧.
೬೩	ಕಿರು ಕುಪ್ಪಟೂರು (ಅಕ್ಕಿಹಾಲೂರು)	ಹಾನಗಲ್	ಹಾವೇರಿ	ತಾಮ್ರ	ಕೃಷ್ಣವರ್ಮ(೨)	ಕ್ರಿ.ಶ. ೬ನೇ.ಶ.	ಕ.ಇ.೨.

ಶಾಸನ ದೊರೆತಿರುವ ಸ್ಥಳ: ಪ್ರಸ್ತುತ ಲೇಖನದಲ್ಲಿ ಚರ್ಚೆ ಮಾಡುತ್ತಿರುವ ರವಿವರ್ಮನ ಶಾಸನವು ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಜಡೆ ಹೋಬಳಿಯ ತೆಲಗುಂದ ಗ್ರಾಮವಾಗಿದೆ. ಈ ಗ್ರಾಮವನ್ನು ಇಲ್ಲಿಯ ಕ್ರಿ.ಶ. ೧೦೫೭ರ ಚಾಲುಕ್ಯ ತ್ರೈಲೋಕ್ಯಮಲ್ಲನ ಕಾಲದ ಶಾಸನದಲ್ಲಿ ಕೆಲಿಗುಂದ ಎಂದು,[೪] ಇದೇ ಗ್ರಾಮದ ಇನ್ನೊಂದು ಕ್ರಿ.ಶ. ೧೧೦೦ರ ಚಾಲುಕ್ಯ ವಿಕ್ರಮಾದಿತ್ಯದೇವನ ಶಾಸನದಲ್ಲಿ ಕೆಲ್ಲಿಗುಂದ ಎಂದು ಕರೆಯಲಾಗಿದ್ದು,[೫] ೧೯೦೨ರಲ್ಲಿ ಬಿ.ಎಲ್. ರೈಸ್‌ರವರು ಈ ಗ್ರಾಮವನ್ನು ತೆಲಗುಂದ ಎಂದು ಉಲ್ಲೇಖಿಸಿದ್ದಾರೆ. ಇದೇ ಗ್ರಾಮದ ೧೯೦೨ರಲ್ಲಿ ದಾಖಲೆಯಾದಂತೆ ರಾಮೇಶ್ವರ

ದೇವಾಲಯವೆಂದು ಕರೆಯುತ್ತಿದ್ದ ದೇವಾಲಯವನ್ನು ಸ್ಥಳೀಯರು ಈಗ ಈಶ್ವರ ದೇವಾಲಯವೆಂದು ಕರೆಯುತ್ತಿದ್ದಾರೆ. ಇದು ನವೀಕರಣಗೊಂಡಿದ್ದು, ಶಿವಲಿಂಗ ಹಾಗೂ ಪಾಣಿಪೀಠವನ್ನು ಹೊಂದಿರುವ ಚಿಕ್ಕ ದೇವಾಲಯವಾಗಿದೆ. ಈ ದೇವಾಲಯದ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ರವಿವರ್ಮನ ಕಾಲದ ಶಾಸನವು ಅಕ್ಷಾಂಶ ೧೪.೫೧೨೬೪೩೦ ಹಾಗೂ ರೇಖಾಂಶ ೭೫.೧೦೮೩೪೪೮೦ ರಲ್ಲಿ ಚಪ್ಪಡಿ ಕಲ್ಲಿನ ಮೇಲೆ ಕಂಡುಬಂದಿದೆ.

ಈ ಶಿಲಾ ಶಾಸನವು ೧೪೩ ಸೆಂ.ಮೀ ಉದ್ದ ಹಾಗೂ ೪೯ ಸೆಂ.ಮೀ. ಆಗಲವಿದ್ದು, ಬ್ರಾಹ್ಮಿ ಪೇಟಿಕಾಶಿರ ಲಿಪಿ ಹಾಗೂ ಸಂಸ್ಕೃತ ಭಾಷೆಯಲ್ಲಿ ಏಳು(೭) ಸಾಲಿನಿಂದ ಕೂಡಿದೆ. ಶಾಸನವು ಅಲ್ಲಲ್ಲಿ ಸ್ವಲ್ಪ ತೃಟಿತವಾಗಿದೆ.



ಕದಂಬ ರವಿವರ್ಮನ ಅಪ್ರಕಟಿತ ಶಾಸನ

ಶಾಸನದ ಪಾಠ

೧. [ಸ್ವ]ಸ್ತಿ ಸ್ವಾಮಿ ಮಹಾಸೇನ ಮಾತೃಗಣಾನುದ್ಧ್ಯಾತಾಭಿಷಿಕ್ತಸ್ಯ ಮಾನವ್ಯಸ ಗೋತಾಣ್ರಾ ಹಾರಿತೀ ಪುತ್ರಾಣಾ

೨. ಸ್ವಾದ್ಧ್ಯಾಯ ಚರ್ಚ್ಚಾಪಾರಣಾ ಸಕಲ ಜಗಜ್ಜನಾಮ್ಬುನಾ ಕದಮ್ಬಾನಾಮ್ ಯಸ್ಸ್ವಶಕ್ತಿ [ನಿ]

೩. . . ರಮಣ್ಡಲಮ್ ಅ[ನ್ದೋಕ್ಯ]ರ . ಯದ್ಬೀಮಾನ್ ಸ್ವ [ವನ್ಯಾಖ್ಯ] ರಿಕ ಶ್ರೀಯಮ್ ॥ ೧ ॥ ಶ್ರೀ

೪. [ಮೃಗೇ*]ಶವರ್ಮಣಃ ಸುತ ಸ್ಸ್ವಗುಣ ಸಮ್ಬೂತ್ಯಾ ರವಿವರ್ಮ್ಯೇತಿ ವಿಶ್ರತಮ್ ॥ ೨ ॥ . .

೫. ಬಿಜಶಯ್ಯಾಙ್ಚ . ಸಕಲ ಸಹಾಯುಕ್ತಕ ತಣ್ಡುಲಾ ॥ ೩ ॥ ಮು[.]ಕ್ತ ವಾತ್ಸಲ ಮಾನಙ್ಚ ಷಡ್ಭಾಗ ಪ

೬ . . . . . ಸ್ಥಿತೇ ಮುಚ್ಚಿಣ್ಡ್ಯ . ಸು . ನ್ತ [ಮ್ಭ]ಪಮಶ್ರಸೇವ್ಯ॥ ಇತಿ ॥

೭ ತತ್ತದಿಯಶಾ [ತಾ] ಸಕ್ಕು . ಪುನ ರವಿವರ್ಮ ನರಕತಮ್ ॥

ಸಾರಾಂಶ: ಮಹಾಸೇನನ ಕೃಪೆಗೆ ಪಾತ್ರರಾಗಿ ಮಾತೃಗಣಗಳಿಂದ ಅಂದರೆ ಸಪ್ತಮಾತೃಕೆಗಳಿಂದ ಅಭಿಷಕ್ತನಾಗಿ ಮಾನವ್ಯಸ ಗೋತ್ರಕ್ಕೆ ಸೇರಿದ ಹಾರೀತಿಯ ಮಕ್ಕಳೆನಿಸಿ ಸ್ವ-ಅಧ್ಯಯನ ಮತ್ತು ಚರ್ಚೆಗಳಲ್ಲಿ ಪಾರಂಗತರಾದ ಕದಂಬ ವಂಶಕ್ಕೆ ಸೇರಿದ ಸ್ವಂತ ಶಕ್ತಿಯಿಂದ ಮಂಡಲದ ಅಧಿಪತಿಯಾದ ಮೃಗೇಶವರ್ಮನ ಮಗ ರವಿವರ್ಮ ಪ್ರಸಿದ್ಧನು. ಇವನು ಮಾನದಲ್ಲಿ ಮುಚ್ಚುಣ್ಡಿಯ ಗ್ರಾಮದಲ್ಲಿ ಷಡ್ಭಾಗ ಅಂದರೆ ಆರನೆಯ ಒಂದು ಭಾಗ ದಾನ ನೀಡಿದ್ದಾನೆ. ಮುಚ್ಚುಣ್ಡಿ ಗ್ರಾಮದ ಉಲ್ಲೇಖ ಶಾತವಾಹನರ ಉಲ್ಲೇಖವಿರುವ ಮಳವಳ್ಳಿ ಶಾಸನದಲ್ಲಿ ಅಪರ ಮುಚ್ಚುಣ್ಡಿ ಮತ್ತು ಕುನ್ದಮುಚ್ಚಿಡಿ ಎಂಬ



ಸಿಂಹ ಶಿಲ್ಪ

ಉಲ್ಲೇಖ ಬರುತ್ತದೆ. ಇದು ಶಿಕಾರಿಪುರ ತಾಲ್ಲೂಕಿನ ಅಗ್ರಹಾರ ಮುಚ್ಚಡಿ ಅಥವಾ ಮಾಯಿತಮ್ಮನ ಮುಚ್ಚಡಿ ಆಗಿರಬಹುದು. ಈ ಶಾಸನದಲ್ಲಿ ರವಿವರ್ಮನ ಹೆಸರನ್ನು ಎರಡು ಬಾರಿ ಉಲ್ಲೇಖ ಮಾಡಲಾಗಿದೆ. ಇಲ್ಲಿ ನರಕತಮ್ ಎಂಬ ಪದ ಅರ್ಥ ತಿಳಿದುಬರುವುದಿಲ್ಲ. ಈಗ ದೊರೆತಿರುವ ಶಿಲಾ ಶಾಸನವು ಸೇರಿ ಒಟ್ಟು ೧೩ ಶಾಸನಗಳು ರವಿವರ್ಮನ ಕಾಲದಲ್ಲಿ ಕಂಡುಬಂದಿವೆ.

ಇತರೆ ಪ್ರಾಚ್ಯಾವಶೇಷಗಳು: ಈ ಶಾಸನದ ಹತ್ತಿರ ಮಣ್ಣಿನಿಂದ ನಿರ್ಮಾಣವಾಗಿರುವ ಬನ್ನಿಮಹಾಕಾಳಮ್ಮ ದೇವಾಲಯ, ಇದರ ಹತ್ತಿರವೇ ಇತ್ತೀಚೆಗೆ ನಿರ್ಮಾಣವಾದ ಚಿಕ್ಕ ದೇವಾಲಯ ಲಿಂಗ ಹಾಗೂ ಪೀಠ ಇದೆ. ಇದಲ್ಲದೆ ಶಾಲೆಯ ಕಾಂಪೌಂಡು ಹೊರಭಾಗದಲ್ಲಿ ಸಿಂಹದ ಶಿಲ್ಪವು ಕಂಡುಬಂದಿದ್ದು, ಇದು ೬೨ ಸೆಂ.ಮೀ. ಉದ್ದ ಹಾಗೂ ೭೮ ಸೆಂ.ಮೀ. ಅಗಲವಾಗಿದ್ದು ಇದರ ಶೈಲಿಯ ಆಧಾರದಲ್ಲಿ ಇದು ಕದಂಬ ಅರಸರ ಕಾಲದ್ದು ಎಂದು ಅಭಿಪ್ರಾಯ ಪಡಲಾಗಿದೆ. ಇದರ ಅಕ್ಕಪಕ್ಕದಲ್ಲಿಯೇ ಇತರೆ ಶಾಸನಗಳು, ಶಿವಲಿಂಗಗಳು, ಸಪ್ತಮಾತೃಕೆ ಶಿಲ್ಪಗಳು ಸಹಾ ಕಂಡುಬಂದಿದ್ದು ಶಾಸನಗಳು ಪ್ರಕಟಗೊಂಡಿವೆ.

ಟಿಪ್ಪಣಿ: ರಾಮೇಶ್ವರ ದೇವಾಲಯವನ್ನು ಸ್ಥಳೀಯರು ನೂತನ ಶಾಲೆ ನಿರ್ಮಾಣ ಮಾಡಲು ಜೆ.ಸಿ.ಬಿ. ಮುಖಾಂತರ ತೆಗೆದು ಅಲ್ಲಿರುವ ಲಿಂಗ ಹಾಗೂ ಪಾಣಿಪೀಠಕ್ಕೆ ಆಧುನಿಕ ಚಿಕ್ಕ ದೇವಾಲಯವನ್ನು ನಿರ್ಮಾಣ ಮಾಡಿ ಪೂಜಿಸುತ್ತಿದ್ದಾರೆ. ಈ ದೇವಾಲಯವನ್ನು ತೆಗೆದಾಗ ಈಗ ಅಲ್ಲಿ ದೊರೆತಿರುವ ರವಿವರ್ಮನ ಶಾಸನವನ್ನು ಸಹಾ ಜೆಸಿಬಿಯಿಂದ ದೂಡಿದ್ದು ಅಲ್ಲಿ ಅರಕ್ಷಿತವಾಗಿ ಬಿದ್ದಿದ್ದು ಇದನ್ನು ಗ್ರಾಮಸ್ಥರು ಶೆಲ್ಟರ್ ಹಾಗೂ ಪೀಠವನ್ನು ಮಾಡಿ ಸಂರಕ್ಷಿಸುವುದಾಗಿ ತಿಳಿಸಿರುತ್ತಾರೆ. ಮಧ್ಯ ನಂದಿ ಹಾಗೂ ದೀಪ ಸ್ಥಂಭವನ್ನು ತೆಗೆದು ದಾರಿ ಮಾಡಿಕೊಂಡಿದ್ದಾರೆ. ಬನ್ನಿಮಹಾಕಾಳಮ್ಮ ಮಣ್ಣಿನ ದೇವಾಲಯವಾಗಿದ್ದು ಇಲ್ಲಿ ಶಾಸನಗಳು, ಶಿವಲಿಂಗ ಹಾಗೂ ನಂದಿ ಕಂಡುಬರುತ್ತವೆ.

---

* ಈ ಶಾಸನವನ್ನು ಪತ್ತೆ ಹಚ್ಚುವಲ್ಲಿ ಸಹಕರಿಸಿದ ಮಂಜಪ್ಪ ಗ್ರಾಮಸ್ಥರಾದ ಮೇಘರಾಜ್, ಮಲ್ಲಿಕಾರ್ಜುನ, ಶಾಸನವನ್ನು ಓದಿಕೊಟ್ಟ ಡಾ. ಜಗದೀಶ ಮತ್ತು ನಾಗರಾಜರಾವ್ ಮೈಸೂರು ಹಾಗೂ ಲೇಖನವನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ಪೂರ್ಣಿಮ ಹಾಗೂ ನಿರ್ದೇಶಕರಾದ ಡಾ. ಆರ್. ಗೋಪಾಲ್ ಇವರುಗಳಿಗೆ ಧನ್ಯವಾದಗಳು.

ಅಡಿಟಿಪ್ಪಣಿಗಳು

೧. ಗೋಪಾಲ್ ಬಾ.ರಾ., ಇತಿಹಾಸ ಮಾಲೆ–೧. ಬನವಾಸಿ ಕದಂಬರು, ಕದಂಬ ಸಾಂಸ್ಕೃತಿಕ ಅಧ್ಯಯನ, ಶಿರಸಿ, ಉತ್ತರ ಕನ್ನಡ, ಪ್ರಾಚಿ ಪ್ರಿಂಟರ್ಸ್ ಪ್ರೈವೇಟ್ ಲಿ. ಬೆಂಗಳೂರು–೦೪೧. ಪುಟಗಳು ೩–೪.

೨. ರೈಸ್ ಬಿ.ಎಲ್., ೧೯೦೪, 'ಎಪಿಗ್ರಾಫಿಯ ಕರ್ನಾಟಿಕ' ಸಂ. ೮, ಸೊರಬ. ಶಾ.ಸಂ. ೨೬೨.

೩. ಗೋಪಾಲ್ ಬಾ.ರಾ., ಇತಿಹಾಸ ಮಾಲೆ–೧, ಬನವಾಸಿ ಕದಂಬರು, ಕದಂಬ ಸಾಂಸ್ಕೃತಿಕ ಅಧ್ಯಯನ, ಶಿರಸಿ, ಉತ್ತರ ಕನ್ನಡ, ಪ್ರಾಚಿ ಪ್ರಿಂಟರ್ಸ್ ಪ್ರೈವೇಟ್ ಲಿ. ಬೆಂಗಳೂರು–೦೪೧. ಪುಟ ೬.

೪. ರೈಸ್ ಬಿ.ಎಲ್., ೧೯೦೪, 'ಎಪಿಗ್ರಾಫಿಯಾ ಕರ್ನಾಟಿಕ' ಸಂಪುಟ–೮, ಸೊರಬ, ಶಾ.ಸಂ. ೪೩೮.

೫. ಅದೇ ಶಾ.ಸಂ. ೪೪೨.

◆◆

೧೪


ಯುವರಾಜು ಆರ್.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಪ್ರಕಟಿತ ಶಾಸನಗಳು

ಕಳೆದ ಕೆಲವು ವರುಷಗಳಿಂದ ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ನನ್ನ ಪಿಹೆಚ್.ಡಿ. ಅಧ್ಯಯನ ಸಂಬಂಧ ಕ್ಷೇತ್ರಕಾರ್ಯ ಮಾಡಲಾಯಿತು. ಈ ಸಂದರ್ಭದಲ್ಲಿ ಹಲವಾರು ಅಪ್ರಕಟಿತ ಶಾಸನಗಳು ದೊರಕಿದ್ದು ಅವುಗಳಲ್ಲಿ ಕೆಲವು ಕನ್ನಡ ಶಾಸನಗಳನ್ನು ಈ ಪ್ರಬಂಧದಲ್ಲಿ ಪರಿಚಯಿಸುತ್ತಿದ್ದೇನೆ.

ಶಾಸನ ೧ : ಸಾದಹಳ್ಳಿಯ ಕ್ರಿ.ಶ. ೭೫೦ರ ತುರುಗೋಳ್ ವೀರಗಲ್ಲು ಶಾಸನ

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯ ಸಾದಹಳ್ಳಿಯು ದೇವನಹಳ್ಳಿಯಿಂದ ೧೦ ಕಿ.ಮೀ. ದೂರದಲ್ಲಿದ್ದು ಗ್ರಾಮದ ಶ್ರೀ ಕೃಷ್ಣ ದೇವಾಲಯದ ಎದುರಿನ ಕಾಂಪೌಂಡಿನ ಒಳಗೆ ೨ ಅಡಿ ಅಗಲ ಹಾಗೂ ೩ ಅಡಿ ಎತ್ತರವಾದ ಕಣಶಿಲೆಯ ಮೇಲೆ ೮ ಸಾಲುಗಳ ಶಾಸನವನ್ನು ಕಾಣಬಹುದು.



ಶಾಸನದ ಪಾಠ

೧. ಶ್ರೀ ಎಗಿತ್ತೊಱ

೨. ಯ ಮಹಾಜನದ ಪ

೩. ೞ(ೞಿ)ಯಾಳು ..ನ್ ಪಿಟ್ಟ

೪. ಕಮ್ಮಱ.ತೊಱುಗೊಳು

೫. ಳ್ಸನ್ದು.ಇದಿರತದ

೬. ಳು.ಅರಮ್ಮುಮಣ್ಡು ಸುರಿ

೭ ಗೆಯ್ದು ...

(ಮುಂದಿನ ಸಾಲುಗಳು ಕಾಣುವುದಿಲ್ಲ)

ಸಾರಾಂಶ : ಶ್ರೀಎಗಿತ್ತೊರಯ ಮಹಾರಾಜರ ಆಳ್ವಿಕೆಯಲ್ಲಿ ಅವರ ಸೈನಿಕ / ಸೇನಾನಿಯಾದ ...ಪಿಟ್ಟ ಕಮ್ಮರ ಎಂಬುವನು ತುರುಗೋಳ್ ಕದನದಲ್ಲಿ ಕಾದಾಡಿ ಮರಣ ಹೊಂದಿರುವ ವಿವರವಿದೆ. ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ಆದರೆ ಲಿಪಿಯಾಧಾರವಾಗಿ ಕ್ರಿ.ಶ. ೭೫೦ಕ್ಕೂ ಹಿಂದಕ್ಕೆ ಸೇರಿಸಬಹುದು. ಹೇಗೆಂದರೆ ಈಗಾಗಲೇ ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೯ ಬೆಂಗಳೂರು ನಲ್ಲಿ ದಾಖಲಾದ ಕ್ರಿ.ಶ. ೭೫೦ರ

೭೮, ಕುವೆಂಪುನಗರ
ತಾವರೆಕೆರೆ, ಮಾಗಡಿ ಮುಖ್ಯರಸ್ತೆ
ಬೆಂಗಳೂರು ದಕ್ಷಿಣ ತಾಲ್ಲೂಕು
ಬೆಂಗಳೂರು-೫೬೨ ೧೩೦
ಮೊ: ೯೬೦೭೯ ೯೯೭೯

ಕಾಲದ ತೋಟಗೆರೆ (ನೆ.ತಾ.೩೩ ಮತ್ತು ೩೪), ದಾಸರಹಳ್ಳಿ (ಬೆಂ.ತಾ.೩೮), ಹೆಬ್ಬಾಳ ಕಿತ್ತಯ ಶಾಸನಗಳ ಅಕ್ಷರ ಬೆಳವಣಿಗೆಗಿಂತಾ ಹಿಂದೆ ಉಳಿದಿದೆ. ಜ, ಐ ಮತ್ತ ಟಿ ಅಕ್ಷರಗಳು ಬ್ರಾಹ್ಮಿಲಿಪಿ ಸನಿಹದಲ್ಲಿದೆ. ಮ ಅಕ್ಷರವನ್ನು ಎರಡು ರೀತಿಯಲ್ಲಿ ಬಳಸಲಾಗಿದೆ. ಆದ್ದರಿಂದ ಶಾಸನದ ಕಾಲವನ್ನು ಕ್ರಿ.ಶ. ೭೨೦-೭೫೦ಕ್ಕೆ ಸೇರಿಸಬಹುದು.

ಈ ಶಾಸನವು ತುರುಗೋಳ್‌ಗೆ ಸಂಬಂಧಿಸಿದಾಗಿದ್ದು, ಈ ಶಾಸನವು ವೀರಗಲ್ಲಿನ ತುಂಡು ಆಗಿರುವುದಿಲ್ಲ. ಆದರೆ ಒಂದು ಕಲ್ಲಿನಲ್ಲಿ ವೀರಗಲ್ಲು ಮತ್ತೊಂದು ಕಲ್ಲಿನಲ್ಲಿ ಶಾಸನವನ್ನು ಕೆತ್ತಿರುವುದಕ್ಕೆ ಉದಾಹರಣೆಯಾಗಿ ದೇವನಹಳ್ಳಿ ತಾಲ್ಲೂಕಿನ ಬ್ಯಾಡರಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡೇರಿ, ರಾಮನಗರ ತಾಲ್ಲೂಕಿನ ಹಾಗಲಹಳ್ಳಿ, ಮಾಗಡಿ ತಾಲ್ಲೂಕಿನ ಮಾಡಬಾಲ ಮುಂತಾದ ಸ್ಥಳಗಳಲ್ಲಿ ಇದೇ ಶೈಲಿಯ ಶಾಸನ ಮತ್ತು ವೀರಗಲ್ಲುಗಳನ್ನು ಕಾಣಬಹುದು. ಆದ್ದರಿಂದ ಈ ಶಾಸನದ ಪಕ್ಕದಲ್ಲಿ ವೀರಗಲ್ಲು ಶಿಲ್ಪ ಇದ್ದಿರಬೇಕು ಇದುವರೆಗೆ ದೊರೆತಿಲ್ಲ.

ಶಾಸನ ೨ : ಕಾರಹಳ್ಳಿಯ ೯ನೇ ಶತಮಾನದ ತುರುಗೋಳ್ ವೀರಗಲ್ಲು ಶಾಸನ

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯ ಕಾರಹಳ್ಳಿ ಗ್ರಾಮವು ದೇವನಹಳ್ಳಿಯಿಂದ ೫ ಕಿ.ಮೀ. ದೂರದಲ್ಲಿರುತ್ತದೆ. ಈ ಗ್ರಾಮದಲ್ಲಿ ಶಾಸನೋಕ್ತ ತುರುಗೋಳ್ ವೀರಗಲ್ಲು ಕಾಣಬಹುದು. ಈ ವೀರಗಲ್ಲು ೫ ಅಡಿ ಎತ್ತರ ಹಾಗೂ ೩ ಅಡಿ ಅಗಲವಾಗಿದ್ದು, ೯ ಸಾಲುಗಳಿವೆ. (ಈ ವೀರಗಲ್ಲುಗಳ ಪಕ್ಕದಲ್ಲಿ ಇದ್ದ ಅಪ್ರಕಟಿತ ೩ ವೀರಗಲ್ಲು ಶಾಸನವನ್ನು ಬೇರೊಂದು ಲೇಖನದಲ್ಲಿ ಪ್ರಕಟಿಸಿರುತ್ತೇನೆ.)

ಶಾಸನದ ಪಾಠ


೧. ಸ್ವಸ್ತಿ ಶ್ರೀ ಜಿರಿನಗರ ತುರು
೨. ಗೊಳ್
೩. ಕ.ವ
೪. ರಮ
೫. ಯದ(ವಿ?)
೬. ....
೭. ...ದಿ.
೮. ಕ...
೯. ಋ



ಸಾರಾಂಶ : ಗಿರಿನಗರದಲ್ಲಿ ನಡೆದ ಕಾಳಗದಲ್ಲಿ ತುರುಗೋಳ್ ರಕ್ಷಿಸಿ ಸ್ವರ್ಗಸ್ಥನಾದನು. ಈ ಶಾಸನದ ಶಿಲ್ಪದಲ್ಲಿ ಸುಂದರವಾದ ಬಲಿಷ್ಠವಾದ ವೀರನು ಆಲೀಢಾಸನದಲ್ಲಿ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ವೀರಾವೇಶದಿಂದ ಶತ್ರುಗಳ ಮೇಲೆ ಆಕ್ರಮಣ ಮಾಡುತ್ತಿರುವಂತೆ, ಶತ್ರುಗಳ ನಾಲ್ಕು ಬಾಣಗಳು ದೇಹವನ್ನು ಹೊಕ್ಕಿದ್ದರೂ ಸಹ ಅವುಗಳನ್ನು ಲೆಕ್ಕಿಸದೆ ಹೋರಾಟವನ್ನು ಮಾಡುತ್ತಿದ್ದಾನೆ. ತಲೆಗೂದಲನ್ನು ದುಂಡಾಗಿ ಗಂಟು ಕಟ್ಟಿ ಬಟ್ಟೆಯಿಂದ ಬಿಗಿದಿರುವಂತೆ ಕಾಣುತ್ತದೆ. ಜಟಾಜೂಟದೊಂದಿಗೆ ಕರ್ಣಕುಂಡಲ, ಕೇಯೂರ, ಕಂಠಿಕೆ, ಹಸ್ತಕಟಕ, ಯುದ್ಧವಸ್ತ್ರವನ್ನು ಧರಿಸಿದ್ದಾನೆ. ಸೊಂಟಕ್ಕೆ ವಸ್ತುವೊಂದನ್ನು ಬಿಗಿದುಕೊಂಡಿದ್ದು, ಅದರ ಒಂದು ತುದಿ ಎರಡು ಕಾಲುಗಳ ನಡುವೆ ತೊಯ್ದಾಡುತ್ತಿದೆ. ಸೊಂಟದಲ್ಲಿ ಚಾಕುವನ್ನು ಸಿಕ್ಕಿಸಿಕೊಂಡಿದ್ದಾನೆ. ದುಂಡನೆಯ ಮುಖದಲ್ಲಿ ಮಂದಹಾಸವಿದೆ. ಕಿವಿ, ಕೊರಳು, ಕೈಗಳಲ್ಲಿ ಆಭರಣಗಳಿವೆ. ತುರುಗಳನ್ನು ರಕ್ಷಿಸಿದ್ದಾನೆ ಎಂಬುದಕ್ಕೆ ವೀರನ ಹಿಂದೆ ಎರಡು ತುರುಗಳು ಹಟ್ಟಿಗೆ ಹಿಂದಿರುಗಿ ಹೋಗುವಂತಿದೆ. ವೀರನ ಮೇಲ್ಭಾಗದಲ್ಲಿ ಚಿಕ್ಕದಾಗಿ ಸುಖಾಸೀನದಲ್ಲಿ ವೀರನು ಚಾಮರಧಾರಿಣಿಯರ ಸೇವೆಯನ್ನು ಅನುಭವಿಸುತ್ತಾ ಕುಳಿತಿರುವುದನ್ನು ಚಿತ್ರಿಸಲಾಗಿದೆ. ಸ್ವರ್ಗಾರೋಹಣದ ಪರಿಕಲ್ಪನೆ ಕಾಣಬಹುದು[೧]. ಇದರ ಪಕ್ಕದಲ್ಲಿ ಸ್ಥಳವಿದ್ದ ಕಡೆಯಲ್ಲಾ ಪಾಠವನ್ನು ಬರೆಯಲಾಗಿದೆ.

ಶಾಸನ ೩ : ಕಾಮರಸನಹಳ್ಳಿಯ ೧೦ನೇ ಶತಮಾನದ ದೇವಾಲಯವನ್ನು ಕಟ್ಟಿಸಿದ ಶಾಸನ

ಹೊಸಕೋಟೆ ತಾಲ್ಲೂಕಿನ ಜಡಿಗೇನಹಳ್ಳಿ ಹೋಬಳಿಯ ಕಾಮರಸನಹಳ್ಳಿಯು ಹೊಸಕೋಟೆಯಿಂದ ೧೧ ಕಿ.ಮೀ.ದೂರದಲ್ಲಿದೆ. ಈ ಗ್ರಾಮದ ಕೆರೆ ಕೋಡಿ ಬಳಿ ಗಂಗರ ಕಾಲದ ಪಾಳುಬಿದ್ದ ಶಿವನ ದೇವಾಲಯದ ಬಿತ್ತಿಯಲ್ಲಿ ಎರಡು ಸಾಲುಗಳ ಶಾಸನವನ್ನು ಕಾಣಬಹುದು.



ಶಾಸನದ ಪಾಠ

೧ ಶ್ರೀ ಸವ್ವದೇವಯ್ಯನ್ ಕಟ್ಟಿಸಿ

೨ ದ ದೇಗುಲ

ಸಾರಾಂಶ : ಸವ್ವದೇವಯ್ಯನು ದೇಗುಲವನ್ನು ನಿರ್ಮಿಸಿದನು ಎಂಬ ಉಲ್ಲೇಖವಿರುವ ಈ ಎರಡು ಸಾಲುಗಳ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ಆದರೆ ಶಾಸನದಲ್ಲಿರುವ ಲಿಪಿಯು ಹೆಸರುಘಟ್ಟ, ಸೋಲದೇವನಹಳ್ಳಿಯ ಶಾಸನಗಳ ಲಿಪಿಯನ್ನು ಹೋಲುತ್ತದೆ. ಲಿಪಿಯಾಧರವಾಗಿ ೧೦ನೇ ಶತಮಾನಕ್ಕೆ ಸೇರಿಸಬಹುದು. ಈ ಶಾಸನದ ಜೊತೆಗೆ ಗಂಗರ ಕಾಲದ ದುರ್ಗಿ ಶಿಲ್ಪಗಳು ಮತ್ತು ವೀರಗಲ್ಲುಗಳನ್ನು ಈ ಪರಿಸರದಲ್ಲಿ ಕಾಣಬಹುದು.

ಶಾಸನ ೪ : ಮುಗಬಾಳದ ೧೦ನೇ ಶತಮಾನದ ತುರುಗೋಳ್ ವೀರಗಲ್ಲು ಶಾಸನ

ಹೊಸಕೋಟೆ ತಾಲ್ಲೂಕಿನ ಜಡಿಗೇನಹಳ್ಳಿ ಹೋಬಳಿಯ ಬೆಂಗಳೂರು–ಕೋಲಾರ ಹೆದ್ದಾರಿಯಲ್ಲಿನ ಮುಗಬಾಳ ಗ್ರಾಮವು ಹೊಸಕೋಟೆಯಿಂದ ೧೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿನ ಸೋಮೇಶ್ವರ ದೇವಾಲಯಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿ ತೋಟಕ್ಕೆಂದು ಹಾಕಿರುವ ರಕ್ಷಣಾ ಚಪ್ಪಡಿಗಳ ಮಧ್ಯೆ ಒಂದು ಅಪ್ರಕಟಿತ ಶಾಸನೋಕ್ತ ವೀರಗಲ್ಲು ಇದೆ. ೭ ಸಾಲುಗಳಿರುವ ಈ ವೀರಗಲ್ಲು ಸುಮಾರು ಎಂಟು ಅಡಿಯಷ್ಟು ಉದ್ದ ಹಾಗೂ ಅಷ್ಟೇ ಪ್ರಮಾಣದಷ್ಟು ಅಗಲವನ್ನು ಹೊಂದಿದೆ.



ಶಾಸನದ ಪಾಠ

ಇಬ್ಬರು ವೀರರ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ

೧. .ಮು..ಟಿ..ಯ್ಯ .ರವಲ್ಲಿ...ಳು

೨. .ಗ ಱ.....ನು ಚನ್ದಿಗನು

೩. ಪದಿ

ಎಡಭಾಗದ ವೀರನ ಕಾಲ ಕೆಳಗೆ

೪. ಬೊವಯ..

೫. ......

ಬಲಭಾಗದ ವೀರನ ಕಾಲ ಕೆಳಗೆ

೬. ..ಕ್ಕ ಅ.ಳ ಕಟಿನಯ್ಯ ಪದಿರ್ಕಲಪ

೭ ...ಪ್ಪ

ಸಾರಾಂಶ : ತುರುಗೋಳ್‌ನಲ್ಲಿ ಚನ್ದಿಗನು ಮತ್ತು ಕಟಿನಯ್ಯನು ಮರಣ ಹೊಂದಿರುವ ವಿವರವನ್ನು ಕಾಣಬಹುದು. ಶಾಸನದ ಅಕ್ಷರಗಳು ಸವೆದಿರುವುದರಿಂದ ಯಾರೊಂದಿಗೆ ಎಲ್ಲಿ ಹೋರಾಡಿದ್ದರು ಎಂಬ ಮಾಹಿತಿ ತಿಳಿದುಬರುವುದಿಲ್ಲ. ಇಲ್ಲಿ ಇಬ್ಬರು ವೀರರನ್ನು ಸ್ಮರಿಸಲು ಈ ಸ್ಮಾರಕವನ್ನು ಹಾಕಲಾಗಿದೆ. ಇಬ್ಬರು ವೀರರು ಒಂದೇ ತುರುಗೋಳ್‌ನಲ್ಲಿ ಹೋರಾಡಿ ವೀರಮರಣ ಹೊಂದಿರುವುದಕ್ಕೆ ಒಂದೇ ಶಿಲೆ ಮೇಲೆ ಇಬ್ಬರು ವೀರರನ್ನು ಸಮಾನವಾಗಿ ಕೆತ್ತಿದ್ದು, ಶಾಸನವನ್ನು ಆಯಾ ವೀರರ ಕೆಳಗೆ ಕೆತ್ತಲಾಗಿದೆ.

ಬಲಭಾಗದಲ್ಲಿರುವ ವೀರನು ಬಲಗೈಯಲ್ಲಿ ಬಿಲ್ಲು, ಎಡಗೈಯಲ್ಲಿ ಕಠಾರಿಯನ್ನು ಹಿಡಿದಿದ್ದು, ಆಲೀಢ ಭಂಗಿಯಲ್ಲಿ ಯುದ್ಧವಸ್ತ್ರದೊಂದಿಗೆ ನಿಂತಿದ್ದಾನೆ. ಕರ್ಣಕುಂಡಲಗಳು, ದಪ್ಪದಾದ ಮಣಿಯಾಕಾರದ ಕಂಠಿಕೆ, ಕೇಯೂರ, ಹಸ್ತಕಟಕಗಳನ್ನು ಧರಿಸಿರುವ ಇವನು ತಲೆಗೆ ದಪ್ಪದಾದ ಜಟಾಜೂಟವನ್ನು ಹಾಕಿದ್ದಾನೆ. ದೇಹದ ಹಲವು ಭಾಗಗಳಲ್ಲಿ ಬಾಣಗಳು ನಾಟಿವೆ. ಸೊಂಟದಲ್ಲಿ ಕಠಾರಿಯನ್ನು ಇಡಲು ಇರುವ ಒರೆ ಇದೆ. ಮತ್ತೊಬ್ಬ ವೀರನು ಸಹ ಈ ಮೊದಲು ವಿವರಿಸಿದ ವೀರನ ಲಕ್ಷಣಗಳನ್ನೆ ಹೊಂದಿದ್ದಾನೆ. ಆದರೆ ಇಲ್ಲಿ ಇವನನ್ನು ಸ್ವಲ್ಪ ಚಿಕ್ಕದಾಗಿ ತೋರಿಸಲಾಗಿದೆಯಷ್ಟೆ. ಈ ಇಬ್ಬರು ಯಾವ ಕಾರಣಕ್ಕಾಗಿ ಹೋರಾಡಿ ವೀರಮರಣವನ್ನಪ್ಪಿದರು ಎಂಬುದನ್ನು ಸಹ ಶಿಲ್ಪದಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. ಶತ್ರುಗಳು ಗ್ರಾಮದ ದನ, ಕರು, ಎಮ್ಮೆಗಳನ್ನು ಅಪಹರಿಸುವ ಸಂದರ್ಭದಲ್ಲಿ ಈ ಇಬ್ಬರು ವೀರರು ಶತ್ರುಗಳ ಮೇಲೆ ಹೋರಾಡಿ ವೀರಮರಣವನ್ನಪ್ಪಿದ್ದಾರೆ ಎಂಬುದನ್ನು ತೋರಿಸಲು ಬಲಭಾಗದಲ್ಲಿ ಚಿಕ್ಕದಾಗಿ ಮೇಲೆ ಹೇಳಿದ ಪ್ರಾಣಿಗಳ ಶಿಲ್ಪಗಳನ್ನು ಮೂಡಿಸಿರುವುದರಿಂದ ತಿಳಿಯಬಹುದಾಗಿದೆ.

ಶಾಸನ ೫ : ಜ್ಯೋತಿಪುರದ ಕ್ರಿ.ಶ. ೧೪೮೯ ರಲ್ಲಿ ದೇವಾಲಯ ನಿರ್ಮಿಸಿದ ಶಾಸನ

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಜ್ಯೋತಿಪುರ ಗ್ರಾಮವು ದೇವನಹಳ್ಳಿಯಿಂದ ೨೭ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಜ್ಯೋತೀಶ್ವರ ದೇವಾಲಯದ ಮುಂದೆ ಇರುವ ಹೊಲದಲ್ಲಿ ಮನೆ ಕಟ್ಟುವ ಸಂದರ್ಭದಲ್ಲಿ ಈ ಶಾಸನವು ದೊರೆಯಿತು. ಪ್ರಸ್ತುತ ಶಾಸನ ಕಲ್ಲನ್ನು ದೇವಾಲಯದ ಆವರಣದಲ್ಲಿ ಸಂರಕ್ಷಿಸಲಾಗಿದೆ. ಈ ಶಾಸನವು ೫ ಅಡಿ ಎತ್ತರ ಹಾಗೂ ೨ ೧/೨ ಅಡಿ ಅಗಲವಾಗಿದ್ದು ಮುಂಭಾಗದಲ್ಲಿ ೧೮ ಸಾಲುಗಳು, ಹಿಂಭಾಗದಲ್ಲಿ ೭ ಸಾಲುಗಳಿವೆ.

ಶಾಸನದ ಪಾಠ

೧. ಸ್ವಸ್ತಿ ಶ್ರೀ
೨. .... ೧೩೩೧
೩. .... ವಿರೋಧಿ ಸಂವತ್ಸರದ
೪. ಜೇಷ್ಟ ಬ ೩ ಲೂ ಶ್ರೀ ವೀರ ದೇವರಾಯ
೫. ವೊಡೆಯರು ಪ್ರಿಥ್ವಿರಾಜ್ಯಂಗೆ
೬. ಯಿಉತಿರಲು ಮುಂಡಿಯು
೭ ರ ನಾಡ ..ಗೆಱೆಯ ಸೊ
೮. ಮೆಯ ದೇವರ ದೇವಾಲಯ
೯. .... ಮಾಡಿಸಿ
೧೦. ....
೧೧. ....
೧೨. ....
೧೩. ....ಜನ
೧೪. ಮಗ.ವೊಜನಿಗೆ .ಬೊ
೧೫. ಕೊಜನ ಮಗ ಮಾಕೋಜ
೧೬. .ಗೆ ಕೊಟ್ಟ ಸಾಸನ
೧೭. ಸೊಮಯ್ಯ ದೇವರ..
೧೮. ....

ಹಿಂಭಾಗ
೧೯. ....
೨೦. ಯನು....
೨೧. .ದೇವದಾನ....
೨೨. ..ಕೊಟ್ಟ .
೨೩. ....
೨೪. ....
೨೫. ....



ಸಾರಾಂಶ : ವಿಜಯನಗರ ಸಾಮ್ರಾಜ್ಯದ ೧ನೇ ದೇವರಾಯನ ಆಳ್ವಿಕೆಯ ೧೪ ಜುಲೈ ೧೪೮೯ ಸೋಮವಾರದಂದು ಸೋಮೆಯ ದೇವಾಲಯವನ್ನು ನಿರ್ಮಿಸಿ ದಾನ ನೀಡಿದ್ದಾನೆ. ಜ್ಯೋತಿಪುರದಲ್ಲಿ ದಾಖಲಾಗಿರುವ ಶಾಸನದ[೨] (ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ಈ ಶಾಸನವನ್ನು ಒಡೆದು ಪಾಯಕ್ಕೆ ಹಾಕಿದ್ದಾರೆ) ಪ್ರಕಾರ ೧೫೦೬ರಲ್ಲಿ ಸೋಮೇಶ್ವರ ದೇವಾಲಯಕ್ಕೆ ದಾನ ನೀಡಿರುವ ವಿವರಗಳು ಮಾತ್ರ ಇದ್ದು, ದೇವಾಲಯ ನಿರ್ಮಾಣವು ಸುಮಾರು ೨೦೦ ವರ್ಷಗಳ ಮೊದಲೇ ನಿರ್ಮಿಸಿರುವುದಕ್ಕೆ ಈ ಅಪ್ರಕಟಿತ ಶಾಸನವು ಆಧಾರವಾಗಿದೆ.

ಶಾಸನ ೬ : ರಾಯಸಂದ್ರದ ಕ್ರಿ.ಶ. ೧೫೧೬ ರ ಮಲ್ಲೆನಾಯಕರ ದಾನಶಾಸನ

ದೇವನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯ ರಾಯಸಂದ್ರ ಗ್ರಾಮವು ದೇವನಹಳ್ಳಿಯಿಂದ ೩ ಕಿ.ಮೀ. ದೂರದಲ್ಲಿದ್ದು, ಈ ಗ್ರಾಮದಲ್ಲಿನ ಬೃಂದಾವನ ವೆಂಕಟೇಶ್ವರ ದೇವಾಲಯದ ಮುಂದೆ ಇರುವ ಹೊಲದಲ್ಲಿ ೪ ಅಡಿ ಎತ್ತರ, ೨ ೧/೨ ಅಡಿ ಅಗಲದ ಶಾಸನವಿದೆ. ಈ ಶಾಸನದಲ್ಲಿ ಮುಂದೆ ೧೦ ಸಾಲುಗಳು, ಹಿಂದೆ ೪ ಸಾಲುಗಳ ಶಾಸನವನ್ನು ಪತ್ತೆ ಹಚ್ಚಲಾಯಿತು.

ಶಾಸನದ ಪಾಠ



೧. ಶುಭಮಸ್ತು ಸ್ವಸ್ತಿ ಶ್ರೀ ಜಯಾ
೨. (ಭ್ಯು)ದಯ ಶಾಲಿವಾಹನ ಶಕ ವ
೩. ರುಷ ೧೪೩೩ನೆಯ ದಾ
೪. ತು ಸಂವತ್ಸರದ ವೈಶಾಖ
೫. ಶು ೩ಲು ಶ್ರೀ ಮತು ಮುಂ
೬. ಮಡಿ ನಾಯಕರ ಮಕ್ಕ
೭. ಳು ಮಲ್ಲೆನಾಯಕರು ಮಾ.
೮. ಜೀಯರುಗೆ ಕೊಡಿಗೆ ನಾ(ನಾ)
೯. ರ ಕೊ(ಂ)ಡರೆ ಗಂಗೆಯ
೧೦. ತಡಿಯಲಿ ಕಪಿಲೆ

ಹಿಂಭಾಗ

೧೧. ಯ ಕೊಂದ ಪಾಪದಲಿ ಹೊ
೧೨. ಹರು ಬ್ರಾಂಹ್ಮಣರ ಕೊ
೧೩. ಂದ ಪಾಪದಲಿ ಹೊಹ
೧೪. ರು

ಸಾರಾಂಶ : ಮುಂಮಡಿ ನಾಯಕರ ಮಕ್ಕಳು ಮಲ್ಲೆನಾಯಕರು ೪ ಮೇ ೧೫೧೬ರಲ್ಲಿ ಮಾ.ಜೀಯರಿಗೆ ದಾನ ಕೊಟ್ಟ ವಿವರವಿದೆ. ಈ ಶಾಸನದ ಮುಂಭಾಗದ ಮೇಲ್ಭಾಗದಲ್ಲಿ ಸೂರ್ಯಚಂದ್ರರ ರೇಖಾ ಚಿತ್ರವಿದ್ದು, ಒಟ್ಟು ೧೪ ಸಾಲುಗಳ ಶಾಸನದಲ್ಲಿ ಅಧಿರಾಜನ ಉಲ್ಲೇಖವಿಲ್ಲ. ಆದರೆ ಶಾಸನ ಹಾಕಿರುವ ೧೫೧೬ ರ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ಕೃಷ್ಣರಾಯರು ಆಳ್ವಿಕೆ ಮಾಡುತಿದ್ದು, ಈ ಗ್ರಾಮಕ್ಕೆ ರಾಯಸಂದ್ರದ ಹೆಸರು ಬಹುಶಃ ರಾಯರ ಹೆಸರಿನಲ್ಲಿ ಈ ಗ್ರಾಮವನ್ನು ನಿರ್ಮಿಸಿ ಅಥವಾ ಮರುನಾಮವನ್ನು ಮಾಡಿ ಅಥವಾ ಕೆರೆಗೆ ರಾಯಸಮುದ್ರ ಎಂದು ಅವರ ಹೆಸರನ್ನೇ ಇಟ್ಟಿರಬಹುದು. (ಸಮುದ್ರದ ಸಂಕ್ಷಿಪ್ತ ರೂಪವೇ ಸಂದ್ರವಾಗಿದೆ.)

ಈ ಶಾಸನದಲ್ಲಿ ಬಹುಮುಖ್ಯವಾಗಿ ಜೀಯರಿಗೆ ದಾನ ನೀಡಿರುವುದನ್ನು ಗಮನಿಸಿದರೆ ಸಾಮಾನ್ಯವಾಗಿ ಈ ಜೀಯರು ದೇವಾಲಯದ ಸ್ಥಾನಿಕರಾಗಿ ಅಥವಾ ದೇವಾಲಯದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುತ್ತಿದ್ದವರು. ಶಾಸನಗಳಲ್ಲಿ ಸಹ ಜೀಯರು ಸ್ಥಾನಾಧಿಪತಿಯಾಗಿದ್ದರು ಎಂಬುದನ್ನು ಹಲ್ಲೂರು ಶಾಸನದಲ್ಲಿ[೩], ಹಾಗೆಯೇ ಈ ಜೀಯತನವು ವಂಶಪಾರಂಪರೆಯಾಗಿ ಬರುತ್ತಿದ್ದು[೪], ದೇವಾಲಯದಲ್ಲಿ ಪೂಜಾಕಾರ್ಯಗಳನ್ನು ಆಯೋಜಿಸುತ್ತಿದ್ದರು. ಅದು ಅಲ್ಲದೆ

ದೇವಾಲಯದ ನಿರ್ಮಾಣದಲ್ಲೂ ಭಾಗಿಯಾಗುವುದನ್ನು ಬೆಳತೂರು ಶಾಸನದಲ್ಲಿ ಕಾಣಬಹುದು[೫]. ಈ ಅಪ್ರಕಟಿತ ಶಾಸನವು ರಾಯಸಂದ್ರ ವೆಂಕಟೇಶ್ವರ ದೇವಾಲಯ ಎದುರಿದ್ದು, ಬಹುಶಃ ಈ ದೇವಾಲಯದ ಜೀಯರಿಗೆ ದಾನ ನೀಡಿರಬೇಕು.

ಶಾಸನ ೭ : ಮದಲಕೋಟೆಯ ಕ್ರಿ.ಶ. ೧೫೫೪ರ ದಾನಶಾಸನ

ನೆಲಮಂಗಲ ತಾಲ್ಲೂಕಿನ ಕಸಬಾ ಹೋಬಳಿಯ ಮದಲಕೋಟೆಯು ನೆಲಮಂಗಲದಿಂದ ೧೧ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಮುತ್ಯಾಲಮ್ಮ ದೇವಾಲಯದ ಎದುರಿನ ಅಶ್ವತ್ಥಕಟ್ಟೆ ಬಳಿ ಬಿದ್ದಿರುವ ೮ ಅಡಿ ಎತ್ತರ ಹಾಗೂ ೩ ಅಡಿ ಅಗಲದ ಕಲ್ಲಿನ ಮೇಲೆ ೧೭ ಸಾಲುಗಳ ಶಾಸನವನ್ನು ಕಾಣಬಹುದು.

ಶಾಸನ ಪಾಠ

೧. ಶುಭಮಸ್ತು ಸ್ವಸ್ತಿ ಶ್ರೀ ವಿಜೆಯಾಭ್ಯುದಯ ಸಾಲಿವಾಹನ ಶಕ ವರುಷ

೨. ಸಾವಿರದ ನಾನೂಱ ಯೆಪ್ಪತನಾಲ್ಕನೆಯ ಆನಂದ ಸಂವತ್ಸರದ ಆ

೩. ಸಾಡ ಬಹುಳ ೧೩ ಲು ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ

೪. ವೀರ ಪ್ರತಾಪ ಸದಾಶಿವ ಮಹಾರಾಯರು ಪ್ರಥವಿ ರಾಜ್ಯಂಗೆಯುತಿರಲು ಶ್ರೀ ಮಹಾ ಮಂ

೫. ಡಳೇಶ್ವರ.........

೬. ..ಪ ಗ ಮ ಮನಕ್ಕೆ..

೭ ..... ಚೆಂನ ಮಲ್ಲಿಕಾರ್ಜುನ ದೇವರಿಗೆ ......

೮. ಶಾಸನದ ಕ್ರಮವೆಂತೆಂದರೆ ಬಿಲಗೊಂಡನಹಳಿ ಸೀಮೆಗೆ ಸಲುವ.....

೯. ಮದಲಕೋಟೆಯ ಗ್ರಾಮವನು ದೇವರಿಗೆ ಸರ್ವಮಾಂನ್ಯವಾಗಿ ಕೊಟ್ಟೆವಾಗಿ ಆ ಗ್ರಾಮಕ್ಕೆ ಸಲುವ ನಿಧಿ

೧೦. ನಿಕ್ಷೇಪ....................

೧೧. ಆ ಗ್ರಾಮಕ್ಕೆ ಸಲುವ ಸಕಲ ಸುವರ್ಣಾದಾಯ ...ಬತ್ತದಾಯ.....

೧೨. ಅಚ್ಚು ಕಟ್ಟು ಮನೆದೆಜೆಗೆ, ಮಗ್ಗದೆಜೆಗೆ ತೋಟ ತುಡಿಕೆ......ಕಾ

೧೩. ಡರಂಬ ನೀರಾರಂಬ........

೧೪. ಯಾಗಿ ದೇವರ .... ಅನುಭವಿಸಿ.....

೧೫. ....

೧೬. ....

೧೭. ಪಾಪಕ್ಕೆ ಹೊಹರು




ಸಾರಾಂಶ : ವಿಜಯನಗರ ಸಾಮ್ರಾಜ್ಯದ ಸದಾಶಿವ ಮಹಾರಾಯರು ರಾಜ್ಯ ಆಳುವ ಸಂದರ್ಭದಲ್ಲಿ ೧೨ ಜುಲೈ ೧೫೫೪ರಲ್ಲಿ ಮಹಾಮಂಡಲೇಶ್ವರರು ಚೆಂನ ಮಲ್ಲಿಕಾರ್ಜುನ ದೇವರಿಗೆ ಬಿಲಗೊಂಡನಹಳ್ಳಿ ಸೀಮೆಗೆ ಸಲುವ ಮದಲಕೋಟೆಯ ಗ್ರಾಮಕ್ಕೆ ಸಲ್ಲುವ ಸಕಲ ಸುವರ್ಣಾದಯ, ಬತ್ತದಾಯ, ಆಣೆ ಅಚ್ಚುಕಟ್ಟು, ಮನೆದೆಜೆಗೆ, ಮಗ್ಗದೆಜೆಗೆ, ತೋಟ, ತುಡಿಕೆ, ಕಾಡಾರಂಬ, ನೀರಾರಂಭ ಎಲ್ಲವನ್ನು ಸರ್ವಮಾನ್ಯವಾಗಿ ದಾನ ನೀಡಿದ್ದರು. ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಕರುವಿಗೆ ಹಾಲು ಉಣಿಸುತ್ತಿರುವ ಹಸು, ಶಿವಲಿಂಗದ ರೇಖಾಚಿತ್ರವಿದೆ.

ಇದೇ ಗ್ರಾಮದಲ್ಲಿ ದಾಖಲಾಗಿರುವ ಶಾಸನದಲ್ಲಿ[೬], ೧೯೦೫ ರ ಸರ್ವೆ ಹಾಗೂ ಎ.ಕ.ದಲ್ಲಿ ಗ್ರಾಮದ ಹೆಸರು ಮೊದಲಕೋಟೆ ಎಂದು ಉಲ್ಲೇಖವಾಗಿದ್ದು, ಪ್ರಸ್ತುತ ಮದಲಕೋಟೆ ಎಂದು ಹೆಸರು ಬದಲಾಗಿದೆ. ಗ್ರಾಮದಲ್ಲಿ ವಿಚಾರಿಸಿದಾಗ ಮದನ ಎಂಬ ರಾಜನಿಂದ ಹೆಸರು ಬಂದಿದ್ದು ಎನ್ನುತ್ತಾರೆ. ತರುವಾಯ ಗ್ರಾಮಸ್ಥರಿಗೆ ಶಾಸನ ಹಾಗೂ ೧೯೦೫ ರ ಸರ್ವೆ, ಗ್ರಾಮ ನಕ್ಷೆಯ ಮೂಲಕ ಮನವರಿಕೆ ಮಾಡಿದ ನಂತರ ಈಗ ಗ್ರಾಮದ ಹೆಸರು ಮೊದಲಿನಂತೆಯೆ ಮೊದಲಕೋಟೆ ಮರುನಾಮಕರಣಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ.

ಶಾಸನ ೮ : ಲಾಲ್ಬಾಗ್ ದಾಸರಹಳ್ಳಿಯ ೧೫ನೇ ಶತಮಾನದ ದಾನಶಾಸನ

ಹೊಸಕೋಟೆ ತಾಲ್ಲೂಕಿನ ಜಡಿಗೇನಹಳ್ಳಿ ಹೋಬಳಿಯ ಲಾಲ್ಬಾಗ್ ದಾಸರಹಳ್ಳಿ ಮತ್ತು ಗೊಟ್ಟಿಪುರ ಮಧ್ಯದಲ್ಲಿರುವ ಮೀಸಲು ಅರಣ್ಯದಲ್ಲಿ ಪಾಳುಬಿದ್ದ ಆಂಜನೇಯ ದೇವಾಲಯದ ಬಳಿ ೭ ಅಡಿ ಎತ್ತರ ೧ ೧/೨ ಅಡಿ ಅಗಲವಾದ ೧೪ ಸಾಲುಗಳ ಶಾಸನವನ್ನು ಶೋಧಿಸಲಾಯಿತು. ಈ ಶಾಸನವು ಹೊಸಕೋಟೆಯಿಂದ ೯ ಕಿ.ಮೀ. ದೂರದಲ್ಲಿದೆ.

ಶಾಸನದ ಪಾಠ



೧. ಶ್ರೀ
೨. ಸ್ವಸ್ತಿ ವಿಕ್ರ
೩. ಮ ಸಂ ಜೇಷ್ಠ
೪. ಶು೨ ಹಲಸ
೫. ಹಳಿಯ...
೬. ಹೊಂನು ಮಾಂನ್ಯ
೭. ..ಪುರ.ಕೊ
೮. ವಾ..ಖಂ.
೯. ಮಗ.ಗಾ.
೧೦. ರೆ ವಂನು ಕೊ..
೧೧. ....
೧೨. ......ಅ
೧೩. ನುಭವಿಸಿ ಕೊಂಡು ಸು
೧೪. ಖದಲಿ ಇರುವರು

ಸಾರಾಂಶ : ಹಲಸಹಳ್ಳಿಯನ್ನು ದಾನ ನೀಡಿರುವ ಮಾಹಿತಿಯನ್ನು ಕಾಣಬಹುದು. ಈ ಹಲಸಹಳ್ಳಿಯು ಶಾಸನ ದೊರೆತ ಸ್ಥಳದಿಂದ ೨ ಕಿ.ಮೀ. ದೂರದಲ್ಲಿದ್ದು, ಹಿಂದೆ ಹಲಸಹಳ್ಳಿ ಗ್ರಾಮವು ಈಗ ಅರಣ್ಯ ಪ್ರದೇಶವಾಗಿರುವ (ಶಾಸನ ದೊರೆತ ಸ್ಥಳ) ಸ್ಥಳದಲ್ಲಿದ್ದು, ಇಲ್ಲಿಂದ ಎತ್ತರವಾದ ಪ್ರದೇಶಕ್ಕೆ ವಲಸೆ ಮಾಡಲಾಗಿದೆ.

ಶಾಸನ ೯ : ಶೆಟ್ಟಿಹಳ್ಳಿಯ ೧೬ನೇ ಶತಮಾನದ ಗ್ರಾಮನಿರ್ಮಾಣದ ಶಾಸನ

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯ ಸಿಂಗಹಳ್ಳಿ ಪಕ್ಕದ ಬೇಚಿರಾಖ್ ಶೆಟ್ಟಿಹಳ್ಳಿ ಗ್ರಾಮವು ದೇವನಹಳ್ಳಿ ತಾಲ್ಲೂಕಿನಿಂದ ೨೦ ಕಿ.ಮೀ. ದೂರದ ಈ ಗ್ರಾಮದಲ್ಲಿ ೨ ಅಡಿ ಎತ್ತರ, ೧ ೧/೪ ಕಾಲು ಅಡಿ ಅಗಲದ ೫ ಸಾಲುಗಳ ಶಾಸನವನ್ನು ಶೋಧಿಸಲಾಯಿತು.

ಶಾಸನದ ಪಾಠ

೧. ಸುಬ್ಬಾ ಪಂಡಿತು ಮದಿ
೨. ಬ್ಬಗರಿ ಪಂಡಿತಗೆ ಶೆ

೩. ಟಿಹಳಿ ಕಟಿದ ಬಗ್ಗೆ

೪. ಸುರುಗು ಮಾಂನ್ಯ ಕೊ

೫. ಡಿಗೆ ಹೊಲ.




ಸಾರಾಂಶ : ಸುಬ್ಬಾ ಪಂಡಿತರು ಮದಿಬ್ಬಗರಿ ಪಂಡಿತರಿಗೆ ಶೆಟ್ಟಿಹಳ್ಳಿ ಗ್ರಾಮ ನಿರ್ಮಾಣ ಮಾಡಿದಕ್ಕಾಗಿ ದಾನ ನೀಡಿದ್ದರು. ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಆದರೆ ಲಿಪಿಯ ಆಧಾರವಾಗಿ ಹಾಗೂ ಈ ಗ್ರಾಮದಲ್ಲಿ ದಾಖಲಾದ ೧೬೯೮ ರ ಕಾಲದ ಶಾಸನಾಧಾರವಾಗಿ (ಈ ಗ್ರಾಮವು ೧೬೯೮ ಮೊದಲೇ ನಿರ್ಮಾಣವಾಗಿರಬೇಕು. ಆ ನಿರ್ಮಾಣದ ಶಾಸನವು ಈ ಅಪ್ರಕಟಿತ ಶಾಸನವಾಗಿರುವುದರಿಂದ) ಈ ಶಾಸನದ ಕಾಲವನ್ನು ೧೬ನೇ ಶತಮಾನಕ್ಕೆ ನಿಗದಿ ಮಾಡಬಹುದು. ಪ್ರಸ್ತುತ ಬೇಚಿರಾಕ್ ಆಗಿರುವ ಈ ಗ್ರಾಮವು ಬಿ.ಎಲ್. ರೈಸ್ ಅವರು ಎ.ಕ. ೯ರಲ್ಲಿ ದಾಖಲಿಸುವ ವೇಳೆಗೆ ಬೇಚಿರಾಕ್ ಆಗಿದೆ.

ಶಾಸನ ೧೦ : ದೇವನಹಳ್ಳಿ ತಾಲ್ಲೂಕಿನ ಆಂಜನೇಯ ದೇವಾಲಯದ ನವರಂಗದಲ್ಲಿನ ಭಕ್ತರ ಶಿಲ್ಪದ ಕೆಳಗೆ ೨ ಅಡಿ ಎತ್ತರ, ೧ ಅಡಿ ಅಗಲದ ೩ ಸಾಲುಗಳ ಶಾಸನವನ್ನು ಕಾಣಬಹುದು.

೧. ಕೊಟ್ಟಣದ ಅ

೨. ಕೆಂಮ ಮಗ ಪಿಲಣನ

೩. ಸದ ದೆವುನಿ ಶೇವ



ಸಾರಾಂಶ : ಪಿಲಣನ ಸೇವೆ ಎಂದು ಕೈ ಮುಗಿದು ನಿಂತಿರುವ ೨ ಅಡಿ ಎತ್ತರವಾದ ಭಕ್ತನ ಶಿಲ್ಪವನ್ನು ನೋಡಬಹುದು. ಶಿವಗಂಗೆ, ಬನ್ನೇರುಘಟ್ಟ, ಬಸವನಗುಡಿಯ ಮೆಟ್ಟಿಲುಗಳ ಮೇಲೆ ಭಕ್ತರು ಸಾಷ್ಟಾಂಗ ನಮಸ್ಕಾರ ಮಾಡುತ್ತಿರುವ ಶಿಲ್ಪ ಹಾಗೂ ಶಾಸನಗಳನ್ನು ಕಾಣಬಹುದು. ದಾಸರಹಳ್ಳಿಯ ಚೌಡೇಶ್ವರಿ ದೇವಾಲಯದ ಮುಂದೆ ೩ ಅಡಿ ಎತ್ತರ, ೧ ಅಡಿ ಅಗಲದ ಭಕ್ತರ ಶಿಲ್ಪಗಳನ್ನು ನೋಡಬಹುದು.

ಈ ೧೦ ಶಾಸನಗಳ ಜೊತೆಗೆ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ನರಸೀಪುರ ತೋಪು ನೆಲಮಂಗಲದಿಂದ ೨೭ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಶ್ರೀರಾಮದೇವರ ದೇವಾಲಯದ ಮುಂದೆ ಇರುವ ಅಶ್ವತ್ಥಕಟ್ಟೆ ಬಳಿ ಬಿದ್ದಿರುವ ಗಾಲಿಯ ಮೇಲೆ 'ಶಿವಗಂಗೆ ಗಂಗಾಧರೇಶ್ವರ ಸ್ವಾಮಿಗೆ ಶಿವಗಂಗೆಯ ಸಿದ್ಧಲಿಂಗಪ್ಪನ ಮಗ ಲಿಂಗನ ಸೇವೆ ೧೮೯೭ ಇಸವಿ' ಎಂದು ಇದ್ದು, ಇದೇ ರೀತಿಯ ರಥದ ಗಾಲಿಯ ಮೇಲಿನ ಶಾಸನವನ್ನು ಬನ್ನೇರುಘಟ್ಟದ ಚಂಪಕಧಾಮ ದೇವಾಲಯ ಮತ್ತು ಆನೇಕಲ್ ತಾಲ್ಲೂಕಿನ ತಿಮ್ಮರಾಯಸ್ವಾಮಿ ದೇವಾಲಯದ ಗಾಲಿಗಳ ಮೇಲೂ ಸಹ ಕಾಣಬಹುದು. ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಹೋಬಳಿಯ ಸೋಮೇಶ್ವರ ದೇವಾಲಯದ ಮುಖಮಂಟಪದ ಮೇಲ್ಛಾವಣಿಯ ಮೇಲೆ ೪ ಅಡಿ ಅಗಲ, ೧ ೧/೨ ಎತ್ತರದ ೪ ಸಾಲುಗಳ ಶಾಸನವನ್ನು ಕಾಣಬಹುದು.

೧. ೦ಖರ ಸಂವತ್ಸರದ ಅಶ್ವಜ
೨. ೦ಸುಧ ೫ಲು ಬಲ್ಲಬಟ್ಟ
೩. ೦ಯ ದೇವರಿಗೆ ಚುಡಪ ಗ
೪. ೦ದೆ



ಕಾಮರಸನಹಳ್ಳಿಯ ಪಾಳು ಬಿದ್ದಿರುವ ದೇವಾಲಯ

ದೇವನಹಳ್ಳಿಯ ವೇಣುಗೋಪಾಲ ದೇವಾಲಯದ ಹಿಂಭಾಗದಲ್ಲಿರುವ ಕಲ್ಯಾಣಿ ಮೇಲೆ 'ಶ್ರೀಕೃಷ್ಣರಾಜವಡ್ಯೆರು ಧರ್ವ್ಮ' ಎಂದು ಹಾಗೂ ಅದೇ ದೇವಾಲಯದ ಮುಂದೆ ಇರುವ ಕಸದ ರಾಶಿಯ ಬಳಿ ಶಾಸನವು ಮುಚ್ಚಿ ಹೋಗಿದ್ದು, 'ಶ್ರೀವೇಣುಗೋಪಾಲ ಸ್ವಾಮಿ' ಅಂತ ೩ ಸಾಲುಗಳು ಮಾತ್ರ ಕಾಣಿಸುತ್ತಿದ್ದು ಮುಂದೆ ಈ ಶಾಸನದ ಪೂರ್ಣ ಪಾಠ ನೀಡುತ್ತೇನೆ. ಇದರ ಜೊತೆಗೆ ರಥ ನಿಲ್ಲುವ ಸ್ಥಳದಲ್ಲಿ ಶ್ರೀರಸ್ತು, ಶ್ರೀವೇಣುಗೋಪಾಲ ಪ್ರೀತ್ಯರ್ಥವಾಗಿ ದೇವನಹಳ್ಳಿ, ಮಹನೀಯರ ಸಹಾಯ ದಿಂದ ಮ॥ರಾ॥, ರಂಗರಾಯರವರ ಅಮಲ್ದಾರಿ ಕಾಲದಲ್ಲಿ, ನಿರ್ಮಿಸಲ್ಪಟ್ಟ ರಥಶಾಲಾ॥ ಶಾಲಿವಾಹನ, ಶಕ೧೮೨೨॥ಹೂ॥ಶಕ೯೯೦೧-೦೨, ॥ಪ್ಲವಸಂ॥ ಎಂಬ ಇತ್ತೀಚಿನ ಶಾಸನವನ್ನು ಸಹ ಕಾಣಬಹುದು. ಇಲ್ಲಿ ಪ್ರಕಟಿಸಿದ ಕೆಲವು ಶಾಸನಗಳ ಅಕ್ಷರಗಳು ಅಸ್ಪಷ್ಟ ಅಥವಾ ಸವೆದಿರುವುದರಿಂದ ಪೂರ್ಣ ಪಾಠ ನೀಡಲು ಸಾಧ್ಯವಾಗಿಲ್ಲ.

---

* ಗುರುಗಳಾದ ಪ್ರೊ. ಕೆ.ಆರ್. ನರಸಿಂಹನ್, ಕೆ. ಧನಪಾಲ್ ಮಂಚೇನಹಳ್ಳಿ, ಎಸ್.ವೈ. ನಿರ್ಮಲ ಹಾಗೂ ಸ್ನೇಹಿತರಾದ ಎಸ್. ವಿಜಯಕುಮಾರ, ಡಾ. ಎಂ.ಜಿ. ಭೈರಪ್ಪ, ಕೆ, ಪುರುಷೋತ್ತಮ, ಕೆ.ಸಿ. ಶಶಿಕುಮಾರ ನಾಯ್ಕ ಅವರಿಗೆ ಹಾಗೂ ಈ ಎಲ್ಲಾ ಶಾಸನಗಳ ಶೋಧನೆಯಲ್ಲಿ ಮತ್ತು ಸಂರಕ್ಷಣೆಯಲ್ಲಿ ಸಹಕಾರ ನೀಡಿರುವ ಗ್ರಾಮಸ್ಥರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಅಡಿಟಿಪ್ಪಣಿಗಳು

೧. ಯುವರಾಜು ಆರ್., ೨೦೨೦, 'ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ' (೫ನೇ ಶತಮಾನದಿಂದ ೧೮ನೇ ಶತಮಾನದವರೆಗೆ), (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ), ಪುಟ ಸಂಖ್ಯೆ ೪೦೧.

೨. ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂ. ೯, ಹೊಸಕೋಟೆ ೧೨೧, ಕ್ರಿ.ಶ. ೧೫೦೬.

೩. ಅದೇ, ಹೊಸಕೋಟೆ ೭೨, ಕ್ರಿ.ಶ. ೧೧೨೭.

೪. ಅದೇ, ಹೊಸಕೋಟೆ ೩೬, ಕ್ರಿ.ಶ. ೧೫೬೭.

೫. ಅದೇ, ಹೊಸಕೋಟೆ ೧೫೫, ಕ್ರಿ.ಶ. ೧೪೩೩.

೬. ಅದೇ, ನೆಲಮಂಗಲ ೪೪.

◆◆

೧೫

ಚನ್ನಬಸಪ್ಪ ಮಲ್ಕಂದಿನ್ನಿ

ಸಿಂಧನೂರು ಪರಿಸರದ ಅಪ್ರಕಟಿತ ಶಾಸನಗಳು

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ಪರಿಸರದ ಜಾಲಿಹಾಳ, ಜಂಬುನಾಥನಹಳ್ಳಿ, ಹನುಮಾಪುರ, ಅಲ್ಬನೂರು, ಒಳಬಳ್ಳಾರಿ, ಸಿಂಧನೂರು, ಕುರುಕಂದಾ, ಪಗಡದಿನ್ನಿ, ಸೋಮಲಾಪುರ, ಬನ್ನಿಗನೂರು, ರಮತ್ನಾಳ, ವಲ್ಕಂದಿನ್ನಿ, ಮಾಟೂರು, ಬಳಗಾನೂರು, ಬಾದರ್ಲಿ ಮತ್ತು ಸಾಲಗುಂದಾ ಎಂಬ ಹೆಸರಿನ ೧೬ ಗ್ರಾಮಗಳಲ್ಲಿ ಒಟ್ಟು ೨೦ ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳು ಕ್ರಿ.ಶ. ೧೧ ನೇ ಶತಮಾನದಿಂದ ಕ್ರಿ.ಶ. ೧೮-೧೯ ನೇ ಶತಮಾನದ ಕಾಲಾವಧಿಯಾಗಿದೆ. ಈ ಎಲ್ಲಾ ಶಾಸನಗಳು ದತ್ತಿ ನೀಡಿದ ಶಾಸನಗಳಾಗಿದ್ದು, ಇವುಗಳಲ್ಲಿ ೫ ವೈಷ್ಣವಧರ್ಮದ ಶಾಸನಗಳು, ೧೪ ಶೈವಧರ್ಮದ ಶಾಸನಗಳು, ೧ ಯಂತ್ರಕಲ್ಲು ಶಾಸನವಿದೆ. ಇವುಗಳಲ್ಲಿ ೧೭ ಶಾಸನಗಳು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿವೆ. ಒಂದು ಶಾಸನವು ನಾಗರಿಲಿಪಿ ಸಂಸ್ಕೃತ ಭಾಷೆಯಲ್ಲಿದ್ದರೆ, ಇನ್ನೊಂದು ಶಾಸನವಾದ ಸಾಲಗುಂದೆಯ ಯಂತ್ರಲಿಪಿ ಶಾಸನವು ಹಲವು ಸಂಕೇತಾಕ್ಷರ ಗೂಢಾರ್ಥವನ್ನು ಹೊಂದಿದೆ. ಹಾಗೆಯೇ ಕುರುಕುಂದಾ ಗ್ರಾಮದ ಎರಡು ತಾಮ್ರಪಟ ಶಾಸನಗಳು ಕೂಟ(ಕೃತಕ, ನಕಲಿ) ಶಾಸನಗಳಾಗಿವೆ.

೧. ಜಾಲಿಹಾಳ ಗ್ರಾಮದ ಈಶ್ವರ ದೇವಾಲಯದ ಮುಂಬದಿಯ (ದಕ್ಷಿಣ) ಕಟ್ಟೆಯ ಮೇಲೆ ಇರುವ ಕಪ್ಪು ಶಿಲೆಯ ಶಿಲ್ಪ ಪೀಠಶಾಸನ

೧. ಶ್ರೀ ಮಹಾಮಂಡಳೇಶ್ವರ


೨. ಎಡೆಪಳ್ಳಿ ಬೀಚಗೌಡನ ಪ್ರತಿಮೆ॥

ಸಾರಾಂಶ: ಈ ಶಿಲ್ಪ ಶಾಸನವು ಎರಡು ಸಾಲುಗಳಿಂದ ರಚಿತಗೊಂಡಿದ್ದು, ಮಹಾಮಂಡಳೇಶ್ವರ ಎಡೆಪಳ್ಳಿ, ಬೀಚಗೌಡನ ಪ್ರತಿಮೆ ಎಂದು ಉಲ್ಲೇಖಿಸುತ್ತದೆ. ಪ್ರಸ್ತುತ ಜಾಲಿಹಾಳ ಗ್ರಾಮವು ಕ್ರಿ.ಶ. ೧೧-೧೨ ನೇ ಶತಮಾನದಲ್ಲಿ ಎಡೆಪಳ್ಳಿ, ಎಂಬ ನಾಮವನ್ನು ಪಡೆದುಕೊಂಡು ಎಡೆದೊರೆ-೨೦೦೦ ನಾಡಿನ ನಿಟ್ಟರವೆ-೭೦ ರ ವಿಭಾಗಕ್ಕೆ ಸೇರಿತ್ತು. ನಂತರ ಈ ಗ್ರಾಮವು ವಿಜಯನಗರ ಸಾಮ್ರಾಟರ ಕಾಲಾವಧಿಯಲ್ಲಿ ಎಡೆಪಳ್ಳಿಯ ಬದಲು ಜಾಲಿಹಾಳು ಎಂದು ನಾಮಕರಣಗೊಂಡಿತು. ಸಿಂಧನೂರು ನಗರದ ಮುಲ್ಲಾರ ಹೊಲದ ಕ್ರಿ.ಶ. ೧೫೬೦ರ ಶಾಸನದಲ್ಲಿ ಜಾಲಿಹಾಳ ಗ್ರಾಮವು ಸರ್ವನಮಸ್ಯದ ಅಗ್ರಹಾರವಾಗಿ ಪ್ರಸಿದ್ಧವಾಗಿತ್ತು. ಇದಕ್ಕೆ ಆಧಾರವೆಂಬಂತೆ ಈ ಶಾಸನದ ವಿಗ್ರಹ ಮತ್ತು ಉಲ್ಲೇಖವು ಎಡೆಪಳ್ಳಿಯ ಬೀಚಗೌಡನದೆಂದು ಪ್ರಸ್ತಾಪಿಸುತ್ತದೆ. ಇಲ್ಲಿರುವ ಈಶ್ವರ ದೇವಾಲಯದ ಪ್ರಕಟಿತ ಕ್ರಿ.ಶ. ೧೧೦೬ರ ಶಾಸನದಲ್ಲಿಯೂ ಕೂಡ ಎಡೆಪಳ್ಳಿ

ಇತಿಹಾಸ ಸಹಾಯಕ ಪ್ರಾಧ್ಯಾಪಕರು
ದೇವನಾಂಪ್ರಿಯ ಅಶೋಕ ಸ.ಪ್ರ.ಕಾ.
ಹಾಗೂ ಸ್ನಾತಕೋತ್ತರ ಕೇಂದ್ರ
ಮಸ್ಕಿ, ರಾಯಚೂರು ಜಿಲ್ಲೆ
ಮೊ : ೯೯೭೨೨ ೨೬೨೪೪೮

ಭೂ ಪ್ರದೇಶವನ್ನು ಬೀಚಗೌಡನು ಆಳುತ್ತಿದ್ದನೆಂದು ತಿಳಿಸುತ್ತದೆ. ಈತನು ತನ್ನ ಹೆಸರಿನಲ್ಲಿ ಬೀಚೇಶ್ವರ (ಪ್ರಸ್ತುತ ಈಶ್ವರ) ದೇವಾಲಯವನ್ನು ಕಟ್ಟಿಸುವುದರೊಂದಿಗೆ ದಾನ-ದತ್ತಿಗಳನ್ನು ನೀಡಿದನೆಂದು ಪ್ರಸ್ತಾಪಿಸುತ್ತದೆ. ಆದುದರಿಂದ ಪ್ರಸ್ತುತ ಈಶ್ವರ ದೇವಾಲಯದ ಮುಂಬದಿಯ (ದಕ್ಷಿಣ) ಕಟ್ಟೆಯಲ್ಲಿರುವ ಕಪ್ಪುಶಿಲೆಯ ಶಾಸನವು ಎಡೆಪಳ್ಳಿ ಗೌಡನಾದ ಬೀಚೇಶ್ವರನದಾಗಿದೆ. ಹಾಗೆಯೇ ಈತನು ದೇವಾಲಯವನ್ನು ತನ್ನ ಹೆಸರಿನಲ್ಲಿ ಕಟ್ಟಿಸುವುದರೊಂದಿಗೆ, ತನ್ನ ಹೆಸರು ಚಿರಸ್ಥಾಯಿಯಾಗಿ ಇರಬೇಕೆಂದು ತನ್ನ ಹೆಸರಿನಲ್ಲಿ ಶಾಸನ ಮತ್ತು ವಿಗ್ರಹವನ್ನು ಕೆತ್ತಿಸಿ ದೇವಾಲಯದ ಮುಂದೆ ಪ್ರತಿಷ್ಠಾಪಿಸಿದ್ದಾನೆ. ಈ ಶಾಸನವು ಲಿಪಿ ಶೈಲಿಯ ಆಧಾರದಿಂದ ಕ್ರಿ. ಶ. ೧೨ ನೇ ಶತಮಾನಕ್ಕೆ ಸೇರಿಸಬಹುದು.

೨. ಒಳಬಳ್ಳಾರಿ ಗ್ರಾಮದ ಬ್ಯಾಗಾರ ಸಣ್ಣ ಯಲ್ಲಪ್ಪ ತಂದೆ ಮರಿಯಪ್ಪರವರ ಹೊಲದ ಬದುವಿನಲ್ಲಿರುವ ಶಾಸನ (ಸರ್ವೆ ನಂ : ೧೫೫)



೧. ಶ್ರೀ ಕುಋುವಡದ

೨. ಪಂಚಲಿಂಗದ ಸೋಮೇ

೩. ಸ್ವರ ದೇವರ ಕೆಯ್ ಮತ್ತ

೪. ರು ನಾಕು ೪ ಬಿಜ ಖಂ

೫. ಡುಗದ ಬೆಳೆ

ಸಾರಾಂಶ: ಈ ಶಾಸನವು ಕ್ರಿ.ಶ. ೧೬ನೇ ಶತಮಾನಕ್ಕೆ ಸೇರುತ್ತಿದ್ದು, ಕಣಶಿಲೆಯಲ್ಲಿ ಬರೆಸಲ್ಪಟ್ಟಿದೆ. ಇದರಲ್ಲಿ ಕುರುವಡದ ಕೋಟೆಯ ಪಂಚಲಿಂಗದ ಸೋಮೇಶ್ವರ ದೇವರಿಗೆ ನಾಲ್ಕು ಮತ್ತರು ಭೂಮಿ, ಖಂಡುಗದ ಬೀಜವನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಶಾಸನದಲ್ಲಿ ಉಲ್ಲೇಖಗೊಂಡ ಕುರುವಡದ ಕೋಟೆಯು ಪ್ರಸ್ತುತ ತುಂಗಭದ್ರಾ ನದಿ ದಡದ (ದಕ್ಷಿಣ) ಹತ್ತಿರದಲ್ಲಿರುವ ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಕುರುಗೋಡು ಕೋಟೆಯಾಗಿದ್ದು, ಅಲ್ಲಿನ ಕೋಟೆಯೊಳಗೆ ಪಂಚಲಿಂಗದ ಸೋಮೇಶ್ವರ ದೇವರು ಪ್ರಸಿದ್ಧಿಯಾಗಿದ್ದರಿಂದ ಭಕ್ತರೊಬ್ಬರು ಆ ದೇವಾಲಯಕ್ಕೆ ದತ್ತಿ ನೀಡಿ ಶಾಸನ ಬರೆಸಿರಬೇಕು. ಆದರೆ, ಅಲ್ಲಿನ ಕುರುವಡದ ಕೋಟೆಯನ್ನು ಉಲ್ಲೇಖಿಸುವ ಶಾಸನ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಒಳಬಳ್ಳಾರಿ ಗ್ರಾಮದ ಜಮೀನಿನಲ್ಲಿ ಹೇಗೆ ಬಂದಿತೆಂದು ಪ್ರಶ್ನೆಯಾಗಿ ಉಳಿಯುತ್ತದೆ.

೩. ಮುಲ್ಲಾರ ಹೊಲದಲ್ಲಿರುವ ಶಾಸನ (ಸರ್ವೆ ನಂ. ೯೦೮) ಸಿಂಧನೂರು ನಗರದ ಆಗ್ನೇಯ ದಿಕ್ಕಿಗೆ ೪ ಕಿ.ಮೀ. ದೂರದಲ್ಲಿದೆ.

೧. ಶ್ರೀ ಹರಿಯೇ ಗತಿ॥ ಶ್ರೀ ಗಣಾಧಿಪತೆ

೨. ಯೇ ನಮಃ ಸ್ವಸ್ತಿ ಶ್ರೀ ಜಯಾದ್ಭುದಯ ಸಾಲಿವಾಹನ

೩. ಶಕವರುಷ ೧೪೮೨ ನೆಯ ರಉದ್ರಿ ಸಂವತ್ಸರದ

೪. ಶ್ರಾವಣ ಬ.೧೦ ಲು ಶ್ರೀ ಮಂನ್ಮಾಹಾಮಂಡಲೇಶ್ವರ ಅಳಿಯ

೫. ರಾಮರಾಜ ಅಯ್ಯನವರ ಕೊಮಾರ ಕೃಷ್ಣಮರಾಜ ಅಯ್ಯನ

೬. ವರ ಕಾರ್ಯಕ್ಕೆ ಕರ್ತರಾದ ಮುದುಗಲ್ಲ ದುರ್ಗಾಧಿಪತಿ ವೆಂಗಳ

೭. ಪನಾಯಕ ಅಯ್ಯನವರು ಸಿಂದನೂರಿಂದಲು ಅಗ್ರಹಾರದ ಜಾ

೮. ಲಿಹಾಳಗೆ ಹೋಹದಾ(ರಿ)ಯಲು ನೀರುತೀರ್ಥವಾಗಲಾಗಿ ಎಡೆಯ ಹೊಲಕ್ಕೆ ಉತ್ತರ


೯. ದಲು ತೆಗೆಸಿದ ಬಾವಿಗೆಣಸಿಗಳ ವಾಕುವದ ಅರವಂಟಿಗೆ ನಿಕ್ಕು

೧೦. ವದಕೆ ಸಿಂದನೂರ ಅರವಂಟಿಗೆ ಮಾಡಿಸಿ ಬಮಗ ತಿಪಣಗೆ ಕೊಟ್ಟ ಧಂರ್ಮ ಮಾಂ

೧೧. ನ್ಯದ ಭೂದಾನದ ಶಿಲಾಶಾಸನದ ಕ್ರಮವೆಂತೆಂದಡೆ, ಸಿಂದನೂರವಕ್ಕಲು ರೊಕ್ಕ

೧೨. ದಕ್ಕೆ ಸಲಿರೆಡ್ಡಿಯತಿಗೆ ಬಿಟ್ಟತುಂಡು ಬೀಳು ಸಿಂದನೂರ ಕರಿಯಬೆಂಚಿ


೧೩. ಯ ಹೊಲದ ಸ್ಥಳದಲು ಧಾರಾ ಪೂರ್ವಕವಾಗಿ ಕೊಟ್ಟ ಬಿಜವರಿದಳಸಬಾ
೧೪. ತವಾಸಿ ॥ ವಕ್ಕುಳದ ಹೊಲಕ್ಕೆ ಚತುರ್ಸೀಮೆಯ ವಿವರಲು ಮೂಡಲು
೧೫. ಚುಂಚಲ ಸಾಯಿರನು ಮಾಡುವ ಬುಕಿರೆಡ್ಡಿ ಅವರ ಹೊಲದ ತಲವಿನನ್ನಾ
೧೬. ಲು ಮೇರೆ ಆಗಿವಡೆಯ ಹಳಕ ಹೊಯಲು ಪಿಂಕಲು ವಡೆಯಹಳ
೧೭. ಹದೂ ಬಾದಿನ್ನೂರಗೊಂಡ ನಾಗಮನು ಮಾಡುವ ಹೊಲನೆ ಮೇರೆ/ಪಡು
೧೮. ವಲು ಜೀರಗೆ ಅವರ ಹೊಲ ಸೂರಗೊಂಡ ನಾಗಯ ಮಾಡುವ ಜಾಲ
೧೯. ಹಳ್ಳಿಗೆ ಹೋಹದಾರಿ ಬಳಿಕಲ್ಲುಗ ಹೊಳಗಣವಡದ ಜನಿವಾರ
೨೦. ದ ಸಂಡು ಮೇರೆ । ಉತ್ತರಕ್ಕೆ ಜಾಲಿಹಾಳಗೆ ಹೋಹದಾರಿಗಳ ಮೇರೆ
೨೧. ಬಾಚಮ ಸೀಮೆಗೆ ವಳಗಾರ ವಕ್ಕುಳಢ ಭೂಮಿಯಂತು ನೀನು ಅನುಭ
೨೨. ವಿಸಿ ಕೊಂಡೊಯ್ಯುಹುದುಯಿಂತಿದು ಕೊಟ್ಟ ಧರ್ಮ ಮಾನ್ಯದ ಭೂ
೨೩. ದಾನದ ಶಿಲಾಶಾಸನಲು/ಯಿದಕೆ ಆವನಾನೊಬ್ಬ ಧೊರೆಗಳು ಗಉಡರು
೨೪. ಸೇನಬೋಗರು ಪ್ರಜೆಗಳು ಹಂನ್ನೆರಡು ಮಂದಿ ಆಯಗಾರರುಚಾಮ
೨೫. ೦ನ ಥಾಪೆ ಮುಂತಾದವರು ಯಿಧಂರ್ಮ ಶಾಸನಕೆ ತಪ್ಪಿದುಂಟಾದರೆ
೨೬. ವಾರಾಣಾಸಿಯಲ್ಲು ಮಾತ್ರಗಮನವ ಮಾಡಿದವರು ಬ್ರಂಹ್ಮತ್ಯೆಗೋ
೨೭. ಹತ್ಯವಮಾಡಿದ ಪಾಪಕೆ ಹೋದವರು ತುರುಕಧೊರೆಗಳು ತಪ್ಪಿದು
೨೮. ೦ಟಾದರೆ ತಂಮ ಮುಸಾಪಕೆ ತಪ್ಪಿದವರು ಹಂದಿಯ ತಿಂದವರು॥
೨೯. ಯಿಧಂರ್ಮಕ್ಕೆ ಆರೊಬರು ತಪ್ಪಿದವರ ಬಾಯ(ಲ್ಲಿ) ಕತ್ತೆತುಂ
೩೦. ಣಿಕಲ್ಲುಪ್ಪು



ಸಾರಾಂಶ : ಈ ಶಾಸನವು ಕಣಶಿಲೆಯಲ್ಲಿದ್ದು ೩೦ ಸಾಲುಗಳಿಂದ ರಚಿತಗೊಂಡಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಕಿರುಗತ್ತಿ ಮತ್ತು ವಿಜಯನಗರ ಸಾಮ್ರಾಜ್ಯದ ರಾಜಲಾಂಛನ ವರಾಹವಿದೆ. ಇವುಗಳ ಕೆಳಭಾಗದಲ್ಲಿ ಹರಿ ಮತ್ತು ಗಣೇಶನನ್ನು ಸ್ತುತಿಸುತ್ತದೆ. ಇದು ಶಕವರ್ಷ ೧೪೮೨ನೇ ರೌದ್ರಿ ಸಂವತ್ಸರದ ಶ್ರಾವಣ ಬ.೧೧ ಎಂದಿದ್ದು ೧೬-೮-೧೫೬೦ ಶುಕ್ರವಾರಕ್ಕೆ ಸರಿಹೊಂದುತ್ತದೆ. ಈ ಸಮಯದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸದಾಶಿವ ಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಆತನ ಮಹಾಮಂಡಳೇಶ್ವರನಾಗಿ ಅಳಿಯ ರಾಮರಾಜನಿದ್ದನು. ಈತನ ಮಗ ಕೃಷ್ಣಮರಾಜನ ಕೈಕೆಳಗೆ ಮುದುಗಲ್ಲ ದುರ್ಗಾಧಿಪತಿಯಾಗಿ ವೆಂಗಳಪ್ಪ ನಾಯಕನಿದ್ದನು. ಈ ವೆಂಗಳಪ್ಪ ನಾಯಕನು ಸಿಂಧನೂರಿನಿಂದ ಜಾಲಿಹಾಳ ಅಗ್ರಹಾರಕ್ಕೆ ಹೋಗುವ ಮಾರ್ಗ(ದಾರಿ)ದಲ್ಲಿ ನೀರುತೀರ್ಥ, ಎಡೆಯಹೊಲದ ಉತ್ತರಕ್ಕೆ ತೋಡುಬಾವಿ, ಅರವಂಟಿಗೆ ಮಾಡಿಸಿದನು. ಬ್ರಾಹ್ಮಣ ತಿಪ್ಪಣ್ಣಗೆ ಧರ್ಮ ಮಾನ್ಯವಾಗಿ ಭೂದಾನ ನೀಡಿದನು. ಹಾಗೆಯೇ ಸಲಿರೆಡ್ಡಿಯತಿಗೆ ಬಿಟ್ಟ ತುಂಡು ಭೂಮಿ ಸಿಂಧನೂರ ಕರಿಯಬೆಂಚಿ ಹೊಲದ ಸ್ಥಳದಲ್ಲಿ ಧಾರಾಪೂರ್ವಕವಾಗಿ ಕೊಟ್ಟನು. ವಕ್ಕುಳದ ಹೊಲ, ಬುಕ್ಕಿರೆಡ್ಡಿಯವರ ಹೊಲ, ವಡೆಯಹಳ್ಳ, ನಾಗಮಯ ಮಾಡುವ ಹೊಲ ಮೊದಲಾದ ಚತುಸ್ಸೀಮೆಗಳಲ್ಲಿ ಜಮೀನನ್ನು ವೆಂಗಳಪ್ಪ ನಾಯಕ ದಾನ ನೀಡಿದನು.

ಈ ಧರ್ಮ ಮಾನ್ಯದ ಭೂಮಿಯನ್ನು ದೊರೆಗಳು ಗೌಡರು ಸೇನಬೋಗರು, ಪ್ರಜೆಗಳು, ಹನ್ನೆರಡು ಮಂದಿ ಆಯಾಗಾರರು ಮೊದಲಾದವರು ಇದಕ್ಕೆ ತಪ್ಪಿ ನಡೆದರೆ ವಾರಣಾಸಿಯಲ್ಲಿ ಗೋಹತ್ಯೆ ಮಾಡಿ ಬ್ರಾಹ್ಮಣರನ್ನು ಕೊಂದ ಪಾಪಕ್ಕೆ ಹೋಗುವರು. ತುರುಕರು ತಪ್ಪಿ ನಡೆದುದಾದರೆ ಹಂದಿಯ ತಿಂದವರು. ಹಾಗೆಯೇ ಈ ಧರ್ಮಕ್ಕೆ ಯಾರಾದರೊಬ್ಬರು ತಪ್ಪಿನಡೆದವರಾದರೆ ಅವರ ಬಾಯಲ್ಲಿ ಕತ್ತೆ ತುಣ್ಣಿ ಕಲ್ಲುಪ್ಪು ಎಂದು ಶಾಪಾಶಯ ಹಾಕಿಸುವುದರೊಂದಿಗೆ ಕತ್ತೆಯ ಉಬ್ಬು ಶಿಲ್ಪವನ್ನು ಶಾಸನದ ಕೆಳಭಾಗದಲ್ಲಿ ಕೊರೆಸಿದ್ದಾರೆ.

೪. ಸಿಂಧನೂರು ನಗರದ ದಡೆ ಬಸವೇಶ್ವರ ದೇವಾಲಯದ ಮುಂದೆ ಇರುವ ಶಾಸನ



೧ನೇ ಬದಿ

೧. ॥ ಸ್ವಸ್ತಿ ಶ್ರೀ

೨. ಶಕ ವರುಷದ . . .

೩. ವಿ. ನಾ. ತಕ ಸಂವತ್ಸರ

೪. ಶ್ರೀ ಮನ್ಮ . .

೫. . . ವೀರ ಪ್ರತಾಪ . .

೬. . . ಮನ . . . . .

೭. . . . . . ನ ವ

೮. . . . . . ದೆ ನ

೨ನೇ ಬದಿ

೯. ಯಂದು . . . .

೧೦. ಸಕ ೧೪೭೫ ನೆಯ . . . ಸಂವ

೧೧. ತ್ಸರದ ಚಯಿತ್ರ ಶು. ೧೧ . .

೧೨. ಲೂ ರಾಜಾದಿರಾಜ ರಾಜಪರಮೇಸ್ವರ



೧೩. ಭಟ್ಟಾರಕ ಸದಾಸಿವ ದೇವ ಮ

೧೪. . . . . ರಾದ ರಾಮ ರಾಯದೇವರ

೧೫. . . . . ಳಿರ ಹಡ ಸತಿ . .

೧೬. . . . . ಸದಾಸಿವ ದೇವ . . .

೧೭. . ವಾಗಿ ಮುದಗಲ ಸೀಮೆಗೆ . .

೧೮. . . ಯದಂಥ . . ನಾ . ತ್ತ .

೧೯. .. ಯ ಬಿರಾಢ ಸುಂಕ

೨೦. . ಂರಾ . . ನ ವ. ಸರ್ವ

೩ನೇ ಬದಿಯಲ್ಲಿರುವ ಅಕ್ಷರಗಳಿಗೆ ಸಿಮೆಂಟ್ ಮೆತ್ತಿಕೊಂಡಿರುವುದರಿಂದ ಅಕ್ಷರಗಳನ್ನು ಓದುವುದಕ್ಕೆ ಸಾಧ್ಯವಾಗಿಲ್ಲ.

ಸಾರಾಂಶ : ಈ ಶಾಸನದಲ್ಲಿ ಶಕವರ್ಷ ೧೪೭೫ನೆಯ ಸಂವತ್ಸರವೆಂದಿದ್ದು ಇದು ಕ್ರಿ.ಶ. ೧೫೫೩ ಏಪ್ರಿಲ್ ೫ ಮಂಗಳವಾರಕ್ಕೆ ಸರಿಹೊಂದುತ್ತದೆ. ಇದು ಮೂರು ಮುಖಗಳಲ್ಲಿ ಬರೆಯಲ್ಪಟ್ಟಿದ್ದು ವಿಜಯನಗರ ಸಾಮ್ರಾಜ್ಯವನ್ನು ಸದಾಸಿವ ಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಆತನ ಕೈಕೆಳಗೆ ಮಹಾಮಂಡಳೇಶ್ವರನಾಗಿ ಅಳಿಯ ರಾಮರಾಯನಿದ್ದು, ಮುದಗಲ್ಲ ಸೀಮೆ, ಬಿರಾಡ ಸುಂಕಗಳ ಉಲ್ಲೇಖಗಳಿವೆ.

೫. ದಡೆ ಬಸವೇಶ್ವರ ದೇವಾಲಯದ ಇನ್ನೊಂದು ಶಾಸನ

ಈ ಶಾಸನವು ಕಪ್ಪು ಶಿಲೆಯಲ್ಲಿದ್ದು ಕೇವಲ ಎರಡು ಸಾಲುಗಳಿಂದ ರಚಿತಗೊಂಡಿದೆ. ಇದು ನಾಗರಿಲಿಪಿ ಸಂಸ್ಕೃತ ಭಾಷೆಯಲ್ಲಿದ್ದು ಕ್ರಿ.ಶ ೧೨-೧೩ ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಶಾಸನದ ಮೇಲ್ಭಾಗದಲ್ಲಿ ನಾರಾಯಣನು ತನ್ನ ಎಡ ತೊಡೆಯ ಮೇಲೆ ಲಕ್ಷ್ಮೀಯನ್ನು ಕುಳ್ಳಿರಿಸಿಕೊಂಡಿದ್ದು ಇವರ ಕೆಳ ಭಾಗದಲ್ಲಿ ಹಸುವಿನ ಶಿಲ್ಪ ಕಾಣಬರುತ್ತದೆ.

೬. ವಲ್ಕಂದಿನ್ನಿ ಗ್ರಾಮದ ರಸ್ತೆಯ ಪಕ್ಕದ ಬಸವಣ್ಣನ ಗುಡಿಯ ಹತ್ತಿರದಲ್ಲಿರುವ ಕಣ ಶಿಲೆಯ ಶಾಸನ



೧. ಶ್ರೀಮತು
೨. ಸಂವತ್ಸರ
೩. . . . ವ ಆ
೪. . . ದೇವರಾಯ
೫. . ರ ತಿ ವ ॥ ೦
೬ ಕಳ್ಳ ಮೊ (ಗೆ)

ಸಾರಾಂಶ : ಈ ಶಾಸನವು ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರುತ್ತಿದ್ದು, ಶ್ರೀಮತು ಸಂವತ್ಸರ ದೇವರಾಯ ಎಂಬ ವಿಷಯವನ್ನು ಪ್ರಸ್ತಾಪಿಸುತ್ತದೆ.

೭. ಹನುಮಾಪುರ ಗ್ರಾಮದ ಗುಂಡೆರಾವ್ ಕುಲಕರ್ಣಿ ಜಾಲಿಹಾಳರವರ ಜಮೀನಿನಲ್ಲಿರುವ (ಸರ್ವೆ ನಂಬರ್ – ೦೧) ಶಾಸನ



೧. ಶುಭಮಸ್ತು ॥ ಶ್ರೀ ಗಣಾಧಿಪತೆಯೇ
೨. ನಮಃ ॥ ಸ್ವಸ್ತಿ ಶ್ರೀ ಜಯಾಬ್ಯುದಯ
೩. ಶಾಲಿವಾಹನ ಶಕವರುಷ ೧೪೮೪ ನೆಯ
೪. ಶ್ರೀಮುಖ ಸಂವತ್ಸರದ ಪಾಲ್ಗುಣ . . .
೫. . . . . . ಶ್ರೀಮನ್ ಮಹಾರಾಜಾಧಿ
೬ ರಾಜ ರಾಜಪರಮೇಶ್ವರ ಶೀವೀರ
೭ ಪ್ರತಾಪ ಶ್ರೀ ಸದಾಶಿವರಾಯ ಮಹಾರಾಯರು . .
೮. ಕ ಸಿಂದಾ . ದಾನ . . . . ಮ . . . .
೯. ನುರ. ವಾ . ಪರಮೇಶ್ವರ
೧೦. ಜಿನಸ . ಲನ ಅರಸ ಕಾರ್ಯಕ್ಕೆ ಕರ್ತರಾದ ಅಳಿಯನಳ
೧೧. . . . . . . ಮನನಪಂ . . ಮಾಜಪಂ ವಿಪ್ರಯ್ಯ
೧೨. . . . . . . ಕೊ. ದಿಯ. ಮ . . ದ . ಸನ್ತಾ . . . .
೧೩. . . ಸರ್ವನಮಸ್ಯದ ಅಗ್ರಹಾರದ ಅಶೇಷವಿಪ್ರ . .
೧೪. . . . ಸೀಮೆಯವರು ಅಮ . ಯಮ .
೧೫ . . . . . . ರಾಜ್ಯಂಗೈಯುತ್ತಿರುವಾಗ

ಸಾರಾಂಶ : ಈ ಶಾಸನವು ಗಣಪತಿಯ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ. ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ೧೪೮೪ನೆಯ ಶ್ರೀಮುಖ ಸಂವತ್ಸರ

ಪಾಲ್ಗುಣವೆಂದಿದ್ದು ಇದು ಕ್ರಿ.ಶ. ೧೫೬೨ಕ್ಕೆ ಸರಿಹೊಂದುತ್ತದೆ. ಶ್ರೀಮನ್ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ ಸದಾಶಿವ ಮಹಾರಾಯರನ್ನು ಉಲ್ಲೇಖಿಸಿ ಆತನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಯನೆಂದಿದೆ. ಈತನು ಸರ್ವನಮಸ್ಯದ ಅಗ್ರಹಾರದ ವಿಪ್ರರಿಗೆ ದತ್ತಿ ನೀಡಿದ ಪ್ರಸ್ತಾಪವಿದೆ.

೮. ಜಂಬುನಾಥನಹಳ್ಳಿ ಗ್ರಾಮದ ಜಂಬುಕೇಶ್ವರ ದೇವಾಲಯದ ಆವರಣದಲ್ಲಿರುವ ಕಪ್ಪುಶಿಲೆಯ ಲಿಂಗಮುದ್ರೆಕಲ್ಲು ಶಾಸನ

೧. ಸಂ. ಕ . ಥೆಗು

೨. ರು ಬನಯ

೩. ನ್ತ ೮ ಧರ್ಮ

ಸಾರಾಂಶ : ಈ ಲಿಂಗಮುದ್ರೆಕಲ್ಲು ಕ್ರಿ.ಶ ೧೮-೧೯ನೇ ಶತಮಾನದ ಶಾಸನದ ಲಕ್ಷಣದಲ್ಲಿದೆ. ಇದರಲ್ಲಿ ಸಂ.ಕ.ಥೆಗುರು ಬನಯನ್ತ ೮ ಧರ್ಮ ಎಂದು ಸಂಕ್ಷಿಪ್ತವಾಗಿ ಬರೆಯಲಾಗಿದೆ. ಇದರ ಅರ್ಥವೇನು ಎಂಬುದು ತಿಳಿಯದಾಗಿದೆ.

೯. ಬನ್ನಿಗನೂರು ಗ್ರಾಮದ ಮಾರುತಿ ದೇವಾಲಯದ ಮುಂಬದಿ ಆವರಣದಲ್ಲಿ (ಗರುಡಗಂಭದ ಕಟ್ಟೆಗೆ) ರುವ ಶಾಸನ



೧. ಶ್ರೀ ನಡುಕಂಟನೂರ ಸಂ . ಮಾಗ . .

೨. ಬಾನುವಾರದ ದಿನದಲ್ಲಿ ರ . ೦ ಪ

೩. ಗಂಗಿದೇವನಾಡು ನಕರ . . . .


೪. ತದಂಡ ಹದಿನೆಂಟು ಸೀಮೆಯ . . .

೫. ಕ್ಷ ವಾಗಿ ಕೊಟ ವರಿ ಎರಿ ಜಸದಿ . .

೬. ಲಪಸೆಟರು ಹಡಪ ಎರಿಮ್ಮೆ . . .

೭ ಮಂಗಳಾಯ ಮಹಾಶ್ರೀ ಶ್ರೀ

ಸಾರಾಂಶ : ಈ ಶಾಸನವು ಕ್ರಿ.ಶ.ಸು. ೧೨ನೇ ಶತಮಾನದ ಕಲ್ಯಾಣ ಚಾಳುಕ್ಯ ಅರಸರ ಕಾಲಾವಧಿಯದ್ದಾಗಿದೆ. ಇದರಲ್ಲಿ ನಡುಕಂಟನೂರ ಗಂಗಿದೇವನೆಂಬ ವ್ಯಕ್ತಿ, ನಾಡು, ಹದಿನೆಂಟು ಸೀಮೆ, ಹಡಪದೊಂದಿಗೆ ವರ್ತಕರಾದ ನಕರರು, ಸೆಟ್ಟರು ಮೊದಲಾದವುಗಳ ಉಲ್ಲೇಖವಿದೆ. ಶಾಸನದ ಮೇಲ್ಬದಿಯಲ್ಲಿ ಚಕ್ರ ಮೂರು ಅಲಗುಗಳು, ಸೂರ್ಯ ಚಂದ್ರ, ತ್ರಿಶೂಲ ಮತ್ತು ಒಂದು ಅಲಗುವಿನ ಚಿತ್ರಗಳಿವೆ.



೧೦. ರಮತ್ನಾಳ ಗ್ರಾಮದ ಅಗಸಿಕಟ್ಟೆಯಲ್ಲಿ ನೆಟ್ಟ ಕಣ ಶಿಲೆಯ ಚಪ್ಪಡಿಕಲ್ಲಿನ ಶಾಸನ

೧. ಪ್ರ. ಭವ ಸಂವತ್ಸರ

೨. ಚಯಿತರ ಖಾ । ೧೦ ದ.

೩. ಗುರುವಾರದಲು ಅ . .

೪. ಯಿತಖಾನ ಖಣದಾರ . ವಂ .

೫. ಖಾನೆ ಅಜಂನೂರಖಾನರ . . ರು .

೬. ರಾಮನಾಥನ ಹಾಳದ ಹೊಲಕ್ಕೆ

೭ ಗುತಿಗೆಯ ನಾನಾ ನಕ್ರಮದಲ್ಲಿ ತಿಂದರೆ

೮. . ಶ ಬಾದಲು ಖಾನಾಬಿ ಬಾದಿಮ ಖಾನನ. ರಿಯಮತಾ.

೯. . . . . ಕ ಅಸ್ತಿಕ್ಕುರುಗಾರು . ನಾ . ೦ ಮಾ

೧೦ . . . . ಕಾನನನ ಕಿಸಿಯ .

ಸಾರಾಂಶ : ಈ ಶಾಸನವು ಕ್ರಿ.ಶ ೨೩-೦೪-೧೭೪೭ ಗುರುವಾರಕ್ಕೆ ಸರಿಹೊಂದುತ್ತದೆ. ಇದರಲ್ಲಿ ಯಿತಖಾನ, ಖಣದಾರ, ವಂಳಖಾನ, ಅಜಂನೂರ ಖಾನರು ರಾಮನಾಥನ ಹಾಳದ ಹೊಲವನ್ನು ಗುತ್ತಿಗೆ ಆಧಾರದಲ್ಲಿ ಕೊಟ್ಟರೆಂಬ ಪ್ರಸ್ತಾಪವಿದೆ.

೧೧. ಅಲ್ಬನೂರು ಕೇಶವಸೆಟ್ಟಿ ಅಂಗಡಿ (ಕಟ್ಟೆ) ಹತ್ತಿರದಲ್ಲಿರುವ ಶಾಸನ



೧. ಪದವಡಿಸಿದ . . . .

೨. . . . ಜನಿಬ್ಯ. ರ . . ಜಡ

೩. . . . ದ . ತದ . . ಕಿವಿ.

೪. . ವಾದ ಬಳವ . ರನ . .

೫. . . . . ಬಳ

ಹಿಂಬದಿಯಲ್ಲಿರುವ ಬರಹ

೬. ಸ್ವಸ್ತಿ ಸಕ ವರ್ಷದ

೭ ೩ ವಿಕ್ರಮ ಸಂವತ್ಸರ

೮. . . . .

೯. ಗೇಪ. ಗೌಡಣ.

೧೦. ಯ್ಬಲಪರೆ . . . .

೧೧. ನಾಕಿಸಿನರ . . ಗೆಯ್ಯ

೧೨. ದೇನಳಲ್ಲಿ ಬಜಂಸೀಮೆ

೧೩. . . ೦ಗೆ ಕಲ್ಸಶಂ ಅನರ

೧೪. ನೆರೆಯ ಆಳನ್ತರದ ಇಕೆಯ್ಯ

೧೫. . . ಳ್ಬಯ ಮಾನ್ಯದ ಮತ

೧೬. ಬಬಾಟವಶೇಷ . ಮಪರು

೧೭. ವಪ್ಪನ . ಕುವಿಲ. ರುಮಪ್ಪ . .

೧೮. ಸಾಸಿಮಯ್ಯ

ಸಾರಾಂಶ : ಇದು ತುರುಗೋಳ್ ವೀರಗಲ್ಲು ಶಾಸನವಾಗಿದ್ದು ಸ್ವಸ್ತಿ ಶಕವರ್ಷ ೦೩ ವಿಕ್ರಮಸಂವತ್ಸರವೆಂದಿದ್ದು ಕಲ್ಯಾಣ ಚಾಳುಕ್ಯ ಅರಸ ಆರನೇ ವಿಕ್ರಮಾದಿತ್ಯನ ಕ್ರಿ.ಶ. ೧೧೦೯ರ ಶಾಸನವಾಗಿದೆ. ಇದರಲ್ಲಿ ಮೊದಲನೇ ಸಾಲಿನಲ್ಲಿ ಪದವಡಿಸಿದ ಎಂಬ ಶಬ್ದ ಉಲ್ಲೇಖಗೊಂಡಿದೆ. ತದನಂತರ ಬಜಂಸೀಮೆ, ಗೌಡಣ ಮೊದಲಾದ ಅಸ್ಪಷ್ಟ ಉಲ್ಲೇಖಗಳಿವೆ.

೧೨. ಅಲಬನೂರು ಸರಕಾರಿ ಪ್ರೌಢಶಾಲೆಯ ಆವರಣದಲ್ಲಿರುವ ಶಾಸನ

೧. ಶ್ರೀಮತು ಮಾ . . . . .

೨. ಹಾಮಂಡಳೇಸ್ವರ . . . . .

೩. ೦ ಚಂಚೆ . . ಳೆ ದ . . . .
೪. ಯವಿಕರ ಸಬಯ . . . .
೫. ಚರಸಬ ಬೆದೆರೆಗೆಳ . . .
೬. ಗೌಮಗೇರು . . ೦ ಗೆಗಳ . .
೭. ಟ್ಟರಿಗೆ ಬಿಟ್ಟ ದ್ರಪಟದ . .
೮. ಗರುಡ ಬಂಟೆದೆಯ . . . .
೯. ತ್ಯರುಳಂ ನವರಂಗೆ . . . .
೧೦. . . . . ಶ್ರೀ

ಸಾರಾಂಶ : ಕ್ರಿ.ಶ. ೧೧-೧೨ನೇ ಶತಮಾನದ ತ್ರುಟಿತ ಶಾಸನವು ಕೇವಲ ಮಹಾಮಂಡಳೇಶ್ವರ ಮತ್ತು ಭಟ್ಟರ ಕುರಿತು ಮಾಹಿತಿ ನೀಡುತ್ತದೆ.



೧೩. ಪಗಡದಿನ್ನಿ ಗ್ರಾಮದ ಅಗಸಿಕಟ್ಟೆಯಲ್ಲಿ ಜೋಡಿಸಿದ ಕಣಶಿಲೆಯ ಕ್ರಿ.ಶ. ೧೭-೧೮ನೇ ಶತಮಾನದ ಶಾಸನ

೧. ಂದೇವರಿಗೆ ಅಮೃತಪಲಿಮಪಡಿಘನವದಪ
೨. ಮಸಶ್ಯದಮುತ್ತರತಿಮದಕಪ.ವ ಬಂದನು ರಬ
೩. ೦ ವಾಗಣ ಹೊಲ ಮಾಂಗನಹಳ್ಳ ಗ್ರಾಮದೊಳಗೆ . . .
೪. ಮರಾಹತ್ತಿನು ಮಾಡುವ ಹೊಲದೊ . . . .
೫. . . . ಡು ಭೂಮಿಯನು ವಾತನೆರಡು ಕಿಲಿಡವಾ . .
೬. . . ಂಡಿ ಹೊಲವ ಪಲಸ್ತುತಿ ಬಿರಾಡವನು . . .
೭. . . ಅಗೊ ಮಾರಿಕೊಂಡು ನಿರೂಪವ . .
೮. . ಮ್ರತ ಪಲದು ಪವಿವನ ಮಾಡುವ
೯. , ೦ ಬಸಣಂದು ಶುಭದಲು ಅಜಿ . .
೧೦. ೦ ಕಸ್ತಿಯಾಣಗೆ ಅನುಭವಿಸಿ . . .
೧೧. ೦ ಸುಖದಲೂ ಯಿರೋದುಯಂದು . . .
೧೨. ೦ ರೆ, ವಾಲಿ ಭೂಧಾನದಪ . . .
೧೩. ೦ ಮರನಾವನು ಸಾಕ್ಷಿ ಶ್ರೀ

ಸಾರಾಂಶ : ಸ್ಥಳೀಯ ವ್ಯಕ್ತಿಯಾದ ಮುದಕಪ್ಪನೆಂಬಾತನು ಇಲ್ಲಿನ ದೇವರ ಅಮೃತಪಡಿ ಸಲುವಾಗಿ ಮಾಂಗನಹಳ್ಳ ಗ್ರಾಮದಲ್ಲಿ ಭೂಮಿಯನ್ನು ದತ್ತಿ ನೀಡಿ ನಿರೂಪ ಹಾಕಿಸಿದನು. ಶಾಸನ ಮುಂದುವರೆದು ಬಿರಾಡವನ್ನು ವಿನಾಯಿತಿಗೊಳಿಸಿದ ಬಗ್ಗೆ ದಾಖಲಿಸುತ್ತದೆ.



೧೪. ಮಾಟೂರು ಗ್ರಾಮದ ಗದ್ದೆಮ್ಮ ಕಟ್ಟೆಯಲ್ಲಿ ನಿಲ್ಲಿಸಿರುವ ವೀರಗಲ್ಲು ಶಾಸನ




೧. ಮರಟುರ ತಿಮಿನ

೨. ಯನಮಗ ಗವರಣ

೩. ಮೊಮ್ಮಗ ತಿಮ್ಮಯ್ಯ

ಸಾರಾಂಶ : ಇದು ಬಂದೂಕು ಬೇಟೆ ವೀರಗಲ್ಲು ಶಾಸನವಾಗಿದೆ. ಇಲ್ಲಿ ಎಡ ಬದಿಯಿಂದ ಹೆಡೆ ಎತ್ತಿದ ನಾಗರಹಾವು ನಂತರ ಇಬ್ಬರು ವ್ಯಕ್ತಿಗಳಿದ್ದಾರೆ. ಒಬ್ಬ ವೀರನು ಬಲಗೈಯಲ್ಲಿ ಚಾಕು ಎಡಗೈಯಲ್ಲಿ ಬಂದೂಕು ಹಿಡಿದಿದ್ದಾನೆ. ಇನ್ನೊಬ್ಬ ವೀರನು ತನ್ನೆರಡು ಕೈಗಳಿಂದ ಬಂದೂಕು ಹಿಡಿದು ಪ್ರಯೋಗಿಸುವ ಹಂತದಲ್ಲಿದ್ದಾನೆ. ಈ ಇಬ್ಬರು ವೀರರು ತಲೆಗಳಿಗೆ ರುಮಾಲು, ಕೊರಳಲ್ಲಿ ಸರಗಳು, ಸೊಂಟದಲ್ಲಿ ವಸ್ತ್ರಗಳನ್ನು ಸುತ್ತಿಕೊಂಡು ಇಲ್ಲಿಯೇ ಕಿರುಗುತ್ತಿಗಳನ್ನು ಸಿಕ್ಕಿಸಿಕೊಂಡಿದ್ದಾರೆ. ಇವರ ಮೇಲ್ಬದಿಯಲ್ಲಿ ಚಂದ್ರ, ಪುಷ್ಪಬಳ್ಳಿ, ಸೂರ್ಯ, ಪಾರಿವಾಳ ಶಿಲ್ಪಗಳನ್ನು ಖಂಡರಿಸಿದ್ದಾರೆ. ಹಾಗೆಯೇ ಈ ವೀರರ ಬಲಬದಿಯಲ್ಲಿ ಮೂರು ಸಾಲಿನ ಕ್ರಿ.ಶ. ೧೫–೧೬ ನೇ ಶತಮಾನದ ಶಾಸನವಿದೆ. ಇದರಲ್ಲಿ ಮರಟುರ (ಪ್ರಸ್ತುತ ಮಾಟೂರ ಗ್ರಾಮ) ತಿಮಿನಯನ ಮಗ ಗವರಣ್ಣ ಮೊಮ್ಮಗ ತಿಮ್ಮಯ್ಯನೆಂದು ಅವರ ವಂಶಾವಳಿ ಹಾಕಿಸಲಾಗಿದೆ.

೧೫. ಕುರುಕುಂದಾ ಗ್ರಾಮದ ತಾಮ್ರಪಟ ಶಾಸನ–೧ (ಕುರುಬರ ಮನೆಯಲ್ಲಿ)



೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇತ್ರೈಲೋ

೨. ಕ್ಯ ನಗರಾರಂಭ ಮೂಲಸ್ತಂಬಾಯ ಸಂಭವೇ ಸ್ವಸ್ತಿಶ್ರೀ

೩. ಜಯಾಭ್ಯುದಯ ಶಾಲಿವಾಹನ ಶಕವರುಷಂಗಳು

೪. ೧೪೦೦ ರನೆಯ ದಾತೃನಾಮ ಸಂ ॥ ಕಾರ್ತಿಕ ಬ॥ ಬುಧು

೫. ವಾರದಲ್ಲಿ ಬಡೆ ರಾಮರಾಜರ ಮುಖಾಂತ್ರದಲ್ಲಿ ಕೊಟದು

೬. ದಾಸ್ತಿ ಯರಡು ಮೇಟಿ ಜಟ ಅವರಗೊಂಡು ಮೇಟೆ ಬಂನೆ

೭ ಲವರುದು ೧ಮೇಟಿ ವುಭಯತ್ರರು ನಿಂನತ ಎಂದಹಾ

೮. ಗಬೇಕೆಂದು ರಾಯರ ಮುಖಾಂತ್ರ ನಿರ್ನಯ ಮಾಡಿ ಕೊ

೯. ಟ್ಟರು ಯಿದಕೆ ತಪ್ಪಿದರೆ ಗೋಹತ್ಯ ಬ್ರಂಮ್ಹತ್ತ್ಯ ಶಿಶುಹ

೧೦. ತ್ತ್ಯ ಯಾಗುವುದು ಸ್ರಿರಾತರವಚನವು ಖಾಲಿಯಲ್ಲ ವುಚೆಂ

೧೧. ದ್ರ ಸೂರ್ಯ್ಯಯಿರೋ ಪರಿಯಂತ್ರದಲ್ಲಿಕುರುಂದಿವಳಗೆ ನಡೆ

೧೨. ದ ಮಾಂನ್ಯ ಸ್ತಿತಿಗಿಮಾಂನ್ಯದಲ್ಲಿನೆಡೆದು ಯರಡು ಭಾಗಬಾವಿಮಾ

೧೩. ನ್ಯದಲ್ಲಿಯರಡು ಭಾಗವಾದಕ್ಕೆ ಸಾಕ್ಷಿ ೧೨ ನೆರಡು ಯೆಂಬನ್ಯೆ(ನಾ)ಸ್ತಿ
೧೪. ವಂತರು ಯಾಗದದಿವರತಟಖಾನಲಿಂಗನಗೌಡ ಸಾಕ್ಷಿನೌಉ
೧೫. ಟ ಬೀಮರಾಯ ಸಾಕ್ಷಿ ಕುರುಕುಂದಿ ನಾಡುಗೌಡಪ ಸಾಕ್ಷಿ ಕು
೧೬. ರುಕುಂದಿ ಕುಂಬಾರ ತಿಂಮ ೧೧ ಸಾಕ್ಷಿ ಮಲದಗುಡ್ಡದ ಲಿಂಗ
೧೭. (ನಗೌ) ಡ ಸಾಕ್ಷಿ ಗುಡದೂರು ಹಸಯನಗೌಡ ಸಾಕ್ಷಿ ಕುರುಬರ
೧೮. ಬಿಟ್ಟು ಮೊಗಲಾಯಿದರ ಬಾರದಾಗೆ ಬ್ಯಾಡರ ಲೈಯ್ಯನನೇಡ
೧೯. ಗೆಯುಕ್ತಕೊನಾಉ? ಂದ್ರೋಟತ್ತುಯಲ್ಲಉದು ಬಿಟ್ಟು.
೨೦. ದ್ರೋಹದ ತರುವಾಯ ನೈ (ನಾ) ಸ್ತಿ ಬೇಕುಯೆಂದು ಬಂದರೆ
೨೧. ಕೊಡಬೇಕುಯಿದಕೆಗುಡದಂಮ ಸಾಕ್ಷಿಯಲ್ಲಉ(ಬ) ಯೆಂದು
೨೨. ಬಾಯಾರಿದರೆ ಗುಡದಂಮನಲ್ಲೆ ಹೋಗಿಯಲ್ಲಕ್ರಿಯೆಗಳು
೨೩. ಮಾಡಬೇಕು ಯೆಂದುಯಿಮಾತಿಗೆ ತಪ್ಪಿದರೆ ವಂಶ ನಾಶನಾಗ
೨೪. ಲ್ಲದು ಕನಕಿರಿ ರಂಗಪನಾಯ್ಕನ ಮುಖಾಂತ್ರದಲ್ಲಿ. ದ.
೨೫. ನಿಲೆರತಲ್ಲಿಸಿ ಕಾಗದು ಬೆಳಿಕಲಂನಾನಿರುಸಮಂ
೨೬. ತರಾಯನ ಬರಹವು . . . . .
೨೭. ಉದ . . ಯ . . . .

ಸಾರಾಂಶ : ಈ ಶಾಸನವು ಶೈವ ಶ್ಲೋಕದಿಂದ ಪ್ರಾರಂಭವಾಗಿ ಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೪೦೦ ರನೆಯ ದಾತೃ ನಾಮ ಸಂವತ್ಸರ ಕಾರ್ತಿಕ ಬಹುಳ ಬುಧವಾರವೆಂದಿದ್ದು ಇದು ಕ್ರಿ.ಶ. ೧೪೭೮ಕ್ಕೆ ಸೇರುತ್ತದೆ. ಇದು ಹಿರಿಯ ರಾಮರಾಜರ ಮುಖಾಂತರವಾಗಿ ಕೊಟ್ಟದ್ದಾಗಿದೆ. ಜಟ ಮತ್ತು ಬನ್ನೆಲವರು ಎಂಬ ಇಬ್ಬರು ಮೇಟಿಗಳು ಸೇರಿ ರಾಯರ ಮುಖಾಂತರ ನಿರ್ಣಯ ಮಾಡಿಕೊಟ್ಟರು. ಇದಕ್ಕೆ ತಪ್ಪಿದರೆ ಗೋಹತ್ಯೆ, ಬ್ರಾಹ್ಮಣ ಹತ್ಯೆ, ಶಿಶುಹತ್ಯೆಯಾಗುವುದು, ಹಾಗೆಯೇ ಸಿರಿತನ (ಶ್ರೀಮಂತಿಕೆ)ವು ಖಾಲಿಯಾಗುವುದು. ಇದು ಸೂರ್ಯ ಚಂದ್ರರಿರುವವರೆಗೆ ಕುರುಕುಂದಿಯ ಒಳಗೆ ಮಾನ್ಯ ಎರಡು ಭಾಗ ಬಾವಿ ಮಾನ್ಯ ಎಂದಿದೆ. ಆಸ್ತಿವಂತರಾದ ದಿವರತಟಖಾನ, ಲಿಂಗನಗೌಡ, ನೋಟ ಭೀಮರಾಯ, ಕುರುಕುಂದಿಯ ನಾಡಗೌಡ, ಕುಂಬಾರತಿಮ್ಮ, ಮಲ್ಲದಗುಡ್ಡದ ಲಿಂಗನಗೌಡ, ಗುಡದೂರು ಹಸಯನಗೌಡ ಸಾಕ್ಷಿಯಾಗಿದ್ದಾರೆ. ಕುರುಬರನ್ನು ಹೊರತುಪಡಿಸಿ ಮೊಗಲಾಯಿದರು (ಹಳೆಯ ಕಾಲದವರು) ಬರದ ಹಾಗೆ ಬೇಡರ ಜಾತಿಯ ಅಯ್ಯನಗೌಡನಿಗೆ ತೋಟದಲ್ಲಿ ದತ್ತಿ ಬಿಟ್ಟರು. ಇದರ ನಂತರ ಇನ್ನೂ ಆಸ್ತಿ ಬೇಕು ಎಂದು ಬಂದರೆ ಗುಡದಮ್ಮನ ಸಾಕ್ಷಿಯಾಗಿ ಕೊಡಬೇಕು. ಇದಕ್ಕೂ ಮಾತು ತಪ್ಪಿದರೆ ಗುಡದಮ್ಮ ದೇವತೆಯಲ್ಲಿಗೆ (ದೇವರು) ಹೋಗಿ ಎಲ್ಲಾ ಕ್ರಿಯೆಗಳನ್ನು ಮಾಡಬೇಕು. ಈ ಮಾತುಗಳಿಗೂ ತಪ್ಪಿದವನಾದರೆ ಆತನ ವಂಶವು ನಾಶವಾಗುತ್ತದೆ ಎಂದು ಕನಕಗಿರಿ ರಂಗಪ್ಪ ನಾಯ್ಕನ ಮುಖಾಂತರದಲ್ಲಿ ಕಾಗದವನ್ನು ಬರೆಸಿ ಬೆಳಕಿಗೆ ತರಲಾಗಿದೆ. ಕೊನೆಯದಾಗಿ ಶಾಸನವನ್ನು ಸಮಂತರಾಯನೆಂಬಾತ ಬರೆದನೆಂದಿದೆ.

೧೬. ಕುರುಕುಂದಾ ಗ್ರಾಮದ ತಾಮ್ರಪಟ ಶಾಸನ – ೨ (ಕುರುಬರ ಮನೆಯಲ್ಲಿ)

೧. ಬುಕ್ಕರಾಯರು ಲೋಹರದದಲ್ಲಿ ಕೆತು ಮಾಡಿಕೊಟ್ಟದ್ದು
೨. ನಮಸ್ತುಂಗ ಸಿರಸ್ತುಂಬಿ ಚಂದ್ರಚಾಮರ ತ್ರೈಲೋಕ್ಯನ
೩. ಗರಾರಂಭ ಮೂಲಸ್ತಂಭಾಯ ಶಾಂಭವೇ ಸ್ವಸ್ತಿ ಶ್ರೀ ವಿಜಯ
೪. ಬುದಯ ಶಾಲಿವಾಹನ ಶಖ ವರುಷಂಗಳು ೧೨೦೦ ರನೆ
೫. ಯ ಬಹುದಾಂನ್ಯ ನಾಮ ಸಂ॥ (ವತ್ಸ) ರದ ಕಾರ್ತಿಕ ಬ॥(ಹುಳ) ಗುರುವಾರ
೬ ದಲ್ಲಿ ಕೊಟ್ಟದು ಬುಕ್ಕರಾಯರಂ ಬಂನೆಲವರು ನಾಗರ ಗೋ
೭ ಡು ನಾಸ್ತಿ ಗ್ರಾಮ ಬಿಟ್ಟು ಬುಕರಾಯರ ನೀವು ಸ್ಥಾನದಲ್ಲಿ ನಿ

೮. ಂತಾಸಿದ ನೈ(ನಾ)ಸ್ತಿಹಾಳ ಗ್ರಾಮ ಕುರುಕುಂದೆ ೧೨ ರಡು ಖಂ

೯. ಡುಗದ ಮೂರು ವಾನ ಮೂರು ಗಿದ್ದನ ಮೊಖರಾರು ಮಾಡಿ

೧೦. ನಾಗದೇವಪ್ಪಗೆ ದೇವರಾಯಗೆ ಕೊಟ್ಟ ನೈ(ನಾ)ಸ್ತಿ ನಾಡಿಗ ದೇಶಾಯಿ

೧೧. ಗಳ ಮುಖಾಂತ್ರದಲ್ಲಿ ದಾನ ಪತ್ರದ ನೈ(ನಾ)ಸ್ತಿ ಬ್ಯಾಡದುಮ

೧೨. ಪ ಬ್ಯಾಡರ ಅಯ್ಯನಗೌಡ ಜಲ್ಲಿ ನರಸನಗೌಡ ಕುರುಬರ

೧೩. ದು ಮೇಟಿ ವಳಗೆ ಯಿಬ್ಬರು ವುಭಯತ್ರರಾಗಿ ಜಲ್ಲಿಹ

೧೪. ಳ ಜಾಗಿರಿ ಮಾಡಿಕೊಟ್ಟುಯಿದೆವು ಯಿಮಾತಿಗೆ ತಪ್ಪಿದರೆ

೧೫. ಗೋಹತ್ಯ ಬ್ರಂಮ್ಹತ್ಯ ಶಿಶುಹತ್ಯಯಾಗುವುದು ಚಿರು

೧೬. ಲೊ ದೊರಿಗಳು ನಡೆಸುವದುಯೆಂದು ಅವರು ತಪಿ

೧೭. ದರೆ ಮುಂದೆ ಕೆಟ್ಟ ದಿನಗಳು ಬರುತ್ತಯಿದಿತು ಯಾ

೧೮. ವತ್ತು ನೈ(ನಾ) ಸ್ತಿವಂತರಿಗೆ ನೆಡೆಸುವಂತೆ ಬರಕೊಟ್ಟರು

೧೯. ದೊಲೆ ಚೆಂದ್ರ ಸೂರ್ಯ ಸಾಕ್ಷಿಯಿದಕೆ ಭೂಮಿ ವಿವರ

೨೦. ವೂರಿಗೆ ವುತ್ರ ದಿಕ್ಕುಯರಡು ಹಳ್ಳದಗಡೆ ಹೊಲದ

೨೧. ಲಿ ಮಾಂನ್ಯವುದಲಕೆ ಪೂರ್ವ ಲಾ ೧೬ ಎಲಿಪ್ಕಿಮಾಂನ್ಯ

೨೨. ವೂರಿಗೆ ಪೂರ್ವ ಗೌಡ್ಕಿ ಮಾಂನ್ಯ ನಾಗಳ ಬಿಜವರಿ ಗುಡಿ

೨೩. ಗೆ ದಕ್ಷ್ಣ ದಿಕು ದೇವರ ಮಾಂನ್ಯ ಬಡಿಗಿ ಕಂಮರ ಬ್ಯಾಗರ

೨೪. ಬಾರಿಕ ೧೨ ಮಂದಿ ನೈ (ನಾ) ಸ್ತಿವಂತರು ಸುಖದಿಂದ ಯಿ

೨೫. ರ್ಹಿದುಯೆಂದು ಬರಕೊಟ್ಟ ದಾನಪತ್ರದಲ್ಲಿ ಬಿವ್ರು

೨೬. ದು ಪುರಾತರನ ಭಾಗ ಮಾಡಲಾಗದು.



ಸಾರಾಂಶ: ಈ ಶಾಸನವನ್ನು ಬುಕ್ಕರಾಯರು ಲೋಹದಲ್ಲಿ ಕೆತ್ತಿಸಿದ್ದು ಎಂದು ಪ್ರಾರಂಭಿಸಿ, ನಂತರದ ಸಾಲುಗಳಲ್ಲಿ ಶೈವ ಶ್ಲೋಕ ಹಾಕಿಸಲಾಗಿದೆ. ಇದರಲ್ಲಿ ಶಕವರ್ಷ ೧೨೦೦ ರನೆ ಬಹುದಾನ್ಯ ನಾಮಸಂವತ್ಸರದ ಕಾರ್ತಿಕ ಬಹುಳ ಗುರುವಾರವೆಂದಿದ್ದು, ಇದು ಕ್ರಿ.ಶ. ೧೨೭೮ ಕ್ಕೆ ಸೇರುತ್ತದೆ. ಶಾಸನದಲ್ಲಿ ಶಕವರ್ಷವು ಅರಸನ ಕಾಲಾವಧಿ, ಹೇಳಿಕೆಗಳು, ಅಕ್ಷರವಾಟಿಕೆಯಿಂದ ಕ್ರಿ.ಶ. ೧೨೭೮ ಕ್ಕೆ ಸೇರದೆ ಇತ್ತೀಚಿನ ಕ್ರಿ.ಶ. ೧೭–೧೮ನೇ ಶತಮಾನಕ್ಕೆ ಸೇರಿದ ಕೂಟ ಶಾಸನವಾಗಿದೆ. ಶಾಸನದಲ್ಲಿ ಹೇಳಿದ ವಿವರಗಳು ವಿಶ್ವಾಸಾರ್ಹತೆಯಿಂದ ಕೂಡಿದವುಗಳಲ್ಲವೆಂದು ಹೇಳಬೇಕಾಗುತ್ತದೆ. ಆದರೆ ಇಲ್ಲಿ ಬುಕ್ಕರಾಯರು? ಕುರುಬಜನಾಂಗದ ಬನ್ನಿಲವರು ಬೆಡಗಿನವರು (ಗೋತ್ರದವರು) ನಾಗರಗೋಡು ಗ್ರಾಮದಲ್ಲಿ ಬಿಟ್ಟುಬಂದ ಆಸ್ತಿಯನ್ನು ನೈಸ್ತಿಹಾಳ ಗ್ರಾಮ ಕುರುಕುಂದೆಯಲ್ಲಿ ಹನ್ನೆರಡು ಖಂಡುಗದ ಮೂರುಮಾನ ಮೂರುಗಿದ್ದಕ್ಕೆ ಒಪ್ಪಂದ (ಮೊಖರಾರು) ಮಾಡಿನಾಗದೇವಪ್ಪ ಮತ್ತು ದೇವರಾಯನಿಗೆ ಕೊಟ್ಟ ಆಸ್ತಿಯಾಗಿದೆ. ಇದನ್ನು ದೇಸಾಯಿಗಳ ಮುಖಾಂತರ(ಸಮ್ಮುಖ) ದಲ್ಲಿ ದಾನಪತ್ರ ಬರೆಸಲಾಗಿದೆ. ಇದರಲ್ಲಿ ಬೇಡರಜಾತಿಯ ದುಮಪ, ಅಯ್ಯನಗೌಡ ಜಲ್ಲಿ, ನರಸನಗೌಡ ಕುರುಬರುಗಳ ಮೇಟಿಗಳಲ್ಲಿ ಎರಡು ಜನಾಂಗದವರು ಜಲ್ಲಿ ಹಳ(ಪ್ರಸ್ತುತ ಜಾಲಿಹಾಳ ಗ್ರಾಮ) ದಲ್ಲಿ ಜಾಗಿರಿ(ಜಹಗೀರು) ಮಾಡಿಕೊಟ್ಟ ಬಗ್ಗೆ ತಿಳಿಸುತ್ತದೆ. ಇದಕ್ಕೆ ತಪ್ಪಿ ನಡೆದವರು ಗೋಹತ್ಯೆ, ಬ್ರಾಹ್ಮಣಹತ್ಯೆ, ಶಿಶುಹತ್ಯೆ ಮಾಡಿದವರೆಂದು ಶಾಪಾಶಯವಿದೆ. ಈ ದಾನವನ್ನು ಚಿರಕಾಲವಾಗಿ ದೊರೆಗಳು ನಡೆಸಿಕೊಂಡು ಹೋಗಬೇಕು ಎಂದು

ಹೇಳುವುದರೊಂದಿಗೆ ತಪ್ಪಿ ನಡೆದರೆ ಅವರಿಗೆ ಮುಂದೆ ಕೆಟ್ಟ (ದುರ್ದಿನ) ದಿನಗಳು ಬರುತ್ತವೆ. ಆದುದರಿಂದ ಮುನ್ನೆಡೆಸಿಕೊಂಡು ಹೋಗುವಂತೆ ಬರೆದು ಕೊಟ್ಟದ್ದಾಗಿದೆ. ಈ ದಾನವು ಸೂರ್ಯ ಚಂದ್ರಾದಿಗಳು ಇರುವವರೆಗೆ ಸಾಕ್ಷಿಯಾಗುತ್ತದೆ. ಇದರಲ್ಲಿ ಭೂಮಿಯ ವಿವರವು ಗ್ರಾಮದ ಉತ್ತರ ದಿಕ್ಕಿಗೆ ಇರುವ ಎರಡು ಹಳ್ಳಗಳ ಹತ್ತಿರದಲ್ಲಿರುವ ಗಡೆ ಹೊಲದಲಿ ಮಾನ್ಯ, ಪೂರ್ವಕ್ಕೆ ಗೌಡಿಕಿ ಮಾನ್ಯ, ನಾಗರ ಬಿಜವರಿ ದೇವರಗುಡಿಗೆ ದಕ್ಷಿಣ ದಿಕ್ಕಿನಲ್ಲಿ ಮಾನ್ಯ ಮಾಡಿದೆ. ಹಾಗೆಯೇ ಬಡಗಿ, ಕಮ್ಮಾರ, ಬ್ಯಾಗಾರ, ಬಾರಿಕ, ಹನ್ನೆರಡು ಮಂದಿ ಜನಾಂಗದವರು ಸುಖದಿಂದ ಇರಬೇಕೆಂದು ಈ ದಾನಪತ್ರದಲ್ಲಿ ಬಿರುದುಗಳ ಸಹಿತ ಬರೆದುಕೊಡಲಾಗಿದೆ. ಶಾಸನದ ಕೊನೆಯಲ್ಲಿ ಇದನ್ನು ಯಾರು ಭಾಗ ಮಾಡಲಾಗದೆಂದು ತಾಮ್ರಪಟದಲ್ಲಿ ಹೇಳಲಾಗಿದೆ.

೧೭. ಸೋಮಲಾಪುರ ಗ್ರಾಮದ ಪಂಪಾಪತಿ ತಂದೆ ದೇವಪ್ಪರವರ ಜಮೀನಿನ ಸರ್ವೆ ನಂಬರ್ ೧೪೭ರಲ್ಲಿನ ಶಾಸನ

೧. ನಮಸ್ತುಂಗ ಸಿರಶ್ಚುಂಚಿ ಚಂದ್ರಚಾಮರ ಚಾರ

೨. ವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ

೩. ಶುಭಮಸ್ತು ಸ್ವಸ್ತಿಶ್ರಿ ಜಯಾಭ್ಯುದಯ ಶಾಲಿವಹನ ಶ

೪. ಕ ವರುಷ ೧೫೦೨ ನೆಯ ವಿಕ್ರಮ ಸಂವಛರದ ಮಾ

೫. ರ್ಗಶಿರ ಬ ೧೦ ಲೂ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ

೬. ಶ್ರೀ ವೀರಪ್ರತಾಪ ಶ್ರೀರಂಗದೇವ ಮಹಾರಾಯರೂ ನವರತ್ನ ಖಚಿತವಾದ ಸಿಂಹಾಸನಾರೂ

೭. ಢರಾಗಿ ಪೆನುಗೊಂಡೆ ಸಿಂಹಾಸನದಲಿ ಪೃಥ್ವೀ ರಾಜ್ಯಂಗೆಯುತಂ ಯಿರಲಾಗಿ ರಾಯಮಂನ್ನೆಯ ಹಂಡೆ ಹ

೮. ನುಮಿನಾಯಕ ವಡೆಯರೂ ಪವಹಾರ ಗೋತ್ರದ ಕಾಟಗೊಂಡನಹಳ್ಳಿಯ ಬಟರ ಪರುವಯನ ಮಗ ಯಲ್ಲಪಗೆ

೯. ಧಾರಾ ಸಹಿತವಾಗಿ ಕೋಟಿಧರ್ಮ್ಮ ಶಾಸನದ ಕ್ರಮವಂತೆಂದರೆ ಹಸ್ತಿನಾವತಿ ವೇಂಠೆಯದ ಕೆಳವಿಡಿ ನಾಡೊಳಗಣರವುಡಕುಂ

೧೦. ದಿ ಸೀಮೆಗೆ ಸಲುವ ಗ್ರಾಮ ಸಾಲುಗುಂದಿಯಿಂ ಪಡುವಲು ಮುಕುಂದಿಯಿಂ ಬಡಗಲು ಗೊಬರಕಲು ರವುಡಕುಂದಿಯಿಂ ಮೂಡಲು ಮಾರ

೧೧. ಗೊಂಡನಹಾಳ ಸಿಂದನೂರ ಸೀಮೆ ವಾಳಗಣ ರಂಗದಲೆ ಬೂದಿ ವಾಳಿಂ ತೆಂಕಲುಯಿಂತಿ ಚತುಸೀಮೆ ವೊಳಗಣ ಸೀಗೆಕಲೂ ಎಂಬ ಗ್ರಾಮವನೂ

೧೨. ಪುಂಣ್ಯ ಮಾಗಣಿಯ ಸಲಿಸಬೇಕಾಗಿ ರಾಯನಿಗೆ ಬಿಂನಾಹವ ಮಾಡಿ ತಂಮ ಕುಲಸ್ವಾಮಿರಾಗಿದ ರಾಮದೇವರಿಗೆ ಪುಂಣ್ಯವಾಗ ಬೇಕೂಯಂದು ತಂಮ

೧೩. ತಾಯಿ ಜಾನೂನಾಕಿತಿಗೂ ತಂಮ ತಂದೆ ಲಖಪನಾಯಕನಿಗೂ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದು ಹಂಡೆಹನುಮಿ ನಾಯಕನು

೧೪. ಕಾಟಗೊಂಡನಹಳ್ಳಿಯ ಭಟರ ಪರುವ್ವೆಯನ ಮಗ ಯಲ್ಲಪ್ಪಗೆ ಸೀಗೆಕಲೂ ಯಂಬ ಗ್ರಾಮವನು ದಾನ ಧಾರಾ ಪೂರ್ವಕವಾಗಿ ದಾರೆ ನೆರೆದು ಕೊಟ್ಟವಾಗಿ ಆ

೧೫. ಗ್ರಾಮಕೆ ಸಲುವ ಗ್ರಹ ರಾಮ ಕ್ಷೇತ್ರದೊಳಗಣ ನಿಧಿ ನಿಕ್ಷೇಪ ಜಲಪಾಷಾಣ ಅಕ್ಷಿಣಿ ಆಗಾಮಿಸಿಧ ಸಾಧ್ಯಂಗಳೆಂಬ ಅಷ್ಟ ಭೋಗ ತೇಜ ಸಾಂಮ್ಯಸರ್ವಾ

೧೬. ಪ್ರತಿ ಸಮಸ್ತ ಬಣ ಸಹಿತವಾಗಿ ತ್ರಿವಾಚಕೂಟವಾಗಿ ನೀನು ನಿಂನ ಪುತ್ರ ಪೌತ್ರ ಪರಂಪರೆಯಾಗಿ ಆಚಂದ್ರಾರ್ಕ ಸ್ಥಾಯಿಯಾಗಿ ಸುಖದಿಂ ಅನುಭವಿಸುವುದು

೧೭. ಎಂದು ಕೊಟ ಧರ್ಮ ಶಾಸನ॥ ಸ್ವನಾಕ್ಷರವಾಧಿಕಾಕ್ಷರಂ ವಾತವಮಂ ಲಿಖಿತ ಪ್ರಮಾಣ ಮಿತಿ॥ ದಾನಪಾಲನಯೋ ಮಧ್ಯೆದಾನಾಶ್ರೆಯೋನುಪಾಲನಂ ದಾನಾ ಸ್ವರ್ಗಯೋ

೧೮. ಪವತಿಪಾಲನಾದ ಚ॥ ತಂಷದಂ। ಸ್ವದತ್ತಾ ದ್ವಿಗುಣಂಪುಂಣ್ಯಂ ಪರದತ್ತಾನು ಪಾಲನಂ ಪರದತ್ತಾ ಪಹರೇಣತಿ ಸಗತ ವಿಷ್ಣು ಲಂಬರ್ವೆ ಶ್ರೀ

೧೯. ಯಿ ಧರ್ಮವನೂ ಆವನಾನೊಬನೂ ಪ್ರತಿ ಪಾಲಿಸಿ ನಡೆಸಿದರೆ ಕಾಸಿ ಕ್ಷೇತ್ರ ದೇವಗಂಗೆ ವಿಶ್ವನಾಥ ಪ್ರಯಾಗ ಮಾಧವನ ಸಂನಿಧಿಯಲಿ ಸಹಸ್ರ ಗೋದಾನ ಸಹಸ್ರ ಕಂನ್ಯಾಧಾನ (ಮಾಡಿದ)

೨೦. ಫಲಮಂ ಮಾಡಿದ ಧರ್ಮವಿಲ ತಾನು ಮಾಡಿದವನು ಯಿಧರ್ಮವನು ನಡೆಸದೆ ಅಳಿದವರುಂ ಪಾಪಕೆ ಕಾಶಿ ವಿಶ್ವನಾಥನ ಸಂನಿದಿಯಲಿ ಗೋಹತ್ಯ ಬ್ರಂಹ್ಮತ್ಯ ಮಾಡಿದ ದೋಷಕೆ ಹೋಹರು ತುರಕ


೨೧. ಧೊರೆಗಳು ಅಳಿದರೆ ಯಿಧರ್ಮವನು ನಡೆಸಿದರೆ ನಡೆಸಿದಷ್ಟು ಫಲ ನಡೆಸದಿದ್ದರೆ ಮಸೀದಿಲಿ ಹಂದಿಕೊಂದು ತಿಂದ ಪಾಪಕೆ ಹೋಹರೂ ಧರ್ಮವೇ ಜಯ ಶ್ರೀ ಶ್ರೀ ಶ್ರೀ ಶ್ರೀ



ಸಾರಾಂಶ : ಈ ಶಾಸನದಲ್ಲಿ ಶಾಲಿವಾಹನ ಶಕ ವರುಷ ೧೫೦೨ ನೆಯ ವಿಕ್ರಮ ಸಂವತ್ಸರದ ಮಾರ್ಗಸಿರ ಬಹುಳ ೧೦ ಲೂ ಎಂದಿದ್ದು, ಇದು ಕ್ರಿ.ಶ. ೦೧-೧೨-೧೫೮೦ ನೇ ಗುರುವಾರಕ್ಕೆ ಸರಿಹೊಂದುತ್ತದೆ. ಈ ವೇಳೆಯಲ್ಲಿ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ರಂಗದೇವ ಮಹಾರಾಯರು (ವಿಜಯನಗರ ಸಾಮ್ರಾಜ್ಯದ ಅರವೀಡು ವಂಶದ ೧ನೇ ಶ್ರೀರಂಗರಾಯ ಕ್ರಿ.ಶ. ೧೫೭೨-೧೫೮೫) ನವರತ್ನ ಖಚಿತವಾದ ಸಿಂಹಾಸನರೂಢನಾಗಿ ಪೆನುಗೊಂಡೆಯಲ್ಲಿ ಪೃಥ್ವೀ ರಾಜ್ಯಂಗೈಯುತ್ತಿದ್ದನು. ಈತನ ಸಾಮಂತನಾಗಿ ಹಂಡೆ ಹಣುಮಿನಾಯಕ ಒಡೆಯನು ಆಳುತ್ತಿದ್ದನು. ಈತನು ಹಸ್ತಿನಾವತಿ ವೇಂಠೆಯ ಕೆಳವಾಡಿ ನಾಡಿನ ರೌಡಕುಂದಿ ಸೀಮೆಗೆ ಸೇರುವ ಗ್ರಾಮ ಸಾಲಗುಂದಿಯ ಪಡುವಣಕ್ಕೆ (ಪಶ್ಚಿಮ) ಮುಕ್ಕುಂದಿ, ಬಡಗಲು (ಉತ್ತರ), ಗೊಬ್ಬರಕಲ್, ರೌಡಕುಂದಿ, ಮೂಡಲು (ಪೂರ್ವ) ಮಾರಗೊಂಡನ ಹಾಳಗ್ರಾಮ. ಸಿಂಧನೂರು ಸೀಮೆ ವಳಗಣ ತೆಂಕಲು (ದಕ್ಷಿಣ) ರಂಗದೆಲೆ, ಬೂದಿವಾಳ ಗ್ರಾಮಗಳಿದ್ದವು. ಈ ಚತುಸ್ಸೀಮೆ ವೊಳಗಣ ಸೀಗೆಕಲ್ಲು ಎಂಬ ಗ್ರಾಮವನ್ನು ಪುಣ್ಯ ಮಾಗಣಿಯ ಸಲ್ಲಿಸಬೇಕಾಗಿ ರಾಯನಿಗೆ ಬಿನ್ನಹ ಮಾಡಿ ತಮ್ಮ ಕುಲಸ್ವಾಮಿ ದೇವರಾದ ರಾಮದೇವರಿಗೆ ಪುಣ್ಯವಾಗಬೇಕೆಂದು ತಮ್ಮ ತಾಯಿ ಜಾನುನಾಕಿತಿ ತಂದೆ ಲಕ್ಕಪ್ಪ ನಾಯಕರಿಗೆ ಪುಣ್ಯ ಪ್ರಾಪ್ತಿಯಾಗಬೇಕೆಂದು ಹಂಡೆಹಣುಮಿ ನಾಯಕನು ಕಾಟಗೊಂಡನಹಳ್ಳಿಯ ಪವಹಾರ ಗೋತ್ರದ ಭಟರ ಪರುವಯ್ಯನ ಮಗ ಯಲ್ಲಪ್ಪನಿಗೆ ಸೀಗೆಕಲ್ಲು (ಪ್ರಸ್ತುತ ಸೋಮಲಾಪುರ ಗ್ರಾಮದ ಹತ್ತಿರದ ಹಳೆಯ ಗ್ರಾಮ) ಗ್ರಾಮಕ್ಕೆ ಸಲ್ಲುವ

ಗ್ರಹರಾಮ ಕ್ಷೇತ್ರದೊಳಗೆ ನಿಧಿ–ನಿಕ್ಷೇಪ, ಜಲಪಾಷಣ, ಅಕ್ಷಿಣಿ, ಆಗಾಮಿ ಎಂಬ ಅಷ್ಟ ಭೋಗಗಳನ್ನು ತೇಜಸ್ವಾಮ್ಯ ಸರ್ವ ಪ್ರತಿಯಾಗಿ ಸಮಸ್ತ ಬಣ ಸಹಿತವಾಗಿ ತ್ರಿವಾಚಕೂಟವಾಗಿ ಮುಂದೆ ತಮ್ಮ ಪುತ್ರ–ಪೌತ್ರರ ಪರಂಪರೆಯಾಗಿ ಆಚಂದ್ರಾರ್ಕ ಸ್ಥಾಯಿಯಾಗಿ ಅನುಭವಿಸುವುದು ಎಂದು ಬರೆದುಕೊಟ್ಟ ಧರ್ಮ ಶಾಸನವಾಗಿದೆ. ಈ ಶಾಸನವನ್ನು ವಾಧಿಕಾಕ್ಷಿನೆಂಬಾತ ಬರೆದಿದ್ದಾನೆ. ಶಾಸನದಲ್ಲಿ ದಾನ ಪಡೆಯುವ ಮತ್ತು ಅದನ್ನು ಪರಿಪಾಲಿಸುವವನಿಗೆ ಸ್ವರ್ಗಲೋಕ ಪ್ರಾಪ್ತಿಯಾಗುತ್ತದೆ. ಹಾಗೆಯೇ ಅದನ್ನು ಪರಿಪಾಲಿಸುವುದರಿಂದ ಉತ್ತಮ ಪದವಿ ಲಭಿಸುತ್ತದೆ. ತಾನು ಸಂಪಾದಿಸಿದ ಭೂಮಿಯನ್ನು ಬೇರೆಯವರಿಗೆ ನೀಡುವದರಿಂದ ಎರಡುಪಟ್ಟು (ದ್ವಿಗುಣ) ಪುಣ್ಯ ದೊರಕುತ್ತದೆ. ಬೇರೆಯವರ ಭೂಮಿಯನ್ನು ಕಬಳಿಸಿದರೆ ತನ್ನ ಸ್ವಂತ ಭೂಮಿಯು ನಿಷ್ಫಲವಾಗುತ್ತದೆ. ಈ ಧರ್ಮವನ್ನು ಯಾರಾದರು ಪ್ರತಿಪಾಲಿಸಿ ನಡೆಸಿಕೊಟ್ಟರೆ ಕಾಶಿ ಕ್ಷೇತ್ರದ ದೇವಗಂಗೆ ವಿಶ್ವನಾಥ ಪ್ರಯಾಗ ಮಾಧವನ ಸನ್ನಿಧಿಯಲ್ಲಿ ಸಹಸ್ರ ಗೋದಾನ, ಸಹಸ್ರ ಕನ್ಯಾದಾನ ಮಾಡಿದ ಫಲವು ದೊರಕುತ್ತದೆ. ಈ ಶಾಸನವನ್ನು ಯಾರಾದರೂ ನಡೆಸಿಕೊಡದೆ ಹಾಳು ಮಾಡಿದರೆ ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಗೋಹತ್ಯೆ, ಬ್ರಹ್ಮ ಹತ್ಯೆ ಮಾಡಿದ ಪಾಪಕ್ಕೆ ಹೋಗುವರು. ತುರುಕ ದೊರೆಗಳು ಇದನ್ನು ನಡೆಸಿಕೊಂಡು ಹೋದರೆ ನಡೆಸಿದಷ್ಟು ಪುಣ್ಯ ಬರುತ್ತದೆ. ಇದನ್ನು ಹಾಳು ಮಾಡಿದರೆ ತಮ್ಮ ಮಸೀದಿಯಲ್ಲಿ ಹಂದಿಯನ್ನು ಕೊಂದು ತಿಂದ ಪಾಪಕ್ಕೆ ಹೋಗುವರೆಂದು ಶಾಪಾಶಯ ಹಾಕಿಸಲಾಗಿದೆ.

೧೮. ಸಾಲಗುಂದಾ ಗ್ರಾಮದ ಅಶ್ವತ್ಥ ಮರದ ಕೆಳಗೆ ಇರುವ ಯಂತ್ರಕಲ್ಲು ಶಾಸನ





ಈ ಶಾಸನವು ಕ್ರಿ.ಶ. ೧೪–೧೫ ನೇ ಶತಮಾನಕ್ಕೆ ಸೇರುತ್ತಿದ್ದು, ಆಂಜನೇಯನ ಅಭಯಯಂತ್ರವೆಂದು ಗೋಚರಿಸುತ್ತದೆ. ಹಿಂದಿನ ದಿನಮಾನಗಳಲ್ಲಿ ಜನರು ಮಕ್ಕಳಲ್ಲಿ ಅಂಜಿಕೆಯಿಂದ ಬರುವ ಮಾನಸಿಕ ಕಾಯಿಲೆಗಳನ್ನು ನಿವಾರಿಸಲು ಹಾಗೂ ಗರ್ಭಿಣಿಯರಲ್ಲಿ ಹೆರಿಗೆಯ ಬಗ್ಗೆ ಇರುವ ಭಯ ನಿವಾರಣೆಗೆಂದು ಬಳಸಿರಬಹುದೆಂದು ತೋರುತ್ತದೆ. ಇದರಲ್ಲಿ ಯಾವುದೋ ಸಂಕೇತಾಕ್ಷರ ಅಥವಾ ತಾಂತ್ರಿಕ ಆಚರಣೆಯ ಲೆಕ್ಕಚಾರ ಇದ್ದಂತೆ ಕಂಡುಬರುತ್ತದೆ. ಇಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ ಅದರಲ್ಲಿ ಬಲಗಡೆ ಇರುವ ವ್ಯಕ್ತಿ ಆಂಜನೇಯನಾಗಿದ್ದರೆ, ಇನ್ನೊಬ್ಬ ವ್ಯಕ್ತಿ ನಿಂತುಕೊಂಡ ಶಿಲ್ಪ ಅಸ್ಪಷ್ಟವಾಗಿದೆ. ಇತ್ತೀಚೆಗೆ ಇದು ಮೂಢನಂಬಿಕೆಗೆ ಕಾರಣವಾಗಿದೆ. ಈ ಗ್ರಾಮದ ಗರ್ಭಿಣಿ ಮಹಿಳೆಯರಿಗೆ ಯಾರಿಗಾದರೂ ಹೆರಿಗೆ ನೋವು ಕಾಣಿಸಿಕೊಂಡು ಬೇಗ ಹೆರಿಗೆ ಆಗದಿದ್ದರೆ, ಆ ಕುಟುಂಬದ ಯಾರಾದರೂ ಒಬ್ಬರು ಸದಸ್ಯರು ಈ ಚಪ್ಪಡಿಕಲ್ಲಿನಲ್ಲಿ ಬಂದು ಅದನ್ನು ಬೋರಲು ಹಾಕುತ್ತಾರೆ. ಹೆರಿಗೆ ಆದ ನಂತರ ಮತ್ತೆ ಇಲ್ಲಿಗೆ ಬಂದು ಪೂಜಿಸಿ ಅಂಗಾತ ಹಾಕುವ ಪದ್ಧತಿ ಆನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

೧೯. ಬಳಗಾನೂರು ಗ್ರಾಮದ ಈರಣ್ಣ ದೇವಸ್ಥಾನದ ಮುಂದೆ ಇರುವ ತ್ರುಟಿತ ಕಪ್ಪುಶಿಲೆಯ ಶಾಸನ

೧. ಶ್ರೀ ಜಯತ್ಯಾ ವಿಷ್ಕೃತಂ ವಿಷ್ಣೋರ್ವ್ವಾರಾಹಾಂ ಕ್ಷೋಭಿತಾರ್ಣ

೨. ವಂದಕ್ಷಿಣೋನ್ನತದಂ ಷ್ಟಾಗ್ರ ವಿಶಾಂತ ಭುವನಂವಪು॥

೩. . . . . ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿ ವಲ್ಲಭ
೪. ಮಹಾರಾಜಾಧಿರಾಜ ಪರಮೇಸ್ವರಂ ಪರಮಭಟ್ಟಾರಕಂ
೫. ವರು . . . .
೬. ಪುರಪರಮೇಸ್ವರ . . . . . .
೭. ಮುತ್ತರೋತ್ತರಾಭಿವೃದ್ಧಿ ಪ್ರವರ್ದಮಾನ ಚಂದ್ರಾರ್ಕ್ಕ
೮. . . ಹಾ . . . . . . ನ . .
೯. ಕ. ಲ . . . . . .
೧೦. ಖೊ . . ಖಂ . .
೧೧. . . . ಬಿಟ್ಟ . .
೧೨. ಟ್ಟನ . . . . . .
೧೩. ಮ . . . .
೧೪. ವಾಗಿ . . . .
೧೫. ಗೌಂ . . .
೧೬. . . . . ವಾವಿ

೧೭. . . . . ಹಳದಲಿ
೧೮. . . . . ಪಣ . .
೧೯. . . . . ಬಿಟ್ಟ
೨೦. . . . . ದರಿ . . ಸ .
೨೧. . . . . .ದ . . ಕ .
೨೨. . . . . ಮತ್ತರು .
೨೩. . . . . ದು . ಣ
೨೪. . . . . ದನಿ
೨೫. . . . . ರು ಗದ್ದೆ . .
೨೬. . . . . ಬಿ ಜೆ . .
೨೭. . . . . ಕೊಟ್ಟರು
೨೮. . . . . ಠನಣು .
೨೯. . . . . ವಾಡಿಯ
೩೦. . . . . ಂ ವಾಡಿಯ
೩೧. . . . . ಕಾ . . ವ್ವ . . ಹ

ಸಾರಾಂಶ : ಈ ಶಾಸನವು ಕ್ರಿ.ಶ. ೧೧-೧೨ ನೇ ಶತಮಾನಕ್ಕೆ ಸೇರುತ್ತದೆ. ಇದು ವಿಷ್ಣುವಿನ ಶ್ಲೋಕ ರಾಜನ ಬಿರುದಾವಳಿ, ಮತ್ತರು ಮೊದಲಾದ ಅಸ್ಪಷ್ಟ ವಿಷಯಗಳಿವೆ.

೨೦. ಬಾದರ್ಲಿ ಗ್ರಾಮದ ಅಮರೇಶಪ್ಪ ತಂ ಬಾಲಯ್ಯ ಎಂಬಾತನ ಹೊಲದಲ್ಲಿ (ಪೂಲದಿನ್ನಿ ಹನುಮಪ್ಪ ದೇವಸ್ಥಾನದ ಹತ್ತಿರ) ರುವ ಶಾಸನ



೧. ಶ್ರೀಮತುಮ . .
೨. ರಗಿನ ಮನ್ನೆಯ . .
೩. ಗ್ಗೆಯ

ಸಾರಾಂಶ : ಈ ಶಾಸನವು ಕಣಶಿಲೆಯಲ್ಲಿದ್ದು ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ಕೇವಲ ಮನ್ನೆಯ ಎಂಬ ವಿಷಯ ಮಾತ್ರ ತಿಳಿದುಬರುತ್ತದೆ.

---

* ಈ ಶಾಸನಗಳ ಕ್ಷೇತ್ರ ಕಾರ್ಯದಲ್ಲಿ ರಡ್ಡೆಪ್ಪ ಹಳ್ಳಿ ಬಳಗಾನೂರು, ಕೆ. ಖಾದರಬಾಷ, ಹನುಮಂತ ನಾಯಕ ಹನುಮಾಮಪುರ, ರಸೂಲ್ ಸಾಬ್, ನಬಿ ರಸೂಲ್, ಕೃಷ್ಣಾರೆಡ್ಡಿ ಬಜಾರ ಒಳಬಳ್ಳಾರಿ, ಬೀರಪ್ಪ ಕುರುಕುಂದಾ ತಿರುಪತಿ ಗುಡಗುಂಟಿ ಅಲಬನೂರು, ಸುರೇಶ ಬಳಗಾನೂರು, ಡಾ. ಶರೀಫ್ ಹಸಮಕಲ್, ಮೌನೇಶ ರಮತ್ನಾಳ, ಛತ್ರಪ್ಪ ದಿದ್ದಿಗಿ, ವಿರುಪಾಕ್ಷಿ ಮತ್ತು ಶೇಖರಪ್ಪ ಗುಕ್ಕ ಸೋಮಲಾಪೂರ, ನಾಗರಾಜ ಬನ್ನಿಗನೂರು, ದೇವಪ್ಪ ಮಾಟೂರು ಹಾಗೂ ಕೊಟ್ರೇಶಯ್ಯ, ಶಿಕ್ಷಕರು, ಒಳಬಳ್ಳಾರಿ ಮೊದಲಾದವರು ನೆರವಾಗಿದ್ದಾರೆ. ಅವರಿಗೆ ಕೃತಜ್ಞತೆಗಳು.

◆◆

೧೬

ರವೀಂದ್ರನಾಥ ಕೆ.

ಆನೆಗುಂದಿ ಮಠದ ಜಯರೇಖಾ ಪತ್ರ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗುಂದಿ ಮಠದ ಶ್ರೀ ಸದ್ಯೋಜಾತ ಸ್ವಾಮಿಗಳಿಗೆ ಕ್ರಿ.ಶ. ೧೫೨೦ರಲ್ಲಿ ಶ್ರೀಕೃಷ್ಣದೇವರಾಯರು ಹಾಗೂ ತ್ರಿಮತಸ್ಥರು, ಬ್ರಹ್ಮಸಭಾ ಸಮೂಹದವರು ಮತ್ತು ಮಹಾಮಂಡಲೇಶ್ವರರಾದ ವಿಜಯನಗರ ಸಂಸ್ಥಾಪನದ ಪೋಚಿರಾಜ, ಬಂಗಾರು ತಿಮ್ಮರಾಜು, ದಳವಾಯಿಯವರು ಬರೆಸಿಕೊಟ್ಟ ಜಯರೇಖಾ ಪತ್ರ. ಈ ಪತ್ರವನ್ನು ತಾಮ್ರಶಾಸನದಲ್ಲಿ ಬರೆಸಲಾಗಿದೆ. ೭೭ ಸಾಲುಗಳ ಈ ಪತ್ರಕ್ಕೆ ೧೫ ಜನರು ಸಾಕ್ಷಿ ಹಾಕಿದ್ದಾರೆ. ಇದು ಗಿಣಿಗೇರಿಯ ಸರಸ್ವತಿ ಪೀಠದಲ್ಲಿ ಸಂರಕ್ಷಣೆಗೊಂಡಿದೆ. ಕನ್ನಡ ವಿಶ್ವವಿದ್ಯಾಲಯ ಕೊಪ್ಪಳ ಜಿಲ್ಲಾ ಶಾಸನ ಸಂಪುಟದ ಪುಟ ೧೩೬, ಶಾಸನ ಸಂಖ್ಯೆ ೧೪೯ರಲ್ಲಿ ಪ್ರಕಟವಾಗಿದೆ.

ಜಯಪತ್ರದ ವಿಷಯ: ಆನೆಗುಂದಿ ಶ್ರೀ ರೂಥಾಚಾರ್ಯ ಮಠದ ಶ್ರೀ ಸದ್ಯೋಜಾತ ಸ್ವಾಮಿಗಳೊಂದಿಗೆ ಆನೆಗುಂದಿ ಮಠಕ್ಕೆ ನಾವೇ ಬಾಧ್ಯರು ಎಂದು ಅಂತರವಳ್ಳಿ ಮಠದ ನಿರಂಜನಯ್ಯ ಮತ್ತು ಮೂರು ಜಾವಯ್ಯನವರು ವ್ಯಾಜ್ಯ ಹೂಡಿರುವುದು ಇಲ್ಲಿಯ ವಿಷಯ. ಈ ವ್ಯಾಜ್ಯವನ್ನು ಆಲಿಸಿದ ಬ್ರಹ್ಮಸಭಾ ಸಮೂಹದವರು ಆನೆಗುಂದಿ ಮಠಕ್ಕೆ ನೀವೇ ಬಾಧ್ಯರುವೆಂಬುದಕ್ಕೆ ಸನದು ಪತ್ರಗಳಿವೆಯೇ? ಒಂದು ಪಕ್ಷ ಸನದು ಪತ್ರವನ್ನು ಕೊಡದೆ ನಿಮ್ಮ ವಾದವನ್ನು ಸಾಬೀತು ಮಾಡದೆ ಹೋದರೆ ಸರಕಾರಕ್ಕೆ ಗದ್ಯಾಣು ೩೦೦೯ ಗುನ್ನಗಾರಿಕೆ ನೀಡಬೇಕೆಂಬುದನ್ನು ಅವರಿಂದ ಬರೆಸಿಕೊಳ್ಳುತ್ತಾರೆ. ಇದೇ ರೀತಿ ಶ್ರೀ ರೂಥಾಚಾರ್ಯ ವಂಶಸ್ಥರಾದ ಶ್ರೀ ಸದ್ಯೋಜಾತ ಸ್ವಾಮಿಗಳೂ ಸಹ ಬ್ರಹ್ಮಸಭಾ ಸಮೂಹದವರಿಗೆ ಬರೆದುಕೊಡುತ್ತಾರೆ.

ವಾದ-ಪ್ರತಿವಾದವನ್ನು ಕೇಳಿ, ದಾಖಲೆಗಳನ್ನು ಪರಿಶೀಲಿಸಿದ ಬ್ರಹ್ಮಸಭಾ ಸಮೂಹದವರು "ಅಂತರವಳ್ಳಿ ನಿರಂಜನಯ್ಯ ಮತ್ತು ಮೂರು ಜಾವದಯ್ಯಾಗಳು ಹೂಡಿದ ತಕರಾರು ಉದ್ದೇಶಪೂರ್ವಕವಾಗಿ ಕೂಡಿದ್ದು, ಕ್ಷುದ್ರಜನರ ಮಾತು ಕೇಳಿ ವ್ಯಾಜ್ಯ ಹೂಡಿರುವುದನ್ನು ಅವರ ಬಾಯಿಂದಲೇ ಕೇಳಿ ತಿಳಿದುಕೊಳ್ಳುತ್ತಾರೆ ಮತ್ತು ಬರೆಸಿಕೊಂಡಂತೆ ತಪ್ಪಿತಸ್ಥರಿಂದ ೩೦೦೯ ವರಹ ದಂಡ ವಿಧಿಸಿ, ಜಯರೇಖಾ ಪತ್ರದಲ್ಲಿ "ಬಹುತಾರಾಭ್ಯವಾಗಿ ಆನೇಗುಂದಿ ಸಿಂಹಾಸನಸ್ಥರು ಯಾವ ದೇಶದಲ್ಲಿ ಇರುವಂಥ ವಿಶ್ವಕರ್ಮ ಪಾಂಚಾನನ ವರ್ಣಾಶ್ರಮಕ್ಕೆ ಮೂಲಪೀಠ ನಮ್ಮ ವಿಜಯನಗರ ರತ್ನಸಿಂಹಾಸನದಲ್ಲಿ ಇದ್ದಂಥ ಆದಿಮಠಸ್ಥರು ಎಂಬುದಾಗಿ, ಶ್ರೀ ರೂಥಾಚಾರ್ಯರೇ ಮೂಲ ಪೀಠಸ್ಥರು, ವಿಶ್ವಕರ್ಮ ಪಾಂಚನನ ವರ್ಣಾಶ್ರಕ್ಕೆ ಗುರುತ್ವಾಧಿಕಾರಿಗಳು ಎಂದು ನಿಶ್ಚಯಿಸಿ ಶ್ರೀ ರೂಥಾಚಾರ್ಯ ವಂಶಸ್ಥರಾದ ಸದ್ಯೋಜಾತ ಸ್ವಾಮಿಯವರಿಗೆ ಆಹಾರ, ವ್ಯವಹಾರ, ಪಾಪ, ಪ್ರಾಯಶ್ಚಿತ್ತವನ್ನು ಮಾಡುವುದಕ್ಕೆ ಬಾಧ್ಯರು," ಎಂದು ಜಯರೇಖಾ ಪತ್ರವನ್ನು ನೀಡುತ್ತಾರೆ.

ಪ್ರಾಧ್ಯಾಪಕರು
ಹಸ್ತಪ್ರತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
ಹೊಸಪೇಟೆ ತಾಲ್ಲೂಕು
ವಿಜಯನಗರ ಜಿಲ್ಲೆ
ಮೊ : ೯೪೪೮೭ ೬೪೯೪೬





ಜಯಪತ್ರದ ಚಾರಿತ್ರಿಕ ನಿಲುವುಗಳು: ಚರಿತ್ರೆಯ ದೃಷ್ಟಿಯಿಂದ ಕೆಲವು ನಿಲುವುಗಳನ್ನು ಜಯರೇಖಾ ಪತ್ರದಿಂದ ವಿದ್ವಾಂಸರ ಗಮನಕ್ಕೆ ತರುವುದಾದರೆ; ೧. ಶಾಸನ ದೊರೆತಿರುವ ಗಿಣಿಗೇರಿ ಸಂಸ್ಥಾನ ಮಠವನ್ನು ಈಗ 'ಸರಸ್ವತಿ ಪೀಠ' ಎಂದು ಕರೆಯುತ್ತಾರೆ. ೨. "ವಿದ್ಯಾನಗರಾದಿ ಪಂಚ ಸಿಂಹಾಸನಾಧಿಕಾರ" ಎಂಬ ಶಾಸನೋಕ್ತ ಉಲ್ಲೇಖದಿಂದಲೂ, ಶಾಸನದಲ್ಲಿ ವರ್ಣಿತನಾದ ಸದ್ಯೋಜಾತ ಸ್ವಾಮಿಗಳು ಹಂಪಿ, ಹಸ್ತಿನಾವತಿ, ಶಿರಶೃಂಗಿ(ಶೃಂಗೇರಿ? ಸಿರಸಂಗಿ?), ಕಾಶಿ, ಕಾಳಹಸ್ತಿ ಹೆಸರಿನ ಪಂಚ ಸಿಂಹಾಸನಗಳಿಗೆ ಪೂಜಿತರಾಗಿದ್ದರು. ಈ ಪಂಚ ಸಿಂಹಾಸನಗಳಿಗೆ ವಿಜಯನಗರಾದಿ ಎಂದರೆ ಹಂಪೆಯೇ ಮೂಲ ಎಂಬುದು ತಿಳಿದುಬರುತ್ತದೆ. ೩. ಬಹುಶಃ ಹಂಪಿಯಲ್ಲಿದ್ದ ಈ ಪೀಠ ಆನೇಗುಂದಿಗೆ ಸ್ಥಳಾಂತರವಾದಂತಿದೆ. ಇದಕ್ಕೆ ಪುರಾವೆಯೆಂದರೆ ವ್ಯಾಜ್ಯ ಹೂಡಿದ ಅಂತರವಳ್ಳಿ ಮಠಸ್ಥರು "ಸದರಿ ಆಚಾರ್ಯ ಪೀಠ ನಮ್ಮದು! ಆನೇಗುಂದಿ ಮಠಕ್ಕೆ ನಾವೇ ಬಾದ್ಯರು" ಎಂಬ ಉಲ್ಲೇಖದಿಂದ ಈ ಅಭಿಪ್ರಾಯಕ್ಕೆ ಬರಬಹುದಾಗಿದೆ. ೪. ಈ ಆನೇಗುಂದಿ ಪೀಠ ಪರಂಪರೆಯಲ್ಲಿ ಯಾದಗಿರಿ ಮಠ, ಬಳ್ಳಾರಿ ಜಿಲ್ಲೆಯ ಹಿರಿಯಾಳ ಮಠ, ದೇವದುರ್ಗ ಮಠ, ಶಹಪುರ ಏಕದಂಡಿಗಿ ಮಠ, ಮುದ್ದಾಬಳ್ಳಿ ಏಕದಂಡಿಗಿ ಮಠ, ಶಾಡ್ಲಗೇರಿ ಏಕದಂಡಿಗಿ ಮಠ – ಇತ್ಯಾದಿ ಹತ್ತಾರು ಪೀಠ ಪರಂಪರೆಗೆ "ಆನೆಗುಂದಿ" ಮೂಲಮಠ ಎಂಬುದು ಗಮನಿಸಬೇಕಾದ ಸಂಗತಿ. ೫. ಆನೇಗುಂದಿ ಪೀಠಕ್ಕೆ ಮೂಲವೆಂದರೆ ಯಾದಗಿರಿಯ ಗುರುಪೀಠ. ಯಾದಗಿರಿ ಗುರುಪೀಠದ ಮೂಲಪುರುಷ ಈ ಶಾಸನ ಉಲ್ಲೇಖಿತ ಶ್ರೀ ರೂಢಾಚಾರ್ಯ ಮಹಾಸ್ವಾಮಿಗಳು. ಈತನ ತಮ್ಮ ಸಾರಾರ್ಣಚಾರ್ಯರು. ಈ ಸಾರಾರ್ಣಚಾರ್ಯರ ಅಣ್ಣ ಕಾಳಹಸ್ತಾಚಾರ್ಯ ನಾಮಾಂಕಿತನಾದ ಸದ್ಯೋಜಾತ ಸ್ವಾಮಿಗಳು. ಎಂಬುದಾಗಿ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಕರ್ನಾಟಕದ ಇತಿಹಾಸದಲ್ಲಿ ಪೀಠಪರಂಪರೆಯ ವ್ಯಾಜ್ಯಗಳು ನಡೆದಿರುವುದಕ್ಕೆ ಅನೇಕ ತಾಮ್ರ ಶಾಸನಗಳು ದೊರೆಯುತ್ತವೆ. ಪ್ರಸ್ತುತ ಶಾಸನದ ಲಿಪಿಯ ಆಧಾರದ ಮೇಲೆ ಇದರ ಕಾಲವನ್ನು ೧೮ನೆಯ ಶತಮಾನವೆಂದು ಸಂಪಾದಕರು ನಿರ್ಣಯಿಸುತ್ತಾರೆ, ಇರಬಹುದು. ಆದರೆ ಶಾಸನ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡ ಕೂಟ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಿಕ್ಕೆ ಅವಕಾಶವಿದೆಯೆಂಬುದನ್ನು ಇಂಥ ತಾಮ್ರಶಾಸನಗಳ ಸಹಾಯದಿಂದ ನಿರೂಪಿಸಲಿಕ್ಕೆ ಸಾಧ್ಯವಾಗುತ್ತದೆ.

◆◆

೧೭

ನಿತಿನ್ ಹೆಚ್.ಪಿ.

ಕುದ್ರಿಗಿಯ ಅಪ್ರಕಟಿತ ಜೈನಶಾಸನಗಳು

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ೨೭ ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಜೈನಕೇಂದ್ರ ಸಾಳುವ ರಾಜಮನೆತನದ ನಗಿರೆ ರಾಜ್ಯದ ರಾಜಧಾನಿಯಾಗಿದ್ದ ಗೇರುಸೊಪ್ಪದಿಂದ ಸುಮಾರು ೭ ಕಿ.ಮೀ. ದೂರದಲ್ಲಿರುವ ಗ್ರಾಮ ಕುದ್ರಿಗಿ. ಈ ಗ್ರಾಮದ ದಿಗಂಬರ ಜಿನಮಂದಿರದ ಅವಶೇಷಗಳ ನಡುವೆ ೧೩ನೇ ಶತಮಾನಕ್ಕೆ ಸೇರಿದ ಜೈನಧರ್ಮದ ಒಂದು ಪಾದಪೀಠ ಶಾಸನ, ಮೂರು ನಿಶಧಿ ಶಾಸನಗಳು ಹಾಗೂ ಒಂದು ದಾನಶಾಸನ ಪತ್ತೆಯಾಗಿವೆ.

ಪಾದಪೀಠ ಶಾಸನ : ಸುಮಾರು ೨.೫ ಅಡಿ ಎತ್ತರವಿರುವ ಪರ್ಯಂಕಾಸನ ಭಂಗಿಯಲ್ಲಿರುವ ತೀರ್ಥಂಕರರ ಪಾದಪೀಠದಲ್ಲಿ ಶಾಸನವನ್ನು ಕಾಣಬಹುದು. ಪ್ರಸ್ತುತ ಭಿನ್ನವಾಗಿರುವ ತೀರ್ಥಂಕರ ವಿಗ್ರಹದ ಶಿರಭಾಗವಿಲ್ಲ, ತೀರ್ಥಂಕರರ ತಲೆಯ ಮೇಲಿದ್ದ ಮುಕ್ಕೊಡೆ, ಇಕ್ಕೆಲಗಳಲ್ಲಿರುವ ಆಕರ್ಷಕವಾದ ಚಾಮರಧಾರಿಗಳು ಧ್ವಂಸಗೊಂಡಿವೆ. ತೀರ್ಥಂಕರರ ಹಾಗೂ ಚಾಮರಧಾರಿಗಳ ಸುತ್ತ ಆಕರ್ಷಕವಾದ ಬಳ್ಳಿಗಳನ್ನು ಕಾಣಬಹುದು. ತೀರ್ಥಂಕರರ ಭುಜಗಳಲ್ಲಿ ತಲೆಯಿಂದ ಇಳಿಬಿಟ್ಟ ಗುಂಗುರು ಕೂದಲನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಈ ವಿಗ್ರಹವು ಆದಿನಾಥ ತೀರ್ಥಂಕರರ ವಿಗ್ರಹದಂತೆ ತೋರುತ್ತದೆ.

ಶಾಸನದ ಪಾಠ

೧ ಶ್ರೀ ಮೂಲ ಸಂಘ ದೇಸಿಯಗಣ ಸಮಯಾಚ

೨ ರಣರ ಗುಡ್ಡಿತಂಗಿಯ ಬರಸಿ ಮಾಡಿಸಿದ ನಾ

೩ ರಣ ಜಿನಚೈತ್ಯಾಲಯ ಮಂಗಳ ಮಹಾ ಶ್ರೀ

ಸಾರಾಂಶ

ಮೂರು ಸಾಲುಗಳಿರುವ ಈ ಶಾಸನವು "ಶ್ರೀ ಮೂಲಸಂಘ ದೇಶಿಯ ಗಣ ಸಮಯಾಚರಣರ ಶಿಷ್ಯರ ತಂಗಿಯು ಬರೆಸಿ ಮಾಡಿಸಿದ ನಾರಣಜಿನಚೈತ್ಯಾಲಯ" ಎಂದು ತಿಳಿಸುತ್ತದೆ.

ಶಾಸನದ ವಿಶ್ಲೇಷಣೆ

* **ಮೂಲಸಂಘ ದೇಶಿಯ ಗಣ** – ಶಾಸನದಲ್ಲಿ "ಮೂಲಸಂಘ ದೇಶೀಯ ಗಣ" ಎಂದಿದ್ದು ಈ ಪ್ರದೇಶದಲ್ಲಿ ಮೂಲಸಂಘದ ಪ್ರಭಾವವಿದ್ದುದಾಗಿ ತೋರುತ್ತದೆ.

೯೦೭, 'ರತ್ನತ್ರಯ'
೧೨ನೇ ಕ್ರಾಸ್, ೨ನೇ ಬ್ಲಾಕ್
೪ನೇ ಹಂತ, ಬಿ.ಟಿ.ಎಂ. ಲೇಔಟ್
ಬೆಂಗಳೂರು–೫೬೦ ೦೭೬
ಮೊ: ೯೮೮೦೮ ೧೮೮೬೯

* **ಸಮಾಯಾಚರಣ** – ಶಾಸನದಲ್ಲಿ 'ಸಮಾಯಾಚರಣರ' ಉಲ್ಲೇಖವಿದ್ದು ನಾವು ಸಮಯಾಚರಣರ ಉಲ್ಲೇಖವನ್ನು ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಹಿರೇಅಣಜಿಯ ನಿಸಿಧಿ ಶಾಸನವೊಂದರಲ್ಲಿ ಕಾಣಬಹುದು. ಬಹುಶಃ ಅವರು ವಿಹಾರ ನಿಮಿತ್ತ ಈ ಪ್ರದೇಶಕ್ಕೆ ಆಗಮಿಸಿದ್ದು ಇಲ್ಲಿನ ಶ್ರಾವಕರ ಮೇಲೆ ಇದ್ದ ಅವರ ಪ್ರಭಾವವನ್ನು ಇದು ತೋರುತ್ತದೆ.



* **ನಾರಣಜಿನ ಚೈತ್ಯಾಲಯ** – ಶಾಸನದಲ್ಲಿ 'ನಾರಣಜಿನ ಚೈತ್ಯಾಲಯ'ವೆಂದಿದ್ದು, ಇದು ಈ ವಿಗ್ರಹವು ನಾರಣ ಜಿನಾಲಯಕ್ಕೆ ಮಾಡಿಸಿ ಕೊಟ್ಟ ವಿಗ್ರಹವೆಂಬುದು ಸ್ಪಷ್ಟವಾಗುತ್ತದೆ.

* **ನಾರಣ ಪದದ ಬಳಕೆ** – 'ನಗಿರೆರಾಜ್ಯ'ಕ್ಕೆ ಸಂಬಂಧಿಸಿದಂತೆ ಮೂಡುಬಿದಿರೆಯಲ್ಲಿ ಎರಡು ಶಾಸನಗಳಿದ್ದು ಅದರಲ್ಲಿ ಒಂದು ಶಾಸನವು ಈ ರಾಜ್ಯದ ಅರಸುಮನೆತನದ ವಿವರಗಳನ್ನು ಒದಗಿಸುತ್ತದೆ. ಮತ್ತೊಂದು ನಗಿರೆಯ ಅರಸನಾದ "ನಾರಣಾಂಕ"ನ ವಿವರವನ್ನು ನೀಡುತ್ತದೆ. ಮೂಡುಬಿದಿರೆಯ ಈ ಎರಡು ಶಾಸನಗಳು ನಗಿರೆ ಅರಸುಮನೆತನದ ಇತಿಹಾಸವನ್ನು ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಒಯ್ಯುತ್ತದೆ. ಈ ಹಿನ್ನೆಲೆಯಲ್ಲಿ ಈ ಶಾಸನದಲ್ಲಿ ಬಳಸಿರುವ "ನಾರಣ" ಎಂಬ ಪದವು ನಗಿರೆಯ ಅರಸನಾದ ನಾರಣಾಂಕನ ಹೆಸರಿನಲ್ಲಿ ನಿರ್ಮಿಸಲಾಗಿದೆ ಎಂದು ನಿರ್ಧರಿಸಬಹುದು.

ಶಾಸನದ ಕಾಲ – ಶಾಸನದಲ್ಲಿ ಯಾವುದೇ ಕಾಲದ ಉಲ್ಲೇಖವಿಲ್ಲ. ಈಗಾಗಲೇ ಚರ್ಚಿಸಿದಂತೆ ಶಾಸನದಲ್ಲಿ 'ಸಮಯಾಚರಣರು' ಹಾಗೂ 'ನಾರಣ'ನ ಉಲ್ಲೇಖವಿದೆ. ಹಿರೇಅಣಜಿಯ ಶಾಸನದಲ್ಲಿ ಸಮಯಾಚರಣರ ಕಾಲ ಕ್ರಿ.ಶ. ೧೨೭೫, ಹಾಗೂ ನಾರಣ/ನಾರಣಾಂಕನ ಕಾಲ ಅಂದಾಜು ೧೩ನೇ ಶತಮಾನ. ಈ ಹಿನ್ನೆಲೆಯಲ್ಲಿ ಶಾಸನವು ೧೩ನೇ ಶತಮಾನಕ್ಕೆ ಸೇರಿದ್ದೆಂದು ತೀರ್ಮಾನಿಸಬಹುದು.

ನಿಶಧಿ ಶಾಸನಗಳು

ಇದಲ್ಲದೆ ಇದೇ ಬಸದಿಯ ಪರಿಸರದಲ್ಲಿ ಮೂರು ನಿಶಧಿ ಶಾಸನಗಳು ಕೂಡ ಪತ್ತೆಯಾಗಿವೆ.

ಜೈನಧರ್ಮದಲ್ಲಿ ಆಚರಿಸುವ ಹಲವು ಆಚರಣೆಗಳಲ್ಲಿ ಸಲ್ಲೇಖನ ವಿಧಿಯೂ ಸಹ ಒಂದು. ವ್ಯಕ್ತಿಯೊಬ್ಬರು ತಮ್ಮ ಜೀವನದ ಜವಾಬ್ದಾರಿಗಳನ್ನೆಲ್ಲ ಮುಗಿಸಿ ತಮಗೆ ಸಾವು ಅನಿವಾರ್ಯವೆಂದಾಗ ತೆಗೆದುಕೊಳ್ಳುವ ವ್ರತವನ್ನು 'ಸಲ್ಲೇಖನ ವ್ರತ'ವೆನ್ನುತ್ತಾರೆ. ಸಲ್ಲೇಖನ ವ್ರತವನ್ನು ಕೈಗೊಂಡ ವ್ಯಕ್ತಿಯು ಹಂತಹಂತವಾಗಿ ಆಹಾರ ಸೇವನೆಯನ್ನು ನಿಲ್ಲಿಸಿ ದೇವರ ಆರಾಧನೆಯಲ್ಲಿ ತಲ್ಲೀನರಾಗಿ ಕ್ರಮೇಣ ದೇಹತ್ಯಾಗ ಮಾಡಿ ಸಮಾಧಿ ಹೊಂದುತ್ತಾನೆ. ಈ ರೀತಿ ಸಮಾಧಿ ಹೊಂದಿದ ಪುಣ್ಯ ಜೀವಿಗಳ ಸ್ಮರಣಾರ್ಥವಾಗಿ ಸ್ಥಾಪಿಸುವ ಶಾಸನವನ್ನು 'ನಿಶದಿ' ಅಥವಾ 'ನಿಶಧಿ' ಎನ್ನುತ್ತಾರೆ. ಈ ಬಸದಿಯ ಆವರಣದಲ್ಲಿ ಮೂರು ನಿಶಧಿಗಳು ದೊರೆತಿರುವುದು ಈ ಪ್ರದೇಶದಲ್ಲಿ ಜೈನಧರ್ಮಾಚರಣೆಗಳು ಹಾಗೂ ಜೈನಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂದು ನಿರ್ಧರಿಸಲು ಸಹಾಯಕವಾಗುತ್ತವೆ.

ಮೊದಲ ನಿಶಧಿ ಶಾಸನ : ಈ ನಿಶಧಿಯಲ್ಲಿ ಒಟ್ಟು ಮೂರು ಭಾಗಗಳಿವೆ.

* **ಮೇಲ್ಭಾಗ** – ಈ ಭಾಗದಲ್ಲಿ ಪರ್ಯಂಕಾಸನಯುಕ್ತ ತೀರ್ಥಂಕರರ ವಿಗ್ರಹ, ಇಕ್ಕೆಲಗಳಲ್ಲಿ ಚಾಮರಧಾರಿಗಳು, ತಲೆಯ ಮೇಲೆ ಮುಕ್ಕೊಡೆ, ಸೂರ್ಯ-ಚಂದ್ರರು ಹಾಗೂ ತೀರ್ಥಂಕರರ ಬಲಭಾಗದಲ್ಲಿ ಮಹಿಳೆಯೊಬ್ಬಳು ಎರಡೂ ಕೈಗಳನ್ನು ಮುಗಿಯುತ್ತಿರುವ ಕೆತ್ತನೆ ಇದೆ.

* **ಮಧ್ಯಭಾಗ–** ಈ ಭಾಗದ ಎಡದಲ್ಲಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಜೈನಮುನಿಗಳು, ಮಧ್ಯದಲ್ಲಿ ಶಾಸ್ತ್ರಗ್ರಂಥವನ್ನಿಟ್ಟಿರುವ ಶ್ರುತಪೀಠ ಹಾಗೂ ಬಲಭಾಗದಲ್ಲಿ ಮಹಿಳೆಯೊಬ್ಬಳು ಎರಡೂ ಕೈಗಳನ್ನು ಮುಗಿಯುತ್ತ ಮುನಿಗಳೆಡೆಗೆ ನೋಡುತ್ತಿರುವ ಕೆತ್ತನೆ ಇದೆ.

* **ಕೆಳಭಾಗ –** ಈ ಭಾಗದಲ್ಲಿ ಎಂಟು ಸಾಲುಗಳಿರುವ ಶಾಸನದ ಕೆತ್ತನೆ ಇದೆ.



ಶಾಸನದ ಪಾಠ

೧ @. . . ಸಂವತ್ಸರದ

೨ . . ನಾಲ. . . ತ. . . .

೩ . . ಬಳಿ . . . . . . ಗ . ಸ

೪ ಮಯಾಚರಣದೇವಗುಡ್ಡ

೫ . . . .

೬ . ಸ ಮಕ್ಕಿರೆಸೊಪ್ಪೆಯ ಬಸ

೭ ದಿಗೆ ಎರಡು ಬರಅಕ್ಕಿಯ

೮ . . . ಗೆ . . ಬಿಟ್ಟ

* **ಶಾಸನದ ವಿವರ –** ಶಾಸನವು ಸವೆದಿದ್ದು ಶಾಸನದ ಕಾಲದ ಉಲ್ಲೇಖವಿರುವ ಅಕ್ಷರಗಳು ತ್ರುಟಿತವಾಗಿದೆ.

* **ಸಾರಾಂಶ –** ಸಮಯಾಚರಣ ಮುನಿಗಳ ಶಿಷ್ಯ (ಶಿಷ್ಯನ ಹೆಸರು ತ್ರುಟಿತವಾಗಿದೆ) ಮಕ್ಕಿರಸೊಪ್ಪೆಯ ಬಸದಿಗೆ ಎರಡು ಬರ ಅಕ್ಕಿಗೆ ದಾನ ಬಿಟ್ಟ ವಿವರವನ್ನು ನೀಡುತ್ತದೆ.

ಎರಡನೇ ನಿಶಧಿ ಶಾಸನ : ಈ ನಿಶಧಿಯಲ್ಲಿ ಒಟ್ಟು ಮೂರು ಭಾಗಗಳಿವೆ:

* **ಮೇಲ್ಭಾಗ –** ಈ ಭಾಗದಲ್ಲಿ ಪರ್ಯಂಕಾಸನಯುಕ್ತ ತೀರ್ಥಂಕರರ ವಿಗ್ರಹ, ತಲೆಯ ಇಕ್ಕೆಲಗಳಲ್ಲಿ ಚಾಮರಗಳು, ತಲೆಯ ಮೇಲೆ ಮುಕ್ಕೊಡೆ, ಸೂರ್ಯ–ಚಂದ್ರರ ಕೆತ್ತನೆ ಇದೆ.

* **ಮಧ್ಯಭಾಗ –** ಈ ಭಾಗದಲ್ಲಿ ಐದು ಸಾಲುಗಳಿರುವ ಶಾಸನದ ಕೆತ್ತನೆ ಇದೆ.

* **ಕೆಳಭಾಗ –** ಈ ಭಾಗದ ಎಡದಲ್ಲಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಜೈನಮುನಿಗಳಿದ್ದು ಅವರ ಮುಂಭಾಗದಲ್ಲಿ ಕಮಂಡಲ, ಮಧ್ಯದಲ್ಲಿ ಶಾಸ್ತ್ರಗ್ರಂಥವನ್ನಿಟ್ಟಿರುವ ಶ್ರುತಪೀಠ ಹಾಗೂ ಬಲಭಾಗದಲ್ಲಿ ಮಹಿಳೆಯೊಬ್ಬಳು ಎರಡೂ ಕೈಗಳನ್ನು ಮುಗಿಯುತ್ತ ಮುನಿಗಳೆಡೆಗೆ ನೋಡುತ್ತಿರುವ ಕೆತ್ತನೆ ಇದೆ.

ಶಾಸನದ ಪಾಠ

೧ ಸ್ವಸ್ತಿಶ್ರೀಪರ . . ಲ್ಯಾಣ . ಹದುದಲು . . .

೨ . . . ೬೨ನೆಯ ಸಂವತ್ಸರದಚೈತ್ರಬ

೩ ಹುಳ [ಪಾಡಿವ] ಬ್ರಹಸ್ಪತಿವಾರದಂದು

೪ . . ,ಸಮಯಾಚರಣದೇವರಗುಡ್ಡ

೫ . . . .

* **ಶಾಸನದ ವಿವರ–** ಐದು ಸಾಲುಗಳಿರುವ ಈ ಶಾಸನವು ಅಲ್ಲಲ್ಲಿ ಸವೆದಿದೆ.



* **ಸಾರಾಂಶ–** ೭೨ನೆಯ ಸಂವತ್ಸರದ ಚೈತ್ರ ಬಹುಳ ಪಾಡಿವ ಬೃಹಸ್ಪತಿವಾರದಂದು ಸಮಯಾಚರಣ ಮುನಿಗಳ ಶಿಷ್ಯ ಎಂದಿದೆ. ಉಳಿದ ಭಾಗವು ತ್ರುಟಿತವಾಗಿದೆ.

ಮೂರನೇ ನಿಶಧಿ ಶಾಸನ : ಈ ನಿಶಧಿಯಲ್ಲಿ ಒಟ್ಟು ನಾಲ್ಕು ಭಾಗಗಳಿವೆ.

* **ಮೇಲ್ಭಾಗ –** ಈ ಭಾಗದಲ್ಲಿ ಪರ್ಯಂಕಾಸನಯುಕ್ತ ತೀರ್ಥಂಕರರ ವಿಗ್ರಹ, ಇಕ್ಕೆಲಗಳಲ್ಲಿ ಚಾಮರಧಾರಿಗಳು, ತಲೆಯ ಮೇಲೆ ಮುಕ್ಕೊಡೆಯ ಕೆತ್ತನೆ ಇದೆ.

* ಎರಡನೇ ಹಾಗೂ ನಾಲ್ಕನೇ ಭಾಗದಲ್ಲಿ ಶಾಸನದ ಕೆತ್ತನೆ ಇತ್ತೆಂದು ತೋರುತ್ತದೆ. ಈಗ ಅಕ್ಷರಗಳೆಲ್ಲವೂ ತ್ರುಟಿತವಾಗಿವೆ.

* **ಮೂರನೇ ಭಾಗ –** ಈ ಭಾಗದ ಬಲದಲ್ಲಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಜೈನಮುನಿಗಳು, ಮಧ್ಯದಲ್ಲಿ ಶಾಸ್ತ್ರಗ್ರಂಥವನ್ನಿಟ್ಟಿರುವ ಶ್ರುತಪೀಠ ಹಾಗೂ ಎಡಭಾಗದಲ್ಲಿ ಮಹಿಳೆಯೊಬ್ಬಳು ಎರಡೂ ಕೈಗಳನ್ನು ಮುಗಿಯುತ್ತ ಮುನಿಗಳೆಡೆಗೆ ನೋಡುತ್ತಿರುವ ಕೆತ್ತನೆ ಇದೆ.

* **ನಿಶಧಿ ಶಾಸನಗಳ ಕಾಲ –** ಅಕ್ಷರಗಳು ಸ್ವಲ್ಪಮಟ್ಟಿಗೆ ಇರುವ ಎರಡು ನಿಶದಿಶಾಸನಗಳಲ್ಲಿ ಕಾಲದ ಉಲ್ಲೇಖವಿರುವ ಅಕ್ಷರಗಳು ತೃಟಿತವಾಗಿದ್ದರೂ ಕೂಡ ಶಾಸನದ ಲಿಪಿ ಹಾಗೂ ಸಮಯಾಚರಣ ಮುನಿಗಳ ಉಲ್ಲೇಖವಿದ್ದು, ಸಮಾಯಾಚರಣರು ಕಾಲ ೧೩ನೇ ಶತಮಾನ. ಈ ಹಿನ್ನೆಲೆಯಲ್ಲಿ ಎರಡೂ ನಿಶಧಿ ಶಾಸನಗಳ ಕಾಲವನ್ನು ೧೩ನೇ ಶತಮಾನವೆಂದು ನಿರ್ಧರಿಸಬಹುದು.

ದಾನ ಶಾಸನ

ಸುಮಾರು ೩.೫ ಅಡಿ ಎತ್ತರ ಹಾಗೂ ೨ ಅಡಿ ಅಗಲವಿರುವ ಐವತ್ತು ಸಾಲುಗಳ ಶಾಸನ.

ಶಾಸನದ ಪಾಠ

೧ ಶ್ರೀ ಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂಜೀಯಾ ತ್ರೈಳೋಕ್ಯ ನಾಥಸ್ಯ ಶಾಸನಂ ಜಿನಶಾಸನಂ

೨ ...ವಾ...ತಿಗಳಿನ..ಸುತಪುತವಿದೆನಿಸಿ ಸೊಗಯಿರಲಲಿಕ್ಕುರ್ಂ ಶುಭತರ ಭೋ

೩ .....ಳಿಂದುಂ ತ್ರಿಭುವನದೊಳು ಭೋಗವತಿಯಂದೆಂಬರು ನಗಿರಂ॥ ತುಳು ರ್ಯ್ಯಗೆಸೆವಲ . ಣ ವಿಳಾ .

೪ ......ಹಿತಚಂದನರೇಖಾ ತಿಳಕೋಲಮಮಂ ಭೂ ನದಿ ಜಳಖಾಲೆಂಯಾಗೆ ನಗಿರು ಸೊಗಯ ಸುತಿಕ್ಕುರ್ಂ॥

೫ ... ನೃಪರ ಮುಖದಂಗಳು ಧುರದೊಳು ರಿಪುಕೇಟಕ ಸೂರೆಕಾರರೆನಿ.ಸೆ ಬರುಹಕ.ಯೆಂದೂಕರಮಸ್ತ

೬ ....ನಸಾಳ್ವ ಭೂಭುಜರೆಲ್ಲಂ ॥ ಅಂನ್ತತಿಬಳದಿನತ.ಜಟ್ಟಿಗಳಪ್ಪರಸುಗಳ. ಕರುಂ ನಗಿರೆಲಮರರಾಜಧಾನಿ

೭ ಯಾಗಿರಾಜ್ಯಂಗೆಯ್ಯುತ್ತಿಮಿರ ಲಂತ ವರೊಳಂ ॥ ಅನುರೂಪ ಮ.ಯ ಬರಸಿಯೆನುನುಜ..ಜಂಗೆ

೮ [ಕೋ]ಟೆಯರಸಂಗೆಂದಾನ ನಜಭರ ನಲೆದು ಮದುವೆಯನನುನಯದಿಂ ಮಾದಲವರು ಸುಖದಿಂದಿ

೯ ರುತಂ ॥ ಪಡೆದರನುಕ್ರಮದಿಂದಂ ಬಡವಂ ನಿಧಿಗಾಣ್ಬಲೆಳದೆ ನಾಲ್ವರು ಸುತರಂ ಪೋಡವಿಯೊಳಲೆ ಚೆಲುವರ

೧೦ ನಾ ಸಿಡಿಲಂ ಪಡೆವಂತೆ [ವಿನತೆರುಪುನ ಪಗೆಲಂ ॥ ಪಿರಿಯಾತಂ ಹೊನ್ನತ ಸಂವರತನು ಗಂಗಂ

೧೧ ನಾತನಿಂ ಮಾಬಳಸಂ ನಿರುಪಮಗುಣಿ ಹಯ್ವರಸಂ ಸುರಗುರು ಪಿತೃ ಭಕ್ತ ವಿನಪ್ಪಧಾರೆ ಪೆರರೊಳಂ

೧೨ ಯಿಂಲೇ ನಾಲ್ವರೊಳಂ ಕಿರಿಯಾತಂ ಹಯ್ವರಸನಾತ ನರಸಿ ತಂಗಲೆರಾನಿಯಂ ಬಳಾಸತಿಯನ್ವಯೆಂ

೧೩ ತೆಂದಡೆ ॥ ಜನಕಂ ಸಂಸುತ ವರ್ದ್ಧಮಾನನ ತುಳಂ ಸಾಮಿತ್ಯರತ್ನಾಕರಂಜಿನಪೂಜ್ಯಂಣುತಹಯ್ವ.

೧೪ ದೊಳಲೆ ಪ್ರಖ್ಯಾತ ಪುಂಣ್ಯಾತ್ಮತಂ ಜಿನನಾಥರ್ಕ್ಕಳ ಸತ್ಯಭಾಸಡನ ಸದ್ಮಾಸಿತ್ಯಧಿ ಪೋ ಪ ಮಂಮನು

೧೫ .ಕಾರದೇವನೀತ ನೆನಿಪಂ ಸದ್ರೂಪ ಲಾಯ್ಯಾದಿವಿನ ನೆಗಳ್ದ ವರ್ದ್ಧಮಾನನ ವಿನುತೆ ಶ್ರೀ ಸೆಟ್ಟಕಬ್ಬೆದೇವಾಂ

೧೬ ಬಿಕೆ ತಾಂಜನನಿಯನೆ ಲೋಕವಂದ್ಯಳು ಜನಪತಿ ಹಯ್ವರಸನರಸಿ ತಂಗಲೇ ಜಗದೊಳು ॥ ಕ್ಷಿತಿಪತಿ ಹಯ್ವ

೧೭ ರಸಂಗಂ ಸತಿನುತೆತಂಗವ್ವೆರಾಣಿಗಂ ಜನಿಯಿಸಿದಂ ವೀತರಾದಿತ್ಯತೇಜಂ ಸುತರತ್ನಂ ನಾರಣಂ

೧೮ .ನಭಿನವರಾಮಂ ॥ ದಾನಚತುಷ್ಟಯ ಶಕ್ತಂ ಮಾನಿತಜಿನಭರಣಭಕ್ತ ನಾಗಮಯುಕ್ತಂ ಆನೆವೇಳಿ

೧೯ ದವಳ ತಿಳಕಂ ಶ್ರೀ ನಿಳಯಂ ನಾವಣಾಂಕವರ್ಜಿತ ಪುಣ್ಯಂ॥ ಇಂತು ಪುತ್ರ ಕಳತ್ರ ಭಂದವ ಪರಿಜ

೨೦ ನಾನ್ವಿತಂ ಹಯ್ವರಸದೇವೇಂದ್ರ..ಯೊಳು ರಾಜ್ಯಂಗೆಯ್ವತ್ತಂ ಸಕಳ. ಪಾಲಯ..ಗ್ರಹಾರ

೨೧ ಗಳ ಪುನಪ್ರತಿಷ್ಠೆಯಂ ಮಾಡಿ ಸಲು ತಮಿತು ಮತ್ತಂ ॥ ವೇದುದಾನಮನಿ..ತದಾ.

೨೨ ಮಂ ಪೈದಿತರಿಂದೆ ಕೇಳ್ವ ಸುರ……ಯೆಂದೆತ…ವಿಧಾನತರ್ಪ್ಪಣ…. ನ್ರಪ..

೨೩ ಸಂಯುತಂಮೋದಿನಿಯಂ ಮನೋ…ದವೆ…..ದಂಜಗ.ತಂ॥ ಪೂಜ್ಯ

೨೪ ಸಿಲೋಪವಾಸಂಗಳಂ ದಿನಂಗಳಾಗೆ

೨೫ .ಲೋಕಸುತ್ನನಾಗೆ ಹಯ್ವರಸಂ..ರಾಜ್ಯಂ…ಅರೆಗುಣದಕಣಿಯು

೨೬ ..ಯೋವಂ. ತಂಗ ಆ ರಾಣಿಯರ. . [ಆದಿ]ನಾಥ ಸ್ವಾಮಿಯ ಸ್ರತುಮಾಪ್ರತಿಷ್ಟೆಮಪ್ಪಚೈತ್ಯಾಲೆಯಮನಿ

೨೭ . ವಂತಾಗಿತಾರುಣ್ಯಂ ಮಾಪುದೆಂದು ಕರಕಮಳ..ಳಿತೆ ಯಾಗಿ ಬಿಜಯಂಗೆಯ್ಯೆ ॥ ಶ್ರೀ ಮಂಗಲೊ

೨೮ ರಾಣಿಯಪ್ರಿಯವರಂ ಹಯ್ವವೆನಿಪ..ಪ್ರಮಕಾಮಿಗದದುಖ್ಯಣ[ಕ?]ಕುದೀ[ರಾ?].ನನ[ದ?]ಕಂಬ ಸಮಿಬ್ಲೂ

೨೯ . . ಮೆಂಬಿನಿಂ ವೀರಚೈತ್ಯವಾಸಸ್ತನಾಪರ. . . .ತೇಜನಂ ನೆಲಸೆ . . . .

೩೦ ಕರವಾಗಎನಿಜಬಾಗನ್ನಯಸಿ..ಪ್ರ ಸ.ರಾದ್ರಿಯಂದಕ?ಯಂಲುಲಿಸುದಾನದದು...........

೩೧ ..ಜಿಯಂಡಿರಿದುಂದಚದುರಂದುತಯಯರಸಂದಿ.ಕರಾದಾರಮಂ.ಪರಮಾನಂದದಪೂ?ಯ

೩೨ ರಾಜನತುಳ ಸಾಹಿತ್ಯ ಸಬ್ಬೇಸ್ವರಲಯಿವಿದಾಂ .ನಸಾ.ಲೆಕನ ಕುದುರೆಗಳಂ ವೀರ ಭಟರ ನೋರ್ವನೆ ಪಿಡಿದಂ ಕದನದೊಳು

೩೩ ..ರಾರಾವಿಧಿತ ಶ್ರೀ ತಂಮಿಯರಸನು ನಿಜಕಲಿಯಂ॥

೩೪ .ವಿದಿತೋತ್ತಮ ಪ್ರಚ್ಚರದಾನ ವಿನದಿಸಮಸತನೆ ವಿದ್ಯಾವಿಭುಮಿತನೆಂದು ಸಲೆ ಬಂಣ್ಣಿಪುದೂರ್ವ್ವೆರೆತಂ

೩೫ .ರಾಜನ ಭಾವದಮೀಲೆಯಂ..ಸಾಸ್ತ ಸುಸಾರತೆಭಾರಸಾರಮಂ॥ ಸ್ವಸ್ತಿ ಸಮಸ್ತ ಪ್ರಸಸ್ತಿ

೩೬ ಸಹಿತಂ ಶ್ರೀ ಮನು ಮಹಾ ಮಂಡಳೇಸ್ವರಂ

೩೭ ಯವಾಕಣಪಯಕ್ತಿಕಜ..........ಸ್ಯ..

೩೮ .ಪ.ಕು...ಕೂದಗದಂದಅರಿ.ದನಾಗಿಕೌ

೩೯ ಗಿಯ........ಗಿ.ವರ

೪೦ ...ಯನಗಿರೆಕರೆಣಪಯಸಗರುಕು.ಲನದತನು.ಭೂ.ರ ನಗಿರೆಯ ಲಯ.ಯಮಂದು.ದಪಾಯ

೪೧ ...ಯಾ..ಕೃಯಲ..ನ.ಕುದುರೆ?ಬಪಾಅರಿಬಐ...ವಾಗಿ......ಕಲಾರದುನು.

೪೨ .ಪ.ಕು...ಕೂದಗದಂದಅರಿ.ದನಾಗಿಕೌ

೪೩ ಕುದುರೆ ಬಸದಿಗೆ ಬಿಟ್ಟನು॥ ಮತ್ತ ಬರಲಾರು ಮುಡಯ ಹೈವ್ವರಸ ಬಿಟ್ಟರು । ಮತ್ತೆ ಬರನೆ

೪೪ ಮುಡಯ ಪಾಂಡ್ಯದೇವನ ಮಗಳು ತಂಗಿಯಬ..ಬಿಟ್ಟರು । ಮತ್ತೆಕಡುಕೊ

೪೫ ಮುಳುವ ಬೊಡೆಯತಂಮಿಯರಸ ಬಿಟ್ಟನು । ಮತ್ತಾಕುಪ್ಪವೇರಿಯಕೋಟಿಯರಸ ಬಿಟ್ಟ

೪೬ ನು । ಮತ್ತತಂಮಿಸೆಟ್ಟಿ ಕಂವಳಿ ಸೆಟ್ಟಿ ಕಾಸ ಲೆಕನಮಕ್ಕೆಯೆರಡು ಮುಡೆ (ಟೆ?) ಬಿಟ್ಟನು । ಪುರುಸುವೆಡೆಯ

೪೭ ತಂವೆರಸಕೆಯರಸಂಗದೆವ ೧ ಬಿಟ್ಟುದು ಮುಡೆಗಗದೆ ೪೦ ಹಸೆ ಪಾಂಡ್ಯದೇವನ ಮಗಳು ತಂಗಿಯ ಬರಸಿ ಬೆಕ್ಕನಮಕ್ಕಿ

೪೮ ಮುರು ಮುಡೆಯ ಬಿಟ್ಟಳು ॥ ತಾ (ಬ)ತನ ಹವ್ವೆ ಗ..ಮೊಡೆಯ ಬಿಟ್ಟನು॥ ಸೋಮಕ್ಕ ಹೊನಿಯ ಮಾಡಿಸೆಟ್ಟಿಗ

೪೯ ವಾರ ೨ ಮೊಳೆಯ ಬಿಟ್ಟಳು ॥ ರಾಮಿಸೆಟ್ಟಿಯ ಮಂದಿತಾರು ಹವ್ವರಸೆಟಿ ಬೋಲಿಯ ಗ ಹ

೫೦ .....॥


ಸಾರಾಂಶ

ಶಾಸನವು ಜಿನಸ್ತುತಿಯೊಂದಿಗೆ ಆರಂಭವಾಗುತ್ತದೆ. ಆರಂಭದಲ್ಲಿ ನಗಿರೆ ರಾಜ್ಯದ ವರ್ಣನೆ ಮಾಡಲಾಗಿದೆ. ನಗಿರೆರಾಜ್ಯವು ಮೂರು ಲೋಕಗಳಲ್ಲೂ ಅತ್ಯುತ್ತಮವಾದ ರಾಜ್ಯವಾಗಿತ್ತೆಂದು ತಿಳಿಸುತ್ತದೆ. ಮುಂದುವರೆದು ಹಯ್ವರಸನ ಗುಣಗಾನ ಮಾಡುತ್ತಾ ಅವನು "ಶತ್ರುಗಳನ್ನು ಚೆಂಡಾಡಿದ, ಬೇರೆ ಬೇರೆ ರಾಜ್ಯಗಳನ್ನಾಳುತ್ತಿದ್ದ ಅತಿಬಲವಾಗಿ ಜಟ್ಟಿಗಳಾದ ರಾಜರುಗಳನ್ನು ಸೋಲಿಸಿದ್ದ. ಅವನು ನಗಿರೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ". ಮುಂದುವರೆದಂತೆ ಹಯ್ವರಸನೂ ಸೇರಿದಂತೆ ಒಟ್ಟು ನಾಲ್ಕು ಅಣ್ಣತಮ್ಮಂದಿರಿದ್ದರು ಎಂದು ವಿವರಿಸುತ್ತಾ ಅವರುಗಳ ಹೆಸರನ್ನು ನೀಡಲಾಗಿದೆ. ಹೊನ್ನತ, ಸಂವರತ, ಗಂಗ ಎಂಬ ಸಹೋದರರನ್ನು ಹೊಂದಿದ್ದ ಹಯ್ವರಸನು ಅಣ್ಣತಮ್ಮಂದಿರಲ್ಲಿ ಕಿರಿಯವನಾಗಿದ್ದನೆಂದು ವಿವರಿಸಿ, ಅವನು ತನ್ನ ತಂದೆ ಹಾಗೂ ಗುರುಹಿರಿಯರನ್ನು ಗೌರವಿಸುತ್ತಿದ್ದನು ಎಂದು ತಿಳಿಸಲಾಗಿದೆ. ಈ ಹಯ್ವರಸನ ರಾಣಿಯ ಹೆಸರು ತಂಗವ್ವೆ.

ಹಯ್ವರಸನ ರಾಣಿಯಾದ ತಂಗವ್ವೆ ಲೋಕವಂದ್ಯಳಾಗಿದ್ದಳು. ಆಕೆಗೆ ಜನಿಸಿದ ಮಗನು ವೀತರಾಗರಲ್ಲಿ ಅಂದರೆ ತೀರ್ಥಂಕರರಲ್ಲಿ ಇರುವಂತಹ ತೇಜಸ್ಸನ್ನು ಹೊಂದಿದ್ದಂತಹ ನಾರಣನು. ಜಿನೇಂದ್ರನ ಪಾದಕಮಲಗಳ ಭಕ್ತನಾಗಿದ್ದ ಅವನು ಚತುಷ್ಟಯ ದಾನಗಳನ್ನು ಮಾಡುವ ಶಕ್ತಿಯನ್ನು ಹೊಂದಿದ್ದನು. ಆನೆಯನ್ನು ಪಳಗಿಸುವಂತಹ ಸಾಮರ್ಥ್ಯವನ್ನು ಹೊಂದಿದ್ದನು. ಭೂಮಿಗೆ ಅವನು ಒಡೆಯನಂತಿದ್ದನು. ಇಂತಹ ಸದ್ಗುಣಗಳಿಂದ ಕೂಡಿದ್ದ ಹೆಂಡತಿ, ಮಕ್ಕಳು, ಬಂಧುಗಳನ್ನು ಹೊಂದಿದ್ದ ಹೈವರಸನ ರಾಜಧಾನಿಯು ದೇವೇಂದ್ರನ ರಾಜಧಾನಿಯಂತಿತ್ತು, ರಾಜ್ಯ ಸುಭಿಕ್ಷವಾಗಿತ್ತು.

ಹಯ್ವರಸನ ರಾಣಿಯಾದ ತಂಗಲೆಯು ಆದಿನಾಥ ಸ್ವಾಮಿಯ ಚೈತ್ಯಾಲಯವನ್ನು ನಿರ್ಮಿಸಿ ಪ್ರತಿಷ್ಠಾಪನೆಯನ್ನು ಮಾಡಿಸಿದ್ದಳು. ಈ ಕುದುರೆ ಬಸದಿಗೆ ಹಯ್ವರಸನು ದಾನವನ್ನು ಬಿಟ್ಟನು. ಅಲ್ಲದೆ ಪಾಂಡ್ಯದೇವನ ಮಗಳು; ತಂಮಿಯರಸಿ; ಕುಪ್ಪವೇರಿಯ ಕೋಟಿಯರಸ; ಪಾಂಡ್ಯದೇವನ ಮಗಳು, ಸೋಮಕ್ಕ, ರಾಮಿಸೆಟ್ಟಿ ಹಾಗೂ ಇನ್ನಿತರರು ಬಸದಿಗೆ ದಾನವನ್ನು ನೀಡಿದ ವಿವರಗಳನ್ನು ಶಾಸನವು ನೀಡುತ್ತದೆ.

ಶಾಸನದ ಕಾಲ – ಶಾಸನದಲ್ಲಿ ಯಾವುದೇ ಕಾಲದ ಉಲ್ಲೇಖವಿಲ್ಲದಿದ್ದರೂ ಕೂಡ ಲಿಪಿಯ ಆಧಾರದ ಮೇಲೆ ಇದನ್ನು ೧೨-೧೩ನೇ ಶತಮಾನದ ಶಾಸನ ಎಂದು ನಿರ್ಧರಿಸಬಹುದು. ಅಲ್ಲದೆ ಈ ಶಾಸನದಲ್ಲಿ ಉಲ್ಲೇಖಿಸಲಾಗಿರುವ ನಾರಣಾಂಕನ ಹೆಸರನ್ನು ಮೇಲೆ ಪ್ರಸ್ತಾಪಿಸಲಾಗಿರುವ ಪಾದಪೀಠ ಶಾಸನದಲ್ಲೂ ಕಾಣಬಹುದು. ಈಗಾಗಲೇ ತಿಳಿಸಿರುವಂತೆ ಪಾದಪೀಠ ಶಾಸನದ ಕಾಲ ಕ್ರಿ.ಶ. ೧೨೭೫ರ ಆಸುಪಾಸಿನದಾಗಿದ್ದು ಈ ಶಾಸನದಲ್ಲಿ ನಾರಣಾಂಕನ ಜನನ ಹಾಗೂ ಆತನ ತಂದೆ ತಾಯಿಯಾದ ಹಯ್ವರಸ – ತಂಗಲೆಯರ ಪ್ರಸ್ತಾಪವಿದೆ. ಈ ಹಿನ್ನೆಲೆಯಲ್ಲಿ ಈ ಶಾಸನದ ಕಾಲವನ್ನು ೧೩ನೇ ಶತಮಾನದ ಆದಿಭಾಗ ಅಥವಾ ಮಧ್ಯಭಾಗದ್ದೆಂದು ನಿರ್ಧರಿಸಬಹುದು.



ಗೇರುಸೊಪ್ಪೆ ಪ್ರದೇಶದಲ್ಲಿ ದೊರೆತ ಜೈನಶಾಸನಗಳು ೧೪ನೇ ಶತಮಾನದಿಂದ ಆರಂಭವಾಗುತ್ತದೆ. ಆದರೆ ಪ್ರಸ್ತುತ ೫ ಶಾಸನಗಳ ಶೋಧ ಹಾಗೂ ಸಂಶೋಧನೆಯು ಅಲ್ಲಿ ಲಭ್ಯವಿದ್ದ ಶಾಸನಗಳಿಗಿಂತ ಒಂದು-ಒಂದೂವರೆ ಶತಮಾನ ಹಳೆಯದಾಗಿದ್ದು ಈ ಪ್ರದೇಶದ ಇತಿಹಾಸ ಹಾಗೂ ಸಾಳುವ ಮನೆತನದ ವಂಶಾವಳಿಯನ್ನು ಕಟ್ಟಿಕೊಡುವಲ್ಲಿ ನೆರವಾಗುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಐದು ಶಾಸನಗಳ ಶೋಧವು ಬಹುಮುಖ್ಯವಾಗಿದೆ.

---

* ಶಾಸನಗಳನ್ನು ಓದಿ ಮಾರ್ಗದರ್ಶನ ನೀಡಿದ ಹರಿಹರದ ಡಾ. ರವಿಕುಮಾರ್ ಕೆ. ನವಲಗುಂದ, ಶಾಸನದ ಅಧ್ಯಯನಕ್ಕೆ ಸಹಕರಿಸಿದ ನನ್ನ ತಂದೆಯವರಾದ ಡಾ. ಹೆಚ್.ಎ. ಪಾರ್ಶ್ವನಾಥ್, ಸಿದ್ಧಾಪುರದ ಭೋಜರಾಜ ಜೈನ್, ಬೆಂಗಳೂರಿನ ಸಂದೇಶ್ ಜೈನರವರಿಗೆ ನನ್ನ ಕೃತಜ್ಞತೆಗಳು.

◆◆

೧೮

ವಸುಧ ವಿದ್ಯಾಧೀಶ

ಮರಕಲಘಟ್ಟದ ಅಪ್ರಕಟಿತ ಶಾಸನ

ಭಾಸ್ಕರ ಕ್ಷೇತ್ರ, ಶತಕವಾಟಪುರಿ ಎಂದು ಪ್ರಸಿದ್ಧಿ ಪಡೆದಿದ್ದ ಮುಳವಾಯಿ ಅಥವಾ ಮುಳಬಾಗಿಲು ಸ್ಥಳ ವಿಜಯನಗರ ಸಾಮ್ರಾಜ್ಯದ ಪ್ರಮುಖ ರಾಜ್ಯವಾಗಿತ್ತು. ಅಂಜನಾದ್ರಿ ಬೆಟ್ಟಗಳಿಂದ ಸುತ್ತುವರೆದಿದ್ದು ನೈಸರ್ಗಿಕವಾಗಿ ಸಾಂಸ್ಕೃತಿಕವಾಗಿ ಸಂಪದ್ಭರಿತ ನಾಡಾಗಿದ್ದಿತು. ದೇವಾಲಯಗಳ ನಾಡು ಎಂದೂ ಪ್ರಸಿದ್ಧವಾಗಿದ್ದು ಕನ್ನಡ ನಾಡಿನ ಹಲವು ರಾಜಮನೆತನಗಳ ಅಧಿಪತ್ಯಕ್ಕೆ ಒಳಪಟ್ಟಿದ್ದನ್ನು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಮುಳವಾಯಿ ರಾಜ್ಯದ ಹಲವು ನಾಡುಗಳಲ್ಲಿ ಅವನ್ಯನಾಡು ಸಹ ಒಂದು.

ಅವನ್ಯನಾಡು ೩೦ ಎಂದು ಕರೆಸಿಕೊಳ್ಳುತ್ತಿದ್ದ ಅವನಿಯು ಸುಮಾರು ೯–೧೦ನೇ ಶತಮಾನಗಳಿಂದಲೇ ಶಾಸನಗಳಲ್ಲಿ ಗುರುತಿಸಿಕೊಳ್ಳುತ್ತಿದ್ದು ಪ್ರಾಚೀನ ಬಾಣರಿಂದ, ಗಂಗರು, ನೊಳಂಬರು, ಕಾಡುವೆಟ್ಟಿಗಳು ಮುಂತಾದವರ ಆಳ್ವಿಕೆಗೆ ಒಳಪಟ್ಟಿದ್ದನ್ನು ಇಲ್ಲಿನ ಅಪಾರವಾದ ಶಾಸನಸಂಪತ್ತು ತಿಳಿಸಿಕೊಡುತ್ತದೆ. ಇಲ್ಲಿನ ದೇವಾಲಯಗಳು ಪುರಾಣ ಮತ್ತು ಇತಿಹಾಸವನ್ನು ಹೊಸೆಯುವ ಕೊಂಡಿಗಳಾಗಿ ನಿಂತಿವೆ. ಈ ಶಾಸನಗಳು ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಸಂಗತಿಗಳನ್ನು ತೆರೆದಿಡುತ್ತಿವೆ. ಅವನಿಯಿಂದ ಸುಮಾರು ೩ ಕಿ.ಮೀ. ದೂರದಲ್ಲಿರುವ ಗ್ರಾಮ ಮರಕಲಘಟ್ಟ ಅಥವಾ ಜೋಡಿಮರಕಲಘಟ್ಟ.

ಮರಕಲಘಟ್ಟ ಗ್ರಾಮದಲ್ಲಿ ಅಪ್ರಕಟಿತ ಶಾಸನವೊಂದು ದೊರೆತಿದ್ದು, ಈಗಾಗಲೇ ಇಲ್ಲಿನ ಕನ್ನಡ ಶಾಸನವೊಂದು ಕ್ರಿ.ಶ.೧೯೨೬ರ ಎಂ.ಎ.ಆರ್.ನ ವಾರ್ಷಿಕ ವರದಿಯಲ್ಲಿ ಪ್ರಕಟವಾಗಿದೆ. ಈ ಶಾಸನವು ವಿಜಯನಗರದ ಅರಸರಾದ ಶ್ರೀರಂಗರಾಯರ ಆಳ್ವಿಕೆಯ ಕಾಲಕ್ಕೆ ಸೇರುತ್ತಿದ್ದು, ಅವನಿಗ್ರಾಮದ ರಾಮಲಿಂಗೇಶ್ವರದೇವರ ಪಾದಪದ್ಮಾರಾಧಕರಿಗೆ ಮರಕಲಘಟ್ಟ ಗ್ರಾಮವನ್ನು ದಾನವಾಗಿ ಕೊಟ್ಟ ವಿಚಾರವನ್ನು ತಿಳಿಸುತ್ತದೆ. ಇದರಿಂದಾಗಿ ನಮಗೆ ಅವನಿಯ ಹಿನ್ನೆಲೆಯಲ್ಲಿ ಗ್ರಾಮವು ಗಳಿಸಿದ್ದ ಪ್ರಸಿದ್ಧಿಗೆ ನಿದರ್ಶನವು ದೊರೆತಂತಾಗುತ್ತದೆ.

ಆದರೆ ಇದಕ್ಕೂ ಮುಂಚಿತವಾಗಿ ಈ ಮರಕಲಘಟ್ಟ ಗ್ರಾಮವು ಪ್ರಖ್ಯಾತವಾಗಿತ್ತು ಎಂಬ ವಿಚಾರವನ್ನು ಈಗ ಹೊಸದಾಗಿ ಶೋಧನೆಯಾದ ಕನ್ನಡ ಶಾಸನದಿಂದ ತಿಳಿದುಬರುತ್ತದೆ. ಊರಬಾಗಿಲಿನಲ್ಲಿ ಈ ಶಾಸನವು ಇದ್ದು ಸುಮಾರು ೩.೯" ಎತ್ತರ ಹಾಗು ೨.೦" ಅಗಲವುಳ್ಳದ್ದಾಗಿದ್ದು, ಶಾಸನದ ಎರಡೂ ಬದಿಯಲ್ಲಿ ಬರೆಯಲಾಗಿದೆ. ಈ ಕೆಳಗೆ ಶಾಸನದ ಪಾಠ ಹಾಗೂ ಅದರ ಹಲವು ವಿಚಾರಗಳನ್ನು ಸಾದರಪಡಿಸಲಾಗಿದೆ.

೬೪೮, ೧೨ನೇ ಅಡ್ಡರಸ್ತೆ
ಈಸ್ಟ್ ವೆಸ್ಟ್ ಕಾಲೇಜ್ ರಸ್ತೆ
ಭಾರತನಗರ ಮೊದಲ ಹಂತ
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
ಮೊ: ೮೦೯೫೫ ೫೩೭೯೮


ಶಾಸನದ ಪಾಠ

ಮುಂಭಾಗ

೧ ಶುಭಮಸ್ತು ಶ್ರೀ ಜಯಾ
೨ ಭ್ಯುದಯ ಶಕವರುಷಗಳು ೧೪
೩ ೫೮ನೆಯ [ಮಂನ್ಮಥ] ಸಂವತ್ಸರ
೪ ದ ಮಾಗ [ಬ] ೧೪ಲು ಶ್ರೀಮನ್ಮ[ಹಾ]
೫ ರಾಜಾಧಿರಾಜ ರಾಜಪರಮೇಶ್ವರ [.]
೬ ವೀರಪ್ರತಾಪ ಅಚ್ಯುತರಾಯ ಮ
೭ ಹಾರಾಯರು ಪೃಥಿವೀರಾಜ್ಯಂಗೆಯು
೮ ತಿರಲು ಶ್ರೀಮಂನ್ಮಹಾಮಂಡ
೯ ಲೇಶ್ವರ ಸಲಕರಾಜಗಳ ಹಿರಿಯ
೧೦ ತಿರುಮಲರಾಜವೊಡೆಯರ ಕಾರ್ಯ
೧೧ ಕೆ ಕರ್ತರಾದ . ಳಿ ಸಲಿ . . .
೧೨ . . . . ಕಾಲ . . . . ಮು
೧೩ ಳುವಾಗಿಲ ರಾಜ್ಯಕೆ . ಸಲುವ
೧೪
೧೫

ಹಿಂಭಾಗ

೧ . ಗಟ್ಟ . ವೆಂಬ ಗ್ರಾಮವನು . . ಹಿರಿಯ
೨ ತಿರುಮಲ ವೇಂಕಟಾದ್ರಿಯವರಿಗೆ ಧರ್ಮವಾಗ
೩ ಬೇಕೆಂದು ಮುಳವಾಗಿಲಿನ ಸೋಮೇಶ್ವರದೇ
೪ [ವರ] ಸನ್ನಿಧಿಯಲು . . ಛತ್ರವನಿಕ್ಕುವುದಕೆ
೫ ಆ [ಶಿ]ತರಾತ್ರಿ ಪುಂಣ್ಯಕಾಲದಲು
೬ [ಮರ]ಕಲಗಟ್ಟವೆಂಬ ಗ್ರಾಮವನು ಧಾರೆ
೭ ಯನೆರೆದು ಕೊಟ್ಟೆವಾಗಿ ಆ ಗ್ರಾಮಕೆ
೮ ಸಲ್ಲುವ ಚತುಸ್ಸೀಮೆ ಒಳಗಾದ ಸಕ
೯ ಲ ಸುವರ್ಣದಾಯ . ಭತ್ತಾದಾಯ
೧೦ . . . . ನಡೆಯಲೇ
೧೧ (ಂನು)ಯೀ ಗ್ರಾಮವನು ಅಚಂದ್ರಾರ್ಕ
೧೨ ಸ್ಥಾಯಿಯಾಗಿ ನಡೆಯಬೇಕಾಗಿ
೧೩ ಇದಕೆ ಆರೊಬ್ಬರು ತಪ್ಪಿದವರು ಗಂ . .
೧೪ ತೀರದಲಿ ತಂಮದೇ[ತಾಯ್ಕಳ] ವಧಿ
೧೫ ಸಿದ ಪಾಪಕ್ಕೆ ಹೊಗಲುಳ್ಳವರು



ಎರಡೂ ಬದಿಯಲ್ಲಿ ಹದಿನೈದು ಸಾಲುಗಳಿಂದ ಕೂಡಿರುವ ಈ ಶಾಸನವು ಅಚ್ಯುತರಾಯ ಮಹಾರಾಯರು ವಿಜಯನಗರದ ಸಿಂಹಾಸನಾಧೀಶ್ವರರು ಆಗಿದ್ದಾಗ ಹಾಕಲಾಗಿದೆ. ಶಕವರುಷ ೧೪೫೮ನೆಯ ಮಂನ್ಮಥನಾಮ ಸಂವತ್ಸರದ ಮಾಗ ಬಹುಳ ೧೪(ಚತುರ್ದಶಿಯಂದು)ರಂದು ಅಂದರೆ ಕ್ರಿ.ಶ. ೧೫೩೬ರಲ್ಲಿ ಸಲಕರಾಜ ಎಂಬುವನು ಹಿರಿಯ ತಿರುಮಲ ವೇಂಕಟಾದ್ರಿಗೆ ಒಳಿತಾಗಬೇಕೆಂದು ಮುಳಬಾಗಿಲಿನ ಸೋಮೇಶ್ವರದೇವರ ಸನ್ನಿಧಿಯಲ್ಲಿ ಅನ್ನಛತ್ರ ಇರಿಸುವ ಸಲುವಾಗಿ ಮರಕಲಘಟ್ಟ ಗ್ರಾಮವನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಕೀರ್ತಿಪತಾಕೆಯನ್ನು ಉತ್ತುಂಗಕ್ಕೆ ಏರಿಸಿದ್ದ ಶ್ರೀಕೃಷ್ಣದೇವರಾಯರ ನಂತರ ಸಿಂಹಾಸನವೇರಿದ ಅಚ್ಯುತರಾಯ ಮಹಾರಾಯನು ಪ್ರಕ್ಷುಬ್ಧ ಪರಿಸ್ಥಿತಿಯಲ್ಲೂ ಸಮರ್ಥವಾಗಿ ಕ್ರಿ.ಶ. ೧೫೩೦/೩೧ ರಿಂದ ೧೫೪೧/೪೨ವರೆಗೂ ರಾಜ್ಯವಾಳಿದನು. ಅಚ್ಯುತರಾಯನಿಗೆ ವರದಾಂಬಿಕೆ ಎಂಬ ಪತ್ನಿಯು, ವೆಂಕಟಾದ್ರಿ ಎಂಬ ಮಗನು ಇದ್ದರು. ಅಚ್ಯುತರಾಯನ ಭಾವಮೈದುನರು ಸಲಕರಾಜ ತಿರುಮಲ ಮತ್ತು ಮಲಕರಾಜರು ವರದಾಂಬಿಕೆಯ ತಮ್ಮಂದಿರು. ಹಾಗೆ ಕ್ರಿ.ಶ. ೧೫೪೩ಕ್ಕೆ ಸೇರುವ ನಂಜನಗೂಡಿನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿರುವ ತಾಮ್ರಪಟವೊಂದರಲ್ಲಿ ಸಲಕರಾಜ ತಿರುಮಲನ ಪ್ರಸ್ತಾಪವಿದೆ.

ಸಲಕರಾಜ, ಮಲಕರಾಜರಿಗೆ ಸಂಬಂಧಿಸಿದ ಶಾಸನವು ಈ ಮುಂಚೆಯೇ ಮುಳವಾಯಿ ರಾಜ್ಯದ ಮದ್ದೇರಿ ಎಂಬ ಗ್ರಾಮದಲ್ಲಿ ದೊರೆತಿದೆ. ಅದು ಶಕವರುಷ ೧೪೬೧ನೆಯ ವಿಳಂಬಿ ಸಂವತ್ಸರದ ಚೈತ್ರಶುದ್ಧ ೧೦ ಅಂದರೆ ದಿನಾಂಕ ೧೦ ಮಾರ್ಚ್ ೧೫೩೮ಕ್ಕೆ ಸರಿಹೊಂದುತ್ತದೆ. ಅಚ್ಯುತರಾಯ ಮಹಾರಾಯರು ರಾಜ್ಯವಾಳುತ್ತಿದ್ದಾಗ ತಿರುಮಲರಾಯರಿಗೆ ಒಳಿತಾಗಬೇಕೆಂದು ಮದ್ದೇರಿ ಗ್ರಾಮದಲ್ಲಿ ಗೋಪಾಲಕೃಷ್ಣದೇವರ ಪ್ರತಿಷ್ಠೆ ಮಾಡಿ, ಆ ದೇವರ ಅಮೃತಪಡಿ ನೈವೇದ್ಯಕ್ಕಾಗಿ ಮದ್ದೇರಿ ಗ್ರಾಮವನ್ನು ದಾನವಾಗಿ ನೀಡಿದ ವಿಷಯ ತಿಳಿಯುತ್ತದೆ. ಆದರೆ ಪ್ರಸ್ತುತ ದೊರೆತಿರುವ ಮರಕಲಘಟ್ಟದ ಶಾಸನವು ಕ್ರಿ.ಶ. ೧೫೩೮ ಮೊದಲೇ ಸಲಕ-ಮಲಕರು ಈ ಪ್ರಾಂತ್ಯದಲ್ಲಿ ಹೊಂದಿದ್ದಿರಬಹುದಾದ ಪ್ರಾಬಲ್ಯವನ್ನು ಅರಿಯಲು ಸಹಾಯಕವಾಗುತ್ತದೆ. ಈ ಸಹೋದರರಿಬ್ಬರೂ ಅಚ್ಯುತರಾಯನ ಕೌಟುಂಬಿಕ ವಿಚಾರಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಲಕರಾಜನ ಸೋದರ ಮಲಕರಾಜನ ಹೆಸರೇ ಈ ಮರಕಲಘಟ್ಟ ಗ್ರಾಮವಿರಬಹುದೆಂದು ಅಂದಾಜಿಸಬಹುದಾಗಿದೆ. ಅಕ್ಷರ ಪಲ್ಲಟಗಳಾಗಿದ್ದು ಮಲಕನಘಟ್ಟ, ಮುಂದೆ ಮರಕಲ, ಜೋಡಿಮರಕಲಘಟ್ಟವಾಗಿದೆ ಎಂದು ಊಹಿಸಬಹುದಾಗಿದೆ.

ಸಲಕರಾಜ ತಿರುಮಲ ಮತ್ತು ಅವನ ಸಹೋದರ ಮಲಕರ ಇತಿಹಾಸವನ್ನು ಅವಲೋಕಿಸಿದಾಗ, ಸಲಕರಾಜನು ಮಹಾಮಂಡಳೇಶ್ವರನಂತೆ ಅಧಿಕಾರ ನಡೆಸಿದ್ದು ಕಾಣುತ್ತೇವೆ. ಈ ಸೋದರರಿಬ್ಬರೂ ತಮ್ಮ ಅಕ್ಕ ವರದಾಂಬಿಕೆಯ ಏಕೈಕ ಸಂತಾನ "ವೇಂಕಟಾದ್ರಿ"ಯನ್ನು ಸಂಚನ್ನು ಹೂಡಿ ಕೊಂದರೆಂಬ ಅಪಖ್ಯಾತಿಯನ್ನು ಹೊತ್ತವರಾಗಿದ್ದಾರೆ.

ಮುಳಬಾಗಿಲು ತಾಲೂಕಿನಲ್ಲಿ ದೊರೆತಿರುವ ಈ ಶಾಸನದಿಂದ ಸಲಕ, ಮಲಕರ ಇತಿಹಾಸ, ಪ್ರಾಬಲ್ಯಗಳ ಮೇಲೆ ಮತ್ತಷ್ಟು ಬೆಳಕು ಹರಿಸಬಹುದಾಗಿದೆ. ಅವರ ಆಡಳಿತ ವ್ಯಾಪ್ತಿಯಲ್ಲಿದ್ದ ಗ್ರಾಮಗಳ ಇತಿಹಾಸವೂ ತೆರೆದುಕೊಳ್ಳುತ್ತದೆ.

---

* ಮಾರ್ಗದರ್ಶಕರಾದ ಪ್ರೊ. ಕೆ.ಆರ್. ನರಸಿಂಹನ್ ಹಾಗೂ ಚಿತ್ರಗಳನ್ನು ಕೊಟ್ಟು ಸಹಕರಿಸಿದ ಕೆ. ಧನಪಾಲ್ ಅವರಿಗೆ ಕೃತಜ್ಞತೆಗಳು.

♦♦

ಶ್ಯಾಮಸುಂದರ ಗೌಡ

ಚಂದಾವರ ಕಾದಂಬರ ಅಪ್ರಕಟಿತ ಶಾಸನಗಳು

ಚಂದಾವರ ಕಾದಂಬರು ಕ್ರಿ.ಶ. ೧೧೮೩ರಿಂದ ೧೪೧೦ರವರೆಗೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಚಂದಾವರದಿಂದ ಆಳ್ವಿಕೆ ಮಾಡಿದಂತಹ ಒಂದು ರಾಜವಂಶ. ೨೦೦೮ ರವರೆಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟ, ಹೊನ್ನಾವರ, ಸಿದ್ದಾಪುರ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕುಗಳಲ್ಲಿ ಈ ವಂಶಕ್ಕೆ ಸೇರಿದ ಒಟ್ಟು ೨೪ ಶಾಸನಗಳು ಪತ್ತೆಯಾಗಿ ಪ್ರಕಟವಾಗಿವೆ. ತದನಂತರದ ದಿನಗಳಲ್ಲಿ ಈ ಮನೆತನಕ್ಕೆ ಸೇರಿದ ಶಾಸನಗಳು ಪ್ರಕಟವಾಗಿರಲಿಲ್ಲ. ಇತ್ತೀಚೆಗೆ ಅಂಕೋಲಾ ಮತ್ತು ಕುಮಟಾ ತಾಲೂಕಿನಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಚಂದಾವರ ಕಾದಂಬ ಮನೆತನಕ್ಕೆ ಸೇರಿದ ಒಂದು ತಿಗಳಾರಿ ಲಿಪಿಯ ಶಾಸನ ನಾಲ್ಕು, ಕನ್ನಡ ಲಿಪಿಯ ವೀರಗಲ್ಲು ಶಾಸನ ಹೀಗೆ ಒಟ್ಟು ೫ ಹೊಸ ಶಾಸನಗಳು ದೊರೆತಿದ್ದು, ಮೊದಲ ಬಾರಿಗೆ ಇಲ್ಲಿ ಪ್ರಕಟಗೊಳ್ಳುತ್ತಿವೆ.

ಶಾಸನ ಸಂಖ್ಯೆ ೧: ಜಿ.ಸಿ. ಕಾಲೇಜಿನ ಆವರಣದಲ್ಲಿರುವ ಚಂದಾವರ ಕಾದಂಬ ಮೊದಲನೇ ವೀರಕಾವದೇವನ ಸೇರಿದ ಕನ್ನಡ ಭಾಷೆ ತಿಗಳಾರಿ ಲಿಪಿಯಲ್ಲಿರುವ ಶಾಸನವು ಮೂಲತಃ ದಾನಶಾಸನವಾಗಿದ್ದು ಅದರ ಪಾಠ ಹೀಗಿದೆ:

ಪಾಠ

೦೧ ಸ್ವಸ್ತಿ ಶ್ರೀ ಸರ್ಬಾಭ್ಯುದಯಮಾಗಲು ಶಕಾಬ್ದ ಸಾಸಿರದ ನೂರೆಪ್ಪತ್ತೆಂಟನೆಯ ಅನ

೦೨ ಲ ಸಂವತ್ಸರ ಚೈತ್ರಮಾಸ ಅಶ್ವಿನಿ ನಕ್ಷತ್ರಮವಾಸೆ ಸೋಮವಾರ

೦೩ ದಲಿ ಚಂದ್ರಪುರದಲುಯಿದ್ದ ವೀರದೇವನ ಮೊಮ್ಮಗ ಕಾದಂಬ ಸಂತಾನಂ ಹೈವೆ

೦೪ ಬನವಾಸೆಯ ರಾಜ್ಯಾಧಿಕಾರಿ ಶ್ರೀಕಾಮದೇವ ಶ್ರೀ ಗೋಕರ್ಣದಲ್ಲಿ ಗ್ರಳದ

೦೫ ಕೋದಳಿ ಬಗೆಯಂ ಬೂರತಮಂನ್ನ ಮುಂಚೆ ಕೊಟ್ಟಿದ ಸಂಗಡಿಯ ಶಂಕ

೦೬ ರೋಪಾಧ್ಯಯರಿಂಗೆ ಬ್ರಹ್ಮಪರಿಯಾಗಿ ಧಾರೆಯನೆರೆದು ಗೋವಿಂದ

೦೭ ಪರಿಮಿತ ತ್ರಿವಿಕ್ರಮ ನಾರಾಯಣ ಭಟ್ಟರು ವಿಷ್ಣು ಭಟ್ಟರು ಕೇಶವ ಪರಿಮಿತ

೦೮ ದಾಮೋದರ ಭಟ್ಟರಿಂತಾರು ತಮಗೆಂದಿಹಗೆ ಆರುವ್ರತ್ತಿ ಈಯಗ್ರಹಾರಕ್ಕೆ

೦೯ ಸಿದ್ದಾಯವಾಗಿ ಕೊಟ್ಟ ಮಂದಕಂಡವಾರು ಹಿಲ್ದ ಸರ್ಬ್ಬಾದಾಯ ಈ ಧರ್ಮ್ಮ

ಸಾಯಿ ಲೀಡ್ಸ್, ಕಾರವಾರ ರಸ್ತೆ
ವಾಜಂತ್ರಿಕೇರಿ, ಅಂಕೋಲಾ-೫೮೧೩೧೪
ಉತ್ತರ ಕನ್ನಡ ಜಿಲ್ಲೆ
ಮೊ: ೬೧೯೦ ೨೪೧೮೭



೧೦ ಕ್ಕೆ, ದವಂಗೆ ಪಂಚಮಹಾಪಾತಕ ಗಂಗೆಯ ತಡಿಯ

೧೧ ಲಿ ನೂರೊಂದು ಕವಿಲೆಯ ಕೊಂದ ಪಾಪ

೧೨. ಮಂಗಳ ಮಹಾ ಶ್ರೀ ಶ್ರೀ ಶ್ರೀ

ಸಾರಾಂಶ: ಈ ಶಾಸನವು ಕ್ರಿ.ಶ. ೧೨೫೬ (ಶಕವರ್ಷ ೧೧೭೮) ನೆಯ ವರ್ಷದ್ದಾಗಿದ್ದು, ಚಂದಾವರ ಕಾದಂಬ ಮೊದಲನೇ ವೀರ ಕಾವದೇವನ ಆಳ್ವಿಕೆಯ ಅವಧಿಯದ್ದಾಗಿದೆ. ಅನಲ ಸಂವತ್ಸರದ ಚೈತ್ರಮಾಸದ ಅಮಾವಾಸ್ಯೆಯ ದಿನ ಚಂದ್ರಪುರದಲ್ಲು ಇದ್ದ ವೀರದೇವನ ಮೊಮ್ಮಗ ಕಾದಂಬ ಸಂತಾನ, ಹೈವೆ ಬನವಸೆಯ ರಾಜ್ಯಾಧಿಕಾರಿ ಶ್ರೀ ಕಾವದೇವನು ಸಂಗಡಿ ಗ್ರಾಮವನ್ನು ಬ್ರಹ್ಮಪುರಿಯನ್ನಾಗಿ ಮಾಡಿ ಅಲ್ಲಿನ ಭೂಮಿಯಿಂದ ಬರುವ ಆದಾಯವನ್ನು ಶಂಕರ ಉಪಾಧ್ಯಾಯರ ಮಕ್ಕಳಾದ ಗೋವಿಂದ ಪರಿಮಿತ, ತ್ರಿವಿಕ್ರಮ ಪರಿಮಿತ, ನಾರಾಯಣ ಭಟ್ಟ, ವಿಷ್ಣು ಭಟ್ಟ, ಕೇಶವ ಪರಿಮಿತ, ದಾಮೋದರ ಭಟ್ಟ ಈ ಆರು ಮಂದಿಗೆ ಸಮನಾಗಿ ಹಂಚಿ ಧಾರೆಯನ್ನೆರೆದು ಕೊಟ್ಟ ವಿಷಯ ತಿಳಿಸುತ್ತದೆ. ಈ ದಾನವನ್ನು ಹಾಳು ಮಾಡಿದವರಿಗೆ ಪಂಚಮಹಾಪಾತಕಗಳ ಪಾಪ ಬರುತ್ತದೆನ್ನುವ ಶಾಪಾಶಯವಿದೆ.

ಈ ಶಾಸನದ ಪಾಠವು ಈ ಹಿಂದೆ ಪ್ರಕಟವಾದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಕತಗಾಲ ಶಾಸನದ ಪಾಠಕ್ಕೆ ಬಹುವಾಗಿ ಹೋಲುತ್ತದೆ.[೧] ಕತಗಾಲ ಶಾಸನದಲ್ಲಿ ಕನ್ನಡ ಲಿಪಿಯಲ್ಲಿ ಬರೆದ ವಿಷಯವನ್ನು ಇಲ್ಲಿ ತಿಗಳಾರಿ ಲಿಪಿಯಲ್ಲಿ ಬರೆಯಲಾಗಿದೆ.

ಶಾಸನ ಸಂಖ್ಯೆ ೨ : ಗೋಳಿಬೀರಪ್ಪ ದೇವಸ್ಥಾನದ ಎದುರಲ್ಲಿರುವ (ಕೋಡಕಣಿ ಗ್ರಾಮ, ಕುಮಟಾ ತಾಲೂಕು, ಉತ್ತರ ಕನ್ನಡ ಜಿಲ್ಲೆ) ತ್ರಿಭುವನ ವೀರಕಾವದೇವನ ಕನ್ನಡ ಭಾಷೆ, ಕನ್ನಡ ಲಿಪಿಯ ವೀರಗಲ್ಲು ಶಾಸನದ ಪಾಠ ಹೀಗಿದೆ:

ಪಾಠ

೧. ಲದಂಕ ರಾಮ ಸತ್ಯರಾಧೇಯ ಸರಣಾಗತ ವಜ್ರಪಂಜರಂ ರಾಯ ಗಂಡ

೨. ರ ದಾವಣಿ ಕಾದಂಬ ಚಕ್ರವರ್ತ್ತಿ ಕಲಿಗಳಂಕುಶಂ ಶ್ರೀಮತು ತ್ರಿಭುವನವೀರ ಕಾ

೩. ವದೇವರಸನು ರಾಜ್ಯಂಗೈಯ್ಯುತ್ತಿದ್ದಲ್ಲಿ ಸರ್ಬ್ಬಧಾರಿ ಸಂವತ್ಸರದಲು ಅರಿ

೪. ಯರ ನಾರಣ ದೇವನ ದಂಡು ಬಂದು ಗುಂಡುಬಳೆಯಲು

೫. ಬಿಟ್ಟಿದೆ ಬಿಂಕಿ ನಾಯ್ಕನ ನಾಯ್ಕರು ಹಯ್ವೆಯ ನಾಡವರೂ ಕಾಳಗ

೬. ವ ಪಿಡಿದು ಕಾದಿದಂದು ಚಯಿತ್ರ ಬಹುಳ ತ್ರಯೋದಶಿ ಆ

೭. ದಿವಾರದಂದು ರಾಣಳ ಬಳಿಯ ಹುಲುವಾರನ ಮಗ ರಾಣುವ ಬ

೮. ಳಿಯ ಚಿಕುನಾ. . . . ಸೂತಯ ನಾಯ್ಕ ಕಾವದೇವರಸರ ನೋ

೯. ವೊದಿಂದ ಗುಂಡುಬಳೆಯ ಕಾಳಗದಲ್ಲಿ ಆರಿಯಲ

೧೦. ಬಲವ ಕಾದಿವೋರಚಿ ಕುದುರೆಯರಿಮಿದು ಸುರ

೧೧. ಲೋಕ ಪ್ರಾಪ್ತನಾದ ವೀರಗಲ್ಲು ಮಂಗಳ ಮಹಾ

೧೨. ಶ್ರೀ ಶ್ರೀ



ಸಾರಾಂಶ : ಗೋಳಿಬೀರಪ್ಪ ದೇವಸ್ಥಾನದ ಆವರಣದಲ್ಲಿರುವ ಶಕವರ್ಷ ೧೨೧೦ (ಕ್ರಿ.ಶ. ೧೨೮೮ ಏಪ್ರಿಲ್ ೧೮)ರ ಕಾಲದ ವೀರಗಲ್ಲು ಶಾಸನ. ಇದರ ಲಲಾಟದ ಭಾಗ ತುಂಡಾಗಿದೆ. ಆದ್ದರಿಂದ ಶಾಸನದ ಆರಂಭದ ಕೆಲವು ಸಾಲುಗಳು ತ್ರುಟಿತಗೊಂಡಿವೆ. ಶಾಸನವು ಸತ್ಯರಾಧೇಯ ಸರಣಾಗತ ವಜ್ರಪಂಜರಂ ರಾಯ ಗಂಡರ ದಾವಣಿ ಕಾದಂಬ ಚಕ್ರವರ್ತಿ ಕಲಿಗಳಂಕುಶಂ ಇತ್ಯಾದಿ ಬಿರುದುಗಳಿರುವ ತ್ರಿಭುವನ ವೀರ ಕಾವದೇವರಸನು ಆಳ್ವಿಕೆ ಮಾಡುತ್ತಿದ್ದ ಸರ್ಭಧಾರಿ ಸಂವತ್ಸರದಲ್ಲಿ ಅರಿಯ ನಾರಾಯಣದೇವನ ದಂಡು ಗುಂಡುಬಳೆಯಲ್ಲಿ ಬಂದು ಉಳಿದುಕೊಂಡಾಗ ಬಿಂಕಿಯ ನಾಯ್ಕನ ನಾಯ್ಕರು ಹಾಗೂ ಹೈವೆಯ ನಾಡವರೊಡನೆ ನಡೆದ ಯದ್ಧದಲ್ಲಿ ಚೈತ್ರ ಬಹುಳ ತ್ರಯೋದಶಿ ಆದಿವಾರದಂದು ರಾಣುವ ಬಳಿಯ ಹುಲುವಾರನ ಮಗ ಗುಂಡುಬಳೆಯ ಕಾಳಗದಲ್ಲಿ ಕಲಿತನದಿಂದ ಹೋರಾಡಿ ಕುದುರೆಯನ್ನು ಕೊಂದು ಸಾವನ್ನಪ್ಪಿದ ವಿಷಯ ತಿಳಿಸುತ್ತದೆ.

ಶಾಸನದಲ್ಲಿ ಶಕವರ್ಷದ ಉಲ್ಲೇಖ ನಮಗೆ ಸಿಗುವುದಿಲ್ಲ. ಆದರೆ ಶಾಸನದ ಲಭ್ಯವಿರುವ ಪಾಠವನ್ನು ಪೂರ್ತಿಯಾಗಿ ಸೂಕ್ಷ್ಮವಾಗಿ ಅವಲೋಕಿಸಿದಾಗ ತೇದಿಗೆ ಸಂಬಂಧಿಸಿದಂತೆ ಸರ್ವಧಾರಿ ಸಂವತ್ಸರದ ಚೈತ್ರ ಬಹುಳ ತ್ರಯೋದಶಿ ಆದಿವಾರ ಎನ್ನುವುದು ಬಿಡಿ ಬಿಡಿಯಾಗಿ ದೊರೆಯುತ್ತದೆ.[2] ಇದನ್ನು ಮತ್ತು ಶಾಸನೋಕ್ತ ಅರಸನ ಬಿರುದುಗಳನ್ನು ಗಮನದಲ್ಲಿಟ್ಟುಕೊಂಡು ಈ ಹಿಂದೆ ದೊರೆತು ಪ್ರಕಟವಾದ ಚಂದಾವರ ಕಾದಂಬರ ಶಾಸನಗಳನ್ನು ಪರಿಶೀಲಿಸಿದಾಗ ಕ್ರಿ.ಶ. ೧೨೬೪ರ ರಕ್ತಾಕ್ಷಿ ಸಂವತ್ಸರದಲ್ಲಿ ಹೊರಟ ಸಂಡಳ್ಳಿ ಶಾಸನವು ಮೊದಲನೇ ಕಾವದೇವನನ್ನು ತ್ರಿಭುವನ ಪ್ರತಾಪ ಚಕ್ರವರ್ತಿ ಎಂದು ಕರೆದಿದೆ.[3] ಕ್ರಿ.ಶ. ೧೨೮೮ರ ಮಲ್ಲಾಪುರ ಶಾಸನವು ಕಾವದೇವನ ಆಳ್ವಿಕೆಯ ೨೫ನೇ ವರ್ಷದಾಗಿದ್ದು ಅದು ಸರ್ವಧಾರಿ ಸಂವತ್ಸರವಾಗಿದೆ.[4] ಪ್ರಸ್ತುತ ಕೊಡ್ಕಣಿಯ ಹೊಸ ಶಾಸನವು ಸರ್ವಧಾರಿ ಸಂವತ್ಸರದಲ್ಲಿಯೇ ಹೊರಡಿಸಿದ್ದಾಗಿದೆ. ಈ ಶಾಸನಗಳೆಲ್ಲವನ್ನು ತಾಳೆನೋಡಿದಾಗ ಕೋಡ್ಕಣಿಯ ಶಾಸನವು ಶಕವರ್ಷ ೧೨೧೦ರ ಸರ್ಬಧಾರಿ ಸಂವತ್ಸರದ ಚೈತ್ರ ಬಹುಳ ತ್ರಯೋದಶಿ ಆದಿವಾರದಂದು ಹೊರಡಿಸಲಾಗಿದೆ. ಇದು ಕ್ರಿ.ಶ. ೧೨೮೮ರ ಎಪ್ರಿಲ್ ೧೮ ರವಿವಾರಕ್ಕೆ ಸರಿ ಹೊಂದುತ್ತದೆ.

ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತನಾದ ಅರಿಯರ ನಾರಣದೇವ ಸೇವುಣರ ನಾಯಕ ನಾರಣದೇವನೇ ಆಗಿರಬೇಕು. ಕಾರಣ ಮುಂದೆ ಐದು ತಿಂಗಳ ನಂತರ ಹೊರಟ ಹೊನ್ನಾವರ ತಾಲೂಕಿನ ಮಲ್ಲಾಪುರ ಶಾಸನವು ಸೇವುಣರ ನಾಯಕ ನಾರಣದೇವನು ಬಂದು ಚಂದಾವುರ ಹೊಕ್ಕನು.[5] ಎನ್ನುತ್ತದೆ. ಈ ಶಾಸನವು "ಹೈವೆಯ ನಾಡವರು" ಎಂದು ಉಲ್ಲೇಖಿಸುವುದು

ಮಹತ್ವದ ಸಂಗತಿಯಾಗಿದೆ. ಏಕೆಂದರೆ ನಾಡವರು ಎನ್ನುವುದು ಉತ್ತರಕನ್ನಡ ಜಿಲ್ಲೆಯ ಪ್ರಮುಖ ಜಾತಿ ಸಮುದಾಯವಾಗಿದೆ. ಈ ಸಮುದಾಯವನ್ನು ಉಲ್ಲೇಖಿಸುವ ಜಿಲ್ಲೆಯ ಮೊದಲ ಶಾಸನ ಇದಾಗಿದೆ. ಹೀಗೆ ಚಾರಿತ್ರಿಕ ಅಂಶಗಳ ಜೊತೆಯಲ್ಲಿಯೇ ಜನಾಂಗಿಕ ಅಧ್ಯಯನದ ಮೇಲೂ ಈ ಶಾಸನ ಬೆಳಕು ಚೆಲ್ಲುತ್ತದೆ. ಈ ಶಾಸನದ ಪಕ್ಕದಲ್ಲಿ ಒಂದು ಚಿತೆ ಸಹಿತವಾದ ಮಾಸ್ತಿ ಕಲ್ಲು ಸಹ ದೊರೆತಿದೆ. ಇದು ಪ್ರಸ್ತುತ ಶಾಸನ ತಿಳಿಸುವ ಮಡಿದ ವೀರನ ಪತ್ನಿ ಸಹಗಮನ ಮಾಡಿದ ಸ್ಮಾರಕವಾಗಿರಬಹುದು ಎಂದು ಊಹಿಸಲಾಗಿದೆ.

ಶಾಸನ ಸಂಖ್ಯೆ ೩ : ಜಿ.ಸಿ. ಕಾಲೇಜಿನ ಆವರಣದಲ್ಲಿರುವ ಮೊದಲನೇ ವೀರಕಾವದೇವನ ಕಾಲಕ್ಕೆ ಸೇರಿದ ಕನ್ನಡ ಭಾಷೆ, ಕನ್ನಡ ಲಿಪಿಯ ವೀರಗಲ್ಲು ಶಾಸನದ ಪಾಠ ಹೀಗಿದೆ:

ಪಟ್ಟಿಕೆ ೧

೧ . . . . ದರ ಮಹಾಮೋದಂ ರಣ

೨ . . . . ಬ ಅರಿರಾಯ ಗಂಡರ

೩ . . . . [ಗೋ]ಕರ್ಣ ಮಹಾಬಳ

ಪಟ್ಟಿಕೆ ೨

೪ . ದೇವರ ದಿಬ್ಯ ಶ್ರೀಸ್ವಸ್ತಿ ಪದುಮಾರಾಧಕರುಮಪ್ಪ ಕಾವದೇವರ್ಸರ ವಿಜ

೫ . ಯ ರಾಜ್ಯಾಭ್ಯುದಯ ೫೬ನೆಯ ಸರ್ವ್ಧಾರಿ ಸಂವತ್ಸರದ ಆಸಾಡ ಮಾಸ

೬ . ದ ಶು [ತ್ರ]ಯೊಧಿಶಿ ಆದಿತ್ಯವಾರದಂದು ರಣ ವಿಕ್ರಮ . ಪ . . ಗಂಡ

೭ . . . . ರಾಮ ರಣದಲು ಆಂ . . . ನಾಯಕ ನೋ . . . .

೮ . . . . . ಕಾದು ಹಾರಿಯೆ . . . .



ಸಾರಾಂಶ : ಇದೊಂದು ವೀರಗಲ್ಲು ಶಾಸನವಾಗಿದ್ದು ಶಕವರ್ಷ ೧೨೧೦ (ಕ್ರಿ.ಶ. ೧೨೮೮ ಜುಲೈ ೪)ಕ್ಕೆ ಸೇರಿದ್ದು, ಹಲವು ತುಂಡುಗಳಾಗಿ ಒಡೆದ ಶಿಲಾಫಲಕದ ಒಂದು ಭಾಗ. ತೀರಾ ತ್ರುಟಿತವಾದ ಈ ಶಾಸನದಿಂದ ಗೋಕರ್ಣ ಮಹಾಬಳ ದೇವರ ಆರಾಧಕರಾದ ಕಾವದೇವರಸರು ರಾಜ್ಯವಾಳುತ್ತಿದ್ದ ೫೬ನೇ ವರ್ಷದ ಸರ್ವಧಾರಿ ಸಂವತ್ಸರದ ಆಶಾಡ ಮಾಸದ ಶುದ್ಧ ತ್ರಯೋದಶಿ ಆದಿತ್ಯವಾರ ಎನ್ನುವ ವಿಷಯವಷ್ಟೇ ತಿಳಿಯುತ್ತದೆ. ಲಿಪಿ ಹಾಗೂ ಶಿಲ್ಪ ಲಕ್ಷಣಗಳನ್ನು ಗಮನಿಸಿ ಇದು ೧೨–೧೩ನೇ ಶತಮಾನ ಎಂದು ಅಂದಾಜಿಸಬಹುದು.

ಶಾಸನದಿಂದ ದೊರೆತ ಪಠ್ಯ ಮತ್ತು ಅದರ ಕಾಲದ ಅಂದಾಜಿನೊಂದಿಗೆ ಸಮಕಾಲೀನ ಇತರ ಶಾಸನಗಳನ್ನು ಪರಾಮರ್ಶಿಸಲಾಗಿ, ಮುಖ್ಯವಾಗಿ ಕತಗಾಲ[೬], ಸಂಡಳ್ಳಿ[೭], ಮಲ್ಲಾಪುರ[೮] ಶಾಸನಗಳ ಆಧಾರದಿಂದ ಇದು ಚಂದಾವರ ಕಾದಂಬರ ಮೊದಲನೇ ಕಾವದೇವರಸನ ಶಾಸನವಾಗಿದೆ ಮತ್ತು ಇದು ಕ್ರಿ.ಶ. ೧೨೮೮ರ ಜುಲೈ ೪ಕ್ಕೆ ಸರಿಹೊಂದುವ ಶಾಸನ ಎಂದು ತೀರ್ಮಾನಿಸಲಾಗಿದೆ.

ಶಾಸನ ಸಂಖ್ಯೆ ೪ : ಜಿ.ಸಿ. ಕಾಲೇಜಿನ ಆವರಣದಲ್ಲಿರುವ ಮೊದಲನೇ ವೀರಕಾವದೇವನ ಮತ್ತೊಂದು ವೀರಗಲ್ಲು ಶಾಸನವು ಕನ್ನಡ ಭಾಷೆ ತಿಗಳಾರಿ ಲಿಪಿಯಲ್ಲಿದೆ.

ಪಟ್ಟಿಕೆ ೧


೧. ಸ್ವಸ್ತಿ ಸಮಸ್ತ ಭುವನಾಧಿಶ್ವರಂ ಪರಬಳ ಸಾಧಕರುಮಪ್ಪ ಮಹಾಮಹೇಸ್ವ

೨. ರ ಜಯಂತಿ ಮಧುಕೇಶ್ವರ ದೇವರ ಲಬ್ದವರ ಪ್ರಸಾದ ಗೋ

೩. ಕರ್ಣ ಮಹಾಬಳ ದೇವರ ದಿಬ್ಯ ಶ್ರೀ ಪಾದ ಪದುಮಾರಾ

೪. ದಕರುಮಪ್ಪ ಸ್ವಸ್ತಿ ಶ್ರೀ ಕಾದಂಬ ಚಕ್ರವರ್ತಿ ಕಲಿಗಳಿಗಂ

೫. ಕುಸಂ ಗಂಡರದಾಣಿ ನಿಗಳಂಕ ಸೂಲ ಸತ್ಯೋಕ್ತಿ ಸರ



ಪಟ್ಟಿಕೆ ೨

೬. ಣಾಗತ ವಜ್ರಪಂಜರಮಪ್ಪ ಶ್ರೀ ವೀರ ಕಾವದೇವರಸರ ವಿಜಯ ರಾಜ್ಯಾಭ್ಯು

೭ ದಯದ ೫೬ ನೇಯ ಸರ್ವಧಾರಿ ಸಂವತ್ಸರದ ಶ್ರಾವಣ ಮಾಸ

೮. ದ . . . .

೯. ಶ್ರೀ ವೀರ ಕಾವದೇವರ . . . .

ಪಟ್ಟಿಕೆ ೩

೧೦. ದ . ಬೊಂಮ . . . . ಕಾದು . . .

೧೧. . . ಕಾರ್ತಿ . . .ಳಿರಿರಿದು . . ಸಗ್ಗಲೋಕ ಪ್ರಾಪ್ತನಾದನು . .

೧೨. . . . ನೆಯ ಕಾ . . . .

ಪಟ್ಟಿಕೆ ೪

೧೩ ಶ್ರೀ ಮತು ಕಾಮನ್ರಪಾಳಂ ಕುಸಮಂ . . . . ಸುರತ್ರಾಣಂ .

೧೪ ಲಹಸುತನಿಂ ಹಿಮಕಂಬ . . . .

೧೫. ಭಾಮಿಯ ನಾಡ ನಿತ್ಯ ಸುಗುಣ ಪ್ರತಾಪ ಮಂಗಳ

೧೬. ಮಹಾ ಶ್ರೀ ಶ್ರೀ ಶ್ರೀ

ಸಾರಾಂಶ : ಇದೊಂದು ವೀರಗಲ್ಲು ಶಾಸನವಾಗಿದ್ದು ತೀರಾ ತೃಟಿತವಾಗಿದೆ. ಶಕವರ್ಷ ೧೨೧೦ (ಕ್ರಿ.ಶ. ೧೨೮೮)ಕ್ಕೆ ಸೇರಿದ್ದು, ವೈಜಯಂತಿಯ ಮಧುಕೇಶ್ವರ ದೇವರ ವರಪ್ರಸಾದನಾದ, ಗೋಕರ್ಣ ಮಹಾಬಳ ದೇವರ ಆರಾಧಕರಾದ ಕಾವದೇವರಸನು ರಾಜ್ಯವಾಳುತ್ತಿದ್ದ ೫೬ನೇ ವರ್ಷದ ಸರ್ವಧಾರಿ ಸಂವತ್ಸರದ ಶ್ರಾವಣ ಮಾಸದ ಎನ್ನುವ ವಿಷಯವಷ್ಟೇ ತಿಳಿಯುತ್ತದೆ. ಲಿಪಿ ಹಾಗೂ ಶಿಲ್ಪ ಲಕ್ಷಣಗಳನ್ನು ಗಮನಿಸಿ ಇದು ೧೨-೧೩ನೇ ಶತಮಾನ ಎಂದು ಅಂದಾಜಿಸಬಹುದು. ಈ ಶಾಸನವನ್ನೂ ಸಹ ಈ ಪ್ರಬಂಧದ ಮೂರನೇ ಶಾಸನದ ಕಾಲನಿರ್ಣಯ ಮಾಡಿದ ವಿಧಾನದಲ್ಲಿಯೇ ಅಧ್ಯಯನ ಮಾಡಿ ಅವೇ ಶಾಸನಗಳ ಆಧಾರದಿಂದ್ ಇದು ಚಂದಾವರ ಕಾದಂಬರ ಮೊದಲನೇ ಕಾವದೇವರಸನ ಶಾಸನವಾಗಿದೆ ಮತ್ತು ಇದು ಕ್ರಿ.ಶ. ೧೨೮೮ಕ್ಕೆ ಸರಿಹೊಂದುವ ಶಾಸನ ಎಂದು ತೀರ್ಮಾನಿಸಲಾಗಿದೆ.

ಶಾಸನ ಸಂಖ್ಯೆ ೫. ಮೂರನೇ ಶಿವಚಿತ್ತ ವೀರಕಾವದೇವನ ಹನೇಹಳ್ಳಿಯ ವೀರಗಲ್ಲು ಶಾಸನ ೨

ಪಾಠ

೧. ಸ್ವಸ್ತಿ ಸಮಧಿಘಥ ಪಂ[ಚ] ಮಹಾಸಬ್ದ ಬನವಾಸೆಪುರ ವಾರಧೀಸ್ವರಂ



೨. [ವೈ]ಜಯಂತಿ ಮಧುಕೇಸ್ವರ ದೇವರ ವರ ಪ್ರಸಾದಿತಂ ಮ್ರಿಗ

೩. ಮಾಲ್ಯಾಧರಂ ಶ್ರೀ ಗೋಕರ್ಣ ಮಹಾಬಳೇಸ್ವರ ದೇವರ ಶ್ರೀಪಾದ ಪದ್ಮಾರಾಧಕಂ

೪. ಬೃತಾಟ ರಾಯಮಣಿಮುಕುಟ ಚೂಡಾಮಣಿ ಹುಸಿವರ ಸುಲಂ ನಿಗಲಂ

೫. ಕ ಮಲ್ಲ ಸತ್ಯರಾಧೇಯ ಸಿವಭಕ್ತರಾಯ ರಾಯ ಕಲಿಸಮರಕೋರ್ಮಜೀಯ್ಯ

೬ ಕ್ಕರ ವಜ್ರಪಂಜರಂ ರಾಯ ಗಂಡರ ದಾವಣಿ ಶ್ರೀ ವಿರಕಾವದೇವರಸ

ಕುಮಟಾ ತಾಲೂಕಿನ ಹನೇಹಳ್ಳಿ ಗ್ರಾಮದ ಹಡಸೆಬೀರ ದೇವಸ್ಥಾನದ ಆವರಣದಲ್ಲಿರುವ ವೀರಗಲ್ಲು ಶಾಸನ. ಕ್ರಿ.ಶ. ೧೩೮೫-೧೪೧೦ರ ಅವಧಿಯ ದಾನ ಶಾಸನ ಇದಾಗಿದ್ದು, ಇದರ ಕೆಳಗಿನ ಅರ್ಧ ಭಾಗ ತುಂಡಾಗಿದ್ದು ಮತ್ತು ಅಲಭ್ಯವಾಗಿದೆ. ಆದ್ದರಿಂದ ಶಾಸನದ ಬಹಳಷ್ಟು ಪಾಠ ನಷ್ಟವಾಗಿವೆ. ಶಾಸನದಲ್ಲಿ ಅರಸನ ಬಿರುದಾವಳಿಗಳು ಮಾತ್ರ ದೊರೆಯುತ್ತದೆ. ಶಾಸನದಲ್ಲಿ ಯಾವುದೇ ತೇದಿಯ ಉಲ್ಲೇಖಗಳು ದೊರೆಯುವುದಿಲ್ಲ. ಲಿಪಿ ಲಕ್ಷಣಗಳಿಂದ ಇದು ೧೩-೧೪ನೇ ಶತಮಾನದೆಂದು ಊಹಿಸಬಹುದಾಗಿದೆ. ಅದರೂ ಈ ಹಿಂದಿನ ಪ್ರಕಟಿತ ಶಾಸನಗಳನ್ನು ಅವಲೋಕಿಸಿದಾಗ ಕುಮಟಾ ತಾಲೂಕಿನ ಮಿರ್ಜಾನಿನಿಂದ ೫ ಕಿ.ಮೀ. ಪೂರ್ವಕ್ಕಿರುವ ನಾಗೂರಿನ ವಿಷ್ಣು ದೇವಾಲಯದ ಶಾಸನ[೧೦] ಲಿಪಿ ಹಾಗೂ ಬಿರುದುಗಳಲ್ಲಿ ಹೋಲಿಕೆಯಿರುವುದನ್ನು ಗಮನಿಸಬಹುದು. ಈ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಹನೇಹಳ್ಳಿಯ ಈ ಶಾಸನ ಕ್ರಿ.ಶ. ೧೩೮೫ರಿಂದ ೧೪೧೦ರವರೆಗೆ ಆಳಿದ ಚಂದಾವರ ಕಾದಂಬರ ಕೊನೆಯ ಅರಸ ಮೂರನೆಯ ಶಿವಚಿತ್ತ ವೀರಕಾವದೇವನ ಆಳ್ವಿಕೆಯ ಅವಧಿಯದ್ದಾಗಿದೆ ಎಂದು ಭಾವಿಸಲಾಗಿದೆ.

ಅಡಿಟಿಪ್ಪಣಿಗಳು

೧. ಗಣಪತಿ ಗೌಡ, ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೨೦.

೨. ಈ ಪ್ರಬಂಧದ ಶಾಸನ ಸಂಖ್ಯೆ ೨ರ ಪಾಠ ಗಮನಿಸಿ.

೩. ವೈ. ಉಮಾನಾಥ ಶೆಣೈ, ಚಂದಾವರ ಕಾದಂಬ ಕಾವದೇವರಸ: ಕೆಲವು ಹೊಸ ವಿಚಾರಗಳು ಮತ್ತು ಪರಿಹಾರಗಳು, ಇತಿಹಾಸ ದರ್ಶನ, ಸಂ. ೧೮, ಪುಟ ೨೨೭-೨೨೯.

೪. ಡಿಸ್ಕ್ರಿಪ್ಟೀವ್ ಲೀಸ್ಟ್ ಆಫ್ ಸ್ಟೋನ್ ಎಂಡ್ ಕಾಪರ ಪ್ಲೇಟ್ ಇನ್ಸ್ಕ್ರಿಪ್ಷನ್ಸ್, ೧೯೪೧-೪೨ ನಂ. ೨೨.

೫. ಪೂರ್ವೋಕ್ತ ೧. ಪುಟ ೧೨೧ ಮತ್ತು ಪೂರ್ವೋಕ್ತ ೪.

೬ ಪೂರ್ವೋಕ್ತ ೧.

೭. ಪೂರ್ವೋಕ್ತ ೩.

೮. ಪೂರ್ವೋಕ್ತ ೪.

೯. ಪೂರ್ವೋಕ್ತ ೧., ೩., ೪.,

೧೦. ಗಣಪತಿ ಗೌಡ, 'ಚಂದಾವರ ಕಾದಂಬ ವೀರಕಾವದೇವ ಮತ್ತು ಶಿವಚಿತ್ತ ವೀರಕಾವದೇವನ ನಾಗೂರು ಶಿಲಾಶಾಸನಗಳು', ಇತಿಹಾಸ ದರ್ಶನ ಸಂ. ೧೯, ಪುಟ ೬೩.

◆◆

೨೦

ರೇಣುಕಸ್ವಾಮಿ ಒಡೆಯರ್ ಬಿ.ಈ.

ಹೊಯ್ಸಳ ವಿನಯಾದಿತ್ಯನ ಹೊಸ ಶಾಸನ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಬಹುಭಾಗ ಮಧ್ಯಕಾಲೀನ ಯುಗದ ಆಡಳಿತ ವಿಭಾಗವಾದ ಆಸಂದಿ ನಾಡು-೫೦೦ ರ ವ್ಯಾಪ್ತಿಗೊಳಪಟ್ಟಿದ್ದಂತಹ ಪ್ರದೇಶವಾಗಿದೆ. ಇಲ್ಲಿ ಶಾತವಾಹನ, ಕದಂಬ, ಗಂಗರು, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯ, ಮೈಸೂರು ಒಡೆಯರು, ಪಾಳೆಯಗಾರರ ಕಾಲದ ಅನೇಕ ಐತಿಹಾಸಿಕ ಕುರುಹುಗಳಿವೆ. ಆಸಂದಿನಾಡಿನಲ್ಲಿ ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಅನೇಕ ಶಿಲಾಯುಗದ ನೆಲೆಗಳು, ಶಾಸನಗಳು, ಸ್ಮಾರಕ ಶಿಲ್ಪಗಳನ್ನು ಪತ್ತೆಹಚ್ಚಲಾಗಿದೆ. ಪ್ರಸ್ತುತ ಬಂಟಿಗನಹಳ್ಳಿ ಗ್ರಾಮದಲ್ಲಿ ಹೊಯ್ಸಳ ವಿನಯಾದಿತ್ಯನ ಕಾಲದ ಹೊಸ ಶಾಸನವನ್ನು ಶೋಧಿಸಲಾಗಿದೆ. ಈಗಾಗಲೇ ಕಡೂರು ತಾಲೂಕಿನ ಕಡೂರಹಳ್ಳಿ,[೧] ಕೇದಿಗೆರೆ,[೨] ಗರ್ಜೆ,[೩] ಬೀರೂರು,[೪] ಯಳ್ಳಂಬಳಸೆ,[೫] ಗ್ರಾಮಗಳಲ್ಲಿ ವಿನಯಾದಿತ್ಯನ ಶಾಸನಗಳು ದಾಖಲಾಗಿವೆ. ಪ್ರಸ್ತುತ ಬಂಟಿಗನಹಳ್ಳಿಯಲ್ಲಿ ಶೋಧಗೊಂಡ ಶಾಸನವನ್ನು ದಾಖಲಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಬಂಟಿಗನಹಳ್ಳಿ ಗ್ರಾಮವು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಹಿರೇನಲ್ಲೂರು ಹೋಬಳಿಗೆ ಸೇರಿದ ಕಾಮನಕೆರೆ ಗ್ರಾಮ ಪಂಚಾಯಿತಿಯ ಕಂದಾಯ ಗ್ರಾಮವಾಗಿದೆ. ತಾಲೂಕು ಕೇಂದ್ರವಾದ ಕಡೂರಿನಿಂದ ೬ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದಲ್ಲಿ ರಾಜ್ಯ ಹೆದ್ದಾರಿ-೨೫೩ ಹಾದುಹೋಗಿದೆ. ೨ ಕಿ.ಮೀ. ಅಂತರದಲ್ಲಿ ತುರುವನಹಳ್ಳಿ[೬] ಹಾಗೂ ೫ ಕಿ.ಮೀ. ಅಂತರದಲ್ಲಿ ಕೂಗೇಮಲ್ಲಪ್ಪನ ಗುಡ್ಡ[೭] ಎಂಬ ಶಿಲಾಯುಗದ ನೆಲೆಗಳಿವೆ. ಆಯುಧಜೀವಿಗಳ ಸಂಘವಾದ ಬಂಟಸಾಸಿರ್ವರು ನೆಲೆಸಿದ ಗ್ರಾಮವಾದ್ದರಿಂದ ಬಂಟಿಗನಹಳ್ಳಿ ಎಂಬ ಸ್ಥಳನಾಮ ಬಂದಿದೆ. ಬಂಟಿ+ಇಗ+ನ+ಹಳ್ಳಿ> ಬಂಟಿಗನಹಳ್ಳಿ>ಬಂಟಿಗನಳ್ಳಿ ಎಂದಾಗಿದೆ.[೮] ಇಂದು ಕೆಲವು ಸರ್ಕಾರಿ ದಾಖಲೆಗಳಲ್ಲಿ ಬಂಟಿಗನಹಳ್ಳಿ, ಬಂಟಗನಹಳ್ಳಿ ಎಂದಿದೆ. ಸ್ಥಳೀಯರು ಎರಡೂ ಸ್ಥಳನಾಮಗಳನ್ನು ಬಳಸುತ್ತಿರುವರು. ಬಂಟಸಾಸಿರ್ವರು ರಾಜನ ತುರ್ತು ಆಹ್ವಾನ ಬಂದಾಗ ದೇಶರಕ್ಷಣೆಗೆ ಮುಂದಾಗುತ್ತಿದ್ದರು. ಈ ಪರಿಸರದ ಮಧ್ಯಯುಗೀನ ಕಾಲದ ಪ್ರಮುಖ ಗ್ರಾಮಗಳಾದ ಆಸಂದಿ, ಹಿರೇನಲ್ಲೂರು, ಕೆರೆಸಂತೆ ಗ್ರಾಮಗಳಿಗೆ ಈ ಸ್ಥಳವು ಸಮೀಪದಲ್ಲಿರುವುದರಿಂದ ದೇಶರಕ್ಷಣೆಗೆ ಅನುಕೂಲವಾಗಲೆಂದು ಇಲ್ಲಿ ಬಂಟಸಾಸಿರ್ವರು ನೆಲೆಸಿರಬಹುದು.

ಗ್ರಾಮದ ಎಂಟನೆಯ ಶತಮಾನದ ಶಾಸನವು ವಿದ್ಯಾಧರನಾಡಿನಲ್ಲಾದ ಕದನದ ಮಾಹಿತಿಯನ್ನು ತಿಳಿಸುತ್ತದೆ.[೯] ಈ ವಿದ್ಯಾಧರನಾಡು ಆಸಂದಿನಾಡು-೫೦೦ರ ಭಾಗವಾಗಿತ್ತು.[೧೦] ಈ ಕದನದ ಬಗ್ಗೆ ತಿಳಿಸುವ ಶಾಸನ ಹಾಗೂ ಇಲ್ಲಿರುವ ಕೋಟೆಯ

ಉಪನ್ಯಾಸಕರು, ಇತಿಹಾಸ ವಿಭಾಗ
ಶ್ರೀ ಜಗದ್ಗುರು ರೇಣುಕಾಚಾರ್ಯ
ಕಾಲೇಜು, ರೇಸ್‌ಕೋರ್ಸ್ ರಸ್ತೆ
ಬೆಂಗಳೂರು-೫೬೦೦೦೯
ಮೊ: ೯೭೪೦೦ ೦೮೩೦೭

ಅವಶೇಷಗಳು ಇಲ್ಲಿ ಹೋರಾಟಗಳು ನಡೆಯುತ್ತಿದ್ದವೆಂಬುದಕ್ಕೆ ಆಧಾರಗಳಾಗಿವೆ. ಈ ಹಿನ್ನೆಲೆಯಲ್ಲಿ ದೇಶರಕ್ಷಣೆಗಾಗಿ ಇಲ್ಲಿ ಬಂಟಸಾಸಿರ್ವರು ನೆಲೆಸಿರಬಹುದು. ಪ್ರಸ್ತುತ ಶೋಧಿಸಿರುವ ಹೊಯ್ಸಳ ಕಾಲದ ಹೊಸ ಶಾಸನವು ಶಿಥಿಲವಾಗಿರುವ ಈಶ್ವರ ದೇವಾಲಯದ ಮುಂಭಾಗದಲ್ಲಿದೆ.

ಶಾಸನಶಿಲ್ಪ ವಿವರಣೆ

ಶಾಸನವು ಸುಮಾರು ಐದು ಅಡಿ ಎತ್ತರದ ಗ್ರಾನೈಟ್ ಕಲ್ಲಿನಲ್ಲಿದೆ. ಹೊಯ್ಸಳರು ದೇವಾಲಯಗಳ ನಿರ್ಮಾಣ ಮತ್ತು ಶಾಸನಗಳನ್ನು ಹಾಕಿಸಲು ಬಳಪದ (ಸೋಪ್ ಸ್ಟೋನ್) ಕಲ್ಲನ್ನು ಬಳಸಿರುವರು. ಗ್ರಾನೈಟ್ ಕಲ್ಲಿನಲ್ಲಿ ದೇವಾಲಯಗಳನ್ನು ನಿರ್ಮಿಸಿರುವ ಉದಾಹರಣೆಗಳೂ ಇವೆ. ಆದರೆ ಗ್ರಾನೈಟ್ ಕಲ್ಲಿನಲ್ಲಿ ಶಾಸನಗಳನ್ನು ಹಾಕಿಸಿರುವುದು ಅಪರೂಪವಾಗಿದೆ. ಈ ಗ್ರಾಮವು ಬೆಟ್ಟ-ಗುಡ್ಡಗಳ ಪ್ರದೇಶದ ಸಮೀಪವಿದೆ. ಸ್ಥಳೀಯವಾಗಿ ಗ್ರಾನೈಟ್ ಹೇರಳವಾಗಿ ಲಭ್ಯವಿರುವುದರಿಂದ ಶಾಸನವನ್ನು ಗ್ರಾನೈಟ್ ಕಲ್ಲಿನಲ್ಲಿ ಹಾಕಿಸಿದ್ದಾರೆ. ಇದು ದಾನಶಾಸನವಾಗಿದ್ದು, ಒಟ್ಟು ೨೩ ಸಾಲುಗಳನ್ನು ಒಳಗೊಂಡಿದೆ. ಶಾಸನದ ಶಿರೋಭಾಗವು ಅರ್ಧ ಗೋಳಾಕೃತಿಯಲ್ಲಿದ್ದು ಮಧ್ಯಭಾಗದಲ್ಲಿ ಶಿವಲಿಂಗ, ಬಲಭಾಗದಲ್ಲಿ ನಂದಿ, ಎಡಭಾಗದಲ್ಲಿ ಸೂರ್ಯ-ಚಂದ್ರರ ಉಬ್ಬುಶಿಲ್ಪಗಳಿವೆ.

ಶಾಸನದ ಲಿಪಿ, ಭಾಷೆ ಮತ್ತು ಕಾಲ

ಶಾಸನವು ಕನ್ನಡ ಲಿಪಿ ಮತ್ತು ಭಾಷೆಯ ಗದ್ಯರೂಪದಲ್ಲಿದೆ. ಶಕವರ್ಷ ೧೦೧೯ ನೆಯ ಧಾತು ಸಂವತ್ಸರದ ಆಷಾಡದ ಪೌರ್ಣಮಾಸೆ ಸೋಮವಾರದಂದು ಹಾಕಿಸಿದ ಶಾಸನವಾಗಿದೆ. ತೇದಿಯು ಕ್ರಿ.ಶ. ೧೦೯೬ ಜುಲೈ ೮ ಮಂಗಳವಾರಕ್ಕೆ ಸಮನಾಗುತ್ತದೆ. ಶಾಸನದಲ್ಲಿ ರಾಜನ ಹೆಸರನ್ನು ಉಲ್ಲೇಖಿಸಿಲ್ಲ. ಕೇವಲ 'ತ್ರೃಭುವನಮಲ್ಲ ಪೊಯ್ಸಳ ದೇವರು' ಎಂದಿದೆ. ಹೊಯ್ಸಳರ ವಿನಯಾದಿತ್ಯ, ಒಂದನೇ ವೀರಬಲ್ಲಾಳ, ವಿಷ್ಣುವರ್ಧನ, ಒಂದನೇ ವೀರನರಸಿಂಹ, ಎರಡನೇ ಬಲ್ಲಾಳ, ಎರಡನೇ ನರಸಿಂಹ ಇವರುಗಳಿಗೆಲ್ಲಾ ತ್ರಿಭುವನಮಲ್ಲ ಎಂಬ ಬಿರುದಿತ್ತು.[೧೧] ಶಾಸನದಲ್ಲಿ ಶಕವರ್ಷ ೧೦೧೯ ಧಾತು ಸಂವತ್ಸರದ ಉಲ್ಲೇಖವಿದೆ. ಈ ಕಾಲಮಾನದಲ್ಲಿ ವಿನಯಾದಿತ್ಯನು (೧೦೪೫-೧೦೯೮)[೧೨] ಆಳ್ವಿಕೆ ನೆಡೆಸುತ್ತಿದ್ದರಿಂದ ಇದು ವಿನಯಾದಿತ್ಯನ ಕಾಲದ್ದಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಈತನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಹಾಕಿಸಿದ ಶಾಸನವಾಗಿದೆ.



ಶಾಸನದ ಪಾಠ

೧ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೃಪೃತಿವಿ ವ
೨ ಲ್ಲಭ ಮಹಾರಾಜಾಧಿರಾಜ ಪರಮೇ
೩ ಸ್ವರ ಪರಮಭಟ್ಟಾರಕ ಶ್ರೃತ್ಯಾಸ್ರಯ ಕುಳ
೪ ತಿಳಕ ಚಾಲುಕ್ಯಾಭರಣ ಶ್ರೃಮತ್ರೃಭು
೫ ವನಮಲ್ಲ ಪೊಯ್ಸಳ ದೇವರುಂ ವಿಜಯ
೬ ರಾಜ್ಯಮುತ್ತರೊತ್ತರಾಭಿವೃದ್ಧಿ ಪ್ರವರ್ತ್ತ ಮಾ
೭ ನಮಾಚಂದ್ರಾರ್ಕ ತಾರಂಬರಂ ಸಲುತ್ತ
೮ ಮಿರೆ ತತ್ಪಾದ ಪದ್ಮೋಪಜೀವಿ ಸಮಧಿಗತ ಪಂ
೯ ಚ ಮಹಾಸಬ್ದ ಮಹಾಮಣ್ಡಳೇಸ್ವರ ದ್ವಾರಾವತಿ
೧೦ ಪುರವರವೇಸ್ವರ ಯಾದವಾಂಬರ ದ್ಯುಮ
೧೧ ಣಿ ಸಮ್ಯಕ್ತ ಚೂಡಾಮಣೀ ಮಲಪರೊಳು ಗ
೧೨ ಣ್ಡಾದ್ಯನೇಕ ನಾಮಾವಳಿ ಸಮೇತರಪ್ಪ ಶ್ರೃಮ
೧೩ ತ್ರೃಭುವನಮಲ್ಲ ಪೊಯ್ಸಳ ದೇವರು ಗಂ
೧೪ ಗವಾಡಿ ತೊಂಬತ್ತಱು ಸಾಸಿರ ಮುಮ

೧೫ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳದಿನಾಳುತ್ತಮಿ
೧೬ ರೆ ಸಕವರ್ಷ ೧೦೧೯ ನೆಯ ಧಾತು ಸಂವತ್ಸ
೧೭ ರದ ಆಷಾಡದ ಪೌರ್ಣಮಾಸೆ ಸೋಮವಾರದಂದು
೧೮ ಬಿಬ್ಬಯನಾಯಕನ ಮಗ ಪೆರೆಯನಾಯ
೧೯ ಕನ ಪೆಂಡತಿ ಚಂಡಿಕಬ್ಬೆಯುಮಿಟ್ಟು ಕೆಱೆ
೨೦ ಯಂ ಕಟ್ಟಿಸಿ ವಾಲ್ಯಮನೆತ್ತಿಸಿ ಅದರ್ಕೆ
೨೧ ಬಿಟ್ಟ ಗಟ್ಡೆ ಮತ್ತ ೧ ಬೆಟ್ಡಲೆ ಮತ್ತ ೪
೨೨ ಇದರ್ಕೆಡವ ನಳಿದವ ನರಕಕ್ಕಿ
೨೩ ೞಿದ । ಮಂಗಳ ॥ @

ಸಾರಾಂಶ

ಹೊಯ್ಸಳ ವಿನಯಾದಿತ್ಯನು ಗಂಗವಾಡಿ ತೊಂಬತ್ತಾರು ಸಾವಿರ ಪ್ರದೇಶವನ್ನು ಆಳುತ್ತಿದ್ದ ಸಂದರ್ಭದಲ್ಲಿ ಶಕವರ್ಷ ೧೦೧೯ನೆಯ ಧಾತು ಸಂವತ್ಸರದ ಆಷಾಡದ ಪೌರ್ಣಮಾಸೆ ಸೋಮವಾರದಂದು ಅಂದರೆ ಕ್ರಿ.ಶ. ೧೦೯೬ ಜುಲೈ ೮ ಮಂಗಳವಾರದಂದು ಬಿಬ್ಬಯ್ಯನಾಯಕನ ಮಗ ಪೆರೆಯನಾಯಕನ ಹೆಂಡತಿಯಾದ ಚಂಡಿಕಬ್ಬೆಯು ಕೆರೆಯನ್ನು ಕಟ್ಟಿಸಿ, ದೇವಾಲಯವನ್ನು ನಿರ್ಮಿಸುತ್ತಾಳೆ. ಶಾಸನದಲ್ಲಿ ವಾಲ್ಯಮನೆತ್ತಿಸಿ ಎಂದಿದೆ. ದೇವಾಲ್ಯ ಅಥವಾ ಶಿವಾಲ್ಯ ಎಂದು ಬರೆಯುವ ಜಾಗದಲ್ಲಿ ದೇ ಅಥವಾ ಶಿ ಅಕ್ಷರ ಬಿಟ್ಟುಹೋಗಿದೆ. ಈಕೆಯು ನಿರ್ಮಿಸಿದ ದೇವಾಲಯಕ್ಕೆ ದತ್ತಿಯನ್ನು ಬಿಡುತ್ತಾಳೆ. ಈ ದತ್ತಿಯನ್ನು ನಾಶ ಮಾಡಿದವರು ನರಕಕ್ಕೆ ಹೋಗುವರು ಎಂಬ ಶಾಪಾಶಯವನ್ನು ಶಾಸನವು ಉಲ್ಲೇಖಿಸಿದೆ.

ಈ ಶಾಸನದಲ್ಲಿ ಗಮನಿಸಬೇಕಾದ ಅಂಶವೆಂದರೆ ಗ್ರಾಮ, ದೇವರ ಹೆಸರು, ಹಾಗೂ ದಾನ ನೀಡಿದ ಹೊಲದ ಮೇರೆಯ ವಿವರದ ಉಲ್ಲೇಖಗಳು ಶಾಸನದಲ್ಲಿಲ್ಲ. ಇಲ್ಲಿ ಶ್ರೀ ಕಾರಕ್ಕೆ ಶ್ರ್ಯ ಕಾರ, ತ್ರಿ ಕಾರಕ್ಕೆ ತ್ರ್ಯ ಕಾರ, ಶ್ರ ಕಾರಕ್ಕೆ ಸ್ರ ಕಾರ ಬಳಕೆಯಾಗಿದೆ. ಗ್ರಾನೈಟ್ ಕಲ್ಲಾಗಿದ್ದರು ಅಕ್ಷರಗಳನ್ನು ಸ್ವಲ್ಪ ಆಳವಾಗಿ, ಸ್ಪಷ್ಟವಾಗಿ ಕೊರೆದಿರುವುದನ್ನು ಗಮನಿಸಿದರೆ ಪರಿಣಿತಿ ಹೊಂದಿರುವ ಕಂಡರಣೆಕಾರನು ಈ ಶಾಸನವನ್ನು ಕಂಡರಿಸಿರಬೇಕು.

ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಬಿರುದಾವಳಿಗಳಿವೆ. ತ್ರಿಭುವನಮಲ್ಲ ಎಂಬ ಬಿರುದು ೬ನೇ ವಿಕ್ರಮಾದಿತ್ಯನಿಗಿತ್ತು. ಇದೇ ಅವಧಿಯಲ್ಲಿ ಸಾಮಂತರಾಗಿ, ಮಾಂಡಳಿಕರಾಗಿ ಆಡಳಿತ ನಡೆಸುತ್ತಿದ್ದವರೂ ತ್ರಿಭುವನಮಲ್ಲ ಬಿರುದನ್ನು ಗಳಿಸುತ್ತಿದ್ದರು.[೧೩]



ಪ್ರಸ್ತುತ ಶಾಸನದಲ್ಲಿ ತ್ರಿಭುವನಮಲ್ಲ ಹೊಯ್ಸಳ ದೇವರು ಎಂದಿದೆ. ಈ ಹಿನ್ನೆಲೆಯಲ್ಲಿ ವಿನಯಾದಿತ್ಯನು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಅಧೀನದಲ್ಲಿ ಆಳ್ವಿಕೆ ನಡೆಸಿರುವುದನ್ನು ತಿಳಿಯಬಹುದಾಗಿದೆ. ವಿನಯಾದಿತ್ಯನು ಆರಂಭದ ಹೊಯ್ಸಳರಲ್ಲಿ ಪ್ರಸಿದ್ಧನಾಗಿದ್ದನು. ತನ್ನ ಬುದ್ಧಿವಂತಿಕೆಯಿಂದಾಗಿ ಹೊಯ್ಸಳ ಶಕ್ತಿಯನ್ನು ತನ್ನ ಪ್ರಭು ಚಾಲುಕ್ಯ ಚಕ್ರವರ್ತಿಗೆ ತಲುಪುವಂತೆ ಮಾಡಿದನು. ಚಾಲುಕ್ಯರ ಆಂತರಿಕ ಕಲಹ, ಗಂಗರ ಸೋಲು, ಚೋಳರ ಗಮನ ಬೇರೆಡೆ ಇದ್ದ ಸಂದರ್ಭದಲ್ಲಿ ವಿನಯಾದಿತ್ಯನಿಗೆ ರಾಜ್ಯದ ವಿಸ್ತರಣೆ ಮಾಡುವ ಅವಕಾಶವಿದ್ದರೂ ರಾಜ್ಯ ವಿಸ್ತರಿಸದೇ ಸೂಕ್ಷ್ಮ ಪರಿಸ್ಥಿತಿಯಲ್ಲಿ ಬುದ್ಧಿವಂತಿಕೆಯಿಂದ ನಡೆದುಕೊಂಡನು. ಚಾಲುಕ್ಯರ ವಿರೋಧ ಎದುರಿಸಲು ಸಿದ್ಧನಾಗಿರಲಿಲ್ಲವಾದ್ದರಿಂದ ಅವರ ಮಹಾಮಂಡಳೇಶ್ವರನಾಗಿಯೇ ಮುಂದುವರಿದನು.[೧೪]

ಪ್ರಸ್ತುತ ಶಾಸನದಲ್ಲಿ ಉಲ್ಲೇಖವಾಗಿರುವ ದೇವಾಲಯವೇ ಇಂದು ಶಿಥಿಲವಾಗಿರುವ ಈಶ್ವರ ದೇವಾಲಯ ವಾಗಿರಬಹುದು. ಇದನ್ನು ಪ್ರಸ್ತುತ ಜೀರ್ಣೋದ್ಧಾರಗೊಳಿಸಲು ಗ್ರಾಮಸ್ಥರು ಪ್ರಯತ್ನಿಸುತ್ತಿರುವರು. ಗ್ರಾಮದ ಕೆರೆಯ ಸ್ಥಳದಲ್ಲಿ ಶಾಲೆ, ಮನೆಗಳು ನಿರ್ಮಾಣಗೊಂಡಿರುವುದರಿಂದ ಕೆರೆಯು ಸಣ್ಣ ಕಟ್ಟೆಯಂತಾಗಿದೆ. ಶಾಸನವು ಐತಿಹಾಸಿಕವಾಗಿ ಮಹತ್ವದ ಅಂಶಗಳನ್ನೇನು ಒಳಗೊಂಡಿಲ್ಲ. ಹೊಯ್ಸಳ ವಿನಯಾದಿತ್ಯನ ಕಾಲದ ಶಾಸನಗಳ ಗುಂಪಿಗೆ ಸೇರುವ ಮತ್ತೊಂದು ಶಾಸನವಾಗಿದ್ದು, ಗ್ರಾನೈಟ್ ಕಲ್ಲಿನಲ್ಲಿರುವುದು ಅಪರೂಪವಾಗಿದೆ.

---

* ಶಾಸನದ ಪಾಠವನ್ನು ಓದಿ, ಮಾರ್ಗದರ್ಶನ ನೀಡಿದ ಗುರುಗಳಾದ ಡಾ. ದೇವರಕೊಂಡಾರೆಡ್ಡಿ ಅವರಿಗೆ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸ್ಥಳೀಯರಾದ ಹಾಲಪ್ಪ ಬಿ.ಎಂ., ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಿ.ಕೆ. ಹೊಸೂರು, ಕಡೂರು ತಾಲೂಕು. ಇವರುಗಳಿಗೆ ಧನ್ಯವಾದಗಳು.

ಅಡಿಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಿಕ ಪರಿಷ್ಕೃತ ಸಂಪುಟ ೧೨, ಕಡೂರು ೩೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. ಅದೇ, ಕಡೂರು ೭೩.

೩. ಅದೇ, ಕಡೂರು ೭೬.

೪. ಅದೇ, ಕಡೂರು ೧೪೦.

೫. ಅದೇ, ಕಡೂರು ೧೯೨.

೬ ರೇಣುಕಸ್ವಾಮಿ ಒಡೆಯರ್ ಬಿ.ಈ., ೨೦೨೦. 'ತುರುವನಹಳ್ಳಿಯ ಕರ್ನಾಟಕದ ಮೊದಲ ಪ್ರಾಗೈತಿಹಾಸಿಕ ಜಿಂಕೆ ಪ್ರಸವದ ವರ್ಣಚಿತ್ರ', ದೇವರಕೊಂಡಾರೆಡ್ಡಿ ಮತ್ತು ಜಿ.ಕೆ. ದೇವರಾಜಸ್ವಾಮಿ. (ಸಂ.), ಇತಿಹಾಸ ದರ್ಶನ ಸಂಪುಟ ೩೫, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು. ಪು. ೧-೩.

೭. ಮುರುಗೇಶಿ ಟಿ., ೨೦೦೯, 'ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೌದ್ಧ ಧರ್ಮ', ಗೋಪಾಲ್ ಆರ್., (ಸಂ.), ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ಪು. ೧೧೨.

೮. ವಿಶ್ವನಾಥಯ್ಯ ಸಿ.ಎಂ., ೨೦೦೪, ಕಡೂರು ತಾಲ್ಲೂಕಿನ ಸ್ಥಳನಾಮಗಳು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಪು. ೪೯.

೯. ಎಪಿಗ್ರಾಫಿಯಾ ಕರ್ನಾಟಿಕ., ಪೂರ್ವೋಕ್ತ, ಕಡೂರು ೧೨೫.

೧೦. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೪೧.

೧೧. ಸೋಮಶೇಖರ್ ಎಸ್.ವೈ., ೨೦೧೪, ಕರ್ನಾಟಕದ ಬಿರುದಾವಳಿಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೨೧-೧೩೬.

೧೨. ಅಂಬಳಿಕೆ ಹಿರಿಯಣ್ಣ (ಪ್ರ.ಸಂ.), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೧೪೨.

೧೩. ಸೋಮಶೇಖರ್ ಎಸ್.ವೈ., ೨೦೧೪., ಪೂರ್ವೋಕ್ತ, ಪು. ೧೨೨.

೧೪. ಸುರೇಂದ್ರರಾವ್ ಬಿ. (ಸಂ.), ೨೦೧೮, (ದ್ವಿತೀಯ ಮುದ್ರಣ)., ಕರ್ನಾಟಕ ಚರಿತ್ರೆ ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೫೦-೧೫೧.

♦♦

೧೮

ಗಣಪತಿ ಗೌಡ ಎಸ್.

ಹೊನ್ನಾವರದ ತಟ್ಟಿಹಕ್ಕಲ ಶಾಸನ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಶಿರಾಲಿ ಗ್ರಾಮದ ಮಣ್‌ಹೊಂಡದ ತಟ್ಟಿಹಕ್ಕಲಿನಲ್ಲಿರುವ ಕೇಶವಮೂರ್ತಿ ದೇವಾಲಯದ ಆವರಣದಲ್ಲಿ ಶಿಲಾಶಾಸನವಿರುವ ಮಾಹಿತಿ ಅಲ್ಲಿಯ ಸ್ಥಳೀಯರಿಂದ ದೊರೆತಾಗ ಅದರ ಪರಿಶೀಲನೆ ಮಾಡಲಾಯಿತು.[೧] ಕಪ್ಪು ಗ್ರಾನೈಟ್ ಶಿಲೆಯಲ್ಲಿ ಇರುವ ಈ ಶಾಸನ ೩.೫ ಅಡಿ ಎತ್ತರ ಹಾಗೂ ೨.೫ ಅಡಿ ಅಗಲವಾಗಿದೆ. ಶಾಸನದಲ್ಲಿ ಒಟ್ಟು ೩೭ ಸಾಲುಗಳಿದ್ದು ೧೪ನೇ ಶತಮಾನದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ. ಶಾಸನದ ಶಿರಭಾಗದಲ್ಲಿ ಶಿವಲಿಂಗಕ್ಕೆ ಪೂಜೆಗೈಯುತ್ತಿರುವ ಯತಿ, ಹಸು ಮತ್ತು ಹಾಲು ಕುಡಿಯುತ್ತಿರುವ ಕರು ಹಾಗೂ ನಂದಿಯ ಶಿಲ್ಪವಿದೆ. ಆದರೆ ಈ ಶಾಸನವನ್ನು ಈಗಾಗಲೇ ಕನ್ನಡ ಸಂಶೋಧನಾ ಸಂಸ್ಥೆ ತನ್ನ Descriptive List of Stone and Copper Plate Inscription ೧೯೪೦-೪೧-೧೯೪೨-೪೩ ರಲ್ಲಿ ವರದಿ ಮಾಡಿರುತ್ತದೆ.[೨] ಶಾಸನವು ಈವರೆಗೆ ಎಲ್ಲಿಯೂ ಪ್ರಕಟವಾಗದಿರುವುದರಿಂದ ಮತ್ತು ಐತಿಹಾಸಿಕವಾಗಿ ಮಹತ್ವಪೂರ್ಣ ಮಾಹಿತಿಯನ್ನು ಒಳಗೊಂಡಿರುವುದರಿಂದ ಇದನ್ನು ಪ್ರಕಟಿಸುವ ಮತ್ತು ಅದರ ಮಹತ್ವವನ್ನು ಅವಲೋಕಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಶಾಸನದ ಕಾಲ

ಶಾಸನವು ಎರಡು ಕಾಲಘಟ್ಟದಲ್ಲಿ ದಾನ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ. ಶಕವರ್ಷ ೧೩೩೩ನೆಯ ವಿಕೃತ ಸಂವತ್ಸರದ ಕಾರ್ತಿಕ ಶು. ೧. ಇದು ಕಾಲಮಾನ ೧೪೧೧ಕ್ಕೆ ಸರಿಹೊಂದುತ್ತದೆ. ಇನ್ನೊಂದು ಶಕ ವರುಷ ೧೩೧೨ನೆಯ ಶುಕ್ಲ ಸಂವತ್ಸರದ ಪಾಲ್ಗುಣ ಶು. ೧೩ ಇದು ಕ್ರಿ.ಶ. ೧೩೯೦ಕ್ಕೆ ಸರಿಹೊಂದುತ್ತದೆ.

ಸಾರಾಂಶ

ಶಕವರುಷ ೧೩೧೨ ನೆಯ ಶುಕ್ಲ ಸಂವತ್ಸರದ ಪಾಲ್ಗುಣ ಶು. ೧೩ ರಂದು ವಿಜಯನಗರದ ದೊರೆ ಇಮ್ಮಡಿ ಹರಿಹರ ಆಳ್ವಿಕೆ ಮಾಡುತ್ತಿರುವಾಗ ಹೊನ್ನಾವರದ ರಾಜಧಾನಿಯಿಂದ ಆಳ್ವಿಕೆ ಮಾಡುತ್ತಿದ್ದ ಮಲ್ಲಪ್ಪ ಒಡೆಯರು ಬೆಂಗರೆಯ ತಟ್ಟಿಯಹಕ್ಕಲ ಕೇಶವನಾಥದೇವರ ಅಮೃತಪಡಿಗೆ ಭೂ ದತ್ತಿ ಬಿಟ್ಟುಕೊಟ್ಟಿರುವುದು ತಿಳಿದುಬರುತ್ತದೆ. ಮಲ್ಲಪ್ಪ ಒಡೆಯರು ದೇವರ ಅಮೃತಪಡಿಯ ಧರ್ಮಕ್ಕೆ ಬಿಟ್ಟಿರುವ ಭೂದತ್ತಿಯನ್ನು ವಿಜಯನಗರ ದೊರೆ ಮೊದಲನೇ ದೇವರಾಯ ಆಳ್ವಿಕೆ ಮಾಡುತ್ತಿದ್ದಾಗ ಹೊನ್ನಾವರದ ರಾಜಧಾನಿಯಲ್ಲಿದ್ದುಕೊಂಡು ಹಯಿವೆ, ತುಳು, ಕೊಂಕಣ ಪ್ರದೇಶಗಳನ್ನು ಆಳ್ವಿಕೆ ಮಾಡುತ್ತಿದ್ದ ಮಹಾಪ್ರಧಾನ ಯೀಚಪ್ಪ ಒಡೆಯರು ಶಕವರುಸಷ ೧೩೩೩ ನೆಯ

ಮುಖ್ಯಸ್ಥರು
ಸ್ನಾತಕೋತ್ತರ ಇತಿಹಾಸ ಮತ್ತು
ಪುರಾತತ್ತ್ವ ವಿಭಾಗ, ವಿಶ್ವವಿದ್ಯಾನಿಲಯ
ಕಾಲೇಜು, ಮಂಗಳೂರು
ಮೊ : ೯೪೮೦೪ ೪೮೭೨೧

ವಿಕೃತ ಸಂವತ್ಸರದ ಕಾರ್ತಿಕ ಶು. ೧೨ರಂದು ಪರಿಷ್ಕರಿಸುತ್ತಾರೆ. ಕೇಶವನಾಥ ದೇವರಿಗೆ ಕೊಟ್ಟ ಧರ್ಮ ದತ್ತಿಯನ್ನು ಆ ಚಂದ್ರಾರ್ಕ್ಕ ಸ್ತಾಯಿಯಾಗಿ ಪಾಲಿಸಿಕೊಂಡು ಬರಬೇಕೆಂದು ಯೀಚಪ್ಪ ಒಡೆಯರು ಶಾಸನವನ್ನು ಬರೆಯಿಸಿರುವ ವಿಷಯ ಶಿಲಾಶಾಸನದ ಮುಖ್ಯ ವಸ್ತುವಾಗಿದೆ. ಶಾಸನದಲ್ಲಿ ಉಲ್ಲೇಖಿತ ಮಂಡ್ಮಣ ಇಂದಿನ ಮಣ್‌ಹೊಂಡವಾಗಿರಬೇಕು. ಇನ್ನುಳಿದಂತೆ ಬೆಂಗರೆ ಮತ್ತು ತಟ್ಟಹಕ್ಕಲು ಹೆಸರು ಯಥಾವತ್ತಾಗಿ ಇಂದಿಗೂ ಬಳಕೆಯಲ್ಲಿದೆ.

ಶಾಸನದ ಮಹತ್ವ

ಪ್ರಸ್ತುತ ಶಾಸನವನ್ನು ಗಮನಿಸಿದಾಗ ವಿಜಯನಗರದ ಚಕ್ರವರ್ತಿಗಳಾದ ಇಮ್ಮಡಿ ಹರಿಹರ ಆಳ್ವಿಕೆ ಮಾಡುತ್ತಿರುವಾಗ ಹೊನ್ನಾವರದ ಮಹಾಪ್ರಧಾನ ಮಲ್ಲಪ್ಪ ಒಡೆಯನಾಗಿರುತ್ತಾನೆ. ವಿಜಯನಗರ ಪಟ್ಟಕ್ಕೆ ಮೊದಲನೆಯ ದೇವರಾಯರು ಬಂದ ನಂತರ ಯೀಚಪ್ಪ ಒಡೆಯರು ಹೊನ್ನಾವರದ ಮಹಾಪ್ರಧಾನರಾಗಿರುವುದು ಕಂಡುಬರುತ್ತದೆ. ಹೊನ್ನಾವರ ಹಯಿವೆ, ತುಳು, ಕೊಂಕಣ ಪ್ರದೇಶಗಳಿಗೆ ರಾಜಧಾನಿಯಾಗಿತ್ತು ಎನ್ನುವ ಅಂಶ ಇದರಿಂದ ತಿಳಿಯುತ್ತದೆ. ಆದರೆ ಶಾಸನದಲ್ಲಿ ಉಲ್ಲೇಖಿತ ಮಲ್ಲಪ್ಪ ಒಡೆಯ ಮತ್ತು ಯೀಚಪ್ಪ ಒಡೆಯರಿಂದ ದಾನ ಸ್ವೀಕರಿಸಿದ ಬೆಂಗ್ರೆಯ ಮೂರು ಮಂದಿ ಯಾರು ಎನ್ನುವ ಉಲ್ಲೇಖವಿಲ್ಲ.

ವಿಶ್ಲೇಷಣೆ

* ಈ ಶಾಸನದಲ್ಲಿ ಉಲ್ಲೇಖಿತ ಮಲ್ಲಪ್ಪ ಒಡೆಯರು ಕ್ರಿ.ಶ. ೧೩೮೬ ರಿಂದ ಕ್ರಿ.ಶ ೧೩೯೦ ರವರೆಗೆ ಮತ್ತು ೧೩೯೫ ರಿಂದ ೧೩೯೬ರವರೆಗೆ ಬಾರಕೂರಿನ ರಾಜ್ಯಪಾಲರಾಗಿದ್ದ ವಿಷಯ ಉಡುಪಿ ಜಿಲ್ಲೆಯ ಬಸ್ರೂರು, ಬಾರ್ಕೂರು, ಕುಂದಾಪುರ ಮೊದಲಾದ ಕಡೆ ದೊರೆತ ಶಾಸನಗಳಿಂದ ತಿಳಿದುಬರುತ್ತದೆ.[೨]
* ಪ್ರಸ್ತುತ ಶಾಸನದಲ್ಲಿ ಮಲ್ಲಪ್ಪ ಒಡೆಯನು ಬೆಂಗರೆಯ ತಟ್ಟಿಯಹಕ್ಕಲ ಕೇಶವನಾಥ ದೇವರ ಅಮೃತಪಡಿಗೆ ದೊರೆ ಇಮ್ಮಡಿ ಹರಿಹರನ ಆಜ್ಞೆಯ ಮೇರೆಗೆ ದತ್ತಿ ಬಿಟ್ಟುಕೊಟ್ಟಿರುವುದನ್ನು ಉಲ್ಲೇಖಿಸಿದೆ. ಆದರೆ ಮಲ್ಲಪ್ಪ ಒಡೆಯನ ಪದವಿ ಮತ್ತು ಆಡಳಿತದ ಕುರಿತಾಗಿ ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ಇದಕ್ಕೆ ಪೂರಕವಾಗಿ ೧೩೯೦ರ ಕಾಲಮಾನಕ್ಕೆ ಸೇರಿದ ವಿಜಯನಗರದ ದೊರೆ ಇಮ್ಮಡಿ ಹರಿಹರನ ಆಳ್ವಿಕೆಗೆ ಸೇರಿದ ಹೊದಕೆ ಶಿರೂರಿನ ಶಾಸನವು ಮಹಾಪ್ರಧಾನರಾದ ಮಲ್ಲಪ್ಪೊಡೆಯರು ಹೊನ್ನಾವರ ರಾಜಧಾನಿಯಿಂದ ಹೈವೆ, ತುಳು, ಕೊಂಕಣ ಮತ್ತು ಮಲೆ ರಾಜ್ಯವನ್ನು ಆಳುತ್ತಿದ್ದ ವಿಷಯದ ಬಗ್ಗೆ ಬೆಳಕು ಚೆಲ್ಲುತ್ತದೆ.[೩] ಅಂದರೆ ಹೊನ್ನಾವರದ ಮಹಾಪ್ರಧಾನ ಮಲ್ಲಪ್ಪೊಡೆಯನೇ ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತ ಮಲ್ಲಪ್ಪ ಒಡೆಯರು ಎನ್ನುವುದು ಸ್ಪಷ್ಟವಾಗುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಕ್ರಿ.ಶ. ೧೩೯೦ರವರೆಗೆ ಬಾರಕೂರಿನ ರಾಜ್ಯಪಾಲನಾಗಿದ್ದ ಆತ ಅದೇ ವರ್ಷ ಹೊನ್ನಾವರದ ರಾಜ್ಯಪಾಲನಾಗಿ ನಿಯುಕ್ತಿಗೊಂಡಿರಬೇಕು.
* ಪ್ರಸ್ತುತ ಶಾಸನವನ್ನು ಆಧಾರವಾಗಿಟ್ಟುಕೊಂಡು ಮಲ್ಲಪ್ಪ ಒಡೆಯನ ಆಡಳಿತವನ್ನು ಪರಾಮರ್ಶಿಸುವುದಾದರೆ ಆತ ಬಾರ್ಕೂರಿನ ರಾಜ್ಯಪಾಲನಾಗುವುದಕ್ಕಿಂತ ಮೊದಲು ಹೊನ್ನಾವರದ ರಾಜ್ಯಪಾಲನಾಗಿದ್ದಿರಬೇಕು. ಹೀಗಾದಲ್ಲಿ ಮಲ್ಲಪ್ಪ ಒಡೆಯನು ಕ್ರಿ.ಶ. ೧೩೭೯ ರಿಂದ ಕ್ರಿ.ಶ. ೧೩೮೬ರ ವರೆಗೆ ಮತ್ತು ಕ್ರಿ.ಶ. ೧೩೯೦ ರಿಂದ ಕ್ರಿ.ಶ. ೧೩೯೫ ರವರೆಗೆ ಎರಡು ಬಾರಿ ಹೊನ್ನಾವರದ (ಮಹಾಪ್ರಧಾನ) ರಾಜ್ಯಪಾಲನಾಗಿದ್ದನೆಂದಾಯಿತು.
* ಮೇಲಿನ ಶಾಸನವು ಇನ್ನೋರ್ವ ಮಹಾಪ್ರಧಾನ ರಾಜ್ಯಪಾಲ ಯೀಚಪ್ಪಒಡೆಯನನ್ನು ಹೆಸರಿಸುತ್ತದೆ. ಈತ ವಿಜಯನಗರ ದೊರೆ ಇಮ್ಮಡಿ ಹರಿಹರ ಆಳ್ವಿಕೆ ಮಾಡುತ್ತಿದ್ದಾಗ ಹಯಿವೆ, ತುಳು, ಕೊಂಕಣ ಪ್ರದೇಶಗಳನ್ನು ಹೊನ್ನಾವರದ ರಾಜಧಾನಿಯಲ್ಲಿದ್ದುಕೊಂಡು ಆಳ್ವಿಕೆ ಮಾಡುತ್ತಿದ್ದನು. ಮಂಡ್ಮಣದ ಕೇಶವನಾಥ ದೇವರಿಗೆ ಕೊಟ್ಟ ಧರ್ಮ ದತ್ತಿಯನ್ನು ಆ ಚಂದ್ರಾರ್ಕ್ಕ ಸ್ತಾಯಿಯಾಗಿ ಪಾಲಿಸಿಕೊಂಡು ಬರಬೇಕೆಂದು ಶಾಸನವನ್ನು ಬರೆಸಿರುತ್ತಾನೆ. ಈ ಶಾಸನ ಕಾಲಮಾನ ಕ್ರಿ.ಶ. ೧೪೧೦. ಅಂದರೆ ಮಲ್ಲಪ್ಪ ಒಡೆಯರ ನಂತರ ಹೊನ್ನಾವರದ ರಾಜ್ಯಪಾಲನಾಗಿದ್ದವನು ಯೀಚಪ್ಪ ಒಡೆಯನೆನ್ನುವುದು ಸ್ಪಷ್ಟವಾಯಿತು. ಹಾಗಾದರೆ ಯೀಚಪ್ಪ ಒಡೆಯನು ಯಾವಾಗ ಹೊನ್ನಾವರದ ರಾಜ್ಯಪಾಲನಾದನೆಂಬ ಬಗ್ಗೆ ಪೂರಕ ಮಾಹಿತಿಗಳಿಂದ ತಿಳಿದುಕೊಳ್ಳಬಹುದು. ಕ್ರಿ.ಶ. ೧೪೧೦ರ ಕಾಲಮಾನಕ್ಕೆ ಸೇರುವ ಗುಣವಂತೆಯ ಶಾಸನವು ವಿಜಯನಗರದ ಮಹಾಪ್ರಧಾನ ಯೀಚಪ್ಪ ಒಡೆಯನು ಗುಣವಂತೆಯ ಸ್ವಯಂಭುನಾಥ ದೇವಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.[೪] ಕ್ರಿ.ಶ. ೧೪೧೦ನೇ ಕಾಲಮಾನಕ್ಕೆ ಸೇರುವ ಇನ್ನೊಂದು ಶಾಸನವು ಮಂಕಿಯ

ಮಹಾಲಿಂಗೇಶ್ವರ ದೇವಾಲಯದಲ್ಲಿ ದೊರಕಿರುತ್ತದೆ. ಈ ಶಾಸನದಲ್ಲಿ ವಿದ್ಯಾಪುರಿ ಶ್ರೀಪಾದಂಗಳ ಶಿಷ್ಯರಾದ ನಾಗೇಂದ್ರತೀರ್ಥರಿಗೆ ಯೀಚಪ್ಪ ಒಡೆಯ ದತ್ತಿ ನೀಡಿರುವ ವಿಷಯ ತಿಳಿಸುತ್ತದೆ.[೬] ಹಳೇಮಠದ ಗಣಪತಿ ದೇವಾಲಯದ ಅವರಣದಲ್ಲಿರುವ ಕ್ರಿ.ಶ. ೧೪೦೮ರ ಶಾಸನವೊಂದರ ಪ್ರಕಾರ ಹರಿಹರ ಮಹಾರಾಯರ ಆಜ್ಞೆಯ ಪ್ರಕಾರ ಮಲ್ಲಪ್ಪ ಒಡೆಯರು ಪುರಂದರಪುರಿ ಶ್ರೀಪಾದಂಗಳಿಗೆ ನೀಡಿದ ದತ್ತಿಯ ಕಾಲಮಾನ ಮುಗಿದಿದ್ದುರಿಂದಾಗಿ ಅದನ್ನು ಪುರಂದರಪುರಿ ಶಿಷ್ಯರಾದ ಮಹೇಂದ್ರಪುರಿಯವರ ಹೆಸರಿನಲ್ಲಿ ನವೀಕರಿಸುವಂತೆ ಯೀಚಪ್ಪ ಒಡೆಯರಿಗೆ ಸೂಚಿಸಲಾಗುತ್ತದೆ.[೭] ಈ ಶಾಸನದ ಆಧಾರದಿಂದಾಗಿ ಯೀಚಪ್ಪ ಒಡೆಯರು ೧೪೦೮ ರಲ್ಲಿ ರಾಜ್ಯಪಾಲನಾಗಿರುವುದಿಲ್ಲ ಎನ್ನುವುದು ತಿಳಿದುಬರುತ್ತದೆ. ಈ ಮೇಲಿನ ಶಾಸನ ಅಧ್ಯಯನಗಳಿಂದ ಯೀಚಪ್ಪ ಒಡೆಯ ವಿಜಯನಗರ ಸಿಂಹಾಸನಕ್ಕೆ ಮೊದಲನೇ ದೇವರಾಯ ಪಟ್ಟಕ್ಕೇರಿದ ನಂತರ ಕ್ರಿ.ಶ. ೧೪೧೦ ರಲ್ಲಿ ಹೊನ್ನಾವರದ ರಾಜ್ಯಪಾಲನಾಗಿರುವುದು ತಿಳಿದುಬರುತ್ತದೆ.

ಈ ಮಧ್ಯೆ ವಿಜಯನಗರ ಅರಸರು ಕರಾವಳಿ ಪ್ರದೇಶದಲ್ಲಿ ತಮ್ಮ ಆಡಳಿತವನ್ನು ಹೆಚ್ಚುಹೆಚ್ಚು ಬಿಗಿಗೊಳಿಸಿರುವುದು ಕಂಡುಬರುತ್ತದೆ. ಸ್ಥಳೀಯ ಅರಸರು ತಮ್ಮ ಪ್ರಾಬಲ್ಯವನ್ನು ವೃದ್ಧಿಸಿಕೊಳ್ಳದಂತೆ ನೋಡಿಕೊಳ್ಳಲು ಮತ್ತು ವ್ಯಾಪಾರದ ಮೇಲೆ ಹಿಡಿತ ಸಾಧಿಸಲು ಕೈಗೊಂಡ ಕ್ರಮಗಳಲ್ಲಿ ಹೊನ್ನಾವರವನ್ನು ಆಡಳಿತದ ಪ್ರಮುಖ ಕೇಂದ್ರವನ್ನಾಗಿ ಮಾಡಿ ರಾಜ್ಯಪಾಲರನ್ನು ನೇಮಕ ಮಾಡಿರುವುದು ಪ್ರಮುಖವೆನಿಸುತ್ತದೆ. ಹೀಗಾಗಿ ಕರಾವಳಿಯ ಹೈವೆ ಮತ್ತಿತರ ಪ್ರದೇಶಗಳು ಬಾರ್ಕೂರಿನಿಂದ ಬೇರ್ಪಟ್ಟು ಹೊನ್ನಾವರವು ವಿಜಯನಗರದ ಆಡಳಿತದ ಕೇಂದ್ರವಾಯಿತು.

ಶಾಸನ ಪಾಠ

೧. ೦ ಸಾಮಾಂನ್ಯೆಯಂ ಧರ್ಮಸೇತುಂ ನೃಪಾಣಾಂ ಕಾಲೇ ಕಾಲೆ ಪಾಲನಿಯೊ ಭವಬ್ಧಿ ಸರ್ವಾನೇ

೨. ೦ ತಾಂ ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಯಾಚೈತ್ರರಾಮಚಂದ್ರ

೩. ೦ ಸ್ವಸ್ತಿ ಶ್ರೀ ಗಣಾಧೀಪತೆಯೆಂ ನಮಃ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇತ್ರೈ

೪. ೦ ಯಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ಶ್ರೀ ಮಂನ್ಮಹಾರಾಜಾಧೀರಾಜರಾಜ ಪರ-

೫. ೦ ಮೇಶ್ವರ ಶ್ರೀ ವೀರ ಪ್ರತಾಪದೇವರಾಯ ಮಹಾರಾಯರ ವಿಜಯ ಸಾಂಬ್ರಾಜ್ಯದ್ದುದಯದಲು ದೇ-

೬. ೦ ವರಾಯರ ನಿರೂಪದಿಂದ ಶ್ರೀಮನು ಮಹಾಪ್ರಧಾನಂ ಯೀಚಪ್ಪಒಡೆಯರು ಹೊಂನಾಉರದ ರಾಜಧಾನಿಯಲು

೭. ೦ ಯಿದ್ದು ಹಯಿವೆ ತುಳು ಕೊಂಕಣ ದೇಶಗಳನು ಪ್ರತಿಪಾಲಿಸುತ್ತ ಯಿದ್ದಂದಿನ ಶಕುವರುಸಷ ೧೩೩೩ ನೇಯ

೮. ೦ ವಿಕೃತ ಸಂವತ್ಸರದಕಾರ್ತಿಕ ಶು. ೧. । ಶ್ರೀಮತು ಯಿಚಪ್ಪಒಡ್ರೆಯರು ಬೆಂಗರೆ ಮೂರು ಮಂದಿಗೆ

೯. ೦ ಮಂಡ್ಮಣದ ಕೇಶವನಾಥದೇವರಿಗೆ ಕೊಟ್ಟಧರ್ಮ ಶಿಲಾಶಾಸನ ಪಟ್ಟಿಯ ಕ್ರಮವೆಂತೆಂದರೆ ಹರಿಹರರಾಯರ ನಿರೂ-

೧೦. ೦ ಪದಿಂದ ಆ ಕೇಶವನಾಥದೇವರ ಅಮೃತಪಡಿಗೆ ಮಾಡಿದ್ದು । ಆ ಮೂರು ಮಂದಿನ ಒಳಗೆ ತಟ್ಟಿಯ-

೧೧. ೦ ಊರಿಂಗೆ ಆ ಕೇಶವನಾಥದೇವರ ದೇವಸ್ವದ ಭೂಮಿಯಿಂ ತೆರವತೇರುತಾರೂ ೨೮೦ ಲೆಕದಲು ಗ. ೨ ವರ್ಷ

೧೨. ೦ ಸಾಂಮ್ಯದಿಂ ೨೦ । ಅಂತು ಆ ದೇವಸ್ವದ ಭೂಮಿ ಹಿತ್ತಲುಗದ್ದೆ ಸಹಿತವಾಗಿ ಅಜೋಪಡಿಯ

೧೩. ೦ ವ್ಯೊಂದೆ ಸಾಮ ಆಯಿದ್ರೆರಡು ಬಾಳು ಭೂಮಿಗೆ ಉಳ್ಳ ತೆರತಾ ೨೮೦ ಲೆಕ್ಕದಲು ಗ. ೨.ವರ್ಷ ಏನೂ ತತ್ಸಂವ

೧೪. ೦ ತ್ಸರದ ತಥಾತಿಥಿ ಆರುಬ್ಯವಾಗಿ ಕುಳವ ಕಡಿದು ಸರ್ವಮಾಂನ್ಯವಾಗಿ ಮಾಡಿದೆವಾಗಿ

೧೫. ೦ ಆ ಎರಡು ಹೊಂನೂ ನಾಲ್ಕು ಹಣ ಹಾಗಉೂ ವಿಸವನು ದೇವರ ಅಮೃತಪಡಿಗೆ

೧೬. ೦ ಆ ಚಂದ್ರಾರ್ಕಸ್ಥಾಯಿಯಾಗಿ ಎಂದೆಂದೂ ಸರ್ವಮಾನ್ಯವಾಗಿಕೊಂಡು ಸುಖದಿಂ ಭೋಗಿ-

೧೭. ೦ ಸೊದು। ಯಿ ದೇವಸ್ವದ ಧರ್ಮಸ್ಥಳಕ್ಕೆ ಅಕಾರ ಅನಾಯ ಬಿಟ್ಟಿ ಬಿಡಾರವನೆ ಆ ಸಂತಾಯವಾ

೧೮. ೦ ಒಸಗೆ ವಿಶೇಷ ಮುಂತಾದ ಚಿಲವಾನ ಉಪದ್ರವಾ ವಅದು ಯಿಲ್ಲಎಂದು ಸರ್ವ ಮಾಂನ್ಯವಾ-

೧೯. ೦ ಗಿ ಯಿ ಧರ್ಮ ಆ ಚಂದ್ರರ್ಕಸ್ಥಾಯಿಯಾಗಿ ಎಂದೆಂದೂ ಸರ್ವಮಾಂನ್ಯವಾಗಿ ನಡೆವ ಹಾಗೆ ಮಾ (ಪಾ)

೨೦. ೦ ಲಿಸಿದರು ಮಾನಸ್ತಿತಿ । ಶಕವರುಷ ೧೩೧೨ ನೆಯ ಶುಕ್ಲ ಸಂವತ್ಸರದ ಪಾಲ್ಗುಣ ಶು. ೧೩ ಆ ಶ್ರೀ

೨೧. ೦ ಮನು ಹರಿಹರಮಹಾರಾಯರ ನಿರೋಪದಿಂದ ಮಲ್ಲಪ್ಪಒಡೆಯರು ಶ್ರೀ ಕೇಶವನಾಥದೇವರ ಅಮೃತಪಡಿ

೨೨. ೦ ಯಧರ್ಮಕ್ಕೆ ಕೊಟ್ಟುದು । ಬೆಂಗರೆಯ ಒಳಗೆ ತಟ್ಟಿಯಹಕ್ಕಲದಿ ಕೇಶವನಾಥದೇವರಿಗೆ ಉಳ(ಬಿಟ್ಟ) ದೇವಸ್ವದ ಭೂಮಿ ಹಿ–

೨೩. ೦ ತ್ತಿಲುಗಳ ಸಹಿತವಾಗಿ ಹಾ ೩೦ ಲೆಕ್ಕದಿಂ ಮೂ ೧೨ ೦೦(೧/೨) ಮೂಡೆ ಭೂಮಿಗೆ ಉಳ ತೆರತಾ ೨೮೦ ಲೆಕ್ಕದ

೨೪. ೦ ಲು ಗ ೩ ಅಕ್ಷರದಲು ಮೂರು ಹೊಂನನೂ ತತ್ಸಂವತ್ಸರದ ಕಾರ್ತಿಕ ಶು. ೧ ಆರಭ್ಯವಾಗಿ ಕುಳವನು ಕ–



೨೫. ೦ ಡಿದು ಸರ್ವ್ವ ಮಾಂನ್ಯವಾಗಿ ಮಲ್ಲಪ್ಪಒಡೆಯರು ದೇವರ ಅಮೃತಪಡಿಯ ಧರ್ಮಕ್ಕೆ ಆ ಚಂದ್ರಾರ್ಕ್ಕ ಸ್ತಾ-
೨೬. ೦ ಯಿಯಾಗಿ ನಡವ ಹಾಗೆ ಪಾಲಿಸಿ ಬಂದ ಸ್ತಿತಿಯನೂ ಧರ್ಮ್ಮಪ್ರತಿಪಾಲಕರ ಹಯಿಚಪ ಒಡೆಯರು ವಿಭಾ-
೨೭. ೦ ಗಿಸಿ ಪೂರ್ವದಿಂದಲೂ ಸರ್ವಮಾನ್ಯವಾಗಿ ನಡೆದು ಬಂದಧರ್ಮ ಎಂದೆಂದೂ ನಡೆಯಬೇಕೆಂದು ಯೀ ಧರ್ಮಸ್ತ
೨೮. ೦ ಳಂಗಳಿಗೆ ಬಿಟ್ಟ ಬಿಡಾರ ಎನೆ(ವನು) ಆ ಸಂತಾಯ ಒಸಗೆ ಮುಂತಾದ ಸರ್ವಸಾಂಮ್ಯವಾಉದು ಯಿಲ್ಲ ಎಂ
೨೯. ೦ ದು ಸರ್ವಮಾಂನ್ಯವಾಗಿ ಯಿ ಧರ್ಮ್ಮ ಆ ಚಂದ್ರಾರ್ಕಸ್ಥಾಯಿಯಾಗಿಎಂದೆಂದೂ ನಡೆವ ಹಾಗೆ ಯಿಚಪ ಓ
೩೦. ೦ ಡೆಯರು ಬೆಂಗರೆ ಮೂರು ಮಂದಿನ ಗ್ರಾಮದ ಸಂನಿಧಿಯಲು ಬರಸಿ ಮಂಡ್ಮಣಕೇಶವನಾಥ
೩೧. ೦ ದೇವರ ಸ್ಥಾನದಲ್ಲಿ । ನೆಟ್ಟ ಶಿಲಾಶಾಸನದ ॥ ಬೆಂಗರೆಯ ಒಳಗೆ ಉಳ ದೇವಸ್ಥಾನದ ಸ್ಥಳಕ್ಕೆ ಮೂಲಿ ಮೂನೂರ ಒಕಲ
೩೨. ೦ ಭಯಿತ್ತರು ಮೂರು ಮಂದಿನ ಬಗೆಗೆ ಉಳ ದೇವಸ್ವಸ್ಥಳಕ್ಕೆ ಮೂಲಿಕೇರಿಯ ಮೂನೂರಣಯಿಂದಣ
೩೩. ೦ ನಾಯಕ್ಕರ್ತರು ಮುಕ್ಕಾಲಡಿಗಳು ತೇಜಮಾಂನ್ಯ ಸರಿಯಾಗಿ ಯಿವರ ಸಂತತಿ ಸಂತತಿಯೂ ತಪ್ಪದೆದೇವರ ಶ್ರೀ
೩೪. ೦ ಕಾರ್ಯ್ಯವನು ನಡೆಸಿ ಬಂದು ಸುಖದಲು ಬಹರು ॥ ಯಿ ಧರ್ಮವನಾ ನೊಬನು ಪ್ರತಿಪಾಲಿಸಿದವರಿಗೆ ಶ್ರೀ
೩೫. ೦ ....ವಾರಣಾಸಿ ಮೊದಲಾದ ಪುಂಣ್ಯ ಕ್ಷೇತ್ರಂಗಳಲ್ಲಿ ಸೋಮ ಸೂರ್ಯ . ೦ಗೆ ಪುಂಣ್ಯಕಾಲದಲ್ಲಿ ಸಹ
೩೬. ೦ ಸ್ರ ಕಪಿಲೆಯನೂ. . . ಸಹಸ್ರಮಂದಿ ಬ್ರಾಂಹ್ಮರಿಗೆದಾನ . .
೩೭. ೦ ... ಅಳುಪಿದವರಿಗೆ

ಅಡಿಟಿಪ್ಪಣಿಗಳು

೧. ಈ ಶಾಸನವನ್ನು ಸಂಶೋಧಿಸುವಲ್ಲಿ ಕೇಶವಮೂರ್ತಿ ದೇವಾಲಯದ ಅಧ್ಯಕ್ಷರಾದ ಆನಂದ ದೇವಾಡಿಗ ಉತ್ಸವ ಸಮಿತಿಯ ಅಧ್ಯಕ್ಷರಾದ ರವಿ ದೇವಾಡಿಗ ಉತ್ಸವ ಸಮಿತಿಯ ವೆಂಕಟ್ರಮಣ ದೇವಾಡಿಗ, ಸುಬ್ರಾಯ ದೇವಾಡಿಗ, ರಾಮಕೃಷ್ಣ ದೇವಾಡಿಗ, ಜನಾರ್ಧನ ದೇವಾಡಿಗ, ದೇವರಾಜ ದೇವಾಡಿಗ, ಮಂಜುನಾಥ ದೇವಾಡಿಗ ಮತ್ತು ಶಾಸನ ಅಧ್ಯಯನದಲ್ಲಿ ಸಂಶೋಧಕ ಶ್ರೀ ಶ್ರುತೇಶ್ ಆಚಾರ್ಯ ಮೊದಲಾದವರು ಸಹಕರಿಸಿದ್ದರು.

೨. Descriptive List of Stone and Copper Plate Inscription 1941-42, Kannada Research Institution, Dharwad.

೩. Ramesh K.V., A History of South Kanara, p.135.

೪. Descriptive List of Stone and Copper Plate Inscription 1941-42, No. 58.

೫. Uttara Kannada District Gazetteer p. 918.

೬ Ibid., 925.

೭. Ibid., 941.

◆◆

೨೨

ಜಗದೀಶ

ಸಂಡ ಗ್ರಾಮದ ಶಾಸನಗಳ ಪುನರಾವಲೋಕನ

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಸಂಡ ಗ್ರಾಮದ ಶಿವಪ್ಪ ಜಂಬೂರು ಇವರ ಮನೆ ಹಿತ್ತಲಿನಲ್ಲಿ ಗದ್ದೆ ಮಟ್ಟ ಮಾಡುವಾಗ ದೊರೆತಿದೆ. ಇತರ ಶಾಸನಗಳು ಮತ್ತು ಪಂಚತಂತ್ರ ಶಿಲ್ಪದ ಕುರಿತು ೨೦೦೧ರಲ್ಲಿ ಸಂಪ್ರಬಂಧವನ್ನು ಮಂಡಿಸಿದೆ. ಈ ಸಮಯದಲ್ಲಿ ಕಲ್ಯಾಣ ಚಾಲುಕ್ಯರ ಕ್ರಿ.ಶ. ೧೧೯೪ರ ಸುಮಾರು ೧೫ ಸಾಲುಗಳ ಶಾಸನವನ್ನು ಬೆಳಕಿಗೆ ತರಲಾಗಿತ್ತು. ಉಳಿದ ಭಾಗ ಮಣ್ಣಿನಲ್ಲಿ ಹೂತು ಹೋಗಿತ್ತು. ೨೦೨೧ರಲ್ಲಿ ಸ್ಥಳಕ್ಕೆ ಪುನಃ ಭೇಟಿ ನೀಡಿದಾಗ ಮಣ್ಣು ಮಟ್ಟಮಾಡಲಾಗಿದ್ದು ಶಾಸನದ ಉಳಿದ ಭಾಗ ಕಾಣುತ್ತಿದ್ದು, ಹೆಚ್ಚುವರಿ ೧೦ ಸಾಲುಗಳು ಕಂಡು ಬಂದಿವೆ. ಶಾಸನವು ಎರಡು ತುಂಡಾಗಿದ್ದು ಮೊದಲ ೧೫ ಸಾಲುಗಳ ಭಾಗವನ್ನು ಈಗ ಊರಿನ ಈಶ್ವರ ಗುಡಿಯ ಹತ್ತಿರ ತಂದು ಇಡಲಾಗಿದೆ. ಉಳಿದ ಕೆಳಭಾಗ ಇನ್ನೂ ಮೂಲ ಸ್ಥಳದಲ್ಲೇ ಇದೆ. ಒಟ್ಟು ೨೫ ಸಾಲುಗಳ ಶಾಸನ ಹೀಗಿದೆ.

ಇಸಿ ೭ ಸಂಪುಟದಲ್ಲಿ ೯ ಶಾಸನಗಳು ಮತ್ತು ಎಂಎಆರ್‌ನಲ್ಲಿ ೫ ಶಾಸನಗಳು ಪ್ರಕಟವಾಗಿವೆ. ೨೦೧೯ರ ಹೊಸ ಶಿಕಾರಿಪುರ ತಾಲೂಕ ಇಸಿ ಸಂಪುಟದಲ್ಲಿ ೧೪ ಶಾಸನಗಳು ಪ್ರಕಟ ಆಗಿದೆ. ೨೦೦೧ರಲ್ಲಿ ೪ ಶಾಸನ ಪ್ರಕಟಿಸಲಾಗಿತ್ತು. ಇದಲ್ಲದೆ ಈಗ ಇನ್ನು ಎರಡು ಶಾಸನಗಳು ಪತ್ತೆ ಆಗಿವೆ. ಒಟ್ಟು ಸಂಡದಲ್ಲಿರುವ ಶಾಸನಗಳು ೧೭ ಆಗಲಿದೆ.


ಶಿವಪ್ಪ ಜಂಬೂರು ಇವರ ಮನೆ ಹಿತ್ತಲಿನಲ್ಲಿನ ಶಾಸನ ಪಾಠ

೧. @ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥುವಿವಲ್ಲ [ಭ]
೨. ಮಹಾರಾಜಾಧಿರಾಜ ಪರಮೇಶ್ವರಂ ಪರಮಭ[ಟ್ಟಾರ]
೩. ಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀ [ಮ]
೪. ತ್ರಿಭುವನಮಲ್ಲದೇವರ ವಿಜಯರಾಜ್ಯ ಮುತ್ತರೋತತ್ತರಾ [ಭಿ]
೫. ವೃದ್ಧಿ ಪ್ರವದ್ಧರ್ವ ಮಾಚಂದ್ರಾರ್ಕ್ಕತಾರಂಬರಂ ಸಲ್ಲುತ್ತಮಿರೆ [ಶ್ರೀ ಪಾ]
೬. ದಪದ್ಮೋಪಜೀವಿ ಸಮದಿಗತ ಪಂಚಮಹಾಷಬ್ಧ ಮಹಾಮಣ್ಡ [ಳೇ]
೭. ಶ್ವರಂ ದ್ವಾರಾವತಿಪುರವರಾಧೀಶ್ವರಂ ಯಾದವಕುಳಾಂಬರ ದ್ಯುಮಣಿ
೮. ಸಮ್ಯಕ್ತಚೂಡಾಮಣಿ ಮಲೆಪರೋಳ್ಗಣ್ಡ ದ್ಯನೇಕ ನಾಮಾವಳಿ [ಮು]
೯. ಖ್ಯರಪ್ಪ ಶ್ರೀ ಮನ್ಮಹಾಮಣ್ಡಳೇಶ್ವರಂ ಹೊಯ್ಸಳರಸರು ಬನವಸಿನಾಡು .

೬೬, ಮೊದಲ ಅಡ್ಡ ರಸ್ತೆ
ಹೊಸಮನೆ ಬಡಾವಣೆ
ಶಿವಮೊಗ್ಗ-೫೭೭೨೦೧
ಮೊ: ೯೪೪೯೪ ೦೦೫೨೫

೧೦. ಕಂ ಷಣ್ಡಮಂ ದುಷ್ಟನಿಗ್ರಹಿಸಿ ಶಿಷ್ಟ ಪ್ರತಿಪಾಳನದಿಂದಾಳ್ದರಸುಗೆಯ್ಯುತ್ತ . .
೧೧. . . ಚಾಳುಕ್ಯ ವಿಕ್ರಮ ಕಾಲದ ೧೪ ನೆಯ ಶ್ರೀಮುಖ ಸಂವತ್ಸರ
೧೨. ದ ಅಮವಾಸ್ಯೆ [ಆ]ದಿವಾರಂ ವ್ಯತೀಪಾತಂ ಸೂರ್ಯ್ಯಗ್ರಹಣದಂನ್ದು ॥
೧೩. ನಿಯಮ ಸ್ವಾಧ್ಯಾಯ ಮೋನ ಧಾರಣ ಮೋನಾನುಷ್ಟಣ ಪರಾಯ [ಣ ಸಮಾ]
೧೪. ಧಿ ಶೀಲಸಂಪನ್ನರಪ್ಪ ಶ್ರೀಮ [ದ] ಗ್ರಹಾರಂ ಷಣ್ಡದ ಮಹಾಜನಂ ಮೂವ . . .
೧೫. ವಶಿಷ್ಟಗೋತ್ರದ ಹೆಮ್ವರುವ ಹಾ . ಮಯ್ಯನ ಪುತ್ರಂ . . ರ್ವ್ವರು ವದಾಸಿಮ [. .ಸಾ]
೧೬. ಷ್ಟಾಂಗಮೆಱಗಿ ನಮಸ್ಕಾರಂ ಗೆಯ್ದು . . . ದ ಪೂಜೆಯಂಕೊಟ್ಟ [. . ದೇವ]
೧೭. ರ ನಿವೇದ್ಯಕಂ ದೂಪ ದೀಪಕೆ ಯಿ ಕಾಳಯ ಕಜ್ಜಿನಪಾಲಿ . . . . .
೧೮. ಕಚ್ವೆ ಗಾಲಾಳಗೆ ಓಣಿಯಂ ಬಡಗಲು ಗುಣಿಗನ ಮತ್ತಲುಂ ಹ ಇನ್ತಿಧರ್ಮ್ಮ .
೧೯. ಮೂವತಿರ್ಚ್ಚಾಸಿರಮುಂ ಪ್ರತಿಪಾಲಿಸುವರು ಈ ಧರ್ಮ್ಮಮನಾವನು .
೨೦. . ಲಿಯದೆ ನಡಿಯಿಸಿದ ಮಹಾಪುರುಷಂ ಕುರುಕ್ಷೇತ್ರ ವಾರಣಾಸಿ
೨೧. ಪ್ರಯಾಗೆಯಲು ಸಹಶ್ರ ಬ್ರಾಹಣರ್ಗ್ಗೆ ಸಹಶ್ರ ಕವಿಲೆಂ ಕೊಟ್ಟ
೨೨. ಫಲಮನೆಯ್ದುವರು ಇನ್ತಿ ಧರ್ಮ್ಮಮನಾವನೋಜ್ವಂ ಕಿಡಿಸಿದಂ ಕುರು
೨೩. ಕ್ಷೇತ್ರ ವಾರಣಾಸಿ ಪ್ರಯಾಗೆಯಲುಂ ಸಹಶ್ರ ಬ್ರಾಹಣರು ಸ [ಹ]
೨೪. ಶ್ರ ಕವಿಲ್ಯೆಯಂ ತನ್ನ ಸ್ವಹಸ್ತದಿಂ ವದಿಯಿಸಿ ದೋಸಮನೆಯ್ದು
೨೫. ವರು

ಶಾಸನದಲ್ಲಿನ ಅಮವಾಸ್ಯೆ ಮತ್ತು ಸೂರ್ಯಗ್ರಹಣದ ಉಲ್ಲೇಖವು ಶ್ರೀಮುಖ ಸಂವತ್ಸರದ ೧೦ ಮಾರ್ಚ ೧೯೪ ಭಾನುವಾರಕ್ಕೆ ಸರಿ ಹೊಂದುತ್ತದೆ.



ಒಕ್ಕೈ ಮಾಸ್ತಿ ಕಲ್ಲಿನ ಮುಂಭಾಗ ಮತ್ತು ಹಿಂಭಾಗದಲ್ಲಿರುವ ಶಾಸನ ಪಾಠ ಹೀಗಿದೆ

ಮುಂಭಾಗ	**ಹಿಂಭಾಗ**
೧ ಆನಂದ ಸಂವತ್ಸರದಲಿ	೧. ಆನಂದ ಸಂವತ್ಸ
೨ ಸಂಡದ ಮಾದಟಿ ಹೊ	೨. ರದಲು ಮದಟಿ
೩ ಂನಯನಯನ ಹೊಸ	೩.
೪ ರಹೊಂಸಗೆನು.	೪.





ಸಂಡದ ಬೂದಿಗೆರೆಯ ಬಳಿ ಇನ್ನೊಂದು ಶಾಸನ ಇದ್ದು ಪಾಠ ಹೀಗಿದೆ



೧ ಯುವ ಸಂವಚ
೨ ರದ ಆಶಾಡ ಬ ೧೨ ಲೂ
೩ ಯ
೪ ಪನಾಯಕ
೫ ಗೆ ಕೊಟ ಭೂಮಿ
೬ ಧರ್ಮ ಶಾಸನ
೭ ದಲಿ ಬೂದಿಗೆರೆ ವ
೮ ಳಗೆ ನಾಗುಳದ
೯ ಗದ್ದೆ ದೇವರ ಅಮ್ರ
೧೦ .ತ ಪಡಿಗೆ ಕೊಟಉ
೧೧ . . ಆವ ಅಳ
೧೨ . ಪಿದರೂ ದೇವರ
೧೩ . . .
೧೪ . . ವರು

ಕ್ರಿ.ಶ ೧೦೧೬ ವೀರಗಲ್ಲು ಶಾಸನದಲ್ಲಿ (ಇಸಿ ಹೊ ನಂ ೪೦೫ (ಹ ೩೦೭), ಕುನ್ದರಾಜ ಬನವಾಸಿ ಆಳುವಾಗ ಕಮ್ಮರ ಬಮ್ಮನ ಉಲ್ಲೇಖ ಇದೆ. ಶಾಸನದ ಒಂದು ಬದಿಯಲ್ಲಿ ಕಮ್ಮಾರರ ಚಿಮ್ಮಟದ ಚಿತ್ರ ಇರುವುದು ವಿಶೇಷ.

---

* ಸಂಡ ಗ್ರಾಮದ ಶಾಸನಗಳ ಪರಿವೀಕ್ಷಣೆಯ ಸಮಯದಲ್ಲಿ ಸಹಕರಿಸಿದ ಡಾ. ಆರ್. ಶೇಜೇಶ್ವರ, ಶ್ರೀ ರಮೇಶ ಬಿ. ಹಿರೇಜಂಬೂರು ಮತ್ತು ಶ್ರೀ ಮಂಜಪ್ಪ ಚುರ್ಚಗುಂಡಿ ಅವರಿಗೆ ಧನ್ಯವಾದಗಳು.

◆◆

ರಮೇಶಬಾಬು ಬಿ.ವಿ.

ಕಾಮನದುರ್ಗ ಪ್ರದೇಶದ ಅಪ್ರಕಟಿತ ಶಾಸನ ಮತ್ತು ಸ್ಮಾರಕ ಶಿಲ್ಪಗಳು

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ನಾಗಲಮಡಿಕೆ ಹೋಬಳಿಯ ಕಂದಾಯ ಗ್ರಾಮ ಕಾಮನದುರ್ಗ ಪ್ರದೇಶವು ಇತಿಹಾಸ ಪ್ರಸಿದ್ಧಿಯನ್ನು ಪಡೆದಿದೆ. ಕಾಮನದುರ್ಗ ಎಂಬ ಹೆಸರು ಬರಲು ಕಾರಣ ಕಾಮನದುರ್ಗ ಎಂಬ ಬೆಟ್ಟವಿರುವುದರಿಂದ, ಈ ಬೆಟ್ಟಕ್ಕೆ ಕಾಕಾದ್ರಿ ಪರ್ವತ, ರಾಮಲಿಂಗೇಶ್ವರಸ್ವಾಮಿ ಬೆಟ್ಟ, ಕಾಮಿಲಿಕೊಂಡ, ರಾಮನಬೆಟ್ಟ, ಕಾಮನದುರ್ಗ ಎಂಬ ಹತ್ತು ಹಲವು ಹೆಸರುಗಳಿವೆ. ಶ್ರೀರಾಮ-ಸೀತಾ, ಲಕ್ಷ್ಮಣರು ವನವಾಸದ ಸಮಯದಲ್ಲಿ ತಂಗಿದ್ದರೆಂಬ ಐತಿಹ್ಯವಿದೆ. ಈ ಬೆಟ್ಟದ ಮೇಲೆ ಶ್ರೀರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ, ಕೋಟೆ-ಕೊತ್ತಲುಗಳಿವೆ. ಶಿವರಾತ್ರಿ ಹಬ್ಬದ ದಿನ ಸಾವಿರಾರು ಭಕ್ತರು ಬೇರೆ ಬೇರೆ ಜಿಲ್ಲೆ, ರಾಜ್ಯಗಳಿಂದ ಬಂದು ದರ್ಶನವನ್ನು ಪಡೆಯುತ್ತಾರೆ.

ಕಾಮನದುರ್ಗ ಪ್ರದೇಶದ ಭೂಪೂರು ತಾಂಡದ ಹೊರ ವಲಯದಲ್ಲಿ ಅಪ್ರಕಟಿತ ಶಾಸನವೊಂದು ದೊರೆತಿದೆ. ಇದು ಭೂಪೂರು ತಾಂಡದಿಂದ ೨ ಕಿ.ಮೀ. ದೂರದಲ್ಲಿದೆ. ಕಾಮನದುರ್ಗ ಸರ್ವೆ ನಂ. ೯೭ರ ಜಮೀನಿನಲ್ಲಿ ಬೇವಿನ ಮರದ ಕೆಳಗೆ ನಿಲ್ಲಿಸಲಾಗಿದೆ. ಈ ಶಾಸನವು ಗ್ರಾನ್ಯೆಟ್ ಶಿಲಾ ಮಾದರಿಯ ಚಪ್ಪಡಿ ಕಲ್ಲಿನ ಮೇಲೆ ಕೆತ್ತಿ ನಿಲ್ಲಿಸಿರುತ್ತಾರೆ. ಈ ಶಾಸನವು ಐದೂವರೆ ಅಡಿ ಎತ್ತರ, ಎರಡೂವರೆ ಅಡಿ ಅಗಲ ಮತ್ತು ೮ ಇಂಚು ದಪ್ಪವಿದೆ.

ಶಾಸನದ ಪಾಠ

೧. ಸರ್ವ್ವಧಾರಿ ಸಂವತ್ಸ[ರ]
೨. ದ ಸ್ರವಣ ಬ೧೩ . .
೩. ಶ್ರೀ ಮತು ಬಂಟರ ಭ
೪. ವ ಬೊಂಮೆನಯ್ಕನ
೫. ಮಗ ವೋಭೆನಯಕನು
೬. ಜೊಮೆ ದಂಣಯಕರ ಕಾ
೭ ಳಗದಾಲಿ ಕುದುರಿಯ
೮. ಯಜಿದು ಬಿಡುದು
೯. ಮಡಿದಂತ ವೀರನು ಮಂಗಳ ಮಹಶ್ರೀ



ಭೂಪೂರು ತಾಂಡ
ನೀಲಮ್ಮನಹಳ್ಳಿ ಅಂಚೆ
ನಾಗಲಮಡಿಕೆ ಹೋಬಳಿ
ಪಾವಗಡ ತಾಲ್ಲೂಕು
ತುಮಕೂರು ಜಿಲ್ಲೆ
ಮೊ: ೯೮೮೦೬ ೬೮೦೮೪

ಈ ಶಾಸನವು ಲಿಪಿಯ ದೃಷ್ಟಿಯಿಂದ ಸಮಾರು ೧೫ನೇ ಶತಮಾನದ್ದಾಗಿದೆ.

ಸಾರಾಂಶ – ಈ ಶಾಸನವು ಬಂಟರಭಾವ ಎಂಬ ಬಿರುದು ಪಡೆದ ಬೊಂಮೆನಾಯ್ಕನ ಮಗನಾದ ವೋಬೆನಾಯ್ಕನು ಜೊಮೆ ದಂಣಾಯಕರ ಕುದುರೆಯ ಕಾಳಗದಲ್ಲಿ ಹೋರಾಟ ಮಾಡಿ ವೀರಮರಣ ಹೊಂದಿದ ಮಾಹಿತಿ ನೀಡುತ್ತದೆ.

ಈ ಶಾಸನದಲ್ಲಿ ಬರುವ ವೋಭೆನಾಯ್ಕ, ಬೊಂಮೆನಾಯ್ಕ, ಜೊಮೆ ದಂಣಾಯಕರ ಬಗ್ಗೆ ಈ ಪ್ರದೇಶದಲ್ಲಿನ ಶಾಸನಗಳಲ್ಲಿ ಮಾಹಿತಿ ಸಿಕ್ಕಿಲ್ಲದಿರುವುದರಿಂದ ಇವರು ಬಹುಶಃ ಸ್ಥಳೀಯ ಅಧಿಕಾರಿಗಳು ಅಥವಾ ಸ್ಥಳೀಯ ಪಾಳೆಗಾರರು ಇರಬಹುದು.

ಈ ವೀರಗಲ್ಲಿನ ಕೆಳಭಾಗದ ಬಲಭಾಗದಲ್ಲಿ ಒಂಬತ್ತು ಸಾಲಿನ ಶಾಸನವಿದ್ದರೆ, ಎಡಭಾಗದಲ್ಲಿ ವೀರನು ಕೈಯಲ್ಲಿ ಆಯುಧ ಹಿಡಿದು ನಿಂತಿರುವ ಶಿಲ್ಪವಿದೆ. ವೀರಮುಡಿ, ಸರ್ವಾಭರಣಗಳನ್ನು ಧರಿಸಿದ್ದಾನೆ. ಮಧ್ಯಭಾಗದ ಪಟ್ಟಿಕೆಯಲ್ಲಿ ಬಲಿಷ್ಟವಾದ ಕುದುರೆಯ ಮೇಲೆ ವೀರನೊಬ್ಬ ಕುಳಿತು ಬಲಗೈಯಲ್ಲಿ ಕತ್ತಿ ಪ್ರಯೋಗಿಸುತ್ತಿರುವಂತೆ ಹಿಡಿದಿದ್ದು, ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದು, ಕುದುರೆಯು ವೇಗವಾಗಿ ಮುನ್ನುಗ್ಗುತ್ತಿರುವಂತೆ ಕಾಣುತ್ತದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಸೂರ್ಯ, ಚಂದ್ರರ ರೇಖಾಚಿತ್ರದ ಮಧ್ಯೆ ಶಿವಲಿಂಗದ ಉಬ್ಬು ಶಿಲ್ಪವನ್ನು ಕಾಣಬಹುದು. ಇದು ವೀರನಾದ ವೋಬೆನಾಯ್ಕನು ವೀರಮರಣ ಹೊಂದಿರುವುದನ್ನು ಸೂಚಿಸುತ್ತದೆ.

ಸ್ಮಾರಕ ಶಿಲ್ಪಗಳು


ಈ ಪ್ರದೇಶದಲ್ಲಿ ಹಲವು ಸ್ಮಾರಕ ಶಿಲ್ಪಗಳು ದೊರೆತಿವೆ.

೧. ಬಂದೂಕು ವೀರಗಲ್ಲು




ಈ ವೀರಗಲ್ಲು ಭೂಪೂರು ಗ್ರಾಮದ ಅಂಗನವಾಡಿ ಹಿಂಬದಿಯ ರಾಮರೆಡ್ಡಿ ಜಮೀನಿನಲ್ಲಿದೆ. ವೀರನು ಸಮಭಂಗಿಯಲ್ಲಿ ನಿಂತು ಎಡಗೈಯಲ್ಲಿ ಬಂದೂಕು, ಬಲಗೈಯಲ್ಲಿ ಕತ್ತಿ ಹಿಡಿದಿದ್ದಾನೆ. ಸೊಂಟದ ಭಾಗದಲ್ಲಿ ಬಾಕುವನ್ನು ಸಿಕ್ಕಿಸಿಕೊಂಡಿದ್ದು, ಕಾಲ್ಗಡಗ, ಕೈಗಡಗ, ಕತ್ತಿನಲ್ಲಿ ಸರ ಹಾಕಿಕೊಂಡಿದ್ದು ಯಾವುದೋ ಯುದ್ಧದಲ್ಲಿ ಮರಣ ಹೊಂದಿದ್ದಾನೆ. ವೀರ ಮರಣ ಹೊಂದಿರುವುದನ್ನು ತಿಳಿದು ಅವನ ಪತ್ನಿಯು ಸತಿಯಾಗಿರುವುದನ್ನು ವೀರಗಲ್ಲಿನಲ್ಲಿ ಕಾಣಬಹುದು. ಸತಿಯು ಎಡಗೈಯಲ್ಲಿ ಕನ್ನಡಿ, ನಿಂಬೆ ಹಣ್ಣನ್ನು ಹಿಡಿದು ಸರ್ವಾಲಂಕಾರ ಭೂಷಿತಳಾಗಿದ್ದಾಳೆ. ಈ ವೀರಗಲ್ಲು ಸುಮಾರು ೧೬ನೇ ಶತಮಾನದ್ದಾಗಿದೆ.

೨. ನೀಲಮ್ಮನಹಳ್ಳಿಯ ವೀರಗಲ್ಲು



ಈ ವೀರಗಲ್ಲು ನೀಲಮ್ಮನಹಳ್ಳಿ ಗ್ರಾಮದ ಕೆ ಟಿ ನಾರಾಯಣಪ್ಪನವರ ಹೊಲದಲ್ಲಿದೆ. ಈ ವೀರಗಲ್ಲು ಪಟ್ಟಿಕೆಯನ್ನು ಹೊಂದಿದ್ದು, ಕೆಳಭಾಗದ ಪಟ್ಟಿಕೆ ಮಣ್ಣಿನಲ್ಲಿ ಮುಚ್ಚಿಹೋಗಿದ್ದು, ಬಹುಶಃ ಯುದ್ಧದ ಚಿತ್ರಣವಿರಬಹುದು. ಮಧ್ಯಭಾಗದ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಸತ್ತ ವೀರನನ್ನು ಚಾಮರಧಾರಿಣಿಯರು ಕೈಹಿಡಿದು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದು, ಅಗ್ರ ಪಟ್ಟಿಕೆಯಲ್ಲಿ ವೀರನು ಶಿವೈಕ್ಯನಾಗಿದ್ದು, ವೀರನ ಬಲಭಾಗದಲ್ಲಿ ಶಿವನ ವಾಹನ ನಂದಿ, ಎಡಭಾಗದಲ್ಲಿ ಶಿವಲಿಂಗದ ಉಬ್ಬು ಶಿಲ್ಪವಿರುವುದನ್ನು ಕಾಣಬಹುದು. ಈ ವೀರಗಲ್ಲು ಸಮಾರು ೧೫ನೇ ಶತಮಾನದ್ದಾಗಿದೆ.

೩. ಕಾಮನದುರ್ಗ ಬೆಟ್ಟದ ಮೇಲಿನ ವೀರಗಲ್ಲು



ಕಾಮನದುರ್ಗ ಬೆಟ್ಟ ಹತ್ತುವ ತುತ್ತತುದಿಯ ಆರಂಭದಲ್ಲಿದ್ದು, ವೀರನು ಕೈಮುಗಿದು ನಿಂತಿದ್ದು ಬಲಗಡೆ ಬಂದೂಕು ಇದೆ. ವೀರನು ತನ್ನ ತೋಳಿನಲ್ಲಿ ಕತ್ತಿ ಸಿಲುಕಿಸಿಕೊಂಡಿದ್ದು. ಯಾವುದೋ ಯುದ್ದದಲ್ಲಿ ಅಥವಾ ಬೇಟೆಗೆ ಹೋದ ಸಂದರ್ಭದಲ್ಲಿ ವೀರಮರಣ ಹೊಂದಿದ್ದಾನೆ. ಕಾಲ ೧೬–೧೭ ನೇ ಶತಮಾನ.

೪. ಕಾಮನದುರ್ಗ ಪ್ರದೇಶದ ರೊಪ್ಪದ ಬಾವಿ ಅರಣ್ಯ ಪ್ರದೇಶದ ವೀರಗಲ್ಲು ಗುಡಿ







ಕಾಮನದುರ್ಗ ಬೆಟ್ಟದ ರೊಪ್ಪದ ಬಾವಿ ಅರಣ್ಯ ಪ್ರದೇಶದಲ್ಲಿ ಒಂದು ಚೌಕಕಾರದ ಗುಡಿಯಿದ್ದು. ಸ್ಥಳೀಯರು ಇದನ್ನು ವೀರಗಾಳ್ಳು ಗುಡಿಯೆಂದು ಕರೆದು ಭಕ್ತಿ ಭಾವದಿಂದ ಪೂಜಿಸುತ್ತಾರೆ. ಈ ಗುಡಿಯಲ್ಲಿ ವೀರಗಲ್ಲಿದ್ದು, ಎರಡು ಶಿಲಾಯುಗದ ಕೊಡಲಿಗಳನ್ನು ಇಟ್ಟಿದ್ದಾರೆ. [ಈ ಪ್ರದೇಶದ ಶಿಲಾಯುಗದ ಕುರುಹುಗಳ ಬಗ್ಗೆ ಪ್ರತ್ಯೇಕ ಲೇಖನವನ್ನು ಬರೆಯುತ್ತಿದ್ದೇನೆ.] ಈ ವೀರನು ತಲೆಗೆ ಪೇಟದಂತೆ ಕಾಣುವ ಬಟ್ಟೆಯನ್ನು ಸುತ್ತಿಕೊಂಡಿದ್ದು, ಕಿವಿಗೆ ಕರಣಕುಂಡಲ, ಕೈಗಡಗ, ಸೊಂಟಪಟ್ಟಿ, ಕಾಲ್ಗಡಗ ಧರಿಸಿ, ಬಲಗೈಯಲ್ಲಿ ಬಾಕುವಿನಂತ ಆಯುಧವಿದೆ. ಈ ವೀರನು ಯಾವುದೋ ಯುದ್ದದಲ್ಲಿ ಹೋರಾಡಿ ವೀರ ಮರಣ ಹೊಂದಿರುವುದಕ್ಕೆ ಈ ವೀರಗಲ್ಲು ಸಾಕ್ಷಿಯಾಗಿದೆ. ಇದು ಸುಮಾರು ೧೬ನೇ ಶತಮಾನದಾಗಿದ್ದು, ಇದನ್ನು ನಾಯಕ [ವಾಲ್ಮೀಕಿ] ಜನಾಂಗದವರು ಪೂಜೆಯನ್ನು ಮಾಡುತ್ತಾರೆ. ಈ ವೀರಗಾಳ್ಳು ಎಂಬ ವೀರನನ್ನು ಸ್ಥಳಿಯರು ತಮ್ಮ ದೇವಮಾನವ, ಊರಿನ ಕಾವಲುಗಾರ, ದಕ್ಷ ವೀರವೆಂದು ಬಗೆದು ಇಂದಿಗೂ ಭಕ್ತಿಭಾವದಿಂದ ಪೂಜೆ ಮಾಡುತ್ತಾರೆ.

ಒಟ್ಟಾರೆಯಾಗಿ ಕಾಮನದುರ್ಗ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಕೋಟೆ-ಕೊತ್ತಲುಗಳು, ವೀರಗಲ್ಲುಗಳು, ಸ್ಮಾರಕ ಶಿಲ್ಪಗಳು, ಶಾಸನಗಳು ದೊರೆತಿದೆ. ಇದು ಸುಮಾರು ೨೦೦೦ ವರ್ಷಗಳಿಂದಲೂ ಜನರು ವಾಸಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಹೀಗೆ ಈ ಪ್ರದೇಶವು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇಲ್ಲಿ ದಾಖಲಾದ ವೀರಗಲ್ಲುಗಳು, ಶಾಸನಗಳು ವಿನಾಶದ ಅಂಚಿನಲ್ಲಿವೆ, ಇವನ್ನು ಸಂರಕ್ಷಣೆ ಮಾಡುವ ಅವಶ್ಯಕತೆ ಇದೆ.

---

* ಈ ಶಾಸನವನ್ನು ಓದಿಕೊಟ್ಟ ಆತ್ಮೀಯ ಸ್ನೇಹಿತರಾದ ಶಶಿಕುಮಾರ ನಾಯ್ಕ ಕೆ.ಸಿ. ಹಾಗೂ ಕ್ಷೇತ್ರಕಾರ್ಯದಲ್ಲಿ ಸಹಾಯ ಮಾಡಿದ ತಂದೆಯವರಾದ ಶ್ರೀ ವೆಂಕಟನಾಯ್ಕ, ಸ್ನೇಹಿತರಾದ ವಿಷ್ಣುವರ್ಧನನಾಯ್ಕ, ಚಂದ್ರಶೇಖರ ಪಾರ್ಥಿ ಮತ್ತು ಕಾಮನದುರ್ಗದ ಸ್ಥಳೀಯ ಜನರಿಗೆ ಧನ್ಯವಾದಗಳು.

ಆಕರಗ್ರಂಥಗಳು

೧. ತುಮಕೂರು ಗೆಜೆಟಿಯರ್.

೨. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಚಿತ್ತಯ್ಯ ಪೂಜಾರ್, ನಿಡಗಲ್ಲು ಪಾಳೆಗಾರರು.

◆◆

ನಾಗರಾಜು ಹೊ.ಮ.

ವಿಜಯನಗರ ಕಾಲದ ಕೂಟ ತಾಮ್ರಶಾಸನ

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಐತಿಹಾಸಿಕ ಸ್ಥಳವಾದ ನಿಡುಗಲ್ಲು ದುರ್ಗದ ಇತಿಹಾಸದ ಬಗ್ಗೆ ಅನೇಕ ಶಿಲಾ ಮತ್ತು ತಾಮ್ರಶಾಸನಗಳು ಬೆಳಕು ಚೆಲ್ಲುತ್ತವೆ. ಆದಾಗ್ಯೂ ನಿಡುಗಲ್ಲು ಇತಿಹಾಸದಲ್ಲಿ ಹೊಸಹೊಸ ಅಂಶಗಳು ಸದಾ ಒಡಮೂಡುತ್ತಲೇ ಬರುತ್ತಿವೆ. ಈ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳು ಅಸಂಖ್ಯಾತ. ಅಂತಹ ಚಟುವಟಿಕೆಗಳಲ್ಲಿ ಒಂದಾಗಿ ನಿಡುಗಲ್ಲು ದುರ್ಗವನ್ನು ಆಳಿದ ಹರತಿ ಮೂಲದ ಪಾಳೆಗಾರರ ಮೂಲವನ್ನು ತಿಳಿಸುವ ತಾಮ್ರಶಾಸನವೊಂದು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಲಭ್ಯವಾಯಿತು. ೨೦೧೨ ರಲ್ಲಿ ಈ ಶಾಸನವನ್ನು ಶೋಧನೆ ಮಾಡಲಾಗಿ ಹಲವು ದಿನಪತ್ರಿಕೆಗಳಲ್ಲಿ ಈ ವಿಷಯ ಪ್ರಕಟವಾಗಿದೆ. ಇದನ್ನು ಗಮನಿಸಿದ ಹಲವು ಸಂಶೋಧಕರು ಇದೊಂದು ಕೂಟ ಶಾಸನ ಎಂದು ತಿಳಿಸಿದ್ದು ಉಂಟು. ಅದೇನೆ ಇದ್ದಾಗ್ಯೂ ಲಭ್ಯವಿರುವ ಶಾಸನವನ್ನು ಇಲ್ಲಿ ಮಂಡಿಸಲಾಗಿದೆ.

ಪ್ರಸ್ತುತದ ಶಾಸನವು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆ ಹೋಬಳಿ ಕೇಂದ್ರದಿಂದ ಪಶ್ಚಿಮಕ್ಕೆ ೨೦ ಕಿ.ಮೀ. ದೂರದಲ್ಲಿರುವ ಮತ್ತು ಐತಿಹಾಸಿಕ ನಿಡುಗಲ್ಲಿಗೆ ೧೦ ಕಿ.ಮೀ. ದೂರದಲ್ಲಿರುವ ಪೋಲೇನಹಳ್ಳಿ ಗ್ರಾಮದಲ್ಲಿ ದೊರೆತಿದೆ. ನಿಡುಗಲ್ಲು ಪಾಳೆಗಾರ ಸಂಬಂಧಿ ಪಾಳೆಗಾರ ಮನೆತನದವರು ಎಂದು ಹೇಳಿಕೊಳ್ಳುವ ಈಶ್ವರನಾಯಕ ಎಂಬರಲ್ಲಿ ಈ ಶಾಸನ ಫಲಕ ಲಭ್ಯವಿದೆ.

ಶಾಸನ ಫಲಕವು ತಾಮ್ರದ್ದಾಗಿದ್ದು, ಹನ್ನೊಂದು ಇಂಚು ಉದ್ದ ಆರು ಇಂಚು ಅಗಲವಾಗಿದೆ. ಮೇಲ್ತುದಿಯು ತ್ರಿಭುಜಾಕಾರದ ಗೋಪುರದ ಮೊನೆಯುಳ್ಳದ್ದಾಗಿದೆ. ಫಲಕದ ಹಿಂದೆ ಮತ್ತು ಮುಂದಿನ ಎರಡೂ ಮುಖಗಳಲ್ಲಿಯೂ ಬರೆಯಲ್ಪಟ್ಟಿದೆ. ಶಾಸನದ ಮುಂಭಾಗದ ಶಿರಭಾಗವು ಸೂರ್ಯ ಮತ್ತು ಚಂದ್ರರ ಚಿಹ್ನೆಗಳನ್ನು ಹೊಂದಿದೆ. ಹಿಂಬದಿಯ ಗೋಪುರದಲ್ಲಿ ಎರಡು ಕಠಾರಿ ಮುದ್ರೆಗಳನ್ನು ಗುರುತು ಮಾಡಲಾಗಿದೆ. ಕನ್ನಡ ಲಿಪಿಯ ಸ್ಪಷ್ಟ ಬರಹವನ್ನು ಹೊಂದಿದ್ದು ಅಲ್ಲಲ್ಲಿ ತೆಲುಗು ಲಿಪಿಯ ಅಕ್ಷರಗಳು ನುಸುಳಿಕೊಂಡಿವೆ. ಲಿಪಿ ಕನ್ನಡವಾಗಿದ್ದು, ಶಾಸನ ಭಾಷೆಯು ತೆಲುಗು ಆಗಿದೆ. ಫಲಕದ ಮುಂಭಾಗದಲ್ಲಿ ೨೬ ಸಾಲುಗಳು ಮತ್ತು ಹಿಂಭಾಗದಲ್ಲಿ ೨೯ ಸಾಲುಗಳು ಸೇರಿ ಒಟ್ಟು ೫೫ ಸಾಲು/ಪಾದಗಳನ್ನು ಒಳಗೊಂಡ ಶಾಸನವಿದು.

'ಶ್ರೀ ಶಾರದಾಂಬಾಯನಮಃ' ಎಂಬುದರೊಂದಿಗೆ ಪ್ರಾರಂಭಗೊಳ್ಳುವ ಶಾಸನದ ಬರಹವು ಪ್ರಾರಂಭಿಕ ಎಂಟು ಸಾಲುಗಳು ಸಂಸ್ಕೃತ ಶ್ಲೋಕವನ್ನೊಳಗೊಂಡಿದೆ. ಆ ನಂತರ ಕಾಲ, ವಿಷಯ, ವಿವರವನ್ನು ತಿಳಿಸುತ್ತಾ ಕೊನೆಯಲ್ಲಿ 'ಶ್ರೀ ವಿರೂಪಾಕ್ಷ' ಎಂಬ ಪದದೊಂದಿಗೆ ಮುಕ್ತಾಯವಾಗುತ್ತದೆ.

೧೦೨೫, ನಿಡಗಲ್ಲು ಮಾರಮ್ಮ
ದೇವಾಲಯ ಹಿಂಭಾಗ, ಎ೧ ಬ್ಲಾಕ್
ವೈ.ಎನ್. ಹೊಸಕೋಟೆ
ಪಾವಗಡ ತಾಲ್ಲೂಕು
ತುಮಕೂರು ಜಿಲ್ಲೆ
ದೂ : ೨೦೫೬ ೪೫೪೪

ಶಾಸನ ಪಾಠ

ಮೊದಲ ಮುಖ– ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿಹ್ನೆ ಇದೆ.

೦೧ "ಶ್ರೀ ಶಾರದಾಂಭಾಯ ನಮಃ"
೦೨ ಸಮಸ್ತುಂಗ ಶಿರಶ್ಚುಂಬಿ।ಚಂದ್ರಚಾಮರಭಾರವೇ ತ್ರೈ
೦೩ ಲೋಕ್ಯನಗರಾರಂಭು ಮೂಲಸ್ತಂಭಾಯ ಸಂ
೦೪ ಭವೆ।ಆಸಿಷಿರಾಂನ್ನವೊದ್ಭೂತಾ।ಮಪಾಶರುಷ್ಟುಯನುತ್ತಮಂ।ಜಲಾಲಯಸ್ಪೂನಿಮಾ
೦೫ ಲ್ಲ್ಯಮಾದೆತ್ತಶಿರಶಾಶ್ವತಃ॥ಸದ್ಯಾಮಾದಧಿಸ್ತಸ್ಯೋ।ಸರಿತ್ತೋನೊಚಸಮುದ್ಭವಃ।ಶ್ರೀಬು
೦೬ ಕ್ಕಭೂಮಿರಾಜೇಶು।ಮಾತ್ಸಾರಭೂತದನ್ವಯೆ।ರಜೋಯಸ್ಯಯಶಃಸಿಂಧು ಜಲಯ
೦೭ ಸ್ಯಗೌರಾಂಬ್ಭಿ ಕಾಜಾನೆಸ್ತನಯೊ ವಿನಯಸಿನ್ನತಃ । ಹರಹರೇಶರಃ ।
೦೮ ಪ್ರತಾಪದೇವರಾಯಾಖ್ಯಂ ಪುತ್ರೋಭೂಸ್ತಸ್ಯ ವಿಕ್ರಮಃ ।
೦೯. ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಬುಲು ೯೦೦
೧೦. ಅಗುನನೆಟಿ ಭಾವನಾಮಸಂವತ್ಸರಂ ಚೈತ್ರಶುದ್ಧ ಸುರವಾರಂ ಡಿಳ್ಳಿ
೧೧. ಕಿ ವುತ್ತರಾನ ಅರಿತಿ ಪೆರಿನಾಯಿನಿ ಮನಮುಡು ತಿಪ್ಪನಾಯನಿಕಿ ಬುಕ್ಕ
೧೨. ರಾಯನಿವಾರು ರಾಜ್ಯಂಯಿಚ್ಚಿನವಿವರಂ ಯೀ ತಿಪ್ಪನಾಯಡು ಬಹುಶಾ
೧೩. ಲಿರಾಕ್ರಮಕಂಠೀರವಡುಅನಿಯೂನಾಯನಿಬಿರುದುಲು।ಕಠಾರಿಚೆಲು
೧೪. ವರಗಂಡ್ಡಮೆಚ್ಚಿನಕಸ್ತೂರಿಕೋಲಾಹಲ ಬಾದರಮಲಕ ಸಪ್ತಾಂಗಹಾರಣ ಅ
೧೫. ರ್ತಿಕೊಮಾರ ಅನೆ ಬಿರುದುಲು ಯಿಚ್ಚಿ ಪೊಗಡಿಂಚ್ಚಿ ಧವಳಶಂಖುಲು
೧೬. ಶಂಖುಚಕ್ರಾಲು ಪಾಪೊಸುಲುಕು ಬಾಷಿಂಗಮು ಪಚ್ಚಲಕಡಿಯಾಲು
೧೭. ಜಂತ್ತಂ ಅಂದಲಮು ಯಿಚ್ಚಿ ಭಾರಿನಿಗಳಮುಯಿಚ್ಚಿ ಅಪ್ಪಡುದಕ್ಷಿಣ
೧೮. ರಾಜ್ಯಮುಲೋಗಾನು ಯನಬೈವೇಲು ಶೀಮಯಿಪ್ಪಿಂಚ್ಚಿ ಅನುಭವಿಂ
೧೯. ಚ್ಚುಂಕೊನಿ ವುಂಡಮನಿ ರಾಯಲುವಾರು ಶಲವುಯಿಚ್ಚಿರಿ ಅಪುಡು ಯೀ ತಿ
೨೦. ಪ್ಪಿನಾಯುಡು ತನವೆಂಬಡಿಗಾ ವಚ್ಚಿನ ಗವುಳ್ಳನು ವಾರಿವಾರಿ ಸ್ಥಳಾನಿಕಿ ಅಂಪ್ಪಿಂಚ್ಚಿನ ವಿವರ
೨೧. ಮು॥ಪೆದಬಳಾಪುರಾನಿಕಿಬಚ್ಚೇಗೌಡು।ಆವತಿಕಿಚಿಕ್ಕೆಗವುಡು।ಬಿಜ್ಜವರಾನಿ
೨೨. ಕಿ ನೊಣಬಚಿಕ್ಕಪ್ಪಗವುಡೂ।ತೆರ್ರೆಯೂರಿಕಿ ನೊಣಬಚಂನೆಗೌಡು।ಯೀಮೊ
೨೩. ದಲಯನವಾರಿನಿಸ್ಥಳಾಲಕು ಅಂಪಿಂಚಿ ಆ ತಿಪ್ಪಿನಾಯುಡು ತನರಾಜ್ಯಂ ವಿಂಗ
೨೪. ಡಂಚಿಕೊನಿನವಿವರಂ।ತೂರ್ಪು ಪಡಮಟ ವುತ್ತರ ದಕ್ಷಿಣಂಯಾನಾಲು ಯಿಂ
೨೫. ದ್ರ ಅಗ್ನಿ ಮೊದಲುಗಾ ಯನಿಮಿದಿದಿಕ್ಕುಲು ಸಹಾ ಯಿಂಗಎಂಚ್ಚುಕೊನಿ ತಾನು ಯೀ
೨೬. ಅಸಲು।ರಾಜ್ಯಮುಲೋ ಗಾವುಂಡಿ ಗೌಳ್ಳು ಪೇರುಲು ಹಠಿಸಾರವಾಡಂ

ಹಿಂದಲ ಮುಖ

ಬಲ ಮತ್ತು ಎಡಮೂಲೆಗಳಲ್ಲಿ ಕಠಾರಿ ಮುದ್ರೆಗಳು ಇವೆ.

೨೭. ಗೊಲ್ಲಲಿಂಗವಚಿತುವಿರನಗೌಡು ಸಾಸುವುಲಕೊಡದಿತಿಮ್ಮಿರೆಡ್ಡಿ ಕೋಟೆಕೆರೆ
೨೮. ಪೂಜಾರಿಚಂನೆಗೌಡು ಬಲಜಭದ್ರಗೌಡು।ಗೋಶಿಕೆರೆಜಲದಿಬೊಪ್ಪನಗೌಡು ಕುರುಬ
೨೯. ತಿಮ್ಮಯ್ಯ ತೈಲಗೆರೆಗೊಲ್ಲವೀರನಗೌಡು ಸಾಸುವುಲರೆಡ್ಡಿ।ಹೇಮಾವತಿ ಬಲಜಕೊಳಗಂ

೩೦. ಬೈರೇಗೌಡು ತಿಮ್ಮನಗೌಡು ಮುದ್ದನಗೌಡು ಬೆಳಗಿರಿಯನಗೌಡು ವೀರು ಸಮಭಾಗ
೩೧. ಸ್ತುಲು॥ಮೋರುಗ್ರಾಮಾನಿಕಿ ಆಪುಲುವಾರು ಕುಂಚ್ಚಿಟಿಗಬೊಂಮನಗೌಡು ಕುರುಂ
೩೨. ಬಹೊಂನ್ನಂಮು ಕೊಡುಕು ವೆಂಕಟಗೌಡು ಕರಣಂಪುಟ್ಟನಾಗರಸಯ್ಯ ಹಾಟಿ
೩೩. ಸಾರವಾಡಂಕರಣಂ ಪುಟರಂಗಪ್ಪ ಜನಾರ್ಧನಯ್ಯ ಕೊಟೆಗೆರೆ ಕರಣಂಭಗವ
೩೪. ಂತಯ್ಯ ಗೋಶಿಕೆರೆಕರಣಂ ಗೋಶಪ್ಪ ಶೈಲಗೆರೆಕರಣಂರಂಗನಯ್ಯ ಜನಾರ್ಧ
೩೫. ಹೇಮಾವತಿ ಕರಣಂಪುಟ್ಟಯ್ಯ॥ಬೂದಿಹಾಳುಗೊಲ್ಲನಿಂಬನಗೌಡ ಕರ
೩೬. ಣಂಚಂನರಸಯ್ಯ।ಸಿಲ್ಲಿಬಲಜದೆವಪ್ಪಗೌಡು ಕರಣಂಜನಾರ್ಧನಯ್ಯ
೩೭. ವೂಲಿಕುಂಟ ಸಾದರಿಹೊಂನ್ನೆಗೌವುಡು ಕರಣಂ ತಿಮ್ಮರಸಯ್ಯ।
೩೮. ಬಾಣಗೆರೆ ಬಲಜಮುದ್ದಗಾವುಡು ಕರಣಂರಂಗಪ್ಪ।ಯೀಮೊದಲೈನಗ್ರ
೩೯. ಮಾಲಕುಗೌವುಳುಕರಣಾಲನು ಯಿಂಗಡಿಂಚಿ ಗೌವುಳ್ಳುಕರಣಲಕು
೪೦. ಚ್ಚೆಪಿನವಿವರಂ ಯಿಾಗ್ರಾಮಾಲಕು ಮೀಕುಸರಿವಚ್ಚಿನಆಯಗಾಳ್ಲನು
೪೧. ವುಂಚಿಕೊನಿ ಸುಖನವುಡಮನಿಚೆಪಿನಮು॥ಪಶ್ಚಿಮಾನಗೊನು
೪೨. ರಿಕಿನಮನಕಠಾರಿಮುದ್ರ। ತೂರ್ಪುನಕಳಾಂಜನಗಿರಿಕಿ ಪ್ರತಿನಾಮಮ್ಮೆ
೪೩. ನ ನಿಡಿಗಂಟಿಕಿ ಅಡ್ಡತಿಪ್ಪನಕಠಾರುಮುದ್ರ।ಹರೇಸಮುದ್ರಂಚೆರುವು
೪೪. ಮೊನರಾಯಲುವಾರಿ ಸತ್ತಿಗೆಕಠಾರುಮುದ್ರ।ಮದ್ದಗಿರಿಕಿಪಡಮಟನ
೪೫. ಲ ರಾತಿಕಿಕಠಾರುಮುದ್ರ।ಬೇಡರಸೂಲು ಆನೆಸಾಲುಕಠಾರುಮುದ್ರ ಗು
೪೬. ಡ್ಡಮುಪಡಮಟನಕ್ಕ ಬಂಡಕಠಾರುಮುದ್ರ ಯಿಗಾಮಾಂತ್ತರಾಲ ರಡ್ಡಿ
೪೭. ಕರಣಾಲು ಆಯಗಾಂಡ್ಲು ಸಪ್ರಲ್ಲುಪಶ್ತುಸಸುಖಾನವುಂಚುಕೊನಿ ಕಾಪಾ
೪೮. ಡುಕೊನಿ ಪುತ್ರಪೌತ್ರಪಾರಂಪರ್ಯಂಗಾ ಆಚಂದ್ರಶಾರಾರ್ಕಸ್ಥಾಯಿ
೪೯. ....ನುಭವಿಂಚ್ಲುಕೊನಿ ವುಂಡೆದಿ ಯೀಗ್ರಮಾಂತರಮುಲ್ಲ ಪೊ
೫೦. ಲಿಮೊರಚಿವಾಸ್ಥಾಪನಲೋಗಾಜಲತರುಪಾಷಾಣಅಕ್ಷಿಣ
೫೧. ಅಗಾಮಿ ಸಿಧಸಾಧ್ಯ ಅಷ್ಟಭಾಗತೇಜಸ್ವಾಮುಲು ಅನುಭವಿಂಚು
೫೩. ಕೊನಿ ಸುಖಾನವುಂಡೇದಿ ಸ್ವದತ್ತಾದ್ವಿಗುಣಂಪುಣ್ಯಂ ಪರದತ್ತಾನು
೫೪. ಪಾಲನಂ ಪರದತ್ತಾನುಪಪಾರೆಣ ಸ್ವದತ್ತೆನಿಷಂಭವೆತೇ ಶ್ರೀವಿರೂಪಾ
೫೫. ಕ್ಷ.

ಶಾಸನದ ವಿಶ್ಲೇಷಣೆ

ಶಾಸನವು ತನ್ನ ರಚನಾ ಕಾಲವನ್ನು ಭಾವನಾಮ ಸಂವತ್ಸರದ ಚೈತ್ರ ಶುದ್ಧ ೫ ಗುರುವಾರ ಎಂದು ತಿಳಿಸುತ್ತದೆ. ಇದು ವಿಜಯಬುಕ್ಕರಾಯರ ಕಾಲಾವಧಿಯಾದ ಕ್ರಿಸ್ತಶಕ ೧೩೯೨-೧೪೦೮ ಕ್ಕೆ ಹೊಂದಿಕೆಯಾಗುವ ಕಾಲ. ಹಾಗಾಗಿ ಈ ಶಾಸನ ವಿಜಯಬುಕ್ಕರಾಯರ ಕಾಲದಲ್ಲಿ ರಚನೆಯಾಗಿರುವ ಸಾಧ್ಯತೆ ಇದೆ. ಇದಕ್ಕೆ ಪುಷ್ಠಿ ನೀಡುವಂತೆ ಶಾಸನದ ಮೊದಲ ಸಂಸ್ಕೃತ ಶ್ಲೋಕದಲ್ಲಿ ಅಂದಿನ ರಾಜ್ಯದ ಬಗ್ಗೆ ವಿವರಣೆ ದೊರೆಯುತ್ತದೆ. ಶ್ರೀ ಬುಕ್ಕಭೂಮಿ ರಾಜೇಶು, ಗೌರಾಂಭಿಕಾ ಜಾನಸ್ತನಯೋ, ಪ್ರತಾಪದೇವರಾಯಾಖ್ಯಂ ಪುತ್ರೋ ಎಂಬ ಅಂಶಗಳನ್ನು ಉಲ್ಲೇಖಿಸಿದೆ. ಇದರ ಆಧಾರದಲ್ಲಿ ನೋಡಿದಾಗಲೂ ಈ ಶಾಸನ ರಚನಾ ಕಾಲವು ವಿಜಯಬುಕ್ಕರಾಯ ಕಾಲಕ್ಕೆ ಸಂಬಂಧಿಸಿದ್ದು ಎನಿಸುತ್ತದೆ.


ಆದರೆ ಶಾಸನದ ಪಾಠದ ಮೊದಲ ಸಾಲು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರ್ಷಂಬುಲು ೯೦೦ ಆಗುನೆನಟಿ ಎಂದು ಪ್ರಾರಂಭವಾಗುತ್ತದೆ. ಇದರಿಂದ ಶಾಸನ ಕಾಲ ಶಾಲಿವಾಹನ ಶಕ ೯೦೦ ಎಂದು ಅಥವಾ ಕ್ರಿಸ್ತಶಕ

೯೭೮ ಎಂದು ತಿಳಿಯುವುದು ಸಹಜ. ಆದರೆ ಇದು ಶಾಸನ ರಚನಾ ಕಾಲವಲ್ಲ. ಅದು ಶಾಸನದಲ್ಲಿ ಬರುವ ತಿಪ್ಪನಾಯನನ ತಾತ ಪೆರಿನಾಯನ ದೆಹಲಿಯ ಉತ್ತರದಲ್ಲಿ ಆಳ್ವಿಕೆ ಮಾಡುತ್ತಿದ್ದ ಕಾಲಾವಧಿ ಎಂದು ತಿಳಿಯಬಹುದು.

ಏಕೆಂದರೆ ಕ್ರಿಸ್ತಶಕ ೯೭೮ ವೇಳೆಗಾಗಲೇ ದೆಹಲಿಯಲ್ಲಿ ಅರಬ್ಬರ ದಾಳಿ ಪ್ರಾರಂಭವಾಗಿರುತ್ತದೆ. ಅರಬ್ಬರ ದಾಳಿಯಿಂದ ಅನೇಕರು ಪಾಳೆಗಾರರು ಉತ್ತರದಿಂದ ದಕ್ಷಿಣ ಭಾರತದ ಕಡೆ ವಲಸೆ ಬಂದಂತೆ ಆಂಧ್ರಪ್ರದೇಶದ ಆಯ್ದಕಲ್ಲು ಚಿತ್ರದೇವರ ಗುಡಿಕಟ್ಟಿನ ಮತ್ತು ಬೆಸ್ತರಹಳ್ಳಿಯ ಬೊಮ್ಮದೇವರ ಗುಡಿಕಟ್ಟಿನ ರೆಕಾರ್ಡುಗಳು ತಿಳಿಸುತ್ತವೆ. ಇವರು ದೆಹಲಿ ಪ್ರದೇಶದಿಂದ ಹೊರಟು ವಾರಂಗಲ್, ಗೋಲ್ಕೊಂಡ ಮಾರ್ಗವಾಗಿ ಆನೆಗೊಂದಿಗೆ ಬಂದು ನೆಲೆಸಿದಂತೆ ವಿವರಣೆ ಇದೆ. ಹಾಗಾಗಿ ಶಾಸನದಲ್ಲಿರುವ ಕಾಲ ಕ್ರಿಸ್ತಶಕ ೯೭೮ ಮತ್ತು ಆಯ್ದಕಲ್ಲು ಹಾಗೂ ಬೆಸ್ತರಹಳ್ಳಿ ಬುಡಕಟ್ಟುಗಳ ರೆಕಾರ್ಡುಗಳಲ್ಲಿನ ಮಾಹಿತಿ ಕಾಲ ತಾಳೆಯಾಗುತ್ತಿದ್ದು, ಅದು ತಿಪ್ಪನಾಯನನ ತಾತನಾದ ಪೆರಿನಾಯನ ಕಾಲವಾಗಿದೆ ಎನ್ನಬಹುದು. ಆದ್ದರಿಂದ ಶಾಸನದ ರಚನಾ ಕಾಲಾವಧಿಯು ವಿಜಯಬುಕ್ಕರಾಯರ ಕಾಲವಾದ ಭಾವನಾಮ ಸಂವತ್ಸರವೇ ಹೊರತು ಕ್ರಿ.ಶ ೯೭೮ ಅಲ್ಲ ಎಂದು ಸ್ಪಷ್ಟವಾಗುತ್ತದೆ. ಇದೇ ವಿಜಯಬುಕ್ಕರಾಯನ ಕಾಲದಲ್ಲಿ ತಿಪ್ಪನಾಯನ ಆಳ್ವಿಕೆ ಇತ್ತು ಎಂಬ ಅಂಶವನ್ನು ಜಾಲೋಡು ತಾಮ್ರಶಾಸನ ಮತ್ತು ಆಂಧ್ರಪ್ರದೇಶದ ಬೋರಂಪಲ್ಲಿ ತಾಮ್ರಶಾಸನಗಳು ಸ್ಪಷ್ಟಪಡಿಸುತ್ತವೆ. ಹಾಗಾಗಿ ಶಾಸನದ ಕಾಲ ೧೪ನೇ ಶತಮಾನದ ಎಂದು ಹೇಳಬಹುದು. ಆದರೆ ಪ್ರಸ್ತುತ ಲಭ್ಯವಿರುವ ಈ ತಾಮ್ರಶಾಸನವನ್ನು ಅವಲೋಕಿಸಿದರೆ ಇದು ೧೪ನೇ ಶತಮಾನದಲ್ಲಿ ರಚನೆಯಾದ ಮೂಲ ಶಾಸನವಲ್ಲ ಎಂಬುದು ದೃಢವಾಗುತ್ತದೆ. ಶಾಸನದ ಭಾಷೆ, ಲಿಪಿ ಇನ್ನಿತರೆ ಅಂಶಗಳ ಆಧಾರದಲ್ಲಿ ನೋಡಿದಾಗ ಇದು ಸುಮಾರು ೧೮ನೇ ಶತಮಾನದ ಮೇಲ್ಪಟ್ಟು ರಚನೆಯಾದಂತೆ ಕಂಡುಬರುತ್ತದೆ. ಹಾಗಾಗಿ ಇದು ಮೂಲ ಶಾಸನದ ನಕಲು ಎನ್ನಬಹುದು.

ಶಾಸನ ಒಳಗೊಂಡಿರುವ ಮುಖ್ಯಾಂಶಗಳು

* ಈ ಶಾಸನವು ಪ್ರಧಾನವಾಗಿ ಆರತಿ ಪೆರಿನಾಯನ ಮೊಮ್ಮಗನಾದ ತಿಪ್ಪನಾಯನರಿಗೆ ಬುಕ್ಕರಾಯರು ರಾಜ್ಯವನ್ನು ಕೊಟ್ಟ ವಿವರ ತಿಳಿಸುತ್ತದೆ.
* ತಿಪ್ಪನಾಯನನಿಗೆ ಕಠಾರಿ ಚೆಲುವರಗಂಡ, ಕಸ್ತೂರಿ ಕೋಲಾಹಲ, ಬಾದರಮಲಕ ಸಪ್ತಾಂಗಹರಣ, ಅರ್ತಿಕುಮಾರ ಎಂಬ ಬಿರುದುಗಳು ಇದ್ದ ವಿಷಯವನ್ನು ತಿಳಿಸುತ್ತದೆ.
* ತಿಪ್ಪನಾಯನನಿಗೆ ರಾಜ್ಯವನ್ನು ಕೊಟ್ಟಾಗ ಅದರೊಟ್ಟಿಗೆ ಧವಳ ಶಂಕುಗಳು, ಶಂಖಚಕ್ರಗಳು, ಪಾಪುಸುಗಳು(ಪಾದರಕ್ಷೆ), ಬಾಸಿಂಗ, ಕೈಕಡಗಗಳು ಮತ್ತು ದೊಡ್ಡ ಗಾತ್ರದ ನಿಗಳ (ಸರಪಣಿ) ಬಹುಮಾನ ಕೊಟ್ಟ ವಿಚಾರವನ್ನು ವ್ಯಕ್ತಪಡಿಸುತ್ತದೆ.
* ಬುಕ್ಕರಾಯರು ತನ್ನ ರಾಜ್ಯದ ದಕ್ಷಿಣ ಭಾಗಕ್ಕೆ ಸೇರಿದ ಎಂಬತ್ತುಸಾವಿರ ಸೀಮೆಯನ್ನು ತಿಪ್ಪನಾಯನಿಗೆ ಕೊಟ್ಟ ವಿವರ ಇದೆ.
* ಬಳುವಳಿಯಾಗಿ ಕೊಟ್ಟ ಎಂಬತ್ತು ಸಾವಿರ ಸೀಮೆಗೆ ಚಕ್ಕುಬಂದಿ ಅಥವಾ ಮೇರೆಗಳನ್ನು ಗುರುತಿಸಲಾಗಿದ್ದು, ಪಶ್ಚಿಮದಲ್ಲಿ ಗೋನೂರು (ಚಿತ್ರದುರ್ಗ) ವರೆಗೂ, ಪೂರ್ವಕ್ಕೆ ನಿಡಗಲ್ಲಿನವರೆಗೂ ದಕ್ಷಿಣಕ್ಕೆ ಮಧುಗಿರಿಯವರೆಗೂ ಮತ್ತು ಉತ್ತರಕ್ಕೆ ಹರೆಸಮುದ್ರದವರೆಗೂ ರಾಜ್ಯವಿದ್ದು, ಈ ಎಲ್ಲೆಗಳುಳ್ಳ ಪ್ರದೇಶದಲ್ಲಿ ತಿಪ್ಪನಾಯನ ರಾಜ್ಯಭಾರ ಮಾಡಿಕೊಂಡು ಹೋಗುವಂತೆ ಸೂಚಿಸಿದ ವಿವರ ಇದೆ.
* ತಿಪ್ಪನಾಯನ ತನಗೆ ದೊರೆತ ಎಂಬತ್ತು ಸಾವಿರ ಸೀಮೆಯ ರಾಜ್ಯದಲ್ಲಿ ತನ್ನ ಜೊತೆಗಿದ್ದ ಗೌಡರನ್ನು ವಿವಿಧ ಸ್ಥಳಗಳಿಗೆ ಕಳುಹಿಸಿ, ಆಯಾ ಸ್ಥಳಗಳಿಗೆ ಗೌಡರನ್ನಾಗಿ ನೇಮಕ ಮಾಡಿದಂತೆ ವಿವರವಿದೆ. ಅದರಂತೆ ದೊಡ್ಡಬಳ್ಳಾಪುರಕ್ಕೆ ಬಚ್ಚೇಗೌಡನನ್ನು, ಅವುತಿಗೆ ಚಿಕ್ಕೇಗೌಡನನ್ನು, ಬಿಜ್ಜವರಕ್ಕೆ ನೊಣಬ ಚಿಕ್ಕಪ್ಪಗೌಡನನ್ನು, ತೆರ್‍ರೆಯೂರಿಗೆ ನೊಣಬ ಚನ್ನಪ್ಪಗೌಡ ಇತ್ಯಾದಿಯಾಗಿ ಗೌಡಿಕೆಗಳನ್ನು ನೇಮಕ ಮಾಡಿದಂತೆ ತಿಳಿಸುತ್ತದೆ.
* ಶಾಸನದಲ್ಲಿ ಹಟ್ಟಿಸಾರವಾಡ ಸಾಸೂಲು ಕೋಟೆಕೆರೆ ಗೋಸಿಕೆರೆ ತೈಲಗೆರೆ ಹೇಮಾವತಿ ಬೆಳಗಿರಿ ಮೋರು ಬೂದಿಹಾಳ ಹುಲಿಕುಂಟೆ ಬಾಣಗೆರೆ ಮುಂತಾದ ಗ್ರಾಮಗಳಿಗೆ ಗೌಡರು ಕರುಣಿಕರುಗಳನ್ನು ವಿಂಗಡಿಸಿ ತಮಗೆ ಅನುಕೂಲವಾಗುವಂತೆ ಗ್ರಾಮಗಳಲ್ಲಿ ಆಯಗಾರರನ್ನು ನೇಮಕ ಮಾಡಿಕೊಳ್ಳುವಂತೆ ತಿಪ್ಪನಾಯನನು ತಿಳಿಸಿದಂತೆ ವಿವರ ಲಭ್ಯವಿದೆ.
* ಗೊಲ್ಲಲಿಂಗವಂತು ವೀರನಗೌಡ, ಸಾಸುವುಲ ಕೊಡದಿ ತಿಮ್ಮಾರೆಡ್ಡಿ, ಕೋಟೆಕೆರೆ ಪೂಜಾರಿ ಚನ್ನೆಗೌಡ, ಬಲಜ ಭದ್ರಗೌಡ, ಜಲದಿ ಬೊಪ್ಪನಗೌಡ, ಕುರುಬ ತಿಮ್ಮಯ್ಯ, ಬಲಜ ಕೊಳಗಂ ಬೈರೇಗೌಡ, ತಿಮ್ಮನಗೌಡ, ಮುದ್ದನಗೌಡ,




ಯನಗೌಡ, ಕುಂಚಿಟಿಗ ಬೊಮ್ಮನಗೌಡ, ಕುರುಬ ವೆಂಕಟಗೌಡ, ಕರಣಂ ಪುಟ್ಟನಾಗನರಸಯ್ಯ, ಘಟರಂಗಪ್ಪ, ಜನಾರ್ಧನಯ್ಯ, ಪುಟ್ಟಯ್ಯ, ನಿಂಬನಗೌಡ, ಚನ್ನರಸಯ್ಯ, ಶಿಲ್ಪಿ ದೇವಪ್ಪಗೌಡ, ತಿಮ್ಮರಸಯ್ಯ, ರಂಗಪ್ಪ ಇನ್ನಿತರೆ ಗೌಡರು, ಕರ್ಣಿಕರುಗಳ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ.

ಹೀಗೆ ಹಲವಾರು ವಿಷಯಾಂಶಗಳನ್ನು ಒಳಗೊಂಡಿರುವ ಈ ಶಾಸನವು ನಿಡಗಲ್ಲು ಇತಿಹಾಸ ಮತ್ತು ಹರತಿ ಪಾಳೇಗಾರರ ಇತಿಹಾಸ ಕಟ್ಟಿಕೊಡುವಲ್ಲಿ ಮಹತ್ವದ್ದಾಗಿದೆ. ಸಂಶೋಧಕರಿಗೆ ಮತ್ತು ಇತಿಹಾಸಕಾರರಿಗೆ ಹೆಚ್ಚು ಉಪಯುಕ್ತವಾಗಬಹುದು ಎಂಬುದು ನನ್ನ ಭಾವನೆ.

---

* ಈ ಶಾಸನವನ್ನು ಸಂಶೋಧಿಸುವಲ್ಲಿ ಸಹಕರಿಸಿದ ಅಷ್ಟಾವಧಾನಿ ಗುರುವೇಪಲ್ಲಿ ನರಸಿಂಹಲುರವರಿಗೆ ಮತ್ತು ಶಾಸನವನ್ನು ಒದಗಿಸಿಕೊಟ್ಟ ಈಶ್ವರನಾಯಕರವರಿಗೆ ನನ್ನ ಧನ್ಯವಾದಗಳು.



ಆಕರಗ್ರಂಥಗಳು

೧. ತುಮಕೂರು ಗೆಜೆಟಿಯರ್.

೧. ಎಪಿಗ್ರಾಫಿಯಾ ಕರ್ನಾಟಿಕ ಭಾಗ-೧೨.

೨. ನರಸಿಂಹಚಾರ್ ಆರ್., ೧೯೩೨, ಹೊಸಕೋಟೆ ಪಾಳೇಗಾರರ ವಂಶಾವಳಿ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಲಕ್ಷ್ಮಣ್ ತೆಲಗಾವಿ, ೨೦೧೦, ಎಪ್ಪತ್ತೇಳು ಪಾಳೆಯಗಾರರು, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ,

೪. ೧೯೭೦, ಕರ್ನಾಟಕ ಪರಂಪರೆ, ಸಂ. ೨, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು.

೫. ಚೆಲುವರಾಜನ್ ವಿ., ೨೦೧೭, ಜಾಲೋಡು ಗ್ರಾಮದ ಅಪ್ರಕಟಿತ ತಾಮ್ರಶಾಸನ, ಇತಿಹಾಸ ದರ್ಶನ.

೬ ಚಿತ್ತಯ್ಯ ಪೂಜಾರ್ ಡಿ.ಕೆ., ೨೦೧೦, ನಿಡಗಲ್ ದುರ್ಗದ ಕಥನ, ಸೃಷ್ಟಿ ಪ್ರಕಾಶನ.

೬ ಗುರುವೇಪಲ್ಲಿ ನರಸಿಂಹುಲು, ಕಲ್ಯಾಣದುರ್ಗಂ ತಾಲ್ಲೂಕು ಚರಿತ್ರ, (ಕರಡು ಪ್ರತಿ).

೭. ಗುರುವೇಪಲ್ಲಿ ನರಸಿಂಹುಲು ಮತ್ತು ಹೊ.ಮ. ನಾಗರಾಜು, ಐತಿಹಾಸಿಕ ನೇಪತ್ಯದಲ್ಲಿ ವೈ.ಎನ್. ಹೊಸಕೋಟೆ, (ಕರಡು ಪ್ರತಿ).

೮. ನಾಗರಾಜು ಹೊ.ಮ., ೨೦೧೧, ಗಡಿನಾಡಿನ ಯಲ್ಲಪ್ಪನಾಯಕನ ಹೊಸಕೋಟೆ.

೯. ನಾಗರಾಜು ಹೊ.ಮ., ೨೦೧೬, ಯಲ್ಲಪ್ಪನಾಯಕನ ಹೊಸಕೋಟೆಯ ಪಾಳೇಗಾರರ ಪಟ್ಟಾಭಿಷೇಕ.

◆◆

೧೫

ಬಸವರಾಜ ವೀ. ಖೋತ

ಶಾಸನೋಕ್ತ ಬಾಗಡಿಗೆ : ಒಂದು ವಿವೇಚನೆ

ಬಾಗಲಕೋಟೆ ನಗರವು ಪ್ರಾಚೀನ ಕಾಲದಿಂದಲೂ ಧಾರ್ಮಿಕ ಹಾಗೂ ರಾಜಕೀಯ ದೃಷ್ಟಿಯಿಂದ ಮಹತ್ವ ಪಡೆದ ಪ್ರದೇಶವಾಗಿದೆ. ಬಾಗಲಕೋಟೆಯು ಪ್ರಾಚೀನ ಬಾಗಡಗೆ-೭೦ ಎಂಬ ಆಡಳಿತ ವಿಭಾಗವಾಗಿದ್ದು, ರಾಷ್ಟ್ರಕೂಟರ ಕಾಲದಿಂದ ಅಸ್ತಿತ್ವ ಹೊಂದಿದ ಉಲ್ಲೇಖಗಳು ಶಾಸನಗಳಿಂದ ಕಂಡುಬರುತ್ತದೆ. ಬಾದಾಮಿ ಚಲುಕ್ಯರ ಅವಧಿಯಲ್ಲಿ ಕ್ರಿ.ಶ. ೭ನೇ ಶತಮಾನದ ವಿನಯಾದಿತ್ಯನ ಕಾಲದ ತಾಮ್ರಶಾಸನದ ಉಲ್ಲೇಖಿತ ಮಲ್ಲಗ್ರಾಮ-೩೦ ಮತ್ತು ಲೋಹಂಜವಾಟಿಕ ಗ್ರಾಮಗಳಲ್ಲಿ ಬಾಗಲಕೋಟೆಗೆ ಸನಿಹದಲ್ಲಿರುವ ಮಲ್ಲಾಪುರವು ಪ್ರಾಚೀನ ಮಲ್ಲಗ್ರಾಮವೆಂದು ವಿದ್ವಾಂಸರ ಅಭಿಪ್ರಾಯ.

ಕನಿಷ್ಟ ೧೨೦೦ ವರ್ಷಗಳ ಇತಿಹಾಸ ಹೊಂದಿದ 'ಬಾಗೆ' (ಬಾಗಲಕೋಟೆ) ಪ್ರಾಚೀನ ಕಾಲದಿಂದಲೂ ಹಂತಹಂತವಾಗಿ ವಿಕಸನಗೊಳ್ಳುತ್ತಾ ಆಡಳಿತ ವಿಭಾಗವಾಗಿ ಹೊರಹೊಮ್ಮಿದ ಪಟ್ಟಣವಾಗಿದೆ. ಆರಂಭಿಕ ಸಮಯದಲ್ಲಿ 'ಬಾಗಡಿ ಅಥವಾ ಬಾಗೆ' ಯೆಂದು ಉತ್ಪತ್ತಿಗೊಂಡ ಬಾಗೆ+ನಾಡು ಎಂಬುದು ೭೦ ಗ್ರಾಮಗಳಿಂದ ಕೂಡಿದ ಆಡಳಿತ ವಿಭಾಗದ ಮುಖ್ಯ ಕೇಂದ್ರವಾಗಿತ್ತು. ಚಾರಿತ್ರಿಕ ದೃಷ್ಟಿಯಿಂದ ಘಟಪ್ರಭಾ ನದಿ ತೀರದ ಬಾಗೆನಾಡು ಮಹತ್ವ ಪಡೆದದ್ದು ರಾಷ್ಟ್ರಕೂಟರ ಕಾಲದಲ್ಲಿ. ಇದಕ್ಕೆ ಸಂಬಂಧಪಟ್ಟಂತೆ ಬಾಗಲಕೋಟೆಯ ಸುತ್ತಮುತ್ತಲಿನ ಹಳ್ಳೂರ, ಶಿರೂರ, ಬೈರಮಟ್ಟಿ, ಮಂಕಣಿ, ಹೆರಕಲ್ಲ ಮೊದಲಾದ ಗ್ರಾಮಗಳಲ್ಲಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಶಾಸನಗಳು ದೊರೆತ್ತಿದ್ದರಿಂದ ಅದೇ ಸಮಯಕ್ಕೆ ಬಾಗಲಕೋಟೆಯು ಪಟ್ಟಣವಾಗಿ ರೂಪಗೊಂಡಿರುವ ಸಾಧ್ಯತೆಗಳಿವೆ.

ಸದ್ಯದ ಮಟ್ಟಿಗೆ ಬಾಗಲಕೋಟೆಯ ಉಲ್ಲೇಖಿತ ಪ್ರಾಚೀನ ಶಾಸನೀಯ ಆಧಾರವೆಂದರೆ ರಾಷ್ಟ್ರಕೂಟರ ಅವಧಿಯಲ್ಲಿನ ಕ್ರಿ.ಶ. ೯೪೮-೫೦ (ಶಕ ವರ್ಷ ೮೭೨) ರ ಕಾಲದ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ 'ಆತಕೂರ ಶಾಸನ'. ಶಾಸನದಲ್ಲಿನ 'ಬಾಗೆನಾಡೆಳ್ಪತ್ತು'[೧]ವೆಂಬ ಉಲ್ಲೇಖವು ಬಾಗಲಕೋಟೆಯ ಅಸ್ತಿತ್ವವನ್ನು ಸಾಕ್ಷೀಕರಿಸುತ್ತದೆ. ರಾಷ್ಟ್ರಕೂಟರ ಸಾಮಂತರಾಗಿದ್ದ ಪಶ್ಚಿಮ ಗಂಗರ ಕಾಲದ ಈ ಶಾಸನದಲ್ಲಿ 'ಬಾಗೆನಾಡು' ಎಂಬುದು, ಇದೊಂದು ಪ್ರಮುಖ ಆಡಳಿತ ವಿಭಾಗವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ಆತಕೂರ ಶಾಸನದ ಸಮಕಾಲೀನ ಶಾಸನವಾದ ಗದಗ ಜಿಲ್ಲೆಯ ರೋಣ ತಾಲೂಕಿನ ನರೇಗಲ್‌ದಲ್ಲಿ ದೊರೆತ ಕ್ರಿ.ಶ. ೯೪೮ರ ಶಾಸನವು[೨] (ಶಾಲಿವಾಹನ ಶಕೆ ೮೭೨) ಕೂಡ ಬಾಗಡಗೆ-೭೦ರ ಉಲ್ಲೇಖ ಹೊಂದಿದೆ. ಆದರೆ ಇಲ್ಲಿ ಶಾಸನ ಪಠ್ಯವು ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದೆ. ಶಾಲಿವಾಹನ ಶಕೆಯನ್ನು ಗಮನಿಸಿದಾಗ ೮೭೨ರ ಸಂವತ್ಸರದಲ್ಲಿ ಹೊರಡಿಸಿದ ಸಮಾನಾಂತರ ಶಾಸನವಾಗುತ್ತದೆ. ಅದಕ್ಕೆ ಸದ್ಯದ ಮಟ್ಟಿಗೆ ಆತಕೂರ ಶಾಸನವೇ ಬಾಗಡಗೆಯ ಪ್ರಸ್ತಾಪವಿರುವ ಪ್ರಾಚೀನ ಶಾಸನ.

ಸಹ ಪ್ರಾಧ್ಯಾಪಕರು ಹಾಗೂ
ಸಂಯೋಜಕರು
ಕನ್ನಡ ಸ್ನಾತಕೋತ್ತರ ವಿಭಾಗ
ಬಸವೇಶ್ವರ ಕಲಾ ಮಹಾವಿದ್ಯಾಲಯ
ಬಾಗಲಕೋಟೆ
ಮೊ: ೯೧೪೧೬ ೨೯೯೭೧

ಗದಗ ಜಿಲ್ಲೆಯ ಹೆಬ್ಬಾಳದಲ್ಲಿ ದೊರೆತ ಕ್ರಿ.ಶ. ೯೭೫ರ ಶಾಸನವು ಬಾಗಲಕೊಟೆಯನ್ನು ಬಾಗೆ-೭೦ ಉಲ್ಲೇಖಿಸಿದೆ. ಗದಗದಲ್ಲಿ ದೊರೆತ ೧೦೦೮ರ ಶಾಸನ ಬಾಗಡಗೆ-೭೦ ಎಂದು ತಿಳಿಸುತ್ತದೆ. ಹೀಗಾಗಿ ಬಾಗಲಕೋಟೆಯು ಆರಂಭದಲ್ಲಿ ಬಾಗೆ ಅಥವಾ ಬಾಗಡಗೆ ಎಂದು ರೂಢಿಯಲ್ಲಿ ಬಂದಿದೆಯೆಬುಂದು ವಿದ್ವಾಂಸರ ಅಭಿಪ್ರಾಯ. ಇದೇ ಸಮಯದ ತರ್ದವಾಡಿ-೧೦೦೦ ಉಪವಿಭಾಗ ಸಹ ರಾಷ್ಟ್ರಕೂಟರ ಕಾಲದ ಕೊಡುಗೆಯೆನ್ನಬಹುದು. ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಕಾಲದ ಅಧಿಕಾರ ಸ್ಥಿತ್ಯಂತರ ಕಾಲದಲ್ಲಿ ಬಾಗಲಕೋಟೆ ಪ್ರದೇಶವು ವಹಿಸಿದ ಮಹತ್ವದ ವಿಷಯಗಳು ಕಂಡುಬರುತ್ತವೆ. ಭೈರಮಟ್ಟಿ ಶಾಸನ ಉಲ್ಲೇಖಿತ 'ಸಿಂಧರಾನ್ವಾಯಂ ಬಾಗಡಗೆಯ'[೩]ವು ರಾಷ್ಟ್ರಕೂಟ-ಕಲ್ಯಾಣ ಚಾಲುಕ್ಯರು ಮತ್ತು ಬಾಗಡಗೆಯ ಸಿಂಧರ ನಡುವಿನ ಕೊಂಡಿಯನ್ನು ತಿಳಿಯಪಡಿಸುತ್ತದೆ. ಕ್ರಿ.ಶ. ೧೦೩೩ರ ಶಾಸನದ ಕಾಲಕ್ಕೆ ರಾಷ್ಟ್ರಕೂಟರ ಸಾಮಂತನಾಗಿದ್ದ ತೈಲಪನು ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಅಡಿಪಾಯ ಹಾಕಿದ್ದ. ಇವನ ಸಾಮಂತನಾಗಿ ಸಿಂಧವಂಶದ ನಾಗಾದಿತ್ಯನು ಬಾಗಡಗೆ-೭೦ನ್ನು ಆಳುತ್ತಿದ್ದನು.

ಆತಕೂರ ಶಾಸನದಲ್ಲಿ ಪ್ರಸ್ತಾಪಿಸಿರುವಂತೆ ಬಾಗೆನಾಡು-೭೦ ಎಂಬುದು ಅದಾಗಲೇ ಆಡಳಿತ ವಿಭಾಗವಾಗಿತ್ತುವೆಂಬುದು ಸ್ಪಷ್ಟವಾಗುತ್ತದೆ. ಬಾಗೆನಾಡು ಅಥವಾ ಬಾಗಡಿಗೆಯು ಆಡಳಿತ ಕೇಂದ್ರವಾಗುವುದರ ಜೊತೆಗೆ ಪ್ರಮುಖ ವಾಣಿಜ್ಯ ಕೇಂದ್ರವೂ ಆಗಿತ್ತು. ಪ್ರಾಚೀನ ಕಾಲದ ವ್ಯಾಪಾರ ಮಾರ್ಗವು ಐಹೊಳೆ, ಭಗವತಿ ಮಾರ್ಗದಿಂದ ಮನಗೂಳಿಗೆ ಸಾಗುವ ಪ್ರಾಚೀನ ವ್ಯಾಪಾರ ಮಾರ್ಗವು ಬಾಗಡಗೆ-೭೦ರ ಸಂಪರ್ಕ ಹೊಂದಿತ್ತು. ಕ್ರಿ.ಶ. ೮ನೇ ಶತಮಾನದ ನಂತರ ಹೆಚ್ಚಿನ ವ್ಯಾಪಾರ ಕೇಂದ್ರಗಳು ಬಾಗಡಿಗೆ-೭೦ನ್ನು ಸಂಧಿಸುತ್ತಿದ್ದವು ಎಂಬುದಕ್ಕೆ ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೦೩೩ರ ಬಾಗಲಕೋಟೆ ಜಿಲ್ಲೆಯ ಭೈರನಮಟ್ಟಿ ಶಾಸನ ಕೂಡಾ 'ಬಾಗೆನಾಡು'ಯೆಂದು ಉಲ್ಲೇಖಿಸಿರುವುದರಿಂದ ಇದು ಒಂದು ಆಡಳಿತ ವಿಭಾಗ ವ್ಯಾಪ್ತಿಯನ್ನು ತಿಳಿಸುವ 'ನಾಡು' ಪದದ ಜೊತೆಗೆ ಜೋಡಿಯಾಗಿದ್ದರಿಂದ ಬಾಗಲಕೋಟೆಯು ಆಡಳಿತ ವಿಭಾಗದ ಮುಖ್ಯ ಕೇಂದ್ರವಾಗಿತ್ತೆಂದು ಹೇಳಬಹುದು.

೧೦೪೯ರ ಶಿರೂರ ಶಾಸನ 'ಬಾಗಡಗಾ ರಾಜಪಥೋತ್ತರ'[೪] ಎಂಬುದು ಸ್ಪಷ್ಟಪಡಿಸುತ್ತದೆ. ಅದರಿಂದ ೮ನೇ ಶತಮಾನದಿಂದಲೇ ಬಾಗಡೆಗೆ-೭೦ ಅಸ್ತಿತ್ವದೊಂದಿಗೆ ಅಭಿವೃದ್ಧಿಯನ್ನು ಹೊಂದುತ್ತಾ ಕ್ರಿ.ಶ. ೧೦-೧೧ನೇ ಶತಮಾನದ ಹೊತ್ತಿಗೆ ಪ್ರಮುಖ ಪಟ್ಟಣವಾಗಿ ಬೆಳೆದು ಬಂದಿತ್ತು. ಕ್ರಿ.ಶ. ೧೧೪೯ರ ಶಾಸನ[೫]ವು ಬಾಗಡಗೆ-೭೦ನ್ನು ರಾಜಧಾನಿ ಪಟ್ಟಣವೆಂದು ಹೆಸರಿಸಿದೆ. ಬಾಗಡಗೆಯು ಚಾಲುಕ್ಯರ ಕಾಲದಿಂದ ವಿಕಸಿತಗೊಂಡು, ಕಲ್ಯಾಣ ಚಾಲುಕ್ಯ ಇಮ್ಮಡಿ ತೈಲಪನ ಮಾಂಡಳಿಕರಾಗಿದ್ದ ಬಾಗಡಗೆಯ ಸಿಂಧರ ಸಮಯಕ್ಕೆ ರಾಜಧಾನಿ ಪಟ್ಟಣವಾಗಿ ಹೊರಹೊಮ್ಮಿತ್ತೆಂದು ಅರ್ಥೈಸಲಾಗುತ್ತದೆ. ಕ್ರಿ.ಶ. ೯೪೫ ರಿಂದ ೧೧೪೯ರ ವರೆಗಿನ ಶಾಸನಗಳಲ್ಲಿ ಬಾಗಡಗೆಯ ಪ್ರಸ್ತಾಪವಿದ್ದು ಪ್ರಾಚೀನ ಆಡಳಿತ ಘಟಕವಾಗಿ ೭೦ ಗ್ರಾಮಗಳೊಂದಿಗೆ ಪ್ರಮುಖ ಕೇಂದ್ರವಾಗಿತ್ತು. ಅಲ್ಲದೆ ಕಲ್ಯಾಣ ಚಾಲುಕ್ಯರ ಸಮಯದಲ್ಲಿ ಇದು ಉಪರಾಜಧಾನಿಯಂತೆ ಕಾರ್ಯನಿರ್ವಹಿಸುತ್ತ ಮಹತ್ವ ಪಡೆದಿತ್ತು.

ರಾಷ್ಟ್ರಕೂಟರ ಕಾಲದಲ್ಲಿ ಬಾಗಡಗೆ-೭೦ ಹೆಚ್ಚು ಮಹತ್ವ ಪಡೆದಿತ್ತೆಂದು ವಿವಿಧ ಸ್ಥಳಗಳಲ್ಲಿ ದೊರೆತ ಶಾಸನಗಳಿಂದ ವ್ಯಕ್ತವಾಗುತ್ತದೆ. ಕ್ರಿ.ಶ. ೯೬೯ರ ನಾಗಾವಿ (ಗದಗ)ಯ ಶಾಸನವು ರಾಷ್ಟ್ರಕೂಟರ ಸಾಮಂತರಾಗಿದ್ದ ಗಂಗರು ಈ ಪ್ರದೇಶವನ್ನು ಆಳುತ್ತಿದ್ದ ಮಾಹಿತಿ ನೀಡುತ್ತದೆ. ಗಂಗ ಅರಸರ ಕೊಂಗುಣಿವರ್ಮನು ಗಂಗವಾಡಿ ೯೬೦೦ ಅಲ್ಲದೆ ಪುಲಿಗೇರಿ-೩೦೦, ಬೆಳ್ವೊಲ-೩೦೦, ಕಿಸುಕಾಡು-೭೦, ಬಾಗಡೆ-೭೦ ಪ್ರದೇಶಗಳನು ಆಳುತ್ತಿದ್ದ ಮಾಹಿತಿ ಲಭ್ಯವಾಗುತ್ತದೆ.

ಅವಿಭಜಿತ ಧಾರವಾಡ ಜಿಲ್ಲೆಯ ಕೊರಳಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೦೫೦ರ ಶಾಸನವು ಬಾಗಲಕೋಟೆಯನ್ನು ಬಾಗಡಗೆ ಎಂದು ಹೆಸರಿಸಿದೆ. ಸುಮಾರು ಒಂದು ಶತಮಾನ ಅವಧಿಯಲ್ಲಿ ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಸಮಯದಲ್ಲಿ ಬಾಗಡಗೆಯು ಆಡಳಿತ ಘಟಕಕ್ಕಿಂತ ಹೆಚ್ಚಾಗಿ ರಾಜಧಾನಿ ಪಟ್ಟಣವಾಗಿ ಬೆಳೆದಿತ್ತು. ಕಲ್ಯಾಣ ಚಾಲುಕ್ಯರು ಅಧಿಕಾರಕ್ಕೆ ಬರುವ ಸಮಯದಲ್ಲಿಯೇ ಇಲ್ಲಿ ಸಿಂಧಕುಲದ ಪ್ರಾಮುಖ್ಯತೆ ಆರಂಭಗೊಂಡಿತ್ತು. 'ತೈಲಪನು ಅಧಿಕಾರಕ್ಕೆ ಬಂದ ಸಮಯದಲ್ಲಿ ಬಾಗಡಗೆ ಮತ್ತು ಕಿಸುಕಾಡು-೭೦ ಪ್ರದೇಶದಲ್ಲಿ ಸಿಂಧರು ಸಾಮಂತರಾಗಿ ಬಲಾಢ್ಯರಾಗುತ್ತಿದ್ದ ಸೂಚನೆಗಳು'[೬] ಮಹಾಕೂಟ ಶಾಸನಗಳಿಂದ ದೊರೆಯುತ್ತದೆ. ಕ್ರಿ.ಶ. ೯೯೦ರ ತೈಲಪನ ಕಾಲದಲ್ಲಿನ ಹಳ್ಳೂರ ಶಾಸನವು, ಕಲ್ಯಾಣ ಚಾಲುಕ್ಯರ ಸಾಮಂತನಾಗಿ ಸಿಂಧ ವಂಶದ ಅರಸನೊಬ್ಬನನ್ನು ಉಲ್ಲೇಖಿಸಿದೆ.

ಕ್ರಿ.ಶ. ೧೦೩೩ರ ಬೈರಮಟ್ಟಿ ಶಾಸನವು ಸಿಂಧರ ನಂತರದ ವಂಶಾವಳಿಯನ್ನು ನೀಡುತ್ತದೆ. ಇದರಿಂದ ಬಾಗಡಗೆ-೭೦ ಆಡಳಿತ ವಿಭಾಗವು ರಾಜಧಾನಿ ಪಟ್ಟಣವಾಗಿ ಬದಲಾಗುತ್ತಿರುವ ಅಂಶವು ನಮಗೆ ವೇದ್ಯವಾಗುತ್ತದೆ. ಸಿಂಧರು

ಸ್ಥಳೀಯವಾಗಿಯೂ ಈ ನಗರದ ಬೆಳವಣಿಗೆಯಲ್ಲಿ ಪಾತ್ರವಹಿಸಿದ್ದುದನ್ನು ಶಾಸನಗಳ ದಾಖಲೆಗಳಿಂದ ಗುರುತಿಸಬಹುದಾಗಿದೆ. ಪ್ರಾಚೀನ ಕಾಲದಿಂದಲೂ ಪ್ರಮುಖ ವ್ಯಾಪಾರಿ ಪಟ್ಟಣಗಳಲ್ಲಿ ಒಂದಾದ ಬಾಗಡಗೆ-೭೦ರ ಜೊತೆಗೆ ಸಂಪರ್ಕಿಸುವ ಪ್ರಮುಖ ವ್ಯಾಪಾರಿ ಮಾರ್ಗಗಳು ಕ್ರಮೇಣ ರಾಜಧಾನಿಯಾಗಿ, ಪಟ್ಟಣವಾಗಿ ಮಹತ್ವ ಪಡೆದುದನ್ನು ಶಾಸನಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ಪ್ರಾಚೀನ ತರ್ದವಾಡಿ ನಾಡು, ವಿಜಯಪುರ, ಐಹೊಳೆ, ಬಾದಾಮಿ, ಪುಲಿಗೆರೆ, ಬನವಾಸಿ ಹೀಗೆ ವ್ಯಾಪಾರ ಮಾರ್ಗದ ಮೂಲಕ ಸಾಗುವ ಪಟ್ಟಣಗಳು ವಿವಿಧ ಅರಸೊತ್ತಿಗೆಗಳ ಸಮಯದಲ್ಲಿ ಮಹತ್ವ ಪಡೆದು ಪಟ್ಟಣಗಳಾಗಿ, ರಾಜಧಾನಿಗಳಾಗಿ ಬೆಳದುಬಂದವು.

ಬಾಗಲಕೋಟೆಯ ಪ್ರಾಚೀನ ಪ್ರಸ್ತಾಪಗಳು ಹಲವು ಶಾಸನಗಳಲ್ಲಿ ಬಂದಿದ್ದು, ಬಹುಶಃ ೧೫ನೇ ಶತಮಾನದ ನಂತರ ಆದಿಲ್‌ಶಾಹಿಗಳ ಅಧಿಕಾರಾವಧಿಯಲ್ಲಿ ಧ್ವನಿ ವ್ಯತ್ಯಾಸ ಹೊಂದಿ ಬಾಗರಿಕೊಟೆ ಅಥವಾ ಬಾಂಗಡಿಕೊಟೆ ಎಂಬುದು ರೂಢಿಯಲ್ಲಿತ್ತೆಂದು ಊಹಿಸಬಹುದಾಗಿದೆ. ೧೭ನೇ ಶತಮಾನದ ಔರಂಗಜೇಬನ ಕಾಲದಲ್ಲಿ ಕೂಡ ಇದೇ ಉಚ್ಚಾರಣೆ ರೂಢಿಯಲ್ಲಿದ್ದುದನ್ನು 'ಬೀಳಗಿ ಆರೆತ್ತಿನ ಬಾವಿ ಎಂಬ ಬಾವಿಯ ಗೊಡೆಯ ಮೇಲಿರುವ ಶಾಸನವು ಬಾಕ[ಗ]ರಕೋಟಾ[೭]' ಎಂದೇ ಪ್ರಸ್ತಾಪಿಸಲಾಗಿದೆ. ಹೀಗೆ ಕಾಲಾಂತರಗಳಲ್ಲಿ ಮೂಲ ಹೆಸರು ಬದಲಾಗುತ್ತ ೧೯ನೇ ಶತಮಾನದಲ್ಲಿನ ಬಾಗಲಕೋಟೆಯು ತನ್ನ ಅಸ್ತಿತ್ವದ ಕುರುಹುಗಳನ್ನು ದಾಖಲಿಸುತ್ತ ಜಿಲ್ಲಾ ಕೇಂದ್ರವಾಗಿ ಬೆಳೆದುಬಂದಿದೆ.

ಅಡಿಟಿಪ್ಪಣಿಗಳು

೧. EI. vol .II, ಪು. ೧೭೨.

೨. EI. III, ಪು. ೨೩೦.

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೯, ಬಾಗಲಕೋಟೆ ಜಿಲ್ಲೆ, ಪು. ೩೬.

೪. -ಅದೇ-- ಪು. ೪೬.

೫. ಕಲಬುರ್ಗಿ ಎಂ.ಎಂ. (ಸಂ.), ವಿಜಯಪುರ ಜಿಲ್ಲೆಯ ಶಾಸನ ಸೂಚಿ, ಪು. ೩.
(ಈ ಶಾಸನವು ಪ್ರಸ್ತುತ ವಿಜಯಪುರದ ವಸ್ತುಸಂಗ್ರಹಾಲಯದಲ್ಲಿದೆ)

೬. SII XX, ಪು. ೨೮೦.

೭. ARIE,1976-77, No. D. 204.

◆◆

೨೬


ಮಧುಸೂದನ ಎಂ.ಎನ್., ಯುವರಾಜು ಆರ್.

ಬೆಂಗಳೂರು ಜಿಲ್ಲೆಯ ಶಾಸನಗಳ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಪಾತ್ರ

ಇತಿಹಾಸ ರಚನೆ, ಅಧ್ಯಯನ ಹಾಗೂ ವಿಮರ್ಶೆಗೆ ಪ್ರಾಕ್ತನಾಧಾರಗಳ ಕೊಡುಗೆ ಅಪಾರವಾದುದು. ಪ್ರಾಕ್ತನಾಧಾರಗಳನ್ನು ಭೂ ಉತ್ಖನನಗಳು, ಶಾಸನಗಳು, ಸ್ಮಾರಕಗಳು ಹಾಗೂ ನಾಣ್ಯಗಳು ಎಂದು ವಿಂಗಡಿಸಿಕೊಳ್ಳಲಾಗಿದ್ದು, ಇವುಗಳ ಮೂಲಕ ನೈಜ ಇತಿಹಾಸವನ್ನು ರಚಿಸುವ/ತಿಳಿಯುವ ನಿರಂತರ ಪ್ರಕ್ರಿಯೆ ಮೊದಲಿನಿಂದಲೂ ನಡೆಯುತ್ತಲೇ ಬಂದಿದೆ. ಈ ಆಧಾರಗಳಲ್ಲಿ ಶಾಸನಗಳು ಅತ್ಯಮೂಲ್ಯ ಸ್ಥಾನವನ್ನು ಪಡೆದುಕೊಂಡಿದ್ದು, ಇವುಗಳನ್ನು ಇತಿಹಾಸ ರಚನೆ ಹಾಗೂ ವಿಮರ್ಶೆಗೆ ಬಹುಮುಖ್ಯ ಪ್ರಾಥಮಿಕ ಆಧಾರಗಳೆಂದೇ ಪರಿಗಣಿಸಲಾಗಿದೆ. ವಿಶೇಷವಾಗಿ ಸ್ಥಳೀಯ ಇತಿಹಾಸ ಮತ್ತು ಪರಂಪರೆಯನ್ನು ತಿಳಿಯುವಲ್ಲಿ ಈ ಶಾಸನಗಳ ಕೊಡುಗೆ ಅಮೋಘವಾದುದು. ಶಾಸನಗಳ ಮೂಲಕ ಆ ಪ್ರದೇಶದ ಭೌಗೋಳಿಕ ವಿಸ್ತೀರ್ಣ, ನಿರ್ದಿಷ್ಟ ಕಾಲಮಾನ, ಭಾಷೆ, ಲಿಪಿ, ಸಂಪ್ರದಾಯಗಳು, ಉಡುಗೆ-ತೊಡುಗೆಗಳು, ದಾನ-ಧರ್ಮಗಳು, ಆಳ್ವಿಕೆ ನಡೆಸಿದ ರಾಜಮನೆತನಗಳು, ಯುದ್ಧಗಳು, ಗಡಿ ಕಾಳಗಗಳು, ಸಾಮಾಜಿಕ ಹಾಗೂ ಧಾರ್ಮಿಕ ಬೆಳವಣಿಗೆಗಳು ಇನ್ನೂ ಮುಂತಾದ ಹತ್ತು-ಹಲವು ಮಾಹಿತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಅತ್ಯಮೂಲ್ಯ ಮಾಹಿತಿಯ ಕಣಜವಾಗಿರುವ ಈ ಶಾಸನಗಳು, ಜನರ ತಿಳುವಳಿಕೆಯ ಕೊರತೆ, ಹವಾಮಾನದ ವೈಪರೀತ್ಯ, ನಗರ-ಪಟ್ಟಣಗಳ ವಿಸ್ತಾರವಾಗುವಿಕೆ ಮತ್ತು ಅಭಿವೃದ್ಧಿ ಎಂಬ ಆಧುನಿಕ ಪರಿಕಲ್ಪನೆಗಳು ಹಾಗೂ ಇನ್ನಿತರ ಕಾರಣಗಳಿಂದಾಗಿ ನಾಶವಾಗುತ್ತಿರುವುದು ನಿಜಕ್ಕೂ ಆತಂಕಕಾರಿಯಾದ ಬೆಳವಣಿಗೆಯಾಗಿದೆ. ಬೆಂಗಳೂರು ನಗರದಲ್ಲಿ (BBMPವ್ಯಾಪ್ತಿ) ಒಟ್ಟು ದಾಖಲಾದ ೧೭೫ ಶಾಸನಗಳಲ್ಲಿ ೧೧೨ ಶಾಸನಗಳು ಮಾತ್ರ ಉಳಿದಿದ್ದು, ೬೩ ಶಾಸನಗಳು ಅಂದರೆ ೪೦% ರಷ್ಟು ಶಾಸನಗಳು ನಾಶವಾಗಿದೆ. ಹಾಗೆಯೇ ಕೆಲವು ಸ್ಥಳ/ಪ್ರದೇಶಗಳಲ್ಲಿ ಶಾಸನಗಳನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದ್ದರೂ/ಮಾಡಲಾಗುತ್ತಿದ್ದರೂ ಸಹ ಹವಾಮಾನದ ವೈಪರೀತ್ಯದಿಂದಾಗಿ ಲಿಪಿಗಳು ಸವೆದು ಹೋಗುತ್ತಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಶಾಸನಗಳ ಲಿಪಿಗಳನ್ನು ಗುರುತಿಸಲು ಅಥವಾ ನೈಜ ಇತಿಹಾಸವನ್ನು ಅರಿಯಲು ನಮ್ಮ ಮುಂದಿನ ತಲೆಮಾರು ಕೊರತೆಯನ್ನು ಅನುಭವಿಸಬೇಕಾದ ಸಂದರ್ಭ ಎದುರಾದರೂ ಆಶ್ಚರ್ಯಪಡುವಂತಿಲ್ಲ. ಆದ್ದರಿಂದ

ಕ್ಷೇತ್ರ ಸಂಶೋಧಕರು
ಶಾಸನಗಳ ೩ಡಿ ಡಿಜಿಟಲ್ ಸಂರಕ್ಷಣಾ
ಯೋಜನೆ, ದಿ ಮಿಥಿಕ್ ಸೊಸೈಟಿ
ನೃಪತುಂಗ ರಸ್ತೆ
ಬೆಂಗಳೂರು-೫೬೦೦೦೧
ಮೊ: ೯೬೦೬೯ ೯೯೬೯೯



ಎಪಿಕಲೆಕ್ಟ್ ೫ನಲ್ಲಿ ಮಾಹಿತಿ ಸಂಗ್ರಹಣೆಯ ಒಂದು ಮಾದರಿ

ಶಾಸನಗಳನ್ನು ಸಂರಕ್ಷಿಸಲು ಪಾರಂಪರಿಕ ವಿಧಾನಗಳನ್ನು ಅನುಸರಿಸುವುದರ ಜೊತೆಗೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು ಪ್ರಸ್ತುತದ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ದಿ ಮಿಥಿಕ್ ಸೊಸೈಟಿಯು ಈಗಾಗಲೇ ಕಾರ್ಯೋನ್ಮುಖವಾಗಿದ್ದು, ತನ್ನ ೩ಡಿ ಸ್ಕ್ಯಾನಿಂಗ್ ಯೋಜನಾ ತಂಡದ ಮೂಲಕ ಪ್ರಾಥಮಿಕ ಹಂತದಲ್ಲಿ ಅವಿಭಜಿತ ಬೆಂಗಳೂರು ಜಿಲ್ಲೆಯ ಶಾಸನಗಳನ್ನು ಆಧುನಿಕ ೩ಡಿ ತಂತ್ರಜ್ಞಾನದ ಮೂಲಕ ಸಂರಕ್ಷಿಸುವ ಕಾರ್ಯವನ್ನು ಮಾಡುತ್ತಿದೆ. ಇಡೀ ಪ್ರಪಂಚದಲ್ಲಿಯೇ ಶಾಸನಗಳನ್ನು ಸಂರಕ್ಷಿಸಲು ಈ ೩ಡಿ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿರುವುದು ಇದೇ ಮೊದಲು ಎಂಬುದು ವಿಶೇಷವಾದ ಸಂಗತಿ.

ಮುಖ್ಯವಾಗಿ ಈ ೩ಡಿ ಸಂರಕ್ಷಣಾ ಯೋಜನೆಯು ತಂತ್ರಜ್ಞಾನ ಆಧಾರಿತವಾದ ಪ್ರಕ್ರಿಯೆಯಾಗಿರುವುದರಿಂದ, ಇದರಲ್ಲಿ ಕೆಲವು ಸಾಫ್ಟ್‌ವೇರ್ ಹಾಗೂ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದ್ದು, ಅವುಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಲಾಗಿದೆ.

೧. ಕ್ಷೇತ್ರಕಾರ್ಯ (epicollect5).

೨. ಗೂಗಲ್ ಮ್ಯಾಪ್ (bit.ly/inscriptionblr).

೩. ಶಾಸನಗಳ ೩ಡಿ ಸ್ಕ್ಯಾನಿಂಗ್ ಮತ್ತು ಡಿಜಿಟಲ್ ಸಂರಕ್ಷಣೆ.

೪. ಪ್ರಚಾರ (ಬೆಂಗಳೂರು ಇತಿಹಾಸ ವೈಭವ ಮಾಲಿಕೆ)

೧. ಕ್ಷೇತ್ರಕಾರ್ಯ (ಎಪಿಕಲೆಕ್ಟ್ ೫ – epicollect5) : ಈ ಎಪಿಕಲೆಕ್ಟ್ ೫ ಎಂಬ ತಂತ್ರಾಂಶವನ್ನು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಅಭಿವೃದ್ಧಿಪಡಿಸಿದ್ದು, ಇದೊಂದು ಉಚಿತವಾದ ಮುಕ್ತ ತಂತ್ರಾಂಶವಾಗಿದೆ. ಪ್ರಮುಖವಾಗಿ ಇದನ್ನು ಕ್ಷೇತ್ರಕಾರ್ಯದ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತದೆ. ಈ ಮೊದಲು ಈ ತಂತ್ರಾಂಶವನ್ನು ಕಾಡು ಪ್ರಾಣಿಗಳ ಬಗ್ಗೆ ಅಧ್ಯಯನ ಮಾಡಲು, ಕೃಷಿ ಸರ್ವೆ ಮಾಡಲು ಹಾಗೂ ಭೂ ವೈಜ್ಞಾನಿಕ ಸರ್ವೆಯಲ್ಲಿ (Geology) ಇನ್ನೂ ಮುಂತಾದ ಸೀಮಿತ ಕ್ಷೇತ್ರಗಳಲ್ಲಿ ಬಳಸಿಕೊಳ್ಳಲಾಗುತ್ತಿತ್ತು. ಆದರೆ ಪ್ರಥಮ ಬಾರಿಗೆ ಶಾಸನಗಳ ಸ್ಥಿತಿ ಗತಿಗಳನ್ನು ದಾಖಲು ಮಾಡಲು, ೩ಡಿ ಸಂರಕ್ಷಣೆ ಯೋಜನೆಯ ಭಾಗವಾಗಿ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಮೊದಲೇ ಹೇಳಿದಂತೆ ಇದೊಂದು ಕ್ಷೇತ್ರಕಾರ್ಯ ಆಧಾರಿತ ತಂತ್ರಾಂಶವಾಗಿದ್ದು, ನಮ್ಮ ತಂಡವು ಕ್ಷೇತ್ರಕಾರ್ಯಕ್ಕೆ ಹೋಗುವುದಕ್ಕೂ ಮುಂಚೆ ಕೆಲವು ಅಗತ್ಯ ತಯಾರಿಗಳನ್ನು ಮಾಡಿಕೊಳ್ಳುವ ಮೂಲಕ, ಅಂದರೆ ಬಿ.ಎಲ್.ರೈಸ್ ರವರು ಶೋಧಿಸಿ, ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳಲ್ಲಿನ ಮಾಹಿತಿ, ಇನ್ನಿತರ ದ್ವಿತೀಯ ಆಕರ ಗ್ರಂಥಗಳು ಹಾಗೂ ಲೇಖನಗಳನ್ನು ಪೂರಕವಾಗಿ ಬಳಸಿಕೊಂಡು ಶಾಸನವಿರುವ ಗ್ರಾಮ/ಸ್ಥಳಕ್ಕೆ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಶಾಸನವಿರುವ ಸ್ಥಳಕ್ಕೆ ತಲುಪಿದ ನಂತರ ಈ ಎಪಿಕಲೆಕ್ಟ್ ೫ ಎಂಬ ತಂತ್ರಾಂಶವನ್ನು ಬಳಸಿಕೊಂಡು ಶಾಸನಕ್ಕೆ ಸಂಬಂಧಿಸಿದ ಹಲವಾರು ಮಾಹಿತಿಗಳನ್ನು ಈ ಆಪ್‌ನಲ್ಲಿ ಸಂಗ್ರಹಿಸಲಾಗುತ್ತದೆ. ಅಂದರೆ ಕ್ಷೇತ್ರ ಸಂಶೋಧಕನ ಹೆಸರು, ಕ್ಷೇತ್ರಕಾರ್ಯ ಮಾಡಿದ ದಿನಾಂಕ, ಸಮಯ (ಘಂಟೆ, ನಿಮಿಷ, ಸೆಕೆಂಡ್), ಶಾಸನವಿರುವ ಸ್ಥಳದ ಜಿ.ಪಿ.ಎಸ್. ಲೊಕೇಶನ್ (GPS location),

ಶಾಸನವಿರುವ ಸ್ಥಳದ Live ವಿಡಿಯೋ, ಶಾಸನವಿರುವ ಗ್ರಾಮ ಮತ್ತು ಸ್ಥಳದ ಹೆಸರು, ಸ್ಥಳೀಯ ಜನರ ದೂರವಾಣಿ ಸಂಖ್ಯೆ(ಮೊಬೈಲ್ ನಂಬರ್), ಶಾಸನವನ್ನು ಸ್ಕ್ಯಾನ್ ಮಾಡಲು ಎಲೆಕ್ಟ್ರಿಸಿಟಿಯ ಲಭ್ಯತೆ ಮತ್ತು ಅಂತರ, ಶಾಸನ ಬಿಸಿಲಿನಲ್ಲಿದೆಯೋ ಅಥವಾ ನೆರಳಿನಲ್ಲಿದೆಯೋ ಎಂಬುದನ್ನು ಖಾತ್ರಿಪಡಿಸುವಿಕೆ, ಶಾಸನವನ್ನು ಸ್ಕ್ಯಾನ್ ಮಾಡಲು ಅನುಮತಿಯ ಅವಶ್ಯಕತೆ ಇದ್ದರೆ ಅವರ ವಿವರ, ಶಾಸನದ ವಿಧ ಅಂದರೆ ಅದು ಶಾಸನವೋ, ವೀರಗಲ್ಲು ಶಾಸನವೋ, ಶಿಲ್ಪವೋ ಅಥವಾ ಇನ್ನಿತರ ಪಾರಂಪರಿಕ ವಸ್ತುವೋ ಎಂಬುದನ್ನು ದಾಖಲಿಸಲಾಗುತ್ತದೆ. ನಂತರ ಶಾಸನ ಕಲ್ಲಿನ ವಿಧ, ಕಲ್ಲಿನ ಎತ್ತರ ಮತ್ತು ಅಗಲ, ಶಾಸನದಲ್ಲಿ ಬಳಸಿರುವ ಭಾಷೆ, ಶಾಸನ ದಾಖಲಾಗಿರುವ ಗ್ರಂಥದ ಹೆಸರು, ಶಾಸನವಿರುವ ಸ್ಥಳ ಮತ್ತು ಶಾಸನದ ಪ್ರಸ್ತುತ ಸ್ಥಿತಿ, ಶಾಸನದ ಬಗ್ಗೆ ಸ್ಥಳೀಯರಿಗಿರುವ ಮಾಹಿತಿ, ಶಾಸನದ ಲಿಪಿಯ ಆಳ, ಶಾಸನವು ದಾಖಲಾಗಿರುವ ಗ್ರಂಥದಲ್ಲಿರುವ ಸಾಲುಗಳ ಸಂಖ್ಯೆ, ಪ್ರಸ್ತುತ ಶಾಸನದಲ್ಲಿ ಕಂಡುಬರುತ್ತಿರುವ ಸಾಲುಗಳ ಸಂಖ್ಯೆ, ಶಾಸನದ ಫೋಟೋ ಮತ್ತು ಶಾಸನಕ್ಕೆ ಗೋಧಿ ಹಿಟ್ಟನ್ನು ಹಚ್ಚಿರುವ ಫೋಟೋ ಹಾಗೂ ಶಾಸನವಿರುವ ಸ್ಥಳದ ವಿಸ್ತಾರವಾದ ಫೋಟೋ ತೆಗೆದುಕೊಂಡು ಇದುವರೆಗೂ ಹೆಸರಿಸಿದ ಎಲ್ಲಾ ಮಾಹಿತಿಗಳನ್ನು ಒಳಗೊಂಡ ಸುಮಾರು ೬೦ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಎಪಿಕಲೆಕ್ಟ್ ೫ ಆಪ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.

ಎಪಿಕಲೆಕ್ಟ್ ೫ನ ಪ್ರಯೋಜನಗಳು

೧. ಸಾವಿರಾರು ಸಂಖ್ಯೆಯಲ್ಲಿರುವ ಶಾಸನಗಳು ಅಥವಾ ಇನ್ನಿತರ ಯಾವುದೇ ವಿಷಯಗಳ ದತ್ತಾಂಶಗಳನ್ನು ಸಂಗ್ರಹಿಸಲು ಈ ಆಪ್ ಬಹು ಉಪಕಾರಿ.

೨. ದತ್ತಾಂಶವನ್ನು ಸಂಗ್ರಹಿಸುವ ಬೇರೆ ಬೇರೆ ರೀತಿಯ ಮಾದರಿಗಳಿಗಿಂತ ಈ ಎಪಿಕಲೆಕ್ಟ್ ೫ ಭಿನ್ನವಾದುದು. ಹೇಗೆಂದರೆ ಈ ಆಪ್‌ನಲ್ಲಿ ಕೇವಲ ಮೊಬೈಲ್ ಅಪ್ಲಿಕೇಶನ್ ಮೂಲಕವೇ ಮಾಹಿತಿಯನ್ನು ಸಂಗ್ರಹಿಸಬಹುದಾಗಿದ್ದು, ಪೆನ್ನು ಪುಸ್ತಕಗಳ ಅವಶ್ಯಕತೆ ಇರುವುದಿಲ್ಲ.

೩. ಈ ಆಪ್‌ನಲ್ಲಿ ಸಂಗ್ರಹಿಸಿದ ಮಾಹಿತಿ ಅಥವಾ ದತ್ತಾಂಶವನ್ನು ಹುಡುಕುವುದು ಸುಲಭ. ಏಕೆಂದರೆ ಬೇರೆ ವಿಧಾನಗಳ ರೀತಿಯಲ್ಲಿ ಹಲವಾರು ಪುಸ್ತಕಗಳು ಅಥವಾ ಪೇಪರ್‌ಗಳನ್ನು ಹರಡಿಕೊಂಡು ಹುಡುಕುವ ಪ್ರಮೇಯ ಈ ಎಪಿಕಲೆಕ್ಟ್ ೫ ಆಪ್‌ನಲ್ಲಿ ಬರುವುದಿಲ್ಲ.

೪. ಏಕಕಾಲದಲ್ಲಿ ಹಲವಾರು ಜನ ಕ್ಷೇತ್ರ ಸಂಶೋಧಕರು ಈ ಆಪ್‌ನ್ನು ಬಳಸಿ ಮಾಹಿತಿಯನ್ನು ದಾಖಲಿಸಬಹುದು ಹಾಗೂ ದಾಖಲಿಸಿದ ಮಾಹಿತಿಯನ್ನು ಕ್ಷಣಾರ್ಧದಲ್ಲಿ ಒಮ್ಮೆಲೆ ನೋಡಬಹುದು.

೫. ಪುಸ್ತಕಗಳಲ್ಲಿ ಸಂಗ್ರಹಿಸಿದ ಮಾಹಿತಿಯು ಪುಸ್ತಕ ಕಳೆದು ಹೋಗುವುದರಿಂದ, ಪ್ರಾಕೃತಿಕ ಅಂಶವಾದ ಮಳೆ ಅಥವಾ ಇನ್ನಿತರ ಯಾವುದೇ ಕಾರಣದಿಂದ ನಾಶವಾಗಬಹುದು. ಆದರೆ ಈ ಆಪ್‌ನಲ್ಲಿ ಸಂಗ್ರಹಿಸಿದ ಮಾಹಿತಿ ಶಾಶ್ವತವಾಗಿ ಉಳಿಯುತ್ತದೆ. ಒಂದು ವೇಳೆ ಮೊಬೈಲ್ ಕಳೆದು ಹೋದರೂ ಸಹ ದತ್ತಾಂಶವು ನಾಶವಾಯಿತೆಂದು ಆತಂಕಪಡುವ ಅವಶ್ಯಕತೆ ಇಲ್ಲ. ಏಕೆಂದರೆ ಈ ಮೊದಲೇ ಸಂಗ್ರಹಿದ ಮಾಹಿತಿಯು ಸೆಂಟ್ರಲ್ ಸರ್ವರ್‌ನಲ್ಲಿ ಸಂಗ್ರಹಣೆಯಾಗಿರುತ್ತದೆ.

೬. ಬೇರೆ ವಿಧಾನಗಳಲ್ಲಿ ಒಂದು ವೇಳೆ ದತ್ತಾಂಶ ಸಂಗ್ರಹಕಾರ ಕೆಲಸ ಬಿಟ್ಟರೆ ಅಥವಾ ಆಕಸ್ಮಿಕ ಅವಗಢಗಳಿಗೆ ಒಳಗಾದರೆ ಸಂಗ್ರಹಿಸಿದ ಮಾಹಿತಿಯು ನಷ್ಟವಾಯಿತು ಅಥವಾ ಇದನ್ನು ಪಡೆಯಲು ಕಷ್ಟಕರ ಎಂಬ ಭಾವನೆ ಇರುತ್ತದೆ. ಆದರೆ ಎಪಿಕಲೆಕ್ಟ್ ೫ ಆಪ್‌ನಲ್ಲಿ ಆ ರೀತಿಯ ಸಮಸ್ಯೆಗಳು ಬರುವುದಿಲ್ಲ. ಏಕೆಂದರೆ ಮೊದಲೇ ಹೇಳಿದಂತೆ ದತ್ತಾಂಶವು ಆಯಾ ದಿನದಲ್ಲೇ ಸೆಂಟ್ರಲ್ ಸರ್ವರ್‌ನಲ್ಲಿ ಸಂಗ್ರಹಣೆಯಾಗುತ್ತದೆ.

೭ ಮೊಬೈಲ್ ಸಿಗ್ನಲ್ ಇದ್ದರೂ ಅಥವಾ ಇಲ್ಲದಿದ್ದರೂ ಈ ಎಪಿಕಲೆಕ್ಟ್ ೫ ನಲ್ಲಿ ದತ್ತಾಂಶವನ್ನು ಸಂಗ್ರಹಿಸಬಹುದು. ಆದರೆ ದತ್ತಾಂಶವನ್ನು ಅಪ್‌ಲೋಡ್ ಮಾಡಲು ಇಂಟರ್‌ನೆಟ್ ಹಾಗೂ ಮೊಬೈಲ್ ಸಿಗ್ನಲ್‌ನ ಅವಶ್ಯಕತೆ ಇದ್ದು, ಈ ಕೆಲಸವನ್ನು ನಿಂತ ಸ್ಥಳದಲ್ಲಿಯೇ ಮಾಡಬೇಕೆಂಬ ಅನಿವಾರ್ಯತೆಯೂ ಇಲ್ಲ. ಏಕೆಂದರೆ ದತ್ತಾಂಶ ಅಪ್‌ಲೋಡಿಂಗ್ ಕೆಲಸವನ್ನು ಸಿಗ್ನಲ್ ಸಿಕ್ಕಾಗ ಅಥವಾ ಕಚೇರಿಯಲ್ಲಿಯೂ ಮಾಡಬಹುದು.

೮. ಈ ಎಪಿಕಲೆಕ್ಟ್ ೫ ಆಪ್‌ನ ಸಹಾಯದಿಂದ ನಮ್ಮ ೩ಡಿ ಯೋಜನೆಯಲ್ಲಿ ೫೦೦ಕ್ಕೂ ಹೆಚ್ಚು ಶಾಸನಗಳನ್ನು ದಾಖಲೀಕರಣ ಮಾಡಲಾಗಿದೆ.

೨. ಗೂಗಲ್ ಮ್ಯಾಪಿಂಗ್ (bit.ly/inscriptionblr) : ಜಗತ್ತು ಇಂದು ಹೊಸ ಹೊಸ ವೈಜ್ಞಾನಿಕ ಆವಿಷ್ಕಾರಗಳಿಗೆ ತೆರೆದುಕೊಂಡಿದ್ದು, ಈ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಆದರೆ ಶಾಸನ ಕ್ಷೇತ್ರದಲ್ಲಿ ಅದರಲ್ಲೂ ಶಾಸನಗಳನ್ನು ದಾಖಲು ಮಾಡುವಲ್ಲಿ ನಾವು ಹಳೆಯ ಸಾಂಪ್ರದಾಯಿಕ ವಿಧಾನವನ್ನೇ ಬಳಸಿಕೊಳ್ಳುತ್ತಿದ್ದೇವೆ. ಅಂದರೆ ಕೆರೆ ಕೋಡಿಯ ಸಮೀಪ, ಹೊಲದ ಆಗ್ನೇಯಕ್ಕೆ, ಗ್ರಾಮದ ಪಶ್ಚಿಮ ದಿಕ್ಕಿನ ಬಂಡೆಯ ಮೇಲೆ, ದೇವಾಲಯದ ಉತ್ತರಕ್ಕೆ, ಪಾಳು ಜಮೀನಿನಲ್ಲಿ ಈ ರೀತಿಯಾಗಿ ಶಾಸನವನ್ನು ಇಂದಿಗೂ ದಾಖಲಿಸಲಾಗುತ್ತಿದೆ. ಆದರೆ ಇದಕ್ಕೆ ಬದಲಾಗಿ ಶಾಸನವಿರುವ ಸ್ಥಳದ ಜಿ.ಪಿ.ಎಸ್ ಲೊಕೇಶನ್ (GPS location) ಅನ್ನು ಗೂಗಲ್ ಮ್ಯಾಪ್‌ನಲ್ಲಿ ಅಳವಡಿಸುವುದರಿಂದ, ಶಾಸನವಿರುವ ಸ್ಥಳಗಳಿಗೆ ತಮ್ಮ ಮೊಬೈಲ್‌ಗಳ ಮೂಲಕ, ಈ ಜಿ.ಪಿ.ಎಸ್. ಲೊಕೇಶನ್ ಅನ್ನು ಬಳಸಿಕೊಂಡು ಸುಲಭವಾಗಿ ತಲುಪಬಹುದು. ಅಂಗೈಯಲ್ಲೇ ಪ್ರಪಂಚ ಎನ್ನುವಂತೆ ಈಗ ಸಾಮಾನ್ಯವಾಗಿ ಎಲ್ಲರ ಕೈಯಲ್ಲೂ ಸ್ಮಾರ್ಟ್‌ಫೋನ್‌ಗಳಿರುತ್ತವೆಯಾದ್ದರಿಂದ ಈ ವಿಧಾನವನ್ನು ಬಳಸುವುದು ಸುಲಭ. ಇದರಿಂದ ಸಮಯದ ಉಳಿತಾಯವೂ ಆಗುತ್ತದೆ ಹಾಗೂ ಶಾಸನವನ್ನು ಹುಡುಕಾಡುವ ಸಮಸ್ಯೆಯೂ ತಪ್ಪುತ್ತದೆ. ವಿದ್ಯಾವಂತರು, ಅವಿದ್ಯಾವಂತರು ಹಾಗೂ ಆಟೋ ಡ್ರೈವರ್‌ಗಳಾದಿಯಾಗೂ ಗೂಗಲ್ ಮ್ಯಾಪ್‌ನ್ನು ಬಳಸುತ್ತಿರುವ ಇಂದಿನ ಕಾಲಘಟ್ಟದಲ್ಲಿ ಶಾಸನಗಳ ದಾಖಲೀಕರಣ ಪ್ರಕ್ರಿಯೆಯಲ್ಲಿ ಇದನ್ನು ಬಳಸುವುದು ದೊಡ್ಡ ಸವಾಲೇನಲ್ಲ. ಆದ್ದರಿಂದ ನಮ್ಮ ಯೋಜನಾ ತಂಡವು ಬೆಂಗಳೂರಿನ ಶಾಸನಗಳು ಕಂಡುಬರುವ ಸ್ಥಳಗಳ ಕ್ಷೇತ್ರಕಾರ್ಯವನ್ನು ಮುಗಿಸಿ ಬಂದ ನಂತರ ಕಛೇರಿಯಲ್ಲಿ bit.ly/inscriptionblr ಎಂಬ google ಮ್ಯಾಪ್‌ನಲ್ಲಿ, ಕ್ಷೇತ್ರಕಾರ್ಯ ಮಾಡಿದ ಸ್ಥಳದ ಜಿ.ಪಿ.ಎಸ್. ಲೊಕೇಶನ್ (GPS location) ಅನ್ನು ಅಳವಡಿಸಲಾಗುತ್ತದೆ.

ಗೂಗಲ್ ಮ್ಯಾಪಿಂಗ್ ಮಾಡುವುದರಿಂದ ಆಗುವ ಅನುಕೂಲಗಳು


೧) ಶಾಸನವಿರುವ ಸ್ಥಳದ ಜಿ.ಪಿ.ಎಸ್. ಲೊಕೇಶನ್ (GPS location) ದೊರೆಯುತ್ತದೆ.

೨) ಗೂಗಲ್ ಮ್ಯಾಪಿಂಗ್ ಮಾಡುವುದರಿಂದ ಕೇವಲ ಒಂದು ಶಾಸನ ಮಾತ್ರವಲ್ಲದೇ ಆ ಪ್ರದೇಶದಲ್ಲಿರುವ ಎಲ್ಲಾ ಶಾಸನಗಳನ್ನು ನೋಡಬಹುದು.

೩) ಶಾಸನದ ಪಾಠ, ಛಾಯಾಚಿತ್ರಗಳು, ದೃಶ್ಯಾವಳಿಗಳನ್ನು ಹಾಗೂ ಶಾಸನದ ಸ್ಥಿತಿಗತಿಗಳನ್ನು ಯಾರು ಬೇಕಾದರೂ ನೋಡಬಹುದು. ಇಷ್ಟು ಮಾತ್ರವಲ್ಲದೇ ಯಾರ್ಯಾರು ಶಾಸನವನ್ನು ನೋಡುತ್ತಾರೋ ಅವರುಗಳು ಸಹ ತಾವು ತೆಗೆದ ಛಾಯಾಚಿತ್ರಗಳು, ದೃಶ್ಯಾವಳಿಗಳನ್ನು ಸೇರಿಸಬಹುದು.

೪) ಶಾಸನ ಪಾಠಗಳಿಗೆ ಸಂಬಂಧಿಸಿದಂತೆ ಹುಡುಕುವ ಅವಕಾಶ (Searchable option) ಇರುವುದರಿಂದ ಶಾಸನ ಪಾಠದಲ್ಲಿನ ಕಾಲ, ವ್ಯಕ್ತಿನಾಮ, ಸ್ಥಳನಾಮ, ಕೆರೆ, ತೆರಿಗೆ, ದೇವಾಲಯ ಮುಂತಾದ ವಿಷಯಗಳನ್ನು ಶಾಸನಲ್ಲಿರುವ ಭಾಷೆಯಲ್ಲಿಯೇ ಹುಡುಕಬಹುದು.

೫) ಈ ಗೂಗಲ್ ಮ್ಯಾಪ್‌ನಲ್ಲಿರುವ ಮಾಹಿತಿಯನ್ನು ಸ್ಥಳೀಯರು ಮಾತ್ರವಲ್ಲದೆ ಪ್ರಪಂಚದ ಮೂಲೆಮೂಲೆಗಳಲ್ಲಿರುವರು ಸಹ ನೋಡಬಹುದು.



ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯಲ್ಲಿ ದಾಖಲಾಗಿರುವ ಶಾಸನಗಳ ಗೂಗಲ್ ನಕ್ಷೆ

೬) ನಮ್ಮ ಯೋಜನೆಯ ವ್ಯಾಪ್ತಿಯಲ್ಲಿ ಕಂಡು ಬರುವ ಶಾಸನಗಳ ಪಾಠ, ಛಾಯಾ ಚಿತ್ರಗಳನ್ನು ಈ ಗೂಗಲ್ ಮ್ಯಾಪ್‌ನಲ್ಲಿ ಅಳವಡಿಸಲಾಗಿದ್ದು, ಈ ಮ್ಯಾಪ್ ಸುಮಾರು ೧೫೦,೦೦೦ಕ್ಕೂ ಹೆಚ್ಚು ವೀಕ್ಷಣೆಗಳನ್ನು ಪಡೆದುಕೊಂಡಿದೆ.


ಹೀಗೆ ಅವಿಭಜಿತ ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುವ ಪ್ರಕಟಿತ ಹಾಗೂ ಅಪ್ರಕಟಿತ ಎಲ್ಲಾ ಶಾಸನಗಳನ್ನು ಗೂಗಲ್ ಮ್ಯಾಪ್‌ನಲ್ಲಿ ಅಳವಡಿಸುವ ಕೆಲಸವನ್ನು ಮಾಡಲಾಗುತ್ತಿದೆ.

೩. **ಶಾಸನಗಳ 3D ಸ್ಕ್ಯಾನಿಂಗ್ ಮತ್ತು ಡಿಜಿಟಲ್ ಸಂರಕ್ಷಣೆ :** ಶಾಸನಗಳ ಸಂರಕ್ಷಣೆಯಲ್ಲಿ ಈ ವಿಧಾನವು ಅತ್ಯಂತ ನಿರ್ಣಾಯಕವಾಗಿದ್ದು, ಶಾಸನ ಕಲ್ಲನ್ನು ಆರ್ಟೆಕ್ ಸ್ಟೂಡಿಯೋ (Artec studio) ತಂತ್ರಾಂಶದ ಸಹಾಯದಿಂದ ೦.೦೫ ಮಿಲಿ ಮೀಟರ್ ಹೈ-ರೆಸಲ್ಯೂಷನ್ ಅಕ್ಯೂರೆಸಿಯಲ್ಲಿ ಸ್ಕ್ಯಾನ್ ಮಾಡುವ ಮೂಲಕ ಡಿಜಿಟಲ್ ಸಂರಕ್ಷಣೆ ಮಾಡಲಾಗುತ್ತದೆ. ಶಾಸನಗಳನ್ನು ಸ್ಕ್ಯಾನ್ ಮಾಡಿದ ನಂತರ ಕಚೇರಿಯಲ್ಲಿ ಉನ್ನತ ದರ್ಜೆಯ ಕಂಪ್ಯೂಟರ್‌ಗಳ ಸಹಾಯದಿಂದ ಆರ್ಟೆಕ್ ತಂತ್ರಾಂಶವನ್ನು ಬಳಸಿಕೊಂಡು ವಿವಿಧ ಹಂತಗಳಲ್ಲಿ ಶಾಸನದ ಮಾಡೆಲ್ ಅನ್ನು ತಯಾರಿಸಲಾಗುತ್ತದೆ. ಈ ಹಂತದಲ್ಲಿ ಸ್ಕ್ಯಾನ್ ಮಾಡುವಾಗ ಆದಂತಹ ಸಣ್ಣ-ಪುಟ್ಟ ದೋಷಗಳನ್ನು (Errors) ತೆಗೆಯುವುದು, ಒಂದಕ್ಕಿಂತ ಹೆಚ್ಚು ಸ್ಕ್ಯಾನ್‌ಗಳಿದ್ದರೆ ಅವುಗಳನ್ನು ಜೋಡಿಸುವುದು (Align), ಸ್ಕ್ಯಾನ್ ಮಾಡುವಾಗ ಅನಗತ್ಯವಾಗಿ ಬಂದಿದ್ದಂತಹ ಭಾಗಗಳನ್ನು ಕತ್ತರಿಸುವುದು (Errase), ಔಟ್ ಲೇಯರ್ ರಿಮೂವಲ್, ಫ್ಯೂಷನ್ (Fusion), ಸ್ಮಾಲ್ ಆಬ್ಜೆಕ್ಟ್ ಫಿಲ್ಟರ್ ಹಾಗೂ ಟೆಕ್ಸ್ಚರ್ (Texture) ಎಂಬ ಇನ್ನೂ ಮುಂತಾದ ಪ್ರಕ್ರಿಯೆಗಳನ್ನು ಮಾಡುವ ಮೂಲಕ ಉತ್ತಮವಾಗಿ ಮಾಡಲ್‌ಗಳನ್ನು ತಯಾರಿಸಲಾಗುತ್ತದೆ. ಈ ೩ಡಿ ಸ್ಕ್ಯಾನಿಂಗ್‌ನಲ್ಲಿ ತಲೆಕೂದಲಿನ ಗಾತ್ರದಷ್ಟು ಸೂಕ್ಷ್ಮವಾದದ್ದನ್ನು ಶಾಸನ ಕಲ್ಲಿನ ಮೇಲೆ ಗುರುತಿಸಬಹುದಾಗಿದ್ದು, ಲಿಪಿಕಾರನು ಶಾಸನ ಕೆತ್ತುವಾಗ ಉಳಿಯನ್ನು ಯಾವ ಯಾವ ದಿಕ್ಕಿನಿಂದ ಬಳಸಿದ್ದಾನೆ ಎಂಬುದೂ ಸಹ ಇದರಿಂದ ತಿಳಿಯುತ್ತದೆ. ಈ ಅಂಶವನ್ನು ಗಮನಿಸಿದಾಗ ಈ 3D ಸ್ಕ್ಯಾನಿಂಗ್‌ನ ನಿಖರತೆ ಮತ್ತು ಪ್ರಾಮುಖ್ಯತೆಯನ್ನು ಅರಿಯಬಹುದು. ಸ್ಕ್ಯಾನಿಂಗ್ ನಂತರ ತಯಾರಿಸಿದ 3r ಮಾಡೆಲ್‌ಗಳನ್ನು ಬಳಸಿಕೊಂಡು Stl, Obj ಹಾಗೂ wrl ೨.೦ ಎಂಬ file format ಗಳ ಮೂಲಕ ಮೆಷ್ಲ್ಯಾಬ್ ಎಂಬ ತಂತ್ರಜ್ಞಾನದ ಸಹಾಯದಿಂದ ಶಾಸನ ಕಲ್ಲಿನ ಮೇಲಿರುವ ಅಕ್ಷರಗಳನ್ನು ಸ್ಪಷ್ಟವಾಗಿ ಓದುವ ಮೂಲಕ ದಾಖಲಿಸಲಾಗುತ್ತದೆ. ಇದರಿಂದ ದಾಖಲಾಗದ ಹೊಸ ಹೊಸ ಸಾಲುಗಳು ದೊರೆಯುವುದರ ಜೊತೆಗೆ ಹಿಂದೆ ಓದಿದ್ದ ಪಾಠದಲ್ಲಿನ ವ್ಯತ್ಯಾಸಗಳನ್ನೂ ಗುರುತಿಸಬಹುದು. ಪ್ರಸ್ತುತ ನಮ್ಮ ಯೋಜನೆಯಲ್ಲಿ ೨೦೦ಕ್ಕೂ ಹೆಚ್ಚು ಶಾಸನಗಳನ್ನು ೩ಡಿ ಸ್ಕ್ಯಾನಿಂಗ್ ಮುಖಾಂತರ ಡಿಜಿಟಲ್ ಸಂರಕ್ಷಣೆ ಮಾಡಲಾಗಿದೆ.



ಹಾರೋಹಳ್ಳಿ ಶಾಸನದ ಡಿಜಿಟಲ್ ಚಿತ್ರ

೪. **ಪ್ರಚಾರ (ಬೆಂಗಳೂರು ಇತಿಹಾಸ ವೈಭವ ಮಾಲಿಕೆ) :** ಶಾಸನಗಳನ್ನು ಡಿಜಿಟಲ್ ಸಂರಕ್ಷಣೆ ಮಾಡುವುದು ಮಾತ್ರವಲ್ಲದೇ, ಈ ಯೋಜನೆಯಲ್ಲಿ ಶಾಸನಗಳು, ವೀರಗಲ್ಲುಗಳು, ದೇವಾಲಯಗಳು, ಶಿಲ್ಪಗಳು ಹಾಗೂ ವಿವಿಧ ರೀತಿಯ ನಂಬಲರ್ಹ ಆಧಾರಗಳನ್ನು ಬಳಸಿಕೊಂಡು ಬೆಂಗಳೂರಿನ ಬಡಾವಣೆಗಳ ಅಥವಾ ಗ್ರಾಮಗಳ ಸ್ಥಳೀಯ ಇತಿಹಾಸವನ್ನು ತಿಳಿಸುವ "ಬೆಂಗಳೂರು ಇತಿಹಾಸ ವೈಭವ ಮಾಲಿಕೆ" ಎಂಬ ಪುಸ್ತಕವನ್ನು ಪ್ರಕಟಿಸಿದ್ದು, ಈ ಮಾಲಿಕೆಯಲ್ಲಿ ಈಗಾಗಲೇ "ಸಿಂಗಾಪುರ" ಹಾಗೂ "ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ" ಎಂಬ ಎರಡು ಸಂಚಿಕೆಗಳು ಪ್ರಕಟವಾಗಿದ್ದು, ಇವುಗಳನ್ನು ಸ್ಥಳೀಯರಿಗೆ ಉಚಿತವಾಗಿ ಹಂಚಲಾಗುತ್ತಿದೆ. ಇಷ್ಟು ಮಾತ್ರವಲ್ಲದೆ ಈ ಸಂಚಿಕೆಗಳ ಇ-ಬುಕ್ ಪ್ರತಿಗಳು ೫೦೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಡೌನ್‌ಲೋಡ್ ಆಗಿರುತ್ತವೆ. ಕರ್ನಾಟಕ ಮಾತ್ರವಲ್ಲದೇ ದೇಶ – ವಿದೇಶಗಳಲ್ಲಿರುವ ಕನ್ನಡಿಗರೂ ಸಹ ಈ ಪುಸ್ತಕಗಳನ್ನು ಡೌನ್‌ಲೋಡ್ ಮಾಡಿಕೊಂಡು ಓದುವ ಮೂಲಕ ತಮಗಿರುವ ಸ್ಥಳೀಯ ಇತಿಹಾಸದ ಬಗೆಗಿನ ಕಾಳಜಿಯನ್ನು ತೋರುತ್ತಿರುವುದು ವಿಶೇಷ.



ಬೆಂಗಳೂರು ಇತಿಹಾಸ ವೈಭವ ಮಾಲಿಕೆಯ ಸಂಚಿಕೆಗಳು

ಶಾಸನಗಳ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಅವಶ್ಯಕತೆ

೧. ಶಾಸನಗಳನ್ನು ಡಿಜಿಟಲ್ ಸಂರಕ್ಷಣೆ ಮಾಡುವುದರಿಂದ ಶಾಸನವನ್ನು ಸಾವಿರಾರು ವರ್ಷಗಳು ಕಳೆದರೂ ತಂತ್ರಜ್ಞಾನದ ಸಹಾಯದಿಂದ ಉಳಿಸಿಕೊಳ್ಳಬಹುದು.

೨. ಮೂಲ ಶಾಸನಗಳು ಯಾವುದಾದರೂ ಕಾರಣಕ್ಕಾಗಿ ನಾಶವಾದರೆ, ಇವುಗಳ ೩ಡಿ ಮಾಡೆಲ್‌ಗಳನ್ನು ಬಳಸಿಕೊಂಡು ಶಾಸನವನ್ನು ಕಲ್ಲಿನ ಮೇಲೆ, ಮರದ ಮೇಲೆ, ಲೋಹಗಳ ಮೇಲೆ ಹಾಗೂ ಇನ್ನಿತರ ವಸ್ತುಗಳ ಮೇಲೆ ಯಥಾವತ್ತಾಗಿ ಅಚ್ಚು ಹಾಕಿಸಬಹುದು.

೩. ಮೂಲ ಶಾಸನಗಳಲ್ಲಿ ಗುರುತಿಸಲು ಸಾಧ್ಯವಾಗದ ಕೆಲವೊಂದು ಅಕ್ಷರ ಹಾಗೂ ಪದಗಳನ್ನು ೩ಡಿ ಸ್ಕ್ಯಾನಿಂಗ್‌ನಿಂದಾಗಿ ಗುರುತಿಸಲು ಸಾಧ್ಯವಾಗುತ್ತದೆ.

೪. ವಿದ್ವಾಂಸರು ಓದಿರುವ ಶಾಸನ ಪಾಠದಲ್ಲಿನ ಕೆಲವು ವ್ಯತ್ಯಾಸಗಳನ್ನು ಈ ತಂತ್ರಜ್ಞಾನದ ಮೂಲಕ ಗುರುತಿಸಲು ಸಾಧ್ಯವಾಗುತ್ತದೆ.

೫. ಈ ಡಿಜಿಟಲ್ ತಂತ್ರಜ್ಞಾನದಿಂದಾಗಿ ಕೆಲವು ಶಾಸನಗಳಲ್ಲಿ ಹೊಸ ಹೊಸ ಸಾಲುಗಳನ್ನು ಸಹ ಗುರುತಿಸಲು ಸಾಧ್ಯವಾಗುತ್ತದೆ. ಹಾಗೂ ಶಾಸನ ಪಠ್ಯವನ್ನು ಈ ಮೊದಲು ಓದಿ, ದಾಖಲಿಸುವಲ್ಲಿ ಆಗಿರುವ ಪದಗಳ ಬದಲಾವಣೆ ಅಥವಾ ದೋಷಗಳನ್ನು ಸಹ ಗುರುತಿಸಿ ಹೊಸ ಪಾಠವನ್ನು ನೀಡಬಹುದಾಗಿದೆ. ಉದಾಹರಣೆಗೆ : ದಾಸರಹಳ್ಳಿಯ ಶಾಸನ.[೧]

ಶಾಸನಗಳು ನಮ್ಮ ಪರಂಪರೆಯ ಜೀವಾಳವಾಗಿದ್ದು, ಇವುಗಳನ್ನು ಸಂರಕ್ಷಿಸಿಕೊಂಡು ಬರುವುದು ಪ್ರತಿಯೊಬ್ಬರ ಕರ್ತವ್ಯ. ಆದ್ದರಿಂದ ಈ ಮೇಲೆ ಚರ್ಚಿಸಿದ ಅಂಶಗಳ ಆಧಾರದ ಮೇಲೆ ಇಂದಿನ ಅಂತರ್ಜಾಲ ಯುಗದಲ್ಲಿ ಹೊಸ ಹೊಸ ತಂತ್ರಜ್ಞಾನ ಹಾಗೂ ವಿಧಾನಗಳನ್ನು ನಮ್ಮ ಇತಿಹಾಸ ಹಾಗೂ ಪರಂಪರೆಯ ಉಳಿವಿಗಾಗಿ ಅದರಲ್ಲೂ ಶಾಸನಗಳ ಸಂರಕ್ಷಣೆಗೆ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಈ ಲೇಖನದ ಮೂಲಕ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಡಿಟಿಪ್ಪಣಿ

೧. ಬೆಂಗಳೂರು ಇತಿಹಾಸ ವೈಭವ; ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ ಸಂಚಿಕೆ, ೨೦೨೧, ಪು. ೬೮.

◆◆

ಧನಪಾಲ್ ಕೆ.

ನಾಲ್ಕು ಅಪ್ರಕಟಿತ ತಮಿಳು ಶಾಸನಗಳು

೧ ವೈ ಹುಣಸೇನಹಳ್ಳಿಯ ಹೊಯ್ಸಳ ವೀರಬಲ್ಲಾಳ ದಾನಶಾಸನ

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ವೈ.ಹುಣಸೇನಹಳ್ಳಿ ಗ್ರಾಮದಲ್ಲಿ ವೇಣುಗೋಪಾಲಸ್ವಾಮಿ ದೇವಸ್ಥಾನದ ಹಿಂದೆ ಇರುವ ಕುಂಟೆಯ ಬಳಿಯಿರುವ ಶಾಸನವು ತಮಿಳು ಭಾಷೆಯಲ್ಲಿ ರಚಿತವಾಗಿದೆ. ಸುಮಾರು ೬ ಅಡಿ ಉದ್ದ, ೨ ಅಡಿ ಅಗಲದ ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಮತ್ತು ನೇಗಿಲಿನ ಚಿತ್ರಣವಿದ್ದು ವಿಶೇಷವಾಗಿ ನಾಟ್ಯ ಗಣಪತಿಯ ಚಿತ್ರಣವಿದೆ. ಈ ಶಾಸನದಲ್ಲಿ ಒಟ್ಟು ೨೪ ಸಾಲುಗಳಿವೆ.

ಶಾಸನ ಪಾಠ

೧ ಸ್ವಸ್ತಿ ಶ್ರೀ ವೀರ ವ
೨ ಲ್ಲಾಟಿ ದೇವರ್
೩ ಕುಮಾರನ್ ಶಿಙ್ಗ
೪ ಪ ದಣ್ಣಾಯಕ್ಕ
೫ ರ್ ಕುಮಾರನ್ ಮದೇವ್
೬ ವ ನಾಯಕ್ಕನ್ ಮಗ
೭ ನ್ ಶೊಪ್ಪನಾಯ
೮ ಕ್ಕನ್ ತನ್ ಮಾಸೂ
೯ ನಿ ಆಜಿರಸ ವರುಶ
೧೦ ತ್ತು ಆನಿ ಮಾದಮ್
೧೧ ಮುದಲ್ ಅಮಬಡಕ್
೧೨ ಕನಾಟ್ಟು ಪರವಪನ
೧೩ ಪ್ಪ ಗವುಣ್ಡನ್ ಮಗ
೧೪ ನ್ ಪರಪ್ಪೀಶಿಯನ್
೧೫ ಕ್ಕು ಶೆರಿಯಡಿ ನ
೧೬ ಞ್ಜೈ ಪುಞ್ಜೈ
೧೭ ಇಜ಼್ ಪಾಲ್ಲೆ ವಿ



೧/೧೨, ಕೊಂಡಪ್ಪ ಬಡಾವಣೆ
ಮಾರುತಿನಗರ, ಯಲಹಂಕ
ಬೆಂಗಳೂರು-೫೬೦೦೬೪
ಮೊ: ೯೭೪೧೪ ೮೮೭೭೧

೧೮ ಯುಮ್ ಕುಡಜ್ ಗೈಯಾ
೧೯ ಗ ಸರ್ವ್ವ ಮಾನ್ಯಾ
೨೦ ಕ್ಕುಡುತಡುತ
೨೧ ನ್ ತಣಮಾ
೨೨ ಶೂನಿ ಶೊ
೨೩ ಪ್ಪಯನ್ದಯ ಮಗ
೨೪ ನಾನ್

ಸಾರಾಂಶ

ವೀರಬಲ್ಲಾಳನ ಮಗ ಶಿಂಗಪ್ಪ ದಂಡನಾಯಕ, ಅವನ ಮಗ ಮಾದೇವನಾಯಕ ಅವನ ಮಗ ಶೊಪ್ಪನಾಯಕನು ಆಂಗಿರಸ ಸಂವತ್ಸರದ ಆಷಾಡ ಮಾಸದಲ್ಲಿ ಅಂದರೆ ೨೪ ಜೂನ್ ೧೩೩೨ ರಲ್ಲಿ ಅಂಬಡಕ್ಕಿನಾಡಿನ ಗಾವುಂಡನ ಮಗ ಪರಪ್ಪ ಜೀಯನಿಗೆ ತನ್ನ ಪಾಲಿನ ಹೊಲ ಗದ್ದೆ ಭೂಮಿಯನ್ನು ಸರ್ವಮಾನ್ಯವಾಗಿ ದತ್ತಿ ಕೊಟ್ಟ ವಿವರವಿದೆ.

ಹೊಯ್ಸಳರ ಸೋಮೇಶ್ವರನು ತನ್ನ ಆಳ್ವಿಕೆಯ ಉತ್ತರಾರ್ಧದಲ್ಲಿ ತನ್ನ ಇಬ್ಬರು ಮಕ್ಕಳಾದ ನರಸಿಂಹ ಮತ್ತು ರಾಮನಾಥನಿಗೆ ಏರ್ಪಟ್ಟಿದ್ದ ಅಂತಃಕಲಹವನ್ನು ನಿವಾರಿಸಲು ಅವರೀರ್ವರಿಗೂ ರಾಜ್ಯವನ್ನು ಇಬ್ಭಾಗ ಮಾಡಿದನು. ದೋರಸಮುದ್ರದ ರಾಜಧಾನಿ ಭಾಗವನ್ನು ಹಿರಿಯ ಮಗನಾದ ನರಸಿಂಹನಿಗೆ, ಕಣ್ಣಾನೂರನ್ನು ರಾಜಧಾನಿಯನ್ನಾಗಿ ಪಡೆದಿದ್ದ ದಕ್ಷಿಣ ಪ್ರದೇಶಗಳನ್ನು ಕಿರಿಯ ಮಗನಾದ ರಾಮನಾಥನಿಗೆ ಹಂಚಿದನು. ಕಾಲಾಂತರದಲ್ಲಿ ಪಾಂಡ್ಯರು ಹೊಯ್ಸಳರ ಕಣ್ಣಾನೂರನ್ನು ಅಕ್ರಮಿಸಿಕೊಂಡಾಗ ಅನಿವಾರ್ಯವಾಗಿ ರಾಮನಾಥನು ಅಲ್ಲಿಂದ ಉತ್ತರಕ್ಕೆ ಸಾಗಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಹಲವು ಭಾಗಗಳನ್ನು ಆಕ್ರಮಿಸಿ ಅಲ್ಲಿಗೆ ಸಮೀಪದ ಕುಂದಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಅಂತಿಮ ಕಾಲದವರೆಗೂ ಆಡಳಿತ ನಡೆಸಿದನು. ಇಂತಹ ಸಂದಿಗ್ದ ಸಂದರ್ಭದಲ್ಲಿ ಹೊಯ್ಸಳ ರಾಮನಾಥನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ಸುಮಾರು ೧೨೮೦ರ ಅನಂತರದಲ್ಲಿ ಕೈವಾರನಾಡಿನ ಒಂದು ಅಂತರಭಾಗವಾಗಿ ಅಂಬಡಕ್ಕಿನಾಡು ಎಂಬುದು ಅಸ್ತಿತ್ವದಲ್ಲಿತ್ತು. ಅಂಬಡಕ್ಕಿ ನಾಡನ್ನು ಉಲ್ಲೇಖಿಸುವ ಶಾಸನಗಳು ಕೋಲಾರ ತಾಲ್ಲೂಕಿನ ನರಸಾಪುರದ ಬಳಿಯ ಬೆಳ್ಳೂರು, ವೇಮಗಲ್ ಬಳಿಯ ಮಡಿವಾಳ, ಚಿಂತಾಮಣಿ ತಾಲ್ಲೂಕಿನ ಹಿರಣ್ಯಪಳ್ಳಿ, ಅಂಬಾಜಿದುರ್ಗ ಹೋಬಳಿಯ ಉಪ್ಪರಪೇಟೆ, ಚಿಂತಾಮಣಿ ಹೋಬಳಿ ದೊಡ್ಡನಂಜೂರು, ಕತ್ತರಿಗುಪ್ಪೆ. ಶಿಡ್ಲಘಟ್ಟ ತಾಲ್ಲೂಕಿನ ಅತ್ತಿಗಾನಹಳ್ಳಿ, ಅರಕೆರೆ, ಗುಡಿಹಳ್ಳಿ, ಚಿಕ್ಕದಾಸನಹಳ್ಳಿ. ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗ್ರಾಮದಲ್ಲಿ ಮತ್ತು ಇತ್ತೀಚೆಗೆ ವಿಜಯಪುರದಲ್ಲಿ ಹನುಮಂತ ದೇವಸ್ಥಾನದ ಬಳಿಯಿದ್ದ ಶಾಸನದ ಮರುಪರಿಶೀಲನೆ ಸಮಯದಲ್ಲಿ ಅಂಜುಡುನಾಡು ಎಂದು ಶಾಸನ ಸಂಪುಟದಲ್ಲಿ ಪ್ರಕಟವಾಗಿದ್ದ ಶಾಸನವು ಕೂಡ ಅಂಬಡಕಿನಾಡು ಎಂದು ನರಸಿಂಹನ್‌ರವರು ಸ್ಪಷ್ಟಪಡಿಸಿದ್ದಾರೆ. ಈ ನಾಡಿಗೆ ಸಂಬಂಧಪಟ್ಟ ಶಾಸನದ ಸಾಲಿಗೆ ಈ ವೈ.ಹುಣಸೇನಹಳ್ಳಿ ಗ್ರಾಮದ ಶಾಸನವೂ ಸೇರಿದ್ದಾಗಿದೆ.

೨. ಬೈಯಪ್ಪನಹಳ್ಳಿಯ ದಾನಶಾಸನ

ಬೈಯಪ್ಪನಹಳ್ಳಿ ಪಕ್ಕದ ಕಮ್ಮಸಂದ್ರ ಗ್ರಾಮದಲ್ಲಿ (ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ) ಬಿದರಹಳ್ಳಿ ಪಂಚಾಯಿತಿಗೆ ಸೇರಿದ ಈ ಗ್ರಾಮದ ಶಾರದಮ್ಮ ಮತ್ತು ಲಕ್ಷ್ಮಣ್ ಎಂಬುವವರ ಜಮೀನಿನಲ್ಲಿ ಪತ್ತೆಯಾದ ಈ ಶಾಸನವನ್ನು ದಿನಾಂಕ ೨೭-೦೩-೨೦೨೧ರಂದು ಶ್ರೀ ರಾಮಕೃಷ್ಣ ಬಿ.ಸಿ. ಇವರಿಂದ ಸರ್ಕಾರಿ ಮ್ಯೂಸಿಯಂಗೆ ಹಸ್ತಾಂತರ ಮಾಡಲಾಯಿತು. ಈಗ ಈ ಶಾಸನವು ಮ್ಯೂಸಿಯಂನಲ್ಲಿ ಸಂರಕ್ಷಿಸಲ್ಪಟ್ಟಿದೆ.

ಶಾಸನದ ಪಾಠ

ಮೊದಲನೆಯ ಮುಖ

೧ ಸ್ವಸ್ತಿ ಶ್ರೀ
೨ ಶಕಾಬ್ದ(ಮ್) ೧
೩ ೨೬೮ ಅನ್

೪ ಮೇಜ್ ಶೆಲ್ಲಾ
೫ ನಿನ್ಜಿ ವಿಯ್ಯ
೬ ವರುಷತ್ತು ತೈ
೭ ಮಾಸಮ್ ಶ್ರೀ ಮ
೮ ತ್ ಭಾಷ್ಯೆಕ್
೯ ಕು ತಪ್ಪುವ ರಾ
೧೦ ಯರ ಕಣ್ಡನ್
೧೧ ವೀರ ಹರಿಯಪ್ಪ
೧೨ ಉಡೈಯಾರ್ ಪ್ರ
೧೩ ಥುವಿ ರಾಜ್ಯಮ್
೧೪ ಪಣ್ಣಿಯರು
೧೫ ಳಾ ನಿಜ್ಗೈಯಿ
೧೬ ಲ್ ಇವರ್ ಕಾರಿ
೧೭ ಯಪ್ಪೇರಿಲ್ ಇ
೧೮ ರಾಮನ್ ಶುವಾ
೩೭ . . . . .
೩೮ . . . . .
೩೯ ಉಳ್ಳಿಟ್ಟ ವೈ
೪೦ ಶ್ಯಜ್ಗಳುಕ್ಕು
೪೧ ಯಿ . . . . .
೪೨ ಪಣ್ಣಿಕ್ಕುಡು
೪೩ ತ್ತ ಪರಿಚಾವದು
೪೪ . . . . . .
೪೫ . . . . .
೪೬ . . . . .
೪೭ . . . . .

ಮೂರನೆಯ ಮುಖ


೪೮ ಇವ್ವೊ
೪೯ . . .
೫೦ . . .
೫೧ . . .
೫೨ . . .
೫೩ ನಾನ್



೫೪ ಕ್ಕೆಲ್
೫೫ ಲೈಯುಮ್
೫೬ ಮೇನೋ
೫೭ ಕ್ಕಿನಮ
೫೮ ರಮುಮ್ ಕೀ

ಸಾರಾಂಶ

ಶಾಸನದಲ್ಲಿ ನಮೂದಿಸಲಾಗಿರುವಂತೆ ಇದರ ಕಾಲವನ್ನು ಶತಾಬ್ದ ೧೨೬೮ ರ ವ್ಯಯ ವರ್ಷದ ತ್ರೈಮಾಸ ಎಂದರೆ ಕ್ರಿ.ಶ. ೧೩೪೬ನೇ ವರ್ಷದ ಜನವರಿ ತಿಂಗಳಿಗೆ ಸೇರಿಸಬಹುದು. ಶ್ರೀಮತು ಭಾಷೆಗೆ ತಪ್ಪುವ ರಾಯರ ಗಂಡ ವೀರ ಹರಿಯಪ್ಪ ಒಡೆಯರು ಪೃಥ್ವೀ ಸಾಮ್ರಾಜ್ಯ ಮಾಡುತ್ತಿರುತ್ತಾರೆ. ಇವರ ಆಳ್ವಿಕೆಯ ಕಾಲದಲ್ಲಿ ಸಣ್ಣೆನಾಡಿನಲ್ಲಿರುವ ಮುಣ್ಣೆಮಯೂರ್ ಎಂಬಲ್ಲಿ ವ್ಯಕ್ತಿಯೊಬ್ಬನು ದೇವರ ಪೂಜಾಕೈಂಕರ್ಯಗಳಿಗಾಗಿ ದಾನ ನೀಡಿದ ವಿವರಗಳು ಶಾಸನದಲ್ಲಿದೆ. ಅಳಿಗಿಯ ಮಣವಾಳರ ಉಲ್ಲೇಖವೂ ಶಾಸನದಲ್ಲಿದೆ. ಶಾಸನವನ್ನು ಕಲ್ಲಿನ ನಾಲ್ಕೂ ಕಡೆ (= ಮುಖ) ಗಳಲ್ಲಿ ಕೆತ್ತಲಾಗಿರುವುದಾದರೂ ಶಾಸನದ ಬಹುಭಾಗವು ತ್ರುಟಿತವಾಗಿರುವುದರಿಂದ ಪೂರ್ಣಾರ್ಥಕ್ಕೆ ತೊಡಕುಂಟಾಗಿದೆ.



ಸಣ್ಣೆನಾಡು ಅಥವಾ ಸಣ್ಣೆ–೩೦೦ : ಎಂಬುದು ದಕ್ಷಿಣ ಪಿನಾಕಿನಿ ನದಿಯ ಎಡದಂಡೆಯ ವ್ಯಾಪ್ತಿಯಲ್ಲಿ ಕಂಡುಬರುವ ನಾಡಾಗಿದೆ. ಈ ನಾಡಿಗೆ ಸಂಬಂಧಿಸಿದ ಶಾಸನಗಳು ಸುಮಾರು ೯ನೇ ಶತಮಾನದಿಂದ ೧೫ನೇ ಶತಮಾನದವರೆಗೂ ವ್ಯಾಪಿಸಿರುವುದನ್ನು ಕಾಣಬಹುದು. ಗಂಗ, ರಾಷ್ಟ್ರಕೂಟ, ಚೋಳ, ಹೊಯ್ಸಳ ಮತ್ತು ವಿಜಯನಗರ ಅರಸರ ಆಳ್ವಿಕೆಯ ಕುರುಹುಗಳಾಗಿ ದೇವನಹಳ್ಳಿ ತಾಲ್ಲೂಕಿನ ಅರದೇಶನಹಳ್ಳಿ, ಬ್ಯಾಡರಹಳ್ಳಿ, ಆವತಿ, ಬುಳ್ಳಹಳ್ಳಿ, ಗಂಗವಾರ, ಬೆಂಗಳೂರು ಉತ್ತರ ತಾಲ್ಲೂಕಿನ ಅಳ್ಳಾಲಸಂದ್ರ, ಸೋಲದೇವನಹಳ್ಳಿ ಮತ್ತು ಇತ್ತೀಚೆಗೆ ಪತ್ತೆಯಾದ ಜಕ್ಕೂರಿನ ಶಾಸನ, ಬೆಂಗಳೂರು ಪೂರ್ವ ತಾಲ್ಲೂಕಿನ ಕಾಡುಗೋಡಿ, ಪಟ್ಟಂದೂರು, ಕಿತ್ತಿಗನೂರು ಗ್ರಾಮಗಳಲ್ಲಿ ಕಾಣಬಹುದು. ಇವುಗಳ ಜೊತೆಗೆ ಸೇರ್ಪಡೆಯಾಗುವ ಇನ್ನೊಂದು ಶಾಸನವೇ ಈಗ ನಾನು ಪ್ರಸ್ತುತಪಡಿಸುವ ಸಣ್ಣೆನಾಡಿಗೆ ಸಂಬಂಧಿಸಿದ ಬೈಯಪ್ಪನಹಳ್ಳಿಯ ತಮಿಳು ಶಾಸನ.

೩. ಬನ್ನೇರುಘಟ್ಟದ ಚಂಪಕಧಾಮಸ್ವಾಮಿ ದೇವಾಲಯದ ಗರ್ಭಗೃಹದ ಹೊರಭಿತ್ತಿಯ ದಕ್ಷಿಣ ಗೋಡೆಯ ಮೇಲಿನ ದಾನ ಶಾಸನ

ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟದಲ್ಲಿರುವ ಚಂಪಕಧಾಮ ದೇವಾಲಯದ ಗರ್ಭಗುಡಿಯ ಹೊರಭಿತ್ತಿಯ ಮೇಲಿರುವ ತಮಿಳು ಭಾಷೆಯ ಶಾಸನವು ಇದಾಗಿದ್ದು, ಹಿಂದೆ ಆರ್.ನರಸಿಂಹಾಚಾರ್‌ರವರು ಮೊದಲಿಗೆ ಗುರುತಿಸಿದ್ದು, ಗ್ಯಾಸಿಟಿಯರ್ ಹಾಗೂ ಎಂ.ಎ.ಆರ್. ನಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಪಾಠವು ಇದುವರೆಗೂ ಪ್ರಕಟವಾಗದಿರುವುದು ನನ್ನ ಗಮನಕ್ಕೆ ಬಂದಿದ್ದು, ಕ್ಷೇತ್ರಕಾರ್ಯದಲ್ಲಿ ಇದರ ಅಧ್ಯಯನ ನಡೆಸಿ ಪಾಠವನ್ನು ಸಿದ್ಧಪಡಿಸಲಾಗಿದೆ.

ಶಾಸನ ಪಾಠ


೧. ಹರಿ ಓಂ ಸ್ವಸ್ತಿ ಶ್ರೀ ಮಹಾಮಣ್ಡಲಿಯನ್ ತಿರುಬುವನ ಮಲ ಪುರಾದರಾಯನ್ ತಾಮತ್ತಾಟುವಾರ್ ನಾಟ್ಟಿಲಿ ಮುರುಇಣ್ಣಾಟ್ಟು ವನ್ದಿಯ(ಗ)ಟ್ಟತ್ತಿಲ್ ಕೊಣ್ಡೈಯರ್ ಕಣ್ಣನ್ ಪುರಮರಾಯನನೆನ್

೨. ಪಿಙ್ಗಳ ಶಮ್ಮರ್ಶಾನ್ದು ವೈಕಾಶಿ ಮಾಸ( ) ೨೦ಡು ಶೆನ್ಟತ್ತಿಙ್ಗಡ್ ಕಿಟಮೈಯುಂ ಪೆಜ್ಜಿನಾನ್ ನಾನ್ . ಉಕನ್ದ . ರುವಿತ್ತ ದಾಮೋದರಪೆರುಮಾಳ್ ಕೋಯಿಜ್ ಕಾನಿ ತಿರುಪ್

೩. ಪನನ್ತಾನ್ ಬಾಜ್ಜವನ್ ಸಾಟ್ರವನ್ ಉಣ್ಡುವರ ಪ್ಪೆರುಮಾನ್ ಆಟ್ವಾರ್ ನಮ್ಬಿಯಾಜ್ಕುಮ್ ಚನಿಯಲ್ಲೂಜ್ ಬಾರಲೂರಿಜಿ ನಾರಾಯಣ ಬಟ್ಟನ್ ತಿರುವರಙ್ಗ ಪ್ಪೆರುಮಾಳಕ್ಕುಂ ಯಿಕ್ಕೊಯಿಲ್ ಇವ್ವಿರು

೪. ವಜಿಕುಂ ಕಾಣಿಯಾಗ ನಿನ್ ವಾನ್ದು ಕ್ಕುಡುತೇನ್ ಇಧಮ್ಮತ್ತೈ ವಿಕ್ಕಿನಾರ್ ಗಙ್ಗೈಕ್ಕರೈಯಿಲೆ ಕುರಾಲ್ ಪ್ಪಶುವೈ ಕೊನ್ನಾನ್ ಬ್ರಮಹೊತ್ತಿಯಿಲೆ ಪೋವಾನ್ ಶ್ರೀ ವಯಿಷ್ಣವರ್ ರಕ್ಷೈ

ಕ್ರಿ.ಶ. ೧೨೫೦ರ ಸುಮಾರಿಗೆ ಹೊಯ್ಸಳರ ಮಹಾಮಂಡಳೇಶ್ವರರಾದ ಪೂರ್ವಾಧಿರಾಯರ ಆಳ್ವಿಕೆಗೆ ಬನ್ನೇರುಘಟ್ಟವು ಒಳಪಟ್ಟಿತ್ತು. ಚೋಳರ ಆಳ್ವಿಕೆಯ ಕಾಲದಲ್ಲಿ ಕಂದಾಯದ ಅಧಿಕಾರಿಗಳಾಗಿ ಅಂದರೆ 'ಪುರುವವರಿ' ರಾಯರೆಂದು ನೇಮಿಸಿಕೊಂಡಿದ್ದವರೇ ಮುಂದೆ ಹೊಯ್ಸಳರ ಕಾಲದಲ್ಲಿ 'ಪೂರ್ವಾಧಿರಾಯರು' ಎಂಬ ಹೆಸರಿನ ಮಹಾಮಂಡಳೇಶ್ವರರಾಗಿ ಬದಲಾಗಿದ್ದರು. ಇವರು ಅನೇಕ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿರುತ್ತಾರೆ. ಕ್ರಿ.ಶ.ಸುಮಾರು ೧೨೫೭ರಲ್ಲಿ ಧರ್ಮಾತ್ತಾಳ್ವಾರ್‌ನೆಂಬ ಪೂರ್ವಾಧಿರಾಯನು ಬನ್ನೇರುಘಟ್ಟದಲ್ಲಿ ದಾಮೋದರ ದೇವರ ದೇಗುಲವನ್ನು ಕಟ್ಟಿಸಿದ್ದನೆಂದು ತಿಳಿದುಬರುತ್ತದೆ. (ಶಾಸನ ಮಂಥನ ಪುಟ-೧೪೯)




ಇದೇ ಮಹಾಮಂಡಳೇಶ್ವರರಾದ ಪೂರ್ವಾದಿರಾಯರು (ಮರುಗೆರೆನಾಡಿಗೆ ಸೇರಿದ ಬನ್ನೇರುಘಟ್ಟದ ದಾಮೋದರ ಪೆರುಮಾಳ್ (ಈಗಿನ ಚಂಪಕಧಾಮಸ್ವಾಮಿ) ದೇವರಿಗೆ ಪಿಂಗಳ ವರ್ಷದ ವೈಶಾಖ ಮಾಸದ ೨೦ನೇ ದಿನ ಸೋಮವಾರದಂದು ಅಂದರೆ ೨೦ ಮೇ, ೧೨೫೭ಕ್ಕೆ ಸರಿ ಹೊಂದುವ ದಿನದಂದು ದೇವಾಲಯದ ಆಡಳಿತವನ್ನು ಪೆರಿಯಾರ್ ಆಳ್ವಾರ್ ನಂಬಿಯಾರ್‌ರವರಿಗೆ ಮತ್ತು ಚನಿಯಲ್ಲೂರ್ ಬಾರಲೂರ್ ನಾರಾಯಣಭಟ್ಟ ತಿರುವೆಂಗಳ ಪೆರುಮಾಳರಿಗೆ ಸ್ಥಾನಾಧಿಪತಿಯಾಗಿ ಅಧಿಕಾರವನ್ನು ನೀಡಿರುತ್ತಾರೆ. ಇದಕ್ಕೆ ಅಡ್ಡಿಪಡಿಸಿದವರು ಗಂಗೆಯ ತಡಿಯಲಿ ಬ್ರಾಹ್ಮಣರನ್ನು ಹಸುವನ್ನು ಕೊಂದ ಪಾಪದಲ್ಲಿ ಹೋಗುವರು. ಶ್ರೀವೈಷ್ಣವ ರಕ್ಷೆ ಎಂದು ಉಲ್ಲೇಖವಿದೆ.

೪ ಬನ್ನೇರುಘಟ್ಟ ಚಂಪಕಧಾಮಸ್ವಾಮಿ ದೇವಾಲಯದ ಗರ್ಭಗೃಹದ ಹೊರಭಿತ್ತಿಯ ಉತ್ತರ ಗೋಡೆ ಮೇಲಿನ ದಾನ ಶಾಸನ

ಶಾಸನ ಪಾಠ

೧. ಸ್ವಸ್ತಿ ಶ್ರೀ ಸಾರ್ವಭೌಮ ಚಕ್ರವರ್ತಿಗಳ್ ಶ್ರೀ ಪೊಸಲ ವೀರರಾಮನಾತ ದೇವರ್ಕ್ಕು ಯಾಣ್ಡು ೧೨ . . ಸರತ್ತು ಪುರಟ್ಟಾ

೨. ದಿ ಮಾಸ ಮಿರಣ್ಡಾನ್ ತಿಯದಿ ವನ್ನಿಯರ್ಗಟ್ಟತ್ತು ನಾಯಣಾರ್ ದಾಮೋದರ ಪ್ಪೆರುಮಾಳುಕ್ಕು . . .





೩. ಮಜ್ಜು ಚೆನ್ದರಸ ಜಿಯಾನ್ ತಿರುಪ್ಪಳ್ಳಿ ಎಟುಶ್ರಿಕ್ಕು ಅಮುದುಪಡಿ ಸಾತ್ತುಪಡಿಕ್ಕೂ ಉಡಲಾಗ (ಚನ್ರಾದಿತ್ತಪಚರ್) ಶೆಲ್ಲುಮ್(ಪಡಿ)ಕ್ಕು

೪. . ತಿರುಮೆಣಿಕ್ಕು . . . . ನಾಡಿ ಶಿಜ್ಜಿಡುಗಲೂರ್ ತಿಡುಶೊಕ್ಕನಾಯನ್ . . . .

ವರುಗಲೂರ್ ತೆನ್ಕರೈಯುಂ ಪೆರಿಯಲಿಚ್ಚಲೂರ್ ಮಣ್ಡಲತ್ತು . . . ಕುಮ್ ವಡವಕ್ಕಿಲ್ ಕದಿಕ್ಕ ಕಡಮೈಯುಮ್ ಮಜ್ಜುಂ ಇವ್ವೂರ್ ನಂಶೆಯ್ ಪುನ್ಶೆಯುನ್ ಪೊನ್ . . . . ಇವ್ವೂರಾಲ್ ಪಟ್ಟವ

೫. . . . . ಪ್ಪೆಡಿಕ್ಕು . . . .

ಸಾರಾಂಶ

ಹೊಯ್ಸಳ ಚಕ್ರವರ್ತಿಯಾದ ವೀರರಾಮನಾಥನ ಆಳ್ವಿಕೆಯಲ್ಲಿ ಬನ್ನೇರುಘಟ್ಟದ ದಾಮೋದರ ಪೆರುಮಾಳ್ ದೇವರಿಗೆ ದಾನವನ್ನು ನೀಡಿರುವುದನ್ನು ಶಾಸನವು ದಾಖಲಿಸುತ್ತದೆ. ಈ ಶಾಸನದ ರೀತ್ಯಾ ಪೆರೆಯಲಿಚ್ಚಲೂರ್‌ನ ಮಂಡಳಕ್ಕೆ ಸೇರುವ ಯಾವುದೋ ಊರಿನ (ಹೆಸರು ತೃಟಿತ) ಪೂರ್ವಕ್ಕಿರುವ ಜಮೀನುಗಳನ್ನು ಮತ್ತು ಅದಕ್ಕೆ ಸೇರುವ ನಾಲ್ಕು ದಿಕ್ಕುಗಳ ಸಂಪತ್ತೆಲ್ಲವನ್ನು ದೇವರ ಸುಪ್ರಭಾತ ಸೇವೆಗೆ ಮತ್ತು ಅಮೃತಪಡಿ, ಇತರ ನೈವೇದ್ಯಗಳಿಗಾಗಿ ಬಳಸಬೇಕೆಂದು ಶಾಸನದಲ್ಲಿ ವಿವರಿಸಲಾಗಿದೆ.

ಕೃತಜ್ಞತೆಗಳು: ಪ್ರೊ. ಕೆ.ಆರ್. ನರಸಿಂಹನ್, ಡಾ. ಪಿ.ವಿ. ಕೃಷ್ಣಮೂರ್ತಿ, ಡಾ. ಆರ್. ಗೋಪಾಲ್, ನಿರ್ದೇಶಕರು ಹಾಗೂ ಅಧಿಕಾರಿಗಳ ತಂಡ, ಮೈಸೂರು, ಅನಿಲ್ ಬನ್ನೇರುಘಟ್ಟ ಹಾಗೂ ಗೆಳೆಯ ಡಾ. ಆರ್. ಯುವರಾಜು.

ಆಕರಗ್ರಂಥ

೧. ಎಂ.ಎ.ಆರ್., ೧೯೦೮.

♦♦

ರಡ್ಡೆಪ್ಪ

ಸಾಲಗುಂದ ಪರಿಸರದ ವೀರಗಲ್ಲುಗಳು

ಅನಾದಿ ಕಾಲದಿಂದಲೂ ತನ್ನ ಇರುವಿಕೆಯನ್ನು ಗುರುತಿಸಿಕೊಂಡು ಹಲವು ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಸಾಲಗುಂದ ಗ್ರಾಮವೂ ಅಗ್ರಹಾರವಾಗಿ ನಂತರ ಆಡಳಿತ ಘಟಕವಾಗಿ ಮುಂದೆ ರವುಡಕುಂದಿ ಸೀಮೆಯ ಪ್ರಮುಖ ಪ್ರದೇಶವಾಗಿ ಇತಿಹಾಸದ ಪುಟಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಿಂಧ ಮನೆತನವು ಈ ಪ್ರದೇಶವನ್ನು ಕೇಂದ್ರವಾಗಿಸಿಕೊಂಡು ಸಾಮಂತ ಮನೆತನವಾಗಿ ಆಡಳಿತ ನಡೆಸಿತು. ಇವರನ್ನು ಸಾಲಗುಂದೆಯ ಸಿಂಧರು ಎಂದೂ ಗುರುತಿಸಲಾಗುತ್ತದೆ. ಪ್ರಸ್ತುತ ನನ್ನ ಸಂಶೋಧನಾ ಲೇಖನವೂ ಈ ಪರಿಸರದ ವೀರಗಲ್ಲುಗಳಿಗೆ ಮಾತ್ರ ಸಂಬಂಧಿಸಿದ್ದು ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಸಾಲಗುಂದ ಪರಿಸರದ ಕೆಲ ವೀರಗಲ್ಲುಗಳನ್ನು ಕುರಿತು ವಿವೇಚಿಸುತ್ತದೆ.

ಭೌಗೋಳಿಕ ಪರಿಸರ

ಸಾಲಗುಂದ ಮತ್ತು ಇದರ ಪರಿಸರವು ರಾಯಚೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿದ್ದು, ಪ್ರಸ್ತುತ ಹೋಬಳಿ ಕೇಂದ್ರವಾಗಿದೆ. ಹಲವು ರೀತಿಯ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಹೊಂದಿರುವ ಈ ಪರಿಸರದ ಪೂರ್ವದಲ್ಲಿ ತುಂಗಭದ್ರಾ ನದಿ, ಪಶ್ಚಿಮದಲ್ಲಿ ಸಿಂಧನೂರು, ಜವಳಗೇರ ಹಾಗೂ ಮಾಡಶಿರವಾರ ಗ್ರಾಮಗಳು, ದಕ್ಷಿಣದಲ್ಲಿ ಕಾರಟಗಿ ತಾಲೂಕು ಉತ್ತರದಲ್ಲಿ ಮಾಡಶಿರವಾರ, ಬಾದರ್ಲಿ ಗ್ರಾಮಗಳಿಂದ ಸುತ್ತುವರೆದಿದೆ. ಈ ಪರಿಸರದ ಪೂರ್ವದಿಂದ ಉತ್ತರದವರೆಗೂ ಸು. ೪.೩ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ. ತುಂಗಭದ್ರಾ ನದಿ ಪರಿಸರದಲ್ಲಿ ಹರಿಯುವುದರ ಮೂಲಕ ಇಲ್ಲಿನ ಕೆಲವು ರೈತರ ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗಿದೆ. ಮತ್ತು ಈ ಭಾಗದ ಜನರ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸುತ್ತದೆ.

ಚಾರಿತ್ರಿಕ ಹಿನ್ನೆಲೆ

ಈ ಪರಿಸರದಲ್ಲಿ ಪ್ರಾಗಿತಿಹಾಸಕಾಲದಲ್ಲಿ ಮಾನವ ವಾಸಮಾಡಿದ ಕುರುಹುಗಳು ದೊರೆತಿವೆ. ಆದಿ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗಳು ಕಂಡುಬರುತ್ತವೆ. ಇಲ್ಲಿ ದೊರಕಿರುವ ಶಿಲಾಯುಧಗಳು, ಇತಿಹಾಸ ಕಾಲ ಆರಂಭದ ಮಣ್ಣಿನ ಕಟ್ಟಡಗಳ ತಳಪಾಯಗಳು ಮತ್ತು ಇತರೆ ಅವಶೇಷಗಳು ಈ ಪರಿಸರದ ಪ್ರಾಚೀನತೆಯನ್ನು ದೃಢಪಡಿಸುತ್ತವೆ.

ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪುರಾತತ್ತ್ವ
ಅಧ್ಯಯನ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ
ವಿಶ್ವವಿದ್ಯಾಲಯ, ಬಳ್ಳಾರಿ-೫೮೩೧೦೫
ಮೊ: ೯೮೮೬೯ ೫೪೬೨೨

ಸಾಲಗುಂದ ಪದದ ನಿಷ್ಪತ್ತಿ

ಸಾಲಗುಂದೆ ಎನ್ನುವ ಪದವನ್ನು ವಿಭಾಗಿಸಿದಾಗ ಕನ್ನಡ ನಿಘಂಟಿನ ಪ್ರಕಾರ ಸಾಲ ಎಂದರೆ, ಸುತ್ತುಗೋಡೆ, ಪ್ರಾಕಾರ, ಶ್ರೇಣಿ ಎಂದರ್ಥ. ಗುಂದೆ ಎಂದರೆ, ಬೆಟ್ಟ, ಗುಡ್ಡ ಎಂದರ್ಥ. ಹೀಗೆ ಬೆಟ್ಟ ಗುಡ್ಡಗಳ ಶ್ರೇಣಿ ಹೊಂದಿರುವ; ಅವುಗಳಿಂದ ಸುತ್ತುವರೆದಿರುವ ಗ್ರಾಮವೇ ಸಾಲಿಗುಂದೆ. ಇಲ್ಲಿ ಸಾಲ ಎಂಬ ಪದ ಸಂಖ್ಯಾವಾಚಿಯ ದೃಷ್ಟಿಕೋನದಿಂದ ನೋಡಿದಾಗ ಅನಿಯಮಿತ, ಹಲವು ಎಂಬ ಅರ್ಥವನ್ನು ಕೊಡುತ್ತದೆ. ಹಲವು ಬೆಟ್ಟಗುಡ್ಡಗಳಿಂದ ಪ್ರಾಕಾರ ಹೊಂದಿರುವ; ಸುತ್ತುವರೆದಿರುವ ಗ್ರಾಮ ಸಾಲಗುಂದೆ ಎಂದೂ ಕರೆಯಬಹುದು.

ಶಾಸನಗಳಲ್ಲಿ

ಸಾಲಗುಂದ ಗ್ರಾಮದ ಜಕ್ಕಮ್ಮನ ಬಾವಿ ಸಮೀಪದ ನೀಲಕಂಠೇಶ್ವರ ದೇವಾಲಯದಲ್ಲಿನ ಕ್ರಿ.ಶ ೧೦೬೩ರ ಕಲ್ಯಾಣ ಚಾಲುಕ್ಯರ ಕಾಲದ ಶಾಸನದಲ್ಲಿ 'ನಿಟ್ಟರವೆ-೭೦'ರ ಆಡಳಿತ ಭಾಗವಾಗಿ 'ಸಾಲಿಗುಂದೆ ಅಗ್ರಹಾರ'ವಾಗಿತ್ತೆಂಬ ಉಲ್ಲೇಖವಿದೆ. ಅದೇ ಗ್ರಾಮದ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ ಕಂಡುಬರುವ ಕ್ರಿ.ಶ. ೧೧೫೩ರ ಶಾಸನದಲ್ಲಿ 'ಎಡೆದೊರೆ-೨೦೦೦'ವನ್ನು ಚಾಲುಕ್ಯರ ದಂಡನಾಯಕ ನಾಚಣನು ಆಳುತ್ತಿದ್ದಾಗ 'ಸಾಲಿಗುಂದೆ-೭೦'ನ್ನು ಬಾಚಿದೇವ ಆಳುತ್ತಿದ್ದ ಎನ್ನುವ ಉಲ್ಲೇಖವನ್ನು ಕಾಣಬಹುದು. ಹಾಗೆಯೇ ಗ್ರಾಮದ ಮಾಬಮ್ಮನ ಮನೆ ಸಮೀಪ ಚಿಕ್ಕಗುಡ್ಡದ ಬಂಡೆಯಲ್ಲಿನ ಕ್ರಿ.ಶ. ೧೫೨೮ರ ಶಾಸನದಲ್ಲಿ ವಿಜಯನಗರದ ಅರಸ ವೀರ ಕೃಷ್ಣರಾಯನು ರಾಜ್ಯವಾಳುತ್ತಿದ್ದಾಗ 'ರವುಡುಕುಂದಿ ಸೀಮೆ'ಯ 'ಸಾಲಿಗುಂದೆ ಗ್ರಾಮ'ವು ಅಬ್ಬರಾವು ಅಯ್ಯನ ಕುದುರೆಯ ನಾಯಕತನಕ್ಕೆ ಸೇರಿತ್ತು ಎನ್ನುವ ಉಲ್ಲೇಖವಿದೆ. ಸಾಲಿಗುಂದೆ ಕ್ರಮೇಣ ಸಾಲಗುಂದೆ, ಸಾಲಗುಂದಿ, ಸಾಲಗುಂದ, ಸಾಲ್ಗುಂದಾ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದೆ.

ಈ ಮೇಲ್ಕಂಡಂತೆ ನೈಸರ್ಗಿಕ ಪರಿಸರ ಮತ್ತು ಶಾಸನಗಳ ಹಿನ್ನೆಲೆಯಲ್ಲಿ ನೋಡುವುದಾದರೆ, ಇದರ ಪ್ರಾಚೀನ ಹೆಸರು ಸ್ಪಷ್ಟವಾಗಿ ಸಾಲಿಗುಂದೆ ಎಂಬುದಾಗಿದೆ. ಕಾಲಕ್ರಮೇಣ 'ಲಿ' ಕಾರದ ಬದಲಾಗಿ 'ಲ' ಕಾರ, 'ದೆ' ಕಾರದ ಬದಲಾಗಿ 'ದ' ಕಾರವು ಸೇರ್ಪಡೆಯಾಗಿ ಪ್ರಸ್ತುತ ಸರಕಾರಿ ದಾಖಲೆಗಳಲ್ಲಿ ಸಾಲಗುಂದ, ಸಾಲ್ಗುಂದಾ ಎಂದಾಗಿದೆ. ಹೀಗೆ ಸಾಲಿಗುಂದೆ > ಸಾಲಗುಂದೆ > ಸಾಲಗುಂದಿ > ಸಾಲಗುಂದ > ಸಾಲಗುಂದಾ > ಸಾಲ್ಗುಂದಾ ಎಂದೂ ಈ ಪರಿಸರದ ಜನರ ಭಾಷೆಯಲ್ಲಿ ಬಳಕೆಯಲ್ಲಿದೆ.

ವೀರಗಲ್ಲು


ಉಪ್ಪಳ ಗ್ರಾಮದ ಹಾಳೂರಿನಲ್ಲಿ ಪಾಳು ಬಿದ್ದಿರುವ ಈಶ್ವರ ದೇವಾಲಯದ ಸಮೀಪದಲ್ಲಿ ಕಂಡುಬರುವ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲು

ಸಂಖ್ಯೆ : ೦೧	ಕಾಲ : ಕ್ರಿ.ಶ. ೧೧-೧೨ನೆ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ಕಲ್ಯಾಣ ಚಾಲುಕ್ಯ
ಊರು : ಉಪ್ಪಳ	ಸ್ಥಿತಿ : ಮಧ್ಯಮ
ಸ್ಥಳ : ಈಶ್ವರ ದೇವಾಲಯದ ಸಮೀಪ	ಅಳತೆ : 3x2 ಅಡಿ ಎತ್ತರ, ಅಗಲ.

ನೀಲಿ ಮಿಶ್ರಿತ ಕಪ್ಪುಶಿಲೆಯಲ್ಲಿ ಕೆತ್ತಲಾಗಿದ್ದು, ಮೂರು ಸುರುಳಿಯಲ್ಲಿ ಕೇಶವನ್ನು ಸುತ್ತಿ ವೀರಮುಡಿ ಕಟ್ಟಿದಂತೆ ಕಾಣಲಾಗುತ್ತದೆ. ಮೇಲೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಕಿವಿಯಲ್ಲಿ ಓಲೆ ಕೊರಳಲ್ಲಿ ಹಾರ ಮತ್ತು ಜನಿವಾರ ಧರಿಸಿರುವನು. ಎಡಗೈಯಲ್ಲಿ ಬಿಲ್ಲು ಬಲಗೈಯಲ್ಲಿ ಬಾಣ ಹಿಡಿದು ಗುರಿಯ ಕಡೆಗೆ ದೃಷ್ಟಿ ಹಾಯಿಸಿ ನಿಂತಿರುವನು. ಸ್ಥಳೀಯರು ಇದನ್ನು ಮಳೆರಾಯಪ್ಪ ಎಂದೂ ಕರೆಯುತ್ತಾರೆ. ಊರಿಗೆ ಬರಗಾಲ ಬಂದಾಗ ಈ ಶಿಲ್ಪವನ್ನು ಪೂಜಿಸುತ್ತಾರೆ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ಪಾಳು ಬಿದ್ದಿರುವ ಭೈರವ ದೇವಾಲಯದ ಸಮೀಪದಲ್ಲಿ ಕಂಡುಬರುವ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲು

ಸಂಖ್ಯೆ : ೦೨	ಕಾಲ : ಕ್ರಿ.ಶ. ೧೧-೧೨ನೆ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ಕಲ್ಯಾಣ ಚಾಲುಕ್ಯ
ಊರು : ಉಪ್ಪಳ	ಸ್ಥಿತಿ : ಮಧ್ಯಮ
ಸ್ಥಳ : ಭೈರವ ದೇವಾಲಯದ ಸಮೀಪ	ಅಳತೆ : 3x2 ಅಡಿ ಎತ್ತರ, ಅಗಲ.



ಹಾಳೂರಿನಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲುಗಳು, ಉಪ್ಪಳ

ಹೆಚ್ಚು ಅಲಂಕರಣೆಗಳಿಂದ ಕೂಡಿದ್ದು, ನೀಲಿ ಮಿಶ್ರಿತ ಕಪ್ಪು ಶಿಲಿಯಲ್ಲಿ ಕೆತ್ತಲಾಗಿದೆ. ಇದರಲ್ಲಿರುವ ಉಡುಪು ಮತ್ತು ಆಭರಣಗಳನ್ನು ನೋಡಿದರೆ ಬಹುಶಃ ಇದು ಅಧಿಕಾರಿವರ್ಗ ಅಥವಾ ರಾಜಮನೆತನದವರಿಗೆ ಸಂಬಂಧಿಸಿದ ವೀರಗಲ್ಲು ಇರಬಹುದು ಎಡಗಡೆ ವೀರಮುಡಿಯನ್ನು ಕಟ್ಟಿದ್ದು ಹಣೆಯಲ್ಲಿ ತಿಲಕ, ಕಿವಿಯಲ್ಲಿ ಓಲೆ, ಕೊರಳಲ್ಲಿ ಎರಡು ಪಟ್ಟಿಕೆಯುಳ್ಳ ಹಾರ ಧರಿಸಿರುವನು. ತೋಳಬಂದಿ, ಕೈ ಮತ್ತು ಕಾಲುಗಳಲ್ಲಿ ಕಡಗ, ಸೊಂಟದಲ್ಲಿ ಕಟಿಸೂತ್ರವನ್ನು ಕಾಣಬಹುದು. ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬೆನ್ನು ಹಿಂದಿರುವ ಬತ್ತಳಿಕೆಯಲ್ಲಿ ಬಿಲ್ಲನ್ನು ತೆಗೆದುಕೊಳ್ಳುವ ರೀತಿಯಲ್ಲಿ ಬಲಗೈಯನ್ನು ಚಿತ್ರಿಸಲಾಗಿದೆ.

ರವುಡಕುಂದದ ಬಂಡೆರಂಗನಾಥ ದೇವಾಲಯದ ಬೆಟ್ಟದ ಕೆಳಗೆ ಇರುವ ಕೊಳದ ದಂಡೆಯ ಬೇವಿನ ಮರಕ್ಕೆ ಒರಗಿಸಿರುವ ತೃಟಿತ ವೀರಗಲ್ಲು

ಸಂಖ್ಯೆ : ೦೩	ಕಾಲ : ಕ್ರಿ.ಶ. ೧೦-೧೨ನೇ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ಕಲ್ಯಾಣ ಚಾಲುಕ್ಯ
ಊರು : ರವುಡಕುಂದ	ಸ್ಥಿತಿ : ಮಧ್ಯಮ
ಸ್ಥಳ : ಬೆಟ್ಟದ ಕೆಳಭಾಗದಲ್ಲಿರುವ ಕೊಳ	ಅಳತೆ : 3x2 ಅಡಿ ಎತ್ತರ, ಅಗಲ.

ನೀಲಿ ಮಿಶ್ರಿತ ಕಪ್ಪು ಶಿಲೆಯಲ್ಲಿ ತುಂಡಾಗಿರುವ ವೀರಗಲ್ಲು ಇದಾಗಿದ್ದು. ಪ್ರಸ್ತುತದಲ್ಲಿ ಎದೆ, ಮುಖ, ಬಲಗೈ ಮತ್ತು ತಲೆಯ ಭಾಗ ಮಾತ್ರ ಕಾಣುತ್ತವೆ. ವೀರಮುಡಿ ಕಟ್ಟಿದ್ದು, ಎಡಗೈಯಲ್ಲಿ ಗುರಾಣಿ ಹಿಡಿದುಕೊಂಡಿದ್ದಾನೆ. ಜನಿವಾರ ಧರಿಸಿದಂತೆ ಕಾಣುತ್ತದೆ. ಕಿವಿಯಲ್ಲಿ ಓಲೆ ಕಂಡುಬರುತ್ತದೆ. ಇದರ ಪಕ್ಕದಲ್ಲಿಯೇ ತೃಟಿತ ಮೂರ್ತಿಶಿಲ್ಪವಿದೆ.

ಮುಕ್ಕುಂದ ಗ್ರಾಮದ ಪಾಪನಾಥೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ವೀರಗಲ್ಲು

ಸಂಖ್ಯೆ : ೦೪	ಕಾಲ : ಕ್ರಿ.ಶ. ೧೪-೧೫ನೇ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ವಿಜಯನಗರ
ಊರು : ಮುಕ್ಕುಂದ	ಸ್ಥಿತಿ : ಮಧ್ಯಮ
ಸ್ಥಳ : ಪಾಪನಾಥೇಶ್ವರ ದೇವಾಲಯದಲ್ಲಿ	ಅಳತೆ : 4x3 ಅಡಿ ಎತ್ತರ, ಅಗಲ.

ಮೂರು ಪಟ್ಟಿಕೆಗಳಿದ್ದು, ಕೆಳಭಾಗದ ಪಟ್ಟಿಕೆಯಲ್ಲಿ ವೀರರಿಬ್ಬರ ಚಿತ್ರಣವಿದೆ. ಕೈಯಲ್ಲಿ ಬಿಲ್ಲು ಹಿಡಿದುಕೊಂಡು ಹೋರಾಡುವ ದೃಶ್ಯವಿದೆ ವೀರರು ಕಾಲಲ್ಲಿ ಕಾಲ್ಗಡಗವನ್ನು ಧರಿಸಿದ್ದಾರೆ. ಹಿಂದುಗಡೆ ಸೈನ್ಯವಿರುವ ಚಿತ್ರಣವಿದೆ ಆದರೆ ಸಷ್ಟವಿಲ್ಲ. ಎರಡನೆಯ ಹಂತದಲ್ಲಿ ಸೈನಿಕರಿಬ್ಬರು ಅಪ್ಸರೆ ಸ್ತ್ರೀಯರ ಜೊತೆ ಸ್ವರ್ಗಕ್ಕೆ ಹೋಗುತ್ತಿರುವಂತೆ ತೋರಿಸಲಾಗಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ ಬಲಭಾಗದಲ್ಲಿ ಕೈ ಮುಗಿದು ಕುಳಿತ್ತಿದ್ದಾನೆ.[೨]

ಮುಕ್ಕುಂದ ವೀರಭದ್ರೇಶ್ವರ ದೇವಾಲಯದಲ್ಲಿರುವ ಬಂದೂಕು ವೀರಗಲ್ಲು

ಸಂಖ್ಯೆ : ೦೫	ಕಾಲ : ಕ್ರಿ.ಶ. ೧೬-೧೭ನೇ ಶತಮಾನ
ಶಿಲ್ಪ : ಬಂದೂಕು ವೀರಗಲ್ಲು	ರಾಜವಂಶ : ವಿಜಯನಗರೋತ್ತರ
ಊರು : ಮುಕ್ಕುಂದ	ಸ್ಥಿತಿ : ಮಧ್ಯಮ
ಸ್ಥಳ : ವೀರಭದ್ರ ದೇವಾಲಯದಲ್ಲಿ	ಅಳತೆ : 4x3 ಅಡಿ ಎತ್ತರ, ಅಗಲ.

ಬಲಗೈಯಿಂದ ಎಡಗೈಗೆ ಅಡ್ಡಲಾಗಿ ಬಂದೂಕು ಹಿಡಿದುಕೊಂಡು ನಿಂತಿದ್ದಾನೆ. ಬಲಗೈಯಲ್ಲಿ ಟ್ರಿಗರ್ ಎಡಗೈಯಲ್ಲಿ

ಬಂದೂಕಿನ ಮುಂಭಾಗವಿದೆ. ಸೋಂಟದಲ್ಲಿ ವಸ್ತ್ರ ಕಟ್ಟಿಕೊಂಡಂತೆವಿದೆ. ಅರ್ಧ ತೋಳಿನ ಅಂಗಿ, ಕೆಳಗಡೆ ದೋತಿಯನ್ನು ಸುತ್ತಿಕೊಂಡಂತೆ ಎರಡು ಕಾಲುಗಳ ಪಾದಗಳವರೆಗೆ ಅದರ ನೇರಿಗೆ ಮೂಡಿ ಬಂದಿದೆ. ದಪ್ಪ ಮೀಸೆಯನ್ನು ಬಿಟ್ಟಿದ್ದು ತಲೆಯ ಮೇಲೆ ಪೇಟ ಅಥವಾ ಟೋಪಿ ಹಾಕಿಕೊಂಡಂತೆ ಕಾಣುತ್ತದೆ.[೩]

ಸೋಮಲಾಪುರದ ಹಾಳೂರಿನಲ್ಲಿ ಭೀರಮಲ್ಲಪ್ಪ ಮಠದ ಮುಂದೆ ಕಂಡು ಬರುವ ವೀರಗಲ್ಲು

ಸಂಖ್ಯೆ : ೦೬ ಕಾಲ : ಕ್ರಿ.ಶ. ೧೫-೧೬ನೇ ಶತಮಾನ
ಶಿಲ್ಪ : ವೀರಗಲ್ಲು ರಾಜವಂಶ : ವಿಜಯನಗರೋತ್ತರ
ಊರು : ಸೋಮಲಾಪುರ ಸ್ಥಿತಿ : ಮಧ್ಯಮ
ಸ್ಥಳ : ಹಾಳೂರು ಅಳತೆ : 3x2 ಅಡಿ ಎತ್ತರ, ಅಗಲ.

ಸಾಲಗುಂದ ಪರಿಸರದಲ್ಲಿ ಕಂಡು ಬರುವ ಸೋಮಲಾಪುರ ಗ್ರಾಮದ ಹಾಳೂರಿನ ಪಾಳು ಬಿದ್ದಿರುವ ಭೀರಮಲ್ಲಪ್ಪನ ಮಠದ ಮುಂದೆ ಕಂಡು ಬರುವ ಈ ವೀರಗಲ್ಲಿನಲ್ಲಿ ಒಬ್ಬ ವೀರನ ಚಿತ್ರಣವಿದೆ. ಆ ವೀರನು ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಗುರಾಣಿ ಹಿಡಿದಿರುವುದು ಕಂಡು ಬರುತ್ತದೆ. ಕೊರಳಲ್ಲಿ ಒಂದು ದಾರವಿದ್ದು, ತಲೆಯ ಕೂದಲನ್ನು ಕಟ್ಟಲಾಗಿದೆ. ಇದರ ಮೇಲುಗಡೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಕಣ ಶಿಲೆಯ ಹುಟ್ಟು ಬಂಡೆಯ ಮೇಲೆ ಕೆತ್ತಲಾಗಿದೆ.

ಸೋಮಲಾಪುರದ ರಡ್ಡೆಪ್ಪ ತಾತನ ಕಟ್ಟೆಯ ಆವರಣದಲ್ಲಿ ಕಂಡುಬರುವ ವೀರಗಲ್ಲು

ಸಂಖ್ಯೆ : ೦೭ ಕಾಲ : ಕ್ರಿ.ಶ. ೧೪-೧೫ನೇ ಶತಮಾನ
ಶಿಲ್ಪ : ವೀರಗಲ್ಲು ರಾಜವಂಶ : ವಿಜಯನಗರ
ಊರು : ಸೋಮಲಾಪುರ ಸ್ಥಿತಿ : ಮಧ್ಯಮ
ಸ್ಥಳ : ರಡ್ಡೆಪ್ಪ ತಾತನ ಕಟ್ಟೆಯ ಆವರಣ ಅಳತೆ : 4x3 ಅಡಿ ಎತ್ತರ, ಅಗಲ.

ಸೋಮಲಾಪುರ ಗ್ರಾಮದ ರಡ್ಡೆಪ್ಪ ತಾತನ ಕಟ್ಟೆಯ ಆವರಣದಲ್ಲಿ ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ. ವೀರನು ವರ್ತುಲಾಕಾರದ ಓಲೆ ಧರಿಸಿ ಮುಡಿ ಕಟ್ಟಿದ್ದಾನೆ. ಕಾಲಲ್ಲಿ ಕಡಗ ಧರಿಸಿ, ಬಲಗೈಯಿಂದ ಅಡ್ಡಲಾಗಿ ಖಡ್ಗ ಭರ್ಜಿಹಿಡಿದು ಎಡಗೈಯಲ್ಲಿ ಖಡ್ಗದ ತುದಿಯನ್ನು ಹಿಡಿದಿದ್ದಾನೆ. ವಸ್ತ್ರದ ನೇರಿಗೆಯನ್ನು ಧರಿಸಿದ ರೀತಿಯಲ್ಲಿ ತುಂಬಾ ಕಲಾತ್ಮಕವಾಗಿ ಕೆತ್ತಲಾಗಿದೆ.

ಕೆಂಗಲ್ ಹಳೆ ಊರ ಮಧ್ಯದಲ್ಲಿ ಕಂಡುಬರುವ ಬಂದೂಕು ವೀರಗಲ್ಲು

ಸಂಖ್ಯೆ : ೦೮ ಕಾಲ : ಕ್ರಿ.ಶ. ೧೫-೧೬ನೇ ಶತಮಾನ
ಶಿಲ್ಪ : ಬಂದೂಕು ವೀರಗಲ್ಲು ರಾಜವಂಶ : ವಿಜಯನಗರೋತ್ತರ
ಊರು : ಕೆಂಗಲ್ ಸ್ಥಿತಿ : ಮಧ್ಯಮ
ಸ್ಥಳ : ಊರ ಮಧ್ಯದಲ್ಲಿ ಅಳತೆ : 4x3 ಅಡಿ ಎತ್ತರ, ಅಗಲ.



ಕೆಂಗಲ್ ಗ್ರಾಮದ ಊರ ಮಧ್ಯದಲ್ಲಿ ಬೇವಿನ ಮರದ ಬಳಿ ಬಂದೂಕು ವೀರಗಲ್ಲು ದೊರೆತಿದ್ದು, ಇದಕ್ಕೆ ಸ್ಥಳೀಯರು ಲೋಹದಿಂದ ತಯಾರಿಸಿದ ಕಣ್ಣುಗಳ ಅಚ್ಚನ್ನು ವೀರ ಕಣ್ಣಿನ ಭಾಗಕ್ಕೆ ಅಂಟಿಸಿ, ಬೇವಿನ ಮರದ ಸುತ್ತಲೂ ಕಟ್ಟೆವೊಂದನ್ನು ನಿರ್ಮಿಸಿ ಅದಕ್ಕೆ ಈರಣ್ಣ ಕಟ್ಟೆ ಎಂದೂ ಹೆಸರಿಟ್ಟು ವೀರಗಲ್ಲನ್ನು ಈರಣ್ಣ ದೇವರೆಂದೂ ಪೂಜಿಸುತ್ತಿದ್ದಾರೆ. ಕಣಶಿಲೆಯಲ್ಲಿ ವೀರನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ವೀರನು ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಬಂದೂಕು ಹಿಡಿದು ನಿಂತಿದ್ದಾನೆ. ಕೈ ಮತ್ತು ಕಾಲುಗಳಲ್ಲಿ ಕಡಗ ಧರಿಸಿದಂತೆ ಕಾಣುತ್ತಿದೆ. ಕೊರಳಲ್ಲಿ ಕಂಠಹಾರ ಮತ್ತು ನಡುವಿನಲ್ಲಿ ಕಟಿಸೂತ್ರವನ್ನು ಧರಿಸಿದಂತೆ ಕಾಣುತ್ತಿದೆ.

ಬಸ್ಸಾಪೂರ ಡಿ ಆಂಜನೇಯ ಸ್ವಾಮಿ ದೇವಾಲಯದ ಮುಂದೆ ಕಂಡುಬರುವ ವೀರಗಲ್ಲು

ಸಂಖ್ಯೆ : ೦೯ | ಕಾಲ : ಕ್ರಿ.ಶ. ೧೬-೧೭ನೆ ಶತಮಾನ
ಶಿಲ್ಪ : ವೀರಗಲ್ಲು | ರಾಜವಂಶ : ವಿಜಯನಗರೋತ್ತರ
ಊರು : ಬಸ್ಸಾಪೂರ ಡಿ | ಸ್ಥಿತಿ : ಮಧ್ಯಮ
ಸ್ಥಳ : ಆಂಜನೇಯ ದೇವಾಲಯದ ಮುಂದೆ | ಅಳತೆ : 5x4 ಅಡಿ ಎತ್ತರ, ಅಗಲ.

ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಎಡಗೈ ಅಭಯ ಹಸ್ತದ ರೀತಿಯಲ್ಲಿದ್ದು, ಬಲಗೈಯಲ್ಲಿ ಖಡ್ಗವನ್ನು ಭೂಮಿಗೆ ಅಭಿಮುಖವಾಗಿ ಹಿಡಿದು ನಿಂತಿದ್ದಾನೆ. ಕೈ ಮತ್ತು ಕಾಲುಗಳಲ್ಲಿ ಕಡಗ, ಕಿವಿಯಲ್ಲಿ ಓಲೆ ಧರಿಸಿದಂತೆ ಕಂಡುಬರುತ್ತದೆ. ಉಬ್ಬುಶಿಲ್ಪವನ್ನು ಹೊರತುಪಡಿಸಿ ಉಳಿದ ಕಣಶಿಲೆಗೆ ಸ್ಥಳೀಯರು ಬಣ್ಣ ಹಚ್ಚಿದ್ದಾರೆ. ಮೇಲೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಇದನ್ನು ಸಹಃ ಈ ಊರಿನ ಜನರು ಈರಣ್ಣ ದೇವರೆಂದೂ ಪೂಜಿಸುತ್ತಿದ್ದಾರೆ.

ಕ್ಷೇತ್ರಕಾರ್ಯ ಕೈಗೊಂಡಾಗ ಸಾಲಗುಂದ ಪರಿಸರದಲ್ಲಿ ಬರುವ ಉಪ್ಪಳ ಮತ್ತು ಸೋಮಲಾಪುರ ಗ್ರಾಮಗಳಲ್ಲಿ ಮಾಸ್ತಿಗಲ್ಲುಗಳು ದೊರೆತಿವೆ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ತುಂಗಭದ್ರಾ ನದಿ ದಂಡೆಯ ಸಮೀಪದಲ್ಲಿ ಕಂಡುಬರುವ ಮಹಾಸತಿಗಲ್ಲು

ಸಂಖ್ಯೆ : ೧೦ | ಕಾಲ : ಕ್ರಿ.ಶ. ೧೪-೧೫ನೇ ಶತಮಾನ
ಶಿಲ್ಪ : ಮಹಾಸತಿಗಲ್ಲು / ಮೆರವಣಿಗೆ ಶಿಲ್ಪ | ರಾಜವಂಶ : ವಿಜಯನಗರ
ಊರು : ಉಪ್ಪಳ | ಸ್ಥಿತಿ : ಮಧ್ಯಮ
ಸ್ಥಳ : ಹಾಳೂರು | ಅಳತೆ : 8x6 ಅಡಿ ಎತ್ತರ, ಅಗಲ.



ಕಣಶಿಲೆಯನ್ನು ಬಳಸಿಕೊಳ್ಳಲಾಗಿದೆ. ಕುದುರೆಯ ಮೇಲೆ ಕುಳಿತ ವೀರನಿಗೆ ಹಿಂದೆ ಮುಂದೆ ಚಾಮರದವರು ಇರುವರು. ಕುದುರೆಯ ಹಿಂದುಗಡೆ ಇರುವ ಚಾಮರದವನ ಹಿಂದೆ ಮಹಾಸತಿ ಎಡಗೈಯಲ್ಲಿ ಖಡ್ಗ, ಬಲಗೈಯಲ್ಲಿ ಬಾಲಕನ ಕೈ ಹಿಡಿದುಕೊಂಡು ಕುದುರೆಯ ಹಿಂದೆ ಹೋಗುತ್ತಿರುವಂತೆ ಕೆತ್ತಲಾಗಿದೆ. ಕುದುರೆಯ ಮೇಲೆ ಕುಳಿತ ವೀರನ ಉಬ್ಬುಶಿಲ್ಪ ಹೆಚ್ಚು ಅಲಂಕರಣೆಯಿಂದ ಕೂಡಿದೆ.

ಬಹುಶಃ ಅಧಿಕಾರಿ ವರ್ಗ ಅಥವಾ ರಾಜ ಪರಿವಾರ ದವರಿಗೆ ಸಂಬಂಧಿಸಿದ ಸ್ಮಾರಕಶಿಲ್ಪವಾಗಿದ್ದಿರಬಹುದು. ಮಹಾಸತಿಯು ಧರಿಸಿದ ಸೀರೆ ನೇರಿಗೆ ತುಂಬಾ ಕಲಾತ್ಮಕವಾಗಿ ಮೂಡಿಬಂದಿದೆ. ಸೂರ್ಯ ಚಂದ್ರರ ಚಿಹ್ನೆಗಳು ಇರಬಹು ದಾದ ಮೇಲ್ಭಾಗ ತುಂಡಾಗಿ ಹೋಗಿದೆ. ಇದನ್ನು ಮೆರವಣಿಗೆ ಶಿಲ್ಪ ಎಂದೂ ಸಹ ಗುರುತಿಸಬಹುದು.

ಪ್ರಸ್ತುತ ದಿನಮಾನಗಳಲ್ಲಿ ವೀರಗಲ್ಲುಗಳನ್ನು ಸಂಶೋಧನೆ ಮಾಡಿ ದಾಖಲಿಸುವ ಕಾರ್ಯದ ಜೊತೆಗೆ ಸಂರಕ್ಷಿಸುವ ಕಾರ್ಯವೂ ಸಹ ಬಹಳ ಶೀಘ್ರವಾಗಿ ನಡೆಯಬೇಕಾಗಿದೆ. ಶೋಧದ ತರುವಾಯ ದಾಖಲು ಮಾಡಲು ತೋರಿದ ಆಸಕ್ತಿ ರಕ್ಷಿಸುವಲ್ಲಿಯೂ ತೋರ ಬೇಕಾಗಿದೆ. ನಾಡಿನಾದ್ಯಂತ ಪ್ರಾಚೀನ ಮೂರ್ತಿಶಿಲ್ಪಗಳು, ವೀರಗಲ್ಲುಗಳು ವಿನಾಶದ ಅಂಚಿನಡೆಗೆ ಸಾಗುತ್ತಿವೆ, ಇದಕ್ಕೆ ಈ ಪರಿಸರದ ಅವಶೇಷಗಳೂ ಹೊರತಾಗಿಲ್ಲ. ಸಂಬಂಧಿಸಿದ ಇಲಾಖೆಗಳು ದಯವಿಟ್ಟು ಈ ಪರಿಸರದ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಲು ಮುಂದಾಗಬೇಕಾಗಿದೆ.

ಕೆಲವೊಂದು ಶಿಲ್ಪಗಳು ಭಗ್ನಗೊಂಡಿವೆ. ಕೆಲವು ವೀರಗಲ್ಲುಗಳು ಭೂಮಿಯಲ್ಲಿ ಹೂತುಹೋಗಿವೆ. ಸಾಲಗುಂದ ಗ್ರಾಮದ ಆನೆ ಶಂಕರ ದೇವಾಲಯದ ಭಿತ್ತಿಯೂ ಬಿದ್ದಿದೆ, ಜಕ್ಕಮ್ಮ ದೇವಾಲಯದ ಪುಷ್ಕರಣಿ ತನ್ನ ರೂಪವನ್ನೆ ಕಳೆದುಕೊಳ್ಳುತ್ತಿದೆ. ಉಪ್ಪಳ ಗ್ರಾಮದ ಈಶ್ವರ ದೇವಾಲಯ, ಭೈರವ ಶಿಲ್ಪ ಹಾಗೂ ಭೂದೇವಿ ಶಿಲ್ಪಗಳಿರುವ ದೇವಾಲಯಗಳು ಸಂಪೂರ್ಣವಾಗಿ ನಶಿಸಿ, ಪಾಳುಬಿದ್ದ ಸ್ಥಿತಿಯಲ್ಲಿವೆ. ದಡೇಸೂಗೂರು, ಕಗ್ಗಲ್ ಗ್ರಾಮಗಳಲ್ಲಿ ಶಿವಲಿಂಗ, ವಿನಾಯಕ

ಮೂರ್ತಿಶಿಲ್ಪಗಳಿದ್ದು, ಇವುಗಳನ್ನು ಒಳಗೊಂಡ ದೇವಾಲಯಗಳಿದ್ದಂತೆ ತೋರುತ್ತದೆ. ಆದರೆ ಅವೂ ನಶಿಸಿವೆ. ಸೋಮಲಾಪುರ ಗ್ರಾಮದ ಪ್ರಾಗಿತಿಹಾಸ ನೆಲೆ ಅಸಂರಕ್ಷಿತ ಪ್ರದೇಶವಾಗಿದೆ, ಇಲ್ಲಿ ಹಲವು ಐತಿಹಾಸಿಕ ಕುರುಹುಗಳು ಇಲ್ಲಿನ ಬೆಟ್ಟಗಳಲ್ಲಿವೆ. ಆದರೆ, ಅವು ಗಣಿಗಾರಿಕೆ, ಕಲ್ಲು ಹೊಡೆಯುವ ಕ್ವಾರಿಗಳಾಗಿ ಮಾರ್ಪಡಾಗಿವೆ.

ಈ ನಿಟ್ಟಿನಲ್ಲಿ ಪ್ರಾಚೀನ ಅವಶೇಷಗಳನ್ನು ಸಂರಕ್ಷಿಸಿ, ದಾಖಲಿಸುವುದರ ಜೊತೆಗೆ ಇತಿಹಾಸ ನಿರ್ಮಾಣದಲ್ಲಿ ಬಳಸಿಕೊಳ್ಳಬೇಕಾಗಿದೆ. ಮೂರ್ತಿಶಿಲ್ಪ ಮತ್ತು ಸ್ಮಾರಕಶಿಲ್ಪಗಳ ಮುಖೇನ ಆ ಕಾಲದ ಕೈಗಾರಿಕತೆ, ತಂತ್ರಜ್ಞಾನ ಹಾಗೂ ಕುಶಲಕರ್ಮಿಗಳನ್ನು ಒಳಗೊಂಡಂತೆ ಐತಿಹಾಸಿಕ ದೃಷ್ಟಿಕೋನದಿಂದ ಅಧ್ಯಯನ ಕೈಗೊಳ್ಳುವುದು ತುಂಬಾ ಅವಶ್ಯಕವಾಗಿದೆ.

ಕೋಷ್ಟಕ : ಸ್ಮಾರಕ ಶಿಲ್ಪಗಳು (ವೀರಗಲ್ಲುಗಳು)

ಕ್ರ.ಸಂ.	ಸ್ಮಾರಕ ಶಿಲ್ಪ	ಊರು	ರಾಜಮನೆತನ	ಕಾಲ	ಪ್ರಕಟಣೆ
೦೧	ವೀರಗಲ್ಲು	ಉಪ್ಪಳ	ಕಲ್ಯಾಣ ಚಾಲುಕ್ಯ	೧೧–೧೨ನೇ ಶತಮಾನ	ಸಾ.ಎ.ಸಾಂ.ಅ.
೦೨	ವೀರಗಲ್ಲು	ಉಪ್ಪಳ	ಕಲ್ಯಾಣ ಚಾಲುಕ್ಯ	೧೧–೧೨ನೇ ಶತಮಾನ	ಸಾ.ಎ.ಸಾಂ.ಅ.
೦೩	ವೀರಗಲ್ಲು	ರವುಡಕುಂದ	ಕಲ್ಯಾಣ ಚಾಲುಕ್ಯ	೧೧–೧೨ನೇ ಶತಮಾನ	ಸಾ.ಎ.ಸಾಂ.ಅ.
೦೪	ವೀರಗಲ್ಲು	ಮುಕ್ಕುಂದ	ವಿಜಯನಗರೋತ್ತರ	೧೫–೧೬ನೇ ಶತಮಾನ	ಮು.ಇ.
೦೫	ಬಂದೂಕು ವೀರಗಲ್ಲು	ಮುಕ್ಕುಂದ	ವಿಜಯನಗರೋತ್ತರ	೧೫–೧೬ನೇ ಶತಮಾನ	ಮು.ಇ.
೦೬	ವೀರಗಲ್ಲು	ಸೋಮಲಾಪುರ	ವಿಜಯನಗರೋತ್ತರ	೧೫–೧೬ನೇ ಶತಮಾನ	ಸಾ.ಎ.ಸಾಂ.ಅ.
೦೭	ವೀರಗಲ್ಲು	ಸೋಮಲಾಪುರ	ವಿಜಯನಗರ	೧೪–೧೫ನೇ ಶತಮಾನ	ಸಾ.ಎ.ಸಾಂ.ಅ.
೦೮	ಬಂದೂಕು ವೀರಗಲ್ಲು	ಕೆಂಗಲ್	ವಿಜಯನಗರೋತ್ತರ	೧೫–೧೬ನೇ ಶತಮಾನ	ಸಾ.ಎ.ಸಾಂ.ಅ.
೦೯	ವೀರಗಲ್ಲು	ಬಸ್ಸಾಪೂರ ಡಿ	ವಿಜಯನಗರೋತ್ತರ	೧೫–೧೬ನೇ ಶತಮಾನ	ಸಾ.ಎ.ಸಾಂ.ಅ.
೧೦	ಮಹಾಸತಿಗಲ್ಲು / ಮೆರವಣಿಗೆ ಶಿಲ್ಪ	ಉಪ್ಪಳ	ವಿಜಯನಗರ	೧೪–೧೫ನೇ ಶತಮಾನ	ಸಾ.ಎ.ಸಾಂ.ಅ.

ಆಕರಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ (ಪ್ರ.ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. ಅಭಿಶಂಕರ ಕೆ. (ಪ್ರ.ಸಂ), ೧೯೭೦, ರಾಯಚೂರು ಜಿಲ್ಲೆ ಗ್ಯಾಸೆಟಿಯರ್, ಕರ್ನಾಟಕ ಸರಕಾರ, ಬೆಂಗಳೂರು.

೩. ದೇವರಕೊಂಡಾರೆಡ್ಡಿ (ಸಂ), ೨೦೧೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:೭ ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಕಲಬುರ್ಗಿ ಎಂ.ಎಂ., ೧೯೮೦, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೫. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೬. ಶೇಷಶಾಸ್ತ್ರಿ ಆರ್., ೨೦೦೭, ಕರ್ನಾಟಕದ ವೀರಗಲ್ಲುಗಳು, ಕಾಮಧೇನು ಪುಸ್ತಕ, ಬೆಂಗಳೂರು.

೭. ತಿರುಪತಿ ಜಿ., ೨೦೦೭, ಮುಕ್ಕುಂದಿ ಇತಿಹಾಸ ದೇವಾಲಯ ಮತ್ತು ಶಾಸನಗಳ ಹಿನ್ನೆಲೆಯಲ್ಲಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೮. ನಾಗರಾಜ, ೨೦೧೮, ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೯. ರಡ್ಡೆಪ್ಪ, ೨೦೧೯, ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

◆◆

ಪಾಂಡುರಂಗ ಹೆಚ್.ಆರ್.

ಕಳಸ ಸೀಮೆ-ಸಂಸೆ ಮೂರುನಾಡಿನ ಅಪ್ರಕಟಿತ ವೀರಗಲ್ಲುಗಳು

ಪ್ರಾದೇಶಿಕ ಇತಿಹಾಸ ರಚನೆಗೆ ವೀರಗಲ್ಲು, ಮಹಾಸತಿಕಲ್ಲು, ನಿಸಿಧಿಕಲ್ಲು, ಸ್ಮಾರಕಗಳು ಮಹತ್ವದ ಆಕರಗಳಾಗುತ್ತವೆ. ವಿವಿಧ ರಾಜರ ಆಡಳಿತದ ಕಾಲಘಟ್ಟಗಳಲ್ಲಿ, ವಿವಿಧ ಬಗೆಯ ಶಿಲೆಗಳು, ಆಕೃತಿಗಳು, ಆಕರ್ಷಕ ಶಿಲ್ಪಗಳಲ್ಲಿ ಮೂಡಿಬಂದಿರುವ ಸಂಸೆ ಮೂರುನಾಡಿನ ಈ ವೀರಗಲ್ಲುಗಳು ಕಳಸ ಸೀಮೆಯ ಮಧ್ಯಕಾಲೀನ ಇತಿಹಾಸ ರಚನೆಗೆ ಮುಖ್ಯ ಸಂಪನ್ಮೂಲ ಆಕರಗಳಾಗಿವೆ. ಇಲ್ಲಿ ನನಗೆ ದೊರೆತಿರುವ ಎಂಟು ವೀರಗಲ್ಲುಗಳು ಶಾಸನರಹಿತವಾಗಿರುವುದರಿಂದ ಅವು ದೊರಕಿದ ಸ್ಥಳ, ಸ್ಥಳನಾಮ, ಶಿಲ್ಪಗಳ ಸೂಕ್ಷ್ಮ ಅಧ್ಯಯನ, ಹಾಗೂ ಸ್ಥಳೀಯರ ನಂಬಿಕೆಗಳನ್ನು ಆಧರಿಸಿದ ಅಮೂಲಾಗ್ರ ಅಧ್ಯಯನದಿಂದ ಈ ವೀರಗಲ್ಲುಗಳನ್ನು "ಬೇಟೆ ವೀರಗಲ್ಲುಗಳು" ಮತ್ತು "ಗಡಿಕಾಳಗದ ವೀರಗಲ್ಲುಗಳು" ಎಂದು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಸಂಸೆ ಮೂರುನಾಡಿನ ಅನಾಮಿಕ ಹುತಾತ್ಮ ವೀರರ ವೀರಗಾಥೆಯನ್ನು ಈ ಸಂಪ್ರಬಂಧದಲ್ಲಿ ಸಚಿತ್ರವಾಗಿ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಅ. ಬೇಟೆ ವೀರಗಲ್ಲುಗಳು

೧. ಹುಲಿ ಹಾಗೂ ಜಿಂಕೆಬೇಟೆ ವೀರಗಲ್ಲು

ಸೋಮಾವತಿ ನದಿ ತೀರದ 'ಸಂಸೆ – ಮೂರುನಾಡು' ಪ್ರದೇಶದ ಶಾಸನೋಕ್ತ 'ಸಉಶೆ' ಗ್ರಾಮದ ಶ್ರೀ ವರಮಹಾಲಕ್ಷ್ಮಿ ದೇವಸ್ಥಾನ ಹಾಗೂ ಬೈರವರಸರ ಕಾಲದ ಶ್ರೀ ಶಾಂತಿನಾಥ ಬಸದಿಯು ಪರಿಸರದಲ್ಲಿ ಸಂಸೆ-ಎಳನೀರು ರಸ್ತೆಯ ಬಲಭಾಗದಲ್ಲಿರುವ ಶ್ರೀ ಅಣ್ಣು ಕಚ್ಚಿಮಕ್ಕಿ ಇವರ ಕಾಫಿ ತೋಟದಲ್ಲಿ, ಹಳ್ಳವೊಂದರ ಎಡದಂಡೆಯ ಮೇಲೆ ದೊರೆತಿರುವ ಭೈರವರಸರ ಕಾಲದ ಶಾಸನ ರಹಿತ ಬಿಳಿ ಕಣಶಿಲೆಯ ಈ ವೀರಗಲ್ಲು ಆರು ಫಲಕಗಳಿಂದ ಕೂಡಿದೆ. ಕೆಳಗಿನ ಫಲಕದಲ್ಲಿ ಇಬ್ಬರು ಬಿಲ್ಗಾರ ಯೋಧರು ತಮ್ಮ ಮೂರು ಬೇಟೆ ನಾಯಿಗಳೊಂದಿಗೆ ಮೇಲೆರಗಿ ಬಂದ ಹುಲಿಗೆ ಮುಖಾ ಮುಖಿಯಾಗಿ ಹೋರಾಡುತ್ತಿರುವ ದೃಶ್ಯ ಹಾಗೂ ಎಡ ಮೂಲೆಯಲ್ಲಿ ಹುಲಿಗೆ ಬೆದರಿ ಓಡುತ್ತಿರುವ ಜಿಂಕೆಯೊಂದನ್ನು ಬೆನ್ನಟ್ಟಿರುವ ಬೇಟೆ ನಾಯಿಯ ಚಿತ್ರಣವೂ ಇದೆ. ಕೆಳಗಿನಿಂದ ಎರಡನೇ ಫಲಕದಲ್ಲಿ ಇಬ್ಬರು ವೀರರು ಪಲ್ಲಕ್ಕಿಯಲ್ಲಿ ಜೊತೆಯಾಗಿ ಕುಳಿತು ಸೈನಿಕರೊಂದಿಗೆ ಬೇಟೆಗೆ ತೆರಳುತ್ತಿರುವ ಚಿತ್ರಣ. ಮೂರನೇ ಫಲಕದಲ್ಲಿ ಹುಲಿಯೊಂದಿಗೆ ಮುಖಾಮುಖಿ ಹೋರಾಟದಲ್ಲಿ ಗಾಯಗೊಂಡರೂ ಹುಲಿಯನ್ನು

ನಿವೃತ್ತ ಕೃಷಿ ಅಧಿಕಾರಿ
ರೈತ ಸಂಪರ್ಕ ಕೇಂದ್ರ
ಕಳಸ, ಮೂಡಿಗೆರೆ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ
ಮೊ: ೯೪೪೯೩ ೪೧೧೧೭



ಹುಲಿ ಮತ್ತು ಜಿಂಕೆಬೇಟೆ ವೀರಗಲ್ಲು– ಕಚ್ಚಿಮಕ್ಕಿ

ಕೊಂದು, ಹೋರಾಟದಲ್ಲಿ ಮಡಿದ ಇಬ್ಬರೂ ಹುಲಿ ಬೇಟೆ ವೀರರನ್ನು ಆರು ಜನ ದೇವಕನ್ಯೆಯರು ತಮ್ಮ ನಳಿದೋಳಿನಾಸರೆಯಲ್ಲಿ ಕೈಲಾಸಕ್ಕೆ ಕರೆದೊಯ್ಯುತ್ತಿರುವ ಚಿತ್ರಣ.

ನಾಲ್ಕನೇ ಫಲಕದಲ್ಲಿ ಕೈಲಾಸದಲ್ಲಿ ಮೂವರು ಶಿವಗಣಗಳೊಂದಿಗೆ ಹುಲಿ ಬೇಟೆ ವೀರರಿಬ್ಬರು ಅಂಜಲಿ ಬದ್ಧರಾಗಿ, ಕುಳಿತ ಚಿತ್ರಣ. ಐದನೇ ಫಲಕದಲ್ಲಿ ಸಂಗೀತ ಹಾಗೂ ನೃತ್ಯದಿಂದ ಶಿವಸಾನಿಧ್ಯ ಕೈಲಾಸಕ್ಕೆ ವೀರರಿಬ್ಬರನ್ನೂ ಸ್ವಾಗತಿಸುತ್ತಿರುವ ಸಂಗೀತಗಾರರು ಹಾಗೂ ನರ್ತಕಿಯರ ಚಿತ್ರಣ ಮತ್ತು ಎಡ ಮೂಲೆಯಲ್ಲಿ ಹಸು–ಕರುವಿನ ಚಿತ್ರಣವಿದೆ. ವೀರಗಲ್ಲಿನ ಗೋಪುರಾಕೃತಿಯ ಅಗ್ರ ಭಾಗದ ಫಲಕದಲ್ಲಿ ಸೂರ್ಯ–ಚಂದ್ರ, ಶಿವಗಣ, ನಂದೀಶ್ವರ ಹಾಗೂ ಮಧ್ಯದಲ್ಲಿ ಶಿವಲಿಂಗಾರ್ಚನೆ ಮಾಡುತ್ತಿರುವ ಜಟಾಧಾರಿ ಕಾಳಾಮುಖ ಶೈವ ಯತಿಯ ಚಿತ್ರಣವಿದೆ.

ಪ್ರಜೆಗಳು ಹಾಗೂ ಸಾಕು ಪ್ರಾಣಿಗಳಿಗೆ ಮತ್ತು ಹಸು ಕರುಗಳಿಗೆ ಉಪಟಳ ಕೊಡುತ್ತಿದ್ದ ಹುಲಿಯನ್ನು ಕೊಂದು ಹುಲಿ ಬೇಟೆಯಲ್ಲಿ ವೀರಮರಣ ಹೊಂದಿ ವೀರಸ್ವರ್ಗ ಸೇರಿದ ಬಿಲ್ಲಾರ ಯೋಧರಿಬ್ಬರ ಅಮರ ಸ್ಮಾರಕವಾಗಿ ಈ ವೀರಗಲ್ಲನ್ನು ಅಂದಿನ ಸಂಸೆ ಮೂರುನಾಡಿನ ನಾಡ ಪ್ರಭುಗಳು ಪ್ರತಿಷ್ಠಾಪಿಸಿ ವೀರರಿಬ್ಬರ ಪರಿವಾರಕ್ಕೆ ಭೂದಾನ ಮಾಡಿ ಹುಲಿ ಬೇಟೆ ವೀರರ ಪರಿವಾರದ ಋಣಸಂದಾಯ ಮಾಡಿದ್ದಾರೆಂದು ಈ ವೀರಗಲ್ಲು ಶಿಲ್ಪ ಅಧ್ಯಯನದಿಂದ ಹಾಗೂ ಶಿಲ್ಪಲಕ್ಷಣದ ಆಧಾರದ ಮೇಲೆ ವಿಜಯನಗರ ಆರಂಭಕಾಲದ ಹದಿನಾಲ್ಕನೇ ಶತಮಾನದ ಕಾಳಾಮುಖ ಶೈವಸಂಪ್ರದಾಯದ ಅಪರೂಪದ ಹುಲಿ ಹಾಗೂ ಜಿಂಕೆಬೇಟೆ ವೀರಗಲ್ಲು ಸ್ಮಾರಕವೆಂದು ಊಹಿಸಬಹುದಾಗಿದೆ.

೨. ಹುಲಿ ಮತ್ತು ಜಿಂಕೆಬೇಟೆ ವೀರಗಲ್ಲು – ಬಸರೀಕಲ್ಲು

ಸಂಸೆ ಗ್ರಾಮದ ಶಾಸನೋಕ್ತ 'ಬಸುರುಗಲ್ಲು' ಪ್ರದೇಶದ ಶ್ರೀ ನಿರಂಜನ ಸೆಟ್ಟಿ, ಬಸರೀಕಲ್ಲುರವರ ಅಡಿಕೆ ತೋಟದಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿ ನಿಂತ ಬಳಪದ ಕಲ್ಲಿನ ಶಾಸನರಹಿತವಾದ ಈ ವೀರಗಲ್ಲು ಐದು ಫಲಕ ಹೊಂದಿದೆ. ಕೆಳಫಲಕದಲ್ಲಿ ಇಬ್ಬರು ಬಿಲ್ಲಾರ ವೀರರು ತಮ್ಮ ಒಂದು ಬೇಟೆನಾಯಿ ಜೊತೆ ಹುಲಿಯೊಂದಿಗೆ ಮುಖಾಮುಖಿಯಾಗಿ ಹೋರಾಡುತ್ತಿರುವ ಮತ್ತು ಉಳಿದ ನಾಲ್ಕು ಬೇಟೆ ನಾಯಿಗಳು, ಓಡುತ್ತಿರುವ ಜಿಂಕೆಗಳ ಬೆನ್ನಟ್ಟಿರುವ ಚಿತ್ರಣವಿದೆ. ಅದರ ಮೇಲಿನ ಫಲಕದಲ್ಲಿ ಬಿಲ್ಲಾರ ವೀರ ಪಲ್ಲಕ್ಕಿಯಲ್ಲಿ ಕುಳಿತು ಬೇಟೆಗೆ ಹೋಗುತ್ತಿರುವ ಚಿತ್ರಣ, ಅವರ ಮುಂದೆ ಖಡ್ಗಧಾರಿ ಯೋಧನೊಬ್ಬ ಎದುರಾಳಿ ಯೋಧನ ಶಿರೋಮುಡಿಯನ್ನು ಎಡಗೈನಲ್ಲಿ ಎತ್ತಿ ಹಿಡಿದು ಬಲಗೈನಲ್ಲಿರುವ ಖಡ್ಗದಿಂದ ಎದುರಾಳಿ ಯೋಧನ ಶಿರಚ್ಛೇದನ ಮಾಡುತ್ತಿರುವ ಭೀಕರ ಚಿತ್ರಣವಿದೆ. ಮುಂದೆ ಅಶ್ವಯೋಧ ಖಡ್ಗಧಾರಿ ಕಾಲ್ದಳದ ಯೋಧ ಸಾಗುತ್ತಿರುವ



ಹುಲಿ ಮತ್ತು ಜಿಂಕೆಬೇಟೆ ವೀರಗಲ್ಲು– ಬಸರಿಕಲ್ಲು

ಚಿತ್ರಣವೂ ಇದೆ. ಮೂರನೇ ಫಲಕದಲ್ಲಿ ಸೇವಕನೊಂದಿಗಿರುವ ಇಬ್ಬರು ಬಿಲ್ಗಾರರು ಶರಸಂಧಾನದ ಮೂಲಕ ಶತ್ರುಗಳೊಂದಿಗೆ ಹೋರಾಟದಲ್ಲಿ ತೊಡಗಿರುವ ಚಿತ್ರಣವಿದೆ. ನಾಲ್ಕನೇ ಫಲಕದಲ್ಲಿ ಹುಲಿ ಬೇಟೆ ಹೋರಾಟದಲ್ಲಿ ಹುಲಿಯನ್ನು ಕೊಂದು ಮಡಿದ ವೀರರಿಬ್ಬರು ಕೈಲಾಸದಲ್ಲಿ ಶಿವಗಣಗಳೊಂದಿಗೆ ಅಂಜಲೀ ಬದ್ಧರಾಗಿ ಕುಳಿತಿರುವ ಚಿತ್ರಣವಿದೆ. ವೀರಗಲ್ಲಿನ ಅರ್ಧಚಂದ್ರ ಗೋಪುರಾಕಾರದ ಅಗ್ರಭಾಗದ ಫಲಕದಲ್ಲಿ ಶಿವಲಿಂಗವನ್ನು ಅರ್ಚನೆ ಮಾಡುತ್ತಿರುವ ಜಟಾಧಾರಿ ಕಾಳಾಮುಖ ಯತಿ ಅವನ ಹಿಂದೆ ಶಿವಗಣ ನಂದಿ ಹಾಗೂ ಶಿವಲಿಂಗದ ಮುಂದೆ ಹಸು ಕರು ಚಿತ್ರಣ, ಲಿಂಗದ ಮೇಲೆ ದೇವಾಲಯದ ಗೋಪುರ ಹೋಲುವ ವಿಶಿಷ್ಟ ಚಿತ್ರಣ ಮತ್ತು ಸೂರ್ಯ ಚಂದ್ರರ ಚಿತ್ರಣವೂ ಇದೆ. ಬಸರೀಕಲ್ಲಿನ ಈ ಹುಲಿಬೇಟೆ ಸ್ಮಾರಕದ ಶಿಲ್ಪದ ಸೂಕ್ಷ್ಮ ಅಧ್ಯಯನದ ಮೂಲಕ ಪ್ರಾಚೀನ ಸಂಸೆ ನಾಡಿನ ವೀರರಿಬ್ಬರು ನಾಡಿನ ಪ್ರಜೆಗಳಿಗೆ ಮತ್ತು ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಹುಲಿಯನ್ನು ಕೊಂದು ಹೋರಾಟದಲ್ಲಿ ಮಡಿದು ವೀರ ಸ್ವರ್ಗ ಸೇರಿದ ನಿಮಿತ್ತ ವೀರರ ಅಮರ ಸ್ಮಾರಕವಾಗಿ ಸಂಸೆ ನಾಡ ಪ್ರಭುಗಳು ಸ್ಥಾಪಿಸಿರಬಹುದಾದ ಕಾಳಾಮುಖ ಶೈವ ಸಂಪ್ರದಾಯದ ಈ ವೀರಗಲ್ಲು ಹದಿನಾಲ್ಕನೇ ಶತಮಾನದ ಭೈರವರಸರ ಆಡಳಿತ ಕಾಲಕ್ಕೆ ಸೇರಿದ್ದಿರಬಹುದೆಂದು ಊಹಿಸಬಹುದಾಗಿದೆ.

೩. ಜಿಂಕೆ ಬೇಟೆ ವೀರಗಲ್ಲು – ಕೆಳಮನೆ



ಜಿಂಕೆ ಬೇಟೆ ವೀರಗಲ್ಲು – ನೆಲ್ಲಿಬೀಡು

ಸಂಸೆ ಗ್ರಾಮದ ನೆಲ್ಲಿಬೀಡು ಪ್ರದೇಶದ ಕೆಳಮನೆ ಪುಟ್ಟಯ್ಯ ಅವರ ಜಾಗದಲ್ಲಿ ದೊರೆತಿರುವ ಬಿಳಿ ಕಣ ಶಿಲೆಯ ಈ ವೀರಗಲ್ಲು ಐದು ಫಲಕಗಳನ್ನು ಹೊಂದಿದೆ. ಕೆಳಗಿನ ಫಲಕದಲ್ಲಿ ಧನುರ್ಧಾರಿ ಯೋಧನೊಬ್ಬ ಮೂವರು ಆಯುಧಧಾರಿ ಯೋಧರೊಂದಿಗೆ ಮತ್ತು ಎರಡು ಬೇಟೆ ನಾಯಿಗಳೊಂದಿಗೆ ಜಿಂಕೆ ಬೇಟೆಯಲ್ಲಿ ನಿರತನಾದ ಚಿತ್ರಣ. ಅದರ ಮೇಲಿನ ಎರಡನೇ ಫಲಕದಲ್ಲಿ ಪುರಾಣ ಪ್ರಸಿದ್ಧವಾದ 'ಸಮುದ್ರ ಮಥನ' ವನ್ನು ಹೋಲುವ ಸನ್ನಿವೇಶದ ಚಿತ್ರಣ, ಮಧ್ಯದಲ್ಲಿರುವ ದೊಡ್ಡ ಹಂಡೆಯೊಳಗೆ ಲಂಬವಾಗಿ ನಿಲ್ಲಿಸಿದ ದೊಡ್ಡ ಕಡೆಗೋಲಿಗೆ ದಪ್ಪವಾದ ಹಗ್ಗದಿಂದ ಬಂಧಿಸಿ ಎರಡೂ ಬದಿ ತಲಾ ಐವರು ವ್ಯಕ್ತಿಗಳು ಹಗ್ಗವನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಎಳೆಯುತ್ತಿರುವ ಚಿತ್ರಣವಿದೆ. ಬಹುಷಃ ಕರ್ನಾಟಕದ ವೀರಗಲ್ಲುಗಳಲ್ಲಿ ದೇವದಾನವರು ನಡೆಸಿದ ಸಮುದ್ರ ಮಥನದ ಸನ್ನಿವೇಶವನ್ನು ಹೋಲುವ ಚಿತ್ರಣ ಕಂಡು ಬಂದಿರುವುದು ಇದೇ ಪ್ರಥಮವೆನ್ನಬಹುದು, ಆ ದಿಸೆಯಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯವಿದೆ, ಅದರ ಮೇಲಿನ ಮೂರನೇ ಫಲಕದಲ್ಲಿ ಖಡ್ಗಧಾರಿ ವೀರನೊಬ್ಬ ಇಬ್ಬರು ಅಶ್ವಾರೋಹಿ ಸೈನಿಕರು ಮತ್ತು ಒಬ್ಬ ಬಿಲ್ಗಾರ, ಒಬ್ಬ ಖಡ್ಗಧಾರಿ ಮತ್ತು ರಾಜ ಛತ್ರಿ ಹಿಡಿದ ಸೇವಕನೊಂದಿಗೆ ಬೇಟೆಗೆ ತೆರಳುತ್ತಿರುವ ಚಿತ್ರಣ. ಅದರ ಮೇಲಿನ ನಾಲ್ಕನೇ ಫಲಕದಲ್ಲಿ ಮೂವರು ಶಿವಗಣಗಳು ಹಾಗೂ ಜೊತೆಗಾರ ಯೋಧರೊಂದಿಗೆ ರಾಜ ಛತ್ರಿ ಅಲಂಕೃತನಾಗಿ ಪೀಠದ ಮೇಲೆ ಕುಳಿತಿರುವ ಬೇಟೆಯಲ್ಲಿ ಮಡಿದ ಬಿಲ್ಗಾರ ಯೋಧನ ಚಿತ್ರಣವಿದೆ. ವೀರಗಲ್ಲಿನ ತ್ರಿಕೋನ ಅರ್ಧ ಚಂದ್ರಾಕೃತಿಯ ಅಗ್ರಫಲಕದಲ್ಲಿ ಶಿವಲಿಂಗ ಪೂಜಾ ನಿರತನಾದ ಜಟಾಧಾರಿ ಕಾಳಾಮುಖ ಯತಿ, ಲಿಂಗದ ಮುಂದೆ ಹಸು–ಕರು, ಹಿಂಭಾಗದಲ್ಲಿ ಪೀಠವೊಂದರ ಮೇಲೆ ಭಕ್ತಿಯಿಂದ ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿರುವ ಕೈಲಾಸವಾಸಿ ಬಿಲ್ಗಾರ ಯೋಧ, ಅವನ ಹಿಂದೆ ಶಿವಗಣ ನಂದೀಶ್ವರ, ಮೇಲೆ ಸೂರ್ಯಚಂದ್ರ ಮತ್ತು ಶಿವಲಿಂಗದ ಮೇಲೆ ದೇವಸ್ಥಾನದ ಗೋಪುರಾಕೃತಿಯ ವಿಶಿಷ್ಟ ಚಿತ್ರಣವಿದೆ. ಕೆಳಮನೆಯ ಶಾಸನ ರಹಿತ ಈ ಜಿಂಕೆ ಬೇಟೆ ವೀರಗಲ್ಲು. ಹದಿಮೂರು ಅಥವಾ ಹದಿನಾಲ್ಕನೇ ಶತಮಾನದ 'ಕಳಸ ಸಾಂತರ' ದೊರೆಗಳ ಆಡಳಿತ ಕಾಲದ ರಾಜ ಪ್ರಮುಖನೊಬ್ಬ ಬೇಟೆಯಲ್ಲಿ ಮಡಿದ ನಿಮಿತ್ತ ಅಂದಿನ ಆಳರಸರು ವೀರನ ಸ್ಮಾರಕವಾಗಿ ಸ್ಥಾಪಿಸಿದ ಕಾಳಾಮುಖ ಶೈವಸಂಪ್ರದಾಯದ 'ಜಿಂಕೆಬೇಟೆ ವೀರಗಲ್ಲು' ಎಂದು ಊಹಿಸಬಹುದಾಗಿದೆ.



ಹುಲಿ ಮತ್ತು ಜಿಂಕೆಬೇಟೆ ವೀರಗಲ್ಲು– ಕುದುರೆಮುಖ

೪. ಹುಲಿ ಮತ್ತು ಜಿಂಕೆಬೇಟೆ ವೀರಗಲ್ಲು – ಕಾವೇರಿ ಮಾರ್ಕೆಟ್ ಕುದುರೆಮುಖ

ಸಂಸೆ ಗ್ರಾಮದ ದಟ್ಟ ಅರಣ್ಯ ಪ್ರದೇಶವಾಗಿದ್ದ ಮಲ್ಲೇಶ್ವರದ ಭದ್ರಾನದಿ ಎಡದಂಡೆಯಲ್ಲಿ ನಿರ್ಮಿಸಲ್ಪಟ್ಟ ಆಧುನಿಕ ಕೈಗಾರಿಕಾ ನಗರ 'ಕುದುರೆಮುಖ'ದ 'ಕಾವೇರಿ ಮಾರ್ಕೆಟ್' ನ ಹಿಂಭಾಗದಲ್ಲಿ ದೊರೆತಿರುವ ಭಗ್ನವಾಗಿರುವ ಬಳಪದ ಕಲ್ಲಿನಿಂದ ರಚಿಸಲ್ಪಟ್ಟ ಈ ವೀರಗಲ್ಲಿನ ಅಗ್ರಭಾಗ ತುಂಡಾಗಿ ಒಂದು ಫಲಕ ಹೊಂದಿದ್ದು, ಕೆಳಗಿನ ತುಂಡಾದ ಭಾಗ ಮೂರು ಫಲಕ ಹೊಂದಿದೆ. ಈ ವೀರಗಲ್ಲಿನ ನಾಲ್ಕನೇ ಫಲಕ ತ್ರುಟಿತವಾಗಿದೆ. ಈ ವೀರಗಲ್ಲಿನ ಕೆಳಭಾಗದ ಕೆಳಗಿನ ಫಲಕದಲ್ಲಿ, ರಾಜಛತ್ರಿ ಸಹಿತ ಬಲಮೂಲೆಯಲ್ಲಿ ನಿಂತ ಬಿಲ್ಗಾರ ಬೇಟೆಗಾರ ತನ್ನ ಮೇಲೇರಿ ಬರುತ್ತಿರುವ ಹುಲಿಯ ಮೇಲೆ ಬಾಣ ಬಿಟ್ಟು ಆಕ್ರಮಣ ಮಾಡುತ್ತಿರುವ ಚಿತ್ರಣ, ಇವನ ಮುಂದೆ ಬೇಟೆ ನಾಯಿ ತನ್ನ ಒಡೆಯನ ಮೇಲೇರಿ ಬರುತ್ತಿರುವ ಹುಲಿಯ ಮೇಲೆ ಆಕ್ರಮಣ ಮಾಡುತ್ತಿರುವ, ಇನ್ನೊಬ್ಬ ಬೇಟೆಗಾರ ತನ್ನ ಎಡಗೈನಲ್ಲಿ ಹುಲಿಯ ಬಾಲವನ್ನು ಹಿಡಿದು ಬಲಗೈನಲ್ಲಿನ ಕಠಾರಿಯಿಂದ ಹುಲಿಯ ಬೆನ್ನಿಗೆ ಇರಿಯುತ್ತಿರುವ ವೀರೋಚಿತ ಸನ್ನಿವೇಶದ ಚಿತ್ರಣವಿದೆ.

ಫಲಕದ ಎಡಮೂಲೆಯಲ್ಲಿ ಮೂರು ಬೇಟೆ ನಾಯಿಗಳು ಅಟ್ಟಿಸಿಕೊಂಡು ಬರುತ್ತಿರುವ ಜಿಂಕೆಯ ಮೇಲೆ ಎದುರಿನಿಂದ ಬಾಣ ಬಿಡುತ್ತಿರುವ ಬಿಲ್ಗಾರನ ಚಿತ್ರಣವೂ ಇದೆ. ಅದರ ಮೇಲಿನ ಎರಡನೇ ಫಲಕದಲ್ಲಿ ರಾಜ ಛತ್ರಿ ಸಹಿತ ಪಲ್ಲಕ್ಕಿಯಲ್ಲಿ ಕುಳಿತ ಬಿಲ್ಗಾರ ಬೇಟೆಗಾರ ತನ್ನೊಂದಿಗೆ ಅಶ್ವಾರೋಹಿ ಯೋಧ ಹಾಗೂ ಖಡ್ಗಧಾರಿ ಯೋಧನೊಂದಿಗೆ ಹುಲಿ ಬೇಟೆಗೆ ಕಾಡಿಗೆ ತೆರಳುತ್ತಿರುವ ವಿಶೇಷ ಚಿತ್ರಣವಿದೆ. ಅದರ ಮೇಲಿನ ಮೂರನೇ ಫಲಕದಲ್ಲಿ ಹುಲಿ ಹಾಗೂ ಜಿಂಕೆ ಬೇಟೆ ಸಮಯದಲ್ಲಿ ಹುಲಿಯನ್ನು ಕೊಂದು ತಾವೂ ಮರಣ ಹೊಂದಿದ ಪಲ್ಲಕ್ಕಿಯೋಧ ಹಾಗೂ ಅಶ್ವಾರೋಹಿ ಯೋಧರಿಬ್ಬರನ್ನೂ ಐದು ಜನ ಅಪ್ಸರೆಯರು ತಮ್ಮ ತೋಳಿನಾಸರೆಯಲ್ಲಿ ಸುರಲೋಕಕ್ಕೆ ಕರೆದೊಯ್ಯುವ ಸನ್ನಿವೇಶದ ಚಿತ್ರಣವಿದೆ. ಅದರ ಮೇಲಿನ ನಾಲ್ಕನೇ ಫಲಕದ ತ್ರುಟಿತ ಭಾಗದಲ್ಲಿ ಹುಲಿ ಬೇಟೆಯಲ್ಲಿ ಮಡಿದ ಬೇಟೆಗಾರರಿಬ್ಬರೂ ಶಿವಗಣಗಳೊಂದಿಗೆ ಕುಳಿತಿರುವ ದೃಶ್ಯದ ಚಿತ್ರಣ ಅಸ್ಪಷ್ಟವಾಗಿದೆ.

ವೀರಗಲ್ಲಿನ ತುಂಡಾದ ತ್ರಿಕೋನ ಅರ್ಧ ಚಂದ್ರಾಕೃತಿಯ ಅಗ್ರ ಫಲಕದ ಮಧ್ಯದಲ್ಲಿ ಶಿವಲಿಂಗ ಪೂಜಾ ನಿರತನಾದ ಜಟಾಧಾರಿ ಕಾಳಾಮುಖ ಯತಿ, ಮುಂದೆ ಹಸು–ಕರು, ಹಿಂದೆ ದೀಪದ ಕಂಬದ ಪಕ್ಕ ಪೀಠವೊಂದರ ಮೇಲೆ ಕುಳಿತ ಮೃತ ಬೇಟೆಗಾರ ವೀರ ಮತ್ತು ಅವನ ಹಿಂದೆ ನಿಂತ ಮತ್ತೊಬ್ಬ ಮೃತ ಬೇಟೆಗಾರ ವೀರ, ಹಿಂದೆ ನಂದಿಯ ಚಿತ್ರಣವಿದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಚಿತ್ರಣ, ಶಿವಲಿಂಗದ ಮೇಲೆ ದೇವಸ್ಥಾನದ ಗೋಪುರದ ರೀತಿಯ ವಿಶೇಷ ಚಿತ್ರಣವಿದೆ.

ಶಾಸನ ರಹಿತವಾದ ಈ ವೀರಗಲ್ಲು ಪ್ರಾಚೀನ ಮಲ್ಲೇಶ್ವರ ಪ್ರದೇಶದ ರಾಜ ಪ್ರಮುಖನೋ ಅಥವಾ ಸೇನಾಪತಿಯೋ ಆಗಿದ್ದು, ಪ್ರಜೆಗಳಿಗೆ ಮತ್ತು ದನ–ಕರುಗಳಿಗೆ ಉಪದ್ರವ ನೀಡುತ್ತಿದ್ದ ಹುಲಿಯನ್ನು ಬೇಟೆಯಾಡಿ ಕೊಂದು ತನ್ಮೂಲಕವಾಗಿ ಮಲ್ಲೇಶ್ವರದ ಪ್ರಜಾಸಮೂಹ ಹಾಗೂ ಗೋಸಮೂಹವನ್ನು ಕಾಪಾಡಿ ಹುಲಿಬೇಟೆಯಲ್ಲಿ ಮರಣ ಹೊಂದಿದ ನಿಮಿತ್ತ ಅಂದಿನ ಸಂಸೆ ನಾಡಿನ ನಾಡಪ್ರಭುಗಳು ಸ್ಥಾಪಿಸಿರಬಹುದಾದ ಈ ವೀರಗಲ್ಲು ಹನ್ನೆರಡನೇ ಶತಮಾನದಲ್ಲಿ ಕಳಸ ರಾಜ್ಯದ ದೊರೆಗಳಾಗಿದ್ದ 'ಕಳಸ ಸಾಂತರರು' ಆಡಳಿತ ಕಾಲದ ಹುಲಿಬೇಟೆ ವೀರರ ಸ್ಮಾರಕವೆಂದು ಊಹಿಸಬಹುದಾಗಿದೆ.

ಆ. ಗಡಿ ಕಾಳಗದ ವೀರಗಲ್ಲುಗಳು

೧. ಜಾಂಬಳೆ ಗದ್ದೆ ವೀರಗಲ್ಲು



ಜಾಂಬಳೆ ಗದ್ದೆ ವೀರಗಲ್ಲು – ಜಾಂಬಳ

ಸಂಸೆ ಗ್ರಾಮದ ಜಾಂಬಳೆ ಪ್ರದೇಶದ ಶ್ರೀ ಜಗದೀಶ್ ಚಂದ್ರೇಗೌಡ, ಜಾಂಬಳೆ ಗದ್ದೆ, ಇವರ ಮನೆ ಅಂಗಳದ ಎಡ ಭಾಗದಲ್ಲಿ ಉತ್ತರ ದಿಕ್ಕಿಗೆ ನಿಂತಿರುವ ಬಿಳಿ ಕಣಶಿಲೆಯ ಈ ವೀರಗಲ್ಲು ನಾಲ್ಕು ಫಲಕ ಹೊಂದಿದೆ. ಕೆಳಗಿನ ಫಲಕದಲ್ಲಿ ಬಲಗಡೆ ಇಬ್ಬರು ಖಡ್ಗ ವೀರರು ಮತ್ತು ಎಡಗಡೆ ಇಬ್ಬರು ಬಿಲ್ಗಾರ ವೀರರು ಪರಸ್ಪರ ಹೋರಾಡುತ್ತಿರುವ ಸನ್ನಿವೇಶದ ಚಿತ್ರಣ. ಅದರ ಮೇಲಿನ ಎರಡನೇ ಫಲಕದಲ್ಲಿ ಹೋರಾಟದಲ್ಲಿ ಮಡಿದ ಖಡ್ಗ ವೀರ ಮತ್ತು ಬಿಲ್ಗಾರವೀರ, ಇಬ್ಬರನ್ನು ಮೂವರು ಅಪ್ಸರೆಯರು ತಮ್ಮ ತೋಳಿನಾಸರೆಯಲ್ಲಿ ಸುರ ಲೋಕಕ್ಕೆ ಕರೆದೊಯ್ಯುತ್ತಿರುವ ಚಿತ್ರಣ. ಅದರ ಮೇಲಿನ ಮೂರನೇ ಫಲಕದಲ್ಲಿ ತಪೋನಿರತರಾದ ಮೂವರು ಶಿವಗಣಗಳೊಂದಿಗೆ ಹೋರಾಟದಲ್ಲಿ ಮಡಿದ ಖಡ್ಗವೀರ ವೀರ ಹಾಗೂ ಬಿಲ್ಗಾರ ವೀರರಿಬ್ಬರೂ ಅಂಜಲಿ ಬದ್ಧರಾಗಿ ಪೀಠದ ಮೇಲೆ ಕೈಲಾಸದಲ್ಲಿ ಕುಳಿತಿರುವ ಸನ್ನಿವೇಶದ ಚಿತ್ರಣ, ವೀರಗಲ್ಲಿನ ತ್ರಿಕೋನ ಅರ್ಧ ಚಂದ್ರಾಕೃತಿಯ ಅಗ್ರ ಭಾಗದ ಫಲಕದಲ್ಲಿ ಮಧ್ಯೆ ಶಿವಲಿಂಗ ಪೂಜಾ ನಿರತನಾದ ಜಟಾಧಾರಿ ಕಾಳಾಮುಖ ಶೈವ ಯತಿ, ಯತಿಯ ಹಿಂದೆ ಶಿವಗಣ ನಂದಿ, ಶಿವಲಿಂಗದ ಮುಂದೆ ಹಸು–ಕರು, ಶಿವಲಿಂಗದ ಮೇಲೆ ದೇವಸ್ಥಾನದ ಗೋಪುರ ಹೋಲುವ ವಿಶೇಷ ಗೋಪುರದ ಚಿತ್ರಣ, ಅದರ ಎರಡು ಬದಿ ಸೂರ್ಯ–ಚಂದ್ರರ ಚಿತ್ರಣವಿದೆ.

೨. ಹೊಸಮಕ್ಕಿ ವೀರಗಲ್ಲು

ಇಂದಿನ ಕುದುರೆಮುಖ ನಗರ ಪ್ರವೇಶಿಸುವ ರಸ್ತೆಯ ಎಡ ಭಾಗದಲ್ಲಿರುವ ಹೊಸ ಮಕ್ಕಿಯ ಪಾಳು ಬಿದ್ದ ಹಾಳುಗದ್ದೆಯ ಮರವೊಂದರ ಮರೆಯಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿ ನಿಂತ ವೀರಗಲ್ಲೊಂದು ದೊರೆತಿದ್ದು, ಇದು ಐದು ಫಲಕ ಹೊಂದಿದೆ. ಕೆಳಗಿನ ಫಲಕದಲ್ಲಿ ಬಿಲ್ಗಾರ ಯೋಧರ ನಡುವೆ ನಡೆಯುತ್ತಿರುವ ಹೋರಾಟದ ಚಿತ್ರವಿದೆ, ಅದರ ಮೇಲಿನ ಎರಡನೇ ಫಲಕದಲ್ಲಿ ರಾಜ ಪ್ರಮುಖನೋ ಅಥವಾ ಸೇನಾಪತಿಯೋ ಪಲ್ಲಕ್ಕಿಯಲ್ಲಿ ಕುಳಿತು ಅಶ್ವದಳದ ಸೈನಿಕರೊಂದಿಗೆ ಯುದ್ಧಕ್ಕೆ ಹೋಗುತ್ತಿರುವ ಚಿತ್ರಣ. ಅದರ ಮೇಲಿನ ಮೂರನೇ ಫಲಕದಲ್ಲಿ ಕಾಳಗದಲ್ಲಿ ಹೋರಾಡಿ ಮಡಿದ ಬಿಲ್ಗಾರ ಯೋಧನನ್ನು ಆರು ಜನ ಅಪ್ಸರೆಯರು ತಮ್ಮ ತೋಳ ಸೆರೆಯಲ್ಲಿ ಕರೆದುಕೊಂಡು ಸುರಲೋಕಕ್ಕೆ ಸಾಗುತ್ತಿರುವ ಚಿತ್ರಣವಿದೆ. ಅದರ ಮೇಲಿನ ನಾಲ್ಕನೇ ಫಲಕದಲ್ಲಿ ಹೋರಾಟದಲ್ಲಿ ಮಡಿದು ಸುರಲೋಕ ಸೇರಿದ ವೀರ ತಪೋನಿರತನಾದ ಮೂವರು ಶಿವಗಣಗಳೊಂದಿಗೆ ಅಂಜಲೀ ಬದ್ಧನಾಗಿ ಪದ್ಮಾಸನದಲ್ಲಿ ಕುಳಿತ ಚಿತ್ರಣವಿದೆ. ಅದರ ಮೇಲಿನ ತ್ರಿಕೋನ ಅರ್ಧ ಚಂದ್ರಾಕೃತಿಯ ಶಿರೋ ಫಲಕದಲ್ಲಿ ಶಿವಲಿಂಗಾರ್ಚನೆ ಮಾಡುತ್ತಿರುವ ಜಟಾ ಕೌಪೀನಧಾರಿ ಕಾಳಾಮುಖ ಯತಿ, ಅವನ ಹಿಂದೆ ಭಕ್ತಿಯಿಂದ ಕೈಮುಗಿದು ಕುಳಿತ ಶಿವ ಸಾಯುಜ್ಯ ಸೇರಿದ ಬಿಲ್ಗಾರ



ಹೊಸಮಕ್ಕಿ ಹಾಳುಗದ್ದೆ ವೀರಗಲ್ಲು–ಮಲ್ಲೇಶ್ವರ

ವೀರ ಮತ್ತು ಶಿವಗಣ ನಂದೀಶ್ವರ, ಶಿವಲಿಂಗದ ಮುಂದೆ ಹಸು-ಕರು ಹಾಗೂ ಶಿವಲಿಂಗದ ಊರ್ಧ್ವ ಭಾಗದಲ್ಲಿ ದೇವಾಲಯದ ಗೋಪುರಾಕೃತಿಯ ವಿಶಿಷ್ಟ ಗೋಪುರ ಸೂರ್ಯ-ಚಂದ್ರರ ಚಿತ್ರಣವಿದೆ.

೩. ಭರನಹಾಳಿಯ ವೀರಗಲ್ಲು

ಸಂಸೆ ಗ್ರಾಮದ ಸೋಮಾವತಿ ನದಿಯ ಬಲದಂಡೆಯಲ್ಲಿರುವ 'ಬಾಳಗಲ್ಲು' ಪರಿಸರದ ಮರಳೀಮನೆ ಪಾಲಯ್ಯ'ಅವರಿಗೆ ಸೇರಿದ 'ಭರನಹಾಳಿ' ಅಡಿಕೆ ತೋಟದಲ್ಲಿ 'ವೀರಗಲ್ಲುಗಣ್ಣ ಎಂದು ಕರೆಯುವ ಜಾಗದಲ್ಲಿ ವೀರಗಲ್ಲೊಂದು ದೊರೆತಿದ್ದು, ಅದು ಭಗ್ನವಾಗಿ ಎರಡು ಭಾಗವಾಗಿದೆ. ಭಗ್ನವಾದ ಸಣ್ಣ ಭಾಗದ ಕೆಳಫಲಕದಲ್ಲಿ ಖಡ್ಗಧಾರಿ ಸೈನಿಕರು ರಾಜಪ್ರಮುಖನನ್ನೋ ಅಥವಾ ದಂಡನಾಯಕನನ್ನೋ ಪಲ್ಲಕ್ಕಿಯಲ್ಲಿ ಯುದ್ಧಕ್ಕೆ ಕರೆದೊಯ್ಯುತ್ತಿರುವ ಚಿತ್ರಣವಿದೆ. ವಿಶೇಷವೆಂದರೆ ಈ ಕೆಳಫಲಕದ ತಳಭಾಗದಲ್ಲಿ ಖಾಲಿ ಜಾಗವಿದ್ದರೂ ವೀರರ ಹೋರಾಟದ ಚಿತ್ರಣ ಕೆತ್ತಲ್ಪಟ್ಟಿಲ್ಲ. ಭಗ್ನವಾಗಿರುವ ಎರಡನೇ ದೊಡ್ಡ ಭಾಗದಲ್ಲಿ ಮೂರು ಫಲಕಗಳಿದ್ದು ಕೆಳಗಿನ ಫಲಕದಲ್ಲಿ ಯಾವುದೋ ಗಡಿ ಕಾಳಗದಲ್ಲಿ ಹೋರಾಡಿ ಮಡಿದ ಖಡ್ಗಧಾರಿ ವೀರನನ್ನು ನಾಲ್ವರು ಅಪ್ಸರೆಯರು ತಮ್ಮ ತೋಳಿನಾಸರೆಯಲ್ಲಿ ದೇವಲೋಕಕ್ಕೆ ಕರೆದೊಯ್ಯುತ್ತಿರುವ ಚಿತ್ರಣವಿದೆ. ಮೇಲಿನ ಎರಡನೇ ಫಲಕದಲ್ಲಿ ತಪೋನಿರತರಾದ ಇಬ್ಬರು ಶಿವಗಣಗಳೊಂದಿಗೆ ಅಂಜಲಿಬದ್ಧನಾಗಿ ಕೈಲಾಸದಲ್ಲಿ ಕುಳಿತಿರುವ ವೀರನ ಹಿಂದೆ ಅವನ ಮಡದಿಯು ಕುಳಿತಿರುವ ಚಿತ್ರಣವಿದೆ. ವೀರಗಲ್ಲಿನ ಅರ್ಧ ಚಂದ್ರಾಕೃತಿಯ ಅಗ್ರ ಫಲಕದಲ್ಲಿ ಶಿವಲಿಂಗ ಪೂಜಾ ನಿರತನಾದ ಜಟಾಧಾರಿ ಕಾಳಾಮುಖ ಯತಿ ಅವನ ಹಿಂದೆ ಶಿವಗಣ ನಂದೀಶ್ವರ ಮತ್ತು ಕರುವಿಗೆ ಹಾಲುಣಿಸುತ್ತಿರುವ ಗೋಮಾತೆಯ ಚಿತ್ರಣ, ಶಿವಲಿಂಗದ ಮೇಲೆ ಎರಡೂ ಬದಿ ಸೂರ್ಯ - ಚಂದ್ರರ ಚಿತ್ರಣವಿದೆ.




ಭರನ ಹಾಳಿಯ ವೀರಗಲ್ಲು- ಬಾಳಗಲ್ಲು

ಕಾಳಾಮುಖ ಶೈವಸಂಪ್ರದಾಯದ ಶಾಸನರಹಿತವಾದ ಈ ಸ್ಮಾರಕ ಕಳಸ-ಕಾರ್ಕಳ ರಾಜ್ಯದ ದೊರೆಗಳಾಗಿದ್ದ ಭೈರವರಸರ ಆಡಳಿತ ಕಾಲದ್ದಾಗಿದೆ. ಹದಿನಾಲ್ಕು-ಹದಿನೈದನೇ ಶತಮಾನದ ಈ ವೀರಗಲ್ಲು ಯಾವುದೋ ಗಡಿ ಕಾಳಗದಲ್ಲಿ ನಾಡಿಗಾಗಿ ಹೋರಾಡಿ ಮಡಿದ ಖಡ್ಗವೀರನೊಬ್ಬನ ವೀರ ಮರಣದ ನಿಮಿತ್ತ ಅಂದಿನ ಆಳರಸರು ಪರೋಕ್ಷ ವಿನಯವಾಗಿ ಈ ವೀರಗಲ್ಲು ಪ್ರತಿಷ್ಠಾಪಿಸಿ ಪರಿಹಾರಾರ್ಥವಾಗಿ ವೀರನ ಪತ್ನಿ ಅಥವಾ ಪರಿವಾರದವರಿಗೆ 'ಬಾಳ್ಗಚ್ಚು' (ಉಂಬಳಿ)ವಾಗಿ ಭೂದಾನ ಮಾಡಿರಬಹುದೆಂದು ಊಹಿಸಬಹುದಾಗಿದೆ. ಈ ವೀರಗಲ್ಲು ದೊರೆತ ಪ್ರದೇಶವನ್ನು ಆದಿಯಿಂದಲೂ 'ಬಾಳಗಲ್ಲು' ಎಂದೇ ಗುರುತಿಸಿ ಕರೆಯುತ್ತಿರುವ ಹಿನ್ನೆಲೆಯಲ್ಲಿ ಭರನಹಾಳಿಯ ಈ ವೀರಗಲ್ಲಿನ ಖಡ್ಗಯೋಧನ ವೀರ ಮರಣದ ನಿಮಿತ್ತ ಪ್ರತಿಷ್ಠಾಪಿಸಿದ ಅಂದಿನ "ಬಾಳ್ + ಕಲ್ಲು" = ಬಾಳಗಲ್ಲು, ವೀರಗಲ್ಲಿನಿಂದಾಗಿಯೇ ಈ ಪ್ರದೇಶ ಅಂದಿನಿಂದ ಇಂದಿನವರೆಗೂ ಬಾಳಗಲ್ಲು ಎಂದು ಕರೆಯಲ್ಪಡುತ್ತಿರುವುದು ಈ ವೀರಗಲ್ಲಿನ ಹುತಾತ್ಮ ಅಮರ ವೀರನಿಗೆ ಸಲ್ಲಿಸುತ್ತಿರುವ ಗೌರವವೆಂದು ಹೆಮ್ಮೆಪಡಬೇಕಾಗಿದೆ.

೪. ಕಂಬ್ರಗೋಡು ವೀರಗಲ್ಲು

ಸಂಸೆ ಪಂಚಾಯಿತಿ ಕಳಕೋಡು ಗ್ರಾಮದಲ್ಲಿ ಶ್ರೀ ಕಲಾನಾಥೇಶ್ವರಿ ದೇವಾಲಯದ ಪರಿಸರದ ಪ್ರಭಾಕರ ಕೃಷ್ಣೇಗೌಡ, ರವರ ಹಾಳು ಬಿದ್ದ ಗದ್ದೆಯಲ್ಲಿ ಭಗ್ನವಾಗಿ ಎರಡು ತುಂಡಾದ ಬಿಳಿ ಕಣಶಿಲೆಯ ವೀರಗಲ್ಲೊಂದು ದೊರೆತಿದ್ದು ಇದು ಮೂರು ಫಲಕ ಹೊಂದಿದೆ. ಭಗ್ನವಾದ ಚಿಕ್ಕ ತುಂಡು ಭಾಗದ ಕೆಳಫಲಕದಲ್ಲಿ ಬಿಲ್ಗಾರ ಯೋಧನ ಮುಂದೆ ನಿಂತ

ಖಡ್ಗಧಾರಿ ಯೋಧರಿಬ್ಬರು ಪರಸ್ಪರ ಕಾದಾಡುತ್ತಿರುವ ಚಿತ್ರಣವಿದೆ. ಭಗ್ನವಾದ ದೊಡ್ಡ ಭಾಗದ ತ್ರುಟಿತವಾದ ಕೆಳಫಲಕದಲ್ಲಿ ಖಡ್ಗ ಯದ್ಧದಲ್ಲಿ ಹೋರಾಡಿ ಮಡಿದ ವೀರ ತಪೋನಿರತರಾದ ಇಬ್ಬರು ಶಿವಗಣಗಳೊಂದಿಗೆ ಕೈಲಾಸದಲ್ಲಿ ಕರ ಮುಗಿದು ಕುಳಿತಿರುವ ಚಿತ್ರಣವಿದೆ, ವೀರಗಲ್ಲಿನ ತ್ರಿಕೋನ ಅರ್ಧ ಚಂದ್ರಾಕೃತಿಯ ಅಗ್ರ ಫಲಕದಲ್ಲಿ ಶಿವಲಿಂಗ ಪೂಜಾ ನಿರತನಾದ ಕಾಳಾಮುಖ ಯತಿ, ಮುಂದೆ ಹಸು–ಕರು, ಹಿಂದೆ ನಂದಿ, ಶಿವಲಿಂಗದ ಮೇಲೆ ಸೂರ್ಯ ಚಂದ್ರರ ಚಿತ್ರಣವಿದೆ.


ಕಂಬ್ರಗೋಡು ವೀರಗಲ್ಲು– ಕಳಕೋಡು

ಕಳಸ ನಾಡಿನಲ್ಲಿ ಆಡಳಿತ ನಡೆಸಿದ ಸಾಂತರರು, ನಂತರ ಬಂದ ಭೈರವರಸರ ಕಾಲದಲ್ಲಿ ನೆರೆಯ ರಾಜ್ಯವಾಗಿದ್ದ 'ಬಂಗವಾಡಿ(ಬಂಗಾಡಿ)ಯಲ್ಲಿ' 'ಬಂಗರಸ ದೊರೆ'ಗಳು ಆಡಳಿತ ನಡೆಸುತ್ತಿದ್ದರು, ಈ ಬಂಗವಾಡಿ ರಾಜ್ಯದ ಗಡಿ ಕಳಸ ರಾಜ್ಯಕ್ಕೆ ಸೇರಿದ 'ಸಂಸೆ ಮೂರುನಾಡು' ಗಡಿಗೆ ಹೊಂದಿಕೊಂಡೇ ಇದ್ದಿದ್ದರಿಂದ ಎರಡೂ ರಾಜ್ಯದ ದೊರೆಗಳ ಪರಸ್ಪರ ಭಿನ್ನಾಭಿಪ್ರಾಯ, ಗಡಿ ವಿವಾದಗಳ ನಿಮಿತ್ತ ಎರಡು ರಾಜ್ಯದ ಗಡಿಕಾಳಗ ಆಗಾಗ ನಡೆಯುತ್ತಿದ್ದವು – ಈ ಕಾಳಗಗಳಲ್ಲಿ ಕಳಸ ರಾಜ್ಯದ ಸಂಸೆ ಮೂರ್ನಾಡಿನ ಪರವಾಗಿ ಹೋರಾಡಿ ಮಡಿದ ವೀರಯೋಧರಿಗೆ ನಾಡಿನ ದೊರೆಗಳು ಅಥವ ಪ್ರಭುಗಳು ಈ ಹುತಾತ್ಮ ವೀರರ ಶೌರ್ಯ, ಪರಾಕ್ರಮದ ಸ್ಮಾರಕವಾಗಿ ವೀರಗಲ್ಲುಗಳನ್ನು ಸ್ಥಾಪಿಸಿ, ಯೋಧರ ಸ್ಮರಣೆ ಆಚಂದ್ರಾರ್ಕವಾಗಿರಲೆಂದು ಗಡಿಕಾಳಗದ ಈ ನಾಲ್ಕು ಸ್ಮಾರಕಗಳನ್ನು ಸ್ಥಾಪಿಸಿದ್ದಾರೆಂದು ತಿಳಿಯಬಹುದು.

ಸಮಾರೋಪ: ಕಳಸ ರಾಜ್ಯದ ದೊರೆಗಳಾಗಿದ್ದ ಕಳಸ ಸಾಂತರರು ಮತ್ತು ಭೈರವರಸರು ಮೂಲತಃ ಜೈನಧರ್ಮೀಯರಾದರೂ ಪ್ರಜಾಧರ್ಮವಾಗಿದ್ದ ಶೈವ ಪಂಥವನ್ನೂ ಪೋಷಿಸುವ ಮೂಲಕ ಕಳಸ ಸೀಮೆಯಲ್ಲಿ ರಾಜಧರ್ಮಕ್ಕಿಂತ ಪ್ರಜಾಧರ್ಮವೇ ಹಿರಿದು ಎಂಬಂತೆ 'ಧರ್ಮ ಸಮನ್ವಯ' ದ ಆಡಳಿತ ನಡೆಸಿದ್ದಾರೆ. ಕುದುರೆಮುಖದ ಲಕ್ಯಾ ಅಣೆಕಟ್ಟಿನ ಮುಳುಗಡೆ ಪ್ರದೇಶ ಹಾಗೂ ಲಕ್ಯಾ ನದಿಯ ಉಗಮಸ್ಥಾನವಾದ 'ಮಲ್ಲೇಶ್ವರ' ದ ಊರಿನ ಸ್ಥಳನಾಮವೇ ಸೂಚಿಸುವಂತೆ 'ಪ್ರಾಚೀನ ಮಲ್ಲೇಶ್ವರ' ಶೈವ ಪಂಥದ ಕಾಳಾಮುಖರ ಕೇಂದ್ರಸ್ಥಾನವಾಗಿದ್ದಿರಬೇಕು. ಇಂದಿಗೂ ಕುದುರೆಮುಖದ ಭದ್ರಾನದಿ ತೀರದಲ್ಲಿರುವ 'ಮಲ್ಲೇಶ್ವರ' ಎಂಬ ಹೆಸರಿನ ಪ್ರಾಚೀನ ಶಿವಲಿಂಗ ಹಾಗೂ ಸಂಸೆ 'ಬಾಳಗಲ್ಲು' ನಲ್ಲಿ ಸೋಮಾವತಿ ನದಿ ತೀರದಲ್ಲಿರುವ ದೇವಾಲಯದ 'ಶ್ರೀ ಎಡಮುರೇಶ್ವರ' ಎಂಬ ಶೈವಪಂಥದ ದೈವಗಳು ಇಂದಿಗೂ ಸಂಸೆ ಮೂರ್ನಾಡಿನ ಜನರಿಂದ ಭಕ್ತಿಯಿಂದ ಆರಾಧಿಸಲ್ಪಡುತ್ತಿರುವುದರಿಂದ ಹಾಗೂ ವೀರಗಲ್ಲುಗಳ ಫಲಕದಲ್ಲಿರುವ ಕಾಳಾಮುಖ ಶೈವ ಪಂಥದ ಲಾಂಛನಗಳಾದ ಶಿವಲಿಂಗ, ಲಿಂಗಪೂಜಾನಿರತನಾದ ಜಟಾಧಾರಿ ಕಾಳಾಮುಖ ಅರ್ಚಕರ ಶಿಲ್ಪಗಳ ಹಿನ್ನೆಲೆಯಲ್ಲಿ ಕಾಳಾಮುಖ ಶೈವಪಂಥ ಹನ್ನೆರಡನೇ ಶತಮಾನದ ಸಾಂತರ ದೊರೆಗಳ ಕಾಲದಿಂದಲೂ ಪ್ರಬಲವಾಗಿತ್ತು ಎಂದು ತಿಳಿದುಬರುತ್ತದೆ. ಇಲ್ಲಿ ದೊರೆತಿರುವ ಹೆಚ್ಚಿನ ವೀರಗಲ್ಲುಗಳ ಅಗ್ರಭಾಗದ ಶಿವಲಿಂಗದ ಮೇಲೆ ದೇವಾಲಯದ ಗೋಪುರಾಕಾರದ ಚಿತ್ರಣವಿರುವುದು ವಿಶೇಷವಾಗಿದೆ. ಇವಲ್ಲದೆ, ನೆಲ್ಲಿಬೀಡು ಕೆಳಮನೆಯಲ್ಲಿ ದೊರೆತ ಜಿಂಕೆ ಬೇಟೆ ವೀರಗಲ್ಲಿನ 'ಸಮುದ್ರಮಥನ'ದ ಸನ್ನಿವೇಶದ ಹೋಲಿಕೆಯ ಚಿತ್ರಣವನ್ನು ವಿಶೇಷವಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

---

* ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಸರ್ವಶ್ರೀ ಮಹಾವೀರಪ್ರಭು ಕಳಸ, ವಿನಯಜೈನ್ ಮುದ್ದನಪಾಲು, ಅಣ್ಣು ಕಚ್ಚಿಮಕ್ಕಿ, ನಿರಂಜನಸೆಟ್ಟಿ ಬಸರೀಕಲ್ಲು, ಬಿ. ಪೌದನ್‌ನೆಲ್ಲಿಬೀಡು, ಶ್ರೀಪಾಲಯ್ಯ ಮರಳೀಮನೆ, ಸುಕುಮಾರ್ ದೇವರಮನೆ, ಷೇಣಕುಮಾರ್, ಆಲೆಕೊಟ್ಟಿಗೆ, ವಿದ್ಯಾನಂದ ಆಲೆಕೊಟ್ಟಿಗೆ, ಸರಿತಾ ಜಗದೀಶ್, ಸುಧನ್ವ ಚಂದ್ರೇಗೌಡ, ಜಾಂಬಳೆ, ಸುಬ್ರಹ್ಮಣ್ಯಆಚಾರ್, ಹೊರನಾಡು ಹಾಗೂ ಕಳಕೋಡು ಗ್ರಾಮಸ್ಥರು, ಮತ್ತು ಮಾರ್ಗದರ್ಶನ ನೀಡಿದ ಇತಿಹಾಸ ವಿದ್ವಾಂಸರಾದ ಆರ್. ಶೇಷ ಶಾಸ್ತ್ರಿ, ಬೆಂಗಳೂರು, ಎಂ.ಜಿ. ಮಂಜುನಾಥ್, ಮೈಸೂರು ಮತ್ತು ಎಂ. ಮಂಜುನಾಥ್, ಗುಂಡ್ಲುಪೇಟೆ ಅವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

◆◆

೩೦

ಹೊನ್ನೂರಸ್ವಾಮಿ ಹೆಚ್.

ಕಳೆದ ಶತಮಾನದ ಹುಲಿಬೇಟೆ ಸ್ಮಾರಕ ಶಾಸನ

ಪ್ರಾಚೀನ ಕಲೆ ಹಾಗೂ ಜೀವನ ವಿಧಾನಗಳಲ್ಲೊಂದಾದ ಬೇಟೆಯ ವಿಚಾರವನ್ನು ಕಾವ್ಯಗಳಲ್ಲಷ್ಟೇ ಅಲ್ಲದೆ ಸ್ಮಾರಕಶಿಲ್ಪಗಳಲ್ಲೂ ಕೂಡ ಗಮನಿಸಬಹುದು. ದುಷ್ಟ ಮೃಗಗಳನ್ನು ಬೇಟೆಯಾಡಲು ಹೋಗಿ ಮಡಿದ ವೀರರ ಸ್ಮಾರಕಶಿಲ್ಪಗಳು ನಮಗೆ ದೊರೆಯುತ್ತವೆ. ಈ ರೀತಿ ಮರಣವನ್ನು ಹೊಂದಿದವರೂ ಕೂಡ ವೀರರು ಎಂದು ನಮ್ಮ ಪ್ರಾಚೀನ ಜನ ನಂಬಿದ್ದರು. ಹೀಗಾಗಿ ಇವರಿಗೂ ಸ್ಮಾರಕಶಿಲ್ಪಗಳನ್ನು ನೆಡುವ ರೂಢಿ ಬೆಳೆದು ಬಂದಿತು.


ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಹುಲಿಯ ಬೇಟೆ ಪ್ರಚಲಿತವಾಗಿತ್ತು. ಗುಪ್ತರ ಕಾಲದ ಕೆಲವಾರು ನಾಣ್ಯಗಳ ಮೇಲೆ ಹುಲಿಯೊಡನೆ ಹೋರಾಡುತ್ತಿರುವ ಚಿತ್ರಣಗಳಿವೆ. ಒಂದು ಚಿನ್ನದ ನಾಣ್ಯದಲ್ಲಿ ಸಮುದ್ರಗುಪ್ತನು ಹುಲಿಯನ್ನು ಕೊಲ್ಲುತ್ತಿರುವಂತೆ ತೋರಿಸಲಾಗಿದೆ. ಇದರಲ್ಲಿ 'ವ್ಯಾಘ್ರ ಪರಾಕ್ರಮ' ಎನ್ನುವ ಬ್ರಾಹ್ಮೀ ಲಿಪಿಯ ಸಂಸ್ಕೃತ ಬರಹವಿದೆ.[೧] ಭಾರತಕ್ಕೆ ಬಂದಿದ್ದ ಫ್ರಾನ್ಸ್ ಪ್ರವಾಸಿಗ ಫಾನ್ಸುವಾ ಪಿರಾರ್ದ್‌ದೆ ಲವಲ್ ಎಂಬುವನು ಹೀಗೆ ಬರೆಯುತ್ತಾನೆ. 'ಈ ದೇಶದಲ್ಲಿ ಹುಲಿಗಳು ಹೆಚ್ಚು, ಅವುಗಳನ್ನು ನಾಯರುಗಳು ಬೇಟೆಯಾಡುತ್ತಾರೆ. ಯಾವ ಆಯುಧಗಳೂ ಇಲ್ಲದೆ ನಾಯರುಗಳು ಹುಲಿಗಳ ಮೇಲೆ ಬಿದ್ದು, ಅವನ್ನು ಕೊಂದದ್ದನ್ನು ನಾನು ನೋಡಿದ್ದೇನೆ. ಕೆಲವರು ತಮ್ಮ ಮೈಕೈ ಪರಚಿಸಿಕೊಂಡು ರಕ್ತ ಸುರಿಸುತ್ತಾ ಕೊಂದ ಹುಲಿಯನ್ನು ರಾಜನ ಮುಂದಕ್ಕೆ ಎಳೆದುಕೊಂಡು ಬಂದದ್ದನ್ನು ನೋಡಿದ್ದೇನೆ' ಎಂದು ಹೇಳುತ್ತಾನೆ.[೨] ಈ ಅಂಶಗಳು ಹುಲಿಯ ಬೇಟೆಯ ವಾಸ್ತವಿಕ ಚಿತ್ರಣಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಹುಲಿಯನ್ನು ಬೇಟೆಯಾಡುವವನು ನಿಜವಾಗಿಯೂ ಬಹಳ ಧೈರ್ಯಶಾಲಿಯಾಗಿರಬೇಕು. ಹಂದಿಯನ್ನು ಕೊಲ್ಲುವಷ್ಟು ಸುಲಭವಾಗಿ ಹುಲಿಯನ್ನು ಕೊಲ್ಲಲು ಸಾಧ್ಯವಿಲ್ಲ. ಅದು ಮನುಷ್ಯನಿಗಿಂತಲೂ ಬಲಿಷ್ಠವಾದ ಪ್ರಾಣಿ. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿ ಮಡಿದ ವೀರರ ಹಲವು ಸ್ಮಾರಕಶಿಲ್ಪಗಳು ಈವರೆಗೆ ಕಂಡುಬಂದಿವೆ. ಪ್ರಸ್ತುತ ಲೇಖನವು ಹುಲಿಬೇಟೆಯನ್ನು ಕುರಿತಾಗಿದ್ದರೂ ಶಾಸನೋಕ್ತವಾಗಿ ವಿಶೇಷ ಮಾಹಿತಿಯನ್ನು ಒದಗಿಸುತ್ತದೆ.

ಕ್ಷೇತ್ರಧ್ಯಯನದ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕು ದಾಗಿನಕಟ್ಟೆ ಗ್ರಾಮದ ಹೊರವಲಯದ ರಸ್ತೆಯ ತಿರುವಿನ ಎಡಬದಿಯಲ್ಲಿ ಈ ಅಪ್ರಕಟಿತ ಸ್ಮಾರಕಶಿಲ್ಪವು ಕಂಡುಬಂದಿದೆ. ಜೆಸಿಬಿಯ ರಸ್ತೆ ಕಾರ್ಯದಿಂದ ತ್ರುಟಿತಗೊಂಡಿದೆ. ಈ ಸ್ಮಾರಕಶಿಲ್ಪವು ಶಾಸನ ಪಾಠ ಮತ್ತು ಶಿಲ್ಪದ ದೃಷ್ಟಿಯಿಂದಲೂ ಗಮನಸೆಳೆಯುತ್ತದೆ.

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಮತ್ತು ಪುರಾತತ್ವ ಅಧ್ಯಯನ
ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-೫೭೭೦೦೨
ಮೊ: ೮೮೬೭೯ ೬೪೯೪೮

ಶಾಸನ ಪಾಠ



೧೯೩೮ನೇ ಇಸವಿ ಮಾ----------

ಚನ್ನಗಿರಿ ತಾಲ್ಲೂಕು ದಾಗಿನಕಟ್ಟೆ ವಾ(ಸಿ)

ಕಜಾಕಿ ದೇವರಹಳ್ಳಿ ಕೆಂಪರಂಗಪ್ಪ(ನ)

(ಮ)ಗ ಸಣ್ಣರಂಗಪ್ಪನು ಹುಲಿಯ ಬಾ---

ಸ್ಮಾರಕದಲ್ಲಿ ಈ ನಾಲ್ಕು ಸಾಲಿನ ಪಾಠವಿದೆ. ಮೊದಲ ಸಾಲಿನಲ್ಲಿ ಮೂರು ಪದಗಳಿವೆ, ಮೂರನೇ ಪದದಲ್ಲಿ 'ಮಾ' ಅಕ್ಷರ ಮಾತ್ರ ಕಂಡುಬರುತ್ತಿದ್ದು ಉಳಿದ ಅಕ್ಷರಗಳು ಸವೆದಿವೆ. ಇಲ್ಲಿ ಘಟನೆ ನಡೆದ ಕಾಲವನ್ನು ಕ್ರಿ.ಶ. ೧೯೩೮ನೇ ಇಸವಿ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಎರಡನೇ ಸಾಲಿನಲ್ಲಿ ನಾಲ್ಕು ಪದಗಳಿದ್ದು, ನಾಲ್ಕನೇ ಪದದಲ್ಲಿ 'ಸಿ' ಅಕ್ಷರವು ಸವೆದಿದೆ. ಇಲ್ಲಿ ಹೋರಾಟದಲ್ಲಿ ಮಡಿದ ವೀರ ಚನ್ನಗಿರಿ ತಾಲೂಕು ದಾಗಿನಕಟ್ಟೆ ವಾಸಿ ಎಂಬುದು ತಿಳಿಯುತ್ತದೆ. ಮೂರನೇ ಸಾಲಿನಲ್ಲಿ ಮೂರು ಪದಗಳಿವೆ. ಮೂರನೇ ಪದದ ಕೊನೆಯ 'ನ' ಅಕ್ಷರವು ಕಾಣುವುದಿಲ್ಲ. ಈ ಸಾಲಿನಲ್ಲಿ ಮಡಿದ ವೀರನ ತಂದೆ ಕಜಾಕಿ ದೇವರಹಳ್ಳಿ ಕೆಂಪರಂಗಪ್ಪನೆಂಬುವುದು ಸ್ಪಷ್ಟವಾಗುತ್ತದೆ. ನಾಲ್ಕನೇ ಸಾಲಿನಲ್ಲಿ ನಾಲ್ಕು ಪದಗಳಿವೆ. ಒಂದನೇ ಪದದ ಮೊದಲ 'ಮ' ಅಕ್ಷರ ಹಾಗೂ ನಾಲ್ಕನೇ ಪದದ ಕೊನೆಯ ಅಕ್ಷರಗಳು ಸವೆದಿವೆ. ಇಲ್ಲಿ ಕೆಂಪರಂಗಪ್ಪನ ಮಗ ಸಣ್ಣರಂಗಪ್ಪನು ಹುಲಿಯ ಬಾಯಿಗೆ ತುತ್ತಾಗಿ ಮಡಿದಿರುವುದು ತಿಳಿದುಬರುತ್ತದೆ.

ಒಟ್ಟಾರೆ ಶಾಸನದ ಸಾರವನ್ನು ಹೀಗೆ ಗ್ರಹಿಸಬಹುದು. ೧೯೩೮ನೇ ವರ್ಷದಂದು ಚನ್ನಗಿರಿ ತಾಲ್ಲೂಕು ದಾಗಿನಕಟ್ಟೆ ವಾಸಿ ಕಜಾಕಿ ದೇವರಹಳ್ಳಿ ಕೆಂಚರಂಗಪ್ಪನ ಮಗ ಸಣ್ಣರಂಗಪ್ಪನು ಹುಲಿಯ ಬಾಯಿಗೆ ತುತ್ತಾಗಿ ಮಡಿದ ಸಂಬಂಧ ಈ ಸ್ಮಾರಕವನ್ನು ನೆಡಲಾಗಿದೆ. ಶಾಸನ ಉಲ್ಲೇಖಿಸುವ ಕಜಾಕಿ ಎಂಬುದು ಪ್ರಾಯಶಃ ವೀರನ ಕುಲ ಅಥವಾ ವಂಶ ಸೂಚಕ ಪದವಾಗಿರಬೇಕು. ದೇವರಹಳ್ಳಿ ಈಗಿನ ಚನ್ನಗಿರಿ ತಾಲೂಕಿನಲ್ಲೇ ಕಂಡುಬರುವ ಗ್ರಾಮವಾಗಿದೆ. ವೀರನ ತಂದೆಯ ಹೆಸರಿನೊಂದಿಗೆ ಈ ಗ್ರಾಮ ಉಲ್ಲೇಖವಾಗುವುದರಿಂದ ಬಹುಶಃ ವೀರನ ತಂದೆ ಅಥವಾ ಅವರ ಪೂರ್ವಜರ ಮೂಲ ದೇವರಹಳ್ಳಿ ಇರಬಹುದು. ಯಾವುದೋ ಕಾಲದಲ್ಲಿ ಅವರು ದಾಗಿನಕಟ್ಟೆ ಗ್ರಾಮಕ್ಕೆ ಬಂದು ನೆಲೆಸಿರುವುದು ತೋರುತ್ತದೆ.

ಸ್ಮಾರಕವನ್ನು ಬಳಪದ ಕಪ್ಪು ಶಿಲೆಯಲ್ಲಿ ಎರಡು ಹಂತದಲ್ಲಿ ಕಂಡರಿಸಿದೆ. ಕೆಳಭಾಗದ ಹಂತದಲ್ಲಿ ಶಾಸನ ಪಾಠವಿದ್ದು, ಮೇಲಿನ ಭಾಗದಲ್ಲಿ ವೀರ ಮತ್ತು ಹುಲಿಯನ್ನು ಚಿತ್ರಿಸಲಾಗಿದೆ. ಎತ್ತರ ನಿಲುವನ್ನು ಹೊಂದಿರುವ ವೀರನು ತನ್ನ ಬಲಗಾಲು ಮತ್ತು ಬಲಗೈಯನ್ನು ಮುಂದೆಮಾಡಿದ್ದಾನೆ. ಬಲಗೈಯಲ್ಲಿ ಹಿಡಿದಿರುವ ಕುಡುಗೋಲನ್ನು ಮೇಲ್ಮುಖವಾಗಿ ಹಿಡಿದಿದ್ದಾನೆ. ತಲೆಯ ಮೇಲೆ ರುಮಾಲು ಸುತ್ತಿದ್ದಾನೆ. ಇಲ್ಲಿ ವೀರನು ಪಲಾಯನಗೈಯುತ್ತಿರುವಂತೆ ತೋರಿಸಲಾಗಿದೆ. ದೈತ್ಯವಾದ ಹುಲಿ ವೀರನ ಬೆನ್ನೇರಿರುವಂತೆ ಚಿತ್ರಿಸಲಾಗಿದೆ. ಬಹುಶಃ ವೀರನು ಹಸು ಅಥವಾ ಕುರಿ, ಮೇಕೆಗಳನ್ನು ಮೇಯಿಸುವುದಕ್ಕೋ, ಇಲ್ಲವೇ ಬೇರೆ ಕೆಲಸದ ನಿಮಿತ್ತ ಗ್ರಾಮದ ಸನಿಹವಿರುವ ಬೆಟ್ಟಕ್ಕೆ ಬಂದು ಹುಲಿ ಬಾಯಿಗೆ ತುತ್ತಾಗಿರುವುದು ಕಂಡುಬರುತ್ತದೆ. ಗ್ರಾಮದ ಹತ್ತಿರವಿರುವ ಕುರುಚಲು ಗಿಡಮರಗಳ ಬೋಳುಬೆಟ್ಟವು ಆ ಕಾಲದಲ್ಲಿ ಹುಲಿ ಇದ್ದಿರುವಿಕೆಯನ್ನು ಸಾಕ್ಷೀಕರಿಸುತ್ತದೆ. ಒಟ್ಟಾರೆ ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ನಡೆದಿರುವ ಘಟನೆಯ ಫಲವಾಗಿ ಹಾಕಿಸಿರುವ ಈ ಶಿಲ್ಪವು ತೀರಾ ಇತ್ತೀಚಿನ ಸ್ಮಾರಕವಾಗಿದೆ.

ಅಡಿಟಿಪ್ಪಣಿಗಳು

೧. ನರಸಿಂಹಮೂರ್ತಿ ಎ.ವಿ., ೨೦೦೮, ಭಾರತೀಯ ನಾಣ್ಯ ಪರಂಪರೆ, ಪು. ೬೬.

೨. ನಾಗೇಗೌಡ ಎಚ್.ಎಲ್., ೨೦೦೭, ಪ್ರವಾಸಿ ಕಂಡ ಇಂಡಿಯಾ, ಸಂ. ೩, ಪು. ೩೬೭.

೩೧

ರೇವಣಸಿದ್ದಯ್ಯ ಕೆ.

ಕುಣಿಗಲ್ ನಾಡಿನ ಹುಲಿಬೇಟೆಯ ವೀರಗಲ್ಲು ಶಿಲ್ಪಗಳು

ಬೇಟೆಗೆ ಸಂಬಂಧಿಸಿದಂತೆ ಹಂಪಿಯ ಮಹಾನವಮಿ ದಿಬ್ಬದ ಸುತ್ತಲೂ ಪ್ರಾಣಿ ಬೇಟೆಯ ಸನ್ನಿವೇಶವನ್ನು ಬಿಂಬಿಸುವ ಕೆತ್ತನೆಯ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಹಾಗೆಯೇ ವಿಜಯನಗರ ಸಾಮ್ರಾಜ್ಯದಲ್ಲಿ ಬೇಟೆ ಸಂಸ್ಕೃತಿಗೆ ಉತ್ತೇಜನವನ್ನು ನೀಡಲಾಗಿದ್ದು, ದೇವಾಲಯಗಳ ಭಿತ್ತಿಯ ಮೇಲೆ ಹಾಗೂ ಕಂಬಗಳ ಮೇಲೆ ಹಾಗೂ ನೀರಿನ ಪುಷ್ಕರಣಿಗಳ ಪಟ್ಟಿಕೆಗಳ ಮೇಲೆ ಕಾಡು ಪ್ರಾಣಿಗಳನ್ನು ಬೇಟೆಯಾಡುವ ಉಬ್ಬುಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಸಾಮ್ರಾಜ್ಯದ ಸೈನ್ಯದಲ್ಲಿ ಮ್ಯಾಸ ಬೇಡರು/ಬೇಡರ ಪಡೆ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇವರು ಬಿಲ್ಲು ವಿದ್ಯೆಯಲ್ಲಿ ಪರಿಣಿತಿ ಪಡೆದಿದ್ದು, ಬಿಡುವಿನ ವೇಳೆಯಲ್ಲಿ ಪ್ರಾಣಿಗಳ ಬೇಟೆಯಲ್ಲಿ ನಿರತರಾಗುತ್ತಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ "ಸೌಗಂಧಿಕಾ ಪರಿಣಯ" ಎಂಬ ಕೃತಿಯು ಬೇಟೆಯ ಬಗ್ಗೆ ಮಾಹಿತಿ ಒದಗಿಸುತ್ತದೆ. ಸುಗಂಧ ರಾಜನು ಮೃಗಯಾ ವಿಹಾರಕ್ಕೆ ಹೊರಟ ವರ್ಣನೆ, ಬೇಟೆಯಾಡುವುದರ ಬಗ್ಗೆ ಕವಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಾಹಿತಿ ನೀಡಿದ್ದಾರೆ. ಸಂಭ್ರಮ ಸಡಗರಗಳಿಂದ ಮೃಗಯಾ ವಿಹಾರಕ್ಕೆ ಹೊರಟ ಅರಸನು ಕಾಡನ್ನು ಪ್ರವೇಶಿಸುತ್ತಲೇ ತನ್ನ ಕಡೆಯವರಿಗೆ ತುಂಬಾ ನಿಶ್ಯಬ್ದವಾಗಿ ಮುಂದುವರಿಯುವಂತೆ ತಿಳಿಸುತ್ತಾನೆ. ವಾದ್ಯಗಳ ಧ್ವನಿಯನ್ನು ತಿಳಿದು ಮೃಗಗಳು ಓಡಿಹೋಗಬಹುದೆಂದು, ಕುದುರೆಗಳು ಕೆನೆದರೂ ಅವುಗಳ ಧ್ವನಿಯನ್ನು ತಿಳಿದ ಮೃಗಗಳು ಓಡಿಹೋಗಬಹುದೆಂದೂ ರಾಜನು ಅವುಗಳ ಬಾಯಿಗೆ ಕಟ್ಟುಗಳನ್ನು ಬಿಗಿಸುತ್ತಾನೆ. ಇಂಥ ಪ್ರಾಣಿ ಇಂಥ ಕಡೆ ಇರಬಹುದೆಂದು ಊಹಿಸುತ್ತಾನೆ. ಉದಾ: ಹುಲಿಗಳು ಕಡವೆಗಳನ್ನು ಕೊಂದು ತನ್ನ ಗುಹೆಯತ್ತ ಎಳೆದೊಯ್ಯುವಾಗ ಸುರಿದ ರಕ್ತದಿಂದ, ಹಂದಿಗಳು ತಮ್ಮ ಮುಸುಡಿಗಳಿಂದ ಗೆಡ್ಡೆ-ಗೆಣಸುಗಳನ್ನು ಅಗೆದು ತಿಂದು ಬಿಟ್ಟು ಹೋದುದರಿಂದ ತಿಳಿಯುತ್ತಿದ್ದರು. ಆನೆ, ಹಂದಿ, ಹುಲಿ, ಜಿಂಕೆ, ಮೊಲ, ಮೊಸಳೆ ಹಾಗೂ ಹಾವಿನ ಮೇಲೆ ಬೇಟೆ ನಡೆಯುತ್ತಿತ್ತು. ಕರ್ನಾಟಕದ ವೀರಗಲ್ಲುಗಳನ್ನು ಪರಿಶೀಲಿಸಿದಾಗ ಹೆಚ್ಚಾಗಿ ಕಾಡುಹಂದಿ ಮತ್ತು ಹುಲಿಯೊಡನೆ ಕಾದಾಡಿ/ ಹೋರಾಡಿ ಸತ್ತ ವೀರರ ವೀರಗಲ್ಲುಗಳು ದೊರೆಯುತ್ತವೆ.[೧]

ಹಿರಿಯ ಸಂಶೋಧಕರಾದ ಡಾ. ಆರ್. ಶೇಷಶಾಸ್ತ್ರಿಯವರು 'ಕರ್ನಾಟಕದ ವೀರಗಲ್ಲುಗಳು' ಎಂಬ ಕೃತಿಯಲ್ಲಿ ಬೇಟೆಯಾಡುವ ೭ ವಿಧಾನವನ್ನು ಈ ರೀತಿ ವಿಂಗಡಿಸಿದ್ದಾರೆ.

ಇತಿಹಾಸ ಸಂಶೋಧಕ
ಕುರುಪಾಳ್ಯ, ಬೇಗೂರು ಅಂಚೆ
ಕಸಬಾ ಹೋಬಳಿ, ಕುಣಿಗಲ್ ತಾಲ್ಲೂಕು
ತುಮಕೂರು-೫೭೨೧೩೦
ಮೊ: ೮೯೭೧೭ ೩೪೨೦೦

೧. ಅಶ್ವಿನಾ – ಕುದುರೆ ಮೇಲೆ ಕುಳಿತು ಬೇಟೆಯಾಡುವುದು.

೨. ಸಜಾಲ – ಬಲೆಯ ಮೂಲಕ ಬೇಟೆ.

೩. ಕಾಲ್ಸಾ – ತಂತ್ರಗಳನ್ನು, ಚಹರೆ ನೋಡಿ ಬೇಟೆ.

೪. ಯಾವಶ್ರೀ – ಪ್ರಾಣಿಗಳ ಚಹರೆ ನೋಡಿ ಬೇಟೆ.

೫. ಸಾಪ್ರೇಕ್ಷ – ಪ್ರಾಣಿಗಳನ್ನು ಗುರಿಮಾಡಿ ಬೇಟೆ.

೬. ಪಾದಪ್ರೇಕ್ಷ – ಪ್ರಾಣಿಗಳ ಕಾಲಿನ ಗುರುತು ಹಿಡಿದು ಬೇಟೆ.

೭. ಶ್ವಗಣಿಕಾ – ನಾಯಿಗಳನ್ನು ಪ್ರಾಣಿಗಳ ಮೇಲೆ ಬಿಟ್ಟು ಬೇಟೆ.

ಕನ್ನಡದ ಆದಿಕವಿ ಪಂಪನು ತನ್ನ "ವಿಕ್ರಮಾರ್ಜುನ ವಿಜಯ" ಕೃತಿಯಲ್ಲಿ ಬೇಟೆಯ ವಿಧಾನಗಳನ್ನು ತಿಳಿಸಿದ್ದಾನೆ. ಕಾಡು ಪ್ರಾಣಿಯನ್ನು ಆಕರ್ಷಿಸಲು ಚಿಗರೆಗಳನ್ನು ಕಟ್ಟಿ ಯಾವ ಸ್ಥಳದಿಂದ ಯಾವ ಅಸ್ತ್ರಗಳನ್ನು ಪ್ರಯೋಗಿಸಬೇಕು, ಯಾವ ಪ್ರಾಣಿಯ ಮೇಲೆ ಯಾವ ಅಸ್ತ್ರವನ್ನು ಯಾವಾಗ ಪ್ರಯೋಗಿಸಬೇಕು, ತಮ್ಮ ವಾಸನೆ ಪ್ರಾಣಿಗೆ ತಿಳಿಯಬಾರದೆಂಬ ಉದ್ದೇಶದಿಂದ ಗಾಳಿಗೆ ವಿರುದ್ಧವಾಗಿ ಹೋಗುವ ಇನ್ನಿತರೆ ಅಂಶಗಳು ಈ ಕೃತಿಯಿಂದ ತಿಳಿದುಬರುತ್ತದೆ.[೨]

ರಾಜಪರಿವಾರಕ್ಕೆ ಬೇಟೆಯೆಂಬುದು ಬಹಳ ಪ್ರಿಯವಾದ ಮತ್ತು ತಮ್ಮ ಶಸ್ತ್ರಪರಿಣಿತಿಯ ಪ್ರೌಢಿಮೆಯನ್ನು ಪ್ರಕಾಶಪಡಿಸುವ ಕ್ರೀಡೆಯಾಗಿತ್ತು. ಪ್ರಮುಖವಾಗಿ ಗಜ ಬೇಟೆ, ಹಂದಿ ಬೇಟೆ, ಹುಲಿ ಬೇಟೆ, ಜಿಂಕೆ ಬೇಟೆ, ಮೊಸಳೆ ಬೇಟೆ, ಹಾವಿನ ಬೇಟೆ, ಕರಡಿ ಬೇಟೆ ಇನ್ನೂ ಮುಂತಾದ ಪ್ರಾಣಿಗಳ ಮೇಲೆ ಬೇಟೆ ನಡೆಯುತ್ತಿತ್ತು. ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ವಿವಿಧ ರೀತಿಯ ಬೇಟೆಯ ಪದ್ಧತಿಗಳಲ್ಲಿ ಹುಲಿ ಬೇಟೆಯು ಒಂದಾಗಿದೆ. ಹುಲಿ ಬೇಟೆಯಾಡುವವನು ನಿಜವಾಗಿಯೂ ಧೈರ್ಯಶಾಲಿಯಾಗಿರಬೇಕು. ಹಂದಿಯನ್ನು ಕೊಲ್ಲುವಷ್ಟು ಸುಲಭವಾಗಿ ಹುಲಿಯನ್ನು ಕೊಲ್ಲಲು ಸಾಧ್ಯವಿಲ್ಲ. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿದ ವಿಷಯವನ್ನು ತಿಳಿಸುವ ಅನೇಕ ವೀರಗಲ್ಲುಗಳು ನಮ್ಮಲ್ಲಿ ದೊರೆಯುತ್ತವೆ. ವಿದೇಶಿ ಪ್ರವಾಸಿಗ "ಫ್ರಾನ್ಸು ವಾಪಿರಾಲ್ಡ್ ದೆಲವಲ್" ಎಂಬುವವರು ಕೇರಳದ ಬಗ್ಗೆ ಬರೆಯುತ್ತಾ ಈ ದೇಶದಲ್ಲಿ ಹುಲಿಗಳು ಹೆಚ್ಚು, ಇವುಗಳನ್ನು ನಾಯರ್‌ಗಳು ಬೇಟೆಯಾಡುತ್ತಾರೆ. ಯಾವ ಆಯುಧಗಳಿಲ್ಲದೆ ಹುಲಿಗಳ ಮೇಲೆ ಬಿದ್ದು ಅವನ್ನು ಕೊಂದುದ್ದನ್ನು ಕಣ್ಣಾರೆ ನೋಡಿದ್ದೇನೆ ಎಂದು ಹೇಳಿದ್ದಾರೆ.[೩] ಹಾಗೂ ಮನುಷ್ಯನಿಗಿಂತಲೂ ಬಲಿಷ್ಠವಾದ ಪ್ರಾಣಿ ಹುಲಿಯೊಡನೆ ಹೋರಾಡಿದ ವಿಷಯವನ್ನು ತಿಳಿಸುವ ಶಾಸನಸಹಿತ, ಶಾಸನರಹಿತ ಅನೇಕ ವೀರಗಲ್ಲುಗಳು ಕರ್ನಾಟಕದಲ್ಲಿಯೂ ದೊರೆತಿವೆ.

ತುಮಕೂರು ಜಿಲ್ಲೆಯ ಕುಣಿಗಲ್ ಪರಿಸರದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈಗಾಗಲೇ ಬೆಳಕಿಗೆ ಬಂದಿರುವಂತಹ ಹುಲಿ ಬೇಟೆಯ ವೀರಗಲ್ಲುಗಳ ಬಗ್ಗೆ ಚರ್ಚಿಸಲಾಗಿದೆ. ಕುಣಿಗಲ್ ಪರಿಸರದಲ್ಲಿ ದಟ್ಟವಾದ ಕಾಡು ಇಲ್ಲದಿದ್ದರೂ ಸಹ ಕಡಿಮೆ ಪ್ರಮಾಣದಲ್ಲಿ ಅರಣ್ಯ ಪ್ರದೇಶದಿಂದ ಕೂಡಿದೆ. ಬೆಟ್ಟಗುಡ್ಡಗಳಿಂದ ಸುತ್ತುವರೆದಿರುವುದರಿಂದ ಬೇಟೆ ಸಂಸ್ಕೃತಿಗೆ ಅನುಕೂಲವಾಗಿದೆ. ಕಾಡು ಪ್ರಾಣಿಗಳು ಗ್ರಾಮಗಳಿಗೆ ಪ್ರವೇಶಿಸಿ ಜನರಿಗೆ ಹಾಗೂ ಸಾಕುಪ್ರಾಣಿಗಳಿಗೆ ತೊಂದರೆಯನ್ನು ಕೊಡುತ್ತಿದ್ದು, ಕೃಷಿಕರ ಬೆಳೆಗಳನ್ನು ನಾಶಪಡಿಸುತ್ತಿದ್ದವು. ಇಂತಹ ಪ್ರಾಣಿಗಳ ತೊಂದರೆಯನ್ನು ತಾಳಲಾರದೆ ಅವುಗಳನ್ನು ಬೇಟೆಯಾಡುತ್ತಿದ್ದರು.

೧. ಚೋಳಸಂದ್ರದಲ್ಲಿರುವ ಹುಲಿಬೇಟೆಯ ವೀರಗಲ್ಲು ಶಿಲ್ಪ: ಕುಣಿಗಲ್ ತಾಲ್ಲೂಕಿನ ಎಡೆಯೂರು ಹೋಬಳಿಯ ಚೋಳಸಂದ್ರ ಗ್ರಾಮದ ಹೊರವಲಯದಲ್ಲಿರುವ ಜಲಜನಾಯಕನ ಗುಡಿಯಲ್ಲಿ ಹುಲಿ ಬೇಟೆಯ ವೀರಗಲ್ಲು ಶಿಲ್ಪ ಬೆಳಕಿಗೆ ಬಂದಿದೆ.[೪] ಈ ವೀರಗಲ್ಲು ಸುಮಾರು ೬ ಅಡಿ ಎತ್ತರ ಹಾಗೂ ೩ ಅಡಿ ಅಗಲ ವಿಸ್ತೀರ್ಣವಾಗಿದ್ದು, ೩ ಹಂತಗಳಿಂದ ಕೂಡಿದೆ. ಈ ವೀರಗಲ್ಲು ಶಿಲ್ಪವು ವಿಜಯನಗರ ಕಾಲಮಾನಕ್ಕೆ ಸೇರಿದ್ದು, ಗ್ರಾನೈಟ್ ಶಿಲೆಯನ್ನು ಬಳಸಿ ರಚಿಸಲಾಗಿದೆ. ೧ನೇ ಹಂತದಲ್ಲಿ ಸದೃಢವಾದ ಮೈಕಟ್ಟು, ತಲೆಯ ಮೇಲೆ ತುರುಬು/ಜಡೆ, ನೀಳವಾದ ಕಿವಿ ಹಾಗೂ ವೀರಗಚ್ಚೆಯನ್ನು ಧರಿಸಿರುವ ವೀರನೊಬ್ಬ ಹೆಬ್ಬುಲಿಯೊಂದಿಗೆ ಕಾದಾಡುತ್ತಿರುವ ದೃಶ್ಯವನ್ನು ಶಿಲ್ಪಿಯು ಆಕರ್ಷಕವಾಗಿ ಚಿತ್ರಿಸಿದ್ದಾನೆ. ವೀರನು ತನ್ನ ಎಡ ಕೈಯಲ್ಲಿ ಹುಲಿಯ ಕುತ್ತಿಗೆಯನ್ನು ಹಿಡಿದುಕೊಂಡು, ಬಲಗೈಯಲ್ಲಿ ಕಡಿತಲೆಯ ಹರಿತವಾದ ಆಯುಧವನ್ನು ಹಿಡಿದು ಹೆಬ್ಬುಲಿಯನ್ನು ಕೊಲ್ಲುತ್ತಿದ್ದಾನೆ. ೨ ಸಾಕು ನಾಯಿಗಳು ತನ್ನ ಒಡೆಯನ ಜೊತೆಗೆ ಹುಲಿಯೊಡನೆ ಕಾದಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ೨ನೇ ಹಂತದಲ್ಲಿ ವೀರನು ಹುಲಿಯೊಡನೆ ಹೋರಾಡಿ ವೀರಮರಣವನ್ನಪ್ಪಿದ್ದು, ಚಾಮರ

ಹಿಡಿದಿರುವ ಇಬ್ಬರು ದೇವಕನ್ಯೆಯರು ವೀರನ ತೋಳನ್ನು ಹಿಡಿದುಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ ಬಿಂಬಿಸಲಾಗಿದೆ. ೩ನೇ ಹಂತದಲ್ಲಿ ಸ್ವರ್ಗಸ್ಥನಾಗಿರುವ ವೀರನು ಇಬ್ಬರು ಸ್ತ್ರೀಯರ ನಡುವೆ ಧ್ಯಾನಾಸಕ್ತನಾಗಿ ಕುಳಿತಿರುವಂತೆ ಬಿಡಿಸಲಾಗಿದೆ. ಸ್ಥಳೀಯರು ಈ ಹುಲಿಬೇಟೆಯ ವೀರಗಲ್ಲು ಶಿಲ್ಪವನ್ನು ಜಲಧಿಗೆರೆಯ ಜಲಜನಾಯಕನ ಸ್ಮಾರಕ ಶಿಲ್ಪವೆಂದು ಪೂಜಿಸುವುದು ವಾಡಿಕೆಯಲ್ಲಿದೆ. ಈ ವೀರಗಲ್ಲನ್ನು ಸುತ್ತುವರಿದಂತೆ ೬ ಕಂಬಗಳಿಂದ ಕೂಡಿದ ತೆರೆದ ಮಂಟಪದ ರೀತಿಯಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ.



ಜಲಜನಾಯಕನ ಸ್ಮಾರಕ ದೇವಾಲಯ

೨. ಶ್ರೀಕ್ಷೇತ್ರ ಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯದ ಹಿಂಭಾಗದ ಅರಳೀಕಟ್ಟೆ ಮೇಲಿರುವ ಶಿಲ್ಪ

ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಎಡೆಯೂರು ಸಿದ್ಧಲಿಂಗೇಶ್ವರ ದೇವಾಲಯದ ಹಿಂಭಾಗದ ಅರಳೀಕಟ್ಟೆಯ ಕೆಳಗೆ ೩ ಹಂತಗಳಿಂದ ಕೂಡಿರುವ ೧ ಹುಲಿಬೇಟೆ ಶಿಲ್ಪವಿದೆ. ಶಾಸನ ತಜ್ಞರಾದ ಡಾ. ಡಿ.ವಿ.ಪರಮಶಿವಮೂರ್ತಿ ಅವರು "ಕನ್ನಡ ಶಾಸನ ಶಿಲ್ಪ" ಎಂಬ ಸಂಶೋಧನಾ ಕೃತಿಯಲ್ಲಿ ಈ ಶಿಲ್ಪದ ಬಗ್ಗೆ ವಿವರಿಸುತ್ತಾ ೨ ಹಂತಗಳಿಂದ ಕೂಡಿರುವ ಹುಲಿಬೇಟೆ ಶಿಲ್ಪ ಎಂಬುದಾಗಿ ಮಾಹಿತಿ ನೀಡಿದ್ದಾರೆ. ನಾನು ಇತ್ತೀಚೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಸ್ಥಳಕ್ಕೆ ಬೇಟಿ ನೀಡಿದಾಗ ಮತ್ತಷ್ಟು ಕುತೂಹಲಕಾರಿ ಸಂಗತಿಗಳು ಬೆಳಕಿಗೆ ಬಂದಿವೆ. ಭೂಮಿಯಲ್ಲಿ ಹುದುಗಿಹೋಗಿದ್ದ ಈ ಹುಲಿಬೇಟೆ ವೀರಗಲ್ಲಿನ ೧ನೇ ಹಂತ ಕಾಣುವಂತೆ ಹೊರತೆಗೆದು ಇರಿಸಿದ್ದಾರೆ. ಇದು ವಿಜಯನಗರ ಕಾಲಮಾನಕ್ಕೆ ಸೇರಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಸ್ಥಳೀಯವಾಗಿ ಸಿಗುವಂತಹ ಗ್ರಾನೈಟ್ ಶಿಲೆಯನ್ನು ವೀರಗಲ್ಲು ರಚನೆಗೆ ಬಳಸಲಾಗಿದೆ. ಈ ವೀರಗಲ್ಲಿನ ೧ನೇ ಹಂತದಲ್ಲಿ ವೀರನು ಈಟಿಯನ್ನು ಹಿಡಿದು ಶತೃವಿನೊಂದಿಗೆ ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ವೀರನ ಕಾಲಿನ ಕೆಳಗೆ ಒಬ್ಬ ಶತೃವಿನ ದೇಹ ಬಿದ್ದಿದೆ. ವೀರನ ಹಿಂಭಾಗದಲ್ಲಿ ೩ ಗೋವುಗಳು ಹಿಮ್ಮುಖವಾಗಿ ಬಾಲವನ್ನು ಮೇಲೆತ್ತಿಕೊಂಡು ಗಾಬರಿಯಿಂದ ಹೋಗುತ್ತಿವೆ. ೨ನೇ ಹಂತದಲ್ಲಿ ಹೋರಾಟವನ್ನು ಬಿಂಬಿಸಲು ಇಬ್ಬರು ವೀರರನ್ನು ಚಿತ್ರಿಸಲಾಗಿದೆ. ಎಡಪಾರ್ಶ್ವದಲ್ಲಿ ವೀರನೊಬ್ಬನು ತನ್ನ ಬಲಗೈಯಲ್ಲಿ ಚೂಪಾದ ಭರ್ಜಿ ಹಿಡಿದಿದ್ದರೆ, ಎಡಗೈಯಲ್ಲಿ ಕೈಮುಗಿದು ನಿಂತಿರುವ ವ್ಯಕ್ತಿಯ ತುರುಬು/ ಜಡೆಯನ್ನು ಹಿಡಿದು ನಿಂತಿರುವ ದೃಶ್ಯ ಕಂಡುಬರುತ್ತದೆ.



ಜಲಜನಾಯಕ ದೇವಾಲಯದ ಬಳಿಯ ಹುಲಿಬೇಟೆಯ ವೀರಗಲ್ಲು

ಬಹುಶಃ ಕೈಮುಗಿದು ನಿಂತಿರುವ ಈ ವ್ಯಕ್ತಿ ಗೋಕಳ್ಳನಾಗಿದ್ದು, ವೀರನು ಗೋಕಳ್ಳನ ಜಡೆಯನ್ನು ಹಿಡಿದು ಆಯುಧದಿಂದ ಶಿಕ್ಷಿಸುತ್ತಿರುವ ಬಗ್ಗೆ ಸ್ಪಷ್ಟವಾಗುತ್ತದೆ. ಅದೇ



ಹುಲಿಬೇಟೆ ವೀರಗಲ್ಲು

ಸಾಲಿನ ಬಲಪಾರ್ಶ್ವದಲ್ಲಿ ವೀರನೊಬ್ಬ ಬಲಗೈಯಲ್ಲಿ ಚೂಪಾದ ಕಡಿಮಚ್ಚು ಹಾಗೂ ಎಡಗೈಯಲ್ಲಿ ಚೂಪಾದ ಚಾಕು ಹಿಡಿದು ಹುಲಿಯೊಂದಿಗೆ ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ಈ ಮೇಲಿನ ದೃಶ್ಯವು ಹುಲಿಬೇಟೆಯ ಹೋರಾಟವನ್ನು ಸೂಚಿಸುತ್ತದೆ. ೩ನೇ ಹಂತದಲ್ಲಿ ಸ್ವರ್ಗಸ್ಥರಾಗಿರುವ ಇಬ್ಬರು ವೀರಯೋಧರು ಶಿವಲಿಂಗದ ಮುಂದೆ ಕೈಮುಗಿದು ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಶೈವಯತಿಯೊಬ್ಬ ಲಿಂಗಕ್ಕೆ ಪೂಜಿಸುತ್ತಿದ್ದು, ಮೇಲ್ಭಾಗದಲ್ಲಿ ಸೂರ್ಯ–ಚಂದ್ರನನ್ನು ಬಿಂಬಿಸಲಾಗಿದೆ. ಗೋಕಳ್ಳರಿಂದ ಗೋವುಗಳನ್ನು ರಕ್ಷಿಸಿ ವೀರಮರಣವನ್ನಪ್ಪಿದ ತುರುಗೋಳ್ ವೀರಗಲ್ಲು ಹಾಗೂ ಹುಲಿಯಿಂದ ಗೋವುಗಳನ್ನು ರಕ್ಷಣೆ ಮಾಡಲು ಹೋಗಿ ವೀರರು ಹುಲಿಯೊಡನೆ ಕಾದಾಡಿ ಸಾವನ್ನಪ್ಪಿರುವ ಉದ್ದೇಶದಿಂದ ಎರಡೂ ಸನ್ನಿವೇಶವನ್ನು ಒಂದೆ ವೀರಗಲ್ಲಿನಲ್ಲಿ ಚಿತ್ರಿಸಿರುವುದು ಬಹಳ ಅಪರೂಪದ ವೀರಗಲ್ಲು ಎಂದು ಹೇಳಬಹುದು. ಬಹುತೇಕ ತುಱುಗೊಳ್ ಕಾಳಗದಲ್ಲಿ ಮಡಿದವನೂ ಹಾಗೂ ಹುಲಿಯೊಡನೆ ಹೋರಾಟ ಮಾಡಿದವನೂ ಬೇರೆ ಬೇರೆ ವ್ಯಕ್ತಿಗಳಾಗಿದ್ದು ಒಂದೇ ಕಲ್ಲಿನಲ್ಲಿ ಎರಡೂ ವಿಭಿನ್ನ ಘಟನೆ ಚಿತ್ರಿಸಿರುವುದು ಅಪರೂಪವಾಗಿದೆ.

೩. ಹುಲಿಯೂರುದುರ್ಗದ ಹುಲಿಯೂರಮ್ಮ ದೇವಾಲಯದ ಮುಂಭಾಗದ ಅರಳೀಕಟ್ಟೆ ಬಳಿಯ ಶಿಲ್ಪ

ಹುಲಿಯೂರುದುರ್ಗದ ಹುಲಿಯೂರಮ್ಮ ದೇವಾಲಯದ ಮುಂಭಾಗದಲ್ಲಿನ ಅರಳೀಕಟ್ಟೆಯ ಮೇಲೆ ಹುಲಿಬೇಟೆಯ ವೀರಗಲ್ಲು ಶಿಲ್ಪವಿದೆ. ಎರಡು ಹಂತಗಳಿಂದ ಕೂಡಿವೆ. ಕೆಳಗಿನ ಹಂತದಲ್ಲಿ ಹುಲಿ ಮತ್ತು ಗೋವು ಮುಖಾಮುಖಿಯಾಗಿದ್ದು, ೨ನೇ ಹಂತದಲ್ಲಿ ಇಬ್ಬರು ವೀರರು ಆಯುಧಗಳನ್ನು ಹಿಡಿದು ಹೋರಾಡುತ್ತಿರುವಂತೆ ಬಿಂಬಿಸಲಾಗಿದೆ. ಈ ವೀರಗಲ್ಲು ನೈಸರ್ಗಿಕವಾಗಿ ನಶಿಸಿರುವ ಕಾರಣದಿಂದಾಗಿ ಕಾಲವಾಗಲಿ, ಹೆಚ್ಚಿನ ಮಾಹಿತಿ ಕಂಡುಬರುವುದಿಲ್ಲ. ಈ ವೀರಗಲ್ಲು ಶಿಲ್ಪದ ಪಕ್ಕದಲ್ಲಿ ದೇವಿಯ ಶಿಲ್ಪವೊಂದು ಕಂಡುಬರುತ್ತದೆ.

೪. ಜೋಡಿ ಹೊಸಹಳ್ಳಿ ಗ್ರಾಮದ ಮುನೇಶ್ವರ ಗುಡಿಯ ಬಳಿ ಇರುವ ಹುಲಿಬೇಟೆ ಶಿಲ್ಪ: ಹುತ್ರಿದುರ್ಗ ಹೋಬಳಿಯ ಯಲಗಲವಾಡಿ ಹ್ಯಾಂಡ್‌ಪೋಸ್ಟ್ ಕಡೆಯಿಂದ ಜೋಡಿ ಹೊಸಹಳ್ಳಿ ಗ್ರಾಮಕ್ಕೆ ತೆರಳುವ ಮಾರ್ಗದಲ್ಲಿ ರಸ್ತೆಯ ಎಡಭಾಗದಲ್ಲಿ ಚಿಕ್ಕದಾದ ಮುನೇಶ್ವರ ದೇವಾಲಯದ ಹಿಂಭಾಗದಲ್ಲಿ ಹುಲಿ ಬೇಟೆಯ ವೀರಗಲ್ಲು ಇದೆ.[೫] ೧ ಹಂತದಿಂದ ಕೂಡಿರುವ ಈ ವೀರಗಲ್ಲು ಶಿಲ್ಪವು ಸುಮಾರು ೩ ಅಡಿ ಎತ್ತರ ಹಾಗೂ ೨.೫ ಅಡಿ ಅಗವಾದ ವಿಸ್ತೀರ್ಣವಾಗಿದ್ದು, ಗ್ರಾನೈಟ್ ಶಿಲೆಯನ್ನು ಬಳಕೆ ಮಾಡಲಾಗಿದೆ. ವಿಜಯನಗರೋತ್ತರ ಕಾಲಮಾನವೆಂದು ಗುರ್ತಿಸಬಹುದಾಗಿದೆ. ವೀರನೊಬ್ಬ ಯಾವುದೇ ರಕ್ಷಣಾತ್ಮಕ ಆಯುಧಗಳ ಬಳಕೆ ಇಲ್ಲದೆ ನೇರವಾಗಿ ಹುಲಿಯೊಡನೆ ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನ ಹಿಂಭಾಗದಲ್ಲಿ ಇಬ್ಬರು ಸ್ತ್ರೀಯರಿದ್ದಾರೆ. ಒಬ್ಬಳು ಸ್ತ್ರೀಯು ತನ್ನ ನೀಳವಾದ ಬಲಗೈಯನ್ನು ಮೇಲೆತ್ತಿ ಹಸ್ತವನ್ನು ಮೇಲ್ಚಾಚಿದ್ದು, ಎಡಗೈಯಲ್ಲಿ ಕಮಂಡಲವನ್ನು ಹಿಡಿದು ನಿಂತಿದ್ದಾಳೆ. ಮತ್ತೊಬಳು ಸ್ತ್ರೀ ಧ್ಯಾನಾಸಕ್ತಳಾಗಿ ಕೈಮುಗಿದು ನಿಂತಿದ್ದಾಳೆ.



ಜೋಡಿಹೊಸಹಳ್ಳಿ ಗ್ರಾಮದ ಮುನೇಶ್ವರ ದೇವಾಲಯದ ಹಿಂಬಾಗದಲ್ಲಿರುವ ಹುಲಿಬೇಟೆ ಶಿಲ್ಪ.

ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಹಾಗೂ ಮಧ್ಯ ಭಾಗದಲ್ಲಿ ನಂದಿಯ ಶಿಲ್ಪವನ್ನು ಬಿಡಿಸಲಾಗಿದೆ. ಬಹುಶಃ ವೀರನೊಬ್ಬ ಹುಲಿಯೊಡನೆ ಕಾದಾಡಿ ಸ್ವರ್ಗಸ್ಥನಾಗಿರಬಹುದು. ಪತಿಯ ಸಾವಿನ ಸುದ್ದಿಯನ್ನು ಕೇಳಿ ವೀರನ ಹೆಂಡತಿ ಸತೀ ಆಚರಣೆ ಮಾಡಿರುವಳೆಂದು ಊಹಿಸಬಹುದಾಗಿದೆ.

೫. ಹುತ್ರಿದುರ್ಗ ಹೋಬಳಿಯ ಕತ್ರಿಘಟ್ಟ ಗ್ರಾಮದ ಬಳಿಯ ಹುಲಿ ಬೇಟೆಯ ಶಿಲ್ಪ: ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಕತ್ರಿಘಟ್ಟ ಗ್ರಾಮದಲ್ಲಿ ಕೇವಲ ೧ ಹಂತದಿಂದ ಕೂಡಿರುವ ಹುಲಿ ಬೇಟೆಯ ವೀರಗಲ್ಲು ಕಂಡುಬಂದಿದೆ. ವಿಜಯನಗರೋತ್ತರ ಕಾಲಮಾನಕ್ಕೆ ಸೇರಿರುವ ಈ ವೀರಗಲ್ಲು ಸರಳವಾಗಿದ್ದು, ಗ್ರಾನೈಟ್ ಶಿಲೆಯನ್ನು ಬಳಸಿ ಚಿತ್ರಿಸಲಾಗಿದೆ. ವೀರನು ವೀರಗಚ್ಚೆ ಧರಿಸಿದ್ದು, ತಲೆಯ ಮೇಲೆ ತುರುಬು ಇದೆ. ಎಡಗೈಯಲ್ಲಿ ಹುಲಿಯನ್ನು ಹಿಡಿದುಕೊಂಡು ಬಲಗೈಯಲ್ಲಿ ಹರಿತವಾದ ಚೂರಿ/ ಬಾಕಿನಿಂದ ಹುಲಿಯ ಎದೆಗೆ ತಿವಿಯುತ್ತಿರುವಂತೆ ಚಿತ್ರಿಸಲಾಗಿದೆ. ಸ್ಥಳೀಯರು ಈ ವೀರಗಲ್ಲು ಶಿಲ್ಪಕ್ಕೆ ಬಣ್ಣ ಬಳಿದಿರುವುದರಿಂದ ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತಿಲ್ಲ.



ಹುಲಿ ಬೇಟೆಯ ಶಿಲ್ಪ

ಈ ಪ್ರದೇಶದಲ್ಲಿ ಹುಲಿಗಳ ಸಂತತಿ ಹಾಗೂ ಹುಲಿಗಳ ಚಲನವಲನ ಹೆಚ್ಚಾಗಿತ್ತು ಎಂಬುದನ್ನು ಈ ಸ್ಮಾರಕಗಳು ಸ್ಪಷ್ಟಪಡಿಸುತ್ತವೆ. ಹಾಗೆಯೇ ಈ ಹುಲಿಗಳು ಸಾಕು ಪ್ರಾಣಿಗಳಿಗೆ ಹಾಗೂ ಜನರಿಗೆ ತೊಂದರೆ ಕೊಡುತ್ತಿದ್ದ ಕಾರಣಕ್ಕಾಗಿ ಸ್ಥಳೀಯ ವೀರ ಯೋಧರು ತಮ್ಮ ಪ್ರಾಣವನ್ನು ಲೆಕ್ಕಿಸದೆ ವೀರತ್ವ, ಧೈರ್ಯ, ಸ್ಥೈರ್ಯದಿಂದ ಹುಲಿಯೊಡನೆ ಕಾದಾಡಿ/ ಹೋರಾಡಿ ಜನರ ಪ್ರಾಣ ಉಳಿಸುತ್ತಿದ್ದರು. ಕುಣಿಗಲ್ ನಾಡಿನ ಸ್ಥಳನಾಮಗಳಲ್ಲಿ ಪ್ರಾಣಿವಾಚಿಯ (ಹುಲಿ) ಸ್ಥಳನಾಮಗಳು ಇಂದಿಗೂ ಪ್ರಚಲಿತದಲ್ಲಿವೆ. ಉದಾ: ಹುಲಿಊರು, ಹುಲಿಯೂರುದುರ್ಗ, ಹುಲಿಪುರ, ಹುಲಿಕಟ್ಟೆ, ಹುಲಿವಾನ, ಹುಲಿಯೂರಮ್ಮ ಎಂಬ ಹೆಸರುಗಳು ಚಾಲ್ತಿಯಲ್ಲಿದ್ದು ಪ್ರಾಮುಖ್ಯತೆ ಪಡೆದುಕೊಂಡಿವೆ.

ಅಡಿಟಿಪ್ಪಣಿಗಳು

೧. ರಾಮದಾಸ ರೆಡ್ಡಿ ಎಸ್.ಜಿ., ೨೦೦೯, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಪು. ೧೧೧.

೨. ಅದೇ, ಪು. ೧೧೧.

೩. ಅದೇ, ಪು. ೧೧೦.

೪. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

೫. ಅದೇ.

◆◆

೩೨

ಅಶೋಕ ಕಂದಗಲ್

ಹೊದ್ಲುರು ಗ್ರಾಮದ ವೀರಗಲ್ಲುಗಳು

ಬಾಗಲಕೋಟೆಯಿಂದ ೩೬ ಕಿ.ಮೀ. ಅಂತರದ ಘಟಪ್ರಭಾ ನದಿ ತೀರದ ಒಂದು ಚಿಕ್ಕ ಗ್ರಾಮ ಹೊದ್ಲುರು. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿ ಆಣೆಕಟ್ಟೆಯ ಹಿನ್ನೀರಿನಲ್ಲಿ ಈ ಗ್ರಾಮವು ಮುಳುಗಡೆಯಾಗಿದೆ. ಪ್ರಸ್ತುತ ಪುನರ್ ವಸತಿ ಕೇಂದ್ರವನ್ನು ನಿರ್ಮಿಸಿದ್ದು, ಇಲ್ಲಿನ ಮಾರುತಿ ದೇವಾಲಯದ ಮುಂಭಾಗದಲ್ಲಿ ಎರಡು ವೀರಗಲ್ಲುಗಳು, ದೇವಾಲಯದ ಗರ್ಭಗೃಹದಲ್ಲಿ ಆಂಜನೇಯ ಹಾಗೂ ವಿಷ್ಣುವಿನ ಶಿಲ್ಪಗಳನ್ನು ಕಾಣುತ್ತೇವೆ. ಪ್ರಸ್ತುತ ಪ್ರಬಂಧದಲ್ಲಿ ಈ ಶಿಲ್ಪಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಒಂದನೇ ವೀರಗಲ್ಲು



ಪ್ರಾಚಾರ್ಯರು
ಸಕ್ರಿ ಪದವಿಪೂರ್ವ ಕಾಲೇಜು
ಬಾಗಲಕೋಟೆ-೫೮೭೧೦೧
ಮೊ: ೯೮೮೬೧ ೪೨೮೧೪

ಊರಿನ ಮಾರುತಿ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಲಾಗಿದೆ. ಸುಮಾರು ೨.೧/೨ ಅಡಿ ಎತ್ತರ ೧ ಅಡಿ ಅಗಲವಾಗಿದೆ. ಬಳಪದ ಕಲ್ಲಿನಲ್ಲಿ ಕಂಡರಿಸಲಾಗಿದೆ. ಇದೊಂದು ತುರುಗೊಳ್ ಶಿಲ್ಪವಾಗಿದೆ. ಮೊದಲನೇ ಪಟ್ಟಿಕೆಯಲ್ಲಿ ವೀರಯೋಧನು ಶತ್ರು ಪಡೆಯೊಂದಿಗೆ ಹೋರಾಡುತ್ತಿದ್ದಾನೆ. ಶತ್ರುಪಡೆಯಲ್ಲಿ ನಾಲ್ಕು ಜನರನ್ನು ಚಿತ್ರಿಸಲಾಗಿದೆ. ಶತ್ರುಪಡೆಯ ಯೋಧನೊಬ್ಬನು ಮರಣ ಹೊಂದಿದ್ದು, ಪ್ರಧಾನ ಯೋಧನು ಅವನಮೇಲೆ ನಿಂತು ಹೋರಾಡುತ್ತಿದ್ದಾನೆ. ವೀರಯೋಧನ ಹಿಂಭಾಗದಲ್ಲಿ ಆತನು ರಕ್ಷಿಸಿದ ಏಳು ಹಸುಗಳನ್ನು ಸಾಲಾಗಿ ಚಿತ್ರಿಸಲಾಗಿದೆ. ಯೋಧನು ಖಡ್ಗವನ್ನು ಎತ್ತಿಹಿಡಿದಿದ್ದು, ರಕ್ಷಣೆಗಾಗಿ ಗುರಾಣಿಯನ್ನು ಹಿಡಿದಿದ್ದಾನೆ. ಶತ್ರು ಪಡೆಯ ನಾಲ್ವರು ಯೋಧರಲ್ಲಿ ಮೂವರು ಪ್ರಧಾನ ಯೋಧನ ವಿರುದ್ಧ ನಿಂತು ಬಿಲ್ಲು ಬಾಣಗಳನ್ನು ಹಿಡಿದು ಹೋರಾಡುತ್ತಿದ್ದಾರೆ. ಯೋಧನು ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನನ್ನು ವಿವಿಧ ಆಭರಣಗಳಿಂದ ಅಲಂಕರಿಸಲಾಗಿದೆ, ವೀರ ಮುಡಿಯನ್ನು ಕಟ್ಟಿದ್ದಾನೆ.

ಎರಡನೇ ಪಟ್ಟಿಕೆಯಲ್ಲಿ ಯೋಧನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಯೋಧನು ಮಂಟಪದಲ್ಲಿ ಕುಳಿತಿದ್ದಾನೆ. ಚಾಮರಧಾರಣಿಯರಾದ ಇಬ್ಬರು ಅಪ್ಸರೆಯರು ಇಕ್ಕೆಲಗಳಲ್ಲಿ ನಿಂತಿದ್ದಾರೆ. ಪ್ರಮಾಣಬದ್ಧವಾದ ಅಂಗಸೌಷ್ಠವ ಕೇಶ ವಿನ್ಯಾಸ ಹಾಗೂ ವಿವಿಧ ಆಭರಣಗಳನ್ನು ಚಿತ್ರಿಸಲಾಗಿದೆ. ಮಂಟಪದ ಮೇಲ್ಭಾಗದಲ್ಲಿ ಢಮರುಗ ಬಾರಿಸುವ ಹಾಗೂ ಪುಷ್ಪಾರ್ಚನೆ ಮಾಡುತ್ತಿರುವ ದೃಶ್ಯಗಳಿವೆ. ಮೂರನೇ ಪಟ್ಟಿಕೆಯಲ್ಲಿ ಈಶ್ವರ ಲಿಂಗದ ಮುಂಭಾಗದಲ್ಲಿ ಯೋಧನು ಕೈಮುಗಿದು ಕುಳಿತಿದ್ದಾನೆ. ಎದುರಿಗೆ ನಂದಿ ಶಿಲ್ಪವಿದೆ. ಶೈವ ಮುನಿಯೊಬ್ಬರು ಎಡಗೈಯಲ್ಲಿ ಗಂಟೆ ಬಾರಿಸುತ್ತಾ ಬಲಗೈಯಿಂದ ಆರತಿ ಮಾಡುತ್ತಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಚಿತ್ರಿಸಿದ್ದಾರೆ.

ಎರಡನೇ ವೀರಗಲ್ಲು



ಮಾರುತಿ ದೇವಾಲಯದ ಬಲಭಾಗದಲ್ಲಿರುವ ಎರಡನೇ ವೀರಗಲ್ಲು ೧.೫ ಅಡಿ ಎತ್ತರ ೯ ಅಂಗುಲ ಅಗಲವಾಗಿದೆ. ಈ ಪ್ರದೇಶದ ಗ್ರಾಮೀಣ ಭಾಗದಲ್ಲಿ ಕರೆಯಲ್ಪಡುವ ಸಜ್ಜೆಗಲ್ಲಿನಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ. ಮೊದಲನೇ ಪಟ್ಟಿಕೆಯಲ್ಲಿ ವೀರನು ವೈರಿಯೊಂದಿಗೆ ಹೋರಾಡುತ್ತಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಮುಂಭಾಗದಲ್ಲಿ ಬಿಲ್ಲನ್ನು ಹಿಡಿದು ವೈರಿಯು ನಿಂತಿದ್ದಾನೆ ಹೆಚ್ಚು ಅಲಂಕಾರವನ್ನು ಕಾಣುವುದಿಲ್ಲ.

ಎರಡನೇ ಪಟ್ಟಿಕೆಯಲ್ಲಿ ಮರಣಹೊಂದಿದ ಯೋಧನನ್ನು ಅಪ್ಸರೆಯರು ದೇವಲೋಕಕ್ಕೆ ತಮ್ಮ ತೋಳುಗಳಲ್ಲಿ ಎತ್ತಿಕೊಂಡು ಹೋಗುತ್ತಿದ್ದಾರೆ. ಒಟ್ಟಿನಲ್ಲಿ ಈ ಗ್ರಾಮದಲ್ಲಿರುವ ಎರಡು ವೀರಗಲ್ಲುಗಳು ರಣರಂಗದಲ್ಲಿ ಹೋರಾಡಿ ವೀರಮರಣವನ್ನು ಹೊಂದಿದವರನ್ನು ಸ್ಮರಿಸುವ ಸ್ಮಾರಕಗಳಾಗಿವೆ. ಇವುಗಳು ವೀರನ ವೀರಾವೇಶದ ಹೋರಾಟದ ಜೊತೆಗೆ ಅಂದಿನ ಕಾಲದಲ್ಲಿ ಯುದ್ಧದಲ್ಲಿ ಬಳಸುತ್ತಿದ್ದ ಆಯುಧಗಳು, ಯುದ್ಧವಸ್ತ್ರಗಳು ಹಾಗೂ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಸುತ್ತವೆ.

ವಿಷ್ಣು ಶಿಲ್ಪ

ಗ್ರಾಮದಲ್ಲಿರುವ ಮಾರುತಿ ದೇವಾಲಯದಲ್ಲಿ ವಿಷ್ಣು ಶಿಲ್ಪವು ೨ ಅಡಿ ಎತ್ತರವಿದೆ. ಕಪ್ಪು ಶಿಲೆಯಲ್ಲಿ ನಿರ್ಮಿಸಲಾಗಿದೆ. ವಿಷ್ಣು ಸಮಭಂಗಿಯಲ್ಲಿ ನಿಂತಿದ್ದು ಚತುರ್ಭುಜನಾಗಿದ್ದಾನೆ. ಶಂಖ, ಚಕ್ರ, ಗದೆ ಕೈಯಲ್ಲಿದ್ದು ಒಂದು ಕೈ ಅಭಯ ಮುದ್ರೆಯಲ್ಲಿದೆ. ವಿಷ್ಣು ಕಿರೀಟಮುಕುಟಧಾರಿಯಾಗಿದ್ದು ಕಿವಿಯಲ್ಲಿ ಕಮಂಡಲ ಕತ್ತಿನಲ್ಲಿ ಹಾರ, ತೋಳಿನಲ್ಲಿ ಕೇಯಾರ, ಕೈಯಲ್ಲಿ ಕಂಕಣ, ಸೊಂಟದಲ್ಲಿ ಕಟಿಬಂಧ, ಯಜ್ಞೋಪವೀತವನ್ನು



ವಿಷ್ಣು ಶಿಲ್ಪ

ಧರಿಸಿದ್ದಾನೆ. ಹಿಂಭಾಗದಲ್ಲಿ ಪ್ರಭಾವಳಿಯನ್ನು ಕಾಣುತ್ತೇವೆ. ವಿಷ್ಣು ಶಿಲ್ಪದ ಪಕ್ಕದಲ್ಲಿ ಆಂಜನೇಯನ ವಿಗ್ರಹವಿದೆ ಸುಮಾರು ೨.೧/೨ ಅಡಿ ಎತ್ತರವಿದೆ ಕಪ್ಪು ಶಿಲೆಯಿಂದ ನಿರ್ಮಿಸಲಾಗಿದೆ. ಎಡಗೈಯಲ್ಲಿ ಹೂವಿನ ಗುಚ್ಚವನ್ನು ಹಿಡಿದಿದ್ದು, ಬಲಗೈ ಆಶೀರ್ವಾದ ಮಾಡುತ್ತಿರುವ ರೀತಿಯಲ್ಲಿ ಇದೆ. ಕೊರಳಲ್ಲಿ ಹಾರ, ಯಜ್ಞೋಪವೀತ ಇದೆ. ಆಂಜನೇಯನ ಬಾಲ ಬಲದಿಂದ ಎಡಕ್ಕೆ ಬಂದಿದೆ.

ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಈ ಗ್ರಾಮವು ಅವರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಸರಾಯರು ವಿವಿಧೆಡೆ ಆಂಜನೇಯನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿದಂತೆ ಈ ಗ್ರಾಮದಲ್ಲಿಯೂ ಆಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆಂದು ಗ್ರಾಮದ ಹಿರಿಯರಾದ ಉಡುಪಿರಾವ್ ಕುಲಕರ್ಣಿಯವರು ತಮ್ಮ ಹಿರಿಯರಿಂದ ಕೇಳಿ ತಿಳಿಯಲ್ಪಟ್ಟ ಮಾಹಿತಿಯನ್ನು ನೀಡುತ್ತಾರೆ. ವ್ಯಾಸರಾಯರು ಈ ಗ್ರಾಮಕ್ಕೆ ಭೇಟಿ ನೀಡಿ ದೇವಾಲಯವನ್ನು ನಿರ್ಮಿಸಿ ಅಲ್ಲಿ ವಿಷ್ಣು, ಆಂಜನೇಯ, ಈಶ್ವರ ಲಿಂಗಗಳನ್ನು ಸ್ಥಾಪಿಸಿದ್ದಾರೆ. ಆದರೆ ಆ ದೇವಾಲಯ ಇಂದು ಘಟಪ್ರಭಾ ನದಿಯಲ್ಲಿ ಮುಳುಗಡೆಯಾಗಿದೆ. ಅಲ್ಲಿನ ಮೂರ್ತಿಗಳನ್ನು ಪುನರ್‌ವಸತಿ ಕೇಂದ್ರದ ಮಾರುತಿ ದೇವಾಲಯದಲ್ಲಿ ಪುನಃ ಪ್ರತಿಷ್ಠಾಪಿಸಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಈ ಗ್ರಾಮವು ಆಲಮಟ್ಟಿ ಆಣೆಕಟ್ಟೆಯ ನೀರಿನಲ್ಲಿ ಮುಳುಗಡೆಯಾಗಿದೆ. ಈ ಗ್ರಾಮದಲ್ಲಿ ರಾಮಲಿಂಗೇಶ್ವರ ದೇವಾಲಯವಿದ್ದು, ಮುಂಭಾಗದಲ್ಲಿ ತ್ರುಟಿತ ಅಪ್ರಕಟಿತ ಶಾಸನವು ಇದೆ, ಆದರೆ ನೀರಿನಲ್ಲಿ ಮುಳುಗಿಹೋಗಿದೆ.

* ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ನೀಡಿದ ಉಡುಪಿರಾವ್ ಕುಲಕರ್ಣಿಯವರಿಗೆ ಧನ್ಯವಾದಗಳು.

ನಾಗವೇಣಿ ಎ.

ಅಳವಂಡಿ ಶಾಸನಗಳ ಅವಲೋಕನ

ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನ ಅಳವಂಡಿಯಲ್ಲಿ ಎಂಟು ಶಾಸನಗಳು, (ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ) ನಾಲ್ಕು ವೀರಗಲ್ಲುಗಳು ಹಾಗೂ ಒಂದು ಮಹಾಸತಿಕಲ್ಲು ಇದೆ. ಪ್ರಸ್ತುತ ಲೇಖನದಲ್ಲಿ ಇವುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಅಳವಂಡಿಯಲ್ಲಿ ದೊರೆತ ಶಾಸನಗಳಲ್ಲಿ ದಾನಶಾಸನಗಳ ಸಂಖ್ಯೆ ಅಧಿಕವಾಗಿದೆ. ಪ್ರಾಚೀನ ಕಾಲದಲ್ಲಿ ದಾನಶಾಸನಗಳನ್ನು ಕೇವಲ ರಾಜರಷ್ಟೇ ಅಲ್ಲದೆ ಮಹಾಮಂಡಲೇಶ್ವರರು, ವ್ಯಾಪಾರಿ ವರ್ಗದವರು, ಗಾವುಂಡರು, ಆಡಳಿತ ವರ್ಗದವರು ಮತ್ತು ಸಾಮಾನ್ಯ ಜನರೂ ಸಹ ಹಾಕಿಸುತ್ತಿದ್ದರು. ದೇವಾಲಯಗಳ ನಿರ್ಮಾಣಕ್ಕೆ, ಕೆರೆ ಕಟ್ಟಲು, ಅಗ್ರಹಾರಗಳನ್ನು ಸ್ಥಾಪಿಸಲು, ವಿದ್ಯಾಕೇಂದ್ರಗಳನ್ನು ನಿರ್ಮಿಸಲು, ಬಾವಿಗಳನ್ನು ತೋಡಿಸಲು, ಅರವಟ್ಟಿಗೆಗಳನ್ನು ನಿರ್ಮಿಸಲು ಮತ್ತು ಅನ್ನಸತ್ರಗಳಿಗೆ ದಾನದ ರೂಪವಾಗಿ ಭೂಮಿಯನ್ನು, ದವಸ-ಧಾನ್ಯಗಳನ್ನು, ಆದಾಯದಿಂದ ಬಂದ ತೆರಿಗೆಗಳನ್ನು ಹೀಗೆ ಹಲವಾರು ರೀತಿಯಲ್ಲಿ ದಾನಗಳನ್ನು ನೀಡುತ್ತಿದ್ದರು. ದಾನವು ಜೀವನದ ಮೌಲ್ಯಗಳಲ್ಲಿ ಒಂದಾಗಿದ್ದು, ಮನುಷ್ಯ ಸತ್ತ ನಂತರ ಮೋಕ್ಷ ದೊರೆಯಬೇಕಾದರೆ ದಾನವನ್ನು ನೀಡಿರಲೇಬೇಕು ಎಂಬ ನಂಬಿಕೆ ಜನರಲ್ಲಿ ಇತ್ತು. ಹೀಗಾಗಿ ದಾನಕ್ಕೆ ಹೆಚ್ಚಿನ ಮಹತ್ವ ದೊರೆಯಿತು. ದಾನ ವ್ಯವಸ್ಥೆಯು ಅಂದಿನ ಸಂದರ್ಭದಲ್ಲಿನ ಆರ್ಥಿಕ ವ್ಯವಸ್ಥೆಯನ್ನು ತಿಳಿಸುತ್ತದೆ. ಕೆಲವು ಸಂದರ್ಭಗಳಲ್ಲಿ ದಾನವು ಪ್ರತಿಷ್ಠೆಯ ಸಂಕೇತವಾಗುತ್ತಿತ್ತು. ಸಮಾಜದಲ್ಲಿ ಯಾರು ಎಷ್ಟು ದಾನ ಮಾಡುತ್ತಾರೋ ಅವರನ್ನು ಶ್ರೇಷ್ಠ ದಾನಿಗಳು ಎಂದು ಕರೆಯಲಾಗುತ್ತಿತ್ತು. ಅಂದರೆ ತಮ್ಮ ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳಲು ದಾನವನ್ನು ನೀಡುತ್ತಿದ್ದರು. ಜನರ ಅಭಿವೃದ್ಧಿಗಾಗಿ ಮತ್ತು ದೇವಾಲಯಗಳ ಅಭಿವೃದ್ಧಿಗಾಗಿ ಹಲವಾರು ರೀತಿಯ ದಾನಗಳನ್ನು ನೀಡಿರುವುದರ ಕುರುಹುಗಳಾಗಿ ದಾನಶಾಸನಗಳು ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಮಕ್ಕಳಿಗೆ ಪುಣ್ಯವಾಗಲೆಂದು ದಾನಗಳನ್ನು ನೀಡಿರುವ ಉದಾಹರಣೆಗಳಿವೆ.

ಶಾಸನ ಸಂಖ್ಯೆ ೧ : ಆಚಾರಿ ಕಟ್ಟೆಯಲ್ಲಿರುವ ಶಾಸನ ಬಹಳ ತ್ರುಟಿತವಾಗಿದೆ. ಅಳಿದುಳಿದ ಅಕ್ಷರಗಳು ಸುಂದರವಾಗಿವೆ. ಹದಿಮೂರು ಸಾಲುಗಳಿಂದ ಕೂಡಿದೆ. ಮೊದಲನೆ ಸಾಲಿನ ಪ್ರಾರಂಭದಲ್ಲಿ ಶ್ರೀ ಪ್ರಭೂತ್ತ ವರಿಷ ಎಂದಿದೆ. ಇದು ರಾಷ್ಟ್ರಕೂಟ ಅರಸನಾದ ಪ್ರಭೂತವರ್ಷನನ್ನು ಹೆಸರಿಸುತ್ತದೆ. ಇದರಲ್ಲಿ ಭೂದಾನ ಮತ್ತು ಮನೆ ತೆರಿಗೆಗೆ ಸಂಬಂಧಿಸಿದ ಮಾಹಿತಿಯಿದೆ.

೧೮ನೇ ವಾರ್ಡ್, ಮನ್ಮಥಕೇರಿ
ಕಮಲಾಪುರ-೫೮೩೨೨೧
ವಿಜಯನಗರ ಜಿಲ್ಲೆ
ಮೊ: ೯೪೪೯೧ ೭೬೨೨೨

ಶಾಸನ ಸಂಖ್ಯೆ ೨ : ಗೋಣಿಬಸವೇಶ್ವರ ದೇವಾಲಯದ ಕಂಬದಲ್ಲಿರುವ ಶಾಸನ ಒಂಬತ್ತು ಸಾಲುಗಳಿಂದ ಕೂಡಿದೆ. ಇದರಲ್ಲಿ ಕಾಲದ ಉಲ್ಲೇಖವಿಲ್ಲ. ಮಾಲಗಾರ ಮಾರಸಿಂಗಣನು ನಲ್ವತ್ತು ಗದ್ಯಾಣ ಹಾಗೂ ಒಂದು ಮತ್ತರು ಭೂಮಿ ನೀಡಿದ ಉಲ್ಲೇಖವಿದೆ. ಹಂಪನಕೇರಿಯ ಭೂಕಸಿಂಗಣನ ಮಗ ಮಾದಣ ಮಾಳಿಗೆ ಮನೆಯೊಂದನ್ನು, ತೆಲ್ಲಿಗರ (ಗಾಣಿಗರ) ಕೇರಿಯಲ್ಲಿ ದೇವರ ನಂದಾದೀಪಕ್ಕಾಗಿ ಮರಾಳನ ಸಿಂಗಸೆಟ್ಟಿಯು ಸೊಟಿಗೆ ಎಣ್ಣೆಯನ್ನು ಬಿಡುತ್ತಾನೆ. ಈ ಧರ್ಮ್ಮವನ್ನು ನಾಲ್ಕೂರ್ವರು ಪ್ರತಿಪಾಳಿಸುವರು ಎಂದಿದೆ. ಇಲ್ಲಿ ತೆಲ್ಲಿಗರ (ಗಾಣಿಗರ) ಉಲ್ಲೇಖವಿದ್ದು, ಅವರಿಗೆ ಸಮಾಜದಲ್ಲಿ ಗೌರವಯುತ ಸ್ಥಾನವಿತ್ತು. ಇಲ್ಲಿ ತೆಲ್ಲಿಗರ ಕೇರಿಯಿರುವುದು ಕಂಡುಬರುತ್ತದೆ. ಮಾಳಿಗೆ ಮನೆಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಸೊಟಿಗೆ ಎಣ್ಣೆದಾನದ ಉಲ್ಲೇಖವನ್ನು ಕಾಣಬಹುದು. ಈ ಧರ್ಮ್ಮವನ್ನು ನಾಲ್ಕೂರ್ವರು ಅಂದರೆ ನಾನ್ನೂರು ಮಹಾಜನರು ಪ್ರತಿಪಾಳಿಸುವರು ಎಂದಿದೆ.

ಶಾಸನ ಸಂಖ್ಯೆ ೩ : ಜಾಣಗಾರ ಓಣಿಯಲ್ಲಿರುವ ಶಾಸನ(ನಾರಾಯಣ ಗೌಡರ ಹಿತ್ತಿಲು) ವಿವಿಧ ಹಂತಗಳಲ್ಲಿ ಬರೆಯಲ್ಪಟ್ಟಿದೆ. ಕ್ರಿ.ಶ.೧೧೬೧ರ ಈ ಶಾಸನದಲ್ಲಿ ಕಲ್ಯಾಣದಿಂದ ತ್ರೈಲೋಕ್ಯಮಲ್ಲದೇವನು ಆಳುತ್ತಿದ್ದಾಗ ಅವನ ಮಾಂಡಲೀಕ, ಮಹಾಸಾಮಂತ ಇರಿವಬೆಡಂಗದೇವ ಭಕ್ತಿಪೂರ್ವಕವಾಗಿ ಭೂಮಿದಾನ ಮಾಡಿರುವ ಉಲ್ಲೇಖವಿದೆ. ನಂತರದಲ್ಲಿ ಅಳವಂಡಿಯ ನಾನ್ನೂರು ಮಹಾಜನರ ವರ್ಣನೆ ಬರುತ್ತದೆ. ಮಹಾಬ್ರಹ್ಮಾಂಡಂ ಚತುಸ್ಸಮುದ್ರ ಪರಿ..ಮಂಡಳ ಮಂಡಿತರ್ ಷಡ್ಗುಣಾಖಂಡಿತರ್, ಯಮ ನಿಯಮ ಸ್ವಾಧ್ಯಾಯ ಧ್ಯಾನ ಮೌನ ಅನುಷ್ಠಾನ ಪಾರಾಯಣರು, ಅಘಘನ ಸಮೀರಣರು, ಚತುರ್ವೇದಾಧ್ಯಾಯಿಗಳು, ಧರ್ಮಶಾಸ್ತ್ರ ಪರಿಣಿತರು, ಆಲಸ್ಯಾಭಿಮಾನಿಗಳು (ಅಂದರೆ ದೈಹಿಕ ಶ್ರಮ ಇಷ್ಟಪಡದವರು, ಬೌದ್ಧಿಕ ಶ್ರಮಕ್ಕೆ ಒತ್ತು ಕೊಡುವವರು), ಪ್ರಭುಮಂತ್ರೋತ್ಸಾಹ ಶಕ್ತಿತ್ರಯ ವಿರಾಜಿತರು, ಭುವನಜನ ಪೂಜಿತರು, ಲೋಕವಿಖ್ಯಾತರು, ಭೂವಳಯ ಪೂತರು(ಹೊಗಳುಭಟ್ಟರು), ಮನುಮಾರ್ಗ್ಗ ಚರಿತರು, ನಿಶ್ಶೇಷ ದುರಿತರು, ಉಚಿತಾಚಾರರು (ವಿವೇಕಿಗಳು), ಅನ್ಯಾಯದೂರರು(ಅನ್ಯಾಯವನ್ನು ದೂರವಿಟ್ಟವರು), ಇನಸೂನು, ಸತ್ಯನಿಷ್ಠೆಯಲ್ಲಿ ಕರ್ಣನಂಥವರು, ಸತ್ಯರು(ನಿಯಮ ಪರಿಪಾಲನೆಯನ್ನು ಮಾಡುವವರು), ಶಿಷ್ಟಸಂಗತ್ಯರು(ಸಜ್ಜನ ಸಹವಾಸಿಗಳು), ಅಭಿನವ ಯುಧಿಷ್ಠರರು, ದುಷ್ಟಜನ ನಿಷ್ಠೂರರು, ಮಿತ್ರೋಪಕಾರಿಗಳು, ಶತ್ರುಸಂಹಾರಿಗಳು, ಶೌಚಾಂಜನೇಯರು, ನಿರ್ಮ್ಮಳಿನಕಾಯರು (ಕಳಂಕ ರಹಿತರು) ಶ್ರೀಮದ್ ಅಳವಂಡಿಯ ಮಹಾಜನ ನಾನ್ನೂರ್ವರು ಎಂದು ಹಲವು ವಿಶೇಷಣಗಳಿಂದ ಹೊಗಳಲಾಗಿದೆ.

ಇದರಲ್ಲಿ ಉಲ್ಲೇಖವಾಗಿರುವ ಕನ್ಯಾದಾನವು ಷೋಡಶ ದಾನಗಳಲ್ಲಿ ಒಂದಾಗಿದೆ. ಕನ್ಯಾದಾನ ಎಂದರೆ ಸರ್ವಾಲಂಕಾರ ಭೂಷಿತಳಾದ ಕನ್ಯೆಯನ್ನು ತಕ್ಕ ವರನಿಗೆ ಮದುವೆ ಮಾಡಿಕೊಡುವುದು. ಅದರಲ್ಲೂ ದೇವರ ಸನ್ನಿಧಾನದಲ್ಲಿ ಕೈಗೊಳ್ಳುವ ಕನ್ಯಾದಾನ ಹೆಚ್ಚು ಪುಣ್ಯಪ್ರಾಪ್ತವಾದದ್ದು ಎಂಬ ಬಲವಾದ ನಂಬಿಕೆ ಅಂದಿನ ಸಮಾಜದಲ್ಲಿತ್ತು. ಮನುವಿನ ಪ್ರಕಾರ ಬಾಲ್ಯದಲ್ಲಿ ತಂದೆ-ತಾಯಿಗಳ ಆಶ್ರಯದಲ್ಲಿ, ಯೌವ್ವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿರಬೇಕು.

ಕವಿಲೆದಾನ ಎಂದರೆ ಗೋದಾನವಾಗಿದೆ. ಸಾಮಾನ್ಯವಾಗಿ ಶಾಸನಗಳ ಶಾಪಾಶಯವನ್ನು ಹೇಳುವಾಗ ದಾನಶಾಸನಗಳನ್ನು ರಕ್ಷಿಸುವವರಿಗೆ ಸಾವಿರ ಕವಿಲೆಗಳ ದಾನ ಮಾಡಿದ ಪುಣ್ಯ ಲಭಿಸುವುದು. ರಕ್ಷಿಸದವರಿಗೆ ಗೋಹತ್ಯೆ, ಬ್ರಾಹ್ಮಣ ಹತ್ಯೆ ಮಾಡಿದ ಪಾಪ ಬರುತ್ತದೆ. ಹಾಗಾಗಿ ಗೋದಾನವು ತುಂಬಾ ಮುಖ್ಯವಾದ ದಾನವಾಗಿದೆ. ಅದೇ ರೀತಿ ಬ್ರಾಹ್ಮಣರಿಗೆ ಅಗಲವಾದ ತಟ್ಟೆಯನ್ನು ಅಂದರೆ ಹರಿವಾಣವನ್ನು, ಧರಿಸಲು ಬಟ್ಟೆಗಳನ್ನು, ಪಾದರಕ್ಷೆಯನ್ನು ದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ. ಇದರ ಉಲ್ಲೇಖವು ತುಂಬಾ ಅಪರೂಪವಾಗಿದೆ.

ಮುಂದಿನ ಭಾಗವು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದು ೪ನೆಯ ಪ್ರಮಾದಿ ಸಂವತ್ಸರ, ಶ್ರಾವಣ ಶು.೧೨, ಸೋಮವಾರ ಉತ್ತರಾಯಣ ಸಂಕ್ರಾಂತಿಯಂದು ಕರುವರ ಹೋಚಿಮಯ್ಯನ ಮಗ ಮೂಕಿಮಯ್ಯನು ಅಳವಂಡಿಯ ಮಹಾಜನ ನಾಲ್ಕೂರ್ವರಿಗೆ ಪಾದ ಪೂಜೆ ಮಾಡಿ ಸರ್ವಬಾಧಾ ಪರಿಹಾರವಾಗಿ ಮಾನ್ಯವಾಗಿ ಶ್ರೀ ಗುಲುಗೇಶ್ವರ ದೇವರ ರಂಗಭೋಗಕ್ಕೆ ಭೂದಾನ ನೀಡುತ್ತಾನೆ ಎಂಬ ಉಲ್ಲೇಖವಿದೆ. ಭೂಮಿಯ ಗಡಿಗಳನ್ನು ಗುರುತಿಸಲಾಗಿದೆ. ಉತ್ತರಕ್ಕೆ ಸೋವಿಮಯ್ಯಗಳ ಹೊಲ, ಹಡವಳರ ಏಚಿಮಯ್ಯನಾಯಕರು ಸತ್ರಕ್ಕೆ ಬಿಟ್ಟ ಹೊಲ ದಕ್ಷಿಣಕ್ಕೆ ಮತ್ತರಾರು. ಇಂತಿ ಧರ್ಮವನ್ನು ಪ್ರತಿಪಾಲಿಸಿದವರಿಗೆ ವಾರಣಾಸಿ ಗುರುಕ್ಷೇತ್ರದಲ್ಲಿ ಪನ್ನಿಚ್ಛಾಸಿರ ಕವಿಲೆ(ಗೋವು)ಯನ್ನು ಅಲಂಕರಿಸಿ ವೇದ ಪಾರಂಗತರಾದ ಬ್ರಾಹ್ಮಣರಿಗೆ ಉಭಯಮುಖಿ ಕೊಟ್ಟಂತೆ, ಧರ್ಮವನ್ನು ಅಳಿದವರು ಏಳುಕೋಟಿ ತೀರ್ಥಸ್ನಾನಗಳಲ್ಲಿ ಉಭಯಮುಖಿ ಕವಿಲೆಯನ್ನೂ ಬ್ರಾಹ್ಮಣರನ್ನು ಅಳಿದ ಮಹಾಪಾತಕರು. . . ಎಂದಿದೆ. ೩೮ ಸಾಲುಗಳಿಂದ ಕೂಡಿರುವ ಈ ಶಾಸನದ ಮುಂದಿನ ಭಾಗ ನೆಲದಲ್ಲಿ ಹೂತಿದೆ.

ಶಾಸನ ಸಂಖ್ಯೆ ೪ : ಅದೇ ಸ್ಥಳದಲ್ಲಿ ಇನ್ನೊಂದು ಶಾಸನ ತ್ರುಟಿತವಾಗಿದೆ. ಶಕಕಾಲ ೧೧೨೫, ದುಂದುಭಿ ಸಂವತ್ಸರದ ಮಾಘ ಬಹುಳ ೩೦ ಸೋಮವಾರ ಸೂರ್ಯಗ್ರಹಣವೆಂದಿದ್ದು, ಇದು ಸು.ಕ್ರಿ.ಶ. ೨.೨.೧೨೦೪ಕ್ಕೆ ಸರಿಹೊಂದುತ್ತದೆ. ಆದರೆ ಆ ದಿನ ಸೂರ್ಯಗ್ರಹಣವಿಲ್ಲ. ಶಾಸನವು ಮೊದಲಿಗೆ ಶ್ರೀ ನಮಸ್ತುಂಗ . . . ಯಾದವ ನಾರಾಯಣಂ ಭುಜಬಳ ಚಕ್ರವರ್ತ್ತಿ . . . ವೀರಬಲ್ಲಾಳ ದೇವರ . . . . ರೆ॥

ಈ ಶಾಸನದಲ್ಲಿ ವೀರಬಲ್ಲಾಳ ಮತ್ತಿತರ ವಿವರಗಳಿವೆ. ಶ್ರೀ ರಂಗನಾಥ ದೇವರ ಅಂಗಭೋಗ . . . . ಎಂದಿದೆ.

(ಮುಂದೆ ಕುಂತಳ ದೇಶವರ್ಣನೆ; ೧೯ನೆಯ ಶಾಸನದೊಳಗಿನ 'ಭತರ ಮಹೀ' ಮತ್ತು 'ಸುತ್ತಿದ ದೇವ' ಈ ಎರಡು ಪದ್ಯಗಳು; ಅಳವಂಡಿಯ 'ನಾಲ್ಗೂರ್ವ್ವರ' ವರ್ಣನೆ ಬರುವುದು)

ಶಕವರ್ಷ ೧೧೨೫ನೆಯ ದುಂದುಭಿ ಸಂವತ್ಸರದ ಮಾಘ ಬಹುಳ ೩೦ ಸೋಮವಾರ

ಸೂರ್ಯ್ಯಗ್ರಹಣ ದಂದು . . . . ಶ್ರೀ ರಂಗನಾಥ ದೇವರ ಅಂಗಭೋಗ

. . . . (ಡಾ. ಪಿ.ಬಿ. ದೇಸಾಯಿಯವರ ಪಾಠ)

ಶಾಸನ ಸಂಖ್ಯೆ ೫ : ಸಿದ್ದೇಶ್ವರ ಮಠದಲ್ಲಿನ ಶಾಸನ ತ್ರುಟಿತವಾಗಿದ್ದು, ಈ ಶಾಸನದಲ್ಲಿ ಮೂರು ಕಾಲಗಳು ಉಕ್ತವಾಗಿವೆ.

೧. ಜಗದೇಕಮಲ್ಲ ವೀರಪೆರ್ಮಾಡಿದೇವನ ಉಲ್ಲೇಖ

೨. ತ್ರೈಲೋಕ್ಯಮಲ್ಲನ ೬ನೆಯ ವರ್ಷದ . . . ಮಾರ್ಗಶಿರ, ಶು.೫, ಸೋಮವಾರ, ಸಂಕ್ರಮಣ ವ್ಯತೀಪಾತವೆಂದಿದ್ದು, ಇದು ಕ್ರಿ.ಶ. ೬.೧೧.೧೧೫೭ ಶನಿವಾರಕ್ಕೆ ಸರಿಹೊಂದುತ್ತದೆ.

೩. ಶಕ ೧೧೯೧ನೆಯ ವಿಭವ ಸಂವತ್ಸರದ ವೈಶಾಖ ಶು. ಸೋಮವಾರವೆಂದಿದ್ದು, ಇದು ಸು.ಕ್ರಿ.ಶ. ೨೮.೪.೧೨೬೮ ಶನಿವಾರಕ್ಕೆ ಸರಿಹೊಂದುತ್ತದೆ. ಇಲ್ಲಿ ಶಕವರ್ಷ ೧೧೯೦ ಆಗಿದೆ.

ಶಾಸನದ ಆರಂಭದಲ್ಲಿ ಕುಂತಳದೇಶ ಮತ್ತು ಅದರ ರಾಜ ಜಗದೇಕಮಲ್ಲ ವೀರ ಪೆರ್ಮಾಡಿಯ ಉಲ್ಲೇಖ ಬರುತ್ತದೆ. ಈತನ ರಾಜ್ಯಭಾರದ ಕುಂತಳದೇಶದಲ್ಲಿ ಎಕ್ಕಲವಾಡವಿತ್ತು. ಅಳವಂಡಿಯು ಇದರಲ್ಲಿನ ಪ್ರಮುಖ ಅಗ್ರಹಾರವಾಗಿತ್ತು. ಮುಂದೆ ಶಾಸನದಲ್ಲಿ ಈ ಅಗ್ರಹಾರದ ವರ್ಣನೆ, ಅಲ್ಲಿದ್ದ ಜನರ ವರ್ಣನೆ ಬರುತ್ತದೆ. ಇಲ್ಲಿ ಬರುವ ವರ್ಣನೆಯಲ್ಲಿ ಹುಲುಸಾಗಿ ಬೆಳೆದ ಕೈತೋಟದಲ್ಲಿ ಗಿಳಿ ಓಡಿಸುತ್ತಿರುವ ಹಳ್ಳಿಯ ಜನರು . . ತಟಾಕಗಳಲ್ಲಿ ಕೋಗಿಲೆ, ಗಿಳಿಗಳು ಗುಂಪಾಗಿ ಅಧಿಕ ರುಚಿಯಿಂದ ಅತೀ ರಮಣೀಯವಾಗಿ ನೀರನ್ನು ಕುಡಿಯುವ ವದನಗಳು ಸುಂದರವಾಗಿ ಕಾಣುತ್ತವೆ. ನೀರಿನಲ್ಲಿ ಹುಟ್ಟಿದ ಅರಳಿದ ಬಿಳಿಯ ನೈದಿಲೆಯಂತೆ ಕಣ್ಣುಳ್ಳವಳು, ದುಂಬಿಯ ಕಂಠನಾದ, ಹೊಸತಾದ ಪಾದರಿ ಹೂವಿನ ಸುವಾಸನೆ ಅಂದರೆ ಚೆಲುವಾದ ಬಳ್ಳಿಗಳ ಪೊದೆಗಳಿಂದ ದಟ್ಟವಾಗಿ ಹರಡಿದ ನಾಗಲತಾ ನಂದನವನದಲ್ಲಿ ಸೂರ್ಯ-ಚಂದ್ರನ ಕಿರಣಗಳು ಬೀಳದಂತೆ ದಟ್ಟವಾಗಿ ಕತ್ತಲೆಯನ್ನಾವರಿಸಿತ್ತು. ಇದೇ ಇರುಳು ಅಂತ ತಿಳಿದು ಹಂಸ, ನವಿಲು ನರ್ತನ ಮಾಡುತ್ತಿದ್ದವು ಎಂಬುದಾಗಿ ಅಳವಂಡಿ ಅಗ್ರಹಾರದ ಪ್ರಕೃತಿ ಸೌಂದರ್ಯವನ್ನು ವರ್ಣಿಸಲಾಗಿದೆ. ಇಲ್ಲಿನ ಮನೆ ಮನೆಯಲ್ಲೂ ಶಂಕರ, ಅಚ್ಯುತ, ಬುಧಜನರ, ಅತಿಥಿಗಳ ಪೂಜೆ ನಡೆಯುತ್ತಿತ್ತು. ವೇದಮಂತ್ರಗಳಿಂದ, ಮಠ, ಸತ್ರಗಳಿಂದ ಶೋಭಿಸುತ್ತಿತ್ತು. ವ್ಯಾಕರಣ, ಆಗಮ, ಸ್ಮೃತಿ, ಪುರಾಣ ಇತ್ಯಾದಿಗಳ ಅಭ್ಯಾಸದಿಂದ ಶೋಭಿಸುತ್ತಿದ್ದ ೪೦೦ ಮಹಾಜನರು ಆ ಗ್ರಾಮದಲ್ಲಿದ್ದರು. ಈ ನಾಲ್ನೂರ್ವರಲ್ಲಿ ಶ್ರೀವತ್ಸ ಗೋತ್ರದ ಭೀಮ ಮತ್ತು ಅವನ ಪತ್ನಿ ದುಗ್ಗಿಯಕ್ಕ, ಇವರ ಮಗ ಚಾವರಾಜನಿದ್ದ. ಈ ಚಾವರಾಜನು ಕೇಶವ ದೇವಾಲಯ, ಅರವಟಿಗೆ, ಅಗ್ಗಿಷ್ಟಿಕೆಯನ್ನು ಮಾಡಿಸಿದ. ಚಾವರಾಜ ಅವನ ಪತ್ನಿ ಚಂದ್ರಿಕಾರಮಣಿಗೆ ಸರ್ವದೇವನುದಿಸಿದ. ಈ ಸರ್ವದೇವನ ಪತ್ನಿ ಸಾವಿಯಕ್ಕ. ಇವರ ಮಗ ಕೇಶವದೇವ. ಈತನು ದಾನ, ಔದಾರ್ಯಕ್ಕೆ ಹೆಸರಾಗಿದ್ದನು.

ಈ ಕೇಶವದೇವನು ತನ್ನ ದೇವರಿಗೆ ಕ್ರಿ.ಶ. ೬.೧೧.೧೧೫೭ರಲ್ಲಿ ಭೂಮಿಯನ್ನು ಬಿಟ್ಟಿದ್ದಲ್ಲದೆ ೧೭೨ ಗದ್ಯಾಣ ಹೊನ್ನನ್ನು ಬಡ್ಡಿಗಾಗಿ ನೀಡುತ್ತಾನೆ. ಈ ಹೊನ್ನ ಬಡ್ಡಿಯ ಹಣದಲ್ಲಿ ದೇವರ ಅಂಗಭೋಗವಲ್ಲದೆ, ಪುರಾಣ, ಚೈತ್ರ-ಪವಿತ್ರ, ಮಾಲೆಗಾರರು ಇವರಿಗೆಲ್ಲಾ ನೀಡಬೇಕೆಂದಿದೆ. ಇದರ ಪ್ರಕಾರ ದೇವರ ರಂಗಭೋಗಕ್ಕೆ, ಪುರಾಣಕ್ಕೆ ೬ ಗದ್ಯಾಣ, ಪೂಜಾರಿಗೆ ೩ ಗದ್ಯಾಣ, ಸಂಕ್ರಮಣಕ್ಕೆ ೭ ಪಣ, ಗ್ರಹಣಕ್ಕೆ ೬ ಪಣ, ಚೈತ್ರಕ್ಕೆ ೬ ಪಣ, ಪವಿತ್ರಕ್ಕೆ ೬ ಪಣ, ಮಾಲೆಗಾರರಿಗೆ ೪ ಪಣ ಎಂಬುದಾಗಿ ನಿಗದಿಪಡಿಸಲಾಗಿದೆ. ಸು.ಕ್ರಿ.ಶ. ೨೮.೪.೧೨೬೮ರಲ್ಲಿ ವಸಿಷ್ಠ ಗೋತ್ರದ ಯುಮುಕರಸನ ಮಗ ಮಲ್ಲಯ್ಯನು

ನಾನೂರು ಜನರ ಅಪ್ಪಣೆ ಪಡೆದು ಚಾವರಾಜ ಮತ್ತು ಕೇಶವದೇವರ ಹಿಂದಿನ ಸಾಮ್ಯವನ್ನು ಮತ್ತು ಆಸ್ಥಾನದ ಆಚಾರ್ಯತ್ವವನ್ನು ಮಾನ್ಯವಾಗಿ ಪಡೆಯುತ್ತಾನೆ.

ಈ ಶಾಸನದಲ್ಲಿ ಕುಂತಲದೇಶದಲ್ಲಿ ಎಕ್ಕಲವಾಡವಿದ್ದು, ಅಳವಂಡಿಯು ಇದರಲ್ಲಿನ ಪ್ರಮುಖ ಅಗ್ರಹಾರವಾಗಿತ್ತು. ೪೦೦ ಮಹಾಜನರು ಆ ಗ್ರಾಮದಲ್ಲಿದ್ದರು. ಬ್ರಾಹ್ಮಣ ಶ್ರೇಷ್ಠರಾದ ೪೦೦ ಮಹಾಜನರಲ್ಲಿ ಶ್ರೀವತ್ಸ ಗೋತ್ರದ ಕೇಶವದೇವನಿದ್ದ. ಶಾಸನದಲ್ಲಿ ಇವನ ವಂಶಾವಳಿ ನೀಡಲಾಗಿದೆ.

ಶ್ರೀವತ್ಸ ಗೋತ್ರ

ಭೀಮ (ಗಂ) + ದುಗ್ಗಿಯಕ್ಕ (ಹೆಂ)

ಚಾವರಾಜ(ಗಂ) + ಚಂದ್ರಿಕಾ ರಮಣಿ (ಹೆಂ)

ಸರ್ವದೇವ (ಗಂ) + ಸಾವಿಯಕ್ಕ (ಹೆಂ)

ಕೇಶವದೇವ (ಮಗ)

ಅದೇ ರೀತಿ ವಸಿಷ್ಠ ಗೋತ್ರದ ಯುಮುಕರಸನ ಮಗ ಮಲ್ಲಯ್ಯ ಎಂದಿದೆ.

ಅಳವಂಡಿಯ ಮನೆ ಮನೆಗಳಲ್ಲಿ ಶಂಕರರ ಹಾಗೂ ಅಚ್ಯುತರ ಆರಾಧನಾ ಕಾರ್ಯಕ್ರಮ ಮತ್ತು ಪುಣ್ಯತಿಥಿಗಳು ಸಂಭ್ರಮದಿಂದ ನಡೆಯುತ್ತಿದ್ದವು. ಪೂಜೆ, ಯಾಗ, ಯಜ್ಞಾದಿಗಳಿಂದಲೂ ಅಗ್ರಹಾರ ಪವಿತ್ರವಾಗಿತ್ತು. ಎತ್ತ ಕಿವಿಗೊಟ್ಟರೂ ವೇದ ಪಠಣ ಮಂತ್ರ ಘೋಷಗಳ ಧ್ವನಿ ಕೇಳಿಸುತ್ತಿತ್ತು. ಮಠ, ಅನ್ನ ಛತ್ರ, ಸಭಾ ಭವನಗಳಿಂದಲೂ ಅಗ್ರಹಾರ ಮಂಗಲಮಯವಾಗಿತ್ತು. ಶಿವ ನಾಮಾವಳಿಗಳಿಂದ ಹಾಗೂ ವಿಷ್ಣು ನಾಮಾವಳಿಗಳಿಂದ ಬೀದಿ ಬೀದಿಗಳಲ್ಲಿ ಗುಂಪು ಗುಂಪಾಗಿ ಭಕ್ತ ಸಮೂಹ ಸಂಚರಿಸುತ್ತಿತ್ತು. ಅಳವಂಡಿಯ ವಿಶೇಷತೆಯನ್ನು ಇದರಿಂದ ತಿಳಿಯಬಹುದು. ಅಲ್ಲದೆ ಇಂದಿಗೂ ಇಲ್ಲಿ ಸುಶಿಕ್ಷಿತರ ಸಂಖ್ಯೆ ಅಧಿಕವಾಗಿದೆ.

ಶಾಸನ ಸಂಖ್ಯೆ ೬: ಬಾವಾಜಿ ಹೊಲದಲ್ಲಿನ ಶಾಸನ ಕಲಚೂರ್ಯ ಆಹವಮಲ್ಲನ ಎರಡನೆಯ ವರ್ಷದ ಪ್ಲವ, ಮಾಘ, ಸು.೧೩, ಸೋಮವಾರವೆಂದಿದ್ದು ಇದು ಕ್ರಿ.ಶ. ೧೯.೧.೧೧೮೨ ಮಂಗಳವಾರಕ್ಕೆ ಸರಿ ಹೊಂದುತ್ತದೆ. ಅಳವಂಡಿಯ ನಾಲ್ಕೂರು ಮಹಾಜನರು ತಮಗೆ ತಾಂಬೂಲಕ್ಕಾಗಿ ೧೪ ಗದ್ಯಾಣ ಹಾಗೂ ೩ ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ಬಿಡುತ್ತಾರೆ. ಈ ಮನೆಯಲ್ಲಿ ಯಾರಿದ್ದರೂ ಯಾವ ಬಾಧೆಯಿಲ್ಲದೆ ನಡೆಸಬೇಕೆಂದು ಶಾಸನ ವಿಧಿಸುತ್ತದೆ. ಅಲ್ಲದೆ ಕಬ್ಬಿಲಗೇರಿ, ಬಿಲ್ಲೇಸ್ವರ ದೇವರ ಬೀದಿಗಳ ಉಲ್ಲೇಖ ಬರುತ್ತದೆ. ೧೪ ಸಾಲುಗಳಿಂದ ಕೂಡಿದೆ.

ಶಾಸನ ಸಂಖ್ಯೆ ೭: ಭೈರಾಪುರದ ರಾಮಸ್ವಾಮಿ ದೇವಾಲಯದ ಹಿಂದೆ ಬಿದ್ದಿರುವ ಶಾಸನ ೯ ಸಾಲುಗಳಿಂದ ಕೂಡಿದ್ದು, ತ್ರುಟಿತವಾಗಿದೆ. ೧೨ನೆಯ ಶತಮಾನದ ಲಿಪಿ. ಇಲ್ಲಿ ನಾಲ್ಕೂರ್ವ್ವರ, ಬಲ್ಲವರಸ, ರುದ್ರಪಾದದೇವರ ಉಲ್ಲೇಖ ಬರುತ್ತದೆ. ಅಲ್ಲದೆ ತೋಟ, ಕೆರೆಯ ಉಲ್ಲೇಖವೂ ಇದೆ. ಶಾಪಾಶಯ ಭಾಗ ಮಾತ್ರ ಉಳಿದಿದೆ.

ವೀರಗಲ್ಲುಗಳು

ಉಡುಚಮ್ಮ ಗುಡಿಯ ಕಟ್ಟೆಯ ಬದಿಯಲ್ಲಿ ವೀರಗಲ್ಲಿದೆ. ಮೂರು ಹಂತಗಳಿಂದ ಕೂಡಿದೆ. ವೀರಗಲ್ಲಿನ ಮೇಲೆ ಎಣ್ಣೆ ಸುರಿದಿರುವರು. ಭೈರಾಪುರದ ರಾಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ವೀರಗಲ್ಲುಗಳಿವೆ. ಅಳವಂಡಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲು ದೊರೆತಿದ್ದು ಲಿಪಿರಹಿತ ವೀರಗಲ್ಲಾಗಿರುವುದರಿಂದ ಹೆಚ್ಚಿನ ವಿವರಗಳು ಲಭಿಸಿಲ್ಲ.

೧೩ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲೊಂದು ಊರಿನ ಅಗಸಿ ಬಾಗಿಲಿನ ಹತ್ತಿರ ಮಸೀದಿಯ ಹಿಂಭಾಗದ ಕಸದ ತಿಪ್ಪೆಯಲ್ಲಿ ಕಂಡುಬರುತ್ತದೆ. ಈ ವೀರಗಲ್ಲು ನಾಲ್ಕು ಪಟ್ಟಿಕೆಗಳಿಂದ ಕೂಡಿದ್ದು ವೀರರಿಬ್ಬರು ವೈರಿಗಳೊಡನೆ ಹೋರಾಡುವ ಶಿಲ್ಪವಾಗಿದೆ. ಉದ್ದ ೭ ಅಡಿ, ಅಗಲ ೨೮ ಇಂಚು, ದಪ್ಪ ೯ ಇಂಚಿನ ಸ್ಮಾರಕದ ಮೊದಲನೆ ಪಟ್ಟಿಕೆಯಲ್ಲಿ ಹೋರಾಟದ ದೃಶ್ಯ. ಎರಡನೆಯ ಪಟ್ಟಿಕೆಯಲ್ಲಿ ನಾಲ್ಕು ಜನ ಅಪ್ಸರೆಯರು ಅಕ್ಕಪಕ್ಕದಲ್ಲಿದ್ದು ಸ್ವರ್ಗಕ್ಕೆ ಕರೆದೊಯ್ಯುವ ದೃಶ್ಯವಿದೆ. ಮೂರನೆಯ ಪಟ್ಟಿಕೆಯಲ್ಲಿ ವೀರರಿಬ್ಬರು ಮಧ್ಯಭಾಗದ ಪೀಠದ ಮೇಲೆ ಒಂದು ಕಾಲು ಮಡಚಿ ಇನ್ನೊಂದು ಕಾಲು ಕೆಳಗೆ ಇಳಿಬಿಟ್ಟು, ಒಂದು ಕೈ ತೊಡೆಯ ಮೇಲೆ, ಇನ್ನೊಂದು ಕೈ ಕೆಳಗೆ ಇಳಿಬಿಟ್ಟು, ಒಬ್ಬರು ಇನ್ನೊಬ್ಬರೊಡನೆ ಪರಸ್ಪರ ಮಾತನಾಡುವ ಭಂಗಿಯಲ್ಲಿ ಕುಳಿತಿರುವರು. ಅಕ್ಕಪಕ್ಕದಲ್ಲಿ ಚಾಮರಧಾರಿಯರು ಕೈಯಲ್ಲಿ ಚಾಮರವನ್ನು ಹಿಡಿದುಕೊಂಡು ಚಾಮರ ಸೇವೆಯಲ್ಲಿ ತೊಡಗಿರುವರು. ನಾಲ್ಕನೆಯ ಪಟ್ಟಿಕೆಯಲ್ಲಿ ಮಧ್ಯದಲ್ಲಿ ಶಿವಲಿಂಗ, ಭಕ್ತ, ಅಕ್ಕಪಕ್ಕದಲ್ಲಿ ಕರುವಿಗೆ

ಹಾಲು ಕುಡಿಸುತ್ತಿರುವ ಆಕಳು ಹಾಗೂ ಇನ್ನೊಂದೆಡೆ ಕುಳಿತ ನಂದಿಯ ಉಬ್ಬುಶಿಲ್ಪಗಳಿವೆ. ಮೇಲ್ಭಾಗದಲ್ಲಿ ಲತಾಸುರುಳಿಯ ಅಲಂಕರಣೆಯಿದೆ.

ಮಹಾಸತಿಗಲ್ಲು ಶಾಸನ

ಊರಿನ ದಕ್ಷಿಣ ಭಾಗದಲ್ಲಿ ಮಾಸ್ತೆಮ್ಮ ಎಂದು ಕರೆಯಲಾಗುವ ಸತಿಗಲ್ಲು ಇದೆ. ಇದಕ್ಕೆ ಊರಿನಲ್ಲಿರುವ ತಳಸಮುದಾಯದವರು ಮಕ್ಕಳಾಗದವರು ಪೂಜೆ ಸಲ್ಲಿಸುವರು. ಗೋಣಿ (ಗ್ವಾ) ಮರದ ಕೆಳಗೆ ಮಹಾಸತಿಗಲ್ಲನ್ನು ಇಟ್ಟು ಅದರ ಮೇಲೆ ಹಾಸುಗಲ್ಲಿನಿಂದ ಮುಚ್ಚಿರುವರು. ಇದರ ಪಟ್ಟಿಕೆಯ ಮೇಲ್ಭಾಗ ಮತ್ತು ಎಡಬದಿಯಲ್ಲಿ ಲಿಪಿಗಳಿವೆ. ಸುಮಾರು ೧೫-೧೬ನೇ ಶತಮಾನದ ಪಾಳೆಯಗಾರರ ಕಾಲದ ಲಿಪಿಸಹಿತ ಮಹಾಸತಿಗಲ್ಲು ಇದಾಗಿದೆ.

ಶಾಸನ ಪಠ್ಯ

ಮಲ ನಾಯಕನ ತಂಮ ಸಿದ್ದಿ ನಾಯಕ ಗೌರಿ ನಾಯಕನ ಮಗ ನಾರನಾಯಕನ ತಂಮ ಬುಶಿವಿಂ ನಾಯಕರ ಶವಿ ನಯಕನ ಮಗ ಪರವರ ಮಲ್ಲ ಇದರಲ್ಲಿ ಮಲನಾಯಕನ ತಮ್ಮ ಸಿದ್ದಿನಾಯಕ ಗೌರಿನಾಯಕನ ಮಗ ನಾರನಾಯಕ ಇವನ ತಮ್ಮ ಬುಶಿವಿಂ ನಾಯಕ, ವಿನಾಯಕನ ಮಗ ಪರವರ ಮಲ್ಲ ಎಂಬ ಉಲ್ಲೇಖ ಕಂಡುಬರುತ್ತದೆ. ನಾಯಕರ ವಂಶಾವಳಿಯನ್ನು ಇದರಿಂದ ತಿಳಿಯಬಹುದಾಗಿದೆ. ಅದರಲ್ಲಿ ಒಂದು ಕಾಲನ್ನು ಮೇಲಕ್ಕೆತ್ತಿ ನಿಂತ ಕುದುರೆ. ಪಕ್ಕದಲ್ಲಿ ಕೈ ಮುಗಿದು ನಿಂತ ವೀರನು ಅವನ ಎಡಗೈ ಬಳಿ ಕತ್ತಿ ಇದೆ. ಪಕ್ಕದಲ್ಲಿ ಸ್ತ್ರೀಯು ಬಲಗೈ ಮೇಲಕ್ಕೆತ್ತಿ ಕೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರುವಳು. ಎಡಗೈ ಕೆಳಗೆ ಇಳಿಬಿಟ್ಟಿರುವಳು. ಪಕ್ಕದಲ್ಲಿ ಮತ್ತೋರ್ವ ವೀರನು ಕೈಮುಗಿದು ನಿಂತಿರುವನು. ಎಡಗೈ ಬಳಿ ಕತ್ತಿಯಿದೆ. ಪಕ್ಕದಲ್ಲಿ ಮತ್ತೋರ್ವ ಸ್ತ್ರೀಯು ಬಲಗೈಯಲ್ಲಿ ನಿಂಬೆಹಣ್ಣನ್ನು ಎಡಗೈಯಲ್ಲಿ ಕನ್ನಡಿ ಹಿಡಿದು ನಿಂತಿರುವಳು. ಒಟ್ಟಾರೆ ಈ ಶಿಲ್ಪದಲ್ಲಿರುವ ವೀರರ ಮತ್ತು ಸ್ತ್ರೀಯರ ವೇಷಭೂಷಣಗಳು ಒಂದೇ ರೀತಿಯಾಗಿವೆ. ವೀರರು ಕೊರಳಲ್ಲಿ ಆಭರಣ, ಕಿವಿಯೋಲೆ, ತಲೆಯ ಮೇಲೆ ಟೊಪ್ಪಿಗೆ, ನೆರಿಗೆಗಳಿಂದ ಕೂಡಿದ ಧೋತಿಯನ್ನು ಧರಿಸಿರುವರು. ಸತಿಯರಿಬ್ಬರು ಕೊರಳಲ್ಲಿ ಸರಗಳು, ಕೈಗಳಲ್ಲಿ ಬಳೆಗಳು, ಕಿವಿಗಳಲ್ಲಿ ಓಲೆಗಳು, ಕಾಲುಗಳಲ್ಲಿ ಕಡಗಗಳು, ಕೇದಿಗೆ ಮುಡಿದಿರುವರು. ನೆರಿಗೆಗಳಿಂದ ಕೂಡಿದ ಸೀರೆಗಳನ್ನು ಧರಿಸಿರುವರು. ಈ ನಾಲ್ಕು ಜನರ ಪಟ್ಟಿಕೆಯ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು ೮ ಅಕ್ಷರ ಲಿಪಿಗಳು, ಪಕ್ಕದ ಪಟ್ಟಿಕೆಯ ಮೇಲೆ ಶಾಸನ ಲಿಪಿ ಕಂಡುಬರುತ್ತದೆ.

ಅಲ್ಲಿಯೇ ಪಕ್ಕದಲ್ಲಿ ದಕ್ಷಿಣ ದಿಕ್ಕಿಗೆ ಕಪ್ಪುಶಿಲೆಯಲ್ಲಿ ಮೇಲ್ಭಾಗದಲ್ಲಿ ಹೂವು-ಚಂದ್ರರು, ಬಲಗೈಯಲ್ಲಿ ಛತ್ರಿ, ಇನ್ನೊಂದು ಎಡಗೈಯಲ್ಲಿ ಕತ್ತಿಯನ್ನು ಇಳಿಬಿಟ್ಟು ನಿಂತಿರುವ ವೀರನ ಚಿತ್ರಣವಿದೆ. ಸತಿ ಪತಿಗಳಿಬ್ಬರೂ ವಿನಮ್ರವಾಗಿ ಕೈ ಮುಗಿದುಕೊಂಡು ನಿಂತಿರುವರು. ಅವರು ಕಂಕುಳಲ್ಲಿ ಕತ್ತಿಯನ್ನು ಇಳಿಬಿಟ್ಟಿರುವರು. ಸತಿ-ಪತಿಗಳಿಬ್ಬರ ಕೇಶವಿನ್ಯಾಸ ಭಿನ್ನವಾಗಿದೆ. ಪತಿಯು ಹೂವಿನಾಕಾರದ ತುರುಬು ಕಟ್ಟಿರುವನು. ಸತಿಯು ರಿಬ್ಬನ್ ಇಟ್ಟುಕೊಂಡು ಜಡೆ ಹಾಕಿರುವಳು. ಹೂವಿನಾಕಾರದ ಕುಚ್ಚಿದೆ. ಇಬ್ಬರ ಕೈಯಲ್ಲಿ, ಕಾಲಲ್ಲಿ ಕಡಗಗಳು, ಕೊರಳಲ್ಲಿ ಕಂಠಹಾರ, ನೆರಿಗೆಗಳಿಂದ ಕೂಡಿದ ವಸ್ತ್ರಗಳನ್ನು ಧರಿಸಿರುವರು. ಅಕ್ಕಪಕ್ಕದಲ್ಲಿ ಕುದುರೆಯು ತನ್ನ ಎರಡೂ ಕಾಲುಗಳನ್ನು ಎತ್ತಿರುವಂತೆ ಚಿತ್ರಿಸಲಾಗಿದೆ. ಅದೇ ರೀತಿ ಕೈಯಲ್ಲಿ ಕತ್ತಿ ಹಿಡಿದು, ಇನ್ನೊಂದು ಕೈಯಲ್ಲಿ ಕಮಂಡಲವನ್ನು ಹಿಡಿದು ನಿಂತಿರುವ ಗಾತ್ರದಲ್ಲಿ ಚಿಕ್ಕದಾದ ಶಿಲ್ಪವಿದೆ. ಕೊರಳಲ್ಲಿ ದಪ್ಪದಾದ ಸರವನ್ನು ಹಾಕಿರುವನು. ಮುಂದುಗಡೆ ಜೋಡಿ ಪಾದಗಳಿವೆ. ಅಕ್ಕ-ಪಕ್ಕ ನಾಗಶಿಲ್ಪಗಳಿವೆ.

ಐತಿಹಾಸಿಕ ವ್ಯಕ್ತಿಗಳು ಮತ್ತು ಅವರ ಸೇವೆಗಳು

ಇತಿಹಾಸದಲ್ಲಿ ಮಹಾನ್‌ಪುರುಷರು ತಮ್ಮದೇ ಆದ ಸಾಧನೆಗಳಿಂದ ಪ್ರಸಿದ್ಧಿ ಪಡೆದಿರುತ್ತಾರೆ. ಇಲ್ಲಿನ ಶಾಸನಗಳು ರಾಜಮಹಾರಾಜರು, ಅಧಿಕಾರಿಗಳು, ರಾಣಿಯರು ಮತ್ತು ಊರಿನ ಹಿರಿಯರು ಮಾಡಿದ ಸೇವೆಯನ್ನು ವ್ಯವಸ್ಥಿತವಾಗಿ ದಾಖಲಿಸಿವೆ. ಕಾಲ ಉಕ್ತವಿಲ್ಲದ ಗೋಣಿಬಸವೇಶ್ವರ ದೇವಾಲಯದ ಕಂಬದಲ್ಲಿರುವ ಶಾಸನವು ಅಲ್ಲಿನ ಮಾಲಗಾರ ಮಾರಸಿಂಗಣನು ನಲ್ವತ್ತು ಗದ್ಯಾಣ ಹಾಗೂ ಒಂದು ಮತ್ತರು ಭೂಮಿ ದಾನ ನೀಡಿದ ಉಲ್ಲೇಖವಿದೆ. ಹಂಪನಕೇರಿಯ ಭೂಕಸಿಂಗಣನ ಮಗ ಮಾದಣ ಮಾಳಿಗೆ ಮನೆಯೊಂದನ್ನು, ಮರಾಳನ ಸಿಂಗ ಸೆಟ್ಟಿಯು ತೆಲ್ಲಿಗರ ಕೇರಿಯಲ್ಲಿ ದೇವರ ನಂದಾದೀಪಕ್ಕಾಗಿ ಸೊಟಿಗೆ ಎಣ್ಣೆಯನ್ನು ದಾನ ಮಾಡಿದ ಉಲ್ಲೇಖವಿದೆ.

ಕ್ರಿ.ಶ. ೧೦೬೧ರ ಜಾಣಗಾರ ಓಣಿಯ ಶಾಸನದಲ್ಲಿ ತ್ರೈಲೋಕ್ಯಮಲ್ಲದೇವನ ಮಾಂಡಲೀಕ, ಮಹಾಸಾಮಂತ ಇರಿವಬೆಡಂಗದೇವ ಭೂಮಿದಾನ ಮಾಡಿರುವ ಉಲ್ಲೇಖವಿದೆ. ಕರುವ ಗುಲ್ಗಿಮಯ್ಯನು ಊರ ಪಶ್ಚಿಮಕ್ಕೆ ತೋಟವನ್ನು,




ಆಚಾರಿ ಕಟ್ಟೆಯಲ್ಲಿರುವ ಶಾಸನ
ರಾಷ್ಟ್ರಕೂಟರ ಕಾಲದ ಶಾಸನ



ಜಾಣಗಾರ ಓಣಿಯಲ್ಲಿರುವ
ಕ.ಚಾಲುಕ್ಯರ ಕಾಲದ ಶಾಸನ



ಅಜ್ಜಯ್ಯನ ಮಠದ ಆವರಣದಲ್ಲಿರುವ
ಕಲಚೂರ್ಯರ ಶಾಸನ



ಕ.ಚಾಲುಕ್ಯರ ಕಾಲದ ಶಾಸನ



ಗೋಣಿಬಸವೇಶ್ವರ ದೇವಾಲಯದ ಕಂಬದ
ಮೇಲಿರುವ ಶಾಸನ




ಭೈರಾಪುರದ ರಾಮಲಿಂಗೇಶ್ವರ
ದೇವಾಲಯದ ಆವರಣದಲ್ಲಿರುವ
ಶಾಸನ



ವೀರಗಲ್ಲು



ವೀರಗಲ್ಲು





ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲು

ಪೂರ್ವಕ್ಕೆ ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ ಹಾಗೂ ಊರ ನಡುವೆ ಶ್ರೀಬಾಗಿಲು ಮಾಡಿಸುತ್ತಾನೆ. ಕರುವನ ಮಗ ಬರ್ಮಯ್ಯ ಭೂಮಿದಾನ ಮಾಡುತ್ತಾನೆ. ಶಾಸನದ ಮುಂದಿನ ಭಾಗದಲ್ಲಿ ಕರುವ ಗುಲ್ಗಿಮಯ್ಯನು ಪೂದಾರೆ, ಬೆಳೆವತ್ತರು, ಪಡಲ್ದಾನ, ಕನ್ಯಾದಾನ, ಕವಿಲೆದಾನ, ಬ್ರಾಹ್ಮಣರಿಗೆ ಸಾಮೆ ಅಕ್ಕಿ, ಬಟ್ಟೆ, ಧರಿಸಲು ಪಾದರಕ್ಷೆ ದಾನ ಕೊಟ್ಟಿರುವ ಉಲ್ಲೇಖವಿದೆ. ತದನಂತರ ಕ್ರಿ.ಶ. ೧೨ನೇ ಶತಮಾನದ ಶಾಸನದಲ್ಲಿ ಕರುವರ ಹೋಚಿಮಯ್ಯನ ಮಗ ಮೂಕಿಮಯ್ಯನು ಶ್ರೀ ಗುಲುಗೇಶ್ವರ ದೇವರ ರಂಗಭೋಗಕ್ಕೆ ಭೂದಾನ ಮಾಡುತ್ತಾನೆ.

ಕ್ರಿ.ಶ. ೧೧೫೭ರ ಸಿದ್ದೇಶ್ವರ ಮಠದ ಶಾಸನದಲ್ಲಿ ಜಗದೇಕಮಲ್ಲ ವೀರಪೆರ್ಮಾಡಿದೇವನ ಉಲ್ಲೇಖವು ಕಂಡುಬರುತ್ತದೆ.

ಕ್ರಿ.ಶ. ೧೧೮೨ರ ಅಜ್ಜಯ್ಯನ ಮಠದ ಆವರಣದಲ್ಲಿರುವ ಶಾಸನವು ನಾಲ್ಕೂರು ಮಹಾಜನರು ತಮಗೆ ತಾಂಬೂಲಕ್ಕಾಗಿ ೧೪ ಗದ್ಯಾಣ ಹಾಗೂ ೩ ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ಬಿಡುತ್ತಾರೆ.

೧೨ನೇ ಶತಮಾನದ ಭೈರಾಪುರದ ಶಾಸನದಲ್ಲಿ ಬಲ್ಲವರಸರ ಉಲ್ಲೇಖವಿದೆ.

ಇವುಗಳಿಂದ ಅಂದಿನ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ವ್ಯಕ್ತಿಗಳ / ಅವರ ಗುಣ ಸ್ವಭಾವದ ಪರಿಚಯವಾಗುತ್ತದೆ. ಈ ಬಹುತೇಕ ದಾನಗಳನ್ನು ಸೋಮವಾರದಂದೇ ನಡೆಸಿರುವುದು ಒಂದು ವಿಶೇಷವಾಗಿದೆ.

ಈ ಬಹುತೇಕ ದಾನಗಳನ್ನು ಸೋಮವಾರದಂದೇ ನಡೆಸಿರುವುದು ಒಂದು ವಿಶೇಷವಾಗಿದೆ.

ಶಾಸನ ಉಲ್ಲೇಖಿತ ಜಾತಿ/ವೃತ್ತಿಗಳು

ಬ್ರಾಹ್ಮಣ, ಗಾಣಿಗ, ಸೆಟ್ಟಿ, ನೇಕಾರ, ಬೇಡ, ಬೆಸ್ತ, ಬೋವ, ಮಾಲಗಾರ, ಪೂಜಾರಿಗಳ ಉಲ್ಲೇಖಗಳು ಇಲ್ಲಿನ ಶಾಸನಗಳಲ್ಲಿ ಕಂಡುಬರುತ್ತವೆ. ಗೋಣಿ ಬಸವೇಶ್ವರ ದೇವಾಲಯದ ಕಂಬದಲ್ಲಿರುವ ಶಾಸನದಲ್ಲಿ ಮಾಲಗಾರ ಮಾರಸಿಂಗಣ, ತೆಲ್ಲಿಗರ ಕೇರಿ, ಮರಾಳನ ಸಿಂಗಸೆಟ್ಟಿಯ ಉಲ್ಲೇಖವಿದೆ. ಜಾಣಗಾರ ಓಣಿಯ ಶಾಸನದಲ್ಲಿ ಬ್ರಾಹ್ಮಣ ಜಾತಿಯ ಉಲ್ಲೇಖ, ಸಿದ್ದೇಶ್ವರ ಮಠದ ಶಾಸನದಲ್ಲಿ ಪೂಜಾರಿ, ಮಾಲೆಗಾರರ ಉಲ್ಲೇಖ, ಅಜ್ಜಯ್ಯನ ಮಠದ ಶಾಸನದಲ್ಲಿ ಬೋವ, ಸಾಲಿಗಾವೆ–ನೇಕಾರ, ಕಬ್ಬಿಲ–ಬೇಡ, ಬೆಸ್ತನ ಉಲ್ಲೇಖಗಳಿವೆ. ಇದರಿಂದ ಅಂದಿನ ಸಮಾಜದಲ್ಲಿದ್ದ ಜಾತಿ, ವೃತ್ತಿಗಳನ್ನು ಗಮನಿಸಬಹುದಾಗಿದೆ.

ನಾಣ್ಯಗಳು

ನಾಡಿನ / ಮಾನವನ ಆರ್ಥಿಕಾಭಿವೃದ್ಧಿಯನ್ನು ಗುರುತಿಸುವಲ್ಲಿ ನಾಣ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಳವಂಡಿಯ ಶಾಸನಗಳಲ್ಲಿ ಗದ್ಯಾಣ, ಹೊಂಗೆ ಪಣ, ಪಣ ಇವುಗಳ ಉಲ್ಲೇಖಗಳಿವೆ. ರಾಜಾದಿತ್ಯನ ಗಣಿತ ಪ್ರಕಾರ ೪ ಹಾಗ = ೧ ಪಣ, ೧೦ ಪಣ = ೧ ಗದ್ಯಾಣಕ್ಕೆ ಸಮವಾಗಿರುತ್ತದೆ.

ತೂಕ ಮತ್ತು ಅಳತೆ

ಹಿಂದಿನವರು ಅನುಸರಿಸಿದ ಅಳತೆ ಮಾಪನಗಳ ಪದ್ಧತಿಯು ಕಂಡುಬರುತ್ತದೆ. ಅಲ್ಲದೆ ಅಂದಿನ ಅರ್ಥವ್ಯವಸ್ಥೆಯ ಬಗೆಗೆ ಮಾಹಿತಿಯನ್ನು ನೀಡುತ್ತದೆ. ೧ ಖಂಡಗ–೪ ಪಂಚಕ, ಕಮ್ಮದಂತಹ ಅಳತೆ ಮಾಪನಗಳನ್ನು ಇಲ್ಲಿ ಕಾಣುತ್ತೇವೆ. ಬರ್ಮಯ್ಯನು ವಸತಿ ಸತ್ರಕ್ಕೆ ೧೮ ಮತ್ತರು, ದೇವರಿಗೆ ೫ ಮತ್ತರು, ಮಠಕ್ಕೆ ಎರೆ ಮತ್ತರು ಭೂಮಿ ದಾನ ಬಿಟ್ಟನೆಂದು ಉಲ್ಲೇಖವಿದೆ. ಮತ್ತರು ಭೂಮಾಪನಕ್ಕೆ ಸಂಬಂಧಿಸಿದೆ. ಮತ್ತರು ಎಂದರೆ ೯೦೦ ಕಂಬಗಳು ಎಂದರ್ಥ. ಜಾಣಗಾರ ಶಾಸನದಲ್ಲಿ ಬ್ರಾಹ್ಮಣರಿಗೆ ಸಾಮೆ ಅಕ್ಕಿ, ಧರಿಸಲು ಬಟ್ಟೆಗಳನ್ನು, ಪಾದರಕ್ಷೆಯನ್ನು ದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ. ಇದರ ಉಲ್ಲೇಖವು ತುಂಬಾ ಅಪರೂಪವಾಗಿದೆ. ಮುಂದಿನ ಭಾಗದಲ್ಲಿ ಕ್ರಿ.ಶ.೧೨ನೇ ಶತಮಾನಕ್ಕೆ ಸೇರಿದ್ದು ಕರುವರ ಹೋಚಿಮಯ್ಯನ ಮಗ ಮೂಕಿಮಯ್ಯನು ಅಳವಿಂಡಿಯ ಮಹಾಜನ ನಾಲ್ಕೂರ್ವರಿಗೆ ಪಾದ ಪೂಜೆ ಮಾಡಿ ಸರ್ವಬಾಧಾ ಪರಿಹಾರವಾಗಿ ಮಾನ್ಯವಾಗಿ ಶ್ರೀ ಗುಲುಗೇಶ್ವರ ದೇವರ ರಂಗಭೋಗಕ್ಕೆ ಭೂದಾನ ನೀಡಿದರ ಬಗ್ಗೆ ಉಲ್ಲೇಖವಿದೆ.

ಅಳವಂಡಿಯ ಶಾಸನಗಳಲ್ಲಿ ಭೂಮಿ, ತೋಟ, ಹೊಲ, ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ, ಮಾಳಿಗೆ ಮನೆ, ಮನೆ, ನಿವೇಶನ, ಬಡ್ಡಿಗಾಗಿ ಹೊನ್ನು, ಪಣ, ಗದ್ಯಾಣ, ಹರಿವಾಣ, ಕನ್ಯೆ, ಗೋವು, ಪಾದರಕ್ಷೆ, ಬಟ್ಟೆ, ದವಸ–ಧಾನ್ಯ, ಎಣ್ಣೆ ಮುಂತಾದವುಗಳನ್ನು ದಾನವಾಗಿ ನೀಡಿರುವ ಉಲ್ಲೇಖವಿದೆ. ಒಟ್ಟಾರೆಯಾಗಿ ಅಳವಂಡಿಯ ಇತಿಹಾಸವನ್ನು ಶಾಸನಗಳ ಹಿನ್ನೆಲೆಯಲ್ಲಿ ನೋಡಿದಾಗ ಅಂದಿನ ಸಂದರ್ಭದಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸಬಹುದು.

♦♦

೩೪

ಗಂಗಾಂಬಿಕೆ ಗೋವರ್ಧನ ಎಸ್.

ಹೊಯ್ಸಳರ ಶಾಸನ ಸಾಹಿತ್ಯ : ಹೊಸ ನೋಟಗಳು

ಕನ್ನಡ ನಾಡಿನ ಚರಿತ್ರೆಯಲ್ಲಿ ಶಾಸನ ಸಾಹಿತ್ಯಕ್ಕೆ ಬಹಳ ವಿಶಿಷ್ಟವಾದ ಸ್ಥಾನವಿದೆ. ಆಳುತ್ತಿರುವ ರಾಜನ ಅವನ ವಂಶಾವಳಿಯ ವರ್ಣನೆ, ತಿಥಿವಾರ ನಕ್ಷತ್ರಗಳು, ದಾನ ಕೊಟ್ಟವನ ವಿವರ, ದಾನ ಪಡೆದವನ ವಿವರ, ದಾನದ ಉದ್ದೇಶ ಮತ್ತು ಅದರ ಸಂಪೂರ್ಣ ವಿವರ ಮುಂತಾದವುಗಳನ್ನು ಶಾಸನಕರ್ತನು ಅಡಕಗೊಳಿಸಿ ಹೇಳಬೇಕಾಗಿದ್ದರೂ ಈ ಒಂದು ಚೌಕಟ್ಟಿನಲ್ಲಿಯೇ ತನ್ನ 'ಪ್ರತಿಭಾ ಸ್ಪರ್ಶ'ದಿಂದ, 'ಬೌದ್ಧಿಕ ಕುಶಲತೆ'ಯಿಂದ ವೈವಿಧ್ಯಮಯವಾದ ಸಾಹಿತ್ಯಕ ಸೌಂದರ್ಯವನ್ನು ಲೇಪಿಸಿ ಶಾಸನಕವಿಯೂ ಆಗಿಬಿಟ್ಟಿರುತ್ತಾನೆ. ರಾಜಾಜ್ಞೆಯ ಪರಿಧಿಯ ಒಳಗಡೆ ಸಾಹಿತ್ಯಾಂಶವೂ ಸೇರ್ಪಡೆಯಾಗಲು ಶಾಸನಕವಿಯ ಔಚಿತ್ಯಪೂರ್ಣತೆಯು ಮುಖ್ಯವಾಗಿ ಕೆಲಸ ಮಾಡಿರುತ್ತದೆ.

ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ, ಶಾಸನಗಳು ತಮ್ಮ ಕಾಲದ ಅಥವಾ ತಮ್ಮ ಹಿಂದಿನ ಸಾಹಿತ್ಯಿಕ ಪ್ರಭಾವಗಳನ್ನು ಗುರುತಿಸಲು ಮೂಲಸಾಮಗ್ರಿಗಳಾಗುತ್ತವೆ. ಪಂಪನಂತಹ ಸತ್ತ್ವಶಾಲಿ ಕವಿಯ ಪ್ರಭಾವವನ್ನು ಮತ್ತೊಂದು ಸಾಹಿತ್ಯ ಕೃತಿಯನ್ನು ಗಮನಿಸುವಷ್ಟೆ ಮುಖ್ಯ ಈ ಶಾಸನಗಳಲ್ಲಿಯೂ ಗಮನಿಸಬಹುದಾಗಿದೆ. ಕಲಬುರ್ಗಿಯವರು ಹೇಳುವಂತೆ ಶಾಸನಗಳು 'ಕವಿಸಾಹಿತ್ಯಾಧ್ಯಯನಕ್ಕೆ ಪೂರಕವಾಗಿವೆ'.

ಶಾಸನಕಾರರು ಶಾಸನಗಳಲ್ಲಿ ಒಂದು ರೀತಿಯ ನಿಯಮದಿಂದ ಕೂಡಿದ ಪದ್ಧತಿಯನ್ನು ಕಾಲಾನುಕ್ರಮದಲ್ಲಿ ಕಂಡುಕೊಂಡಿದ್ದರೂ ಈ ಹೊಯ್ಸಳ ಶಾಸನಗಳಲ್ಲಿ ಒಂದು ವಿಶಿಷ್ಟ ಸ್ವರೂಪವು ಮನೋಜ್ಞವಾದ ರೀತಿಯಲ್ಲಿ ವಿಕಾಸಗೊಂಡು ವಿಸ್ತೃತ ಪ್ರಮಾಣದಲ್ಲಿ ಕಂಗೊಳಿಸುತ್ತದೆ. ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ನಿಯಮವನ್ನು ಹೀಗೆ ಗುರುತಿಸಬಹುದಾಗಿದೆ. ಆರಂಭದಲ್ಲಿ ದೇವತಾಸ್ತುತಿ, ರಾಜನ, ಅವನ ವಂಶಾವಳಿಯ ಪ್ರಶಸ್ತಿ, ದೇಶ ಅಥವಾ ಪ್ರದೇಶದ ಪ್ರಶಂಸೆ ಅಥವಾ ಊರಿನ ವರ್ಣನೆ, ದಾನಿಯ ಮತ್ತು (ಕೆಲವೊಮ್ಮೆ) ಅವನ ವಂಶೀಯರ ವಿವರಣೆ, ದಾನದ ವಿವರಣೆ, ಶಾಪಾಶಯ. ಈ ನಿಯಮ ಕನ್ನಡ ಶಾಸನಗಳ ಮಟ್ಟಿಗೆ ಸಾರ್ವತ್ರಿಕವಾದರೂ ಅವುಗಳಲ್ಲಿನ ವರ್ಣನಾಭಾಗದಲ್ಲಿ ಅನುಪಮವಾದ ಕಾವ್ಯಾತ್ಮಕತೆಯು ಇಣುಕಿರುವುದನ್ನು ಹೊಯ್ಸಳರ ಹಲವು ಶಾಸನಗಳಲ್ಲಿ ಕಾಣಬಹುದಾಗಿದೆ. ಇವರ ಶಾಸನಗಳು ಚಂಪೂ ಶೈಲಿಯಲ್ಲಿ ರಚಿತವಾಗಿರುವುದನ್ನು ಗಮನಿಸಬೇಕು. ಇದಕ್ಕೆ ಮುಖ್ಯ ಕಾರಣವೆಂದರೆ, ಕವಿಗೆ ಶಾಸನವನ್ನು ರಚಿಸುವಾಗ ಬರುವ ನಿಯಮಗಳ ಬಂಧನ; ಶಾಸನದಲ್ಲಿ ಕೆಲವು

೪೭೩/ಎ, 'ಕಾಮಧೇನು'
೨ನೇ ಅಡ್ಡರಸ್ತೆ, ಕಾಡಗೊಂಡನಹಳ್ಳಿ
ಅರೆಬಿಕ್ ಕಾಲೇಜು ಅಂಚೆ
ಬೆಂಗಳೂರು–೫೬೦೦೪೫
ಮೊ: ೯೭೪೦೧ ೯೨೭೦೬

ವಿಷಯಗಳನ್ನು ಖಚಿತವಾಗಿ, ವಿವರವಾಗಿ, ಸಂಗ್ರಹವಾಗಿ, ಹೇಳಬೇಕಾಗುತ್ತದೆ. ಅಂತಹ ಕಡೆಗಳಲ್ಲಿ ಶಾಸನಕಾರರು ಸಾಮಾನ್ಯವಾಗಿ ಗದ್ಯವನ್ನು ಬಳಸುತ್ತಾರೆ ಉಳಿದ ಕಡೆಗಳಲ್ಲಿ ಅಂದರೆ ಸ್ತುತಿಪರವಾದ ಕಡೆಗಳಲ್ಲಿ, ವರ್ಣನೆಗಳು ಬರುವೆಡೆಗಳಲ್ಲಿ ಸಂಸ್ಕೃತ ವೃತ್ತಗಳನ್ನು ಬಳಸುತ್ತಾ ಚಂಪೂ ಶೈಲಿಯನ್ನು ಶಾಸನಗಳಲ್ಲಿಯೂ ಸಾಧಿಸಿಕೊಂಡಿರುವುದು ಪ್ರಸ್ತುತ ಪ್ರಬಂಧದಲ್ಲಿ ಬಹಳ ಮುಖ್ಯವಾಗಿ ಗಮನಿಸಿರುವ ಸಂಗತಿಯಾಗಿದೆ.

ಪ್ರಭಾವ ಮತ್ತು ಪ್ರೇರಣೆಗಳು

ಹೊಯ್ಸಳ ಶಾಸನಗಳನ್ನು ಸಾಹಿತ್ಯದೃಷ್ಟಿಯಿಂದ ಗಮನಿಸುವಾಗ ಎರಡು ಹಂತಗಳಲ್ಲಿ ಗುರುತಿಸಿ ವಿವೇಚಿಸಬಹುದು.

* ಶಾಸನ ಪಾಠಗಳ ಮೇಲೆ ಕಾವ್ಯಲಕ್ಷಣಗಳ ಪ್ರಭಾವ.
* ಶಾಸನ ಕವಿಗಳ ಮೇಲೆ ಸಮಕಾಲೀನ ಅಥವಾ ಹಿಂದಿನ ಕವಿಗಳ ಪ್ರಭಾವ.

ಮೊದಲನೆಯದಾಗಿ, ಶಾಸನ ಪಾಠದ ಮೇಲೆ ಕಾವ್ಯ ಲಕ್ಷಣಗಳ ಪ್ರಭಾವವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಗೋಚರಿಸಿದ ಸಂಗತಿಗಳೆಂದರೆ, ಶಾಸನಕಾರರು ಕಾವ್ಯ ಪರಿಣತರೂ ಉತ್ತಮ ಕಾವ್ಯಲಕ್ಷಣಗಳನ್ನು ಅರಿತಿದ್ದವರೂ ಆಗಿದ್ದ ಕಾರಣ ಶಾಸನದ ಪಠ್ಯದ ಅಂಗವು ಸುಂದರಾಂಗವಾಗುವಂತೆ ಪ್ರದರ್ಶಿಸಿದ್ದಾರೆ. ದಾನ ಕೊಟ್ಟವನ ಹಾಗೂ ಪಡೆದವನ ವಿವರಗಳನ್ನು ನೀಡುವಾಗ ಜಂಬೂದ್ವೀಪದಿಂದ ಆರಂಭಿಸಿ ಸಮುದ್ರ, ಭರತವರ್ಷ ಅಲ್ಲಿನ ಹಿಮಾಚಲ, ಕುಂತಲದೇಶ ಅದರಲ್ಲಿನ ಪ್ರಾಂತಗಳು ಪ್ರಾಂತ್ಯದ ಗ್ರಾಮ, ಆ ಗ್ರಾಮದ ವಿಶಿಷ್ಟತೆ ಧರ್ಮ ದೃಷ್ಟಿಯಿಂದ ಅದರ ಕೋಟೆ ಕಂದಕ ಮುಂತಾದವುಗಳ ವರ್ಣನೆಯನ್ನು ತರಲು ಆರಂಭಿಸಿದರು. ಇದಾದನಂತರ ಆ ದೇಶದ ರಾಜರ, ಜನರ, ಊರಿನ, ಆ ಊರಿನ ಕೆಲವು ಬೀದಿಗಳ ವರ್ಣನೆಗಳು ಬರುತ್ತವೆ. ಊರಿನ ವರ್ಣನೆ ಮಾಡುವಾಗ ಆ ಕಾಲದ ಜಾತಿ ವ್ಯವಸ್ಥೆಯಲ್ಲಿಯೂ ಪ್ರತ್ಯೇಕವಾಗಿ ಬೇರೆ ಬೇರೆ ಜಾತಿಗಳವರ ಕೇರಿಗಳ ವರ್ಣನೆಗಳು ಬರುತ್ತವೆ.

ಶಾಸನಗಳಲ್ಲಿ ನಮಗೆ ದೇವದಾಸಿಯರ ಬಗ್ಗೆ ಪ್ರಾಸಂಗಿಕವಾಗಿ ಉಲ್ಲೇಖಗಳು ಕಂಡುಬರುತ್ತವೆ. ಈ ವರ್ಣನೆ ಶಾಸನದ ಅಂಗವಾಗಿ ಬರದೆ ಅದರ ಸಾಹಿತ್ಯಿಕ ಅಂಶವಾಗಿ ಬಂದಿದೆ. ಈ ರೀತಿಯ ವರ್ಣನೆಯ ಪ್ರವೇಶಕ್ಕೆ ಮುಖ್ಯಕಾರಣ ಎಂದರೆ ಶಾಸನಕಾರರ ಮುಂದಿದ್ದ ಕಾವ್ಯಲಕ್ಷಣಗಳು. ಅಷ್ಟಾದಶ ವರ್ಣನೆಗಳಲ್ಲಿ ಕೆಲವನ್ನಾದರೂ ತರುವ ಪ್ರಯತ್ನಮಾಡುವುದರ ಮೂಲಕ ಶಾಸನಕಾರರು ತಮ್ಮ ಶಾಸನಗಳನ್ನು ಶಾಸನಗಬ್ಬವನ್ನಾಗಿ ಮಾಡಲು ಹೊರಟರು. ನನಗೆ ತೋರುವ ಮಟ್ಟಿಗೆ ಶಾಸ್ತ್ರಕಾರರಾದ ಗುರುಗಳಿಂದ ವಿದ್ಯಾಭ್ಯಾಸವನ್ನು ಪಡೆದು ತಾವು ಕವಿಗಳಾಗಲು ಒಂದು ಅಭ್ಯಾಸದಂತೆ ಅವರು ಶಾಸನಗಳನ್ನು ರಚಿಸಿದ್ದಿರಬೇಕು. ಹಾಗಾಗಿಯೇ ಬಂಧವನ್ನು ತೊರೆಯದ ಹಾಗೆ ಈ ಕವಿಗಳು ಕನ್ನಡ ಕಾವ್ಯಲಕ್ಷಣಗಳನ್ನು ಶಾಸನಗಳ ಮೂಲಕ ಕಟ್ಟುವ ಅಭ್ಯಾಸಿಗಳಾಗಿದ್ದರು.

ಎರಡನೆಯದಾಗಿ, ಶಾಸನ ಕವಿಗಳ ಮೇಲೆ ಸಮಕಾಲೀನ ಅಥವಾ ಹಿಂದಿನ ಕವಿಗಳ ಪ್ರಭಾವದ ಬಗ್ಗೆ ವಿವೇಚಿಸಹೊರಟಾಗ ಹಳಗನ್ನಡ ಕಾವ್ಯ ಸರಕುಗಳೆಂದು ಕರೆಯಬಹುದಾದ ಅಪ್ರತಿಮ ಪ್ರತಾಪ, ಕದನ ತ್ರಿಣೇತ್ರ, ಮನುಜ ಮಹೇಶ್ವರ, ವಾರಣಹಂಸ ಮಯೂರಯಾನೆ, ಕೋಕತಾಳಫಳ ಹೇಮಘಟಸ್ತನಿ–ಈ ತೆರನಾದ ಹಲವು ಪದಪ್ರಯೋಗಗಳು ಆ ಸಂಬಂಧದ ಭಾವ ಕಲ್ಪನೆಗಳೂ ಪ್ರಾಚೀನ ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವುದನ್ನು ಶಾಸನಕವಿಗಳು ಅನಾಮತ್ತಾಗಿ ಎತ್ತಿಕೊಂಡಿರುವುದನ್ನು ಹೊಯ್ಸಳರ ಪೋಷಣೆಯಲ್ಲಿ ರಚಿತವಾದ ಹಲವಾರು ಶಾಸನಗಳಲ್ಲಿ ಕಾಣಬಹುದು. ಇನ್ನೊಂದು ವಿಶೇಷ ಅಂಶವೆಂದರೆ, ಪಂಪನ ಪ್ರಭಾವವನ್ನು ದಟ್ಟವಾಗಿ ಬಹುಪಾಲು ಹೊಯ್ಸಳರ ಶಾಸನಗಳಲ್ಲಿ ಗೋಚರಿಸಿರುವುದು. ಇದಕ್ಕೆ ಕಾರಣ ಬಹುಶಃ ಕವಿಗಳಾಗಬೇಕಾದವರು ಅನಿವಾರ್ಯವಾಗಿ ಪಂಪನನ್ನು ಪ್ರಧಾನಕೇಂದ್ರವಾಗಿ ಅಧ್ಯಯನ ಮಾಡಲೇಬೇಕಿತ್ತು. ಇವು ಎರಡು ತೆರನಾಗಿವೆ.

* ಪಂಪ ತನ್ನ ಕಾವ್ಯದಲ್ಲಿ ನಿರೂಪಿಸಿದ ಮೌಲ್ಯಗಳ ಪ್ರಸಾರ
* ಪಂಪನ ಕೃತಿಗಳ ಪ್ರಸ್ತುತಿಯ ಪ್ರಭಾವ

ಮೊದಲನೆಯ ವರ್ಗದ ಬಗ್ಗೆ ಎಂ. ಚಿದಾನಂದಮೂರ್ತಿ ಹೇಳುವಂತೆ "ಪಂಪನ ಸಮಕಾಲೀನ ಮೌಲ್ಯಗಳೆಲ್ಲವೂ ಪಂಪನ ನಂತರದ ಶಾಸನಗಳಲ್ಲಿ ಕಂಡುಬರುತ್ತವೆ. ಇವು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವುದು ಮಾತ್ರವಲ್ಲದೆ ಭಾರತದ ಪಾತ್ರಗಳೊಡನೆ ಹೆಚ್ಚು ಕಡಿಮೆ ಪಂಪ ಸೇರಿಸುವಂತೆ ಸೇರಿಸಿ ಹೇಳುತ್ತಾರೆ. ಪಂಪಪೂರ್ವದಲ್ಲಿ ಒಂದೆರಡು ಕಡೆ ಅರ್ಜುನನ ಶೌರ್ಯವನ್ನು ಕರ್ಣನ ತ್ಯಾಗವನ್ನೂ ಪ್ರಶಂಸಿದ್ದರೂ ಪಂಪನ ನಂತರ ಶಾಸನಗಳಲ್ಲಿ ಎಲ್ಲಿ ನೋಡಿದರೂ

ಭೀಮಾರ್ಜುನರ ಸಾಹಸ ಕೀರ್ತಿಗಳೂ ಭೀಷ್ಮರ ವೀರ ಮತ್ತು ಶೌಚ ಕರ್ಣನ ನನ್ನಿ ಮತ್ತು ಚಾಗ ಕೌರವನ ಚಲ ಮತ್ತು ಅಭಿಮಾನಿಗಳ ಪ್ರಸಕ್ತಿಯೇ ಪ್ರಸಕ್ತಿ. ಪಂಪ ತನ್ನ ಕಾಲದ ಮೌಲ್ಯಗಳಿಗೆ ಕಾವ್ಯದಲ್ಲಿ ಸ್ಥಾನವನ್ನು ಕೊಟ್ಟು ಅವುಗಳಿಗೆ ಬೆಲೆಯನ್ನೂ ಘನತ್ವವನ್ನೂ ನಿರ್ದಿಷ್ಟತೆಯನ್ನೂ ತಂದುಕೊಟ್ಟಿದ್ದರ ಫಲವಾಗಿ ಅವುಗಳ ಪ್ರಸಾರವಾಗಲು ಪಂಪನ ಕೃತಿಯೊಂದೇ ಕಾರಣ, ಅಂತಹ ಮೌಲ್ಯಗಳನ್ನು ಜನರ ಕಣ್ಣಿಗೆ ಬೀಳುವಂತೆ ಬಾಳಿದ ಆ ಕಾಲದ ಮಹನೀಯರು ಕಾರಣವಲ್ಲ. ಪಂಪನ ಕೃತಿಯೂ ಕಾರಣ, ಬಹುಮಟ್ಟಿಗೆ ಕಾರಣ ಎಂದರ್ಥವಷ್ಟೆ."[೧] ಹೀಗೆ ಪಂಪನಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು ಅವನ ಕಾವ್ಯದಲ್ಲಿನ ಪದ್ಯಗಳ ಪಡಿಯಚ್ಚುಗಳಾಗಿ ಬಂದಿವೆ. ಹೊಯ್ಸಳ ಎರಡನೇ ಬಲ್ಲಾಳನ ಸಾಮಂತನಾದ ಮಂಡಲಸ್ವಾಮಿಯನ್ನು ಹೊಗಳುವ ಕ್ರಿ.ಶ. ೧೧೯೯ರ ನಾಗಮಂಗಲ ಶಾಸನದಲ್ಲಿ ಇದನ್ನು ಬಹಳ ಸೊಗಸಾಗಿ ನೋಡಬಹುದು.

ರವಿ ಸುತನೊಂದು ನನ್ನಿ ಪವಮಾನ ತನೂಜನದೊಂದು ಬಲ್ಪುವಾ
ಸವಸುತನೊಂದು ವಿಕ್ರಮದನುಕ್ರಮಮಶ್ವಿನಿದೇವಪುತ್ರರೊಂ
ದವಿಚಳಮಪ್ಪ ಶಸ್ತ್ರದ ನೆಗಟ್ತೆಯ ಶಾಸ್ತ್ರದ ಪೆರ್ಮೆ ತನ್ನೊಳೊ
ಪ್ಪುವುದೆನೆ ಪಾಂಡವ ಪ್ರತಿಮನಲ್ಲನೆ ಮಂಡಳಸ್ವಾಮಿಲೋಕದೊಳ್[೨]

ಎಂಬುದಾಗಿ ಹೊಗಳುತ್ತದೆ. ಎರಡನೆಯ ವರ್ಗವಾದ ಪಂಪನ ಕೃತಿಗಳ ಪ್ರಭಾವವನ್ನು ಹೊಯ್ಸಳರ ಶಾಸನಗಳಲ್ಲಿ ಹುಡುಕಹೊರಟಾಗ ನನಗೆ ಈ ಕೆಳಗಿನ ಪದ್ಯ ಬಹಳ ಮುಖ್ಯವೆನಿಸುತ್ತದೆ. ಪಂಪನು ಕರ್ಣನ ವ್ಯಕ್ತಿತ್ವವನ್ನು ಕೊಂಡಾಡುವಾಗಿನ ಪ್ರಸಿದ್ಧ ಪದ್ಯವೊಂದು ಹೀಗಿದೆ.

"ನೆನೆಯದಿರಣ್ಣ ಭಾರತದೊಳಿಂ ಪೆಱರಾನುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎಂಬ ಪ್ರಸಿದ್ಧವಾದ ಪಂಪನ ಪದ್ಯದ ಪೂರ್ಣ ಛಾಯೆಯನ್ನು ಒಳಗೊಂಡ ಶಾಸನ ಪದ್ಯವೊಂದು ಹೀಗಿದೆ. ಈ ಪದ್ಯದಲ್ಲಿ ಕರ್ಣನನ್ನು ಹೊಗಳುವಂತೆಯೇ ಮಹಾಸಾಮಂತನಾದ ಚಟ್ಟನನ್ನು ಶಾಸನಕವಿ ಮನದುಂಬಿ ಹಾಡಿ ಹೊಗಳಿರುವ ಪರಿ ಇಂತಿದೆ.

ಚಟ್ಟನೆ ದಾನಿ ಚಟ್ಟನೆ ಮಹಾಗುಣಿ ಚಟ್ಟನೆ ಶೌರ್ಯಸಾಗರಂ
ಚಟ್ಟನೆ ಭೋಗಿ ಚಟ್ಟನೆ ಪಸಾಯಿತನೆಲ್ಲಿಯುವೆಂತು ನೋಳ್ಪಡಂ
ಚಟ್ಟನೆ ಶೌಚಚಟ್ಟನೆ ದೃಢಬ್ರತಿ ಚಟ್ಟನೆ ಸತ್ಯಸಂಗತಂ
ಚಟ್ಟನೆ ಮಾನಿ ಚಟ್ಟನೆ ಮಹಾಪ್ರಭು ಚಟ್ಟನೆ ಮಂದರಸ್ಥಿರಂ[೩]

ಹೊಯ್ಸಳರ ಶಾಸನಗಳ ರಚನಾಶೈಲಿ

ಕೆಲವು ವಿದ್ವಾಂಸರು ಕವಿಗಳನ್ನು, ಶಾಸನಕವಿಗಳನ್ನು ಭೇದದಿಂದಲೇ ನೋಡಿದ್ದಾರೆ. ಕವಿತ್ವವೆನ್ನುವುದು ಎಲ್ಲಿದ್ದರೂ ಶ್ರೇಷ್ಠವೇ. ಅದು ಕಾವ್ಯದಲ್ಲಿರಲೀ, ಶಾಸನಗಳಲ್ಲಿಯೇ ಇರಲೀ ಎರಡೂ ಒಂದೇ. ಶಾಸನಗಳನ್ನು ಬರೆದವರು ತಮ್ಮನ್ನು ಕವಿಗಳೆಂದು ಕರೆದುಕೊಂಡಿದ್ದಾರೆ ; ಶಾಸನಗಳನ್ನು ಕ್ರಮಬದ್ಧವಾಗಿ ಬರೆಯುವ ಸಾರ್ವಭೌಮರೆಂದೂ ಕರೆದುಕೊಂಡಿದ್ದಾರೆ. ಶಾಸನ ಪದ್ಧತಿಯಲ್ಲಿ ಬರುವುದು ಒಂದು ರೀತಿಯಲ್ಲಿ ವಿಶಿಷ್ಟಗುಣವೆ. ಶಾಸನಕಾರರಿಗೆ ಮುಖ್ಯವಾಗಿ ಗಮನದಲ್ಲಿರಬೇಕಾದುದು ಎಂದರೆ **'ಶಾಸನಮಾಗಿರೆ ಪೇಳ್ವುದು'** ಅದನ್ನು **'ಬರೆವುದಂತೆ ಶಾಸನಮಾಗಲ್'** ಈ ಎರಡೂ ನಿಯಮಗಳಿಗೆ ಬಾಧಕವಾಗದಂತೆ ಶಾಸನ ರಚಿತವಾಗಬೇಕು. ಇದಕ್ಕೆ ಇನ್ನೊಂದು ಮಹತ್ವದ ಉದಾಹರಣೆಯೊಂದನ್ನು ನೀಡಬಹುದು. ಪುಣಿಸಮಯ್ಯ ದಂಡನಾಯಕನು ವಿಷ್ಣುವರ್ಧನನ ಸೇನಾಪತಿಯೂ ಸಂಧಿವಿಗ್ರಹಿಯೂ ಆಗಿದ್ದನು. ಮಹಾಮಾತ್ಯ ಕುಲೋದ್ಭವನಾಗಿದ್ದ ಪುಣಿಸಮಯ್ಯನಿಗೆ ಮಂತ್ರಿಪದವಿಯು ವಂಶಪಾರಂಪರ್ಯವಾಗಿ ಬಂದಿರುವಂತೆ ತೋರುತ್ತದೆ. ಇವನ ವಂಶದವರು ಜೈನಮತಾನುಯಾಯಿಗಳಾಗಿದ್ದರು. ಇವರಲ್ಲಿ ಮೊದಲಿಗನು ಚಾಮಚಮೂಪ. ಆತನ ಮಗ ಪುಣಿಸಚಮೂಪ. ಇವನನ್ನು 'ಸಕಳಶಾಸನ ವಾಚಕಚಕ್ರವರ್ತಿ' ಎಂದು ವರ್ಣಿಸಲಾಗಿದೆ.[೪] ಜೊತೆಗೆ ಮಿತ್ರಕುಳಾಬ್ಧಿವರ್ಧನ ಸುಧಾಂಶು, ವಿರೋಧಿ ಬಳಾಂತಕಂ ಎಂತಲೂ ಕೀರ್ತಿತನಾಗಿದ್ದಾನೆ.

ಇನ್ನು ಕೆಲವು ಶಾಸನಕಾರರು ತಮ್ಮ ಶಾಸನಗಳ ಶೈಲಿಯ ಬಗ್ಗೆ ಹೇಳಿಕೊಂಡಿದ್ದಾರೆ. ಕ್ರಿ.ಶ. ೧೧೬೧ರ ತುಮಕೂರು ಜಿಲ್ಲೆಯ ಹೆಗ್ಗೆರೆಯ ಶಾಸನದಲ್ಲಿ[೫] ಆ ಶಾಸನವನ್ನು ಬರೆದವನು ತನ್ನ ಶಾಸನದ ರೀತಿ ಮತ್ತು ಶೈಲಿಯ ಬಗ್ಗೆ ಹೀಗೆ ಹೇಳಿಕೊಂಡಿದ್ದಾನೆ.

ಉಚಿತಪದಾಳಂಕಾರಂ
ಪ್ರಚುರ ರಸಂ ನೆಗಳಲಿನ್ತು ಜಿನಶಾಸನಮಂ

ರಚಿಯಿಸಿದಂ ಹರ ಹಾಸರಚಿತಯಶಂ
ದೇವಭದ್ರ ಮುನಿಪೋತ್ತಂಸಂ

ದಾವಣಗೆರೆ ತಾಲೂಕಿನ ಈಶ್ವರಾಚಾರ್ಯನೆಂಬ ಶಾಸನಕಾರ[೯] ತನ್ನ ಶಾಸನರಚನಾ ಸಂಕ್ಷಿಪ್ತ ವೈಖರಿಯನ್ನು ತಾನೇ ಪ್ರಶಂಸಿಸಿಕೊಂಡಿದ್ದಾನೆ.

ಆ ಚಂದ್ರಾರ್ಕಂ ಸಲುವಿನ
ಮಾಚರಿಸಿದನತುಳ ಧರ್ಮಮಂ ತಿಪ್ಪರಸಂ
ವಾಚಸ್ಪತಿಗರಿದೆನೆ ಸಂ
ಕೋಚದೆ ಶಾಸನಮನೀಶ್ವರಾಚಾರ್ಯಂ ಪೇಳ್ದಂ

ಈಶ್ವರಾಚಾರ್ಯನ ಸಂಗ್ರಹಶಕ್ತಿ ಬ್ರಹ್ಮನಿಗೂ ಅಚ್ಚರಿಯನ್ನೂ ಮೂಡಿಸಿತ್ತಂತೆ. ಮತ್ತೆ ಕೆಲವರು ತಮ್ಮ ಶಾಸನಗಳನ್ನು ಶಾಸನಗಬ್ಬಗಳೆಂದೂ ತಮ್ಮನ್ನು ಕವಿಗಳೆಂದೂ ಕರೆದುಕೊಂಡಿದ್ದಾರೆ. ಶಾಸನಕವಿಗಳು ಹೀಗೆ ತಮ್ಮನ್ನು ತಾವು ಕರೆದುಕೊಳ್ಳಬೇಕಾದರೆ ಅದಕ್ಕೆ ರಾಜಮಾನ್ಯತೆಯೂ ಸಿಗಬೇಕಾಗಿತ್ತು. ಕಾವ್ಯವನ್ನು ಯಾರು ಬೇಕಾದರೂ ತಮ್ಮಿಷ್ಟದಂತೆ ಬರೆಯುವ ಸ್ವಾತಂತ್ರ್ಯವು ಇದ್ದಿತಾದರೂ ರಾಜಾಧಿಕಾರಿಗಳಿಂದ ಪೋಷಿಸಲ್ಪಡುತ್ತಿದ್ದ ಶಾಸನಗಳಲ್ಲಿ ಏನಾದರೂ ಅಧಿಕೃತವಾಗಿ ತಮ್ಮ ವೈಯಕ್ತಿಕ ಸಂಗತಿಗಳನ್ನು ಬರೆದುಕೊಳ್ಳಬೇಕಾದರೆ ಅಂತಹ ಶಾಸನ ರಚನೆಕಾರರಿಗೆ ಹೊಯ್ಸಳ ಮಹಾಮಂಡಲೇಶ್ವರರ ಬೆಂಬಲವೂ ಇತ್ತೆಂದು ಕಂಡುಬರುತ್ತದೆ.

ಹೊಯ್ಸಳರ ಶಾಸನಗಳ ಗದ್ಯಶೈಲಿ

ಪ್ರಧಾನವಾಗಿ, ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಅವರ ಬಿರುದಾವಳಿಗಳನ್ನು ತಿಳಿಸುವ ಗದ್ಯಶೈಲಿ ಗಂಭೀರ ನಿನಾದದಿಂದ ಕೂಡಿದೆ. ಈ ಬಿರುದಾವಳಿಗಳು ಮಾಲೆ ಮಾಲೆಯಾಗಿ, ಲಯಬದ್ಧ ನುಡಿಗಟ್ಟುಗಳಿಂದ ಕೂಡಿ ಅದ್ಭುತ ಸ್ತುತಿಮಾಲಿಕೆಯಾಗಿ ಆಹ್ಲಾದಮಯವಾಗಿವೆ. ಉದಾ: ಮಹಾಪ್ರಧಾನ ದಂಡನಾಯಕ ಗಂಗರಾಜನ ಈ ಬಿರುದಾವಳಿಗಳನ್ನು ಗಮನಿಸಬಹುದು.

"ಸಮಧಿಗತಪಂಚಮಹಾಶಬ್ದ ಮಹಾಸಾಮನ್ತಾದಿಪತಿ ಮಹಾಪ್ರಚಂಡದಂಡನಾಯಕಂ ವೈರಿಭಯದಾಯಕಂ ಗೋತ್ರಪವಿತ್ರಂ ಬುಧಜನಮಿತ್ರ ಶ್ರೀಜೈನಧರ್ಮಾಮೃತಾಂಬುಧಿ ಪ್ರವರ್ದ್ಧನಸುದಾಕರಂ ಸಮ್ಯಕ್ತ್ವರತ್ನಾಕರ ಆಹಾರಾಭಯಭೈಶಜ್ಯಶಾಸ್ತ್ರದಾನವಿನೋದ ಭವ್ಯಜನಹೃದಯಪ್ರಮೋದ ವಿಷ್ಣುವರ್ಧನ ಭೂಪಾಳ ಹೊಯ್ಸಳ ಮಹಾರಾಜ ರಾಜ್ಯಾಭಿಷೇಕ ಪೂರ್ಣ್ನಕುಂಭ ಧರ್ಮ್ಮಹರ್ಮ್ಯೋದ್ಧರಣ ಮೂಳಸ್ತಂಭ ನುಡಿದನ್ತೆಗಣ್ಡಪಗೆವರಂ ಬೆಂಕೊಂಡಂ ದ್ರೋಹಘರಟ್ಟ"[೭]

ಇಂತಹ ಎಡೆಗಳಲ್ಲಿ ಸಂಸ್ಕೃತಮಯತೆ ಭಾಷೆಯಲ್ಲಿ ಒಳಹರಿದಿರುವುದನ್ನು ಲಕ್ಷಿಸಬಹುದು. ಇದಕ್ಕೆ ಕಾರಣ ಶಾಸನಕವಿ ತನ್ನ ಪೋಷಕನನ್ನು ಒಪ್ಪಿಸಬೇಕಿರುತ್ತದೆ. ಅವನಿಗೆ ಸಂತೋಷವನ್ನು ಒದಗಿಸಬೇಕಾಗುತ್ತದೆ. ತನ್ಮೂಲಕ ತನ್ನ ಬರಹಕ್ಕೂ ಮಾನ್ಯತೆಯನ್ನು ಹೊಂದಬೇಕಾಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ತನ್ನನ್ನು ಇದೇ ದಾರಿಯಲ್ಲಿ ಮುಂದುವರೆಯಲು ಅವಕಾಶವನ್ನು ಕಲ್ಪಿಸಿಕೊಟ್ಟ ಪ್ರಭುತ್ವವನ್ನು ಕವಿಯಾದವನು ಅಭಿಮಾನದಿಂದಲೇ ನೆನೆದಿರುವುದು ಆದರಣೀಯ.

ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿನ ವ್ಯಕ್ತಿಚಿತ್ರಗಳು

ಶಾಸನಗಳನ್ನು ಸಾಹಿತ್ಯದ ದೃಷ್ಟಿಯಿಂದ ಗಮನಿಸಿದಾಗ ಅವುಗಳಲ್ಲಿ ಕಂಡುಬರುವ ಒಂದು ವಿಶಿಷ್ಟ ಗುಣವೆಂದರೆ, ಶಾಸನಕಾರರು ನೀಡುವ ವ್ಯಕ್ತಿಚಿತ್ರಗಳು. ಕೆಲವೇ ಪದ್ಯಗಳಲ್ಲಿ ವ್ಯಕ್ತಿಗುಣಗಳು, ಆಡಳಿತ ದಕ್ಷತೆ, ಅವನ ಧಾರ್ಮಿಕ ಜೀವನ, ಮುಂತಾದ ಎಲ್ಲ ವಿವರಗಳುನ್ನು ಒಂದೆರಡು ಪದ್ಯಗಳ ಚೌಕಟ್ಟಿನಲ್ಲಿ ಪರಿಣಾಮಕಾರಿಯಾಗಿ ನೀಡುತ್ತಾರೆ. ಉದಾಹರಣೆಗೆ, ಶಾಸನಕವಿ ಹೊಯ್ಸಳರ ಇಮ್ಮಡಿ ಬಲ್ಲಾಳನ ಕಾಲದಲ್ಲಿನ ಆದಿಗೌಂಡನೆಂಬುವನ ಚಿತ್ರಣವನ್ನು ಹೀಗೆ ಕೊಡುತ್ತಾನೆ.

ಹಸಿದರ ಮೊಗಮಂ ನೋಡಂ
ಹಸಿವುಂ ನೀರಟ್ಕೆಯಿಲ್ಲಂ ಕಂಡೊಡೆ ತನ್ನಂ
ವಸುಮತಿಗೆನಿಪ ಮಹಾಪ್ರಭು
ವಸುಧೆಯೊಳಾರ್ ಕಾಣ್ಬರಾದಿಗೌಂಡಂಗೆಣೆಯಂ[೮]

ಕನ್ನಡ ಸಾಹಿತ್ಯದಲ್ಲಿ ವಿರಳವಾಗಿರುವ ವ್ಯಕ್ತಿಚಿತ್ರಗಳು ಶಾಸನ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತದೆ. ಕನ್ನಡ ಶಾಸನಕಾವ್ಯಗಳನ್ನು ತೆಗೆದುಕೊಂಡರೆ ಪ್ರತಿಯೊಂದು ಶಾಸನವೂ ಸಹ ಅನೇಕ ವ್ಯಕ್ತಿಗಳನ್ನು ಹೀಗೆ ವರ್ಣಿಸುತ್ತವೆ. ಹೀಗೆ

ವರ್ಣಿಸುತ್ತಲೇ ತಮ್ಮ ಕಾಲದ ಅನೇಕ ಮಹತ್ವದ ಸಂಗತಿಗಳನ್ನು ಕಟ್ಟಿಕೊಡುತ್ತವೆ. ಹೀಗೆ ಕಟ್ಟಿಕೊಡುವಾಗ ಹುಟ್ಟುವ ಎಲ್ಲಾ ಲೀಲೆಗಳು ಸ್ಥಳೀಯತೆಗೆ ವಿಶೇಷವಾದ ಒತ್ತನ್ನು ನೀಡುತ್ತದೆ. ಹೀಗೆ "ಶಾಸನಕಾವ್ಯಗಳು ಐತಿಹಾಸಿಕವಾದರೂ ಲಿಖಿತಕಾವ್ಯಗಳಾಗಿವೆ. ನಮ್ಮ ನಾಡು, ನಮ್ಮ ನದಿಗಳು, ನಮ್ಮ ಊರು, ನಮ್ಮ ಗುಡಿಗಳು, ನಮ್ಮ ದೇವರು, ನಮ್ಮ ರಾಜರು, ನಮ್ಮ ಜನಗಳನ್ನು ಸುಂದರವಾಗಿ ಅಭಿಮಾನ ಪೂರ್ವಕವಾಗಿ ಆದರೂ ವಾಸ್ತವವಾಗಿ ವರ್ಣಿಸುವುದರಿಂದ ಇವು ನಾಡಗಬ್ಬಗಳಾಗಿವೆ".

ವಿಶಿಷ್ಟವಾದ ವರ್ಣನೆಗಳು

ಸಾಹಿತ್ಯದ ಅಧಿಕೃತ ರಾಯಭಾರಿಗಳೇನೋ ಎನ್ನುವಂತೆ ಕಾಣುವ ವರ್ಣನೆಗಳು ಶಾಸನಗಳಲ್ಲಿ ವಿಶೇಷವಾಗಿ ಕಿರಿದರೊಳ್ ಪಿರಿದರ್ಥಂ ಎಂಬಂತೆ ಪ್ರಯೋಗಗೊಂಡಿವೆ. ಅಂತೆಯೇ ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಕೂಡ ಅನುಪಮವಾದ ವರ್ಣನೆಗಳು ಹೇರಳವಾಗಿವೆ. ಪುರಾಣ ಪ್ರಪಂಚದ ವ್ಯಕ್ತಿಗಳಾದ ರಾಮ, ಶಿವ, ಅರ್ಜುನ, ವಿಷ್ಣು, ಆದಿಶೇಷರೊಂದಿಗೆ ರತಿ, ಸೀತೆ, ಗೌರಿ, ಅರುಂಧತಿಯರೇ ಮುಂತಾದವರು ಕವಿಕಲ್ಪನೆಯ ಮೂಲಸಾಮಗ್ರಿಯಾಗಿ ಇಲ್ಲಿ ಬಂದಿದ್ದಾರೆ. ಅದರಲ್ಲೂ ಮುಖ್ಯವಾಗಿ ವ್ಯಕ್ತಿವರ್ಣನೆ, ಸ್ಥಳ ವರ್ಣನೆ, ಯುದ್ಧವರ್ಣನೆಗಳು ರೋಚಕವಾಗಿವೆ. ಇವುಗಳ ವಿವರ ಈ ಮುಂದಿನಂತಿದೆ; ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿರುವ ವ್ಯಕ್ತಿವರ್ಣನೆಗಳಲ್ಲಿ ಪುರುಷ ವರ್ಣನೆ, ಸ್ತ್ರೀ ವರ್ಣನೆಗಳೆಂದು ವಿಭಾಗಿಸಿಕೊಂಡು ಸಹ ಗಮನಿಸಬಹುದಾಗಿದೆ. ಸ್ತ್ರೀ ವರ್ಣನೆಯ ಭಾಗದಲ್ಲಿ ಮಹಾಮಂಡಳೇಶ್ವರರನ್ನು ಮತ್ತು ಅವರ ಅಧೀನತೆಯಲ್ಲಿ ರಚಿತವಾದ ಸಾಹಿತ್ಯದಲ್ಲಿ ಪ್ರತಿಪಾದಿತವಾದ ಶಾಸನ ವರ್ಣನೆಗಳನ್ನು ಗಮನಿಸಬಹುದು. ಮಹಾಮಂಡಳೇಶ್ವರರ ಪತ್ನಿಯರು, ಪುತ್ರಿಯರು ಹಾಗೂ ಸಾಮಾನ್ಯ ಮಹಿಳೆಯರ ವರ್ಣನೆಗಳನ್ನು ವಿಶೇಷವಾಗಿ ಗಮನಿಸಬಹುದು. ಚಟ್ಟ ಮತ್ತು ಚಂದವ್ವೆ ದಂಪತಿಗಳ ಈರ್ವರು ಕುವರಿಯರಲ್ಲಿ ಹಿರಿಯಳನ್ನ್ ಶಾಸನಕವಿ ವರ್ಣಿಸಿದ ಪರಿಯಿಂತಿದೆ:

ವೊಳುನುಡಿ ಮತ್ತಕೋಕಿಳಮನೀಕ್ಷಣಮುತ್ಪಳಮಂ ವಿನೀಳಕುಂ
ತಳಚೆಲುವಪ್ಪ ತುಂಬಿಗಳ ಬಂಬಲುಮಂ ಯೆಸೆದಿಪ್ಪು ಕೇಸಭಾ
ರಂಸಲೆ ನವಿಲುಮಂ ನಡೆಗಳೊಳು ಪೊಳೆದೊಪ್ಪುವ ಹಂಸೆಯಂದ
ಮಂಚಂದಲದೇವಿಯಾತ್ಮಜೆ ಮಹಾಸತಿ ದೇಮಲೆಯೆಂತು ಪೋಲುತಳೋ

ಕೋಗಿಲೆ ಇಂಪಾದ ದನಿಯಂತಹ ಮಾತು, ಕನ್ನೈದಿಲೆಯ ನೋಟದ ಸೌಂದರ್ಯ, ದುಂಬಿಗಳ ಗುಂಪಿನಂತಹ ಜಡೆಯ ಹೆಣಿಗೆ, ನವಿಲು ಗರಿಗಳ ಸಮೂಹದಂತಿರುವ ಕೇಶರಾಶಿ, ಹಂಸೆಯನ್ನು ಹೋಲುವಂತಹ ನಡಿಗೆಯಿಂದ ದೇಮಲೆಯು ಶೋಭಾಯಮಾನವಾಗಿದ್ದಳು. ಇನ್ನು ಈಕೆಯ ತಂಗಿ ಕಾಚವ್ವೆಯು[೧೧] ಕುಲದ, ಚಲದ, ಬಳ್ವಿನ, ನೆಲಯಾಗಿ, ನೀತಿಯ ಮೂರ್ತಿಯಾಗಿ, ಕೀರ್ತಿಗೆ ಆಶ್ರಿತಳಾಗಿ, ಸೌಂದರ್ಯದಲ್ಲಿ ರತಿಯಾಗಿ, ನಾರಿಯರಲ್ಲಿ ರತ್ನಮಣಿ(ಶ್ರೇಷ್ಠ)ಯಾಗಿ ಪ್ರಸಿದ್ಧಳಾಗಿದ್ದಳು. ಚಟ್ಟಯ್ಯನ ಮಡದಿ ಶಾಂತಲೆಯ ವ್ಯಕ್ತಿತ್ವವನ್ನು ಗುಣಾತಿಶಯವನ್ನು ಶಾಸನಗಳು ಸೊಗಸಾಗಿ ಕಟ್ಟಿಕೊಟ್ಟಿವೆ:

ನುಡಿದಡೆ ಮಂದರಾಚಳದಲಂ 'ಬುಜಭವಂ ಬರದಕ್ಕರಕ್ಕವಿಂ
ಮ್ಮಡಿ ನೆನಗೀವೆನೆಂದಡೆ ಭವಂ ಕುಡಲಿತ್ತ ಬರಕ್ಕದಂತು ನಾ
ಲ್ವಡಿ ಸರಣಾರ್ತ್ಥಿಗಂಜದಿರೀವೆಂದಡೆ ವಜ್ರದ ಕೋಟಿಗಂ ಪದಿ
ಮ್ಮಡಿಯೆನೆ ಶಾಂತೆ ಶಾಂತಲೆ ಜಸಂ ಬಡೆದಿರ್ದ್ದಳಳಾತಳಾಗ್ರದೊಳು[೧೧]

ಮಾತನಾಡುವಿಕೆಯಲ್ಲಿ ಮಂದರಪರ್ವತದಂತೆ ಗಂಭೀರ, ಬ್ರಹ್ಮನ ಬರವಣಿಗೆಗೂ ಇಮ್ಮಡಿ. ದಾನ ಮಾಡುವುದರಲ್ಲಿ ನಾಲ್ಕುಪಟ್ಟು ಕೊಡುಗೈದಾನಿ, ಶರಣು ಬಂದವರಿಗೆ ಆಶ್ರಯ ನೀಡುವಲ್ಲಿ ಹತ್ತುಪಟ್ಟು ಮಿಗಿಲಾದವಳು ಈ ಶಾಂತಲೆ.

ಸ್ಥಳ ವರ್ಣನೆಯ ವಿಭಾಗದಲ್ಲಿ ಊರು, ದೇವಾಲಯ ಮತ್ತು ಕೆರೆಗಳು ವಿಶೇಷವಾಗಿ ವರ್ಣಿತವಾಗಿರುವುದನ್ನು ಗಮನಿಸಬೇಕು. ಚಂದವಾದ ಅರಸಿಯಕೆರೆಯನ್ನು ಅಂದವಾಗಿ ವರ್ಣಿಸಿರುವ ಪರಿ ಮನೋಜ್ಞವಾಗಿದೆ. ಉದಾಹರಣೆಗೆ

"ಸಾರಂ ನೋಳ್ಪರ್ಗ್ಗೆ ಪೆಂಪುಳ್ಳರಸಿಯ ಕೆರೆಯೊಳ್ವಿಶ್ವವೇದಾಂಕ ವಿಪ್ರರ್ವ್ವಿರಕ್ಕಾ ಯ್ವಾಳ್ಗಳಾಢ್ಯರ್ಪ್ಪರೆದರ್ ಅಚಲ ವಾಕ್ಯರ್ತ್ತುರೀ ಯುರ್ವ್ವಿನುತಾಕಾರಂ ಕಾನ್ತಾಜನಂ ಕಾರುಗಳಮದರಿಳಾಮಂಡನಂ ದೇಗುಳಂ ಗಂಭೀರೊದಾರಂ ತಟಾಕಂ ಫಳಭರಿತವನಂ ಪೂತಪೂದೋಟವೆಂದುಂ"[೧೨]

ಅದೇ ರೀತಿ ಬಾಗಿಯೂರನ್ನು ವರ್ಣಿಸುವಾಗಿನ ಶಾಸನ ಕವಿಯೋರ್ವನ ಕಾವ್ಯಪ್ರಜ್ಞೆಯನ್ನು ಗುರುತಿಸಬಹುದು. ಉದಾ: "ಪೂತರಗಿರ್ದ್ದ ಮಾಮರನ ನೋಡೆ ಜನಂ ಸೊಗಯಿಪ್ಪುದೇಂ . . ಸ್ಥಳಗಳಿನೊಪ್ಪೆ ಪೆರ್ಗ್ಗೆರೆಯು ಕೋಕಿಳನಾದವು ಸುತ್ತಲೆತ್ತಲುಂ ಮೊರೆವಮದಾಳಿ ಪೂತ ನಿಡುಸಂಪಗೆ ಪಾದರಿಯೆತ್ತಸುತ್ತಲುಂ ಭಕ್ತಿ ವಿಶೇಷದಿಂದೆಸೆದು ತೋರ್ಪ್ಪುದು ಯೀಸಲೆ ಬಾಗಿಯೂರೊಳುಂ"[೧೩] ಹರಿಹರದಂಡನಾಯಕನು ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯದ ವರ್ಣನೆ ಹೀಗಿದೆ.

ಮೊದಲಿಂದಂ ಕಲಶಂಬರಂ ಮೆಱೆವ ನಾನಾಚಿತ್ರಪತ್ರಂಗಳಿಂ
ಮುದಮಂ ಬೀಱುವ ಭಾರತಾದಿ ಕಥೆಯಿಂ ಮೆಯ್ವೆತ್ತ ಕೂಟಂಗಳಿಂ
ದಿದು ಪಾಂಚಾಳಿಕೆ ತಳ್ತಮೇರುಗಿರಿಯೋ ಪೇೞಿಂಬಿನಂ ವಿಭ್ರಮಾ
ಸ್ಪದಮಾಗಿರ್ಪುದು ಮಲ್ಲಿಕಾರ್ಜುನ . . . ದೇವಾಲಯ[೧೪]

ಯುದ್ಧಚಿತ್ರಗಳು

ದಂಡನಾಯಕ ಸೋಮೆಯನಾಯಕನು ಹೊಯ್ಸಳರ ಪರವಾಗಿ ನಿಂತು ಶತ್ರುಗಳೊಂದಿಗೆ ಉಗ್ರವಾಗಿ ಹೋರಾಡಿದುದರ ಒಂದು ಯುದ್ಧ ಚಿತ್ರವನ್ನು ಇಲ್ಲಿ ನೋಡಬಹುದು.

ಉಡಿಗುಂ ಸಿಂಗದ ದಾಡಿಯಂ ಛರಿಲೆನಲು ಸಂಕ್ರುದ್ಧನಾಗೇಂದ್ರನಂ
ಪೊಡೆಗುಂದೋರ್ವನೆ ಮೇರೆದಪ್ಪಿ ಕವಿತಪ್ಪಂಭೋನಿಧಾನಂಗಳಂ
ಕುಡಿಗಂ ಸುಜ್ರೈ..... ಡನಾಡೆ ಮುಳಿಸಿಂದೆಂದಂದು ಮಾಜೂಂತವಲಾ
ಪ್ಪಡೆಯಂ ಚಟ್ಟೆಯನಾಯಕಂ ಮಡಿದನೇ ಸಂಗ್ರಾಮರಂಗಾಗ್ರದೊಳು.[೧೫]

ಮಹಾಕೇಸರಿಯನ್ನು, ಉಗ್ರಸರ್ಪವನ್ನು, ಸಾಗರಗಳನ್ನು ಮಣಿಸುವ ಸಾಮರ್ಥ್ಯವುಳ್ಳ ಚಟ್ಟಯ್ಯನಿಗೆ ಎದುರಾದ ವೈರಿಗಳನ್ನು ರಣರಂಗದಲ್ಲಿ ಮಣಿಸುವುದು ಅತಿಸುಲಭ.

ಪೆರ್ಮ್ಮೆಯನೇನ ಬಣ್ಣಿಸುವೆ ಪಾಣ್ಡ್ಯನ್ರಿಪಂ ಮುನಿದಾಸ್ತು ತೂಟ್ದೆ ಬ
ನ್ನೆಮ್ಮೆಗನೂರಲೊಡ್ಡಿದಡೆ ವಿಷ್ಣುನ್ರಿಪಾಳಕ ನೋಡೆ. ವೈರಿಯಂ
ದುಮ್ಮಳಿನ್ನೆರ್ತ್ತೇವಾಜಿಗಜಯೂಥಮನಾಜ್ಜಿಯಟ್ಟಿ ಪೊಯ್ಯೆ ನಿಂ
ದಣ್ಣಿದ ಗನ್ದಸಿನ್ದುರಮ ತನ್ದುಮಹೀಪತಿಗಿತ್ತಂ ಚಟ್ಟಮಂ[೧೬]

ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳು ಮತ್ತು ಅಲಂಕಾರಗಳು

ಭರತನ ಕಾಲದಲ್ಲಿಯೇ ಅಲಂಕಾರಗಳ ವಿವೇಚನೆ ನಡೆದಿದೆ. ಅಲ್ಲಿ ಹೇಳಲ್ಪಟ್ಟಿರುವುದು ಉಪಮಾ, ರೂಪಕ, ದೀಪಕ, ಯಮಕ ಎಂಬ ನಾಲ್ಕೇ ನಾಲ್ಕು ಅಲಂಕಾರಗಳು ಮಾತ್ರ. ಇವುಗಳ ಬಗ್ಗೆ ಹೆಚ್ಚು ವಿವರಪೂರ್ಣವಾಗಿ ಪ್ರಸ್ತಾಪಿಸಿದವನು ಭಾಮಹ. ಕೇವಲ ನಾಲ್ಕಿದ್ದ ಅಲಂಕಾರಗಳ ಸಂಖ್ಯೆ ಈತನಲ್ಲಿ ಮೂವತ್ತಕ್ಕೆ ಏರಿದೆ. ಭಾಮಹನ ನಂತರ ಇವುಗಳ ಬಗ್ಗೆ ಹೆಚ್ಚು ಗಮನಹರಿಸಿ ಶಾಸ್ತ್ರೀಯ ವಿಶ್ಲೇಷಣೆ ಮತ್ತು ವಿಂಗಡಣೆ ಮಾಡಿದವರು ರುದ್ರಟ ಮತ್ತು ಉದ್ಭಟರು. ದಂಡಿ ವಾಮನರೂ ಅಲಂಕಾರಗಳ ಪ್ರಸ್ತಾಪ ಮಾಡಿದ್ದಾರೆ. ಅಲಂಕಾರಗಳನ್ನು ಭೂಷಣಗಳಿಗೆ ಅನ್ವಯಿಸಿ ಹೇಳಿದ್ದನ್ನು ಸ್ಮರಿಸಬಹುದು. ಇದರಿಂದ ಇವು ಕಾವ್ಯ ಶರೀರದ ಮೇಲ್ಮೈಗೆ ಸಂಬಂಧಿಸಿದವೆಂಬ ಭಾವನೆಯೂ ಮೂಡಿತ್ತು. ವೈವಿಧ್ಯಮಯವಾದ ಅಲಂಕಾರಾಭರಣಗಳನ್ನು ಗುರುತಿಸುತ್ತಾ ಸಾಗಿದ್ದರಿಂದಾಗಿ ಅಲಂಕಾರಗಳ ಸಂಖ್ಯೆ ನೂರನ್ನೂ ದಾಟಿತು. ಕಾವ್ಯಕ್ಕೆ ಶೋಭೆಯನ್ನು ಉಂಟು ಮಾಡುವ 'ಎಲ್ಲ'ವೂ ಅಲಂಕಾರಗಳು ಎಂಬ ಅರ್ಥವನ್ನು ಪಡೆಯಿತು.

ಇದರಿಂದಾಗಿ 'ಗುಣ' ಗಳೂ ಕೂಡ ಅಲಂಕಾರಗಳೆಂಬ ಪರಿಧಿಯೊಳಗೆ ಅಡಗಬೇಕಾಯಿತು. ಅಲಂಕಾರವೆಂಬುದು ಒಂದು ಬಗೆಯ ಉಕ್ತಿವೈಚಿತ್ರ್ಯವಾಗಿದ್ದು ರೀತಿ ಅಥವಾ ಮಾರ್ಗವನ್ನು ನಿರ್ಧರಿಸುವಲ್ಲಿ ಕವಿಯ ಮನೋವ್ಯಾಪಾರ ವಕ್ರತೆಯಾಗಿ ಪರಿಭಾವಿಸುವ ವ್ಯಾಪ್ತಿಗೆ ಬೆಳೆಯಿತು. ಮುಂದೆ ಅಲಂಕಾರಗಳನ್ನು ಶಾಸ್ತ್ರೀಯವಾದ ರೀತಿಯಲ್ಲಿ ವಿಂಗಡಿಸಿದವನು ರುದ್ರಟ. ಅಲಂಕಾರಗಳನ್ನು ಮೀಮಾಂಸಕರು ೧. ಶಬ್ದಾಲಂಕಾರಗಳು ೨. ಅರ್ಥಾಲಂಕಾರಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಿದರು. ವರ್ಣ ಅಥವಾ ಶಬ್ದ ಪ್ರಧಾನವಾದುದು ಶಬ್ದಾಲಂಕಾರ. ಅರ್ಥಪ್ರಧಾನವಾದುದು ಅರ್ಥಾಲಂಕಾರ. ವಿಶೇಷವೆಂದರೆ ಕಾವ್ಯಗಳಲ್ಲಿರುವಂತೆಯೇ ಶಾಸನಗಳಲ್ಲಿ ಅದರಲ್ಲೂ ಮುಖ್ಯವಾಗಿ ಹೊಯ್ಸಳರ ಶಾಸನಗಳಲ್ಲಿ ಈ ಎಲ್ಲ ಅಲಂಕಾರಗಳು ನುಸುಳಿರುವುದನ್ನು ಪ್ರಕೃತ ಅಧ್ಯಯನವು ಮುನ್ನೆಲೆಗೆ ತಂದು ತೋರಿಸುತ್ತಿದೆ.

ಶಬ್ದಾಲಂಕಾರಗಳು

ಕಾವ್ಯದಲ್ಲಿ ಪ್ರಯೋಗವಾಗುವ ಶಬ್ದಗಳು ನಿರ್ದಿಷ್ಟವಾದ ಸ್ಥಾನ ಮತ್ತು ವಿಧಾನಗಳಲ್ಲಿ ವಿಶಿಷ್ಟವಾಗಿ ಪ್ರಯೋಗಗಳ್ಳುವುದೇ ಶಬ್ದಾಲಂಕಾರಗಳ ಸ್ವರೂಪ. ಇವುಗಳಲ್ಲಿ ಅನುಪ್ರಾಸ, ಯಮಕ, ಚಿತ್ರಕವಿತ್ವ ಎಂದು ಮುಖ್ಯವಾಗಿ ಮೂರುವಿಧ. ಈ ಬಗೆಯು ಶಾಸನಗಳಲ್ಲಿಯೂ ಗೋಚರವಾಗುತ್ತದೆ.

ಅನುಪ್ರಾಸ

ಪದ್ಯದ ಪ್ರತಿಪದದಲ್ಲೂ ಅಕ್ಷರಗಳ ಆವೃತ್ತಿಯೇ ಅನುಪ್ರಾಸದ ಮುಖ್ಯ ಲಕ್ಷಣ. ಒಂದನ್ನೊಂದು ಹೋಲುವ ಅಕ್ಷರಗಳನ್ನು ಒಂದೆಡೆ ಪ್ರಯೋಗಿಸಿದರೆ ಅದನ್ನು ಅನುಪ್ರಾಸವೆನ್ನುವರು. ಅನುಪ್ರಾಸದ ಸ್ಥಾನದಲ್ಲಿ ಒಂದೋ ಅಥವಾ ಒಂದಕ್ಕಿಂತ ಹೆಚ್ಚಿನ ಅಕ್ಷರಗಳು ಪುನರಾವರ್ತನೆಯಾಗುತ್ತಿದ್ದರೆ ಅದು ವೃತ್ಯನುಪ್ರಾಸ ಎನಿಸಿಕೊಳ್ಳುತ್ತದೆ.

ಅ. ವೃತ್ಯನುಪ್ರಾಸಕ್ಕೆ ಉದಾ:

ಹರಿಯಂ ವಾರಣವಟ್ಟೆವಾರಣಘಟಾನೀಕಂಗಳು ಕೋಪದಿಂ
ತುರಗಾನೀಕವದಟ್ಟಲುರ್ವ್ವಿಸೆ ಹಯಾನೀಕಂ ನರಾನೀಕಮು
ಮರಳುಟ್ಟುತ್ತಿರೆ ನಾರದಂ ನಲಿಯಲಾಜಿಕ್ಷೋಣಿಯೊಳು ಕೊಂದು
ದುರ್ದ್ಧರ ಕೋಪಂ ನಲಿಯುತ್ತಮಿರ್ಪುದಂ ಭುಜಂ ಸಾಮನ್ತಗೋವಿಂದನಂ[೧೭]

'ರ'ಕಾರವು ಇಲ್ಲಿ ಪುನರಾವರ್ತನೆಯಾಗಿ ವೃತ್ಯನುಪ್ರಾಸಕ್ಕೆ ತಕ್ಕ ಉದಾಹರಣೆಯಾಗಿದೆ.

ಆ. ಛೇಕಾನುಪ್ರಾಸಕ್ಕೆ ಉದಾ:

ಎರಡೆರಡು ಪದಗಳು ಜೊತೆಜೊತೆಯಾಗಿ ಪ್ರಯೋಗಗೊಳ್ಳುವುದು ಛೇಕಾನುಪ್ರಾಸದ ಲಕ್ಷಣ. ಇಲ್ಲಿ ಪ್ರಯೋಗ ಗೊಂಡಿರುವ 'ಹರಿ' ಎಂಬ ಪದಗಳು ಒಂದೇ ತೆರನಾಗಿದ್ದರೂ ಭಿನ್ನವಾದ ಅರ್ಥಗಳನ್ನು ಹೊಂದಿವೆ ಎಂಬುದು ಗಮನಿಸಬೇಕಾದ ಅಂಶ. ಉದಾ:

ಹರಿ ಮುಳಿದಾರ್ದ್ದು ಗೆಲ್ದುದೆಜಿದಿಂದಿದಿರಾಂತವಿರೋಧಿವರ್ಗ್ಗಮಂ
ಹರಿಯಿರದೆಯ್ದೆ ಹಾಯ್ದು ಗಜದಂದವೊಲಿರ್ದ್ದರರಾತಿಭೂಭುಜ
ಹರಿಯಣ ಮುಟ್ಟೆ ಮೂದಲಿಸಿ ತಾಗಿ ಮೊಗಂದಿರುವಂ ಹೊಯ್ಯಲಾ
ಹರಿಣದ ಮಾಳ್ಕೆಯಿಂದ ಕೆಲರೋಡಿದರಾಹವ ರಂಗಭೂಮಿಯೊಳು.[೧೮]

ಪುರುಷೋತ್ತಮನಾದ ಹರಿಯು ರಾಕ್ಷಸವರ್ಗವನ್ನು ಗೆದ್ದ ರೀತಿಯಂತೆ, ಗಜದ ಮೇಲೆ ಆಕ್ರಮಣ ಮಾಡಿದ ತೆರದಂತೆ, ಹರಿಯಣ್ಣನು(ಹರಿಹರನು) ಶತ್ರುರಾಜರೊಡನೆ ಹೋರಾಟಕ್ಕಿಳಿದಾಗ ವೈರಿಪಡೆಯು ಸಿಂಹವನ್ನು ಕಂಡು ಪಲಾಯನ ಮಾಡುವ ಜಿಂಕೆಯಂತೆ ರಣರಂಗದಿಂದ ಓಡಿಹೋಯಿತು. ಚಟ್ಟನ ಮಗ ಹರಿಹರನ ಹೆಸರಿನಲ್ಲಿ ಮಾತ್ರ ಸಿಂಹವಿಲ್ಲ; ಬದಲಿಗೆ ಅವನ ಭುಜಬಲದಲ್ಲಿಯೂ ಸಿಂಹಪರಾಕ್ರಮವಿದ್ದು, ಆತ ಅದ್ವಿತೀಯ ವೀರಗ್ರಣಿಯಾಗಿದ್ದನು.

ಯಮಕಾಲಂಕಾರ : ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವೋ ಅಥವಾ ಪದಭಾಗವೋ ಪದ್ಯದ ಆದಿ, ಮಧ್ಯ, ಅಂತ್ಯಗಳಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಅದು ಯಮಕಾಲಂಕಾರವಾಗುತ್ತದೆ. ಇದಕ್ಕೂ ಸಹ ಒಂದು ಶಾಸನ ಪದ್ಯವನ್ನು ಉದಾಹರಿಸಬಹುದು.

ಕಲಿಯುಗಬಲಿ ಕಲಿಯುಗಶಿಬಿ
ಕಲಿಯುಗವಿದ್ಯಾಧರೇಶಿ ಕಲಿಯುಗಕರ್ಣ್ನಂ
ಕಲಿಯುಗಕಳ್ಪಕ್ಷ್ಮಾಜಂ
ಕಲಿಯುಗಸುರಧೇನುವೆನಿಸಿ ಕೊಟ್ಟಂ ಚಟ್ಟಂ[೧೯]

'ಕಲಿಯುಗ' ಎಂಬ ಪದವು ಈ ಪದ್ಯದಲ್ಲಿ ಆದಿ ಮಧ್ಯ ಮತ್ತು ಅಂತ್ಯದಲ್ಲಿ ನಿಯಮಿತವಾಗಿ ಬಂದಿರುವುದನ್ನು ಗಮನಿಸಬಹುದು.

ಚಿತ್ರಕವಿತ್ವ: ಅಕ್ಷರ ಮತ್ತು ಪದಗಳನ್ನು ಚತುರತೆಯಿಂದ ಕೂಡಿ ಕಟ್ಟಿದ ಬಂಧವೇ ಚಿತ್ರಕವಿತ್ವ. ಇದೊಂದು ಪೂರ್ಣವಾದ ರಚನಾ ವಿಶೇಷ. ನಿರೋಷ್ಠ್ಯ, ಅತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ಹಾರಬಂಧ, ಮುರಜಬಂಧ ಎಂದು ಮುಂತಾಗಿ ಇದರಲ್ಲಿ

ವಿಧಗಳಿವೆ. ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಿಂದ ಅತಾಲವ್ಯಕ್ಕೆ (ಈ ಶಾಸನ ಪದ್ಯದಲ್ಲಿ ಎಲ್ಲಿಯೂ ತಾಲವ್ಯಾಕ್ಷರಗಳು ಇಲ್ಲದಿರುವುದನ್ನು ಗಮನಿಸಬೇಕು) ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ.

ಶ್ರೀಮನ್ಮಹಾಪ್ರಧಾನಶಿ
ಖಾಮಣಿಭಂಡಾರವಾಡದಧಿಪಂ ಲಕ್ಷ್ಮೀ
ರಾಮಾಧಿಪಭವನಮನಬಿ
ರಾಮತಿಯಿಂ ಹರಿಹರಾರ್ಯ್ಯಾವಿಭು ಮಾಡಿಸಿದಂ[೨೦]

ಅರ್ಥಾಲಂಕಾರಗಳು

ಅರ್ಥಾಲಂಕಾರಗಳಲ್ಲಿ ಮುಖ್ಯವಾಗಿ ಉಪಮೆ, ರೂಪಕ, ಉತ್ಪ್ರೇಕ್ಷೆ, ಅರ್ಥಾಲಂಕಾರಗಳು ಔಚಿತ್ಯಪೂರ್ಣವಾಗಿ ಶಾಸನಗಳಲ್ಲಿ ಪ್ರಯೋಗಗೊಂಡಿರುವುದನ್ನು ಉದಾಹರಿಸಬಯಸುತ್ತಾನೆ.

ಉಪಮಾಲಂಕಾರ: ಅರ್ಥಾಲಂಕಾರಗಳಲ್ಲಿ ಇದು ಮುಖ್ಯವಾದ ಅಲಂಕಾರವಾಗಿದೆ. ಎರಡು ವಸ್ತುಗಳಿಗೂ ನಡುವೆ ಇರುವ ಹೋಲಿಕೆಯನ್ನು ಇದು ಹೇಳುತ್ತದೆ. ಉದಾ: ಗೋವಿದೇವನ ಮಗನಾದ ಬಿಟ್ಟಿದೇವನ ವ್ಯಕ್ತಿತ್ವವನ್ನು ಮತ್ತು ಅವನ ಪರಾಕ್ರಮಗಳನ್ನು ಶಾಸನಗಳು ಮನದುಂಬಿ ಹಾಡಿಹೊಗಳಿವೆ :

ಬಲಯುಕ್ತಂ ಬಲಭದ್ರನಂತಿನ ಜನಂತೌದಾರ್ಯ್ಯಯುಕ್ತಂ ವಚೋ
ಲಲನಾವಿಭ್ರಮಯುಕ್ತನಬಂಜಭವನಂತಬುಜಾಕ್ಷನಂತೂರ್ಜ್ಜಿತೋ
ಜ್ವಳಲಕ್ಷ್ಮೀವಧುಯುಕ್ತನೆಂದನುದಿನಂ ಸಂವರ್ಣ್ನಿಕುಂ ಧಾತ್ರಿ ಶಾ
ನ್ತಲದೇವೀಸುತನಂ ಚರಿತ್ರಯುತನಂ ಶ್ರೀವಿಷ್ಣು ಸಾಮನ್ತನಂ[೨೧]

ಶಕ್ತಿಸಾಮರ್ಥ್ಯಗಳಲ್ಲಿ ಬಲರಾಮನಂತೆ, ಔದಾರ್ಯದಲ್ಲಿ ಕರ್ಣನಂತೆ, ವಾಗ್ವೈಕರಿಯಲ್ಲಿ ಬ್ರಹ್ಮನಂತೆ, ಶ್ರೇಷ್ಠಳಾದ ಲಕ್ಷ್ಮಿಯಂತಹ ವಧುವನ್ನು ಪಡೆದಿರುವಲ್ಲಿ ವಿಷ್ಣುವಂತೆ ಹೆಸರಾಂತನಾಗಿದ್ದನು ಈ ಸಾಮಂತ ಬಿಟ್ಟಿದೇವನು. "ನುಡಿವಹಿತರ ನಿಟ್ಟೆಲುವ ಮುರಿದು ತೇಯುವ". ಈ ಶಾಸನಪದ್ಯದಲ್ಲಿ ಉಪಮೇಯ ಉಪಮಾನಗಳು ಸ್ಪಷ್ಟವಾಗಿ ಉಕ್ತವಾಗಿರುವುದರಿಂದ ಇದು ಪೂರ್ಣೋಪಮೆ ಎಂದೆನಿಸಿಕೊಳ್ಳುವುದಕ್ಕೆ ಸೂಕ್ತವಾಗಿದೆ. ಇಂತಹ ಹಲವು ಪೂರ್ಣೋಪಮೆಯುಕ್ತವಾದ ಪದ್ಯಗಳು ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಹೇರಳವಾಗಿವೆ.

ರೂಪಕಾಲಂಕಾರ

ಉಪಮಾನಕ್ಕೂ ಉಪಮೇಯಕ್ಕೂ ವ್ಯತ್ಯಾಸವನ್ನು ಮಾಡದೆ ಉಪಮಾನವೇ ಉಪಮೇಯವೆಂದು ಪರಿಗಣಿಸುವುದು ಈ ಅಲಂಕಾರದ ಮುಖ್ಯ ಲಕ್ಷಣ. ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಕೆಲವನ್ನು ಇಲ್ಲಿ ಈ ಅಲಂಕಾರಕ್ಕೆ ಉದಾಹರಿಸಬಹುದಾಗಿದೆ.

ಗೋವಿದೇವನ ಅಧೀನವರ್ತಿಯಾದ ಏಚಭೂಪನು

"ಪಾರದಲಕ್ಷ್ಮಿಯಂ ಪಡೆದು ಸಂಪದದಿಂದ ವಿಭ್ರಾಳಿಗಳ್ಗೆ ಕೈಯ್ಯಾವದನಿತ್ತು ಶೋಭಿಸುವ ಕೀರ್ತಿಗೆ ಪಾತ್ರನಾಗಿದ್ದನು". ಇವನ ಧಾರ್ಮಿಕ ನಿಷ್ಠೆಯಿಂದ "ಕಲಿಕಾಲದ ಕಳ್ಪಭೂಜ"[೨೨] ಎಂದು ಹೆಸರಾಂತವನಾಗಿದ್ದನು.

ಶ್ಲೇಷಾಲಂಕಾರ

ಒಂದು ಶಬ್ದಾನುಪೂರ್ವಿಯಲ್ಲಿ ನಾನಾರ್ಥಗಳನ್ನಿಟ್ಟು ಆ ಅರ್ಥಗಳ ಮೂಲಕ ಬೇರೆ ಬೇರೆ ವಸ್ತುಗಳನ್ನು ವರ್ಣಿಸುವುದು ಶ್ಲೇಷಾಲಂಕಾರವೆನಿಸಿಕೊಳ್ಳುತ್ತದೆ. ಇದಕ್ಕೆ ಉದಾಹರಣೆಯಾಗಿ ಮಹಾಮಂಡಲೇಶ್ವರನಾದ ಕೂಸ ಚಟ್ಟನ ಮಡದಿಯ ವರ್ಣನಾ ಪದ್ಯವನ್ನು[೨೩] ಉಲ್ಲೇಖಿಸುತ್ತಿದ್ದೇನೆ.

ಹರಹಾಸಂ ದರಹಾಸವಾಗೆ ಹಿಮವತ್ಕುತ್ಕೀಳಮುಂ ಶಂಭುಭೂ
ಧರಮುಂ ತುಂಗಕುಚಂ ಗಳಾಗೆ ಮುಖವಾಗಲ್ಚಂದ್ರಮಂ ಚಿಂನದಾ
ವರಣಂ ದುಗ್ಧಸಮುದ್ರವಾಗೆ ದಶನಂ ದಿಗ್ದಂತಿದಂತಂಗಳಾಗಿರೆ
ತಾರಾನಖಕೂಸಚಟ್ಟನ ಯಶಃಶ್ರೀ ಲೋಕದೊಳ್ ವರ್ತ್ತಿಪಳ್

ದೃಷ್ಟಾಂತಾಲಂಕಾರ

ಬೇರೆ ಬೇರೆ ವಾಕ್ಯಗಳಾದರೂ ಅರ್ಥದಲ್ಲಿ ಸಾಮ್ಯತೆಯಿಂದ ಒಂದು ಮತ್ತೊಂದರಿಂದ ಅರ್ಥವಾಗುವಂತಿದ್ದರೆ ಅದು ದೃಷ್ಟಾಂತಾಲಂಕಾರವೆನಿಸುತ್ತದೆ. ಇದಕ್ಕೆ ಹೊಯ್ಸಳ ಮಹಾಮಂಡಳೇಶ್ವರನಾದ 'ಅಂಣ್ಣನ ಗಂಧವಾರಣ' (ಚಟ್ಟನ ಪ್ರಿಯನಾದ) ಗೋವಿದೇವನು ಅಣ್ಣನಂತೆ ವೀರಾಗ್ರಣಿಯಾಗಿದ್ದನು ಎಂಬುದನ್ನು ತಿಳಿಸುವಾಗಿನ ಈ ಶಾಸನೋಕ್ತ ಪದ್ಯಗಳು[೨೪] ದೃಷ್ಟಾಂತಕ್ಕೆ ಸಾಕ್ಷಿಯಾಗಿವೆ:

ಚಂಗಾಳುವನೇಱಿದ ಮಾ
ತಂಗದ ಮೊಗದೊಡ್ಡಿನಲ್ಲಿ ಸಬಳದ ಮಸೆಗಳು
ಪಿಂಗದೆ ಪೋಲ್ತೆಸದಿರ್ದ್ದುವು
ಸಂಗತಗುಣ ಗೋವಿಯಿಱಿದ ಸಾಸನಲಿಪಿಯಂ

ಚೆಂಗಾಳ್ವ ದೊರೆಯನ್ನು ಸೋಲಿಸಿದುದು ಗೋವಿದೇವನ ಬಹುದೊಡ್ಡ ಸಾಧನೆ. ಈ ಶಾಸನೋಕ್ತ ಸಾಲಿನ ಅರ್ಥವೇನೆಂದರೆ, ಗೋವಿದೇವನು ಚೆಂಗಾಳ್ವ ಅರಸನೊಡನೆ ಯುದ್ಧ ಮಾಡುತ್ತಿದ್ದಾಗ, ಆ ಅರಸನು ಕುಳಿತಿದ್ದ ಆನೆಯ ಮುಖದ ಮೇಲೆ ಭರ್ಜಿಯಿಂದ ಇರಿದು ಮಾಡಿದ ಗಾಯಗಳು ಗೋವಿದೇವನ ಶೌರ್ಯವನ್ನು ವರ್ಣಿಸುವ ಶಾಸನದ ಅಕ್ಷರಗಳಂತೆಯಿದ್ದವು.

ಉತ್ಪ್ರೇಕ್ಷಾಲಂಕಾರ

ಒಂದು ವಸ್ತುವನ್ನು ಇನ್ನೊಂದು ವಸ್ತುವಾಗಿ ಇಲ್ಲಿ ಭಾವಿಸಲಾಗಿರುತ್ತದೆ. ಹಾಗೂ ಅಸಂಭಾವ್ಯತೆಯ ಅಂಶ ಪ್ರಧಾನವಾಗಿರುತ್ತದೆ.

ಉದಾಹರಣೆಗೆ : **ವಜ್ರಂವಜ್ರಭೃತೋಹಳಂ ಹಳಭೃತಶ್ಚಕ್ರಂ ತಥಾ ಚಕ್ರಿಣ**
ಶ್ಶಕ್ತಿಶ್ಶಕ್ತಿಧರಸ್ಯಗಾಂಡಿವಧನುರ್ಗ್ಗಾಂಢಿವಕೋದಂಡಿನಃ
ಯಸ್ತದ್ವತ್ಪಿತನೋತಿ ವಿಷ್ಣುನೃಪತೇಃಕಾರ್ಯ್ಯಂ ಕಥಂ ಮಾದೃಶೈ
ರ್ಗ್ಗಂಗೋಗಾಂಗತರಂಗರಂಜಿತಯಶೋರಾಶಿಸ್ಸವರ್ಣ್ನ್ಯೋರ್ ಭವೇತು[೨೫]

ವಜ್ರಧರನಿಗೆ ವಜ್ರಾಯುಧವಾಗಿ, ಹಲಾಯುಧನಿಗೆ(ಬಲರಾಮ) ಹಲಾಯುಧವಾಗಿ, ಚಕ್ರಧರನಿಗೆ ಚಕ್ರಾಯುಧವಾಗಿ ಶಕ್ತಿಧರನಿಗೆ(ಸ್ಕಂಧ)ಶಕ್ತಿಯಾಗಿ, ಗಾಂಢಿವಿಗೆ ಗಾಂಢಿವವಾಗಿ ಕಂಗೊಳಿಸುತ್ತಿದ್ದ ಗಂಗರಾಜನು ವಿಷ್ಣುವರ್ಧನನ ರಾಜಕಾರ್ಯದುರಂಧರನಾಗಿದ್ದನು. (ರಾಜಕಾರ್ಯದಲ್ಲಿ ತಾನೇ ತಾನಾಗಿದ್ದನು)

ಕಾವ್ಯದ ಗುಣ-ರೀತಿ-ಧ್ವನಿ ಸಿದ್ಧಾಂತಗಳ ಛಾಯೆಗಳು

ಕಾವ್ಯಗುಣ-ಶಾಸನಗುಣ

ಅಲಂಕಾರಗಳು ಕಾವ್ಯಕ್ಕೆ ಶೋಭೆಯನ್ನು ತರುವ ಸಾಧನಗಳೇನೋ ನಿಜ. ತಮ್ಮ ವಿಕಾಸದ ಹಂತದಲ್ಲಿ ಗುಣಗಳೂ ಕೂಡ ಅಲಂಕಾರಗಳು ಎಂಬರ್ಥವನ್ನು ಪಡೆದಿವೆ. ಕಾವ್ಯದ ಅಭಿವ್ಯಕ್ತಿಯಲ್ಲಿ ಕಾಣುವ ವಿಶೇಷತೆಯೇ ಗುಣ; ಇದನ್ನೇ ಕಾವ್ಯದ 'ಗುಣ' ಎಂದು ಕರೆಯುತ್ತಾರೆ. ಭರತನ ಕಾಲದಿಂದಲೂ ಕಾವ್ಯದ ದಶಗುಣಗಳ ವಿಚಾರವು ಪ್ರಸ್ತಾಪಗೊಂಡಿದ್ದರೂ ಸಹ ಹತ್ತು ಗುಣಗಳ ಮುಖ್ಯ ಪ್ರತಿಪಾದಕ ದಂಡಿಯೆಂದು ಗುರುತಿಸಲಾಗಿದೆ. ಈ ಕಾವ್ಯದ ಗುಣವಿಚಾರವನ್ನು ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿಯು ಸಹ ಗುರುತಿಸಿದ್ದೇನೆ. ಶ್ಲೇಷೆ, ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತಾ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿಗಳು ಕಾವ್ಯಗುಣಗಳೆಂದು ಕರೆಯಲ್ಪಟ್ಟಿವೆ. ಈ ಗುಣಗಳ ಲಕ್ಷಣಗಳಾದ (ಕ್ರಮವಾಗಿ) ಅಲ್ಪಪ್ರಾಣಗಳು ಸುಭಗ ಪ್ರಯೋಗ, ಎಲ್ಲರಿಗೂ ತಿಳಿಯುವಂತಹ ಅರ್ಥ, ಮೃದುವಾದ ಪದ ಬಂಧುತ್ವವಿರುವಿಕೆ, ರಸವತ್ತಾದ ಮಾತುಗಳು, ಪರುಷ ವರ್ಣಗಳ ಪ್ರಯೋಗ, ಅರ್ಥಸ್ಪಷ್ಟತೆ, ವಿಶೇಷಣ, ಸಮಾಸದಿಂದ ಕೂಡಿರುವಿಕೆ, ಲೋಕ ಪ್ರಸಿದ್ಧವಾದ ಅರ್ಥ, ಉಜ್ವಲವಾದ ರಚನೆಗಳು ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ವಿಪುಲವಾಗಿ ಕಂಡುಬಂದಿವೆ. ಆದರೆ ಬಹುಪಾಲು ಪದ್ಯಗಳಲ್ಲಿ 'ಅರ್ಥವ್ಯಕ್ತಿ' ಗುಣವು ಯಥೋಚಿತವಾಗಿ ಬಳಕೆಯಾಗಿರುವುದು ಸಹ ಒಂದು ವಿಶೇಷವೆ ಸರಿ. ಇದು ಆಯಾ ಶಾಸನಕವಿಗಳ ಲೀಲಾಜಾಲವಾದ ಸೃಜನಶಕ್ತಿಯನ್ನು ಮನಗಾಣಿಸುತ್ತದೆ.

ಕಾವ್ಯರೀತಿ–ಶಾಸನರೀತಿ

ಶಬ್ದ ಮತ್ತು ಅರ್ಥಗಳ ವಿಶಿಷ್ಟ ಬಗೆಯ ವಿನ್ಯಾಸವೆ ರೀತಿಯನ್ನು ನಿರ್ಣಯಿಸುವ ಮಾರ್ಗ. ಭಾಷೆಯ ಬಳಕೆಯೇ ಇಲ್ಲಿ ಪ್ರಧಾನವಾದ ಅಂಶ. ಕವಿ ಬಳಸುವ ಭಾಷೆ ಸಾಮಾನ್ಯ ಭಾಷೆಗಿಂತ ಭಿನ್ನವಾದುದು. ಅದು ಒಂದು ರೀತಿಯಲ್ಲಿ ಅತಿಶಯವಾಗಿರುತ್ತದೆ. ಈ ಬಗೆಯ ಕಾವ್ಯದ ರೀತಿಯನ್ನು ನಿರ್ಧರಿಸುವುದರಲ್ಲಿ 'ಗುಣ'ಗಳ ಪಾತ್ರವು ಮುಖ್ಯವಾಗಿರುತ್ತದೆ. ಏಕೆಂದರೆ ಗುಣ ಮತ್ತು ರೀತಿ ಇವೆರಡಕ್ಕೂ ತೀರ ನಿಕಟವಾದ ಸಂಪರ್ಕವಿರುತ್ತದೆ. ಪ್ರಾಚೀನ ಲಾಕ್ಷಣಿಕರು ರೀತಿಯನ್ನು ಗುರುತಿಸುವಾಗ 'ಪ್ರಾದೇಶಿಕತೆ'ಯನ್ನು ಮುಖ್ಯವಾಗಿ ಪರಿಗಣಿಸಿದ್ದಾರೆ. ವಿದರ್ಭ, ಗೌಡ, ಪಾಂಚಾಲ ಪ್ರದೇಶಗಳ ಹಿನ್ನೆಲೆಯಿಂದ ರೀತಿಯನ್ನು ನೋಡುವಂತಹುದನ್ನು ನಂತರದ ಮೀಮಾಂಸಕರು ಬದಿಗೊತ್ತಿ ಪ್ರಾದೇಶಿಕತೆಗಿಂತ ಪದರಚನೆಗೆ ಹೆಚ್ಚಿನ ಮಹತ್ವ ಕೊಟ್ಟು ವಿವೇಚಿಸಿದರು. ಹಾಗಾಗಿ ವೈದರ್ಭೀ, ಗೌಡಿ, ಪಾಂಚಾಲಿ ಎಂಬ ಮೂರು ಬಗೆಯ ರೀತಿಗಳಲ್ಲಿ ಕಾವ್ಯದ ಒಳಗೆ ಹುದುಗಿರುವ ಬಹುಮುಖ್ಯವಾದ ತತ್ತ್ವಸತ್ವವನ್ನು ಅವಲಂಬಿಸಿ ನಿರ್ಧರಿಸಿದರು. ಹಾಗಾಗಿ ಕುಂತಕನು ಈ ರೀತಿಗಳಿಗೆ ಮಾರ್ಗಗಳೆಂದು ಹೆಸರಿತ್ತು ಸುಕುಮಾರಮಾರ್ಗ, ವಿಚಿತ್ರಮಾರ್ಗ, ಮಧ್ಯಮಮಾರ್ಗಗಳೆಂದು ಕರೆದು ಕಾವ್ಯದ ಅಂತಃಸತ್ವಕ್ಕೆ ಮಹತ್ವ ನೀಡಿದ್ದಾನೆ. ಹೊಯ್ಸಳ ಮಹಾಮಂಡಲೇಶ್ವರರ ಶಾಸನಗಳ ಗದ್ಯಭಾಗಗಳಲ್ಲಿ ಸರಳ ಮತ್ತು ಆಕರ್ಷಕ ಪದ ವಿನ್ಯಾಸ, ದೀರ್ಘ ಸಮಾಸವಿಲ್ಲದಿರುವಿಕೆ, ಮನಮುಟ್ಟುವ ಗುಣ, ಕವಿ ಆಶಯ ಗ್ರಾಹ್ಯತೆ, ರಸಗ್ರಾಹಿತ್ವಗಳುಳ್ಳ ಸುಕುಮಾರಮಾರ್ಗವು ಕಂಡುಬರುತ್ತದೆ. ಇನ್ನು ಪದ್ಯಭಾಗಗಳಲ್ಲಿ ಸಮಾಸಪದಗಳು, ಬಂಧಗಳಲ್ಲಿನ ಬಂಧುರತೆ, ಭಾಷೆಯ ಔನ್ನತ್ಯ, ಪ್ರಸನ್ನತೆ, ಲುಪ್ತವಲ್ಲದ ವಿಸರ್ಗಾಂತಗಳು, ಶಾಸನಕವಿಗಳ ಪ್ರೌಢಿಮೆ, ಹೊಸ ಬಗೆಯ ಪದಲಾಲಿತ್ಯಗಳು, ಅನುಭವ ವೇದ್ಯವಾಗುವ ಮಂಜುಳ ರಚನೆ, ಸಹಜವಾದ ವರ್ಣನಾ ಭಾಗಗಳುಳ್ಳ ವಿಚಿತ್ರಮಾರ್ಗವು ಇರುವುದನ್ನು ನನ್ನ ಪ್ರಸ್ತುತ ಪ್ರಬಂಧವು ಹೇಳಬಯಸುತ್ತದೆ.

ಕಾವ್ಯಧ್ವನಿ –ಧ್ವನಿಯ ವ್ಯಾಪಕತ್ವ –ಶಾಸನಧ್ವನಿ

ಭಾರತೀಯ ಕಾವ್ಯಮೀಮಾಂಸೆಯ ರಂಗದಲ್ಲಿ ಧ್ವನಿಗೆ ಅಪೂರ್ವವಾದ ಸ್ಥಾನವಿದೆ. ಅದೊಂದು ಸಶಕ್ತವಾದ ವಿಚಾರಧಾರೆ. ಆನಂದವರ್ಧನನು ಧ್ವನಿಸಿದ್ದಾಂತದ ಪ್ರತಿಪಾದಕ. ಶಬ್ದಗಳಿಗೆ ವಾಚ್ಯಾರ್ಥವಲ್ಲದೆ ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳನ್ನು ನೀಡುವ ಸಾಮರ್ಥ್ಯವುಂಟು. ಈ ವ್ಯಂಗ್ಯಾರ್ಥವನ್ನು ನೀಡುವ ಶಬ್ದಶಕ್ತಿಯೇ ಧ್ವನಿ ಎಂದು ಆನಂದವರ್ಧನನು ನಿರ್ದೇಶಿಸಿದ್ದಾನೆ. ಆದರೂ ಧ್ವನಿಯ ವ್ಯಾಪಕತ್ವವು ವರ್ಣಧ್ವನಿ, ಪದಧ್ವನಿ ಮತ್ತು ಪ್ರಬಂಧಧ್ವನಿಗಳಲ್ಲಿ ಅಡಗಿದೆ. ಹೀಗಾಗಿ ಕಾವ್ಯಗಳಲ್ಲಿ ಮಾತ್ರವಲ್ಲದೆ ಶಾಸನಗಳಲ್ಲಿಯೂ ಇದಕ್ಕೆ ಉದಾಹರಣೆಗಳನ್ನು ಗುರುತಿಸಲು ಸಾಧ್ಯವಿದೆ. ಅದರಲ್ಲೂ ನನ್ನ ಪ್ರಕೃತ ಅಧ್ಯಯನದಲ್ಲಿ ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಈ ವರ್ಣಧ್ವನಿ, ಪದಧ್ವನಿ, ಪ್ರಬಂಧಧ್ವನಿಗಳನ್ನು ಲಕ್ಷೀಕರಿಸಲು ಸಾಧ್ಯವಿದೆ.

ವರ್ಣಧ್ವನಿ: ಕಾವ್ಯದಲ್ಲಿ ವರ್ಣವಿನ್ಯಾಸದಿಂದ ಉಂಟಾಗುವ ವ್ಯಂಜಕತ್ವಕ್ಕೆ ವರ್ಣಧ್ವನಿ ಎಂದು ಕರೆಯುತ್ತಾರೆ. ಅಂತೆಯೇ ಶಾಸನದಲ್ಲಿ ಕೂಡ ವರ್ಣಗಳಿಂದ ಪದ್ಯದಲ್ಲಿ ಪ್ರತಿಯೊಂದು ಅಂಶವೂ ವ್ಯಂಜಕವಾಗಬಲ್ಲದು.

ಉದಾ: **ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದನೆಲ್ಲಿಗಲ್ಲಿ ಕ**
ಣ್ಣಿತ್ತಿದುದೆಲ್ಲಿಗಲ್ಲಿ ಮನಮಾವೆಡೆಯೆಯ್ದಿದುದೆಲ್ಲಿಗಲ್ಲಿ
ಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆ
ತ್ತೆತ್ತಲು ಮಾವಗಂ ಪಳೆಯ ಮಾಳ್ಕೆವೊಲಾದುದು ಗಂಗರಾಜನಿಂ[೨೬]

ಗಂಗರಾಜನು ಹೋದ ಕಡೆಯಲೆಲ್ಲ, ತಂಗಿದ್ದ ಕಡೆಯಲ್ಲೆಲ್ಲ, ದೃಷ್ಟಿಬಿದ್ದ ಕಡೆಯಲ್ಲೆಲ್ಲ, ಇವನ ಮನಸ್ಸು ಹರಿದ ಕಡೆಯಲ್ಲೆಲ್ಲ ಜಿನಾಲಯಗಳು ಉದ್ಭವಿಸಿದವು. ಇವರಿಂದ ಮತ್ತೆ ಜೈನಧರ್ಮದ ಗತವೈಭವವು ಮರುಕಳಿಸಿತು. ಈ ಪದ್ಯದಲ್ಲಿ ಪ್ರಯೋಗಗೊಂಡಿರುವ ತ, ದ, ಲ, ನ, ಗಳೆಂಬ ದಂತ್ಯಗಳು ಮೃದುವಾದ ಗತಿಯನ್ನು ಒಳಗೊಂಡು ಪದ್ಯದಿಂದ ವೇದ್ಯಗೊಳ್ಳುವ ಶಾಂತರಸಕ್ಕೆ ಪೋಷಕವಾಗುವಂತಿದೆ. ಜೊತೆಗೆ ಉತ್ಪಲಮಾಲಾವೃತ್ತದ ಸೌಮ್ಯ ನಡೆಗೂ ಸಹಕಾರಿಯಾಗಿದೆ. ಇದೇ ವರ್ಣಧ್ವನಿ.

ಪದಧ್ವನಿ : ಎರಡು ಶಬ್ದಗಳ ವಾಚ್ಯಾರ್ಥ ಒಂದೇ ಆಗಿದ್ದರೂ ಅವುಗಳ ವ್ಯಂಜಕತ್ವವು ಮಾತ್ರ ಬೇರೆ ಬೇರೆಯಾಗಿರುತ್ತದೆ. ಅದೇ ಪದಧ್ವನಿ. ಉದಾ–

ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ
ಗಂಗವಾಡಿಯ ಗೊಮ್ಮಟದೇವರ್ಗ್ಗೆ ಸುತ್ತಾಲಯಮನೆಯ್ದೆ ಮಾಡಿಸಿದಂ
ಗಂಗವಾಡಿಯ ತಿಗುಳರಂ ಬೆಂಕೊಣ್ಡು ವೀರಗಂಗಂಗೆ ನಿಮಿರ್ಚ್ಚಿಕೊಟ್ಟಂ
ಗಂಗರಾಜನಾ ಮುನ್ನಿನ ಗಂಗರ ರಾಯಂಗಂ ನೂರ್ಮ್ಮಡಿ ಧನ್ಯನಲ್ತೆ[೨೫]

ಗಂಗವಾಡಿಯಲ್ಲಿ ಎಷ್ಟು ಜಿನಾಲಯಗಳಿವೆಯೋ ಅಷ್ಟನ್ನೂ ಈ ಗಂಗರಾಜನು ಜೀರ್ಣೋದ್ಧಾರ ಮಾಡಿಸಿದ್ದನು. ಗೊಮ್ಮಟಮೂರ್ತಿಗೆ ಸುತ್ತಾಲಯವನ್ನು ಮಾಡಿಸಿದನು ಎಂದು ಹೊಗಳುವ ಸಂದರ್ಭದಲ್ಲಿ ಇದರಲ್ಲಿ ನಾಲ್ಕನೆಯ ಸಾಲಿನಲ್ಲಿ ಹೇಳಲಾಗಿರುವ ವಿಷಯಕ್ಕೆ ನಾವು ವಿಶೇಷವಾದ ಗಮನವನ್ನು ನೀಡಬೇಕು. ಗಂಗರಾಜನಿಗಿಂತ ಹಿಂದೆ ಇದ್ದ ಗಂಗದೊರೆಗಳ ಸಾಹಸಗಳಿಗಿಂತ ಗಂಗರಾಜನ ಸಾಹಸವು ನೂರುಪಟ್ಟು ಹಿರಿದಾದುದಾಗಿತ್ತು. ಈ ಮಾತಿನ ಬಲದಿಂದ ನಾವು ಗಂಗರಾಜನು ಗಂಗದೊರೆಗಳ ಸಂಬಂಧಿ ಆಗಿದ್ದಿರಬಹುದು ಎಂದು ಕೂಡ ಊಹಿಸಬಹುದಾಗಿದೆ. ಕೆಲವರು ಮುನ್ನಿನ ಗಂಗರ ರಾಯ ಎಂದರೆ ಚಾವುಂಡರಾಯ ಎಂದು ಹೇಳುತ್ತಾರೆ. ನಾನು ಮುನ್ನಿನ ಗಂಗರ ರಾಯ ಎಂದರೆ ಹಿಂದೆ ಇದ್ದ ಗಂಗದೊರೆಗಳು ಎಂದೇ ಹೇಳಲು ಬಯಸುತ್ತೇನೆ.

ಪ್ರಬಂಧಧ್ವನಿ: ಮಹಾಕಾವ್ಯಗಳನ್ನು ಮಹಾಪ್ರಬಂಧಧ್ವನಿ ಎಂದು ಕರೆಯುತ್ತಾರೆ. ಒಟ್ಟು ಕಾವ್ಯದಿಂದ ಹೊರಡುವ ಧ್ವನಿಗೆ ಪ್ರಬಂಧಧ್ವನಿ ಎಂದು ಹೆಸರು. ಕಾವ್ಯದ ಪ್ರಬಂಧಧ್ವನಿ ಯಾವುದೆಂಬುದನ್ನು ಗುರುತಿಸುವುದು ಇಡೀ ಕಾವ್ಯದ ಪರಿಣಾಮ ರಮಣೀಯತೆಯಿಂದ; ಕಾವ್ಯದ ಯಾವುದೋ ಒಂದು ಭಾಗದಿಂದಲ್ಲ. ಅಂತೆಯೇ ಒಂದೊಂದು ಶಾಸನವು ಒಂದೊಂದು ಪುಟ್ಟಕಾವ್ಯವಾಗಿರುವುದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ. ಅದರಲ್ಲೂ ಮುಖ್ಯವಾಗಿ ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ರಾಜಕೀಯ ನಡೆಗಳ, ಹೋರಾಟದ, ಯುದ್ಧಚಿತ್ರದ ಸಂಗತಿಗಳು ವರ್ಣಿತವಾಗಿವೆ. ಇಲ್ಲೆಲ್ಲ ನಾನು ವೀರರಸವು ಪ್ರಧಾನವಾಗಿ ಪ್ರಣೀತವಾಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಜೊತೆಜೊತೆಗೆ ಅವರು ನೀಡಿದ ದಾನದ ವಿವರವಿರುವ ಶಾಸನಗಳಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಂಗತಿಗಳು ಇಡಿಕಿರಿದಿರುವುದನ್ನು ಗಮನಿಸಿದಾಗ ಶಾಂತರಸವೂ ಮೇರೆವರಿದಿರುವುದನ್ನೂ ಲಕ್ಷಿಸಬಹುದು. ಈ ಶಾಂತ ಭಾವದ ಪ್ರತೀತಿಯೆ ಪ್ರಬಂಧಧ್ವನಿ.

ಛಂದೋಬಂಧಗಳಾದ ಕಂದ, ರಗಳೆ, ಖ್ಯಾತಕರ್ಣಾಟಕಗಳು ಈ ಅಧ್ಯಾಯದಲ್ಲಿ ಸಂದರ್ಭೋಚಿತವಾಗಿ ಉದಾಹರಣೆಗಳಲ್ಲಿ ಮಿಳಿತವಾಗಿರುವುದನ್ನು ಗಮನಿಸಬಹುದು. ಹಾಗಾಗಿ ಇಲ್ಲಿ ಮತ್ತೆ ವಿವರಿಸ ಹೋಗಿಲ್ಲ. ರಗಳೆ, ಖ್ಯಾತಕರ್ಣಾಟಕಗಳ ಎಲ್ಲ ಭೇದಗಳು ಹೊಯ್ಸಳ ಮಹಾಮಂಡಳೇಶ್ವರರ ಶಾಸನಗಳಲ್ಲಿ ಬಳಕೆಯಾಗಿವೆ. ಕಂದಪದ್ಯವಂತೂ ಎಲ್ಲೆಡೆ ಮೇರೆವರಿದಿದೆಯೆಂದರೆ ಅತಿಶಯೋಕ್ತಿಯಲ್ಲ.

ಅಡಿಟಿಪ್ಪಣಿಗಳು

೦೧. ಚಿದಾನಂದ ಮೂರ್ತಿ ಎಂ, ಪಂಪಕವಿ ಮತ್ತು ಮೌಲ್ಯ ಪ್ರಸಾರ, ಸಂಶೋಧನ ತರಂಗ, ಭಾಗ ೧, ಪುಟ ೧೩-೧೪, ಬೆಂಗಳೂರು.
೦೨. ಎ.ಕ. ೪ (ರೈ), ನಾಗ ೪೭.
೦೩. ಎ.ಕ. ೮ (ಪ), ಬೇ ೪೯, ೪೧೦.
೦೪. ಎ.ಕ. ೪ (ಪ), ಚಾನ ೨.
೦೫. ಎ.ಕ. ೨೪ (ಪ), ತುಮ ೨೧.
೦೬. ಎ.ಕ. ೧೧ (ರೈ), ದಾವ ೭೦.
೦೭. ಎ.ಕ. ೨ (ಪ), ಶ್ರಬೆ ೧೩೬.
೦೮. ಎ.ಕ. ೫ (ರೈ), ಬೇ ೧೩೭.
೦೯. ಎ.ಕ. ೧೨ (ಪ), ಕ ೨೦೧.
೧೦. ಎ.ಕ. ೧೨ (ಪ), ಕ ೨೦೧.
೧೧. ಎ.ಕ. ೨೪ (ಪ), ಚಿನಾ ೯೫.
೧೨. ಎ.ಕ. ೧೦ (ಪ), ಅರ ೪೨.
೧೩. ಎ.ಕ. ೧೦ (ಪ), ಚಪ ೫೧.
೧೪. ಎ.ಕ. ೬ (ಪ), ಮಂ ೧೨೧, ೧೨೨.
೧೫. ಎ.ಕ. ೧೨ (ಪ), ಕ ೨೦೧.
೧೬. ಅದೇ ೨೦೦.
೧೭. ಅದೇ ೨೦೦.
೧೮. ಅದೇ ೨೦೦.
೧೯. ಎ.ಕ. ೮ (ಪ), ಬೇ ೪೯-೪೧೦.
೨೦. ಎ.ಕ. ೬ (ಪ), ಮಂ ೧೨೧, ೧೨೨.
೨೧. ಎ.ಕ. ೨೪ (ಪ), ಚಿನಾ ೧೩.
೨೨. ಎ.ಕ. (ಪ), ಚಿನಾ ೩೨.
೨೩. ಎ.ಕ. ೮ (ಪ), ಬೇ ೪೯, ೪೧೦.
೨೪. ಎ.ಕ. ೨೪ (ಪ), ಚಿನಾ ೧೩.
೨೫. ಎ.ಕ. ೨ (ಪ), ಶ್ರಬೆ ೧೫೪.
೨೬. ಎ.ಕ. ೨ (ಪ), ಶ್ರಬೆ ೮೨.
೨೭. ಎ.ಕ. ೨ (ಪ), ಶ್ರಬೆ ೮೨.

◆◆

ಗೀತಾ ಪಾಟೀಲ

ಕೊಪ್ಪಳ ಜಿಲ್ಲೆಯ ವಿಶಿಷ್ಟ ವೀರಗಲ್ಲುಗಳು

ನಮ್ಮ ನಾಡಿನ ಚರಿತ್ರೆವನ್ನು ಕಟ್ಟಿಕೊಡುವಲ್ಲಿ ಸ್ಮಾರಕ ಶಿಲ್ಪಗಳು ಪ್ರಮುಖ ಆಕರ ಸಾಮಗ್ರಿಗಳಾಗಿವೆ. ನಮ್ಮ ಹಿರಿಯರ ಜೀವನ ಶೈಲಿಯ ಬಗ್ಗೆ ತಿಳಿದುಕೊಳ್ಳಲು ಹಳ್ಳಿ-ಹಳ್ಳಿಗಳಲ್ಲಿ ಸ್ಮಾರಕ ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಚರಿತ್ರೆಕಾರರು ತಮ್ಮ ಅಧ್ಯಯನದಲ್ಲಿ ಸ್ಮಾರಕ ಶಿಲ್ಪಗಳನ್ನು ಪ್ರಮುಖವಾಗಿ ಬಳಸಿಕೊಂಡು ಸಾಂಸ್ಕೃತಿಕ ಹಿರಿಮೆಯನ್ನು ಕಟ್ಟಿಕೊಟ್ಟಿದ್ದಾರೆ. ಶಿಲ್ಪಗಳು ನಿಜವಾಗಿ ಸವಾಲಾಗಿ ನಿಂತಿದ್ದು ಸ್ಮಾರಕಶಿಲೆಗಳು, ವೀರನ ತ್ಯಾಗ, ಬಲಿದಾನ, ಮಹಾಸತಿಯರ ಆದರ್ಶಗುಣ, ಸನ್ಯಾಸಿಗಳ ಪಾರಮಾರ್ಥಿಕ ಗುಣಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಹೇಳಬೇಕಾಗುತ್ತಿತ್ತು. ಶಿಲ್ಪಗಳು ಅನಕ್ಷರಸ್ಥರಿಗೂ ಸುಲಭವಾಗಿ ಅರ್ಥವಾಗು ವಂತಿದ್ದವು. ಸ್ಮಾರಕ ಶಿಲೆಗಳಲ್ಲಿ ವ್ಯಕ್ತಿಗಳ ಶಿಲ್ಪದ ಜೊತೆಗೆ ಅವರ ಉಡುಪು, ಆಭರಣಗಳು, ಕೇಶ ಶೃಂಗಾರ ಮೊದಲಾದವುಗಳಲ್ಲಿ ಬಗ್ಗೆ ತಿಳಿದುಕೊಳ್ಳಬಹುದು.

ಕೊಪ್ಪಳ ತಾಲೂಕು ಅಳವಂಡಿ ಹೊಬಳಿ ಹಲಗೇರಿಯ ಗ್ರಾಮದಲ್ಲಿ ಒಂದು ವೀರಗಲ್ಲು ಶಿಲ್ಪ ಶೈಲಿಯ ದೃಷ್ಟಿಯಿಂದ ಅತಿ ಮಹತ್ವದಾಗಿದೆ. ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. (ಚಿತ್ರ-೧) ಕ್ರಿ.ಶ. ೧೨-೧೩ನೇಯ ಶತಮಾನಕ್ಕೆ ಸಂಬಂಧಿಸಿದೆ. ಮೂರುಹಂತಗಳನ್ನು ಕಂಡರಿಸಲಾಗಿದ್ದು ಮೊದಲನೆಯ ಹಂತದಲ್ಲಿ ಮೂರು ಜನ ವೀರರಿದ್ದು ಮೂವರು ಹೋರಾಟವನ್ನು ಮಾಡುತ್ತಿದ್ದಾರೆ. ಚೂರಿಯನ್ನು ಹಿಡಿದುಕೊಂಡಿದ್ದಾರೆ. ಒಬ್ಬ ವೀರನು ಮಧ್ಯದಲ್ಲಿರುವ ವೀರನಿಗೆ ಚೂರಿಯಿಂದ ಇರಿಯಲು ಬಂದಿದ್ದಾನೆ. ಎದುರಿಗೆ ಇರುವ ವೀರನು ಅದನ್ನು ಎಡಗೈಯಿಂದ ಆ ಚೂರಿಯನ್ನು ಮುಂದಿನ ಭಾಗವನ್ನು ಹಿಡಿದುಕೊಂಡಿದ್ದಾನೆ. ತನ್ನ ಬಲಗೈಯ ಚೂರಿಯಿಂದ ಎದುರಾಳಿ ಚುಚ್ಚುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಇವನ ಹಿಂದೆ ಮತ್ತೊಬ್ಬ ವೀರನು ತನ್ನ ಬಲಗೈಯಲ್ಲಿ ಚೂರಿಯನ್ನು ಹಿಡಿದು ಎಡಗೈಯಲ್ಲಿ ಮೇಲೆ ಎತ್ತಿದ್ದಾನೆ. ಈ ಮೂವರು ವೀರರು ಹೋರಾಟವನ್ನು ಮಾಡುತ್ತಿದ್ದಾರೆ. ಶಿಲ್ಪದ ಎರಡನೇ ಹಂತದಲ್ಲಿ ಮಂಟಪದಲ್ಲಿ ಇಬ್ಬರು ವೀರರು ಕುಳಿತು ಕೊಂಡಿದ್ದಾರೆ. ಇವರ ಪಕ್ಕದಲ್ಲಿ ಒಬ್ಬಳು ಕೈಮುಗಿದು ನಿಂತುಕೊಂಡಿದ್ದಾಳೆ. ಇನ್ನೊಬ್ಬರು ಡೊಳ್ಳು ಬಾರಿಸುತ್ತಾ ಬಲಗೈಯನ್ನು ಮೇಲೆ ಎತ್ತಿದ್ದಾಳೆ. ಮೂರನೇ ಹಂತದಲ್ಲಿ ಒಬ್ಬ ವೀರ ಇವನ ಮಧ್ಯೆ ಶಿವಲಿಂಗ ಮತ್ತೆ ಇಬ್ಬರು ವೀರರು ಕೈಮುಗಿದು ನಿಂತುಕೊಂಡಿದ್ದನು ಶಿಲ್ಪದಲ್ಲಿ ಕಾಣಬಹುದು.

ಕುಷ್ಟಗಿ ತಾಲೂಕು ಹನಮನಾಳ ಹೊಬಳಿ ಶ್ಯಾಡಲಗಿ (ಶ್ಯಾಡಲಗೇರಿ)ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿ ನೆಡಲಾಗಿದೆ. ಕ್ರಿ.ಶ ಸು. ೧೩ನೆಯ ಶತಮಾನ ಇದು ಮೂರು ಹಂತಗಳನ್ನು ಹೊಂದಿದೆ. ಮೊದಲ ಹಂತದಲ್ಲಿ ವೀರನು ಕೈಯಲ್ಲಿ

ಉಪನ್ಯಾಸಕರು, ವಿಜಯನಗರ
ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ, ಕೊಪ್ಪಳ
ಮೊ: ೮೭೬೨೨ ೨೯೬೬೬

ಬಿಲ್ಲು ಮತ್ತು ಬಾಣವನ್ನು ಹಿಡಿದು ಯುದ್ಧ ಮಾಡುತ್ತಿರುವಂತೆ ಬಿಡಿಸಲಾಗಿದೆ. ಎರಡನೆಯ ಹಂತದಲ್ಲಿ ಸೇವಕಿಯರು ವೀರನನ್ನು ಸ್ವರ್ಗಕ್ಕೆ ಒಯ್ಯುತ್ತಿರುವ ಸನ್ನಿವೇಶವನ್ನು ಬಿಡಿಸಲಾಗಿದೆ. ಮೂರನೆಯ ಹಂತದಲ್ಲಿ ಇಬ್ಬರು ವ್ಯಕ್ತಿಗಳ ಶಿಲ್ಪವಿದ್ದು, ಒಬ್ಬ ವ್ಯಕ್ತಿ ಧ್ಯಾನಾಸ್ತನಾಗಿದ್ದು ಮತ್ತೊಬ್ಬ ವ್ಯಕ್ತಿ ಲಿಂಗದ ಮುಂದೆ ನಿಂತಿದ್ದಾನೆ. ಲಿಂಗದ ಬಲ ಭಾಗದಲ್ಲಿ ನಂದಿಯನ್ನು ಬಿಡಿಸಲಾಗಿದೆ.

ತಾಲೂಕು ವೆಂಕಟಗಿರಿ ಹೋಬಳಿ ಮುಕ್ಕುಂಪಿ ನಾಗಮ್ಮ ವಾಲೇಕಾರ ಹೊಲದಲ್ಲಿ ಪ್ರಸ್ತುತ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು, ಕೆಳಭಾಗದ ಮೊದಲ ಹಂತವು ಅಶ್ವರೂಢರಾಗಿರುವ ವೀರರಿಬ್ಬರೂ ಭರ್ಚಿಗಳನ್ನು ಹಿಡಿದು ಪರಸ್ಪರ ಅಭಿಮುಖವಾಗಿ ಹೋರಾಡುತ್ತಿರುವಂತೆ ತೋರಿಸಲಾಗಿದೆ. ಕ್ರಿ.ಶ.ಸು. ೧೩ನೆಯ ಶತಮಾನ ಈ ವೀರರಿಬ್ಬರೂ ತುರುಬು ಕಟ್ಟಿರುವರು. ಎರಡನೆಯ ಹಂತದಲ್ಲಿ ಮಂಟಪದೊಳಗೆ ಕೈ ಮುಗಿದುಕೊಂಡು ಪದ್ಮಾಸನದಲ್ಲಿ ಕುಳಿತಿರುವ ವೀರನನ್ನು ಅಪ್ಸರೆಯರಿಬ್ಬರೂ ಚಾಮರಸೇವೆಯೊಂದಿಗೆ ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ಮೂರನೇಯ ಹಂತದಲ್ಲಿ ಶಿವಲಿಂಗ ಹಾಗೂ ಲಿಂಗವನ್ನು ಪೂಜಿಸುತ್ತಿರುವ ಯತಿ ಮತ್ತು ನಂದಿಯನ್ನು ಚಿತ್ರಿಸಲಾಗಿದೆ. ಯತಿಯ ಬಲಭಾಗದಲ್ಲಿ ವೀರರಿಬ್ಬರೂ ಪೀಠದ ಮೇಲೆ ಕೈ ಮುಗಿದುಕೊಂಡು ಕುಳಿತಿರುವ ದೃಶ್ಯವಿದೆ. ಈ ಶಿಲ್ಪದಲ್ಲಿ ವಿಶೇಷವೆಂದರೆ ಹೋರಾಟವೊಂದರಲ್ಲಿ ವೀರರಿಬ್ಬರೂ ಮಡಿದಿದ್ದಾರೆ, ಆದರೆ ಸ್ವರ್ಗದ ಹಂತದಲ್ಲಿ ಒಬ್ಬ ವೀರನು ಮಾತ್ರವೇ ಸ್ವರ್ಗ ಪ್ರಯಾಣ ಮಾಡುತ್ತಿರುವಂತೆ ತೋರಲಾಗಿದೆ.

ಇದೇ ಗ್ರಾಮದ ನಾಗಮ್ಮ ವಾಲೇಕಾರ್ ಹೊಲದಲ್ಲಿ ಕ್ರಿ.ಶ ಸು. ೧೩ನೆಯ ಶತಮಾನ ಈ ಸ್ಮಾರಕ ಶಿಲ್ಪವು ಮೂರು ಹಂತದಲ್ಲಿದ್ದು ಮೊದಲನೇ ಹಂತದಲ್ಲಿ ಎರಡು ಕೈಯಲ್ಲಿ ವೀರನು ತಲೆಯಲ್ಲಿ ತುರುಬು ಮುಡಿಕಟ್ಟಿ ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಹಾರ, ಭುಜದಲ್ಲಿ ಭುಜಬಂಧಿ, ತೋಳಲ್ಲಿ ಬಾಹುಹೊಳೆಯ, ಕೈಯಲ್ಲಿ ಕೈಕಡಗ, ಕಾಲ್ಗಡಗ ಧರಿಸಿದ್ದಾರೆ ಮತ್ತು ವೀರನು ತನ್ನ ಎರಡು ಕೈಯಲ್ಲಿ, ಭರ್ಚಿಯನ್ನು ಹಿಡಿದು ಶತ್ರುವಿಗೆ ತಿವಿಯುತ್ತಿರುವ ದೃಶ್ಯವಿದೆ. ಎರಡನೇ ಹಂತದಲ್ಲಿ ಅಪ್ಸರೆಯರು ವೀರ ಸತಿಯನ್ನು ಸ್ವರ್ಗಕ್ಕೆ ಕೊಡೊಯ್ಯುತ್ತಿರುವ ಸನ್ನಿವೇಶವನ್ನು ಕಂಡರಿಸಲಾಗಿದೆ. ಮೂರನೇ ಹಂತದಲ್ಲಿ ಶಿವಸಾಯುಜ್ಯದಲ್ಲಿ ವೀರನಿದ್ದಾನೆ.

ಕೊಪ್ಪಳ ತಾಲೂಕಿನ ಹಿಟ್ನಾಳ ಹೋಬಳಿಯ ಬಿಳೆಬಾವಿಯ ಗ್ರಾಮದ ಹೊರಭಾಗದ ಬೆಟ್ಟದಲ್ಲಿಯ ಆಂಜನೇಯ ಶಿಲ್ಪದ ಹತ್ತಿರ ನೈಸರ್ಗಿಕ ದೊಡ್ಡದಾದ ಬಂಡೆಯಲ್ಲಿ ವೀರಮಾಸ್ತಿಗಲ್ಲು ಕೆತ್ತಲಾಗಿದೆ. (ಚಿತ್ರ–೨) ವೀರನು ಎಡಗೈಯನ್ನು ಮುಂದೆ ಚಾಚಿ ದೊಡ್ಡದಾದ ಬಂದೂಕುನ್ನು ಹಿಡಿದ್ದು, ಬಂದೂಕಿನ ಮುಖವನ್ನು ಮೇಲೆ ಮಾಡಿ ಬಂದೂಕಿನ ಹಿಂಭಾಗವನ್ನು ಕೆಳಮುಖ ಮಾಡಿ ಮಧ್ಯೆದಲ್ಲಿ ಹಿಡಿದುಕೊಂಡಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಸೊಂಟದ ಮುಂಭಾಗದವರೆಗೆ ಅಂದರೆ ಬಂದೂಕಿನ ಕಡೆ ಚಾಚಿದಂತೆ ತೋರಲಾಗಿದೆ. ವೀರನು ತುರುಬಿಗೆ ಅಲಂಕಾರವನ್ನು ಮಾಡಿ ಎರಡು ಎಲೆಯನ್ನು ಸಿಗಿಸಿಕೊಂಡಿದ್ದಾನೆ. (ತ್ರಿಕೋನದ ರೀತಿ ಇದೆ) ಸೊಂಟದ ಬಲಭಾಗದಲ್ಲಿ ಕತ್ತಿಯನ್ನು ಸಿಕ್ಕಿಸಿಕೊಂಡಿದ್ದಾರೆ. ಸೊಂಟದಿಂದ ಕಚ್ಚೆಯ ನೆರಿಗೆ ಕುಚ್ಚಿನಂತೆ ಮಂಡಿಯ ಕೆಳಭಾಗದವರೆಗೂ ಇಳಿಬಿದ್ದಿದ್ದು ಸುಂದರವಾಗಿ ತೋರಲಾಗಿದೆ. ವೀರನ ಮುಖದಲ್ಲಿ ಕಣ್ಣು, ಮೂಗು, ತುಟಿಯನ್ನು, ಕಿವಿಯಲ್ಲಿ ಕರಣಕುಂಡಲಗಳನ್ನು ತೋರಲಾಗಿದೆ. ಇವನ ಪಕ್ಕದಲ್ಲಿ ನಿಂತಿರುವ ಮಹಾಸತಿಯು ಎಡಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದು, ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಮೇಲೆ ಎತ್ತಿದ್ದಾಳೆ. ಅವಳು ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದು ಎಡೆಯ ಭಾಗವನ್ನು ಸುಂದರವಾಗಿ ಚಿತ್ರಿಸಲಾಗಿದೆ. ತಲೆಗೆ ತುರುಬು ಕಟ್ಟಿದ್ದು ಕೈಕಡಗಗಳನ್ನು ಧರಿಸಿದ್ದಾಳೆ. ಸತಿಯ ಬಲಗೈಯ ಪಕ್ಕದಲ್ಲಿ ರಂಧ್ರವನ್ನು ಮಾಡಲಾಗಿದೆ. ಈ ಶಿಲ್ಪವನ್ನು ಗಮನಿಸಿದರೆ ಸ್ಥಳೀಯ ಶಿಲ್ಪಿಯು ಕೆತ್ತಿರುವ ಸಾಧ್ಯತೆಯಿದೆ.

ಕಾರಟಗಿ ತಾಲೂಕು ಸಿದ್ದಾಪುರ ಹೊಬಳಿ ಉಳೇನೂರು ಗ್ರಾಮದ ಪಂಚಾಯಿತಿ ಹತ್ತಿರ ವೀರನು ಬಲಗೈಯಲ್ಲಿ ಕತ್ತಿಯನ್ನು ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ, ತಲೆಯಲ್ಲಿ ತುರುಬು ಕಟ್ಟಿದ್ದು, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಹಾರ, ಸೊಂಟದಲ್ಲಿ ಪಟ್ಟಿಕೆ, ತೋಳಲ್ಲಿ ಬಾಹುಹೊಳೆಯ, ಕೈಗಡಗ ಕಾಲ್ಗಡಗಳನ್ನು ಧರಿಸಿರುವನು, ಸೊಂಟದಿಂದ ಮೊಣಕಾಲೀನವರೆಗೂ ವೀರಗಚ್ಚೆಯನ್ನು ಹಾಕಿದ್ದು, ಅದು ನೆರೆಗೆಯಾಕಾರದಲ್ಲಿ ಮೂಡಿಬಂದಿದೆ. ಇದು ಒಂದು ಯುದ್ಧ ಸನ್ನಿವೇಶದ ವೀರಗಲ್ಲಾಗಿದೆ. ಇದಕ್ಕೆ ಸ್ಥಳಿಯರು ಕಾಸ್ಯಪ್ಪ ಎಂದು ಕರೆಯುವರು. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಸಿದ್ದಾಪುರ ಹೊಬಳಿ ಕೊಕ್ಕಗೋಳ ಗ್ರಾಮದಿಂದ ಬೆನ್ನೂರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ವೀರಗಲ್ಲುವಿದೆ. ಬಿಳಿ ಕಣಶಿಲೆಯಲ್ಲಿರುವ ಸ್ಮಾರಕವು ಸಮಭಂಗಿಯಲ್ಲಿ ನಿಂತಿರುವ ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಕಿವಿಯಲ್ಲಿ ಕಿವಿಯೊಲೆ ಕೊರಳಲ್ಲಿ ಕೊರಳ ಹಾರವನ್ನು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು. ವೀರನು ತಲೆಕೂದಲನ್ನು ತುರುಬಿನ ರೀತಿಯಲ್ಲಿ ಕಟ್ಟಿರುವನು, ವೀರನು ಧರಿಸಿರುವ ಉಡುಪಿನಿಂದ ಸಾಮಾನ್ಯ ಯೋಧನೆಂದು ಗುರುತಿಸಬಹುದು. ಸ್ಥಳೀಯರು ಈತನನ್ನು 'ಈರಣ್ಣ' ಎಂದು ಕರೆಯುತ್ತಾರೆ. ಈ ಸ್ಮಾರಕ ಶಿಲ್ಪವನ್ನು ಎಲ್ಲಾ ಸಮುದಾಯದವರು ಪೂಜಿಸುತ್ತಾರೆ. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಕಾರಟಗಿ ಹೊಬಳಿ ತೊಂಡಿಹಾಳ ಗ್ರಾಮ ಮಧ್ಯದಲ್ಲಿ ವೀರಗಲ್ಲು ಇದೆ. ಈ ಶಿಲ್ಪದಲ್ಲಿ ವೀರನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮುವನ್ನು ಹಿಡಿದಿರುವನು. ಕುದುರೆಯ ಬಾಯಿಗೆ, ಥಡಿ, ರಿಕಾಪುಗಳನ್ನು ಹಾಕಲಾಗಿದೆ. ವೀರನು ಯುದ್ಧಕ್ಕೆ ಹೋಗುವ ದೃಶ್ಯವನ್ನು ಚಿತ್ರಿಸಲಾಗಿದೆ. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಯಲಬುರ್ಗಾ ತಾಲೂಕು ಯಲಬುರ್ಗಾ ಹೋಬಳಿ ಬಳ್ಳೊಟಗಿ ಗ್ರಾಮದ ಮೌನೇಶ ಪತ್ತಾರ ಅವರ ಮನೆಯ ಮುಂಭಾಗದಲ್ಲಿ ವೀರಗಲ್ಲು ಕಂಡು ಬರುತ್ತದೆ. ಈ ಶಿಲ್ಪವು ಕಪ್ಪು ಕಣಶಿಲೆಯಲ್ಲಿ ಕಂಡರಿಸಲಾಗಿದೆ. (ಚಿತ್ರ-೩) ಇಲ್ಲಿ ವೀರನನ್ನು ಪ್ರಧಾನವಾಗಿ ತೋರಿಸಿದ್ದಾರೆ. ವೀರನ ಶಿಲ್ಪವು ಸುಂದರ ಉಬ್ಬು ಶಿಲ್ಪವಾಗಿದೆ. ವೀರನು ಬಲಗೈಯಲ್ಲಿ ಖಡ್ಗವನ್ನು ಹಾಗೂ ಎಡಗೈಯಲ್ಲಿ ವೃತ್ತಾಕಾರದ ಅಲಂಕೃತ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ತಲೆಗೆ ಮುಂಡಾಸು (ಪೇಟವನ್ನು) ಧರಿಸಿರುತ್ತಾನೆ. ಕೊರಳಲ್ಲಿ ಆಭರಣಗಳನ್ನು ಹಾಕಿಕೊಂಡಿದ್ದಾನೆ. ಕೈಗಳಲ್ಲಿ ಕೈಗಡಗ ಹಾಗೂ ತೋಳ್ಬಂಧಿಗಳಿವೆ. ಕಾಲಲ್ಲಿ ಕಾಲುಗಡಗಗಳಿವೆ. ಸುಂದರವಾದ ಉಡುಗೆಯನ್ನು ಧರಿಸಿದ್ದಾನೆ. ಸೊಂಟದ ಮಧ್ಯೆ ವಸ್ತ್ರದ ಕುಂಚುವನ್ನು ಇಳಿಬಿದ್ದಿವೆ. ಚಲಿಸುವ ಭಂಗಿಯಲ್ಲಿದ್ದಾನೆ.

ಯಲಬುರ್ಗಾ ತಾಲೂಕು ಮಂಗಳೂರು ಹೋಬಳಿ ಬೂದಗುಂಪಾದ ಶರಣಬಸವೇಶ್ವರ ದೇವಾಲಯದ ಮುಂಭಾಗದಲ್ಲಿ ವೀರಗಲ್ಲು ಇದೆ. ಈ ವೀರಗಲ್ಲನ್ನು ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ವೀರನು ತನ್ನ ಕೈಗಳಲ್ಲಿ ಬಿಲ್ಲು, ಬಾಣವನ್ನು ಹಿಡಿದುಕೊಂಡಿರುತ್ತಾನೆ. ವೀರನು ಕೊರಳಲ್ಲಿ ಅಲಂಕಾರಯುತವಾದ ಪದಕದ ಸರಗಳನ್ನು ಧರಿಸಿರುತ್ತಾನೆ. ವೀರನ ಮುಖದ ಲಕ್ಷಣವನ್ನು ಸುಂದರವಾಗಿ ಕೆತ್ತಲಾಗಿದೆ. ಈ ವೀರನ ಶಿಲ್ಪವು ಅರ್ಧಮಾತ್ರವೇ ಕಾಣುತ್ತದೆ. ಇನ್ನೂ ಉಳಿದಿರುವ ಭಾಗವನ್ನು ನೆಲಭಾಗದಲ್ಲಿ ಮುಚ್ಚಲಾಗಿರುತ್ತದೆ. ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಯಲಬುರ್ಗಾ ತಾಲೂಕಿನ ಕರಮುಡಿಯ ಗ್ರಾಮದ ವೀರಭದ್ರ ದೇವಾಲಯ ಹೊರಗಡೆ ವೀರಗಲ್ಲು ಶಿಲ್ಪವಿದೆ. ಈ ಶಿಲ್ಪವು ಎರಡು ಹಂತವನ್ನು ಹೊಂದಿದ್ದು ಮೊದಲನೆಯ ಹಂತದಲ್ಲಿ ವೀರನು ಕೈಯಲ್ಲಿ ಬಾಣ ಹಿಡಿದು ಚಲಿಸುವ ಭಂಗಿಯಲ್ಲಿದಾನೆ. ಎರಡನೆಯ ಹಂತದಲ್ಲಿ ವೀರನು ಸ್ವರ್ಗದಲ್ಲಿ ಲಿಂಗದ ಮುಂದೆ ಧ್ಯಾನಾಸ್ತನಾಗಿದ್ದು, ನಂದಿಯ ಶಿಲ್ಪವನ್ನು ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.

ಕುಕನೂರು ತಾಲೂಕು ಕುಕನೂರು ಹೋಬಳಿ ಕಲ್ಲೂರು ಗ್ರಾಮದಲ್ಲಿರುವ ಶೇಖಪ್ಪ ಕಲ್ಲಪ್ಪ ಕ್ಯಾದರಗುಪ್ಪಿ ಅವರ ಮನೆಯ ಮುಂಭಾಗದಲ್ಲಿ ವೀರಗಲ್ಲುವಿದ್ದು, ಬಿಳಿಕಣಶಿಲೆ ಕಂಡರಿಸಲಾಗಿದೆ. ಪ್ರಸ್ತುತ ವೀರಗಲ್ಲಿನಲ್ಲಿ ಮೂರು ಹಂತ ಇದ್ದು ಮೊದಲನೆಯ ಹಂತ ಮಣ್ಣಿನಲ್ಲಿ ಮುಚ್ಚಿದೆ. ಎರಡನೆ ಹಂತದಲ್ಲಿ ಅಪ್ಸರೆಯರು ಹೂವಿನ ಹಾರವನ್ನು ಹಿಡಿದು ವೀರನ ಕೊರಳಿಗೆ ಹಾಕುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ವೀರನು ಪುಷ್ಪಕ ವಿಮಾನದಲ್ಲಿ ಕುಳಿತಿರುವುದನ್ನು ಕೆತ್ತಲಾಗಿದೆ. ಮೂರನೆಯ ಹಂತದಲ್ಲಿ ಮಧ್ಯಭಾಗದಲ್ಲಿ ಶಿವಲಿಂಗವಿದೆ. ಅದರ ಪಕ್ಕದಲ್ಲಿ ಯತಿ ಮತ್ತು ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ಬಲಭಾಗದಲ್ಲಿ ಚಾಮರಧಾರೆಯರು ಲಿಂಗದ ಸೇವೆಯಲ್ಲಿ ತಲ್ಲೀನರಾಗಿರುವ ದೃಶ್ಯವನ್ನು ತೋರಲಾಗಿದೆ. ಕ್ರಿ.ಶ.ಸು.೧೬ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಕಾರಟಗಿ ಹೋಬಳಿ ತೊಂಡಿಹಾಳ ಗ್ರಾಮದ ಕಲ್ಗುಡಿ ದ್ಯಾಮಮ್ಮನವರ ಮನೆ ಮುಂದೆ ಇರುವ ಈ ವೀರಗಲ್ಲುವನ್ನು ಬಿಳಿ ಕಣಶಿಲೆಯಲ್ಲಿ ಕೆತ್ತಲಾಗಿದೆ. ವೀರನು ಸೊಂಟದಲ್ಲಿ ಚೂರಿಯನ್ನು ಸಿಕ್ಕಿಸಿಕೊಂಡು, ತನ್ನ ಬಲಗೈಯಲ್ಲಿ ಉದ್ದನೆಯ ಕತ್ತಿಯನ್ನು ಬಲಭುಜದ ಮೇಲೆ ಇಟ್ಟುಕೊಂಡು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ.

ತಲೆಗೂದಲನ್ನು ಜುಟ್ಟಿನೋಪಾದಿಯಲ್ಲಿ ಕಟ್ಟಿಕೊಂಡು. ಕಿವಿ, ಕೊರಳಲ್ಲಿ ಆಭರಣಗಳನ್ನು, ಕೈಕಾಲುಗಳಲ್ಲಿ ಕಡಗಗಳು ಮತ್ತು ತೋಳಬಂಧಿಯನ್ನು ಧರಿಸಿರುವನು. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಸಿದ್ದಾಪುರ ಹೊಬಳಿ ನಂದಿಹಳ್ಳಿಯ ಹಳೇ ಗ್ರಾಮದ ದೇವತೆಯ ಮುಂದೆ ಕಪ್ಪು ಕಣಶಿಲೆಯಲ್ಲಿ ವೀರಗಲ್ಲನ್ನು ಒಂದೇ ಹಂತದಲ್ಲಿ ವೀರರನ್ನು ಕಂಡರಿಸಲಾಗಿದೆ. ವೀರನು ತುರುಬು ಕಟ್ಟಿಕೊಂಡು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು. ಬಲಗೈಯಲ್ಲಿ ಕತ್ತಿಯನ್ನು ಹಿಡಿದು, ಎಡಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ನಿಂತಿರುವಂತೆ ತೋರಲಾಗಿದೆ. ಕ್ರಿ.ಶ.ಸು. ೧೫ನೇ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಸಿದ್ದಾಪುರ ಹೋಬಳಿ ನಂದಿಹಳ್ಳಿ ಗ್ರಾಮದ ದೇವತೆ ಆವರಣದಲ್ಲಿ ಕಪ್ಪು ಕಣಶಿಲೆ ವೀರಗಲ್ಲು ಇದೆ. ಇಲ್ಲಿ ವೀರನು ಸಮಭಂಗಿಯಲ್ಲಿ ನಿಂತಿರುವಂತೆ ವೀರನನ್ನು ಕೆತ್ತಲಾಗಿದೆ. ವೀರನು ತನ್ನ ಬಲಗೈಯಲ್ಲಿ ಉದ್ದನೆಯ ಕತ್ತಿಯನ್ನು ಹಿಡಿದು ಬಲಭುಜದ ಮೇಲೆ ಇಟ್ಟುಕೊಂಡು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಕೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ವೀರನು ತಲೆಕೂದಲನ್ನು ತುರುಬಿನ ರೀತಿ ಕಟ್ಟಿಕೊಂಡು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ. ಕ್ರಿ.ಶ.ಸು. ೧೫ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕಾರಟಗಿ ತಾಲೂಕು ಸಿದ್ದಾಪುರ ಹೋಬಳಿ ಕೊಕ್ಕರಗೋಳದ ಬೆನ್ನೂರುಗೆ ಹೋಗುವ ರಸ್ತೆಯ ಬಲಭಾಗದ ಗುಡ್ಡದ ಮೇಲ ಭಾಗದಲ್ಲಿ ಇದೆ. ವೀರಗಲ್ಲಿನಲ್ಲಿ ವೀರನು ಅಶ್ವರೂಢನಾಗಿದ್ದು. ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಕುದುರೆಯ ಲಗಾಮವನ್ನು ಹಿಡಿದಿರುವನು. ಕುದುರೆಯ ಬಾಯಿಗೆ ಥಡಿ, ರಿಕಾಪುಗಳನ್ನು ಹಾಕಲಾಗಿದೆ. ವೀರನ ಮುಂದೆ ನಾಲ್ಕು ವೀರರು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ನಾಲ್ಕು ಜನ ವೀರರು ಗುರಾಣಿಯನ್ನು ಹಿಡಿದ್ದಾರೆ. ಒಬ್ಬ ಮಾತ್ರ ಬಲಗೈಯಲ್ಲಿ ಚಾಕು ಹಿಡಿದಿದ್ದಾನೆ. ಎಡಗೈಯನ್ನು ಇಳಿ ಬಿಟ್ಟಿದ್ದಾನೆ. ಮುಂದೆ ನಿಂತ ಐದು ಜನ ವೀರರು ಸಮಾನ ರೀತಿಯ ಉಡುಗೆಯನ್ನು ಧರಿಸಿದ್ದಾರೆ, ಅವರು ಕೈ ಮತ್ತು ಕಾಲುಗಳಲ್ಲಿ ಕಡಗಳನ್ನು ಧರಿಸಿರುವರು. ತೋಳಬಂಧಿಯನ್ನು ಸಹ ಕಾಣಬಹುದು. ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ. ಈ ದೃಶ್ಯ ಯುದ್ಧಕ್ಕೆ ಹೊರಡುವ ದೃಶ್ಯವಾಗಿದೆ. ಸ್ಥಳಿಯರು ಸೋಲ್ ಬೀರಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ. ಕ್ರಿ.ಶ.ಸು. ೧೬ನೆಯ ಶತಮಾನಕ್ಕೆ ಸಂಬಂಧಿಸಿದೆ.

ಕೊಪ್ಪಳ ತಾಲೂಕಿನ ಗಿಣಿಗೆರಿಯಲ್ಲಿ ಎರಡು ವೀರಗಲ್ಲುಗಳವೆ ಅದರಲ್ಲಿ ಮೊದಲನೆಯ ವೀರಗಲ್ಲು ಎರಡು ಹಂತ ಹೊಂದಿದ್ದು ಮೊದಲನೆಯ ಹಂತದಲ್ಲಿ ಮೂರು ಜನ ವೀರರು ಇದ್ದು ಮೊದಲನೇಯ ವೀರನು ಬಿಲ್ಲು ಹಿಡಿದು ನಿಂತಿದ್ದಾನೆ. ಮತ್ತೋರ್ವ ವೀರನು ಬಿಲ್ಲು, ಬಾಣವನ್ನು ಹಿಡಿದ್ದು ಪ್ರಯೋಗಿಸುವಂತೆ ತೋರಲಾಗಿದೆ, ಇವರ ಪಕ್ಕದಲ್ಲಿ ಮತ್ತೋರ್ವ ವೀರನು ಎಡಗೈಯಲ್ಲಿ ಬಿಲ್ಲು ಹಿಡಿದ್ದು, ಎಡಗೈಯನ್ನು ಬೆನ್ನಿಗೆ ಹಾಕಿದ ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಳ್ಳುವಂತೆ ಖಂಡರಿಸಲಾಗಿದೆ. ಓರ್ವ ವೀರನು ನಿಂತಿದ್ದು ಇಬ್ಬರು ವೀರರು ಚಲಿಸುವ ಭಂಗಿಯಲ್ಲಿರುವಂತೆ ತೋರಲಾಗಿದೆ. ಎರಡನೆಯ ಹಂತದಲ್ಲಿ ಕುದುರೆಯ ಮೇಲೆ ವೀರ ಕುಳಿತಿದ್ದು ಎಡಗೈಯನ್ನು ಮೇಲೆ ಎತ್ತಿದ್ದು, ಬಲಗೈಯಲ್ಲಿ ಕುದುರೆ ಜೀನನ್ನು ಹಿಡಿದಿದ್ದು ಕುದುರೆಯು ಓಡುವ ಭಂಗಿಯಲ್ಲಿ ಇದೆ. ಕುದುರೆ ಹಿಂಭಾಗದಲ್ಲಿ ಸೇವಕ ಛಾಮರವನ್ನು ಹಿಡಿದು ಚಲಿಸುವಂತೆ ಚಿತ್ರಿಸಲಾಗಿದೆ. ಇದೇ ಸ್ಥಳದಲ್ಲಿ ಮತ್ತೊಂದು ವೀರಗಲ್ಲಿನಲ್ಲಿ ವೀರನು ಕುದುರೆ ಮೇಲೆ ಕುಳಿತಿದ್ದು ಬಲಗೈಯಲ್ಲಿ ಈಟಿ ಹಿಡಿದಿದ್ದು, ಎಡಗೈಯಲ್ಲಿ ಕುದುರೆಯ ಜೀನ ಹಿಡಿದ್ದಾನೆ. ಕುದುರೆಗೆ ಕವಚವನ್ನು ಹಾಕಿರುವಂತೆ ತೋರಲಾಗಿದೆ.

ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದ ಬಸಪ್ಪಾ ಕಳ್ಳಿಯವರ ಮನೆಯ ಮುಂದೆಯ ಕಟ್ಟೆಯ ಮೇಲೆ ಕಲ್ಯಾಣ ಚಾಲುಕ್ಯರ ಕಾಲದ ವೀರಗಲ್ಲು ದೊರೆತಿದ್ದು, ಇದು ೧.೫ ಮೀಟರ್ ಅಗಲ ಮತ್ತು ೧ ಮೀಟರ್ ಎತ್ತರವಿರುವ ಈ ವೀರಗಲ್ಲು ಬಳಪದ ಶಿಲೆಯಲ್ಲಿ ಉಬ್ಬುಶಿಲ್ಪಗಳಿಂದ ಕೆತ್ತಲಾದ ವೀರಗಲ್ಲಾಗಿದೆ. ಇದೊಂದು ವೈವಿಧ್ಯಮಯವಾದ ವೀರಗಲ್ಲಾಗಿದೆ. ಈ ವೀರಗಲ್ಲಿನಲ್ಲಿ ಮೂವರು ವೀರರು ಮತ್ತು ಇಬ್ಬರು ಸತಿಯರ ಶಿಲ್ಪಗಳಿವೆ. ವೀರ, ಸತಿಯರು ಒಂದೇ ಸಾಲಿನಲ್ಲಿ ತೋರಲಾಗಿದೆ. ಮೊದಲನೆಯ ವೀರನು ಬಲಗೈಯಲ್ಲಿ ಖಡ್ಗ, ಎಡಗೈನ್ನು ಸೊಂಟದ ಮೇಲೆ ಇಟ್ಟಿದ್ದು, ಸೊಂಟದಲ್ಲಿ ಚೂರಿಯನ್ನು ಸಿಗಿಸಿಕೊಂಡಿದ್ದಾರೆ. ಮಧ್ಯದಲ್ಲಿರುವ ಇಬ್ಬರು ವೀರರ ಶಿಲ್ಪಗಳು ಉಳಿದ ಶಿಲ್ಪಗಳಿಗಿಂತ ದೊಡ್ಡದ್ದಾಗಿದೆ. ವೀರರೆಲ್ಲರ ಕೈಯಲ್ಲಿ ಖಡ್ಗ–ಗುರಾಣಿಗಳನ್ನು ಹಿಡಿದು ಎಡಗಾಲು ಮುಂದಿಟ್ಟು ಎರಡೂ ಕಾಲುಗಳನ್ನು ತುಸು ಮಡಚಿ ನಿಂತಿದ್ದಾರೆ. ಬರಿ ನಡೆ ಉಡಿಗೆ ಬಿಗಿದು ಕಟ್ಟಿಕೊಂಡಂತಿದ್ದು, ಉಡುಗೆಯ ತುದಿಯು ಕಾಲುಗಳ ಮಧ್ಯೆ ಇಳಿಬಿದ್ದಿದೆ. ಈ ವೀರಶಿಲ್ಪಗಳ ಮಧ್ಯೆ ಇರುವ ಇಬ್ಬರು ಸತಿಯರ ಕೈಯಲ್ಲಿ ಕರಂಡಮುಕುಟದ ಪಾತ್ರ ಫಲಗಳನ್ನು ಹೊಂದಿದ್ದು ವೀರರಂತೆ



೧. ವೀರಗಲ್ಲು, ಹಲಗೇರಿ



೨. ವೀರಗಲ್ಲು, ಬಿಳೆಬಾವಿ



೩. ವೀರಗಲ್ಲು, ಬಳ್ಳೋಟಗಿ

ಕಾಲುಗಳನ್ನು ಬಾಗಿಸಿನಿಂತಿದ್ದಾರೆ. ಈ ಸತಿಯರ ಮೇಲುಡುಗೆ ಮತ್ತು ಕೆಲ ಉಡುಗೆ ಎದ್ದು ಕಾಣುತ್ತದೆ. ತಲೆಯಲ್ಲಿ ಕಟ್ಟಿಕೊಂಡ ತುರುಬು ಸ್ಪಷ್ಟವಾಗಿದೆ. ಈ ವೀರಗಲ್ಲು ಶಿಲ್ಪದಲ್ಲಿ ಯಾವುದೇ ಶಾಸನವಿಲ್ಲ ಮತ್ತು ಮೂರು ಹಂತಗಳ ವೀರಗಲ್ಲಿನ ದೃಶ್ಯಭಾಗಗಳು ಇಲ್ಲದಿರುವುದು ವಿಶೇಷವಾಗಿದೆ.

ಕೊಪ್ಪಳ ತಾಲೂಕು ಇರಕಲ್ಲಗಡ ಹೋಬಳಿ ಕೊಡದಾಳ ಗ್ರಾಮದ ವೀರಮಾಸ್ತಿಗಲ್ಲು ಎರಡು ಹಂತಗಳನ್ನು ಹೊಂದಿದ್ದು, ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ಮೊದಲಿನ ಹಂತದಲ್ಲಿ ಒಬ್ಬ ವೀರ ಮತ್ತು ಇಬ್ಬರು ಸತಿಯರ ಶಿಲ್ಪವಿದೆ. ವೀರನು ಕೈಮುಗಿದು ನಿಂತುಕೊಂಡಿದ್ದಾನೆ. ವೀರನು ಎಡಕ್ಕೆ ಮುಡಿಯನ್ನು ಕಟ್ಟಿದ್ದಾನೆ. ವೀರನ ಅಕ್ಕ ಪಕ್ಕದಲ್ಲಿ ಇಬ್ಬರು ಸತಿಯರ ಶಿಲ್ಪವಿದೆ. ಇಬ್ಬರು ಸತಿಯರು ತಮ್ಮ ಬಲಗೈಯನ್ನು ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟಿದ್ದಾರೆ. ಸತಿಯರು ಎಡಭಾಗಕ್ಕೆ ತುರುಬು ಕಟ್ಟಿದ್ದಾರೆ. ಇವರು ತೊಟ್ಟ ಉಡುಪು ನೆರಿಗೆಯಿಂದ ಕೂಡಿದೆ. ನೆರಿಗೆ ಮೇಲೆ ಬಟ್ಟೆಯನ್ನು ಸುತ್ತಿಕೊಂಡಿರುವುದು ಕಂಡು ಬರುತ್ತದೆ. ಎರಡನೆಯ ಹಂತದಲ್ಲಿ ಇಬ್ಬರು ವೀರರು ಇದ್ದು ಅದರಲ್ಲಿ ಒಬ್ಬ ವೀರನು ಚಲಿಸುವ ಭಂಗಿಯಲ್ಲಿದ್ದು ಎಡಗೈಯನ್ನು ಮೇಲೆ ಎತ್ತಿದ್ದಾರೆ. ಬಲಗೈಯಲ್ಲಿ ಏನು ಹಿಡಿದಿದ್ದಾನೆಂಬುದು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಪದ್ಮಾಸನದಲ್ಲಿ ಕುಳಿತು ಅಂಜಲಿಬದ್ಧನಾಗಿ ಧ್ಯಾನಾಸಕ್ತರಾಗಿದ್ದಾರೆ. ಮಧ್ಯದಲ್ಲಿ ಶಿವಲಿಂಗವಿದೆ. ಕ್ರಿ.ಶ. ಸು. ೧೭ನೆಯ ಶತಮಾನಕ್ಕೆ ಸಂಬಂಧಿಸಿದೆ.

ಒಟ್ಟಾರೆಯಾಗಿ ಕರ್ನಾಟಕದ ಪರಂಪರೆಯಲ್ಲಿ ವೀರಗಲ್ಲು, ವೀರಮಾಸ್ತಿಗಲ್ಲು, ಮಾಸ್ತಿಗಲ್ಲು, ಮಹತ್ವವನ್ನು ತಿಳಿಯಲು ಪ್ರಸ್ತುತ ಸಮೀಕ್ಷೆ ಸಹಾಯಕವಾಗಿದೆ ಎನ್ನಬಹುದು. ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಪ್ರತಿ ಗ್ರಾಮದ ಸ್ಮಾರಕ ಶಿಲ್ಪಗಳ ಕುರಿತು ಪ್ರತ್ಯೇಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಸ್ಮಾರಕ ಶಿಲ್ಪಗಳಲ್ಲಿ ಕೆಲವು ಮಾತ್ರ ಸಂರಕ್ಷಣೆಯಲ್ಲಿದ್ದು, ಇನ್ನು ಹಲವು ಸ್ಮಾರಕ ಶಿಲ್ಪಗಳು ನಾಶದ ಅಂಚಿನಲ್ಲಿದೆ. ಅವುಗಳನ್ನು ರಕ್ಷಿಸುವ ಕಾರ್ಯ ಆಗಬೇಕಿದೆ.

ಆಕರಗ್ರಂಥಗಳು

೧. ಗೀತಾ ಪಾಟೀಲ, ೨೦೨೧, ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು, ತಿಳಿವು ಪ್ರಕಾಶನ, ವಳವಂಡವಾಡಿ.

೨. ಗೀತಾ ಪಾಟೀಲ, ೨೦೨೧, ಕೊಪ್ಪಳ ಜಿಲ್ಲೆಯ ವಾಸ್ತು-ಶಿಲ್ಪ-ಸಂಸ್ಕೃತ, ತಿಳಿವು ಪ್ರಕಾಶನ, ವಳವಂಡವಾಡಿ.

◆◆

ವಿಜಯಕುಮಾರ್ ಪಿ.

ಕೊಂಗುನಾಡಿನ ಜೈನ ಶಾಸನಗಳು ಒಂದು ಅವಲೋಕನ

ನಮ್ಮ ಕನ್ನಡ ಸಾಹಿತ್ಯದ ೯ನೆಯ ಶತಮಾನದ ಪ್ರಾಚೀನ ಗದ್ಯ ಕೃತಿಯಾದ ವಡ್ಡಾರಾಧನೆಯಲ್ಲಿನ ಭದ್ರಬಾಹುಭಟ್ಟಾರರ ಕಥೆ, ಹಲವು ಚಾರಿತ್ರಿಕ ಸಂಗತಿಗಳಿಂದ ಕೂಡಿರುವುದು ಸರಿಯಷ್ಟೆ. ಮಧ್ಯದೇಶದಲ್ಲಿ ಹನ್ನೆರಡು ವರ್ಷಗಳ ಕಾಲ ಅನಾವೃಷ್ಟಿಯಾಗುವುದೆಂದು ಭದ್ರಬಾಹು ಭಟ್ಟಾರಕರು ಗ್ರಹಿಸಿ ತನ್ನ ಶಿಷ್ಯರಾದ ಸಂಪ್ರತಿ ಚಂದ್ರಗುಪ್ತ ಮುನಿಯು ಸೇರಿದಂತೆ ಎರಡು ಸಾವಿರ ರಿಸಿ ಸಮುದಾಯದೊಂದಿಗೆ ದಕ್ಷಿಣಾಪಥಕ್ಕೆ ಸಾಗಿ ಕಟ್ವಪ್ಪು (ಶ್ರವಣಬೆಳಗೊಳ) ನಾಡಿಗೆ ಬಂದರು. ಆದರೆ ಭದ್ರಬಾಹುಭಟ್ಟಾರಕರು ತಮ್ಮ ದೇಹದ ಅಸೌಕರ್ಯದಿಂದ ಕಟ್ವಪ್ಪುವಿನಲ್ಲಿಯೇ ನಿಂತರು. ಆಗ ವಿಶಾಖಾಚಾರ್ಯರೇ ಮೊದಲಾದ ಸಾವಿರಾರು ರಿಸಿಯರು ದಕ್ಷಿಣಕ್ಕೆ ಸಾಗಿ ಮಧುರೆಯವರೆಗೆ ಹೋಗಿ ಜೈನ ಧರ್ಮದ ಪ್ರಚಾರವನ್ನು ಕೈಗೊಂಡರೆಂಬ ಕಥೆ ಲೋಕವಿದಿತ. ಅವರು ಕಟ್ವಪ್ಪುವಿನ ದಕ್ಷಿಣಕ್ಕಿರುವ ಕೊಂಗುನಾಡು ಪ್ರದೇಶದ ಪುನ್ನಾಟದ ಮೂಲಕವೇ ದಕ್ಷಿಣಕ್ಕೆ ಸಾಗಿ, ಮುಂದೆ ಹೋಗಿರುವುದು, ಆ ಪ್ರದೇಶಗಳಲ್ಲಿ ಲಭ್ಯವಾಗಿರುವ ವಿಪುಲ ಜೈನ ಸ್ಮಾರಕಗಳು ಮತ್ತು ಶಾಸನಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ.

ಕೊಂಗುನಾಡು ಎಂಬುದು ಒಂದು ವಿಶಾಲವಾದ ಪ್ರದೇಶ. ಇದರ ಉತ್ತರ ಗಡಿ, ಇಂದಿನ ಕರ್ನಾಟಕದ ದಕ್ಷಿಣದ ಗಡಿಜಿಲ್ಲೆಯಾದ ಚಾಮರಾಜನಗರ ಜಿಲ್ಲೆ. ಇದು ಉತ್ತರ (ಬಡಗ) ಕೊಂಗುನಾಡಿನ ಭಾಗವಾಗಿದ್ದಿತು ಎಂಬುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ[೧]. ಹಾಗೇ ಅದರ ದಕ್ಷಿಣಕ್ಕಿರುವ ಇಂದಿನ ತಮಿಳುನಾಡಿನ ಈರೋಡು, ಕೊಯಮತ್ತೂರು, ನೀಲಗಿರಿ ಪ್ರದೇಶಗಳು ಮಧ್ಯಕೊಂಗುನಾಡಿನ ಭಾಗವೆಂದು ಗುರುತಿಸಿರುತ್ತಾರೆ. ದಿಂಡಿಗಲ್ ಜಿಲ್ಲೆಯ ಉತ್ತರ ಭಾಗವನ್ನು ದಕ್ಷಿಣ ಕೊಂಗುನಾಡು ಎಂದು ಕರೆಯಲಾಗಿದೆ. ಇವನ್ನೂ ಒಳಗೊಂಡಂತೆ ಈ ಪ್ರದೇಶಕ್ಕೆ ಅಂಟಿಕೊಂಡಂತಿರುವ ತಿರುಪ್ಪೂರು, ಕರೂರು, ಸೇಲಂ, ನಾಮಕ್ಕಲ್, ಹಾಗೂ ಧರ್ಮಪುರಿ ಜಿಲ್ಲೆಯ ಪಶ್ಚಿಮ ಭಾಗಗಳು, ಪ್ರಾಚೀನ ಕೊಂಗುನಾಡಿನಲ್ಲಿ ಅಂತರ್ಗತವಾಗಿದ್ದವು. ಕೊಂಗುನಾಡು ಮುಖ್ಯವಾಗಿ ಬೆಟ್ಟಗುಡ್ಡ =(ಮಲೆ)ಗಳಿಂದ ಕೂಡಿದ ಪ್ರದೇಶವಾಗಿದೆ. ಇಲ್ಲಿ ಐವತ್ತಕ್ಕಿಂತ ಹೆಚ್ಚು ಬೆಟ್ಟ-ಗುಡ್ಡಗಳಿವೆ. ಹಾಗಾಗಿ ಈ ಪ್ರದೇಶವನ್ನು ಹಲವು ಶಾಸನಗಳಲ್ಲಿ 'ಮಲೆನಾಡು' ಎಂದೂ ಕರೆದಿರುವುದುಂಟು. ಕಾವೇರಿ ಇಲ್ಲಿಯ ಮುಖ್ಯ ನದಿ. ನೊಯಲ್, ಭವಾನಿ ಮತ್ತು ಅಮರಾವತಿ ಇವು ಉಪನದಿಗಳು.

೯೬೧, 'ಪದ್ಮನಿಕೇತನ್'
೪ನೇ ಮುಖ್ಯರಸ್ತೆ, ಇಸ್ರೋ ಬಡಾವಣೆ
ಬೆಂಗಳೂರು-೫೬೦೧೧೧
ಮೊ: ೯೯೮೬೮ ೮೯೮೮೬

'ಕೊಂಗು' ಎಂಬ ಹೆಸರು ಹೇಗೆ ಬಂದಿತೆಂಬ ಬಗ್ಗೆ ಅನೇಕ ವಿವರಣೆಗಳಿವೆ: ಅವುಗಳಲ್ಲಿ ಹೂಗಿಡ ಬಳ್ಳಿಗಳು ತುಂಬಿದ್ದ ಈ ಪ್ರದೇಶ ಹೂವಿನ ನಸುಗಂಪಿನಿಂದಲೂ ಜೇನಿನ ಸವಿಯಿಂದಲೂ ಕೂಡಿದ್ದುದರಿಂದ ಅದಕ್ಕೆ ಈ ಹೆಸರು ಬಂದಿರಬಹುದೆಂಬುದು ಒಂದು ಊಹೆ. ಈ ಪ್ರದೇಶಕ್ಕೆ ಆ ಹೆಸರು ಯಾವಾಗ ಬಂತೆಂದು ನಿರ್ದಿಷ್ಟವಾಗಿ ತಿಳಿದಿಲ್ಲ. ತಮಿಳಿನಲ್ಲಿ 'ಕಂಗು' ಎಂದರೆ ಅಂಚು, ಎಲ್ಲೆ, ಗಡಿ, ಎಂಬರ್ಥಗಳಿರುವುದನ್ನು ವಿದ್ವಾಂಸರು ದಾಖಲಿಸಿದ್ದಾರೆ. ಅದೇ 'ಕೊಂಗು' ಎಂದು ರೂಪಾಂತರಗೊಂಡಿತೆಂದು ಹೇಳಿರುತ್ತಾರೆ. ಆದರೆ 'ಕೊಂಗು' ಎಂಬುದಕ್ಕೆ ಅಡಕೆ, ಜಂಬುರಸ, ಮಾದುಫಲಂ ನವಣೆ ಎಂಬುವ ಅರ್ಥಗಳ ಜೊತೆಗೆ ಕೊಂಗು ಎಂದರೆ ಅಂಚು, ಗಡಿ ಎಂಬರ್ಥವಿರುವುದು ಸರಿಯಷ್ಟೆ. ಅಂದರೆ ಅದು ಪ್ರಧಾನ ತಮಿಳು ಪ್ರದೇಶದ ಉತ್ತರದ ಗಡಿ, ಹಾಗೇ ಕರ್ನಾಟಕದ ದಕ್ಷಿಣದ ಗಡಿನಾಡು ಅದಾಗಿದ್ದಿತೆಂಬುದು ತಿಳಿಯುತ್ತದೆ. ಹಾಗಾಗಿ 'ಕೊಂಗು' ಎಂಬುದು 'ಸೆರಗು' ಅರ್ಥಾತ್ ಗಡಿನಾಡು ಎಂಬರ್ಥವೇ ಹೆಚ್ಚು ಸಮಂಜಸವೆಂದು ತೋರುತ್ತದೆ. ಇದಕ್ಕೆ ಪೂರಕವಾಗಿ ತಮಿಳಿನ ಸಂಘಂ ಸಾಹಿತ್ಯದ ಕಾಲದಲ್ಲಿ ಕೊಂಗುಮಂಡಲ ಪ್ರದೇಶದಲ್ಲಿ ತಮಿಳೇತರರಾದ ಮಲವರ್, ಕೋಸರ್, ಕೊಂಗರ್ ಮೊದಲಾದ ಬುಡಕಟ್ಟುಗಳ ಜನರು ವಾಸಿಸುತ್ತಿದ್ದರು ಎಂದು ಉಲ್ಲೇಖಿಸುತ್ತದೆ. ಗಂಗರನ್ನು ಶಾಸನಗಳಲ್ಲಿ ಕೊಂಗುಣಿವರ್ಮರೆಂದು ಕರೆದಿರುವುದು, ಅವರು ಮೂಲತಃ ಕೊಂಗುನಾಡಿನ ಮೂಲದವರೇ ಆಗಿದ್ದರೆಂಬುದನ್ನು ಸೂಚಿಸುತ್ತದೆ.

ಕೊಂಗುನಾಡಿನ ಚರಿತ್ರೆಯನ್ನು ಗಮನಿಸಿದರೆ; ಇತಿಹಾಸಪೂರ್ವ ಕಾಲದ ನಾಗರಿಕತೆ ಕ್ರಿ.ಪೂ. ದಲ್ಲಿ ಈ ಪ್ರದೇಶದಲ್ಲಿ ವ್ಯಾಪಿಸಿದ್ದ ಬಗ್ಗೆ ಪುರಾತತ್ವ ಶೋಧನೆಗಳು ಬೆಳಕು ಚೆಲ್ಲುತ್ತವೆ. ಬೃಹತ್ ಶಿಲಾಸಮಾಧಿಗಳು ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಸೀಸರ್, ಆಗಸ್ಟಸ್, ಟೈಬರಿಯಸ್, ಕ್ಲಾಡಿಯಸ್ ಮುಂತಾದವರ, ಕ್ರಿಸ್ತಶಕದ ಪ್ರಾರಂಭ ಕಾಲಕ್ಕೆ ಸೇರಿದ, ಅನೇಕ ರೋಮನ್ ನಾಣ್ಯಗಳು ಈ ಪ್ರದೇಶದಲ್ಲಿ ದೊರಕಿರುವುದರಿಂದ ಆ ವೇಳೆಗೆ ಐರೋಪ್ಯ ದೇಶಗಳೊಂದಿಗೆ ಈ ಪ್ರದೇಶದ ವ್ಯಾಪಾರ ಸಂಪರ್ಕ ಬೆಳೆಸಿಕೊಂಡಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಕಾಲದಲ್ಲಿ ಪಶುಪಾಲನೆ ಇಲ್ಲಿಯ ಜನರ ಮುಖ್ಯ ಕಸುಬಾಗಿದ್ದುದಾಗಿ ತಿಳಿದು ಬಂದಿದೆ. ಗಂಗರ ಮೂಲಸ್ಥಳವಾಗಿದ್ದ ಕೊಯಮತ್ತೂರು ಸಮೀಪದ ಪೇರೂರಿನಲ್ಲಿ ಪಟ್ಟೀಶ್ವರ ದೇವಾಲಯವಿರುವುದನ್ನು ಗಮನಿಸಬಹುದು[೨]. (ಪಟ್ಟಿ=ಹಟ್ಟಿ, ಪಶುಗಳ ಕೊಟ್ಟಿಗೆ).

ಸಂಘ ಸಾಹಿತ್ಯದ ಕಾಲದಿಂದ ಕೊಂಗುಮಂಡಲದ ಇತಿಹಾಸ ಯುಗ ಪ್ರಾರಂಭವಾಯಿತು. ಮಲವರ್, ಕೋಸರ್, ಕೊಂಗರು ಮೊದಲಾದ ಬುಡಕಟ್ಟುಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಕೊಂಗುನಾಡನ್ನಾಳಿದ ಐತಿಹಾಸಿಕ ಮನೆತನಗಳಲ್ಲಿ ನಾಗಸಂತತಿ ಮೊದಲನೆಯದು. ಅನಂತರ ಸಂಘ ಸಾಹಿತ್ಯ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ತಮಿಳು ಅರಸು ಮನೆತನಗಳಲ್ಲೊಂದಾದ ಚೇರ ಸಂತತಿ ಕೊಂಗುನಾಡಿನ ಮೇಲೆ ತನ್ನ ಆಡಳಿತವನ್ನು ಸ್ಥಾಪಿಸಿತು. ಈ ಕಾರಣದಿಂದಲೇ ಚೇರ ರಾಜರಿಗೆ ಕೊಂಗು ಚೇರ ಎಂಬ ಹೆಸರು ರೂಢಿಗೆ ಬಂತು. ಕೊಂಗುನಾಡಿನ ಕರೂರುಪಟ್ಟಣ ಚೇರ ಮಂಡಲಾಧಿಕಾರಿಯ ರಾಜಧಾನಿಯಾಗಿತ್ತು. ಕೊಂಗುನಾಡಿನ ಮೇಲೆ ಚೇರರ ಆಡಳಿತ ಕ್ರಿ.ಶ. ೩ನೆಯ ಶತಮಾನದ ಮಧ್ಯಭಾಗದಲ್ಲಿ ಕೊನೆಗೊಂಡಿತು.

ಅನಂತರ ಕನ್ನಡ ಅರಸು ಮನೆತನಗಳು ಈ ಪ್ರದೇಶದಲ್ಲಿ ಬಹುಕಾಲ ಆಡಳಿತ ನಡೆಸಿದುವು. ಈ ಮಧ್ಯೆ ಪಾಂಡ್ಯರ ವರಗುಣ, ವೀರಪಾಂಡ್ಯ; ಕೊಂಗು ವಿಕ್ರಮಚೋಳದೇವ, ರಾಜಕೇಸರಿವರ್ಮ– ಕುಲೋತ್ತುಂಗಚೋಳದೇವ ಇವರ ಆಡಳಿತವೂ ನಡೆದಿದೆ.

'ಕೊಂಗುದೇಶ ರಾಜಾಕ್ಕಳ್ ಚರಿತಂ" ಗ್ರಂಥದಲ್ಲಿ ಇದನ್ನು ಸ್ವತಂತ್ರ ರಾಜ್ಯವೆಂದು ಹೇಳಲಾಗಿದೆ. ಆ ಕೃತಿ ತಿಳಿಸುವಂತೆ 'ರಟ್ಟ ಮನೆತನದ ವೀರರಾಯ ಚಕ್ರವರ್ತಿ ಅಲ್ಲಿಯ ಸಿಂಹಾಸನವನ್ನೇರಿದ. ರಟ್ಟ, ರಥಿಕ, ರೆಡ್ಡಿ ಹಾಗೂ ರಾಷ್ಟ್ರಕೂಟ ಎಂಬುದಾಗಿ ವಿದ್ವಾಂಸರು ಕರೆದಿರುವ ಈ ಜನರು ಉತ್ತರ ಭಾಗದಿಂದ ಮೈಸೂರಿನ ಮೂಲಕ ವಲಸೆ ಬಂದು ಕೊಂಗು ಪ್ರದೇಶದಲ್ಲಿ ತಮ್ಮ ಅಧಿಕಾರ ಸ್ಥಾಪಿಸಿದರು. ಸ್ಕಂಧಪುರ ಇವರ ರಾಜಧಾನಿಯಾಗಿತ್ತು. ೨೫೦ರಿಂದ ೪೫೦ರ ವರೆಗೆ ರಟ್ಟಮನೆತನದ ಏಳುಜನ ರಾಜರು ಕೊಂಗು ನಾಡನ್ನಾಳಿದರು. ಇವರ ಆಳ್ವಿಕೆಯಲ್ಲಿ ಜೈನ ಮತ ವಿಶೇಷವಾಗಿ ಪ್ರಸಾರವಾಯಿತು. ರಟ್ಟರ ಕೊನೆಯ ರಾಜ, ತ್ರಿವಿಕ್ರಮ, ಜೈನಮತದಿಂದ ಶೈವಪಂಥಕ್ಕೆ ಪರಿವರ್ತನೆಯಾದ. ರಟ್ಟವಂಶೀಯರು ಸುವ್ಯವಸ್ಥಿತವಾದ ಆಡಳಿತವನ್ನು ಜಾರಿಗೆ ತಂದಿದ್ದರು' ಎಂದು ಮುಂತಾದ ವಿವರಗಳು 'ಕೊಂಗುದೇಶ ರಾಜಾಕ್ಕಳ್ ಚರಿತಂ' ಗ್ರಂಥದಲ್ಲಿ ಕಂಡುಬರುತ್ತವೆ. ಆದರೆ ಈ ರಟ್ಟಮನೆತನದ ಬಗೆಗೆ ಸಮಕಾಲೀನ ಶಾಸನಾಧಾರಗಳು ಕಂಡುಬಂದಿಲ್ಲ.

ಕ್ರಿ.ಶ. ೪೫೦ರ ಸುಮಾರಿನಲ್ಲಿ ಕೊಂಗು ಪ್ರದೇಶವು ಗಂಗರ ಅಧೀನವಾಯಿತು. ಒಂದನೆಯ ಮಾಧವ ಕೊಂಗಣಿವರ್ಮ ಗಂಗಮನೆತನವನ್ನು ಸ್ಥಾಪಿಸಿ ಕೊಂಗುದೇಶವನ್ನು ಸ್ವಾಧೀನಪಡಿಸಿಕೊಂಡ. ಸು. ೪೫೦ ರಿಂದ ೧೦ನೆಯ ಶತಮಾನದವರೆಗೂ

ಗಂಗ ಅರಸರು ಕೊಂಗುನಾಡನ್ನು ಆಳಿದರು. ದುರ್ವಿನೀತ, ಭೂವಿಕ್ರಮ, ಇಮ್ಮಡಿ ಶಿವಮಾರ, ಹಾಗೂ ೩ನೆಯ ಕೊಂಗುಣಿವರ್ಮರ ಆಳ್ವಿಕೆಯ ಕಾಲದಲ್ಲಿ ಕೊಂಗುನಾಡು ಸಂಪದ್ಭರಿತವಾಗಿತ್ತು. ೭೫೦ರ ಅನಂತರ ತಲಕಾಡು ಗಂಗ ವಂಶದ ಸ್ವತಂತ್ರ ಶಾಖೆಯೊಂದು ಕೊಂಗು-ಗಂಗರೆಂಬ ಹೆಸರಿನಿಂದ ಇಲ್ಲಿ ಸ್ಥಾಪಿತವಾದಂತೆ ಕಂಡುಬರುತ್ತದೆ. ನಾಲ್ವಡಿ ರಾಚಮಲ್ಲನ ಆಳ್ವಿಕೆಯೂ ಇಲ್ಲಿ ನಡೆದಿದೆ. ಅವನ ಸೇನಾಪತಿಯಾದ ಶ್ರವಣಬೆಳಗೊಳದ ಪ್ರಸಿದ್ಧ ಗೊಮ್ಮಟಮೂರ್ತಿಯ ನಿರ್ಮಾತೃ ಚಾಮುಂಡರಾಯನ ವಂಶೀಯರ ಮೂಲ ನೆಲೆ ಈ ಕೊಂಗುನಾಡಿನ ವಿಜಯಮಂಗಲ ಎಂದು ಅಭಿಪ್ರಾಯವಿದೆ. ಆತನ ಸೋದರಿ ಪುಲ್ಲಬ್ಬೆಯ ನಿಷಧಿಯೂ ವಿಜಯಮಂಗಲದಲ್ಲಿರುವುದು ಗಮನಾರ್ಹ ಸಂಗತಿ. ಗಂಗರ ಆಳ್ವಿಕೆಯ ಕಾಲದಲ್ಲಿ ಕೊಂಗುರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ವಿಷಯ ಅಥವಾ ನಾಡುಗಳೆಂದು ವಿಂಗಡಿಸಲಾಗಿತ್ತು. ತೊರೆನಾಡು-೫೦೦, ಕೊಂಗುನಾಡು – ೨೦೦೦ ಮತ್ತು ಮಲೆನಾಡು – ೧೦೦೦ ಎಂಬ ವಿಭಾಗಗಳಿದ್ದುವು. ಈ ವಿಭಾಗಗಳು ಒಬ್ಬೊಬ್ಬ ಪ್ರಾಂತ್ಯಾಧಿಕಾರಿಯ ಆಡಳಿತಕ್ಕೊಳಪಟ್ಟಿದ್ದುವು. ಗ್ರಾಮಗಳು ಆಡಳಿತ ಘಟಕಗಳಾಗಿದ್ದುವು. ಗವುಂಡ (ಗೌಡ) ಮುಖ್ಯವಾದ ಗ್ರಾಮಾಧಿಕಾರಿ. ಗವುಂಡನಿಗೆ ಸಹಾಯಕನಾಗಿ ಮಣೆಗಾರ ಎಂಬ ಅಧಿಕಾರಿಯಿದ್ದ. ಕೊಯಮತ್ತೂರು ಜಿಲ್ಲೆಯಲ್ಲಿ ಇಂದಿಗೂ ಅಧಿಕ ಸಂಖ್ಯೆಯಲ್ಲಿ ಇರುವ ಗವುಂಡರುಗಳು ಗಂಗರ ಆಡಳಿತದ ಪ್ರತಿಫಲವೆನ್ನಬಹುದು. ಗಂಗರ ಆಳ್ವಿಕೆಯ ಕೊನೆಗಾಲದಲ್ಲಿ ಪಲ್ಲವ, ಬಾಣ ಮತ್ತು ಅಡಿಗೈಮಾನ್ ಶಾಖೆಗಳು ಕೊಂಗುನಾಡಿನ ಹಲವು ಭಾಗಗಳಲ್ಲಿ ತಲೆಯೆತ್ತಿದ್ದವು. ಆ ಕಾಲದಲ್ಲಿ ಶೈವ ಮತ್ತು ಜೈನ ಪಂಥಗಳು ಇಲ್ಲಿ ಪ್ರಬಲವಾಗಿದ್ದುವು. ಆ ಕಾಲದ ಜೈನ ಬಸದಿಗಳ ಭಗ್ನಾವಶೇಷಗಳು ಈರೋಡು ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲಿ ಕಾಣಬಹುದಾಗಿದೆ.

೧೧ನೆಯ ಶತಮಾನದ ಪ್ರಾರಂಭದಿಂದ ಕೊಂಗುಮಂಡಲ, ಚೋಳರ ಅಧೀನಕ್ಕೆ ಬಂದಿತು. ೧೧೧೪ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿಯನ್ನಾಕ್ರಮಿಸಿದ್ದ ಚೋಳರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದಾಗ ಕೊಂಗುಪ್ರದೇಶದ ಹಲವು ಭಾಗಗಳು ಹೊಯ್ಸಳ ರಾಜ್ಯಕ್ಕೆ ಸೇರಿದುವು. ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಕೊಂಗುಮಂಡಲ ಪೂರ್ಣವಾಗಿ ಹೊಯ್ಸಳರ ವಶವಾಗಿದ್ದಿತು.

ಹೊಯ್ಸಳರ ತರುವಾಯ ಇದು ವಿಜಯನಗರ ಸಾಮ್ರಾಜ್ಯದಲ್ಲಿ ಐಕ್ಯವಾಗಿತ್ತು. ಮುಮ್ಮಡಿ ಹರಿಹರ ಮೊದಲಾದವರ ಆಳ್ವಿಕೆ ನಡೆದಿದೆ. ವಿಜಯನಗರದ ಪತನಾನಂತರ ಸ್ವಲ್ಪ ಕಾಲದವರೆಗೂ ಮಧುರೆಯ ನಾಯಕರು ಕೊಂಗುನಾಡನ್ನು ಆಳಿದರು. ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಮೈಸೂರಿನ ಕಂಠೀರವನರಸರಾಜ ಒಡೆಯರು ಕೊಯಮತ್ತೂರು ಜಿಲ್ಲೆಯನ್ನು ವಶಪಡಿಸಿಕೊಂಡನು. ಚಿಕ್ಕದೇವರಾಜ ಒಡೆಯರು ಕೊಂಗುಮಂಡಲವನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡರು. ಹೈದರ್ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಕೊಂಗುನಾಡಿನ ಸುತ್ತಮುತ್ತಣ ಪ್ರದೇಶಗಳು ಮೈಸೂರುರಾಜ್ಯದಲ್ಲಿ ಸೇರಿದ್ದುವು. ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ಈ ಪ್ರದೇಶ ಬ್ರಿಟೀಷರ ವಶವಾಗಿ ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಯಿತು. ಆಗ ಮುಮ್ಮಡಿ ಕೃಷ್ಣರಾಜ ಒಡೆಯರ್, ಅನಂತರ ಮದ್ರಾಸು ಪ್ರಾಂತ್ಯದಲ್ಲೂ ತರುವಾಯ ಮದ್ರಾಸು ರಾಜ್ಯದಲ್ಲೂ ಮುಂದುವರಿದ ಕೊಂಗುಮಂಡಲದ ಬಹುಭಾಗ ಈಗ ತಮಿಳುನಾಡಿನ ಭಾಗವಾಗಿದೆ.

ಕೊಂಗುನಾಡು ಪ್ರದೇಶದಲ್ಲಿ ಸು. ೧೦೦೦ದಷ್ಟು ಶಾಸನಗಳನ್ನು ಶೋಧಿಸಲಾಗಿದೆ. ಅವುಗಳಲ್ಲಿ ಉತ್ತರ ಕೊಂಗು ನಾಡಿನ ಭಾಗವಾಗಿದ್ದ ಇಂದಿನ ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಇಂದಿನ ತಮಿಳುನಾಡಿಗೆ ಸೇರಿದ ೩೯, ಇಂದಿನ ಕೇರಳಕ್ಕೆ ಸೇರಿದ ೬, ಒಟ್ಟು ಮೊತ್ತ=೯೪.

ಕಾಲಮಾನದ ದೃಷ್ಟಿಯಿಂದ ಕೊಂಗುನಾಡಿನ ಶಾಸನಗಳು ಕ್ರಿ.ಪೂ. ೨-೧ನೇ ಶತಮಾನದಿಂದ ಕ್ರಿ.ಶ. ೧೯ನೆಯ ಶತಮಾನದ ವರೆಗೂ ವ್ಯಾಪಿಸಿವೆ. ಭಾಷಿಕವಾಗಿ ತಮಿಳು/ಪ್ರಾಕೃತ, ಕನ್ನಡ, ಸಂಸ್ಕೃತ ಭಾಷೆಯ ಶಾಸನಗಳಿದ್ದು, ಅವನ್ನು ತಮಿಳು ಬ್ರಾಹ್ಮೀ, ವಟ್ಟೆಲುತ್ತು, ತಮಿಳು ಮತ್ತು ಕನ್ನಡ ಲಿಪಿಗಳಲ್ಲಿ ಕೊರೆಯಲಾಗಿದೆ.

ಪ್ರಸ್ತುತ ಕೊಂಗುನಾಡಿನ ದಿಂಡಿಗಲ್, ಈರೋಡ್, ಕೊಯಮತ್ತೂರು ಮತ್ತು ಚಾಮರಾಜನಗರ ಮೊದಲಾದ ಜಿಲ್ಲಾ ಪ್ರದೇಶಗಳಲ್ಲಿರುವ ಅನೇಕ ಜೈನ ನೆಲೆಗಳಲ್ಲಿ ಬಹುಮುಖ್ಯವಾದುವುಗಳ ಸೂಕ್ಷ್ಮ ಅವಲೋಕನ ಇಂತಿದೆ:

ಸಿದ್ಧರಮಲೆ: ಕ್ರಿ.ಪೂ. ೨-೧ನೇ ಶತಮಾನಕ್ಕೆ ಸೆರಿದ ತಮಿಳು-ಬ್ರಾಹ್ಮೀ ಶಾಸನಗಳೆಲ್ಲವೂ ದಿಂಡಿಗಲ್ ಜಿಲ್ಲೆ ನಿಲಕ್ಕೋಟ್ಟೈ ತಾಲ್ಲೂಕಿನ ಮೆಟ್ಟುಪಟ್ಟಿಯ ಸಿದ್ಧರಮಲೆಯ ಶಿಲಾ ಹಾಸಿನ ಮೇಲೆ ಇದ್ದು ಅಂತೈ ಅರಿಯತಿ, ಅಂತೈ ಇರವಾತನ್, ಮದಿರೈ ಅಂತೈ ವಿಶುವನ್, ಅಂತೈ ಚೆಂತನ್ ಎಂಬಿವೆ ಮೊದಲಾದ ಬರಹಗಳಿವೆ (JIIT, No. 16 to 24). ಇಲ್ಲಿ 'ಅಂತೈ' ಎಂದರೆ: 'ಪವಿತ್ರ ತಂದೆ' ಎಂಬರ್ಥವಿದೆ.

ನಾಗಮಲೆ: ನಂತರದಲ್ಲಿ ಅಂದರೆ, ಕ್ರಿ.ಶ. ೩-೪ನೆಯ ಶತಮಾನದ ತಮಿಳು-ಬ್ರಾಹ್ಮೀ ಶಾಸನಗಳು, ಈರೋಡ್ ಜಿಲ್ಲೆ, ಈರೋಡ್ ತಾಲ್ಲೂಕಿನ ಅರ್ಚ್ಚಲೂರಿನ ನಾಗಮಲೈ ಬೆಟ್ಟಸಾಲಿನ ಗುಹೆಗಳಲ್ಲಿವೆ. ಅಲ್ಲಿನ ಗುಹೆಯಲ್ಲಿ ಶಿಲ್ಪಗಳ ಕೆಳಗೆ ಸು. ೧೨ ಶಾಸನಗಳಿವೆ. ಅಲ್ಲಿನ ೭ ಕಲ್ಲಿನ ಹಾಸಿಗೆಗಳನ್ನು ವಜ್ರಗಳ ವ್ಯಾಪಾರಿಯಾದ ತೇವರ್-ಚಾತ್ತನ್ ಎಂಬುವನು ಮಾಡಿಸಿಕೊಟ್ಟನೆಂದು ತಿಳಿಯುತ್ತದೆ. (JIIT, No. 364 to 366).

ಐವರಮಲೆ (ಅಯ್ಯಂಪಾಳ್ಯಂ): ಕ್ರಿ.ಶ. ೭-೮-೯ನೆಯ ಶತಮಾನಕ್ಕೆ ಸೇರಿದ ಶಾಸನಗಳು ದಿಂಡಿಗಲ್ ಜಿಲ್ಲೆ, ಪಳನಿ ತಾ॥ ಐವರಮಲೆಯ ಸ್ವಾಭಾವಿಕ ಗುಹೆಗಳ ಸಮೀಪ ಕಂಡುಬಂದಿದ್ದು ತಮಿಳು ಭಾಷೆ ಮತ್ತು ವಟ್ಟೆಲುತ್ತು ಲಿಪಿಯಲ್ಲಿವೆ. ಅಲ್ಲಿ ಪಾರ್ಶ್ವನಾಥ ಮತ್ತು ಯಕ್ಷಿಯರ ಪ್ರಸ್ತಾಪವಿದ್ದು ಇಲ್ಲಿ ಅನೇಕ ಜಿನ ಪ್ರತಿಮೆಗಳನ್ನು ನಿರ್ಮಾಣ ಮಾಡಿಸಿರುವ ವಿವರಗಳು ದಾಖಲಾಗಿದೆ. ಅಲ್ಲದೆ ಪಾಂಡ್ಯರಾಜ ವರಗುಣನ ಪ್ರಸ್ತಾಪ ಶಾಸನವೊಂದರಲ್ಲಿ ಬಂದಿದೆ. ಅನೇಕ ಜಿನಮುನಿಗಳ ಶ್ರಾವಕ, ಶ್ರಾವಕಿಯರ, ಶಿಲ್ಪಿಗಳ ಪ್ರಸ್ತಾಪ, ಆಹಾರದಾನ, ದೇವರಿಗೆ ಚಿನ್ನದ ಉಡುಗೊರೆಗಳನ್ನು ನೀಡಿರುವುದನ್ನು ಇಲ್ಲಿನ ಶಾಸನಗಳು ದಾಖಲಿಸಿವೆ. (JIIT, No. 1 to 15).

ತಿಂಗಳೂರು: ಈರೋಡ್ ಜಿಲ್ಲೆಯ ಈರೋಡ್ ತಾಲ್ಲೂಕಿನ ತಿಂಗಳೂರಿನಲ್ಲಿ ೧೧, ೧೩ ಮತ್ತು ೧೪ನೆಯ ಶತಮಾನದ ಕೊಂಗು ವಿಕ್ರಮಚೋಳ ಮತ್ತು ಹೊಯ್ಸಳ ಮುಮ್ಮಡಿ ವೀರಬಲ್ಲಾಳರ ಕಾಲದ ಶಾಸನಗಳು ಇವೆ (JIIT, No. 367 to 369).

ವಿಜಯಮಂಗಲ: (ಈರೋಡ್ ಜಿಲ್ಲೆ ಈರೋಡ್ ತಾಲ್ಲೂಕು) ಕ್ರಿ.ಶ. ೬೭೮ರಲ್ಲೇ ಇಲ್ಲಿನ ಚಂದ್ರಪ್ರಭನಾಥರ ಜಿನಾಲಯವನ್ನು ಕೊಂಗುವೆಲಿರ್ ಎಂಬುವ ಅರಸನು ಮಾಡಿಸಿದನೆಂದು ಹೇಳಲಾಗಿದೆ. ಆದರೆ ಕ್ರಿ.ಶ. ೧೦, ೧೨, ೧೩, ೧೫ನೆಯ ಶತಮಾನಗಳಿಗೆ ಸೇರಿದ ೮ ಶಾಸನಗಳು ಮಾತ್ರ ಸದ್ಯಕ್ಕೆ ದಾಖಲಾಗಿವೆ. ೧೨ನೆಯ ಶತಮಾನದ ಜೈನ ಆಚಾರ್ಯ ಭವನಂದಿಯ ಜನ್ಮಸ್ಥಳ ಇದು. ಇಲ್ಲಿ ಪ್ರಸಿದ್ಧ ಶ್ರವಣಬೆಳಗೊಳದ ಗೊಮ್ಮಟನ ನಿರ್ಮಾತೃವಾದ ಚಾಮುಂಡರಾಯನ ಸೋದರಿ ಪುಲ್ಲಬ್ಬೆಯ ನಿಷದಿ ಶಾಸನವಿದೆ. ಇಲ್ಲಿನ ಚಂದ್ರಪ್ರಭನಾಥನ ಬಸದಿಯು ತಲಕಾಡು ಗಂಗರ ವಾಸ್ತುಶೈಲಿಯಲ್ಲಿ ರಚನೆಯಾಗಿದೆ (JIIT, No. 370 to 377).

ತ್ರಿಮೂರ್ತಿ ಮಲೆ (ಆನೆಮಲೆ ಬೆಟ್ಟ): (ಕೊಯಮತ್ತೂರು ಜಿಲ್ಲೆ ಉಡುಮಲೈಪೇಟ್ಟೈ ತಾಲ್ಲೂಕು) ಬೆಟ್ಟದ ಬುಡದಲ್ಲಿನ ಬಂಡೆಯ ಮೇಲಿನ ಜೈನಶಿಲ್ಪದ ಬಳಿ ಎದ್ದಲಪ್ಪನಾಯಕನ ಕಾಲದ ಕ್ರಿ.ಶ. ೧೭೯೩ರ ತಮಿಳು ಶಾಸನವೊಂದಿದೆ. (ARIE, ೧೯೨೭/೧೮೬).

ಪ್ರಸ್ತುತ ಬಡಗಕೊಂಗುನಾಡಿನ ಭಾಗವಾಗಿದ್ದ ಇಂದಿನ ಚಾಮರಾಜನಗರ ಪ್ರದೇಶದಲ್ಲಿ ಅನೇಕ ಜೈನ ನೆಲೆಗಳಿವೆ. ಅದರಲ್ಲೂ ಮುಖ್ಯವಾಗಿ ಮಲೆಯೂರು (ಕನಕಗಿರಿ), ಉಮ್ಮತ್ತೂರು, ಚಾಮರಾಜನಗರ, ತೆರಕಣಾಂಬಿ, ಕೆಲಸೂರು, ಕುಲಗಾಣ, ಕೊಳ್ಳೇಗಾಲ, ಧನಗೆರೆ, ಬಸದಿಪುರ ಮೊದಲಾದ ಕಡೆಗಳಲ್ಲಿರುವ ಜೈನ ನೆಲೆಗಳು ಮುಖ್ಯವಾದುವಾಗಿವೆ.

ಮಲೆಯೂರು (ಕನಕಗಿರಿ): ಚಾಮರಾಜನಗರ ಜಿಲ್ಲಾ ಪ್ರದೇಶಕ್ಕೆ ಸೇರಿದ ಮಲೆಯೂರು ಪ್ರಮುಖ ಜೈನ ಪಂಥದ ಕ್ಷೇತ್ರವಾಗಿದ್ದು, ಪ್ರಾಚೀನ ಕಾಲದಿಂದಲೂ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಜೈನಮುನಿ ಪೂಜ್ಯಪಾದರು ತಮ್ಮ ಕೊನೆಯ ದಿನಗಳನ್ನು ಕಳೆದ ಪುಣ್ಯಭೂಮಿ ಇದಾಗಿದೆ. ಮಲೆಯೂರಿನ ನಿಸಿಧಿಗಳು ಪ್ರಸಿದ್ಧವಾಗಿವೆ. ಕ್ರಿ.ಶ. ೧೧೮೧ರ ಚಾ.ನ. ೩೭೧ನೇ ಮಲೆಯೂರು ಶಾಸನವು ಚಿಕ್ಕತಾಯಿಗೆ ಸಂಬಂಧಪಟ್ಟದ್ದಾಗಿದೆ. ಆಕೆಯು ಅತಿಥಿ ಸತ್ಕಾರ, ದಾನಧರ್ಮಗಳಿಗೆ ಹೆಸರುವಾಸಿಯಾಗಿದ್ದಳೆಂದು ಶಾಸನದಿಂದ ತಿಳಿದುಬರುತ್ತದೆ. ಆಕೆಯು ಪಾರ್ಶ್ವನಾಥನ ಪಂಚಪರ್ವಕ್ಕೆ ನಿತ್ಯ ಅನ್ನದಾನಕ್ಕೆಂದು ಕಿನ್ನರಿಪುರವನ್ನು ದತ್ತಿ ನೀಡಿದ್ದಳೆಂದು ಶಾಸನ ತಿಳಿಸುತ್ತದೆ. ಮಲೆಯೂರಿನ ಪ್ರಕಟಿತ ೧೯ ಶಾಸನಗಳಲ್ಲಿ ೧೦ ನಿಸಿಧಿ ಶಾಸನಗಳಿವೆ. ಈ ಶಾಸನಗಳು ಸಮಾಧಿ ಮರಣವನ್ನಪ್ಪಿದವರ ಗೌರವಾರ್ಥ ನಿಲ್ಲಿಸಿದ ಸ್ಮಾರಕಗಳಾಗಿವೆ. ನಿಸಿಧಿ ಪದವು ಧ್ಯಾನಾಸಕ್ತನು ಆಯ್ದುಕೊಂಡ ಸ್ಥಳ ಹಾಗೂ ಭಂಗಿಗಳನ್ನು ಸೂಚಿಸುವುದೆಂದು ಅರ್ಥೈಸಲಾಗಿದೆ. ಮುನಿಗಳು ಧ್ಯಾನಕ್ಕಾಗಿ ಬಂಡೆಗಳು ಸುತ್ತುವರೆದ ಸ್ಥಳಗಳನ್ನು ಆಯ್ಕೆಮಾಡಿಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ನಿಸಿಧಿಗಳನ್ನು ಬಂಡೆಕಲ್ಲು ಮತ್ತು ಗುಂಡುಕಲ್ಲುಗಳ ಮೇಲೆ ಕೆತ್ತುವುದು ರೂಢಿಯಲ್ಲಿತ್ತು. ಮಲೆಯೂರಿನಲ್ಲೂ ಅಂತಹ ಬಂಡೆಕಲ್ಲು ಮತ್ತು ಗುಂಡುಕಲ್ಲುಗಳನ್ನೇ ಬಳಸಿಕೊಳ್ಳಲಾಗಿದೆ. ಕಾರಣ ಅಲ್ಲಿಯ ಕನಕಗಿರಿ ಬೆಟ್ಟ ತಪಸ್ಸಿಗೆ ಯೋಗ್ಯವಾಗಿದ್ದು, ಪ್ರಾಚೀನ ಕಾಲದಿಂದಲೂ ಋಷಿಮುನಿಗಳನ್ನು ಆಕರ್ಷಿಸುತ್ತಿತ್ತು. ಮಲೆಯೂರಿನಲ್ಲಿ ಬಂಡೆಕಲ್ಲುಗಳಿಗಿಂತ ಗುಂಡುಕಲ್ಲು ನಿಸಿಧಿಗಳು ಹೆಚ್ಚು ಕಲಾತ್ಮಕವಾಗಿ ಕಂಡುಬರುತ್ತವೆ. ಉದಾಹರಣೆಗೆ ಕ್ರಿ.ಶ. ೧೩೫೫ರ ಚಾ.ನ. ೩೬೫ನೇ ಶಾಸನದ

ಮೇಲ್ಭಾಗದಲ್ಲಿ ಬ್ರಹ್ಮದೇವರ ಶಿಲ್ಪ ವಿಜಯಪಾರ್ಶ್ವನಾಥ ಶಿಲ್ಪ ಆಚಾರ್ಯರ ಓಲಗದ ಉಬ್ಬುಶಿಲ್ಪಗಳಿವೆ. ಈ ಶಿಲ್ಪಗಳ ಭಂಗಿಗಳನ್ನು ಗಮನಿಸಿದಾಗ ಏಕಪಾರ್ಶ್ವ ನಿಯಮವನ್ನನುಸರಿಸಿ ಸಮಾಧಿ ಮರಣ ಅನುಭವಿಸಿದಂತೆ ಕಂಡುಬರುತ್ತದೆ. ೧೪ನೇ ಶತಮಾನದ್ದೆಂದು ಅಂದಾಜು ಮಾಡಲಾಗಿರುವ ಪಾರ್ಶ್ವನಾಥ ಬಸದಿಯ ಪ್ರಾಕಾರದಲ್ಲಿ ದಕ್ಷಿಣ ಕಡೆ ನಿಲ್ಲಿಸಿರುವ ಚಾ.ನ. ೩೬೯ನೇ ಮಲೆಯೂರು ಶಿಲಾಶಾಸನವು ಬಾಹುಬಲಿ ಪಂಡಿತದೇವರ ನಿಸಿದಿಯಾಗಿದೆ. ಇವನು ಸಕಲ ವಿದ್ಯಾಚಕ್ರವರ್ತಿಯೆನಿಸಿದ್ದು ದ್ವಿಭಾಷಾ ಕವಿತಾ ತ್ರಿಣೇತ್ರನೆಂದೂ ಜ್ಯೋತಿಷ್ಯಶಾಸ್ತ್ರ ಸರ್ವಜ್ಞನೆಂದೂ ವರ್ಣಿಸಲ್ಪಟ್ಟಿದ್ದಾನೆ. ಹೀಗೆ ದೇವಚಂದ್ರನ ನಾಡಾದ ಮಲೆಯೂರು (ಕನಕಗಿರಿ) ಜೈನಯತಿ ಪರಂಪರೆಗೆ ಪ್ರಸಿದ್ಧಿ ಪಡೆದಿದ್ದು ಅನೇಕ ಯತಿಗಳ ತಪಸ್ಸಿನ ತಾಣವಾಗಿತ್ತು. ಕ್ರಿ.ಶ. ೧೪೯೨ರ ಮಲೆಯೂರಿನ ಮತ್ತೊಂದು ಶಾಸನದ ಪ್ರಕಾರ ಮಲೆಯೂರಿನ ಶ್ರೀ ವಿಜಯನಾಥ ಬಸದಿಯ ಆರತಿ ಸೇವೆಗೆ ಆ ಊರಿನ ದಿಮ್ಮಣ್ಣಸೆಟ್ಟಿ ಎಂಬುವವನು ೨೦ ಹೊನ್ನನ್ನು ಠೇವಣಿಯಿರಿಸಿ ಅದರಿಂದ ಬರುವ ಬಡ್ಡಿಯಲ್ಲಿ ಒಟ್ಟು ೪ ಹಣವನ್ನು ಆರತಿ ಸೇವೆಗೆ ಬಳಸಿಕೊಳ್ಳುವಂತೆ ಸೂಚಿಸಿರುವ ವಿಚಾರ ತಿಳಿದುಬರುತ್ತದೆ. [EC-4 (R),Chamarajanagar 355 to 374].

ಹರವೆ (ಚಾಮರಾಜನಗರ ತಾ.): ಗ್ರಾಮದ ಆದೀಶ್ವರಬಸದಿಯ ಪ್ರಾಕಾರದಲ್ಲಿನ ಶಾಸನ ಮಂಟಪದ ಮೇಲ್ಭಾಗ ತೊಲೆಯಲ್ಲಿರುವ ಕ್ರಿ.ಶ. ೧೪೮೨ರ ಶಾಸನವು ಮಹಾಮಂಡಲೇಶ್ವರ ವೀರಸೋಮೆರಾಯ ಒಡೆಯರ ಕರಣಿಕನಾದ ದೇವರಸನು ಚೈತ್ಯಾಲಯ, ಪಾಕಶಾಲೆ ಮತ್ತು ಆದಿಪರಮೇಶ್ವರನನ್ನು ಪ್ರತಿಷ್ಠಾಪಿಸಿ ಪೂಜಾ ಕೈಂಕರ್ಯಗಳಿಗಾಗಿ ವಿಪುಲ ದತ್ತಿಗಳನ್ನು ಬಿಟ್ಟಿರುವುದನ್ನು ದಾಖಲಿಸುತ್ತದೆ. (EC-4 (R),Chamarajanagar 390].

ಬಿಳಗಿರಿರಂಗನಬೆಟ್ಟ (ಯಳಂದೂರು ತಾ.): ಅಲ್ಲಿನ ಶ್ರವಣನ ಅರೆಯಲ್ಲಿ ಬಿದ್ದಿರುವ ಕ್ರಿ.ಶ. ೧೯೯೦ರ ಶಾಸನ ಹೊಯ್ಸಳ ಇಮ್ಮಡಿ ವೀರಬಲ್ಲಾಳನದಾಗಿದ್ದು ಆರಂಭದ ಜಿನಸ್ತುತಿಯ ಹೊರತು ಪೂರ್ಣವಾಗಿ ತ್ರುಟಿತವಾಗಿದೆ. [(EC-4 (R), Yalandur 198].

ಬಸ್ತಿಪುರ: ಕ್ರಿ.ಶ. ಸು. ೭-೮ನೆಯ ಶತಮಾದ ಸಂಸ್ಕೃತ ಶಾಸನ, ಜೈನ ಆಚಾರ್ಯ ಪುಷ್ಪಣಂದಿಯ ಪ್ರಶಸ್ತಿ ಹಾಗೂ ಆತ ತನ್ನ ಶಿಷ್ಯರಿಗೆ ತ್ರಿರತ್ನ ನಿಯಮಗಳನ್ನು ಬೋಧಿಸಿ ಅಮರತ್ವ ಪಡೆದನೆಂದು ಉಲ್ಲೇಖಿಸುತ್ತದೆ. [EC-4 (R), Kollegala 91].

ಉಮ್ಮತ್ತೂರು (ಚಾಮರಾಜನಗರ ತಾ.): ಊರಿನ ಮನೆಯ ಹಿತ್ತಲು, ಸಮೀಪದ ತೋಪಿನ ಹೊಲ ಮುಂತಾದೆಡೆಗಳಲ್ಲೆಲ್ಲ ಜೈನ ಅವಶೇಷಗಳು ಕಂಡುಬಂದಿವೆ. ಅಲ್ಲದೆ ಊರಿನಲ್ಲಿರುವ ವರ್ಧಮಾನಸ್ವಾಮಿ ಬಸದಿಯ ಗರ್ಭಗುಡಿಯ ಮೇಲೆ ೧೮ನೆಯ ಶತಮಾನದ ಶಾಸನವಿದೆ. [EC-4 (R), Chamarajanagar 99,101,102, & 91].

ಮಂಗಲ: ಚಾ.ನ. ತಾ॥ ಮಂಗಲದ ಕ್ರಿ.ಶ. ೧೦-೧೧ನೇ ಶತಮಾನದ ಶಾಸನವು ಶ್ರೀ ಮತ್ಕೊಣ್ಡಕಂದಾನ್ವಯದ....ಚಾರ್ಯ ಭಟರರ ಶಿಷ್ಯರ್ ಗುಣನಂದಿ ಕರ್ಮಪ್ರಕೃತಿ ಭಟ್ಟಾರರು ೩೧ ದಿವಸ ಉಪವಾಸ ಮಾಡಿ ಸನ್ಯಸನ ವಿಧಿಯಿಂದ ನೋನ್ತು ಮುಡುಪಿದವರಿಗೆ ನಿಷಿಧಿಯಾದ ಉಲ್ಲೇಖವಿದೆ. [EC-4 (R), Chamarajanagar 137].

ಕುಲಗಾಣ: (ಚಾಮರಾಜನಗರ ತಾ.), ಈ ಗ್ರಾಮದಲ್ಲಿ ದೊರೆತ ಕ್ರಿ.ಶ. ೭ನೆಯ ಶತಮಾನದ ಗಂಗ ಇಮ್ಮಡಿ ಶಿವಮಾರನ ತಾಮ್ರಶಾಸನದಲ್ಲಿ ಪಲ್ಲವ ಯುವರಾಜರು ಕೆಲ್ಲಿಪುಸೂರಿನ ಬಸದಿಗೆ ಗಂಜೆನಾಡಿನ ಕಣ್ಣಮ್ಮ ನೀಡಿದ ದಾನವನ್ನು ಚನ್ತಸೇನಾಚಾರ್ಯ (ಚಂದ್ರಸೇನಾಚಾರ್ಯ) ಅವರಿಗೆ ನೀಡಿದ ವಿವರವಿದೆ. ಅದೇ ಗ್ರಾಮದ ಈಶಾನ್ಯದ ಹೊಲವೊಂದರಲ್ಲಿ ಕ್ರಿ.ಶ. ೧೨೪೧ರ ಶಾಸನ ಮಹಾಪ್ರಧಾನಿ ಕೇತೆಯ ಕೊಲುಗಣದ ಬಸದಿಗೆ ಸುಂಕಗಳನ್ನು ದತ್ತಿ ಬಿಟ್ಟ ವಿವರ. [EC-4 (R), Chamarajanagar 343].

ಹಳೇ ಆಲೂರು: ಹಳೇ ಆಲೂರಿನಲ್ಲಿರುವ ಚಾ.ನ. ೧೯೫ನೇ ಶಾಸನದ ಪ್ರಕಾರ ಅಲ್ಲಿರುವ ಚಂದ್ರನಾಥ ಬಸದಿಯನ್ನು ವೇಲರು, ಕೋವರು, ಕುನಿಂದರು, ನಲ್ಲೊಡೆಯರು ಜೀರ್ಣೋದ್ಧಾರ ಮಾಡಿಸಿ, ದಕ್ಷಿಣ ಕರ್ನಾಟಕದ ಅಯ್ಯಾವೊಳೆ ಎಂದೇ ಬಣ್ಣಿಸಲಾಗಿರುವ ಆಲೂರು ಮತ್ತು ಆ ಊರಿನ ಗದ್ದೆ ಬೆದ್ದಲು ತೋಟ, ಮನೆ ಇತ್ಯಾದಿಗಳನ್ನು ಸಮರ್ಪಿಸಿ ಆ ಬಸದಿಯ ಉಸ್ತುವಾರಿಗೆ ಕವಿ ಗಮಕಿ ವಾದಿ ಮಲ್ಲಿಸೇನ ಮಲಧಾರಿ ದೇವರ ಶಿಷ್ಯರಾದ ಪಾರಿಸದೇವರನ್ನು ಕೋರಿಕೊಂಡದ್ದು ಶಾಸನದಲ್ಲಿದೆ. [EC-4 (R), Chamarajanagar 195].

ಕಾಡಹಳ್ಳಿ: ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂದೆ ಗರುಡಗಂಬದ ಮೇಲೆ ಇರುವ ಕ್ರಿ.ಶ. ೧೬೮೩ರ ಶಾಸನ, ಅದನ್ನು ಮಾನಸ್ತಂಭ ಎಂದು ಉಲ್ಲೇಖಿಸುತ್ತದೆ. [EC-4 (R),Chamarajanagar 64].

ಮೂಗೂರು: ಮೂಗೂರಿನ ಶಾಸನವೊಂದರಲ್ಲಿ ಮೂಗೂರಿನ ಸಮಸ್ತ ಗಾವುಂಡಗಳು ತಮ್ಮ ಗುರುಗಳಾದ ಮೂಲಸಂಘ ದೇಶಿಗಣ ಪುಸ್ತಕಗಚ್ಛ ಕೊಂಡಕುಂದಾನ್ವಯ ಇಂಗಣೇಶ್ವರ ಸಂಘದ ಶ್ರೀ ಭಾನುಕೀರ್ತಿ ಪಂಡಿತದೇವರ ಶಿಷ್ಯರಾದ ಕಾನ ನಂದಿದೇವರ ಗುಡ್ಡುಗಳಪ್ಪನವರ ಸೇವಾರ್ಥ ಮೂಗೂರ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿರುವುದು ಉಕ್ತವಾಗಿದೆ. [EC-5 (R). T. Narasipura 280]

ಸಂಪಿಗೆಪುರ: ಗುಂಡ್ಲಪೇಟೆ ತಾ. ಸಂಪಿಗೆಪುರದ ಅರ್ಕೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೯ನೇ ಶತಮಾನದ ಶಾಸನವು ಮಾಂಬಳ್ಳಿ ಮಹಾರಾಜರು ಕೊಜ್ಗಳ್ಳಿಯ ಪುದಿಗೆರೆಯ, ಕೋಣವೂರ, ತಮ್ಮೂರ ಇವರಿಂದ ಪಡೆದ ಧನವನ್ನು ಬಸದಿಗೆ ಹಾಗೂ ಅತಿಥಿಗಳಿಗಾಗಿ ನೀಡಿದ ದಾನವನ್ನು ತಿಳಿಸುತ್ತದೆ. [EC-3 (R),Gundlupet 92].

ಮಹದೇಶ್ವರ ಬೆಟ್ಟ: ಕೊ.ಗಾ. ತಾ. ಮಹದೇಶ್ವರ ಬೆಟ್ಟದ ದೇವಸ್ಥಾನದ ಸುಕನಾಸಿ ಬಾಗಿಲ ಮೇಲಿನ ಶಾಸನ ಹೊನ್ನಣ್ಣ ಸೆಟ್ಟಿಯ ಮಗ ಗುರುವ ಸೆಟ್ಟಿಯು ಬಸದಿಯನ್ನು ಕಟ್ಟಿಸಿದ ಉಲ್ಲೇಖವಿದೆ. [EC-4 (R), Kollegala 77].

ತೆರಕಣಾಂಬಿ: (ಗುಂಡ್ಲಪೇಟೆ ತಾ.) ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ೧೪ನೆಯ ಶತಮಾನದ ಶಾಸನವಿದೆ. [EC-3 (R),Gundlupet 216].

ಧನಗೆರೆ: ಕೊಳ್ಳೇಗಾಲದಿಂದ ಸುಮಾರು ೫ ಕಿ.ಮೀ. ದೂರದಲ್ಲಿರುವ ಧನಗೆರೆ ಗ್ರಾಮದ ಪೂರ್ವಭಾಗದಲ್ಲಿರುವ ಒಂದು ಜಮೀನಿನಲ್ಲಿ ಜೈನ ಅವಶೇಷಗಳು ದೊರೆತಿವೆ.

ಮುಡಿಗೊಂಡ (ಕೊಳ್ಳೇಗಾಲ ತಾ.): ಇಲ್ಲಿನ ಬಸವೇಶ್ವರ ದೇವಾಲಯದ ಸಮೀಪದ ಕೊಳದ ಪಶ್ಚಿಮ ಮೆಟ್ಟಿಲುಗಳಿಗೆ ಸೇರಿಸಿರುವ ಹದಿನಾಲ್ಕನೆಯ ಶತಮಾನದ ತ್ರುಟಿತ ಶಾಸನವೊಂದು ಮುಡಿಗೊಂಡ ಚೋಳಪುರಂನ ಚಂದ್ರಪ್ರಭಾಸ್ವಾಮಿಗಳ ನಕರ ಜಿನಾಲಯದ ಜೀರ್ಣೋದ್ಧಾರಕ್ಕೆ ಪೂಜೆ, ಆಹಾರದಾನ ಇತ್ಯಾದಿಗಳಿಗೆ ದತ್ತಿ ಬಿಟ್ಟಿರುವುದನ್ನು ದಾಖಲಿಸಿದೆ. [EC-4 (R), Kollegala 118].

ಗುಂಡ್ಲುಪೇಟೆ: ಕ್ರಿ.ಶ. ೧೧೯೬ರಲ್ಲಿ ಗುಂಡ್ಲುಪೇಟೆಯಲ್ಲಿ ಮಹಾಪ್ರಧಾನ ಕುಮಾರ ಲಕ್ಷ್ಮಣ ದಂಡನಾಯಕನು ಆಳುವಾಗ ಕೊಡುಗುನಾಡ-೩೦೦ ಪ್ರಭು ಗಾವುಂಡರು ಮಿರ್ದು ತಪೂರ ಜಿನಾಲಯಕ್ಕೆ ಮಾದಹಳ್ಳಿಯನ್ನು ದಾನ ಮಾಡಿದ್ದು ಶಾಸನದಲ್ಲಿ ಕಂಡುಬರುತ್ತದೆ [EC-3 (R), Gundlupet 3]. ಕ್ರಿ.ಶ. ೧೧೯೬ರ ಗುಂಡ್ಲುಪೇಟೆಯ ಬಸ್ತಿಮಾಳದಲ್ಲಿರುವ ಶಾಸನದಲ್ಲಿ ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಕೊಡುಗನಾಡ ಸಮಸ್ತ ಪ್ರಭು ತುಪ್ಪೂರ ಬಿತ್ತಿ ಜಿನಾಲಯಕ್ಕೆ ಮಡಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಷಯವು ಕಂಡುಬರುತ್ತದೆ. ಮುಂದುವರೆದು ವಜ್ರನಂದಿ ಸಿದ್ಧಾಂತದೇವರ ಶಿಷ್ಯ ನಾಗಪಂಡಿತರ ಮಗ ಕನಕನಂದಿ ಪಂಡಿತನ ಕಾಲು ತೊಳೆದು, ಸಮಸ್ತ ಗೌವುಂಡರು ಜಿನಾಲಯದ ಜೀರ್ಣೋದ್ಧಾರ, ದೇವರ ಅಷ್ಟವಿಧ್ಯಾರ್ಚನೆಗೆ ಮತ್ತು ಮುನಿಗಳ ಆಹಾರಧಾನ್ಯಕ್ಕೆ ಭೂದಾನ ನೀಡಿದನ್ನು ತಿಳಿಸುತ್ತದೆ. [EC-3 (R), Gundlupet 4].

ಕೆಲಸೂರು: (ಗುಂಡ್ಲುಪೇಟೆ ತಾ.): ಕೆಲಸೂರಿನಲ್ಲಿ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ ೩ ಶಾಸನಗಳು ದೊರೆಕಿವೆ. ಮೊದಲನೇ ಶಾಸನವು ಕುಡುಗುನಾಡಿನ ಬಸದಿಯ ಶ್ರೀಕಾರ್ಯಕ್ಕೆ ದತ್ತಿ ನೀಡಿದ ಮಾಹಿತಿ ನೀಡಿದರೆ, ಮತ್ತೊಂದು ಶಾಸನ ಬಸದಿಗೆ ಕುಡುನೂರುನಾಡಿನ ಕಲೂರು ಗ್ರಾಮದ ೧೨ ಖಂಡುಗ ಭೂಮಿ ದಾನ ನೀಡಿದ್ದು ಕಂಡುಬರುತ್ತದೆ. ಇನ್ನೊಂದು ಶಾಸನದಲ್ಲಿ ಸಹ ಇದೇ ಬಸದಿಗೆ ದಾನ ನೀಡಿರುವುದು ಉಲ್ಲೇಖಗೊಂಡಿದೆ. ಗು.ಪೇ. ೧೦೦ರ ಕೆಲಸೂರ ಬಸದಿಯಲ್ಲಿರುವ ಕ್ರಿ.ಶ. ೧೨೨೯ರ ಶಾಸನವು ಇಮ್ಮಡಿ ವೀರನರಸಿಂಹನ ಕಾಲದಲ್ಲಿ ಹಿರಿಯನಾಡ ಮಹಾಪ್ರಭು ಕೊಲ್ಲಣದ ಶಂಕರ, ಗೋಪಯ್ಯ, ರಂಗಣ್ಣ ಇವರುಗಳು ಕುಡುಗುನಾಡ ಕೆಲಸೂರು ಜೈನಬಸದಿಯ ಶ್ರೀಕಾರ್ಯಕ್ಕೆ ದಾನವಾಗಿ ನೀಡಿದ ಭೂದತ್ತಿಯ ಬಗ್ಗೆ ತಿಳಿಸುತ್ತದೆ [EC-3 (R),Gundlupet 100, 101,102 &103].

ಹಂಗಳ: (ಗುಂಡ್ಲುಪೇಟೆ ತಾ.): ಹಂಗಳದಲ್ಲಿ ದೊರೆತ ಲೋಹದ ಬಿಂಬ, ದೀಪಸ್ಥಂಭ, ಗಂಟೆ ಮೊದಲಾದವುಗಳ ಮೇಲೆ ಒಟ್ಟು ೩ ಶಾಸನಗಳು ಇವೆ. ಅವು ಪ್ರಾಯಶಃ ೧೦ನೆಯ ಶತಮಾನದ್ದಾಗಿವೆ. [EC-3 (R),Gundlupet 203].

ಬೇರಂಬಾಡಿ (ಗುಂಡ್ಲುಪೇಟೆ ತಾ.): ಊರಿನ ಮಾರಿಗುಡಿ ಬಳಿಯಲ್ಲಿನ ಯಂತ್ರದ ಕಲ್ಲಿನ ಶಾಸನ ಸು. ೧೪ನೆಯ ಶತಮಾನದ ಲಿಪಿಯಲ್ಲಿದ್ದು ಗ್ರಾಮದ ಸರ್ವವ್ಯಾದಿಗಳ ಪರಿಹಾರಾರ್ಥವಾಗಿ ಪಾರ್ಶ್ವನಾಥ, ಧರಣೇಂದ್ರ, ಪದ್ಮಾವತಿಯವರನ್ನು ಪ್ರಾರ್ಥಿಸಿರುವುದು ವಿಶಿಷ್ಟವಾಗಿದೆ. [EC-3 (R),Gundlupet 218].

ಚಾಮರಾಜನಗರ (ಆರುಕೊಠಾರ): ಚಾಮರಾಜನಗರ ಸ್ಥಳದ ಪಾರ್ಶ್ವನಾಥಸ್ವಾಮಿ ಬಸದಿಯಲ್ಲಿರುವ ಎರಡು ಶಾಸನಗಳು ಕಾಣಸಿಗುತ್ತವೆ. ಹೊಯ್ಸಳರ ಕಾಲದ ಪ್ರಮುಖ ಅಧಿಕಾರಿಯಾದ್ದ ಪುಣಿಸಮಯ್ಯ ಚಾಮರಾಜನಗರದಲ್ಲಿರುವ ಪಾರ್ಶ್ವನಾಥಸ್ವಾಮಿ ಬಸದಿಯನ್ನು ಕಟ್ಟಿಸಿ, ಗಂಗವಾಡಿ ೯೬,೦೦೦ ಪ್ರದೇಶದಲ್ಲಿನ ಆನೇಕ ಬಸದಿಗಳನ್ನು ಜೀರ್ಣೋದ್ಧಾರಗೊಳಿಸಿದನೆಂಬ ವರ್ಣನೆ ಬಂದಿದೆ. ಮತ್ತೊಂದು ಶಾಸನದಲ್ಲಿ ಎಣ್ಣೇನಾಡ ಆರುಕುಠಾರ (ಚಾಮರಾಜನಗರ)ದಲ್ಲಿ ತ್ರಿಕೂಟ ಬಸದಿಯನ್ನು ನಿರ್ಮಿಸಿ, ಆ ಬಸದಿಗೆ ದಾನ ನೀಡಿದ ಉಲ್ಲೇಖವಿದೆ. [EC-4 (R),Chamarajanagar 2, 3 & 60,61].

ಹೊಯ್ಸಳರ ಪ್ರಖ್ಯಾತ ದಂಡನಾಯಕರಾದ ಗಂಗರಾಜ, ಪುಣಿಸಮಯ್ಯ ಮೊದಲಾದ ಜೈನ ಅಧಿಕಾರಿಗಳ ಪ್ರೋತ್ಸಾಹದಿಂದ ಜೈನಧರ್ಮ ಈ ಪ್ರದೇಶದಲ್ಲಿ ಮತ್ತೊಮ್ಮೆ ಪ್ರಬಲವಾಗಿ ಬೆಳೆಯಿತು.

ಈ ಕೊಂಗುನಾಡಿನ ಭಾಗವೇ ಆಗಿರುವ ಬಿಳಿಗಿರಿರಂಗನಬೆಟ್ಟ ಹಾಗೂ ಮಲೆಮಹದೇಶ್ವರ ಬೆಟ್ಟಗಳಲ್ಲೂ ಜೈನಾವಶೇಷಗಳು ಲಭ್ಯವಾಗಿರುವುದರಿಂದ ಹಿಂದೆ ಅಲ್ಲೂ ಜೈನ ಬಸದಿಗಳು ಇದ್ದಿರಬಹುದಾದ ಸಾಧ್ಯತೆಗಳನ್ನು ತೆಗೆದು ಹಾಕುವಂತಿಲ್ಲ. ಮುಖ್ಯವಾಗಿ ಕೊಂಗುನಾಡೆಂಬುದು ಮಲೆಗಳ ನಾಡೂ ಹೌದು.

ಮೇಲ್ಕಂಡ ಈ ಆಧಾರಗಳೆಲ್ಲ ಕೊಂಗುನಾಡಿನ ಚರಿತ್ರೆ ಹಾಗೂ ಅಲ್ಲಿದ್ದ ಜೈನಧರ್ಮದ ಪ್ರಾಬಲ್ಯವನ್ನು ತಿಳಿಯಲು ಬಹು ಮಟ್ಟಿಗೆ ಸಹಕಾರಿಯಾಗಿವೆ. ಒಟ್ಟಾರೆ ಕೊಂಗುನಾಡು ಪ್ರದೇಶದ ಸುಮಾರು ೨೦ ಸ್ಥಳಗಳಲ್ಲಿ, ಜೈನ ಸಂಬಂಧಿಯ ಸು. ೯೫ ಶಾಸನಗಳು ಇರುವುದನ್ನು ಸದ್ಯಕ್ಕೆ ಗುರುತಿಸಲಾಗಿದೆ.

---

* ಈ ಸಂಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ನನ್ನ ಶಾಸನಶಾಸ್ತ್ರ ಗುರುಗಳಾದ ಡಾ. ಪಿ.ವಿ. ಕೃಷ್ಣಮೂರ್ತಿ ಸರ್ ಅವರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು.

ಅಡಿಟಿಪ್ಪಣಿಗಳು

೧. ಅ) ಎಪಿಗ್ರಾಫಿಯಾ ಕರ್ನಾಟಕ (ಪರಿಷ್ಕೃತ) ಸಂ. ೪, ಚಾಮರಾಜನಗರ ೩೫೪, ಕ್ರಿ.ಶ. ೯೦೪, ಕೆರೆಹಳ್ಳಿ; ಅದೇ ೧೪೬, ಕ್ರಿ.ಶ. ೧೧ನೇ ಶತ, ಕೆಂಪನಪುರ; ಅಲ್ಲದೆ,

ಆ) ಕೃಷ್ಣಮೂರ್ತಿ ಪಿ.ವಿ., ತಮಿಳುನಾಡಿನ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ೩ನೇ ಪರಿಷ್ಕೃತ ವಿಸ್ತೃತ ಮದ್ರಣ ೨೦೧೮, ಪು. ೧೫, 'ಬಡಗಕೊಂಗನಾಡಿನಲ್ಲಿ ಚಾಮರಾಜನಗರ ಜಿಲ್ಲೆಗೆ ಅಂಟಿಕೊಂಡಂತಿರುವ ಈರೋಡ್ ಜಿಲ್ಲೆಯ ಸತ್ಯಮಂಗಲ, ಗೋಪಿಚೆಟ್ಟಿಪಾಳ್ಯ ಮುಂತಾದ ಪ್ರದೇಶಗಳು ಅಂತರ್ಗತವಾಗಿದ್ದವು'.

೨. ಕೃಷ್ಣಮೂರ್ತಿ ಪಿ.ವಿ., ೨೦೦೩, 'ಪೇರೂರಿನ ಪಟ್ಟೇಶ್ವರ ದೇವಾಲಯದ ಶಾಸನಗಳು.' ಶಾಸನ ಅಧ್ಯಯನ-೧(೧): ಕನ್ನಡ ವಿ.ವಿ. ಹಂಪಿ, ಪು. ೪೮, ೫೪.

೩. ದೇವರಕೊಂಡಾರೆಡ್ಡಿ (ಮು. ಸಂ.)., ೨೦೧೮, ಕರ್ನಾಟಕ ಜೈನಶಾಸನಗಳು, ಭಾಗ ೨, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೪. ಕೃಷ್ಣಮೂರ್ತಿ ಪಿ.ವಿ., ೨೦೧೨, 'ಪೆರ್ಬಾಣವಾಡಿ ಪ್ರದೇಶದ ಜೈನಶಾಸನಗಳು', ಶತನಮನ, (ಜಿ.ವಿ. ಅಭಿನಂದನ ಸಂಪುಟ), ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ ಜನ್ಮಶತಾಬ್ದಿ ಸ್ವಾಗತ ಸಮಿತಿ, ಬೆಂಗಳೂರು, ಪು. ೩೭೦-೩೭೭.

೫. Desai P.B., 1957, Jainism in South India and Some Jaina Epigraphs, Jaina Samskriti Samrakshaka Sangha, Sholapur.

೬. Ekambaranathan A., & Shivaprakasham C.K., (Ed.)., 1987, Jaina Inscriptions in Tamilnadu, (JIIT) Madras.

೭. Chattarjee A.K., 1984, A Comprehensive History of Jainism, Firma KLM Private Ltd. Culcatta.

◆◆

ಶ್ರೀನಿವಾಸ ಎ.ಜಿ.

ಇಡಗೂರು ಪರಿಸರದ ಸ್ಮಾರಕ ಶಿಲ್ಪಗಳು

ಇಡಗೂರು ಗುಬ್ಬಿ ತಾಲ್ಲೂಕಿನ ಚಂದ್ರಶೇಖರಪುರ ಹೋಬಳಿಯ ಒಂದು ಗ್ರಾಮವಾಗಿದೆ. ಹಿಡಂಬಿಕೇಶ್ವರಿ ಎಂಬ ರಾಕ್ಷಸಿ ಈ ಪ್ರದೇಶದಲ್ಲಿ ನೆಲೆಸಿದ್ದಳು. ಹಾಗಾಗಿ ಇಡಗೂರು ಎಂಬ ಹೆಸರು ಬಂದಿದೆ ಎಂದು ಇಲ್ಲಿನ ಸ್ಥಳೀಯ ಐತಿಹ್ಯ ಹೇಳುತ್ತದೆ.

ಇಡಗೂರು ಪರಿಸರ ಐತಿಹಾಸಿಕವಾಗಿ ಹೆಚ್ಚು ಮಹತ್ವ ಪಡೆದಿರುವ ಪ್ರದೇಶವಾಗಿದೆ. ಗಂಗವಾಡಿ ೯೬,೦೦೦ದಲ್ಲಿ ಈಗಿನ ಕುಣಿಗಲ್ ಅಂದಿನ ಕುಣಿಗಲ್ ನಾಡಾಗಿತ್ತು. ಕ್ರಿ.ಶ. ೭೪೦ರ ಕುಣಂಗಿಲ್ ನಕರ ಕ್ರಿ.ಶ. ೮೧೩ರ ಶಾಸನ ಕುಣುಂಗಿಲ್ ದೇಶ ಎಂದು ಕರೆದಿವೆ. ಕ್ರಿ.ಶ. ೧೨೯೨ರ ಕುಣಿಗಲ್ ತಾಲ್ಲೂಕಿನ ಬೇಗೂರು ಗ್ರಾಮದ ಶಾಸನದಲ್ಲಿ "ಕುಣಂಗಲ್ ನಾಡಿನ ವೆಪ್ಪೂರು" ಉಲ್ಲೇಖಗೊಂಡಿದೆ. ಗಂಗರ ಕಾಲದಿಂದ ಹಿಡಿದೂ ನೊಳಂಬರು, ಚೋಳರು, ಹೊಯ್ಸಳರವರೆಗೂ ಮುಂದುವರಿದಿತ್ತು. ಇಂತಹ ಕುಣಿಗಲ್ ನಾಡಿನಲ್ಲಿ ಗುಬ್ಬಿ ತಾಲ್ಲೂಕಿನ ಇಡಗೂರು ಮುಖ್ಯಸ್ಥಳವಾಗಿದ್ದು ಆಡಳಿತ ವಿಭಾಗವಾದ ವಿಷಯವಾಗಿತ್ತು. ಕ್ರಿ.ಶ. ೮೧೩ರಲ್ಲಿ ಗಂಗಮಂಡಲವನ್ನು ಆಳುತ್ತಿದ್ದ ಚೌಕಿರಾಜನ ವಿನಂತಿಯ ಮೇರೆಗೆ ೩ನೇ ಗೋವಿಂದನು ಇಡಗೂರು ವಿಷಯದಲ್ಲಿಯ ಜಾಲಮಂಗಲ (ರಾಮನಗರ ತಾ) ಗ್ರಾಮವನ್ನು ಮಾನ್ಯಪುರದ ದಕ್ಷಿಣಕ್ಕಿರುವ (ಮಣ್ಣೆ ಸಮೀಪ) ಶಿಲಾಗ್ರಾಮದ ಜೈನ ಮಂದಿರಕ್ಕೆ ದಾನ ನೀಡುತ್ತಾನೆ. ಹೀಗಾಗಿ ಇಡಗೂರು ಆಡಳಿತ ದೃಷ್ಟಿಕೋನದಿಂದ ಹೆಚ್ಚು ಮಹತ್ವ ಪಡೆದಿದ್ದು, ಹೊಯ್ಸಳರ ನಂತರ ಅಧಿಕಾರಕ್ಕೆ ಬಂದಂತಹ ವಿಜಯನಗರದ ಅರಸರು ಆಡಳಿತದ ವಿಕೇಂದ್ರೀಕರಣ ಮತ್ತು ಆಡಳಿತ ಸುಭದ್ರಗೊಳಿಸಲು ಸಣ್ಣ ಘಟಕಗಳಾಗಿ ವಿಂಗಡಿಸಿ ಸ್ಥಳೀಯ ನಾಯಕರಿಗೆ ಹೆಚ್ಚು ಮಹತ್ವ ನೀಡಿದರು. ಹಾಗಾಗಿ ಹಿಂದೆ ಇದ್ದಂತಹ ಆಡಳಿತ ಘಟಕಗಳು ಮಹತ್ವವನ್ನು ಕಳೆದುಕೊಂಡವು. ಕುಣಿಗಲ್ ನಾಡು ಸಹ ವಿಜಯನಗರ ಕಾಲಕ್ಕಾಗಲೇ ಸಂಕುಚಿತಗೊಂಡು ಕುಣಿಗಲ್ ಸೀಮೆಯಾಗಿ ಪರಿವರ್ತನೆಯಾಯಿತು. ಇಡಗೂರು ವಿಷಯ ತನ್ನ ಸ್ಥಾನವನ್ನು ಕಳೆದುಕೊಂಡಿತು. ಇಡಗೂರು ಹೊಯ್ಸಳರ ಕಾಲದಲ್ಲಿ ಮಹತ್ವ ಪಡೆದಿದ್ದು, ಅದೇ ಗ್ರಾಮದಲ್ಲಿನ ಶಾಸನವು ವಿಷ್ಣುವರ್ಧನನ್ನು ನೇರವಾಗಿ ಉಲ್ಲೇಖಿಸುತ್ತದೆ. ಮಹಾಮಂಡಲೇಶ್ವರ, ನೊಳಂಬವಾಡಿಗೊಂಡ ಎಂಬ ಬಿರುದನ್ನು ಪ್ರಸ್ತಾಪಿಸುತ್ತಾ ವಿಷ್ಣುವರ್ಧನ ನೊಳಂಬವಾಡಿ, ಗಂಗವಾಡಿಯನ್ನು ಆಳುತ್ತಿದ್ದುದನ್ನು ಉಲ್ಲೇಖಿಸುತ್ತದೆ. ಅದೇ ರೀತಿ ಜೈನರ ಪ್ರಮುಖ ಕೇಂದ್ರವಾಗಿದ್ದಂತೆ ತೋರುತ್ತದೆ. ಕ್ರಿ.ಶ. ಸುಮಾರು ೧೩ನೇ ಶತಮಾನದ ಶಾಸನವು ಕುಮುದ ಚಂದ್ರದೇವರ ಗುಡ್ಡ ಗುಮ್ಮಸೆಟ್ಟಿಯೆಂಬ ವ್ಯಕ್ತಿಯು ಸಲ್ಲೇಖನ ವ್ರತದಿಂದ ಮರಣಿಸಿದ ನಿಷಿದಿ ಶಾಸನವೂ

ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
ವಿಜಯನಗರ ಜಿಲ್ಲೆ
ಮೊ: ೯೯೮೬೭ ೬೫೨೩೯

ಇದೇ ಗ್ರಾಮದಲ್ಲಿದೆ. ಹೀಗೆ ಐತಿಹಾಸಿಕ ದೃಷ್ಟಿಕೋನದಿಂದ ಹೆಚ್ಚು ಮಹತ್ವ ಪಡೆದಿರುವ ಇಡಗೂರು ಮತ್ತು ಸುತ್ತಲಿನ ಪರಿಸರದ ಅಧ್ಯಯನಕ್ಕೆ ಶಾಸನಗಳು, ದೇವಾಲಯಗಳು, ಸ್ಮಾರಕಶಿಲ್ಪಗಳು ಮುಖ್ಯವಾದವುಗಳಾಗಿವೆ.

ಈ ಪರಿಸರದಲ್ಲಿನ ಪ್ರದೇಶಗಳಾದ ಅಂಕಳಕೊಪ್ಪ, ಹರಿದೇವನಹಳ್ಳಿಯಲ್ಲಿ ಕಂಡುಬರುವ ಬಂದೂಕು ವೀರಗಲ್ಲುಗಳು, ಹರಿದೇವನಹಳ್ಳಿಯಲ್ಲಿ ಕಂಡುಬರುವ ತುರುಗೋಳ್‌ವೀರಗಲ್ಲು, ಬೆಳ್ಳಿಯಲ್ಲಿ ಕಂಡುಬರುವ ಹುಲಿಬೇಟೆ ವೀರಗಲ್ಲು ಮತ್ತು ಮಣಕುಪ್ಪೆ, ಜೋರನಪಾಳ್ಯಗಳಲ್ಲಿ ಕಂಡುಬರುವ ವೀರಗಲ್ಲು ಮತ್ತು ವೀರಮಹಾಸತಿ ಕಲ್ಲುಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಬಂದೂಕು ವೀರಗಲ್ಲುಗಳು

ಪಿರಂಗಿ, ಗುಂಡುಗೋವಿ, ಮದ್ದಿನ ಪಟ್ಟಣ, ಶತಘ್ನಿಪೆಟಲು. ಕೈಗೋವಿ, ತೋಪು ಮುಂತಾದ ಸಿಡಿ ಮದ್ದಿನ ಆಯುಧ ಕ್ರಿ.ಶ. ೧೬ನೇ ಶತಮಾನದ ನಂತರದ ಕಾವ್ಯಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತವೆ. ಇದಕ್ಕೂ ಮುಂಚಿನ ಕಾಲಘಟ್ಟದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಬಿಲ್ಲು, ಬಾಣ, ಕತ್ತಿ, ಗುರಾಣಿ, ಈಟಿ, ಭರ್ಜಿ, ಕಠಾರಿಗಳಂತಹ ಆಯುಧಗಳು ಕಂಡುಬರುತ್ತವೆ. ಆದರೆ ಕಾವ್ಯಗಳಲ್ಲಿ ಬಂದೂಕಿನ ಉಲ್ಲೇಖ ಕಂಡುಬರುವುದಿಲ್ಲ. ವಿಜಯನಗರ ಮತ್ತು ವಿಜಯನಗರ ನಂತರದ ಕಾಲದ ವೀರಗಲ್ಲುಗಳಲ್ಲಿ ಇತರ ಆಯುಧಗಳ ಜೊತೆಗೆ ಬಂದೂಕುಗಳು ಕಂಡುಬಂದಿವೆ. ಇದನ್ನು ಗಮನಿಸಿದಾಗ ಕರ್ನಾಟಕದಲ್ಲಿ ಬಂದೂಕುಗಳು ಸುಮಾರು ೧೪-೧೫ ನೇ ಶತಮಾನದಿಂದ ಬಳಕೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಕಾಲಘಟ್ಟದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕತ್ತಿ, ಗುರಾಣಿ, ಬಿಲ್ಲು, ಬಾಣ, ಈಟಿ, ಕಠಾರಿಗಳಂತಹ ಆಯುಧಗಳನ್ನು ಹಿಡಿದು ಹೋರಾಡುತ್ತಿರುವ ಯೋಧರ ಶಿಲ್ಪಗಳು ಕರ್ನಾಟಕದಾದ್ಯಂತ ಕಾಣಬಹುದು. ೧೫ನೇ ಶತಮಾನದ ನಂತರದ ವೀರಗಲ್ಲುಗಳಲ್ಲಿ ವಿಶೇಷವಾಗಿ ಕಂಡುಬರುವ ಆಯುಧವೆಂದರೆ ಬಂದೂಕು.

ಇಡಗೂರು ಪರಿಸರದ ಅಂಕಳಕೊಪ್ಪ ಗ್ರಾಮದ ಜಯರಾಂ ಎಂಬ ಖಾಸಗಿ ವ್ಯಕ್ತಿಯ ಜಮೀನಿನಲ್ಲಿ ಒಂದು ಬಂದೂಕು ವೀರಗಲ್ಲಿದೆ. ಇದು ಸುಮಾರು ೧೬ನೇ ಶತಮಾನಕ್ಕೆ ಸೇರಿದ ವೀರಗಲ್ಲಾಗಿದೆ. ಇದನ್ನು ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ವೀರನು ತಲೆಗೆ ಪೇಟವನ್ನು ಧರಿಸಿದ್ದಾನೆ. ಕಾಲು ಮತ್ತು ಕೈಗಳಲ್ಲಿ ಕಡಗವನ್ನು ಧರಿಸಿದ್ದಾನೆ. ಸೊಂಟಪಟ್ಟಿಯನ್ನು ಧರಿಸಿರುವ ವೀರನು ವಸ್ತ್ರವನ್ನು ಮಧ್ಯದ ಕೆಳಭಾಗದಲ್ಲಿ ಇಳಿಬಿಟ್ಟಿದ್ದಾನೆ. ವೀರನು ಬಂದೂಕನ್ನು ಪ್ರಯೋಗ ಮಾಡುತ್ತಿದ್ದಾನೆ. ಎಡಗೈ ಬಂದೂಕಿನ ಮುಂಭಾಗವನ್ನು ಹಿಡಿದಿದ್ದರೆ, ಬಲಗೈಯಲ್ಲಿ ಮದ್ದು ಸಿಡಿಸುವ ಭಾಗವನ್ನು ಹಿಡಿದುಕೊಂಡು ಬಂದೂಕನ್ನು ಪ್ರಯೋಗ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಇದೇ ಪರಿಸರದಲ್ಲಿನ ಹರಿದೇವನಹಳ್ಳಿಯ ಆಂಜನೇಯ ದೇವಾಲಯದ ಮುಂದಿನ ಗರುಡಕಂಬದ ಬಳಿಯಲ್ಲಿ ಒಂದು ಬಂದೂಕು ವೀರಗಲ್ಲಿದೆ. ಇದನ್ನು ಗಮನಿಸಿದಾಗ ಬೇರೆ ಎಲ್ಲಿಂದಲೋ ಈ ವೀರಗಲ್ಲನ್ನು ತಂದು ಇಟ್ಟಿರುವಂತಿದೆ. ಈ ವೀರಗಲ್ಲಿನ ರಚನೆಗೆ ಹಸಿರು ಮಿಶ್ರಿತ ಬೂದು ಬಣ್ಣದ ಬಳಪದ ಕಲ್ಲನ್ನು ಬಳಸಲಾಗಿದೆ. ಇದರಲ್ಲಿ ಒಳಮುಖವಾಗಿ ಸಮತಟ್ಟು ಮಾಡಿಕೊಂಡು, ಸಮತಟ್ಟಾಗಿರುವ ಭಾಗದಲ್ಲಿ ಶಿಲ್ಪವನ್ನು ಕಂಡರಿಸಲಾಗಿದೆ. ಇದು ಕ್ರಿ.ಶ. ಸುಮಾರು ೧೬ನೇ ಶತಮಾನಕ್ಕೆ ಸೇರಿದ್ದಾಗಿದೆ. ವೀರನು ತುರುಬನ್ನು ಕಟ್ಟಿದ್ದು ಕಿವಿಯಲ್ಲಿ ಓಲೆ, ಕೈಗಳಲ್ಲಿ ಕಡಗ, ತೋಳ್ಬಂಧಿ, ಕಾಲ್ಗಡಗ, ಸೊಂಟಪಟ್ಟಿಯನ್ನು ಧರಿಸಿದ್ದಾನೆ. ವೀರನು ಅಲಂಕಾರಿಕ ವೀರಗಚ್ಚೆಯನ್ನು ತೊಟ್ಟಿದ್ದು, ವಸ್ತ್ರದಿಂದ ಕಚ್ಚೆಯನ್ನು ಬಿಗಿದಿದ್ದಾನೆ. ಕಚ್ಚೆಯ ಮಧ್ಯಭಾಗ ಎರಡು ಕಾಲುಗಳ ಮಧ್ಯೆ ಇಳಿಬಿಟ್ಟಿದ್ದಾನೆ. ವೀರನು ತನ್ನ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಮೇಲಕ್ಕೆ ಎತ್ತಿದ್ದಾನೆ. ಕತ್ತಿಯ ಭಾಗದಲ್ಲಿ ಚಕ್ಕೆಗಳು ಎದ್ದಿವೆ. ಎಡಗೈಯಲ್ಲಿ ಉದ್ದವಾದ ಬಂದೂಕನ್ನು ಹಿಡಿದುಕೊಂಡು ನಿಂತಿದ್ದಾನೆ.

ಹುಲಿಬೇಟೆ ವೀರಗಲ್ಲು

ಗುಬ್ಬಿ ತಾಲ್ಲೂಕಿನಲ್ಲಿ ಮೊದಲ ಬಾರಿಗೆ ಬೆಳ್ಳಿ ಗ್ರಾಮದಲ್ಲಿ ಹುಲಿಬೇಟೆ ವೀರಗಲ್ಲು ಪತ್ತೆಯಾಗಿದೆ. ವೀರನು ಹುಲಿಯೊಡನೆ ಹೋರಾಡಿ ಮರಣ ಹೊಂದಿರುವ ವಿಚಾರ ತಿಳಿಯುತ್ತದೆ. ಇದು ಶಾಸನ ರಹಿತವಾಗಿದ್ದು ಶಿಲ್ಪದಲ್ಲಿ ವೀರನು ತುರುಬನ್ನು ಕಟ್ಟಿದ್ದಾನೆ. ಕೈಗಳು ಮತ್ತು ಕಾಲುಗಳಲ್ಲಿ ಕಡಗಗಳಿವೆ, ತೋಳ್ಬಂಧಿಗಳಿವೆ. ಹುಲಿ ತನ್ನ ಹಿಂದಿನ ಕಾಲುಗಳ ಮೇಲೆ ಭದ್ರವಾಗಿ ನಿಂತು ಮುಂದಿನ ಕಾಲುಗಳನ್ನು ಮೇಲಕ್ಕೆ ಎತ್ತಿ ವೀರನನ್ನು ಕಾಲುಗಳಿಂದ ಪರಚುವಂತಿದ್ದು ತನ್ನ ಬಾಯಿಯನ್ನು ತೆಗೆದಿದೆ. ವೀರನು ಬಲಗೈಯಲ್ಲಿ ಹುಲಿಯ ಬಾಯಿಗೆ ಕೈ ಹಾಕುತ್ತಿರುವಂತೆ ಭಾಸವಾಗುತ್ತದೆ. ಎಡಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಹುಲಿಯು ಬಾಲವನ್ನು ಮೇಲಕ್ಕೆ ಎತ್ತಿ ಗಾಬರಿಗೊಂಡಿರುವಂತಿದೆ. ಮೇಲಿನ

ಭಾಗದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಈ ವೀರಗಲ್ಲು ಕ್ರಿ.ಶ. ಸುಮಾರು ೧೫-೧೬ನೇ ಶತಮಾನದ್ದಾಗಿರಬಹುದು. ಈ ವೀರಗಲ್ಲು ಪೂಜೆಗೆ ಒಳಪಟ್ಟಿದೆ. ಸುತ್ತಲೂ ಕಲ್ಲು ಚಪ್ಪಡಿಗಳನ್ನು ನಿಲ್ಲಿಸಿ ಗುಡಿ ನಿರ್ಮಿಸಲಾಗಿದೆ.

ನಾಯಿಯ ಸ್ಮಾರಕ ಶಿಲ್ಪ

ಬೇಟೆಯಲ್ಲಿ ಮಡಿದ ನಾಯಿಗಳಿಗೆ ಹಾಕಿಸಿರುವ ಅಪರೂಪದ ವೀರಗಲ್ಲು ಗುಬ್ಬಿ ತಾಲ್ಲೂಕಿನ ಇಡಗೂರು ಪರಿಸರದ ದೊಡ್ಡ ಚಂಗಾವಿ ಗ್ರಾಮದಲ್ಲಿ ಕಂಡುಬಂದಿದೆ. ಇಲ್ಲಿ ಬೇಟೆಗಾರನು ಮರಣಿಸಿರುವುದಿಲ್ಲ ಎಂಬ ಅಂಶವನ್ನು ಸ್ಪಷ್ಟವಾಗಿ ಗಮನಿಸಬೇಕು. ಇದು ಕೇವಲ ನಾಯಿಯ ಶಿಲ್ಪವಿರುವ ವೀರಗಲ್ಲಾಗಿದೆ. ಆ ನಾಯಿಯ ಒಡೆಯ ಯಾರು? ನಾಯಿ ಯಾವ ಪ್ರಾಣಿಯೊಂದಿಗೆ ಹೋರಾಡಿ ಮರಣ ಹೊಂದಿದೆ ಎಂಬುದು ತಿಳಿಯಲು ಈ ಸ್ಮಾರಕ ಶಿಲ್ಪದಲ್ಲಿ ಯಾವುದೇ ಶಾಸನ ಕಂಡುಬರುವುದಿಲ್ಲ. ಇದರ ಮೇಲೆ ಸೂರ್ಯ, ಚಂದ್ರರ ಕೆತ್ತನೆಗಳಿವೆ. ಈ ಶಿಲ್ಪದ ರಚನೆಗೆ ಕಣಶಿಲೆಯನ್ನು ಬಳಸಲಾಗಿದೆ. ಈ ಸ್ಮಾರಕಶಿಲ್ಪ ಕ್ರಿ.ಶ. ಸುಮಾರು ೧೪-೧೫ನೇ ಶತಮಾನಕ್ಕೆ ಸೇರಿದ್ದಾಗಿದೆ. ಬೇಟೆಗಾರ ಬೇಟೆಗೆ ಹೋದಾಗ ಯಾವುದಾದರೂ ಪ್ರಾಣಿಗೆ ಗುರಿಯಿಟ್ಟು ಭರ್ಜಿ ಅಥವಾ ಈಟಿಯನ್ನು ಎಸೆಯುತ್ತಿರುವಾಗ ಗುರಿ ತಪ್ಪಿ, ನಾಯಿಗೆ ಏಟು ಬಿದ್ದು, ಗಾಯಗಳಿಂದಾಗಿ ಮಡಿದಿರಬಹುದು ಎಂದು ತೋರುತ್ತದೆ. ಹೀಗೆ ನಾಯಿ ಬೇಟೆಗಾರರಿಗೆ ಬೇಟೆಯಲ್ಲಿ ಸಹಕಾರ ನೀಡುತ್ತಿದ್ದರಿಂದ ಅದರ ಮೇಲಿನ ವಿಶ್ವಾಸಕ್ಕೆ ವೀರಗಲ್ಲನ್ನು ಹಾಕಿರಬಹುದು. [ಯಲಹಂಕ, ಅತಕೂರು, ನೆಲವಾಗಿಲು, ಬಳ್ಳಿಗಾವೆ ವೀರಗಲ್ಲುಗಳಲ್ಲಿ ನಾಯಿಯ ಶಿಲ್ಪಗಳಿವೆ.]

ತುರುಗೋಳ್ ವೀರಗಲ್ಲು

ಇಂತಹ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ (ದನಗಳು) ತುರುಗಳು ಕಂಡುಬರುತ್ತವೆ. ಇಡಗೂರು ಪರಿಸರದಲ್ಲಿನ ಹರಿದೇವನಹಳ್ಳಿಯ ಆಂಜನೇಯ ದೇವಾಲಯದ ಮುಂದಿನ ಗರುಡಕಂಬದ ಬಳಿಯಲ್ಲಿ ಒಂದು ತುರುಗೋಳ್ ವೀರಗಲ್ಲಿದೆ. ಇದನ್ನು ಬೇರೆ ಎಲ್ಲಿಂದಲೋ ತಂದು ಇಡಲಾಗಿದೆ. ಈ ವೀರಗಲ್ಲನ್ನು ಹಸಿರು ಮಿಶ್ರಿತ ಬೂದು ಬಣ್ಣದ ಬಳಪದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಶಿಲೆಯನ್ನು ಸಮತಟ್ಟು ಮಾಡಿಕೊಂಡು ಆ ಭಾಗದಲ್ಲಿ ಶಿಲ್ಪಗಳನ್ನು ಕಂಡರಿಸಲಾಗಿದೆ. ವೀರನು ತುರುಬನ್ನು ಕಟ್ಟಿದ್ದು, ಕಿವಿಯೋಲೆ, ಕೈಗಳಲ್ಲಿ ಕೈಗಡಗ, ಕಾಲ್ಗಡಗ, ತೋಳಬಂಧಿ ಧರಿಸಿದ್ದಾನೆ. ವೀರನು ಸೊಂಟದಲ್ಲಿ ವಸ್ತ್ರದಿಂದ ಉಡುಪನ್ನು ಬಿಗಿದಿದ್ದಾನೆ. ವಸ್ತ್ರದ ಭಾಗ ಬಲಭಾಗದಲ್ಲಿ ಇಳಿಬಿದ್ದಿದೆ. ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಮೇಲೆತ್ತಿದ್ದಾನೆ. ಆತನ ಎಡಭಾಗದಲ್ಲಿ ಸತಿಯ ಶಿಲ್ಪವಿದೆ. ಬಲಭಾಗದಲ್ಲಿ ತಲೆಯೆತ್ತಿ ನಿಂತಿರುವ ಎರಡು ತುರುಗಳಿವೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ. ಸತಿಯ ಮೇಲ್ಭಾಗದಲ್ಲಿ ಒಂದು ಪ್ರಾಣಿಯ ಶಿಲ್ಪವಿದ್ದು ಗುರುತಿಸಲು ಸಾಧ್ಯವಾಗುವುದಿಲ್ಲ. ಎಲ್ಲಾ ಶಿಲ್ಪಗಳನ್ನು ಒಳಗೊಂಡಿರುವ ಶಿಲೆಯು ಅಲ್ಲಲ್ಲಿ ರಂಧ್ರಗಳು ಉಂಟಾಗಿ ವಿನಾಶದ ಅಂಚಿನಲ್ಲಿದೆ. ಇದರಲ್ಲಿರುವ ವೀರನು ತುರುಗಳನ್ನು ರಕ್ಷಿಸಲು ಹೋಗಿ ಮರಣ ಹೊಂದಿರುವ ನೆನಪಿಗಾಗಿ ಈ ಸ್ಮಾರಕ ಶಿಲ್ಪವನ್ನು ನಿರ್ಮಿಸಲಾಗಿದೆ.

ಇದೇ ಇಡಗೂರು ಪರಿಸರದಲ್ಲಿನ ಬೋರನಪಾಳ್ಯ ಗ್ರಾಮದಲ್ಲಿ ಅಜ್ಞಾತವಾಗಿದ್ದ ಕಲ್ಲೇಶ್ವರ ದೇವಾಲಯವನ್ನು ಗ್ರಾಮಸ್ಥರು ಇತ್ತೀಚೆಗೆ ಬೆಳಕಿಗೆ ತಂದಿದ್ದರು. ಇದರ ಸಮೀಪದಲ್ಲಿ ಸುಮಾರು ಆರು ಅಡಿ ಎತ್ತರ, ಎರಡು ಅಡಿ ಅಗಲವಾಗಿರುವ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿರುವ ಒಂದು ವೀರಗಲ್ಲು ಬಿದ್ದಿದೆ. ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಚೂಪಾದ ಕತ್ತಿಯನ್ನು ಹಿಡಿದು ಶತೃವೀರನ ಕಿಬ್ಬೊಟ್ಟೆಯ ಭಾಗಕ್ಕೆ ತಿವಿದಿದ್ದಾನೆ. ಈತನು ಧರಿಸಿರುವ ಉಡುಪು ಹುಲಿಯ ಚರ್ಮದಂತಿದೆ. ಒಂದು ಕತ್ತಿಯನ್ನು ಸೊಂಟದಲ್ಲಿ ಹಿಮ್ಮುಖವಾಗಿ ಸಿಗಿಸಿದ್ದಾನೆ. ಮೂರು ಎಳೆಯ ಜನಿವಾರ ಧರಿಸಿದ್ದಾನೆ. ದಪ್ಪದಾದ ಮೀಸೆ, ವೃತ್ತಾಕಾರದ ಕಿವಿಯೋಲೆ, ತೋಳಬಂಧಿ, ಸೊಂಟಪಟ್ಟಿ ಧರಿಸಿದ್ದಾನೆ. ಜುಟ್ಟನ್ನು ದುಂಡಾಗಿ ಕಟ್ಟಿದ್ದಾನೆ. ಶತೃವೀರನು ಬಲಗೈಯಲ್ಲಿ ಕತ್ತಿಯನ್ನು ಮೇಲೆತ್ತಿ ಬಿಲ್ಲಿಗೆ ಅಡ್ಡಲಾಗಿ ಕೊಟ್ಟಿದ್ದಾನೆ. ಸೊಂಟದಲ್ಲಿ ಚಿಕ್ಕದಾದ ಕತ್ತಿಯನ್ನು ಹಿಮ್ಮುಖವಾಗಿ ಸಿಕ್ಕಿಸಿಕೊಂಡಿದ್ದಾನೆ. ವೀರನ ಕೆಳಗೆ ಒಬ್ಬ ಶತ್ರುವೀರ ಸತ್ತು ಬಿದ್ದಿದ್ದಾನೆ. ಹೋರಾಟದ ಹಂತದ ಮೇಲಿನ ಭಾಗದಲ್ಲಿ, ಮಧ್ಯದಲ್ಲಿ ವೀರ ಮತ್ತು ಅವನ ಪಾರ್ಶ್ವದಲ್ಲಿ ಇಬ್ಬರು ಪತ್ನಿಯರು ನಿಂತಿದ್ದಾರೆ. ಮಧ್ಯದಲ್ಲಿ ನಿಂತಿರುವ ವೀರನು ತನ್ನ ಎರಡು ಕೈಗಳಿಂದ ಇಬ್ಬರು ಪತ್ನಿಯರ ಸೊಂಟವನ್ನು ಬಳಸಿ ಹಿಡಿದಿದ್ದಾನೆ. ಹಾಗೆಯೇ ಬಲಭಾಗದಲ್ಲಿರುವ ಪತ್ನಿಯು ಎಡಗೈಯಿಂದ ವೀರನ ಸೊಂಟವನ್ನು ಬಳಸಿ ಹಿಡಿದಿದ್ದಾಳೆ. ಸಮೀಪದಲ್ಲಿ ಲಿಂಗವಿದ್ದು ಸ್ವರ್ಗ ಪ್ರಾಪ್ತಿಯಾಗಲೆಂದು ಲಿಂಗಕ್ಕೆ ವೀರನು ಪೂಜೆ ಸಲ್ಲಿಸುತ್ತಿರುವಂತಿದೆ. ಈ ವೀರಗಲ್ಲು ತುಂಬಾ ಆಕರ್ಷಣೀಯವಾಗಿದ್ದು ಕ್ರಿ.ಶ. ಸುಮಾರು ೧೫ ನೇ ಶತಮಾನಕ್ಕೆ ಸೇರಿದ್ದಾಗಿದೆ.

ಇದೇ ಪರಿಸರದಲ್ಲಿನ ನಾಲ್ಕು ಹಂತದ ಒಂದು ವೀರ ಮಾಸ್ತಿಗಲ್ಲು ಪತ್ತೆಯಾಗಿದೆ. ಈ ಶಿಲೆಯಲ್ಲಿ ಶಿಲ್ಪಗಳನ್ನು ಕೆತ್ತಲು ಒಳಮುಖವಾಗಿ ಸಮತಟ್ಟು ಮಾಡಿಕೊಂಡು ಶಿಲ್ಪಗಳನ್ನು ಕೆತ್ತಲಾಗಿದೆ. ಈ ವೀರಗಲ್ಲಿನ ಕೆಳಗಿನ ಮೊದಲ ಹಂತದಲ್ಲಿ ವೀರನು ಕುದುರೆಯ ಮೇಲೆ ಕುಳಿತು ಕಠಾರಿಯನ್ನು ಹಿಡಿದು ಹೋರಾಡುವಂತಿದ್ದರೆ, ಅದರ ಮೇಲಿನ ಹಂತದಲ್ಲಿ ವೀರನು ಬಲಗೈಯಲ್ಲಿ ಚಿಕ್ಕದಾದ ಅಗಲವಾದ ಬಾಯಿಯುಳ್ಳ ಕತ್ತಿಯನ್ನು ಎಡಗೈಯಲ್ಲಿ ಚೂಪಾದ ಆಯುಧವನ್ನು ಕೆಳಮುಖವಾಗಿ ಹಿಡಿದು ನಿಂತಿದ್ದಾನೆ. ಈತನ ಎಡಭಾಗದಲ್ಲಿ ಇಬ್ಬರು ಸತಿಯಿದ್ದಾರೆ. ಅವರು ಬಲಗೈಯಲ್ಲಿ ನಿಂಬೆ ಹಣ್ಣನ್ನು, ಎಡಗೈಯಲ್ಲಿ ಕಳಶವನ್ನು ಹಿಡಿದಿದ್ದಾರೆ. ತಮ್ಮ ತಲೆಯ ಕೂದಲನ್ನು ಬಲಭಾಗಕ್ಕೆ ದುಂಡಾಕಾರದಲ್ಲಿ ಕಟ್ಟಿದ್ದು ಅಲಂಕಾರಿಕ ಉಡುಗೆ ತೊಡುಗೆ ಧರಿಸಿದ್ದಾರೆ. ಅದರ ಮೇಲಿನ ಹಂತದಲ್ಲಿ ವೀರ ಮತ್ತು ಆತನ ಇಬ್ಬರು ಸತಿಯರು ಕೈಮುಗಿದು ಕುಳಿತಿದ್ದಾರೆ. ಮೇಲಿನ ಕೊನೆಯ ಹಂತದಲ್ಲಿ ಸ್ವರ್ಗದಲ್ಲಿನ ಶಿವನ ದರ್ಶನ ಪಡೆದಿರುವುದು. ಲಿಂಗ ಮತ್ತು ನಂದಿಯ ಶಿಲ್ಪಗಳಿವೆ. ಅದರ ಮೇಲೆ ಸೂರ್ಯ ಚಂದ್ರರ ಕೆತ್ತನೆಗಳಿವೆ. ಇದರ ರಚನೆಗೆ ಕಣಶಿಲೆಯನ್ನು ಬಳಸಿದ್ದು ಸುಮಾರು ಆರು ಅಡಿ ಎತ್ತರವಾಗಿದೆ. ವೀರನಾದವನು ವೀರಗಚ್ಚೆಯನ್ನು ಧರಿಸಿದ್ದು ಕಿವಿಯೋಲೆ, ಕೊರಳಹಾರ, ಸೊಂಟಪಟ್ಟಿ, ಕಾಲ್ಗಡಗ, ಕೈಗಡಗ, ತೋಳಬಂಧಿ ಧರಿಸಿದ್ದಾನೆ. ಸೊಂಟದಲ್ಲಿ ಚಿಕ್ಕದಾದ ಕತ್ತಿಯನ್ನು ಸಿಗಿಸಿದ್ದಾನೆ. ಈ ವೀರಗಲ್ಲು ಕ್ರಿ.ಶ. ಸುಮಾರು ೧೫ನೇ ಶತಮಾನಕ್ಕೆ ಸೇರಿದ್ದಾಗಿದೆ.

ಕುಣಿಗಲ್ ನಾಡಿನಲ್ಲಿ ಗುಬ್ಬಿ ತಾಲ್ಲೂಕಿನ ಇಡಗೂರು ಆಡಳಿತ ವಿಭಾಗದ ವಿಷಯವಾಗಿದ್ದು, ಇದರ ಆಡಳಿತದ ಅಧೀನದಲ್ಲಿ ಸಾಕಷ್ಟು ಗ್ರಾಮಗಳು ಇದ್ದವು. ಅಂತಹ ಗ್ರಾಮಗಳಲ್ಲಿ ಕಂಡು ಬಂದಿರುವ ಪ್ರಾಚೀನ ಸಂಸ್ಕೃತಿಯ ಮಹತ್ವವುಳ್ಳ, ಶಾಸನ ಶಿಲ್ಪಗಳಾದ ಬಂದೂಕು ವೀರಗಲ್ಲು, ತುರುಗೋಳ್ ವೀರಗಲ್ಲು, ಹುಲಿಬೇಟೆ ವೀರಗಲ್ಲು, ನಾಯಿಯ ಸ್ಮಾರಕಶಿಲ್ಪ ಮತ್ತು ವೀರಮಾಸ್ತಿಕಲ್ಲುಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಇಂತಹ ಐತಿಹಾಸಿಕ ಕುರುಹುಗಳು ಸಂಶೋಧಕರನ್ನು ತನ್ನೆಡೆಗೆ ಆಕರ್ಷಿಸುತ್ತದೆ.

ಆಕರಗ್ರಂಥಗಳು

೧. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಗೋಪಾಲ್. ಆರ್., (ಸಂ). ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩. ಚಿದಾನಂದಮೂರ್ತಿ. ಎಂ., ೨೦೧೫, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.

೪. ಶೇಷಶಾಸ್ತ್ರಿ. ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬ ಭಗವತಿ ಎಸ್.ಎಸ್., ಮೇಲಿನಮನಿ ಎಚ್.ಎಸ್., ೨೦೦೪, ಕನ್ನಡ ಶಾಸನಗಳ ಅಧ್ಯಯನ, ವಿದ್ಯಾನಿಧಿ ಪ್ರಕಾಶನ, ಗದಗ.

೭. ಸೋಮಶೇಖರ್ ಎಸ್.ವೈ., ೨೦೦೯, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

◆◆

೩೮

ಭಾರತಿ ನಾಗೇಂದ್ರ

ಕಡೂರು ಶಾಸನಗಳಲ್ಲಿ ದಾನಿಗಳ ವ್ಯಕ್ತಿತ್ವ

ಪ್ರಸ್ತುತ ಲೇಖನವನ್ನು ಎಪಿಗ್ರಾಫಿಯ ಕರ್ನಾಟಕ ಸಂಪುಟ-೧೨ ಚಿಕ್ಕಮಗಳೂರು ಜಿಲ್ಲೆಯ ಪ್ರಕಟಿತ ಶಾಸನಗಳ ಆಧಾರದಿಂದ ರಚಿಸಲಾಗಿದೆ. ಮತ್ತು ಕಡೂರು ತಾಲ್ಲೂಕಿನ ದಾನ ಶಾಸನಗಳಿಗೆ ಸೀಮಿತಗೊಳಿಸಲಾಗಿದೆ. ಈ ವಿಭಾಗದಲ್ಲಿ ಹೊಯ್ಸಳರ ಶಾಸನಗಳೇ ಅಧಿಕವಾಗಿರುವುದರಿಂದ ಸಹಜವಾಗಿ ಇಲ್ಲಿ ಉಲ್ಲೇಖಿಸಿರುವ ದಾನಿಗಳು ಇದೇ ಕಾಲಕ್ಕೆ ಸಂಬಂಧಿಸಿದವರಾಗಿದ್ದಾರೆ.

ಸುಮಾರು ಮುನ್ನೂರು ವರ್ಷಗಳಷ್ಟು ದೀರ್ಘಕಾಲ ಕರ್ನಾಟಕವನ್ನು ಆಳಿದ ಹೊಯ್ಸಳ ವಂಶದ ಅರಸರ ಸಾಮ್ರಾಜ್ಯವು ಸುಭದ್ರವಾದ ಅಸ್ತಿತ್ವವನ್ನು ಮತ್ತು ಭವ್ಯವಾದ ಹಿರಿಮೆಯನ್ನು ಹೊಂದಿತ್ತು. ಸದಾ ಯುದ್ಧನಿರತರೂ, ಸಾಮ್ರಾಜ್ಯ ವಿಸ್ತರಣಾಕಾಂಕ್ಷಿಗಳೂ ಆಗಿದ್ದ ಈ ಅರಸರು ಪ್ರಜಾವತ್ಸಲರಾಗಿದ್ದರು. ನಾಡಿನ ಆರ್ಥಿಕ, ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಅಭ್ಯುದಯಕ್ಕೆ ಪ್ರಮುಖ ಆದ್ಯತೆಯನ್ನಿತ್ತಿದ್ದರು. ಪ್ರಜೆಗಳಿಂದ ಪಡೆದ ತೆರಿಗೆಯನ್ನು ಪ್ರಜಾಹಿತಕ್ಕಾಗಿ ವ್ಯಯಿಸುತ್ತಿರುವುದನ್ನು ಶಾಸನಗಳು ದಾಖಲಿಸಿವೆ. ಸ್ವತಃ ರಾಜನೇ ಅಲ್ಲದೇ ಹೊಯ್ಸಳರ ನಾಡಿನ ಅಧಿಕಾರಿಗಳಾದ ಮಂತ್ರಿಗಳು, ದಂಡನಾಯಕರು ಮತ್ತು ಶ್ರೀಮಂತವ್ಯಕ್ತಿಗಳೂ ಸಹಾ ಕೆರೆ ಕಟ್ಟಿಸುವುದು, ದೇವಾಲಯ ನಿರ್ಮಿಸುವುದು ಮೊದಲಾದ ಕಾರ್ಯಗಳನ್ನು ನೆರವೇರಿಸಿ ಶಾಸನಗಳನ್ನು ಬರೆಯಿಸುತ್ತಿದ್ದರು. ಈ ಶಾಸನಗಳಲ್ಲಿ ರಾಜರ ಇತಿಹಾಸದ ಸಂಗತಿಗಳಷ್ಟೇ ಅಲ್ಲದೆ ದಾನಿಗಳ ವ್ಯಕ್ತಿತ್ವ ವಿವರಗಳೂ, ಅವರು ಮಾಡಿದ ದಾನಗಳೂ ಎಲ್ಲವೂ ದಾಖಲಾಗಿದೆ.

ಆಸಂದಿಯ ಈಶ್ವರ ದೇವಾಲಯದ ರಂಗಮಂಟಪದಲ್ಲಿರುವ ನೆಟ್ಟಿರುವ ಕಲ್ಲಿನಲ್ಲಿರುವ ಶಾ.ಸಂ. ೧೬ (VI ಕ 156) ಮತ್ತು ಗಂಗೇಶ್ವರ-ಬಮ್ಮೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಕಲ್ಲಿನ ಶಾಸನ ಸಂಖ್ಯೆ (17 VIP ಕ 157) ಎರಡರಲ್ಲೂ ದಾನಿಯಾದ ವೀರನಾರಸಿಂಗದೇವನ ವಿವರಗಳು ಲಭ್ಯವಿದೆ. ಈಶ್ವರ ದೇವಾಲಯದ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಗಂಗೇಶ್ವರ-ಬಮ್ಮೇಶ್ವರ ಶಾಸನ ಕ್ರಿ.ಶ. ೧೧೫೯ರ ಕಾಲಕ್ಕೆ ಸಂಬಂಧಿಸಿದೆ.

ಈ ನರಸಿಂಹ ಅಥವಾ ನಾರಸಿಂಗದೇವನು ಹೊಯ್ಸಳರ ಅರಸ ಎರಡನೆಯ ವೀರಬಲ್ಲಾಳನ ಮಹಾಮಾಂಡಳಿಕನಾಗಿದ್ದನು. ಇವನ ತಂದೆ ಆಸಂದಿಯ ಗಂಗವಂಶದ ಬರ್ಮರಸ ಮತ್ತು ತಾಯಿ ಗಂಗಮಾದೇವಿ. ನರಸಿಂಹನು ತನ್ನ ತಂದೆ ತಾಯಿಯರು ಸ್ವರ್ಗಗಾಮಿಗಳಾದಾಗ ಶ್ರೀ ಪರ್ವತ ಮತ್ತು ಪಾತಾಳಗಂಗೆಯಿಂದ ಲಿಂಗ ಸಲಾಖೆಗಳನ್ನು ತರಿಸಿ, ಪರೋಕ್ಷ ವಿನಯವಾಗಿ ಬಮ್ಮೇಶ್ವರ ಮತ್ತು ಲಿಂಗೇಶ್ವರ ದೇವರನ್ನು ಪ್ರತಿಷ್ಠಾಪಿಸಿದನು. ಆ ದೇವಾಲಯಕ್ಕೆ ಭೂದಾನ ನೀಡಿ, ಅದನ್ನು ಕ್ರಿಯಾಶಕ್ತಿ ದೇವರು

೩೬, ೩ನೇ ಅಡ್ಡರಸ್ತೆ
೨ನೇ ಮುಖ್ಯರಸ್ತೆ
ಸಾರ್ವಭೌಮನಗರ, ಚಿಕ್ಕಲ್ಲಸಂದ್ರ
ಬೆಂಗಳೂರು-೫೬೦೦೬೧
ಮೊ: ೯೪೪೯೦ ೦೬೩೩೦

ಮತ್ತು ಕಲ್ಯಾಣಶಕ್ತಿ ದೇವರಿಗೆ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ಸಮರ್ಪಿಸಿದನು. ಆ ದೇವಾಲಯದ ಪೂಜಾ ನಿರ್ವಹಣೆ ಮತ್ತು ಜೀರ್ಣೋದ್ಧಾರ ಕಾರ್ಯಗಳಿಗಾಗಿ ಇದೇ ಊರಿನ ಬಮ್ಮಗೌಡ, ಆದಿಗೌಡ ಪಟ್ಟಣ ಸ್ವಾಮಿ ಸೆಟ್ಟಿಯಣ ಮೊದಲಾದವರು ದಾನ ನೀಡಿದ ಸಂಗತಿಯು ಶಾಸನದಲ್ಲಿ ಉಲ್ಲೇಖಿಸಿದೆ. ರಣಕಲಿ, ಯುದ್ಧ ಪರಾಕ್ರಮಿಯಾದ ವೀರ, ನರಸಿಂಹನನ್ನು ಈ ಪದ್ಯದಲ್ಲಿ ವಿಶಿಷ್ಟವಾಗಿ ಪ್ರಶಂಸಿಸಲಾಗಿದೆ.

ಅರಿ ಭೂಪಾಳ ಸಿರಂಗಳಿಂದೆ ಸೊರೆಯಂ ತದ್ಬಾಹು ಸಂದೋಹದಿಂ
ಕರೆಯಂ ದಂಡಿಗೆ ಮಾಡಿ ಬೆಂನೆಸೆವ ಬೀಏಂ ತಂತಿಯಂ ಕಟ್ಟಿತ
ದ್ಧುರ ದೊಳ್ವಾಡುತವಿಪ್ಪಳೊಲ್ದು ನಲವಿಂ ಶ್ರೀಕಾಂತೆಯಾನಂದದಿಂ
ಧರಣೀ ಶೋತ್ತಮ ನಾರಸಿಂಹ ನ್ರಿಪನಂ ಸದ್ಭಾವದಿಂ ಭೂತಗಳ್[೧]

ಯುದ್ಧದಲ್ಲಿ ಗೆದ್ದ ಶತ್ರುಗಳ ಅವಯವಗಳಿಂದ ನಿರ್ಮಿಸಿದ ತಂತೀ ವಾದ್ಯವನ್ನು ನುಡಿಸುತ್ತಾ ಜಯಲಕ್ಷ್ಮೀ ಶ್ರೀಕಾಂತೆಯೂ ಆಗಿ ನರಸಿಂಹನ ವಕ್ಷಸ್ಥಲದಲ್ಲಿ ನೆಲೆಸಿರುವವಳಂತೆ. ಪರಾಕ್ರಮ, ಆಳ್ವಿಕೆಯ ದಕ್ಷತೆ, ಅವನ ರಾಜ್ಯದಲ್ಲಿರುವ ಸಿರಿ, ಸಂಪತ್ತು, ಸುಭಿಕ್ಷತೆಯ ವರ್ಣನೆಯಿಂದ ಶಾಸನದ ಕವಿ ನರಸಿಂಹನ ವ್ಯಕ್ತಿತ್ವವನ್ನು ಪ್ರಶಂಸಿದ್ದಾನೆ.

ಮಾಂಡಳಿಕ ನರಸಿಂಹನು ತನ್ನ ದೊರೆಯಾದ ಎರಡನೆಯ ಬಲ್ಲಾಳನ ಆದೇಶದ ಮೇರೆಗೆ 'ಕರಿಪತಿಯಪ್ಪ ಮಾಳವ ಮಹೀಪತಿ ಬಂಟಿನ ಲಾಳ ಭೂಮಿಪಂ.(೧) ತುರುಗ ಚಯಂಗಳಿಂದೆಸೆವ ಗೂರ್ಜ್ಜರ ಭೂಪತಿ ಚೋಳಭೂಭುಜರ್' ಇವರೊಡನೆ ಏಕಾಕಿ ಸಾಹಸಿಯಾಗಿ ಸೆಣಸಿದನು. ಆ ಹೋರಾಟದಲ್ಲಿ 'ಕದನಕ್ಕಾಂತ ವಿರೋಧಿ ಭೂಪತಿಗಳಂ ಕೊಂದಿಕ್ಕಿದಾಬಾಹುವಂ ಮದ ಮಾತಂಗದ ಕೊಂಬನುಚ್ಚಿ ಬಳೆಯಂ ತನ್ಮೌಕ್ತಿ ಹಾರವಂ ಚದುರಿಂದಂತೊಡಿಸುತ್ತಿಪ್ಪನು. ಜಯಶ್ರೀ ಕಾಂತೆಗಂ ಕಾಂತೆಗಂ ಮುದದಿಂ' ಎಂದು ನರಸಿಂಹನ ಶೌರ್ಯ ವರ್ಣಿಸಲಸದಳವಾದುದು ಎಂದು ಅವನ ಧೀರೋದ್ಧಾತ್ತ ಗುಣವನ್ನು ಶಾಸನವು ದಾಖಲಿಸಿದೆ.

ಕ್ರಿ.ಶ. ೧೨೦೬ರ ಆಸಂದಿಯ ವೀರಭದ್ರ ದೇವಾಲಯದ ಮುಂದೆ ನೆಟ್ಟ ಕಲ್ಲಿನ ಶಾಸನದಲ್ಲಿ ಶಾ.ಸಂ. (9 VI ಕ 199) ಮಹಾಪ್ರಧಾನಿ ಹರಹ-ಸಾಹಣಿಯ ವಿಚಾರವನ್ನು ಪ್ರಸ್ತಾಪಿಸುತ್ತದೆ.

ಹೊಯ್ಸಳರ ರಾಜ ಎರಡನೆಯ ಬಲ್ಲಾಳ ದೊರೆಯ ಪಾದಪದ್ಮೋಪಜೀವಿಯಾದ ಹರಹ-ಸಾಹಣಿ ಆಸಂದಿಪುರದಲ್ಲಿ ಬಲ್ಲೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ಆ ದೇವಾಲಯದ ರಂಗಭೋಗ. ವಸಂತೋತ್ಸವ, ಸಂಗೀತ, ನೃತ್ಯ ಮೊದಲಾದ ಸೇವೆಗಳಿಗಾಗಿ ತಾಂಡೇಶ್ವರ ಎಂಬ ಹಳ್ಳಿಗೆ ಬಲ್ಲೇಶ್ವರಪುರ ಎಂಬ ಹೆಸರಿಟ್ಟು ದಾನ ನೀಡಿದನು. ತಾನು ಮೊದಲು ವೈಜರಸನಿಂದ ಪಡೆದಿದ್ದ ಭೂಮಿಯನ್ನು ಸಹಾ ದೇವಾಲಯಕ್ಕೆ ದಾನ ನೀಡಿದನು. ಈ ಶಾಸನದ ಉತ್ತರಾರ್ಧದ ಭಾಗ ಹಾನಿಗೊಳಗಾಗಿ ತ್ರುಟಿತವಾಗಿದ್ದು ಹರಹ-ಸಾಹಣಿಯ ಸಾಹಸದ ವಿವರಗಳ ಪೂರ್ಣಪಾಠ ದೊರೆಯುವುದಿಲ್ಲ. ಆದರೂ ಸಾರಾಂಶ ಗ್ರಹಿಸಲು ಅಡ್ಡಿಯಾಗದು. ಮಹಾಪ್ರಧಾನ ಹರಹ-ಸಾಹಣಿಯನ್ನು ರಣಭಯಂಕರ, ಮಹಾಪರಾಕ್ರಮಿ, ಸ್ವಾಮಿನಿಷ್ಠ ಎಂದು ಈ ಶಾಸನದ ಪದ್ಯಗಳು ವರ್ಣಿಸಿವೆ.

ಹರಹ ಸಾಹಣಿಯು ಅಶ್ವಾರೋಹಿಯಾಗಿ ಶತ್ರುಗಳ ಬೆನ್ನಟ್ಟಿದರೆ, ಅವರು 'ಕಪ್ಪಮಂ ತ್ವರಿತದಿಂ ತಂದುವೆತ್ತು' 'ವೈರಮನೊಲ್ಲದೆ ಬಾಳ್ವರೆಂದೊಡೆ ಹರಹಣವಿಂನೊಳಂ ತೊಡರ್ದು ಕಾದು ಬರ್ದುಂಕುವ ನೇಂ ತ್ರಿಣೇತ್ರನೊ' ಎಂದು ಶಾಸನದ ಪದ್ಯ ಕೊಂಡಾಡಿದೆ. ಎಣಿಕೆಗೆ ನಿಲುಕದಂಥ ರಿಪುಬಲವಿದ್ದರೂ ಹರಹ ಸಾಹಣಿಯ ಯುದ್ಧದ ರಭಸಕ್ಕೆ 'ಕ್ಷಣದೊಳೆ ಬಿದ್ದ ದಂತಿಗಳಿನಶ್ವಭಟರ್ಕಳಿಂ ನಾಡುವನಟ್ಟೆ ಕುಣಿವ ಮರುಳ್ಗಳಿಂ ಪರಿವ" ರಣ ಭೂಮಿಯಾಗುತ್ತಿತ್ತು. (ಅಟ್ಟೆ= ತಲೆಯಿಲ್ಲದ ದೇಹ, ದಂತಿ=ಆನೆ) ಅವನ ಕೂರಲಗಿ ನಾದಕ್ಕೆ ಶತ್ರುಗಳ ಅಟ್ಟೆಯ ನರ್ತನವೇ ತಾಳವಾಗುತ್ತಿತ್ತು. ಹರಹ-ಸಾಹಣಿಯ ರಣಕಹಳೆಯ ದನಿ ಕೇಳಿದೊಡನೆ ವೈರಿ ಸಮೂಹವು ಭಯದಿಂದ ತಲ್ಲಣಿಸುತ್ತಿತ್ತು ಎಂದು ಅವನ ಶೌರ್ಯ ಶಾಸನದಲ್ಲಿ ವರ್ಣಿತವಾಗಿದೆ. ಅವನ ವ್ಯಕ್ತಿತ್ವದ ಹಿರಿಮೆಯನ್ನು ಈ ಪದ್ಯದಲ್ಲಿ ಸುಂದರವಾಗಿ ಪರಿಚಯಿಸಲಾಗಿದೆ.

ಪವಿಕಾಯಂ ಸತ್ವನಾದಂ ಸಕಳಶುಭಗುಣಂ ಸಂದದುದ್ದಾನಿ ವರ್ಣಂ
ಜವಮಾಳ್ಪಿಂ ತಿಟ್ಟಿ ವಿಟ್ಟಂತೆಸೆವ ತನುಕರಂ ದುಷ್ಟಚೇಷ್ಟಾ ವಿಳಾಸಂ
ಭುವನಕ್ಕಾಶ್ಚರ್ಯವೆಂಬಂನೆಗೆವತಿ ಮುದದಿಂದೇಱಿ ತೋಱಲುಕೆ ಬಲ್ಲಂ
ರವಿಪುತ್ರಂ ತಾನೆನಲು ಸಾಹಣಿ ಹರಹನು ಪ್ರೌಢನತ್ಯಂತ ರೂಢಂ[೨]

(ಪವಿಕಾಯ= ವಜ್ರದೇಹಿ, ತಿಟ್ಟಿವಿಟ್ಟಿ= ಚಿತ್ರಬರೆದಂತೆ) (ರವಿಪುತ್ರ=ಕರ್ಣ)

* * *

ಕ್ರಿ.ಶ. ೧೧೫೫ರ ಕಾಲದ ಕಬ್ಬಳ್ಳಿಯ ಹಳೇ ಊರ ನಿವೇಶನದಲ್ಲಿ ಬಿದ್ದಿರುವ ಕಲ್ಲಿನ ಮೇಲಿನ ಶಾಸನ ಸಂಖ್ಯೆ ೪೩ (VI ಕ 69) ಮಹಾದಾನಿಯಾದ ಹೊಯ್ಸಳಗವುಂಡನನ್ನು ಉಲ್ಲೇಖಿಸುತ್ತದೆ. ಈ ಶಾಸನವು ಹೊಯ್ಸಳ ವಿಷ್ಣುವರ್ಧನ (ನರಸಿಂಹ)ನ ಕಾಲಕ್ಕೆ ಸೇರಿದುದು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ದ್ರಮಿಳ ಸಂಗದ ಅರುಗಂಳಾನ್ವಯದ ಗುಡ್ಡ ಹೊಯ್ಸಳ ಗಾವುಂಡನು ತನ್ನ ತಾಯಿ ಚಟ್ಟವೆ ಗಾವುಂಡಿಯ ಪರೋಕ್ಷ ವಿನಯವಾಗಿ ಬಸದಿಯನ್ನು ನಿರ್ಮಿಸಿದನು. ಹೊಯ್ಸಳ ಗಾವುಂಡನೂ ಮತ್ತು ಊರಿನ ಸಮಸ್ತ ಪ್ರಜೆಗಾವುಂಡರೂ ಇದ್ದು ಬಸದಿಗೂ ಮತ್ತು ದೇವಾಲಯಕ್ಕೂ ಸಮಾನವಾಗಿ ಭೂಮಿಯನ್ನು ಹಂಚಿದರು. ಈ ದಾನದ ಪ್ರತಿಗ್ರಹಿ ಅಹೋಬಲ ಪಂಡಿತ. ಹೊಯ್ಸಳ ಗಾವುಂಡನು ತಾನು ದೊರೆ ನರಸಿಂಹನಿಂದ ಪಡೆದ ಭೂಮಿಯನ್ನೂ, ಎರಡು ಮನೆಗಳನ್ನೂ, ಒಂದು ಕೊಳವನ್ನೂ, ಒಂದು ತೋಟವನ್ನೂ ಮತ್ತು ಒಂದು ಗಾಣವನ್ನೂ ಬಸದಿಗೆ ನೀಡಿದನು. ಈ ಶಾಸನವನ್ನು ಬರೆದವನು ನೆಲ್ಕುದುರೆಯ ಊರೊಡೆಯ ಕಲಿದೇವ ಮತ್ತು ಕಂಡರಣೆಕಾರ ಮಣಿವೋಜ.

ಈ ಶಾಸನದ ಪದ್ಯವು ಮಹಾದಾನಿ ಹೊಯ್ಸಳ ಗಾವುಂಡನ ಅನುಪಮವಾದ ದಾನಗುಣವನ್ನು ಕೊಂಡಾಡಿದೆ.

ಪದನಱಿದಾಸೆತಪ್ಪಿಸದೆ ಬೇಳ್ವರ ಬೇಳ್ಪುದನಿತ್ತು ಸದ್ಗುಣಾ
ಸ್ಪದವೆನಿಸಲ್ಕೆ ನಿನ್ನ ಪೆಸರೇಂಗಳ ಹೊಯ್ಸಳ ಗೌವುಂಡನೆಂ
ಬುದೇ ಶಿಬಿಯೆಂಬುದೇ ಖಚರನಾಯಕನೆಂಬುದೇ ಚಾರುದತ್ತನೆಂ
ಬುದೇ ಬಲಿಯೆಂಬುದೇ ರವಿತನೂಭವನೆಂಬುದೇ ಗುತ್ತೆನೆಂಬುದೇ[೩]

ಬೇಡುವವರ ಮನದಿಂಗಿತವನರಿದು ಅವರು ಬಯಸಿದುದನೆ ನೀಡುವ ಶ್ರೇಷ್ಠ ಔದಾರ್ಯದ ಗುಣವುಳ್ಳ ಹೊಯ್ಸಳ ಗಾವುಂಡನನ್ನು ಶ್ರೇಷ್ಠ ತ್ಯಾಗಿಗಳು, ಪುರಾಣ ಪ್ರಸಿದ್ಧ ಪುರುಷರುಗಳಾದ ಶಿಬಿ, ಬಲಿ, ಕರ್ಣ ಮೊದಲಾದವರೊಡನೆ ಸಮೀಕರಿಸಿ ಶಾಸನದ ಪದ್ಯವು ಅವನ ವ್ಯಕ್ತಿತ್ವವನ್ನು ಹೊಗಳಿರುವ ಪರಿ ಅನನ್ಯವಾಗಿದೆ.

ಕ್ರಿ.ಶ. ೧೧೫೫ರ ಕಾಲದ ಬ್ರಹ್ಮಸಮುದ್ರದ ನಾಕನಾಥೇಶ್ವರ ದೇವಾಲಯದ ದಕ್ಷಿಣದ ಕಡೆ ನೆಟ್ಟಿರುವ ಕಲ್ಲಿನ ಶಾಸನ-ಶಾ.ಸಂ. ೧೫೦ (VI ಕ 51) ಹೊಯ್ಸಳರ ದೊರೆಯಾದ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಹೆಗ್ಗಡೆಯಾಗಿದ್ದ ನಾಕಿಮಯ್ಯನ ದಾನದ ವಿವರಗಳನ್ನು ಉಲ್ಲೇಖಿಸುತ್ತದೆ. ನಾಕಿಮಯ್ಯ ಹೆಗ್ಗಡೆಯು ತನ್ನ ದೊರೆಯಾಗಿದ್ದ ಒಂದನೆಯ ನರಸಿಂಹನ ಬಳಿ ತಾನು ಪಡೆದಿದ್ದ ಬ್ರಹ್ಮಸಮುದ್ರ ಎಂಬ ಊರಿನಲ್ಲಿ ಶಿವ ದೇವಾಲಯವನ್ನು ನಿರ್ಮಿಸಿ ಅಲ್ಲಿ ನಾಕೇಶ್ವರ ದೇವರನ್ನು ಪ್ರತಿಷ್ಠಾಸಿದನು. ಆ ದೇವಾಲಯದ ಅಂಗಭೋಗ, ಪೂಜೆ, ನೈವೇದ್ಯ, ನಂದಾದೀಪ ಮೊದಲಾದ ಖರ್ಚುಗಳಿಗಾಗಿ ಭೂದಾನ ನೀಡಿ ಶುದ್ಧಶೈವ ಶಂಖ ಮಠದ ಪರಮಗುಹ ಇಂದ್ರವನೀ ಕದಂಬವೃಕ್ಷಾನ್ವಯದ ತ್ರಿಲೋಚನ ಪಂಡಿತರಿಗೆ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ದಾನವಿತ್ತನು. ಈ ಶಾಸನವನ್ನು ಬರೆದವನು ಬಿರುದರ ಲೇಖಕ ಮದನ ಸೂರ್ಯಣ್ಣನು.

ಶ್ರೀವತ್ಸಗೋತ್ರದ ವಿಪ್ರನಾದ ಮದ್ದಿರಾಜ ಮತ್ತು ಮೂಕಾಂಬಿಕೆಯರ ತಿಲಕಪ್ರಾಯರಾದ ನಾಲ್ಕು ಜನ ಗಂಡು ಮಕ್ಕಳಲ್ಲಿ ಮೂರನೆಯವನು ನಾಕಿಮಯ್ಯ. ಶಾಸನದ ಪದ್ಯಗಳಲ್ಲಿ ವರ್ಣರಂಜಿತವಾಗಿ ಇವನ ಭವ್ಯ ವ್ಯಕ್ತಿತ್ವವನ್ನು ಉಲ್ಲೇಖಿಸಲಾಗಿದೆ. ನಾಕಿಮಯ್ಯನು-'ನರಸಿಂಹಕ್ಷಿತಿಪ್ರಸಾದ ವಿಳಸತ್ಸರ್ವಾಕಾರಂ, ಪರಾರ್ತ್ಥರತಂ' ಮೇರು ಸದೃಶ ವ್ಯಕ್ತಿ. ಸಂಪತ್ಕರಂ. ಪುರುಷಾರ್ಥಗಳಿಗೆ ಆಶ್ರಯಸ್ಥಾನನು, ವಿನಯ, ನೀತಿ, ಪ್ರೀತಿ ಗುಣಗಳಿಂದ ಖ್ಯಾತನಾದವನು. ತನ್ನ ನಾಡನ್ನು ಚಂದ್ರಕಾಂತಿಯ ಶೋಭೆಯು, ಕ್ಷೀರಸಾಗರದಲ್ಲಿ ಜನಿಸಿದ ನವಾಮೃತಧಾರೆಯೂ ಪಸರಿಸಿದಂತೆ ನಿರ್ಮಿಸಿದನು. 'ಈ ವಿಶ್ವಂಭರಾರಕ್ಷಣ ವ್ಯಸನ ವ್ಯಾಪ್ತ ಯಶೋವಿಳಾಸ ವಿಳಸದ್ ಭೂನಾಕನಂ ನಾಕನಂ' (೪) ಎಂದು ಇಲ್ಲಿ ಶ್ಲಾಘಿಸಿದೆ.

ನಾಕರಸನ ನುಡಿಗಳು ಕರ್ಣಸಾಯನಂ, ತನುಜಗಂ ನೇತ್ರಕ್ಕೆ ಚಂದ್ರೋದಯಂ, ಇನ್ನು ಆರ್ತರಿಗೆ ದಾನ ನೀಡುವಾಗ ನಿಧಿಯ ರಾಶಿ, ಸದಾಚಾರ ಚೂಡಾಮಣಿ, ಪವಿತ್ರ ಗಂಗಾಜಲದಂತೆ ನಿರ್ಮಲ ಮನದ ಈತನನ್ನು 'ಪೋಲ್ವಂನನದಾವನಾಶ್ರಿತ ಕೃತ ಶ್ರೀಲೋಕನಂ ನಾಕನಂ' (೪) ಎಂದೇ ಬಣ್ಣಿಸಲಾಗಿದೆ.

ನಾಕಿಮಯ್ಯನು ಭುವಿಗಿಳಿದ ಕಲ್ಪತರು, ವಾಚಸ್ಪತಿ, ಪರೋಪಕಾರದಲ್ಲಿ ಜೀಮೂತ ವಾಹನನಿಗಿಂತಲೂ ಮಿಗಿಲಾದ 'ಲೋಕೋಪಕಾರೋದಯಂ' ತಮ್ಮ ಮತ್ತು ಸತಿಸುತರ ಇಷ್ಟಾರ್ಥಗಳಿಗಾಗಿ ಧನವನ್ನು ಗಳಿಸುವ ಜನರಿರುವ ಈ ಲೋಕದಲ್ಲಿ 'ದೇವಾಲಯ ನಿರ್ಮಿಸಲು' ಪಡೆವಂ ಧರ್ಮದೀನರ್ತ್ಥಮುಂ ಪರಹಿತ ವ್ಯಾಪಾರನೆಂದು ಪೆರ್ಗ್ಗಡೆ ನಾಕಣ್ಣನೇ ವಿಶ್ವಧಾತ್ರಿಯೊಳಗೇಂ ಧನ್ಯ ಪೆರರ್ ಧನ್ಯರೇ ಎನ್ನುವಂಥ ಪುಣ್ಯಜೀವಿ. 'ಸ್ಥಿರನೇ ಸದುಗುಣಿಯೇ, ವಿವೇಕ ನಿಧಿಯೇ

ವಿದ್ವಜ್ಜನಾಧಾರನೇ ನಿರಹಂಕಾರ ವಿನೋದನೇ ಮನುಮುನಿ ಪ್ರಖ್ಯಾತನೇ ನಾಕನೇ ಕೀರ್ತಿಧ್ವಜಂ'[೪] ಎಂಬ ಅತಿಶಯವಾದ ಹೊಗಳಿಕೆಯನ್ನು ಶಾಸನವು ಉಲ್ಲೇಖಿಸಿದೆ.

'ಧನಮಂ ಶಾಶ್ವತಮಾಗಿ ಮಾಳ್ಪುದೇ ದಿಟಕ್ಕಾಚಂದ್ರತಾರಂ ಯಶೋಧನಮುಂ ಧರ್ಮಮುಂ' ಎಂದು ನಾಕೇಶ್ವರನನ್ನು ಪ್ರತಿಷ್ಠಾಪಿಸಿ, ಅನುಷ್ಠಾನ ನಿಷ್ಠಾಪರ ದ್ವಿಜರಿಗೆ ಯಥೇಚ್ಛವಾಗಿ ದಾನ ನೀಡಿದನು. ಆ ನಾಕೇಶ್ವರ ದೇವರ ಪ್ರತಿಷ್ಠೆಯ ಉತ್ಸವದಲ್ಲಿ 'ಸುರಭಿ ತೊಱೆದತ್ತು ಸುರಭೂಮಿರುಹಂ ಫಳಮಾಯ್ತು. ಸಿದ್ಧರಸದೊಂದು ಪೊನಲ್ ಪರಿದುದೆನೆ ಧರೆಗೆ ಧನಮಂ ಪಿರಿದಿತ್ತಂ ನಾಕನ್' ಎಂದು ನಾಕಿಮಯ್ಯನ ಉದಾರ ಗುಣವನ್ನು ಶಾಸನವು ಉಲ್ಲೇಖಿಸಿದೆ.

* * *

ಕ್ರಿ.ಶ. ೧೧೭೨ರ ಕಾಲದ ಬ್ರಹ್ಮಸಮುದ್ರದ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ದಕ್ಷಿಣದ ಕಡೆ ನೆಟ್ಟಿರುವ ಕಲ್ಲಿನ ಶಾಸನವು (ಶಾ.ಸಂ. ೧೯೯ (VI ಕ 66) ಹೊಯ್ಸಳರ ದೊರೆ ಒಂದನೆಯ ನರಸಿಂಹನ ಸರ್ವಾಧಿಕಾರಿ ಶ್ರೀಕರಣದ ಹೆಗ್ಗಡೆಯಾಗಿದ್ದ ಆಚಿರಾಜನು ಬ್ರಹ್ಮಸಮುದ್ರದಲ್ಲಿ ಶ್ರೀವರ (ಶ್ರೀ ವಿಷ್ಣು) ದೇವಾಲಯವನ್ನು ನಿರ್ಮಿಸಿದ ಸಂಗತಿ ಉಲ್ಲೇಖಿಸಿದೆ. ಆ ದೇವಾಲಯದ ಪೂಜೆ, ನೈವೇದ್ಯ, ಅನ್ನ ಸಂತರ್ಪಣೆ ಇತ್ಯಾದಿ ಸೇವೆಗಳಾಗಿ ಆಚಿರಾಜನು ತಾನು ದೊರೆ ನರಸಿಂಹನಿಂದ ಪಡೆದ ಭೂಮಿಯನ್ನು ದಾನವಾಗಿ ನೀಡಿದನು. ಈ ಶಾಸನವನ್ನು ಬರೆದವನು ಬಿರುದರ ಲೇಖಕ– ಮದನ ಮಹೇಶ್ವರ ಸೂರ್ಯ್ಯಣ್ಣನು.

ನಿರುಪಮ ಪುಣ್ಯಾಕರನಾದ ಆಚಿರಾಜನು ವಾಜಿವಂಶದ ಬುಧವರ್ಯ ಕೇಶವ ಮತ್ತು ವಿನುತ ಶೀಲಾಢ್ಯೆ ಚೌಂಡಿಯಕ್ಕನವರ ಹಿರಿಯ ಮಗ. ಹೊಯ್ಸಳರ ದೊರೆ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಆಚಿರಾಜನು 'ರಾಜ್ಯವಾರ್ಧಿಗಮೃತಕರಂ ಶ್ರೀ ಕರಣ ಪ್ರಧಾನನಮಳ ಸ್ಥಿರಮತಿ ಸರ್ವಾಧಿಕಾರಿ ಚಮೂಪ'ನಾಗಿದ್ದನು.

ಭವ್ಯ ವ್ಯಕ್ತಿತ್ವದ ಆಚಿರಾಜನನ್ನು ಬಗೆಬಗೆಯಾಗಿ ವಿವಿಧ ಉಪಮೆಗಳೊಂದಿಗೆ ವಿಶಿಷ್ಟವಾಗಿ ಶಾಸನದ ಪದ್ಯಗಳಲ್ಲಿ ವರ್ಣಿಸಿದೆ.

ಸೃಷ್ಟಿಕರ್ತನಾದ ಬ್ರಹ್ಮನು ಆಲೋಚಿಸಿ ಅಮೃತ, ಕಮಲ, ಚಂದ್ರಕಾಂತಿ ಇತ್ಯಾದಿಗಳ ಸೌಂದರ್ಯದ ಒಂದೊಂದು ಅಂಶವನ್ನು ಪಡೆದು ಚೆಲುವಾದ ಆಚಿರಾಜನನ್ನು ನಿರ್ಮಿಸಿದನೆಂದು ಈ ಪದ್ಯದಲ್ಲಿದೆ.

'ಅಮರ್ದಿಂದಬುಜದಿಂ ಸುಧಾಂಶರುಚಿಯಿಂ ರತ್ನೌಘದಿಂ ಚಂದನ
ದ್ರುಮನಿರ್ಯ್ಯಾಸ ದಿನಂಗ ಚೇಷುಗಳ ಕೂರ್ಪ್ಪಿಂ ಕಾಮಿನೀ ಲೋಕದೃಕ್
ಸಮಯೋದಿತ ಪುಣ್ಯದಿಂ ಪಡೆದನಕ್ಕುಂ ಧಾತ್ರನೆಂಬಂದದಿಂ
ಕಮನೀಯಂ ಬಗೆದಾಗಳಾಚಣನ ರೂಪಾಶ್ಚರ್ಯ ಸಂಪಾದಕ॥(೫)

ಬ್ರಹ್ಮನು ಸೃಷ್ಟಿಯಲ್ಲಿ ಒಂದೊಂದು ದೇವತೆಗೆ ಒಂದೊಂದು ವಿಶಿಷ್ಟ ಶಕ್ತಿಯನ್ನು ನೀಡಿದ್ದಾನೆ ಎಂದರೆ ಅದೇನು ಅಚ್ಚರಿಯೇ, ಆದರೆ ಈ ಸಕಲ ಶಕ್ತಿ, ಗುಣಗಳಿಗೂ ಆಚಿರಾಜನೊಬ್ಬನೆ ಆವಾಸಸ್ಥಾನಗಿರುವುದು ಬೆರಗಿನ ಸಂಗತಿಯೆಂದು ಈ ಪದ್ಯದಲ್ಲಿದೆ.

'ಹರಿಯೊಳ್ ವಿಕ್ರಾಂತಮಿಂದ್ರೇಜ್ಯನೊಳಱಿವು ಮನೋಜಾತ ನೊಳ್ಚೆಲುವು ರತ್ನಾ
ಕರದೊಳ್ ಗಾಂಭೀರ್ಯ ಭಾವಂ ರವಿಯೊಳತುಳ ತೇಜಂ ಸುರೋರ್ವ್ವೀಜ ದೊಳ ನಿ
ಬ್ಬರದಾನಂ ತಾಮಿಮೊಂದೆಸೆವುವಿನತುವೊಂದಾದುವಾಶ್ಚರ್ಯ ಮೇನ
ಚ್ಚರಿ ಧಾತ್ರಂ ಕೂರ್ತಡೆಂಬಂತಖಿಳಗುಣಕವಾಚಣ್ಣನಾವಾಸ ನಾದಂ.॥
(ಹರಿ=ಇಂದ್ರ, ಇಂದ್ರೇಜ್ಯ= ಬೃಹಸ್ಪತಿ)[೬]

ಹೊಯ್ಸಳ ದೊರೆ ನರಸಿಂಹನ ಸಚಿವನಾಗಿದ್ದ ಆಚಿರಾಜನ ಕಾರ್ಯ ವಿಧಾನಯೆಂತೆಂದರೆ–'ಪತಿಹಿತದೊಳ್ ಯೋಗಂಧರರಂಗಂ ಶೌರ್ಯೋಕ್ತಿಯೊಳ್ ಶೂದ್ರಕನಿಗೂ, ದಾನಗುಣದಲ್ಲಿ ಸ್ವದ್ರುಮಕ್ಕುಂ, ಸತ್ಕಾಮಿನೀ ಮೊಹನ ಗುಣದೊಳ್ ಮನ್ಮಥಂಗಂ' ಮತ್ಸರ ತರಿಸುವಂತಿತ್ತು ಎಂದು ವರ್ಣಿಸಿದೆ.

ಆಚಿರಾಜನು ನಾಗರಾಜನಂತೆ ಭೋಗಿ, ಚಂದ್ರನಂತೆ ಕಲಾಧರ, ಶಿವನಂತೆ ಉಗ್ರ, ದೇವೇಂದ್ರನಂತೆ ವೈಭವಶಾಲಿ, ರವಿಯಂತೆ ತೇಜಸ್ವಿ, ಬೃಹಸ್ಪತಿಯಂತೆ ಬ್ರಹ್ಮತತ್ವಕೋವಿದ. ಮೇರುಗಿರಿಯಂಥ ಔನ್ನತ್ಯ, ದದೀಚಿ, ಬಲಿಯಂಥ ಮಹಾತ್ಯಾಗಿ ಎಂದು ಪೌರಾಣಿಕ ಪ್ರಸಿದ್ಧ ವ್ಯಕ್ತಿಗಳಿಗೆ ಸಮಾನನಾದವನು ಎಂಬ ಪ್ರಶಂಸೆಯನ್ನು ಈ ಶಾಸನ ಪದ್ಯ ಉಲ್ಲೇಖಿಸಿದೆ.

ಕ್ರಿ.ಶ. ೧೨೦೨ರ ವಕ್ಕಲಗೆರೆಯ ಬಾಣರಂಗನಾಥ ದೇವಾಲಯದ ಹೊರ ಪ್ರಾಕಾರದಲ್ಲಿ ನೆಟ್ಟಿರುವ ಕಲ್ಲಿನ ಶಾಸನ (ಸಂ. ೧೯೯ VI ಕ ೨೬) ವು ಹೊಯ್ಸಳ ಎರಡನೆಯ ಬಲ್ಲಾಳನ ಮಹಾಪ್ರಧಾನ ಅಮಿತಯ್ಯ ದಂಡನಾಯಕನು ತನ್ನ ಜನ್ಮಸ್ಥಳವಾದ ಲೊಕ್ಕಿಗುಂಡಿಯಲ್ಲಿ, ಒಂದು ದೇವಾಲಯವನ್ನು, ಒಂದು ಕೆರೆ, ಒಂದು ಅನ್ನಸತ್ರ, ಒಂದು ಅಗ್ರಹಾರ, ಮತ್ತು ಒಂದು ಅರವಟ್ಟಿಗೆಯನ್ನು ದಾನ ನೀಡಿದನು. ನಂತರ ಅಮಿತಯ್ಯನು ತನ್ನ ಮೂವರು ತಮ್ಮಂದಿರೂ ಮತ್ತು ದಂಡನಾಯಕರೂ ಆಗಿದ್ದ ಕಲ್ಲಯ್ಯ, ಮಸಣಯ್ಯ ಮತ್ತು ಬಸವಯ್ಯರ ಜೊತೆಗೂಡಿ ವಕ್ಕಲಗೆರೆಯಲ್ಲಿ ತಮ್ಮ ಅಭ್ಯುದಯಕ್ಕಾಗಿ ಏಕ್ಕೋಟಿ ಜಿನಾಲಯದಲ್ಲಿ ಶಾಂತಿನಾಥನ ಪ್ರತಿಷ್ಠೆ ಮಾಡಿಸಿದನು. ಆಗ ಸಮಸ್ತ ಪ್ರಜೆ ಗಾವುಂಡರೂ ಮತ್ತು ನಾಯಕರೂ ಇದ್ದು ಆ ದೇವರ ಪೂಜೆ ಮತ್ತು ಸೇವಾಕಾರ್ಯಗಳ ನಿರ್ವಹಣೆಗಾಗಿ ಭೂಮಿಯನ್ನು ನಯಕೀರ್ತಿ ಪಂಡಿತದೇವರಿಗೆ ದಾನ ನೀಡಿದರು.

ಅಮಿತಯ್ಯ, ಕಲ್ಲಯ್ಯ, ಮಸಣಯ್ಯ ಮತ್ತು ಬಸವಯ್ಯ ಈ ನಾಲ್ವರೂ, ಸಕಲ ಲೋಕ ಖ್ಯಾತನಾಗಿದ್ದ ಹರಿಯಮ ಸೆಟ್ಟಿ ಮತ್ತು ಶ್ರೇಷ್ಠ ಸುಗ್ಗವ್ವೆ ದಂಪತಿಯ ಮಕ್ಕಳು ಈ ನಾಲ್ವರು ಸಹೋದರರೂ ವಚೋವೀರ್ಯ ಗಾಂಭೀರ್ಯರೂ, ವೀರಬಲ್ಲಾಳ ರಾಜನಿಗೆ ಬ್ರಹ್ಮನ ಹೊಳೆಯುವ ನಾಲ್ಕು ಮುಖಗಳಂತೆಯೂ, ವಿಷ್ಣುವಿನ ನಾಲ್ಕು ಭುಜಗಳಂತೆಯೂ, ಆ ಸಾಮ್ರಾಜ್ಯವನ್ನು ಸುತ್ತುವರೆದಿರುವ ನಾಲ್ಕೂ ಸಮುದ್ರಗಳೋ ಎಂಬಂತಿದ್ದರು(೬) ಎಂದು ಶಾಸನದಲ್ಲಿ ಪ್ರಶಂಶಿಸಲಾಗಿದೆ.

ಮಹಾಪ್ರಧಾನ, ಸರ್ವಾಧಿಕಾರಿ, ಮಹಾಪಸಾಯ್ತ ಎಂಬ ಬಿರುದಿಗೆ ಪಾತ್ರನಾದ ಅಮಿತಯ್ಯನು 'ಮನೆಯೊಳು ಮಂತ್ರಿಪ್ರದಾನಂ ಮೊನೆಯೊಳದಟನಾ ಕೋಪದೊಳು ನಿರ್ವಿಕಾರಂ ಧನದೊಳು ವಿಶ್ವಾಸಿ' ಎಂದು ವೀರಬಲ್ಲಾಳ ನೃಪನಿಂದ ದಂಡನಾಥತ್ವ ಪಡೆದು ಇತರ ದಂಡನಾಯಕರಿಗೂ ಮಿಗಿಲಾದ ಸ್ವಾಮಿ ಸಂಪತ್ತಿಯನ್ನು ಹೊಂದಿದ್ದ ಯಶೋವಂತನೆಂದು ಶಾಸನದಲ್ಲಿ ವರ್ಣಿಸಿ ಉಲ್ಲೇಖಿಸಿದೆ.

ಕೀರ್ತಿಶಾಲಿಯಾದ ಅಮಿತಯ್ಯನ ಸದ್ಗುಣಗಳ ವರ್ಣನೆ ಈ ಶಾಸನ ಪದ್ಯದಲ್ಲಿದೆ.

'ಗುಣ ಗಂಭೀರಂ ಪ್ರಸಿದ್ಧಂ ಪತಿಹಿತನಧಟಂ ಗೋತ್ರಚಿನ್ತಾ
ಮಣಿಧೀರಂ ದಾನಿ ದಕ್ಷಪಟು ಶುಭಮತಿ ಪುಣ್ಯಾಧಿಕಂ ಮಂತ್ರಿಚೂಡಾ
ಮಣಿ ಸೇವ್ಯಂ ಸೌಮ್ಯ ರಮ್ಯಾ ಕ್ಷಿತಿ ಕಲಿ ಕುಲಜಂ ಸಚ್ಚರಿತ್ರಂ ಸಭಾಭೂ
ಷಣ ರತ್ನಂ ಸತ್ಯಭಾಶಾನ ಮಿತನಮಿತ ದಂಡಾದಿಪಂ ಕೀರ್ತಿವೆತ್ತಂ'

ಈ ಜಗತ್ತಿಗೇ ಅಮಿತಯ್ಯನ ಒಂದು ನುಡಿ, ನಗೆ ತುಂಬಿದ ಒಂದು ನೋಟ. ಔದಾರ್ಯ ವಿವೇಕ, ಅವನ ಮಂತ್ರಿತ್ವ ಅಮೃತ ಸದೃಶವಾಗಿರಲು ಅಮೃತವೂ ಸಹಾ ಅವನಿಗೆ ಸಮನಾಗಲಾರದು ಎಂದು ಲೋಕಕ್ಕೆ ಮಾದರಿಯಾದ ಅಮಿತ ದಂಡನಾಯಕನ ವ್ಯಕ್ತಿತ್ವದ ಔನ್ನತ್ಯವನ್ನು ಶಾಸನವು ಮುಕ್ತಕಂಠನಿಂದ ಶ್ಲಾಘಿಸಿದೆ.

ಕ್ರಿ.ಶ. ೧೨೧೬ರ ಕಾಲದ ಕಂಚಿಗಲ್ಲು ಚಳಿಕೇಶ್ವರ ದೇವಾಲಯದ ಮುಂದೆ ನೆಟ್ಟ ಕಲ್ಲಿನ ಶಾಸನವು(ಸಂ.೨೮(VIP ೧೧೧) ಚಿಕ್ಕಚಳಿಕೆಯ ನಾಯಕನ ಮಕ್ಕಳಾದ ನೊಣಬೆಯ ನಾಯಕ ಮತ್ತು ಮಾಚೆಯ ನಾಯಕ ಸಹೋದರರು ಚಳಿಕೇಶ್ವರ ದೇವರನ್ನು ಪ್ರತಿಷ್ಠಿಸಿದ ಸಂಗತಿ ಉಲ್ಲೇಖಿಸಿದೆ. ಚಳಿಕೇಶ್ವರ ದೇವಾಲಯದ ಪೂಜೆ ಮಹಾಸೇವಾಕಾರ್ಯಗಳ ನಿರ್ವಹಣೆಗಾಗಿ ಭೂದಾನವನ್ನು ಆಸಂದಿ ನಾಡಿನ ನಾಗಜೀಯ ಮತ್ತು ಬಾಚಜೀಯರ ಕಾಲು ತೊಳೆದು ಧಾರಾಪೂರ್ವಕವಾಗಿ ದತ್ತಿ ನೀಡಿದರು. ಈ ಶಾಸನವು ಹೊಯ್ಸಳದೊರೆ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದೆ.

ಈ ಶಾಸನದಲ್ಲಿ ಒಂದು ಆಸಕ್ತಿಕರ ಚಾರಿತ್ರಿಕ ಸಂಗತಿಯ ಉಲ್ಲೇಖವಿದೆ. ಕಲ್ಯಾಣದ ಹಿರಿಯ ಹೆಮ್ಮಾಡಿರಾಯನು ಬಿಟ್ಟಿದೇವನ ಓಲಗಕ್ಕೆ ಭೇಟಿ ನೀಡಿ. ಉತ್ತರದ ಕಡೆಯಿಂದ ಬರುತ್ತಿರುವಾಗ, ಆತನಿಗೆ ವೋಲಗಕಾರ್ತಿಯಾಗಿದ್ದ ಚಳುಕವ್ವೆಯಿಂದ ಚಿಕ್ಕಚಳಿಕೆಯ ನಾಯಕ ಮತ್ತು ಅವನ ಮಕ್ಕಳು ತನ್ನದೇ ವಂಶದ ಕುಡಿಗಳು ಎಂಬ ಸಂಗತಿ ತಿಳಿಯುತ್ತದೆ. ಆಗ ಆತನು ನಾಯಕನ ಮಕ್ಕಳಿಗೆ ಚಳಿಕೆಯ ವೃತ್ತಿಗಳನ್ನು ಅನುಗ್ರಹಿಸಿ ಕಂಚಿಗಲ್ಲು ಮತ್ತು ಬಿದರೆ ಎಂಬ ಎರಡು ಊರುಗಳನ್ನು ನೀಡಿದನು. ತಮಗೆ ದಾನವಾಗಿ ಬಂದ ಈ ಎರಡೂ ಊರುಗಳನ್ನು ಚಳಿಕೇಶ್ವರ ಪ್ರತಿಷ್ಠೆಯ ಸಮಯದಲ್ಲಿ ನೊಣಬೆಯ ನಾಯಕ ಮತ್ತು ಮಾಚೆಯ ನಾಯಕರು ಆ ದೇವಾಲಯಕ್ಕೆ ದಾನ ನೀಡಿದರು.

ಚಿಕ್ಕಚಳಿಕೆಯ ನಾಯಕನು ಪಡೆದ ಸುತ ಶ್ರೇಷ್ಠರಾದ ನೊಣಬೆಯ ನಾಯಕ ಮತ್ತು ಮಾಚೆಯ ನಾಯಕರು ನಂದಗೋಕುಲ ನಾರಾಯಣದೇವರ ಪಾದಾರಾಧಕರು, ಗಡಿಯಂಕ ಭೀಮ, ಕಡಂಬ ಕಂಠೀರವ, ಅಸಹಾಯ ಶೌರ್ಯರ್, ಏಕಾಂಗಿ ವೀರರ್ ಸುಜನೆಯ್ಕ ಬಾಂಧವರ್, ಸ್ವಾಮಿ ವಂಚಕರಿಗೆ ಭಯಂಕರರು, ಕಲ್ಪ ತರುವಿನಂತೆ ಆನಂದವೀಯುವವರು.

ತಮ್ಮ ಕೀರ್ತಿಯನ್ನೇ ಪ್ರತಿಷ್ಠೆ ಮಾಡುತ್ತಿರುವರೋ ಎಂಬಂತೆ ಚಳಿಕೇಶ್ವರ ದೇವರನ್ನು ಪ್ರತಿಷ್ಠಾಪಿಸಿದರು[೭] ಎಂದು ಶಾಸನದಲ್ಲಿ ಇವರ ಸದ್ಗುಣಗಳನ್ನು ಉಲ್ಲೇಖಿಸಿದೆ.

ಹೊಯ್ಸಳ ಸಾಮ್ರಾಜ್ಯದ ಸಂಸ್ಕೃತಿಯ ಸ್ಮಾರಕಗಳಂತೆ, ಆ ಕಾಲದ ಶ್ರೇಷ್ಠ ದಾನಿಗಳು ನಿರ್ಮಿಸಿದ ಅನೇಕ ದೇವಾಲಯಗಳು ಕನ್ನಡ ನಾಡಿನಾದ್ಯಂತ ಕಂಗೊಳಿಸುತ್ತಾ ಇತಿಹಾಸವನ್ನು ಸಾರುತ್ತಿವೆ. ತಾವು ಗಳಿಸಿದ ಸಿರಿಸಂಪತ್ತನ್ನು ಧಾರ್ಮಿಕ ಸತ್ಕಾರ್ಯಕ್ಕಾಗಿ ವಿನಿಯೋಗಿಸಿದ ಈ ದಾನಿಗಳೇ ಬಲು ಧನ್ಯಜೀವಿಗಳು.

ಅಡಿಟಿಪ್ಪಣಿಗಳು

೧. EC XII ಚಿಕ್ಕಮಗಳೂರು ಜಿಲ್ಲೆ, ಕಡೂರು ಶಾ.ಸಂ. ೧೬ (VI ಕ ೧೫೬) ಶಾಸನದ ಸಾಲುಗಳು ೩೬, ೩೭, ೩೮, ೩೯, ೪೦.

೨. ಅದೇ, ಶಾ.ಸಂ. ೯ (VI ಕ ೧೪೯) ಶಾಸನ ಸಾಲುಗಳು ೪೬, ೪೭, ೪೮, ೪೯, ೫೦, ೫೧, ೫೨.

೩. ಅದೇ, ಶಾಸಂ. ೪೩ (VI ಕ ೬೯೧) ಶಾಸನ ಸಾಲುಗಳು ೨೬, ೨೭, ೨೮.

೪. ಅದೇ, ೧೫೦ (VI ಕ ೫೧) ೩೪, ೩೫, ೩೯, ೪೦, ೪೧, ೪೭, ೪೮, ೫೨, ೫೩, ೫೪.

೫. ಅದೇ, ಶಾ.ಸಂ. ೧೬೯ (VI ಕ ೬೬) ಶಾಸನದ ಸಾಲುಗಳು ೩೪, ೩೫, ೩೯, ೪೦, ೪೧, ೪೮, ೫೨, ೫೩, ೫೪.

೬. ಅದೇ, ಶಾ.ಸಂ. ೧೯೯ (VI ಕ ೨೬) ಶಾಸನದ ಸಾಲುಗಳು ೫೪, ೫೫, ೪೩, ೪೪, ೪೫, ೪೬, ೫೮, ೫೯, ೬೦.

೭. ಅದೇ, ಶಾ.ಸಂ. ೨೮ (VI ಕ ೧೧೧) ಶಾಸನದ ಸಾಲು ೩೭, ೩೮, ೩೯, ೪೦, ೪೧, ೪೨.

೩೮

ನಂಜುಂಡಸ್ವಾಮಿ ಬಿ.

ಉತ್ತರಾದಿಮಠದ ಸ್ವಾಮಿಗಳು ಜಂಗಮನಿಗೆ ಮಠ ಕಟ್ಟಿಸಿಕೊಟ್ಟ ಶಿಲಾಶಾಸನ

ಅಖಿಲ ಭಾರತ ಮಟ್ಟದಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಅನೇಕ ಹೊಸ ಹೊಸ ವಿಷಯಗಳು ವಿದ್ವಾಂಸರ ಕಣ್ಣಿಗೆ ಗೋಚರವಾಗುತ್ತವೆ. ಅದರಲ್ಲಿ ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ ಸಂಪುಟವನ್ನು ಪರಿಶೀಲಿಸಿದಾಗ ಅದರಲ್ಲಿ ಬಹಳ ಅಪರೂಪವಾದ ಧರ್ಮಸಮನ್ವಯಕ್ಕೆ ಸಂಬಂಧಿಸಿದ ದಾನಶಾಸನ ದಾಖಲಾಗಿದೆ. ದಾನ ನೀಡಿ ಶಾಸನ ಹಾಕಿಸಿದ ಉತ್ತರಾದಿಮಠದ ಸ್ವಾಮಿಗಳು ದ್ವೈತ ಸಿದ್ಧಾಂತದವರು. "ಹರಿ ಸರ್ವೋತ್ತಮತ್ವವನ್ನು" ಸಾರುವಂತಹವರು. ದಾನ ಸ್ವೀಕರಿಸಿದವರು "ಶಿವ ಸರ್ವೋತ್ತಮತ್ವವನ್ನು" ಸಾರುವಂತಹ ವೀರಶೈವ ಧರ್ಮದವರು. ಇವರು ಅಂಗದ ಮೇಲೆ ಲಿಂಗವಿಲ್ಲದವರನ್ನು ಭವಿಗಳು, ಅಂಗದ ಮೇಲೆ ಲಿಂಗವಿದ್ದವರು ಭಕ್ತರು ಎಂದು ೬೩ ಶೀಲಾಚರಣೆ ಅನುಸರಿಸುವುದರ ಬಗ್ಗೆ ನಮಗೆಲ್ಲ ಗೊತ್ತಿರುವಂತಹದು.

ಈ ಶಿಲಾಶಾಸನ ಇರುವ 'ಗೋಡಿಹಾಳ' ರಾಣಿಬೆನ್ನೂರು ತಾಲ್ಲೂಕು ಈಗ ಹಾವೇರಿ ಜಿಲ್ಲೆಯಲ್ಲಿ ಇರುವಂತಹದು. ಕ್ಷೇತ್ರಕಾರ್ಯ ಮಾಡಿ ಪ್ರತ್ಯಕ್ಷವಾಗಿ ಶಾಸನ ಪರಿಸರವನ್ನು ವೀಕ್ಷಣೆ ಮಾಡಲು ಸಾಧ್ಯವಾಗಿಲ್ಲ. ಶಾಸನದಲ್ಲಿ ಉಲ್ಲೇಖವಾದ ಕಾಲ ಇದ್ದ ಜಾಗ ತ್ರುಟಿತವಾಗಿ ಹೋಗಿದೆ.

ಉತ್ತರಾದಿಮಠದ ಸ್ವಾಮಿಗಳು ವೀರಶೈವ ಮಾಹೇಶ್ವರ ಕೊಂಡರ ರುದ್ರಪ್ಪನ ಮಗ ಕಂಬಾಳ್ಯನವರಿಗೆ 'ಗೋಡಿಹಾಳು' ಗ್ರಾಮದಲ್ಲಿ ಮಠ ಕಟ್ಟಿಸಿ ಸ್ವಾಧೀನ ಕೊಟ್ಟು ನೀವು ಪುತ್ರ ಪೌತ್ರ ಪರಂಪರೆಯಾಗಿ ಅನುಭವಿಸಿಕೊಂಡು ಬನ್ನಿ ಎಂದು ೨೪ನೇ ಸಾಲಿನಲ್ಲಿ ಮಾಡಿದ ಭಕ್ತಿ ಎಂದು ಇರುವುದರಿಂದ ಪರಮಪೂಜ್ಯ ಸ್ವಾಮಿಗಳಿಗೆ ಜಂಗಮಮೂರ್ತಿ ಮೇಲೆ ಎಂತಹ ಭಕ್ತಿ ಶ್ರದ್ಧೆ ಇತ್ತು ಎಂಬುದು ತಿಳಿದುಬರುತ್ತದೆ. 'ಗೋಡಿಹಾಳು' ಗ್ರಾಮ ಉತ್ತರಾದಿ ಮಠಕ್ಕೆ ದಾನ ಬಂದಿದಕ್ಕೆ ಶಾಸನ ಇದೆ. SII XVIII ೪೩೫ನೇ ಶಾಸನ ಕ್ರಿ.ಶ. ೧೬೭೭ರ ಕಾಲಮಾನದ್ದು. ಸ್ವಸ್ತಿ ಶ್ರೀ ಜಯಾಭ್ಯುದಯ ನೃಪ ಶಾಲಿವಾಹನ ಶಕವರ್ಷ ೧೫೯೪[೪] ನೇ ನಳನಾಮ ಸಂವತ್ಸರದ [ಪುಷ್ಯ] ಶುದ್ಧ ೧೨ ಪುಣ್ಯಕಾಲದಲ್ಲು ಶ್ರೀಮತ್ಸತ್ಯಾಧೀಶ ಶ್ರೀಪಾದಸ್ವಾಮಿಗಳಿಗೆ ದೇಶಾಯಿ ಗುತ್ತಳ ಬಸವನಗೌಡರ ಪುತ್ರರು ಹನುಮಂತಗೌಡರು ತತ್ಪುತ್ರರು ಲಿಂಗಪ್ಪಗೌಡರು ಅರ್ಪಿಸಿದ ಗ್ರಾಮದಾನದಿಂದ ಉತ್ತರಾದಿಮಠಕ್ಕೆ ಬಂದದ್ದು.

ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ
ತುಮಕೂರು-೫೭೨೧೦೨
ಮೊ: ೯೮೮೦೯ ೯೭೦೧೯೬

ಶ್ರೀ ಸತ್ಯಪ್ರಿಯತೀರ್ಥರು ವೃಂದಾವನಸ್ಥರಾಗಿದ್ದು ಶಾ.ಶ. ೧೭೪೪ ರ ರಕ್ತಾಕ್ಷಿ ಸಂವತ್ಸರದ ಚೈತ್ರ ಶುದ್ಧ ತ್ರಯೋದಶಿಯ ಶ್ರೀ ಸತ್ಯಬೋಧತೀರ್ಥರು ವೃಂದಾವನಸ್ಥರಾಗಿದ್ದು ಕ್ರಿ.ಶ. ೧೭೮೪ರ ಸಂವತ್ಸರದ ಶೋಭನಕೃತು ಫಾಲ್ಗುಣ ಬಹುಳ ಪ್ರತಿಪತ್‌ದಂದು.

SII XVIII (18) BK I - III 1975

No. 458

(B.K. No. 17 of 1934-35)

GODIHAL, RANEBENNUR TALUK, DHARWAR DISTRICT

Stone on Mathada-kana

This inscription, the date of which is lost, is engraved in late characters. It states that the I vaishnava pontiff Satyabodhas Sripada-odeya, disciple of Satyapriya-- Sripada - Odeya, built a matha in the village Godihain and placed it in charge of Kambalayya, son of Kondara Rudrappa The characters belong to the 19th century A.D.

Text

೧ ಶ್ರೀಮ್ತುಪರಮಹಂಸಪರಿವವಂಜಿಕಾಚಾರ್ಯ [ತ್ಯಾದ್ಯ]–
೨ ನೇಕಗುಣಸಂಪನ್ನರಾದಾಶ್ರೀಮದ್ವ [ಯಿಪ್ಲವ]–
೩ ಸಿದಾಂತಪ್ರತಿಷ್ಠಾಪನಾಚಾರ್ಯಾರಾದಾ ಶ್ರೀವ(ದ್ರಾಮ)–
೪ ಚಂದ್ರದೇವರ ದಿವ್ಯಶ್ರೀಪಾದಪದ್ಮರಥಾಕರಾ[ರ]
೫ ಶ್ರೀಮಸ್ಯತುಪ್ರಿಯ ಶ್ರೀಪದವಡಿಯರವ[ರ]
೬ ಕಮಳಕಂದ ಶ್ರೀಮಸ್ಚ[ತ್ಯ]ಬೋಧ ಶ್ರೀಪಾದ [ವ]–
೭ ಡಿಯರು [ಕೊ]ಂಡರ ರುದ್ರ[ಪ್ಪ]ನವರ ಪುತ್ರರಾದ
೮ ಕಂಬಾಳ್ಯಯನವರಗೆ ಮಾಡುವ ನಾರಾಯಣ
೯ ಸ್ಮರಣ ನಮ್ಮ ಮಠಕ್ಕೆ ಸಲವುಹ ಗೋಡಿ–
೧೦ ಹಾಳು ಗ್ರಾಮದ{ಗೆ] ನಿಮಗೆ ಮಠಾ ಕಟಿ
೧೧ ಸ್ವಾಧೀನಕ್ಕೆ ಕೊಟು ಯಿದೇವೆ ನೀವು ನಿಮ್ಮ
೧೨ ಪುತ್ರಪರಂಪರ್ಯವಾಗಿ ಸು–
೧೩ ಖದಿ ಅನುಭಾವಿಸಿಕೊಂಡು . . .
೧೪ . ಯಿದಕ್ಕೆ ಅನ್ಯಥ ಯಿಲ್ಲ . . . .
೧೫ . . . ಮುಡಿ . . . .
೧೬ . . . ದರಾ . . . . . . [ನಾ]ಮ್ಮ [ಮನೆ]...
೧೭ . . . ಕೊಂಡು . . . [ಮಲ್ಲ]ದಿ ಗೌಡ . .
೧೮ . . . ಮಾನಗೌಡ . . . . ಗೌಡ..
೧೯ . . . ನಾ . . . .
೨೦ . . . . . ವೆಲ್ಲ . . .
೨೧ . ನಾಮ ಸಂಚರದ ಜೇಷ್ಟ ಬ . .
೨೨ . . . . . ಚತುರ್ದಸಿ ದಇವಸ . . .
೨೩ . . . . ತಂಮ್ಮ . . .
೨೪ . . . . ಮಾಡಿದಾ ಭಕ್ತಿ

♦♦

ಸುರೇಶ ಎ.ಎನ್.

ಪ್ರಾಚೀನ ಪುನ್ನಾಟ ಪ್ರದೇಶದ ಶಾಸನೋಕ್ತ ನಾಡುಗಳು

ಪ್ರಸ್ತುತ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯನ್ನು 'ಪುನ್ನಾಟ' ಎಂಬುದಾಗಿ ಕರೆಯಲಾಗುತ್ತಿತ್ತು. ಪ್ರಾಚೀನ ಪುನ್ನಾಟ ಕಾವೇರಿ ಬಯಲುಸೀಮೆಯಲ್ಲಿದ್ದು, ತನ್ನದೇ ಆದ ಚಾರಿತ್ರಿಕತೆಯನ್ನು ಪಡೆದುಕೊಂಡಿದೆ.

ಶಾಸನಗಳಲ್ಲಿ ಭೂದಾನ ಅಥವಾ ಗ್ರಾಮದಾನಗಳ ಸಂದರ್ಭಗಳಲ್ಲಿ ಭೂಮಿ ಅಥವಾ ಗ್ರಾಮವನ್ನು ಗುರುತಿಸುವಾಗ ನಾಡುಗಳ ಉಲ್ಲೇಖ ಕಂಡುಬರುತ್ತದೆ. ಹಾಗೆಯೇ ನಾಡನಾಳ್ವ ಮುಖಂಡರು ಸಾರ್ವಜನಿಕ ಕೆಲಸಗಳನ್ನು ಕೈಗೊಳ್ಳುವಾಗಲೂ ನಾಡುಗಳ ಉಲ್ಲೇಖ ದೊರಕುತ್ತದೆ.

ಪುನ್ನಾಟ ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ. ೮೦೦ರಿಂದ ೧೩೦೦ರವರೆಗಿನ ಅವಧಿಯಲ್ಲಿನ ಶಾಸನಗಳಲ್ಲಿ ತೊರೆನಾಡು, ಕಲ್ನಾಡು, ನುಗುನಾಡು, ನವಿಲೆನಾಡು, ಬಯಲುನಾಡು, ನೊಳೆನಾಡು, ಎಡೆನಾಡು, ಪುನ್ನಾಡು, ಕಿಲ್‌ಕೆನಾಡು, ಕುಮಾರನಾಡು, ಪಾಂಡ್ಯನಾಡುಗಳ ಪ್ರಸ್ತಾಪ ಗಮನಿಸಬಹುದು.

ಕಲ್ನಾಡು ಅಥವಾ ಕಲ್ನಾಟು ಪದವನ್ನು ಹಲವು ವಿದ್ವಾಂಸರು ವೀರರಿಗೆ ಬಿಟ್ಟ ದತ್ತಿ ಎಂದು ಅರ್ಥೈಸಿದ್ದಾರೆ. ಚಿದಾನಂದಮೂರ್ತಿಯವರು ಸತ್ತ ವೀರನ ಮನೆಯವರಿಗೆ ಕೊಟ್ಟ ದತ್ತಿಯ ಮೇರೆಗಳನ್ನು ಸೂಚಿಸಲು ಕಲ್ಲುಗಳನ್ನು ನೆಡುತ್ತಿದ್ದರು ಎಂದರೆ ಶೇಷಶಾಸ್ತ್ರಿಯವರು ವೀರರಿಗೆ ಬಿಟ್ಟ ದತ್ತಿಯ ವಿಷಯ ನಿರೂಪಣೆಯಲ್ಲಿ ಮಾತ್ರ ಕಲ್ನಾಟು ಪ್ರಸ್ತಾಪ ಬರುತ್ತದೆ.[೧] ಎಂದಿದ್ದಾರೆ. ಸತ್ತ ವೀರನ ಸ್ಮಾರಕವಾಗಿ ಕಲ್ಲನ್ನು ನೆಟ್ಟು ಆನಂತರದಲ್ಲಿ ಕಲ್ನಾಡು ಪದ ಬರುತ್ತದೆ. ಚಂಗಾಳ್ವರು ಆಕ್ರಮಣ ಮಾಡಿದಾಗ ಅಜುಮಗೌಡ, ಅಂಕಗೌಡ, ಭವ ಮತ್ತು ಕೇತಗೌಡ ಶತ್ರುಗಳ ವಿರುದ್ಧ ಹೋರಾಡಿದಾಗ ಕಾಳಗದಲ್ಲಿ ಮಡಿದಿದ್ದರಿಂದ ನಾಗಮಂಗಲ ಗ್ರಾಮವನ್ನು ಕಲ್ನಾಡಾಗಿ ಕೊಡಲಾಗುತ್ತದೆ.[೨]

ನುಗುನಾಡು ಹಾಗೂ ನವಿಲೆನಾಡಿನ ಪ್ರಭು ಎರೆಯಪ್ಪ ಅರಸನು ಬಯಲುನಾಡಿನ ಶತ್ರುಗಳು ಆಕ್ರಮಣ ಮಾಡಿ ಕೊಟ್ಟ ಮಂಗಲದ ತುರುಗಳನ್ನು ಅಪಹರಿಸಿಕೊಂಡು ಹೋದಾಗ, ಪೆರುವಾಯಿಲ್ ಗ್ರಾಮದ ಕೊಂಗಣೆ ಎಂಬುವನು ಶತ್ರುಗಳನ್ನು ಬೆನ್ನಟ್ಟಿ ಕಾದಾಡಿ ಮಡಿಯುತ್ತಾನೆ ಹಾಗೂ ಕಾಳಗದಲ್ಲಿ ಪೆರ್ಮಾಡಿಗೌಡನ ಮಗ ರಾಮ ಮಡಿಯುತ್ತಾನೆ. ಗಂಗ ಅರಸ ಕೊಂಗುಣಿವರ್ಮ ಪೆರ್ಮಾಡಿ ಹಾಗೂ ನುಗುನಾಡು

ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮೇಲುಕೋಟೆ, ಪಾಂಡವಪುರ ತಾಲ್ಲೂಕು
ಮಂಡ್ಯ ಜಿಲ್ಲೆ-೫೭೧೪೩೧
ಮೊ: ೯೦೦೫೩ ೪೫೫೫೩೦

ಮತ್ತು ನವಿಲೆನಾಡಿನ ಪ್ರಭು ಎರೆಯಪ್ಪರಸನು ಜೊತೆಗೂಡಿ ಕುರುಮಂದೂರಿನ ಪೆರ್ಮಾಡಿಗೌಡನನ್ನು ನಾಡಗೌಡನನ್ನಾಗಿ ಮಾಡಿ ಕಿರು ಹೊಸೂರನ್ನು ಕಲ್ನಾಡಾಗಿ ದಾನ ಕೊಡುತ್ತಾನೆ.[೩]

ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ರಿ.ಶ. ೯ನೆಯ ಶತಮಾನದ ಒಂದು ಶಾಸನದಲ್ಲಿ ನುಗುನಾಡಿನ ಪ್ರಸ್ತಾಪವಿದೆ. ನುಗುನಾಡನ್ನು ಹೆಗ್ಗಡದೇವನಕೋಟೆ ತಾಲ್ಲೂಕಿನ ನುಗುನದಿ ಹರಿಯುವ ಪ್ರದೇಶ ಎನ್ನುತ್ತದೆ. ಇದೇ ತಾಲ್ಲೂಕಿನ ಕ್ರಿ.ಶ. ೧೧೩೭ರ ಒಂದು ಶಾಸನದಲ್ಲಿ ವೀರಣ್ಣ ಎಂಬುವನು ಹೆಗ್ಗವಾಡಿಯ ಬಿಜ್ಜಗವುಡನು, ಗೋಗ್ರಹಣದ ಸಂದರ್ಭದಲ್ಲಿ ಮಡಿದುದ್ದಕ್ಕಾಗಿ ಒಂದು ಶಾಸನ ನೆಡಿಸಿದುದನ್ನು ತಿಳಿಸುತ್ತದೆ. ಕಳ್ಳರು ಬಯಲುನಾಡಿನ ಕೊಡಗಹಳ್ಳಿಯಲ್ಲಿ ಹಸುಗಳನ್ನು ಅಪಹರಿಸಿದಾಗ ನಡೆದ ಘರ್ಷಣೆಯಲ್ಲಿ ಬಿಜ್ಜಗವುಡನು ಸಾವನ್ನಪ್ಪಿದ ಮತ್ತು ಸ್ಥಳೀಯ ಗವುಡರು ಆ ವೀರನಿಗೆ ದಾನ ಕೊಟ್ಟ ವಿವರ ಈ ಶಾಸನದಲ್ಲಿದೆ.[೪] ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ರಿ.ಶ. ೧೦೨೦ರ ಒಂದು ಶಾಸನದಲ್ಲಿ ನುಗುನಾಡಿನ ಒಡೆಯನು ಬೆಳತೂರು ಗ್ರಾಮದ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ದೇವಾಲಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ರುದ್ರ ಹೋಮಗಳನ್ನು ಮಾಡಿ ೧೦೦೦ ಜನಕ್ಕೆ ಊಟ ಹಾಕಿಸಿದ ವಿಷಯ ದಾಖಲಾಗಿದೆ.[೫] ಇದೇ ತಾಲ್ಲೂಕಿನ ಕ್ರಿ.ಶ. ೧೧೮೦ ರ ಒಂದು ಶಾಸನದಲ್ಲಿ ನುಗುನಾಡಿನ ಗವುಡರು ಕಲ್ಲಿಯ ಕಾಮೇಶ್ವರಮ್ ಒಡೆಯರ್ ದೇವಾಲಯಕ್ಕೆ ಮಂಟಪವನ್ನು ಕಟ್ಟಿಸಿ ಒಂದು ಹಳ್ಳಿಯನ್ನು ದೇವದಾನವಾಗಿ ಕೊಟ್ಟ ವಿಷಯ ತಿಳಿಸುತ್ತದೆ.[೬]

ಹೆಗ್ಗಡದೇವನಕೋಟೆ ತಾಲ್ಲೂಕಿನ ಕ್ರಿ.ಶ. ೧೨೧೧ ರ ಶಾಸನದಲ್ಲಿ ಮಂಚಯ್ಯ ದಂಡನಾಯಕ ಹಾಗೂ ಅವನ ಅಣ್ಣ ಗೋವಿಂದಯ್ಯ ನುಗುನಾಡಿನ ಮಾಚಿವಂಶದ ಬಂಕಗವುಡ, ಯಿಮ್ಮಡಿನಾಡಿನ ವೊಡ್ಡಿಗವುಡ ಹಾಗೂ ಕಳ್ಳಮ್ ಬೆಳ್ಳದ ನಕರರು, ಹದಿನಾಲ್ಕು ನಾಡಿನ ಪ್ರಭುಗವುಡರ ಜೊತೆಗೂಡಿ ನುಗುನಾಡಿನ ಕುಂದೂರನ್ನು ಕಲಿಯುಗ ಕಾಮೇಶ್ವರ ದೇವರಿಗೆ ನಿತ್ಯಪೂಜೆ ನಡೆಸಿಕೊಂಡು ಹೋಗಲು ದಾನ ನೀಡಿದ ಉಲ್ಲೇಖವಿದೆ.[೭] ಇದೇ ತಾಲ್ಲೂಕಿನ ಕ್ರಿ.ಶ. ೧೨೧೮ರ ಮತ್ತೊಂದು ಶಾಸನದಲ್ಲಿ ಮಹಾರಾಜಾಧಿರಾಜ ಮಹಾಪ್ರಧಾನಿ, ಸರ್ವಾಧಿಕಾರಿ ಹಾಗೂ ೭೨ ಮುಖ್ಯ ಅಧಿಕಾರಿಗಳ ನಾಯಕನಾಗಿದ್ದ ನರಸಿಂಹ ನಾಯಕ ಮತ್ತು ಮಹಾಪ್ರಧಾನ ಎರಮನಾಯಕ ಇತರ ಹದಿನಾಲ್ಕು ನಾಡಿನ ಪ್ರಭುಗವುಡರ ಜೊತೆಗೂಡಿ ದಾನ ನೀಡಿದ ವಿವರವಿದೆ.[೮] ಮಾನ್ಯ ಮಾಡಿದ ತೆರಿಗೆಯಿಂದ ಬಂದ ಆದಾಯದಲ್ಲಿ ಕಿತ್ತೂರಿನ ರವಿಯಮೇಶ್ವರ ದೇವಾಲಯದಲ್ಲಿ ಶಾಶ್ವತ ನಂದಾದೀವಿಗೆಗೆ ಬಳಸಬೇಕೆಂಬ ಕೋರಿಕೆ ಇದೆ. ಇದೇ ಶಾಸನದಲ್ಲಿ ಕಿತ್ತೂರನ್ನು ಮೇಲೆ ಹೇಳಿದ ಕಂದಾಯ ಅಧಿಕಾರಿಗಳ ರಾಜಸ್ಥಾನ ಎಂದು ಪ್ರಸ್ತಾಪಿಸಲಾಗಿದೆ.[೯] ಹೆಗ್ಗಡದೇವನಕೋಟೆ ತಾಲ್ಲೂಕಿನ ಒಂದು ಶಾಸನವು ಕುಂದತೂರಿನ ಮಲೆಯಮ್ಮನನ್ನು ಪೊಕುನಾಡಿನ ಹಾಗೂ ಕಿಲ್‌ಕಿ ನಾಡಿನ ಪ್ರಭು ಎಂದು ಪ್ರಸ್ತಾಪಿಸುತ್ತದೆ. ಈ ನಾಡ ಪ್ರಭುವಿನ ಬಗ್ಗೆ ಸ್ವಾರಸ್ಯಕರವಾದ ಮಾಹಿತಿಯನ್ನು ಶಾಸನವು ವರ್ಣಿಸುತ್ತದೆ. ತನ್ನ ಶಕ್ತಿ ಸಾಮರ್ಥ್ಯಗಳಿಂದ ಶತ್ರುಗಳ ಹುಟ್ಟಡಗಿಸಿದ ಮಲೆಯಮ್ಮನು ತನ್ನ ಕುಲಕ್ಕೆ ತಿಲಕಪ್ರಾಯದಂತಿದ್ದು, ತನ್ನ ಶಕ್ತಿ ಸಾಮರ್ಥ್ಯಗಳಿಂದ ತನ್ನ ರಕ್ತ ಸಂಬಂಧಿಗಳನ್ನು ಒಗ್ಗೂಡಿಸಿದ ಬಂಧಕ ಎಂದು ಶಾಸನ ಶ್ಲಾಘಿಸುತ್ತದೆ.[೧೦]

ಕ್ರಿ.ಶ. ೧೦೫೩ರ ಹೆಗ್ಗಡದೇವನಕೋಟೆ ತಾಲ್ಲೂಕಿನ ಒಂದು ಶಾಸನದಲ್ಲಿ ನವಿಲೆನಾಡಿನ ಉತ್ತಮ ಚೋಳಗವುಡನ ಮಗ ರಾಚಯ್ಯನು ಗಂಗೇಶ್ವರ ದೇವರಿಗೆ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಅಲ್ಲದೇ ದೇವರಿಗೆ ತವುಡಹಳ್ಳಿಯ ಕೆರೆಯ ಕೆಳಗಿನ ಭೂಮಿಯನ್ನು ದಾನ ನೀಡಿ ದೇವರ ನಂದಾದೀವಿಗೆಗೆ ಒಂದು ಎಣ್ಣೆಗಾಣವನ್ನು ದಾನ ಮಾಡಿದ ವಿವರವಿದೆ.[೧೧] ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕ್ರಿ.ಶ. ೧೦೩೭ರ ಒಂದು ಶಾಸನದಲ್ಲಿ ಚಂಗಾಳ್ವ ಅರಸರು ನೊಳೆನಾಡನ್ನು ಆಳುತ್ತಿದ್ದುದರ ಪ್ರಸ್ತಾಪವಿದೆ.[೧೨] ಇದೇ ತಾಲ್ಲೂಕಿನ ಕ್ರಿ.ಶ. ೧೦೬೩ರ ಒಂದು ಶಾಸನದಲ್ಲಿ ನವಿಲೆನಾಡಿನ ಕೆತಚಾರಿಯು ಭೂಮಿಯನ್ನು ದಾನ ಮಾಡಲೆಂದು ಗಂಡರಾದಿತ್ಯ ಚೋಳಗವುಡನಿಂದ ಭೂಮಿಯನ್ನು ಕೊಂಡ ವಿವರವಿದೆ.[೧೩] ಇದೇ ತಾಲ್ಲೂಕಿನ ಚೋಳಗವುಡನ ಮಗ ಮಾರಗವುಡನು ಮಹದೇವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ.

ಎಡತೊರೆನಾಡು, ಎಡೆನಾಡು ಹಾಗೂ ತೊರೆನಾಡುಗಳ ಉಲ್ಲೇಖ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಬಂದಿದೆ. 'ಎಡೆ' ಎಂಬ ಪದಕ್ಕೆ ಪ್ರದೇಶ, ನಡುವೆ, 'ಮಧ್ಯೆ' ಹತ್ತಿರ, ಸಮೀಪ ಎಂಬ ಅರ್ಥಗಳಿವೆ. ಆದ್ದರಿಂದ ಎಡದಿಕ್ಕಿಗೆ ನದಿ ಹರಿಯುವ ಪ್ರದೇಶದನಾಡು, ಪುನ್ನಾಟ-ಪುನ್ನಾಡು ಹೆಗ್ಗಡದೇವನಕೋಟೆ ತಾಲ್ಲೂಕಿನ ಇಂದಿನ ಕಿತ್ತೂರು.

ಬಯಲುನಾಡಿನ ಬಗ್ಗೆ ಉಲ್ಲೇಖವಿರುವ ಶಾಸನಗಳು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ದೊರೆತಿವೆ. ಬಯಲು ಎಂದರೆ ಮೈದಾನ ಎಂಬ ಅರ್ಥ ಬರುತ್ತದೆ. ಕಾವೇರಿನದಿ ಬಯಲು ಪ್ರದೇಶದ ದಕ್ಷಿಣಕ್ಕಿರುವ ಕೆಲವು ಭಾಗಗಳನ್ನು ಮತ್ತು ಅದಕ್ಕೆ ಹೊಂದಿಕೊಂಡಂತಿರುವ ದಕ್ಷಿಣ ಕರ್ನಾಟಕದ ಪ್ರದೇಶವನ್ನು ಬಯಲು ಪ್ರದೇಶ ಎಂದು ಗುರುತಿಸಬಹುದು.

ಬಯಲುನಾಡಿನ ಆಕ್ರಮಣಕಾರರಿಂದ ಕಾವೇರಿ ಬಯಲು ಪ್ರದೇಶದ ಮೇಲೆ ಆಕ್ರಮಣ ನಡೆದ ಹಿನ್ನೆಲೆಯಲ್ಲಿ ಬಯಲುನಾಡು ಅಥವಾ ಬಯಲ್‌ನಾಡು ಇಂದಿನ ಮೈನಾಡು ಎಂದು ಗುರ್ತಿಸಲಾಗಿದೆ. ಕದಂಬ ವಂಶದ ಕರವರ್ಮನು ಬನವಾಸಿ ವಿಷಯದಲ್ಲಿ ಆಳುತ್ತಿದ್ದು ಬಯಲು ನಾಡಿನ ಮೇಲೆ ತನ್ನ ಅಧಿಪತ್ಯವನ್ನು ಸಾಧಿಸಿದ್ದ ಎಂಬುದಾಗಿ ಕ್ರಿ.ಶ. ೧೦೭೯ರ ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನದಲ್ಲಿ ಉಲ್ಲೇಖವಾಗಿದೆ. ಇವನು ಮಲರಿಯ ಗ್ರಾಮದ ಸಿದ್ದಾಯವನ್ನು ಹಾಗೂ ಇತರೆ ತೆರಿಗೆಗಳನ್ನು ಒಂದು ಪುದುವಟ್ಟಾಗಿ ಮಾಡಿ ಅದನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವಂತೆ ರವಿನಲ್ಲ ದೇವ ಹಾಗೂ ಇತರ ಗೌಡರಿಗೆ ಆದೇಶಿಸಿದನು. ಶಾಸನದಲ್ಲಿ ಈ ಮಾನ್ಯದ ವಿವರವನ್ನು ಪುನ್ನಾಡು ಹಾಗೂ ನಿಡುಳೆ ನಾಡಿನ ಅಧಿಕಾರಿಗಳ ಗಮನಕ್ಕೆ ತಂದ ಅಂಶ ಸ್ಪಷ್ಟವಾಗಿದೆ.[೧೪]

೧೧ನೆಯ ಶತಮಾನದ ಹೆಗ್ಗಡದೇವನಕೋಟೆಯ ಒಂದು ಶಾಸನದಲ್ಲಿ ಗಂಗ ಅರಸರ ಆಳ್ವಿಕೆಗೆ ಒದಗಿದ ಒಂದು ವಿಪತ್ತಿನ ವಿವರವಿದೆ. ಗಂಗ ಅರಸ ಎರೆಯಪ್ಪನ ನಂತರ ರಾಚಮಲ್ಲನು ಪ್ರಭುತ್ವ ವಹಿಸಿಕೊಂಡನು. ಚಿಕ್ಕ ವಯಸ್ಸಿನ ಅರಸನು ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಭುವನಾದಿತ್ಯನು ಗಂಗ ರಾಜ್ಯದ ಮೇಲೆ ಆಕ್ರಮಣಮಾಡಿ ಬಯಲುನಾಡನ್ನು ವಶಕ್ಕೆ ತೆಗೆದುಕೊಂಡು ಗಂಗ ಅರಸರ ಭಂಡಾಯದಲ್ಲಿ ಅರ್ಧದಷ್ಟನ್ನು ಕಸಿದುಕೊಳ್ಳುವ ಹುನ್ನಾರ ಹಾಕಿದ ವಿಷಮ ಪರಿಸ್ಥಿತಿಯಲ್ಲಿ ನಂದಿಯ ಕೋಟೆ ಅರಸನ ನಾಲ್ಕು ಜನ ಮಕ್ಕಳು ರಾಚಮಲ್ಲನಲ್ಲದೆ ಬೇರೆ ಯಾರೂ ಬಯಲುನಾಡಿನ ಮೇಲೆ ಅಧಿಪತ್ಯ ನಡೆಯಲು ಬಿಡೆವು ಎಂದು ಶಪಥ ಮಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಮಾಗುಂದಿ ಸಮೀಪ ನಡೆದ ಕಾಳಗದಲ್ಲಿ ಹತರಾಗುತ್ತಾರೆ. ವೀರರ ವಂಶಸ್ಥರಿಗೆ ಗಂಗ ಅರಸನು ಭೂಮಿಯನ್ನು ಕಲ್ನಾಡಾಗಿ ದಾನ ಮಾಡುತ್ತಾನೆ.[೧೫]

ಕೃಷಿ ಗುಂಪುಗಳು ಕಾವೇರಿ ನದಿ ಬಯಲು ಪ್ರದೇಶದ ವಿವಿಧ ಪ್ರದೇಶಗಳಲ್ಲಿ ನೆಲೆನಿಂತ ಸೂಚನೆಯಾಗಿ ಕ್ರಿ.ಶ. ೭. ೮ನೇ ಶತಮಾನದ ನಂತರ ನಾಡುಗಳ ಪ್ರಸ್ತಾಪ ಕಂಡು ಬರುತ್ತದೆ. ಎಡೆತೊರೆನಾಡು, ಎಡೆನಾಡು, ತೊರೆನಾಡು ಇವು ಕಾವೇರಿ ನದಿಯ ಪರಿಸರದಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾದುದಕ್ಕೆ ಸೂಚನೆಯಾಗಿದೆ. ಕಾವೇರಿ ಮತ್ತು ಕಬಿನಿ ನಡುವಿನ ಪ್ರದೇಶ ಕೃಷಿಗೆ ಒಳಪಟ್ಟಿರುವುದನ್ನು ಪುನ್ನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ. ಹೆಗ್ಗಡದೇವನ ಕೋಟೆ ತಾಲ್ಲೂಕಿನ ನುಗುನದಿ ಹರಿಯುವ ಪ್ರದೇಶದಲ್ಲಿ ಕೃಷಿ ಚಟುವಟಿಕೆ ವ್ಯಾಪಕವಾಗಿ ವಿಸ್ತರಿಸಿದ್ದುದ್ದನ್ನು ನುಗು ನಾಡಿನ ಶಾಸನಗಳಲ್ಲಿ ಕಾಣಬಹುದು. ಹೆಚ್ಚಿನ ಸಂಖ್ಯೆಯ ನಾಡುಗಳು ಕಂಡು ಬಂದಿದ್ದರೂ ಕೂಡ ಹೆಚ್ಚಿನ ಸಂಖ್ಯೆಯ ಶಾಸನಗಳು ಕೃಷಿಯೇತರ ಅಂದರೆ ತುರುಕಾಳಗ ಹಾಗೂ ಸ್ಥಳೀಯ ಘರ್ಷಣೆಗಳ ಹಿನ್ನೆಲೆಯಲ್ಲಿ ನಾಡುಗಳನ್ನು ಪ್ರಸ್ತಾಪಿಸಿದೆ.

ಅಡಿಟಿಪ್ಪಣಿಗಳು

೧. ಶೇಷಾಶಾಸ್ತ್ರಿ ಆರ್., ೧೯೮೨, ಕರ್ನಾಟಕ ವೀರಗಲ್ಲುಗಳು, ಪುಟ ೧೦೭.
೨. ಎ.ಕ. III, ಹೆಗ್ಗಡದೇವನಕೋಟೆ, ೦೭, ಅಂಕನಾಥ, ಪು. ೪೩೪, ೪೩೫.
೩. ಅದೇ, ೫, ಕಟ್ಟೆ ಮುಸುಗನಹಳ್ಳಿ, ಪು. ೪೩೩, ೪೩೪.
೪. ಅದೇ, ೧೧೭, ನರಸೀಪುರ, ಪು. ೫೧೧, ೫೧೨.
೫. ಅದೇ, ೫೮, ಬೆಳತೂರು, ಪು. ೪೬೩, ೪೬೪.
೬. ಅದೇ, ೮೨, ಕುಂದೂರು, ಪು. ೪೪೭–೪೭೮.
೭. ಅದೇ, ೭, ಕುಂದೂರು, ಪುಟ ೪೭೨, ೪೭೪.
೮. ಅದೇ, ೮೩, ಪು. ೪೭೮, ೪೭೯.
೯. ಅದೇ, ೧೨೩.
೧೦. ಅದೇ, ೧೧೪, ಹಳೇವೂರು, ಪು. ೫೦೯.
೧೧. ಅದೇ, ೩೨, ಕೊಳ್ಳೇಗಾಲ, ಪು. ೪೫೦.
೧೨. ಅದೇ, ೭, ಅಂಕನಾಥಪುರ, ಪು. ೪೩೪, ೪೩೫.
೧೩. ಅದೇ, ೩೪, ಗುಜ್ಜಪ್ಪನ ಹುಂಡಿ, ಪು. ೪೫೧, ೪೫೨.
೧೪. ಅದೇ, ೧೨೩, ಕಿತ್ತೂರು, ಪುಟ ೫೧೪–೫೧೫.
೧೫. ಅದೇ, ೨೩, ಹಿರನಂದಿ, ಪು. ೪೪೬.

♦♦

೪೧

ಉಷಾರಾಣಿ ಎಚ್.ಎಸ್.

ಚಿಕ್ಕಮಗಳೂರು ಜಿಲ್ಲೆಯ ಶಾಸನೋಕ್ತ ಮಹಿಳೆಯರ ಕೈಂಕರ್ಯ

ಗಿರಿ ಕಾನನಗಳಿಂದ ಆವೃತವಾಗಿರುವ ಮಲೆನಾಡಿನ ಪರಿಸರ ಅನೇಕ ತಪಸ್ವಿಗಳಿಗೆ ಆಶ್ರಯ ನೀಡಿದೆ. ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಈ ನಾಡು ಜನರನ್ನು ಕ್ರಿಯಾಶೀಲರನ್ನಾಗಿಸಿದೆ. ಐತಿಹಾಸಿಕ ಮನೆತನಗಳಾದ ಗಂಗರು, ಹೊಯ್ಸಳರು, ಬೇಲೂರು ನಾಯಕರು, ವಿಜಯನಗರದರಸರು, ಕೆಳದಿ ನಾಯಕರು, ಮೈಸೂರು ಅರಸರು ಮುಂತಾದವರ ಪ್ರಭಾವಕ್ಕೆ ಒಳಪಟ್ಟ ನಾಡಿದು. ಶಕ್ತಿ ದೇವತೆಗಳು ನೆಲೆಸಿರುವ ತಾಣವಿದು. ಈ ಜಿಲ್ಲೆಯ ಶಾಸನಗಳಲ್ಲಿ ಉಕ್ತವಾಗಿರುವ ಮಹಿಳೆಯರ ವಿವಿಧ ಕ್ಷೇತ್ರಗಳಲ್ಲಿನ ಕೈಂಕರ್ಯಗಳನ್ನು ಪರಿಶೀಲಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ತಪಸ್ಸು, ಆತ್ಮವಿಕಾಸಕ್ಕೆ ಪೂರಕವಾಗಿದ್ದ ಈ ನಾಡಿನಲ್ಲಿ ಜಿನಮುನಿ ದೀಕ್ಷೆ ಪಡೆದ ಶ್ರಾವಕಿಯರು, ಕಂತಿಯರು ಮತ್ತು ಗುಡ್ಡಿಯರು ಸಾತ್ವಿಕ ಜೀವನ ನಡೆಸಿದರ ಬಗ್ಗೆ ನಿಷಿದಿ ಶಾಸನಗಳು ಉಪಯುಕ್ತ ಮಾಹಿತಿ ನೀಡುತ್ತವೆ. ಉದಾಹರಣೆಗೆ ಕ್ರಿ.ಶ. ೯೭೧ರ ಕಡೂರು ಶಾಸನ[೧] ಪಡಿಯಾರ ದೊರಪ್ಪಯ್ಯನ ಪಿರಿಯರಸಿ ಹಾಗೂ ಗಂಗ ಬೂತುಗನ ಅಕ್ಕ ಪಾಂಬಬ್ಬೆಕನ್ತಿ 'ತಲೆವರಿದು ಮೂವತ್ತು ವರಿಸಂ ತಪಂಗೆಯಂ' ಎಂದು ಎಲ್ಲಾ ಭೋಗ ವಸ್ತುಗಳನ್ನು ತ್ಯಜಿಸಿ ತಪೋನಿಯಮಕ್ಕೆ ಬದ್ಧಳಾಗಿ 'ಯಮನಿಯಮ ಸ್ವಾಧ್ಯಾಯ ಧ್ಯಾನ ಮೌನಾನುಷ್ಠಾನ ಪರಾಯಣೆ' ಯಾಗಿದ್ದು ಸ್ವರ್ಗಸ್ಥಳಾದಳೆಂದು ಹೇಳಿದೆ. ಈಕೆ ಕೊಂಡಕುಂದಾನ್ವಯ ದೇಸಿಯಗಣದ ದೇವೇಂದ್ರಸಿದ್ಧಾಂತಭಟಾರರ ಶಿಷ್ಯರಾದ ಅಭಯಪಂಡಿತದೇವರ ಶಿಷ್ಯೆ ನಾಗಬ್ಬೆಕನ್ತಿಯರ ಶಿಷ್ಯೆಯಾಗಿದ್ದಳು.

ಕ್ರಿ.ಶ. ೧೦೫೪ರ ಮೂಡಗೆರೆ ಶಾಸನವು[೨] ಸೂರಸ್ತಗಣದ ಶ್ರೀ ವಜ್ರನಂದಿ ಪಂಡಿತ ದೇವರ ಶಿಷ್ಯ ಜಾಕಿಯಬ್ಬೆ ಕನ್ತಿ ಸೊಸೆವೂರಿನ ಒಕ್ಕಲಿಗನಿಗೆ, ಅರ್ಧಪೊನ್ ನೀಡಿ ಭೂಮಿಯನ್ನು ಕೊಂಡು ಬಸದಿಗೆ ದಾನ ಬಿಟ್ಟಿದ್ದನ್ನು ದಾಖಲಿಸುತ್ತದೆ. ಕ್ರಿ.ಶ. ೧೧೦೧ರ ಚಿಕ್ಕಮಗಳೂರು ಶಾಸನವು[೩] ಮಾಳಬ್ಬೆಕನ್ತಿ ಸನ್ಯಸನದಿಂದ ಮುಡುಪಿದ ಜಿನಮುನಿಗಳಿಗೆ ನಿಷಿಧಿಗೆಯನ್ನು ನಿಲ್ಲಿಸಿದರ ಬಗ್ಗೆ ತಿಳಿಸಿದೆ. ಕ್ರಿ.ಶ. ೧೧೩೦ರ ಮೂಡಗೆರೆ ಶಾಸನ[೪] ಪ್ರಕಾರ ಹೊಯ್ಸಳ ವಿಷ್ಣುವರ್ಧನ ಮತ್ತು ರಾಣಿ ಶಾಂತಲಾದೇವಿಯರ ಪುತ್ರಿ ಹರಿಯಬ್ಬರಸಿ' ಗುಡ್ಡಿ, ಕೈಗೊಂಡ ಕೈಂಕರ್ಯಗಳು ಹೀಗಿವೆ: ಈಕೆ ಮಹಾದಾನಿ ಚಾತುರ್ವರ್ಣದವರು ಇವಳನ್ನು 'ಅಗಣ್ಯಪುಣ್ಯಜನಶಿಖಾಮಣಿ' ಎನ್ನುತ್ತಿದ್ದರು. 'ಸರಸ್ವತಿಯಂತೆ ಸತ್ಕಳಾನ್ವಿತೆ'. ಸಮ್ಯಕ್ತ ಚೂಡಾಮಣಿ ಎನಿಸಿದ್ದಳು. ಓದಲು ಶಾಸ್ತ್ರಮನೀವಪೆಂಪು, ಪರಹಿತಳಾಗಿದ್ದಳು. ಕೊಡಂಗಿನಾಡ ಮಲೆ ಕೆಳಗಿನ ಹನ್ತಿಯೂರಿನಲ್ಲಿ

೨೭೪, ೪ನೇ ಮುಖ್ಯರಸ್ತೆ
ಬ್ಯಾಂಕ್ ಕಾಲೋನಿ, ಬೋಗಾದಿ
ಮೈಸೂರು-೫೭೦೦೦೬
ಮೊ: ೭೩೩೭೬ ೬೨೬೮೭

ಅನೇಕ ರತ್ನಖಚಿತ ಕಳಸ ಕೂಟಗಳನ್ನು ಹೊಂದಿದ್ದ ಉತ್ತುಂಗ ಚೈತ್ಯಾಲಯ ನಿರ್ಮಿಸಿದ್ದಳು. ಈ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ನಿತ್ಯಪೂಜೆಗೆ ರಿಷಿಯರ (ಮುನಿಗಳು) ಮತ್ತು ಅಜ್ಜಿಯರ (ಕಂತಿಯರು) ಆಹಾರದಾನಕ್ಕೆ, ಸೀತ(ಶೀತ) ಪರಿಹಾರಕ್ಕೆ ಐದು ಹಣದ ಮಣ್ಣನ್ನು ಕೊಂಡು ಅದನ್ನು ಹೊಯ್ಸಳ ದೇವರ ಕೈಯಲ್ಲಿ ಸರ್ವಬಾಧಾಪರಿಹಾರವಾಗಿ ಕೊಡಿಸಿದಳು. ಈಕೆಯನ್ನು ಶ್ರೀ ಮೂಲಸಂಘದ ಕೊಂಡಕುಂದಾನ್ವಯದ ದೇಸಿಗಣದ ಪುಸ್ತಕಗಚ್ಛದ ಶ್ರೀಮಾಘಸಿದ್ಧಾಂತ ದೇವರ ಶಿಷ್ಯರಾದ ಜಗದ್ವಿಖ್ಯಾತರಾಗಿದ್ದ ಗಣ್ಡ ವಿಮುಕ್ತ ಸಿದ್ಧಾಂತದೇವರ ಗುಡ್ಡಿ ಹರಿಯಬ್ಬರಸಿ' ಎಂದು ವರ್ಣಿಸಲಾಗಿದೆ.

ಕ್ರಿ.ಶ. ೧೧೪೩-೪೪ರ ಮತ್ತಾವಾರ ಶಾಸನ[೫] ಜಕ್ಕವ್ವೆಗಂತಿ ಹೆಗ್ಗರೆಯ ಮತ್ತಿಕಾಪುರದಿಂದ ಮತ್ತಾವಾರಕ್ಕೆ ಬಂದಳೆಂದು ಕವಿ ದೇವೇಂದ್ರ ಬುಧನನ್ನು ಹೆಸರಿಸಿ ಜಕ್ಕವ್ವೆಯ ನಿಷಿಧಿಯನ್ನು ಸ್ಥಳೀಯರು ನಿಲ್ಲಿಸಿದರೆಂದು ಹೇಳುತ್ತದೆ. ಇದರಿಂದ ಜೈನ ಸಂಪ್ರದಾಯದಂತೆ ಸನ್ಯಸನ, ಸಲ್ಲೇಖನ ವ್ರತ ಅನುಸರಿಸುವುದಲ್ಲದೆ ಬಸದಿಗಳ ನಿರ್ಮಾಣ ದಾನ ದತ್ತಿ ನೀಡುವ ಚಟುವಟಿಕೆಗಳಲ್ಲೂ ತಮ್ಮ ತೊಡಗಿಸಿಕೊಂಡಿದ್ದಾರೆಂಬುದು ಖಚಿತ. ಮಲೆನಾಡಿನಲ್ಲಿ ಸಂಚರಿಸುತ್ತಿದ್ದವರಿಗೆ ಆರೋಗ್ಯ ಸಮಸ್ಯೆಗೆ ಪರಿಹಾರವನ್ನು ಸೂಚಿಸಲಾಗಿದೆ.

ವೀರಶೈವ ಮತದಲ್ಲಿ ಸ್ತ್ರೀಯರೂ ಜವಾಬ್ದಾರಿಯುತ ಕೆಲಸಕಾರ್ಯಗಳನ್ನು ಆಚಾರ್ಯ ವೃತ್ತಿಯನ್ನು ನಿರ್ವಹಿಸುತ್ತಿದ್ದರು. ಚಿಕ್ಕಮಗಳೂರು ತಾಲ್ಲೂಕಿನ ಅಂಬಳೆಗ್ರಾಮದ ಈಶ್ವರ ದೇವಾಲಯದ ಲಿಂಗಪೀಠದ ಮೇಲಿರುವ ಶಾಸನದಲ್ಲಿ[೬] ಗಣಕುಮಾರಿ ಬೊಪ್ಪವ್ವೆಯ ನಾಗಯ್ಯನು, ಶ್ರೀಶಂಕರದೇವರಿಗೆ ೩ ಖಂಡುಗ ಗದ್ದೆ ನೀಡಿದ ಬಗ್ಗೆ ತಿಳಿಸುತ್ತದೆ. ಹಿರಿಯೂರಿನ ಅರಸಿಕೆರೆ ತಾಲ್ಲೂಕಿನ ಕುಂಜೇಶ್ವರ ದೇವಾಲಯದಲ್ಲಿನ ಶಾಸನವು ವಿಭೂತಿಪಟ್ಟವನ್ನಲಂಕರಿಸಿದ್ದ ಗಣಕುಮಾರಿ ಚಂದವ್ವೆ ಬಗ್ಗೆ ನೀಡಿದ ಸಮಗ್ರ ವಿವರದಂತೆ ಬೊಪ್ಪವ್ವೆ ಬಗ್ಗೆ ಮಾಹಿತಿ ಇಲ್ಲ. ತೇದಿ ಇಲ್ಲದ ಶಾಸನವಿದು. ಹೀಗಿರಲು ಸ್ತ್ರೀ ಮಠ ಕಟ್ಟಿಸಿದರ ಬಗ್ಗೆ ತಿಳಿಸುವ ಶಾಸನವಿದೆ. ೧೭ನೇ ಶತಮಾನದ ಕೆಳದಿ ಸೋಮಶೇಖರ ನಾಯಕರ ನರಸಿಂಹರಾಜಪುರ ಶಾಸನವು[೭] ರಾಮಪ್ಪರಿಗೆ ಬರೆಸಿ ಕಳುಹಿಸಿದ ಕಾರ್ಯವನ್ನು ತಿಳಿಸಿರುವುದು ಹೀಗಿದೆ: ಬಗ್ಗುಂಜಿ ಸೀಮೆಯ ಸೀತಾನದಿ ತೀರದಲ್ಲಿ ಕೆಂಚೌವ್ವ ಕಟ್ಟಿಸಿದ ವಿರಕ್ತಮಠಕ್ಕೆ ನಾಲ್ಕು ಗ್ರಾಮದವರನ್ನು ಕರೆಸಿ ಗಡಿತಷ್ಕರ ಬಾರದಂತೆ ಗಡಿರೇಖೆಗೆ ಶಿಲೆ ಸ್ಥಾಪಿಸಿ ಶಿವಾರ್ಪಿತನಾಗಿ ಕೊಟ್ಟ ಧರ್ಮ ಎಂದು ತಿಳಿಸುತ್ತದೆ. ಇಲ್ಲಿ ಸ್ತ್ರೀಯೋರ್ವಳು ಕಟ್ಟಿಸಿದ ವಿರಕ್ತಮಠದ ಬಗ್ಗೆ ಶ್ರದ್ಧೆ ತೋರಿದ ಆಡಳಿತ ವರ್ಗದ ನಿಲುವು ವೇದ್ಯವಾಗುತ್ತದೆ.

ಕಲಾವಿದೆಯರು: ಶಾಸನಗಳಲ್ಲಿ ಉಕ್ತವಾಗಿರುವ ರಂಗಭೋಗ ಸೇವೆ ಕಲಾವಿದೆಯರ ಬಗ್ಗೆ ಪರೋಕ್ಷವಾಗಿ ಬೆಳಕು ಚೆಲ್ಲುತ್ತವೆ. ಬಹುತೇಕ ದೇವಾಲಯಗಳ ದಾನದತ್ತಿಗಳಲ್ಲಿ 'ಗೀತವಾದ್ಯನೃತ್ಯಕಂ' ಎಂಬುದು ರಂಗಸೇವೆಗೈಯುವ ಕಲಾವಿದರಿಗೆ ನೀಡಿದವೇ ಆಗಿವೆ. ಉದಾಹರಣೆಗೆ, ಕಳಸನಾಥ ದೇವಾಲಯದ ಆವರಣದಲ್ಲಿರುವ ೧೯ನೇ ಕಲ್ಲಿನ ಶಾಸನವು[೮] ಶ್ರೀ ಕಳಸನಾಥ ದೇವರಿಗೆ ಹೆಬ್ಬಾರ್ವನ ಮಗ ಕೇಶವದೇವನು ಆಚಂದ್ರಾರ್ಕವಾಗಿ ಮಾಡಿದ ಧರ್ಮ, ಪ್ರತಿದಿನ ೧ ಕ್ಕಂ ಪಾತ್ರಪೂಜೆಯಲು ಉಂಬ ಬ್ರಾಹ್ಮಣನುಂಬ ಭತ್ತ ಸ೨೦ ಎಂದು ದೇವಾಲಯದ ರಂಗಭೋಗ ಸೇವೆಗೈಯಲು ಸಿದ್ಧರಾಗುವ ಮುನ್ನಿನ ಪೂಜೆ ಪ್ರಸಾದಕ್ಕೆಂದು ನೀಡಿದ ದಾನದ ಬಗ್ಗೆ ತಿಳಿಸುತ್ತದೆ.

ಕ್ರಿ.ಶ. ೧೪ನೇ ಶತಮಾನದ ಕಳಸ ಶಾಸನ (೮೮) ಪಾತ್ರಭೋಗಕ್ಕೆ ಗ ೨ ನ್ನು ನೀಡಿದೆ. ಕ್ರಿ.ಶ. ೧೩೪೨ ಮತ್ತೊಂದು ಕಳಸ (೭ನೇ ಕಲು) ಶಾಸನವು[೯] ಒಕ್ಕೆಲಭಟ್ಟರ ಮಗಳ ಮಗ ಸೂರಪ್ಪನು ಶ್ರೀ ಕಳಸನಾಥ ದೇವರಿಗೆ ಮಾಡಿದ ಧರ್ಮದಲ್ಲಿ ಪಾತ್ರದ ನಾಗಮ್ಮಿಯ ಧರ್ಮ ಗ ೧೦ ಎಂದಿದೆ. ವಿಜಯನಗರ ರಾಜ್ಯದಲ್ಲಿ ರಂಗಭೋಗ ಸೇವೆ ಸಲ್ಲಿಸುವ ಪಾತ್ರ (ನರ್ತಕಿ) ದವರ ಸಂಭಾವನೆ ಹೆಚ್ಚಿದಂತೆ ತೋರುತ್ತದೆ.

ದೇವಾಲಯ ಮಾತ್ರವಲ್ಲದೆ ಅರಮನೆಯ ಓಲಗದಲ್ಲೂ ಕಲಾವಿದೆಯರ ಅಗತ್ಯವಿತ್ತು ಕಡೂರು[೧೦] ಶಾಸನದಲ್ಲಿ ಉಕ್ತವಾಗಿರುವ ಚಳುಕವ್ವೆ ವೋಲಗಿಕಾತಿ ಅರಮನೆಯ ಓಲಗದ ನರ್ತನ ಗಾಯನದಲ್ಲಿದ್ದ ಕಲಾವಿದೆ ಎಂದು ಊಹಿಸಬಹುದು.

'ಶಾಸ್ತ್ರ ಗೀತ ನೃತ್ಯದಲ್ಲಿ ಪ್ರೌಢೆಯರು' ಎನಿಸಿದ್ದ ಪದ್ಮಲದೇವಿ, ಚಾವಲದೇವಿ ಮತ್ತು ಬೊಪ್ಪಾದೇವಿಯರನ್ನು ತರಬೇತಿಗೊಳಿಸಿದ ಗುರುಪರಂಪರೆ ಬಗ್ಗೆ ಶಾಸನ[೧೧] ಮೌನವಾಗಿದೆ. ಆಕೆಯ ತಾಯಿ ದ್ವಿತೀಯ ಲಕ್ಷ್ಮೀ ಸಮಾಳೆನಿಸಿದ್ದ ಚಾಮವ್ವೆ ನೃತ್ಯಗಾತಿಯಾಗಿದ್ದಳೇ? ಆಕೆಯೇ ಗುರುಸ್ಥಾನದಲ್ಲಿದ್ದು ಪುತ್ರಿಯರ ಕಲಾ ಏಳಿಗೆಗೆ ಶ್ರಮಿಸಿದ್ದಳೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ರಾಜತಾಂತ್ರಿಕ ಕೌಶಲ: ರಾಜತಾಂತ್ರಿಕ ಕೌಶಲದಲ್ಲಿ ಪುರುಷರಷ್ಟೇ ಸ್ತ್ರೀಯರೂ ಸಮರ್ಥರು. ಇದು ತಿಳಿದಿರುವ ವಿಚಾರ. ಶೈಶವಾವಸ್ಥೆಯಲ್ಲಿದ್ದ ಹೊಯ್ಸಳ ರಾಜ್ಯವನ್ನು ಬಲಪಡಿಸುವಲ್ಲಿ ಸ್ತ್ರೀಯರ ಪಾತ್ರ ಮಹತ್ವದ್ದಾಗಿತ್ತು.

ಮಹಾಮಂಡಲೇಶ್ವರನಾಗಿದ್ದ ವಿನಯಾದಿತ್ಯನ ಪತ್ನಿ ಕೆಳೆಯಬ್ಬರಸಿ ಅನುಸರಿಸಿದ ಕ್ರಮ ಉಲ್ಲೇಖನಾರ್ಹ. ಅದು ಇಂತಿದೆ: ಕ್ರಿ.ಶ. ೧೦೪೬ರ ಸಿಂಧಗೆರೆ ಶಾಸನವು[೧೨] ಅಂದು ದಕ್ಷ ದಂಡನಾಯಕನೆನಿಸಿದ್ದ ಮರಿಯಾನೆ ದಂಡನಾಯಕನನ್ನು ತನ್ನ ತಮ್ಮನೆಂದು ರಕ್ಷಿಸಿ ದೇಕವ್ವೆ ದಂಡನಾಯಕಿತ್ತಿಯನ್ನು ಕನ್ಯಾದಾನ ಮಾಡಿ ಭೂದಾನವಾಗಿ ಆಸಂದಿನಾಡಿನ ಸಿಂಧಗೆರೆಯ ಪ್ರಭುತ್ವ ವಹಿಸಿಕೊಟ್ಟಳು. ಕೆಳೆಯಬ್ಬರಸಿಯನ್ನು ಪರಿಜನಕಂ ಪುರಜನಕಂ ಜನಾರದ್ವೆ ಭುವನವನಿತಾರತ್ನಂ ಎಂದು ವರ್ಣಿಸಿದೆ. ಶಾಸನದ ಮುಂದುವರಿದ ಭಾಗ ೧೧೦೩ರಲ್ಲಿ ಮರಿಯಾನೆ ದಂಡನಾಯಕನ ದ್ವಿತೀಯ ಲಕ್ಷ್ಮೀ ಸಮಾನಳೆನಿಸಿದ್ದ ಚಾಮವ್ವೆ, ದಂಡನಾಯಕಿತ್ತಿಗೆ ಜನಿಸಿದ ಪದ್ಮಲದೇವಿ ಚಾವಲದೇವಿ ಬೊಪ್ಪಾಲದೇವಿಯರು 'ಶಾಸ್ತ್ರಗೀತ ನೃತ್ಯ'ದಲ್ಲಿ ಪ್ರೌಢೆಯರೆನಿಸಿದ್ದು 'ಮೂರುರಾಯ ಕಟಕಪಾತ್ರ' ಮೂರು ರಾಜ್ಯಗಳ ರಾಜಧಾನಿಯನ್ನು ಅಲಂಕರಿಸಲು ಅರ್ಹರಾಗಿದ್ದರೆಂದೂ ಅವರನ್ನು ಸ್ತುತಿಸಲಾಗಿದೆ. ಅಂಥ ಸಮರ್ಥ ಹಾಗೂ ಪ್ರೌಢ ಕಲಾವಿದೆಯರಾದ ಮೂವರು 'ಕನ್ಯೆಯರನೊಂದೆ ಹಸೆಯಲು' ಬಲ್ಲಾಳದೇವ ವಿವಾಹಮಾಡಿಕೊಂಡು 'ಮೊಲೆವಾಲರಿಣಕ್ಕೆ' ಮರಿಯಾನೆ ದಂಡನಾಯಕನಿಗೆ ಸಿಂಧಗೆರೆಯನ್ನು ಎರಡನೇ ಬಾರಿಗೆ ಮರ್ಯಾದೆಯಾಗಿ ಪ್ರಭುತ್ವ ಸಹಿತ ಪುನರ್ಭಾರಾ ಪೂರ್ವಕಂ ಕೊಟ್ಟರೆಂದು ಹೇಳಲಾಗಿದೆ. ಕೆಳೆಯಬ್ಬರಸಿಯ ದೂರದೃಷ್ಟಿಯಿಂದಾಗಿ ಹೊಯ್ಸಳರಿಗೆ ನಿಷ್ಠೆ ವ್ಯಕ್ತಪಟ್ಟು ರಾಜ್ಯ ಕ್ರೋಢೀಕರಿಸಲ್ಪಟ್ಟಿತು.

ಭೂಕಬಳಿಕೆ: ಶಾಸನೋಕ್ತ ದಾನದತ್ತಿಗಳು ದುರುಪಯೋಗವಾದ ಪ್ರಸಂಗಗಳಿವೆ. ಉದಾಹರಣೆಗೆ ಕ್ರಿ.ಶ. ೧೧೪೭ರ ಮರಲೆ ಶಾಸನದಲ್ಲಿ[೧೩] ಹಿಂದೆ ದೇವಳಿಗೆ ನಾಡಿನ ರಾಯಣ್ಣ ದಂಡನಾಥ ಕಲಿದೇವರ ದೇವಾಲಯ ನಿರ್ಮಿಸಿ ಅಗ್ರಹಾರ ಸ್ಥಾಪನೆ ಬಗ್ಗೆ ಹಾಗೂ ಕಲಿದೇವರಿಗೆ ನೀಡಿದ ಭೂಮಿಯನ್ನು ಅನ್ಯಾಯವಾಗಿ ಕಿತ್ತುಕೊಳ್ಳಲಾಗಿತ್ತು. ಕನಕವ್ವೆಯು ಆ ವ್ರಿತ್ತಿಯನ್ನು ಪಡೆದು ದೇವಾಲಯಕ್ಕೆ ದತ್ತಿ ನೀಡಿದಳು. ಅಲ್ಲದೆ ದೊರೆ ಹೊಯ್ಸಳ ನರಸಿಂಹನಿಗೆ ಮನವಿ ಸಲ್ಲಿಸಿ ತಡೀಕೆರೆ ಗ್ರಾಮವನ್ನು ದೇವಾಲಯಕ್ಕೆ ಕೊಡಿಸಿದಳು.

ಕ್ರಿ.ಶ. ೧೧೫೭ರ ಶಿಂಸೆ ಶಾಸನ[೧೪] ದಲ್ಲಿ ಸಲ್ಲಿವಾಳರ ಕುಲದ ಬಾಚಲದೇವಿ, ಸಾಮಂತ ವೀರ ಸಾಂತರದೇವನ ಪಿರಿಯರಸಿ ಮತ್ತು ಶ್ರೀವಲ್ಲಭದೇವನ ಸೊಸೆ. ಈಕೆ ಧರ್ಮ ನಿಮಿತ್ತ ಸಿಂಸೆಯ ಅಶೇಷ ಮಹಾಜನರ ಸರ್ವದೋಷ ಪರಿಹಾರಾರ್ಥವಾಗಿ ಮತ್ತು ನಾಗಪುರದ ಅಗ್ರಹಾರದ ಮಹಾಜನರ ನಡುವೆ ಉಂಟಾದ ವಿವಾದವನ್ನು ಎರಡೂ ಅಗ್ರಹಾರದ ಮಹಾಜನರ ಮುಂದೆ 'ಧರ್ಮಾಧಿಕರಣವಿರ್ದು' ವಿಚಾರಿಸಿ ಅದನ್ನು ಪರಿಹರಿಸಿದಳೆಂದು ಕಂಡುಬರುತ್ತದೆ.

ಆಸ್ತಿಯಲ್ಲಿ ಸಮಪಾಲು ಸ್ತ್ರೀಯರಿಗೂ ಇತ್ತು. ಅದನ್ನು ಉಲ್ಲಂಘಿಸಿದಲ್ಲಿ ಹತ್ಯೆ, ಅತಿಕ್ರಮಣ ಪ್ರಕರಣಗಳು ನಡೆದಿವೆ. ಕ್ರಿ.ಶ. ೧೧೮೪ರ ಇಂದಾವಾರ ಶಾಸನ[೧೫]ದನ್ವಯ ಶ್ರೀ ವೀರಬಲ್ಲಾಳದೇವ ಚಿಕ್ಕಬಮ್ಮಲದೇವಿಗೆ ಶಾಂತಿ ನಿಮಿತ್ತವಾಗಿ ಮಹಾದಾನ ಮಾಡಿದ್ದಲ್ಲದೆ, ದಾನದತ್ತಿಯ ಭೂಮಿಯನ್ನು ಕಾಂತವೂರಿನವರು ಆಕ್ರಮಿಸಿಕೊಂಡಿದ್ದನ್ನು ಬಿಡಿಸಿ ಯೋಗೇಶ್ವರ ದೇವರ ಅತ್ತಿಗನಹಳ್ಳಿಗೆ ಹಿಂತಿರುಗಿಸಿದ್ದನ್ನು ದಾಖಲಿಸಲಾಗಿದೆ. ಕ್ರಿ.ಶ. ೧೧೮೮-೮೯ರ ಹಂತೂರು ಶಾಸನ[೧೬] ದಲ್ಲಿ ಬಂಮಚನ ದ್ವೇಷದಿಂದಾಗಿ ಮಾಚನ ಮಗ ಮತ್ತು ಮಗಳು ಮರಣ ಹೊಂದಿದ್ದರು. ಹೀಗಾಗಿ ೧೦೦೦ ಹೊನ್ನಿನ ಭೂಮಿಗಾಗಿ ಮಗಳ ಮಕ್ಕಳು .... ಮಗನ ಮಕ್ಕಳ ಭೂಮಿಯನ್ನು ಅತಿಕ್ರಮಿಸಿದರು. ಈ ಸಂಬಂಧ ಮೂವರು ಹೆಗ್ಗಡೆಗಳು ಪರಿಹಾರ ಸೂಚಿಸಿದಂತಿದೆ. ಶಾಸನ ಹಾಳಾಗಿದೆ.

ಆಸ್ತಿ ವಿವಾದಕ್ಕೆ ಕಡೂರು ಶಾಸನ[೧೭] ಇನ್ನೊಂದು ಉದಾಹರಣೆಯಂತಿದೆ. ಅದರಂತೆ ಕ್ರಿ.ಶ. ೧೨೩೫ರಲ್ಲಿ ಮಾಚವ್ವೆ ಮಗಳು ನಾಗಮ್ಮ, ಆಕೆಯ ಮಗ ಹೊನ್ನ ಮಗಳು ಶಿರಿಯವ್ವೆ ವೃತ್ತಿ ಸಂಬಂಧದ ವಿವಾದದಲ್ಲಿ 'ಎಂಟು ಹೊಂನ ಕೊಂಡು ವ್ರಿತ್ತಿ ಸಂಬಂಧ ವಿತ್ತಾರ್ತ ಸಂಬಂಧವೆಂದು ಯಿಲ್ಲೆಂದು' ಹೇಳಿ ಕಿಲ್ಲಜೀಯ ನಾಗಜೀಯೆಂಗಳ ಕಾಲು ತೊಳೆದು ಎಕ್ಕೋಟಿ ತಪೋಧನರ ಗೌಡನಖರಂಗಳ ಮತ್ತು ಶ್ರೀ ಬಲ್ಲೇಶ್ವರ ದೇವರ ಸನ್ನಿಧಿಯಲ್ಲಿ ಧಾರೆಯೆರೆದು ಕೊಟ್ಟಳು ಎಂದು ದಾಖಲಿಸಿದೆ. ಆಸ್ತಿ ವಿವಾದ ಪ್ರಯುಕ್ತ ಹಣ ಪಡೆದು ದೇವಾಲಯಕ್ಕೆ ಬಿಟ್ಟುಕೊಟ್ಟಂತಿದೆ.

ಛತ್ರಗಳು: ಸಕಲದಾನಗಳಲ್ಲೂ ಅನ್ನದಾನವೇ ಶ್ರೇಷ್ಠ, ಅನ್ನದಾಸೋಹ ಪುಣ್ಯದ ಕೆಲಸವೆಂದು ಭಾವಿಸಿ ಅನ್ನಛತ್ರ ನಿರ್ಮಿಸುತ್ತಿದ್ದರು. ಹಸಿದು ಬಂದವನಿಗೆ 'ಅತಿಥಿದೇವೋಭವ' ಎಂಬ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿದಂತಿದೆ. ಉದಾಹರಣೆಗೆ ೧೧ನೇ ಶತಮಾನದ ಮೂಡಗೆರೆ ಶಾಸನ[೧೮]ವು ಬನ್ನುದತ್ತ ಮತ್ತು ಸೆಟ್ಟೆತ್ತಿದೇವಿಯಬ್ಬೆಯರು ಇಬ್ಬರು ಬ್ರಾಹ್ಮಣರಿಗೆ ಛತ್ರ ನಿರ್ಮಿಸಿದ್ದನ್ನು ಹೇಳುತ್ತದೆ. ಕ್ರಿ.ಶ.೧೪೨೭ರ ಕೊಪ್ಪ ತಾಲ್ಲೂಕಿನ ಭಂಡಿಗಡಿ ಶಾಸನದಲ್ಲಿ [೧೯] ಹೆಬ್ಬರಡಿಯ ಹರಿಯಕ ನಾಯಕಿತ್ತಿ ಮುನಿಯೂರಮಠದ ಒತ್ತಿನಲ್ಲೇ ಛತ್ರದ ಮಠವ ಮಾಡಿ ದಿನ ಒಂದಕ್ಕೆ ಕಟ್ಟಳೆ ಆ ಮಠದ ಯತಿಗಳ ಜ ೧ ಪರದೇಶಿ ಬ್ರಾಹ್ಮಣರ ಜನ ೪ ಅಡಿಗೆಯವರ ಜನ ೨ ಒಟ್ಟು ೭ ಕ್ಕೆ ಛತ್ರವ ಮಾಡಿಸಿ, ಭೂಮಿಯಲ್ಲಿ ಗಡಿ ಗುರುತಿಸಿ

ಅದೇ ಮಠದ ಪುರುಷೋತ್ತಮತೀರ್ಥ ಮತ್ತು ದೇವೇಂದ್ರತೀರ್ಥಪಾದಂಗಳು ಆಕೆ ಮಾಡಿದ ಛತ್ರದ ಧರ್ಮವ ನಡೆಸಬೇಕೆಂದು ಹೇಳಲಾಗಿದೆ. ಪ್ರಜಾಸಂಖ್ಯೆ ಹೆಚ್ಚಿದಂತೆ ಸಾರಿಗೆ ಸಂಚಾರವೂ ವೃದ್ಧಿಗೊಂಡು ಅಲ್ಲಲ್ಲಿ ತಂಗುದಾಣ ಅನ್ನಛತ್ರಗಳ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಇತ್ತೆಂದು ಗೋಚರಿಸುತ್ತದೆ.

ದೇವಾಲಯ ನಿರ್ಮಾಣ: ಪುಣ್ಯ ಸಾಧನೆಗಾಗಿ ದೇವಾಲಯ ನಿರ್ಮಿಸುತ್ತಿದ್ದರು. ಆರ್ಥಿಕವಾಗಿ ಜನರಿಗೆ ಉದ್ಯೋಗ ಕಲ್ಪಿಸುತ್ತಿತ್ತು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದ ದೇವಾಲಯಗಳ ರಚನಾ ಕಾರ್ಯಕ್ಕೆ ಜನ ಮುಂದಾಗುತ್ತಿದ್ದರು. ಉದಾಹರಣೆಗೆ ಕ್ರಿ.ಶ. ೧೧೫೮ರ ಸಮತಳ ಶಾಸನ[೨೦] ಮಡಿಕುಲದ ಸುಗ್ಗಣವ್ವೆ ತನ್ನ ಪುಣ್ಯ ಸಾಧನೆಗಾಗಿ ಮುದ್ದೇಶ್ವರ ಶಿವಲಿಂಗ ಪ್ರತಿಷ್ಟೆ ಮಾಡಿ ದೇವಾಲಯ ಮಾಡಿದ್ದು ಮತ್ತೊಂದು ಕಾರ್ಯಕ್ಕೆ ಸ್ಫೂರ್ತಿ ನೀಡಿತು. ಆಕೆಯ ಮಗಳು ಚೌಡವ್ವೆ ಅಳಿಯ ವಾಜಿವಂಶದ ಹೆಗ್ಗಡೆ ಚಂದಿರಯ್ಯ ಜೊತೆಗೂಡಿ 'ಸರಸ್ವತಿಪುರ' ಎಂಬ ಅಗ್ರಹಾರ ನಿರ್ಮಿಸಿ ೨೪ ಬ್ರಾಹ್ಮಣರಿಗೆ ನೆಲೆಸಲು ಅವಕಾಶ ಮಾಡಿಕೊಟ್ಟರು. ಅಲ್ಲದೆ (ದೇವಾಲಯದ) ದೇವರ ನಿತ್ಯಪೂಜೆ, ನೈವೇದ್ಯ ನಂದಾದೀವಿಗೆ, ದೇವಾಲಯದ ದುರಸ್ತಿ ಜೀರ್ಣೋದ್ಧಾರಕ್ಕೆಂದು ದತ್ತಿಬಿಟ್ಟರು.

ಕ್ರಿ.ಶ. ೧೧೬೨ರ ಬಿದಿರೆ ಶಾಸನವು[೨೧] ದಂಪತಿಗಳು ಜೊತೆಗೂಡಿ ಈ ಕಾರ್ಯಕ್ಕೆ ಕೈಗೊಂಡದ್ದನ್ನು ತಿಳಿಸುತ್ತದೆ. ಅದರಂತೆ ಗುಲ್ಲಗಾವುಂಡ ಆತನ ಪತ್ನಿಯರಾದ ತಿಪ್ಪವ್ವೆ, ಮಾಳವ್ವೆ ಹಾಗೂ ಆತನ ಹಿರಿಯಣ್ಣ ದೇವಗಾವುಂಡ, ಪತ್ನಿ ಮಾದಿಗಾವುಂಡಿಯರು ಬ್ರಹ್ಮೇಶ್ವರ ದೇವರ ಸ್ಥಾನವನ್ನು ಕಮಳಶಕ್ತಿದೇವರ್ಗೆ ಶಿವಶಕ್ತಿದೇವರ್ಗೆ ಕಾಲಂಕರ್ಚಿ ಧಾರೆಯೆರದು ಕೊಟ್ಟರು ಎಂದು ಹೇಳುತ್ತದೆ. ಅಲ್ಲದೆ ದೇವರ ಸೊಡರು, ನಿವೇದ್ಯ ಮತ್ತು ಜೀರ್ಣೋದ್ಧಾರಕ್ಕೆ ಭೂಮಿ ಬಿಟ್ಟಿದ್ದನ್ನು ದಾಖಲಿಸಿದೆ.

ಕ್ರಿ.ಶ. ೧೧೮೭–೮೮ರ ವಕ್ಕಲಗೆರೆ ಶಾಸನವು[೨೨] ನಿರ್ಗುಂದ ನಾಡಿನ ಸಾಮಂತ ಚಟ್ಟನಾಯಕನ ಪತ್ನಿ ಚಂದವ್ವೆ ನಾಯಕಿತ್ತಿ ಪತಿಗೆ ಪರೋಕ್ಷವಿನಯವಾಗಿ, ಮತ್ತು ಮಗಳು ಕಾಚವ್ವೆ ನಾಯಕಿತ್ತಿ, ಅಳಿಯ ಮಲ್ಲಯ್ಯ ನಾಯಕರನ್ನು ಮುಂದಿಟ್ಟುಕೊಂಡು ಅವರ ಅಭ್ಯುದಯಕ್ಕಾಗಿ ತನ್ನ ಊರು ವೊಕ್ಕಲಗೆರೆಯಲ್ಲಿ ಶಿವಾಲಯ ನಿರ್ಮಿಸಿ ಭೂದಾನ ನೀಡಿದಳೆಂದು ಹೇಳುತ್ತದೆ.

ಕ್ರಿ.ಶ. ೧೨೧೮ರ ಮಾದಾಪುರ ಶಾಸನವು[೨೩] ಮಾದಿಯಕ್ಕನ ಮಗಳು ಬೈಚಲದೇವಿ ತನ್ನ ತಾಯಿಯ ಹೆಸರಿನಲ್ಲಿ ಮಗರೆ ೩೦೦ ರ ಚಳಿಕೆಯ ವ್ರಿತ್ತಿಯ ಕೇಸಿಹಳ್ಳಿಯಲ್ಲಿ ಶ್ರೀಪ್ರಸನ್ನಮಾಧವದೇವರ ದೇವಾಲಯ ನಿರ್ಮಿಸಿ ಭೂದಾನ ನೀಡಿದಳು. ಇದನ್ನು ಅಗ್ರಹಾರವಾಗಿ ಮಾಡಿ ೪೨ ಬ್ರಾಹ್ಮಣರಿಗೆ ದಾನ ನೀಡಿದಳು. ಇಲ್ಲಿದ್ದ ಅನೇಕ ಪಂಡಿತರಲ್ಲಿ ಶಾಮವ್ವೆ ಮತ್ತು ನಾಗದೇವನ ಪುತ್ರ ಕವಿತಿಳಕನೆಂದು ಪ್ರಸಿದ್ಧನಾದ ನಾಗದೇವನೂ ಒಬ್ಬ.

ಕೃಷಿ ಒಕ್ಕಲು: ಖಜಾನೆ ರಾಜ್ಯಕ್ಕೆ ಭದ್ರ ಬುನಾದಿ. ಭೂದಾನ ದತ್ತಿ ಪಡೆದ ಮಠ, ದೇವಾಲಯ, ಬ್ರಾಹ್ಮಣರು ಕೃಷಿಕರಲ್ಲದ ಕಾರಣ ಒಕ್ಕಲುಗಳಿಂದ ತಮ್ಮ ಭೂಮಿಯನ್ನು ಸಾಗುವಳಿ ಮಾಡಿಸುತ್ತಿದ್ದರು. ನಿಗದಿತ ಸಿದ್ಧಾಯ ಸಂಗ್ರಹಿಸುತ್ತಿದ್ದರು. ಕೊಪ್ಪ ತಾಲ್ಲೂಕಿನ ಹರಿಹರಪುರದ ಎರಡು ಶಾಸನಗಳು ಮಹಿಳಾ ಒಕ್ಕಲುಗಳನ್ನು ವಿಶೇಷವಾಗಿ ಹೆಸರಿಸುತ್ತವೆ. ಅದರಂತೆ ಕ್ರಿ.ಶ. ೧೩೯೨ರ ಹರಿಹರಪುರ ಶಾಸನ[೨೪] ಸಾಬಂಣವೊಡೇರು ಅರಗ ರಾಜ್ಯವನ್ನಾಳುತ್ತಿದ್ದಾಗ ಮಾಧವರಾಮಚಂದ್ರಸರಸ್ವತಿ ವೊಡೆಯರಿಗೆ ಪ್ರತಾಪಹರಿಹರ ಮಠವನ್ನು ಸರ್ವಮಾನ್ಯವಾಗಿ ಧಾರೆಯೆರೆದು ಕೊಟ್ಟರು. ಸಣ್ಣಣ್ಣ ಹೆಗ್ಗಡೆ ಮತ್ತು ವೀರ ಹೆಗ್ಗಡೆಗೆ ಮಠದ ಹಳ್ಳಿಗಳಿಗೆ ಸೇರಿದ ಒಕ್ಕಲುಗಳ ಕುಲ ಪ್ರತ್ಯೇಕಿಸಲು ಆದೇಶಿಸಲಾಯಿತು. ಹೀಗಾಗಿ ಕೃಷಿಕರನ್ನು ಪಟ್ಟಿ ಮಾಡಲಾಗಿ ಹಲವು ಮಹಿಳಾ ಒಕ್ಕಲುಗಳನ್ನು ಗುರುತಿಸಬಹುದು. ಹನ್ನೆರಡು ಗ್ರಾಮಗಳಿಂದ ಬರುವ ಸಿದ್ಧಾಯ ಗ ೨೧೫ ವರಹ ೨ ಹಣವಿನ ಕುಳವನ್ನು ರಾಮಚಂದ್ರವಡೇರಿಗೆ ಕೊಡಲಾಯಿತು. ಉಲ್ಲೇಖಿತ ೧೨ ಗ್ರಾಮಗಳಲ್ಲಿ ೯ ಗ್ರಾಮಗಳು ಮಹಿಳಾ ಒಕ್ಕಲುಗಳಿಂದ ಸಾಗುವಳಿಗೆ ಒಳಪಟ್ಟಿದ್ದವು. ಅದು ಹೀಗಿದೆ. ಹಚರು ಬಮ್ಮಿಯಕ್ಕ, ಅರುವತಿ ಕಾಮಕ್ಕ ಹೆಗ್ಗಡ್ತಿ, ಮತ್ತಿವಾನಿ ಹೊಂನಕ್ಕ, ಅತ್ರವಳಿ ಬೊಂಮಣ್ಣ ಅವನ ತಂಗಿ ಚಂನಿಯಕ್ಕ, ನಂದಿಗೋಡ ಬೇಳಕ್ಕ, ನಂದಿಗೋಡ ದೇವಿಯಕ್ಕ ಅವಳ ಮಕ್ಕಳು, ಹೊಸೂರ ಕಳಿಯಕ್ಕ, ಮಾಕೋಡ ಸಂಣಿಯಕ್ಕ, ಬಳವಡಿ ಕುಪಳಿ ಬೇಲಕ್ಕ ಅವಳ ಮಕ್ಕಳು ಎಂದು ಮಹಿಳಾ ಒಕ್ಕಲುಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಬಹುದು.

ದೇವರಾಯನ ಕ್ರಿ.ಶ. ೧೪೧೮ರ ಹರಿಹರಪುರ ಶಾಸನದನ್ವಯ[೨೫] ಅರಗ–ರಾಜ್ಯವನ್ನು ವಿಠಣ ಒಡೆಯರು ಆಳುತ್ತಿದ್ದಾಗ ಅಗ್ರಹಾರದ ಮಹಾಜನರಿಗೂ ಪೆದ್ದಣ್ಣ ನಾಗಣ್ಣ ಅಯ್ಯಗಳ ಮಕ್ಕಳಾದ ಮಲ್ಲಣ್ಣ ಅಯ್ಯಗಳಿಗೆ ಕೊಟ್ಟ ಒಕ್ಕಲು ವಿವರ ಇಂತಿದೆ: ಹರಿಹರಮಹಾರಾಯರಿಂದ ಬಂದ ದೇವಿಯಕ್ಕನ ೪ ಹಣವಿನ ಕುಳದ ಭೂಮಿಯನ್ನು ಸರ್ವಮಾನ್ಯವಾಗಿ

ಅನುಭವಿಸುತ್ತಿದ್ದ ಪೆದ್ದಣ್ಣ ನಾಗಣ್ಣಗಳಿಗೆ ಕೊಟ್ಟ ಪಟ್ಟೆಯ ಒಕ್ಕಲುಗಳ ವಿವರದಲ್ಲಿ ಮಹಿಳಾ ಒಕ್ಕಲುಗಳೆಂದರೆ ಲಕ್ಕ ಹೆಗ್ಗಡತಿ, ಹೊನ್ನಕ್ಕ, ಸಿರಿಯಕ್ಕನ ಮಗಳು ಬೊಂಮಕ್ಕ, ಬೊಂಮಕ್ಕನ ಮಕ್ಕಳು ತಿಪ್ಪು, ಕಾಮಕ್ಕನ ಮಕ್ಕಳು, ಬೊಂಮಣ್ಣನ ತಂಗಿ ಹೊನ್ನಕ್ಕನ ಮಗ ಬಾಲಮೊಮ್ಮಣ್ಣರು ತೆರುವ ಕುಲ ಗದ್ಯಾಣವನ್ನು ದಾಖಲಿಸುತ್ತದೆ.

ಮೇಲಿನ ಎರಡು ಶಾಸನಗಳಲ್ಲಿ ಗ್ರಾಮಗಳಲ್ಲಿದ್ದ ಮಹಿಳಾ ಒಕ್ಕಲುಗಳು ತೆರಬೇಕಾದ ಕುಳದ ಮೊತ್ತವನ್ನು ನಿಗದಿಪಡಿಸಲಾಗಿದೆ. ಆದರೆ ಯಾವುದೇ ನಿರ್ದಿಷ್ಟ ಬೆಳೆಯ ಕುರಿತು ದಾಖಲಿಸಿಲ್ಲ.

ವೀರಗಲ್ಲು: ತಮ್ಮ ಜೀವದ ಹಂಗನ್ನು ತೊರೆದು ಹೋರಾಡಿ ಮಡಿದವರಿಗೆ ಕಲ್ಲು ನೆಟ್ಟು ಗೌರವಿಸುವುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಸ್ತ್ರೀ ರಕ್ಷಣೆ, ಗೋವುಗಳ ಸಂರಕ್ಷಣೆ, ಕಳ್ಳರು, ಶತ್ರುಗಳ ದಾಳಿಯಿಂದ ಗ್ರಾಮ ನಾಡು, ರಾಜ್ಯದ ರಕ್ಷಣೆಗಾಗಿ ಹೋರಾಡಿದ ಪ್ರಸಂಗಗಳು ಲಭ್ಯವಿದೆ. ಇದಕ್ಕೆ ಈ ಜಿಲ್ಲೆಯೂ ಹೊರತಲ್ಲ.

ಕ್ರಿ.ಶ. ೧೧೧೭ರ ಕೋಡಹಳ್ಳಿ ಶಾಸನದಲ್ಲಿ[೨೬] ಮಹಾಮಂಡಲೇಶ್ವರ ಹೊಯ್ಸಳ ಬಿಟ್ಟಿದೇವನು ತಲಕಾಡಿನಿಂದ ಆಳುತ್ತಿದ್ದಾಗ ಉದಯಾದಿತ್ಯರ ಮಗಳು ಏಚಲದೇವಿ ಕಾಲವಾದಳು. ಮಾದೆಯ ಬಾಸ ಎಂಬಾತ ವಿಜಯಿತಮಂಗಲದಲ್ಲಿ ವೇಳೆವಾಳಿ (ಆತ್ಮಬಲಿದಾನ, ಆತ್ಮಾಹುತಿ) ಯಾದನೆಂದೂ, ಆತನ ಕುಟುಂಬಕ್ಕೆ ಒಂದು ಹಣವಿನ ಮಣ್ಣಿನ ಭೂಮಿಯನ್ನು ಬಿಟ್ಟರೆಂದೂ, ಮನ್ನಾಚಾರಿ ಈ ಶಿಲೆ ಮಾಡಿದ ಎಂದು ಹೇಳಲಾಗಿದೆ.

ಕ್ರಿ.ಶ. ೧೧೭೨ ಕಸಿಗೆ ಶಾಸನ[೨೭]ವು ಹೊಯ್ಸಳ ನರಸಿಂಹನ ಕಾಲದಲ್ಲಿ ಕಡಗುಳ ೩೦ರ ಭಟ್ಟವೆಗ್ಗಡೆಯ ಮಗ ಡಾಣವೆಗ್ಗಡೆ ಕುಡಿಹಳ್ಳದಲ್ಲಿ ಆನೆ ಮತ್ತು ಕುದುರೆ ದಳ ಎತ್ತಿದ ಹಿನ್ನೆಲೆಯಲ್ಲಿ ಹೋರಾಡಿ ಮಡಿದ. ಆತನ ಹೆಗ್ಗಡತಿ ಮಾಚವ್ವೆ, ತಮ್ಮ ಮಾದಿವೆರ್ಗಡೆ ಬಿಟ್ಟಿವೆಗ್ಗಡೆಯರು ಸೇರಿ ಕಲ್ಲು ನಿಲ್ಲಿಸಿದರೆಂದು ಹೇಳುತ್ತದೆ.

ಸತಿ: ನಾಡಿಗಾಗಿ ಹೋರಾಡಿ ಮಡಿದ ವೀರರ ಗೌರವಾರ್ಥ ಸತಿಯಾದ ಪ್ರಸಂಗವೂ ಇದೆ. ಅದು ಅವರ ಆಯ್ಕೆಯಾಗಿತ್ತು. ಉದಾಹರಣೆಗೆ, ಹೊಯ್ಸಳ ನರಸಿಂಹನ ಕ್ರಿ.ಶ. ೧೨೮೩ರ ಅಸಂದಿ ಶಾಸನವು (೨೮) ರಾಮನಾಥನ ವಿರುದ್ಧ ರಾಯಗೌಡ ಎಂಬಾತ ಅತಿಮೊಘೆಯಲ್ಲಿ ಹೋರಾಡಿ ಮಡಿದ. ಆತನ ಪತ್ನಿ ಲಕುಮಾದೇವಿ ಸಹಗಮನ ಮಾಡಿದಳು. ಅವರ ಸುಪುತ್ರರಾದ ಎಲ್ಲಹದೇವ ಮತ್ತು ಪಸಂಗಿದೇವಗಳು 'ವೀರಶಾಸನ' ನಿಲ್ಲಿಸಿದರು ಎಂದು ದಾಖಲಿಸಿದೆ.[೨೮]

ಪುರ ಪ್ರತಿಷ್ಠೆ: ಇನ್ನು ಕ್ರಿ.ಶ. ೧೨೬೭ರ ಕಳಸ ಶಾಸನವು[೨೯] ಕಳಸ ಕಾರ್ಕಳದ ಪ್ರಭು ಮಹಾಮಂಡಲೇಶ್ವರ ವೀರಬಲ್ಲುದೇವನ ಪಟ್ಟದ ಪರಿಯರಸಿ ಜಾಕಲಮಹಾದೇವಿ 'ಪರಾಭವ ಸಂವತ್ಸರದಲು ಪಾಲ್ಗುಣ ೫ ನೆಯ ಬ್ರಹವಾರದಂದು ಪುರ ಪ್ರತಿಷ್ಠೆ ಮಾಡಿ ಭಟರಿಸಿತಂಗೆ ಧರ್ಮಪುರಿ'ಯಾಗಿ ಬಿಟ್ಟುಕೊಟ್ಟಳು. ಇದು ಬ್ರಹ್ಮಪುರಿಯೂ ಆಗಿರಬಹುದು.

ಕೊನೆಯದಾಗಿ ಕ್ರಿ.ಶ. ೧೫೫೯ರ ಪುರ ಶಾಸನವು[೩೦] ದುರ್ಗದ ತಿಮ್ಮಪ್ಪನಾಯಕರ ತಂಗಿ ಕೆಂಪೆಯ ನಾಯಕಿತ್ತಿಯರು ಅರೆನ್‌ತೊಳಲ ಮಲ್ಲಿಕಾರ್ಜುನ ದೇವರ ಸೇವೆಗೆಂದು ತುಂಬೆ ಹೂ, ಸಂತಧಾರೆ, ಮೊಸರನ್ನಕ್ಕೆ, ಕಾರ್ತಿಕ ಪೂಜೆ ಮತ್ತು ಸಿವರಾತ್ರೆ ಪರ್ವದಲ್ಲಿ ಬ್ರಾಹ್ಮಣ ಭೋಜನಕ್ಕೆ ಒಟ್ಟು ಈ ಐದು ಸೇವೆಗಳಿಗೆ ಪುರ ಮತ್ತು ಅರವಿನತೊಳದಲ್ಲಿ ಹೊಲವನ್ನು ಧಾರೆಯೆರೆದು ಕೊಟ್ಟಳು. ಕೆಳದಿ ಚೆನ್ನಮ್ಮಾಜಿ ಮತ್ತು ಲಿಂಗಮ್ಮಾಜಿಯರ ಕಾಲದ ಸೇವೆಯು ಶೃಂಗೇರಿ ಮತ್ತು ಕಿಗ್ಗಾ ಶಾಸನಗಳಲ್ಲಿ ಉಕ್ತವಾಗಿದೆ

ಜಿಲ್ಲೆಯ ಶಾಸನಗಳ ಅಧ್ಯಯನದಿಂದ ಈ ಕೆಳಗಿನಂತೆ ತೀರ್ಮಾನಿಸಬಹುದು.

೧. ಮಲೆನಾಡಿನ ಮಹಿಳೆಯರು ಪ್ರಕೃತಿ ಸೌಂದರ್ಯ ಆಸ್ವಾದಿಸುತ್ತಿದ್ದರೂ ಸ್ಥಳೀಯ ವಿದ್ಯಮಾನಕ್ಕೆ ತಕ್ಕುದಾದ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಉದಾಹರಣೆಗೆ: ಪುರ, ದೇವಾಲಯ, ಮಠ, ಛತ್ರದ ಸ್ಥಾಪನೆ ಹಾಗೂ ನಿರ್ವಹಣೆಯಲ್ಲಿ ತೊಡಗಿದ್ದರು.

೨. ತಪಸ್ವಿಗಳಾಗಿ ಜೈನ ಮುನಿಗಳಂತೆ ಸ್ತ್ರೀಯರೂ ಅಗತ್ಯಬಿದ್ದಲ್ಲಿ ಸಂಚರಿಸುತ್ತಿದ್ದರು. ಉದಾ: ಜಕ್ಕವ್ವೆಗಂತಿ ಹೆಗ್ಗರೆಯ ಮತ್ತಿಕಾಪುರದಿಂದ ಮತ್ತಾವಾರಕ್ಕೆ ಕಾರ್ಯ ನಿಮಿತ್ತ ಬಂದಿದ್ದಳು. ದೀರ್ಘಾವಧಿಯ ತಪಸ್ಸನ್ನು ಆಯ್ದುಕೊಳ್ಳುತ್ತಿದ್ದರು. ರಾಣಿಯರು, ಸಾಮಾನ್ಯರು ದೀಕ್ಷೆ ಪಡೆದು ಸಾತ್ವಿಕ ಜೀವನ ನಡೆಸುತ್ತಿದ್ದರು.

೩. ಕೃಷಿಯೇ ಆರ್ಥಿಕ ಜೀವನಕ್ಕೆ ತಳಹದಿ ವಿಜಯನಗರ ಕಾಲದಲ್ಲಿ ಮಹಿಳಾ ಒಕ್ಕಲುಗಳು ಗುರುತಿಸಲ್ಪಟ್ಟಿದ್ದಾರೆ.

೪. ಆಸ್ತಿ ವಿವಾದಗಳನ್ನು ಮುಂದೂಡದೆ ಬಗೆಹರಿಸುತ್ತಿದ್ದರು. ಇದರಲ್ಲಿ ಮಹಿಳೆಯರ ಪಾತ್ರವು ಗಣನೀಯವಾಗಿತ್ತು.

ಅಡಿಟಿಪ್ಪಣಿಗಳು

೧. ಎ.ಕ. (ಪರಿಷ್ಕೃತ) ಸಂ. ೧೨ ಕಡೂರು ೩೪.
೨. ಎ.ಕ. (ಪ), ಸಂ. ೧೧, ಮೂಡಿಗೆರೆ ೨೧.
೩. ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೬.
೪. ಎ.ಕ. (ಪ), ಸಂ. ೧೧, ಮೂಡಗೆರೆ ೧೮.
೫. ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೨೩.
೬ ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೯೪.
೭. ಎ.ಕ. (ಪ), ಸಂ. ೧೨, ನರಸಿಂಹರಾಜಪುರ ೩೦.
೮. ಎ.ಕ. (ಪ), ಸಂ. ೧೧, ಮೂಡಗೆರೆ ೬೩. ೮ಅ, ಸಂ.೧೧ ಮೂಡಗೆರೆ ೬೫.
೯. ಎ.ಕ. (ಪ), ಸಂ. ೧೧, ಮೂಡಗೆರೆ ೭೦.
೧೦. ಎ.ಕ. (ಪ), ಸಂ. ೧೨, ಕಡೂರು ೨೮.
೧೧. ಮತ್ತು ೧೨ ಎ.ಕ. (ಪ), ಸಂ. ೧೨ ಚಿಕ್ಕಮಗಳೂರು ೨೧೦.
೧೩. ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೧೧೧.
೧೪. ಎ.ಕ. (ಪ), ಸಂ. ೧೨, ನರಸಿಂಹರಾಜಪುರ ೩೭.
೧೫. ಎ.ಕ. (ಪ), ಸಂ. ೧೨, ತರೀಕೆರೆ ೧೮.
೧೬. ಎ.ಕ. (ಪ), ಸಂ. ೧೧, ಮೂಡಗೆರೆ ೨೦.
೧೭. ಎ.ಕ. (ಪ), ಸಂ. ೧೨, ಕಡೂರು ೧೨.
೧೮. ಎ.ಕ. (ಪ), ಸಂ. ೧೧, ಮೂಡಗೆರೆ ೧೬.
೧೯. ಎ.ಕ. (ಪ), ಸಂ. ೧೨, ಕೊಪ್ಪ ೨೨.
೨೦. ಎ.ಕ. (ಪ), ಸಂ. ೧೨, ತರೀಕೆರೆ ೮೮.
೨೧. ಎ.ಕ. (ಪ), ಸಂ. ೧೨, ಕಡೂರು ೧೩೪.
೨೨. ಎ.ಕ. (ಪ), ಸಂ. ೧೨, ಕಡೂರು ೨೦೦.
೨೩. ಎ.ಕ. (ಪ), ಸಂ. ೧೨, ಕಡೂರು ೧೮೫.
೨೪. ಎ.ಕ. (ಪ), ಸಂ. ೧೨, ಕೊಪ್ಪ ೩೧.
೨೫. ಎ.ಕ. (ಪ), ಸಂ. ೧೨, ಕೊಪ್ಪ ೩೪.
೨೬ ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೧೪೦.
೨೭. ಎ.ಕ. (ಪ), ಸಂ. ೧೧, ಚಿಕ್ಕಮಗಳೂರು ೧೮೭.
೨೮. ಎ.ಕ. (ಪ), ಸಂ. ೧೨, ಕಡೂರು ೨೫೩.
೨೯. ಎ.ಕ. (ಪ), ಸಂ. ೧೧, ಮೂಡಗೆರೆ ೭೧.
೩೦. ಎ.ಕ. (ಪ), ಸಂ. ೧೨, ಕಡೂರು ೧೨೨.

◆◆

೩೨

ನಳಿನಿ ವೆಂಕಟೇಶ್

ಮಾವನೂರು ಶಾಸನ : ಒಂದು ಅವಲೋಕನ

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕು ಮಾವನೂರಿನ ಮಲ್ಲೇಶ್ವರ ದೇವಾಲಯದಲ್ಲಿರುವ ಒಂದು ಶಾಸನವು ೮೦ ಸಾಲುಗಳಿದ್ದು ದೀರ್ಘವಾಗಿದೆ. ದೇವರಸನೆಂಬ ವ್ಯಕ್ತಿಯ ವ್ಯಕ್ತಿತ್ವವನ್ನು ಈ ಶಾಸನದ ಕವಿ ಚಿತ್ರಿಸಿದ್ದಾನೆ. ಶಾಸನದ ಕಾಲ ಕ್ರಿ.ಶ. ೧೨೮೨. ಈ ಶಾಸನ ಕವಿಯ ಮೇಲೆ ಕನ್ನಡದ ಖ್ಯಾತ ಕವಿ ಹರಿಹರನ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಹರಿಹರನು ಶಿವಶರಣರನ್ನು ಕುರಿತು ರಗಳೆಗಳನ್ನು ರಚಿಸಿದ್ದಾನೆ. ಹಾಗೆ ರಚಿಸುವಾಗ ಸಾಧಾರಣವಾಗಿ ಒಂದು ಕ್ರಮವನ್ನು ಅನುಸರಿಸುತ್ತಾನೆ. ಮೊದಲು ಶಿವಪರವಾದ ಒಂದು ಪದ್ಯವನ್ನು ಕನ್ನಡ ಅಥವಾ ಸಂಸ್ಕೃತದಲ್ಲಿ ರಚಿಸುತ್ತಾನೆ. ತನ್ನ ಕಾವ್ಯದ ನಾಯಕನ ತಂದೆ-ತಾಯಿಯರನ್ನು ಕುರಿತು ಹೇಳುವಾಗ ಶಿವಭಕ್ತ, ಶಿವಭಕ್ತೆ ಎಂದು ಮಾತ್ರ ಹೇಳುತ್ತಾನೆ. ಅವನಿಗೆ ತನ್ನ ನಾಯಕನೇ ಮುಖ್ಯ. ರಗಳೆಗಳಲ್ಲಿ ಒಂದು ಸ್ಥಲ ಗದ್ಯ ಒಂದು ಸ್ಥಲ ರಗಳೆಯ ಛಂದಸ್ಸು ಹೀಗೆ ರಚಿಸುತ್ತಾನೆ.

ಪ್ರಸ್ತುತ ಈ ಮಾವನೂರು ಶಾಸನದಲ್ಲಿ ಶಿವಭಕ್ತಿ ಎದ್ದು ಕಾಣುತ್ತದೆ. ಹರಿಹರನ ಭಕ್ತಿಯ ಆವೇಶ, ಶಿವಭಕ್ತರನ್ನು ಕುರಿತು ಮಾಡಿರುವ ವರ್ಣನೆ, ಪದಪ್ರಯೋಗಗಳು, ಪ್ರಾಸಬದ್ಧವಾದ ಕಾವ್ಯಾತ್ಮಕವಾದ ಅಭಿವ್ಯಕ್ತಿಯು ರಗಳೆಯ ಛಂದಸ್ಸಿನಲ್ಲಿ ಯಶಸ್ವಿಯಾಗಿ ಪ್ರಯೋಗವಾಗಿರುವುದು ಶಾಸನ ಕವಿಯ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದೆ. ಶಾಸನವು ಗದ್ಯದಲ್ಲಿ ರಚಿತವಾಗಿದ್ದರೂ ಕಾವ್ಯಾತ್ಮಕವಾಗಿದೆ. ಶಾಸನ ತಿಳಿಸುವಂತೆ ಇಲ್ಲಿ ಶಿವಭಕ್ತನಿಗೆ ಹುಟ್ಟು ಹಾಗೂ ಸಂಸ್ಕಾರವನ್ನು ನಂದಿ ಕೊಡುತ್ತಾನೆ. ಇಲ್ಲಿನ ಸ್ಥಾನಪತಿ ಒಬ್ಬ ಮಹಿಳೆಯಾಗಿದ್ದು, ಅವಳಿಗೆ ಸ್ಥಾನಪತಿ ಪಟ್ಟವನ್ನು ಮಹಿಳೆಯೇ ಕೊಡುತ್ತಾಳೆ. ಇಲ್ಲಿ ಮಹಿಳೆಗೆ ಇರುವ ಮಹತ್ವವನ್ನು ಕಾಣಬಹುದು.

ಈ ಶಾಸನವು ತಿಳಿಸುವ ವಿಚಾರವನ್ನು ೫ ಭಾಗಗಳಾಗಿ ವಿಂಗಡಿಸಬಹುದು.

೧. ಶೀವರವೆಂಬ ಮಹಾಗ್ರಾಮದ ವರ್ಣನೆ
೨. ಪರ್ವತಯ್ಯನ ವರ್ಣನೆ
೩. ದೇವರಸನ ವರ್ಣನೆ- ಗುರುಕಾರುಣ್ಯ
೪. ದೇವಾಲಯಗಳ ನಿರ್ಮಾಣ- ಅದಕ್ಕೆ ನೀಡಿದ ದಾನ ದತ್ತಿಗಳು
೫. ಸ್ಥಾನಪತಿಯ ನೇಮಕ.

ಸಾಧಾರಣವಾಗಿ ಶಾಸನಗಳಲ್ಲಿ ಒಂದು ಊರಿನ ವರ್ಣನೆಯೆಂದರೆ ನಾನಾ ತರುಲತೆಗಳು, ಉದ್ಯಾನವನಗಳು, ದೇವಾಲಯಗಳು, ಸರೋವರ, ಕೆರೆ-ಕೊಳಗಳಿಂದ

೧೫, 'ಮನಸ್ವಿನಿ'
ಸ್ನೇಹ ಕಾಲೋನಿ, ಚಿಕ್ಕಲಸಂದ್ರ
ಬೆಂಗಳೂರು-೫೬೦೦೬೧
ಮೊ: ೯೪೪೫೫ ೬೦೧೯೪

ಕೂಡಿದ ವರ್ಣನೆಯಿರುತ್ತದೆ. ಆದರೆ ಶೀವರ ಗ್ರಾಮದ ವರ್ಣನೆಯು ಮೇಲಿನ ಸಾಂಪ್ರದಾಯಿಕ ವರ್ಣನೆಗಿಂತ ಬೇರೆಯಾಗಿದೆ ಹಾಗೂ ವಿಶೇಷವಾಗಿದೆ. ಇದು ಗದ್ಯ ಶಾಸನವಾದರೂ ಕಾವ್ಯಾತ್ಮಕವಾಗಿದೆ. ಶಾಸನ ಕವಿಯು ಇಡೀ ಊರಿಗೆ ಒಂದು ಪವಿತ್ರ್ಯ ವಾತಾವರಣದ ಆವರಣವನ್ನು ಕಟ್ಟಿದ್ದಾನೆ. ಶಾಸನದ ಪ್ರಾರಂಭದಲ್ಲಿ ೩ ಶ್ಲೋಕಗಳಿವೆ. ನಾಲ್ಕನೆಯ ಚಂಪಕಮಾಲಾವೃತ್ತದಲ್ಲಿ ಮಾವನೂರ ದೇವರಸನನ್ನು ಹೊಗಳಲಾಗಿದೆ. "ಜಡೆಯಲ್ಲಿ ದೇವಗಂಗೆಯನ್ನುಳ್ಳ ಮಹೇಶ್ವರನು ಶಿವಭಕ್ತರ ಸಂಗಡವೇ ಇರುವವನು ಪುಣ್ಯ ಪೋಷಕನಾದ, ವೀತಗುಣದವನಾದ, ಈ ಭೂಲೋಕದಲ್ಲಿ ನಡೆದಾಡುವ ಚಂದ್ರಶೇಖರನು ಎನಿಸಿದ ಮಾವನೂರಿನ ಒಡೆಯನಾದ ದೇವರಸ ಇಳೆಗೆ ಭೂಷಣಪ್ರಾಯನಾಗಿದ್ದಾನೆ" ಎಂಬ ವರ್ಣನೆಯಿದೆ. ಇಲ್ಲಿ ದೇವರಸನನ್ನು ನಡೆದಾಡುವ ಚಂದ್ರಶೇಖರನೆಂದು ಹೊಗಳಲಾಗಿದೆ. ಶೀವರ ಗ್ರಾಮದ ವರ್ಣನೆ ವಿಶೇಷವಾಗಿದೆ.

"ಸಮಸ್ತ ಸಮುದ್ರಮುದ್ರಿತಮಪ್ಪ ಧರಾಕಾಂತೆಯ ಶಿರಃ ಕಂಜದಂತೆ.....

ಸಕಳ ಭಕ್ತರ ಪುಣ್ಯಸಾಲೆಯಂತೆ ಮುಕ್ತ್ಯಾಂಗನೆಯ ತಾಯ್ಮನೆಯಂತೆ ಧರ್ಮಾರ್ಥ್ಯಕಾಮ ಮೋಕ್ಷಂಗಳಪ್ಪ ಚತುರ್ವಿಧ ಪುರುಷಾರ್ಥಂಗಳ ಜನ್ಮಕ್ಷೇತ್ರದಂತೆ ಮೆಱೆವ ...." ದಕ್ಷಿಣ ದಿಶಾಭಾಗದೊಳು ಮೆಱೆವ ಶೀವರವೆಂಬ ಮಹಾಗ್ರಾಮದೊಳು" ಎಂದು ವರ್ಣಿತವಾಗಿದೆ.

ಶೀವರ ಮಹಾಗ್ರಾಮದಲ್ಲಿ ಶಿವನಿಯಾಮಸ್ತರಪ್ಪ ಬ್ರಾಹ್ಮಣರ ಪುಣ್ಯೋದರದಲ್ಲಿ 'ಪೂರ್ವವಾಸನಾ ಸಂಬಂಧದಿಂದ' ಪರ್ವತಯ್ಯನು ಜನಿಸಿದನು. ಆದರೆ ಶೈಶವದ ಯಾವ ಚಟುವಟಿಕೆಯನ್ನೂ ತೋರದೆ, ಸಕಲ ಪ್ರಾಪಂಚಿಕ ಸುಖ ಭೋಗಗಳನ್ನು ಹಗುರವಾಗಿ ಪಕ್ಕಕ್ಕೆ ಸರಿಸಿ "ತಾನು ಗುರುವೆತ್ತುದಱಿಂ ಚಂದ್ರನುದಯದಿಂ ಮುನ್ನಂ ಬೆಳುದಿಂಗಳೊಗೆವಂತೆ ಫಳರಸಮನೀಂಟುವದಱಿಂ ಮುನ್ನ ಸವಿ ಜಿಹ್ವೆಯಂ ಮುತ್ತುವಂತೆ" ತನಗೆ ಗುರುಪ್ರಾಪ್ತಿಯಾದುದರಿಂದ – ಮೊದಲಿನ ಪೂರ್ವವಾಸನೆಯಿಂದ ಶ್ರೀಪರ್ವತವನ್ನು ಏರಿ ಮಲ್ಲಿಕಾರ್ಜುನನನ್ನು ಪ್ರದಕ್ಷಿಣೆ ಮಾಡಿ, ಈಶನನ್ನು ಸಮೀಪಿಸಿ ಆಲಂಗಿಸುತ್ತಾನೆ. ಈಶನ ಪಾದಪದ್ಮಗಳಲ್ಲಿ ತನ್ನ ಚಿತ್ತವನ್ನು ಸೆರೆಯಿಡುತ್ತಾನೆ. ಪರ್ವತಯ್ಯನು ತನ್ನ ದೇಹವನ್ನು ಜನ್ಮಭೂಮಿಗೆ ಹಾಗೂ ಶ್ರೀಪರ್ವತಕ್ಕೆ ಯೆಡೆಯಿಡುತ್ತಾನೆ. ಅವನ ಈ ಭಕ್ತಿಯನ್ನು ಮೆಚ್ಚಿದ ಮಲ್ಲಿಕಾರ್ಜುನನು ಗುರುಕಾರುಣ್ಯವನ್ನು ಕೊಡಲು ಮನಸ್ಸು ಮಾಡುತ್ತಾನೆ. ನಂದೀಶ್ವರನನ್ನು ಕರೆದು ತನ್ನ ಹೆಸರನ್ನು ಸೇರಿಸಿ ಮಲ್ಲೈಯ್ಯನೆಂದು ಹೆಸರಿಸಿ ಅವನ ಮೂಲಕ ಪರ್ವತಯ್ಯನಿಗೆ ಗುರುಕಾರುಣ್ಯವನ್ನು ನೀಡುತ್ತಾನೆ. ಗುರುಕಾರುಣ್ಯವನ್ನು ಪಡೆದ ನಂತರದ ಪರ್ವತಯ್ಯನ ವ್ಯಕ್ತಿತ್ವವನ್ನು ಶಾಸನ ಕವಿ ಸುಂದರವಾಗಿ ವರ್ಣಿಸಿದ್ದಾನೆ.

"ಕಾಂತಿಯಂ ತಳೆದ ನಿರ್ಮಳ ಜ್ಯೋತಿಯಂತಿಪ್ಪ ಪರ್ವತಯ್ಯನ ಗುಣಂಗಳು ಪೊಗಳ್ದಡನಂತಗತರ್ಕ್ಯವೆನಿಸಿ ಮೆಱವುತ್ತೆ ಭಕ್ತನೆಂದಱಿದಂತೆ ಮಱುಗುತಂ ನಿಂದಿಸಿದಱ ಮೇಲೆ ನೇಹವ ಗಳಿಸುತಂ ಮೆಱೆವುತ್ತಿರೆಯಿರೆ...." ಹೀಗೆ ಅಪರೂಪವಾದ ಗುಣಗಳಿಂದ ಕೂಡಿರುತ್ತಾನೆ. ಹೀಗೆ ಪರ್ವತಯ್ಯನು ಮೆರೆಯುತ್ತಿದ್ದಾಗ "ಶಿವನ ಎರಡು ಕಣ್ಣುಗಳಿಂದ ಸೂರ್ಯಚಂದ್ರರು ಹುಟ್ಟುವಂತೆ ಪರ್ವತಯ್ಯನ ಎರಡೂ ಕಾರುಣ್ಯಕಟಾಕ್ಷದಿಂದ ಹುಟ್ಟಿದ ಅಪ್ಪಯ್ಯ ದೇವರಸರನ್ನು ಕಂಡು ಕಾರುಣ್ಯವನ್ನು ದಯಪಾಲಿಸಲು "ಚಂದ್ರಂಗೆ ಬೆಳದಿಂಗಳಂ ಬೆಳದಿಂಗಳಿಗೆ ಪರಿಮಳಮಂ ಪರಿಮಳಕ್ಕೆ ಸವಿಯಂ ಸವಿಗೆ ರೂಪಂ ರೂಪಿಂಗೆ ಸೌಂದರ್ಯಮಂ ಕೊಡುವಂತೆ ಉಪದೇಶ" ವನ್ನು ಮಾಡಲಾಯಿತು. ಉಪದೇಶವನ್ನು ಕೈಗೊಂಡ ಅಪ್ಪಯ್ಯ ದೇವರಸರು "ಪುಟವಿಟ್ಟ ಪುಣ್ಯ ಪುರುಷಾಕಾರವಾದಂತೆ ಶಾಂತಿ ಸಾಕಾರವೆತ್ತಂತೆ ಪರಮಾರ್ಥ್ಯಂ ಶರೀರವಡೆದಂತೆ" ಅಷ್ಟೇ ಅಲ್ಲದೆ ಭಕ್ತಿ ಜ್ಞಾನದಲ್ಲಿಯೇ ಸಂಸಾರದ ಸ್ವಾರಸ್ಯವನ್ನು ಪಡೆವಂತೆ, ಕೈಗಳಿಗೆ ಯಾವ ಕಾರಣಕ್ಕೂ ಲೋಭವು ತಟ್ಟದಂತೆ, ಯಾವ ಕಾರಣದಿಂದಲೂ ನಾಲಗೆಯಿಂದ ಸುಳ್ಳಾಡದಂತೆ, ಕಾಮಕ್ಕೆ ಯಾವ ರೀತಿಯೂ ಮನದ ಪ್ರವೇಶಕ್ಕೆ ಎಡೆಕೊಡದಂತೆ, ಮಾಯೆಯನ್ನು ಉಲ್ಲಂಘಿಸಿದ ಚಿತ್ತವೃತ್ತಿಯನ್ನು ಸಾಧಿಸಿ, ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡ, ಮಹಾಮಹಿಮರಾದ ಅಪ್ಪಯ್ಯ ದೇವರಸರು ಹೇಗಿದ್ದರೆಂದು ಶಾಸನಕವಿ ವರ್ಣಿಸಿದ್ದಾನೆ.

ಎಳ್ಳಿನ ಮಧ್ಯದಲ್ಲಿರುವ ಎಣ್ಣೆಯಂತೆ, ಮರದೊಳಗಿನ ಅಗ್ನಿಯಂತೆ, ನೀರಿನ ನಡುವೆಯಿರುವ ಕಮಲದಂತೆ ಅಪ್ಪಯ್ಯದೇವರಸರಿದ್ದರು. ತಾವು ಮನುಷ್ಯ ಜನ್ಮದಲ್ಲಿ ಇರುವುದರಿಂದ ಸಂಸಾರಕ್ಕೆ ಅಂಟದಂತಿದ್ದರು, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯಿಂದ ಶಿವಭಕ್ತರಾದುದರಿಂದ ಯಾವಾಗಲೂ ಶಿವಪೂಜೆಯನ್ನು ಮಾಡುತ್ತ ಮೂಲೋಕದಲ್ಲಿಯೂ ಶೈವಕೀರ್ತಿಯಿಂದ ಪ್ರಸಿದ್ಧರಾಗಿದ್ದರು. ಹೀಗೆ ಅತಿಶಯವಾದ ಶೈವ ಕೀರ್ತಿಯನ್ನು ಹೊಂದಿದ್ದ ಅಪ್ಪಯ್ಯ ದೇವರಸರ ಕೀರ್ತಿ ಹೊಯ್ಸಳ ದೊರೆ ವೀರನಾರಸಿಂಹ ದೇವರವರೆಗೂ ತಲುಪಿತು.

ಮಾವನೂರ ಹಿರಿಯರಾದ ದೇವರಸೈಯ್ಯನವರ ಹೆಸರಿನಲ್ಲಿ ಅವರ ತಮ್ಮ ಅಪ್ಪರಸೈಯ್ಯರು ಕಟ್ಟಿಸಿದ ದೇವೇಶ್ವರ ದೇವರ ಹಾಗೂ ಅಪ್ಪರಸೈಯ್ಯರ ಅರಸಿ ದೇವವ್ವೆಯವರು ಅಪ್ಪರಸೈಯ್ಯರ ಹೆಸರಿನಲ್ಲಿ ಮಾವನೂರಿನಲ್ಲಿ ಪ್ರತಿಷ್ಠೆ ಮಾಡಿದ ಅಪ್ಪೇಸ್ವರ ದೇವಾಲಯಗಳಿಗೆ ವೀರನಾರಸಿಂಹನು ತವನಿಧಿ ಎಂಬ ಗ್ರಾಮವನ್ನು ದೇವವ್ವೆಯವರಿಗೆ ಸರ್ವನಮಸ್ಯವಾಗಿ ಧಾರೆಯೆರೆದುಕೊಟ್ಟನು. ದೇವವ್ವೆಯವರು ದೇವೇಶ್ವರ ಅಪ್ಪೇಸ್ವರಪುರವಾದ ತವನಿಧಿಯ ಸಿವಪುರವೆಂದು ಹೆಸರಿಟ್ಟು, ಸಿವಪುರವನ್ನು ನಿಯೋಗವೃತ್ತಿಮಾಡಿ "ಆ ಸರ್ವ ನಿಯೋಗಿಗಳಹ ವುಪಮಂನ್ಯು ಭ್ರಿಗು ಸದೃಕರಹ ಸಿವಸಂಸ್ಕಾರ ಸಂಪನ್ನರಪ್ಪ ಪರಮ ಮಾಹೇಶ್ವರರುಗಳಿಗೆ ನಿಯೋಗಪ್ರವೃತ್ತಿಯಾಗಿ ಧಾರಾಪೂರ್ವಕಂ ಮಾಡಿಕೊಟ್ಟರು."

ಅಲ್ಲದೆ ದೇವವ್ವೆಗಳು ತಮ್ಮ ಸ್ವಂತ ಆಸ್ತಿಯಾದ ಕೆಜೆವೂರ ಸಿವಪುರದಲ್ಲಿದ್ದ ಮಾವನೂರ ಬಡಗಣ ಹೊನ್ನೋಜನ ಕಟ್ಟವನೂ, ವೊಡೆಯರಿಗೆ ಸೆಲ್ಲಂಣ್ಣಂಗಳುಂ ತಿಲ್ಲೆಯ ಡಣ್ಣಾಯಕರು ಕೊಟ್ಟ ಹೂದೋಟವನ್ನೂ ಶಾಸನಸ್ಥವಾಗಿ ಎರಡೂ ದೇವಾಲಯಗಳಿಗೆ ಕೊಟ್ಟರು. ನಂತರ ದೇವವ್ವೆಯವರು ಈ ಎರಡೂ ದೇವಾಲಯಗಳ ಮಹಾಸ್ಥಾನವನ್ನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗಳಾದ ಪಾರ್ವತೀದೇವಿಯವರಿಗೆ ಸ್ಥಾನಪಟ್ಟವನ್ನು ಧಾರಾಪೂರ್ವಕವಾಗಿ ಮಾಡಿಕೊಟ್ಟರು.

ಮಗಳಾದ ಪಾರ್ವತೀದೇವಿಯವರು ಸರ್ವಧರ್ಮಾಧಿಪತಿಯಾಗಿ ಶಿವಪುರವನ್ನು ಪಾಲಿಸಿಕೊಂಡು 'ಸರ್ಬ್ಬಾಯ ಬ್ರಯಕ್ಕೆ' ವೊಡೆಯರಾದರು. ಈಕೆಯೂ ಸಹ ಪರಮ ಮಾಹೇಶ್ವರರುಗಳಿಗೆ ವೃತ್ತಿಯನ್ನು ನೀಡಿದಳು. ಶಿವಪುರದ ವೃತ್ತಿಗಳು ಅನ್ಯಸಮಯ, ಅನ್ಯಜಾತಿಗಳಿಗೆ ಅಧಿಕ ಕ್ರಯದಾನ ಸಲ್ಲದು ಎಂದೂ, ಆ ವೃತ್ತಿವಂತರು ಅನ್ಯ ದೈವೋಪಾಸನೆ, ಅನಾಚಾರ, ದುರಾನುಸಂಧಾನ ಗ್ರಾಮ ಕಾರ್ಯವನ್ನು ಯಾರು ಮಾಡಿದರೂ ಅವರಿಗೆ ವೃತ್ತಿಛೇದನವಾಗುವುದು ಎಂದು ಪಾರ್ವತೀದೇವಿಯು ಕಠಿಣ ನಿಯಮಗಳನ್ನು ಹಾಕುತ್ತಾಳೆ.

ದೇವವ್ವೆಯು ತನ್ನ ಸ್ವಂತದ ಆಸ್ತಿ, ತನಗೆ ದಾನ ಬಂದ ಊರು, ತನ್ನ ವೈಯಕ್ತಿಕ ಆಸ್ತಿಯನ್ನು ತನ್ನ ಇಚ್ಛಾನುಸಾರ ದೇವಾಲಯಗಳಿಗೆ ದಾನ ಕೊಡುತ್ತಾಳೆ. ಈ ದಾನಗಳು ಹಾಗೂ ಅದಕ್ಕೆ ಸಂಬಂಧಿಸಿದ ನೀತಿ ನಿಯಮಗಳನ್ನು ತಾಯಿ–ಮಗಳೇ ನಿರ್ವಹಿಸಿದ್ದಾರೆ.

ಸ್ಥಾನಪತಿ ವಿಚಾರ: ಇಲ್ಲಿ ದೇವವ್ವೆಯು ತನ್ನ 'ಉದರಪುತ್ರಿ'ಯಾದ ಪಾರ್ವತಿಯನ್ನೇ ಸ್ಥಾನಪತಿಯಾಗಿ ನೇಮಿಸುತ್ತಾಳೆ. ಸ್ಥಾನಪತಿಗಳ ಬಗ್ಗೆ ಚಿದಾನಂದಮೂರ್ತಿಯವರು "ಶೈವಗುರುಗಳು ವಾಸವಾಗಿದ್ದ ದೇವಸ್ಥಾನಗಳು 'ಸ್ಥಾನ'ಗಳು. ಆ ದೇವಸ್ಥಾನದ ಆಗುಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು 'ಸ್ಥಾನಿಕರು' ಅಥವಾ 'ಸ್ಥಾನಪತಿ'ಗಳು" ಎಂದು ಹೇಳುತ್ತಾರೆ.

ಇಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದವನು ಅಪ್ಪಯ್ಯರಸ ಹಾಗೂ ಮತ್ತೊಂದು ದೇವಾಲಯವನ್ನು ನಿರ್ಮಿಸಿದವಳು ದೇವವ್ವೆ, ಆದರೆ ಎರಡೂ ದೇವಾಲಯಗಳಿಗೆ ದಾನ ದತ್ತಿಗಳನ್ನು ಪಡೆದು, ಅದನ್ನು ನಿರ್ವಹಿಸಿದವಳು ದೇವವ್ವೆ. ಇಲ್ಲಿ ಮೊದಲೇ ಯಾವುದೇ ಗುರುಗಳಾಗಲೀ ಸ್ಥಾನಪತಿಗಳಾಗಲೀ ಇರಲಿಲ್ಲ. ದೇವಾಲಯಗಳ ನಿರ್ಮಾಣವಾದ ಮೇಲೆ ಆಕೆ ನೇರವಾಗಿ ತಾನೇ ತನ್ನ ಪುತ್ರಿಗೆ 'ಸ್ಥಾನಪತಿಪಟ್ಟ' ವನ್ನು ಕೊಡುತ್ತಾಳೆ. ಆಕೆ ಅಂದರೆ ಪುತ್ರಿಯಾದ ಪಾರ್ವತಿಯು ದೇವಾಲಯದ ಸರ್ವಧರ್ಮಾಧಿಪತಿಯಾಗಿ, ಸ್ಥಾನಪತಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಾಳೆ. ವೃತ್ತಿವಂತರಿಗೆ ಬಿಗಿಯಾದ ನೀತಿ ನಿಯಮಗಳನ್ನು ರೂಪಿಸಿದ್ದಾಳೆ. ದೇವವ್ವೆಯು ಪರಮ ಮಾಹೇಶ್ವರರಿಗೆ ಮಾತ್ರ ದಾನ ವೃತ್ತಿ ನೀಡಿದಂತೆ ಆಕೆಯ ಮಗಳೂ ಸಹ ಹಾಗೆಯೇ ಮಾಡುತ್ತಾಳೆ. ಬಿಗಿಯಾದ ಆಡಳಿತವನ್ನೂ ನಡೆಸುತ್ತಾಳೆ.

ಇಲ್ಲಿ ಭಕ್ತಿ, ಜ್ಞಾನ– ಆಧ್ಯಾತ್ಮ ಮುಪ್ಪುರಿಗೊಂಡಿದೆ. ಗುರುವಿನ ಉಪದೇಶಕ್ಕೆ ಇರುವ ಮಹತ್ವ ಕಂಡುಬರುತ್ತದೆ. ಈ ಶಾಸನದಲ್ಲಿ ರಾಜಕೀಯ ಅಂಶಗಳಿಲ್ಲ. ಒಂದು ರಾಷ್ಟ್ರಕ್ಕೆ ಸಮಾಜದ ವಿವಿಧ ಆಯಾಮಗಳು ಹೇಗೆ ಮುಖ್ಯವೋ ಈ ಆಧ್ಯಾತ್ಮಿಕವೂ ಹಾಗೆಯೇ ಮುಖ್ಯವಾಗುತ್ತದೆ.

ಈ ಶಾಸನ ಮುಖ್ಯವಾಗಿ ಬಸವಣ್ಣನವರ ನಂತರದ ಕಾಲಘಟ್ಟದ ಶಾಸನ. ವೀರಶೈವ ಮತ ಎಂದು ಕರೆಯುವುದಕ್ಕೆ ಮೊದಲು ಮಾಹೇಶ್ವರ ಮತ ಎಂದೇ ಕರೆಯುತ್ತಿದ್ದರು. ಈ ಶಾಸನದಲ್ಲೂ ಮಾಹೇಶ್ವರ ಮತ ಎಂದೇ ಪ್ರಯೋಗವಾಗಿದೆ. ಈ ಶಾಸನದಲ್ಲಿ ಮೇಲಿನ ಅಂಶಗಳೊಂದಿಗೆ ಮಹಿಳೆಯರಿಗೆ ಇರುವ ಮಹತ್ವವನ್ನು ಕಾಣಬಹುದು. ಗಮನಿಸಬೇಕಾದ ಅನೇಕ ಮುಖ್ಯ ಅಂಶಗಳನ್ನು ಈ ಶಾಸನ ಒಳಗೊಂಡಿದೆ.

◆◆

೪೩

ನಾಗರಾಜು ಡಿ.ಎಂ.

ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಕೆರೆಗಳು

ಸಾರ್ವಜನಿಕ ಕಾರ್ಯಗಳಲ್ಲಿ ಬಹುಮುಖ್ಯವಾದುದು ತಟಾಕ ನಿರ್ಮಾಣ. ಮೃತರು ಪಿತೃಲೋಕದಲ್ಲಿ ಬಾಯಾರಿಕೆಯಿಂದ ಬಳಲುವರೆಂದೂ, ತಟಾಕ ನಿರ್ಮಾಣ ಮುಂತಾದ ಧರ್ಮಕಾರ್ಯಗಳಿಂದ ಅವರ ಬಾಯಾರಿಕೆ ಹಿಂಗುವುದೆಂದೂ ಹಿಂದಿನ ಜನರು ನಂಬಿದ್ದರು. ಮಹಾಭಾರತದ ಪ್ರಕಾರ ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ. ದೇವಸ್ಥಾನ, ತಟಾಕ, ಕೆರೆಗಳನ್ನು ಕಟ್ಟಿಸಿದರೆ ತನಗೆ ಮಾತ್ರವಲ್ಲ. ತನ್ನ ತಾಯಿ ತಂದೆಗಳಿಗೂ ಪುಣ್ಯವು ಲಭಿಸುತ್ತದೆಯೆಂದು ನಾಣಿಮಯ್ಯ ನಾಯಕನು ಕೆರೆಗಳನ್ನು ಕಟ್ಟಿಸಿದ್ದಲ್ಲದೆ ಒಂದು ಹೊಕ್ಕರಣೆಯನ್ನು (ಪುಷ್ಕರಣಿ) ಅಗೆಯಿಸಿದ ವಿಷಯವು ಶಾಸನದಲ್ಲಿದೆ. ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದವರು ತಮ್ಮ ಹೆಸರನ್ನೇ ದೇವಸ್ಥಾನಗಳಿಗೆ ಇಡುತ್ತಿದ್ದಂತೆ ಕೆರೆಗಳನ್ನು ಕಟ್ಟಿಸುತ್ತಿದ್ದವರು ತಮ್ಮ ಹೆಸರನ್ನೇ ಕೆರೆಗಳಿಗೆ ಇಡುತ್ತಿದ್ದರು. ಕೆರೆಯನ್ನು ಕಟ್ಟಿಸಬೇಕಾದರೆ ಅಪಾರವಾದ ಹಣವು ಬೇಕಾದ್ದರಿಂದ ರಾಜರೂ, ಸಾಮಂತರೂ, ಶ್ರೀಮಂತರೂ ಅಥವಾ ಪ್ರಭಾವಶಾಲಿಗಳಾದ ಸನ್ಯಾಸಿಗಳು ಐದು ಕೆರೆಗಳನ್ನು ಕಟ್ಟಿಸಿದರೆಂದು ಒಂದು ಶಾಸನವು ತಿಳಿಸುತ್ತದೆ. ಊರಿನ ಜನ ಒಗ್ಗಟ್ಟಾಗಿ ಸೇರಿ ಕೆರೆಯನ್ನು ಕಟ್ಟಿಸಿದ ನಿದರ್ಶನಗಳೂ ಇವೆ.

ಕೆರೆ, ದೇವಾಲಯ ಹಾಗೂ ಸ್ಥಳನಾಮ ಅಧ್ಯಯನಕ್ಕೆ ಸಾಕಷ್ಟು ಸಾಮಾಗ್ರಿ ಈ ಶಾಸನಗಳಲ್ಲಿ ಕಂಡುಬರುತ್ತದೆ. ಬೇಸಾಯ ಜನರ ಜೀವನೋಪಾಯ. ಅದಷ್ಟು ಜಮೀನುಗಳನ್ನು ಸಾಗುವಳಿಗೆ ಯೋಗ್ಯವನ್ನಾಗಿ ಮಾಡುವುದೇ ರಾಜರ ನೀತಿಯಾಗಿದ್ದಿತು. ಆದ್ದರಿಂದ ವರಮಾನವೂ ಹೆಚ್ಚಿತು. ನೀರಾವರಿಗಾಗಿ ಕೆರೆಗಳನ್ನು ಕಾಲುವೆಗಳನ್ನು ಕೆರೆಕಟ್ಟೆಗಳಲ್ಲದ ಊರುಗಳೇ ವಿರಳ. ಸಾಮಾನ್ಯವಾಗಿ ಊರುಗಳ ಹೆಸರಿನಿಂದಲೇ ಅವನ್ನು ಕರೆಯುವುದುಂಟು. ಕೆರೆ ಕಟ್ಟಿಸಿದವರ ಮುಖಂಡರ ಅಥವಾ ಪ್ರಸಿದ್ಧ ವ್ಯಕ್ತಿಗಳ ಹೆಸರಿಡುವುದೂ ಉಂಟು. ರಾಜಮಹಾರಾಜರ, ಮಂತ್ರಿ ದಂಡಾಧಿಪತಿ ಹೆಸರಿನ ಕೆರೆಗಳು ಸಾಕಷ್ಟಿವೆ. ಊರುಗಳ ಉಲ್ಲೇಖಗಳಿಲ್ಲದ ಶಾಸನಗಳು ಇಲ್ಲವೆಂದೇ ಹೇಳಬಹುದು. ರಾಜ್ಯಾಡಳಿತ, ಯುದ್ಧ ದೇವಾಲಯ ನಿರ್ಮಾಣ, ದಾನಧರ್ಮ ಇದೇ ಮೊದಲಾದ ಹಲವಾರು ವಿಷಯಗಳ ಶಾಸನಗಳಲ್ಲಿ ಅಂತರ್ಗತವಾಗಿರುವುದರಿಂದ ಊರುಗಳ ಸಂಪರ್ಕವಿಲ್ಲದ ಆ ವಿಷಯಗಳ ಚಲಾವಣೆ ಸಾಧ್ಯವಿಲ್ಲದ್ದರಿಂದ ಅನೇಕ ಭೌಗೋಳಿಕ ಹಾಗೂ ಚಾರಿತ್ರಿಕಾಂಶಗಳು ಶಾಸನಗಳಲ್ಲಿ ದೊರೆಯುವುದರಿಂದ ಪ್ರಾಕೃತಿಕನಾಮಗಳು ಕೆರೆ, ಕಟ್ಟೆ, ನದಿ, ಬೆಟ್ಟ ಮೊದಲಾದ ನೈಸರ್ಗಿಕ ವಸ್ತುಗಳು ಹೆಸರಾಗಿದ್ದವು. ಜಲಸೂಚಕ ಘಟಕಗಳು, ಕೆರೆ, ಕೆಗ್ಗೆರೆ, ಬಿಳಿಗೆರೆ, ಯಲಚಗೆರೆ, ಕಟ್ಟೆ, ಸಾಗರಕಟ್ಟೆ, ಅರಳಿಕಟ್ಟೆ, ಸಮುದ್ರ,

೯೩೬, 'ರಾಜಗೃಹ'
೨೫ನೇ ಮುಖ್ಯರಸ್ತೆ
೨ನೇ ಹಂತ, ಜೆ.ಪಿ. ನಗರ
ಮೈಸೂರು-೫೭೦೦೩೧
ಮೊ: ೯೬೩೨೦ ೭೦೯೫೨

ರಂಗಸಮುದ್ರ, ಸೋಮಸಮುದ್ರ ನೀರಾವರಿಯು ಮುಖ್ಯವಾಗಿ ನದಿ, ಬಾವಿಕೆರೆಗಳನ್ನು ಅವಲಂಬಿಸಿದ್ದಿತು. ಕೆರೆಗಳು ಪ್ರಾಚೀನ ಕರ್ನಾಟಕ ನಿರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದವು. ಆಗಿಂದ್ದಾಗೆ ಕೆರೆಗಳನ್ನು ದುರಸ್ತಿ ಮಾಡಲು ಬಿಟ್ಟು ಕೊಡುತ್ತಿದ್ದ ಭೂಮಿಯನ್ನು 'ಬಿತ್ತುವಾಟ' ಎಂದು ಶಾಸನಗಳು ಕರೆದಿರುವುದು. ಕೆಲವು ಮುಖ್ಯವಾದ ಶಾಸನಗಳನ್ನು ಅಧ್ಯಯನ ಮಾಡಿದಾಗ ಕಲ್ಯಾಣ ಚಾಳುಕ್ಯರ ಮನೆತನದ ನಾಲ್ಕನೇ ಸೋಮೇಶ್ವರನ ಕ್ರಿ.ಶ. ೧೧೮೯ನೇ ಕಂಪನಹಳ್ಳಿ (ಬೇಬಿರಾಕ್) ಶಾಸನದಲ್ಲಿ ಕಲಿದೇವರ ಪೂಜೆಗೋಸ್ಕರ ಮತ್ತು ದೀಪಾರಾಧನೆಗೋಸ್ಕರ ಹೆಗ್ಗಡೆ ಬೀಚಣನು ಕೆರೆ ಕಟ್ಟಿಸಿ ಭೂಮಿದಾನ ನೀಡಿದ್ದಾನೆ. ಇದೇ ಮನೆತನದ ಭುವಲ್ಲಭರಾಯ ಪೆರ್ಮಾಡಿದೇವ ಕ್ರಿ.ಶ. ೧೧೭೧ರ ನಂದಿಹಳ್ಳಿ ಶಾಸನದಲ್ಲಿ ದೇಹರಾದ ಮಹದೇವನು ಸಾಮಂತ ಗೋವಿಂದ ಕೆಱೆಯ ಕಟ್ಟಿ ಸತಲೇಶ್ವರದೇವರ ಎಂದು ಪ್ರತಿಷ್ಠೆಯಂ ಮಾಡಿದ ವಿಷಯವಿದೆ. ಇದೇ ಮನೆತನದ ಹುಳಿಯೂರು ಶಾಸನದಲ್ಲಿ ಎರಡನೇ ಜಗದೇಕಮಲ್ಲನ ಕ್ರಿ.ಶ. ೧೨-೧೩ನೇ ಶತಮಾನದ ಬಲ್ಲಾಳದೇವನ ತಂದೆ ಮಾಂಡಳಿಕ ಬಲ್ಲರಸ ಭೀಮಸಮುದ್ರ ಗ್ರಾಮವನ್ನು ಹುಲಿಯಾರ ಭೀಮೇಶ್ವರ ದೇವರಪೂಜೆ, ನೈವೇದ್ಯಗೋಸ್ಕರ ದತ್ತಿ ಬಿಟ್ಟ ವಿವರವಿದೆ.

ಹೊಯ್ಸಳರು : ಕ್ರಿ.ಶ. ೧೧೩೪ರ ವಿಷ್ಣುವರ್ಧನ ಕಾಮನಹಳ್ಳಿ ಶಾಸನದಲ್ಲಿ ಕುಣಿಗಿಲುನಾಡು ಕಾವಗೌಡನು ಹಳ್ಳಿಯ ರಾಮೇಶ್ವರ ದೇವರಿಗೆ ತೇಜೋನಿಧಿ ಪಂಡಿತರು ಕೆರೆ ಕಟ್ಟಿಸಿದ ವಿವರವಿದೆ. ಕ್ರಿ.ಶ. ೧೧೫೧ರ ಕೈದಾಳ ಶಾಸನದಲ್ಲಿ ಒಂದನೇ ನರಸಿಂಹನ ಶ್ರೀಮನ್ಮಹಾಸಾಮಂತ ಬಾಚಿದೇವಭೀಮ ಜಿನಾಲಯ ಬಸದಿ ಮಾಡಿಸಿ ಭೀಮಸಮುದ್ರವೆಂದು ಕನ್ನೆಗೆಱೆಯನ್ನು ಕಟ್ಟಿಸಿ ಆ ಕೆಱೆಯ ಕೆಳಗೆ ಭೀಮಜಿನಾಲಯದ ಶ್ರೀ ಚನ್ನಪಾರಿಶ್ವದೇವರ ರಂಗಭೋಗಕ್ಕೆ ದಾನ ನೀಡಿದ ವಿವರವಿದೆ. ಒಂದನೇ ನರಸಿಂಹ ಕ್ರಿ.ಶ. ೧೨ನೇ ಶತಮಾನದ ಪಂಡಿತರಹಳ್ಳಿ ಶಾಸನದಲ್ಲಿ ರಾಜನು ದೋರಸಮುದ್ರ ಆಳುತ್ತಿರುವಾಗ ಮಹಾಪ್ರಧಾನ ಸರ್ವಾಧಿಕಾರಿ ದಂಡನಾಯಕ ಎಱೆಯಂಗಮಯ್ಯಗಳ ಮತ್ತು ಮಾಚಿಯಕ್ಕ ಈಶ್ವರ ಚಮೂಪತಿ ಮತ್ತು ಸಾಹಣಿ ಬಿಟ್ಟ ಗಾಂಕನ ಮಗಳು ಪದ್ಮಾವತಿಗೆ ಕೆಱೆಂ ಕಟ್ಟಿಸಿ ಬಸದಿಗೆ ದಾನ ನೀಡಿದ ವಿವರವಿದೆ. ಎರಡನೇ ಬಲ್ಲಾಳನ ಕ್ರಿ.ಶ. ೧೨೧೫ರ ಸೂಜಿಗಲ್ಲು ಶಾಸನದಲ್ಲಿ ಸೂಜಿಗಲ್ಲು ಜಕ್ಕಗೌಡ ಜೊತೆಗೆ ಅವನ ಕುಟುಂಬದ ಸದಸ್ಯರು ಕಲಿದೇವರಿಗೆ ಸಾವಿದೇವಿ ಕೆಱೆಯ ಬಳಿಯ ಭೂಮಿಯನ್ನು ದಾನವಾಗಿ ನೀಡುತ್ತಾರೆ. ಸೋಮೇಶ್ವರನ ವೋಟುಕೆರೆ ಶಾಸನದಲ್ಲಿ ಕ್ರಿ.ಶ. ೧೨೩೫ರ ಕಾಟೂರ ವಿತ್ತಿಯ ಯೆಳಹದ ಸೇನಬೋವ ಮಾದಯನ ಮಗ ಸೇನಬೋವ ಆಚಯಸಿವಯಂಗಳು ಹಿರಿಯ ಕೆಱೆಕಲ್ಲು ತೂಬನ್ನು ಕಟ್ಟಿಸಿ ಸೋಮನಾಥದೇವರಿಗೆ ಭೂದಾನ ಮಾಡಿದ್ದಾರೆ. ಕ್ರಿ.ಶ. ೧೨೩೪ರ ಎರಡನೇ ನರಸಿಂಹನ ಕಾಲದಲ್ಲಿ ಸಂಪಿಗೆ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಕೆರೆ ಕಟ್ಟಿಸಿ ದಾನ ನೀಡಿದೆ. ರಾಮನಾಥನ ಕ್ರಿ.ಶ. ೧೨೮೭ರ ಹೊನ್ನುಡಿಕೆ ಶಾಸನದಲ್ಲಿ ಕಂಪಯಧನಾಯಕರು ಮರುಗಲಿನಾಡನಾಳುತ್ತಿರುವಾಗ ಮೆಯಿಂದವೊಳಲು ಕೆರೆಯ (bund) ಕಟ್ಟಿಸಿ ಚೊಕ್ಕ ಪೆರುಮಾಳ ದೇವರಿಗೆ ಅರ್ಪಿಸಿದ ವಿವರವಿದೆ. ಇದೇ ರಾಜನ ಇದೇ ಕಾಲದ ಭೈರಸಂದ್ರ ಶಾಸನದಲ್ಲಿ ಹೊಂನಸಿಗೆರೆಯ ಹೊಂನಮಾರಗೌಡನ ಮಗ ಹೊಂನಮಾರಗೌಡ ಮರುಗಲನಾಡೊಳಗೆ ಹರಲೂರಲು ಹೊಂನ ಮಾರಗೌಡ ತಂಮ್ಮ ತಾಯಿ ಕಾಚಗಲುಡಿಯ ಹೆಸರಲ್ಲಿ ಕಾಚಸಮುದ್ರವೆಂದು ಕೆರೆಯ ಕಟ್ಟಿಸಿದ್ದಾನೆ. ಇದೇ ರಾಜನ ಇದೇ ಕಾಲದ ರಾಯಪುರ ಶಾಸನದಲ್ಲಿ ಮಹಾಪ್ರಧಾನ ಮಂಡಳಿಕ ಜೀವರಾಜ, ನಿಚಯನಾಥ ಮೂವರು ರಾಯರಗಂಡ ಕಂಚಿಯ ದಣ್ನಾಯಕರು ಆಳುತ್ತಿರುವಾಗ ಹೊಂನಗವೂಡನು ಆ ಬಸಿಗವೊಡನ ಹೆಸರಲು ಬಾಸಿಸಮುದ್ರವೆಂದು ಕೆರೆಯ ಕಟ್ಟಿಸಿದ. ಕ್ರಿ.ಶ. ೧೩೧೪ರ ಮೂರನೇ ವೀರಬಲ್ಲಾಳನ ಹೆಗ್ಗರೆ ಶಾಸನದಲ್ಲಿ ಹೆಗೆಱೆಯವೊಳಗೆ ಬೂದಿಹಾಳ ಕೆಱೆಯ ನೀರೋ ನೀರೆತ್ತುವ ಭೂಮಿಯನ್ನು ದಾನವಾಗಿ ಕೊಟ್ಟ ವಿವರವಿದೆ.

ವಿಜಯನಗರದ ಶಾಸನಗಳು : ವಿಜಯನಗರ ಮನೆತನದ ಎರಡನೇ ಬುಕ್ಕನ ಕ್ರಿ.ಶ. ೧೩೮೭ರ ದೇವರಾಯದುರ್ಗದ ಶಾಸನದಲ್ಲಿ ಅಂಗಜಾವದ (bodyguard) ಅಲ್ಲಪ್ಪನಾಯಕರ ಮಕ್ಕಳು ಪೋಲೆಯ ನಾಯಕರು ಆನೆಬಿದ್ದ ಸಱೆಯವೆ ಮೇಗೋಟೆಯ ಜಾಟದಗೊಂದಿಯ ಬಡಗಣ ಭಾಗೆಯ ಪಡುವಣ ಭಾಗದಲ್ಲಿ (Pond) ಡೊಣೆ ಕಟ್ಟಿಸಿ ಡೊಣೆ ಬುಕ್ಕರಾಯನ ಸಮುದ್ರ ಮೂಡಣ ಭಾಗೆಯಲು ಕಟ್ಟಿಸಿದ ಪೋಲಸಮುದ್ರ ಕಟ್ಟಿದ ವಿವರವಿದೆ. ಮೂರನೇ ಬುಕ್ಕರಾಯನ ಕ್ರಿ.ಶ. ೧೪೨೯ರ ಉಜಿನಿ ಶಾಸನದಲ್ಲಿ ಉಜೆನಿಯ ಬಯಿಚರಸರ ಮಕ್ಕಳು ಚೇಮಸರಿಗೆ ಆ ಉಜೆನಿಯ ರಾಮಗೌಡ ಹಾಗೂ ಹಲವರು ಸೇರಿ ಕೆಱೆಯ ಕಟ್ಟಿಸಿ ದಾನ ನೀಡಿದ್ದಾರೆ. ಕ್ರಿ.ಶ. ೧೫೪೧ರ ಅಚ್ಯುತರಾಯನ ಬ್ಯಾಡನಕಟ್ಟೆ ಶಾಸನದಲ್ಲಿ ಆಚೆರಾಜ ತಿರುಮಲರಾಜಯನವರು ಚೇಳೂರ ಗಲುಡುಗಳಿಗೆ ಪಾಲಿಸಿದ ಬೇಡನಕಟ್ಟೆ ಗ್ರಾಮದ ಕೆಱೆ ಬೆದ್ದಲು ಉಂಬಳಿ ಗ್ರಾಮದ ಸ್ಥಾನಮಾನ್ಯ ಕೊಟ್ಟ ವಿವರವಿದೆ.

ಅರವೀಡು ಮನೆತನ : ಅರವೀಡು ಮನೆತನದ ರಾಮದೇವರಾಯರ ಕ್ರಿ.ಶ. ೧೬೨೩ರ ಜೋಗಿಹಳ್ಳಿ ಶಾಸನದಲ್ಲಿ

ವೀರಮಹೇಶ್ವರರಾಧಕನಾದ ಶೀಲವಂತ ದಳವಾಯಿ ಪರಮಪ್ಪ, ಮಠದಲ್ಲಿ ಒಂದು ಭೂಮಿಯನ್ನು ಅಗೆದು ಕೆರೆ ಕಟ್ಟಿಸಿ ತೋಟಗಾರಿಕೆಗೋಸ್ಕರ ಮಠದ ಭೂಮಿಗೆ ದಾನ ನೀಡಿದ ವಿವರವಿದೆ.

ಯಲಹಂಕ ಪ್ರಭುಗಳು : ಇಮ್ಮಡಿ ಹಿರಿಯಕೆಂಪೇಗೌಡ ಕಾಲದ್ದು. ಶೃಂಗಾರ ಸಾಗರ ಶಾಸನದಲ್ಲಿ ಪ್ರಭುವಿನ 'ಪಟ್ಟದನಾಟಕ ಶಾಲೆ' ಶೃಂಗಾರಮ್ಮ ಎಂಬ ಮಹಿಳೆಯು ಶೃಂಗಾರ ಸಾಗರ ಎಂಬ ಅಗ್ರಹಾರವನ್ನು ಮತ್ತು ಕೆಱೆಯನ್ನು ಕಟ್ಟಿಸಿದ ಉಲ್ಲೇಖವಿದೆ.

ಮೈಸೂರು ಒಡೆಯರು : ಮೈಸೂರು ಒಡೆಯರ ಕೃಷ್ಣರಾಜವೊಡೆಯರ ಕ್ರಿ.ಶ. ೧೭೨೦ರ ಹೆಬ್ಬೂರು ಶಾಸನದಲ್ಲಿ ಹೆಬ್ಬೂರಿಗೆ ಪಶ್ಚಿಮದಿಕ್ಕಿನಲು ಕಟ್ಟಿದ ದ್ಯೇವಾಂಬುಧಿ ಕೆರೆಯನ್ನು ಹುಣಿಸೆನಾಳು ನಂಜರಾಜವಡೆಯರ ಮಗ ದೊಡ್ಯೆಯ್ಯನವರ ಕುಟುಂಬ ದ್ಯೇವಾಜಂಮನವರ ಕುಮಾರ ದೊಡ್ಡಯ್ಯ ಅರಸು ಕಟ್ಟಿಸಿದ ದ್ಯೇವಾಂಬುದಿಯೆಂಬ ಕೆರೆ ಎಂದು ದಾಖಲಿಸಿದೆ.

ಮನೆತನವಿಲ್ಲದ ಶಾಸನಗಳು : ಕ್ರಿ.ಶ. ೧೧೫೧ರ ಕೊಂಡಾಪುರ ಶಾಸನ ಸವೆದಿದೆ. ಮಾರಮಯ್ಯಂ ಸಾಮಾನ್ತಗೊಳಿ ಬಾಚಿದೇವ ಕಯ್ಯಲು ಭೂಮಿಯಂ ಪಡೆದು ಮಾರಸಮುದ್ರಮೆಂದು ಕನ್ನಗೆಱೆಯಂ ಕಟ್ಟಿಸಿದ ಕೆಱೆಯ ದಾಖಲೆಯಿದೆ. ಕ್ರಿ.ಶ. ೧೧೬೪ರ ಚಿನಗಶಾಸನ ಸವೆದಿದೆ. ಸತಿವಂಗಳದ ಮಂಡಳಿಕ ಮಾಚಿಯನಮಗ ಚೋಳಗವುಡ ಕೆರೆಯನ್ನು ಕಟ್ಟಿ ಭುಜಬಲಸಮುದ್ರ ಮಂಡಲಿಕ ಸಮುದ್ರ ಕೆರೆಯನ್ನು ಕಟ್ಟಿಸಿ ಅನ್ನದಾನ, ಸುವರ್ಣದಾನ, ಗೋದಾನ, ಕನ್ಯಾದಾನ, ಭೂಮಿದಾನ ಮಾಡಿದ ವಿವರವಿದೆ. ಚೋಳೇಶ್ವರ ದೇವರಂಗಭೋಗಕ್ಕೆ ಅಷ್ಟಾವಿದಾರ್ಚನೆಗೆ ತಪೋಧನರಾಹಾರದಾನಕ್ಕೆ ಜೀರ್ಣೋದ್ಧಾರಕ್ಕೆ ಭುಜಬಲ ಸಮುದ್ರದ ಕೆಳಗೆ ಗದ್ದೆ ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೨೩೫ರ ಮೋಟಿಹಳ್ಳಿ ಶಾಸನ ಸವೆದಿದೆ. ಮಗರೆಮುನ್ನೂಱರ ಸಮ(ಸ್ತ) ನಾಡಪ್ರಭು ಮೋಟಗೌಡ ಅನೇಕ ಕೆರೆಗಳನ್ನು ಕಟ್ಟಿಸಿ ಅನೇಕ ದೇವಾಲಯಗಳಲ್ಲಿ ಉಚಿತ ನೀರಿನ ಸೆಡ್ಡುಗಳನ್ನು ಮತ್ತು ತೋಟಗಳನ್ನು ಮಾಡಿಸಿ ಹಾಗೂ ಶ್ರೀ ಮಾಚೇಶ್ವರ ನಂದಾದೀವಿಗೆಗೆ, ನೈವೇದ್ಯಗೋಸ್ಕರ ದತ್ತಿ ಬಿಟ್ಟ ವಿವರವಿದೆ. ಕ್ರಿ.ಶ. ೧೪೯೪ರ ಕುಣಿಗಲ್ ಶಾಸನದಲ್ಲಿ ಇರುಗಪ್ಪ ದಂಣಾಯ್ಕ ಒಡೆಯರ ಹೆಸರಿನಲ್ಲಿ ತೂಬಿನಕಂಭ ಪ್ರತಿಷ್ಠೆ ಮಾಡಿದ ಶಾಸನವಿದೆ. ಕ್ರಿ.ಶ. ೧೫೦೭ರ ಕಲ್ಲಣೆ ಶಾಸನದಲ್ಲಿ ಶ್ರೀಮಂನ್ಮ(ಹಾ) ಮಂಡಳೇಶ್ವರ ಕೇಶವಯ್ಯ ಮಹಾ ಅರಸುಗಳು ಕಲ್ಲುಕೆರೆ ಅಣೆಯ ಕಟ್ಟಿಸಿ ಯಿರಿಸಿದ ಧರ್ಮಶಾಸನ. ಕ್ರಿ.ಶ. ೧೫೪೧ರ ಕಡಬ ಶಾಸನದಲ್ಲಿ ಕಾಡನೂರ ಮದೆಯನಾಯಕನ ಮಗ ಗಂಟೆಯ ಮಾದೆಯನಾಯಕನು ಮದಗವನು ಮಾಡಿಸಿ ಕೋಡಿಯನ್ನು ಕೆಱೆಯ ಕಲುಕಟ್ಟಿಯನ ಕಡಿಸಿದರು. ಕ್ರಿ.ಶ. ೧೬ನೇ ಶತಮಾನದ ಲಿಂಗಮ್ಮನಹಳ್ಳಿ ಶಾಸನದಲ್ಲಿ ಕಂಪಣನಾಯಕನು ಧರ್ಮಕ್ಕೆ ಕೂಡಿಸಿದ ಭೂಮಿಯನು ಸಿಂಗೇಗೋಡನಗೌಡನ ಮಗ ಸಿಗಪನು ಕೆರೆ ಕಟ್ಟಿಸಿದ ವಿವರವಿದೆ. ಕ್ರಿ.ಶ. ೧೬ನೇ ಶತಮಾನದ ತಟಸಂದ್ರ ಶಾಸನದಲ್ಲಿ ಗಿರಿಯಂಣನಾಯಕನು ತಟಸಮುದ್ರದಾಲಿ ಕಟ್ಟಿಸಿದ ವಕರಣೆ ಬಾವಿಯ ಮೆಟ್ಟಿಲುಗಳನ್ನು ಕಟ್ಟಿಸಿದ ವಿವರಣೆಯಿದೆ. ಕ್ರಿ.ಶ. ೧೬೨೮ರ ನಾಗಸಂದ್ರ ಶಾಸನದಲ್ಲಿ ಚಉಡಿರ ಚಉಡಿಕೆಱೆಯೂರ ನರಸಪ್ಪವೊಡೆಯ ಅಯ್ಯನವರಿಗೆ ಪು(ಂ)ಣ್ಯವಾಗಲಿ ಎಂದು ಉಗ್ರಾಣದ ದೇವಂಣನಪ್ಪನ ಮಗ ಮಾರಪ್ಪನಾಯಕ ಬಾವಿ ಕಟ್ಟಿಸಿದ ವಿವರವಿದೆ. ಕ್ರಿ.ಶ. ೧೬೯೬ರ ಕೋಡಿಪಾಳ್ಯ ಶಾಸನದಲ್ಲಿ ಸಿದ್ದೇಶ್ವರಸ್ವಾಮಿಯವರ ಗುಡಿಗೆ ಅಂಬಿನಯಸಗೆವಳಗೆ ಭಾವಿ ನಿರ್ಮಾಣ ಮಾಡಿದ ವಿಷಯವಿದೆ.

ಕೊನೆಯದಾಗಿ ನೀರಾವರಿಯು ಮುಖ್ಯವಾಗಿ ನದಿ, ಕೆರೆ, ಸಮುದ್ರ, ಬಾವಿ, ಕಾಲುವೆ ಕೋಡಿಗಳನ್ನು ಅವಲಂಬಿಸಿದ್ದಿತು. ಕೆರೆ, ಬಾವಿಗಳನ್ನು ನಿರ್ಮಿಸುವುದು ಅತ್ಯಂತ ಶ್ರೇಯಸ್ಕರ ಎಂದು ನಂಬಿದ್ದ ಅರಸರು, ಮಹಾಮಂಡಳೇಶ್ವರರು, ಅಧಿಕಾರಿಗಳು ಸಾಮಾನ್ಯರು ತಮ್ಮ ಅಥವಾ ವಂಶಜರ ಹೆಸರಿನಲ್ಲಿ ಮತ್ತು ಅರಸರ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸುತ್ತಿದ್ದರು. ಕಟ್ಟಿಸಿದ ಕೆರೆ ಬಾವಿಗಳನ್ನು ಯಾರೇ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರ ಎಂಬ ಭಾವನೆ ಇತ್ತು. ಆದುದರಿಂದಲೇ ಪ್ರಾಚೀನ ಕಾಲದ ಕಲ್ಯಾಣಚಾಳುಕ್ಯರ, ಹೊಯ್ಸಳರ, ವಿಜಯನಗರ, ಯಲಹಂಕ ಪ್ರಭುಗಳ ಮತ್ತು ಮೈಸೂರು ಒಡೆಯರ ಕಾಲದ ಕೆರೆಗಳು ಹಲವಾರು ಶತಮಾನಗಳಾದರೂ ಈ ಶಾಸನಗಳಲ್ಲಿ ಉಳಿದುಕೊಂಡು ಬಂದಿದೆ. ಕೆರೆಗಳ ನಿರ್ಮಾಣವನ್ನು ಕೆಲವು ಶಾಸನಗಳು ನೇರವಾಗಿ ದಾಖಲಿಸಿದರೆ, ದಾನ ಶಾಸನಗಳು ದಾನವಾಗಿ ಕೊಟ್ಟ ಪ್ರದೇಶದ ಸರಹದ್ದುಗಳ ವಿವರಣೆಯಲ್ಲಿ ಕೆರೆಗಳ ಇರುವಿಕೆಯನ್ನು ನಾವು ಕಾಣುತ್ತೇವೆ.

ಉಪಸಂಹಾರ : ಈ ಅವಲೋಕನದಿಂದ ರೈತರು ಬೆಳೆದರೆ ಲೋಕವು ಬದುಕುತ್ತದೆ ಎಂಬ ಸತ್ಯವನ್ನು ಕಂಡುಕೊಂಡು ಹಿಂದಿನ ಕಾಲದ ಅರಸರು, ಅಧಿಕಾರಿಗಳು ಹಾಗೂ ಸಾಮಾನ್ಯರು ಕೃಷಿಜನಾಂಗದ ಅಭಿವೃದ್ಧಿಗಾಗಿ ಮತ್ತು ಪ್ರಜೆಗಳ ಹಿತಕ್ಕಾಗಿ ಹಾಗೂ ಸಾಮ್ರಾಜ್ಯದ ಯಶೋಭಿವೃದ್ಧಿಗಾಗಿ ಅನೇಕ ಕೆರೆ ಕಟ್ಟೆ ಭಾವಿ ಮತ್ತು ತೂಬುಗಳನ್ನು, ಅಣೆಕಟ್ಟೆಗಳನ್ನು ನಿರ್ಮಿಸಲು ಶ್ರಮಿಸುತ್ತಿದ್ದರು ಎಂಬುದನ್ನು ತಿಳಿಯಬಹುದು.

◆◆

೩೪

ಮಹಾಂತೇಶ ಮ. ಅಕ್ಕಿ

ದೇವಗಿರಿ ಯಾದವರ ಕಾಲದ ಶಾಸನೋಕ್ತ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು

ದೇವಗಿರಿ ಯಾದವರ ಚರಿತ್ರೆ ಸುಮಾರು ಒಂಬತ್ತನೆಯ ಶತಮಾನದಿಂದ ಆರಂಭವಾಗುತ್ತದೆ. ಸುಬಾಹುವಿನ ಮಗನಾದ ದೃಢಪ್ರಹಾರನು ಈ ವಂಶದ ಸ್ಥಾಪಕ. ಇವರು ಆರಂಭದಲ್ಲಿ ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ಆರಂಭಿಸಿದರು. ನಂತರ ಕಲಚೂರಿಯ ಬಿಜ್ಜಳ ಕಲ್ಯಾಣದ ಸಿಂಹಾಸನವನ್ನು ವಶಪಡಿಸಿಕೊಂಡುದುದರ ಪರಿಣಾಮವಾಗಿ ಉಂಟಾದ ಅರಾಜಕತೆಯ ಲಾಭವನ್ನು ಪಡೆದುಕೊಂಡ ಇವರು ಕ್ರಿ.ಶ. ೧೨ನೇ ಶತಮಾತನದ ಉತ್ತರಾರ್ಧದಲ್ಲಿ ತಮ್ಮ ಸ್ವಾತಂತ್ರವನ್ನು ಘೋಷಣೆ ಮಾಡಿಕೊಂಡು ಸ್ವತಂತ್ರವಾದ ಆಳ್ವಿಕೆಯನ್ನು ಆರಂಭಿಸಿದರು. ಸೇವುಣರನ್ನು ಸಾಮಾನ್ಯವಾಗಿ ದೇವಗಿರಿಯ ಯಾದವರೆಂದು ಕರೆಯಲಾಗುತ್ತದೆ. ಆದರೆ ಈ ವಂಶದ ಸರಿಯಾದ ಅಂಕಿತನಾಮ ಸೇವುಣ. ಕೆಲವು ಶಾಸನಗಳಲ್ಲಿ ಇವರನ್ನು ಸೇವುಣ, ಸೇಗುಣ, ಸೇವಣ ಎಂದೂ ಕರೆಯಲಾಗಿದೆ. ಅಲ್ಲದೆ ಕೆಲವು ವಿದ್ವಾಂಸರು ಈ ಮನೆತನವು ಮೊದಲನೆಯ ಅರಸ ಸೇವುಣಚಂದ್ರನಿಂದ ಈ ಹೆಸರನ್ನು ಪಡೆದುಕೊಂಡಿತೆಂದು ಹೇಳುತ್ತಾರೆ. ಕ್ರಿ.ಶ. ೧೮೮೨ರಲ್ಲಿ ಇವರನ್ನು ಕುರಿತು ಮೊದಲು ಅಧ್ಯಯನ ಮಾಡಿದವರೆಂದರೆ ಡಾ. ಫ್ಲೀಟ್ ನಂತರ ಅಲ್ತೇಕರ್, ಭಂಡಾರ್‌ಕರ್, ಶ್ರೀನಿವಾಸ ರಿತ್ತಿ ಮುಂತಾದವರು ಇವರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಡಾ. ಎ.ವಿ. ನರಸಿಂಹಮೂರ್ತಿಯವರು 'ಕರ್ನಾಟಕದ ಸೇವುಣರ ಇತಿಹಾಸ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಅವರು ಸುಮಾರು ೬೦೦ ಶಾಸನಗಳ ಪಟ್ಟಿಯನ್ನು ಮಾತ್ರ ನೀಡಿದ್ದಾರೆ. ಈ ಶಾಸನಗಳನ್ನು ಆಧರಿಸಿ ಅದರಲ್ಲಿ ಉಲ್ಲೇಖವಾಗಿರುವ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳನ್ನು ಕುರಿತು ಬರೆಯುವುದೇ ಈ ಲೇಖನದ ಉದ್ದೇಶವಾಗಿದೆ.

ಕನ್ನಡ ನಾಡಿನ ಶಾಸನ ಕವಿಗಳನ್ನು ಕುರಿತಂತೆ ಈವರೆಗೆ ಆರ್. ನರಸಿಂಹಾಚಾರ್ ಅವರು "ಕರ್ನಾಟಕದ ಕವಿಚರಿತೆ" ಹಾಗೂ ಮೇವುಂಡಿ ಮಲ್ಲಾರಿಯವರ "ಕನ್ನಡ ಶಾಸನ ಕವಿಗಳು" ಕೃತಿಗಳಲ್ಲಿ ಹಾಗೂ ಇತರರು ಬಿಡಿ ಲೇಖನಗಳಲ್ಲಿ ಕೇವಲ ಶಾಸನ ಕವಿಗಳನ್ನು ಮಾತ್ರ ಗುರುತಿಸಿ ಶಾಸನ ಲಿಪಿಕಾರರನ್ನು ಹಾಗೂ ರೂವಾರಿಗಳನ್ನು ಶಿಲಾಲಿಪಿ ಶಿಲ್ಪಿಗಳನ್ನು ಗಮನಿಸಿಲ್ಲ, ಡಾ. ಎಂ.ಎಂ. ಕಲಬುರ್ಗಿ, ಡಾ. ಶ್ರೀನಿವಾಸ ರಿತ್ತಿ, ಆರ್.ಎಸ್. ಗುರುವ, ಡಾ. ಆರ್.ಎಲ್. ಪಾಟೀಲ, ಡಾ. ಎಸ್.ಎಂ. ನಾಗಭೂಷಣ, ಡಾ.ಶೀಲಾಕಾಂತ ಪತ್ತಾರ ಮುಂತಾದವರು ಈ ನಿಟ್ಟಿನಲ್ಲಿ ಸಂಶೋಧನೆ ಮಾಡಿ ಶಾಸನ

ಮುಖ್ಯಸ್ಥರು, ಇತಿಹಾಸ ವಿಭಾಗ
ಎಂ.ಎ.ಎಸ್.ಸಿ. ಮಹಾವಿದ್ಯಾಲಯ
ಹಂಸಭಾವಿ–೫೮೧೧೧೯
ಹಿರೇಕೆರೂರು ತಾಲ್ಲೂಕು
ಹಾವೇರಿ ಜಿಲ್ಲೆ
ಮೊ: ೯೯೭೧೭ ೭೯೫೮೯

ಕವಿಗಳ ಜೊತೆಗೆ ಲಿಪಿಕಾರರನ್ನು, ರೂವಾರಿಗಳನ್ನು ಗುರುತಿಸುವ ಸ್ಮರಣೀಯ ಶೋಧನಾ ಕಾರ್ಯವನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಶಿಲಾಶಾಸನಗಳು ಮತ್ತು ತಾಮ್ರಶಾಸನಗಳು ಸಿದ್ಧವಾಗುವಾಗ ಮೊದಲು ಕವಿಗಳು, ಶಾಸನ ಪಠ್ಯವನ್ನು ರಚಿಸಿ ಲಿಪಿಕಾರರಿಂದ ಸ್ಪಷ್ಟ ಲಿಪಿಯಲ್ಲಿ ಬರೆಯಿಸಿ ಅನಂತರದಲ್ಲಿ ಶಿಲೆ ಅಥವಾ ಲೋಹಪಟಗಳಲ್ಲಿ ಕೆತ್ತುವುದಕ್ಕೆ ಲಿಪಿಕಾರರಿಗೆ ವಹಿಸಿಕೊಡುತ್ತಿದ್ದರು. ಅಲ್ಲದೆ ಶಿಲ್ಪಿ ಲಿಪಿಕಾರರ ಹೆಸರುಗಳನ್ನು ಕೆಲವೇ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಶಿಲೆಯಲ್ಲಿ ಸುಂದರ ಲಿಪಿಯನ್ನು ಶ್ರಮವಹಿಸಿ ಲಿಪಿಸಿದ ಲಿಪಿಕಾರರು ನಮ್ಮ ಭವ್ಯ ಸಂಸ್ಕೃತಿಯನ್ನು ಉಳಿಸುವಲ್ಲಿ ಶ್ರಮವಹಿಸಿದ್ದು ಅವರನ್ನು ಸ್ಮರಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ.

ಯಾದವರ ಶಾಸನಗಳು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ದೊರೆತಿದ್ದು ಇವುಗಳಲ್ಲಿ ಶಾಸನ ಕವಿಗಳನ್ನು ಉಲ್ಲೇಖಿಸುವ ಶಾಸನಗಳು ಮಾತ್ರ ಅತ್ಯಲ್ಪ. ಯಾದವರ ಕಾಲದಲ್ಲಿ ದೊರೆತ ೬೦೦ ಶಾಸನಗಳಲ್ಲಿ ಕೇವಲ ೨೨ ಶಿಲಾ ಹಾಗೂ ತಾಮ್ರಶಾಸನಗಳಲ್ಲಿ ಶಾಸನ ಕವಿಗಳು ಹಾಗೂ ಲಿಪಿಕಾರರು ಹಾಗೂ ರೂವಾರಿಗಳ ಅಥವಾ ಶಿಲಾಶಿಲ್ಪಿಗಳ ಹೆಸರುಗಳನ್ನು ಹೇಳಲಾಗಿದೆ. ಪ್ರಾದೇಶಿಕವಾಗಿ ಅವರನ್ನು ಹೀಗೆ ಗುರುತಿಸಬಹುದು.

ರಾಜ್ಯ	ಜಿಲ್ಲೆ	ಸಂಖ್ಯೆ
ಕರ್ನಾಟಕ	ಗದಗ	೧
	ಬಾಗಲಕೋಟೆ	೪
	ಬೆಳಗಾವಿ	೧
	ಧಾರವಾಡ	೧
	ಬಿಜಾಪುರ	೨
	ಬಳ್ಳಾರಿ	೪
	ಹಾವೇರಿ	೫
ಆಂಧ್ರಪ್ರದೇಶ	ಕರ್ನೂಲ	೧
	ಕಡಪ	೧
	ಅನಂತಪುರ	೧
ಮಹಾರಾಷ್ಟ್ರ	ಉಸ್ಮಾನಾಬಾದ್	೧
	ಒಟ್ಟು	**೨೨**

ಲಿಪಿಗಾರರನ್ನು ಉಲ್ಲೇಖಿಸುವ ಶಾಸನಗಳು

ರಾಜರ ಹೆಸರು	**ಸಂಖ್ಯೆ**
ಸಿಂಘಣ	೧೦
ಮಹದೇವ	೦೩
ರಾಮಚಂದ್ರ	೦೨
ಕಂದಹಾರಯ್ಯ	೦೧
ಆದಿತ್ಯವರ್ಮ	೦೧
ರಾಜರ ಉಲ್ಲೇಖ ಇಲ್ಲದೇ ಇರುವ ಶಾಸನಗಳು	೦೫
ಒಟ್ಟು	**೨೨**

ಶಾಸನಗಳಲ್ಲಿ ಕವಿಗಳನ್ನು ರಚಿಸಿದಂ, ಪೇಳ್ವಪಂ, ವಿರಚಿಸಿದಪ್ಪ, ಶ್ರೀಕರ್ಪನಂ ಕಾವ್ಯಂ, ನಾಗಾರ್ಜುನ ಪಂಡಿತರು ಪೇಳ್ದ ಕಬ್ಬಂ, ಚಂದ್ರಭಟ್ಟಕವಿ ವಿರಚಿಸಿದಂ. ಹೀಗೆ ಕವಿಗಳನ್ನು ಶಾಸನಗಳಲ್ಲಿ ರಚಿಸಿದರೆ ಇವುಗಳನ್ನು ಕಲ್ಲು, ತಾಮ್ರ ಪಟಗಳ ಮೇಲೆ ಬರೆಯುವ ಕೆಲಸವನ್ನು ಲಿಪಿಕಾರ ಮಾಡುತ್ತಿದ್ದನು. ಅವನನ್ನು ಶಾಸನಗಳಲ್ಲಿ ಬರೆದಂ, ಲಿಖಿಸಿದಂ, ಮತ್ತು ರೂವಾರಿಗಳು ಆರೋಪಿತವಾಗಿವೆ. ಹೀಗಾಗಿ ಶಾಸನಗಳಿಂದ ಲಿಪಿಕಾರರನ್ನು ಬೆರಳಿಟ್ಟು ಗುರುತಿಸುವುದು ಕಷ್ಟದ ಕೆಲಸವೇ. ಆದಷ್ಟು ಎಚ್ಚರವಹಿಸಿಯೇ ಇಂತವರನ್ನು ಗುರುತಿಸ ಬೇಕಾಗುತ್ತದೆ. ಶಾಸನಗಳಲ್ಲಿ 'ಶ್ರೀ ಕಲಿದೇವರ ದಾಸ ಬೊಂಮ್ಮರಸರು ಬರೆದ ಸಾಸನ' 'ಪ್ರಶಸ್ತಿಯಂ ಬರದ ಸೇನಬೋವ ಬಾಚರಸ' 'ಶಿವಂಣಂಗಳ ಮಗ ಶ್ರೀಪತಿದೇವ ಬರುದ ಶಾಸನ' 'ಲಿಖಿತಂ ಶಾಸನ ಕಾದಂಬರಿಯೆ ವಾಮನ ರಚಿತಂ' ಎನ್ನುವ ಪದಗಳು, ವ್ಯಾಖ್ಯೆಗಳು ಶಾಸನ ಲಿಪಿಕಾರರನ್ನು ಗುರುತಿಸಲು ಸಾಧ್ಯವಾಗಿವೆ.

ಸಾಮಾನ್ಯವಾಗಿ ಶಾಸನದ ಕೊನೆಯಲ್ಲಿ ರೂವಾರಿಗಳ ಕಂಡರಿಸಿದವರ ಹೆಸರುಗಳನ್ನು ಕ್ವಚಿತ್ತವಾಗಿ ಹೇಳಿರುವುದುಂಟು ಕಲ್ಲಂ ಕಡಿದಾತ, ಕಂಡರಣೆಕಾಱ, ಸರಸ್ವತಿ ಗಣಗಾತ್ರ, ಸರಸ್ವತಿ ಗಣಪುತ್ರ, ಸರಸ್ವತಿ ಗಣದಾಸಿ, ಶಾಸನಾಚಾರ್ಯ, ಸೂತ್ರದಾರಿ, ವಿಶ್ವಕರ್ಮ, ಅಕ್ಕಸಾಲಿ, ಬಿನ್ನಣಿ. ಬಡಗಿ. ಶಿಲ್ಪ, ಆಚಾರಿ ಕಮ್ಮಾರ, ಕಂಚುಗಾರ, ಗಾವುಂಡ, ಮತ್ತು ರೂವಾರಿ ಮುಖ ವಿಶೇಷ ಗುಣಗಳು ಬರುತ್ತವೆ. ಉದಾಹರಣೆಗೆ – 'ಶ್ರೀ ದಾಮೋಜರ ಮಗ ಸೂತ್ರಧಾರಿ ಚೆಣ್ಣೋಜ ಹೊಇದ ಸಾಸನ' 'ಕಲುಕುಟಿಗ ಬಮೋಜಂಗೆ' 'ಇಂದೋಜನ ಪುತ್ರ ಚಾವೋಜಂ ನೂಜಿಪ್ಪದಿಂಬರ ತೊತ್ತು ಶಾಸನಮಂ ಕಂಡರಿಸಿದಾತ' 'ಗೋಸೋಜನುಂ ಮಾಡಿದ' ಎಂಬ ಉಲ್ಲೇಖಗಳು ಶಾಸನಗಳನ್ನು ಕಂಡರಿಸಿದವವರನ್ನು ಕುರಿತು ಹೇಳುತ್ತದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ

ಚಿಕ್ಕಜಂಬಗಿಯ ಕಲ್ಲೇಶ್ವರ ದೇವಾಲಯದ ಮುಂದೆ ನಿಂತಿರುವ ಶಾಸನದ ಕವಿ ಯಾಗ್ನಿಕ ದೇವಪ್ಪಣನ ಮಗನಾದ ಕಾಳಿದಾಸ (ಸೂಕ್ತಿ ಸುಧಾ ನಿಧಾನಃ ಶ್ರೀ ಕಾಳಿದಾಸೋ ಗುಣರತ್ನದಾಮಾಯಾಗ್ನಿಕ ದೇವಪ್ಪಣ ಸುನುನೇದಂತೇನ ಸ್ಕೃತಂ ಶಾಸನಮಭ್ಯ ದಾಯಿ ॥), ಧಾರವಾಡ ಜಿಲ್ಲೆಯ ಕುಂದಗೋಳ ಶಾಸನದಲ್ಲಿ ವೈಜನಾಥ ಕವಿಯ ಉಲ್ಲೇಖ ಬರುತ್ತದೆ. ಈ ಶಾಸನದ ಅರ್ಧಭಾಗ ಸಂಸ್ಕೃತದಲ್ಲಿ ಅರ್ಧಭಾಗ ಕನ್ನಡದಲ್ಲಿದೆ ಸಂಸ್ಕೃತ ಭಾಗದ ಕೊನೆಯಲ್ಲಿ ಶಾಸನದ ಮಧ್ಯದಲ್ಲಿಯೇ "ವೈಜನಾಥಕೃತಿಃ" ಎಂದಿರುವುದರಿಂದ ಇವನು ಈ ಶಾಸನದ ಸಂಸ್ಕೃತ ಭಾಗವನ್ನು ಮಾತ್ರ ರಚಿಸಿಕೊಟ್ಟಂತೆ ತೋರುತ್ತದೆ. ಆದರೆ ಉಳಿದ ಭಾಗವನ್ನು ಯಾವ ಕವಿ ರಚಿಸಿದನೆಂಬುದು ತಿಳಿದು ಬರುವುದಿಲ್ಲ. ಹೀಗಾಗಿ ಇವನ್ನು ಕೇವಲ ಸಂಸ್ಕೃತ ಕವಿಯೆಂದು ಗುರುತಿಸಬಹುದು. ಬಿಜಾಪುರ ಜಿಲ್ಲೆಯ ಕಲಕೇರಿಯ ಮಲ್ಲಯ್ಯನ ಗುಡಿಯಲ್ಲಿರುವ ಜೈನ ಶಾಸನವನ್ನು ಕನ್ನಡದ ಕವಿ ದೇವ ಎಂಬುವವನು ರಚಿಸಿದನು "ಪಾಯಿಗನ ಧರ್ಮ್ಮಸಾ(ಂ)ಮ್ರಾಜ್ಯದ ಮೆಯ್ಸಿರಿ ಕರುವಿನ ಕವಿ ಕನ್ನಡಸರಸತಿ ವಿರಚಿಸಿದಂ ದೇವನೀ ಶಾಸನಮಂ ॥" ಮತ್ತು ಈ ಶಾಸನವನ್ನು ಕೆತ್ತಿದವರು ಕಲ್ಯಾಣದ ಶಿಲ್ಪಿ ಬಲ್ಲೋಜ ಹೀಗೆ ಪರಿಚಯಿಸಿಕೊಂಡಿದ್ದಾನೆ. ಕಲ್ಯಾಣದ ರಾಯರೂವಾರಿ ಬಲ್ಲೋಜ ಕಂಡರಿಸಿದ ಸಾಸನ ಮಂಗಳ ಮಹಾಶ್ರೀ ಅಂದರೆ ಈ ಶಾಸನದ ಕವಿ ಹಾಗೂ ರೂವಾರಿ ಕನ್ನಡಿಗರೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಬಲ್ಲೋಜನ್ನು ಇದು ರಾಯರೂವಾರಿ ಎಂದು ಹೆಸರಿಸಿದೆ. ಹೀಗಾಗಿ ಇವನಿಗೆ ರಾಯ ಎಂಬ ಬಿರುದು ಇದ್ದಿರಬಹುದು ಅಥವಾ ರೂವಾರಿಗಳಲ್ಲಿಯೇ ಈತ ಶ್ರೇಷ್ಠನಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಹಾಗೆಯೇ ಇದೇ ಜಿಲ್ಲೆಯ ಇಂಗಳೇಶ್ವರದ ನಾರಾಯಣ ಗುಡಿಯಲ್ಲಿರುವ ಒಂದು ಶಾಸನವನ್ನು ಗೋಪಿರಾಜ ಎಂಬ ಕವಿ ರಚಿಸಿದ್ದಾನೆ. ಇವನು ಹರಿತಗೋತ್ರದ ಶೈವ ಬ್ರಾಹ್ಮಣ ಕವಿಯ ಪರಿಚಯ ಶಾಸನ ಕೊನೆಯಲ್ಲಿ ಈ ರೀತಿಯಾಗಿ ಕಂದ ಪದ್ಯದಲ್ಲಿ ಮೂಡಿಬಂದಿದೆ. ಗುರುಚರಿತ ಸದಾಶಿವ ಚರಣಾಂಬುಜಭೃಂಗ ಹರಿತಗೋತ್ರೋದ್ಭವನೋಪ್ಪಿರಲೀ ಶಾಸ[ನ ಗ]ಬ್ಬಮ ವಿರಚಿಸಿದಂ ಗೋಪಿರಾಜನಿಳೆಗಿ[ಂ]ತೆಸೆದಂ ॥ ಅಲ್ಲದೆ ಶಾಸನದ ಮೊದಲ ಹಾಗೂ ಕೊನೆಯ ಸಾಲಿನಲ್ಲಿ 'ಶ್ರೀ ಗೋಪಿನಾಥ ಶರಣು' ಎಂದಿದೆ ಮತ್ತು ಈ ಶಾಸನವನ್ನು ಮಣಿಗವಳ್ಳಿಯ ರೆಬ್ಬೋಜನ ಮಗ ಕಲ್ಲೋಜ ಹಾಗೂ ಬೊಂಮೋಜನ ಮಗ ವಾಮೋಜರು ಸೇರಿ ಕಂಡರಿಸಿದಂತೆ ಹೇಳಿದೆ ಹೀಗೆ ೪೯ ಸಾಲುಗಳುಳ್ಳ ಈ ಶಾಸನವನ್ನು ಇಬ್ಬರು ಕಂಡರಿಸಿರುವುದು ವಿಶೇಷವೆಂದು ಹೇಳಬಹುದು. ಈ ಶಾಸನಮಂ ಮಣಿಗವಳ್ಳಿಯ ರೆಬ್ಬೋ[ಜ]ನ ಮಗ ಕಲ್ಲೋಜನು ಬೊಂಮೋಜನ ಮಗ ವಾಮೋಜನುಂ ಕ[ಂ]ಡಳಿಸಿದರು ಎಂದು ಶಾಸನದಲ್ಲಿ ಹೇಳಿದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ತಾಲೂಕಾ ಆಫೀಸಿನ ಮೇಲಿರುವ ಶಾಸನವನ್ನು ರುದ್ರಭಟ್ಟೋಪಾಧ್ಯಾಯನ ಮಗ 'ಶ್ರೀಮ[ದ್ರುದ್ರ] ಭಟ್ಟೋಪಾಧ್ಯಾಯ ಸೂಮನಾ' ರಚಿಸಿದಂತೆ ತಿಳಿದುಬರುತ್ತದೆ. ಅಂದರೆ ಇಲ್ಲಿ ಲಿಪಿಕಾರನ ಹೆಸರಿಲ್ಲ. ಆದರೆ ಅವನ ತಂದೆಯ ಹೆಸರು ಉಲ್ಲೇಖವಾಗಿದೆ. ಇದರಿಂದಾಗಿ ತಂದೆ ಹಾಗೂ ಮಗ ಇಬ್ಬರೂ ಲಿಪಿಕಾರರಾಗಿದ್ದರೆಂದು ಹೇಳಬಹುದು. ಹಾವೇರಿ ಜಿಲ್ಲೆಯ ಕಾಗಿನೆಲೆ ಶಾಸನವು ಬಸದಿಯೊಂದಕ್ಕೆ ಸಂಬಂಧಿಸಿದ ಶಾಸನಗಳುಳ್ಳ ಕಂಬಗಳನ್ನು ಇಲ್ಲಿನ ಕಟ್ಟಡಕ್ಕೆ ಬಳಸಲಾಗಿದೆ. ರೂವಾರಿಗಳಾದ ಚಾವನ, ಮಸಣ ಈ ಇಬ್ಬರು ತಾವು ರಚಿಸಿದ ಕಂಬದ ಕೆಲಸದ ಬಗ್ಗೆ ಹೇಳಿಕೊಂಡಿದ್ದಾರೆ. ಹೀಗೆ ಯಾದವರ ಕಾಲದ ಶಾಸನಗಳನ್ನು ಬರೆದಿರುವ ಕವಿಗಳು, ಲಿಪಿಕಾರರು ಹಾಗೂ ರೂವಾರಿಗಳನ್ನು ಗಮನಿಸಬಹುದಾಗಿದೆ. ಸುಮಾರು ೬೦೦ರಷ್ಟು ಶಾಸನಗಳಿದ್ದರೂ ಕೇವಲ ೨೨ ಶಾಸನಗಳಲ್ಲಿ ಮಾತ್ರ. ಶಾಸನಗಳ ಕವಿಗಳ, ಲಿಪಿಕಾರರ ಮತ್ತು ರೂವಾರಿಗಳ ಉಲ್ಲೇಖಗಳು ಕಂಡುಬರುತ್ತವೆ.

ಆಕರಗ್ರಂಥಗಳು

೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್, ಸಂ. ೧೮.

೨. ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್, ಸಂ. ೧, ೪, ೫.

೩. ದೇವರಕೊಂಡಾರೆಡ್ಡಿ (ಸಂ.), ಕರ್ನಾಟಕ ಜೈನ ಶಾಸನಗಳು, ಸಂ. ೪ ಮತ್ತು ೫.

೪. ಉಪಾಧ್ಯಾಯ ಜಿ.ಎನ್., (ಸಂ.), ಮಹಾರಾಷ್ಟ್ರದ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೬.

೫. ದೇವರಕೊಂಡಾರೆಡ್ಡಿ (ಸಂ.), ಬಾಗಲಕೋಟೆ ಜಿಲ್ಲೆ, ಬಿಜಾಪುರ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಗಣೇಶ್ ಕೆ.ಆರ್. (ಸಂ.), ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೫ ಸಂ. ೧ ಮತ್ತು ೨.

೭. ಸುರೇಂದ್ರರಾವ್ ಬಿ. (ಸಂ.), ಕರ್ನಾಟಕ ಚರಿತ್ರೆ, ಸಂ. ೨.

೮. ಮೇವುಂಡಿ ಮಲ್ಲಾರಿ, ಕನ್ನಡ ಶಾಸನ ಕವಿಗಳು.

೯. ಕೃಷ್ಣರಾವ್ ಎಂ.ವಿ., ಕರ್ನಾಟಕ ಇತಿಹಾಸ ದರ್ಶನ.

೧೦. ನರಸಿಂಹಮೂರ್ತಿ ಎ.ವಿ., ಕರ್ನಾಟಕದ ಸೇವುಣರ ಇತಿಹಾಸ.

೧೧. ಕಲಬುರ್ಗಿ ಎಂ.ಎಂ., ಮಾರ್ಗ, ಸಂ. ೧.

◆◆

೩೫

ಮಲ್ಲಿಕಾರ್ಜುನ ಕುಂಬಾರ

ಶಾಸನಗಳಲ್ಲಿ 'ರೋಣ'

ಮಲಪ್ರಭೆ ನದಿಯ ದಡದಲ್ಲಿರುವ ರೋಣ ತಾಲೂಕಿನ ಭೂಪ್ರದೇಶವು ಆದಿಶಿಲಾಯುಗಕ್ಕೆ ಸೇರಿದೆ ಎಂದು ಕ್ರಿ.ಶ. ೧೮೬೪ರಲ್ಲಿ ಭೂವಿಜ್ಞಾನಿ ಬ್ರುಸ್ ಫುಟ್ ಗುರುತಿಸಿದ್ದಾರೆ. ಇದರಿಂದ ಇದು ಆದಿಶಿಲಾಯುಗದಿಂದಲೂ ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ಸುಮಾರು ೬ ನೆಯ ಶತಮಾನದ ಬಾದಾಮಿ ಚಾಲುಕ್ಯರ ಆಳ್ವಿಕೆಗಿಂತ ಮೊದಲು ರೋಣ ಸಣ್ಣಪುಟ್ಟ ಅರಸರ ಆಳ್ವಿಕೆಗೆ ಒಳಪಟ್ಟರೂ, ನಮಗೆ ಅಧಿಕೃತವಾಗಿ ದೊರೆಯುವ ಶಾಸನದಿಂದ ತಿಳಿದುಬರುವುದು ಬಾದಾಮಿ ಚಾಲುಕ್ಯರ ಕಾಲದಿಂದ, ಅಲ್ಲಿಂದ ಕ್ರಿ.ಶ. ೧೭೮೮ ರವರೆಗಿನ ಶಾಸನಗಳು ದೊರೆಯುತ್ತವೆ. ಬಾದಾಮಿಯ ಆರೇರ ಓಣಿಯಲ್ಲಿ ಕ್ರಿ.ಶ. ೭ನೆಯ ಶತಮಾನದ ಶಾಸನವೊಂದರಲ್ಲಿ ರೋಣದ ಶಿವದೇವಾಲಯದ(ರೋಣದ ಶ್ರೀಸಿವಾಲಯ) ಉಲ್ಲೇಖವಿದೆ. ಇಂತಹ ಪ್ರಾಚೀನ ಇತಿಹಾಸವನ್ನು ಹೊಂದಿದ ರೋಣ ಒಂದು ಕಾಲಕ್ಕೆ ಹೆಸರಾಂತ ಅಗ್ರಹಾರವಾಗಿತ್ತು. ತನ್ನ ಮೇಲೆ ದಾಳಿ ಮಾಡಿದವರ ಮೇಲೆ ಜೀವದ ಹಂಗು ತೊರೆದು ಹೋರಾಡಿದ ಶಕ್ತಿ ಈ ಮಣ್ಣಿನಲ್ಲಿದೆ. ಇಲ್ಲಿ ಈ ವರೆಗೂ ಒಟ್ಟು ೧೫ ಶಾಸನಗಳು ಪತ್ತೆಯಾಗಿವೆ. ಇವುಗಳಲ್ಲಿ ೫ ರಾಷ್ಟ್ರಕೂಟರಿಗೆ, ೮ ಕಲ್ಯಾಣ ಚಾಲುಕ್ಯರಿಗೆ, ೨ ಶಾಸನಗಳು ವಿಜಯನಗರ ಅರಸರ ಕಾಲಕ್ಕೆ ಸೇರಿದವುಗಳಾಗಿವೆ. ಇದರಲ್ಲಿ ಎರಡು ವೀರಗಲ್ಲುಗಳು ಕೂಡಾ ಸೇರಿವೆ. ಈ ವೀರಗಲ್ಲುಗಳಲ್ಲಿರುವವರು ರಾಜರಲ್ಲ !, ಸಾಮಾನ್ಯ ಜನರು. ತಮ್ಮ ಊರಿನ ಮಾನ ಕಾಯಲು ಅವರ ತ್ಯಾಗದ ಹೋರಾಟ ನಿಜಕ್ಕೂ ನಮ್ಮ ಕಣ್ಣು ತೆರೆಯಿಸುತ್ತದೆ.

ಬೆಳ್ವೊಲ-೩೦೦ಕ್ಕೆ ಸೇರಿದ ರೋಣ ಪಟ್ಟಣವನ್ನು ಶಾಸನಗಳು 'ಸರ್ವಧರ್ಮಧೇನು ನಿವಹಕ್ಕೆ ಆಡುಂಬೊಲಂ ಬೆಳ್ವೊಲಂ' ಎಂದು ಮನದುಂಬಿ ವರ್ಣಿಸುತ್ತವೆ. ಧರ್ಮವನ್ನು ಹಸುಗಳಿಗೆ ಹೋಲಿಸಿ ಇಂತಹ ಬೆಳ್ವೊಲ ನಾಡು ಧರ್ಮವೆಂಬ ಹಸುಗಳು ಹಾಯಾಗಿ ವಿಹರಿಸುವ ಪ್ರದೇಶವೆಂದು ಬಣ್ಣಿಸುತ್ತದೆ. ಇದನ್ನು ಇಂದ್ರನ ಅಮರಾವತಿಗೆ ಸಮಾನವೆಂದು, 'ಶ್ರೀ ರಮಣೀಪ್ರಿಯ(ನಿಲಯ)। ದ್ವಾರಾವತಿಗಂ ಸುರೇಂದ್ರನಮರಾವತಿಗಂ॥ ಸಾರಂ ಧರಣಿ ವನಿತೆಯ। ಹಾರಂ ಶ್ರೀ ರೋಣಮೊಪ್ಪುಗುಂ ವಸುಮತಿಯೊಳ್॥" ಎಂದು ಬಣ್ಣಿಸಿ, ಚಾಲುಕ್ಯ ರಾಜ ಒಂದನೆ ಜಗದೇಕಮಲ್ಲ ಜಯಸಿಂಹನ ಆಳ್ವಿಕೆಯಲ್ಲಿ ಸಂಕಿಮಯ್ಯನು ರೋಣದ ಮೂಲಸ್ಥಾನ ದೇವಸ್ಥಾನವನ್ನು ಕಟ್ಟಿಸಿದನು. ಅವನ ಸಹೋದರ ಮಾಚಿಮಯ್ಯನು ಇಲ್ಲಿ ಜನರಿಗಾಗಿ ಸತ್ರವನ್ನು ನಿರ್ಮಿಸಿ, ನೀರಿಗಾಗಿ ಬಾವಿಯನ್ನು ತೋಡಿಸುತ್ತಾನೆ. ಇದನ್ನು ಉಲ್ಲೇಖಿಸುವ ಶಾಸನದಲ್ಲಿ ಆಯ್ತವರ್ಮನ ಮಗ ಸಂಕಿಮಯ್ಯನನ್ನು "ಆತಂಗೆ ಸುಜನ ಜನ ವಿ। ಖ್ಯಾತಂಗೆ ಜಗಜ್ಜನೈಕ ನುತ

'ವಚನ', ರಾಜೂರ ಅಂಚೆ
ಗಜೇಂದ್ರಗಡ, ಗದಗ ಜಿಲ್ಲೆ
ಮೊ: ೯೪೪೯೨ ೨೦೭೬

ಚರಿತಂ ನಿ॥ ಧೂರ್ತಾಘನಿಚಯನುರ್ವಿ। ಖಾತಂ ಶ್ರೀ ಸಂಕಮಯ್ಯನಾದಂ ತನಯಂ॥ ಕ್ಷಿತಿವಳಯಂ ಬಣ್ಣಿಸಲು। ನ್ನತಿಯಂ ಮಾಡಿಸಿದನೆಸೆವಿನಂ ರೋಣದೊಳು॥ ನ್ನತಮೆನೆ ಮೂಲಸ್ಥಾನಾ। ಯತನಮನಾ ಸಂಕಿಮಯ್ಯನೆನೆ ಪೊಗಳದರಾರ್॥" ಎಂದು ಬಣ್ಣಿಸುತ್ತಾ ಮುಂದುವರೆದು ಮಾಚಿಮಯ್ಯನನ್ನು ಕುರಿತು "ಜಗತೀಜನಹಿತಮಂ ವಿಬು। ಧಗಣಾಗ್ರಣಿ ಮಾವಿಮಯ್ಯನುರ್ವೀವಳಯಂ॥ ಪೊಗಳಲ್ ರೋಣದ ಮಣಿಯರ। ನೆಗಳ್ದೂರಮೆಯೆಳಗೆ ಬಾವಿಯಂ ತೋಡಿಸಿದಂ॥"[೧] ಎಂದು ಕಾವ್ಯಾತ್ಮಕವಾಗಿ ಹೊಗಳುತ್ತದೆ.

ಕ್ರಿ.ಶ. ೧೧೭೯ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಸಾಮಂತ ಕಳಚುರಿ ಸಂಕಮನ ಆಳ್ವಿಕೆಯಲ್ಲಿ ಸಿಂದ ವಂಶದ ವಿಕ್ರಮಾದಿತ್ಯನು ಬಾಚಿಯ ಸಾಹಣಿಯ ಕೋರಿಕೆಯಂತೆ ಚಾಮೇಶ್ವರ, ಮಾಳೇಶ್ವರ ದೇವಾಲಯಗಳಿಗೆ ಭೂದಾನ ನೀಡುವ ಶಾಸನದಲ್ಲಿ ಸಮುದ್ರ, ಮೇರು ಪರ್ವತ, ಕುಂತಳದೇಶ, ಅದರ ಮಧ್ಯದೇಶ, ಅರಸರುಗಳಾದ ಸಂಕಮದೇವ, ಅಚುಗಿ, ಪೆರ್ಮಾಡಿದೇವ, ಚಾವುಂಡಭೂಪ, ವಿಕ್ರಮಾದಿತ್ಯ, ಬಾಚಿಯ ಸಾಹಣಿಯನ್ನು ಶಾಸನದ ಸಾಲುಗಳಲ್ಲಿ ಹೃದಯದುಂಬಿ ಹೊಗಳಲಾಗಿದೆ.[೨]

ಇಲ್ಲಿನ ಕ್ರಿ.ಶ. ೯೪೨ರ ಶಾಸನವು ಹೇಳುತ್ತದೆ. ಪಂಪಯ್ಯನ ವೀರಮರಣದ ೩೪ ವರ್ಷಗಳ ನಂತರ ಕಾಶ್ಯಪ ಗೋತ್ರದ ಬಳಗವಟ್ಟಿ ವಂಶದ ರಾಚಗಿವರ್ಮಯ್ಯನೆಂಬವನೂ ಕೂಡಾ ಇದೇ ಹಾದಿಯನ್ನು ಹಿಡಿಯುತ್ತಾನೆಂದು ಕ್ರಿ.ಶ. ೯೭೬ ರಲ್ಲಿನ ಶಾಸನವು ಹೇಳುತ್ತದೆ. ಹೀಗೆ ಅರಸರ, ಅಧಿಕಾರಿಗಳ ದೌರ್ಜನ್ಯವನ್ನು ಪ್ರತಿಭಟಿಸಿ ಸಿಡಿದೆದ್ದ ನಿದರ್ಶನಗಳು ಅದರಲ್ಲೂ ರಾಷ್ಟ್ರಕೂಟರ ಇತಿಹಾಸದಲ್ಲಿ ತುಂಬಾ ವಿರಳವಾದರೂ ರೋಣದ ಈ ಪ್ರತಿಭಟನೆ ವಿಶೇಷವಾಗಿ ತೋರುತ್ತದೆ. ಈ ಎರಡು ವೀರಗಲ್ಲುಗಳು ರೋಣದ ಇತಿಹಾಸನ್ನು ಹೇಳುತ್ತವೆ.

ಕ್ರಿ.ಶ. ೧೧೭೯ರ ಸೋಮೇಶ್ವರ ದೇವಾಲಯದ ಶಾಸನದಲ್ಲಿ ಕಲ್ಲುಮಠದ ಆಚಾರ್ಯ ಗುರುಭಕ್ತ ದೇವನ ಗುರುಪರಂಪರೆಯನ್ನು ಹೇಳಲಾಗಿದೆ. ಕಾಳಾಮುಖ ಪರ್ವತಾವಳಿಯ ಕೊಪ್ಪಿನ ವಕ್ಖಾಣದೇವರ ಶಿಷ್ಯ ರುದ್ರಶಕ್ತಿ ದೇವರು, ಅವರ ಶಿಷ್ಯ ಜ್ಞಾನಶಕ್ತಿದೇವರು, ಅವರ ಶಿಷ್ಯ ಗುರುಭಕ್ತಿ ದೇವರು ಎಂದು ಹೇಳುತ್ತದೆ. ಇದೇ ಕಾಲದಲ್ಲಿ (ಕ್ರಿ.ಶ. ೧೧೭೯) ಸಿಂದರಸ ಚಾವುಂಡನ ಮಕ್ಕಳಾದ ವೀರಬಿಜ್ಜಳ ಮತ್ತು ಮಿಕ್ಕರು ಎಂಬವರು ಕೆರೆಗೆ ಎರಡು ಮತ್ತರ, ಅರವಟಿಗೆಗೆ ಎರಡು ಮತ್ತರ ಭೂಮಿಯನ್ನು ದಾನ ಮಾಡುತ್ತಾರೆ. ಇದರೊಂದಿಗೆ ಬಲ್ಲವರಸರಿಂದ ರೋಣ ಮಹಾಜನರಿಗೆ ತುಪ್ಪದ ಸುಂಕದ (ಕ್ರಿ.ಶ. ೮೭೪) ದಾನ, ಬಾಲಿವಂಶದ ತುರಗವೆಡಂಗ ಬನಿಯ ಬಿಟ್ಟ (ಕ್ರಿ.ಶ. ೯) ವಿಷಯ, ಸಿಂದ ವಂಶದ ಮಹಾಮಂಡಳೇಶ್ವರ ವಿಕ್ರಮಾದಿತ್ಯನಿಂದ ಚಾಮೇಶ್ವರ ಮತ್ತು ಮಲ್ಲೇಶ್ವರ ದೇವರಿಗೆ (ಕ್ರಿ.ಶ. ೧೧೭೯) ಭೂದಾನ, ಬದವಿಯ ಮಲರಸನು ಹನುಮಂತ ದೇವರ (ಕ್ರಿ.ಶ. ೧೬) ಗುಡಿಗೆ ಭೂದಾನ, ನೀಡಿದ ಹಲವು ಶೈವ ಶಾಸನಗಳಿವೆ. ಇದರೊಂದಿಗೆ ಸುಮಾರು ೧೧-೧೨ನೆಯ ಶತಮಾನದ ಕಲ್ಯಾಣರ ಚಾಲುಕ್ಯರ ಕಾಲದ ಮೂಲಸಂಘದ ಮತ್ತು ದೇವಗಣದ ಆಚಾರ್ಯ ಶ್ರೀ ಶಂಖದೇವರು ಇಲ್ಲಿನ ಪಾರ್ಶನಾಥ ವಿಗ್ರಹವನ್ನು ಸ್ಥಾಪಿಸಿದ ಬಗ್ಗೆ ಉಲ್ಲೇಖಿಸುತ್ತದೆ.

ಇಲ್ಲಿ ಲೋಕನಾಥ, ಸೋಮಲಿಂಗೇಶ್ವರ, ಮಲ್ಲಿಕಾರ್ಜುನ, ಸಂಗಮೇಶ್ವರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಆರಂಭದಲ್ಲಿ ನಿರ್ಮಾಣಗೊಂಡಿವೆ. ಇವುಗಳು ವಾಸ್ತು-ಶಿಲ್ಪ ವಿನ್ಯಾಸದಲ್ಲಿ ಸಾಕಷ್ಟು ಸಾಮ್ಯತೆ ಹೊಂದಿವೆ. ಇಂತಹ ವಿದ್ವತ್ ಮತ್ತು ಸೃಜನಶಕ್ತಿಯ ವಾರಸುದಾರರು ರೋಣದಲ್ಲಿದ್ದರು. ಆದರೆ ಸಾಕಷ್ಟು ಐತಿಹಾಸಿಕ ಸಂಪತ್ತನ್ನು ಹೊಂದಿದ ರೋಣ ಶಾಸನಗಳು ಮತ್ತು ಗುಡಿಗಳ ಸ್ಥಿತಿ ಮರುಕಪಡುವಂತ ದುಸ್ಥಿತಿಯಲ್ಲಿವೆ. ಕೆಲವು ಶಾಸನಗಳು ದನದ ಗೂಟದ ಕಲ್ಲುಗಳಾಗಿವೆ. ಕೆಲವು ಚರಂಡಿಗೆ ಬಿದ್ದರೆ, ಕೆಲವನ್ನು ಚರಂಡಿಗೆ ಹೊದಿಸಲಾಗಿದೆ. ಇಂದಿನ ಗುಡಿಗಳ ಸ್ಥಿತಿಯನ್ನು ನೋಡಿದರೆ, ಅಯ್ಯೋ, ಎನ್ನಿಸುತ್ತದೆ. ಅಲ್ಲಿ ಅಕ್ರಮ ಚಟುವಟಿಕೆಗಳ ತಾಣವಾಗಿದೆ. ಕೆಲವು ಕುಸಿದು ನೆಲಕಚ್ಚಿವೆ. ಚಾರಿತ್ರಿಕ ಮಹತ್ವವನ್ನು ಹೊಂದಿದ, ನಮ್ಮ ಪ್ರಾದೇಶಿಕ, ಉಪಸಂಸ್ಕೃತಿಯನ್ನು ತಿಳಿಸುವ ಗಟ್ಟಿ ಆಧಾರಗಳಾಗಿರುವ ಈ ಗುಡಿಗಳು ಮತ್ತು ಶಾಸನಗಳು ನಮ್ಮ ಸಾಂಸ್ಕೃತಿಕ ಸಂಪತ್ತುಗಳಾಗಿವೆ. ಇವುಗಳ ಬಗ್ಗೆ ನಮ್ಮಲ್ಲಿ ಸಂವೇದನೆ ಉಂಟಾಗಬೇಕು.

ಅಡಿಟಿಪ್ಪಣಿಗಳು

೧. EPI.XIX, ೨೨೨, ರೋಣ ಶಾಸನ, ಕ್ರಿ.ಶ. ೧೦೨೨.

೨. EPI.XIX, ೨೨೬, ರೋಣ ಶಾಸನ, ಕ್ರಿ.ಶ. ೧೧೭೯.

◆◆

೩೬

ನಿರ್ಮಲಾ ಎಸ್.ವೈ.

ಢಕ್ಕೆಬಲಿ : ಶಾಸನೋಕ್ತ ಪೂಜಾಚರಣೆ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟ ಸಂಸ್ಕೃತಿಯ ಪ್ರತೀಕವೆಂದರೆ ಅಲ್ಲಿನ ಭೂತಾರಾಧನೆ, ನಾಗಾರಾಧನೆ, ಯಕ್ಷಗಾನ, ಕಂಬಳ ಮುಂತಾದವು. ನಾಗಾರಾಧನೆಯಲ್ಲಿ ನಾಗಮಂಡಲ, ಢಕ್ಕೆಬಲಿ ಮೊದಲಾದ ಪೂಜಾವಿಧಿ/ಸೇವೆ/ಆಚರಣೆಗಳನ್ನು ಕಾಣಬಹುದು. ನಾಗಮಂಡಲದ ಸಂಕ್ಷೇಪರೂಪದ ಆಚರಣೆ ಢಕ್ಕೆಬಲಿ ಎಂದರೆ ತಪ್ಪಾಗಲಾರದು. ಈ ಪೂಜಾವಿಧಿ/ಸೇವೆ/ಆಚರಣೆಗಳ ಮೇಲುಸ್ತುವಾರಿ ಬ್ರಾಹ್ಮಣರು ವಹಿಸಿದರೆ, ಅದರ ಧಾರ್ಮಿಕಕ್ರಿಯೆಗಳನ್ನು ನಡೆಸುವವರು ದಲಿತವರ್ಗದವರು. ಇದು ಆರ್ಯಸಂಸ್ಕೃತಿಯ ಪ್ರಭಾವದಿಂದ ದ್ರಾವಿಡ ಸಂಸ್ಕೃತಿಯ ದೈವಗಳ ಕಲ್ಪನೆಯಲ್ಲಿ ಕೆಲ ಬದಲಾವಣೆಗಳಾದವು. ಹೆಚ್ಚಿನ ದೈವಗಳು ಈಶ್ವರ ಗಣಗಳ ಅವತಾರವೆಂದು ಹೊಸ ಪುರಾಣಗಳಲ್ಲಿ ಹೆಣೆಯಲಾಯಿತು ಎಂದು ಸುಶೀಲ ಉಪಾಧ್ಯಾಯ ಅವರು ಅಭಿಪ್ರಾಯಪಡುತ್ತಾರೆ.

ಹರಕೆಯ ಸ್ವರೂಪದಲ್ಲಿ ಸ್ಥಳೀಯ ದೈವಗಳಿಗೆ ಜರುಗುವ ಧಾರ್ಮಿಕ ಕ್ರಿಯೆ ಢಕ್ಕೆಬಲಿ ಸೇವೆಯನ್ನು ನಡೆಸುವವರು ಬ್ರಾಹ್ಮಣ ವರ್ಗಕ್ಕೆ ಸೇರಿದ ವೈದ್ಯರು ಹಾಗೂ ಪಾಣರು. ತುಳುನಾಡಿನ ಪ್ರದೇಶದಲ್ಲಿ ಪ್ರಚಲಿತವಿರುವ ನಾಗಮಂಡಲವನ್ನು ಈಗ ಬ್ರಾಹ್ಮಣ ಪಾತ್ರಿಗಳು ಹಾಗು ಬ್ರಾಹ್ಮಣ ವರ್ಗಕ್ಕೆ ಸೇರಿದ ವೈದ್ಯ ಜನಾಂಗದವರು ನಡೆಸಿಕೊಡುತ್ತಾರೆ. ಪೂಜೆ, ಆವಾಹನೆ ಮೊದಲಾದ ಆಚರಣೆಗಳಿಂದ ಇದು ಇಂದು ಬ್ರಾಹ್ಮಣರ ಅಥವಾ ವೈದಿಕ ಆಚರಣೆಯಂತೆ ಕಂಡುಬಂದರೂ ಅದು ಮೂಲತಃ ತಾಂತ್ರಿಕ ಮೂಲದ ಒಂದು ಸ್ಥಳೀಯ ಆಚರಣೆಯಾಗಿದ್ದಿರಬೇಕು ಎಂಬುದಕ್ಕೆ ನಾಗಮಂಡಲದ ರಚನೆಯಲ್ಲಿ ಆಧಾರಗಳು ಸಿಗುತ್ತವೆ. ಪಾಣರು ನಡೆಸುವ ಢಕ್ಕೆಬಲಿಯೇ ನಾಗಮಂಡಲಕ್ಕೆ ಮೂಲವಾಗಿರಬಹುದು ಎಂದು ಎ.ವಿ. ನಾವಡ ಅವರು ಅಭಿಪ್ರಾಯಪಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಭಾಗದಲ್ಲಿ ವಿಷ್ಣು, ಶಿವ ಮುಂತಾದ ಆರ್ಯ ವೈದಿಕ ದೇವತೆಗಳ ಆರಾಧನೆಯೊಂದಿಗೆ ಸ್ವಾಮಿ ಅಥವಾ ಸ್ವಾಮಿಲಿಂಗ, ನಂದಿ, ಹಾಯ್ಗುಳಿ, ಹುಲಿ, ಹಳೆಯಮ್ಮ, ತಾಯಿ, ಚಿಕ್ಕು, ಮಾಸ್ತಿ, ಉಮ್ಮಳ್ತಿ, ಕ್ಷೇತ್ರಪಾಲ, ಕಾಡ್ತಿಯಮ್ಮ, ಪಂಜುರ್ಲಿ, ಕಲ್ಕುಡ, ಬೊಬ್ಬರ್ಯ ಸೇರಿದಂತೆ ಅನೇಕ ದೈವಗಳಿಗೆ ಆರಾಧನೆಯನ್ನು ನಡೆಸುತ್ತಾರೆ. ಈ ಆರ್ಯೇತರ ಆರಾಧನೆಯ ಮುಖ್ಯ ರೂವಾರಿಗಳು ಪಾಣರು ಮತ್ತು ವೈದ್ಯರು. ವೈದ್ಯರು ನಡೆಸುವ ಢಕ್ಕೆಬಲಿಯನ್ನು ಮಂಡ್ಲಭೋಗ, ಮಂಡಲಸೇವೆ ಎನ್ನುತ್ತಾರೆ. ಪಾಣರು ನಡೆಸುವ ಢಕ್ಕೆಬಲಿ ಹಾಗೂ ವೈದ್ಯರು ನಡೆಸುವ ಢಕ್ಕೆಬಲಿಯಲ್ಲಿ ಮೂಲಭೂತವಾಗಿ ವ್ಯತ್ಯಾಸಗಳು ಇಲ್ಲದಿದ್ದರೂ ಆಚರಣೆಯ ವಿಧಿವಿಧಾನಗಳಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸಗಳು ಕಾಣಿಸುತ್ತವೆ. ನಿತ್ಯಜೀವನದಲ್ಲಿ ತೊಂದರೆ

೨೨೩, ೩ನೇ ಅಡ್ಡರಸ್ತೆ
ಚನ್ನಮ್ಮನಕೆರೆ ಅಚ್ಚುಕಟ್ಟು
ತ್ಯಾಗರಾಜನಗರ
ಬೆಂಗಳೂರು–೫೬೦೦೭೦
ಮೊ: ೮೩೧೦೨ ೫೬೦೬೯

ಗಳು ಉಂಟಾದಾಗ ಅವಕ್ಕೆ ಕಾರಣಗಳು ಬುದ್ಧಿಗೆ ಗೋಚರವಾಗದಿದ್ದಾಗ ಅಲೌಕಿಕ ಶಕ್ತಿಗಳು ಕಾರಣವಿರಬಹುದು ಎಂದು ನಂಬಿದ ದೈವಗಳ ಮೊರೆಹೋಗುವುದು, ಅಲೌಕಿಕ ಶಕ್ತಿಗಳ ಪ್ರೀತ್ಯರ್ಥವಾಗಿ ನಡೆಸುವ ಹಲವಾರು ಧಾರ್ಮಿಕ ಕ್ರಿಯೆಗಳಲ್ಲಿ ಢಕ್ಕೆಬಲಿಯು ಒಂದು. ಈ ಪೂಜಾವಿಧಾನವು ಸರಿಸುಮಾರು ೬೦೦ಕ್ಕೂ ಹೆಚ್ಚು ವರ್ಷಗಳಿಗೂ ಹಿಂದಿನದು ಎಂದು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು.

ಸಂಜೆಯ ವೇಳೆಯಲ್ಲಿ ಹರಕೆಯ ಸ್ವರೂಪದಲ್ಲಿ ನಡೆಯುವ ಢಕ್ಕೆಬಲಿಯು ದೈವಸ್ಥಾನಗಳಲ್ಲಿ ಜರುಗುತ್ತದೆ. ದೈವಸ್ಥಾನದಲ್ಲಿರುವ ದೈವಕ್ಕೆ ಪೂಜೆಯನ್ನು ಮಾಡಿ, ಅದರ ಅನುಮತಿ ಪಡೆದುಕೊಳ್ಳುತ್ತಾನೆ ಢಕ್ಕೆಬಲಿಯ ನರ್ತನಪಾತ್ರಿ. ಈತನೊಂದಿಗೆ ಎರಡು–ಮೂರು ಮಂದಿ ಸಹಾಯಕರು ಇರುತ್ತಾರೆ. ದೈವದ ಅನುಮತಿ ಪಡೆದ ನಂತರ, ದೈವಸ್ಥಾನದ ಹೊರಗೆ ಮುಂಚಿತವಾಗಿ ಬರೆದಿದ್ದ ಮಂಡಲಕ್ಕೆ ಪೂಜೆಯನ್ನು ನಡೆಸುತ್ತಾರೆ. ದೈವಸ್ಥಾನದ ಅರ್ಚಕರು ಈ ಮಂಡಲಕ್ಕೆ ಪೂಜೆಯನ್ನು ನಡೆಸಿದ ನಂತರ ಅರ್ಧನಾರಿ ವೇಷವನ್ನು ತೊಟ್ಟ ನರ್ತನಪಾತ್ರಿಯು ಢಕ್ಕೆಬಲಿಸೇವೆಯನ್ನು ಮುಂದುವರೆಸುತ್ತಾನೆ. ಸಾಮಾನ್ಯವಾಗಿ ಬ್ರಹ್ಮನಿಗೆ, ದೇವಿಗೆ ನಡೆಸುವ ಸೇವೆಯೇ ಢಮರು ಸೇವೆ. ಢಮರು ಸೇವೆ ಆಡುಭಾಷೆಯಲ್ಲಿ ಅದು ಢಕ್ಕೆಬಲಿ ಎಂದಾಗಿದೆ. ಢಮರು ಶಿವನ ಕೈಲಿರುವ ವಸ್ತು. ವಿಶೇಷವಾಗಿ ಬ್ರಹ್ಮದೇವರಿಗೆ ನಡೆಸುವ ಸೇವೆ. ಬ್ರಹ್ಮನಿಗೆ ಮೂರ್ತಿಪೂಜೆ ಇಲ್ಲ. ಹಾಗಾಗಿ ಶಿವನ ಸಪರಿವಾರದಲ್ಲಿ ಬರುವ ಬ್ರಹ್ಮನಿಗೆ ಆಕಾರವಿಲ್ಲ. ಅವನನ್ನು ಲಿಂಗಸ್ವರೂಪಿಯಾಗಿ ಪೂಜೆಯನ್ನು ಮಾಡುತ್ತಾರೆ. ಸಪರಿವಾರದಲ್ಲಿ ನಾಗನೊಂದಿಗೆ ಬ್ರಹ್ಮನನ್ನು ಪೂಜಿಸುತ್ತಾರೆ. ಮೊದಲು ಅರಶಿನ ಹಾಗು ಅಕ್ಕಿಹಿಟ್ಟನ್ನು ಹಾಲಿನಲ್ಲಿ ಸೇರಿಸಿ ನಾಗಶಿಲೆಗೆ ಅಭಿಷೇಕ ಮಾಡಿ ನಂತರ ಹರಕೆಯ ಸ್ವರೂಪದಲ್ಲಿ ಢಕ್ಕೆಬಲಿ ಸೇವೆಯು ಆರಂಭವಾಗುತ್ತದೆ. ಇದಕ್ಕೆ ಹಾಲಿಟ್ಟುಸೇವೆ ಎಂದು ಹೆಸರು. ಇಲ್ಲಿ ನಾಗಪಾತ್ರಿ ಈ ಸೇವೆಯನ್ನು ನಡೆಸುತ್ತಾನೆ. ಬ್ರಹ್ಮನ ಸ್ಥಳದಲ್ಲಿ ಬ್ರಹ್ಮನ ಪಾತ್ರಿ, ದೇವಿಯ ಸ್ಥಳದಲ್ಲಾದರೆ ದೇವೀ ಪಾತ್ರಿಗಳಿರುತ್ತಾರೆ. ನಂದಿ ಪಾತ್ರಿಗಳು ಇರುತ್ತಾರೆ. ಢಕ್ಕೆಬಲಿಯ ಸಂದರ್ಭದಲ್ಲಿ ಪಾತ್ರಿಗಳಿರುವುದಿಲ್ಲ. ಅರ್ಧನಾರಿ ವೇಷದಲ್ಲಿರುವ ನಾಗಕನ್ನಿಕೆಯೇ ಢಕ್ಕೆಬಲಿಸೇವೆಯ ಪ್ರಧಾನ ನರ್ತಕ.

ಮಂಡಲದ ರಚನೆ: ಒಂದು ಚೌಕಾಕಾರದೊಳಗೆ ಕುಂಡೋದರನನ್ನು (ಮನುಷ್ಯ ಮುಖ ಹಾಗೂ ಮಣ್ಣಿನ ಮಡಿಕೆಯ ಹಾಗೆ ಹೊಟ್ಟೆಯುಳ್ಳವ), ಆ ಚೌಕಾಕಾರದೊಳಗೆ ಸ್ವಸ್ತಿಕ, ಒಂದು ನಾಗ, ಒಂದು ತ್ರಿಶೂಲ, ಹಾಗೂ ಗಣಪತಿ ಎಂದು ಕರೆಯುವ ವೃತ್ತದೊಳಗಿನ ಎರಡು ತ್ರಿಕೋನಾಕೃತಿಗಳು ಪಂಚವರ್ಣದ ಹುಡಿ(ಅಕ್ಕಿಹಿಟ್ಟು)ಯಲ್ಲಿ ಬರೆಯಲಾಗುತ್ತದೆ. ಈ ತ್ರಿಕೋನಾಕೃತಿಯನ್ನು ಪ್ರಕೃತಿ–ಪುರುಷರ ಸಂಯೋಜನೆಯನ್ನು ಸೂಚಿಸುತ್ತವೆ ಎಂದು ಕಾ.ವೆಂ. ರಾಜಗೋಪಾಲರು



ಅಭಿಪ್ರಾಯಪಡುತ್ತಾರೆ. ಸುತ್ತಲೂ ಹೂವು ಹಾಗೂ ಸಿಂಗಾರದ ಹೂವಿನ ಅಲಂಕಾರವಿರುತ್ತದೆ. ನಾಲ್ಕು ದಿಕ್ಕುಗಳಲ್ಲಿ ದೀಪವನ್ನು ಇಡಲಾಗುತ್ತದೆ. ಮಂಡಲದ ಮಧ್ಯೆ ಮೇಲ್ಭಾಗದ ಚಪ್ಪರದಲ್ಲಿ ತೆಂಗಿನ ಗರಿಯಿಂದ ಮಾಡಿದ ಸಿರಿಯೋಲೆಗಳನ್ನು ಕಟ್ಟಿರುತ್ತಾರೆ. ಇದರಲ್ಲಿ ಶಂಖ, ಪದ್ಮ, ನವಿಲುಗಳು ಹೆಚ್ಚಾಗಿರುತ್ತದೆ. ನಾಗಕನ್ನಿಕೆ ಬಂದು ನಾಗನನ್ನು ಆಡಿಸುವಾಗ ಕಂಚಿನ ಢಕ್ಕೆಯನ್ನು ಬಾರಿಸುತ್ತಾರೆ. ಇದರಿಂದ ನಾಗ ಕೂಡಲೆ ಬರುತ್ತಾನೆಂಬ ನಂಬಿಕೆ. ಸಹಾಯಕರ ಕೈಯಲ್ಲಿರುವ ಢಕ್ಕೆ ಕಂಚಿನದಲ್ಲ.

ವೇಷಭೂಷಣ: ಪ್ರಧಾನ ನರ್ತಕನು ಗಾಢವಾದ ಕೆಂಪು ಸೀರೆಯುಟ್ಟು ರವಿಕೆಯನ್ನು ಧರಿಸಿ ಸೊಂಟಕ್ಕೆ ಪಟ್ಟಿಯನ್ನು ಕಟ್ಟಿರುತ್ತಾನೆ. ಕೈಗೆ ಕಡಗ, ಕಾಲಿಗೆ ಗಗ್ಗರ/ಗೆಜ್ಜೆಪಟ್ಟಿ, ತಲೆಗೆ ಜರಿಪಟ್ಟೆ ಸುತ್ತಿದ್ದ ಮುಂಡಾಸನ್ನು ಧರಿಸಿರುತ್ತಾನೆ. ಮುಂಡಾಸಿನ ತುದಿಯಲ್ಲಿ ತುರಾಯಿ ಇರುತ್ತದೆ. ಈತನ ಸಹಾಯಕರು ಪಂಚೆ, ಶಲ್ಯವನ್ನು ಧರಿಸಿರುತ್ತಾರೆ. ಒಬ್ಬನ ಕೈಯಲ್ಲಿ ಢಕ್ಕೆ ಇದ್ದರೆ, ಮತ್ತೊಬ್ಬನ ಕೈಯಲ್ಲಿ ತಾಳ ಇರುತ್ತದೆ. ಪ್ರಧಾನ ನರ್ತಕ ಒಂದು ಕೈಯಲ್ಲಿ ಢಕ್ಕೆಯನ್ನು ನುಡಿಸುತ್ತಾ ತಾನು ಆವಾಹಿಸಿಕೊಂಡ ದೈವವನ್ನು ಹೊಗಳುತ್ತಾ ನರ್ತಿಸುತ್ತಾನೆ. ಆ ದೈವಕ್ಕೆ ಸಂಬಂಧಪಟ್ಟ ಈತ ಈ ಕ್ರಿಯೆಯಲ್ಲಿ ಪ್ರಮುಖ ವ್ಯಕ್ತಿ. ಈತನ ಜೊತೆಗಾರರು ಇರುತ್ತಾರೆ. ಅವರು ಅರ್ಧನಾರಿ ವೇಷ ತೊಟ್ಟ ವ್ಯಕ್ತಿ ಢಕ್ಕೆಯ ನಾದದೊಡನೆ ಆಯಾಯಾ ದೈವಗಳ ನರ್ತನಪಾತ್ರಿಯು ಆ ದೈವದ ಹುಟ್ಟು, ಅಂಗಾಂಗಗಳ ಚೆಲುವು, ಪರಾಕ್ರಮ, ಹೊಗಳಿಕೆಯುಳ್ಳ ಹಾಡನ್ನು ಹಾಡುತ್ತಾ ಮಂಡಲ ಸುತ್ತುತ್ತಾ ಕುಣಿಯುತ್ತಾನೆ. ಅದೇ ಹಾಡನ್ನು ಉಳಿದವರು ಪುನರುಚ್ಚರಿಸುತ್ತಾರೆ. ನಾಗಗಳ ಆರಾಧನೆ ಪ್ರತೀಕವಾಗಿ ಅಷ್ಟಕುಲ ನಾಗಗಳನ್ನು ವರ್ಣಿಸುತ್ತಾ ಸ್ತುತಿಸುವುದು ಇದೆ. ಹೀಗೆ ಆವೇಶ ಹೆಚ್ಚಾದಂತೆ ಜೋರಾಗಿ ಢಕ್ಕೆಯನ್ನು ನುಡಿಸುತ್ತಾ ಹಿಂಗಾರವನ್ನು ಮಂಡಲಕ್ಕೆ ಸಮರ್ಪಿಸಿ ತನ್ನ ನರ್ತನೆ ಸೇವೆಯನ್ನು ಸಂಪೂರ್ಣಗೊಳಿಸುತ್ತಾನೆ.

ಇದೊಂದು ನರ್ತನಸೇವೆ. ನಾಗಾರಾಧನೆಯಲ್ಲಿ ನಡೆಯುವ ಪ್ರತಿಯೊಂದು ಪ್ರದರ್ಶನವು ಸೇವೆ–ಹರಕೆಯ ರೂಪದಲ್ಲಿಯೇ ಇರುತ್ತದೆ. ಇದನ್ನು ಶಾಸನಗಳಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು. ಶಾಸನಗಳು ದಕೆಯ ಬಲಿಪೂಜೆ/ದಕೆಬಲಿ ಎಂದು ಉಲ್ಲೇಖಿಸುತ್ತದೆ. ಹೊಸಾಳದ ಬಪ್ಪಳಾಪುರ ಗಣಪತಿ ದೇವಾಲಯದ ಪ್ರಾಕಾರದಲ್ಲಿ ನೆಟ್ಟಿರುವ ಶಾಸನವು ಶಾಲಿವಾಹನ ಶಕವರ್ಷ ೧೩೫೫ ಪರಿಧಾವಿ ಸಂವತ್ಸರದ ಮಾರ್ಗಶಿರ ಶುದ್ಧ ೧೪ ಶುಕ್ರವಾರದಂದು ಅಂದರೆ ಕ್ರಿ.ಶ.೧೪೩೨, ಡಿಸೆಂಬರ್ ೬ರ ಶನಿವಾರಕ್ಕೆ ಸರಿಹೊಂದುವ ಕಾಲದ ವಿವರಣೆ ಇದೆ. ಈ ಸಮಯದಲ್ಲಿ ವಿಜಯನಗರದರಸ ದೇವರಾಯನ ಮಹಾಪ್ರಧಾನಿಯಾಗಿದ್ದ ಪೆರುಮಾಳೆದೇವ ದಂಡನಾಯಕನ ನಿರೂಪದಂತೆ ಚಂಡರಸ ಒಡೆಯನು ಬಾರಕೂರು ಹೊಸಾಳ ಮುಂತಾದ ಪ್ರದೇಶಗಳನ್ನು ಆಳುತ್ತಿರುತ್ತಾನೆ. ಹೊಸಾಳದ ಚೌಳಿಕೇರಿಯ ವಿನಾಯಕದೇವರು, ಚೌಡೇಶ್ವರಿ ನಾರಾಯಣದೇವರುಗಳಿಗೆ ಕಾಲಕಾಲಗಳ ನಿತ್ಯನೈಮಿತ್ಯಕಗಳಿಗೆ ಹಾಗೂ ಬ್ರಾಹ್ಮಣರ ಭೋಜನ ಮುಂತಾದ ಕೆಲಸಗಳಿಗೆ ಸಂಬಂಧಿಸಿದಂತೆ ಈ ಹಿಂದೆ ರಂಗಣ್ಣಸೆಟ್ಟಿಯು ಮಾಡಿದ್ದ ಭೂದಾನವನ್ನು ಶಾಸನ ಹೀಗೆ ಉಲ್ಲೇಖಿಸಿದೆ: "*. . . ಕಂನೇ[ಶ] ವೊಡೆಯರಿಗೆ ಮೂಋುಕೇರಿಯ ವೊಳಗಣ ಅರಿಯ ಕೇರಿಯ [ವೊಬ್ಬ ಸೆಟ್ಟಿ]ಕಾ[ಱ ಐ]ವತೆರಡು ವೊಕ್ಕಲೊಳಗಾದ ಸಮಸ್ತ ಹಲರು ಕೊಟ್ಟ ದಾನಶಾಸನದ ಕ್ರಮವೆಂತೆಂದರಾ ಪೂರ್ವ್ವದಲಿ ರಂಗಂಣಸೆಟ್ಟಿ . . . . ಆ ವಿನಾಯಕ ದೇವರಿಗೆ ಎರಡು ಹೊತ್ತಿಗೆ ಕಂಚಿನ ವೊಪ್ಪಾನೆ ಅಕ್ಕಿ ನೈವೇದ್ಯ ಗಂಧಧೂಪ ಪೂಜಾರಿಗೆ ಮಾಲೆಯ ಕಟ್ಟುವವರಿಗೆ ದೇವ[ದೀ]... [ದೇ]ವರ ಚೌತಿಯಹೋಮ ನಾಲ್ವತ್ತ ಎಂಟು ಮಂದಿ ಬ್ರಾಹ್ಮಣ ಭೋಜನ ಬ್ರಹ್ಮರು ನಾಗರಿಗೆ ಹಾಲು [ಹೆ]... ದಕೆಯ ಬಲಿಪೂಜೆ [ಅ]ರಿಯ ಕೇರಿಯ ಹಲರಿಗೆ ಎಂಟು ವೀಳೆಯ ಚೌಡೇಶ್ವರಿಗೆ ಎಳು ದಿನದ ಕಥೆಯ ಬಿಯ ಮುಗಿವ ದಿನ ಪುಜೆ ಕಥೆಯ ಹೇಳಿದವರಿಗೆ ಉಡುಗೊಱೆ ಪ್ರತಿ ಅಮಾವಾಸೆಯಲು ಯಿಬ್ಬರು ಬ್ರಾಹ್ಮಣ ಭೋಜನ . . .*" ಹೀಗೆ ಶಾಸನ ಮುಂದುವರೆಯುತ್ತದೆ. ರಂಗಣ್ಣಸೆಟ್ಟಿಯ ಕಾಲದಲ್ಲಿ ಈ ದಾನದತ್ತಿಗಳನ್ನು ನವೀಕರಿಸಿ ಕಂನೇಶವೊಡೆಯರಿಗೆ ಒಪ್ಪಿಸಿದ ವಿಷಯವನ್ನು ದಾಖಲಿಸಿದೆ.

ಮತ್ತೊಂದು ಶಾಸನವು ಕ್ರಿ.ಶ.೧೫೬೭ರ ಶಾಸನವು ಬಾರಕೂರಿನ ಪಾಳುಬಿದ್ದ ದೇವಾಲಯದ ಪ್ರಾಕಾರದೊಳಗಿದ್ದು ಇದು ಸದಾಶಿವರಾಯನ ಕಾಲಕ್ಕೆ ಸೇರುತ್ತದೆ. ೧೩೦ ವರ್ಷಗಳ ಹಿಂದೆ ರಂಗಣ್ಣಸೆಟ್ಟಿ ಮಾಡಿದ್ದ ದಾನದ ಭೂಮಿಗಳನ್ನು ಕಲೆಯೆಲ್ಲಪೊಡೆಯರು ತಮ್ಮ ವಶಕ್ಕೆ ತೆಗೆದುಕೊಂಡು ಪುನರ್‌ನವೀಕರಿಸಿ ಕೊಟ್ಟದ್ದನ್ನು ಶಾಸನ ದಾಖಲಿಸಿದೆ. "*. . . ವೀರಸದಾಶಿವರಾಯ ಮಹಾರಾಯರೂ ವಿಜಯನಗರದ ಸಿಂಹಾಸನದಲು ಸುಖಸಕ್ಥಾ ವಿನೋದದಿಂದ . . . ಆ ಮಹಾರಾಯರ ನಿರೂಪದಿಂ ವೆಂಕಟಾದ್ರಿ ರಾಯರು ಮುಂತಾಗಿ ಅರಸುಗಳು ಕೆಳದಿ ಸದಾಶಿವರಾಯ ನಾಯಕ ಅಯ್ಯನವರಿಗೆ ಬಾರಕೂರ ರಾಜ್ಯವನೂ ಪಾಲಿಸಿದಲ್ಲಿ ಆ ಸದಾಶಿವರಾಯನಾಯಕ ಅಯ್ಯನವರು ನಿರೂಪದಿಂದ ಕಲೆಯೆಲ್ಲಪೊಡೆರು ಬಾರಕೂರ ಸಿಂಹಾಸನದಲ್ಲಿ ಕುಳಿತ್ತು ರಾಜ್ಯವನಾಳುವ ಕಾಲದಲ್ಲಿ ಮುರುಕ್ಕೇರಿಯ ವೊಳಗಣ ರಂಗಣನಕ್ಕೇರಿಯ ಶ್ರೀ*

ಕೇಶವನಾತ್ತ ದೇವರಸ್ತನ ಮತ್ತು ವಿನಾಯಕ ದೇವಾಲ್ಯವನೂ ಜೀರ್ನೋದ್ಧಾರವ ಮಾಡಿ ಬರಸಿದ ದಂರ್ಮ್ಮಶಾಸನದ ಕ್ರಮವೆಂತೆಂದರೆ ಪೂರ್ವದಲು ರಂಗಣ್ಣಸೆಟ್ಟಿ ಮಾಡಿದ ಧರ್ಮ್ಮದ ಬಾಳನು ದೇವಸ್ವದ ಬಾಳನು . . . ಪಂಚಪರ್ವಕೆ ಮು ೫ ಚಉತ್ತಿ ಮಹಾಚಉತ್ತಿ ೨ಕೆ ಹಾ ೨ ಚಉಡೇಶ್ವರಿಗೂ ನಾಗರಿಗೂ ಉರಿತ ಶಂಕ್ರಂತಿಯಲ್ಲಿ **ದೆಕ್ಕೆಬಲಿ** *ಹಾಲು ಹಿಂಡಿ ಅರೆಯವೊಂಬ ಸೆಟ ಕಾರ್ರತಿ ಯೀವಂತ ಯೆರಡು ಮಂದಿ ಹಲರ ಉತ ವಿಳೇಯಂಕೆ ಮು ೧೨ . . .*" ಎಂದಿದೆ.

ಹಿಂದೆ ಕೊಟ್ಟಿದ್ದ ದಾನವನ್ನು (ಕ್ರಿ.ಶ.೧೪೩೨) ರಂಗಣ್ಣನು ಪುನಃನವೀಕರಿಸಿ ಕೊಟ್ಟಂತ ದಾನವನ್ನು ೧೩೦ ವರ್ಷಗಳ ನಂತರವು ರಂಗಣ್ಣನ ದಾನವನ್ನು ಪುನಃ ನವೀಕರಿಸಿ ಕೊಡಲಾಗಿದೆ. ಆ ಸಂದರ್ಭದಲ್ಲಿ ಢಕೆಯಬಲಿಗೆ ಹಾಗೂ ಮತ್ತಿತರ ಪೂಜೆಗಳಿಗೆ ದಾನ ಕೊಟ್ಟಿದ್ದನ್ನು ದಾಖಲಿಸಿದೆ.

ಈ ಢಕ್ಕೆಬಲಿಯ ಪೂಜೆಯು ೬೦೦ಕ್ಕೂ ಹೆಚ್ಚಿನ ವರ್ಷಗಳಿಗೂ ಹಿಂದಿನಿಂದಲೂ ನಡೆದುಬಂದ ಪೂಜೆ/ಸೇವೆಯಾಗಿದೆ ಎಂದು ಶಾಸನಗಳನ್ನು ಆಧರಿಸಿ ಹೇಳಬಹುದಾಗಿದೆ. ಪ್ರಸ್ತುತ ಇಂದಿಗೂ ಈ ರೀತಿಯ ಸೇವೆ/ಪೂಜೆಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದುಬರುತ್ತಿದೆ.

---

* ಪ್ರಸ್ತುತ ಲೇಖನಕ್ಕೆ ನೆರವಾದ ಮಟಪಾಡಿ ಗ್ರಾಮದ ಶ್ರೀ ಸದಾಶಿವ, ದಂಪತಿಗಳಾದ ಉಷಾಕ್ಕ ಹಾಗೂ ಶ್ರೀ ಗಿರೀಶ್ ಆಚಾರ್ಯ ಅವರಿಗೂ ಹಾಗೂ ನಂದಿಕೇಶ್ವರ ದೇವಸ್ಥಾನದ ಅರ್ಚಕಾರದ ಶ್ರೀ ಸೂರ್ಯ ಭಟ್ಟರಿಗೂ ಕ್ಷೇತ್ರಕಾರ್ಯದಲ್ಲಿ ನೆರವಾದ ಸೋದರಮಾವನ ಮಗ ಶ್ರೀ ನಾಗೇಂದ್ರ ಬಿಳಿಯ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಆಕರಗ್ರಂಥಗಳು

೧. ನಾವಡ ಎ.ವಿ., ೧೯೮೯, ನಾಗಮಂಡಲ ಢಕ್ಕೆಬಲಿ – ತುಳುವ ಆಚರಣೆಗಳಲ್ಲಿ ಕಲಾವಂತಿಕೆ.

೨. ರಾಜಗೋಪಾಲ ಕಾ.ವೆಂ., ೧೯೮೨, ಯಕ್ಷಗಾನ–ತಂತ್ರ, ಢಕ್ಕೆಬಲಿ–ನಾಗದರ್ಶನ.

೩. ಸೌತ್ ಇಂಡಿಯನ್ ಇನ್‌ಕ್ರಿಪಷನ್ಸ್ ಸಂಪುಟ ೨೭

೪. ಲಕ್ಷ್ಮೀ ವಿ., ೨೦೦೯, ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ.

♦♦

ಸಿದ್ಧಲಿಂಗಮ್ಮ ಕೊಂಡಜ್ಜಿ

ಹಾವೇರಿ ಜಿಲ್ಲೆಯ ಶಾಸನ ಸಾಹಿತ್ಯ

ಪ್ರಾಚೀನ ಕನ್ನಡ ಶಾಸನ ಮತ್ತು ಕಾವ್ಯಗಳನ್ನು ಅವಲೋಕಿಸಿದಾಗ ನಮಗೆ ಹಲವಾರು ಜನ ಕವಿಗಳು ಗಮನಕ್ಕೆ ಬರುತ್ತಾರೆ. ಕಾವ್ಯಗಳ ಮೂಲಕ ಪರಿಚಯವಾದಂತೆ ಶಾಸನಗಳಲ್ಲಿ ಕೆಲವು ಕವಿಗಳು ಕಂಡುಬರುತ್ತಾರೆ. ಶಾಸನ ಮತ್ತು ಕಾವ್ಯಗಳೆರಡನ್ನು ರಚಿಸಿ ಪ್ರಸಿದ್ಧಿ ಪಡೆದಿರುವವರ ಸಂಖ್ಯೆ ಬಹಳ ವಿರಳವಾಗಿದೆ ಎನ್ನಬಹುದು. ಕೆಲವು ಶಾಸನಗಳು ಸಮರ್ಥ ಕವಿಗಳಿಂದಲೇ ರಚಿಸಲ್ಪಟ್ಟಿದ್ದು, ಅವು ಪ್ರೌಢವಾದ ಕಾವ್ಯಗಳಾಗಿ ಹೊರಹೊಮ್ಮಿವೆ. ಉದಾ: ಕ್ರಿ.ಶ. ೧೧೩೪ರ ಹಾವೇರಿ ಶಾಸನವೊಂದರಲ್ಲಿ ಕವಿ ಮೂಕಣ ಪಣ್ಡಿತರನು ಇತಿಹಾಸ ಪ್ರಸಿದ್ಧ ಕುಂತಳನಾಡನ್ನು ಹಾಗೂ ಅದರ ಭಾಗವಾದ ಬನವಾಸಿಯನ್ನು ಹೀಗೆ ವರ್ಣಿಸುತ್ತಾನೆ: "ಅಮಿತದ್ವೀಪಾಬ್ದಿವೇಳಾವಳಯಿತ ವಸುಧಾಭಾಗದೊಳ್ ಕುನ್ತಳಂ ವಿಶ್ವ ಮಹೀಸಂಸೇವ್ಯಮಾ ಕುನ್ತಳಧರಣಿಗಳಂಕಾರಮೀ ತೆಂಕನಾಡಲ್ಲಿ ಮನೋಜ್ಞಂ ಖ್ಯಾತಮವ್ಯಾಹತಮೆನಿಸಿ ಸರಸ್ಸೇವ್ಯನೀರೇಜನಾನಾ ಕಮನೀಯೊದ್ಯನದಿಂದಂ ಬನವಸೆ ವಸುಧಾಭಾಮಿನೀರಮ್ಯಹರ್ಮ್ಯಂ"[೧] ಇಂಥ ಖ್ಯಾತಿಯನ್ನು ಪಡೆದ ರಮಣೀಯ ನಾಡಿನಲ್ಲಿ ಹಾವೇರಿ ಪಟ್ಟಣ ಕೇಂದ್ರವಾಗಿತ್ತು ಎಂದು ಉಲ್ಲೇಖಿಸುತ್ತಾ, ಮುಂದೆ ವರ್ಣಿಸುತ್ತಾ ಶಾಸನ ಮುಂದುವರಿಯುತ್ತದೆ. ಇಂಥಹ ಹಲವಾರು ವಿಷಯಗಳನ್ನು ಪ್ರಸ್ತುತ ಲೇಖನದಲ್ಲಿ ಹಾವೇರಿ ಹಾಗೂ ರಾಣೇಬೆನ್ನೂರು ತಾಲ್ಲೂಕಿನ ಶಾಸನಗಳನ್ನು ಅನುಲಕ್ಷಿಸಿ ಸಾಹಿತ್ಯಿಕ ಮತ್ತು ಚಾರಿತ್ರಿಕ ದೃಷ್ಟಿಯಿಂದ ಅವುಗಳನ್ನು ನೋಡಲಾಗಿದೆ.

ಪುರಹೂತನ ಪುರದೊಳ್ಮ
ಚ್ಚರಿಸುವುದಿದು ಭೋಗವತಿಯ ಭೋಗಮನುರೆ ಮಾಂ
ಕರಿಪುದು ಕುಬೇರನಳಕಾ
ಪುರದಳಕಮನಡ(ಸಿ) ಪಿಡಿದುಕೊಯ್ದುದು ಚೆಲ್ವಿಂ॥[೨]

ಸೌಂದರ್ಯದಲ್ಲಿ ಹಾವೇರಿ ಇಂದ್ರನ ರಾಜಧಾನಿಯನ್ನು ಅಂದರೆ ಸ್ವರ್ಗವನ್ನು ಮೀರಿಸುವಂತಹದು ಎಂದು ಹೇಳಿದ್ದಾನೆ. ಮುಂದೆ ಈ ಪ್ರದೇಶದ ಬೆಳೆಗಳ ವರ್ಣನೆ ಕಾಣಬಹುದಾಗಿದೆ. ಇಲ್ಲಿಯ ಉದ್ಯಾನವನವನ್ನು ಕವಿ ಹೀಗೆ ವರ್ಣಿಸುತ್ತಾನೆ.

ಎಳೆ ಮಾವಿಂದಬ್ಜ ಷಣ್ಡಂಗಳಿನಳಿಕುಳಝುಂಕಾರದಿಂ ಸಾರಪುಂಸ್ಕೋ
ಕಿಳ ಮಂದ್ರಾರವದಿಂ ಪೂಂಬಳೆಯ ಸೊವಳಿನಿಂ ಸುತ್ತಿ ಸರ್ವ್ವರ್ತ್ತುಕೋದ್ಯ
ತ್ಫಳಮಂ ತಾಳ್ದಿ(ರ್ದ್ದ) ಪೂಗಿವನದಿನೆಲೆಯ ತೋಂಟಂಗಳಿಂ ಕಾಯ್ತ
ತೆಂಗಿಂ ಫಳಮಂ ಪೇರುರ್ದ್ದ ರಂಬಾವನದಿನೆಸೆವ ವುದ್ಯಾನ ಲಕ್ಷ್ಮೀ(ನಿವಾ)ಸ ॥[೩]

ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಣೆಬೆನ್ನೂರು
ಹಾವೇರಿ ಜಿಲ್ಲೆ
ಮೊ: ೯೮೪೫೨ ೨೫೬೫೯

ಎಳೆ ಮಾವಿನಿಂದ, ತಾವರೆಗಳಿಂದ, ದುಂಬಿಗಳ ಝೇಂಕಾರದಿಂದ, ಕೋಗಿಲೆಗಳ ಇಳಿದನಿಯಿಂದ, ತೋಟಗಳಿಂದ, ತೆಂಗಿನ ವೃಕ್ಷಗಳಿಂದ, ಫಲಪುಷ್ಪಗಳಿಂದ ಈ ಉದ್ಯಾನವನ ಲಕ್ಷ್ಮೀಯ ಆವಾಸಸ್ಥಾನವಾಗಿತ್ತೆಂದು ಕವಿ ವರ್ಣಿಸುತ್ತಾನೆ.

ಸೇವಣ ದೊರೆ ಕನ್ನರನ ಶಾಸನದಲ್ಲಿ ಹಾವೇರಿಯನ್ನು ಹೀಗೆ ವರ್ಣಿಸಿದ್ದು ಕಂಡುಬರುತ್ತದೆ. "ಮೂಗು ಮೊಗಕ್ಕೆ ಚಂದನಸುಗನ್ಧಚಯಂ ನಿಟಿಳಕ್ಕೆ ರತ್ನ ಭೂಷಾಗಮಕಂ ಕೊರಲುಗೆ ಕಿವಿಗೊಪ್ಪುವ ಮುತ್ತಿನ ಕರ್ಣ್ಯ ಪೂರದಂತಾಗಳು ಮೊಪ್ಪುಗಂ ನೆಗೆರ್ದ್ದ ಪಾವರಿ ತಾಂ ಬನವಾಸೆ ನಾ(ಳ್ಗೆ)"[೪] ಎಂದು ಈ ಗದ್ಯದಲ್ಲಿ ವರ್ಣಿಸಿರುವರು. ಅಂದರೆ ಮುಖಕ್ಕೆ ಮೂಗು ಚಂದ, ಹಣೆಗೆ ಶ್ರೀಗಂಧ ಚಂದ, ರತ್ನಖಚಿತ ಹಾರ ಕೊರಳಿಗೆ ಚಂದ, ಮುತ್ತಿನ ಕಿವಿ ಓಲೆ ಕಿವಿಗೆ ಚಂದ, ಹಾಗೆ ಬನವಾಸಿ ನಾಡಿಗೆ ಹಾವೇರಿ ಚಂದವಾಗಿ ಕಂಗೊಳಿಸುತ್ತಿತ್ತು ಎಂದಿದೆ.

ಚೌಡಯ್ಯದಾನಪುರ ಶಾಸನಗಳು ಸಂಖ್ಯೆ ೨೪೪, ೨೪೬ ಇವು ಚಿಕ್ಕ ಚಂಪೂ ಕಾವ್ಯಗಳೇ ಆಗಿದ್ದು ಶಿವದೇವಮುನಿಯ ಕಾರ್ಯಗಳನ್ನು ವಿವರಿಸುತ್ತವೆ. ಶಿವನಿಗೆ ವಿವಿಧ ಭಾಷೆ ಕೊಟ್ಟನೆಂದು ಹೇಳುತ್ತವೆ.

ತಲೆದಂಡ ಸ್ವರ್ಗ ಮುಕ್ತಿಯ
ಫಲವನಪೇಕ್ಷಿಸಿದೆ ನಾದ
ಡೆಲೆ ಶಂಕರಾ ಕೇಳ್ ಸಲೆ ಪುಂಣ್ಯ ಪಾಪವೆರಡರ
ಫಲವಲ್ಲದ ನಿತ್ಯಪೂಜೆಯ ಮಾಡಿದಪೆಂ॥[೫]

ಸ್ವರ್ಗ, ಮುಕ್ತಿ ಫಲವನ್ನು ಅಪೇಕ್ಷಿಸಲಾರದೆ ಪುಣ್ಯಪಾಪ ಫಲವಲ್ಲದ ನಿತ್ಯ ನಿನ್ನ ಪೂಜೆಯನ್ನು ಮಾಡುವೆನೆಂದು ಭಾಷೆ ಇತ್ತುದನ್ನು ಶಾಸನ ಹೇಳುತ್ತದೆ. ಇದರಿಂದ ಶಿವದೇವನದು ಯಾವ ಫಲಾಪೇಕ್ಷೆಯಿಲ್ಲದ ನಿಷ್ಕಾಮ ಭಕ್ತಿಯಾಗಿತ್ತೆಂಬುದು ತಿಳಿದುಬರುತ್ತದೆ.

ಗುತ್ತಪೊಳಲಿನ ಅರಸರಾದ ಗುತ್ತರ ಶಾಸನಗಳಲ್ಲಿ ಕೆಲವು ಸೊಗಸಾದ ಸಾಹಿತ್ಯ ದೊರಕುತ್ತವೆ. ಅರಸರ ವಂಶಾವಳಿ, ಅವರ ಸಾಧನೆಗಳನ್ನು ಶಾಸನಗಳು ವರ್ಣನಾತ್ಮಕವಾಗಿ ವಿವರಿಸುತ್ತವೆ.

ಎನುತುಮ್ಮಳಿಪ್ಪ ಮನುಜರ
ಮನಸ್ತಮಂ ಪಿಂಗೆ ನಲಿಯೆ ಕವಿಚಕ್ರಂ ಮೇ
ದಿನಿ ಕಣ್ಬಡದವೋಲಾಗಿರೆ
ಜನಿಯಿಸಿದಂ ವೀರ ವಿಕ್ರಮಾದಿತ್ಯ ನ್ರಿಪಂ॥[೬]

ದುಃಖದಲ್ಲಿರುವ ಜನರ ಮನಸ್ಸಿನ ಕತ್ತಲು ಹಿಂಗುವಂತೆ, ಕವಿಗಳು ನಲಿಯುವಂತೆ, ಭೂಮಿಕಣ್ಣು ಪಡೆದಂತೆ ಗುತ್ತರ ವಿಕ್ರಮಾದಿತ್ಯ ನೃಪ ಜನಿಸಿದನೆಂದು ಶಾಸನ ವರ್ಣಿಸುತ್ತದೆ.

ಮಹಾಮಂಡಳೇಶ್ವರ ಚನ್ನರಸನದಾನ, ಧರ್ಮ ಕಾರ್ಯಗಳ ವಿವರಗಳನ್ನು ಗಳಗನಾಥ ಶಾಸನವು ಈ ರೀತಿ ಒದಗಿಸುತ್ತದೆ.

ಹರನ ವಿ(ನಿ) ಕೇತನಕ್ಕೆ ಮರನಂ ಕಡೆದಲ್ಲಿಯೆ ಕೆಯ್ಗಳಾದವೀ
ಸ್ವರಸದ್ಮಕ್ಕೆ ಕಲ್ಗಡಿದೊಡಲ್ಲಿಯೆ ಪೂಗೊಳನಾದವಿನ್ದು ಸೇ
ಕರಗ್ರಿಹ ಭಿತ್ತಿಗಿಟ್ಟಗೆಗಂ ಮಣ್ಣಗಲ್ದಿಲ್ಲಿ ತಟಾಕಮಾದುವೇಂ
ಪಿರಿಯನೋ ಧರ್ಮ್ಮವಿರ್ಮ್ಮಡಿಗೆ ವನ್ದುದು ಚನ್ನುಗ ಭೂಮಿಪಾಳನೆ॥[೭]

ಎಂದು ಬಣ್ಣಿಸುತ್ತವೆ. ಹರನ ದೇವಾಲಯಕ್ಕಾಗಿ ಮರಗಳ ಕಡೆದಾಗ ಅಲ್ಲಿ ಹೊಲಗಳಾದವು. ಈಶ್ವರನ ದೇವಾಲಯಕ್ಕಾಗಿ ಕಲ್ಲುಕಡಿದಾಗ ಅಲ್ಲಿ ಹೂಗಳಿಂದ ಕಂಗೊಳಿಸುವ ಕೊಳಗಳಾದವು. ಶಿವನ ದೇವಾಲಯದ ಗೋಡೆಗಳಿಗೆಂದು ಇಟ್ಟಿಗೆಗಾಗಿ ಮಣ್ಣು ಅಗೆದಲ್ಲಿ ಕೆರೆಗಳು ನಿರ್ಮಾಣವಾದವು. ಹೀಗೆ ಚನ್ನರಸನ ಧರ್ಮ ಕಾರ್ಯಗಳು ಎರಡು ಪಟ್ಟಾದುವೆಂದು ಶಾಸನ ವರ್ಣಿಸುತ್ತದೆ.

ಅರಸರ, ಮುನಿಗಳ, ಜನರ, ಮಂಡಲ, ನಾಡುಗಳ, ಗ್ರಾಮಗಳ ವರ್ಣನೆ ಇಲ್ಲಿಯ ಶಾಸನಗಳಲ್ಲಿ ಮಡುಗಟ್ಟಿ ನಿಂತಿದೆ. ಉದಾಹರಣೆಗಾಗಿ ಕೆಲವು ಪದ್ಯಗಳನ್ನು ಮಾತ್ರ ವಿವರಿಸಲಾಗಿದೆ. ಇಂಥ ಶಾಸನ ಕವಿಗಳ ವಿವರವು ಶಾಸನಗಳಲ್ಲಿ ಬಂದಿದ್ದು ಅವರ ವಿವರ ಇಂತಿವೆ.

ಶಾಸನಗಳನ್ನು ರಚಿಸಿದ ಕವಿಗಳಲ್ಲಿ ಕೆಲವರ ಹೆಸರುಗಳು ಮಾತ್ರ ಕಂಡುಬರುತ್ತವೆ. ಅನಾಮಧೇಯರಿಂದ ರಚಿಸಲ್ಪಟ್ಟ ಅನೇಕ ಶಾಸನಗಳಿವೆ. ಶಾಸನ ಕವಿಗಳು ಶ್ರೇಷ್ಠ ಕವಿಗಳಲ್ಲದಿದ್ದರೂ, ಕೆಲವರು ಒಳ್ಳೆಯ ಕಾವ್ಯಾತ್ಮಕ ಗುಣಗಳಿಂದ ಕೂಡಿದ

ಶಾಸನಗಳನ್ನು ರಚಿಸಿದ್ದಾರೆ. ಇಂಥ ಹಾವೇರಿ ಜಿಲ್ಲೆಯ ಉಪಲಬ್ಧ ಶಾಸನ ಕವಿಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಹಾವೇರಿ ತಾಲೂಕಿನ ದೇವಿಹೊಸೂರ ಗ್ರಾಮದ ಬನಶಂಕರಿ ದೇವಾಲಯದ ಹತ್ತಿರವಿರುವ ವೀರಗಲ್ಲು ಕ್ರಿ.ಶ. ೯೦೭–೯೦೮ನೆಯ ಶತಮಾನಕ್ಕೆ ಸೇರಿದ್ದು, ಅದು ರಾಷ್ಟ್ರಕೂಟ ಅರಸ ೨ನೆಯ ಕೃಷ್ಣನ ಕಾಲದ್ದಾಗಿದೆ. ಈ ಶಾಸನವು ಯುದ್ಧದಲ್ಲಿ ಮಡಿದ ವೀರನೊಬ್ಬನನ್ನು ಉಲ್ಲೇಖಿಸುತ್ತದೆ. 'ಪೆರ್ಮಾಡಿ ನಾಯಕನ ಮಗ ಸರುವಯ್ಯ ಸೆಟ್ಟಿ ಕುಳರೆ ಕಾಳಗದೊಳು' ಹೋರಾಡಿ ಸತ್ತು ಸ್ವರ್ಗಕ್ಕೇರುತ್ತಾನೆ. ಅವನ ನೆನಪಿಗೆ ಅವನ ತಮ್ಮ ಚಿಕಸೆಟ್ಟಿಯು ಕಲ್ಲನಿರಿಸುತ್ತಾನೆಂದು ಶಾಸನ ಹೇಳುತ್ತದೆ. ಇದರಲ್ಲಿ ಶಾಸನ ಕವಿಯು ತನ್ನ ಹೆಸರನ್ನು ಹೀಗೆ ಪ್ರಸ್ತಾಪಿಸಿಕೊಂಡಿದ್ದಾನೆ.

"ಸಾಸಿರ್ಬರು ಊರಾ(ನು) ಸಾಧಕ(ನು)ಪಕ್ಕಲೆ ಇರೆ ಘಯ್ಯಸಾಸ ಬರೆದೊ ಘನಸಿಗನು ಬೆಸನು"[೮]

ಶಾಸನದ ಕೊನೆಯಲ್ಲಿ 'ಘಯ್ಯಸಾಸ ಬರೆದೊ' ಎಂದು ಬರುತ್ತಿರುವುದರಿಂದ ಈ ಶಾಸನವನ್ನು ರಚಿಸಿದ ಕವಿ ಘಯ್ಯಸಾಸನಾಗಿದ್ದು, ಅವನು ಲಿಪಿಕಾರನೂ ಆಗಿದ್ದಾನೆ. ಇವನ ಹೆಸರನ್ನು ಗಮನಿಸಿದಾಗ ಘಟಿಕಾ ಸಾಹಸಿ ಎಂಬ ಬಿರುದಿನಿಂದ ಕವಿಯನ್ನು ಕರೆಯಲಾಗಿದೆ. ಘಟಿಕಾಸ್ಥಾನದಲ್ಲಿ ಚರ್ಚೆ ಅಥವಾ ವಾದದಲ್ಲಿ ಯಶಸ್ವಿಯಾದವನಿಗೆ ಘಟಿಕಾ ಸಾಹಸಿ ಎಂಬ ಪದವಿ ಕೊಡಲಾಗುತ್ತಿತ್ತು. ಇಂಥ ಪದವಿ ಪಡೆದುಕೊಂಡ ಪಂಡಿತನೇ ಪ್ರಸ್ತುತ ಶಾಸನದ ಕರ್ತೃವಾಗಿದ್ದಾನೆ. ಶಾಸನ ಚಿಕ್ಕದಾಗಿರುವುದರಿಂದ ಇವನ ಪ್ರತಿಭೆಯ ಪರಿಚಯ ನಮಗಾಗುವುದಿಲ್ಲ.

ಹಾವೇರಿ ತಾಲೂಕಿನ ಕಳ್ಳಿಹಾಳ ಗ್ರಾಮದ ಕ್ರಿ.ಶ. ೧೦೯ರ ಶಾಸನವನ್ನು ಶ್ರೀ ಕಂದರ್ಪನೆಂಬ ಕವಿಯು ರಚಿಸಿದ್ದು ಇದೊಂದು ಸುದೀರ್ಘ ಶಾಸನವಾಗಿದೆ. ಈ ಶಾಸನದಲ್ಲಿ ಸಹದೇವ ಹಾಗು ರಾಚಮಲ್ಲರ ಉದಾರ ಗುಣಗಳ ವರ್ಣನೆಯ ಉಲ್ಲೇಖವು ಹೀಗೆ ಬರುತ್ತದೆ.

ಆತನನುಜಂ(!) ಗುಣ ಪ್ರ
(ಖ್ಯಾ)ತಿಯಿನೆಸೆದಿಟ್ಟ್ದ ರಾಚಮಲ್ಲಂ(!) ವಿಜಯ
ಖ್ಯಾತಿಗೆ ನಲ್ಲಂ(!) ಮೀರುವ
ರಾತಿಗೆ ಮಲ್ಲಂ ಕುಮಾರ್ಗ್ಗ ಚರಿತಮನೊಲ್ಲಂ॥[೯]

ಮೀರಿಬಂದ ಶತೃವನ್ನು ಸದೆ ಬಡಿಯುವಂತವನು, ಕೆಟ್ಟ ಮಾರ್ಗದ ಚರಿತೆವಲ್ಲದವನು, ವಿಜಯಖ್ಯಾತಿಗೆ ನಲ್ಲನಾಗಿರುವಂತವನು, ಶ್ರೇಷ್ಠ ಗುಣಗಳಿಂದಾಗಿ ಪ್ರಖ್ಯಾತಿಯನ್ನು ಪಡೆದಿರುವಂತವನು ಎಂದು ರಾಚಮಲ್ಲನನ್ನು ಈ ಪದ್ಯ ವರ್ಣಿಸುತ್ತದೆ.

ಹಾವೇರಿ ತಾಲೂಕಿನ ದೇವಿಹೊಸೂರ ಗ್ರಾಮದ ಬನಶಂಕರಿ ಗುಡಿಕಂಬದ ಮೇಲಿರುವ ಶಾಸನದಲ್ಲಿ "ದೇವನಾಗಯ್ಯ ಲಿಖಿತ ವಿದ್ಯಾಧರಂ ಬರೆದ ಕಲ್ಕುಟಿಗಂ ಬಮ್ಮೋಜ ಬೆಸಗಯ್ದ ಮಂಗಳ ಮಹಾಶ್ರೀ" ಎಂದು ಬರುತ್ತದೆ. ಇದು ಕಲ್ಯಾಣದ ಚಾಲುಕ್ಯ ೧ನೆಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಕ್ರಿ.ಶ. ೧೦೬೩ಕ್ಕೆ ಸಂಬಂಧಿಸಿದೆ. ಇದರಲ್ಲಿ ಇನ್ದಪಯ್ಯ ನಾಯಕ ಮಾಳದೇವಿಗೆ ಮಕರತೋರಣ ಮಾಡಿಸಿದ ವಿವರಗಳಿವೆ. ಈ ಶಾಸನ ಒಂದು ಚಿಕ್ಕ ಚಂಪೂ ಕಾವ್ಯವಾಗಿದ್ದು, ಗದ್ಯ ಮತ್ತು ವೃತ್ತಗಳನ್ನು ಕವಿ ಬಳಸಿದ್ದಾನೆ.

ಕಾಳಿಗೆ ಕಾಳರಾಕ್ಷಸಿಗೆ ರೌದ್ರೆಗೆ ಭೈರವಿಗುಗ್ರೆಗಾ ಮಹಾ
ಕಾಳಿಗೆ ಕಾಳಯೋಗಿನಿಗೆ ಮಾರಜ ದೇವತೆಗಿನ್ದರಂ ಸುರ
ತ್ನಾಳಿ ವಿರಾಜಿಸಲ್ನೆರೆಯೆ ಮಾಡಿಸಿದಂ ಧರೆ ಬಣ್ಣಿಸಲ್ಕೆಸ
ಲ್ಲಿಳೆಯ ನಾಂತಿರಲ್ಮಕರತೋರಣಮಂ ಪೊಸವೂರೊಳಕ್ಕರಂ॥[೧೦]

ಎಂದು ಕಾಳಿಯ ವರ್ಣನೆಯನ್ನು ಮಾಡುತ್ತ, ಆಕೆಗೆ ಮಕರತೋರಣ ಮಾಡಿಸಿದುದನ್ನು ಕವಿ ಸೊಗಸಾಗಿ ಹೇಳಿದ್ದಾನೆ. ಶಾಸನದ ಗದ್ಯವೂ ಸೊಗಸಾಗಿ ಮೂಡಿಬಂದಿದೆ.

ಹಾವೇರಿ ತಾಲ್ಲೂಕಿನ ಗಳಗನಾಥದ ಕ್ರಿ.ಶ. ೧೦೮೦ರ ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಈ ಶಾಸನವು[೧೧] ಕಂದ ಪದ್ಯದಿಂದ ಆರಂಭವಾಗಿ ಪುಲ್ಲಣಿಯ ಗ್ರಾಮದ ಪ್ರಾಚೀನತೆ, ಕ್ಷೇತ್ರದ ಮಹತ್ವವನ್ನು ಹೀಗೆ ವರ್ಣಿಸುತ್ತದೆ.

ಸುರ ನದಿಯ ಸಸಿಯ ಜಲಧಿಯ
ಧರಣಿಯ ಭಾಸ್ಕರನ ಪುಟ್ಟಿದಂದಿನ ತೀರ್ತ್ಥಂ

ಸಿರಿಸೈಳದ ಕೈಳಾಸದ
ದೊರೆಯನೆ ಪು(ಲ್ಲು)ಣಿಯ ಜನ್ಮಮರುವವರೊಳರೇ॥[೧೨]

ಪುಲ್ಲಣಿಯು ಭೂಮಿ, ಸೂರ್ಯ ಹುಟ್ಟಿದಂದೆ ಹುಟ್ಟಿದ ಪವಿತ್ರಕ್ಷೇತ್ರವಾಗಿದ್ದು ಇದು ಶ್ರೀಶೈಲ, ಕೈಲಾಸದಷ್ಟು ಶ್ರೇಷ್ಠ ಮತ್ತು ಪವಿತ್ರವಾಗಿದೆಯೆಂದು ವರ್ಣಿಸುತ್ತದೆ. ಈ ಪುಲ್ಲಣಿ ಗ್ರಾಮವನ್ನು ಪುನರ್ದತ್ತಿ ಕೊಟ್ಟಿರುವುದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಶಾಸನದಲ್ಲಿ ವೃತ್ತಗಳು ಅಷ್ಟೇ ಸೊಗಸಾಗಿ ಮೂಡಿಬಂದಿವೆ.

ಹಾವೇರಿ ಪಟ್ಟಣದ ಪುರದ ಸಿದ್ಧೇಶ್ವರ ದೇವಸ್ಥಾನದ ಶಾಸನದ ಕೊನೆಗೆ ಮಹಾಸ್ರಗ್ಧರಾ ವೃತ್ತದಲ್ಲಿ ಕವಿಯ ಉಲ್ಲೇಖವಾಗಿದೆ.

ಪುಣುತಾರ್ತ್ಥಂ ಹೃದ್ಯಮೀ ಪದ್ಯ ನಿಚಯಮೆನೆ ಪೇಳ್ದಂ ಮನಂಗೊಂಡು ವಿದ್ವ
ದ್ಗಣಮತ್ಯಾನಂದದಿಂ ಬಣ್ಣಿಸೆ ಬರೆದನಿದಂ ಸತ್ಕವೀಂದ್ರಸ್ತುತಂ ನಾ
ರಣದೇವಂ ಪಾರ್ವ್ವತೀವಲ್ಲಭ ಪದಯುಗಳಾರಾಧಕಂ ವಿಪ್ರವಂಶಾ
ಗ್ರಣಿ ವಿಶ್ವಾಮಿತ್ರ ಗೋತ್ರಾಂಬುರುಹ ವನ ಪತಂಗಂ ವಿಶುದ್ಧಾನ್ತರಂಗ"[೧೩]

ಹೃದಯಕ್ಕೆ ಹಿಡಿಸುವ ಹಾಗೆ ಪದ್ಯ ರಚಿಸುವ ಖ್ಯಾತಿ ಹೊಂದಿದ್ದ ನಾರಣದೇವನು, ತನ್ನನ್ನು ಸತ್ಕವೀಂದ್ರನೆಂದು ಕರೆದುಕೊಂಡಿದ್ದಾನೆ.

ಹಾವೇರಿ ತಾಲೂಕಿನ ಹತ್ತಿಮತ್ತೂರ ಗ್ರಾಮದ ಹೊಂಡದ ಮೇಲಿರುವ ಶಾಸನವನ್ನು ಚಾವಣ ಕವಿಯು ಬರೆದಿದ್ದಾನೆ. ಇವನು ಲಿಪಿಕಾರನಾಗಿಯೂ ಕೆಲಸ ಮಾಡಿದ್ದಾನೆ. ಶಾಸನದಲ್ಲಿ "ಪೆರ್ಗಡೆಯದ ಚಾವಣಂ ಬರದಂ ಮಂಗಳ"[೧೪] ಎಂದು ಬರುತ್ತದೆ. ದೇವಿಂಗೇರಿಯ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕೊಟ್ಟಿರುವ ಸುಂಕ ದಾನದ ವಿವರವನ್ನು ಕವಿಯು ಇಲ್ಲಿ ಕೊಟ್ಟಿದ್ದಾನೆ. ಇದೊಂದು ಚಿಕ್ಕ ಚಂಪೂ ಕಾವ್ಯವಾಗಿದೆ. ಕವಿಯ ಹಾರೈಕೆಯು ಶಾಸನದ ಕೊನೆಯಲ್ಲಿ ಹೀಗೆ ಬರುತ್ತದೆ.

ಅಭಿವೃದ್ಧೀಶ್ವರರಾಗಿ ಜೀವಿಸುಗೆ ನಮ್ಮೀ ಗ್ರಾಮದಿನ್ನೂರ್ವ್ವರುಂ
ಪ್ರಭುವುಂ ಕ್ಷೀರಸಮುದ್ರದನ್ತೆ ಕೆರೆಯುಂ ತೀವಿಕ್ಕೆ ಚಾಳುಕ್ಯವ
ಲ್ಲಭನುಂ ಚೋಳನನಿಕ್ಕಿ ಚೋಳ್‌ನೆಲನ್ಮಂ ಪಾಳಿಕ್ಕೆ ದೀರ್ಗ್ಘಾಯುವ
ಕ್ಕಭಿವಾಂಛಾಫಳಮಕ್ಕೆ ಬಾಹುಬಲಿಗಾಚಂದ್ರಾರ್ಕತಾರಂಬರ"[೧೫]

ನಮ್ಮ ಗ್ರಾಮದಲ್ಲಿ ಜೀವಿಸುವಂತ ಎಲ್ಲಾ ೨೦೦ ಜನರು ಮತ್ತು ಅರಸ ಆಯುಷ್ಯ, ಐಶ್ವರ್ಯದಿಂದ ಅಭಿವೃದ್ಧಿ ಹೊಂದುತ್ತ ಸುಖವಾಗಿ ಬಾಳಲಿ, ಹಾಲಿನ ಸಮುದ್ರದಂತೆ ನಮ್ಮ ಕೆರೆಗಳು ತುಂಬಿ ತುಳುಕಲಿ, 'ಚಾಳುಕ್ಯ ವಲ್ಲಭನುಂ ಚೋಳನನಿಕ್ಕಿ ಚೋಳನೆನ್ಮಂ ಪಾಳಿಕ್ಕಿ' ಎಂಬ ಮಾತು ಚಾಳುಕ್ಯ ಚಕ್ರವರ್ತಿ ಮತ್ತು ಚೋಳರಿಗೆ ನಡೆಯುತ್ತಿದ್ದ ಯುದ್ದಗಳು ಮತ್ತು ಚೋಳರ ಕಿರುಕುಳವನ್ನು ಸ್ಪಷ್ಟಪಡಿಸುತ್ತದೆ. ಚಾಲುಕ್ಯ ಚಕ್ರವರ್ತಿ ಚೋಳನನ್ನು ಕೊಂದು ಚೋಳನ ರಾಜ್ಯವನ್ನು ನಾಶಮಾಡಲೆಂದು ಹಾರೈಸುತ್ತಾನೆ.

ರಾಣೇಬೆನ್ನೂರು ತಾಲ್ಲೂಕಿನ ಅಸುಂಡಿ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಎದುರಿನಲ್ಲಿರುವ ಶಾಸನವು ೩ನೇ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಪ್ರಸ್ತುತ ಶಾಸನದ ಕರ್ತೃ ಸುಬ್ಬನಾಗಿದ್ದು, ಇವನ ಪ್ರತಿಭೆಯನ್ನು ಮಾಚಣ್ಣನನ್ನು ವರ್ಣಿಸುವ ಈ ಚಂಪಕ ಮಾಲಾವೃತ್ತವನ್ನು ನೋಡಬಹುದು.

ರತಿಪತಿಕೋಮಳಾಂಗಂ ವರರೂಪದೊಳುಂನತಿವೆತ್ತ ಗೋಮಿನೀ
ಪತಿ ನಿಪುಣೋತ್ತ್ರವೀಣ ಬಹುಕೌಷಳ ಭಾವದ ಕಾವ್ಯಶಬ್ದ ವಾ
ಕ್ಪತಿ ಚತುರೋಕ್ತಮ . . . ತ ಸಚೀಪತಿ ವೈಭವದೇಳ್ಗೆಯೋಳ್ ಬೃಹ
ಸ್ಪತಿ ದೃಢಮಂತ್ರದೊಳ್ನೆಗರ್ದ ಪೆರ್ಗ್ಗಡೆ ಮಾಚಣನೀ ಧರಿತ್ರಿಯೋಳ್॥[೧೬]

ಮಾಚಣ್ಣನು ಪಾಂಡಿತ್ಯವನ್ನು ಪಡೆದವನಾಗಿದ್ದನು. ವಾಕ್ ಚಾತುರ್ಯವಂತನಾಗಿದ್ದ, ಕಾವ್ಯವನ್ನು ಬಲ್ಲವನಾಗಿದ್ದನು ಎನ್ನುವುದು ಈ ಶಾಸನದಲ್ಲಿ ಪದ್ಯದಿಂದ ಖಚಿತವಾಗುತ್ತದೆ.

ಕಲಚೂರಿ ಅಹವಮಲ್ಲನ ಕ್ರಿ.ಶ.೧೧೮೪ರ ಗುಡ್ಡದಾನ್ವೇರಿ ಗ್ರಾಮದ ಶಾಸನವು 'ಹಡಗಿಲೆಯ ದಾಸೋಜನ ಮಗ ಕಲ್ಲೋಜನ ಬರಪಮಿದಾಚಂದ್ರಾರ್ಕತಾರಂಬರಂ ಸಲುಗೆ'[೧೭] ಎಂದಿರುವುದರಿಂದ ಕಲ್ಲೋಜನೆ ಇದರ ಕವಿ ಮತ್ತು

ಲಿಪಿಕಾರನಾಗಿರಬೇಕು. ಶಾಸನದಲ್ಲಿ ಕಂದ ಮತ್ತು ಮಹಾಸ್ರಗ್ಧರಾ ವೃತ್ತಗಳು ಬಳಕೆಯಾಗಿವೆ. ಜಂಬೂದ್ವೀಪದ ಕುಂತಳ ನಾಡಿನ ವರ್ಣನೆ ಈ ಕೆಳಗಿನಂತೆ ಕಾಣಬಹುದಾಗಿದೆ.

ಪಿರಿದುಂ ಮಧ್ಯಸ್ಥವಾದ್ವೀಪದೊಳಮರನಗಂ ತಂನಗೇಂದ್ರಕ್ಕೆ ತೆಂಕಲು
ಭರತಕ್ಷೇತ್ರಂ ಜನಾನಂದ ಮ (ನೊ)ದವಿಪುದಾ ಕ್ಷೇತ್ರದೊಳು ನಾಡೆಯುಂ ಸೌಂ
ದರ ಲಕ್ಷ್ಮಿಮೀ ಜನುಮಗೇಹಂ ನು ತಭುವನಧೂಕುಂತಳ(ಂ) ತಾನೆನಲು
ಸ್ತರಿಸಿಕ್ಕುಂ ಕುಂತಳೋರ್ವ್ವೀತಳವಖಿಳಸುಧಾಳಂಕ್ರಿತೋದ್ಯದುವಿಳಾಸಂ॥[೧೮]

ಈ ರೀತಿ ವರ್ಣಿಸಲಾಗಿದೆ.

ಹೀಗೆ ಹಾವೇರಿ ಹಾಗೂ ರಾಣೇಬೆನ್ನೂರು ತಾಲ್ಲೂಕಿನ ಕೆಲವು ಶಾಸನಗಳು ಸಾಹಿತ್ಯಿಕ ಮಹತ್ವವನ್ನು ಪಡೆದುಕೊಂಡಿವೆ. ಕೆಲವು ಕವಿಗಳು ಒಳ್ಳೆಯ ಶಾಸನ ಸಾಹಿತ್ಯವನ್ನು ರಚಿಸಿದ್ದಾರೆ. ಗದ್ಯ, ಪದ್ಯ ಮಿಶ್ರಿತ ಚಂಪೂ ಕಾವ್ಯಗಳನ್ನು, ಕಂದ ವೃತ್ತಗಳನ್ನು, ಸುಂದರವಾಗಿ ರಚಿಸಿದ್ದು ಮೇಲಿನ ವಿವರಗಳಿಂದ ಗೊತ್ತಾಗುತ್ತದೆ.

ಅಡಿಟಿಪ್ಪಣಿಗಳು

೧. SII-18, ಶಾ.ಸಂ. ೧೩೬. ಕ್ರಿ.ಶ. ೧೧೩೪. ಹಾವೇರಿ.
೨. ಅದೇ,
೩. ಅದೇ,
೪. ಅದೇ,
೫. ಅದೇ, ೨೪೬, ಕ್ರಿ.ಶ. ೧೨೬೩, ಚೌಡಯ್ಯದಾನಪುರ.
೬ ಅದೇ, ೩೦೧, ಕ್ರಿ.ಶ. ೧೨೩೩, ಕನವಳ್ಳಿ.
೭. ಅದೇ, ೮೮, ಕ್ರಿ.ಶ. ೧೦೮೦, ಗಳಗನಾಥ.
೮. ಅದೇ, ೧೬. ಕ್ರಿ.ಶ. ೯೦೭–೦೮, ದೇವಿಹೊಸೂರು.
೯. ಅದೇ, ೪೪, ಕ್ರಿ.ಶ. ೧೦೯೯, ಕಳ್ಳಿಹಾಳ.
೧೦. ಅದೇ, ೬೯, ಕ್ರಿ.ಶ. ೧೦೬೩, ದೇವಿಹೊಸೂರ.
೧೧. ಅದೇ, ೮೮, ಕ್ರಿ.ಶ. ೧೦೮೦. ಗಳಗನಾಥ.
೧೨. ಅದೇ,
೧೩. ಅದೇ,
೧೪. ಅದೇ,
೧೫. ಅದೇ,
೧೬. ಅದೇ, ೧೯೨, ಕ್ರಿ.ಶ. ೧೧೨೭, ಅಸುಂಡಿ.
೧೭. ಅದೇ, ೧೯೨, ಕ್ರಿ.ಶ. ೧೧೮೩, ಗುಡ್ಡದಾನ್ವೇರಿ.
೧೮. ಅದೇ,

◆◆

೩೮

ರಾಜೇಶ್ ಪ್ರಸಾದ್

ಶಾಸನಗಳಲ್ಲಿ ಮಹಿಳೆ ಮತ್ತು ಪರಿಸರ

ಇಂದು ಪರಿಸರಕ್ಕೆ ಸಂಬಂಧಿಸಿದ ಹಲವರು ಸಮಸ್ಯೆಗಳು ಇಡೀ ವಿಶ್ವವನ್ನೇ ಕಾಡುತ್ತಿವೆ. ಆದರೆ, ಪರಿಸರ ಸಂರಕ್ಷಣಾ ಆಂದೋಲನಕ್ಕೆ ಬಹಳ ಪ್ರಾಚೀನ ಪರಂಪರೆ ಇದೆ ಎಂದರೆ ಆಶ್ಚರ್ಯ ಆಗಲಾರದು. ಮನುಷ್ಯನ ಪ್ರವೇಶಕ್ಕೆ ನಿರ್ಬಂಧವಿರುವ ದೇವರಕಾಡುಗಳ ಪರಿಕಲ್ಪನೆಯ ಹಿಂದೆ ನಮ್ಮ ಪೂರ್ವಜರು ಪರಿಸರ ಸಂರಕ್ಷಣೆಗೆ ಮಾಡಿದ್ದ ಯೋಜನೆಯನ್ನು ಗುರುತಿಸಬಹುದಾಗಿದೆ[೧]. ಹೀಗೆ ನಾಗಬನ, ದೇವರಕಾಡು, ಪೂಜನೀಯ ಮರ, ವನಗಳನ್ನು ಇಂತಹ ಪರಿಸರ ಸಂರಕ್ಷಣೆಯ ಹಿನ್ನೆಲೆಯಲ್ಲಿ ಕಾಣಬಹುದು.

ಪ್ರಪಂಚದಾದ್ಯಂತ ಹಲವಾರು ಪ್ರಾಚೀನ ನಾಗರಿಕತೆಗಳಲ್ಲಿ ನಿಸರ್ಗದ ಆರಾಧನೆ ಇತ್ತು. ಭಾರತದ ಸಿಂಧೂ ಬಯಲಿನ ನಾಗರಿಕತೆಯ ಆರಾಧ್ಯ ದೈವ ಮಾತೃದೇವತೆಯು ಸಹ ಪ್ರಕೃತಿಯ ಆರಾಧನ ವಿಧಾನವೇ ಆಗಿತ್ತು. ಪರಿಸರವಿಲ್ಲದೆ ನಮ್ಮ ಅಸ್ತಿತ್ವವೇ ಇಲ್ಲ ಎಂಬ ವಿಚಾರವನ್ನು ಅರಿತಿದ್ದ ಅಂದಿನ ಜನ ಅದನ್ನು ಧಾರ್ಮಿಕ ಆಚರಣೆಯೊಂದಿಗೆ ಬೆಸೆದು ಪರಿಸರ ರಕ್ಷಣೆ ಕೈಗೊಳ್ಳುತ್ತಿದ್ದರು. 'ಕೆರೆಯನ್ನು ಕಟ್ಟಿಸಿದ ವ್ಯಕ್ತಿಯು ತನ್ನ ಹಿಂದಿನ ಎಲ್ಲಾ ಪಾಪಗಳಿಂದ ವಿಮುಕ್ತಿ ಪಡೆಯುವುದಲ್ಲದೆ, ತನ್ನ ಜೀವಿತಾವಧಿಯ ನಂತರ, ತನ್ನ ಪೂರ್ವಜರ ಸಹಿತ ಸ್ವರ್ಗ ಪಡೆಯುತ್ತಾನೆ' ಎಂದು ಹೇಳಲಾಗಿರುವ ಪುರಾಣಗಳ ಉದ್ದೇಶವೂ ಕೂಡ ಇದೇ ಆಗಿದೆ. ನಮ್ಮ ನಾಡಿನಲ್ಲಿ ನಿರ್ಮಾಣಗೊಂಡಿರುವ ಹಲವಾರು ಕೆರೆಗಳ ಹಿಂದೆ ಇರುವ ಇಂತಹ ಭಾವನಾತ್ಮಕ ವಿಚಾರಗಳನ್ನು ಅಲ್ಲಿನ ಶಾಸನಗಳು ಸಾರುತ್ತಿವೆ.

ನಮ್ಮ ನಾಡಿನಲ್ಲಿ ಮಹಿಳೆಯರಿಗೆ ಧಾರ್ಮಿಕ ಆಚರಣೆಗಳನ್ನು ನಡೆಸಲು ಮುಕ್ತ ಸ್ವಾತಂತ್ರ ಇದ್ದುದನ್ನು ಅನಾದಿಕಾಲದಿಂದಲೂ ಗುರುತಿಸಬಹುದು. ಧಾರ್ಮಿಕ ಆಚರಣೆಯ ಅಂಗವಾಗಿ ಕೆರೆ, ಕಲ್ಯಾಣಿಗಳ ನಿರ್ಮಾಣ, ದೇವಾಲಯಗಳಿಗೆ ದಾನ ನೀಡಲೆಂದು ಹೂತೋಟ, ವನಗಳ ನಿರ್ಮಾಣ ಹಾಗೂ ನಿರ್ವಹಣೆ, ಕ್ಷಿತಿರುಹ ನೋಂಪಿಯಂತಹ ವೃಕ್ಷಸಂಬಂಧಿ ವ್ರತ-ಆಚರಣೆಗಳು, ಮೊದಲಾದ ಕಾರ್ಯಗಳನ್ನು ಕೈಗೊಳ್ಳುತ್ತಿದ್ದ ಪರಂಪರೆಯನ್ನು ಶಾಸನಗಳು ಸವಿಸ್ತಾರವಾಗಿ ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನಲ್ಲಿ ಪುರುಷರಿಗೆ ಸಮಾನವಾಗಿ ಅಥವಾ ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇಂತಹ ಕಾರ್ಯಗಳಲ್ಲಿ ತೊಡಗಿ, ಆ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚು ಕೊಡುಗೆ ನೀಡಿದ್ದಾರೆ ಎನ್ನಬಹುದಾಗಿದೆ.

ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
ವಿಜಯನಗರ ಜಿಲ್ಲೆ
ಮೊ: ೮೭೯೨೭ ೭೯೫೧೭

ಈ ಮೇಲೆ ಉಲ್ಲೇಖಿಸಿರುವಂತೆ ಧಾರ್ಮಿಕ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಿರುವ ಮಹಿಳೆಯರ ಶಾಸನೋಕ್ತ ವಿಚಾರಗಳನ್ನು ಪ್ರಾಚೀನ ಕಾಲದಿಂದಲೇ ಗುರುತಿಸಬಹುದು. ಒಂಬತ್ತನೇ ಶತಮಾನದ ಗಂಗರ ಸೊಸೆ ಅವಲಬ್ಬೆ, ಆಚಬ್ಬೆ, ಮಾಂಕಣವ್ವೆ (ಮಾಂಕವೆ), ಜಕ್ಕವ್ವೆ, ಸಿಂಗಲೆ, ಮೇಚಲದೇವಿ, ಶಾಂತವ್ವ ಮುಂತಾದ ಮಹಿಳೆಯರು ಈ ನಿಟ್ಟಿನಲ್ಲಿ ಪ್ರಮುಖರಾಗಿದ್ದಾರೆ. ಅಂದಿನ ಸಮಾಜದಲ್ಲಿ ಪರಿಸರವಾದಿಗಳ ಅಗತ್ಯವಿಲ್ಲದಿದ್ದರೂ ಅಥವಾ ಪರಿಸರ ಸಂರಕ್ಷಣೆಯೆಂಬಂತಹ ಪರಿಕಲ್ಪನೆಗೆ ಅವಕಾಶವೇ ಇರದಿದ್ದರೂ ಸ್ವಚ್ಛಂದ ಪರಿಸರಕ್ಕೆ ಮಹಿಳೆಯರ ಕೊಡುಗೆ ಅಪಾರವಾದುದಾಗಿದೆ,

ಅವಲಬ್ಬೆ ಎಂಬ ಮಹಿಳೆ ಚಿಕ್ಕಬಳ್ಳಾಪುರದ ಬಳಿ ಕೆರೆಯೊಂದನ್ನು ನಿರ್ಮಿಸಿದ್ದಾಳೆ. ಇವಳು ಗಂಗರ ರಾಜಕುಮಾರನ ಮಡದಿ ಇದ್ದಿರಬಹುದೆಂದು ವಿದ್ವಾಂಸರು ಭಾವಿಸಿದ್ದಾರೆ. ಇವಳು ನಿರ್ಮಿಸಿರುವ ಕೆರೆಯು ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರದಿಂದ ಆರು ಕಿಲೋಮೀಟರ್ ಅಂತರದಲ್ಲಿದೆ. ಅಮಾನಿಗೋಪಾಲಕೃಷ್ಣ ಕೆರೆ ಎಂಬ ಹೆಸರಿನಲ್ಲಿ ಕರೆಯಲಾಗುವ ಈ ಗ್ರಾಮದಲ್ಲಿ ಈಕೆಯು ದೇವಾಲಯಕ್ಕಾಗಿ ಕೆರೆಯನ್ನು ನಿರ್ಮಿಸಿ ಕೊಡುಗೆಯಾಗಿ ನೀಡಿದ್ದರೂ ಇದು ಮಾನವನನ್ನು ಒಳಗೊಂಡಂತೆ ಸಕಲ ಜೀವರಾಶಿಗಳಿಗೆ ನೀರನ್ನು ಒದಗಿಸುವ ಕಾರ್ಯಕ್ಕೆ ಇಂದಿಗೂ ಬಳಕೆಯಾಗುತ್ತಿದೆ.

ಅವಲಬ್ಬೆಯಂತೆಯೇ ಮೇಚಲದೇವಿ ಎಂಬ ಅರಸಿಯು ಹಾಸನ ಜಿಲ್ಲೆಯ ಕೇಂದ್ರದಿಂದ ಐವತ್ತು ಕಿಲೋಮೀಟರ್ ದೂರದಲ್ಲಿ ಹಾಗೂ ಸಕಲೇಶಪುರ ತಾಲ್ಲೂಕು ಕೇಂದ್ರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಹಾಳೆ ಬೇಲೂರು ಎಂಬ ಗ್ರಾಮದಲ್ಲಿ ಕೆರೆಯೊಂದನ್ನು ಕಟ್ಟಿಸಿದ್ದಾಳೆ. ಇವಳು ಕಲ್ಯಾಣದ ಚಾಲುಕ್ಯರ ಮಾಂಡಳೀಕನಾಗಿದ್ದ ದಯಾಸಿಂಹನ ತಾಯಿ.

ಶಾಸನವು ತಿಳಿಸುವ ಪ್ರಕಾರ ೧೧೯೫ ಕೇಶವ ದೇವಾಲಯವನ್ನು ನಿರ್ಮಿಸಿ ಅಲ್ಲಿ ತನ್ನ ಹೆಸರಿನಲ್ಲಿ ಮೇಚಲಸಮುದ್ರವೆಂಬ ಬೃಹತ್ ಕೆರೆಯನ್ನು ನಿರ್ಮಿಸಿದ್ದಾಳೆ. ಇವಳ ಉದ್ದೇಶ ತನ್ನ ಪೂರ್ವಿಕರಿಗೆ ಸದ್ಗತಿ ದೊರೆಯಲಿ ಎನ್ನುವುದು ಆಗಿತ್ತು. ಇದಕ್ಕಾಗಿ ನಿರ್ಮಿಸಿದ ಆ ಕೆರೆಯಿಂದ ಸುತ್ತಮುತ್ತಲಿನ ಗ್ರಾಮದ ಜನರಿಗೆ, ಅಲ್ಲಿನ ಪ್ರಾಣಿ–ಪಕ್ಷಿಗಳಿಗೆ ನೀರಿನ ಅನುಕೂಲ ಏರ್ಪಟ್ಟಿದೆ.

ಈ ಪ್ರಕಾರ ಧಾರ್ಮಿಕ ಕಾರ್ಯದ ಹಿನ್ನೆಲೆಯಲ್ಲಿ ಕೆರೆಯನ್ನು ಕಟ್ಟಿಸಿದ ಮತ್ತೊಬ್ಬ ಮಹಿಳೆ ಜಕ್ಕವ್ವೆ, ಶ್ರವಣಬೆಳಗೊಳದಲ್ಲಿ ಜಂಕಿಕಟ್ಟೆಯ ದಕ್ಷಿಣದಲ್ಲಿ ದೊಡ್ಡ ಬಂಡೆಯ ಮೇಲಿರುವ ತೀರ್ಥಂಕರ ವಿಗ್ರಹದ ಕೆಳಗಡೆ ಸಿಕ್ಕಿರುವ ಶಾಸನದ ಪ್ರಕಾರ ಜಂಕಿಯವ್ವೆಯು ಖ್ಯಾತ ಜೈನಮುನಿ ಶುಭಚಂದ್ರ ದೇವರ ಶಿಷ್ಯೆಯಾಗಿದ್ದು ತನ್ನ ಗುರುವಿನ ಪ್ರೇರಣೆಯಿಂದ ಶ್ರವಣಬೆಳಗೊಳದಲ್ಲಿ ಕೆರೆಯನ್ನು ಕಟ್ಟಿಸಿದ್ದಾಳೆ. ಅದನ್ನು ಜಂಕವ್ವೆ ಕಟ್ಟೆ ಎಂದೇ ಇಂದಿಗೂ ಕೂಡ ಕರೆಯುತ್ತಾರೆ. ಶ್ರವಣ ಬೆಳಗೊಳ ಪರಿಸರದಲ್ಲಿ ತಪ ಸಾಧನೆ ಮಾಡುತ್ತಿದ್ದ ಅಂದಿನ ಮುನಿ ಸಂಕುಲಕ್ಕೆ ಇದರ ತೀವ್ರ ಅಗತ್ಯ ಇದ್ದುದನ್ನು ಶಾಸನ ಸೂಚ್ಯವಾಗಿ ತಿಳಿಸುತ್ತದೆ. ಕೇವಲ ಮನುಜ ಸಂಕುಲಕ್ಕಷ್ಟೇ ಅಲ್ಲದೆ, ಪ್ರಾಣಿ ಪಕ್ಷಿಗಳಿಗೂ ಇದರ ಪ್ರಯೋಜನ ದೊರೆತಿದೆ. ಜಕ್ಕವ್ವೆಯು ಕೆರೆಯನ್ನು ತನಗೆ ಮೋಕ್ಷ ಸಿಗಬೇಕೆಂಬ ಅಭಿಲಾಷೆಯಿಂದ ನಿರ್ಮಿಸಿದ್ದೇ ಆದರೂ, ಇವಳು ಆ ಕಾಲದಲ್ಲಿ ಈ ಕೆರೆಯ ಮೂಲಕ ಶ್ರವಣಬೆಳಗೊಳದ ಪರಿಸರಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆಯಾಗಿತ್ತು.

ಕೇವಲ ಧಾರ್ಮಿಕ ಕಾರ್ಯ, ಹಿರಿಯರಿಗೆ ಸದ್ಗತಿ ದೊರಕಲಿ ಎಂಬ ಉದ್ದೇಶಗಳಿಗಷ್ಟೇ ಅಲ್ಲದೆ, ಸಮಾಜಕ್ಕೆ ಒಳಿತಾಗಲಿ ಎಂಬ ಅಭಿಲಾಷೆಯಿಂದಲೂ ಕೆರೆಗಳನ್ನು ನಿರ್ಮಿಸುತ್ತಿದ್ದರು. ಅವುಗಳಲ್ಲಿ ಶಾಂತವ್ವೆ ಕಟ್ಟಿಸಿದ ಕೆರೆಯೂ ಒಂದಾಗಿದೆ. ಇಂದಿನ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಸೂಳೆ ಕೆರೆಯ ಹಿಂದೆ ಈ ಶಾಂತವ್ವೆ ಎಂಬ ಮಹಿಳೆಯ ಕುರಿತಾದ ಸುಂದರವಾದ ಐತಿಹ್ಯ ಕೇಳಿಬರುತ್ತದೆ.

ಶಾಂತವ್ವೆಯು ಸ್ವರ್ಗವತಿ ಗ್ರಾಮದ ವಿಕ್ರಮ ರಾಜನ ಮಗಳು ಇವಳಿಗೆ ಸಿದ್ದೇಶ್ವರ ಎಂಬ ಯುವಕನೊಂದಿಗೆ ಪ್ರೇಮಾಂಕುರವಾಗಿ ಅವನನ್ನು ಗಾಂಧರ್ವ ವಿವಾಹವಾಗುತ್ತಾಳೆ. ಆದರೆ ಈ ವಿವಾಹವನ್ನು ಒಪ್ಪದ ಆ ಊರಿನ ಜನರು ಅವಳ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡಿ, ಅವಳನ್ನು ಸೂಳೆ ಎಂದು ಕರೆಯಲು ಆರಂಭಿಸುತ್ತಾರೆ. ಇದರಿಂದ ಬೇಸತ್ತ ಶಾಂತಲೆ ಜೀವನದಲ್ಲಿ ಏನಾದರೂ ಒಳ್ಳೆಯದನ್ನು ಮಾಡಬೇಕು, ಇದರಿಂದ ಇಡೀ ಮಾನವ ಕುಲಕ್ಕೆ ಒಳಿತಾಗಬೇಕು ಎಂದು ಯೋಚಿಸಿ, ಇಡೀ ಸಮಾಜಕ್ಕೆ ಒಳಿತಾಗುವಂತಹ ಒಂದು ಬೃಹತ್ ಕೆರೆಯನ್ನು ಕಟ್ಟಿಸುತ್ತಾಳೆ. ಈ ಐತಿಹ್ಯದ ಮಾಹಿತಿ ಸಂಪೂರ್ಣ ಸತ್ಯವಲ್ಲದೇ ಹೋದರೂ, ಇದು ಅಂದಿನ ಕಾಲದಲ್ಲಿ ಆ ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಜನರ ನೀರಿನ ಸಮಗ್ರ ಅವಶ್ಯಕತೆಗಳನ್ನು ಪೂರೈಸುತ್ತಿತ್ತು.

ಇದನ್ನು ಸೂಳೆಕೆರೆ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿದ್ದು, ಇತ್ತೀಚೆಗೆ ಇವಳ ನಿಜನಾಮದಲ್ಲಿ ಈ ಕೆರೆಗೆ 'ಶಾಂತಿ ಸಾಗರ' ಎಂದು ಮರುನಾಮಕರಣ ಮಾಡಲಾಗಿದೆ. ಐತಿಹ್ಯಗಳು, ಕತೆಗಳು ಏನೇ ವಿಚಾರವನ್ನು ಹೇಳಿದರೂ, ಅದರ ಸತ್ಯಾಸತ್ಯತೆಗಳು ಏನೇ ಇದ್ದರೂ, ಮಹಿಳೆಯೊಬ್ಬಳು ಇಂತಹ ಬೃಹತ್ ಕೆರೆಯನ್ನ ನಿರ್ಮಿಸಿರುವ ಹಿನ್ನೆಲೆಯಲ್ಲಿ ಅವಳು ಸಮಾಜದ ಬಗ್ಗೆ, ಪರಿಸರದ ಬಗ್ಗೆ ವಹಿಸಿದ್ದ ಕಾಳಜಿಯನ್ನು ಕುರಿತು ತಿಳಿಸುತ್ತದೆ. ನೂರಾರು ವರ್ಷಗಳ ಹಿಂದೆ ಕೊಡುಗೆಯಾಗಿ ನೀಡಲಾದ ಈ ಕೆರೆಯ ಉಪಯೋಗ ಇಂದಿಗೂ ಆಗುತ್ತಿದ್ದು, ಸುತ್ತಮುತ್ತಲಿನ ಹಲವು ಗ್ರಾಮಗಳ ಅಂತರ್ಜಲ ಇದರಿಂದ ಉತ್ತಮ ಗೊಂಡಿದ್ದು, ಪರಿಸರಕ್ಕೆ ಒಳ್ಳೆಯ ಕೊಡುಗೆಯಾಗಿದೆ.

ಅರಸಿಕೆರೆ ಹೆಸರೇ ಹೇಳುವಂತೆ ಇದು ಅರಸಿಯೊಬ್ಬಳು ನಿರ್ಮಿಸಿದ ಕೆರೆಯಿಂದ ಈ ಹೆಸರನ್ನು ಪಡೆದಿದೆ. ಇದೇ ರೀತಿ ಆವನಿಯಲ್ಲಿ ದೀವಳಬ್ಬೆ ನಿರ್ಮಿಸಿದ ಬೃಹತ್ ಕೆರೆ, ಮುತ್ತನ ಪೊಸವೂರಿನಲ್ಲಿ ಹೊಯ್ಸಳ ವಿಷ್ಣುವರ್ಧನನ ತಂದೆ ಎರೆಯಂಗನ ಕಿರಿಯರಸಿ ನಿರ್ಮಿಸಿದ ಕೆರೆ ಹೀಗೆ ಮಹಿಳೆಯರು ನಿರ್ಮಿಸಿದ ಕೆರೆ, ಕಾಲುವೆಗಳು ಅಸಂಖ್ಯಾತವಾಗಿವೆ. ಅಲ್ಲದೆ, ಕೆರೆಗಳ ದುರಸ್ತಿ, ಹೂಳೆತ್ತಿಸುವುದು ಮೊದಲಾದ ಕಾರ್ಯಗಳನ್ನೂ ನಡೆಸಿ ಕೆರೆಯನ್ನು ಸುಸ್ಥಿತಿಯಲ್ಲಿರಿಸುವುದರಲ್ಲೂ ಅವರ ಕೊಡುಗೆ ಅಪಾರವಾಗಿದೆ.

ಈ ಮೇಲಿನ ಎಲ್ಲಾ ಸಂಗತಿಗಳನ್ನು ನಾವು ನೋಡಿದರೆ ನಮ್ಮ ಪೂರ್ವಜರು ಪರಿಸರವನ್ನು ಎಷ್ಟು ಪೂಜ್ಯನೀಯವಾಗಿ ನೋಡುತ್ತಿದ್ದರು ಎಂಬುದು ಅರಿವಾಗುತ್ತದೆ ಇದಕ್ಕೆ ಪೂರಕವಾಗುವಂತೆ ಹಂಪಿಯ ಲಕ್ಷ್ಮೀಧರಾಮಾತ್ಯ ಶಾಸನವು, ಅಂದಿನ ತಾಯಿಯರು ಮಕ್ಕಳನ್ನು ಬೆಳೆಸುವಾಗಲೇ ಕೆರೆಯನ್ನು ಕಟ್ಟಿಸು ಬಾವಿಯನ್ನು ಸವೆಸು, ದೇವಾಲಯಗಳನ್ನು ನಿರ್ಮಿಸು ಎಂಬ ಒಳ್ಳೆಯ ಭಾವವನ್ನು ಬಿತ್ತುತ್ತಿದ್ದರು. ಮಹಿಳೆಯರು ತಮ್ಮ ಕೈಲಾದ ಕೈಂಕರ್ಯವನ್ನು ಮಾಡುತ್ತಿದ್ದುದಲ್ಲದೆ, ಇತರರಿಗೆ ಮನೆಯ ಜನರಿಗೆ, ತಮ್ಮ ಮಕ್ಕಳಿಗೆ ಪ್ರೇರಣೆಯಾಗುತ್ತಿದ್ದರು, ಸಮಾಜಮುಖಿ ಕಾರ್ಯಗಳನ್ನು ಮಾಡುವಂತೆ ತಿಳಿ ಹೇಳುತ್ತಿದ್ದರು. ಹೀಗೆ ಸ್ವಚ್ಛಂದ ಪರಿಸರಕ್ಕೆ ಮಹಿಳೆಯರ ಕೊಡುಗೆ ಅಪಾರವಾದುದಾಗಿದೆ.

ಆಕರಗ್ರಂಥಗಳು

೧. ಎಪಿಗ್ರಾಫಿಯ ಕರ್ನಾಟಿಕ, ಸಂ. ೨, ೧೯೭೩, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೨. ಅದೇ. ಸಂ. ೮, ೧೯೮೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೩. ಅದೇ, ಸಂ. ೧೦, ೧೯೯೭, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೪. ದೇವರಕೊಂಡಾರೆಡ್ಡಿ (ಪ್ರಸಂ ೨೦೦೦), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ವಂದನಶಿವ, ೨೦೦೫, ಬತ್ತದ ಚಿಲುಮೆ (ಅನು) ಮಾಧವ ಐತಾಳ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬ ರಾಮಚಂದ್ರ ಗುಹಾ, ೨೦೨೦, ಜಾಗತಿಕ ಪರಿಸರ ಚರಿತ್ರೆ, (ಅನು) ಮಾಧವ ಐತಾಳ್, ದಿವ್ಯ ಪ್ರಕಾಶನ, ಬೆಂಗಳೂರು.

◆◆

೪೯

ಸಂಧ್ಯಾ ಎ.

ರಾಣಿ ಪಂಪಾದೇವಿಯರ ಕುರಿತ ಕೆಲವು ಗೊಂದಲಗಳು

ಪಂಪಾದೇವಿ ಹೆಸರಿನ ಹಲವು ರಾಣಿಯರು ಕರ್ನಾಟಕದಲ್ಲಿ ಕಂಡುಬರುತ್ತಾರೆ. ಅವರಲ್ಲಿ ತೈಲ–ತ್ರಿಭುವನಮಲ್ಲ ಸಾಂತರನ ಮಗಳಾದ ಪಂಪಾದೇವಿ, ಚಾಲುಕ್ಯ ಎರಡನೆಯ ಸೋಮೇಶ್ವರನ ರಾಣಿ ಪಂಪಾದೇವಿ, ಕುಂದಮರಸನ ರಾಣಿ ಪಂಪಾದೇವಿ. ಇವರೆಲ್ಲರೂ ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಕಂಡುಬರುವ ಅರಸಿಯರು. ಇವರೆಲ್ಲರಿಗಿಂತ ಹಿರಿಯಳಾದ ಪಂಪಾದೇವಿ ಹೆಸರಿನ ರಾಣಿಯೊಬ್ಬಳು ಕ್ರಿ.ಶ.೯೯೭ರಲ್ಲಿ ಪಿರಿಯಾಪಟ್ಟಣದ ಕುಡಕೂರಿನ ಶಾಸನದಲ್ಲಿ[೧] ಉಕ್ತಳಾಗಿದ್ದಾಳೆ. ಶಾಸನವು ಇವಳನ್ನು 'ಶ್ರೀಮಚ್ಚಾಳುಕ ಪೆರ್ಮಾನಡಿ ದೇವರು ತತ್ಪುತ್ರಿ' ಎಂದು ಉಲ್ಲೇಖಿಸಿದೆ. ಜೊತೆಗೆ 'ಶ್ರೀ ಪಂಪಾದೇವಿಯರ ರಾಜ್ಯಾಭ್ಯುದಯದಂದು.." ಎನ್ನುತ್ತಾ ಈ ಭಾಗದಲ್ಲಿ ಇವಳು ಆಳ್ವಿಕೆ ನಡೆಸುತ್ತಿದ್ದುದನ್ನು ಕುರಿತು ತಿಳಿಸುತ್ತದೆ. ಇಲ್ಲಿ ಹೇಳಲಾಗಿರುವ ಚಾಳುಕ್ಯ ಪೆರ್ಮಾನಡಿಯು ಚಾಳುಕ್ಯ ಇಱಿವಬೆಡಂಗ ಸತ್ಯಾಶ್ರಯನೇ ಆಗಿದ್ದಾನೆ. ಈ ಶಾಸನವನ್ನು ಕುರಿತು ರೈಸ್, ಫ್ಲೀಟ್, ಬಾ.ರಾ.ಗೋಪಾಲ್, ಹಯವದನರಾವ್ ಮೊದಲಾದ ವಿದ್ವಾಂಸರು ಚರ್ಚೆ ಮಾಡಿದ್ದಾರೆ.[೨]

ಚಾಲುಕ್ಯ ಮನೆತನದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೊದಲ ಅರಸಿ ಎಂದು ಭಾವಿಸಲಾಗಿದ್ದ ಅಕ್ಕಾದೇವಿಗಿಂತಲೂ ಪೂರ್ವದಲ್ಲಿಯೇ, ಈ ಪಿರಿಯಾಪಟ್ಟಣದ ಶಾಸನದಲ್ಲಿ ಉಕ್ತಳಾದ ಪಂಪಾದೇವಿಯು ಆಡಳಿತ ಕೈಗೊಂಡ ಅರಸಿಯಾಗಿದ್ದಾಳೆ. ಸತ್ಯಾಶ್ರಯನ ತಮ್ಮ ದಶವರ್ಮನ ಮಗಳಾದ ಅಕ್ಕಾದೇವಿಯ ಆಳ್ವಿಕೆ ತಿಳಿಸುವ ಮೊದಲ ಶಾಸನವು ಕ್ರಿ.ಶ. ೧೦೧೦ರದ್ದಾಗಿದ್ದರೆ[೩] ಈ ಕಾಲಕ್ಕೆ ಹದಿಮೂರು ವರ್ಷಗಳಿಗೂ ಮುನ್ನ ಕ್ರಿ.ಶ. ೯೯೭ರಲ್ಲಿ ಇಱಿವಬೆಡಂಗ ಸತ್ಯಾಶ್ರಯನ ಮಗಳು ಆಳ್ವಿಕೆ ನಡೆಸಿದ್ದಾಳೆ ಎನ್ನುವುದನ್ನು ಈ ಮೇಲಿನ ಪಿರಿಯಾಪಟ್ಟಣದ ಶಾಸನವು[೪] ತಿಳಿಸುತ್ತದೆ. ಆದರೆ, ಚಾಲುಕ್ಯ ರಾಜಕುಮಾರಿಯಾದ ಈ ಪಂಪಾದೇವಿಯು ರಾಜಧಾನಿಯಿಂದ ಬಹಳ ದೂರದ ಗಡಿ ಪ್ರದೇಶದ ಗಂಗವಾಡಿಯಲ್ಲಿ ಆಳ್ವಿಕೆ ನಡೆಸಿದ ವಿಚಾರವು ಆಶ್ಚರ್ಯವನ್ನುಂಟು ಮಾಡುತ್ತದೆ. ಇವಳನ್ನು ಕುರಿತು ತಿಳಿಸುವ ಈ ಪುಟ್ಟ ಐದು ಸಾಲಿನ ಶಾಸನವು 'ಸಕ ೯೧೯ರಲ್ಲಿ ಚಾಳುಕ್ಯ ಪೆರ್ಮಾನಡಿ ದೇವರ ಮಗಳಾದ ಪಂಪಾದೇವಿಯರ ರಾಜ್ಯಾಭ್ಯುದಯದಂದು ಕುಡುಕೂರ ಈಚಲ ದೋರಯ್ಯನ ಮಗ ಮಾರಯ್ಯ ಪೆಳ್ತಿಯೂರಲ್ಲಿ ಊರಳಿವಿನ ಕಾದಾಟದಲ್ಲಿ ಮಡಿದ' ಎಂಬ ವಿಚಾರವನ್ನು ತಿಳಿಸುತ್ತದೆ. ಮಡಿದ ವೀರನ ತಂದೆ ದೋರಯ್ಯ ಹಾಕಿಸಿರುವ ಈ ಶಾಸನದಲ್ಲಿ ಅರಸಿಯ ಪತಿಯ ವಿಚಾರವನ್ನು ಹೇಳದೆ, ಕೇವಲ ತಂದೆಯನ್ನು ಮಾತ್ರ ಉಲ್ಲೇಖಿಸಿದೆ.

ಉಪನ್ಯಾಸಕರು
ದಯಾನಂದಸಾಗರ್ ಕಾಲೇಜು
ಕುಮಾರಸ್ವಾಮಿ ಬಡಾವಣೆ
ಬೆಂಗಳೂರು
ಮೊ: ೯೯೮೬೧ ೬೪೮೯೦

ಈ ಪಂಪಾದೇವಿಯನ್ನು ಕುರಿತು ಚರ್ಚಿಸಿರುವ ವಿದ್ವಾಂಸರು ಹಲವು ರೀತಿಯ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಅಲ್ಲದೆ, ಸತ್ಯಾಶ್ರಯನ ಮಗಳು ಎಂದು ತಿಳಿಸುವ ಅರಸಿಯೊಬ್ಬಳ ಮತ್ತೆರಡು ಶಾಸನಗಳು ಅಂದಿನ ನೊಳಂಬವಾಡಿಗೆ ಸೇರಿದ್ದ ಪ್ರದೇಶದಲ್ಲಿ ದೊರೆತಿದೆ. ವಿದ್ವಾಂಸರು ಈ ಎಲ್ಲಾ ಶಾಸನಗಳಲ್ಲಿ ಉಕ್ತಳಾಗಿರುವವಳು ಒಬ್ಬಳೇ ಆಗಿದ್ದಾಳೆ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ[೫] ಅಲ್ಲದೆ, ಜಿಗುಡೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಪಂಪಾದೇವಿ ಎನ್ನುವ ಅರಸಿಯನ್ನೂ ಕೂಡ ಫ್ಲೀಟರು ಸತ್ಯಾಶ್ರಯನ ಮಗಳು ಎಂದು ಕರೆದಿರುವುದು ಗೊಂದಲಕ್ಕೆ ಕಾರಣವಾಗಿದೆ. ಫ್ಲೀಟ್ ಅವರು, ಬಾಗಲಕೋಟೆಯ ಹುನಗುಂದದ ಮರೋಳ ಎಂಬಲ್ಲಿನ ಶಾಸನವೊಂದರಲ್ಲಿ 'ಸತ್ತಿಗನಣುಂಗಿ' ಎಂದು ಉಕ್ತವಾಗಿರುವ ವಿಚಾರವನ್ನು ಉಲ್ಲೇಖಿಸಿ, ಸತ್ತಿಗ ಎಂದು ಸತ್ಯಾಶ್ರಯನನ್ನು ಕುರಿತು ಹೇಳುವುದಾದ್ದರಿಂದ ಈ ಹುನಗುಂದದ ಶಾಸನದಲ್ಲಿ ಉಕ್ತಳಾಗಿರುವವಳು ಸತ್ಯಾಶ್ರಯನ ಮಗಳೇ ಆಗಿದ್ದಾಳೆಂದೂ, ಪಿರಿಯಾಪಟ್ಟಣದ ಶಾಸನದಲ್ಲಿ ಉಕ್ತಳಾಗಿರುವ ಪಂಪಾದೇವಿಯೂ ಇವಳೇ ಎಂದು ತಿಳಿಸಿದ್ದಾರೆ. ಆದರೆ ಹುನಗುಂದದ ಶಾಸನವು ಬಹಳ ತ್ರುಟಿತವಾಗಿದ್ದು ಅಲ್ಲಿ ಹೆಸರು ತಿಳಿದು ಬರುವುದಿಲ್ಲ. ಹಾಗಾಗಿ ಅವಳು ಸತ್ಯಾಶ್ರಯನ ಮಗಳೇ ಆಗಿದ್ದರೂ, ಪಿರಿಯಾಪಟ್ಟಣದ ಶಾಸನದ ಪಂಪಾದೇವಿಯೇ ಅವಳು ಎನ್ನಲು ಆಧಾರ ಸಾಲದಾಗುತ್ತದೆ.

ಬಾ.ರಾ. ಗೋಪಾಲ್ ಅವರು, ಪಿರಿಯಾಪಟ್ಟಣದ ಶಾಸನದಲ್ಲಿ ಉಲ್ಲೇಖಗೊಂಡಿರುವ (ಕ್ರಿ.ಶ. ೯೯೭) ಸಂದರ್ಭದಲ್ಲಿ ಅವಿವಾಹಿತೆಯಾಗಿದ್ದ ಪಂಪಾದೇವಿಯು ಜಯಸಿಂಹನ (ಕ್ರಿ.ಶ. ೧೦೧೫) ಆಡಳಿತದ ಕಾಲವನ್ನು ಉಲ್ಲೇಖಿಸುವ ಹುನಗುಂದದ ಮರೋಳದಲ್ಲಿನ ಶಾಸನದ ಕಾಲಕ್ಕೆ ವಿವಾಹಿತಳಾಗಿದ್ದಾಳೆ ಎನ್ನುತ್ತಾ ಫ್ಲೀಟರ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.[೬] ರೈಸರು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ತಳ್ಳಿಹಾಕದೆ, ಪಿರಿಯಾಪಟ್ಟಣದ ಶಾಸನದಲ್ಲಿ ಕಂಡುಬರುವ ಪಂಪಾದೇವಿಯನ್ನು ಕುರಿತು ಹೇಳುತ್ತಾ "ಫ್ಲಿಟ್ ಆಕೆಯನ್ನು ಸತ್ಯಾಶ್ರಯನ ಮಗಳೆಂದು ಗುರುತಿಸಿರುವುದು ಸರಿಯಲ್ಲದಿದ್ದಲ್ಲಿ, ಆಕೆ ಗಂಗ ಅರಸನೊಬ್ಬನ ಪತ್ನಿಯಾಗಿದ್ದು, ಈ ಕಾಲಕ್ಕೆ ವಿಧವೆಯಾಗಿದ್ದಳು" ಎಂಬ ಅಭಿಪ್ರಾಯಪಡುತ್ತಾರೆ.[೭]

'ಸತ್ತಿಗನಣುಂಗಿ' ಎಂಬ ಉಲ್ಲೇಖ ಇರುವ ಮರೋಳದ ಶಾಸನವು, ಅಲ್ಲಿನ ಬಸದಿಗೆ ಜಯಸಿಂಹನ ಪಾದಪದ್ಮೋಪಜೀವಿ ಎಂದು ಕರೆದುಕೊಂಡಿರುವ ಘಟಿಯಂಕಕಾಱ ನೊಳಂಬ ಅರಸನು ದೇವಕೀರ್ತಿ ಪಂಡಿತರ ಪಾದ ತೊಳೆದು ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[೮] ಈ ತ್ರುಟಿತ ಶಾಸನವು, 'ರತ್ನ ಮಕುಟ ಚೂಡಾಮಣಿ, ಸಮಸ್ತ ದಾನ ಧರ್ಮ್ಮಾನುರಾಗಪ್ರಿಯೆ, ಸತ್ಯಬ್ರತಯುಕ್ತೆ, ಆಮೋದ ವಿದ್ಯಾಧರಿ, ಸತ್ತಿಗನಣುಂಗಿ ರೂಪವಿಳಾಸ ಯತ್ಯುದಾರ ಶಾಲಿನಿ ಗುಣರತ್ನ ನಿಧಾನೆಯರಪ್ಪ ಶ್ರೀಮನ್ಮಹಾದೇವಿಯರ್' ಎಂದು ಅವಳ ಗುಣಗಾನ ಮಾಡುತ್ತದೆ. ಆದರೆ, ಮೇಲೆ ತಿಳಿಸಿರುವಂತೆ ಈ ಶಾಸನದಲ್ಲಿ ಈಕೆಯ ಹೆಸರು ತಿಳಿದುಬರುವುದಿಲ್ಲ, ಅಷ್ಟೇ ಅಲ್ಲದೆ, ಇವಳು ಘಟಿಯಂಕಕಾಱ ನೊಳಂಬನ ಅರಸಿ ಎಂಬ ವಿಚಾರವೂ ಕೂಡ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಕ್ರಿ.ಶ. ೧೦೧೦ಕ್ಕೆ ಸೇರುವ ಆಲೂರಿನ ಶಾಸನದಲ್ಲಿ[೯] 'ಮನುಮಾರ್ಗ್ಗಾಗ್ರಣಿ ಚಕ್ರವರ್ತಿ ತಿಳಕಂ ತೈಲಂಗೆ ಮರ್ಮ್ಮಳೊಡರ್ಪಿನ ಸತ್ಯಾಶ್ರಯ ಚಕ್ರವರ್ತಿಯ ಮಗಳ್ ಶ್ರೀ ವಿಕ್ರಮಾದಿತ್ಯ ದೇವನ ಚಕ್ರೇಶನ ತಂಗೆ ತನ್ನರಸಿಯೆನ್ದನ್ದೀ ನೊಳಂಬಾಧಿರಾಜನ ಪೆಂಪಂ ಕುಳಮಂ ಮಹಾಮಹಿಮೆಯಂ ಬಣ್ಣಿಪ್ಪೋನೇ ವಣ್ಣಿಪೊಂ.." ಎಂಬ ಉಲ್ಲೇಖ ದೊರಕುತ್ತದೆ. ತೈಲನ ಮೊಮ್ಮಗಳೂ, ಸತ್ಯಾಶ್ರಯನ ಮಗಳೂ, ವಿಕ್ರಮಾದಿತ್ಯನ ತಂಗಿಯೂ ಆದ ಇವಳು ನೊಳಂಬಾಧಿರಾಜನ ಅರಸಿ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರಕಾರವಾಗಿ ಪ್ರಭಾವಿ ಅರಸಿಯಾಗಿದ್ದ ಸತ್ಯಾಶ್ರಯನ ಮಗಳು ನೊಳಂಬಾಧಿರಾಜನ ಅರಸಿಯಾಗಿದ್ದು, ನೊಳಂಬವಾಡಿಯಲ್ಲಿ ಆಳ್ವಿಕೆ ನಡೆಸುತ್ತಿದ್ದುದು ಸಹಜವಾಗಿದೆ. ಮೇಲೆ ಉಲ್ಲೇಖಿಸಿರುವ ಪಿರಿಯಾಪಟ್ಟಣದ ಶಾಸನದಲ್ಲಿ ಉಕ್ತಳಾಗಿರುವ ಸತ್ಯಾಶ್ರಯನ ಮಗಳು ಪಂಪಾದೇವಿಯು ಆಳ್ವಿಕೆ ನಡೆಸುತ್ತಿದ್ದದ್ದು ಗಂಗವಾಡಿ ಪ್ರದೇಶವಾಗಿದೆ. ಚಾಳುಕ್ಯ ರಾಜಧಾನಿಯಿಂದ ಬಹಳ ದೂರದ ಪ್ರದೇಶದಲ್ಲಿ ವಿವಾಹ ಪೂರ್ವದಲ್ಲಾಗಲೀ, ನೊಳಂಬ ರಾಜನನ್ನು ವರಿಸಿದ ನಂತರವಾಗಲಿ ಆಳ್ವಿಕೆ ನಡೆಸುತ್ತಿದ್ದಳೆನ್ನುವುದು ಒಪ್ಪತಕ್ಕ ವಿಚಾರವಾಗುವುದಿಲ್ಲ. ಅಲ್ಲದೆ, ನೊಳಂಬ ರಾಜನನ್ನು ವರಿಸಿರುವ ಚಾಲುಕ್ಯ ರಾಜಕುಮಾರಿಯನ್ನು ತೈಲನ ಮೊಮ್ಮಗಳು, ಸತ್ಯಾಶ್ರಯನ ಮಗಳು, ವಿಕ್ರಮಾದಿತ್ಯನ ತಂಗಿ ಎಂದೆಲ್ಲಾ ಬಣ್ಣಿಸಿರುವ ಶಾಸನವು ಆಕೆಯ ಹೆಸರನ್ನು ಮಾತ್ರ ತಿಳಿಸಿಲ್ಲ. ಎರಡೂ ಶಾಸನಗಳಲ್ಲಿನ 'ಸತ್ಯಾಶ್ರಯನ ಮಗಳು' ಎಂಬ ಉಲ್ಲೇಖವೇ ಇವರಿಬ್ಬರನ್ನು ಒಬ್ಬಳೇ ಎಂದು ಪರಿಗಣಿಸುವಂತೆ ಮಾಡಿದೆ.

ಸತ್ಯಾಶ್ರಯನ ಮಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ವಿದ್ವಾಂಸರು ಮತ್ತೊಬ್ಬ ಪಂಪಾದೇವಿಯನ್ನು ಕುರಿತು ತಿಳಿಸಿರುವುದನ್ನು ಕಾಣಬಹುದು. ಇವಳು ಸತ್ಯಾಶ್ರಯ ಹಾಗೂ ಅವನ ನಂತರ ವಿಕ್ರಮಾದಿತ್ಯರ ಕಾಲದಲ್ಲಿ ಬನವಾಸಿ ಮೊದಲಾದ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದ ಕುಂದಮರಸನ ಮೂವರು ರಾಣಿಯರಲ್ಲೊಬ್ಬಳಾದ ಪಂಪಾದೇವಿ. ಈ ಪಂಪಾದೇವಿಯು ಜಿಗುಡೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದಳೆಂದು ತಿಳಿಸುವ ಶಾಸನವೊಂದು[೧೦] ಬಹಳ ತ್ರುಟಿತವಾಗಿದ್ದು,

ಶಾಸನದ ಕಾಲ ಹಾಗೂ ಈಕೆಯ ತಂದೆ–ತಾಯಿಯರ ವಿಚಾರ ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತಿಲ್ಲ. ಮೊದಲು ಈ ಶಾಸನವನ್ನು ಸಂಪಾದಿಸಿದ ಸಂಪಾದಕರು, ಈ ಪಂಪಾದೇವಿ ಹಾಗೂ ಪಿರಿಯಾಪಟ್ಟಣದ ಶಾಸನದಲ್ಲಿ ಉಕ್ತಳಾಗಿರುವ ಪಂಪಾದೇವಿಯರು ಒಬ್ಬಳೇ ಎಂದು ಬಗೆದು, ಜಿಗುಡೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಪಂಪಾದೇವಿಯು ಇಜೀವಬೆಡಂಗ ಸತ್ಯಾಶ್ರಯನ ಮಗಳೆಂದೇ ತಿಳಿಸಿದ್ದಾರೆ. ಆದರೆ, ಜಿಗುಡೂರಿಗನಲ್ಲಿ ಆಳ್ವಿಕೆ ನಡೆಸುತ್ತಿದ್ದ ಪಂಪಾದೇವಿಯ ಪತಿ ಕುಂದಮರಸನು ತನ್ನನ್ನು 'ಸತ್ತಿಗನ ಚಟ್ಟ' ಎಂದು ತನ್ನೆಲ್ಲ ಶಾಸನಗಳಲ್ಲಿಯೂ ಕರೆದುಕೊಂಡಿದ್ದಾನೆ. ಸುಮಾರು ಹತ್ತಕ್ಕೂ ಮೀರಿದಂತೆ ಸಿಗುವ ಈತನ ಶಾಸನಗಳಲ್ಲಿ ಕೆಲವು ಇವನನ್ನು ಸತ್ಯಾಶ್ರಯನ ಮಗನೆಂದೇ ಸ್ಪಷ್ಟವಾಗಿ ಉಲ್ಲೇಖಿಸಿವೆ. ಆದರೆ, ಇಜೀವಬೆಡಂಗ ಸತ್ಯಾಶ್ರಯನ ನಂತರ ಇವನ ತಮ್ಮ ದಶವರ್ಮನ ಮಗ ಐದನೆಯ ವಿಕ್ರಮಾದಿತ್ಯನು ಚಾಲುಕ್ಯ ಸಿಂಹಾಸನವನ್ನು ಏರಿದ್ದಾನೆ. ಇವನ ನಂತರ ಜಯಸಿಂಹ, ಆನಂತರ ಇವನ ಮಗ ಸೋಮೇಶ್ವರ, ನಂತರ ಇವನ ಮಕ್ಕಳ ಹೆಸರು ಚಾಲುಕ್ಯ ವಂಶಾವಳಿಯಲ್ಲಿ ದೊರಕುತ್ತದೆ. ಐದನೆಯ ವಿಕ್ರಮಾದಿತ್ಯ ಹಾಗೂ ಎರಡನೆಯ ಜಯಸಿಂಹರ ನಡುವೆ ಅಯ್ಯಣ ದೇವನ ಹೆಸರು ಕೂಡ ಇವರ ವಂಶಾವಳಿಯಲ್ಲಿ ದೊರಕುತ್ತದೆ. ಆದರೆ ಸತ್ಯಾಶ್ರಯ ಇಜೀವಬೆಡಂಗನ ಮಗನೆಂದು ಹೇಳಿಕೊಳ್ಳುವ ಕುಂದಮರಸನ ಹೆಸರು ಚಾಲುಕ್ಯ ವಂಶಾವಳಿಯಲ್ಲಿ ಕಂಡುಬರುವುದಿಲ್ಲ. ಹಾಗಾಗಿ ಇವನು ಸತ್ಯಾಶ್ರಯನ ಮಗನಲ್ಲ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ.

ಹಯವದನರಾವ್ ಅವರು, ಕುಂದಮರಸನ ಒಂದು ಶಾಸನದಲ್ಲಿ 'ಉಭಯಸಾಮ್ಯದಿಂ' ಎಂದಿರುವುದನ್ನು ಗುರುತಿಸಿ, ಈತ ಮಗ ಹಾಗೂ ಅಳಿಯ ಎಂಬ ಅರ್ಥ ಬರುವಂತೆ ಹೇಳಿಕೊಂಡಿದ್ದಾನೆ (ಮಗನ ಸ್ಥಾನ ತುಂಬಿದ ಅಳಿಯ) ಎಂದಿದ್ದಾರೆ. ಇದರ ಪ್ರಕಾರ ಕುಂದಮರಸನು ಸತ್ಯಾಶ್ರಯ ಇಜೀವಬೆಡಂಗನ ಮಗಳು ಪಂಪಾದೇವಿಯನ್ನು ವರಿಸಿ, ತನ್ನನ್ನು 'ಸತ್ತಿಗನ ಚಟ್ಟ' ಎಂದು ಕರೆದುಕೊಂಡಿದ್ದಾನೆ, ಎನ್ನುವುದು ಹಯವದನರಾವ್ ಹಾಗೂ ಹಲವು ವಿದ್ವಾಂಸರ ಅಭಿಪ್ರಾಯವಾಗಿತ್ತು[೧೧].

ಆದರೆ, ನಂತರದ ಕಾಲದಲ್ಲಿ ದೊರೆತಿರುವ ಕೆಲವು ಶಾಸನಗಳು ಇವನನ್ನು 'ಸತ್ತಿಗನ ಚಟ್ಟಂ' ಎಂದು ಕರೆದಿರುವುದಲ್ಲದೆ 'ಶ್ರೀಮದಿಜೀವಬೆಡಂಗ ದೇವರ ಮಗ' ಎಂಬ ಸ್ಪಷ್ಟ ಉಲ್ಲೇಖಗಳನ್ನೂ ನೀಡಿವೆ. ಕುಳನೂರು ಶಾಸನವನ್ನು ಎಪಿಗ್ರಾಫಿಯಾ ಇಂಡಿಕಾದಲ್ಲಿ ಪ್ರಕಟಿಸಿರುವ ಸಂಪಾದಕರು, ಕುಂದಮರಸನನ್ನು ಚಾಲುಕ್ಯ ಸತ್ಯಾಶ್ರಯ ಇಜೀವಬೆಡಂಗನ ಮಗನೆಂದೇ ತಿಳಿಸಿದ್ದಾರೆ[೧೨]. ಹಾಗಾಗಿ ಈತನ ಅರಸಿ ಪಂಪಾದೇವಿಯು ಸತ್ಯಾಶ್ರಯನ ಮಗಳಾಗಿರಲು ಸಾಧ್ಯವಿಲ್ಲ. ಅಲ್ಲದೆ, 'ಕುಂದಮರಸನು ಸತ್ಯಾಶ್ರಯನ ಪಟ್ಟದರಸಿಯ ಮಗನಾಗಿರದೆ, ಕಿರಿಯರಸಿಯೊಬ್ಬಳ ಮಗನಾಗಿದ್ದಿರಬೇಕು, ಮಗನಾಗಿದ್ದರೂ ಇಂತಹ ಯಾವುದೋ ಕಾರಣದಿಂದಾಗಿ ಚಾಲುಕ್ಯ ಸಿಂಹಾಸನವನ್ನೇರಲು ಸಾಧ್ಯವಾಗಿಲ್ಲ ಎನ್ನುವಂತಹ ಅಭಿಪ್ರಾಯವನ್ನು ಬಹುತೇಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಇದರಿಂದ ಪಿರಿಯಾಪಟ್ಟಣದ ಶಾಸನದಲ್ಲಿ ಚಾಲುಕ್ಯ ಸತ್ಯಾಶ್ರಯನ ಮಗಳೆಂದು ಕರೆಯಲಾಗಿರುವ ಪಂಪಾದೇವಿ ಹಾಗೂ ಜಿಗುಡೂರಿನಲ್ಲಿ ಆಳ್ವಿಕೆ ನಡೆಸಿದ ಕುಂದಮರಸನ ರಾಣಿ ಪಂಪಾದೇವಿಯರು ವಿಭಿನ್ನರು ಎನ್ನುವುದು ಸ್ಪಷ್ಟವಾಗುತ್ತದೆ.

ಪಿರಿಯಾಪಟ್ಟಣದ ಶಾಸನದಲ್ಲಿ ಉಕ್ತಳಾಗಿರುವ ಪಂಪಾದೇವಿಯನ್ನು ಕುರಿತು ಇವಳು 'ಗಂಗ ಅರಸನೊಬ್ಬನ ಪತ್ನಿಯಾಗಿದ್ದಿರಬಹುದು ಎನ್ನುವ ರೈಸರ ಹೇಳಿಕೆಯನ್ನು ಒಪ್ಪಬಹುದಾಗಿದೆ[೧೩]. ಇಜೀವಬೆಡಂಗ ಸತ್ಯಾಶ್ರಯನಿಗೆ ಇಬ್ಬರು ಹೆಣ್ಣುಮಕ್ಕಳಿದ್ದು, ಅದರಲ್ಲಿ ಹಿರಿಯಳಾಗಿದ್ದಿರಬಹುದಾದ ಪಂಪಾದೇವಿಯನ್ನು ಗಂಗರಾಜ ಮನೆತನದ ಅರಸನಿಗೆ ಕೊಟ್ಟು ವಿವಾಹ ನಡೆಸಿರುವ ಸಾಧ್ಯತೆಯನ್ನು ಈ ಶಾಸನವು ತಿಳಿಸುತ್ತದೆ. ಹಾಗಿದ್ದುದರಿಂದಲೇ ಇವಳು ಗಂಗವಾಡಿಯಲ್ಲಿ ಆಳ್ವಿಕೆ ನಡೆಸುವ ಅವಕಾಶವನ್ನು ಪಡೆದುಕೊಂಡಿದ್ದಾಳೆ. ಆದರೆ, ರೈಸರು ಹೇಳಿರುವಂತೆ 'ಇವಳು ಈ ಕಾಲಕ್ಕೆ ವಿಧವೆಯಾಗಿದ್ದಳು' ಎಂಬ ವಿಚಾರವನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಅರಸಿಯೊಬ್ಬಳು ತನ್ನ ಆಳ್ವಿಕೆಯನ್ನು ಕುರಿತು ತಿಳಿಸುವ ಶಾಸನದಲ್ಲಿ ಪತಿಯ ಹೆಸರನ್ನು ಉಲ್ಲೇಖಿಸದೆ, ತಂದೆಯ ಹೆಸರನ್ನು ಹೇಳಿಕೊಂಡ ಮಾತ್ರಕ್ಕೆ, ಪತಿ ಮೃತನಾಗಿದ್ದ ಎಂಬ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ. ಈ ಪ್ರಕಾರ ಪತಿಯ ಹೆಸರನ್ನು ಉಲ್ಲೇಖಿಸದೆ, ತಂದೆಯ ಹೆಸರನ್ನು ಮಾತ್ರ ಹೇಳಿರುವ ಅರಸಿಯರ ಇನ್ನೂ ಕೆಲವು ಶಾಸನಗಳನ್ನು ಗಮನಿಸಬಹುದು. ಹೊಯ್ಸಳ ಸೋವಲದೇವಿ, ಗಂಗ ರಾಜಕುಮಾರಿ ಚಟ್ಟಲದೇವಿಯರು ವಿವಾಹವಾದ ನಂತರವೂ ತಮ್ಮ ಶಾಸನಗಳಲ್ಲಿ ತಂದೆಯರನ್ನು ಮಾತ್ರ ಉಲ್ಲೇಖಿಸಿ, ತಂದೆಯ ಮನೆತನದ ಮೂಲಕವೇ ತಮ್ಮನ್ನು ಗುರುತಿಸಿಕೊಂಡಿರುವುದನ್ನು ಕಾಣಬಹುದು. ಚಾಲುಕ್ಯ ರಾಜಕುಮಾರಿ ಅಕ್ಕಾದೇವಿಯು ಹಾಕಿಸಿದ ಸುಮಾರು ಹತ್ತು ಶಾಸನಗಳು ಕಂಡುಬಂದರೂ ಅವುಗಳಲ್ಲಿ ಪತಿಯ ಹೆಸರನ್ನಾಗಲಿ ಮನೆತನವನ್ನಾಗಲೀ ಉಲ್ಲೇಖಿಸದೆ, ಇವಳನ್ನು ಚಾಲುಕ್ಯ ಮನೆತನದ ರಾಜಕುಮಾರಿ ಎನ್ನುವುದನ್ನು ಮಾತ್ರ ಹೇಳಿರುವುದು ಗಮನಾರ್ಹ.

ಪಿರಿಯಾಪಟ್ಟಣದ ಪಂಪಾದೇವಿಯ ಕಾಲಕ್ಕೆ ಸಮೀಪವಾಗುವ ಕ್ರಿ.ಶ.೯೯೨ರ ಶಾಸನವೊಂದು ಗಂಗ ಮನೆತನದ ನೀತಿಮಾರ್ಗ ಪೆರ್ಮಾನಡಿ ರಾಚಮಲ್ಲನು ಪೃಥ್ವಿರಾಜ್ಯಂಗೆಯ್ಯುತ್ತಿದ್ದನೆಂಬ ವಿಚಾರ ಚಿಕ್ಕಮಗಳೂರ ಶಾಸನದಲ್ಲಿ ತಿಳಿದುಬರುತ್ತದೆ. ಕ್ರಿ.ಶ. ೯೯೯ಕ್ಕೆ ಹೊಂದುವ ಶಕ ೯೨೧ನೆಯ ಕಾಲದ ಚಾಮರಾಜನಗರದ ಶಾಸನವು[೧೪] ಉಲ್ಲೇಖಿಸುವ ನೀತಿಮಾರ್ಗ ಪೆರ್ಮಾನಡಿ ಕೂಡ ಈತನೇ ಇರಬಹುದು. ಇಂತಹ ಕೆಲವು ಶಾಸನಗಳ ಉಲ್ಲೇಖಗಳಿಂದ ಆ ಕಾಲದಲ್ಲಿ ಪ್ರಸಿದ್ಧನಾಗಿದ್ದ ಗಂಗ ಅರಸು ಇವನಾಗಿದ್ದ ಎನ್ನುವುದನ್ನು ಗಮನಿಸಬಹುದಾದರೂ, ಪಂಪಾದೇವಿಯ ಶಾಸನದಲ್ಲಿ ಈತನ ಹೆಸರು ಇಲ್ಲದಿರುವುದರಿಂದ, ಇವನೇ ಆಕೆಯ ಪತಿ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇವಳ ಆಳ್ವಿಕೆಯನ್ನು ತಿಳಿಸುವ ಶಾಸನದ ಕಾಲದ ನಂತರದ ಕೆಲವೇ ವರ್ಷಗಳಲ್ಲಿ ಚೋಳ ಒಂದನೆಯ ರಾಜರಾಜನು ಗಂಗವಾಡಿಯ ಮೇಲೆ ಧಾಳಿ ನಡೆಸಿ ಆಕ್ರಮಿಸಿಕೊಂಡ ಕಾರಣ ಪಂಪಾದೇವಿಯ ಆಳ್ವಿಕೆ ಇಲ್ಲಿ ಹೆಚ್ಚುಕಾಲ ಮುಂದುವರೆದಿಲ್ಲ. ಹಾಗಾಗಿ ಇವಳ ಬೇರೆ ಯಾವ ಶಾಸನವೂ ಕಂಡುಬಂದಿಲ್ಲ. ಇದು ಇವಳ ಕುರಿತಾಗಿ ಹೆಚ್ಚಿನ ಮಾಹಿತಿ ಸಂಗ್ರಹಕ್ಕೆ ಅವಕಾಶ ಇಲ್ಲದಂತಾಗಿದೆ. ಆದರೆ, ಮೇಲೆ ತಿಳಿಸಿರುವ ನೊಳಂಬವಾಡಿಯ ಕೆಲವು ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ಸತ್ಯಾಶ್ರಯನ ಮಗಳು ಹಾಗೂ ಜಿಗುಡೂರಿನಲ್ಲಿ ಆಳ್ವಿಕೆ ನಡೆಸಿದ ಪಂಪಾದೇವಿಯರಿಗಿಂತಲೂ ಭಿನ್ನಳಾದ ಹಾಗೂ ಅವರಿಬ್ಬರಿಗೂ ಹಿರಿಯಳಾದ ಚಾಲುಕ್ಯ ರಾಜಕುಮಾರಿ ಈ ಪಂಪಾದೇವಿ ಎನ್ನುವುದು ಸ್ಪಷ್ಟವಾಗುತ್ತದೆ.

ಚಾಲುಕ್ಯ ವಂಶದಲ್ಲಿ ಮೊಟ್ಟಮೊದಲು ಆಡಳಿತ ನಡೆಸಿದ ಅರಸಿ ಎಂಬ ಖ್ಯಾತಿಗೆ ಒಳಗಾಗುವ ಸತ್ಯಾಶ್ರಯನ ಮಗಳು ಪಂಪಾದೇವಿಯ ವಿಚಾರವಾಗಿ, ಹೆಸರಿನ ಉಲ್ಲೇಖವನ್ನುಳಿದು ಮತ್ಯಾವ ವಿಷಯವೂ ತಿಳಿಯದೇ ಇರುವುದು ದುರದೃಷ್ಟಕರ. ಇವಳಂತೆಯೇ ಸಾಂತರ ಮನೆತನದ ರಾಜಕುಮಾರಿ ಪಂಪಾದೇವಿಯೂ ಕೂಡ, ಮದುವೆಯಾದ ನಂತರವೂ ಕೂಡ ತನ್ನ ತವರುಮನೆಯ ಉಲ್ಲೇಖದಿಂದಲೇ ತನ್ನನ್ನು ಗುರುತಿಸಿಕೊಂಡಿದ್ದಾಳೆ[೧೫]. ತೈಲ-ತ್ರಿಭುವನಮಲ್ಲ ಸಾಂತರನ ಮಗಳಾದ ಇವಳು ಕ್ರಿ.ಶ. ೧೧೪೭ರಲ್ಲಿ ತನ್ನ ತಮ್ಮ ಶ್ರೀವಲ್ಲಭನೊಂದಿಗೆ ಹೊಂಬುಜದಲ್ಲಿ ಆಳ್ವಿಕೆ ನಡೆಸುತ್ತಿದ್ದಳು ಎನ್ನುವ ವಿಚಾರ ಆ ಕಾಲದ ಶಾಸನದಿಂದ[೧೬] ತಿಳಿದುಬರುತ್ತದೆ. ಶಾಸನವು ತಿಳಿಸುವಂತೆ, ಈ ಹಿಂದೆ ಚಟ್ಟಲದೇವಿಯು ಕಟ್ಟಿಸಿದ್ದ 'ಉರ್ವಿತಿಲಕ ಪಂಚಕೂಟ ಬಸದಿ'ಯನ್ನು ಇವಳು ತನ್ನ ಆಳ್ವಿಕೆಯ ಕಾಲದಲ್ಲಿ ನವೀಕರಿಸಿ, ಜೊತೆಗೆ ಪಟ್ಟಶಾಲೆ ನಿರ್ಮಾಣ ಮಾಡಿಸುತ್ತಾಳೆ. ಇದನ್ನು ತನ್ನ ಮಗಳು ಹಾಗೂ ತಮ್ಮನೊಂದಿಗೆ ವಾಸುಪೂಜ್ಯ ಸಿದ್ಧಾಂತರ ಕಾಲುತೊಳೆದು ದಾನ ಕೊಡುತ್ತಾಳೆ. ಈಕೆಯ ದಣ್ಣಾಯಕ ಎಂದು ಕರೆದುಕೊಂಡಿರುವ ದೇವರಸ ರಚಿಸಿರುವ ಈ ಶಾಸನವು ಕಾವ್ಯಾತ್ಮಕವಾಗಿದೆ ಆದರೆ ಈಕೆಯ ಪತಿಯ ವಿಚಾರವನ್ನು ತಿಳಿಸಿಲ್ಲ[೧೭].

ಈ ಪಂಪಾದೇವಿಯರಲ್ಲದೆ, ಮತ್ತೊಬ್ಬ ಪಂಪಾದೇವಿಯ ವಿಚಾರವನ್ನೂ ಶಾಸನದ ಹೇಳಿಕೆಯು ಗೊಂದಲಕ್ಕೆ ಈಡು ಮಾಡಿದೆ. ಇವಳು ಚಾಲುಕ್ಯ ಎರಡನೆಯ ಸೋಮೇಶ್ವರನ ರಾಣಿ ಪಂಪಾದೇವಿ. ಈ ಪಂಪಾದೇವಿಯು ಕೆಜ಼ಿಯೂರ ನೆಲೆವೀಡಿನಲ್ಲಿದ್ದಾಗ ಮೊಸಳೆಕಲ್ಲು ೩೦೦ರ ಕಂಪಣ ಗೋರಿಕಲ್ಲು ೧೨ರಲ್ಲಿಯ ಭತ್ತಗ್ರಾಮ ಕಪ್ಪಗಲ್ಲು ಭೋಗೋಶ್ವರ ದೇವರಿಗೆ ದಾನ ನೀಡಿದ್ದಾಳೆ[೧೮]. ಈ ವಿಚಾರವನ್ನು ತಿಳಿಸುವ ಶಾಸನವು ಈ ಪಂಪಾದೇವಿಯನ್ನು 'ಮಲೆಪವೆಡಂಗಿ' ಎಂದು ಬಿರುದಾಂಕಿತಳಾದ ಚಾಮಲದೇವಿಯರಣುಂಗಿ ಎಂದು ಕರೆದಿದೆ. ಸಾಧಾರಣವಾಗಿ ಪ್ರೀತಿಪಾತ್ರಳಾದ ಮಗಳನ್ನು ಕಾವ್ಯ, ಶಾಸನಗಳಲ್ಲಿ 'ಅಣುಗಿ' ಎಂದು ಕರೆದಿರುವ ಉದಾಹರಣೆಗಳು ದೊರಕುತ್ತವೆ. ಈ ಹಿನ್ನೆಲೆಯಲ್ಲಿ, ಈ ಶಾಸನೋಕ್ತ ಪಂಪಾದೇವಿಯನ್ನು ಚಾಮಲದೇವಿಯ ಮಗಳೆಂದು ಕೆಲವೆಡೆ ಶಾಸನ ಅಧ್ಯಯನ ಮಾಡಿರುವಲ್ಲಿ ಗುರುತಿಸಲಾಗಿದೆ[೧೯]. ಆದರೆ, ಈ ಮಲೆಪವೆಡಂಗಿ ಚಾಮಲಾದೇವಿಯು ಮೊದಲನೆಯ ಸೋಮೇಶ್ವರನ ರಾಣಿ. ಹಾಗಾಗಿ ಆತನ ಮಗ ಎರಡನೆಯ ಸೋಮೇಶ್ವರನ ರಾಣಿಯಾದ ಪಂಪಾದೇವಿಯು ಚಾಮಲಾದೇವಿಯ ಮಗಳಾಗಿರಲು ಸಾಧ್ಯವಿಲ್ಲ.

ಶಾಸನಗಳು ಮಕ್ಕಳನ್ನಷ್ಟೇ ಅಲ್ಲದೆ ಶಿಷ್ಯರನ್ನು, ನೆಚ್ಚಿನ ಭಂಟರನ್ನು, ಮನೆಮಗ ಅಥವಾ ಇತರ ಆಪ್ತ ಸಂಬಂಧಿಯನ್ನು 'ಅಣುಗ' ಎಂದು ಕರೆದಿರುವುದನ್ನು ಗಮನಿಸಬಹುದು. ಇಲ್ಲಿ ಚಾಮಲದೇವಿಯ ಪ್ರೀತಿಪಾತ್ರ ಸೊಸೆ ಎಂಬ ಅರ್ಥದಲ್ಲಿ ಅತ್ತೆಯ ಅಣುಗಿ ಎಂದು ಬಣ್ಣಿಸುವ ಪದವಾಗಿ 'ಚಾಮಲದೇವಿಯರಣುಂಗಿ' ಎಂದು ಕರೆದಿದೆ. ಈ ರೀತಿ ಅತ್ತೆ-ಸೊಸೆಯರ ಸಂಬಂಧವನ್ನು ಶಾಸನವು ಹೀಗೆ ಉಲ್ಲೇಖಿಸಿರುವುದು ಅಪರೂಪದ ನಿದರ್ಶನವಾಗಿದೆ, ಜೊತೆಗೆ ಶಾಸನವು ಅರಸಿ ಪಂಪಾದೇವಿಯ ತಂದೆ-ತಾಯಿಯರ ಹೆಸರನ್ನು ಹೇಳದೇ ಇರುವುದು ಕೂಡ ಗೊಂದಲಕ್ಕೆ ಕಾರಣವಾಗಿದೆ[೨೦].

ಈ ಪ್ರಕಾರವಾಗಿ, ಶಾಸನದ ಅಸ್ಪಷ್ಟ ವಿಚಾರಗಳು ಅಥವಾ ತ್ರುಟಿತಗೊಂಡ ಶಾಸನಗಳ ಅಪೂರ್ಣ ಮಾಹಿತಿಗಳು ಕೆಲವು ಅರಸಿಯರ ವಿಚಾರವನ್ನು ಗೊಂದಲಮಯವಾಗಿಸಿವೆ. ವಿಚಿತ್ರವೆಂದರೆ, ಕಲ್ಯಾಣದ ಚಾಲುಕ್ಯ ಅರಸರ ಕಾಲದಲ್ಲಿ, ವಿಭಿನ್ನ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ 'ಪಂಪಾದೇವಿ' ಹೆಸರಿನ ಎಲ್ಲ ರಾಣಿಯರ ವಿಚಾರವೂ ಅಸ್ಪಷ್ಟವಾಗಿವೆ.

ಆಕರಗ್ರಂಥಗಳು

೧. E.C IV, (ಪರಿ) ಪಿರಿಯಾಪಟ್ಟಣ, ೯೨, (ಕ್ರಿ.ಶ. ೯೯೭-೯೮).

೨. Gopal B.R., QJMS Vol. xlix p. 252-256.

೩. E.I xv, ನಂ. ೬ ಸೂಡಿ (ತಾ) ರೋಣ 'ಸಿ' (ಕ್ರಿ.ಶ. ೧೦೧೦) .

೪. E.C, ಪೂರ್ವೋಕ್ತ.

೫. Gopal B.R., ಪೂರ್ವೋಕ್ತ.

೬ ಪೂರ್ವೋಕ್ತ.

೭. E.C. IV, (ರೈಸ್), ಪೀಠಿಕೆ, ಪು. ೧೩.

೮. ಕವಿಶಾಸಂ ೯, ಬಾಗಲಕೋಟೆ, ಹುನಗುಂದ (ತಾ), ಮರೋಳ, ೯೯, (ಕ್ರಿ.ಶ. ೧೦೨೪).

೯. ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ ೧, ಮೈಸೂರು ವಿವಿ, ೨೦೦೧.

೧೦. SSI XVIII, ಶಾ.ಸಂ. ೫೨.

೧೧. ಪೂರ್ವೋಕ್ತ.

೧೨. E.I XV, ಪು. ೩೨೯.

೧೩. E.C. IV, (ರೈಸ್), ಪೀಠಿಕೆ, ಪು. ೧೩.

೧೪. E.C . III, ೧೦, ಚಾಮರಾಜನಗರ.

೧೫. E.C. VIII, (ರೈಸ್), ನಗರ, ೩೭, ಕ್ರಿ.ಶ. ೧೧೪೭.

೧೬. ಪೂರ್ವೋಕ್ತ.

೧೭. E.C. ಪೂರ್ವೋಕ್ತ.

೧೮. ಕ.ವಿ.ಶಾ.ಸಂ ೭, ಕಪಗಲ್ಲು, ೫೫, ಕ್ರಿ.ಶ. ೧೦೬೯.

೧೯. ಮಾನ್ವಿ ತಾಲೂಕಿನ ಶಾಸನಗಳು, ಕಸಾಪ, ಬೆಂಗಳೂರು, ೨೦೦೦, ಶಾ.ಸಂ. ೨೬, ಪು. ೪೬.

೨೦. ಪೂರ್ವೋಕ್ತ.

♦♦

೫೦

ವಿರೂಪಾಕ್ಷಿ ಪೂಜಾರಹಳ್ಳಿ

ಹನುಮನ ಮೂಲನೆಲೆ : ಅಂಜನಾದ್ರಿ ಪರಿಸರ

ಹಂಪಿಯ ವಿರೂಪಾಕ್ಷ ದೇವಾಲಯದ ಈಶಾನ್ಯಕ್ಕೆ ಕಾಣುವುದೇ ಅಂಜನಾದ್ರಿ ಪರ್ವತ. ವಿದ್ವಾಂಸರ ಪ್ರಕಾರ 'ಅಂಜನಾದ್ರಿ' ಎಂಬುವುದು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಎಂದು ಖ್ಯಾತವಾದ ಆನೆಗುಂದಿಯ ಪಂಪಾಸರಸ್ಸು ಸರೋವರದ ಹತ್ತಿರ ಬರುತ್ತದೆ. ಈ ಪ್ರದೇಶವು ಪುರಾತತ್ವ-ಚಾರಿತ್ರಿಕವಾಗಿ ಹಾಗೂ ಪೌರಾಣಿಕವಾಗಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಪರಂಪರಾಗತವಾಗಿ ಸ್ಥಳೀಯರ ನಂಬಿಕೆಯಂತೆ ರಾಮಾಯಣದಲ್ಲಿ ಉಲ್ಲೇಖಗೊಂಡಿರುವ ಪಂಪಾಸರೋವರ ಮತ್ತು ವಾನರಾಧಿ ರಾಜನಾದ ವಾಲಿಯ ರಾಜಧಾನಿ ಕಿಷ್ಕಿಂಧೆ ಎಂಬ ಪ್ರದೇಶ ಇದೇ ಎನ್ನಲಾಗಿದೆ.[1] ಸ್ಥಳಪುರಾಣ ಮತ್ತು ಶಾಸನಗಳಲ್ಲಿ ಕಿಷ್ಕಿಂಧನಗರ, ಕಿಷ್ಕಂಧನಾಡು, ಕಿಷ್ಕಂಧ ಪರ್ವತಗಳು ಎಂದು ಅಂಜನಾದ್ರಿಯ ಬಗ್ಗೆ ಉಲ್ಲೇಖಗಳಿವೆ. ಹನುಮಂತ, ವಾಲಿ, ಸುಗ್ರೀವ ಈ ಪರಿಸರದಲ್ಲಿಯೇ ವಾಸವಾಗಿದ್ದರೆಂದು ಹಾಗೂ ರಾಮನು ದರ್ಶನ ನೀಡಿದ ಪೌರಾಣಿಕ ಸ್ಥಳವೆಂದು ಐತಿಹ್ಯಗಳಿವೆ. ಇಲ್ಲಿಯ ನಿಸರ್ಗ ನಿರ್ಮಿತ ಕುರುಹುಗಳು ಹಾಗೂ ಪುರಾತತ್ವ, ಪ್ರಾಗೈತಿಹಾಸ ಕಾಲದ ಅವಶೇಷಗಳನ್ನು ರಾಮಾಯಣದ ಘಟನೆಗಳಿಗೆ ಹಾಗೂ ಪ್ರಮುಖ ವ್ಯಕ್ತಿಗಳಿಗೆ ಜೋಡಿಸುವುದುಂಟು. ಈ ಸನ್ನಿವೇಶಗಳೆ ಮುಂದೆ ಅನೇಕ ಪುರಾಣ ಕಥೆಗಳ ಹುಟ್ಟಿಗೆ ಕಾರಣವಾದವು. ಪಂಪಾ ಮಹಾತ್ಮೆಯಲ್ಲಿ ಬರುವ ಮಾಲ್ಯವಂತಗಿರಿ, ಋಷ್ಯಮೂಕ, ಕಿಷ್ಕಿಂದಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಸೋಮಪರ್ವತ, ಮಣಿಭದ್ರೇಶ್ವರ ಪರ್ವತ ಮುಂತಾದವು ವಾಲ್ಮೀಕಿ ರಾಮಾಯಣದ ಮಹಾಕಾವ್ಯದ ಉಲ್ಲೇಖಗಳಿಗೆ ಸಮಾನಾಗಿದ್ದು ಅವು ಹಂಪಿ-ಆನೆಗುಂದಿ ಪರಿಸರದಲ್ಲಿರುವುದು ಗಮನಾರ್ಹ.

ತುಂಗಭದ್ರಾ ನದಿಯ ಎಡ ಪರಿಸರದಲ್ಲಿ ಪಂಪಾವನ, ಮಾನಸಸರೋವರ, ಶಬರಿಗುಹೆ, ಅಂಜನಾದ್ರಿ, ಆನೆಗೊಂದಿಯ ಹತ್ತಿರ ವಾಲಿಭಂಡಾರಗಳಿವೆ. ನದಿಯ ಬಲಭಾಗದಲ್ಲಿ ಸುಗ್ರೀವ ಗುಹೆ ಇದೆ. ಸೀತೆಯ ಸೆರಗು, ಮತಂಗಪರ್ವತ, ಹೇಮಕೂಟ, ರತ್ನಕೂಟಗಳಿವೆ. ಹಂಪಿ ಹತ್ತಿರದ ವೆಂಕಟಾಪುರದಲ್ಲಿ ಬೂದಿದಿಬ್ಬ ದೊರೆತಿದ್ದು, ಅದು ವಾಲಿಯ ದಹನಕ್ರಿಯೆಯಿಂದುಂಟಾದ ದಿಬ್ಬವೆಂದೂ (ವಾಲಿಕಾಷ್ಟ) ಜನರ ನಂಬಿಕೆ. ಅದರೊಂದಿಗೆ ಹಂಪಿ ಹಾಗೂ ಆನೆಗೊಂದಿ ಪರಿಸರದ ಬೆಟ್ಟಗಳಲ್ಲಿ ಪ್ರಾಗೈತಿಹಾಸ ಕಾಲದ ಗವಿವರ್ಣ ಚಿತ್ರಗಳು ವ್ಯಾಪಕವಾಗಿವೆ. ಅವುಗಳಲ್ಲಿ ಕೆಲವು ಮನುಷ್ಯರಿಗೆ ಬಾಲವಿರುವ ಚಿತ್ರಗಳು ಅಂಜನಾದ್ರಿಯ ವಾನರರನ್ನು ನೆನಪಿಗೆ ತರುತ್ತವೆ. ಆಂಜನೇಯನ ಜನನ ಸ್ಥಳವಾದ ಅಂಜನಾದ್ರಿ, ಆನೆಗೊಂದಿ, ಹಸ್ತಿನಾವತಿ, ಪಂಪಾಕ್ಷೇತ್ರ, ಕಿಷ್ಕಿಂಧೆ ಮುಂತಾದ ಹೆಸರುಗಳು ರಾಮಾಯಣದ ಸಾಂಸ್ಕೃತಿಕ ಘಟನೆಗಳಿಗೆ ಪೂರಕವಾಗಿವೆ.

ಪ್ರಾಧ್ಯಾಪಕರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ-೫೮೩೨೭೬
ಹೊಸಪೇಟೆ ತಾಲ್ಲೂಕು
ವಿಜಯನಗರ ಜಿಲ್ಲೆ
ಮೊ: ೯೪೪೮೨ ೨೭೧೫೬

ಹಂಪಿ–ಆನೆಗೊಂದಿ ಪ್ರದೇಶ ರಾಮಾಯಣದ ಕಿಷ್ಕಿಂದವೆಂಬುದು ಸಮಕಾಲೀನ ನಂಬಿಕೆಯೇನಲ್ಲ. ಪ್ರಾಚೀನ ಕಾಲದಿಂದಲೂ ಜನಮನದಲ್ಲಿ ಆಳವಾಗಿ ಬೇರೂರಿತ್ತೆಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಹಂಪಿಯಿಂದ ೧೦ ಕಿ.ಮೀ. ಅಂತರದಲ್ಲಿರುವ ದೇವಿಘಾಟ್ ಎಂಬಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶೈವ ದೇವಾಲಯದಲ್ಲಿ ೬ನೇ ವಿಕ್ರಮಾದಿತ್ಯನ ೧೧೦೯ರ ಶಾಸನವಿದೆ. ತುಂಗಭದ್ರಾ ತಟದ ಬಡಗ ಕಿಷ್ಕಿಂದಾಮಿ ಪರ್ವತಂ ಎಂಬ ಉಲ್ಲೇಖ ಆನೆಗೊಂದಿ ಪ್ರದೇಶವನ್ನು ಸೂಚಿಸುತ್ತದೆ ಎಂದು ಅ.ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.[೧] ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಶಿರಸಂಗಿ ಗ್ರಾಮದ ಕಾಳಿಕಾ ದೇವಾಲಯದಲ್ಲಿರುವ ೧೧೩೬ರ ಕಲ್ಯಾಣ ಚಾಲುಕ್ಯ ೪ನೇ ಸೋಮೇಶ್ವರನ ಶಾಸನದಲ್ಲಿ ಋಷ್ಯಶೃಂಗ ಮುನಿಯ ಮಹಿಮೆ ಮತ್ತು ಕಿಷ್ಕಂದೆಯ ಹಿರಿಮೆಯ ವರ್ಣನೆ ಬರುತ್ತದೆ.[೨] ಕಿಷ್ಕಿಂದ ಪರ್ವತವು ಅತ್ಯಂತ ಶ್ರೇಷ್ಟ ಹಾಗೂ ಉನ್ನತವಾದದು ಎನ್ನಲಾಗಿದೆ. ಕಿಷ್ಕಿಂದಗಿರಿಯು ಜನನಿಬಿಡವಾದ ನಗರವಾಗಿದ್ದು, ವಾಲಿ, ಮರುತ್ಸ, ಅಂಗದ, ದಿನೇಸ, ಮತಂಗ, ಹಂಸ, ಕಲಿಲ, ಅಗಸ್ತ್ಯ ಮೊದಲಾದವರಿಗೆ ಆಶ್ರಯತಾಣವಾಗಿತ್ತೆಂದು ಹೇಳಲಾಗಿದೆ. ಅಂದರೆ ವಾಲಿ, ಮರುತ್ಸ, ಅಂಗದ, ದಿನೇಸಗಳು ಅಂದಿನ ಬುಡಕಟ್ಟಿನ ಜನಾಂಗದ ಮೂಲಪುರುಷರ ಹೆಸರು ಅಥವಾ ಪಂಗಡಗಳ ಹೆಸರುಗಳಾಗಿದ್ದವೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅದರೊಂದಿಗೆ ರಾಮಾಯಣದಲ್ಲಿ ಉಲ್ಲೇಖಿತವಾದ ಈ ಬೆಟ್ಟಗಳ ಪರಿಸರದಲ್ಲಿ ವಾಸಿಸುವ ಮೂಲ ಜನಾಂಗದ ವಿವರಗಳು ದೊರೆಯುವುದು ವಿರಳ. ಆದರೆ ಈ ಪರಿಸರದಲ್ಲಿ ನೆಲೆಸಿರುವ ಜನಾಂಗದ ಪ್ರತಿಯೊಂದು ಆಚರಣೆ ಸಂಪ್ರದಾಯಗಳು ರಾಮಾಯಣದ ಘಟನೆಗಳಿಗೆ ಸಂಬಂಧಿಸಿವೆ. ಹಾಗಾದರೆ ಇಲ್ಲಿ ವಾಸಿಸುವ ಜನಾಂಗ ಈ ಮೇಲೆ ತಿಳಿಸುವ ಜನರಿಗೆ ಸಂಬಂಧಿಸಿದವೋ ಎಂಬ ಪ್ರಶ್ನೆ ನಮ್ಮಲ್ಲಿ ಹುಟ್ಟಿಕೊಳ್ಳುತ್ತದೆ.

ರಾಮಾಯಣದ ಪ್ರಕಾರ ಕಿಷ್ಕಿಂದ ಪ್ರದೇಶ (ಅಂಜನಾದ್ರಿ) ಸುಗ್ರೀವ ವಾಲಿಯರ ಪ್ರದೇಶ. ವಾಲಿ–ಸುಗ್ರೀವರ ಕಾಳಗ, ವಾಲಿಯ ವಧೆ ನಡೆಯುವುದು ಈ ಪ್ರದೇಶದಲ್ಲಿ. ರಾಮ ಸುಗ್ರೀವನನ್ನು ಭೇಟಿಯಾಗುವುದು ಮತಂಗ ಪರ್ವತದಲ್ಲಿ. ರಾಮ ವಾಲಿಯನ್ನು ಕೊಂದ ಸ್ಥಳ ಆನೆಗುಂದಿಯ ತಾರಾ ಬೆಟ್ಟವೆಂಬುದು ಜನಪದರ ನಂಬಿಕೆ. ಈ ಭಾಗದಲ್ಲಿ ಜನಪದರ ರಂಗಭೂಮಿಯಲ್ಲಿ ರಾಮಾಯಣದ ಪ್ರಸಂಗಗಳು ಮಹತ್ವದ ಸ್ಥಾನ ಪಡೆದು ಪ್ರದರ್ಶನಗೊಳ್ಳುತ್ತವೆ. ಹಗಲು ವೇಷಗಾರರು ಇಂಥ ಘಟನೆಗಳನ್ನು ಕಥಾಪ್ರಸಂಗವಾಗಿ ಪ್ರದರ್ಶನ ನೀಡುತ್ತಾರೆ. ಈ ಎಲ್ಲ ಸನ್ನಿವೇಶ, ಐತಿಹಾಸಿಕ ಕುರುಹುಗಳು ಜನಪದರ ನಂಬಿಕೆಗಳಲ್ಲಿ ಹಾಗೂ ಹಂಪಿ–ಆನೆಗೊಂದಿ ಪರಿಸರ ರಾಮಾಯಣದ ಕಿಷ್ಕಿಂದವಾಗಿ (ಅಂಜನಾದ್ರಿ) ಪ್ರಮುಖ ಸ್ಥಾನ ಪಡೆದುಕೊಂಡಿವೆ.

ಆದರೆ ಈ ಮೇಲಿನ ಘಟನೆ ಹಾಗೂ ವಿವರಣೆಗಳನ್ನು ಗಮನಿಸಿದರೆ ಇದನ್ನು ಹಂಪಿ ಅಥವಾ ಕಿಷ್ಕಿಂದಾ ರಾಮಾಯಣ ಅಥವಾ ಅಂಜನಾದ್ರಿ ರಾಮಾಯಣ ಎಂದು ಕರೆಯಬಹುದಾಗಿದೆ. ಏಕೆಂದರೆ ಆನೆಗೊಂದಿ ಹಾಗೂ ಹಂಪಿ ಪರಿಸರದ ಜನಪದರಲ್ಲಿ ರಾಮ ಮತ್ತು ರಾಮಾಯಣ ಕುರಿತು ನಂಬಿಕೆ ಸಂಪ್ರದಾಯ ಆಚರಣೆಗಳು ಇಂದಿಗೂ ಜೀವಂತವಾಗಿ ಪ್ರಚಲಿತದಲ್ಲಿವೆ. ಹಾಗಾದರೆ ಇವು ಯಾವ ಕಾಲದಿಂದ ಹಾಗೂ ಯಾವ ಸಂದರ್ಭದಲ್ಲಿ ಪ್ರಚುರಕ್ಕೆ ಬಂದವು ಎಂಬುದನ್ನು ಸಂಶೋಧನೆಯ ಮೂಲಕ ಕಂಡುಕೊಳ್ಳಬೇಕಾಗಿದೆ. ಕಾರಣ ವಿಜಯನಗರ ಸ್ಥಾಪಕರಾದ ಸಂಗಮ ಮನೆತನದವರು ಶೈವ ಧರ್ಮದ ಆರಾಧಕರಾಗಿದ್ದರು. ಇವರು ರಾಮ ಅಥವಾ ವೈಷ್ಣವ ಧರ್ಮಕ್ಕೆ ಕೊಡಮಾಡಿದ ಕಾಣಿಕೆ ಏನು ಎಂಬುದನ್ನು ಕುರಿತು ಅರಿಯುವುದು ಮುಖ್ಯವಾಗಿದೆ. ಐತಿಹ್ಯಗಳ ಪ್ರಕಾರ ಈ ಆನೆಗೊಂದಿ ಪರಿಸರವು ರಾಮ ಅಥವಾ ಹನುಮನ ಆರಾಧನಾ ಕೇಂದ್ರವಾಗಿತ್ತು. ಇಲ್ಲಿಯ ಬೆಟ್ಟಗುಡ್ಡಗಳಿಗೆ ರಾಮಾಯಣದಲ್ಲಿ ಉಲ್ಲೇಖಿಸಿರುವ ಪ್ರಮುಖ ಸಂಗತಿ ಹಾಗೂ ಹೆಸರುಗಳು ಪೂರಕವಾಗಿದ್ದರಿಂದ ಅವುಗಳಿಗೆ ಸಂಬಂಧಿಸಿದ ವಿಜಯನಗರಪೂರ್ವದ ಐತಿಹಾಸಿಕ ಸ್ಮಾರಕ ಶಿಲ್ಪಗಳ ರಚನೆಗಳು ವಿರಳವೆನ್ನಬಹುದಾಗಿವೆ. ಹಾಗಾದರೆ ಇಲ್ಲಿಯ ಐತಿಹ್ಯಗಳು ವಿಜಯನಗರ ಹಾಗೂ ನಂತರದ ಕಾಲಘಟ್ಟದಲ್ಲಿ ಹುಟ್ಟಿಕೊಂಡಿರುವುದು ನಮ್ಮನ್ನು ಜಿಜ್ಞಾಸೆಗೆ ಒಳಪಡಿಸಿವೆ. ಆದ್ದರಿಂದ ಅಂಜನಾದ್ರಿ ಪರಿಸರದ ಜನಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಜರುಗಬೇಕಾಗಿದೆ. ಅದರೊಂದಿಗೆ ಹನುಮಂತ ಅಥವಾ ಆಂಜನೇಯ ಹಾಗೂ ಕಿಷ್ಕಿಂದ ನಾಡಿನ ಚರಿತ್ರೆ ಅನಾವರಣಗೊಳ್ಳುವುದು ಕನ್ನಡ ಶಬ್ದಕೋಶ ಮತ್ತು ಪದಕೋಶದಲ್ಲಿ. ಆಂಜನೇಯ ಮತ್ತು ಅಂಜನ–ಒಂದು ಪರ್ವತ= ಅಸಿತಮುನಿಯು ಇಲ್ಲಿ ತಪಸ್ಸು ಮಾಡಿದನು ಎಂದು ಉಲ್ಲೇಖವಾಗಿದೆ. ಹಾಗೆಯೇ ಹನುಮಂತ–ಅಂಜನಾದೇವಿಯ ಮಗ. ಅಂಜನೆ ಮತ್ತು ಆಂಜನೇಯನ ಪುರಾಣ, ದಂತಕಥೆಗಳಲ್ಲಿ ವ್ಯಕ್ತವಾಗಿರುವುದನ್ನು ಹೀಗೆ ತಿಳಿಸಲಾಗಿದೆ.

ಅಂಜನೆ: ವನಸ್ತ್ರೀಯೊಬ್ಬಳು ಈಕೆಯ ಪತಿಯು ಕೇಸರಿ ಎಂಬ ವನನಾಯಕ. ಪುಂಜಕಸ್ಥಲಿ ಎಂಬ ಅಪ್ಸರೆಯ ಶಾಪದಿಂದ ಕುಂಜರನ ಮಗಳಾಗಿ ಅಂಜನಿ ಎಂಬ ಹೆಸರಿನಿಂದ ಹುಟ್ಟಿ, ವಾಯುವಿನಿಂದ ಆಂಜನೇಯ ಎಂಬ ಮಗನನ್ನು

ಪಡೆದಳು. ಆಕೆಯ ತಂದೆ ಗೌತಮ. ತಾಯಿ ಅಹಲ್ಯೆ. ಅಹಲ್ಯೆ ಸೂರ್ಯ ಮತ್ತು ಇಂದ್ರರಿಂದ ಪಡೆದ ಮಕ್ಕಳೇ ಸುಗ್ರೀವ ಮತ್ತು ವಾಲಿ. ಮಗಳಾದ ಅಂಜನೆಯು ಈ ವಿಚಾರವನ್ನು ಗೌತಮಳಿಗೆ ತಿಳಿಸಲು ಅವನು–ಇವರು ನನ್ನ ಮಕ್ಕಳಲ್ಲದಿದ್ದರೆ ಕಪಿಮುಖರಾಗಲಿ ಎನಲು ವಾಲಿ ಸುಗ್ರೀವರು ಕಪಿಮುಖರಾದರು. ಅಹಲ್ಯೆಯು ಈ ಗುಟ್ಟನ್ನು ರಟ್ಟು ಮಾಡಿದ ಮಗಳಿಗೆ ಕಪಿಯನ್ನು ಮಗನನ್ನಾಗಿ ಪಡೆಯುವಂತೆ ಶಾಪವನ್ನಿತ್ತಳು. ಇದರಿಂದಲೇ ಹನುಮಂತನು ಕಪಿಮುಖವಾಗಿ ಈಕೆಯಲ್ಲಿ ಜನ್ಮವೆತ್ತಿದನು.[೩] ಮುಂದುವರೆದು ನೋಡಿದಾಗ ಇನ್ನಷ್ಟು ವಿವರ ಈ ಬಗ್ಗೆ ಲಭ್ಯ.

ಹನುಮಂತ: ಅಂಜನಾದೇವಿಗೆ ವಾಯುವಿನಿಂದ ಜನಿಸಿದವನೇ ಹನುಮಂತ. 'ಶಿವನು ಪಾರ್ವತಿಯ ಗರ್ಭವನ್ನು ಆಕೆಯ ವಕ್ಕಳು ಭಾಗದಿಂದ ಹೊರತೆಗೆದು ವಾಯುವಿನ ಮೂಲಕ ಗೌತಮನು ಮಗಳಾಗಿ, ಪುತ್ರನಿಗಾಗಿ ತಪಸ್ಸು ಮಾಡುತ್ತಿದ್ದ, ಆಂಜನೇಯ ಕೈಯಲ್ಲಿಡಲು, ಅದನ್ನು ಆಕೆ ನುಂಗಲು ಹುಟ್ಟಿದ ವೀರನೇ ಆಂಜನೇಯ. ಇವನು ಶಿವನ ಅಂಶದಿಂದ ಜನಿಸಿದವನು. ಈತನು ಬಾಲ್ಯದಲ್ಲಿ ಸೂರ್ಯನನ್ನು ಹಣ್ಣೆಂಬ ಭ್ರಾಂತಿಯಿಂದ ತಿನ್ನಹೋಗಲು, ಇಂದ್ರನು ಈ ಅನರ್ಥವನ್ನು ತಪ್ಪಿಸಲು ವಜ್ರಾಯುಧದಿಂದ ಆಂಜನೇಯನ ಮುಖಕ್ಕೆ ಹೊಡೆದು, ಆತನ ಮುಖವು ಜಜ್ಜಿಹೋಗಿ ಬಾಲ ಆಂಜನೇಯನು ನೆಲಕ್ಕೊರಗಿದನು. ಇದನ್ನು ತಿಳಿದ ವಾಯುವು ಪುತ್ರ ಶೋಕದಿಂದ ಅಡಗಲು ಜಗತ್ತು ನಾಶದ ದಾರಿಯನ್ನು ಹಿಡಿಯಿತು. ಇದನ್ನು ಕಂಡ ಬ್ರಹ್ಮನು ಆಂಜನೇಯನನ್ನು ಬದುಕಿಸಿ–ಇನ್ನು ಮುಂದೆ ಯಾವ ಆಯುಧಗಳಿಂದಲೂ ಮರಣ ಬಾರದಿರಲಿ ಎಂಬ ವರ ಕೊಟ್ಟನು. ಆಂಜನೇಯನು ಅಂದಿನಿಂದ ಹನುಮಂತನಾದನು. ಇವನು ಬಾಲ್ಯದಲ್ಲಿ ಋಷ್ಯಾಶ್ರಮವನ್ನು ಹೊಕ್ಕು, ಮುನಿಗಳನ್ನು ತುಂಬ ಪೀಡಿಸುತ್ತಿರಲು ಅವರು ಕೋಪಗೊಂಡರೂ, ಇವನ ಭವಿಷ್ಯವನ್ನು ತಿಳಿದು–ಶ್ರೀರಾಮನ ದರ್ಶನವಾಗುವವರೆಗೆ ನಿನ್ನ ಶಕ್ತಿಯ ಅರಿವು ನಿನಗೆ ಇರದಿರಲಿ ಎಂದು ಶಾಪಕೊಟ್ಟರು. ಇದರಿಂದ ವಾಲಿಯ ಭಯದಿಂದ ಸುಗ್ರೀವನೊಡನೆ ಹನುಮಂತನು ಓಡುತ್ತಿದ್ದನು. ಹನುಮನು ಮುಂದೆ ಸೂರ್ಯನಿಂದ ವ್ಯಾಕರಣ ಮತ್ತು ಸಮಸ್ತ ವಿದ್ಯಾಪಾರಂಗತನಾದನು. ಇವನು ಸುಗ್ರೀವನಿಗೆ ಮಂತ್ರಿಯಾಗಿ, ಶ್ರೀರಾಮನ ಭಕ್ತನಾಗಿ, ಅವನಿಗೆ ಸೀತಾಶೋಧನೆಯಲ್ಲಿ ನೆರವಾದನು. ಇವನು ಲಂಕಾಪಟ್ಟಣವನ್ನು ಪ್ರವೇಶಿಸುವಾಗ ಸಿಂಹಿಕೆಯನ್ನು ಕೊಂದು, ಸುರಸೆಯನ್ನು ಮೆಚ್ಚಿಸಿ, ಲಂಕಿಣಿಯನ್ನು ಗೆದ್ದು, ಅಶೋಕವನದಲ್ಲಿ ಸೀತೆಯನ್ನು ಕಂಡು, ರಾವಣನ ಪಕ್ಷದವರ ಶಕ್ತಿಯನ್ನು ತೂಕ ಮಾಡಲು ಯುದ್ಧಹೂಡಿ, ಅಕ್ಷಕುಮಾರನನ್ನು ಕೊಂದು ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಉದ್ದೇಶಪೂರ್ವಕ ಸಿಕ್ಕಿದನು.[೪] ಆಮೇಲೆ ಸೀತೆಯಿಂದ ಚೂಡಾಮಣಿಯನ್ನು ಪಡೆದು, ಆಕೆಗೆ ಶ್ರೀರಾಮನ ಮುದ್ರೆಯುಂಗುರವನ್ನಿತ್ತು, ಲಂಕೆಯನ್ನು ಸುಟ್ಟು ಶ್ರೀರಾಮನ ಬಳಿಗೆ ಸುಖವಾಗಿ ಬಂದನು.[೫]

೧. ರಾಜನೀತಿಯಂತೆ ಶತ್ರುಪಟ್ಟಣವನ್ನು ಪೌಳಿಗೋಡೆಯ ಮೂಲಕ ಎಡಗಾಲು ಮುಂದಿಟ್ಟು ಪ್ರವೇಶಿಸಿದ. ಗೃಹಪ್ರವೇಶ, ಮದುವೆ ಕಾಲದ ಹಸೆಮಣೆ ಮೇಲೆ ಹೆಜ್ಜೆ ಇಡುವಾಗ ಬಲ ಹೆಜ್ಜೆಯನ್ನು ಇಡಬೇಕು. ಹಾಗೆಯೇ ಪುರ ಪ್ರವೇಶಿಸುವಾಗ ಎಡಹೆಜ್ಜೆ ಇಡಬೇಕೆಂದು ಬೃಹಸ್ಪತಿಯು ಅಭಿಪ್ರಾಯ ಪಡುತ್ತಾರೆ.

೨. ವಿಷ್ಣು ಮೋಹಿನಿ ರೂಪತಾಳಲು ಶಿವನು ಮೋಹಗೊಂಡು ವೀರ್ಯಸ್ಕಲನವಾಯಿತು. ಸಪ್ತಋಷಿಗಳು ಅದನ್ನು ಅಂಜನೆಗೆ ಅರ್ಪಿಸಿದರು. ಅದರಿಂದ ಮಾರುತಿ ಹುಟ್ಟಿದನು. ಇವನು ಮುಂದೆ ಸೂರ್ಯನ ಸೂಚನೆಯಂತೆ ಸುಗ್ರೀವನ ಮಂತ್ರಿಯಾಗಿ, ಋಷ್ಯಮೂಕ ಪರ್ವತದಲ್ಲಿರುವಾಗ ಅಲ್ಲಿ ಶ್ರೀರಾಮ ಲಕ್ಷ್ಮಣರ ದರ್ಶನವಾಯಿತು.

೩. ಪುಂಜಿಕಸ್ಥಲಿ ಎಂಬ ಅಪ್ಸರೆಯ ಶಾಪದಿಂದ ಕುಂಜರನೆಂಬ ಕಪಿ ನಾಯಕನ ಮಗಳಾಗಿ ಅಂಜನ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ, ಕೇಸರಿ ಎಂಬ ವಾನರ ವೀರನನ್ನು ವಿವಾಹವಾದಳು. ಒಮ್ಮೆ ವಾಯುವು ಈಕೆಯ ರೂಪಕ್ಕೆ ಮೋಹಿಸಿ ಈಕೆಯನ್ನು ಬಲತ್ಕಾರದಿಂದ ಕೂಡಲು ಆಂಜನೇಯ ಜನಿಸಿದನು.

೪. ಹನುಮಂತನು ಯುದ್ಧರಂಗದಲ್ಲಿ ಧೂಮ್ರಾಕ್ಷ, ನಿಶುಂಭ ಮೊದಲಾದ ರಾಕ್ಷಸರನ್ನು ಕೊಂದನು. ಲಕ್ಷ್ಮಣನು ರಾವಣನ ಶಕ್ತ್ಯಾಯುಧದಿಂದ ಮೂರ್ಛೆ ಹೋದಾಗ, ಈತನು ಸಂಜೀವಿನಿ ಮೂಲಿಕೆ ಇದ್ದ ಪರ್ವತವನ್ನೇ ಯುದ್ಧರಂಗಕ್ಕೆ ತಂದನು. ಅಗ್ನಿಪ್ರವೇಶ ಮಾಡಲು ಮುಂದಾದ ಭರತನಿಗೆ ಶ್ರೀರಾಮನ ಆಗಮನದ ವಿಚಾರವನ್ನು ತಿಳಿಸಿದನು.[೬]

೫. ಅಶ್ವಮೇಧ ಕುದುರೆ ಕಟ್ಟಿದ ಲವಕುಶರೊಡನೆ ಯುದ್ಧದಲ್ಲಿ ಸೋತು ಅವರಿಂದ ಸೆರೆ ಹಿಡಿದು ಸೀತೆ ಹತ್ತಿರ ಕರೆತಂದರು.

೬. ಶ್ರೀರಾಮನಿಂದ ಇವನಿಗೆ ಬ್ರಹ್ಮಪಟ್ಟ ಆಶೀರ್ವಾದ ಸಿಕ್ಕಿತು. ಬ್ರಹ್ಮನ ಮಾನಸಪುತ್ರಿ ಸುವತ್ಸಲಾ ಎಂಬುವವರು ಆಂಜನೇಯನ ಪತ್ನಿ. ಸೂರ್ಯನ ಮಗಳನ್ನು ಹನುಮಂತ ಮದುವೆ ಆಗುತ್ತಾನೆ.

೭. ಲಂಕಾದಹನ ಮಾಡಿ ಮರಳಿಬರುವಾಗ ಮಾರುತಿಗೆ ಬಾಯಾರಿಕೆಯಾಗಿ ಋಷಿ ಬಳಿ ಹೋದಾಗ, ಕೊಳದ ನೀರು ಸೇವಿಸಿ ತನ್ನ ಮುದ್ರಿಕೆ, ಮಣಿ ಮತ್ತು ಬ್ರಹ್ಮನು ಕೊಟ್ಟ ಸಲಹೆಯಂತೆ ಕೊಳದಲ್ಲಿ ಮುದ್ರಿಕೆಯಿಂದ ರಾಮಾವತಾರದ ಬಗ್ಗೆ ತಿಳಿಯುತ್ತದೆ.

ಹೀಗೆ ಹನುಮಂತನ ಬಗ್ಗೆ ಪೌರಾಣಿಕ ಮಾಹಿತಿ ಹೆಚ್ಚಾಗಿದ್ದು, ಐತಿಹಾಸಿಕ ಮಹತ್ವ ಕಡಿಮೆ ಇದೆ. ಇತ್ತೀಚೆಗೆ ಧಾರ್ಮಿಕ ಪುರುಷನಾಗಿ ಹನುಮ ಮಾಲೆಧಾರಿಗಳನ್ನು ಧರಿಸಿ ವರ್ಷಕ್ಕೊಮ್ಮೆ ಭಕ್ತಿಪೂರ್ವಕವಾಗಿ ಸಮಾವೇಶಗೊಳ್ಳುತ್ತಾರೆ. ವಾನರ ಸಂಕುಲ ಕೋತಿಗಳ ತಾಣ ಇದಾಗಿದೆ. ಕಿಷ್ಕಿಂದೆ ವಾನರಬೀಡು. ಇಲ್ಲಿ ಕಪಿ ಸೈನ್ಯ ವಾಲಿ, ಸುಗ್ರೀವ, ಆಂಜನೇಯ ಮೊದಲಾದ ಕಪಿ ನಾಯಕರಿದ್ದರು. ಇವರೆಲ್ಲರಿಗೂ ಶ್ರೇಷ್ಠನಾದವನು ಹನುಮಂತ-ಆಂಜನೇಯ.

೮. ಅಭೇದ್ಯವಾದ ಗಿರಿಯ ತುದಿಯಲ್ಲಿ ಹನುಮಂತನ ಶಿಲ್ಪವಿರುವ ದೇವಾಲಯವೇ ಅಂಜನಾದ್ರಿ ಬೆಟ್ಟ ಎಂದು ಕರೆಯಲ್ಪಡುತ್ತದೆ. ಈ ಬೆಟ್ಟಕ್ಕೆ ಮೆಟ್ಟಿಲು ಮಾಡಿಸಿದ್ದು, ಬೆಟ್ಟದ ತಲೆಭಾಗದಲ್ಲಿನ ದೇವಾಲಯವನ್ನು ನಿರ್ಮಿಸಿದ್ದು ಯಾರು? ಯಾವಾಗ? ಎಂಬುದು ಚಾರಿತ್ರಿಕವಾಗಿ ತಿಳಿದುಬಂದಿಲ್ಲ. ಇತ್ತೀಚೆಗೆ ಅತೀ ಹೆಚ್ಚು ಪ್ರಚಲಿತದಲ್ಲಿರುವ ಯಾತ್ರಾಸ್ಥಳ ಇದಾಗಿದ್ದು ಆಂಜನೇಯ ಅಥವಾ ಹನುಮಮಾಲೆಧಾರಿಗಳಿಂದ ಖ್ಯಾತಿ ಪಡೆದಿದೆ. ಕೆಲವು ಆಧಾರಗಳ ಪ್ರಕಾರ ಅಂಜನಾದ್ರಿ ಪರಿಸರದಲ್ಲಿ ಆದಿ ಮಾನವ ನೆಲೆಸಿರುವ ಕುರುಹುಗಳಿದ್ದು, ಶಿಲಾಯುಗದ ಸಂಸ್ಕೃತಿಯನ್ನು ಹೋಲುತ್ತದೆ ಎನ್ನಲಾಗಿದೆ. ವಿಜಯನಗರ ಅವಧಿಯಲ್ಲಿ ಇಲ್ಲಿ ಸ್ಮಾರಕಗಳನ್ನು ನಿರ್ಮಿಸಿದ್ದು ಗಮನಾರ್ಹ.

ಇಲ್ಲಿಯ ಮೂಲನಿವಾಸಿಗಳು ಆದಿಶಿಲಾಯುಗದ ಆಯುಧ ಬಳಸಿದ್ದು, ಇಲ್ಲಿಯ ಗವಿ ಬಯಲು ಬಂಡೆಯ ರೇಖಾ ಚಿತ್ರಗಳು, ಕಲ್ಲಾಸರೆ, ಮಡಿಕೆ ಚೂರು, ಬೂದಿ ದಿಬ್ಬ ಮೊದಲಾದವು ಕಂಡುಬಂದಿವೆ. ವಾನರ ಕ್ಷೇತ್ರವೆಂದು ಕರೆಯುವ ಎಲ್ಲ ಲಕ್ಷಣಗಳು ಇದಕ್ಕಿವೆ. ಯಥೇಚ್ಚವಾಗಿ ಕೋತಿ(ಮಂಗಗಳು) ಇಲ್ಲಿ ನೆಲೆಸಿವೆ. ಮಂಗಗಳು ಪೂಜ್ಯನೀಯವಂತೆ, ಪ್ರಕೃತದತ್ತ ಜೈವಿಕ ಸಂಬಂಧವನ್ನು ಹೊಂದಿವೆ. ಮನುಷ್ಯನಂತೆ ಪ್ರಾಣಿಗಳ ಚಲನವಲನ ಇಲ್ಲಿ ಮುಖ್ಯ. ಹಾಗಾಗಿ ವಾನರ ಜನಜೀವನ ಕುರಿತಂತೆ ವಾಲಿ-ಸುಗ್ರೀವ-ಹನುಮಂತನನ್ನು ಉದಾಹರಣೆ ಕೊಡುವುದು ಸಹಜ. ಆಂಜನೇಯನಿಗೆ ಬಾಲವಿದ್ದು, ಬೇರೆ-ಬೇರೆ ಬಗೆಯಲ್ಲಿ ಅಧ್ಯಯನಗಳಾಗಿವೆ. ವಿವಿಧ ಶಿಸ್ತುಗಳ ಮೂಲಕ ಮಾನವರಂತೆ ಇದ್ದ ವಾನರ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಆಗಬೇಕಿದೆ. ಇಡೀ ಅಂಜನಾದ್ರಿ ಪರ್ವತ ಆಂಜನೇಯ ಮೂಲ ನೆಲೆಯಾದರೂ, ಅದರ ವ್ಯಾಪ್ತಿ ತುಂಗ-ಭದ್ರಾ ನದಿ ದಾಟಿ ಸಹಸ್ರಾರು ಕಿ.ಮೀ. ವರೆಗೂ ವ್ಯಾಪಿಸಿದೆ. ತುಂಗ-ಭದ್ರಾ ನದಿಯ ಎಡದಂಡೆಗೆ ಅಂಜನಾದ್ರಿ ಪರ್ವತವಿದ್ದರೆ, ದಕ್ಷಿಣಕ್ಕೆ ಮಾತಂಗ, ಹೇಮಕೂಟ, ಮಾಲ್ಯವಂತ, ಜಂಬುಕೇಶ್ವರ ಮೊದಲಾದವುಗಳಿವೆ. ಆನೆಗೊಂದಿ-ಕಿಷ್ಕಿಂದೆ-ಹಂಪಿ ಪರಿಸರದಲ್ಲಿ ಹನುಮಂತ ಅಥವಾ ಆಂಜನೇಯ ಶಿಲ್ಪಗಳು ಸಹಸ್ರಾರು ಕಂಡುಬಂದಿವೆ. ಇವುಗಳನ್ನು ಬೇರೆ-ಬೇರೆ ಶಿಸ್ತುಗಳ ಮೂಲಕ ಅಧ್ಯಯನ ಮಾಡಿದರೆ ಒಳಿತು.

೯. ಒಂದು ಕಾಲಕ್ಕೆ ಆಂಜನೇಯ ಅಥವಾ ಹನುಮಂತನ ಗುಡಿಗಳು ಮಹಿಳೆಯರ ಶೋಷಣೆಯ ಕೇಂದ್ರಗಳಾಗಿದ್ದವು. ಬ್ರಹ್ಮಚಾರಿ ಆಂಜನೇಯನಿಗೆ ದೈವಸ್ವರೂಪಿ ಎಂದು ಮಹಿಳೆಯರನ್ನು ದೇವದಾಸಿಯರನ್ನಾಗಿ ಬಿಡುತ್ತಿದ್ದರು. ಪಂಡಿತ ರೇವಣಶಾಸ್ತ್ರೀಯವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: 'ಕ್ರಿ.ಶ.೧೦೫೦ ರಲ್ಲಿ ವಿಷ್ಣುವೇ ಸರ್ವೋತ್ತಮನೆಂದು ಸಾರಿದ ಶ್ರೀರಾಮಾನುಜಾಚಾರ್ಯರು ವಾಲ್ಮೀಕಿ ಜನಾಂಗದ ಗುರುವೆಂದು ಹೇಳಿ, ಅವರಿಂದ ಸ್ಥಾಪಿಸಲ್ಪಡುವ ವಿಷ್ಣುದೇವಾಲಯಗಳ ಕಾರ್ಯಕಲಾಪಗಳಿಗಾಗಿ ದೇವದಾಸಿಯರನ್ನು ಹಾಗೂ ಬಸವಿ ಬಿಡುವ ಪದ್ಧತಿಯನ್ನು ವಾಲ್ಮೀಕರಲ್ಲಿ ಜಾರಿಗೆ ತಂದದ್ದನ್ನು ಕನಕದಾಸ(ವ್ಯಾಸ-ವ್ಯಾಸಕೂಟ) ದಾಸಪಂಥಿಗಳು ಖಂಡಿಸುತ್ತ ಬಂದರು.[೭] ಮಹಿಳೆಯರು ಹನುಮಂತ ಗುಡಿ ಸುತ್ತ ತಿರುಗುತ್ತಾರಲ್ಲದೆ, ಪೂಜೆ ಮಾಡಿ ಉತ್ತರ ಕರ್ನಾಟಕದಲ್ಲಿ ಬಸವಿಗೆ ಬಿಡುವ ಕೇಂದ್ರವಾಗಿತ್ತು.

ಕಮಲಾಪುರ ಗ್ರಾಮದ ವಾಯುವ್ಯಕ್ಕೆ ಕುಂಬಾರಕುಂಟೆಯ ಹತ್ತಿರವಿರುವ ಗುಂಡಿನ ಮೇಲೆ ಕೃಷ್ಣದೇವರಾಯನ ಕಾಲದ ೩೦-೧೦-೧೫೧೮ರ ಶನಿವಾರದ ಶಾಸನವಿದೆ. 'ರಾಜಕುಮಾರ ತಿರುಮಲರಾಯ ಮಹಾರಾಯನಿಗೆ ಪುಣ್ಯವಾಗಲೆಂದು ಅರಸನ ಹಿರಿಯ ರಾಣಿ ತಿರುಮಲದೇವಿಯು ವಿಜಯನಗರದಲ್ಲಿರುವ ಆಂಜನಗಿರಿಯ ಕರಿಯ ತಿರುವೆಂಗಳನಾಥ ದೇವರಿಗೆ ವಿಜಯನಗರದ ಹತ್ತಿರವಿರುವ ಕುಮ್ಮಾರಗುಂಟೆ ಎಂಬ ಭೂಮಿಯನ್ನು ದಾನ ಮಾಡಿದಳೆಂದು ತಿಳಿಸುತ್ತದೆ.[೮] ಅಂಜನಗಿರಿ ಹಂಪಿ ಪರಿಸರದ ಅಂಜನಾದ್ರಿ ಆಗಿರಬೇಕು.

ವಿಜಯನಗರ ಕಾಲದಲ್ಲಿ ಆಂಜನೇಯ ಗುಡಿಗಳು ಸಾಕಷ್ಟು ನಿರ್ಮಾಣಗೊಂಡವು. ಹಂಪಿ, ಕಮಲಾಪುರ, ಕಡ್ಡಿರಾಂಪುರ, ನಾಗೇನಹಳ್ಳಿ, ಮಲ್ಪನಗುಡಿ, ಅನಂತಶಯನಗುಡಿ, ಹೊಸಪೇಟೆ, ಬುಕ್ಕಸಾಗರ, ವೆಂಕಟಾಪುರ, ರಾಮಸಾಗರ, ಆನೆಗೊಂದಿ,

ಮೊದಲಾದ ಸ್ಥಳಗಳಲ್ಲಿ ಇಂದಿಗೂ ನೋಡಬಹುದು. ರಾಯಚೂರು ಜಿಲ್ಲೆಯ ಸಿಂಧನೂರು ತಾ., ಕಲ್ಮಗಿ, ಮಾನ್ವಿ ತಾಲ್ಲೂಕು, ವಟಗಲ್ಲು, ರಾಯಚೂರು ತಾಲ್ಲೂಕು, ಹೀರಾಪುರ, ಗಧಾರ, ಗುಂಡ್ರವೇಲಿ, ಮಟಮಾರಿ, ಸಿಂಧನೂರು ತಾ., ಕೋಳಬಾಳಗಳಲ್ಲಿ ಆಂಜನೇಯನ ಗುಡಿಗಳಿವೆ. ಹಾಗೇಯೆ ದೇವದುರ್ಗ ತಾ., ಗಬ್ಬೂರು, ಲಿಂಗಸ್ಗೂರು ತಾಲ್ಲೂಕು, ಯಲಗಲದಿಣ್ಣೆ, ಮಾಚನೂರು, ಮಾನ್ವಿ ತಾಲ್ಲೂಕು, ಹರವಿ, ಸಿಂಧನೂರು ತಾಲ್ಲೂಕು, ಬಳಗಾನೂರು, ಮುಕ್ಕುಂದ ಮೊದಲಾದವುಗಳಲ್ಲಿ ಇಂದಿಗೂ ಹನುಮನ ದೇವಾಲಯಗಳನ್ನು ಕಾಣಬಹುದು. ತುಂಗಭದ್ರಾನದಿಯಿಂದ ಕಾವೇರಿವರೆಗೂ ಮತ್ತು ಹಂಪಿ ಯಿಂದ ಕೃಷ್ಣಾ, ಭೀಮಾ ನದಿಗಳವರೆಗೆ ಆಂಜನೇಯನ ಪಂಥ ಪ್ರಬಲವಾಗಿ ಬೆಳೆದಿದೆ.

೧೦. ಪಂಪಾಸರಸ್ಸು-ಪಂಪಾಸರೋವರ ತುಂಗಭದ್ರಾ ನದಿ ಪರಿಸರದಲ್ಲಿದೆ. ಸುಗ್ರೀವನು ತನ್ನ ಅಣ್ಣ ವಾನರ ರಾಜ ಬಲಿಷ್ಠ ವಾಲಿಯೊಡನೆ ಹೋರಾಡಿ ಸೋತು ಪ್ರಾಣ ರಕ್ಷಣೆಗಾಗಿ ಓಡಿಹೋದುದು ಮಾತಂಗ ಪರ್ವತಕ್ಕೆ.[೯]

ಪ್ರೊ. ಬಾಲಸುಬ್ರಹ್ಮಣ್ಯಂ ಅವರು 'ವಿಜಯನಗರದ ಹನುಮಂತನ ಶಿಲ್ಪಗಳು' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ.[೧೦] ಇದರಲ್ಲಿ ರಾಮಾಯಣ ಕಾಲದಲ್ಲಿ ಹನುಮಂತ ಹುಟ್ಟಿದ ಸ್ಥಳ ಹಾಗೂ ವಾಲಿ-ಸುಗ್ರೀವರು ಬದುಕಿದ್ದು ಕಿಷ್ಕಿಂದೆಯಲ್ಲಿ. ರಾಮನು ಹನುಮಂತನನ್ನು ಭೇಟಿಯಾಗಿದ್ದು ಕಿಷ್ಕಿಂದೆಯಲ್ಲಿ ಅಂದರೆ ಹಂಪಿಯಲ್ಲಿ. ಸುಗ್ರೀವ ರಾಜ್ಯವಾಳುತ್ತಿದ್ದಾಗ, ಆತನ ಮಂತ್ರಿಯಾಗಿದ್ದವನು ಹನುಮಂತ. ರಾಮಾಯಣಕ್ಕೆ ಸಂಬಂಧಿಸಿದ ಅಂಜನಾದ್ರಿ, ಋಷ್ಯಮೂಕ, ಮಾಲ್ಯವಂತ, ಮಾತಂಗ ಪರ್ವತಗಳು ಇಲ್ಲಿವೆ. ವಾಲಿಕಾಷ್ಠ, ಸುಗ್ರೀವನ ಗುಹೆ, ಮಧುವನ ಮೊದಲಾದ ಸ್ಮಾರಕಗಳಿವೆ. ಬಾಲಸುಬ್ರಹ್ಮಣ್ಯಂ ಅವರು ಹೇಳುವಂತೆ ವಿಜಯನಗರ ಕಾಲದಲ್ಲಿ ಹನುಮಂತನ ವಿಗ್ರಹಗಳನ್ನು ಸ್ಥಾಪಿಸಿ, ಸೃಷ್ಠಿಸಿದ್ದಾರೆ. ಇದಕ್ಕೆ ಉದಾಹರಣೆ ಇಂದಿಗೂ ಪ್ರತೀ ಊರಿನಲ್ಲಿಯೂ ಹನುಮಂತನ ವಿಗ್ರಹಗಳಿರುವುದು.

ವಿಜಯನಗರ ಕಾಲದಲ್ಲಿ ಜನಪದ ದೈವವಾಗಿ ಹನುಮಂತನ ಶಿಲ್ಪಗಳು ಜನಮನ ಸೂರೆಗೊಂಡಿವೆ. ಸರಳವಾದ ಗುಡಿಗಳಲ್ಲಿ ಆಂಜನೇಯನ ಶಿಲ್ಪಗಳಿವೆ. ಎಲ್ಲ ಸಮುದಾಯದವರು ಇವನನ್ನು ಆರಾಧಿಸುತ್ತಾರೆ. ವಡಕರಾಯ, ಕಣಿವೆರಾಯ, ಬರ್ಮಪ್ಪ, ಗಾರೆಬಾವಿ ಹೇಮಗಿರಿ ಆಂಜನೇಯ, ಯಂತ್ರೋದ್ಧಾರಕ, ಪಂಚಮುಖ ಆಂಜನೇಯನ ಶಿಲ್ಪ ಹಾಗೂ ವಿಗ್ರಹಗಳಿವೆ. ಹನುಮಂತ ತಮಿಳು ಕಲಿಯುಗದಲ್ಲಿ ವಾಯು ಮತ್ತು ರುದ್ರರ ಅಂಶವಾದರೆ, ವಾಲ್ಮೀಕಿ ರಾಮಾಯಣದಲ್ಲಿ ವಾಯುವಿನ ಒಂದಂಶವೆಂದು ಹೇಳಲಾಗಿದೆ. ಹಿಂದೂ ಸಂಸ್ಕೃತಿ-ಧಾರ್ಮಿಕ ಪರಂಪರೆಯಲ್ಲಿ ದೇವಾನುದೇವತೆಗಳು ಇವನಿಗೆ ರಾಕ್ಷಸನೆಂದು ಕರೆಯಲಾಗಿದೆ. ರಾಮನ ಭಂಟನೆಂದು ಖ್ಯಾತಿ ಪಡೆದದ್ದು ನಿಜ. ಪೈಲ್ವಾನ್, ಕುಸ್ತಿ ಪಟುಗಳು ದೇವರಿಗೆ ಬೇಟೆಗಾರ-ಶೌರ್ಯದ ಸಂಕೇತವಾಗಿದ್ದಾನೆ. ಮಹಾಭಾರತದಲ್ಲಿ ಭೀಮನ ರೂಪದಲ್ಲಿ ಹನುಮಂತ. ವ್ಯಾಸರಾಯರು ಸ್ಥಾಪಿಸಿದ ಹನುಮಂತನ ಮೂರ್ತಿಗಳು ಜಗತ್ ಪ್ರಸಿದ್ದಿಯಾದವು. ಈಗಲೂ ಕುಸ್ತಿ ಪಟುಗಳು ಹನುಮಂತನ ಆರಾಧಕರಾಗಿದ್ದಾರೆ.

೧೧. ವಿಷ್ಣು, ಶಿವನ ಗುಡಿಗಳಲ್ಲಿ ಹನುಮಂತನ ಶಿಲ್ಪಗಳಿರುವುದು ಸಾಮಾನ್ಯವಾಗಿದೆ. ಜನರ ಭಾವನೆಗಳಿಗೆ ತಕ್ಕಂತೆ ಒಂದು ಕಾಲದಲ್ಲಿ ಈ ಶಿಲ್ಪಗಳ ರಚನೆ ಉತ್ಕೃಷ್ಟತೆ ಪಡೆದಿದೆ. ನ್ಯೂನಿಜ್ ೧೬ನೇ ಶತಮಾನದ ವಿದೇಶಿಯಾತ್ರಿಕ. ಇವನು ಪಗೋಡಗಳಲ್ಲಿ ಮಂಗನಶಿಲ್ಪಗಳಿವೆ ಎಂದಿದ್ದಾನೆ. ಅಂದರೆ ಎಲ್ಲೆಲ್ಲೂ ಹನುಮಂತನ ಸ್ಮಾರಕಗಳಿವೆ ಎಂದರೆ ಅದಕ್ಕೊಂದು ಚಾರಿತ್ರಿಕ ಮಹತ್ವ ಇರುವುದು ಸುಳ್ಳಲ್ಲ. ಹಂಪಿಯ ಉತ್ತರಕ್ಕಿರುವ ಅಂಜನಾದ್ರಿ ಪರ್ವತವೇ ಹನುಮಂತನು ಹುಟ್ಟಿದ ಸ್ಥಳ. ಆನೆಗೊಂದಿಯಲ್ಲಿ ೪ ಹನುಮಂತನ ಗುಡಿಗಳಿವೆ. ಹಂಪಿಯಲ್ಲಿ ನೂರಕ್ಕೂ ಹೆಚ್ಚಿವೆ. ಕಮಲಾಪುರದ ಉತ್ತರಕ್ಕೆ ಕಳಸಾಪುರವಿದ್ದು, ಬೃಹತ್ ಹನುಮಂತನ ವಿಗ್ರಹವಿದೆ. ೧೪೩೪ ರಲ್ಲಿ ೨ನೇ ದೇವರಾಯ ದಾನ ಕೊಟ್ಟ ಶಾಸನವಿದೆ. ೧೪೪೬-೬೫ ಚಾಮದರದ ಸಿರಂಗ ದೊರೆ ಮಲ್ಲಿಕಾರ್ಜುನ ಕಾಲದಲ್ಲಿ ಕೋಟೆಯ ಬಳಿ ಆಂಜನೇಯನಿಗೆ ಗೌರವವನ್ನು ಕಲ್ಪಿಸಲಾಗಿದೆ.

ಹಂಪಿಯಲ್ಲಿ ಹಜಾರರಾಮ ದೇವಾಲಯ, ಅಕ್ಕತಂಗಿ ಗುಂಡುಗಳು, ಮಾಧವನ ಗುಡಿ, ಅಹ್ಮದ್‌ಖಾನ್ ಧರ್ಮಶಾಲೆ, ಗಾಣಗಿತ್ತಿ ದೇವಾಲಯ, ಪೆನುಗೊಂಡ ದ್ವಾರ, ವಿರೂಪಾಕ್ಷ ದೇವಾಲಯ, ತಿರುವೆಂಗಳನಾಥ, ಮಾಲ್ಯವಂತ, ರಘುನಾಥ, ಅರೆಶಂಕರ ಬಳಿ ಯಂತ್ರೋದ್ಧಾರಕ, ಚಕ್ರತೀರ್ಥದ ಬಳಿ ಹನುಮಂತ ದೇವಾಲಯಗಳು ಇವೆ. ರಕ್ಷಣೆ ಕೋಟೆಗೋಡೆಯ ಮೇಲೆ ಬುರುಜು, ಬತೇರಿಗಳ ಇಕ್ಕೆಲಗಳಲ್ಲಿ ಆಂಜನೇಯ ಸುಂದರ ಕೆತ್ತನೆಗಳಿವೆ. ಹನುಮಂತ ಗಾಳಿಯಲ್ಲಿ ಹಾರುವಂತೆ, ಸೌಗಂಧಿಕ ಪುಷ್ಪ ಹಿಡಿದಂತೆ, ದೊಡ್ಡ ಬೆಟ್ಟ ಕೈಯಲ್ಲೆತ್ತಿದಂತೆ ಹೀಗೆ ವಿವಿಧ ಭಂಗಿಯ ಶಿಲ್ಪಗಳು ಕೆತ್ತಲ್ಪಟ್ಟಿವೆ. ಪುರಾಣ-ಇತಿಹಾಸ ಸಂಮಿಶ್ರಣಗೊಂಡಂತೆ ಆಂಜನೇಯನ ಆರಾಧನೆ ಹಂಪಿ ಪರಿಸರದಲ್ಲಿ ವೈವಿಧ್ಯಮಯವಾಗಿ ಕಂಡುಬಂದಿದೆ. ವೈಷ್ಣವ ಸಂಪ್ರದಾಯದಂತೆ ರಾಮನ ಗುಡಿಗಳ ಸಮ್ಮುಖದಲ್ಲಿ ಹನುಮನ ಗುಡಿಗಳಿವೆ. ಹಾಗೇ ಪ್ರತ್ಯೇಕವಾಗಿಯೂ ಇವನ ದೇವಾಲಯಗಳಿವೆ. ಒಟ್ಟಾರೆಯಾಗಿ ಕರ್ನಾಟಕ, ಭಾರತ ಹಾಗೂ ವಿಶ್ವದಾದ್ಯಂತ ಹನುಮಂತನ ಅಥವಾ ಆಂಜನೇಯನ

ಆರಾಧನೆಯ ಸ್ವರೂಪದ ವಿವಿಧ ಆಯಾಮಗಳಿಂದ ಕೂಡಿದೆ. ಅಂಜನಾದ್ರಿ ಪರಿಸರದ ಅನನ್ಯತೆಯನ್ನು ಗುರುತಿಸುತ್ತ, ಇದರ ವೈಶಿಷ್ಟ್ಯ ಮತ್ತು ಲಕ್ಷಣಗಳನ್ನು ಐತಿಹಾಸಿಕ, ಧಾರ್ಮಿಕ ಮತ್ತು ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ. ಇತ್ತೀಚೆಗೆ ಕೇಳಿಬರುತ್ತಿರುವ ಹನುಮಂತನ ಜನ್ಮಸ್ಥಳ ವಿವಾದಗಳು ಅನಪೇಕ್ಷಿತವಾಗಿವೆ. ಆಂಜನೇಯ ಜನಿಸಿದ್ದು ಕರ್ನಾಟಕದ ಆನೆಗೊಂದಿಯ ಕಿಷ್ಕಿಂದ ಪರ್ವತದಲ್ಲಿಯೇ ಎನ್ನುವುದು ಐತಿಹಾಸಿಕ ಆಧಾರಗಳಿಂದ ಸಾಬೀತಾಗಿದೆ. ಇದನ್ನು ಎಲ್ಲ ಇತಿಹಾಸಕಾರರು ಒಪ್ಪಿದ್ದಾರೆ. ಈ ಕಾರಣಕ್ಕಾಗಿ ಆಂಜನೇಯ ಹುಟ್ಟಿದ್ದು ತಿರುಪತಿಯ ಅಂಜನಾದ್ರಿ ಪರ್ವತ ಅಥವಾ ಗೋಕರ್ಣ ಎಂಬುದು ಸುಳ್ಳು ವಾದವಾಗಿದೆ.

ಅಧ್ಯಯನದ ಚರ್ಚೆಗಳು

ದಿನೇ ದಿನೇ ಪೌರಾಣಿಕ ಆಧ್ಯಾತ್ಮಿಕ, ಧಾರ್ಮಿಕ ಮತ್ತು ಐತಿಹಾಸಿಕ ಸ್ಥಳವೊಂದು ಯಾತ್ರಾಸ್ಥಳವಾಗಿರುವುದಕ್ಕೆ ಉದಾಹರಣೆ ಅಂಜನಾದ್ರಿ. ಪ್ರವಾಸೋದ್ಯಮಕ್ಕೆ ಇದರ ಹೆಸರು ಖ್ಯಾತಿಯಾಗಿದೆ. ಈ ಅಧ್ಯಯನದಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗುವುದು. 'ಅಂಜನಾದ್ರಿ ಪರಿಸರದ ಪುರಾತತ್ವ, ಚರಿತ್ರೆ ಮತ್ತು ಸಂಸ್ಕೃತಿ' ಎಂಬುದಾಗಿದೆ. ಈ ವಿಷಯದ ಕುರಿತಾದ ಸಮಗ್ರ ಚರಿತ್ರೆಯನ್ನು ಅನಾವರಣಗೊಳಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಅದರೊಂದಿಗೆ

೧. ಅಂಜನಾದ್ರಿ ಪರಿಸರದ ಜನರು ಚರಿತ್ರೆಯ ಘಟನೆಗಳನ್ನು ತಮ್ಮ ಜನಜೀವನದ ಆಚರಣೆಗಳಲ್ಲಿ ರೂಢಿಸಿಕೊಂಡು ಬಂದ ಬಗೆಯನ್ನು ಗುರುತಿಸುವುದು.

೨. ಆಂಜನೇಯ ಮತ್ತು ಆತನ ತಾಯಿ ಅಂಜನಾದೇವಿಯ ಜನ್ಮ ಸ್ಥಳದ ಸಂಶೋಧನೆ.

೩. ಈ ಪರಿಸರದಲ್ಲಿ ನೆಲೆಸಿರುವ ವಿವಿಧ ಸಮುದಾಯ ಹಾಗೂ ಅವರ ಸಂಸ್ಕೃತಿಯ ಅಧ್ಯಯನ ಕೈಗೊಳ್ಳುವುದು.

೪. ಪುರಾತತ್ವ ನೆಲೆ, ಚಿತ್ರಕಲೆ, ಗವಿ ವರ್ಣ, ರೇಖಾಚಿತ್ರ, ವಸತಿ ದಿಬ್ಬ, ಬೆಟ್ಟ, ಗುಡ್ಡ, ಕೋಟೆ, ಕೆರೆ, ದೇವಾಲಯ, ಬುರುಜು, ಬತೇರಿ, ಅರಮನೆ, ಶಿಲ್ಪ, ವೀರಗಲ್ಲು ಮೊದಲಾದ ಸ್ಮಾರಕಗಳನ್ನು ಬೆಳಕಿಗೆ ತರುವ ಪ್ರಯತ್ನವಿದು.

೫. ಆಂಜನೇಯ ಅಥವಾ ಹನುಮಂತನ ಮೂಲಕ ಮರೆಯಾದ ಪ್ರಾಚೀನ ಭಾರತದ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ರಚಿಸುವ ಉದ್ದೇಶವಿದೆ.


೬. ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಾಲಯ ಟ್ರಸ್ಟ್ 'ಅಂಜನಾದ್ರಿ' ಎಂಬುದು ತಿರುಪತಿ ಹತ್ತಿರವಿದ್ದು ಇದೇ ಹನುಮಂತನ ಜನ್ಮಸ್ಥಳ ಎಂದು ಹೊಸ ವಿವಾದ ಸೃಷ್ಟಿಸಿದೆ. ಇದು ಸುಳ್ಳು ವಾದವಾಗಿದೆ.

೭. ಪ್ರಸ್ತುತ ಲೇಖನದಲ್ಲಿ ಹಂಪಿ ಪರಿಸರದ ಆನೆಗೊಂದಿ ಸಮೀಪ ಇರುವ ಅಂಜನಾದ್ರಿ ಪರ್ವತವೇ ಹನುಮಂತನ ಮೂಲ ಸ್ಥಳವೆಂದು ಪ್ರತಿಪಾದಿಸಲಾಗಿದೆ. ಸಂಶೋಧನ ಆಧಾರಗಳ ಮೂಲಕ ಕನ್ನಡಿಗರು ಈ ಬಗ್ಗೆ ಪ್ರತಿಕ್ರಿಯಿಸಿದ್ದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಪ್ರಚಲಿತ ವಿವಾದದಲ್ಲಿ ಅಂಜನಾದ್ರಿ ಮತ್ತು ಹನುಮಂತ : ಚಾರಿತ್ರಿಕ ವಿಶ್ಲೇಷಣೆ

ಆದಿಮಾನವನ ಉಗಮ ಸ್ಥಾನವೇ ಕಿಷ್ಕಿಂದಾ ಪರಿಸರ. ಇದನ್ನು ವಾನರ ನೆಲೆ ಎಂದು ಹನುಮಂತನ ಜನ್ಮಸ್ಥಳವೆಂದು ಅಂಜನಾದ್ರಿ ಪರ್ವತವನ್ನು ಸಂಕೇತಿಸಿ ಗುರುತಿಸಲಾಗಿದೆ. ಇತಿಹಾಸ (ಪೂರ್ವ) ಕಾಲದಲ್ಲಿ ಕಿಷ್ಕಿಂದಾಪುರಿ ಆನೆಗೊಂದಿ ಮಹಾಸಾಮ್ರಾಜ್ಯ ಇತ್ತೆಂದು ಸ್ಪಷ್ಟ. ಇಂದಿನ ಆನೆಗೊಂದಿ ಪರಿಸರವನ್ನು ಪ್ರಾಚೀನ ಕಾಲದಲ್ಲಿ ಕಿಷ್ಕಿಂದಾಪುರಿ ಎಂದು ಕರೆಯುತ್ತಿದ್ದರು. ವಾಲ್ಮೀಕಿ ರಾಮಾಯಣದಲ್ಲಿ ಗಜಗಪ್ಪರ, ಹಸ್ತಿನಾವತಿ, ಗಜಕೋರ್ಣ, ಶ್ರೀರಂಗನಗರ, ಪಂಪಾಪುರಿ ಮತ್ತು ಪಂಪಾನದಿ ಪರಿಸರವನ್ನು ಕಿಷ್ಕಿಂದೆಯೆಂದು ದಾಖಲಿಸಿದ್ದು ಗಮನಾರ್ಹ (ಕಿಷ್ಕಿಂಧೆ–ಕಿರ್ಕಿಂಧೆ–ಕಿಕಿಂದ–ಕಿರುಕಿಂದ–ಕಂದರ ಎನ್ನಲಾಗುತ್ತದೆ). ಕಿಷ್ಕಿಂದೆ ಮಹಾಸಾಮ್ರಾಜ್ಯಕ್ಕೆ ಸುಗ್ರೀವ ರಾಜನಾಗಿದ್ದ. ಮೂಲತಃ ಕಿಷ್ಕಿಂಧೆ ವಾನರರಾಜ್ಯ (ವಾನರ–ಕೋತಿ–ಮಾನವನ ಆದಿಮವ್ಯವಸ್ಥೆ) ಸುಗ್ರೀವನು ಈ ವಾನರ ಮುಖಂಡನಾಗಿದ್ದು, ಪಂಪತಟಾಕದ ಋಷ್ಯಮೂಕದ ಬೆಟ್ಟದ ನಂಬಿಗಸ್ತ ಹನುಮಂತ ಮತ್ತು ನಾಲ್ವರ ಅನುಚರರೊಂದಿಗೆ ಇದ್ದನು. ಮಹರ್ಷಿ ವಾಲ್ಮೀಕಿ ತನ್ನ ರಾಮಾಯಣ ಮಹಾಕಾವ್ಯದಲ್ಲಿ ಪಂಪಾಸರಸ್ಸಿನ ನೀರು ವನಪ್ರದೇಶ, ಶಿಖರ, ರಮಣೀಯವಾದ ಹಸಿರು ಹುಲ್ಲು, ಸೌಗಂಧಯುಕ್ತವಾದ ಗಾಳಿ, ಪ್ರಕೃತಿ ಸೌಂದರ್ಯ, ವನ್ಯ ಜೀವಿಗಳ ಬಗ್ಗೆ ತಿಳಿಸಿದ್ದು ಗಮನಾರ್ಹ. ಪಂಪಾಸರಸ್ಸು, ಋಷ್ಯಮೂಕ ಪರ್ವತ, ಮತಂಗ ಬೆಟ್ಟ, ಮಾಲ್ಯವಂತ ಬೆಟ್ಟ, ಅಂಜನಾದ್ರಿಬೆಟ್ಟ, ಶಬರಿ ಆಶ್ರಮ, ವಾಲಿಭಂಡಾರ, ಹಂಪಿಪರಿಸರ (ಕಿಷ್ಕಿಂದಾ)ದ ಸ್ವಾಭಾವಿಕ ಹಾಗೂ ಮಾನವ ನಿರ್ಮಿತ ದೃಶ್ಯಗಳಾಗಿವೆ.

ರಾಮ ಲಕ್ಷ್ಮಣರು ಸೀತಾನ್ವೇಷಣೆಯಲ್ಲಿ, ಕಿಷ್ಕಿಂದಗೆ ಬರುತ್ತಾರೆ. ಕಿಷ್ಕಿಂದ ಕಾಂಡದಲ್ಲಿ ವಾಲ್ಮೀಕಿ ವರ್ಣಿಸಿದ್ದು ನಿಜ. ವಾನರ ಮುಖಂಡ ವಾಲಿ, ಸುಗ್ರೀವರ ರಾಜ್ಯವಲ್ಲದೆ, ನೆಲಸು ತಾಣವಾಗತ್ತು ಕಿಷ್ಕಿಂದೆ, ಇವರ ರಾಜಲಾಂಛನ ವಾನರ ಧ್ವಜವಾಗಿತ್ತು.[೧೧] ರಾಮಾಯಣದಲ್ಲಿ ಬರುವ ಪಂಪಾಸರಸ್ಸು, ಮತಂಗ ಪರ್ವತ, ಋಷ್ಯಮೂಕಬೆಟ್ಟ, ಅಂಜನಾದ್ರಿ ಬೆಟ್ಟದ ಮಧ್ಯದಲ್ಲಿ ಹರಿಯುವ ನಿರಂತರ ನದಿ ಪಂಪಾಸರಸ್ಸಾಗಿದೆ. ಇಲ್ಲಿಯೇ ಮಸಲಯ್ಯನ ಗುಡ್ಡ, ಅಂಜನಾದ್ರಿ ಬೆಟ್ಟ, ಪಂಪಾಸರಸ್ಸು, ವಿರುಪಾಪುರ ಗಡ್ಡೆ ಮೊದಲಾದ ಸ್ಮಾರಕಗಳ ಬಗ್ಗೆ ಪಂಪಾ ಮಹಾತ್ಮೆ ಗ್ರಂಥದಲ್ಲಿ ಉಲ್ಲೇಖ ವಾಗಿದೆ. ಇಲ್ಲಿನ ವಿಶೇಷವೆಂದರೆ ಅಂಜನಾದ್ರಿ ಪರ್ವತದಿಂದ ಹರಿಯುವ ನೀರು ಆನೆಗೊಂದಿ – ಹಂಪಿ ಪರಿಸರದ ಮೂಲಕ ತುಂಗ ಭದ್ರ ನದಿಯನ್ನು ಸೇರುತ್ತದೆ. ಕಿಷ್ಕಿಂದಾ ಕಾಂಡದಲ್ಲಿ ಹನುಮಂತ ಋಷ್ಯಮೂಕ ಪರ್ವತದಿಂದ ರಾಮಲಕ್ಷ್ಮಣರಿರುವಲ್ಲಿಗೆ ಹಾರಿದನು. ವಾಲಿಯ ಮಗನು ರಾಮನ ಹಿತೋಪದೇಶ, ಸುಗ್ರೀವನ ಪಟ್ಟಾಭಿಷೇಕ, ರಾಮಮುದ್ರೆಯುಂಗರವನ್ನು ಹನುಮಂತನಿಗೆ ಕೊಡುವುದು ಹನುಮಂತ ಲಂಕೆಗೆ ಪ್ರಯಾಣಿಸುವುದನ್ನು ಚಿತ್ರಿಸಲಾಗಿದೆ.[೧೨]



ಅಂಜನಾದ್ರಿ ಬೆಟ್ಟ

ಕಿಷ್ಕಿಂದಾಪರಿಸರದಲ್ಲಿ ಅನಾಗರೀಕ ಹಂತದ ಕಾಡಿನ ಜನರು ವಾನರರು ಮತ್ತು ರಾಕ್ಷಸರಾಗಿಯೂ ಪರಿವರ್ತಿತರಾದರು. ಗುಹಾವಾಸಿ ವಾನರರಿಗೆ 'ವಾಲಿ' ನಾಯಕ, ಸುಗ್ರೀವ ರಾಜಭ್ರಷ್ಟನಾಗುತ್ತಾನೆ. ಹನುಮಂತ ಸಂಜೀವಿನಿ ತರುವುದು ಕಿಷ್ಕಿಂದೆಯಿಂದ ಮಾತ್ರ. ಆ ಕಾಲದ ರಾಕ್ಷಸರು, ರಾವಣ ಕುಂಭಕರ್ಣರ ಬಗ್ಗೆ ಮೌಖಿಕ ಚರಿತ್ರೆಯ ಗೊಂಡರ ರಾಮಾಯಣ ತೋರಿಸುತ್ತದೆ.[೧೩] ಇಲ್ಲಿ ನೆಲೆಸಿರುವ ಬುಡಕಟ್ಟು ಮತ್ತು ಆದಿಮ ಸಮುದಾಯಗಳು ಹನುಮಂತನ ನೆಲೆ ಅಂಜನಾದ್ರಿ ಎಂದು ಆರಾಧಿಸುವುದು ಐತಿಹಾಸಿಕ ಸತ್ಯ. ಸಾಹಿತಿ, ಸಮಾಜ ವಿಜ್ಞಾನಿಗಳು ಸಹಾ ರಾಮಾಯಣದಲ್ಲಿ ಬರುವ ಕಿಷ್ಕಿಂದೆ ಬಗ್ಗೆ ಸಂಶೋಧಿಸಿದ್ದಾರೆ. ಅವರಲ್ಲಿ ಪ್ರಮುಖರಾದವರು ಎಚ್.ಡಿ. ಸಂಕಾಲಿಯಾ ಅವರು. ಕಿಷ್ಕಿಂದಾಕಾಂಡದಲ್ಲಿ ಬರುವ ಸುಗ್ರೀವನ ನೆಲೆ ಕಿಷ್ಕಿಂದೆ, ಋಷ್ಯಮೂಕ, ಪಂಪಾಸರೋವರ, ವಾಲಿ, ಸುಗ್ರೀವ, ಹನುಮಂತ ವಾನರರು (ಪ್ರಾಣಿ–ಮನುಷ್ಯನ ಸ್ವರೂಪ) ರಾಮಧೂತ ಹನುಮಂತನ ಬಗ್ಗೆ ತಿಳಿಸಿದ್ದಾರೆ. ಇವರ ಪ್ರಕಾರ ನರ್ಮದೆಯ ಉತ್ತರಕ್ಕೆ ಹನುಮಂತ ಸುಗ್ರೀವನ ಸುಳಿವು ಸಿಗುವುದಿಲ್ಲ. ಗೋದಾವರಿ, ನರ್ಮದಾ, ಕೃಷ್ಣಾ, ವರದಿ, ಕಾವೇರಿ ಮತ್ತು ತಾಮ್ರಪರ್ಣಿಗಳ ಉಲ್ಲೇಖ ಬರುವುದರಿಂದ ಕಿಷ್ಕಿಂದೆಯೇ ಅಂಜನಗಿರಿ ಹನುಮಂತನ ಮೂಲನೆಲೆ ಎಂದು ಗುರುತಿಸಿದ್ದಾರೆ. ಉಂಗುರವನ್ನು ಸುಗ್ರೀವ ಹನುಮಂತನಿಗೆ ಕೊಡುವುದು ಸುಂದರ ಕಾಂಡದಲ್ಲಿ, ಹನುಮಂತನ ಸಾಹಸಗಳಿವೆ.[೧೪]

ಅಂಜನಾದ್ರಿ ಮತ್ತು ಕಿಷ್ಕಿಂದ ಪರಿಸರದಲ್ಲಿ ಪ್ರಾಚೀನ ಕಾಲದಲ್ಲಿ ಮೌರ್ಯ, ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಹಾಗೂ ಮಧ್ಯಕಾಲೀನದಲ್ಲಿ ಕುಮ್ಮಟದುರ್ಗದ ನಾಯಕರು, ವಿಜಯನಗರ ಸಾಮ್ರಾಜ್ಯ ಆಳ್ವಿಕೆ ನಡೆಸಿದ ಕುರುಹುಗಳಿವೆ. ಇಲ್ಲಿ (ಕಿಷ್ಕಿಂದ ಹಂಪಿ ಪರಿಸರದಲ್ಲಿ ಶಬರ, ಕಿರಾತ, ಬಿಲ್ಲರು, ಗುಹರು, ನಿಷಾದರು, ನಾಗರು, ವ(ಬ)ನವಾಸಿಗಳಿದ್ದರೆಂದು ಜಯರಾಮ ಸರಜೋಶೀ ಗಂಗಾವತಿಯವರು ತಿಳಿಸಿದ್ದಾರೆ.[೧೫] ಅವರು ಮುಂದುವರೆದು, ಪಿ. ವಿಷ್ಣುತೀರ್ಥರು ಬರೆದ ಪಂಪಾಮಹಾತ್ಮೆಯಲ್ಲಿ ಆನೆಗೊಂದಿಯ ಕೊನೆಯ ರಾಜ ಜಂಬುಕೇಶ್ವರ ಮಹಾರಾಜನ

ಮಗಳು ಹಿರಿಯಮ್ಮ ವಾಲ್ಮೀಕಿ ಕ್ಷತ್ರಿಯನಾದ ಕಂಪಲಿರಾಯನ ರಾಣಿಯಾದ ಬಗ್ಗೆ ತಿಳಿಸಿದ್ದಾರೆ. ಕಂಪಲಿರಾಯನ ಸಹೋದರಿಯರಾದ ಬುಕ್ಕಮ್ಮ, ಗೌರಾಂಬಿಕೆ, ನಾಗಲಾಂಬಿಕೆಯನ್ನು ಸಂಗಮದೇವ ವಿವಾಹವಾಗಿದ್ದನಂತೆ. ಕಂಪಲಿಯ ಸಂಗಮನ ಧರ್ಮಪತ್ನಿ ಬುಕ್ಕಮ್ಮನಿಗೆ ೫ ಜನ ಗಂಡು ಮಕ್ಕಳು ಹರಿಹರ, ಬುಕ್ಕ, ಮಾರಪ್ಪ, ಮುದ್ದಣ್ಣ ಮತ್ತು ಕಂಪಣ ಎಂಬ ಸಹೋದರರಿದ್ದರು. ಕ್ರಿ.ಶ. ೧೨೪೦ ಕಿಷ್ಕಿಂದಾ ಆನೆಗೊಂದಿಯ ಕೊನೆಯ ಚಕ್ರವರ್ತಿ ಜಂಬುಕೇಶ್ವರನು ಕೊಲೆಯಾದ ಮೇಲೆ ಸಂಗಮನ ಮಕ್ಕಳು ಅಧಿಕಾರಕ್ಕೆ ಬಂದರು. ಕಿಷ್ಕಿಂದಾ, ಆನೆಗೊಂದಿ ಮತ್ತು ವಿಜಯನಗರ ರಾಜ್ಯಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿರುವುದು ಗಮನಾರ್ಹ.

ಕ್ರಿ.ಶ. ೧೩೩೬ರಿಂದ ೧೫೬೫ರವರೆಗೆ ಆಳಿದ ವಿಜಯನಗರ ಸಾಮ್ರಾಜ್ಯವು ಕಿಷ್ಕಿಂಧೆ, ಆನೆಗೊಂದಿ ಮತ್ತು ಅಂಜನಾದ್ರಿಯ ಭೌಗೋಳಿಕತೆಯನ್ನು ಹೊಂದಿತ್ತು. ಕೃಷ್ಣದೇವರಾಯನ ೧೫೧೦ ಜನವರಿ ೨೪ ಗುರುವಾರ ಕೃಷ್ಣದೇವರಾಯ ಹೊಸಪೇಟೆ ತಾಲೂಕು ಹಂಪಿಯ ಬಳಿ ಸಿಂಗನಾಯಕನಹಳ್ಳಿ ಎಂಬ ಹಾಳೂರಿನ ಆಂಜನೇಯಗುಡಿ ಈ ಗ್ರಾಮ ತೋಟ, ವಿವಿಧ ಆದಾಯ ಬರುವ ವಸ್ತುಗಳನ್ನು ಕೊಟ್ಟಿದ್ದರು. ಕ್ರಿ.ಶ. ೧೫೫೭ರಲ್ಲಿ ರತ್ನಾಕರವರ್ಣಿಯು ಭರತೇಶ ವೈಭವದಲ್ಲಿ 'ಅಂದೆಲ ಕಿಷ್ಕಿಂದ, ಪುರವೆಂಬರಾನೆಯಗೊಂದಿ ಎಂಬರು ಕಲಿಯುಗದಿ ಎಂಬ ಮಾತು ಈಗಿನ ಹಂಪಿ ಪರಿಸರದ ಆನೆಗೊಂದಿ–ಕಿಷ್ಕಿಂದೆಯನ್ನು ಸಂಕೇತಿಸುತ್ತವೆ. ಜೈಮಿನಿ ಭಾರತದಲ್ಲಿ 'ಕಿಕ್ಕಿಂದದಿಂರಾಜಿಸಿ' ಎಂಬ ಉಲ್ಲೇಖವಿದೆ. ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಪಂಪಾಕ್ಷೇತ್ರ ಪಂಪಸರೋವರ, ವಾನರಸೇನೆ, ದಂಡಕಾರಣ್ಯವು ಕಿಷ್ಕಿಂದೆಯೇ ಆಗಿತ್ತು.

ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಕಿಷ್ಕಿಂಧೆಯ ಪ್ರಸ್ತಾಪ ಇರುವುದಲ್ಲದೆ ಶಾಸನ ಶಿಲ್ಪ, ವಿಗ್ರಹ, ಚಿತ್ರಕಲೆ, ದೇವಾಲಯ, ವೀರಗಲ್ಲು, ಕೋಟೆ, ಮೊದಲಾದ ಸ್ಮಾರಕಗಳ ಮೂಲಕ ಅಂಜನಾದ್ರಿಯ ಪ್ರಸ್ತಾಪವಿರುವುದು ಗಮನಾರ್ಹ. ಮೌಖಿಕ ಚರಿತ್ರೆಯಲ್ಲಿ ಹನುಮನಹಳ್ಳಿ ಹನಮಂತನ ಜನ್ಮಸ್ಥಳ. ಹಾಗೆಯೇ ಅಂಜನಾದ್ರಿ ಬೆಟ್ಟ ಅಂಜನಾದೇವಿಯ ವಾಸಸ್ಥಳ. ಅಂಜನಾದೇವಿ ಮತ್ತು ಹನುಮಂತನ ಮೂಲಕ ರಾಮಾಯಣವಲ್ಲದೆ, ಚಾರಿತ್ರಿಕ ಕಾಲಘಟ್ಟದಲ್ಲಿಯ ವಿವಿಧ ಬಗೆಯ ಅಭಿವೃದ್ಧಿ ಕಾರ್ಯಗಳಾಗಿವೆ.

ಆಂಜನೇಯನ ಮೂಲನೆಲೆ ಅಂಜನಾದ್ರಿ ಪರ್ವತವೇ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಐತಿಹಾಸಿಕವಾಗಿ ಮೌರ್ಯರಿಂದ ಪ್ರಜಾಪ್ರಭುತ್ವ ವ್ಯವಸ್ಥೆವರೆಗೂ ವಿವಿಧ ಕಾಲಘಟ್ಟದ ಚಾರಿತ್ರಿಕ ಸನ್ನಿವೇಶಗಳನ್ನು ಇದು ಹೊಂದಿದೆ. ಆದಿಮಾನವನ ನೆಲೆಯಾದ ಅಂಜನಾದ್ರಿ ಕ್ರಮೇಣ ಐತಿಹಾಸಿಕ, ಧಾರ್ಮಿಕ, ಆಧ್ಯಾತ್ಮಿಕ, ಪ್ರವಾಸೋದ್ಯಮ ಕೇಂದ್ರವಾಗಿರುವುದು ಗಮನಾರ್ಹ. ಇದಕ್ಕೊಂದು ಮಹಾನ್ ತಿರುವು ಸಿಕ್ಕಿದ್ದು ಮಹರ್ಷಿ ವಾಲ್ಮೀಕಿ ರಾಮಾಯಣ ಹಾಗೂ ವಿಜಯನಗರ ಕಾಲದ ಧಾರ್ಮಿಕ ಮಹತ್ವದ ಕಾರಣದಿಂದ. ಕಿಷ್ಕಿಂದಾ ಕಾಂಡದಲ್ಲಿ ಬರುವ ಕುರುಹುಗಳು, ವಿವಿಧ ಪುರಾಣ ಕಾವ್ಯ ಇವರ ಸಾಹಿತ್ಯ ಪ್ರಕಾರಗಳಲ್ಲಿ ಅಂಜನಾದ್ರಿ ಪರಿಸರವನ್ನು ವಿಭಿನ್ನ, ವೈಶಿಷ್ಟ್ಯಪೂರ್ಣವಾಗಿ ಚಿತ್ರಿಸಿರುವುದು ಗಮನಾರ್ಹ.

ಅಂಜನಾದ್ರಿ ನೆಲೆ ಮತ್ತು ಹನುಮಂತನ ಮೂಲದ ಬಗೆಗೆ ವಿವಾದ ೨೦೨೧ರಲ್ಲಿ ಏಕಾಏಕಿ ಹುಟ್ಟಿಕೊಂಡಿತು. ತಿರುಮಲ ಬೆಟ್ಟವೇ ಹನುಮಂತನ ಜನ್ಮಸ್ಥಳ ಎಂದು ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್ ಹೊಸ ವಿವಾದವನ್ನು ಹುಟ್ಟುಹಾಕಿತು. ಇವರ ಪ್ರಕಾರ ತಿರುಮಲಬೆಟ್ಟದ ಆಕಾಶಗಂಗಾ ಜಲಪಾತದ ಬಳಿಯಿರುವ ಜಪಾಲಿತೀರ್ಥಂ ಸಮೀಪದಲ್ಲಿ ಹನುಮಂತ ಹುಟ್ಟಿದ್ದನೆಂದು ಟಿಟಿಡಿ ಮಂಡಳಿ ವಾದಿಸುತ್ತಿದೆ. ವಾಸ್ತವವಾಗಿ ಮತ್ತು ಶತ ಶತ ಮಾನಗಳಿಂದ ಕರ್ನಾಟಕದ ಕಿಷ್ಕಿಂಧೆ ಮತ್ತು ಅಂಜನಾದ್ರಿ ಬೆಟ್ಟವೇ ಹನುಮಂತನ ಮೂಲ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ತಿರುಮಲೆಯ ಏಳು ಬೆಟ್ಟ ಆಂಜನೇಯ ಹುಟ್ಟಿದ ಬಗ್ಗೆ ಯಾವುದೇ ಖಚಿತ ಪುರಾವೆಗಳಿಲ್ಲ. ಈ ಬಗ್ಗೆ ಪುರಾತತ್ವ ವಿದ್ವಾಂಸರು, ಸಂಸ್ಕೃತ ಪಂಡಿತರು ಇತಿಹಾಸಕಾರರು ಚರ್ಚಿಸಿದ್ದಾರೆ. ಇನ್ನು ಕೆಲವು ಮೂಲಗಳ ಪ್ರಕಾರ ಜಾರ್ಖಂಡ್‌ನ ಗುಮ್ಲಾ ಜಿಲ್ಲೆಯ ಗುಹೆಯೊಂದರಲ್ಲಿ ಹನುಮಂತ ಜನಿಸಿದನಂತೆ. ಮತ್ತೊಂದು ಮೂಲದ ಪ್ರಕಾರ ಮಹಾರಾಷ್ಟ್ರದ ನಾಸಿಕ್‌ನ ಆಂಜನೇರಿ ಬೆಟ್ಟ ಹನುಮನ ಜನ್ಮ ಸ್ಥಳ ಎಂದು ವಾದಿಸಿದ್ದಾರೆ.

ಆಂಜನೇಯ ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಿಷ್ಕಿಂಧೆ, ಪಂಪಾನದಿ, ವಾಲಿಕಿಲ್ಲಾ, ಮತಂಗ, ಋಷ್ಯಮೂಕ ಪರ್ವತಗಳ ಪರಿಸರದಲ್ಲಿ ನೆಲೆಸಿದ್ದ ಬಗ್ಗೆ ಆಧಾರಗಳಿವೆ. ಅಂಜನಾದ್ರಿ ತಪ್ಪಲಿನಲ್ಲಿರುವ ಹನುಮನಹಳ್ಳಿ ಇದಕ್ಕೆ ಉತ್ತಮ ಉದಾಹರಣೆ. ಹನ್ನೆರಡು ಪುರಾಣಗಳಲ್ಲಿ ಹನುಮಂತನ ಜನ್ಮಸ್ಥಳ ಕುರಿತು ಚಿಂತಿಸಲಾಗಿದೆ. ವೆಂಕಟಾಚಲ ಮಹಾತ್ಮಂ, ವರಾಹ ಪುರಾಣ ಮತ್ತು ಬ್ರಹ್ಮಾಂಡ ಪುರಾಣಗಳು ಈ ಬಗ್ಗೆ ಹೊಸಬೆಳಕು ಚಲ್ಲುತ್ತವೆ. ಹನುಮಂತನ ತಾಯಿ ಅಂಜನಾದೇವಿ ಮಕ್ಕಳ ಫಲಕ್ಕಾಗಿ ಮಾತಂಗ ಋಷಿಗಳನ್ನು ಬೇಡಿಕೊಳ್ಳುತ್ತಾಳೆ. ಋಷಿಗಳು ಅಂಜನಾದೇವಿಗೆ ತಪಸ್ಸು

ಮಾಡಲು ಹೇಳಿ ಆನಂತರ ತಪಸ್ಸು ಫಲವಾಗಿಯೇ ಹನುಮಂತ ಹುಟ್ಟುವುದು ಸಹ ಹಂಪಿ–ಆನೆಗೊಂದಿ ಪರಿಸರದ ಅಂಜನಾದ್ರಿ ಬೆಟ್ಟದಲ್ಲಿಯೇ. ಹಾಗಾಗಿ ಆಂಧ್ರದ ವಾದಕ್ಕೆ ಯಾವುದೇ ಒತ್ತು ನೀಡದಿರುವುದು ಸೂಕ್ತ. ವಿಜಯನಗರ ಕಾಲದ ದೇವಘಾಟ(ಆನೆಗೊಂದಿ) ಸವದತ್ತಿ ತಾಲೂಕಿನ ಸಿರಸಂಗಿ ಶಾಸನಗಳಲ್ಲಿ ಕಿಷ್ಕಿಂಧೆ ಉಲ್ಲೇಖವಿದೆ. ಕಿಷ್ಕಿಂಧೆ–ಹಂಪಿ–ಅಂಜನಾದ್ರಿಗೆ ಅವಿನಾಭಾವ ಸಂಬಂಧವಿದೆ. ಶತಮಾನಗಳಿಂದ ಇದು ಆಂಜನೇಯನ ಆವಾಸಸ್ಥಾನ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಅಂಜನಾದ್ರಿ ಆಂಜನೇಯನ ಮೂಲ ಸ್ಥಳವೆಂದು ಸ್ಥಳೀಯರು ಚಿಂತಕರು, ಸಂಶೋಧಕರು, ಚರಿತ್ರೆಕಾರರು ಅಭಿಪ್ರಾಯ ಪಟ್ಟಿರುತ್ತಾರೆ. ಟಿ.ಟಿ.ಡಿ. ಯ ಪೌರಾಣಿಕ ಕಥೆಯ ವಾದವನ್ನು ಖಂಡಿಸುತ್ತಾ ಭೌಗೋಳಿಕ, ಸಾಹಿತ್ಯ, ಆಕರಗಳಲ್ಲದೆ ಪುರಾತತ್ವ ಮತ್ತು ವಾಲ್ಮೀಕಿ ರಾಮಾಯಣದ ಕಿಷ್ಕಿಂದಾಕಾಂಡವನ್ನು ಡಾ. ಶರಣಬಸಪ್ಪ ಕೋಲ್ಕರ ಗಂಗಾವತಿ ಅವರು ಅಭಿಪ್ರಾಯ ವ್ಯಕ್ತಪಡಿಸಿ, ಆಂಜನೇಯನ ಮೂಲ ನೆಲೆ ಅಂಜನಾದ್ರಿಬೆಟ್ಟವೆಂದು ತಿಳಿಸುತ್ತಾರೆ.[೧೬]

ರಾಯಚೂರು ಜಿಲ್ಲೆ ಸಿಂಧನೂರಿನ ಹಿರಿಯಸಾಹಿತಿ ಪ್ರೊ.ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು ಯುಗಗಳಿಂದ ಇಲ್ಲದ ಆಂಜನೇಯ ಜನ್ಮಸ್ಥಳದ ವಿವಾದ ಈಗೇಕೆ ಎಂದು ಪ್ರಶ್ನಿಸಿದ್ದಾರೆ. ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಿ ಕಿಷ್ಕಿಂಧಾ, ಪಂಪಾಸರೋವರ, ಶಬರಿ ಆಶ್ರಮ, ಅಂಜನಾದ್ರಿ ವಾಲಿ–ಸುಗ್ರೀವರ ಪ್ರದೇಶಗಳನ್ನು ಹಂಪಿ–ಪರಿಸರಕ್ಕೆ ಹೋಲುತ್ತವೆ ಎನ್ನುತ್ತಾರೆ. ಆಂಧ್ರ ಪ್ರತಿಪಾದಿಸುವ ಆಕರಗಳು ವಾಲ್ಮೀಕಿ ರಾಮಾಯಣದ ನಂತರ ಹಲವು ವಾರಹಪುರಾಣ, ಭವಿಷ್ಯೋತ್ತರ ಪುರಾಣ, ಸ್ಕಾಂದಪುರಾಣ, ಶ್ರೀವೆಂಕಟೇಶ್ವರ ಮಹಾತ್ಮೆ ಮೊದಲಾದವು ಆಂಧ್ರದ ತಿರುಪತಿ ಮೂಲವನ್ನು ತಿಳಿಸುತ್ತವೆ. ಇವುಗಳು ಪೂರ್ವಗ್ರಹ ಪೀಡಿತವಾಗಿವೆ ಎಂದು ಆನಂತರ ನಿರ್ಮಾಣಗೊಂಡಿರುವುದರಿಂದ ಮಹತ್ವ ಕೊಡುವ ಅಗತ್ಯವಿಲ್ಲ ಎಂದು ಶಾಶ್ವತಸ್ವಾಮಿ ಮುಕ್ಕುಂದಿಮಠ ಹೇಳುತ್ತಾರೆ.[೧೭]

ಹನುಮಜಯಂತಿಯಂದು ವಿಜಯವಾಣಿ ಪತ್ರಿಕೆಯಲ್ಲಿ ರಾಮಚಂದ್ರಹೋಡೆ ಕೊಂಡದಕುಳಿ ಅವರು 'ಅಖಂಡ ಭೂಮಂಡಲಕ್ಕೊಬ್ಬನೇ ಮಾರುತಿ' ಎಂದು ಅಭಿಪ್ರಾಯಿಸಿದ್ದಾರೆ. ರಾಮಾಯಣ ಕಥೆ ಹಾಗೂ ಹಂಪಿ ಪರಿಸರವೇ ಆಂಜನೇಯ ಮೂಲ ಅಂಜನಾದ್ರಿ. ಇವರ ವಾದವನ್ನು ಇನ್ನೊಬ್ಬ ಚಿತ್ರ ಕಲಾವಿದರಾದ ಚಿತ್ರಮಿತ್ರ ಅವರು 'ನಮ್ಮೊಳಗಿದ್ದು ಎಚ್ಚರಿಸುತ್ತಿದ್ದಾನೆ. ಮಾರುತಿ ಎಂಬ ಅಭಿಪ್ರಾಯ ಇವರದು. ಹಂಪಿ ಪರಿಸರದಲ್ಲಿ ಆಂಜನೇಯ ಇದ್ದ ಎಂಬುದಕ್ಕೆ ನಿದರ್ಶನಗಳನ್ನು ಇವರು ಕೊಡುವ ಪ್ರಯತ್ನ ಮಾಡುತ್ತಾರೆ.[೧೮] ದಿನಾಂಕ ೨೮.೦೪.೨೦೨೧ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕೀಯದಲ್ಲಿ 'ಹನುಮನ್ ಬರ್ತ್‌ಪ್ಲೇಸ್ ನೀಡ್ ಲೆಸ್ ಫೈಟ್' ಎಂಬ ಶೀರ್ಷಿಕೆ ಅಡಿಯಲ್ಲಿ ಚರ್ಚಿಸಲಾಗಿದೆ. ಈವರೆಗೆ ಇಲ್ಲದ ಮೂಲಸ್ಥಳದ ವಿವಾದ ಈಗ ಚಾಲ್ತಿಗೆ ಬರಲು ಹಲವು ಹುನ್ನಾರಗಳಿವೆ. ಹನುಮ ಜನ್ಮಸ್ಥಳ ಗಂಗಾವತಿ ತಾಲೂಕಿನ ಹನುಮನಹಳ್ಳಿ ಹತ್ತಿರ ಇರುವ ಅಂಜನಾದ್ರಿ ಬೆಟ್ಟವೇ ಆಗಿದೆ ಎಂಬುದನ್ನು ಇವರು ಪ್ರತಿಪಾದಿಸಿದ್ದಾರೆ. ಅನಾವಶ್ಯಕವಾಗಿ ಆಂಧ್ರದ ತಿರುಮಲೆ ತಿರುಪತಿ ದೇವಸ್ಥಾನದ ಕಮಿಟಿ ಅವರು ಇಲ್ಲಸಲ್ಲದ ವಾದ ಮಾಡುವುದರಲ್ಲಿ ಅರ್ಥವಿಲ್ಲ. ಭಾರತದಲ್ಲಿ ಹನುಮನ ಮೂಲವನ್ನು ಆಯಾ ರಾಜ್ಯಗಳು ಸಾಂಕೇತಿಕವಾಗಿ ನಂಬಿದ್ದಾರೆ. ಹರಿಯಾಣ, ಜಾರ್ಖಂಡ್ ಮತ್ತು ಮಹಾರಾಷ್ಟ್ರದಲ್ಲಿ ಈ ಬಗ್ಗೆ ಕುರುಹುಗಳಿರುವುದನ್ನು ಉಲ್ಲೇಖಿಸಲಾಗಿದೆ.

ಇಷ್ಟೆಲ್ಲಾ ವಿವಾದ ಹುಟ್ಟಲು ಕಾರಣ ಕೇಂದ್ರಸರ್ಕಾರ ಅಂಜನಾದ್ರಿ ಪರ್ವತಕ್ಕೆ ವಿಶೇಷ ಯೋಜನೆಯೊಂದನ್ನು ರೂಪಿಸಿದೆ. ಇದರ ಲಾಭ ಪಡೆಯಲು ತಿರುಪತಿ ದೇವಸ್ಥಾನ ಕಮಿಟಿ ಪ್ರಯತ್ನಿಸುತ್ತದೆ. ಪ್ರಧಾನಿ ನರೇಂದ್ರ ಮೋದಿಯವರ ಪತ್ನಿ ಯಶೋದಾಬೇನ್ ಅಂಜನಾದ್ರಿಗೆ ಭೇಟಿ ನೀಡಿದ್ದು ವಿಶೇಷ. ಆ ದಿನದಿಂದ ಈ ದಿನಕ್ಕೆ ಯಾತ್ರಾರ್ಥಿಗಳ ಮಹತ್ವ ಹೆಚ್ಚಾಗಿದೆ. ಹನುಮನ ಮಾಲಾಧಾರಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಸೇರುತ್ತಾರೆ. ಶ್ರೀರಾಮ್ ಸರ್ಕ್ಯೂಟ್ ಯೋಜನೆ ಬಗ್ಗೆ ಶಾಸಕರ ಮಾಹಿತಿ ಹೀಗೆ ನೀಡಿರುತ್ತಾರೆ. ಇದು ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿದೆ. ಈ ಯೋಜನೆ ಮೂಲಕ ಕಿಷ್ಕಿಂದಾದ ಅಂಜನಾದ್ರಿ ಬೆಟ್ಟವನ್ನು ಹನುಮನು ಉದಯಿಸಿದ ನಾಡು ಎಂದು ಘೋಷಿಸಿದೆ. ಇದನ್ನು ತಿರುಮಲ ತಿರುಪತಿ ಕಮಿಟಿಗೆ ನುಂಗಲಾರದ ತುತ್ತಾಗಿದೆ. ಈ ಬಗ್ಗೆ ಗಂಗಾವತಿ ಶಾಸಕರಾದ ಪರಣ್ಣ ಮನವಳ್ಳಿ ಅವರು ಪುರಾತತ್ವ ಪ್ರಾಚ್ಯವಸ್ತು ಇಲಾಖೆಯನ್ನು ಒತ್ತಾಯಿಸಿದ್ದಾರೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿ ಬಿ.ಸಿ. ಪಾಟೀಲ್ ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮೊದಲಾದವರು ಹಂಪಿ ಬಳಿಯಿರುವ ಅಂಜನಾದ್ರಿ ಬೆಟ್ಟವೇ ಹನುಮಂತನ ಜನ್ಮಸ್ಥಳವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿದ್ವಾಂಸರ ಪ್ರತಿಕ್ರಿಯೆ

ತಿರುಮಲ ತಿರುಪತಿ ದೇವಾಲಯ ಕಮಿಟಿಯವರು ಅಂಜನೇಯನ ಜನ್ಮಸ್ಥಳ ತಿರುಪತಿಯ ಅಂಜನಾದ್ರಿ ಎಂದು

ವಾದಿಸಿರುವುದನ್ನು ಕನ್ನಡ ಸಾಹಿತಿ ಸಂಶೋಧಕರು ಚರಿತ್ರೆಕಾರರು, ಸಂಸ್ಕೃತಿ ಚಿಂತಕರು ಖಂಡಿಸಿದ್ದಾರೆ. ಗಂಗಾವತಿ ಮಹಿಳಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ.ಶರಣಬಸಪ್ಪ ಕೋಲ್ಕಾರ ಅವರು ಕಿಷ್ಕಿಂದೆ-ಆನೆಗೊಂದಿ ಪರಿಸರದ ಅಂಜನಾದ್ರಿಯೇ ಹನುಮಂತನ ಮೂಲ ಎಂದು ವಾದಿಸಿದ್ದಾರೆ. ಸಿಂಧನೂರಿನ ಶಾಶ್ವತಸ್ವಾಮಿ ಮುಕ್ಕುಂದಿಮಠ, ಅಗ್ನಿಹೋತ್ರಿ ಪಂಢರಿನಾಥ, ಗಂಗಾವತಿಯ ಸಂತೋಷ ಕೆಲೋಜಿ, ಡಾ. ವಾಸುದೇವ ಬಡಿಗೇರ, ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಮೊದಲಾದವರು ಈ ಬಗ್ಗೆ ವಿಶ್ಲೇಷಿಸಿದ್ದಾರೆ. ಕರ್ನಾಟಕ ಸರ್ಕಾರವು ೨೦೨೨-೨೩ನೇ ಸಾಲಿನ ನೂರು ಕೋಟಿ ರೂ.ಗಳನ್ನು ಇದರ ಅಭಿವೃದ್ಧಿಗೆ ತೆಗೆದಿಟ್ಟಿರುವುದು ಶ್ಲಾಘನೀಯ.

ಆಂಧ್ರಪ್ರದೇಶ ಸರ್ಕಾರ ಹನುಮಂತ ಮೂಲ ತಿರುಪತಿ ಹತ್ತಿರ ಇರುವ ಅಂಜನಾದ್ರಿ ಪರ್ವತವೆಂದು ಹೇಳಿದರೂ ಕರ್ನಾಟಕ ರಾಜ್ಯ ಸರ್ಕಾರ ಈವರೆಗೆ ಮೌನವಹಿಸಿದ ಬಗ್ಗೆ ಕಾಂಗ್ರೆಸ್ ವಕ್ತಾರ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹೊಸಪೇಟೆಯಲ್ಲಿ ಸುದ್ದಿಗೋಷ್ಠಿ ನಡೆಸಿದ್ದಾರೆ (೦೮.೦೨.೨೦೨೨ ಪ್ರಜಾವಾಣಿ). ಇವರ ಪ್ರಕಾರ ಆಂಜನೇಯ ಅಥವಾ ಹನುಮಂತನ ಮೂಲ ಆನೆಗೊಂದಿ ಕಿಷ್ಕಿಂಧೆಯ ಸಮೀಪ ಇರುವ ಅಂಜನಾದ್ರಿ ಪ್ರದೇಶವಾಗಿದೆ. ಗಂಗಾವತಿ ತಾಲೂಕಿನಲ್ಲಿರುವ ಯಾತ್ರಾಸ್ಥಳವಾಗಿದ್ದು ಈ ಬಗ್ಗೆ ರಾಜ್ಯ ಸರ್ಕಾರ ಮುತುವರ್ಜಿ ವಹಿಸಲು ಆಗ್ರಹಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ದಿನಾಂಕ: ೧೬.೦೨.೨೦೨೨ ರಂದು ತಿರುಪತಿ ದೇವಾಲಯದ ಕಮಿಟಿಯವರು ತಿರುಪತಿಯ 'ಅಂಜನಾದ್ರಿ' ಪರಿಸರದಲ್ಲಿ ಭೂಮಿ ಪೂಜೆಯನ್ನು ನೆರವೇರಿಸುತ್ತಾರೆ.[೧೯] ಇವರ ಪ್ರಕಾರ ತಿರುಪತಿಯೇ ಹನುಮ ಜನ್ಮಸ್ಥಳ'ವಾಗಿದ್ದು ಇದನ್ನು ಅಭಿವೃದ್ಧಿ ಪಡಿಸಲು ಟಿ.ಟಿ.ಡಿ ಮಂಡಳಿ ದಿನಾಂಕ ೧೬.೦೨.೨೦೨೨ರಂದು ಶಂಕು ಸ್ಥಾಪನೆ ಮಾಡಿದ್ದು ಆಂಧ್ರದ ಅಂಜನಾದ್ರಿಯಲ್ಲಿ ಈ ಕಾರ್ಯಕ್ರಮಗಳು ನಡೆದಿವೆ. ಈ ಶಂಕು ಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಶಾಖ ಶಾರದಾಪೀಠದ ಸ್ವರೂಪಾನಂದ ಸರಸ್ವತಿ(ರಿ) ಸ್ವಾಮೀಜಿ ರಾಮಜನ್ಮಭೂಮಿ ಟ್ರಸ್ಟ್ ಖಜಾಂಚಿ ಗೋವಿಂದೇವಗಿರಿ ಮಹಾರಾಜ್, ಚಿತ್ರಕೂಟ ಸ್ವಾಮೀಜಿ, ರಾಮಭದ್ರಾಚಾರ್ಯಲು ಕೋಟೇಶ್ವರ ಶರ್ಮಾ ಮತ್ತು ಇನ್ನಿತರ ಧಾರ್ಮಿಕ ಮುಖಂಡರಿಗೆ ಆಹ್ವಾನಿಸಲಾಗಿತ್ತು. ಇದಕ್ಕೆ ಕರ್ನಾಟಕದ ಶ್ರೀ ಹನುಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಅಂಜನಾದ್ರಿ ಹನುಮನ ಜನ್ಮಸ್ಥಳ ಅಲ್ಲ ಕರ್ನಾಟಕದ ಕೊಪ್ಪಳ ಜಿಲ್ಲೆಯ ಹಂಪಿಬಳಿ ಇರುವ ಕಿಷ್ಕಿಂದೆಯೇ ಹನುಮನ ಜನ್ಮಸ್ಥಳ ಎಂದು ತನ್ನ ವಾದವನ್ನು ಪ್ರಕಟಿಸಿದೆ. ರಾಮ, ಲಕ್ಷ್ಮಣರು ಮೊದಲಬಾರಿಗೆ ಆಂಜನೇಯನನ್ನು ಭೇಟಿಮಾಡಿದ್ದು ಇಲ್ಲಿಯೇ ಮತ್ತು ಈ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿ ಮಾಹಿತಿಯಿದೆ ಎಂದು ವಾದಿಸಿದೆ.

ಅಂಜನಾದ್ರಿ ಅಭಿವೃದ್ಧಿಗೆ ದಿನಾಂಕ ೧೬.೦೨.೨೦೨೨ರಂದು ತಿರುಮಲದಲ್ಲಿ ಭೂಮಿಪೂಜೆ ಮಾಡಲಾಯಿತು. ತಿರುಮಲದ ಅಂಜನಾದ್ರಿ ಪರಿಸರ ಹನುಮಂತನ ಜನ್ಮಸ್ಥಳವೆಂದು ವಾದಿಸಿದ್ದಲ್ಲದೆ, ಅದನ್ನು ಸುಂದರಗೊಳಿಸಲು ನಾಂದಿ ಹಾಡಿದೆ. ವಿಶಾಖಪಟ್ಟಣಂ ಶಾರದಾಪೀಠದ ಸ್ವರೂಪಾನಂದ ಸರಸ್ವತಿ ಮಹಾಸ್ವಾಮೀಜಿ, ಇದೇ ಪೀಠದ ಕಿರಿಯ ಸ್ವಾಮೀಜಿ ಶ್ರೀ ಸ್ವಾತ್ಮಾನಂದ ಸುಬ್ಬಾರೆಡ್ಡಿ ಮೊದಲಾದವರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.[೨೦]

ದಿನಾಂಕ ೨೩.೦೨.೨೦೨೨ರಂದು ಕಮಲಾಪುರದ ಪಟ್ಟಾಭಿರಾಮ ದೇವಾಲಯದಲ್ಲಿ 'ದೇವಾಯತನಂ ಭಾರತೀಯ ದೇವಾಲಯ ವಾಸ್ತುಶಿಲ್ಪ ಅದ್ಭುತ ಮಹಾಕಾವ್ಯ' ಎಂಬ ಅಂತರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. ಇದರಲ್ಲಿ ಕೇಂದ್ರ ಪ್ರವಾಸೋದ್ಯಮ ಸಂಸ್ಕೃತಿ, ಈಶಾನ್ಯ ರಾಜ್ಯಗಳ ಪ್ರದೇಶಾಭಿವೃದ್ಧಿ ಸಚಿವ ಜಿ. ಕಿಶನ್‌ರೆಡ್ಡಿ ಭಾಗವಹಿಸಿ ಅಂಜನಾದ್ರಿಯಲ್ಲಿ ಭವ್ಯಮಂದಿರ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು. ಹನುಮನ ಜನ್ಮಸ್ಥಳ ಎಂಬುದು ಭಾವನಾತ್ಮಕ ವಿಚಾರ. ಅಂಜನಾದ್ರಿ ಬೆಟ್ಟದ ಬಗ್ಗೆ ಟಿ.ಟಿ.ಡಿ ನೀಡಿರುವ ಹೇಳಿಕೆ ಕುರಿತು ಪ್ರತಿಕ್ರಿಯಿಸಲಾರೆ. ಇದನ್ನು ಭಕ್ತರೇ ನಿರ್ಧರಿಸಬೇಕು ಎಂದು ಕಿಶನ್ ರೆಡ್ಡಿ ತಿಳಿಸಿದ್ದು ಸ್ವಾಗತಾರ್ಹ ಕ್ರಮ. ಏಕೆಂದರೆ ಭಕ್ತರು ಆನೆಗೊಂದಿ ಪಕ್ಕದಲ್ಲಿರುವ ಅಂಜನಾದ್ರಿಯೇ ಹನುಮಂತನ ಮೂಲಸ್ಥಳ ಎಂಬುದು ಇದಕ್ಕೆ ಸಾಕ್ಷಿ. ಈ ಕಾರ್ಯಕ್ರಮದಲ್ಲಿ ರಾಜ್ಯ ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್, ಸಾರಿಗೆ ಮಂತ್ರಿ ಬಿ.ಶ್ರೀರಾಮುಲು ಭಾಗವಹಿಸಿದ್ದರು. ಇವರೀರ್ವರು ಈಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.[೨೧] ಕಿಶನ್ ರೆಡ್ಡಿ ಅವರು ಆಂಜನೇಯನ ಜನ್ಮಸ್ಥಳ ವಿವಾದವಾಗಿಸಲು ಬಯಸುವುದಿಲ್ಲ. ಎಂದು ಭಾರತ ಸರ್ಕಾರದ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅವರು ಜನರ ಭಾವನೆಗಳನ್ನು ಗೌರವಿಸಿದ್ದು, ಆಪ್ರಕಾರ ನಡೆದುಕೊಳ್ಳಬೇಕಾಗಿದೆ.[೨೨]

ಕರ್ನಾಟಕ ಸರ್ಕಾರ ಮಾರ್ಚ್ ೨೦೨೨ರ ಬಜೆಟ್‌ನಲ್ಲಿ ಅಂಜನಾದ್ರಿ ಅಭಿವೃದ್ಧಿಗಾಗಿ ಕಾರ್ಯಸೂಚಿಯನ್ನು ರೂಪಿಸಿದೆ.

೧. ಅಂಜನಾದ್ರಿ ಕರ್ನಾಟಕಕ್ಕೆ ಸೇರಿದ ಧಾರ್ಮಿಕ, ಯಾತ್ರಾ ಸ್ಥಳವಾಗಿದೆ.

೨. ಆಂಜನೇಯನ ನೆಲಸುತಾಣ ಇದೇ ಆಗಿತ್ತು.
೩. ವಿವಿಧ ಕಾಲಘಟ್ಟದ ಆಳರಸರು ಅಂಜನಾದ್ರಿ ಹಾಗೂ ಹನುಮಂತನ ಸ್ಮಾರಕಗಳ ನಿರ್ಮಾಣಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ.
೪. ವಿಜಯನಗರ ಕಾಲದಲ್ಲಿ ಅಂಜನಾದ್ರಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದರು.
೫. ಆಂಧ್ರದ ವಾದವನ್ನು ಕನ್ನಡಿಗರು ಒಪ್ಪಬಾರದು.
೬. ಕೇಂದ್ರ ಹಾಗೂ ರಾಜ್ಯ ಸರ್ಕಾರ ಅಂಜನಾದ್ರಿ (ಹಂಪಿ)ಗೆ ಹೆಚ್ಚಿನ ಆದ್ಯತೆ ನೀಡಬೇಕು.
೭. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಂಜನಾದ್ರಿ ಹನುಮಂತನ ಅಧ್ಯಯನ ಪೀಠವನ್ನು ಸರ್ಕಾರ ಆರಂಭಿಸಬೇಕು.
೮. ೨ ಕೋಟಿ ರೂ. ವೆಚ್ಚದಲ್ಲಿ ಯೋಜನೆ ಕೈಗೊಂಡು ಈ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಬೇಕು.
೯. ಅಂಜನಾದ್ರಿಯನ್ನು ವಿವಾದಿತವಾಗಿ ಬಿಡಬಾರದು.
೧೦. ಕನ್ನಡಿಗರೆಲ್ಲರೂ ಒಟ್ಟಾಗಿ ಇದನ್ನು ರಕ್ಷಿಸಿ ಉಳಿಸಿಕೊಳ್ಳಬೇಕಿದೆ.

ಅಡಿಟಿಪ್ಪಣಿಗಳು

೧. Department of Kannada and Culture, Kannada Bhavan, Bangalore, 2014.
೨. Kuvempu Institute of Kannada Studies, Manasagangotri, Mysure University, 2009.
೩. ಪುರಾಣ ಭಾರತ ಕೋಶ., ಪು.ಸಂ. ೧೧.
೪. ಅದೇ., ಪು.ಸಂ. ೭೩೫.
೫. ಅದೇ., ಪು.ಸಂ. ೭೩೬.
೬ ಅದೇ., ಪು.ಸಂ. ೭೩೬.
೭. ವಾಲ್ಮೀಕಿ ಪುರಾಣವು, (೧೯೫೫), ಪು.ಸಂ. ೨೨.
೮. ಚೆನ್ನಬಸಪ್ಪ ಎಸ್.ಪಾಟೀಲ್ (ಸಂ)., (೧೯೯೬) ವಿಜಯನಗರ (ಹಂಪೆಯ) ಶಾಸನಗಳು, ಶಾಸನ ಸಂಪುಟ-೪೨೮, ಪು.ಸಂ. ೧೨೨.
೯. ದೀಕ್ಷಿತ್ ಜಿ.ಎಸ್. (ಸಂ)., (೧೯೮೮), ಸಂಗಮರ ಕಾಲದ ವಿಜಯನಗರ, ಪು.ಸಂ. ೧೯೫.
೧೦. ವಿಜಯನಗರ ಅಧ್ಯಯನ ಸಂಪುಟ ೫. (೨೦೦೦), ಪು.ಸಂ. ೧೯-೨೨.
೧೧. ಚರಿತ್ರೆ ಅಧ್ಯಯನ ಸಂ. ೪, ಸಂ. ೧, ೨೦೦೮, ಪು. ೫೦.
೧೨. ನೋಡಿ, ಸಿ.ಎನ್. ಶ್ರೀನಿವಾಸ ಅಯ್ಯಂಗಾರ್, ಕನ್ನಡ ವಾಲ್ಮೀಕಿ ರಾಮಾಯಣ ಕಿಷ್ಕಿಂದಾ ಕಾಂಡ, ಡಿಬಿಕೆ ಮೂಲ, ಮೈಸೂರು, ಸಂಪುಟ ೧, ೧೯೭೩, ಪು. ೬೭೩ ರಿಂದ ೮೪೩.
೧೩. ಗೊಂಡರ ರಾಮಾಯಣ, ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೩+೨೬+೨೭.
೧೪. ನೋಡಿ, ಎಚ್.ಡಿ. ಸಂಕಾಲಿಯಾ, ಇತಿಹಾಸ ಕಣ್ಣಲ್ಲಿ ರಾಮಾಯಣ, ೨೦೧೧, ೪ನೇ ಮುದ್ರಣ, ನವ ಕರ್ನಾಟಕ, ಬೆಂಗಳೂರು, ಪುಟ ೭೮+೮೦+೯೦.
೧೫. ನೋಡಿ, ಕಿಷ್ಕಿಂದಾ ಆನೆಗೊಂದಿ ಮಹಾ ಸಾಮ್ರಾಜ್ಯ, ವಾಲ್ಮೀಕಿ ವಾಣಿ, ೧೯೯೮, ಮೇ, ಪುಟ ೮-೯, ಚಿತ್ರದುರ್ಗ.
೧೬. ವಿಜಯವಾಣಿ, ೨೨.೦೪.೨೦೨೧, ಪುಟ ೧೩.
೧೭. ವಿಜಯವಾಣಿ, ೨೩.೦೪.೨೦೨೧, ಪು. ೧೧.
೧೮. ವಿಜಯವಾಣಿ, ೨೭.೦೪.೨೦೨೧, ಪು. ೬.
೧೯. ಕನ್ನಡ ಪ್ರಭ, ೧೫.೦೨.೨೦೨೨, ಪು. ೭.
೨೦. ನೋಡಿ, ವಿಜಯವಾಣಿ, ೧೭.೦೨.೨೦೨೨ರಂದು ಪು. ೧೧.
೨೧. ವಿಜಯವಾಣಿ, ೨೬.೦೨.೨೦೨೨. ಪು. ೨.
೨೨. ಪ್ರಜಾವಾಣಿ, ೨೬.೦೨.೨೦೨೨, ಪು. ೪.

◆◆

೫೧

ಪ್ರಭಾಕರ್ ಎಂ.ಎಸ್.

ಫಾಂಸನಾ ಶೈಲಿ : ಆರಂಭ ಮತ್ತು ಬೆಳವಣಿಗೆ

ಔತ್ತರೇಯ ಸಂಪ್ರದಾಯದ ಶಿಖರ ರಚನೆ, ಅದರ ಸ್ವರೂಪ, ಬೆಳವಣಿಗೆಯೊಂದಿಗೆ ಫಾಂಸನಾ ಶೈಲಿಯನ್ನು ಗುರುತಿಸುವಾಗ ಮಹಾಕೂಟದ ಪರಿಸರದಿಂದಲೇ ಆರಂಭಿಸಬೇಕು. ಮೊದಲಿಗೆ ನಾಲ್ಕು ಕಂಭಗಳ ಚತುಷ್ಕ ರೂಪದ ಮಂಟಪ; ಇದು ದೇವ ದ್ರೋಣಿ ಪುಷ್ಕರಿಣಿಯಲ್ಲಿದೆ. ಇದನ್ನು ಆರಂಭಿಕ ದೇವಾಲಯದ ಪ್ರತಿನಿಧಿ ಎಂದೇ ವಿದ್ವಾಂಸರು ಗುರುತಿಸಿದ್ದಾರೆ. ಚತುಷ್ಕದ ಮೇಲ್ಛಾವಣಿಯಲ್ಲಿ ಮತ್ತೊಂದು ಹಂತವಿದ್ದು, ಅನಂತರ ಆಮಲಕವಿದೆ. ಆಮಲಕ ಔತ್ತರೇಯ ಮೂಲದ್ದು. ತದನಂತರ ಕಾಲದಲ್ಲಿ ಇರಿಸಿರಲೂ ಸಾಧ್ಯ. ಮುಂದಿನ ಬೆಳವಣಿಗೆಯನ್ನು ಈ ಆವರಣದಲ್ಲೇ ಕಾಣಬಹುದು.

ಪುಷ್ಕರಿಣಿಯ ದಕ್ಷಿಣಕ್ಕೆ ಕೇವಲ ಗರ್ಭಗೃಹವುಳ್ಳ ರಚನೆಯೊಂದಿದೆ. ಇಲ್ಲಿ ಶಿಖರವು ಸರಳವಾಗಿ ಮೆಟ್ಟಿಲು ಮೆಟ್ಟಿಲಾಗಿ ಮೇಲೇರುತ್ತದೆ. ಛಾದ್ಯದ ಮೇಲೆ ಕಂಠ ಹಾಗೂ ಕಪೋತಗಳು ನಾಲ್ಕು ಬಾರಿ ಪುನರಾವರ್ತನೆಗೊಂಡಿದೆ. ಮೇಲ್ತುದಿಯಲ್ಲಿ ಕಲಶವಿದೆ. ಕಂಠದ ಹರಹು ತುಸು ಹೆಚ್ಚು. ಕಿರುಭಿತ್ತಿಯ ಸ್ವರೂಪವೆಂದೇ ಪರಿಗಣಿಸಬಹುದು. ಇಲ್ಲಿಯ ಅಲಂಕಾರ ಪ್ರಮುಖವಾದುದು. ಇದು ಐಹೊಳೆಯ ಚಿಕ್ಕ ಗುಡಿಯ ಭಿತ್ತಿಯಂತಿದೆ! ಕಂಭಗಳ ಮಧ್ಯೆ ಭಿತ್ತಿ ಅಥವಾ ಜಾಲಂಧ್ರವನ್ನು ಜೋಡಿಸಿದಂತಿದೆ. ಕಳಶವು ಸೀಳು ಕುಂಭವನ್ನು ಪಡೆದಿದ್ದು ತುದಿಯಲ್ಲಿ ಬೀಜಪೂರದಂತಹ ನಾಳವಿದೆ. ಮೂರು ದಿಕ್ಕಿನಲ್ಲಿ ಪೂರ್ಣ ಭಿತ್ತಿ ಇದ್ದು, ಮುಂಭಾಗದಲ್ಲಿ ಭಿತ್ತಿಯ ಮಧ್ಯಪ್ರವೇಶಕ್ಕೆ ದ್ವಾರಬಂಧವನ್ನು ಜೋಡಿಸಿದ್ದಾರೆ. ಇದರ ಶಿಖರವನ್ನು ಆರಂಭಿಕ ಫಾಂಸನಾ ಶೈಲಿ ಎಂದು ಗುರುತಿಸಬೇಕು. ಮುಂದಿನ ಹಂತದ ದೇವಾಲಯಗಳು ಗರ್ಭಗೃಹ, ಮುಖಮಂಟಪಗಳನ್ನು ಹೊಂದಿವೆ. ಈ ಎರಡೂ ದೇವಾಲಯಗಳು ಪುಷ್ಕರಿಣಿಯ ಪೂರ್ವಕ್ಕೆ ಪ್ರಾಕಾರ ಭಿತ್ತಿಗೆ ಹೊಂದಿಕೊಂಡಂತೆ ನಿಂತಿವೆ. ಛಾದ್ಯದ ನಂತರ ಕಂಠ ಹಾಗೂ ಕಪೋತ ಭಾಗಗಳು ಐದು ಬಾರಿ ಪುನರಾವರ್ತನೆಗೊಳ್ಳುತ್ತದೆ. ಮೇಲ್ತುದಿಯ ಕಪೋತ ರಚನೆ ಕೊಂಚ ಕಿರಿದಾಗಿದ್ದು ಕಳಶಕ್ಕೆ ವೇದಿಯಾಗಿರಲು ಸಾಧ್ಯ. ಕಂಠದ ರಚನೆ, ಹಿಂದೆ ಕಂಡಂತೆ ಕಂಭಗಳ ಮಧ್ಯೆ ಭಿತ್ತಿ ಅಥವಾ ಜಾಲಂದ್ರ ಜೋಡಿಸಿದಂತೆ ಇದೆ. ಕಪೋತದ ಮೇಲೆ ನಾಸಿಕಾಕಾರ ಉಬ್ಬು ರಚನೆಗಳಿವೆ. ಕಳಶವು ಕೊಂಚ ಭಿನ್ನ ಸ್ತರಗಳುಳ್ಳದ್ದು. ಕಳಶದ ಕೆಳಭಾಗ ಸುತ್ತ ಸೀಳು ರಚನೆಯುಳ್ಳ ಕುಂಭ; ಅನಂತರ ಚಚ್ಚೌಕಾರ ಕಿರು ರಚನೆ. ಈ ಭಾಗಗಳನ್ನು ಬೇರ್ಪಡಿಸಿದರೆ, ಕೆಳಗೆ ಆಮಲಕ, ಮೇಲಿನ ಭಾಗ ಘಂಟಾರಚನೆಯಂತಿದೆ! ಕೆಳಗಿನ ಅಮಲಕವು ರೇಖಾ ಶಿಖರಗಳಲ್ಲಿ ಮುಂದುವರೆದರೆ ಮೇಲಿನ ಘಂಟಾ ಭಾಗವು ಕೊಂಚ ತಡವಾಗಿ ವಿಮಾನ ಶಿಖರದಲ್ಲಿ ಜೋಡಣೆಗೊಂಡಿದೆ.

೪೨, 'ಪದ್ಮಪ್ರಭ'
೧೭ನೇ ಬ್ಲಾಕ್, ಬ್ಯಾಂಕ್ ಕಾಲೋನಿ
ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦೦೩೪
ಮೊ: ೯೮೪೫೪ ೯೧೫೪೫



ಪುಷ್ಕರಣಿ ಪರಿಸರ, ಮಹಾಕೂಟ



ಭೂತನಾಥ ದೇವಾಲಯದ ಪರಿಸರ, ಬಾದಾಮಿ

ಗರ್ಭಗೃಹದ ಮುಂಭಾಗದಲ್ಲಿ ನಾಲ್ಕು ಕಂಭಗಳ ಮುಖಮಂಟಪ, ಕಕ್ಷಾಸನ ಜೋಡಣೆಗಳಿವೆ. ಮುಖಮಂಟಪದ ಮುಂಭಾಗದಲ್ಲಿ ಕೆಳಗಿಳಿಯಲು ಸೋಪಾನಗಳು. ಗರ್ಭಗೃಹವು ಚತುರಶ್ರ ರಚನೆ; ಪಕ್ಕಗಳಲ್ಲಿ ಮಧ್ಯೆ ಜಂಘಾಭಾಗವು ಕೊಂಚ ಉಬ್ಬಿದ್ದು, ಸ್ತಂಭಿಕೆಗಳ ಮಧ್ಯೆ ಸ್ಥಾನಕ ಶಿಲ್ಪಗಳಿವೆ. ಇವು ಆರಂಭಿಕ ಫಾಂಸನಾ ಶೈಲಿಯ ಲಕ್ಷಣಗಳು. ಇದರ ಮುಂದಿನ ಹಂತವನ್ನು ಆರಂಭಿಕ ಫಾಂಸನಾ ಶೈಲಿಯಲ್ಲಿಯೇ ಗುರುತಿಸಬೇಕು. ಆ ರಚನೆಗಳನ್ನು ಇಲ್ಲಿಯೇ ಗಮನಿಸಬಹುದು. ಇವುಗಳಲ್ಲಿ ಕಳಶಕ್ಕೆ ಬದಲಾಗಿ ಆಮಲಕವಿದೆ. ಕಳಶದ ಕೆಳಗೆ ವೇದಿ ಸ್ಪಷ್ಟತೆಯನ್ನು ಕಾಯ್ದುಕೊಂಡಿದೆ. ವೃತ್ತಾಕಾರದ ಆಮಲಕದಲ್ಲಿ ಸೀಳುಗಳು ಸ್ಪಷ್ಟವಿದೆ. ಇದು ಕಳಶವೇ ಆಗಿದೆ.

ಈ ರಚನೆಗಳಲ್ಲಿ ಒಂದು ಪುಷ್ಕರಣಿಯ ಪಶ್ಚಿಮಕ್ಕೆ ಮಹಲಿಂಗ ದೇವಾಲಯದ ಬಲಕ್ಕಿದೆ. ಎರಡನೆಯದು ಪುಷ್ಕರಣಿಯ ಉತ್ತರಕ್ಕೆ ಸಂಗಮೇಶ್ವರ ದೇವಾಲಯದ ಹಿಂದಿದ್ದು, ಗರ್ಭಗೃಹವು ಕೊಂಚ ವಾಲಿದ ಸ್ಥಿತಿಯಲ್ಲಿದೆ. ಮೂರನೆಯದು ಮಹಾಕೂಟೇಶ್ವರ ದೇವಾಲಯದ ಅಗ್ನೇಯಕ್ಕೆ ಪ್ರಾಕಾರಕ್ಕೆ ಸೇರಿರುವ ಮಂಟಪದ ಎಡಕ್ಕಿದೆ. ಈ ದೇವಾಲಯಗಳ ಮುಂಭಾಗದಲ್ಲಿ ನಾಲ್ಕು ಕಂಭಗಳ ಮುಖಮಂಟಪವಿದ್ದು ಕಕ್ಷಾಸನವಿಲ್ಲ. ಪ್ರತಿ ದೇವಾಲಯದಲ್ಲಿ ನಾಲ್ಕು ಬಾರಿ ಕಂಠ, ಕಪೋತಗಳು ಕಿರಿದಾಗುತ್ತಾ ಪುನರಾವರ್ತನೆಗೊಳ್ಳುತ್ತವೆ. ಸೀಳುಮುಖದ ವೃತ್ತಾಕಾರದ ಆಮಲಕವು ಸ್ಪಷ್ಟವಾಗಿದೆ. ಗರ್ಭಗೃಹದ ಪಾರ್ಶ್ವಗಳಲ್ಲಿ ಸ್ತಂಭಿಕೆಗಳ ಮಧ್ಯೆ ಕೆಲವೆಡೆ ಮೂರ್ತಿಗಳಿಲ್ಲ. ಈ ಎಲ್ಲ ದೇವಾಲಯಗಳನ್ನೂ ಆರಂಭಿಕ ಫಾಂಸನಾ ಶೈಲಿಯ ಅಡಿಯಲ್ಲಿಯೇ ಗುರುತಿಸಬೇಕು. ಈ ಹಂತದಲ್ಲಿಯೇ ಕರ್ನಾಟಕದಲ್ಲಿ ಕಳಿಂಗ ಶೈಲಿಯೂ ಅರಳಿತು ಎನ್ನಬಹುದು.

ಕಳಿಂಗ ಶೈಲಿಯ ಏಕಭೂಮಿ ರಚನೆ ಎನ್ನಲಾದ ಪುಟ್ಟ ದೇವಾಲಯವು ಮಹಾಕೂಟ ಸಂಕೀರ್ಣದಲ್ಲೇ ಲಭ್ಯ. ಮಹಾಕೂಟೇಶ್ವರ ದೇವಾಲಯದ ಆಗ್ನೇಯಕ್ಕೆ ನಂದಿಮಂಟಪದ ದಕ್ಷಿಣಕ್ಕೆ ಅನತಿ ದೂರದಲ್ಲಿ ಲಭ್ಯ. ಅತಿ ಸರಳ ರಚನೆ, ಫಾಂಸನಾ ಶೈಲಿಯಂತೆ ಆಮಲಕವು ಶಿಖರದ ಮೇಲಿದೆ. ಕಂಠ ಹಾಗೂ ಕಪೋತಗಳು ಮೂರು; ತುದಿಯಲ್ಲಿ ವೇದಿ,



ರಾಮಲಿಂಗೇಶ್ವರ, ಐಹೊಳೆ


ಆಮಲಕ. ಕಪೋತಗಳ ಮೇಲಿನ ಅಲಂಕಾರ ತುಸು ಭಿನ್ನ. ಮಧ್ಯೆ ನಾಸೀ ಅಲಂಕಾರ, ಎರಡೂ ಕಡೆ ಅಂಚಿನಲ್ಲಿ ಅರ್ಧ ನಾಸಿ, ನಡುವೆ ಪಟ್ಟಿಕೆಯು ನಾಸಿಯಿಂದ ಅರ್ಧ ನಾಸಿವರೆಗೆ ವಿಸ್ತರಿಸಿದೆ. ಈ ಅಲಂಕಾರದಿಂದಲೇ ಕಳಿಂಗ ಶೈಲಿಗೆ ಮುನ್ನುಡಿ ಬರೆದಂತಿದೆ. ಶಿಖರವನ್ನು ರೇಖಾ ಮಾದರಿ ಎನ್ನಲಾಗದು. ಆರಂಭಿಕ ಕಳಿಂಗ ಶೈಲಿ ರಚನೆ; ಮುಂದಿನ ಹಂತವನ್ನು ಸಂಗಮೇಶ್ವರ ದೇವಾಲಯದಲ್ಲಿ, ತ್ರಯಂಗ ರಚನೆಯೊಂದಿಗೆ, ಕರ್ಣಾಮಲಕಗಳೊಂದಿಗೆ, ಕಪೋತ ಖಂಡಗಳ ಮೇಲಿನ ಅಲಂಕಾರದೊಂದಿಗೆ ಗುರುತಿಸಬಹುದು. ಆರಂಭಿಕ ಫಾಂಸನ, ಕಳಿಂಗ ರಚನೆಗಳ ಕಾಲ ನಿರ್ಣಯಕ್ಕೆ ಆಮಲಕವು ಸಹಕಾರಿಯಾಗಿದೆ.

ಮಹಾಕೂಟೇಶ್ವರನಿಗೆ ಸಂಬಂಧಿಸಿದ ಪ್ರಮುಖ ಶಾಸನವೊಂದು ಲಭ್ಯವಿದ್ದು ಅದರ ಕಾಲ ಕ್ರಿ.ಶ. ೫೯೬–೫೯೭ ಎಂದು ನಿರ್ಣಯಿಸಲಾಗಿದೆ. ಇದು ಸ್ತಂಭ ಶಾಸನವಾಗಿದ್ದು ಬಿಜಾಪುರದ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ. ಇದು ಬಾದಾಮಿ ಚಲುಕ್ಯರ ಮಂಗಳೇಶನ ಕಾಲಾವಧಿಯದು. ಈ ಸ್ತಂಭ ಶಾಸನದ ತುದಿಯಲ್ಲಿ ಆಮಲಕವಿದೆ. ಐಹೊಳೆಯ ರಾವಳಫಡಿಯ ಮುಂಭಾಗದಲ್ಲಿ ಇಂತಹುದೇ ಸ್ತಂಭವಿದ್ದು, ಇದರ ತುದಿಯಲ್ಲಿದ್ದ ಆಮಲಕವು ಪಕ್ಕದಲ್ಲಿ ಕಳಚಿಬಿದ್ದಿದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೬೦೦ರ ಸುಮಾರಿನಲ್ಲಿ ಆಮಲಕವು ಬಳಕೆಯಲ್ಲಿತ್ತು. ಆಮಲಕದಿಂದಾಗಿ, ಆರಂಭಿಕ ಫಾಂಸನಾ ಮತ್ತು ಕಳಿಂಗ ಶೈಲಿಗಳು ಕ್ರಿ.ಶ. ೬೦೦ಕ್ಕೆ ಮುನ್ನ ರಚನೆಗೊಂಡವು ಎಂದು ಖಚಿತವಾಗಿ ಹೇಳಬಹುದು.

ಎರಡನೆಯ ಹಂತದ ಫಾಂಸನಾ ಶಿಖರಗಳಲ್ಲಿಯೂ ಕೊಂಚ ವೈವಿಧ್ಯತೆಯನ್ನು ಕಾಣಬಹುದು. ಇವು ಐಹೊಳೆಯ ಪರಿಸರದ ದೇವಾಲಯಗಳು. ಈ ದೇವಾಲಯಗಳು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಪಡೆದಿವೆ. ಕೆಲವೆಡೆ ಮುಖ ಮಂಟಪಗಳಿವೆ. ಐಹೊಳೆಯ ಗಳಗನಾಥ ದೇವಾಲಯದಲ್ಲಿ ಕಂಠ, ಕಪೋತಗಳ ಪುನರಾವರ್ತನೆ ಹಿಂದಿನಂತಿದ್ದು ಮೇಲಿನ ಎರಡು ಕಪೋತಗಳ ನಡುವೆ ಕರ್ಣಭಾಗದಲ್ಲಿ ವೃತ್ತಾಕಾರದ ಕರ್ಣಾಮಲಕಗಳು ಜೋಡಣೆಗೊಂಡಿವೆ! ಇವನ್ನು ಇರಿಸಿದ ಔಚಿತ್ಯ ಅರ್ಥವಾಗದು. ತುದಿಯಲ್ಲಿ ಕಳಶವಾಗಲಿ, ಆಮಲಕವಾಗಲಿ ಇಲ್ಲ. ವೇದೀ ರಚನೆಯೂ ಅಸ್ಪಷ್ಟ. ನಾಶಗೊಂಡಿರಲು ಸಾಧ್ಯವಿದೆ. ಮೇಗುತಿ ಬಸದಿಯಿಂದ ಇಳಿದು ಎಡಕ್ಕೆ ತಿರುಗಿದಾಗ ಬಲಕ್ಕೆ ಕಂಠ ಶಿಖರವುಳ್ಳ ರಚನೆ, ಮಲ್ಲಿಕಾರ್ಜುನ ದೇವಾಲಯ. ಕಂಠ, ಕಪೋತಗಳ ಪುನರಾವರ್ತನೆಯ ನಂತರ ತುಸು ಅಗಲದ ಕಂಠವಿದ್ದು ಮೇಲೆ



ಮಲ್ಲಿಕಾರ್ಜುನ ದೇವಾಲಯ



ನಾಡಕಳಸಿ ದೇವಾಲಯ

ಆಮಲಕವಿದೆ. ಆಮಲಕದ ತುದಿಯಲ್ಲಿ ಪುನಃ ಕಳಶ ಮೂಡುತ್ತಿದೆ. ಮುಂಭಾಗದಲ್ಲಿ ಶುಕನಾಸ, ನಾಸೀ ಫಲಕವಿದೆ. ಈ ಶಿಖರಗಳನ್ನು ರೇಖಾ ಮಾದರಿ ಎನ್ನಲಾಗದು. ಇವು ಬಾದಾಮಿ ಚಲುಕ್ಯರ ಕಾಲದವು. ಆನಂತರದ ರಚನೆಗಳನ್ನು ಹೆಚ್ಚಾಗಿ ರಾಷ್ಟ್ರಕೂಟ/ಕಲ್ಯಾಣದ ಚಾಲುಕ್ಯರ ಕಾಲದ್ದೆಂದು ಗುರುತಿಸಲು ಸಾಧ್ಯ. ಮಲ್ಲಿಕಾರ್ಜುನ ದೇವಾಲಯದ ಹಿಂದಿರುವ ಕೆಲವು ರಚನೆಗಳನ್ನು ಗಮನಿಸಬೇಕು. ಕಂಠ ಹಾಗೂ ಕಪೋತಗಳ ಹರಹು ಕಿರಿದಾಗುತ್ತಿದ್ದು ವಿಮಾನ ಮಾದರಿ ಶಿಖರ ಖಚಿತವಾಗುತ್ತಿದೆ. ಉಬ್ಬಿದ ಕಪೋತಗಳ ಮೇಲೆ ನಿಯತ ಅಂತರದಲ್ಲಿ ನಾಸಿಗಾಗಿ ಕೇವಲ ಉಬ್ಬುವಿಕೆ ಇದೆ. ಅಲಂಕಾರವಿಲ್ಲ. ತುದಿಯಲ್ಲಿ ವೇದಿ; ವೇದಿಯ ಮೇಲೆ ಘಂಟಾ ರಚನೆ ಸಾಧ್ಯ. ಆದರೆ ಇಲ್ಲಿ ಕಾಣದು. ಘಂಟಾ ರಚನೆ ರಾಷ್ಟ್ರಕೂಟರ ಕಾಲದಲ್ಲಿಯೇ ಹಲವೆಡೆ ಸ್ಪಷ್ಟವಾಗಿ ಮೂಡಿದೆ. ಲಾಡ್‌ಖಾನ್ ಗುಡಿಯ ಹಿಂಬದಿಯಲ್ಲಿರುವ ಬಡಿಗೇರ ಗುಡಿಯಲ್ಲಿ ಕಪೋತದ ಸಾಲುಗಳು ಮೇಲೇರುತ್ತಾ ದಂತಪಂಕ್ತಿಯ ಅಲಂಕಾರವನ್ನು ಅಳವಡಿಸಿಕೊಂಡಿತು. ಶುಕನಾಸದ ಭಾಗದಲ್ಲಿ ಸೂರ್ಯನ ವಿಗ್ರಹವನ್ನು ಕಾಣಬಹುದು. ಶಿಖರದ ತುದಿಯಲ್ಲಿ ವೇದಿ ಇದೆ. ಘಂಟಾಭಾಗವಿಲ್ಲ. ಮದ್ದಿನ ಗುಡಿ, ತ್ರಯಂಬಕೇಶ್ವರ ಗುಡಿಗಳ ಗುಂಪಿನಲ್ಲಿಯೂ ಈ ರೀತಿ ರಚನೆಗಳಿವೆ. ಹಲವು ಗುಡಿಗಳಲ್ಲಿ ಘಂಟಾ ರಚನೆ ಕಾಣದು.

ರಾಮಲಿಂಗೇಶ್ವರ ಗುಡಿಯ ಗುಂಪಿನಲ್ಲಿ ಘಂಟಾ ರಚನೆಯೊಂದಿಗೆ, ಕಳಶ ರಚನೆಯನ್ನೂ ಕೆಲವು ದೇವಾಲಯಗಳಲ್ಲಿ ಕಾಣಬಹುದು. ಇವು ಕಲ್ಯಾಣದ ಚಾಲುಕ್ಯರ ಕಾಲದ್ದು. ಭೂತನಾಥ ಗುಡಿಯ ಉತ್ತರ ಗುಂಪಿನ ದೇವಾಲಯಗಳನ್ನು ಇವುಗಳೊಂದಿಗೆ ಹೆಸರಿಸಬೇಕು. ಇವು ಪೂರ್ಣ ಬೆಳವಣಿಗೆಯನ್ನು ಕಂಡ ಫಾಂಸನಾ ಶಿಖರಗಳು. ಇಲ್ಲಿ ಕಂಡ ಘಂಟಾ ರಚನೆ ದಾಕ್ಷಿಣಾತ್ಯ ಶೈಲಿಯ ನಾಗರ ಶಿಖರವನ್ನು ಹೋಲುತ್ತದೆ. ಇದು ದೇವಾಲಯಗಳನ್ನು ಗುರುತಿಸುವಲ್ಲಿ ಗಲಿಬಿಲಿಗೊಳಿಸುತ್ತದೆ!

ಹಲಸಿಯಲ್ಲಿ ಕಂಡ ಕಲ್ಯಾಣದ ಚಾಲುಕ್ಯರ ಕಾಲದ ರಚನೆಯನ್ನು ಪ್ರೊ. ಜಿ.ಎಂ. ಮೊರೆಸ್ ಅವರು "ಕದಂಬನಾಗರ" ಶೈಲಿ ಎಂದು ಗುರುತಿಸಿದರು. ಇದು ಫಾಂಸನಾ ಶಿಖರವೇ. ಇಂದಿಗೂ ಫಾಂಸನಾ ಶೈಲಿಯನ್ನು ಕದಂಬ ನಾಗರವೆಂದು ಪರ್ಯಾಯವಾಗಿ ವಿದ್ವಾಂಸರು ಹೆಸರಿಸುತ್ತಾರೆ: ದೇವಾಲಯ ಶೈಲಿಗಳಲ್ಲಿ ಇತರೆ ಔತ್ತರೇಯ ಶೈಲಿಗಳು ಬೆಳೆದರೂ, ಸರಳವಾದ ಫಾಂಸನ ಶೈಲಿ ಸಂಪ್ರದಾಯಗಳ ಎಲ್ಲೆಗಳನ್ನು ಮೀರಿ ವಿಜೃಂಭಿಸಿತು. ತ್ರಿಕೂಟ ರಚನೆಯಲ್ಲಿ ಮೂರು ಶಿಖರಗಳನ್ನೂ ಫಾಂಸನ ಶೈಲಿಯಲ್ಲಿ ಕಾಣಲು ಸಾಧ್ಯ. ಕಲ್ಯಾಣದ ಚಾಲುಕ್ಯರ ಕಾಲದಿಂದ ಹೊಯ್ಸಳರ ಕಾಲಕ್ಕೂ ವಿಸ್ತರಿಸಿತು. ಕಲ್ಯಾಣದ ಚಾಲುಕ್ಯರ ಕಾಲದ ಮುಳುಗುಂದದ ಸಿದ್ದೇಶ್ವರ ದೇವಾಲಯ ತ್ರಿಕೂಟ ರಚನೆ. ಮೂರು ಶಿಖರಗಳೂ ಫಾಂಸನಾ ಶೈಲಿಯವು. ಕುಪ್ಪಗದ್ದೆಯ ರಾಮೇಶ್ವರ ದೇವಾಲಯವನ್ನೂ ಇದರೊಂದಿಗೆ ಸ್ಮರಿಸಬಹುದು. ದೊಡ್ಡಗದ್ದವಳ್ಳಿಯ



ಸಿದ್ಧೇಶ್ವರ, ಮುಳಗುಂದ



ಹೇಮಕೂಟ, ಹಂಪಿ

ಮಹಾಲಕ್ಷ್ಮೀ ದೇವಾಲಯ ಹೊಯ್ಸಳರ ಪ್ರಾಚೀನ ರಚನೆಗಳಲ್ಲಿ ಒಂದು. ಈ ದೇವಾಲಯದಲ್ಲಿ ನಾಲ್ಕು ಗರ್ಭಗೃಹಗಳಿದ್ದು ಮೂರು ಫಾಂಸನಾ ಶೈಲಿಯವು. ಈ ದೇವಾಲಯದ ಪ್ರಾಕಾರ ಭಿತ್ತಿಗೆ ಸೇರಿದಂತೆ ಮೂಲೆಗಳಲ್ಲಿ ಕಿರುಶಿಖರಗಳುಳ್ಳ ಸುಂದರ ಫಾಂಸನಾ ರಚನೆಗಳಿವೆ.

ನಾಡಕಳಸಿಯಲ್ಲಿ ಕಂಡ ಎರಡು ದೇವಾಲಯಗಳೂ ಫಾಂಸನಾ ಶಿಖರವುಳ್ಳದ್ದು. ಈ ದೇವಾಲಯದ ಶಿಖರ ಭಾಗದ ಕಂಠ, ಕಪೋತಗಳ ಪುನರಾವರ್ತನೆಯಲ್ಲಿ ಕಂಠವು ಅಲಂಕಾರದಿಂದ ಕೂಡಿದ್ದು ಮಹಾಕೂಟದ ರಚನೆಗಳನ್ನು ನೆನಪಿಸುತ್ತವೆ. ಹಂಪೆಯ ಹೇಮಕೂಟ ದೇವಾಲಯಗಳ ಸಂಕೀರ್ಣದಲ್ಲಿ ಫಾಂಸನ ಶೈಲಿಯ ತ್ರಿಕೂಟ ರಚನೆಗಳಿವೆ. ಇವು ಹೊಯ್ಸಳರ ಕಾಲದ ಅಂತಿಮ ಹಂತ ಎನ್ನಬಹುದು. ಶೃಂಗೇರಿಯ ವಿದ್ಯಾಶಂಕರ ದೇವಾಲಯವನ್ನು ಫಾಂಸನ ಶೈಲಿ ಎಂದೇ ಗುರುತಿಸಬೇಕು. ಇದು ತ್ರಿಭೂಮಿ ರಚನೆ, ಪ್ರತಿ ಭೂಮಿಯಲ್ಲಿ ಜಂಘಾ ಭಾಗವಿದ್ದು, ಅನಂತರ ನಾಲ್ಕಾರು ಬಾರಿ ಕಂಠ, ಕಪೋತಗಳು ಪುನರಾವರ್ತನೆಗೊಳ್ಳುತ್ತವೆ. ಈ ದೇವಾಲಯ ವಿಜಯನಗರ ಕಾಲದ್ದೆನಿಸಿದರೂ, ಶಿಖರ ರಚನೆ ಇಕ್ಕೇರಿ ಅರಸರ ಕಾಲದ್ದು ಎನ್ನಲು ಅವಕಾಶವಿದೆ.

ಇಲ್ಲಿ ಬಳಸಿದ ಕಲ್ಲು, ಕ್ಲೋರೈಟಿಕ್ ಸಿಸ್ಟ್‌ನಲ್ಲಿ ಅತಿ ಒರಟಾದುದು ಎನಿಸಿದೆ. ಸೂಕ್ಷ್ಮ ಕೆತ್ತನೆ ಹೆಚ್ಚು ಅವಕಾಶವಿಲ್ಲದಿದ್ದರೂ ಜಂಘಾ ಭಾಗದಲ್ಲಿ ದೇವದೇವತೆಗಳ ಲೀಲಾ ಮೂರ್ತಿಗಳನ್ನು ಕಡೆಯಲಾಗಿದೆ. ಇಲ್ಲಿರುವ ಘಂಟಾಭಾಗ ವೃತ್ತಾಕಾರದ್ದು. ನಾಲ್ಕು ಮೂಲೆಗಳಲ್ಲಿ ನಾಲ್ಕ ಕಿರುಕಳಶಗಳು. ಘಂಟಾ ರಚನೆಯ ಮೇಲೆ ಪ್ರಧಾನ ಕಳಶವಿದೆ. ತೀರ್ಥಹಳ್ಳಿಯ ಪುತ್ತಿಗೆ ಮಠದ ಆವರಣದಲ್ಲಿ ಏಕಭೂಮಿ ರಚನೆಯನ್ನು ಕಾಣಬಹುದು. ಕಲ್ಲಿನ ಗುಣಮಟ್ಟದಿಂದಾಗಿ ಈ ಪರಿಸರದ ದೇವಾಲಯಗಳಲ್ಲಿರುವ ಫಾಂಸನಾ ಶಿಖರಗಳು ಒಂದೇ ರೀತಿಯನ್ನು ಅನುಸರಿಸಿವೆ. ಬಿಳಗಿ ಅರಸರ ಕಾಲದಲ್ಲಿ ನಿರ್ಮಿಸಿದ ಬಿಳಗಿಯ ವಿರೂಪಾಕ್ಷ ದೇವಾಲಯವೂ ಫಾಂಸನಾ ಶೈಲಿಯದು. ಈ ಶೈಲಿ ಬಾದಾಮಿ ಚಲುಕ್ಯರ ಕಾಲದಿಂದ ಬಿಳಗಿ ಅರಸರ ಕಾಲದವರೆಗೆ ವಿಸ್ತರಿಸಿದ್ದನ್ನು ಗುರುತಿಸಲಾಗಿದೆ. ಈ ದಿಸೆಯಲ್ಲಿ ಮತ್ತಷ್ಟು ಸೂಕ್ಷ್ಮ ಅಧ್ಯಯನಗಳು ಮುಂದುವರೆಯಬೇಕಾಗಿದೆ.

◆◆

ಶಕುಂತಲ ಎನ್.

ಎಲೆಬೇತೂರಿನ ಮಹಿಷಮರ್ಧಿನಿ ಶಿಲ್ಪ

ಕಲೆ, ವಾಸ್ತು ಮತ್ತು ಮೂರ್ತಿಶಿಲ್ಪಗಳ ಬೆಳವಣಿಗೆಗಳನ್ನು ಆ ಕ್ಷೇತ್ರಗಳ ಬದಲಾವಣಾ ಘಟ್ಟ, ಆಯಾಕಾಲದ ರಾಜವಂಶಗಳ ಹೆಸರಿನೊಂದಿಗೆ ಸಮೀಕರಿಸಲಾಗಿದೆ. ಇದು ಔಚಿತ್ಯವೂ ಹೌದು. ಪ್ರಾಚೀನ ಭಾರತದಲ್ಲಿ ಬಹುಪಾಲು ಎಲ್ಲಾ ಕಲಾ ಪ್ರಕಾರಗಳು ಹುಟ್ಟಿ ಬೆಳೆದದ್ದು ರಾಜಾಶ್ರಯದಿಂದಲೇ. ಆಶ್ರಯದಾತರು ಇಲ್ಲದೆ ಯಾವುದೇ ಕಲಾ ಪ್ರಕಾರಗಳು ಪ್ರವರ್ಧಮಾನಕ್ಕೆ ಬಂದಿಲ್ಲ. ಹಾಗೆಯೇ ಆಯಾ ರಾಜಮನೆತನಗಳ ಏಳು-ಬೀಳುಗಳ ಪ್ರಭಾವವು ಕಲಾ ಪ್ರಕಾರಗಳ ಮೇಲಾಗಿರುವುದನ್ನು ಗುರುತಿಸಲಾಗಿದೆ. ಕೆಲವರು ಖಾಸಗಿಯಾಗಿ ಕಲಾಪ್ರಕಾರಗಳಿಗೆ, ಸಾಂಸ್ಕೃತಿಕ ಅಂಶಗಳಿಗೆ ನೆರವು ನೀಡಿದ್ದರೂ, ಈ ಎಲ್ಲಾ ನೆರವು ಕಲಾವಿದರ, ಕಲಾಕೃತಿಗಳ, ಸಾಂಸ್ಕೃತಿಕ ಅಂಶಗಳ ಸಂಖ್ಯೆಯನ್ನು ಹೆಚ್ಚಿಸಿದೆಯೇ ಹೊರತು, ಕಲಾ ಪ್ರಕಾರಗಳ ಒಲವುಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.[೧] ಈ ಒಂದು ದೃಷ್ಟಿಯಿಂದಲೇ ಭಾರತೀಯ ಅಥವಾ ಕರ್ನಾಟಕದ ವಾಸ್ತುಶಿಲ್ಪವನ್ನು ವಿಂಗಡಿಸುವಾಗ ರಾಜಮನೆತನಗಳನ್ನು ಗಮನದಲ್ಲಿಟ್ಟುಕೊಂಡು, ನಂತರ ಅವುಗಳನ್ನು ಧರ್ಮದ ದೃಷ್ಟಿಯಿಂದ ವಿಂಗಡಿಸಲಾಗುತ್ತದೆ.[೨]

ಹಾಗೆಯೇ ಕರ್ನಾಟಕದಾದ್ಯಂತ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣಗೊಂಡು ಆಯಾಯ ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡಂತೆಯೇ, ಬೇರೆ ಬೇರೆ ಪ್ರದೇಶಗಳಲ್ಲಿ ಬಿಡಿಬಿಡಿಯಾಗಿಯೂ ನಿರ್ಮಾಣಗೊಂಡವು. ಅಂದರೆ ಬಾದಾಮಿ ಚಳುಕ್ಯರ ಕಾಲದ ದೇವಾಲಯಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಕೇಂದ್ರೀಕೃತಗೊಂಡರೆ, ಎಲ್ಲೋರ, ಕುಕ್ಕನೂರು, ರೋಣ, ಮುಳಗುಂದ, ಸಿರಿವಾಳ, ಮುಂತಾದ ಪ್ರದೇಶಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳು ನಿರ್ಮಾಣಗೊಂಡಿವೆ.[೩] ಕುರುವತ್ತಿ, ಗದಗ, ಲಕ್ಕುಂಡಿಗಳಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು,[೪] ಬೇಲೂರು, ಹಳೇಬೀಡು, ಸೋಮನಾಥಪುರ, ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊಯ್ಸಳರ ದೇವಾಲಯಗಳು[೫], ಅವನಿ ಮತ್ತು ಹೇಮಾವತಿಗಳಲ್ಲಿ ಗಂಗರ ದೇವಾಲಯಗಳು,[೬] ಹಂಪೆಯಲ್ಲಿ ವಿಜಯನಗರ ಕಾಲದ ದೇವಾಲಯಗಳು[೭], ಕೇಂದ್ರೀಕೃತಗೊಂಡಿವೆ. ಅಲ್ಲದೇ ಬೇರೆಡೆಯಲ್ಲಿಯೂ ನಿರ್ಮಾಣಗೊಂಡಿದ್ದರೂ, ಒಂದು ಕಾಲದ ದೇವಾಲಯಗಳ ರಚನಾ ಶೈಲಿ ಆಯಾ ರಾಜವಂಶದ ರಾಜಧಾನಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಪ್ರಮುಖ ದೇವಾಲಯಗಳಲ್ಲಿ ನಿಖರವಾಗಿ, ಸ್ಪಷ್ಟವಾಗಿ ಮತ್ತು ಪೂರ್ಣವಾಗಿ ಪ್ರಕಟವಾಗಿರುತ್ತದೆ. ಆದ್ದರಿಂದ ಒಂದುಕಾಲದ ದೇವಾಲಯಗಳ ಶೈಲಿಯನ್ನು ಅರಿಯುವಲ್ಲಿ ಆ ಕೇಂದ್ರ ಸ್ಥಾನಗಳು ಪ್ರಮುಖ ಪಾತ್ರವಹಿಸುತ್ತವೆ.

ಮುಖ್ಯಸ್ಥರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ
ಮಹಿಳಾ ಕಾಲೇಜು
ದಾವಣಗೆರೆ
ಮೊ: ೯೦೨೬೭೨ ೦೧೪೯೬

ಸಾಮಾನ್ಯ ಅರ್ಥದಲ್ಲಿ 'ವಾಸ್ತು' ಅಂದರೆ ಭೂಮಿಯ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ ಮುಂತಾದವುಗಳು. ವಿಶಾಲಾರ್ಥದಲ್ಲಿ 'ವಾಸ್ತು' ಎಂದರೆ ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಂಕಗಳು ಎಂದು ಅರ್ಥೈಸಲಾಗಿದೆ. ಗರುಡ ಪುರಾಣವು ಗ್ರಾಮಗಳು, ನಗರಗಳು, ಪಟ್ಟಣಗಳು, ಕೋಟೆಗಳು, ಮಠಗಳು ಸಹ ವಾಸ್ತುಗಳೆಂದು ಉಲ್ಲೇಖಿಸಿದೆ.[೮] ಹಾಗೆಯೇ ವಿಶ್ವಕರ್ಮ ವಾಸ್ತುಶಾಸ್ತ್ರ 'ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಶಿಲೆ, ಮರ ಹಾಗೂ ಕಬ್ಬಿಣಗಳನ್ನೂ ವಾಸ್ತುಗಳೆಂದು ತಿಳಿಸಿದೆ.[೯] ಶುಕ್ರನೀತಿ ಗ್ರಂಥವು ದೇವಾಲಯ, ಅರಮನೆ, ದೇವತಾಮೂರ್ತಿಗಳ ರಚನೆ, ಸಾರ್ವಜನಿಕಉಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೧೦]

ವಾಸ್ತುವಿನ ಜತೆಜತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ, ಕಲಾನೈಪುಣ್ಯತೆಗೆ ಅನುಗುಣವಾಗಿ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಸಾಮಾನ್ಯವಾಗಿ ಶಿಲ್ಪವೆನ್ನುವ ಪದವು 'ಮೂರ್ತಿಶಿಲ್ಪ' ಎಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. 'ಶಿಲ್ಪಕರ್ಮ ಕಲಾಧಿಕಂ' ಎನ್ನುವ ಅಮರಕೋಶದಲ್ಲಿನ ಉಕ್ತಿ ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಅರ್ಥೈಸುತ್ತದೆ.[೧೧] ಆದರೆ ಹಲವಾರು ವಿದ್ವಾಂಸರು 'ಶಿಲ್ಪ' ಎನ್ನುವ ಪದವು ವಾಸ್ತು ಹಾಗೂ ಮೂರ್ತಿಶಿಲ್ಪಗಳೆರಡನ್ನೂ ಒಳಗೊಂಡದ್ದು ಎಂದು ವಿವರಿಸಿದ್ದಾರೆ.

ಪ್ರೊ. ಫಣೀಂದ್ರನಾಥ ಬೋಸ್‌ರವರು ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗೂ ಪ್ರತಿಮಾಶಾಸ್ತ್ರ ಎರಡನ್ನೂ ಒಳಗೊಂಡಂತೆ ವಿವರಿಸಿದ್ದಾರೆ.[೧೨] ಹಾಗೆಯೇ ಕಲೆ ಎಂದರೆ ಒಂದು ವಿಶೇಷವಾದ ಒಳ್ಳೆಯ ಅಭಿರುಚಿಯಿಂದ ಕೂಡಿದ ರಚನಾತ್ಮಕಕ್ರಿಯೆ ಅಥವಾ "ಸದಭಿರುಚಿಯಿಂದ ಕೂಡಿದ ಸೌಂದರ್ಯಾನಾಭವವನ್ನುಂಟು ಮಾಡುವ ಕಾರ್ಯ. ಕಲಾಪ್ರಕಾರಗಳಲ್ಲಿ ದೃಶ್ಯ ಮತ್ತು ಶ್ರಾವ್ಯ ಎಂಬ ಎರಡು ಮಾಧ್ಯಮಗಳಿದ್ದು, ಕಲೆಯೆನ್ನುವುದು ಒಂದು ಜನಾಂಗದ ಅನುಭವಸಾರದ ಕೈಗನ್ನಡಿಯಾಗಿದೆ. ಹಾಗಾಗಿ ವಾಸ್ತುಶಿಲ್ಪ, ವಾಸ್ತುಕಲೆ, ವಾಸ್ತುಶಾಸ್ತ್ರ, ವಾಸ್ತುವಿದ್ಯೆ ಎಂಬ ಪದಗಳನ್ನು ಸರಿಸಮಾನವಾಗಿ ಬಳಸಬಹುದಾಗಿದೆ. ಬೆಂಜಮಿನ್ ರೋಲೆಂಡ್ "ಭಾರತದ ಕಲಾ ಜಗತ್ತುಧಾರ್ಮಿಕ ಶ್ರದ್ಧೆಯೊಂದಿಗೆ ಮೇಳೈಸಿದೆ" ಎನ್ನುವುದನ್ನು ಗುರುತಿಸಿದ್ದಾರೆ.[೧೩]



ಮಹಿಷಮರ್ಧಿನಿ ಶಿಲ್ಪ

ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮ ತುಂಬಾ ಪ್ರಾಚೀನವಾದ ಐತಿಹಾಸಿಕ ನೆಲೆಯಾಗಿದ್ದು, ಕ್ರಿ.ಶ. ಹತ್ತನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿರುವ ಮಹಿಷಮರ್ಧಿನಿ ಶಿಲ್ಪದ ಕುರಿತಾದ ಕೆಲವು ವಿಚಾರಗಳನ್ನು ತಿಳಿಸುವುದೇ ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

ಶ್ರೀ ಕಲ್ಲೇಶ್ವರ ದೇವಾಲಯದ ಮುಂಬದಿಯಲ್ಲಿ ಎಡಭಾಗಕ್ಕೆ ಕಂಬಗಳ ಸಮೀಪ ಮಹಿಷಮರ್ಧಿನಿಯ ಶಿಲ್ಪವನ್ನು ಇಡಲಾಗಿದೆ. ಶಿಲ್ಪದ ಮುಖವು ಹಾಳಾಗಿದ್ದು, ಇತ್ತೀಚೆಗೆ ಕಂತಿ(ಸಿಮೆಂಟ್) ಉಪಯೋಗಿಸಿ ಮುಖ ಲಕ್ಷಣವನ್ನು ಪೂರ್ಣಗೊಳಿಸಿರುವರು. ಮಹಿಷಮರ್ಧಿನಿಯು ತನ್ನ ಎಡಗಾಲನ್ನು ನೆಲದ ಮೇಲಿಟ್ಟು ಬಲಗಾಲನ್ನು ಮಹಿಷನ ತೊಡೆಯ ಮೇಲಿರಿಸಿ ತುಳಿಯುತ್ತಿರುವಂತೆ ಬಿಂಬಿಸಲಾಗಿದೆ. ಕಾಲಂದಿಗೆ, ಸಣ್ಣ ಸಣ್ಣ ಕಡಗಗಳನ್ನು ಶಿಲ್ಪಿ ವಿವರವಾಗಿ ಬಿಡಿಸಿದ್ದಾನೆ.

ಈ ಮಹಿಷಾಸುರ ಎಮ್ಮೆಯ ರೂಪದಲ್ಲಿದ್ದು ಅದನ್ನು ಕತ್ತರಿಸಿದಾಗ ರುಂಡ ಬೇರೆಡೆ ಬಿದ್ದಿದೆ. ಮಹಿಷನ ಮುಂಡದಿಂದ ಮಾನವಾಕಾರದ ಮಹಿಷ ಹೊರಬಂದಿದ್ದು ಒಂದು ಕೈಯಲ್ಲಿ ಕತ್ತಿ ಇನ್ನೊಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಕತ್ತಿ ಹಿಡಿದಿರುವ ಕೈಯನ್ನು ಮಹಿಷಮರ್ಧಿನಿಯು ಬಿಗಿಯಾಗಿ ಹಿಡಿದಿದ್ದು ಶೂಲದಿಂದ ಮಹಿಷನನ್ನು ತಿವಿದಿದ್ದಾಳೆ. ಮಹಿಷನ ಕರುಳು ಹೊರಗೆ ಬಂದಿದೆ. ಮಹಿಷಮರ್ಧಿನಿಯ ನಡುಬಂಧ ತುಂಬಾ ಸುಂದರವಾಗಿದ್ದು ಯಜ್ಞೋಪವೀತ ಧರಿಸಿದ್ದಾಳೆ. ಭುಜಕೀರ್ತಿ ಕೊರಳ ಆಭರಣಗಳು ಅಲಂಕಾರಿಕವಾಗಿದ್ದು ಸ್ತನಗಳ ಮೇಲೆ ಅಲಂಕಾರಿಕ ಪಟ್ಟಿಯನ್ನು ಧರಿಸಿರುವುದು ಇದರ ವಿಶೇಷವಾಗಿದೆ. ತೋಳ್ಬಂದಿ, ಕೈಕಡಗಗಳನ್ನು ಹೊಂದಿದ್ದು, ಇಡೀ ವಿಗ್ರಹ ಚಲನೆಯಲ್ಲಿದೆ.

ಶಿಲ್ಪದ ಕಿರೀಟ ಮುಕುಟದ ಸುತ್ತಲೂ ಗೋಲಾಕಾರದ ಆಕರ್ಷಕ ಪ್ರಭಾಮಂಡಲವಿದೆ. ಪ್ರಭಾಮಂಡಲದಲ್ಲಿ ಕಮಲದ ದಳಗಳನ್ನು ತುಂಬಾ ಸ್ಪಷ್ಟವಾಗಿ ಬಿಡಿಸಿಸಲಾಗಿದೆ. ಹಾಗೆಯೇ ಶಿಲ್ಪದ ಮತ್ತೊಂದು ಆಕರ್ಷಕ ಅಂಶವೆಂದರೆ ಅಲಂಕೃತ ವಸ್ತ್ರವನ್ನು ಧರಿಸಿರುವುದು. ಶಿಲ್ಪಕ್ಕೆ ಅಷ್ಟಭುಜ, ಎಂಟು ಕೈಗಳಿದ್ದು ಬಲ ಕೈಗಳಲ್ಲಿ ಕ್ರಮವಾಗಿ ಶೂಲ, ಖಡ್ಗ, ಚಕ್ರ ಮತ್ತು ಬಾಣಗಳನ್ನು, ಎಡಗೈಗಳಲ್ಲಿ ಶಂಖ, ಗುರಾಣಿ, ಬಿಲ್ಲು ಮತ್ತು ಮಹಿಷನನ್ನು ಹಿಡಿದಿದ್ದಾಳೆ. ಶಿಲ್ಪದ ಬಲಭಾಗದಲ್ಲಿ ಕೆಳಗಡೆ ಮಹಿಷನ ಹಿಂಬದಿಯಲ್ಲಿ ಮಹಿಷಮರ್ಧಿನಿಯ ವಾಹನವಾದ ಸಿಂಹವಿದೆ. ಮಹಿಷಾಸುರನಲ್ಲಿ ಆಕರ್ಷಕವಾದ ಕರಂಡ ಮುಕುಟವಿದೆ. ಶಿಲ್ಪದ ಈ ಎಲ್ಲಾ ಲಕ್ಷಣಗಳಿಂದ ಈ ಬಿಂಬವನ್ನು ಹತ್ತನೆಯ ಶತಮಾನದ ಕೊನೆ ಹಾಗೂ ಹನ್ನೊಂದನೆಯ ಶತಮಾನದ ಆರಂಭ ಕಾಲದ್ದೆಂದು ಹೇಳಬಹುದಾಗಿದೆ.[೧೪] ಈ ಶಿಲ್ಪವು ಇಂದಿಗೂ ತನ್ನ ಕಲಾಸೌಂದರ್ಯವನ್ನು ಉಳಿಸಿಕೊಂಡು ಬಂದಿದೆ.

ಅಡಿಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ., ೧೯೯೪, ತಲಕಾಡಿನ ಗಂಗರ ದೇವಾಲಯಗಳು–ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು (ಪ್ರ) ಮ. ಪು. ೧.
೨. ಅದೇ, ಪು. ೨.
೩. ಸಿಂದಗಿ ರಾಜಶೇಖರ., ೧೯೮೮, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು. ೬೭.
೪. ಶ್ರೀಕಂಠಶಾಸ್ತ್ರಿ ಎಸ್., ೧೯೯೫, ಹೊಯ್ಸಳ ವಾಸ್ತುಶಿಲ್ಪ, ಪು. ೨೬.
೫. ನಾಗರಾಜರಾವ್ ಎಚ್.ಎಂ., ೧೯೦೫, ಹೊಯ್ಸಳ ವಾಸ್ತುಶಿಲ್ಪ, ಪು. ೧೮.
೬. ದೇವರಕೊಂಡಾರೆಡ್ಡಿ, ೧೯೯೪, ಪೂರ್ವೋಕ್ತ, ಪು. ೧೨೫.
೭. ಸಾಲತೊರೆ ಆರ್.ಎಸ್., ೧೯೮೨, ವಿಜಯನಗರ ಆರ್ಟ್, ಪು. ೨೫, ೫೨.
೮. ಗೋಪಾಲ್ ಬಾ.ರಾ. ೧೯೯೩, "ಕಲೆ ಮತ್ತು ವಾಸ್ತು", ಪು. ೧.
೯. ಪೂರ್ವೋಕ್ತ, ಪು. ೧.
೧೦. ಪ್ರಭಾಕರ್ ಎಂ.ಎನ್., ೧೯೯೯, 'ದೇವಾಲಯಗಳ ವಾಸ್ತುಚಂದ್ರಿಕೆ', ಪು. ೩.
೧೧. ಅದೇ., ಪು. ೪.
೧೨. ಫಣೀಂದ್ರನಾಥಬೋಸ್., ೧೯೭೮, 'ಪ್ರಿನ್ಸಿಪಾಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ', ಪು. ೮.
೧೩. ಗೋಪಾಲ್ ಬಾ.ರಾ., ಪೂರ್ವೋಕ್ತ, ಪು. ೧.
೧೪. ಶಿವಕುಮಾರ ಎಂ.,. ೨೦೧೨, 'ಬೇತೂರಿನ ಶ್ರೀ ಕಲ್ಲೇಶ್ವರ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ', ಎಂ.ಫಿಲ್. ಪ್ರಬಂಧ, ಪು. ೧೩.

◆◆

೫೩

ದತ್ತಪ್ರಸನ್ನ ಪಾಟೀಲ

ಜಂತ್ಲಿ ಶಿರೂರಿನ ಶ್ರೀಕೃಷ್ಣ ದೇವಾಲಯದ ಕಥಾನಿರೂಪಕ ಶಿಲ್ಪಗಳು

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಆಳ್ವಿಕೆಯ ಕಾಲ ಕನ್ನಡ ನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ವಿಶಿಷ್ಟ ಕೊಡುಗೆಗಳನ್ನು ನೀಡಿದೆ. ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಹಿಂದೆಂದಿಗಿಂತಲೂ ವಿಭಿನ್ನ ಬೆಳವಣಿಗೆಯನ್ನು ಕರ್ನಾಟಕ ಇತಿಹಾಸ ಕಂಡಿತಲ್ಲದೆ, ಈ ಕಾಲದಲ್ಲಿ ಅನೇಕ ಅಪರೂಪದ ದೇವಾಲಯಗಳು ನಿರ್ಮಾಣಗೊಂಡವು. ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಪ್ರಾಮುಖ್ಯತೆ ಪಡೆದ ಗದಗ ಪ್ರದೇಶ ಕಲೆಯ ಬೀಡಾಗಿ, ಕವಿಗಳ ನೆಲವೀಡಾಗಿ, ಶೈಕ್ಷಣಿಕ ಕೇಂದ್ರವಾಗಿ ವಿಜಯನಗರ ಕಾಲದಲ್ಲಿಯೂ ಕರ್ನಾಟಕದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿತು.

ವಿಜಯನಗರ ಕಾಲದಲ್ಲಿ ಗದಗ ಪರಿಸರವು ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದರೂ ಇಲ್ಲಿ ಕಥಾನಿರೂಪಕ ಶಿಲ್ಪಗಳ ಕಂಡರಿಸುವಿಕೆಯು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು. ಗದಗ ಜಿಲ್ಲೆಯಲ್ಲಿ ನಿರ್ಮಾಣ, ಸೇರ್ಪಡೆ ಮತ್ತು ಜೀರ್ಣೋದ್ಧಾರಗೊಂಡ ಬಹುತೇಕ ದೇವಾಲಯಗಳಲ್ಲಿ ಕಥಾನಿರೂಪಕ ಶಿಲ್ಪಗಳು ಕಂಡುಬರುವುದಿಲ್ಲ. ಗದುಗಿನ ವೀರನಾರಾಯಣ ಮತ್ತು ಮುಂಡರಗಿ ತಾಲೂಕಿನ ಶಿರೂರಿನ ಕೃಷ್ಣ ದೇವಾಲಯದಲ್ಲಿ ಮಾತ್ರ ಗಮನಾರ್ಹವಾದ ಕಥಾನಿರೂಪಕ ಶಿಲ್ಪಗಳು ಚಿತ್ರಿಸಲ್ಪಟ್ಟಿವೆ.



೧. ಶ್ರೀಕೃಷ್ಣ ದೇವಾಲಯ ಶಿರೂರು

ಉಪನ್ಯಾಸಕರು
ವಿದ್ಯಾದಾನ ಸಮಿತಿ
ಬಾಲಕಿಯರ ಪದವಿಪೂರ್ವ ಕಾಲೇಜು
ಗದಗ
ಮೊ : ೯೪೪೮೬ ೪೦೮೩೩



೨. ಕಥಾನಕ ಶಿಲ್ಪಗಳನ್ನು ಹೊಂದಿರುವ ಶಿರೂರಿನ ಶ್ರೀಕೃಷ್ಣ ದೇವಾಲಯದ ಭಿತ್ತಿಯ ಭಾಗ

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಶಿರೂರು ಗ್ರಾಮದ ಶ್ರೀಕೃಷ್ಣನ ದೇವಾಲಯವು ಎತ್ತರವಾದ ಕಟ್ಟೆಯ ಮೇಲೆ ನಿರ್ಮಾಣಗೊಂಡಿದೆ. ಇದು ಗರ್ಭಗೃಹ, ನವರಂಗ, ಹಾಗೂ ನವರಂಗಕ್ಕೆ ಪ್ರವೇಶಿಸುವಂತೆ ಪೂರ್ವ ಮತ್ತು ಉತ್ತರದಲ್ಲಿ ಎರಡು ಪ್ರವೇಶದ್ವಾರಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಕೃಷ್ಣನ (ಮುರಳಿಮೋಹನ) ವಿಗ್ರಹವನ್ನಿಟ್ಟು ಪೂಜಿಸಲಾಗುತ್ತದೆ.[೧] (ಚಿತ್ರ–೧) ಇದೊಂದು ವಿಜಯನಗರ ಕಾಲದ ಆರಂಭಿಕ ಘಟ್ಟದ ದೇವಾಲಯವಾಗಿದೆ. ಈ ದೇವಾಲಯವನ್ನು ೧೪ನೇ ಶತಮಾನದ ಆರಂಭದಲ್ಲಿ ನಿರ್ಮಿಸಿರಬಹುದಾಗಿದೆ. ಇದರ ಅಧಿಷ್ಠಾನವು ಸರಳ ರಚನೆಯಿಂದ ಕೂಡಿದ್ದು, ಹೊರಭಿತ್ತಿಯಲ್ಲಿ ಹಲವು ಮಿಥುನ ಶಿಲ್ಪಗಳನ್ನು ಕಂಡರಿಸಲಾಗಿದೆ. ಅವುಗಳಲ್ಲಿ ಒಬ್ಬ ವೀರಯೋಧನ ಫಲಕವಿರುವುದು ಗಮನಾರ್ಹ. ಈ ಮಿಥುನ ಶಿಲ್ಪಗಳ ಮಧ್ಯ ಕೃಷ್ಣ ಚರಿತೆಯ ಎರಡು ಮತ್ತು ನರಸಿಂಹಾವತಾರದ ಕಥಾನಿರೂಪಕ ಶಿಲ್ಪಗಳು ಕಂಡರಿಸಲ್ಪಟ್ಟಿವೆ. (ಚಿತ್ರ–೨)

ಕಾಳಿಂಗಮರ್ಧನ

ಈ ಪ್ರಸಂಗವು ಶ್ರೀಮದ್ ಭಾಗವತದ ದಶಮಸ್ಕಂದದ ಪೂರ್ವಾರ್ಧದ ೧೬ನೇ ಅಧ್ಯಾಯದಲ್ಲಿದೆ. ಅದರ ಕಥಾ ಸಾರಾಂಶ ಈ ರೀತಿಯಾಗಿದೆ.

"ಒಂದು ದಿನ ಕೃಷ್ಣನು ಗೊಲ್ಲಬಾಲಕರು ಹಾಗೂ ಹಸುಗಳೊಡನೆ ಯಮುನಾ ನದಿಯ ಕಾಳಂದಿ ಮಡುವಿನ ಬಳಿಗೆ ಬಂದನು. ಬಾಯಾರಿ ನೀರಿಡಿಸಿದ ಗೋಪಾಲಕರು ಅಲ್ಲಿಯ ನೀರನ್ನು ಕುಡಿದು ಮೂರ್ಛಿತರಾಗಿ ಕೆಳಗೆ ಬಿದ್ದರು. ಆಗ ಭಗವಂತನೇ ಆದ ಶ್ರೀಕೃಷ್ಣನು ತನ್ನ ಅಮೃತಮಯ ದೃಷ್ಟಿಯಿಂದ ಕೂಡಲೇ ಗೋಪಾಲಕರನ್ನು ಬದುಕಿಸಿದನು. ಕಾಲಂದಿಯ ಮಡುವಿನಲ್ಲಿ ಸರ್ಪರಾಜನಾದ ಕಾಳಿಯ ನಾಗನು ವಾಸಿಸುತ್ತಿದ್ದುದರಿಂದ ಆ ನೀರು ವಿಷಪ್ರಾಯವಾಗಿತ್ತು. ಕಾಳಿ ನಾಗರಾಜನನ್ನು ಶಿಕ್ಷಿಸಬೇಕೆಂದು ಶ್ರೀಕೃಷ್ಣನು ಮಡುವಿಗೆ ಹಾರಿ ಕಾಳಿನಾಗರಾಜನ ಹೆಡೆಯ ಮೇಲೆ ಜಿಗಿದನು, ಆಗ ಕಾಳಿನಾಗರಾಜನು ಶ್ರೀ ಕೃಷ್ಣನನ್ನು ಮಂಡಲಾಕಾರದಲ್ಲಿ ತನ್ನ ದೇಹದಿಂದ ಬಿಗಿಯಾಗಿ ಬಂಧಿಸಿದನು. ಹೀಗೆ ಸರ್ಪದಿಂದ ಬಂಧಿಸಲ್ಪಟ್ಟ ಶ್ರೀ ಕೃಷ್ಣನು ನಿಶ್ಚೇಷ್ಟನಾದನು. ಇದನ್ನು ನೋಡಿ ಭಯಭೀತರಾದ ನಂದ ಪ್ರಮುಖರು, ಗೋಪಾಲಕರು, ವ್ಯಾಕುಲಗೊಂಡು ಮೂರ್ಛಿತರಾಗಿ ಕೆಳಗೆ ಬಿದ್ದರು. ನಂತರ ಶ್ರೀ ಕೃಷ್ಣನು ಸರ್ಪದ ಹೆಡೆಗಳನ್ನು ಬಗ್ಗಿಸಿ ಅವುಗಳ ತಲೆಯ ಮೇಲೆ ಹತ್ತಿ ನೃತ್ಯವಾಡತೊಡಗಿದನು. ಕಾಳಿಯು ಶ್ರೀಕೃಷ್ಣನನ್ನು ಕಚ್ಚಬೇಕೆಂದು ಪ್ರಯತ್ನ ಮಾಡಲು ಅದು ಸಾಧ್ಯವಾಗದೇ ರಕ್ತಕಾರಿದನು. ಆಗ ಕಾಲಿಯನ ಪತ್ನಿಯರು ಬಂದು ಪ್ರಾಣ ಭಿಕ್ಷೆ ಬೇಡಲು ಶ್ರೀಕೃಷ್ಣನು ಕಾಳಿಯನನ್ನು ಕ್ಷಮಿಸಿ, ಅವನಿಗೆ ಗರುಡರಿಂದ ಅಭಯನೀಡಿ ಸಮುದ್ರದಲ್ಲಿರುವ ಸರ್ಪಗಳು ವಾಸಮಾಡಲು ಯೋಗ್ಯವಾದ ರಮಣಕ ದ್ವೀಪಕ್ಕೆ ಕಳುಹಿಸಿಕೊಟ್ಟನು. ಯಮುನೆಯ ನೀರು ಸ್ನಾನಪಾನಾದಿಗಳಿಗೆ ಯೋಗ್ಯವಾಯಿತು ಅದು ಅಮೃತಮಯ ಮಡುವಾಯಿತು".[೨] ಈ ಕಥೆಯು ಕೆಲ ಕಿರು ಬದಲಾವಣೆಗಳೊಂದಿಗೆ ಹರಿವಂಶ ಪುರಾಣ, ಬ್ರಹ್ಮವೈವರ್ತ ಪುರಾಣ, ಬ್ರಹ್ಮ ಪುರಾಣ, ವಿಷ್ಣುಪುರಾಣ ಗಳಲ್ಲಿಯೂ ವರ್ಣಿಸಲ್ಪಟ್ಟಿದೆ.

ಕಾಳಿಂಗ ಮರ್ದನದ ಈ ಕಥಾನಿರೂಪಕ ಶಿಲ್ಪದಲ್ಲಿ ಒಂದೇ ಪಟ್ಟಿಕೆಯಲ್ಲಿ ಎರಡು ದೃಶ್ಯಗಳನ್ನು ಕಂಡರಿಸಲಾಗಿದೆ. ಮೊದಲ ದೃಶ್ಯದಲ್ಲಿ ಕೃಷ್ಣನು ಕಾಳಿಕಾ ಎಂಬ ಸರ್ಪರಾಜನ ಮುಂಭಾಗದ ಮೇಲೆ ನಿಂತುಕೊಂಡಿದ್ದು ಸರ್ಪದ ಬಾಲವನ್ನು ತನ್ನ ತಲೆಯ ಮೇಲೆ ಬರುವಂತೆ ಎರಡೂ ಕೈಗಳಿಂದ ಹಿಡಿದುಕೊಂಡಿದ್ದಾನೆ. ಹಾಗೂ ಅದರ ಮೇಲೆ ನಾಟ್ಯವಾಡುತ್ತಿದ್ದಾನೆ. ಎರಡನೇ ದೃಶ್ಯವನ್ನು ವಿಭಿನ್ನವಾಗಿ ವಿಶಿಷ್ಟವಾಗಿ ಕಂಡರಿಸಲಾಗಿದೆ. ಇಲ್ಲಿ ಶ್ರೀ ಕೃಷ್ಣನು ತನ್ನ ಮೂಲ ವಿಷ್ಣುವಿನ ರೂಪದಲ್ಲಿ



೩. ಕಾಳಿಂಗ ಮರ್ಧನದ ಕಥಾನಿರೂಪಕ ಶಿಲ್ಪ


ಶಂಖ ಚಕ್ರ, ಗಧಾ ಪದ್ಮಗಳನ್ನು ಧರಿಸಿ ಕಾಳಿಂಗ ಸರ್ಪದ ಮೇಲೆ ಕುಳಿತು ಕೊಂಡಿದ್ದಾನೆ. ಸರ್ಪದ ಹೆಡೆಯನ್ನು ದೊಡ್ಡದಾಗಿ ತೋರಿಸಲಾಗಿದೆ. ಅವನ ಎಡ ಮತ್ತು ಬಲ ಬದಿಗಳಲ್ಲಿ ಚಿಕ್ಕ ಕಂಬಗಳನ್ನು ತೋರಿಸಲಾಗಿದ್ದು, ಅದರ ಮೇಲೆ ಸರ್ಪಗಳ ಹೆಡೆಯಾಕಾರದ ಪ್ರಭಾವಳಿಯನ್ನು ಕಂಡರಿಸಲಾಗಿದೆ.

ಈ ಶಿಲ್ಪವು ಅತ್ಯಂತ ಸಾಮಾನ್ಯ ಮತ್ತು ಸಂಕ್ಷಿಪ್ತವಾಗಿ ಕಾಳಿಂಗ ಮರ್ಧನವನ್ನು ವಿವರಿಸುವ ಕಥಾನಕವಾಗಿದೆ. ಸಾಮಾನ್ಯವಾಗಿ ಒಂದೇ ದೃಶ್ಯದಲ್ಲಿ ಕೃಷ್ಣನು ಕಾಳಿಂಗನ ಮೇಲೆ ನೃತ್ಯಮಾಡುತ್ತಿರುವ ಶಿಲ್ಪವನ್ನು ಕಲ್ಯಾಣ ಚಾಲುಕ್ಯರ ಕಾಲದ ಕಥಾನಿರೂಪಕ ಶಿಲ್ಪಗಳಲ್ಲಿ ತೋರಿಸಲಾಗುತ್ತದೆ. ಆದರೆ ಪ್ರಸ್ತುತ ಶಿಲ್ಪದಲ್ಲಿ ಸ್ವಲ್ಪ ವಿಭಿನ್ನವಾಗಿ ಎರಡು ದೃಶ್ಯದಲ್ಲಿ ಈ ಘಟನೆಯನ್ನು ಕಂಡರಿಸಲಾಗಿದೆ. (ಚಿತ್ರ-೩)

ಗೋಪಿಕಾವಸ್ತ್ರಾಪಹರಣ

ಇದೇ ದೇವಾಲಯದ ಭಿತ್ತಿಯಲ್ಲಿ ಗೋಪಿಕಾವಸ್ತ್ರಾಪಹರಣದ ಕಥಾನಿರೂಪಕ ಶಿಲ್ಪವು ಕಂಡರಿಸಲ್ಪಟ್ಟಿದೆ. ಈ ಕಥೆಯು ಭಾಗವತ ಪುರಾಣದ ದಶಮಸ್ಕಂದದ ಪೂರ್ವಾರ್ಧದ ೨೨ನೇ ಅಧ್ಯಾಯದಲ್ಲಿದೆ. ಇದರ ಕಥಾಸಾರಾಂಶ ಈ ರೀತಿಯಾಗಿದೆ;

"ಶ್ರೀಕೃಷ್ಣನ ವೇಣುವಾದನಕ್ಕೆ ಮನಸೋತ ಗೋಪಿಕಾ ಬಾಲೆಯರು ಕೃಷ್ಣನು ತಮಗೆ ಪತಿಯಾಗಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ಕಾತ್ಯಾಯಿನಿ (ಗೌರಿದೇವಿ) ವೃತವನ್ನು ಆಚರಿಸುತ್ತಿದ್ದರು. ಅದರಂತೆ ವೃತದ ಕಡೆಯ ದಿನ ಅವರೆಲ್ಲರೂ ಎಂದಿನಂತೆ ನದಿಗೆ ಹೋಗಿ ಸೀರೆಗಳನ್ನೆಲ್ಲ ನದಿಯ ದಡದಲ್ಲಿ ಇಟ್ಟು ಬರಿಮೈಯಲ್ಲಿ ನೀರಿಗಿಳಿದು ವಿನೋದದಿಂದ ಸ್ನಾನಮಾಡತೊಡಗಿದರು. ಆಗ ಶ್ರೀಕೃಷ್ಣನು ಬಾಲೆಯರ ವಸ್ತ್ರಗಳನ್ನೆಲ್ಲ ಸಂಗ್ರಹಿಸಿಕೊಂಡು ಸಮೀಪದ ಕದಂಬ ಮರವನ್ನೇರಿ ಕುಳಿತನು. ನೀರೊಳಗಿದ್ದ ಗೋಪಿಕೆಯರು ಕೃಷ್ಣನ ಈ ತುಂಟಾಟವನ್ನು ಕಂಡು ವೃತನಿಷ್ಠರಾದ ತಮ್ಮ ಸೀರೆಗಳನ್ನು ಕದಿಯುವುದು ಯೋಗ್ಯವಲ್ಲ ನಿಮ್ಮ ತಂದೆ ನಂದಗೋಪನಿಗೆ ಹೇಳಿ ಶಿಕ್ಷೆ ಕೊಡಿಸುತ್ತೇವೆ ಎಂದು ಹೇಳಿದರು. ಮತ್ತು ಗೋಪಿಕೆಯರು ಕೃಷ್ಣ ನಾವು ನಿನ್ನ ದಾಸಿಯರು ನಮ್ಮ ಬಟ್ಟೆಗಳನ್ನು ಕೊಟ್ಟು ಕೃಪೆಮಾಡು ಎಂದು ವಿನಂತಿಸಿಕೊಂಡರು. ಆಗ ಕೃಷ್ಣನು ಅವರು ವಸ್ತ್ರಹೀನರಾಗಿ ಸ್ನಾನ ಮಾಡುತ್ತಿರುವುದು ಜಲಾಭಿಮಾನಿ ದೇವತೆಗಳಾದ ವರುಣ ಮತ್ತು ಯಮುನೆಗೆ ಮಾಡಿದ ಅಪರಾಧವಾಗಿದೆ. ಆದ್ದರಿಂದ ಅವರೆಲ್ಲರೂ ನೀರಿನಿಂದ ಹೊರಬಂದು ತಲೆಯಮೇಲೆ ಕೈಜೋಡಿಸಿ ನಮಸ್ಕಾರ ಮಾಡಿದರೆ ಸೀರೆಗಳನ್ನು ಕೊಡುವೆನೆಂದು ಹೇಳಿದನು. ಕೊನೆಗೆ ದಾರಿಗಾಣದೆ ಗೋಪಿಕಾಸ್ತ್ರೀಯರು ಒಂದು ಕೈಯಿಂದ ಗೌಪ್ಯಸ್ಥಳವನ್ನು ಮುಚ್ಚಿಕೊಂಡು ಉಭಯ ಬಾಹುಗಳಿಂದ ಕುಚಪ್ರದೇಶವನ್ನು ಮರೆಮಾಡಿ ನೀರಿನಿಂದ ಹೊರಕ್ಕೆಬಂದು ಕೃಷ್ಣ ವಸ್ತ್ರಗಳನ್ನು ಕೊಟ್ಟು ಉದ್ಧರಿಸು ಎಂದು ಎದೆಯ ಮೇಲಿದ್ದ ತಮ್ಮ ಒಂದು ಕೈಯನ್ನೆತ್ತಿ ಪ್ರಾರ್ಥಿಸಿದರು. ಆಗ ಕೃಷ್ಣನು



೪. ಗೋಪಿಕಾ ವಸ್ತ್ರಾಪಹರಣದ ಕಥಾನಿರೂಪಕ ಶಿಲ್ಪ

ಒಂದು ಕೈಯನ್ನೆತ್ತಿ ನಮಸ್ಕರಿಸಿದರೆ ಪಾಪ ಎರಡೂ ಕೈಗಳನ್ನೆತ್ತಿ ನಮಸ್ಕರಿಸಿ ಎಂದು ಹೇಳಿದನು. ಆಗ ಗೋಪಿಕಾಸ್ತ್ರೀಯರು ನಾಚಿ ನೀರಾಗಿ ಎರಡೂ ಕೈಗಳನ್ನೆತ್ತಿ ನಮಸ್ಕರಿಸಿದರು. ನಂತರ ಕೃಷ್ಣನು ಅವರಿಗೆ ಸೀರೆಗಳನ್ನು ನೀಡಿ, ನಿಜವಾದ ಪ್ರೇಮವು ಕಾಮವನ್ನು ತ್ಯಜಿಸುತ್ತದೆ. ನನ್ನ ಮೇಲಿನ ಕಾಮ ಇತರ ಸಕಲ ಕಾಮನೆಗಳನ್ನು ನಾಶಮಾಡಿ ನಿರ್ಮಲ ಪ್ರೇಮದಿಂದ ಮೋಕ್ಷಪ್ರದಾಯಿನಿ ಆಗುತ್ತದೆ. ಆದ್ದರಿಂದ ನೀವು ಶರತ್ಕಾಲದ ರಾತ್ರಿಗಳನ್ನು ನನ್ನ ಸಹವಾಸದಲ್ಲಿ ಕಳೆದು ನಿಮ್ಮ ಮನೋರಥ ಸಿದ್ಧಿಗೊಳಿಸಿಕೊಳ್ಳಿ ಎಂದು ಹೇಳಿದನು. ಅವನ ಮಾತುಗಳಿಂದ ಸಂತುಷ್ಟರಾಗಿ ಗೋಪಿಕಾ ಸ್ತ್ರೀಯರು ಗೋಕುಲಕ್ಕೆ ತೆರಳಿದರು". ಈ ಕಥೆಯು ಕೆಲ ಕಿರು ಬದಲಾವಣೆಗಳೊಂದಿಗೆ ಬ್ರಹ್ಮ ವೈವರ್ತ ಪುರಾಣದಲ್ಲಿಯೂ ವರ್ಣಿಸಲ್ಪಟ್ಟಿದೆ.

ಈ ದೇವಾಲಯದ ಹೊರಭಿತ್ತಿಯ ಮೇಲೆ ಗೋಪಿಕಾವಸ್ತ್ರಾಪಹರಣದ ಶಿಲ್ಪಪಟ್ಟಿಕೆ ಕಂಡುಬರುತ್ತದೆ. ಇದು ಏಕದೃಶ್ಯಗಳಲ್ಲಿ ಕಂಡುಬರುವ ಶಿಲ್ಪವಾಗಿದೆ. ಈ ಕಥಾನಕದಲ್ಲಿ ಭಾಗವತದ ಪ್ರಸಿದ್ಧ ಪ್ರಸಂಗವಾದ ಗೋಪಿಕಾವಸ್ತ್ರಹರಣ ಕಂಡರಿಸಲ್ಪಟ್ಟಿದೆ. ಕೃಷ್ಣನು ಗೋಪಿಕೆಯರ ವಸ್ತ್ರಗಳನ್ನು ಕದ್ದು, ಮರದ ಮೇಲೆ ಕುಳಿತಂತೆ ತೋರಿಸಲಾಗಿದೆ. ಅವನ ಮುಂದೆ ನಾಲ್ವರು ಗೋಪಿಕಾಸ್ತ್ರೀಯರು ನಗ್ನರಾಗಿ ನಿಂತಿದ್ದು ಒಂದು ಕೈಯಿಂದ ತಮ್ಮ ವೃಕ್ಷಸ್ಥಳವನ್ನು ಮುಚ್ಚಿಕೊಂಡು ಮತ್ತೊಂದು ಕೈಯಿಂದ ಶ್ರೀಕೃಷ್ಣನಿಗೆ ತಮ್ಮ ವಸ್ತ್ರಗಳನ್ನು ನೀಡುವಂತೆ ಗೋಗರೆಯುತ್ತಿದ್ದಾರೆ. ಗೋಪಿಕಾ ಸ್ತ್ರೀಯರ ಹಿಂದೆ ಎರಡು ವೃಕ್ಷಗಳನ್ನು ತೋರಿಸಲಾಗಿದೆ. (ಚಿತ್ರ-೪)

ನರಸಿಂಹಾವತಾರ

ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಬರುವ ನರಸಿಂಹಾವತಾರದ ಕುರಿತಾದ ಕಥೆ ಈ ರೀತಿಯಾಗಿದೆ: "ಬ್ರಹ್ಮನು ನೀಡಿದ ವರದ ಮದದಿಂದ ಮೆರೆಯುತ್ತಿದ್ದ ಹಿರಣ್ಯಕಶ್ಯಪುವಿಗೆ ಲ್ಹಾದ, ಸುಲ್ಹಾದ, ಅನುಲ್ಹಾದ ಮತ್ತು ಪ್ರಹ್ಲಾದ ಎಂಬ ನಾಲ್ಕು ಮಕ್ಕಳಿದ್ದರು. ಇವರಲ್ಲಿ ಪ್ರಹ್ಲಾದನು ವಿಷ್ಣುವಿನ ಭಕ್ತನಾಗಿದ್ದನು. ಒಮ್ಮೆ ಹಿರಣ್ಯಕಶ್ಯಪವು ಪ್ರಹ್ಲಾದನಿಗೆ ನೀನು ಕಲಿತಿರುವ ಶ್ರೇಷ್ಠ ವಿದ್ಯೆಯ ಬಗೆಗೆ ಹೇಳು ಎಂದು ಕೇಳಿದಾಗ ಪ್ರಹ್ಲಾದನು ವಿಷ್ಣುವೇ ತನಗೆ ಆರಾಧ್ಯ ದೈವವೆಂದು ಹೇಳಿದನು. ಹಿರಣ್ಯಕಶ್ಯಪು ಕೋಪಗೊಂಡು ಪ್ರಹ್ಲಾದನನ್ನು ಸರಿದಾರಿಗೆ ತರಬೇಕೆಂದು ಮತ್ತೆ ಗುರುಕುಲಕ್ಕೆ ಕಳುಹಿಸಿದನು. ಯಾರೇ ಏನೇ ಪ್ರಯತ್ನ ಮಾಡಿದರೂ ಪ್ರಹ್ಲಾದನ ವಿಷ್ಣುಭಕ್ತಿಗೆ ಚ್ಯುತಿ ಬರಲಿಲ್ಲ. ಕೊನೆಗೆ ತನ್ನನ್ನು ಭಗವಂತನೆಂದು ಪರಿಗಣಿಸದೆ; ಶ್ರೀಹರಿಯೇ ಸಾರ್ವಭೌಮ ಪರಮದೈವನೆಂದು ಆರಾಧಿಸುವ ಪ್ರಹ್ಲಾದನನ್ನು ಕೊಲ್ಲುವಂತೆ ಆದೇಶಿಸಿದನು. ರಾಕ್ಷಸ ಸೈನಿಕರು ಬಗೆ ಬಗೆಯ ವಿಧಾನಗಳಿಂದ ಪ್ರಹ್ಲಾದನನ್ನು ಸಂಹರಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಸರ್ಪಗಳಿಂದ ಕಚ್ಚಿಸಿದರು, ಅಸ್ತ್ರಗಳನ್ನು ಪ್ರಯೋಗಿಸಿದರು, ಆನೆಯಿಂದ ತುಳಿಸಿದರು, ಅಗ್ನಿಕುಂಡಕ್ಕೆ ತಳ್ಳಿದರು; ಇಷ್ಟಾದರೂ ಪ್ರಹ್ಲಾದನು ಹರಿಯ ಉಪಾಸನೆ, ಧ್ಯಾನ, ಪೂಜೆಗಳಲ್ಲಿ ಮೈಮರೆತು ಎಲ್ಲ ಸಂಕಷ್ಟಗಳನ್ನು ಸಹಿಸಿಕೊಂಡನು. ಪ್ರಹ್ಲಾದನು ನಿರಂತರವಾಗಿ ಮಾಡಿದ ಧ್ಯಾನಕ್ಕೆ ಮೆಚ್ಚಿ ವಿಷ್ಣುವು ಪ್ರತ್ಯಕ್ಷನಾಗಲು ಪ್ರಹ್ಲಾದನು ತನಗೆ ಭಗವಂತನಲ್ಲಿ ಶಾಶ್ವತವಾದ ಭಕ್ತಿ ಇರುವಂತೆಯೂ ತನ್ನ ತಂದೆಗೆ ಹರಿಭಕ್ತರ ಪೀಡನೆಯ ಶಾಪದಿಂದ ವಿಮುಕ್ತಿ ಮಾಡೆಂದು ಪ್ರಾರ್ಥಿಸಿದನು. ಭಗವಂತನ ವರದ ಫಲವಾಗಿ ಹಿರಣ್ಯಕಶ್ಯಪುವಿಗೆ ಜ್ಞಾನೋದಯವಾಯಿತು. ಮಗ ಪ್ರಹ್ಲಾದನು ಚಿರಂಜೀವಿಯಾಗಲೆಂದು ಹರಸಿದನು. ಕೆಲ ಕಾಲದ ನಂತರ ನರಸಿಂಹಾವತಾರದಲ್ಲಿ ವಿಷ್ಣುವು ಹಿರಣ್ಯಕಶ್ಯಪುವನ್ನು ವಧಿಸಿದ ಮೇಲೆ ಪ್ರಹ್ಲಾದನು ದೈತ್ಯರ ರಾಜನಾಗಿ ಧರ್ಮದಿಂದ ರಾಜ್ಯವಾಳಿದನು[೩]. ಹೀಗೆ ವಿಷ್ಣು ಪುರಾಣದಲ್ಲಿ ಹಿರಣ್ಯಕಶ್ಯಪು ಪ್ರಹ್ಲಾದನನ್ನು ಹಿಂಸಿಸಿದ ಪ್ರಸಂಗ ಮೊದಲ ಬಾರಿಗೆ ಬಂದಿವೆ. ಆದರೆ ರಾಕ್ಷಸನನ್ನು ಸಭಾಭವನದಲ್ಲಿನ ಕಂಬದಿಂದ ಅರ್ವಿಭವಿಸಿ ಕೊಂದನೆಂಬ ವಿವರಣೆಗಳಿಲ್ಲ. ಆದರೆ ನಂತರದ ನರಸಿಂಹಾವತಾರದ ಪುರಾಣಗಳಾದ ಭಾಗವತ, ಪದ್ಮ ಪುರಾಣ, ಕೂರ್ಮ ಪುರಾಣ, ಮತ್ಸ್ಯ ಪುರಾಣ, ಬ್ರಹ್ಮ ಪುರಾಣ, ಶಿವ ಪುರಾಣ[೪], ಅಗ್ನಿ ಪುರಾಣ[೫], ಗರುಡ ಪುರಾಣ[೬] ಮುಂತಾದ ಪುರಾಣಗಳಲ್ಲಿ ವಿಷ್ಣುವು ನರಸಿಂಹನ ಅವತಾರದಿಂದ ಕಂಬದಿಂದ ಅವಿರ್ಭವಿಸಿ ಹೊಸ್ತಿಲ ಮೇಲೆ ಕುಳಿತು ಹಿರಣ್ಯಕಶ್ಯಪುವನ್ನು ಸಂಹರಿಸಿದನೆಂದು ವರ್ಣಿಸಲಾಗಿದೆ.



೫. ನರಸಿಂಹಾವತಾರದ ಕಥಾನಿರೂಪಕ ಶಿಲ್ಪ

ದೇವಾಲಯದ ಭಿತ್ತಿಯ ಮೇಲೆ ಕಂಡರಿಸಿರುವ ನರಸಿಂಹಾವತಾರದ ಶಿಲ್ಪವನ್ನು ಏಕದೃಶ್ಯದಲ್ಲಿ ಸರಳವಾಗಿ ಸಾಂಕೇತಿಕವಾಗಿ ನಿರೂಪಿಸಲಾಗಿದೆ. ಪಟ್ಟಿಕೆಯ ಬಲಭಾಗದಲ್ಲಿ ನರಸಿಂಹನ ಶಿಲ್ಪವನ್ನು ಕಂಡರಿಸಲಾಗಿದ್ದು ಅವನ ತೊಡೆಯ ಮೇಲೆ ಲಕ್ಷ್ಮೀ ಆಸೀನಳಾಗಿದ್ದಾಳೆ. ಪಕ್ಕದಲ್ಲಿ ಕಂಬವೊಂದನ್ನು ತೋರಿಸಲಾಗಿದ್ದು, ಕಂಬದ ಎಡಭಾಗದಲ್ಲಿ ಪ್ರಹ್ಲಾದನು ಭಕ್ತಿಯಿಂದ ಲಕ್ಷ್ಮೀನರಸಿಂಹನಿಗೆ ನಮಸ್ಕರಿಸುತ್ತಿದ್ದಾನೆ. (ಚಿತ್ರ–೫)

ಸಾಮಾನ್ಯವಾಗಿ ಹಿರಣ್ಯಕಶ್ಯಪುವನ್ನು ತೊಡೆಯಮೇಲೆ ಹಾಕಿಕೊಂಡು ಸಂಹರಿಸುವ ಏಕದೃಶ್ಯದ ಕಥಾನಕಗಳು ಕರ್ನಾಟಕದ ವಿವಿಧ ದೇವಾಲಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೋಡಸಿಗುತ್ತವೆ. ಆದರೆ ಈ ಶಿಲ್ಪಗಳಿಗಿಂತ ವಿಭಿನ್ನವಾಗಿ ಈ ದೇವಾಲಯದಲ್ಲಿ ನರಸಿಂಹಾವತಾರದ ಕೊನೆಯ ಭಾಗವನ್ನು ಮಾತ್ರ ಕಂಡರಿಸಲಾಗಿದೆ.

ತಂತ್ರ ಮತ್ತು ಶೈಲಿ

ಗದಗ ಜಿಲ್ಲೆಯ ವಿಜಯನಗರ ಕಾಲದ ಹಲವಾರು ದೇವಾಲಯಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಪೌರಾಣಿಕ ಪಾತ್ರಗಳ ಬಿಡಿ ಉಬ್ಬು ಶಿಲ್ಪಗಳು ಕಂಡುಬರುತ್ತವೆಯಾದರೂ, ಕಥಾನಕ ಸ್ವರೂಪವನ್ನು ಪಡೆದಿರುವ ಶಿಲ್ಪಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ದೊರಕುತ್ತವೆ. ಕಲ್ಯಾಣ ಚಾಲುಕ್ಯರ, ಹೊಯ್ಸಳರ ಕಾಲದ ಕಥಾನಿರೂಪಕ ಶಿಲ್ಪಗಳಿಗೆ ಹೋಲಿಸಿದರೆ, ವಿಜಯನಗರ ಕಾಲದ ಶಿಲ್ಪಗಳು ಅತ್ಯಂತ ನಿರಾಡಂಬರವಾಗಿ ಸರಳವಾಗಿ ಮೂಡಿಬಂದಿದೆ. ಕಥಾನಕ ಶಿಲ್ಪಗಳ ಕಂಡರಿಸುವಿಕೆಯ ತಂತ್ರದಲ್ಲಿ ಸರಳತೆ ವ್ಯಕ್ತವಾಗುತ್ತದೆ. ಹೆಚ್ಚಾಗಿ ಇಲ್ಲಿನ ಶಿಲ್ಪಗಳು ಏಕದೃಶ್ಯ ಮತ್ತು ದ್ವಿದೃಶ್ಯಗಳಲ್ಲಿ ಮೂಡಿಬಂದಿವೆ. ಮೇಲಿನ ದೇವಾಲಯಗಳು ವೈಷ್ಣವ ಸಂಪ್ರದಾಯಕ್ಕೆ ಸೇರಿದ ದೇವಾಲಯಗಳಾಗಿರುವುದರಿಂದ ಇಲ್ಲಿ ಹೆಚ್ಚಾಗಿ ಭಾಗವತ ಪುರಾಣಕ್ಕೆ ಸಂಬಂಧಿಸಿದ ಕಥಾನಕಗಳೇ ಕಂಡರಿಸಲ್ಪಟ್ಟಿವೆ.

ಬಾದಾಮಿ ಚಲುಕ್ಯರ ಕಾಲದ ಕಥಾನಕಗಳು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಮೂಡಿಬಂದರೆ ಕಲ್ಯಾಣ ಚಾಲುಕ್ಯರ ಕಾಲದ ಕಥಾನಕಗಳು ಸರಳ ಸಹಜವಾಗಿ ಮೂಡಿಬಂದಿರುತ್ತವೆ. ಆದರೆ ವಿಜಯನಗರ ಕಾಲದ ಕಥಾನಿರೂಪಕ ಶಿಲ್ಪಗಳು ರಾಷ್ಟ್ರಕೂಟರ ಶಿಲ್ಪಗಳಂತೆ ಒರಟಾಗಿ ಕಂಡರಿಸಲ್ಪಟ್ಟಿವೆ. ಇವು ಹೆಚ್ಚಾಗಿ ದ್ವಿಮಾನದಲ್ಲಿ ಮೂಡಿಬಂದಿದ್ದು, ಶಿಲ್ಪಿಯು ಅಂತಿಮ ಸ್ವರೂಪ ನೀಡುವಲ್ಲಿ ಹೆಚ್ಚಿನ ಕಾಳಜಿ ವಹಿಸಿಲ್ಲ. ಹೊಯ್ಸಳರ ಕಥಾನಕಗಳಂತೆ ಪಾತ್ರಗಳ ವಸ್ತ್ರ, ಆಭರಣಗಳ ಕಂಡರಿಸುವಿಕೆಯಲ್ಲಿ ಕೊರತೆ ಕಂಡುಬರುತ್ತದೆ. ವಿಜಯನಗರ ಕಾಲವನ್ನು ಕಥಾನಕ ಶಿಲ್ಪಗಳ ಪರಂಪರೆಯ ದೃಷ್ಟಿಯಿಂದ ಒಂದು ರೀತಿಯ ಇಳಿಗಾಲದ ಹಂತವೆಂದೇ ಭಾವಿಸಬಹುದು. ಶಿಲ್ಪಿಯು ಇಲ್ಲಿ ತಂತ್ರ ಮತ್ತು ಸೌಂದರ್ಯಕ್ಕಿಂತ ವಿಷಯವಸ್ತುವಿಗೆ ಮಹತ್ವ ನೀಡಿದ್ದಾನೆ. ಗದಗ ಜಿಲ್ಲೆಯಲ್ಲಿ ಕಂಡುಬರುವ ಬಹುತೇಕ ವಿಜಯನಗರದ ದೇವಾಲಯಗಳಲ್ಲಿ ಪುರಾಣೋಕ್ತ ಶಿಲ್ಪಗಳು ಏಕದೃಶ್ಯದಲ್ಲಿಯೇ ಮೂಡಿಬಂದಿದ್ದು ಕಥೆಯ ಓಟ, ಚಲನಶೀಲತೆ ಇಲ್ಲದೇ ಸೊರಗಿವೆ. ವಿಜಯನಗರ ಕಾಲದಲ್ಲಿ ಸಂಕ್ಷಿಪ್ತತೆಯು ಕಥಾನಿರೂಪಕ ಶಿಲ್ಪಗಳ ಪ್ರಮುಖ ಲಕ್ಷಣವಾಗಿದೆ. ವಿಜಯನಗರದ ಕಥಾನಕಗಳು ಭಕ್ತರಿಗೆ ಕಥೆಯನ್ನು ನೆನಪಿಸಿಕೊಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಹೊರತು ಶಿಲ್ಪದ ಸೌಂದರ್ಯ ಮತ್ತು ತಂತ್ರಕ್ಕಲ್ಲ ಎಂಬ ಅಂಶ ಗಮನಾರ್ಹವಾಗಿದೆ. ಈ ಎಲ್ಲ ಮೇಲಿನ ಲಕ್ಷಣಗಳನ್ನು ಗದಗ ಜಿಲ್ಲೆಯ ಶಿರೂರಿನ ಶ್ರೀಕೃಷ್ಣ ಮತ್ತು ಗದುಗಿನ ವೀರನಾರಾಯಣ ದೇವಾಲಯದ ಕಥಾನಿರೂಪಕ ಶಿಲ್ಪಗಳಿಗೆ ಅನ್ವಯಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಬಾಲಸುಬ್ರಮಣ್ಯ, ವಾಸುದೇವನ್ ಸಿ.ಎಸ್., ರಮೇಶ ನಾಯಕ, ೨೦೦೭, ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೭೦–೧೭೧.

೨. ಶ್ರೀಹರಿ ಮತ್ತು ಇತರರು, (ಅನು.), ೧೯೯೫, ಶ್ರೀಮದ್ ಭಾಗವತ ಸಂ.೬, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು, ಪು. ೨೨೦೫–೨೨೨೩.

೩. ಪಂಢರಿನಾಥಾಚಾರ್ಯ ಗಲಗಲಿ, (ಅನು.), ೨೦೦೩, ವಿಷ್ಣುಮಹಾಪುರಾಣ, ಖೋಡೆ ಫೌಂಡೇಶನ್, ಬೆಂಗಳೂರು, ಪು. ೫೯–೭೨.

೪. Shastri J.L, (Ed.), 1969, Shiva purana, Vol.2, Part.II, Motilal Banarasidass, Delhi p. 985-988.

೫. Pushpendra kumar, (Ed.), 2006, The Agnipuranam, Vol.1, Estern book linkers, Delhi, p. 121-126.

೬ Shastri J.L, (Ed.), The Garudapurana, Vol.12, Part.I, Motilal Banarasidass, Delhi, p. 5.

◆◆

೫೪

ರಮೇಶ ಬಿ. ಹಿರೇಜಂಬೂರು

ಶಿಕಾರಿಪುರ ತಾಲೂಕಿನ ಬೋಗಿ ಗ್ರಾಮದ ಅವಶೇಷಗಳು

ಶಿಕಾರಿಪುರ ತಾಲೂಕಿನ ಚಂದ್ರಕಲಾ ಅರಣ್ಯಭಾಗದ ಹೃದಯ ಕೇಂದ್ರದಲ್ಲಿರುವ ಗ್ರಾಮವೇ ಈಗಿನ ಬೋಗಿ ಗ್ರಾಮ. ಈ ಗ್ರಾಮದ ಪೂರ್ವಕ್ಕೆ ಮಲ್ಲೇಶಪ್ಪ ಬಣಕಾರರವರ ಅಡಿಕೆ ತೋಟದಲ್ಲಿ ೧೪೦ ಸೆಂ.ಮೀ. ಎತ್ತರ, ೭೨ ಸೆಂ.ಮೀ. ಅಗಲ ಮತ್ತು ೪೦ ಸೆಂ.ಮೀ. ದಪ್ಪ ಅಳತೆ ಹೊಂದಿರುವ ಬೃಹತ್ ಗಾತ್ರದ ಗೋಸಾಸ ಕಲ್ಲು ದೊರೆತಿದ್ದು ಅದರಲ್ಲಿ ನಾಲ್ಕು ಸಾಲಿನ ಶಾಸನ ಪಾಠ ಕೆತ್ತಲಾಗಿದೆ. ರಾಷ್ಟ್ರಕೂಟರ ಮೂರನೇ ಕೃಷ್ಣನ ಅವಧಿಯಲ್ಲಿ ಬನವಾಸಿ ೧೨೦೦೦ ನಾಡನ್ನು ಕಲಿವಿಟ್ಟರಸ ಆಳುತ್ತಿರುವಾಗ, ಚೌಧರೆಯ ಗುಣಗನು ನಾಳ್ಗಾಮುಂಡನಾಗಿದ್ದ.[೧] ಈ ವೇಳೆಯಲ್ಲಿ ಊರ ಗಾವುಂಡರ ಹಾಳನೆಂಬ ಭಟನು ಹೋರಾಟದಲ್ಲಿ ದೇವಲೋಕಕ್ಕೆ ಹೋದ ಕಾರಣ ಗೋಸಾಸ ನಿಲ್ಲಿಸಲಾಗಿದೆ. ಒಂದು ಸಾವಿರ ಗೋವುಗಳನ್ನು ದಾನ ನೀಡಿದಾಗ ಅದರ ನೆನಪು ಹಾಗೂ ಪ್ರತಿಷ್ಠೆ ಮತ್ತು ಇನ್ನೊಬ್ಬರಿಗೆ ಪ್ರೇರಣೆ ನೀಡುವ ಕಾರಣಕ್ಕೆ ಒಂದು ವಿಶೇಷ ಕಲ್ಲನ್ನು ನೆಡಲಾಗುತಿತ್ತು. ಇವುಗಳನ್ನು ಗೋಸಾಸ ಕಲ್ಲುಗಳು ಎಂದು ಕರೆಯಲಾಗುತ್ತದೆ. ಗೋಸಾಸಕಲ್ಲುಗಳು ಗೋದಾನಕ್ಕೆ ಸಂಬಂಧಿಸಿದ ಶಾಸನಗಳಾಗಿದ್ದು ಕನ್ನಡ ಶಾಸನಗಳಲ್ಲಿಯೇ ವಿಶಿಷ್ಟವೆನಿಸಿವೆ.[೨] ಈ ಗೋಸಾಸ ಕಲ್ಲಿನ ಮುಂಭಾಗದಲ್ಲಿ ಆನೆಯ ಚಿತ್ರವಿದ್ದು ಅದರ ಮೇಲೆ ಗಣಪತಿಯ ಚಿತ್ರ ಕೆತ್ತಲಾಗಿದೆ. ಹಿಂಭಾಗದಲ್ಲಿ ಕಳಸದ ಚಿತ್ರ ಕೆತ್ತಲಾಗಿದೆ.


ಶಾಸನ ಪಾಠ

೧. ಸ್ವಸ್ತಿ ಶ್ರೀ ಕನ್ನರ ಬಲ್ಲ ಆಳೆ ಪ್ರಿತುವಿ ರಾ(ಜ್ಯ)ಗೆಯೆ ಕಲಿವಿಟ್ಟಂ ಭನ

೨. ವಸಿ ಪನಿಸಸಿರಮಾಳೆ ಚದುರೆವಯಂನು ಗುಣಗನು ನಾಗಾಮು[ಂ]ಡುಗೆ


೩. ಇ ವನ್ನು ವಿಯಳೆ ಕೊಟೆಗಂ ಊರು ಗಾಮುಡಾರಾ ಭಟ ಹಾಟಾ ಹೊರಾಡಿ ಆಞ್ಞು

೪. ಗೊಸಾಸಿ ದೇ(ವ)ಲೊಗಂ ಸೆರ್ದ



ಹಿರೇಜಂಬೂರು-೫೭೭೪೨೮
ಶಿಕಾರಿಪುರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ
ಮೊ : ೯೭೪೩೫ ೯೨೨೨೮

ಗ್ರಾಮದ ರಾಜು ವೆಂಕಪ್ಪರವರ ಗದ್ದೆಯಲ್ಲಿ ೯೦ಸೆಂ.ಮೀ ಎತ್ತರ, ೪೦ಸೆಂ.ಮೀ ಅಗಲ ಅಳತೆಯ ವಿಶೇಷ ಕೆತ್ತನೆಗಳಿರುವ ಶಿಲಾಫಲಕ ಪತ್ತೆಯಾಗಿದೆ. ಫಲಕದ ಮಧ್ಯದಲ್ಲಿ ಕಮಲದ ಹೂವಿನ ಮೇಲೆ ಕೋಣನ ತಲೆಯ ರಚನೆಯಿದ್ದು ಅದರ ಮೇಲೆ ದೇವಿಯು ಎರಡೂ ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದು ಕೂತಿದ್ದಾಳೆ. ದೇವಿಯ ಶಿರೋಭಾಗದ ಎರಡೂ ಪಾರ್ಶ್ವಗಳಲ್ಲಿ ಆನೆಗಳು ಜಲಾಭಿಷೇಕಗೈಯುತ್ತಿವೆ. ಕೆಳಭಾಗದ ಎರಡೂ ಕಡೆ ಚಾಮರಧಾರಿಗಳನ್ನು ಕೆತ್ತಲಾಗಿದೆ. ಫಲಕದ ಮೇಲ್ಭಾಗದಲ್ಲಿ ಒಂದು ಸಾಲಿನ ರಾಷ್ಟ್ರಕೂಟರ ಅವಧಿಯ ಪಾಠವಿದ್ದು ಚವಳ್ದರೆಯ ವಾಸಣ್ಣನು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಲ್ಲೇಖವಾಗಿರುವ ವಾಸಣ್ಣನು ಶಿಕಾರಿಪುರ ತಾಲೂಕಿನ ತುಂಬರಹೊಸೂರು ಗ್ರಾಮದ ಶಾಸನವೊಂದರಲ್ಲಿ ಉಲ್ಲೇಖಿತನಾದ ವಾಸುದೇವನಾಗಿರಬಹುದಾದ ಸಾಧ್ಯತೆಗಳು ಹೆಚ್ಚಿವೆ.[೩] ಶಿಲ್ಪದ ಲಕ್ಷಣಗಳನ್ನು ಆಧರಿಸಿ ಅದೊಂದು ದುರ್ಗಾಲಕ್ಷ್ಮಿಯ ದೇವಾಲಯದ ಗರ್ಭಗುಡಿಯ ಮೇಲಿನ ಶಿಲಾಫಲಕವಾಗಿದ್ದು ಅದೇ ರೀತಿಯ ದುರ್ಗಾಲಕ್ಷ್ಮಿಯ ಮೂಲ ಶಿಲ್ಪ ಗರ್ಭಗುಡಿಯಲ್ಲಿ ಇದ್ದಿರಬಹುದಾಗಿದ್ದು ಈ ರೀತಿಯ ಲಕ್ಷಣಗಳಿರುವ ದುರ್ಗೆಯ ಶಿಲ್ಪ ದೊರೆತಿರುವುದು ಅಪರೂಪವಾಗಿದೆ ಎಂದು ಖ್ಯಾತ ಪ್ರಾಕ್ತನ ಶಾಸ್ತ್ರಜ್ಞರಾದ ಟಿ.ಎಂ. ಕೇಶವರವರು ಅಭಿಪ್ರಾಯಪಟ್ಟಿದ್ದಾರೆ. ಶಿಲಾಫಲಕದ ಅನತಿ ದೂರದಲ್ಲಿ ಅಲ್ಪ ಭಗ್ನವಾಗಿರುವ ಕೋಣನತಲೆ ಶಿಲ್ಪವು ಪತ್ತೆಯಾಗಿದೆ. ಇದರಿಂದಾಗಿ ಈ ಪ್ರದೇಶದಲ್ಲಿ ಸುಮಾರು ಹತ್ತನೇ ಶತಮಾನದ ಅವಧಿಯಲ್ಲಿಯೇ ದುರ್ಗಾದೇವಿಯ ಆರಾಧನೆ ಇರುವುದು ಅಧಿಕೃತವಾಗಿ ದೃಢಪಟ್ಟಿದೆ.[೪]







ಗ್ರಾಮದ ಸನಿಹದಲ್ಲಿರುವ ಕಾಳಿಗುಂಡಿಯ ಬಳಿ ರಾಷ್ಟ್ರಕೂಟರ ನೇಗಿಲಿನ ಚಿತ್ರವಿರುವ ತ್ರುಟಿತ ಶಾಸನ ಪತ್ತೆಯಾಗಿದ್ದು ಕೆಳಭಾಗದಲ್ಲಿ ಶಾಪಾಶಯದ ಭಾಗ ಮಾತ್ರ ಉಳಿದುಕೊಂಡಿದೆ. ಅಲ್ಲಿಯೇ ೧೧ನೇ ಶತಮಾನದ ಅವಧಿಯ ೧೪೦ ಸೆಂ.ಮೀ. ಎತ್ತರ, ೯೦ ಸೆಂ.ಮೀ. ಅಗಲದ ಬೃಹತ್ ಮಹಾಸತಿಕಲ್ಲು ಹಾಗೂ ಬೈರವಿ ದೇವಿಯ ಶಿಲ್ಪಗಳ ಜೊತೆ ಪ್ರಾಚೀನ ಕೆಲವು ಶಾಸನಗಳ ತ್ರುಟಿತ ಭಾಗಗಳು ಕಂಡುಬಂದಿವೆ. ಗ್ರಾಮದ ಸೋಮ್ಲಾನಾಯ್ಕರ ಗದ್ದೆಯಲ್ಲಿ ರಾಮನಾಥ ಉಲ್ಲೇಖವಿರುವ ರೇವಂತ ಶಿಲ್ಪವಿದ್ದು ಅದರ ಬಳಿ ಕ್ರಿ.ಶ. ೧೪೧೫ರ ಅವಧಿಯ ವಿರೂಪಾಕ್ಷದೇವರ ಪಾದಾರಾಧಕರಾದ ಶ್ರೀ ದೇವರಾಯ ಮಹಾರಾಜರ ಉಲ್ಲೇಖವಿರುವ ಅಪೂರ್ಣ ಶಾಸನ ಕಂಡುಬಂದಿದೆ.

---

* ಶಾಸನಗಳನ್ನು ಓದಲು ಜಗದೀಶ್ ಹಾಗೂ ಜಾಗೀರ್‌ದಾರ್‌ರವರು ಮಾರ್ಗದರ್ಶನ ಮಾಡಿದ್ದಾರೆ. ಶಾಸನ ಹಾಗೂ ಶಿಲ್ಪಗಳನ್ನು ಪತ್ತೆಮಾಡಲು ಗ್ರಾಮದ ಮುಖಂಡರಾದ ಶ್ರೀ ಬಂಗಾರಿನಾಯ್ಕ, ಸತೀಶ್‌ನಾಯ್ಕ್, ಕುಮಾರ್, ರಾಜುನಾಯ್ಕ್, ರಾಜು ಬಿ.ವಿ., ಅಜ್ಜಪ್ಪ, ಮಹಮ್ಮದ್ ರಫಿ ಮತ್ತು ಹಬೀಬುಲ್ಲಾರವರು ಸಹಕರಿಸಿರುತ್ತಾರೆ ಅವರೆಲ್ಲರಿಗೂ ಕೃತಜ್ಞತೆಗಳು.

ಅಡಿಟಿಪ್ಪಣಿಗಳು

೧. ಚೌಥರೆ-ನಾಲ್ಕು ಮಾರ್ಗಗಳು ಸೇರುವ ಸ್ಥಳದಲ್ಲಿನ ಕಂದಾಯ ಸಂಗ್ರಾಹದ ಅಧಿಕಾರಿ.
೨. ಗೋಸಾಸ ಕಲ್ಲುಗಳಿಗೆ ಸಂಬಂಧಿಸಿದಂತೆ ಶ್ರೀ ನೇಗಿಲಹಾಳ ಸರ್ ಹಾಗೂ ಶ್ರೀ ಭೋಜರಾಜ ಪಾಟೀಲ್ ಸರ್‌ರವರ ಲೇಖನಗಳು ಹೆಚ್ಚಿನ ಮಾಹಿತಿ ನೀಡುತ್ತವೆ.
೩. ಇಸಿ ೭, ಎಸ್‌ಕೆ ೨೯೭, ಕ್ರಿ.ಶ. ೧೦೭೯.
೪. ಈಗಲೂ ಈ ಪ್ರದೇಶವನ್ನು ಮಾರಿ ಕಣಿವೆ ಎಂದು ಸ್ಥಳೀಯರು ಕರೆಯುತ್ತಾರೆ.

◆◆

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ನ್ಯಾಮತಿ ತಾಲ್ಲೂಕಿನ ಕುಂಕೋವಾದ ವೀರಭದ್ರ ದೇವಸ್ಥಾನದ ಉಬ್ಬುಶಿಲ್ಪಗಳು

ದಾವಣಗೆರೆ ಜಿಲ್ಲೆಯ ನೂತನ ತಾಲ್ಲೂಕು ಕೇಂದ್ರವಾದ ನ್ಯಾಮತಿಯ ಪೂರ್ವ ದಿಕ್ಕಿಗೆ ೫ ಕಿ.ಮೀ ದೂರದಲ್ಲಿ ಕುಂಕುವಾ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ವೀರಭದ್ರ ದೇವಾಲಯವಿದೆ. ಇದು ಒಂದು ದೇವಾಲಯಗಳ ಬೃಹತ್ ಸಂಕೀರ್ಣವಾಗಿದ್ದು, ಮೂಲ ದೇವಾಲಯಕ್ಕೆ ನಂತರದ ಕಾಲಘಟ್ಟದಲ್ಲಿ ಅನೇಕ ವಾಸ್ತುಗಳನ್ನು ಸೇರ್ಪಡೆ ಮಾಡಲಾಗಿದೆ. ಮೂಲ ದೇವಾಲಯ ಚೌಕಕಾರದ ಗರ್ಭಗುಡಿ, ಅಂತರಾಳ, ಅದರ ಮುಂದೆ ನವರಂಗದ ಭಾಗಗಳಿವೆ ನವರಂಗದ ಭಾಗವನ್ನು ನಯಗೊಳಿಸಿದ ನಾಲ್ಕು ಕಂಬಗಳ ಮೇಲೆ ನಿರ್ಮಿಸಲಾಗಿದೆ. ಗರ್ಭಗುಡಿಯ ಉತ್ತರಕ್ಕೆ ಮುಖವಾಗಿ ೬ ಅಡಿ ಎತ್ತರದ ಸರ್ವಾಲಂಕಾರಗಳಿಂದ ಕೂಡಿದ ನಿಂತ ಭಂಗಿಯ ವೀರಭದ್ರನಮೂರ್ತಿ ಇದ್ದರೆ, ನವರಂಗಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ ಮುಖವಾಗಿ ಸುಂದರವಾದ ಕುಳಿತ ಭಂಗಿಯ ಕಾಳಮ್ಮನ ವಿಗ್ರಹವಿದೆ. ಇದೊಂದು ದ್ವಿಕುಟಾಚಲ ಮಂದಿರದ ಹಾಗೆ ಕಾಣುತ್ತದೆ, ನವರಂಗಕ್ಕೆ ಉತ್ತರ ಮತ್ತು ಪೂರ್ವ ದಿಕ್ಕಿನ ಎರಡೂ ಕಡೆ ಪ್ರವೇಶದ್ವಾರವಿದೆ. ವೀರಭದ್ರಮೂರ್ತಿ ಇರುವ ಉತ್ತರ ದಿಕ್ಕಿನ ಪ್ರವೇಶದ್ವಾರ ಸಾಧಾರಣ ಗಜಶಿಲ್ಪ ಲಕ್ಷ್ಮೀಯನ್ನೊಳಗೊಂಡಿದ್ದು, ಸರಳ ಅಲಂಕಾರಗಳಿಂದ ಕೂಡಿದೆ. ಪೂರ್ವ ದಿಕ್ಕಿನ ಬಾಗಿಲ ತೋರಣವನ್ನು ವಿಶೇಷವಾಗಿ ರಚನೆ ಮಾಡಲಾಗಿದೆ. ಇದರಲ್ಲಿ ಗಂಡ ಭೇರುಂಡ ರೀತಿಯ ಪುರುಷಮೃಗ ಅದರ ಕೈಯಲ್ಲಿ ವಿವಿದ ಆಯುಧಗಳು ಅಕ್ಕಪಕ್ಕದಲ್ಲಿ ದಕ್ಷಬ್ರಹ್ಮ -ರುದ್ರಕಾಳಿ ಶಿಲ್ಪ ಬಳ್ಳಿ ಮುಂತಾದವುಗಳನ್ನು ಸುಂದರವಾಗಿ ನಿರ್ಮಿಸಲಾಗಿದೆ. ಈ ಶಿಲ್ಪವನ್ನು ಶರಭ ಭೇರುಂಡ ಎಂದು ಗುರುತಿಸಲಾಗುತ್ತದೆ. ಶರಭ ಭೇರುಂಡ ಎಂಬ ಬಿರುದು ಕವಿ ರಾಘವಾಂಕಗೆ ಇದ್ದುದನ್ನು ಇಲ್ಲಿ ನೆನಪಿಸಿಕೊಳ್ಳ ಬಹುದಾಗಿದೆ.

ಶಿವಪುರಾಣದ ಒಂದು ಕಥೆಯಂತೆ ಹಿರಣ್ಯಕಶ್ಯಪುವನ್ನು ಕೊಂದಾದ ಮೇಲೆ ನರಸಿಂಹನು ಮದೋನ್ಮತ್ತನಾಗಿ ಲೋಕವನ್ನು ಪೀಡಿಸಲು, ದೇವತೆಗಳು ಅವನನ್ನು ನಿಗ್ರಹಿಸಲು ಶಿವನಲ್ಲಿ ಮೊರೆ ಇಟ್ಟರು. ಆಗ ಪರಶಿವನು ವೀರೇಶನನ್ನು ಕರೆದು ನರಸಿಂಹನಿಗೆ ನೀತಿ ಹೇಳಿ ಅವನ್ನು ನಿಗ್ರಹಿಸಲು ಸೂಚಿಸದರೂ ಅದನ್ನು ನರಸಿಂಹ ಪಾಲಿಸದಿದ್ದಾಗ. ಶರಭಾವತಾರದಲ್ಲಿ ವೀರಭದ್ರ ತನ್ನ ಚಂಚುವಿನಿಂದ ಅವನನ್ನು ಸೀಳಿ, ಅವನ ಶಿರವನ್ನು ತೆಗೆದು, ಚರ್ಮವನ್ನು ಶಿವನಿಗೆ ಅರ್ಪಿಸಿದನು. ಶಿವನು ನರಸಿಂಹನ ಮುಖಕ್ಕೆ ಕೀರ್ತಿಮುಖವೆಂದು ಹೆಸರಿಟ್ಟ ಅದನ್ನು ಭೂಷಣ ಮಾಡಿ ಧರಿಸಿ, ಚರ್ಮವನ್ನು

ನಿವೃತ್ತ ಪತ್ರಕರ್ತರು
ಸಂತೇಬೆನ್ನೂರು-೫೭೭೫೫೨
ದಾವಣಗೆರೆ ಜಿಲ್ಲೆ
ಮೊ : ೯೯೦೦೨ ೪೩೭೮೦







ತನ್ನ ಸಿಂಹಾಸನಕ್ಕೆ ಉಪಯೋಗಿಸಿಕೊಂಡನು. ಈ ಕಥೆಯ ದೃಶ್ಯವೆಂಬಂತೆ ಪೂರ್ವ ದಿಕ್ಕಿನ ಈ ದೇವಾಲಯದ ಬಾಗಿಲ ತೋರಣ ನಿರ್ಮಿಸಿದ್ದು, ಈ ಬಾಗಿಲವಾಡದ ವಿಶೇಷವಾಗಿದೆ. ಈ ವೀರಭದ್ರ ದೇವರ ಗರ್ಭಗುಡಿಯ ಎದುರು ನವರಂಗದಲ್ಲಿ ನಂದಿಯ ಅಲಂಕಾರಿಕ ಶಿಲ್ಪ ಇದೆ ಅದೇ ಗರ್ಭಗುಡಿಗೆ ಎದುರಾಗಿ ನವರಂಗದ ಹೊರಭಾಗದಲ್ಲಿ ಇನ್ನೊಂದು ಸಣ್ಣ ಗರ್ಭಗುಡಿ ನಿರ್ಮಿಸಲಾಗಿದ್ದು, ಅದರಲ್ಲಿ ಚೌಡಮ್ಮನ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ವೀರಭದ್ರದೇವರ ಮುಂಭಾಗ ಹಾಗೂ ಕಾಳಮ್ಮನ ಎದುರು ಭಾಗದಲ್ಲಿ ಎರಡು ಕಲ್ಲಿನ ಬೃಹತ್ ದೀಪಸ್ಥಂಭ ನಿರ್ಮಿಸಲಾಗಿದೆ.

ಮೂಲ ಗರ್ಭಗುಡಿ ಸುತ್ತಲು ಪೌಳಿಯಾಕಾರದಲ್ಲಿ ತೆರೆದ ಕಕ್ಷಾಸನಗಳುಳ್ಳ ಮಂಟಪಗಳನ್ನು ನಿರ್ಮಿಸಲಾಗಿದ್ದು, ಸುಮಾರು ೫೦ಕ್ಕೂ ಹೆಚ್ಚು ಕಲ್ಲಿನ ಕಂಬಗಳ ಮೇಲೆ ಅವುಗಳನ್ನು ನಿರ್ಮಿಸಲಾಗಿದೆ. ಆ ಕಂಬಗಳ ಮೇಲೆ ವಿವಿಧ ರೀತಿಯ ಪ್ರಾಣಿಗಳು, ಪಕ್ಷಿಗಳು, ನಾಗರ, ಯಾಳಿ, ರಾಜದಂಪತಿಗಳು ಶಿವಲಿಂಗ, ಗಣಪತಿ ಮುಂತಾದ ವಿವಿಧ ಉಬ್ಬು ಶಿಲ್ಪಗಳನ್ನು ರಚಿಸಿರುವುದಲ್ಲದೆ ಬೇಡರಕಣ್ಣಪ್ಪ ಶಿವನಿಗೆ ಕಣ್ಣನ್ನು ಅರ್ಪಿಸುತ್ತಿರುವ ಶಿಲ್ಪ, ಶ್ರವಣಕುಮಾರ ತನ್ನ ತಂದೆ-ತಾಯಿಗಳನ್ನು ತಕ್ಕಡಿ ಮೇಲೆ ಎತ್ತಿಕೊಂಡು ಹೋಗುತ್ತಿರುವ ಶಿಲ್ಪ, ಅಗ್ನಿ ಪುರುಷಮೃಗ ಹುತ್ತಕ್ಕೆ ಹಾಲು ಎರೆಯುತ್ತಿರುವ ಹಸು ಚಿತ್ರ, ಋಷಿಮುನಿಗಳು, ಜಿಂಕೆ ಹೂಬಳ್ಳಿ ಮುಂತಾದ ಉಬ್ಬುಶಿಲ್ಪಗಳನ್ನು ಮನೋಜ್ಞವಾಗಿ ನಿರ್ಮಿಸಲಾಗಿದೆ.

ದೇವಸ್ಥಾನದ ಪೂರ್ವ ಮತ್ತು ಉತ್ತರ ಬಾಗಿಲಗಳ ಪ್ರವೇಶ ದ್ವಾರದ ಎರಡೂ ಕಡೆ ಎಡ ಬರಿಯ ದ್ವಾರಪಾಲಕರ ಬದಲು ಗಂಡು-ಹೆಣ್ಣುಗಳ ೫ ಅಡಿ ಎತ್ತರದ ನಗ್ನ ಶಿಲ್ಪಗಳನ್ನು ನಿಲ್ಲಸಲಾಗಿದೆ. ಅಲ್ಲದೇ ದೇವಾಲಯದ ಮುಂದೆ ಹಾಗೂ ದೇವಸ್ಥಾನದ ಬಲ ಬದಿ ಎರಡು ಬೃಹತ್ ೨೫ ಅಡಿ ಎತ್ತರದ ತೂಗುಯ್ಯಾಲೆ ನಿರ್ಮಿಸಿದ್ದು. ಅವುಗಳ ಕಂಬಗಳ ಮೇಲೂ ಎದುರು ಬರುದಾಗಿ ಗಂಡು-ಹೆಣ್ಣುಗಳ ನಗ್ನ ಶಿಲ್ಪಗಳನ್ನು ಬಿಡಿಸಲಾಗಿದೆ. ವೀರಭದ್ರ ದೇವಾಲಯಗಳು ಈ ರೀತಿಯ ಶಿಲ್ಪಗಳಿರುವುದು ಅಚ್ಚರಿ ತರುವುದಲ್ಲದೆ ಎಲ್ಲರ ಗಮನ ಸೆಳೆಯುತ್ತವೆ. ಇದೇ ದೇವಾಲಯದ ಸಂಕೀರ್ಣದಲ್ಲಿ ದೇವಾಲಯದ ಎಡಭಾಗ ಮತ್ತು ಪಕ್ಕದಲ್ಲಿ ಎರಡು ಚಿಕ್ಕ ತೆರೆದ ಮಂಟಪಗಳಿದ್ದು. ಅದರ ಒಂದರಲ್ಲಿ ಗಣಪತಿ, ನಾಗರ, ಶಿವಭಕ್ತರು ಶಿಲ್ಪಗಳಿದ್ದು, ಇನ್ನೊಂದರ ಗೋಡೆಗೆ ಹೊಂದಿಕೊಂಡಂತೆ ಗುಂಡ ಬ್ರಹ್ಮರ ಶಿಲ್ಪ ಆಳವಡಿಸಲಾಗಿದೆ.

ದೇವಸ್ಥಾನದ ಸಮೀಪದ ಉತ್ತರಕ್ಕೆ ಕೆಲವೇ ಗಜಗಳ ದೂರದಲ್ಲಿ ೧೧ ಸಾಲಿನ ಒಂದು ಶಿಲಾಶಾಸನವಿದೆ ಈ ಶಾಸನ







ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸ್‌ರ ಶಿವಮೊಗ್ಗ ಜಿಲ್ಲೆ (ಹೊನ್ನಾಳ್ಳಿ ತಾಲ್ಲೂಕು) ಶಾಸನ ಸಂಪುಟದಲ್ಲಿ ಪ್ರಕಟವಾಗಿದೆ. ಆದರಂತೆ ದುಂಧುಬಿ ಸಂವತ್ಸರದ ಮಾರ್ಗಶಿರ ಶುದ್ದ ಹತ್ತರಲ್ಲಿ ಆಯನೂರಿನ ಹಾಲಸಿದ್ದಪ್ಪ ಗೌಡರು ಈ ವೀರಭದ್ರ ದೇವಾಲಯ ಕಟ್ಟುತ್ತಿದ್ದಾಗ ಗ್ರಾಮದ ದೇವಣ್ಣನ ಮಗ ರಾಮಗನ ಮೇಲೆ ಕಲ್ಲು ಬಿದ್ದು ಆತ ಮಡಿದಾಗ ಅವನಿಗೆ ಭೂದಾನ ನೀಡಿದ ವಿವರಗಳಿವೆ. ಇದು ೧೮ನೇ ಶತಮಾನಕ್ಕೆ ಸೇರಿದ ಶಾಸನ ಎಂದು ಗುರುತಿಸಲಾಗಿದೆ. ಅದೇ ಗ್ರಾಮದ ಉಂಬಳಿ ಹೊದಲ್ಲಿಯೂ ಒಂದು ಶಿಲಾ ಶಾಸನವಿದ್ದು ಅದು ಶಕ ವರ್ಷ ೧೨೪೩ (ಕ್ರಿ.ಶ. ೧೩೨೧) ರುಧಿರೋದ್ಗಾರಿ ಸಂವತ್ಸರದ ವೈಶಾಖ ಶುರು ಚೆನ್ನಾನಾಯಕನು ಆಳುತ್ತಿದ್ದಾಗ. ಅವರ ಮಗ ಕಲ್ಲಪುನು ತನ್ನ ಅಣ್ಣ ವೀರಯ್ಯ ಬೈಯಿರಣ್ಣ ನಿಧನ ಹೊಂದಿದ ಮೇಲೆ ಪರೋಕ್ಷ ವಿನಯವಾಗಿ ಕುಂಕುವಾದ ವೀರೇಶ್ವರನಿಗೆ ೨೦ ಕಂಬದ ಹೊಲವನು ದಾನ ಬಿಟ್ಟದ್ದನ್ನು ತಿಳಿಸುತ್ತದೆ. ಈ ಚೆನ್ನನಾಯಕ ಬೆಳಗುತ್ತಿ ನಾಯಕ ವಂಶದವನಾಗಿರುವ ಸಂಭವವಿದೆ. ಒಟ್ಟಿನಲ್ಲಿ ಈ ದೇವಸ್ಥಾನದ ಕಂಬಗಳಲ್ಲಿರುವ ಉಬ್ಬುಶಿಲ್ಪಗಳು ಎರಡು ಪ್ರವೇಶದ್ವಾರದ ಬಳಿ ಮತ್ತು ತೂಗೂಯ್ಯಲೆಗಳಲ್ಲಿ ಕಂಡು ಬರುವ ಪುರುಷ-ಸ್ತ್ರೀ ನಗ್ನ ಶಿಲ್ಪಗಳು ಪೂರ್ವ ದಿಕ್ಕಿನ ಬಾಗಿಲ ವಾಡದಲ್ಲಿರುವ ಶರಭಾಸುರ ಶಿಲ್ಪ ಗುಂಡ-ಬ್ರಹ್ಮರ ಶಿಲ್ಪಗಳು ಎಲ್ಲರ ಗಮನ ಸೆಳೆಯುತ್ತದೆ. ದೇವಸ್ಥಾನದ ಗೋಪುರ ಮೇಲ್ಛಾವಣಿ ಸುತ್ತಲೂ ಸಿಮೆಂಟಿನಲ್ಲಿ ಈಚೆಗೆ ದೇವಕೊಷ್ಟಗಳನ್ನು ನಿರ್ಮಿಸಿ ಅನೇಕ ಶಿಲ್ಪಗಳನ್ನು ನಿರ್ಮಿಸಲಾಗುತ್ತಿದೆ. ದೇವಸ್ಥಾನದ ಆವರಣದಲ್ಲಿ ಎರಡು ಬೃಹತ್ ಮರದ ರಥಗಳು ಇದ್ದು, ಅವೂ ಅನೇಕ ಕಾಷ್ಠ ಶಿಲ್ಪಗಳಿಂದ ಕೂಡಿದ್ದು, ಜನರನ್ನು ಆಕರ್ಷಿಸುತ್ತಿವೆ.

ಆಕರಗ್ರಂಥಗಳು

೧. ಕೋಟ್ರೇಶ್ ಉತ್ತಂಗಿ, ೨೦೦೪, ಹೊನ್ನೆಲೆಗಳು, ಸಹ್ಯಾದ್ರಿ ಪ್ರಕಾಶನ, ಹೊನ್ನಾಳಿ.

೨. ಗಿರಿಜ ಟಿ., ಶೈಲಜ ಟಿ.ಎನ್., ೨೦೧೯, ದಾವಣಗೆರೆ ಇದು ನಮ್ಮ ಜಿಲ್ಲೆ, ಗಿರಿಶೈಲ ಪ್ರಕಾಶನ, ದಾವಣಗೆರೆ.

೩. ವಾಸುದೇವನ್ ಸಿ.ಎನ್. ಮತ್ತಿತರರು, ೨೦೨೦, ಕರ್ನಾಟದ ದೇವಾಲಯಗಳ ಕೋಶ-ದಾವಣಗೆರೆ ಜಿಲ್ಲೆ, ಕನ್ನಡ ವಿಶ್ವಾವಿದ್ಯಾಲಯ ಹಂಪಿ.

೪. ರೈಸ್ ಬಿ.ಎಲ್., ೧೯೦೩, ಎಫಿಗ್ರಾಫಿಯ ಕರ್ನಾಟಿಕ (ಶಿವಮೊಗ್ಗ) ೭ ಭಾಗ-೧.

೫. ೧೯೭೪, ಪುರಾಣ ಭಾರತಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

◆◆

ಪದ್ಮಜಾ ದೇಸಾಯಿ

ಕೇವಲ ನರಸಿಂಹ ಶಿಲ್ಪ : ಗಿರಿಜಾ ನರಸಿಂಹ ಶಿಲ್ಪ

ಕ್ರಿ.ಶ. ೧೩೩೬ ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಮಧ್ಯಕಾಲೀನ ಇತಿಹಾಸದಲ್ಲಿ ಸುವರ್ಣಯುಗವನ್ನು ಆರಂಭಿಸಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಎಲ್ಲಾ ರಾಜವಂಶಗಳು ಒಂದೇ ಮನೆತನದಿಂದ ಆಳಿದರೆ ವಿಜಯನಗರ ಸಾಮ್ರಾಜ್ಯವು ಹಂಪಿಯನ್ನು ರಾಜಧಾನಿಯನ್ನಾಗಿಸಿಕೊಂಡು ನಾಲ್ಕು ವಂಶಗಳಿಂದ ೨೫೦ ವರ್ಷಗಳ ಕಾಲ ಆಡಳಿತವನ್ನು ನಡೆಯಿಸಿದಂತಹ ವಿಶಿಷ್ಟವಾದ ರಾಜಮನೆತನವಾಗಿದೆ.

ಪ್ರಸ್ತುತ ಪ್ರಬಂಧವು ಶಿರ್ಷಿಕೆಯ ಕೇವಲ ನರಸಿಂಹ ಅಥವಾ ಗಿರಿಜಾ ನರಸಿಂಹ ಶಿಲ್ಪ ಎಂಬುದಾಗಿದ್ದು ಈ ನರಸಿಂಹ ಶಿಲ್ಪವು ಆಗಮ ಸಹಿತವಾಗಿ ರಚನೆಯಾಗಿದೆಯೋ ಅಥವಾ ಆಗಮರಹಿತವಾಗಿ ರಚನೆಯಾಗಿದೆಯೋ ಎಂಬುದನ್ನು ಚರ್ಚಿಸುವುದು ಈ ಲೇಖನದ ಮೂಲ ಉದ್ದೇಶವಾಗಿದೆ.

ಶಿಲ್ಪದ ಸ್ಥಳ ನಿರ್ದೇಶನ : ಈ ಶಿಲ್ಪವು ಅನಂತಶಯನ ಗುಡಿ ಗ್ರಾಮದ ಅನಂತಶಯನ ದೇವಾಲಯದಲ್ಲಿದೆ. ಹೊಸಪೇಟೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಈ ಗ್ರಾಮವೊಂದರಲ್ಲಿ ಶ್ರೀ ಕೃಷ್ಣದೇವರಾಯನು ತನ್ನ ಮಗನಾದ ತಿರುಮಲರಾಯನಿಗೆ ಒಳಿತಲಾಗಲೆಂದು ನಿರ್ಮಿಸಿದ ಬೃಹತ್ ದೇವಾಲಯವಾಗಿದೆ. ದೀರ್ಘಚತುಶ್ರಾಕಾರದ ತಲ ವಿನ್ಯಾಸವನ್ನು ಹೊಂದಿದ ದೇವಾಲಯವಾಗಿದೆ. ಈ ದೇವಾಲಯದ ಪ್ರವೇಶ



೦೮-೧೧-೧೮೨/೪೨
ಪಂಚಮುಖಿ ಕಾಲೋನಿ
ರಾಯಚೂರು
ಮೊ : ೯೩೪೨೬ ೨೧೧೧೭

ದ್ವಾರದ ಒಳಭಾಗದ ಬಲಭಾಗದಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ. ಇದು ಉಬ್ಬು ಶಿಲ್ಪವಾಗಿದ್ದು, ನರಸಿಂಹ ಶಿಲ್ಪಗಳ ವಿಧದಲ್ಲಿ ವಿಶಿಷ್ಟವಾದ ಶಿಲ್ಪವಾಗಿದೆ.

ಪ್ರತಿಮಾ ಶಾಸ್ತ್ರದ ವಿವರಗಳು : ನರಸಿಂಹ ಶಿಲ್ಪವು ದಶಾವಾತಾರ ಶಿಲ್ಪಗಳಲ್ಲಿ ನಾಲ್ಕನೆಯ ಶಿಲ್ಪ. ನರಸಿಂಹ ಶಿಲ್ಪಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಅದರಲ್ಲಿ ಪ್ರಮುಖವಾಗಿ ಸ್ಥಾಣು ನರಸಿಂಹ (ಉಗ್ರ ನರಸಿಂಹ), ಗಿರಿಜಾ ನರಸಿಂಹ, ಕೇವಲ ಯೋಗಾ ನರಸಿಂಹ, ಲಕ್ಷ್ಮೀ ನರಸಿಂಹ, ಕುಳಿತ ನರಸಿಂಹ, ನಿಂತ ನರಸಿಂಹ, ಹೀಗೆ ಹಲವು ಬಗೆಯಲ್ಲಿ ನರಸಿಂಹ ಶಿಲ್ಪಗಳನ್ನು ಕೆತ್ತಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿತ್ತದೆ. ಅದೇ ರೀತಿ ದೇವಾಲಯದ ಭಿತ್ತಿ, ಕಂಬಗಳ ಮೇಲೆ ಅನೇಕ ಕಥಾನಕ ಶಿಲ್ಪಗಳನ್ನು ಕಾಣಬಹುದು.

ವೈಖಾನಾಸಾಗಮ : ಕೇವಲ ನರಸಿಂಹ ಅಥವಾ ಗಿರಿಜಾ ನರಸಿಂಹ ಶಿಲ್ಪದ ಪ್ರತಿಮಾ ಲಕ್ಷಣವನ್ನು ವೈಖಾನಸಾಗಮದಲ್ಲಿ ಈ ರೀತಿಯಾಗಿ ವಿವರಿಸಲಾಗಿದೆ.

ಎರಡು ಕೈಗಳಿರುವ ನರಸಿಂಹ ಶಿಲ್ಪವು ಬಲಗೈಯನ್ನು ಮಂಡಿಯ ಮೇಲೆ ಇರಿಸಿರುತ್ತದೆ. ಎಡಗೈಯನ್ನು ತೊಡೆಯ ಮೇಲಿಟ್ಟು ಉತ್ಕುಟಿಕಾಸನದಲ್ಲಿಯಿರುತ್ತದೆ. ಕೇವಲ ನರಸಿಂಹ ಶಿಲ್ಪವು ಎರಡೇ ಕೈಗಳನ್ನು ಹೊಂದಿರುತ್ತವೆ. ನಂತರದ ಕಾಲದಲ್ಲಿ ಶಿಲ್ಪಗಳನ್ನು ಸ್ವಲ್ಪ ಬದಲಾವಣೆ ಮಾಡಿ ನಾಲ್ಕು ಕೈಗಳನ್ನು ತೋರಿಸಲಾಗಿದೆ. ಪದ್ಮಾಸನಾಸೀನವಾಗಿ ನಾಲ್ಕು ಕೈಗಳಿರುವ ಶಿಲ್ಪಗಳಲ್ಲಿ ಮೇಲಿನ ಬಲಗೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹೊಂದಿದ್ದು ಕೆಳಗಿನ ಎರಡು ಕೈಗಳನ್ನು ಮಂಡಿಯ ಮೇಲಿರುವಂತೆ ತೋರಿಸಲಾಗಿರುತ್ತದೆ. ಕೆಲವು ಶಿಲ್ಪಗಳಲ್ಲಿ ಯೋಗಪಟ್ಟವನ್ನು ಕೆತ್ತಲಾಗಿರುತ್ತದೆ. ಇದನ್ನು ಯೋಗಾನರಸಿಂಹ ಎಂದು ಕರೆಯಲಾಗುತ್ತದೆ.


ಶಿಲ್ಪರತ್ನ ಶಿಲ್ಪಶಾಸ್ತ್ರ ಗ್ರಂಥವಾದದ ಪ್ರಕಾರ ಕೇವಲ ನರಸಿಂಹ ಶಿಲ್ಪದ ಪ್ರತಿಮಾ ಲಕ್ಷಣವು ಈ ರೀತಿಯಾಗಿದೆ. ಕೇವಲ ನರಸಿಂಹ ಶಿಲ್ಪವು ಪದ್ಮಾಸನದಲ್ಲಿ ಕುಳಿತು ಪ್ರಭಾವಳಿಯಲ್ಲಿ ಶಂಖ ಮತ್ತು ಚಕ್ರವನ್ನು ಹೊಂದಿದ್ದು, ಎರಡು ಕೈಗಳಲ್ಲಿ ಗದಾ ಮತ್ತು ಪದ್ಮವನ್ನು ಹಿಡಿದಿರುವಂತೆ ಕೆತ್ತಲಾಗಿರುತ್ತದೆ.

ಶಿಲ್ಪರತ್ನ ಗ್ರಂಥ : ಇನ್ನೊಂದು ವಿವರಣೆಯ ಪ್ರಕಾರ ಕೇವಲ ನರಸಿಂಹ ಶಿಲ್ಪದ ಪ್ರತಿಮಾ ಲಕ್ಷಣವು ಈ ಕೆಳಗಿನಂತಿದೆ.

ಸಿಂಹಾಸನ ಪೀಠದ ಮೇಲಿನ ಕೇವಲ ನರಸಿಂಹ ಶಿಲ್ಪ ಬಲಗಾಲನ್ನು ಕೆಳಗಡೆ ಇಳಿ ಬಿಟ್ಟಿರುತ್ತದೆ. ಎಡಗಾಲನ್ನು ಮಡಿಚಿ ಸಿಂಹಾಸನದ ಮೇಲಿರುವಂತೆ ಕಂಡರಿಸಿಲಾಗಿರುತ್ತದೆ. ಇಂಥಹ ಶಿಲ್ಪಗಳು ನಾಲ್ಕು ಕೈಗಳನ್ನು ಹೊಂದಿರುತ್ತದೆ.



ಮೇಲಿನ ಬಲ ಮತ್ತು ಎಡಗೈಗಳಲ್ಲಿ ಶಂಖ ಮತ್ತು ಚಕ್ರವನ್ನು, ಕೆಳಗಿನ ಎಡಗೈಯು ಕಟಿಯ ಮೇಲೆ ಇರುವಂತೆ ಕೆತ್ತಲಾಗಿರುತ್ತದೆ. ಆಭರಣಗಳು ಮತ್ತು ಕರಂಡಮಕುಟಯುತ ನರಸಿಂಹ ಶಿಲ್ಪದ ಎಡ ಬಲದಲ್ಲಿ ಶ್ರೀದೇವಿ ಮತ್ತೂ ಭೂದೇವಿ ಶಿಲ್ಪವನ್ನು ಹೊಂದಿರುತ್ತದೆ.



ಅನಂತಶಯನ ದೇವಾಲಯ (ಹೊಸಪೇಟೆ)

ಅನಂತಶಯನ ದೇವಾಲಯದ ಪ್ರವೇಶ ದ್ವಾರದಲ್ಲಿರುವ ಈ ಕೇವಲ ನರಸಿಂಹ ಶಿಲ್ಪವು ಸಾದಾ ಪೀಠದ ಮೇಲೆ ಸುಖಾಸನ ಭಂಗಿಯಲ್ಲಿದೆ. ಶಿಲ್ಪವು ಎರಡು ಕೈಗಳನ್ನು ಹೊಂದಿದ್ದು, ಬಲಗೈಯನ್ನು ಬಲ ಮಂಡಿಯ ಮೇಲೆ ಇರಿಸಿದೆ. ಎಡಗೈಯನ್ನು ಎಡ ಎಡ ತೊಡೆಯ ಮೇಲೆ ಇರಿಸಿದೆ. ಕಣ್ಣುಗಳಲ್ಲಿ ಕಾಂತಿಯಿದೆ. ಮುಖಭಾವವು ನಗೆಯನ್ನು ಸೂಸುವಂತಿದೆ. ಈ ಶಿಲ್ಪದ ತಲೆಯ ಮೇಲೆ ಕರಂಡಮುಕುಟವಿದೆ. ಯಜ್ಞೋಪವೀತ, ತೋಳ್ಬಂದಿಗಳು, ಕೈಗಡಗಗಳು, ಕಾಲುಕಡಗಗಳು ಇವೆ.

ಹಂಪಿ ಪರಿಸರದಲ್ಲಿ ಇಂತಹ ಶಿಲ್ಪಗಳು ದೊರೆತಿರುವುದು ವಿರಳ. ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿತವಾದ ಬೃಹತ ಶಿಲ್ಪವು ಉಗ್ರನರಸಿಂಹ ಶಿಲ್ಪ. ಅಂದಿನ ಕಾಲದಲ್ಲಿ ಈ ಶಿಲ್ಪವು ನರಸಿಂಹನ ಆರಾಧನೆಯನ್ನು ಎತ್ತಿ ತೋರಿಸುತ್ತದೆ. ಅದು ಮೂಲತಃ ಲಕ್ಷ್ಮೀನರಸಿಂಹ ಶಿಲ್ಪ ತುಳು ಮತ್ತು ಸಾಳ್ವ ವಂಶದ ಆಳ್ವಿಕೆಯಲ್ಲಿ ವೈಷ್ಣವ ಶ್ರೀವೈಷ್ಣವ ಧರ್ಮದ ಉಚ್ಛ್ರಾವಸ್ಥೆಯ ಕಾಲದಲ್ಲಿ ಈ ದೇವತೆಗಳ ಆರಾಧನೆ ಅತಿಶಯವಾಗಿ ನಡೆಯುತ್ತಿತ್ತು ಎಂಬುದು ವೇದ್ಯವಾಗುತ್ತದೆ.

ವೈಖಾನಸಾಗಮದ ಪ್ರಕಾರ ಒಂದೇ ದೇವತೆ, ಪದ್ಮಾಸನದಲ್ಲಿ ಕುಳಿತು ಉತ್ಕುಟಿಕಾಸಾನದಲ್ಲಿದ್ದು ಯೋಗಪಟ್ಟವನ್ನು ಹೊಂದಿರಬೇಕು. ಆದರೆ ಈ ಶಿಲ್ಪದಲ್ಲಿ ಯಾವುದೇ ಆಯುಧಗಳಿಲ್ಲ. ಎರಡೇ ಕೈಗಳಿದ್ದು, ಒಂದು ಬಲಗೈ ಬಲಮಂಡಿಯ ಮೇಲೆ, ಎಡಗೈ ಎಡ ತೊಡೆಯ ಮೇಲಿಟ್ಟಿದೆ. ಸುಖಾಸನದಲ್ಲಿ ಸಾದಾಪೀಠದಲ್ಲಿರುವಂತೆ ಕೆತ್ತಲಾಗಿದೆ.

ಉಪಸಂಹಾರ : ಒಟ್ಟಾರೆಯಾಗಿ ಈ ಕೇವಲ ನರಸಿಂಹ ಶಿಲ್ಪವು ವಿಶೇಷತೆಯಿಂದ ಕೂಡಿದೆ. ನರಸಿಂಹ ಶಿಲ್ಪಿಗಳಲ್ಲಿ ವಿವಿಧತೆಯನ್ನು ತೋರಿಸುವಂತೆ ಕೆತ್ತಲಾಗಿರುತ್ತದೆ. ಶಿಲ್ಪಿಯು ಕೈಚಳಕ ಮತ್ತು ಜಾಣ್ಮೆಯನ್ನು ಇಲ್ಲಿ ನೋಡಬಹುದು. ಹಂಪಿ ಪರಿಸರದಲ್ಲಿ ದೊರೆಯುವ ಬೆಣಚು ಕಲ್ಲಿನಿಂದ ಶಿಲ್ಪಗಳನ್ನು ಕೆತ್ತಿರುವುದು ಆದರೆ ಅಂದಿನ ರಾಜರು ವಾಸ್ತು ಕಲೆಗೆ ನೀಡಿದ ಪೋಷಣೆ ಮತ್ತು ಅಂದಿನ ಸ್ಥಪತಿಗಳಿಗೆ ನೀಡಿದ ಪ್ರೋತ್ಸಾಹವನ್ನು ಇಲ್ಲಿ ಕಾಣಬಹುದು.

ಎಲ್ಲಾ ಶಿಲ್ಪಗಳೂ ಆಗಮ ಶಾಸ್ತ್ರದ ನಿಯಮಗಳಿಗೆ ಅನುಸಾರವಾಗಿಯೇ ರಚಿತವಾಗುತ್ತಿರಲಿಲ್ಲ ಎನ್ನುವ ಅಂಶವು ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದ ವಿಚಾರವಾಗಿದೆ.

ಆಕರಗ್ರಂಥಗಳು

೧. ಮಹಾದೇವ ಸಿ., ಹೊಸಪೇಟೆ ತಾಲೂಕು ದರ್ಶನ, ಪು. ೬-೮.

೨. ಮಹಾದೇವ ಸಿ., ಹೊಸಪೇಟೆ ತಾಲೂಕು ದರ್ಶನ, ಪು. ೧೧-೨೩.

೩. ಗೋಪಿನಾಥರಾವ್ ಟಿ.ಎ. 'ಹಿಂದೂ ಐಕೋನೋಗ್ರಫಿ', ಸಂ. ೨, ಪು. ೧೪೯.

೪. ಗೋಪಿನಾಥರಾವ್ ಟಿ.ಎ. 'ಹಿಂದೂ ಐಕೋನೋಗ್ರಫಿ', ಸಂ. ೨, ಪು. ೧೫೦.

೫. ಗೋಪಿನಾಥರಾವ್ ಟಿ.ಎ. 'ಹಿಂದೂ ಐಕೋನೋಗ್ರಫಿ', ಸಂ. ೨. ಪು. ೧೫೨.

೬. ಕಲ್ಪನಾ ದೇಸಾಯಿ, ವೈಷ್ಣವಾ ಐಕೋನೋಗ್ರಫಿ, ಪು. ೯೪.

◆◆

ಮಂಜುಳ ಎ.ಸಿ.

ತ್ರಿಯಂಬಕೇಶ್ವರ ದೇವಾಲಯ ಇತಿಹಾಸ ಮತ್ತು ವಾಸ್ತು ವೈಶಿಷ್ಟ್ಯತೆ

ಚಾಮರಾಜನಗರ ಜಿಲ್ಲೆಯಲ್ಲಿರುವ 'ತ್ರಿಯಂಬಕಪುರ' ವು ಗುಂಡ್ಲುಪೇಟೆಯಿಂದ ಪೂರ್ವಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿದ್ದು ತೆರಕಣಾಂಬಿಯಿಂದ ಸುಮಾರು ೪ ಕಿ.ಮೀ ದೂರದಲ್ಲಿದೆ. ವಿಜಯನಗರಕಾಲದಲ್ಲಿ ಪ್ರಸಿದ್ದಿಗೆ ಬಂದ ಪ್ರಾಚೀನ ಊರಾಗಿದ್ದು ಇಲ್ಲಿ ವಿಜಯನಗರದ ಅರಸನಾದ ಎರಡನೇ ಬುಕ್ಕರಾಯನ ಕಾಲಕ್ಕೆ ಸೇರಿದ ಸುಂದರವಾದ ತ್ರಿಯಂಬಕೇಶ್ವರವೆಂಬ ಐತಿಹಾಸಿಕ ದೇವಾಲಯವಿದೆ. ಹದಿನಾಡು (ಮೈಸೂರು) ಕೇರಳ, ತಮಿಳುನಾಡು ೩ ಗಡಿಕಲ್ಲುಗಳು ಸೇರುವ ಜಾಗದಲ್ಲಿ ಲಂಬ ಕರ್ಣರಾಯನೆಂಬುವನು ತ್ರಿಕಂದಂಬೇಶ್ವರನನ್ನು ಪ್ರತಿಷ್ಠಾಪಿಸಿದನೆಂದು ಅಭಿಪ್ರಾಯಪಡಲಾಗಿದೆ. ದೇವಚಂದ್ರ ಕವಿ ವಿರಚಿತ "ರಾಜಾವಳಿ ಕಥಾಸಾರ"ದಲ್ಲಿ ತ್ರಿಯಂಬಕಪುರದ ಪ್ರಸ್ತಾಪವಿದ್ದು ಅದರಲ್ಲಿ "ಆರುನೂರಿಪ್ಪತ್ತಾಗಲಂತು ಸಾವಿರದ ಮುನ್ನೂರ ಹತ್ತು ಶತವರಷಂಬರಂ ನಡೆಯಲು ತ್ರಿಯಂಬಕರಾಯ ತನ್ನ ಪೆಸರಿಂ ತ್ರ್ಯಂಬಕೇಶ್ವರಾಲಯವಂ ಮಾಡಿಸಿ ತ್ರಿಯಂಬಕಪುರಮಂ ಕಟ್ಟಿಸಿ ಕೆಲದಿವಸಮಿರ್ದನಾತನಿಂ ಬಳಿಯಂ ಆನೆಗೊಂದಿಯಿಂ ಬಂದ ಹರಿಹರರಾಯನಾದಿ ಮೂವರೋಳು ದೇವಣ್ಣರಾಯಂ ಕುಡಗನಾಡ ತೆರಕಣಾಂಬಿಯೊಳಿರ್ದನಾತನ ಕುಮಾರಂ ವೀರರಾಯಂ ಹಿರಿಯನಾಡ ತಗಡೂರಲ್ಲಿ ಪ್ರಭುವಾದಂ" ಎಂದು ಉಲ್ಲೇಖವಿದೆ.

ತ್ರಿಯಂಬಕಪುರದಲ್ಲಿ ಒಟ್ಟು ೧೯ ಶಾಸನಗಳು ದೊರೆತಿದ್ದು ಅದರಲ್ಲಿ ದೇವಾಲಯದ ಪ್ರಾಕಾರದಲ್ಲಿ ೨ ಶಾಸನಗಳು ಮಹಾದ್ವಾರದ ಪಕ್ಕದಲ್ಲಿ ಒಂದು ಶಾಸನವಿದ್ದು ಉಳಿದ ೯ ಶಾಸನಗಳು ಮಹಾದ್ವಾರದ ಹೊಸ್ತಿಲುಗಳ ಮೇಲೆ, ತಳಪಾದಿ ಕಲ್ಲಿನ ಮೇಲೆ, ಬಾಗಿಲು ಮುಂದೆ, ಮುಖಮಂಟಪದಲ್ಲಿ, ನಂದಿ ಹಾಗೂ ಶಿವಲಿಂಗದ ಮುಂದೆ ಕೆತ್ತಲ್ಪಟ್ಟಿವೆ. ಉಳಿದ ಎರಡೂ ಶಾಸನಗಳು ತ್ರಿಯಂಬಕಪುರ ಊರಿನ ಉತ್ತರಕ್ಕೆ ಬಾವಿಯ ಬಳಿ ಇರುವ ಶಾಸನ ಹಾಗೂ ಗ್ರಾಮದ ಪಶ್ಚಿಮಕ್ಕೆ ಇರುವ ಹೊಲದಲ್ಲಿರುವ ಒಂದು ಶಾಸನ ಒಟ್ಟು ೧೪ ಶಿಲಾಶಾಸನಗಾಳಾಗಿದ್ದು ಉಳಿದ ೫ ಶಾಸನಗಳು ತಾಮ್ರಶಾಸನಗಳಾಗಿದ್ದು, ಅರ್ಚಕರ ವಶದಲ್ಲಿರುತ್ತದೆ ಅದರಲ್ಲಿ ೧೧೪ ಸಾಲುಗಳನ್ನು ಒಳಗೊಂಡ ಶಾಸನ. ಗುಂಡ್ಲುಪೇಟೆ ತಾಲ್ಲೂಕಿನ ಅತಿದೊಡ್ಡ ಶಾಸನವಾಗಿದೆ. ಈ ಶಾಸನಗಳು ವಿಜಯನಗರದ ಅರಸರು, ಪದಿನಾಲ್ಕುನಾಡಸರು, ಉಮ್ಮತ್ತೂರು ಪಾಳೆಯಗಾರರಿಗೆ ಸಂಬಂಧಿಸಿದ್ದು ತ್ರಿಯಂಬಕೇಶ್ವರ ದೇವಾಲಯಗಳಿಗೆ ದಾನದತ್ತಿ ಬಿಟ್ಟ ವಿಚಾರಗಳನ್ನು ತಿಳಿಸುತ್ತದೆ.

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೆ.ಆರ್. ಸಾಗರ, ಶ್ರೀರಂಗಪಟ್ಟಣ
ಮಂಡ್ಯ
ಮೊ: ೯೮೮೬೬ ೬೬೩೨೨




ದೇವಾಲಯದ ಮಹಾದ್ವಾರ



ದೇವಾಲಯದ ಒಳ ಆವರಣ

ಈ ದೇವಾಲಯವನ್ನು ಚಚ್ಚೌಕಾಕಾರದ ಪ್ರಾಕಾರದಲ್ಲಿ ನಿರ್ಮಿಸಲಾಗಿದೆ ಪ್ರಾಕಾರಕ್ಕೆ ಪೂರ್ವ ಮತ್ತು ದಕ್ಷಿಣಭಾಗದ ಮಧ್ಯಭಾಗದಲ್ಲಿ ಪ್ರವೇಶ ದ್ವಾರವಿದ್ದು, ಪ್ರಾಕಾರ ವಿಶಾಲವಾಗಿದ್ದು ಮಹಾದ್ವಾರಗಳ ಮೇಲೆ ಗೋಪುರವಿದೆ ಮಹಾದ್ವಾರದ ಮುಂದೆ ದೇವಾಲಯದ ಮುಂಭಾಗದಲ್ಲಿ ಮಂಟಪದಿಂದ ಸುತ್ತುವರೆದ ೪೦ ಅಡಿ ಎತ್ತರದ ಏಕಶಿಲಾದೀಪಸ್ತಂಭವಿದ್ದು ಮಂಟಪವು ೫ ಅಡಿಗಳಷ್ಟು ಎತ್ತರವಿದ್ದು ೧೦ ಅಡಿ ಅಗಲವಿದೆ. ದೀಪಸ್ತಂಭದ ಹತ್ತಿರ ಬಲಿಪೀಠ ಮತ್ತು ನಂದಿಮಂಟಪಗಳಿವೆ. ನಂದಿಮಂಟಪದಲ್ಲಿರುವ ಬಸವನ ವಿಗ್ರಹವು ಸಾಮಾನ್ಯಗಾತ್ರಕ್ಕಿಂತ ದೊಡ್ಡದಾಗಿದ್ದು ಸುಂದರವಾಗಿದೆ. ಮುಖ್ಯದೇವಾಲಯದ ಪಶ್ಚಿಮಕ್ಕೆ ಸುಂದರವಾದ ಪಂಚಲಿಂಗೇಶ್ವರ ಗುಡಿಇದ್ದು ಐದು ಗೂಡುಗಳಲ್ಲಿ ಪ್ರತ್ಯೇಕವಾಗಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವುಗಳಲ್ಲಿ ಪ್ರತಿಯೊಂದು ಶಿವಲಿಂಗವು ವಿಭಿನ್ನ ಕಲ್ಲುಗಳಿಂದ ನಿರ್ಮಿತವಾಗಿದ್ದು ಹಿಟ್ಟುಕಲ್ಲು, ಬಳಪದಕಲ್ಲು, ಕಗ್ಗಲ್ಲು, ಬೆಣಚುಕಲ್ಲು ಮತ್ತು ಕಪ್ಪುಕಲ್ಲನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಸುಬ್ರಮಣ್ಯೇಶ್ವರ ವಿಗ್ರಹವಿದೆ. ಪ್ರಧಾನ ದೇವಾಲಯದ ಈಶಾನ್ಯ ಮೂಲೆಯಲ್ಲಿ ಒಂದು ಮಂಟಪವಿದ್ದು ಸ್ಥಳೀಯರು 'ರಂಗಮಂಟಪ'ವೆಂದು ಕರೆದಿದ್ದು ನೃತ್ಯಾದಿ ಸಾಂಸ್ಕೃತಿಕ ಸೇವಾಕಾರ್ಯಗಳಿಗೆ ಇದು ಬಳಕೆಯಾಗುತ್ತಿದ್ದಿರಬಹುದು, ದೇವಾಲಯದ ಪ್ರಾಕಾರದ ನೈರುತ್ಯ ದಿಕ್ಕಿನಲ್ಲಿ ೫೪ ಕಂಬಗಳುಳ್ಳ ಕಲ್ಯಾಣಮಂಟಪವಿದ್ದು ಇದು ವಿಜಯನಗರ ಶೈಲಿಯ ಮಂಟಪವಾಗಿದ್ದು ೨೪ ಅಂಕಣಗಳನ್ನು ಒಳಗೊಂಡಿದೆ ಸುಮಾರು ೧೫ ಅಡಿ ಎತ್ತರವಿದೆ. ಇದು ಸಂಪೂರ್ಣವಾಗಿ ದೊಡ್ಡ ದೊಡ್ಡ ಕಲ್ಲಿನ ಕಂಬಗಳು ಮತ್ತು ಚಪ್ಪಡಿ ಗೋಡೆ ಛಾವಣಿಗಳ ಮೇಲೆ ಸುಂದರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ವಿವಿಧ ಬಗೆಯ ದೇವತೆಗಳ ಚಿತ್ರಗಳಿದ್ದು ಒಂದೇ ಶಿರವನ್ನು ಹೊಂದಿರುವ ಪುರುಷರೂಪ ಹಾಗೂ ಸ್ತ್ರೀ ರೂಪದ ಶಿಲ್ಪ ವಿಶೇಷವಾಗಿದೆ. ಈ ಮಂಟಪವನ್ನು 'ಮಹಾನವಮಿ' ದಿನದಂದು ವಿಜೃಂಭಣೆಯಿಂದ ಉತ್ಸವ ಜರಗುತ್ತಿದ್ದು 'ಉಯ್ಯಾಲೆ ಉತ್ಸವ' ವನ್ನು ಆಚರಿಸಲಾಗುತ್ತಿತ್ತು ಎಂದು ಸ್ಥಳೀಯರ ಅಭಿಪ್ರಾಯವಾಗಿದೆ. ಮುಖ್ಯದೇವಾಲಯದ ಅಗ್ನೇಯ ಮೂಲೆಗೆ ಎರಡು ಗರ್ಭಗುಡಿಗಳಿದ್ದು ಅವುಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತ ಸಪ್ತಮಾತೃಕೆಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ ಮತ್ತು ಪೂರ್ವದ ಗುಡಿಯು ಯೋಗಶಾಲೆಯಾಗಿದೆ ಪ್ರಾಕಾರದಲ್ಲಿ ಒಂದು ಚಿಕ್ಕ ಚಂಡಿಕೇಶ್ವರನ ಗುಡಿ ಇದೆ.

ತ್ರಿಯಂಬಕೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ಚೌಕಾಕಾರದ ಗರ್ಭಗುಡಿ ಹಾಗೂ ಚೌಕಾಕಾರದ ಅಂತರಾಳ ಇದೆ. ಗರ್ಭಗುಡಿಯಲ್ಲಿ ಸುಂದರವಾದ 'ತ್ರಿಯಂಬಕೇಶ್ವರ ಲಿಂಗ' ವಿದೆ. ದೇವಾಲಯದ ಎಡಭಾಗ ಖಾಲಿ ಇದ್ದು, ಬಲಭಾಗದಲ್ಲಿ ಪಾರ್ವತಿಯ ಗುಡಿ ಇದ್ದು, ಪಾರ್ವತಿಯ ಮೂರ್ತಿಯು ಸುಮಾರು ೫ ಅಡಿ ಎತ್ತರವಿದ್ದು ವಿಗ್ರಹವು ನಿಂತಭಂಗಿಯಲ್ಲಿದೆ ದೇವಿಯು ಅಭಯ ಪದ್ಮ ಮತ್ತು ದಾನಮುದ್ರೆಗಳ ಹಸ್ತವನ್ನು ಹೊಂದಿದ್ದಾಳೆ. ಇಷ್ಟು ಸುಂದರವಾದ ಮತ್ತು ಎತ್ತರವಾದ ವಿಗ್ರಹವು ಮತ್ತೆಲ್ಲಿಯೂ ಕಂಡು ಬರುವುದಿಲ್ಲವೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಅಂತರಾಳವು ಮುಂದಿರುವ ರಂಗಮಂಟಕ್ಕೆ ತೆರೆದುಕೊಂಡಿದೆ. ರಂಗಮಂಟಪದ ಪಶ್ಚಿಮಕ್ಕೆ ತೆರೆದದಾರಿ ಇದ್ದು ಅವು ಗರ್ಭಗೃಹ ಹಾಗೂ





ದೇವಾಲಯದ ಆವರಣದಲ್ಲಿರುವ ಶಾಸನಗಳು



ಸುಬ್ರಮಣ್ಯೇಶ್ವರ ವಿಗ್ರಹ

ಅಂತರಾಳವನ್ನು ಸುತ್ತುವರೆದಿರುವ ಪ್ರದಕ್ಷಿಣ ಪಥವನ್ನು ಸಂಧಿಸುತ್ತದೆ. ರಂಗಮಂಟಪಕ್ಕೆ ಪೂರ್ವ ಮತ್ತು ದಕ್ಷಿಣದಿಕ್ಕಿನ ಮಧ್ಯಭಾಗದಲ್ಲಿ ಎರಡು ಬಾಗಿಲುಗಳಿದ್ದು ಅವು ಮುಖಮಂಟಪಗಳಿಗೆ ಕರೆದೊಯ್ಯುತ್ತವೆ. ರಂಗಮಂಟಪದ ಅಧಿಷ್ಠಾನವು ಕೆಳಗಿನಿಂದ ಉಪಾನ, ಜಗತಿ,ಪಟ್ಟೀಕಾ ಕಾಂತ ಮತ್ತು ಪ್ರತಿಗಳ ರಚನೆಯಿಂದ ಕೂಡಿದೆ. ಗೋಡೆಗಳಲ್ಲಿ ನಿಯತವಾದ ಅಂತರಕ್ಕೊಂದರಂತೆ ಗೋಡೆಕಂಬಗಳನ್ನು ಕೆತ್ತಲಾಗಿದೆ. ಉತ್ತರ ಗೋಡೆಯ ಮಧ್ಯದಲ್ಲಿ ಒಂದು ಗೂಡು ಇದ್ದು ಅದು ನೆಲದಿಂದ ನಿರ್ಮಿಸಲಾಗಿರುವ ರಚನೆಗಳಲ್ಲಿ ಅತ್ಯಂತ ಮೇಲ್ಭಾಗದ ರಚನೆಯನ್ನು ತುಂಡರಿಸಿದೆ. ಈ ಗೂಡನ್ನು ಬಿಡಿಸಿದ ಗೂಡು ಕಂಬಗಳಿಂದ ರೂಪಿಸಲಾಗಿದ್ದು ಪೂರ್ವ ಮತ್ತು ದಕ್ಷಿಣ ಗೋಡೆಗಳ ಮಧ್ಯದಲ್ಲಿನ ಬಾಗಿಲುಗಳು ಮುಖಮಂಟಪಗಳಿಗೆ ದಾರಿಯನ್ನು ಕಲ್ಪಿಸಿವೆ. ಪೂರ್ವದ ಮುಖ ಮಂಟಪವು ದಕ್ಷಿಣ ಮತ್ತು ಉತ್ತರದ ಕಡೆಗೆ ಹಂತಗಳನ್ನು ಹೊಂದಿದ್ದು ಯಾಳಿ ಕೈಪಿಡಿಗಳಿಂದ ಸುತ್ತುವರೆದಿದೆ. ದಕ್ಷಿಣ ಮುಖಮಂಟಪವು ದಕ್ಷಿಣ ದಿಕ್ಕಿಗೆ ಮಧ್ಯಭಾಗದಲ್ಲಿ ಮೆಟ್ಟಿಲುಗಳುಳ್ಳ ಪ್ರವೇಶವನ್ನು ಹೊಂದಿದೆ ರಂಗಮಂಟಪದ ಪಶ್ಚಿಮಗೋಡೆಗಳು ಪ್ರದಕ್ಷಿಣ ಪಥದ ಗೋಡೆಗಳನ್ನು ಸೇರಿದ್ದು ಗೋಡೆಯಲ್ಲಿ ಸಣ್ಣ



ಮಂಟಪದಿಂದ ಸುತ್ತುವರೆದಿರುವ ಏಕಶಿಲಾ ದೀಪಸ್ಥಂಭ



ಸುಂದರವಾದ ಕೆತ್ತನೆಗಳಿಂದ ಕೂಡಿದ ಕಂಬಗಳು



ಸುಂದರವಾದ ಕೆತ್ತನೆಗಳಿಂದ ಕೂಡಿದ ಕಂಬಗಳು

ಜಾಲಂಧ್ರ ಇದೆ. ರಂಗಮಂಟಪದ ಗೋಡೆಯು ತುದಿಯ ಮೇಲ್ಭಾಗದಲ್ಲಿ ವ್ಯಾಸಗಳಿಂದ ಕೂಡಿದ ಕಲ್ಲಿನ ಕೈಪಿಡಿ ಇದ್ದು ಅದು ದೇವಸ್ಥಾನದ ಸುತ್ತ ಬಂದಿದೆ ಪೂರ್ವಭಾಗದ ಮುಖಮಂಟಪದ ಛಾವಣಿಯ ಮೂಲೆಯಲ್ಲಿ ಎರಡು ಮಡಿಕೆಗಳುಳ್ಳ ಕಾರ್ನಿಸ್ ಇದ್ದು ದಕ್ಷಿಣದ ಮುಖಮಂಟಪದಲ್ಲಿ ಕೋನಾಕೃತಿಯ ಚಜ್ಜ ಇದೆ ಈ ಮುಖ ಮಂಟಪಗಳ ಮೇಲೆ ಸುಣ್ಣಗಾರೆಯಲ್ಲಿ ಮಾಡಿದ ಗೂಡುಗಳ ಸರಣಿಗಳು ಕಂಡುಬರುತ್ತದೆ. ಈ ಗೂಡುಗಳಲ್ಲಿ ವಿಗ್ರಹಗಳು ಇರುವುದಿಲ್ಲ.

ಗರ್ಭಗೃಹವು ಸರಳಗೋಡೆಯನ್ನು ಹೊಂದಿದ್ದು ಕೊಕ್ಕೆಯಿರುವ ಚಾಚು ಪೀಠವುಳ್ಳ ಮೂಲೆಕಂಬಗಳಿಂದ ಕೂಡಿದೆ ಗರ್ಭಗೃಹದ ಚಾವಣಿಯು ಭುವನೇಶ್ವರಿಯಿಂದ ಚೆನ್ನಾಗಿ ಅಲಂಕೃತವಾಗಿದೆ. ಗರ್ಭಗೃಹದ ದ್ವಾರದಲ್ಲಿ ದ್ವಾರಪಾಲಕರಿಲ್ಲದ ಬರಿದ್ವಾರ ಪೀಠಗಳಿವೆ. ಇದು ಕಂಬಗಳಿಂದ ಕೂಡಿದ ರಂಗಮಂಟಪಕ್ಕೆ ಒಯ್ಯುತ್ತದೆ.

ನವರಂಗವು ಬಹಳ ದೊಡ್ಡದಾಗಿದ್ದು ಬಹು ದೊಡ್ಡ ಗಾತ್ರದ ವಿಜಯನಗರ ಶೈಲಿಯ ಸ್ತಂಭಗಳಿವೆ ನವರಂಗದ ಉತ್ತರಗೋಡೆಯ ಬದಿಯಲ್ಲಿ ಕುಳಿತಿರುವ ಅಂಜನೇಯ, ರಾಮ, ಲಕ್ಷ್ಮಣ ಮತ್ತು ಸೀತೆಯರ ಮೂರ್ತಿಗಳಿವೆ. ನವರಂಗದ ಉತ್ತರಭಾಗದಲ್ಲಿ ಮಯೂರ ವಾಹನಾರೂಢನಾದ ಸುಬ್ರಮಣ್ಯನ ವಿಗ್ರಹ ಹಾಗೂ ದಕ್ಷಿಣ ಭಾಗದಲ್ಲಿ ಗಣೇಶನ ವಿಗ್ರಹವಿದೆ. ವಿಶಾಲವಾದ ದೇವಸ್ಥಾನದ ಸುತ್ತಲೂ ಕುದುರೆಗಳ ಸಾಲುಗಳನ್ನು ಕೆತ್ತಿರುವುದನ್ನು ಗಮನಿಸಿದಾಗ ದೇವಾಲಯವನ್ನು ಒಂದೇ ಬಾರಿಗೆ ಕಟ್ಟಿಸಿರುವಂತೆ ಗೋಚರಿಸುತ್ತದೆ. ಕ್ರಿ.ಶ. ೧೪೯೨ರಲ್ಲಿ ಉಮ್ಮತ್ತೂರು ದೊರೆಗಳು ಶಾಸನ ಹಾಕಿಸಿರುವುದರಿಂದ ಇದರ ರಚನಾ ಕಾಲವು ಇವರಿಗಿಂತ ಹಿಂದಿನದು ಎಂದು ಊಹಿಸಲು ಸಾಧ್ಯ ಈ ದೇವಸ್ಥಾನದ ಗರ್ಭಗೃಹ ಮತ್ತು ಸುಖನಾಸಿಗಳು ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿದ್ದು ಪೂರ್ವದ್ವಾರ ಮತ್ತು ಮಹಾದ್ವಾರಗಳು ವಿಜಯನಗರದ ಕಾಲಕ್ಕೆ ಸೇರಿದ್ದು ದೇವಾಲಯದ ಪ್ರಾಕಾರದ ಅಗ್ನೇಯ ದಿಕ್ಕಿನಲ್ಲಿ ದೊಡ್ಡದಾದ ಒಂದು ಅಡುಗೆ ಮನೆಯಿದ್ದು, ಒಳಕಲ್ಲು ಮತ್ತಿತ್ತರ ನಿತ್ಯ ಬಳಕೆಯ ವಸ್ತುಗಳಿವೆ ಇಲ್ಲಿ ಸುಮಾರು ೧ ಅಡಿ ದಪ್ಪ ಸುಮಾರು ೧೨ ಅಡಿ ಉದ್ದ ಹಾಗೂ ೩ ಅಡಿ ಅಗಲವುಳ್ಳ ನಯವಾದ ಒಂದು ಚಪ್ಪಟೆಯಾಕಾರದ ಅಪರೂಪದ ಕಲ್ಲಿದೆ. ಇದನ್ನು ಅನ್ನ ಸುರಿಯಲು ಮತ್ತು ಮುದ್ದೆ ಕಟ್ಟಲು ಬಳಸುತ್ತಿದ್ದರೆಂದು ಸ್ಥಳೀಯರು ತಿಳಿಸಿದ್ದಾರೆ. ದೇವಾಲಯದಿಂದ ಪೂರ್ವಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿ ಒಂದು ಕಟ್ಟೆ ಇದ್ದು ಇದನ್ನು "ಗಂಜಿಕಟ್ಟೆ" ಎಂದು ಕರೆಯುತ್ತಾರೆ. ಅಡಿಗೆ ಮನೆಯಿಂದ ಅಕ್ಕಿ ಹಾಕಿ ಬಸಿದ ನೀರು ಮುಂದೆ ಹೋಗಿ ಈ ಸ್ಥಳದಲ್ಲಿ ಸೇರುತ್ತಿದ್ದುದರಿಂದ ಇದಕ್ಕೆ ಗಂಜಿಕಟ್ಟೆಯೆಂದು ಕರೆಯುತ್ತಾರೆ ದೇವಸ್ಥಾನವನ್ನು ಸರ್ಕಾರ ೨೦೧೪ರಲ್ಲಿ ಜೀರ್ಣೋದ್ಧಾರ ಮಾಡಿದ್ದು ಸ್ಥಳೀಯ ದಾನಿಗಳು ವಿದ್ಯುತ್ ದೀಪ ಮತ್ತಿತರ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ ತ್ರಿಯಂಬಕಪುರವು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು ತ್ರಿಯಂಬಕೇಶ್ವರ ದೇವಾಲಯವು ವಿಶಿಷ್ಟತೆಯಿಂದ ಕೂಡಿದ್ದು ಅದರ ಮಹತ್ವವನ್ನು ದಾಖಲಿಸಲಾಗಿದೆ.

ಆಕರಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಿಕ ಸಂ. ೩, ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪುಟ ೯೬ರಿಂದ ೧೨೪ರವರೆಗೆ.

೨. ದೇವಚಂದ್ರ ರಾಜಾವಳಿ ಕಥಾಸಾರ, ಪು.ಸಂ. ೨೦೦.

೩. ಪಳನಿಸ್ವಾಮಿ, ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ.

೪. ಮಲೆಯೂರು ಗುರುಸ್ವಾಮಿ, ಸೋಮಸಿರಿ.

◆◆

ನಿಂಗನಗೌಡ ಹ. ದೇಸಾಯಿ


ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿರುವ ಭಿತ್ತಿಶಿಲ್ಪಗಳು

ಸುರಪುರವನ್ನು ಆಳಿದ ಅರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಸುರಪುರದಲ್ಲಿ ಹಲವಾರು ದೇಗುಲಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ನರಸಿಂಹಸ್ವಾಮಿ ದೇವಾಲಯ, ಪಾಂಡುರಂಗ ದೇವಾಲಯ ವೇಣುಗೋಪಾಲಸ್ವಾಮಿ ದೇವಾಲಯಗಳನ್ನು ಹೆಸರಿಸಬಹುದು.

ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ ಸುರಪುರದ ಬೆಟ್ಟದ ಮೇಲೆ ಇದೆ. ಈ ದೇವಾಲಯವನ್ನು ಸುರಪುರದ ಅರಸುಮನೆತನದ ಪಿತಾಂಬರ ಬಹರಿಪಿಡ್ಡ ನಾಯಕರು ಕ್ರಿ.ಶ. ೧೭೧೦ – ೧೭೧೪ರ ಅವಧಿಯಲ್ಲಿ ನಿರ್ಮಿಸಿದನೆಂದು ತಿಳಿದು ಬರುತ್ತದೆ. ಪೀತಂಬರ ಬಹರಿಪಿಡ್ಡ ನಾಯಕರು ಈ ಸ್ಥಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಇದರ ಸುತ್ತಮುತ್ತ ೧೪ ಕೇರಿಗಳನ್ನು ನಿರ್ಮಿಸಿ ಈ ಎಲ್ಲಾ ಕೇರಿಗಳಲ್ಲಿ ಮಾರುತಿ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಮೇಲೆ ನಡುಗೇರಿಯಲ್ಲಿ ಕಾರ್ತಿಕ ಶುದ್ಧ ಪೌರ್ಣಮಿ ದಿನದಂದು ಶ್ರೀವೇಣುಗೋಪಾಲಸ್ವಾಮಿ ದೇವಾಲಯವನ್ನು ಕಟ್ಟಿಸಿದರೆಂದು ಐತಿಹ್ಯಗಳು ತಿಳಿಸುತ್ತವೆ.

ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯವು ಸುರಪುರದ ಅಸ್ಮಿತೆಯಾಗಿದೆ. ವಿಜಯನಗರೊತ್ತರ ಕಾಲದಲ್ಲಿ ನಿರ್ಮಾಣವಾದ ಪ್ರಮುಖ ದೇವಾಲಯಗಳಲ್ಲಿ ಒಂದೆನ್ನಬಹುದಾದ ಈ ದೇವಾಲಯವನ್ನು ಸ್ಥಳಿಯವಾಗಿ ದೊರೆಯುವ ಬೆಣಚು ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಹೆಚ್ಚು ಅಲಂಕೃತವಿಲ್ಲದಿದ್ದರೂ ಈ ಭವ್ಯದೇವಾಲಯದ ಶಿಲ್ಪಗಳು ಮನಸೆಳೆಯುತ್ತವೆ. ಬೆಟ್ಟದ ಮೇಲಿನ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಮುಖ್ಯದ್ವಾರದ ಮುಂದೆ ಅನೇಕ ಕಂಬಗಳುಳ್ಳ ಬೃಹತ್ ಮಂಟಪವಿದೆ. ಮುಖ್ಯದ್ವಾರದಿಂದ ಒಳಗೆ ನವರಂಗ ನಂತರ ಗರ್ಭಗೃಹ ಕಾಣಿಸುತ್ತದೆ. ವಿಶಾಲ ಗರ್ಭಗೃಹವು ಸಾದಾ ರಚನೆಯಿಂದ ಕೂಡಿವೆ. ಗರ್ಭಗೃಹದ ಮೇಲ್ಚಾವಣಿ ಬೃಹತ್ ಬಂಡೆಯಿಂದ ಜೋಡಿಸಲಾಗಿದೆ. ಗರ್ಭಗೃಹದ ಮಧ್ಯದಲ್ಲಿ ಎತ್ತರವಾದ ಪೀಠದ ಮೇಲೆ ಪೂರ್ವಾಭಿಮುಖವಾಗಿ ಶ್ರೀ ಕೃಷ್ಣ, ರುಕ್ಮಿಣಿ, ಸತ್ಯಭಾಮೆಯರ ಪಂಚಲೋಹದ ಸುಂದರ ಸ್ಥಾನಿಕ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಈ ಗರ್ಭಗೃಹದ ಬಾಗಿಲುವಾಡವು ಪಂಚ ಕಲಶಾಲಂಕೃತವಾಗಿದೆ. ಗರ್ಭಗೃಹದ ಮುಂದೆ ಅಂತರಾಳದ ಅಲಂಕೃತ ಬಾಗಲವಾಡ ಹಾಗೂ ಬಾಗಿಲನ್ನು ಕಲ್ಲಿನಿಂದ ಕೆತ್ತಲಾಗಿದೆ. ಅಂತರಾಳದಲ್ಲಿ ಸು. ೨ ಅಡಿ ಎತ್ತರದ ಮಹಾಲಕ್ಷ್ಮೀಯ ಆಶೀನ ವಿಗ್ರಹವಿದೆ.

ಸಹ ಶಿಕ್ಷಕರು
ಬಾಲಕಿಯರ ಸರಕಾರಿ ಪ್ರೌಢಶಾಲೆ
ಕೆಂಭಾವಿ, ಸುರಪುರ ತಾಲ್ಲೂಕು
ಯಾದಗಿರಿ ಜಿಲ್ಲೆ
ಮೊ: ೯೮೪೫೩೩ ೩೮೮೯೮



ಅಂತರಾಳದ ಮುಂದೆ ಸುಂದರವಾದ ನವರಂಗವಿದ್ದು, ಈ ನವರಂಗಕ್ಕೆ ನಾಲ್ಕು ಕಂಬಗಳಿದ್ದು, ಎಲ್ಲಾ ಕಂಬಗಳು ಕೆತ್ತನೆಯಿಂದ ಕೂಡಿವೆ. ನವರಂಗದ ಭುವನೇಶ್ವರಿಯಲ್ಲಿ ಸಾಧಾರಣವಾಗಿ ಕಂಡುಬರುವ ಕಮಲದ ಹೂವು ಕೆತ್ತಲಾಗಿದೆ. ಮುಖ್ಯದ್ವಾರವು ಸುಮಾರು ಹತ್ತು ಅಡಿಗಿಂತ ಎತ್ತರವಾಗಿದ್ದು, ಬೃಹತ್ ಕಲ್ಲಿನಿಂದ ಕೆತ್ತಲಾಗಿರುವ ಈ ಮುಖ್ಯದ್ವಾರಕ್ಕೆ ಪ್ರವೇಶಿಸಲು ೫ ಮೆಟ್ಟಿಲುಗಳಿವೆ. ಮುಖ್ಯದ್ವಾರದ ಎರಡೂ ಬದಿಗಳಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಮುಖ್ಯದ್ವಾರದಿಂದ ನಾಲ್ಕು ಅಡಿಗಳ ಕೆಳಗೆ ಪಾತಾಳಂಕಣವಿದೆ. ಪಾತಾಳಂಕಣದ ಈ ವಿಶಾಲವಾದ ಸಭಾಮಂಟಪವು ಬೃಹತ್‌ಗಾತ್ರದ ತೊಲೆಗಳು ಹಾಗೂ ಅಲಂಕಾರ ರಹಿತವಾದ ಸುಮಾರು ೩೮ ಕಂಬಗಳಿಂದ ಕೂಡಿದ್ದು, ಬೃಹತ್ ಬಂಡೆಗಳಿಂದ ಇದರ ಮೇಲ್ಛಾವಣಿ ನಿರ್ಮಿಸಲಾಗಿದೆ.




ಮುಖ್ಯ ಪ್ರವೇಶದ್ವಾರದ ಬಿತ್ತಿಗಳಲ್ಲಿರುವ ಶಿಲ್ಪಗಳು

ದೇವಾಲಯದ ಗೋಡೆಗಳಲ್ಲಿ ಅನೇಕ ಶಿಲ್ಪಗಳನ್ನು ಕೆತ್ತಿರುವುದು ಆಕರ್ಷಕವಾಗಿವೆ. ಅವುಗಳಲ್ಲಿ ಜೋಡಿ ಮೀನುಗಳು ಸೇರಿದಂತೆ ಹಲವು ಪ್ರಾಣಿಗಳ ಶಿಲ್ಪ, ಹೋರಾಟದಲ್ಲಿ ತೊಡಗಿರುವ ಯೋಧರು, ಆನೆ, ಕುದುರೆಗಳ

ಮೇಲೆ ಕುಳಿತಿರುವ ವೀರರ ಶಿಲ್ಪಗಳಲ್ಲದೆ ಒಂಟೆಯೊಂದಿಗೆ ಸಾಗುತ್ತಿರುವ ಸೈನಿಕರ ಶಿಲ್ಪವೂ ವಿಶೇಷವಾಗಿದೆ. ವಿಭಿನ್ನ ಆಯಾಮಗಳಲ್ಲಿ ಕಂಡರಿಸಿರುವ ಆನೆ ಮತ್ತು ಬಸವ ಶಿಲ್ಪಗಳು. ಡೋಲು ಮೊದಲಾದ ವಾದ್ಯಗಳನ್ನು ನುಡಿಸುವ ಶಿಲ್ಪಗಳು, ಮಹಿಳೆಯರ ನೃತ್ಯ ಶಿಲ್ಪ, ಧ್ವಜವನ್ನು ಹಿಡಿದು ಸಾಗುತ್ತಿರುವ ಶಿಲ್ಪ, ಜಿಂಕೆ ಬೇಟೆಯಲ್ಲಿ ತೊಡಗಿರುವ ನಾಯಿಯ ಶಿಲ್ಪ, ಕಿರೀಟಧಾರಿಯಾದ ರಾಜನ ಮುಖ, ರಾಜರಾಣಿಯರು ಪರಸ್ಪರ ಸಂವಾದದಲ್ಲಿ ತೊಡಗಿರುವಂತೆ ಚಿತ್ರಿಸಲಾದ ಶಿಲ್ಪ. ಈ ಎಲ್ಲ ಶಿಲ್ಪಗಳೊಂದಿಗೆ ವಿವಿಧ ಭಂಗಿಯ ಶ್ರೀ ಕೃಷ್ಣನ ಶಿಲ್ಪಗಳು ಬಹುತೇಕ ತುಂಬಿದೆ.







ಸುರಪುರದ ಅರಸರಿಗೂ ತಿರುಪತಿಗೂ ಇರುವ ಸಂಬಂಧ

ಈ ಸಂಸ್ಥಾನದ ಅರಸರು ತಿರುಮಲದ ವೆಂಕಟೇಶ್ವರನ ಅನನ್ಯ ಭಕ್ತರಾಗಿದ್ದು ಪ್ರತಿ ವರ್ಷ ತಿರುಪತಿಯ ದರ್ಶನ ಮಾಡುವ ನಿಯಮವನ್ನು ಪಾಲಿಸುತ್ತಿದ್ದರಂತೆ, ಇವರ ಭಕ್ತಿಗೆ ಮೆಚ್ಚಿದ ವೆಂಕಟೇಶ್ವರನು ರಾಜರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಇನ್ನು ಮುಂದೆ ನಿಮಗೆ ಸುರಪುರದಲ್ಲಿಯೇ ದರ್ಶನ ನೀಡುವೆ ಎಂದು ಅಭಯ ನೀಡಿದ ಮೇಲೆ ವೇಣುಗೋಪಾಲಸ್ವಾಮಿ ದೇವಾಲಯ ನಿರ್ಮಾಣಗೊಂಡಿತೆಂದೂ ಹೇಳಲಾಗುತ್ತದೆ. ಆದರೆ, ದೇವಾಲಯ ನಿರ್ಮಾಣವಾದ ಮೇಲೂ ರಾಜಮನೆತನದವರ ತಿರುಪತಿಗೆ ಭೇಟಿ ನಿರಂತರವಾಗಿ ನಡೆದುಬಂದಿದೆ. ಈಗಲೂ ಪ್ರತಿವರ್ಷ ಅರಸು ಮನೆತನದ ಪ್ರತಿನಿಧಿಗಳು ಬ್ರಹ್ಮೋತ್ಸವದಲ್ಲಿ ಪಾಲ್ಗೊಂಡು ಪ್ರಥಮ ಪೂಜೆ ಸಲ್ಲಿಸುತ್ತಾರೆ.

ಜಾತ್ರೆ ವಿಶೇಷ: ಸುರಪುರ ಸಂಸ್ಥಾನದ ಅರಸರು ಶ್ರೀ ವೈಷ್ಣವ ಮತಾವಲಂಬಿಗಳಾಗಿದ್ದರಿಂದ ಈ ದೇವಾಲಯದ ಪೂಜೆ ಪುನಸ್ಕಾರಗಳೆಲ್ಲಾ ರಾಮಾನುಜ ಸಂಪ್ರದಾಯದಂತೆಯೇ ನಡೆಯುತ್ತದೆ. ಶ್ರಾವಣ ಬಹುಳ ಅಷ್ಟಮಿಯ ಕೃಷ್ಣ ಜನ್ಮಾಷ್ಟಮಿಯಂದು ವಿಶೇಷ ಪೂಜೆಗಳು ನಡೆಯುತ್ತವೆ. ಈ ದಿನವನ್ನು ಸಗರನಾಡಿನ ಜನರು ಹಾಲೋಕುಳಿ ಎಂದು ಕರೆಯುತ್ತಾರೆ.

ಅಂದು ನಗರದ ಬಹುತೇಕ ಜನರು ಇಲ್ಲಿ ಬಂದು ನೆರೆಯುತ್ತಾರೆ. ಉಪವಾಸ ನೇಮಗಳಿಂದ ತಮ್ಮ ಭಕ್ತಿಯನ್ನು ಸಮರ್ಪಿಸುವ ಭಕ್ತಾದಿಗಳು, ರಾತ್ರಿ ಉತ್ಸವದಲ್ಲಿ ಪಾಲ್ಗೊಂಡು, ರಾಜ ಪರಿವಾರದವರ ನಂತರ ತೀರ್ಥ ಪ್ರಸಾದಗಳನ್ನು ಸ್ವೀಕರಿಸುತ್ತಾರೆ. ಮರುದಿನ ಪಾರಣೆ ಹಾಗೂ ಸ್ತಂಭಾರೋಹಣ (ಕಂಬ ಹರಿಯುವ) ನಡೆಯುತ್ತದೆ. ಈ ಸ್ತಂಭಾರೋಹಣ ಕಾರ್ಯಕ್ರಮ ನೋಡಲು ನಾಡಿನಾದ್ಯಂತ ಸಾವಿರಾರು ಜನರು ಬರುತ್ತಾರೆ. ರಾಜ ಪರಿವಾರದವರು ಪೀತ (ಹಳದಿಬಣ್ಣದ) ವಸ್ತ್ರಧಾರಿಗಳಾಗಿ ರಾಜಲಾಂಛನ, ಶ್ವೇತಛತ್ರಿ, ಬಾಜಾಭಜಂತ್ರಿ ಮೇಳದವರಿಂದ ಒಡಗೂಡಿ, ಬಂಧು ಬಾಂಧವರೊಡನೆ ಭಾಗವಹಿಸುತ್ತಾರೆ. ಬೆಳ್ಳಿ ಬೆತ್ತ ಹೊತ್ತ ಚೌಬದಾರರು ಪರಂಪರೆಯಿಂದ ಬಂದ ರಾಜಮನೆತನದ ಬಿರುದುಗಳನ್ನು ಹೇಳುತ್ತಾ ಹೊಗಳುತ್ತಾ ಇವರನ್ನು ಕರೆತರುತ್ತಾರೆ. ವಾದ್ಯ ಸಮೇತ ಮಂತ್ರ ಘೋಷಗಳೊಂದಿಗೆ ಶ್ರೀಕೃಷ್ಣನ ಪೂಜೆಯನ್ನು ವಿಧ್ಯುಕ್ತವಾಗಿ ನೆರವೇರಿಸಿ, ತೀರ್ಥಪ್ರಸಾದ ಪಡೆದು ರಾಜ ಪರಿವಾರದವರು

ದೇವಾಲಯದ ಮುಂದೆ ಬಯಲಿನಲ್ಲಿ ಎತ್ತರವಾದ ಸ್ಥಳದಲ್ಲಿ ರಾಜ ಕುಳಿತುಕೊಳ್ಳುತ್ತಾರೆ. ಅವರ ಮುಂದಿನ ಪ್ರದೇಶದಲ್ಲಿ ಸ್ಥಾಪಿಸಿದ ೪೦-೫೦ ಅಡಿ ಎತ್ತರದ ಐದು ಕಂಬಗಳಿಗೆ ಮುಟ್ಟಿದರೆ ಕೈ ಜಾರುವಂತೆ ಹಳದಿ ರಸ(ರಾಳ) ಬೆಣ್ಣೆ, ಬಾಳೆ ಮುಂತಾದವುಗಳನ್ನು ಸವರಿ ನುಣ್ಣಗೆ ಮಾಡಿರುತ್ತಾರೆ. ಕಂಬಗಳ ತುದಿಯಲ್ಲಿ ನೀರುತುಂಬಿದ ನಾಲ್ಕಾರು ಹರಿವಾಣ(ಗಡಿಗೆ)ಇಟ್ಟುಕೊಂಡು ಕುಳಿತವರು ಕಂಬ ಏರುವವರಿಗೆ ಮೇಲಿನಿಂದ ನೀರು ಸುರಿದು ಅಡ್ಡಪಡಿಸುತ್ತಾರೆ. ಕಂಬ ಏರಲು ಹರಸಾಹಸ ಮಾಡುವವರನ್ನು ಜನರು ಹುರಿದುಂಬಿಸುತ್ತಾ, ಕೆಳಗೆ ಬಿದ್ದಾಗ ಛೇಡಿಸುತ್ತಾ ಹರ್ಷೋದ್ಗಾರ ಮಾಡುತ್ತಾರೆ. ಮೇಲೇರಿ ಅಲ್ಲಿ ಕಟ್ಟಿರುವ ಕಾಯಿಗಳನ್ನು ಹರಿದು ತಂದವರಿಗೆ ರಾಜರು ಸನ್ಮಾನ ಮಾಡುತ್ತಾರೆ. ಇದರೊಂದಿಗೆ ವೇಣುಗೋಪಾಲಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಸ್ವತಃ ರಾಜನೇ ಪಲ್ಲಕ್ಕಿಯನ್ನು ಹೊತ್ತುಕೊಂಡು ಉತ್ಸವ ಆರಂಭಿಸುತ್ತಾನೆ.

ರಣಗಂಬ: ಪಾರಣೇಯ ಮರುದಿನ ರಮಣಪ್ಪ ನಾಯಕನ ಕಟ್ಟೆಯ ಬಳಿ ರಣಗಂಬ ಏರುವ ಸ್ಪರ್ಧೆ ಇರುತ್ತದೆ. ಹಿಂದಿನ ದಿನಕ್ಕಿಂತಲೂ ಈ ದಿನ ಜನ ಹೆಚ್ಚಾಗಿ ಸೇರಿರುತ್ತಾರೆ. ರಾಜ ಹಾಗೂ ರಾಜ ಗುರುಗಳು ಆಸೀನರಾದ ಮೇಲೆ, ಹಿಂದಿನ ದಿನದ ಕಂಬಕ್ಕಿಂತಲೂ ದೊಡ್ಡದಾಗಿ ಸ್ಥಾಪಿಸಿರುವ ಕಂಬವನ್ನು ಏರುವ ಸ್ಪರ್ಧೆ ನಡೆಯುತ್ತದೆ. ಹೀಗೆ ಮೂರು ದಿನಗಳ ಕಾಲ ಈ ಹಾಲೋಕಳಿ ಜಾತ್ರೆಯು ವಿಶೇಷವಾಗಿ ನಡೆಯುತ್ತದೆ. ಇದರಲ್ಲಿ ಮೂರು ದಿನ ಕುಸ್ತಿ ಸ್ಪರ್ಧೆ ಕೂಡ ಇರುತ್ತದೆ. ಒಟ್ಟಾರೆ ಸುರಪುರದ ಅರಸರು ಮಹಾನವಮಿ ಹಬ್ಬದಲ್ಲಿ ಹತ್ತು ದಿನ ಹಾಗೂ ಯುಗಾದಿ, ಸಂಕ್ರಾಂತಿ ಹಬ್ಬದಿನಗಳಂದು ವೇಣುಗೋಪಾಲಸ್ವಾಮಿ ವಿಶೇಷ ಪೂಜೆ ಇರುತ್ತದೆ.

ಸುರಪುರ ಅರಸರ ಭಾವೈಕ್ಯತೆ: ಸುರಪುರ ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿದ ಹಲವಾರು ಅರಸರು ತಮ್ಮತಮ್ಮ ಆಳ್ವಿಕೆಯಲ್ಲಿ ಅನೇಕ ಮಾರುತಿ ಮಂದಿರಗಳನ್ನು ಅಲ್ಲದೆ ಪಾಂಡುರಂಗ ದೇವಾಲಯಗಳು, ಶಿವಾಲಯ ಕಟ್ಟಿಸಿದ್ದಾರೆ. ಸುರಪುರದಲ್ಲಿ ಅನೇಕ ಮಸೀದಿ ಮತ್ತು ದರ್ಗಾಗಳನ್ನು ಕೂಡ ನಿರ್ಮಿಸಿ ಭಾವೈಕ್ಯತೆಯನ್ನು ಮೆರೆದಿದ್ದಾರೆ.

◆◆

೫೯

ಅಜಯ್‌ಕುಮಾರ್ ಶರ್ಮಾ

ಚತುರ್ವಿದ್ಯೇಶ್ವರ ಮೂರ್ತಿಶಿಲ್ಪದ ವೈಶಿಷ್ಟ್ಯತೆ

ಕೊನೆಯ ಹಿಂದು ಸಾಮ್ರಾಜ್ಯ ಎಂದೇ ಪ್ರಖ್ಯಾತಿ ಪಡೆದಿರುವ ಕರ್ನಾಟ (ವಿಜಯನಗರದ) ಹೆಸರು ಪ್ರಸ್ತಾಪ ಅದಾಗಲೆಲ್ಲಾ ಎಲ್ಲರ ಮನಸ್ಸಿಗೆ ಬರುವ ಮೂರು ಹೆಸರುಗಳೆಂದರೆ – ಹಕ್ಕ (ಹರಿಹರ), ಬುಕ್ಕ ಮತ್ತು ಶ್ರೀ ವಿದ್ಯಾರಣ್ಯರು. ಇನ್ನೂ ಕರ್ನಾಟ ಸಿಂಹಾಸನ ಪ್ರತಿಷ್ಠಾಪನಾಚಾರ್ಯರು ಎಂದೇ ಸಂಭೋಧಿಸಲ್ಪಡುವ ಶ್ರೀ ವಿದ್ಯಾರಣ್ಯರು ಮತ್ತು ಅವರ ಗುರುಗಳ ಏಕೈಕ ಶಿಲಾಮೂರ್ತಿ ಇರುವುದು ಮಲೆನಾಡಿನ ಪುಣ್ಯಕ್ಷೇತ್ರ ಮತ್ತು ಈ ಹಿಂದೆ ಧರ್ಮಸಂಸ್ಥಾನ ಎಂದೆ ಕರೆಯಲ್ಪಡುತ್ತಿದ್ದ ಶೃಂಗೇರಿಯಲ್ಲೇ. ಇಂತಹ ವಿಶಿಷ್ಟವಾದ ಶಿಲಾಮೂರ್ತಿ ಇರುವ ಪುರಾತನ ದೇವಾಲಯದ ಜೀರ್ಣೋದ್ಧಾರದ ಪ್ರಯುಕ್ತ ೨೯ ಡಿಸೆಂಬರ್ ೨೦೨೧ರಂದು ಶ್ರೀ ಶಾರದಾ ಪೀಠದ ಸನ್ನಿಧಾನಂ ಶ್ರೀ ವಿಧುಶೇಖರ ಮಹಾಸ್ವಾಮಿಗಳು ಶಿಲಾನ್ಯಾಸ ಮತ್ತು ಭೂಮಿ ಪೂಜೆಯನ್ನು ನೆರವೇರಿಸಿದರು.

ಶೃಂಗೇರಿಯ ಶಾರದಾ ಮಠದ ಹತ್ತನೆಯ ಆಚಾರ್ಯರಾಗಿದ್ದ ವಿದ್ಯಾತೀರ್ಥರು ಯೋಗತಪಸ್ಸಿನಿಂದ ತಮ್ಮ ಭೌತಿಕ ದೇಹವನ್ನು ತಮ್ಮ ಇಷ್ಟದಂತೆ ತೊರೆಯುವ ಮುಂಚೆ ಒಂದು ಸುಂದರ ಮತ್ತು ಅಲೌಕಿಕ ವಿಗ್ರಹವೊಂದನ್ನು ನಿರ್ಮಾಣ ಮಾಡಿಸುತ್ತಾರೆ. ಈ ವಿಗ್ರಹದಲ್ಲಿ ವಿದ್ಯಾತೀರ್ಥರು ತಮ್ಮ ಇಬ್ಬರು ಶಿಷ್ಯರಾದ ಶ್ರೀ ಭಾರತೀತೀರ್ಥ ಮತ್ತು ವಿದ್ಯಾರಣ್ಯರೊಂದಿಗೆ ಬ್ರಹ್ಮ, ವಿಷ್ಣು ಮತ್ತು ಈಶ್ವರರ ಪ್ರತಿಮೆಗಳನ್ನು ಕೆತ್ತಲಾಗಿದೆ. ವಿದ್ಯಾತೀರ್ಥರು ತಮ್ಮ ಜೀವಿತಾವಧಿಯಲ್ಲಿ ಹಿಂದೆಂದೂ ಕಂಡಿರದ ಮತ್ತು ಮುಂದೆಂದೂ ಕಾಣದ ಒಂದು ಹೊಸ ಆಚರಣೆಗೆ ನಾಂದಿ ಹಾಡುತ್ತಾ ತಾವು ಕೈಗೊಳ್ಳಲು ಅಪೇಕ್ಷಿಸಿರುವ ಹನ್ನೆರಡು ವರ್ಷಗಳ ನಿರ್ವಿಘ್ನ ಲಂಬಿಕಾಯೋಗದ ಆನಂತರ ತಮ್ಮ ಶರೀರವು ರೂಪಾಂತರಗೊಳ್ಳುವ ರೂಪವನ್ನು ತಮ್ಮ ಶಿಷ್ಯೋತ್ತಮರಾದ ಭಾರತೀತೀರ್ಥ ಮತ್ತು ವಿದ್ಯಾರಣ್ಯರಿಗೆ ಈ ವಿಗ್ರಹದ ಮೂಲಕ ತೋರಿಸಿಕೊಡುತ್ತಾರೆ. ೧೩೩೩ರಲ್ಲಿ ಶ್ರೀ ಭಾರತೀತೀರ್ಥರನ್ನು ವ್ಯಾಖ್ಯಾನ ಸಿಂಹಾಸದಲ್ಲಿ ಕೂರಿಸಿ ಮಠದ ಜವಾಬ್ದಾರಿಯನ್ನು ನೀಡಿ ತಾವು ಲಂಬಿಕಾಯೋಗದ ಅನುಷ್ಠಾನಕ್ಕೆಂದು ಶಿಲಾ ವೇದಿಕೆಯ ಕೊಠಡಿಯ ಒಳಗಡೆ ಪ್ರವೇಶಿಸುತ್ತಾರೆ. ಪವಿತ್ರನದಿ ತುಂಗೇ ಸಿಂಹಗಿರಿಯಿಂದ ಮುಂದೆ ಸಾಗುತ್ತಾ ದಿಢೀರನೆ ಉತ್ತರಾಭಿಮುಖವಾಗಿ ಹರಿಯುವ ಸ್ಥಳದ ಪಕ್ಕದ ದಂಡೆಯ ಮೇಲೆ ಕೊಠಡಿಯನ್ನು ತಮ್ಮ ಕಣ್ಣುಗಾವಲಿನಲ್ಲಿ ವಿದ್ಯಾತೀರ್ಥರು ಸಿದ್ಧಪಡಿಸುತ್ತಾರೆ. ಈ ಕೊಠಡಿಯನ್ನು ಕಲ್ಲಿನಿಂದ ಮುಚ್ಚುವ ಮುಂಚೆ ಆಚಾರ್ಯರು ಯಾವುದೇ ಕಾರಣಕ್ಕೂ ಹನ್ನೆರಡು ವರ್ಷಗಳು ತುಂಬುವ ಮುನ್ನ ಈ ಕೊಠಡಿಯನ್ನು ತೆಗೆಯಬಾರದು ಎಂದು ಸೂಚಿಸುತ್ತಾರೆ. ಇದರ ತರುವಾಯ ಶ್ರೀ ಭಾರತೀತೀರ್ಥರು ಧರ್ಮ ಪ್ರಚಾರಕ್ಕೆ

'ಶ್ರೀ ಶಾರದ ಕೃಪೆ'
ಎಲ್.ಐ.ಜಿ. ೧೮೩/LSA
೧೪ನೇ 'ಎ' ಅಡ್ಡರಸ್ತೆ
೧ನೇ ಮುಖ್ಯರಸ್ತೆ, ಕೆ.ಎಚ್.ಬಿ. ಕಾಲೋನಿ
ಚಾಲುಕ್ಯನಗರ, ಗೋಪಿಶೆಟ್ಟಿ ಕೊಪ್ಪ
ಶಿವಮೊಗ್ಗ–೫೭೭೨೦೫
ಮೊ: ೯೪೮೦೩ ೫೪೫೧೪

ಶೃಂಗೇರಿ ಇಂದ ಹೊರ ಹೋದರೆ ಇನ್ನೊಂದು ಕಡೆ ಶ್ರೀ ವಿದ್ಯಾರಣ್ಯರು ಕಾಶಿಗೆ ಭೇಟಿ ನೀಡಿ ಅಲ್ಲಿಂದ ನೇರವಾಗಿ ಬಂದು ಮತಂಗ ಪರ್ವತದಲ್ಲಿ ಕಠಿಣ ತಪಸ್ಸನ್ನು ಕೈಗೊಳ್ಳುತ್ತಾರೆ. ಇನ್ನೂ ಶೃಂಗೇರಿಯಲ್ಲಿ ಕೆಲವು ಭಟ್ಟರು ಮತ್ತು ಮಠದ ಪರಿಚಾರಕರು ತಮ್ಮ ಪೆದ್ದು ಕುತೂಹಲದ ಕಾರಣ ೧೩೩೮ರಲ್ಲಿ ಶಿಲಾಕೊಠಡಿಯ ಕಲ್ಲು ಮುಚ್ಚಳವನ್ನು ತೆಗೆದು ಬಿಡುತ್ತಾರೆ. ಆ ವೇಳೆಗೆ ಆ ಮಹಾತ್ಮರ ಶರೀರವು ಅದೃಶ್ಯವಾಗಿ ಅದರ ಜಾಗದಲ್ಲಿ ನಮೂನೆಗೆ ಅನುಗುಣವಾಗಿ ಬದಲಾವಣೆಯ ಹಂತದಲ್ಲಿದ್ದ ಮೇಲ್ಭಾಗದ ಶಿವಲಿಂಗವೊಂದು ಮಾತ್ರ ಗೋಚರವಾಯಿತು. ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿದ್ಯಾರಣ್ಯರ ಕನಸಿನಲ್ಲಿ ಶ್ರೀ ವಿದ್ಯಾತೀರ್ಥರು ಕಾಣಿಸಿಕೊಂಡು ತಮ್ಮ ನಿಯಮವನ್ನು ಮುರಿದಿರುವ ಕಾರಣ ತಾವು ಮಾತು ಕೊಟ್ಟಿದ್ದ ಘಟನೆಯು ಇನ್ನೆಂದೂ ಘಟಿಸುವುದಿಲ್ಲ ಎಂದು ತಿಳಿಯಪಡಿಸಿ ಬೇರೊಂದು ಶಿವಲಿಂಗವನ್ನು ಅಲ್ಲಿ ಪ್ರತಿಷ್ಠಾಪಿಸ ಬೇಕೆಂದು ಆದೇಶಿಸುತ್ತಾರೆ. ಶ್ರೀ ಭಾರತೀತೀರ್ಥ ಮತ್ತು ವಿದ್ಯಾರಣ್ಯರು ವಿಜಯನಗರದ ರಾಯರ ಸಹಾಯದಿಂದ ಶ್ರೀ ವಿದ್ಯಾತೀರ್ಥರು ಯಾವ ಶಿಲಾವೇದಿಕೆಯ ಒಳಗಡೆ ಲಂಬಿಕಾ ಯೋಗದಲ್ಲಿ ನಿರತರಾಗಿದ್ದರೋ ಅದರ ಮೇಲೆ ವಿದ್ಯಾಶಂಕರ ದೇವಾಲಯವನ್ನು ಅವರ ಹೆಸರಿನಲ್ಲಿ ನಿರ್ಮಿಸಿ ಅದರಲ್ಲಿ ವಿದ್ಯಾಶಂಕರಯಂಬ ಹೆಸರಿನ ನೂತನ ಶಿವಲಿಂಗವೊಂದನ್ನು ಪ್ರತಿಷ್ಠೆ ಮಾಡುತ್ತಾರೆ. ವಿದ್ಯಾತೀರ್ಥರು ರಚಿಸಿದ ಶಿಲಾ ವಿಗ್ರಹದ ಅನುಗುಣವಾಗಿ ಪೂರ್ವಾಭಿಮುಖವಾಗಿ ವಿದ್ಯಾಶಂಕರ ದೇವಾಲಯವನ್ನು ನಿರ್ಮಿಸಿ ದಕ್ಷಿಣದಲ್ಲಿ ಬ್ರಹ್ಮ, ಪಶ್ಚಿಮದಲ್ಲಿ ವಿಷ್ಣು ಮತ್ತು ಉತ್ತರದಲ್ಲಿ ಈಶ್ವರನನ್ನು ಪ್ರತಿಷ್ಠಾಪಿಸುತ್ತಾರೆ. ಇನ್ನೂ ಸಿಂಹಗಿರಿಯಲ್ಲಿದ್ದ ನಮೂನೆಯನ್ನೇ ಚತುರ್ಮೂರ್ತಿ ವಿದ್ಯೇಶ್ವರ ಎಂಬ ಹೆಸರಿನಿಂದ ಪ್ರತಿಷ್ಠೆ ಮಾಡಿ ಪೂಜೆಗೆ ವ್ಯವಸ್ಥೆ ಮಾಡಲಾಯಿತು. ಶ್ರೀ ವಿದ್ಯಾತೀರ್ಥರು ಇಂದಿಗೂ ಸಹಾ ಇಲ್ಲಿ (ವಿದ್ಯಾಶಂಕರ ದೇವಾಲಯದಲ್ಲಿ) ಲಂಬಿಕಾ ಯೋಗದಲ್ಲಿ ನಿರತರಾಗಿದ್ದಾರೆ ಎಂಬ ಬಲವಾದ ನಂಬಿಕೆ ಸ್ಥಳೀಯರಲ್ಲಿ ಇದೆ. ದೇವಗಣಗಳು ರಾತ್ರಿ ವೇಳೆಯಲ್ಲಿ ಬಂದು ಪ್ರತಿದಿನ ಇವರ ಪೂಜೆಗೈಯುತ್ತಾರೆ, ಈಗಲೂ ನಡುರಾತ್ರಿಯಲ್ಲಿ ಅವರು (ದೇವಗಣಗಳು) ಮಾಡುವ ಘಂಟೆಗಳ ಸದ್ದು ಕೇಳಿಬರುತ್ತದೆ ಎಂದು ನಂಬಿರುತ್ತಾರೆ. ಈ ಕಾರಣದಿಂದಲೇ ಇಂದಿಗೂ ಶೃಂಗೇರಿ ಮಠದಿಂದ ಹೊರಡಿಸಲಾಗುವ ಶ್ರೀಮುಖಗಳೆಲ್ಲ "ಶ್ರೀ ವಿದ್ಯಾಶಂಕರ" ಎಂಬ ಮುದ್ರೆಯನ್ನೇ ಒಳಗೊಂಡಿದೆ.

ಸಿಂಹಗಿರಿಯ ಚತುರ್ಮೂರ್ತಿ ವಿದ್ಯೇಶ್ವರ ದೇವಾಲಯ: ಈ ದೇವಾಲಯವು ಶೃಂಗೇರಿಯ ಮೊದಲ ಅಗ್ರಹಾರ ಸಿಂಹಗಿರಿಯ ಗುಡ್ಡದ ಮೇಲಿರುವ ಬಂಡೆಯ ಮೇಲೆ ಕಲ್ಲಿನಿಂದ ಕಟ್ಟಿದ್ದು ಇದಕ್ಕೆ ಹೆಂಚಿನ ಮಾಡು, ಕಲ್ಲಿನ ಅಡಿಪಾಯ ಮತ್ತು ಕಲ್ಲಿನ ಸೋಪಾನದ ಮೆಟ್ಟಿಲನ್ನು ನಿರ್ಮಿಸಲಾಗಿತ್ತು. ಈ ದೇವಾಲಯವು ಈಶಾನ್ಯಮುಖವಾಗಿದ್ದು ಇದರ ಬಾಗಿಲಲ್ಲಿ ನಿಂತು ಉತ್ತರಕ್ಕೆ ಮುಖ ಮಾಡಿದರೆ ತುಂಗೆಯ ಆಚೆ ಇರುವ ಶಾರದಾ ದೇವಾಲಯ, ವಿದ್ಯಾಶಂಕರ ದೇವಾಲಯ ಮತ್ತು ಮಠದ ನೂತನ ಪ್ರವೇಶ ಗೋಪುರವನ್ನು ಸ್ಪಷ್ಟವಾಗಿ ಕಾಣಬಹುದು. ತುಂಗೇ ನದಿಗೆ ಸಿಂಹಗಿರಿಯಿಂದ ಕೆಳಗೆ ಹೋಗುವ ದಾರಿಯ ಮದ್ಯದಲ್ಲಿ ಕಲ್ಲಿನ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗುಡಿಯ ಒಳಗೆ ಇಪ್ಪತ್ತು ನಾಲ್ಕು ದಳಗಳ ಕಮಲದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಿದ ಶಿಲ್ಪದ ನಾಲ್ಕು ದಿಕ್ಕಿನಲ್ಲಿ ಕ್ರಮವಾಗಿ ಶ್ರೀ ವಿದ್ಯಾ ತೀರ್ಥರು, ಬ್ರಹ್ಮ, ವಿಷ್ಣು ಮತ್ತು ಈಶ್ವರನನ್ನು ಕೆತ್ತಲಾಗಿದೆ. ಇವುಗಳ ಮೇಲ್ಭಾಗದಲ್ಲಿ ಮತ್ತೆ ಇನ್ನೊಂದು ಇಪ್ಪತ್ತು ನಾಲ್ಕು ದಳಗಳ ಪಾಣಿಪೀಠದ ಮೇಲೆ ಲುಂಬಿನಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಕೆಳಗಿನ ಮತ್ತು ಮೇಲಿನ ಪಾಣಿಪೀಠದ ಯೋನಿ ವಾಯುವ್ಯ ದಿಕ್ಕಿಗೆ ಮುಖ ಮಾಡಿರುವುದು ವಿಶೇಷ. ಇನ್ನೂ ಈ ಚತುರ್ಮುಖ ಶಿಲಾ ಮೂರ್ತಿಯನ್ನು ಈ ಕೆಳಗಿನಂತೆ ವರ್ಣಿಸಬಹುದು.



ಈಶಾನ್ಯ ದಿಕ್ಕು: ಶ್ರೀ ವಿದ್ಯಾತೀರ್ಥರು ಪದ್ಮಾಸನದಲ್ಲಿ ಧ್ಯಾನಮುದ್ರೆಯ ಭಂಗಿಯಲ್ಲಿ ಕುಳಿತಿದ್ದು ಇವರ ಬಲಭಾಗದಲ್ಲಿ ದಂಡ ಮತ್ತು ಅದರ ಮೇಲ್ಭಾಗದಲ್ಲಿ ಕಟ್ಟಿರುವ ಬ್ರಹ್ಮಸೂತ್ರವನ್ನು

ಗಮನಿಸಬಹುದು. ಶ್ರೀ ವಿದ್ಯಾತೀರ್ಥರ ಅಕ್ಕಪಕ್ಕದಲ್ಲಿ ಅಂದರೆ ಬಲಕ್ಕೆ ಶ್ರೀ ಭಾರತೀತೀರ್ಥರು ಮತ್ತು ಎಡಕ್ಕೆ ಶ್ರೀ ವಿದ್ಯಾರಣ್ಯರನ್ನು ಕಾಣಬಹುದು. ಶ್ರೀ ಶಾರದಾ ಮಠದ ಹತ್ತು, ಹನ್ನೊಂದು ಮತ್ತು ಹನ್ನೆರಡನೆಯ ಪೀಠಾಧಿಪತಿಗಳು ಜೀವಂತ ಇರುವಾಗಲೇ ನಿರ್ಮಾಣವಾಗಿರುವ ಈ ಶಿಲಾಮೂರ್ತಿ ಬಹಳ ವಿಶೇಷವಾಗಿದೆ. ಶ್ರೀ ವಿದ್ಯಾತೀರ್ಥ ಗುರುಗಳ ಕಿವಿ ಮತ್ತು ಈ ಮೂವರು ಧರಿಸಿರುವ ಕೌಪೀನ ನಮ್ಮ ಗಮನವನ್ನು ಸೆಳೆಯುತ್ತದೆ. ಅಂದಿನಿಂದ ಇಂದಿನವರೆಗೂ ಒಬ್ಬ ಸನ್ಯಾಸಿಗೆ ಕೌಪೀನ ವಸ್ತ್ರ ಬಹಳ ಪ್ರಮುಖ ವಾಗಿರುವುದನ್ನು ಶ್ರೀ ಶಂಕರಾಚಾರ್ಯರು ರಚಿಸಿದ "ಕೌಪೀನ ಪಂಚಕಂ" ದಿಂದ ತಿಳಿದುಕೊಳ್ಳಬಹುದು. ಶ್ರೀ ವಿದ್ಯಾತೀರ್ಥರ ಮೇಲ್ಭಾಗದಲ್ಲಿ ಇರುವ ಪ್ರಭಾವಳಿಯಲ್ಲಿ ನಾಲ್ಕು ಚತುರ್ಭುಜ ಲಕ್ಷ್ಮೀ, ಕೀರ್ತಿಮುಖ ಮತ್ತು ಲಕ್ಷ್ಮೀನರಸಿಂಹನನ್ನು ಕಾಣಬಹುದು. ಲಕ್ಷ್ಮೀಯ ಮೇಲಿನ ಎರಡು ಕೈಯಲ್ಲಿ ಕಮಲದ ಹೂವು ಇದ್ದರೆ ಕೆಳಗಿನ ಬಲಗೈ ಅಭಯಮುದ್ರೆ ಮತ್ತು ಎಡಗೈ ವರದಮುದ್ರೆಯನ್ನು ಸೂಚಿಸುತ್ತದೆ. ನರಸಿಂಹನ ಮೇಲಿನ ಕೈಯಲ್ಲಿ ಚಕ್ರ ಮತ್ತು ಶಂಖ ಇದ್ದರೆ ಎಡಗೈ ಲಕ್ಷ್ಮೀಯ ಹಿಂಬದಿಯಿಂದ ಮುಂದೆಬಂದು ವರದಮುದ್ರೆಯಲ್ಲಿ ಮತ್ತು ಬಲಗೈ ಅಭಯಮುದ್ರೆಯಲ್ಲಿ ಇರುವುದು ಗಮನಾರ್ಹ. ನರಸಿಂಹನ ಎಡತೊಡೆಯ ಮೇಲೆ ಲಕ್ಷ್ಮೀ ಆಸೀನರಾಗಿದ್ದು ಬಲಗೈಯಲ್ಲಿ ಕಮಲದ ಹೂವು ಮತ್ತು ಎಡಗೈ ವರದಮುದ್ರೆಯಲ್ಲಿ ಇದೆ. ಕೆಳಭಾಗದ ಪೀಠದಲ್ಲಿ ಕೂರ್ಮನನ್ನು ಕಾಣಬಹುದು. ಚತುರ್ಮುಖ ವಿದ್ಯೇಶ್ವರ ಮೂರ್ತಿಯ ಕೆಳ ಬಾಗದಲ್ಲಿ ಇರುವ ಪೀಠ ಮತ್ತು ಮೇಲ್ಭಾಗದಲ್ಲಿ ಇರುವ ಲಂಬಿಕ ಲಿಂಗದ ಕೆಳಗೆ ಇರುವ ಪೀಠ ಎರಡು ಸಹಾ ಕಮಲದ ದಳಗಳ ಆಕೃತಿಯನ್ನು ಹೊಂದಿದ್ದು ಒಂದು ಕೆಳಮುಖವಾಗಿದ್ದರೆ ಇನ್ನೊಂದು ಮೇಲ್ಮುಖವಾಗಿದೆ.





ಆಗ್ನೇಯ ದಿಕ್ಕು: ಮೂರು ತಲೆಯುಳ್ಳ ಚತುರ್ಭುಜ ಬ್ರಹ್ಮನ ವಿಗ್ರಹ ತುಂಬಾ ಸೊಗಸಾಗಿದೆ. ಮೇಲಿನ ಕೈಯಲ್ಲಿ ಸೃಕ್ ಸೃವ ಇದ್ದರೆ ಕೆಳಗಿನ ಬಲಗೈ ಅಭಯಮುದ್ರೆ ಮತ್ತು ಎಡಗೈ ವರದಮುದ್ರೆಯನ್ನು ಸೂಚಿಸುತ್ತದೆ. ಮೇಲ್ಭಾಗದಲ್ಲಿ ಮಕರ ಅಲಂಕೃತ ತೋರಣ ಮತ್ತು ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳು ಹಾಗೂ ಕೀರ್ತಿಮುಖವನ್ನು ಗಮನಿಸಬಹುದು. ಬ್ರಹ್ಮನ ಕಾಲಿನ ಕೆಳಭಾಗದ ಪೀಠದಲ್ಲಿ ಬ್ರಹ್ಮನ ವಾಹನ ಹಂಸನನ್ನು ಕಾಣಬಹುದು.

ನೈರುತ್ಯ ದಿಕ್ಕು: ಚತುರ್ಭುಜ ವಿಷ್ಣುವಿನ ವಿಗ್ರಹ ತುಂಬಾ ಸೊಗಸಾಗಿದ್ದು ಮೇಲಿನ ಕೈಯಲ್ಲಿ ಚಕ್ರ ಶಂಖ ಇದ್ದರೆ ಕೆಳಗಿನ ಬಲಗೈ ಧ್ಯಾನಮುದ್ರೆ ಮತ್ತು ಎಡಗೈ ವರದಮುದ್ರೆಯನ್ನು ಸೂಚಿಸುತ್ತದೆ. ಮೇಲ್ಭಾಗದಲ್ಲಿ ಮಕರ ಅಲಂಕೃತ ತೋರಣ ಮತ್ತು ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳು, ಸಪ್ತಮುಖೀ ಶೇಷ ಹಾಗೂ ಕೀರ್ತಿಮುಖವನ್ನು ಗಮನಿಸಬಹುದು. ವಿಷ್ಣುವಿನ ಕಾಲಿನ ಕೆಳಭಾಗದ ಪೀಠದಲ್ಲಿ ಅವನ ವಾಹನ ಗರುಡನನ್ನು ಕಾಣಬಹುದು.

ವಾಯುವ್ಯ ದಿಕ್ಕು: ನಾಲ್ಕು ತಲೆಯುಳ್ಳ ಚತುರ್ಭುಜ ಈಶ್ವರನ ವಿಗ್ರಹ ತುಂಬಾ ಸೊಗಸಾಗಿದೆ. ಮೇಲಿನ ಬಲಗೈಯಲ್ಲಿ ಪರಶು (ಆಯುಧ) ಇದ್ದರೆ ಎಡಗೈಯಲ್ಲಿ ಮೃಗಿ ಹಾಗೂ ಕೆಳಗಿನ ಬಲಗೈ ಅಭಯಮುದ್ರೆ ಮತ್ತು ಎಡಗೈ ವರದಮುದ್ರೆಯನ್ನು ಸೂಚಿಸುತ್ತದೆ. ಮೇಲ್ಭಾಗದಲ್ಲಿ ಪುರುಷ ಮೃಗ ಹಲಗಾರತಿ ಮಾಡುತ್ತಿರುವ ಅಲಂಕೃತ ತೋರಣ ಮತ್ತು ಪ್ರಭಾವಳಿಯಲ್ಲಿ ಅಷ್ಟದಿಕ್ಪಾಲಕರು ಹಾಗೂ ಕೀರ್ತಿಮುಖವನ್ನು ಗಮನಿಸಬಹುದು. ಈಶ್ವರನ ಕಾಲಿನ ಕೆಳಭಾಗದ ಪೀಠದಲ್ಲಿ ಅವನ ವಾಹನ

ನಂದಿಯನ್ನು ಕಾಣಬಹುದು. ಪ್ರತಿಮಾಶಾಸ್ತ್ರದ ಪ್ರಕಾರ ಈಶ್ವರನ ಈ ರೂಪವನ್ನು 'ಚಂದ್ರಶೇಖರಮೂರ್ತಿ' ಎಂದು ಕರೆಯುತ್ತಾರೆ. ಇದಕ್ಕೆ ಪುಷ್ಟಿ ನೀಡುವಂತೆ ಶಿವನ ತಲೆಯ ಮೇಲ್ಭಾಗದಲ್ಲಿ ಬಲಕ್ಕೆ ಚಂದ್ರ ಹಾಗೂ ಎಡಕ್ಕೆ ಗಂಗೆಯನ್ನು ಕಾಣಬಹುದು.

ವಿದ್ಯಾಶಂಕರ ದೇವಾಲಯದ ವಿನ್ಯಾಸದಲ್ಲಿ ಚತುರ್ಮೂರ್ತಿ ವಿದ್ಯೇಶ್ವರ ದೇವಾಲಯದ ಪಾತ್ರ: ಬಹುಶಃ ಇಂದಿನ ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವ ಅತ್ಯದ್ಭುತ ವಾಸ್ತುಶಾಸ್ತ್ರದ ಅನುಗುಣವಾಗಿ ನಿರ್ಮಾಣ ಗೊಂಡ ದೇವಾಲಯಗಳಲ್ಲಿ ಶ್ರೀ ವಿದ್ಯಾಶಂಕರ ದೇವಾಲಯ ಸಹಾ ಒಂದಾಗಿದೆ. ನಮ್ಮ ರಾಜ್ಯದ ಪುರಾತತ್ವ ತಜ್ಞರಾದ ಶ್ರೀ ಆರ್. ನರಸಿಂಹಾಚಾರ್ ಅವರ ಅಭಿಪ್ರಾಯದಲ್ಲಿ ವಿದ್ಯಾಶಂಕರ ದೇವಾಲಯದ ನಿರ್ಮಾಣದ ಕಾಲಘಟ್ಟ ಕ್ರಿ.ಶ. ೧೩೫೭ ಅಥವಾ ಕ್ರಿ.ಶ. ೧೩೫೮ ಆಗಿರಬಹುದು. ವಿದ್ಯಾತೀರ್ಥರ ಕೆಳಭಾಗದಲ್ಲಿ ಇರುವ ಕೂರ್ಮದಂತೆ ವಿದ್ಯಾಶಂಕರ ದೇವಾಲಯವನ್ನು ಕೂರ್ಮ ಪೀಠ ವಿನ್ಯಾಸದ ಅಡಿಪಾಯದ ಮೇಲೆ ನಿರ್ಮಾಣ ಮಾಡಲಾಗಿದೆ. ಕೂರ್ಮನ ಮೈಯಿಂದ ಹೊರ ಚಾಚುವ ಅದರ ನಾಲ್ಕು ಕಾಲು, ತಲೆ ಮತ್ತು ಬಾಲದಂತೆ ವಿದ್ಯಾಶಂಕರ ದೇವಾಲಯಕ್ಕೆ ಒಟ್ಟು ಆರು ದ್ವಾರಗಳನ್ನು ನೀಡಲಾಗಿದೆ. ಚತುರ್ಮೂರ್ತಿ ವಿದ್ಯೇಶ್ವರ ದೇವಾಲಯದ ಶಿಲಾಮೂರ್ತಿಯಂತೆ ಶ್ರೀ ವಿದ್ಯಾಶಂಕರ ದೇವಾಲಯದಲ್ಲಿ ಪ್ರದಕ್ಷಿಣಾಕಾರವಾಗಿ ಶ್ರೀ ವಿದ್ಯಾಶಂಕರ ಲಂಬಿನಿ ಲಿಂಗ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ವಿದ್ಯಾಶಂಕರ ದೇವಾಲಯದ ಹೊರ ಗೋಡೆಯ ಮೇಲೆ ಇರುವ ವಿಷ್ಣುವಿನ ದಶಾವತಾರ, ಅಷ್ಟದಿಕ್ಪಾಲಕರು ಮತ್ತು ಲಂಬಿನಿ ಹಠ ಯೋಗದ ವಿವಿಧ ಭಂಗಿಗಳ ಕೆತ್ತನೆ ಚತುರ್ಮೂರ್ತಿ ವಿದ್ಯೇಶ್ವರ ಶಿಲಾ ಮೂರ್ತಿಯ ಪ್ರಭಾವವನ್ನು ಪುಷ್ಟೀಕರಿಸುತ್ತದೆ.

ಈ ಶಿಲಾಮೂರ್ತಿಯ ಕಾಲಮಾನವನ್ನು ಅದರ ಕೆತ್ತನೆಯ ಶೈಲಿಯ ಪ್ರಕಾರ ಸರಿಸುಮಾರು ಕ್ರಿ.ಶ. ೧೩೦೦ ಇಂದ ಕ್ರಿ.ಶ. ೧೩೪೩ರ ಕಾಲಮಾನವಾಗಿದ್ದು ವಿದ್ಯಾತೀರ್ಥರು ತಮ್ಮ ಜೀವಿತಾವಧಿಯಲ್ಲಿ ಈ ಅಭೂತಪೂರ್ವ ಶಿಲಾ ಮೂರ್ತಿಯನ್ನು ನಿರ್ಮಿಸಿದ ಬಗ್ಗೆ ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ.

ಆಕರಗ್ರಂಥಗಳು

೧. Mysore Archeological Survey Report (M.A.R) 1931.

೨. The records of the sringeri dharmasamsthana by A.K. Shastry.

೩. ಪವಿತ್ರ ಕ್ಷೇತ್ರ ಶೃಂಗೇರಿ.

◆◆

೩೦

ಪ್ರವೀಣ್ ದೊಡ್ಡಗೌಡ್ರ

ಅರೆಬಿಳಿಚಿಯ ಅವಶೇಷಗಳ ಶೋಧ

ಪ್ರಾಚಾರ್ಯರು ಹಾಗೂ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಶ್ರೀ ಮೃತ್ಯುಂಜಯ ಶಿವಾಚಾರ್ಯ
ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ
ಕಾಲೇಜು. ಹೊನ್ನಾಳಿ
ಶಿವಮೊಗ್ಗ ಜಿಲ್ಲೆ
ಮೊ: ೯೦೮೮೮ ೨೪೬೧೪


ಈ ಲೇಖನದಲ್ಲಿ ಶಿವಮೊಗ್ಗ ಜಿಲ್ಲೆಯ ಅರೆಬಿಳಿಚಿ ಗ್ರಾಮದಲ್ಲಿ ಶೋಧಿಸಿರುವ ರಾಷ್ಟ್ರಕೂಟರ ಕಾಲದ ದೇವಾಲಯಗಳ ಅವಶೇಷಗಳ ಕುರಿತು ವಿಶ್ಲೇಷಿಸಲಾಗಿದೆ. ೮ನೇ ಶತಮಾನದಿಂದ ೧೦ನೇ ಶತಮಾನದ ಕೊನೆಯ ಪಾದದವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಭಾಗಗಳನ್ನು ಆಳಿದ ರಾಜಮನೆತನವಾದ ರಾಷ್ಟ್ರಕೂಟರು ಆರಂಭದಲ್ಲಿ ಬಾದಾಮಿ ಚಾಳುಕ್ಯರ ಆಶ್ರಿತರಾಗಿ ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳ ಪೈಕಿ ಉಳಿದುಬಂದಿರುವ ದೇವಾಲಗಳ ಸಂಖ್ಯೆ ತೀರಾ ಕಡಿಮೆ. ಈಗಿನ ಕರ್ನಾಟಕವನ್ನಷ್ಟೇ ಪರಿಗಣಿಸಿದರೆ ಆ ಸಂಖ್ಯೆ ತೀರಾ ಗೌಣ. ರಾಷ್ಟ್ರಕೂಟರ ಕಾಲದ ದೇವಾಲಯಗಳ ನಿರ್ಮಾಣ ಒಂದನೇ ಕೃಷ್ಣನ ಕಾಲದಿಂದ ಪ್ರಾರಂಭಗೊಂಡಿತು. ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಎಲ್ಲೋರಾದಲ್ಲಿ ನಿರ್ಮಾಣಗೊಂಡಿರುವ ಕೈಲಾಸನಾಥ ದೇವಾಲಯವು ವಾಸ್ತುಶಿಲ್ಪ ಶೈಲಿಯ ಪ್ರಯೋಗಕ್ಕೆ ಒಂದು ಉತ್ತಮ ಉದಾಹರಣೆ. ಮುಂಬೈ ನಗರಕ್ಕೆ ಅತೀ ಸಮೀಪದಲ್ಲಿರುವ ಎಲಿಫೆಂಟಾ, ಮತ್ತು ಎಲ್ಲೋರಾದ ಗುಹಾಲಯಗಳಲ್ಲಿ ರಾಷ್ಟ್ರಕೂಟರಕಾಲದ ಹೆಚ್ಚಿನ ಪ್ರಮಾಣದ ನಿರ್ಮಾಣಗಳಿವೆ. ಕರ್ನಾಟಕದಲ್ಲಿ ರಾಷ್ಟಕೂಟರ ಕಾಲದ ವಾಸ್ತು ನಿರ್ಮಿತಿಗಳು ಇಲ್ಲ ಎನ್ನುವಂತಿಲ್ಲ. ಬಾಗಲಕೋಟೆ ಜಿಲ್ಲೆಯ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಗುಲ್ಬರ್ಗ ಜಿಲ್ಲೆಯ ಸಿರಿವಾಳ, ಕುಕ್ಕನೂರು, ನೆಲಮಂಗಲ ತಾಲೂಕಿನ ಮಣ್ಣೆಯ ಶ್ರೀವಿಜಯ ಜಿನಾಲಯ, ಶ್ರವಣಬೆಳಗೊಳದ ರಾಷ್ಟ್ರಕೂಟರ ಬಸದಿಗಳು, ಹಳ್ಳೂರು, ಸವಡಿ, ರೋಣ, ಇಂಡಿ, ಬೇಲೂರು ಕಳಸಾಪುರ, ನರೇಗಲ್, ಕುಡುತಿನಿ, ಕೊಳಗಲ್ಲು, ಶಿರಸ್ತಹಳ್ಳಿ, ಮಾವಳ್ಳಿ ಗದಗ, ಲಕ್ಷ್ಮೇಶ್ವರ, ಲಕ್ಕುಂಡಿ, ರಾಜೂರು, ಗೌಜಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳು ಮತ್ತು ಬಸದಿಗಳು ನಿರ್ಮಾಣವಾಗಿವೆ. ಈ ದೇವಾಲಗಳ ಪಟ್ಟಿಗೆ ಸೇರುವ ಮತ್ತೊಂದು ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ ದೇವಾಲಯವನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಅರೆಬಿಳಚಿ ಗ್ರಾಮದಲ್ಲಿ ಶೋಧಿಸಲಾಗಿದೆ. ಆ ದೇವಾಲಯದ ವಿವರಣೆಯನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ. ಅದಕ್ಕೂ ಪೂರ್ವದಲ್ಲಿ ದೊರೆತಿರುವ ಅವಶೇಷಗಳು ರಾಷ್ಟಕೂಟರ ಕಾಲಕ್ಕೆ ಸಂಬಂಧಿಸಿದವೆಂದು ತಿಳಿಸುವ ದೃಷ್ಟಿಕೋನದಿಂದ ರಾಷ್ಟ್ರಕೂಟರ ಕಾಲದ ದೇವಾಲಯದ ಲಕ್ಷಣವನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ರಾಷ್ಟ್ರಕೂಟರ ಕಾಲದ ದೇವಾಲಯದ ಲಕ್ಷಣಗಳು

೧ ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿ ಎರಡು ಮಾದರಿಯ ಕಂಬಗಳು ಕಂಡುಬರುತ್ತದೆ. ೧) ಬೊದಿಗೆಯ ಕೆಳಭಾಗದಲ್ಲಿ ಘಟಪಲ್ಲವ ಹೊಂದಿರುವ ವೃತ್ತಾಕಾರದ



ಇಟ್ಟಿಗೆ ತಳಪಾಯ



ಹಂಚಿನ ಅವಶೇಷಗಳು

ಕಂಬಗಳು ೨) ಚೌಕಾಕಾರದ ಕಂಬಗಳು. ಸಾಮಾನ್ಯವಾಗಿ ಕಂಬಗಳ ಮೇಲೆ ವಿವಿಧ ಶಿಲ್ಪಗಳ ಕೆತ್ತನೆ ಕಂಡುಬರುತ್ತದೆ. ಭೈರವಿ, ತ್ರಿಪುರಾಂತಕ, ನಟರಾಜ, ಗಂಧರ್ವ, ವಿಷ್ಣು, ಮಹಿಷಮರ್ದಿನಿ ಶಿಲ್ಪಗಳು.

೨ ಇವರ ಕಾಲದ ಅತ್ಯಂತ ದೊಡ್ಡ ದೇವಾಲಯಗಳು ಗರ್ಭಗೃಹ, ಅಂತರಾಳ ನವರಂಗ ಮಂಟಪ ಭಾಗಗಳನ್ನು ಹೊಂದಿರುತ್ತವೆ.

೩ ರಾಷ್ಟ್ರಕೂಟರ ಕಾಲದಲ್ಲಿ ಮೂರು ಬಗೆಯ ಶಿಲೆಗಳನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಲಾಗಿದೆ. ಇಂದಿನ ಬಾಗಲಕೋಟೆ ಪ್ರದೇಶದ ಐಹೊಳೆ, ಪಟ್ಟದಕಲ್ಲು ಮಹಾಕೂಟ, ಗೂಡೂರು, ನಂದವಾಡಿ ಪ್ರದೇಶದಲ್ಲಿ ದೇವಾಲಯಗಳನ್ನು ನಿರ್ಮಿಸಲು ಕೆಂಪು ಮರಳುಗಲ್ಲುನ್ನು ಹಾಗೂ ಬಳ್ಳಾರಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಕುಡುತಿನಿ, ಹಂಪಿ, ಸಿರಿವಾಳದ ದೇವಾಲಯಗಳನ್ನು ನಿರ್ಮಿಸಲು ಗ್ರಾನೈಟ್‌ಕಲ್ಲು ಮತ್ತು ಬೆಳಗಾವಿ ಜಿಲ್ಲೆಯ ಹುಲಿಗಲ, ಹರಪನಹಳ್ಳಿ ತಾಲೂಕಿನ ಹಳ್ಳಿಕೆರೆ ಪ್ರದೇಶದಲ್ಲಿನ ದೇವಾಲಯಗಳನ್ನು ನಿರ್ಮಿಸಲು ಬಳಪದ ಕಲ್ಲು, ಬಳಸಿರುವುದು ಕಂಡುಬರುತ್ತದೆ.

ಅರೆಬಿಳಿಚಿಯ ರಾಷ್ಟ್ರಕೂಟರಕಾಲದ ಶೈವ ದೇವಾಲಯ

ರಾಷ್ಟ್ರಕೂಟರ ಕಾಲದ ಶೈವ ದೇವಾಲಯದ ಅವಶೇಷಗಳು ಭದ್ರಾವತಿ ತಾಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿ ಕಂಡುಬರುವ ಅರೆಬಿಳಿಚಿ ಗ್ರಾಮದಲ್ಲಿ ಪತ್ತೆಯಾಗಿವೆ. ಅರೆಬಿಳಿಚಿಯಿಂದ ದಕ್ಷಿಣದ ಕಡೆಗೆ ಸುಮಾರು ಒಂದು ಕಿ.ಮೀ. ಚಲಿಸಿದರೆ ದೇವಾಲಯದ ಅವಶೇಷಗಳು ದೊರೆತ ಸ್ಥಳ ಕಂಡ ಬರುತ್ತದೆ. ಈ ಸ್ಥಳವು ವಡ್ಡರಹಟ್ಟಿ ಹೊಸಳ್ಳಿ ವಾಯುವ್ಯ ಗಡಿ ಭಾಗದಲ್ಲಿರುವ ಜಮೀನಿನಲ್ಲಿದೆ. ಜಮೀನಿನ ಮಧ್ಯಭಾಗದಲ್ಲಿ ೧೫ ಅಡಿ ಉದ್ದ ೧೨ ಅಡಿ ಅಗಲ ಹಾಗೂ ೫ ಅಡಿ ಎತ್ತರದ ದಿಬ್ಬವು ಕಂಡುಬರುತ್ತದೆ. ಆದಿಬ್ಬದಲ್ಲಿ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ ದೇವಾಲಯದ ಅವಶೇಷಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಇಟ್ಟಿಗೆ ತಳಪಾಯ

ಜಮೀನಿನ ಮಧ್ಯ ಭಾಗದಲ್ಲಿರುವ ದಿಬ್ಬದ ಸುತ್ತಲೂ ಎರಡು ಅಡಿ ಎತ್ತರದ ಇಟ್ಟಿಗೆಯಿಂದ ನಿರ್ಮಿಸಿದ ದೇವಾಲಯದ ತಳಪಾಯ ಕಂಡುಬರುತ್ತದೆ. ಪೂರ್ಣ ಪ್ರಮಾಣದಲ್ಲಿ ಸುಟ್ಟಿರುವ ಇಟ್ಟಿಗೆಗಳನ್ನು ಬಳಸಿ ದೇವಾಲಯದ ತಳಪಾಯವನ್ನು ನಿರ್ಮಿಸಲಾಗಿದೆ.

ಹಂಚಿನ ಅವಶೇಷಗಳು

ಜಮೀನಿನ ಮಧ್ಯಭಾಗದಲ್ಲಿರುವ ದಿಬ್ಬದ ಮೇಲ್ಭಾಗದ ಸುತ್ತಲೂ ಪ್ರಾರಂಭಿಕ ಮಧ್ಯಯುಗಕ್ಕೆ ಸಂಬಂಧಿಸಿದ ಹಂಚಿನ ಅವಶೇಷಗಳು ಹಾಗೂ ಮಡಿಕೆ ಚೂರುಗಳು ದೊರೆಯುತ್ತವೆ. ಈ ದೇವಾಲಯದ ಮೇಲ್ಚಾವಣಿಯನ್ನು ಪೂರ್ಣ ಪ್ರಮಾಣದಲ್ಲಿ ಸುಟ್ಟ ಹಂಚುಗಳನ್ನು ಬಳಸಿ ನಿರ್ಮಿಸಲಾಗಿತ್ತು ಎಂದು ಹೇಳಬಹುದು. ಇದಕ್ಕೆ ಸಾಕ್ಷಿ ಎಂಬಂತೆ ದಿಬ್ಬದ ಮೇಲ್ಭಾಗದಲ್ಲಿ ಸಾಕಷ್ಟು ಹಂಚಿನ ಅವಶೇಷಗಳು ದೊರೆಯುತ್ತವೆ. ಈ ಹಂಚಿನ ಅವಶೇಷಗಳು ೮ ರಿಂದ ೯ನೇ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ಹಂಚು ಪೂರ್ಣ ಪ್ರಮಾಣದಲ್ಲಿ ಸುಡಲ್ಪಟ್ಟಿದ್ದು ಅದರ ಬಣ್ಣವೂ ಕೈಗೆ ತಾಗುವುದಿಲ್ಲ.

ಬಾಗಿಲವಾಡ

ದಿಬ್ಬದ ಮಧ್ಯ ಭಾಗದಲ್ಲಿ ಭಗ್ನಗೊಂಡಿರುವ ಬಾಗಿಲವಾಡದ ಅವಶೇಷಗಳು ಕಂಡುಬರುತ್ತದೆ. ಬಾಗಿಲವಾಡವು ಅತ್ಯಂತ ಸರಳವಾದ ಎರಡು ಶಾಖೆಗಳಿಂದ ಕೂಡಿದೆ.



ಭಗ್ನಗೊಂಡ ನಂದಿಯ ಶಿಲ್ಪ

ಭಗ್ನಗೊಂಡ ನಂದಿಯ ಶಿಲ್ಪ

ದೇವಾಲಯದ ಅವಶೇಷಗಳಿರುವ ದಿಬ್ಬದ ಪೂರ್ವ ಭಾಗದಲ್ಲಿ ಭಗ್ನಗೊಂಡಿರುವ ನಂದಿಯ ಶಿಲ್ಪವು ಕಂಡುಬರುತ್ತದೆ. ಈ ಶಿಲ್ಪವು ಎರಡು ಅಡಿ ಎತ್ತರವಾಗಿದ್ದು, ರುಂಡ ಭಾಗವು ಸಂಪೂರ್ಣವಾಗಿ ಭಗ್ನಗೊಂಡಿದೆ. ನಂದಿಯ ಶಿಲ್ಪವು ಅತ್ಯಂತ ಸರಳವಾಗಿ ಕೆತ್ತಲ್ಪಟ್ಟಿದೆ. ನಂದಿಯ ಶಿಲ್ಪವನ್ನು ನಿರ್ಮಿಸಲು ಗ್ರಾನೈಟ್ ಕಲ್ಲನ್ನು ಬಳಸಲಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ಗ್ರಾನೈಟ್ ಶಿಲೆಯನ್ನು ಸಹ ದೇವಾಲಯದ ನಿರ್ಮಾಣಕ್ಕೆ ಬಳಸಿರೋದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತದೆ. ಕುಡಿತಿನಿ, ಹಂಪಿ, ಸಿರಿವಾಳ, ಸೋಗಲಗಳಲ್ಲಿ ರಾಷ್ಟ್ರಕೂಟರ ದೇವಾಲಯಗಳನ್ನು ಗ್ರಾನೈಟ್ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ.

ಕೋಣನತಲೆ

ದೇವಾಲಯದ ಅವಶೇಷಗಳಿರುವ ದಿಬ್ಬದ ಹಿಂಭಾಗದಲ್ಲಿ ಕೋಣನ ತಲೆಯ ಶಿಲ್ಪವು ಕಂಡುಬರುತ್ತದೆ. ಈ ಶಿಲ್ಪವು ಎರಡುವರೆ ಅಡಿ ಉದ್ದ ಒಂದುವರೆ ಅಡಿ ಅಗಲವನ್ನು ಹೊಂದಿದೆ. ಕೋಣನ ಮುಖವನ್ನು ಅತ್ಯಂತ ದಷ್ಟ ಪುಷ್ಟವಾಗಿ ಕೆತ್ತಲಾಗಿದೆ. ಕೋಣನ ಕಂಬಗಳು ಸಮಗಾತ್ರದಲ್ಲಿವೆ. ಕೋಣನ ತಲೆಯ ಕೆಳಭಾಗದಲ್ಲಿ ಕತ್ತಿಯನ್ನು ಹಿಡಿದಿರುವ ಶಿಲ್ಪಗಳ ಕೆತ್ತನೆಯನ್ನು ಮಾಡಲಾಗಿದೆ. ಕೋಣನ ತಲೆಯನ್ನು ದೇವಿಯ ಸಂಕೇತವಾಗಿ ಪೂಜಿಸಲಾಗುತ್ತದೆ. ಈ ಮಾದರಿಯ ಆರಾಧನೆ ೯ನೇ ಶತಮಾನಕ್ಕೂ ಪೂರ್ವದಲ್ಲಿಯೇ ಪ್ರಾರಂಭವಾಗಿದೆ ಎಂದು ಹೇಳಲು ಅನೇಕ ಆಧಾರಗಳು ದೊರೆಯುತ್ತವೆ. ಉದಾಹರಣೆಗೆ. ಅ. ಸುಂದರ ಅವರು ಎಲವಟ್ಟಿಯಲ್ಲಿ ೬ ಮತ್ತು ೭ನೇ ಶತಮಾನಕ್ಕೆ ಸಂಬಂಧಿಸಿದ ಕೋಣನತಲೆಯ ಶಿಲ್ಪವನ್ನು ಪತ್ತೆ ಮಾಡಿರುವುದು ವರದಿಯಾಗಿದೆ. ಇದರ ಆಧಾರದ ಮೇಲೆ ೬ ಮತ್ತು ೭ ನೇ ಶತಮಾನದಿಂದಲೇ ದುರ್ಗೆಯ ಸಂಕೇತವಾಗಿ ಕೋಣನ ತಲೆಯ ಶಿಲ್ಪವನ್ನು ಪೂಜಿಸುವ ಪದ್ಧತಿ ಇತ್ತೆಂದು ಗುರುತಿಸ ಬಹುದಾಗಿದೆ. ಸೊರಬ, ಶಿಕಾರಿಪುರ ಸುತ್ತಮುತ್ತಲ ಪ್ರದೇಶಗಳಲ್ಲಿನ ವನಗಳಲ್ಲಿ ಈ ಮಾದರಿಯ ಕೋಣನಶಿಲ್ಪಗಳು ಕಂಡುಬರುತ್ತದೆ. ವನ ದುರ್ಗೀಯ ಪರಿಕಲ್ಪನೆಯಲ್ಲಿ ಈ ಮಾದರಿಯ ಶಿಲ್ಪಗಳನ್ನು ಪೂಜಿಸಲಾಗುತ್ತದೆ ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಇಂದಿಗೂ ಭಾರತದ ಬಹುಭಾಗದಲ್ಲಿ ದುರ್ಗೆಯ ಹಬ್ಬಗಳಲ್ಲಿ ಕೋಣವನ್ನು ಕಡಿದು ಅದರ ತಲೆಯ ಮೇಲೆ ದೀಪವನ್ನು ಇಟ್ಟು ಆರಾಧಿಸುವ ಪದ್ಧತಿ ಜಾರಿಯಲ್ಲಿರುವುದನ್ನು ಗುರುತಿಸಬಹುದು.



ಕೋಣನ ತಲೆ

ಈ ಮೇಲಿನ ಅವಶೇಷಗಳ ಆಧಾರದ ಮೇಲೆ ದಿಬ್ಬವಿರುವ ಸ್ಥಳದಲ್ಲಿ ಖಚಿತವಾಗಿ ದೇವಾಲಯ ನಿರ್ಮಾಣವಾಗಿತ್ತು ಎಂದು ಹೇಳಬಹುದಾಗಿದೆ. ಈ ಪರಿಸರದಲ್ಲಿ ದೊರೆತಿರುವ ದೇವಾಲಯದ ಅವಶೇಷಗಳನ್ನು ಆದರಿಸಿ ಇದೊಂದು ಶೈವ ದೇವಾಲಯವೆಂದು ಗುರುತಿಸ ಬಹುದು. ದಿಬ್ಬದಲ್ಲಿ ದೊರೆತಿರುವ ದೇವಾಲಯದ ಅವಶೇಷಗಳ ಲಕ್ಷಣಗಳನ್ನು ಆಧರಿಸಿ ಈ ದೇವಾಲಯವು ೮ ರಿಂದ ೯ನೇ ಶತಮಾನದಲ್ಲಿ ನಿರ್ಮಿಸಿದ ದೇವಾಲಯ ವೆಂದು ಹೇಳಬಹುದು. ಇಲ್ಲಿನ ದೇವಾಲಯದ ತಳಪಾಯದಲ್ಲಿ ದೊರೆತಿರುವ ಇಟ್ಟಿಗೆಗಳು ರಾಷ್ಟ್ರಕೂಟರ ಕಾಲದ ನಿರ್ಮಿತಿ



ಮಡಿಕೆ ಚೂರುಗಳು

ಎಂದು ಗುರುತಿಸಲಾಗಿರುವ 'ಹರಪನಹಳ್ಳಿ ತಾಲೂಕಿನ ಹಳ್ಳಿಕೆರೆಯ ಈಶ್ವರ ದೇವಾಲಯದ ತಳಪಾಯದ ಇಟ್ಟಿಗೆಯ ಲಕ್ಷಣಗಳನ್ನು ಹೋಲುತ್ತವೆ'. ಅಲ್ಲದೆ ಪ್ರೊ.. ರಾಜಾರಾಮ್ ಹೆಗಡೆ ಅವರು ಪ್ರಾರಂಭಿಕ ೧೦ನೇ ಶತಮಾನಕ್ಕೆ ಸೇರಿದ ದೇವಾಲಯಗಳನ್ನು ಸೊರಬ, ಶಿಕಾರಿಪುರ, ಹಿರೇಕೆರೂರು ತಾಲ್ಲೂಕುಗಳಲ್ಲಿ ಗುರುತಿಸಿರುವುದನ್ನು "ಯೂಜಸ್ಸ್ ಆಫ್ ಬ್ರಿಕ್ ಇನ್ ಟೆಂಪಲ್ ಆರ್ಕಿಟೆಕ್ಚರ್ ಆಫ್ ಮಿಡಿವಲ್ ಕರ್ನಾಟಕ ೧೦ ಟು ೧೩ ಸೆಂಚುರಿ ಎ.ಡಿ" ಎಂಬ ಲೇಖನದಲ್ಲಿ ವರದಿ ಮಾಡಿದ್ದಾರೆ. ಆ ಲೇಖನದಲ್ಲಿ ಚರ್ಚಿಸಿರುವ ಇಟ್ಟಿಗೆಗಳ ಲಕ್ಷಣ ಹಾಗೂ ಗಾತ್ರಗಳನ್ನು ಅನುಲಕ್ಷಿಸಿ ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಖಚಿತವಾಗಿ ಹೇಳಬಹುದಾಗಿದೆ. ಹಾಗೂ ದೇವಾಲಯದ ಅವಶೇಷಗಳಲ್ಲಿ ದೊರೆತಿರುವ ಹಂಚಿನ ಚೂರುಗಳು ಪ್ರಾರಂಭಿಕ ಮಧ್ಯಯುಗದ ೮ರಿಂದ ೯ನೇ ಶತಮಾನಕ್ಕೆ ಸೇರಿದ ಹಂಚಿನ ಲಕ್ಷಣಗಳನ್ನು ಹೋಲುತ್ತವೆ. ಮೇಲೆ ತಿಳಿಸಿದ ಆಧಾರಗಳಲ್ಲದೆ ದೇವಾಲಯದ ಅವಶೇಷಗಳಲ್ಲಿ ದೊರೆತಿರುವ ಮೂರ್ತಿಶಿಲ್ಪಿಗಳ ಲಕ್ಷಣಗಳನ್ನು ಗಮನಿಸಿ ಈ ಶೈವ ದೇವಾಲಯವು ೮ ರಿಂದ ೯ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ರಾಷ್ಟ್ರಕೂಟರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ಗುರುತಿಸಲಾಗಿದೆ. ಇಲ್ಲಿ ದೊರೆತಿರುವ ದೇವಾಲಯದ ಅವಶೇಷಗಳನ್ನು ಕುರಿತು ಪ್ರೊ. ರಾಜಾರಾಮ್ ಹೆಗಡೆ ಪ್ರೊ. ಶ್ರೀನಿವಾಸ್ ಪಾಡಿಗಾರ್ ಪ್ರೊ. ಸರ್ವಮಂಗಳ ಇತಿಹಾಸಕಾರರೊಂದಿಗೆ ಚರ್ಚಿಸಿ ದೇವಾಲಯದ ಕಾಲಮಾನವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆಕರಗ್ರಂಥಗಳು

೧. ಗೋಪಾಲರಾವ್ ಎಚ್.ಎಸ್., ೨೦೦೮, ರಾಷ್ಟ್ರಕೂಟ ಶಿಲ್ಪಕಲೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨. ಸುಂದರ ಅ., (ಸಂ), ೧೯೯೭, ಕರ್ನಾಟಕ ಚರಿತ್ರೆ, ಸಂ. ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ರಾಜಾರಾಮ ಹೆಗಡೆ, ೧೯೯೧ "ಯೂಜಸ್ಸ್ ಆಫ್ ಬ್ರಿಕ್ ಇನ್ ಟೆಂಪಲ್ ಆರ್ಕಿಟೆಕ್ಚರ್ ಆಫ್ ಮಿಡಿವಲ್ ಕರ್ನಾಟಕ ೧೦ ಟು ೧೩ ಸೆಂಚುರಿ ಎ.ಡಿ" ಐ.ಸಿ.ಎಚ್.ಆರ್, ನ್ಯೂಡೆಲ್ಲಿ.

೪. ರಾಜಶೇಖರ ಎಸ್., ೧೯೮೨, "ರಾಷ್ಟ್ರಕೂಟ ಹೀರೋ ಸ್ಟೋನ್ಸ್ : ಏ ಸ್ಟಡಿ ಇನ್ ಮೆಮೋರಿಲ್ ಸ್ಟೋನ್ಸ್ ಆ್ಯಂಡ್ ಸ್ಟಡಿ ಆಫ್ ದೆರ್ ಆರಿಜನ್, ಸಿಗ್ನಿ ಫಿಕೆನ್ಸ್ ಆ್ಯಂಡ್ ವೈರೈಟಿ", ಇನ್‌ಸ್ಟೂಟ್ಯುಟ್ ಆಫ್ ಆರ್ಟ್ ಹಿಸ್ಟರಿ, ಕರ್ನಾಟಕ ಯೂನಿರ್ವಸಿಟಿ, ಧಾರವಾಡ.

೫. ಸೂರ್ಯನಾಥ ಕಾಮತ್, ೨೦೦೧, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ. ಪಬ್ಲಿಕೇಷನ್, ಬೆಂಗಳೂರು.

◆◆

೩೧

ಕುಮಾರ್ ಎ.ಸಿ.

ಗಂಗಾಬಾಬಳಗಾಂವ್‌ನ ಚಿದಂಬರೇಶ್ವರ ದೇವಾಲಯ

ಗೋದಾವರೀ ತಟ ಉಭಾ ಜಗಜೇಟಿ ।
ಸಾವಿತ್ರೀಚಾ ಪತಿ ಚಿದಂಬರ ।
ಹರಿಹರ ಯಮ ಇಂದ್ರ ಆಣಿ ಬ್ರಹ್ಮ ।
ಭೇಟಿ ಏತಿ ರೋಜ ಮಧ್ಯರಾತ್ರಿ ॥ ೧ ॥
ದೇವ ಸರ್ವ ಏತಿ ಋಷಿಗಣ ಸಹಿತ ।
ವೇದ ಘೋಷ ಕರಿತ ಮಧ್ಯರಾತ್ರಿ ॥ ೨ ॥
ದೇವಾಚೀ ಹೀ ದೇವ ಸ್ವಾಮೀ ಚಿದಂಬರ ।
ಉಭಾ ಆಹೆ ಜಾಣ ಗುಪ್ತರೂಪೆ ॥ ೩ ॥
ವಿಠಾಬಾಯಿ ಮ್ಹಣೇ ದರ್ಶನಚೇ ಘೇತಿ ।
ಪಾಯ ತೇಚಿ ವಂದಿತಿ ಬ್ರಹ್ಮಾದಿಕ ॥ ೪ ॥[೧]

ಈ ಮೇಲಿನ ಅಭಂಗ ಸಂತಮಾತಾ ವಿಠಾಬಾಯಿಯಿಂದ ರಚಿತಗೊಂಡಿದ್ದು, ಗಂಗಾಬಾಬಳಗಾಂವ್‌ನ ಮಹತ್ವ ಸಾರುತ್ತದೆ. ಮುರಗೋಡು ಚಿದಂಬರರಿಗೆ ಇಬ್ಬರು ಮಡದಿಯರು. ಇಲ್ಲಿ "ಸಾವಿತ್ರೀಚಾ ಪತಿ" ಎಂದು ಸಂಭೋದಿಸಿದ್ದಾರೆ. ಇನ್ನೊಬ್ಬರು ಸರಸ್ವತಿಮಾತಾ.

ಸಹಜ ರೀತಿಯಲ್ಲಿ ಹರಿ ಹರ ಬ್ರಹ್ಮ ತ್ರಿಮೂರ್ತಿಗಳನ್ನು ನೆನೆಯುವದು ವಾಡಿಕೆ. ಇಲ್ಲಿ ಇಂದ್ರನ ಜೊತೆಗೆ ಯಮನೂ, ಹರಿ ಹರ ಬ್ರಹ್ಮರೂ ಪ್ರತಿದಿನ ಮಧ್ಯರಾತ್ರಿ ಚಿದಂಬರರನ್ನು ಭೇಟಿಮಾಡಲು ಬರುತ್ತಾರೆ ಎಂಬುದು ವಿಠಾಬಾಯಿಯ ಆಶಯ. ಇದನ್ನು ಮೇಲಿನ ಅಭಂಗದಲ್ಲಿ ವ್ಯಕ್ತಪಡಿಸಿದ್ದಾರೆ.

ಹೀಗೆ ಪ್ರಸಿದ್ಧ ಗಂಗಾಬಾಬಳಗಾಂವ್ ಚಿದಂಬರ ಕ್ಷೇತ್ರ ಇರುವುದು ಇಂದಿನ ಸಾಂಭಾಜಿನಗರ (ಔರಂಗಬಾದ್) ಜಿಲ್ಲೆಯ ವೈಜಾಪುರ ತಾಲ್ಲೂಕಿನ ಗೋದಾವರಿ ನದಿಯ ದಕ್ಷಿಣ ದಂಡೆಯ ಮೇಲೆ. ಮಹಾರಾಷ್ಟ್ರದ ಮರಾಠವಾಡ ಪ್ರಾಂತ್ಯದ ಅತ್ಯಂತ ದೊಡ್ಡ ಜಿಲ್ಲೆ ಸಂಭಾಜಿನಗರ. ವಿಶ್ವಪ್ರಸಿದ್ದ ಎಲ್ಲೋರ ಹಾಗೂ ಅಜಂತಾ ಗುಹಾಂತರ ದೇವಾಲಯಗಳಿರುವುದು ಇದೇ ಪ್ರಾಂತ್ಯದಲ್ಲಿ. ಸಾಯಿಬಾಬಾರ ಶಿರಡಿ. ಗಂಗಾಬಾಬಳಗಾಂವ್‌ನಿಂದ ೩೦ ಕಿ.ಮೀ. ದೂರದಲ್ಲಿದೆ. ಶಿರಡಿ ಸಾಯಿಬಾಬಾರವರು ಗಂಗಾ ಬಾಬಳಗಾಂವ್ ಕ್ಷೇತ್ರಕ್ಕೆ ಭೇಟಿ ನೀಡಿರುವ ವಿಚಾರಗಳು ದಾಖಲೆಗಳಿಂದ ತಿಳಿದುಬರುತ್ತದೆ.

೮೨೨, ೬ನೇ ಕ್ರಾಸ್
ಕುಮಾರಸ್ವಾಮಿ ಬಡಾವಣೆ
ಬೆಂಗಳೂರು-೫೬೦೦೭೮
ಮೊ: ೯೯೦೦೫ ೦೭೨೩೫



ಚಿದಂಬರ ವಾರಕರಿ ಪಂಥದ ಸ್ಥಾಪಕರಾದ ಸಂತ ರಾಜಾರಾಮರ ಹುಟ್ಟೂರು ಇದೇ ಗಂಗಾಬಾಬಳಗಾಂವ್. ಪರಮಪೂಜ್ಯ ದ್ವಾರಕದಾಸರು ಗಂಗಾಬಾಬಳಗಾಂವ್‌ನಲ್ಲಿ ನೆಲೆಸಿದ್ದ ಸಾಧುಗಳು. ರಾಜಾರಾಮರಲ್ಲಿ ಆಧ್ಯಾತ್ಮಿಕ ಆಸಕ್ತಿ ಬೆಳೆಯಲು ಕಾರಣರಾದವರು ಇದೇ ದ್ವಾರಕದಾಸರು.

ರಾಜಾರಾಮರು ಕ್ರಿ.ಶ. ೧೭೬೯ರ ಪಾಲ್ಗುಣ ವದ್ಯ ದ್ವಿತೀಯದಂದು ಜನಿಸಿದರು. ತಂದೆ ಹರಿಸಿಂಗ, ತಾಯಿ ಲಕ್ಷ್ಮೀತಾಯಿ. ಇವರು ಶ್ರೀಕೃಷ್ಣ ಹಾಗೂ ಪಂಡರಪುರದ ವಿಠ್ಠಲನ ಪರಮಭಕ್ತರು. ವಿಠ್ಠಲ ವಾರಕರಿ ಸಂಪ್ರದಾಯದ ಅನುಯಾಯಿಗಳು. ರಾಜಾರಾಮರು ನರ್ಮದಾನದಿಯ ದಕ್ಷಿಣ ದಂಡೆಯ ಮೇಲಿರುವ ನರ್ಮದಾಪುರಂ (ಹೊಷಂಗಾಬಾದ್, ಮಧ್ಯಪ್ರದೇಶ) ನಲ್ಲಿ ನೌಕರಿ ಮೇಲೆ ಇದ್ದಾಗ ಅಂದಿನ ಆಂಧ್ರ ರಾಜ್ಯ ಮೂಲದ ಕೃಷ್ಣಭಟ್ಟ ಎಂಬುವರಿಂದ ಮುರಗೋಡು ದೀಕ್ಷಿತರ ಅವತಾರದ ಬಗ್ಗೆ ತಿಳಿಯುತ್ತದೆ. ರಾಜಾರಾಮರು ಕ್ರಿ.ಶ. ೧೮೦೫ರಲ್ಲಿ ಕುಂದಗೋಳದಲ್ಲಿ ಮುರಗೋಡು ಚಿದಂಬರರ ದರ್ಶನ ಪಡೆಯುತ್ತಾರೆ.

ಚಂದ್ರಭಾಗ ನದಿಯ ದಂಡೆಯ ಮೇಲಿರುವ ಪಂಡರಪುರ ಮೂಲದ ಸಂತಮಾತಾ ವಿಠಾಬಾಯಿಯವರು ಸಹ ಚಿದಂಬರರ ದರ್ಶನ ಪಡೆಯುತ್ತಾರೆ.

ಕ್ರಿ.ಶ. ೧೮೧೩ರಲ್ಲಿ ಮುರಗೋಡು ಚಿದಂಬರರು ಮಲಪ್ರಭಾ ನದಿಯ ದಕ್ಷಿಣ ದಂಡೆಯ ಮೇಲೆ ವ್ಯವಸ್ಥಿತವಾಗಿ ನಗರ ನಿರ್ಮಾಣ ಮಾಡಿಸುತ್ತಾರೆ. ಇದು ಗುರ್ಲಹೊಸೂರು ಎಂದು ಪ್ರಸಿದ್ಧಗೊಂಡಿದೆ. ಚಿದಂಬರರ ಸಮ್ಮುಖದಲ್ಲಿ ಮೊದಲ ೫೨೭ ಅಭಂಗಗಳನ್ನು ಗುರ್ಲಹೊಸೂರಿನಲ್ಲಿ ರಚಿಸುತ್ತಾರೆ. ಇವು 'ವರದ ಅಭಂಗಗಳು' ಎಂದು ಪ್ರಸಿದ್ಧಗೊಂಡಿವೆ. ಒಟ್ಟು ೧,೫೧,೬೯೧ ಅಭಂಗಗಳನ್ನು[೨] ರಚಿಸಿದ್ದಾರೆ.

ಮುರಗೋಡು ಚಿದಂಬರರು, ಸಂತ ರಾಜಾರಾಮರ ಮುಖಂಡತ್ವದಲ್ಲಿ 'ವಾರಕರಿ ಪಂಥ' ಸ್ಥಾಪನೆ ಮಾಡಿದರು. ಇದು ಇಂದು 'ಚಿದಂಬರ ವಾರಕರಿ ಪಂಥ' ಎಂದು ಪ್ರಸಿದ್ಧವಾಗಿದೆ.

ಮುರಗೋಡು ಚಿದಂಬರರ ಸಮಕಾಲಿನ ಭಕ್ತರಲ್ಲಿ ಮಹಾರಾಷ್ಟ್ರದ ಮೈಸಾಳ ಗ್ರಾಮದ ಸಖಾರಾಮ ತ್ರಯಂಬಕ ಗರ್ದೆ, ಕರ್ನಾಟಕ ಪಾಶ್ಚಾಪುರ ಗ್ರಾಮದ ರಾಮಚಂದ್ರ ಭೋಜೋ ದೇಶಪಾಂಡೆ, ಅಂದಿನ ಆಂಧ್ರಪ್ರದೇಶದ ಅಟ್ಟಂಪಲ್ಲಿ ಗ್ರಾಮದ ಶಿವಶಾಸ್ತ್ರಿಗಳು. ಗಂಗಾಬಾಬಳಗಾಂವ್ ಮೂಲದ ರಾಜಾರಾಮ ಮಹಾರಾಜರು, ಪಂಡರಪುರ ಮೂಲದ ವಿಠಾಬಾಯಿ ಪ್ರಸಿದ್ಧರು. ಸಖಾರಾಮ ಗರ್ದೆ ಅವರ ಮರಾಠಿ ಭಾಷೆಯಲ್ಲಿರುವ ಮೇರುಕೃತಿ 'ಶ್ರೀಮಚ್ಚರಿತ್ರ', ರಾಮಚಂದ್ರಭೋಜೋ ದೇಶಪಾಂಡೆ ಅವರ 'ಶ್ರೀ ಚಿದಂಬರ ಮಹಾತ್ಮೆ', ಶ್ರೀ ಶಿವಶಾಸ್ತ್ರಿಗಳ ಸ್ತೋತ್ರಗಳು, ರಾಜಾರಾಮ, ವಿಠಾಬಾಯಿಯವರ ಅಭಂಗಗಳು ಪ್ರಕಟಗೊಂಡಿವೆ. ಸಖಾರಾಮ ಗರ್ದೆಯವರು ಅಭಂಗಗಳನ್ನು ರಚಿಸಿದ್ದು, ಶ್ರೀ ಚಿದಂಬರ ಪ್ರತಿಷ್ಠಾನ ಧಾರವಾಡ/ಬೆಂಗಳೂರು ಇವರ ನೇತೃತ್ವದಲ್ಲಿ ಪ್ರಕಟಗೊಂಡಿದೆ. ಕ್ರಿ.ಶ.೧೮೧೫ರಲ್ಲಿ ಮುರಗೋಡು ಚಿದಂಬರರು ದೇಹ ತ್ಯಜಿಸುತ್ತಾರೆ.

ಗುರ್ಲಹೊಸೂರಿನಲ್ಲಿ ಭವ್ಯವಾದ ಮಂದಿರ ನಿರ್ಮಿಸಿ, ಚಿದಂಬರರು, ಸಾವಿತ್ರಿಮಾತಾ, ಸರಸ್ವತಿ ಮಾತಾ, ದಾಸ ಮಾರುತಿ, ಪ್ರಭಾಕರ, ಗರುಡ ಮೂರ್ತಿಗಳನ್ನು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಗ್ರಾಮದ (ಇದು ಮಲಪ್ರಭೆಯ ಉಗಮಸ್ವಾನ) ಶಿಲೆಗಳಿಂದ ಅಭಂಗ ಪಠಿಸುವ ಮೂಲಕ ತಯಾರುಮಾಡಿದ್ದಾರೆ (ಕ್ರಿ.ಶ. ೧೮೧೪), ಎಂಬುದು ಚಿದಂಬರ ಭಕ್ತರ ನಂಬಿಕೆ.



ಆದರೆ ಈಶ್ವರ ಸ್ವರೂಪನಾದ ಚಿದಂಬರರನ್ನು ನಾವು ಮೂರ್ತಿ ರೂಪದಲ್ಲಿ ಪೂಜಿಸುವುದಿಲ್ಲ, ಲಿಂಗರೂಪದಲ್ಲಿ ಪೂಜಿಸುತ್ತೇವೆ ಎಂಬುದು ವೈದಿಕರ ವಾದ ಹಾಗೂ ಲಿಂಗವನ್ನು ಆ ಮಂದಿರದಲ್ಲಿ ಪ್ರತಿಷ್ಠಾಪಿಸಿ ಪೂಜಿಸಲು ಆರಂಭಿಸುತ್ತಾರೆ. ನವಿಲುತೀರ್ಥ ಅಣೆಕಟ್ಟಿನಲ್ಲಿ ಕ್ರಿ.ಶ. ೧೯೭೦ರ ಸುಮಾರಿಗೆ ಗುರ್ಲಹೊಸೂರು ಮುಳುಗಡೆಗೊಂಡಾಗ ಸವದತ್ತಿಯ ಚಿದಂಬರ ನಗರಕ್ಕೆ ಸ್ಥಳಾಂತರಗೊಂಡು, ಇಂದೂ ಭವ್ಯವಾದ ಮಂದಿರದಲ್ಲಿ ಲಿಂಗರೂಪಿ ಚಿದಂಬರ ಪೂಜೆಗೊಳ್ಳುತ್ತಿದೆ.

ಹಾಗಾಗಿ ರಾಜಾರಾಮರು ಸರಿಸುಮಾರು ಕ್ರಿ.ಶ. ೧೮೨೨ರಲ್ಲಿ[೩] ಮೂರ್ತಿಗಳನ್ನು ತಮ್ಮ ಸ್ವಗ್ರಾಮಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸುತ್ತಾರೆ. ದಾಸಮಾರುತಿ, ಸಾವಿತ್ರಿಮಾತಾ, ಸರಸ್ವತಿಮಾತಾ ಸಹಿತ ಚಿದಂಬರ ಮೂರ್ತಿಗಳನ್ನು ತಮ್ಮ ಮನೆಯ ಆವರಣದಲ್ಲಿ ಸ್ಥಾಪಿಸಿ ಪೂಜಿಸಲು ಪ್ರಾರಂಭಿಸುತ್ತಾರೆ ಎಂದು ತಿಳಿದುಬರುತ್ತದೆ. ಪ್ರಭಾಕರ, ಗರುಡ ಮಲಪ್ರಭಾ ನದಿಯಲ್ಲಿದ್ದು ಶ್ರೀ ಚಿದಂಬರ ಪುನರಾಗಮನಕ್ಕೆ ಕಾಯುತ್ತಿದ್ದಾರೆ ಎಂಬುದು ಸಂತರ ನಂಬಿಕೆ. ಸುಮಾರು ಎರಡು ಶತಮಾನಗಳ ಹಿಂದೆ ಮೂರ್ತಿಗಳು ಅಭಂಗ ಪಠಣದಿಂದ ರೂಪುಗೊಂಡಿವೆ ಎಂಬುದು ಭಕ್ತರ ನಂಬಿಕೆ. ಶಿಲ್ಪಿಗಳ ಕೆತ್ತನೆಯಿಂದ ರೂಪುಗೊಂಡಿರುವುದು ಎಂದು ಇತಿಹಾಸಕಾರರು ಸ್ಪಷ್ಟಪಡಿಸಬೇಕು. ಕೆತ್ತನೆ ನಡೆಯಬೇಕಾದರೆ ರಾಜಾರಾಮರು ಅಭಂಗಗಳನ್ನು ಪಠಿಸುತ್ತಿದ್ದಿರಬಹುದು ಎಂಬುದು ಕೆಲವು ಭಕ್ತರ ಅಭಿಪ್ರಾಯ.

೧೯೯೬ರಲ್ಲಿ ಪ್ರಥಮಬಾರಿ ಕ್ಷೇತ್ರಕಾರ್ಯ ಕೈಗೊಂಡಾಗ, ಮೂರ್ತಿಗಳು ಅದೇ ಹಳೆಯ ಮನೆಯಲ್ಲಿದ್ದವು. ಸರಿಸುಮಾರು ೧೯೮೦ರ ದಶಕದಲ್ಲಿ ಕಿಟ್ಟಣ್ಣಕಾಕ ಚಿಂತಾಮಣಿ (ಚಿದಂಬರ ಭಕ್ತರು, ಕೋಲಾರದ ಮೂಲದವರು. ಮುಂದೆ ಅವರು ನಾಥಪಂಥದ ದೀಕ್ಷೆ ಪಡೆದು, ಯೋಗಿನಾಥ ಮಸ್ತನಾಥ ಜೀ ಎಂದು ಪ್ರಸಿದ್ಧಿಗೊಂಡರು). ಇವರು ಗಂಗಾಬಾಬಳಗಾಂವ್ ಪರಿಸರದಲ್ಲಿ, ತಮ್ಮ ಚಿದಂಬರ ವಾರಕರಿ ಪಂಥದ ಗುರುಗಳಾದ, ಮಲ್ಹಾರ ದೀಕ್ಷಿತರ ಹೆಸರಿನಲ್ಲಿ ಆಶ್ರಮ ಸ್ಥಾಪನೆ ಮಾಡಿಕೊಂಡಿದ್ದರು. ೨೦೦೮ರಲ್ಲಿ ಎರಡನೇ ಬಾರಿ ಕ್ಷೇತ್ರಕಾರ್ಯ ಕೈಗೊಂಡಾಗ, ಅವರು ತಮ್ಮ ಗುರ್ಲಹೊಸೂರಿನ ವಾಸದ ದಿನಗಳನ್ನೂ, ತಮ್ಮ ಗುರುಗಳ ಪ್ರೀತಿಯನ್ನು ಮೆಲುಕುಹಾಕಿದ್ದರು. ೧೯೯೬ರ ರಾಜಾರಾಮ ಜಯಂತಿಗೆ ಗುರ್ಲಹೊಸೂರು ರಾಜಾರಾಮ ಮಠದ ಸೌ॥ ಕಮಲಾತಾಯಿ, ಸೌ॥ ರುಕ್ಮಿಣತಾಯಿ, ಪಾಂಡುರಂಗ ಮಲ್ಹಾರ ದೀಕ್ಷಿತ್, ಮುದ್ದಣ್ಣಕಾಕ, ಹವಾಲ್ದಾರ್ ಪಾಂಡು, ಮುದುಕಪ್ಪ (ಲಕ್ಷ್ಮಣ ದುರುಗಪ್ಪ ಅಂಬಿಗೇರ್, ಗುರ್ಲಹೊಸೂರು), ಸಿಂಗಾರಕೊಪ್ಪದ ರಾಮನಗೌಡ್ರು, ದಿಂಡೀಯಾತ್ರೆಯಿಂದ ಗಂಗಾಬಾಬಳಗಾಂವ್‌ಗೆ ಯಾತ್ರೆ ಕೈಗೊಂಡಾಗ, ಚಿಂತಾಮಣಿ ಕೃಷ್ಣಾಜಿ, ಮರಾಠಿ

ಭಾಷೆ ಬಲ್ಲವರಾದ್ದರಿಂದ, ಪಾದಯಾತ್ರೆಗೆ ಭಾಷಾಸಮಸ್ಯೆ ಅಡ್ಡಿಬರದಂತೆ ಹಾಗೂ ಇತರೆ ಯಾವುದೇ ಸಮಸ್ಯೆಗಳು ಬರದಂತೆ ನೋಡಿಕೊಂಡರು.

ಒಂದು ರೀತಿಯಲ್ಲಿ ಮರಾಠಿ ಬರದೇ ಇದ್ದ ಚಿದಂಬರ ಭಕ್ತರಿಗೆ ಇವರೇ ಆಶ್ರಯದಾತರಿದ್ದಂತೆ, ಕರ್ನಾಟಕ ಮೂಲದ ಭಕ್ತರಿಗೆ ವಿಶೇಷ ಅಭಿಮಾನದಿಂದ ತಮ್ಮ ಮಲ್ಹಾರಿ ಕುಟೀರದಲ್ಲಿ ಆಶ್ರಯ ನೀಡುತ್ತಿದ್ದರು. ಕರ್ನಾಟಕ – ಮಹಾರಾಷ್ಟ್ರದ ಮಧ್ಯೆ ಸಾಂಸ್ಕೃತಿಕ ಬಾಂಧವ್ಯಕ್ಕೆ 'ಚಿದಂಬರ ರಾಯಭಾರಿ' ನಮ್ಮ ಕಿಟ್ಟಣ್ಣಕಾಕ ಎಂದರೆ ತಪ್ಪಾಗುವುದಿಲ್ಲ.

ಸರಿಸುಮಾರು ೧೮೨೨ರಲ್ಲಿ ಚಿದಂಬರಮೂರ್ತಿ ಹಾಗೂ ಪರಿವಾರ ಮೂರ್ತಿಗಳು, ರಾಜಾರಾಮ ಮಹಾರಾಜರ ಅಭಂಗಗಾಥಾಗಳು ಗಂಗಾಬಾಬಳಗಾಂವ್ ತಲುಪಿದ ದಿನದಿಂದಲೂ, ಚಿದಂಬರ ಭಕ್ತರು, ಚಿದಂಬರ ಮಠಾಧೀಶರು ವಿಶೇಷ ಸಂದರ್ಭಗಳಲ್ಲಿ ಬಾಬಳಗಾಂವ್ ಚಿದಂಬರನಿಗೆ 'ಕಾಯಿ ಹರಕೆ' ಇಟ್ಟು ಬರುತ್ತಿದ್ದಾರೆ. ಗೋಕಾಕ (ಬೆಳಗಾವಿ) ಮೂಲದ ಚಿದಂಬರ ಭಕ್ತರು ೧೯೯೦ರ ದಶಕದಲ್ಲಿ ಕ್ಷೇತ್ರಕ್ಕೆ ಬಂದು ಹೋಗುವ ಭಕ್ತರಿಗೆ ತಂಗುದಾಣ, ಅನ್ನಸತ್ರ ನಿರ್ಮಿಸಿದ್ದರು.

ಚಿದಂಬರ ಭಕ್ತರ ಸಹಕಾರದೊಂದಿಗೆ, ಚಿದಂಬರ ಮಂದಿರವನ್ನು ಹೊಸದಾಗಿ ಕಟ್ಟಿಸಿ ಫೆ.೨೬,೨೦೧೨ರಲ್ಲಿ ಕಳಸಾರೋಹಣ ಕಾರ್ಯಕ್ರಮ ನೆರವೇರಿತು. ೨೦೧೪ರಲ್ಲಿ ಶ್ರೀಗುರು ಚಿದಂಬರ ದೀಕ್ಷಿತರು, ಕೈಲಾಸ ಬುವಾ, ರಾಮ್ ಹೆಗ್ಗಪ್ಪ ಕುಲಕರ್ಣಿ ಮತ್ತಿತರರು ಹಾಗೂ ಭಕ್ತರ ಸಹಕಾರದೊಂದಿಗೆ ೬೦೦ ಕೋಟಿ ಶಿವಚಿದಂಬರ ನಾಮಜಪ ಸಂಕಲ್ಪ ಕೈಗೊಂಡು ಇಂದು ವಿಶ್ವದಾದ್ಯಂತ ಭಕ್ತರು ನಾಮಸ್ಮರಣೆಮಾಡಿ, ಸಂಖ್ಯೆ ಪೂರ್ಣಗೊಂಡು ಇದೇ ಬರುವ ೨೮-೦೧-೨೦೨೩ ರಿಂದ ೦೩-೦೨-೨೦೨೩ರವರೆಗೆ ಜಪಯಜ್ಞದ ಸಾಂಗತಾಕಾರ್ಯ ನೆರವೇರಲಿದೆ. ಕೋವಿಡ್-೧೯ ಮಹಾಮಾರಿಯ ಉಪಟಳದಿಂದ ಈ ಹಿಂದೆ ಸಂಕಲ್ಪಗೊಂಡಿದ್ದ ಕಾರ್ಯಕ್ರಮ ಮುಂದೂಡಿ ಬರುವ ೨೦೨೩ರಲ್ಲಿ ನೆರವೇರಿಸಲು ಸಮರೋಪಾದಿಯಲ್ಲಿ ಕಾರ್ಯಕ್ರಮ ತಯಾರಿ ನಡೆಯುತ್ತಿದೆ.

ಉಮಾಕಾಂತ ಕುಲಕರ್ಣಿಯವರು, ಬಾಬಳಗಾಂವ್ ಚಿದಂಬರ ಮಂದಿರಮೂರ್ತಿ ರೂಪದಲ್ಲಿ ಚಿದಂಬರ ಮಂದಿರಗಳನ್ನು ಕರ್ನಾಟಕ – ಮಹಾರಾಷ್ಟ್ರಗಳಲ್ಲಿ ಕಟ್ಟಿಸಿದ್ದು, ಇತ್ತೀಚೆಗೆ ಕವಟೇಮಹಾಂಕಾಳ (ಮೀರಜ್ ಸಬ್‌ಡಿವಿಜನ್, ಸಾಂಗ್ಲಿ ತಾಲ್ಲೂಕಿನ ಒಂದು ಪಟ್ಟಣ)ದಲ್ಲಿ ಮಂದಿರ ಉದ್ಘಾಟನೆಗೊಂಡಿತು. ದಿವಂಗತ ಉಮಾಕಾಂತ ಕುಲಕರ್ಣಿಯವರ ಈ ಕಾರ್ಯ, ಚಿದಂಬರ ಪಂಥ ಮುಂದುವರೆದು, ಪ್ರಸಿದ್ಧವಾಗುವುದರಲ್ಲಿ ಸಹಕಾರಿಯಾಗಿದೆ. ಶ್ರಾವಣ ಮಾಸದಲ್ಲಿ ನಿವೃತ್ತಿನಾಥರ ಸಮಾಧಿ ಕ್ಷೇತ್ರ, ತ್ರಯಂಬಕೇಶ್ವರ (ನಾಸಿಕ) ದಿಂದ, ಗಂಗಾಬಾಬಳಗಾಂವ್‌ಗೆ ನಡೆಯುವ ದಿಂಡೀಯಾತ್ರೆಯಲ್ಲಿ ಅಸಂಖ್ಯಾತ ಭಕ್ತರು ಪಾಲ್ಗೊಳ್ಳುತ್ತಾರೆ.

ಇಂದಿಗೂ ಕರ್ನಾಟಕದಿಂದ ಸ್ವಾಮಿಯ ದರ್ಶನಕ್ಕೆ ಗಂಗಾಬಾಬಳಗಾಂವ್‌ಗೆ ಬರುವ ಭಕ್ತರನ್ನು ಚಿದಂಬರ ಮಹಾಸ್ವಾಮಿ ವಿಶೇಷ ಕಾಳಜಿಯಿಂದ ಯಾತ್ರಾ ಸಂಗವಾಗುವಂತೆ ನೋಡಿಕೊಳ್ಳುವುದು ಸ್ವಾನುಭವವೂ ಹೌದು. ಹೀಗೆ ಮುರುಗೋಡು ಚಿದಂಬರರು ಕರ್ನಾಟಕ – ಮಹಾರಾಷ್ಟ್ರ ಸಾಂಸ್ಕೃತಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಬಾಂಧ್ಯವಕ್ಕೆ ಗಟ್ಟಿತನ ತಂದಿರುತ್ತಾರೆ.

ಅಡಿಟಿಪ್ಪಣಿಗಳು

೧. ಪೂರ್ಣಬ್ರಹ್ಮ ಚಿದಂಬರ ಅಭಂಗಗಾಥ; ಸಂತರತ್ನ ರಾಜಾರಾಮ ಮಹಾರಾಜ ಕೃತ ಮೂಲ ಮರಾಠಿ ಅಭಂಗಗಳು. ಶ್ರೀ ಚಿದಂಬರ ಪ್ರತಿಷ್ಠಾನ, ಅಲಾಪ, ಪಂಡಿತ ವಿನಾಯಕ ತೋರವಿ, ನಂ.೪, ೬ನೇ ಅಡ್ಡರಸ್ತೆ, ೪೦ ಅಡಿ ರಸ್ತೆ, ೨ನೇ ಸ್ಟೇಜ್, ಮಂಜುನಾಥನಗರ, ಬೆಂಗಳೂರು ೫೬೦೦೧೦ P-F-೩೦.

೨. ಕುಮಾರ್ ಎ.ಸಿ., 2021, ಚಿದಂಬರ ವಾರಕರಿ ಮೂಲಪೀಠ – ರಾಜಾರಾಮ ಮಠ (ಗುರ್ಲಹೊಸೂರು) – ಇತಿಹಾಸ ದರ್ಶನ ಸಂ. ೩೬, ಪು. ೨೮೦.

೩. ಪೂರ್ಣಬ್ರಹ್ಮ ಚಿದಂಬರ ಅಭಂಗಗಾಥ – ಪು. ೪೮೬, ೪೮೭ ಪತ್ರವ್ಯವಹಾರ.

◆◆

೩೨

ಸ್ಮಿತಾ ರೆಡ್ಡಿ ಡಿ.

ಎಕ್ಕೋಟಿ ಮತ್ತು ಬ್ರಹ್ಮ ಜಿನಾಲಯಗಳು

(ಮಧ್ಯಕಾಲೀನ ಕರ್ನಾಟಕದ ಮತಾನುಸಂಧಾನ ಮಾದರಿಗಳು)

ಕರ್ನಾಟಕದಲ್ಲಿ ಜಿನಾಲಯಗಳ ನಿರ್ಮಾಣ ಸುಮಾರು ಏಳನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಆನಂತರ ಆಳರಸರ ಪ್ರೋತ್ಸಾಹ, ಬೆಂಬಲದಿಂದ ಹನ್ನೊಂದನೆಯ ಶತಮಾನದವರೆಗೂ ಅವುಗಳ ನಿರ್ಮಾಣಕಾರ್ಯ ಅವಿಚ್ಛಿನ್ನವಾಗಿ ನಡೆಯುತ್ತಾ ಬಂತು. ಜಿನಾಲಯಗಳನ್ನು ನಿರ್ಮಿಸಿದ ನಂತರ, ಅವುಗಳನ್ನು ನಿರ್ಮಿಸಿದ ವ್ಯಕ್ತಿಯ ಹೆಸರಿನಿಂದಲೋ ಅಥವಾ ಯಾವ ತೀರ್ಥಂಕರನಿಗಾಗಿ ಅದನ್ನು ನಿರ್ಮಿಸಿದರೋ ಆ ತೀರ್ಥಂಕರನ ಹೆಸರಿನ ಮೂಲಕ ಹೆಸರಿಸುವ ವಾಡಿಕೆ ರೂಢಿಗೆ ಬಂತು. ಆದರೆ, ಹನ್ನೊಂದನೆ ಶತಮಾನದಿಂದ ಹದಿಮೂರನೆಯ ಶತಮಾನದ ಶಾಸನಗಳಲ್ಲಿ ಕೆಲವು ಜಿನಾಲಯಗಳನ್ನು 'ಬ್ರಹ್ಮ ಜಿನಾಲಯ', 'ಎಕ್ಕೋಟಿ ಜಿನಾಲಯ' ಮತ್ತು 'ಜೋಗವಟ್ಟಿಗೆ ಜಿನಾಲಯ' ಎಂಬ ವಿಶಿಷ್ಟ ಹೆಸರುಗಳಿಂದ ಕರೆಯಲಾಗಿರುವುದು ವಿಶೇಷ.

ಬ್ರಹ್ಮ ಜಿನಾಲಯಗಳು ಮತ್ತು ಎಕ್ಕೋಟಿ ಜಿನಾಲಯಗಳು ಅರ್ಥಾತ್ ಜೋಗವಟ್ಟಿಗೆ ಜಿನಾಲಯಗಳು ಮಧ್ಯಕಾಲೀನ ಕರ್ನಾಟಕದ ಧಾರ್ಮಿಕತೆಯ ವಿಶಿಷ್ಟ ಚಹರೆಗಳಾಗಿವೆ. ಹನ್ನೊಂದನೆಯ ಶತಮಾನದ ಆರಂಭ ಭಾಗದಿಂದ ಹದಿಮೂರನೆಯ ಶತಮಾನದವರೆಗೆ ಅಂದರೆ, ಎರಡು ಶತಮಾನಗಳ ಕಾಲ ಮಾತ್ರ ಕಾಣಿಸಿಕೊಳ್ಳುವ ಇವು ತರುವಾಯ ಹೇಳಹೆಸರಿಲ್ಲದಂತೆ ಕಣ್ಮರೆಯಾಗುತ್ತವೆ. ಬ್ರಹ್ಮ ಜಿನಾಲಯಗಳು ಮತ್ತು ಎಕ್ಕೋಟಿ ಜಿನಾಲಯಗಳಿಗೆ ಅರ್ಥ ವ್ಯಾಖ್ಯಾನ ನೀಡಬೇಕಾದರೆ, ಅವುಗಳ ಗುಣವಿಶೇಷಣ ಮತ್ತು ವಿನ್ಯಾಸಗಳನ್ನು ಅರಿಯಬೇಕಾದರೆ, ಕರ್ನಾಟಕದ ಧಾರ್ಮಿಕ ಇತಿಹಾಸದ ಹಿನ್ನೆಲೆಯ ಅರಿವೂ ಸಹ ಅಷ್ಟೇ ಮುಖ್ಯವಾಗುತ್ತದೆ. ಕರ್ನಾಟಕದ ಧಾರ್ಮಿಕ ಚರಿತ್ರೆಯ ಅರಿವಿನ ಹೊರತಾಗಿ ಈ ಪರಿಕಲ್ಪನೆಗಳನ್ನು ಅರ್ಥೈಸಲು ಸಾಧ್ಯವಿಲ್ಲ.

ಕರ್ನಾಟಕವು 'ಬಹುಧರ್ಮಧೇನು ನಿವಹಕ್ಕೆ ಆಡುಂಬೊಲವಾಗಿದ್ದಂತೆ', ಕರ್ನಾಟಕದ ಅರಸರೂ ಸಹ 'ಚತುಸ್ಸಮಯ ಸಮುದ್ಧರಣ'ರಾಗಿದ್ದರು. ಅದರ ಅರ್ಥ ಕರ್ನಾಟಕದಲ್ಲಿ ಮತ, ಧರ್ಮಗಳ ನಡುವೆ ತಿಕ್ಕಾಟ ಇರಲಿಲ್ಲವೆಂದಲ್ಲ. ಅವರು ಅಂತಹ ಧಾರ್ಮಿಕ ಸಂಘರ್ಷಗಳಿಗೆ ಸಾಕ್ಷಿಯಾಗುತ್ತಲೇ ಅವುಗಳಿಗೆ ಅನುಸಂಧಾನಗಳನ್ನು ಏರ್ಪಡಿಸಲೂ ಪ್ರಯತ್ನಿಸುತ್ತಾ, ಮತ-ಪಂಥಗಳ ನಡುವೆ ಸಮನ್ವಯ ಸಾಧಿಸುತ್ತಾ ಬಂದರು. ಕರ್ನಾಟಕ ಪ್ರಭುತ್ವಗಳು ಅನುಸರಿಸಿದ ಧಾರ್ಮಿಕ ಸಮನ್ವಯತೆಯ ಸ್ವರೂಪವನ್ನು ಹರಿಹರ ಪುರಗಳ ಸ್ಥಾಪನೆ, ಹರಿಹರ ದೇವಾಲಯಗಳ ನಿರ್ಮಾಣ, ಬಹುಕೂಟ ದೇವಾಲಯಗಳ ರಚನೆ ಮುಂತಾದ ಅಂಶಗಳಲ್ಲಿ ಗುರುತಿಸಬಹುದು.

ಮುಖ್ಯ ಭಾಷಾಂತರಕಾರರು
ಕರ್ನಾಟಕ ಕಾನೂನು ವರದಿಗಳ ಮಂಡಲಿ, ಉಚ್ಚ ನ್ಯಾಯಾಲಯ
ಬೆಂಗಳೂರು-೫೬೦೦೦೧
ಮೊ: ೯೪೪೯೫ ೩೨೪೬೩

ಇವು ವೈದಿಕ ಧರ್ಮದೊಳಗೆ ನಡೆದ ವಿಲೀನ ಪ್ರಕ್ರಿಯೆಯಾದರೆ, ವೈದಿಕ ಮತಗಳು ವೈದಿಕೇತರವಾದ ಅನ್ಯ ಮತಗಳೊಂದಿಗೆ ಮಾಡಿಕೊಂಡ ಅನುಸಂಧಾನಗಳ ಫಲಿತಗಳೇ ಬ್ರಹ್ಮಜಿನಾಲಯ ಮತ್ತು ಎಕ್ಕೋಟಿ ಜಿನಾಲಯಗಳು.

ಎಕ್ಕೋಟಿ ಜಿನಾಲಯಗಳು: ಕರ್ನಾಟಕದ ಸುಮಾರು ಇಪ್ಪತ್ತು ಶಾಸನಗಳಲ್ಲಿ ಎಕ್ಕೋಟಿ ಜಿನಾಲಯಗಳ ಉಲ್ಲೇಖ ಕಂಡುಬರುತ್ತದೆ. ಇವುಗಳಲ್ಲಿ ಎರಡು ಜಿನಾಲಯಗಳನ್ನು ನಿರ್ದಿಷ್ಟವಾಗಿ ಜೋಗವಟ್ಟಿಗೆ ಜಿನಾಲಯಗಳೆಂದೇ ಕರೆಯಲಾಗಿದೆ. ಹನ್ನೆರಡನೆಯ ಶತಮಾನದ ಆರಂಭದ ಅವಧಿಯಿಂದ ಎಂದರೆ, ಕ್ರಿ.ಶ. ೧೧೦೪ ರಿಂದ ಆರಂಭವಾಗಿ ಕ್ರಿ.ಶ. ೧೨೭೭ರವರೆಗೆ ಸುಮಾರು ಎರಡು ಶತಮಾನಗಳ ಅಂತರದಲ್ಲಿ ಮಾತ್ರ ಈ ಜಿನಾಲಯಗಳು ಅಸ್ತಿತ್ವದಲ್ಲಿರುವುದು ಕಂಡುಬರುತ್ತವೆ. ವಿಶೇಷವೆಂದರೆ ವೀರಶೈವ ಪರಂಪರೆ ಅಥವಾ ಶರಣ ಚಳುವಳಿ ಅತ್ಯುಚ್ಛ್ರಾಯ ಹಂತದಲ್ಲಿದ್ದಾಗಲೇ ಇವು ಅಸ್ತಿತ್ವದಲ್ಲಿದ್ದು ನಂತರ ಕಣ್ಮರೆಯಾಗುತ್ತವೆ.

ಎಕ್ಕೋಟಿ ಜಿನಾಲಯಗಳ ಕುರಿತ ಸುಮಾರು ಇಪ್ಪತ್ತು ಶಾಸನಗಳಲ್ಲಿ ಕೇವಲ ಒಂಭತ್ತು ಶಾಸನಗಳಲ್ಲಿ ಮಾತ್ರ ಯಾವ ತೀರ್ಥಂಕರರ ಮೂರ್ತಿಯನ್ನು ಈ ಎಕ್ಕೋಟಿ ಜಿನಾಲಯಗಳಲ್ಲಿ ಪ್ರತಿಷ್ಠಾಪಿಸಲಾಗಿತ್ತೆಂದು ಉಲ್ಲೇಖಿಸಲಾಗಿದೆ. ಒಂಭತ್ತು ಶಾಸನಗಳಲ್ಲಿ ನಾಲ್ಕು ಶಾಂತಿನಾಥ ತೀರ್ಥಂಕರನ ಬಸದಿಗಳನ್ನು, ಮೂರು ಪಾರ್ಶ್ವನಾಥ ತೀರ್ಥಂಕರನ ಬಸದಿಗಳನ್ನು, ತಲಾ ಒಂದೊಂದು ನೇಮಿನಾಥ ಮತ್ತು ಪದ್ಮಪ್ರಭ ದೇವರ ಬಸದಿಗಳನ್ನು ಎಕ್ಕೋಟಿ ಜಿನಾಲಯಗಳೆಂದು ಹೆಸರಿಸಲಾಗಿದೆ. ಎಂದರೆ, ಯಾವುದೇ ಒಂದು ನಿರ್ದಿಷ್ಟ ತೀರ್ಥಂಕರನ ಬಸದಿಗಳನ್ನು ಮಾತ್ರ ಎಕ್ಕೋಟಿ ಬಸದಿಗಳನ್ನಾಗಿ ಮಾಡದೆ, ಸಂದರ್ಭಾನುಸಾರವಾಗಿ, ಬಸದಿಗಳ ನಿರ್ವಹಣೆಯ ಅನುಕೂಲತೆ ಅಥವಾ ಅಗತ್ಯಕ್ಕೆ ತಕ್ಕಂತೆ ಅಸ್ತಿತ್ವದಲ್ಲಿದ್ದ ಜಿನಾಲಯಗಳನ್ನು ಎಕ್ಕೋಟಿ ಜಿನಾಲಯಗಳೆಂದು ಕರೆದಂತೆ ತೋರುತ್ತದೆ.

ಎಕ್ಕೋಟಿ ಜಿನಾಯಲಗಳ ಬಗ್ಗೆ ಚರ್ಚಿಸುವ ಮೊದಲು ಜಿನಾಲಯಗಳ ವಿಶೇಷಣ ಪದವಾದ 'ಎಕ್ಕೋಟಿ' ಪದದ ಬಗ್ಗೆ ಚರ್ಚಿಸುವುದು ಅಗತ್ಯವೆನಿಸುತ್ತದೆ. ಎಕ್ಕೋಟಿ ಎಂಬುದು ಶೈವಮತದಲ್ಲಿ ಏಳುಕೋಟಿ ತಪಸ್ವಿಗಳ ಪರಿಕಲ್ಪನೆ. ಕರ್ನಾಟಕದ ಶಾಸನಗಳಲ್ಲಿ ಏಳ್ಕೋಟಿ ಮುನೀಂದ್ರರು, ಎಕ್ಕೋಟಿ ಸಮಯ, ಎಕ್ಕೋಟಿ ಮಠ, ಮುಂತಾದ ವಿವರಗಳು ಲಭ್ಯವಾಗುತ್ತವೆ. ಏಳ್ಕೋಟಿ ಮತ್ತು ಎಕ್ಕೋಟಿ ಪದಗಳನ್ನು ಸಮಾನಾರ್ಥದಲ್ಲಿಯೇ ಬಳಸಲಾಗಿದೆ. 'ಏಳ್ಕೋಟಿಯೇ' ಎಕ್ಕೋಟಿಯಾಗಿದೆ ಎಂಬುದು ಚಿದಾನಂದಮೂರ್ತಿಯವರ ಅಭಿಮತ.[೧] ಎಕ್ಕೋಟಿಗಳ ಉಲ್ಲೇಖ ನಮಗೆ ರಾಷ್ಟ್ರಕೂಟರ ಕಾಲದಿಂದಲೂ ಕಂಡುಬರುತ್ತದೆ. ಹೊಯ್ಸಳರ ಮತ್ತು ಅವರ ಸಮಕಾಲೀನ ಶಾಸನಗಳಲ್ಲಿ 'ಎಕ್ಕಟಿಗ' ಎಂಬ ಪದ ಪ್ರಯೋಗವಾಗಿದ್ದು, ಅದಕ್ಕೂ ಎಕ್ಕೋಟಿಗೂ ಸಂಬಂಧವಿರುವುದಿಲ್ಲ. ಸೈನ್ಯ, ಅಂಗರಕ್ಷೆ, ಯುದ್ಧದ ಸನ್ನಿವೇಶಗಳ ಹಿನ್ನೆಲೆಯಲ್ಲಿ 'ಎಕ್ಕಟಿಗರ' ಉಲ್ಲೇಖ ಕಂಡುಬಂದರೆ, ಕಾಳಾಮುಖ ದೇವಾಲಯಗಳ ಯತಿಗಳು, ಸ್ಥಾನಪತಿಗಳ/ಆಚಾರ್ಯರ ಜೊತೆ 'ಎಕ್ಕೋಟಿ' ಅವಿನಾಭಾವ ಸಂಬಂಧ ಹೊಂದಿದೆ. ಲಲಿತಾಂಬಾರವರು ಎಕ್ಕಟಿಗಳು, ಏಳ್ಕೋಟಿ/ಎಕ್ಕೋಟಿಗಳಿಗಿಂತ ಭಿನ್ನವೆಂದು ವಿವರಿಸಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.[೨]

ಎಕ್ಕೋಟಿ ಜಿನಾಲಯಗಳ ಸ್ವರೂಪ, ವಿನ್ಯಾಸಗಳನ್ನು ತೇರದಾಳದ ಶಾಸನದ ಹಿನ್ನೆಲೆಯಲ್ಲಿಯೇ ಚರ್ಚಿಸಬಹುದೆನಿಸುತ್ತದೆ. ಜಮಖಂಡಿಯ ತೇರದಾಳದ ಶಾಸನವು[೩] ಮೂರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಾಕಿಸಿರುವ ಶಾಸನವಾಗಿದೆ. ಎಂದರೆ ಕ್ರಿ.ಶ. ೧೧೨೩, ೧೧೮೭ ಹಾಗೂ ೧೧೮೭ರಲ್ಲಿ ಮೂರು ಹಂತಗಳಲ್ಲಿ ಈ ಶಾಸನವನ್ನು ಬರೆಸಲಾಗಿದೆ. ತುಂಬಾ ದೊಡ್ಡದಾದ ಈ ಶಾಸನದಲ್ಲಿ ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯರ ಕಾಲದ ಸುದೀರ್ಘ ಶಾಸನಗಳಲ್ಲಿ ಬರುವ ವರ್ಣನೆಯಂತೆ ಸಮುದ್ರ, ಕುಂತಲದ ವರ್ಣನೆ, ರಾಜಪೆರ್ಮಾಡಿದೇವ, ನಗರವರ್ಣನೆ, ಜೈನಮುನಿಗಳ ಪರಂಪರೆಯ ವರ್ಣನೆಯ ತರುವಾಯ, ಪೆರ್ಮಾಡಿರಾಯನ ಸಾಮಂತ ಗೊಂಕರಾಜನು ತೇರದಾಳದಲ್ಲಿ ಗೊಂಕ ಜಿನಾಲಯ ನಿರ್ಮಿಸಿ ನೇಮಿನಾಥನನ್ನು ಪ್ರತಿಷ್ಠಾಪನೆ ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ. ಆನಂತರ ರೂಪನಾರಾಯಣ ಬಸದಿಯ ಜೈನ ಆಚಾರ್ಯರನ್ನು ಕರೆಸಿ ಅವರ ಕಾಲನ್ನು ತೊಳೆದು ಬಸದಿಯ ನಿರ್ವಹಣೆಗೆ ದಾನ ದತ್ತಿಗಳನ್ನು ನೀಡುತ್ತಾನೆ. ಅದನ್ನನುಸರಿಸಿ ಇತರರೂ ಸಹ ದಾನ ದತ್ತಿಗಳನ್ನು ನೀಡುತ್ತಾರೆ. ಬಹುಶಃ ಈ ಬಸದಿಯನ್ನು ನಿರ್ವಹಿಸುವುದಕ್ಕೆ ಈಗಾಗಲೇ ಅಲ್ಲಿ ಅಸ್ತಿತ್ವದಲ್ಲಿದ್ದ ರೂಪನಾರಾಯಣ ಬಸದಿಗೆ ಅದನ್ನು ಪ್ರತಿಬದ್ಧ ಮಾಡಿ ಒಪ್ಪಿಸಿರಬಹುದೆನಿಸುತ್ತದೆ. ಹೊಸದಾಗಿ ನಿರ್ಮಿಸಿದ ದೇವಾಲಯ ಮತ್ತು ಬಸದಿಗಳನ್ನು ಈಗಾಗಲೇ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ದೇವಾಲಯಗಳಿಗೆ 'ಪ್ರತಿಬದ್ಧ' ಮಾಡುವ ಪದ್ಧತಿ ಇದ್ದುದನ್ನು ಇದೇ ಅವಧಿಯ ಶಾಸನಗಳು ಉಲ್ಲೇಖಿಸುತ್ತವೆ. ಗೊಂಕರಾಜ ಗೊಂಕ ಜಿನಾಲಯವನ್ನು ನಿರ್ಮಿಸಿದ ೫೮ ವರ್ಷಗಳ ತರುವಾಯ ಕ್ರಿ.ಶ. ೧೧೮೧ರಲ್ಲಿ ಅಯ್ಯಾವೊಳೆ ಅಯ್ನೂರ್ವರಾದ ವರ್ತಕ ಸಮುದಾಯದವರು ಗೊಂಕ ನಿರ್ಮಿಸಿದ ನೇಮಿನಾಥ ಚೈತ್ಯಾಲಯವನ್ನು ನೋಡಿ ಹರುಷದಿಂದ ಚತುಸ್ಸಮುದ್ರಾಂತವಾಗಿ ೧೨೦ ಕತ್ತೆ, ಕೋಣ, ಬಂಡಿ, ಭೈತ್ರ, ದೋಣಿ ಮತ್ತು

ದುರ್ಗಗಳ ಪಥಗಳ ಮೂಲಕ ಹಾದುಹೋಗುವ ಆನೆ, ಮಾಣಿಕ ಮುಂತಾದ ವಸ್ತುಗಳ ಮೇಲಿನ ಸುಂಕ ಹಾಗೂ ಇತರ ಹೊಲ, ಮನೆ ಮುಂತಾದ ದಾನ ದತ್ತಿಗಳನ್ನು ನೀಡುತ್ತಾರೆ. ಶಾಸನದ ಮೂರನೆಯ ಹಂತದಲ್ಲಿ ಕ್ರಿ.ಶ. ೧೧೮೭ರಲ್ಲಿ ರೂಪನಾರಾಯಣ ಬಸದಿಯ ಪ್ರತಿಬದ್ಧವಾದ ತೇರದಾಳದ ಗೊಂಕ ಜಿನಮಂದಿರಕ್ಕೆ ಕೊಲ್ಲಾಪುರದ ಅಗಸ್ತೇಶ್ವರ, ಕಣಗಿಲೇಶ್ವರದ ಮಹಾಲಕ್ಷ್ಮಿ ದೇವಿಯ, ಗೋಕಾಕೆಯ ಮಹಾಲಿಂಗದೇವರ ಘಟಿಕಾಸ್ಥಾನದ ಆಚಾರ್ಯರು ಮುಖ್ಯರಾಗಿ ಏಳ್ಕೋಟಿಯ ಅಸಂಖ್ಯಾತ ಗಣಗಳು ಒಂದು ಒಕ್ಕೂಟವನ್ನು ಮಾಡಿಕೊಂಡು ತೇರದಾಳಕ್ಕೆ ಬಂದು ಜೈನ ರೂಪನಾರಾಯಣ ಬಸದಿಗೆ ಪ್ರತಿಬದ್ಧ ಮಾಡಲಾಗಿದ್ದ ಗೊಂಕ ಜಿನಾಲಯವನ್ನು, ಕಾಳಾಮುಖ ದೇವಾಲಯವಾದ ತೇರದಾಳದ ಮೂಲಸ್ಥಾನದ ಕಲಿದೇವರಿಗೆ ಪ್ರತಿಬದ್ಧ ಮಾಡುತ್ತಾರೆ. ಹಾಗೆ ಪ್ರತಿಬದ್ಧ ಮಾಡಿಕೊಂಡು ನೇಮಿನಾಥನನ್ನು ಪ್ರತಿಷ್ಠೆ ಮಾಡುವ ಕಾಲದಲ್ಲಿ ಗೊಂಕ ಜಿನಾಲಯದ ಆಚಾರ್ಯರಾದ ಪ್ರಭಾಚಂದ್ರ ಪಂಡಿತ ದೇವರಿಗೆ 'ಇದು ಎಮ್ಮ ಜೋಗವಟ್ಟಿಗೆಯ ಸ್ಥಾನ' ಎಂದು ಬಸದಿಯೊಳಗೆ ಜೋಗವಟ್ಟಿಗೆಯನ್ನು ಇರಿಸಿ, ಬಸದಿಯ ಮೇಲೆ ಸೂದ್ರಕ, ಸಿಂಹದ ಚಕ್ರ, ತಿಸುಳದ ಘಂಟೆ, ಪಜೆಯನ್ನು ಇಡುತ್ತಾರೆ. ಜೋಗವಟ್ಟಿಗೆಯನ್ನು ಇಡುವಾಗಲೂ ಸಹ ಮುನಿತಾಪಸರು "ಇದಾಗದು ಎನುವವನು ಏಳುಕೋಟಿ ತಾಪಸರ್ಗೆ, ಮಹಾವಿರೋಧಿ, ಈಶ್ವರನ ವೈರಿ" ಎಂದು ಹೇಳುತ್ತಾ ಜೋಗವಟ್ಟಿಗೆಯನ್ನು ಇರಿಸುತ್ತಾರೆ. ಬಹುಶಃ ಬೇರೆ ಬೇರೆ ಕಾಲದಲ್ಲಿ ದಾನ ನೀಡಿ ನೀಡಿದ್ದಂತಹ ಶಾಸನಗಳನ್ನು (ತಾಮ್ರಪತ್ರಗಳನ್ನು?) ಇಟ್ಟುಕೊಂಡು ಈ ಶಾಸನವನ್ನು ಅಂತಿಮವಾಗಿ ಕ್ರಿ.ಶ. ೧೧೮೭ರಲ್ಲಿ ಬರೆಸಿದಂತಿದೆ. ಮೊದಲಿಗೆ ಕ್ರಿ.ಶ. ೧೧೨೩ರಲ್ಲಿ ಹಾಕಿಸಿದಾಗ ಯಾವುದೇ ಗೊಂದಲವಿರಲಿಲ್ಲ. ಆದರೆ, ಇದಾದ ೫೮ ವರ್ಷಗಳ ತರುವಾಯ ಅಯ್ಯಾವೊಳೆಯ ವರ್ತಕರು ವಿಪುಲವಾದ ಮೌಲ್ಯಯುತವಾದ ಸುಂಕಗಳನ್ನು ಬಿಟ್ಟುಕೊಟ್ಟ ತರುವಾಯ ಆ ಬಸದಿಯ ಮೇಲೆ ಇತರ ಧರ್ಮೀಯರ ಅಸಹನೆ, ಅಸಮಾಧಾನಗಳಿಗೆ ಪ್ರತಿಯಾಗಿ ಬಸದಿಯನ್ನು ರಕ್ಷಿಸಲು ಜೋಗವಟ್ಟಿಗೆ ಇರಿಸಿದಂತಿದೆ.

ಶಿವಮೊಗ್ಗದ ಇಮ್ಮಡಿ ಬಲ್ಲಾಳನ ಕಾಲದ ಶಾಸನದಲ್ಲೂ[೪] ಸಹ ಬಲ್ಲಾಳದೇವನ ರಾಜಗುರುವಾದ ಎಕ್ಕೋಟಿ ಚಕ್ರವರ್ತಿಗಳೆಂದು ಹೆಸರಾದ ಮಾಲೇಶ್ವರ ವಾಮಶಕ್ತಿದೇವ ಎಕ್ಕೋಟಿಯ ಕುಮಾರನಾದ ಮಾಕಜೀಯ ಮುಂತಾದ ಬೇರೆಬೇರೆ ಊರುಗಳ ಸಮಸ್ತ ಎಕ್ಕೋಟಿಗಳು ಮತ್ತು ಅಸಂಖ್ಯಾತ ಗಣಗಳು ಕೂಡಿ ಕುರುಳಿಯ ತೀರ್ಥದ ಬಸದಿಗೆ ಜೋಗವಟ್ಟಿಗೆಯನಿಕ್ಕಿ ಅದಕ್ಕೆ ಎಕ್ಕೋಟಿ ಜಿನಾಲಯವೆಂದು ನಾಮಕರಣ ಮಾಡಿ ನಂದಿಕೋಲು ಕೊಡುತ್ತಾರೆ.

ಕಂಬದಹಳ್ಳಿಯ ಶಾಸನದಲ್ಲಿ[೫] ಈಗಾಗಲೇ ಶಾಂತೀಶ್ವರ ಬಸದಿ ನಿರ್ಮಾಣವಾಗಿ ಆ ಬಸದಿಯ ನಿರ್ವಹಣೆಗಾಗಿ ಇಮ್ಮಡಿ ಬಲ್ಲಾಳ ಮತ್ತು ನರಸಿಂಹ ಮುಂತಾದವರು ದಾನ ನೀಡಿರುತ್ತಾರೆ. ತರುವಾಯ ಏಳುಕೋಟಿ ರುದ್ರರು ಕಂಬದಹಳ್ಳಿಯಲ್ಲಿ ಸೇರಿ ಮೂಲಸಂಘದ, ದೇಸಿಯ ಗಣದ, ಪುಸ್ತಕಗಚ್ಚದ ಕಂಬದ ಹಳ್ಳಿ ಪುಣ್ಯಕ್ಷೇತ್ರವನ್ನು ಎಕ್ಕೋಟಿ ಜಿನಾಲಯವೆಂದು ಕರೆದು ಪಂಚವಾದ್ಯಗಳನ್ನು ಜಿನಾಲಯಗಳಲ್ಲಿ ಇಟ್ಟಿದುದಾಗಿ ಹೇಳಲಾಗಿದೆ. ಇದು ಜೈನ ಶಾಸನವಾದರೂ ಇದರಲ್ಲಿ ಸಂಪೂರ್ಣವಾಗಿ ಏಳುಕೋಟಿ ರುದ್ರರನ್ನೇ ಹೊಗಳಲಾಗಿದೆ. "ಸ್ವಸ್ತಿ . . . . . ಗುರುದೇವತಾ ಭಕ್ತರೂ...............ಲಾಕುಳೇಸ್ವರ ಸಿದ್ಧಾಂತ ಕುಮುದಿನಿ ದೀನಾನಾಥಯೂಥರುಂ, ಸಪ್ತಕೋಟಿ ಸಮಾಗ್ರಗಣ್ಯರುಂ, ಅನೇಕ ತೀರ್ಥಾವಗಾಹನ ಪವಿತ್ರಕೃತೋತ್ತಮಾಂಗರುಂ, ಸೋಯಾಯಿಕ ನರ್ತಕೆ ನಟೀನಾಟ್ಯರಂಗರುಂ ಪಂಚಪ್ರಕಾರ ದೀಕ್ಷಾ ಕ್ರಿಯಾ ಪ್ರತಿಷ್ಠಿತರುಂಅಪ್ಪ..............ಏಳುಕೋಟಿ ಮಹಾರುದ್ರರಿಟ್ಟು ಕೊಟ್ಟರು" ಇಡೀ ಶಾಸನದಲ್ಲಿ ಎಲ್ಲಿಯೂ ಜೈನಾಚಾರ್ಯರನ್ನು ಉಲ್ಲೇಖಿಸದೆ, ಶೈವಾಚಾರ್ಯರನ್ನೇ ಹೆಚ್ಚು ಪ್ರಶಂಸಿರುವುದನ್ನು ಕಾಣಬಹುದು.

ಎಕ್ಕೋಟಿ ಜಿನಾಲಯಗಳ ಸ್ವರೂಪ: ಶಾಸನಗಳಲ್ಲಿ ಬಂದಿರುವಂತೆ ಎಕ್ಕೋಟಿ ಜಿನಾಲಯಗಳ ವಿನ್ಯಾಸವನ್ನು ಎರಡು ಹಂತಗಳಲ್ಲಿ ಗುರುತಿಸಬಹುದು.

೧. ಎಕ್ಕೋಟಿ ಜಿನಾಲಯಗಳ ನಿರ್ಮಾಣ

೨. ಎಕ್ಕೋಟಿ ಜಿನಾಲಯಗಳಾಗಿ ಪರಿವರ್ತನೆ

ಎಕ್ಕೋಟಿ ಜಿನಾಲಯಗಳ ನಿರ್ಮಾಣ: ಎಕ್ಕೋಟಿ ಜಿನಾಲಯಗಳ ಉಲ್ಲೇಖವಿರುವ ಆರಂಭದ ಶಾಸನಗಳಲ್ಲಿ ನೇರವಾಗಿ ಎಕ್ಕೋಟಿ ಜಿನಾಲಯಗಳನ್ನು ನಿರ್ಮಿಸಿರುವುದನ್ನು ಉಲ್ಲೇಖಿಸಿಲ್ಲ. ಆದರೆ ಹನ್ನೆರಡು ಮತ್ತು ಹದಿಮೂರನೆಯ ಶತಮಾನದಲ್ಲಿ ನಿರ್ಮಾಣಗೊಂಡಿರುವ ಕೆಲವು ಬಸದಿಗಳನ್ನು ಎಕ್ಕೋಟಿ ಜಿನಾಲಯಗಳೆಂದು ಸ್ಪಷ್ಟವಾಗಿ ಹೆಸರಿಸಲಾಗಿದೆ. ಎಂದರೆ, ಆ ವೇಳೆಗೆ ಬಸದಿಗಳಲ್ಲಿ ಜೋಗವಟ್ಟಿಗೆಗಳನ್ನು ಇಟ್ಟು ರಕ್ಷಿಸುವ ಪದ್ಧತಿ ಪ್ರಾರಂಭವಾಗಿದ್ದರಿಂದ, ಈ ಕಾಲಘಟ್ಟದಲ್ಲಿ ಬಸದಿಗಳನ್ನು ನಿರ್ಮಿಸುವಾಗ ಎಕ್ಕೋಟಿ ಶೈವ ಆಚಾರ್ಯರ ಪೂರ್ವಾನುಮತಿ ಪಡೆದುಕೊಂಡೇ ನಂತರ ನಿರ್ಮಿಸುವ ಜಿನಾಲಯಗಳಿಗೆ ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟಂತೆ ತೋರುತ್ತದೆ.

ಹೊಂಗನೂರಿನ ಕ್ರಿ.ಶ. ೧೩ನೆಯ ಶತಮಾನದ ಶಾಸನವು ಮೂಲ ಸಂಘದ ಕಾಣೂರುಗಣಕ್ಕೆ ಸೇರಿದ ಸರಳ ಚಂದ್ರಭಟ್ಟಾರಕ ದೇವರ ಶಿಷ್ಯರಾದ ಮಾಧವ ಚಂದ್ರದೇವರ ಗುಡ್ಡರು ಉಭಯ ನಾನ ದೇಸಿಗಳು ಹೊಂಗನೂರಿನ ಶಾಂತಿನಾಥದೇವರ ಜೋಗವಟ್ಟಿಗೆ ಬಸದಿ ಮಾಡಿಸಿದರೆಂದು ಉಲ್ಲೇಖಿಸುತ್ತದೆ. ಹಣ್ಣಿಗೇರಿಯ ಶಾಸನವು[೬] ಸಹ ಯಾಪನೀಯ ಸಂಘದ ಕಾರೆಯಗಣದ ಕನಕಪ್ರಭ ಪಂಡಿತರ ಶ್ರಾವಕ ಶಿಷ್ಯ ಅಂಮಗಾವುಂಡನು ತಮ್ಮ ಗ್ರಾಮದ ಏಳ್ಕೋಟಿ ಮಹಾದೇವರ ಆಜ್ಞೆ ಪಡೆದು ಆ ಸ್ಥಳದಲ್ಲಿ ಜೋಗವಟ್ಟಿಗೆ ಇರಿಸಿ ಪಾರ್ಶ್ವಜಿನೇಂದ್ರ ಭವನ ಮಾಡಿಸಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಬಹುಶಃ ಹೊಸದಾಗಿ ನಿರ್ಮಿಸುವ ಬಸದಿಗಳಿಗೆ ಏಳ್ಕೋಟಿ ಶಿವಾಚಾರ್ಯರ ಅನುಮತಿಯೊಂದಿಗೆ, ಮೊದಲು ಅವರಿಂದ ಜೋಗವಟ್ಟಿಗೆ ಇಟ್ಟು ನಂತರ ಜಿನಮಂದಿರಗಳನ್ನು ನಿರ್ಮಿಸಬೇಕಾಗಬಹುದೆಂದು ತೋರುತ್ತದೆ. ಮೂವತ್ತಾರು ಜನ ನಾಯಕರು, ಹಲವಾರು ಗೌಡರೊಂದಿಗೆ ಹಾಗೆಯೇ ನಯಕೀರ್ತಿಸಿದ್ಧಾಂತ ದೇವರ ಪ್ರಶಿಷ್ಯರಾದ ಬಾಹುಬಲಿಶೆಟ್ಟಿ ಪಾರಿಶೆಟ್ಟಿಯರು ಎಕ್ಕೋಟಿ ಜಿನಾಲಯ ನಿರ್ಮಿಸಿ ಪದ್ಮಪ್ರಭ ದೇವರನ್ನು ಪ್ರತಿಷ್ಠಾಪಿಸುತ್ತಾರೆ.[೭]

ಎಕ್ಕೋಟಿ ಜಿನಾಲಯಗಳಾಗಿ ಪರಿವರ್ತನೆ: ಪ್ರಸ್ತುತ ಈ ಶಾಸನಗಳು ದೊರೆತ ಕಾಲಘಟ್ಟದಲ್ಲಿ ಎಕ್ಕೋಟಿ ಜಿನಾಲಯಗಳು ನಿರ್ಮಾಣಗೊಂಡಿದ್ದಕ್ಕಿಂತ, ಅಸ್ತಿತ್ವದಲ್ಲಿದ್ದ ಜಿನಾಲಯಗಳಿಗೆ 'ಎಕ್ಕೋಟಿ ಜಿನಾಲಯ', 'ಜೋಗವಟ್ಟಿಗೆ ಜಿನಾಲಯ' ಎಂದು ಮರುನಾಮಕರಣ ಮಾಡಿದ ಉಲ್ಲೇಖಗಳೇ ಹೆಚ್ಚು ದೊರೆಯುತ್ತದೆ. ಈಗಾಗಲೇ ಆರಂಭದಲ್ಲಿಯೇ ಚರ್ಚಿಸಲಾದಂತೆ ಗೊಂಕರಾಜನು ತೇರದಾಳದಲ್ಲಿ ನಿರ್ಮಿಸಿದ ಗೊಂಕ ಜಿನಾಲಯಕ್ಕೆ 'ಜೋಗವಟ್ಟಿಗೆ ಜಿನಾಲಯ' ಎಂದು ಹೆಸರಿಟ್ಟಿದ್ದನ್ನು ಗಮನಿಸಲಾಗಿದೆ.

ಕಂಬದಹಳ್ಳಿ ಪುಣ್ಯಕ್ಷೇತ್ರವನ್ನು ಏಳುಕೋಟಿ ರುದ್ರರು ಎಕ್ಕೋಟಿ ಜಿನಾಲಯವೆಂದು ಕರೆದು ಭೇರಿಯೇ ಮೊದಲಾದ ಪಂಚವಾದ್ಯಗಳನ್ನು ಜಿನಾಲಯದಲ್ಲಿ ಇಡುತ್ತಾರೆ. ಕಸಲಗೆರೆ ಶಾಸನವು,[೮] ಕಲ್ಕುಣಿನಾಡ ಜಿನಾಲಯವೊಂದಕ್ಕೆ ಎಲ್ಲರೂ ಸೇರಿ ಎಕ್ಕೋಟಿ ಜಿನಾಲಯವೆಂದು ಹೆಸರನ್ನು ಇಡುತ್ತಾರೆ. ಕೆಲವು ಶಾಸನಗಳನ್ನು ಆರಂಭಿಸುವ ಮೊದಲೇ ಶಾಸನದ ಶೀರ್ಷಿಕೆಯಾಗಿಯೇ 'ಎಕ್ಕೋಟಿ ಜಿನಾಲಯ' ಎಂದು ಬರೆದಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಬಿಟ್ಟಿಗೌಡನು ಕಟ್ಟಿಸಿದ ಬಿಟ್ಟಿ ಜಿನಾಲಯ ಎಕ್ಕೋಟಿ ಜಿನಾಲಯವಾಗಿ ಪರಿವರ್ತನೆಯಾಗಿದೆ. ಹಾಗೆಯೇ ಗೋವಿಂದ ಜಿನಾಲಯ, ಕುರುಳಿಯ ತೀರ್ಥದ ಬಸದಿ, ಕಲಸಗೆರೆ, ಅರಸೀಕೆರೆಯ ಸಹಸ್ರಕೂಟ ಜಿನಾಲಯಗಳೆಲ್ಲವೂ ನಂತರ ಎಕ್ಕೋಟಿ ಜಿನಾಲಯಗಳಾಗಿ ಮರು ನಾಮಕರಣಗೊಂಡಿವೆ.

ಜೋಗವಟ್ಟಿಗೆ: ಎಕ್ಕೋಟಿ ಜಿನಾಲಯಗಳ ಮುಖ್ಯ ವೈಲಕ್ಷಣವೆಂದರೆ, ಅವು ಜೋಗವಟ್ಟಿಗೆಗಳನ್ನು ಹೊಂದಿರಬೇಕು. ಎಕ್ಕೋಟಿ ಜಿನಾಲಯಗಳ ಉಲ್ಲೇಖವಿರುವ ಇಪ್ಪತ್ತು ಶಾಸನಗಳಲ್ಲಿ ಒಂಬತ್ತು ಶಾಸನಗಳಲ್ಲಿ ಜೋಗವಟ್ಟಿಗೆ ಇಟ್ಟ ಉಲ್ಲೇಖವಿದೆ. ತೇರದಾಳ ಮತ್ತು ಗೊಗ್ಗದಲ್ಲಿನ ಜಿನಾಲಯಗಳನ್ನು ಸಹ ಶಾಸನಗಳು ಜೋಗವಟ್ಟಿಗೆ ಬಸದಿಗಳೆಂದೇ ಕರೆದಿವೆ. ಬಹುಶಃ ಹದಿಮೂರನೆಯ ಶತಮಾನದಲ್ಲಿ ನೇರವಾಗಿ ಜಿನಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಮೊದಲು ಜೋಗವಟ್ಟಿಗೆ ಇರಿಸಿಯೇ ನಿರ್ಮಾಣ ಮಾಡಬೇಕಿತ್ತೆಂದು ತೋರುತ್ತದೆ. ಈ ಅವಧಿಯಲ್ಲಿ ನಿರ್ಮಾಣವಾದ ಬಸದಿಗಳನ್ನು 'ಜೋಗವಟ್ಟಿಗೆ ಬಸದಿ'ಗಳೆಂದೇ ಕರೆಯಲಾಗಿರುವುದು ಈ ಅಂಶಕ್ಕೆ ಪೂರಕವಾಗಿದೆ. ಅಮ್ಮಗಾವುಂಡ ಏಳ್ಕೋಟಿ ಮಹಾದೇವರಾಜ್ಞೆಯಿಂದ ಜೋಗವಟ್ಟಿಗೆ ಇರಿಸಿ ಪಾರ್ಶ್ವಜಿನೇಂದ್ರ ಬಸದಿ ನಿರ್ಮಿಸಿದ್ದು, ಈ ಜೋಗವಟ್ಟಿಗೆಗಳು ಆ ಬಸದಿಗಳಿಗೆ 'ವಜ್ರ ಪಂಜರದಂತೆ' ರಕ್ಷಣೆಯನ್ನು ನೀಡುತ್ತಿದ್ದವು. ಹಾಗಾಗಿ ಬಸದಿಗಳ ರಕ್ಷಣೆಗಾಗಿ, ಬಸದಿಗಳಲ್ಲಿ ಇಟ್ಟುಕೊಳ್ಳಲು ಜೋಗವಟ್ಟಿಗೆಗಳನ್ನೇ ದಾನ ನೀಡಲಾಗುತ್ತಿತ್ತು. ಕಲಘಟಗಿ ಶಾಸನವು ಎಕ್ಕೋಟಿ ವೃತಿಗಳು ಜೋಗವಟ್ಟಿಗೆ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಕರ್ನಾಟಕದ ದಕ್ಷಿಣ ಭಾಗದ ಅಮರಾಪುರ ಮತ್ತು ಶಿವಮೊಗ್ಗ ಶಾಸನಗಳಲ್ಲಿ ಬ್ರಹ್ಮ ಜಿನಾಲಯಗಳಲ್ಲೂ ಸಹ ಜೋಗವಟ್ಟಿಗೆ ನೀಡಲಾಗುತ್ತಿದ್ದುದನ್ನು ಉಲ್ಲೇಖಿಸಲಾಗಿದೆ.

ಸಿ.ಯು. ಮಂಜುನಾಥರವರು "ಜಿನಾಲಯಗಳಿಗೆ ಕೊಡುವ ಜೋಗವಟ್ಟಿಗೆ ಎಂಬ ಪದ ಶಾಸನಗಳಲ್ಲಿ ಜೋಗಮಟ್ಟಿಗೆ, ಜೋಗವಟಿಗೆ, ಯೋಗಪಟ್ಟಿಗೆ, ಜೋಗವಟ್ಟಿಗೆ ಎಂಬ ರೂಪಗಳಲ್ಲಿ ಕಾಣಿಸುತ್ತದೆ. ಇದರಲ್ಲಿ ಜೋಗವಟ್ಟಿಗೆ ಸರಿಯಾದ ರೂಪವಾಗಿದ್ದು, ಅದು ಸಂಸ್ಕೃತದ 'ಯೋಗಪಟ್ಟಿಕಾ' ತದ್ಭವವಾಗಿದೆ ಎಂದು ಹೇಳಿ, ಇದು ಧ್ಯಾನಕಾಲದಲ್ಲಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ಯೋಗಿಯ ಬೆನ್ನು ಮತ್ತು ಮೊಳಕಾಲುಗಳನ್ನು ಸೇರಿಸಿ ಸುತ್ತಿಕೊಳ್ಳುವ ಬಟ್ಟೆಯಾಗಿದೆ" ಎಂದು ನಿಘಂಟು ನೀಡಿರುವ ಅರ್ಥವನ್ನು ನೀಡಿರುತ್ತಾರೆ.[೯] ಆದರೆ ಎಕ್ಕೋಟಿ ಜಿನಾಲಯದ ಉಲ್ಲೇಖದ ಶಾಸನಗಳಲ್ಲಿ ಬರುವ ಜೋಗವಟ್ಟಿಗೆ ದಾನ, ಜೋಗವಟ್ಟಿಗೆಯನಿರಿಸುವುದು ಮುಂತಾದ ಪದಗಳನ್ನು ಗಮನಿಸಿದಾಗ, 'ಇರಿಸು' ಎಂಬ ಕ್ರಿಯಾ ಧಾತು ಮಹತ್ವವನ್ನು ಪಡೆದುಕೊಳ್ಳುತ್ತದೆ. ತೇರದಾಳದ ಶಾಸನದಲ್ಲಿ ಜೋಗವಟ್ಟಿಗೆಯನ್ನಿರಿಸಿ ಜಿನಾಲಯದ ಮೇಲೆ ಇತರ

ಚಿಹ್ನೆಗಳನ್ನು ಇರಿಸಿದರೆಂಬ ವಾಕ್ಯವನ್ನು ಗಮನಿಸಿದಾಗ, ಜೋಗವಟ್ಟಿಗೆಯನ್ನು ಜಿನಾಲಯದ ಒಳಗೆ ಎಲ್ಲರಿಗೂ ಕಾಣುವಂತಹ ಭಾಗದಲ್ಲಿ ಇಡುತ್ತಿದ್ದರೆಂದು ತೋರುತ್ತದೆ. ಕಂಬದಹಳ್ಳಿಯಲ್ಲಿ ಈಗಾಗಲೇ ಇದ್ದ ಬಸದಿಗೆ ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟಿದ್ದನ್ನು ಉಲ್ಲೇಖಿಸುವ ಶಾಸನವನ್ನು ಶಾಂತಿನಾಥ ಬಸದಿಯ ರಂಗಮಂಟಪದ ಕಂಬದ ಬೋಧಿಗೆಪಟ್ಟಿಯ ಸುತ್ತಲೂ ಹಾಕಿಸಿರುವುದನ್ನು ಗಮನಿಸಿದಾಗ ಬಹುಶಃ ಆ ಕಂಬದ ಬಳಿಯೇ ಜೋಗವಟ್ಟಿಗೆ ಇಟ್ಟಿರಬಹುದೆಂದು ಊಹಿಸಲು ಅವಕಾಶವಿದೆ. ಹಾಗೆಯೇ ಉಳಿದ ಬಸದಿಗಳಲ್ಲೂ ಹಾಗೇ ಎಲ್ಲರಿಗೂ ಕಾಣುವ ಸ್ಥಳದಲ್ಲಿ ಇರಿಸುತ್ತಿದ್ದರೆಂದು ತೋರುತ್ತದೆ. ಹಾಗಾಗಿ ಬೆನ್ನು ಮತ್ತು ಮೊಳಕಾಲನ್ನು ಸೇರಿಸಿ ಸುತ್ತುವ ಬಟ್ಟೆಯನ್ನು ಜಿನಾಲಯದಲ್ಲಿ ಎಲ್ಲರಿಗೂ ಕಾಣುವಂತೆ ಇರಿಸುವುದು ಅಸಂಗತವೆನಿಸುತ್ತದೆ. ಹಾಗಾಗಿ ಸಿ.ಯು. ಮಂಜುನಾಥರವರು ಅಭಿಪ್ರಾಯ ಪಟ್ಟಿರುವಂತೆ ಇದು ಯೋಗಪಟ್ಟಿಕೆಯಾಗಿರಲಾರದು. ಜೋಗವಟ್ಟಿಗೆಯ ಬಗ್ಗೆ ಚರ್ಚಿಸುತ್ತಾ ದೇವರಕೊಂಡಾರೆಡ್ಡಿಯವರು "ಜೋಗವಟ್ಟಿಗೆಯೆಂದರೆ, ಮುನಿಗಳ ಬಳಿ ಇರುವ ಯೋಗದಂಡ . . . . ಬಸದಿಯ ಆಡಳಿತದ ಜವಾಬ್ದಾರಿಯನ್ನು ಶೈವರು ಒಪ್ಪಿಕೊಂಡಾಗ, ಅದರ ದ್ಯೋತಕವಾಗಿ ಬಸದಿಯಲ್ಲಿ ಯೋಗದಂಡ/ತ್ರಿಶೂಲ ಮೊದಲಾದ ವಸ್ತುಗಳನ್ನು ಇರಿಸಿಕೊಂಡಿರುತ್ತಾರೆ. ಇಂತಹ ವ್ಯವಸ್ಥೆಗೆ ಒಳಪಟ್ಟ ಬಸದಿಗಳು ಮಾತ್ರ ಜೋಗವಟ್ಟಿಗೆ ಬಸದಿಗಳಾಗುತ್ತವೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೦]

ಮೇಲ್ಕಂಡ ಚರ್ಚೆಯ ಹಿನ್ನೆಲೆಯಲ್ಲಿ ಜೋಗವಟ್ಟಿಗೆ ಎಂದರೆ, ಯೋಗಪಟ್ಟಿಗೆ ಎಂಬ ಅರ್ಥಕ್ಕಿಂತ ಮಿಗಿಲಾಗಿ ಯೋಗದಂಡ ಎಂಬುದು ಸೂಕ್ತವೆನಿಸುತ್ತದೆ. ಹನ್ನೊಂದರಿಂದ ಹದಿಮೂರನೆಯ ಶತಮಾನದ ಶೈವಾಚಾರ್ಯರ ಉಲ್ಲೇಖದ ಶಾಸನಗಳಲ್ಲಿನ ಶಾಸನ ಶಿಲ್ಪಗಳನ್ನು ಗಮನಿಸಿದಾಗ ಅವರ ಬಳಿ ಒಂದು ಯೋಗದಂಡವಿರುವುದನ್ನು ಕಾಣಬಹುದು. ಕರ್ನಾಟಕ ಕಾದಂಬರಿ ಸಂಗ್ರಹದಲ್ಲಿ ನಾಗವರ್ಮ ಯಜ್ಞೋಪವೀತವನ್ನು ಧರಿಸಿದ್ದ ಮಹಾಶ್ವೇತೆಯು ದೃಢಪಾಶುಪತೆಯಾಗಿದ್ದಳೆಂದು ವರ್ಣಿಸುತ್ತಾ, ಅವಳ ಗುಹಾ ಅಂಕಣವನ್ನು ವಿವರಿಸುವಾಗ ಅಲ್ಲಿ ಜೋಗವಟ್ಟಿಗೆ, ಭಸ್ಮಶಯ್ಯೆ ಮುಂತಾದ ವಸ್ತುಗಳು ಇದ್ದ ವಿವರವನ್ನು ನೀಡುತ್ತಾನೆ. ಜೋಗವಟ್ಟಿಗೆಯಲ್ಲದೆ, ನಂದಿಕೋಲು, ಪಂಚಮಹಾಶಬ್ದ (ವಾದ್ಯ) ಶೂದ್ರಕ, ಸಿಂಹ, ಹರೆಗಳನ್ನು ಸಹ ಇಡಲಾಗುತ್ತಿತ್ತು. ಹೆಚ್ಚಿನ ಶಾಸನಗಳಲ್ಲಿ ಜೋಗವಟ್ಟಿಗೆಯೊಡನೆ ಪಂಚಮಹಾವಾದ್ಯಗಳನ್ನು ಇರಿಸಿದುದನ್ನೂ ಉಲ್ಲೇಖಿಸಲಾಗಿದೆ. ಬಹುಶಃ ಉತ್ಸವಗಳಲ್ಲಿ ಅವುಗಳನ್ನು ಬಳಸುತ್ತಿದ್ದಿರಬಹುದೆಂದು ತೋರುತ್ತದೆ. ಹೀಗೆ ಜೋಗವಟ್ಟಿಗೆ, ನಂದಿಕೋಲು ಮುಂತಾದ ಮತಸಂಕೇತಗಳನ್ನು ಇಡುವ ಪದ್ಧತಿ ಹಾಗೂ ಪಂಚಮಹಾ ವಾದ್ಯಗಳನ್ನು ಇಡುವ ಪದ್ಧತಿಯೇ ಮುಂದೆ– ವಿಜಯನಗರ ಅರಸರ ಕಾಲದಲ್ಲಿ ವಿವಾದಗಳಿಗೆ ಕಾರಣವಾದಂತೆ ತೋರುತ್ತದೆ. ಇವುಗಳನ್ನು ಶೈವರೇ ಒಪ್ಪಿ ಇಡಬೇಕಾದ್ದರಿಂದ ಅಥವಾ ಜೈನರೇ ಸಮ್ಮತಿಸಿ ತಮ್ಮ ಬಸದಿಗಳಲ್ಲಿ ಇರಿಸಿ ಕೊಳ್ಳಬೇಕಾದ್ದರಿಂದ ಮುಂದೆ ಅವರ ಸಮ್ಮತಿಯಿಲ್ಲದೆ ಧ್ವಜಪತಾಕಾದಿಗಳು (ನಂದಿಕೋಲು?) ಮತ್ತು ಪಂಚಮಹಾವಾದ್ಯಗಳನ್ನು ಜಿನಾಲಯಗಳಲ್ಲಿ ಬಳಸಿದ್ದು ಶೈವರಿಗೆ ಕೋಪ ತಂದಿರಬಹುದು.

ಧರ್ಮಸಮನ್ವಯ ಶಾಸನವೆಂದು ಗುರುತಿಸಲಾಗುವ ಕ್ರಿ.ಶ. ೧೩೬೮ರ ಶ್ರವಣಬೆಳಗೊಳ ಶಾಸನದ[೧೧] ವಿವಾದದ ವಿಷಯ ಭಕ್ತರು ಅನ್ಯಾಯ ಮಾಡುತ್ತಿದ್ದಾರೆ ಎನ್ನುವುದಾದರೂ, ಆ ಅನ್ಯಾಯದ ಸ್ವರೂಪವೇನು? ಎಂಬ ಬಗ್ಗೆ ಶಾಸನ ಮೌನವಹಿಸಿವೆ. ಆದರೆ ಶಾಸನದಲ್ಲಿ ಪೂರ್ವ ಮರಿಯಾದೆಯಂತೆ ಬಸದಿಗಳಲ್ಲಿ ಕಳಶ ಮತ್ತು ಪಂಚಮಹಾವಾದ್ಯಗಳನ್ನು ಬಳಸಬಹುದೆಂದು ಸಮ್ಮತಿ ನೀಡಿರುವುದನ್ನು ಗಮನಿಸಿದಾಗ, ವಿವಾದವು ಜೈನರು ಪಂಚಮಹಾವಾದ್ಯಗಳನ್ನು ಬಳಸಿದ್ದರಿಂದಲೇ ಉದ್ಭವಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೪೦೩ರ ಲಕ್ಷ್ಮೇಶ್ವರ ಶಾಸನದಲ್ಲೂ[೧೨] ಸಹ ಅಷ್ಟದಿಕ್ಪಾಲಕಾದಿಗಳು ಮತ್ತು ಧ್ವಜಪತಾಕಾದಿಗಳನ್ನು ಮತ್ತು ಪಂಚಮಹಾವಾದ್ಯಗಳನ್ನು ಬಳಸಿದುದೇ ವಿವಾದಕ್ಕೆ ಕಾರಣವಾಗಿ, ಅಂತಿಮವಾಗಿ ಜೈನರು ಅರಿಯದೆ ಮಾಡಿದೆವು ತಪ್ಪಾಯಿತು ಎಂದು ಪತ್ರ ಬರೆದುಕೊಡುತ್ತಾರೆ. ಕಾಳಾಮುಖ ಶೈವ ಯತಿಗಳು ಜಿನಾಲಯಗಳಿಗೆ ನೀಡುತ್ತಿದ್ದ ಇಂತಹ ಆರಾಧನಾ ಸಂಕೇತಗಳನ್ನು ಕಾಳಾಮುಖ ಮತ ತನ್ನ ಅಸ್ತಿತ್ವ ಕಳೆದುಕೊಂಡ ನಂತರ ಜೈನರು ಬಳಸಿದುದು ನಂತರದ ವಿವಾದ/ಗಲಭೆಗಳಿಗೆ ಕಾರಣವಾಯಿತೆನ್ನಬಹುದು.

ಎಕ್ಕೋಟಿ ಜಿನಾಲಯಗಳ ಬಗ್ಗೆ ಹೇಳುತ್ತಾ ದೇವರಕೊಂಡಾರೆಡ್ಡಿಯವರು[೧೩] ಶೈವರೊಡಗೂಡಿ ತಮ್ಮ ಅಸ್ಥಿತ್ವ ಉಳಿಸಿಕೊಳ್ಳಲು ಇಲ್ಲಿನ ಜೈನ ಧರ್ಮೀಯರು ಮಾಡಿಕೊಂಡ ಅಲಿಖಿತ ಒಪ್ಪಂದದ ಫಲವೇ ಯಕ್ಕೋಟಿ ಜಿನಾಲಯಗಳ ಉಗಮಕ್ಕೆ ಕಾರಣವಾಯಿತೆಂದು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯವನ್ನೇ ಮುಂದುವರೆಸಿ ಹೇಳುವುದಾದರೆ, ಜೈನ ಧರ್ಮದ ರಕ್ಷಣೆಗಾಗಿ ಸ್ವತಃ ಶೈವಯತಿಗಳೇ ಮುಂದಾಗಿ ಶೈವ ಧರ್ಮೀಯರಿಂದ ಆಗುತ್ತಿದ್ದ ತೊಂದರೆಗಳನ್ನು ತಪ್ಪಿಸಲು ತಮ್ಮ ಆರಾಧನೆಯ ಸಂಕೇತಗಳಾದ ಯೋಗದಂಡ, ತ್ರಿಶೂಲ, ಶೂದ್ರಕ, ನಂದಿಕೋಲು ಮುಂತಾದವುಗಳನ್ನು ನೀಡಿ ಬಸದಿಗಳಿಗೆ ಶೈವಧರ್ಮದ ಆಶ್ರಯವಿದೆ ಎಂಬ ಸಂದೇಶಗಳನ್ನು ಹರಡಿ, ಆ ಮೂಲಕ ಶೈವರು ಜೈನರ ಮತ್ತು ಜೈನ

ಬಸದಿಗಳ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡುತ್ತಿದ್ದರೆಂದು ಹೇಳಬಹುದು. ಈಗಾಗಲೇ ಅಣ್ಣಿಗೆರೆ, ಅಬ್ಬಲೂರು, ತಾಳಿಕೋಟೆ ಶಾಸನಗಳಲ್ಲಿ, ಹರಿಹರನ ರಗಳೆಗಳಲ್ಲಿ ಪ್ರತಿಬಿಂಬಿತವಾಗಿರುವಂತೆ ಸಮಕಾಲೀನ ಸಂದರ್ಭದಲ್ಲಿ ಆದ ಜೈನರ/ಜೈನ ಬಸದಿಗಳ ಮೇಲಿನ ಹಲ್ಲೆ/ಆಕ್ರಮಣಗಳನ್ನು ತಪ್ಪಿಸಲು ಶೈವಯತಿಗಳು ಬಸದಿಗಳಿಗೆ ಯೋಗಪಟ್ಟಿಕೆಗಳನ್ನು ನೀಡಿ ಅವುಗಳನ್ನು 'ವಜ್ರಪಂಜರದಂತೆ' ರಕ್ಷಣೆ ನೀಡುತ್ತಿದ್ದರೆಂದು ಹೇಳಬಹುದು.

ಜೋಗವಟ್ಟಿಗೆಗಳು ಜೈನ ಬಸದಿಗಳಿಗೆ ವಜ್ರಪಂಜರಗಳಾಗಿದ್ದವೇ?

ಈಗಾಗಲೇ ಗಮನಿಸಲಾಗದಂತೆ ಬಸದಿಗಳಲ್ಲಿ ಕಡ್ಡಾಯವಾಗಿ ಜೋಗವಟ್ಟಿಗೆ ಇಟ್ಟರೆ ಅವು ಎಕ್ಕೋಟಿ ಬಸದಿಗಳಾಗುತ್ತಿದ್ದವೆಂಬುದನ್ನು ಗಮನಿಸಲಾಗಿದೆ. ಬಸದಿಗಳಿಗೆ ಜೋಗವಟ್ಟಿಗೆ ಯಾವ ರೀತಿಯ ರಕ್ಷೆ ನೀಡುತ್ತಿತ್ತು ಮತ್ತು ಅವುಗಳಿಗೆ ಎಂತಹ ರಕ್ಷಣಾತ್ಮಕ ಶಕ್ತಿ ಇತ್ತು ಎಂದರೆ, ಬಸದಿಗಳಲ್ಲಿ ಯೋಗವಟ್ಟಿಗೆಗಳನ್ನು ಇರಿಸಿಕೊಳ್ಳುವುದಕ್ಕಾಗಿಯೇ ಅವುಗಳನ್ನು ದಾನ ನೀಡಿದ್ದನ್ನು ಕಲಘಟಗಿ ಶಾಸನ ಉಲ್ಲೇಖಿಸುತ್ತದೆ. ಜಿನಾಲಯಗಳಲ್ಲಿ ಜೋಗವಟ್ಟಿಗೆ ಇಟ್ಟರೆ ಅವು ವಜ್ರಪಂಜರದಂತೆ ಆ ಜಿನಾಲಯಗಳನ್ನು ರಕ್ಷಿಸುತ್ತಿದ್ದವು. ಅಂತಹ ಜಿನಾಲಯಗಳನ್ನು ನಾಶಮಾಡುವ ಪ್ರಯತ್ನವನ್ನಾಗಲೀ, ಆಕ್ರಮಣವನ್ನಾಗಲೀ ಮಾಡುತ್ತಿರಲಿಲ್ಲ. ನೇಮಿಸೆಟ್ಟಿ ಎಂಬುವವನು ಕೊಡಕಣಿಯಲ್ಲಿ ಶಾಂತಿನಾಥ ದೇವರ ಜಿನಮಂದಿರ ನಿರ್ಮಿಸುತ್ತಾನೆ. ಶ್ರೀಕಂಠವ್ರತಿ ಆ ಬಸದಿಯನ್ನು ದರ್ಶಿಸಿ ಅದರ ರಕ್ಷಣೆಗಾಗಿ ಜೋಗವಟ್ಟಿಯನ್ನು ಆದರದಿಂದ 'ವಜ್ರಪಂಜರದಂತೆ' ಇಟ್ಟಿದ್ದರಿಂದ ಅಸಂಖ್ಯಾತ ಗಣಗಳು ಈ ಶಾಂತಿನಾಥ ಜಿನಮಂದಿರವನ್ನು ಪಾಲಿಸುತ್ತಿದ್ದರೆಂದು ಸೊರಬ ಶಾಸನ[೧೪] ಉಲ್ಲೇಖಿಸುತ್ತದೆ.

ಜೋಗವಟ್ಟಿಗೆ ಇಟ್ಟಂತಹ ಎಕ್ಕೋಟಿ ಜಿನಾಲಯಗಳಿಗೆ ಪ್ರತ್ಯೇಕವಾದ ವರ್ತನಾ ಸಂಹಿತೆ ಆಚರಣೆಯಲ್ಲಿತ್ತು. ಎಕ್ಕೋಟಿ ಜಿನಾಲಯ ಎಂದು ಹೆಸರಿಟ್ಟ ನಂತರ ಅಂತಹ ಜಿನಾಲಯಗಳು ಶೈವ ಯತಿಗಳು ವಿಧಿಸುವ ನಿಯಮಾವಳಿಗಳಿಗೆ ಬದ್ಧರಿದ್ದು, ಅದರಂತೆ ನಡೆದುಕೊಳ್ಳಬೇಕಿತ್ತು. ಹಾಗಿದ್ದರೆ, ಆ ಸಂಹಿತೆ/ನಿಯಮಾವಳಿಗಳು ಯಾವುವು? ಪಂಚವಾದ್ಯಗಳನ್ನು ಇಟ್ಟುಕೊಳ್ಳುವುದೆ? ಜೋಗವಟ್ಟಿಗೆ, ನಂದಿಕೋಲು ಇಟ್ಟುಕೊಳ್ಳುವುದೆ? ಇದಕ್ಕೆ ಉತ್ತರವಾಗಿ, ಎಕ್ಕೋಟಿ ಜಿನಾಲಯ ಮತ್ತು ಬ್ರಹ್ಮ ಜಿನಾಲಯ ಉಲ್ಲೇಖವಿರುವ ಶಾಸನಗಳ ಮಂಗಳ ಶ್ಲೋಕ ಮತ್ತು ಶಾಪಾಶಯ ಭಾಗವನ್ನು ಅವಲೋಕಿಸಿದರೆ, ಈ ಬಸದಿಗಳ ವಿಶ್ಲೇಷಣೆಗೆ ಸಹಾಯಕವಾಗುತ್ತದೆ.

ತೇರದಾಳದ ಶಾಸನದ[೧೫] ಶಾಪಾಶಯದಲ್ಲಿ 'ಈ ಮುನಿಸಂತೆಯ ತಾಪಸರು ಇದಾಗದು ಎನುವವನು ಏಳುಕೋಟಿ ತಾಪಸರ್ಗೆ ಮಹಾವಿರೋಧಿ, ಈಶ್ವರನ ವೈರಿ ಎಂದು ಹೇಳುತ್ತಾ ಮಿಸುಗುವ ಜೋಗವಟ್ಟಿಗೆಯನಿಕ್ಕಿದರು' ಎಂದು ಉಲ್ಲೇಖಿಸಿದೆ. ಈ ಶಾಪಾಶಯ ಸ್ಪಷ್ಟವಾಗಿ ಶೈವಧರ್ಮೀಯರನ್ನೇ ಉದ್ದೇಶಿಸಿ ಹೇಳಿದೆ. ಶಿವಮೊಗ್ಗ ಶಾಸನದಲ್ಲಿ[೧೬] 'ಈ ಮರಿಯಾದೆ ಮೀರಿದಾತಂ ಶಿವದ್ರೋಹಂ' (ಜಿನದ್ರೋಹನಲ್ಲ) ಎಂದು ಹೇಳುವ ಮೂಲಕ ಬಸದಿಗಳಿಗೆ ಶೈವರಕ್ಷೆ ನೀಡಿರುವುದನ್ನು ಕಾಣಬಹುದು. ದೋಣಿ ಶಾಸನದ ಕೊನೆಯಲ್ಲಿ ಮಂಗಳ ಶ್ಲೋಕ ಬಂದ ನಂತರ ಮಂಗಳ ಮಹಾಶ್ರೀ ಎಕ್ಕೋಟಿ ಜಿನಾಲಯಂ ಧರ್ಮಪ್ರತಿಪಾಳಿಸುವರು ಎಂದು ಹೇಳುವ ಮೂಲಕ ಮತ್ತೆ ಶಾಸನ ಆರಂಭವಾಗಿರುವುದನ್ನು ಗಮನಿಸಿದರೆ, ಎಕ್ಕೋಟಿ ಜಿನಾಲಯಕ್ಕೂ ಕೆಲವು ಶಿಷ್ಟಾಚಾರಗಳನ್ನು ಪಾಲಿಸಿ ಆ ಧರ್ಮಕ್ಕನುಸಾರ ಬಸದಿಗಳನ್ನು ನಡೆಸಿಕೊಳ್ಳಬೇಕು ಎಂಬ ಅರ್ಥ ಸೂಚ್ಯವಾಗುತ್ತದೆ.

ಕೆಲವು ಶಾಸನಗಳ ಮೊದಲ ಸಾಲು ಅಥವಾ ಕೊನೆಯ ಸಾಲಿನಲ್ಲಿ "ಇದು ಎಕ್ಕೋಟಿ ಜಿನಾಲಯ" ಎಂದು ನಿರ್ದಿಷ್ಟವಾಗಿ ಹೇಳಲಾಗಿದೆ. ಮಾಕೋಡು ಶಾಸನ ಕೊನೆಯಲ್ಲಿ[೧೭] ಸ್ವಸ್ತಿ ಶ್ರೀಮತು ಸಮಸ್ತ ಏಳ್ಕೋಟಿ ಜಿನಾಲಯ ಜಾವಳಿಗೆಯ ಬಸದಿ ಮಂಗಳ ಮಹಾಶ್ರೀ ಎಂದೂ, ಹಾಸನದ ಮುಗಳೂರು ಶಾಸನದ[೧೮] ಮೊದಲ ಸಾಲೇ ಶೀರ್ಷಿಕೆಯಾಗಿ ಶ್ರೀಮದೇಳ್ಕೋಟಿ ಜಿನಾಲಯವಿದು ಎಂದು ಬರೆಸಲಾಗಿದೆ. ಈ ಶಾಸನ ವಿಷ್ಣುವರ್ಧನನ ಕಾಲದಲ್ಲಿ ಗೋವಿಂದಸೆಟ್ಟಿ ಎಂಬ ವರ್ತಕ ಗೋವಿಂದ ಜಿನಾಲಯ ನಿರ್ಮಿಸಿ ದಾನವೂ ನೀಡಿರುತ್ತಾನೆ. ಆದರೆ ಅದರ ರಕ್ಷೆ ಸಲುವಾಗಿ ಇದು ಜೋಗವಟ್ಟಿಗೆ ಇಟ್ಟಿರುವ ಎಕ್ಕೋಟಿ ಜಿನಾಲಯ ಇದರ ತಂಟೆಗೆ ಬರಬಾರದು ಎಂಬ ಸೂಚನೆ ಇರಬಹುದೇ ಎನಿಸುತ್ತದೆ. ಶಾಪಾಶಯದ ಭಾಗಗಳಿಂದ ಬಸದಿಗಳು ಶೈವರಿಂದಲೇ ಹಾಳಾಗುತ್ತಿದ್ದುದರಿಂದ ಶೈವ ಗುರುಗಳೇ ಅವರಿಗೆ ರಕ್ಷಕರಾಗಿ ನಿಲ್ಲುವುದು ಅನಿವಾರ್ಯವಾಯಿತು. ಸಮಾಜದ ಸ್ವಾಸ್ಥ್ಯಕ್ಕೆ ಗುರುಗಳ ಮಧ್ಯಪ್ರವೇಶಿಕೆ ಅನಿವಾರ್ಯವಾಗಿ ಬಸದಿಗಳ ರಕ್ಷಣೆಗಾಗಿ ಅವುಗಳಲ್ಲಿ ಶೈವ ಗುರುಗಳು ಜೋಗವಟ್ಟಿಗೆಗಳನ್ನು ಇರಿಸುತ್ತಿದ್ದರು. ಅಂತಹ ಬಸದಿಗಳ ಮೇಲೆ ಆಕ್ರಮಣ ಮಾಡಲು ಹಿಂಜರಿಯುತ್ತಿದ್ದರು.

ಬ್ರಹ್ಮ ಜಿನಾಲಯಗಳು: ಬ್ರಹ್ಮ ಜಿನಾಲಯದ ಬಗ್ಗೆ ಸುಮಾರು ಹನ್ನೆರಡು ಶಾಸನೋಲ್ಲೇಖಗಳು ಲಭ್ಯವಾಗಿದ್ದು, ಅವುಗಳ ಕಾಲವ್ಯಾಪ್ತಿ ಕ್ರಿ.ಶ. ೧೦೦೭–೧೨೩೨ರವರೆಗೆ ವಿಸ್ತರಿಸಿದೆ. ಲಕ್ಕುಂಡಿ, ಸೇಡಂ, ಕಳಸವಳ್ಳಿ, ಗಬ್ಬೂರು, ಬಾಲ್ಕಿ, ಬೆಳವತ್ತಿ, ಸಾಲಿಯೂರು, ಹುಲ್ಲೇಕೆರೆ, ಬಾಡ್ಲಿ, ಅಮರಾಪುರ ಮುಂತಾದ ಶಾಸನಗಳಲ್ಲಿ ಬ್ರಹ್ಮಜಿನಾಲಯಗಳ ಉಲ್ಲೇಖವಿದೆ. ಬ್ರಹ್ಮಜಿನಾಲಯಗಳು ಉತ್ತರ ಕರ್ನಾಟಕದ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವಾದರೂ, ದಕ್ಷಿಣದಲ್ಲಿ ಪಾವಗಡದವರೆಗೂ ವಿಸ್ತರಿಸಿವೆ. ಇವುಗಳಲ್ಲಿ ಎರಡು ಬ್ರಹ್ಮ ಜಿನಾಲಯಗಳು ಎಕ್ಕೋಟಿ ಜಿನಾಲಯಗಳಂತೆ ಜೋಗವಟ್ಟಿಗೆ ಜಿನಾಲಯಗಳೂ ಆಗಿರುವುದು ವಿಶೇಷ.

ಹಂಪನಾರವರು ಬ್ರಹ್ಮ ಜಿನಾಲಯಗಳೆಂದರೆ 'ಆದಿ ತೀರ್ಥಂಕರರ ಬಸದಿಗೆ (ಆದಿ) ಬ್ರಹ್ಮ ಜಿನಾಲಯ ಎಂಬ ಹೆಸರು ಮೊದಲಿಗೆ ಬಳಕೆಯಲ್ಲಿ ಇದ್ದುದು ಕ್ರಮೇಣ ಇತರ ತೀರ್ಥಂಕರರ ಬಸದಿಗೂ ಅನ್ವಯವಾಗತೊಡಗಿದೆ. ಕುಪಟೂರಿನ ಬಸದಿ ಪಾರ್ಶ್ವನಾಥ ತೀಥಂಕರರದು, ಸೇಡಿಂಬದ ಬಸದಿ ಶಾಂತಿನಾಥ ತೀರ್ಥಂಕರರದು. ಈ ಬಸದಿಗಳಿಗೂ ಬ್ರಹ್ಮ ಜಿನಾಲಯ ಎಂಬ ಹೆಸರು ಅನ್ವಯ ಆಗಿರುವುದು ಉಚಿತವಾಗಿದೆ. ಏಕೆಂದರೆ, ಆತ್ಯಂತಿಕವಾಗಿ ತೀರ್ಥಂಕರರೇ ಆದಿಬ್ರಹ್ಮರು' ಎಂದು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ಅವರು ಲಕ್ಕುಂಡಿ ಶಾಸನದ "ಬ್ರಹ್ಮನೆ ದಲ್ ನಮಗಾದಿ। ಬ್ರಹ್ಮಜಿನಂ ತಾನೆನುತ್ತೆ ಸಾಸಿರ್ವ್ವರುಮೀ। ಬ್ರಹ್ಮಜನ ನಿಳಯಕಿತ್ತರ್। ಬ್ರಹ್ಮಜಿನಾಳಯ ಮನಿಷ್ಟ ಪೆಸರಂ ಮುದದಿಂ" ಎಂಬ ಪದ್ಯವನ್ನು ಮತ್ತು "ಆದಿ ಬ್ರಹ್ಮನೆ ದಲ್ ಜಿನಂ। ತಾನೆನುತ ಸಾಸಿರ್ವ್ವರುಂ ಬ್ರಹ್ಮ ಜಿನ ನಿಳಯ।ಕಿತ್ತರು ಬ್ರಹ್ಮಜಿನಾಳಯ। ಮೆಂಬೀ ಪೆಸರಂ ಮುದದಿಂ। ಎಂಬ ಈಸೂರು ಶಾಸನ ಪದ್ಯವನ್ನು ಉದಾಹರಿಸುತ್ತಾರೆ. ಎಂದರೆ ಆದಿಬ್ರಹ್ಮನಾದ ಆದಿ ತೀರ್ಥಂಕರನಿಗೆ ನಿರ್ಮಿಸುತ್ತಿದ್ದ ಬಸದಿಗಳೇ ಮೂಲತಃ ಬ್ರಹ್ಮ ಜಿನಾಲಯಗಳಾಗಿದ್ದವೆಂಬುದು ಅವರ ಅಭಿಪ್ರಾಯ.[೧೯] ಅವರ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ, ಬ್ರಹ್ಮಜಿನಾಲಯಗಳ ಉಲ್ಲೇಖವಿರುವ ಕೆಲವು ಶಾಸನಗಳನ್ನು ಮತ್ತೊಮ್ಮೆ ಪರಾಮರ್ಶಿಸುವುದು ಅಗತ್ಯವೆನಿಸುತ್ತದೆ.

ಕರ್ನಾಟಕ ಶಾಸನಗಳಲ್ಲಿ ಬ್ರಹ್ಮ ಜಿನಾಲಯಗಳ ಬಗ್ಗೆ ಮೊದಲ ಉಲ್ಲೇಖ ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿ[೨೦] ಕ್ರಿ.ಶ. ೧೦೦೭ರಲ್ಲಿ ಕಂಡುಬರುತ್ತದೆ. ಅತ್ತಿಮಬ್ಬೆ ಜಿನಾಲಯ ನಿರ್ಮಿಸಿ ಶಾಸನವನ್ನು ಹಾಕಿಸಿದ್ದಳು. ಆ ಶಾಸನ ಕೆಲವು ವರ್ಷಗಳ ನಂತರ ಸುಟ್ಟುಹೋಗಿದ್ದರಿಂದ ಅದೇ ಶಾಸನವನ್ನು ಪ್ರತಿಮಾಡಿ ಮತ್ತಷ್ಟು ವಿವರಗಳೊಂದಿಗೆ ಬರೆಸಲಾಯಿತು. ಹಂಪನಾರವರು ಈ ಶಾಸನದ ೮೮ ಸಾಲುಗಳಲ್ಲಿ ೬೧ ಸಾಲುಗಳು ಮಾತ್ರ ರನ್ನನದು. ಉಳಿದ ಸಾಲುಗಳು ಆ ನಂತರ ಸೇರ್ಪಡೆಯಾಗಿದ್ದು, ಆ ಸೇರ್ಪಡೆಯಾದ ಭಾಗದಲ್ಲಿ ಬ್ರಹ್ಮ ಜಿನಾಲಯದ ಹೆಸರು ಬಂದಿರುವುದರಿಂದ ಲಕ್ಕುಂಡಿಯ ಬಸದಿಗೆ ಬ್ರಹ್ಮಜಿನಾಲಯ ಎಂದು ಹೆಸರು ಇಟ್ಟಿದ್ದು ಅತ್ತಿಮಬ್ಬೆಯಲ್ಲ. ಅದು ಲಕ್ಕುಂಡಿಯ ಸಾಸಿರ್ವರು ಮುದದಿಂದ ಕೊಟ್ಟದ್ದು ಎಂದು ಅಭಿಪ್ರಾಯಪಡುತ್ತಾರೆ.

೬೧ನೆಯ ಸಾಲಿನವರೆಗೆ ಅತ್ತಿಮಬ್ಬೆಯ ಕೌಟುಂಬಿಕ ಹಿನ್ನೆಲೆ, ಆಕೆ ಮೆರೆಸಿದ ಪವಾಡಗಳು, ವ್ಯಕ್ತಿತ್ವದ ವಿವರಗಳೊಂದಿಗೆ ಆಕೆ ಲೊಕ್ಕಿಗುಂಡಿಯಲ್ಲಿ ಬಸದಿ ಮಾಡಿಸಿ ಅದಕ್ಕೆ ತಳವೃತ್ತಿಯಾಗಿ ಸುಙುಕಿ ಸೀಮೆಯನ್ನು ಸೀಮಾಸಮೇತ ನೀಡಿದುದನ್ನು ಹೇಳಿ ಶಾಸನ ಶಾಪಾಶಯದೊಂದಿಗೆ ಕೊನೆಗೊಳ್ಳುತ್ತದೆ. ೬೧ ಸಾಲಿನ ಶಾಸನದಲ್ಲಿ ಬಸದಿಯ ಪ್ರಸ್ತಾಪ ಬಂದಾಗಲೆಲ್ಲಾ ಈ ಬಸದಿಯನ್ನು ಪರಮ ಜಿನನಾಥಗೇಹ, ಜೈನಾಧಿವಾಸ, ಜಿನೇಂದ್ರವಾಸ, ಬಸದಿ ಎಂದು ಉಲ್ಲೇಖಿಸಲಾಗಿದೆ. ಆದರೆ, ೬೧ನೆಯ ಸಾಲಿನ ನಂತರ ಶಾಸನದ ವಿನ್ಯಾಸವೇ ಬದಲಾಗುತ್ತದೆ. ಬಸದಿಯ ಬಗ್ಗೆ ಹೇಳಿದರೂ, ಅದನ್ನು ಬ್ರಹ್ಮಜಿನೇಂದ್ರ ಗೃಹವೆಂದು ಉಲ್ಲೇಖಿಸಲಾಗಿದೆ. ೬೨ನೆಯ ಸಾಲಿನಿಂದ ೭೯ನೆಯ ಸಾಲಿನವರೆಗೆ ಮತ್ತೆ ಲೊಕ್ಕಿಗುಂಡಿಯೂರೊಡೆಯರಾದ ಪ್ರಮುಖ ಮಹಾಜನ ಸಾಸಿರ್ವ್ವರನ್ನು ಪ್ರಶಸ್ತಿಗಳ ಸಮೇತ ವರ್ಣಿಸಲಾಗಿದೆ. ಶಾಸನದಲ್ಲಿ ಸ್ಪಷ್ಟವಾಗಿ ಮಹಾಸತೀರತ್ನಮತ್ತಿಯಬ್ಬರಸಿಯರು . . . . . ಸಮಸ್ತಗುಣಗಣಾಲಂಕೃತ ವಿದಿತವೇದಾರ್ತ್ಥವಿದ್ಯಾಪಾರಗರ್, ಷಟ್ಕರ್ಮನಿರತರ್, ಅಷ್ಟಾದಶ ಧರ್ಮಶಾಸ್ತ್ರ ಕುಶಳರ್, ಏಕವಾಕ್ಯರ್, ಅಚಳಿತಧೈರ್ಯ ಸಿಂಹ ಪರಾಕ್ರಮರ್, ಆಶ್ರಿತಜನ ಕಲ್ಪವೃಕ್ಷರ್, ಅಹಿತಪಕ್ಷಕ್ಷಯರ್, ... ದ್ವಿಜಕುಲತಿಳಕರ್, ಶರಣಾಗತ ವಜ್ರಪಂಜರರ್, ದಾಶರಥಿ ನಿರ್ಮಿತ ಮಹಾಗ್ರಾಮವಾದ ಶ್ರೀಲೊಕ್ಕಿಗುಣ್ಡಿಯೂರೊಡೆಯ ಪ್ರಮುಖ ಮಾಹಾಜನ ಸಾಸಿರ್ವರ ಕಯ್ಯೊಳು ತನ್ನ ಬಸದಿಗೆ ಪೂಜಾನಿಮಿತ್ತವಾಗಿ ಮೂರು ಮತ್ತರು ತೋಟವನ್ನು ಬೇಡಿ ಪಡೆದುದನ್ನು ಶಾಸನ ಉಲ್ಲೇಖಿಸುತ್ತದೆ. ಎಂದರೆ, ಅತ್ತಿಮಬ್ಬೆಯ ಕಾಲದಲ್ಲಿಯೇ, ಅತ್ತಿಮಬ್ಬೆ ಮಾಡಿಸಿದ್ದ ಸಾವಿರದಯ್ನೂರು ಬಸದಿಗಳಿಗೆ ಕಳಶವೆನ್ನುವಂತೆ ಮಾಡಿಸಿದ ಬಸದಿ ಆಕೆಯ ಕಾಲದಲ್ಲಿಯೇ ಬ್ರಹ್ಮಜಿನೇಂದ್ರ ಗೃಹವಾಗಿರುವುದು ಸ್ಪಷ್ಟವಾಗಿದೆ. ಬಹುಶಃ ಅತ್ತಿಮಬ್ಬೆಯ ಜಿನೇಂದ್ರಗೃಹ ಧರಣೀತಳಕ್ಕೆ ಬಿದ್ದ ತರುವಾಯ

ಇದನ್ನು ಮಹಾಜನರ ಸಹಕಾರದೊಂದಿಗೆ ಪುನರ್ನಿರ್ಮಿಸಿ ಅದಕ್ಕೆ ಬ್ರಹ್ಮಜಿನಾಲಯ ಎಂದು ಹೆಸರಿಸಿದಂತೆ ತೋರುತ್ತದೆ. ಆದರೆ ಯಾವ ಕಾರಣಕ್ಕೆ ಅತ್ತಿಮಬ್ಬೆಯ ಬಸದಿ 'ಬಿದ್ದು ಹೋಯಿತು' ಎಂಬುದರ ಬಗ್ಗೆ ಶಾಸನ ಮೌನವಹಿಸಿದೆ.

ಕ್ರಿ.ಶ. ೧೦೭೭ರ ಕುಪಟೂರಿನ ಶಾಸನದಲ್ಲಿ[೨೧] ಬನವಾಸಿ ಪ್ರದೇಶದ ಅಗ್ರಹಾರಗಳನ್ನು ವರ್ಣಿಸಿದ ನಂತರ ಕುಪಟೂರಿನ ಅಗ್ರಹಾರವನ್ನು ಮತ್ತು ಅಲ್ಲಿನ ಬ್ರಾಹ್ಮಣರನ್ನು ವರ್ಣಿಸಲಾಗಿದೆ. ಕುಪಟೂರ ವಿಪ್ರರು ಭುವನ ಪ್ರಸಿದ್ಧರಾಗಿದ್ದರೆಂದು ವರ್ಣಿಸುತ್ತಾ, ಮಾಳಲದೇವಿ ಕುಪ್ಪಟೂರಿನ ಜಿನಾಲಯ ನಿರ್ಮಿಸಿ, ಅನಾದಿ ಅಗ್ರಹಾರವಾದ ಕುಪಟೂರಿನ ಮಹಾಜನರನ್ನು ಯಥೋಕ್ತವಿಧಿಯಿಂದ ಪೂಜಿಸಿ ಅವರ ಕೈಯಿಂದ ಆ ದೇವಾಲಯಕ್ಕೆ ಬ್ರಹ್ಮಜಿನಾಲಯವೆಂದು ಹೆಸರಿಡಿಸುತ್ತಾಳೆ. ತರುವಾಯ ಕೋಟೇಶ್ವರ ಮೂಲಸ್ಥಾನದ ಪ್ರಮುಖರಾದ ಹದಿನೆಂಟು ಸ್ಥಾನದಾಚಾರ್ಯರ ಜೊತೆಗೆ ಬನವಾಸಿಯ ಮಧುಕೇಶ್ವರ ದೇವಾಲಯದ ಆಚಾರ್ಯರನ್ನು ಕರೆಸಿ ಪೂಜೆ ಕೊಟ್ಟು ಅಲ್ಲಿ ಜೋಗವಟ್ಟಿಗೆಯನ್ನು ಇಕ್ಕಿಸುತ್ತಾಳೆ. ಆ ಮಹಾಜನರಿಗೆ ಐನೂರು ಹೊನ್ನನ್ನು ಕೊಟ್ಟು ಸ್ಥಳವೃತ್ತಿ ಪಡೆದು ಜಿನಾಲಯಕ್ಕೆ ಜೈನ ಆಚಾರ್ಯ ಪದ್ಮನಂದಿ ಆಚಾರ್ಯರ ಕಾಲನ್ನು ತೊಳೆದು ದಾನ ನೀಡುತ್ತಾಳೆ.

ಕ್ರಿ.ಶ. ೧೧೨೩ರ ಸೇಡಂ ಶಾಸನದಲ್ಲಿ[೨೨] ಜೈನ ಗುರು ಪ್ರಭಾಚಂದ್ರ ತ್ರೈವಿದ್ಯ ಭಟ್ಟಾರಕರನ್ನು ಮೊದಲಿಗೆ ಸ್ತುತಿಸಿದರೂ, ಶಾಸನದಲ್ಲಿ ಸೇಡಿಂಬದ ೩೦೦ ಮಹಾಜನರನ್ನು ವಿಶೇಷವಾಗಿ ವರ್ಣಿಸಲಾಗಿದೆ. ಅವರು "ನುಡಿದುದನ್ನು ಮತ್ತೆ ನುಡಿಯದವರು, ಕಾಂಚೀಪುರದ್ವಾರದ ಬಾಗಿಲನ್ನು ತಮ್ಮ ಪಾದಧೂಳಿಯಿಂದ ತೆರೆಸಿ ವಿರೋಧಿಗಳೆಂಬ ಅರಣ್ಯಕ್ಕೆ ಬಡಬಾಗ್ನಿಯಂತೆ ಇದ್ದವರು, ಚತುರ್ವೇದಗಳಲ್ಲಿ ಪಾರಂಗತರು, ಹಲವು ವಿದ್ಯೆಗಳಲ್ಲಿ ನಿಷ್ಣಾತರು, ಶರಣಾಗತರಾದವರಿಗೆ ರಕ್ಷಕರು . . . . ನಾರಾಯಣದೇವರ ಪಾದಾರಾಧಕರಾಗಿದ್ದಂತಹ ಈ ಅಶೇಷ ಮುನ್ನೂರು ಮಹಾಜನರು ಸೇಡಿಂಬದಲ್ಲಿ ಬಸದಿ ನಿರ್ಮಿಸಿ ಶಾಂತಿನಾಥನನ್ನು ಪ್ರತಿಷ್ಠೆ ಮಾಡಿ, ಆ ಬಸದಿಗೆ ಸುವರ್ಣ ಕಳಶ ಇರಿಸಿ 'ಬ್ರಹ್ಮ ಜಿನಾಲಯ' ಎಂಬ ಹೆಸರನ್ನಿಟ್ಟುದನ್ನು ದಾಖಲಿಸುತ್ತದೆ. ಇಲ್ಲಿ ಮುನ್ನೂರು ಮಹಾಜನರೇ (ಬ್ರಾಹ್ಮಣರು) ಬಸದಿ ನಿರ್ಮಿಸಿ ಶಾಂತಿನಾಥನನ್ನು ಪ್ರತಿಷ್ಠಾಪನೆ ಮಾಡಿ ಅದಕ್ಕೆ ಬ್ರಹ್ಮ ಜಿನಾಲಯ ಎಂಬ ಹೆಸರಿಟ್ಟಿರುವುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಶಾಂತಿನಾಥ ದೇವರ ಅಷ್ಟವಿದಾರ್ಚನೆಗೆ, ಜೀವದಯಾಷ್ಟಮಿ, ನಂದೀಶ್ವರದಷ್ಟಮಿ, ಸಂಕ್ರಮಣ ಗ್ರಹಣ ಪರ್ವ್ವದ ಪೂಜೆಗಾಗಿ ಭೂಮಿ, ಹೂದೋಟ, ಗಾಣಗಳನ್ನು ದಾನ ಮಾಡುತ್ತಾರೆ.

ಹಿರಿಯ ಗಬ್ಬಲೂರು ಶಾಸನವಂತೂ[೨೩] ಗಬ್ಬಲೂರಿನ ಮಹಾಜನರನ್ನು ವರ್ಣಿಸುತ್ತ, ಅಲ್ಲಿದ್ದ ಟಂಕಸಾಲೆಯನ್ನು ಉಲ್ಲೇಖಿಸಿ ಅದು ಸರ್ವೇಸಾಮಾನ್ಯ ಅಗ್ರಹಾರವಾಗಿತ್ತು. ಇಲ್ಲಿ ನಾಣ್ಯ ಟಂಕಿಸುವ ಅಧಿಕಾರಿಗಳೂ, ವರ್ತಕರೂ ಸೇರಿ ನಾಣ್ಯದ ಮೇಲಿನ ಸಗಟು ಆದಾಯವನ್ನು ಬ್ರಹ್ಮ ಜಿನಾಲಯಕ್ಕೆ ಒಪ್ಪಿಸುತ್ತಾರೆ. ಶಾಸನದಲ್ಲಿ ಈ ಜಿನಾಲಯದ ಮೂಲ ಹೆಸರು ನಗರ ಜಿನಾಲಯವಾಗಿತ್ತು, ಎಂದರೆ ಈಗಾಗಲೇ ಇದ್ದ ಜಿನಾಲಯಕ್ಕೆ ಬ್ರಹ್ಮ ಜಿನಾಲಯ ಎಂದು ಪುನರ್ ನಾಮಕರಣ ಮಾಡಿರುವುದನ್ನು ಗಮನಿಸಬಹುದು.

ಕ್ರಿ.ಶ. ೧೧೨೩ರ ಬೆಳವತ್ತಿ ಶಾಸನವು[೨೪] ಬೆಳ್ವಂತಿಯ ಮುನ್ನೂರು ಮಹಾ ಜನರನ್ನು ಉಲ್ಲೇಖಿಸುತ್ತದೆ. ಜನಸೇವೆ ದಾನಧರ್ಮಾಧಿಗಳಿಗೆ ಹೆಸರಾದ ಬಮ್ಮಿಸೆಟ್ಟಿ ನಿರ್ಮಿಸಿದ ಬ್ರಹ್ಮ ಜಿನಾಲಯಕ್ಕೆ ಸುಜನೋತ್ತಮರೂ, ಸುಶಬ್ದ ಶಾಸ್ತ್ರ ಪಾರಂಗತರೂ, ಪುರಾಣ, ತರ್ಕ ವಿನೋದಗಳಲ್ಲಿ ಪರಿಣತರೂ, ಅಗ್ನಿಷ್ಟೋಮ ಮೊದಲಾದ ಯಾಗಗಳನ್ನು ಮಾಡಿದ ಅವಭೃತ ಸ್ನಾನ ಮಾಡಿದ ಪವಿತ್ರಗೋತ್ರರಾದ ಮೂನೂರ್ವರು ಮಹಾಜನರು ದಾನ ನೀಡುತ್ತಾರೆ. ಸಾಲಿಯೂರ ಶಾಸನದಲ್ಲಿ ಶ್ರೀಮದನಾದಿಯಗ್ರಹಾರ ಸಾಲಿಯೂರ ಸಾಸಿರ್ಬ್ಬರ ಬ್ರಹ್ಮ ಜಿನಾಲಯ ಬಸದಿಯ ನೈವೇದ್ಯಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಸಾಲಿಯೂರ ಸಾಸಿರ್ವರಿಗೆ ಈ ಬ್ರಹ್ಮ ಜಿನಾಲಯ ಸೇರಿತ್ತು ಎಂಬುದನ್ನು ಧ್ವನಿಸುತ್ತದೆ. ಇನ್ನು ಹಂದಿಗೋಳ, ಬಾಡ್ಲಿ, ಬಾಲ್ಕಿ, ಹುಲ್ಲೇಕೆರೆ, ಇನ್ನೂ ಮುಂತಾದ ಸ್ಥಳಗಳಲ್ಲಿ ಬ್ರಹ್ಮ ಜಿನಾಲಯಗಳಿದ್ದ ಉಲ್ಲೇಖ ಲಭ್ಯವಾಗುತ್ತದೆ. ಕ್ರಿ.ಶ. ೧೨೭೭ರ ಪಾವಗಡದ ಶಾಸನ[೨೫] ಬ್ರಹ್ಮ ಜಿನಾಲಯವನ್ನು ಹೆಸರಿಸುವ ಕೊನೆಯ ಶಾಸನ. ಬಾಳೇಂದು ಮಲಧಾರಿ ದೇವರ ಶಿಷ್ಯ ಮಲ್ಲಿಸೆಟ್ಟಿ ಅಮರಾಪುರದ ಬ್ರಹ್ಮ ಜಿನಾಲಯ ಕಟ್ಟಿಸುತ್ತಾನೆ. ಈ ಬಸದಿಯನ್ನು ತೈಲಂಗೆರೆಯ ಜೋಗವಟ್ಟಿಗೆ ಬ್ರಹ್ಮ ಜಿನಾಲಯ ಎಂದೂ ಕರೆಯುತ್ತಾರೆ. ಇಲ್ಲಿದ್ದ ಭವಸೇನ ತ್ರೈವಿದ್ಯ ಚಕ್ರವರ್ತಿ ಪ್ರತಿವಾದ ಭಯಂಕರನಾಗಿದ್ದ ಎಂದು ಶಾಸನದ ಉಲ್ಲೇಖವಿದೆ.

ಬ್ರಹ್ಮ ಜಿನಾಲಯಗಳ ಉಲ್ಲೇಖವಿರುವ ಶಾಸನಗಳನ್ನು ಗಮನಿಸುವಾಗ ಅಲ್ಲಿ ವ್ಯಕ್ತವಾಗುವ ಮುಖ್ಯ ಸಂಗತಿ ಎಂದರೆ,

೧. ಬ್ರಹ್ಮ ಜಿನಾಲಯಗಳು ಅಗ್ರಹಾರಗಳಲ್ಲಿರುತ್ತಿದ್ದವು.

೨. ಮಹಾಜನರ ಉಪಸ್ಥಿತಿ–ಎಲ್ಲ ಬ್ರಹ್ಮ ಜಿನಾಲಯಗಳಲ್ಲಿ ಈ ಜಿನಾಲಯಗಳ ಪೋಷಕರು, ಆಶ್ರಯದಾತರು ಅಗ್ರಹಾರಗಳಲ್ಲಿದ್ದಂತಹ ಮಹಾಜನರಾಗಿರುತ್ತಿದ್ದರು.

೩. ಮಹಾಜನರ ವರ್ಣನೆಗಳಲ್ಲಿ ಬರುವ ಬಿರುದಾವಳಿಗಳಲ್ಲಿ ಅವರ 'ಪರವಾದಿತನದ' ವಿದ್ವತ್ತು ಎದ್ದು ಕಾಣುವಂತಿರುತ್ತದೆ.

೪. ಬ್ರಹ್ಮ ಜಿನಾಲಯಗಳಲ್ಲಿ ಆದಿಜಿನನಾದ ವೃಷಭನಾಥನಿಗೆ ಮಾತ್ರವಲ್ಲದೆ, ಪಾರ್ಶ್ವನಾಥ, ಶಾಂತಿನಾಥನ ವಿಗ್ರಹಗಳೂ ಇರುತ್ತಿದ್ದವು.

೫. ಬೆಳವತ್ತಿ, ಸೇಡಂ ಮುಂತಾದ ಕಡೆ ಜಿನಾಲಯಗಳನ್ನು ನಿರ್ಮಿಸುವಾಗಲೇ 'ಬ್ರಹ್ಮ ಜಿನಾಲಯಗಳನ್ನು' ನಿರ್ಮಾಣ ಮಾಡಿದುದಾಗಿ ಹೇಳಿಕೊಂಡಿದ್ದರೆ, ಉಳಿದ ಕಡೆ ಲಕ್ಕುಂಡಿ, ಹುಲ್ಲೇಕೆರೆ, ಗಬ್ಬೂರು ಮುಂತಾದ ಕಡೆ ಈಗಾಗಲೇ ಇದ್ದಂತಹ ಜಿನಾಲಯಗಳಿಗೆ ಬ್ರಹ್ಮ ಜಿನಾಲಯ ಎಂದು ಮರುನಾಮಕರಣ ಮಾಡಿರುವುದು ಕಂಡುಬರುತ್ತದೆ. ಉಳಿದಂತೆ ಬ್ರಹ್ಮ ಜಿನಾಲಯಗಳಿಗೆ ದಾನ ಮಾಡಿದ್ದನ್ನು ಉಲ್ಲೇಖಿಸುತ್ತವೆ. ಆದರೆ ಯಾರು ನಿರ್ಮಿಸುತ್ತಿದ್ದರು ಎಂಬ ಬಗ್ಗೆ ಉಲ್ಲೇಖವಿಲ್ಲ.

೬. ಬ್ರಹ್ಮ ಜಿನಾಲಯಗಳನ್ನು ಸ್ವತಃ ಮಹಾಜನರೇ ನಿರ್ಮಾಣ ಮಾಡಿ, ಅವರೇ ದಾನ ನೀಡಿದ್ದರೆ, ಕೆಲವು ಶಾಸನಗಳಲ್ಲಿ ಮಹಾಜನರ ಸಮ್ಮತಿ ಮೇರೆಗೆ ದಾನ ನೀಡಿರುವುದನ್ನು ಕಾಣಬಹುದು.

೭. ಅಮರಾಪುರ ಮತ್ತು ಕಳಸವಳ್ಳಿ (ಸೊರಬ) ಶಾಸನಗಳಲ್ಲಿ ಬ್ರಹ್ಮ ಜಿನಾಲಯಗಳಲ್ಲಿ ಜೋಗವಟ್ಟಿಗೆ ಇರಿಸಿ ಜೋಗವಟ್ಟಿಗೆ ಬ್ರಹ್ಮ ಜಿನಾಲಯ ಎಂದು ಕರೆಯಲಾಗಿದೆ. ಶಾಸನಗಳಲ್ಲಿ ಮಹಾಜನರ ಉಪಸ್ಥಿತಿಯೊಂದಿಗೆ, ಕಾಳಾಮುಖ ಯತಿಗಳ ಪ್ರಭಾವವನ್ನೂ ಕಾಣಬಹುದು.

೮. ಮತ್ತೊಂದು ಪ್ರಮುಖ ಸಂಗತಿಯೆಂದರೆ ಬ್ರಹ್ಮ ಜಿನಾಲಯಗಳ ನಿರ್ಮಾಣಕ್ಕೂ ಯಾಪನೀಯ ಸಂಪ್ರದಾಯಕ್ಕೂ ಇರುವ ಸಂಬಂಧವನ್ನು ಪರಿಶೀಲಿಸುವುದು ಅಗತ್ಯ. ಬ್ರಹ್ಮ ಜಿನಾಲಯಗಳ ಉಲ್ಲೇಖವಿರುವ ಜಾವೂರು, ದೋಣಿ, ಸೇಡಂ ಪ್ರದೇಶಗಳು ಯಾಪನೀಯರು ಪ್ರಧಾನವಾಗಿದ್ದ ಪ್ರದೇಶವೆಂಬುದು ಗಮನಾರ್ಹ.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ 'ಆತ್ಯಂತಿಕವಾಗಿ ತೀರ್ಥಂಕರನೇ ಆದಿ ಬ್ರಹ್ಮರಾಗಿರುವುದರಿಂದ ಅವರ ಹೆಸರಿನಲ್ಲಿ ಬ್ರಹ್ಮ ಜಿನಾಲಯ ಎಂಬ ಹೆಸರು ಬಂದಿರಬಹುದು' ಎಂಬ ಹಂಪನಾರವರ ಅಭಿಪ್ರಾಯವನ್ನು ಅಂಗೀಕರಿಸುವುದು ಕಷ್ಟ. ಅಗ್ರಹಾರಗಳಲ್ಲಿ ಮಹಾಜನರ ನೆರವಿನಿಂದ ಅಥವಾ ಅವರ ಸಮ್ಮತಿಯಿಂದ ನಿರ್ಮಾಣವಾದ ಮತ್ತು ಅವರಿಂದ ಪೋಷಿತವಾದ ಜಿನಾಲಯಗಳನ್ನು ಬ್ರಹ್ಮ ಜಿನಾಲಯವೆಂದು ಕರೆಯುವುದು ಸೂಕ್ತವಾಗಬಹುದೆಂಬುದು ನನ್ನ ಅಭಿಮತ.

ಎಕ್ಕೋಟಿ ಜಿನಾಲಯ ಮತ್ತು ಬ್ರಹ್ಮ ಜಿನಾಲಯಗಳು ಒಂದೇ ಕಾಲಘಟ್ಟದಲ್ಲಿ ಬದಲಾದ ಧಾರ್ಮಿಕ ಸ್ಥಿತ್ಯಂತರಗಳ ಫಲಿತಗಳಾಗಿವೆ. ತಮ್ಮ ಅಸ್ತಿತ್ವದ ಉಳಿವಿಗಾಗಿ ಬಲಾಢ್ಯ ಧರ್ಮಗಳೊಂದಿಗೆ ಮಾಡಿಕೊಂಡ ಅನುಸಂಧಾನದ ಫಲಿತಗಳೇ ಈ ಜಿನಾಲಯಗಳು. ಹಾಗಾಗಿ ಇವೆರಡೂ ಒಂದೇ ಕಾಲಘಟ್ಟದಲ್ಲಿ, ಒಂದೇ ರೀತಿಯ ಒತ್ತಡಗಳಲ್ಲಿ ಕಾಣಿಸಿಕೊಳ್ಳುವುದರಿಂದ ಇವೆರಡರ ನಡುವಿನ ವ್ಯತ್ಯಾಸಗಳು ಅತ್ಯಲ್ಪ. ಒಂದೆರಡು ಭಿನ್ನತೆಗಳನ್ನು ಗುರುತಿಸುವುದಾದರೆ,

* ಬ್ರಹ್ಮ ಜಿನಾಲಯಗಳು ಅಗ್ರಹಾರಗಳ ಮಹಾಜನರ ಸಮ್ಮತಿ ಅಥವಾ ಅನುನಯದ ಮೇರೆಗೆ ನಿರ್ಮಿಸಿದ ಅಥವಾ ಅವರ ನಿರ್ವಹಣೆಗೆ ಒಳಪಟ್ಟು ಅವರಿಂದ ಮರು ನಾಮಕರಣಗೊಂಡ ಬಸದಿಗಳು.
* ಎಕ್ಕೋಟಿ ಜಿನಾಲಯಗಳು ಪ್ರಬಲ ಕಾಳಾಮುಖ ಶೈವ ಪರಂಪರೆಯ ಎಕ್ಕೋಟಿ ಮುನೀಂದ್ರರ ಸಹಕಾರದಿಂದ ಒಡಮೂಡುತ್ತಿದ್ದವು. ಎಕ್ಕೋಟಿ ಜಿನಾಲಯವಾಗಬೇಕಾದರೆ, ಅಲ್ಲಿ ಜೋಗವಟ್ಟಿಗೆ ಇರಿಸಲೇಬೇಕು.
* ಬ್ರಹ್ಮ ಜಿನಾಲಯಗಳಲ್ಲಿ ಜೀವದಯಾಷ್ಟಮಿ, ನಂದೀಶ್ವರ ಅಷ್ಟಮಿ, ಸಂಕ್ರಮಣ ಮುಂತಾದ ಹಬ್ಬಗಳನ್ನು ಆಚರಿಸುತ್ತಿದ್ದು, ಅವುಗಳಿಗಾಗಿ ದಾನ ನೀಡಲಾಗಿದೆ.
* ಎಕ್ಕೋಟಿ ಜಿನಾಲಯಗಳು ಉತ್ಸವಗಳಿಗಾಗಿ ಬಸದಿಗಳಲ್ಲಿ ಪಂಚಮಹಾವಾದ್ಯಗಳು, ನಂದಿಕೋಲು ಜೋಗವಟ್ಟಿಗೆ ಬಳಸಿರುವುದನ್ನು ಕಾಣಬಹುದು.
* ಎಕ್ಕೋಟಿ ಜಿನಾಲಯಗಳಂತೆ ಕೆಲವು ಬ್ರಹ್ಮ ಜಿನಾಲಯಗಳೂ ಜೋಗವಟ್ಟಿಗೆ ಬ್ರಹ್ಮ ಜಿನಾಲಯಗಳಾಗಿದ್ದವು.

ಉಪಸಂಹಾರ

ಎಕ್ಕೋಟಿ ಜಿನಾಲಯ ಆಗಬೇಕಾದರೆ, ಅಲ್ಲಿ ಜೋಗವಟ್ಟಿಗೆ ಇರಿಸಲೇಬೇಕು. ಗ್ರಾಮದ ಮಹಾಜನರ (ಬ್ರಾಹ್ಮಣರ) ಅನುನಯದಿಂದ ಅಥವಾ ಸಮ್ಮತದಿಂದ ನಿರ್ಮಿಸಿದ ಅಥವಾ ಅವರ ನಿರ್ವಹಣೆಗೆ ಒಳಪಟ್ಟ ಜಿನಾಲಯಗಳು ಬ್ರಹ್ಮ ಜಿನಾಲಯಗಳಾಗಿದ್ದವು. ಮಹಾಜನರೊಟ್ಟಿಗೆ ಶೈವ ಆಚಾರ್ಯರೂ ಸೇರಿ ಕೊಟ್ಟಂತಹ ಅಥವಾ ಮಹಾಜನರ ಸಮ್ಮತದಿಂದ ನಿರ್ಮಾಣವಾದ ಜಿನಾಲಯಗಳು ಕಾಲಾನಂತರ ಶೈವ ಆಚಾರ್ಯರ ನಿರ್ವಹಣೆಯಡಿ ಬಂದಾಗ ಬಹುಶಃ ಜೋಗವಟ್ಟಿಗೆ ಇರಿಸಿರಬಹುದು. ಈ ಶಾಸನಗಳಲ್ಲಿ ಮಹಾಜನರ ಮತ್ತು ಯತಿಗಳಿಬ್ಬರ ಇಬ್ಬರ ಪ್ರಶಸ್ತಿಗಳೂ ಬಂದಿವೆ. ಬ್ರಹ್ಮ ಜಿನಾಲಯಗಳೆಲ್ಲವೂ ಅಗ್ರಹಾರಗಳಲ್ಲಿಯೇ ನೆಲೆಗೊಂಡಿವೆ ಮತ್ತು ಅಗ್ರಹಾರದ ಸಾಸಿರ್ವರಿಂದ ಪೋಷಿಸಲ್ಪಟ್ಟಿವೆ.

ಅಡಿಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಸ್ಕೃತಿಕ ಅಧ್ಯಯನ, ಪು. ೧೪೯.
೨. ಲಲಿತಾಂಬ ಎನ್.ಆರ್., ಶಾಸನಗಳಲ್ಲಿ ಕರ್ನಾಟಕದ ಹೆಮ್ಮೆಯ ವೀರಕುಡಿಗಳು, ಪು. ೨೦.
೩. ದೇವರಕೊಂಡಾರೆಡ್ಡಿ (ಪ್ರ.ಸಂ), ಕರ್ನಾಟಕ ಜೈನಶಾಸನಗಳು, ಸಂ. ೫, ತೇರದಾಳ–೨೨೦.
೪. ಪೂರ್ವೋಕ್ತ, ಸಂ. ೩, ಶಿವಮೊಗ್ಗ–೧೩, ಕ್ರಿ.ಶ. ೧೩ನೆಯ ಶತಮಾನ.
೫. ಪೂರ್ವೋಕ್ತ, ಸಂ. ೨, ಕಂಬದಹಳ್ಳಿ–೧೭೬, ಕ್ರಿ.ಶ. ೧೩ನೆಯ ಶತಮಾನ.
೬. ಪೂರ್ವೋಕ್ತ, ಸಂ. ೪, ಹಣ್ಣಿಗೇರಿ–೭೯, ಕ್ರಿ.ಶ. ೧೨೦೯.
೭. ಪೂರ್ವೋಕ್ತ, ಸಂ. ೧, ಕಾಂತರಾಜಪುರ, ಕ್ರಿ.ಶ. ೧೩ನೆಯ ಶತಮಾನ.
೮. ಪೂರ್ವೋಕ್ತ, ಸಂ. ೨, ಕಸಲಗೆರೆ–೧೯೬, ಕ್ರಿ.ಶ. ೧೨ನೆಯ ಶತಮಾನ.
೯. ಮಂಜುನಾಥ್ ಸಿ.ಯು., ಎಕ್ಕೋಟಿ ಜಿನಾಲಯಗಳು, ಸಂಶೋಧನ, ಪು. ೬೩೩.
೧೦. ಕರ್ನಾಟಕದ ಜೈನಶಾಸನಗಳು, ಸಂ. ೩, ಪು. ೩೧.
೧೧. ಇ.ಸಿ–೨(ಪ), ಶ್ರವಣಬೆಳಗೊಳ–೪೭೫, ಕ್ರಿ.ಶ. ೧೩೬೮.
೧೨. ದೇವರಕೊಂಡಾರೆಡ್ಡಿ (ಸಂ): ಲಕ್ಷ್ಮೀಶ್ವರದ ಶಾಸನಗಳು, ಸಂಖ್ಯೆ–೪೮ ಕ್ರಿ.ಶ.೧೪೦೩)
೧೩. ಕರ್ನಾಟಕ ಜೈನಶಾಸನಗಳು, ಸಂ. ೨, ಪು. ೩೫.
೧೪. ಪೂರ್ವೋಕ್ತ, ಸಂ. ೩, ಸಂ. ೭೭, ಕ್ರಿ.ಶ. ೧೨೦೮.
೧೫. ಪೂರ್ವೋಕ್ತ, ಸಂ. ೫, ತೇರದಾಳ, ೧೧೨೩, ೧೧೮೧, ೧೧೮೭.
೧೬. ಪೂರ್ವೋಕ್ತ, ಸಂ. ೩, ಸಂ. ೧೩, ಕ್ರಿ.ಶ. ೧೩ನೇ ಶತಮಾನ.
೧೭. ಪೂರ್ವೋಕ್ತ, ಸಂ. ೫, ಮಾಕೋಡು–೨೪೭, ಕ್ರಿ.ಶ. ೧೨–೧೩ನೇ ಶತಮಾನ.
೧೮. ಪೂರ್ವೋಕ್ತ, ಸಂ. ೨, ಮುಗಳೂರು–೩೨೬, ಕ್ರಿ.ಶ. ೧೧೪೭.
೧೯. ಹಂಪ ನಾಗರಾಜಯ್ಯ, ಮೂಲ–ಚೂಲ, ಪು. ೬೨–೬೩.
೨೦. ಕರ್ನಾಟಕ ಜೈನಶಾಸನಗಳು ಸಂ. ೪, ಲಕ್ಕುಂಡಿ–೨೭೭, ಕ್ರಿ.ಶ. ೧೦೦೭.
೨೧. ಪೂರ್ವೋಕ್ತ, ಸಂ. ೩, ಸಂ. ೧೨೬, ಕ್ರಿ.ಶ. ೧೦೭೭.
೨೨. ಪೂರ್ವೋಕ್ತ, ಸಂ. ೫, ಸೇಡಂ–೧೫೫, ಕ್ರಿ.ಶ. ೧೧೨೩.
೨೩. ಪೂರ್ವೋಕ್ತ, ಸಂ. ೫, ಗಬ್ಬೂರು–೧೩೦, ಕ್ರಿ.ಶ. ೧೧೧೯.
೨೪. ಪೂರ್ವೋಕ್ತ, ಸಂ. ೪, ಬೆಳವತ್ತಿ–೨೧೨, ಕ್ರಿ.ಶ. ೧೧೨೩.
೨೫. ಇ.ಸಿ.(ರೈ)–xii, Sl. 32, ಕ್ರಿ.ಶ. ೧೨೭೭.

◆◆

೬೩

ಸೀತಾಲಕ್ಷ್ಮಿ ರಾವ್

ಹೂಲಿಯ ಕಾಶ್ಮೀರ ವೈಕುಂಠ ವಿಷ್ಣುಶಿಲ್ಪ

ಹೂಲಿಯು ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನಲ್ಲಿರುವ ಐತಿಹಾಸಿಕವಾಗಿ ಪ್ರಸಿದ್ಧವಾದ ಗ್ರಾಮ. ಬೆಳ್ವಲ ೩೦೦ ಆಡಳಿತ ವಿಭಾಗದಲ್ಲಿದ್ದ ಹೂಲಿಯಲ್ಲಿ ಕಲ್ಯಾಣ ಚಾಲುಕ್ಯ ಅರಸರ ಕಾಲದ ಹಲವಾರು ಶಾಸನಗಳಿದ್ದು ಇದು ಕಾಳಮುಖ ಪಂಥದ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಶಿವ, ವಿಷ್ಣು, ಸೂರ್ಯ ಹಾಗೂ ತೀರ್ಥಂಕರರ ಉಪಾಸನೆಯೂ ನಡೆಯುತ್ತಿತ್ತು. ಇಲ್ಲಿನ ಶಾಸನಗಳಲ್ಲಿ ಅರಸರು, ದಂಡನಾಯಕರು, ಯತಿಗಳು, ಪ್ರಜೆಗಳೂ ದೇವಾಲಯಗಳ ಸ್ಥಾಪನೆ, ಜೀರ್ಣೋದ್ಧಾರ, ಮುಂತಾದ ಕಾರ್ಯಗಳಲ್ಲಿ ಭಾಗಿಯಾಗಿ ಹಲವು ಬಗೆಯ ದಾನ ಧರ್ಮಗಳನ್ನು ಮಾಡಿರುವುದನ್ನು ಕಾಣಬಹುದು. ಕಾಳಾಮುಖ ಮಹಾ ಅಗ್ರಹಾರವಾಗಿ, ಒಂದು ವಿದ್ಯಾಕೇಂದ್ರವಾಗಿ, ವೈದಿಕ ಹಾಗೂ ಜೈನಧರ್ಮಗಳ ನೆಲೆಯಾಗಿ ಹಲವು ಸುಂದರ ದೇವಾಲಯಗಳನ್ನೂ, ತನ್ನದೇ ಆದ ದೇವಾಲಯ ವಾಸ್ತುಶೈಲಿಯನ್ನೂ ಹೊಂದಿರುವ ಹೂಲಿಯು ನಾಡಿನ ಪ್ರಮುಖ ಐತಿಹಾಸಿಕ ಕೇಂದ್ರವಾಗಿದೆ.

ಪ್ರಸ್ತುತ ಲೇಖನದಲ್ಲಿ ಇಲ್ಲಿನ ಅಂಧಕೇಶ್ವರ ದೇವಾಲಯದಲ್ಲಿನ ಮಕರ ತೋರಣದಲ್ಲಿರುವ ವಿಶೇಷವಾದ ಮೂರು ಮುಖಗಳುಳ್ಳ ಆಸೀನ ವಿಷ್ಣು ಶಿಲ್ಪವನ್ನು ಅಧ್ಯಯನ ಮಾಡಲಾಗಿದೆ. ಅಂಧಕೇಶ್ವರ (ಅಂಧಾಸುರ) ದೇವಾಲಯವನ್ನು ಕಲ್ಯಾಣ ಚಾಳುಕ್ಯಅರಸ ಭುವನೈಕಮಲ್ಲ ಎರಡನೆಯ ಸೋಮೇಶ್ವರನ ಕಾಲದಲ್ಲಿ (೧೦೬೮-೧೦೭೬) ಕಾಳಾಮುಖ ಯತಿಗಳಾದ ಜ್ಞಾನಶಕ್ತಿ ವ್ರತಿಗಳು ಮಾಡಿಸಿದ್ದಾರೆ[೧]. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಭೂದಾನ ಮತ್ತಿತರ ದಾನಗಳನ್ನು ನೀಡಲಾಗಿದೆ. ಅಂಧಾಸುರ




ಮಕರ ತೋರಣ

೧೯೨, ಕ್ಲಾಸಿಕ್ ಅರ್ಚರ್ಡ್ಸ್
ಫೇಸ್ ೧, ಬನ್ನೇರುಘಟ್ಟ ರಸ್ತೆ
ಬೆಂಗಳೂರು-೫೬೦೦೭೬
ಮೊ: ೯೮೮೦೫ ೨೮೪೦೭

ದೇವಾಲಯವು ದ್ವಿಕೂಟವಾಗಿದ್ದು ಎರಡು ಗರ್ಭಗೃಹಗಳಿವೆ. ಮಧ್ಯದಲ್ಲಿ ನವರಂಗವಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದ ಅಂತರಾಳದಲ್ಲಿ ಜ್ಞಾನಶಕ್ತಿ ವ್ರತಿಗಳು ಮಾಡಿಸಿರುವ ಸುಂದರವಾದ ತ್ರೈಪುರುಷ ಮಕರತೋರಣವಿದೆ. ಸಮಕಾಲೀನ ಕಲ್ಯಾಣ ಚಾಲುಕ್ಯರ ಅನೇಕ ದೇವಾಲಯಗಳಲ್ಲಿ ಈ ರೀತಿಯ ಬ್ರಹ್ಮ, ವಿಷ್ಣು, ಈಶ್ವರ ಇರುವ ಮಕರ ತೋರಣಗಳನ್ನು ಕಾಣಬಹುದು. ಅಂಧಾಸುರ ದೇವಾಲಯದಲ್ಲಿರುವ ಮಕರತೋರಣವು ವಿಶಿಷ್ಟವಾಗಿದ್ದು, ಮಧ್ಯದಲ್ಲಿ ನಾಟ್ಯ ಶಿವನೂ, ಬಲಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ಮೂರು ಮುಖಗಳ ವಿಷ್ಣುವೂ ಆಸೀನನಾಗಿದ್ದಾನೆ. ಬ್ರಹ್ಮನು ಹಂಸದ ಮೇಲೂ, ವಿಷ್ಣುವು ಪದ್ಮಪೀಠದ ಮೇಲೆ ಲೀಲಾಸನದಲ್ಲಿ ಕುಳಿತಿದ್ದಾರೆ. ಇನ್ನಿತರ ದೇವಾಲಯಗಳಲ್ಲಿರುವ ತ್ರೈಪುರುಷ ಮಕರತೋರಣಗಳಲ್ಲಿ ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿದ್ದರೆ ಹೂಲಿಯಲ್ಲಿರುವ ಮೂರು ಮುಖಗಳುಳ್ಳ ವಿಷ್ಣುವು ಬಹಳ ಅಪರೂಪ ಮತ್ತು ವಿಶೇಷವಾದದ್ದು. ಕರ್ನಾಟಕದಲ್ಲಿ ಮತ್ತೆಲ್ಲೂ ಇರುವ ಉಲ್ಲೇಖವಿಲ್ಲ. ಸಧ್ಯದಲ್ಲಿ ಉಪಲಬ್ಧವಿರುವ ಈ ಶಿಲ್ಪ ವಿಶಿಷ್ಟವೇ ಆಗಿದೆ.

ನಾಲ್ಕು ಶಿರಗಳು ನಾಲ್ಕು ಕೈಗಳು ಇರುವ ವಿಷ್ಣುವಿನ ಶಿಲ್ಪಗಳು ನಮಗೆ ಕಾಶ್ಮೀರದಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಇದನ್ನು ವೈಕುಂಠ ವಿಷ್ಣು ಎಂದು ಕರೆಯಲಾಗಿದೆ. ಕಾಶ್ಮೀರದಾದ್ಯಂತ ಆರನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ವೈಕುಂಠ ವಿಷ್ಣುವಿನ ಶಿಲ್ಪಗಳು, ದೇಗುಲಗಳು ರಚಿತವಾಗಿವೆ. ಉತ್ತರಪ್ರದೇಶದಲ್ಲಿ ಮತ್ತು ಕೊನಾರ್ಕ್ ಸೂರ್ಯದೇವಾಲಯಗಳಲ್ಲಿ ಈ ಪ್ರಕಾರದ ಒಂದೊಂದು ಶಿಲ್ಪಗಳಿವೆ. ಕೋನಾರ್ಕ್‌ನಲ್ಲಿರುವ ವೈಕುಂಠ ವಿಷ್ಣು ಶಿಲ್ಪ ಅದ್ಭುತವಾಗಿದ್ದು ಶಿಲ್ಪದ ಕೆಳಭಾಗದಲ್ಲಿ 'ಕಾಶ್ಮೀರ ಶೈಲಿಯ ವಿಷ್ಣು' ಎಂಬ ಶಾಸನವಿದೆ.

ಕಾಶ್ಮೀರದಲ್ಲಿರುವ ಹಾಗೂ ವಿದೇಶೀ ವಸ್ತುಸಂಗ್ರಹಾಲಯಗಳಲ್ಲಿರುವ ವೈಕುಂಠ ವಿಷ್ಣುವಿನ ಪ್ರತಿಮಾ ಲಕ್ಷಣಗಳು ಹೀಗಿವೆ. ಇವು ಜಯಾಖ್ಯ ಸಂಹಿತೆ, ಪಾಂಚರಾತ್ರಾಗಮ, ವಿಷ್ಣುಧರ್ಮೋತ್ತರ ಪುರಾಣ ಮತ್ತು ನೀಲಮತಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಪ್ರತಿಮಾ ಲಕ್ಷಣವಾಗಿದೆ. ಇದರ ಪ್ರಕಾರ, ಮೂರ್ತಿಗೆ ನಾಲ್ಕು ಮುಖಗಳಿದ್ದು ಮಧ್ಯದಲ್ಲಿರುವ ಮುಖವು ವಾಸುದೇವ, ಬಲಭಾಗದಲ್ಲಿ ನರಸಿಂಹ, ಎಡಭಾಗದಲ್ಲಿ ವರಾಹ, ಹಿಂಭಾಗದಲ್ಲಿ ಕಪಿಲ ಅಥವಾ ಸ್ತ್ರೀ ಅಥವಾ ಅಗ್ನಿ ರೂಪವನ್ನು ಹೊಂದಿರುತ್ತದೆ. ಮೂರ್ತಿಗೆ ನಾಲ್ಕು ಕೈಗಳಿದ್ದು, ಮೇಲಿನ ಕೈಗಳು ಪದ್ಮ ಮತ್ತು ಶಂಖ ಹಿಡಿದಿರುತ್ತವೆ. ಗದಾದೇವಿ ಮತ್ತು ಚಕ್ರಪುರುಷ ಎಂಬ ಆಯುಧ ದೇವತೆಗಳ ಚಿಕ್ಕಮೂರ್ತಿಗಳು ವಿಷ್ಣುವಿನ ಎರಡೂ ಬದಿಗಳಲ್ಲಿ ಇರುತ್ತವೆ. ವಿಷ್ಣುವಿನ ಹಿಂಬದಿಯ ಎರಡು ಕೈಗಳು ಈ ಶಿಲ್ಪಗಳ ಶಿರದ ಮೇಲೆ ಇರುತ್ತವೆ. ಜಯಾಖ್ಯ ಸಂಹಿತೆಯ ಪ್ರಕಾರ ವೈಕುಂಠ ವಿಷ್ಣುವು ಪದ್ಮ, ಶಂಖ, ಚಕ್ರ, ಗದೆ ಇವುಗಳನ್ನು ಕೈಗಳಲ್ಲಿ ಹಿಡಿದಿರುತ್ತಾನೆ. ಜಯಾಖ್ಯ ಸಂಹಿತೆ, ಪಾಂಚರಾತ್ರಾಗಮ, ತೈತರೀಯ ಉಪನಿಷತ್ತುಗಳಲ್ಲಿ ವೈಕುಂಠ ವಿಷ್ಣುವಿನ ಈ ನಾಲ್ಕು ರೂಪಗಳಿಗೆ ಅವುಗಳ ಪರಮಾತ್ಮನ ಅಂಶರೂಪಗಳನ್ನು ಪ್ರತಿಪಾದಿಸಲಾಗಿದೆ. ಮಧ್ಯದಲ್ಲಿ ಸವಿತೃನಾಮಕ ಶ್ರೀ ನಾರಾಯಣನೇ ದೇವತೆ. ಬಲಭಾಗದಲ್ಲಿ ವಾಯು ಅಂತರ್ಗತನಾದ ಸೃಷ್ಟಿ ರೂಪಿ, ಷಡ್ಗುಣ ಐಶ್ವರ್ಯಪೂರ್ಣ ಪ್ರದ್ಯುಮ್ನ- ನರಸಿಂಹನೂ ಎಡಭಾಗದಲ್ಲಿ ಅಗ್ನಿಯ ಅಂತರ್ಗತನಾದ ಸ್ಫೂರ್ತಿರೂಪಿ, ಪ್ರಕಾಶ ಸ್ವರೂಪಿ ಅನಿರುದ್ಧ- ವರಾಹನೂ, ಹಿಂಭಾಗದಲ್ಲಿ ಸೂರ್ಯ ಅಂತರ್ಗತನಾದ ಜ್ಞಾನಾನಂದ ಪೂರ್ಣ ಸಂಕರ್ಷಣ ಕಪಿಲನು ದೇವತೆಯು. ಕೆಲವು ಶಿಲ್ಪಗಳಲ್ಲಿ ಹಿಂಭಾಗದಲ್ಲಿ ಪ್ರಕೃತಿ ತತ್ವವನ್ನು ಪ್ರತಿನಿಧಿಸುವ ಸ್ತ್ರೀಮುಖವನ್ನು ಬಿಡಿಸಿರುತ್ತಾರೆ. ಬಹುತೇಕ ಶಿಲ್ಪಗಳಲ್ಲಿ ಹಿಂಬದಿಯ ಮುಖ ಕಪಿಲ ಮಹರ್ಷಿಯದ್ದು. ಜಗತ್ತಿಗೆ ಸಾಂಖ್ಯ ದರ್ಶನವನ್ನು ನೀಡಿದ ಕಪಿಲ ಮಹರ್ಷಿಯೂ ಕೂಡ ವಿಷ್ಣುವಿನ ಅವತಾರಗಳಲ್ಲಿ ಒಂದು ಎಂದು ಪಾಂಚರಾತ್ರ



ವೈಕುಂಠ ವಿಷ್ಣು ಶಿಲ್ಪ ೧

ಸಂಹಿತೆ ಮತ್ತು ಭಾಗವತ ಪುರಾಣಗಳು ಹೇಳಿವೆ. ಮಧ್ವಾಚಾರ್ಯರ ತೈತರಿಯ ಉಪನಿಷತ್ ಭಾಷ್ಯದಲ್ಲಿ ವ್ಯಾಹೃತಿಯನ್ನು ವಿವರಿಸುತ್ತಾ, ಓಂ ಭೂಃ ಭುವಃ ಸುವಃ ಎಂಬ ಶಬ್ದಗಳಿಗೆ ಕ್ರಮವಾಗಿ ಶ್ರೀಹರಿ, ವರಾಹ, ನರಸಿಂಹ ಮತ್ತು ಕಪಿಲ ಈ ದೇವತೆಗಳನ್ನು ಹೆಸರಿಸಿದ್ದಾರೆ. ವಿದ್ವಾಂಸರ ಪ್ರಕಾರ ಪಾಂಚರಾತ್ರಾಗಮ, ವಿಷ್ಣು ಧರ್ಮೋತರ ಪುರಾಣ, ನೀಲಮತ ಪುರಾಣಗಳು ಕಾಶ್ಮೀರದಲ್ಲಿ ಬರೆಯಲ್ಪಟ್ಟವು. ಚತುರ್ಮುಖ ವಿಷ್ಣುವನ್ನು ಮಹಾಭಾರತದಲ್ಲಿ ಮೂರ್ತಿಚತುಷ್ಟಯವೆಂದೂ, ನೀಲಮತಪುರಾಣದಲ್ಲಿ ಚತುರಾನನನೆಂದೂ, ವಿಷ್ಣುಧರ್ಮೋತ್ತರ ಪುರಾಣದಲ್ಲಿ ವೈಕುಂಠಮೂರ್ತಿಯೆಂದೂ ಕರೆಯಲಾಗಿದೆ. ಕಲ್ಹಣನ ರಾಜತರಂಗಿಣಿಯು ಚತುರಾತ್ಮಾನ ಎಂದು ಕರೆದು, ಕಾಶ್ಮೀರ ದೇಶದ ಅನೇಕ ಕಡೆಗಳಲ್ಲಿ ಈ ಮೂರ್ತಿ ಇದ್ದುದನ್ನು ಹೇಳುತ್ತದೆ.



ವೈಕುಂಠ ವಿಷ್ಣು ಶಿಲ್ಪ ೨

ಹೂಲಿಯ ಮಕರ ತೋರಣದ ವೈಕುಂಠ ವಿಷ್ಣುಶಿಲ್ಪವು ಈ ಪ್ರತಿಮಾ ಲಕ್ಷಣಗಳನ್ನು ಹೋಲುತ್ತದೆ. ಅತಿ ಅಪರೂಪದ ಲೀಲಾಸನದ ಭಂಗಿಯಲ್ಲಿ ಕಮಲ ಪೀಠದ ಮೇಲೆ ಕುಳಿತಿರುವ ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದೆ. ಆದರೆ ದುರದೃಷ್ಟವಶಾತ್ ಕೈಗಳು ನಷ್ಟವಾಗಿವೆ. ಮೂರ್ತಿಗೆ ಮೂರು ಮುಖಗಳಿದ್ದು ಮಧ್ಯದಲ್ಲಿ ವಾಸುದೇವ, ಬಲಭಾಗದಲ್ಲಿ ನರಸಿಂಹ, ಎಡಭಾಗದಲ್ಲಿ ವರಾಹವಿದೆ. ಇದು ಚಿಕಣಿ ಶಿಲ್ಪವಾದ್ದರಿಂದ ಹಿಂಬದಿಯ ನಾಲ್ಕನೇ ಮುಖ ಇರುವುದಿಲ್ಲ. ಕೆಳಗೆ ಅಂಜಲೀ ಮುದ್ರೆಯಲ್ಲಿರುವ ಗರುಡನಿದ್ದಾನೆ. ಬನ್ಸಿಲಾಲ್ ಮಲ್ಲ ಅವರು Vaishnava Art and Iconography of Kashmir ಗ್ರಂಥದಲ್ಲಿ ಹೇಳಿರುವಂತೆ ಕಾಶ್ಮೀರದ ದೇವಸರ್ ಎನ್ನುವ ಸ್ಥಳದಲ್ಲಿ ದೊರಕಿರುವ ಹಿತ್ತಾಳೆಯ ಪ್ರಭಾವಳಿಯಲ್ಲಿ ಲೀಲಾಸನದ ವೈಕುಂಠ ವಿಷ್ಣು ಕಂಡುಬಂದಿದೆ. ಮತ್ತೆಲ್ಲೂ ಈ ಭಂಗಿಯಲ್ಲಿ ಕುಳಿತ ವೈಕುಂಠ ವಿಷ್ಣು ದೊರಕಿರುವುದಿಲ್ಲ. ಆದ್ದರಿಂದ ಹೂಲಿಯಲ್ಲಿರುವ ವೈಕುಂಠ ವಿಷ್ಣುವಿನ ಶಿಲ್ಪವು ಅಪರೂಪವಾದದ್ದು. ಈ ಲಲಿತಾಸನದಲ್ಲಿ ಕುಳಿತಿರುವ ಕಾಶ್ಮೀರದ ವಿಷ್ಣುವನ್ನು ಹೂಲಿಯ ವೈಕುಂಠ ವಿಷ್ಣುವಿಗೆ ಹೋಲಿಸಿ ಕೈಗಳಲ್ಲಿ ಹಿಡಿದಿರಬಹುದಾಗಿದ್ದ ವಸ್ತುಗಳು ಹಾಗು ಬಲಭಾಗದ ಹಸ್ತ ಮುದ್ರೆಯನ್ನು ಊಹಿಸಬಹುದು. ಬಲ ಮೇಲ್ಭಾಗದ ಕೈಯಲ್ಲಿ ಪದ್ಮವೂ ಕೆಳಗಿನ ಹಸ್ತದಲ್ಲಿ ಕಟಕ ಮುದ್ರೆ ಎಡ ಮೇಲ್ಭಾಗದ ಕೈಯಲ್ಲಿ ಶಂಖವೂ ಇದ್ದಿರಬಹುದು. ಎಡ ಕೆಳಭಾಗದ ಕೈ ಊಹಿಸಲು ಕಷ್ಟಕರವಾಗಿದೆ.

ಹೂಲಿಯ ಮಕರತೋರಣದ ಮತ್ತೊಂದು ವಿಶೇಷವೆಂದರೆ ಮೂರು ಪದ್ಯಗಳ ಶಾಸನವು ಶಿಲ್ಪದ ಕೆಳಭಾಗದಲ್ಲಿ ಕೆತ್ತಲ್ಪಟ್ಟಿದೆ. ಮಕರ ತೋರಣದ ಸೌಂದರ್ಯವನ್ನು ಹೊಗಳುತ್ತಾ ಇದನ್ನು ಜ್ಞಾನಶಕ್ತಿ ವ್ರತಿಗಳು ಸಮಯಿಸಿದರೆಂದು ಹೇಳುತ್ತದೆ. ಶಾಸನದಲ್ಲಿ ಮೂರು ವೃತ್ತಗಳಿದ್ದು ಮೊದಲೆರಡು ವೃತ್ತಗಳು ಮಕರ ತೋರಣವನ್ನು ವರ್ಣಿಸಿದರೆ, ಮೂರನೆಯದು ಮಾರ್ತಾಂಡ ಎನ್ನುವ ಜ್ಞಾನಶಕ್ತಿ ಯತಿಗಳ ಶಿಷ್ಯನನ್ನು ಹೊಗಳಿದೆ. ಅವನ ಗುರು ಭಕ್ತಿ, ಸ್ವಚ್ಛ ಚಾರಿತ್ರ, ಉದಾತ್ತ ಗುಣಗಳನ್ನು ಹೇಳುತ್ತದೆ. ಶಾಸನದ ಪಾಠ(೧) ಹೀಗಿದೆ.

ಇದನತ್ಯಾನಂದದಿಂದಂ ಸಮೆದನೊ ಕಮಲಪ್ರೋದ್ಭವಂ ವಿಶ್ವಕರ್ಮ್ಮಂ
ಮುದದಿಂ ಮೇಣಿಂತಿದಂ ತೀಟ್ಚಿದನೊ ಮಕರಯುಗ್ಮಾನ್ವಿತಂ ತೋರಣಂಗ
ಟ್ಟಿದನೋ ಮೇಣ್ ಪ್ರತ್ಯಗಾಶಾಪತಿಯಿದನೆನೆ ಸರ್ವೋರ್ವಿಶೋಭಾವಿಭೂತ್ಯಾ
ಸ್ಪದಮಿಂತೀ ಜ್ಞಾನಶಕ್ತಿವ್ರತಿ ಸಮೆಯಿಸಿದಂ [- U - -] ಟಿಪ್ಪೆಂತುಂ ॥ (ಮಹಾಸ್ರಗ್ಧರಾ ವೃತ್ತ)

ಅನೂನತರಪದ್ಮಸಂಭವಭವಾಬ್ಜನಾಭಾರ್ಚಿಗಳ್
ಮನೋಹರತರಂಗಳಾಗಿ [ಮ] ಕರದ್ವಯಂ ಶೋಭೆಯಿಂ
ಮನಂಗೊಳಿಸೆ ಮಾಡಿದೀ ಮಕರತೋರಣಂ ಧಾತ್ರಿಯೊಳ್
ವಿನೂತ್ನತರಮಿಂತಿದಂ ಪೊಗಳದಿರ್ಪ್ಪನಾವೊಂ ಗಡಂ॥ (ಪೃಥ್ವಿ ವೃತ್ತ)

ಹರಪಾದಾಂಬುಜ ಷಟ್ಪದಂ [u u u -] ವಾರ್[]ಭಪಂಚಾನನಂ
ದುರಿತೋರ್ವ್ವೀಧರ ವಜ್ರನುಜ್ವಲ [u - - -u] ರತ್ನಾಕರಂ

[U U - -] ರತಿದೂರನಿಷ್ಟಜನತಾಧಾರಂ ಕಲಾಕೋವಿದಂ
ಗುರುಭಕ್ತಂ ನಿಯಮೋಕ್ತನಂಬುದನೆನಲ್ ಮಾರ್ತ್ತಾಂಡನೇಂ ಧನ್ಯನೋ ॥ (ಮತ್ತೇಭವಿಕ್ರೀಡಿತ ವೃತ್ತ)

ಕೊನೆಯ ಸಾಲಿನಲ್ಲಿ ಉಲ್ಲೇಖಿಸಿರುವ ಮಾರ್ತಾಂಡ ಎಂಬ ವ್ಯಕ್ತಿಯೇ ಈ ಶಾಸನವನ್ನು ಹಾಕಿಸಿರಬಹುದು. ಇವನು ಈ ಮಕರತೋರಣದ ಶಿಲ್ಪಿಯಿರಬಹುದು ಎಂದು ಊಹಿಸಲು ಆಧಾರಗಳಿಲ್ಲ. ಕಾಶ್ಮೀರದ ವೈಕುಂಠ ವಿಷ್ಣು ಲಕ್ಷಣಗಳನ್ನು ಹೊಂದಿದ ಈ ಶಿಲ್ಪವನ್ನು ಕೆತ್ತಿದ ಶಿಲ್ಪಿಯು ಕಾಶ್ಮೀರದವನೇ ಆಗಿರಬಹುದು ಅಥವಾ ಇದನ್ನು ಮಾಡಿಸಿದ ವ್ಯಕ್ತಿಯು ಈ ಪ್ರತಿಮಾಲಕ್ಷಣವನ್ನು ಬಲ್ಲವನಾಗಿರಬಹುದು. ಈ ಶಾಸನದಲ್ಲಿ ಹೊಗಳಲ್ಪಟ್ಟಿರುವ ಮಾರ್ತಾಂಡನೆಂಬ ಹೆಸರು ಕಾಶ್ಮೀರಲ್ಲಿ ಹೆಚ್ಚು ಪ್ರಚಲಿತವಾಗಿತ್ತು ಎನ್ನುವುದನ್ನು ಇತರ ಮೂಲಗಳಿಂದ ಗುರುತಿಸಬಹುದು. ಕಾಶ್ಮೀರದ ಮಾರ್ತಾಂಡ ಸೂರ್ಯ ದೇವಾಲಯವು ಜಗತ್ಪ್ರಸಿದ್ಧವಾದದ್ದನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬಹುದು.



ವೈಕುಂಠ ವಿಷ್ಣು ಶಿಲ್ಪ – ಕಾಶ್ಮೀರ – ಶಿಲ್ಪ ಲಕ್ಷಣ ೧



ವೈಕುಂಠ ವಿಷ್ಣು ಶಿಲ್ಪ – ಕಾಶ್ಮೀರ – ಶಿಲ್ಪ ಲಕ್ಷಣ ೩

ಕಾಶ್ಮೀರ ದೇಶದಲ್ಲಿ ಬಹಳ ಪ್ರಚಲಿತವಾಗಿದ್ದ ವೈಕುಂಠ ವಿಷ್ಣು ಶಿಲ್ಪಲಕ್ಷಣಗಳಿಂದ ಕೂಡಿದ ವಿಷ್ಣು ಶಿಲ್ಪವು ಕರ್ನಾಟಕದ ಹೂಲಿಯಲ್ಲಿ ದೊರಕಿರುವುದು, ಆ ಕಾಲಘಟ್ಟದ ನಮ್ಮ ನಾಡಿನ ಹಾಗೂ ಕಾಶ್ಮೀರದ ನಡುವೆ ಇದ್ದ ಉತ್ತಮ ಸಾಂಸ್ಕೃತಿಕ ಸಂಬಂಧಕ್ಕೆ ದೃಢವಾದ ಸಾಕ್ಷಿಯನ್ನು ಒದಗಿಸುತ್ತದೆ. ಹೂಲಿಯ ಶಾಸನಗಳಲ್ಲಿ ಕಾಶ್ಮೀರಕ್ಕೆ ಸಂಬಂಧಿಸಿದ ವ್ಯಕ್ತಿನಾಮಗಳ ಉಲ್ಲೇಖ ಕಾಣಸಿಗದಿದ್ದರೂ, ಕಾಶ್ಮೀರ ಹಾಗೂ ನಮ್ಮ ನಾಡಿನ ಸಂಬಂಧವನ್ನು ದೃಢಪಡಿಸುವ ಅನೇಕ ವಿಚಾರಗಳನ್ನು ಇತಿಹಾಸ ತಜ್ಞರು ಬೆಳಕಿಗೆ ತಂದಿದ್ದಾರೆ. ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ಬಿಲ್ಹಣ ಕಾಶ್ಮೀರದವನು ಎಂದು ತಿಳಿದಿದೆ. ಕಲ್ಹಣನ ರಾಜತರಂಗಿಣಿಯಲ್ಲೂ ಕಲ್ಯಾಣ ಚಾಲುಕ್ಯರ, ಜನಪದರ ಹಾಗೂ ರಾಣಿಯರ ಉಲ್ಲೇಖವಿದೆ. ವಿದ್ವಾಂಸರಾದ ಡಾ. ದೇವರಕೊಂಡಾರೆಡ್ಡಿ ಮತ್ತು ಡಾ. ವಸಂತಲಕ್ಷ್ಮೀ ಅವರು ತಮ್ಮ ಶಾಸನ ಅಧ್ಯಯನದ ಮೂಲಕ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಾಶ್ಮೀರದಿಂದ ಬಂದ ಯತಿಗಳು, ಜನಸಾಮಾನ್ಯರು, ಪಂಡಿತರು ನೆಲೆಯೂರಿದರೆಂದು ಸಾಬೀತುಪಡಿಸಿದ್ದಾರೆ. ಕರ್ನಾಟಕದ ಶಾಸನಗಳಲ್ಲಿ ಕಾಶ್ಮೀರದ ಉಲ್ಲೇಖ, ಸವಾಸಿ ಬ್ರಾಹ್ಮಣರು, ಸರಸ್ವತಿಯ ಆರಾಧನೆ, ಕಾಶ್ಮೀರದ ಹೆಸರುಗಳು ವಿಪುಲವಾಗಿ ಸಿಗುತ್ತವೆ. ಇವೆಲ್ಲವೂ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಹಾಗೂ ಧಾರ್ಮಿಕವಾಗಿ ಕಂಡುಬರುವ ಅಂಶಗಳಾದರೆ ಹೂಲಿಯಲ್ಲಿರುವ ಈ ಶಿಲ್ಪವು ಕರ್ನಾಟಕ ಮತ್ತು ಕಾಶ್ಮೀರದ ನಡುವೆ ಇದ್ದ ಶಿಲ್ಪಕಲಾ ಸಂಬಂಧಕ್ಕೆ ಸಾಕ್ಷಿ ಒದಗಿಸುತ್ತದೆ. ಆ



ಲಲಿತಾಸನದಲ್ಲಿರುವ
ವೈಕುಂಠ ವಿಷ್ಣು ಕಾಶ್ಮೀರ

ಕಾಲಘಟ್ಟದಲ್ಲಿ ರಚಿಸಲ್ಪಟ್ಟ ದೇಗುಲ ಹಾಗೂ ಶಿಲ್ಪಗಳಲ್ಲಿ ಕಾಶ್ಮೀರದ ಪ್ರಭಾವ ಮತ್ತು ಕಾಶ್ಮೀರದಲ್ಲಿ ಇರುವ ದೇಗುಲ ಶಿಲ್ಪಗಳಲ್ಲಿ ಕರ್ನಾಟಕದ ಶಿಲ್ಪಕಲೆಯ ಪ್ರಭಾವವನ್ನು ಗುರುತಿಸಲು ಅಧ್ಯಯನಗಳು ನಡೆಯಬೇಕಿದೆ.

* ಈ ವಿಶಿಷ್ಟ ಶಿಲ್ಪದ ಬಗ್ಗೆ ನಮ್ಮ ಗಮನ ಸೆಳೆದು, ಮಕರತೋರಣದ ಚಿತ್ರಗಳನ್ನು ಒದಗಿಸಿದ ಶ್ರೀ ಕೆಂಗೇರಿ ಚಕ್ರಪಾಣಿಯವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಅಧ್ಯಯನಕ್ಕೆ ಪ್ರೋತ್ಸಾಹವಿತ್ತು ಪೂರಕ ಮಾಹಿತಿ ಒದಗಿಸಿದ ಪ್ರೊ. ದೇವರಾಜಸ್ವಾಮಿಯವರಿಗೆ, ಡಾ. ಸಂಧ್ಯಾ, ಡಾ. ಸ್ಮಿತಾ ರೆಡ್ಡಿ, ಡಾ. ನಳಿನಿ ವೆಂಕಟೇಶ್ ಹಾಗೂ ಕೆ.ಎಲ್. ರಾಜಶೇಖರ್ ಅವರಿಗೆ ನನ್ನ ವಂದನೆಗಳು. ಶಾಸನ ಪದ್ಯ ಓದಲು ಸಹಾಯ ಮಾಡಿದ ಲೋಕೇಶ್ ಆಚಾರ್ಯ ಅವರಿಗೆ ನನ್ನ ಕೃತಜ್ಞತೆಗಳು. ಆಗಮ ಹಾಗೂ ಉಪನಿಷತ್‌ಗಳಲ್ಲಿರುವ ವಿಷ್ಣುತತ್ವದ ಬಗ್ಗೆ ನನ್ನ ಅರಿವು ಹೆಚ್ಚಿಸಿದ ಜಿ. ಪವನ್ ಭಾರದ್ವಾಜನಿಗೆ ಕೃತಜ್ಞತೆಗಳು.

ಆಕರಗ್ರಂಥಗಳು

೧. ಎಪಿಗ್ರಾಫಿಯಾ ಇಂಡಿಕಾ, ಸಂಪುಟ ೧೮, ಶಾ.ಸಂ. ೨೨.

೨. Bansi Lal Malla, Vaisnava Art and Iconography of Kashmir, Abhinav Publications.

೩. Stella Kramrisch, The Vishnudharmotthara, Part 3, Calcutta University Press.

೪. Shrinivasa Padigar, Vishnu Cult in Karnataka, Directorate of Archaeology and Museums.

೫. ವಸಂತಲಕ್ಷ್ಮಿ ಕೆ., ಕರ್ನಾಟಕದ ವೈಷ್ಣವ ಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೬ ರಾಮಚಂದ್ರರಾವ್ ಎಸ್.ಕೆ., ಮೂರ್ತಿ ಶಿಲ್ಪ ನೆಲೆ–ಹಿನ್ನೆಲೆ, ಸುರಮಾ ಪ್ರಕಾಶನ, ಬೆಂಗಳೂರು.

೭. ದೇವರಕೊಂಡಾರೆಡ್ಡಿ, ಕರ್ನಾಟಕ ಮತ್ತು ಕಾಶ್ಮೀರ ಸಂಸ್ಕೃತಿ ಸಂಬಂಧ, ಶಾಸನ ಅಧ್ಯಯನ, ಸಂಪುಟ ೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಆನಂದತೀರ್ಥ, ಉಪನಿಷತ್ತ್ರಸ್ಥಾನ, ಅಖಿಲ ಭಾರತ ಮಾಧ್ವ ಮಹಾ ಮಂಡಲ ಪಬ್ಲಿಕೇಷನ್ ಟ್ರಸ್ಟ್.

೯. ಗೋಪಾಲರಾವ್ ಎಚ್.ಎಸ್., ಕಲ್ಯಾಣ ಚಾಳುಕ್ಯ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೦. ಪಾಟೀಲ ಕೆ.ಎಸ್., ೨೦೧೪, ಹೂಲಿ: ಕಾಳಾಮುಖ ಮಹಾ ಅಗ್ರಹಾರ, ಇತಿಹಾಸ ದರ್ಶನ, ಸಂ. ೨೪, ಕರ್ನಾಟಕ ಇತಿಹಾಸ ಅಕಾದೆಮಿ.

೧೧. ಪಾಟೀಲ ಕೆ.ಎಸ್., ಹೂಲಿ ಮತ್ತು ಲಕ್ಕುಂಡಿ ದೇವಾಲಯಗಳು: ಒಂದು ತೌಲನಿಕ ಅಧ್ಯಯನ, ಪ್ರತಿಭಾ ಪ್ರಕಾಶನ, ಧಾರವಾಡ.

◆◆

೬೪

ನಾಗರಾಜ ಟಿ.ವಿ.

ತಳಗವಾರ ಗ್ರಾಮದ ಐತಿಹಾಸಿಕ ಕುರುಹುಗಳು

ಇತಿಹಾಸ ರಚನೆ ಮತ್ತು ಪುನಾರಚನೆಯ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಇತಿಹಾಸದ ಅಧ್ಯಯನಗಳು ಹೊಸ ಪ್ರವೃತ್ತಿಯನ್ನು ಹುಟ್ಟುಹಾಕಿದವು. ಹಾಗೆಯೇ ಇತಿಹಾಸ ರಚನೆಯಲ್ಲಿ ಗ್ರಾಮ ಅಧ್ಯಯನಗಳು ಸಹ ಮಹತ್ವಪೂರ್ಣ ಕೊಡುಗೆ ನೀಡಬಲ್ಲವು ಎಂಬುದು ಇದುವರೆಗಿನ ಅಧ್ಯಯನಗಳಿಂದ ಕಂಡು ಬಂದಿದೆ. ಸ್ಥಳೀಯ ಅಧ್ಯಯನಗಳು ಚರಿತ್ರೆಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವಹಿಸಬಲ್ಲವು. ಪ್ರಚಲಿತ ಇತಿಹಾಸದ ಗತಿಯನ್ನೇ ರೂಪಿಸಬಲ್ಲ ಶಕ್ತಿಶಾಲಿ, ವೈಶಿಷ್ಟತೆಗಳು ಪ್ರತಿಗ್ರಾಮದಲ್ಲೂ ಹುದುಗಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಸೂಕ್ಷ್ಮ ಅಧ್ಯಯನಗಳು ಗ್ರಾಮ ಕೇಂದ್ರಿತವಾದಾಗ, ಅನೇಕ ಬೆಳಕು ಕಾಣದ ಶಾಸನಗಳು, ವೀರಗಲ್ಲುಗಳು, ಸ್ಮಾರಕ ಇತ್ಯಾದಿ ಪಳೆಯುಳಿಕೆಗಳ ಜೊತೆಗೆ ಇದುವರೆವಿಗೂ ನಿರ್ಲಕ್ಷಿತ ಮೌಖಿಕ ಪರಂಪರೆ ಅನಾವರಣಗೊಳ್ಳುವ ಮೂಲಕ ಇತಿಹಾಸದ ಹೊಸ ಶೋಧಕ್ಕೆ ಸಹಾಯಕವಾಗಬಲ್ಲವು. ಜೊತೆಗೆ ಅವುಗಳ ಸಂರಕ್ಷಣಾ ಕಾರ್ಯ ಕೈಗೊಳ್ಳುವ ಮೂಲಕ ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸುವ ಸುತ್ತ್ಯಾರ್ಹ ಕಾರ್ಯ ಸಾಧ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ನಾನು ಹುಟ್ಟಿದ ಊರಿನ ಐತಿಹಾಸಿಕ ಕುರುಹುಗಳ ಹುಡುಕಾಟದ ಪರಿಣಾಮವೇ ಈ ಸಂಶೋಧನಾ ಪ್ರಬಂಧ.

ತಳಗವಾರ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರ ಹೋಬಳಿಯ ಗ್ರಾಮ. ಇದು ರಾಜ್ಯ ಹೆದ್ದಾರಿ ಬೆಂಗಳೂರು–ಚಿಂತಾಮಣಿ ರಸ್ತೆಯಲ್ಲಿ, ಬೆಂಗಳೂರಿಗೆ ಎಪ್ಪತ್ತು ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವಕ್ಕೆ ದೊಡ್ಡ ಕೆರೆ. ಉಳಿದ ಮೂರು ಕಡೆಗಳಲ್ಲಿ ಕೃಷಿ ಸಾಗುವಳಿ ಭೂಮಿ. ಸುಮಾರು ಮುನ್ನೂರು–ಮುನ್ನೂರ ಐವತ್ತು ಮನೆಗಳಿರುವ ಈ ಗ್ರಾಮದ ಪರಿಸರದಲ್ಲಿ ದೊಡ್ಡ ಕೆರೆ ಹಾಗೂ ಸ್ವಲ್ಪ ದೂರಕ್ಕೆ ಕಾಣುವ ಕೊಂಗನಹಳ್ಳಿ ಮತ್ತು ಮಡಬಹಳ್ಳಿ ಹಾಗೂ ಕೈವಾರದ ಬೆಟ್ಟಗಳ ವಿಹಂಗಮ ನೋಟ ಮನಮೋಹಕವಾಗಿದೆ.

ಸ್ಥಳನಾಮ

'ವಾರ'ದಿಂದ ಕೊನೆಯಾಗುವ ಹೆಸರುಗಳು ಕರ್ನಾಟಕದ ದಕ್ಷಿಣಭಾಗದಲ್ಲಿ ವಿಶೇಷವಾಗಿ ಸೀಮಿತವಾಗಿರುವುದರಿಂದಲೂ, ಈ ದಕ್ಷಿಣಭಾಗದಲ್ಲಿ ಎರಡೂ 'ವರ' ಮತ್ತು 'ವಾರ' ಬಗೆಯ ಹೆಸರುಗಳು ಅಕ್ಕಪಕ್ಕದಲ್ಲಿ ಕಾಣಿಸಿಕೊಂಡಿರುವುದರಿಂದಲೂ 'ವಾರ' ಹೆಸರುಗಳಿಗಿಂತಲೂ 'ವರ' ಹೆಸರುಗಳು ಹೆಚ್ಚು ಪ್ರಾಚೀನವೆಂದು ಊಹಿಸಬಹುದು. 'ಪುರ'ವು ಮೊದಲು 'ವರ' ಆಗಿರಬೇಕು. 'ವರ'ದ ಹಿಂದಿನ ದೀರ್ಘಸ್ವರ ಹ್ರಸ್ವವಾದಾಗ '–ವರ' ಆಗಿ ಹಸ್ವವು ದೀರ್ಘವಾಗಿ '–ವಾರ' ಬಂದಿರಬೇಕು. ಇದು '–

ನಿವೃತ್ತ ಪ್ರಾಧ್ಯಾಪಕರು
ಬೆಂಗಳೂರು–೫೬೦೦೯೨
ಮೊ: ೯೪೪೯೧ ೧೨೭೬೪

ವರ' 'ವಾರ'ಗಳ ಸಾಪೇಕ್ಷ ಕಾಲಾನುಕ್ರಮಣಿಕೆ. (ಡಾ. ಎಂ. ಚಿದಾನಂದಮೂರ್ತಿ ಅವರ 'ವರ.' 'ವಾರ' ಎಂದು ಕೊನೆಗೊಳ್ಳುವ ಊರಿನ ಹೆಸರುಗಳು ಎಂಬ ಲೇಖನ, ಸಾಧನೆ-೭-೧-ಮಂಥನದಲ್ಲಿ.) ಕೈವಾರವು ಶಾಸನಗಳಲ್ಲಿ 'ಕಯ್ವರ', 'ಕಯಿವಾರ' ನಂತರ 'ಕೈವಾರ' ಹೀಗೆ ಕರೆಯಲ್ಪಟ್ಟಿದ್ದು ಅದರ ಪಶ್ಚಿಮಕ್ಕೆ ಇರುವ ತಳಗವಾರ ಗ್ರಾಮ ನಾಮದ ನಿಷ್ಪತ್ತಿಯ ಬಗ್ಗೆ 'ಅಸ್ಪಷ್ಟ' ಎಂದೇ ಖ್ಯಾತ ಸ್ಥಳನಾಮ ತಜ್ಞರಾದ ಡಾ. ವಿ. ಗೋಪಾಲಕೃಷ್ಣ ಅವರು ಅಭಿಪ್ರಾಯ ಪಟ್ಟಿದ್ದಾರೆ. (ಕೋಲಾರ ಜಿಲ್ಲೆಯ ಸ್ಥಳನಾಮಗಳು: ಸಮಾಜೋ ಭಾಷಿಕ ಅಧ್ಯಯನ, ೧೯೧೯, ಪು.೨೩೦) ಪ್ರಾಯಶಃ ಗ್ರಾಮದ ಪೂರ್ವಕ್ಕಿರುವ ಪ್ರಸಿದ್ಧ ಸ್ಥಳ ಕೈವಾರಕ್ಕಿಂತ ತುಸು ತಗ್ಗು ಪ್ರದೇಶದಲ್ಲಿರುವುದರಿಂದ ಕೆಳಗಿನ ಅರ್ಥಾತ್ 'ತಳದ' ಗ್ರಾಮವೇ ತಳಗವಾರ ಆಗಿರಬಹುದು ಎಂಬುದು ನನ್ನ ಊಹೆಯಾಗಿದೆ. ಆದರೆ ನಿರ್ದಿಷ್ಟವಾಗಿ ಈ ಬಗ್ಗೆ ಏನೂ ಹೇಳಲು ಸಾಧ್ಯವಾಗುತ್ತಿಲ್ಲ.

ಶಾಸನಗಳು

ಈ ಗ್ರಾಮದ ಪರಿಸರದಲ್ಲಿ ಒಟ್ಟಾರೆ ನಾಲ್ಕು ಶಾಸನಗಳು ಕಂಡುಬಂದಿವೆ. ಈ ಗ್ರಾಮನಾಮವನ್ನು ಉಲ್ಲೇಖಿಸುವ ಶಾಸನವೊಂದು ಕೈವಾರದ ಅಮರನಾರೇಯಣ ದೇವಾಲಯದ ಆವರಣದಲ್ಲಿ ಇದೆ. ಆ ಶಾಸನದಲ್ಲಿ ತಳಗವಾರದ ಉಲ್ಲೇಖ ಇರುವುದರಿಂದ ಇಲ್ಲಿ ಅದನ್ನು ಸಹ ಪರಿಗಣಿಸಿದ್ದೇನೆ. ಕೈವಾರದ ಅಮರನಾರೇಯಣ ದೇವಾಲಯದ ಆವರಣದಲ್ಲಿನ ಆ ಶಾಸನದ ಸಾರಾಂಶ: 'ಶಕವರ್ಷ ೧೨೮೩ (ಕ್ರಿ.ಶ. ೧೩೬೧) ರಲ್ಲಿ ವೀರ ಬುಕ್ಕಣ್ಣೊಡೆಯರ ಕುಮಾರ ಕಂಪಣ್ಣಒಡೆಯರು ರಾಜ್ಯವಾಳುತ್ತಿದ್ದಾಗ ಅವನ ನಗರದ ಬಲುಮನ್ನೆರಾಜಲು ಮಹಾಮಂಡಲೇಶ್ವರ ಸಲರಣದೇವ ನಿಲಕ್ಕರಾಜನ ಮಗ ರಾಚಯದೇವಮಹಾರಾಜ ಕೈವಾರನಾಡಿನ ಆಜ್ಞೆಯ ಮೇರೆಗೆ ಕಯಿವರನಾಡ ಸಮಸ್ತಗೌಡ ಪ್ರಜೆಗಳು, ಉಭಯ ನಾನಾದೇಶಿ, ಹದಿನೆಂಟು ಸಮಯಗಳವರು ಸೇರಿ ಕೈವಾರದಲ್ಲಿ ಸಂತೆಯನ್ನು ಕಟ್ಟಿಸಿ, ಈ ಸಂತೆಗೆ ಪಟ್ಟಣಸ್ವಾಮಿ ಮಾರಪ್ಪಶೆಟ್ಟಿಯ ತಮ್ಮನಾದ ಪೆರಿಯನಾರಾಣನನ್ನು ಪಟ್ಟಣಸ್ವಾಮಿಯನ್ನಾಗಿ ನಿಲ್ಲಿಸಿ, ಆತನಿಗೆ ಕೈವಾರದ ದೊಡ್ಡ ಕೆರೆಯ ಹಿಂದೆ ಗದ್ದೆಗಳನ್ನೂ, ತಳಗವಾರದ ದೇವಗ . . ಹೊಲವನ್ನು ಸರ್ವಮಾನ್ಯವಾಗಿ ಅಚಂದ್ರಾರ್ಕವಾಗಿ ದತ್ತಿ ನೀಡಲಾಯಿತು. ಎಂದಿದೆ. (ಎ.ಕ.-೧೦, ಚಿಂತಾಮಣಿ ೯೫). ಈ ಶಾಸನದಲ್ಲಿ ತಳಗವಾರ ಸ್ಪಷ್ಟವಾಗಿ ಉಲ್ಲೇಖಿತಗೊಂಡಿದ್ದು ಹದಿನಾಲ್ಕನೆಯ ಶತಮಾನದ ವೇಳೆಗೆ ಗ್ರಾಮವು ತನ್ನ ಅಸ್ತಿತ್ವಕ್ಕೆ ಶಾಸನ ಆಧಾರ ಹೊಂದಿದೆ. ಆ ವೇಳೆಗಾಗಲೇ ಈ ಗ್ರಾಮವು ಜನವಸತಿ ಪ್ರದೇಶವಾಗಿದ್ದು, ಕೃಷಿ ಮತ್ತು ಇತರ ಚಟುವಟಿಕೆಗಳ ನೆಲೆಯಾಗಿರಬೇಕು. ತಳಗವಾರ ಗ್ರಾಮದ ದೇವಮಾನ್ಯ ಹೊಲವೊಂದನ್ನು ದಾನವಾಗಿ ನೀಡಿರುವ ಸಂದರ್ಭದಲ್ಲಿ ಈ ಗ್ರಾಮವು ಉಲ್ಲೇಖಿತಗೊಂಡಿದೆ.

ಅಕ್ಕಿಮಂಗಲ ರಾಮಕ್ರಿಷ್ಣಪ್ಪನವರ ತೋಟದಲ್ಲಿನ ಶಾಸನ




೧ ಶಕವರುಷಂಗಳು ೧೩ . .
೨ ವ್ಯಯ ಸಂವತ್ಸರದ ಪಾಲ್ಗುಣ
೩ ಶುದ್ಧ ಬುಧವಾರದಂದು ಶ್ರೀಮನು ಮಹಾ
೪ ಮಂಡಳೇಶ್ವರ ಅರಿರಾಯ ವಿಭಾಡ ಭಾಸೆಗೆ ತಪ್ಪು
೫ ವ ರಾಯರಗಂಡ ಶ್ರೀ ವೀರಬುಕ್ಕಣ್ಣವೊಡೆಯರು
೬ ಪೃಥುವಿ ರಾಜ್ಯಂ ಮಾಡುತಿರಲು
೭ . . . . . ಶ್ರೀಮನುಮಹಾ ಸಾಮಂತಾಧಿಪತಿ
೮ . . . . ಯನಾಯ್ಕರು . . . .
೯ ಬೆ . . . . ಮಗ . ಸಂಣ . . . . .

ದುರದೃಷ್ಟವಶಾತ್ ಈ ಶಾಸನದ ದ್ವಿತಿಯಾರ್ಧದ ಭಾಗಗಳು ಸ್ವಲ್ಪಮಟ್ಟಿಗೆ ತ್ರುಟಿತವಾಗಿದ್ದು ಲಭ್ಯವಾದ ಭಾಗಗಳ ಪಾಠದಂತೆ; ಈ ಶಾಸನದಲ್ಲಿ ವಿಜಯನಗರದ ಮಹಾಮಂಡಳೇಶ್ವರ ಶ್ರೀವೀರಬುಕ್ಕಣ್ಣ ಒಡೆಯರು ರಾಜ್ಯಬಾರ ಮಾಡುವಾಗ ಅವರ ಸಾಮಂತಾಧಿಪತಿ [ಯಾವೊಬ್ಬ] ನಾಯ್ಕರ ಆಳ್ವಿಕೆಯಲ್ಲಿ ತಳಗವಾರಕ್ಕೆ ಸಂಬಂಧಿಸಿದ ವಿಚಾರವೊಂದನ್ನು ದಾಖಲಿಸಿದೆ.

ನಂಜುಂಡಶಾಸ್ತ್ರಿಗಳ ಹೊಲದಲ್ಲಿನ ಶಾಸನ

ಮರಾಠರ ಶಾಸನ, ಕಾಲ. ಕ್ರಿ.ಶ. ೧೬೬೭ ಸುಮಾರು ೨೪ ಸಾಲುಗಳಿವೆ. ಆದರೆ ಕೆಲವು ಸಾಲುಗಳು. ತ್ರುಟಿತವಾಗಿವೆ.



೧ . . . .

೨ . . . . . . ಶ್ರೀ ಮ

೩ ತ್ವರಾಭವ ಸಂವ

೪ ತ್ಸರದ ಮಾಗ ಶು ೧೫

೫ ಲು ಶ್ರೀಮತು ರಾಜ

೬ ಮಾನ್ಯ ರಾಜ ಶ್ರೀಮಲು-

೭ ಕೋಜಿರಾಜ ಸಂಬೋಜಿ . .

೮ ಯ್ಯ ನವರು . . ತಳಗಹಾರ .

೯ ದ . . . . . ಗಳಿಗೆ . . . .

(ಮುಂದಿನ ೧೫ ಸಾಲುಗಳು ಅಸ್ಪಷ್ಟವಾಗಿವೆ)

ಈ ಶಾಸನವು ಮರಾಠರ ಕಾಲದ ಶಾಸನವಾಗಿದ್ದು, ಇದರಲ್ಲಿ ಸಂವತ್ಸರದ ಹೆಸರು ಮಾತ್ರ ಲಭ್ಯವಿದೆ. ಕೈವಾರ ನಾಡಿನಲ್ಲಿ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಹೆಸರಾಗಿರುವ ಆಲಂಬಗಿರಿಯಲ್ಲಿ ಮಲುಕೋಜಿಯ ಶಾಸನವಿದ್ದು, ಅದರ ಆಧಾರದ ಮೇಲೆ ಕಾಲ ನಿರ್ಣಯಿಸಲಾಗಿದೆ. ಉಳಿದಂತೆ ಬಹುಮಟ್ಟಿಗೆ ಶಾಸನದ ಬಹುಭಾಗಗಳು ಸವೆದ ಸ್ಥಿತಿಯಲ್ಲಿ ಕಂಡುಬಂದಿದ್ದು ಓದುವಿಕೆಗೆ ಕಷ್ಟಸಾಧ್ಯ.

ಊರಬಾಗಿಲು ಶಾಸನ

ಗ್ರಾಮದ ಹಳೆಯ ಮನೆಗಳ ಬಳಿ ಊರುಬಾಗಿಲು ಇದ್ದು, ಇಂದಿಗೂ ಸುಸ್ಥಿತಿಯಲ್ಲಿದೆ. ನಾಲ್ಕು ಕಂಬಗಳುಳ್ಳ ಚೌಕಾಕಾರದ, ಮೇಲೆ ಛಾವಣಿ ಉಳ್ಳ ಕಲ್ಲಿನ ರಚನೆಯಾಗಿದೆ. ಯಾವುದೇ ಅಲಂಕರಣ ಕಂಡುಬಂದಿಲ್ಲ. ಪೂರ್ವದ ಕಲ್ಲಿನ ಮೇಲೆರಡು ಸಾಲಿನ ಶಾಸನ ಇದೆ. ಆದರೆ ಮೊದಲ ಭಾಗ ತ್ರುಟಿತವಾಗಿದ್ದು, ಎರಡನೆಯ ಭಾಗದಲ್ಲಿ

೧ . . . . . . ನಂತರದ ಬಾಗದಲ್ಲಿ . . . ಗೌಡ

೨ . . . . . . .ಕಟ್ಟಿಸಿದ ಊರ ಬಾಗಿಲು . . . . . . ಎಂದಿದೆ.

ಸೀಕುಂಟೆ ತೋಪಿನ ಶಾಸನ

ಸೀಕುಂಟೆಯ ಪಕ್ಕದಲ್ಲಿ ಇದ್ದಂತಹ ಹುಣಿಸೆ ತೋಪಿನಲ್ಲಿ (ಈಗ ತೋಪು ಇಲ್ಲ) ಸುಮಾರು ಐದು ಅಡಿ ಎತ್ತರ ಮತ್ತು ೩ ಅಡಿ ಅಗಲ ಹಾಗೂ ಐದು ಇಂಚು ದಪ್ಪದ ಚಪ್ಪಡಿಯ ಮೇಲೆ ಐದು ಸಾಲುಗಳ ಕನ್ನಡ ಶಾಸನವಿದೆ.

೧ ಸುಭಕ್ರುತು ಸಂ

೨ ಪುಷ್ಯ ಶು ೧೦ ಸಾ

೩ ದು ಪೆದ್ದ ದಾಸಪ್ಪ ವೇ

೪ ಶಿನ ವನಮು ತೆಲಿ

೫ ಸೇದಿ ೧೯೨೨/೫ ರಲ್ಲು –ಎಂದಿದೆ.

ಸುಮಾರು ಎಂಟು ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಬಯಲುಸೀಮೆಯ ಪ್ರದೇಶದಲ್ಲಿ 'ವನ'ಬೆಳೆಸುವುದು ಸಾಹಸ ಕೆಲಸ ಎಂದು ಹೇಳಬಹುದಾದ ಕಾರ್ಯ ನಡೆಸಿದ್ದು, ಅದನ್ನು ದಾಖಲೆಗೊಳಿಸಿರುವುದು ಗಮನಾರ್ಹ! ಚಚ್ಚೌಕಾರದ ಸಾಲುಗಳಲ್ಲಿ ನೆಟ್ಟು ಬೆಳೆಸಿದ್ದ ಹುಣಸೆ ಮರದ ತೋಪು, ಜೊತೆಗೆ ನಾಲ್ಕು ಮೂಲೆಗಳಲ್ಲಿ ಆಲದ ಮರಗಳನ್ನು ಬೆಳೆಸಲಾಗಿದ್ದಿತು. ಸೀಕುಂಟೆಯಿಂದ ಕಾವಡಿಗಳಲ್ಲಿ ನೀರನ್ನು ಹೊತ್ತು ಹಾಕಿ ವನ ಬೆಳೆಸಿದ ಪರಿ, ಅವರಿಗಿದ್ದ ಪರಿಸರ ಪ್ರಜ್ಞೆಯ ದ್ಯೋತಕವೆನಿಸಿದೆ.

ವೀರಗಲ್ಲುಗಳು




ತಳಗವಾರ ಗ್ರಾಮ ಪರಿಸರದಲ್ಲಿ ಒಟ್ಟು ಒಂಬತ್ತು ವೀರಗಲ್ಲುಗಳು ಕಂಡುಬಂದಿದ್ದು, ಅವುಗಳಲ್ಲಿ ಎರಡನ್ನು ಮಾತ್ರ ಡಾ. ಆರ್. ಶೇಷಶಾಸ್ತ್ರಿಗಳು ತಮ್ಮ 'ಕರ್ನಾಟಕದ ವೀರಗಲ್ಲುಗಳು' ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ಅವುಗಳ ಜೊತೆಗೆ ಇಲ್ಲಿ ಕಂಡುಬಂದಿರುವ ಇನ್ನಿತರ ವೀರಗಲ್ಲುಗಳನ್ನು ಸಹ ಇಲ್ಲಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಮಾಡಿದ್ದೇನೆ.


೧. ಕೊತ್ವಾಲರ ಮನೆಯ ಹತ್ತಿರದ ವೀರಗಲ್ಲು: ವೀರನು ಕತ್ತಿಯನ್ನು ಹಿಡಿದು ತನ್ನ ಹೆಂಡತಿಯೊಂದಿಗೆ ನಿಂತಿದ್ದಾನೆ. ವೀರನ ಬಲ ಬದಿಯಲ್ಲಿ ವ್ಯಕ್ತಿಯೊಬ್ಬನು ಕೈಮುಗಿದು ನಿಂತಿದ್ದಾನೆ. ವೀರನ ಹೆಂಡತಿಯ ಎಡಗಡೆ ಎತ್ತರವಾದ ವೇದಿಕೆಯ ಮೇಲೆ ಸಣ್ಣ ಹುಡುಗ ನಿಂತಿದ್ದಾನೆ. ಇವನನ್ನು ವೀರನ ಹೆಂಡತಿ ತನ್ನ ಕೈಯಿಂದ ಹಿಡಿದಿದ್ದಾಳೆ. ಈ ರೀತಿಯ ಚಿತ್ರಣ ನಮ್ಮ ಗಮನಕ್ಕೆ ಕರ್ನಾಟಕದ ಬೇರಾವ ಭಾಗದಲ್ಲೂ ಕಂಡುಬಂದಿಲ್ಲ. ಈ ಬಾಲಕ ಯಾರು? ಎನ್ನುವುದರ ಕುರಿತು ಹಲವು ರೀತಿಯ ಪ್ರಶ್ನೆಗಳನ್ನೆತ್ತಿದ್ದಾರೆ. (ಪುಟ-೪೦೬).

ಇದೇ ವೀರಗಲ್ಲು ಕುರಿತಂತೆ ಮತ್ತೊಬ್ಬ ವಿದ್ವಾಂಸರಾದ ಆದೆಪ್ಪ ಪಾಸೋಡಿಯವರು ಇದನ್ನು ವಿವರಿಸುತ್ತಾ, "ಬಲಗೈಯಲ್ಲಿ ಖಡ್ಗವನ್ನು ಕೆಳಮುಖ ಮಾಡಿಟ್ಟು ನಿಂತ ವೀರ, ಅವನ ಎಡ ಪಕ್ಕದಲ್ಲಿರುವ ಪತ್ನಿ ಬಲಗೈ ಎತ್ತಿ ಹಿಡಿದಿರುತ್ತಾಳೆ. ಅವಳು ಎಡಗೈಯಲ್ಲಿ ಮಗುವಿನ ಕೈ ಹಿಡಿದು ನಿಂತಿರುವಳು. ವೀರನೊಂದಿಗೆ ಅವನ ಪತ್ನಿಯು ಸಹಗಮನ ಮಾಡಿರುವ ವಿಷಯ ಈ ಶಿಲ್ಪದಲ್ಲಿ ವ್ಯಕ್ತವಾಗಿದೆ. ವೀರ ಮತ್ತು ಅವನ ಪತ್ನಿ ಕಾಲ್ಕಡಗ, ತೋಳ್ಬಂದಿ, ಭುಜಕೀರ್ತಿ, ಕಂಠಹಾರ ಹಾಗೂ ವಿಶಿಷ್ಟ ಕೇಶಾಲಂಕಾರ ಹೊಂದಿದ್ದಾರೆ. ಪತಿಯ ಬಳಿ ಇರುವುದು ಮುಖ್ಯವೆಂದು ಭಾವಿಸಿದ್ದ ಪತ್ನಿ ಪತಿಯು ಮಡಿದ ತಕ್ಷಣ ಅಥವಾ ಅವನು ಮಡಿಯುವ ಸೂಚನೆ ಸಿಕ್ಕತಕ್ಷಣ ತಾವೂ ಸಾಯಲು ಸಿದ್ಧರಾಗುತ್ತಿದ್ದರು. ಆದರೆ ಇಲ್ಲಿ ಸಹಗಮನಕ್ಕೆ ಸಿದ್ಧಳಾದ ಪತ್ನಿ ತನ್ನ ಮಗುವನ್ನು ಕೈ ಹಿಡಿದು ಕರೆದುಕೊಂಡು ಹೋಗುತ್ತಿರುವುದು ಸೋಜಿಗ ಉಂಟುಮಾಡಿದೆ. ಮಗುವಿನ ಎಡಗೈಯಲ್ಲಿ ಕಮಂಡಲ ಇರುವುದು ಕಂಡುಬರುತ್ತದೆ. ತಲೆಯ ಮೇಲ್ಭಾಗದಲ್ಲಿರುವ ವಸ್ತು ಯಾವುದೆಂದು ತಿಳಿದುಬಂದಿಲ್ಲ. ಶಿಲ್ಪಿಯು ಬಿಳಿಬಣ್ಣದ ಗಟ್ಟಿಕಲ್ಲನ್ನು ಸಿದ್ಧಪಡಿಸಿಕೊಂಡು ಸುಂದರವಾಗಿ ಮತ್ತು ಸೂಕ್ಷ್ಮವಾಗಿ ಉಬ್ಬುಶಿಲ್ಪವನ್ನು ಕಂಡರಿಸಿರುವನು. ವೀರ-ಸತಿ ಸೊಂಟದ ಭಾಗದಿಂದ ಕೆಳಾರ್ಧದ ವಸ್ತ್ರ ಕಂಡರಣೆಯಲ್ಲಿ ಅಲಂಕಾರವಿದೆ. ಇದು ಹೊಯ್ಸಳರ ಕಾಲದ ನಂತರದ ಅವಧಿಯ ವೀರಗಲ್ಲು ಎಂದು ತಜ್ಞರಾದ ಆದೆಪ್ಪ ಪಾಸೋಡಿ ಅಭಿಪ್ರಾಯ ಪಟ್ಟಿದ್ದಾರೆ.

೨. ಗ್ರಾಮದ ಆಂಜನೇಯ ದೇವಾಲಯದ ಬಳಿಯ ವೀರಗಲ್ಲು: ಇದೊಂದು ಶಿಲಾಫಲಕವಾಗಿದ್ದು, ಇದರಲ್ಲಿ ಕುದುರೆಯೊಂದನ್ನು ಸೇವಕನೊಬ್ಬನು ಹಿಡಿದು ನಿಂತಿರುವಂತೆ ಶಿಲ್ಪದ ವಿವರಗಳನ್ನು ಈ ಶಿಲೆಯ ಮೇಲೆ ಜಿಡಿಸಲಾಗಿದೆ. (ಪು. ೩೧೮, ಆರ್. ಶೇಷಶಾಸ್ತ್ರಿ).

ಹೊಯ್ಸಳರ ಕಾಲದಲ್ಲಿ ಯುದ್ಧದಲ್ಲಿ ಕುದುರೆಗಳ ಬಳಕೆ ಇದ್ದಿತು. ವಿದೇಶಗಳಿಂದ ಆಮದು ಮಾಡಿಕೊಂಡ ಕುದುರೆಗಳಿಗೆ ಸ್ಥಳೀಯವಾಗಿ ತರಬೇತಿ ಕೊಡುತ್ತಿರುವಂತೆ ತೋರುತ್ತದೆ. ಎತ್ತರವಾದ ಕಟ್ಟೆಯ ಮೇಲೆ ನಿಂತ ತರಬೇತುದಾರ/ವೀರನು ತನ್ನ ಎಡಗೈಯನ್ನು ಮೇಲೆತ್ತಿ ಕುದುರೆಗೆ ಕಾಲು ಎತ್ತಿ ಕಟ್ಟೆ ಮೇಲಿಡಲು ಸೂಚಿಸುತ್ತಿದ್ದಾನೆ. ವೀರನು ಬಲಗೈಯಲ್ಲಿ ಕುದುರೆ ಲಗಾಮು ಹಿಡಿದು, ಬಲಭುಜಕ್ಕ ಈಟಿಯನ್ನು ಇಟ್ಟುಕೊಂಡಿದ್ದಾನೆ. ಕುದುರೆ ಬೆನ್ನಿನ ಮೇಲೆ ಜೀನು, ಜೀನು ಅಲುಗಾಡದಂತೆ ಕುದುರೆ ಬಾಲದ ಕೆಳಗೆ ಪಟ್ಟಿ, ಬಾಯೊಳಗೆ ಕಬ್ಬಿಣದ ಕವಲುಗೋಲು, ಅಲಂಕರಣ ಸಾಮಗ್ರಿಗಳನ್ನೂ





ಶಿಲ್ಪಿಯ ಕುಸುರಿಗಾರಿಕೆಯ ನೈಪುಣ್ಯತೆಯನ್ನು ಸೂಚಿಸುತ್ತದೆ. ಇದು ಹೊಯ್ಸಳರ ಕಾಲದ್ದಾಗಿದೆ. (ಆದೆಪ್ಪ ಪಾಸೋಡಿ).

೩. ಸೀಕುಂಟೆ ಬಳಿಯ ವೀರಗಲ್ಲು: ಆಲೀಢ ಬಂಗಿಯಲ್ಲಿ ನಿಂತು ಬಲಗೈಯಲ್ಲಿ ಕಠಾರಿ, ಎತ್ತಿ ಹಿಡಿದಿರುವ ವೀರನು, ಕಾಲ್ಗಡಗ, ಕೈಕಡಗ ಕಂಠಿಹಾರಗಳನ್ನು ಧರಿಸಿದ್ದಾನೆ. ತಲೆಯ ಮೇಲೆ ದುಂಡಾದ ಮುಂಡಾಸು ಹಾಗೂ ಚಲ್ಲಣ (ಚಣ್ಣ–ಚಡ್ಡಿಗಳು) ಇರುವುದರಿಂದ ಇದು ೧೬–೧೭ನೇ ಶತಮಾನದ ವೀರಗಲ್ಲು ಎಂದು ತೋರುತ್ತದೆ.

೪. ಮಂಡಿಯವರ ತೋಟದಲ್ಲಿನ ವೀರಗಲ್ಲುಗಳು

೧. ಈ ವೀರಗಲ್ಲಿನಲ್ಲಿ ವೀರನೊಬ್ಬನನ್ನೆ ಕಂಡರಿಸಲಾಗಿದ್ದು, ವೀರನು ಆಲೀಢ ಭಂಗಿಯಲ್ಲಿ ನಿಂತು ಬಲಗೈಯಲ್ಲಿ ಕಠಾರಿಯನ್ನು ಎತ್ತಿ ಹಿಡಿದಿರುತ್ತಾನೆ. ಕೈಕಡಗ, ಕಂಠಹಾರ, ತಲೆಯ ಮೇಲೆ ದುಂಡಾದ ಪೇಟ (ಮುಂಡಾಸು) ಧರಿಸಿದ್ದಾನೆ. ಚಲ್ಲಣ(ಚಣ್ಣ–ಚಡ್ಡಿ)ದ ಮೇಲೆ ಶಿಲ್ಪಿಯು ಮೂಡಿಸಿರುವ ಗೆರೆಗಳನ್ನು ಗಮನಿಸಿದಾಗ, ಇದು ೧೬–೧೭ನೇ ಶತಮಾನದ ವೀರಗಲ್ಲು ಎಂದು ತೋರುತ್ತದೆ. ವೀರಗಲ್ಲುಗಳಲ್ಲಿ ಆರಂಭ ಕಾಲದಿಂದಲೂ ಗಮನಿಸಬಹುದಾದ ಸಂಪ್ರದಾಯದಂತೆ ಇಲ್ಲಿಯೂ ವೀರನು ವೀರಗಲ್ಲಿನ ಬಲಭಾಗದಿಂದ ಬಂದು ಹೋರಾಟಕ್ಕೆ ಅಣಿಯಾಗಿದ್ದಾನೆ.

೨. ವೀರನು ಕಾಲುಗಳನ್ನು ಅಗಲವಾಗಿಟ್ಟು, ತನ್ನೆರಡೂ ಕೈಗಳನ್ನು ಮೇಲೆ ಎತ್ತಿದ್ದಾನೆ. ಶಿಲ್ಪಿಯು ವೀರನ ಮುಖವನ್ನು ಸ್ವಲ್ಪ ಅಮಾನುಷವಾಗಿ ಚಿತ್ರಿಸಿರುವುದು ಕಂಡುಬರುತ್ತದೆ.

೩. ಕಾಲ್ಗಡಗ, ಕೈಕಡಗ, ಕಂಠಹಾರಗಳನ್ನು ಧರಿಸಿ, ಆಲೀಢ ಭಂಗಿಯಲ್ಲಿ ನಿಂತು ತನ್ನ ಬಲಗೈಯಿಂದ ಕಠಾರಿ ಎತ್ತಿ ಹಿಡಿದಿರುವ ವೀರನು ತಲೆಯ ಮೇಲೆ ದುಂಡನೆಯ ಪೇಟ ಧರಿಸಿದ್ದಾನೆ. ಒಂದನೇ ವೀರಗಲ್ಲಿನಲ್ಲಿ ತೋರಿಸಿರುವಂತೆ, ಶಿಲ್ಪಿಯು ಇಲ್ಲಿಯೂ ವೀರನ ಚಲ್ಲಣಕ್ಕೆ ಉದ್ದುದ್ದ–ಅಡ್ಡಡ್ಡ ಗೆರೆಗಳನ್ನು ಮೂಡಿಸಿದ್ದಾನೆ. ಇಡೀ ವೀರಗಲ್ಲಿನ ತುಂಬಾ ಒಬ್ಬನೇ ವೀರನನ್ನು ಕಂಡರಿಸಿರುವುದರಿಂದ ತುಂಬಾ ಪ್ರಾಚೀನ ಕಾಲದ ವೀರಗಲ್ಲುಗಳಾಗಿರಬಹುದೆಂಬ ಭಾವನೆ ಮೂಡುತ್ತಾದರೂ, ಮುಂಡಾಸು, ಚಲ್ಲಣಗಳ ತೊಡುಗೆ, ೧೬–೧೭ನೆಯ ಶತಮಾನದಿಂದೀಚೆಗೆ ಮೂಡಿಬಂದಿರುವುದನ್ನು ಗಮನಿಸಬೇಕಾಗುತ್ತದೆ.

೪. ಎದುರು ಮುಖಮಾಡಿ ನಿಂತ ವೀರನು ತನ್ನ ಎಡಗೈಯನ್ನು ಕೆಳಗೆ ಇಳಿಬಿಟ್ಟು, ಬಲಗೈಯಲ್ಲಿ ಕಠಾರಿ ಹಿಡಿದು ಮೇಲೆ ಎತ್ತಿದ್ದಾನೆ. ಸೊಂಟ ಪಟ್ಟಿ, ಚಿತ್ತಾರದಿಂದ ಕೂಡಿದ ಚಲ್ಲಣ, ಕೈಕಡಗ, ಕಂಠಹಾರ, ತಲೆಯ ಮೇಲೆ ಚಿಕ್ಕದಾದ ಪೇಟ ಧರಿಸಿರುವುದು ಕಂಡುಬರುತ್ತದೆ. ಈ ಮೂರು ವೀರಗಲ್ಲುಗಳು (೧, ೩, ಮತ್ತು ೪) ಹೆಚ್ಚು ಕಡಿಮೆ ಒಂದೇ ತೆರನಾಗಿದ್ದು ವೀರರು ಬಹುಶಃ ರಾಜನ ಸೇವೆಯಲ್ಲಿರುವ ಭಟರಾಗಿರಬೇಕು.

ದುಗ್ಗೆಮ್ಮನ ಗುಡಿ: ಗ್ರಾಮದ ಕೆರೆಯ ಏರಿಯ ಮಧ್ಯಭಾಗದಲ್ಲಿ ದುಗ್ಗೆಮ್ಮನ ಗುಡಿ ಇದೆ. ಅತ್ಯಂತ ಚಿಕ್ಕ ಗುಡಿ. ಇಟ್ಟಿಗೆ ಮತ್ತು ಗಾರೆ ಬಳಸಿ ಕಟ್ಟಲಾಗಿದೆ. ಸುಮಾರು ಐದು ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಗ್ರಾಮದೇವತೆ ದುಗ್ಗೆಮ್ಮ ಕೋಣದ ತಲೆಯ ಮೇಲೆ ನಿಂತಿರುವ ಸುಂದರ ಶಿಲ್ಪ ಇದೆ.

ಉಪಸಂಹಾರ

ಪ್ರಸ್ತುತ ಗ್ರಾಮ ಅಧ್ಯಯನದ ಪರಿಶೀಲನೆಯಲ್ಲಿ ಹದಿನಾಲ್ಕನೇ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗಿನ ಹಲವು ಚಾರಿತ್ರಿಕ ಕುರುಹುಗಳು (ಶಾಸನ ಮತ್ತು ವೀರಗಲ್ಲುಗಳು) ಕಂಡುಬಂದಿವೆ. ಇಲ್ಲಿ ಕಂಡುಬಂದಂತಹ ಎಲ್ಲಾ ಶಾಸನಗಳು ಸಹ ಅಪ್ರಕಟಿತ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಂತಹ ನಾಲ್ಕೂ ಶಾಸನಗಳು ರಾಜ್ಯದ ಶಾಸನ ಸಂಪತ್ತಿಗೆ ಹೊಸ ಸೇರ್ಪಡೆ. ವೀರಗಲ್ಲುಗಳಲ್ಲಿ ಕೇವಲ ಎರಡು ಮಾತ್ರ ಅಧ್ಯಯನಕ್ಕೆ ಒಳಪಟ್ಟಿದ್ದು, ಉಳಿದ ಆರು ವೀರಗಲ್ಲುಗಳು ಹೊಸ ಶೋಧ. ಇಲ್ಲಿನ ಒಂದು ಶಾಸನ ಮಾತ್ರ ಹದಿನಾಲ್ಕನೇ ಶತಮಾನದ್ದಾಗಿದ್ದು, ಮತ್ತೊಂದು ಹದಿನೈದನೆಯ ಶತಮಾನದ್ದಾಗಿದೆ. ಈ ವೀರಗಲ್ಲುಗಳ ಕಾಲಘಟ್ಟ ಸರಿ ಸುಮಾರು ಒಂದೇ ಆಗಿರುವಂತೆ ತೋರುತ್ತದೆ. ತಳಗವಾರ ಗ್ರಾಮವು ಕೈವಾರ ನಾಡಿನ ಅಂತರ್ಗತ ಭಾಗವೇ ಆಗಿದ್ದು, ನಾಡಾಳ್ವಿಕೆಯ ಘಟಕವಾಗಿರಬಹುದು. ಹದಿನಾಲ್ಕನೇ ಶತಮಾನದಿಂದಲೇ ಶಾಸನೋಕ್ತ ಚಹರೆಗಳೊಂದಿಗೆ ಚಾರಿತ್ರಿಕ ಸುಳಿವುಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಳ್ಳುತ್ತಲೇ ದಾನ, ದತ್ತಿ ಹಾಗೂ ಶೌರ್ಯಸಾಹಸಗಳ ನೆಲೆಯಾಗಿ ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ವೀರಗಲ್ಲುಗಳಲ್ಲಿ ಕಂಡುಬಂದಂತಹ ಶೌರ್ಯಸಾಹಸದ ಬಲಿದಾನಗಳು ಈ ಭಾಗದ ಸೈನಿಕ ವೀರ ಪರಂಪರೆಯ ದ್ಯೋತಕವಾಗಿವೆ.

---

* ನನ್ನೊಂದಿಗೆ ಕ್ಷೇತ್ರಕಾರ್ಯ ಕೈಗೊಂಡು ಶಾಸನಗಳನ್ನು ಅಧ್ಯಯನ ಮಾಡಿ, ಅವುಗಳನ್ನು ಅರ್ಥೈಸಲು ಸಹಕಾರ ನೀಡಿ, ಮಾರ್ಗದರ್ಶನ ಮಾಡಿದ ಕೆ.ಆರ್. ನರಸಿಂಹನ್, ಧನಪಾಲ್ ಮತ್ತು ಪಿ.ವಿ. ಕೃಷ್ಣಮೂರ್ತಿ ಅವರಿಗೆ ಹಾಗೂ ವೀರಗಲ್ಲುಗಳ ಅಧ್ಯಯನಕ್ಕಾಗಿ ನನ್ನೊಂದಿಗೆ ಕ್ಷೇತ್ರಕಾರ್ಯ ನಡೆಸಿ ಅವುಗಳನ್ನು ಅರ್ಥೈಸಲು ಸಹಕಾರ ನೀಡಿದ ಆದೆಪ್ಪ ಪಾಸೋಡಿ ಅವರಿಗೆ ಕೃತಜ್ಞತೆಗಳು.

ಆಕರಗ್ರಂಥಗಳು

೧. ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೦, ಕೋಲಾರ ಜಿಲ್ಲೆ.

೨. ಶೇಷಶಾಸ್ತ್ರಿ ಆರ್., ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೩೧೮.

೩. ಚಿದಾನಂದಮೂರ್ತಿ ಎಂ., 'ಊರಿನ ಹೆಸರುಗಳು', ಸಾಧನೆ–೧, ಮಂಥನದಲ್ಲಿ.

೪. ಗೋಪಾಲಕೃಷ್ಣ ವಿ., ೧೯೧೯, ಕೋಲಾರ ಜಿಲ್ಲೆಯ ಸ್ಥಳನಾಮಗಳು: ಸಮಾಜೋ ಭಾಷಿಕ ಅಧ್ಯಯನ (ಪುಟ–೨೩೦).

೫. ಕೃಷ್ಣಮೂರ್ತಿ ಪಿ.ವಿ., ೨೦೧೧, 'ಕೈವಾರ ನಾಡು: ಶಾಸನಗಳು ಹಿನ್ನೆಲೆಯಲ್ಲಿ ಒಂದು ಅಧ್ಯಯನ', ಶಾಸನ ಮಂಥನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಪು. ೧೧೭.

೬. ಕೃಷ್ಣಮೂರ್ತಿ ಪಿ.ವಿ., ೨೦೧೧, 'ಪುರಾಣ ಪ್ರಸಿದ್ಧವಾದ ಏಕಚಕ್ರ ಪುರವಾದ ಕೈವಾರ ಕ್ಷೇತ್ರದ ಶಾಸನಗಳು–ಒಂದು ಅಧ್ಯಯನ', ಶಾಸನಮಂಥನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ಪು. ೧೩೧.

◆◆

೬೫

ನಾಗೇಂದ್ರ

ಕೋಲಾರ ಜಿಲ್ಲೆಯನ್ನಾಳಿದ ಶಿವಾಜಿಯ ಸೊಸೆ ಜಯತಾಬಾಯಿ

ಕರ್ನಾಟಕದ ಕೆಲವು ಭಾಗಗಳನ್ನು ಮರಾಠರು ಆಳ್ವಿಕೆ ನಡೆಸಿರುವುದು ಎಲ್ಲರಿಗೂ ತಿಳಿದ ವಿಚಾರವೇ. ಆದರೆ ಇವರ ಆಡಳಿತಗಾರರ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ಭಾಗಗಳನ್ನಾಳಿದ ಶಿವಾಜಿಯ ಸೊಸೆ ಜೈತಾಬಾಯಿ ಆಡಳಿತದ ಬಗ್ಗೆ ತಿಳಿಯುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಶಿವಾಜಿಯ ತಂದೆ ಷಹಾಜಿಯು ಬಿಜಾಪುರದ ಸುಲ್ತಾನರಿಂದ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳನ್ನು ಕ್ರಿ.ಶ. ೧೬೪೪ರಲ್ಲಿ ಜಹಾಗೀರಾಗಿ ಪಡೆಯುತ್ತಾನೆ. ನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಅಂದರೆ ಕ್ರಿ.ಶ. ೧೬೪೮ರ ಶಿವಾಜಿಯು ದಂಗೆ ಎದ್ದಾಗ ಷಹಾಜಿಯನ್ನು ಬಂಧಿಸಿ ಬಿಜಾಪುರಕ್ಕೆ ಒಯ್ಯುತ್ತಾರೆ. ಈ ವೇಳೆಯಲ್ಲಿ ಈ ಭೂಭಾಗದ ಉಸ್ತುವಾರಿಯನ್ನು ಷಹಾಜಿಯ ಹಿರಿಯ ಮಗನಾದ ಸಂಭಾಜಿಗೆ ಕೊಡಲಾಗಿರುತ್ತದೆ. ಈತನು ಕ್ರಿ.ಶ. ೧೬೫೩ರಲ್ಲಿ ಕನಕಗಿರಿಯ ಯುದ್ಧದಲ್ಲಿ ಮರಣ ಹೊಂದುತ್ತಾನೆ. ನಂತರದ ಬೆಳವಣಿಗೆಯಲ್ಲಿ ಷಹಾಜಿಗೆ ಬಿಜಾಪುರದ ಸುಲ್ತಾನನು ಕೋಲಾರವನ್ನು ವಾಪಸ್ಸು ನೀಡುತ್ತಾರೆ. ಕ್ರಿ.ಶ. ೧೬೬೪ರಲ್ಲಿ ಷಹಾಜಿಯು ಸಹ ಮರಣವನ್ನು ಹೊಂದುತ್ತಾನೆ.

ಕೋಲಾರ ಜಿಲ್ಲೆಯಲ್ಲಿ ಮರಾಠರ ಇತಿಹಾಸಕ್ಕೆ ಸಂಬಂಧಿಸಿದಂತೆ ಹೊಸಬೆಳಕನ್ನು ಚೆಲ್ಲುವ ಶಾಸನಗಳನ್ನು ಕಾಣಬಹುದಾಗಿದೆ. ಷಹಾಜಿಯ ಮರಣಾಂತರ ಶಿವಾಜಿಯ ಮಗನಾದ ಸಂಭಾಜಿಯು ಈ ಭೂಭಾಗವನ್ನು ಆಳ್ವಿಕೆ ನಡೆಸಿದ್ದರ ಬಗ್ಗೆ ಕ್ರಿ.ಶ. ೧೬೬೩ರ ಹೋಳೂರಿನ ಶಾಸನವು[1] ಸ್ಪಷ್ಟಪಡಿಸುತ್ತದೆ. ಹಿಂದೆ ಕಟ್ಟಿಸಿದ ಕೆರೆಯನ್ನು ಸಂಭಾಜಿಯು ದುರಸ್ಥಿ ಮಾಡಿಸಿ ಹಲವು ಖಂಡುಗ ಗದ್ದೆಯನ್ನು ಆಲಂಬಗಿರಿಯ ತಿಪ್ಪಾಶೆಟ್ಟಿ ಮತ್ತು ವಾರಣಾಶಿಯ ಚೆನ್ನಗೌಡರಿಗೆ ನೀಡಿದ ದಾನದ ಬಗ್ಗೆ ತಿಳಿಸುತ್ತದೆ. ಶಾಸನದಲ್ಲಿ ಉಲ್ಲೇಖಿಸಲಾಗಿರುವ ವಾರಣಾಸಿ ಸ್ಥಳವು ಇಂದಿನ ಶ್ರೀನಿವಾಸಪುರ ತಾಲೂಕಿನ ವಾನರಾಶಿ ಎಂಬುದಾಗಿ ಗುರುತಿಸಬಹುದಾಗಿದೆ. ಕಾರಣಾಂತರಗಳಿಂದ ಶಿವಾಜಿಯ ಮಗನಾದ ಸಂಭಾಜಿಯು ಮರಣ ಹೊಂದಿದಾಗ ಈ ಪ್ರದೇಶದ ಆಡಳಿತವನ್ನು ಶಿವಾಜಿಯ ಸೊಸೆಯಾದ ಜಯತಾಬಾಯಿಯು ಆಳ್ವಿಕೆ ನಡೆಸಿದ ಬಗ್ಗೆ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಬೆಳಕನ್ನು ಚೆಲ್ಲುತ್ತವೆ.

ಕೋಲಾರ ಜಿಲ್ಲೆ ಹುತ್ತೂರು ಗ್ರಾಮದಲ್ಲಿನ ಶಾಸನದಲ್ಲಿ[2] ಭೊಸಲೇ ವಂಶದವನಾದ ಶಿವಾಜಿಯ ಮಗನಾದ ಸಂಭಾಜಿ ರಾಜನ ಹೆಂಡತಿಯಾದ ಜಯಿತಾಬಾಯಿಯು

ಬೈಚಗುಪ್ಪೆ
ತಾವರೆಕೆರೆ ಅಂಚೆ
ಮಾಗಡಿ ಮುಖ್ಯರಸ್ತೆ
ಬೆಂಗಳೂರು–೫೬೨೧೩೦
ಮೊ: ೯೭೪೧೨ ೩೮೨೫೨

ಕಾಶ್ಯಪಗೋತ್ರದ 'ಕಪಥಳಿ' ಗೋವಿಂದಪಂತನ ವಿರೂಪಾಕ್ಷ ಶಂಕರನ ಮಗನಾದ ಭಾವುಜಿ ಪಂತನಿಗೆ ಕೊಟ್ಟಿರುವ ಭೂದಾನದ ಧರ್ಮಶಾಸನವಾಗಿದೆ. ಕೋಲಾರ ಚಾವಡಿಗೆ ಸಲ್ಲುವ ಕೋಲಾರ ಸೀಮೆಯ ಉತ್ತೂರ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ದಾನವನ್ನು ನೀಡಿದ ಬಗ್ಗೆ ಶಾಸನವು ದಾಖಲಿಸುತ್ತದೆ. ಶಾಸನದ ಕಾಲವು ಶಕ ೧೫೮೮ ವಿಶ್ವಾವಸು ಸಂವತ್ಸರ ಅಂದರೆ ಕ್ರಿ.ಶ. ೧೬೬೬ರ ಕಾಲಘಟ್ಟದ್ದಾಗಿದೆ.

ಅದೇ ಕೋಲಾರ ತಾಲೂಕಿನ ಅಣ್ಣೇನಹಳ್ಳಿ ಗ್ರಾಮದ ಶಾಸನದಲ್ಲಿ[೩] ಜಯಿತಾಬಾಯಿಯ ಆಜ್ಞೆಯ ಮೇರೆಗೆ ಸುಗಟೂರ ಹೋಬಳಿಯ ರಕ್ಷಣಾಧಿಕಾರಿಯಾದ(ಹವಾಲುದಾರ) ಶ್ರೀವಿಠಲಪಂಡಿತ ಮತ್ತು ಅಗ್ರಹಾರದ ಜನಗಳು ಆಂಣೇನಳ್ಳಿಯ ಶಂಕರನಿಗೆ ನೆತ್ತರಕೊಡುಗೆಯಾಗಿ ನೀಡಿದ ಹೊಲದ ದಾನದ ವಿಚಾರವನ್ನು ತಿಳಿಸುತ್ತದೆ. ಶಾಸನದಲ್ಲಿ ಸಾಧಾರಣ ಸಂವತ್ಸರ ಚಯಿತ್ರ ಶು ೧೦ ಎಂದು ಮಾತ್ರ ನಮೂದಾಗಿದೆ. ಸಂವತ್ಸರದ ಆಧಾರದ ಮೇಲೆ ಶಾಸನದ ಕಾಲವು ಕ್ರಿ.ಶ. ೧೬೭೦ರ ಕಾಲಘಟ್ಟಕ್ಕೆ ಸೇರಿದ ಶಾಸನವೆಂದು ಗುರುತಿಸಬಹುದು.

ಕೋಲಾರ ಜಿಲ್ಲೆಯ ನೆರನಹಳ್ಳಿ ಶಾಸನದಲ್ಲಿ[೪] ಕ್ರಿ.ಶ. ೧೬೭೩ರಲ್ಲಿ ರಾಜಶ್ರೀ ಜಯಿತಾಬಾಯಿ ಅಮ್ಮನವರು ಕೈಲಾಸವಾಸಿಯಾದರು ಎಂಬುದಾಗಿ ಸ್ಪಷ್ಟವಾಗಿ ತಿಳಿಸುತ್ತದೆ.

೧. ಸ್ವಸ್ತಿಶ್ರೀವಿಜಯಾಬ್ದಶಾಲಿವಾಹನ

೨. ಶಕವರುಷಂಗಳು ೧೫..ನೆಯ ಶ್ರೀಮುಖಸಂವತ್ಸರದ

೩. ..ಮಹೋದಯ ಪುಣ್ಯಕಾಲದಲು ಶ್ರೀ

೪. ಮತು ರಾಜಶ್ರೀ ಜಯಿತಾಬಾಯಂಮನವರು ಕೈಲಾ

೫. ಸವಾಸಿ...

ಶಾಸನವು ಬಹುತೇಕ ತ್ರುಟಿತವಾಗಿರುವುದರಿಂದಾಗಿ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.

ಹೀಗೆ ಗಮನಿಸಿದಾಗ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದ ಜಯಿತಾಬಾಯಿ ತನಗೆ ತಿಳಿಯದ ಭಾಷೆಯ ದೂರದ ಪ್ರದೇಶಕ್ಕೆ ಬಂದು ಆಳ್ವಿಕೆಯನ್ನು ನಡೆಸಿರುವುದು ವಿಶೇಷವಾದ ಸಂಗತಿ. ಈ ದಿಸೆಯಲ್ಲಿ ಜಯತಾಬಾಯಿಯ ಬಗೆಗಿನ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ.

ಅಡಿಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೦, ಕೋಲಾರ, ಹೋಳೂರು, ಶಾ.ಸಂ. ೨೧೯.

೨. ಅದೇ., ಹುತ್ತೂರು, ಶಾ.ಸಂ. ೨೨೭.

೩. ಅದೇ., ಅಣ್ಣೇನಹಳ್ಳಿ, ಶಾ.ಸಂ. ೨೨೪.

೪. ಅದೇ., ನೆರನಹಳ್ಳಿ, ಶಾ.ಸಂ. ೨೫೪.

೬೬

ಯೋಗೇಶ್ವರಿ ಎಂ.

ದೋರಸಮುದ್ರ – ಹಳೇಬೀಡು ಕೆಲವು ಹೊಸ ವಿಚಾರಗಳು

ಭಾರತದ ಹಳೇಬೀಡು ಸುಮಾರು ಒಂಬೈನೂರು ವರ್ಷಗಳ ಹಿಂದೆ ದೋರಸಮುದ್ರ ಎಂಬ ಹೆಸರಿನೊಂದಿಗೆ ಸುಮಾರು ೨೭೦ ವರ್ಷಗಳ ಕಾಲ ಹೊಯ್ಸಳರ ರಾಜಧಾನಿಯಾಗಿ ಕಾರ್ಯನಿರ್ವಹಿಸಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವನ್ನು ಗಳಿಸಿಕೊಂಡಿದೆ. ಹಳೇಬೀಡು ಹೊಯ್ಸಳರ ರಾಜಧಾನಿಯಾಗಿದ್ದುದರಿಂದ ಹಳೇಬೀಡಿನಲ್ಲಿ ದೊರೆತಿರುವ ಶಾಸನಗಳು ಹೊಯ್ಸಳರ ಸಮಗ್ರ ಚರಿತ್ರೆಯನ್ನೇ ತನ್ನೊಡಲಿನಲ್ಲಿ ಸುಪ್ತವಾಗಿಸಿಕೊಂಡಿವೆ. ದೋರಸಮುದ್ರ, ಹಳೇಬೀಡು ಹಾಗೂ ಹೊಯ್ಸಳರ ಚರಿತ್ರೆಯನ್ನು ಕುರಿತು ಕೆಲವು ಭಿನ್ನಾಭಿಪ್ರಾಯಗಳು ಮತ್ತು ಗೊಂದಲಗಳಿವೆ. ಮುಖ್ಯವಾಗಿ ದೋರಸಮುದ್ರ ಹಾಗೂ ಹಳೇಬೀಡು ಸ್ಥಳನಾಮಗಳನ್ನು ಕುರಿತು, ದೋರಸಮುದ್ರ ಕೆರೆಯನ್ನು ನಿರ್ಮಿಸಿದ ದೊರೆ ಯಾರು? ಹಾಗೂ ಹೊಯ್ಸಳರ ಮೊದಲ ರಾಜಧಾನಿ ಯಾವುದು? ಈ ಅಂಶಗಳನ್ನು ಕುರಿತು ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಬೆಳಕು ಚೆಲ್ಲಲಾಗಿದೆ.

ಭಾರತದ ಚರಿತ್ರೆಯಲ್ಲಿ ರಾಜಮನೆತನಗಳನ್ನು ಸಾಮಾನ್ಯವಾಗಿ ಅವುಗಳ ರಾಜಧಾನಿಯೊಂದಿಗೆ ಸೇರಿಸಿ ಹೆಸರಿಸಲಾಗುತ್ತದೆ. ಕನೂಜ್‌ನ ವರ್ಧನರು, ಬಂಗಾಳದ ಪಾಲರು ಹೀಗೆ. ಕರ್ನಾಟಕವನ್ನು ಆಳಿದ ರಾಜಮನೆತನಗಳನ್ನು ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು ಎಂದು ಉಲ್ಲೇಖಿಸಲಾಗುತ್ತದೆ. ಇದೇ ರೀತಿ 'ದೋರಸಮುದ್ರದ ಹೊಯ್ಸಳ'ರೆಂದೇ ಪ್ರಸಿದ್ಧಿಯಿದೆ. 'ರಾಜಧಾನಿಯನ್ನು ನೆಲೆವೀಡೆಂದು, ಅಧಿಷ್ಠಾನವೆಂದು ಕರೆಯಲಾಗಿದೆ. ರಾಜಧಾನಿಯಲ್ಲದೆ ಬೇರೊಂದು ಕಡೆ ರಾಜನು ಬೀಡನ್ನು ಬಿಟ್ಟಿದ್ದರೆ ಅದನ್ನು 'ವಿಜಯಸ್ಕಂಧಾವಾರ' ಎಂದು ಕರೆಯುತ್ತಿದ್ದರು'[೧] ಎಂದು ಎಂ. ಚಿದಾನಂದಮೂರ್ತಿ ಅವರು ಹೇಳಿದ್ದಾರೆ.

ಪ್ರಾಚೀನ ಮಾತ್ರವಲ್ಲದೇ ಆಧುನಿಕ ರಾಜ್ಯಗಳು ಸಹ ವ್ಯವಸ್ಥಿತ ಆಡಳಿತವನ್ನು ನೀಡಲು, ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡಲು ಒಂದು ಕೇಂದ್ರ ಸ್ಥಳವನ್ನು ಹೊಂದಿ ಅಲ್ಲಿಂದಲೇ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸುತ್ತವೆ. ಈ ಕೇಂದ್ರ ಸ್ಥಳವೇ ರಾಜಧಾನಿ. ಪ್ರಾಚೀನ ರಾಜಮನೆತನಗಳು ರಾಜಧಾನಿಗೆ ಹೆಚ್ಚಿನ ಗಮನವನ್ನು ನೀಡುತ್ತಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಎಲ್ಲಾ ರಾಜಮನೆತನಗಳು ಒಂದಕ್ಕಿಂತ ಹೆಚ್ಚು ರಾಜಧಾನಿಗಳನ್ನು, ಉಪರಾಜಧಾನಿಗಳನ್ನು,

ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–೫೭೦೦೦೬
ಮೊ: ೯೬೩೨೩ ೪೨೧೩೬

ತಾತ್ಕಾಲಿಕ ರಾಜಧಾನಿಗಳನ್ನು ಮಾಡಿಕೊಂಡು ಆಳ್ವಿಕೆ ನಡೆಸಿವೆ. ಹೊಯ್ಸಳ ಅರಸರು ರಾಜಧಾನಿ ಪ್ರದೇಶವನ್ನು ಸುಸಜ್ಜಿತವಾಗಿ ನಿರ್ಮಿಸಿ, ಸಕಲ ರೀತಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರು.

ಹೊಯ್ಸಳರ ರಾಜಧಾನಿಯನ್ನು ಇಂದಿನ ಚಿಕ್ಕಮಗಳೂರು ಜಿಲ್ಲೆಯ ಅಂಗಡಿ (ಸೊಸೆವೂರು ಅಥವಾ ಶಶಕಪುರ) ಮೊದಲ ರಾಜಧಾನಿಯಾಗಿದ್ದು ನಂತರ ಬೇಲೂರಿಗೆ ವರ್ಗಾಯಿಸಿ ಅಲ್ಲಿಂದ ದೋರಸಮುದ್ರಕ್ಕೆ ವರ್ಗಾಯಿಸಿದರೆಂದು ಚರಿತ್ರೆಯಲ್ಲಿ ದಾಖಲಾಗಿದೆ. ಬಹುತೇಕ ವಿದ್ವಾಂಸರು ಇದನ್ನು ಒಪ್ಪಿದ್ದಾರೆ. "ವಿನಯಾದಿತ್ಯನ ಕಾಲದಲ್ಲಿ ಸೊಸೆವೂರಿನಿಂದ ಅವರ ರಾಜಕೀಯ ಕಾರ್ಯಕ್ಷೇತ್ರವು ಬೇಲೂರಿಗೆ ವರ್ಗವಾಯಿತು. 'ವೇಲಾಪುರಿ'ಯನ್ನು (ಬೇಲೂರು) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಸಾಮ್ರಾಜ್ಯವನ್ನು ಬಲಪಡಿಸಿಕೊಂಡರು. ಅನಂತರದಲ್ಲಿ ದೋರಸಮುದ್ರಕ್ಕೆ ಸ್ಥಳಾಂತರವಾಯಿತು" ಎಂದು ವಿಲಿಯಂ ಕೊಯ್ಲೊ ಅವರು ಅಭಿಪ್ರಾಯಪಟ್ಟಿದ್ದಾರೆ.[೨] ಎರೆಯಂಗನ ಕಾಲದಲ್ಲಿ ರಾಜಧಾನಿ ಸೊಸೆವೂರಿನಿಂದ ಬೇಲೂರಿಗೆ ವರ್ಗವಾಯಿತೆಂದು ಸೂರ್ಯನಾಥ ಕಾಮತ್‌ರವರು ಹೇಳಿದ್ದಾರೆ.[೩]

ಆದರೆ ವಿನಯಾದಿತ್ಯನು ಸೊಸೆವೂರಿನಿಂದ ರಾಜಧಾನಿಯನ್ನು ನೇರವಾಗಿ ದೋರಸಮುದ್ರಕ್ಕೆ ವರ್ಗಾವಣೆ ಮಾಡಿದನೆಂದು, ಅಲ್ಲದೆ, ದೋರಸಮುದ್ರವೇ ಕೇಂದ್ರ ರಾಜಧಾನಿಯಾಗಿದ್ದು ಬೇಲೂರಿಗಿಂತಲೂ ಹಳೆಯ ರಾಜಧಾನಿ ಎಂದು ಶಾಸನಗಳು ಹಾಗೂ ಪುರಾತತ್ವ ಆಧಾರಗಳಿಂದ ಸ್ಪಷ್ಟಪಡಿಸಬಹುದು. ಹಾಗಾಗಿ ಸೊಸೆಯೂರಿನಲ್ಲಿದ್ದ ಹೊಯ್ಸಳರು ಚಾಲುಕ್ಯರ ಸಾಮಂತರಾಗಿ ರಾಜ್ಯ ವಿಸ್ತರಿಸುತ್ತಾ ಬಯಲು ಸೀಮೆಯೆಡೆಗೆ ನೆಲೆಯನ್ನು ವಿಸ್ತರಿಸಲು ಹವಣಿಸಿದಾಗ ವಿನಯಾದಿತ್ಯನನ್ನು ದೋರಸಮುದ್ರ ಆಕರ್ಷಿಸಿತು.

ಹೊಯ್ಸಳ ವಿನಯಾದಿತ್ಯನ ರಾಜಧಾನಿ ಸೊಸೆವೂರೆಂದು ನಾಗಮಂಗಲದ ಅಳಿಸಂದ್ರ ಶಾಸನದಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ "ವಿನಯಾದಿತ್ಯ ಹಾಗೂ ಕೆಳೆಯಬ್ಬರಸಿಯರು ಸುಖಸಂಕಥಾವಿನೋದದಿಂ ಸೊಸೆವೂರ ನೆಲೆವೀಡಿನೊಳು ರಾಜ್ಯಂಗೆಯುತ್ತಮಿರ್ದು"[೪] ಎಂದು ಉಲ್ಲೇಖಿಸಲಾಗಿದೆ. ಈ ಶಾಸನವನ್ನು ಆಧರಿಸಿ ಸೀತಾರಾಮ ಜಾಗೀರದಾರರು 'ಹೊಯ್ಸಳರ ರಾಜಧಾನಿಗಳು' ಎಂಬ ಲೇಖನದಲ್ಲಿ "ಸೊಸೆವೂರಿನಿಂದ ರಾಜಧಾನಿಯು ಒಂದನೇ ಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಬೇಲೂರಿಗೆ ಸ್ಥಳಾಂತರಗೊಳ್ಳುತ್ತದೆ" ಎಂದಿದ್ದಾರೆ. ಆದರೆ ಈ ಶಾಸನವು ಕ್ರಿ.ಶ.ಸು. ೧೧೮೩ರಲ್ಲಿ ಬರೆಯಲ್ಪಟ್ಟಿದೆ.

ಆದ್ದರಿಂದ ಅಂಗಡಿಯ ಕ್ರಿ.ಶ. ೧೦೫೪ರ ಶಾಸನದಲ್ಲಿ ಸೊಸೆವೂರಿನ ಪ್ರಾಚೀನ ಶಾಸನೋಕ್ತ ದಾಖಲೆಯನ್ನು ಕಾಣಬಹುದು. ಈ ಶಾಸನದಲ್ಲಿ ಶಕವರ್ಷ ೯೭೪ನೆಯ ಜಯಸಂವತ್ಸರ, ಚೈತ್ರಮಾಸ, ಶುದ್ಧ ದಶಮಿ ಪುಶ್ಯ ನಕ್ಷತ್ರದಂದು "ವಿನಯಾದಿತ್ಯ ಪೊಯ್ಸಳನ ರಾಜ್ಯಂ ಪ್ರವರ್ತ್ತಿಸೆ" ಎಂಬ ಉಲ್ಲೇಖವಿದೆ. ಆದ್ದರಿಂದ ಕ್ರಿ.ಶ. ೧೦೫೪ರಲ್ಲಿ ವಿನಯಾದಿತ್ಯ ಅಂಗಡಿಯಲ್ಲಿಯೇ ಇದ್ದು ರಾಜ್ಯವನ್ನು ಪಾಲಿಸುತಿದ್ದನೆಂದು ತಿಳಿಯುತ್ತದೆ.[೫] ಈ ಶಾಸನವು ವಿನಯಾದಿತ್ಯನು ಸೊಸೆವೂರಿನಲ್ಲಿದ್ದನೆಂದು ತಿಳಿಸುವ ಪ್ರಥಮ ದಾಖಲೆಯಾಗಿದೆ. ಹಳೇಬೀಡಿನ ಕ್ರಿ.ಶ. ೧೦೬೭ರ ಶಾಸನದಲ್ಲಿ "ಅನುಪನೆನಿಸಿದ ನೃಪಕಾಮನಾಮವೊಯ್ಸಳನಂದನಂ ಜಗದಧಿಕಂ ವಿನಯಾದಿತ್ಯಂ ವೊಯ್ಸಳನೆನಿಸಿ ಚಿರಂ ಗಂಗವಾಡಿಯಂ ಪಾಳಿಸುತಂ" ಎಂಬುದಾಗಿ ನೃಪಾಕಾಮನ ಮಗ ವಿನಯಾದಿತ್ಯನು ದೋರಸಮುದ್ರದಿಂದ ಸುಖಸಂಕಥಾ ವಿನೋದದಿಂದ ರಾಜ್ಯವಾಳುತ್ತಿದ್ದನೆಂದು ದಾಖಲಿಸಲಾಗಿದೆ.[೬] ಅಲ್ಲದೇ ಶಾಸನದಲ್ಲಿ "ನೃಪಕಾಮ ನಾಮ ವೊಯ್ಸಳನ ನನ್ದನ ವಿನಯಾದಿತ್ಯ"ನೆಂಬ ಉಲ್ಲೇಖವಿದೆ.[೭] ಇದು ದೋರಸಮುದ್ರ ನೆಲೆಬೀಡಿನಿಂದ ವಿನಯಾದಿತ್ಯ ಆಳುತ್ತಿದ್ದನೆಂದು ಹೇಳುವ ಪ್ರಾಚೀನ ದಾಖಲೆಯಾಗಿದೆ.

ಆದರೆ ಬೇಲೂರು ಹೊಯ್ಸಳರ ನೆಲೆವೀಡು ಎಂಬ ಪ್ರಾಚೀನ ಉಲ್ಲೇಖ ಕಡೂರಿನ ಕೇದಿಗಿಗೆರೆಯ ಕ್ರಿ.ಶ. ೧೦೯೫ರ ಶಾಸನದಲ್ಲಿ ಬರುತ್ತದೆ. ಮಹಾಮಂಡಲೇಶ್ವರ ತ್ರಿಭುವನಮಲ್ಲ ಹೊಯ್ಸಳ ದೇವರು ವಿನಯಾದಿತ್ಯ ಮತ್ತು ಯುವರಾಜ ಎರೆಯಂಗರು ಬೇಲೂರ ಜೀಡಿನಲ್ಲಿ ರಾಜ್ಯವಾಳುತ್ತಿದ್ದರೆಂದು ತಿಳಿದುಬರುತ್ತದೆ.[೮] ಕ್ರಿ.ಶ. ೧೧೦೬ರ ಹುಣಸೂರು ತಾಲೂಕಿನ ಮರದೂರು ಗ್ರಾಮದ ಶಾಸನದಲ್ಲಿ ದೋರಸಮುದ್ರ ರಾಜಧಾನಿ ಎಂಬ ಸ್ಪಷ್ಟ ಉಲ್ಲೇಖ ಸಿಗುತ್ತದೆ.[೯] ಈ ಆಧಾರವು ದೋರಸಮುದ್ರವೇ ಹೊಯ್ಸಳರ ಕೇಂದ್ರ ರಾಜಧಾನಿ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಬೇಲೂರು ನೆಲೆಬೀಡು ಎಂಬ ಕೊನೆಯ ಉಲ್ಲೇಖ ಕ್ರಿ.ಶ. ೧೧೩೯ರ ಕಡೂರು ತಾಲೂಕಿನ ನಿಡಘಟ್ಟ ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ.[೧೦] ಆದರೆ ದೋರಸಮುದ್ರದ ನೆಲೆಜೀಡು ಎಂಬ ಕೊನೆಯ ಉಲ್ಲೇಖ ಹಾಗಲಹಳ್ಳಿಯ ಕ್ರಿ.ಶ. ೧೩೪೪ರ ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ.[೧೧]

ಕೆಲವು ಪುರಾತತ್ವ ಆಧಾರಗಳನ್ನು ಈ ವಿಚಾರಕ್ಕೆ ಪೂರಕ ಆಧಾರವಾಗಿ ಬಳಸಿಕೊಳ್ಳಬಹುದು. ಹಳೇಬೀಡಿನಲ್ಲಿ ಬೃಹತ್ ಅರಮನೆ ಇದ್ದು ಇದರ ಅವಶೇಷ ದೊರೆತಿದೆ. ಆದ್ದರಿಂದ ಹೊಯ್ಸಳ ಅರಸರೆಲ್ಲರೂ ದೋರಸಮುದ್ರದ

ಅರಮನೆಯಲ್ಲಿಯೇ ನೆಲೆಸಿದ್ದರೆಂದು ಹೇಳಬಹುದು. ಹಳೇಬೀಡಿನಲ್ಲಿ ಬೃಹತ್ತಾದ ಎರಡು ಕೋಟೆಗಳು ನಿರ್ಮಾಣವಾಗಿದ್ದವು. ಇದರ ಅವಶೇಷಗಳನ್ನು ಈಗಲೂ ಗುರುತಿಸಬಹುದು. ಒಂದು ರಾಜ್ಯದ ಸುರಕ್ಷತೆಗೆ ಕೋಟೆ ಮುಖ್ಯವಾಗಿದ್ದು ಕೌಟಿಲ್ಯನ ಸಪ್ತಾಂಗ ಸಿದ್ಧಾಂತದ ಒಂದು ಅಂಗವಾಗಿದೆ. ಆದರೆ ಬೇಲೂರಿನಲ್ಲಿ ಹೊಯ್ಸಳರ ಕಾಲದಲ್ಲಿ ಅರಮನೆ ಹಾಗೂ ಕೋಟೆ ನಿರ್ಮಿತವಾದ ಅವಶೇಷಗಳು ದೊರೆತಿಲ್ಲ. ಹಳೇಬೀಡಿಗೆ ರಾಜಮಾರ್ಗಗಳಿದ್ದವೆಂದು ತಿಳಿದು ಬಂದಿದೆ. ಆದರೆ ಬೇಲೂರಿನಲ್ಲಿ ಇಂತಹ ರಾಜಮಾರ್ಗಗಳನ್ನು ಗುರುತಿಸಲಾಗಿಲ್ಲ. ಹಳೇಬೀಡಿನ ಶಾಸನದಲ್ಲಿ ಹೊಯ್ಸಳ ಅರಸನ ಓಲಗದ ವರ್ಣನೆ ಬರುತ್ತದೆ.[೧೨]

ಹೊಯ್ಸಳರ ಪ್ರಮುಖ ಶಾಸನಗಳು ಹಾಗೂ ಹೆಚ್ಚು ಶಾಸನಗಳೂ ಆರಂಭದಿಂದಲೂ ದೊರೆತಿರುವುದು ಹಳೇಬೀಡಿನಲ್ಲಿ. ಹೊಯ್ಸಳರ ಶಾಸನಗಳಲ್ಲಿ ದೋರಸಮುದ್ರದ ನೆಲೆವೀಡಿನೊಳ್ ಸುಖಸಂಕಥಾ ವಿನೋದದಿಂದ ರಾಜ್ಯಂಗೆಯುತ್ತಿದ್ದರು ಎಂಬ ಉಲ್ಲೇಖ ಹೆಚ್ಚು ಸಿಗುತ್ತದೆ. ಬಂಕಾಪುರ ಮೊದಲಾದ ಹೊಯ್ಸಳರ ಉಪರಾಜಧಾನಿಗಳು ಶಾಸನಗಳಲ್ಲಿ ಉಲ್ಲೇಖವಾಗಿರುವಷ್ಟು ಪ್ರಮಾಣದಲ್ಲಿ ಮಾತ್ರ ಬೇಲೂರು ಉಲ್ಲೇಖಗೊಂಡಿದೆ. ಅಲ್ಲದೇ ಹೊಯ್ಸಳರ ಚರಿತ್ರೆಯನ್ನು ಹೇಳುವ ಬಹುತೇಕ ಎಲ್ಲಾ ಶಾಸನಗಳಲ್ಲಿಯೂ ದ್ವಾರಾವತೀ ಪುರವರಾಧೀಶ್ವರರೆಂದು ಹೇಳಿ ಶಶಕಪುರ ಮತ್ತು ದೋರಸಮುದ್ರ ಈ ಎರಡರ ಪ್ರಸ್ತಾಪ ಮಾತ್ರ ಬರುತ್ತದೆ.[೧೩] ಹೊಯ್ಸಳರ ಆದಿಯಿಂದಲೂ ಹಳೇಬೀಡು ಅಭಿವೃದ್ಧಿಗೊಂಡಷ್ಟು ಬೇಲೂರು ಅಭಿವೃದ್ಧಿಗೊಂಡಿರಲಿಲ್ಲ. ವಿಜಯನಗರ ಸಾಮ್ರಾಜ್ಯ, ಬೇಲೂರು ಪಾಳೇಗಾರರು ಮತ್ತು ಮೈಸೂರು ಒಡೆಯರು ವೈಷ್ಣವ ಧರ್ಮವನ್ನು ಪ್ರೋತ್ಸಾಹಿಸಿದ್ದರಿಂದ ಬೇಲೂರು ಇವರ ಕಾಲದಲ್ಲಿ ಬೆಳವಣಿಗೆಯನ್ನು ಕಂಡಿತು.

ಆದ್ದರಿಂದ ಸಳನೃಪಕಾಮ ಸೊಸೆವೂರಿನಲ್ಲಿದ್ದು, ಅವನ ಮಗ ವಿನಯಾದಿತ್ಯನು ಕ್ರಿ.ಶ. ೧೦೫೪ರಲ್ಲಿ ಅಂಗಡಿಯಲ್ಲಿಯೇ ಇದ್ದು ಕ್ರಿ.ಶ. ೧೦೬೦ರ ವೇಳೆಗೆ ದೋರಸಮುದ್ರಕ್ಕೆ ಬಂದು ನೆಲೆನಿಂತನೆಂದು ಹಳೇಬೀಡಿನ ಶಾಸನ[೧೪] ಹಾಗೂ ಅಂಗಡಿಯ ಶಾಸನಗಳ[೧೫] ಆಧಾರದಿಂದ ಸ್ಪಷ್ಟವಾಗುತ್ತದೆ. ಅಲ್ಲದೇ ಕ್ರಿ.ಶ. ೧೦೬೦ರ ನಂತರದ ವಿನಯಾದಿತ್ಯನ ಶಾಸನಗಳಲ್ಲಿ ಆತ ಸೊಸೆವೂರಿನಲ್ಲಿದ್ದ ಬಗೆಗೆ ಯಾವುದೇ ಉಲ್ಲೇಖಗಳಿಲ್ಲದಿರುವುದು ಇದನ್ನು ಸ್ಪಷ್ಟ ಪಡಿಸುತ್ತದೆ. ಈ ಎಲ್ಲಾ ಶಾಸನಾಧಾರಗಳಿಂದ ದೋರಸಮುದ್ರವೇ ಹೊಯ್ಸಳರ ಪ್ರಥಮ ರಾಜಧಾನಿ ಎಂದೂ ಬೇಲೂರಿಗಿಂತಲೂ ಹಳೆಯ ರಾಜಧಾನಿ ಎಂದೂ ದೃಢಪಡಿಸಬಹುದು. ಈ ಎಲ್ಲಾ ಶಾಸನಗಳು ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳಲ್ಲಿ ಪ್ರಕಟಗೊಂಡಿವೆ.

ಇದೇ ಕಾಲಘಟ್ಟದ ಆಸುಪಾಸಿನಲ್ಲಿ ರಾಜಧಾನಿಯೆಂಬ ಅರ್ಥದಲ್ಲಿ ಉಪರಾಜಧಾನಿಯಾಗಿ ಬೇಲೂರು ಕಾರ್ಯನಿರ್ವಹಿಸಿದೆ. ಹಳೇಬೀಡಿನ ಜೊತೆಗೆ ಬೇಲೂರು ಜಂಟಿ ಅಥವಾ ಅವಳಿ ಅಥವಾ ಉಪರಾಜಧಾನಿಯಾಗಿ ಮುಂದುವರೆದಿದೆ. ಬೇಲೂರು ಎಂದಿಗೂ ಹೊಯ್ಸಳರ ಪ್ರಮುಖ ಆಡಳಿತ ಕೇಂದ್ರವಾಗಲಿಲ್ಲ. ಅಲ್ಲದೇ ದೋರಸಮುದ್ರದ ಸ್ಥಾನವನ್ನು ಪಡೆಯಲಿಲ್ಲ. ದೋರಸಮುದ್ರ ಗಂಗರ ಕಾಲಕ್ಕೆ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತೆಂದು ಹಳೇಬೀಡಿನ ಕ್ರಿ.ಶ. ೯೫೪ರ ಶಾಸನದಿಂದ ತಿಳಿದುಬರುತ್ತದೆ.[೧೬] ಈ ಕಾರಣದಿಂದಲೂ ವಿನಯಾದಿತ್ಯ ದೋರಸಮುದ್ರವನ್ನು ಆರಂಭದಲ್ಲಿಯೇ ಆಯ್ಕೆ ಮಾಡಿಕೊಂಡಿರುವ ಸಾಧ್ಯತೆಗಳಿವೆ. ಅಲ್ಲದೇ ದೋರಸಮುದ್ರದ ವಿಸ್ತಾರ, ಪ್ರಾಕೃತಿಕ ಸಂಪನ್ಮೂಲ, ನೈಸರ್ಗಿಕ ರಕ್ಷಣೆ, ಮನಮೋಹಕ ಪರಿಸರ, ಶತ್ರುಗಳಿಂದ ರಕ್ಷಣೆ, ವಾಯುಗುಣ ಹೀಗೆ ರಾಜಕೀಯ, ಧಾರ್ಮಿಕ, ಆರ್ಥಿಕ ಅಂಶಗಳನ್ನು ಆಧರಿಸಿ ದೋರಸಮುದ್ರವೇ ರಾಜಧಾನಿಗೆ ಸರಿಯಾದ ಪ್ರದೇಶವೆಂದು ವಿನಯಾದಿತ್ಯ ದೋರಸಮುದ್ರಕ್ಕೆ ಬಂದು ನೆಲೆ ನಿಂತರೆನಿಸುತ್ತದೆ.

ವಿಷ್ಣುವರ್ಧನನ ಕಾಲಕ್ಕೆ ಹೊಯ್ಸಳ ರಾಜ್ಯ ವಿಸ್ತಾರವಾಗಿ ಹಬ್ಬಿತ್ತು. ಯುದ್ಧಗಳು ಸಾಲುಸಾಲಾಗಿ ನಡೆಯುತ್ತಲೇ ಇದ್ದವು. ಇದರಿಂದಾಗಿ ಉಪರಾಜಧಾನಿಗಳ ಸಂಖ್ಯೆ ಕ್ರಮೇಣ ಹೆಚ್ಚಿತು. ಹೀಗೆ ಹೊಯ್ಸಳ ಅರಸರು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ರಾಜಧಾನಿಗಳನ್ನು ಹೊಂದಿದ್ದರು. ಉತ್ತರ ಕರ್ನಾಟಕ ಮಾತ್ರವಲ್ಲದೇ ತಮಿಳುನಾಡಿನಲ್ಲಿಯೂ ಇವರ ರಾಜಧಾನಿಗಳು ಇದ್ದವು. ಇವುಗಳು ಉಪರಾಜಧಾನಿಗಳಾಗಿ, ತಾತ್ಕಾಲಿಕ ನೆಲೆವೀಡುಗಳಾಗಿ, ರಾಜನ ಯುದ್ಧಯಾತ್ರೆಯಲ್ಲಿ ಸೇನಾ ಶಿಬಿರಗಳಾಗಿರುತ್ತಿದ್ದವು.

ಅವುಗಳಲ್ಲಿ ತಳವನಪುರ, ಸುತ್ತೂರು, ಕೋಡಾಲ, ಬನವಾಸಿ, ಕುರುಗೋಡು, ಕೊಪ್ಪ, ಕೋಲಾರ, ಹೊರನೂರ ಪಟ್ಟಣ, ಎರಂಬರೆಗೆಯ ಕುಪ್ಪ, ಕುಂದಾಣಿಬೀಡು, ಬನವಾಸಿ, ಬಂಕಾಪುರ, ಸಾಯಿರಮಲೆ, ತಲಕಾಡು, ಬಡಕಲೆತ್ತಿ, ಯಾದವಪುರ (ತೊಣ್ಣೂರು), ಬಡಗಲ ನೊಳಂಬವಾಡಿ, ಹೊಸವೀಡು, ತಿರುವಣ್ಣಾಮಲೈ, ಅರುಣಸಮುದ್ರ, ಹೊಂಗನೂರು, ಹಳ್ಳದಬೀಡು, ಕಣ್ಣಾನೂರು, ದೋಚಲೆ, ಬಂಕಾಪುರ, ಹಳ್ಳವೂರು, ಹಾನಂಗಲ್ಲು, ನವಿಲೆ, ಲೊಕ್ಕಿಗುಂಡಿ, ಚೋಳಮಂಡಲ

ವಿಕ್ರಮಪುರ, ಕೊಕ್ಕನೂರು ಕೊಪ್ಪ ಈ ಪ್ರದೇಶಗಳನ್ನು ಶಾಸನಗಳಲ್ಲಿ ಗುರುತಿಸಬಹುದು. ಇವುಗಳಂತೆಯೇ ಬೇಲೂರು ಒಂದು ನೆಲೆಬೀಡಾಗಿದ್ದು ರಾಜಧಾನಿ ಪ್ರದೇಶವಾದ ದೋರಸಮುದ್ರಕ್ಕೆ ಸಮೀಪದಲ್ಲಿದ್ದುದರಿಂದ ತುಸು ಹೆಚ್ಚಿನ ಮನ್ನಣೆಯನ್ನು ಪಡೆಯಿತು.

ದೆಹಲಿ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನು ದೋರಸಮುದ್ರದ ಮೇಲೆ ದಾಳಿ ಮಾಡಿದ ನಂತರ ರಾಜಧಾನಿ ಬೇಲೂರಿಗೆ ವರ್ಗವಾಯಿತೆಂದು ಹೇಳಲಾಗುತ್ತದೆ. ಆದರೆ ಇದಕ್ಕೆ ಯಾವುದೇ ಲಿಖಿತ ಆಧಾರಗಳಿಲ್ಲ. ಕ್ರಿ.ಶ. ೧೩೧೮ರಲ್ಲಿ ಮೊದಲ ಬಾರಿ ಮಲ್ಲಿಕಾಫರನು ದಾಳಿ ಮಾಡಿದ ನಂತರ ನಾಲ್ಕನೇ ಬಲ್ಲಾಳನು ದೋರಸಮುದ್ರವನ್ನು ಪುನರುಜ್ಜೀವನಗೊಳಿಸಿ ದೋರಸಮುದ್ರದಲ್ಲಿಯೇ ನೆಲೆಸಿದ್ದನು. ಇದೇ ಕಾರಣದಿಂದ ಕ್ರಿ.ಶ. ೧೩೨೬ ರಲ್ಲಿ ಎರಡನೇ ದಾಳಿ ದೋರಸಮುದ್ರದ ಮೇಲೆಯೇ ನಡೆಯಿತು. ಇದರ ನಂತರವೂ ಬೇಲೂರಿಗೆ ರಾಜಧಾನಿಯನ್ನು ವರ್ಗಾವಣೆ ಮಾಡಿರಲಿಲ್ಲ. ನಂತರ ತಿರುವಣ್ಣಾಮಲೈ ಹಾಗೂ ವಿರೂಪಾಕ್ಷಪಟ್ಟಣಗಳಿಂದ ಆಡಳಿತ ನಡೆಸುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೩೧೭ರಲ್ಲಿ ವೀರಬಲ್ಲಾಳನು ಅರುಣಸಮುದ್ರ ಅಂದರೆ ಈಗಿನ ತಿರುವಣ್ಣಾಮಲೈಯಲ್ಲಿ ಇದ್ದನೆಂದು ಕಮಲಾಪುರ ಶಾಸನ ಹೇಳುತ್ತದೆ.[೧೭] ಇದರ ನಂತರವೂ ತಿರುವಣ್ಣಾಮಲೈಯಿಂದ ರಾಜ್ಯಭಾರ ನಡೆಸುತ್ತಿದ್ದನೆಂದು ಬೆಂಗಳೂರಿನ ಕೆಲವು ಶಾಸನಗಳಲ್ಲಿ ಉಲ್ಲೇಖವಾಗಿದೆ.[೧೮]

ಮೂರನೇ ಬಲ್ಲಾಳನು ಕ್ರಿ.ಶ. ೧೩೩೧ರಲ್ಲಿ ವಿರೂಪಾಕ್ಷ ಹೊಸದುರ್ಗವೆಂದು ಕರೆಯಲ್ಪಟ್ಟ ಈ ನಗರದಿಂದಲೇ ಆಳುತ್ತಿದ್ದನೆಂದು ಸಂಪಿಗೆಯ ಶಾಸನ ಹೇಳುತ್ತದೆ.[೧೯] ಕ್ರಿ.ಶ. ೧೩೧೮ರ ಚಿಕ್ಕನಾಯಕನಹಳ್ಳಿಯ ಶಾಸನವು ಮೂರನೇ ಬಲ್ಲಾಳ ದೋರಸಮುದ್ರ ನೆಲೆಬೀಡಿನಿಂದ ಆಳ್ವಿಕೆ ನಡೆಸುತ್ತಿದ್ದನೆಂಬ ವಿಚಾರವನ್ನು ಪ್ರಸ್ತಾಪಿಸುವ ಕೊನೆಯ ಶಾಸನ.[೨೦] ಆದರೆ ಬೇಲೂರು ನೆಲೆಬೀಡು ಎಂಬ ಕೊನೆಯ ಉಲ್ಲೇಖ ಕಡೂರಿನ ನಿಡಘಟ್ಟದ ಕ್ರಿ.ಶ. ೧೧೯೯ರ ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ.[೨೧] ದೋರಸಮುದ್ರದ ಬೀಡಿನೊಳಗೆ ಹೊಯ್ಸಳ ಅರಸನು ಆಳುತ್ತಿದ್ದನೆಂಬ ಇತ್ತೀಚಿನ ಉಲ್ಲೇಖ ದೊರೆಯುವುದು ಹಾಗಲಹಳ್ಳಿಯ ನಾಲ್ಕನೇ ವೀರಬಲ್ಲಾಳನ ಕಾಲದ ಕ್ರಿ.ಶ. ೧೩೪೪ರ ಶಾಸನದಲ್ಲಿ[೨೨] ಈ ಎಲ್ಲಾ ಶಾಸನಗಳ ಆಧಾರದಿಂದ ಮಲ್ಲಿಕಾಫರನ ದಾಳಿಯ ನಂತರವೂ ರಾಜಧಾನಿ ದೋರಸಮುದ್ರದಿಂದ ಬೇಲೂರಿಗೆ ವರ್ಗವಾಗಲಿಲ್ಲವೆಂದು ಸ್ಪಷ್ಟಪಡುತ್ತದೆ.

ವೈಶಿಷ್ಟ್ಯಪೂರ್ಣ ಚರಿತ್ರೆಯನ್ನು ನಿತ್ಯಹರಿದ್ವರ್ಣಮಯ ಸಿರಿಯನ್ನೂ, ಅನುಪಮ ಶಿಲ್ಪಕಲಾ ಬೆಡಗನ್ನು ವಿಶಿಷ್ಟವಾದ ಸಾಂಸ್ಕೃತಿಕ ಸಂಪತ್ತನ್ನು, ಸಮೃದ್ಧವಾದ ನೈಸರ್ಗಿಕ ಸಂಪನ್ಮೂಲಗಳನ್ನು, ಪ್ರಾಚೀನ ಸ್ಮಾರಕಗಳನ್ನು, ಅವಶೇಷಗಳನ್ನು ಹೊಂದಿರುವ ಇಂದಿನ ಹಳೇಬೀಡು ಗ್ರಾಮ ಒಂದು ಕಾಲಕ್ಕೆ ಪಟ್ಟಣ ಪ್ರದೇಶ. ಹಳೇಬೀಡು ಇತಿಹಾಸ ಪ್ರಸಿದ್ಧ ಸ್ಥಳವಾಗಿ ಹೋಬಳಿ ಕೇಂದ್ರವಾಗಿ, ಕಲಾಕ್ಷೇತ್ರವಾಗಿ ಉಳಿದುಬಂದಿದೆ. ಒಂದು ಕಾಲಕ್ಕೆ ರಾಜಧಾನಿಯ ಗತವೈಭವ ಸಾರಿ ಆಕ್ರಮಣಕಾರರ ಮನಸ್ಸನ್ನು ಸೆಳೆದ ದೋರಸಮುದ್ರ ಈಗ ಹಳೇಬೀಡೆಂಬ ಪುಟ್ಟ ಗ್ರಾಮ. ಹೊಯ್ಸಳರು ಹಾಗೂ ಹಳೇಬೀಡಿನ ಶಾಸನಗಳಲ್ಲಿ ಹಳೇಬೀಡು ದೋರಸಮುದ್ರ, ದ್ವಾರಾವತಿಯೆಂದು ಕರೆಯಲ್ಪಟ್ಟಿದೆ. ಕ್ರಿ.ಶ. ೧೦೬೨ರ ಹಳೇಬೀಡಿನ ಶಾಸನದಲ್ಲಿ ದೋರಸಮುದ್ರದ ಮೊದಲ ಉಲ್ಲೇಖ ಬರುತ್ತದೆ.[೨೩] ಇದು ಹಳೇಬೀಡಿನಲ್ಲಿ ದೊರೆತಿರುವ ಮೊದಲ ಶಾಸನ. ಕ್ರಿ.ಶ.೧೧೩೬ ರ ಹಳೇಬೀಡಿನ ಶಾಸನದಲ್ಲಿ ಮಹಾಪಟ್ಟಣವೆಂದು ದೋರಸಮುದ್ರವನ್ನು ಉಲ್ಲೇಖಿಸಲಾಗಿದೆ.[೨೪] ಹಳೇಬೀಡಿನ ಮೂಲ ಹೆಸರು ದೋರಸಮುದ್ರಕ್ಕೂ ಮೊದಲು ತ್ರಿಪುರಿ ಎಂದು ಹೇಳಲಾಗುತ್ತದೆ. ಕದಂಬರ ಮೊದಲನೇ ಕೃಷ್ಣವರ್ಮನು ತ್ರಿಪುರಿ ಎಂದರೆ ಬೇಲೂರು ತಾಲೂಕಿನ ಹಳೇಬೀಡು (ವಿದ್ವಾಂಸರಾದ ಎಲ್.ಟಿ. ಶರ್ಮ ಮತ್ತು ಬಿ.ಹೆಚ್. ಶ್ರೀಧರ ಅವರ ಅಭಿಪ್ರಾಯ) ನೆಲೆವೀಡಿನಿಂದ ಕ್ರಿ.ಶ. ೪೭೫–೪೮೦ರ ಕಾಲಘಟ್ಟದಲ್ಲಿ ಆಳಿದನು ಎಂಬುದಾಗಿ ಶ್ಯಾಮಲಾ ರತ್ನಕುಮಾರಿಯವರು ಅಭಿಪ್ರಾಯಪಟ್ಟಿದ್ದಾರೆ.[೨೫] ಆದರೆ ಹಳೇಬೀಡಿಗೆ ತ್ರಿಪುರಿ ಎಂಬ ಹೆಸರಿದ್ದುದರ ಬಗೆಗೆ ಹಾಗೂ ಕದಂಬ ವಂಶದ ನೆಲೆಬೀಡಾಗಿದ್ದುದರ ಬಗೆಗೆ ಯಾವುದೇ ಆಧಾರಗಳು ಲಭ್ಯವಿಲ್ಲ.

ದೋರನೆಂಬ ವ್ಯಕ್ತಿ ಕೆರೆಯನ್ನು ನಿರ್ಮಿಸಿದುದರಿಂದ ದೋರಸಮುದ್ರ ಎಂಬ ಹೆಸರು ಬಂದಿದೆ. ಈ ಕೆರೆಯು ಪೂರ್ವ ಮತ್ತು ಆಗ್ನೇಯ ದಿಕ್ಕುಗಳ ನಡುವೆ ನಿರ್ಮಿತಗೊಂಡಿದೆ. ಆದರೆ ಈ ಕೆರೆಯನ್ನು ಯಾರು, ಯಾವಾಗ ನಿರ್ಮಿಸಿದರೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಕ್ರಿ.ಶ. ೧೦ನೇ ಶತಮಾನದಲ್ಲಿ ಈ ಪ್ರಾಂತ್ಯ ಗಂಗ ಅರಸ ಬೂತುಗನ ಆಳ್ವಿಕೆಗೆ ಒಳಪಟ್ಟಿದ್ದು ಅಕ್ಕ ಪಾಂಬವ್ವೆ ಮತ್ತು ಭಾವ ದೋರ ಇಲ್ಲಿ ಇದ್ದಂತೆ ತಿಳಿದುಬರುವುದರಿಂದ ೯೫೦ಕ್ಕೆ ಮುಂಚೆ ಈ ದೋರ ಕೆರೆಯನ್ನು ಕಟ್ಟಿಸಿ ತನ್ನ ಹೆಸರಿನಲ್ಲಿ ದೋರಸಮುದ್ರವೆಂಬ ಊರನ್ನು ನಿರ್ಮಿಸಿ ಇಲ್ಲಿಂದ ರಾಜ್ಯಭಾರ ಮಾಡಿರುವುದು ಹೆಚ್ಚು ಸಂಭವನೀಯವೆಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದಲ್ಲಿ ದಾಖಲಾಗಿದೆ.[೨೬] ಆದರೆ ಇದಕ್ಕೆ ಯಾವುದೇ

ಶಾಸನೋಕ್ತ ಆಧಾರಗಳಿಲ್ಲ. ದ್ವಾರದಲ್ಲಿ ಕೆರೆ ಇದ್ದುದ್ದರಿಂದ ದೋರಸಮುದ್ರ ಎಂಬ ಹೆಸರು ಬಂದಿದೆ ಎಂದು ಕೆಲವರ ಅಭಿಮತ. ಆದರೆ ಜನರ ಬಾಯಿಯಲ್ಲಿ ಸೌಲಭ್ಯಾಕಾಂಕ್ಷೆಯಿಂದಾಗಿ ದೋರ, ದ್ವಾರ ಎಂದಾಗಿದೆ.

ಗಂಗದೊರೆ ಶ್ರೀಪುರುಷನನ್ನು ಮಣ್ಣೆಯಲ್ಲಿ ಸೋಲಿಸಿ ಅಲ್ಲಿಂದ ಓಡಿಸಿದ ರಾಷ್ಟ್ರಕೂಟ ದೊರೆ ಒಂದನೇ ಕೃಷ್ಣನು ಗಂಗವಾಡಿಯ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಗಂಗವಾಡಿ ಪ್ರಾಂತ್ಯಕ್ಕೆ ತನ್ನ ಕಿರಿಯ ಮಗ ಧ್ರುವನನ್ನು ರಾಜ್ಯಪಾಲನಾಗಿ ನೇಮಿಸಿದನು. ಈ ಧ್ರುವನೇ ದೋರಸಮುದ್ರದಲ್ಲಿ ಕೆರೆಯೊಂದನ್ನು ಕಟ್ಟಿ ತನ್ನ ನೆಲೆವೀಡಾಗಿ ಮಾಡಿಕೊಂಡನು. ಅಂದಿನಿಂದ ಅದಕ್ಕೆ ದೋರಸಮುದ್ರವೆಂದು ಹೆಸರಾಯಿತೆಂದು ವಿಲಿಯಂ ಕೊಯ್ಲಿಲೊ, ಎಚ್. ತಿಪ್ಪೇರುದ್ರಸ್ವಾಮಿ ಮೊದಲಾದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಧ್ರುವನು ಕೆರೆ ಕಟ್ಟಿಸಿದ ವಿಚಾರವನ್ನು ಡೆರೆಟ್ ಕೂಡ ಒಪ್ಪಿದ್ದಾರೆ.[೨೭] ರಾಷ್ಟ್ರಕೂಟರ ಧ್ರುವನು ಕ್ರಿ.ಶ. ೭೮೪–೭೯೪ರವರೆಗೆ ಅರಸನಾಗಿ ಆಳ್ವಿಕೆ ನಡೆಸಿದ್ದಾನೆ.[೨೮] ಧ್ರುವನು ತನ್ನ ಮಗ ಕಂಬನನ್ನು ಗಂಗರಾಜ್ಯದ ಅಧಿಕಾರಿಯಾಗಿ ನೇಮಿಸಿ ಉತ್ತರದ ಕಡೆಗೆ ಸಾಗುತ್ತಾನೆ. ಅಲ್ಲಿ ತನ್ನ ಅಣ್ಣ ಗೋವಿಂದನಿಗೆ ಸಹಾಯ ಮಾಡಿದ ಬಂಗಾಳದ ಪಾಲವತ್ಸನನ್ನು ಸೋಲಿಸುವುದು ಅವನ ಗುರಿಯಾಗಿತ್ತು. ಅವನು ಮರಣಿಸುವ ಸಂದರ್ಭದಲ್ಲಿಯೂ ಉತ್ತರದಲ್ಲಿಯೇ ಇದ್ದನೆಂದು ಎಚ್. ತಿಪ್ಪೇರುದ್ರಸ್ವಾಮಿಯವರು ದಾಖಲಿಸಿದ್ದಾರೆ.[೨೯] ಈ ನಡುವೆ ಧ್ರುವ ದೋರಸಮುದ್ರಕ್ಕೆ ಬಂದು ಇಲ್ಲಿ ಆಡಳಿತ ನಡೆಸಿರಲು ಸಾಧ್ಯವಿಲ್ಲ.

ರಾಷ್ಟ್ರಕೂಟರ ಧ್ರುವ ದೋರಸಮುದ್ರ ಕೆರೆಯನ್ನು ನಿರ್ಮಿಸಿದನೆಂಬುದಕ್ಕೆ ಯಾವ ಸ್ಪಷ್ಟ ಆಧಾರಗಳು ಇಲ್ಲ. ಧ್ರುವನಿಗೆ ದೋರ ಎಂಬ ಮತ್ತೊಂದು ಹೆಸರೂ ಇರಲಿಲ್ಲ. ಅಕ್ಷರ ಪಲ್ಲಟವಾಗಿ ಧ್ರುವ, ದೋರನಾಗಿದ್ದಾನೆ ಎನ್ನುವುದಾದರೆ ಭಾಷಾವಿಜ್ಞಾನದ ನಿಯಮಗಳಿಗೆ ಇದು ವಿರುದ್ಧ. ಕ್ರಿ.ಶ. ೮೦೦ರಲ್ಲಿದ್ದ ರಾಷ್ಟ್ರಕೂಟರ ದೋರನ ಹೆಸರಾಗಲಿ, ಈತನು ಕೆರೆಯನ್ನು ನಿರ್ಮಿಸಿದನೆಂಬ ಉಲ್ಲೇಖವಾಗಲಿ ಶಾಸನಗಳಲ್ಲಿ ಪ್ರಕಟಗೊಂಡಿಲ್ಲ. ಧ್ರುವನ ಶಾಸನಗಳಲ್ಲಿಯೂ ಈ ಕುರಿತು ಯಾವುದೇ ದಾಖಲೆಗಳಿಲ್ಲ. ಈ ಎಲ್ಲಾ ಆಧಾರಗಳಿಂದ ದೋರಸಮುದ್ರ ನಿರ್ಮಾತೃ ರಾಷ್ಟ್ರಕೂಟರ ಧ್ರುವನಲ್ಲ ಎಂಬುದು ಧೃಡಪಡುತ್ತದೆ. ಧ್ರುವ ಹಾಗೂ ದೋರ ಇಬ್ಬರೂ ಭಿನ್ನ ವ್ಯಕ್ತಿಗಳೆಂದು ಹೇಳಬಹುದು. ಹಾಗಾದರೆ ದೋರ ಯಾರು? ಪ್ರಸ್ತುತ ಸಂಶೋಧನೆಯ ಅನ್ವಯ ಗಂಗರ ಅಧೀನದಲ್ಲಿದ್ದ ಒಂದು ಚಿಕ್ಕ ಮನೆತನದವನು ದೋರ ಎಂದು ಹೇಳಬಹುದು. ಇದಕ್ಕೆ ಆಧಾರವಾಗಿ ಶ್ರವಣಬೆಳಗೊಳದ ಒಂದು ಶಾಸನವನ್ನು ನೋಡಬಹುದು.

ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿರುವ ಕ್ರಿ.ಶ.ಸು. ೧೦ನೇ ಶತಮಾನಕ್ಕೆ ಸೇರಿದ ಶಾಸನವು ದೋರನ ಮಗನಾದ ಲೋಕವಿದ್ಯಾಧರ ಎಂದು ಖ್ಯಾತಿಯನ್ನು ಪಡೆದ ಉದಯ ವಿದ್ಯಾಧರನ ಹೆಂಡತಿಯಾದ ಸಾವಿಯಬ್ಬೆಯ ಮರಣವನ್ನು ಪ್ರಸ್ತಾಪಿಸುತ್ತದೆ.[೩೦] ಸಾವಿಯಬ್ಬೆಯು ರಣಮೂರ್ಖಕುಲದ ಬಾಯಿಕ ಮತ್ತು ಜಾಬವ್ವೆಯರ ಮಗಳೆಂದು ಮಾಧವರ ಮತ್ತು ಮೋಯಿಲಮ್ಮರು ಇವಳ ಸೋದರರೆಂದು ಪ್ರಸ್ತಾಪಿಸಲಾಗಿದೆ. ಭೂಭುವನದಲ್ಲಿ ಪ್ರಸಿದ್ಧಳಾದ ಸಾವಿಯಬ್ಬೆಗೆ ಬೇರಾರು ಸತಿಗಳು ಸಮಾನರೇ ಎಂದು ಹೇಳಲಾಗಿದೆ. ಈಕೆಯು ಭಗಿಯೂರಿನಲ್ಲಿ ನಡೆದ ಯುದ್ಧವೊಂದರಲ್ಲಿ ಗಾಯಗೊಂಡು ಸಲ್ಲೇಖನ ವ್ರತದಿಂದ ಮರಣ ಹೊಂದಿದ್ದಾಳೆ. ಚಿಕ್ಕಬೆಟ್ಟದಲ್ಲಿ ಅವಳ ವೀರ ನಿಸಿಧಿಗಲ್ಲನ್ನು ನಿಲ್ಲಿಸಲಾಗಿದೆ. ಶಾಸನದಲ್ಲಿ ಸಜ್ಜನಿಕೆಯಲ್ಲಿ ಜನಕಾತ್ಮಜೆಯೆಂದು, ರೂಪಿನಲ್ಲಿ ದೇವಿಕಿಯೆಂದು, ಪೆಂಪಿನಲ್ಲಿ ಅರುಂಧತಿಯಂದು ಜಿನೇಂದ್ರನ ಭಕ್ತಿ ಸದ್ಭಾವದಲ್ಲಿ ಜಿನಶಾಸನ ದೇವತೆಯೆಂದು ವರ್ಣಿಸಲಾಗಿದೆ. ರಣಮೂರ್ಖಕುಲವು ಗಂಗರ ಕೆಳಗಿನ ಚಿಕ್ಕರಾಜಮನೆತನವೆಂದು ಊಹಿಸಬಹುದು. ಕ್ರಿ.ಶ.ಸು. ೧೦ನೇ ಶತಮಾನದಲ್ಲಿ ಶ್ರವಣಬೆಳಗೊಳ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿದ್ದಿತು. ಹಾಗಾಗಿ ಅವರ ಅಧೀನ ಅಧಿಕಾರಿಯಾಗಿ ಹಳೆಬೀಡು ಪರಿಸರವನ್ನು ದೋರನು ಆಳುತ್ತಿದ್ದಿರಬೇಕು. ಅವನ ಆಳ್ವಿಕೆಗೆ ಸೇರಿದ ಪ್ರದೇಶದಲ್ಲೊಂದು ಕೆರೆಯನ್ನು ಕಟ್ಟಿಸಿದ್ದಾನೆ. ಆದರೆ ಶಾಸನದಲ್ಲಿ ದೋರನ ವಂಶದ ಬಗ್ಗೆ ಯಾವ ವಿಚಾರಗಳು ಉಲ್ಲೇಖವಾಗಿಲ್ಲ.

ಪ್ರಸ್ತುತ ಶಾಸನವು ದೋರನ ಮಗನ ಕಾಲಕ್ಕೆ ಸೇರಿದ್ದಾಗಿದೆ. ಆದ್ದರಿಂದ ದೋರನ ಕಾಲವನ್ನು ಕ್ರಿ.ಶ. ೯೮೦ರ ಆಸುಪಾಸು ಎಂದು ಊಹಿಸಿ ಇದೇ ಕಾಲಾವಧಿಯಲ್ಲಿ ದೋರಸಮುದ್ರದಲ್ಲಿ ಕೆರೆಯೊಂದನ್ನು ನಿರ್ಮಿಸಿದನೆಂದು ನಂತರ ಇಲ್ಲಿ ನಿರ್ಮಿತಗೊಂಡ ಊರಿಗೆ ದೋರಸಮುದ್ರವೆಂಬ ಹೆಸರೇ ಬಂದಿತ್ತೆಂದು ಭಾವಿಸಬಹುದು. ದೋರಸಮುದ್ರದ ಕೆರೆಯ ನಿರ್ಮಾಣ, ಹಾಗೂ ದೋರನಿಗೆ ಸಂಬಂಧಿಸಿದಂತೆ ಹೋಲಿಕೆಯಾಗುವ ಏಕೈಕ ಶಾಸನ ಇದು.[೩೧] ಅಲ್ಲದೇ ದೋರಸಮುದ್ರ ಹಾಗೂ ಕೆರೆಯ ಮೊದಲ ಉಲ್ಲೇಖ ಬರುವುದೇ ವಿನಯಾದಿತ್ಯನ ಕಾಲದಲ್ಲಿ.[೩೨] ಕೆರೆಯ ಮೊದಲ ತೂಬು ಕ್ರಿ.ಶ. ೧೦೬೨ರಲ್ಲಿ ವಿನಯಾದಿತ್ಯನಿಂದ ನಿರ್ಮಿಸಲ್ಪಟ್ಟಿತೆಂದು ಹಳೇಬೀಡಿನ ಕ್ರಿ.ಶ. ೧೦೬೨ರ ಶಾಸನದಿಂದ ತಿಳಿದುಬರುತ್ತದೆ.[೩೩] ಹಾಗಾಗಿ ಇದಕ್ಕಿಂತ ಕೆಲ ವರ್ಷಗಳ ಹಿಂದಷ್ಟೇ ಕೆರೆ ನಿರ್ಮಾಣವಾಗಿರುತ್ತದೆಯೇ ವಿನಾಃ ಧ್ರುವನ

ಕಾಲವಾದ ಕ್ರಿ.ಶ. ೭೮೦ರಲ್ಲಿ ನಿರ್ಮಾಣವಾಗಿರುವುದಿಲ್ಲ. ಈ ಎಲ್ಲಾ ನಿದರ್ಶನಗಳಿಂದ ದೋರಸಮುದ್ರ ಕೆರೆಯನ್ನು ಕ್ರಿ.ಶ. ೯೫೦-೯೮೦ರ ನಡುವೆ ಗಂಗರ ಅಧಿಕಾರಿ ದೋರ ನಿರ್ಮಿಸಿದನೇ ಹೊರತು ರಾಷ್ಟ್ರಕೂಟರ ಧ್ರುವನಲ್ಲ ಎಂದು ಹೇಳಬಹುದು. ಈ ಶಾಸನವು ಶ್ರವಣಬೆಳಗೊಳ ಶಾಸನ ಸಂಪುಟದಲ್ಲಿ ೧೯೭೩ರಲ್ಲಿಯೇ ಪ್ರಕಟವಾಗಿವೆ. ಆದರೆ ಇದುವರೆಗೆ ಯಾರು ಗುರುತಿಸಿರಲಿಲ್ಲ.

ಮಲ್ಲಿಕಾಫರನ ದಾಳಿಯಿಂದ ದೋರಸಮುದ್ರ ನಾಶವಾದ ಕಾರಣ ಹಳೇಬೀಡೆಂಬ ಹೆಸರು ಬಂದಿತೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಮೂರನೇ ಬಲ್ಲಾಳನ ಸಹೋದರಿಯ ಶಾಪದಿಂದ ದೊರಸಮುದ್ರ ಹಾಳಾಯಿತೆಂದು ಸ್ಥಳ ಪುರಾಣ ಹೇಳುತ್ತದೆ. ಆದರೆ ಈ ಎರಡು ಅಭಿಪ್ರಾಯಗಳನ್ನು ಒಪ್ಪಲು ಯಾವುದೇ ಆಧಾರಗಳಿಲ್ಲ ಮತ್ತು ಈ ವಿವರಣೆಗಳು ಸಮಂಜಸವಾದುದಲ್ಲ. ಮಲ್ಲಿಕಾಫರನು ಕ್ರಿ.ಶ. ೧೩೧೦ ಮತ್ತು ಕ್ರಿ.ಶ. ೧೩೨೬ರಲ್ಲಿ ದಾಳಿ ನಡೆಸುತ್ತಾನೆ.

ಹಳೇಬೀಡು ಊರಿನ ಪ್ರಥಮ ಉಲ್ಲೇಖ ಬೇಲೂರಿನ ಕ್ರಿ.ಶ. ೧೫೫೭ರ ಶಾಸನದಲ್ಲಿ[೩೪] ದೊರೆಯುತ್ತದೆ. ಈ ಆಧಾರದಿಂದ ವಿಜಯನಗರದ ಅರಸರ ಆಳ್ವಿಕೆಯ ಅಂತ್ಯ ಕಾಲದಲ್ಲಿ ಹಳೆಯ ರಾಜಧಾನಿ ಎಂಬರ್ಥದಲ್ಲಿ ದೋರಸಮುದ್ರ ಹಳೇಬೀಡಾಯಿತೆಂದು ಹೇಳಬಹುದು. ಜನರ ಬಾಯಲ್ಲಿ ಹಳೇಬೀಡೆಂದು ಪರಿಪಾಠವಾಗಿ, ತದನಂತರ ಶಾಸನಗಳಲ್ಲಿ ಕ್ರಿ.ಶ. ೧೫೫೭ರಿಂದ ಪ್ರಯೋಗವಾಗಿದೆ. ಪುಷ್ಪಗಿರಿಯ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಕ್ರಿ.ಶ. ೧೫೫೯ರ ಶಾಸನದಲ್ಲಿ 'ಹಳೇಬೀಡು' ಎಂಬ ಉಲ್ಲೇಖ ಕಾಣಬಹುದು. ಹಳೇಬೀಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ದೊರೆಯುವ ಮೊದಲ ಶಾಸನೋಕ್ತ ದಾಖಲೆ ಇದಾಗಿದೆ.[೩೫] 'ಬೀಡು' ಎಂದರೆ 'ರಾಜಧಾನಿ' ಎಂದರ್ಥ. ಆದ್ದರಿಂದ ಹಳೇಬೀಡು ಎಂದರೆ 'ಹಳೆಯ ರಾಜಧಾನಿ' ಎಂದು ಅರ್ಥೈಸುವುದು ಸೂಕ್ತ.

ಅಡಿಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೨೫.
೨. William Coelho, The Hoysala Vamsha, p. 250.
೩. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು. ೧೧೨.
೪. ಎ.ಕ. ೭, ನಾಗಮಂಗಲ-೭೨, ಪು. ೫೫.
೫. ಎ.ಕ. ೧೧, ಮೂಡಿಗೆರೆ-೨೧, ಅಂಗಡಿ, ಪು. ೧೬೪.
೬ ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೭. ಪೂರ್ವೋಕ್ತ.
೮. ಎ.ಕ. ೧೨, ಕಡೂರು-೭೩, ಕೇದಗಿಗೆರೆ, ಪು. ೯೪.
೯. ಎ.ಕ. ೯, ಹುಣಸೂರು-೧೫, ಮರದೂರು, ಪು. ೨೬೩.
೧೦. ಎ.ಕ. ೧೨, ಕಡೂರು-೧೧೬, ನಿಡಘಟ್ಟ, ಪು. ೧೨೭.
೧೧. ಎ.ಕ. IX, ಹಾಗಲಹಳ್ಳಿ-೭೧, ಪು. ೭೬.
೧೨. ಎ.ಕ. ೯, ಬೇಲೂರು-೨೬೮, ಹಳೇಬೀಡು, ಪು. ೨೬೦.
೧೩. ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೧೪. ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೧೫. ಎ.ಕ. ೧೧, ಮೂಡಿಗೆರೆ-೨೧, ಅಂಗಡಿ, ಪು. ೧೬೪.
೧೬. ಎ.ಕ. ೯, ಬೇಲೂರು-೩೮೮, ಬಸ್ತಿಹಳ್ಳಿ, ಪು. ೩೫೧.
೧೭. ಎ.ಕ. ೨೪, ಚಿಕ್ಕನಾಯಕನಹಳ್ಳಿ-೧೪, ಕಮಲಾಪುರ, ಪು. ೩೭೦.
೧೮. ಎ.ಕ. IX, ಬೆಂಗಳೂರು-೨೧, ೨೪, ೪೧, ೧೨೯, ಪು. ೧೩, ೧೪, ೧೯, ೪೮.
೧೯. ಎ.ಕ. ೨೪, ಗುಬ್ಬಿ-೭೭, ಸಂಪಿಗೆ, ಪು. ೩೩೯.
೨೦. ಎ.ಕ. ೨೪, ಚಿಕ್ಕನಾಯಕನಹಳ್ಳಿ-೫೩, ಬರಗಿಹಳ್ಳಿ, ಪು. ೪೩೨.
೨೧. ಎ.ಕ. ೧೨, ಕಡೂರು-೧೧೬, ಪು. ೧೨೭.
೨೨. ಎ.ಕ. IX, ಹಾಗಲಹಳ್ಳಿ-೭೧, ಪು. ೭೬.
೨೩. ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೨೪. ಎ.ಕ. ೯, ಬೇಲೂರು-೩೨೮, ಹಳೇಬೀಡು, ಪು. ೩೦೯.
೨೫. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೪೯.
೨೬ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ಪು. ೧೩೦೯.
೨೭. J.D.M. Derrett, The Hoysalas, P. 34.
೨೮. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೧೩.
೨೯. ಪೂರ್ವೋಕ್ತ, ಪು. ೧೧೪.
೩೦. ಎ.ಕ. ೨, ಶ್ರವಣಬೆಳಗೊಳ-೧೭೨, ಪು. ೧೧೬-೧೧೭.
೩೧. ಎ.ಕ. ೨, ಶ್ರವಣಬೆಳಗೊಳ-೧೭೨, ಪು. ೧೧೬.
೩೨. ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೩೩. ಎ.ಕ. ೯, ಬೇಲೂರು-೩೩೮, ಹಳೇಬೀಡು, ಪು. ೩೧೭.
೩೪. ಎ.ಕ. ೯, ಬೇಲೂರು-೧೪೮, ಪು. ೧೦೯.
೩೫. ಎ.ಕ. ೯, ಬೇಲೂರು-೪೪೨, ಪುಷ್ಪಗಿರಿ, ಪು. ೪೧೬.

◆◆

ಗುಜ್ಜಾರಪ್ಪ ಎಚ್.

ವೀರಬಲ್ಲಾಳನ ನೆಲವೀಡು ಹಳ್ಳೂರು

ಹೊಯ್ಸಳ ವಂಶದ ಎರಡನೇ ವೀರಬಲ್ಲಾಳನು ಹಳ್ಳೂರನ್ನು ತನ್ನ ರಾಜಧಾನಿ/ನೆಲೆವೀಡು/ಸೈನ್ಯದ ನೆಲೆಯನ್ನಾಗಿ ಮಾಡಿಕೊಂಡಿದ್ದನು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಂಚಿಹೋಗಿರುವ ಹತ್ತೊಂಬತ್ತು ಶಾಸನಗಳು ಈ ಮಾಹಿತಿಯನ್ನು ಒದಗಿಸುತ್ತವೆ. ಈ ಹಳ್ಳೂರು ಗ್ರಾಮವು ವಿವಿಧ ಜಿಲ್ಲೆಗಳಲ್ಲಿ ಕಾಣಬರುವ ಮೂವತ್ತಾರು ಶಾಸನಗಳಲ್ಲಿ ಕಾಣಿಸಿಕೊಂಡಿದೆ. ಎರಡನೇ ವೀರಬಲ್ಲಾಳನು ಹಳ್ಳೂರು ಕೇಂದ್ರದಿಂದ ಅನೇಕ ವಿಜಯಗಳನ್ನು ಸಾಧಿಸುತ್ತಾನೆ. 'ಸೊರಟೂರು' ಮಹಾಯುದ್ಧದಲ್ಲಿ ಜಯ ಗಳಿಸಿದ ವೀರಬಲ್ಲಾಳನು 'ಪ್ರತಾಪಚಕ್ರವರ್ತಿ' ಬಿರುದನ್ನು ಸಂಪಾದಿಸಿ ಹೊಯ್ಸಳ ಸಾಮ್ರಾಜ್ಯಕ್ಕೆ ಚಕ್ರಾಧಿಪತ್ಯದ ಗೌರವವನ್ನು ತಂದುಕೊಟ್ಟನು. ಈ ಬಹು ದೊಡ್ಡ ಯುದ್ಧಕ್ಕೆ ರಂಗಪ್ರವೇಶ ಆಗಿದ್ದು ಹಳ್ಳೂರು ಕೇಂದ್ರದಿಂದ. ಈ ಮಹಾನ್ ವಿಜಯದಿಂದ ಸೇವುಣ ಮತ್ತು ಹೊಯ್ಸಳರ ಮಧ್ಯೆ ದ್ವೇಷ ಹೆಮ್ಮರವಾಗಿ ಬೆಳೆದು ಮುಂದೆ ಉತ್ತರ ಭಾರತದ ದಾಳಿಕೋರರು ಮೂರನೇ ಬಲ್ಲಾಳನನ್ನು ಮೋಸದಿಂದ ಕೊಲೆ ಮಾಡುವ ಮೂಲಕ ಇಡೀ ಹೊಯ್ಸಳ ವಂಶವೇ ನಾಶವಾಗುತ್ತದೆ. ಇಡೀ ದಕ್ಷಿಣ ಭಾರತ ಉತ್ತರದ ದಾಳಿಕೋರರಿಗೆ ಆಹುತಿಯಾಗುತ್ತದೆ. ದಕ್ಷಿಣ ಭಾರತದ ಸಂಸ್ಕೃತಿ, ಸಂಪತ್ತು, ಜನಜೀವನ ನಲುಗಿಹೋಗುತ್ತದೆ. ಇದೊಂದು ರಾಷ್ಟ್ರೀಯ ದುರಂತವಾಗಿ ಪರಿಣಮಿಸುತ್ತದೆ.

ಈ ದುರಂತ ಇತಿಹಾಸ ಕೇವಲ ಇತಿಹಾಸಕ್ಕೆ ಸೀಮಿತವಾಗಿರದೆ ವರ್ತಮಾನ ಮತ್ತು ಭವಿಷ್ಯದ ಭಾರತದ ಚರಿತ್ರೆಯಾಗುವ ಲಕ್ಷಣಗಳು ಕಂಡುಬರುತ್ತಿವೆ. ಇದಕ್ಕೆ ಹಳ್ಳೂರು ಸಾಕ್ಷಿಯಾಗುತ್ತದೆ. ಈ ಅಂಶಗಳನ್ನು ಪರಿಶೀಲಿಸುವುದು ಈ ಕಿರುಲೇಖನದ ಉದ್ದೇಶವಾಗಿದೆ. ಸುದೀರ್ಘ ಅವಧಿಗೆ ತುಂಗಭದ್ರಾ ನದಿಯನ್ನು ಗಡಿಯಾಗಿಟ್ಟುಕೊಂಡು ಈ ಎರಡೂ ರಾಜಕೀಯ ಶಕ್ತಿಗಳು ಕಾದಾಡಿದ್ದರ ಪರಿಣಾಮ ಒಂದು ಭಾಷಿಕ ಸಂಸ್ಕೃತಿಯ ಅಸ್ಮಿತೆಯ ಕನ್ನಡನಾಡು ದಕ್ಷಿಣ – ಉತ್ತರ ಕರ್ನಾಟಕ ಎಂಬ ಭಿನ್ನತೆಗೆ ಕಾರಣವಾಯಿತು. ಕರ್ನಾಟಕದ ಏಕೀಕರಣದ ಅನಂತರವೂ ಈ ಭಿನ್ನತೆ ಹೊಗೆ ಯಾಡುತ್ತಿದೆ. ಈ ಘಟನಾವಳಿಗಳು ವರ್ತಮಾನ/ಭವಿಷ್ಯ ಭಾರತದ ರಾಷ್ಟ್ರೀಯತೆಗೆ ರಾಷ್ಟ್ರದ ಭದ್ರತೆ ದೃಷ್ಟಿಯಿಂದ ಆತಂಕಕಾರಿ ಸಂಗತಿಗಳಾಗಿವೆ.

೩೪೬, ೧೮ನೇ ಕ್ರಾಸ್
೬ನೇ ಮುಖ್ಯರಸ್ತೆ
ಬಿಇಎಂಎಲ್ ಬಡಾವಣೆ
೧ನೇ ಹಂತ, ಬಸವೇಶ್ವರನಗರ
ಬೆಂಗಳೂರು-೫೬೦೦೭೯
ಮೊ: ೯೯೮೦೭ ೧೪೧೩೦

ಮರೆತುಹೋದ ಹಳ್ಳೂರು

ಹಳ್ಳೂರು ಇಂದಿನ ಹಾವೇರಿ ಜಿಲ್ಲೆ ಹಿರೇಕೇರೂರು ತಾಲೂಕಿನ ಗಡಿ ಗ್ರಾಮವಾಗಿದ್ದು, ಇಲ್ಲಿ ಸುಮಾರು ಆರುನೂರು ಮನೆಗಳಿವೆ. ಇದು ತುಂಗಭದ್ರಾ ನದಿಯ ಪಶ್ಚಿಮ ದಂಡೆಯಲ್ಲಿದೆ. ಈ ಗ್ರಾಮದ ದಕ್ಷಿಣಕ್ಕೆ ಅಂದಿನ ಶಿವಮೊಗ್ಗ ಜಿಲ್ಲೆ

ಇಂದಿನ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನ ಗಡಿಗ್ರಾಮಗಳಿವೆ. ಉತ್ತರಕ್ಕೆ ರಾಣಿಬೆನ್ನೂರು ತಾಲೂಕಿನ ಗ್ರಾಮಗಳಿವೆ. ಇತಿಹಾಸಕಾರರು ಹಳ್ಳೂರಿನಲ್ಲಿ ನೂತನ ಶಿಲಾಯುಗ, ಸೂಕ್ಷ್ಮಶಿಲಾಯುಗ, ಕಬ್ಬಿಣ, ತಾಮ್ರಯುಗಕ್ಕೆ ಸೇರಿದ ಮಾಹಿತಿಗಳನ್ನು ದಾಖಲಿಸಿದ್ದಾರೆ. ಹಳ್ಳೂರು ಕದಂಬರ ಬನವಾಸಿಗೆ ತೀರ ಸಮೀಪದಲ್ಲಿದೆ. ಪ್ರಾಚೀನ ಎಡೆವೆಟ್ಟ-೭೦ ಕಂಪಣದಲ್ಲಿ ಬರುತ್ತದೆ. ೧೯೪೮-೪೯ರಲ್ಲಿ ಆರ್.ಎಸ್. ಪಂಚಮುಖಿ ಮತ್ತು ತಂಡದವರು ಹಳ್ಳೂರಿನ ಐತಿಹಾಸಿಕ ಮಹತ್ವವನ್ನು ಪ್ರಥಮ ಬಾರಿಗೆ ಗುರುತಿಸಿದ್ದರು. ಡಾ. ಎಂ.ಎಸ್. ನಾಗರಾಜ ರಾವ್ ಅವರು, ಪ್ರೊ. ಅ. ಸುಂದರ ಮತ್ತು ತಂಡದವರೊಡನೆ ೧೯೬೪ರಲ್ಲಿ ಹಳ್ಳೂರಿನಲ್ಲಿ ಉತ್ಖನನ ನಡೆಸಿ ಹಳ್ಳೂರಿನ ಪ್ರಾಚೀನ ಇತಿಹಾಸವನ್ನು ದಾಖಲಿಸಿದರು. 'ದ ಪ್ರೋಟೋಹಿಸ್ಟಾರಿಕಲ್ ಕಲ್ಚರ್ಸ್ ಆಫ್ ದ ತುಂಗಭದ್ರಾ ವ್ಯಾಲಿ – ಎ ರಿಪೋರ್ಟ್ ಆನ್ ಹಳ್ಳೂರ್ ಎಸ್ಕವೇಷನ್' ಎಂಬ ಗ್ರಂಥವನ್ನು ೧೯೭೧ರಲ್ಲಿ ಧಾರವಾಡದಿಂದ ಪ್ರಕಟಿಸಿದರು. ಪ್ರಾಚೀನ ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಶಾಸನಗಳನ್ನು ಹಳ್ಳೂರಿನಲ್ಲಿ ಕಾಣಬಹುದು. ಹೀಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನು ತನ್ನೊಡಲೊಳಗೆ ತುಂಬಿಕೊಂಡು ಇಂದಿಗೂ ಜೀವಂತ ಗ್ರಾಮವಾಗಿ ಉಳಿದುಕೊಂಡಿದೆ. ಹಳ್ಳೂರಿನ ಬೆಟ್ಟದ ಮೇಲೆ ಶ್ರೀರಾಮಾನುಜ ಪರಂಪರೆಯ ರಂಗನಾಥ ದೇವಾಲಯವಿದೆ. ಇಲ್ಲಿರುವ ಬೆಟ್ಟದ ಸಾಲುಗಳ ಮಧ್ಯೆ ತುಂಗಭದ್ರೆ ಮೈದುಂಬಿ ಹರಿದು ಬಯಲುಸೀಮೆಯ ಕಡೆ ಸಾಗುತ್ತದೆ.

ಹಳ್ಳೂರು ಬೆಳಗುತ್ತಿ ಸಿಂದರ ೨ನೇ ರಾಜಧಾನಿಯಾಗಿತ್ತು

ಕ್ರಿ.ಶ. ಹತ್ತನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅನೇಕ ಸಿಂದ ಮನೆತನಗಳು ಸಾಮಂತರಾಗಿ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಇವುಗಳಲ್ಲಿ ಬೆಳಗುತ್ತಿ ಸಿಂದ ವಂಶದವರು ಬೆಳಗುತ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಆಳಿದ್ದಾರೆ. ಅವರು ತದನಂತರದಲ್ಲಿ ತಮ್ಮ ರಾಜಧಾನಿಯನ್ನು ಹಳ್ಳೂರಿಗೆ ವರ್ಗಾಯಿಸಿದರು. ಬೆಳಗುತ್ತಿ ಈಗಿನ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನಲ್ಲಿದೆ. ಬೆಳಗುತ್ತಿ ನ್ಯಾಮತಿ-ಹೊನ್ನಾಳಿ ಮಾರ್ಗದಿಂದ ಹಳ್ಳೂರಿಗೆ ಸುಮಾರು ೨೬ ಕಿ.ಮೀ. ದೂರದಲ್ಲಿದೆ. ಒಳದಾರಿಯಲ್ಲಿ ಬೆಳಗುತ್ತಿ-ಹಳ್ಳೂರು ನಡುವಣ ದೂರ ಸುಮಾರು ೨೦ ಕಿ.ಮೀ. ಬೆಳಗುತ್ತಿ ಕೇಂದ್ರದ ಸುತ್ತ ಒಂದು ಚಿಕ್ಕ ಪ್ರದೇಶದಲ್ಲಿ ಆಳ್ವಿಕೆಯಲ್ಲಿದ್ದ ಸಿಂದರು ಕ್ರಮೇಣ ಹದಿನಾರು ಕಂಪಣಗಳಿಗೆ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು.ಇವರ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅನೇಕ ಶಾಸನಗಳು ಹೊನ್ನಾಳಿ ಶಿಕಾರಿಪುರ ಹರಿಹರ ಹಾಗು ಹಿರೇಕೇರೂರು ತಾಲೂಕುಗಳಲ್ಲಿ ಕಂಡುಬಂದಿವೆ. ಹೊಯ್ಸಳರ ೨ನೇ ವೀರಬಲ್ಲಾಳ ತಾನು ಅಧಿಕಾರಕ್ಕೆ ಬಂದ ತತ್‌ಕ್ಷಣ ತೂದುಪಿಳ್ಳೆ ದಂಡನಾಯಕ ಎಂಬ ಅಧಿಕಾರಿಯನ್ನು ಬೆಳಗುತ್ತಿಗೆ ನೇಮಿಸಿದನು ಎಂಬುದಾಗಿ ಹೊನ್ನಾಳಿ ಶಾಸನ ಹೇಳುತ್ತದೆ. ಇವನು ಬೆಳಗುತ್ತಿಯಲ್ಲಿ ಮೂವತ್ತಮೂರು ವರ್ಷಗಳ ಕಾಲ ಇದ್ದನು. ೨ನೇ ವೀರಬಲ್ಲಾಳನ ಒಟ್ಟು ಒಂಬತ್ತು ರಾಣಿಯರಲ್ಲಿ ಒಬ್ಬಳಾದ ಉಮಾದೇವಿ ತನ್ನ ಸೈನ್ಯದೊಂದಿಗೆ ಬೆಳಗುತ್ತಿ ಸಿಂದರ ಮೇಲೆ ಆಕ್ರಮಣ ಮಾಡಿದಳು. ಕತ್ತಿಗೆ ಎಂಬ ಗ್ರಾಮದಲ್ಲಿ ಹೋರಾಟ ನಡೆದು ಇಬ್ಬರು ಮರಣ ಹೊಂದಿದ ಬಗ್ಗೆ ಹೊನ್ನಾಳಿ ಶಾಸನ ಹೇಳುತ್ತದೆ. ಉಮಾದೇವಿಯು ಸೈನ್ಯವನ್ನು ಮುನ್ನಡೆಸುವ ದಿಟ್ಟ ಮಹಿಳೆಯಾಗಿದ್ದು ಇವಳ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಅನೇಕ ಶಾಸನಗಳು ಹಾಸನ ಶಿವಮೊಗ್ಗ ಜಿಲ್ಲೆಗಳಲ್ಲಿ ದೊರೆತಿವೆ.

ಹಳ್ಳೂರು ಹೊಯ್ಸಳ ಎರಡನೇ ವೀರಬಲ್ಲಾಳನ ರಾಜಧಾನಿ/ನೆಲೆವೀಡಾಗಿತ್ತು

Veeraballala II seized Hallur in Dharwad district and proceeded further to capture a good part of Belvola ಎಂಬುದಾಗಿ ಪ್ರೊ. ಬಿ. ಷೇಕ್ ಅಲಿಯವರು ತಮ್ಮ Groundwork of Karnataka History ಎಂಬ ಗ್ರಂಥದಲ್ಲಿ ದಾಖಲಿಸಿದ್ದಾರೆ. ವೀರಬಲ್ಲಾಳನು ಕ್ರಿ.ಶ. ೧೧೭೩ರ ಜುಲೈ ೨೨ರ ಸೋಮವಾರದಂದು ಸಿಂಹಾಸನವನ್ನೇರಿದನು. ತನ್ನ ತಂದೆ ಒಂದನೇ ನರಸಿಂಹನ ದುರ್ಬಲ ಆಡಳಿತದಿಂದ ಬೇಸರಗೊಂಡಿದ್ದ ವೀರಬಲ್ಲಾಳನು ತತ್‌ಕ್ಷಣವೇ ಕಾರ್ಯಪ್ರವೃತ್ತನಾಗಿ ಆಕ್ರಮಣಕಾರಿ ಯುದ್ಧಗಳಲ್ಲಿ ತೊಡಗಿ ನಿರಂತರ ಜಯ ಗಳಿಸುತ್ತಾ ಸಾಗಿದನು. ಮೊದಲಿಗೆ ಕೊಂಗಾಳ್ವ ಚೆಂಗಾಳ್ವರನ್ನು ನಿಯಂತ್ರಣಕ್ಕೆ ತೆಗೆದುಕೊಂಡನು. ತನ್ನ ಆಕ್ರಮಣಕಾರಿ ಯುದ್ಧಗಳಿಂದ ತನ್ನ ರಾಜ್ಯದ ಉತ್ತರ ದಿಕ್ಕಿನ ಬೆಳ್ವೊಲ, ಕುಂತಳ ಪ್ರದೇಶಗಳನ್ನು ಆಕ್ರಮಣ ಮಾಡಲು ಸನ್ನದ್ಧನಾದನು. ತನ್ನ ರಾಜ್ಯದ ಉತ್ತರ ದಿಕ್ಕಿನ ಪ್ರದೇಶಗಳಿಗೆ ಪ್ರವೇಶ ಪಡೆಯಲು ಹಳ್ಳೂರನ್ನು ಕೇಂದ್ರ ಮಾಡಿಕೊಂಡನು. ವೀರಬಲ್ಲಾಳನ ಉತ್ತರ ದಿಕ್ಕಿನ ವಿಜಯಯಾತ್ರೆಗೆ ಹಳ್ಳೂರು ಮಹಾದ್ವಾರವಾಯಿತು. ವಿವಿಧ ಜಿಲ್ಲೆಗಳಲ್ಲಿ ಕಾಣಸಿಗುವ ಸುಮಾರು ಹತ್ತೊಂಬತ್ತು ಶಾಸನಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಬೆಳ್ವೊಲ ಪ್ರದೇಶವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡ ಮೇಲೆ ಕುಂತಳ ಸಾಮ್ರಾಜ್ಯದ ಮೇಲೆ ಶ್ರೇಷ್ಠತೆಯನ್ನು ಸಾಧಿಸಲು ವೀರಬಲ್ಲಾಳನು ಸಿದ್ಧನಾದನು. ಇಡೀ ಭಾರತದೇಶಕ್ಕೆ ಪ್ರಭುವಾಗಲು ಬಯಸಿದನು. ಈ ಆಸೆಯು ಅವನಿಂದ ಅದ್ಭುತ

ಸಾಧನೆಗಳನ್ನು ಮಾಡಿಸಿತು. ಅದು ತನ್ನೊಂದಿಗೆ ಮುಂದಿನ ಪ್ರತೀಕಾರದ ಬೀಜಗಳನ್ನು ಇಟ್ಟುಕೊಂಡಿತ್ತು. ಇವನಷ್ಟೇ ಮಹತ್ವಾಕಾಂಕ್ಷಿಗಳಾದ ಸೇವುಣರು ಉತ್ತರದ ಕಡೆಯಿಂದ ದಕ್ಷಿಣದ ಹೊಯ್ಸಳರ ರಾಜ್ಯದ ಕಡೆ ನುಗ್ಗಲು ಪ್ರಯತ್ನಿಸುತ್ತಿದ್ದರು. ಇವರಿಬ್ಬರಿಗೂ ತುಂಗಭದ್ರಾ ನದಿ ಗಡಿಯಾಯಿತು. ಕೊನೆಗೆ ಗದುಗಿನ ಸಮೀಪದ ಸೊರಟೂರು ಎಂಬಲ್ಲಿ ಸೇವುಣರ ಬಿಲ್ಲಮ–ಜೈತುಗಿ ಮತ್ತು ವೀರಬಲ್ಲಾಳನ ನಡುವೆ ಭೀಕರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ವೀರಬಲ್ಲಾಳನಿಗೆ ಜಯ ಲಭಿಸಿತು. ಸೇವುಣರನ್ನು ಕೃಷ್ಣಾನದಿಯ ಆಚೆಗೆ ಅಟ್ಟಿದನು. ಲೊಕ್ಕಿಗುಂಡಿಯನ್ನು ವೀರಬಲ್ಲಾಳ ಕೆಲಕಾಲ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಹೊಯ್ಸಳರ ಈ ಬಹು ದೊಡ್ಡ ವಿಜಯ ಹಾಗೂ ಸೇವುಣರ ಸೋಲು ಇಬ್ಬರ ಮಧ್ಯೆ ದ್ವೇಷದ ಬೀಜಗಳನ್ನು ಬಿತ್ತಿತು. ಮುಂದೆ ಸುದೀರ್ಘ ಅವಧಿಗೆ ಇವರಿಬ್ಬರೂ ಕಾದಾಡಿ ಇಬ್ಬರೂ ದುರ್ಬಲರಾಗಿ ಉತ್ತರದ ಮುಸ್ಲಿಂ ದಾಳಿಕೋರರಿಗೆ ಸುಲಭದ ತುತ್ತಾದರು. ಕಾಕತೀಯರು ಮತ್ತು ಪಾಂಡ್ಯರ ಸ್ಥಿತಿಯೂ ಇದೇ ಆಗಿತ್ತು.

ಡೆರೆಟ್‌ರ ದೃಷ್ಟಿಯಲ್ಲಿ ಹಳ್ಳೂರಿನ ಐತಿಹಾಸಿಕ ಮಹತ್ವ

ಹಳ್ಳೂರಿನ ಐತಿಹಾಸಿಕ ಮಹತ್ವದ ಬಗ್ಗೆ ಅನೇಕ ದಾಖಲೆಗಳ ಲಭ್ಯತೆ ಇದೆ. ಆದರೆ ಹಳ್ಳೂರು ಇತಿಹಾಸಜ್ಞರ ಅವಜ್ಞೆಗೆ ಒಳಗಾಗಿರುವಂತೆ ಕಾಣುತ್ತದೆ. ಇಂದು ಸಾಮಾನ್ಯ ಹಳ್ಳಿಯಾಗಿರುವ ಹಳ್ಳೂರು ೩೬ ಶಾಸನಗಳಲ್ಲಿ ಪ್ರಸ್ತಾಪಗೊಂಡಿದೆ. ಎರಡನೇ ವೀರಬಲ್ಲಾಳನು ಹಳ್ಳೂರನ್ನು ತನ್ನ ರಾಜಧಾನಿ/ನೆಲೆವೀಡು/ಸೈನ್ಯಶಕ್ತಿಯ ನೆಲೆಯನ್ನಾಗಿ ಮಾಡಿಕೊಂಡ ಬಗ್ಗೆ ೧೯ ಶಾಸನಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆ.

ಜೆ. ಡಂಕನ್ ಎಂ. ಡೆರೆಟ್ ಅವರು ‘The Hoysalas’ ಎಂಬ ಗ್ರಂಥವನ್ನು ರಚಿಸಿದ್ದು, ಇದು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಲ್ಲಿ ೧೯೫೭ರಲ್ಲಿ ಪ್ರಕಟಗೊಂಡಿದೆ. ದೂರದ ಡೆರೆಟ್ ನಮ್ಮ ಹಳ್ಳೂರನ್ನು ಹೇಗೆ ಗ್ರಹಿಸಿದ್ದಾರೆ ಎಂಬುದನ್ನು ಅವರ ಮಾತುಗಳಲ್ಲೇ ತಿಳಿಯಬಹುದು.

‘...... Ballala now began to inspect his northern possessions; he commenced to use as his standing camp Hallavur, a place in an excellent strategic position, a little less than 80 miles from Dorasamudra, and about 20 miles upstream from Harihara. He was there in May 1180, and seems to have made full use thereafter of its amenities: it was in a fine situation for the receipt of intelligence from every direction, while from it one might move at the shortest notice into Banavase on the west or the Pandya or Chola Nads on the east; an invasion of the northern regions was as easily effected as a sudden retreat to the Hoysala Country while the town itself was admirably placed for defence on every side but the south.

In 1181 operations began afresh in Banavase…’

ಹೀಗೆ ಎರಡನೇ ವೀರಬಲ್ಲಾಳನು ತನ್ನ ರಾಜ್ಯದ ಉತ್ತರ ದಿಕ್ಕಿನ ಬೆಳ್ವೊಲ ಮತ್ತು ಕುಂತಳ ಪ್ರದೇಶಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಹಳ್ಳೂರನ್ನು ಕೇಂದ್ರಸ್ಥಳವನ್ನಾಗಿ ಮಾಡಿಕೊಂಡಿದ್ದನು. ಕ್ರಿ.ಶ. ೧೧೮೦ರಿಂದ ೧೨೧೮ರವರೆಗೆ ಸುಮಾರು ೩೬ ವರ್ಷ ಹಳ್ಳೂರು ಕೇಂದ್ರದೊಂದಿಗೆ ನಿಕಟ ಸಂಪರ್ಕ ಹೊಂದಿದ್ದನು. ಹೊಯ್ಸಳ ವಂಶದ ಕೀರ್ತಿಯ ಉನ್ನತಿಗೆ ಮತ್ತು ಅವನತಿಗೆ ಹಳ್ಳೂರು ಮಹಾದ್ವಾರವಾಯಿತು. ವೀರಬಲ್ಲಾಳನು ತನ್ನ ಹೋರಾಟದ ಬದುಕಿನ ಬಹುಮುಖ್ಯ ಅವಧಿಯನ್ನು ಹಳ್ಳೂರು ಮೂಲಕವೇ ನಡೆಸಿದನು. ಕರ್ನಾಟಕದ ಮಧ್ಯಭಾಗದಲ್ಲಿರುವ ಹಳ್ಳೂರು ದೋರಸಮುದ್ರಕ್ಕೆ ಸಂಪರ್ಕ ಸೇತುವೆಯಾಯಿತು.

ಅಧ್ಯಯನದ ಫಲಶ್ರುತಿ

೧. ಮುಸ್ಲಿಂ ದಾಳಿಕೋರರು ದೆಹಲಿಯನ್ನು ಕೇಂದ್ರ ಮಾಡಿಕೊಂಡು ಇಡೀ ಉತ್ತರ ಭಾರತದ ಮೇಲೆ ದಾಳಿ ಮಾಡಿ ತಮ್ಮ ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು. ಉತ್ತರ ಭಾರತದ ಸಾರ್ವಜನಿಕ ಬದುಕು ನಲುಗಿಹೋಗಿತ್ತು. ಇತಿಹಾಸದ ಈ ಸತ್ಯ ಆ ಕಾಲದಲ್ಲಿ ದಕ್ಷಿಣ ಭಾರತವನ್ನು ಆಳುತ್ತಿದ್ದ ಎಲ್ಲ ರಾಜವಂಶದವರಿಗೆ ತಿಳಿದಿತ್ತು. ದೆಹಲಿ ಕೇಂದ್ರದ ಮುಸ್ಲಿಂ ಆಡಳಿತಗಾರರು ಉತ್ತರ ಭಾರತದ ಮೇಲೆ ನಿಯಂತ್ರಣ ಸಾಧಿಸಿದ ಮೇಲೆ ದಕ್ಷಿಣ ಭಾರತದ ಮೇಲೆ ದಾಳಿ ಮಾಡಲು ಸನ್ನದ್ಧರಾದರು. ಈ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಪ್ರಬಲರಾಗಿ ಆಡಳಿತ ನಡೆಸುತ್ತಿದ್ದ ಹೊಯ್ಸಳರು ಮತ್ತು ಸೇವುಣರು (ದೇವಗಿರಿಯ ಯಾದವರು), ತಮಿಳು ಮತ್ತು ತೆಲುಗು ಪ್ರದೇಶಗಳಲ್ಲಿನ ಕಾಕತೀಯರು ಮತ್ತು ಪಾಂಡ್ಯರು, ಉತ್ತರ ಭಾರತದ ಮುಸ್ಲಿಂ ದಾಳಿಕೋರರ ಅಪಾಯವನ್ನು ಅರಿತು ಒಂದು ಸಂಯುಕ್ತ ರಂಗವನ್ನು ರಚಿಸಿಕೊಂಡು

ಒಗ್ಗಟ್ಟಿನಿಂದ ಒಗ್ಗೂಡಿದ್ದರೆ ದಕ್ಷಿಣ ಭಾರತದ ಮೇಲೆ ಒಬ್ಬನೇ ಒಬ್ಬ ಮುಸ್ಲಿಂ ದಾಳಿಕೋರರ ಹೆಜ್ಜೆ ಇಡಲು ಸಾಧ್ಯವಿರಲಿಲ್ಲ. ಆದರೆ ಹಾಗಾಗಲಿಲ್ಲ. ಇವರೆಲ್ಲರೂ ಪರಸ್ಪರ ನಿರಂತರ ಯುದ್ಧದಲ್ಲಿ ನಿರತರಾಗಿದ್ದರು. ಒಗ್ಗಟ್ಟಿನ ಕೊರತೆಯಿಂದಾಗಿ ದುರಂತ ನಡೆದೇಹೋಯಿತು.

೨. ಹೊಯ್ಸಳರು ಸೇವುಣರು ತುಂಗಭದ್ರಾ ನದಿಯನ್ನು ಗಡಿಯಾಗಿಟ್ಟುಕೊಂಡು ಸುದೀರ್ಘ ಅವಧಿಗೆ ಕಾದಾಟ ನಡೆಸಿದರು. ಎರಡೂ ಕನ್ನಡ ರಾಜ್ಯಗಳು; ಕನ್ನಡ ಭಾಷಿಕ ಸಂಸ್ಕೃತಿಗೆ ಒಳಪಟ್ಟ ಪ್ರದೇಶಗಳು. ಇವರು ಸುದೀರ್ಘ ಕಾಲ ಕಾದಾಡಿದ್ದರಿಂದ ಜನರ ನಡುವೆ ಸಂಪರ್ಕ ಕಡಿದುಹೋಗಿ ಕಂದರವುಂಟಾಯಿತು. ಕ್ರಿ.ಶ. ೧೨ನೇ ಶತಮಾನದಲ್ಲೇ ಈ ಕಂದರವುಂಟಾಯಿತು. ಈ ಅಂಶವನ್ನು ಇತಿಹಾಸಕಾರರು ದಾಖಲಿಸಿದ್ದಾರೆ. ಸ್ವಾತಂತ್ರ್ಯಾನಂತರ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆ ಮಾಡಲಾಗಿದೆ. ಇದರ ಉದ್ದೇಶ ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಈಗಲೂ ಕರ್ನಾಟಕ ಏಕೀಕರಣದ ನಂತರವೂ ಉತ್ತರ ಕರ್ನಾಟಕ–ದಕ್ಷಿಣ ಕರ್ನಾಟಕ ಎಂಬ ಅಸಮಾನತೆಯ ಹೊಗೆ ಆಗಾಗ ಕಾಣಿಸಿಕೊಳ್ಳುತ್ತಿದೆ. ಈ ಪರಿಸ್ಥಿತಿ ದೇಶದ ಇತರ ರಾಜ್ಯಗಳಿಗೆ ಹಬ್ಬಿದರೆ ಒಕ್ಕೂಟ ವ್ಯವಸ್ಥೆಯ ಗತಿ ಏನಾಗಬಹುದು? ಗಂಭೀರ ಚಿಂತನೆಯ ಅಗತ್ಯವಿದೆ.

೩. ಹಳ್ಳೂರು ಇತಿಹಾಸಕಾರರ ಅವಜ್ಞೆಗೆ ಒಳಗಾಗಿದೆ. ಈ ಊರು ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನು ತನ್ನೊಡಲೊಳಗೆ ತುಂಬಿಕೊಂಡು ಇಂದಿಗೂ ಜೀವಂತ ಗ್ರಾಮವಾಗಿ ಉಳಿದುಕೊಂಡಿದೆ. ರಾಷ್ಟ್ರೀಯ ಮಹತ್ವದ ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಹಳ್ಳೂರಿನ ಬಗ್ಗೆ ವ್ಯವಸ್ಥಿತವಾದ ಅಧ್ಯಯನ ನಡೆಯಬೇಕಿದೆ.

೪. ತುಂಗಭದ್ರಾ ನದಿ ದಂಡೆಯಲ್ಲಿರುವ ಹಳ್ಳೂರಿನ ಬೆಟ್ಟದ ಮೇಲೆ ಶ್ರೀರಾಮಾನುಜ ಪರಂಪರೆಯ ಪುರಾತನ ಶ್ರೀಲಕ್ಷ್ಮೀ ರಂಗನಾಥ ದೇವಾಲಯವಿದೆ. ಸುತ್ತಮುತ್ತಲ ಗ್ರಾಮಸ್ಥರ ಭಕ್ತಿಯ ಕೇಂದ್ರವಾಗಿರುವ ಈ ದೇವಾಲಯದಲ್ಲಿ ವರ್ಷವಿಡೀ ಅನೇಕ ಧಾರ್ಮಿಕ ಚಟುವಟಿಕೆಗಳು ನಡೆಯುತ್ತವೆ. ದೇವಸ್ಥಾನದ ಆಡಳಿತ ಮಂಡಳಿ ಇದನ್ನು ಅಭಿವೃದ್ಧಿಗೊಳಿಸುತ್ತಿದೆ. ಇಲ್ಲಿ ನಡೆಯುವ ಜಾತ್ರೆಯಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಶ್ರದ್ಧೆಯಿಂದ ಭಾಗವಹಿಸುತ್ತಾರೆ. ಈ ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ದಕ್ಷಿಣ ಭಾರತದ ವಿವಿಧ ರಂಗನಾಥ ದೇವಾಲಯಗಳ ಕುರಿತು ಸಂಶೋಧನೆ ನಡೆಯಬೇಕಿದೆ.

೫. ಭೌಗೋಳಿಕ ಅಂಶಗಳು ಇತಿಹಾಸ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬ ಮಾತಿದೆ. ತುಂಗಭದ್ರಾ ನದಿ ಪಾತ್ರದಲ್ಲಿ ಸೃಷ್ಟಿಯಾಗಿರುವ ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಬಗ್ಗೆ ಗಟ್ಟಿ ಚಿಂತನೆಯ ಅಗತ್ಯ ಇದೆ. ಹರಿಹರ ಸಮನ್ವಯದ ಧಾರ್ಮಿಕ ಇತಿಹಾಸ ಈ ನದಿ ಪಾತ್ರದಲ್ಲಿ ಇಂದಿಗೂ ಜೀವಂತವಾಗಿದೆ.

೬. ಇಲ್ಲಿ ಹರಿಯುವ ತುಂಗಭದ್ರಾ ನದಿ ಇದೆ. ರಾಷ್ಟ್ರೀಯ ಹೆದ್ದಾರಿ ೪ಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಉತ್ತರ ಮತ್ತು ದಕ್ಷಿಣ ಕರ್ನಾಟಕವನ್ನು ಬೆಸೆಯುವ ಮಧ್ಯದ ಆಯಕಟ್ಟಿನ ಸ್ಥಳದಲ್ಲಿದೆ. ಈ ಸ್ಥಳವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಿದಲ್ಲಿ ಸುತ್ತಮುತ್ತಲ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸುವಂತಾಗಲಿ.

ಆಕರಗ್ರಂಥಗಳು

೧. Mysore Archeological Survey, Epigraphia Carnatica Vol. XIV, Part–I, General Index, published by Dr. M.H. Krishna, Director of Archeological Researches in Mysore, 1934.

೨. Gopal B.R., Karnataka Inscriptions, Vol. VI, by Kannada Research Institute, Dharwar, 1973.

೩. ಶಂಕರನಾರಾಯಣ ರಾವ್ ಎಚ್.ಎಂ., ೧೯೮೨, ಹರಿಹರ ದೇವಾಲಯ, ಶಾರದಾ ಮಂದಿರ, ರಾಮಯ್ಯಂಗಾರ್ ರಸ್ತೆ, ಮೈಸೂರು.

೪. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕದ ಸೇವುಣರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೫. ಸುಂದರ ಅ. (ಸಂ), ೧೯೯೭, ಕರ್ನಾಟಕ ಚರಿತ್ರೆ ಸಂಪುಟ ೧, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

೬ ಸುರೇಂದ್ರರಾವ್ ಬಿ. (ಸಂ), ೧೯೯೭, ಕರ್ನಾಟಕ ಚರಿತ್ರೆ ಸಂಪುಟ ೨, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

೭. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್ (ಸಂ), ೨೦೦೧, ಮಲೆಕರ್ನಾಟಕದ ಅರಸುಮನೆತನಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

◆◆

ಮಹಾದೇವಪ್ಪ ರಂಗಣ್ಣನವರ

ಐತಿಹಾಸಿಕ ನೆಲೆಯಾಗಿ ಉದ್ರಿ

ಮಲೆನಾಡು ಪ್ರದೇಶವಾದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಉದ್ರಿ ಎಂಬ ಗ್ರಾಮ ಪ್ರಾಚೀನ ಕಾಲಘಟ್ಟದಲ್ಲಿ ಒಂದು ರಾಜಧಾನಿಯ ಆಳ್ವಿಕೆಗೆ ಒಳಗಾಗಿ ಇಂದು ಒಂದು ಕುಗ್ರಾಮದಂತೆ ಕಂಡುಬರುತ್ತಿದೆ. ಅದರೆ ಅದರ ಛಾಯೆ ಮಾತ್ರ ಇಂದಿಗೂ ಮಾಸಿರುವಂತೆ ಕಾಣುವುದಿಲ್ಲ, ಏಕೆಂದರೆ ಆ ಗ್ರಾಮದ ಉದ್ದ ಅಗಲಕ್ಕೂ ಇತಿಹಾಸದ ಕುರುಹುಗಳು ತುಂಬಿತುಳುಕುತ್ತಿವೆ. ಉದ್ರಿ ಗ್ರಾಮ ತಾಲ್ಲೂಕ ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ಹನ್ನೆರಡು–ಹದಿಮೂರನೇ ಶತಮಾನದಲ್ಲಿ ಜಿಡ್ಡಳಿಗೆ ನಾಡೆಂದು ಪ್ರಸಿದ್ದಿ ಪಡೆದಿತ್ತು. ಅದರ ಪ್ರಮುಖ ಕೇಂದ್ರವೇ ಈ ಉದ್ರಿ, ಶಾಸನಗಳಲ್ಲಿ ಈ ಗ್ರಾಮವನ್ನು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಉದ್ದರೆ, ಉದ್ದರಿಪೂರ, ಯುದ್ದರೆ, ಜದರದುರ್ಗ, ಮತ್ತು ಉದ್ದರೆಯ ಪುರ ಹೀಗೆ ಅನೇಕ ಹೆಸುರುಗಳಿಂದ ಈ ಗ್ರಾಮವನ್ನು ಗುರುತಿಸಲಾಗಿದೆ. ಈ ಗ್ರಾಮದಲ್ಲಿ ಅನೇಕ ದೇವಾಲಯಗಳು ಮತ್ತು ಐತಿಹಾಸಿಕ ಕುರುಹುಗಳು ತುಂಬಿ ತುಳುಕುತ್ತಿವೆ. ಈ ಗ್ರಾಮವೂ ಸಾಂಸ್ಕೃತಿಕವಾಗಿ ಬಹಳ ಶ್ರೀಮಂತಿಕೆಯಿಂದ ಮೆರೆದುದರ ಬಗೆಗೆ ಅನೇಕ ಕುರುಹುಗಳು ಕಂಡು ಬರುತ್ತವೆ. ಉದಾ: ಈ ಗ್ರಾಮದಲ್ಲಿ ಇಂದಿಗೂ ಕಂಡುಬರುವ ಬನಶಂಕರಿ ದೇವಾಲಯ, ವೀರಭದ್ರ ದೇವಾಲಯ, ಈಶ್ವರ ದೇವಾಲಯ, ಲಕ್ಷ್ಮೀನಾರಾಯಣ ದೇವಾಲಯ, ಭೂಪೇಶ್ವರ ದೇವಾಲಯ ಮತ್ತು ಜೈನಬಸದಿಗಳು ಕಂಡುಬರುತ್ತವೆ. ಇದರೊಂದಿಗೆ ಗ್ರಾಮದ ಅನೇಕ ಪ್ರದೇಶದಲ್ಲಿ ಒಕ್ಕೈಮಾಸ್ತಿಗಲ್ಲುಗಳು. ವೀರಗಲ್ಲುಗಳು. ಮಹಾಸತಿ ಕಲ್ಲುಗಳು, ಮೂರ್ತಿಶಿಲ್ಪಗಳು, ನಾಗರಕಲ್ಲುಗಳು, ಕೋಟೆ. ಮುಂತಾದ ಸ್ಮಾರಕಗಳು ಇಲ್ಲಿ ಕಂಡುಬರುತ್ತದೆ. ಈ ವಿಷಯದ ಮೇಲೆ ಈಗಾಗಲೇ ಅನೇಕ ಜನ ವಿದ್ವಾಂಸರುಗಳು ಕೆಲಸ ಮಾಡಿದ್ದರು ಸಹ ಇನ್ನು ಹೊಸ ಅಧ್ಯಯನಕ್ಕೆ ಅವಕಾಶ ಕಲ್ಪಿಸುವಷ್ಟು ಆಕರಗಳು ಇಲ್ಲಿವೆ.

ಉದ್ರಿಯ ಅರಸರು ಪ್ರಾಚೀನ ಗಂಗ ಅರಸರ ಕಾಲದಿಂದಲೇ ಸಾಮಂತರಾಗಿ ಆಡಳಿತವನ್ನು ಪ್ರಾರಂಭಿಸಿ, ಕಲ್ಯಾಣಿ ಚಾಲುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಮಹಾಮಾಂಡಲಿಕರಾಗಿ ಆಳ್ವಿಕೆ ಮಾಡಿರುವಂತೆ ಕಂಡುಬರುತ್ತದೆ. ಉದ್ರಿಯ ಇತಿಹಾಸದಲ್ಲಿ ಜಿಡ್ಡಳಿಗೆ ನಾಡೆಂದು ಪ್ರಸಿದ್ಧಿ ಪಡೆದಿದೆ. ಕ್ರಿ.ಶ. ೧೧೪೭ರ ಒಂದು ಶಾಸನದಲ್ಲಿ ಉದ್ದರೆಯ ಪ್ರಾಕೃತಿಕ ವರ್ಣನೆ ಕಂಡುಬರುತ್ತದೆ. ಅದರಂತೆ ಇಲ್ಲಿ ವೈವಿಧ್ಯಮಯವಾದ ಬೆಳೆಗಳಾದ ಶ್ರೀಗಂಧ, ತೆಂಗು, ಅಡಿಕೆ, ಸಂಪಿಗೆ, ಅಶೋಕ, ಜಿಂಜರ್ ನೇರಳೆ, ಮುಂತಾದ ಗಿಡಮರಗಳಿಂದ ಸಮೃದ್ಧವಾಗಿತ್ತೆಂದು ಮತ್ತು ಇದು ಚಂದ್ರನಂತೆ ಹೊಳೆಯುವುದೆಂದು ಹೇಳಿರುವುದು ಕಂಡುಬರುತ್ತದೆ. ಇಂತಹ ಪರಿಸರದಲ್ಲಿ ಆಳ್ವಿಕೆ ಮಾಡಿರುವ ಅರಸರು

ಸಹಾಯಕ ಪ್ರಾಧ್ಯಾಪಕರು
ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ
ಮಹಿಳಾ ಕಾಲೇಜು, ಸಾಗರ
ಶಿವಮೊಗ್ಗ ಜಿಲ್ಲೆ
ಮೊ: ೯೯೦೧೯ ೩೩೧೮೦

ಕಲಿಗಳಾಗಿದ್ದರು, ವೀರರಾಗಿದ್ದರು ಎಂದು ಇದೇ ಮನೆತನಕ್ಕೆ ಸಂಬಂಧಿಸಿದ ೧೧೯೬ ರ ಶಾಸನದಲ್ಲಿ ಹೇಳಿರುವುದು ತಿಳಿದುಬರುತ್ತದೆ. ಇಲ್ಲಿ ಆಳ್ವಿಕೆ ಮಾಡಿರುವ ಬಿಟ್ಟಿಗ, ಯೆಕ್ಕಲದೇವ ಎರಡನೇ ಯೆಕ್ಕಲರು ಪ್ರಮುಖರಾಗಿದ್ದು, ಬಹಳ ವೀರರಾಗಿದ್ದರೆಂದು ತಿಳಿದುಬರುವುದು.

ಇವರ ಕಾಲಕ್ಕೆ ಸಂಬಂಧಿಸಿದಂತೆ ಈ ಗ್ರಾಮದಲ್ಲಿ ಅನೇಕ ಕುರುಹುಗಳು ಕಂಡುಬರುತ್ತವೆ. ಅದರಲ್ಲಿ ಪ್ರಮುಖವಾದವುಗಳೆಂದರೆ ಅಲ್ಲಿನ ದೇವಾಲಯಗಳು ಹೀಗಾಗಿ ಅವುಗಳ ಬಗೆಗೆ ವಿವರಿಸಲಾಗಿದೆ.

೧. ಲಕ್ಷ್ಮೀ ನರಸಿಂಹದೇವಾಲಯ : ಉದ್ರಿಯ ಅರಸರು ಲಕ್ಷೀ ನರಸಿಂಹನ ಆರಾಧನೆ ಮಾಡುವುದರ ಬಗೆಗೆ ನಮಗೆ ಅಲ್ಲಿನ ಅವಶೇಷಗಳಿಂದ ತಿಳಿಯುವುದು. ಅವರ ಆಸ್ಥಾನದಲ್ಲಿದ್ದ ಬ್ರಹ್ಮಪುರಿ ಜನರಿಗಾಗಿ ಈ ದೇವಾಲಯ ನಿರ್ಮಿಸಿರುವಂತೆ ಕಂಡುಬರುತ್ತದೆ. ಏಕೆಂದರೆ ಕ್ರಿ.ಶ. ೧೨೧೩ರ ಶಾಸನವೊಂದು ಲಕ್ಷ್ಮೀ ನರಸಿಂಹ ದೇವಾಲಯಕ್ಕೆ ಯಕ್ಕಲ ಅರಸನು ದಾನ ಮಾಡಿದ ಉಲ್ಲೇಖ ಕಂಡುಬರುವುದು. ಕಪ್ಪುಶಿಲೆಯಿಂದ ನಿರ್ಮಾಣಗೊಂಡಿರುವ ಈ ದೇವಾಲಯವೂ ೩೦ ಅಡಿ ಉದ್ದ ೨೦ ಅಡಿ ಅಗಲವಾದ ವಿಸ್ತೀರ್ಣದಲ್ಲಿ ರಚಿಸಲ್ಪಟ್ಟಿದೆ. ದೇವಾಲಯದ ತಳವಿನ್ಯಾಸವೂ ಆಯತಕಾರವಾಗಿದ್ದು ಉತ್ತರಾಭಿಮುಖವಾಗಿದೆ. ಮೂರು ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದ್ದು, ಇದರಲ್ಲಿ ಯಾವುದೇ ರೀತಿಯ ಕೆತ್ತನೆಗಳು ಕಂಡುಬರುವುದಿಲ್ಲ. ಈ ದೇವಾಲಯದ ಭಿತ್ತಿ ಭಾಗದಲ್ಲಿ ಸರಳವಾದ ಹೂವಿನ ಕೆತ್ತನೆಗಳು ಕಂಡುಬರುತ್ತವೆ. ಮುಂದೆ ಬಾಗಿದ ಚಜ್ಜ ಕಂಡುಬರುತ್ತದೆ. ಗರ್ಭಗೃಹ ಮೂರು ಅಡಿ ಜಗತಿಯ ಮೇಲೆ ಲಕ್ಷ್ಮೀ ನಾರಾಯಣನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಆನೆ, ಆಂಜನೇಯ, ನರಸಿಂಹ, ಪರುಶುರಾಮ, ವೀರಭದ್ರ, ಮೀನು ಮುಂತಾದ ಚಿತ್ರಗಳನ್ನು ಕೆತ್ತಲಾಗಿದೆ. ಗರ್ಭಗೃಹದ ನಂತರದ ಭಾಗವೇ ಅಂತರಾಳ ಅಥವಾ ಸುಖನಾಸಿ. ಇದು ಚೌಕಾಕಾರವಾಗಿದ್ದು ಇದರಲ್ಲಿ ಯಾವುದೇ ತರಹದ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ. ದ್ವಾರಬಾಗಿಲು ಇದು ಪಟ್ಟಿಗೆಗಳಿಂದ ಕೂಡಿದ್ದು ನಾಲ್ಕು ಪಟ್ಟಿಗೆಗಳಲ್ಲಿ ಯಾವುದೇ ರೀತಿಯ ಅಲಂಕಾರಿಕ ಕೆತ್ತನೆಗಳು ಕಂಡುಬರುವುದಿಲ್ಲ. ಅದರೆ ಮಧ್ಯದ ಪಟ್ಟಿಗೆಯಲ್ಲಿ ಹೂಬಳ್ಳಿಗಳಿಂದ ಅಲಂಕಾರ ಮಾಡಿರುವುದು ಕಂಡುಬರುತ್ತದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿರುವುದು ಕಂಡುಬರುತ್ತದೆ. ಗರ್ಭಗೃಹದಲ್ಲಿ ನಾಲ್ಕು ಅರ್ಧಗಂಬಗಳಿವೆ, ದೇವಾಲಯದ ಮೇಲ್ಚಾವಣಿಯೂ ಸರಳವಾಗಿದ್ದು ಯಾವುದೇ ರೀತಿಯ ಅಲಂಕಾರ ಅಥವ ಕೆತ್ತನೆಗಳನ್ನು ಹೊಂದಿರುವುದಿಲ್ಲ.

೨. ಈಶ್ವರ ದೇವಾಲಯ : ಕಲ್ಯಾಣಿಚಾಲುಕ್ಯರ ಶೈಲಿಯಲ್ಲಿ ರಚಿಸಿರುವ ದೇವಾಲಯಗಳಲ್ಲಿ ಇದು ಒಂದು. ಈ ದೇವಾಲಯದ ಉಲ್ಲೇಖವು ಕ್ರಿ.ಶ. ೧೨೫೫ರ ಕಾಲದಲ್ಲಿ ಕಂಡುಬರುತ್ತದೆ. ಉದ್ರಿ ಅರಸರ ಸಾರಂಗದೇವನ ಕಾಲದಲ್ಲಿ ಈಶ್ವರ ದೇವರ ನಂದಾದೀವಿಗೆಗೆ ದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ. ಹೀಗಾಗಿ ಇದು ಇವನಿಗಿಂತಲೂ ಪೂರ್ವದಲ್ಲಿ ಅಂದರೆ ಯಕ್ಕರಸನ ಕಾಲದಲ್ಲಿ ಕಟ್ಟಿಸಿದ್ದಾಗಿರಬೇಕೆಂದು ತಿಳಿಯುವುದು. ಈ ದೇವಾಲಯವೂ ೩೦ ಅಡಿ ಉದ್ದ ೩೦ ಅಡಿ ಅಗಲವಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದೆ. ಇದರ ತಳವಿನ್ಯಾಸವೂ ಆಯತಕಾರದಲ್ಲಿದ್ದು ಪೂರ್ವಾಭಿಮುಖವಾಗಿದೆ. ಇಲ್ಲಿ ಅದಿಷ್ಠಾನವು ನಾಲ್ಕು ಅಡಿ ಎತ್ತರದಲ್ಲಿರುವುದನ್ನು ಕಾಣಬಹುದು. ಇದರಲ್ಲಿ ಮೂರು ಪಟ್ಟಿಗೆಗಳು ಕಂಡುಬರುತ್ತವೆ ಅವುಗಳನ್ನು ಈ ರೀತಿ ಹೆಸರಿಸಬಹುದು ಉಪನ, ಕಂಠ, ಕುಮುದ. ಇವು ಸರಳವಾಗಿರುವುದು ಕಂಡುಬರುತ್ತದೆ. ಸರಳವಾದ ಭಿತ್ತಿಯನ್ನು ಹೊಂದಿದ್ದು ಮಧ್ಯಭಾಗದಲ್ಲಿ ಕಮಲ ಚಿತ್ರವನ್ನು ಕೆತ್ತಲಾಗಿದೆ. ಅರ್ಧಗಂಬಗಳಿದ್ದು, ನಾಗರಶೈಲಿಯ ಶಿಖರವನ್ನು ಕಾಣುತ್ತೇವೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ಶಿವಲಿಂಗವಿದೆ. ಪ್ರಣಾಳದ ಮೂಲಕ ಅಭಿಷೇಕದ ನೀರು ಹೊರಹೋಗುವ ವ್ಯವಸ್ಥೆ ಇದೆ. ಚೌಕಾಕಾರದ ಸುಕನಾಸಿಯನ್ನು ಹೊಂದಿದ್ದು ಇದರಲ್ಲಿ ಯಾವುದೇ ರೀತಿಯ ಕೆತ್ತನೆಗಳು ಕಂಡುಬರುವುದಿಲ್ಲ. ದ್ವಾರಬಾಗಿಲು ಹೆಚ್ಚು ಅಲಂಕೃತವಾಗಿದ್ದು ಇದರಲ್ಲಿ ಅನೇಕ ಕೆತ್ತನೆಗಳು ಕಂಡುಬರುತ್ತವೆ. ಇದರಲ್ಲಿ ಏಳು ಶಾಖೆಗಳಿದ್ದು ರತ್ನ, ಲತಾಸುರಳಿ, ಅರ್ಧಗಂಬ, ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ, ಹೊಸ್ತಿಲಿನಲ್ಲಿ ಚಂದ್ರಶಿಲೆಗಳು ಕಂಡುಬರುತ್ತವೆ. ಅಂತರಾಳದ ದ್ವಾರದಲ್ಲಿ ಮೂರು ಶಾಖೆಗಳಿದ್ದು ಅದರ ಮೇಲ್ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಬ್ರಹ್ಮ ಶಿಲ್ಪದ ಪಾದದ ಬಲಬದಿಯಲ್ಲಿ ಗಣೇಶ, ಅವನ ಬಲಬದಿಗೆ ನಂದಿಯನ್ನು ಕೆತ್ತಿರುವುದು ಕಂಡುಬರುವುದು. ನಂತರ ವಿಷ್ಣುವಿನ ವಿಗ್ರಹವಿದ್ದು ಅದರ ನಾಲ್ಕು ಕೈಗಳಲ್ಲಿ ಒಂದು ಅಭಯ ಮುದ್ರಿಕೆಯಲ್ಲಿ ಶಂಕ, ಚಕ್ರ ಮತ್ತು ಗದೆಗಳಿವೆ. ಮುಂದೆ ಎರಡು ಕೈಗಳನ್ನು ಜೋಡಿಸಿರುವ ಗರುಡನ ವಿಗ್ರಹವಿರುವುದು. ಅಂತರಾಳದಲ್ಲಿ ನಾಲ್ಕು ಅರ್ಧಗಂಬಗಳಿವೆ. ಮೇಲ್ಚಾವಣಿ ಸಾಧಾರಣವಾಗಿದ್ದು ಯಾವುದೇ ಅಲಂಕಾರ ಕಂಡುಬರುವುದಿಲ್ಲ. ಅಂತರಾಳದ ಎರಡೂ ಬದಿಗೆ ಜಾಲಂಧ್ರಗಳನ್ನು ಕಾಣಬಹುದು.

೩. ವೀರಭದ್ರ ದೇವಾಲಯ : ಉದ್ರಿ ಗ್ರಾಮದ ಮಧ್ಯಭಾಗದಲ್ಲಿ ಕಂಡುಬರುವ ವೀರಭದ್ರೇಶ್ವರ ದೇವಾಲಯವು ಕ್ರಿ.ಶ. ೧೭೫೫ರ ನಿರ್ಮಿತಿಯಾಗಿದೆ. ರಕ್ಷಣೆ ಇಲ್ಲದೆ ಹಾಳಾಗುವ ಹಂತದಲ್ಲಿದೆ. ಈಗಾಗಲೇ ದೇವಾಲಯದ ಬಹುಭಾಗಗಳು ಬಿದ್ದುಹೋಗಿದ್ದು ಗರ್ಭಗೃಹ ಮಾತ್ರ ಉಳಿದಿದೆ. ಉಳಿದ ಭಾಗವನ್ನು ಜೀರ್ಣೋದ್ದಾರ ಮಾಡಲಾಗಿದೆ. ಇತ್ತೀಚೆಗೆ ಗರ್ಭಗೃಹದಲ್ಲಿ ನಾಲ್ಕು ಸ್ಥಂಭಗಳಿವೆ. ಗರ್ಭಗೃಹದಲ್ಲಿರುವ ಶ್ರೀ ವೀರಭದ್ರ ದೇವರಮೂರ್ತಿಯು ಸುಮಾರು ನಾಲ್ಕು ಅಡಿ ಎತ್ತರವಾಗಿದ್ದು ಸುಮಾರು ಎರಡೂವರೆ ಅಡಿ ಅಗಲದ ಸುಂದರವಾದ ಮೂರ್ತಿ ಆಗಿದೆ. ಶಿಲ್ಪದ ನಾಲ್ಕು ಕೈಗಳಲ್ಲಿ ಖಡ್ಗ, ಬಾಣ, ಗುರಾಣಿ, ಬಿಲ್ಲುಗಳನ್ನು ಹಿಡಿದಿರುವುದು ಕಂಡುಬರುತ್ತದೆ. ಈ ದೇವಾಲಯದ ಬಗೆಗೆ ಉಲ್ಲೇಖಿಸುವ ಶಾಸನಾಧಾರಗಳು ಕಂಡುಬರುವುದಿಲ್ಲ. ಈ ದೇವಾಲಯದ ಲಕ್ಷಣಗಳನ್ನು ಗಮನಿಸಿದರೆ ಇದು ಕೆಳದಿ ಅರಸರ ಕಾಲದಲ್ಲಿ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಆದರೆ ಮುಖ್ಯವಾಗಿ ಈ ದೇವಾಲಯ ಅನೇಕ ದಾಳಿ ಅಥವಾ ಪ್ರಾಕೃತಿಕ ವಿಕೋಪಗಳಿಗೆ ಒಳಗಾಗಿರುವಂತೆ ಕಂಡುಬರುತ್ತದೆ. ಇವುಗಳನ್ನು ಹೊರತುಪಡಿಸಿ ದೇವಾಲಯದ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಇದೇ ದೇವಾಲಯದ ಬಲಬದಿಗೆ ನಂದಿ ಮಂಟಪದಲ್ಲಿ ಸುಮಾರು ಮೂರು ಅಡಿ ಎತ್ತರದ ನಂದಿಯನ್ನು ಕೆತ್ತಲಾಗಿದೆ. ಈ ನಂದಿ ವಿಗ್ರಹವೂ ಬಹಳ ಸುಂದರವಾಗಿದ್ದು ಇದರ ಕೊರಳಿಗೆ ಸರಗಳನ್ನು ಮತ್ತು ಗೆಜ್ಜಗಳನ್ನು ಕಟ್ಟಲಾಗಿದೆ. ಈ ಮಂಟಪದ ಮುಂದೆ ಮತ್ತೊಂದು ಮೂರು ಅಡಿ ಎತ್ತರದ ಮುರಿದಿರುವ ವೀರಭದ್ರನ ಮೂರ್ತಿ ಕಂಡುಬರುತ್ತದೆ. ಇದರಲ್ಲಿ ನಾಲ್ಕು ಕೈಗಳು ಮತ್ತು ಎದೆಯ ಮೇಲ್ಭಾಗವೂ ಕಂಡುಬರುತ್ತದೆ. ಒಂದು ಕೈಯಲ್ಲಿ ಢಮರುಗ, ಮತ್ತೊಂದು ಕೈಯಲ್ಲಿ ಕಡಿದ ರುಂಡವು ಕಂಡುಬರುವುದು. ವೀರಭದ್ರನ ಜಡೆಯಲ್ಲಿ ನಾಗರಹೆಡೆ ಕಂಡುಬರುವುದು. ದೇವಾಲಯದ ಮುಂಭಾಗದಲ್ಲಿ ಐದು ಅಡಿ ಎತ್ತರದ ಎರಡು ದ್ವಾರಪಾಲಕರ ವಿಗ್ರಹಗಳಿವೆ ಇವುಗಳ ಕೈಗಳು ತುಂಡರಿಸಿವೆ. ಇವು ಕೂಡಾ ಕಲಾತ್ಮಕವಾದ ವಿಗ್ರಹಗಳಾಗಿದ್ದು, ಕಲಾ ವೈಶಿಷ್ಟತೆಯೊಂದಿಗೆ ನಿಂತಿರುವುದು ಕಂಡುಬರುತ್ತದೆ.

೪. ಬನಶಂಕರಿ ದೇವಾಲಯ: ಈ ದೇವಾಲಯವೂ ಉದ್ರಿಗ್ರಾಮದ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬಸ್ ನಿಲ್ದಾಣ ದಿಂದ ಗ್ರಾಮದ ಒಳಗೆ ಹೋಗುವಾಗ ರಸ್ತೆಯಲ್ಲಿ ಕಂಡುಬರುತ್ತದೆ. ಇದೊಂದು ಚಿಕ್ಕ ದೇವಾಲಯವಾಗಿದ್ದು, ಸ್ಥಳೀಯರಿಗೆ ಇದು ಮುಖ್ಯ ದೇವಾಲಯವಾಗಿದೆ. ಇಡೀ ಗ್ರಾಮದ ಜನರೆಲ್ಲಾ ಸೇರಿ ಈ ದೇವತೆಯನ್ನು ಆರಾಧಿಸುವುದು ಮತ್ತು ಪೂಜಿಸುವುದು ಕಂಡುಬರುತ್ತದೆ. ಬನಶಂಕರಿ ದೇವಾಲಯವೂ ಸುಮಾರು ೧೭-೧೮ನೇ ಶತಮಾನದಲ್ಲಿ ಅಂದರೆ ಕೆಳದಿ ಅರಸರ ಕಾಲದಲ್ಲಿ ಸ್ಥಾಪಿಸಿರುವ ದೇವಾಲಯದಂತೆ ಕಂಡುಬರುತ್ತದೆ. ಬನಶಂಕರಿ ದೇವರ ಮೂರ್ತಿಯು ಸುಮಾರು ನಾಲ್ಕು ಅಡಿ ಎತ್ತರವಾಗಿದೆ ಮತ್ತು ೩ ಅಡಿ ಅಗಲವಾಗಿದೆ. ಇದು ಗರ್ಭಗೃಹವನ್ನು ಮಾತ್ರ ಹೊಂದಿದೆ. ಉದ್ರಿ ಗ್ರಾಮದ ಪಾಟೀಲ ಮನೆತನದವರು ಬನಶಂಕರಿಯನ್ನು ಬಾದಾಮಿಯಿಂದ ಇಲ್ಲಿಗೆ ತಂದು ಪ್ರತಿಷ್ಠಾಪಿಸಿದ್ದಾರೆ ಎಂದು ಸ್ಥಳೀಯರು ಹೇಳುವರು. ಈ ದೇವಾಲಯದ ಗರ್ಭಗೃಹದ ದ್ವಾರಬಾಗಿಲ ಮೇಲೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯನ್ನು ಕೆತ್ತಲಾಗಿದೆ.

ಇವು ಉದ್ರಿ ಗ್ರಾಮದಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳಾದರೆ, ಇದರೊಂದಿಗೆ ಗ್ರಾಮದಲ್ಲಿ ಇನ್ನೂ ಅನೇಕ ಕುರುಹುಗಳು ಕಂಡುಬರುತ್ತವೆ. ಗ್ರಾಮದ ಆರಂಭದಲ್ಲಿಯೇ ಇರುವ ಬೃಹತ್ ಕೆರೆ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಕೋಡಿಯ ಮೇಲಿರುವ ನಂದಿ ವಿಗ್ರಹ. ಮತ್ತು ಕೆರೆಗೆ ಹೊಂದಿಕೊಂಡಂತೆ ಇರುವ ಅನೇಕ ಅವಶೇಷಗಳು ತಿಳಿಸುತ್ತವೆ. ಗ್ರಾಮದ ಸುತ್ತಲೂ ಏಳು ಸುತ್ತಿನ ಕೋಟೆ ಇದೆ ಎಂದು ಹೇಳಲಾಗುತ್ತದೆಯಾದರೂ ಮಣ್ಣಿನ ಆಳವಾದ ಕಂದಕ ಕಂಡುಬರುತ್ತದೆ. ವೀರಗಲ್ಲುಗಳು ಮತ್ತು ಮಹಾಸತಿಕಲ್ಲುಗಳು ಕೂಡಾ ಕಂಡುಬರುತ್ತವೆ.

ಆಕರಗ್ರಂಥಗಳು

೧. ಜ್ಞಾನಾನಂದ ಜಿ., ೨೦೦೨, ಶಿಲ್ಪಾದರ್ಶ, ಸಂಪುಟ ೨, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಶ್ರೀಕಂಠಶಾಸ್ತ್ರೀ ಎಸ್., ೨೦೧೪, ಹೊಯ್ಸಳ ವಾಸ್ತುಶಿಲ್ಪ, ಪರಿಶ್ರೀ ಪ್ರಿಂಟರ್ಸ್, ಬೆಂಗಳೂರು.

೩. ಪ್ರಭಾಕರ್ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಬಡಿಗೇರ ವಾಸುದೇವ (ಸಂ.), ೨೦೦೮, ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ರೈಸ್ ಬಿ.ಎಲ್., ೧೯೦೪, ಎಪಿಗ್ರಾಫಿಯ ಕರ್ನಾಟಿಕ, VIII, ಸೊರಬ.

೬ ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್ (ಸಂ.), ೨೦೦೧, ಮಲೆಕರ್ನಾಟಕದ ಅರಸುಮನೆತನಗಳು, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.

೭. ಗೋಪಾಲ ಆರ್., ೨೦೦೮, ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

◆◆

ಕೃಷ್ಣಮೂರ್ತಿ ಪಿ.ವಿ.

ಮಹಾರಾಜವಾಡಿ–ಎೞುಸಾಸಿರದ ಭಾಗವಾಗಿ ಕೊಯ್ಯಕೊೞುನಾಡು–೩೦೦: ಅದರ ಪ್ರಭುಗಳು

'ಕುಂತಲದೇಶ ಸಪ್ತಾರ್ಧಲಕ್ಷ' ಎಂಬುದು ವಿಂಧ್ಯಪರ್ವತಗಳ ದಕ್ಷಿಣಕ್ಕೆ, ಡೆಕ್ಕನ್ ಪ್ರಸ್ಥಭೂಮಿಯನ್ನು ಒಳಗೊಂಡಂತೆ ಅಖಂಡ ಕರ್ನಾಟಕ ಭೂಪ್ರದೇಶಕ್ಕೆ ಇದ್ದ ಹೆಸರು. ಅದೇ ರಾಷ್ಟ್ರಕೂಟರ 'ರಟ್ಟವಾಡಿ' ಅಥವಾ 'ರಟ್ಟವಾಡಿ ಎೞುವರೆ ಲಕ್ಕೆ' (ಸಪ್ತಾರ್ಧ ಲಕ್ಷ) ಎಂಬುವ ಒಂದು ವಿಶಾಲವಾದ ಪ್ರದೇಶ. ಆ ಪ್ರದೇಶವನ್ನು ರಾಷ್ಟ್ರಕೂಟ ಸಾಮ್ರಾಟರು ಆಳುತ್ತಿದ್ದರು. ಇಂದಿನ ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೊಂಡೆಮಂಡಲದ ಹಲವು ಭಾಗಗಳು ಮತ್ತು ಕರ್ನಾಟಕದ ಬಹುಭಾಗವೂ ಅದರಲ್ಲಿ ಅಂತರ್ಗತವಾಗಿದ್ದಿತೆಂದು ಹೇಳಬಹುದು. ಪ್ರಾಯಃ ಇಲ್ಲಿ 'ರಟ್ಟವಾಡಿ ಎೞುವರೆ ಲಕ್ಕೆ' ಎಂಬುದು ಕುಂತಲದೇಶ ಸಪ್ತಾರ್ಧಲಕ್ಷ ಎಂಬುದರ ಪರ್ಯಾಯವೆಂದು ತೋರುತ್ತದೆ. ಅಂತಹ ವಿಶಾಲವಾದ ಪ್ರದೇಶದ ಒಂದು ಭಾಗ 'ಮಹಾರಾಜವಾಡಿ'. ಇದನ್ನು 'ಮಾರಾಜವಾಡಿ ೭೦೦೦', 'ಮಹಾರಾಜವಾಡಿ ೬೦೦೦' ಅಥವಾ 'ಮಾರ್ಜವಾಡಿ' ಎಂದೂ ಕರೆದಿರುವುದುಂಟು. ಇದನ್ನು ಪ್ರಸ್ತಾಪಿಸುವ ಹಲವಾರು ಶಾಸನಗಳು ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ದೇವಲುಪಲ್ಲಿ[೧], ಅಮರಾವತಿ[೨], [ಪೆನುಗೊಂಡ], ಚಿತ್ತೂರು ಜಿಲ್ಲೆಯ ತಂಬಲ್ಲಪಲ್ಲಿ[೩] [ಚಂದ್ರಗಿರಿ], ಪೆದ್ದತಿಪ್ಪಸಮುದ್ರಂ (ಮದನಪಲ್ಲೆ) [೧೭೪/ಟೋಪೊಲಜಿಕಲ್ ಲಿಸ್ಟ್ ಆಫ್ ಇನ್ಸ್ಕ್ರಿಪ್ಷನ್ಸ್ ಇನ್ ಮದ್ರಾಸ್ ಪ್ರಸಿಡೆನ್ಸಿ–೧], ಇಂದಿನ ತಮಿಳುನಾಡಿನ ತಿರುವಳ್ಳಂ[೪] ಹಾಗೂ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಿಂಡುಗಲ್ಲು ಮಜರೆ ದಿಗುಪಲ್ಲಿ[೫], ನಂದನಹೊಸಹಳ್ಳಿ[೬] ಪೊಟ್ಟಪಲ್ಲಿ[೭], ಬಟ್ಲಹಳ್ಳಿ[೮], ನಂದನವನ್, ದೊಡ್ಡನಂಜೂರು[೧೦], ಮುಂಗಾನಹಳ್ಳಿ[೧೧], ಮಾವುಕೆರೆ[೧೨], ಹಿರಣ್ಯಪಲ್ಲಿ[೧೩], ಗುಂದಿಗೆರೆ[೧೪], ಬೋಡಂಪಲ್ಲಿ[೧೫], ಚಿಲಕಲನೇರ್ಪು[೧೬]; ಶಿಡ್ಲಘಟ್ಟ ತಾಲ್ಲೂಕಿನ ರಾಮೇಶ್ವರ[೧೭]; ಬಾಗೇಪಲ್ಲಿ ತಾಲ್ಲೂಕಿನ ಚೇಳೂರು[೧೮] ಶ್ರೀನಿವಾಸಪುರ ತಾಲ್ಲೂಕಿನ, ಚಾಕನಪಲ್ಲಿಗಳಲ್ಲಿ[೧೯] ಕಂಡುಬಂದಿದೆ. ಒಟ್ಟಾರೆ ಇಂದಿನ ಆಂಧ್ರಪ್ರದೇಶದ ಅನಂತಪುರ, ಕಡಪ, ಚಿತ್ತೂರು; ತಮಿಳುನಾಡಿನ ತಿರುವಳ್ಳಂ: ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲಾ ಪ್ರದೇಶಗಳಲ್ಲಿ 'ಮಹಾರಾಜವಾಡಿ' ಪ್ರದೇಶವು ವ್ಯಾಪಿಸಿದ್ದಿತು. ಇದರಲ್ಲಿ ಕೊಯ್ಯಕುೞುನಾಡು ೩೦೦ ಎಂಬುವ ವಿಭಾಗವು, ಬಹುಮಟ್ಟಿಗೆ ಇಂದಿನ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ, ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲ್ಲೂಕು ಮತ್ತು ಇಂದಿನ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕು ಪ್ರದೇಶದ ಹಲವು ಭಾಗಗಳನ್ನು ಒಳಗೊಂಡಂತೆ ಇದ್ದಿತು. ಪ್ರಸ್ತುತ ಆ ಪ್ರಾದೇಶಿಕ

೩೭, 'ಶ್ರೀಕೃಷ್ಣಕೃಪ'
೩ನೆಯ ಅಡ್ಡರಸ್ತೆ
ಮೊದಲನೆಯ ಮುನೇಶ್ವರ ಬ್ಲಾಕ್
ಹರಿನಗರ ಕ್ರಾಸ್, ಅಂಜನಾಪುರ ಅಂಚೆ
ಬೆಂಗಳೂರು–೫೬೦೧೦೮
ಮೊ: ೯೦೩೬೮ ೦೮೪೯೫

ವಿಭಾಗದ ವ್ಯಾಪ್ತಿ, ನಾಮನಿಷ್ಪತ್ತಿ ಹಾಗೂ ಅದನ್ನು ಆಳಿದ ಸ್ಥಳೀಯ ಪ್ರಭುಗಳನ್ನು ಕುರಿತು ವಿವೇಚಿಸುವುದು ಈ ಸಂಪ್ರಬಂಧದ ಆಶಯವಾಗಿದೆ.

ಪ್ರಾದೇಶಿಕ ವಿಭಾಗದ ವ್ಯಾಪ್ತಿ

ಕೊಯ್ಯಕುಱುನಾಡು ೩೦೦ನ್ನು ಪ್ರಸ್ತಾಪಿಸುವ ಶಾಸನಗಳು ಪ್ರಧಾನವಾಗಿ ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳ ಉತ್ತರ ಭಾಗಗಳು ಹಾಗೂ ಬಾಗೇಪಲ್ಲಿ ತಾಲ್ಲೂಕಿನ ಆಗ್ನೇಯ ಭಾಗ ಮತ್ತು ಮದನಪಲ್ಲಿ ತಾಲ್ಲೂಕಿನ ಪಶ್ಚಿಮಭಾಗಗಳಲ್ಲಿ ಸಾಂಧ್ರವಾಗಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಈ ತಾಲ್ಲೂಕುಗಳ ಪ್ರದೇಶದ ವ್ಯಾಪ್ತಿಯಲ್ಲಿನ, ಸುಮಾರು ಮುನ್ನೂರು ಗ್ರಾಮಗಳನ್ನು ಒಳಗೊಂಡಂತೆ 'ಕೊಯ್ಯಕುಱುನಾಡು-೩೦೦' ಎಂಬ ಈ ನಾಡು,





ತನ್ನ ಅಸ್ತಿತ್ವವನ್ನು ಪಡೆದಿತ್ತು. ಸದ್ಯಕ್ಕೆ ಕ್ರಿ.ಶ. ಸು. ೧೦೪೦ರಿಂದ ಸು. ೧೩೦೦ರವರೆಗಿನ ಶಾಸನಗಳಲ್ಲಿ ಮಾತ್ರ ಈ ನಾಡಿನ ಉಲ್ಲೇಖ ಕಂಡು ಬಂದಿದೆ. ಅಂದರೆ ಅದು ಪ್ರಧಾನವಾಗಿ ಚೋಳರ, ಕ್ವಚಿತ್ತಾಗಿ ಹೊಯ್ಸಳರ ಕಾಲದ ಆಳ್ವಿಕೆಯ ಸಂದರ್ಭದಲ್ಲಿ ಮಾತ್ರ ಉಲ್ಲೇಖಿತ ಗೊಂಡಿರುವುದು ಕಂಡು ಬಂದಿದೆ. ಆದರೆ ಆಡಳಿತ ವಿಭಾಗಗಳಿಗೆ ಸಂಖ್ಯೆಗಳನ್ನು ಜೋಡಿಸುವ ಕ್ರಮ ವಿಶೇಷವಾಗಿ ಕರ್ನಾಟಕದ ಅರಸುಮನೆತನಗಳಾದ ಬಾದಾಮಿಯ ಚಲುಕ್ಯ, ರಾಷ್ಟ್ರಕೂಟ ಮೊದಲಾದವರಲ್ಲಿ ಮಾತ್ರ ಕಂಡು ಬರುವುದರಿಂದ, ಅಲ್ಲದೆ ಇದು ರಟ್ಟವಾಡಿಯ ಭಾಗವಾಗಿದ್ದುದರಿಂದ ಅದು ರಾಷ್ಟ್ರಕೂಟರ ಕಾಲದಲ್ಲೇ ರೂಪುಗೊಂಡಿದ್ದ ಒಂದು ಆಡಳಿತ ಘಟಕವೆಂದು ಪರಿಗಣಿಸಬಹುದಾಗಿದೆ.

ಕೊಯ್ಯಕೊಜಿನಾಡಿನಲ್ಲಿ ಮಿಂಡುಗಲ್ಲು[೨೦], ಪುಲಿಕ್ಕುಜಿಕ್ಕಿ[೨೧], ಚೇಳೂರು[೨೨], ಮಾದಮಂಗಲಂ[೨೩], ಪೆದ್ದತಿಪ್ಪಸಮುದ್ರಂ ಗ್ರಾಮಗಳು ಅಂತರ್ಗತವಾಗಿರುವುದು ಸ್ಪಷ್ಟವಿದೆ. ಇಲ್ಲಿ ಉಲ್ಲೇಖಿತ ಪುಲಿಕ್ಕುಜಿಕ್ಕಿ ಹೊರತು ಬೇರೆ ಸ್ಥಳಗಳೆಲ್ಲ ಈಗಲೂ ಅಸ್ತಿತ್ವದಲ್ಲಿವೆ. ಪುಲಿಕ್ಕುಜಿಕ್ಕಿ ಪ್ರಾಯಃ, ಆ ಶಾಸನ ದೊರೆತಿರುವ ಸ್ಥಳವಾದ ಪೊಟ್ಟಪಲ್ಲಿ ಗ್ರಾಮದ ಪೂರ್ವನಾಮ ವಾಗಿರುವ ಸಾಧ್ಯತೆಯನ್ನು ತೆಗೆದು ಹಾಕುವಂತಿಲ್ಲ.

ಒಟ್ಟಾರೆ ಚಿಂತಾಮಣಿ ತಾಲ್ಲೂಕಿನ ಮಿಂಡುಗಲ್ಲು ಮಜರೆ ದಿಗುಪಲ್ಲಿ, ನಂದನಹೊಸಹಳ್ಳಿ, ಪೊಟ್ಟಪಲ್ಲಿ, ಬಟ್ಲಹಳ್ಳಿ, ಮುಂಗಾನಹಳ್ಳಿ, ಮಾವುಕೆರೆ, ಗುಂದಿಗೆರೆ, ಬೋಡಂಪಲ್ಲಿ, ಚಿಲಕಲನೇರ್ಪು; ಶಿಡ್ಲಘಟ್ಟ ತಾಲ್ಲೂಕಿನ ರಾಮೇಶ್ವರ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹಾಗೂ ಮದನಪಲ್ಲಿ ತಾಲ್ಲೂಕಿನ ಪೆದ್ದತಿಪ್ಪಸಮುದ್ರಂ ಗ್ರಾಮಗಳ ಶಾಸನಗಳಲ್ಲಿ ಕೊಯ್ಯಕೊಜಿನಾಡನ್ನು ಉಲ್ಲೇಖಿಸಲಾಗಿದೆ.

ಚೋಳರ ಆಳ್ವಿಕೆಯ ಪೂರ್ವದಲ್ಲಿ ಈ ಪ್ರದೇಶವು ಬಹುಮಟ್ಟಿಗೆ ಕೈವಾರನಾಡಿನ ಉತ್ತರದ ಗಡಿ ಪ್ರದೇಶವಾಗಿದ್ದಿತು. ಕೊಯ್ಯಕೊಜಿನಾಡನ್ನು ಪ್ರಸ್ತಾಪಿಸುವ ಶಾಸನಗಳಿರುವ ಸ್ಥಳಗಳನ್ನು ನಕ್ಷೆಯ ಮೇಲೆ ಗುರುತಿಸುವುದರಿಂದ, ಆ ಪ್ರದೇಶದ ವ್ಯಾಪ್ತಿಯನ್ನು ಸ್ಥೂಲವಾಗಿ ನಿರ್ದೇಶಿಸಬಹುದಾಗಿದೆ.

ನಾಮನಿಷ್ಪತ್ತಿ

ಈ ನಾಡು 'ಕೊಯ್ಯಕೊಜಿನಾಡು'[೨೪], 'ಕೊಯ್ಯಕೊಜುನಾಡು-೩೦೦'[೨೫], 'ಕೊಯ್ಯರ್-ಕುಜ್ಜೈನಾಡು'[೨೬], 'ಕೊಯ್ಯಗೈಕುಜ್ಜೈನಾಡು'[೨೭], 'ಕೊಯ್ಗೈಕ್ಕುಜ್ಜೈನಾಡು'[೨೮], 'ಕೊಯ್ಯಕ್ಕುರೈನಾಡು'[೨೯], 'ಕೊಯ್ಗೈಕ್ಕುಜುನಾಟ್ಟು'[೩೦], 'ಕೊಯ್‌ಗೈಕ್ಕುರು-

ನಾಡು'[೩೧], 'ಕೊಯ್ಯಕುೖನಾಡು'[೩೨], ಎಂದು ಮುಂತಾಗಿ ಶಾಸನಗಳಲ್ಲಿ ಕ್ರಮವಾಗಿ ಉಲ್ಲೇಖಿಸಲಾಗಿದೆ. ಇದು ಪ್ರಧಾನವಾಗಿ ಎರಡು ಮುಖ್ಯ ಶಬ್ದಗಳಿಂದ ಕೂಡಿದೆ. ಅವೆಂದರೆ; ಕೊಯ್ ಮತ್ತು 'ಕುಜು' / ಕೊಜ್.

ಪದಗಳಿಗೆ ಅರ್ಥ: ಕೊಯ್ ಎಂಬುವ ದ್ರಾವಿಡಭಾಷಾ ಮೂಲದ ಪದಕ್ಕೆ to pluck, to shear, to snip off, to select, to gather edge of cloth in to fold, to bristle up ಎಂಬ ಅರ್ಥಗಳಿರುವುದು ಕಂಡುಬರುತ್ತದೆ. ಹಾಗೇ, 'ಕುಜು' ಎಂಬುದಕ್ಕೆ ಗುರುತಿಸು, ಗಮನಿಸು, ಉದ್ದೇಶಿಸು, ಗುರುತು, ಚಿಹ್ನೆ ಎಂಬರ್ಥಗಳಿವೆ. ಕೊಜ್/ಕೊಜ್ಜು/ ಎಂಬುವ ಪದಕ್ಕೆ to nibble, to eat scanitly ಎಂಬ ಅರ್ಥಗಳಿರುವುದು ಕಂಡುಬರುತ್ತದೆ. ಇಲ್ಲಿನ 'to select' ಮತ್ತು 'eat scanitly' ಎಂಬುವ ಪದಗಳ ಅರ್ಥವ್ಯಾಪ್ತಿಯ ಹಿನ್ನೆಲೆಯಲ್ಲಿ 'ಕೊಯ್ಯಕೊಜ್' ಎಂಬುದನ್ನು 'ಆಯ್ದು, ಮೆಲ್ಲ-ಮೆಲ್ಲನೆ ಆಕ್ರಮಿಸಿದ/ಪಡೆದುಕೊಂಡ ಪ್ರದೇಶವೆಂದೂ ಸ್ಥೂಲವಾಗಿ ಅರ್ಥೈಸಲು ಸಾಧ್ಯವಾಗುತ್ತದೆ. ಇಲ್ಲಿ, ಯಾರು? ಏಕೆ? ಇಷ್ಟು ಪ್ರದೇಶವನ್ನು ಮಾತ್ರ ಆಯ್ದುಕೊಂಡರು ಎಂಬುದು ಅಧ್ಯಯನಾರ್ಹ ಅಂಶವಾಗಿದೆ.

ಅಂತೆಯೇ ಈ ನಾಡಿನ ವ್ಯಾಪ್ತಿಯನ್ನು ನಕ್ಷೆಯಲ್ಲಿ ಗಮನಿಸಿದರೆ; ಕೈವಾರದ ಪರಿಸರದ ಬೆಟ್ಟಗುಡ್ಡಗಳಿಂದ ಆರಂಭವಾಗುವ ಪಾಪಾಗ್ನೀ ಮತ್ತು ಚಿತ್ರಾವತೀ ಎಂಬುವ ಉತ್ತರ-ಪಿನಾಕಿನೀಯ ಉಪನದಿಗಳ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲೇ ಈ ಕೊಯ್ಯಕೊರೆನಾಡು ವ್ಯಾಪಿಸಿರುವುದನ್ನು ಗಮನಿಸಬಹುದಾಗಿದೆ. ಹಾಗಾಗಿ ಇದು ಕೃಷಿ ಮೂಲದ ಆರ್ಥಿಕತೆಗೆ ಹೆಚ್ಚು ಸೂಕ್ತವಾದ ತಾಣವೆಂದು ಗ್ರಹಿಸಿ ಅದನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ಮೊದಲಿಗೆ ರಾಷ್ಟ್ರಕೂಟ ಅನಂತರದಲ್ಲಿ ಚೋಳ ಆಡಳಿತಗಾರರ ಸೂಕ್ಷ್ಮತೆ, ಕುಶಲತೆ ಹಾಗೂ ಅವರಲ್ಲಿದ್ದ ನೈಜ-ಭೌಗೋಳಿಕ ಜ್ಞಾನದ ಅರಿವು ವಿಸ್ಮಯಕಾರಿಯಾದುದಾಗಿದೆ. ಇದಕ್ಕೆ ಪೂರಕವಾಗಿ ಈ ಪ್ರದೇಶದಲ್ಲಿನ ಶಾಸನಗಳಲ್ಲಿ ದಾಖಲಾಗಿರುವ, ಈ ನಾಡಿನ ಪ್ರಭುವರ್ಗದವರ ಕೈಂಕರ್ಯಗಳು ಗಮನ ಸೆಳೆಯುತ್ತವೆ. ಇಲ್ಲಿ ಉಕ್ತವಾಗಿರುವ ದಂಡನಾಯಕರೇ ಮೊದಲಾದವರು ಸ್ಥಳಿಯ ಮೂಲದವರೇ ಆಗಿದ್ದರೆಂಬುದಕ್ಕೆ ಭೈರಯ್ಯ, ಅಪ್ಪಿಮಯ್ಯ, ಮಾಚಿಮಯ್ಯ, ಮಂಜಪ್ಪಯ್ಯ ಎಂಬ ಅವರ ಮೂಲ ಹೆಸರುಗಳೇ ಸಾಕ್ಷಿ ನುಡಿಯುವಂತಿವೆ. ಆದರೆ ಅವು, ಚೋಳರು ಅವರಿಗೆ ನೀಡಿರುವ 'ಪೊಂಪಲರಾಯ, ಬ್ರಹ್ಮಮಾರಯ, ಒಕ್ಕಟ್ಟು-ಗಂಡ-ನಾರಾಯಣ, ರಾಜರಾಜ ಬ್ರಹ್ಮಮರಾಯ' ಮುಂತಾದ ಬಿರುದುಗಳ ಮಧ್ಯದಲ್ಲಿ ಸಿಕ್ಕಿಕೊಂಡು ಸರಿಯಾಗಿ ಗಮನಕ್ಕೆ ಬಾರದೆ ಹೋಗುವುದುಂಟು.

ಸ್ಥಳೀಯ ಪ್ರಭುಗಳು ಮತ್ತು ಅವರ ಕಾರ್ಯಗಳು

ದಂಡನಾಯಕ ಅಪ್ಪಿಮಯ್ಯ: ಚೋಳ ರಾಜಾಧಿರಾಜನ ಕಾಲದಲ್ಲಿ ಈತನು ಮಾರಾಜವಾಡಿ ೭೦೦೦ ಎಂಬ ವಿಶಾಲ ಪ್ರದೇಶವನ್ನು ಆಳುತ್ತಿದ್ದನು. ಈತನ ನಿಜನಾಮಧೇಯ ಭೈರಯ್ಯ ಎಂದಿತ್ತು. ಈತನು ಮುಜುಗಮಲೆಯ ಮದ್ದರಸನ ಮಗ. ಈತನ ಧೈರ್ಯ ಸಾಹಸಗಳಿಗೆ ಮೆಚ್ಚಿ, ಚೋಳರು ತಮ್ಮ ಪದ್ಧತಿಯಂತೆ ರಾಜೇಂದ್ರಚೋಳ ಪೊಂಪಲ ಮಾರಾಯ ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. ಇವನನ್ನು ರಾಜೇಂದ್ರಚೋಳ ಬ್ರಹ್ಮಮಾರಾಯ ಅಪ್ಪಿಮಯ್ಯ ಎಂದು ಕೂಡ ಕರೆಯಲಾಗಿದೆ. ಈತನು ಮಿಂಡುಂಗಲ್ಲಲ್ಲಿ ಪಲ್ಲವಕಟ್ಟು ಎಂಬ ಹೊಸಕೆರೆಯ ರಚನೆಯನ್ನು ಮಾಡಿಸಿರುವ ಸಂಗತಿ ಮಿಂಡುಗಲ್ಲು ಮಜರೆ ದಿಗುಪಲ್ಲಿ ಶಾಸನದಲ್ಲಿ ದಾಖಲಾಗಿದೆ. ಆಗ ಚೋಳ ರಾಜಾಧಿರಾಜ ವಲ್ಲೂರಿನಿಂದ (ಕಡಪ ಜಿಲ್ಲೆಯಲ್ಲಿನ ಮಹಾರಾಜವಾಡಿಯ ರಾಜಧಾನಿ) ಆಳುತ್ತಿದ್ದ ವಿವರ ಅದೇ ಶಾಸನದಿಂದ ತಿಳಿಯುತ್ತದೆ.[೩೩]

ದಂಡನಾಯಕ ಮಾಚಿಮಯ್ಯ: ಈತನಿಗೆ ಮಂಡಳೇಶ್ವರಾಧಿಪತಿ, ಒಕ್ಕಟ್ಟು-ಗಂಡ-ನಾರಾಯಣ, ರಾಜರಾಜ ಬ್ರಹ್ಮಮರಾಯ, ಎಂಬ ಬಿರುದುಗಳಿದ್ದವು. ಈತನು ಮಹಾರಾಜವಾಡಿ ೭೦೦೦ ಬಳಿಯ ಕೊಯ್ಯಕೊಜುನಾಡು-೩೦೦ನ್ನು ಆಳುತ್ತಿದ್ದ ವಿವರ ಚಿಂತಾಮಣಿ ತಾಲ್ಲೂಕಿನ ನಂದನಹೊಸಹಳ್ಳಿಯ ಕಾಸೀ ವಿಶ್ವೇಶ್ವರಸ್ವಾಮಿ ದೇವಾಲಯದಲ್ಲಿನ ಸಾ.ಶ. ೧೦೫೩ರ ಶಾಸನದಿಂದ ತಿಳಿಯುತ್ತದೆ. ಅದರಲ್ಲಿ ಗೌಡನ ಮಗನೊರ್ವನು ಮಡಿದಂತೆ ಹಾಗೂ ಕಾಲುವೆಯಲ್ಲಿ, ಭೂದತ್ತಿ ಬಿಟ್ಟ ಅಸ್ಪಷ್ಟ ವಿವರವಿದೆ.[೩೪]

ಸೇನಾಪತಿ ಮಂಜಪ್ಪಯ್ಯ: ಈತನನ್ನು ಶಾಸನದಲ್ಲಿ ಒಕ್ಕೆತ್ತುಗಂಡಂ, ಗಂಡನಾರಾಯಣಂ, ಚೋಳನಸಿಂಘಂ, ರಾಜರಾಜ ಬ್ರಹ್ಮಾಧಿರಾಜರ್ ಎಂದು ವರ್ಣಿಸಲಾಗಿದೆ. ಈತನು ಮಹಾರಾಜವಾಡಿ ೭೦೦೦, ಪುಲಿನಾಡು ೭೦, ಮುಜಿಕಿನಾಡು ೩೦೦ ಗಳನ್ನು ಬಲ್ಲೂರಿನ ಬೀಡಿನಿಂದ (ಕಡಪ ಜಿಲ್ಲೆಯಲ್ಲಿನ ಮಹಾರಾಜವಾಡಿಯ ರಾಜಧಾನಿ) ಆಳುತ್ತಿದ್ದನೆಂಬ ವಿವರವನ್ನು ಶ್ರೀನಿವಾಸಪುರ ತಾಲ್ಲೂಕು ಚಾಕನಪಲ್ಲಿಯ ಮೊದಲನೆಯ ರಾಜೇಂದ್ರ ಚೋಳನ ಸಾ.ಶ. ೧೦೫೭ರ ಕನ್ನಡ ಶಾಸನ ನೀಡುತ್ತದೆ.[೩೫]

ಶೋಳವಿಚ್ಚಾದರ: (ಚೋಳ ವಿದ್ಯಾಧರ): ಈತನು ಒಬ್ಬ ಅಧಿಕಾರಿಯೆಂದು ಕ್ರಿ.ಶ. ೧೦೮೪ರ ಚೋಳ ಕುಲೋತ್ತುಂಗನ ಬಾಗೇಪಲ್ಲಿ ತಾಲ್ಲೂಕು ಚೇಳೂರಿನ ಆಂಜನೆಯ ದೇವಾಲಯದ ಆಂಜನೇಯ ಶಿಲ್ಪದ ಹಿಂಬದಿಯಲ್ಲಿ ಕೆತ್ತಲಾಗಿರುವ ತ್ರುಟಿತ ಶಾಸನದಿಂದ ತಿಳಿಯುತ್ತದೆ. ಅದರಲ್ಲಿ ಕಾಶ್ಯಪಗೋತ್ರದ ಶೇಲೂರಿನ ನಿವಾಸಿ ಇರಟ್ಟಪ್ಪಾಡಿ ಶೋಳಮಂಡಲದ ಕೊಯ್ಯಕ್ಕುಜ್ಜೈನಾಡಿನ ಶೇಲೂರಿನ ವ್ಯಕ್ತಿ ಒರ್ವನಿಗೆ ದತ್ತಿ ಬಿಟ್ಟ ವಿವರ ಹಾಗೂ ಚೋಳಸಮುದ್ರ ಎಂಬ ಜಲವಸತಿಯ ಗ್ರಾಮವನ್ನು ದೇವಾಲಯಕ್ಕೆ ದತ್ತಿ ಬಿಟ್ಟ ಅಸ್ಪಷ್ಟ ಉಲ್ಲೆಖವಿದೆ.[೩೬]

ಕಾಣಿಯಾಳನ್ ಶೋಮರೈಶನ್ [ಪುಲಿಕ್ಕುಜಿಕ್ಕಿಯ (ಕಾಣಿಯಾಳನ್) ಭೂವೊಡೆಯ]: ಈತನು ಪುಲಿಕ್ಕುಜಿಕ್ಕಿಯ ಕಾಣಿಯಾಳನ್ ಎಂದರೆ ಭೂವೊಡೆಯನಾದ ಮುತ್ತಿಯರೈಶನ್ ಎಂಬುವನ ಮಗ. ಈತನು ಯಾವುದೋ ಹೋರಾಟವೊಂದರಲ್ಲಿ ಮಡಿದಾಗ ಅವನ ಮಡದಿ ಪಿಳ್ಳೈಪೊನ್ನಕ್ಕನ್ ಎಂಬುವಳು ಅಗ್ನಿ ಪ್ರವೇಶಮಾಡಿದಳು. ಆಗ ಅವರ ಮಗನಾದ ಮಾಶೈಯನ್‌ನು ಅವರ (ತಾಯಿಯ) ಮುಕ್ತಿಗಾಗಿ ಮಹಾದೇವ ದೇವರಿಗೆ ನೀರಾರಂಬ ಮತ್ತು ಕಾಡಾರಂಬದ ಭೂಮಿಗಳನ್ನು ದತ್ತಿ ಬಿಟ್ಟ ವಿವರವನ್ನು ಸಾ.ಶ. ೧೦೬೯ರ ಚಿಂತಾಮಣಿ ತಾ॥ ಪೊಟ್ಟಪಲ್ಲಿಯಲ್ಲಿನ ಇಮ್ಮಡಿ ಚೋಳರಾಜೇಂದ್ರನ (ವೀರ ರಾಜೇಂದ್ರ) ೬ನೆಯ ಆಡಳಿತ ವರ್ಷದ ವೀರಗಲ್ಲು ಶಾಸನ ದಾಖಲಿಸುತ್ತದೆ.[೩೭] ಸಾ.ಶ. ೧೧೦೦ ಒಳಗಿನ ಅವಧಿಯ ಈ ಮೇಲಿನ ಅಧಿಕಾರಿಗಳಲ್ಲಿ ಎಲ್ಲರೂ ಕೆರೆ-ಕಾಲುವೆಗಳ ರಚನೆಗೆ ಹೆಚ್ಚಿನ ಗಮನವನ್ನು ಕೊಟ್ಟಿರುವುದು ಕಂಡುಬರುತ್ತದೆ. ಆ ಮೂಲಕ ಇಂತಹ ಸಮಾಜಮುಖಿಯಾದ ಸೌಕರ್ಯಗಳ ಸ್ಥಾಪನೆ, ನಿರ್ವಹಣೆಗೆ ಕರ್ತರಾಗಿರುವುದರೊಂದಿಗೆ ರಾಜಾದಾಯವನ್ನು ಹೆಚ್ಚಿಸಿ, ಸಾಮ್ರಾಟರ ಶಕ್ತಿ ಸಾಮರ್ಥ್ಯವನ್ನು ಉನ್ನತೀಕರಿಸುವುದಕ್ಕೆ ಕಾರಣವಾಗಿರುವ ಅಂಶವನ್ನು ಮನಗಾಣಬಹುದಾಗಿದೆ. ಮುಂದೆ ಸಾ.ಶ. ೧೧೦೦ರ ಆಚೀಚಿನ ಅವಧಿಯಲ್ಲಿ ಈ ನಾಡಿನಲ್ಲಿ, ಮಾದಮಂಗಲದ ಒಡೆಯರು ಹೆಚ್ಚು ಪ್ರಬಲರಾದಂತೆ ಕಂಡುಬರುತ್ತದೆ. ಇವರು ಮಾದಮಂಗಲವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಅದಕ್ಕೆ ಹೊಂದಿಕೊಂಡಂತಿರುವ ಸಿದ್ಧನಮಲೆ ಎಂಬ ಬೆಟ್ಟದಲ್ಲಿ ಕೋಟೆ, ದೇವಾಲಯ, ನಾಲೆಗಳನ್ನು ನಿರ್ಮಿಸುವ ಕೆಲಸವನ್ನು ಕೈಗೊಂಡಿರುವುದು ಕಂಡುಬರುತ್ತದೆ. ಪ್ರಾಯಃ ಈ ಮಾದಮಂಗಲದ (= ಬಟ್ಲಹಳ್ಳಿಯ) 'ಸಿದ್ಧನಮಲೆ'ಯೇ ಈ ಕೊಯ್ಯಕೊರೆನಾಡಿನ ಕೇಂದ್ರಸ್ಥಳವಾಗಿದ್ದಿರಬಹುದೆಂದು ತೋರುತ್ತದೆ.

ಕುಲೋತ್ತುಂಗಶೋಳ ಮಾದಮಂಗಲಂನ ಒಡೆಯರು

ಕಾಣಿಯಾಳನ್ ಕೊಂಗಿರೈಯನ್ ಶೊಮದೇವನ್: ಈತನಿಗೆ ಕುಲೋತ್ತುಂಗಶೋಳ ಮಾದಮಂಗಲಂನ ಒಡೆಯ ಎಂಬ ಬಿರಿದು ಇದ್ದಿತು. ಈತ ಇರಟ್ಟಪಾಡಿಕೊಂಡ ಚೋಳಮಂಡಲದಲ್ಲಿನ ಮೇಲ್ಯೆ ಮಾರಾಯಪಾಡಿಯ ಕೊಯ್ಯಗೈ-ಕುಜ್ಜೈನಾಡಿನ ಮಾದಮಂಗಲಂನ (ಕಾಣಿಯಾಳನ್) ಭೂವೊಡೆಯನೆಂದು ತಿಳಿಯುತ್ತದೆ. ಈತನು ಸಿದ್ಧನಮಲೆಬೆಟ್ಟದ ಮೇಲೆ ಕೋಟೆಯನ್ನು ಮತ್ತು ನಾಲೆಯನ್ನು ಕಟ್ಟಿಸಿದ ವಿವರ ಚಿಂತಾಮಣಿ ತಾ॥ ಬಟ್ಲಹಳ್ಳಿಯ ಸಿದ್ಧನಮಲೆ ಬೆಟ್ಟದ ಯೆಂಡಪಲು ಬಂಡೆ ಸಮೀಪದ ಪಾತ್ರದೊಣೆ ದಕ್ಷಿಣದಲ್ಲಿನ ಸಾ.ಶ. ಸು. ೧೧೦೦ರ ಶಾಸನದಿಂದ ತಿಳಿಯುತ್ತದೆ.[೩೮]

ಕಾಣಿಯಾಳನ್ ಕೊಂಗಿರೈಯನ್ ವಂಶದ ವೀಮದೇವನ್: ಈತನು ಕೆಂಗೈಗೊಂಡ ಶೋಳ ಮಾದಮಂಗಲದ ಒಡೆಯನ ಮಗನಿರಬೇಕು. ಈತನು ಕುಲೋತ್ತುಂಗಶೋಳ ಮಾದಮಂಗಲಂನ ಒಡೆಯನೆಂದು ಕೀರ್ತಿಸಲ್ಪಟ್ಟಿದ್ದಾನೆ. ಈತನು ನಾಲೆ ಮತ್ತು ಬೆಟ್ಟದ ಮೇಲೆ ಕೋಟೆ ದೇವಾಲಯಗಳನ್ನು ಕಟ್ಟಿಸಿದ ಎಂಬ ವಿವರವನ್ನು ಚಿಂತಾಮಣಿ ತಾ॥ ಬಟ್ಲಹಳ್ಳಿಯ ಸಿದ್ಧನಮಲೆ ಬೆಟ್ಟದ ಯೆಂಡಪಾಲು ಬಂಡೆ ಸಮೀಪದ ಕಲುವಲುದೊಣಿ ಪಶ್ಚಿಮಕ್ಕೆ ಇರುವ ಸಾ.ಶ. ಸು. ೧೧೦೦ರ ಶಾಸನವು ದಾಖಲಿಸುತ್ತದೆ.[೩೯] ಈತನನ್ನು ಮಾಬೀಮಗಾಮುಂಡನ್‌ನ ವಂಶೀಯನೆಂದೂ, 'ಕುಲೋತ್ತುಂಗ ಶೋಳ ಮಾದಮಂಗಲಂ ಉಡೈಯಾನ್' ಎಂದೂ ಹಾಗೂ ಈತನೇ ಬೆಟ್ಟದ ಮೇಲಿನ ಕೋಟೆ, ದೇವಾಲಯ, ನಾಲೆಗಳ ರಚನೆಗೆ ಕಾರಣನೆಂದು ಶಾಸನವೊಂದರಲ್ಲಿ ವರ್ಣಿಸಲ್ಪಟ್ಟಿದ್ದಾನೆ.[೪೦] ಪ್ರಾಯಃ ಈತನಿಗೆ 'ಕುಲೋತ್ತುಂಗ ಶೋಳ ಮಾದಮಂಗಲದ ಒಡೆಯ' ಎಂಬ ಬಿರುದಿದ್ದಿತು. ಈತನು ಕೆರೆ ಮತ್ತು ತೂಬನ್ನು ಕಟ್ಟಿಸಿ, ಅದನ್ನು ತನ್ನ ಹೆಸರಿನಲ್ಲಿ 'ವೀಮಕಟ್ಟೆ' ಅಥವಾ 'ವೀಮನೇರಿ' ಎಂದು ಹೆಸರಿಸಲಾಯಿತು. ನಾವಲೇರಿಯನ್ನು ತೂಬಿನೊಂದಿಗೆ ರಚಿಸಿದನು. ವೀಮನೇರಿಯ ಮುಂದೆ ನಾಲೆಯನ್ನು ಮಾಡಿಸಿದನು. ಬೆಟ್ಟದ ಮೇಲೆ ಕೋಟೆ, ದೇವಾಲಯ ಮತ್ತು ಕೊಳಗಳನ್ನು ಮಾಡಿಸಿದನು ಎಂಬ ಈ ವಿವರಗಳು ಬಟ್ಲಹಳ್ಳಿಯ ಸಿದ್ಧನಮಲೆ ಬೆಟ್ಟದ ಬಂಡೆಯ ಸಮೀಪ, ನೆತ್ತರು ದೊಣೆ ಕೆಳಭಾಗದಲ್ಲಿನ ಶಾಸನದಿಂದ ತಿಳಿಯುತ್ತದೆ.[೪೧] ಮೇಲೆ ಉಕ್ತನಾಗಿರುವ ಕಾಣಿಯಾಳನ್ ಕೊಂಗಿರೈಯನ್ ಶೊಮದೇವನ್‌ಗೂ, ಈತನಿಗೂ ಏನು ಸಂಬಂಧವಿದೆಯೆಂಬುದು ತಿಳಿಯುವುದಿಲ್ಲ.

ಕೊಂಗಿರೈಯನ್ ಎಂಬುವ ವಿರುದುಕಾರನ್

ಈತನನ್ನು ಕಳವಾರನಾಡ ಒಡೆಯನೆಂದು ಕರೆದಿದ್ದು, ಈತನಿಗೆ 'ವೈದುಂಬ ಗಾಮುಂಡ' ಎಂಬ ಬಿರುದನ್ನು ಕೊಟ್ಟು, ಮೇಲೈ ಮಾರಾಜಪಾಡಿಯ ಕೊಯ್ಯೈಕ್ಕುಜ್ಯೈನಾಡಿನ 'ಮಾದಿಮಂಗಲ' ಗ್ರಾಮವನ್ನು ಧಾರಾಪೂರ್ವಕವಾಗಿ ನೀಡಲ್ಪಟ್ಟಿದೆ. ಈತನು ಮಾದಮಂಗಲದ ಒಡೆಯನಾಗಿ ಸಂತೃಪ್ತನಾಗಿದ್ದನು ಎಂಬ ವಿವರ ಶಾಸನದಲ್ಲಿ ಬಂದಿದೆ.

ಅರಿಮೋಳಿಗಾಮುಂಡ: ಈತನು ಮೇಲೆ ಉಕ್ತನಾಗಿರುವ ಕೊಂಗಿರೈಯನ್‌ನ ಮೊಮ್ಮಗ.

ವಿಕ್ರಮ ಚೋಳಗಾಮುಂಡ: ಈತನು ಅರಿಮೋಳಿಗಾಮುಂಡನ ಮಗ. ಈತನು ಅಲ್ಲಿ (ಮಾದಮಂಗಲದಲ್ಲಿ) ಕೆರೆಯನ್ನು ಕಟ್ಟಿಸಿ ತೂಬನ್ನು ಇರಿಸಿದನು.

ಕೆಂಗೈಗೊಂಡ ಶೋಳ ಮಾದಮಂಗಲದ ಒಡೆಯ: ಈತನು ವಿಕ್ರಮ ಚೋಳಗಾಮುಂಡನ ಮಗ, ಇವನ ನಿಜ ನಾಮಧೇಯ ತಿಳಿಯುವುದಿಲ್ಲ. ಇವನು ಪುತ್ತೇರಿ ಎಂಬಲ್ಲಿ ಕೆರೆ ಮತ್ತು ತೂಬನ್ನು ಮಾಡಿಸಿದನು.

ಒಟ್ಟಾರೆ ಚೋಳರ ಶಾಸನಗಳಲ್ಲಿ ಯಾವೊಬ್ಬ ಅಧಿಕಾರಿ ಅಥವಾ ಪ್ರಭುವಿನ ನೈಜ ಹೆಸರಿಗಿಂತ ಅವರಿಗೆ ನೀಡಲಾಗಿರುವ ಬಿರುದಾವಳಿಗಳೇ ಪ್ರಧಾನವಾಗಿರುತ್ತಿದ್ದವೆಂಬುದಕ್ಕೆ ಸಾಕ್ಷಿಯಾಗಿ 'ಪೊಂಪಲರಾಯ, ಬ್ರಹ್ಮಮಾರಯ, ಒಕ್ಕಟ್ಟು-ಗಂಡ-ನಾರಾಯಣ, ರಾಜರಾಜ ಬ್ರಹ್ಮಮರಾಯ' ಮುಂತಾದ ಬಿರುದುಗಳು ವಿಜೃಂಬಿಸುತ್ತಿರುವುದರಿಂದ ಮನಗಾಣಬಹುದು.

ವೀರರಾಜೇಂದ್ರ ಮಂಡಲಾದಿತ್ತ ಶೆಟ್ಟಿ

ಈಗ ಚಿಂತಾಮಣಿ ತಾಲ್ಲೂಕಿನಲ್ಲಿರುವ (ಹಿಂದೆ ಶಿಡ್ಲಘಟ್ಟ ತಾ॥) ನಂದನವನ ಗ್ರಾಮದ ಚೆನ್ನಕೇಶವ ದೇವಾಲಯದ ತಳಪಾದಿ ಕಲ್ಲಿನ ಮೇಲಿರುವ ಕುಲೋತ್ತುಂಗ ಚೋಳನ ಆಳ್ವಿಕೆಯ ೩೩ನೆಯ (ಸಾ.ಶ. ೧೧೦೨) ವರ್ಷದ ಶಾಸನವಿದೆ. ಇದರಲ್ಲಿ ವೀರರಾಜೇಂದ್ರ ಮಂಡಲಾದಿತ್ತ ಶೆಟ್ಟಿ ಎಂಬುವನ ಪ್ರಸ್ತಾಪವಿದೆ. ಇವನಿಗೆ ಇಜ್ಜೈಯಡನ್ ದುಟ್ಟರಗಂಡನ್ ಎಂಬುವ ಬಿರುದುಗಳಿದ್ದವು. ಈತನು ಕುಲೋತ್ತುಂಗ ಚೋಳನ ಕಾಲದ ಒಬ್ಬ ಪ್ರಮುಖ ವ್ಯಾಪಾರಿಯಾಗಿದ್ದನು. ಅವನು ಶ್ರೀಕುಲೋತ್ತುಂಗ ಶೋಟಿ ನಾನಾದೇಶಿ ತಿರುವಿಣ್ಣಗರ್ ಆಳ್ವಾರ್ ಎಂಬುವ ವೈಷ್ಣವ ದೇವಾಲಯವನ್ನು ಸ್ಥಾಪಿಸಿದ್ದನು. ಆ ದೇವಾಲಯದ ಆವರಣ ಮತ್ತು ಸುತ್ತಮುತ್ತಲಿನ ಪ್ರದೇಶ ಮತ್ತು ಭೂಮಿಗಳನ್ನು ಅದರ ಒಡೆಯನಾದ ವಯಿರಾಗ ರಾಜನ್ ಎಂಬುವನಿಂದ ಕ್ರಯಕ್ಕೆ ಕೊಂಡುಕೊಂಡು, ಅದನ್ನು ತೆರಿಗೆಗಳಿಂದ ಮುಕ್ತಗೊಳಸಿ, ದತ್ತಿ ಬಿಟ್ಟ ವಿವರವಿದೆ. ಜೊತೆಗೆ ಪೂಜಾರಿ ಕುರುವಸಾರಿ ತಿರಿರಂಗಮಾನನ್, ದೇವಾಲಯದಲ್ಲಿ ವಿವಿಧ ಕರ್ತವ್ಯಗಳನ್ನು ನಿರ್ವಹಿಸುವ ಸೇವಕರು, ನೃತ್ಯಮಾಡುವ ನರ್ತಕಿಯರು, ಹೊರಸ್ಥಳಗಳಿಂದ ಬರುವ ಬ್ರಾಹ್ಮಣರು ಮುಂತಾದವರ ಪ್ರಸ್ತಾಪವೂ ಬಂದಿದೆ.[೮೨] ಸಾ.ಶ. ೧೧೨೫ರ ವಿಕ್ರಮಚೋಳದೇವನ ಕಾಲದ ಶಾಸನವೊಂದು ತಂಜಾವೂರು ಜಿಲ್ಲೆ, ನಾಗಪಟ್ಟಿನಂ ತಾಲ್ಲೂಕಿನ ತಿರುವಾರೂರಿನ ತ್ಯಾಗರಾಜಸ್ವಾಮಿ ದೇವಾಲಯದಲ್ಲಿದ್ದು ಕೊಯ್ಯಕೊರೆನಾಡಿಗೆ ಸೇರಿದ ಶೆಟ್ಟಿಯೊರ್ವನು ದೇವರ ನಂದಾದೀಪಕ್ಕಾಗಿ ದ್ರವ್ಯದತ್ತಿ ಬಿಟ್ಟಿರುವ ಉಲ್ಲೇವಿದೆ. [ಎ.ಇಂ-೮, ಪು. ೨೬೩; ಎ.ಆರ್.ಐ.ಇ. ೧೯೦೪/೫೫೬].

ಪೆರಿಯ ಪಾಲೈಯನ್ ಮತ್ತು ಶಿರಿಯ ಪಾಲೈಯನ್

ಚಿಲಕಲನೇರ್ಪು ಗ್ರಾಮದ ವೀರಗಲ್ಲು: ಇರಟ್ಟಪಾಡಿ ಶೋಟಿಮಂಡಲದ ಮೇಲೈ ಮಾರಾಜ ಪಾಡಿಯ ಕೊಯ್ಯೈಕ್ಕುಜ್ಯೈನಾಡಿನ . . . ಗಂಗೈಗೊಂಡ ಶೋಟಿ ಈಶ್ವರಂಉಡ್ಯೈಯ ದೇವರ ದೇವಾಲಯದ ಮುಂದೆ ಮಂಟಪವೊಂದನ್ನು ನಿರ್ಮಿಸಲಾಯಿತು. ಕೇತ್ತಿಯನ್ ಪಾಲೈಯನ್ ಎಂಬುವ ಗಂಗೈಗೊಂಡಶೋಟಿಕ್ಕಾಮುಂಡನ್ ಅವರ ಮಕ್ಕಳು ಶಾಮುಂಡೈಯನ್ ಎಂಬುವ ಗಂಗೈಗೊಂಡಶೋಟಿ-ಕ್ಕಾಮುಂಡನ್ ಮತ್ತು ಕೇತಿಯನ್ ಎಂಬುವ ಕುಲೋತ್ತುಂಗ ಶೋಟಿ ಗಾಮುಂಡನ್, ಅವರ ಮಕ್ಕಳು ಪೆರಿಯ ಪಾಲೈಯನ್ ಮತ್ತು ಶಿರಿಯ ಪಾಲೈಯನ್ ಅವರುಗಳು ದೇವದಾನವಾಗಿ ಗಂಗೈಗೊಂಡ ಶೋಟಿ ಈಶ್ವರಂ ಉಡ್ಯೈಯ ಮಾದೇವರಿಗೆ ನಂದಾದೀವಿಗೆಗಾಗಿ ಒಂದು ಗಾಣ, ಅಮೃತಪಡಿಗಾಗಿ ಭೂಮಿ ದಾನವನ್ನು ದಾಖಲಿಸಿರುವ ವಿವರ ಶಾಸನದಲ್ಲಿ ಬಂದಿದೆ.[೮೩]

ಪೊನ್ನಂಬಲಕ್ಕೂತ್ತನ್ ಮತ್ತು ಅವನ ಮಗ ಯಿರುಗನ್: ಕರ್ನಾಟಕದಲ್ಲಿ ಚೋಳರ ಆಳ್ವಿಕೆಯ ಕೊನೆಯ ಕಾಲಕ್ಕೆ ಸೇರಿದ ಸಾ.ಶ. ೧೧೩೦ರ ಚಿಂತಾಮಣಿ ತಾ॥ ದೊಡ್ಡನಂಜೂರು ಗ್ರಾಮದ ತ್ರುಟಿತ ಶಾಸನ ಚೋಳರಸ ತ್ರಿಭುವನ ಚಕ್ರವರ್ತಿ ವಿಕ್ರಮಚೋಳನದಾಗಿದ್ದು ಆತನು ತನ್ನ ಮಡದಿ ಮುಕ್ಕೋಕ್ಕಿಟಾನ್ ಅಡಿಗಳೊಂದಿಗೆ ವೀರ ಸಿಂಹಾಸನಸ್ಥನಾಗಿದ್ದಾಗ

ನಿಗರಿಲಿ ಶೋಬಿಮಂಡಲದ . . . . ಕುಣಿನಾಡಿನ ನಾಡ ಗಾಮುಂಡನ್ ಪೊನ್ನಂಬಲಕ್ಕೂತ್ತನ್ ಎಂಬುವ ಗಂಗೈಗೊಂಡಶೋಳ ಬ್ರಹ್ಮಮಾರಾನ್‌ನ ಮಗ ಯಿರುಗನ್ ಎಂಬುವ ಗಂಗೈ . . . . . ಎಂಬ ಅಸ್ಪಷ್ಟ ವಿವರವಿದೆ.[೪೪]

ಕೊಯ್ಸೈಕ್ಕುಋನಾಟ್ಟು ಮಾಂಡಲಿಕನ್ ಎಂಬ ಮಲೈಯಾಂಡೈ ಶೀಯನ್ ವಂಶಿಯರು

ದೇವಾಂಡೈ ಶೀಯನು: ಕೋಲಾರದ ಬೆಟ್ಟದ ಮೇಲಿನ ತೇರಹಳ್ಳಿಯಲ್ಲಿರುವ ಗಂಗಾಧರೇಶ್ವರ ದೇವಾಲಯದ ಅಧಿಷ್ಠಾನದ ಮೇಲಿರುವ ಸಾ.ಶ. ೧೨೮೬ರ ಶಾಸನವು ಭುಜಬಲ ವೀರನಾರಾಯಣನ್ ಕೊಯ್ಸೈಕ್ಕುಋನಾಟ್ಟು ಮಾಂಡಲಿಕನ್ ಆದ ಮಲೈಯಾಂಡೈ ಶೀಯನ್‌ನ ಮಗ ದೇವಾಂಡೈ ಶೀಯನು, ವೀರಗಂಗೀಶ್ವರಂ ಉಡೈಯನಾನಾರ್ ದೇವರಿಗೆ ೩೦೦ ಕುಟಿ ಭೂಮಿಯಿಂದ ಬರುವ ಆದಾಯ ೨೧ ಪಣವನ್ನು ದೇವರ ಮೆರವಣಿಗೆ ಹಾಗೂ ವೈಗಾಸಿ ತಿಂಗಳಿನಲ್ಲಿ ಬರುವ ಆಶ್ಲೇಷ ನಕ್ಷತ್ರದಿನದಂದು (ದೇವಾಂಡೈ ಶೀಯನ) ಜನ್ಮದಿನದ ಪೂಜೆಯನ್ನು ಆಚರಿಸಲು ದತ್ತಿಬಿಟ್ಟ ವಿವರ ದಾಖಲಾಗಿದೆ.[೪೫]

ವೀರರಾಘವದೇವ: ಸಾ.ಶ. ೧೨೮೮ರ ಶಿಡ್ಲಘಟ್ಟ ತಾ॥ ರಾಮೇಶ್ವರ ಗ್ರಾಮದ ರಾಮಲಿಂಗಬೆಟ್ಟದ ದೇವಾಲಯದ ಹೊರ ಪ್ರಾಕಾರದಲ್ಲಿ ಬಿದ್ದಿರುವ ಶಾಸನವು, ಕೊಯ್ಯಕುಜ್ಜೈನಾಡಿನ ಮಂಡಲಿಕ ವೀರರಾಘವದೇವನಾದ ಭುಜಬಲ ವೀರನಾರಾಯಣನು ತಿರುವಿರಾಮೀಶರಂ ಉಡೈಯನಾಯನಾರು ದೇವರಿಗೆ ಹೊಲ ಮತ್ತು ಗದ್ದೆ ಭೂಮಿಗಳನ್ನು ಅಚಂದ್ರಾರ್ಕವಾಗಿ ದತ್ತಿ ಬಿಟ್ಟ ವಿವರ.[೪೬] ನೀಡುತ್ತದೆ.

ಭುಜಬಲ ವೀರನಾರಾಯಣ . . . . ಲಗನಾಜಿದೇವರ್: ಮುಂಗಾನಹಳ್ಳಿಯ ಕೆರೆಯ ಕೆಳಗೆ ಇರುವ ಶಾಸನ ಬಹಳವಾಗಿ ತ್ರುಟಿತವಿದೆ. ಕೊಯ್ಯಕುಜ್ಜೈ – ನಾಡಿನ ಮಾಂಡಲಿಕ ಭುಜಬಲ ವೀರನಾರಾಯಣ. . . . ಲಗನಾಜಿದೇವರ್, ಎಂಬುವರು, ಐಯ್ಯರ್ ಅಟಿಗರ್ ಶೆಲ್ಲಪಿಳ್ಳೈನಾಯನ್ ಮತ್ತು ಇತರ ಹತ್ತು ಜನರು ಭೂಮಿಯನ್ನು ೧೨.೫ ವೃತ್ತಿಗಳನ್ನಾಗಿ ವಿಂಗಡಿಸಿ ಧಾರಾಪೂರ್ವಕವಾಗಿ ದತ್ತಿಬಿಟ್ಟ ವಿವರ.[೪೭] ಇಲ್ಲಿದೆ.

ಭುಜಬಲ ವೀರನಾರಾಯಣ: ಸಾ.ಶ. ೧೨೮೮ರ ಚಿಂತಾಮಣಿ ತಾ॥ ಮಾವುಕೆರೆ ಗ್ರಾಮದ ಶಾಸನ ಕೊಯ್ಸೈಕುಋನಾಡಿನ ಮಾಂಡಲಿಕ ಭುಜಬಲ ವೀರನಾರಾಯಣನು, ಅವಿಚ್ಛಿನ್ನ ಸದಾಶಿವ ಪರಂಪರೆಯ ಶುದ್ಧಶೈವಗುರುಗಳೂ ಚೋಳ, ಪಾಂಡ್ಯ, ಚೇರರ ಕುಲಗುರುಗಳಾದ ಶ್ರೀಮತ್ ರಾಜಾಕ್ಕಳ್ ನಾಯನಾರ್ ಎಂಬುವರಿಗೆ ಮಾದಮಂಗಲ ಪಟ್ರುವಿನಲ್ಲಿ (ಪಜಿಜೆಲ್) ಸರ್ವಮಾನ್ಯವಾಗಿ ಹೊಲ ಗದ್ದೆಗಳನ್ನು ದತ್ತಿ ಬಿಟ್ಟ ವಿವರ ನೀಡುತ್ತದೆ.[೪೮]

ವೀರರಾಘವ . . . . ನಾಲೇರ್‌ಕ್ಕಂಡನ್: ಚಿಂತಾಮಣಿ ತಾ॥ ಹಿರಣ್ಯಪಲ್ಲಿ ಗ್ರಾಮದ ಸಾ.ಶ. ೧೨೮೯ರ ಶಾಸನ ಬೀಮೇಶ್ವರ ಉಡೈಯದೇವರಿಗೆ ವೀರರಾಘವ . . . . ನಾಲೇರ್‌ಕ್ಕಂಡನ್ ಎಂಬುವನು ಪೆರಿಯಣ್ಣಪಳ್ಳಿಯ ಹೊಲ ಮತ್ತು ಗದ್ದೆ ಭೂಮಿಗಳನ್ನು ದತ್ತಿ ಬಿಟ್ಟ ವಿವರ.[೪೯] ದೊರಕುತ್ತದೆ.

ಇರಾಗವದೇವನ್

ಹಿರಣ್ಯಪಲ್ಲಿ ಸ್ಥಳದ ಶಾಸನ ಮಹಾಂಡಲೇಶ್ವರ ಭುಜಬಲ ವೀರನಾರಾಯಣ, ಅಯ್ಯನ್ ಅಂಕಕಾರ, ನಾಲೇರಕಣ್ಣನ್ ,ಕೊಯ್ ಗೈಕ್ಕುರುನಾಡು ಮಂಡಲಿಕನ್ ಇರಾಗವದೇವನ್ ಎಂಬುವವನು ತನ್ನ ಶ್ರೇಯೋಭಿವೃದ್ಧಿಯನ್ನು ಬಯಸಿ, ನಿಗರಿಲಿ ಚೋಳಮಂಡಲದ ಕೈವಾರದ ಭೀಮೇಶ್ವರಂ ಉಡೈಯನಾಯನಾರ್ ದೇವರಲ್ಲಿ ಆತನ ಹೆಸರಿನ 'ನಾಲೇರ್‌ಕ್ಕಂಡ' ಎಂದು ಸಂಜೆ ಪೂಜೆಗಾಗಿ ಕೆಳಕಂಡ ದತ್ತಿಯನ್ನು ತೆರಿಗೆರಹಿತಗೊಳಿಸಿ ಧಾರಾಪೂರ್ವಕವಾಗಿ ದತ್ತಿ ಬಿಡಲಾಯಿತು. ತಂದನಾಡಿನ ಅಂಬಡಕ್ಕಿಯಲ್ಲಿ ಗಂಗೈಪ್ಪೆರುಮಾಳನ್ ತಿರು ಚ್ಚಿಟ್ರಂಬಲ ನಾಲನಾಯನ್ಬ್ರಹ್ಮರಾಯರ ವಿರುದ್ಧ ಸಾ.ಶ. ೧೨೮೦ರಲ್ಲಿ ವಿಜಯಸಾಧಿಸಿದಾಗ ತನ್ನ ವಶವಾದ ಗ್ರಾಮಗಳ . . . . . ಪೆರಿಯಣ್ಣಪಳ್ಳಿಯಹೊಲ-ಗದ್ದೆ ಭೂಮಿಗಳು, ವೃಕ್ಷಗಳು ಇತರ ಗದ್ದೆ ಭೂಮಿಗಳನ್ನು ದತ್ತಿ ಬಿಡಲಾಯಿತು.[೫೦]

ಮಾಂಡಲಿಕನಾದ ವೀರರಾಘವ ಎಂಬುವ ವೀರನಾರಾಯಣ

ಈತನು ಕೊಯ್‌ಗೈಕ್ಕುರುನಾಡಿನ ಮಾಂಡಲಿಕನು. ಗುಂದಿಗೆರೆ (ಇರುಗಂಪಲ್ಲಿ ಹೋ॥) ಹಳೆಯಕೋಟೆಯ ಸಮೀಪವಿರುವ ಪಾಳು ಈಶ್ವರ ದೇವಾಲಯದ ಸಮೀಪ ಬಿದ್ದಿರು ಕಲ್ಲಿನಲ್ಲಿರುವ ಶಾಸನ ಬಹು ತ್ರುಟಿತವಿದೆ. ಕೊಯ್‌ಗೈಕ್ಕುರುನಾಡಿನ ಮಾಂಡಲಿಕನಾದ ವೀರರಾಘವ ಎಂಬುವ ವೀರನಾರಾಯಣನು ದತ್ತಿ ಬಿಟ್ಟಿರುವ ವಿವರವಿದ್ದಂತಿದೆ.[೫೧]



ಕೊಯ್ಯಕೊರೆನಾಡಿನ ಕೇಂದ್ರಸ್ಥಳ ಬಟ್ಲಹಳ್ಳಿ ಸಮೀಪದ ಸಿದ್ಧನಮಲೆಬೆಟ್ಟ

ಮಾಂಡಲಿಕನಾದ ವೀರರಾಘವ ಎಂಬುವ ಭುಜಬಲ ವೀರನಾರಾಯಣ

ಬೋಡಂಪಲ್ಲಿ ಗ್ರಾಮದ ಶಾಸನವು, ಕೊಯ್‌ಗೈಕ್ಕುರುನಾಡಿನ ಮಾಂಡಲಿಕನಾದ ವೀರರಾಘವ ಎಂಬುವ ಭುಜಬಲ ವೀರನಾರಾಯಣನು ಭಾರದ್ವಾಜಗೋತ್ರದ ಶೆಲ್ಲಪ್ಪಿಳ್ಳೈಗೆ ಧರ್ಮದತ್ತಿಯಾಗಿ ಕೆಲವು ಭೂಮಿಗಳನ್ನು ದತ್ತಿ ಬಿಟ್ಟ ವಿವರ.[೫೨]

ಇರುಗಂಪಲ್ಲಿ ಹೋ॥ ಗುಂದಿಗೆರೆ ಶಾಸನ ತ್ರುಟಿತ, ಶೇ . . . . . ಸಮುದ್ರಮ್ ಎಂಬುವ ವೀರನಾರಾಯಣ ಚ್ಚತುರೇದಿ ಮಂಗಲಂಗೆ ಸೇರಿದ ಮಹಾಜನರಿಗೆ ಯಾರೋ ಧಾರಾಪೂರ್ವಕವಾಗಿ ಹೊಲ, ಗದ್ದೆ ಭೂಮಿಗಳನ್ನು ಸರ್ವಮಾನ್ಯವಾಗಿ ದತ್ತಿ ಬಿಟ್ಟ ವಿವರವಿದ್ದಂತಿದೆ.[೫೩]

ದೇವಾಣ್ಡೆಶ್ರೀಯನ್

ಬೋಡಂಪಲ್ಲಿ ಗ್ರಾಮದ ಶಾಸನವು, ಕೊಯ್‌ಗೈಕ್ಕುರುನಾಡಿನ ನಾಡಿನ ಮಾಂಡಲಿಕನಾದ ಭುಜಬಲ ವೀರನಾರಾಯಣ ಎಂಬುವ ದೇವಾಣ್ಡೆಶ್ರೀಯನ್ ಎಂಬುವನು ಬೆಟ್ಟದ ಮೇಲಿನ ಮುತ್ತೀಶ್ವರಂ ಉಡೈಯನಾರ್ ದೇವಾಲಯದ ತಾನಪತಿಗಳಾದ ಸದಾಶಿವದೇವ ಎಂಬುವವರಿಗೆ ಮಡಪುರಂ ದತ್ತಿಯಾಗಿ ಹಲವು ಭೂಮಿಗಳನ್ನು ದತ್ತಿ ಬಿಟ್ಟ ವಿವರವನ್ನು ಇಲ್ಲಿ ಒಳಗೊಂಡಿದೆ.[೫೪]

ಮೇಲಿನ ಶಾಸನೋಕ್ತ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮಹಾರಾಜವಾಡಿಯ ಭಾಗವಾದ ಕೊಯ್ಯಕೊರೆ ನಾಡು–೩೦೦ ಎಂಬುದು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಪೂರ್ವಕ್ಕಿರುವ ಬಾಗೇಪಲ್ಲಿ, ಶಿಡ್ಲಘಟ್ಟ ಹಾಗೂ ಚಿಂತಾಮಣಿ ತಾಲ್ಲೂಕಿನ ಉತ್ತರ ಭಾಗಗಳು ಹಾಗೂ ಅದಕ್ಕೆ ಹೊಂದಿಕೊಂಡಿರುವ ಆಂಧ್ರದ ಮದನಪಲ್ಲಿ ತಾಲ್ಲೂಕು ಪ್ರದೇಶವೂ ಒಳಗೊಂಡಂತೆ ಅದು ಇದ್ದಿತೆಂಬುದು ಖಚಿತವಾಗುತ್ತದೆ. ಹಾಗೇ ಚಿಂತಾಮಣಿ ತಾ॥ ಮಾದಮಂಗಲದ ಸಮೀಪದ ಬಟ್ಲಹಳ್ಳಿಯ ಸಿದ್ಧನಮಲೆ ಬೆಟ್ಟದ ಮೇಲಿನ ಕೋಟೆ, ದೇವಾಲಯ, ನಾಲೆಯ ರಚನೆ ಇತ್ಯಾದಿಗಳ ಶಾಸನೋಕ್ತ ವಿವರಗಳ ಹಿನ್ನೆಲೆಯಲ್ಲಿ ಪ್ರಾಯಃ ಕೊಯ್ಯಕೊರೆನಾಡಿನ ಕೇಂದ್ರಸ್ಥಳ ಸಿದ್ಧನಮಲೆಬೆಟ್ಟವೇ ಆಗಿರಬೇಕೆಂದು ತೋರುತ್ತದೆ.

* ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೆರವಾದ ಸನ್ಮಿತ್ರ ಶ್ರೀ ತಾಯಪ್ಪ ಅವರಿಗೆ ನನ್ನ ಹಾರ್ದಿಕ ಧನ್ಯವಾದಗಳು.

ಅಡಿಟಿಪ್ಪಣಿಗಳು

೧. ಎಪಿಗ್ರಾಫಿಯಾ ಇಂಡಿಕಾ, ಸಂಪುಟ ೮, ಪು. ೭೪–೭೫, ಅನಂತಪುರ ಜಿಲ್ಲೆಯ ದೇವುಲುಪಲ್ಲಿ.

೨. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್. ಸಂಪುಟ ೬, ಶಾ.ಸಂ. ೨೩೨, ಅಮರಾವತಿ, [ಪೆನುಗೊಂಡ].

೩. ಸೌ.ಇ.ಇ. ಸಂಪುಟ ೯, ಭಾಗ ೨, ಶಾ.ಸಂ. ೪೨೯, ಚಿತ್ತೂರು ಜಿಲ್ಲೆಯ ತಂಬುಲ್ಲಪಲ್ಲಿ.

೪. ಸಾ.ಇ.ಇ. ಸಂಪುಟ ೩, ಪುಟ ೧೦೬, ತಮಿಳುನಾಡಿನ ತಿರುವಳ್ಳಂ.

೫. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೦, (ರೈಸ್) ಚಿಂತಾಮಣಿ ೩೦, ಮಿಂಡುಗಲ್ಲು ಮಜರೆ ದಿಗುಪಲ್ಲಿ, ಸಾ.ಶ. ೧೦೪೭.

೬ ಅದೇ, ಶಿಡ್ಲಘಟ್ಟ ೭೩, ನಂದನಹೊಸಹಳ್ಳಿ, ಸಾ.ಶ. ೧೦೫೩.

೭. ಅದೇ, ಚಿಂತಾಮಣಿ ೧೬೧, ಪೊಟ್ಟಪಲ್ಲಿ ೭, ಸಾ.ಶ. ೧೦೬೯.

೮. ಅದೇ, ೭, ೮, ೯ ಮತ್ತು ೧೦, ಬಟ್ಲಹಳ್ಳಿ, ಸಾ.ಶ. ೧೧೦೦.

೯. ಅದೇ, ಶಿಡ್ಲಘಟ್ಟ ೯೧, ನಂದನವನ, ಸಾ.ಶ. ೧೧೦೨.

೧೦. ಅದೇ, ಚಿಂತಾಮಣಿ ೭೦, ದೊಡ್ಡನಂಜೂರು.

೧೧. ಅದೇ, ೩, ಮುಂಗಾನಹಳ್ಳಿ, ಸಾ.ಶ. ೧೨೮೮.

೧೨. ಅದೇ, ೧೩, ಮಾವುಕೆರೆ, ಸಾ.ಶ. ೧೨೮೮.

೧೩. ಅದೇ, ೩೭, ಹಿರಣ್ಯಪಲ್ಲಿ, ಸಾ.ಶ. ೧೨೮೯.

೧೪. ಅದೇ, ೨೦; ಗುಂದಿಗೆರೆ, ಸಾ.ಶ. ೧೨೮೯.

೧೫. ಅದೇ, ೧೫ ಮತ್ತು ೧೮, ಸಾ.ಶ. ೧೨೬೨ ಮತ್ತು ೧೨೮೯.

೧೬. ಅದೇ, ಶಿಡ್ಲಘಟ್ಟ ೮೩, ಚಿಲಕಲನೇರ್ಪು, ಸಾ.ಶ. ೧೧೦೮,

೧೭. ಅದೇ, ೧೧೧, ರಾಮೇಶ್ವರ, ಸಾ.ಶ. ೧೨೮೮.

೧೮. ಎಂ.ಎ.ಆರ್. ೧೯೨೧, ಪು. ೨೯. ಚೇಳೂರು,

೧೯. ಎಂ.ಎ.ಆರ್. ೧೯೨೮, ನಂ. ೩೧, ಚಾಕನಪಲ್ಲಿ, ಸಾ.ಶ. ೧೦೬೩.

೨೦. ಎ.ಕ. ಚಿಂತಾಮಣಿ ೩೦, ಸಾ.ಶ. ೧೦೪೭.

೨೧. ಅದೇ, ೧೬೧, ಪೊಟ್ಟಪಲ್ಲಿ, ಸಾ.ಶ. ೧೦೬೯.

೨೨. ಎಂ.ಎ.ಆರ್. ೧೯೨೧, ಪು. ೨೯, ಚೇಳೂರು.

೨೩ ಎ.ಕ., ಚಿಂತಾಮಣಿ ೭, ೮, ಸಾ.ಶ. ಸು. ೧೧೦೦.

೨೪. ಅದೇ, ೩೦, ಸಾ.ಶ. ೧೦೪೭.

೨೫. ಅದೇ, ಶಿಡ್ಲಘಟ್ಟ ೭೩, ನಂದನಹೊಸಹಳ್ಳಿ, ಸಾ.ಶ. ೧೦೫೩.

೨೬. ಎಂ.ಎ.ಆರ್. ೧೯೨೧, ಪು. ೨೯. ಚೇಳೂರು.

೨೭. ಎ.ಕ., ಸಂ. ೧೦, ಚಿಂತಾಮಣಿ ೭, ಸಾ.ಶ. ಸು. ೧೧೦೦.

೨೮. ಅದೇ, ಶಿಡ್ಲಘಟ್ಟ ೮೩, ಚಿಲಕಲನೇರ್ಪು, ಸಾ.ಶ. ೧೧೦೮.

೨೯. ಅದೇ, ೯೧, ನಂದನವನ, ಸಾ.ಶ. ೧೧೦೨.

೩೦. ಅದೇ, ಚಿಂತಾಮಣಿ ೧೩, ಮಾವುಕೆರೆ, ಸಾ.ಶ. ೧೨೮೮.

೩೧. ಅದೇ, ೧೫.

೩೨. ಅದೇ, ಶಿಡ್ಲಘಟ್ಟ ೧೧೧, ರಾಮೇಶ್ವರ, ಸಾ.ಶ. ೧೨೮೮.

೩೩. ಅದೇ, ಚಿಂತಾಮಣಿ ೩೦, ಸಾ.ಶ. ೧೦೪೭.

೩೪. ಅದೇ, ಶಿಡ್ಲಘಟ್ಟ ೭೩.

೩೫. ಎಂ.ಎ.ಆರ್. ೧೯೨೮, ಶ್ರೀನಿವಾಸಪುರ ೩೧, ಪು. ೪೫.

೩೬. ಎಂ.ಎ.ಆರ್. ೧೯೨೧, ಪು. ೨೯, ಚೇಳೂರು.

೩೭. ಎ.ಕ., ಸಂಪುಟ ೧೦, (ರೈಸ್), ಚಿಂತಾಮಣಿ ೧೬೧.

೩೮. ಅದೇ, ಚಿಂತಾಮಣಿ ೭.

೩೯. ಅದೇ, ಚಿಂತಾಮಣಿ ೮.

೪೦. ಅದೇ, ಚಿಂತಾಮಣಿ ೧೦, ಸು. ೧೧೦೦.

೪೧. ಅದೇ, ಚಿಂತಾಮಣಿ ೯, ಸು. ೧೧೦೦.

೪೨. ಅದೇ, ಶಿಡ್ಲಘಟ್ಟ ೯೧.

೪೩. ಅದೇ, ಶಿಡ್ಲಘಟ್ಟ ೮೩; ಸಾ.ಶ. ೧೧೦೮.

೪೪. ಅದೇ, ಚಿಂತಾಮಣಿ ೭೦.

೪೫. ಅದೇ, ಕೋಲಾರ ೧೨೬.

೪೬ ಅದೇ, ಶಿಡ್ಲಘಟ್ಟ ೧೧೧.

೪೭. ಅದೇ, ಚಿಂತಾಮಣಿ ೩: ಸಾ.ಶ. ಸು. ೧೨೮೮.

೪೮. ಅದೇ, ಚಿಂತಾಮಣಿ ೧೩: ಸಾ.ಶ. ಸು. ೧೨೮೮.

೪೯. ಅದೇ, ಚಿಂತಾಮಣಿ ೩೭.

೫೦. ಅದೇ, ಚಿಂತಾಮಣಿ ೩೮, ಸಾ.ಶ. ೧೨೮೯.

೫೧. ಅದೇ, ಚಿಂತಾಮಣಿ ೨೦, ಸಾ.ಶ. ೧೨೮೯.

೫೨. ಅದೇ, ಚಿಂತಾಮಣಿ ೧೮, ಸಾ.ಶ. ೧೨೮೯.

೫೩. ಅದೇ, ಚಿಂತಾಮಣಿ ೧೯, ೧೨೯೦.

೫೪. ಅದೇ, ಚಿಂತಾಮಣಿ ೧೫, ೧೨೯೨.

೨೦

ನರಸಿಂಹನ್ ಕೆ.ಆರ್.

ಪು(ಪೊ)ದಲ್ನಾಡು: ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಮೀಕ್ಷೆ

ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿದ್ದು, ಕರ್ನಾಟಕದ್ದೇ ಆಗಿರುವ ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲು ಮತ್ತು ಕೋಲಾರ ತಾಲ್ಲೂಕುಗಳ ಸ್ಥಳೀಯ ಇತಿಹಾಸದಲ್ಲಿ 'ಪುದಲ್ನಾಡು' ಪ್ರಸಿದ್ಧಿ ಪಡೆದಿದೆ. ಇವು ಮೂರು ತಾಲ್ಲೂಕುಗಳ ಹಲವು ಗ್ರಾಮಗಳ ಚರಿತ್ರೆಯಲ್ಲಿ 'ಪುದಲ್ನಾಡು' ಪುದನಾಟ್ಟು, ಹೊದೆನಾಡು ಹಾಸುಹೊಕ್ಕಾಗಿದೆ. ಪುದಲ್ನಾಡು-೬೦ ಎಂಬ ಎಂಟನೇ ಶತಮಾನದ ವಿಭಾಗವೊಂದು ತದನಂತರದಲ್ಲಿ ಸಾಕಷ್ಟು ಸಂಖ್ಯೆಯ ಗ್ರಾಮಗಳ ಬೆಳವಣಿಗೆಯ ಕಾರಣದಿಂದಾಗಿ ಪುದಲ್ನಾಡು ಎಂಬ ದೊಡ್ಡ ನಾಡಿನ ವಿಸ್ತರತೆಯನ್ನು ಹೊಂದಿತೆಂದು ಹೇಳಬಹುದು. ಇದೊಂದು ಆಡಳಿತ ವಿಭಾಗವಾಗಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಚರಿತ್ರೆಯಿಂದ ಕೂಡಿ ಪ್ರಸಿದ್ಧಿ ಪಡೆದಿದೆ. ಪುದಲ್ನಾಡಿನ ಅಧ್ಯಯನಕ್ಕೆ ನಮಗಿಂದು ಸುಮಾರು ೩೭ ಶಿಲಾಶಾಸನಗಳು ಮತ್ತು ಎರಡು ತಾಮ್ರಪಟಗಳು ನೆರವಾಗಿವೆ. ಇವುಗಳಲ್ಲಿ ಹೆಚ್ಚಿನ ಶಾಸನಗಳು ಶ್ರೀನಿವಾಸಪುರ ತಾಲ್ಲೂಕಿನಲ್ಲಿದ್ದು, ಎರಡನೇ ಸ್ಥಾನ ಮುಳಬಾಗಿಲು ತಾಲ್ಲೂಕಿಗೆ ಸಲ್ಲುತ್ತದೆ. ಕೋಲಾರ ತಾಲ್ಲೂಕಿನ ನಾಲ್ಕೈದು ಶಾಸನಗಳೂ ಇಲ್ಲಿ ಸೇರಿಕೊಂಡಿವೆ (ಅನುಬಂಧ ನೋಡಿ).

'ಪುದಲ್'- ಎಂಬುದಕ್ಕೆ ತಮಿಳು ನಿಘಂಟಿನಲ್ಲಿ ಪೊದೆ, ಹೊದರು, ಕುರುಚಲು ಕಾಡು ಮುಂತಾದ ಅರ್ಥಗಳಿವೆ. ಇದಕ್ಕೆ ಅನ್ವರ್ಥವಾಗುವಂತೆ ಪುದಲ್ನಾಡು ವ್ಯಾಪಿಸಿಕೊಂಡಿದ್ದು, ವಿಸ್ತಾರವಾದ ಪ್ರದೇಶವು ಅರಣ್ಯ ಸಂಬಂಧವನ್ನು ಹೊಂದಿದ್ದಾಗಿದೆ. ನಮ್ಮ ನಾಡುಗಳ ಬಹುಪಾಲು ಹೆಸರುಗಳು ಭೌಗೋಳಿಕ ನಂಟನ್ನು ಹೊಂದಿರುವುದಕ್ಕೆ ಇದೂ ಸಹ ಉದಾಹರಣೆಯಾಗಿದೆ. ಪೊದಲ್ನಾಡಿನಲ್ಲಿ ಹೊದಲಿ, ತಿನ್ನಲಿ, ಮಡಿವಾಳ, ದಿಂಬಾಲ, ಕಲ್ಲೂರು, ಯಲ್ದೂರು, ಕುರುಡುಮಲೆ, ರಾಜಗುಂಡ್ಲಹಳ್ಳಿ, ಗುಡಿಪಲ್ಲಿ, ಶೆಟ್ಟಿಮಾದಮಂಗಲ, ದಳಸನೂರು ಇವೇ ಮೊದಲಾದ ಪ್ರಮುಖವಾದ ಗ್ರಾಮಗಳಿರುವುದನ್ನು ಕಾಣುತ್ತೇವೆ. ಇವೆಲ್ಲವೂ ಸಹ ಶಾಸನ ಕಂಡ ಗ್ರಾಮಗಳಾಗಿ ಪೊದಲ್ನಾಡಿನ ಅಧ್ಯಯನದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತವೆ.

ಪೊದಲ್ನಾಡಿನ ಕೆಲವೊಂದು ಗ್ರಾಮಗಳು ಬೇಚರಾಕ್ ಆಗಿರುವುದು ಕಂಡುಬಂದಿದೆ. ಇದಕ್ಕೆ ಉದಾಹರಣೆಯೆಂದರೆ ಶ್ರೀನಿವಾಸಪುರ ತಾಲ್ಲೂಕಿನ ಕೊರ್ನೆಲ್ಲಿ ಮಡಿವಾಳ, ಕೋಲಾರ ತಾಲ್ಲೂಕಿನ ಚಿಕ್ಕಪುರ ಇತ್ಯಾದಿಗಳು. ಇಂದಿಗೂ ಸಹ ಹೊದೆನಾಡಿನ ಪ್ರಮುಖ ಸ್ಥಳಗಳಾಗಿ ಕುರುಡುಮಲೆ, ಉತ್ತನೂರು, ಯಲ್ದೂರು, ಗುಡಿಪಲ್ಲಿ ಮುಂತಾದವು

೨೦೩, ಸಿಂಚನ
೧೦ ಎ ಅಡ್ಡರಸ್ತೆ, ೧ನೇ ಮುಖ್ಯರಸ್ತೆ
ಮಾರುತಿನಗರ, ಯಲಹಂಕ
ಬೆಂಗಳೂರು-೫೬೦೦೬೪
ಮೊ: ೯೪೪೮೪ ೧೩೦೪೫

ಪ್ರಖ್ಯಾತವಾಗಿರುವುದನ್ನು ಕಾಣುತ್ತೇವೆ. ಪುದನಾಟ್ಟು ಪ್ರದೇಶವು ಕಾಡಿನೊಂದಿಗೆ ನಂಟು ಹೊಂದಿದ್ದರೂ ರಾಜರ ಬೆಂಬಲದಿಂದಾಗಿ ಅವರ ಮಾಂಡಲೀಕರು, ಪ್ರಧಾನಿಗಳು, ಸೇನಾನಿಗಳು, ಸಾಮಂತರು, ಸಾಮಾನ್ಯರು, ಅಧಿಕಾರಿಗಳು ಮುಂತಾದವರೆಲ್ಲರ ಪ್ರರಿಶ್ರಮದಿಂದ ಗ್ರಾಮಗಳ ವಿಕಾಸವಾಗಿರುವುದನ್ನು ಕಾಣುತ್ತೇವೆ. ಇಂತಹ ನೂರಾರು ಹಳ್ಳಿಗಳಿಂದಾಗಿ ಪೊದಲ್ನಾಡು ಅಧ್ಯಯನಯೋಗ್ಯವಾದದ್ದಾಗಿದೆ.

ಗಂಗ, ಬಾಣ, ನೊಳಂಬ, ರಾಷ್ಟ್ರಕೂಟ, ಚೋಳ, ಹೊಯ್ಸಳ, ವಿಜಯನಗರ–ಮುಂತಾದ ಪ್ರಮುಖ ರಾಜವಂಶಗಳು ಮಾತ್ರವಲ್ಲದೆ, ಕಾಡುವೆಟ್ಟಿಗಳು, ಪಾಳೆಯಗಾರರು, ತಾಡಿಗೋಳ್ಳ ಮುಂತಾದ ವಂಶಗಳಿಗೆ ಸೇರಿದ ಸ್ಥಳೀಯ ನಾಯಕರುಗಳು ಸಹ ಪೊದಲ್ನಾಡಿನ ಅಭಿವೃದ್ಧಿಗೆ ಶ್ರಮವಹಿಸಿದ್ದಾರೆ. ಎಂಟನೇ ಶತಮಾನದಿಂದ ಹದಿನೇಳನೇ ಶತಮಾನದವರೆಗೆ ಪುದನಾಡು ಇಲ್ಲವೆ ಹೊದೆನಾಡೆಂಬುದು ಒಂದಲ್ಲ ಮತ್ತೊಂದು ರೀತಿಯಲ್ಲಿ ಚಾರಿತ್ರಿಕ ಅಭಿವೃದ್ಧಿ ಹೊಂದಿರುವುದನ್ನು ಕಾಣುತ್ತಿದ್ದೇವೆ. ಇಂದಿನ ಬೆಚರಾಕ್ ಗ್ರಾಮವಾದ ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳದ ಶ್ರೀಪುರುಷನ ಮಗ ದುಗ್ಗಮಾರನ ಕಾಲದ ಶಾಸನವನ್ನು ಪೊದಲ್ನಾಡಿನ ಉಲ್ಲೇಖವಿರುವ ಮೊದಲ ಶಾಸನವೆಂದು ಪರಿಣಗಣಿಸಿದ್ದು, ಮುಳಬಾಗಿಲು ತಾಲ್ಲೂಕಿನ ಉತ್ತನೂರಿನ ಶಾಸನವು ಸದ್ಯಕ್ಕೆ ಕಡೆಯದಾಗಿದೆ.

'ಪುದಲ್ನಾಡು' ಎಂಬುದು ಶುದ್ಧ ದೇಶೀಯ ಕನ್ನಡ ಹೆಸರಾಗಿತ್ತು ಎಂಬುದಕ್ಕೆ ಆರಂಭಕಾಲದ ಕನ್ನಡ ಶಾಸನಗಳೇ ನಿದರ್ಶನಗಳಾಗಿವೆ. ಮಡಿವಾಳದ ತ್ರುಟಿತವಾದ ನಾಡಋವತ್ತು ಎಂಬುದು, ತಿನ್ನಿಲಿಯ ಪೊದಲ್ನಾಡಋವತ್ತು ಎಂಬ ಉಲ್ಲೇಖ, ಅಂತೆಯೇ ನಂಬಿಹಳ್ಳಿಯ ಶಾಸನದಲ್ಲಿನ 'ಪುದಲ್ನಾಡು ಎಂಬ ಪದಗಳಿಂದ ನಮಗೆ ಇದು ವಿಶೇಷವಾಗಿ ಕರ್ನಾಟಕದ ಉತ್ತರ ಭಾಗದ ಶ್ರೀನಿವಾಸಪುರ ತಾಲ್ಲೂಕಿನ ಪ್ರದೇಶಕ್ಕೆ ಅನ್ವಯವಾದದ್ದಾಗಿದೆ ಎಂದು ತಿಳಿಯಲವಕಾಶವಿದೆ. ಇವೆಲ್ಲವೂ ಸಹ ಹತ್ತನೇ ಶತಮಾನಕ್ಕೆ ಮುಂಚಿನ ಅವಧಿಯ ಶಾಸನಗಳಾಗಿದ್ದು, ಇವು ಬಹುಪಾಲು ವೀರಗಲ್ಲುಶಾಸನಗಳೆಂದೇ ಹೇಳಬಹುದು. ಬಾಣರ ಕಾಲದ ಕನ್ನಡ ಶಾಸನಗಳು, ವೀರಗಲ್ಲುಗಳ ಪ್ರಭಾವ ಇದರಲ್ಲಿದೆ. ಅಂದಿನ ಕಾಲದಲ್ಲಿ ಕರ್ನಾಟಕದ ಕೋಲಾರ ಜಿಲ್ಲೆಯ ಉತ್ತರ ಗಡಿಗಳಲ್ಲಿ ಪ್ರಭುತ್ವ ಗಳಿಸಿದ್ದ ಬಾಣರೊಂದಿಗೆ ನೊಳಂಬರು ನಡೆಸಿದ ಆಕ್ರಮಣಗಳು ಸಹ ಇದರ ಹಿನ್ನೆಲೆಯಲ್ಲಿ ಕಂಡುಬರುತ್ತವೆ. ಗಂಗರ ಸಾಮಂತರಾದ ನೊಳಂಬರು, ನೇರವಾಗಿ ಗಂಗರೇ ಹೋರಾಟ ನಡೆಸಿದ ಚಿತ್ರಣಗಳಾಗಿ ಇಲ್ಲಿನ ದಾಖಲೆಗಳು ಕಂಡುಬಂದಿವೆ.




ಪುದಲ್ನಾಡರವತ್ತು ಪ್ರಸ್ತಾಪವಿರುವ ತಿನ್ನಿಲಿಯ ವೀರಗಲ್ಲು

ಶ್ರೀಪುರುಷನು ಗಂಗ ಸಾಮ್ರಾಜ್ಯವನ್ನಾಳಿದವರಲ್ಲಿ ಪ್ರಸಿದ್ಧ ದೊರೆಯಾಗಿದ್ದಾನೆ. ಈತನ ಮಗನಾದ ದುಗ್ಗಮಾರ ಎರೆಯಪ್ಪನು ಕೋಲಾರ ಜಿಲ್ಲೆಯ ಕುವಳಾಲ ನಾಡು ಮುನ್ನೂರರ ಒಡೆಯನಾಗಿದ್ದು ಮಾತ್ರವಲ್ಲದೆ ಗಂಗರು ಸಾಸಿರದ ಗಂಗ ಸಾಯಿರದ ಭಾಗಕ್ಕೂ ತನ್ನ ಆಳ್ವಿಕೆಯನ್ನು ವಿಸ್ತರಿಸಿಕೊಂಡಿದ್ದ. ಕುವಳಾಲನಾಡು–೩೦೦ರಲ್ಲಿ ಸೇರ್ಪಡೆಯಾಗಿದ್ದ 'ಪೊದಲ್ನಾಡು' ಒಂದು ಆಯಕಟ್ಟಿನ ಪ್ರದೇಶವಾಗಿತ್ತು. ದುಗ್ಗಮಾರ ಎರೆಯಪ್ಪನ ಬಿಸನಹಳ್ಳಿ ವೀರಗಲ್ಲು, ಯಲ್ದೂರಿನ ಶ್ರೀ ಮಂಗಲಿಸಿಂಗ ಪರಾಕ್ರಮನ ಮಗ ತಿರುವೆಂಗಡಯ್ಯನ ವೀರಗಲ್ಲು, ಮುತ್ತುಕಪಲ್ಲಿ, ತಿನ್ನಿಲಿಗಳ ವೀರಗಲ್ಲುಗಳೆಲ್ಲವನ್ನು ಗಮನಿಸಿದಾಗ 'ಪುದಲ್ನಾಡು' ಒಂದು ಆಯಕಟ್ಟಿನ ಪ್ರದೇಶವಾಗಿ ವಿರೋಚಿತವಾದ ಸಮರಭೂಮಿಯಾಗಿದ್ದಿರಬೇಕೆಂಬುದು ಮನದಟ್ಟಾಗುತ್ತದೆ. ಬಾಣ, ಗಂಗ, ನೊಳಂಬರ ನಡುವಿನ ಸಂಘರ್ಷಗಳು, ಇದಕ್ಕೆ ರಾಷ್ಟ್ರಕೂಟರಿಂದ ದೊರೆತ ಬೆಂಬಲಗಳಿಂದಾಗಿ ಪುದಲ್ನಾಡಿನ ಕ್ಷಾತ್ರತೇಜಸ್ಸನ್ನು ಗಮನಕ್ಕೆ ತಂದುಕೊಳ್ಳಬಹುದಾಗಿದೆ.

'ಪೊದಲ್ನಾಡು' ಎಂಬುದು ಪ್ರಮುಖವಾಗಿ ಶ್ರೀನಿವಾಸಪುರ ತಾಲ್ಲೂಕಿಗೆ ಅನ್ವಯವಾಗುತ್ತಿದ್ದ ಆರಂಭಕಾಲದ ಆಡಳಿತ ವಿಭಾಗವಾಗಿದೆ. ಇದರ ಮೇರೆಗಳನ್ನು ಗುರುತಿಸುವ

ಸಂದರ್ಭದಲ್ಲಿ ಮುಳಬಾಗಿಲು ಮತ್ತು ಕೋಲಾರ ತಾಲ್ಲೂಕುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದವಶ್ಯಕವಾಗಿದೆ. ಇದರದ್ದೊಂದು ಭೌಗೋಳಿಕ ನಕ್ಷೆಯನ್ನು ಇತಿಹಾಸದ ಹಿರಿಯ ಸಂಶೋಧಕ ಮಿತ್ರರಾದ ಡಾ. ಪಿ.ವಿ. ಕೃಷ್ಣಮೂರ್ತಿ ಅವರು ತಯಾರಿಸಿಕೊಟ್ಟು ಉಪಕರಿಸಿರುತ್ತಾರೆ. ಶ್ರೀನಿವಾಸಪುರದ ಗಡಿತಾಲ್ಲೂಕುಗಳಾದ ಮುಳಬಾಗಿಲು ಮತ್ತು ಕೋಲಾರದ ಹಲವು ಸ್ಥಳಗಳಿಗೆ ವ್ಯಾಪಿಸಿಕೊಂಡ 'ಪುದನಾಟ್ಟು' ಕನ್ನಡ ಹಾಗೂ ತಮಿಳು ಲಿಪಿ-ಭಾಷೆಗಳ ಶಾಸನಗಳನ್ನು ಹೊಂದಿರುವುದು ಸಹಜವೇ ಆಗಿದೆ.



ಪುದಲ್ನಾಡಿನ ಭೂಪಟ

ಕನ್ನಡ ಶಾಸನಗಳಿಗೆ ಎರಡರಷ್ಟು ಅಥವಾ ಇನ್ನೂ ತುಸು ಹೆಚ್ಚಾಗಿಯೇ ಇರುವ ತಮಿಳು ಶಾಸನಗಳು ಪುದನಾಡಿನುದ್ದಕ್ಕೆ ಹರಡಿಕೊಂಡಿವೆ. ಹನ್ನೊಂದನೇ ಶತಮಾನದ ಆರಂಭದಿಂದ ಹದಿನಾಲ್ಕನೇ ಶತಮಾನದ ಮಧ್ಯಭಾಗದವರೆಗೆ ಎಂದರೆ ಮೂರೂವರೆ ಶತಮಾನಗಳ ಕಾಲ ತಮಿಳಿನ ಸಾರ್ವಭೌಮತ್ವ ಕಂಡುಬಂದಿರುವ ಪುದನಾಟ್ಟಿನ ಚರಿತ್ರೆಯ ಅವಲೋಕನ ಸ್ವಾರಸ್ಯಕರವಾಗಿದೆ. ಕೋಲಾರ ಜಿಲ್ಲೆಯಲ್ಲಿನ ಚೋಳರ ಆಳ್ವಿಕೆಯನ್ನು ಪ್ರಧಾನವಾಗಿ ರಾಜರಾಜಚೋಳನ ಕಾಲದಿಂದಲೇ ಗುರುತಿಸಬಹುದಾಗಿದ್ದು, ಉತ್ತನೂರು ಅಂದಿನ ಗಂಗಸಾಯಿರದ ಪುದನಾಡಿಗೆ ಸೇರಿತ್ತು. ಇದನ್ನು ಅರುಮೋಳಿಚತುರ್ವೇದಿ ಮಂಗಲವೆಂದು ಕರೆದಿತ್ತು. 'ಅರುಮೋಳಿ' ಎಂಬುದು ವಿಷ್ಣುದೇವರನ್ನೇ ಹೇಳುತ್ತಿರುವುದು. ಇದು ವರದರಾಜನಿಗೆ ಅನ್ವಯವಾಗಿದ್ದಿರಬಹುದು.

ಅನಂತರದಲ್ಲಿ ರಾಜೇಂದ್ರನ ಮಗನಾದ ರಾಜಾಧಿರಾಜನ ಪ್ರಭಾವವು ಪುದಲ್ನಾಡಿನ ಮೇಲೆ ಇತ್ತು ಎಂಬುದಕ್ಕೆ ಇಂದಿನ ಯಲ್ದೂರು ಇಲ್ಲವೆ ಇರಟಿಯೂರಿನ ಶಾಸನಗಳು ಸಾಕ್ಷಿಯಾಗಿವೆ. ಇಂದು ಸೋಮೇಶ್ವರನೆಂದು ಪರಿವರ್ತಿತ ಹೆಸರನ್ನು ಹೊಂದಿದ ಈಶಾನೇಶ್ವರ ದೇವರಿಗೆ ಅನೇಕ ದಾನಗಳನ್ನು ಈತನ ಕಾಲದಲ್ಲಿ ನೀಡಲಾಗಿದೆ. ರಾಜಾಧಿರಾಜನು ತನ್ನ ತಂದೆ ರಾಜೇಂದ್ರನ ಜೊತೆ ಜೊತೆಯಲ್ಲಿ ಆಡಳಿತ ನಡೆಸಿ, ಚೋಳರಾಜ್ಯದ ಪ್ರಸಿದ್ಧ ರಾಜನಾಗಿದ್ದ. ಇವನು ಚಾಳುಕ್ಯರೊಂದಿಗೆ ಸಮರಗಳನ್ನು ಹೂಡಿ ಅಂತಿಮವಾಗಿ ಚಾಳುಕ್ಯರ ರಾಜಧಾನಿಯಲ್ಲಿ ನಡೆದ ಸಮರದಲ್ಲಿ ಅಸುನೀಗುತ್ತಾನೆ. ಅನಂತರದಲ್ಲಿ ಈತನ ಸೋದರನಾದ ಮತ್ತು ಕುಲೋತ್ತುಂಗ ಚೋಳನ ಮಾವನಾದ ಎರಡನೇ ರಾಜೇಂದ್ರನು ಸಮರಭೂಮಿಯಲ್ಲಿಯೇ ಪಟ್ಟಕಟ್ಟಿಕೊಂಡು ಅತ್ಯುಗ್ರವಾಗಿ ಹೋರಾಟ ಮಾಡಿ ಜಯಶೀಲನಾಗಿ ಕಲ್ಯಾಣಪುರವನ್ನು ಸುಟ್ಟ ಕತೆ ಇತಿಹಾಸದ ಪುಟಗಳಲ್ಲಿ ಜನಜನಿತವಾಗಿದೆ. ಯಲ್ದೂರಿನ ಎರಡು ಶಾಸನಗಳು ರಾಜಾಧಿರಾಜನ ೩೩ನೇ ವರ್ಷದ ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದ್ದು ಪುದಲ್ನಾಡಿನ ಇತಿಹಾಸದ ಅಧ್ಯಯನಕ್ಕೆ ಸಂಬಂಧಿಸಿದ ವಿಶಿಷ್ಟ ದಾಖಲೆಗಳಾಗಿವೆ.

ಒಂದನೆಯ ಕುಲೋತ್ತುಂಗನೆಂದು ಹೆಸರು ಧರಿಸಿ ಪ್ರಸಿದ್ಧನಾದ ವೆಂಗಿಚಾಳುಕ್ಯ ಮನೆತನದ ರಾಜೇಂದ್ರದೇವನು ತನ್ನ ತಾಯಿಯ ಕಡೆಯ ಸಂಬಂಧದಿಂದಾಗಿ ವೀರರಾಜೇಂದ್ರನ ನಂತರ, ಚೋಳಸಾಮ್ರಾಜ್ಯಕ್ಕೆ ವಾರಸುದಾರರಿಲ್ಲದ ಕಾರಣ, ಅರಸೊತ್ತಿಗೆಯನ್ನೇರಿ ಸುಮಾರು ಐವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾನೆ. ಈತ ತನ್ನ ತಾತ ಒಂದನೇ ರಾಜೇಂದ್ರಚೋಳನ ಹಾದಿಯಲ್ಲಿಯೇ ನಡೆದು ಪ್ರಸಿದ್ಧಿ ಹೊಂದುತ್ತಾನೆ. ಯಲ್ದೂರಿನ ಶಾಸನಗಳಲ್ಲಿ ಈತನ ಕುಲೋತ್ತುಂಗ ಚೋಳ ಹೆಸರಿನ ಪ್ರಸ್ತಾಪ ಪ್ರಥಮವಾಗಿ ದೊರೆಯುತ್ತದೆ. ಇವನು ಎರಡನೇ ರಾಜೇಂದ್ರಚೋಳನ ಮಗಳಾದ ಮಧುರಾಂತಕಿಯನ್ನು ವಿವಾಹವಾಗಿದ್ದ. ಪುದನಾಡಿನ ಪ್ರಸಿದ್ಧ ಸ್ಥಳವಾದ ಯಲ್ದೂರಿಗೆ ಈತ ತನ್ನ ತಾಯಿ ಅಮ್ಮಂಗೈದೇವಿಯ ಹೆಸರನ್ನು ನಾಮಕರಣ ಮಾಡಿದ್ದು ನಿಗರಿಲಿಚೋಳಮಂಡಲದ ಪುದನಾಟ್ಟಿನ ಇರಟಿಯೂರು, ಅಮಂಗೈಯಾಳ್ವಾರ್ ತಿರುಯೂಡೈಪಳ್ಳಿ ಪುರಮ್ ಎಂದು ಪ್ರಖ್ಯಾತವಾದದ್ದು. ಇದು ಗಂಗರ ಶ್ರೀಪುರುಷರ ಮಗ ದುಗ್ಗಮಾರ ಎರೆಯಪ್ಪನ ಕಾಲದಲ್ಲಿ 'ಎರಡಿಯೂರು' ಎಂಬ ಹೆಸರನ್ನು ಹೊಂದಿದ್ದು ಸ್ಮರಣೀಯವಾಗಿದೆ. (ಬಿಸನಹಳ್ಳಿ ವೀರಗಲ್ಲು ಶಾಸನ ಗಮನಿಸಿ: ಎಪಿಗ್ರಾಫಿಯಾ ಕರ್ನಾಟಿಕ, ಮು.ಬಾ.೨೨೩) ಯಲ್ದೂರಿನಲ್ಲಿ ಇರುವ ವೀರಗಲ್ಲು ಸಹ ಎರಡಿಯೂರನ್ನೇ ಹೇಳುತ್ತದೆ.

ಕುಲೋತ್ತುಂಗನ ಮಗನಾದ ವಿಕ್ರಮಚೋಳನ ಕಾಲದಲ್ಲಿ ಪುದಲ್ನಾಡಿಗೆ ಸಂಬಂಧಿಸಿದಂತಿರುವ ಶಾಸನಗಳು ದಳಸನೂರು ಹಾಗೂ ಬೆಚಿರಾಕ್ ಮಡಿವಾಳಗಳಲ್ಲಿ ಲಭ್ಯವಿದ್ದು, ಇದರಲ್ಲಿ ದಳಸನೂರಿನ ಶಾಸನವು ವಿಶಿಷ್ಟವಾದ ವಿಚಾರಗಳನ್ನು



ಶೆಟ್ಟಿ ಮಾದಮಂಗಲದ ವೀರಗಲ್ಲು

ದಾಖಲಿಸಿದೆ. ಅರಣ್ಯವನ್ನು ಸವರಿ ಬೇಸಾಯಕ್ಕೆ ಪರಿವರ್ತಿಸಿ ಕೊಂಡಿದ್ದಲ್ಲದೆ, ಕೃಷಿಯಾಧಾರಿತ ಕೆರೆಯ ಕೆಳಗಿನ ಜಮೀನಿನ ದಾನವನ್ನು ಹೇಳುತ್ತದೆ. ಇದರಲ್ಲಿ ಬಾಣವಿದ್ಯಾಧರನ ಹೆಸರಿದೆ. ಪುದನಾಟ್ಟು ಎಂದಿರುವುದು ಕುತೂಹಲಕಾರಿಯಾಗಿದೆ. ರಾಜೇಂದ್ರಚೋಳ ಪುದನಾಟ್ಟು ಎಂದೂ ಕರೆದಿದೆ. ಮಡಿವಾಳದ ಶಾಸನವು ನಿಗರಿಚೋಳಮಂಡಲದ ಪುದನಾಡಿನ ಗಾವುಂಡನನ್ನು ಉಲ್ಲೇಖಿಸಿ, ವಿಕ್ರಮಚೋಳ ವೀರ ನೊಳಂಬನು ಕುರನೆಲ್ಲಿ ಉಲೋಕಿತೇಶ್ವರನಿಗೆ ಕೊಟ್ಟ ದಾನದ ವಿಚಾರವನ್ನೂ ಹೇಳುತ್ತದೆ.


ಹೊಯ್ಸಳರಸರು ನಮ್ಮ ನಾಡಿನ ಕಲೆ, ಸಂಸ್ಕೃತಿಗಳಿಗೆ ಅನುಪಮವಾದ ಕೊಡುಗೆಯನ್ನಿತ್ತಿದ್ದಾರೆ. ಕನ್ನಡ ರಾಜರೇ ಆದ ಇವರಿಗೆ ಸಂಬಂಧಿಸಿದ ಅನೇಕ ಶಿಲಾಶಾಸನಗಳು ಕೋಲಾರ ಜಿಲ್ಲೆಯಲ್ಲಿವೆ. ಪುದನಾಡಿಗೆ ಸಂಬಂಧಿಸಿದಂತೆ ನೋಡುವುದಾದರೆ ಕೋಲಾರ ತಾಲ್ಲೂಕಿನ ಶೆಟ್ಟಿಮಾದಮಂಗಲ ದಲ್ಲಿರುವ ವೀರಗಲ್ಲು-ಶಾಸನಗಳು ಪುದಲ್ನಾಡಿನ ಇತಿಹಾಸ ಕ್ಕೊಂದು ಅಪರೂಪವಾದ ಕಾಣಿಕೆಯಾಗಿದೆ. ಇದನ್ನು ಇತ್ತೀಚೆಗೆ ಸಂರಕ್ಷಿಸಲಾಗಿದೆ. ಹನ್ನೆರಡನೇ ಶತಮಾನದ ಕಾಲಘಟ್ಟಕ್ಕೆ ಸೇರುವ ತುರುಗೋಳ್ ವೀರಗಲ್ಲು ಇಲ್ಲಿ ದೊರೆತಿರುವುದು ಪುದನಾಡಿನ ಹಿರಿಮೆಯನ್ನು ಹೆಚ್ಚಿಸಿದೆ. ಪುದಲ್ನಾಡಿನಲ್ಲಿ ನಡೆಯುತ್ತಿದ್ದ ಜನೋಪಯೋಗಿ ಕಾರ್ಯಗಳಿಗೆ ಕುರುಡುಮಲೆಯಲ್ಲಿ ದೊರೆತ ಶಾಸನವು ನಿದರ್ಶನವಾಗಿದ್ದು, ಕೆರೆಕಟ್ಟೆ-ಉದ್ಯಾನಗಳ ನಿರ್ಮಾಣದ ಮೂಲಕ ಸೌಂದರ್ಯಕ್ಕೆ ನೀಡಿದ ಮಹತ್ವಕ್ಕೆ ಸಾಕ್ಷಿಯಾಗಿದೆ. ತಮಿಳು ಶಾಸನಗಳಲ್ಲಿ ಬಹುಪಾಲು ಶಾಸನಗಳು 'ನಿಗರಿಲಿಚೋಳಮಂಡಲದ ಪುದನಾಟ್ಟು' ಎಂದೇ ಹೆಸರಿಸಿದೆ. ಇದು ನಮಗೆ ಚೋಳ-ಹೊಯ್ಸಳರ ಕಾಲದಲ್ಲಿ ಕೋಲಾರ ಜಿಲ್ಲೆಯು ಹರಡಿಕೊಂಡಿದ್ದ ವಿಸ್ತಾರತೆಯನ್ನು ಮತ್ತು ಅದರಲ್ಲಿ ಪುದನಾಡಿನ ಸ್ಥಾನವನ್ನು ನಿರ್ದೇಶಿಸುವಂತಿದೆ.

ಪುದಲ್ನಾಡಿನ ಅಭಿವೃದ್ಧಿಯು ಹದಿಮೂರನೇ ಶತಮಾನದಲ್ಲಿ ಶೀಘ್ರಗತಿಯನ್ನು ಪಡೆದುಕೊಂಡಿದ್ದೇ ಇಲ್ಲಿ ವಿವೇಚಿಸಲಾದ ಮೂವತ್ತೊಂಬತ್ತು ಶಾಸನಗಳಲ್ಲಿ ಹನ್ನೆರಡು ತಮಿಳು ಶಾಸನಗಳು ಹದಿಮೂರನೇ ಶತಮಾನಕ್ಕೆ ಸೇರಿದ್ದು ಇವುಗಳಲ್ಲಿ ಕೆರೆಯನ್ನು ಕಟ್ಟಿದ ಸಂಬಂಧವಾದ ಎರಡು ಶಾಸನಗಳನ್ನು ಹೊರತುಪಡಿಸಿ ಉಳಿದದ್ದೆಲ್ಲವೂ ದಾನ-ಧರ್ಮಗಳಿಗೆ ಸಂಬಂಧಿಸಿದ್ದಾಗಿವೆ. ಕಂಚಿಯೊಂದಿಗೆ ತಮ್ಮ ಬಾಂಧವ್ಯವನ್ನು ಹೊಂದಿದ್ದ ವ್ಯಕ್ತಿಗಳು ಸಹ ಇಲ್ಲಿ ತಮ್ಮ ಪಾತ್ರ ನಿರ್ವಹಿಸಿದ್ದಾರೆ. ವಿಶೇಷವಾಗಿ ಕೂತ್ತಾಡುದೇವನ ಆಳ್ವಿಕೆಯಲ್ಲಿ ಯದರೂರು, ಕುರುಡುಮಲೆ, ಮಡಿವಾಳ ಮುಂತಾದ ಕಡೆಗಳಲ್ಲಿ ದೇವಾಲಯ ನಿರ್ಮಾಣಗಳು, ದೇವದಾನದ ಕಾರ್ಯಗಳು ನೆರವೇರಿದ್ದನ್ನು ಗಮನಿಸಬಹುದು. ಕುರುಡುಮಲೆಯ ಚನ್ನಕೇಶವ ದೇವಾಲಯ, ಈಶ್ವರ ದೇವಾಲಯಗಳಲ್ಲಿನ ಶಾಸನಗಳು ಹದಿಮೂರನೇ ಶತಮಾನದಲ್ಲಿ ಪುದನಾಡಿನ ದೇವಾಲಯ ಸಂಸ್ಕೃತಿಯು ವಿಕಾಸಗೊಂಡಿದ್ದ ವಿಚಾರವನ್ನರಿಯಲು ಸಾಕ್ಷಿಯಾಗಿವೆ. ಹೊಯ್ಸಳರ ಕಾಲದ ಮಾಂಡಲೀಕರಾಗಿದ್ದ ಇಳವಂಜಿರಾಯ ಮತ್ತು ಹುಳ್ಳದೇವರ ಕಾರ್ಯತತ್ಪರತೆಗೆ ಹದಿಮೂರನೇ ಶತಮಾನದ ಪುದನಾಡು ಸಾಕ್ಷಿಯಾಗಿದೆ.

ಪುದಲ್ನಾಡಿಗೆ ಸಂಬಂಧಿಸಿದ ಹದಿನಾಲ್ಕನೇ ಶತಮಾನದ ಶಾಸನಗಳಲ್ಲಿ ವಾನರಾಸಿ ಮತ್ತು ಹೊದಲಿಯ ಶಾಸನಗಳು ಕನ್ನಡ ಭಾಷೆಯದ್ದಾಗಿದ್ದರೆ, ಉಳಿದವು ತಮಿಳು ಭಾಷೆಯಲ್ಲಿವೆ. ಇದರಲ್ಲಿ ಚಿಕ್ಕಪುರದ ತಮಿಳು ಶಾಸನ ಹಲವು ದೃಷ್ಟಿಗಳಿಂದ ವಿಶಿಷ್ಟವಾಗಿದೆ. ಇದರಲ್ಲಿ ಕಂಪಣ್ಣ ಒಡೆಯರು ಮುಳಬಾಗಿಲು ಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಇವರ ಪ್ರಧಾನಿ ಸೋಮಪನ ಉಲ್ಲೇಖವಿದೆ. ಚಿಕ್ಕಪುರ (ಬೆಚರಕ್) ಗ್ರಾಮಕ್ಕೆ ಸನಿಹದಲ್ಲಿ ಇರುವ ಸೋಮಸಂದ್ರದಲ್ಲಿನ ಸೋಮಪ್ಪ ಒಡೆಯರ ಶಾಸನವು ಇಲ್ಲಿ ಸ್ಮರಣಾರ್ಹವಾಗಿದೆ. ವಿಟ್ಟಪ್ಪ ಮತ್ತು ಅಣ್ಣ ಕೊಪ್ಪರಸರು ಸೋಮಪ್ಪ ಒಡೆಯರ ನಿರೂಪದಿಂದ ನಿಗರಿಲಿಸೋಳಮಂಡಲಕ್ಕೆ ಸೇರಿದ ಪುದನಾಡಿನ ಪೆರಿಯ ನಾಡಿನವರಾದ ನಾಲ್ಕು ಜನರೊಂದಿಗೆ ಸೇರಿ ಅರುವತ್ತುಮೂರು ವೀರಭದ್ರದೇವನ ಮಗ ವೀರಪ್ಪನೆಂಬಾತನಿಗೆ ತನ್ನಿಚ್ಚೈಪಲ್ಲಿ (ಇದು ಅಣ್ಣಿಹಳ್ಳಿ ಇರಬೇಕು) ಪುರದ

ಪೂರ್ವಕ್ಕೆ ಕಲ್ಲುನೆಟ್ಟು ಶಿಲಾಶಾಸನ ಮಾಡಿಕೊಟ್ಟ ಭೂದಾನ ಶಾಸನವಾಗಿದೆ. ಕಡೆಯಲ್ಲಿ ಇದು ಕೊಪ್ಪರಸರ ಧರ್ಮವೆಂದು ಹೇಳಲಾಗಿದೆ.

ಇನ್ನುಳಿದ ಎರಡು ತಮಿಳು ಶಾಸನಗಳಲ್ಲಿ ಕುರುಡುಮಲೆಯ ಶಾಸನವು ಹದಿಮೂರನೇ ಶತಮಾನದ ಆರಂಭದ ಕಾಲದ್ದಾಗಿದ್ದು ಇದರಲ್ಲಿ ನಮಗೆ ಪೆಂಗೀಶ್ವರ ಗಂಗೀಶ್ವರ ದೇವರ ಉಲ್ಲೇಖವು ಲಭ್ಯವಾಗುತ್ತದೆ. ಇದೊಂದು ವಿಶಿಷ್ಟವಾದ ಶಿವನ ಹೆಸರಾಗಿದ್ದು, ಕೂತ್ತಾಂಡಪಲ್ಲಿಯ ಪಾತೂರು ಎಂಬ ಸ್ಥಳದಲ್ಲಿ ಹಾಳುಬಿದ್ದಿರುವ ಕುರುಡುಮಲೆಯದ್ದನ್ನೇ ಹೋಲುವಂತಿರುವ ದೇವಾಲಯದಲ್ಲಿ ಲಭ್ಯವಾದ ರಾಮನಾಥನ ಕಾಲದ ಶಾಸನದಲ್ಲಿ ಸಹ ಕಂಡುಬರುತ್ತದೆ. ಮುಡಿಯನೂರು ಸಹ ಪುದಲ್ನಾಡಿಗೆ ಸೇರಿತ್ತೆಂಬುದು ಇಲ್ಲಿರುವ ಆಲಯದ ಶಾಸನದಿಂದ ತಿಳಿದುಬರುವಂತಿದೆ. ಮೂರನೇ ವೀರಬಲ್ಲಾಳನ ಪ್ರಧಾನಿ ಬಲ್ಲಪ ದಂಡನಾಯಕರು ಮುಡಿಯನೂರಾದ ಕೂತ್ತಾಡುಂದೇವ ಚತುರ್ವೇದಿಮಂಗಲದ ಸೋಮೇಶ್ವರ ದೇವರಿಗೆ ನೀಡಿದ ದಾನದ ವಿವರಣೆ ಇದರಲ್ಲಿ ಕಂಡುಬರುತ್ತದೆ.



ಪುದಲ್ನಾಟ್ಟನ್ನು ಹೆಸರಿಸುವ ಕುರುಡುಮಲೆ ಶಾಸನ

ಹೊದೆನಾಡು ಎಂಬುದು ಹದಿನಾಲ್ಕನೇ ಶತಮಾನ ಮತ್ತು ಅನಂತರದ ಕನ್ನಡ ಶಾಸನಗಳಲ್ಲಿ ಕಂಡುಬರುವ ಪುದಲ್ನಾಡಿನ ಕನ್ನಡದ ಹೆಸರಾಗಿದೆ. ಶ್ರೀನಿವಾಸಪುರ ತಾಲ್ಲೂಕಿಗೆ ಹೊಂದಿಕೊಂಡ ಕೋಲಾರ ಮತ್ತು ಮುಳಬಾಗಿಲಿನ ಗಡಿಪ್ರದೇಶಗಳ ಶಾಸನಗಳಲ್ಲಿ ಹೊದೆನಾಡಿನ ಪ್ರಯೋಗವಿರುವುದನ್ನು ಕಾಣುತ್ತೇವೆ. ಕೋಲಾರ ತಾಲ್ಲೂಕಿನ ವಾನರಾಸಿ (ಶಾಸನದಲ್ಲಿ ವಾರಣಾಸಿ ಎಂದಿದೆ) ಮುಳಬಾಗಿಲು ತಾಲ್ಲೂಕಿನ ಅಗರ, ಉತ್ತನೂರು, ವಾನಿಗಾನಹಳ್ಳಿ, ಗುಡಿಪಲ್ಲಿ ಮುಂತಾದ ಸ್ಥಳಗಳಲ್ಲಿರುವ ಕನ್ನಡ ಶಾಸನಗಳು ಹೊದೆನಾಡು ಎಂಬ ರೂಪ ಧರಿಸಿ ನಿಂತಿವೆ. ಇದರಿಂದಾಗಿ ಹೊದೆನಾಡು ಪ್ರಯೋಗವು ನಮಗೆ ವಿಜಯನಗರದ ಅರಸರ ಕಾಣಿಕೆಯೆಂದೇ ಹೇಳಬಹುದು. ಹೊದೆನಾಡೊಳಗಣ ಅಬಾಚಲಿಅಗರ, ಹೊದೆನಾಡ ವಾಣಿಯರಹಳ್ಳಿ, ಹೊದೆನಾಡೊಳಗಣ ನರಸೀಪುರವಾದ ಗುಂಡಲಹಳ್ಳಿ, ಹೊದೆನಾಡ ಉತ್ತನೂರು ಮುಂತಾದ ಹೆಸರುಗಳು ಕನ್ನಡ ಭಾಷೆಯ ಹಿರಿಮೆಗೆ ಸಾಕ್ಷಿಯಾದದ್ದು. ಪ್ರತಾಪದೇವರಾಯಪುರವಾದ ಗುಡಿಪಲ್ಲಿಯು ಸಹ ಹೊದೆನಾಡಿಗೆ ಸೇರಿದ್ದೇ ಆಗಿತ್ತೆಂದು ಅಭಿಪ್ರಾಯಪಡಬಹುದು. ಇಲ್ಲಿನ ಶಾಸನದ ಹೊರೆನಾಡು ಎಂಬ ಪ್ರಯೋಗ ಹೊದೆನಾಡೇ ಆಗಿರಲು ಸಾಧ್ಯವಿದೆ.

ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಮುಳಬಾಗಿಲುರಾಜ್ಯದ ಕೇಂದ್ರಸ್ಥಾನವಾಗಿದ್ದ ಮುಳಬಾಗಿಲು ಹಾಗೂ ಇದರ ಸುತ್ತಲಿನ ಹಲವಾರು ಪ್ರಮುಖ ಸ್ಥಳಗಳ ಅಭಿವೃದ್ಧಿಯ ಪಥವನ್ನು ಗಮನಿಸಿದಾಗ ಇದರಲ್ಲಿ ವಿಜಯನಗರದ ಅರಸರ ಬಹುಮುಖ್ಯವಾದ ಪಾತ್ರವನ್ನು ನಾವು ಕಾಣಬಹುದು. ಹಿಂದಿನಿಂದಲೂ ರಾಜರ ಮನ್ನಣೆ, ಪೋಷಣೆಗಳಿಗೆ ಪಾತ್ರವಾಗಿದ್ದ ಸ್ಥಳಗಳು 'ಹೊದೆನಾಡು' ಎಂಬ ಹೊಸರೂಪವನ್ನು ಧರಿಸಿ ನಿಂತು ಇದರಲ್ಲಿ ಸೇರಿ ಚಾರಿತ್ರಿಕ ಹಿನ್ನೆಲೆಯನ್ನು ಪಡೆದಿದ್ದ ಗ್ರಾಮಗಳು ವಿಜಯನಗರದ ಅರಸರ ಕಾಲದಲ್ಲಿಯೂ ಹಿರಿಮೆಗೆ ಪಾತ್ರವಾಗಿವೆ.

'ಪುದಲ್ನಾಡು' ಇಲ್ಲವೆ ಹೊದೆನಾಡೆಂಬುದು ಕೇವಲ ಭೌಗೋಳಿಕ ವ್ಯಾಪ್ತಿಯಿಂದ ಮಾತ್ರವಲ್ಲದೆ, ರಾಜಕೀಯ ಇತಿಹಾಸ, ಧಾರ್ಮಿಕ ಚರಿತ್ರೆ, ಸಾಂಸ್ಕೃತಿಕ ಸಮಾಜದಿಂದ ಕೂಡಿದ್ದಾಗಿದೆಯೆಂಬುದು ಇದರ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಒಂದು ನಾಡಿನಲ್ಲಿರಬೇಕಾದ ಜೀವನಾವಶ್ಯಕ ಸಂಗತಿಗಳು ಇಲ್ಲಿಯೂ ಹರಡಿಕೊಂಡಿದ್ದನ್ನು ನಾವು ಕಾಣುತ್ತಿದ್ದೇವೆ. ಇದರ ಹೆಸರೇ ಹೇಳುವಂತಿರುವ ಹೊದರುಗಳಿಂದ ತುಂಬಿದ ಭೂಮಿ, ಹಿನ್ನೆಲೆಯಾದ ಬೆಟ್ಟಗುಡ್ಡಗಳು, ನೀರಿನ ಬವಣೆ ನೀಗಿಸುವ

ಸಣ್ಣಪುಟ್ಟ ಕೆರೆ-ಕುಂಟೆಗಳು ಇಲ್ಲಿ ಕಂಡುಬಂದಿವೆ. ಇದರೊಂದಿಗೆ ನೆಮ್ಮದಿಯ ಬದುಕಿಗೆ ಅಗತ್ಯವಾದ ಗುಡಿಸಲು, ಗೃಹಗಳು, ಇದನ್ನು ಸುತ್ತಿಕೊಂಡ ಕೋಟೆ ಕೊತ್ತಲಗಳು ಇಲ್ಲಿದ್ದವೆನ್ನಬೇಕು. ಮನುಷ್ಯನ ಪಾರಮಾರ್ಥಿಕ ಬದುಕಿಗೆ ಅಗತ್ಯವಾದ ಆಯಾ ಧರ್ಮದ ಪೂಜಾಕೇಂದ್ರಗಳು ಇಲ್ಲಿ ತಲೆಎತ್ತಿ ನಿಂತಿದ್ದನ್ನೂ ಕಾಣುತ್ತೇವೆ. ಇದರೊಂದಿಗೆ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವ ವಾಣಿಜ್ಯ ವ್ಯವಹಾರಗಳ ತಾಣಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಕಲೆ, ಶಿಕ್ಷಣಗಳಿಗೆ ಸಂಬಂಧಿಸಿದ ವಿಷಯಾಧ್ಯಯನಗಳಿಗೆ ನೆರವಾಗುವ ಸಂಗತಿಗಳು ಇಲ್ಲಿ ತುಂಬಿದೆಯೆನ್ನಬಹುದು.

'ಪುದಲ್ನಾಡು' ಸಮರಭೂಮಿ, ಕರ್ಮಭೂಮಿ, ಧರ್ಮಭೂಮಿಯಾಗಿರುವುದನ್ನು ನಾವು ಗಮನಿಸುತ್ತೇವೆ. ಇಲ್ಲಿನ ಕೆಲವೊಂದು ವೀರಗಲ್ಲುಗಳು ಪೂರಕವಾದ ಚರಿತ್ರೆಯನ್ನು ಹೇಳುವಂತಿದ್ದರೆ, ದೇವಾಲಯ, ಕೆರೆಗಳನ್ನು ಆಶ್ರಯಿಸಿ ನಿಂತಿರುವ ಶಾಸನಗಳು ನಮಗೆ ಅರಸರಾದರೂ ಮಾನವರೇ ಅದವರ ಕರ್ಮಕತೆಯನ್ನು ಹೇಳುವಂತಿವೆ. ವೀರತ್ವದ ಕೊನೆ ವೈರಾಗ್ಯವೆಂಬುದನ್ನು, ಭೋಗದ ಕಡೆಯ ಭಾಗ ತ್ಯಾಗವೆಂಬುದನ್ನೂ ಮನವರಿಕೆ ಮಾಡಿಕೊಡಬಲ್ಲ ದೇವಾಲಯಗಳನ್ನಿಲ್ಲಿ ಕಾಣುತ್ತೇವೆ. ಇದರ ಏಳು-ಬೀಳುಗಳು ನಮಗೊಂದು ಪಾಠವಾಗಿ ಉಳಿದಿವೆ. ಇಂತಹ ಪುದಲ್ನಾಡಿನ ಆಯ್ದ ಹಲವು ಸ್ಥಳಗಳ ಅವಲೋಕನವನ್ನಿಲ್ಲಿ ಪ್ರಸ್ತುತಪಡಿಸಲಾಗಿದೆ.

ಕುರುಡುಮಲೆ

ಶ್ರೀವಿನಾಯಕನ ಆರಾಧನೆಗೆ ಪ್ರಸಿದ್ಧವಾಗಿ ಅಂತರರಾಜ್ಯ ಮನ್ನಣೆ ಗಳಿಸಿರುವ ಕುರುಡುಮಲೆಯು 'ಪುದನಾಟ್ಟು' ಇಲ್ಲವೆ ಪುದಲ್ನಾಡಿನ ಪ್ರಸಿದ್ಧವಾದ ಸ್ಥಳವಾಗಿದೆ. ಇಲ್ಲಿ ಹನ್ನೆರಡು-ಹದಿಮೂರನೇ ಶತಮಾನಗಳಲ್ಲಿ ನಡೆದಿರುವ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳು ಸಾಂಸ್ಕೃತಿಕ ಲೋಕಕ್ಕೆ ಸಹ ಅಮೂಲ್ಯವಾದ ಕೊಡುಗೆಯನ್ನು ನೀಡಿವೆ. ಇತಿಹಾಸದಲ್ಲಿ ಗುರುತಿಸಲಾದಂತೆ ಕೂತ್ತಾಡುದೇವನೆಂಬ ಹೊಯ್ಸಳರ ಮಾಂಡಲೀಕ, ಈತನ ಮಗನಾದ ಇಳವಂಜಿಯರಾಯ ವಾಸುದೇವನು ಕುರುಡುಮಲೆಯ ಮಹತ್ತರ ಬೆಳವಣಿಗೆಗೆ ಕಾರಣಕರ್ತರಾಗಿರುತ್ತಾರೆ. ಇದರಿಂದಾಗಿಯೇ ಇಲ್ಲಿ ಹೊಯ್ಸಳ ವಾಸ್ತುಶೈಲಿಯ ಕೂತ್ತಾಡುಂದೇವನ ಹೆಸರಿನ ಸೋಮೇಶ್ವರ ದೇವಾಲಯ ಮತ್ತು ವಾಸುದೇವ ಪೆರುಮಾಳ ದೇವರ ಹೆಸರಿನ ಚನ್ನಕೇಶವ ದೇವಾಲಯಗಳು ಬೆಳಕು ಚೆಲ್ಲಿದ್ದವೆನ್ನಬಹುದು. ಇಲ್ಲಿರುವ 'ಲಂಜಲ ಬಂಡ' (ದೇವದಾಸಿಯರ ನೃತ್ಯಾಭ್ಯಾಸದ ಸ್ಥಳ) ಎಂದು ಕರೆಯುವ ವಿಶಾಲವಾದ ಹೆಬ್ಬಂಡೆಯು ಕೂತ್ತಾಂಡೀಶ್ವರ ದೇವಾಲಯಕ್ಕೆ ಸೇರಿದ್ದಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಇಲ್ಲಿರುವ ಸೋಮೇಶ್ವರ ದೇವಾಲಯದಲ್ಲಿ ವಿವಿಧ ಬಗೆಯ ನೃತ್ಯಶಿಲೆಗಳನ್ನೂ ಕಾಣಬಹುದು. ಯಳವಂಜಿ ನಾಡಿನ ಕ್ಯಾಸಂಬಳ್ಳಿ, ಮಡಿವಾಳ, ಆವಣಿನಾಡಿನ ಆವನಿ, ಪುದಲ್ನಾಡಿನ ಕುರುಡುಮಲೆಗಳು ಸಾಂಸ್ಕೃತಿಕ ಲೋಕಕ್ಕೆ ವಿಶಿಷ್ಟ ಕೊಡುಗೆಗಳನ್ನಿತ್ತ ಸ್ಥಳಗಳಾಗಿ ಪ್ರಸಿದ್ಧಿ ಪಡೆದಿವೆ.

ಉತ್ತನೂರು

ಪುದಲ್ನಾಡಿನ ಉತ್ತನೂರು ವರದರಾಜನ ದೇವಾಲಯಕ್ಕೆ ಪ್ರಸಿದ್ಧವಾಗಿದ್ದು ಇಲ್ಲಿನ ದೇವರ ಕೈಲಿರುವ ಪ್ರಯೋಗಚಕ್ರ ಕುತೂಹಲವನ್ನು ಹುಟ್ಟಿಸುವಂತಿದೆ. ಇದು ಅರುಮೊಳಿದೇವಚತುರ್ವೇದಮಂಗಲವೆಂದಾದರೆ, ಇದು ಚನ್ನಪಟ್ಟಣದ ಸಮೀಪವಿರುವ ಮಳೂರು ಪಟ್ಟಣದ ಇತಿಹಾಸದೊಂದಿಗೆ ಸಂಬಂಧಪಡುವಂತಿದೆ. ನೊಳಂಬ, ಚೋಳ, ವಿಜಯನಗರ ಅರಸರೆಲ್ಲರ ಕಾಲಕ್ಕೆ ಪುದನಾಡಿನ ಮುಖ್ಯಸ್ಥಳವಾಗಿ ಉತ್ತನೂರು ಪ್ರಸಿದ್ಧಿ ಪಡೆದದ್ದಾಗಿದೆ. ಇಲ್ಲಿನ ತಮಿಳು ಶಾಸನಗಳ ನಿರ್ದಿಷ್ಟವಾದ ವಿವರಗಳ ಬಗೆಗೆ ಇನ್ನೂ ಹೆಚ್ಚಿನ ಶೋಧನೆ ಆಗಬೇಕಾಗಿದೆ. ಇತ್ತೀಚೆಗೆ ಶೋಧವಾದ ಶ್ರೀಕೃಷ್ಣದೇವರಾಯ ಮಹಾರಾಯನ ತಾಮ್ರಪಟದಲ್ಲಿ ಹೊದೆನಾಡು ಉತ್ತನೂರಿಗೆ ಮಹತ್ವವಾದ ಮಾನ್ಯತೆಯಿರುವುದನ್ನು ಅರಿತುಕೊಳ್ಳಬಹುದು.

ಯಲ್ದೂರು

ಅಮ್ಮಂಗೈಯಾಳ್ವಾರ್ ತಿರುಮಡೈಪ್ಪಲ್ಲಿಪುರ, ಇರಟಿಯೂರು, ಎರಡಿಯೂರು-ಇತ್ಯಾದಿ ಪ್ರಾಚೀನವಾದ ಹೆಸರುಗಳನ್ನು ಹೊಂದಿದ ಇಂದಿನ ಯಲ್ದೂರು ಶೈವ-ವೈಷ್ಣವ ಧರ್ಮಗಳೆರಡರ ಸಮಾಗಮದಂತಿರುವುದಾಗಿದೆ. ಇಲ್ಲಿನ ಪ್ರಾಚೀನವಾದ ಶಿವಾಲಯವು ಊರಹೊರಗಿನ ಕೆರೆ ದಂಡೆಯಲ್ಲಿದ್ದು ಅಧಿಷ್ಠಾನವನ್ನುಳಿದಂತೆ ತನ್ನ ಎಲ್ಲಾ ಪ್ರಾಚೀನ ಕುರುಹುಗಳನ್ನು ಕಳೆದುಕೊಂಡಿದೆ. ಒಂದನೆಯ ರಾಜೇಂದ್ರನ ಮಗ ಮತ್ತು ಈತನ ಮೊಮ್ಮಗ ಒಂದನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಪುದಲ್ನಾಡಿನ ಯಲ್ದೂರು ಸಾಕಷ್ಟು ಪ್ರಸಿದ್ಧಿಗಳಿಸಿದ್ದೆನ್ನಬಹುದು. ಪುದಲ್ನಾಡಿನ ಇತಿಹಾಸದ ಅವಲೋಕನದಲ್ಲಿ ಯಲ್ದೂರಿಗೆ ಸಹಜವಾದ ಮಾನ್ಯತೆಯು ಅನಿವಾರ್ಯವಾದದ್ದು. ಚೋಳರ ಆಳ್ವಿಕೆಯ ಕಾಲದಲ್ಲಿ ಕನ್ನಡನಾಡಿನ ಅಭಿವೃದ್ಧಿಗೆ

ಅವರು ನೀಡಿದ್ದ ಅಗ್ರಸ್ಥಾನದ ಹಿನ್ನೆಲೆಯಲ್ಲಿ ಯಲ್ದೂರಿನ ಅಧ್ಯಯನವು ಅವಶ್ಯಕವೇ ಆಗಿದೆ. ತಾಡಿಗೋಳ್ಳು ಪಾಳೆಗಾರರ ಕಾಲಕ್ಕೆ ಯಲ್ದೂರಿನಲ್ಲಿ ವೈಷ್ಣವಧರ್ಮವು ಮುಂಚೂಣಿಗೆ ಬಂದು ಇದರ ಕಾರಣಕ್ಕಾಗಿ ಇಲ್ಲಿ ಇಂದಿಗೂ ಪ್ರಸಿದ್ಧಿ ಗಳಿಸಿದ ಕೋದಂಡ ರಾಮಾಲಯವನ್ನು ನೋಡಬಹುದು.

'ಪೊದಲ್ನಾಡು' ಎಂಬ ಪದದ ವಾಚ್ಯಾರ್ಥವನ್ನು ಗಮನಿಸಿದಾಗ ಇಲ್ಲಿನ ಪ್ರದೇಶದಲ್ಲಿ ಯಾವುದೇ ಸಾಮಾಜಿಕ ಚಟುವಟಿಕೆಗಳು ಸಾಧ್ಯವಿಲ್ಲವೇನೋ ಎಂಬಂತೆ ಭಾಸವಾಗಬಹುದು. ಆದರೆ ಪುದಲ್ನಾಡಿನ ಉದ್ದಗಲಕ್ಕೆ ಓಡಾಡಿದಾಗ ನಮಗೆ ಇದಕ್ಕೆ ವ್ಯತಿರಿಕ್ತವಾದ ಚಿತ್ರಣವು ದೊರೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿನ ಸ್ಥೂಲವಾದ ಸಮೀಕ್ಷೆಯಿಂದ ಪುದಲ್ನಾಡಿನಲ್ಲಿ ಹುದುಗಿರುವ ಚಾರಿತ್ರಿಕ ನೋಟ, ಧಾರ್ಮಿಕ ಅರಿವು, ಸಾಮಾಜಿಕ ಚಿತ್ರಣಗಳು ನಮಗೆ ಧಾರಾಳವಾಗಿ ದೊರೆಯುತ್ತವೆ. ಇದರದ್ದೊಂದು ಆಳವಾದ ಅಧ್ಯಯನವು ನಡೆದಲ್ಲಿ ಇಲ್ಲಿನ ಇತಿಹಾಸದಲ್ಲಿ ಹೊಸನೋಟಗಳು ತೆರೆದುಕೊಳ್ಳಬಹುದು.

ಅನುಬಂಧ

ಪೊದಲ್ನಾಡು ಶಾಸನಗಳ ಕಾಲಾನುಕ್ರಮ ಪಟ್ಟಿ ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–X ರಂತೆ

ಕ್ರ.ಸಂ.	ತಾಲ್ಲೂಕು	ಶಾ.ಸಂ.	ಶಾಸನ ಸ್ಥಳ	ಕಾಲ	ಉಲ್ಲೇಖ
೧	ಶ್ರೀನಿವಾಸಪುರ	೫೭	ಮಡಿವಾಳ	೭೭೦	ಅಱುವತ್ತು (ಪುದಲ್ನಾಡು ಇರಬೇಕು)
೨	ಶ್ರೀನಿವಾಸಪುರ	೧೪ಎ	ನಂಬಿಹಳ್ಳಿ	೮/೯ನೇ ಶತಮಾನ	ಪೊದಲ್ನಾಡು
೩	ಶ್ರೀನಿವಾಸಪುರ	೫೦	ತಿನ್ನಿಲಿ	ಸು.೮೮೦	ಪುದಲ್ನಾಡಱುವತ್ತು
೪	ಮುಳಬಾಗಿಲು	೧೨೩	ಉತ್ತನೂರು	೧೦೦೩	ಗಂಗಸಾಯಿರತ್ತಿಲ್ ಪುದಲ್ನಾಟ್ಟು
೫	ಮುಳಬಾಗಿಲು	೧೦೫ಎ	ಯಲ್ದೂರು	೧೦೫೦	ನಿಗರಿಲಿಸೋಳಮಂಡಲ ಪುದಲ್ನಾಟ್ಟು
೬	ಮುಳಬಾಗಿಲು	೧೦೬ಎ	ಯಲ್ದೂರು	೧೦೫೦	ನಿಗಿರಿಲಿಸೋಳಮಂಡಲ ಪುದಲ್ನಾಟ್ಟು ಇರಟಿಯೂರು
೭	ಮುಳಬಾಗಿಲು	೧೦೫ಎ	ಯಲ್ದೂರು	೧೦೭೩	ನಿಗಿರಿಲಿಸೋಳಮಂಡಲ ಪುದಲ್ನಾಟ್ಟು ಇರಟಿಯೂರು ಅಮ್ಮಂಗೈಯಾಳ್ವಾರ್ ತಿರುಮಡೈಪ್ಪಲ್ಲಿಪುರ ಇರಟಿಯೂರು
೮	ಮುಳಬಾಗಿಲು	೧೦೫ಬಿ	ಯಲ್ದೂರು	೧೦೭೩	ನಿಗಿರಿಲಿಸೋಳಮಂಡಲ ಪುದಲ್ನಾಡು ಇರಟಿಯೂರು
೯	ಕೋಲಾರ	೧೮೬	ದಳಸನೂರು	೧೧೨೭	ನಿಗರಿಲಿಸೋಳಮಂಡಲ ಪುದನಾಟ್ಟು ತಿಲದನೂರು
೧೦	ಶ್ರೀನಿವಾಸಪುರ	೬೧	ಮಡಿವಾಳ	೧೧೨೭	ನಿಗರಿಲಿಸೋಳಮಂಡಲ ಪುದನಾಟ್ಟು
೧೧	ಕೋಲಾರ	೭೭	ಮಾದಮಂಗಲ	೧೧೬೩	ನಿಗರಿಲಿಸೋಳಮಂಡಲ ಪುದನಾಟ್ಟು ಮಾದಮಂಗಲ
೧೨	ಮುಳಬಾಗಿಲು	೧೯೩	ಕುರುಡುಮಲೆ	೧೧೮೫	ಪುದನಾಟ್ಟು
೧೩	ಕೋಲಾರ	೨೨೧	ಹೋಳೂರು	ಸು.೧೨೦೦	ನಿಗಿರಿಲಿಸೋಳಮಂಡಲಪುದನಾಟ್ಟು ಪೋಳೂರು
೧೪	ಮುಳಬಾಗಿಲು	೧೨೫	ಯದರೂರು	೧೨೧೦	ನಿಗಿರಿಲಿಸೋಳಮಂಡಲತ್ತು ಪುದನಾಟ್ಟು
೧೫	ಶ್ರೀನಿವಾಸಪುರ	೦೮	ಅರಳುಕೋಟೆ	ಸು.೧೨೨೫	ನಿಗಿರಿಲಿಸೋಳಮಂಡಲತ್ತು ಪುದನಾಟ್ಟು
೧೬	ಶ್ರೀನಿವಾಸಪುರ	೨೧	ಕಲ್ಲೂರು	ಸು.೧೨೨೫	ನಿಗಿರಿಲಿಸೋಳಮಂಡಲತ್ತು ಪುದನಾಟ್ಟು
೧೭	ಶ್ರೀನಿವಾಸಪುರ	೨೨	ಕಲ್ಲೂರು	ಸು.೧೨೨೫	ನಿಗಿರಿಲಿಸೋಳಮಂಡಲತ್ತು ಪುದನಾಟ್ಟು
೧೮	ಶ್ರೀನಿವಾಸಪುರ	೬೩	ಮಡಿವಾಳ	೧೨೨೫	ನಿಗಿರಿಲಿಸೋಳಮಂಡಲತ್ತು ಪುದನಾಟ್ಟು
೧೯	ಶ್ರೀನಿವಾಸಪುರ	೪೯	ಗುಟ್ಟಪಲ್ಲಿ	೧೨೩೧	ನಿಗಿರಿಲಿಸೋಳಮಂಡಲ ಪುದನಾಡು
೨೦	ಶ್ರೀನಿವಾಸಪುರ	೦೩	ಶ್ರೀನಿವಾಸಪುರ	೧೨೫೦	ನಿಗಿರಿಲಿಸೋಳಮಂಡಲಪುದನಾಡುಕುಳಂದೂರು
೨೧	ಮುಳಬಾಗಿಲು	೧೭೮	ಕುರುಡುಮಲೆ	೧೨೬೦	ಪುದನಾಟ್ಟು ಕುರುಡಿಮಲೈ

೨೨	ಮುಳಬಾಗಿಲು	೧೮೪	ಕುರುಡುಮಲೆ	೧೨೭೩	ನಿಗಿರಿಲಿಸೋಳಮಂಡಲ ಪುದನಾಟ್ಟು ಕುರುಡಿಮಲೈ
೨೩	ಕೋಲಾರ	೨೩೪	ನೆರ್ನಹಳ್ಳಿ	೧೨೯೧	ನಿಗಿರಿಲಿಸೋಳಮಂಡಲ ಪುದನಾಡು
೨೪	ಶ್ರೀನಿವಾಸಪುರ	೬೨	ಮಡಿವಾಳ	೧೨೯೨	ನಿಗಿರಿಲಿಸೋಳಮಂಡಲ ಪುದನಾಟ್ಟು
೨೫	ಮುಳಬಾಗಿಲು	೧೮೧ಎ	ಕುರುಡುಮಲೆ	೧೩೧೨	ನಿಗಿರಿಲಿಸೋಳಮಂಡಲ ಪುದನಾಟ್ಟು
೨೬	ಮುಳಬಾಗಿಲು	೧೬೦	ಮುಡಿಯನೂರು	೧೩೩೮	ನಿಗಿರಿಲಿಸೋಳಮಂಡಲ ಪುದನಾಡು ಮುಡಿಯನೂರು
೨೭	ಕೋಲಾರ	೨೦೩	ಚಿಕ್ಕಪುರ	೧೩೬೧	ನಿಗಿರಿಲಿಸೋಳಮಂಡಲ ಪುದನಾಡು
೨೮	ಮುಳಬಾಗಿಲು	೧೯೦	ಕುರುಡುಮಲೆ	೧೩೬೧	ಪುದನಾಟ್ಟು ಕುರುಡಿಮಲೈ
೨೯	ಕೋಲಾರ	೨೦೫	ವಾನರಾಸಿ	೧೩೭೩	ಹೊದೆನಾಡು ವಾರಣಾಸಿ
೩೦	ಶ್ರೀನಿವಾಸಪುರ	೫೦	ಹೊದಲಿ	೧೩೯೬	ಹೊದಲಿ ಗ್ರಾಮ
೩೧	ಮುಳಬಾಗಿಲು	೧೩೧	ವಾನಿಗಾನಹಳ್ಳಿ	೧೪೦೭	ಹೊದೆನಾಡ ವಾಣಿಯರಹಳ್ಳಿ
೩೨	ಮುಳಬಾಗಿಲು	೧೭೫	ಅಗರ	೧೪೦೮	ಹೊದೆನಾಡೊಳಗಣ ಅಬಾಚಲಿ ಅಗರ
೩೩	ಮುಳಬಾಗಿಲು	೦೭	ಮುಳಬಾಗಿಲು	೧೪೧೬	ಮುಳಬಾಗಿಲು ರಾಜ್ಯಕ್ಕೆ ಸಲುವ ಹೊದೆನಾಡು
೩೪	ಮುಳಬಾಗಿಲು	೧೭೨	ರಾಜಗುಂಡ್ಲಹಳ್ಳಿ	೧೪೯೭	ಹೊದೆನಾಡೊಳಗಣ ನರಸಿಂಹಪುರ
೩೫	ಚಿಂತಾಮಣಿ	೧೪೭	ಗುಟ್ಟಹಳ್ಳಿ	೧೬೨೭	ಹುದನಾಡ ಗುಲ್ಲಹಳ್ಳಿ
೩೬	ಮುಳಬಾಗಿಲು	೧೧೫	ಉತ್ತನೂರು	೧೬೩೬	ಹೊದೆನಾಡ ಉತ್ತನೂರು
೩೭	ಮುಳಬಾಗಿಲು	೨೩೮	ಗುಡಿಪಲ್ಲಿ	೧೫೨೫	ಹೊದೆನಾಡೊಳಗಣ ಪ್ರತಾಪದೇವರಾಯಪುರವಾದ ಗುಡಿಪಲ್ಲಿ
೩೮	ಮುಳಬಾಗಿಲು	೧೫೭	ತಾ.ಪಮುಡಿಯನೂರು	೩೩೬?	ಪೊದಲ್ನಾಡ ರಾಷ್ಟ್ರ
೩೯	ಮುಳಬಾಗಿಲು	೧೫೧೬	ಅಪ್ರಕಟಿತ ತಾಮ್ರಪಟ, ಹಂಪಿ ಉತ್ಸವ ಸಂಪುಟದಲ್ಲಿ ಪ್ರಕಟಣೆಯ ನಿರೀಕ್ಷೆ. (ಹೊದೆನಾಡಿನ ಉಲ್ಲೇಖ)		

* ಲೇಖನ ರಚನೆಗೆ ನೆರವಾದ ಪಿ.ವಿ. ಕೃಷ್ಣಮೂರ್ತಿ, ಕೆ. ಧನಪಾಲ್, ಉಪನ್ಯಾಸಕ ಗೋಪಿ, ಜೋಗುಪಾಳ್ಯ ತಾಯಪ್ಪ, ಯಲ್ದೂರಿನ ಹರಿನಾಥ್, ಆಯಾ ಗ್ರಾಮಗಳ ಹಿರಿಯರು ಮತ್ತಿತರ ಗ್ರಾಮಸ್ಥರೆಲ್ಲರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಆಕರಗ್ರಂಥಗಳು

೧. ರೈಸ್ ಬಿ.ಎಲ್. (ಸಂ.), ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–X.

♦♦

ಸುಂಕಂ ಗೋವರ್ಧನ

ಜಿಡ್ಡುಳಿಗೆ ನಾಡು : ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯ

ಪ್ರಾಚೀನವಾದ ಜಿಡ್ಡುಳಿಗೆ ನಾಡು ಪ್ರಸ್ತುತ ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಅಂತರ್ಗತವಾಗಿದ್ದು ಅತ್ಯಂತ ಪ್ರಸಿದ್ಧವಾಗಿತ್ತು. ಯಾವುದೇ ನಾಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಂದರ್ಭದಲ್ಲಿ ತನ್ನ ಭೌಗೋಳಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯದ ಹಿನ್ನೆಲೆಯಲ್ಲಿ ಪ್ರಮುಖವಾಗುತ್ತದೆ. ಕರ್ನಾಟಕದ ಅತ್ಯಂತ ವಿಶಿಷ್ಟವಾದ ಸಾಂಸ್ಕೃತಿಕ ಪದರಗಳನ್ನು ಹೊಂದಿರುವ ಈ ಪ್ರದೇಶವು ರಾಜಕೀಯವಾಗಿಯೂ ಹಾಗೂ ಪ್ರಾಕೃತಿಕವಾಗಿಯೂ ಶ್ರೀಮಂತವಾಗಿರುವ ಪ್ರದೇಶವಾಗಿದೆ. ಅಂತರ್ದೇಶೀಯ ವ್ಯಾಪಾರಗಳಿಂದ ಹಿಡಿದು ಸ್ಥಳೀಯ ಮಾರುಕಟ್ಟೆಗಳವರೆಗೆ, ಕೃಷಿಯ ಉತ್ಪನ್ನಗಳಿಂದ ಹಿಡಿದು ಕೈಗಾರಿಕೆಗಳವರೆಗೆ, ವೀರತ್ವವನ್ನು ಪ್ರತಪಾದಿಸಿ ನಡೆದ ತುರುಗೋಳ್ ಮುಂತಾದ ಕದನಗಳಿಂದ ಹಿಡಿದು ಚಕ್ರವರ್ತಿಗಳ ಯುದ್ಧಗಳವರೆಗೆ, ಶ್ರೀಮಂತ ಕಲಾಸೌಧಗಳಿಂದ ಹಿಡಿದು ಪ್ರಧಾನವಾದ ವಾಸ್ತುಶಿಲ್ಪ ಕೇಂದ್ರಗಳವರೆಗೆ, ಬಯಲು ಪ್ರದೇಶಗಳಿಂದ ಹಿಡಿದು ಮಲೆನಾಡಿನ ಸೆರಗಿನವರೆಗೆ ಈ ನಾಡಿನ ಭೌಗೋಳಿಕ ಹಾಗೂ ಸಾಂಸ್ಕೃತಿಕ ವ್ಯಾಪ್ತಿಯು ಹರಡಿಕೊಂಡಿದೆ.

ಜಿಡ್ಡುಳಿಗೆ ೭೦ : ಯಾವುದೇ ಒಂದು ಭೌಗೋಳಿಕ ಪ್ರದೇಶದ ಜೊತೆಗೆ ಹೊಂದಿಕೊಂಡಿರುವ ಸಂಖ್ಯೆ ಏನನ್ನು ಸೂಚಿಸುತ್ತದೆ ಎಂಬ ಪ್ರಶ್ನೆ ಬಹಳ ಹಿಂದಿನಿಂದಲೇ ಕನ್ನಡ ಸಂಶೋಧನ ಪ್ರಪಂಚಕ್ಕೆ ಕಾಡಿದೆ. ಬಹುತೇಕ ಎಲ್ಲರೂ ಒಪ್ಪಬಹುದಾದ ಒಂದು ತೀರ್ಮಾನದಂತೆ ಈ ಸಂಖ್ಯೆಗಳು ಪ್ರಧಾನವಾದ ಸ್ಥಳದಲ್ಲಿ ಅಂತರ್ಗತವಾಗಿರುವ ಕಂದಾಯ ಗ್ರಾಮಗಳು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಈ ಜಿಡ್ಡುಳಿಗೆ ೭೦ರಲ್ಲಿ ಒಟ್ಟು ೭೦ ಗ್ರಾಮಗಳು ಇದ್ದವು. ಇವೆಲ್ಲವೂ ಕಂದಾಯ ಗ್ರಾಮಗಳಾಗಿದ್ದವು. ಉಳಿದಂತೆ ಉಪಕಂದಾಯ ವಿಭಾಗಗಳಾಗಲೀ ಅಥವಾ ಕಂದಾಯ ರಹಿತ ಗ್ರಾಮಗಳು ಈ ಪರಿವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದೆನಿಸುತ್ತದೆ. ಪ್ರಾಚೀನ ಶಾಸನಗಳಲ್ಲಿ ಜೀಡುರಾಳ್ಗೆಪ್ಪತ್ತು, ಜೀಡುರಾಳ್ಗೆ ಎಂದೂ, ಹೊಯ್ಸಳರ ಕಾಲದ ಶಾಸನಗಳಲ್ಲಿ ಜಿಡ್ಡುಳಿಗೆ ಎಪ್ಪತ್ತು, ಜಿಡ್ಡುಳಿಗೆ ಎಪ್ಪತ್ತು ಎಂದೂ ಈ ಪ್ರದೇಶದ ಸ್ಪಷ್ಟವಾದ ಉಲ್ಲೇಖಗಳಿವೆ. ಶಾಸನಗಳು ಸ್ಪಷ್ಟವಾಗಿ ಜಿಡ್ಡುಳಿಗೆ ನಾಡನ್ನು ಬನವಸೆ ಪನ್ನೀರ್ಚಾಸಿರದ ಜಿಡ್ಡುಳಿಗೆ ೭೦, ಬನವಸೆ ನಾಡಿನ ಕಂಪಣ ಜಿಡ್ಡುಳಿಗೆ ೭೦, ಕುಂತಳ ದೇಶದಲ್ಲಿ ಸುಸ್ಥಿರವಾದ ಬನವಸೆಗೆ ಆಶ್ರಯವಾದ ೧೮ ಕಂಪಣದ ವಿಸ್ತಾರವುಳ್ಳ ಜಿಡ್ಡುಳಿಗೆ ನಾಡು, ಕುಂತಳ ವಿಷಯಕ್ಕೆ ಅಧಿಪತಿ, ಕುಂತಳ ಚಕ್ರೇಶನಲ್ಲಿ ಬನವಸೆ ನಾಡಿನಲ್ಲಿ ಶ್ರೀನಿಳಯವಾದ ಜಿಡ್ಡುಳಿಗೆ ಮುಂತಾದ

ಸಹ ಪ್ರಾಧ್ಯಾಪಕರು
ಸಿಲಿಕಾನ್ ಸಿಟಿ ಕಾಲೇಜು
ಕೆ.ಆರ್.ಪುರಂ
ಬೆಂಗಳೂರು–೫೬೦೦೩೬
ಮೊ: ೯೫೩೫೭ ೭೨೪೬೪

ಉಲ್ಲೇಖಗಳು ಬರುವುದರಿಂದ ಜಿಡ್ಡುಳಿಗೆ ನಾಡಿನ ಪ್ರಾಮುಖ್ಯತೆಯನ್ನು ನಾವು ಬನವಸೆ ನಾಡಿನಲ್ಲಿ ಅಂತರ್ಗತವಾಗಿದ್ದ ಶ್ರೀಮಂತ ನಾಡಿನ ಹಿನ್ನೆಲೆಯಲ್ಲಿ ಚೆನ್ನಾಗಿ ತಿಳಿದುಕೊಳ್ಳಬಹುದು.

ಭೌಗೋಳಿಕ ವ್ಯಾಪ್ತಿ : ಜಿಡ್ಡುಳಿಗೆ ನಾಡಿನ ವ್ಯಾಪ್ತಿಯು ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉತ್ತರದ ಅರ್ಧಭಾಗವನ್ನು, ಸೊರಬ ತಾಲ್ಲೂಕಿನ ಪೂರ್ವದ ಅರ್ಧಭಾಗವನ್ನು, ಸಾಗರ ತಾಲ್ಲೂಕಿನ ಸ್ವಲ್ಪಭಾಗವನ್ನು ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಪಶ್ಚಿಮಭಾಗವನ್ನು ಒಳಗೊಂಡಿತ್ತು. ಪ್ರಾಚೀನ ಕಾಲಘಟ್ಟದಲ್ಲಿ ಜಿಡ್ಡುಳಿಗೆ ನಾಡಿನ ಉತ್ತರದಲ್ಲಿ ನಾಗರಖಂಡ ೭೦, ದಕ್ಷಿಣದಲ್ಲಿ ಸಾಂತಳಿಗೆ ಸಾಸಿರ, ಪೂರ್ವದಲ್ಲಿ ಎಡೆನಾಡು ೭೦ ಹಾಗೂ ಪಶ್ಚಿಮದಲ್ಲಿ ಸತ್ತಳಿಗೆ ನಾಡುಗಳು ಕಾರ್ಯನಿರ್ವಹಿಸುತ್ತಿದ್ದವು. ಜಿಡ್ಡುಳಿಗೆ ನಾಡಿನ ಉತ್ತರದಲ್ಲಿದ್ದ ನಾಗರಖಂಡ ೭೦ರ ರಾಜಧಾನಿಯಾಗಿ ಬಂದಳಿಕೆಯಿತ್ತು, ದಕ್ಷಿಣದಲ್ಲಿದ್ದ ಸಾಂತಳಿಗೆ ಸಾಸಿರದ ರಾಜಧಾನಿಯಾಗಿ ಹೊಂಬುಜವಿತ್ತು, ಹಾಗೆಯೇ ಜಿಡ್ಡುಳಿಗೆಯ ರಾಜಧಾನಿಯಾಗಿ ಬಳ್ಳಿಗಾವೆಯಿತ್ತು ಎಂದು ತಿಳಿಯುವುದು ಸರಿಯಾಗುತ್ತದೆ. ಹಾಗಾಗಿ ಕೇಂದ್ರದ ಅಥವಾ ರಾಜಧಾನಿಯ ಹೆಸರಿನಿಂದಲೇ ನಾಡನ್ನು ಕೂಡ ಕರೆಯಬೇಕು ಎಂಬ ಒತ್ತಾಯವೇನೂ ಇರಲಿಲ್ಲ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಪ್ರಾಚೀನತೆ : ಬಹಳ ಪ್ರಾಚೀನ ಕಾಲದಿಂದಲೂ ಜಿಡ್ಡುಳಿಗೆಯನ್ನು ಬನವಸೆ ಪನ್ನೀರ್ಚ್ಛಾಸಿರದ ಕಂಪಣವೆಂದು ಕರೆಯಲಾಗಿತ್ತು. ಈ ಜಿಡ್ಡುಳಿಗೆ ಎಪ್ಪತ್ತು ಎಂಬ ಭೌಗೋಳಿಕ ವಿಭಾಗದ ಉಲ್ಲೇಖಗಳು ಈ ಪ್ರದೇಶದ ಶಾಸನಗಳಲ್ಲಿ ವಿಪರೀತವಾಗಿ ಬರುತ್ತದೆ. ಈ ಜಿಡ್ಡುಳಿಗೆ ನಾಡಿನ ಉಲ್ಲೇಖವು ಸುಮಾರು ಕ್ರಿ.ಶ. ೯೦೦ರ ಸುಮಾರಿಗೆ ಆರಂಭವಾಗುತ್ತದೆ. ರಾಷ್ಟ್ರಕೂಟರ ಶಾಸನಗಳಲ್ಲಿ ಬರುವ 'ಜೀಡುರಾಳ್ಗೆಪ್ಪತ್ತರ್' ಉಲ್ಲೇಖಗಳು ಜಿಡ್ಡುಳಿಗೆಗೆ ಪರ್ಯಾಯವಾಗಿ ಉಪಯೋಗವಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕ್ರಿ.ಶ. ೯೧೨ಕ್ಕೆ ಸೇರಿದ ಕುಂಸಿಯ ವೀರಗಲ್ಲು ಶಾಸನವೊಂದರಲ್ಲಿ ಅಕಾಲವರ್ಷನ ಕಾಲದಲ್ಲಿ ಕಲಿವಿಟ್ಟರ್ ಆಳ್ವಿಕೆಯಲ್ಲಿ ಜೀಡುರಾಳ್ಗೆಪ್ಪತ್ತರ ನಾಡಗಾವುಂಡನೊಬ್ಬನು ಹೋರಾಡಿ ವೀರಮರಣವನ್ನಪ್ಪಿದ ಶಾಸನೋಲ್ಲೇಖವಿದೆ[೧] ಹಾಗೂ ಹೊನವಳ್ಳಿಯ ಕ್ರಿ.ಶ. ೯೯೧ರ ಶಾಸನದಲ್ಲಿಯೂ ಜಿಡುರಾಳ್ಗೆ ಎಪ್ಪತ್ತಕ್ಕೆ ಸೇರಿದ ಮಾದಿಯೂರು ಗ್ರಾಮದ ಉಲ್ಲೇಖವಿದೆ.[೨] ರಾಷ್ಟ್ರಕೂಟರಿಂದ ಆರಂಭವಾದ ಈ ನಾಡಿನ ಇತಿಹಾಸವು ಗಂಗರ ಕಾಲದಲ್ಲಿ ಮುಂದುವರೆಯಿತು. ಕ್ರಿ.ಶ. ೧೨೦೦ರವರೆಗೆ ರಾಜಕೀಯ ಚದುರಂಗದಾಟದಲ್ಲಿ ಪ್ರಧಾನವಾದ ಭೂಮಿಕೆಯನ್ನು ವಹಿಸಿದ ಈ ನಾಡು ನಂತರ ವಿಜಯನಗರದ ಕಾಲದವರೆಗೂ ತನ್ನ ಪ್ರಾಮುಖ್ಯತೆಯಲ್ಲಿ ಹಲವಾರು ಪಲ್ಲಟಗಳನ್ನು ಹೊಂದಿಯೂ ಅಸ್ತಿತ್ವವನ್ನು ಕಾಯ್ದುಕೊಂಡಿತ್ತು. ಜಿಡ್ಡುಳಿಗೆ ನಾಡಿನ ಇತಿಹಾಸದ ಪ್ರಮುಖ ಘಟ್ಟಗಳನ್ನು ಹೊಯ್ಸಳರ ಪೂರ್ವಕಾಲಘಟ್ಟ, ಹೊಯ್ಸಳರ ಪ್ರಭಾವಶಾಲಿಯುಗ ಹಾಗೂ ಹೊಯ್ಸಳೋತ್ತರ ವಿಜಯನಗರದ ಕಾಲ ಎಂದು ವಿಭಾಗಿಸುವುದು ಸೂಕ್ತವಾಗಿದೆ. ಹೊಯ್ಸಳರ ಪೂರ್ವ ಕಾಲಘಟ್ಟದಲ್ಲಿ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ಈ ಪ್ರದೇಶದ ಪ್ರಾಮುಖ್ಯತೆಯು ನಗಣ್ಯವಾಗಿತ್ತು. ಹೊಯ್ಸಳರ ಕಾಲಘಟ್ಟದಲ್ಲಿ ಈ ಪ್ರದೇಶದ ಮೇಲಿನ ಸ್ವಾಮ್ಯಕ್ಕಾಗಿ ಹೊಯ್ಸಳರು ಮತ್ತವರ ಸಮಕಾಲೀನರಾದ ದೇವಗಿರಿಯ ಯಾದವರು, ಕಲ್ಯಾಣದ ಚಾಲುಕ್ಯರು, ಕಳಚೂರಿಗಳು, ಸಾಂತರರು ನಿರಂತರವಾದ ಸಂಘರ್ಷದಲ್ಲಿ ತೊಡಗಿಕೊಂಡಿದ್ದರು. ಒಂದು ಅರ್ಥದಲ್ಲಿ ಜಿಡ್ಡುಳಿಗೆ ನಾಡನ್ನು ಹೊಂದುವುದು ಪ್ರತಿಯೊಂದು ರಾಜಕೀಯ ಶಕ್ತಿಯ ಆದ್ಯ ಮಹತ್ವಾಕಾಂಕ್ಷೆಯಾಗಿತ್ತು.

ಜಿಡ್ಡುಳಿಗೆಯ ಅರ್ಥ : ಜಿಡ್ಡುಳಿಗೆ ನಾಡು ಎಂಬ ಸಮಸ್ತಪದದಲ್ಲಿರುವ ಜಿಡ್ಡುಳಿಗೆ ಎಂಬ ಪದದ ಅರ್ಥವನ್ನು ಗಮನಿಸುವುದು ಒಳ್ಳೆಯದು. ಭಾಷಿಕವಾಗಿ ಈ ಸಮಸ್ತ ಪದದಲ್ಲಿ ಎರಡು ಪದಗಳಿವೆ. ಇದರ ಅರ್ಥವು ಎರಡು ಸಂಭವನೀಯ ಊಹೆಗಳಿಗೆ ಅವಕಾಶವನ್ನು ಕಲ್ಪಿಸುತ್ತದೆ. ಮೊದಲನೆಯದು ಜಿಡ್ಡು + ಅಣಿಕೆ ಎಂಬ ಎರಡು ಪದಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಇಲ್ಲಿ ಜಿಡ್ಡು ಎಂದರೆ ಎಣ್ಣೆಯ ಜಿಗುಟು ಮತ್ತು ಅಣಿಕೆ ಎಂದರೆ ಒಂದು ಸಸ್ಯ. ಹಾಗಾಗಿ ಎಣ್ಣೆ ಕಾಳುಗಳನ್ನು ಬೆಳೆಯುತ್ತಿದ್ದ ಪ್ರದೇಶ ಎಂಬ ಅರ್ಥವನ್ನು ಹೊರಡಿಸುತ್ತಿರಬಹುದು. ಎರಡನೆಯದು, ಜಿಡ್ಡು + ಅಳಿಗೆ ಎಂಬ ಪದಗಳ ಕಡೆಗೆ ಗಮನ ಹರಿಸುವುದಾದರೆ, ಜಿಡ್ಡು ಎಂದರೆ ಎಣ್ಣೆಯ ಜಿಗುಟು ಅಳಗೆ = ಅಳಿಗೆ = ಮಣ್ಣಿನ ಪಾತ್ರೆ. ಎಣ್ಣೆ ಕಾಳುಗಳನ್ನು ಸಂಗ್ರಹಿಸಿ ಇಡಲು ಸಿದ್ಧಪಡಿಸುತ್ತಿದ್ದ ದೊಡ್ಡ ದೊಡ್ಡ ಮಣ್ಣಿನ ಪಾತ್ರೆಗಳನ್ನು ಇದು ಪ್ರತಿನಿಧಿಸುತ್ತಿರುವುದು ಎಂದು ಊಹಿಸಬಹುದು. ಇದರಲ್ಲಿ ಮೊದಲನೆಯದನ್ನು ಸಸ್ಯವಾಚಿಯಾಗಿಯೂ ಹಾಗೂ ಎರಡನೆಯದನ್ನು ಜನಾಂಗವಾಚಿಯಾಗಿಯೂ ಗುರುತಿಸಬಹುದು.[೩] ನಾಮವಿಜ್ಞಾನದ ಹಿನ್ನೆಲೆಯಲ್ಲಿ ಹೇಳುವುದಾದರೆ ಎರಡೂ ಕ್ರಮಗಳೂ ಪ್ರಾಚೀನವಾದ ಕ್ರಮಗಳೇ ಆಗಿವೆ. ಮೊದಲನೆಯ ಊಹೆಗೆ ಪೂರಕವಾಗಿ ಈ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದ ಎಣ್ಣೆ ಕಾಳುಗಳನ್ನು ಈಗಲೂ ಕಾಣಬಹುದಾಗಿದೆ. ಎರಡನೆಯ ಪ್ರಮೇಯದ ಊಹೆಗೆ ಒಂದು ವಿಷಯವನ್ನು ಸೂಕ್ಷ್ಮವಾಗಿ ನೋಡಬಹುದು. ಅದೆಂದರೆ ಇಂದಿಗೆ ಈ ಜಿಡ್ಡುಳಿಗೆ ನಾಡಿನ ಕೇಂದ್ರಸ್ಥಳದ ಹತ್ತಿರವಿರುವ

ಇಂದಿನ ಶಿರಾಳಕೊಪ್ಪದಲ್ಲಿ ಹೆಂಚು ತಯಾರಿಕೆ ಘಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ನಾವು ಗಮನಿಸಬಹುದು. ಈ ಹೆಂಚಿನ ಕಾರ್ಖಾನೆಗಳು ಹಿಂದೆ ಮಣ್ಣಿನ ಇನ್ನಿತರ ವಸ್ತುಗಳನ್ನು ಅಂದರೆ ದೊಡ್ಡ ದೊಡ್ಡ ಮಡಿಕೆಗಳನ್ನು ತಯಾರಿಸುತ್ತಿದ್ದ ಕೇಂದ್ರಗಳೇ ಎಂಬುದು ಕೂಡ ಉಲ್ಲೇಖನೀಯ.

ಈ ಜಿಡ್ಡುಳಿಗೆ ನಾಡು ಈಗಾಗಲೇ ಗಮನಿಸಿರುವಂತೆ ಸಮಕಾಲೀನ ಕಾಲಘಟ್ಟದಲ್ಲಿ ಅತ್ಯಂತ ಪ್ರಮುಖವಾದ ನಾಗರಖಂಡ ಎಪ್ಪತ್ತು, ಸಾಂತಳಿಗೆ ಸಾಸಿರ, ಎಡೆನಾಡು ಎಪ್ಪತ್ತು, ಸತ್ತಳಿಗೆ ನಾಡುಗಳನ್ನು ಸುತ್ತುವರೆದಿದ್ದುದರಿಂದಲೂ ಈ ನಾಡುಗಳ ನಡುವೆ ಇದ್ದ ಪ್ರಮುಖವಾದ ಸಾರಿಗೆ ರಸ್ತೆಗಳಿಂದಲೂ ಈ ನಾಡಿಗೆ ವಿಶೇಷವಾದ ಕಂದಾಯವು ಸಂದಾಯವಾಗುತ್ತಿತ್ತು. ಈ ಎಲ್ಲಾ ನಾಡುಗಳೂ ಕೂಡ ಸಾಮ್ರಾಜ್ಯದ ರಾಜಕೀಯ ಕೇಂದ್ರವಾಗಿದ್ದ ಬನವಾಸೆ ಪನ್ನಿರ್ಚ್ಛಾಸಿರದ ಪ್ರಮುಖ ಉಪವಿಭಾಗಗಳಾಗಿದ್ದವು.

ನಾಡಿನ ಕೇಂದ್ರಸ್ಥಳ : ಈ ಜಿಡ್ಡುಳಿಗೆ ನಾಡಿನ ಪ್ರಮುಖವಾದ ಮೊದಲ ರಾಜಧಾನಿ ಬಳ್ಳಿಗಾವೆಯೇ ಆಗಿದೆ. ಬಳ್ಳಿಗಾವೆಯನ್ನು ಶಾಸನಗಳು ಬನವಸೆ ಪನ್ನಿರ್ಚ್ಛಾಸಿರದ ಅಧಿಷ್ಠಾನ, ಬನವಾಸೆ ಪನ್ನಿರ್ಚ್ಛಾಸಿರದ ರಾಜಧಾನಿ, ಬನವಸೆ ನಾಡ ಕಂಪಣ ಜಿಡ್ಡುಳಿಗೆ ಎಪ್ಪತ್ತರ ಬಳ್ಳಿಗಾವೆಯ ನೆಲೆವೀಡು ಎಂದೆಲ್ಲ ಕರೆದಿರುವುದನ್ನು ನೋಡಿದರೆ ಬಳ್ಳಿಗಾವೆಯು ಬನವಸೆ ನಾಡಿನ ಆರ್ಥಿಕ ಪ್ರಗತಿಯ ಮೊದಲನೆಯ ಆಕರಕೋಶವಾಗಿತ್ತು ಎಂಬುದನ್ನು ತಿಳಿಯಬಹುದು. ಜಿಡ್ಡುಳಿಗೆ ನಾಡನ್ನು ಶ್ರೀನಿಳಯ ಎಂದು ಕರೆದಿರುವುದು ಕೇವಲ ಕವಿಸಮಯವಲ್ಲ. ಬದಲಿಗೆ ಅದೊಂದು ರೂಪಕ. ಇದಕ್ಕೆ ಕಾರಣ ಈ ನಾಡಿನಲ್ಲಿ ಉತ್ಪತ್ತಿಯಾಗುತ್ತಿದ್ದ ತೆರಿಗೆ. ಜಿಡ್ಡುಳಿಗೆ ನಾಡಿನಲ್ಲಿ ಆಕರವಾಗುತ್ತಿದ್ದ ತೆರಿಗೆಗಳಲ್ಲಿ ಹೆಚ್ಚಿನ ಸ್ಥಾನಗಳು ಹೆಜ್ಜುಂಕ ಹಾಗೂ ವಡ್ಡರಾವುಳವನ್ನು ಪ್ರಧಾನವಾಗಿ ಚಿತ್ರಿಸುವುದನ್ನು ಗಮನಿಸಬಹುದು. ಶಿರಾಳಕೊಪ್ಪದ ೨೨-೬-೧೧೮೦ರ ಶಾಸನವು ಅತ್ಯಂತ ಸ್ಪಷ್ಟವಾಗಿ ಬನವಾಸೆ ನಾಡ ಕಂಪಣ ಜಿಡ್ಡುಳಿಗೆ ೭೦ರ ಬಳ್ಳಿಗಾವೆಯ ನೆಲೆವೀಡು ಎಂದೇ ಹೇಳುತ್ತದೆ.[೪] ಉಳಿದಂತೆ ಇಲ್ಲಿನ ಆದಾಯಗಳಲ್ಲಿ ಮನ್ನೆಯ ಆದಾಯ ಹಾಗೂ ಕಿರುಕುಳಗಳು ಅಪಾರ ಪ್ರಮಾಣದಲ್ಲಿ ಬರುತ್ತಿದ್ದುದಕ್ಕೆ ಶಾಸನಗಳಲ್ಲಿ ಹೇರಳವಾದ ಉದಾಹರಣೆಗಳಿವೆ. ಇದನ್ನು ಹೊರತುಪಡಿಸಿದರೆ ಮಗ್ಗವಣ ಹಾಗೂ ಮನೆವಣಗಳು ಹೆಚ್ಚು ಬರುತ್ತಿದ್ದುದು ಇಲ್ಲಿನ ಜವಳಿ ಉದ್ಯಮ ಹಾಗೂ ವಸತಿ ನಿಲಯಗಳು ಅಪಾರವಾದ ಪ್ರಮಾಣದಲ್ಲಿ ಇದ್ದವು ಎಂಬುದನ್ನು ಎತ್ತಿ ತೋರುತ್ತಿದೆ.

ನಾಡಿನಲ್ಲಿ ಅಂತರ್ಗತವಾಗಿದ್ದ ಗ್ರಾಮಗಳು : ೮-೪-೧೦೪೭ರಲ್ಲಿ ಜಗದೇಕ ಮಲ್ಲೇಶ್ವರ ದೇವರ ಮುಂದೆ ಗಂಡಭೇರುಂಡ ಸ್ಥಂಭವನ್ನು ನಿಲ್ಲಿಸಿದಾಗ, ಈ ಭೇರುಂಡೇಶ್ವರ ದೇವರ ಪೂಜೆಗೆ ಜಿಡ್ಡುಳಿಗೆ ಎಪ್ಪತ್ತರ ಬಟಿಯ 'ಹರ್ವಗಬ್ಬೂರ'ನ್ನು ದಾನ ನೀಡಲಾಯಿತು.[೫] ಕ್ರಿ.ಶ. ೩-೧೧-೧೦೬೫ರ ಬಳ್ಳಿಗಾವೆಯ ಶಾಸನ ಬಳ್ಳಿಗಾವೆಯಲ್ಲಿ ಜಯಂತಿ ಪ್ರಬೌದ್ಧ ವಿಹಾರವನ್ನು ನಿರ್ಮಿಸಿ ತಾರಾಭಗವತಿಯನ್ನು ಸ್ಥಾಪಿಸಿದ ಸಂದರ್ಭದಲ್ಲಿ ನೀಡಲಾದ ದಾನಗಳ ಸಂದರ್ಭದಲ್ಲಿ ಜಿಡ್ಡುಳಿಗೆ ನಾಡೊಳಗೆ ಇದ್ದ 'ಹರಿಗೆ', 'ಮುಂದಸೆ', 'ಬಳ್ಳಿಗಾವೆಯ ನಗರ'ವನ್ನು ಚಿತ್ರಿಸುತ್ತದೆ.[೬]

ಕ್ರಿ.ಶ. ೧೦೭೦ರ ದೇವಸ್ಥಾನ ಹಕ್ಕಲು ಗ್ರಾಮದ ಶಾಸನವು ತಿಳಿಸುವಂತೆ ಜಿಡ್ಡುಳಿಗೆ ಮುಖ್ಯವಾದ ದಕ್ಷಿಣದಿಶಾವರವನ್ನು ಆಳುತ್ತಿದ್ದಾಗ 'ಚಿಕ್ಕಸಕುನ'ವು ಮುಖ್ಯವಾದ ಗ್ರಾಮವಾಗಿತ್ತು.[೭] ಭುವನೈಕಮಲ್ಲನ ಕಾಲದ ಕ್ರಿ.ಶ. ೨೫-೧೨-೧೦೭೧ರ ಬಳ್ಳಿಗಾವೆಯ ಹರಿಹರಾದಿತ್ಯ ದೇವರ ಸೇವೆಗೆ ದಾನನೀಡುವಾಗ ಬನವಸೆ ಪನ್ನಿರ್ಚ್ಛಾಸಿರದ ಕಂಪಣವಾದ ಜಿಡ್ಡುಳಿಗೆ ೭೦ರ ಬಳಿಯ ಬಾಡವಾದ 'ಬಿದರಿಂಗೆರೆ'ಯನ್ನು ಉಲ್ಲೇಖಿಸುತ್ತದೆ.[೮] ತ್ರಿಭುವನಮಲ್ಲದೇವರು ಬಂಕಾಪುರದ ನೆಲೆವೀಡಿನಿಂದ ಆಳ್ವಿಕೆ ಮಾಡುತ್ತಿದ್ದಾಗ ನೀಡಲಾದ ದಾನವೊಂದನ್ನು ತಿಳಿಸುವ ೨೫-೧೨-೧೦೭೫ರ ಬಳ್ಳಿಗಾವೆಯ ಶಾಸನವು ಈ ನಾಡಿನಲ್ಲಿದ್ದ 'ಗೊಬ್ಬಳ್ಳಿ'ಯನ್ನು ಉಲ್ಲೇಖಿಸುತ್ತದೆ.[೯] ೨೪-೧೨-೧೦೭೭ರ ಬಳ್ಳಿಗಾವೆಯ ಶಾಸನದ ಪ್ರಕಾರ ಬನವಸೆ ಪನ್ನಿರ್ಚ್ಛಾಸಿರದ ಕಂಪಣವಾದ ಜಿಡ್ಡುಳಿಗೆ ೭೦ರ ಬಳಿಯ ಬಾಡವಾದ 'ಮನೆವನ' ಗ್ರಾಮವನ್ನು ದಾನವಾಗಿ ನೀಡಲಾಯಿತು.[೧೦] ೩೦-೧-೧೦೭೮ರಲ್ಲಿ ಬಳ್ಳಿಗಾವೆಯಲ್ಲಿ ಪೂಜಾರಿ ಸಿಂಗಣನಿಂದ ನಿರ್ಮಿತವಾದ ಮಲ್ಲಿಕಾರ್ಜುನ ದೇವಾಲಯಕ್ಕೆ ಪ್ರಧಾನ ದಂಡನಾಯಕನಾದ ಬರ್ಮ್ಮದೇವರಸನು ದಾನ ನೀಡುವ ಸಂದರ್ಭದಲ್ಲಿ ಜಿಡ್ಡುಳಿಗೆ ಎರ್ಪ್ಪತ್ತರ ಬಳಿಯ ಬಾಡ 'ಹಿರವೂರ'ನ್ನು ದಾಖಲಿಸಲಾಗಿದೆ.[೧೧] ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ (ಕಿ.ಶ. ೧೦೭೬-೧೧೨೬) ಸೇರಿದ ಬಳ್ಳಿಗಾವೆಯ ಶಾಸನವು ಈ ನಾಡಿನಲ್ಲಿದ್ದ ಒಂದು ಗ್ರಾಮವನ್ನು ತಿಳಿಸುತ್ತಿದ್ದು ತ್ರುಟಿತವಾಗಿರುವುದರಿಂದ 'ಬೆಳ . . .' ಎಂದಷ್ಟೇ ಗೊತ್ತಾಗುತ್ತದೆ.[೧೨] ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನವು ಬಾರಹಕೋಡಿಯ ಸರ್ವೇಶ್ವರದೇವರಿಗೆ ದಾನನೀಡುವಾಗ ಜಿಡ್ಡುಳಿಗೆ ಎಪ್ಪತ್ತರಲ್ಲಿದ್ದ 'ಕಣ್ಣೆವಣ' ಗ್ರಾಮವನ್ನು ಉಲ್ಲೇಖಿಸುತ್ತದೆ.[೧೩]

ಕ್ರಿ.ಶ. ೨೫-೧೨-೧೧೦೩ರ ತ್ರಿಭುವನಮಲ್ಲದೇವ ಹಾಗೂ ಅನಂತ ಪಾಳರಸನ ಆಳ್ವಿಕೆಯ ಸಂದರ್ಭದಲ್ಲಿ ಬನವಸೆ ಪನ್ನಿೀರ್ಚ್ಛಾಸಿರದ ಕಂಪಣವಾದ ಜಿಡ್ಡುಳಿಗೆ ಎಪ್ಪತ್ತರ ಬಳಿಯ ಬಾಡವಾದ 'ಪಕ್ಕಳೆಯೂರು' ದಾಖಲಾಗಿದೆ.[೧೪] ಕ್ರಿ.ಶ. ೨೦-೨-೧೧೨೯ರ ಶಾಸನ ತಿಳಿಸುವಂತೆ ಚಾಲುಕ್ಯ ಚಕ್ರವರ್ತಿ ಸೋಮೇಶ್ವರನು ಕೇದಾರೇಶ್ವರ ದೇವಾಲಯಕ್ಕೆ ದಾನವನ್ನು ನೀಡುವಾಗ ಈ ನಾಡಿನಲ್ಲಿದ್ದ 'ತದವಣಲೆ' ಮತ್ತು 'ಹಕ್ಕಳೆ' ಗ್ರಾಮಗಳ ಉಲ್ಲೇಖ ಬರುತ್ತದೆ.[೧೫] ೧೧೫೧ರ ಹಿರೇ ಆವಲಿಯ ಶಾಸನದ ಪ್ರಕಾರ ಜಿಡ್ಡುವಳಿಗೆ ನಾಡಿಗೆ 'ಹನ್ನಿಪಳ್ಳಿ'ಯು ಸೇರಿತ್ತು.[೧೬] ಕ್ರಿ.ಶ. ೮-೫-೧೧೭೯ರ ಬಳ್ಳಿಗಾವೆಯ ಶಾಸನವು ತಿಳಿಸುವಂತೆ ಜಿಡ್ಡುಳಿಗೆ ನಾಡಬಟಿಯ 'ಕಿಱುಬಳ್ಳಿಗಾವೆ'ಯ ಮನ್ನೆಯವನ್ನು ಕಿರುಕುಳ ಸಹಿತವಾಗಿ ದಾನ ನೀಡುವ ವಿಷಯವನ್ನು ತಿಳಿಸುತ್ತಾ ಈ ನಾಡಿನಲ್ಲಿ ಕಿಱುಬಳ್ಳಿಗಾವೆಯಿದ್ದ ಸಂಗತಿಯನ್ನು ತಿಳಿಸುತ್ತದೆ.[೧೭] ೧೦-೫-೧೧೮೬ರಲ್ಲಿ ಸರ್ವನಮಸ್ಯವಾಗಿ ತ್ರಿಭೋಗ್ಯಾಂತರವಾಗಿ ನೀಡಲಾದ ದಾನವೊಂದನ್ನು ಉಲ್ಲೇಖಿಸುತ್ತಾ ಈ ನಾಡಿನಲ್ಲಿ 'ಸಿರುವೊಳಲು' ಗ್ರಾಮವಿದ್ದ ಸಂಗತಿಯನ್ನು ತಿಳಿಸುತ್ತದೆ.[೧೮] ೧೩ನೇ ಶತಮಾನದ ಕೌಲಿಯ ಶಾಸನವೊಂದು ಜಿಡ್ಡುಳಿಗೆ ಎಪ್ಪತ್ತರಲ್ಲಿ 'ತಾಣಗೂಡೂರು' ಅಂತರ್ಗತವಾಗಿದ್ದ ಸಂಗತಿಯನ್ನು ತಿಳಿಸುತ್ತದೆ.[೧೯] ಸಾಗರ ತಾಲ್ಲೂಕಿನ ೮-೧೨-೧೨೪೧ರ ಮಾಸೂರಿನ ಶಾಸನವೊಂದು ಬೀರದೇವರಸನು ಸಾತಳಿಗೆಯನ್ನು ಆಳುತ್ತಿದ್ದ ಸಂದರ್ಭದಲ್ಲಿ 'ಮಾಸೂರಿ'ನ ಸೆಟುಮಗೌಡನ ಮಗ ಹೆಳವಜನು ಜಿಡುವಳಿಗೆ ನಾಡ ಮೊಳೆಊರಿನ ಲಖ್ಖಣಪಾಲನ ಜೊತೆಗೆ ನಡೆದ ಕದನದಲ್ಲಿ ಮರಣ ಹೊಂದಿದನು ಎಂದು ಹೇಳುವಾಗ ಈ ನಾಡಿನಲ್ಲಿ 'ಮೊಳೆಊರು' ಇದ್ದ ಬಗ್ಗೆ ಸ್ಪಷ್ಟವಾದ ಉಲ್ಲೇಖವಿದೆ.[೨೦] ಕ್ರಿ.ಶ. ೧೨೫೬ರಲ್ಲಿ ಜಿಡ್ಡುಳಿಗೆ ನಾಡಿನಲ್ಲಿರುವ 'ಕೋಳಿಗೆಸಾಲೆಯ' ಗ್ರಾಮವನ್ನು ಅಭಿನವ ಶ್ರೀಶೈಲವಾದ ಶ್ರೀ ಸೊನ್ನಲಿಗೆಯ ಪುರದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಲಾಯಿತು.[೨೧]

ಕ್ರಿ.ಶ. ೧೩೩೪ರ ಕುಪ್ಪೆಯ ಶಾಸನ ತಿಳಿಸುವಂತೆ ಜಿಡುವಳಿಗೆ ನಾಡೊಳಗಿದ್ದ ಮಹಾಸ್ಥಳ 'ಸಾಗವಣೆ' ಎಂಬ ವಿವರವಿದೆ.[೨೨] ಕ್ರಿ.ಶ. ೧೩೭೯ರ ಹಿರೇ ಆವಲಿಯ ಶಾಸನವು ತಿಳಿಸುವಂತೆ ವೀರಬುಕ್ಕರಾಯನ ಕುಮಾರನಾದ ಹರಿಹರನ ರಾಜ್ಯಭಾರದಲ್ಲಿ ಮಹಾಮಂತ್ರಿ ಮಾದರಸ ಒಡೆಯರ ಕಾಲದಲ್ಲಿ ಜಿಡ್ಡುವಳಿಗೆ ನಾಡಿಗೆ ಅತೀಮುಖ್ಯವಾದ ಗ್ರಾಮವಾಗಿ ನಮಗೆ 'ಹಿರಿಯವಲಿಯಪುರ' ಕಂಡುಬರುತ್ತದೆ.[೨೩]

ಆಡಳಿತ : ಜಿಡ್ಡುಳಿಗೆ ನಾಡಿಗೆ ಬಹಳ ಮುಖ್ಯವಾದ ಪ್ರಾಮುಖ್ಯತೆಯಿದೆ. ಬನವಸೆ ನಾಡಿನ ನೇರವಾದ ಆಡಳಿತಕ್ಕೆ ಜಿಡ್ಡುಳಿಗೆ ನಾಡೂ ಕೂಡ ಸೇರಿತ್ತು. ಗಂಗಪೆರ್ಮಾನಡಿ ವಿಕ್ರಮಾದಿತ್ಯದೇವನು ಬನವಾಸಿ ಪನ್ನಿೀರ್ಚ್ಛಾಸಿರವನ್ನು ಆಳುತ್ತಿದ್ದ ವಿಷಯವನ್ನು ತಿಳಿಸುವ ಕ್ರಿ.ಶ. ೧೨-೨-೧೨೦೮ರ ಅಡಗಂಟಿಯ ಶಾಸನದ ಮೂಲಕ ಸಾನ್ತಳಿಗೆ ಸಾವಿರ, ನೊಳಂಬವಾಡಿ ಮೂವತ್ತಾರು ಸಾವಿರ, ಗಂಗಮಂಡಲ ತೊಂಬತ್ತಾರು ಸಾವಿರಗಳನ್ನು ರಾಜಧಾನಿಯಾದ ಬಳ್ಳಿಗಾವೆಯಿಂದ ಆಳುತ್ತಿದ್ದ ಸಂಗತಿ ತಿಳಿದುಬರುತ್ತದೆ.

ವಿಜಯನಗರ ಮತ್ತು ಜಿಡ್ಡುಳಿಗೆ ನಾಡು : ಹೊಯ್ಸಳರ ಕಾಲದಲ್ಲಿ ಪ್ರಮುಖವಾಗಿದ್ದ ಪ್ರದೇಶವನ್ನು ವಿಜಯನಗರದ ಆಡಳಿತ ಕಾಲದಲ್ಲಿ ಪುನಃ ಸಂಸ್ಕರಿಸಲಾಯಿತು. ಕಂದಾಯ ಗ್ರಾಮಗಳ ಪುನರ್ವಿಂಗಡಣೆಯ ಮೂಲಕ ನಾಡುಗಳಿಗೆ ಇದ್ದ ಪ್ರಾಮುಖ್ಯತೆಯು ಕಡಿಮೆಯಾಗಿ ಸೀಮೆಗಳನ್ನು ಕೇಂದ್ರಗಳನ್ನಾಗಿ ಮಾಡಲಾಯಿತು. ಈ ಸೀಮೆಗಳ ಕೇಂದ್ರವನ್ನು ರಾಜ್ಯವನ್ನಾಗಿ ರೂಪಿಸಲಾಯಿತು. ಆದರೆ ಜಿಡ್ಡುಳಿಗೆ ನಾಡಿನ ಪ್ರಾಮುಖ್ಯತೆಯು ಮಾತ್ರ ಹಾಗೇ ಮುಂದುವರೆಯಿತು. ಹಾರೋಮುಚ್ಚಡಿಯ ಕ್ರಿ.ಶ. ೧೩-೧೦-೧೩೬೮ರ ಶಾಸನವು[೨೪] ವೀರಬುಕ್ಕರಾಯರ ಕಾಲದಲ್ಲಿ ಮಾದರಸ ಒಡೆಯನು ಬನವಾಸೆ ನಾಡ ಪನ್ನಿೀರ್ಚ್ಛಾಸಿರದ ಒಳಗಣ ಗುತ್ತಿಯ ರಾಜ್ಯದ ೧೮ ಕಂಪಣದ ಮುಖ್ಯರಾದ ಹಲವಾರು ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ. ಅದರಲ್ಲಿ ಜಿಡ್ಡುಳಿಗೆ ನಾಡ ಒಳಗಣ ಉದ್ಧರೆಯ ಬೈಚಪ್ಪ, ಕೆಸರೂರ ಮೇಚಗೌಡ, ಚಿಕ್ಕಜಿಡ್ಡುಳಿಗೆಯ ಬೆಟ್ಟೂರು ಮೊಲೆಯ ತಮ್ಮೇಗೌಡರ ಉಲ್ಲೇಖಗಳಿವೆ. ಕ್ರಿ.ಶ. ೧೩೭೯ರ ಹಿರೇಆವಲಿಯ ಶಾಸನವು[೨೫] ತಿಳಿಸುವಂತೆ ವೀರಬುಕ್ಕರಾಯನ ಕುಮಾರನಾದ ಹರಿಹರನ ರಾಜ್ಯಭಾರದಲ್ಲಿ ಮಹಾಮಂತ್ರಿ ಮಾದರಸ ಒಡೆಯರ ಕಾಲದಲ್ಲಿ ಜಿಡ್ಡುವಳಿಗೆ ನಾಡಿಗೆ ಅತಿ ಮುಖ್ಯವಾದ ಹಿರಿಯವಲಿಯಪುರವನ್ನು ಆಳುತ್ತಿದ್ದ ಪ್ರಭುಕಾಮಗೌಂಡನ ಸುಪುತ್ರಕುಲದೀಪಕನಾದ ಹಿರಿಯ ಚಂದಪ್ಪನು ಸನ್ಯಸನ ವ್ರತಧಾರಿಯಾಗಿ ಪ್ರಾಣಾರ್ಪಣೆ ಮಾಡಿದನು. ಕ್ರಿ.ಶ. ೧೩೯೫ರಲ್ಲಿ ಹರಿಹರನು ರಾಜ್ಯವಾಳುವಾಗ ಹರಿಯಪ್ಪರಾಯನು ಪ್ರಧಾನಿಯಾಗಿದ್ದನು. ಈ ಸಂದರ್ಭದಲ್ಲಿ ಕಾಮಿಗೌಂಡಿಯು ಸನ್ಯಸನ ವಿಧಿಯಿಂದ ಮುಡಿಪಿದಳು. ಈ ಸಂದರ್ಭದಲ್ಲಿ ಜಿಡ್ಡುಳಿಗೆ ನಾಡ ಆವಲಿಪುರಾಧಿಪನಾದ ಬೇಚಗೌಡನು ಕೆಲವು ದಾನಗಳನ್ನು ನೀಡಿದನು.[೨೬] ಕ್ರಿ.ಶ. ೧೪೦೮ರಲ್ಲಿ ವಿಜಯನಗರದ ದೊರೆ ದೇವರಾಯನ ಆಡಳಿತ ಕಾಲದಲ್ಲಿ ಜಿಡ್ಡುಳಿಗೆ ನಾಡಿಗೆ ಮುಖ್ಯವಾದ ಹಿರಿ ಆವಲಿಯ ಗ್ರಾಮದಲ್ಲಿ ನಾಡಪ್ರಭು

ರಾಮೇಗೌಡನ ಸುಪುತ್ರ ಹಾರುವಗೌಂಡನು ಸ್ವರ್ಗಸ್ಥನಾದನು.[೨೭] ಇದೇ ಕಾಲದಲ್ಲಿ ಜಿಡ್ಡುಳಿಗೆಯ ಚನ್ನಪ್ಪನ ಸ್ವರ್ಗಾರೋಹಣವನ್ನು ದಾಖಲಿಸುವ ಜೈನಶಾಸನವೊಂದು ಇದೇ ಹಿರೇಆವಲಿಯಲ್ಲಿ ದಾಖಲಾಗಿದೆ.[೨೮]

ಶಾಸನೋಕ್ತ ದೇವಾಲಯಗಳು : ಜಿಡ್ಡುಳಿಗೆ ನಾಡಿನ ರಾಜಧಾನಿಯಾದ ಬಳ್ಳಿಗಾವೆಯೊಂದರಲ್ಲಿಯೇ ಅನೇಕ ದೇವಾಲಯಗಳು ಇದ್ದವು. ಇದರರ್ಥ ಇಲ್ಲಿ ಎಲ್ಲಾ ವರ್ಗದ ಹಾಗೂ ಜಾತಿಯ ಜನರು ಇದ್ದರು. ಧಾರ್ಮಿಕವಾದ ಸ್ವಾಮ್ಯಗಳು ಇಲ್ಲಿ ನೆರವೇರುತ್ತಿದ್ದವು. ಇಲ್ಲಿ ನಂದಿಕೇಶ್ವರ, ಕುಸುಮೇಶ್ವರ, ಗವರೇಶ್ವರ, ಜಗದೇಕ ಮಲ್ಲೇಶ್ವರ, ತ್ರಿಲೋಕೇಶ್ವರ, ಜೋಗೇಶ್ವರ, ವೀರಕೇಶವ, ನಾರಸಿಂಹ, ಅಷ್ಟೋಪವಾಸಿ ಭಟಾರರ ಬಸದಿ, ಗೋಳಪ್ಯನ ಬಸದಿ, ಜಯಂತಿಪ್ರಭ ಬೌದ್ಧವಿಹಾರ ಮುಂತಾದವು ಇಂದಿಗೆ ಹೇಳಹೆಸರಿಲ್ಲದೆ ಹೋಗಿವೆ.

ಇದಲ್ಲದೇ ಬಂದಳಿಕೆಯ ಬೊಪ್ಪೇಶ್ವರ, ಬಳ್ಳಿಗಾವೆಯ ಕೇದಾರೇಶ್ವರ, ಅಭಿನವ ಸೊಮೇಶ್ವರ (ಗವರೇಶ್ವರ) ಮುಂತಾದ ದೇವಾಲಯಗಳ ಖರ್ಚು ವಿಪರೀತವಾಗಿತ್ತು. ಈ ಎಲ್ಲಾ ದೇವಾಲಯಗಳ ಖರ್ಚನ್ನು ತೂಗುತ್ತಿದ್ದ ದಾನಗ್ರಾಮಗಳು ಜಿಡ್ಡುಳಿಗೆ ನಾಡಿನಲ್ಲಿ ಅಂತರ್ಗತವಾಗಿದ್ದ ಗ್ರಾಮಗಳು ಎಂಬುದು ಪ್ರಮುಖವಾದ ಸಂಗತಿಯಾಗಿದೆ. ಬೌದ್ಧ. ಜೈನ, ಶೈವ, ವೈಷ್ಣವ ಧರ್ಮದ ದೇವಾಲಯಗಳು ಹಾಗೂ ಅವುಗಳ ನಿರ್ವಹಣೆಯ ಬಗ್ಗೆ ವಿಶೇಷವಾದ ವಿಷಯಗಳು ಇಲ್ಲಿನ ಶಾಸನಗಳಲ್ಲಿವೆ.

೮-೪-೧೦೪೭ರಲ್ಲಿ ಜಗದೇಕ ಮಲ್ಲೇಶ್ವರ ದೇವರ ಮುಂದೆ ಗಂಡಭೇರುಂಡ ಸ್ಥಂಭವನ್ನು ನಿಲ್ಲಿಸಿದಾಗ, ಈ ಭೇರುಂಡೇಶ್ವರ ದೇವರ ಪೂಜೆಗೆ ಜಿಡ್ಡುಳಿಗೆ ಎಪ್ಪತ್ತರ ಬಟಿಯ ಹರ್ವಗಬ್ಬೂರನ್ನು ಹಾಗೆ ಬಳ್ಳಿಗಾವೆಯ ಬಡಗಣ ಹೊಲದಲ್ಲಿ ಕೆಲವು ಭೂಮಿಯನ್ನು ದಾನ ನೀಡಲಾಯಿತು.[೨೯] ಬಳ್ಳಿಗಾವೆಯಲ್ಲಿ ಕನ್ನಡ ಕವಿಯಾದ ಶಾಂತಿನಾಥನು ಮಲ್ಲಿಕಾಮೋದ ಶಾಂತಿನಾಥ ಬಸದಿಯನ್ನು ೨೯-೩-೧೦೬೮ರಲ್ಲಿ ಜೀರ್ಣೋದ್ಧಾರಗೊಳಿಸಿದನು. ಈ ಸಂದರ್ಭದಲ್ಲಿ ಜಿಡ್ಡುಳಿಗೆ ಗುಳಿಯ ಉಲ್ಲೇಖವಿದೆ. ಈ ಜಿಡ್ಡುಳಿಗೆ ಗುಳಿ ಎಂಬುದು ಇಲ್ಲಿನ ಸ್ಥಳೀಯ ವಿಶೇಷವಾದ ತೆರಿಗೆಯಾಗಿತ್ತು.[೩೦] ಭುವನೈಕಮಲ್ಲನ ಆಳ್ವಿಕೆಯ ಕ್ರಿ.ಶ. ೨೫-೧೨-೧೦೭೧ರ ಶಾಸನವು ಹಿರಿಯ ಸಂದಿವಿಗ್ರಹಿಯಾದ ಉದಯಾದಿತ್ಯನು ಬಳ್ಳಿಗಾವೆಯ ಹರಿಹರಾದಿತ್ಯ ದೇವರಿಗೆ ಸ್ನಾನ, ನೈವೇದ್ಯ, ದೇಗುಲದ ಬೆಸಕ್ಕೆ ಮಠದ ಬಿಯಕ್ಕೆ ಬನವಾಸೆ ಪನ್ನಿರ್ಚ್ಛಾಸಿರದ ಕಂಪಣವಾದ ಜಿಡ್ಡುಳಿಗೆ ೭೦ರ ಬಳಿಯ ಬಾಡವಾದ ಬಿದರಿಂಗೆರೆಯನ್ನು ದಾನ ನೀಡಿದನು.[೩೧] ೩೦-೧-೧೦೭೮ರಲ್ಲಿ ಬಳ್ಳಿಗಾವೆಯಲ್ಲಿ ಪೂಜಾರಿ ಸಿಂಗಣನಿಂದ ನಿರ್ಮಿತವಾದ ಮಲ್ಲಿಕಾರ್ಜುನ ದೇವಾಲಯಕ್ಕೆ ಪ್ರಧಾನ ದಂಡನಾಯಕನಾದ ಬರ್ಮ್ಮದೇವರಸನು ಜಿಡ್ಡುಳಿಗೆ ಎರ್ಪ್ಪತ್ತರ ಬಳಿಯ ಬಾಡ ಹಿರವೂರನ್ನು ದಾನವಾಗಿ ನೀಡಿದನು.[೩೨]

ಕ್ರಿ.ಶ. ೨೫-೧೨-೧೧೦೩ರ ತ್ರಿಭುವನಮಲ್ಲದೇವ ಹಾಗೂ ಅನಂತ ಪಾಳರಸನ ಆಳ್ವಿಕೆಯ ಸಂದರ್ಭದಲ್ಲಿ ಬೆಳ್ವೊಲ ೩೦೦, ಪುಲಿಗೆರೆ ೩೦೦, ಬನವಾಸೆ ಪನ್ನಿರ್ಚ್ಛಾಸಿರ ಮತ್ತು ಸಪ್ತಾರ್ಧಲಕ್ಷಭೂಮಿಗಳನ್ನು ಪನ್ನಾಯವನ್ನು ಪಡೆದು ಆಳುತ್ತಿದ್ದನು. ಈ ಸಂದರ್ಭದಲ್ಲಿ ಗೋವಿಂದರಾಜ ಹಾಗೂ ಈಶ್ವರಯ್ಯನಾಯಕರು ಬಳ್ಳಿಗಾವೆಯ ಉತ್ತರದಿಗ್ಭಾಗದ ಪೆರ್ಗಟ್ಟದ ಏರಿಯ ಮೇಲಿರುವ ನಾರಸಿಂಹ ದೇವರ ದೇಗುಲಕ್ಕೆ ಬನವಸೆ ಪನ್ನಿರ್ಚ್ಛಾಸಿರದ ಕಂಪಣವಾದ ಜಿಡ್ಡುಳಿಗೆ ಎಪ್ಪತ್ತರ ಬಳಿಯ ಬಾಡವಾದ ಪಕ್ಕಳೆಯೂರು ಒಡೆಯನಾದ ಕವಿಬಾಂಧವನ ಮಗನಾದ ರುದ್ರಮಯ್ಯನ ಮಗ ನಾರಣಯ್ಯನು ಕಚ್ಛವಿಯ ಗಡಿಂಬದಲ್ಲಿ ಅಳೆದು ದಾನವನ್ನು ನೀಡಿದ್ದಾನೆ.[೩೩] ಕ್ರಿ.ಶ. ೨೦-೨-೧೧೨೯ರ ಶಾಸನ ತಿಳಿಸುವಂತೆ ಚಾಲುಕ್ಯ ಚಕ್ರವರ್ತಿ ಸೋಮೇಶ್ವರನು ಕೇದಾರೇಶ್ವರ ದೇವಾಲಯಕ್ಕೆ ಜಿಡ್ಡುವಳಿಗೆ ನಾಡಿನಲ್ಲಿರುವ 'ತದವಣಲೆ' ಗ್ರಾಮವನ್ನು ಮತ್ತು ತಳವೃತ್ತಿಯಾಗಿದ್ದ 'ಹಕ್ಕಳೆ' ಗ್ರಾಮದ ಹೊಲಗಳನ್ನು ದಾನವಾಗಿ ನೀಡಿದ್ದಾನೆ. ಈ ಗ್ರಾಮಗಳಿಂದ ಹೆಜ್ಜುಂಕ ಹಾಗೂ ವಡ್ಡರಾವುಳಗಳೂ ಬರುತ್ತಿದ್ದವು.[೩೪] ಕ್ರಿ.ಶ. ೧೧೪೩ರಲ್ಲಿ ಯೋಗೇಶ್ವರ ದಂಡನಾಯಕನು ಬನವಸೆ ಪನ್ನೀರ್ಚ್ಛಾಸಿರವನ್ನು ಆಳುತ್ತಿದ್ದಾಗ, ಜಿಡ್ವಳಿಗೆ ೭೦ನ್ನು ಪೆರ್ಗ್ಗಡೆ ಮಯ್ದುನ ಮಲ್ಲಿದೇವನು ಆಳುತ್ತಿದ್ದನು. ಈತನು ದಂಡನಾಯಕರಿಗೆ ಬಿನ್ನಪವನ್ನು ಮಾಡಿ ಉತ್ತರಾಯಣ ಸಂಕ್ರಾಂತಿಯಂದು ಶ್ರೀಮದವಲಿಯ ಪಾರ್ಶ್ವದೇವರಿಗೆ ಕಾರುಗುಳಿಯ ಬಯಲ ಸಾಲಮಾವಿನಲ್ಲಿ ಕೆಲವು ಭೂಮಿಯನ್ನು ದಾನವಾಗಿ ನೀಡಿದನು.[೩೫] ಬಂದಳಿಕೆಯು ನಾಗರಖಂಡ ೭೦ರ ರಾಜಧಾನಿಯಾಗಿತ್ತು. ಕದಂಬ ಕುಲದ ಮಾಚಿನಾಯಕನು ತನ್ನ ತಂದೆಯ ಹೆಸರಿನಲ್ಲಿ ೧೭-೧೨-೧೧೭೩ರಲ್ಲಿ ಬಂದಳಿಕೆಯಲ್ಲಿ ಬೊಪ್ಪೇಶ್ವರ ದೇವಾಲಯವನ್ನು ನಿರ್ಮಿಸಿದ ಸಂದರ್ಭದಲ್ಲಿ ಈ ದೇವಾಲಯದ ನಿರ್ವಹಣೆಗಾಗಿ ಹಲವಾರು ದಾನಗಳನ್ನು ನೀಡಿದ್ದಾನೆ. ವಿಶೇಷವಾದ ಸಂಗತಿಯೆಂದರೆ ಮಹಾಮಂಡಳೇಶ್ವರನಾದ ಸೋವಿದೇವರಸನ ಪ್ರಧಾನ ಹಟ್ಟಭೋವ ನಾಚರಸನು ನಾಗರಖಂಡ ೭೦, ಎಡೆನಾಡು, ಜಿಡ್ಡುಳಿಗೆಯ ಹೆಜ್ಜುಂಕ ಹಾಗೂ ವಡ್ಡರಾವುಳವನ್ನು ನೀಡಿದ್ದಾನೆ.[೩೬] ೮-೫-೧೧೭೯ರ ಬಳ್ಳಿಗಾವೆಯ ಶಾಸನವು

ತಿಳಿಸುವಂತೆ ಬನವಸೆ ಪನ್ನಿರ್ಚ್ಛಾಸಿರದ ಅಧಿಷ್ಠಾನವಾದ ಬಳ್ಳಿಗಾವೆಯ ದಕ್ಷಿಣ ಕೇದಾರೇಶ್ವರ ದೇವರ ತ್ರಿಕೂಟಪ್ರಾಸಾದ, ಲತಾಮಂಟಪ ಮುಂತಾದವುಗಳನ್ನು ನೋಡಿದ ಮಹಾರಾಜನು ಕೇದಾರೇಶ್ವರ ದೇವರ ಅಂಗರಂಗಭೋಗ ವೈಭೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಹಾಗೂ ತಪೋಧನರ ಆಹಾರದಾನಕ್ಕೆಂದು ಜಿಡ್ಡುಳಿಗೆ ಕಂಪಣದ ಬಳಿಯ ಬಾಡವಾದ ಕಿರುಬಳ್ಳಿಗಾವೆಯನ್ನು ದಾನವಾಗಿ ನೀಡಿದನು.[೩೭] ಆರನೇ ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿ.ಶ. ೧೦೭೬–೧೧೨೬) ಬಾರಹಕೋಡಿಯ ಸರ್ವೇಶ್ವರದೇವರಿಗೆ ದಾನನೀಡುವಾಗ ಜಿಡ್ಡುಳಿಗೆ ಎಪ್ಪತ್ತರಲ್ಲಿದ್ದ 'ಕಣ್ಣೆವಣ' ಗ್ರಾಮವನ್ನು ದಾನವಾಗಿ ನೀಡಲಾಯಿತು.[೩೮] ಕ್ರಿ.ಶ. ೧೧೮೩ರಲ್ಲಿ ಕೋಡಿಮಠದ ಆಚಾರ್ಯ ವಾಮಶಕ್ತಿ ಪಂಡಿತದೇವರ ಕಾಲನ್ನು ತೊಳೆದು ಜಿಡ್ಡುಳಿಗೆ ಎಪ್ಪತ್ತರ ಬಳಿಯ ಬಾಡ ಮುಂದುಗುಳಿಯ ಚಿಕ್ಕಳೆಯನ್ನು ತ್ರಿಭೋಗಾಭ್ಯಂತರವಾಗಿ ದಾನ ನೀಡಲಾಯಿತು.[೩೯]

ನೆಲೆವೀಡಾಗಿದ್ದ ಬಳ್ಳಿಗಾವೆಯನ್ನು ಹಲವು ಚಕ್ರವರ್ತಿಗಳು ಅನಿವಾರ್ಯವಾಗಿ ಅಗತ್ಯವಾಗಿ ಸಂದರ್ಶಿಸುತ್ತಿದ್ದರು. ಇದಕ್ಕೆ ಕಾರಣ ಇಲ್ಲಿನ ಸ್ಥಾನಾಚಾರ್ಯರುಗಳ ಪ್ರಭಾವವು ರಾಜಧಾನಿಯೆಲ್ಲಡೆಯಲ್ಲದೇ ಇಡೀ ಬನವಸೆ ಪನ್ನಿರ್ಚ್ಛಾಸಿರದ ರಾಜಕೀಯ ಆಗುಹೋಗುಗಳನ್ನು ಧಾರ್ಮಿಕವಾಗಿ ನಿಯಂತ್ರಿಸುತ್ತಿತ್ತು. ಹಾಗಾಗಿ ಇಲ್ಲಿಗೆ ಭೇಟಿ ನೀಡುತ್ತಿದ್ದ ಚಕ್ರವರ್ತಿಗಳು, ಮಹಾಮಂಡಳೇಶ್ವರರು, ದಂಡನಾಯಕರು, ನಾಡಗಾವುಂಡರು, ಸೇನಭೋಗರು ವಿಪರೀತ ದಾನಗಳನ್ನು ನೀಡಬೇಕಾಗುತ್ತಿತ್ತು. ಹೀಗೆ ದಾನ ನೀಡುವಾಗ ಸಹಜವಾಗಿಯೇ ಜಿಡ್ಡುಳಿಗೆ ನಾಡಿನ ಗ್ರಾಮಗಳನ್ನು ದಾನವಾಗಿ ನೀಡಲಾಗುತ್ತಿತ್ತು.

ಈ ಪ್ರದೇಶವೇ ಬಹುತೇಕ ದಾನಗಳಿಗೆ ಪ್ರಶಸ್ತವಾಗಿದ್ದ ಕಾರಣ, ಈ ಜಿಡ್ಡುಳಿಗೆ ನಾಡಿನ ಮುಖಾಂತರ ಹಾದುಹೋಗುತ್ತಿದ್ದ ಹೆದ್ದಾರಿಗಳು ವಿಶೇಷವಾಗಿದ್ದವು. ಈ ಪ್ರದೇಶದಿಂದ ಹೆದ್ದಾರಿ ಸುಂಕವು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗುತ್ತಿತ್ತು. ಬಳ್ಳಿಗಾವೆಯ ಹೊರವಲಯದಲ್ಲಿದ್ದ ಶಿರಿಯಾಳ ಕೊಪ್ಪ ಅಥವಾ ಇಂದಿನ ಶಿರಾಳಕೊಪ್ಪವು ಬನವಾಸಿ, ಸಾಗರ, ಸೊರಬಗಳ ಮುಖ್ಯರಸ್ತೆಯಾಗಿತ್ತು.

ಆಡಳಿತಾತ್ಮಕವಾಗಿ ಜಿಡ್ಡುಳಿಗೆ ನಾಡಿನಲ್ಲಿ ಬಳ್ಳಿಗಾವೆಯನ್ನು ಹೊರತುಪಡಿಸಿದರೆ ಉದ್ಧರೆ (ಇಂದಿನ ಉದ್ರಿ). ಬಹಳ ಪ್ರಧಾನವಾದ ತಾಣವಾಗಿತ್ತು. ಜಂಬೂದ್ವೀಪಕ್ಕೆ ಶಿಖಾಮಣಿಯೆನಿಸಿದ ಬನವಸೆ ಪನ್ನಿರ್ಚ್ಛಾಸಿರದ ಜಿಡ್ಡುಳಿಗೆಯ ಕಂಪಣದಲ್ಲಿದ್ದ ಉದ್ಧರೆ ಎಂಬ ಉಲ್ಲೇಖಗಳಿವೆ. ಈ ಉದ್ಧರೆಯನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಯುದ್ಧಗಳಾಗಿವೆ. ಈ ಉದ್ಧರೆಯು ಬಳ್ಳಿಗಾವೆಗೆ ಸಮಾನಾಂತರವಾಗಿ ಬೆಳೆದ ಪ್ರದೇಶವಾಗಿದೆ. ಇಲ್ಲಿ ಪ್ರಖ್ಯಾತ ಬ್ರಹ್ಮಪುರಿಯಿತ್ತು. ಸೇವುಣರು ಹಾಗೂ ಹೊಯ್ಸಳರಿಗೆ ನಡೆದ ಅನೇಕ ಯುದ್ಧಗಳಲ್ಲಿ ಈ ಭಾಗ ಮುಖ್ಯವಾದ ಕೊಡುಗೆಯನ್ನು ನೀಡುತ್ತಾ ಬಂದಿತು. ಎಲ್ಲಕ್ಕಿಂತ ಮಿಗಿಲಾಗಿ ಬನವಸೆ ಪನ್ನಿರ್ಚ್ಛಾಸಿರದ ಪ್ರಮುಖ ನೆಲೆವೀಡಾಗಿ ಬಳ್ಳಿಗಾವೆಗೆ ಪರ್ಯಾಯ ಶಕ್ತಿಯಾಗಿ ಉದ್ಧರೆಯು ಪ್ರಸಿದ್ಧವಾಗಿತ್ತು. ಬಳ್ಳಿಗಾವೆಯು ಧಾರ್ಮಿಕವಾಗಿ ಬೆಳೆದರೆ ಉದ್ಧರೆಯು ಪರಾಕ್ರಮದಿಂದ ಬೆಳೆಯಿತು. ಹೊಯ್ಸಳರ ಕಾಲದಲ್ಲಿ ಎಕ್ಕಲರಸನೆಂಬ ಮಾಂಡಳಿಕನು ಉದ್ಧರೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡುತ್ತಿದ್ದನು. ಇವೆಲ್ಲಕ್ಕಿಂತಲೂ ಸಮುದ್ರತೀರದ ವಾಣಿಜ್ಯಮಾರ್ಗ ಈ ಪ್ರದೇಶದ ಮೂಲಕ ಹಾದುಹೋಗುತ್ತಿತ್ತು.

ಪಶುಸಂಗೋಪನೆ ಹಾಗೂ ಗೋಗ್ರಹಣಗಳು : ಜಿಡ್ಡುಳಿಗೆ ನಾಡಿನ ಇನ್ನೊಂದು ಪ್ರಮುಖ ಆದಾಯವು ಪಶುಸಂಗೋಪನೆಯಿಂದ ಬರುತ್ತಿತ್ತು. ಇಲ್ಲಿ ಹಸುಗಳನ್ನು ಅಂದರೆ ಗೋವುಗಳನ್ನು ಪ್ರಧಾನವಾದ ಸಂಪತ್ತು ಎಂದು ಬಗೆಯುತ್ತಿದ್ದರು. ಹಾಗಾಗಿ ಗೋದಾನಗಳನ್ನು ವಿಶೇಷವಾಗಿ ಈ ಪ್ರದೇಶದಲ್ಲಿ ಪರಿಗಣಿಸಬೇಕಾಗುತ್ತದೆ. ಇದೇ ಕಾರಣಕ್ಕೆ ಈ ಪ್ರದೇಶದಲ್ಲಿ ಗೋಗ್ರಹಣಗಳು ಕೂಡ ಹೆಚ್ಚಾಗಿ ಕಂಡುಬರುತ್ತದೆ. ಅಕ್ಕಪಕ್ಕದ ನಾಡುಗಳ ಕಳ್ಳರು ಜಿಡ್ಡುಳಿಗೆ ನಾಡಿನ ಹಸುಗಳನ್ನು ಅಪಹರಿಸಲು ನಡೆಸಿದ ಉದಾಹರಣೆಗಳು ಮಾಸೂರು, ನಾಡಮಂಚಸಾಲೆ, ಸಾದೇಮರೂರು, ಮಾವಳಿ, ಕುಂಸಿ, ಹಿರೇಕಬ್ಬೂರು ಮುಂತಾದ ಅನೇಕ ಊರುಗಳ ಶಾಸನಗಳಲ್ಲಿ ದೊರಕುತ್ತದೆ.

ಮಾವಳಿಯ ಶಾಸನವೊಂದು ಜಿಡ್ಡುಳಿಗೆ ಎಪ್ಪತ್ತರಲ್ಲಿನ ಒಂದು ಗ್ರಾಮದಲ್ಲಿ (ಹೆಸರು ತ್ರುಟಿತವಾಗಿದೆ). ನಡೆದ ತುರಗೋಳ್ ಹೋರಾಟವನ್ನು ತಿಳಿಸುತ್ತದೆ.[೪೦] ೧೨–೨–೧೦೫೮ರಲ್ಲಿ ಜಿಡ್ಡುಳಿಗೆ ಎಪ್ಪತ್ತರ ನಾಡಗಾವುಂಡನಾಗಿದ್ದ ಸಂದರ್ಭದಲ್ಲಿ ಅಡಿಗಟ್ಟಿಯ (ಇಂದಿನ ಅಡಗಂಟಿ) ಗೊಗ್ಗಿಸೆಟ್ಟಿಯ ಮಗನಾದ ಮಾಚಯ್ಯನು ಊರಗಾವುಂಡನಾಗಿದ್ದ ಸಂದರ್ಭದಲ್ಲಿ ನಡೆದ ತುರುಕಾಳಗವನ್ನು ಅಡಗಂಟಿಯ ಶಾಸನವು ತಿಳಿಸುತ್ತದೆ.[೪೧]

ಕ್ರಿ.ಶ. ೧೧೫೫ರಲ್ಲಿ ಬನವಸೆ ಪನ್ನಿರ್ಚ್ಛಾಸಿರದ ಜಿಡ್ಡಳಿಗೆಯೆಪ್ಪತ್ತರ ಬಳಿಯ ಬಾಡ ಮಾಯಿಲೆಯ ತುರುಗಳನ್ನು ಕಾಳರಸನು ಅಪಹರಿಸಿದನು. ಉತ್ತಗಾವುಂಡನು ಹೋರಾಡಿ ಹಸುಗಳನ್ನು ಮರಳಿಸಿ ಸುರಲೋಕಕ್ಕೆ ಹೋದನು.[೪೨] ಕ್ರಿ.ಶ. ೧೧೯೪ರ ಸೊರಬದ ಶಾಸನ ತಿಳಿಸುವಂತೆ ಎಕ್ಕಲರಸದೇವನು ರಾಜ್ಯವಾಳುತ್ತಿರಲು ವೀರಬಲ್ಲಾಳ ದೇವರಸನು ಬನವಾಸೆ

ಪನ್ನೀರ್ಚ್ಛಾಸಿರಕ್ಕೆ ವಿಜಯಮಾಡಿಸಿದನು. ಜಿಡ್ಡುಳಿಗೆ ಎಪ್ಪತ್ತರ ಬಳಿಯ ಬಾಡವಾದ ಹಿರ್ಯ್ಯಸಕುಣವನ್ನು ದೇವರಸನಾಯಕ, ಹಡವಳ ಮಾಚಯನಾಯಕನನ್ನು ಇರಿದು ಹಸುಗಳನ್ನು ತೆಗೆದುಕೊಂಡು ಹೋಗುವಾಗ ಬೀರಗೌಡ, ಕಾಳಗೌಡನ ಆಳು ಕಂಚಗಾರ ಬಸವೋಜನ ಮಗ ಇವರು ಹಸುಗಳನ್ನು ಮರುಳಿಸಿ ಹಲವರನ್ನು ಕೊಂದು ಕುದುರೆಗಳನ್ನು ಕೂಡ ಕೊಂದು ಕುದುರೆಗಳ ಮೇಲೆ ಯುದ್ಧ ಮಾಡುವ ವೀರರನ್ನು ಕೂಡ ಕೊಂದು ಸ್ವರ್ಗಸ್ಥರಾದರು.[೪೩]

ಕ್ರಿ.ಶ. ೧೧೮೨ರ ಸಾದೇಮರೂರು ಶಾಸನವು ತಿಳಿಸುವಂತೆ ಸಂಕಮದೇವನ ಆಳ್ವಿಕೆಯ ಕಾಲದಲ್ಲಿ ಜಿಡ್ಡುಳಿಗೆ ನಾಡ ಬಳಿಯ ಬಾಡವಾದ ಯಾವುದೋ ಒಂದು ಗ್ರಾಮದಲ್ಲಿ (ಹೆಸರು ತ್ರುಟಿತಗೊಂಡಿದೆ) ನಡೆದ ದಾಳಿಯ ಸಂದರ್ಭದಲ್ಲಿ ಮಸಣಗಾವುಂಡನು ಸತ್ತನು.[೪೪] ಕ್ರಿ.ಶ. ೧೧೮೭ರಲ್ಲಿ ಹಳೇಸೊರಬದಲ್ಲಿರುವ ಶಾಸನವೊಂದು ತುರುಗೋಳ್ ಕಾಳಗದ ಭೀಕರತೆಯನ್ನು ಚಿತ್ರಿಸುತ್ತದೆ. ಕೊಂಡಮರಸನು ಬನವಸೆ ಪನ್ನೀರ್ಚ್ಛಾಸಿರವನ್ನು ಆಳುತ್ತಿದ್ದಾಗ, ಮಹಾಮಂಡಳೇಶ್ವರ ಉದ್ಧರೆಯ ಎಚಿಹರಸನ ಒಡೆಯರಸನು ಪಾಶದಿಂದ ಕೊಲ್ಲಲು, ಕೊಡಕಣಿ ಮುಖ್ಯವಾಗಿ ಜಿಡ್ವಳಿಗೆ ನಾಡೇ ಓಡಿಬಂದು ಸೊರಬವನ್ನು ವಶಪಡಿಸಿಕೊಳ್ಳಲು, ಮಸಣಗಾವುಂಡನ ಅಳಿಯನಾದ ಕಾಮಗಾವುಂಡನು ಈ ತನ್ನ ಶರೀರವೇ ಪರೋಪಕಾರಕ್ಕೆಂದು ಬಗೆದು ತೆಂಕಣದ ಸಮಸ್ತ ನಾಯಕರನ್ನೂ, ತಾವರೆಹಳ್ಳಿಯ ಸೋವಿಸೆಟ್ಟಿಯು ಹಸುಗಳನ್ನು ಅಪಹರಿಸಲು ಹೋಗುವಾಗ ಹೋರಾಡಿ ವೀರತನವನ್ನು ಮೆರೆದು ಸತ್ತನು.[೪೫] ಮಾವಳಿಯಲ್ಲಿ ಹಲವಾರು ವೀರಗಲ್ಲುಗಳಿದ್ದು ಇವುಗಳು ಗೋಗ್ರಹಣಗಳನ್ನು ತಿಳಿಸುತ್ತದೆ.[೪೬]

೧೨೧೫ರ ನಾಡಮಂಚಸಾಲೆಯ ಶಾಸನವು ತಿಳಿಸುವಂತೆ ಕುಮಾರ ಬಾದೆಯಮ ಹೆಗ್ಗಡೆಯು ಜಿಡ್ಡುಳಿಗೆ ನಾಡಿನ ಮೇಲೆ ಹರಿಹಾಯ್ದು ಅಲ್ಲಿನ ತುರುಗಳನ್ನು ತೆಗೆದುಕೊಂಡು ಬರುವಲ್ಲಿ ನಡೆದ ಯುದ್ದದಲ್ಲಿ ಬಾಳೆಯನು ಸುರಲೋಕವನ್ನು ಸೇರಿದ್ದಾನೆ.[೪೭] ಮರುವರ್ಷವೂ ಕೂಡ ೧೨೧೬ರಲ್ಲಿ ಬಾಳೆಯ ಹೆಗ್ಗಡೆಯು ಜಿಡ್ಡುವಳಿಗೆ ನಾಡ ಮೇಲೆ ಬಿದ್ದು ತುರುಗಳನ್ನು ಅಪಹರಿಸಿದನು. ಈ ಯುದ್ದದಲ್ಲಿ ತುರುಂಬನಾಯಕಿತ್ತಿಯ ಮಗನಾದ ಕವಡಯ ಬಿಮ್ಮನು ತನ್ನ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು.[೪೮]

ಊರಳಿವು ಹಾಗೂ ಕಳ್ಳರ ಹೋರಾಟಗಳಲ್ಲಿ ಮರಣ

ಕುಂಸಿಯ ಕ್ರಿ.ಶ. ೧೧೫೦ರ ಚಕ್ರವರ್ತಿ ಜಗದೇಕಮಲ್ಲನ ಕಾಲದ ಶಾಸನವೊಂದು ಜಿಡ್ಡುವಳಿಗೆ ಎಪ್ಪತ್ತಕ್ಕೆ ಮನ್ನೆಯದಂತಿದ್ದ ಉದ್ಧರೆಯ ಎಕ್ಕಲರಸನು ನಡೆಸಿದ ಹೋರಾಟದಲ್ಲಿ ವಿಪ್ರಗುಂಪದ ಊರಳಿವಿನಲ್ಲಿ ಕಮ್ಮಾರ ಮಾಚೋಜನ ಮಗ ಮಾರೋಜನು ಹಲವರನ್ನು ಕೊಂದು ಸುರಲೋಕಕ್ಕೆ ಹೋದನು.[೪೯] ಕ್ರಿ.ಶ. ೧೨೧೩ರ ಹಿರೇಕಬ್ಬೂರಿನ ಶಾಸನವು ಕಳ್ಳರ ಹೋರಾಟವನ್ನು ಚಿತ್ರಿಸುತ್ತದೆ. ಸಿಂಗಣದೇವರಾಯ ಚಕ್ರವರ್ತಿಯ ಕಾಲಘಟ್ಟದಲ್ಲಿ ಎಕ್ಕಲರಸನು ಜಿಡ್ಡುಳಿಗೆ ೭೦ನ್ನು ಆಳುತ್ತಿದ್ದನು. ಪಿರಿಯಕಬ್ಬೂರ ದಮ್ಮೋಜನ ಮಗ ಹಳ್ಳೋಜನು ದುಂಡೆಯ ಗಟ್ಟದ ದಾರಿಯಲ್ಲಿ ಕಳ್ಳರೊಡನೆ ನಡೆದ ಕಾಳಗದಲ್ಲಿ ಹಲವರನ್ನು ಕೊಂದು ತಾನೂ ಸುರಲೋಕವನ್ನು ಪಡೆದನು.[೫೦]

ಕ್ರಿ.ಶ. ೧೩೩೪ರ ಕುಪ್ಪೆಯ ಶಾಸನವು ಮಹಾಪ್ರಧಾನ ಕಾಮೆಯದಣ್ಣಾಯಕನು ತಮ್ಮ ಸೈನ್ಯದ ಸಮೇತ ಕುಪ್ಪೆಯನ್ನು ಮುತ್ತಿದನು. ಆಗ ಜಿಡುವಳಿಗೆ ನಾಡಿನ ಮಹಾಸ್ಥಳವಾದ ಸಾಗವದ್ದೆಯಲ್ಲಿ ಸಕಳಗುಣ ಸಂಪನ್ನನಾದ ಕುಪ್ಪಗಡಿಯನ್ನು ಕಣಲಗಡಿದುರ್ಗವನ್ನು ಆಳುವ ಎರಡೂ ಕಡೆಯ ಸೈನಿಕರು ಸತಿರೆಪ್ರೇಮಗಾವುಂಡರು, ಮಹಾಪ್ರಭು ಸಂಭುನಾಯಕರ ಮಗ ಹಾರುಪಗೌಡನು ಕುದುರೆಯನ್ನು ಏರಿ ಯುದ್ಧಕ್ಕೆ ಹೋದರು. ಅದನ್ನೂ ಮೀರಿಸಿದಂತೆ ಕಾಲ್ದಳವನ್ನು ಸಜ್ಜುಗೊಳಿಸಿದರು. ಈ ಯುದ್ಧದಲ್ಲಿ ಇವನು ಸತ್ತು ಸ್ವರ್ಗಕ್ಕೆ ಸೇರಿದನು.[೫೧]

ಭೂದಾನಗಳು : ಗೋದಾನಗಳಿಗಿಂತ ಹೆಚ್ಚು ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಇರುವಂತೆಯೇ ಭೂದಾನಗಳಿಗೆ ಈ ಪ್ರದೇಶದಲ್ಲಿ ಹೆಚ್ಚಿನ ಸ್ಥಾನಮಾನಗಳಿದ್ದವು. ಆದರೆ ಇಲ್ಲಿ ಪ್ರತ್ಯೇಕ ಗ್ರಾಮಗಳ ಹುಟ್ಟುವಳಿಯೇ ವಿಶೇಷವಾಗಿತ್ತು. ಹಾಗಾಗಿ ಭೂದಾನಗಳನ್ನು ನೀಡುವ ಸಂದರ್ಭದಲ್ಲಿ ಗ್ರಾಮವೊಂದರಲ್ಲಿ ಕೆಲವು ಮಟ್ಟದ ಭೂಮಿಯನ್ನು ನೀಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಭೇರುಂಡ ಗಳೆ, ಕಚ್ಚವಿಯ ಗಳೆ ಹಾಗೂ ಜಿಡ್ಡುಳಿಗೆ ಗಳೆ ಎಂಬ ಮೂರು ರೀತಿಯ ಮಾಪನಗಳನ್ನು ಬಳಸುತ್ತಿದ್ದುದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿನ ಗಳೆಗಳಲ್ಲಿ ಭೇರುಂಡ ಗಳೆಯು ತಾಳಗುಂದದ ಭೇರುಂಡನನ್ನು ಪ್ರತಿನಿಧಿಸುತ್ತಿತ್ತು. ಕಚ್ಚವಿಯ ಗಳೆಯು ಕಚ್ಚವಿಗೆ ಇದ್ದ ಪ್ರಾತಿನಿಧ್ಯವನ್ನು ತಿಳಿಸುತ್ತದೆ. ಈ ಕಚ್ಚವಿಯ ಗಳೆಯ ಆಧಾರದ ಮೇಲೆಯೇ ಜಿಡ್ಡುಳಿಗೆ ನಾಡಿನಲ್ಲಿ ಇಂದಿನ ಹಾವೇರಿ ಜಿಲ್ಲೆಯ ಭೂಭಾಗಗಳೂ ಅಂತರ್ಗತವಾಗಿದ್ದವು ಎಂದು ಸುಲಭವಾಗಿ ಹೇಳಬಹುದಾಗಿದೆ. ಭೂದಾನಗಳಲ್ಲಿ ವಿಶೇಷವಾಗಿ ಇಡೀ ಗ್ರಾಮಗಳನ್ನೇ ಭೂದಾನವಾಗಿ ನೀಡಲಾಗುತ್ತಿತ್ತು. ಈ ಗ್ರಾಮಗಳಲ್ಲಿ

ಹುಟ್ಟುತ್ತಿದ್ದ ಹುಟ್ಟುವಳಿಗಳಾದ ಮನೆವಣ, ಮಗ್ಗವಣ ಮುಂತಾದ ನಾಗರಿಕ ತೆರಿಗೆಗಳೆಲ್ಲವೂ ಈ ರೀತಿಯಲ್ಲಿ ದೇವಾಲಯಗಳಿಗೆ ಸಂದಾಯವಾಗುತ್ತಿದ್ದ ವ್ಯವಸ್ಥೆಯೂ ಇತ್ತು.

ಬಳ್ಳಿಗಾವೆಯ ೨೮-೭-೧೦೪೮ರ ಶಾಸನದಲ್ಲಿ ಚಾಮುಂಡ ರಾಯರಸನು ಬನವಾಸಿ ಪನ್ನಿರ್ಚ್ಛಾಸಿರವನ್ನು ರಾಜಧಾನಿ ಬಳ್ಳಿಗಾವೆಯಿಂದ ಆಳುತ್ತಿದ್ದಾಗ ಜಜಾಹುತಿ ಶ್ರೀಶಾಂತಿನಾಥ ಸಂಬಂಧಿಯಾದ ಬಳಗಾರಗಣದ ಮೇಘನಂದಿ ಭಟ್ಟಾರಕರ ಶಿಷ್ಯರಾದ ಕೇಶವನಂದಿ ಅಷ್ಟೋಪವಾಸಿ ಭಟಾರರ ಬಸದಿಗೆ ಪೂಜೆಗೆಂದು ಜಿಡ್ಡುಳಿಗೆ ೭೦ರ ಬಳಿಯ ರಾಜಧಾನಿ ಬಳ್ಳಿಗಾವೆಯ ಪುಲ್ಲೆಯ ಬಯಲಿನಲ್ಲಿ ಭೇರುಂಡ ಗಳೆಯಲ್ಲಿ ಅಳೆದು ೫ ಮತ್ತರು ಭೂಮಿಯನ್ನು ಹಾಗೂ ತಾಣಗುಂದೂರು (ತಾಳಗುಂದ) ಸೀಮೆಯಲ್ಲಿ ಸ್ವಲ್ಪ ಭೂದಾನವನ್ನು ನೀಡಿದ್ದಾನೆ.[೫೨]

ಕ್ರಿ.ಶ. ೩-೧೧-೧೦೬೫ರ ಬಳ್ಳಿಗಾವೆಯ ಶಾಸನ ಬಹಳ ಮುಖ್ಯವಾದದ್ದು. ಕಾರಣ, ಈ ಶಾಸನ ಇಲ್ಲಿದ್ದ ಬೌದ್ಧಧರ್ಮದ ವಿವರಗಳನ್ನು ಕಟ್ಟಿಕೊಡುತ್ತದೆ. ರೂಪಭಟ್ಟಯ್ಯನು ಬಳ್ಳಿಗಾವೆಯಲ್ಲಿ ಜಯಂತಿ ಪ್ರಬೌದ್ಧ ವಿಹಾರವನ್ನು ನಿರ್ಮಿಸಿ ತಾರಾಭಗವತಿಯನ್ನು ಸ್ಥಾಪಿಸಿದ ಸಂಗತಿಯನ್ನು ತಿಳಿಸಿದೆ. ಇಲ್ಲಿನ ಬೌದ್ಧಾಲಯದಲ್ಲಿದ್ದ ಯೋಗಿಣಿಯರು, ಕುಸುಳಿಯರ, ಸನ್ಯಾಸಿಗಳ ಆಹಾರದಾನಕ್ಕೆಂದು ಪರಮೇಶ್ವರ ದತ್ತಿಯಾಗಿ ದೊರೆಯ ಅನುಮತಿಯಿಂದ ಜಿಡ್ಡುಳಿಗೆ ನಾಡೊಳಗೆ ಇದ್ದ ಹರಿಗೆ, ಮುಂದಸೆ, ಬಳ್ಳಿಗಾವೆಯ ನಗರದ ಪಂಚಮಠಸ್ಥಾನ ಮುಂತಾದ ಅನೇಕ ದೇವಾಲಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಲಾಗಿದೆ. ಕಚ್ಛವಿಯ ಗಳೆಯಲ್ಲಿ ಅಳೆದು ಭೂದಾನವನ್ನು ನೀಡಲಾಗಿದೆ.[೫೩]

ಗಾವುಂಡರ ಪ್ರಾಮುಖ್ಯ : ಗ್ರಾಮ ಗಾವುಂಡರು ಹಾಗೂ ನಾಡಗಾವುಂಡರ ಜವಾಬ್ದಾರಿಗಳು ಪ್ರಮುಖವಾಗಿದ್ದವು. ತೆರಿಗೆಗಳನ್ನು ಸಂಗ್ರಹಿಸುವುದು. ಚಕ್ರವರ್ತಿಗಳಿಗೆ ಸಲ್ಲಿಸುವುದು, ಭೂಹಿಡುವಳಿಯನ್ನು ಕಾಯ್ದುಕೊಳ್ಳುವುದು, ಆಡಳಿತವನ್ನು ಸರಿಯಾಗಿ ನಿರ್ವಹಿಸುವುದು, ಯುದ್ಧ ಸಂದರ್ಭಗಳಲ್ಲಿ ಸೈನ್ಯವನ್ನು ಅವಶ್ಯಕತೆ ಇರುವೆಡೆಯಲ್ಲಿ ಸರಬರಾಜು ಮಾಡುವುದು ಇವೆಲ್ಲವನ್ನೂ ಬಹಳ ಸಮರ್ಪಕವಾಗಿ ನಿಭಾಯಿಸುತ್ತಿದ್ದರು. ಆದರೆ ಇವೆಲ್ಲಕ್ಕಿಂತ ಈ ಉಭಯ ಗಾವುಂಡರುಗಳ ಬಹಳ ಮುಖ್ಯವಾದ ಕಾರ್ಯವೊಂದನ್ನು ವಿಶೇಷವಾಗಿ ಜಿಡ್ಡುಳಿಗೆ ನಾಡಿನ ಶಾಸನಗಳು ತಿಳಿಸುತ್ತವೆ. ಅದೆಂದರೆ ದಾನಗಳನ್ನು ನೀಡುವಾಗ ಮುಖ್ಯವಾಗಿ ಜನರನ್ನು ಒಡಂಬಡಿಸಿ ದಾನಗಳನ್ನು ನೀಡಲು ಸಹಕಾರಿಯಾಗುತ್ತಿದ್ದರು.

ಕ್ರಿ.ಶ. ೧೦-೫-೧೦೫೪ರಲ್ಲಿ ಬಳ್ಳಿಗಾವೆಯ ಅಭಿನವ ಸೋಮೇಶ್ವರ ದೇವಾಲಯವನ್ನು ಕೆಲವರು ಸೇರಿ ಜೀರ್ಣೋದ್ಧಾರಗೊಳಿಸಿದರು. ಈ ದೇವಾಲಯಕ್ಕೆ ಗವರೇಶ್ವರ ಎಂದು ಮರುನಾಮಕರಣವನ್ನು ಮಾಡಿದರು. ಈ ಸಂದರ್ಭದಲ್ಲಿ ಅನೇಕ ದಾನದತ್ತಿಗಳು ನೀಡಲ್ಪಟ್ಟವು. ಈ ಸಂದರ್ಭದಲ್ಲಿ ಜಿಡ್ಡುಳಿಗೆ ಎಪ್ಪತ್ತರ ಮನ್ನೆಯ ಎಕ್ಕಲರಸನು ಮುಖ್ಯವಾಗಿ ಜಿಡ್ಡುಳಿಗೆಯ ನಾಳ್ಪ್ರಭು ಬೆಟ್ಟವೂರ ಕಾಳಗಾವುಂಡ ಮೊದಲಾದ ಗಾವುಂಡರ ಸಮ್ಮುಖದಲ್ಲಿ ದಾನವನ್ನು ನೀಡಲಾಯಿತು. ಈ ಶಾಸನದಲ್ಲಿ[೫೪] ಸಿಗ್ಗದ ಚಾವಗಾವುಂಡ, ಸಾಗವದ್ದೆಯ ಚೌಡಗಾವುಂಡ, ಅವಲಿಯ ಜಕ್ಕಗೌಡ, ಹಂಪಗೌಡ, ಹೊಸಹಳ್ಳಿಯ ಊರೊಡೆಯ, ಕೂಡಲಿಯ ಸಾಂತಗಾವುಂಡ, ತೊತ್ತೂರ ಗೊಯ್ದಗೌಡ ಈ ಎಲ್ಲರೂ ಸೇರಿ ತಮ್ಮ ತಮ್ಮ ಊರಿನಲ್ಲಿ ಪ್ರತೀವರ್ಷ ದೇವರಿಗೆ ೫ ಹಣವನ್ನು ಕೊಟ್ಟ ಸಂಗತಿಯನ್ನು ತಿಳಿಸುವಾಗ ನಾಡಗಾವುಂಡ ಹಾಗೂ ಊರಗಾವುಂಡರ ಪ್ರಾಮುಖ್ಯತೆಯನ್ನು ತಿಳಿಯಬಹುದು.

ಬಳ್ಳಿಗಾವೆಯ ಶಾಸನವು ತಿಳಿಸುವಂತೆ[೫೫] ಕೇಶವ ದಂಡನಾಯಕನು ಕೇಶವ ದೇವಾಲಯವನ್ನು ನಿರ್ಮಿಸಿದಾಗ ಹಲವಾರು ದಾನಗಳನ್ನು ನೀಡಲಾಯಿತು. ಆಗಲೇ ವೀರಕೇಶವಪುರ ಎಂಬ ಬ್ರಹ್ಮಪುರಿಯನ್ನು ಕೂಡ ನಿರ್ಮಿಸಲಾಯಿತು. ಈ ಸಂದರ್ಭದಲ್ಲಿ ಈ ಜಿಡ್ಡುಳಿಗೆ ನಾಡಿನ ಎಕ್ಕಲರಸನು ಹಾಗೂ ಸಂಧಿವಿಗ್ರಹಿ ಮಹಾದೇವನು ಜಿಡ್ಡುಳಿಗೆ ನಾಡಿನ ಸಮಸ್ತಪ್ರಭುಗಾವುಂಡರನ್ನು ಒಪ್ಪಿಸಿ ಮನ್ನೆಯ ಆದಾಯ, ಕಿರುಕುಳವನ್ನು ಒಳಗೊಂಡಂತೆ ಬೆಳ್ವಣಿಯ ಹಳ್ಳಿಯನ್ನು ಸರ್ವನಮಸ್ಯವಾಗಿ ದಾನ ನೀಡಿದನು. ಈ ಶಾಸನದಿಂದ ನಾವು ಯಾವುದೇ ದಾನವನ್ನು ನೀಡಬೇಕಾದರೆ, ಈ ಗಾವುಂಡರನ್ನು ಒಪ್ಪಿಸುವುದು ಬಹಳ ಮುಖ್ಯವಾಗಿತ್ತು ಎಂದು ತಿಳಿಯಬಹುದು. ಈ ಶಾಸನದಲ್ಲಿ ಎರಡು ದಾನಗಳಿದ್ದು ಇವುಗಳ ಕಾಲ ೫-೧-೧೧೫೯ ಹಾಗೂ ೨೪-೩-೧೧೭೯.

ಕೊನೆಮಾತು : ಒಟ್ಟಿನಲ್ಲಿ ಬಳ್ಳಿಗಾವೆಯನ್ನು ಕೇಂದ್ರವಾಗಿ ಇಟ್ಟುಕೊಂಡು ಕೆಲವು ಅಧ್ಯಯನಗಳು ನಡೆದಿವೆಯಾದರೂ ಜಿಡ್ಡುಳಿಗೆ ನಾಡು ಅಥವಾ ಜಿಡ್ಡುಳಿಗೆ ೭೦ರ ರಾಜಧಾನಿಯಾಗಿ ಬಳ್ಳಿಗಾವೆಯು ಇತಿಹಾಸದಲ್ಲಿ ವಹಿಸಿದ ಪಾತ್ರವನ್ನು ಇದೇ ಮೊದಲನೇ ಬಾರಿಗೆ ಸ್ವತಂತ್ರ ಲೇಖನದ ಸ್ವರೂಪದಲ್ಲಿ ಇಲ್ಲಿ ಮಂಡಿಸಲಾಗಿದೆ. ಈ ಒಟ್ಟು ನಾಡು ಒಂದು ಸ್ವತಂತ್ರ ಕೃತಿಯಾಗುವಷ್ಟು ದಟ್ಟವಾದ ಮಾಹಿತಿಯನ್ನು ಒಳಗೊಂಡಿದೆ. ಅವುಗಳಲ್ಲಿ ಈ ಲೇಖನದಲ್ಲಿ ಕೇವಲ ಭೌಗೋಳಿಕ ಹಾಗೂ

ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಮಾತ್ರ ಪ್ರಧಾನವಾಗಿ ಗಮನಿಸಲಾಗಿದೆ. ಇದೇ ಮೊದಲ ಬಾರಿಗೆ ಜಿಡ್ಡುಳಿಗೆ ನಾಡಿನ ಸರಿಯಾದ ಭೌಗೋಳಿಕ ವಿಸ್ತಾರವನ್ನು ಕಂಡುಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಎ.ಕ. ೮ (ರೈ) ಸೊರ ೮೮.
೨. ಎ.ಕ. ೮ (ರೈ) ಸೊರ ೫೩೦.
೩. ಕನ್ನಡ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು.
೪. ಎ.ಕ. ೧೪ (ಪ): ಶಿಕಾ ೩೮೯.
೫. ಎ.ಕ. ೧೪ (ಪ): ಶಿಕಾ ೨೬೩.
೬. ಎ.ಕ. ೧೪ (ಪ): ಶಿಕಾ ೨೮೨.
೭. ಎ.ಕ. ೮ (ರೈ) : ಸೊರ ೨೭೬.
೮. ಎ.ಕ. ೧೪ (ಪ): ಶಿಕಾ ೨೪೧.
೯. ಎ.ಕ. ೧೪ (ಪ): ಶಿಕಾ ೨೪೦.
೧೦. ಎ.ಕ. ೧೪ (ಪ): ಶಿಕಾ ೨೩೬.
೧೧. ಎ.ಕ. ೧೪ (ಪ): ಶಿಕಾ ೨೪೭.
೧೨. ಎ.ಕ. ೧೪ (ಪ): ಶಿಕಾ ೨೮೯.
೧೩. ಎ.ಕ. ೧೪ (ಪ): ಶಿಕಾ ೨೨೩.
೧೪. ಎ.ಕ ೧೪ (ಪ): ಶಿಕಾ ೨೪೩.
೧೫. ಎ.ಕ. ೧೪ (ಪ): ಶಿಕಾ ೨೧೨.
೧೬. ಎ.ಕ. ೮ (ರೈ) ; ಸೊರ ೧೩೨.
೧೭. ಎ.ಕ. ೧೪ (ಪ): ಶಿಕಾ ೨೦೮.
೧೮. ಎ.ಕ. ೧೪ (ಪ): ಶಿಕಾ ೨೮೯.
೧೯. ಎ.ಕ. ೧೪ (ಪ): ಶಿಕಾ ೪೬.
೨೦. ಎ.ಕ. ೧೫ (ಪ), ಸಾಗರ ೧೮೨.
೨೧. ಎ.ಕ. ೮ (ರೈ) : ಸೊರ ೫೬೧.
೨೨. ಎ.ಕ. ೮ (ರೈ) : ಸೊರ ೪೯೪.
೨೩. ಎ.ಕ. ೮ (ರೈ) : ಸೊರ ೧೧೬.
೨೪. ಎ.ಕ. ೧೪ (ಪ): ಶಿಕಾ ೪೪೨.
೨೫. ಎ.ಕ. ೮ (ರೈ) : ಸೊರ ೧೧೬.
೨೬. ಎ.ಕ. ೮ (ರೈ) : ಸೊರ ೧೦೩.
೨೭. ಎ.ಕ. ೮ (ರೈ) : ಸೊರ ೧೦೭.
೨೮. ಎ.ಕ. ೮ (ರೈ) : ಸೊರ ೧೦೮.
೨೯. ಎ.ಕ. ೧೪ (ಪ): ಶಿಕಾ ೨೬೩.
೩೦. ಎ.ಕ. ೧೪ (ಪ): ಶಿಕಾ ೨೪೮.
೩೧. ಎ.ಕ. ೧೪ (ಪ): ಶಿಕಾ ೨೪೧.
೩೨. ಎ.ಕ. ೧೪ (ಪ): ಶಿಕಾ ೨೪೭.
೩೩. ಎ.ಕ. ೧೪ (ಪ): ಶಿಕಾ ೨೪೩.
೩೪. ಎ.ಕ. ೧೪ (ಪ): ಶಿಕಾ ೨೧೨.
೩೫. ಎ.ಕ. ೮ (ರೈ): ಸೊರ ೧೨೫.
೩೬. ಎ.ಕ. ೧೪ (ಪ): ಶಿಕಾ ೧೬೭.
೩೭. ಎ.ಕ. ೧೪ (ಪ): ಶಿಕಾ ೨೦೭.
೩೮. ಎ.ಕ. ೧೪ (ಪ): ಶಿಕಾ ೨೨೩.
೩೯. ಎ.ಕ. ೧೪ (ಪ): ಶಿಕಾ ೨೨೦.
೪೦. ಎ.ಕ. ೮ (ರೈ) : ಸೊರ ೧೧.
೪೧. ಎ.ಕ. ೧೪ (ಪ): ಶಿಕಾ ೧.
೪೨. ಎ.ಕ. ೮ (ರೈ) : ಸೊರ ೧೨.
೪೩. ಎ.ಕ. ೮ (ರೈ) : ಸೊರ ೩೦.
೪೪. ಎ.ಕ. ೮ (ರೈ) : ಸೊರ ೪೩.
೪೫. ಎ.ಕ. ೮ (ರೈ) : ಸೊರ ೪೭.
೪೬ ಎ.ಕ. ೮ (ರೈ) ಸೊರ ೩, ೫, ೭.
೪೭. ಎ.ಕ. ೧೫ (ಪ) : ಸಾಗ ೧೩೪.
೪೮. ಎ.ಕ. ೧೫ (ಪ) : ಸಾಗ ೧೩೫.
೪೯. ಎ.ಕ. ೮ (ರೈ) : ಸೊರ ೮೬.
೫೦. ಎ.ಕ. ೮ (ರೈ) : ಸೊರ ೩೯೮.
೫೧. ಎ.ಕ. ೮ (ರೈ) : ಸೊರ ೪೯೪.
೫೨. ಎ.ಕ. ೧೪ (ಪ): ಶಿಕಾ ೨೩೨.
೫೩. ಎ.ಕ. ೧೪ (ಪ): ಶಿಕಾ ೨೮೨.
೫೪. ಎ.ಕ. ೧೪ (ಪ): ಶಿಕಾ ೨೩೦.
೫೫. ಎ.ಕ. ೧೪ (ಪ): ಶಿಕಾ ೨೩೫.

(ಇಲ್ಲಿ ಎ.ಕ. ಎನ್ನುವುದು ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳನ್ನು ಪ್ರತಿನಿಧಿಸಿದರೆ (ರೈ) ಎನ್ನುವುದು ಬಿ.ಎಲ್. ರೈಸ್ ಅವರ ಸಂಪುಟಗಳನ್ನು ಹಾಗೂ (ಪ) ಎನ್ನುವುದು ಪರಿಷ್ಕೃತ ಸಂಪುಟಗಳನ್ನು ಪ್ರತಿನಿಧಿಸುತ್ತದೆ. ಸೊರ = ಸೊರಬ, ಶಿಕಾ = ಶಿಕಾರಿಪುರ, ಸಾಗ=ಸಾಗರ).

◆◆

ನಂದೀಶ್ವರ ಎನ್.

ರಾಮನಾಥನ ಆಡಳಿತಾಧಿಕಾರಿ ಹೊನ್ನಮಾರಗೌಡನ ವಂಶಸ್ಥರು

ಹೊಯ್ಸಳರ ದೊರೆ ಸೋಮೇಶ್ವರನು ತನ್ನ ಆಳ್ವಿಕೆಯ ಉತ್ತರಾರ್ಧದಲ್ಲಿ ತನ್ನ ಇಬ್ಬರು ಮಕ್ಕಳಾದ ನರಸಿಂಹ ಮತ್ತು ರಾಮನಾಥರಿಗೆ ಏರ್ಪಟ್ಟಿದ್ದ ಅಂತಃಕಲಹಗಳನ್ನು ನಿವಾರಿಸಲು ಅವರೀರ್ವರಿಗೂ ರಾಜ್ಯವನ್ನು (ಕ್ರಿ.ಶ. ೧೨೫೪) ಇಬ್ಭಾಗ ಮಾಡಿದನು. ದೋರಸಮುದ್ರದ ರಾಜಧಾನಿ ಭಾಗವನ್ನು ಹಿರಿಯ ಮಗನಾದ ನರಸಿಂಹನಿಗೆ, ಕಣ್ಣಾನೂರು ರಾಜಧಾನಿಯನ್ನಾಗಿ ಪಡೆದಿದ್ದ ದಕ್ಷಿಣದ ಪ್ರದೇಶಗಳನ್ನು ಕಿರಿಯ ಮಗನಾದ ರಾಮನಾಥನಿಗೆ ಹಂಚಿದರು. ಸ್ವತಃ ತಾನು ಕಣ್ಣಾನೂರಿನಲ್ಲೇ ಅಂತಿಮ ದಿನಗಳವರೆಗೂ ನೆಲಸಿದನು. ಕಾಲಾನಂತರದಲ್ಲಿ ಹೊಯ್ಸಳ ಮತ್ತು ಚೋಳರ ನಡುವಿನ ಬಾಂಧ್ಯವ್ಯ ಬಿಗಡಾಯಿಸಿಕೊಂಡಿತ್ತು. ಈ ಸಂದರ್ಭದ ಲಾಭ ಪಡೆದ ಪಾಂಡ್ಯರು ಹೊಯ್ಸಳರ ಕಣ್ಣಾನೂರನ್ನು ಆಕ್ರಮಿಸಿಕೊಂಡರು. ಆಗ ಅನಿವಾರ್ಯವಾಗಿ ರಾಮನಾಥನು ಕಣ್ಣಾನೂರಿನಿಂದ ಉತ್ತರಕ್ಕೆ ಸಾಗಿ ಕುಂದಾಣವನ್ನು (ಕೃಷ್ಣಗಿರಿ ಜಿಲ್ಲೆ) ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಅಂತಿಮ ಕಾಲದವರೆಗೂ ಆಡಳಿತ ನಡೆಸಿದನು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಹೊಯ್ಸಳ ರಾಮನಾಥನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ಸು. ೧೨೮೦ ರವೆಗೆ ಸುಮಾರು ೬ ಬಾರಿ ಆಕ್ರಮಣವೆಸಗುತ್ತಾನೆ. ಈ ಸಂದರ್ಭದಲ್ಲಿ ಗೆದ್ದ ಭೂಪ್ರದೇಶಗಳನ್ನು ಉಳಿಸಿಕೊಳ್ಳಲು ತುಮಕೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ತನ್ನ ಆಡಳಿತಾಧಿಕಾರಿಗಳನ್ನು ನೇಮಿಸಿರುವುದು ತಿಳಿದುಬರುತ್ತದೆ. ಬೆಂಗಳೂರು ಜಿಲ್ಲೆಯಲ್ಲಿ ಹೊಯ್ಸಳರ ರಾಮನಾಥನ ಶಾಸನಗಳು ಲಭ್ಯವಾಗಿದ್ದರೂ ಆ ಜಿಲ್ಲೆಯಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸದೆ, ತುಮಕೂರು ಜಿಲ್ಲೆಯಲ್ಲಿ ಹೊನ್ನಮಾರಗೌಡ ಎಂಬ ಆಡಳಿತಾಧಿಕಾರಿಗಳನ್ನು ನಿಯೋಜಿಸಿರುವುದನ್ನು ನೋಡಿದರೆ ತುಮಕೂರು ಪ್ರದೇಶ ಎಂತಹ ಆಯಕಟ್ಟಿನ ಪ್ರದೇಶವೆಂದು ವೇದ್ಯವಾಗುತ್ತದೆ.

ತುಮಕೂರು ಶಾಸನ ಸಂಖ್ಯೆ ೬೮ ಬೈರಸಂದ್ರ ಗ್ರಾಮದ ಕ್ರಿ.ಶ. ೧೨೮೭ರ ಶಾಸನವು[೧] ಹೊಯ್ಸಳರ ದೊರೆ ರಾಮನಾಥ ಕುಂಥಣಿ (ಕುಂದಾಣ) ಬೀಡಿನಿಂದ ರಾಜ್ಯವಾಳುತ್ತಿದ್ದಾಗ ಇವನ ಪ್ರಧಾನ ದಂಡನಾಯಕನಾದ ಕಂಬಯ್ಯ ದಂಡನಾಯಕನು ಹೊಂನಸಿಗೆರೆ(ಹೊನ್ನಸಿಗೆರೆ)ಯ ಹೊಂನಮಾರನಗೌಡ(ಹೊನ್ನಮಾರನಗೌಡ)ನ ಮಗ ಹೊಂನಮಾರನಗೌಡ(ಹೊನ್ನಮಾರಗೌಡ)ನಿಗೆ ಗೌಡ ಕೊಡುಗೆಯಾಗಿ ಮರಗಲ ನಾಡೊಳಗಿನ ಹರಲೂ(ಳೂ)ರನ್ನು ನೀಡುತ್ತಾನೆ. ಹೊನ್ನಮಾರಗೌಡ ತನ್ನ ತಾಯಿ

ಪೂರ್ಣಚಂದ್ರ ತೇಜಸ್ವಿ ಸದನ
ಸಿದ್ಧಪ್ಪ ಲೇಔಟ್, ಬಾಲಾಜಿನಗರ
ಸಿರಾ ಟೌನ್, ತುಮಕೂರು ಜಿಲ್ಲೆ
ಮೊ: ೯೯೬೪೨ ೦೭೧೨೩

ಕಾಚಗುಡ(ಕಾಚಗೌಡಿ) ಹೆಸರಿನಲ್ಲಿ ೧೨೦೦ ಹೊನ್ನನ್ನು ವೆಚ್ಚಮಾಡಿ ಕಾಚಸಮುದ್ರ ಕೆರೆಯನ್ನು ಕಟ್ಟಿಸುತ್ತಾನೆ. ಈ ಕಾಚಸಮುದ್ರ ಕೆರೆ ಕೆಳಗಡೆ ೧೧೦ ಮೆಟ್ಟು ಬೆದ್ದಲನ್ನು ದಾನವಾಗಿ ಪಡೆಯುತ್ತಾನೆ.

ತುಮಕೂರು ಶಾಸನ ಸಂಖ್ಯೆ ೮೪, ರಾಯಪುರ ಗ್ರಾಮದ ಕ್ರಿ.ಶ. ೧೨೮೭ರ ಶಾಸನವು[೨] ಹೊಯ್ಸಳರ ದೊರೆ ರಾಮನಾಥ ಕುಂಥಣಿ (ಕುಂದಾಣ) ಬೀಡಿನಿಂದ ರಾಜ್ಯವಾಳುತ್ತಿದ್ದಾಗ ಬಸಿಗಉಡ(ಬಾಸಿಗೌಡ)ನು ಹೊನಗಉಡ (ಹೊನ್ನಗೌಡ)ನಿಗೆ ಉಡುಗೊರೆಯಾಗಿ ಮರುಗಲನಾಡೊಳಗಿನ ಹುಳಮಣಕುಪ್ಪೆಯನ್ನು ದಾನ ನೀಡುತ್ತಾನೆ. ಈ ಹೊನ್ನಗೌಡನು ದಾನ ಕೊಟ್ಟ ಬಾಸಿಗೌಡನ ಹೆಸರಿನಲ್ಲಿ ಬಾಚಿಸಮುದ್ರ ಕೆರೆಯನ್ನು ಕಟ್ಟಿರುತ್ತಾನೆ ಹಾಗೂ ಬಾಚಿಗೌಡನ ಹೆಸರಿನಲ್ಲಿ ಬಾಚೇಶ್ವರ ದೇವಾಲಯವನ್ನು ನಿರ್ಮಿಸಿ ಈ ದೇವರ ಅಮೃತಪಡಿಗೆ ಊರಮುಂದಣ ಹುಳಮನಕುಪ್ಪೆಯ ಕೆರೆಯ ಕೆಳಗೆ ಭೂಮಿಯನ್ನು ದಾನ ನೀಡುತ್ತಾನೆ.

ತುಮಕೂರು ಶಾಸನ ಸಂಖ್ಯೆ ೯೨ ಹರಳೂರು ಗ್ರಾಮದ ಕ್ರಿ.ಶ. ೧೨೮೭ರ ಶಾಸನವು[೩] ಸಹ ಶಾಸನಸಂಖ್ಯೆ ೬೮ರ ವಿವರವನ್ನು ಹೊಂದಿದ್ದು, ಈ ಶಾಸನದಲ್ಲಿ ಹೊನ್ನಮಾರಗೌಡನಿಗೆ ಚಿಕ್ಕ ಇಚ (ಚಿಕ್ಕಬೈಚ) ಎಂಬ ಮಗನಿರುತ್ತಾನೆ. ಹೊನ್ನಮಾರಗೌಡನಿಗೆ ಕೊಟ್ಟ ಕೆಲವು ಬಿರುದುಗಳ ಪ್ರಸ್ತಾಪ ಇದೆ.

ತುಮಕೂರು ಶಾಸನ ಸಂಖ್ಯೆ ೯೩ ಹರಳೂರು ಗ್ರಾಮದ ಕ್ರಿ.ಶ. ೧೨೮೭ರ ಶಾಸನವು[೪] ಹೊಯ್ಸಳರ ದೊರೆ ರಾಮನಾಥ ಕುಂಥಣಿ (ಕುಂದಾಣ) ಬೀಡಿನಿಂದ ರಾಜ್ಯವಾಳುತ್ತಿದ್ದಾಗ ಕಂಬಯ್ಯ ದಂಡನಾಯಕನು ಹೊನ್ನಸಿಗೆರೆಯ ಹೊನ್ನಮಾರಗೌಡನ ಮಗ ಹೊಂನಮಾರಗವುಡ(ಹೊನ್ನಮಾರಗೌಡ)ನಿಗೆ ಗೌಡ ಕೊಡುಗೆಯಾಗಿ ಮುರುಗಲನಾಡೊಳಗಣ ಹಲಗೋಡಲು ಗ್ರಾಮವನ್ನು ದಾನ ನೀಡಿರುತ್ತಾರೆ. ಇದರಲ್ಲಿ ಹೊನ್ನಮಾರಗೌಡನಿಗೆ ಬಿಚಗೌಡ (ಬೈಚಗೌಡ) ಎಂಬ ಇನ್ನೊಬ್ಬ ಮಗ ಇರುತ್ತಾನೆ. ಈ ಶಾಸನದಲ್ಲೂ ಕೂಡ ಹೊನ್ನಮಾರಗೌಡನಿಗೆ ಶ್ರೀಮನ್ ಮಹಾಪ್ರಭು ಪ್ರಜೆಮೆಚ್ಚಿಗಂಡ ಪ್ರಭುಗಳಾದಿತ್ಯ, ಅರಮನೆ ಗೊಂಡಯ್ಯರಗಂಡ, ಅಸ್ಥಾನಜ್ಯೋತಿ, ಸೊಕ್ಕಿಸೂಳ್ವರಗಂಡ, ಮರೆಹೊಕ್ಕಕಾವನಜೀರದೀರ, ಗೌಡಮಾಣಿಜ್ಯ, ಸತ್ಯದಸಾಗರ ಅಭಿಮಾನದಾದರ, ಹೊನ್ನಮನ್ನಣೆಯಿತ್ತು ಮರೆವ ಕೀರ್ತಿ ಭೂಷಣ ಹೊಯ್ಸಳರ ಗಂಡವಾರಣ ಎಂಬ ಬಿರುದಾವಳಿಗಳು ಇವೆ.

(ತುಮಕೂರು– ಕುಣಿಗಲ್ ರಸ್ತೆಯ ನಾಗವಲ್ಲಿ ಗ್ರಾಮದಲ್ಲಿ ಸುಮಾರು ೭ ಕಿ.ಮೀ. ದೂರದಲ್ಲಿ ಹೊನ್ನಸಿಗೆರೆ ಗ್ರಾಮವಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಕರ್ನಾಟಕ ಗ್ರಾಮಸೂಚಿ ಪುಸ್ತಕದಲ್ಲಿ ಹೊನ್ನಸಿಗೆರೆಯ ಗ್ರಾಮದ ಹೆಸರು ಬಿಟ್ಟುಹೋಗಿದೆ.

ಕಂಬಯ್ಯ ದಂಡನಾಯಕ ವಂಶಾವಳಿ (ಹೊಳೆನರಸೀಪುರ ಶಾಸನ ಸಂಖ್ಯೆ ೧೧೯)[೫] ಕ್ರಿ.ಶ. ೧೨೪೨

ತೊಂಡದೇಶದ ಚಾತ ಗ್ರಾಮ

ಆದಿತ್ಯ ಮಗ

ದೇವಪಿಲ್ಲ (ಹೆಂಡತಿ ಚೀಲಾದೇವಿ)

ಕಂಬಯ್ಯ ದಂಡನಾಯಕ	ಕರುಮಾಣಿಕದೇವ	ಆಲ್ಲಾಳದೇವ
(ಕ್ರಿ.ಶ. ೧೨೪೨–೧೨೮೮)	(ನೆಲಮಂಗಲ ಶಾಸನ ಸಂಖ್ಯೆ ೬೩, ಕ್ರಿ.ಶ. ೧೨೮೮)	

ನೆಲಮಂಗಲ ಶಾಸನ ಸಂಖ್ಯೆ ೯, ಸಂಖ್ಯೆ ೬೭ರಲ್ಲಿ ಉಲ್ಲೇಖವಿದೆ.[೬] ಕಂಬಯ್ಯ ದಂಡನಾಯಕ ತಮ್ಮ ನೆಲಮಂಗಲ ತಾಲ್ಲೂಕಿನ (ನೆಲಮಂಗಲ ೬೭) ಕರುಮಾಣಿಕ ಹೆಸರು ಮಾತ್ರ ಬರುತ್ತದೆ.)

ತುಮಕೂರು ಶಾಸನ ಸಂಖ್ಯೆ ೮೦, ಮೆಳೆಕೋಟೆ ಗ್ರಾಮದ ಕ್ರಿ.ಶ. ೧೩೧೪ರ ಶಾಸನವು ಹೊಯ್ಸಳರ ದೊರೆ ಮುಮ್ಮಡಿ ಬಲ್ಲಾಳನು ದ್ವಾರಸಮುದ್ರದಿಂದ ರಾಜ್ಯಭಾರ ಮಾಡುತ್ತಿರಬೇಕಾದರೆ ಈತನ ಪ್ರಧಾನ ದೆಪಣದ ದೆವಪ ದಂಡನಾಯಕರ ಮೈದುವ ಬಿಮಳಪನವರು ಆನೆಬಿದ್ದಸರಿಯ ಏಳು ನಾಡನಾಥ ಎಂದು ಬಿರುದಾಂಕಿತನಾದ ಹೊನ್ನಮಾರಗೌಡನ ಮಗ ಹಿರಿಯ ಬೈಚಗೌಡನಿಗೆ ಮಲೆಗಲನಾಡಳೊಗಣ ಮೆಳೆಕೋಟೆಯನ್ನು ದಾನ ನೀಡುತ್ತಾನೆ.

ಹೊನ್ನಸಿಗೆರೆಯ ಹೊನ್ನಮಾರಗೌಡ (ಹೆಂಡತಿ ಕಾಚಿಗೌಡಿ)

ಮಗ

ಹೊನ್ನಮಾರಗೌಡ

ಹಿರಿಯ ಬೈಚ | ಚಿಕ್ಕ ಬೈಚ

ಮರುಗಳ ನಾಡ ಪಟ್ಟಿ (ಶಾಸನದಲ್ಲಿ ಬರುವ ಪಟ್ಟಿ)

ಆನೆ ಬಿದ್ದನಾಡ ಸರಿ (ಶಾಸನಗಳ ಪಟ್ಟಿ) ಈ ಮೆಳೆಕೋಟೆ ಶಾಸನದಲ್ಲಿ ಹೊನ್ನಸಿಗೆರೆಯ ಹೊನ್ನಮಾರಗೌಡನ ಮಗ ಹಿರಿಯ ಬೈಚಗೌಡನಿಗೆ ಏಳುನಾಡ ನಾಥ ಎಂಬ ಬಿರುದು ಶಾಸನದಲ್ಲಿ ಉಲ್ಲೇಖಗೊಂಡಿದೆಯೇ ಹೊರತು, ಶಾಸನದಲ್ಲಿ ಆ ಏಳು ನಾಡುಗಳ ಉಲ್ಲೇಖವಿರುವುದಿಲ್ಲ. ಆನೆಬಿದ್ದ ಸರಿಯ ಸುತ್ತ ಇರುವ ನಾಡುಗಳೆಂದರೆ

೧. ಮರುಗಳನಾಡು (ತುಮಕೂರು ಶಾಸನ ಸಂಖ್ಯೆ ೯೫, ಕಾಲ ೮ ನೇ ಶತಮಾನ, ಶ್ರೀಪುರುಷನ ಕಾಲ)

೨. ಕೆಸಮಣ್ಣುನಾಡು (ತುಮಕೂರು ೧೦೫, ಹಿರೇಗುಂಡಗಲ್, ಕಾಲ ಕ್ರಿ.ಶ. ೮ನೇ ಶತಮಾನ)

೩. ಆನೆಬಿದ್ದಸರಿನಾಡು (ತುಮಕೂರು ೪೧, ಕಾಲ ಕ್ರಿ.ಶ. ೧೨೬೯)

೪. ಕುಣಿಗಲ್ ನಾಡು (ಕುಣಿಗಲ್ ೧೧, ಕಾಮನಹಳ್ಳಿ ಕ್ರಿ.ಶ. ೧೦೬೦)

೫. ಕೋರ ಮರುಗಳನಾಡು (ತುಮಕೂರು ೧೧೪, ಕ್ರಿ.ಶ. ೧೨೨೩, ಹಿರೇಗುಂಡಗಲ್ಲು)

೬. ದೇವಗುಂದನಾಡು (ತುಮಕೂರು ೧೧೪, ಹಿರೇಗುಂಡಗಲ್ಲು, ಕ್ರಿ.ಶ. ೧೩೨೩)

೭. ಮಣ್ಣೆನಾಡು (ಇಂಡೆಕ್ಸ್)

೮. ಹೆರಿವೆ ೩೦೦ (ಗುಬ್ಬಿ ೫೬, ಪುರ ಗ್ರಾಮ, ಕ್ರಿ.ಶ. ೧೨೨೭)

೯. ನೀರ್ಗುಂದ ನಾಡು (ಎ.ಕ. ಪರಿಷ್ಕತ, ಹಾಸನ ಜಿಲ್ಲೆ, ಸಂ.೧೦, ಅರಸೀಕೆರೆ ೧೯೧, ಕ್ರಿ.ಶ. ೧೨೧೮)

೧೦. ದಾಸೇನಹಳ್ಳಿ ನಾಡು (ಮಾಗಡಿ ತಾಲ್ಲೂಕು)

೧೧. ಹುಳಿದೇವನಹಳ್ಳಿ ನಾಡು (ಮಾಗಡಿ ತಾಲ್ಲೂಕು)

೧೨. ಹೊನ್ನುಡಿಕೆ ೭೦ (ಕಲ್ಪಸಿರಿ ೩೦೬, ಕಾಲ ೭ ನೇ ಶತಮಾನ)

ಮರುಗಲ ನಾಡಿನ ಸುತ್ತಮುತ್ತ ೧೨ ನಾಡುಗಳು ಇವೆ. ಈ ೧೨ ನಾಡುಗಳಲ್ಲಿ ೭ ನಾಡಿಗೆ ಅಧಿಪತಿಯಾಗಿರುತ್ತಾನೆ. ಆದರೆ ಮರುಗಳ ನಾಡಿನ ಆಡಳಿತ ಕೇಂದ್ರ ಯಾವುದು ಎಂದು ಶಾಸನದಲ್ಲಿ ಉಲ್ಲೇಖವಿರುವುದಿಲ್ಲ.

ಅಡಿಟಿಪ್ಪಣಿಗಳು

೧. ರೈಸ್ ಬಿ.ಎಲ್., ೧೯೦೪, ಎಪಿಗ್ರಾಫಿಯಾ ಕರ್ನಾಟಿಕ, ಸಂ. ೧೨, ತುಮಕೂರು ೬೮.

೨. ಅದೇ, ತುಮಕೂರು ೮೪.

೩. ಅದೇ, ೯೨.

೪. ಅದೇ, ೯೩.

೫. ಎಪಿಗ್ರಾಫಿಯಾ ಕರ್ನಾಟಿಕ, ಪರಿಷ್ಕೃತ ಸಂ. ೮, ಹೊಳೆನರಸೀಪುರ ೧೧೯.

೬ ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂ. ೯, ನೆಲಮಂಗಲ ೬೭.

೭. ರೈಸ್ ಬಿ.ಎಲ್., ಅದೇ, ತುಮಕೂರು ೮೦.

♦♦

ಕುಮಾರಸ್ವಾಮಿ ತಾ.ನಂ.

ಚೋಳರ ನೆಲೆವೀಡಾದ 'ವಿಕ್ರಮ ಚೋಳಪುರಂ'ನ ಹುಡುಕಾಟ

ಹತ್ತನೆಯ ಶತಮಾನದ ಕೊನೆಯ ದಶಕದ ವೇಳೆಗೆ ಕರ್ನಾಟಕದ ಮೇಲೆ ಚೋಳರ ಆಕ್ರಮಣಗಳು ಹೆಚ್ಚಾದವು. ಆಗ ಕರ್ನಾಟಕದ ದಕ್ಷಿಣದಲ್ಲಿ ಗಂಗ, ಬಾಣ, ನೊಳಂಬ, ವೈದುಂಬರೇ ಮೊದಲಾದ ಸ್ಥಳೀಯ ಅರಸುಮನೆತನಗಳವರು, ರಾಷ್ಟ್ರಕೂಟರಂತಹ ಪ್ರಬಲ ಸಾಮ್ರಾಟರ ಆಶ್ರಯದಲ್ಲಿದ್ದರು. ಕ್ರಿ.ಶ. ಸು. ೯೪೩ರಲ್ಲಿ ತಕ್ಕೋಳದಲ್ಲಿ ಚೋಳರ ವಿರುದ್ಧ ಏರ್ಪಟ್ಟ ಭೀಕರ ಕಾಳಗದಲ್ಲಿ ರಾಷ್ಟ್ರಕೂಟರ ಪರವಾಗಿ ಗಂಗರಾಜ ಬೂತುಗ, ಅವನ ಅಂಕಕಾರ ಮಣಲೇರರ ನೆರವಿನಿಂದ ಚೋಳ ರಾಜಕುಮಾರನಾದ ರಾಜಾದಿತ್ಯನನ್ನು ಕೊಂದು ರಾಷ್ಟ್ರಕೂಟರು ವಿಜಯಶಾಲಿಗಳಾದರು. ಆಗ ಕರ್ನಾಟಕದ ಮೇಲಷ್ಟೆ ಅಲ್ಲದೆ ಮೂಲತಃ ಪಲ್ಲವರ ನೆಲೆಯಾದ ತೊಂಡೆಮಂಡಲದ ಮೇಲೂ ರಾಷ್ಟ್ರಕೂಟರು ತಮ್ಮ ಆಡಳಿತವನ್ನು ದೃಢವಾಗಿ ನೆಲೆಯೂರಿಸಿದ್ದ ಕಾರಣ ಮುಂದೆ ಸುಮಾರು ೨೪ ವರ್ಷಗಳ ಕಾಲ ಚೋಳರು ಕರ್ನಾಟಕದ ಕಡೆ ಕಣ್ಣಾಯಿಸಲು ಅವಕಾಶವಿಲ್ಲವಾಗಿತ್ತು. ಆದರೆ 'ಕಚ್ಚಿಯಂ ತಂಜೆಯುಂ ಕೊಂಡ ಶ್ರೀಕನ್ನರದೇವ'ನಾದ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನು ಕ್ರಿ.ಶ. ೯೬೭ರಲ್ಲಿ ಮರಣಿಸಿದ ಅನಂತರ ಅವರ ಅಧೀನರಾಗಿ ಈ ಪ್ರದೇಶಗಳ ಮೇಲೆ ತಮ್ಮ ಆಡಳಿತವನ್ನು ನಡೆಸುತ್ತಿದ್ದ ಗಂಗ, ಬಾಣ, ವೈದುಂಬ, ನೊಳಂಬ ಮೊದಲಾದ ಸ್ಥಳೀಯ ಅರಸರು ತಮ್ಮ ತಮ್ಮಲ್ಲೇ ಪರಸ್ಪರ ಕಾದಾಟಗಳಲ್ಲಿ ತೊಡಗಿದ್ದರು. ಉತ್ತರದಲ್ಲಿ ಕಲ್ಯಾಣದ ಚಾಲುಕ್ಯರು ಪ್ರಬಲವಾಗ ತೊಡಗಿದ್ದರು, ಅಂತಹ ಸಂಕ್ರಮಣ ಸಂದರ್ಭದಲ್ಲಿ, ಅಂದರೆ ಕ್ರಿಸ್ತಶಕ ಸುಮಾರು ೯೯೦ರ ವೇಳೆಗೆ, ಚೋಳರು ಮತ್ತೆ ಪ್ರಬಲರಾಗಿ, ಕ್ರಮವಾಗಿ ಕರ್ನಾಟಕದ ಭೂಪ್ರದೇಶಗಳ ಮೇಲೆ ಆಕ್ರಮಣ ನಡೆಸಿ, ೧೦೦೪ರ ವೇಳೆಗೆ ಗಂಗರ ರಾಜಧಾನಿಯಾದ ತಲಕಾಡನ್ನು ತಮ್ಮ ವಶಕ್ಕೆ ಪಡೆದು ಕೊಳ್ಳುವುದರೊಂದಿಗೆ ದಕ್ಷಿಣ ಕರ್ನಾಟಕದ ಬಹುಭಾಗವನ್ನು ತಮ್ಮ ಆಡಳಿತದ ತೆಕ್ಕೆಗೆ ಸೇರಿಸಿಕೊಂಡು ಬಿಟ್ಟರು.

ಹೀಗೆ ಕರ್ನಾಟಕದ ಮೇಲೆ ತಮ್ಮ ಆಡಳಿತವನ್ನು ಆರಂಭಿಸಿದ ಚೋಳರು ತಮ್ಮ ಆಳ್ವಿಕೆಗೆ ಸೇರಿದ ಪ್ರದೇಶದ ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ವಿಜಯಸ್ಕಂದವಾರಗಳು ಅಂದರೆ ಸ್ಥಳೀಯ ರಾಜಧಾನಿ ಅಥವಾ ಸೈನಿಕ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದರು. ಅಂತಹ ಒಂದು ಸ್ಥಳೀಯ ನೆಲೆವೀಡು ಅರ್ಥಾತ್ ಸೈನಿಕ ನೆಲೆಯೇ 'ವಿಕ್ರಮಚೋಳಪುರಂ' ಆಗಿದೆ.

ಸಂಸ್ಥಾಪಕ ಕಾರ್ಯದರ್ಶಿ
ವಿಧಾತ್ ವಿದ್ಯಾಸಂಸ್ಥೆಗಳು
ಆನೇಕಲ್-೫೬೨೧೦೬
ಬೆಂಗಳೂರು ದಕ್ಷಿಣ ಜಿಲ್ಲೆ
ಮೊ: ೮೧೦೫೧ ೦೩೮೬೨

ಸಾಮಾನ್ಯವಾಗಿ ಚೋಳರು ತಮ್ಮ ಆಳ್ವಿಕೆಯ ಪೂರ್ವದಲ್ಲಿನ ಅಂದರೆ, ಗಂಗರ ಕಾಲದಲ್ಲಿನ ಕುವಳಾಲ > ಕೋಲಾರ, ತಲಕಾಡು > ರಾಜರಾಜಪುರಂ, ಮಣ್ಣೆ (ಗಂಗ ಶ್ರೀಪುರುಷ ಹಾಗೂ ಮುಂದೆ ರಾಷ್ಟ್ರಕೂಟರ ನೆಲೆವೀಡು ಹಾಗೂ ಚೋಳರಾಜೇಂದ್ರನ ಕಾಲದ ಸೇನೆಯ ಕವಾಯತು ನೆಲೆ, ನೆಲಮಂಗಲ ತಾ॥) ಕುಣಿಂಗಿಲ್ > ರಾಜೇಂದ್ರಚೋಳಪುರಂ, (ತುಮಕೂರು ಜಿ॥) ಗಳನ್ನು ಮುಖ್ಯ ಆಡಳಿತ ಕೇಂದ್ರಗಳನ್ನಾಗಿ ಮಾಡಿಕೊಂಡರು. ಇಂತಹ ಆಯಕಟ್ಟಿನ ಸ್ಥಳಗಳನ್ನೇ ಅವರು ತಮ್ಮ ಅಗತ್ಯಕ್ಕೆ ತಕ್ಕಹಾಗೆ, ಸೂಕ್ತವಾಗಿ ಮಾರ್ಪಡಿಸಿ, ಅಭಿವೃದ್ಧಿಪಡಿಸಿಕೊಂಡು ಮುಂದುವರಿಸಿರುವುದು ಕಂಡುಬರುತ್ತದೆ.

ಇದಲ್ಲದೆ, ಕರ್ನಾಟಕದಲ್ಲಿ ಚೋಳರ ಆಳ್ವಿಕೆಯ ಕಾಲದಲ್ಲಿ ಮುಡಿಗೊಂಡಂ > ದೇಶಿಯ ಉಯ್ಯಕ್ಕೊಂಡ ಚೋಳಪಟ್ಟಣಂ; ಮಣಲೂರು > ನಿಗರಿಲಿಚೋಳಪುರಂ (ಚೆನ್ನಪಟ್ಟಣ ತಾ॥ ಮಳೂರುಪಟ್ಟಣ); ಮಾಲವ್ವಿ (ಮಾಲಂಬಿ) [ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ]; ಮುಳಬಾಗಿಲು (ಕೋಲಾರ ಜಿಲ್ಲೆ)ಗಳು ಪ್ರಾಯಃ ಚೋಳರ ಆಳ್ವಿಕೆಯ ಕಾಲದಲ್ಲೇ ಹುಟ್ಟಿಕೊಂಡ ಅಥವಾ ಮುನ್ನೆಲೆಗೆ ಬಂದ ಕೆಲವು ಸ್ಥಳೀಯ ನೆಲೆವೀಡುಗಳಾಗಿದ್ದವು.

ಆದರೆ ಕೈವಾರನಾಡಿನ 'ವಿಕ್ರಮಚೋಳಪುರಂ' ಎಂಬುದು ಮಾತ್ರ, ಚೋಳರೇ ಹೊಸದಾಗಿ ನಿರ್ಮಿಸಿಕೊಂಡ ಸ್ಥಳೀಯ ರಾಜಧಾನಿ ಆಗಿದ್ದಿತ್ತಾದರೂ ಅದರ ನೆಲೆಯನ್ನು ಮಾತ್ರ ನಿರ್ದಿಷ್ಟವಾಗಿ ಗುರುತಿಸಲು ಈವರೆಗೂ ಯಾರೂ ಪ್ರಯತ್ನಿಸಿರುವುದು, ನಮ್ಮ ಗಮನಕ್ಕೆ ಬಂದಿಲ್ಲ. ಹಾಗಾಗಿ, ಪ್ರಸ್ತುತ ಅದರ ಶೋಧನೆಯೇ ನಮ್ಮ ಈ ಸಂಪ್ರಬಂಧದ ಆಶಯ.

ಕೋಲಾರದ ಕೋಲಾರಮ್ಮನ ದೇವಾಲಯದ ಹೊರ ಭಿತ್ತಿಯಲ್ಲಿರುವ ಕ್ರಿ.ಶ. ೧೦೨೭ರ (ಎ.ಕ. ೧೦, ಕೋಲಾರ ೧೧೧) ಶಾಸನದಲ್ಲಿ ಶ್ರೀ ರಾಜೇಂದ್ರಚೋಳದೇವರ್ ತನ್ನ ಆಳ್ವಿಕೆಯ ೧೬ನೆಯ ವರ್ಷದ ೨೪೦ನೆಯ ದಿನದಂದು, "ನಿಗರಿಲಿ ಚೋಳಮಂಡಲತ್ತು ಕೈವಾರನಾಟ್ಟು ವಿಕ್ಕಿರಮಚೋಳಪುರತ್ತು" ಎಂಬಲ್ಲಿ, ಮೊದಲಿಗೆ ವಿಕ್ರಮ ಚೋಳಪುರಂ ಎಂಬ ಉಲ್ಲೇಖ ಬಂದಿದ್ದು, ಈ ಸ್ಥಳೀಯ ನೆಲೆವೀಡಿನ ಅರಮನೆಯ ಪ್ರಾಂಗಣದಲ್ಲಿ ರಾಜೇಂದ್ರಚೋಳನು ಆಸೀನನಾಗಿ ಕೋಲಾರದ ಪಿಡಾರಿಯರ್ (ಕೋಲಾರಮ್ಮ) ದೇವತೆಗೆ ಕುವಳಾಲನಾಡಿನ ಪಿರಗಂಪಳ್ಳಿ ಎಂಬ ಗ್ರಾಮವೊಂದನ್ನು ದತ್ತಿನೀಡಲು ಆಜ್ಞಾಪಿಸಿರುವುದು ಕಂಡುಬರುತ್ತದೆ. ಈ ಪಿರಗಂಪಳ್ಳಿಯನ್ನು ಸದ್ಯಕ್ಕೆ ಗುರುತಿಸಲು ಸಾಧ್ಯವಾಗಿಲ್ಲ. ಪ್ರಾಯಶಃ ಅದು ಬೇಚರಾಕ್ ಆಗಿರಬಹುದು.

ಇದೇ ರೀತಿ ಸಾಮ್ರಾಟ ಅಥವಾ ಅವನಿಂದ ಅಧಿಕೃತರಾದ ಅಧಿಕಾರಿಗಳು ಬೇರೆ ಬೇರೆ ನೆಲೆವೀಡುಗಳಲ್ಲಿದ್ದುಕೊಂಡು ದಾನ ದತ್ತಿಗಳನ್ನು ನೀಡಿರುವುದನ್ನು ಕಾಣಬಹುದು. ಉದಾ: ಕೋಲಾರ ೧೦೬ ಎ ಶಾಸನದ ಪ್ರಕಾರ; ಶೋಳಮಂಡಲಂನ ಉಯ್ಯಕ್ಕೊಣ್ಡಾರ್ ವಳನಾಡಿನ ತಿರ್ರೈಮೂರ್-ನಾಡಿನ ಶಾತ್ತಮಂಗಲಂನಲ್ಲಿ ತಂಗಿದ್ದಾಗ ಅರೈಯನ್ ರಾಜರಾಜನ್ ಎಂಬುವ ವಿಕ್ಕಿರಮ ಶೋಳ-ಚ್ಚೋಳಿಯವರೈಯನ್ ಎಂಬುವ ಉನ್ನತ ಅಧಿಕಾರಿಯು, ನೊಳಂಬವಾಡಿ ಎನಿಸಿದ್ದ ನಿಗರಿಲಿ ಚೋಳಮಂಡಲದ ಕುವಳಾಲನಾಡಿನ ಕುವಳಾಲದಲ್ಲಿರುವ ಪಿಡಾರಿಯಾರ್ ದೇವತೆಗೆ, ನಂದಾದೀಪಗಳ ನಿರ್ವಹಣೆಗಾಗಿ ಉತ್ತಮ ದರ್ಜೆಯ ೫೫ ಎಮ್ಮೆಗಳನ್ನು ಪೂಜಾರಿಗಳಾದ ಶೊರ್ನಪುಳಯನ್ ಮತ್ತು ವಿನಕ್ಕಾಲನ್ ಎಂಬುವ ಕೌಶಿಕಗೋತ್ರದ ಶಿವಬ್ರಾಹ್ಮಣರ ವಶಕ್ಕೆ ನೀಡಿರುವುದನ್ನು ಕಾಣಬಹುದು.

ಕೋಲಾರಕ್ಕೆ ವಿಕ್ರಮಚೋಳಪುರ ಎಂದು ಹೆಸರಿದ್ದಿತೆಂದು ಕೆಲವರು ಹೇಳಿರುವುದುಂಟು. ಆದರೆ ಇದಕ್ಕೆ ಖಚಿತ ಆಧಾರಗಳೇ ಇಲ್ಲ. ಆದರೆ ಮೇಲೆ ಉಲ್ಲೇಖಿತ ಕ್ರಿ.ಶ. ೧೦೨೭ರ ಶಾಸನದಲ್ಲಿ, ವಿಕ್ರಮಚೋಳಪುರವು ಕೈವಾರನಾಡಿನ ಸ್ಥಳವೆಂದು ಖಚಿತವಾಗಿ ಉಲ್ಲೇಖಿಸಲಾಗಿದೆ. ಹಾಗಾಗಿ ಈ ವಿಕ್ರಮಚೋಳಪುರವನ್ನು ಪ್ರಾಚೀನ ಕೈವಾರನಾಡಿನ ವ್ಯಾಪ್ತಿಯಲ್ಲೇ ಶೋಧಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಇತರ ದಾಖಲೆಗಳನ್ನು ಶೋಧಿಸಿದಾಗ ವಿಕ್ರಮಚೋಳಪುರ ಎಂಬ ಹೆಸರಿನ ಯಾವುದೇ ಸ್ಥಳ ಕೈವಾರನಾಡಿನ ವ್ಯಾಪ್ತಿಯಲ್ಲಿ ಕಂಡುಬರಲಿಲ್ಲ, ಆದರೆ ಕೈವಾರನಾಡಿನ ವ್ಯಾಪ್ತಿಯಲ್ಲೇ ಕೈವಾರದ ದಕ್ಷಿಣಕ್ಕೆ ಮದ್ದೇರಿ ಸಮೀಪದಲ್ಲಿ ಚೋಳಘಟ್ಟ ಎಂಬ ಹೆಸರಿನ ಗ್ರಾಮವಿರುವುದು ಗೊತ್ತಾಯಿತು. ಅದೇ ವಿಕ್ರಮಚೋಳಪುರದ ನೆಲೆಯಾಗಿರಬಹುದೇ? ಅಲ್ಲಿ ಏನಾದರೂ ತತ್ಸಂಬಂಧಿ ಪ್ರಾಚ್ಯ ಅವಶೇಷಗಳು ದೊರೆಯಬಹುದೇನೋ ಎಂಬ ಆಶಯದೊಂದಿಗೆ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಕೋಲಾರದ ಉತ್ತರಕ್ಕೆ ವೇಮಗಲ್, ಸೀತಿ ಬೆಟ್ಟಗಳ ಉತ್ತರಕ್ಕೆ ಕೆಲವೇ ಕಿಲೋಮೀಟರುಗಳ ಅಂತರದಲ್ಲಿರುವ ಚೋಳಘಟ್ಟ ಪ್ರದೇಶದಲ್ಲಿ ಯಾವುದೇ ಗಮನಾರ್ಹವಾದ ಕುರುಹುಗಳು




ಬಯಲಿನಲ್ಲಿರುವ ಒಂಟಿ ಶಿವಲಿಂಗ



ತೋಟದಲ್ಲಿರುವ ಚೌಡೇಶ್ವರೀ ಅಮ್ಮನವರ ಗುಡಿ

ಈಗ ಉಳಿದಿಲ್ಲವೆಂದು ಹೇಳಬಹುದು. ಆ ಊರಿನಲ್ಲಿರುವ ಚಂದ್ರಮೌಳೇಶ್ವರ ದೇವಾಲಯವು ಬಹುಮಟ್ಟಿಗೆ ವಿಜಯನಗರೋತ್ತರ ಕಾಲದ ರಚನೆಯಂತೆ ತೋರುತ್ತದೆ. ಇನ್ನೂ ಒಂದೆರಡು ಆಧುನಿಕ ದೇವಾಲಗಳೇನೋ ಆ ಊರಿನಲ್ಲಿವೆ.

ಇಂತಹ ನೆಲೆವೀಡುಗಳೇ ಏಕೆ? ಎಷ್ಟೋ ದೊಡ್ಡ ದೊಡ್ಡ ಸಾಮ್ರಾಜ್ಯಗಳ ರಾಜಧಾನಿಗಳಲ್ಲೇ, ಯಾವುದೇ ಗಮನಾರ್ಹ ಪಳೆಯುಳಿಕೆಗಳು ಉಳಿಯದೆ ಈಗ ಅವು ಕೇವಲ ಕುಗ್ರಾಮಗಳಾಗಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಅಲ್ಲಿನ ಭೌಗೋಳಿಕ ಪರಿಸರದ ಅವಲೋಕನ ಅಗತ್ಯವಾಯಿತು.



ಚೋಳಗುಡ್ಡವನ್ನು ತೋರಿಸುವ ಕೈವಾರ ನಾಡಿನ ನಕ್ಷೆ

ಚೋಳಘಟ್ಟ ಊರಿನ ಪರಿಸರ, ನಿಜಕ್ಕೂ ಫಲವತ್ತಾದ ಪ್ರದೇಶವಾಗಿರುವುದು ಮನವರಿಕೆ ಆಗುತ್ತದೆ. ಆ ಊರಿನ ದಕ್ಷಿಣಕ್ಕೆ ಸುಮಾರು ಅರ್ಧ ಕಿಲೋಮೀಟರ್ ಅಂತರದಲ್ಲಿರುವ ತೋಟವೊಂದರಲ್ಲಿ ಚೌಡೇಶ್ವರೀ ಅಮ್ಮನವರ ಚಿಕ್ಕಚೊಕ್ಕ ಇತ್ತೀಚಿನ ಗುಡಿಯೊಂದು ಇದೆ. ಆ ಗುಡಿಯ ಉತ್ತರಕ್ಕೆ ಬಯಲಿನಲ್ಲಿ ಒಂದು ಒಂಟಿ ಶಿವಲಿಂಗ ಹಾಗೂ ಚಿಕ್ಕ ನಂದಿ ಶಿಲ್ಪಗಳಿವೆ. ಅವು ಸಾಕಷ್ಟು ಪ್ರಾಚೀನವಾದುವು ಎಂದು ಹೇಳಬಹುದು. ಊರಿನ (ದಕ್ಷಿಣ, ನೈರುತ್ಯ ಮತ್ತು ಉತ್ತರದಲ್ಲಿ) ಸುತ್ತಮುತ್ತಲೂ ತುಸು ದೂರದಲ್ಲಿ ಅನೇಕ ಗುಡ್ಡಗಳಿವೆ. ಅಲ್ಲದೆ ಪಾಲಾರ್ ಮತ್ತು ಕ್ಷೀರನದಿಗಳ ದಂಡೆಯ ಬಯಲಿನ ಮೇಲೆ ಈ ಗ್ರಾಮ ನೆಲೆಗೊಂಡಿದ್ದು, ಗ್ರಾಮದ ಪೂರ್ವಕ್ಕೆ ದೊಡ್ಡ ಕೆರೆ ಇದೆ. ವಿಶಾಲವಾದ ಮಟ್ಟಸವಾದ ಬಯಲು ಪ್ರದೇಶ ಹಾಗೂ ಸದಾ ಲಭ್ಯವಾಗುವ ನೀರಿನ ಸೌಕರ್ಯ ಇವು ಯಾವುದೇ ರಾಜ್ಯವೊಂದರ ರಕ್ಷಣಾ ವ್ಯವಸ್ಥೆಯ ಭಾಗವಾಗಿ ಸೇನೆಯನ್ನು ಸಂಘಟಿಸಿ, ಅವುಗಳ ಅಶನ ವಸನಗಳಿಗೆ ಹಾಗೂ ತರಬೇತಿಗೆ ಸೂಕ್ತವಾದ ಸೇನಾ ಠಾಣೆಗೆ ಬಹು ಯೋಗ್ಯವಾದ ಪ್ರದೇಶ ಇದಾಗಿದ್ದಿತೆಂದು ನಿಶ್ಚಯವಾಗಿ ಹೇಳಬಹುದಾಗಿದೆ. ಈ ಪ್ರದೇಶದ ಮೇಲ್ಮೈ ಮತ್ತು ಪರಿಸರವು ಸೈನ್ಯದ ಚಲನವಲನಕ್ಕೆ ಅನುಕೂಲಕರವಾದ ಸಂಚಾರ ಮಾರ್ಗಗಳಿಂದ ಕೂಡಿರುವುದು ಮನವರಿಕೆ ಆಗುತ್ತದೆ. ಹಾಗಾಗಿ ಪ್ರಸ್ತುತ ಚೋಳಘಟ್ಟವೇ ಶಾಸನೋಕ್ತ 'ವಿಕ್ರಮಚೋಳಪುರಂ' ಆಗಿರಬಹುದೆಂದು ತೋರುತ್ತದೆ.

ಹಾಗೆಯೇ, ಚೋಳರು ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ, ತಮ್ಮ ಸೈನಿಕಾಚರಣೆಗಳಿಗೆ ಅಗತ್ಯವಿದ್ದ ಆರ್ಥಿಕ ಬಲವನ್ನು ಬಹಳ ವ್ಯವಸ್ಥಿತವಾಗಿ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರಗಳ ಮೂಲಕ ಅಭಿವೃದ್ಧಿಪಡಿಸಿಕೊಳ್ಳುವ ಸಲುವಾಗಿ ಕೆರೆ, ತೂಬು, ಕಾಲುವೆಗಳ ವಿಪುಲ ರಚನೆ, ವ್ಯಾಪಾರಿಗಳಿಗಾಗಿ ಎಜಿವೀರಪಟ್ಟಣಗಳ ರಚನೆ (ಇದು ಕರ್ನಾಟಕದ ಬಣಂಜುಪಟ್ಟಣಗಳಂತೆ ವರ್ತಕ ಸ್ನೇಹಿ ತಾಣಗಳು). ನಿಯಮಿತವಾಗಿ ತೆರಿಗೆಗಳ ಸಂಗ್ರಹಕ್ಕೆ 'ಪುರವು-ವರಿ'ಗಳೆಂಬ ಅಧಿಕಾರಿಗಳ ನೇಮಕ ಇತ್ಯಾದಿ ಸಂಗತಿಗಳ ಬಗ್ಗೆ ಹೆಚ್ಚು ಗಮನವೀಯುವುದು ಅವರ ಸಾಮಾನ್ಯ ಕ್ರಮ ಮತ್ತು ವಿಶಿಷ್ಟ ಪ್ರವೃತ್ತಿಯಾಗಿರುತ್ತದೆ. ಅದನ್ನು ಅವರು ಕ್ರಮಬದ್ಧವಾಗಿ ರೂಢಿಸಿಕೊಂಡಿರುವ ಅಂಶ ಎಂಬುದನ್ನು ಅವರ ಶಾಸನಗಳ ಅಧ್ಯಯನದಿಂದ ನಾನು ಮನಗಂಡಿರುತ್ತೇನೆ.

---

* ಕ್ಷೇತ್ರಕಾರ್ಯ ಕೈಗೊಳ್ಳಲು ನೆರವಿಗೆ ಬಂದ ನನ್ನ ಮೊಮ್ಮಗ ಚಿ. ವಿಖ್ಯಾತ್, ಸಹಕರಿಸಿದ ವಿದ್ವಾಂಸರಾದ ಟಿ.ವಿ. ನಾಗರಾಜ, ಪಿ.ವಿ. ಕೃಷ್ಣಮೂರ್ತಿ ಹಾಗೂ ಶಂಕರ್ ಅವರಿಗೆ ನನ್ನ ಹಾರ್ದಿಕ ಧನ್ಯವಾದಗಳು.

ಆಕರಗ್ರಂಥಗಳು

೧. ಈ ಯುದ್ಧ ಕ್ರಿ.ಶ. ೯೪೩ಕ್ಕೂ ತುಸು ಹಿಂದೆ ನಡೆದಿರಬೇಕೆಂಬುದಕ್ಕೆ ಸಾಕಷ್ಟು ಪುರಾವೆಗಳು ಈಗ ಲಭ್ಯವಿವೆ. ಈ ಹಿಂದೆ ಇದನ್ನು ಕ್ರಿ.ಶ. ೯೫೦ರ ಆತಕೂರು ನಾಯಿಯ ಸ್ಮಾರಕ ಶಾಸನದ ಹಿನ್ನೆಲೆಯಲ್ಲಿ ೯೫೦ ಎಂದು ತಪ್ಪಾಗಿ ಗ್ರಹಿಸಿರುವಂತೆ ತೋರುತ್ತದೆ.

೨. ಈ ತಕ್ಕೋಲಂ ಕಾಳೆಗದ ನಂತರ ಅಂದರೆ ಕ್ರಿ.ಶ. ೯೪೩ ರಿಂದ ೯೬೭ರ ಅವಧಿಗೆ ಸೇರಿದ ರಾಷ್ಟ್ರಕೂಟರ ಸುಮಾರು ೧೦೬ ಶಾಸನಗಳು ತೊಂಡೇಮಂಡಲ ಪ್ರದೇಶದಲ್ಲಿ ಅವಿರತವಾಗಿ ದೊರೆತಿರುವುದನ್ನು ನಾವು ಗಮನಿಸಬಹುದಾಗಿದೆ. (ಡಾ. ಸ್ವಾಮಿನಾಥನ್., ರಾಷ್ಟ್ರಕೂಟರ ತಮಿಳು ಶಾಸನಗಳು, {Rashtrakuta Inscriptions in the Tamil Country} -(ಸಂ) ಎಸ್. ಸ್ವಾಮಿನಾಥನ್, ಕ.ವಿ.ವಿ. ಹಂಪಿ, ೨೦೦೦).

೩. ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂ. ೯, ಬೆಂಗಳೂರು.

೪. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೭, (ಎಂ. ಶೇಷಾದ್ರಿ); ಕೋಲಾರ ಜಿಲ್ಲೆ ಸಪ್ಲಿಮೆಂಟರಿ, ಮೈಸೂರು, ೧೯೬೫.

೫. ಮೈಸೂರು ಪುರಾತತ್ತ್ವ ವಾರ್ಷಿಕ ವರದಿಗಳು (೧೯೦೫-೧೯೫೬).

೬ ದಿನಾಂಕ ೧೦ನೇ ಫೆಬ್ರವರಿ ೨೦೨೨ರಂದು, ಪ್ರೊ. ಟಿ.ವಿ. ನಾಗರಾಜ ಮತ್ತು ಡಾ. ಪಿ.ವಿ. ಕೃಷ್ಣಮೂರ್ತಿ ಅವರೊಂದಿಗೆ ಕೈಗೊಂಡ ಕ್ಷೇತ್ರಕಾರ್ಯ.

◆◆

ಸುಜಾತ ಎಸ್. ನೆಟೇಕಲ್

ಕೋಠಾ ಗ್ರಾಮದ ಅವಶೇಷಗಳು

ಕೋಠಾ ಗ್ರಾಮವು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಒಂದು ಚಿಕ್ಕ ಗ್ರಾಮವಾಗಿದೆ. ಇದು ಲಿಂಗಸೂರು ಪಟ್ಟಣದಿಂದ ಈಶಾನ್ಯಕ್ಕೆ ೨೭ ಕಿಲೋಮೀಟರ್ ದೂರದಲ್ಲಿದ್ದು ಈ ಒಂದು ಚಿಕ್ಕ ಗ್ರಾಮ ಐತಿಹಾಸಿಕವಾಗಿ ಮಹತ್ವ ಪಡೆದಿದೆ ಇಲ್ಲಿನ ಗ್ರಾಮದಲ್ಲಿ ಕೆಲವು ದೇವಾಲಯಗಳು ಅನೇಕ ಶಿಲ್ಪಗಳು ಶಾಸನಗಳು, ಬಾವಿಗಳು ಹಾಗೂ ಗ್ರಾಮದ ಸುರಕ್ಷತೆಗಾಗಿ ಕಾರ್ಯನಿರ್ವಹಿಸಿದಂತಹ ಒಂದು ಚಿಕ್ಕ ಕೋಟೆ ಇಲ್ಲಿದೆ.

ಐತಿಹಾಸಿಕ ಹಿನ್ನೆಲೆ

ಕೋಠಾ ಗ್ರಾಮದ ಉತ್ತರಕ್ಕೆ ಒಂದು ಕಿ.ಮೀ. ದೂರದಲ್ಲಿರುವ ರಾಮಲಿಂಗ ದೇವಾಲಯದ ಬಳಿ ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಹನ್ನೊಂದು–ಹನ್ನೆರಡನೇ ಶತಮಾನಗಳ ಒಂದು ತ್ರುಟಿತ ಶಾಸನವಿದೆ.[೧] ಗ್ರಾಮದಲ್ಲಿ ವಿಜಯನಗರ ಅರಸ ಸದಾಶಿವರಾಯನ ಮೂರು ಶಾಸನಗಳಿವೆ. ಕ್ರಿ.ಶ. ೧೫೫೮ರ ಶಾಸನದಲ್ಲಿ ಇದನ್ನು ಕೋಟೆ ಸೀಮೆ ಎಂದು ಉಲ್ಲೇಖಿಸಿದೆ. ಕೋಟೆ ಸೀಮೆಯಲ್ಲಿ ೩೫ ಗ್ರಾಮಗಳಿದ್ದವು.[೨] ಇದನ್ನು ಮೇಧಾವೀರಾಯನ ಕೋಟೆ ಎಂದು ಸಹ ಶಾಸನದಲ್ಲಿ ಉಲ್ಲೇಖಿಸಿದೆ.[೩] ಈಗಲೂ ಇದನ್ನು ಮದ್ದರಾಯನ ಕೋಟೆ ಎಂದು ಕರೆಯುತ್ತಾರೆ.[೪]

ಕೋಟೆ

ಇಲ್ಲಿಯ ಕೋಟೆ ಆಯತಾಕಾರದಲ್ಲಿದೆ. ಆದರೆ ಉತ್ತರ ಮತ್ತು ಪೂರ್ವ ಗೋಡೆಗಳು ಈಶಾನ್ಯ ದಿಕ್ಕಿನಲ್ಲಿ ಒಳಗೆ ಸುರಿದು, ಪೂರ್ವ ಗೋಡೆ ಪಶ್ಚಿಮಕ್ಕೆ ಮತ್ತು ಉತ್ತರ ಗೋಡೆ ದಕ್ಷಿಣಕ್ಕೆ ತಿರುಗಿ ಮುಂದೆ ಹೋಗಿ, ಒಂದನ್ನೊಂದು ಸೇರುವುದರಿಂದ ಆಯತಾಕಾರದ ನಾಲ್ಕು ಮೂಲೆಗಳ ಬದಲಾಗಿ ಐದು ಮೂಲೆಗಳಾಗಿವೆ. ಕೋಟೆ ಗೋಡೆಯನ್ನು ದಪ್ಪ ಚೌಕಾಕಾರದ ಕಲ್ಲುಗಳಿಂದ ಕಟ್ಟಿದೆ. ಇದನ್ನು ನಂತರ ಕಾಲದಲ್ಲಿ ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ದುರಸ್ತಿ ಮಾಡಿದೆ. ಮೊದಲು ಕಟ್ಟಿದ ಭಾಗದಲ್ಲಿ ಚೌಕಾಕಾರದ ಕೊತ್ತಳಗಳು ಮತ್ತು ನಂತರ ದುರಸ್ತಿಯಾದ ಭಾಗದಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ಕೆಲವು ಕಡೆ ಕೋಟೆ ಬಿದ್ದು ಹೋಗಿ ಮಣ್ಣಿನ ದಿಬ್ಬ ಮಾತ್ರ ಉಳಿದಿದೆ. ಹದಿನಾರನೇ ಶತಮಾನದ ಕೋಟೆಯನ್ನು ಹದಿನೇಳು–ಹದಿನೆಂಟನೇ ಶತಮಾನಗಳಲ್ಲಿ ದುರಸ್ತಿ ಮಾಡಿದೆ.

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ವಿಸಿಬಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಲಿಂಗಸುಗೂರು
ರಾಯಚೂರು ಜಿಲ್ಲೆ
ಮೊ: ೯೦೩೩೧ ೬೬೫೫೨



ಬಾಗಿಲು, ಕೋತಾ



ಬಾವಿ, ಕೋತಾ

ಕೋಟೆಯ ಈಶಾನ್ಯ ಮೂಲೆಯಲ್ಲಿ, ಹಿಂದೆ ಸರಿದ ಭಾಗದಲ್ಲಿ, ಉತ್ತರಾಭಿಮುಖವಾದ ಬಾಗಿಲಿದೆ. ಪಶ್ಚಿಮ ಕೋಟೆಗೋಡೆ ಲಂಬಕೋನದಲ್ಲಿ ಪೂರ್ವಕ್ಕೆ ತಿರುಗಿ ಬಾಗಿಲ ಮುಂದೆ ಬಂದು ಲಂಬ ಕೋನದಲ್ಲಿ ತಿರುಗಿ ಮುಂದೆ ಹೋಗುವುದರಿಂದ ಬಾಗಿಲನ್ನು ಮರೆಮಾಡಿ ಸಂರಕ್ಷಿಸುತ್ತದೆ. ಬಾಗಿಲ ಪೂರ್ವಕ್ಕೆ ಆಯತಾಕಾರದ ದೊಡ್ಡ ಕೊತ್ತಳವಿದೆ. ಬಾಗಿಲಿಗೆ ಚೌಕಟ್ಟು ಮತ್ತು ಚಾವಣಿಯಿಲ್ಲ. ಪ್ರವೇಶದ ಪಕ್ಕದಲ್ಲಿ ಕಟ್ಟೆಗಳಿವೆ. ಪ್ರತಿ ಕಟ್ಟೆಯ ಅಧಿಷ್ಠಾನದ ಮೇಲೆ ಒಂದು ಗಜಲಕ್ಷ್ಮಿಯ ಶಿಲ್ಪವಿದೆ. ಬಾಗಿಲ ಒಳಗೆ ಹೋದಾಗ ಪ್ರವೇಶದ ಪಕ್ಕದ ಪೂರ್ವ ಗೋಡೆಯಲ್ಲಿ ಮತ್ತೊಂದು ಗಜಲಕ್ಷ್ಮಿಯ ಶಿಲ್ಪವಿದೆ. ಕೋಟೆಯ ಒಳಗೆ ಈಶಾನ್ಯ ದಿಕ್ಕಿನ ಒಂದು ಮೂಲೆಯ ಹತ್ತಿರ ಚೌಕಾಕಾರದ ಕೊತ್ತಳಕ್ಕೆ ಸೇರಿದಂತೆ ಈರಣ್ಣನ ಗುಡಿಯನ್ನು ಕಟ್ಟಿದೆ. ಈಶಾನ್ಯ ದಿಕ್ಕಿನ ಮತ್ತೊಂದು ಮೂಲೆಯಲ್ಲಿ ಮಸೀದಿಯಿದೆ. ಕೋಟೆಯ ಮಧ್ಯದಲ್ಲಿ ಬಾವಿ, ನಂದಿಕೇಶ್ವರ ಮತ್ತು ಬಸವೇಶ್ವರ ಗುಡಿಗಳು ಇವೆ. ಚೌಕಾಕಾರದ ಬಾವಿಯ ಉತ್ತರ ಭಾಗ ಶಿಥಿಲವಾಗಿದೆ. ದಕ್ಷಿಣ ಭಾಗದಲ್ಲಿ ಬಾವಿಯ ಅಗಲ ಹಂತಹಂತವಾಗಿ ಕಡಿಮೆಯಾಗುತ್ತದೆ. ಈ ಭಾಗದಲ್ಲಿ ಮೆಟ್ಟಿಲುಗಳಿವೆ. ಬಾವಿಯಲ್ಲಿ ಇಳಿಯಲು ಮೊದಲು ಪೂರ್ವ ಗೋಡೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ, ನಂತರ ಪೂರ್ವದಿಂದ ಪಶ್ಚಿಮಕ್ಕೆ, ಕೊನೆಗೆ ದಕ್ಷಿಣದಿಂದ ಉತ್ತರಕ್ಕೆ ಮೆಟ್ಟಿಲುಗಳಿವೆ. ಬಾವಿಯನ್ನು ಚೆನ್ನಾಗಿ ನಯ ಮಾಡಿದ ಉದ್ದವಾದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಪ್ರತಿಸಾಲು ಅದರ ಕೆಳಗಿನ ಸಾಲಿಗಿಂತ ಸ್ವಲ್ಪ ಹಿಂದೆ ಸರಿವಂತೆ ರಚಿಸಿದೆ. ಈ ಬಾವಿಯನ್ನು ಹನ್ನೊಂದು-ಹನ್ನೆರಡನೇ ಶತಮಾನಗಳಲ್ಲಿ ಕಟ್ಟಿಸಿದೆ. ನಂದಿಕೇಶ್ವರ ದೇವಾಲಯದ ಮುಂದೆ ಸಪ್ತಮಾತೃಕೆಯರ ಶಿಲ್ಪವಿದೆ. ಪೀಠದ ಮೇಲೆ ವಾಹನಗಳಿರುವ ಈ ಶಿಲ್ಪವು ಸಹ ಹನ್ನೊಂದು-ಹನ್ನೆರಡನೇ ಶತಮಾನಗಳದ್ದು.

ಕೋಟೆಯ ಹೊರಗೆ ಬಾಗಿಲಿನ ಹತ್ತಿರದ ರಸ್ತೆಯ ಬದಿಗಳಲ್ಲಿ ಒಂದು ದೊಡ್ಡ ಬಾಗಿಲು ಮತ್ತು ಬಸವಣ್ಣನ ದೇವಾಲಯ ಎದುರುಬದುರಾಗಿವೆ. ರಸ್ತೆಯ ಉತ್ತರಕ್ಕೆ ದಕ್ಷಿಣಾಭಿಮುಖವಾಗಿರುವ ದೊಡ್ಡ ಬಾಗಿಲು ಕೋಟೆಗಳ ಬಾಗಿಲಿನಂತೆ ದೊಡ್ಡದಾಗಿದೆ. ಚಿಕ್ಕ ಕಲ್ಲುಗಳು ಮತ್ತು ಗಾರೆಯಿಂದ ಮಾಡಲಾದ ಬಾಗಿಲು ಕಮಾನಿನಾಕಾರದಲ್ಲಿದೆ. ಕಮಾನಿನ ಪ್ರತಿ ಬದಿಯಲ್ಲಿ ಕೆಳಭಾಗದಲ್ಲಿ ಕಮಾನಿನಾಕಾರದ ದೊಡ್ಡ ಗೂಡು ಮತ್ತು ಮೇಲ್ಭಾಗದಲ್ಲಿ ಚೌಕಾಕಾರದ ಗೂಡು ಇವೆ. ರಸ್ತೆಯ ದಕ್ಷಿಣ ಬದಿಯಲ್ಲಿ ಉತ್ತರಾಭಿಮುಖವಾಗಿರುವ ಬಸವಣ್ಣ ದೇವಾಲಯವನ್ನು ಸಹ ಸಣ್ಣ ಕಲ್ಲುಗಳು ಮತ್ತು ಗಾರೆಯಿಂದ ಕಟ್ಟಲಾಗಿದೆ. ದೇವಾಲಯದ ಮುಂಭಾಗದಲ್ಲಿ ಮೂರು ಕಮಾನುಗಳಿವೆ. ಕೈಪಿಡಿ ಗೋಡೆಯಲ್ಲಿ ಮೂಲೆಗಳಲ್ಲಿ ನಂದಿಗಳಿವೆ. ಗರ್ಭಗೃಹದ ಶಿಖರ ಗುಮ್ಮಟಾಕಾರದಲ್ಲಿದೆ. ಬಾಗಿಲ ಹಿಂಭಾಗದಲ್ಲಿ ಒಂದು ಬಾವಿಯಿದೆ. ಈ ಎರಡೂ ಕಟ್ಟಡಗಳು ಹದಿನೇಳು-ಹದಿನೆಂಟನೇ ಶತಮಾನಕ್ಕೆ ಸೇರಿದ್ದಾಗಿದೆ.

ಅಡಿಟಿಪ್ಪಣಿಗಳು

೧. Patil C.S. and Vinoda C. Patil (Eds), 1998, Inscriptions of Raichur District No. 83, ARIE, 1958-59, No. B. 701.

೨. ಅದೇ, No. 79; ARIE, 1958-59. No. B. 697.

೩. ಅದೇ, No. 80; ARIE, 1958-59. No. B. 698.

೪. ೧೯೬೪ರಲ್ಲಿ ಪ್ರಕಟವಾದ ಸರ್ವೆ ಆಫ್ ಇಂಡಿಯಾ ನಕಾಶೆ ೫೬ ಡಿಯಲ್ಲಿ ಇದನ್ನು Madrainakota ಎಂದು ಗುರುತಿಸಿದೆ.

◆◆

೭೫

ಕೆಳದಿ ಗುಂಡಾಜೋಯಿಸ್

ಬಿನ್ನಾಹ ಪದ್ಧತಿ ಕೃತಿಯಲ್ಲಿ ಕದಂಬ ಇತಿಹಾಸದ ಉಲ್ಲೇಖಗಳು

ಸಾಗರ ತಾಲ್ಲೂಕು ಇಕ್ಕೇರಿ ಶ್ರೀ ಅಖಿಲಾಂಡೇಶ್ವರಿ ದೇವರ ಅರ್ಚಕರಾಗಿರುವ ಭಾಸ್ಕರ ಭಟ್ಟರ ಮನೆಯಲ್ಲಿ ತಾಳೆಯೋಲೆ ಹಸ್ತಪ್ರತಿ ಕ್ಯಾಟಲಾಗ್ ಸಿದ್ಧಪಡಿಸುವ ಸಂದರ್ಭದಲ್ಲಿ ದೊರೆತ ತಿಗಳಾರಿ ಲಿಪಿಯ ಹಸ್ತಪ್ರತಿ ಗಮನ ಸೆಳೆಯಿತು. ಈ ಹಸ್ತಪ್ರತಿಯು ಸುಮಾರು ೨೫ ಸೆಂಟಿಮೀಟರ್ ಉದ್ದ ಮತ್ತು ೫ ಸೆಂಟಿಮೀಟರ್ ಅಗಲ ಹೊಂದಿದ್ದು ಪ್ರತಿ ಗರಿಯಲ್ಲಿ ಸುಮಾರು ಹತ್ತು ಸಾಲುಗಳಿವೆ. ಸುಮಾರು ೬೯ ಗರಿಯಲ್ಲಿ ಸಂಸ್ಕೃತ ಭಾಷೆ ಮತ್ತು ತಿಗಳಾರಿ ಲಿಪಿಯಲ್ಲಿ ಇದು ಬರೆಯಲ್ಪಟ್ಟಿದೆ. ಹಸ್ತಪ್ರತಿಯು ಸುಸ್ಥಿತಿಯಲ್ಲಿದೆ. ಈ ಹಸ್ತಪ್ರತಿಯ ಲಿಪಿಕಾರ ಇಕ್ಕೇರಿ ಅಖಿಲಾಂಡೇಶ್ವರಿ ಅರ್ಚಕ ಶ್ರೀ ಮಧುಲಿಂಗಭಟ್ಟರು. ಹಸ್ತಪ್ರತಿಯ ಕಾಲದ ಉಲ್ಲೇಖ ಇದರಲ್ಲಿಲ್ಲ. ಅಕ್ಷರಗಳ ಆಧಾರದಿಂದ ಇದು ಸುಮಾರು ೧೬-೧೭ನೇ ಶತಮಾನ ಎಂದು ಹೇಳಬಹುದು. ಇದು ಶ್ಲೋಕ ಮತ್ತು ಗದ್ಯ ಶೈಲಿಯಲ್ಲಿ ರಚಿತವಾಗಿದ್ದು ಕನ್ನಡದ ಕೆಲವು ದಾಖಲೆಗಳನ್ನು ಒಳಗೊಂಡಿದೆ.

ಇದು

ನತ್ವಾ ಗುರುಂ ತ್ರೆಂಬಕಂಚ ರಾಮಚಂದ್ರ ಸರಸ್ವತಿಂ
ಯತೀಂದ್ರಂ ಶಾರದಾಂಚಾಪಿ ಲಿಖ್ಯತೇ ವಿಜ್ಞಾಪನಾಯನಂ ॥

ಗುರುದೇವತಾ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಗುರು ಶಿವರಾಮಚಂದ್ರ ಸರಸ್ವತಿ ಯತೀಂದ್ರ ಇವರುಗಳನ್ನು ಸ್ಮರಿಸುತ್ತ ವಿಜ್ಞಾಪನಾಯನ ಎಂಬ ಗ್ರಂಥವು ಬರೆಯಲ್ಪಡುತ್ತಿದೆ. ಗ್ರಂಥದ ಹೆಸರು ಬಿನ್ನಾಹ ಪದ್ಧತಿ ಎಂದಿದ್ದರೂ ಮೂಲ ಹೆಸರು ವಿಜ್ಞಾಪನಾಯನ ಎಂಬುದಾಗಿರುವುದನ್ನು ಈ ಶ್ಲೋಕ ತಿಳಿಸುತ್ತದೆ. ಇದರ ನಂತರ 'ಅಭ್ಯುತ್ಥಾನಂ ಸ್ವಾಸನಂ ಸ್ವಾಗತೋಕ್ತಿಃ ಪಾದ್ಯಂ ಸಾರ್ಘ್ಯಂ ಮದುಪರ್ಕ ಚವತೌ ಯ ಸ್ನಾನಂ ವಾಸೋ ಭೂಷಣಂ ಗಂಧಮಾಲ್ಯಾ ಧೂಪೋ ದೀಪಃ ಸೋಪಹಾರಃ ಪ್ರಣಾಮಃ' ಎಂಬುದಾಗಿ ಎದ್ದುನಿಂತುಕೊಳ್ಳುವುದು, ಆಸನ, ಸ್ವಾಗತ ಮಾಡುವುದು, ಪಾದ್ಯ, ಅರ್ಘ್ಯ ಮಧುಪರ್ಕ, ಸ್ನಾನ ವಸ್ತ್ರ, ಗಂಧ ಮಾಲ್ಯ ದೂಪ ದೀಪ ಆಹಾರ ಮತ್ತು ಪ್ರಣಾಮಗಳೆಂಬ ಶೋಡಶೋಪಚಾರಗಳ ಮೂಲಕ ನಮಸ್ಕರಿಸುವಂತಹ ವಿಧದೊಂದಿಗೆ ಕೃತಿ ಪ್ರಾರಂಭವಾಗುತ್ತದೆ. ಈ ಗ್ರಂಥದಲ್ಲಿ ಸಭೆಗಳು ಅವುಗಳ ಲಕ್ಷಣ, ವಿಧಗಳು ಮೊದಲಾದವುಗಳನ್ನು ಪ್ರಾರಂಭದಲ್ಲಿ ತಿಳಿಸುತ್ತ ಪಂಚ ಸಭಾ ಸುಮಂತ ದೀಕ್ಷಿತ ಇದರ ವಿವರಣೆಯನ್ನು ಹೇಳಲಾಗಿದೆ. ದೇವ, ಬ್ರಹ್ಮ, ಮಹೀಪಾಲ,ದೇಶ ಸಂಸತ್ ಮಹಾಸಭೆ ಎಂಬ ಐದು ವಿಧದ ಸಭೆಯ ಕುರಿತು ಕವೀಶ್ವರರು ಹೇಳುತ್ತಾರೆ

ಪ್ರಾಚ್ಯ ವಸ್ತುಸಂಗ್ರಹಾಲಯ
ಕೆಳದಿ, ಸಾಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ
ಮೊ: ೯೪೪೮೮ ೩೯೭೩೯

ಎಂದು ತಿಳಿಸಲಾಗಿದೆ. ಇದರ ಜೊತೆಗೆ ಕವೀಶ್ವರರ ಲಕ್ಷಣ, ಚಾತುರ್ವರ್ಣ, ಭೂಮಿ ವಿಸ್ತಾರ, ಸಪ್ತ ದ್ವೀಪಗಳ ವಿವರಗಳು ವಿಸ್ತಾರವಾಗಿ ದಾಖಲಾಗಿದೆ.

ಗೋಕರ್ಣೋತ್ಪತ್ತಿ ಪದ್ಧತಿ ಇದರಲ್ಲಿ ಸಮುದ್ರ ಮಧ್ಯದಲ್ಲಿರುವ ಗೋಕರ್ಣ ಕ್ಷೇತ್ರ, ಮಹಾಭಲೇಶ್ವರ ಲಿಂಗದ ಕುರಿತು ವಿಸ್ತಾರವಾಗಿರುವ ವಿವರಣೆ ನೀಡಲಾಗಿದೆ. ಜೊತೆಗೆ ಚಪ್ಪನ್ನ ದೇಶ ಬೇಧ ಪದ್ಧತಿ, ಭಟ್ಟಾಚಾರ್ಯ ಪದ್ಧತಿ (ಕುಮಾರೀಲ ಭಟ್ಟರು ಮತ್ತು ಶಂಕರಾಚಾರ್ಯರ ಕುರಿತು ಮಾಹಿತಿ), ಅಹಿಚ್ಛತ್ರ ಈ ಕುರಿತು ದಾಖಲಾಗಿದೆ.

ಆಸೀತ್ ಅಹಿಚ್ಛತ್ರಂ ಅತೋ ವಲಭ್ಯಾಂ ಯತ್ರಸ ಲಕ್ಷ್ಮೀಧರ ಕಂಧರಾಕ್ಯಃ
ರಾಜಾ ಜನೀಂದ್ರ ಪ್ರಿಯ ಕೃಚ್ಛ ಲಕ್ಷ್ಮೀ ರಾಣಿ ಚ ರಾಜ್ಞಿ ದ್ವಿಜದೇವಭಕ್ತಾ ॥

ಅಹಿಚ್ಛತ್ರವು ವಲಭಿಯಲ್ಲಿತ್ತು. ಇದನ್ನು ಲಕ್ಷ್ಮೀಧರ ಕಂದರ ಎಂಬ ಹೆಸರಿನ ಜೈನ ರಾಜನು ಆಳುತ್ತಿದ್ದನು. ಇವನ ಪತ್ನಿ ಲಕ್ಷ್ಮೀ ರಾಣಿಯು ದ್ವಿಜ ದೇವಭಕ್ತಳಾಗಿದ್ದಳು ಎಂಬ ಮಾಹಿತಿಯೊಡನೆ ವಿವರಿಸಲಾಗಿದೆ. ಇದರಲ್ಲಿ ಲಕ್ಷ್ಮೀಧರನು ವೇದನಿಂದಕನಾಗಿದ್ದನು ಎಂಬ ಮಾಹಿತಿಯು ಲಭ್ಯವಾಗುತ್ತದೆ. ಅಲ್ಲದೆ ಇನ್ನೂ ಎಷ್ಟೋ ಐತಿಹಾಸಿಕ ಮಾಹಿತಿಗಳು ಇದರಲ್ಲಿ ಉಲ್ಲೇಖಗೊಂಡಿದೆ. (ಅಹಿಚ್ಛತ್ರ – ಇದು ಇಂದು ರೋಹಿಲ ಖಂಡದಲ್ಲಿದೆ. ಇಲ್ಲಿಂದ ಕದಂಬ ಕಾಲದಲ್ಲಿ ಮಯ್ಯೂರವರ್ಮನು ಬ್ರಾಹ್ಮಣರನ್ನು ಈ ಕಡೆಗೆ ಕರೆತಂದನೆಂಬ ಅಂಶ ಗಮನಿಸುವಂತಹುದು)

ಇಲ್ಲಿಂದ ಕದಂಬ ವಂಶ ಇತಿಹಾಸ ಪ್ರಾರಂಭವಾಗುತ್ತದೆ.

ಅಭೂತ್ ಅಭೂತ ಪ್ರತಿಮಃ ಪೃಥಿವ್ಯಾಂ ಪುರಂ ಜಯಂತಿ ಪುರಂ ಅಪ್ಯುದಾರಂ
ಪುರಂದರಸ್ಥಾಪಿ ಪುರಿಂ ಅಪಾಸ್ಯ ಸ್ತಿತೇವ ಯತ್ರ ಸ್ತಿರ ಧೀಹಿ ಪದಾಶ್ರೀಃ

ಈ ಭೂಮಿಯಲ್ಲಿ ಅಪ್ರತಿಮವಾದ ಉದಾರವಾದ ಸಂಪದ್ಭರಿತವಾದ ಜ್ಞಾನಗಳಿಂದ ಕೂಡಿದ ನಗರವಾದ ಜಯಂತಿ ಪುರವು ಇದೆ. ಇಂದ್ರನೂ ಸಹ ಈ ನಗರದಲ್ಲಿ ವಾಸಿಸಲು ಬಯಸಿದನು ಎಂಬುದಾಗಿ ಬನವಾಸಿಯ ಕುರಿತು ಹೇಳಲಾಗಿದೆ.

ತದಿದಂ ಪೃಥಿವಿ ಚಯಾರ್ಜಿತಂ ವಿಜಯಂತಿ ಪುರಂ ಇತ್ಯುಗಂತಿ ಚ
ಕನಕಾಬಿ ಪುರಂ ಪರೆಜಗುಃ ವನವಾಸಿ ಪುರಮಿತ್ಯು ಶಂತ್ಯುದಃ

ಈ ವಿಜಯಂತಿ ಪುರಕ್ಕೆ ಬನವಾಸಿ ಎಂಬ ಹೆಸರೂ ಇತ್ತು ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಲಾಗಿದೆ.

ದಶವಾಹಿಕ ಸೌಜ್ಞಿಕ ನೃಪ ದಶಸಿಂಹಾಸನ ಸಂಶ್ರಿತ ಸ್ತ್ವಿಹ
ದಶಯೋತ್ತಮ ಯಾಮಿತಾಃ ಪುರ ದಶಕ ದಿಕ್ಪಾಲನ ಕರ್ಮಚಕ್ರಿರೆ

ಇದರಲ್ಲಿ ದಶವಾಹಿಕ ಎಂಬ ಹೆಸರಿನ ರಾಜ ಹತ್ತು ಸಿಂಹಾಸನವನ್ನು ಆಶ್ರಯಿಸಿದ್ದನು. ಹತ್ತು ದಿಕ್ಕುಗಳನ್ನು ಪಾಲನೆ ಮಾಡುವ ಕೆಲಸವನ್ನು ಇವನು ಕೈಗೊಂಡನು.


ತ್ರಿ ಸಪ್ತ ಮೌರ್ಯಾಃ ಕ್ಷಿತಿಪಾಲ ವೀರಾಃ ತ್ರಿಸಪ್ತ ಸಿಂಹಾಸನ ಸಂಶ್ರಯಾಸ್ವಿತಿ
ತ್ರಿಸಪ್ತವಾರ ಹತರಾಜ ಮಂಡಲಾಃ ತ್ರಿಸಪ್ತ ಕೃತ್ವಃ ಧರಣೀದುರಂ ದದುಹು ॥

ಕ್ಷಿತಿಪಾಲವೀರರಾದ ಹತ್ತು ಮೌರ್ಯರು, ಹತ್ತು ಸಿಂಹಾಸನಗಳನ್ನು ಆಶ್ರಯಿಸಿದವರು, ಹತ್ತು ಬಾರಿ ರಾಜಮಂಡಲಗಳನ್ನು ಗೆದ್ದವರು ಹತ್ತು ಬಾರಿ ಭೂಮಿಯನ್ನು ಆಳಿದವರು ಎಂಬ ಅರ್ಥವನ್ನು ಈ ಶ್ಲೋಕ ಕೊಡುತ್ತದೆ. ಇದು ಸಂಶೋಧನೆಗೆ ಅರ್ಹವಾಗಿದೆ.

ಸಪ್ತ ಸಪ್ತಿತಿ ಸಮ ತೇಜಸೋ ದಧುಃ ಸಪ್ತ ಸಪ್ತತಿ ಕದಂಬ ವಂಶಜಾಃ
ಸಪ್ತ ಸಪ್ತತಿ ನೃಪಾಸನಾಶ್ರಯಾಃ ಸಪ್ತ ಸಪ್ತತಿ ವಿದ್ಯಾಧರ ಧುರಂ ॥

ಎಪ್ಪತ್ತೇಳು ತೇಜಸ್ಸುಗಳಿಂದ ಕೂಡಿದ ಎಪ್ಪತ್ತೇಳು ಕದಂಬ ವಂಶಜರು, ಎಪ್ಪತ್ತೇಳು ಸಿಂಹಾಸನವನ್ನು ಆಶ್ರಯಿಸಿದವರು, ಎಪ್ಪತ್ತೇಳು ವಿದ್ಯಾಧರ ದುರಂಧರರು ಎಂಬ ಅರ್ಥವನ್ನು ಕದಂಬರ ಕುರಿತು ಈ ಶ್ಲೋಕ ಮಾಹಿತಿಯನ್ನು ನೀಡುತ್ತದೆ.


ಕದಂಬ ವಂಶದ ಹುಟ್ಟಿನ ಕುರಿತು ಹೇಳುತ್ತ ಹಿಂದೆ ಇಂದ್ರನು ತ್ರಿಪುರವನ್ನು ಸುಟ್ಟಾಗ ಸುಟ್ಟುಹೋದ ದೈತ್ಯನು ಕಷ್ಟಪಟ್ಟು ಕೈಲಾಸ ಪರ್ವತಕ್ಕೆ ಹೋದಾಗ ಅವರ ದೇಹವು ಕೆಳಗೆ ಬಿದ್ದಿತು. ಅವನು ಕದಂಬ ವೃಕ್ಷದ ಪೊಟರೆಯಲ್ಲಿ ಬಿದ್ದು ಬಹುಕಾಲ ಇದ್ದಾಗ ನಾಲ್ಕು ಭುಜ ಉಳ್ಳ ಪುರುಷಾಕೃತಿಯನ್ನು ತಾಳಿದನು. ಶಿವನು ಅವನ ಹತ್ತಿರ ಬಂದು ನಿನಗೆ ನಾನು ಹಿತೋಪದೇಶವನ್ನು ಮಾಡಬಯಸುತ್ತೇನೆ. ನೀನು ನನ್ನ ಮಗನಾಗಿರುವೆ. ನಿನಗೆ 'ತ್ರಿನೇತ್ರ ಕಾದಂಬ' ಎಂಬ ಹೆಸರಾಗಲಿ ಎಂಬುದಾಗಿ ಹೇಳುತ್ತಾನೆ.



ಜಯಂತಿಪುರಿಯಲ್ಲಿ ವೀರ್ಯಾತಿಶಯವಾದ ಶಿವಲಿಂಗ ಬಿದ್ದು ಅದು ಮಧುಕೇಶ್ವರ ಲಿಂಗವಾಗಿದೆ. ಸಾಕ್ಷಾತ್ ಶಿವನೇ ಅಲ್ಲಿ ನೆಲೆ ನಿಂತಿದ್ದಾನೆ. ಶಿವನ ಅನುಗ್ರಹದಿಂದ ಪ್ರಭಾವವನ್ನು ಪಡೆದು ಮಹಾರಾಜರನ್ನೆಲ್ಲಾ ತನ್ನ ವಶದಲ್ಲಿಟ್ಟುಕೊಂಡು ಏಕಾತಪತ್ರವನ್ನುಳ್ಳವನಾಗಿ ಏಕ ವೀರನಾಗಿ ಬಹುಕಾಲ ರಾಜ್ಯವನ್ನು ಆಳು ಎಂಬುದಾಗಿ ಶಿವ ತಿನೇತ್ರ ಕಾದಂಬನಿಗೆ ಅನುಗ್ರಹಿಸಿದನು. ಕಾಲಕ್ರಮೇಣ ಆ ಮಹಾನುಭಾವನಿಗೆ ಅನುರೂಪನಾದ ಮಧುಕೇಶ್ವರನೆಂಬ ಮಗನು ಜನಿಸಿದನು. ಇವನಿಗೆ ಮಲ್ಲಿನಾಥ ಎಂಬ ಮಗನೂ ಹಾಗೆಯೇ ಅವನಿಗೆ ಚಂಡವರ್ಮನೆಂಬ ಮಗನೂ ಜನಿಸಿದನು. ಅವನಿಗೂ ಮತ್ತಿಬ್ಬರು ಮಕ್ಕಳು ಜನಿಸಿದರು. ಅವರು ಚಂದವರ್ಮ ಮತ್ತು ಪುರಂದರ. ಇವರು ವೀರ್ಯ ಸಂಪನ್ನರು, ಸುರೂಪಿಗಳು, ವೈರಿ ವರ್ಗಗಳನ್ನು ನಿಗ್ರಹಿಸಿದವರಾಗಿದ್ದರು.

ಈ ಚಂಡವರ್ಮನು ಬೇಟೆಗಾಗಿ ಕುದುರೆಯನ್ನು ಏರಿ ಕಾಡಿಗೆ ಹೋಗಿ ಬೇಟೆಯ ವಿನೋದದಲ್ಲಿ ತೊಡಗುತ್ತಾನೆ. ಈ ಸಂದರ್ಭದಲ್ಲಿ ಕಾಡಿನ ಬೆಂಕಿಗೆ ಸಿಕ್ಕ ಹಾವಿನ ವಿಚಾರವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಆ ಸಮಯದಲ್ಲಿ ಹಾವು ಕಚ್ಚಿದ್ದರಿಂದ ಚಂಡವರ್ಮನ ದೇಹಕ್ಕೆ ಜಲೋದರ ರೋಗವು ಅಂಟಿಕೊಳ್ಳುತ್ತದೆ. ಇದನ್ನು ನಿವಾರಿಸಲು ಯಾವ ವೈದ್ಯರಿಗೂ ಸಾಧ್ಯವಾಗಲಿಲ್ಲ. ಆಹಾರವೂ ಸಹ ರುಚಿಸುತ್ತಿರಲಿಲ್ಲ. ಆಗ ಸರ್ಪವು ಅವನಿಗೆ ಹೇಳುತ್ತದೆ. ರಾಜನೇ ನೀನು ಹಾಲನ್ನು ಕುಡಿ. ತಣ್ಣಗಿರುವ ನೀರಿನಲ್ಲಿ ಸ್ನಾನ ಮಾಡು. ತಣ್ಣಗಿರುವ ಅನ್ನವನ್ನು ಊಟ ಮಾಡು. ಇಲ್ಲದಿದ್ದರೆ ನಿನ್ನ ಶರೀರವು ನಾಶವಾಗುವುದು. ಅದರಂತೆ ರಾಜನು ಅದನ್ನು ಗಮನಿಸದೆ ಬಿಸಿನೀರಿನಿಂದಲೂ ಸ್ನಾನ ಮಾಡುವುದಲ್ಲದೆ ಎಳ್ಳೆಣ್ಣೆಯನ್ನು ತನ್ನ ದೇಹಕ್ಕೆ ತಿಕ್ಕಿಕೊಂಡಿದ್ದರಿಂದ ಅವನ ದೇಹವು ಕುಂಟಿತಗೊಳ್ಳುತ್ತದೆ. ಇದರಿಂದ ಖಿನ್ನನಾದ ಚಂಡವರ್ಮನು ರಾಜ್ಯದ ಮಂತ್ರಿ ಮತ್ತು ಪ್ರಮುಖರ ಮಾತಿನಂತೆ ಪುರಂದರನಿಗೆ ರಾಜ್ಯವನ್ನು ಒಪ್ಪಿಸಿ ತಾನು ಹೆಂಡತಿ ಸಹಿತ ತೀರ್ಥಕ್ಷೇತ್ರ ದರ್ಶನ ಮಾಡಲು ಹೋದ ವಿಚಾರ ಇಲ್ಲಿ ಉಲ್ಲೇಖಗೊಂಡಿದೆ.

ಹೀಗೆ ಅವನು ಯಾತ್ರಾ ಸಂದರ್ಭದಲ್ಲಿ ಧರ್ಮಛತ್ರಗಳಲ್ಲಿ ವಾಸಿಸುತ್ತಿರುವಾಗ ಅಲ್ಲಿಯ ಮುಖ್ಯಸ್ಥನು ಚಂಡವರ್ಮನ ರಾಜ ಲಕ್ಷಣಗಳನ್ನು ನೋಡಿ ನೀನಾರು ಮತ್ತು ಎಲ್ಲಿಂದ ಬಂದಿರುವೆ ಎಂಬುದಾಗಿ ಕೇಳುತ್ತಾನೆ. ವಿಷಯ ತಿಳಿದಾಗ





ಅವನಿಗೆ ವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುತ್ತದೆ. ಕೊನೆಗೆ ಅವರಿಬ್ಬರೂ ದುರ್ಗಾದೇವಿಯ ದರ್ಶನಕ್ಕೆ ಹೋಗಿರುವುದಾಗಿ ತಿಳಿದುಬರುತ್ತದೆ. ಹೀಗೆ ಕಥೆಯ ರೂಪದಲ್ಲಿ ಚಂಡವರ್ಮನ ಕುರಿತು ಉಲ್ಲೇಖಗಳು ಕಂಡುಬರುತ್ತದೆ.

ಅನಂತರದಲ್ಲಿ ಚಂಡ ಮಹಾಸೇನ, ಮಯೂರ ವಲ್ಲಭ, ಶಿಖಿವರ್ಮ, ಯಶೋವರ್ಮ್, ಪುರಂಧರ, ಶಶಿಪ್ರಭಾ, ಚಂಡಸೇನ, ಚಕ್ರಕಲ್ಲು ಭಗವತಿ ಖಂಗನೆ, ತ್ರಿಣಯನ, ಕನಕಾವತಿ ಇವರುಗಳ ಕುರಿತು ಇದರಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿ ಭಗವತಿ ಖಂಗನೆ ಹೇಳುವ ಸಂದರ್ಭದಲ್ಲಿ ಕನ್ನಡ ಭಾಷೆಯಲ್ಲಿ ದಾಖಲಾಗಿದೆ. ನಿನಗೆ ಆವ ಕಾರ್ಯವ ಮಾಡಬೇಕೆಂದು ಅವರು ಹೇಳಿದಡೆ ನೀವು ಸಭಾಸಾಸಿಬ್ಬರೂ ನಮ್ಮ ದೇಶಕ್ಕೆ ದಿಶೆಯಂ ಗೆಯ್ಯಬೇಕು ಎಂದಡೆ ತಥಾಸ್ತು ಎಂದರು. ಅನ್ನಕರ ಸಭಾ ಸಾಸಿಬ್ಬರು ಆತನ ದೇಶವನ್ನು ಬ್ರಾಹ್ಮಣ ಭೂಯಿಷ್ಠವನ್ನಾಗಿ ಮಾಡಿದರು. "ಆ ಕಾಲದಲ್ಲಿ ಫಣಿದರ ವಾಜಪೇಯ ಸೋಮಯಾಜಿ ಭಟ್ಟರು ಆನೆಯ ಮೇಲಣ ಅಗ್ನಿಹೋತ್ರದಿಂದ ಸಹಿತರಾಗಿ ರಾಮೇಶ್ವರ ದರ್ಶನಾರ್ಥಿಗಳಾಗಿ ಹೋಲುವಣ್ಣ ಎರಡು ಮೂರು ದಿನದಿಂದ ಅಂಬು ನದಿಯನ್ನುತ್ತರಿಶಿ ಬಿಜಯಂ ಗೈದರು. ಅನಂತರ ಮದ್ಯಾಹ್ನ ಕಾಲವಾಗಲೊಡತೆ ಮೊದಲು ಮೊದಲುಗೊಂಡಿತು. ಅಗ್ನಿಹೋಮಕ್ಕೆ ಕಾಲವಾಗಿ ಆ ಹೊತ್ತಿನಲ್ಲಿ ಶಿಶ್ಯಕ್ಕಳಿಂದ ಉದಕ ಎಲ್ಲಿ ಉಂಟೆಂದು ನೋಡಿಸಿದರು. ಅನಂತರ ಉದಕವ ಕಂಡರು ಅಗ್ನಿ ಹೋಮವನ್ನು ಮಾಡುತ್ತಿದ್ದರು ಗಡ. ಆ ಕಾಲದಲ್ಲಿ ಚಂಡಸೇನನೆಂಬ ರಾಜನು ಬೇಂಟೆಯನಾಡುತ್ತಿದ್ದ."

ತದುಕ್ತ ಮಾಕರ್ಣ್ಯ ವಿಲೋಕ್ಯ ವಿಪ್ರಾಮ ಪರಸ್ಪರಂ ಗಂತುಂಮಧೀರ ಬುದ್ಧಯಃ
ಯೇಕೈಃ ಕಶಃ ಶ್ರೋಣಿಶುರೇಶು ನಿರ್ಗತಾ ದೃತಾಗ್ನ ಹೋತ್ರಾಯ ಯುರಸ್ಯ ರಾಜ್ಯಂ ॥

"ಅದು ಕಾರಣದಿಂದ ಹೈವೆ ಹತ್ತು ಸ್ಥಳವು ಬ್ರಾಹ್ಮಣ ಭೂಯಿಷ್ಟವಾಯಿತು ಯಂದು ಯನ್ನುತ್ತಿರಲು ಚಕ್ರಕಲ್ಲು ಭಗವತಿ ಖಂಗನೆ, ಚಂಡಸೇನ ಬ್ರಾಹ್ಮಣ ಭೂಯಿಷ್ಟವಾದಲ್ಲಿ" ಅಗ್ರಹಾರ ನಿರ್ಮಾಣ ಮಾಡುವುದರಲ್ಲಿ ಮಗ್ನನಾಗಿದ್ದನ್ನು ಉಲ್ಲೇಖಿಸುತ್ತದೆ. ಇದರ ಮಧ್ಯೆ

ಯಿಯಂ ಕದಂಬಮಾಹ್ವಯ ಭೂಪತಿ ನಾಮ್ ಪುರಿ ಜಯಂತಿ ಪ್ರಥಿತಾ ಪೃಥಿವ್ಯಾಂ
ಮಯ್ಯೂರ ವರ್ಮೇಹ ನೃಪೋ ಮಹಾತ್ಮ ಬಿಭೇಮಿ ತಸ್ಮಾತ್ ಅಹಂ ಯಿಶತ್ ಅತ್ರ ॥

ಜಯಂತಿಪುರವನ್ನು ಆಳುತ್ತಿರುವ ಮಯ್ಯೂರವರ್ಮನು ಮಹಾ ಬಲಿಷ್ಠನಾಗಿದ್ದನು ಎಂಬ ಅಂಶ ಈ ಶ್ಲೋಕದಿಂದ ತಿಳಿದುಬರುತ್ತದೆ. ಈ ಸಮಗ್ರ ಕೃತಿಯು ಕದಂಬ ವಂಶದ ಪ್ರಾರಂಭದ ಕುರಿತು ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಇದುವರೆಗೆ ಮಯೂರವರ್ಮ ಮತ್ತು ಅವನ ನಂತರದ ಕಾಲದ ಕುರಿತು ಅಧ್ಯಯನ ನಡೆಯಲ್ಪಟ್ಟಿದೆ. ಆದರೆ ಅವನಿಗೂ ಪೂರ್ವದಲ್ಲಿ ಚಂಡವರ್ಮ, ಶಿಖಿವರ್ಮ ಮೊದಲಾದ ಹೆಸರುಗಳ ಉಲ್ಲೇಖ ಈ ಕೃತಿಯಲ್ಲಿ ಕಂಡುಬರುವುದರಿಂದ ಈ ಕುರಿತಂತೆ ಸಂಶೋಧನೆ ಆಗಬೇಕಿದೆ. ಮುಖ್ಯವಾಗಿ ಆ ಕಾಲಘಟ್ಟದಲ್ಲಿ ಮಾಹಿತಿಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಬರೆಯಲ್ಪಟ್ಟಿರುವ ಕೃತಿ ಎಂಬುದಾಗಿ ಹೇಳಬಹುದು. ರಾಜರು, ಜನಾಂಗ, ಅಗ್ರಹಾರಗಳು ಮತ್ತು ಗ್ರಾಮಗಳು, ಭೂಪ್ರದೇಶದ ಮಾಹಿತಿಯನ್ನು ಈ ಕೃತಿ ಕೊಡುವುದಲ್ಲದೆ ಬಂಕಿ ಮತ್ತು ಕಾಕಾಲು ಮೊದಲಾದ ಪದ್ಧತಿಗಳ ಕುರಿತು ಇಲ್ಲಿ ಹೇಳಲಾಗಿದ್ದು ಅವುಗಳ ಕುರಿತು ಹೆಚ್ಚಿನ ಸಂಶೋಧನೆ ಮಾಡುವ ಅಗತ್ಯ ಕಂಡುಬರುತ್ತದೆ. ಈ ಕೃತಿ ಪೂರ್ಣ ಪ್ರಕಟವಾದಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತದೆ.

---

* ಈ ಕೃತಿಯನ್ನು ಸಂಶೋಧನೆಗೆ ಬಳಸಿಕೊಳ್ಳಲು ಅವಕಾಶವಿತ್ತ ಮಾನ್ಯ ಭಾಸ್ಕರ ಭಟ್ಟರು ಮತ್ತು ಅವರ ಕುಟುಂಬ ವರ್ಗದವರಿಗೆ, ಕೃತಿಯನ್ನು ಸಂಸ್ಕೃತೀಕರಿಸಿ, ಕನ್ನಡೀಕರಿಸಿ ಉಪಕರಿಸಿದ ಮಾನ್ಯ ವಿದ್ವಾನ್ ಹುಲೀಮನೆ ಗಣಪತಿ ಕಾಳಿ ಇವರಿಗೂ ನಾನು ಅಭಾರಿಯಾಗಿದ್ದೇನೆ.

◆◆

೭೬

ಮದ್ದಾನಸ್ವಾಮಿ ವೈ.

ಹಾವೇರಿ ಜಿಲ್ಲೆಯ ಸ್ಮಾರಕಶಿಲ್ಪಗಳಲ್ಲಿ ಆಭರಣಗಳು

ಹಾವೇರಿಯು ಬ್ಯಾಡಗಿ, ರಾಣೇಬೆನ್ನೂರು, ಶಿಗ್ಗಾಂವಿ, ಹಾನಗಲ್ಲು, ಸವಣೂರು, ಹಿರೇಕೆರೂರು, ರಟ್ಟಿಹಳ್ಳಿ ಮತ್ತು ಹಾವೇರಿ ಎಂಬ ಎಂಟು ತಾಲೂಕುಗಳನ್ನು ಒಳಗೊಂಡ ವಿಶಾಲ ಜಿಲ್ಲೆಯಾಗಿದೆ. ಜಿಲ್ಲೆಯು ೪೮೨೩ ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ಇದು ಮಲೆನಾಡು, ಅರೆಮಲೆನಾಡು, ಮತ್ತು ಬಯಲುಸೀಮೆಗಳಿಂದ ಕೂಡಿದೆ. ಪ್ರಾಚೀನ ಕಾಲದಿಂದಲೂ ಬೇರೆ-ಬೇರೆ ಅರಸುಮನೆತನಗಳ ಆಳ್ವಿಕೆಗೆ ಒಳಪಟ್ಟ ಈ ಜಿಲ್ಲೆ ಸಾಂಸ್ಕೃತಿಕ ಆಕರಗಳಿಂದೊಡಗೂಡಿ ಸಂಪದ್ಧರಿತವಾಗಿದೆ. ಈವರೆಗೆ ಸ್ಮಾರಕಶಿಲ್ಪಗಳನ್ನು ಕುರಿತು ನಡೆದಿರುವ ಅಧ್ಯಯನಗಳಿದ್ದರೂ ಇವುಗಳು ಹಾವೇರಿ ಜಿಲ್ಲೆಯ ಸ್ಮಾರಕ ಶಿಲ್ಪಗಳಲ್ಲಿಯ ಆಭರಣಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡುವುದಿಲ್ಲ. ಈ ನಿಟ್ಟಿನಲ್ಲಿ ಸ್ಮಾರಕಶಿಲ್ಪಗಳಲ್ಲಿಯ ಆಭರಣಗಳ ವಿವರಣೆಯನ್ನು ನೀಡುವ ಒಂದು ಕಿರು ಪ್ರಯತ್ನ ಇಲ್ಲಿದೆ.

ಹಾವೇರಿ ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯವನ್ನು ಕೈಗೊಂಡು, ಅಲ್ಲಿಯ ಪ್ರತಿಯೊಂದು ಗ್ರಾಮಗಳ ಸ್ಮಾರಕಶಿಲ್ಪಗಳನ್ನು ಪತ್ತೆಹಚ್ಚಲಾಯಿತು. ಜಿಲ್ಲೆಯಾದ್ಯಂತ ಈವರೆಗೆ ೫೮೪ ವೀರಗಲ್ಲುಗಳು, ೩೨೭ ಮಾಸ್ತಿಕಲ್ಲುಗಳು ಮತ್ತು ೬೪ ನಿಸಿಧಿಕಲ್ಲುಗಳು, ೧೪ ಧಾರ್ಮಿಕಾ ಆತ್ಮಬಲಿದಾನ ಸ್ಮಾರಕಶಿಲ್ಪಗಳು ದೊರಕಿವೆ. ಈ ಸ್ಮಾರಕಶಿಲ್ಪಗಳಲ್ಲಿ ವೀರರು, ಮಾಸ್ತಿಯರು, ಜೈನ ಧರ್ಮಿಯರು ಧರಿಸಿದ ಆಭರಣಗಳನ್ನು ಕೂಲಂಕಷವಾಗಿ ಅವಲೋಕಿಸಿ, ಅವುಗಳನ್ನು ವಿಂಗಡಿಸಿ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

ಸ್ಮಾರಕಶಿಲ್ಪಗಳು ವೀರಮರಣ, ಮಹಾಸತಿ ಆಚರಣೆ, ಸಲ್ಲೇಖನ ಹಾಗೂ ಆತ್ಮಬಲಿದಾನಕ್ಕೆ ಸಂಬಂಧಿಸಿದ್ದು, ಸಮಕಾಲೀನ ಸಮಾಜದ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳನ್ನು ಅರಿಯಲು ಸಹಕಾರಿಯಾಗಿವೆ. ಸ್ಮಾರಕಶಿಲ್ಪಗಳು ಮಾನವನ ವೇಷ-ಭೂಷಣ, ಆಭರಣಗಳು, ಆಯುಧಗಳು, ದಾನದತ್ತಿಗಳು, ವೀರರ ಸಾಮಾಜಿಕ ಹಿನ್ನೆಲೆ, ಜೀವನ ಮೌಲ್ಯಗಳು, ನಂಬಿಕೆ-ಆಚರಣೆಗಳ ವಿವರಗಳನ್ನು ಸೆರೆಹಿಡಿದಿವೆ. ಅವುಗಳಲ್ಲಿನ ಶಿಲ್ಪಗಳಲ್ಲಿರುವ ಆಭರಣಗಳನ್ನು ಪರಿಶೀಲಿಸಿ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಾವೇರಿ
ಮೊ: ೯೬೨೦೧ ೭೯೮೭

ಆಭರಣಗಳು

ಭಾರತೀಯ ಶಿಲ್ಪಶಾಸ್ತ್ರದಲ್ಲಿ ಆಭರಣಗಳಿಗೆ ಒಂದು ವಿಶಿಷ್ಟವಾದ ಸ್ಥಾನವಿದ್ದು,

ಇದರ ಇತಿಹಾಸ ಅತ್ಯಂತ ಪುರಾತನವಾಗಿದೆ. ಕಾಡಿನಲ್ಲಿ ಬೆತ್ತಲೆಯಾಗಿ ಅಡ್ಡಾಡುವ ಬೇಟೆಗಾರ ಆದಿವಾಸಿಗಳೂ ಮೈಯನ್ನು ಸಿಂಗರಿಸಿಕೊಳ್ಳುವುದಿದೆ. ಹರಪ್ಪಾದ ಸುಡಾವೆ ಮಣ್ಣಿನ ಮಾತೃದೇವತೆಯ ಗೊಂಬೆ, ಮಹೆಂಜೋದಾರೊಪಿನ ನರ್ತಕಿಯ ಗೊಂಬೆಯಲ್ಲಿ ಅಲಂಕರಣೆಯನ್ನು ಕಾಣಬಹುದು. ಈ ಸೌಂದರ್ಯಾಭಿರುಚಿ ಪ್ರಾಚೀನ ಕಾಲದಿಂದಲೂ ಮಾನವನೊಂದಿಗೆ ಬೆಳೆದು ಬಂದಿದ್ದು, ಅಲಂಕರಿಸಿದರೆ ಅಸಾಧಾರಣವಾದ ಶಕ್ತಿಯೊಂದು ಒದಗಿ ಬರುತ್ತದೆಯೆನ್ನುವ ಭಾವನೆ ಇತ್ತು. ದೇವತಾಮೂರ್ತಿಯಷ್ಟೇ ಅಲ್ಲ, ಪಂಗಡದ ಹಿರಿಯನೂ, ಪೂಜಾರಿಯೂ ಸಾಮಾನ್ಯರಂತೆ ಇರುತ್ತಿರಲಿಲ್ಲ. ಅವರ ಗೌರವಕ್ಕೆ ಸರಿಯಾದ ಉಡುಗೆ-ತೊಡುಗೆಗಳೂ, ಹಾರತುರಾಯಿಗಳು ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ರಾಜನ ಕೈಯಲ್ಲಿ ಕತ್ತಿ, ಪಂಗಡದ ಯಜಮಾನನ ಕೈಯಲ್ಲಿ ದೊಣ್ಣೆ, ಪೂಜಾರಿಯ ಕೈಯಲ್ಲಿ ಬೆತ್ತ ಇವು ಕೆಲಸಕ್ಕೆ ಬರುವ ಆಯುಧಗಳಲ್ಲ ಭೂಷಣಗಳಷ್ಟೆ. ಎಲ್ಲ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಆಭರಣ-ಭೂಷಣಗಳ ದೊಡ್ಡ ಪಟ್ಟಿಯೇ ಇರುತ್ತದೆ. ವ್ಯಕ್ತಿಗೆ ಸೌಂದರ್ಯವಿದ್ದರೆ ಸಾಲದು ತಲೆಗೆ ರತ್ನಕಿರೀಟ, ಕಿವಿಯಲ್ಲಿ ಮಕರಕುಂಡಲ, ಕೊರಳಲ್ಲಿ ರತ್ನಮಾಲೆ, ಎದೆಯ ಮೇಲೆ ಶ್ರೀವತ್ಸಚಿಹ್ನೆ, ನಡುವಿಗೆ ಉದರಬಂಧ, ಕಟಿಸೂತ್ರ, ತೋಳಿನಲ್ಲಿ ತೋಳಬಂಧ, ಅಂದಿಗೆ, ಕೇಯೂರಗಳು; ಕೈಮಣಿಕಟ್ಟಿನಲ್ಲಿ ಕಂಕಣ, ಮಣಿಬಂಧ; ಕೈಬೆರಳುಗಳಲ್ಲಿ ರತ್ನಾಂಗುಲೀಯಕಗಳು; ಕಾಲುಗಳಲ್ಲಿ ನೂಪುರ, ಪಾದಜಲಕ್, ಪೀತಾಕಾರ್ಪಾಟಗಳಿಂದ ಅಲಂಕೃತನಾಗಿರಬೇಕು. ಸ್ತ್ರೀ ಮೂರ್ತಿಗಾದರೆ ಓಲೆ, ಕಂಠಹಾರ, ಗ್ರೀವ, ಸ್ಕಂದಮಾಲ, ಕುಚಬಂಧ, ಬಾಜುಬಂಧ, ಬಳೆ, ಉಂಗುರ, ಕಠಿಸೂತ್ರ ಮುಂತಾದ ಅಲಂಕರಣೆಗಳಿರಬೇಕು ಎಂಬುದಿತ್ತು. ಕಾಲಾಂತರದಲ್ಲಿ ಶಿಲ್ಪಗಳಲ್ಲಿ ಆಭರಣಗಳನ್ನು ಸೂಕ್ಷ್ಮವಾಗಿ ನಾಜೂಕಾಗಿ ತೋರಿಸುವ ಪರಿಪಾಠ ಬೆಳೆದು ಬಂದಿತು. ವಾಸ್ತುಶಿಲ್ಪಗಳಂತೆಯೇ ಆಭರಣಗಳ ಬಗೆಗೆ ಮಾಹಿತಿಯನ್ನು ನೀಡುವ ಆಕರಗಳೆಂದರೆ ಸ್ಮಾರಕಶಿಲ್ಪಗಳು. ಇವುಗಳಲ್ಲಿ ಕೆತ್ತಿರುವ ಆಭರಣಗಳಿಂದ ಅವುಗಳ ವಿವಿಧ ರೂಪಗಳನ್ನು ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದಾಗಿದೆ.

ಕಿರೀಟ: ವೀರಗಲ್ಲುಗಳಲ್ಲಿ ಹೋರಾಡುತ್ತಿರುವ ವೀರನು ಪ್ರಮುಖ ವ್ಯಕ್ತಿಯಾಗಿದ್ದರೆ ಆತನು ತಲೆಗೆ ಕಿರೀಟವನ್ನು ಧರಿಸಿರುವಂತೆ ಕಂಡರಿಸಲಾಗಿರುತ್ತದೆ. ಕೆಲವೊಮ್ಮೆ ಮುನಿಗಳಿಗೆ (ಅರ್ಚಕ) ಕಿರೀಟವಿರುವಂತೆ ಚಿತ್ರಿಸಲಾಗಿರುತ್ತದೆ. ಉಳಿದಂತೆ ಸ್ಮಾರಕಶಿಲ್ಪಗಳಲ್ಲಿ ಕಂಡುಬರುವ ದೇವತೆಗಳು ಮತ್ತು ಅಲ್ಲಲ್ಲಿ ಅಪ್ಸರೆಯರು ಕಿರೀಟವನ್ನು ಧರಿಸಿರುವಂತೆ ಕೆತ್ತಲಾಗಿರುವುದನ್ನು ಕಾಣಬಹುದು. ಗೋನಾಳ ಗ್ರಾಮದಲ್ಲಿರುವ ಇಬ್ಬರು ವೀರರಶಿಲ್ಪದಲ್ಲಿ ಒಬ್ಬ ವೀರನಿಗೆ ಕಿರೀಟವನ್ನು ಕಂಡರಿಸಲಾಗಿದೆ. ಅತ್ತಿಗೇರಿಯಲ್ಲಿ ಏಕವೀರನ ಶಿಲ್ಪವೊಂದಿದ್ದು ವೀರನು ತಲೆಗೆ ಕಿರೀಟವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಆಲದಗೇರಿಯಲ್ಲಿ ಏಕವೀರನ ಶಿಲ್ಪವೊಂದಿದ್ದು ವೀರನು ತಲೆಗೆ ದೊಡ್ಡದಾದ ಪೇಟವನ್ನು ಧರಿಸಿದ್ದಾನೆ. ಕಲಕೇರಿಯ ವೀರಗಲ್ಲೊಂದರ ಮೇಲಿನ ಹಂತದಲ್ಲಿ ಶಿವಲಿಂಗದ ಬಳಿ ಕೈಮುಗಿದು ಕುಳಿತಿರುವ ಗಡ್ಡಧಾರಿ ಮುನಿಯು ತಲೆಗೆ ಕಿರೀಟವನ್ನು ಧರಿಸಿರುವಂತೆ ಕಂಡರಿಸಲಾಗಿದೆ. ಇಲ್ಲಿ ಕಿರೀಟ ಧರಿಸಿರುವವನು ಮುನಿಯಾಗಿರದೆ ದಾನ ನೀಡಿದ ರಾಜನೋ ಅಥವಾ ಮಾಂಡಲಿಕನೋ ಆಗಿರಬಹುದು. ಇದಕ್ಕೆ ಪುಷ್ಟಿ ನೀಡುವಂತೆ ಆತನು ಲಿಂಗವನ್ನು ಪೂಜಿಸುತ್ತಿರುವಂತಿರದೆ ಕೈಮುಗಿದು ಕುಳಿತಿರುವುದನ್ನು ಗಮನಿಸಬಹುದು. ಕಾರಡಗಿಯ ಏಕವೀರನ ಶಿಲ್ಪದಲ್ಲಿರುವ ವೀರನು ಬಿಲ್ಲುಬಾಣ ಹಿಡಿದಿದ್ದು, ತಲೆಯ ಮೇಲೆ ಕಿರೀಟವನ್ನು ಧರಿಸಿದ್ದಾನೆ. ಕರ್ನಾಟಕ ವಿಶ್ವವಿದ್ಯಾಲಯದ ಕೆ.ಆರ್.ಐ. ವಸ್ತುಸಂಗ್ರಹಾಲಯದಲ್ಲಿರುವ ತಿಳವಳ್ಳಿಯ ವೀರಗಲ್ಲೊಂದರ ಸ್ವರ್ಗ ಹಂತದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಮತ್ತು ಅವರ ಪರಿವಾರದವರಿಗೆ ಕಿರೀಟಗಳನ್ನು ಕಂಡರಿಸಲಾಗಿದೆ. ಸ್ವರ್ಗಾರೋಹಣ ಹಂತದಲ್ಲಿ ವೀರನು ಕಿರೀಟ ಧರಿಸಿ ಅಪ್ಸರೆಯರೊಂದಿಗೆ ನಿಂತಿದ್ದಾನೆ. ರಟ್ಟಿಹಳ್ಳಿಯ ವೀರಗಲ್ಲಿನಲ್ಲಿರುವ ಅಪ್ಸರೆಯರು ಕಿರೀಟಗಳನ್ನು ಧರಿಸಿದ್ದಾರೆ. ಹಾನಗಲ್ಲಿನ ವೀರಗಲ್ಲಿನಲ್ಲಿ ಆರುಜನ ಅಪ್ಸರೆಯರು ಕಿರೀಟಗಳನ್ನು ಧರಿಸಿರುವಂತೆ ಕಂಡರಿಸಲಾಗಿದೆ. ಮಾಸಣಗಿಯ ವೀರಗಲ್ಲಿನ ವೀರ ಮತ್ತು ಸೈನಿಕರು ಟೊಪ್ಪಿಗೆಯಂತಹ ಚಿಕ್ಕ ಕಿರೀಟಗಳನ್ನು ಧರಿಸಿದ್ದಾರೆ.

ಹಣೆಸರ: ತಲೆಯನ್ನು ಹಿಂದಕ್ಕೆ ಬಾಚಿ ಹಣೆಗೆ ಮಣಿಗಳಿಂದ ಅಥವಾ ಮುತ್ತುಗಳಿಂದ ಮಾಡಿದ ಹಣೆಸರವನ್ನು ಸಾಮಾನ್ಯವಾಗಿ ಸ್ತ್ರೀಯರು ಧರಿಸಿರುವುದುಂಟು. ಹಿರೇಕೊಣತಿಯ ವೀರಮಾಸ್ತಿಕಲ್ಲೊಂದರಲ್ಲಿಯ ಮಹಾಸತಿಯು ತಲೆಯ ಹಿಂದೆ ಕೇದಿಗೆ ಮುಡಿದಿದ್ದು, ಹಣೆಯಿಂದ ಸ್ವಲ್ಪ ಮೇಲಕ್ಕೆ ಸಣ್ಣ ಸಣ್ಣ ಮಣಿಗಳಿಂದ ಕೂಡಿದ ಹಣೆಸರವನ್ನು ಕಟ್ಟಿಕೊಂಡಿದ್ದಾಳೆ. ನಾಗಲಾಪುರದ ಮಾಸ್ತಿಕಲ್ಲಿನಲ್ಲಿರುವ ಮಹಾಸತಿಯು ಹಣೆಯಿಂದ ಸ್ವಲ್ಪ ಮೇಲೆ ಎರಡು ಎಳೆಗಳ ಹಣೆಸರವನ್ನು ಧರಿಸಿದ್ದಾಳೆ. ಹಿರೇಬಾಸೂರಿನ ವೀರಮಾಸ್ತಿಕಲ್ಲೊಂದರಲ್ಲಿರುವ ಮಾಸ್ತಿಯು ಹಣೆಸರವನ್ನು ಧರಿಸಿದ್ದಾಳೆ. ಇವುಗಳಲ್ಲದೆ ಮುತ್ತೂರು, ಅರಳಿಕಟ್ಟಿ, ಧೂಳಿಕೊಪ್ಪ, ತಿಪ್ಪಾಯಿಕೊಪ್ಪ, ದಶರಥನಕೊಪ್ಪ ಮುಂತಾದ ಕಡೆಯಲ್ಲಿರುವ ಮಾಸ್ತಿಕಲ್ಲುಗಳಲ್ಲಿರುವ ಮಹಾಸತಿಯರು ಹಣೆಸರವನ್ನು ಧರಿಸಿರುವುದು ಕಂಡುಬರುತ್ತದೆ. ಚಿಕ್ಕಳ್ಳಿಯ ವೀರಗಲ್ಲಿನಲ್ಲಿರುವ ವೀರನೊಬ್ಬ ಬಲಕ್ಕೆ ತುರುಬನ್ನು ಕಟ್ಟಿ ತಲೆಯ ಸುತ್ತ ಹಣೆಸರದಂತೆ ಕಟ್ಟಿರುವುದನ್ನು ಕಾಣಬಹುದು. ವರಹದ ವೀರಮಾಸ್ತಿಕಲ್ಲಿನ ಮಾಸ್ತಿಯು



ಆಭರಣ ಅಲಂಕೃತ ಸ್ವರ್ಗಾರೋಹಣ ಶಿಲ್ಪ, ಹಿರೇಬಾಸೂರು



ವಿಶೇಷ ಆಭರಣಗಳನ್ನು ಧರಿಸಿದ ವೀರಮಾಸ್ತಿ ಶಿಲ್ಪ, ವರಾಹ

ರಡು ಎಳೆಯ ಹಣೆಸರವನ್ನು ಧರಿಸಿದ್ದಾಳೆ.

ಬೈತಲೆಮಣಿ: ತಲೆಯನ್ನು ಬಾಚ ಬೈತಲೆ ತೆಗೆದು, ಅದರ ಹಿಂಭಾಗದಿಂದ ಹಣೆಯವರೆಗೂ ಇಳಿಬಿದ್ದಂತೆ ಇದನ್ನು ್ರೀಯರು ಧರಿಸುತ್ತಾರೆ. ಸಾಮಾನ್ಯವಾಗಿ ಸಮಾರಂಭಗಳಲ್ಲಿ ಇದನ್ನು ಧರಿಸುವುದುಂಟು. ಹಿರೇಬಾಸೂರಿನ ೀರಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಮೂರು ಎಳೆಯ ಬೈತಲೆ ಮಣಿಯನ್ನು ಧರಿಸಿದ್ದಾಳೆ. ನಾಗಲಾಪುರದ ಮಾಸ್ತಿಕಲ್ಲಿನಲ್ಲಿರುವ ಾಸ್ತಿಯು ನೆತ್ತಿಯಿಂದ ಹಣೆಸರದವರೆಗೂ ಬೈತಲೆ ಮಣಿಯನ್ನು ಧರಿಸಿದ್ದಾಳೆ. ಇದು ಒಂದು ಎಳೆಯ ಬೈತಲೆಮಣಿಯಾಗಿದೆ.

ಓಲೆ: ಸ್ತ್ರೀಯರ ಪ್ರಮುಖ ಆಭರಣಗಳಲ್ಲಿ ಓಲೆಯೂ ಒಂದು. ಮಹಾಸತಿಶಿಲ್ಪಗಳಲ್ಲಿ ವಿವಿಧ ಬಗೆಯ ಓಲೆಗಳನ್ನು ಾಸ್ತಿಯರು ಧರಿಸಿದಂತೆ ಕಂಡರಿಸಲಾಗಿರುತ್ತದೆ. ನಾಗಲಾಪುರದ ಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಧರಿಸಿದ ಓಲೆಯು ುಂಡಾಗಿದ್ದು, ಸುತ್ತಲೂ ಹರಳುಗಳಿಂದ ಕೂಡಿದೆ ಮತ್ತು ಮಧ್ಯದಲ್ಲಿ ಪೊಳ್ಳಾಗಿದೆ. ಇದೇ ರೀತಿಯ ಓಲೆಗಳನ್ನು ರಳಿಕಟ್ಟಿಯ ಇಬ್ಬರು ಮಾಸ್ತಿಯರು, ಹೊಂಕಣದ ಮಾಸ್ತಿಯು ಧರಿಸಿರುವುದನ್ನು ಕಾಣಬಹುದು. ಕಾಡಶೆಟ್ಟಿಹಳ್ಳಿಯ ಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಧರಿಸಿರುವ ಓಲೆ ಮೂರು ಸಾಲಿನ ಮಣಿಗಳಿಂದ ಕೂಡಿದ್ದು, ಮಧ್ಯದಲ್ಲಿ ತಗ್ಗಾದಂತೆ ನ್ಯಾಸಗೊಳಿಸಲಾಗಿದೆ. ಇದೇ ರೀತಿಯ ಓಲೆಗಳನ್ನು ಅಬ್ಬಲೂರಿನ ಮಾಸ್ತಿಯು ಧರಿಸಿದ್ದಾಳೆ. ಮುತ್ತೂರು, ಚಿನ್ನಕಟ್ಟಿ, ದರಗಡ್ಡಿ, ಜಂಗಿನಕೊಪ್ಪ ಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯರು ದುಂಡನೆಯ ಸಾಧಾರಣ ಓಲೆಗಳನ್ನು ಧರಿಸಿದ್ದಾರೆ. ಶರಥನಕೊಪ್ಪದಲ್ಲಿರುವ ವಿಶೇಷ ಮಾಸ್ತಿಕಲ್ಲೊಂದರ ಮಾಸ್ತಿಯು ಧರಿಸಿರುವ ಓಲೆಗಳು ಮೂರು ಸುತ್ತಿನ ರಿಂಗುಗಳಂತಿದ್ದು, ುಧ್ಯದಲ್ಲಿ ಪೊಳ್ಳಾಗಿದೆ.

ಜುಮಕಿ: ತಿಮಕಾಪುರದ ವೀರಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಸುತ್ತಲೂ ಮಣಿಗಳಿರುವ ಎಲೆಯ ಆಕಾರದ ುಮಕಿಗಳನ್ನು ಧರಿಸಿದ್ದಾಳೆ. ಹಿರೇಬಾಸೂರಿನ ವೀರಗಲ್ಲೊಂದರಲ್ಲಿ ವೀರನು ಕಿವಿಗಳಿಗೆ ಮೂರು ಹಂತಗಳಲ್ಲಿ ಇಳಿಬಿದ್ದಂತಿರುವ ುಮಕಿ ಧರಿಸಿದ್ದಾನೆ. ಅವು ಛತ್ರಿಯಾಕಾರದಲ್ಲಿದ್ದು, ಆತನ ಭುಜದವರೆಗೂ ಇಳಿಬಿದ್ದಿವೆ. ಕಲಕೇರಿಯ ವೀರಗಲ್ಲಿನಲ್ಲಿ ವೀರ ುತ್ತು ಅಪ್ಸರೆಯರು ಜುಮಕಿಗಳನ್ನು ಧರಿಸಿದ್ದಾರೆ. ಹಿರೇಬಾಸೂರಿನ ಮಾಸ್ತಿಯ ಓಲೆಯ ಕೆಳಗೆ ಜುಮಕಿ ಇಳಿಬಿದ್ದಂತೆ ಂಡರಿಸಿದ್ದಾರೆ.

ಕುಂಡಲ: ಸಾಮಾನ್ಯವಾಗಿ ಪುರುಷರು ಧರಿಸುವ ಈ ಆಭರಣವನ್ನು ಲೋಲಾಕುವಿನಂತೆ ಚಿಕ್ಕದಾದ ಸರಪಳಿಗೆ ಾಲ್ಕು ಮುತ್ತುಗಳನ್ನು ಪೋಣಿಸಿ, ಅವನ್ನು ಚಿನ್ನದ ಕಟ್ಟಿನಲ್ಲಿ ಬಂಧಿಸಲಾಗಿರುತ್ತದೆ. ಇವುಗಳಲ್ಲಿ ಮಕರಕುಂಡಲ, ಪತ್ರಕುಂಡಲ, ತ್ನಕುಂಡಲ, ಶಂಖಪತ್ರಕುಂಡಲ, ಸರ್ಪಕುಂಡಲಗಳೆಂಬ ವಿಧಗಳಿವೆ. ಹಿರೇಕೊಣತಿ ಮತ್ತು ಗುತ್ತಲದ ವೀರಗಲ್ಲುಗಳಲ್ಲಿಯ



ಆಭರಣಗಳ ಅಲಂಕಾರವಿರುವ ವೀರಮಾಸ್ತಿ, ಹಳೆನಿಡ್ನೇಗಿಲು

ವೀರರು ನಾಲ್ಕು ಮುತ್ತುಗಳನ್ನು ಹೊಂದಿರುವ ಕುಂಡಲಗಳನ್ನು ಧರಿಸಿದ್ದು, ಅವು ಮುಖದಲ್ಲಿ ಎದ್ದು ಕಾಣುತ್ತವೆ. ಹಿರೇಕೊಣತಿಯ ಇನ್ನೊಂದು ವೀರಮಾಸ್ತಿಕಲ್ಲಿನಲ್ಲಿರುವ ವೀರನು ಕುಂಡಲಗಳನ್ನು ಧರಿಸಿದ್ದು, ಅವುಗಳ ಮೇಲಿನ ಎರಡು ಮುತ್ತುಗಳು ಚಿಕ್ಕದಾಗಿಯೂ, ಕೆಳಗಿನ ಎರಡು ಮುತ್ತುಗಳು ದೊಡ್ಡದಾಗಿಯೂ ಚಿತ್ರಿಸಲ್ಪಟ್ಟಿವೆ.

ನಕ್ಷತ್ರ ಕುಂಡಲ: ಹನುಮನಕೊಪ್ಪ ಮತ್ತು ತಿಪ್ಪಾಯಿಕೊಪ್ಪದ ಸ್ಮಾರಕಶಿಲ್ಪಗಳಲ್ಲಿರುವ ವೀರರು ನಕ್ಷತ್ರಕುಂಡಲಗಳನ್ನು ಧರಿಸಿದ್ದಾರೆ. ನಕ್ಷತ್ರದಂತೆ ತೋರುವ ಇವು ನಾಲ್ಕು ಹರಳುಗಳನ್ನು ಹೊಂದಿವೆ.

ರಿಂಗು: ಬಳೆಯಾಕಾರದಲ್ಲಿ ಚಿಕ್ಕದಾಗಿ ಮಾಡಿರುವ ಇದು ಕಿವಿಗೆ ಧರಿಸುವ ಆಭರಣವಾಗಿದೆ. ಹಾವೇರಿ ವೀರಗಲ್ಲಿನಲ್ಲಿರುವ ಸೈನಿಕರು ರಿಂಗು ಧರಿಸಿದ್ದಾರೆ. ಕಾರಡಗಿಯ ಮತ್ತು ತಿಪ್ಪಾಯಿಕೊಪ್ಪದ ವೀರಗಲ್ಲಿನಲ್ಲಿರುವ ವೀರರು ಈ ರೀತಿಯ ಆಭರಣಗಳನ್ನು ಧರಿಸಿದ್ದಾರೆ. ಜಂಗಿನಕೊಪ್ಪದ ವೀರಗಲ್ಲಿನ ವೀರನೂ ಸಹ ರಿಂಗು ಧರಿಸಿರುವುದನ್ನು ಕಾಣಬಹುದು. ನೂಲಗೇರಿಯ ವೀರಗಲ್ಲಿನ ವೀರನು ಕಿವಿಗೆ ರಿಂಗು ಧರಿಸಿದ್ದಾನೆ.


ಲೋಲಾಕು: ಕಿವಿಯಲ್ಲಿ ನೇತಾಡುವಂತೆ ಧರಿಸುವ ಒಂದು ಆಭರಣ. ಸಿಡೇನೂರು ಗ್ರಾಮದ ಆತ್ಮಬಲಿದಾನ ಶಿಲ್ಪವೊಂದರಲ್ಲಿಯ ವೀರನು ಕಿವಿಗಳಲ್ಲಿ ಚೌಕ ಘನಾಕೃತಿಯಲ್ಲಿರುವ ಲೋಲಾಕುಗಳನ್ನು ಧರಿಸಿದ್ದಾನೆ. ಕಿವಿಗಳಲ್ಲಿ ಜೋತಾಡುವಂತೆ ಕಂಡರಿಸಿರುವ ಇವುಗಳ ಪ್ರತಿಯೊಂದು ಚೌಕದಲ್ಲಿಯೂ ನಾಲ್ಕು ನಾಲ್ಕರಂತೆ ಮಣಿಗಳ ಅಲಂಕರಣೆ ಇದೆ. ಗುಂಡೂರಿನ ವೀರಮಾಸ್ತಿಕಲ್ಲಿನಲ್ಲಿರುವ ವೀರನು ಕಿವಿಗಳಲ್ಲಿ ಜೋತಾಡುತ್ತಿರುವಂತೆ ಲೋಲಾಕುಗಳನ್ನು ಧರಿಸಿದ್ದಾನೆ. ಹಿರೇಕೊಣತಿಯ ವೀರಗಲ್ಲಿನಲ್ಲಿರುವ ವೀರ, ಸೈನಿಕರು ಲೋಲಕುಗಳನ್ನು ಧರಿಸಿದ್ದಾರೆ.

ಗ್ರೀವ: ಗ್ರೀವ ಎಂದರೆ ಕತ್ತು ಅಥವಾ ಕೊರಳು ಎಂದರ್ಥ. ಕೊರಳಿಗೆ ಅಂಟಿಕೊಂಡಂತಿರುವ ಆಭರಣವೇ ಗ್ರೀವ. ಸಾಮಾನ್ಯವಾಗಿ ಮಾಸ್ತಿಕಲ್ಲುಗಳಲ್ಲಿರುವ ಮಹಾಸತಿಯರು ಇದನ್ನು ಧರಿಸಿರುವುದನ್ನು ಕಾಣುತ್ತೇವೆ. ನಾಗಲಾಪುರ ಮತ್ತು ತಿಪ್ಪಾಯಕೊಪ್ಪದ ಮಾಸ್ತಿಕಲ್ಲುಗಳಲ್ಲಿಯ ಮಾಸ್ತಿಯರು ಇದನ್ನು ಧರಿಸಿದ್ದು, ಅವುಗಳಿಗೆ ಪದಕಗಳಿವೆ. ಅಧ್ಯಯನ ಪ್ರದೇಶದ ನಿಡ್ನೇಗಿಲು, ದೂಪದಹಳ್ಳಿ, ಅರಳಿಕಟ್ಟಿ, ಕಾರ್ಗಿ, ಮಾಸಣಗಿ, ಧೂಳಿಕೊಪ್ಪ, ಹಿರೇಕೆರೂರು, ಮುತ್ತೂರು, ಕಾಟೇನಹಳ್ಳಿ, ಅಬ್ಬಲೂರು, ಚೀರನಹಳ್ಳಿ, ಹನುಮನಕೊಪ್ಪ, ಆಡೂರು, ಹೆರೂರು, ಹಾವಣಗಿ, ಬಿದರಗಡ್ಡಿ, ಹೆಡಿಯಾಲ, ದಶರಥನಕೊಪ್ಪ ಮುಂತಾದ ಕಡೆಗಳಲ್ಲಿರುವ ಮಾಸ್ತಿ ಮತ್ತು ವೀರಮಾಸ್ತಿಕಲ್ಲುಗಳ ಮಾಸ್ತಿಯರು ಇಂಥ ಆಭರಣವನ್ನು ಧರಿಸಿದ್ದಾರೆ. ಬಾಳಂಬೀಡು, ಬನ್ನಿಹಟ್ಟಿ ಮತ್ತು ಹಿರೇಬಾಸೂರುಗಳಲ್ಲಿಯ ವೀರಮಾಸ್ತಿಕಲ್ಲುಗಳ ಮಾಸ್ತಿ ಮತ್ತು ವೀರರು ಗ್ರೀವ ಆಭರಣವನ್ನು ಧರಿಸಿದ್ದಾರೆ. ಮಂತ್ರವಾಡಿಯ ವೀರಮಾಸ್ತಿಕಲ್ಲಿನ ವೀರನು ಈ ಆಭರಣವನ್ನು ಧರಿಸಿದ್ದಾನೆ.

ಉಪಗ್ರೀವ: ಗ್ರೀವಕ್ಕಿಂತ ಸ್ವಲ್ಪ ಕೆಳಭಾಗದಲ್ಲಿ ಒಂದು ಎಳೆಯ ಸರದಂತೆ ಇರುವ ಆಭರಣವೆ ಉಪಗ್ರೀವ. ಸಾಮಾನ್ಯವಾಗಿ ಸ್ತ್ರೀಯರು ಧರಿಸುವ ಈ ಆಭರಣವು ಗ್ರೀವದೊಂದಿಗೆ ಇರುವುದನ್ನು ಕಾಣುತ್ತೇವೆ. ಹಾವಣಗಿಯ ಮಾಸ್ತಿಯ ಕೊರಳಲ್ಲಿರುವ ಉಪಗ್ರೀವವು ಪದಕವನ್ನು ಹೊಂದಿದೆ. ಬಾಳಂಬೀಡು ಗ್ರಾಮದ ವೀರಮಾಸ್ತಿಕಲ್ಲಿನ ವೀರ ಮತ್ತು ಮಾಸ್ತಿಯರು ಉಪಗ್ರೀವವನ್ನು ಧರಿಸಿದ್ದಾರೆ. ಅಧ್ಯಯನ ಪ್ರದೇಶದ ನಾಗಲಾಪುರ, ಅಬ್ಬಲೂರು, ಚೀರನಹಳ್ಳಿ, ಹನುಮನಕೊಪ್ಪ, ಜಂಗಿನಕೊಪ್ಪ, ಬಿದರಗಡ್ಡಿ,

ಾಸಣಗಿ, ನಿಡ್ನೇಗಿಲು, ಹೆಡಿಯಾಲ, ಹೆರೂರು, ಆಡೂರು ಳಲ್ಲಿರುವ ಮಾಸ್ತಿ ಮತ್ತು ವೀರಮಾಸ್ತಿಕಲ್ಲುಗಳಲ್ಲಿಯ ಮಹಾ ತಿಯರು ಉಪಗ್ರೀವ ಧರಿಸಿರುವುದನ್ನು ಕಾಣಬಹುದು.

ಕಂಠಿಹಾರ: ಕುತ್ತಿಗೆಯಿಂದ ಸ್ತನಗಳವರೆಗೆ ಈ ಂಠಿಹಾರ ಮೂರರಿಂದ ಐದು ಎಳೆಗಳಲ್ಲಿ ಕುತ್ತಿಗೆ ಮತ್ತು ದೆಯ ಮೇಲೆ ಹರಡಿರುತ್ತದೆ. ಇದೊಂದು ದೊಡ್ಡ ಕ್‌ಲೇಸ್ ತರಹದಲ್ಲಿ ಕಾಣುತ್ತದೆ. ಇವುಗಳಲ್ಲಿ ವೈವಿಧ್ಯತೆಯನ್ನು ಣಬಹುದು. ಕೊರಳಿನ ಹಾರಗಳಲ್ಲಿ ವೇಷಿತ, ವಿತತ, ಂಥಿಮತ್, ಮುಕ್ತಕ, ಮಂಜರಿ, ಸ್ತವಕ ಎಂಬ ವಿಧಗಳಿವೆ. ಂಚಿನೆಗಳೂರಿನ ಸತಿಶಿಲೆಯ ಮಾಸ್ತಿಯು ಮೂರು ಳೆಗಳಿಂದ ಕೂಡಿದ ಕಂಠಿಹಾರ ಧರಿಸಿದ್ದು, ಅದರ ಕೆಳಗಿನ ಾಗದಲ್ಲಿ ಕಮಲದ ದಳಗಳಂತೆ ವಿನ್ಯಾಸಗೊಳಿಸಲಾಗಿದೆ. ರೇಬಾಸೂರು, ದಶರಥನಕೊಪ್ಪ ಮತ್ತು ದೂಪದಹಳ್ಳಿಯ ಮಾಸ್ತಿಶಿಲೆಯಲ್ಲಿರುವ ಮಹಾಸತಿಯರು ಸಂಪೂರ್ಣ ಕುತ್ತಿಗೆ ಮುಚ್ಚುವಂತೆ ಕಂಠಿಹಾರ ಧರಿಸಿದ್ದಾರೆ. ಪ್ರಸ್ತುತ ಅಧ್ಯಯನ ಪ್ರದೇಶದ ಹಾದ್ರಿಹಳ್ಳಿ, ಹೆಡಿಯಾಲ, ಹೆರೂರು, ಂಗಾಯಿಕೊಪ್ಪ, ಚಿಕ್ಕಣಜಿ, ಹೊಂಕಣ, ದಶರಥನಕೊಪ್ಪ, ರಹ, ದೂಪದಹಳ್ಳಿ ಮುಂತಾದೆಡೆಗಳಲ್ಲಿಯ ಮಾಸ್ತಿಕಲ್ಲಿನಲ್ಲಿರುವ ಸತಿಯರು ಕಂಠಿಹಾರವನ್ನು ಧರಿಸಿದ್ದಾರೆ. ಂಡಗಟ್ಟಿಯ ಮಾಸ್ತಿಶಿಲೆಯಲ್ಲಿರುವ ಮಾಸ್ತಿಯ ಕಂಠಿಹಾರಕ್ಕೆ ಮುಂದೆ ಪದಕವಿದೆ. ಬಾಳಂಬೀಡಿನ ವೀರ ಮಾಸ್ತಿಕಲ್ಲಿನಲ್ಲಿ ುವ ವೀರನು ಕಂಠಿಹಾರವನ್ನು ಧರಿಸಿದ್ದಾನೆ. ಅಬ್ಬಲೂರಿನ ೀರಗಲ್ಲೊಂದರ ವೀರನು ಒಂದೇ ಎಳೆಯ ಕಂಠಿಹಾರ ಧರಿಸಿದ್ದಾನೆ.


ಆಭರಣವಿರುವ ಸತಿ ಮೆರವಣಿಗೆಯ ವೀರಗಲ್ಲು, ಕಲಕೇರಿ

ಮುತ್ತಿನಸರ: ಶಿಲ್ಪಶಾಸ್ತ್ರದಲ್ಲಿ ಇದನ್ನು 'ಹಾರ' ಎಂದು ಗುರುತಿಸಿದ್ದಾರೆ. ಇದು ವಕ್ಷಸ್ಥಳದ ಬಹುಭಾಗವನ್ನು ಅಲಂಕರಿಸಿದ್ದು, ಸ್ತನಗಳ ಮೇಲೆ ಹರಡಿರುವಂತೆ ಕಂಡರಿಸಲಾಗಿರುತ್ತದೆ. ಕೆಲವೊಮ್ಮೆ ಮಾಸ್ತಿಶಿಲ್ಪಗಳಲ್ಲಿ ಹಾರವನ್ನು ಸ್ತನಗಳ ನಡುವೆ ಜೋತಾಡುತ್ತಿರುವಂತೆ ಕೆತ್ತಿರುತ್ತಾರೆ. ಅಪ್ಸರೆಯರೂ ಸಹ ಇಂಥ ಹಾರವನ್ನು ಧರಿಸಿದಂತೆ ಚಿತ್ರಿಸಿರುತ್ತಾರೆ. ಹಿರೇಕೊಣತಿಯ ೀರನು ಧರಿಸಿರುವ ಹಾರದ ಮಧ್ಯೆ ಐದು ಮಣಿಗಳಿಂದ ಮಾಡಿದ ಪದಕವನ್ನು ಕಂಡರಿಸಿದ್ದಾರೆ. ಹಿರೇಅಣಜಿಯ ಮಾಸ್ತಿಕಲ್ಲಿನಲ್ಲಿ ಸತಿಯು ಚೌಕಾಕಾರದ ಪದಕವಿರುವ ಸರವನ್ನು ಧರಿಸಿದ್ದಾಳೆ. ನಿಡ್ನೇಗಿಲು ಮಾಸ್ತಿಶಿಲೆಯ ಸತಿಯು ಧರಿಸಿರುವ ಸರದಲ್ಲಿ ನಕ್ಷತ್ರದಂತಹ ಪದಕವಿದೆ. ನಾಗಲಾಪುರ, ತಾವರಗಿ ಮತ್ತು ವರಹಗಳಲ್ಲಿಯ ಮಾಸ್ತಿಶಿಲೆಯಲ್ಲಿರುವ ಸತಿಯರು ಧರಿಸಿದ ಹಾರ ಎರಡೂ ಸ್ತನಗಳ ಮೇಲೆ ಹರಡಿರುವಂತೆ ಚಿತ್ರಿಸಲಾಗಿದೆ. ಕಾಡಸೆಟ್ಟಿಹಳ್ಳಿ, ಅರಳಿಕಟ್ಟಿ, ಮುತ್ತೂರು, ಚಿನ್ನಿಕಟ್ಟಿ, ನಿಡ್ನೇಗಿಲು, ಹನುಮನಕೊಪ್ಪ, ತಿಪ್ಪಾಯಿಕೊಪ್ಪ, ಚಿಕ್ಕೆರೂರುಗಳ ಸ್ಮಾರಕಶಿಲೆಗಳಲ್ಲಿರುವ ಮಾಸ್ತಿಯರು ಧರಿಸಿರುವ ಮುತ್ತಿನಸರವು ಸ್ತನಗಳ ಮೇಲಿಂದ ಜೋತುಬಿದ್ದಂತೆ ಕಂಡರಿಸಲಾಗಿದೆ. ಹಿರೇಕೆರೂರು, ಗಂಗಾಯಿಕೊಪ್ಪ, ಸಿದ್ದಾಪುರ, ಕಾಟೇನಹಳ್ಳಿ, ಕಾಡಸೆಟ್ಟಿಹಳ್ಳಿ, ಬಾಳಂಬೀಡು, ಕಲಕೇರಿ, ಅಂತರವಳ್ಳಿ ಮತ್ತು ಅರಳಿಕಟ್ಟಿಗಳಲ್ಲಿಯ ಮಾಸ್ತಿಶಿಲೆಯ ಮಾಸ್ತಿಯರು ಧರಿಸಿರುವ ಮುತ್ತಿನ ಸರವು ಎರಡೂ ಸ್ತನಗಳ ಮಧ್ಯದಲ್ಲಿ ಇಳಿಬಿದ್ದಂತೆ ಚಿತ್ರಿಸಲಾಗಿದೆ. ಕಲಕೇರಿಯ ವೀರಗಲ್ಲಿನಲ್ಲಿ ವೀರನು ಧರಿಸಿದ ಹಾರವು ಸರಪಳಿಯಂತೆ ತೋರುತ್ತದೆ.

ವಂಕಿ: ಅಂಕುಡೊಂಕಾಗಿ ಕಾಣುವ ಇದು ಸ್ತ್ರೀಯರು ಧರಿಸುವ ಆಭರಣವಾಗಿದೆ. ಇದನ್ನು ರಟ್ಟೆಗೆ (ಬಾಹು) ಧರಿಸುತ್ತಿದ್ದು, ಸಾಮಾನ್ಯವಾಗಿ ಬಲಗೈ ರಟ್ಟೆಗೆ ಹಾಕಿರುತ್ತಾರೆ. ನೆಲ್ಲಿಕೊಪ್ಪದಲ್ಲಿರುವ ವೀರಮಾಸ್ತಿಕಲ್ಲೊಂದರ ವೀರ ಮತ್ತು ಮಾಸ್ತಿ ಇಬ್ಬರೂ ಬಲತೋಳಿಗೆ ವಂಕಿ ಧರಿಸಿದ್ದಾರೆ. ಅಂಗರಗಟ್ಟಿ, ಮುತ್ತೂರು, ಚಿಕ್ಕಣಗಿ, ಚೀರನಹಳ್ಳಿ, ಬನ್ನಿಹಟ್ಟಿ,

ನಿಡ್ನೇಗಿಲುಗಳಲ್ಲಿಯ ಮಾಸ್ತಿಶಿಲೆಯಲ್ಲಿರುವ ಸತಿಯರು ಬಲಗೈ ರಟ್ಟೆಗೆ ವಂಕಿಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ.

ತೋಳುಬಂದಿ (ಬಾಜುಬಂದ): ಸ್ಮಾರಕಶಿಲೆಗಳಲ್ಲಿ ಸ್ತ್ರೀ–ಪುರುಷರಿಬ್ಬರು ತೋಳುಬಂದಿ ಧರಿಸಿರುವಂತೆ ಚಿತ್ರಿಸಲಾಗಿರುತ್ತದೆ. ಇದನ್ನು ಎರಡೂ ರಟ್ಟೆಗಳಿಗೆ ಧರಿಸುತ್ತಾರೆ. ಇವುಗಳಲ್ಲಿ ಕೆಲವು ಸಾಧಾರಣವಾಗಿದ್ದರೆ ಮತ್ತೆ ಕೆಲವು ಮಣಿ–ಮುತ್ತುಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ಗಂಗಾಯಿಕೊಪ್ಪದ ಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಎಡಗೈ ರಟ್ಟೆಗೆ ತೋಳುಬಂದಿ ಧರಿಸಿದ್ದು ಬಲಗೈಗೆ ವಂಕಿ ಧರಿಸಿದ್ದಾಳೆ. ನೆಲ್ಲಿಕೊಪ್ಪದ ವೀರಮಾಸ್ತಿಕಲ್ಲಿನಲ್ಲಿ ವೀರ ಮತ್ತು ಮಾಸ್ತಿಯರು ಬಲಗೈಗಳಿಗೆ ವಂಕಿ ಧರಿಸಿದ್ದು, ಎಡಗೈ ರಟ್ಟೆಗಳಿಗೆ ಮಾತ್ರ ಬಾಜುಬಂದ ಧರಿಸಿದ್ದಾರೆ. ಹುಡೆಯ ಹಂದಿಬೇಟೆ ಶಿಲ್ಪದಲ್ಲಿ ಮಾಸ್ತಿ ಮತ್ತು ವೀರ ಇಬ್ಬರು ಬಾಜುಬಂದಗಳನ್ನು ಧರಿಸಿದ್ದಾರೆ. ಅಧ್ಯಯನ ಪ್ರದೇಶದ ಕಾಡಸೆಟ್ಟಿಹಳ್ಳಿ, ಅಕ್ಕಿವಳ್ಳಿ, ಉಪ್ಪುಣಸಿ, ಹಿರೇಕೆರೂರು, ಚಳಗೇರಿ, ಕಡಕೋಳ, ಮಂತ್ರೋಡಿ, ಮೆಳ್ಳಾಗಟ್ಟಿ, ಹತ್ತಿಮತ್ತೂರುಗಳಲ್ಲಿನ ಸ್ಮಾರಕಶಿಲೆಗಳಲ್ಲಿಯ ಮಾಸ್ತಿಯರು ಸಾಧಾರಣ ಬಾಜುಬಂದಗಳನ್ನು ಧರಿಸಿದ್ದಾರೆ. ವರಹದ ವೀರಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಎರಡು ತೋಳುಗಳಿಗೆ ಎರಡೆರಡು ಬಾಜುಬಂದ ಧರಿಸಿದ್ದರೆ, ವೀರನು ಒಂದೊಂದು ಬಾಜುಬಂದ ಧರಿಸಿದ್ದಾನೆ. ಚೀರನಹಳ್ಳಿ ಮತ್ತು ದಶರಥನಕೊಪ್ಪದಲ್ಲಿರುವ ವೀರಮಾಸ್ತಿಕಲ್ಲುಗಳಲ್ಲಿನ ಮಾಸ್ತಿಯರು ಮೂರು ಎಳೆಗಳಂತಿರುವ ಬಾಜುಬಂಧಗಳನ್ನು ಧರಿಸಿದ್ದರೆ ಅರಳಿಕಟ್ಟೆ, ಹಾದ್ರಿಹಳ್ಳಿ, ಕಾರ್ಗಿ, ವರಹ, ಚಿಕ್ಕೆರೂರುಗಳಲ್ಲಿಯ ಮಾಸ್ತಿಶಿಲೆಗಳಲ್ಲಿನ ಮಾಸ್ತಿಯರು ಎರಡು ಎಳೆಗಳಂತಿರುವ ತೋಳುಬಂದ ಧರಿಸಿದ್ದಾರೆ. ದಮ್ಮಳ್ಳಿಯ ವೀರಮಾಸ್ತಿಕಲ್ಲಿನ ವೀರ ಮತ್ತು ಮಾಸ್ತಿ ಇಬ್ಬರೂ ತೋಳುಬಂದ ಧರಿಸಿದ್ದಾರೆ. ವರಹ, ಹಿರೇಕೊಣತಿ, ಕಚವಿ, ಕೋಡ, ಗಳಪೂಜಿಗಳಲ್ಲಿರುವ ಒಕ್ಕೈಮಾಸ್ತಿಕಲ್ಲುಗಳ ತೋಳುಗಳಿಗೆ, ವರಹ, ಸಾತ್ನಳ್ಳಿಗಳಲ್ಲಿರುವ ಇಕ್ಕೈಮಾಸ್ತಿಕಲ್ಲುಗಳ ತೋಳುಗಳಿಗೆ ಹಾಗೂ ಚಿನ್ನಮುಳಗುಂದದ ಬಹುಕ್ಕೈ ಮಾಸ್ತಿಕಲ್ಲಿನ ತೋಳುಗಳಿಗೆ ಬಾಜುಬಂದಗಳನ್ನು ಹಾಕಿದಂತೆ ಚಿತ್ರಿಸಲಾಗಿದೆ. ವರಹದ ವೀರಮಾಸ್ತಿಕಲ್ಲಿನಲ್ಲಿರುವ ವೀರನು ಧರಿಸಿದ ತೋಳುಬಂದಕ್ಕೆ ಮಧ್ಯದಲ್ಲಿ ಮುತ್ತುಗಳನ್ನು ಪೋಣಿಸಲಾಗಿದೆ. ಕಡಕೋಳದ ವೀರಗಲ್ಲಿನಲ್ಲಿರುವ ವೀರನು ಬಂಗಾರದ ಅಗಲವಾದ ಬಾಜುಬಂದ ಧರಿಸಿದ್ದಾನೆ. ಆಲದಕಟ್ಟಿಯ ವೀರಮಾಸ್ತಿಕಲ್ಲುಗಳಲ್ಲಿರುವ ವೀರರು ತೋಳುಬಂದಿ ಧರಿಸಿದ್ದು, ಅವುಗಳ ಮಧ್ಯದಲ್ಲಿ ಮುತ್ತಿನ ಅಲಂಕರಣೆಯಿದೆ.

ಬಳೆ: ಬಳೆಗಳು ಸ್ತ್ರೀಯರಿಗೆ ಮುತ್ತೈದೆತನದ ದ್ಯೋತಕವಾಗಿವೆ. ಆದರೆ ಸ್ಮಾರಕಶಿಲ್ಪಗಳಲ್ಲಿ ಸ್ತ್ರೀ–ಪುರುಷರಿಬ್ಬರೂ ಬಳೆಗಳನ್ನು ಧರಿಸಿರುವಂತೆ ಕಂಡರಿಸಲಾಗಿರುತ್ತದೆ. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳಲ್ಲಿ ಹಲವು ರೀತಿಯ ಬಳೆಗಳು ಕಂಡುಬರುತ್ತವೆ. ಸ್ಮಾರಕಶಿಲ್ಪಗಳಲ್ಲಿ ಸಾಮಾನ್ಯವಾಗಿ ಗಾಜಿನ ಬಳೆಗಳಂತಿರುವ ಬಳೆಗಳನ್ನು ಕಂಡರಿಸಿರುವುದು ಅಪರೂಪ. ಬಂಗಾರದ ದಪ್ಪನೆಯ ವಿವಿಧ ಮಾದರಿಯ ಬಳೆಗಳನ್ನು ಹೆಚ್ಚಾಗಿ ಧರಿಸಿರುವುದನ್ನು ಕಾಣಬಹುದು. ಮಾಸ್ತಿಶಿಲ್ಪಗಳಲ್ಲಿಯ ತೋಳಬಂದಿ ಮತ್ತು ಬಳೆಗಳು ಒಂದೇ ಮಾದರಿಯ ವಿನ್ಯಾಸವನ್ನು ಹೊಂದಿರುವಂತೆ ತೋರುತ್ತವೆ. ಸಾಮಾನ್ಯವಾಗಿ ಎಲ್ಲಾ ಸ್ಮಾರಕಶಿಲ್ಪಗಳಲ್ಲಿ ಮಾಸ್ತಿ ಮತ್ತು ವೀರರು ಬಳೆಯೊಂದಿಗೆ ತೋಳುಬಂದಿ ಧರಿಸಿರುವುದನ್ನು ಕಾಣಬಹುದು. ಕೆಲವು ಮಾಸ್ತಿಶಿಲೆಗಳಲ್ಲಿ ಮಹಾಸತಿಯರು ಮೇಲಕ್ಕೆ ಎತ್ತಿದ ಬಲಗೈಗೆ ಮೂರು ಬಳೆಗಳನ್ನು ಎಡಗೈಗೆ ಎರಡು ಬಳೆಗಳನ್ನು ಧರಿಸಿರುವಂತೆ ಕಂಡರಿಸಲಾಗಿರುತ್ತದೆ. ಕಡಕೋಳದ ವೀರನು ಎರಡೂ ಕೈಗಳಿಗೆ ಬಂಗಾರದ ಬಳೆಗಳನ್ನು ಧರಿಸಿದ್ದಾನೆ. ವರಹದ ವೀರಮಾಸ್ತಿಕಲ್ಲೊಂದರಲ್ಲಿನ ವೀರನು ಮುಂಗೈಗೆ ಕೈಗಡಿಯಾರ ರೀತಿಯಲ್ಲಿರುವ ಅಗಲವಾದ ಬಳೆಗಳನ್ನು ಧರಿಸಿದ್ದಾನೆ. ಗೊಡಚಿಕೊಂಡದ ವೀರಮಾಸ್ತಿಕಲ್ಲಿನ ವೀರ ಮತ್ತು ಮಾಸ್ತಿ ಇಬ್ಬರೂ ಒಂದೊಂದರಂತೆ ಕೈಗಳಿಗೆ ಬಳೆಗಳನ್ನು ಧರಿಸಿದ್ದಾರೆ. ಗಳಪೂಜಿಯ ಮಾಸ್ತಿಕಲ್ಲಿನ ಸತಿಯು ಬಾಜುಬಂದ ಧರಿಸದೆ ಕೇವಲ ಬಳೆಗಳನ್ನು ಮಾತ್ರ ಧರಿಸಿದ್ದಾಳೆ. ಶಿರಗೋಡಿನ ಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಎರಡೂ ಕೈಗಳಿಗೆ ಮುಂದೆ ಒಂದು ಹಿಂದೆ ಎರಡು ಬಳೆಗಳನ್ನು ಧರಿಸಿದ್ದು, ಮಧ್ಯದಲ್ಲಿರುವ ಮೂರು ಬಳೆಗಳನ್ನು, ಪಟ್ಟಿಯಿಂದ ಬಂಧಿಸಿದಂತೆ ಕಂಡರಿಸಲಾಗಿದೆ. ಹಾದ್ರಿಹಳ್ಳಿ ಮತ್ತು ಅರಳಿಕಟ್ಟೆಯ ಮಾಸ್ತಿಕಲ್ಲುಗಳಲ್ಲಿರುವ ಮಾಸ್ತಿಯರು ತಮ್ಮ ಕೈಗಳಿಗೆ ಒಂದೊಂದು ಬಳೆಯನ್ನು ಧರಿಸಿದ್ದಾರೆ. ವರಹದ ಎರಡು ಒಕ್ಕೈ ಮಾಸ್ತಿಕಲ್ಲುಗಳ ತೋಳುಗೈಗಳಿಗೆ ಎರಡೆರಡು ಬಳೆಗಳಿದ್ದರೆ, ಇಲ್ಲಿಯ ಇನ್ನೆರಡು ಇಕ್ಕೈಮಾಸ್ತಿಕಲ್ಲುಗಳ ತೋಳುಗಳಿಗೆ ಮೂರು ಮೂರರಂತೆ ಬಳೆಗಳನ್ನು ಕಂಡರಿಸಲಾಗಿದೆ. ಹಿರೆಕೊಣತಿ, ಕಚವಿ, ಚಿನ್ನಮುಳಗುಂದ, ಕೋಡ, ಗಳಪೂಜಿ, ಸಾತ್ನಳ್ಳಿ ಮುಂತಾದ ಕಡೆಗಳಲ್ಲಿರುವ ತೋಳುಗೈ ಮಾಸ್ತಿಶಿಲೆಗಳ ಕೈಗಳಿಗೆ ಬಳೆಗಳನ್ನು ಕೆತ್ತಲಾಗಿದೆ. ಸಿದ್ದಾಪುರದ ಮಾಸ್ತಿಶಿಲೆಯ ಮಾಸ್ತಿಯು ಕೈತುಂಬ ಬಳೆ ಧರಿಸಿದ್ದಾಳೆ.

ಕಡಗ: ಪುರುಷರು ಕೈಗೆ ಧರಿಸುವ ಆಭರಣಗಳಲ್ಲಿ ಕಡಗವೂ ಒಂದು. ಹಿರೇಕೊಣತಿಯ ವೀರಗಲ್ಲಿನಲ್ಲಿರುವ ವೀರನು ಚಪ್ಪಟೆಯಾಕಾರದ ಕಡಗವನ್ನು ಧರಿಸಿದ್ದಾನೆ. ಕಲಕೇರಿಯ ಕೋಟೆಕಾಳಗದ ವೀರಗಲ್ಲಿನಲ್ಲಿರುವ ವೀರನು ಬಲಗೈಗೆ ದಪ್ಪನಾದ ಎರಡು ಕಡಗಗಳನ್ನು ಧರಿಸಿದ್ದಾನೆ.

ಉಂಗುರ: ಉಂಗುರವು ಸ್ತ್ರೀ-ಪುರುಷರಿಬ್ಬರೂ ಧರಿಸುವ ಆಭರಣವಾಗಿದೆ. ಆದರೆ ಸ್ಮಾರಕಶಿಲ್ಪಗಳಲ್ಲಿ ಹೆಚ್ಚಾಗಿ ಮಾಸ್ತಿಯರು ಉಂಗುರಗಳನ್ನು ಧರಿಸಿರುವುದು ಕಂಡುಬರುತ್ತದೆ. ಹೆಡಿಯಾಲ, ತಿಪ್ಪಾಯಿಕೊಪ್ಪ, ನಿಡ್ನೇಗಿಲು ಮತ್ತು ಆಲದಕಟ್ಟಿಯಲ್ಲಿರುವ ಮಾಸ್ತಿಕಲ್ಲಿನ ಮಹಾಸತಿಯರು ಬಲಗೈ ಹೆಬ್ಬೆರಳಿಗೆ ಮಾತ್ರ ಉಂಗುರವನ್ನು ಧರಿಸಿರುವಂತೆ ಕಂಡರಿಸಲಾಗಿದೆ. ಗುಂಡಗಟ್ಟಿಯ ಮಾಸ್ತಿಕಲ್ಲಿನ ಮಾಸ್ತಿಯು ಬಲಗೈಯ ಐದು ಬೆರಳುಗಳಿಗೂ ಉಂಗುರ ಧರಿಸಿದ್ದಾಳೆ. ಅರಳಿಕಟ್ಟಿಯ ಮಾಸ್ತಿಕಲ್ಲುಗಳಲ್ಲಿನ ಇಬ್ಬರು ಮಾಸ್ತಿಯರು ಎರಡೂ ಕೈಗಳ ಹೆಬ್ಬೆರಳು ಮತ್ತು ತೋರುಬೆರಳುಗಳಿಗೆ ಉಂಗುರಗಳನ್ನು ಧರಿಸಿದ್ದಾರೆ. ನಿಡ್ನೇಗಿಲು ವೀರಮಾಸ್ತಿಕಲ್ಲೊಂದರ ವೀರನು ಹತ್ತು ಬೆರಳುಗಳಿಗೂ ಉಂಗುರಗಳನ್ನು ಧರಿಸಿರುವಂತೆ ಕಂಡರಿಸಲಾಗಿದೆ. ದೂಪದಹಳ್ಳಿಯ ಒಕ್ಕೆಮಾಸ್ತಿಕಲ್ಲಿನಲ್ಲಿ ಐದು ಬೆರಳುಗಳಿಗೂ ಉಂಗುರಗಳನ್ನು ಚಿತ್ರಿಸಲಾಗಿದೆ. ಕೋಡದ ಒಂದು ಒಕ್ಕೈಮಾಸ್ತಿಕಲ್ಲಿನ ಐದುಬೆರಳುಗಳಿಗೆ ಉಂಗುರಗಳಿದ್ದರೆ, ಇನ್ನೊಂದು ಒಕ್ಕೈ ಮಾಸ್ತಿಕಲ್ಲಿನ ಹೆಬ್ಬೆರಳಿಗೆ ಮಾತ್ರ ಉಂಗುರವನ್ನು ಕಂಡರಿಸಲಾಗಿದೆ. ಇವುಗಳ ಉಂಗುರಗಳನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಸಿದ್ದಾಪುರ, ಅರಳೇಶ್ವರ, ಚಿನ್ನಿಕಟ್ಟಿ, ಬಿದರಗಡ್ಡಿ ಮತ್ತು ಹಾವಣಗಿಯ ಮಾಸ್ತಿಕಲ್ಲಿನ ಮಹಾಸತಿಯರು ಉಂಗುರಗಳನ್ನು ಧರಿಸಿದ್ದಾರೆ.

ಸ್ಕಂಧಮಾಲಾ: ಸ್ಕಂಧ ಎಂದರೆ ಹೆಗಲು ಅಥವಾ ಭುಜಾಗ್ರ, ಭುಜದಿಂದ ತೋಳಿನ ಮೇಲೆ ಇಳಿಬಿದ್ದಂತೆ ಧರಿಸುವ ಒಂದು ರೀತಿಯ ಆಭರಣವೇ ಸ್ಕಂಧಮಾಲಾ, ಸ್ಮಾರಕಶಿಲ್ಪಗಳಲ್ಲಿ ಹೆಚ್ಚಾಗಿ ಸ್ತ್ರೀಯರು ಇಂಥ ಆಭರಣಗಳನ್ನು ಧರಿಸಿದಂತೆ ಕಂಡರಿಸಿದ್ದು, ಅಲ್ಲಲ್ಲಿ ಪುರುಷರೂ ಇದನ್ನು ಧರಿಸಿರುವುದು ಕಂಡುಬರುತ್ತದೆ. ದಾರಕ್ಕೆ ಮಣಿ ಮತ್ತು ಮುತ್ತುಗಳನ್ನು ಪೋಣಿಸಿ ತಯಾರಿಸಿದಂತಿರುವ ಈ ಆಭರಣದ ಕುಚ್ಚಗಳು ಮುಂದೆ ಇಳಿಬಿದ್ದಂತೆ ಕಾಣುತ್ತದೆ. ಕಾಡಶೆಟ್ಟಿಹಳ್ಳಿ, ಚೀರನಹಳ್ಳಿ, ಬಾಳಂಬೀಡು, ಹೆರೂರು, ಹೆಡಿಯಾಲ, ಧೂಳಿಕೊಪ್ಪ, ನಿಡ್ನೇಗಿಲು, ಅರಳಿಕಟ್ಟಿ, ಚಿಕ್ಕೆರೂರು, ಸಿಡೇನೂರು, ತಿಮಕಾಪುರ, ಮಾಸಣಗಿ ಮಾಸ್ತಿಶಿಲೆಗಳಲ್ಲಿ ಸತಿಯರು ಸ್ಕಂಧಮಾಲಾ ಧರಿಸಿದ್ದಾರೆ. ಮಂತ್ರವಾಡಿಯ ವೀರಮಾಸ್ತಿಕಲ್ಲಿನಲ್ಲಿ ವೀರನು ಇದನ್ನು ಧರಿಸಿದ್ದರೆ, ವರಹದ ವೀರಮಾಸ್ತಿಕಲ್ಲಿನಲ್ಲಿ ವೀರ ಮತ್ತು ಸತಿ ಇಬ್ಬರೂ ಸ್ಕಂಧಮೂಲ ಧರಿಸಿದಂತೆ ಕಂಡರಿಸಿದ್ದಾರೆ.

ಚನ್ನವೀರ: ಇದೊಂದು ಎದೆಗೆ ಕಟ್ಟಿಕೊಳ್ಳುವ ಆಭರಣವಾಗಿದ್ದು, ಇಂಗ್ಲೀಷಿನ 'ಫಿ' ಅಕ್ಷರದ ಆಕಾರವನ್ನು ಹೊಂದಿರುತ್ತದೆ. ಇದನ್ನು ಎದೆಯ ಗೂಡಿನ ನಡುವೆ ಬರುವಂತೆ ಕಟ್ಟಿಕೊಳ್ಳುತ್ತಾರೆ. ಭುಜದ ಮೇಲಿಂದ ಎರಡು ಸರಗಳು ಕಂಕುಳು ಕೆಳಗಿಂದ ಎರಡು ಸರಗಳನ್ನು ಹಿಂದಕ್ಕೆ ಒಯ್ದು ಬೆನ್ನಿನ ಹಿಂದೆ ಕಟ್ಟಲಾಗಿರುತ್ತದೆ. ಚಳಗೇರಿಯ ಇಬ್ಬರು ವೀರರಿರುವ ಶಿಲೆಯೊಂದರ ಕಲ್ಲಿನ ಒಬ್ಬ ವೀರನು ಹಗ್ಗದಿಂದ ಹೆಗಲ ಮೇಲೆ ಒಂದು ಎಳೆ ಕೆಳಗಿನಿಂದ ಎರಡು ಎಳೆಗಳನ್ನು ತಂದು ಮುಂದೆ ಗಂಟು ಹಾಕಿಕೊಂಡಿದ್ದಾನೆ ಚಿಕ್ಕಣಗಿಯ ವೀರಗಲ್ಲಿನಲ್ಲಿರುವ ವೀರನೊಬ್ಬ ಎದೆಗೆ ಹಗ್ಗದಂತಿರುವ ಚನ್ನವೀರ ಧರಿಸಿದ್ದಾನೆ.

ಉಪವೀತ: ಉಪವೀತವೊಂದು ವಿಶೇಷವಾದ ಆಭರಣವಾಗಿದ್ದು, ಪಲ್ಲವರ ಮೂರ್ತಿಶಿಲ್ಪದಲ್ಲಿ ಕಾಣುತ್ತೇವೆ. ವಿಷ್ಣುಶಿಲ್ಪದಲ್ಲಿ ಉಪವೀತ ನಡುವಿಗೆ ಮಾತ್ರ ಮುಗಿಯದೆ ಬಲಗಾಲ ಹಿಮ್ಮಡಿಯವರೆಗೂ ಇಳಿಬಿದ್ದಿರುತ್ತದೆ. ಚೋಳರ ಶಿಲ್ಪಗಳಲ್ಲಿ ಉಪವೀತವು ಈಗಿನ ಜನಿವಾರದಂತೆಯೇ ಕಾಣಿಸಿಕೊಳ್ಳುತ್ತದೆ. ಉಪವೀತಗಳಿಗೆ ಮಣಿಗಳನ್ನು ಪೋಣಿಸಿದಂತೆ ತೋರಿಸಿರುವುದುಂಟು. ಮೂರೆಳೆಯ ದಾರದಂತೆ ಇದನ್ನು ಶಿಲೆಗಳಲ್ಲಿ ಕಾಣಿಸಿರುವುದನ್ನು ಕಾಣಬಹುದು. ಇನ್ನು ವನಮಾಲವನ್ನು ಇದೇ ರೀತಿ ಶಿಲೆಗಳಲ್ಲಿ ಕಂಡರಿಸಿರುತ್ತಾರೆ. ಕಾಡಿನ ಹೂವುಗಳಿಂದ ಈ ವನಮಾಲಾವನ್ನು ತಯಾರಿಸಿರುತ್ತಾರೆ. ಅಧ್ಯಯನ ಪ್ರದೇಶದ ದಶರಥನಕೊಪ್ಪ, ಹಿರೇಬಾಸೂರು, ಹೆಡಿಯಾಲ, ತಿಪ್ಪಾಯಿಕೊಪ್ಪ, ಅರಳಿಕಟ್ಟಿಗಳಲ್ಲಿರುವ ಮಾಸ್ತಿಕಲ್ಲುಗಳಲ್ಲಿನ ಮಾಸ್ತಿಯರು ಉಪವೀತವನ್ನು ಧರಿಸಿರುವಂತೆ ಕಂಡರಿಸಲಾಗಿದೆ. ನೆಲ್ಲಿಕೊಪ್ಪ, ನಿಡ್ನೇಗಿಲು ಮತ್ತು ವರಹಗಳಲ್ಲಿರುವ ವೀರಮಾಸ್ತಿಕಲ್ಲುಗಳಲ್ಲಿನ ವೀರರು ಉಪವೀತವನ್ನು ಧರಿಸಿರುವಂತೆ ಕೆತ್ತಲಾಗಿದ್ದು, ತಿಮಕಾಪುರದ ವೀರಮಾಸ್ತಿಕಲ್ಲಿನ ವೀರ ಮತ್ತು ಮಾಸ್ತಿ ಇಬ್ಬರೂ ಉಪವೀತವನ್ನು ಧರಿಸಿದಂತೆ ಚಿತ್ರಿಸಲಾಗಿದೆ.

ಉದರಬಂಧ: ಪುರುಷರು ಧರಿಸುವ ಇಂಥ ಆಭರಣಕ್ಕೆ ಉದರಬಂಧ ಎಂದು ಕರೆಯುತ್ತಾರೆ. ಒಂದು ವೇಳೆ ಇದನ್ನೇ ಸ್ತ್ರೀಯರು ಧರಿಸಿದರೆ ಕುಚಬಂಧವೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಸ್ತ್ರೀ-ಪುರುಷರಿಬ್ಬರೂ ಇದನ್ನು ಎದೆಯ ಕೆಳಭಾಗದಲ್ಲಿ (ಸ್ತನಗಳ ಕೆಳಗೆ) ಬಿಗಿದು ಹಿಂದೆ ಗಂಟು ಹಾಕಿರುತ್ತಾರೆ. ವರಹ ವೀರಮಾಸ್ತಿಕಲ್ಲಿನ ವೀರ ಮತ್ತು ಮಾಸ್ತಿ ಇಬ್ಬರೂ ಇಂತಹ ಆಭರಣವನ್ನು ಧರಿಸಿದ್ದಾರೆ. ವೀರನು ಕಟ್ಟಿರುವ ಉದರಬಂಧವು ಮುತ್ತುಗಳಿಂದ ಮಾಡಲ್ಪಟ್ಟಿದ್ದು ಎರಡು ಎಳೆಗಳನ್ನು ಹೊಂದಿದೆ. ಇಲ್ಲಿಯ ಮಾಸ್ತಿಯು ಧರಿಸಿದ ಕುಚಬಂಧವು ಒಂದೇ ಎಳೆಯನ್ನು ಹೊಂದಿದೆ. ನಿಡ್ನೇಗಿಲು ವೀರಮಾಸ್ತಿಕಲ್ಲಿನ ವೀರನೊಬ್ಬ ಎರಡು ಎಳೆಯ ಸಾದಾ ಉದರಬಂಧವನ್ನು ಧರಿಸಿದ್ದರೆ ಇಲ್ಲಿಯ ಇನ್ನೊಂದು



ತುರುಗೋಳ್ ಸ್ಮಾರಕಶಿಲ್ಪ, ಅಬಲೂರು

ವೀರಮಾಸ್ತಿಕಲ್ಲಿನಲ್ಲಿರುವ ವೀರನು ಅಗಲವಾದ ನಡುಪಟ್ಟಿಯಂತಿರುವ ಉದರಬಂಧವನ್ನು ಧರಿಸಿದ್ದಾನೆ. ದೇವಗೆರೆಯ ಏಕವೀರನ ಶಿಲ್ಪದಲ್ಲಿರುವ ವೀರನು ತೆಳುವಾದ ಪಟ್ಟಿಯಂತಿರುವ ಉದರಬಂಧವನ್ನು ಧರಿಸಿದ್ದಾನೆ.

ಕಟಿಸೂತ್ರ: ಇದನ್ನು ಗ್ರಾಮ್ಯ ಭಾಷೆಯಲ್ಲಿ ಒಡ್ಯಾಣ, ಡಾಬು ಎಂದು ಕರೆಯುತ್ತಾರೆ. ಇದನ್ನು ಸೊಂಟಕ್ಕೆ ಸುತ್ತಲೂ ಬಿಗಿದುಕೊಳ್ಳುತ್ತಿದ್ದು, ಬಂಗಾರ ಮತ್ತು ಬೆಳ್ಳಿಯಿಂದ ಮಾಡಿರುತ್ತಾರೆ. ಇದರಲ್ಲಿ ಸಾದಾಡಾಬು, ಗೆಜ್ಜೆಡಾಬು ಎಂಬ ವಿಧಗಳಿದ್ದು ಸ್ತ್ರೀ–ಪುರುಷರಿಬ್ಬರೂ ಧರಿಸುವ ಆಭರಣ ವಾಗಿದೆ. ಸ್ತ್ರೀಯರು ಸೀರೆಯು ಜಾರದಂತೆ ಅದರ ಮೇಲೆ ಈ ಆಭರಣವನ್ನು ಧರಿಸುತ್ತಿದ್ದರಿಂದ ಬಹುಪಾಲು ಮಾಸ್ತಿಶಿಲೆ ಯಲ್ಲಿರುವ ಸತಿಯರು ಇದನ್ನು ಧರಿಸಿರುವುದನ್ನು ಕಾಣಬಹುದು. ಕಾಟೇನಹಳ್ಳಿ ಮಾಸ್ತಿಶಿಲೆಯ ಮಾಸ್ತಿಯು ಸೀರೆಯ ಮೇಲೆ ಧರಿಸಿರುವ ಕಟಿಸೂತ್ರವು ಮೂರು ಹಂತಗಳ ಪಟ್ಟಿಕೆಗಳನ್ನು ಹೊಂದಿದ್ದು, ಮಣಿಗಳು ಇಳಿಬಿದ್ದಂತೆ, ಕಮಲದ ದಳಗಳು ಇಳಿಬಿದ್ದಂತೆ ಮತ್ತು ಕೆಳಗೆ ಮುತ್ತಿನಸರದಂತೆ ವಿನ್ಯಾಸಗೊಳಿಸಲಾಗಿದೆ. ಇದರ ಅಂಚಿಗೆ ಸರಪಳಿಗಳನ್ನು ಹಾರದಂತೆ ಇಳಿಬಿಡಲಾಗಿದೆ. ಮಧ್ಯದಲ್ಲಿ ಎರಡು ಎಳೆಗಳು ಇಳಿಬಿದ್ದಿದ್ದು, ಕೆಳಗೆ ಪದಕಗಳಿವೆ. ಮಾಸಣಗಿಯ ಮಾಸ್ತಿಶಿಲೆಯಲ್ಲಿನ ಮಹಾಸತಿಯು ಲಂಗದ ಮೇಲೆ ಧರಿಸಿರುವ ಕಟಿಸೂತ್ರವು ಮಧ್ಯದಲ್ಲಿ ಪದಕವನ್ನು ಹೊಂದಿದ್ದು, ಅದರಿಂದ ಎರಡು ಎಳೆಗಳು ಆಚೆ ಈಚೆ ಹಾರದಂತೆ ಇಳಿಬಿದ್ದಿವೆ. ಗಂಗಾಯಿಕೊಪ್ಪದ ಮಾಸ್ತಿಶಿಲೆಯಲ್ಲಿನ ಮಾಸ್ತಿಯು ಧರಿಸಿರುವ ಕಟಿಸೂತ್ರವು ಅಗಲವಾಗಿದ್ದು, ಸುತ್ತಲೂ ಮಣಿಸರಗಳು, ಮುತ್ತಿನಸರಗಳು ಇಳಿಬಿದ್ದಂತೆ ಮತ್ತು ಅವುಗಳ ತುದಿಯಲ್ಲಿ ಪದಕಗಳಿದ್ದಂತೆ ಕಂಡರಿಸಲಾಗಿದೆ. ವೀರಗಲ್ಲುಗಳಲ್ಲಿ ವೀರರು ಧರಿಸಿರುವ ಕಟಿಸೂತ್ರಕ್ಕೆ ಚಿಕ್ಕದಾದ ಚಾಕು(ಕಿರುಗತ್ತಿ)ವನ್ನು ಸಿಕ್ಕಿಸಿಕೊಂಡಿರುವುದು ಸಾಮಾನ್ಯ. ಹಿರೇಕೊಣತಿಯ ವೀರಮಾಸ್ತಿಕಲ್ಲಿನಲ್ಲಿರುವ ವೀರನು ಎರಡು ಎಳೆಯ ಕಟಿಸೂತ್ರವನ್ನು ಧರಿಸಿದ್ದು, ಅದಕ್ಕೆ ಚೌಕಾಕಾರದ ಪದಕವಿದೆ. ಅಬಲೂರಿನ ವೀರಗಲ್ಲಿನಲ್ಲಿರುವ ವೀರರು ಧರಿಸಿದ ಕಟಿಸೂತ್ರವು ಗೆಜ್ಜೆ ಡಾಬಿನಂತೆ ತೋರುತ್ತಿದ್ದು, ತೊಡೆಯ ಮೇಲೆ ಪದಕಗಳು ಇಳಿಬಿದ್ದಂತೆ ಕಂಡರಿಸಲಾಗಿದೆ. ಹಿರೇಬಾಸೂರಿನ ವೀರಮಾಸ್ತಿಕಲ್ಲಿನಲ್ಲಿರುವ ಮಾಸ್ತಿಯು ಮಣಿಗಳಿಂದ ಅಲಂಕೃತವಾದ ಕಟಿಸೂತ್ರಕ್ಕೆ ತನ್ನ ಸೀರೆಯ ನೆರಿಗೆಗಳನ್ನು ಸಿಕ್ಕಿಸಿಕೊಂಡಂತೆ ಕಂಡರಿಸಲಾಗಿದೆ. ಕಡಕೋಳ, ನೆಲ್ಲಿಕೊಪ್ಪ, ಬಾಳಂಬೀಡು, ನಿಡ್ನೇಗಿಲು, ತಿಮಕಾಪುರ, ಗುಡುಗೂರು, ದೇವಗೇರಿ, ಕದರಮಂಡಲಗಿ, ಹೆಡಿಯಾಲ ಮುಂತಾದ ಕಡೆಗಳಲ್ಲಿನ ಸ್ಮಾರಕಶಿಲ್ಪಗಳಲ್ಲಿ ವೀರರು ಮತ್ತು ಮಾಸ್ತಿಯರು ಕಟಿಸೂತ್ರ ಧರಿಸಿರುವುದನ್ನು ಕಾಣಬಹುದು.

ಕಾಲ್ಕಡಗ: ಸಾಮಾನ್ಯವಾಗಿ ಬೆಳ್ಳಿಯಿಂದ ದಪ್ಪನಾಗಿ ಬಳೆಯಾಕಾರದಲ್ಲಿ ಮಾಡಿದ ಇದನ್ನು ಕಾಲುಗಳಿಗೆ ಹಾಕುತ್ತಾರೆ. ಬಹುಪಾಲು ವೀರಗಲ್ಲುಗಳಲ್ಲಿ ವೀರರು ಎರಡೂ ಕಾಲುಗಳಿಗೆ ಕಡಗ ಧರಿಸಿರುತ್ತಾರೆ. ಕೆಲವೊಮ್ಮೆ ಒಂದೇ ಕಾಲಿಗೆ ಧರಿಸಿರುವುದೂ ಉಂಟು. ಮಾಸ್ತಿಯರು ಸಹ ಕಾಲ್ಕಡಗ ಧರಿಸಿರುವುದನ್ನು ಕಾಣಬಹುದು. ಸಿಡೇನೂರಿನ ಆತ್ಮಬಲಿದಾನ ಸ್ಮಾರಕಶಿಲೆಯೊಂದರ ವೀರನು ಅಗಲವಾದ ಪಟ್ಟಿಕೆಯ ರೀತಿಯಲ್ಲಿರುವ ಕಡಗಗಳನ್ನು ಕಾಲುಗಳಿಗೆ ಧರಿಸಿದ್ದು, ಮಧ್ಯದಲ್ಲಿ ಅಡ್ಡಪಟ್ಟಿಕೆಯಿಂದ ಬಂಧಿಸಿದಂತೆ ಕಂಡರಿಸಲಾಗಿದೆ. ಮಂತ್ರವಾಡಿಯ ವೀರಮಾಸ್ತಿಕಲ್ಲಿನಲ್ಲಿರುವ ವೀರನು ದಪ್ಪ ಮತ್ತು ಅಗಲವಾದ ಕಡಗಗಳನ್ನು ಧರಿಸಿದ್ದಾನೆ. ಚಳಗೇರಿಯ ಇಬ್ಬರು ವೀರರಿರುವ ಶಿಲೆಯಲ್ಲಿ ಇಬ್ಬರೂ ಕಾಲ್ಕಡಗಗಳನ್ನು ಧರಿಸಿದ್ದಾರೆ. ಬಾಳಂಬೀಡಿನ ವೀರಮಾಸ್ತಿಶಿಲೆಯ ವೀರನು ಧರಿಸಿರುವ ಕಡಗಗಳು, ಮೂರು ಎಳೆಗಳನ್ನು ಒಟ್ಟಿಗೆ ಸೇರಿಸಿ ಪದಕದಿಂದ ಬಂಧಿಸಿದಂತೆ ಕೆತ್ತಲಾಗಿದೆ. ಕಡಕೋಳದ ವೀರಮಾಸ್ತಿಕಲ್ಲಿನ ವೀರನು ಬಲಗಾಲಿಗೆ ಮಾತ್ರ ಕಾಲ್ಕಡಗ ಧರಿಸಿದ್ದರೆ ಇದೇ ಶಿಲೆಯ ಮಾಸ್ತಿಯು ಎರಡೂ ಕಾಲುಗಳಿಗೂ ದಪ್ಪನಾಗಿರುವ ಕಾಲ್ಕಡಗ ಧರಿಸಿದ್ದಾಳೆ. ಮಾಗೋಡ,

ಹಿರೇಬಾಸೂರು, ಹೊಂಬರಡಿ, ಸಿಡೇನೂರು, ಆಲದಕಟ್ಟಿ, ಚಿಕ್ಕಳ್ಳಿಗಳಲ್ಲಿರುವ ಸ್ಮಾರಕಶಿಲೆಗಳಲ್ಲಿ ವೀರರು ಕಾಲ್ಕಡಗ ಧರಿಸಿರುವುದನ್ನು ಕಾಣಬಹುದು. ಕಲಕೇರಿಯ ಕೆಲವು ವೀರಗಲ್ಲುಗಳಲ್ಲಿ ವೀರರು ಕಾಲ್ಕಡಗಗಳನ್ನು ಧರಿಸಿದ್ದಾರೆ.

ಗಂಡಪೆಂಡೇರ: ಚಿನ್ನದ ಎಳೆಗೆ ಮುತ್ತುಗಳನ್ನು ಪೋಣಿಸಿ ಮಧ್ಯೆ ಮಧ್ಯೆ ಸಣ್ಣ ಗೊಂಬೆಗಳನ್ನು ಜೋಡಿಸಿ ಗಂಡಪೆಂಡೇರವನ್ನು ಮಾಡುತ್ತಿದ್ದರು. ನಡೆದಾಡುವಾಗ ಝಣ ಝಣ ಎಂಬ ಶಬ್ದವು ಇದರಿಂದ ಹೊರಡುತ್ತಿದ್ದು, ಹೆಚ್ಚಾಗಿ ವೀರರು ಇದನ್ನು ಧರಿಸುತ್ತಿದ್ದರು. ತನ್ನನ್ನು ಸಾಕಿ ಸಲಹಿತ ಒಡೆಯನಿಗೆ ಗರುಡನಾಗಬಯಸುವವನು ತನ್ನ ಒಡೆಯನ ಮುಂದೆ ಭಾಷೆಯನ್ನು ಕೊಟ್ಟು ಅದರ ದ್ಯೋತಕವಾಗಿ ತನ್ನ ಎಡಗಾಲಿಗೆ ಗಂಡಪೆಂಡೇರವನ್ನು ಕಟ್ಟಿಕೊಳ್ಳುತ್ತಿದ್ದನು. ಹಳೆಬೀಡಿನ ಕುವರಲಕ್ಷ್ಮಣನ ಶಾಸನದಲ್ಲಿ ಇದರ ಬಗ್ಗೆ ವರ್ಣನೆ ಇದ್ದು, ಶಾಸನ ಶಿಲ್ಪದಲ್ಲಿಯೂ ಕುವರಲಕ್ಷ್ಮಣ ಎಡಗಾಲಿಗೆ ಈ ಆಭರಣವನ್ನು ಧರಿಸಿದ್ದಾನೆ. ಆದರೆ ಶಾಸನದಲ್ಲಿ ತಿಳಿಸಿದಂತೆ ಗಂಡಪೆಂಡೇರದಲ್ಲಿ ಗೊಂಬೆಗಳ ಚಿತ್ರ ಕಂಡುಬರುವುದಿಲ್ಲ. ಕಲಕೇರಿಯ ಕೋಟೆಕಾಳಗದ ವೀರಗಲ್ಲಿನಲ್ಲಿ ವೀರನು ಎಡಗಾಲಿಗೆ ಗಂಡಪೆಂಡೇರವನ್ನು ಧರಿಸಿದ್ದಾನೆ. ಹಿರೇಬಾಸೂರಿನ ವೀರಮಾಸ್ತಿಕಲ್ಲೊಂದರಲ್ಲಿ ವೀರನು ಬಲಗಾಲಿಗೆ ಒಂದು ಕಾಲ್ಕಡಗ ಧರಿಸಿದ್ದಾನೆ. ಎಡಗಾಲಿನಲ್ಲಿ ಕಾಲ್ಕಡಗದ ಜೊತೆಯಲ್ಲಿ ಎರಡು ಎಳೆಗಳ ಹಗ್ಗದ ಮಾದರಿಯಲ್ಲಿರುವ ಇನ್ನೊಂದು ಆಭರಣವಿದ್ದು ಅದು ಗಂಡಪೆಂಡೇರವೇ ಆಗಿರಬಹುದೆಂದು ಹೇಳಬಹುದು. ಎಮ್ಮಿಗನೂರಿನ ಹುಲಿಬೇಟೆ ವೀರಗಲ್ಲಿನ ವೀರನು ಎಡಗಾಲಿಗೆ ಗಂಡಪೆಂಡೇರವನ್ನು ಧರಿಸಿದ್ದಾನೆ.

ನೂಪುರ (ಕಾಲಂದುಗೆ) (ಪಾದಜಲಕ್): ಸ್ತ್ರೀಯರು ಧರಿಸುವ ಕಾಲ್ಗೆಜ್ಜೆಯಂತಿರುವ ಈ ಆಭರಣವನ್ನು ಸ್ತ್ರೀ–ಪುರುಷರಿಬ್ಬರೂ ಧರಿಸಿರುವಂತೆ ಸ್ಮಾರಕಶಿಲೆಗಳಲ್ಲಿ ಕಂಡರಿಸಲಾಗಿದೆ. ಹಿಮ್ಮಡಿಯಿಂದ ಮುಂಚಾಚಿದ ಇದು ಪಾದದ ಮೇಲೆ ಹರಡಿದಂತೆ ತೋರುತ್ತದೆ. ಚಳಗೇರಿಯ ವೀರಗಲ್ಲೊಂದರ ವೀರರಿಬ್ಬರು ತಮ್ಮ ಬಲಗಾಲುಗಳಿಗೆ ಸಾದಾ ನೂಪುರಗಳನ್ನು ಧರಿಸಿದ್ದರೆ ಎಡಗಾಲುಗಳಿಗೆ ಸರಪಳಿಯಂತಿರುವ ನೂಪುರಗಳನ್ನು ಧರಿಸಿದ್ದಾರೆ. ಇದೇ ಗ್ರಾಮದ ವೀರಮಾಸ್ತಿಯಲ್ಲಿ ವೀರ ಮತ್ತು ಮಾಸ್ತಿಯರು ನೂಪುರಗಳನ್ನು ಧರಿಸಿದ್ದಾರೆ. ಬಾಳಂಬೀಡಿನ ವೀರಮಾಸ್ತಿಕಲ್ಲೊಂದರ ವೀರ ಮತ್ತು ಮಾಸ್ತಿಯರು ಕಾಲಂದುಗೆಗಳನ್ನು ಧರಿಸಿದಂತೆ ಕಂಡರಿಸಲಾಗಿದೆ. ಕಡಕೋಳದ ವೀರಮಾಸ್ತಿಕಲ್ಲಿನ ವೀರನು ಬಲಗಾಲಿಗೆ ಮಾತ್ರ ನೂಪುರವನ್ನು ಧರಿಸಿದ್ದಾನೆ. ಹೀಗೆ ಹಾವೇರಿ ಜಿಲ್ಲೆಯಾದ್ಯಂತ ಇರುವ ವೀರಗಲ್ಲು, ಮಾಸ್ತಿಕಲ್ಲು ಶಿಲ್ಪಗಳಲ್ಲಿ ಕಂಡುಬರುವ ಆಭರಣಗಳನ್ನು ಗುರುತಿಸಬಹುದು.

ಆಕರಗ್ರಂಥಗಳು

೧. ರಾಮಚಂದ್ರರಾವ್ ಎಸ್.ಕೆ., ೨೦೧೨, ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ನಾಗಯ್ಯ ಜೆ.ಎಂ., ೨೦೧೭, ಆತ್ಮಬಲಿದಾನ–ವಿಜಯ ವಿಕ್ರಮ ಪ್ರಕಾಶನ, ಉಣಕಲ್ಲ, ಹುಬ್ಬಳ್ಳಿ.

೪. ಮಂಜುನಾಥ ಎಂ.ಜಿ., ೨೦೦೯, ನಿಸಿದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಿಂಚು ಮಲ್ಟಿಗ್ರಾಫ್, ಮೈಸೂರು.

೫. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬ ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.

೭. ಕಲಬುರ್ಗಿ ಎಂ.ಎಂ., ೨೦೧೧, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಸಪ್ನ ಬುಕ್ ಹೌಸ್, ಬೆಂಗಳೂರು.

೮. ಶೇಠ ಬಿ.ಎಸ್., ೧೯೯೧, ಕರ್ನಾಟಕದಲ್ಲಿ ಸತಿಪದ್ಧತಿ, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.

೯. ಬಸವರಾಜ ಕಲ್ಗುಡಿ, ೧೯೮೫, ಮಹಾಸತಿ ಆಚರಣೆ : ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೦. ಅಂಬಳಿಕೆ ಹಿರಿಯಣ್ಣ (ಪ್ರ. ಸಂ.) ೨೦೧೫, ಕರ್ನಾಟಕ ಗ್ರಾಮಚರಿತ್ರೆ ಕೋಶ, ಹಾವೇರಿ ಭಾಗ–೨, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.

♦♦

೭೭

ಲಕ್ಷ್ಮಣ್ ತೆಲಗಾವಿ

ನಾಯಕನಹಟ್ಟಿ ಶ್ರೀತಿಪ್ಪೇಸ್ವಾಮಿಮಠ(ದೇವಸ್ಥಾನ)ದ ಜಮಾ-ಖರ್ಚಿನ ದಾಖಲೆ : ೧೮೦೦-೧೮೦೧

ನಾಯಕನಹಟ್ಟಿಯು ಚಿತ್ರದುರ್ಗಜಿಲ್ಲೆ ಚಳ್ಳಕೆರೆ ತಾಲ್ಲೂಕಿನಲ್ಲಿರುವ ಒಂದು ಪ್ರಸಿದ್ಧ ಯಾತ್ರಾಸ್ಥಳ. ಚಿತ್ರದುರ್ಗದಿಂದ ೪೦ ಕಿ.ಮೀ. ದೂರದಲ್ಲಿದೆ. ತಿಪ್ಪೇಸ್ವಾಮಿಯೆಂಬ ಅವಧೂತನ ಸಮಾಧಿ ಇಲ್ಲಿದ್ದು, ಆತನ ಹೆಸರಿನಲ್ಲಿ ಪ್ರತಿವರುಷ ಹೋಳಿಹುಣ್ಣಿಮೆಯಲ್ಲಿ ಭಾರೀ ಜಾತ್ರೆ ನಡೆಯುತ್ತದೆ. ಚಿತ್ತಾನಕ್ಷತ್ರದ ತದಿಗೆಯಂದು ಭಾರೀ ರಥೋತ್ಸವ ಜರುಗುತ್ತದೆ. ಇಡೀ ಜಿಲ್ಲೆಯಲ್ಲಿಯೇ ಅತ್ಯಂತ ಪ್ರಸಿದ್ಧವಾದ ಜಾತ್ರೆಯೆಂದರೆ ಈ ತಿಪ್ಪೇಸ್ವಾಮಿಯದು. ಈ ಜಾತ್ರೆಯೊಂದು ಶಿಷ್ಟ-ಪರಿಶಿಷ್ಟಗಳ ಅದ್ಭುತ ಸಂಗಮ (**ನಾಯಕನಹಟ್ಟಿ ಪಾಳೆಯಗಾರರು:** ೧೨೧). ಈ ತಿಪ್ಪೇಸ್ವಾಮಿಯ ವಿವರ ದೊರಕುವುದು ಜನಪದ ಸಾಹಿತ್ಯದಲ್ಲಿ ಮಾತ್ರ. ಅಲ್ಲಿ ಆತನನ್ನು ಚಿತ್ರಿಸಿರುವುದು ಪವಾಡಪುರುಷನನ್ನಾಗಿ. ಹಾಗೆಯೇ, ಆತ ಜನಪದದೈವವಾಗಿಯೂ ಸಾಂಸ್ಕೃತಿಕ ವೀರನಾಗಿಯೂ ಕಾಣಿಸಿಕೊಳ್ಳುತ್ತಾನೆ. ಜನಪದರು ಈ ಅವಧೂತನನ್ನು ತಿಪ್ಪಯ್ಯ, ಹಟ್ಟಿ ತಿಪ್ಪಯ್ಯ, ತಿಪ್ಪೇಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಅವಧೂತ ತಿಪ್ಪೇಸ್ವಾಮಿ, ತಿಪ್ಪೇಯ ತಿರುಪಣ್ಣ, ಸ್ವಾಮಿ ತಿಪ್ಪಯ್ಯ, ಶರಣ ತಿಪ್ಪೇಸ್ವಾಮಿ, ಹೊಟ್ಟೆಪ್ಪನೆಂತಲೂ, ಚಿಕ್ಕಜಂಗಮ, ಬಾಲಜಂಗಮ, ಏಳುಮಠದ ಒಡೆಯ, ರುದ್ರ, ಶಿವಯೋಗಿರುದ್ರ, ತಿಪ್ಪೇರುದ್ರಸ್ವಾಮಿಯೆಂತಲೂ ಕರೆದಿರುವರು. ತಿಪ್ಪೇಸ್ವಾಮಿಯ ಮಠವನ್ನು ತಿಪ್ಪಯ್ಯನಮಠವೆಂತಲೂ ತಿಪ್ಪಯ್ಯನ ಸಮಾಧಿಮಂಟಪವೆಂತಲೂ ಗುರುತಿಸಲಾಗಿದೆ. ಈ ಅವಧೂತನ ಜಾತ್ರೆ ಹಟ್ಟಿಜಾತ್ರೆ, ತಿಪ್ಪಯ್ಯನ ಪರಿಸೆ, ನಾಯಕನಹಟ್ಟಿ ಜಾತ್ರೆಯೆಂತಲೇ ಪ್ರಸಿದ್ಧವಾಗಿದೆ. ಈತ ಮ್ಯಾಸಬೇಡ ಮೂಲದವನೆನ್ನುತ್ತಾರೆ ಸಂಶೋಧಕರು (**ಜಾನಪದ ಅನುಸಂಧಾನ:** ೩೧). ತಿಪ್ಪೇಸ್ವಾಮಿಯೆನ್ನುವ ಈ ಸಂತ ಕ್ರಿ.ಶ. ೧೬ನೇ ಶತಮಾನದ ಕೊನೆ, ೧೭ನೇ ಶತಮಾನದ ಆರಂಭದಲ್ಲಿ ಬದುಕಿರಬಹುದೆಂದೂ ನಾಯಕನಹಟ್ಟಿ ದೊರೆ ಬೋಡಿಮಲ್ಲಪ್ಪನಾಯಕನು ತನ್ನ ದೊರೆತನವನ್ನೇ ಈ ಸಂತನಿಗೆ ಧಾರೆಯೆರೆದಿರುವ ಸಾಧ್ಯತೆಯಿದೆಯೆಂದೂ ಹೇಳಲಾಗಿದೆ (**ನಾಯಕನಹಟ್ಟಿ ಪಾಳೆಯಗಾರರು:** ೫೬).

ಮೂಲದಲ್ಲಿ ತಿಪ್ಪೇಸ್ವಾಮಿಯೆಂದೇ ಕರೆಸಿಕೊಳ್ಳುತ್ತಿದ್ದ ಈ ಅವಧೂತನನ್ನು ಈಗ ತಿಪ್ಪೇರುದ್ರಸ್ವಾಮಿಯೆಂದು ಕರೆಯುವುದು ರೂಢಿಯಲ್ಲಿದೆ. ಈ ತಿಪ್ಪೇಸ್ವಾಮಿ ಲಕ್ಷಾಂತರ ಕುಟುಂಬಗಳಿಗೆ ಮನೆದೇವರು ಹಾಗೂ ಮನದದೇವರೆನಿಸಿದ್ದಾನೆ. ಕರ್ನಾಟಕದ ಹಲವೆಡೆಗಳಲ್ಲಿ ಈ ಸಂತನ ಗದ್ದುಗೆಗಳಿದ್ದು, ಅವು ಇಂದಿಗೂ ಪೂಜೆಗೊಳ್ಳುತ್ತಿವೆ. ಅಲ್ಲದೆ, ನಾಯಕನಹಟ್ಟಿ ಅರಸ ಹಟ್ಟಿ ಮಲ್ಲಪ್ಪನಾಯಕನು ಈ ತಿಪ್ಪೇಸ್ವಾಮಿಗೆ ೭೭

೧೫, ಸೋಮಶೇಖರ ನಿಲಯ
ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿ
ರಜತಗಿರಿ, ಧಾರವಾಡ-೫೮೦ ೦೦೪
ಮೊ: ೯೪೪೯೧ ೦೬೬೫೩

ಬಿರುದುಸಹಿತವಾಗಿ ರಾಜ್ಯಭಾರವನ್ನು ಭಕ್ತಿಪುರಸ್ಸರವಾಗಿ ವಹಿಸಿಕೊಟ್ಟಿದ್ದನೆಂದೂ ಅಲ್ಲಿಗೆ ಅವನ ರಾಜ್ಯಭಾರ ಮುಕ್ತಾಯಗೊಂಡಿತೆಂದೂ ಹೇಳಲಾಗಿದೆ (**ಎಪ್ಪತ್ತೇಳು ಪಾಳೆಯಗಾರರು:** ೫೪-೫೫).

ಪ್ರಸ್ತುತ ದಾಖಲೆಯು ಅಂಗೈ ಅಗಲದ ಕೈಕಾಗದದ ಮೇಲೆ ಉದ್ದಕ್ಕೆ ಬರೆಯಲಾದ ಮಾಹಿತಿಯನ್ನೊಳಗೊಂಡಿರುವಂಥಾದ್ದು. ಕಪ್ಪುಶಾಯಿಯಲ್ಲಿ ಸುಂದರ ಹಸ್ತಾಕ್ಷರಗಳಲ್ಲಿ ಮಾಹಿತಿ ಸಂಗ್ರಹಗೊಂಡಿದೆ. ಪಟ್ಟಿ ಒಂದಕ್ಕೆ ನಾಲ್ಕುಮುಖಗಳಿವೆ. ಅವುಗಳಲ್ಲಿ ಅಂಕಿಗಳಲ್ಲಿ ತೋರಿಸಲಾಗಿದೆ. ದಾಖಲೆಯಲ್ಲಿ ಈ ಅವಧೂತನನ್ನು 'ತಿಪ್ಪೇಸ್ವಾಮಿ'ಯೆಂದೇ ಕರೆದಿದೆ. ಈ ದಾಖಲೆಯು ೧೮೦೦ ಜನವರಿ ೨೭ ರಿಂದ ೧೮೦೧ ಡಿಸೆಂಬರ್ ೬ರ ಮಧ್ಯದ ಕಾಲಾವಧಿಗೆ ಸಂಬಂಧಿಸಿದುದು. (ಶಕ ೧೭೨೩ ದುರ್ಮತಿ ಸಂವತ್ಸರದ ಮಾರ್ಗಶಿರ ಶುದ್ಧ ಲಾಗಾಯಿತ್ತು ದುಂದುಭಿ ಸಂವತ್ಸರದ ಚೈತ್ರ ಬಹುಳ ೩೦). ಈ ಅವಧೂತನ ಮಠ ಅಥವಾ ದೇವಸ್ಥಾನಕ್ಕೆ ನಾಡಿನ ಎಲ್ಲ ವರ್ಗದವರೂ ನಡೆದುಕೊಳ್ಳುತ್ತಿದ್ದರೆಂಬುದಕ್ಕೆ ಪ್ರಸ್ತುತ ಜಮಾ-ಖರ್ಚಿನ ದಾಖಲೆಯೇ ಸಾಕ್ಷಿಯಾಗಿದೆ. ಆಯಾ ಸಂವತ್ಸರಗಳಲ್ಲಿ 'ತಿಪ್ಪೇಸ್ವಾಮಿ ದೇವಸ್ಥಾನ'ಕ್ಕೆ ಸಂದಾಯವಾದ ಹಾಗೂ ಸಂಗ್ರಹಿಸಲಾದ ಕಾಣಿಕೆಯ ಲೆಕ್ಕವನ್ನು ಇಲ್ಲಿ ದಾಖಲಿಸಲಾಗಿದೆ. ಒಂದುಕಾಲಕ್ಕೆ ಈ ಸಂತನ ಭಕ್ತರು ಗ್ರಾಮಗಳ ಮೇಲೆ ಸಂಚರಿಸಿ ಸೇವೆಮಾಡಿಕೊಂಡು ಬರುತ್ತಿದ್ದಿರಬಹುದು. ಅದಕ್ಕೆ ದಾಖಲೆಯಲ್ಲಿ ಒಂದೆರಡು ಸೂಚನೆಗಳಿವೆ.

ದಾಖಲೆಯಲ್ಲಿ ಕ್ರಿ.ಶ. ೧೭೩೯ (ಶಕ ೧೬೬೧: ಸಿದ್ಧಾರ್ಥಿ ಸಂ ॥), ಕ್ರಿ.ಶ. ೧೭೪೦ (ಶಕ ೧೬೬೨: ರೌದ್ರಿ ಸಂ ॥), ಕ್ರಿ.ಶ. ೧೭೪೧ (ಶಕ ೧೬೬೩: ದುರ್ಮತಿ ಸಂ ॥), ಕ್ರಿ.ಶ. ೧೭೪೨ (ಶಕ ೧೬೬೪: ದುಂದುಭಿ ಸಂ ॥), ಕ್ರಿ.ಶ. ೧೭೯೯ (ಶಕ ೧೭೨೧: ಸಿದ್ಧಾರ್ಥಿ ಸಂ ॥), ಕ್ರಿ.ಶ. ೧೮೦೦ (ಶಕ ೧೭೨೨: ರೌದ್ರಿ ಸಂ ॥), ಕ್ರಿ.ಶ. ೧೮೦೧ (ಶಕ ೧೭೨೩: ದುರ್ಮತಿ ಸಂ ॥) ಮತ್ತು ಕ್ರಿ.ಶ. ೧೮೦೨ (ಶಕ ೧೭೨೪: ದುಂದುಭಿ ಸಂ॥) ವರುಷಗಳಲ್ಲಿ ಮಠಕ್ಕೆ / ದೇವಸ್ಥಾನಕ್ಕೆ ಹಣ ವಸೂಲಾದ ಹಾಗೂ ದೇಣಿಗೆ ದೊರೆತ ಬಗೆಗೆ ಉಲ್ಲೇಖಗಳಿವೆ. ಅಂದರೆ, ಕ್ರಿ.ಶ. ೧೮೦೧ಕ್ಕೂ ಹಿಂದೆಯೇ, ಮೇಲ್ಕಂಡ ಸಂವತ್ಸರಗಳಲ್ಲಿ, ಮಠ ಅಥವಾ ದೇವಸ್ಥಾನಕ್ಕೆ ವಸೂಲಾದ ಹಾಗೂ ವೆಚ್ಚಮಾಡಿದ ರುಸುಮಿನ ವಿವರಗಳ ಪ್ರಸ್ತಾಪವಿದೆ.

ಭಕ್ತಾದಿಗಳು ಸಲ್ಲಿಸಿದ ಕಾಣಿಕೆಯ ವಿವರದೊಡನೆ, ಮಠದ ಮಹಾದ್ವಾರದ ಕಾಮಗಾರಿ ನಡೆಸಿದುದು; ಹೊಸಕೋಟೆ ವಿರುಪಣ್ಣನು ಹೊರಮಠದ ಪೌಳಿಯೊಳಗೆ ಸೇದುವಬಾವಿ ತೆಗೆಸಲು ವೆಚ್ಚಮಾಡಿದುದು; ಹಿರೇಹಳ್ಳಿ ಅಕ್ಕಸಾಲಿ ಪರಮೇಶ್ವರಪ್ಪ ಒಳಗಿನ ದೇವಸ್ಥಾನ(ಮಠ)ದ ದಕ್ಷಿಣ ಮಹಾದ್ವಾರದ ಗೋಪುರಕ್ಕೆ ಸ್ವಂತವೆಚ್ಚದಲ್ಲಿ ಹಿತ್ತಾಳೆ ಕಳಶ ಇಡಿಸಿದುದು-ಇವು ಕೆಲವು ಹೊರ ಮತ್ತು ಒಳಮಠಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ದಾಖಲುಗೊಂಡಿರುವ ವಿಶೇಷ ಸಂಗತಿಗಳು. ಸುಬೇದಾರ್ ವೆಂಕಟಸುಬ್ಬಯ್ಯನೆಂಬ ಅಧಿಕಾರಿಯ ಉಲ್ಲೇಖವೂ ಕಂಡುಬರುತ್ತದೆ. ಇತರೆ ಭಕ್ತರು ವಿವಿಧ ವಸ್ತುಗಳನ್ನು ಮಠದ ಸುಧಾರಣೆಗೆಂದು ಅರ್ಪಿಸಿದುದನ್ನೂ ಪ್ರಸ್ತಾಪಿಸಲಾಗಿದೆ. ಹಳೆಯ ನಾಣ್ಯಪದ್ಧತಿ ಜಾರಿಯಿರುವಾಗಲೂ ಹಣವನ್ನು 'ಕುಂಪಣಿ ರೂಪಾಯಿ'ಗಳಲ್ಲೂ ಸಂದಾಯಮಾಡಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿ ಪ್ರಸ್ತಾಪಗೊಂಡಿರುವ ಊರುಗಳು ಚಳ್ಳಕೆರೆ ತಾಲ್ಲೂಕಿಗೆ ಮಾತ್ರ ಸಂಬಂಧಿಸಿರದೆ, ಚಿತ್ರದುರ್ಗ, ಹಿರಿಯೂರು, ಜಗಲೂರು ಮತ್ತಿತರ ತಾಲ್ಲೂಕುಗಳಿಗೂ ಒಂದೆರಡು ಜಿಲ್ಲೆಗಳಿಗೂ ಸೇರಿರುತ್ತವೆ. ಇದರಿಂದ ಅನ್ಯಜಿಲ್ಲೆಗಳ ಭಕ್ತರೂ ತಿಪ್ಪೇಸ್ವಾಮಿಗೆ ನಡೆದುಕೊಳ್ಳುತ್ತಿದ್ದುದು ಸ್ಪಷ್ಟಪಡುತ್ತದೆ.


ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬೇಕಾದುದು ಹಳೆಯ ನಾಣ್ಯಪದ್ಧತಿಯನ್ನು. ನಾಣ್ಯಪದ್ಧತಿ ಇನ್ನೂ ವಿಕಸಿತವಾಗದ ಸಮಯದಲ್ಲಿ ಗದ್ಯಾಣ, ಪಣ, ಪೊನ್ನು, ಹೊನ್ನು, ವೀಸ, ಚೌವಲ, ಹಾಗ, ಬೇಳೆ, ಕಾಣಿ, ಗಿದ್ದಾಣಿ ಮೊದಲಾದ ಹೆಸರಿನ, ಪರಿಮಾಣದ ಮತ್ತು ಮೌಲ್ಯದ ಚಿನ್ನ, ಬೆಳ್ಳಿ ಮತ್ತು ತಾಮ್ರಲೋಹಗಳ ನಾಣ್ಯಗಳು ಚಲಾವಣೆಯಲ್ಲಿದ್ದುದು ವ್ಯಕ್ತಪಡುತ್ತದೆ. ಜೈನಕವಿ ರಾಜಾದಿತ್ಯನ **ವ್ಯವಹಾರಗಣಿತವು** (೧೨ನೇ ಶತಮಾನ) ಆಗಿನ ನಾಣ್ಯಪದ್ಧತಿಯಲ್ಲಿದ್ದ ಸಂಕೇತಗಳನ್ನು ತಿಳಿಸುತ್ತದೆ. ಆತನ **ಭೂಅಳತೆಯ ಕ್ಷೇತ್ರಗಣಿತ**ದಲ್ಲೂ ಈ ಕುರಿತ ವಿವರಗಳಿವೆ. ಇಂಥಾ ನಾಣ್ಯವಿಶೇಷಗಳಲ್ಲಿ ಗದ್ಯಾಣ, ವರಹ, ಹಾಗ, ಪಣಗಳನ್ನೂ ಅಡ್ಡ, ಬೇಳೆ, ವೀಸ, ಅರೆವೀಸ, ಮುಪ್ಪಾಗ, ಮುಕ್ಕಾಣಿ ಇತ್ಯಾದಿಗಳನ್ನೂ ಒಂದರಿಂದ ಮೂರು ಗೀಟುಗಳ (|||) ಮಾನವನ್ನೂ ಪ್ರಸ್ತಾಪಿಸಲಾಗುತ್ತದೆ. ವರಹದ ಚಿಹ್ನೆಯಾಗಿ ' ' ಬಳಕೆಗೊಂಡಿದ್ದರೆ, 'U' ಮತ್ತು '|' ಗೀಟುಗಳಿಗೆ ಪ್ರತ್ಯೇಕವಾದ ಮಾನದ ಅಥವಾ ಮೌಲ್ಯದ ಸಂಕೇತಗಳನ್ನು ಹೇರಳವಾಗಿ ತೋರಿಸಲಾಗಿದೆ. ದೇಗುಲ ಸಂಬಂಧದ ಪರಿಕರಗಳ ಮಾನ, ಪರಿಮಾಣ, ಪ್ರಮಾಣಗಳ ಸಂಕೇತಸಹಿತವಾದ ನಮೂದುಗಳು ಅಂದಿನ ವಾಣಿಜ್ಯ-ವ್ಯವಹಾರಗಳ, ಆರ್ಥಿಕ ಜಾಯಮಾನದ ಸಂಗತಿಯನ್ನು ಅರುಹುತ್ತವೆಂಬುದು ವಾಸ್ತವ. ಚಲಾವಣೆಯಲ್ಲಿದ್ದ ನಾಣ್ಯ, ತೂಕದ ಮಾನಗಳ ಕನಿಷ್ಠ ಭಿನ್ನಾಂಶಗಳವರೆಗಿನ ವಿಷಯಗಳನ್ನು ಇವು ತಿಳಿಯಪಡಿಸುತ್ತವೆ (ವಿವರಗಳಿಗೆ: **ಇತಿಹಾಸ ದರ್ಶನ,** ಸಂಪುಟ ೧೫: ೧೦೫-೧೨೧). ಇಲ್ಲಿ ಸದ್ಯಕ್ಕೆ ಪ್ರಾಚೀನಕಾಲದ ನಾಣ್ಯ ಪರಿಮಾಣ ಹಾಗೂ ಮೌಲ್ಯಗಳ ವಿವರಣೆಯನ್ನು ನಿರ್ದಿಷ್ಟವಾಗಿ

ಕೊಡಲು ಸಾಧ್ಯವಾಗಿಲ್ಲ. ಒಂದು ಅಧ್ಯಯನದ ಪ್ರಕಾರ, ೧ ಗದ್ಯಾಣ–೧೦ ಪಣ; ೧ ಪಣ–೨೦ ವೀಸ; ೧ ಪಣ–೪ ಹಾಗ; ೧ ಹಾಗ–೨ ಬೇಳೆ, ೫ ವೀಸ; ೧ ಪಣ–೬೪ ಕಾಣಿ; ೧ ವೀಸ–೨ ಬೇಳೆ ಇತ್ಯಾದಿಯಾಗಿ ಮೌಲ್ಯವನ್ನು ನಿರ್ಧರಿಸಿರುವುದನ್ನು ಗಮನಿಸಬಹುದು. ಅಲ್ಲದೆ, ಸದ್ಯಕ್ಕೆ ಇದು ಪ್ರಸ್ತುತ ಪ್ರಬಂಧದ ಮಿತಿಗೆ ಮೀರಿದುದೆಂದರೂ ತಪ್ಪಿಲ್ಲ. ಪರಿಣತರು ಹಾಗೂ ಸಂಶೋಧಕರು ಈ ದಾಖಲೆಯಲ್ಲಿರುವ ಮಾಹಿತಿಯನ್ನು ಪರಾಮರ್ಶಿಸಿ ಜಮಾ–ಖರ್ಚಿನ ಸಂಕೇತಗಳಿಗೆ ಸೂಕ್ತ ವಿವರಣೆ ನೀಡುವುದಾದರೆ, ಈ ವಿಷಯದಲ್ಲಿ ಹೆಚ್ಚಿನ ಅಧ್ಯಯನ ಕೈಗೊಳ್ಳುವವರಿಗೆ ಉಪಕಾರವಾದೀತು.

ದಾಖಲೆಯ ಮೂಲಪಾಠ

ಪಟ್ಟಿ ೧/೩

ಶ್ರೀ ತಿಪ್ಪೆಸ್ವಾಮಿ ಪ್ರಸಂನ್ನಾ



ಶ್ರೀ ತಿಪ್ಪೆಸ್ವಾಮಿಯವರ ಮಠ
ದ ಜಮಾ ಖರ್ಚು ಗೊಷುವಾರ್‍ರ ದುರ್ಮ
ತ್ರಿ ಸಂವತ್ಸರ್‍ರದ ಮಾರ್ಗಶಿರ್‍ರ ಶು ೧ ಲಾಗಾ
ಯಿತ್ತು ದುಂದುಭಿ ಸಂ। ರದ ಚೈತ್ರ ಬ ೩೦
ವರ್‍ರಿಗೇ ಮಾಹೆ ೫ ಕೊ–

ಪಟ್ಟಿ ೧/೪

ಶ್ರೀ ತಿಪ್ಪೆಸ್ವಾಮಿ ಪ್ರಸಂನ್ನಾ



ಶ್ರೀ ತಿಪ್ಪೆಸ್ವಾಮಿ ದೇವಸ್ಥಾನದ
ಜಮಾ ಖರ್ಚು ಗೊಷುವಾರ್‍ರ ಶಿಧಾರ್ತಿ ಸಂ
ವತ್ಸರ್‍ರದ ಪುಷ್ಯ ಬ ೧ ಲಾಗಾಯಿತ್ತು ರ್‍ರವುದ್ರಿ
ಸಂವತ್ಸರ್‍ರದ ಭಾದ್ರಪದ ೩೦ವರ್‍ರಿಗೆ–

ಕುಲ್ಲು ಜಮ್ಮ ಕುಂಪಣಿ ರ್‍ರುಪಾಯಿ
೧೦೩೨ । ≡ ೯

ವಿವರ್‍ರಾ –
। = ಚಳ್ಳಕೆರ್‍ರೆಗೇ ಜಮಾಬಂದಿಗೇ ಬಂದಾಗ್ಯೆ ಬಂದವರ್‍ರ
ಕಡೆಯಿಂದಾ ಶೆವೆ ಆದ್ದು –

೧೯ ‖। =	ಚಳ್ಳಕೆರೆಗ್ರಾಮ	೯	ಭರಮಸಾಗರ್‍ರ
೨ ‖೦	ನಂದಿವಾಳ	೩	ಗಿರ್‍ರಿಯಂಮ್ಮನಹಳ್ಳಿ
೨ ।೦	ಚಿಗಚಲೂರ್‍ರು	೦ ‖೦	ಕೆರ್‍ರೆಕೆರ್‍ರೆ
೦ ‖೦	ಸೋಮಗುದ್ದು	೧	ನಗರಂಗೆರ್‍ರೆ
೧	ನಗರಂಗೆರ್‍ರೆ	೦ ।೦	ತ್ರಿಂಮಂಣನಹಳ್ಳಿ
೭	ತಳುಕು	೦ ‖೦	ಭೊಗನಹಳ್ಳಿ
೨	ಬುಕಾಂಬುದಿ	೮	ಜಾಜೂರ್‍ರು
೧೨	ಪರ್‍ರುಶರಾಂಪುರಂ	೧೨ ‖।೦	ಮಂನೆಕೊಟ್ಟೆ
೧	ಮಲ್ಲಾಪುರ್‍ರ	೨	ಚಿಕ್ಕನಹಳ್ಳಿ
೧	ವಲಿಶೆ	೩	ಚಿತ್ರನಹಳ್ಳಿ

೩ ॥೦ ರ್‍ಡ್ಡಿಹಳ್ಳಿ
೩ ॥೦ ಘಟ್ಟಪರ್ತಿ
೩ ॥೦ ವುಳರ್ತಿ
೨ ಕಾಲುವೆಹಳ್ಳಿ
೩ ಸಾಣಿಕೆರ್‍ರೆ
೩ ॥೦ ಬಂಜಗೆರ್‍ರೆ
೧ ಯಾದಲಕಟ್ಟೆ
೦ ಲಂಗರ್‍ರ

೧೦ ೮ ।=

೧೧ ॥ ೦ ೨ ಗ್ರಾಮಾಂತರ್‍ರಗಳಿಗೆ ಹೊಗಿ ಶೆವೆ ಮಾಡಿಕೊಂ
ಡು ಬಂದದ್ದು –
೨೨ । ೦ ಹಾಯಿಕಲ್ಲು
೭ ॥ ೦ ಮಾಡ್ಲಕನಹಳ್ಳಿ
೯ ಭೂಪಸಮುದ್ರ ಶಿವಂ
ಣಹೊಡೆರಯಿಂದಾ
ತಂದದ್ದು
೧೩ ॥ ೦ ಹುಣಿಶೆಕಟ್ಟೆ
೫೧ । ೦೨ ಜಗಲೂರು
೯ ರ್‍ರೆಕಲಗೆರ್‍ರೆ

೧೧೧ ॥ ೦ ೨

೩೦ । ೦ ೪ ಸಾಲುಗುದಗ್ರಾಮನುಹುಯಿದ್ದ ಬಾಕಿ ವಸೂಲು
೧ ವೊಬ್ಬೆನಹಟ್ಟಿ
೧ ಹಟ್ಟಿದೊರೆ ಪುರ್‍ರ
ಗಣಾರಾಧನೆ
೨೦ ಬಳಾರ್‍ರಿ ಬಂಣಗಾರ್‍ರ ಸುಬ್ಬಣ್ಣ
೩ । ೦ ೪ ಹಟ್ಟಿ ಶಾ॥ ವೆಂಕಂಣಾ
೧ ಧೊಡಗಟ್ಟದ ಜೊಗ್ಯೆಯಾ
೪ ಕಣುಕುಪ್ಪೆ ತಾ॥ ಚದುರುಗೊಳದ ಗೊ
ಲ್ಲರ ಬಸಂಣಾ

(ಎರಡನೇ ಮುಖ)–

೨ ≡ ೪ ಬಂಡೆಮೆಲಕ್ಕೆ ಗರ್‍ರಿ ಹೆರ್‍ರಿದ ಭಂ
ಡಿ ಬಾಡಿಗೆ ಕಸುರ್‍ರು ಬಂದದ್ದು
೧೫ । ೦
ಭಕ್ತಾದಿಗಳು ತಂದ್ದುಕೊಟ್ಟ ಪೈಕಿ
ಶೆವೆ ಆಗಲಿಕಾಗಿ ನಿಂತ್ತ ಶಿಲುಕು
೨೦೨ ॥ ೦ ೧೦

೧೧೧ ಮಹದ್ವಾರದ ಕಾಮಗಾರಿ ಬಗ್ಯೆ ಜಾತ್ರೆಯ
ಲ್ಲು ಚಿಲ್ರವಾಗಿ ಶೆವೆ ಆದ್ದು
೪೫ ಪರಿಷೆಯಲ್ಲು ವಸೂಲುಬಂದದ್ದು
೬೬ ಚೈತ್ರಮಾಸದಿಂದಾ ಯಿಾಚಿಗೆ
ವಸೂಲುಬಂದದ್ದು ೯೬
ಪೈಕಿ ಕಳಸದ ಖರ್‍ರಿದಿ ಸದರ್‍ರಿ ದಾ
ಲು – ರ್‍ರು ೩೦
ಜಾತ್ರಾ ಬಾಕಿ – ೬೬
೧೧೧
೯೦೨ = ೨ ಯಿದೆ ಶಿಧಾರ್ತಿ ಸಂವತ್ಸರದ ಫಾಲ್ಗುಣ ಬ ೨

ಯಲ್ಲು ರಥೋತ್ಸವದಲ್ಲಿ ಜಾತ್ರೆಯಲ್ಲಿ
ರುಸುಂ ವಗೈರೆ ಬಂದದ್ದು –

೪೪೨೩ U ಗುಡಾರ್‍ರದವರ್‍ರ ಕಡೆಯಿಂದಾ ಬಂ
ದದ್ದು

೧೭ ಜವಳೀ ಗುಡಾರ್‍ರದ ಬಾಬತ್ತು
೧ ಲಯ್ಯ ಜವಳಿ ಲಂಗರಿ.
೦ ॥ ೦ ಕುಪಸದ ಲಂಗರಿ ೧ ಕೆ.
ಯಿಾ ಮೆರ್‍ರಿಗೆ ವಸೂಲು ಬಂದಾ.
೫ ಕಂಚುಗಾರ್‍ರ ಬಜಾರ್‍ರು ೧ ಕೆ.
೩ ॥ ೦ ಕಂಚುಗಾರ್‍ರು ಗುಡಾರ್‍ರ...
ವಜಾ ಶೆಟ್ಟರ ಯಂಣ.
ಜಾತ್ರಾ ಗುಡಾರ್‍ರ ೭ ಕೊ..
ದರ್‍ರ ೦ ॥ ೦ ಮೆರ್‍ರಿಗೆ ವ್ಯ..
೧ ॥ ೦ ಕಾಲುಂಗರ್‍ರ ಗುಡಾರ್‍ರ.
ವಜಾ ಗವುಡ...
ಬಾಕೀ ಗುಡಾರ್‍ರ ೬ಕೆ...
ದರ್‍ರ ೦ । ೦ ರೆಟ್ಟಿದೊ
೫ ೧೩

ಅದೇ ಪಟ್ಟಿ (ಮೂರನೇ ಮುಖ) –

ಲ ೩೦ । ಹಿ ೪

೨೦೨ ॥। ಹಿ ೧೦ ಚಿಲ್ರಿ ಬಾಬು ವಸೂಲು ಬಂದದ್ದು

೧೬ ॥। ≡ ೬ .. ಸು ವೆಚ್ಚದ ಬಾಬತ್ತು ನಾಯ್ಕನಹ
ಟ್ಟಿ ತೊಟದವರ್‍ರಿಂದಾ ಬಂದದ್ದು
೬೨ = ೬ ವಡ್ಡಹಳ್ಳಿ ಮಾರ್‍ರೆಂಮ್ಮನ ಜಾತ್ರೆ ಶಿಧಾ
ರ್ತಿ ಸಂವತ್ಸರ್‍ರದ ಮಾಘ ಶು ೨ ಮಂಗಳ
ವಾರ್‍ರ ದೆವತ್ತೆ ಮಾಡಿದಕ್ಕೆ ನಾಯ್ಕನಹಟ್ಟಿ
ನಾಯ್ಕರು ತಳವಾರ್‍ರು ಮುಂತ್ತಾದ...
ದವರು ಪೂಜಾಮಾಡಬೇಕೆಂದ್ದು ಆ ದೇವ
ತ್ತೆಗೇ ಮುಖ್ಯ ವಕ್ಕಲು ಆದ ಬೆಗಾರ್‍ರು ಕೊಟ್ಟು
ಯಿದ್ದು
೩ । = ೬ ಸಂಣಕ್ಕಿ ಸೆರು ೫೧ಕೆ
೨ ॥। ೦ ಕೊಣ ೧ಕೆ
೬೨ = ೬
ಯಿಾಚಿಗೆ ಸಾಮಾನು ನಾಯ್ಕರ್‍ರು ಸ್ವಾಮಿ.
ಗಳ ವಪ್ಪಿಶಿದ್ದರಿಂದಾ ಜಿನಶಿ ಮಾರ್‍ರಿ
ದ ಖರ್‍ರಿದಿ ದಾಖಲು
೭೪ । ಹಿ ಮುಡುಪು ತಂದ್ದು ವಪ್ಪಿಶಿದ್ದು ೮೮

ಹಿದಾ ದೈವದವರ್‍ರ ವಶಕ್ಕೆ ಕೊಟ್ಟ ಬಾಬತ್ತು
೨೫ । ೦ ಹಿರ್‍ರೆಮಲ್ಲನಹೊಳೆ ಶಾನ
ಭಾಗ ಸುಬಂಣನ ಶೆವೆ...
೨ U ಕೊಂಮನಗಟ್ಟ ಸಾಂತ್ತನೂ
ರ್‍ರು ಶಿವಪ್ಪನ ಶೆವೆ
೧ ಸಾಸಲಹಟ್ಟಿಯವರ್‍ರು
೧೦ ಶಿದ್ದಿಹಳ್ಳಿ ಅಂಗಡಿ ನಂಜಪ್ಪ
೧೦ ರಾಮದುರ್ಗದ ಕರ್‍ರಿಬಸಂಣ
ಭಾದ್ರಪದ ಶು ೨ಯಲ್ಲು

೭೪ । ೦ ೫

೨೧ ಹೊಸಕೊಟೆ ವಿರ್‍ರುಪಂಣನ್ನು ಹೊ
ರ್‍ರಮಠದ ಪವುಳಿ ವಳಗೇ ಶೇದೊಬಾವಿ
ತ್ತೆಗಸುವ ಲಾಗಾಯಿತು ಶೆವೆ ರ್‍ರು ೩೦
ಕ್ಕೆ ವಳಗಡೆ ಬಂದದ್ದು ರ್‍ರು ೧೦
ಪೈಕೀ ವಿರುಪಂಣಗೇ ವಾಪಸು ರ್‍ರು ೧
ಬಾಕೀ ರ್‍ರು ೯
ಹೊಗಲಾಗೀ ಯಿಾಚೆಗೆ ವಸೂಲುಬಂದದ್ದು ರ್‍ರು ೨೧

(ನಾಲ್ಕನೇ ಮುಖ)–


೩೦ ಹಿರ್‍ರೆಹಳಿ ಅಕ್ಕಸಾಲೆ ಪರಮೇಶ್ವರಪ್ಪನ್ನು
ವಳಗಿನ ದೆವಸ್ಥಾನದ ದಕ್ಷಿಣದ ಮಹದ್ವಾರದ
ಗೊಪುರ್‍ರಕ್ಕೆ ತಂನ್ನ ಸ್ವಂತವಾಗಿ ಹಿತಾಳಿ
ಕಲಶ ಯಿಡಿಶಿದಕ್ಕೆ ಆ ಬಗೆ ಖರ್‍ರಿದಿ ಕೊಟ್ಟಿ
ದ್ದು
೦ ॥ = ೬ ಗ್ರಾಮಾಂತರಗಳಿಗೆ ಹೊಗಿ ಶೆವೆ ಮಾಡು
ವಲ್ಲು .. ವಡಿ ದುಡ್ಡು ಯಂಬದಾಗಿ ಯಿಾ
ಸಂ ವಂದಕ್ಕೆ ವಂದು ದುಡಿನ ಮೆರ್‍ರಿಗೆ ವಸೂ
ಲು ಬಂದದ್ದು
U ಪೈ ೪ ನಾಕಾರ್‍ರೆ ವುಕ್ಕಿನಘಟ್ಟಿಗಳು ಚಿಲ್ರವಾ
ಗಿ ಮಾರ್‍ರಿದ ಕ್ರಯ ಮೊಳೆಗಳು ಸಹಾ
೩೦ ಹರ್‍ರಿಕೆ ಯತ್ತು ೩ಕ್ಕೆ ಕ್ರಯಾ
೧೯ ಮಲ್ಲೂರಹಟ್ಟಿ ಕೊಟ್ಟೂರಪ್ಪಗೆ
ಯೆತ್ತು ೨ಕ್ಕೆ ವಸೂಲುಬಂದದ್ದೂ
೧೧ ಶೆಟ್ಟಿವಾಯಿನ್ತಿ ತ್ತಿಪಂಣಕ್ಕೆ ಯೆ
ತ್ತು ೧ಕ್ಕೆ ಕ್ರಯ ರ್‍ರು ೧೩
ಪೈಕಿ ಬಾಕಿಯಿರುವ ರ್‍ರು ೨
ಜಾತ್ರಾ ವಸೂಲು ಬಂದದ್ದು ೧೧

೩೦


೦ ॥ ೦ ಗ್ನಾಪಕವಿಲ್ಲದ್ದು ಜಮೆ ಬಂದದ್ದು
೧೫ । ೦ ಯಂಣಿ ಬಗ್ಯೆ ಬಂದದ್ದು
೫ ಸುಭೆದಾರ್ರು ವೆಂಕಟಸುಬ್ಬೈಯನವರ್ರು
೩ ॥ ೦ ಕಡೆಹೂಡೆದ ಮಲ್ಲಪ್ಪನ್ನು ಗಂಗಪ್ಪ
ನ ಲಗ್ನದಲ್ಲಿ ಕೊಟ್ಟಿದ್ದು
೩ ॥ ೦ ಚಿತ್ರಗೊಂಡನಹಳ್ಳಿ ಖಬಿಣದ
ಗಿಡಪ್ಪ ತಂದ್ದುಕೊಟ್ಟಿದ್ದು
೦ ॥ = ಹೊಸಮಠದ ಗುರ್ರುಶಿದಪ್ಪ ತಂ
ದುಕೊಟ್ಟಿದ್ದು
೦ । ೦ ಘಂಟೆ ಸರಘಣಿ ಬರ್ರದಿಬಂದದ್ದು
೧ ಬಾಳೇಹಳಿ ಶಿಂಹ್ವಾಸನದವರು ಕ
ಳುಹಿಶಿದ್ದು
೦ ॥ = U ಹಿರ್ರೆಮಠದ ರುದ್ರಪ್ಪನ ಬಾಬತ್ತು
ಕೊಟ್ಟಿದ್ದು

ಪಟ್ಟಿ ೧/೫

ಶ್ರೀ ತಿಪ್ಪೆಸ್ವಾಮಿ ಪ್ರಸಂನ್ನಾ



ತಿಪ್ಪೆಸ್ವಾಮಿ ದೇವಸ್ಥಾ
ನದ ಜಮಾ ಖರ್ಚು ಗೊಷುವಾರ್ರು
ಶಿಧಾರ್ತಿ ಸಂವತ್ಸರ್ರದ ಪುಷ್ಯ ಬ ೧ ಲಾ
ಗಾಯಿತ್ತು ರವುದ್ರಿ ಸಂವತ್ಸರದ ಭಾದ್ರ
ಪದ ಬ ೩೦ವರ್ರಿಗೇ ಕುಲ್ಲು ಜಮ್ಮಾ
೧೦೩೨ । ≡ ೯.



ಆಕರಗ್ರಂಥಗಳು

೧. ಕೃಷ್ಣಮೂರ್ತಿ ಹನೂರು (ಸಂ.), ೧೯೮೭, **ಜನಪದ ವೀರಗೀತೆಗಳು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
–೧೯೯೮, **ಜನಪದ ಮತ್ತು ಬುಡಕಟ್ಟು ಗೀತೆಗಳು,** ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.

೨. ಪ್ರಭಾಕರ್ ಎ.ಎಸ್. (ಸಂ.), ೧೯೯೯, **ಹಾಲಮ್ಮ ಮತ್ತು ಸಂಗಡಿಗರು ಹಾಡಿದ ಮ್ಯಾಸಬೇಡರ ಕಥನಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ನಾಗರಾಜ್ ಎಂ.ಜಿ., ೨೦೦೦, 'ಕೊಡಗಿನ ಎರಡನೇ ಲಿಂಗರಾಜೇಂದ್ರಒಡೆಯನ ಓಂಕಾರೇಶ್ವರ ದೇಗುಲದ ಅಪ್ರಕಟಿತ ನಿರೂಪ', **ಇತಿಹಾಸ ದರ್ಶನ,** ಸಂಪುಟ ೧೫.

೪. ಗೀತಾ ಎನ್., ಕೃಷ್ಣಮೂರ್ತಿ ಪಿ.ವಿ., ೨೦೦೧, 'ಶಾಸನಗಳಲ್ಲಿ ಸಂಕೇತ ಮತ್ತು ಸಂಕ್ಷೇಪಗಳ ಬಳಕೆ–ಒಂದು ಅವಲೋಕನ', **ಇತಿಹಾಸ ದರ್ಶನ,** ಸಂಪುಟ ೧೬.

೫. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೬, **ತರೀಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನಕಾವ್ಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬ ಮೀರಾಸಾಬಿಹಳ್ಳಿ ಶಿವಣ್ಣ, ೨೦೦೯, **ಕಣಜ,** ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು.
– ೨೦೧೫, **ಜಾನಪದ ಅನುಸಂಧಾನ,** ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು.
– ೨೦೨೦, **ನಾಯಕನಹಟ್ಟಿ ಪಾಳೆಯಗಾರರು,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೭. ಲಕ್ಷ್ಮಣ್ ತೆಲಗಾವಿ, ೨೦೧೦, **ಎಪ್ಪತ್ತೇಳು ಪಾಳೆಯಗಾರರು: ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನೆ,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

೮. ಮೇಲಕಾರ ಎಸ್.ಕೆ., ಚಲವಾದಿ ಎಸ್.ಜಿ., ೨೦೧೪, **ಮುದ್ದೆಬಿಹಾಳ ತಾಲೂಕಿನ ಇತಿಹಾಸ ದರ್ಶನ (ಡೋಣಿಸಿರಿ),** ಭಾರತಸಿಂಧುರಶ್ಮಿ ಪ್ರಕಾಶನ, ಧಾರವಾಡ.

೯. ವಿರೂಪಾಕ್ಷಪ್ಪ ಕೋರಗಲ್, ೨೦೧೮, **ಜೈನಕವಿ ರಾಜಾದಿತ್ಯಕೃತ ಕ್ಷೇತ್ರಗಣಿತ,** ಸ್ವಾದಿ ಪ್ರಕಾಶನ, ಶ್ರೀಕ್ಷೇತ್ರ ಸ್ವಾದಿ ದಿಗಂಬರ ಜೈನಸಂಸ್ಥಾನಮಠ, ಸೋಂದಾ, ಶಿರಸಿ ತಾಲ್ಲೂಕು.

♦♦

೨೮

ಕಾವ್ಯಶ್ರೀ ಎಂ., ಕಾರ್ತಿಕ್ ಎಸ್.

ಶಿವಪ್ಪ ಒಪ್ಪಿತವುಳ್ಳ ಓಲೆಗರಿ ಸನ್ನದು

ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯವು ಭಾರತದ ಪ್ರಾಚೀನವಾದ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದ್ದು, ದಕ್ಷಿಣ ಭಾರತದಲ್ಲಿ ಸ್ಥಾಪನೆಯಾದ ವಸ್ತುಸಂಗ್ರಹಾಲಯಗಳಲ್ಲಿ ಎರಡನೆಯದಾಗಿದೆ. ೧೮೬೫ರಲ್ಲಿ ಸ್ಥಾಪನೆಯಾದ ಈ ವಸ್ತು ಸಂಗ್ರಹಾಲಯದಲ್ಲಿ (ಈಗ ಇರುವ ಕಟ್ಟಡವು ೧೮೭೭ರಲ್ಲಿ ಕಟ್ಟಿರುವುದಾಗಿದೆ) ವಿವಿಧ ರಾಜಮನೆತನಗಳ ನಾಣ್ಯಗಳು, ವರ್ಣಚಿತ್ರಗಳು, ಶಿಲ್ಪಗಳು (ಶಿಲೆ, ಮರ ಇತ್ಯಾದಿ), ಸಂಗೀತ ವಾದ್ಯಗಳು, ಶಿಲಾಶಾಸನಗಳು, ತಾಮ್ರಶಾಸನಗಳು, ಉತ್ಖನನಗಳಲ್ಲಿ ದೊರಕಿರುವ ಅವಶೇಷಗಳು ಮುಂತಾದ ಅಮೂಲ್ಯ ವಸ್ತುಗಳು ಸಂಗ್ರಹವಾಗಿ, ಸಂರಕ್ಷಿತವಾಗಿ, ಪ್ರದರ್ಶಿತವಾಗಿವೆ. ಮೊದಮೊದಲ ಕಾಲದಲ್ಲಿ ಇಲ್ಲಿ ಹಸ್ತಪ್ರತಿಗಳ ಸಂಗ್ರಹ ಇದ್ದರೂ ಅನಂತರ ಇವೆಲ್ಲವೂ ಬಲುಮಟ್ಟಿಗೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ (Oriental Research Institute, Mysuru) ವರ್ಗಾವಣೆಗೊಂಡಿದೆ ಎಂದು ತಿಳಿದುಬರುತ್ತದೆ. ಇಷ್ಟಾದರೂ ಸುಮಾರು ೩-೪ ಹಸ್ತಪ್ರತಿಗಳು ವಸ್ತುಸಂಗ್ರಹಾಲಯದಲ್ಲಿಯೇ ನಿಕ್ಷಿಪ್ತವಾಗಿರುವುದು ಕಂಡುಬರುತ್ತದೆ. ಇವುಗಳಲ್ಲಿ ಶಿವಪ್ಪ ಎಂಬ ವ್ಯಕ್ತಿಯ ಸ್ವಹಸ್ತಾಕ್ಷರ ಒಪ್ಪಿತವುಳ್ಳ ಓಲೆಗರಿ ಹಸ್ತಪ್ರತಿಯು ಒಂದಾಗಿದೆ (ದಾಖಲಾತಿ ಸಂಖ್ಯೆ-೫). ಈ ಹಸ್ತಪ್ರತಿಯು ಸನ್ನದಿನ ಗುಂಪಿಗೆ ಸೇರಿದ್ದು, ಇದರಲ್ಲಿನ ವಿಷಯ ಬಹುಪಾಲು ಸಂಶೋಧಕರ ಗಮನಕ್ಕೆ, ಬಂದಂತಿಲ್ಲ. ಈ ಸಂಬಂಧವಾಗಿ ಪ್ರಕಟವಾಗಿರುವ ಒಂದೆರಡು ಬರಹಗಳಲ್ಲಿಯೂ ಕೆಲವೊಂದು ಗೊಂದಲಗಳು, ಸಮಸ್ಯೆಗಳು ಕಂಡುಬರುತ್ತಿವೆ. ಈ ಹಸ್ತಪ್ರತಿಯನ್ನು ಕುರಿತಾದ ವಿವರಗಳು ನಮ್ಮ ಗಮನಕ್ಕೆ ಬಂದಂತೆ ಸಮರ್ಪಕವಾಗಿ ಇದುವರೆಗೂ ಪ್ರಕಟವಾಗಿಲ್ಲ. ಆದುದರಿಂದ ಪ್ರಕೃತ ಲೇಖನದಲ್ಲಿ ಹಿಂದಿನ ಬರಹಗಳಲ್ಲಿನ ಗ್ರಹಿಕೆಗಳನ್ನು ಆಧಾರಸಹಿತವಾಗಿ ವಿಮರ್ಶಿಸಿ, ಈ ಓಲೆಗರಿಯ ಬಗೆಗೆ ಹಾಗೂ ಅದರಲ್ಲಿರುವ ವಿಷಯದ ಬಗೆಗೆ ಲಭ್ಯ ಆಧಾರಗಳನ್ನು ಅವಲಂಬಿಸಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಓಲೆಗರಿ ಸನ್ನದಿನ ಪೂರ್ವಪ್ರಕಟನೆಗಳು ಹಾಗೂ ಅವುಗಳ ವಿಮರ್ಶೆ : ಈ ಓಲೆಗರಿ ಸನ್ನದಿನ ಪಾಠ ನಮ್ಮ ಗಮನಕ್ಕೆ ಬಂದಂತೆ ಎರಡು ಬಾರಿ ಪ್ರಕಟವಾಗಿದೆ. ಪ್ರಕಟವಾಗುವುದಕ್ಕೆ ಮೊದಲೇ ಇದು ವರದಿಯಾಗಿದೆ. ಇದರ ವಿವರಗಳನ್ನು ಕ್ರಮವಾಗಿ ಕೆಳಗೆ ದಾಖಲಿಸಲಾಗಿದೆ.

೧. ೧೯೦೯ರ ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಇದರ ಸಂಕ್ಷಿಪ್ತ ಸಾರಾಂಶ ಮೊತ್ತಮೊದಲು ಕೆಳಕಂಡಂತೆ ದಾಖಲಾಗಿದೆ[೧].

ಸಹಾಯಕ ನಿರ್ದೇಶಕರು
ಸರ್ಕಾರಿ ವಸ್ತುಸಂಗ್ರಹಾಲಯ
(ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ), ಕಸ್ತೂರ ಬಾ ರಸ್ತೆ
ಬೆಂಗಳೂರು-೫೬೦೦೦೧
ಮೊ: ೮೧೦೫೦ ೨೪೬೫೯

ಸಂಶೋಧಕರು # ೪೧೩
'ಡಿ' ಗ್ರೂಫ್ ಎಂಪ್ಲಾಯಿಸ್ ಲೇಔಟ್
೧ನೆಯ ಬ್ಲಾಕ್, ೬ನೆಯ ಮುಖ್ಯರಸ್ತೆ
ಲಿಂಗಧೀರನಹಳ್ಳಿ (ಹೇರೋಹಳ್ಳಿ)
ಅಂದ್ರಹಳ್ಳಿ ಮುಖ್ಯರಸ್ತೆ
ಬೆಂಗಳೂರು-೫೬೦೦೯೧
ಮೊ: ೯೪೪೮೩ ೨೪೧೨೨

IKKERI

Sivappa-Nayaka.

96. An interesting sannad on palm leaf, issued by Sivappa Nayaka of Ikkeri under his own signature, was found in the Bangalore Museum. Its date about 1650 A. D. It refers to two former nirups issued in 1616 and 1633 A. D. and tells us that as the vole (order on palm leaf) formerly issued with instructions that it should be returned after entry in the sénabóva's kadita had been lost, the present vole was issued instead. It appears one Lingabhatta was enjoying certain lands as the archak of the Narayana, Tirumaladeva and Hanumanta temples in the fort of Haranhalli. Subsequently an order was issued by Sivappa Nayaka that no Smártas should be the archaks in Vishnu temples, and, on Lingabhatta agreeing to employ a Vaishnava Brahman for the place of archak in the above temples, he was allowed to enjoy the Lands with certain conditions.

ಈ ಸಾರಾಂಶ ಬಲುಮಟ್ಟಿಗೆ ತೃಪ್ತಿಕರವಾಗಿಯೇ ಇದ್ದರೂ ಮತ್ತೂ ಹೆಚ್ಚಿನ ಸ್ಪಷ್ಟತೆಯನ್ನು ಬಯಸುತ್ತದೆ. ಈ ಸನ್ನದು ಕೆಳದಿಯ ಶಿವಪ್ಪನಾಯಕನದ್ದೆಂದು ಮೊದಲ ಬಾರಿಗೆ ದಾಖಲಾಗಿರುವುದು ಇಲ್ಲಿಯೇ. ಆದರೂ ಆಗಿನ ಕಾಲಕ್ಕೆ ಲಭ್ಯವಾದ ವಿವರಗಳನ್ನು ಸಾಧ್ಯವಿರುವ ಮಟ್ಟಿಗೂ ಖಚಿತವಾಗಿ ಪ್ರಸ್ತುತಪಡಿಸಲಾಗಿರುವುದು ಗಮನಿಸಬೇಕಾದ ಅಂಶ.

೨. ೧೯೦೯ರ ವಾರ್ಷಿಕ ವರದಿಯಲ್ಲಿನ ನಮೂದಿನ ಅನಂತರ ಅಧಿಕೃತವಾಗಿ ಅಪ್ರಕಟಿತವಾಗಿದ್ದರೂ ಪ್ರಚಾರದಲ್ಲಿರುವ, ಕರಡಚ್ಚು ಸ್ಥಿತಿಯಲ್ಲಿರುವ, ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ–೯, ಬೆಂಗಳೂರು ಜಿಲ್ಲೆಯ ಪುರವಣಿ ಸಂಪುಟದಲ್ಲಿ ಇದರ ಪಾಠ ಮೊತ್ತಮೊದಲು ಪ್ರಕಟವಾಗಿದೆ. ಮೂಲ ಓಲೆಗರಿ ಸನ್ನದನ್ನು ಹಾಗೂ ಪುರವಣಿ ಸಂಪುಟದ ಪಾಠವನ್ನು ಪರಸ್ಪರ ಹೋಲಿಸಿ ನೋಡಿದರೆ, ಪುರವಣಿ ಸಂಪುಟದ ಪಾಠ ಅತ್ಯಂತ ಕರಾರುವೊಕ್ಕಾಗಿದೆ ಎಂದು ಒತ್ತಿ ಹೇಳಬೇಕಿದೆ. ಈ ಸಂಪುಟವನ್ನು ಸಿದ್ಧಪಡಿಸಿದವರು ಆಗ ಮೈಸೂರು ಪುರಾತತ್ತ್ವ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಆರ್. ನರಸಿಂಹಾಚಾರ್ಯರು. ಇವರು ಸಿದ್ಧಪಡಿಸಿರುವ ಪಾಠವನ್ನು ಪೂರ್ಣವಾಗಿ ತಿದ್ದುವುದು ನಿಜಕ್ಕೂ ಸವಾಲೇ ಸರಿ. ಇಂದು ನಮಗೆ ಅವಿದಿತವಾಗಿರುವ ಯಾವುದೇ ಕಾರಣಗಳಿಂದ ಬೆಂಗಳೂರು ಜಿಲ್ಲೆಯ ಪುರವಣಿ ಸಂಪುಟ ಪ್ರಕಟವಾಗದೆ ಇದೆ.

೩. ಮೇಲಿನ ಪ್ರಕಟನೆಯ ಅನಂತರ ಕೆಳದಿ ಅರಸರ ಶಾಸನ ಸಂಪುಟದಲ್ಲಿ ಇದರ ಪಾಠ ಪ್ರಕಟವಾಗಿದೆ[೨]. ಈ ಪಾಠದ ದಾಖಲಾತಿಗೆ ೧೯೦೯ರ ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯನ್ನು ಆಕರವಾಗಿ ತೋರಿಸಲಾಗಿದೆ. ಆದರೆ ೧೯೦೯ರ ವರದಿಯಲ್ಲಿ ಸನ್ನದಿನ ಪಾಠ ಪ್ರಕಟವಾಗಿಯೇ ಇಲ್ಲ. ವಸ್ತುಸ್ಥಿತಿ ಈ ರೀತಿ ಇರುವಾಗ ಕೆಳದಿ ಅರಸರ ಶಾಸನಸಂಪುಟದಲ್ಲಿ ಪಾಠವನ್ನು ದಾಖಲಿಸಲು ಯಾವ ಆಕರವನ್ನು ಬಳಸಲಾಗಿದೆ ಎಂಬುದನ್ನು ಸರಿಯಾಗಿ ನೀಡಬೇಕಿತ್ತು. ವಾರ್ಷಿಕ ವರದಿ ಸಂಖ್ಯೆ–೯೬ ಎಂದು ಸೂಚಿಸಿರುವುದು ಕೂಡ ದೋಷಪೂರ್ಣವಾಗಿದೆ. ಇದು ಶಾಸನದ ಕ್ರಮಸಂಖ್ಯೆಯಾಗಿರದೆ ಪ್ರಘಟ್ಟದ (para) ಕ್ರಮಸಂಖ್ಯೆಯಾಗಿದೆ. ಅಷ್ಟೇ ಅಲ್ಲದೆ ಈ ಓಲೆಗರಿಯಲ್ಲಿ ಒಟ್ಟು ೪ ಪತ್ರಗಳಿವೆಯೆಂದು ದಾಖಲಿಸಿದೆ. ೪ ಪತ್ರಗಳ ಮುಂಭಾಗ ಮತ್ತು ಹಿಂಭಾಗದಲ್ಲಿ ಬರವಣಿಗೆಯಿರುವಂತೆ ಪಾಠವನ್ನು ಅಚ್ಚುಮಾಡಲಾಗಿದೆ. ಇದಂತೂ ಸಂಪೂರ್ಣವಾಗಿ ತಪ್ಪು ಎಂದು ಮೂಲ ಓಲೆಗರಿಯ ಪರಿಶೀಲನೆಯಿಂದ ಖಚಿತಪಡುತ್ತದೆ. ಈ ಓಲೆಗರಿ ಸನ್ನದು ಒಂದೇ ಗರಿಯಿಂದ ಕೂಡಿದ್ದು, ಇದರ ಮುಂಭಾಗ ಮತ್ತು ಹಿಂಭಾಗದಲ್ಲಿ ಬರವಣಿಗೆಯಿದೆ. ಸನ್ನದಿನ ಪಾಠ ಎಲ್ಲಿಯೂ ತ್ರುಟಿತವಾಗಿಲ್ಲ. ಆದರೂ ಕೆಳದಿ ಅರಸರ ಶಾಸನಸಂಪುಟದಲ್ಲಿ ಅನೇಕ ಕಡೆ ತ್ರುಟಿತವೆಂದು ತೋರಿಸಲಾಗಿದೆ. ಒಟ್ಟಾರೆಯಾಗಿ ಪಾಠವೂ ತೃಪ್ತಿಕರವಾಗಿಲ್ಲ. ಈ ಸಂಪುಟದ ಪಾಠ ಮತ್ತು ವಿವರಗಳು ನಂಬಲರ್ಹವಾದವುಗಳಲ್ಲ.

೪. ಕೆಳದಿ ಗುಂಡಾಜೋಯಿಸರು ಈ ಓಲೆಗರಿ ಹಸ್ತಪ್ರತಿಯಲ್ಲಿ ಇರುವ ವಿಷಯವನ್ನು ಕುರಿತು ಲೇಖನವೊಂದನ್ನು ಬರೆದಿದ್ದಾರೆ[೩]. ಈ ಲೇಖನದಲ್ಲಿ ಅನೇಕ ವಿವರಗಳು ವಿಶ್ಲೇಷಣೆಗೆ ಒಳಪಟ್ಟಿದ್ದರೂ ಗೊಂದಲಗಳೂ ಸೇರಿಕೊಂಡಿವೆ. ಸಂಬಂಧಪಡದ ವಿವರಗಳೇ ಬಹಳವಾಗಿವೆ. ಹಸ್ತಪ್ರತಿಯ ಬಗೆಗೆ ಸರಿಯಾಗಿ ವಿವರವೇ ಇಲ್ಲವಾಗಿದೆ. ಈ ಸನ್ನದಿನ ವಿಸ್ತೃತ ಸಾರಾಂಶ ಪುರಾತತ್ತ್ವ ವರದಿಯಲ್ಲಿದೆ ಎಂದು ಹೇಳಿ ಆ ಸಾರಾಂಶವನ್ನು ದಾಖಲಿಸಲಾಗಿದೆ. ಆದರೆ ಯಾವ ಪುರಾತತ್ತ್ವ ವರದಿ ಎಂದೇ ನಮೂದಿಸಿಲ್ಲ. ೧೯೦೯ರ ವರದಿಯಲ್ಲಿ ಗುಂಡಾಜೋಯಿಸರು ಉದ್ಧರಿಸಿರುವ ಸಾರಾಂಶ ಇಲ್ಲವೇ ಇಲ್ಲ. ಆದರೂ ಗುಂಡಾಜೋಯಿಸರು ದಾಖಲಿಸಿರುವ ಈ ವಿಸ್ತೃತ ಸಾರಾಂಶ ಬಹಳ ಉಪಯುಕ್ತವಾದುದೆಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಈ ಸಾರಾಂಶ ಮತ್ತಷ್ಟು ಪರಿಷ್ಕಾರವಾಗಿ ಇರಬೇಕಿತ್ತು

ಎಂಬುದನ್ನೂ ಈ ಸಂದರ್ಭದಲ್ಲಿ ಮರೆಯಲಾಗದು. ಗುಂಡಾಜೋಯಿಸರು ಈ ಸನ್ನದಿನ ವಿಷಯಕ್ಕೆ ಪೂರಕವಾದುದೆಂದು ಭಾಷಾಪತ್ರ ಎಂಬ ಶೀರ್ಷಿಕೆ ಯನ್ನು ಹೊಂದಿರುವ, ದಾಖಲೆಯೊಂದರ ಸಾರಾಂಶವನ್ನು, ಅಸಮಗ್ರ ಮೂಲಪಾಠದಸಹಿತ ನೀಡಿದ್ದಾರೆ. ಈ ದಾಖಲೆಯ ಪ್ರತಿಗಳು ಶೃಂಗೇರಿಯ ಶ್ರೀಶಾರದಾಪೀಠ, ಕೆಳದಿ ವಸ್ತುಸಂಗ್ರಹಾಲಯ ಮುಂತಾದ ಕಡೆಗಳಲ್ಲಿಯೂ ಇದೆ[೪]. ವಿಭಿನ್ನ ಸ್ಥಳಗಳಲ್ಲಿ ದೊರಕಿದ್ದರೂ ಸ್ವಲ್ಪ ಪಾಠವ್ಯತ್ಯಾಸಗಳಿದ್ದರೂ ವಿಷಯ ಮಾತ್ರ ಸಮಾನವಾಗಿದೆ. ಇದರ ಕಾಲ 'ವಿಭವ ಸಂವತ್ಸರದ ಮಾಘ ಬಹುಳ ೩೦ (ಅಮಾವಾಸ್ಯೆ), ಸೋಮವಾರ, ಶತತಾರಾ ನಕ್ಷತ್ರ (ಶತಭಿಷಾ), ಸೂರ್ಯೋಪರಾಗ ಪುಣ್ಯಕಾಲ' ಎಂದು ದಾಖಲಾಗಿದೆ. ಇದು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೧೨-೨-೧೮೨೯, ಸೋಮವಾರಕ್ಕೆ ಯಾವುದೇ ಗೊಂದಲಗಳೂ ಇಲ್ಲದೆ ಸರಿಹೊಂದುತ್ತದೆ. ಈ ದಾಖಲೆಯಲ್ಲಿ ಅನೇಕ ಜನ ಮಠಾಧಿಪತಿಗಳು ಒಂದೆಡೆ ಸೇರಿ ಆಚಾರ ವಿಚಾರಗಳನ್ನು ನಿರ್ಣಯಿಸುವ ಬಗೆಗೆ ವಿವರಗಳಿವೆ. ಆದುದರಿಂದ ಭಾಷಾಪತ್ರದ ವಿಷಯಕ್ಕೂ ಓಲೆಗರಿ ಸನ್ನದಿನಲ್ಲಿರುವ ವಿವರಕ್ಕೂ ವಿಷಯ ಸಾಮ್ಯವಂತೂ ಖಂಡಿತವಾಗಿಯೂ ಇಲ್ಲವೆಂದು ಒತ್ತಿ ಹೇಳಬೇಕಿದೆ. ಇದೇನೇ ಇದ್ದರೂ ಓಲೆಗರಿ ಸನ್ನದಿನಲ್ಲಿನ ವಿಷಯದ ನೈಜತೆಯ ಬಗೆಗೆ ಸಂದೇಹವನ್ನು ತಾಳಿರುವುದು ಒಪ್ಪತಕ್ಕ ವಿಷಯವಾಗಿದೆ.

೫. ಅ. ಸುಂದರ ಅವರ ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ ಎಂಬ ಗ್ರಂಥದಲ್ಲಿ[೫] 'ಇಕ್ಕೇರಿಯ ಲಿಂಗಾಭಟ್ಟರಿಗೆ ಶಿವಪ್ಪನಾಯಕರು ಕೊಟ್ಟ ಆದೇಶ. ಇನ್ನು ಮುಂದೆ ನಾರಾಯಣ ಮತ್ತು ತಿರುಮಲ ದೇವಸ್ಥಾನಗಳಲ್ಲಿ ಸ್ಮಾರ್ತರು ಪೂಜೆ ಮಾಡಬಾರದು. ಅವರ ಬದಲಿಗೆ ವೈಷ್ಣವರು ಪೂಜೆಯನ್ನು ಮಾಡಬೇಕು' ಎಂಬುದಾಗಿ ಸನ್ನದಿನ ಸಾರಾಂಶವನ್ನು ದಾಖಲಿಸಲಾಗಿದೆ. ಇಕ್ಕೇರಿಯ ಲಿಂಗಾಭಟ್ಟ ಎಂದಿರುವುದಕ್ಕೆ ಆಧಾರವೇ ಇಲ್ಲ. ಸಾರಾಂಶವೂ ಪೂರ್ಣವಾಗಿ ತೃಪ್ತಿಕರವಾಗಿಲ್ಲ. ಕೆಳದಿ ಅರಸರ ಶಾಸನ ಸಂಪುಟದಲ್ಲಿ ಸೂಚಿಸಿರುವಂತೆ ಆಕರವನ್ನು ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ, ಸಂಖ್ಯೆ-೯೬ ಎಂದೇ ಹೇಳಲಾಗಿದೆ. ಇದು ಸಮರ್ಥನೀಯವಲ್ಲ.

ಮೇಲೆ ಸೂಚಿಸಿರುವ ಆಕರಗಳಲ್ಲಿ ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯ ಸಾರಾಂಶ ಮಾತ್ರ ಬಲುಮಟ್ಟಿಗೆ ತೃಪ್ತಿಕರವಾಗಿದೆ. ಮಿಕ್ಕವುಗಳಲ್ಲಿ ಅನೇಕ ಗೊಂದಲಗಳು ಹಾಗೂ ಸಮಸ್ಯೆಗಳಿವೆ. ಇವುಗಳನ್ನು ಆಮೂಲಾಗ್ರವಾಗಿ ಗಮನಿಸಿ, ಪ್ರಕೃತ ಲೇಖನದಲ್ಲಿ ಈ ಹಸ್ತಪ್ರತಿಯ ಪಾಠವನ್ನು ಮತ್ತೊಮ್ಮೆ ಪರಿಶೀಲಿಸಿ ಇಲ್ಲಿ ಪ್ರಕಟಿಸಿ (ಬರಹದ ಕೊನೆಯಲ್ಲಿ ಸನ್ನದಿನ ಪಾಠವನ್ನು ಪ್ರಕಟಿಸಲಾಗಿದೆ), ವಿಶ್ಲೇಷಣೆಯನ್ನು ಮಾಡಲಾಗಿದೆ. ಸನ್ನದಿನ ಪಾಠದಲ್ಲಿ ಆಡುಮಾತಿನ ರೂಪಗಳೂ ಕೆಲವು ಸ್ಖಾಲಿತ್ಯಗಳೂ ಇದ್ದು, ಅವುಗಳ ಶುದ್ಧರೂಪವನ್ನು ಆಯಾ ಶಬ್ದಗಳ ಪಕ್ಕದಲ್ಲಿಯೇ ದುಂಡುಕಂಸದೊಳಗೆ ( ) ನೀಡಲಾಗಿದೆ. ಆಡುಮಾತಿನ ರೂಪಗಳನ್ನು (ಉದಾಹರಣೆಗೆ : ವಬ, ವಯಿಷ್ಣವ ಮುಂತಾದವು) ಸ್ಖಾಲಿತ್ಯಗಳೆಂದು ತಿಳಿಯುವುದು ಪೂರ್ಣವಾಗಿ ಸೂಕ್ತವಾಗಲಾರದು ಎಂಬುದನ್ನೂ ಈ ಸಂದರ್ಭದಲ್ಲಿ ಗಮನಲ್ಲಿಟ್ಟುಕೊಳ್ಳಬೇಕು. ಕೆಲವು ರೂಪಗಳು (ಉದಾಹರಣೆಗೆ : ಮೊಂಮಗ, ಆಗಿಅದೆ ಇತ್ಯಾದಿ) ಆ ಕಾಲದ ಲಿಪಿವೈಚಿತ್ರ್ಯಗಳಾಗಿವೆ. ಬೇರೆ ಬೇರೆ ಶಾಸನಗಳು ಮತ್ತು ಹಸ್ತಪ್ರತಿಗಳನ್ನು ಇದಕ್ಕೆ ಪೂರಕವಾಗಿ ಗಮನಿಸಬಹುದು. ಭಾಷೆ ಮತ್ತು ಲಿಪಿ ಎರಡೂ ಬೇರೆ ಬೇರೆ ಎಂದು ಇದರಿಂದ ಸ್ಪಷ್ಟವಡುತ್ತದೆ.

ಓಲೆಗರಿ ಸನ್ನದಿನ ಒಟ್ಟುಸ್ಥಿತಿ ಮತ್ತು ಇತರ ವಿವರಗಳು : ಈ ಓಲೆ ಸನ್ನದು ಯಾವ ಸಮಯದಲ್ಲಿ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ಬಂದು ಸೇರ್ಪಡೆಯಾಗಿದೆ ಎಂದು ತಿಳಿಯಲು ಈಗ ದೊರಕುತ್ತಿರುವ ಆಕರ ಸಾಮಗ್ರಿಗಳಿಂದ ಸಾಧ್ಯವಿಲ್ಲವಾಗಿದೆ. ೧೯೦೯ರ ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಇದರ ನಮೂದು ದೊರಕುವ ಕಾರಣ ಬಲುಮಟ್ಟಿಗೆ ಆ ಸಮಯದಲ್ಲಿಯೇ ವಸ್ತುಸಂಗ್ರಹಾಲಯಕ್ಕೂ ಸೇರ್ಪಡೆಯಾಗಿರಬಹುದೆಂದು ಊಹಿಸಬಹುದಷ್ಟೆ. ಆದರೆ ಈ ವಾರ್ಷಿಕ ವರದಿಯಲ್ಲಿಯೇ Found in the Bangalore Musuem ಎಂದಿರುವ ಕಾರಣ ಈ ವರದಿಯ ನಮೂದಿಗೂ ಮೊದಲೇ ಈ ಓಲೆ ವಸ್ತುಸಂಗ್ರಹಾಲಯಕ್ಕೆ ಬಂದು ಸೇರ್ಪಡೆಯಾಗಿರಬೇಕು (ಈ ವಸ್ತುಸಂಗ್ರಹಾಲಯವು ಮೊದಲು ಪುರಾತತ್ತ್ವ ಇಲಾಖೆಯ ಅಧೀನದಲ್ಲಿ ಇದ್ದಿರದೆ ಬೇರೆ ಬೇರೆ ಇಲಾಖೆಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು). ಈ ಓಲೆಯು ಶ್ರೀತಾಳ ಜಾತಿಯದಾಗಿದ್ದು, ಒಂದೇ ಗರಿಯಿಂದ ಕೂಡಿದೆ. ಇದರ ಸಹಜವಾದ ಲಕ್ಷಣದಿಂದ ಸ್ವಲ್ಪ ಜೋರಾಗಿ/ಒರಟಾಗಿ ಬಳಸಲು ಹೊರಟರೆ ಮುರಿದುಹೋಗುತ್ತದೆ. ಈ ಪ್ರತಿ ಉದ್ದವಾಗಿದ್ದು ಮುಂಭಾಗದಲ್ಲಿ ೩ ಸಾಲುಗಳು, ಹಿಂಭಾಗದಲ್ಲಿ ೩ ಸಾಲುಗಳ ಬರಹದಿಂದ ಕೂಡಿದೆ. ೧ ಮೀಟರ್ ಅಗಲ, ೧೦೦.೨ ಸೆಂಟಿಮೀಟರ್ ಉದ್ದದಿಂದ ಕೂಡಿರುವ ಇದು, ಒಂದನೆಯ ಸಾಲಿನಲ್ಲಿ ೧೮೮ ಅಕ್ಷರಗಳು, ಎರಡನೆಯ ಸಾಲಿನಲ್ಲಿ ೨೦೦ ಅಕ್ಷರಗಳು, ಮೂರನೆಯ ಸಾಲಿನಲ್ಲಿ ೨೦೪ ಅಕ್ಷರಗಳು, ನಾಲ್ಕನೆಯ ಸಾಲಿನಲ್ಲಿ ೧೭೬ ಅಕ್ಷರಗಳು, ಐದನೆಯ ಸಾಲಿನಲ್ಲಿ ೧೭೬

ಅಕ್ಷರಗಳು, ಆರನೆಯ ಸಾಲಿನಲ್ಲಿ ೧೨ ಅಕ್ಷರಗಳನ್ನು (ಅಳತೆಮಾನಗಳ ಸಂಕೇತಗಳನ್ನೂ ಒಳಕೊಂಡು) ಕ್ರಮವಾಗಿ ಹೊಂದಿದೆ. ವಸ್ತುಸಂಗ್ರಹಾಲಯಕ್ಕೆ ಬಂದ ಸಮಯದಲ್ಲಿ ಇದು ಬಹುಶಃ ೫ ತುಂಡುಗಳಾಗಿದ್ದಿತೆಂದು ತೋರುತ್ತದೆ. ಬೆಂಗಳೂರು ಜಿಲ್ಲೆಯ ಪುರವಣಿ ಸಂಪುಟದಲ್ಲಿ ಇದನ್ನೇ ಸೂಚಿಸಲಾಗಿದೆ. ಅನಂತರದ ಯಾವುದೋ ಸಮಯದಲ್ಲಿ ತುಂಡುಗಳನ್ನು ಜೋಡಿಸಿ, ಅಂಟಿಸಿಡಲಾಗಿದೆ. ಈ ರೀತಿ ಅಂಟಿಸಿರುವ ಕಾರಣ ಇದು ಸುಸ್ಥಿತಿಯಲ್ಲಿಯೇ ಇದ್ದರೂ ಒಂದೆರಡು ಕಡೆಯ ಅಕ್ಷರಗಳ (೫-೬ ಅಕ್ಷರಗಳು ಮಾತ್ರ) ಭಾಗ ದೊರಕುವುದಿಲ್ಲ. ಬಹುಶಃ ಸಣ್ಣತುಂಡು ಗಳಾಗಿದ್ದ ಕಾರಣ ಈ ರೀತಿಯಾಗಿದೆ ಎಂದು ಕಾಣುತ್ತದೆ. ಆದರೆ ಬೆಂಗಳೂರು ಜಿಲ್ಲೆಯ ಪುರವಣಿ ಸಂಪುಟದಲ್ಲಿ ಇದರ ಪಾಠ ಯಾವುದೇ ತ್ರುಟಿತಗಳಿಲ್ಲದೆ ಅಚ್ಚಾಗಿರುವುದರಿಂದ ಆ ಕಾಲಕ್ಕೆ ಸಣ್ಣಪುಟ್ಟ ತುಂಡುಗಳು ಕೂಡ ಇದ್ದುವೆಂದು ಸ್ಪಷ್ಟ ವಾಗುತ್ತದೆ. ಈ ಓಲೆಪ್ರತಿಯಲ್ಲಿನ ಸನ್ನದನ್ನು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ಈ ಓಲೆಪ್ರತಿಯ ಬಗೆಗೆ ಇದಕ್ಕಿಂತ ಹೆಚ್ಚಿನ ವಿವರಗಳನ್ನು ತಿಳಿಯಲು ಸಾಮಗ್ರಿಯ ಕೊರತೆಯಿದೆ.

ಸನ್ನದಿನ ಸಾರಾಂಶ : ಖಿರಿದಿ ರಾಮಪ್ಪಯ್ಯನ ಮುಖಾಂತರ ಗುಂಡಾವಧಾನಿಯ ಮಗನೂ ನಾರಣಭಟ್ಟನ ಮೊಮ್ಮಗನೂ ಆದ ಲಿಂಗಾಭಟ್ಟನಿಗೆ ಹುಜೂರು ಬಂದು (=ಆಜ್ಞೆಯು ಬಂದು), ಹಾರನಹಳ್ಳಿ ಕೋಟೆಯ ಒಳಗಡೆ ಇರುವ ನಾರಾಯಣ, ತಿರುಮಲ ಮತ್ತು ಹನುಮಂತ ದೇವರುಗಳ ಪೂಜೆಯನ್ನು ಮೊದಲಿನಿಂದಲೂ (=ಪೂರ್ವಾರಭ್ಯ) ನೀವು ಮಾಡಿಕೊಂಡು ಬರುತ್ತಿರುವಾಗ, ಈ ಸಂಬಂಧವಾಗಿ (ದೇವರ ಪೂಜೆಗೆ) ಕಾಣಿಕೆ ಬರಬೇಕೆಂದು [ರಾಜನಿಂದ] ಅಪ್ಪಣೆ ಆದ ಕಾರಣ, ನಳ ಸಂವತ್ಸರದಲ್ಲಿ ಕಾಣಿಕೆ ೬೦ ಗದ್ಯಾಣವನ್ನು ಕೊಟ್ಟು ಅದಕ್ಕೆ ಸಂಬಂಧಪಟ್ಟ ನಿರೂಪವನ್ನು ಬರೆಯಲಾಗಿದೆ.

ಈ ದೇವರುಗಳಿಗೆ ಉತ್ತಾರವಾದ (ಸಲ್ಲುತ್ತಿರುವ, ಸೇರಿರುವ) ಭೂಮಿಯನ್ನು (ಪೂಜೆ ಮಾಡುವವರು) ಅನುಭವಿಸಿ ಕೊಂಡು, ದೇವರ ಪೂಜೆ ಮಾಡಿಕೊಂಡು ಬರಲಾಗುತ್ತಿದೆ. ವಿಷ್ಣುವಿಗೆ ಸಂಬಂಧಪಡುವ ಈ ಸ್ಥಳದಲ್ಲಿ ಸ್ಮಾರ್ತರು (ಸ್ಮಾರ್ತ ಬ್ರಾಹ್ಮಣರು) ಪೂಜೆ ಮಾಡಬಾರದೆಂದು [ರಾಜನ] ಅಪ್ಪಣೆ ಆಗಿದೆ [ಎಂದು ಖಿರಿದಿ ರಾಮಪ್ಪಯ್ಯನು ಲಿಂಗಾಭಟ್ಟನಿಗೆ ಸೂಚಿಸುತ್ತಿದ್ದಾನೆ].

ಹನುಮಂತದೇವರಿಗೆ ಸೇರಿರುವ ಭೂಮಿಯಲ್ಲಿ ದನಕರುಗಳು ನಿಲ್ಲುವ ಸಂಬಂಧ (ದನಕರುಗಳು ಹುಲ್ಲನ್ನು ಮೇಯಲು ಬಹುಶಃ ಬರುವ ಕಾರಣ ಎಂಬ ಅರ್ಥವಿರಬಹುದೇ?) ತುರುಮಂದಿಗಾಗಿ ಅಂದರೆ ದನಕರುಗಳಿಗಾಗಿ (ಅಥವಾ ತುರುಗಳನ್ನು ನೋಡಿಕೊಳ್ಳುವ ಸಂರಕ್ಷಕರಿಗಾಗಿ?) ೩ ಗದ್ಯಾಣ ಭೂಮಿಯನ್ನು ಕಟ್ಟು ಮಾಡಿಸಿದ್ದು (ಅಳತೆ ಮಾಡಿಸಿದ್ದು), ಅದರ ಒಟ್ಟು ಅಳತೆ ಪ್ರಮಾಣ ಇಷ್ಟು ಬರುತ್ತದೆ. ಇದನ್ನು ಕಾಣಿಕೆಯಾಗಿ ಕೊಡಲಾಗಿದೆ. ಈ ಭೂಮಿಯನ್ನು ಕೊಟ್ಟು ಆಗಿರುವ ನಷ್ಟಕ್ಕೆ, ಇದರ ಬದಲು ಹಾರನಹಳ್ಳಿ ಸೀಮೆ ಹಾರನಹಳ್ಳಿ ಗ್ರಾಮದ ಭೂಮಿಯಿಂದ ನಷ್ಟವನ್ನು ತುಂಬಿಕೊಳ್ಳಲು ಉತ್ತಾರವಾಗಿ ಕೊಡಲಾಗಿದೆ. ಲಿಂಗಾಭಟ್ಟನ ಕಡೆಯಿಂದಲೇ ಒಬ್ಬ ವೈಷ್ಣವ ಬ್ರಾಹ್ಮಣನನ್ನು ನೇಮಿಸಿ ಪೂಜೆಯನ್ನು ಮಾಡಿಸಬೇಕು ಎಂದು, [ರಾಜನಿಂದ] ಅಪ್ಪಣೆ ಆಗಿದೆಯೆಂದು ಖಿರಿದಿ ರಾಮಪಯ್ಯನು ಲಿಂಗಾಭಟ್ಟನಿಗೆ ಸೂಚನೆಯನ್ನು ಇತ್ತಿದ್ದಾನೆ. ಈವರೆಗೂ [ಸಂದಾಯವಾಗಿರುವ] ಕಾಣಿಕೆ ೧೦೦ ಗದ್ಯಾಣ ವರಹವನ್ನು ಅರಮನೆಗೆ ತೆಗೆದುಕೊಂಡು, ಹನುಮಂತದೇವರಿಗೆ ಉತ್ತಾರವಾದ ಹಾರನಹಳ್ಳಿ ಗ್ರಾಮದಲ್ಲೂ ಮತ್ತು ಭೂಮಿಯಲ್ಲಿಯೂ ದನಕರುಗಳು ನಿಲ್ಲುವ ಬಗೆಗೆ ೩ ಗದ್ಯಾಣ ವರಹವನ್ನು ನಷ್ಟಕ್ಕೆ ಎಂದು ನಿಲ್ಲಿಸಿ ಗದ್ಯಾಣ ೩ ಕೂಡಿದ ದಾಸೋಹ ಮೂರುವರಹ ಮೂರುವೀಸದ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಪೂಜೆ ನಡೆಸುವ ಬಗೆಗೆ ಹಾಗೂ ಮೇಲ್ಕಂಡ ೩ ದೇವರುಗಳ ಪೂಜೆಗೆ ಲಿಂಗಾಭಟ್ಟನೇ ಒಬ್ಬ ವೈಷ್ಣವ ಬ್ರಾಹ್ಮಣನನ್ನು ಪೂಜೆ ಮಾಡಲು ನೇಮಿಸಿ ಈ ದೇವರುಗಳಿಗೆ ಉತ್ತಾರವಾಗಿ ನೀಡಿರುವ ಭೂಮಿಯನ್ನು ಅನುಭವಿಸಬೇಕೆಂದು (ಇಲ್ಲಿ ಲಿಂಗಾಭಟ್ಟನು ಕೂಡ ಭೂಮಿಯನ್ನು ಅನುಭವಿಸಬಹುದು ಅಂದರೆ ಒಡೆಯ ಎನ್ನುವ ರೀತಿ ಅರ್ಥೈಸಬಹುದಾದ ಸಂಭಾವ್ಯತೆಯೂ ಕಾಣಬರುತ್ತದೆ) ಶ್ರೀಮುಖ ಸಂವತ್ಸರದ ಜೇಷ್ಟ ಬಹುಳ ೫ರಲ್ಲು [ರಾಜನಿಂದ] ಅಪ್ಪಣೆ ಆಗಿದೆ. ವಿಂಗಡದ ಕಾಣಿಕೆ ಹಣ [ತಾನಾಗಿಯೇ] ಬರುತ್ತದೆ. ಕೇಳುವಂತಿಲ್ಲ. ಈ ಓಲೆಗರಿಯ ವಿಷಯವನ್ನು ಸೇನಬೋವರ ಕಡಿತಕ್ಕೆ ಬರೆಸಿ ತಿರುಗಿ ಕೊಡಬೇಕು. ಇದರ ಸಂಬಂಧ ಬದಲು ಬರೆಸಿತ್ತು. ಶಿವಪ್ಪ ಎಂಬ ಒಪ್ಪವಿದೆ.

ಓಲೆಗರಿ ಪಾಠದ ಸಂಕ್ಷಿಪ್ತ ವಿಶ್ಲೇಷಣೆ ಹಾಗೂ ಇತರ ವಿವರಗಳು

* ಓಲೆಗರಿ ಸನ್ನದಿನ ಪಾಠ ಅನೇಕ ಗೊಂದಲಗಳಿಂದ ಕೂಡಿದೆ. ಬಹುಶಃ ಪ್ರತಿಕಾರರಿಂದಾಗಿರುವ ಅನೇಕ ಸ್ಖಾಲಿತ್ಯಗಳ ಕಾರಣ ಕೆಲವು ಕಡೆ ವಾಕ್ಯರಚನೆಯ ವಿಷಯದಲ್ಲಿ ಸ್ಪಷ್ಟತೆ ಇಲ್ಲದೆ, ಸಂದರ್ಭವನ್ನು ಊಹಿಸಿ, ಅಧ್ಯಾಹಾರ ಮಾಡಿಕೊಳ್ಳ

ಬೇಕಿದೆ. ಮೇಲೆ ನೀಡಿರುವ ಸಾರಾಂಶದಲ್ಲಿಯೂ ಇದೇ ವಿಧಾನವನ್ನು ಅನುಸರಿಸಲಾಗಿದೆ. ಒಂದೆರಡು ಕಡೆಯ ವಾಕ್ಯಗಳು (ಉದಾಹರಣೆಗೆ : ಯಡವರವಾದಸಂಮಂಧ) ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಆದುದರಿಂದ ಅವುಗಳ ಸಾರಾಂಶವನ್ನು ನೀಡಲು ಹೋಗಿಲ್ಲ.

* ಈ ಓಲೆಗರಿ ಲಭ್ಯವಾದ ಸ್ಥಳದ ವಿವರ ತಿಳಿಯದು. ಬಹುಶಃ ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಪ್ರದೇಶದಲ್ಲಿಯೇ ಲಭ್ಯವಾಗಿದ್ದಿರಬೇಕು ಎಂದು ಊಹಿಸಬಹುದೇನೋ?.

* ಸನ್ನದಿನಲ್ಲಿ ಉಕ್ತವಾಗಿರುವ ಹಾರನಹಳ್ಳಿ ಎಂಬ ಸ್ಥಳ ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನಲ್ಲಿದೆ. ಇಲ್ಲಿ ಕೋಟೆ ಇದ್ದು, ಈ ಓಲೆಗರಿಯಲ್ಲಿ ಉಲ್ಲೇಖವಿರುವ ದೇವರುಗಳು ಈಗಲೂ ಇವೆ. ಈ ಕೋಟೆ ಮೂಲತಃ ಹೊಯ್ಸಳರ ಕಾಲದ್ದಾಗಿದ್ದು, ಈಗ ಅವನತಿಯ ಅಂಚಿನಲ್ಲಿದೆ. ಆದರೂ ಹಾರನಹಳ್ಳಿ ಎಂಬ ಊರು ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕಿನಲ್ಲಿಯೂ ಇರುವುದನ್ನು ಈ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಿದೆ. ಈ ಸ್ಥಳನಾಮವು ಮೂಲತಃ ಪಾರ್ವರಪಳ್ಳಿ ಎಂದಿದ್ದು, ಅನಂತರ ಸಹಜವಾದ ಭಾಷಿಕ ಬದಲಾವಣೆಯಿಂದ ಪಾರ್ವನಪಳ್ಳಿ > ಹಾರ್ವನಹಳ್ಳಿ > ಹಾರುವನಹಳ್ಳಿ > ಹಾರನಹಳ್ಳಿ ಎಂದಾಗಿದೆ. ಇದರ ಅರ್ಥ ಬ್ರಾಹ್ಮಣರ ಅಗ್ರಹಾರ ಎಂದು. ಪ್ರಖ್ಯಾತ ವಿಜಯನಗರ ಸಾಮ್ರಾಜ್ಯದ ಜಲಶಿಲ್ಪಿ, ಸಂಗೀತಶಾಸ್ತ್ರಕಾರ ಬಯಕಾರ ರಾಮಾಮಾತ್ಯನು (ಕ್ರಿ.ಶ. ೧೫೫೦) ಇಲ್ಲಿ ಅಧಿಕಾರಿಯಾಗಿದ್ದ. ಈತನ ತಾಮ್ರಶಾಸನವೂ ಈ ಗ್ರಾಮದಲ್ಲಿ ದೊರೆತಿರುವುದು ಗಮನಿಸತಕ್ಕುದಾಗಿದೆ[೬].

* ಖಿರಿದಿ ರಾಮಪ್ಪ ಯಾರು ಎಂಬುದು ತಿಳಿಯುವುದಿಲ್ಲ. ಸಂದರ್ಭದ ಆಧಾರದ ಮೇಲೆ ಈತ ಒಬ್ಬ ಅಧಿಕಾರಿಯಿರಬಹುದೆಂದು ಹೇಳಬಹುದು. ಖಿರಿದಿ ಎಂಬ ಪದವನ್ನು ಬಿರಿದಿ ಎಂದು ಕೂಡ ಓದಲು ಆಸ್ಪದವಿದೆ. ಖ, ಬ ಅಕ್ಷರಗಳ ಅಕ್ಷರ ಸಾದೃಶ್ಯ ಇದಕ್ಕೆ ಕಾರಣವಾಗಿದೆ. ಆದರೆ ಖಿರಿದಿ ಎಂಬುದೇ ಸರಿಯಾದ ಪಾಠ. ಖಿರ್ದಿ > ಖಿರಿದಿ ಆಗುತ್ತದೆ. ಖಿರ್ದಿ ಎಂದರೆ ಲೆಕ್ಕದ ಪುಸ್ತಕ ಎಂದರ್ಥ. ರಾಮಪ್ಪನು ಲೆಕ್ಕಾಧಿಕಾರಿ, ಕರಣಿಕ ಎಂದು ಈ ಶಬ್ದದಿಂದ ತಿಳಿಯುತ್ತದೆ.

* ಗುಂಡಾವಧಾನಿಯ ಮಗನೂ ನಾರಣಭಟ್ಟನ ಮೊಮ್ಮಗನೂ ಆದ ಲಿಂಗಾಭಟ್ಟನು ಪೂರ್ವಾರಭ್ಯ ಎಂದರೆ ಮೊದಲಿನಿಂದಲೂ ಪೂಜೆ ಮಾಡಿಕೊಂಡಿದ್ದ ಸ್ಮಾರ್ತ ಬ್ರಾಹ್ಮಣನೆಂದು ಸನ್ನದಿನ ಪಾಠದಿಂದ ಸ್ಪಷ್ಟವಾಗುತ್ತದೆ. ಈತನೇ ಒಬ್ಬ ವೈಷ್ಣವನನ್ನು ಪೂಜೆಗೆ ನೇಮಿಸಬೇಕು, ಈತ ಪೂಜೆ ಮಾಡಬಾರದು ಎಂಬ ಆಜ್ಞೆಯಂತೂ ವಿಚಿತ್ರವಾದುದು. ಲಿಂಗಾಭಟ್ಟನು ನೇಮಿಸುವ ವೈಷ್ಣವನು ದೇವರ ಭೂಮಿಯನ್ನು ಅನುಭವಿಸಬೇಕು, ಇದನ್ನು ಮಾಡುವಂತೆ ಲಿಂಗಾಭಟ್ಟನೇ ತಾಕೀತು ಮಾಡಬೇಕು ಎಂದೆಲ್ಲ ಬರೆದಿರುವುದು ಒಪ್ಪುವಂತಹ ವಿಷಯವೇ ಅಲ್ಲ.

* ವೈಷ್ಣವ ಎಂಬ ಪದ ಸನ್ನದಿನಲ್ಲಿದೆ. ವೈಷ್ಣವರೆಂದರೆ ಯಾರು ಎಂಬ ಪ್ರಶ್ನೆ ಏಳುತ್ತದೆ. ವಿಷ್ಣುವಿನ ಭಕ್ತರನ್ನು ವೈಷ್ಣವರೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಶ್ರೀವೈಷ್ಣವರೆಂದರೆ ಶ್ರೀರಾಮಾನುಜಾಚಾರ್ಯರ ಮತವನ್ನು ಅನುಸರಿಸುವ ಪಂಗಡದವರು. ಶ್ರೀ ಎಂಬ ಪೂರ್ವಾಕ್ಷರ ಇಲ್ಲದೆ ವೈಷ್ಣವ ಎಂದು ಮಾತ್ರ ಇದ್ದರೆ, ಅವರುಗಳನ್ನು ಸಾಮಾನ್ಯವಾಗಿ ಶಾತ್ತಾನ, ಓ(ಉ)ಷ್ಟಮ ಪಂಗಡದವರೆಂದು ತಿಳಿಯುವುದು ಇಂದಿಗೂ ರೂಢಿಯಲ್ಲಿದೆ. ಸಾಮಾನ್ಯವಾಗಿ ವೈಷ್ಣವ, ಶ್ರೀವೈಷ್ಣವರಲ್ಲಿ ಶೈವಪೂಜೆ, ಉಪಾಸನೆ ಇಲ್ಲ. ಮಾಧ್ವ ಪಂಗಡದವರನ್ನು ಕೂಡ ವಿಷ್ಣುವನ್ನು ಆರಾಧಿಸುವವರು, ವಿಷ್ಣುಭಕ್ತರು ಎಂಬ ಅರ್ಥದಲ್ಲಿ ವೈಷ್ಣವರು ಎಂದೇ ಕರೆಯಲಾಗುತ್ತಿತ್ತು[೭]. ಇವರಲ್ಲಿ ವಿಷ್ಣುಪೂಜೆಗೇ ಪ್ರಾಶಸ್ತ್ಯ ಹೆಚ್ಚು. ಶೈವ ಸಂಬಂಧೀ ಆಚರಣೆಗಳು ಕಂಡುಬರುವುದಿಲ್ಲ. ಆದುದರಿಂದ ಸನ್ನದಿನಲ್ಲಿ ಉಲ್ಲೇಖಗೊಂಡಿರುವ ವೈಷ್ಣವರು ಯಾರು, ಯಾವ ಪಂಗಡದವರು ಎಂದು ಹೇಳಬರುವಂತಿಲ್ಲ. ವೈಷ್ಣವ (ಶ್ರೀವೈಷ್ಣವ), ಮಾಧ್ವ ಈ ಎರಡು ಪಂಗಡಗಳನ್ನು ಇಲ್ಲವೇ ಇವೆರಡರಲ್ಲಿ ಒಂದನ್ನು ಸನ್ನದಿನಲ್ಲಿ ಬಹುಶಃ ಉದ್ದೇಶಿಸಲಾಗಿದೆಯೆಂದು ತೋರುತ್ತದೆ.

* ಸ್ಮಾರ್ತರು ಅದ್ವೈತಿಗಳು. ಶಿವ, ವಿಷ್ಣು ಇಬ್ಬರನ್ನೂ ಪೂಜಿಸುವವರು. ಹಾಗಿದ್ದರೂ ಇವರನ್ನು ದೂರವಿಡುವ ಪ್ರಯತ್ನ ನಡೆದಿರುವುದು ವಿಪರ್ಯಾಸವೇ ಸರಿ. ಶಾಸ್ತ್ರದ ದೃಷ್ಟಿಯಿಂದ ಸ್ಮಾರ್ತ, ವೈಷ್ಣವ (ಶ್ರೀವೈಷ್ಣವ ಕೂಡ) ರ ನಡುವೆ ಚರ್ಚೆಗಳು ನಡೆದಿರಬಹುದು. ಆದರೆ ದೇವಾಲಯದಲ್ಲಿ ಸ್ಮಾರ್ತರು ಪೂಜೆ ಮಾಡಬಾರದು ಎಂಬುವವರೆಗೂ ಹೋಗಿರುವುದು ವಿಚಿತ್ರವಾಗಿದೆ. ಶಾಸ್ತ್ರದ ನೆಲೆಯೇ ಬೇರೆ, ವೈಯಕ್ತಿಕ ನೆಲೆಯೇ ಬೇರೆ ಎಂಬುದನ್ನು ಇಲ್ಲಿ ಗಮನಿಸಬೇಕು. ಎಲ್ಲ ಬ್ರಾಹ್ಮಣ ಪಂಗಡದವರಿಗೂ ವೇದ, ಉಪನಿಷತ್ತು ಇತ್ಯಾದಿಗಳು ಒಂದೇ ಆಗಿದ್ದು, ಆಚರಣೆಗಳಲ್ಲಿ

ಮಾತ್ರ ದೇಶ-ಕಾಲಾನುಸಾರವಾಗಿ ಸಣ್ಣಪುಟ್ಟ ಭೇದಗಳಿವೆ. ಇಂತಹ ವಿವರಗಳನ್ನು ಗಮನಿಸಿದರೆ ಈ ಸನ್ನದು ಬಲುಮಟ್ಟಿಗೆ ಸ್ಮಾರ್ತ, ವೈಷ್ಣವರ ನಡುವೆ ವೈಮನಸ್ಯ ಹುಟ್ಟಿಬರಲು ಸಿದ್ಧವಾದದ್ದು ಎಂದೇ ತೋರುತ್ತದೆ.

* ಈ ಓಲೆಗರಿಯಲ್ಲಿ ಎರಡು ಭಾಗಗಳಿರುವಂತೆ ಕಾಣುತ್ತದೆ. ಖಿರಿದಿ ರಾಮಪ್ಪನು ಲಿಂಗಾಭಟ್ಟನಿಗೆ ಬರೆದಿರುವ ಆಜ್ಞಾಪತ್ರ ಮೊದಲು ಇದ್ದು, ಅನಂತರ ರಾಜನಿಂದ ಆಗಿರುವ ಅಪ್ಪಣೆಯೂ ದಾಖಲಿಸಲ್ಪಟ್ಟಿರುವಂತೆ ಪಾಠಕ್ರಮವಿದೆ. ಈ ಪಾಠಕ್ರಮವೂ ಎರಡು ಬಾರಿ ಪುನರಾವರ್ತನೆಯಿರುವ ಕಾರಣ ಓಲೆಗರಿಯಲ್ಲಿನ ವಿಷಯದ ಬಗೆಗೆ ಅನುಮಾನ ಮೂಡುತ್ತದೆ.

* ಸನ್ನದಿನ ಕೊನೆಯಲ್ಲಿ ಶಿವಪ್ಪ ಎಂದು ಮಾತ್ರ ಒಪ್ಪಿತವಿದೆ. ಇದನ್ನು ಶಿವಪ್ಪನಾಯಕನ ಸ್ವಹಸ್ತಾಕ್ಷರವೆಂದು ಕೂಡ ತಿಳಿಯಲಾಗಿದೆ. ಇಲ್ಲಿಯವರೆಗೂ ಪ್ರಕಟವಾಗಿರುವ ಆಕರಗಳಲ್ಲಿಯೂ ಇದನ್ನೇ ದಾಖಲಿಸಲಾಗಿದೆ. ಈ ಒಟ್ಟು ಸನ್ನದಿನಲ್ಲಿ ಕೆಳದಿ ಅರಸರಿಗೆ ಸಂಬಂಧಪಡುವ ಯಾವುದೇ ಬಿರುದು-ಬಾವಲಿ ಇತ್ಯಾದಿಗಳು ಕಂಡುಬರುತ್ತಿಲ್ಲ. ಆದುದರಿಂದ ಈ ಓಲೆಗರಿ ಸನ್ನದು ಕೆಳದಿ ಅರಸರ ಕಾಲದ್ದು, ಇಲ್ಲವೇ ಅವರ ಸಮಕಾಲೀನದ್ದು ಎಂದು ಮಾತ್ರ ಹೇಳಬಹುದಾಗಿ ತೋರುತ್ತದೆ. ಅಂದರೆ ನೇರವಾಗಿ ಕೆಳದಿ ಅರಸರ ಕಾಲದ್ದೇ ಎಂದು ತಿಳಿಯುವಲ್ಲಿ ತೊಡಕಿದೆ. ಶಿವಪ್ಪ ಎಂಬುದನ್ನು ಕೆಳದಿ ಅರಸ ಶಿವಪ್ಪನಾಯಕನ ಒಪ್ಪಿತ ಎಂದು ಹೇಳುವುದನ್ನು ಕೂಡ ಮರುಪರಿಶೀಲನೆ ಮಾಡಬೇಕಿದೆ, ಇಲ್ಲವೇ ಹಾರನಹಳ್ಳಿ ಪ್ರದೇಶದಲ್ಲಿ ಶಿವಪ್ಪ ಎಂಬ ಸ್ಥಳೀಯ ಆಡಳಿತಗಾರನಿದ್ದನೇ ಎಂಬುದನ್ನೂ ಶೋಧಿಸಬೇಕಿದೆ. ಆದರೆ ಸನ್ನದಿನಲ್ಲಿ ರಾಜನೆಂದೇ ಇರುವುದನ್ನೂ ಗಮನಿಸಬೇಕಿದೆ. ಸ್ಥಳೀಯ ಆಡಳಿತಗಾರನೂ ರಾಜನೇ ತಾನೇ!.

* ಕೆಳದಿ ಅರಸರು ಧಾರ್ಮಿಕ ಸಹಿಷ್ಣುಗಳು, ಸ್ಮಾರ್ತ ವೈಷ್ಣವ ಎಂಬ ಭೇದ ಮಾಡದವರು. ಅವರ ಹೆಸರಿಗೆ ಮಸಿ ಬಳಿಯಲು ತಯಾರಾದ ಓಲೆಗರಿ ಇದಾಗಿದೆಯೆಂದು ಕೆಳದಿ ಗುಂಡಾಜೋಯಿಸರು ಹೇಳಿದ್ದಾರೆ. ಲಭ್ಯವಿರುವ ವಿವರಗಳನ್ನು ಗಮನಿಸಿದರೆ ಇದನ್ನು ಒಪ್ಪಲು ಆಸ್ಪದವೇನೋ ಇದೆ. ಎಲ್ಲಾ ಮತಗಳ ಸಮನ್ವಯವನ್ನು ಸಾಧಿಸಿದ್ದ ಕೆಳದಿ ಅರಸರ ಕಾಲದಲ್ಲಿ ಸ್ಮಾರ್ತ, ಶ್ರೀವೈಷ್ಣವ ಇಂತಹ ಭೇದ ಪರಂಪರೆ ಇದ್ದಿತೇ ಎನ್ನುವುದು ಯೋಚಿಸಬೇಕಾದ ವಿಷಯ. ಇದ್ದಿತೆಂದು ಹೇಳಲು ಯಾವುದೇ ಪ್ರಮಾಣಗಳೂ ದೊರೆತಿಲ್ಲ. ಅವರ ಬಿರುದುಗಳಲ್ಲಿ 'ವಿಶುದ್ಧ ವೈದಿಕಾದ್ವೈತಸಿದ್ಧಾಂತಪ್ರತಿಷ್ಠಾಪಕ' ಎಂಬುದೂ ಒಂದಾಗಿದೆ. ಶಾಸನಗಳು, ಕಡತಗಳು, ಸಾಹಿತ್ಯ ಮತ್ತು ಶಾಸ್ತ್ರಕೃತಿಗಳಲ್ಲಿನ ವಿವರಗಳ ಹಿನ್ನೆಲೆಯಲ್ಲಿಯೂ ಇದನ್ನು ಸಾಧಿಸಲು ಶಕ್ಯವಿಲ್ಲ. ಅದ್ವೈತ, ವಿಶಿಷ್ಟಾದ್ವೈತ, ಮಾಧ್ವ, ವೀರಶೈವ, ಜೈನ ಮುಂತಾದ ಎಲ್ಲ ಮತಗಳಿಗೂ ಸಮಾನ ಪ್ರೋತ್ಸಾಹವನ್ನು ನೀಡಿ, ದಾನದತ್ತಿಗಳನ್ನು ವ್ಯಾಪಕವಾಗಿ ನೀಡಿರುವ ಕೆಳದಿ ಅರಸರು ಇಂತಹ ವಿಚಿತ್ರ, ಅಸಂಬದ್ಧ, ಮತೀಯ ಸಾಮರಸ್ಯ ಕದಡುವಂತಹ ಆಜ್ಞೆಯನ್ನು ಹೊರಡಿಸಿದ್ದರೆಂಬುದನ್ನು ಒಪ್ಪುವುದು ಕಷ್ಟ. ಆದುದರಿಂದ ಇದು ಕೆಳದಿ ಅರಸರು ಹೊರಡಿಸಿರುವ ಸನ್ನದು ಎಂಬ ವಿಷಯದಲ್ಲಿ ಸಂದೇಹಪಡಲೇಬೇಕಿದೆ.

* ಸನ್ನದಿನ ನೈಜತೆಯ ಬಗೆಗೆ ಸಂದೇಹವಿದ್ದರೂ ಇದರಲ್ಲಿ ದಾಸೋಹದ ವೆಚ್ಚದ ಬಗೆಗೆ ಪ್ರಸ್ತಾಪಿಸಲಾಗಿರುವುದು ಗಮನಸೆಳೆಯುತ್ತದೆ. ಬಹುಶಃ ಅನ್ನದಾನವೂ ನಡೆಯುತ್ತಿದ್ದಿರಬೇಕು ಎಂದು ಇದರಿಂದ ತಿಳಿಯುವಂತಿದೆ. ತುರುಗಳು ಮತ್ತು ತುರುಮಂದಿಯ ಬಗೆಗಿನ ಕಳಕಳಿ ಮೆಚ್ಚತಕ್ಕದ್ದಾಗಿದೆ.

* **ಸನ್ನದಿನ ಕಾಲ :** ಈ ಓಲೆಗರಿ ಸನ್ನದಿನಲ್ಲಿ ನಳ ಸಂವತ್ಸರ ಮತ್ತು ಶ್ರೀಮುಖ ಸಂವತ್ಸರದ ಜೇಷ್ಟ ಬಹುಳ ೫ ಎಂದು ಎರಡು ತೇದಿಗಳು ದಾಖಲಾಗಿವೆ. ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ ೧೯೪೯ರಲ್ಲಿ ಈ ಓಲೆಗರಿ ಸನ್ನದಿನ ಕಾಲವನ್ನು ಬಹುಶಃ ೧೬೫೦ರ ಅನಂತರ ಎಂದು ಹೇಳಿ, ಕ್ರಿ.ಶ. ೧೬೧೬ ಮತ್ತು ೧೬೩೩ರ ತೇದಿಗಳ ಸಮಯದಲ್ಲಿ ನೀಡಲಾಗಿರುವ ದಾನದ ವಿವರಗಳನ್ನು ನಮೂದಿಸಲಾಗಿದೆ ಎಂದು ಸೂಚಿಸಲಾಗಿದೆ. ಕ್ರಿ.ಶ. ೧೬೧೬ರಲ್ಲಿ ನಳ ಸಂವತ್ಸರ, ಕ್ರಿ.ಶ. ೧೬೩೩ರಲ್ಲಿ ಶ್ರೀಮುಖ ಸಂವತ್ಸರ ಬರುವ ಕಾರಣ ಬಹುಶಃ ಈ ತೇದಿಗಳನ್ನು ಸೂಚಿಸಲಾಗಿದೆಯೆಂದು ತೋರುತ್ತದೆ. ಶ್ರೀಮುಖ ಸಂವತ್ಸರದ ಜೇಷ್ಟ ಬಹುಳ ೫ [=ಪಂಚಮೀ] ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೨-೬-೧೬೩೩, ಭಾನುವಾರಕ್ಕೆ ಸರಿಹೊಂದುತ್ತದೆ. ಶಿವಪ್ಪನಾಯಕನ ಆಳ್ವಿಕೆಯ ಕಾಲ ಚಾಂದ್ರಮಾನ ಪಂಚಾಂಗದ ರೀತ್ಯಾ ಕ್ರಿ.ಶ. ೨೦-೧೧-೧೬೪೫ ರಿಂದ ೨೫-೦೯-೧೬೬೦ರ ವರೆಗೆ. ಈ ಸನ್ನದು ಶಿವಪ್ಪನಾಯಕನದು ಇಲ್ಲವೇ ಅವನ ಕಾಲದ್ದು ಎಂದು ಹೇಳಲು ಹೊರಟರೆ, ಈತನ ಆಳ್ವಿಕೆಯ ಕಾಲದಲ್ಲಿ ನಳ

ಸಂವತ್ಸರ ಮತ್ತು ಶ್ರೀಮುಖ ಸಂವತ್ಸರಗಳು ಬರುವುದೇ ಇಲ್ಲ. ಆದುದರಿಂದ ಶಿವಪ್ಪನಾಯಕನ ಹಿಂದಿನ ಅರಸರಾದ ಹಿರಿಯ ವೆಂಕಟಪ್ಪನಾಯಕ (ಕ್ರಿ.ಶ. ಸು. ೧೫೮೦-೧೬೨೯) ಮತ್ತು ವೀರಭದ್ರನಾಯಕನ (ಕ್ರಿ.ಶ. ಸು. ೧೬೨೯-೧೬೪೫) ಕಾಲದಲ್ಲಿ ಈ ಘಟನೆ ನಡೆದಿದ್ದು ಶಿವಪ್ಪನಾಯಕನು ಇದನ್ನು ತನ್ನ ಕಾಲದಲ್ಲಿ ಸ್ಥಿರೀಕರಿಸಿದನೆಂದು ಹೇಳಬೇಕಾಗುತ್ತದೆ. ಇದು ಸಂಭಾವ್ಯವೆಂದು ಭಾವಿಸಲು ಆಸ್ಪದವೇನೋ ಇದೆ. ಆದರೆ ಬೇರೆ ಆಧಾರಗಳು ಸನ್ನದಿನಲ್ಲಿನ ವಿಷಯಕ್ಕೆ ಸಮರ್ಥನೆ ಒದಗಿಸುವುದಿಲ್ಲ. ಒಟ್ಟಿನಲ್ಲಿ ಈ ಸನ್ನದಿನ ಕಾಲ ಸಂದಿಗ್ಧತೆಯಿಂದ ಕೂಡಿದೆಯೆಂದು ಹೇಳಲೇಬೇಕಿದೆ. ಅನಿವಾರ್ಯವಾಗಿ ಮತ್ತು ತಾತ್ಕಾಲಿಕವಾಗಿ ಬೇರೆ ಆಧಾರಗಳು ದೊರಕುವವರೆಗೂ ಓಲೆಗರಿಯಲ್ಲಿನ ಲಿಪಿಯ ಆಧಾರದ ಮೇಲೆ ೧೭ನೆಯ ಶತಮಾನವೆಂದು ತಿಳಿಯುವುದೇ ಉತ್ತಮವಾಗಿ ಕಾಣುತ್ತದೆ.

* ಈ ಸನ್ನದಿನಲ್ಲಿ ಮೂರು ನಾಣ್ಯಗಳ ಉಲ್ಲೇಖಗಳಿದ್ದು, ಆಸಕ್ತಿದಾಯಕವಾಗಿದೆ. ಗ ಎಂಬುದು ಗದ್ಯಾಣ ಎಂಬ ಶಬ್ದವನ್ನು ಸೂಚಿಸುತ್ತದೆ. ಇದು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ನಾಣ್ಯವಾಗಿದ್ದು, ಚಿನ್ನ ಮತ್ತು ಬೆಳ್ಳಿಯ ಗದ್ಯಾಣಗಳು ದೊರೆತಿವೆ. ವರಹ ಎನ್ನುವುದು ಕೂಡ ಇಂತಹುದೇ ನಾಣ್ಯವಾಗಿದೆ. ವೀಸ ಎಂಬುದು ಕೂಡ ನಾಣ್ಯವೇ ಆಗಿದ್ದು, ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಮೌಲ್ಯಗಳಿಂದ ಕೂಡಿ ಬಳಕೆಯಲ್ಲಿತ್ತು. ಆದರೆ ಸನ್ನದಿನಲ್ಲಿ ಮೂರು ವೀಸದ ಭೂಮಿಯನ್ನು ಎಂದಿರುವ ಕಾರಣ ಈ ಭಾಗಕ್ಕೆ ಮೂರುವೀಸ ಬೆಲೆಯ ತೆರಿಗೆ ಎಂದು ಅರ್ಥೈಸುವುದೇ ಸೂಕ್ತವಾಗಿ ಕಾಣುತ್ತದೆ.

* ಸನ್ನದಿನ ಕೊನೆಯಲ್ಲಿ ಬರುವ ಈ ಓಲೆಗರಿಯ ವಿಷಯವನ್ನು ಸೇನಬೋವರ ಕಡಿತಕ್ಕೆ ಬರೆಸಿ ತಿರುಗಿ ಕೊಡಬೇಕು ಎಂಬುದು ಮಾತ್ರ ನಮ್ಮಲ್ಲಿ ದಾಖಲೆಗಳ ಸಂರಕ್ಷಣೆ ಮತ್ತು ಮರುನಕಲುಗಳ ತಯಾರಿಕೆ ಯಾವ ರೀತಿ ನಡೆಯುತ್ತಿತ್ತು ಎಂಬುದಕ್ಕೆ ಉದಾಹರಣೆಯಾಗಿದೆ. ಇಂತಹ ಉಲ್ಲೇಖಗಳು ಶೃಂಗೇರಿ ಶ್ರೀಶಾರದಾಪೀಠ, ಸೋಂದೆಯ ಸ್ವರ್ಣವಲ್ಲೀಮಠ, ರಾಮಚಂದ್ರಾಪುರಮಠ ಮುಂತಾದೆಡೆ ಇರುವ ಕಡತಗಳು, ಕಾಗದ ಮತ್ತು ಓಲೆಗರಿಗಳಲ್ಲಿಯೂ ದಾಖಲಾಗಿದೆ.

ಮೇಲ್ಕಂಡ ವಿಶ್ಲೇಷಣೆಯ ಆಧಾರದಿಂದ ಹೇಳಬಹುದಾದ ಅಂಶಗಳನ್ನು ಮತ್ತು ಪ್ರಕೃತ ಲೇಖನದ ಒಟ್ಟು ಸಾರಾಂಶವನ್ನು ಕೆಳಗೆ ಕ್ರಮವಾಗಿ ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.

೧. ಈ ಸನ್ನದಿನಲ್ಲಿನ ವಿಷಯಕ್ಕೆ ಸಂಬಂಧಪಡುವ ಬೇರಾವುದಾದರೂ ಆಕರ ದೊರೆತಲ್ಲಿ ಈ ಓಲೆಗರಿ ಸನ್ನದಿನ ಪ್ರಾಮಾಣ್ಯವನ್ನು ಒಪ್ಪಬಹುದು. ಅಲ್ಲಿಯವರೆಗೂ ಈ ಸನ್ನದನ್ನು ಪ್ರಮಾಣಭೂತವೆಂದು ಸ್ವೀಕರಿಸಲು ಸಾಧ್ಯವಿಲ್ಲ. ಸಸಂದೇಹದಲ್ಲಿಯೇ ಇದರ ವಿಷಯವನ್ನು ಅಧ್ಯಯನಗಳಲ್ಲಿ ಉದ್ಧರಿಸಬೇಕು. ಇದು ಕೂಟ ದಾಖಲೆಯಿದ್ದರೂ ಇರಬಹುದು.

೨. ಸನ್ನದಿನಲ್ಲಿ ನಮೂದಾಗಿರುವ ಕಾಲವೂ ಸಂದಿಗ್ಧವಾಗಿದೆ. ಆದರೂ ಕಾಲನಿಷ್ಕರ್ಷೆಗೆ ಪ್ರಕೃತ ಬರಹದಲ್ಲಿ ಪ್ರಯತ್ನಿಸಲಾಗಿದೆ ಹಾಗೂ ಲಿಪಿಯ ಆಧಾರದ ಮೇಲೆ ಕಾಲವನ್ನು ಸೂಚಿಸಲಾಗಿದೆ.

೩. ಈ ಸನ್ನದು ಕೆಳದಿಯ ಅರಸ ಶಿವಪ್ಪನಾಯಕನದ್ದೆಂದು ಇಲ್ಲವೇ ಅವನ ಕಾಲದ್ದೆಂದು ಕೂಡ ಹೇಳಲು ಕಷ್ಟಸಾಧ್ಯ ಎಂಬುದನ್ನು ಸೂಚಿಸಲಾಗಿದೆ.

೪. ಬೆಂಗಳೂರು ವಸ್ತುಸಂಗ್ರಹಾಲಯಕ್ಕೆ ಈ ಓಲೆಗರಿ ಸನ್ನದು ಯಾವಾಗ ಬಂದು ಸೇರ್ಪಡೆಯಾಗಿದೆ ಇತ್ಯಾದಿ ವಿವರಗಳನ್ನು ಲಭ್ಯವಿರುವ ಆಧಾರಗಳ ಮೇರೆಗೆ ಮೊದಲ ಬಾರಿಗೆ ದಾಖಲಿಸಲಾಗಿದೆ.

೫. ಸನ್ನದಿನ ಸಾರಾಂಶವನ್ನು ಸಾಧ್ಯವಿರುವಮಟ್ಟಿಗೂ ತೃಪ್ತಿಕರವಾಗಿ ನೀಡಲು ಪ್ರಯತ್ನಿಸಲಾಗಿದೆ.

೬. ಸನ್ನದಿನ ಪಾಠದಲ್ಲಿ ಕಂಡುಬರುವ ಸ್ಖಾಲಿತ್ಯಗಳ ಶುದ್ಧರೂಪವನ್ನು ದಾಖಲಿಸಿ, ಮೂಲ ಓಲೆಪ್ರತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಅಧಿಕೃತವಾಗಿ ಪಾಠವನ್ನು ಪ್ರಕೃತ ಲೇಖನದಲ್ಲಿ ಕೊಡಲಾಗಿದೆ.

೭ ಕೆಲವೊಂದು ಶಬ್ದಗಳ ಅರ್ಥಗಳನ್ನೂ ಸೂಚಿಸಲಾಗಿದೆ.

೮. ಒಟ್ಟಾರೆಯಾಗಿ ಇದರ ಅಧ್ಯಯನ ಪೂರ್ವಗ್ರಹರಹಿತವಾಗಿ ಅಧಿಕೃತ ಆಕರಗಳ ಅವಲಂಬನೆಯಿಂದ ನಡೆಯಬೇಕಾದ ಅಗತ್ಯ ಬಹಳವಾಗಿದೆ.

ಸನ್ನದಿನ ಪಾಠ

ಮುಂಭಾಗ

೧ ಖಿರಿದಿ ರಾಮಪಯ(ಪ್ಪಯ್ಯ)ನ ಮುಖಾಂತ್ರ (ಮುಖಾಂತರ) ಗುಂಡಾವಧಾನಿ ನಾರಣಭಟ್ಟನ (ನಾರಾಯಣಭಟ್ಟ> ನಾರಣಭಟ್ಟ) ಮೊಂಮಗ ಲ್ಲಿಂಗಾಭಟ್ಟನು (ಲಿಂಗಾಭಟ್ಟನು) ಹುಜೂರುಬಂದು ಹಾರನಹಳಿ(ಳ್ಳಿ)ಕೋಟೆ ವ(ಒ)ಳಗಣ ನಾರಾಯಣದೇವರು ತಿರುಮಲದೇವರು ಹನುಮಂತದೇವರ ಪೂಜೆಯಂನು ಪೂರ್ವಾರಭ್ಯಾ(ಭ್ಯ) ಮಾಡಿ ಬರುತ್ತಿದಲ್ಲಿ ಯಿಾ ಬಗ್ಯೆ ಕಾಣಿಕ್ಕೆ (ಕಾಣಿಕೆ) ಬರಬೇಕೆಂದು ಅಪಣೆ (ಅಪ್ಪಣೆ) ಆದಲ್ಲಿ ನಳಸಂವತ್ಸರದಲು ಕಾಣಿಕ್ಕೆ (ಕಾಣಿಕೆ) ಗ ೬೦ನ ಕೊಟ್ಟು ನಿರೂಪವಾಗಿ ಅದೆ ಯಿಾ ದೇವರಿಗೆ ಉತ್ತಾರವಾದ ಭೂಮಿಯಂನು ಅನುಭವಿಸಿಕೊಂಡು ದೇವರಪೂಜೆ ಮಾಡಿಬರುತ್ತೇವೆ ವಿಷ್ಣುಸ್ತ(ಸ್ಥ)ಳದಲ್ಲಿ ಸ್ಮಾರ್ತರು ಪೂಜೆ ಮಾಡುವರಾಗದೆಂದು ಅಪಣೆ (ಅಪ್ಪಣೆ) ಆಗಿಅದೆ (ಆಗಿದೆ) ಹನುಮಂತದೇವರಿಗೆ

೨ ಉತ್ತಾರವಾದ ಭೂಮಿಯಲ್ಲು ದನಕರುಗಳು ನಿಲ್ಲುವ ಸಂಮಂಥ (ಸಂಬಂಧ) ತುರುಮಂದಿ ಬಗ್ಯೆಯೆಂದು ಗ ೩ನ ಭೂಮಿಯಂ ಕಟ್ಟು ಮಾಡಿಸಿದ ಪ್ರಮಾಣು ನಿಂತ್ತು(ತು)ಬರುತದೆ ಕಾಣಿಕ್ಕೆ (ಕಾಣಿಕೆ) ಕೊಟ್ಟೆನು ಯಿಾ ಭೂಮಿಯನಷ್ಟಕ್ಕೆ ನಿಲ್ಲಿಸಿ ಬದಲ್ಲು ಹಾರನಹಳಿ(ಳ್ಳಿ)ಸೀಮೆ ಹಾರನಹಳಿ(ಳ್ಳಿ) ಗ್ರಾಮದ ನಿಲ್ಲಿಸಿದ ನಷ್ಟದಿಂದ ಉತ್ತಾರವ ಕೊಟ್ಟುತ್ತಾನೆ ವಬ(ಒಬ್ಬ) ವಯಿಷ್ಣವ (ವೈಷ್ಣವ) ಬ್ರಾಹ್ಮಣನಯಿಟ್ಟು ಪೂಜೆನಡಸ ಬಾಹಂಗೆ ಅಪ್ಪಣೆ ಆಗಬೇಕೆಂದು ಹೇಳಿಕೊಳುಧಾ(ತಾ)ನೆಂದು ಅರಿಕ್ಕೆ (ಅರಿಕೆ) ಆದಲ್ಲಿ ಯಿಾತನ ಕಯ (ಕಯ್ಯ) ಕಾಣಿಕ್ಕೆ (ಕಾಣಿಕೆ) ಗ ೧೦೦ ನೂರುವರಹಾನು ಅರಮನೆಗೆ ತೆಗದುಕೊಂಡು ಯಿಾ ಹನುಮಂತದೇವರಿಗೆ ಹಾರನಹಳಿ(ಳ್ಳಿ) ಗ್ರಾಮದಲ್ಲು ಉತ್ತಾರವಾದ ಭೂಮಿಯಲ್ಲು ದನಕರು


೩ ನಿಲುವಬಗ್ಯೆ ಗ ೩ ಮೂರುವರಹಾನ ನಷ್ಟಕ್ಕೆನಿಲ್ಲಿಸಿ ಯಿಾ ದೇವರಿಗೆ ಹಾರನಹಳಿ(ಳ್ಳಿ)ಸೀಮೆ ಹಾರನಹಳಿ(ಳ್ಳಿ)ಗ್ರಾಮದ ನಿಲ್ಲಿಸಿದ ನಷ್ಟದಿಂದ ಗ ೩ ಯಿಾ ಬಗ್ಯೆಕೂಡಿದ ದಾಸೋಹ ಉಭಯಂಗ ಮೂರುವರಹಂನು ಮೂರುವೀಸದ ಭೂಮಿಯಂನ್ನು(ಯನ್ನು) ಸಾಗಮಾಡಿಕೊಂಡು ಪೂಜೆನಡೆಸುವ ಬಗ್ಯೆ ಉತ್ತಾರವಕೊಟ್ಟು ಹಾರನಹಳಿ(ಳ್ಳಿ)ಕೋಟ್ಟೆ(ಟೆ) ವ(ಒ)ಳಗಣ ನಾರಾಯಣದೇವರು ತ್ತಿ(ತಿ)ರುಮಲದೇವರು ಹನುಮಂತದೇವರ ಪೂಜೆಯಂನು ಯಿಾ ಲ್ಲಿಂಗಾಭಟನೆ (ಲಿಂಗಾಭಟನೆ) ವಬ(ಒಬ್ಬ) ವಯಿಷ್ಣವ(ವೈಷ್ಣವ) ಬ್ರಾಂ(ಬ್ರಾ)ಹ್ಮಣನಯಿಟ್ಟು ಪೂಜೆ ನಡಸಿಬರಹೇಳಿಯು ಯಿಾ ದೇವರುಗಳಿಗೆ ಹಾರನಹಳಿ(ಳ್ಳಿ)ಸೀಮೆಯಲ್ಲು ಉತ್ತಾರವಾಗಿ ಪ್ರಾಕಾರಭ್ಯಾ ಅನುಭವಿಸಿಬಹ ಭೂಮಿ ಯಿಾಗ ಉತ್ತಾ

ಹಿಂಭಾಗ

೪ ರವಕೊಟ್ಟ ಭೂಮಿ ಸಹಬಾಳುತ್ತಾರವಾಗಿ ವಿಂಗಡಿಸಿ ಕೊಡಹೇಳಿ ಸಹ ಶ್ರೀಮುಖಸಂವತ್ಸರದ ಜೇಷ್ಟ ಬ ೫ ಲ್ಲು ಅಪಣೆ (ಅಪ್ಪಣೆ) ಆಗಿಅದೆ (ಆಗಿದೆ) ಆ ಪ್ರಮಾಣಿ ಯಿಾ ಹನುಮಂತದೇವರಿಗೆ ಹಾರನಹಳಿ(ಳ್ಳಿ) ಗ್ರಾಮದಿಂದ ಪ್ರಾಕುಉತ್ತಾರವ ಕೊಟ್ಟಭೂಮಿಯಲ್ಲು ದನಕರುನಿಲ್ಲುವ ಬಗ್ಯೆ ಗ ೩ನ ನಷ್ಟಕ್ಕೆ ನಿಲ್ಲಿಸಿ ಯಿಾ ಬದಲ್ಲಿಗೆ ಯಿಾ ಗ್ರಾಮದ ನಿಲ್ಲಿಸಿದ ನಷ್ಟದಿಂದ ಗ ೩ ಯಿಾ ಬಗ್ಯೆ ಕೂಡಿದ ದಾಸೋಹದ ಸಿಸ್ತು ಉಭಯಂಗ ದ ಭೂಮಿಯಂನು ಉತ್ತಾರವಕೊಟ್ಟು ಅದೆ ಭೂಮಿ ವಿಂಗಡಿಸಿ ಕೊಟ್ಟು ಸಾಗಮಾಡಿಕೊಂಡು ಯಿಾ ಹನುಮಂತದೇವರು ನಾರಾಯಣದೇ। [ವ]

೫ ರು ತ್ತಿ(ತಿ)ರುಮಲದೇವರಿಗೆ ಸಹ ಉತ್ತಾರವಾದ ಭೂಮಿ ಯಿಾಗ ನಷ್ಟದಿಂದ ಉತ್ತಾರವಾದ ಭೂಮಿಸಹ ಯಿಾ ಲ್ಲಿಂಗಾಭಟ್ಟಗೆ(ಲಿಂಗಾಭಟ್ಟಗೆ) ಬಾಳುತ್ತಾರವಾಗಿ ಅನಭವಿಸಿಬಾಹಂಗೆ ಭೂಮಿ ಹವಾಲೆ ಮಾಡಿಕೊಟ್ಟು ಯಿಾತನೆ ವಬ(ಒಬ್ಬ) ವಯಿಷ್ಣವ (ವೈಷ್ಣವ) ಬ್ರಾಂ(ಬ್ರಾ)ಹ್ಮಣನ ಯಿಟ್ಟು ಯಿಾ ದೇವರುಗಳಿಗೆ ಪೂಜೆಯಂನು ಸಾಂಗವಾಗಿ ನಡಸಿಬಾಹಂಗೆ ತ್ತಾಕೀತ್ತಿ (ತಾಕೀತು) ಮಾಡುವದು ಕಾಣಿಕ್ಕೆ (ಕಾಣಿಕೆ) ಹಣ ವಿಂಗಡದಲು ಬರುತದೆ ಕೇಳಲಾಗದು ಯಿಾ ವಾಲೆ ಸೇನಬೋವರ ಕಡಿತಕ್ಕೆ ಬರಸಿ ತ್ತಿ(ತಿ)ರುಗಿಕೊಡುವದಾಗಿಯೆಂದು ಪ್ರಾಕುಬರಸಿದವಾಲೆ ಯಡವರವಾದಸಂಮಂಧ (ಸಂಬಂಧ)।

೬ ಬದಲು ಬರಸಿದಿತ್ತಾಗಿ। ಶಿವಪ್ಪ



ಸನ್ನದಿನ ಮಾದರಿ

ಅಡಿಟಿಪ್ಪಣಿಗಳು

೧. ನರಸಿಂಹಾಚಾರ್ಯ ಆರ್. (ಸಂ.), ೧೯೦೯, ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ, ಮೈಸೂರು ಪುರಾತತ್ತ್ವ ಇಲಾಖೆ, ಬೆಂಗಳೂರು, ಪುಟ ೨೫.

೨. ಕೆಳದಿ ವೆಂಕಟೇಶ ಜೋಯಿಸ್ (ಸಂ.), ೧೯೯೧, ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ, ಸಂಖ್ಯೆ ೧೨೪, ಪುಟ ೧೮೪-೧೮೫.

೩. ಕೆಳದಿ ಗುಂಡಾಜೋಯಿಸ್, ೨೦೦೩, ಬೆಂಗಳೂರು ಮ್ಯೂಜಿಯಂನಲ್ಲಿರುವ ಕೆಳದಿ ಅರಸರ ಅಪೂರ್ವ ಚಾರಿತ್ರಿಕ ದಾಖಲೆ, ಭಾಷಾ ಸಂಗಮ [ಡಾ. ಸಂಗಮೇಶ ಸವದತ್ತಿಮಠ ಅವರ ಷಷ್ಟ್ಯಬ್ದಿ ಅಭಿನಂದನ ಸಂಪುಟ, (ಸಂ) ಬಸವರಾಜ ಪೋಲಿಸ ಪಾಟೀಲ], ಡಾ. ಸಂಗಮೇಶ ಸವದತ್ತಿಮಠ ಅಭಿನಂದನ ಸಮಿತಿ, ಗುಲಬರ್ಗಾ, ಪುಟ ೬೨೯-೬೩೧

೪. Shastry A.K. (Ed), 2009, The Records of the Sringeri Dharmasamsthana, Sringeri Matha, Sringeri, pp 87-92, No.25; ತಿಗಳಾರಿ ತಾಳೆಯೋಲೆ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ-(ಸಂ) ಕೆಳದಿ ಗುಂಡಾಜೋಯಿಸ್, ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ-೧೯೯೯, ಪುಟ ೨೩-೨೫, ಸಂಖ್ಯೆ-೧೫.

೫. ಸುಂದರ ಅ., ೧೯೮೬, ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ {ಸಂಪುಟ-೧}, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ ೮೮, ಸಂಖ್ಯೆ-೯, ಅನುಬಂಧ-೫.

೬ ರೈಸ್ ಬಿ.ಎಲ್., ಎಪಿಗ್ರಾಫಿಯಾ ಕರ್ನಾಟಿಕಾ-೫, ಅರಸೀಕೆರೆ-೧೨೬ ; ಎಪಿಗ್ರಾಫಿಯ ಕರ್ನಾಟಿಕ-೧೦ (ಪರಿಷ್ಕೃತ), ಅರಸೀಕೆರೆ-೨೪೦.

೭. ಇದರ ಉದಾಹರಣೆಗೆಂದು ಎಂ.ಎಸ್. ಪುಟ್ಟಣ್ಣ ಅವರ 'ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ' (ಪ್ರಕಟನೆ : ಕಾವ್ಯಾಲಯ, ಮೈಸೂರು-೧೯೫೨, ಮರುಮುದ್ರಣ ; ಪ್ರಥಮ ಮುದ್ರಣ-೧೯೧೦) ಎಂಬ ಕೃತಿಯನ್ನು ಗಮನಿಸಬಹುದು. ಇದು ಹೊಸಗನ್ನಡದ ಮೊತ್ತಮೊದಲ ಜೀವನ ಚರಿತ್ರೆಯಾಗಿದೆ.

◆◆

೭೯

ರಾಜೇಶ್ ಹಂ.ಗು.

ಪ್ರಾಚೀನ ಬೆಂಗಳೂರು ಯಾವುದು?

ಪ್ರಸ್ತುತ ಲೇಖನವು ಪ್ರಾಚೀನ ಬೆಂಗಳೂರು ಯಾವುದು? ಎಂಬುದನ್ನು ಕುರಿತು ನಡೆಸಿರುವ ಅಧ್ಯಯನವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ನಿಖರ ಆಧಾರಗಳ ಕೊರತೆ ಇರುವುದರಿಂದ ಪೂರಕ ಆಧಾರಗಳನ್ನು ಆಧರಿಸಿ, ಊಹಾತ್ಮಕವಾದವನ್ನು ಮಂಡಿಸಲಷ್ಟೆ ಸಖ್ಯವಾಗಿದ್ದೇನೆ. ಹಳೆಯ ಬೆಂಗಳೂರು ಕುರಿತು ಕೆಲವು ಪ್ರಬಂಧಗಳು ಮಂಡನೆಯಾಗಿವೆ ಯಾದರೂ, ಅಲ್ಲಿಯೂ ನಿಖರವಾದ ಅಭಿಪ್ರಾಯಕ್ಕೆ ಬರಲು ಆಧಾರಗಳ ಮಿತಿಗಳಿವೆ. ಪ್ರಸ್ತುತ ಪ್ರಬಂಧದಲ್ಲಿ ವಿಭಿನ್ನ ವಾದವನ್ನು ಮಂಡಿಸುವ ಪ್ರಯತ್ನ ನಡೆಸಲಾಗಿದೆ.

ಈ ಲೇಖನವನ್ನು ಬೆಂಗಳೂರಿಗೆ ಸಂಬಂಧಿಸಿದ ಜಾನಪದ ಕಥನವೊಂದರ ಮೂಲಕ ಪ್ರವೇಶಿಸುವುದು ಸೂಕ್ತವಾಗಿದೆ. ಹೊಯ್ಸಳ ಬಲ್ಲಾಳನು ಬೇಟೆಗೆಂದು ಬಂದಾಗ ಕಾಡಿನಲ್ಲಿ ತಪ್ಪಿಸಿಕೊಂಡು ಹಸಿವಿನಿಂದ ಅಲೆಯುವಾಗ ಮುದುಕಿಯೊಬ್ಬಳು ಅವನಿಗೆ ಬೇಯಿಸಿದ ಕಾಳುಗಳನ್ನು ನೀಡಿ ಉಪಚರಿಸಿದಳಂತೆ. ಬೆಂಗಾಳು ತಿಂದು ಹಸಿವೆಯನ್ನು ನೀಗಿಸಿಕೊಂಡ ಬಲ್ಲಾಳ ಆ ಪ್ರದೇಶವನ್ನು 'ಬೆಂಗಾಳೂರು' ಎಂದು ಕರೆದ ಎಂಬ ಜಾನಪದ ಐತಿಹ್ಯವಿದೆ.

ಆದರೆ ಬಿ.ಎಲ್. ರೈಸ್ ಅವರು ಸಂಪಾದಿಸಿದ ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ ೯ (ಬೆಂಗಳೂರು ಜಿಲ್ಲೆ)ರ ಕ್ರಿ.ಶ. ೧೨೪೭ರ (ಬೆಂಗಳೂರು-೬೮) ಮಡಿವಾಳ ಸೋಮೇಶ್ವರ ದೇವಾಲಯದ ತಳಪಾಯದ ಮೇಲಿನ ತಮಿಳು ಶಾಸನವು 'ವೆಂಗಳೂರು' ಪಿರಿಯ (ದೊಡ್ಡ) ಕೆರೆಯ ಕೆಳಗಿನ ಭೂಮಿಯನ್ನು ಸೆಂಬೇಶ್ವರ (ಸೋಮೇಶ್ವರ) ದೇವರಿಗೆ ಪೆಮ್ಮತ್ತಯ್ಯ ನೀಡಿದನೆಂದು ತಿಳಿಸುತ್ತದೆ.

೧೯೧೫ರವರೆಗೆ ಬಲ್ಲಾಳನ ಕುರಿತಾದ ಜಾನಪದ ಐತಿಹ್ಯವೇ 'ಬೆಂಗಳೂರು' ಹೆಸರಿನ ಮೂಲವೆಂದು ಭಾವಿಸಲಾಗಿತ್ತು. ಯಾವಾಗ ಆರ್. ನರಸಿಂಹಚಾರ್ ೧೯೧೫ರ 'ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್' (MAR) ನಲ್ಲಿ ಬೇಗೂರಿನ ವೀರಗಲ್ಲು ಶಾಸನದಲ್ಲಿ 'ಬೆಂಗುಳೂರು' ಉಲ್ಲೇಖ ಇರುವುದನ್ನು ಗುರುತಿಸಿ ಪ್ರಕಟಿಸಿದರೋ, ಆಗ ಬೆಂಗಳೂರು ನಾಮನಿಷ್ಪತ್ತಿಯ ಬಗ್ಗೆ ಇದ್ದ ಜಾನಪದ ಐತಿಹ್ಯ ತನ್ನ ಮಹತ್ವವನ್ನು ಕಳೆದುಕೊಂಡಿತು. ಬೇಗೂರು ವೀರಗಲ್ಲು ಶಾಸನದ ಕಾಲ ಸುಮಾರು ಕ್ರಿ.ಶ. ಸು. ೯೦೦. ಇದರಿಂದ ಬಲ್ಲಾಳನಿಗೂ ೨ ಶತಮಾನಗಳ ಮೊದಲೇ ಬೆಂಗಳೂರು ಎಂಬುದು ಇತ್ತು ಎಂಬುದು ದೃಢಪಟ್ಟಿತು. (ಬೇಗೂರಿನ ವೀರಗಲ್ಲು ಶಾಸನದಲ್ಲಿ ಬೆಂಗುಳೂರ ಕಾಳೆಗದೊಳ್ ನಾಗತ್ತರನ ಮಗಂ ಬುಟ್ಟಣಪತಿ ಸತ್ತಂ ಎಂಬ ಉಲ್ಲೇಖವಿದೆ.)

೩೩/ಎ, ಐ.ಟಿ.ಐ. ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ ಅಂಚೆ
ಬೆಂಗಳೂರು-೫೬೦೦೯೧
ಮೊ: ೭೮೨೯೪ ೦೪೦೬೩

ಈವರೆಗೆ ಅನೇಕ ವಿದ್ವಾಂಸರು ಪ್ರಾಚೀನ ಬೆಂಗಳೂರು ಯಾವುದು ಎಂಬುದನ್ನು ಗುರುತಿಸಲು ಪ್ರಯತ್ನ ನಡೆಸಿದ್ದಾರೆ. ಈ ವಿದ್ವಾಂಸರ ನಡುವೆ ೨ ವಾದಗಳು ಪ್ರಧಾನವಾಗಿವೆ.

೧. ಹೆಬ್ಬಾಳ ಸಮೀಪದ ಕೊಡಿಗೆಹಳ್ಳಿಯೇ ಪ್ರಾಚೀನ ಬೆಂಗಳೂರು.

ಈ ವಾದವನ್ನು ಪ್ರತಿಪಾದಿಸುವವರಲ್ಲಿ ಪ್ರಮುಖ ವಿದ್ವಾಂಸರೆಂದರೆ– ಸಿ. ಹಯವದನರಾವ್, ಎಸ್.ಕೆ. ನರಸಿಂಹಯ್ಯ, ಫಜಲುಲ್ ಹಸನ್, ದೇ.ಜವರೇಗೌಡ, ಸೂರ್ಯನಾಥ ಕಾಮತ್, ಬ.ನ. ಸುಂದರರಾವ್, ಜೆ.ವಿ. ಗಾಯತ್ರಿ., ನಾ. ಗೀತಾಚಾರ್ಯ ಪ್ರಮುಖರು.

* ಈ ವಿದ್ವಾಂಸರ ಪ್ರಕಾರ– ೧೫೯೭ರಲ್ಲಿ ಅನಂತಭಟ್ಟರಿಗೆ ಇಮ್ಮಡಿ ಕೆಂಪೇಗೌಡ ನೀಡಿರುವ ಪೌರೋಹಿತ್ಯದಾನ ಶಾಸನದಲ್ಲಿ "ದೇವರಾಯಪಟ್ಟಣಕ್ಕೆ ಪ್ರತಿನಾಮದೇಯವಾದ ಬೆಂಗಳೂರು" ಎಂದಿದೆ.
* ಕ್ರಿ.ಶ. ೧೪೩೧ರ ಕೊಡಿಗೆಹಳ್ಳಿ ಶಾಸನದಲ್ಲಿ ವಿರೂಪಾಕ್ಷಪುರವನ್ನು (ಕೊಡಿಗೆಹಳ್ಳಿಯ ಹಿಂದಿನ ಹೆಸರು) ದೇವರಾಯಪುರ ಎಂಬ ಗ್ರಾಮವನ್ನಾಗಿ ಮಾಡಿದ ಬಗ್ಗೆ ತಿಳಿಸುತ್ತದೆ.
* ಕೋಲಾರದ ಶಾಸನವೊಂದರಲ್ಲಿ "ಶ್ರೀಮತು ಬೆಂಗಳೂರು ದ್ವಾವರಾಯ ಪಟ್ಟಣ" ಎಂಬ ಉಲ್ಲೇಖಗಳನ್ನು ಆಧರಿಸಿ, ಕೊಡಿಗೆಹಳ್ಳೀ ಸಮೀಪದ ದೇವರಾಯಪಟ್ಟಣವನ್ನೇ ಹಳೆಯ ಬೆಂಗಳೂರು ಎಂದು ತಪ್ಪಾಗಿ ತಿಳಿದಂತಿದೆ.

ಕೊಡಿಗೆಹಳ್ಳಿಯೇ ಪ್ರಾಚೀನ ಬೆಂಗಳೂರು ಎಂಬ ವಾದದ ಸಮಸ್ಯೆ

* ಮೊದಲನೆಯದಾಗಿ ೧೫೯೭ರ ಪೌರೋಹಿತ್ಯ ದಾನಶಾಸನ ಒಂದು ಕೂಟಶಾಸನ ಎಂಬ ಅನುಮಾನವಿದೆ. (ಬೆಂಗಳೂರು ಪೌರೋಹಿತ್ಯದಾನ ಶಾಸನವನ್ನು ಕರ್ಲಮಂಗಲ ಶ್ರೀಕಂಠಯ್ಯ ಅವರು 'ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ' ಎಂಬ ಕೃತಿಯನ್ನು ಸಂಪಾದಿಸಿದ ಸಂದರ್ಭದಲ್ಲಿ ಆ ಕೃತಿಯ ಕೊನೆಯಲ್ಲಿ ಶಾಸನವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಎಸ್. ಶ್ರೀಕಂಠಶಾಸ್ತ್ರಿ ಅವರು ಈ ಕೃತಿಗೆ ವಿಮರ್ಶೆ ಬರೆದಿದ್ದು, ಅದರಲ್ಲಿ "ಇಮ್ಮಡಿ ಕೆಂಪೇಗೌಡನು ಬೆಂಗಳೂರು ಪೌರೋಹಿತ್ಯವನ್ನು ದಾನ ಮಾಡಿದನೆಂದು ಕೊಟ್ಟಿರುವ ಶಾಸನ ನಿಜವಾದುದೇ ಕೃತಕವೇ? ಎಂದು ಪರೀಕ್ಷಿಸಬೇಕಾಗಿದ್ದಿತು... ಈ ಶಾಸನ ತಾಮ್ರಶಾಸನವೇ, ಓಲೆಗರಿಯೇ? ಏನೂ ಹೇಳಿಲ್ಲ. ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ (೧೯೩೫) ನಲ್ಲಿ ಬೆಂಗಳೂರಿನ ನಾಲ್ಕು ಗೋಪುರಗಳು ೧೫೨೧ರಿಂದ ೧೫೬೯ ವರೆಗೂ ಆಳಿದ ಕೆಂಪೇಗೌಡನ ರಚನೆಯೆಂದು ಹೇಳಿದೆ" ಎಂಬುದಾಗಿ ಅನುಮಾನ ವ್ಯಕ್ತಪಡಿಸಿದ್ದಾರೆ. ಗಮನಿಸಿ: ಎಸ್. ಶ್ರೀಕಂಠಶಾಸ್ತ್ರೀ. ೨೦೧೪. ಸಂಶೋಧನಾ ಲೇಖನಗಳು, ಪು. ೫೮೩–೮೪.)
* ಎರಡನೆಯದಾಗಿ, ಈ ಶಾಸನದಲ್ಲಿ ಬೆಂಗಳೂರು ಸ್ಥಾಪನೆಗೊಂಡು ೬೦ ವರ್ಷಗಳು ಕಳೆದ ನಂತರ "ದೇವರಾಯ ಪಟ್ಟಣಕ್ಕೆ ಪ್ರತಿನಾಮದೇಯವಾದ ಬೆಂಗಳೂರು" ಎಂದಿದೆ. ಆದರೆ ಕೊಡಿಗೆಹಳ್ಳಿಯ ಶಾಸನದಲ್ಲಿ ದೇವರಾಯಪುರ ಎಂದು ಹೇಳುತ್ತಿರುವುದರಿಂದ ಮತ್ತು ಸಮಕಾಲೀನ ಉಲ್ಲೇಖಗಳಿಲ್ಲದ ಕಾರಣ ಈ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ.

೨. ಮಡಿವಾಳ ಪ್ರದೇಶವೇ ಪ್ರಾಚೀನ ಬೆಂಗಳೂರು

ಈ ವಾದವನ್ನು ಪ್ರಧಾನವಾಗಿ ಮಂಡಿಸುವವರು ಎಂ.ಜಿ. ಮಂಜುನಾಥ. ಇವರ ಪ್ರಕಾರ ೧೨೪೭ರ ಮಡಿವಾಳ ಶಾಸನದ ಪ್ರಕಾರ ಬೆಂಗಳೂರಿನಲ್ಲಿ ಕನಿಷ್ಠ ೨ ಕೆರೆಗಳಿದ್ದವು. ಬೇಗೂರಿನ ಶಾಸನೋಕ್ತ 'ಬೆಂಗುಳೂರು' ಮತ್ತು ೧೨೪೭ರ ಮಡಿವಾಳದ ಶಾಸನೋಕ್ತ 'ವೆಂಗಳೂರು' ಇಂದಿನ ಮಡಿವಾಳ ಪ್ರದೇಶದಲ್ಲಿಯೇ ಇತ್ತು. ಆ ಬೆಂಗಳೂರು ಕ್ರಿ.ಶ. ೧೪೦೨ರ ವೇಳೆಗೆ ದೊಡ್ಡ ಊರಾಗಿ ಬೆಳೆದು ಇಂದಿನ ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರವೂ ಸೇರಿದಂತೆ ದೊಡ್ಡಪ್ರದೇಶದ ಆಡಳಿತ ಕೇಂದ್ರವಾಗಿತ್ತು. ಹಾಗೆ ವಿಸ್ತಾರವಾಗಿ ಬೆಳೆದಿದ್ದ ದೊಡ್ಡ ಊರನ್ನು ಯಲಹಂಕ ನಾಡಪ್ರಭು ಕೆಂಪೇಗೌಡನ ತಂದೆ ಕೆಂಪನಂಜೇಗೌಡನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಆನಂತರ ಕೆಂಪೇಗೌಡ ಬೆಂಗಳೂರನ್ನು ಮತ್ತಷ್ಟು ವಿಸ್ತಾರವಾಗಿ ಬೆಳೆಸಿ ದೊಡ್ಡ ಪಟ್ಟಣವನ್ನಾಗಿಸಿದನೆಂದು ಅಭಿಪ್ರಾಯ ಪಡುತ್ತಾರೆ (ಬೆಂಗಳೂರು ದರ್ಶನ ಸಂ–೧ ಪು: ೨೦).

ಮಂಜುನಾಥ ಅವರ ತೀರ್ಮಾನ ಗೊಂದಲದಿಂದ ಕೂಡಿದಂತೆ ತೋರುತ್ತದೆ. ಮಡಿವಾಳದ ಶಾಸನೋಕ್ತ ಬೆಂಗಳೂರು ಇಂದಿನ ಮಡಿವಾಳ ಪ್ರದೇಶದಲ್ಲಿ ಇತ್ತು ಎನ್ನುತ್ತಾರೆ. ಆದರೆ ವಾದ ಸರಣಿಯನ್ನು ಬೆಳೆಸುತ್ತಾ ಹೋದಂತೆ, ಇದೇ ಬೆಂಗಳೂರನ್ನು ಕೆಂಪೇಗೌಡನ ತಂದೆ ಕೆಂಪನಂಜೇಗೌಡ ತನ್ನ ರಾಜಧಾನಿ ಮಾಡಿಕೊಳ್ಳುತ್ತಾನೆ. ಅನಂತರ ಅದನ್ನು ಕೆಂಪೇಗೌಡ ದೊಡ್ಡ ಪಟ್ಟಣವಾಗಿಸಿದ ಎನ್ನುತ್ತಾರೆ. ಇಲ್ಲಿ ಮಂಜುನಾಥ ಅವರು ಯಾವ ಬೆಂಗಳೂರಿನ ಬಗ್ಗೆ ಹೇಳುತ್ತಿದ್ದಾರೆ ಎಂಬ ಗೊಂದಲ ಕಾಡುತ್ತದೆ. ಏಕೆಂದರೆ, ಮಡಿವಾಳಕ್ಕೂ ಈಗಿನ ಬೆಂಗಳೂರು ಕೋಟೆ ಪ್ರದೇಶಕ್ಕೂ ಸುಮಾರು ೧೦ ಕಿ.ಮೀ. ಅಂತರವಿದೆ. ಮಡಿವಾಳ ಪ್ರದೇಶದ ಬೆಂಗಳೂರನ್ನೆ ಕೆಂಪೇಗೌಡ ಮತ್ತು ಅವನ ತಂದೆ ಅಭಿವೃದ್ಧಿ ಪಡಿಸಿದ್ದೇಯಾದರೆ ಅದು ಯಾವ ಬೆಂಗಳೂರು? ಈಗಿನ ಕೋಟೆ ಮತ್ತು ಪೇಟೆಯುಕ್ತ ಬೆಂಗಳೂರನ್ನು ಸ್ಥಾಪಿಸಿದವರು ಯಾರು? ಎಂಬ ಗೊಂದಲಗಳು ಮುಂದುವರೆಯುತ್ತದೆ.

ನಾ. ಗೀತಾಚಾರ್ಯ ಅವರ ಪ್ರತಿವಾದ: ಕೊಡಿಗೆಹಳ್ಳಿಯೇ ಪ್ರಾಚೀನ ಬೆಂಗಳೂರು ಎಂದು ಒಪ್ಪುವ ಗೀತಾಚಾರ್ಯ ಅವರು ಎಂ.ಜಿ. ಮಂಜುನಾಥ ಅವರ ವಾದವನ್ನು ಅಲ್ಲಗಳೆದಿದ್ದಾರೆ.

೧೫೯೭ರ ಪೌರೋಹಿತ್ಯ ಶಾಸನವನ್ನು ಮಂಜುನಾಥ ಅವರು ತಪ್ಪಾಗಿ ಅರ್ಥೈಸಿದ್ದಾರೆ ಎನ್ನುತ್ತಾರೆ.

ಕೆಂಪೇಗೌಡ ಬೆಂಗಳೂರಿನವನು. ಅವನ ತಾಯಿ, ಹೆಂಡತಿ ಎಲ್ಲರೂ ಬೆಂಗಳೂರಿನವರೇ. ಕೊಡಿಗೆಹಳ್ಳಿಯ ಬೆಂಗಳೂರೇ ಈ ಕೆಂಪೇಗೌಡನ ತವರೂರಾದ ಬೆಂಗಳೂರು. ಕೆಂಪೇಗೌಡನು 'ದೇವರಾಯಪಟ್ಟಣ' ಕಟ್ಟಿದ ಮೇಲೆ ಜನರ ಬಾಯಲ್ಲಿ ಅದೇ ಬೆಂಗಳೂರು ಆದ ಮೇಲೆ ಕೊಡಿಗೆಹಳ್ಳಿ ಬೆಂಗಳೂರೇ ಹಳೆಯ ಬೆಂಗಳೂರಾಯಿತು. ಈಗಲೂ ಕೊಡಿಗೆಹಳ್ಳಿಯಲ್ಲಿ ಹಳೆಯ ಸಾಲು ಮಂಟಪದ ನಿವೇಶನ ನೋಡಬಹುದು.


ಊರಿನ ಹಳೆಯ ತಲೆಮಾರಿನವರು ಈಗಲೂ ಕೊಡಿಗೆಹಳ್ಳಿಯನ್ನು 'ಹಿಂದೆ ಹಳೆ ಬೆಂಗಳೂರು' ಎಂದು ಕರೆಯುತ್ತಿದ್ದರೆಂದು ನೆನಪಿಸಿಕೊಳ್ಳುತ್ತಾರೆ ಎನ್ನುತಾರೆ.

ಗೀತಾಚಾರ್ಯ ಅವರು ಕೊಡಿಗೆಹಳ್ಳಿ ಕೆಂಪೇಗೌಡನ ತವರೂರಾಗಿತ್ತು ಎಂಬುದಕ್ಕೆ ನಿರ್ದಿಷ್ಟ ಆಧಾರಗಳನ್ನು ನೀಡಿರುವುದಿಲ್ಲ. ಕೆಂಪೇಗೌಡ ಕಟ್ಟಿದ ನೂತನ ಬೆಂಗಳೂರಿಗೆ ಮೊದಲು ದೇವರಾಯಪಟ್ಟಣ ಎಂಬ ಹೆಸರಿದ್ದ ಬಗ್ಗೆ ಯಾವುದೇ ನಿರ್ದಿಷ್ಠ ಸಮಕಾಲೀನ ಆಧಾರಗಳಿಲ್ಲ. ಆದ್ದರಿಂದ ಗೀತಾಚಾರ್ಯ ಅವರ ಅಭಿಪ್ರಾಯವನ್ನು ಸಹ ಮರುಪರಿಶೀಲಿಸಬೇಕಾಗುತ್ತದೆ.

ಹಾಗಾದರೆ ಪ್ರಾಚೀನ ಬೆಂಗಳೂರು ಯಾವುದು...!?

ಪ್ರಾಚೀನ ಬೆಂಗಳೂರು ಯಾವುದು ಎಂಬುದಕ್ಕೆ ನಿರ್ದಿಷ್ಟ ಆಧಾರಗಳು ನಮಗೆ ಲಭ್ಯವಿಲ್ಲ. ಆದರೆ ಶಾಸನಗಳು ಮತ್ತು ಭೌಗೋಳಿಕ ಅಂಶಗಳನ್ನು ಆಧರಿಸಿ, ಒಂದು ಊಹಾತ್ಮಕ ವಾದವನ್ನು ನಿಮ್ಮ ಮುಂದಿಡಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಮುಖ್ಯವಾಗಿ ಎರಡು ಶಾಸನಗಳನ್ನು ಬಳಸಿಕೊಳ್ಳಲಾಗಿದೆ.



ನಕ್ಷೆಯಲ್ಲಿ ಮಡಿವಾಳ, ಅಗರ ಮತ್ತು ಬೆಳಂದೂರು ಕೆರೆಗಳು



೧೯೪೨ರ ಬೆಳಂದೂರು ಕೆರೆ

೧. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ-೯ರಲ್ಲಿರುವ ಕ್ರಿ.ಶ. ೮೭೦ರ ಅಗರದ (ಬೆಂಗಳೂರು ಶಾಸನ ಸಂಖ್ಯೆ-೭೯) ಶಾಸನದಲ್ಲಿ ಇರ್ವ್ವಲಿಯೂರನ್ನು ಇರುಗಮಯ್ಯನ ಮಗ ಸಿರಿಮಯ್ಯ ಆಳುತ್ತಿದ್ದನು. ಸಿರಿಮಯ್ಯನು ಇದ್ದ ಎರಡು ಕೆರೆಗಳಿಗೆ ತೂಬನ್ನು ಇಕ್ಕಿಸಿ, ಮೂಡಣದ ಕೆರೆಯೊಂದನ್ನು ಕಟ್ಟಿಸಿ, ಮೂರೂ ಕೆರೆಗಳಿಗೆ ಬಿತ್ತುವಟ್ಟು ಬಿಟ್ಟುದಾಗಿ ತಿಳಿಸುತ್ತದೆ. ಈ ವೇಳೆ ಗಂಗರಾಜ್ಯವನ್ನು ಸತ್ಯವಾಕ್ಯ ಪೇರ್ಮಾಡಿಯು ಆಳುತ್ತಿದ್ದ. ಬೇಗೂರಿನ ಅಧಿಕಾರಿಯಾಗಿದ್ದ ನಾಗತ್ತರ ಅವನಿಗೆ ಕಲಿಯುಗದ ಹನುಮನಂತಿದ್ದನೆಂದು ತಿಳಿದುಬರುತ್ತದೆ. ಈ ಶಾಸನವು ಅಗರ ಕೆರೆಯ ಪಶ್ಚಿಮ ತೂಬಿನ ಬಳಿಯಲ್ಲಿ ದೊರೆತಿರು ವುದಾಗಿ ರೈಸ್ ಅವರು ದಾಖಲಿಸಿದ್ದಾರೆ.



ಬೆಂಗಳೂರು ಪರಿಸರದ ಕೆರೆಗಳ ನಕ್ಷೆ

೭-೮ನೇ ಶತಮಾನದಲ್ಲಿ ಕೆರೆಗಳ ತೂಬು ಪರಿಚಯವಾಗಿದ್ದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದರಿಂದ ನೀರನ್ನು ನಿಯಂತ್ರಿಸುವ ತಂತ್ರಜ್ಞಾನ ಬಳಕೆಗೆ ಬಂದಿತು. ಹೀಗೆ ಪರಿಚಯವಾದ ತೂಬಿನ ತಂತ್ರಜ್ಞಾನವನ್ನು ಹಳೆಯ ಕೆರೆಗಳಿಗೂ ಅಳವಡಿಸುವ ಕಾರ್ಯ ೯ನೇ ಶತಮಾನದಲ್ಲಿ ನಡೆಯುತ್ತಿತ್ತು ಎಂಬುದಕ್ಕೆ ಅಗರದ ಶಾಸನವೇ ಸಾಕ್ಷಿಯಾಗಿದೆ.

ಇರ್ವ್ವಲಿಯೂರು ಎಂದರೆ ಇಂದಿನ ಅಗರದ ಪಕ್ಕದಲ್ಲಿಯೇ ಇರುವ ಇಬ್ಬಲೂರು. ಇದರ ಮುಖಂಡನಾಗಿದ್ದವನು ಸಿರಿಮಯ್ಯ. ಇವನ ತಂದೆ ಇರುಗಮಯ್ಯ. ಬೇಗೂರಿನ ಪ್ರಾಂತಾಧಿಕಾರಿಯಾಗಿದ್ದ ನಾಗತ್ತರನು ಗಂಗರ ಎರೆಯಪ್ಪ ಮತ್ತು ವೀರಮಹೇಂದ್ರರ ನಡುವೆ ನಡೆದ ತುಂಬೇಪಾಡಿ ಯುದ್ಧದಲ್ಲಿ ವೀರಮರಣ ಹೊಂದಿದಾಗ, ಎರೆಯಪ್ಪನೇ ನಾಗತ್ತರನ ಸ್ಥಾನವನ್ನು ಸಿರಿಮಯ್ಯನ ತಂದೆ ಇರುಗನಿಗೆ ವಹಿಸಿಕೊಡುತ್ತಾನೆ. ಈ ಸಿರಿಮಯ್ಯ ಅಂದು ಪ್ರಚಲಿತಕ್ಕೆ ಬರುತ್ತಿದ್ದ ತೂಬಿನ ತಂತ್ರಜ್ಞಾನವನ್ನು, ತನ್ನ ಊರಿನ ಪರಿಸರದಲ್ಲಿ ಆ ಹೊತ್ತಿಗೆ ಇದ್ದ ಎರಡು ಹಳೆಯ ಕೆರೆಗಳಿಗೆ ಅಳವಡಿಸಿದನು. ಆ ಎರಡು ಕೆರೆಗಳಲ್ಲಿ ಒಂದು ಅಗರದ ಕೆರೆ ಎಂಬುದು ನಿರ್ವಿವಾದ. ಏಕೆಂದರೆ ಈ ಶಾಸನ ದೊರೆತಿರುವುದು ಅಗರ ಕೆರೆಯ ತೂಬಿನ ಬಳಿಯಲ್ಲಿಯೇ ಆಗಿದೆ. ಇನ್ನೊಂದು ಕೆರೆ ಎಂದರೆ ಅಗರ ಕೆರೆಗೆ ನೀರನ್ನು ಪೂರೈಸುತ್ತಿದ್ದ ಮಡಿವಾಳದ ಕೆರೆ ಎಂದು ಊಹಿಸಬಹುದು. ವ್ಯಾಪ್ತಿಯಲ್ಲಿ ಮಡಿವಾಳದ ಕೆರೆಯು ಅಗರ ಕೆರೆಗಿಂತ ದೊಡ್ಡದು. ಸಿರಿಮಯ್ಯ ಪೂರ್ವದಲ್ಲಿ ಹೊಸದಾಗಿ ಮಾಡಿಸಿದ



ಬೇಗೂರಿನ ಗಂಗ ಅರಸರ ಪ್ರತಿನಿಧಿ ನಾಗತ್ತರನ ಹೋರಾಟಗಳನ್ನು ದಾಖಲಿಸಿದ ವೀರಗಲ್ಲು ಶಾಸನ

ಕೆರೆಯೇ ಅಗರಕ್ಕೆ ಪೂರ್ವದಲ್ಲಿರುವ ಮತ್ತು ಇಬ್ಬಲೂರಿನ ದಂಡೆಗೆ ಇರುವ ಬೆಳ್ಳಂದೂರು ಕೆರೆಯೇ ಆಗಿದೆ. ಬೆಳ್ಳಂದೂರು ಕೆರೆ ಸಹಜವಾಗಿ ಹಳೆಯ ಕೆರೆಗಳಿಗಿಂತ ವಿಸ್ತಾರದಲ್ಲಿ ದೊಡ್ಡದಾಗಿದೆ. ಇದರಿಂದ ಸಿರಿಮಯ್ಯನಿಗೆ ಕೆರೆ ನಿರ್ಮಾಣ ತಂತ್ರಜ್ಞಾನದ ಅರಿವು ಚೆನ್ನಾಗಿ ಇದ್ದಿರಬಹುದೆಂದು ನಾವು ಗ್ರಹಿಸಬಹುದಾಗಿದೆ. ವಿಶಾಲ ಕೆರೆಗಳ ನಿರ್ಮಾಣದಿಂದ ಸಹಜವಾಗಿ ಅಗರ, ಮಡಿವಾಳ, ಇಬ್ಬಲೂರು ಪರಿಸರದಲ್ಲಿ ಕೃಷಿ ವಿಸ್ತರಣೆಯಾಗಿದೆ. ಇದರಿಂದಾಗಿ ಈ ಪರಿಸರ ಸಮೃದ್ಧವಾಗಿರುವ ಸಾಧ್ಯತೆಗಳಿವೆ. ಆ ಪ್ರದೇಶದ ಮೇಲಿನ ನಿಯಂತ್ರಣಕ್ಕಾಗಿ ಪ್ರಭುತ್ವಗಳ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ ಎಂದು ಊಹಿಸಬಹುದು. ಇಂತಹ ಒಂದು ಸಂಘರ್ಷವೇ ಬೇಗೂರಿನ ವೀರಗಲ್ಲು ಶಾಸನ ಉಲ್ಲೇಖಿಸುವ ಬೆಂಗಳೂರು ಕಾಳಗವಾಗಿದೆ.

ಪ್ರಸ್ತುತ ವಾದಕ್ಕೆ ಬಳಸಿಕೊಳ್ಳುತ್ತಿರುವ ೨ನೇ ಶಾಸನ ಎಂದರೆ ಕ್ರಿ.ಶ. ೧೨೪೭ರ ಮಡಿವಾಳ ಸೋಮೇಶ್ವರ ದೇವಾಲಯದ ತಳಪಾಯದ ಮೇಲಿನ ತಮಿಳು ಶಾಸನ (ಬೆಂಗಳೂರು-೬೮). ಈ ಶಾಸನದಲ್ಲಿ ವೆಪ್ಪೂರಿನ (ಬೇಗೂರಿನ) ಪೆಮ್ಮತ್ತಿಯಾರ್ ಎಂಬುವವನು ವೆಂಗಳೂರಿನ ಪಿರಿಯ ಕೆರೆಯ ಕೆಳಗೆ ಸೋಮೇಶ್ವರ ದೇವರಿಗೆ ಭೂಮಿಯನ್ನು ಬಿಟ್ಟ ಬಗ್ಗೆ ತಿಳಿಸುತ್ತದೆ. ಈ ಶಾಸನ ಇರುವುದು ಮಡಿವಾಳದಲ್ಲಿ. ಈ ಶಾಸನದಲ್ಲಿ ವೆಂಗಳೂರಿನ ಪಿರಿಯ ಕೆರೆಯ ಕೆಳಗೆ ಅಂದರೆ ದೊಡ್ಡಕೆರೆಯ ಕೆಳಗೆ ದೇವರಿಗೆ ಭೂಮಿ ಬಿಟ್ಟ ಬಗ್ಗೆ ತಿಳಿಸುವುದರಿಂದ ಈ ಪರಿಸರದಲ್ಲಿರುವ ದೊಡ್ಡ ಕೆರೆ ಯಾವುದು ಎಂಬುದನ್ನು ನಾವು ಪರಿಶೀಲಿಸುವುದು ಅವಶ್ಯ. ಮಡಿವಾಳ ಮತ್ತು ಅಗರದ ಕೆರೆಗಳಿಗಿಂತ ವಿಸ್ತಾರದಲ್ಲಿ ಸಿರಿಮಯ್ಯ ಕಟ್ಟಿಸಿದ ಪೂರ್ವದ ಕೆರೆಯಾದ ಬೆಳ್ಳಂದೂರು ಕೆರೆ ದೊಡ್ಡದು. ಇವತ್ತಿಗೂ ಕೂಡ ಬೆಂಗಳೂರು ಪರಿಸರದಲ್ಲಿರುವ ಅತಿದೊಡ್ಡ ಕೆರೆ ಎಂದರೆ ಅದು ಬೆಳ್ಳಂದೂರು ಕೆರೆಯೇ ಆಗಿದೆ. ಬೆಳ್ಳಂದೂರು ಕೆರೆ ಅನೇಕ ಒತ್ತುವರಿಯ ನಡುವೆಯೂ ಅರಣ್ಯ ಇಲಾಖೆಯ ದಾಖಲೆಯ ಪ್ರಕಾರ ಸುಮಾರು ೯೫೦ ಎಕರೆ ವಿಸ್ತಾರವನ್ನು ಹೊಂದಿದೆ.

ಉಪಸಂಹಾರ: ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಹೇಳಲು ಹೊರಟಿರುವುದೇನೆಂದರೆ- ಬೆಂಗಳೂರು ಪಿರಿಯ ಕೆರೆ ಎಂದರೆ ಬೇರೆ ಯಾವುದೂ ಅಲ್ಲ, ಅದು ಬೆಳ್ಳಂದೂರು ಕೆರೆಯಾಗಿದೆ. ಬೆಂಗಳೂರೇ ಏಕೆ ಬೆಳ್ಳಂದೂರು ಆಗಿರಬಾರದು ಎಂಬ ಬಗ್ಗೆ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ.

ಗಂಗರ ಕಾಲದಲ್ಲಿ ಪ್ರಸಿದ್ಧ ನಾಡಾಗಿದ್ದ ಬೇಗೂರಿನಿಂದ ಕೇವಲ ೧೦ ಕಿ.ಮೀ. ಅಂತರದಲ್ಲಿ ಇಂದಿನ ಬೆಳ್ಳಂದೂರು ಇದೆ. ಹೆಚ್ಚು ಪ್ರಾಚೀನ ಶಾಸನಗಳು ಇದೇ ಪರಿಸರದಲ್ಲಿ ಕೇಂದ್ರೀಕೃತವಾಗಿವೆ. ಇದರ ಅರ್ಥ ಅಗರ, ಇಬ್ಬಲೂರು ಪರಿಸರ ರಾಜಕೀಯವಾಗಿ ಹೆಚ್ಚು ಚಟುವಟಿಕೆಯ ಕೇಂದ್ರವಾಗಿತ್ತು ಎಂಬುದಾಗಿದೆ. ಒಟ್ಟಾರೆ, ನಿಕರ ಆಧಾರಗಳ ಕೊರತೆಯ ನಡುವೆಯೂ ಶಾಸನಗಳು ಮತ್ತು ಭೌಗೋಳಿಕ ಅಂಶಗಳ ತುಲನಾತ್ಮಕ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಾಚೀನ ಬೆಂಗಳೂರು ಇಂದಿನ ಬೆಳ್ಳಂದೂರು ಆಗಿರಬಹುದು ಎಂಬುದು ಪ್ರಸ್ತುತ ಪ್ರಬಂಧದ ಊಹಾತ್ಮಕವಾದವಾಗಿದೆ. ಬೆಳ್ಳಂದೂರು ಹೆಸರು ಅರ್ವಾಚೀನವಾದುದು. ಪ್ರಾಚೀನವಾಗಿ ಕೇಳಿಬರುವ ಬೆಂಗಳೂರಿನ ಹೆಸರು ನಂತರದ ಕಾಲಘಟ್ಟದಲ್ಲಿ ಅಪಭ್ರಂಶಗೊಂಡು ಬೆಳ್ಳಂದೂರು ಆಗಿರಬಹುದು. ಆದ್ದರಿಂದ ಬೆಳ್ಳಂದೂರಿನ ಹೆಸರು ಪ್ರಾಚೀನವಾಗಿ ಕಂಡುಬರುವುದಿಲ್ಲ. ಈ ಕುರಿತು ಬೇರೆ ಬೇರೆ ಆಯಾಮಗಳಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯತೆ ಇದೆ.

ಆಕರಗ್ರಂಥಗಳು

೧. ಕರ್ಲಮಂಗಲಂ ಶ್ರೀಕಂಠಯ್ಯ (ಸಂ.), ೧೯೬೧, ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ. ಜಿ.ಎಸ್.ವಿಶ್ವ ಮತ್ತು ಕಂಪೆನಿ. ಬೆಂಗಳೂರು.

೨. ಕೃಷ್ಣಮೂರ್ತಿ ಪಿ.ವಿ., ೨೦೧೧, ಇತಿಹಾಸ ಮಂಥನ, ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು,

೩. ನರಸಿಂಹಯ್ಯ ಎಸ್.ಕೆ. ೧೯೨೪ (೧೯೨೨). ಮಾಗಡಿ ಕೆಂಪೇಗೌಡ ಬೆಂಗಳೂರು ಸ್ಥಾಪಕ ಮತ್ತು ಆತನ ಪೂರ್ವಿಕರು. ಬೆಂಗಳೂರು ಒಕ್ಕಲಿಗರ ಸಂಘದ ಮುದ್ರಣಾಲಯ.

೪. ಮಂಜುನಾಥ ಎಂ.ಜಿ. ೨೦೦೬. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ. ಶ್ರೀ ಕೆಂಪೇಗೌಡ ಅಧ್ಯಯನ ಪೀಠ. ಬೆಂಗಳೂರು.

೫. ರಾಜೇಶ್ ಹಂ.ಗು., ೨೦೨೦. "ಕೆಂಪೇಗೌಡರ ಬೆಂಗಳೂರು: ನೆಲೆ-ಹಿನ್ನೆಲೆ", ಇತಿಹಾಸ ದರ್ಶನ, ಸಂಪುಟ-೩೫: ೪೯೯-೫೦೧.

೬. ರೈಸ್ ಬಿ.ಎಲ್., (ಸಂ.) ೧೯೦೫. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯, (ಬೆಂಗಳೂರು ಜಿಲ್ಲೆ), ಮೈಸೂರು ಪುರಾತತ್ವ ಇಲಾಖೆ, ಬೆಂಗಳೂರು.

೭. ಸುಂದರರಾವ್ ಬ.ನ., ೨೦೧೧ (೧೯೮೫), ಬೆಂಗಳೂರಿನ ಇತಿಹಾಸ, ಅಂಕಿತ ಪುಸ್ತಕ, ಬೆಂಗಳೂರು.

೮. Fazlul Hasan, 1970, Bangalore Through the Centuries, Historical Publication, Bangalore.

◆◆

ಮಧುರಾಜ್, ಭರತ್ ಎ.ಸಿ.

ಕರಾವಳಿ ಕರ್ನಾಟಕದಲ್ಲಿ ಮಧ್ಯಕಾಲೀನ ಕಂದಾಯ ಪದ್ಧತಿ

ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು ಮಧ್ಯಕಾಲೀನ ಕರ್ನಾಟಕದ ಸಮಕಾಲೀನ ಪ್ರತಿಷ್ಠಿತ ರಾಜವಂಶಗಳಾಗಿವೆ. ಚಾಲುಕ್ಯರು ತಮ್ಮ ಅಧಿಕಾರದ ಉತ್ತುಂಗದಲ್ಲಿದ್ದಾಗ ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಭೂ ಪ್ರದೇಶಗಳ ಮೇಲೆ ತಮ್ಮ ಹಿಡಿತವನ್ನು ಸಾಮಂತ ಅರಸರುಗಳ ಮೂಲಕ ಸಾಧಿಸಿದ್ದರು. ಇಂತಹ ಸಾಮಂತರಲ್ಲಿ ಹೊಯ್ಸಳರು ಅತ್ಯಂತ ಪ್ರಭಾವಿ ಮಾಂಡಲೀಕರಾಗಿದ್ದರು. ಕರ್ನಾಟಕದ ಮಲೆನಾಡು ಹಾಗೂ ದಕ್ಷಿಣದ ಪ್ರದೇಶಗಳಲ್ಲಿ ತಮ್ಮ ಪ್ರಭುತ್ವವನ್ನು ಸುದೀರ್ಘ ಕಾಲದವರೆಗೆ ಸ್ಥಾಪಿಸಿಕೊಂಡಿದ್ದರು. ಅನೇಕ ಸಂದರ್ಭಗಳಲ್ಲಿ ತಮ್ಮ ಒಡೆಯರಾದ ಚಾಲುಕ್ಯರ ಪರಮಾಧಿಕಾರವನ್ನು ಪ್ರಶ್ನಿಸುವ ಮೂಲಕ ಸ್ವತಂತ್ರ ಆಡಳಿತದ ಆಸೆಯನ್ನು ವ್ಯಕ್ತಪಡಿಸಿದ್ದರು. ಆದರೆ ಈ ಎರಡು ರಾಜವಂಶಗಳು ಸಾಮ್ರಾಜ್ಯಶಾಹಿ ಧೋರಣೆಯನ್ನು ಅನುಸರಿಸಿಕೊಂಡು ಬಂದರೂ ಕರಾವಳಿ ಭಾಗದಲ್ಲಿ ತಮ್ಮ ರಾಜ್ಯವಿಸ್ತರಣಾ ನೀತಿಯನ್ನು ಅನುಸರಿಸಿಕೊಂಡು ಬಾರದೇ ಇರುವಂತಹದ್ದು ಗಮನಾರ್ಹ.

ಸಾಮಾನ್ಯವಾಗಿ ಎಲ್ಲಾ ರಾಜವಂಶಗಳೂ ತಮ್ಮ ರಾಜ್ಯದ ವಿಸ್ತರಣೆಗೋಸ್ಕರ ಅನೇಕ ತಂತ್ರಗಳನ್ನು ಅನುಸರಿಸುವುದು ಸಾಮಾನ್ಯ. ಆದರೆ ಕರಾವಳಿ ಭಾಗದಲ್ಲಿ ಈ ಎರಡೂ ರಾಜವಂಶಗಳು ವಿಸ್ತರಣಾದಾಹವನ್ನು ತೋರ್ಪಡಿಸಿಲ್ಲ. ಇಂತಹ ರಾಜನೀತಿ ತಂತ್ರಕ್ಕೆ ಕಾರಣಗಳೇನು ಎನ್ನುವಂತಹದ್ದು ಕುತೂಹಲವನ್ನು ಮೂಡಿಸುತ್ತದೆ. ಕರಾವಳಿಯ ಈ ಭೂಭಾಗಗಳಲ್ಲಿ ದೊರೆತ ಕಂದಾಯ ಪದಗಳನ್ನು ಹೊಂದಿದ ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರ ಕಂದಾಯ ಉಲ್ಲೇಖಿತ ಶಾಸನಗಳನ್ನು ಅಧ್ಯಯನ ನಡೆಸಿದಾಗ ಈ ವಿಚಾರವು ಸ್ಪಷ್ಟವಾಗಿ ಗೋಚರಿಸುತ್ತದೆ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ೧೧ ಮತ್ತು ಹೊಯ್ಸಳರ ಕಾಲಕ್ಕೆ ಸೇರಿದ ೯ ಕಂದಾಯ ಪದ ಉಲ್ಲೇಖಿತ ಶಾಸನಗಳು ಲಭ್ಯವಾಗಿವೆ.[೧] ಇವುಗಳು ತಲಾ ೧೭ ಮತ್ತು ೧೫ ಕಂದಾಯಪದಗಳನ್ನು ಮಾತ್ರವೇ ಉಲ್ಲೇಖಿಸಿವೆ. ಉಳಿದಂತೆ ಬಯಲುನಾಡಿನಲ್ಲಿ ಚಾಲುಕ್ಯರ ೪೮೫ ಶಾಸನಗಳಲ್ಲಿ ೧೧೩೪ ಕಂದಾಯ ಪದಗಳಿದ್ದರೆ, ಮಲೆನಾಡಿನ ೧೩೭ ಶಾಸನಗಳಲ್ಲಿ ೩೩೮ ಕಂದಾಯ ಪದಗಳಿವೆ. ಹೊಯ್ಸಳರ ಮಲೆನಾಡಿನ ೧೭೧ ಶಾಸನಗಳಲ್ಲಿ ೫೫೯ ತೆರಿಗೆ ಪದಗಳಿದ್ದರೆ, ಬಯಲುನಾಡಿನ ೨೨೭ ಶಾಸನಗಳಲ್ಲಿ ೭೬೨ ಕಂದಾಯ ಪದಗಳಿವೆ. ಇಂತಹ ಸಂದರ್ಭದಲ್ಲಿ ಎರಡೂ ರಾಜಮನೆತನಗಳ ಕಂದಾಯ ಉಲ್ಲೇಖಿತ ಶಾಸನಗಳು ಮತ್ತು ಕಂದಾಯ ಪದಗಳನ್ನು ಗಮನಿಸಿದಾಗ ಕರಾವಳಿ ಪ್ರದೇಶದಲ್ಲಿ

ಇತಿಹಾಸ ಉಪನ್ಯಾಸಕರು
ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು
ಅದಮಾರು, ಉಡುಪಿ ಜಿಲ್ಲೆ
ಮೊ: ೯೪೮೦೫ ೭೫೫೯೩

ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಮಂಗಳಗಂಗೋತ್ರಿ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ
ಮೊ: ೯೯೬೪೯ ೬೭೫೪೪

ಗಣನೀಯವಾಗಿ ಕಡಿಮೆ ಸಂಖ್ಯೆ ಕಂಡುಬರುತ್ತದೆ. ಈ ವ್ಯತ್ಯಾಸಗಳಿಗೆ ಕಾರಣವೇನು?, ಭೌಗೋಳಿಕ ಅಂಶಗಳು ಪ್ರಭಾವ ಬೀರಿತ್ತೇ? ವಾಣಿಜ್ಯ ಅಥವಾ ಆರ್ಥಿಕ ಚಟುವಟಿಕೆಗಳಿಗೆ ಏನಾದರೂ ಸಂಬಂಧವಿದೆಯೇ? ಅಥವಾ ಈ ಬಲಿಷ್ಠ ಶಕ್ತಿಗಳಿಗೆ ಕರಾವಳಿ ಪ್ರದೇಶದ ಬಗ್ಗೆ ನಿರಾಸಕ್ತಿಯೇ? ಇತ್ಯಾದಿ ಪ್ರಶ್ನೆಗಳು ಉದ್ಭವಿಸುವುದು ಸಹಜ. ಈ ಎಲ್ಲಾ ಪ್ರಶ್ನೆಗಳಿಗೆ ಸೂಕ್ತ ವಿವರಣೆ ನೀಡುವ ಅಗತ್ಯವಿದೆ. ಈ ಕಾರಣಕ್ಕಾಗಿಯೇ ಕಂದಾಯ ಆಧಾರಿತ ಅಧ್ಯಯನವನ್ನು ಕೈಗೊಂಡು ಶಾಸನೋಕ್ತವಾಗಿ ಈ ಎರಡು ಪ್ರಭುತ್ವದ ಮೇಲೆ ಇರಬಹುದಾದ ರಾಜಕೀಯ, ಭೌಗೋಳಿಕ, ಆಡಳಿತಾತ್ಮಕ ಹಾಗೂ ವಾಣಿಜ್ಯ ಚಟುವಟಿಕೆಗಳ ಪ್ರಭಾವವನ್ನು ಪರಾಮರ್ಶಿಸುವ ಪ್ರಯತ್ನ ಮಾಡಲಾಗಿದೆ.

ತುಳುನಾಡು ಮತ್ತು ಕಲ್ಯಾಣ ಚಾಲುಕ್ಯರ ನಡುವಿನ ರಾಜಕೀಯ ಬಾಂಧವ್ಯದ ಕುರಿತು ಅನೇಕ ಶಾಸನಗಳು ನಮಗೆ ಮಾಹಿತಿಯನ್ನು ನೀಡುತ್ತವೆ. ಕಲ್ಯಾಣ ಚಾಲುಕ್ಯರ ಪ್ರಖ್ಯಾತ ಅರಸನಾದ ೬ನೇ ವಿಕ್ರಮಾದಿತ್ಯ (ಕ್ರಿ.ಶ. ೧೦೭೬ ರಿಂದ ೧೧೨೬) ನ ಆಳ್ವಿಕೆಯ ಅವಧಿಯಲ್ಲಿ ಸಾಮಂತನಾಗಿದ್ದ ಗೋವೆಯ ಕದಂಬವಂಶದ ಒಂದನೆಯ ಜಯಕೇಶಿ ತುಳುವರ ಮೇಲೆ ದಾಳಿ ನಡೆಸಿಬಂದಾಗ ಪಟ್ಟಿಯೊಡೆಯನನ್ನು ಯುದ್ಧದಲ್ಲಿ ಸೋಲಿಸಿದಾಗ ಅವನು ಚಾಲುಕ್ಯ ಅಧಿಪತ್ಯವನ್ನು ಒಪ್ಪಿಕೊಳ್ಳುವಂತಾಯಿತು.[೨] ಈ ಮೂಲಕ ಚಾಲುಕ್ಯರು ಕರಾವಳಿಯ ಪ್ರದೇಶದಲ್ಲಿ ತಮ್ಮ ಇರುವಿಕೆಯನ್ನು ತೋರ್ಪಡಿಸಿದಂತಾಯಿತು. ನಂತರದ ದಿನಗಳಲ್ಲಿ (ಕ್ರಿ.ಶ. ೧೧೦೧) ಹಾಸನ ಜಿಲ್ಲೆಯ ಬೇಲೂರು ಶಾಸನ ೬ನೇ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾಗಿದ್ದ ಬಲ್ಲಾಳ ದೇವರಸನು ಕೊಂಕಣ ಕರಾವಳಿ, ಆಳ್ವಖೇಡ, ಬಯಲುನಾಡು, ತಲಕಾಡು ಹಾಗೂ ಸಾವಿರ ಮಲೆ ಪ್ರದೇಶಗಳನ್ನು ಆಳುತ್ತಿದ್ದನೆಂಬ ಉಲ್ಲೇಖವಿದೆ.[೩]

೬ನೇ ವಿಕ್ರಮಾದಿತ್ಯನು ತುಳುನಾಡಿನ ಮೇಲೆ ವಿಜಯಸಾಧಿಸಿದನೆಂಬ ಪ್ರತೀತಿಯಿದೆ. ಬಾರಕೂರಿನಲ್ಲಿ ಪಂಚಲಿಂಗೇಶ್ವರ ದೇವಸ್ಥಾನದ ಹಿಂದಿನ ಹಳೆಯ ಕೋಟೆಯ ಬಳಿ ಇರುವ 'ವಿಕ್ರಮಾದಿತ್ಯನ ಸ್ಥಾನ' ವನ್ನು ಉಲ್ಲೇಖಿಸಲಾಗಿದೆ.[೪] ಹೀಗೆ ತುಳು ದಂತಕಥೆಗಳಲ್ಲಿ 'ವಿಕ್ರಮಾಂಕ' ಎಂಬ ಹೆಸರೂ ಕೂಡ ಇದೆ. ಹೀಗಾಗಿ ಕರ್ನಾಟಕ ಕರಾವಳಿ ಪ್ರದೇಶ ಕ್ರಿ.ಶ. ೧೦೭೩ ರಿಂದ ೧೧೨೭ರ ವರೆಗೆ ಕಲ್ಯಾಣ ಚಾಲುಕ್ಯರ ಅದೀನದಲ್ಲಿತ್ತು.[೫] ಈ ವಿಚಾರಗಳು ವಿಕ್ರಮಾದಿತ್ಯ ತುಳುನಾಡಿನಲ್ಲಿ ತನ್ನ ಅಧಿಕಾರವನ್ನು ಪ್ರದರ್ಶಿಸಿರುವುದನ್ನು ಸ್ಪಷ್ಟಪಡಿಸುತ್ತದೆ.

ಕಲ್ಯಾಣ ಚಾಲುಕ್ಯ ದೊರೆ ಸೋಮೇಶ್ವರದೇವನ ಸೇನಾಪತಿಯಾದ ಕಾಮದೇವನ ಶಾಸನ (ಕ್ರಿ.ಶ. ೧೧೮೯–೧೧೯೦) ದಲ್ಲಿ ಮಲೆ, ತುಳು, ಕೊಂಕಣ ಮತ್ತು ಪಶ್ಚಿಮಘಟ್ಟ ಪ್ರದೇಶಗಳನ್ನು ವಶಪಡಿಸಿಕೊಂಡಿರುವುದನ್ನು ಉಲ್ಲೇಖಿಸಲಾಗಿದೆ. ಅಲ್ಲದೇ ಈತನು ಬನವಾಸೆ–೧೨೦೦೦, ಪಾನುಂಗಲ್ಲು–೫೦೦ ಹಾಗೂ ಹುಲಿಗೆರೆ, ಲಕ್ಷ್ಮೇಶ್ವರ–೩೦೦ ಇಲ್ಲಿಯ ಪ್ರಾಂತ್ಯಾಧಿಕಾರಿಯಾಗಿ ನೇಮಕಗೊಂಡಿದ್ದ.[೬] ಈ ಮೇಲಿನ ಶಾಸನಾಧಾರಗಳಿಂದ ಕಲ್ಯಾಣ ಚಾಲುಕ್ಯರು ತಮ್ಮ ಪಾರಮ್ಯವನ್ನು ಸುಮಾರು ೧೨ನೇ ಶತಮಾನದ ಕೊನೆಯವರೆಗೂ ಮುಂದುವರಿಸಿಕೊಂಡಿದ್ದರೆಂಬುದನ್ನು ಸೂಚಿಸುತ್ತದೆ. ಅಂತೆಯೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇರವಾಗಿ ಆಳ್ವಿಕೆ ನಡೆಸಿದ ಪ್ರಪ್ರಥಮ ಕರ್ನಾಟಕದ ಸಾರ್ವಭೌಮರು ಹೊಯ್ಸಳರು. ಕ್ರಿ.ಶ. ೧೩೩೩ರಲ್ಲಿ ಅಳುಪ ರಾಜ್ಯದ ಮೇಲೆ ಹೊಯ್ಸಳ ಮುಮ್ಮಡಿ ಬಲ್ಲಾಳನ ಆಕ್ರಮಣದೊಂದಿಗೆ ಈ ಪರ್ವಕಾಲ ಪ್ರಾರಂಭವಾಯಿತು. ಅಳುಪರಾಜ ಸೋಯಿದೇವ, ಮುಮ್ಮಡಿ ಬಲ್ಲಾಳನಿಗೆ ತನ್ನ ಮಗಳಾದ ಚಿಕ್ಕಾಯಿ ತಾಯಿಯನ್ನು ಮದುವೆ ಮಾಡಿಕೊಟ್ಟು ಈಕೆಯ ಮೂಲಕ ಬಲ್ಲಾಳ ತುಳುನಾಡಿನಲ್ಲಿ ಆತನ ಪರವಾಗಿ ಆಳ್ವಿಕೆ ನಡೆಸಿದಳು.[೭]

ಕ್ರಿ.ಶ. ೧೩೩೩ರ ನೀಲಾವರದ ಶಾಸನ ಬಲ್ಲಾಳನ 'ಪಟ್ಟದ ಪಿರಿಯರಸಿ' ನೀಲಾವರದ ಗ್ರಾಮಸಭೆಯಲ್ಲಿ (೧೪ ಊರಿನಿಂದ) ಕೆಲವು ತೆರಿಗೆಗಳನ್ನು ದೇವಿ ದುರ್ಗಾಭಗವತಿಗೆ ದಾನ ನೀಡಿದ ಬಗ್ಗೆ ತಿಳಿಸಲಾಗಿದೆ. ಅಂತೆಯೇ ೧೩೩೪ರ ಹೊಸಾಳದ ಶಾಸನ ದತ್ತಿಯ ಬಗ್ಗೆ ವಿವರಣೆ ನೀಡಿದ್ದು, ಇದರ ವಿವರಗಳು ಲಭ್ಯವಾಗಿಲ್ಲ. ೧೩೩೪ರ ಹಂದಾಡಿಯ ಬೆಣ್ಣೆಕುದ್ರುವಿನಲ್ಲಿ ದೊರೆತ ಶಾಸನ ಹಾರಾಡಿಯಿಂದ ಸರಕಾರಕ್ಕೆ ಸಂದಾಯವಾಗುವ ೫೨ ಮುಡಿ ಭೂಮಿಗೆ ಸಂಬಂಧಿಸಿದ ಕಂದಾಯವನ್ನು ಮರದ ಹಲಗೆಯ ಸಂಕ ನಿರ್ಮಿಸಲು ಮೂರು ಗ್ರಾಮಗಳ ಸಮ್ಮುಖದಲ್ಲಿ ದಾರೆಯೆರೆದುಕೊಟ್ಟ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ. ೧೩೩೫ರ ಉಡುಪಿಯ ಬೈಲೂರಿನ ಶಾಸನ ರಾಣಿ ಕಿಕ್ಕಾಯಿತಾಯಿ (ಚಿಕ್ಕಾಯಿತಾಯಿ) ತೆರಿಗೆಯಿಂದ ಬರುವ ಆದಾಯವನ್ನು ಬೈಲೂರು ಗ್ರಾಮದಲ್ಲಿ 'ಗ್ರಾಮದ ಮರ್ಯಾದೆಯಂತೆ' ಪ್ರಚಲಿತದಲ್ಲಿರುವ ನಿಯಮದಂತೆ ನೀಡುವ ನಿರ್ದೇಶನವು ಇಲ್ಲಿ ಕೇಂದ್ರಾಡಳಿತ ನೇರವಾಗಿ ಸ್ಥಳೀಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಅಂತೆಯೇ ಬಾರಕೂರಿನ ನಖರ (ವರ್ತಕರ ಸಂಘ) ಮತ್ತು ಹಂಜಮಾನ (ಮುಸ್ಲಿಂ ವರ್ತಕರು) ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ವ್ಯಾಪಾರಿ ಸಂಘಟನೆಗಳು ಆಡಳಿತದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿತ್ತು ಎಂಬುದನ್ನು ತೋರಿಸಿಕೊಟ್ಟಿದೆ.

ಕ್ರಿ.ಶ. ೧೩೩೬ರ ಶಾಸನ ಬಾರಕೂರಿನ ಮೂಡುಕೇರಿಯ ಸೋಮೇಶ್ವರ ದೇವಸ್ಥಾನದಲ್ಲಿ ದೊರೆತಿದ್ದು, ವಿಜಯನಗರ ಸ್ಥಾಪನೆಯ ನಂತರವೂ ಕರಾವಳಿ ಭಾಗದಲ್ಲಿ ಚಿಕ್ಕಾಯಿತಾಯಿಯ ಆಡಳಿತ ಮುಂದುವರೆದಿರುವುದನ್ನು ಖಾತ್ರಿಪಡಿಸುತ್ತದೆ.

ಕ್ರಿ.ಶ. ೧೩೪೨ರಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನ ಮರಣಾನಂತರ ಕಿಕ್ಕಾಯಿತಾಯಿ ತನ್ನ ಮಗ ಕುಲಶೇಖರನೊಂದಿಗೆ ರಾಜ್ಯಭಾರ ಮಾಡಿದ್ದಳು. ಕ್ರಿ.ಶ. ೧೩೪೮ರ ಶಾಸನದಲ್ಲಿ ಕಿಕ್ಕಾಯಿತಾಯಿ ತನ್ನ ಸಾರ್ವಭೌಮ ಬಿರುದನ್ನು ಶಾಸನದಲ್ಲಿ ಉಲ್ಲೇಖಿಸಿರುವುದು ಇಲ್ಲಿ ಗಮನಾರ್ಹ. ಇನ್ನೊಂದು ಮುಖ್ಯ ವಿಚಾರವೆಂದರೆ–ಮುಮ್ಮಡಿ ಬಲ್ಲಾಳನ ಸಾಮಂತ ವೀರಲೋಕನಾಥ ದೇವರಸ ತನ್ನ ಸಾಮಂತಿಕೆಯನ್ನು ಬಲ್ಲಾಳನ ಮರಣಾನಂತರವೂ ಮುಂದುವರಿಸಿದ್ದು, ಕಿಕ್ಕಾಯಿತಾಯಿ ಬಾರಕೂರಿನಿಂದ ಕ್ರಿ.ಶ. ೧೩೪೮ರವರೆಗೂ ತನ್ನ ಅಧಿಕಾರವನ್ನು ಮುಂದುವರಿಸಿದ ಬಗ್ಗೆ ಉಲ್ಲೇಖಗಳಿವೆ.[೮]

ಕಲ್ಯಾಣ ಚಾಲುಕ್ಯರ ಕಾಲಾವಧಿಯ ಶಾಸನಗಳು

ಕ್ರ.ಸಂ.	ಕಾಲ	ಶಾಸನ ದೊರೆತ ಸ್ಥಳ	ಕಂದಾಯ ಪದಗಳು	ಶಾಸನ
೧.	ಸಾ.ಶ. ೧೦ನೇ ಶತಮಾನ	ಬಿಜೂರು (ಕುಂದಾಪುರ)	ದಂಡ ಗದ್ಯಾಣಂ ೫೦	MAR Report (1953-54) Section –B No. 315
೨.	ಸಾ.ಶ. ೧೦೭೨	ಕಲ್ಲಾಳ (ಉ.ಕ.)	ಬಳೆಗಾರ ಸುಂಕ	K.I., V, Siddapura-09
೩.	ಸಾ.ಶ. ೧೧ನೇ ಶತಮಾನ	ಮೂಡಕೇರಿ (ಬಾರಕೂರು)	ಬ್ರಹ್ಮದಾಯ	SII., VII, Udupi-316
೪.	ಸಾ.ಶ. ಸುಮಾರು	ಕರಿಯಂಗಳ (ಮಂಗಳೂರು) ೧೧–೧೨ನೇ ಶತಮಾನ	ಪಂಡಿಕರ	SII., IX, Part-1 Mangalore-399
೫.	ಸಾ.ಶ. ೧೨ನೇ ಶತಮಾನ	ಬೆಳುವಾಯಿ (ದ.ಕ.)	ಸರ್ವಭಾದಾ ಪರಿಹಾರ	SII., VII, Karkala-237
೬.	ಸಾ.ಶ. ೧೧೪೦	ಕೋಟೆಕೇರಿ (ಬಾರಕೂರು)	ಬಿಡಾರ, ಆರುವಾರ, ಪಾಂಡ್ಯಗದ್ಯಾಣ	SII, VII, Udupi-381
೭.	ಸಾ.ಶ. ೧೧೪೪	ಹಳಿಹಾಳ (ಉ.ಕ.)	ಸರ್ವಭಾದಾ ಪರಿಹಾರ	Dr. Shanthakumari, 'The Kadamba's of Goa and their Inscriptions'-New Delhi, 2015, Haliyala-45
೮.	ಸಾ.ಶ. ೧೧೫೪	ಬಸರೂರು (ಕುಂದಾಪುರ)	ಪಾಂಡ್ಯಗದ್ಯಾಣ, ಮನ್ನೆಯ, ಆರುವಾರ, ಬಿಡಾರ	Ramesh K.V., 'Tulunadina Shasanagalu', Vol-I,
೯.	ಸಾ.ಶ. ೧೧೫೫	ಕೋಟೆಕೇರಿ (ಬಾರಕೂರು)	ತೆರು, ತಪ್ಪು, ಸರ್ವಭಾದಾ ಪರಿಹಾರ	SII., VII, Udupi-376. SII., IX, Part-1,
೧೦.	ಸಾ.ಶ. ೧೧೭೬	ಬಸರೂರು (ಕುಂದಾಪುರ)	ತೆರಿಗೆ ಮತ್ತು ಭೂಮಿ ದಾನ	Kundapura, 394
೧೧.	ಸಾ.ಶ. ೧೧೬೦–೧೨೨೦	ಮೂಡಬಿದಿರೆ	ನಗರದ ಸುಂಕ	SII., VII, Karkala-227
೧೨.	ಸಾ.ಶ. ಸುಮಾರು ೧೧ ರಿಂದ ೧೨ನೇ ಶತಮಾನ	ಮಂಗಳೂರು	ದೇವಾಲಯದ ಪಾದಮೂಲಗಳ ಮೇಲಿನ ಹಿಂಸಾಚಾರದ ದಂಡ	SII., VII, Mangalore-185

ಎರಡು ಸಾರ್ವಭೌಮ ರಾಜವಂಶಗಳ ಕಾರ್ಯಾವಧಿಯಲ್ಲಿ ತಮ್ಮ ಇರುವಿಕೆಯನ್ನು ಕರಾವಳಿ ತೀರದಲ್ಲಿ ಸ್ಪಷ್ಟಪಡಿಸಿದ್ದು, ನಮ್ಮ ಗಮನಕ್ಕೆ ಬರುತ್ತದೆ. ಈ ಅಸ್ತಿತ್ವ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಅವಶ್ಯಕವಾಗಿದ್ದರೂ ನೇರ ಆಡಳಿತವನ್ನು ಈ ಎರಡೂ ರಾಜವಂಶಗಳು ಸ್ಥಾಪಿಸಲು ಮುಂದಾಗಿಲ್ಲ. ಆದರೆ ಈ ಆಡಳಿತವನ್ನು ಸ್ಥಾಪಿಸಲು ಇರುವ ಅಡೆತಡೆಗಳೇನು ಎನ್ನುವಂತಹದ್ದನ್ನು ಗಮನಿಸುವುದು ಅತ್ಯಗತ್ಯ. ಇಲ್ಲಿ ಅರ್ಥೈಸಬೇಕಾದ ಅಂಶವೇನೆಂದರೆ–ಹೊಯ್ಸಳರು ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಅದೀನದಲ್ಲಿದ್ದ ಸಣ್ಣ ಸಾಮಂತ ರಾಜಕೀಯ ಶಕ್ತಿ ತಮ್ಮ ರಾಜ್ಯ ನಿರ್ಮಾಣದ ಬಯಕೆಯನ್ನು ಈಡೇರಿಸಲು ಯುದ್ಧನೀತಿಯನ್ನು ಅನುಸರಿಸಿದರು. ತಮ್ಮ ರಾಜಕೀಯ ಗುರಿ ಸಾಧಿಸುವರೆ ತನಗಿಂತ ಕಿರಿಯ ರಾಜಕೀಯ ಶಕ್ತಿಗಳ ಸಹಾಯವನ್ನು ಸಾರ್ವಭೌಮ ಶಕ್ತಿಗಳು ಬಯಸುತ್ತವೆ. ಹೊಯ್ಸಳರು ತಾವು ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲು ಕ್ರಿ.ಶ. ೧೦ರಿಂದ ೧೨ನೇ ಶತಮಾನದಲ್ಲಿ ಕರ್ನಾಟಕದ ರಾಜಕೀಯದಲ್ಲಾದ ಬದಲಾವಣೆಗಳು ಹಾಗೂ ಪಾರಮ್ಯಕ್ಕೆ ನಡೆದ ಸಂಘರ್ಷದಿಂದ ಹೊಸಶಕ್ತಿಯ ಉದಯವಾಯಿತು. ಆರಂಭಿಕ ಮಧ್ಯಯುಗೀನ ಭಾರತದಲ್ಲಿ ಸಾಮಾನ್ಯವಾಗಿ ರಾಜ್ಯದ ಕೆಲಭಾಗದ ಆಡಳಿತ

ಹೊಯ್ಸಳರ ಕಾಲಾವಧಿಯ ಶಾಸನಗಳು

ಕ್ರಸಂ.	ಕಾಲ	ಶಾಸನ ದೊರೆತ ಸ್ಥಳ	ಕಂದಾಯ ಪದಗಳು	ಶಾಸನ
೧.	ಸಾ.ಶ. ೧೨೧೫	ಮೂಡಬಿದಿರೆ	ನಗರದ ಸುಂಕ	SII., VII-222
೨.	ಸಾ.ಶ. ೧೨೫೪	ಕೋಟೇಶ್ವರ	ಸಮುದಾಯ ಗದ್ಯಾಣ	AR-486 (1928-29)
೩.	ಸಾ.ಶ. ೧೨೬೧	ಕೋಟೇಶ್ವರ	ಸಮುದಾಯ ಗದ್ಯಾಣ	SII., IX, Part-1-395
೪.	ಸಾ.ಶ. ೧೨೬೨	ಕುಂದಾಪುರ	ಸಮುದಾಯ ಗದ್ಯಾಣ	Ibid-396
೫.	ಸಾ.ಶ. ೧೨೮೭	ಕೊಡವೂರು	ಸಮುದಾಯ	AR-577 (1929-30)
೬.	ಸಾ.ಶ. ೧೨೯೨	ನೀಲಾವರ	ಸಮುದಾಯ	Ibid-587(1929-30)
೭.	ಸಾ.ಶ. ೧೨೯೨	ಪಡುಅಲೆವೂರು	ಬೆಡುಂಗುಲ	Ibid-491(1929-30)
೮.	ಸಾ.ಶ. ೧೩೦೨	ಮಂಗಳೂರು	ಭೂಮಿ ಸಿದ್ದಾಯ, ತಪ್ಪು ತೆರುವ ಸಿದ್ದಾಯ.	Ramesh K.V., 'Tulunadina Shasanagalu', Vol-I, Udupi-45, Udupi-1978, P 91
೯.	ಸಾ.ಶ. ೧೩೩೪	ಕಾರ್ಕಳ	ಬಟ್ಟೆಯ ಮೇಲಿನ ಸುಂಕ, ಉಪ್ಪಿನ ಮೇಲಿತ ಸುಂಕ, ಮೆಣಸಿನ ಮೇಲಿನ ಸುಂಕ, ಭತ್ತದ ಮೇಲಿನ ಸುಂಕ, ಶುಂಠಿಯ ಮೇಲಿನ ಸುಂಕ, ಎಳ್ಳಿನ ಮೇಲಿನ ಸುಂಕ	Ramesh K.V., 'Tulunadina Shasanagalu', Vol-I, Udupi-45, Udupi-1978, Pp 94-98

ಪ್ರದೇಶವನ್ನು ನೇರವಾಗಿ ಆಳ್ವಿಕೆ ನಡೆಸುತ್ತಿದ್ದು, ಇನ್ನುಳಿದ ಪ್ರದೇಶಗಳನ್ನು ತಮ್ಮ ಸಾಮಂತರ ಮೂಲಕ ನಡೆಸುವುದು[೯] ಈ ಕಾಲದ ಒಂದು ಸಾಮಾನ್ಯ ಲಕ್ಷಣವಾಗಿದೆ.

ಇಲ್ಲಿ ನಾವು ಗಮನಿಸಬೇಕಾದಂತಹ ಇನ್ನೊಂದು ಅಂಶವೆಂದರೆ ಬಯಲು ಪ್ರದೇಶ ಹಾಗೂ ಮಲೆನಾಡು ಪ್ರದೇಶದಲ್ಲಿ ತಮ್ಮ ಪ್ರಾಬಲ್ಯವನ್ನು ಸಾಧಿಸಿರುವ ಎರಡು ಸಾರ್ವಭೌಮ ಶಕ್ತಿಗಳಿಗೆ ಕರಾವಳಿ ತೀರದ ಭೌಗೋಳಿಕ ಸನ್ನಿವೇಶಗಳು ನೇರವಾಗಿ ಆಡಳಿತ ನಡೆಸಲು ಅಡೆತಡೆಯನ್ನುಂಟುಮಾಡಿರಬಹುದು. ಕರಾವಳಿ ಪ್ರದೇಶವನ್ನು ಪ್ರವೇಶಿಸಲು ಮಲೆನಾಡಿನ ಘಟ್ಟ ಪ್ರದೇಶದ ದುರ್ಗಮ ದಾರಿಗಳನ್ನು ದಾಟಿ, ಸೈನ್ಯವನ್ನು ಕರೆತರುವುದು ತ್ರಾಸದಾಯಕ ಮತ್ತು ಹೆಚ್ಚು ವೆಚ್ಚದಾಯಕವೂ ಹೌದು. ಚೀನಾದ ಯಾತ್ರಿಕನಾದ ಫಾಯಿಯಾನ್ ದಕ್ಷಿಣಭಾರತದ ವ್ಯಾಪಾರಮಾರ್ಗಗಳು ಬಹಳ ಕಷ್ಟಕರವಾಗಿತ್ತೆಂದು ತಿಳಿಸಿದ್ದ. ಕ್ರಿ.ಶ. ೭ನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಹ್ಯೂಯಾನ್ ತ್ಸಾಂಗ್ ದಕ್ಷಿಣಭಾರತದ ದಾರಿಕಳ್ಳರು ಮತ್ತು ದಟ್ಟ ಅರಣ್ಯಗಳು, ಯಾತ್ರಾರ್ಥಿಗಳ ಚಲನವಲನ, ವ್ಯಾಪಾರದ ಬೆಳವಣಿಗೆಗೆ ಅಡ್ಡಿಯಾಗುತ್ತಿತ್ತೆಂದು ಹೇಳಿದ್ದಾನೆ. ಈ ಮೂಲಕ ಭೌಗೋಳಿಕ ಅಡೆತಡೆಗಳ ಕಾರಣಗಳನ್ನು ನಾವು ಸಾರಸಗಟಾಗಿ ಕಡೆಗಣಿಸುವಂತಿಲ್ಲ.

ಆದರೆ ಇಷ್ಟೆಲ್ಲಾ ಎಡರುತೊಡರುಗಳ ನಡುವೆಯೂ ಈ ಎರಡೂ ಸಾರ್ವಭೌಮ ಶಕ್ತಿಗಳು ತಮ್ಮ ಪರೋಕ್ಷ ಇರುವಿಕೆಯನ್ನು ತೋರ್ಪಡಿಸಿರುವುದು ಈ ಮೇಲೆ ಉಲ್ಲೇಖಗಳನ್ನೊಳಗೊಂಡ ಶಾಸನಗಳು ದೃಢಪಡಿಸುತ್ತವೆ. ಕರಾವಳಿ ಪ್ರದೇಶದ ಮೇಲೆ ತಮ್ಮ ಪ್ರತ್ಯಕ್ಷ ಅಥವಾ ಪರೋಕ್ಷ ಹಿಡಿತವನ್ನು ಸಾಧಿಸುವ ಜರೂರು ಈ ಎರಡೂ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಇದ್ದ ರಾಜಕೀಯೇತರ ಕಾರಣವನ್ನು ಗಮನಿಸುವುದಾದರೆ, ರಾಜರುಗಳು ಸಾಗರೋತ್ತರ ವ್ಯವಹಾರಗಳಿಗೆ ವಿಸ್ತಾರವಾದ ಕರಾವಳಿ ಪ್ರದೇಶಗಳನ್ನು ಸುಮಾರು ಕ್ರಿ.ಶ. ೭ರಿಂದ ೧೭ನೇ ಶತಮಾನದ ವರೆಗೆ ವಾಣಿಜ್ಯ ವ್ಯವಹಾರಗಳಿಗೆ ಯಥೇಚ್ಛವಾಗಿ ಬಳಕೆ ಮಾಡಿತ್ತು. ಈ ಕಾಲದಲ್ಲಿ ಭಟ್ಕಳ, ಬಸ್ರೂರು, ಬಾರಕೂರು, ಕಾಸರಗೋಡು, ಮಂಗಳೂರು, ಶಿರೂರು, ಕುಂಬಳೆ ಮತ್ತು ಮಲ್ಪೆ ಮುಖ್ಯ ಬಂದರುಪಟ್ಟಣಗಳಾಗಿದ್ದವು. ಅಂತೆಯೇ ಕರಾವಳಿಯ ಮೂಡಬಿದರೆ ಕರ್ನಾಟಕದ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ವಿದೇಶಿಯರನ್ನು ಆಕರ್ಷಿಸಿತ್ತು.[೧೦] ಇದಕ್ಕೆ ಇಂಬು ನೀಡುವಂತೆ ಐರೋಪ್ಯ ದೇಶಗಳಲ್ಲೂ ಕ್ರಿ.ಶ. ೧೧ನೇ ಶತಮಾನದ ನಂತರ ಗ್ರಾಮೀಣ ಪ್ರದೇಶದ ವ್ಯಾಪಾರಿ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದ ಉದಾಹರಣೆಗಳಿವೆ.[೧೧] ಅಂತೆಯೇ ಭಾರತದಲ್ಲೂ ವಿಶೇಷವಾಗಿ ಹೊಯ್ಸಳರ ನಾಡಿನಲ್ಲಿ ಕ್ರಿ.ಶ. ೧೧ನೇ ಶತಮಾನದ ದ್ವಿತೀಯಾರ್ಧದ ನಂತರ ವಾಣಿಜ್ಯ ತೆರಿಗೆಗಳು ರಾಜ್ಯಾದಾಯದ ಪ್ರಮುಖ ಆಕರಗಳಾಗಿದ್ದವು.[೧೨] ಈ ಎಲ್ಲಾ

ಅಂಶಗಳನ್ನು ಗಮನಿಸಿಕೊಂಡು ಮೇಲೆ ತಿಳಿಸಿರುವ ಕಂದಾಯ ಆಧಾರಿತ ಶಾಸನಗಳ ಪಟ್ಟಿಯಿಂದಲೂ ಇದನ್ನು ಗ್ರಹಿಸಬಹುದಾಗಿದೆ. ಇದರೊಂದಿಗೆ ಗದ್ಯಾಣ ಪದದ ಬಳಕೆಯು ಕೂಡ ಗಮನಾರ್ಹವಾಗಿದೆ. ಅತ್ಯಂತ ಹೆಚ್ಚು ಮೌಲ್ಯಭರಿತವಾದ ಗದ್ಯಾಣ ನಾಣ್ಯಗಳನ್ನು ಕ್ರಿ.ಶ. ೧೨ ಮತ್ತು ೧೩ನೇ ಶತಮಾನಗಳಲ್ಲಿ ಹೆಚ್ಚು ಬಳಕೆಯಾಗುತ್ತಿದ್ದು, ವಾಣಿಜ್ಯ ಚಟುವಟಿಕೆಗಳು ಚುರುಕುಗೊಂಡಿರುವುದನ್ನು ತಿಳಿಸುತ್ತದೆ.

ಈ ಮೇಲಿನ ವಿಚಾರಗಳಿಗೆ ಪೂರಕವೆಂಬಂತೆ ಕರ್ನಾಟಕದ ವರ್ತಕರು ಸಮುದ್ರ ಮಾರ್ಗದ ಮುಖಾಂತರ ಬೆಲೆಬಾಳುವ ವಸ್ತುಗಳ ವ್ಯಾಪಾರ ನಡೆಸುತ್ತಿದ್ದರು. ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ರಸ್ತೆಗಳಿದ್ದು, ಅದರಲ್ಲೂ ಪ್ರಮುಖವಾಗಿ ಬಂಡಿ ದಾರಿ ಮತ್ತು ಹೆದ್ದಾರಿಗಳನ್ನು ರಾಜಧಾನಿಯೊಂದಿಗೆ ಪ್ರಮುಖ ಪಟ್ಟಣಗಳು ಸಂಧಿಸುವಂತೆ ಮಾಡುತ್ತಿತ್ತು. ಇದರೊಂದಿಗೆ ಸಮುದ್ರ ಮುಖೇನ ವ್ಯಾಪಾರಗಳೂ ಬೆಳೆದಿದ್ದವು. ಡಾ. ಹನುಮ ನಾಯಕ ಇವರು ತಮ್ಮ ಸಂಶೋಧನಾ ಪ್ರಬಂಧವಾದ 'Artizanal and Trading Activities in Medieval Karnataka' ಮತ್ತು ಮಧ್ಯಯುಗೀನ ಕಾಲದ 'ಕರ್ನಾಟಕದ ಸಾರಿಗೆ ಸಂಪರ್ಕಗಳು: ಒಂದು ಚಾರಿತ್ರಿಕ ವಿಶ್ಲೇಷಣೆ' ಲೇಖನದಲ್ಲಿ ಕರ್ನಾಟಕದ ಎಲ್ಲ ಪ್ರಮುಖ ಪ್ರಾಂತ್ಯಗಳನ್ನು ಮತ್ತು ವ್ಯಾಪಾರ ಕೇಂದ್ರಗಳು ಒಂದಕ್ಕೊಂದು ಸಾರಿಗೆ ಸಂಪರ್ಕವನ್ನು ಹೊಂದಿದ್ದರ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಅವುಗಳಲ್ಲಿ ಕೆಲವು ರಸ್ತೆಗಳು ಪಶ್ಚಿಮಘಟ್ಟದ ಮೂಲಕ ಹಾದು ತೀರ ಪ್ರದೇಶಗಳನ್ನು ಸಂಪರ್ಕಿಸುತ್ತಿದ್ದವು. ಹೊಯ್ಸಳರ ಕಾಲದ ಕೆಲವು ಹೆದ್ದಾರಿಗಳು ಕರಾವಳಿ, ಒಳನಾಡು, ಪ್ರಸ್ತಭೂಮಿಯ ನಡುವೆ ಸಂಪರ್ಕವನ್ನು ಹೊಂದಿತ್ತು. ದೊಡ್ಡಗದ್ದವಳ್ಳಿಯ ಶಾಸನ ಸುಂಕದ ಅಧಿಕಾರಿಯ ಪುತ್ರನಾದ ಹೆಗ್ಗಡೆ ಸೋಮಯ್ಯನು ಪರ್ವತ ಶ್ರೇಣಿಗಳ ಪ್ರದೇಶದಿಂದ ಬರುವ ಆದಾಯವನ್ನು ದೇವರಾದ ಭೂತನಾಥನಿಗೆ ದಾನವಾಗಿ ನೀಡುತ್ತಿದ್ದ.[೧೩] ಇವೆಲ್ಲವೂ ಕೂಡ ವ್ಯಾಪಾರ ಚಟುವಟಿಕೆಯಿಂದ ಬರುವ ತೆರಿಗೆ ಆದಾಯ ರಾಜ್ಯದ ಪ್ರಮುಖ ಆದಾಯಗಳಲ್ಲೊಂದಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಇದರೊಂದಿಗೆ ತುಳುನಾಡು ಮತ್ತು ಹೊಯ್ಸಳರ ರಾಜ್ಯಗಳ ನಡುವಿನ ಸಂಪರ್ಕವನ್ನು ಕಲ್ಕುಡ–ಕಲ್ಲುರ್ಟಿ ತುಳು ಪಾಡ್ದನಗಳ ಅಧ್ಯಯನಗಳಲ್ಲೂ ಇದನ್ನು ಕಾಣಬಹುದು. ಕಲ್ಲುರ್ಟಿ ತನ್ನ ಸಹೋದರ ತುಳುನಾಡಿನ ಪ್ರಸಿದ್ಧ ಶಿಲ್ಪಿಯಾಗಿದ್ದ ಕಲ್ಕುಡನನ್ನು ಹುಡುಕುವ ವೇಳೆ ಆಕೆ 'ಅಡ್ಕ' (ಅಟ್ಟ) ಎಂಬಲ್ಲಿ ಜಲಮಾರ್ಗವನ್ನು ಹಾದು ಹೋಗಿ ಬೇಲೂರಿಗೆ ತಲುಪಿದಳು. ಬೇಲೂರಿನ ಜನತೆ ಆಕೆಯ ಸಹೋದರ 'ಬೆಳಗೊಳ' (ಶ್ರವಣಬೆಳಗೊಳ)ಕ್ಕೆ ತೆರಳಿದ್ದಾನೆಂದು ತಿಳಿಸಿದಾಗ ಅಲ್ಲಿಗೂ ತೆರಳುತ್ತಾಳೆ. ಅಲ್ಲೂ ಸಿಗದಿದ್ದಾಗ ಮಾಹಿತಿ ತಿಳಿದು, ಯೆರನಾಡು ತಲುಪುತ್ತಾಳೆ. ಅಲ್ಲಿಂದ ಕಲ್ಕುಡ ನಾಡಿನಲ್ಲಿದ್ದಾನೆಂಬ (ನಾಡ್) ವಿಷಯ ತಿಳಿದು, ಕೊಲ್ಲೂರು, ಪೆರ್ಡೂರು, ಕಾರ್ಕಳ ಮತ್ತು ಹೊಯ್ಸಳ ರಾಜ್ಯದ ನಡುವೆ ರಸ್ತೆ ಸಂಪರ್ಕ ಸಾಧಿಸುವ 'ಉಬ್ಬಾರ್' (ಉಪ್ಪಿನಂಗಡಿ) ಮೂಲಕ ಸಾಗಿ, ವೇಣೂರಿಗೆ ತಲುಪುತ್ತಾಳೆ.[೧೪] ಈ ವಿವರಗಳು ತುಳು ರಾಜ್ಯ ಮತ್ತು ಹೊಯ್ಸಳ ರಾಜ್ಯದ ನಡುವಿನ ಸಂಪರ್ಕವಿದ್ದರೂ ತುಸು ತ್ರಾಸದಾಯಕ ಪ್ರಯಾಣವಾಗಿತ್ತೆಂದು ರುಜುವಾತುಪಡಿಸುತ್ತದೆ.

ಮುಮ್ಮಡಿ ಬಲ್ಲಾಳನು ಸೈನಿಕ ಖರ್ಚು–ವೆಚ್ಚಗಳು ಹೆಚ್ಚಾದ್ದರಿಂದ[೧೫] ಅದನ್ನು ಸರಿದೂಗಿಸಲು ತನ್ನ ನೇರ ಆಡಳಿತವನ್ನು ತನ್ನ 'ಪಟ್ಟದ ಪಿರಿಯರಸಿ' ಯಾದ ಚಿಕ್ಕಾಯಿತಾಯಿಯ ಮೂಲಕ ಅಧಿಕಾರವನ್ನು ಹೇರುವುದು ಅನಿವಾರ್ಯವಾಗಿತ್ತು. ಮೂರನೇ ಬಲ್ಲಾಳ ಕಳಸದಿಂದ ಬೇಲೂರಿಗೆ ಹಾದುಹೋಗಿದ್ದ ವ್ಯಾಪಾರಿ ಮಾರ್ಗಗಳ ಮೇಲೆ ನಿಯಂತ್ರಣವನ್ನು ಮರಳಿ ಪಡೆದುಕೊಂಡಿದ್ದನು. ಶಿರಸಿಯನ್ನು ಕೇಂದ್ರವಾಗಿಸಿಕೊಂಡು ಅಲ್ಲಿಂದ ಕದಂಬ ಮತ್ತು ಸಾಂತರರ ರಾಜ್ಯಗಳಿಗೆ ಇರುವ ಪ್ರಮುಖ ವ್ಯಾಪಾರಿ ಮಾರ್ಗಗಳನ್ನು ತನ್ನ ಹಿಡಿದತಲ್ಲಿಟ್ಟುಕೊಂಡಿರುವುದು[೧೬] ಇನ್ನಷ್ಟು ಈ ವಿಚಾರಕ್ಕೆ ಪುಷ್ಟಿಯನ್ನು ನೀಡುತ್ತವೆ.

ಈ ಮೇಲಿನ ಕಂದಾಯ ಉಲ್ಲೇಖಿತ ಶಾಸನಗಳನ್ನು ಪರಾಮರ್ಶಿಸಿದಾಗ ಕರಾವಳಿ ಪ್ರದೇಶದಲ್ಲಿ ವಿದೇಶಿ ವ್ಯಾಪಾರಕ್ಕೆ ಅತಿಮುಖ್ಯ ಭೌಗೋಳಿಕ ಸರಹದ್ದನ್ನು ಮಾಡಿಕೊಟ್ಟಿದ್ದವು. ಆದ್ದರಿಂದ ಈ ಎರಡೂ ಸಾರ್ವಭೌಮ ಶಕ್ತಿಗಳು ಈ ಭೂಭಾಗದ ಮೇಲೆ ತಮ್ಮ ರಾಜಕೀಯ ನಿಯಂತ್ರಣವನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಾಧಿಸಲು ಪ್ರಯತ್ನಿಸಿರುವುದು ಈ ಮೇಲೆ ತಿಳಿಸಿದ ಶಾಸನಗಳಿಂದ ತಿಳಿದುಬರುತ್ತದೆ. ವಿಶೇಷವಾಗಿ ಕಂದಾಯ ಉಲ್ಲೇಖಿತ ಶಾಸನಗಳಲ್ಲಿ ಹೆಚ್ಚಿನ ತೆರಿಗೆಗಳು ೧೧ನೇ ಶತಮಾನದ ದ್ವಿತೀಯಾರ್ಧದಲ್ಲಿ ಕಂಡುಬಂದಿದೆ. ಅದರಲ್ಲೂ ರಾಜ್ಯಾದಾಯದ ಪ್ರಮುಖ ತೆರಿಗೆಗಳೆನಿಸಿಕೊಂಡ ಸಿದ್ಧಾಯ, ಸುಂಕ, ಗದ್ಯಾಣದಂತಹ ಪದಗಳನ್ನು ಹೊಂದಿವೆ. ಇವು ರಾಜ್ಯಾದಾಯದ ಪ್ರಮುಖ ಮೂಲಗಳಾಗಿದ್ದವು ಎಂಬುದಕ್ಕೆ ಸಾಕ್ಷಿಯಾಗಿವೆ.

ಕಲ್ಯಾಣ ಚಾಲುಕ್ಯರು ಮೂಲತಃ ಬಯಲು ನಾಡಿನಲ್ಲಿ ತಮ್ಮ ಕೇಂದ್ರಾಡಳಿತವನ್ನು ನಡೆಸಿಕೊಂಡು ಬಂದಿದ್ದು, ಪಶ್ಚಿಮಘಟ್ಟಗಳ ಮೂಲಕ ಹಾದುಬಂದು, ಕರಾವಳಿ ತೀರದಲ್ಲಿ ಆಡಳಿತ ನಡೆಸುವುದು ಕಷ್ಟಸಾಧ್ಯವಾಗಿರಬಹುದು. ಭೌಗೋಳಿಕ ಅಡೆತಡೆಗಳು ಮತ್ತು ತಂತ್ರಜ್ಞಾನದ ಕೊರತೆಯಿಂದ ಸಹಜವಾಗಿಯೇ ಇಂತಹ ಸನ್ನಿವೇಶಗಳು ಎದುರಾಗಿರಬಹುದು.

ಆದರೆ ಮಲೆನಾಡಿನಲ್ಲಿ ಹುಟ್ಟಿದಂತಹ ಹೊಯ್ಸಳರು ನಂತರದ ದಿನಗಳಲ್ಲಿ ಬಯಲುನಾಡಿಗೆ ತಮ್ಮ ಆಡಳಿತವನ್ನು ವಿಸ್ತರಿಸಿಕೊಂಡಿದ್ದರು. ಹೊಯ್ಸಳರ ಶ್ರೇಷ್ಠದೊರೆಯಾದ ವಿಷ್ಣುವರ್ದನನು ತನ್ನ ಅನೇಕ ಶಾಸನಗಳಲ್ಲಿ ಆಳ್ವಖೇಡ ಅಥವಾ ತುಳುನಾಡಿ(ಕರಾವಳಿ ಪ್ರದೇಶ)ನ ವರೆಗೂ ತನ್ನ ರಾಜ್ಯದ ಪರಿಧಿ ವಿಸ್ತರಿಸಿಕೊಂಡಿತ್ತು ಎಂದು ಹೇಳಿದ್ದಾನೆ. ಇದರ ಹೊರತಾಗಿ ಹೊಯ್ಸಳರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದು, ಮತ್ತು ಆಳ್ವಖೇಡರ ಸಮೀಪದಲ್ಲಿ ಹಲವಾರು ವರ್ಷಗಳ ಆಡಳಿತ ನಡೆಸಿರುವುದರಿಂದ ಈ ಭೂಭಾಗ ಹೆಚ್ಚು ಚಿರಪರಿಚಿತವಾಗಿದೆ. ಇದರೊಂದಿಗೆ ಬೆಳವಣಿಗೆ ಪಡೆಯುತ್ತಿದ್ದ ವಾಣಿಜ್ಯ ವ್ಯವಹಾರಗಳು ಮತ್ತು ಆಗಿಂದಾಗ್ಯೆ ಹೊಯ್ಸಳರ ನಾಡಿನಲ್ಲಿ ನಡೆಯುತ್ತಿದ್ದ ದಾಳಿಗಳು ಹೊಯ್ಸಳರ ಆದಾಯವನ್ನು ಹೆಚ್ಚಿಸಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು. ಈ ಕಾರಣಕ್ಕಾಗಿಯೇ ಕರಾವಳಿ ಪ್ರದೇಶದ ಮೇಲೆ ತಮ್ಮ ನೇರ ಆಡಳಿತವನ್ನು ಸ್ಥಾಪಿಸುವುದು ಅವಶ್ಯಕವಾಗಿದೆ. ಈ ಎಲ್ಲ ಬೆಳವಣಿಗೆಯಿಂದ ಎಲ್ಲಾ ಸಾರ್ವಭೌಮ ರಾಜವಂಶಗಳು ತಮ್ಮ ಆರ್ಥಿಕ ಅಸ್ತಿತ್ವವನ್ನು ಕಂಡುಕೊಳ್ಳಲು ಮತ್ತು ಕಂದಾಯದ ಸಂಗ್ರಹಕ್ಕಾಗಿ ಒಂದಲ್ಲ ಒಂದು ರೀತಿಯ ರಾಜಕೀಯ ನೀತಿಗಳನ್ನು ಅನುಸರಿಸುತ್ತವೆ. ಅದರಂತೆ ಭೌಗೋಳಿಕ ಅಡಚಣೆಗಳನ್ನು ಹೋಗಲಾಡಿಸುವುದು ಸ್ಥಳೀಯ ಸಮಸ್ಯೆಗಳಿಂದ ಪಾರಾಗಲು ಕೆಲವೊಮ್ಮೆ ಪರೋಕ್ಷವಾಗಿ ತಮ್ಮ ಸಾರ್ವಭೌಮತ್ವವನ್ನು ಸಾಧಿಸುತ್ತಿದ್ದವು ಎಂಬುದನ್ನು ಇಲ್ಲಿಯ ಅಧ್ಯಯನಗಳಿಂದ ಅರಿತುಕೊಳ್ಳಬಹುದಾಗಿದೆ.

ಅಡಿಟಿಪ್ಪಣಿಗಳು

೧. Madhuraj, 2017, 'Revenue System Under the Hosysalas: A Topographical and Chronological Analysis' (Unpublished Thesis of Mangalore Unviersity) P. 113.

೨. ರಮೇಶ್ ಕೆ.ವಿ., ೧೯೬೯, 'ತುಳುನಾಡಿನ ಇತಿಹಾಸ', ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಮೈಸೂರು, ಪು.ಸಂ ೫೫.

೩. ಇ.ಅ. ೫, ಬೇಲೂರು ತಾ, ೧೯೯.

೪. ಸಾಲೆತ್ತೂರು ಬಿ.ಎ., 1936, 'Ancient Karnataka', History of Tuluva Vol.I, Pune, P 206.

೫. ನಾದಸ್ವಾಮಿ ಆರ್., ೧೯೯೭, 'ಸ್ಟಡೀಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ ಆಂಡ್ ಕಲ್ಚರ್' ವಿ.ಆರ್. ರಾಮಚಂದ್ರ ಸೆಂಟಿನರಿ ಕಮಿಟಿ, ಚೆನ್ನೈ, ಪು.ಸಂ. ೧೭೫.

೬ ಸಾಲೆತ್ತೂರು ಬಿ.ಎ., ಪೂರ್ವೋಕ್ತ, ಪು.ಸಂ. ೨೦೬–೨೦೭.

೭. ವಸಂತ ಶೆಟ್ಟಿ ಬಿ., ೧೯೯೫, 'ಐತಿಹಾಸಿಕ ಮಹತ್ವದ ಉಡುಪಿ ತಾಲೂಕಿನ ಶಾಸನಗಳು', ಪು.ಸಂ. ೧೫.

೮. ವಸಂತ ಶೆಟ್ಟಿ ಬಿ., ಪೂರ್ವೋಕ್ತ, ಪು.ಸಂ. ೧೮.

೯. Prasad Om Prakash, 1980, 'Decay and Revival of Urban Centers in Medieval India' (CE-600-1200), Patna, P-49.

೧೦. Kuppuswami G.R., 1975, 'Economic Condition in Karnataka' (CE 973-1336) Dharwar, Pp. 115-116.

೧೧. Dubey George, 1974, 'The Early Growth of European Economy' London, P. 179.

೧೨. Madhuraj, Op.cit, P. 108.

೧೩. E.C. VIII; Hasana 35.

೧೪. Saletore B.A., 1936, 'Ancient Karnataka' Vol. I, 'History of Tuluva', Pp. 520-21.

೧೫. Derret JDM, 1957, 'The Hoysalas-A Medieval Indian Royal Family', Madras, Pp. 165-66.

೧೬. Derret JDM, 'OP. Cit' Pp. 144-146.

◆◆

೮೧

ರಾಜಶೇಖರಪ್ಪ ಬಿ.

ಡಾಬ್ಸ್ ಪ್ರಸ್ತಾಪಿಸಿದ ಚಿತ್ರದುರ್ಗದ ವಶಕ್ಕಾಗಿ ನಡೆದ ವಿಫಲ ದಂಗೆ

ಚಿತ್ರದುರ್ಗವು ನಾಯಕ ದೊರೆಗಳ ಕೈತಪ್ಪಿ ಹೋದದ್ದು

ಹುಲ್ಲೂರು ಮತ್ತು ಹಿರೇಗುಂಟನೂರು ಶಿಲಾಶಾಸನಗಳ ರೀತ್ಯಾ, ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ ಕ್ರಿ.ಶ. ಸು. ೧೫೬೮ರಷ್ಟು ಹೊತ್ತಿಗಾಗಲೇ ಪ್ರಾರಂಭವಾಗಿತ್ತು. ಅಲ್ಲಿಂದ ೨೫೧ ವರ್ಷಗಳ ಕಾಲ ಅವರ ಆಳ್ವಿಕೆ ನಡೆದು, ಹೈದರಾಲಿ ಚಿತ್ರದುರ್ಗವನ್ನು ಕೈವಶಮಾಡಿಕೊಳ್ಳುವ ಮೂಲಕ ಕ್ರಿ.ಶ. ೧೭೭೯ರಲ್ಲಿ ಕೊನೆಗೊಂಡಿತು. 'ದೊಡ್ಡಮದಕೇರಿನಾಯಕನ ಕೈಫಿಯತ್ತಿ'ನ ಪ್ರಕಾರ, ಹೈದರಾಲಿಯು ಕೊನೆಯ ದೊರೆ ೭ನೇ ಮದಕೇರಿನಾಯಕನನ್ನು ಸೆರೆಹಿಡಿದು ಶ್ರೀರಂಗಪಟ್ಟಣದಲ್ಲಿ ಗೃಹಬಂಧನದಲ್ಲಿಟ್ಟಾಗ ವಿಷಪ್ರಾಶನವಾಗಿ ಅವನು ಅದರಲ್ಲೇ ಮರಣಿಸಿದ. ಹೈದರ್ ಚಿತ್ರದುರ್ಗವನ್ನು ವಶಪಡಿಸಿಕೊಳ್ಳಲು ಅವನಿಗೆ ಚಿತ್ರದುರ್ಗದಲ್ಲಿ ಯಾರೆಲ್ಲಾ ಶಾಮೀಲಾಗಿದ್ದರೆಂಬುದನ್ನು 'ಚಿತ್ರದುರ್ಗ ಬಖೈರು', 'ಹೈದರ್‌ನಾಮಾ' ಮತ್ತು ಜನಪದ ಸಾಹಿತ್ಯ ನಮಗೆ ತಿಳಿಸುತ್ತವೆ.

೧. 'ಚಿತ್ರದುರ್ಗ ಬಖೈರಿ'ನ ಪ್ರಕಾರ, ಅಷರಫ್ ಖಾನ್, ಖುತ್ಬುದ್ದೀನ್ ಖಾನ್, ಅಹಮದ್ ಖಾನ್, ಖಾಜಿ ಜಮಾಲ್ ಸಾಹೇಬ್, ಸಲಾಬತ್ ಖಾನ್, ಮಹಮ್ಮದ್ ಖಾನ್, ಬಿಜಲೆ ವಗೈರೆ (?) ಖಾನ್, ಸಾಹೇಬ್ ಮೊಹದೀನ್ ಖಾನ್, ಕಲ್ಯಾಣಿ (?) ವಗೈರೆ ದರೋಬಸ್ತು ಮುಸಲ್ಮಾನರು, ಮರಾಠೇ ಜನರು ಅರ್ಧಜನ, ಬೇಡರು ಅರ್ಧಜನ ಹೈದರನ ಪಿತೂರಿಯಲ್ಲಿ ಸೇರಿದ್ದರು.

೨. ಇನ್ನು 'ಹೈದರ್‌ನಾಮಾ' ಪ್ರಕಾರ, "ಪಠಾಣರ ಸರದಾರ ಅಟಲಖಾನ, ಸಲಾಬತ ಖಾನ, ೨೦೦೦ ಪಠಾಣೇರು ಸಹಾ ನವಾಬರಿಗೆ ಪಿತೂರಾಗಿ ಸಫೆಜಂಗಿಗೆ ಹೊರಟಲ್ಲಿ, ಮದಕೆರೆ ನಾಯ್ಕ ಈತನ ತಮ್ಮ ಪರಶುರಾಮಪ್ಪ ನಾಯ್ಕನಿಗೆ ಸಹಾ ಬಂದೂಕಿನ ಗುಂಡುಗಳು ತಗಲಿ ಜಖಂ ಬಾರಿಯಾದ ಸಬುಬೂ ಮೇಲುದುರ್ಗದ ಪಾಲನಾಯ್ಕ, ತಮ್ಮಾಜಿ ವಗೈರೇರೆಲ್ಲಾ ವಗ್ಗಟ್ಟಾಗಿ ದುರ್ಗದ ಠಾಣೆ ನವಾಬರಿಗೆ ಆಗುವ ಮಸಲತ್ತು ನಡೆದಿತ್ತು".

೩. ಮೇಲೆ ಹೆಸರಿಸಿರುವವರಲ್ಲಿ ಯಾರು ಯಾರು ಯಾವ ಯಾವ ಸ್ಥಾನದಲ್ಲಿ ಅಥವಾ ಅಧಿಕಾರದಲ್ಲಿದ್ದರು ಎನ್ನುವುದು ತಿಳಿಯದು. ಆದರೆ, ಇವರೆಲ್ಲರೂ ಹೈದರ್‌ಗೆ ನೆರವಾದರು ಎಂದು ಮಾತ್ರ ಸ್ಪಷ್ಟ. ಇದಲ್ಲದೆ ಕುಂಬೀಪಾಲ ನಾಯಕ, ಬಾರೂದ್‌ಖಾನ್ ಕಾಳೋಜಿರಾವ್ (ಕಾಳಪ್ಪ), ಕಸ್ತೂರಪ್ಪ ಮತ್ತು ಕಳ್ಳಿನರಸಪ್ಪ ಇವರು ಹೈದರಾಲಿಗೆ

ಕನ್ನಡ ಪ್ರಾಧ್ಯಾಪಕರು
ಪ್ರಾಂಶುಪಾಲರು (ನಿ)
೨ನೇ ಕ್ರಾಸ್, (ಪಶ್ಚಿಮ)
ಜೆ.ಸಿ.ಆರ್. ಬಡಾವಣೆ
ಚಿತ್ರದುರ್ಗ-೫೭೭ ೫೦೧
ಮೊ: ೯೪೪೮೦೨ ೨೬೦೭೪

ಕುಮ್ಮಕ್ಕು ಕೊಟ್ಟಿರುವಂತೆ ಚಿತ್ರದುರ್ಗದ ಜನಪದ ಸಾಹಿತ್ಯದಿಂದ ತಿಳಿಯುತ್ತದೆ. ಮುಂದೆ ಕಳ್ಳಿನರಸಪ್ಪನು ಹೈದರಾಲಿಯ ಪ್ರತಿನಿಧಿಯಾದ ಷೇಕ್ ಅಯಾಜ್‌ನಿಗೆ ಸೀಮೆ ಬದುಕಿಗೆ (ಸ್ಥಳೀಯ ವ್ಯವಹಾರಕ್ಕೆ) ಸಹಾಯಕನಾಗಿದ್ದ ಎಂಬುದನ್ನೂ ಅದೇ 'ಹೈದರ್‌ನಾಮಾ'ತಿಳಿಸುತ್ತದೆ.

ಹೀಗೆ ಚಿತ್ರದುರ್ಗದ ಕೊನೆಯ (೬ನೆಯ) ಮೆದಕೇರಿನಾಯಕ ದೊರೆಗೆ ಅವನ ಸೇನೆಯಲ್ಲಿದ್ದ ಅಥವಾ ಸೇವೆಯಲ್ಲಿದ್ದ ಹಲವರು ಮುಸಲ್ಮಾನರು, ಮರಾಠರು ಮತ್ತು ಬೇಡರು ದ್ರೋಹ ಮಾಡಿ, ಹೈದರಾಲಿಯ ಸಹಾಯಕ್ಕೆ ನಿಂತಿದ್ದರಿಂದ ದೊರೆಗೆ ಹಿನ್ನಡೆಯಾಗಿ, ಬಲವಂತದ ಸೋಲನ್ನು ಅನುಭವಿಸಬೇಕಾಯಿತು. ಅವರೆಲ್ಲರ ಕುಮ್ಮಕ್ಕು ಸಿಕ್ಕಿದ್ದೇ ಹೈದರಾಲಿಗೆ ಗೆಲ್ಲಲು ಹಾಗೇ ಮೆದಕೇರಿನಾಯಕ ಸೋಲಲು ಕಾರಣವಾಯಿತು.

ಅಂಥ ಹಿನ್ನೆಲೆಯಲ್ಲಿ ಚಿತ್ರದುರ್ಗವು ನಾಯಕರ ಕೈತಪ್ಪಿ ಹೋದದ್ದು, ಆ ನಾಯಕ ವಂಶಸ್ಥರಿಗೆ, ಅವರ ಬಂಧುಗಳಿಗೆ ಮತ್ತು ಕೆಲವರು ಅಭಿಮಾನಿಗಳಿಗೆ ನುಂಗಲಾರದ ತುತ್ತಾಗಿರಬೇಕು. ಹಾಗಾಗಿ ಮುಂದೊಮ್ಮೆ ದುರ್ಗವನ್ನು ಮರಳಿ ಕೈಗೆ ತೆಗೆದುಕೊಳ್ಳಬೇಕೆಂಬ ಹಂಬಲ ಅವರ ಮನಸ್ಸಿನಲ್ಲಿ ಕಾಡುತ್ತಿದ್ದು, ಅವರೆಲ್ಲ ಒಳಗೊಳಗೇ ಕುದಿಯುತ್ತ ಸನ್ನಾಹಕ್ಕೆ ಯತ್ನಿಸುತ್ತಿದ್ದರೆಂದು ತಿಳಿಯಬಹುದು.

ದೊಡ್ಡಮೆದಕೇರಿನಾಯಕನ ಪ್ರಯತ್ನ

೧೭೭೯ರಲ್ಲಿ ಚಿತ್ರದುರ್ಗ ಪತನವಾಗಿ, ಕೊನೆಯ ದೊರೆ ಮೆದಕೇರಿನಾಯಕನು ದಾಯಾದಿ ಸಂಬಂಧದ ಅಣ್ಣ ದೊಡ್ಡಮೆದಕೇರಿನಾಯಕ, ಸ್ವಂತ ತಮ್ಮ ಪರಶುರಾಮಪ್ಪನಾಯಕ ಮತ್ತು ಮಗ ಬಾಲಕ ಬರಮಪ್ಪನಾಯಕ ಇವರ ಸಹಿತ ಸೆರೆಯಾಗಿ ಶ್ರೀರಂಗಪಟ್ಟಣಕ್ಕೆ ಸಾಗಿಸಲ್ಪಟ್ಟರು ಎಂಬಲ್ಲಿಗೆ ಚಿತ್ರದುರ್ಗ ನಾಯಕರ ಚರಿತ್ರೆ ಅಲ್ಲಿಗೇ ಮುಗಿದುಹೋಯಿತು ಎನ್ನಿಸುತ್ತದೆ. ಆದರೆ, ಮುಂದೆ ಕೆಲವು ಬೆಳವಣಿಗೆಗಳಾದವು. ಸಚಿವನಾಗಿದ್ದ ಪೂರ್ಣಯ್ಯ ತೋಷೀಖಾನ್ ಕೃಷ್ಣರಾವ್ ಇವರ ಸಲಹೆಯಂತೆ ಬ್ರಿಟಿಷರು ಮತ್ತು ಮಿತ್ರಪಡೆಗಳು ಶ್ರೀರಂಗಪಟ್ಟಣ ಮುತ್ತಿದಾಗ, ಅಂದರೆ ೪ನೆಯ ಮೈಸೂರು ಯುದ್ಧ ಘಟಿಸಿದಾಗ ಮುಂದೆ ಚಿತ್ರದುರ್ಗ ಸಂಸ್ಥಾನ ತನಗೆ ಮರಳುವುದೆಂಬ ಆಶೆಯಿಂದ ಅವರಿಗೆ ಸಹಾಯ ಮಾಡಿದ. ಆದರೆ ಅವನಿಗೆ ಚಿತ್ರದುರ್ಗ ಮರಳಿ ಕೈಸೇರಲಿಲ್ಲ. ಆದರೆ ಅವರಿಗೆಲ್ಲ 'ರಾಜ ಪಿಂಚಣಿ' ಅಥವಾ 'ಸುಖವೇತನ' (Royal Pension) ನಿಗದಿಯಾಯಿತು. ಪೂರ್ಣಯ್ಯನೂ ಉಪಾಯದಿಂದ ಚಿತ್ರದುರ್ಗವನ್ನು ನಾಯಕನಿಗೆ ಮರಳಿಸುವುದನ್ನು ಮುಂದೆಹಾಕುತ್ತಾ ಬಂದ. ಆ ತರುವಾಯ ಉತ್ತರ ಕರ್ನಾಟಕ ಭಾಗದಲ್ಲಿ ಕಿತ್ತೂರು ಸಂಸ್ಥಾನವನ್ನು ಬ್ರಿಟಿಷರಿಂದ ಬಿಡಿಸಿಕೊಳ್ಳಲು ಹೋರಾಟ ಜರುಗಿತು. ಹೀಗೆ ಒಂದಲ್ಲ, ಒಂದು ಕಡೆ, ತಮ್ಮ ತಮ್ಮ ಸಂಸ್ಥಾನಗಳನ್ನು ಬ್ರಿಟಿಷರಿಂದ ಬಿಡಿಸಿಕೊಳ್ಳಲು ಸ್ಥಳೀಯ ಜನ ಪ್ರಯತ್ನ ಮಾಡುತ್ತಲೇ ಇದ್ದರು. ಈ ಹಿನ್ನೆಲೆಯಲ್ಲಿ ಬ್ರಿಟಿಷರ ಬಗ್ಗೆ ವಿರೋಧ ಎಲ್ಲೆಡೆ ಬೆಳೆಯುತ್ತ ಬಂದಿತು. ಆ ಘಟ್ಟದಲ್ಲಿ ಆಸೆ ಚಿಗುರಿದ ಚಿತ್ರದುರ್ಗ ಪಾಳೆಯಗಾರ ವಂಶಸ್ಥರು ನಾವೂ ಕೂಡಾ ಏಕೆ ಒಂದು ಪ್ರಯತ್ನ ಮಾಡಬಾರದು ಎನಿಸಿ ಅಂಥ ಒಂದು ಪ್ರಯತ್ನಕ್ಕೆ ಕೈಹಾಕಿರಬೇಕು. ಚಿತ್ರದುರ್ಗ ಪಾಳೆಯಗಾರ ಕುಟುಂಬದ ಮುಖ್ಯಸ್ಥರಲ್ಲಿ ಒಬ್ಬನಾದ ಬರಮನಾಯಕ ಎಂಬುವನು, ಕೆಲವರು ದರೋಡೆಕೋರರನ್ನು ಜೊತೆಗೆ ಸೇರಿಸಿಕೊಂಡು, ಚಿತ್ರಕಲ್ಲುದುರ್ಗವನ್ನು ಮರಳಿ ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದಂತೆ, ಹಾಗಾಗಿ ಅವನು ಆಗ ಚಿತ್ರದುರ್ಗದಲ್ಲಿ ಇದ್ದ ಟಿಪ್ಪುಸುಲ್ತಾನನ ದಂಡಿನೊಂದಿಗೆ ಆಗಾಗ ಚಕಮಕಿ ನಡೆಸಿದಂತೆ ಕಾಣುತ್ತದೆ. ಆದರೆ ಅಂಥ ಯಾವ ಪ್ರಯತ್ನವೂ ಫಲಕಾರಿಯಾಗಲಿಲ್ಲ. ಅಷ್ಟು ಹೊತ್ತಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ವಶದಲ್ಲಿದ್ದ ಮೈಸೂರು ಸಂಸ್ಥಾನವನ್ನು ಬ್ರಿಟಿಷರು ಕಾರಣಾಂತರದಿಂದ ೧೮೩೧ರಲ್ಲಿ ತಮ್ಮ ಕೈಗೆ ತೆಗೆದುಕೊಂಡರು; ಇಡೀ ಸಂಸ್ಥಾನ ಬ್ರಿಟಿಷ್ ಕಮೀಷನರ್ ಆಡಳಿತದ ತೆಕ್ಕೆಗೆ ಬಂದಿತು.

ಕ್ಯಾಪ್ಟನ್ ಡಾಬ್ಸ್ ವಿವರಿಸಿದ ಒಂದು ವಿಫಲ ದಂಗೆ

ಅದಾದ ಮೇಲೆ, ೧೮೩೪ರ ತರುವಾಯ, ಚಿತ್ರದುರ್ಗ ಸಂಸ್ಥಾನವನ್ನು ಬಿಡಿಸಿಕೊಳ್ಳಬೇಕೆಂಬ ಮತ್ತೊಂದು ಪ್ರಯತ್ನ ಚಿತ್ರದುರ್ಗ ಪಾಳೆಯಗಾರರ ವಂಶಸ್ಥರಿಂದ ಜರುಗಿತು. ಆ ಬಂಡಾಯ ಕೂಡಾ ಯಶಸ್ವಿಯಾಗಲಿಲ್ಲ. ಆ ಬಂಡಾಯ ಹೇಗೆ ನಡೆಯಿತು ಮತ್ತು ಹೇಗೆ ವಿಫಲವಾಯಿತು ಎಂಬುದನ್ನು ಚಿತ್ರದುರ್ಗ ಡಿವಿಜನ್ನಿನ ಸೂಪರಿಂಟೆಂಡೆಂಟ್ ಆಗಿ ಬಂದಿದ್ದ ಕ್ಯಾಪ್ಟನ್ ಡಾಬ್ಸ್ ತನ್ನ 'ಮೈಸೂರು, ದಕ್ಷಿಣ ಆಫ್ರಿಕ ಮತ್ತು ಬರ್ಮಾದಲ್ಲಿಯ ಜೀವನದ ನೆನಪುಗಳು' ಎಂಬ ಕೃತಿಯಲ್ಲಿ ದಾಖಲಿಸಿದ್ದಾನೆ. ದಿನಚರಿಯ ರೀತಿಯ ಅವನ ಬರಹದಲ್ಲಿ ಹಂತ ಹಂತವಾಗಿ ಜರುಗಿದ ವಿದ್ಯಮಾನಗಳ ಒಂದು ನಿರೂಪಣೆಯನ್ನು ನೋಡುತ್ತೇವೆ. ಆ ವಿದ್ಯಮಾನಗಳನ್ನೆಲ್ಲ ಅವನ ಈ ಮುಂದಿನ ಮಾತುಗಳಲ್ಲೇ ನೋಡಿ:

ಈಗ ನಾನು ಚಿತ್ರದುರ್ಗ ಪಾಳೆಯಗಾರರು ಕೈಕೊಂಡ ಒಂದು ಬಂಡಾಯದ ಬಗ್ಗೆ ಮತ್ತು ರಕ್ತರಹಿತವಾಗಿ ಅದನ್ನು ದಮನ ಮಾಡಿದ್ದರ ಬಗ್ಗೆ ಒಂದು ಸಣ್ಣ ವಿವರಣೆ ಕೊಡುತ್ತೇನೆ.

ಪಾಳೆಯಗಾರರು ಎಂದರೆ ಬೇಡ ಸಮುದಾಯದ ಮುಂದಾಳುಗಳು; ದೇಶದ ದೊಡ್ಡ ದೊಡ್ಡ ಪ್ರಾಂತಗಳನ್ನು ಆಳುತ್ತಿದ್ದವರು; ಮೈಸೂರು ರಾಜ್ಯದ ಮೇಲಾಳಿಕೆಯನ್ನು ಒಪ್ಪಿಕೊಂಡಿದ್ದವರು; ಹಾಗೆಯೇ ಅವರು ಅದಕ್ಕೂ ಮೇಲಿನ ಪ್ರಭುತ್ವದ ಜೊತೆಗೆ ಮತ್ತು ಪರಸ್ಪರರ ಜೊತೆಗೆ ಪೆಡಸು ಭಾವನೆಯನ್ನು ಇಟ್ಟುಕೊಂಡೇ ಬಂದಿದ್ದವರು.

ಹೈದರ್‌ಅಲಿಯು ಚಿತ್ರದುರ್ಗ ಮತ್ತು ಬದಿಯ ಪ್ರಾಂತಗಳ ನಾಯಕರನ್ನು ಬೇರುಸಹಿತ ಕಿತ್ತುಹಾಕಿ, ಅವರ ಮನೆತನದವರೆಲ್ಲ ನಿರ್ಗತಿಕರಾಗಿ, ಜೀವನಾಧಾರವಿಲ್ಲದೆ ಶೋಚನೀಯ ಅಭದ್ರ ಸ್ಥಿತಿಯಲ್ಲಿದ್ದು, ವಂಶಪಾರಂಪರ್ಯವಾಗಿ ಅವರ ಹಿಂಬಾಲಕರಾಗಿದ್ದವರಿಗೆ ಅವಲಂಬಿಗಳಾಗಿದ್ದವರು. ಮೈಸೂರು ರಾಜ್ಯದ ರಾಜನಿಗೆ (೧೭೯೯ರಲ್ಲಿ) ರಾಜ್ಯ ಪುನಃ ಪ್ರಾಪ್ತಿಯಾದ ಮೇಲೆ ಬ್ರಿಟಿಷ್ ರೆಸಿಡೆಂಟರ ಪ್ರಭಾವದಿಂದ ಆ ಮನೆತನಗಳ ಮುಖ್ಯಸ್ಥರಿಗೆ ಪಿಂಚಣಿಯನ್ನು ನೀಡಲಾಯಿತು. ಅವರೆಲ್ಲ ಸರ್ಕಾರದ ಮುಖ್ಯ ಸ್ಥಳದಲ್ಲೇ ವಾಸವಾಗಿರಬೇಕೆಂದೂ, ಸರ್ಕಾರದವರ ವಿಶೇಷ ಪರವಾನಗಿ ಇಲ್ಲದೆ ತಮ್ಮ ಪೂರ್ವದ ಪಾಳೆಯಪಟ್ಟಿನ ಊರುಗಳಿಗೆ ಭೇಟಿ ಮಾಡಕೂಡದೆಂದೂ ಕಟ್ಟು ವಿಧಿಸಲಾಗಿತ್ತು.

೧೮೩೧ರಲ್ಲಿ ಮೈಸೂರಿನ ಆಡಳಿತವನ್ನು ನಾವು ಕೈಗೆ ತೆಗೆದುಕೊಂಡಾಗ, ಆ ಮುಖಂಡರನ್ನೆಲ್ಲ ಮೈಸೂರಿಂದ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಅವರು ಚೀಫ್ ಕಮೀಷನರ್ ಅವರನ್ನು ತಮ್ಮ ಅತೃಪ್ತಿಯ ಹಾಗೂ ಕೊಂಕು ಮಾತುಗಳಿಂದ ಸತತವಾಗಿ ಬೇಸರಗೊಳಿಸುತ್ತಲೇ ಇದ್ದರು.

೧೮೪೯ರಲ್ಲಿ, ಸಂಖ್ಯೆಯಲ್ಲಿ ೭ ಜನರಿದ್ದ ಈ ಪಾಳೆಯಗಾರರು, ಒಂದು ದಂಗೆಗೆ ಯೋಜನೆ ಹಾಕಿದರು. ಬ್ರಿಟಿಷರ ಅಧಿಕಾರವನ್ನು ಕಿತ್ತೊಗೆಯಲು ಎಲ್ಲಾ ವರ್ಗದವರಿಗೂ ಕರೆ ಕೊಡುವ ರೀತಿಯ ಪ್ರಕಟಣೆಗಳನ್ನು ಸಿದ್ಧಪಡಿಸಿದರು. (ಈ ಪ್ರಕಟಣೆಗಳು ಯಾವ ಬಗೆಯವು ಇತ್ಯಾದಿ ಸ್ಪಷ್ಟ ವಿವರವನ್ನು ಡಾಬ್ಸ್ ನೀಡಿರುವುದಿಲ್ಲ). ಅವರು ವಿಶೇಷವಾಗಿ ಮನವಿ ಮಾಡಿಕೊಂಡದ್ದು ಸೈನಿಕ ವರ್ಗವರಿಗೆ. ಅವರ ವೃತ್ತಿ ಕಳೆದುಹೋದದ್ದನ್ನು, ಆದರೆ, ಈಗ ಹಿಂದಿನ ಆಕರ್ಷಕ ಹೆಸರಿನ ಮತ್ತು ಪಾಳೆಯಗಾರರ ಪ್ರಸಿದ್ಧಿಯ ಅಡಿಯಲ್ಲಿ ಲೂಟಿ ಮಾಡುವ ಪದ್ಧತಿಗೆ ಹಿಂತಿರುಗುವ ಅವಕಾಶ ಪಡೆಯಬಹುದೆಂಬುದನ್ನು ಅವರಿಗೆ ನೆನಪಿಸಲಾಗಿತ್ತು. ಈ ಭಾವೀ ದಂಗೆಕೋರರು, ವೇತನಕ್ಕೆ ಇರಿಸಿಕೊಂಡ ಐವತ್ತರಷ್ಟು ಸಿಬ್ಬಂದಿಯನ್ನು ಕೂಡಿಸಿಕೊಂಡು ಬೆಂಗಳೂರಿಂದ ತಪ್ಪಿಸಿಕೊಂಡರು. ಚಿತ್ರದುರ್ಗದಿಂದ ೨೫ ಮೈಲಿ ದೂರದಲ್ಲಿದ್ದ ದೊಡ್ಡೇರಿ ಪಟ್ಟಣದತ್ತ ಧಾವಿಸಿದರು. ಅಲ್ಲಿ ಅವರು ತಮ್ಮ ಪ್ರಕಟಣೆಗಳನ್ನು ಅತ್ತ ಇತ್ತ ತೂರಿದರು. (ಇಲ್ಲಿ 'ತೂರಿದರು' ಎಂದರೆ ಏನು ಎಂಬುದು ಸ್ಪಷ್ಟವಾಗುವುದಿಲ್ಲ). ರಾತ್ರಿ ಹೊತ್ತು ಹಿಂದಿನಿಂದ ಬಂದಿದ್ದ ಕೆಲವು ಸಾವಿರದಷ್ಟು ಸಂಖ್ಯೆಯ ಅನುಯಾಯಿಗಳನ್ನು ಜಮಾಯಿಸಿದರು. ಆಗ ಅವರ ಚಟುವಟಿಕೆಗಳ ವರದಿಯ ಒಂದು ತುರ್ತುಸಂದೇಶ ನನಗೆ ತಲುಪಿತು. (ಈ ತುರ್ತು ಸಂದೇಶ ಹೇಗೆ ತಲುಪಿತು ಎಂಬುದನ್ನು ಡಾಬ್ಸ್ ಹೇಳಿಲ್ಲ). ಆಮೇಲೆ ನನಗೆ ತಿಳಿದುಬಂದದ್ದೆಂದರೆ, ಹಗಲಿಗೆ ಮುಂಚೆಯೇ, ಅವರ ಸಂಬಳದ ಸಿಪಾಯಿಗಳನ್ನು ಬಿಟ್ಟು ಉಳಿದೆಲ್ಲರೂ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿದರು ಮತ್ತು ಆ ಪಾಳೆಯಗಾರರು ಮಾತ್ರ ಚಿತ್ರದುರ್ಗದತ್ತ ಧಾವಿಸಿದರು–ಎಂದು. ಮೊದಲ ವರದಿ ಕೈ ಸೇರುತ್ತಿದ್ದಂತೆಯೇ ನಾನು ಚೀಫ್ ಕಮೀಷನರ್‌ರಿಗೆ, ಅಷ್ಟಗ್ರಾಮ ಮತ್ತು ನಗರ ಇವುಗಳ ಸೂಪರಿಂಟೆಂಡೆಂಟ್ ಅವರಿಗೆ ಮತ್ತು ಬಳ್ಳಾರಿ ಜಿಲ್ಲೆಯ ಮ್ಯಾಜಿಸ್ಟ್ರೇಟರಿಗೆ, ಅವರು ಏರಿ ಬರುತ್ತಿರುವುದರ ಬಗ್ಗೆ ತುರ್ತುಸಂದೇಶಗಳನ್ನು ಕಳುಹಿಸಿದೆ. (ಈ ತುರ್ತು ಸಂದೇಶಗಳನ್ನು ಹೇಗೆ ಕಳುಹಿಸಿದೆ ಎಂಬ ಬಗ್ಗೆ ಡಾಬ್ಸ್ ಏನನ್ನೂ ಹೇಳಿರುವುದಿಲ್ಲ).

ಅದೇ ರೀತಿ, ನಾನು ಹರಿಹರದಲ್ಲಿದ್ದ ರೆಜಿಮೆಂಟಿನ ಕಮಾಂಡಿಂಗ್ ಆಫೀಸರ್‌ಗೆ – ಚಿತ್ರದುರ್ಗಕ್ಕೆ ಸಿಪಾಯಿಗಳ ಎರಡು ತುಕಡಿ (ಕಂಪನಿ)ಗಳನ್ನು ಕಳಿಸಿಕೊಡಲು ಕೋರಿ ಒಂದು ತುರ್ತುಸಂದೇಶವನ್ನು ಕಳಿಸಿಕೊಟ್ಟೆ. ಈ ಕ್ರಮ ಅವಶ್ಯಕವೆಂದು ನನಗೆ ಅನ್ನಿಸಿದ್ದು ಏಕೆಂದರೆ ದಂಗೆಕೋರರು, ಬಹುಶಃ ಕೋಟೆಯಿಂದ ಆವೃತವಾಗಿರುವ ಸ್ಥಳವನ್ನು ಆಕ್ರಮಿಸಲು ಪ್ರಯತ್ನ ಮಾಡಬಹುದು ಎಂದು. ಅವರಾಗಲೇ ಚಿತ್ರದುರ್ಗದ ಪೊಲೀಸರ ಒತ್ತಡವಿದ್ದರೂ ನಗರ ಡಿವಿಜನ್ನಿನ ಗಡಿಪ್ರದೇಶವನ್ನು ದಾಟಿದ್ದರು. ಭಾನುವಾರ ಬೆಳಗ್ಗೆಯೇ, ನನ್ನ ಮ್ಯಾಜಿಸ್ಟ್ರೇಟ್ ಮುನ್ಷಿಯು ಮುಂಚಿತವಾಗಿ ಬಂದು, ರಾತ್ರಿ ಯಾವುದೇ ಸುದ್ದಿ ಬಂದಿಲ್ಲವೆಂದು ವರದಿ ಮಾಡಿ, ಈಗ ಏನು ಆದೇಶಗಳಿವೆ ಎಂದು ಕೇಳಿದನು. ನಾನಾಗ ಯಾವ ಆದೇಶವೂ ಇಲ್ಲ ಎಂದು ಉತ್ತರಿಸಿದೆ. ಅವನು ಹಿಂತಿರುಗಿ ಹೋದ ಸ್ವಲ್ಪ ಹೊತ್ತಿನಲ್ಲೇ, ನಾನು ದೇವರಿಗೆ ಪ್ರಾರ್ಥನೆ ಸಲ್ಲಿಸಿ ಮಾರ್ಗದರ್ಶನಕ್ಕೆ ಪ್ರಾರ್ಥಿಸುತ್ತಿದ್ದಾಗ, ಆ ದಂಗೆಕೋರರು ಗಡಿಯನ್ನು ದಾಟಿ, (ನಾನಿದ್ದ ತುಮಕೂರಿಂದ ೧೦೦ ಮೈಲಿ

ದೂರದಲ್ಲಿರುವ) ಹೊಳಲ್ಕೆರೆಯಿಂದ ಕೆಲವೇ ಕೆಲವು ಮೈಲಿಗಳ ದೂರದ ಯಾವುದೋ ಬೆಟ್ಟದ ಜಾಗವನ್ನು ಹಿಡಿದುಕೊಳ್ಳಬಹುದೆಂಬ ಯೋಚನೆಯೊಂದು ತತ್‌ಕ್ಷಣವೇ ಮನದಲ್ಲಿ ಮಿಂಚಿತು. ನನ್ನ ನಂಬಿಕೆ ಎಷ್ಟು ಬಲವಾಗಿತ್ತೆಂದರೆ, ನಾನು ತತ್‌ಕ್ಷಣವೇ ಮುನ್ಸಿಗೆ ಬರಲು ಹೇಳಿಕಳಿಸಿದೆ. ಚಿತ್ರದುರ್ಗದ ಕೋಟೆಯೊಳಗೆ ನೆಲೆಗೊಂಡಿದ್ದ, ಅಷ್ಟೊಂದು ವ್ಯವಸ್ಥಿತವಿಲ್ಲದಿದ್ದ ಕುದುರೆದಳದ ಸ್ಥಳೀಯ ಕಮಾಂಡಿಂಗ್ ಆಫೀಸರ್‌ನಿಗೆ ತುರ್ತುಸಂದೇಶವೊಂದನ್ನು ಕಳಿಸಿದೆ. ಸೂಚಿಸಿದ ಬೆಟ್ಟದತ್ತ ಹೋದರೆ, ಅಲ್ಲಿ ಅವನ ಕೈಗೆ ಆ ಪಾಳೆಯಗಾರರು ಸಿಕ್ಕಬಹುದೆಂದೂ ಅವನು ತಡಮಾಡದೆ ಕೂಡಲೇ ಧಾವಿಸಬೇಕೆಂದೂ ಅವನಿಗೆ ನಿರ್ದೇಶಿಸಿದ್ದೆ. ನನ್ನ ತುರ್ತು ಸಂದೇಶ ತಡರಾತ್ರಿ ಆ ಆಫೀಸರನಿಗೆ ತಲುಪಿತು. ಅವನು ಕಾಲಹರಣ ಮಾಡದೆ, ಬೆಳಕು ಹರಿಯುವ ಮುನ್ನವೇ ಹರಿಹರದಿಂದ ಧಾವಿಸಿ ಬಂದಿದ್ದ ಸಿಪಾಯಿಗಳ ಕಂಪನಿಗಳ ಯುವಕ ಆಫೀಸರ್ ಲೆಫ್ಟಿನೆಂಟ್ ಹಾರ್ಕ್‌ನೆಸ್‌ನನ್ನು ಕೂಡಿಕೊಂಡನು.

ಈ ಸಂದರ್ಭದಲ್ಲಿ, ಸ್ಥಳೀಯರು ಒಬ್ಬ ಬ್ರಿಟಿಷ್ ಅಧಿಕಾರಿಯ ಮೇಲೆ ಎಂಥ ನಂಬಿಕೆ ಇರಿಸಿಕೊಂಡಿದ್ದರೆಂಬುದನ್ನು ತೋರಿಸುವ ಸಂದರ್ಭವೊಂದು ಘಟಿಸಿತು. (ಡಾಬ್ಸ್ ಹೀಗೆ ಬರೆದಿರುವನಾದರೂ, ಆ ಸಂದರ್ಭ ಏನೆಂಬುದನ್ನು ವಿವರಿಸಿಲ್ಲ). ಕುದುರೆದಳದ ಕಮಾಂಡಿಂಗ್ ಆಫೀಸರ್ ಆಗಿದ್ದ, ತುಂಬು ಉತ್ಸಾಹದ ಮುಸಲ್ಮಾನನೊಬ್ಬ ಮತ್ತು ಅವನ ತುಕಡಿ ಯುವ ಸ್ವಯಂಸೇವಕನ ಆಜ್ಞೆಗಳಿಗಾಗಿ ಕಾಯುತ್ತಿದ್ದರು.

ಮರುದಿನ ಮಧ್ಯಾಹ್ನ, ಅವರೆಲ್ಲ ೨೫ ಮೈಲಿಗಳ ನಡಿಗೆಯ ಅನಂತರ ಹೊಳಲ್ಕೆರೆಯನ್ನು ತಲುಪಿದರು. ಅಷ್ಟುಹೊತ್ತಿಗೆ ಇಬ್ಬರು ಪತ್ತೇದಾರರು, ದಂಗೆಕೋರರು ಮೇಲೆ ಹೇಳಿದ ಬೆಟ್ಟಗಳ ಜಾಗವೊಂದನ್ನು ಹಿಡಿದಿದ್ದರೆಂಬ ಮಾಹಿತಿಯನ್ನು ತಂದರು. ನಡಿಗೆಯನ್ನು ಮುಂದುವರಿಸುವ ಮೊದಲು, ದಳದವರು ಮತ್ತು ಕುದುರೆಗಳು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಒಂದಷ್ಟು ಉಪಾಹಾರ ತೆಗೆದುಕೊಳ್ಳಬೇಕೆಂದು ಸ್ಥಳೀಯ ಅಧಿಕಾರಿ ಸಲಹೆ ಮಾಡಿದನು. ಅದಕ್ಕೆ ಹಾರ್ಕ್‌ನೆಸ್ "ಬೇಡ" ಎಂದವನೇ "ಒಂದು ಕ್ಷಣವೂ ತಡಮಾಡುವುದು ಬೇಡ. ಶತ್ರುಗಳಿಗೆ ನಾವು ಹತ್ತಿರ ಬರುತ್ತಿರುವುದರ ಸುಳಿವು ಸಿಕ್ಕಿದರೆ, ಅವರು ತಪ್ಪಿಸಿಕೊಳ್ಳುತ್ತಾರೆ" ಎಂದನು. ಅದರಂತೆ ಅವರು ತ್ವರೆಮಾಡಿ ದಂಗೆಕೋರರಿಗೆ ಸಂಪೂರ್ಣ ದಿಗ್ಭ್ರಮೆಯಾಗುವಂತೆ ಮಾಡಿದರು. ಹಾರ್ಕ್‌ನೆಸ್ ಮುನ್ನಡೆಸಿದ ದಳದಲ್ಲಿ ಅರ್ಧದಷ್ಟು ಜನ ಕುದುರೆಯಿಂದಿಳಿದು ಬೆಟ್ಟವನ್ನೇರಿದರು; ಸಣ್ಣ ಪ್ರತಿರೋಧ ಮಾತ್ರ ಮಾಡಿದ ಎಲ್ಲ ಪಾಳೆಯಗಾರರನ್ನೂ ಅವರ ಹಿಂಬಾಲಕರನ್ನೂ ದಸ್ತಗಿರಿ ಮಾಡಿದರು. ಹೀಗೆ ತತ್‌ಕ್ಷಣವೇ ಕೈಕೊಂಡ ಕ್ರಮಗಳಿಂದ, ಪೊಲೀಸರ ಚಟುವಟಿಕೆಯಿಂದ ಮತ್ತು ಯುವಕ ಅಧಿಕಾರಿಯ ಶಕ್ತಿಯಿಂದ, ಒಂದೂ ಗ್ರಾಮದ ಲೂಟಿಯಾಗದೆ, ಒಂದೂ ಹನಿ ರಕ್ತಪಾತವೂ ಆಗದೆ, ದಂಗೆಯ ತೀವ್ರತೆ ಅಡಗಿಸಲ್ಪಟ್ಟಿತು. ಒಂದು ಕ್ಷಣ ನಾನು ಜನರು ಉರಿದೇಳುವುದರ ಯಾವೊಂದು ಸಂಶಯವೂ ಕಿಂಚಿತ್ತೂ ಇಲ್ಲದವನಾಗಿದ್ದೆ. ಆದರೆ, ದರೋಡೆಕೋರರು ದುಷ್ಟ ನಡವಳಿಕೆಯ ವ್ಯಕ್ತಿಗಳು ಪಾಳೆಯಗಾರರ ಹೆಸರಿನಲ್ಲಿ ಲೂಟಿಗೆ ಜಮಾವಣೆಯಾಗಬಹುದೆಂಬ ಬಗ್ಗೆ ಮಾತ್ರ ಭಯಗ್ರಸ್ತನಾಗಿದ್ದೆ. (ಇವನ್ನೆಲ್ಲ ಕಣ್ಣಾರೆ ಕಾಣುತ್ತಿರುವವನಂತೆ ಡಾಬ್ಸ್ ಬರೆದಿದ್ದಾನಾದರೂ ಅವನು ಸ್ಥಳದಲ್ಲೇ ಇರಲಿಲ್ಲ. ಅವನು ಇದ್ದದ್ದು ತುಮಕೂರಿನಲ್ಲಿ. ಈ ವಿವರವೆಲ್ಲ ಆಮೇಲೆ ಅವನಿಗೆ ತಿಳಿದುಬಂದು ಹೀಗೆ ಬರೆದಿರಬೇಕು).

ಈ ಕಥೆಗೆ ಒಂದು ಮುಕ್ತಾಯ, ಧರ್ಮವು ಈ ಪ್ರಸ್ತುತ ಜಗತ್ತಿನ ಎಲ್ಲ ವ್ಯವಹಾರಗಳಿಗೂ ಮೇಲಾದುದು ಎಂದು ಯಾರೆಲ್ಲ ಬೆಲೆ ಕೊಡುತ್ತಾರೋ ಅಂಥವರಿಗೆ ತುಂಬ ಅರ್ಥಪೂರ್ಣ ಎನಿಸಬಹುದು. ಮೇಲೆ ವಿವರಿಸಿದ ಘಟನೆಗಳ ತರುವಾಯದ ಕೆಲಕಾಲದಲ್ಲೇ, ಸರ್ಕಾರದ ಕರ್ತವ್ಯವು ನನ್ನನ್ನು ದಾವಣಗೆರೆಗೆ ಸೆಳೆಯಿತು. ಅದು ಹರಿಹರದಿಂದ ಎಂಟು ಮೈಲಿ ದೂರವಿದ್ದು ಅಲ್ಲಿ ಹೈದರಾಬಾದಿನ ಹಿರಿಯ ಮಿತ್ರರೊಬ್ಬರು (ಸೇನಾ)ದಳಕ್ಕೆ ಮೇಲಧಿಕಾರಿಯಾಗಿದ್ದರು. ಆ ಕರ್ನಲ್ ಜಸ್ಟೀಸ್ ಅವರನ್ನು ನಾನು ಅನೇಕ ವರ್ಷ ನೋಡಿರಲೇ ಇಲ್ಲ... ಅವರನ್ನು ಭೇಟಿ ಮಾಡುವ ಸದವಕಾಶ ನನ್ನನ್ನು ಹರ್ಷಿತನನ್ನಾಗಿ ಮಾಡಿತು..." – ಹೀಗೆಂದು ಅವನು ಬರೆಯುತ್ತಾನೆ.


ಡಾಬ್ಸ್ ವಿವರಣೆಯ ಅನಂತರದ ಭಾಗ; ಪಾಳೆಯಗಾರ ವಂಶಸ್ಥರ ದಾಖಲೆಗಳಿಂದ

ಈ ಮೇಲಿನ ಡಾಬ್ಸ್ ವಿವರಣೆಯಲ್ಲಿ ಅನೇಕ ಕಡೆ ಪ್ರಶ್ನೆಗಳು ಸಂಶಯಗಳು ಹುಟ್ಟುವವಾದರೂ ಅವುಗಳಿಗೆ ಸೂಕ್ತ ಉತ್ತರ ಕಷ್ಟವೆಂದೇ ಹೇಳಬೇಕು. ಅವನ ಹೇಳಿಕೆಯ ಪ್ರಕಾರ ಚಿತ್ರದುರ್ಗವನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದವರು ೭ ಜನ ಪಾಳೆಯಗಾರರು ಎಂದು ಅವನು ಹೇಳಿರುವನಾದರೂ, ಅವರಾರೂ ಪಾಳೆಯಗಾರರಾಗಿರಲಿಲ್ಲ; ಅವರದೆನ್ನುವ ಪಾಳೆಯಪಟ್ಟು ಆಗ ಯಾವುದೂ ಇರಲಿಲ್ಲ. ಹಾಗಾಗಿ, ಪಾಳೆಯಗಾರರ ವಂಶಸ್ಥರು ಎಂದು ಅವನು ಹೇಳಬೇಕಾಗಿತ್ತು. ಅಲ್ಲದೆ ಅವರ ಹೆಸರನ್ನೂ ಅವನು ಹೇಳಿಲ್ಲ. ಅದಲ್ಲದೆ ಅವರ ದಸ್ತಗಿರಿಯ ಅನಂತರದ ವಿದ್ಯಮಾನಗಳೇನು? ಅವರಿಗೆಲ್ಲ



ಏನೇನಾಯಿತು? ಈ ಯಾವ ಸಂಗತಿಗಳ ಕಡೆಗೂ ಡಾಬ್ಸ್ ಗಮನ ಕೊಟ್ಟಿಲ್ಲದಿರುವುದನ್ನು ಅವನ ಬರಹವೇ ಹೇಳುತ್ತದೆ.

ಆದರೆ ಒಂದು ಆಶಾದಾಯಕ ಸಂಗತಿ ಎಂದರೆ, ಚಿತ್ರದುರ್ಗ ಪಾಳೆಯಗಾರರ ವಂಶಸ್ಥರಲ್ಲೊಬ್ಬರಾಗಿದ್ದ, ಹೊಳಲ್ಕೆರೆ ತಾಲ್ಲೂಕು ಅರೆಹಳ್ಳಿಹಟ್ಟಿಯ ದಿ. ಬಿ.ಎಸ್. ಶ್ರೀನಿವಾಸ ನಾಯಕರಲ್ಲಿದ್ದ ಕೋರಿ ಕಾಗದದ ಮತ್ತು ಕನ್ನಡ ಮೋಡೀ ಲಿಪಿಯ ಹಳೆಯ ಪುಸ್ತಕವೊಂದರಲ್ಲಿ ಬರೆದುಕೊಂಡಿರುವ ಕೆಲವು ವಿವರಗಳಿಂದ ಬಹುತೇಕ ಆ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರೆಯುತ್ತವೆ. ಈ ದಾಖಲೆಗಳಾದರೂ ಅಕ್ಷರಜ್ಞಾನ ವಾಕ್ಯರಚನಾ ಜ್ಞಾನ ಚೆನ್ನಾಗಿ ಇದ್ದವರು ಬರೆದ ಬರಹಗಳಲ್ಲ. ಹೆಚ್ಚು ಕಡಿಮೆ ಅವು ದಿನಚರಿ ಬರಹವನ್ನು ಹೋಲುತ್ತವೆ. ಅರೆಹಳ್ಳಿಹಟ್ಟಿಯಲ್ಲಿ ಆಗ ಇದ್ದ (ಚಿತ್ರದುರ್ಗ ಪಾಳೆಯಗಾರರ ವಂಶಸ್ಥರಾದ) ಶ್ರೀನಿವಾಸ ನಾಯಕರ ಪೂರ್ವಿಕರು ಬರೆದಿಟ್ಟುಕೊಂಡಿದ್ದ ಬರಹಗಳು ಅವು. ತಮ್ಮ ವಂಶದವರ ಬಂಡಾಯ ಅಥವಾ ಹೋರಾಟದ ಬಗ್ಗೆ ಕುತೂಹಲ ಮತ್ತು ಅಭಿಮಾನಗಳಿಂದ, ಅವರ ಚಲನವಲನಗಳು ಅವರ ಕಿವಿಗೆ ಬಿದ್ದ ಬಿದ್ದ ಹಾಗೆ



ಹೊಳಲ್ಕೆರೆ–ಅರೆಹಳ್ಳಿ ಹಟ್ಟಿಯಲ್ಲಿರುವ ಚಿತ್ರದುರ್ಗ ಪಾಳೆಯಗಾರರ ವಂಶಸ್ಥರಾದ ಬಿ.ಎಸ್. ಶ್ರೀನಿವಾಸ ನಾಯಕರಲ್ಲಿದ್ದ ಹಳೆಯ ದಾಖಲೆಯ ಭಾಗಗಳು

ದಾಖಲಿಸಿಕೊಂಡಿರುವ ರೀತಿಯ ಬರಹಗಳು ಅವು. ಈ ಬರಹಗಳ ಕಾಗುಣಿತ ಮತ್ತಿತರ ಸಂಗತಿಗಳೇನೇ ಇರಲಿ, ಅವುಗಳಲ್ಲಿಯ ವಿವರ ಮಾತ್ರ ಪ್ರಾಮಾಣಿಕ ಮತ್ತು ಸ್ಪಷ್ಟ ಎನ್ನುವಂತಿದೆ.

ಮಕ್ಕಳು ಹುಟ್ಟಿದ್ದು, ಹೆಣ್ಣುಮಕ್ಕಳು ಮೈನೆರೆತದ್ದು, ಮದುವೆಯಾದದ್ದು, ಕೆಲವರು ತೀರಿದ್ದು, ಕೆಲವರಿಗೆ ಸಾಲ ಕೊಟ್ಟದ್ದು, ಹಬ್ಬ ಮಾಡಿದ್ದು, ಪಾಲು ವಿಭಾಗ ಮಾಡಿಕೊಂಡದ್ದು, ಸಾಲ ಫೈಸಲ್ ಆದದ್ದು, ಅಕ್ಕಿ ಗೋಧಿ ಮುಂತಾದ್ದನ್ನು ಕೊಂಡುತಂದದ್ದು, ಭೋಜನಕ್ಕೆ ಕರೆದದ್ದು, ದೇವತಾಸೇವೆ, ಪೂಜೆ, ಹರಕೆ, ಆಚರಣೆ, ಮನೆತನದ ಖರ್ಚು, ಎತ್ತು ಮುಂತಾದ್ದು ಕೊಂಡದ್ದು, ಇವನ್ನು ಬರೆದುಕೊಂಡಿರುವ ಬರಹ ಆ ಪುಸ್ತಕದಲ್ಲಿವೆ.

ಬಂಡಾಯಗಾರರು ಇದ್ದದ್ದು ೭ ಜನರೆ? ಮತ್ತು ಅವರು ಯಾರು?

ಡಾಬ್ಸ್ ಬರೆದಿರುವಂತೆ ಬಂಡಾಯಕಾರರು ಇದ್ದದ್ದು ೭ ಜನರಲ್ಲ, ೫ ಜನ ಮಾತ್ರ. ಡಾಬ್ಸ್‌ಗೆ ದೊರೆತ ಸುದ್ದಿ(ಮಾಹಿತಿ) ಸಕ್ರಮವಾಗಿರಲಿಲ್ಲವೆಂದು ಕಾಣುತ್ತದೆ. ಹಾಗಾಗಿ ಅವನು ೭ ಜನ ಎಂದು ಬರೆದಿದ್ದಾನೆ. ೭ ಜನ ಎಂದಿರುವಲ್ಲಿ ಆ ೫ ಜನರಿಗೆ ಸಹಾಯಕರಾಗಿ ಅವರ ಬಲಗೈಯಂತಿದ್ದವರಾರೋ ಇಬ್ಬರು ಇದ್ದಿರಬಹುದೇನೋ! ಬೇರೆಯ ಆ ಇಬ್ಬರು ಪಾಳೆಯಗಾರರ ವಂಶಸ್ಥರಾಗಿರಲಿಕ್ಕಿಲ್ಲ. ಹಾಗಾಗಿ ಅರೆಹಳ್ಳಿಹಟ್ಟಿಯ ಆ ಪುಸ್ತಕದ ಬರಹದಲ್ಲಿ ಅವರನ್ನು ಹೆಸರಿಸಿಲ್ಲ. ಆ ದಾಖಲೆ ಪ್ರಕಾರ ಆ ೫ ಜನ ಯಾರೆಂದರೆ, ೧. ಮದಕೇರಿನಾಯಕ (ಇವನನ್ನು ವೀರಮದಕೇರಿನಾಯಕ ಎಂತಲೂ ಹೆಸರಿಸಲಾಗಿದೆ), ೨. ಕಸ್ತೂರಿರಂಗಪ್ಪನಾಯಕ, ೩. ಲಿಂಗಳನಾಯಕ, ೪. ಪರಶುರಾಮಪ್ಪನಾಯಕ ಮತ್ತು ೫. ಬರಮಪ್ಪ ನಾಯಕ – ಇವರು. ಇವರೆಲ್ಲರನ್ನೂ ಆ ದಾಖಲೆಯಲ್ಲಿ (ಅವರೆಲ್ಲ ತಮ್ಮ ವಂಶಸ್ಥರೆಂಬ ಕಾರಣಕ್ಕೆ) ಬಹುವಚನದ ಗೌರವದೊಂದಿಗೆ ಹೆಸರಿಸಲಾಗಿದೆ. ಅರೇಹಳ್ಳಿಹಟ್ಟಿಯಲ್ಲಿ ಆಗ ಇದ್ದ ಚಿತ್ರದುರ್ಗ ಪಾಳೆಯಗಾರ ವಂಶಸ್ಥರು ಯಾರು? ಅವರ ಹೆಸರೇನು? ಅದು ಮಾತ್ರ ಆ ದಾಖಲೆಯಲ್ಲಿ ಉಲ್ಲಿಖಿತವಾಗಿಲ್ಲ. ಮೇಲೆ ಹೇಳಿದ ಪಾಳೆಯಗಾರ ವಂಶಸ್ಥರು ಬೇರೆ ಬೇರೆ ಊರುಗಳಿಗೆ ಪಯಣಿಸಿದ್ದು, ಕೊನೆಯಲ್ಲಿ (ಬ್ರಿಟಿಷ್ ಸೈನಿಕರಿಂದ) ದಸ್ತಗಿರಿಯಾಗಿದ್ದು, ಯಾರು ಯಾರು ಎಷ್ಟೆಷ್ಟು ವರ್ಷ ಸೆರೆವಾಸದಲ್ಲಿದ್ದರು? ಮತ್ತು ಯಾವ ಯಾವ ದಿನ ಬಿಡುಗಡೆ ಹೊಂದಿದರು ಎನ್ನುವುದು– ಈ ಎಲ್ಲ ವಿವರಗಳು ಆ ದಾಖಲೆಯಲ್ಲಿವೆ.

ಆ ದಾಖಲೆಯಲ್ಲಿ ಯಾರು ಯಾರು ಯಾವ ಯಾವ ಊರಿನಿಂದ ಎತ್ತ ಕಡೆಗೆ ಪ್ರಯಾಣ ಬೆಳೆಸಿದರು ಎಂಬ ಸುದ್ದಿಯು ತಮ್ಮ ಕಿವಿಗೆ ತಲುಪಿದ ಹಾಗೆ ಅದನ್ನು (ಸಂವತ್ಸರ ಮಾಸ ಪಕ್ಷ ತಿಥಿ ಸಹಿತ) ದಾಖಲಿಸಿರುತ್ತಾರೆ. (ಅವರ ಓಡಾಟವೆಲ್ಲ ನಡೆದದ್ದು ಏತಕ್ಕಾಗಿ? ಎಂಬ ವಿವರ ಏನೂ ಆ ಬರಹದಲ್ಲಿ ನಮೂದಾಗಿಲ್ಲ. ಅದನ್ನು ಬರೆದವರಿಗೆ ಆ ಬಗ್ಗೆ ಆಗಲೇ ಗೊತ್ತಿತ್ತು ಎನಿಸುತ್ತದೆ). ಆ ದಿನಾಂಕಗಳನ್ನು ಕ್ರೈಸ್ತ ದಿನಾಂಕದ ರೀತ್ಯಾ ಹೀಗೆ ನಮೂದಿಸಬಹುದು:

೧. ೧೮೪೯ರ ಮೇ ತಿಂಗಳು ೪ನೆಯ ತಾರೀಖು ಶುಕ್ರವಾರ, ಬರಮಪ್ಪನಾಯಕರು ಕುಟುಂಬ ಸಹಿತ ಚಳ್ಳಕೆರೆಯನ್ನು ಬಿಟ್ಟು ಹೊರಟರು ಎಂದು ಕೇಳಿದಿವಿ – ಎಂದು ದಾಖಲಿಸಲಾಗಿದೆ. ಅವರು ಚಳ್ಳಕೆರೆ ಬಿಟ್ಟು ಎಲ್ಲಿಗೆ ಬಂದರೆಂಬ ನಿಖರ ವಿವರ ಪ್ರಾಯಶಃ ಸಿಕ್ಕದೆಯೋ ಅಥವಾ ನಿಶ್ಚಿತವಾಗಿ ಗೊತ್ತಿದ್ದುದರಿಂದಲೋ ಏನೋ ಮುಂದೆ ಅವರು ಎಲ್ಲಿಗೆ ಬಂದರು ಎಂಬುದನ್ನು ದಾಖಲಿಸಹೋಗಿಲ್ಲ.

೨. ಹಾಗೇ ಅದೇ ೧೮೪೯ರ ಜೂನ್ ೧೩ರ ಬುಧವಾರ, ವೀರಮದಕೇರಿನಾಯಕರು, ಕಸ್ತೂರಿರಂಗಪ್ಪನಾಯಕರು, ಲಿಂಗಳನಾಯಕರು, ಪರಶುರಾಮಪ್ಪನಾಯಕರು ಇವರುಗಳು ರಾತ್ರಿ ಚಳ್ಳಕೆರೆಯನ್ನು ಬಿಟ್ಟರು ಎಂದು ಕೇಳಿದಿವಿ – ಎಂದು ದಾಖಲಿಸಲಾಗಿದೆ.

೩. ಅದಾದಮೇಲೆ ೧೮೪೯ರ ಅದೇ ಜೂನ್ ೧೯ರ ಮಂಗಳವಾರ ಮೇಲೆ ಹೇಳಿದ ಆ ನಾಲ್ಕು ಜನ ನಾಯಕರು ಹೊಳಲ್ಕೆರೆಯ ಗುಡ್ಡದ ಕಡೆಯಿಂದ ಹೊಳಲ್ಕೆರೆಗೆ ಬಂದು ಆಮೇಲೆ ದುರ್ಗಕ್ಕೆ ಬಂದರು – ಎಂದು ದಾಖಲಿಸಲಾಗಿದೆ.


೪. ಈ ಮೇಲಿನ ಉಲ್ಲೇಖಗಳೆಲ್ಲ ಅವರ ಬಂಡಾಯದ ಸಿದ್ಧತೆಯ ಉದ್ದೇಶದ ಓಡಾಟಗಳಿದ್ದಂತೆ ಕಾಣುತ್ತದೆ. ಆದರೆ, ಆ ಬಂಡಾಯದ ಬಗ್ಗೆ ಮಾತ್ರ ಏನೊಂದು ವಿವರವನ್ನೂ ಆ ಪುಸ್ತಕದಲ್ಲಿ ಬರೆದಿರುವುದಿಲ್ಲ.

ಬಂಡಾಯಗಾರರ ದಸ್ತಗಿರಿ ಹೇಗಾಯಿತು?

ಆ ಬಂಡಾಯಗಾರರು ಅಡಗಿಕೊಂಡ ಹೊಳಲ್ಕೆರೆಯ ಗುಡ್ಡ ಯಾವುದೆಂಬುದನ್ನೂ ಡಾಬ್ಸ್ ತನ್ನ ವಿವರಣೆಯಲ್ಲಿ ಹೇಳಿಲ್ಲ. ಆದರೆ ಆ ಗುಡ್ಡ, ಚಿತ್ರದುರ್ಗದಿಂದ ಹೊಳಲ್ಕೆರೆಗೆ ಬರುವಾಗ, ಆ ಹೊಳಲ್ಕೆರೆ ಇನ್ನೇನು ಸಮೀಪವಿದೆ ಎನ್ನುವಾಗ

ಬರುವ ಘಾಟ್ ಸೆಕ್ಷನ್ನಿಗೆ ಸೇರಿದ 'ಹನುಮಂತದೇವರ ಕಣಿವೆ' ಎಂದು ಮೇಲೆ ಹೇಳಿದ ದಿ. ಬಿ.ಎಸ್. ಶ್ರೀನಿವಾಸ ನಾಯಕರು ಮೌಖಿಕವಾಗಿ ತಿಳಿಸಿದ್ದು ನನ್ನ ನೆನಪಿನಲ್ಲಿದೆ. ಅವರೆಲ್ಲ ಅಲ್ಲಿಗೆ ಬಂದು ಅಡಗಿಕೊಂಡು ಮುಂದಿನ ಹೆಜ್ಜೆಗಳ ಕುರಿತು ಯೋಜನೆ ರೂಪಿಸುತ್ತಿದ್ದರೆಂದು ಕಾಣುತ್ತದೆ. ಅವರು ಅಲ್ಲಿ ಅಡಗಿರುವ ಸುದ್ದಿ ಬ್ರಿಟಿಷ್ ಅಧಿಕಾರಿಗಳಿಗೆ ತಿಳಿದು, ಹರಿಹರದಿಂದ ಎರಡು ಸೇನಾ ತುಕಡಿ(ರೆಜಿಮೆಂಟು), ಪ್ರಸ್ತುತ ದಾಖಲೆ ಹೇಳುವಂತೆ ೨೦೦ಜನ ಕುದುರೆ ಸವಾರರು ಬಂದು, ನಿಖರವಾದ ಕಾರ್ಯಾಚರಣೆ ಮಾಡಿದರು.

ಅವರೆಲ್ಲ ಬೆಳಗ್ಗೆ ಉಣ್ಣುವ ವೇಳೆಯಲ್ಲಿ ಸೈನ್ಯದ ಹಠಾತ್ ಪ್ರವೇಶದಿಂದ ದಸ್ತಗಿರಿಯಾದರು. ಅಂದರೆ ಸೈನ್ಯದ ವಿರುದ್ಧ ಅವರಾರೂ ಏನೂ ಬಲಪ್ರಯೋಗ ಅಥವಾ ಪ್ರತಿರೋಧ ಮಾಡಲಾಗದೆ, ಅಂದರೆ ಬಹುಶಃ ತಮ್ಮ ಹತ್ಯಾರುಗಳನ್ನು ಪ್ರಯೋಗ ಮಾಡಲಾಗದೆ, ದಸ್ತಗಿರಿಯಾದರು. ಅವರ ಈ ದಸ್ತಗಿರಿಗೆ ಕಾರಣನಾದವನು (ಪ್ರಾಯಶಃ ಅವರ ಇರುವಿಕೆಯ ಬಗ್ಗೆ ಮುಖ್ಯ ಸುಳಿವು ಕೊಟ್ಟವನು) ಹೊಳಲ್ಕೆರೆಯ ಪೊಲೀಸ್ ಠಾಣಾ ವ್ಯಾಪ್ತಿಯ ಒಬ್ಬ ಜವಾನ ಅರ್ಥಾತ್ ಪೊಲೀಸ್ ಪೇದೆ ಎಂದು ದಾಖಲೆ ಹೇಳುತ್ತದೆ. ಆ ಪೇದೆಯ ಹೆಸರು 'ರೆಡ್ಡೇರ ಯಂಗ' ಎಂದೂ, ಅವನ ಪೇದೆ ಬಿಲ್ಲೆ ನಂಬರು ೪೬ ಎಂದೂ ಅದು ಹೇಳಿದೆ. ವೀರಮದಕೇರಿನಾಯಕರು, ಕಸ್ತೂರಿರಂಗಪ್ಪನಾಯಕರು, ಲಿಂಗಳನಾಯಕರು, ಪರಶುರಾಮಪ್ಪನಾಯಕರು ಇವರನ್ನು ದಸ್ತಗಿರಿ ಮಾಡಿದವ ನಾನೇ ಎಂದ ಆ ಪೇದೆಗೆ ಸರಕಾರದಿಂದ ಬಳೆ ಹಾಕಿಸಿದರೆಂದೂ ಆ ದಾಖಲೆಯಲ್ಲಿ ಹೇಳಿದೆ. ಅವನಿಗೆ ಸರಕಾರದಿಂದ ಹಾಕಿಸಿದ್ದು ಬೆಳ್ಳಿ ಬಳೆ ಇರಬೇಕು. ಸಾಹಸ ಮಾಡಿದವರಿಗೆ ಕುಸ್ತಿಯಲ್ಲಿ ಗೆದ್ದವರಿಗೆ ಬೆಳ್ಳಿಯ ಬಳೆ ಹಾಕುವುದು ಹಿಂದಿನ ಕಾಲಕ್ಕೆ ಒಂದು ಬಹುಮಾನ ಅಥವಾ ಸನ್ಮಾನ ಎಂಬುದನ್ನು ಇಲ್ಲಿ ನೆನೆಯಬೇಕು. ಈ ಯಾವ ವಿವರವೂ ಡಾಬ್ಸನಲ್ಲಿಲ್ಲ.



ಬಂಡಾಯಕಾರ ಮೆದಕೇರಿನಾಯಕನನ್ನು ಹಿಡಿದುಕೊಡಲು ಬ್ರಿಟಿಷ್ ಕಮೀಷನರ್ ಹೊರಡಿಸಿದ್ದ ಇಸ್ತಿಹಾರ್ ನಾಮೆ – ೧೯ ಜೂನ್ ೧೮೪೯

ಮೇಲೆ ಹೇಳಿದಂತೆ ದಸ್ತಗಿರಿಯಾದವರಲ್ಲಿ ಬರಮಪ್ಪನಾಯಕನ ಹೆಸರು ಬಂದಿಲ್ಲ. ಅದಕ್ಕೆ ಕಾರಣ ಅವನು ಆಗ ಬಹುಶಃ ತಪ್ಪಿಸಿಕೊಂಡಿರಬೇಕು. ಇಲ್ಲವೆ ಅವನು ಆ ಸ್ಥಳಕ್ಕೆ ಬಂದು ಜತೆಯವರೊಂದಿಗೆ ಕೂಡಿಕೊಳ್ಳಲು ಸಾಧ್ಯವಾಗದೆ ಬೇರೊಂದು ಸ್ಥಳದಲ್ಲಿದ್ದಿರಬೇಕು. ಆದರೆ ಅದೇ ಜೂನ್ ೨೯ರಂದು ಶುಕ್ರವಾರ ಅವನನ್ನು ಅವನ ಕುಟುಂಬ ಸಹಿತ ಆಕನೂರು ಎಂಬಲ್ಲಿ ದಸ್ತಗಿರಿ ಮಾಡಲಾಯಿತು ಎಂದೂ ಆಮೇಲೆ ಅವರನ್ನು ಲೋಕಿಕೆರೆಗೆ (ಜುಲೈ ೧೮ರಂದು) ಮತ್ತೆ ಅಲ್ಲಿಂದ ದಾವಣಗೆರೆಗೆ (ಜುಲೈ ೧೯ರಂದು) ಕರೆದೊಯ್ಯಲಾಯಿತು ಎಂದೂ ದಾಖಲೆ ವಿವರ ನೀಡುತ್ತದೆ. ಅಲ್ಲಿಂದ ಮುಂದೆ ಅವರನ್ನು ಬೆಂಗಳೂರಿಗೆ ಸಾಗಿಸಲಾಯಿತು ಎಂದು ಕಾಣುತ್ತದೆ.

ಇನಾಮು ಘೋಷಣೆಯ ಇಸ್ತಿಹಾರ್ ನಾಮೆ

ಇಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಬೇಕು: ಮಹದೇವ ಬಣಕಾರರ 'ಆಂಗ್ಲರ ಆಡಳಿತದಲ್ಲಿ ಕನ್ನಡ' ಎಂಬ ಗ್ರಂಥದಲ್ಲಿ, 'ಮೈಸೂರು ದೊರೆಗಳ ಶೀಮೆಯ ರಾಜ್ಯಭಾರದ ಕಮೀಷನರ್'ರ 'ಸೆಕೆಂಡ್ ಅಸಿಸ್ಟೆಂಟ್' ಕನಿಂಗ್‌ಹ್ಯಾಮ್ ಎಂಬುವರು ರಾಜ್ಯದ ಎಲ್ಲಾ ಜನರಿಗೂ ತಿಳಿಯಪಡಿಸಲೆಂದು ಹೊರಡಿಸಿದ್ದ ಒಂದು 'ಇಸ್ತಿಹಾರ್ ನಾಮೆ' ಇದೆ. ಅದು ಈ

ಸಂದರ್ಭಕ್ಕೆ ಪೂರಕವಾದದ್ದು. ಅದು ಇದೇ ೧೮೪೯ರ ಜೂನ್ ೧೯ರಂದು ಹೊರಡಿಸಿದ ಸರ್ಕಾರಿ ಪ್ರಕಟಣೆಯಾಗಿದೆ. ಇಂಗ್ಲಿಷ್, ಅರಾಬಿಕ್ ಮತ್ತು ಕನ್ನಡ ಲಿಪಿ ಇರುವ, ಕಮೀಷನರ್ ಅವರ ದುಂಡು ಮೊಹರು ಮೇಲುಭಾಗದಲ್ಲಿ ಇರುವ, ಈ ಇಸ್ತಿಹಾರ್ ನಾಮೆ ಅದರ ವಿನ್ಯಾಸ ಭಾಷೆ ಇತ್ಯಾದಿಗಳಿಂದ ಗಮನಸೆಳೆಯುತ್ತದೆ. ಚಳ್ಳಕೆರೆಯಲ್ಲಿದ್ದ ಚಿತ್ರದುರ್ಗ ಪಾಳ್ಳೇಗಾರ ಮೆದಕೇರಿನಾಯಕನು ಕೆಲವು ಹತ್ಯಾರುಗಳನ್ನು ಮತ್ತು ಕೆಲವರು ಜನರನ್ನು ಜಮಾಯಿಸಿಕೊಂಡು ಸ್ಥಳೀಯ ಜನಗಳ ಮೇಲೆ ಹಂಗಾಮು ನಡೆಸಿದ್ದನೆಂದೂ ಅದಕ್ಕಾಗಿ ಅವನನ್ನು ಸರ್ಕಾರಿ ಉದ್ಯೋಗಸ್ಥರ ಕಡೆ ಹಿಡಿದುಕೊಟ್ಟವರಿಗೆ ೧೦೦೦ ಕುಂಪಣಿ ರೂಪಾಯಿ ಇನಾಮು ಘೋಷಿತವಾಗಿರುವುದಾಗಿಯೂ, ಯಾರಾದರೂ ಸರ್ಕಾರಿ ಉದ್ಯೋಗಸ್ಥರು (ಸೇವೆಯಲ್ಲಿರುವವರು) ಅಥವಾ ಇತರ ಜನರು ಅವರಿಗೆ ಕುಮ್ಮಕ್ಕು ಅಥವಾ ಆಶ್ರಯ ನೀಡಿದರೆ, ಇಲ್ಲವೆ ಆಹಾರ ಸಾಮಗ್ರಿ (ರಸ್ತು) ಇತ್ಯಾದಿ ಸರಬರಾಜು ಮಾಡಿದರೆ ಅಥವಾ ಸುದ್ದಿ ತಿಳಿಸುವುದು ಇತ್ಯಾದಿ ಮಾಡಿದರೆ ಅಂಥವರು ಸಹ ಆ ಆರೋಪಿಯ ಅಪರಾಧಗಳಿಗೆ ಶಾಮೀಲಾದವರೆಂದು ಪರಿಗಣಿತವಾಗುತ್ತಾರೆ ಮತ್ತು ಅವರೂ ಶಿಕ್ಷೆಗೂ ಅರ್ಹರಾಗುತ್ತಾರೆ ಎಂದೂ ಅದರಲ್ಲಿ ತಿಳಿಸಲಾಗಿದೆ. ಆ ಇಸ್ತಿಹಾರ್ ನಾಮೆಯಿಂದ ಆ ಮೆದಕೇರಿನಾಯಕನಷ್ಟೇ ಅಲ್ಲ, ಅವನ ಸಂಗಡಿಗರು ಸಹ ಸಾಕಷ್ಟು ಮಾರಕ ಶಸ್ತ್ರಾಸ್ತ್ರಗಳನ್ನೂ ಮತ್ತು ಜನರನ್ನೂ ಕೂಡಿಸಿಕೊಂಡಿದ್ದರು ಎಂದು ತಿಳಿಯಬಹುದು.

ಮೇಲೆ ಹೇಳಿದ ಇಸ್ತಿಹಾರ್ ನಾಮೆಯು ಮೆದಕೇರಿನಾಯಕನೊಬ್ಬನನ್ನು ಕುರಿತಿದೆ ಎನ್ನುವುದು ಸ್ಪಷ್ಟ. ಈ ಪ್ರಕಟಣೆಯ ಬಗ್ಗೆ ಡಾಬ್ಸ್ ತನ್ನ ನೆನಪುಗಳ ಮಾಲಿಕೆಯಲ್ಲಿ ಏನನ್ನೂ ಬರೆದಿಲ್ಲದಿರುವುದು ಆಶ್ಚರ್ಯಕರವಾಗಿದೆ. ಇದು ಅವನ ಗಮನಕ್ಕೆ ಬಂದಿರದಿರಲು ಸಾಧ್ಯವೇ ಇಲ್ಲ. ಆದರೆ, ಅದಕ್ಕೆ ಕಾರಣ ಏನೆಂದು ತಿಳಿಯದು. ಕಮೀಷನರ್ ಆಡಳಿತ ಮೆದಕೇರಿನಾಯಕನ ತಲೆಗೆ ೧೦೦೦ ರೂಪಾಯಿಗಳ (ಆಗಿನ ಕಾಲಕ್ಕೆ ಬಹುದೊಡ್ಡ ಮೊತ್ತವೇ ಸರಿ) ಇನಾಮು ಘೋಷಣೆ ಮಾಡಿರಬೇಕಾದರೆ, ಅವನು ಅವರ ಆಡಳಿತಕ್ಕೆ ಎಂಥ ತಲೆನೋವಾಗಿದ್ದ ಎಂಬುದು ವ್ಯಕ್ತವಾಗುತ್ತದೆ. ಅವನ ತಲೆಗೆ ಇನಾಮು ಘೋಷಣೆಯಾದಂತೆ, ಉಳಿದವರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಘೋಷಣೆಯಾಗಿರುವ ಸಾಧ್ಯತೆ ಇದೆ. ಆದರೆ ಆ ಬಗ್ಗೆ ಸದ್ಯಕ್ಕೆ ಏನು ಮಾಹಿತಿಯೂ ದೊರೆತಿಲ್ಲ.

ಅವರೆಲ್ಲ ಬ್ರಿಟಿಷ್ ತುಕಡಿಯಿಂದ ದಸ್ತಗಿರಿಯಾದದ್ದು ಯಾವ ದಿನದಂದು ಎಂಬುದನ್ನೂ ಡಾಬ್ಸ್ ಹೇಳಿಲ್ಲ. ಆದರೆ, ಹಿಂದೆ ಹೇಳಿದ ದಾಖಲೆಯಲ್ಲಿ ಅವರು ದಸ್ತಗಿರಿಯಾದದ್ದು ಸೌಮ್ಯ ಸಂವತ್ಸರದ ಜ್ಯೇಷ್ಠ ಬಹುಳ ೭ ಮಂಗಳವಾರ ಎಂದು ಸ್ಪಷ್ಟವಾಗಿ ದಾಖಲಾಗಿದೆ. ಅದು ಕ್ರಿ.ಶ. ೧೮೪೯ರ ಜೂನ್ ೧೯ನೆಯ ತಾರೀಖು ಮಂಗಳವಾರ. ಅಂದರೆ ಮೇಲೆ ಹೇಳಿದ ಇಸ್ತಿಹಾರ್ ನಾಮೆಯೂ ಅದೇ ದಿನಾಂಕದ್ದೇ. ಅಂದರೆ ಆ ಇಸ್ತಿಹಾರ್ ನಾಮೆಯು ಹೊರಡಿಸಲ್ಪಟ್ಟಿರುವುದು ಅವರು ಹೊಳಲ್ಕೆರೆ ಗುಡ್ಡದಲ್ಲಿ ದಸ್ತಗಿರಿಯಾದ ದಿನವೇ. ಈ ನಾಮೆ ಹೊರಡುವ ಹೊತ್ತಿಗಾಗಲೇ ಮೆದಕೇರಿನಾಯಕ ಮತ್ತು ಅವನ ಎಲ್ಲ ಸಂಗಡಿಗರೂ ದಸ್ತಗಿರಿಯಾಗಿಬಿಟ್ಟಿದ್ದರು. ಈ ನಾಮೆ ಅದೇ ದಿನಾಂಕವನ್ನು ಹೊಂದಿರುವ ಸಂಗತಿ ಆಶ್ಚರ್ಯಕರವಾಗಿದೆ. ಹಾಗಾಗಿರುವುದಕ್ಕೆ ಕಾರಣ, ಈ ಇಸ್ತಿಹಾರ್ ನಾಮೆ ಹೊರಡಿಸಲು ಆ ಹೊತ್ತಿಗಾಗಲೇ ಕಮೀಷನರ್ ತೀರ್ಮಾನ ತೆಗೆದುಕೊಂಡು, ಅದರ ಕರಡು ಆಗಲೇ ಸಿದ್ಧವಾಗಿತ್ತೆಂದು ಕಾಣುತ್ತದೆ. ಅದು ಕಮೀಷನರ್ ಅವರ ಒಪ್ಪಿಗೆಯ ಮೇರೆಗೆ ಕನಿಂಗ್‌ಹ್ಯಾಮ್ ಅವರ ಸಹಿಯಾಗಿ ಹೊರಬರುವ ಹೊತ್ತಿಗೆ ಆಗಲೇ ಮೆದಕೇರಿ ನಾಯಕ ಮತ್ತು ಅವನ ಜೊತೆಗಾರರ ದಸ್ತಗಿರಿ ಆಗಿಯೇ ಹೋಗಿತ್ತು. ಹೊಳಲ್ಕೆರೆಯ ಬಳಿ ನಡೆದ ಘಟನೆಗಳ ತಾಜಾ ವಿವರ ದೂರದ ಬೆಂಗಳೂರಿಗೆ ತಲುಪಲು ಈಗಿನಷ್ಟು ಶೀಘ್ರ ಸಂದೇಶ ರವಾನೆಯ ಅನುಕೂಲಗಳು ಆಗ ಇರದಿದ್ದುದು ಕೂಡ ಅದಕ್ಕೆ ಒಂದು ಕಾರಣವಾಗಿರಬೇಕು.

ಆ ಇಸ್ತಿಹಾರ್ ನಾಮೆಯಲ್ಲಿ ಆಂಗ್ಲರು ಕನ್ನಡ ಬಳಸಿರುವುದು ಮಾತ್ರ ತುಂಬ ಗಮನ ಸೆಳೆಯುವಂತಿದೆ.

ಬಂಡಾಯಗಾರರಿಗೆ ಆದ ಸಜಾ ಮತ್ತು ಬಿಡುಗಡೆ

ಹಿಂದೆ ಹೇಳಿದ ದಾಖಲೆಯ ಪ್ರಕಾರ, ಅವರನ್ನು ದಸ್ತಗಿರಿ ಮಾಡಿದ ಮೇಲೆ, ಅದೇ ದಿನ ಮೊದಲಿಗೆ ಹೊಳಲ್ಕೆರೆಗೆ ಕರೆದೊಯ್ದು, ಮರುದಿನ (ಜೂನ್ ೨೦ರಂದು ಬುಧವಾರ) ಚಿತ್ರದುರ್ಗಕ್ಕೆ ತಂದು ದಾಖಲು ಮಾಡಿ, ಆ ತರುವಾಯ ದಿನಾಂಕ ೨೬ರಂದು ಮಂಗಳವಾರ, ಎಲ್ಲರ ಕಾಲಿಗೂ ಬೇಡಿ ಹಾಕಲಾಯಿತು. ಅದೇ ಜೂನ್ ೨೯ರಂದು, ಈ ಹಿಂದೆ ಹೇಳಿದಂತೆ ಸ್ವಲ್ಪ ತಡವಾಗಿ ದಸ್ತಗಿರಿಯಾದ ಬರಮಪ್ಪನಾಯಕ ಮತ್ತು ಅವರ ಕುಟುಂಬದ ಎಲ್ಲರಿಗೂ ಅದೇ ಜುಲೈ ೧ರಂದು ಭಾನುವಾರ ಕಾಲುಕೈದು (ಕಾಲಿಗೆ ಸರಪಳಿ ಬೇಡಿ) ಮಾಡಲಾಯಿತು. ಹಾಗೇ ಮುಂದೆ ಜುಲೈ ೨ರಂದು ಸೋಮವಾರ, ಎಲ್ಲರನ್ನೂ ಕೂಡಿಸಿ ಬೆಂಗಳೂರಿಗೆ ಕರೆದೊಯ್ಯಲಾಯಿತು. ಮುಂದೆ ಅವರಿಗೆ ಯಾವ ರೀತಿ ವಿಚಾರಣೆ

ಆಯಿತೋ ತಿಳಿಯದು. ಆದರೆ, ಯಾರಿಗೆ ಎಷ್ಟೆಷ್ಟು ಕಾಲ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು ಎಂಬುದು ಮಾತ್ರ ಪರೋಕ್ಷವಾಗಿ, ಆ ದಾಖಲೆಯಲ್ಲಿ ಅವರು ಬಿಡುಗಡೆಯಾದ ದಿನಾಂಕಗಳನ್ನು ಹೇಳಿರುವುದನ್ನು ಗಮನಿಸಿದರೆ ತಿಳಿಯುತ್ತದೆ:

ಕಸ್ತೂರಿರಂಗಪ್ಪನಾಯಕನನ್ನು ೯ ವರ್ಷ ಕೈದಿನಲ್ಲಿ ಪೂರೈಸಿದ ಮೇಲೆ ಕಾಳಾಯುಕ್ತಿ ಸಂವತ್ಸರದ ಆಷಾಢದಲ್ಲಿ (೧೮೫೮ರ ಜುಲೈ-ಆಗಸ್ಟ್ ಅವಧಿಯಲ್ಲಿ) ಬಿಡುಗಡೆ ಮಾಡಲಾಯಿತು. ಹಾಗೇ ಬರಮಪ್ಪನಾಯಕನನ್ನು ಕೈದಿನಲ್ಲಿ ೧೦ ವರ್ಷ ಪೂರೈಸಿದ ಮೇಲೆ ಸಾಧಾರಣ ಸಂವತ್ಸರದ ಆಷಾಢದಲ್ಲಿ (೧೮೫೯ರ ಜುಲೈ-ಆಗಸ್ಟ್ ಅವಧಿಯಲ್ಲಿ) ಮತ್ತು ಅದೇ ರೀತಿ ಮೆದಕೇರಿನಾಯಕನನ್ನು ಕೈದಿನಲ್ಲಿ ೧೧ ವರ್ಷ ಪೂರೈಸಿದ ಮೇಲೆ ರೌದ್ರಿ ಸಂವತ್ಸರದ ಆಷಾಢದಲ್ಲಿ (೧೮೬೦ರ ಜೂನ್-ಜುಲೈ ಅವಧಿಯಲ್ಲಿ) ಬಿಡುಗಡೆ ಮಾಡಲಾಯಿತು. ಪರಶುರಾಮಪ್ಪನಾಯಕ ಮತ್ತು ಲಿಂಗಳನಾಯಕ ಇವರು ಎಷ್ಟು ಕಾಲ ಕೈದಿನಲ್ಲಿದ್ದರು? ಎಂದು ಬಿಡುಗಡೆಯಾದರು? ಎಂಬುದರ ಬಗ್ಗೆ ದಾಖಲೆಯಲ್ಲಿ ಯಾವ ಉಲ್ಲೇಖವೂ ಇಲ್ಲ. ಅವರ ಜೈಲುವಾಸದ ಅವಧಿ ಬಹುಶಃ ಮೇಲೆ ಹೇಳಿದವರಷ್ಟು ದೀರ್ಘ ಇದ್ದಿರಲಾರದೆನಿಸುತ್ತದೆ. ಈ ಎಲ್ಲ ಖೈದಿಗಳನ್ನೂ ಬಿಡುಗಡೆ ಮಾಡಿದ್ದು ಆಷಾಢ ಮಾಸದಲ್ಲಿ ಎಂಬುದು ಆಶ್ಚರ್ಯ ತರುತ್ತದೆ. ಅದಕ್ಕೆ ನಿರ್ದಿಷ್ಟ ಕಾರಣ ತಿಳಿಯದು.

ಮೇಲೆ ಹೇಳಿದ ಘಟನೆಯ ತರುವಾಯದಲ್ಲಿ ಚಿತ್ರದುರ್ಗ ಪಾಳೆಯಗಾರ ವಂಶಸ್ಥರಿಂದ ಅಥವಾ ಇತರರಿಂದ ಚಿತ್ರದುರ್ಗವನ್ನು ಮರಳಿ ಬಿಡುಗಡೆ ಮಾಡುವ ಅಥವಾ ಕೈವಶ ಮಾಡಿಕೊಳ್ಳುವ ಯಾವುದೇ ಪ್ರಯತ್ನವೂ ಘಟಿಸಲಿಲ್ಲ.

[ಇಲ್ಲಿ ಒಂದು ಮಾತನ್ನು ಹೇಳಬೇಕೆನಿಸುತ್ತದೆ: ಡಾಬ್ಸ್ ಕೊಟ್ಟಿರುವ ವಿವರವನ್ನು ಆಧರಿಸಿ, ಖ್ಯಾತ ಕಾದಂಬರಿಕಾರ ಡಾ. ಬಿ.ಎಲ್. ವೇಣು ಅವರು "ದುರ್ಗದ ಬೇಡರ್ದಂಗೆ" ಎಂಬ ಕಾದಂಬರಿಯನ್ನು ಬರೆದಿದ್ದಾರೆ. (ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೨೧). ಡಾಬ್ಸ್ ಬರೆದಿರುವ ಹಾಗೆ ಅವರು ಪಾಳೆಯಗಾರರೂ ಅಲ್ಲ; ವೇಣು ಅವರು ಬರೆದಿರುವ ಹಾಗೆ ಕೇವಲ ಬೇಡರೂ ಅಲ್ಲ; ಅವರು ಪಾಳೆಯಗಾರ ವಂಶಸ್ಥರು ಮಾತ್ರ. ೧೮೫೭ಕ್ಕಿಂತ ೮ ವರ್ಷ ಮುಂಚೆ ಅಂದರೆ ೧೮೪೯ರಲ್ಲಿ ದುರ್ಗದ ಏಳು ಜನ ಹುಡುಗರು ನಡೆಸಿದ ಸಂಗ್ರಾಮವೇ ಭಾರತದಲ್ಲಿ ನಡೆದ ಪ್ರಪ್ರಥಮ ಸ್ವಾತಂತ್ರ ಹೋರಾಟ ಎಂದು ಆ ಕಾದಂಬರಿಯ ಬೆನ್ನುಡಿಯಲ್ಲಿ ಹೇಳಲಾಗಿದೆ. ಆ ಬೆನ್ನುಡಿಯ ರಚಕರು ಯಾರೆಂದು ಹೆಸರನ್ನು ಹಾಕಿಲ್ಲ. ಹಾಗೆ ಹೇಳುವುದು ಚರಿತ್ರೆ ಗೊತ್ತಿದ್ದವರು ಹೇಳುವ ಮಾತೇ ಎಂದು ಸಂದೇಹವಾಗುತ್ತದೆ. ಕಿತ್ತೂರು ಚೆನ್ನಮ್ಮನ ಬಗ್ಗೆ ಇವರು ಏನು ಹೇಳುತ್ತಾರೆ? ಈ ಕಾದಂಬರಿಯ ಬಿಡುಗಡೆಯ ಕಾಲಕ್ಕೆ (ದಿ. ೨೪-೧೧-೨೦೨೨ರಂದು) ಶ್ರೀ ವೇಣು ಅವರೇ "ಇದು ಇತಿಹಾಸವಲ್ಲ. ಅದರ ಸುತ್ತ ಹೆಣೆದಿರುವ ಕಲ್ಪನೆ" ಎಂದದ್ದು ದಿ. ೨೫ರ 'ಪ್ರಜಾವಾಣಿ'ಯಲ್ಲಿ ಒಂದು ಬಾಕ್ಸ್‌ನಲ್ಲಿ ವರದಿಯಾಗಿದೆ. ಅವರು ಹಾಗೆ ಹೇಳಿರುವುದು ಸರಿ. ಆದರೆ, ಹಾಗೆ ಹೇಳಿದವರು ತಮ್ಮ ಪುಸ್ತಕದೊಳಗೆ ಅದನ್ನು 'ಐತಿಹಾಸಿಕ ಕಾದಂಬರಿ' ಎಂದು ಹೇಳಿದ್ದಾರೆ! ಅದರಿಂದಾಗಿ ವಿಷಯ ಗೊತ್ತಿಲ್ಲದ ಬಹುಸಂಖ್ಯೆಯ ಓದುಗರಿಗೆ ಕಾದಂಬರಿಕಾರರ ಕಲ್ಪನೆಯೇ ಇತಿಹಾಸ ಎನಿಸುವಂತಾಗುತ್ತದೆ!]

ಆಕರಗ್ರಂಥಗಳು

೧. ಹುಲ್ಲೂರು ಶ್ರೀನಿವಾಸ ಜೋಯಿಸ್ (ಸಂ.), ೧೯೬೮, ಚಿತ್ರದುರ್ಗ ಬಖೈರು, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ಪು. ೧೦೬-೧೦೮.

೨. ತಿ.ತಾ. ಶರ್ಮ (ಸಂ.), ೧೯೯೯, ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ೨ನೇ ಮುದ್ರಣ, ಪು. ೬೯-೭೧.

೩. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ., ೧೯೭೬, ಹು.ಶ್ರೀ. ಜೋ ಐ ಲೇ. (ಸಂ.), ಚಿತ್ರದುರ್ಗ, ಪು. ೧೪೪.

೪. Dobbs R.S., 1882, Remimiscences of Life in Mysore, South Africa and Burmah, George Herbent, Dublin, P. 37-41.

೫. ಮಹದೇವ ಬಣಕಾರ, ೧೯೮೬, ಆಂಗ್ಲರ ಆಡಳಿತದಲ್ಲಿ ಕನ್ನಡ (ಸಂ.), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪು. ೨೪೬, ದಾಖಲೆ ನಂ. ೫೩.

೬ Swamy Kannu Pillai L.D., An Indian Ephemeris, A.D. 1800 to AD 2000.

೭. Francis Buchanan, A Journey from Madras through Mysore, Canara and Malabar, Vol II, 1809, London.

೮. ಕರಾಕೃ (ಸಂ.), ೧೯೭೫, ಚಿತ್ರಕಲ್ಲು ಮದಕರಿ, ಜನಪದ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. ರಾಜಶೇಖರಪ್ಪ ಬಿ. (ಸಂ.), ೨೦೦೭, ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು (ಚಿತ್ರದುರ್ಗ ಪಾಳೆಯಗಾರರ ವಂಶಾವಳಿ ಮತ್ತು ದೊಡ್ಡಮದಕೇರಿನಾಯಕನ ಕೈಫಿಯತ್ತು), ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

◆◆

ಅಮರೇಶ ಯತಗಲ್

ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನ : ಅಮರೇಶ್ವರ ದೈವ

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿ ಬರುವ ಎರಡು ಪ್ರಮುಖ ಸಂಸ್ಥಾನಗಳೆಂದರೆ ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನಗಳಾಗಿವೆ. ಗುಡಗುಂಟಿ ಸಂಸ್ಥಾನವು ಲಿಂಗಸೂಗೂರು ತಾಲ್ಲೂಕಿನಿಂದ ೧೯ ಕಿ.ಮೀ. ದೂರದಲ್ಲಿದೆ. ಸುರಪುರ ಹಾಗೂ ಗುಡಗುಂಟಿ ಅರಸರು ಒಂದೇ ಮೂಲಕ್ಕೆ ಸೇರಿದವರು. ಇವರು ಗೋಸಲ ವಂಶದವರು. ಪ್ರಾಚೀನ ಕೈಫಿಯತ್ತುಗಳ ಪ್ರಕಾರ ಇವರ ಪೂರ್ವಜರು ದಕ್ಷಿಣದಿಂದ ಬಂದವರೆಂದೂ ಇವರ ಮೂಲಪುರುಷ ನರಸಿಂಹನಾಯಕನೆಂದೂ ತಿಳಿಯುತ್ತದೆ. ನಂತರ ಈ ಮನೆತನದ ಜಕ್ಕಪ್ಪ ದೇಸಾಯಿಯ ಹಿರಿಯ ಮಗನಾದ ಗಡ್ಡಿಲಿಂಗನಾಯಕನು ಗುಡಗುಂಟಿ ಸಂಸ್ಥಾನವನ್ನು ಸ್ಥಾಪಿಸುತ್ತಾನೆ. ಆನಂತರದಲ್ಲಿ ಈ ಮನೆತನದಲ್ಲಿ ಜಡಿ ಸೋಮಪ್ಪನಾಯಕ, ಲಿಂಗನಾಯಕ, ಸೋಮಸಜ್ಜನಾಯಕ, ಸೋಮಪ್ಪನಾಯಕ, ಜಡಿ ಸೋಮಪ್ಪ ನಾಯಕ, ರಾಜಾ ಸೋಮಪ್ಪನಾಯಕ, ರಾಜಾ ಜಡಿ ಸೋಮಪ್ಪನಾಯಕ, ರಾಣಿ ಗೌರಮ್ಮ ಮತ್ತು ರಾಜಾ ತಿಪ್ಪರಾಜ ಜಡಿಸೋಮಪ್ಪ ನಾಯಕ ಆಳ್ವಿಕೆ ಮಾಡಿದ್ದುಂಟು.

ಗುಂತಗೋಳ ಸಂಸ್ಥಾನವು ಲಿಂಗಸೂಗೂರು ತಾಲ್ಲೂಕಿನಿಂದ ಸುಮಾರು ೩೦ ಕಿ.ಮೀ. ಅಂತರದಲ್ಲಿದೆ. ಈ ಮನೆತನದ ಕುರಿತಾಗಿ ಆಕರಗಳು ಲಭ್ಯವಿಲ್ಲ. ಹೀಗಾಗಿ ಸ್ಥಳೀಯ ಸ್ಮಾರಕಗಳನ್ನು, ಜನಪದ ಹಾಡುಗಳನ್ನು ಅವಲೋಕಿಸಿದಾಗ ವ್ಯಕ್ತಗೊಳ್ಳುವ ಅಭಿಪ್ರಾಯಗಳನ್ನು ಆಧರಿಸಿ ಈ ಮನೆತನದ ವಂಶಸ್ಥರನ್ನು ಗುರುತಿಸಲಾಗಿದೆ. ಜೊತೆಗೆ ಗುಂತಗೋಳ ಪರಿಸರದಲ್ಲಿರುವ ಅನೇಕ ಹಿರಿಯ ತಲೆಮಾರಿನವರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಗುಂತಗೋಳ ಸಂಸ್ಥಾನಿಕರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿ (ಕ್ರಿ.ಶ. ೧೪೮೯ ರಿಂದ ಕ್ರಿ.ಶ. ೧೬೮೬)ಯಲ್ಲಿ ನಿರ್ಲಕ್ಷ್ಯಿಸಲ್ಪಟ್ಟ ಪ್ರದೇಶದಲ್ಲಿ ಸಂಸ್ಥಾನವನ್ನು ಸ್ಥಾಪಿಸಿದರು. ನಂತರ ಬ್ರಿಟಿಷರು ಮತ್ತು ಹೈದರಾಬಾದ್ ನಿಜಾಮರ ಮಧ್ಯೆ (ಕ್ರಿ.ಶ. ೧೭೨೪ ರಿಂದ ಕ್ರಿ.ಶ. ೧೯೪೮) ಸಮರ್ಥವಾಗಿ ಆಳ್ವಿಕೆ ನಡೆಸಿದವರು. ಈ ಸಂಸ್ಥಾನದ ಮೂಲಪುರುಷ ಕಾಳಭೈರವನಾಯಕ. ನಂತರದಲ್ಲಿ ರಾಜಾ ದೊಡ್ಡ ಅಮರಪ್ಪನಾಯಕ, ರಾಜಾ ಬಸವಪ್ಪನಾಯಕ, ರಾಜಾ ಇಮ್ಮಡಿ ಅಮರಪ್ಪನಾಯಕ, ರಾಜಾ ಶ್ರೀನಿವಾಸನಾಯಕ, ರಾಜಾ ಇಮ್ಮಡಿ ಬಸವಪ್ಪನಾಯಕ, ರಾಜಾ ರಾಯಪ್ಪನಾಯಕ, ರಾಜಾ ಮುಮ್ಮಡಿ ಅಮರಪ್ಪನಾಯಕ, ರಾಜಾ ಇಮ್ಮಡಿ ರಾಯಪ್ಪನಾಯಕ ಮತ್ತು ರಾಜಾ ನರಸಿಂಹನಾಯಕರು ಆಳ್ವಿಕೆ ಮಾಡಿದವರಲ್ಲಿ

ಮುಖ್ಯಸ್ಥರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
ಹೊಸಪೇಟೆ ತಾಲ್ಲೂಕು
ವಿಜಯನಗರ ಜಿಲ್ಲೆ
ಮೊ: ೯೯೭೨೮ ೪೧೨೫೬

ಪ್ರಮುಖರಾಗಿದ್ದಾರೆ. ಈ ಸಂಸ್ಥಾನಿಕರು ಮೂಲತಃ 'ಕಂಚಿ'ಯಿಂದ ಬಂದವರು. ಬರುವಾಗ ತಮ್ಮೊಂದಿಗೆ ಅನೇಕ ಜನರನ್ನು ಕರೆದುಕೊಂಡು ಬಂದಿದ್ದಾರೆ. ಇವರೊಂದಿಗೆ ಬಂದ ಮನೆತನದವರಿಗೆ ಕಂಚಿಯವರು ಎಂದು ಕರೆಯುತ್ತಾರೆ. ಇವರ ಕುಟುಂಬಗಳು ಇಂದಿಗೂ ಗುಂತಗೋಳದಲ್ಲಿವೆ.



ಗುಡಗುಂಟಿ ಸಂಸ್ಥಾನಿಕರ ಅರಮನೆ, ಗುಡಗುಂಟಿ




ಗುಂತಗೋಳ ಸಂಸ್ಥಾನಿಕರ ಅರಮನೆ, ಗುಂತಗೋಳ

ಶ್ರೀ ಅಮರೇಶ್ವರ ದೈವವು ದೇವರಭೂಪೂರ ಎಂಬ ಗ್ರಾಮದಿಂದ ಎರಡು ಕಿ.ಮೀ. ಅಂತರದಲ್ಲಿದೆ. ಅಮರೇಶ್ವರ ದೈವದ ಹೆಸರಿನಿಂದಲೇ ಈ ಊರನ್ನು 'ಅಮರೇಶ್ವರ' ಎಂತಲೇ ಕರೆಯುತ್ತಾರೆ. ಇನ್ನೂ ಕೆಲವರು 'ಗುಡಗುಂಟಿ ಅಮರೇಶ್ವರ', 'ದೇವರಭೂಪೂರ ಅಮರೇಶ್ವರ' ಎಂದೂ ಕರೆಯುತ್ತಾರೆ. ಈ ದೈವವು ಗುಡಗುಂಟಿ ಸಂಸ್ಥಾನಿಕರ ಆರಾಧ್ಯದೈವ ಹಾಗೂ ಗುಂತಗೋಳ ಸಂಸ್ಥಾನಿಕರಿಗೆ ಮನೆದೇವರು. ಸದ್ಯ ಈ ದೇವರ ಜಾತ್ರೆಯಲ್ಲಿ ಗುಂತಗೋಳದ ಅರಸರು ಭಾಗವಹಿಸುವುದಿಲ್ಲ. ಕಾರಣ ಗುಡಗುಂಟಿ ರಾಜಾ ಸೋಮಪ್ಪನಾಯಕರ ಕಾಲದಲ್ಲಿ ಆತನ ಮಡದಿ ಗುಂತಗೋಳದವರಾಗಿದ್ದರು. ಆಕೆ ತವರುಮನೆಗೆ ಹೋಗುವಾಗ ಆಕೆಯ ಗಂಡ ರಾಜಾ ಸೋಮಪ್ಪನಾಯಕರು "ಗುಡಗುಂಟಿಯ ಅಮರೇಶ್ವರನ ಜಾತ್ರೆಯಲ್ಲಿ ನಿಮ್ಮ ಮನೆತನದವರು ನಡೆಸಿಕೊಡುವ ಕಾರ್ಯಕ್ರಮಗಳನ್ನೆಲ್ಲಾ ನಮಗೆ ಬಿಟ್ಟುಕೊಡಲು ಕೇಳಿಕೊಂಡು ಬಾ" ಎಂದು ತಾಕೀತು ಮಾಡಿ ಕಳುಹಿಸಿದ್ದರಂತೆ. ಆ ಪ್ರಕಾರ ರಾಣಿಯು ತಮ್ಮ ತಂದೆಯಿಂದ ಗುಡಗುಂಟಿ ಅಮರೇಶ್ವರನ ಜಾತ್ರೆಯಲ್ಲಿ ಗುಂತಗೋಳದ ಅರಸರಿಗೆ ಸಲ್ಲುವ ಎಲ್ಲಾ ಮರ್ಯಾದೆಗಳನ್ನು ಪಡೆದುಕೊಂಡು ಬಂದರಂತೆ. ಹೀಗಾಗಿ ಗುಡಗುಂಟಿ ಅರಸರೇ ಈ ಜಾತ್ರೆಯಲ್ಲಿ ಭಾಗವಹಿಸುವ ಸಂಪ್ರದಾಯವಿದೆ.



ಅಮರೇಶ್ವರ ದೇವಾಲಯದ ಮಹಾದ್ವಾರ



ಅಮರೇಶ್ವರ ಮೂರ್ತಿ

ಅಮರೇಶ್ವರ ಜಾತ್ರೆಯ ಉಸ್ತುವಾರಿಯನ್ನು ಗುಂತಗೋಳದ ರಾಜಾ ರಾಯಪ್ಪನಾಯಕರು ತಮ್ಮ ಬಂಧುಗಳಾದ ಗುಡಗುಂಟಿಯವರಿಗೆ ವಹಿಸಿದ್ದರು. ಆಗ ಗುಂತಗೋಳ ಸಂಸ್ಥಾನಿಕರ ಬದಲಾಗಿ ಶ್ರೀ ಅಮರೇಶ್ವರನ ತೇರಿಗೆ ಗುಡಗುಂಟಿಯವರು ಹೋಗಿದ್ದರು. ಗುಂತಗೋಳ ಸಂಸ್ಥಾನಿಕರ ಬರದಿದ್ದಕ್ಕಾಗಿ ತೇರು ಮುಂದಕ್ಕೆ ಸಾಗಲಿಲ್ಲವಂತೆ. ಈ ಸೂಚನೆ ಗುಂತಗೋಳದ

ಅರಸ ರಾಜಾ ರಾಯಪ್ಪನಾಯಕರಿಗೆ ತಿಳಿದು ಅರಮನೆಯ ಮೇಲೆ ನಿಂತು ಅಮರೇಶ್ವರನ ಕಡೆ ಮುಖ ಮಾಡಿ ಧ್ಯಾನಿಸುತ್ತಾ "ನಿನ್ನ ಜಾತ್ರೆಯ ದಿನ ಬೆಳಗ್ಗೆ ಕಳಸದ ಪೂಜೆಯನ್ನು ನಮ್ಮ ಅರಮನೆಯಲ್ಲಿಯೇ ನೆರವೇರಿಸುವೆ" ಎಂದು ಬೇಡಿಕೊಂಡರಂತೆ. ಅಂದಿನಿಂದ ಶ್ರೀ ಅಮರೇಶ್ವರ ಜಾತ್ರೆಯ ದಿನದಂದು ಬೆಳಿಗ್ಗೆ ಶ್ರೀ ಅಮರೇಶ್ವರನ ಕಳಸಕ್ಕೆ ಗುಂತಗೋಳದ ಅರಮನೆಯಲ್ಲಿಯೇ ಪೂಜೆಯಾಗುವ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ.

ಪ್ರತಿವರ್ಷ ಫಾಲ್ಗುಣಮಾಸದ ಶುಕ್ಲ ಪೌರ್ಣಿಮೆಯಂದು ಅಮರೇಶ್ವರನ ಜಾತ್ರೆ ಜರುಗುತ್ತದೆ. ಜಾತ್ರೆಯ ಮುನ್ನಾದಿನ ಅಮರೇಶ್ವರನ ಕಳಸವು ಗುಡಗುಂಟಿ ಸಂಸ್ಥಾನಿಕರು ಕಟ್ಟಿಸಿದ ಗುಡಗುಂಟಿಯ ಕಳಸದ ದೇವಾಲಯದಲ್ಲಿ ರಾತ್ರಿ ತಂಗುತಿತ್ತು. ನಂತರ ಬೆಳಗ್ಗೆ ಗುಡಗುಂಟಿ ಸಂಸ್ಥಾನದ ದರ್ಬಾರಿಗೆ ಬರುತಿತ್ತು. ಜೊತೆಗೆ ಅಮರೇಶ್ವರನ ರಾಜಗುರುಗಳಾದ ಶ್ರೀಗಜದಂಡ ಮಹಾಸ್ವಾಮಿಗಳು ದೇವರಭೂಪೂರವರು ಬರುತ್ತಿದ್ದರು. ಅಲ್ಲಿಂದ ಸಂಸ್ಥಾನಿಕರ ಸಮ್ಮುಖದಲ್ಲಿ ಕಳಸಕ್ಕೆ ಪೂಜೆಯಾದ ತರುವಾಯ, ಕಳಸವು ಪುನಃ ಅಮರೇಶ್ವರ ದೇವಸ್ಥಾನಕ್ಕೆ ಹೋಗುತ್ತಿತ್ತು. ಅಲ್ಲಿಂದ ಸಾಯಂಕಾಲ ಗುಂತಗೋಳದ ಸಂಸ್ಥಾನಿಕರ ಅರಮನೆಗೆ ಹೋಗುತ್ತಿತ್ತು. ಜೊತೆಗೆ ದೇವರಭೂಪೂರದ ಶ್ರೀಗಜದಂಡ ಸ್ವಾಮಿಗಳೂ ತೆರಳುತ್ತಿದ್ದರು.



ಗುಡಗುಂಟಿ ಅರಸು ವಂಶಸ್ಥರು ಅಮರೇಶ್ವರ ಪಲ್ಲಕ್ಕಿಗೆ ಪೂಜೆಸಲ್ಲಿಸುತ್ತಿರುವುದು.



ಅಮರೇಶ್ವರ ರಥೋತ್ಸವ

ಗುಂತಗೋಳ ಸಂಸ್ಥಾನಿಕರು ಶ್ರೀ ಅಮರೇಶ್ವರನ ಕಳಸಕ್ಕೆ ಹಾಗೂ ಸ್ವಾಮಿಗಳನ್ನು ಬರಮಾಡಿಕೊಳ್ಳಲು ಹಸಿರು ಛತ್ರಿಯೊಂದಿಗೆ ಸ್ವತಃ ಸಂಸ್ಥಾನಿಕರೆ ದೀವಟಿಗೆಯನ್ನು ಹಿಡಿದುಕೊಂಡು ಊರ ಹೊರಗೆ ಬರುತ್ತಿದ್ದರು. ಕಳಸ ಬಂದ ಮೇಲೆ ಪೂಜೆಸಲ್ಲಿಸಿ ಅರಮನೆಗೆ ಕರೆದುಕೊಂಡು ಹೋಗುವಾಗ, ಗುಂತಗೋಳ ಸಂಸ್ಥಾನಿಕರ ಹಸಿರು ಛತ್ರಿಯನ್ನು ಶ್ರೀಗಜದಂಡ ಸ್ವಾಮಿಗಳಿಗೆ ಹಿಡಿಯಲಾಗುತ್ತಿತ್ತು. ಅರಮನೆ ತಲುಪಿದ ನಂತರ ಪೂಜೆಯಾಗುತ್ತಿತ್ತು. ತರುವಾಯ ಕೃಷ್ಣಾನದಿಗೆ ತೆರಳಿ ಅಲ್ಲಿ ಕಳಸಕ್ಕೆ ಸ್ನಾನಮಾಡಿಸಿ ಪೂಜೆ ನಡೆಯುತ್ತಿತ್ತು. ಅಲ್ಲಿಂದ ಮರಳಿ ಅರಮನೆಯ ಆವರಣದ ಕಟ್ಟೆಯ ಮೇಲೆ ಅಮರೇಶ್ವರ ಕಳಸವನ್ನು ಇಡಲಾಗುತ್ತಿತ್ತು.



ಅಮರೇಶ್ವರ ಕಳಸವನ್ನು ಸ್ವಾಗತಿಸಲು ಹೊರಟಿರುವ ಗುಂತಗೋಳ ಸಂಸ್ಥಾನಿಕರು



ಶ್ರೀ ಗಜದಂಡ ಸ್ವಾಮಿಗಳಿಗೆ ಪೂಜೆ ಸಲ್ಲಿಸುತ್ತಿರುವ ಗುಂತಗೋಳ ಸಂಸ್ಥಾನಿಕರು

ಇಡೀ ರಾತ್ರಿ ಭಜನೆ ಕಾರ್ಯಕ್ರಮ ಜರುಗುತ್ತಿತ್ತು. ಬೆಳಗ್ಗೆ ಗುಂತಗೋಳದ ಊರ ಹೊರಗಿರುವ ಶ್ರೀಗಂಗಾಧರ ದೇವಾಲಯದ ಬಲಭಾಗದ ಶ್ರೀ ಅಮರೇಶ್ವರನ ಕಟ್ಟೆಗೆ ಸಂಸ್ಥಾನಿಕರ ಸಮ್ಮುಖದಲ್ಲಿ ಊರಿನ ಸಮಸ್ತ ಜನರೊಂದಿಗೆ ಮೆರವಣಿಗೆಯು ಅದ್ದೂರಿಯಿಂದ ನಡೆಯುತ್ತಿತ್ತು. ಅಲ್ಲಿ ಪೂಜೆಯಾದ ಬಳಿಕ ಕಳಸವು ಪುನಃ ಅರಮನೆಗೆ ಬರುತ್ತಿತ್ತು. ಅರಮನೆಯ ಪರಿವಾರ ಪೂಜೆ ಸಲ್ಲಿಸಿದ ಬಳಿಕ, ಸಾರ್ವಜನಿಕರು ಪೂಜೆ ಸಲ್ಲಿಸುತ್ತಿದ್ದರು. ಆನಂತರ ಅಮರೇಶ್ವರಕ್ಕೆ, ಅಮರೇಶ್ವರನ ಕಳಸವು ಹೋಗುತ್ತಿತ್ತು. ಗುಂತಗೋಳ ಸಂಸ್ಥಾನಿಕರು ಕಳಸವನ್ನು ಊರ ಹೊರಗಿನ ದಕ್ಷಿಣದ ಅಗಸಿಯವರೆಗೆ ಹೋಗಿ ಬೀಳ್ಕೊಡುತ್ತಿದ್ದರು. ಈ ಸಂಪ್ರದಾಯವು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಈ ಸಂಸ್ಥಾನಿಕರು ಈ ಕಳಸದ ಉತ್ಸವದಲ್ಲಿ ಭಾಗವಹಿಸುತ್ತಾರೆ. ಅಲ್ಲದೆ ಹಿಂದಿನಿಂದ ನಡೆದುಕೊಂಡು ಬಂದಿರುವ ವಿಧಿವಿಧಾನಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿದ್ದಾರೆ. ಅಂದು ಸಾಯಂಕಾಲ ಅಮರೇಶ್ವರದಲ್ಲಿ ಅಮರೇಶ್ವರನ ರಥೋತ್ಸವ ನಡೆಯುತಿತ್ತು. ಈ ರಥೋತ್ಸವಕ್ಕೆ ಗುಡಗುಂಟಿಯ ಸಂಸ್ಥಾನಿಕರು ಆಗಮಿಸುತ್ತಿದ್ದರು. ಅವರ ಸಮ್ಮುಖದಲ್ಲಿಯೇ ಈ ರಥೋತ್ಸವ ಜರುಗುತ್ತಿತ್ತು. ಇವರು ತೇರಿಗೆ ಮೊದಲ ಪೂಜೆಯನ್ನು ಸಲ್ಲಿಸಿ, ತೇರಿನ ಗಾಲಿಗೆ ಕಾಯಿಯನ್ನು ಹೊಡೆದ ನಂತರವೇ ರಥೋತ್ಸವ ನಡೆಯುತ್ತಿತ್ತು. ಇಂದಿಗೂ ಈ ರಥೋತ್ಸವದಲ್ಲಿ ಗುಡಗುಂಟಿ ಅರಸು ಮನೆತನದವರು ಭಾಗವಹಿಸಿ ಜಾತ್ರೆಯನ್ನು ನಡೆಸಿಕೊಡುತ್ತಾರೆ.

ಅಲ್ಲದೆ ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನಿಕರ ಆರಾಧ್ಯದೈವ ಅಮರೇಶ್ವರನ ಪೂಜೆಯನ್ನು ಪ್ರತಿ ಶನಿವಾರ ಹಾಗೂ ಪ್ರತಿ ಅಮಾವಾಸ್ಯೆಗೆ ಮಾಡುತ್ತಾರೆ. ಈ ದೇವರ ಪೂಜೆಯ ಕುರಿತಾದ ಮಂಗಳಾರತಿ ಪದದ ನುಡಿಯೊಂದು ಇಂತಿದೆ:

"ಆಸೀನ ಮಲೆಯೆ, ಮುತ್ತಿನ ಜಡಿಯೇ
ಅಮರೇಶ್ವರನ ಗುಡಿಯೆ । ಬೆಳಗ್ಯಾನೆ
ಬಂಗಾರದ ಕಳಸ ಗುಡಗುಂಟಿ ದೊರೆಯೇ"

ಎಂಬ ವಿವರಣೆ ನೀಡುತ್ತದೆ. ಅಂದು ಈ ಸಂಸ್ಥಾನಿಕರು ಉಪವಾಸವನ್ನು ಆಚರಿಸುತ್ತಾರೆ. ಪ್ರತಿವರ್ಷ ಹೋಳಿ ಹುಣ್ಣಿಮೆಯ ದಿನ ನಡೆಯುವ ಅಮರೇಶ್ವರ ರಥೋತ್ಸವಕ್ಕೆ ಇವರು ಫಲಪುಷ್ಪಗಳನ್ನು ಸಮರ್ಪಿಸಿ ಪೂಜೆ ಸಲ್ಲಿಸಿದ ಬಳಿಕವೇ ರಥ ಎಳೆಯಲಾಗುತ್ತದೆ. ಇಂದಿಗೂ ಈ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ. ಈ ಜಾತ್ರೆಯು ಅತ್ಯಂತ ಅದ್ದೂರಿಯಿಂದ ನಡೆಯುತ್ತದೆ. ರಾಯಚೂರು ಜಿಲ್ಲೆಯಾದ್ಯಂತ ಈ ದೇವರ ಭಕ್ತರಿದ್ದಾರೆ. ಅವರುಗಳೆಲ್ಲಾ ಜಾತ್ರೆಯ ಸಂದರ್ಭದಲ್ಲಿ ಇಲ್ಲಿಗೆ ಆಗಮಿಸಿ ಪೂಜೆ ಸಲ್ಲಿಸುತ್ತಾರೆ.

ಆಕರಗ್ರಂಥಗಳು

೧. ಅಮರೇಶ ಯತಗಲ್, ೨೦೦೮, ಇತಿಹಾಸ ಇಂಚರ, ಅದಿತಿ ಪ್ರಕಾಶನ, ಲಿಂಗಸೂಗೂರು.

೨. ಅಮರೇಶ ಯತಗಲ್, ೨೦೦೮, ಇತಿಹಾಸ ಮಂಥನ, ಅದಿತಿ ಪ್ರಕಾಶನ, ಲಿಂಗಸೂಗೂರು.

೩. ಅಮರೇಶ ಯತಗಲ್, ೨೦೧೮, ಕರ್ನಾಟಕ ನಾಯಕ ಅರಸುಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು, ಪಲ್ಲವಿ ಪ್ರಕಾಶನ, ಕಸಬಾ ಲಿಂಗಸೂಗೂರು.

೪. ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನಿಕರ ಅರಸು ವಂಶಸ್ಥರಿಂದ ಪಡೆದ ಮಾಹಿತಿ.

◆◆

೮೩

ರಾಕೇಶ್ ಬಿ.ಸಿ.

ನಂದಿಗುಡಿ ಬಸವೇಶ್ವರ ದೇವಾಲಯದ ಆಚರಣೆಗಳು

ಪ್ರಸ್ತುತ ನನ್ನ ಲೇಖನವು ವಿಶೇಶ ಪೂಜೆಗೊಳ್ಳುವ ನಂದಿಗುಡಿ ಬಸವೇಶ್ವರ ದೇವಾಲಯದ ಆಚರಣೆಗಳನ್ನು ಕುರಿತು ವಿವರಿಸುವುದಾಗಿದೆ. ನಂದಿಗುಡಿಯು ಹರಿಹರ ತಾಲೂಕು ದಾವಣಗೆರೆ ಜಿಲ್ಲೆಯಲ್ಲಿ ಬರುವ ತುಂಗಾಭದ್ರ ನದಿಯ ಬಲದಂಡೆಯ ಮೇಲಿದೆ. ವಾಸನ ಗ್ರಾಮ ಪಂಚಾಯಿತಿಗೆ ಸೇರಿದ ನಂದಿಗುಡಿಯಲ್ಲಿ ಪ್ರಾಚೀನ ಬಸವೇಶ್ವರ ದೇವಾಲಯ, ವೀರಗಲ್ಲುಗಳು, ಬೃಹನ್ಮಠ, ಮಹೇಶ್ವರದೇವರ ಆಚರಣೆ, ಕತೃಗದ್ದುಗೆಗಳು, ತುಂಗಭದ್ರ ನದಿಗೆ ಸೇತುವೆ ಇನ್ನು ಮುಂತಾದ ಐತಿಹಾಸಿಕ ಮಹತ್ವ ಪಡೆದ ಸ್ಥಳಗಳಿವೆ. ನಂದಿಗುಡಿ ಪ್ರಾಚೀನತೆಯನ್ನು ಗಮನಿಸಿದಾಗ ಸುಮಾರು ೯ನೇ ಶತಮಾನಕ್ಕಿಂತಲೂ ಹಳೆಯದಾದ ಬಸವೇಶ್ವರ ದೇವಾಲಯದೊಂದಿಗೆ ಇತಿಹಾಸದಲ್ಲಿ ಗುರುತಿಸಲ್ಪಟ್ಟಿದೆ. ಇದರ ಜೊತೆಗೆ ಸಾಮಾನ್ಯ ಶಕೆ ೯೩೦ರ ಕೀಳ್ಗುಂಟೆ ಶಾಸನವು ಅಲ್ಲಿ ಸಿಗುವ ಮೊದಲ ಲಿಖಿತ ದಾಖಲೆಯಾಗಿದೆ. (ಡಾ. ಡಿ.ವಿ. ಪರಮಶಿವಮೂರ್ತಿಯವರು ಶಾಸನವನ್ನು ಅರ್ಥೈಸಿದ್ದಾರೆ) ನೊಳಂಬ ಅರಸುಮನೆತನ ಆಳ್ವಿಕೆಗೆ ಒಳಪಟ್ಟ ನೊಳಂಬವಾಡಿ ೩೨೦೦೦ ಪ್ರಾಚೀನ ಆಡಳಿತ ವಿಭಾಗದ ಭಾಗವಾಗಿದ್ದ ನಂದಿಗುಡಿಯು ನೊಳಂಬರ ರಾಜಲಾಂಛನವಾದ ನಂದಿಗಾಗಿ ಗುಡಿಯನ್ನು ಕಟ್ಟಿದ್ದರಿಂದ ನಂದಿಗುಡಿ ಎಂದು ಹೆಸರು ಬಂದಿದೆ. ಇಲ್ಲಿರುವ ಬಸವೇಶ್ವರ ದೇವಾಲಯ ಹಾಗೂ ವೃಷಭಪುರಿ ಸಂಸ್ಥಾನದ ಬೃಹನ್ಮಠ, ನಂದಿಗುಡಿಗಳು ನೊಳಂಬ ಲಿಂಗಾಯತ ಸಮಾಜದವರಿಂದ ಆರಾಧನೆಗೊಳ್ಳುವ ಪುಣ್ಯಸ್ಥಳಗಳಾಗಿದೆ. ನಂದಿಗುಡಿಯ ಇತಿಹಾಸವನ್ನು ನೋಡಿದಾಗ ಅಲ್ಲಿರುವ ಶಾಸನಗಳು, ವೀರಗಲ್ಲುಗಳು ನಂದಿಗುಡಿಯ ಪ್ರಾಚೀನತೆಯ ಬಗ್ಗೆ ಹಾಗೂ ಗ್ರಾಮವು ಅಸ್ತಿತ್ವದಲ್ಲಿದ್ದ ಮಾಹಿತಿ ದೊರೆಯುತ್ತದೆ. ಮಲ್ಲಿಕಾರ್ಜುನ ಅಥವಾ ಬಸವೇಶ್ವರ ದೇವಾಲಯದ ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ೧೦೦೦ ವರ್ಷಗಳಿಗಿಂತ ಹಿಂದಿನ ಪ್ರಾಚೀನ ಇತಿಹಾಸವನ್ನು ಗಮನಿಸಬಹುದು. ಚಚ್ಚೌಕವಾದ ಗರ್ಭಗುಡಿಯಲ್ಲಿ ೩ ಅಡಿ ಎತ್ತರದ ಶಿವಲಿಂಗ, ಆಂತರಾಳದಲ್ಲಿ ಸಣ್ಣದಾದ ನಂದಿ, ನವರಂಗದಲ್ಲಿ ಬೃಹತ್ ನಂದಿ, ಹಾಗೂ ನಂದಿಯ ಹಿಂಭಾಗದಲ್ಲಿ ಸೂರ್ಯನ ಶಿಲ್ಪ, ಇವುಗಳನ್ನು ಪೂಜಿಸುತ್ತಾರೆ. ಶಿವನ ಪರಿವಾರ ದೇವತೆಗಳು, ಅಲಂಕೃತ ಬಾಗಿಲುಗಳು, ಕಂಬಗಳು, ಭುವನೇಶ್ವರಿ, ಸರಳವಾದ ಭಿತ್ತಿ ನಮ್ಮನ್ನು ಆಕರ್ಷಿಸುತ್ತದೆ. ಶಿವಲಿಂಗಕ್ಕೆ ಬೆಳ್ಳಿಯ ಕವಚವನ್ನು ರಥೋತ್ಸವ, ಶಿವರಾತ್ರಿ, ಶ್ರಾವಣ ಮಾಸ, ಅಮಾವಾಸ್ಯೆಯ ವಿಶೇಷ ಪೂಜೆಗಳಂದು ಅಲಂಕರಿಸುತ್ತಾರೆ.

ಅಂತರಾಳದಲ್ಲಿ ಚಿಕ್ಕದಾದ ನಂದಿಯ ಸುಂದರ ಶಿಲಾಕೆತ್ತನೆಯಿಂದ ಕೂಡಿದೆ. ಸರಳವಾದ ಭಿತ್ತಿಗಳನ್ನು ಹೊಂದಿದೆ. ಅಂತರಾಳದ ಬಾಗಿಲಿನ ಪಕ್ಕದಲ್ಲಿ ದ್ವಾರಪಾಲಕರ ಸುಂದರ ಕೆತ್ತನೆಗಳಿವೆ. ಅಂತರಾಳಕ್ಕೆ ಹೊಂದಿಕೊಂಡಂತೆ ನಾಲ್ಕು ಸುಂದರ ಕಂಬಗಳಿಂದ

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು
ಎಸ್. ನಿಜಲಿಂಗಪ್ಪ ಬಡಾವಣೆ
ದಾವಣಗೆರೆ-೫೭೭೦೦೪
ಮೊ: ೯೯೮೭೩ ೧೩೮೭೩

ಕೂಡಿದ ನವರಂಗದಲ್ಲಿ ಎಡಗಾಲು ಮುಂದೆ ಮಾಡಿ ಮಲಗಿರುವ ೭ ಅಡಿ ಎತ್ತರ ೧೦ ಅಡಿ ಉದ್ದದ ಬೃಹತ್ ನಂದಿಯ ಶಿಲಾಮೂರ್ತಿ ಸ್ಥಾಪಿತವಾಗಿದೆ. ನಂದಿಯ ಕೊರಳಹಾರ, ಗಂಟೆಸರ ಭುಜದ ಮೇಲೆ ಹಾಗೂ ಕೊಂಬಿನ ಮೇಲೆ ಚಿತ್ರಿಸಿರುವ ಕೆತ್ತನೆಗಳು ಸುಂದರವಾಗಿದೆ. ಗೋವಿನಹಾಳು ಗ್ರಾಮದ ದಡ್ಡಿ ನಿಂಗನಗೌಡರ ಮನೆತನದವರು ಮೂರು ತಲಮಾರುಗಳ ಕಾಲದಿಂದಲೂ ರಥೋತ್ಸವದ ಸಮಯದಲ್ಲಿ ನಂದಿಗೆ ಬಾಸಿಂಗವನ್ನು ಪಲ್ಲಕ್ಕಿಯ ಮೂಲಕ ವಾದ್ಯಗಳೊಂದಿಗೆ ಬರಿಗಾಲಿನಲ್ಲಿ ಮೆರವಣಿಗೆಯ ಮೂಲಕ ತಂದು ಸಲ್ಲಿಸುತ್ತಾರೆ. ನೊಳಂಬರ ಲಾಂಛನ ನಂದಿ ಆಗಿದ್ದರಿಂದ ಅವರು ದೇವಾಲಯ ನಿರ್ಮಾಣ ಮಾಡುವಾಗ ಅಂತರಾಳದಲ್ಲಿ ಸಣ್ಣನಂದಿ ಹಾಗೂ ನವರಂಗದಲ್ಲಿ ಬೃಹತ್ ನಂದಿಯನ್ನು ನಿರ್ಮಿಸುತ್ತಿದ್ದರು. ಉದಾಹರಣೆಗೆ ದಾವಣಗೆರೆ ಜಿಲ್ಲೆಯಲ್ಲ ನಂದಿತಾವರೆ, ಹಾವೇರಿ ಜಿಲ್ಲೆಯ ಪುರದಕೇರಿ ಮತ್ತು ಹರಪನಳ್ಳಿಯ ತಾಲೂಕಿನ ಕೇರೆಗುಡಿಹಳ್ಳಿ ಹಾಗೂ ಮುಂತಾದ ಕಡೆಗಳಲ್ಲಿ ಗಮನಿಸಬಹುದು. ನವರಂಗದಲ್ಲಿ ನಂದಿಯ ಬಲಪಕ್ಕದಲ್ಲಿ ಪಾರ್ವತಿಯ ಹಾಗೂ ಸಪ್ತಮಾತೃಕೆಯರ ಶಿಲ್ಪಗಳನ್ನು, ಎಡಪಕ್ಕದಲ್ಲಿ ಗಣಪತಿ ಮುಂತಾದ ಶಿಲ್ಪಗಳನ್ನು ಗಮನಿಸಬಹುದು. ನಂದಿಯ ಹಿಂಭಾಗದಲ್ಲಿನ ಪೂರ್ವದ ಗರ್ಭಗುಡಿಯಲ್ಲಿ ಸೂರ್ಯನ ಸುಂದರ ಶಿಲ್ಪವಿದ್ದು, ಪೂರ್ವದ ಗೋಡೆಯ ಮೇಲಿನ ಜಾಲಂಧ್ರದಿಂದ ಸೂರ್ಯನ ಬೆಳಗಿನ ಕಿರಣಗಳು ನಂದಿ ಕೊಂಬಿನ ಮಧ್ಯದಿಂದ ಹಾದು ಶಿವಲಿಂಗವನ್ನು ತಲುಪಿ ಲಿಂಗವನ್ನು ಪ್ರಕಾಶಿಸುವಂತೆ ಮಾಡಿದ್ದಾರೆ. ಹಾಗೂ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡುವಾಗ ಮೂಲ ದೇವಾಲಯದ ಶಿಲ್ಪಗಳಿಗೆ ತೊಂದರೆ ಆಗದಂತೆ ಜೀರ್ಣೋದ್ಧಾರ ಮಾಡಿದ್ದಾರೆ.

ದೇವಾಲಯಕ್ಕೆ ಹೊಂದಿಕೊಂಡಂತೆ ಕರ್ನಾಟಕದ ಪ್ರಾಚೀನ ಮಠಗಳಲ್ಲಿ ಒಂದಾದ ನಂದಿಗುಡಿ ಬೃಹನ್ಮಠವು ನೊಳಂಬ ಲಿಂಗಾಯತ ಸಮಾಜಕ್ಕೆ ಸೇರಿದ್ದು, ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದೆ. ದೇವಾಲಯದೊಂದಿಗೆ ಬೃಹನ್ಮಠವು ಅಸ್ತಿತ್ವಕ್ಕೆ ಬಂದಿದ್ದರಿಂದ ದೇವಾಲಯದ ಎಲ್ಲಾ ಕಾರ್ಯಗಳನ್ನು ಪ್ರಾಚೀನ ಕಾಲದಿಂದ ಪ್ರಸ್ತುತ ಶ್ರೀಶ್ರೀಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿಗಳವರ ಮುಂದಾಳತ್ವದಲ್ಲಿ ಮಠದ ವತಿಯಿಂದ ನಡೆಸಲಾಗುತ್ತದೆ. ಕರ್ನಾಟಕದಾದ್ಯಂತ ಇರುವ ಭಕ್ತರಿಗಾಗಿ ಉಚಿತ ದಾಸೋಹ ಮತ್ತು ವಸತಿ ವ್ಯವಸ್ಥೆಯ ಸೌಲಭ್ಯವನ್ನು ಒದಗಿಸಿದ್ದಾರೆ. ಶ್ರೀಮಠದ ವತಿಯಂದ ಶಿಕ್ಷಕರ ತರಬೇತಿ ಸಂಸ್ಥೆ, ಪ್ರೌಢಶಾಲೆಗಳು, ಪ್ರಾಥಮಿಕ ಶಾಲೆ, ಕಲ್ಯಾಣ ಮಂಟಪ, ಜಮೀನುಗಳು ಹಾಗೂ ಉಕ್ಕಡಗಾತ್ರಿ ಟ್ರಸ್ಟ್‌ನ ಗೌರವಾಧ್ಯಕ್ಷರಾಗಿ ಸ್ವಾಮೀಜಿಗಳು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಶಿವರಾತ್ರಿ ಹಬ್ಬದ ನಂತರ ಐದು ದಿನಗಳವರೆಗೆ ಬಸವೇಶ್ವರ ರಥೋತ್ಸವ ಜರುಗುತ್ತದೆ. ಇದರಲ್ಲಿ ನಂದಿಗುಡಿ, ವಾಸನ, ಗೋವಿನಹಾಳ್, ಮುಗಿನಗೊಂದಿ, ಕೊಣನತಲೆ, ಗೋಣಗೆರೆ, ಕೊಕ್ಕನೂರು, ತುಮ್ಮಿನಕಟ್ಟೆ, ಗುಡ್ಡದ ಹೊಸಳ್ಳಿ, ಬಸಾಪುರ, ಜಿಗಳಿ, ನಂದಿತಾವರೆ, ಉಕ್ಕಡಗಾತ್ರಿ, ತಿಮ್ಮೆನಹಳ್ಳಿ, ಹಳ್ಳೂರು, ಅಣಜಿ, ಮಾದಪುರ, ತಡಕನಹಳ್ಳಿ, ಮೆಣಸಿನಹಾಳ್, ಕಿರಿಗೆರಿ, ಪುರದಕೇರಿ, ವಾಸನ, ಕಡರನಾಯಕನಹಳ್ಳಿ, ಪಾಳ್ಯ, ಹಿಂಡಿಸಘಟ್ಟೆ, ಹಳ್ಳಿಹಾಳ್ ಇನ್ನೂ ಮುಂತಾದ ಹಳ್ಳಿಗಳಲ್ಲಿನ ಎಲ್ಲಾ ಸಮಾಜದ ಜನರು ಈ ಹಬ್ಬವನ್ನು ಆಚರಿಸುತ್ತಾರೆ. ಮತ್ತು ಜಾತ್ರೆಯಲ್ಲಿ ಗೋವಿನಹಾಳ್, ವಾಸನ, ಕೊಕ್ಕನೂರು, ಹಳ್ಳಿಹಾಳ್, ಕಡರನಾಯಕನಹಳ್ಳಿ, ಪಾಳ್ಯ, ಹಿಂಡಿಸಘಟ್ಟ ದೇವರುಗಳು ಭಾಗವಹಿಸುತ್ತವೆ. ಹಾಗೂ ಪಂಚಮಿಯಲ್ಲಿ ಕೊಕ್ಕನೂರು ಆಂಜನೇಯನ ಹೊಳೆಜಾತ್ರೆ ಮತ್ತು ಕಾರ್ಣಿಕ ಆಚರಣೆಗಳು ಜರಗುತ್ತವೆ. ಕಾರ್ಣಿಕ ಆಚರಣೆಯಲ್ಲಿ ಗೋವಿನಹಾಳು, ವಾಸನ, ಕಡರನಾಯಕನಹಳ್ಳಿ, ಪಾಳ್ಯ, ಹಿಂಡಿಸಗಟ್ಟೆ, ಹಳ್ಳಿಹಾಳ್, ನಂದಿಗುಡಿ ಸೇರಿದಂತೆ ಏಳುಹಳ್ಳಿಗಳ ದೇವರುಗಳು ಆಗಮಿಸಿ ಆಚರಣೆಯಲ್ಲಿ ಪಾಲ್ಗೊಳ್ಳುವ ಮೂಲಕ ಹಳ್ಳಿಗಳ ಸಹಕಾರ–ಸಹಬಾಳ್ವೆಗಳ ಬಂಧುತ್ವಕ್ಕೆ ಸಾಕ್ಷಿಯಾಗಿದೆ.

ಶ್ರೀ ಬಸವೇಶ್ವರ ದೇವಾಲಯದ ಬಸವೇಶ್ವರ ದೇವರ ಮಹಾರಥೋತ್ಸವ ಶ್ರೀಶೈಲ ವೃಷಭಪುರಿ ಬೃಹನ್ಮಠ ನಂದಿಗುಡಿ ೧೧೧೮ ಜಗದ್ಗುರು ಶ್ರೀಶ್ರೀಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ರಥೋತ್ಸವ ಪ್ರತಿ ವರ್ಷ ಫೆಬ್ರವರಿ/ಮಾರ್ಚ್ ತಿಂಗಳಲ್ಲಿ ಒಂದು ವಾರಗಳವರೆಗೆ ಜರುಗುತ್ತದೆ. ಅಷ್ಟಮಿಯಂದು ಬೆಳಗ್ಗೆ ಗಣಪತಿ ಪೂಜೆ ಸೂರ್ಯದೇವರಿಗೆ ಅರ್ಘ್ಯ ಪೂಜೆ, ಶ್ರೀ ನಂದಿ ಧ್ವಜರೋಹಣ ಹಾಗೂ ರಾತ್ರಿ ಶ್ರೀ ಬಸವೇಶ್ವರ ದೇವರಿಗೆ ಕಂಕಣ ಧಾರಣೆ ಕಾರ್ಯಕ್ರಮ ಶ್ರೀಗಳಿಂದ ನೇರವೇರಿಸಲಾಗುತ್ತದೆ. ನವಮಿಯಂದು ಬೆಳಗ್ಗೆ ಶ್ರೀ ನಂದಿ ಪಟ(ಬಾವುಟ)ದೊಂದಿಗೆ ಪೂಜಾ ಮೆರವಣಿಗೆ ನಂತರ ಎಣ್ಣೆ ಅರಿಷಿಣ ಕಾರ್ಯಕ್ರಮ ನಡೆಯುತ್ತದೆ. ನಂತರ ಇದೇ ದಿನ ರಾತ್ರಿ ಶ್ರೀನಂದಿ ಉತ್ಸವಮೂರ್ತಿಗೆ ಗಜೋತ್ಸವದ ಉಚ್ಛಾಯವು ಗ್ರಾಮದ ರಾಜಬೀದಿಗಳಲ್ಲಿ ರಾಜೋತ್ಸವ ನೆರವೇರುವುದು. ದಶಮಿಯಂದು ಶ್ರೀ ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ, ನಂತರ ಮಹಾಮಂಗಳಾರತಿಯೊಂದಿಗೆ ನೆರವೇರುವುದು. ಹಾಗೂ ಶ್ರೀ ನಂದಿ ಉತ್ಸವಮೂರ್ತಿಯ ಪುಷ್ಪೋತ್ಸವ ನೆರವೇರುವುದು. ದಶಮಿಯಂದು ಬೆಳಗ್ಗೆ ೫ ಗಂಟೆಯಿಂದ ೭ ಗಂಟೆಯವರೆಗೆ ಕತೃ ಗದ್ದುಗೆಗಳಿಗೆ ಹಾಗೂ ಶ್ರೀ ಬಸವೇಶ್ವರ ದೇವರಿಗೆ ಮಹಾರುದ್ರಾಭಿಷೇಕ, ೭ ಗಂಟೆಯಿಂದ ಶಿವದೀಕ್ಷಾ

ಸಂಸ್ಕಾರ ೮ ರಿಂದ ೮–೩೦ರ ವರೆಗೆ ಮಂತ್ರೋಪದೇಶ, ಶ್ರೀ ಬಸವೇಶ್ವರ ದೇವರಿಗೆ ಬೆಳಗ್ಗೆ ೯–೩೦ ರಿಂದ ೧೦–೩೦ರ ವರೆಗೆ ಮಹಾನಂದಿಗೆ ಬಾಸಿಂಗ ಧಾರಣೆ ನೇತೃತ್ವದಲ್ಲಿ ಪೂಜಾಕಾರ್ಯಗಳೊಂದಿಗೆ ಸಕಲ ವಾದ್ಯಗಳ ಜೊತೆ ಶ್ರೀಬಸವೇಶ್ವರ ದೇವರಿಗೆ ಬಾಸಿಂಗ ಧಾರಣೆ ಮಾಡಲಾಗುತ್ತದೆ. ಬಾಸಿಂಗ ಧಾರಣೆ ನಂತರ ಮಹಾರಥೋತ್ಸವಕ್ಕೆ ಕಳಸ ಸ್ಥಾಪನೆಮಾಡಿ ಬೃಹತ್‌ರಥದ ದಶಮಿರಥ ಪೂಜೆಯನ್ನು ಶ್ರೀಗಳವರಿಂದ ನೆರವೇರಿಸಲಾಗುತ್ತದೆ. ನಂತರ ಶಸ್ತ್ರ ಹಾಕುವ (ಹಾಯುವ) ಕಾರ್ಯಕ್ರಮಗಳು ಜರುಗುವುದು. ಏಕಾದಶಿ ಬೆಳಗ್ಗೆ ರುದ್ರ ಗುಗ್ಗಳ ಹಾಗೂ ಸಕಲ ವಾದ್ಯದೊಂದಿಗೆ ೧೧೦೮ ಜಗದ್ಗುರು ಶ್ರೀಶ್ರೀಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ನಂತರ ಶ್ರೀ ಬಸವೇಶ್ವರ ದೇವರ ಬೃಹತ್ ರಥೋತ್ಸವ ನೆರವೇರುತ್ತದೆ. ನಂತರ ಶ್ರೀಬಸವೇಶ್ವರ ರಥದ ಫಲಾಪುಷ್ಪಾಹಾರಗಳನ್ನು ಹರಾಜು ಮಾಡಲಾಗುವದು. ನಂತರ ಜವಳ ಕಾರ್ಯಕ್ರಮ, ದೊಡ್ಡ ಬಂಡಿ(ಬೆಲ್ಲದ ಬಂಡಿ)ಪ್ರದರ್ಶನ, ಇದೇ ದಿನ ರಾತ್ರಿ ಓಕುಳಿ ಕಂಕಣ ವಿಸರ್ಜನೆ ಮಾಡುವ ಕಾರ್ಯಕ್ರಮಗಳು ಜರುಗುತ್ತವೆ. ದ್ವಾದಶಿಯಂದು ಬೆಳಗ್ಗೆ ಶ್ರೀ ಬಸವೇಶ್ವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ನೆರವೇರುತ್ತದೆ. ಶ್ರೀ ಮಠದಲ್ಲಿ ನಡೆಯುವ ಶ್ರೀ ಗುರು ಕೆಂಚವೀರೇಶ್ವರ ಮಹಾಶಿವ ಯೋಗಿಗಳವರ ಕತೃ ಗದ್ದುಗೆಗಳಿಗೆ ಮತ್ತು ಶ್ರೀ ಬಸವೇಶ್ವರ (ಮಲ್ಲಿಕಾರ್ಜುನ) ದೇವರಿಗೆ ನಿರಂತರ ಮಹಾ ರುದ್ರಾಭಿಷೇಕ ದಂತಹ ಪೂಜಾಕಾರ್ಯಗಳು ನೆರವೇರುತ್ತವೆ.

ಪ್ರಸ್ತುತ ಲೇಖನದಲ್ಲಿ ನೊಳಂಬ ಲಿಂಗಾಯತ ಸಮಾಜದ ಆರಾಧ್ಯದೈವ ನಂದಿಗುಡಿ ಶ್ರೀ ಬಸವೇಸ್ವರ ದೇವರ ಆಚರಣೆಗಳನ್ನು ವಿಶೇಷವಾಗಿ ಗಮನಿಸಿದಾಗ ಬಾಸಿಂಗ ಧಾರಣೆಯ ಕಾರ್ಯಕ್ರಮವು ನನ್ನ ಗಮನಕ್ಕೆ ಬಂದಹಾಗೆ ಈ ರೀತಿಯ ಆಚರಣೆ ನಂದಿಗುಡಿಯಲ್ಲಿ ಬಿಟ್ಟರೆ ನಂದಿತಾವರೆಯಲ್ಲಿ ಮಾತ್ರ ಕಂಡುಬರುತ್ತದೆ. ಹಾಗೂ ಕ್ಷೇತ್ರಕಾರ್ಯ ಕೈಗೊಂಡಾಗ ನನಗೆ ತಿಳಿಸಿದ ಮಾಹಿತಿ ಎಂದರೆ ಸುಮಾರು ೩೦೦ ವರ್ಷಗಳ ಹಿಂದೆ ದಡ್ಡಿಗೌಡರ ಮನೆತನದಲ್ಲಿ ಹನುಮಮ್ಮ ಬಸಿರಿಯಾಗಿದ್ದಾಗ ಪ್ಲೇಗ್ ಬಂದು ಬದುಕುವುದಿಲ್ಲ ಎಂದು ಮನೆಯವರು ಭಾವಿಸಿದ್ದರು ಕೊನೆಗೆ ದೇವರ ಮೊರೆಹೋಗಿ ಪ್ಲೇಗ್‌ರೋಗ ಗುಣವಾದರೆ ನಂದಿಗುಡಿ ಬಸವೇಶ್ವರರಿಗೆ ಹರಕೆಯನ್ನು ಮಾಡಿಕೊಂಡು ಪ್ರತಿವರ್ಷ ಬಾಸಿಂಗವನ್ನು ಮಾಡಿಸಿಕೊಡುತ್ತೇವೆ ಎಂದು ಹರಕೆ ಕಟ್ಟಿಕೊಳ್ಳುತ್ತಾರೆ. ನಂತರ ರೋಗ ವಾಸಿಯಾದ ನಂತರ ಪ್ರತಿ ವರ್ಷ ಬಾಸಿಂಗಧಾರಣೆಯನ್ನು ನಡೆಸಿಕೊಂಡು ಬಂದಿದ್ದಾರೆ. ಹಾಗೂ ಈ ಮೊದಲು ಒಂದು ಮನೆತನಕ್ಕೆ ಸೀಮಿತವಾದ ಆಚರಣೆ ಪ್ಲೇಗು ವಾಸಿಯಾದ ನಂತರ ಊರಿನವರೆಲ್ಲಾ ಸೇರಿಕೊಂಡು ವಿಜೃಂಭಣೆಯಿಂದ ಊರ ಹಬ್ಬದ ರೀತಿಯಲ್ಲಿ ಪ್ರತಿ ವರ್ಷ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಸುಂದರ ಬಾಸಿಂಗವನ್ನು ಬಾನುವಳ್ಳಿಯ ಕುಂಬಾರ ಮನೆತನದ ವಿರೂಪಾಕ್ಷಪ್ಪ ಮತ್ತು ಇವರ ತಂದೆ ಹಾಲಪ್ಪನವರ ವಂಶದವರು ಬಹಳ ಹಿಂದಿನಿಂದಲೂ ಬಾಸಿಂಗ ಸೇವೆಯ ರೂಪದಲ್ಲಿ ಒಂದು ವಾರ ಕಾಲ ಬಂದು ಇಲ್ಲಿಯೇ ಇದ್ದು ಬಾಸಿಂಗವನ್ನು ಜಾಗರೂಕತೆಯಿಂದ ಸಿದ್ದಪಡಿಸಿ ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಇವರು ಮರಳುವ ದಿನ ದಡ್ಡಿಗೌಡರ (ದಡ್ಡೇರ) ಮನೆತನದವರು ಪ್ರೀತಿಯಿಂದ ಇವರಿಗೆ ಬಟ್ಟೆ, ಅಕ್ಕಿ, ಜೋಳ, ರಾಗಿ, ತೆಂಗಿನಕಾಯಿ ಮತ್ತು ಹಣವನ್ನು ನೀಡಿ ಕಳುಹಿಸುತ್ತಾರೆ.

---

* ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಕಾರ ನೀಡಿದ ಪ್ರಕಾಶ್ ಡಿ.ಎನ್. ಹನುಮಗೌಡ ಡಿ.ಎನ್., ನಿಂಗನಗೌಡ. ಡಿ.ಡಿ., ರಾಜೀವ್ ಡಿ.ಡಿ. ಮತ್ತು ಗೋವಿನಹಾಳ್ ಹಾಗೂ ನಂದಿಗುಡಿ ಗ್ರಾಮದ ಜನತೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಆಕರಗ್ರಂಥಗಳು

೧. ಕ್ಷೇತ್ರಕಾರ್ಯ.

೨. ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., ೨೦೧೭, 'ಇತಿಹಾಸ ದರ್ಶನ', ಸಂ. ೩೨, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಪು. ೩೦೦.

೩. ಗಿರಿಜಾ ಟಿ., ೨೦೧೯, 'ದಾವಣಗೆರೆ ಇದು ನಮ್ಮ ಜಿಲ್ಲೆ', ಗಿರಿಶೈಲ ಪ್ರಕಾಶನ, ದಾವಣಗೆರೆ, ಪರಿಷ್ಕೃತ ಮುದ್ರಣ.

೪. ಕೊಟ್ರೇಶ್ ಉತ್ತಂಗಿ, ೨೦೧೩, 'ಹರಿಹರದೇಗುಲಗಳು: ಹರಿಹರ ತಾಲ್ಲೂಕು ಸಮಗ್ರ ಅಧ್ಯಯನ' ಸಹನಾದ್ರಿ ಪ್ರಕಾಶನ ಹೊನ್ನಾಳಿ.

೫. ಮಹಾದೇವ ಸಿ., ವಾಸುದೇವನ್ ಸಿ.ಎಸ್., ಸೋಮಶೇಖರ್ ವೈ.ಎಸ್., ವಾಸುದೇವ ಬಡಿಗೇರ, ರಮೇಶ್ ನಾಯಕ, ೨೦೨೦, 'ಕರ್ನಾಟಕ ದೇವಾಲಯ ಕೋಶ: ದಾವಣಗೆರೆ ಜಿಲ್ಲೆ'. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

◆◆

ಧನುಷ್ ಹೆಚ್. ಶೇಖರ್

ಬಳ್ಳಾರಿ ಜಿಲ್ಲೆಯ ಬಂಗಾಳಿ ಪಂಡಿತರು

ಬಳ್ಳಾರಿ ಜಿಲ್ಲೆಯ ಶಾಸನಗಳನ್ನು ಗಮನಿಸುವಾಗ ಅನೇಕ ವಿಷಯಗಳು ಪ್ರಮುಖವೆನಿಸುತ್ತದೆ. ಈ ಜಿಲ್ಲೆಯಲ್ಲಿ ಕ್ರಿ.ಪೂ. ೩ನೇ ಶತಮಾನದಿಂದ ಹಿಡಿದು ೧೮ನೇ ಶತಮಾನದ ಹಂಡೆ ಪಾಳೆಗಾರರವರೆಗಿನ ಒಂದು ಸಾವಿರಕ್ಕೂ ಮಿಕ್ಕ ಶಾಸನಗಳು ದಾಖಲಾಗಿವೆ. ಕರ್ನಾಟಕದ ಚರಿತ್ರೆಯ ಬಿಡಿಬಿಡಿ ಅಂಶಗಳನ್ನು ಸಮಗ್ರವಾಗಿ ಕಟ್ಟಲು ಅಭೂತಪೂರ್ವವಾದ ಮಾಹಿತಿಯನ್ನು ಈ ಎಲ್ಲಾ ಶಾಸನಗಳೂ ಹೊಂದಿವೆ. ಧಾರ್ಮಿಕವಾಗಿ, ಸಾಮಾಜಿಕವಾಗಿ ಹಲವು ಸ್ಥಿತ್ಯಂತರಗಳನ್ನು ಈ ಪ್ರದೇಶ ಎದುರಿಸಿರುವ ಪರಿಯನ್ನು ಶಾಸನಗಳು ಮೌನವಾಗೇ ಸಾರುತ್ತವೆ. ಬೌದ್ಧರಾದಿಯಾಗಿ ಜೈನರೂ ವೈದಿಕರೂ ಶೈವರೂ ಹೀಗೆ ಹಲವು ಧರ್ಮಿಯರ ನೆಲೆವೀಡಾಗಿ ಈ ಜಿಲ್ಲೆ ಕಂಡುಬರುತ್ತದೆ. ಹಾಗಾಗಿ ಈ ಧರ್ಮಗಳನ್ನು ಅನುಕರಿಸುವ, ಆರಾಧಿಸುವ ಹಾಗೂ ಪೊರೆಯುವ ಹಲವು ಜನರು ಮತ್ತು ಆಯಾ ಧರ್ಮದ ಪ್ರಮುಖರೂ ಇದ್ದ ವಿಷಯ ಶಾಸನಗಳಲ್ಲಿವೆ. ಅನೇಕ ಯತಿಗಳ ಮುನಿಗಳ ಆವಾಸಕೇಂದ್ರವೂ ಇದಾಗಿತ್ತು. ಈ ಮುನಿಗಳ ವ್ಯಕ್ತಿತ್ವ, ಧರ್ಮ ನಿಷ್ಠೆ, ಜ್ಞಾನ, ಅಧಿಕಾರ, ಅದರಿಂದ ಉಂಟಾದ ಆಡಳಿತ ಈ ಎಲ್ಲಾ ವಿಷಯಗಳನ್ನು ಶಾಸನಗಳು ಹೆಮ್ಮೆಯಿಂದ ಸಾದರಪಡಿಸುತ್ತವೆ. ಅಂತಹ ಒಂದು ಮುನಿ ಪರಂಪರೆಯ ಬಗೆಗೆ ವಿಶ್ಲೇಷಿಸುವುದೇ ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಬಳ್ಳಾರಿ ಜಿಲ್ಲೆಯ ಕುಡಿತಿನಿ, ಕೊಳಗಲ್ಲು ಮತ್ತು ಸೊಂಡೂರು ಗ್ರಾಮಗಳಲ್ಲಿ ಕ್ರಿ.ಶ. ೯೬೬ರಿಂದ ಕ್ರಿ.ಶ. ೧೨೧೮ರವರೆಗೆ 'ಕುಡಿತಿನಿಯ ಕಾರ್ತಿಕೇಯ ತಪೋವನಾಧಿಪತಿ'ಗಳೆಂದು ಕರೆದುಕೊಂಡಿರುವ ಒಂದು ಮುನಿ ಪರಂಪರೆ ಕಂಡುಬರುತ್ತದೆ. ಈ ಪರಂಪರೆ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡು, ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಕಾಲದವರೆಗೆ ಸುಮಾರು ೨೫೦ಕ್ಕೂ ಹೆಚ್ಚು ವರ್ಷಗಳ ಕಾಲ ಚಾಲ್ತಿಯಲ್ಲಿರುವುದು ತಿಳಿದುಬರುತ್ತದೆ. ಇವರ ಅಧಿಕಾರ ವ್ಯಾಪ್ತಿ ಮತ್ತು ಆ ಮೂಲಕ ಗಳಿಸಿಕೊಂಡ ವರ್ಚಸ್ಸು ಬೆರಗು ಮೂಡಿಸುವಂತಹದ್ದು. ಎರಡೂವರೆ ಶತಮಾನಗಳ ಕಾಲ ಇವರು ತಮ್ಮ ಅಧಿಕಾರವನ್ನು ಸಾರ್ಥಕವಾಗಿ ಬಳಸಿಕೊಂಡದ್ದು ಸುಲಭದ ಮಾತಲ್ಲ. ಇವರ ಬಗೆಗೆ ಪ್ರಸ್ತಾಪಿಸುವ ಸರಿಸುಮಾರು ೧೫ ಶಾಸನಗಳು ಈ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಸಂಶೋಧನಾ ವಿದ್ಯಾರ್ಥಿ
ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು
ಮೊ: ೬೩೬೨೪ ೭೦೯೪೦

ಬಂಗಾಳಿ ಪಂಡಿತರ ಮುನಿ ಪರಂಪರೆ

ಬ್ರಹ್ಮಚಾರಿ ಗಧಾದರ ಎನ್ನುವವನು ಕ್ರಿ.ಶ. ೯೬೭ರಲ್ಲಿ ವರೇಂದ್ರಿ ಪ್ರದೇಶದಿಂದ ಕೊಳಗಲ್ಲಿನಲ್ಲಿ ಕಾರ್ತಿಕೇಯನನ್ನು ಹಾಗೂ ಇತರ ದೇವತೆಗಳನ್ನು ಪ್ರತಿಷ್ಠಾಪಿಸಿದಾಗಿ

ಕೊಳಗಲ್ಲಿನ ಒಂದು ಶಾಸನ ತಿಳಿಸುತ್ತದೆ.[೧] ಮಧುಸೂದನ ಎಂಬ ಕವಿ ಈ ಶಾಸನವನ್ನು ಸಂಸ್ಕೃತದಲ್ಲಿ ಕಾವ್ಯಮಯವಾಗಿ ಬರೆದಿದ್ದಾನೆ. ಗಧಾದರನು ಕಾರ್ತಿಕೇಯನ ವಿಗ್ರಹವನ್ನೂ ಅದರ ಪೀಠವನ್ನೂ ಚಿನ್ನದಲ್ಲಿ ಮಾಡಿಸಿದಾಗಿ ತಿಳಿಯುತ್ತದೆ. ಇವನು ಸೂರ್ಯ, ಬ್ರಹ್ಮ, ವಿಷ್ಣು, ಶಿವ, ಪಾರ್ವತಿ ಮತ್ತು ವಿನಾಯಕ ದೇವರನ್ನು ಸ್ಥಾಪಿಸಿ, ದೇವಾಲಯಗಳ ನಿರ್ವಹಣೆಗಾಗಿ ಕೆರೆಯನ್ನು, ಬಾವಿಯನ್ನು ಪ್ರಯಾಣಿಕರಿಗೆ ಛತ್ರಗಳನ್ನು ಕಟ್ಟಿಸುತ್ತಾನೆ. ಕವಿ ಇವನನ್ನು ಗೌಡದೇಶದ ಮಣಿಯಂತಿದ್ದವನೆಂದೂ ವರೇಂದ್ರಿ ಪ್ರದೇಶವನ್ನು ಬೆಳಗಿದವನೆಂದು ಹೊಗಳಿದ್ದಾನೆ. ವರೇಂದ್ರಿ ಪ್ರದೇಶ ಬಂಗಾಳ ಮತ್ತು ಬಾಂಗ್ಲಾದೇಶದ ಗಡಿಯಲ್ಲಿ ಕಂಡುಬರುತ್ತದೆ.[೨] ರಾಷ್ಟ್ರಕೂಟ ಕೊಟ್ಟಿಗನ ಕಾಲದ ಕ್ರಿ.ಶ. ೯೭೧ರ ಕುಡಿತಿನಿ ಗ್ರಾಮದ ಶಾಸನವೂ ಸಹ ಇದಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತದೆ.[೩] ಇದರಲ್ಲಿ 'ವರೇನ್ದ್ರಿ ಮಣ್ಡಳೇ ಭಟ್ಟತಟಾಗ್ರ' ಎಂಬ ಉಲ್ಲೇಖವಿದ್ದುಇದೂ ಸಹ ಸಂಸ್ಕೃತದಲ್ಲಿ ಬರೆದ ಶಾಸನವೇ ಆಗಿದೆ. ಗಧಾದರನು ಸ್ಕಂದನನ್ನು ಕುಡಿತಿನಿಯಲ್ಲಿ ಪ್ರತಿಷ್ಠಾಪಿಸಿ ಭೂದಾನವನ್ನು ನೀಡಿದ ಮಾಹಿತಿ ಇದರಲ್ಲಿದೆ. ಕ್ರಿ.ಶ. ೯೬೪ರ ಕೊಳಗಲ್ಲಿನ ಶಾಸನವೊಂದು' 'ಲೋಹಾಸನ ಮಸ್ತಕ ಸ್ಥಿತನಾದ ಸ್ವಾಮಿಕಾರ್ತಿಕೇಯ ತಪೋವನದ ಅಧಿಪತಿಯಾದ ಶ್ರೀ ಗಜಾಧರಯ್ಯನು ಕೊಳ್ಗಲ್ಲಾಳೆ' ಎಂದು ತಿಳಿಸುತ್ತದೆ[೪]. ಈ ಕಾಲದಲ್ಲಿ ರಾಷ್ಟ್ರಕೂಟರ ದೊರೆ ಅಕಾಲವರ್ಷ ಮೂರನೇ ಕೃಷ್ಣನು ಅಧಿಕಾರದಲ್ಲಿರುತ್ತಾನೆ. ಆದರೆ ಈ ಶಾಸನದಲ್ಲಿ ಕಂಡುಬರುವ ಗಜಾಧರ ಮತ್ತು ಕ್ರಿ.ಶ. ೯೬೭ರ ಶಾಸನದಲ್ಲಿ ಉಲ್ಲೇಖಗೊಂಡಿರುವ ಗಧಾದರ ಇಬ್ಬರು ಒಬ್ಬರೇ ಆಗಿರುವ ಸಾಧ್ಯತೆ ಇದೆ. ಅದಲ್ಲದೆ ಬ್ರಹ್ಮಚಾರಿ ಗಧಾದರನ ಹೆಸರು ಕ್ರಮವಾಗಿ ೯೭೧, ೯೭೬, ೯೯೬ರ ವರೆಗೆ ಸರಿಸುಮಾರು ನಾಲ್ಕು ಶಾಸನಗಳಲ್ಲಿ ಕಂಡುಬಂದರೆ, ಗಜಾಧರ ಎಂಬ ಹೆಸರು ಇದೊಂದು ಶಾಸನದ ಹೊರತು ಬೇರೆಲ್ಲು ಕಂಡುಬರುವುದಿಲ್ಲ. ಆದ್ದರಿಂದ ಬಹುಶಃ ಗಜಾಧರ ಮತ್ತು ಗಧಾದರ ಒಬ್ಬನೇ ಆಗಿರುವ ಸಾಧ್ಯತೆ ಇದೆ.

ಇವನ ನಂತರದಲ್ಲಿ ಅರ್ಧ ಶತಮಾನದ ಕಾಲ ಯಾವ ಪಂಡಿತರ ದಾಖಲೆಯೂ ಇಲ್ಲ. ಕ್ರಿ.ಶ. ೧೦೫೦ರಲ್ಲಿ ಕುಡಿತಿನಿ ಶಾಸನದಲ್ಲಿ ಶ್ರೀಮದ್ದಂಡಾಸನಿ ದೇವರಸ ಎಂಬುವನು ಕಂಡುಬಂದರೂ ಈ ಮುನಿಯ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲ. ಕ್ರಿ.ಶ.೧೦೯೮ ಮತ್ತು ೧೦೯೯ರಲ್ಲಿ ವಿಶ್ವರೂಪ ಬ್ರಹ್ಮಚಾರಿ ಎಂಬ ಈ ಪರಂಪರೆಯ ಮುನಿ ಕಂಡುಬರುತ್ತಾನೆ. ಇವು ಕಲ್ಯಾಣ ಚಾಳುಕ್ಯರ ಪ್ರಸಿದ್ಧ ದೊರೆ ಆರನೇ ವಿಕ್ರಮಾದಿತ್ಯನ ಕಾಲದ ಶಾಸನಗಳಾಗಿವೆ. ಮುಂದುವರೆದು ಕ್ರಿ.ಶ. ೧೧೧೯ರಲ್ಲಿ ಶ್ರೀ ದಂಡಾಸನಿ ಯಶೋಧರ ಬ್ರಹ್ಮಚಾರಿ ಅರಸರು, ಕ್ರಿ.ಶ. ೧೧೨೦ರಿಂದ ಕ್ರಿ.ಶ. ೧೧೪೮ರವರೆಗೆ ಶ್ರೀಮದ್ದಂಡಾಸನಿ ಲೋಹಾಸನಿ ಮಾಧವ ಬ್ರಹ್ಮಚಾರಿ ಅರಸರು ಚಾಳುಕ್ಯ ದೊರೆ ಎರಡನೆ ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ಕಾಣಿಸಿಕೊಳ್ಳುತ್ತಾರೆ. ತದನಂತರದಲ್ಲಿ ಕ್ರಿ.ಶ.೧೧೬೮ರ ಕುಡಿತಿನಿಯ ಶಾಸನ "ಶ್ರೀಮದ್ದಂಡಾಸನಿ ಪುರುಷೋತ್ತಮ ಬ್ರಹ್ಮಚಾರಿಯರಸರ್ ರಾಜ್ಯಂಗೆಯ್ಯುತ್ತಮಿರೆ" ಎಂದು ತಿಳಿಸಿದರೆ, ೧೨೦೬ ಮತ್ತು ೧೨೧೦ರ ಶಾಸನಗಳು ಶ್ರೀಮದ್ದಂಡಾಸನ ಸುಖಾಸೀನರುಮಪ್ಪ ವಿನಯನಿಧಿ ವಿಷ್ಣುಕರ ದೇವನನ್ನು ಹೆಸರಿಸುತ್ತವೆ. ಪ್ರಸ್ತುತ ಈ ಶಾಸನಗಳು ಹೊಯ್ಸಳ ಎರಡನೇ ವೀರಬಲ್ಲಾಳನ ಕಾಲದಲ್ಲಿ ರಚನೆಗೊಂಡಿವೆ. ಈ ಮುನಿ ಪರಂಪರೆಯ ಕೊನೆಯ ಶಾಸನ ಕ್ರಿ.ಶ. ೧೨೧೮ರ ಕುಡಿತಿನಿಯಲ್ಲಿ ದೊರೆತಿದೆ. ಶ್ರೀಮದ್ದಂಡಾಸನಿ ಲೋಹಾಸನಿ ಉದೆಯಾಕರದೇವ ಬ್ರಹ್ಮಚಾರಿಯನ್ನು ಅವನ ಉಜ್ವಲ ಕೀರ್ತಿಯನ್ನು ಹೊಗಳುವ ಶಾಸನ ಇದಾಗಿದೆ.

ಮುನಿಗಳ ಒಡೆತನ ಮತ್ತು ಕಾರ್ಯ ನಿರ್ವಹಣೆ

ವರೇಂದ್ರಿ ಪ್ರದೇಶದಿಂದ ಕರ್ನಾಟಕದ ಬಳ್ಳಾರಿ ಸುತ್ತಮುತ್ತಲಿನ ಪ್ರದೇಶಕ್ಕೆ ವಲಸೆ ಬಂದ ಗಧಾದರನು ಕುಡಿತಿನಿ ಮತ್ತು ಕೊಳ್ಗಲ್ಲಿನ ಗ್ರಾಮಗಳಲ್ಲಿ ಕಾರ್ತಿಕೇಯನನ್ನೂ ಹಾಗೂ ಇತರ ದೇವತೆಗಳನ್ನೂ ಚಿನ್ನದಲ್ಲಿ ಮಾಡಿಸಿ ಪ್ರತಿಷ್ಠಾಪಿಸುತ್ತಾನೆ. ಇವನು ಕರ್ಮಾರಕುಲದ ಶಾಂಡಿಲ್ಯ ಗೋತ್ರದವನಾಗಿರುತ್ತಾನೆ. ಈ ಪ್ರದೇಶಕ್ಕೆ ವಲಸೆ ಬಂದ ಇವನು ಸಾಕಷ್ಟು ಸ್ಥಿತಿವಂತನೆ ಎಂಬುದರಲ್ಲಿ ಅನುಮಾನವಿಲ್ಲ. ಕ್ರಿ.ಶ. ೯೯೬ರ ಸೊಂಡೂರಿನ[೫] ಶಾಸನ ಬೆಟ್ಟದ ಮೇಲಿರುವ ಕುಮಾರಸ್ವಾಮಿ ದೇವಾಲಯದ ನಿರ್ಮಾಣಕ್ಕೆ ಕಾರಣರಾದ ಕಲ್ಕುಟಿಗ ಬೂಮವಳ, ಬಿಯಳಚಟ್ಟ, ಬೆನಗಬೋವ ಎಂಬ ಮೂವರಿಗೆ ಆರು ಮತ್ತರು ಭೂಮಿಯನ್ನೂ, ಕಮ್ಮಾರ ನಾಕನಿಗೂ ಇಷ್ಟೇ ಪ್ರಮಾಣದ ಭೂಮಿಯನ್ನು ಸರ್ವಬಾದಾ ಪರಿಹಾರವಾಗಿ ಗಧಾದರ ಅರಸನು ದಾನವಾಗಿ ನೀಡುತ್ತಾನೆ. ಕ್ರಿ.ಶ. ೯೭೬ರ ಶಾಸನದಲ್ಲಿ ಇವನನ್ನು 'ಮಯೂರಧ್ವಜವಿರಾಜಮಾನ' ಎಂದು ಕರೆದಿದೆ.[೬] ಹಂಪಣ ಭಟ್ಟೋಪಾಧ್ಯಾಯ ಎಂಬವನು ರಾಜಧಾನಿ ಕೊಟ್ಟಿತ್ತೊಣೆಯ ಭೈರವದೇವರಿಗೂ ಅಲ್ಲಿನ ಮತ್ತಿತರ ದೇವರಿಗೂ, ಕಾರ್ತಿಕೇಯ ತಪೋವನದ ಅಧಿಕಾರಿ ಗಧಾದರ ಬ್ರಹ್ಮಚಾರಿ ಹಾಗೂ ಕೊಟ್ಟಿತೊಣೆಯ ಸ್ಥಾನದ ಐದು ವರ್ಗದವರ ಸಮ್ಮುಖದಲ್ಲಿ ಭೂದಾನವನ್ನು ಮಾಡಿದ್ದಾನೆ. ಕೊಟ್ಟಿತೊಣೆಯಲ್ಲಿ ಸ್ಥಾನದ ಐದು ವರ್ಗದವರ ಉಲ್ಲೇಖ

ಶಾಸನಗಳಲ್ಲಿ ಪದೇ ಪದೇ ಕಂಡುಬರುತ್ತದೆ. ಇವರು ತಮ್ಮನ್ನು ತಾವು ಕಾರ್ತಿಕೇಯ ತಪೋವನಾಧಿಪತಿಯ ಪಾದಪದ್ಮೋಪಜೀವಿಗಳು ಎಂದು ಕರೆದುಕೊಂಡಿದ್ದಾರೆ. ಇದರ ಒಬ್ಬ ಮುಖಂಡನಾದ ಸಜಾವಿ ಚಕ್ರಪಾಣಿಯನ್ನು ಒಂದು ಶಾಸನ ಹೆಸರಿಸುತ್ತದೆ.[೭] ಮತ್ತೊಂದು ಶಾಸನದಲ್ಲಿ ಇವರನ್ನು ಪ್ರಸಿದ್ಧಶುದ್ಧಾನ್ವಯರೂ, ಸಮಸ್ತ ದೇಸಿಕ ಜನಾಧಾರರೂ ಎಂದೆಲ್ಲ ಹೊಗಳಲಾಗಿದೆ. ಇವರು ಕಾರ್ತಿಕೇಯ ತಪೋವನದ ಮುನಿ ಪರಂಪರೆಯ ಜೊತೆಯಲ್ಲಿ ಎಲ್ಲಾ ಮುಖ್ಯ ಪ್ರಸಂಗಗಳಲ್ಲೂ ಭಾಗಿಯಾಗಿರುತ್ತಾರೆ. ಇವರು ಆ ಸಮಾಜದ ಪ್ರಭಾವಿ ವ್ಯಕ್ತಿಗಳು ಎಂಬುದರಲ್ಲಿ ಎರಡು ಮಾತಿಲ್ಲ.

ಕಾರ್ತಿಕೇಯ ತಪೋವನಾಧಿಪತಿಗಳು ಪಂಚಮಹಾಶಬ್ದಗಳನ್ನು ಬಳಸುವ ಅಧಿಕಾರವುಳ್ಳವರೂ, ಜಪತಪ ಹೋಮ ಹವನವನ್ನು ನೆರವೇರಿಸುವ, ಷಟ್ಕರ್ಮಗಳನ್ನು ಪಾಲಿಸುವ, ಬ್ರಹ್ಮಚರ್ಯದಲ್ಲಿ ನಿರತರಾದ ವೈದಿಕರು ಎಂಬುದನ್ನು ಇವರ ಶಾಸನಗಳೇ ತಿಳಿಸುತ್ತವೆ. ಪಂಚಮಹಾಶಬ್ದಗಳನ್ನು ಬಳಸುವ ಅಧಿಕಾರ ಕೇವಲ ಚಕ್ರವರ್ತಿಗಳಿಗೆ, ಸಾಮಂತರಿಗೆ ಮತ್ತು ಮಂಡಲೇಶ್ವರರಿಗೆ ಮಾತ್ರ ಬಳಕೆಯಾಗುತ್ತಿತ್ತು. ಆದರೆ ೧೦ ಮತ್ತು ೧೧ನೇ ಶತಮಾನದಲ್ಲಿ ಹೊಸ ಆರ್ಥಿಕ ವ್ಯವಸ್ಥೆಯ ತೀವ್ರ ಬದಲಾವಣೆಯ ಪರಿಣಾಮವಾಗಿ ಚಿಕ್ಕ ಪುಟ್ಟ ನಾಡುಗಳನ್ನೋ ಅಥವಾ ಊರುಗಳನ್ನೋ ಆಳುವವರು ಸಹ ಈ ಬಿರುದು ಬಾವಲಿಗಳ ತಗಾದೆಗೆ ಒಳಪಟ್ಟಿದ್ದನ್ನು ಮನು ವಿ ದೇವದೇವನ್ ಅವರು ಒಂದೆಡೆ ಗುರುತಿಸುತ್ತಾರೆ.[೮] ಇವರು ಕುಡಿತಿನಿ, ಕೊಳಗಲ್ಲು ಮತ್ತು ಸೊಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿ ಕಾರ್ತಿಕೇಯ ದೇವಾಲಯವನ್ನು ನಿರ್ಮಿಸಿದ ದಾಖಲೆಗಳಿವೆ. ಕಾಳಿದಾಸನ ಕುಮಾರಸಂಭವ ಕಾವ್ಯದಲ್ಲಿ ಕಾರ್ತಿಕೇಯನೆಂದರೆ ತಾರಕಾಸುರನನ್ನು ಸಂಹರಿಸಲು ಹುಟ್ಟಿದ ಶಿವನ ಮಗನೆಂಬುದು ವೇದ್ಯವಾಗಿದೆ. ಇದಲ್ಲದೆ ಇವರು ಶಿವನ ದೇವಾಲಯಗಳಿಗೆ ದಾನದತ್ತಿ ನೀಡುವ ಸಂದರ್ಭಗಳಲ್ಲಿಯು ಪ್ರಮುಖವಾಗಿ ಹಾಜರಿರುವುದರಿಂದ ಇವರನ್ನು ಶೈವ ಮತಾವಲಂಬಿಗಳು ಎಂದು ಹೇಳಲು ಯಾವುದೇ ಅಡ್ಡಿಯಿಲ್ಲ.

ಇವರು ತಮ್ಮ ಗುರುತಿಗೆ ಕಾರ್ತಿಕೇಯನ ವಾಹನವಾದ ನವಿಲನ್ನು ಬಳಸುತ್ತಿದ್ದಿರಬೇಕು. ಆದ್ದರಿಂದಲೇ ಈ ಸುತ್ತಲಿನ ಪ್ರದೇಶದಲ್ಲಿ ನವಿಲಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಕ್ರಿ.ಶ. ೧೦೯೮ರ ಶಾಸನವೊಂದು[೯] ಸಾವಿಮೋಜ ಮತ್ತು ಚಿಕ್ಕ ಮಾದೋಜ ಎಂಬ ಇಬ್ಬರು ಶ್ರೀಸ್ವಾಮಿ ದೇವರ ಲೊಕ್ಕಿನಾಣ್ಯವನ್ನು ನವಿಲಚ್ಚಿನ ನಾಣ್ಯವಾಗಿ ಅದೇ ತೂಕದಲ್ಲಿ ಪರಿವರ್ತಿಸಿ 'ಸ್ವಾಮಿದೇವರಿಗೆ ಪ್ರತಿವರ್ಷ ೧೨ ಗದ್ಯಾಣವನ್ನು ದಾನವಾಗಿ ಬಿಡುವಂತೆ' ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಈ ಒಪ್ಪಂದಕ್ಕೆ ಆ ಕಾಲದಲ್ಲಿ ಕಾರ್ತಿಕೇಯ ತಪೋವನದ ಅಧಿಪತಿಯಾದ ವಿಶ್ವರೂಪ ಬ್ರಹ್ಮಚಾರಿ ಹಾಗೂ ಕೊಟ್ಟತೊಣೆಯ ಸ್ಥಾನದ ಐದು ವರ್ಗದವರು ಸಾಕ್ಷಿಯಾಗಿರುತ್ತಾರೆ. ಮತ್ತೊಂದು ಶಾಸನ ನವಿಲ ಮತ್ತರಿನ ಅಳತೆಯಲ್ಲಿ ಭೂದಾನ ನೀಡಿರುವ ಮಾಹಿತಿಯಿದೆ. ಈ ಮುನಿಗಳನ್ನು ಹೆಸರಿಸುವಾಗಲೂ ಅವರನ್ನು ಮಯೂರಧ್ವಜ ವಿರಾಜಮಾನರು ಎಂದೇ ಸಂಬೋಧಿಸುತ್ತಾರೆ. ಆರ್ಥಿಕ ಹೊಸ ನೀತಿಗಳ ಬದಲಾವಣೆಯ ಸಂದರ್ಭದಲ್ಲಿ ನಾಣ್ಯ ಮತ್ತು ಅಳತೆಯ ಮಾಪನಗಳು ಸಹ ಬದಲಾಗುತ್ತವೆ. ಈ ಮುನಿ ಪರಂಪರೆಯ ಪ್ರಭಾವ ವಲಯವನ್ನು ಈ ಮಾನದಂಡದಲ್ಲಿ ಅಳೆಯುವುದಾದರೆ, ಇವರು ಒಂದು ಪ್ರದೇಶದ ಮೇಲೆ ತಮ್ಮ ಸಂಪೂರ್ಣ ಅಧಿಕಾರ ಸ್ಥಾಪಿಸುವುದರಲ್ಲಿ ಮೊದಲು ಬದಲಿಸಿರುವುದು ಅಲ್ಲಿನ ಆರ್ಥಿಕ ವಹಿವಾಟಿನ ಮಾಪನಗಳನ್ನು ಎನ್ನಬಹುದು.

ಇವರ ಅಧಿಕಾರ ವ್ಯಾಪ್ತಿಯ ಬಗೆಗೆ ಹೇಳುವಾಗ ಇವರು ಕೊಳಗಲ್ಲು ಮತ್ತು ಕುಡಿತಿನಿ ಪ್ರದೇಶಗಳನ್ನು ಆಳುತ್ತಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಅಲ್ಲಿ ನಡೆಯುವ ಯಾವುದೇ ಬಗೆಯ ದಾನ ದತ್ತಿಗಳೇ ಇರಲಿ, ನ್ಯಾಯ ತೀರ್ಮಾನಗಳೇ ಆಗಿರಲಿ ಇವರ ಸಮಕ್ಷಮತೆ ಇದ್ದೇ ಇರುತ್ತಿತ್ತು. ಕ್ರಿ.ಶ. ೧೦೯೯ರ ಶಾಸನವೊಂದರಲ್ಲಿ ಮೊದಲು ಪರಮೇಶ್ವರದತ್ತಿಯಾಗಿ ನೀಡಿದ್ದ ದಾನವೊಂದನ್ನು ಭಗವತಿದೇವಿಗೆ ಮರುದತ್ತಿಯಾಗಿ ನೀಡಿದ ಪ್ರಸಂಗ ನಡೆದಿದೆ. ಇದಕ್ಕೆ ನವಿಲಕೋಲಿನಲ್ಲಿ ಇಪ್ಪತ್ತು ಮತ್ತರು ಭೂಮಿಯನ್ನು ಅಳೆದು ದಾನ ಬಿಟ್ಟಿದ್ದಾರೆ. ಹೊಯ್ಸಳರ ಕಾಲದ ಶಾಸನದಲ್ಲಿ ಶ್ರೀ ದಂಡಾಸನಿ ಲೋಹಾಸನಿ ಉದಯಾಕರ ದೇವ ಬ್ರಹ್ಮಚಾರಿಗಳು ಅಧಿಪತಿಯಾಗಿದ್ದಾಗ, ೬೦ ಒಕ್ಕಲು ತೆಲ್ಲಿಗರು ಒಂದೆಡೆ ಸೇರಿ ತೆಲ್ಲಿಗೇಶ್ವರ ದೇವಾಲಯವನ್ನು ನಿರ್ಮಿಸಿ ಅಲ್ಲಿನ ಮುನಿಗಳು, ಪಂಚಮಠಸ್ಥಾನದ ತಪೋಧನರು, ಅಸಂಖ್ಯಾತ ಗಣಗಳು ಸಭೆ ಸೇರಿದೇವರ ಅಂಗರಂಗಭೋಗಕ್ಕೆ, ನಂದಾದೀವಿಗೆಗೆ ಬರುವ ಸಿದ್ಧ ಆದಾಯದಲ್ಲಿ ಒಂದು ಭಾಗವನ್ನು ದೇವರಿಗೆ ಬಿಡುತ್ತಾರೆ.[೧೦] ಅದೇ ಕಾಲಘಟ್ಟದ ತ್ರುಟಿತ ಶಾಸನವೊಂದು[೧೧] ಮುನಿ ವಿಷ್ಣುಕರ ಬ್ರಹ್ಮಚಾರಿಯಾದಿಯಾಗಿ, ಎಕ್ಕೋಟಿ ಮಹಾದೇವರು, ಮುಂಮುರಿದಂಡಗಳು ಒಂದೆಡೆ ಸಭೆ ಸೇರಿ ಆ ಊರಿಗೆ ಅನ್ಯಾಯ ಅವಾಂತರಗಳು ಸಂಭವಿಸಿದರೆ ಅದನ್ನು ಅಲ್ಲಿನ ಸ್ಥಾನಿಕರು ತಪೋಧನರು ನೋಡಿಕೊಳ್ಳಬೇಕು ಎಂದಿದೆ. ಈ ಎಲ್ಲಾ ಆಧಾರದ ಮೇಲೆಯೇ ವಿ. ಸಂಧ್ಯಾ ಅವರು ಕಾಷಾಯಧಾರಿಗಳೂ ರಾಜ್ಯವಾಳುತ್ತಿದ್ದದು ಹೊಸತೇನಲ್ಲ ಎಂದು ಈ ಮುನಿಗಳ ವಿವರವನ್ನು

ಉದಾಹರಣೆಯಾಗಿ ನೀಡುತ್ತಾರೆ.[೧೨] ಇವೆಲ್ಲವೂ ಆ ಪ್ರದೇಶದ ಮೇಲೆ ಇವರಿಗಿದ್ದ ಅಧಿಕಾರ ಮತ್ತು ವರ್ಚಸ್ಸನ್ನೇ ಪ್ರತಿಬಿಂಬಿಸುತ್ತವೆ.

ಒಟ್ಟಾರೆಯಾಗಿ ದೂರದ ಪ್ರದೇಶದಿಂದ ಬಳ್ಳಾರಿ ವಲಯಕ್ಕೆ ವಲಸೆ ಬಂದ ಮುನಿ ಪರಂಪರೆಯೊಂದು ಎರಡೂವರೆ ಶತಮಾನಕ್ಕೂ ಹೆಚ್ಚು ಕಾಲ, ಇಲ್ಲಿ ಪ್ರಭಾವಿ ವ್ಯಕ್ತಿಗಳಾಗಿ ಅಧಿಕಾರ ಚಲಾಯಿಸಿರುವುದು ಒಂದು ಮಹತ್ತರವಾದ ವಿಷಯವಾಗಿಯೇ ಗೋಚರಿಸುತ್ತದೆ. ಪ್ರಭುತ್ವವೂ ಸಹ ಇವರಿಗೆ ವಿಶೇಷ ಗೌರವ ಪ್ರೋತ್ಸಾಹಗಳನ್ನು ಒದಗಿಸುವುದರಲ್ಲಿ ಹಿಂದೆ ಉಳಿಯಲಿಲ್ಲ. ಇವರೂ ಸಹ ಸಾಕಷ್ಟು ಸ್ಥಿತಿವಂತರಾಗಿದ್ದರು ಎಂಬುದನ್ನು ಹಿಂದೆಯೇ ಹೇಳಲಾಗಿದೆ. ಆರ್ಥಿಕ ಸ್ಥಿತಿ ಪ್ರಬಲವಾಗಿದ್ದಾಗ ಅಧಿಕಾರದ ಚುಕ್ಕಾಣಿ ಹಿಡಿಯುವುದು ಗಗನ ಕುಸುಮವಾಗಿ ಉಳಿಯುವುದಿಲ್ಲ. ಈ ಯಾವೊಂದು ಪ್ರಕ್ರಿಯೆಗಳು ಇವರ ಸಾಮಾಜಿಕ, ಧಾರ್ಮಿಕ, ರಾಜಕೀಯ ಅಭಿವೃದ್ಧಿ ಮತ್ತು ಮೇಲ್ಮುಖ ಪರಿಚಲನೆಗೆ ಸಹಕಾರಿಯಾದವು ಎಂದು ನಿಸ್ಸಂಶಯವಾಗಿ ಹೇಳಬಹುದು.

ಅಡಿಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾನಿಲಯ, ಶಾ.ಸಂ. ೧, ಬಳ್ಳಾರಿ ಜಿಲ್ಲೆ, ಕೊಳಗಲ್ಲು, ಶಾ.ಸಂ. ೫೪, ಹಂಪಿ.
೨. http://en.wikipedia.org.
೩. ಕ.ವಿ.ಶಾ.ಸಂ. ೧, ಕುಡಿತಿನಿ, ಶಾ.ಸಂ. ೨೧.
೪. ಕ.ವಿ.ಶಾ.ಸಂ. ೧, ಕೊಳಗಲ್ಲು, ಶಾ.ಸಂ ೫೨.
೫. ಕ.ವಿ.ಶಾ.ಸಂ. ೧, ಸೊಂಡೂರು, ಶಾ.ಸಂ ೦೧.
೬. ಅದೇ, ಕುಡಿತಿನಿ, ಶಾ.ಸಂ. ೩೨.
೭. ಅದೇ ಶಾ.ಸಂ. ೨೨.
೮. ಮನು ವಿ. ದೇವದೇವನ್, ಪೃಥ್ವಿಯಲ್ಲೊದಗಿದ ಘಟವು...ಕರ್ನಾಟಕದ ನಿನ್ನೆಗಳು, ಅಕ್ಷರ ಪ್ರಕಾಶನ, ಪು. ೪೭, ೨೦೧೨.
೯. ಕ.ವಿ.ಶಾ.ಸಂ–೧, ಕುಡಿತಿನಿ, ಶಾ.ಸಂ ೨೦.
೧೦. ಅದೇ ಶಾ.ಸಂ. ೨೨, ಪೂರ್ವೋಕ್ತ.
೧೧. ಅದೇ ಶಾ.ಸಂ. ೩೫.
೧೨. ಸಂಧ್ಯಾ ವಿ., 'ಕಾಷಾಯಧಾರಿಗಳ ಆಳ್ವಿಕೆ ಪುರಾತನ ಕಾಲದಲ್ಲೂ ಇತ್ತು', ವಿಶ್ವವಾಣಿ ಪತ್ರಿಕೆ, ೧೮.೪.೨೦೨೨.

◆◆

ಪಾಟೀಲ ಎಸ್.ಸಿ.

ಕೈಫಿಯತ್ತುಗಳಲ್ಲಿ ಹಂಡೆ ಹನುಮಪ್ಪನಾಯಕ

ಬಳ್ಳಾರಿ–ಅನಂತಪುರ ಪ್ರದೇಶಗಳನ್ನು ಕ್ರಿ.ಶ. ೧೫ರಿಂದ ೧೮ನೆಯ ಶತಮಾನದ ವರೆಗೆ ಆಳಿದ ಹಂಡೆ ಸಂಸ್ಥಾನಿಕರನ್ನು ಕುರಿತು ಐದು ಕೈಫಿಯತ್ತುಗಳು ಸದ್ಯ ಉಪಲಬ್ಧವಿದೆ. ೧. ಅನಂತಪುರ ಕೈಫಿಯತ್ತು, ೨. ಬಳ್ಳಾರಿ ಕೈಫಿಯತ್ತು, ೩. ಕುರುಗೋಡು ಕೈಫಿಯತ್ತು, ೪. ಮೈಸೂರು ಕೈಫಿಯತ್ತು ಹಾಗೂ ೫. ಬುಕ್ಕರಾಯಸಮುದ್ರ–ಅನಂತಸಾಗರ ಗ್ರಾಮಗಳ ಕೆರೆಯ ಕೈಫಿಯತ್ತು. ಇವುಗಳಲ್ಲಿ ಬಳ್ಳಾರಿ, ಅನಂತಪುರ ಪ್ರದೇಶಗಳನ್ನು ಆಳಿದ ಹಂಡೆ ಹನುಮಪ್ಪನಾಯಕನ ಚರಿತ್ರೆ ಕುರಿತಂತೆ ಭಿನ್ನ ಪಾಠಗಳಿದ್ದು, ಅವುಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ಹನುಮಪ್ಪನಾಯಕನ ಜೀವನದ ಪ್ರಮುಖ ಘಟ್ಟಗಳಾದ ಜನನ, ಸ್ಥಳ, ಮತ, ಪೃಷ್ಠದಲ್ಲಿ ಗೇಣುದ್ದ ಬಾಲವಿದ್ದ ಬಗೆಗೆ, ಆರಾಧ್ಯಗುರು ಸೊನ್ನಲಾಪುರದ ಶ್ರೀ ಸಿದ್ಧರಾಮೇಶ್ವರರ ಕುರಿತು, ಹನುಮಪ್ಪನಾಯಕನ ಐದು ಜನ ಮಕ್ಕಳು, ಗುರು ಪರಂಪರೆ, ವಜೀರ ಬಿರುದು ಹಾಗೂ ಕೊನೆಯ ದಿನಗಳು ಕುರಿತಂತೆ ಚರ್ಚಿಸಲಾಗಿದೆ.

ಈ ಮೇಲೆ ವಿವರಿಸಿರುವ ಐದು ಕೈಫಿಯತ್ತುಗಳಲ್ಲಿ ಆರಂಭದ ನಾಲ್ಕು ಕೈಫಿಯತ್ತುಗಳು 'ಹಂಡೆ ಪಾಳೆಗಾರರ ಕುರಿತ ಕೈಫಿಯತ್ತುಗಳು' ಎಂಬ ಕೃತಿಯಲ್ಲಿ ಕೈಫಿಯತ್ತಿನ ಪೂರ್ಣ ಪಾಠವನ್ನು ಪ್ರಕಟಿಸಲಾಗಿದೆ. ಉಳಿದಂತೆ ಐದನೇ ಕೈಫಿಯತ್ತಿನ ಪಾಠವನ್ನು ನೇತಿ ರಘುರಾಮ ಅವರಿಂದ ಅನುವಾದಗೊಂಡು 'ಬುಕ್ಕರಾಯಸಮುದ್ರ–ಅನಂತಸಾಗರ ಗ್ರಾಮಗಳ ಕೆರೆಯ ಕೈಫಿಯತ್ತು' ಹೆಸರಿನ ಕೃತಿಯಲ್ಲಿ ಪ್ರಕಟವಾಗಿರುತ್ತದೆ. ಈ ಐದು ಕೈಫಿಯತ್ತುಗಳ ವಿವರಗಳನ್ನು ಅವಲೋಕಿಸಿ ಹನುಮಪ್ಪನಾಯಕನ ಬಗೆಗೆ ಕೆಲವೊಂದು ಅಂಶಗಳ ಬಗೆಗೆ ಇಲ್ಲಿ ಚರ್ಚಿಸಲಾಗಿದೆ. ಪರಿಣಾಮವಾಗಿ ಅಸ್ಪಷ್ಟ ಸಂಗತಿಗಳಿಗೆ ಚಾರಿತ್ರಿಕವಾದ ಕೊಂಡಿಗಳನ್ನು ಬೆಸೆಯಲು ಪ್ರಯತ್ನಿಸಲಾಗಿದೆ. ಅದರಲ್ಲಿ ಬಹುಮುಖ್ಯವಾಗಿ ಹನುಮಪ್ಪನಾಯಕನ–

೧. ಜನನ ಮತ್ತು ಮತದ ವಿಚಾರ, ೨. ಪೃಷ್ಠದಲ್ಲಿ ಗೇಣುದ್ದ ಬಾಲವಿರುವ ಪ್ರಸ್ತಾಪ, ೩. ಆರಾಧ್ಯಗುರು ಸೊನ್ನಲಾಪುರದ ಶ್ರೀ ಸಿದ್ಧರಾಮೇಶ್ವರ, ೪. ಮಕ್ಕಳ ಕುರಿತು, ೫. ರಾಜಗುರುಗಳು, ೬. ವಜೀರ ಬಿರುದು, ೭. ಕೊನೆಯ ದಿನಗಳು ಕುರಿತಂತೆ ಕೈಫಿಯತ್ತುಗಳಲ್ಲಿರುವ ಲಭ್ಯ ಮಾಹಿತಿಗಳನ್ನು ಅನ್ಯ ಆಕರಗಳೊಂದಿಗೆ ಚರ್ಚಿಸಿ ಹಂಡೆ ಹನುಮಪ್ಪನಾಯಕನ ಇತಿಹಾಸವನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ.

೧. ಜನನ ಮತ್ತು ಮತದ ವಿಚಾರ : ಹನುಮಪ್ಪನಾಯಕನು ಸೊನ್ನಲಾಪುರ ಪ್ರದೇಶದ ಬಿಜಾಪುರ ಸೀಮೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದವನು. ಇವನ ತಂದೆ ಲಕ್ಷ್ಮೀನಾಯಕ. ಇವನಿಗೆ ಒಬ್ಬ ಸಹೋದರ ಮತ್ತು ಆರು ಜನ ಸಹೋದರಿಯರು ಇರುವ ವಿಷಯ ಮೇಲಿನ ಕೈಫಿಯತ್ತುಗಳಿಂದ ಹಾಗೂ

ವಿಶ್ರಾಂತ ಪ್ರಾಧ್ಯಾಪಕರು
೯, 'ತಾಯಿನೆರಳು'
ತುಂಗಭದ್ರ ಹೌಸಿಂಗ್ ಕಾಲೋನಿ
೨ನೇ ಕ್ರಾಸ್, ಹಳಿಯಾಳ ರಸ್ತೆ
ಧಾರವಾಡ–೫೮೦೦೦೧
ಮೊ: ೯೪೪೮೫ ೬೩೬೮೭

ಗೆಝೆಟಿಯರ್‌ನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಬಳ್ಳಾರಿ ಕೈಫಿಯತ್ತಿನಲ್ಲಿ ಈತನ ಮತದ ಬಗ್ಗೆ "ಕರ್ನಾಟ ದೇಶವನ್ನು ದಖಣಿಯರು ಆಕ್ರಮಿಸಿಕೊಂಡ ಬಳಿಕ, ಬಿಜಾಪುರದ ಅಲಿ ಆದಿಲ್‌ಶಾಹಿ ಬಾದುಶಹರ ಕೈಕೆಳಗೆ ಈ ದಕ್ಷಿಣರಾಜ್ಯವು ನಡೆಯುತ್ತಿರಲಾಗಿ, ಬಿಜಾಪುರದ ದೇಶದಲ್ಲಿ ಕೃಷ್ಣಾನದಿಗೆ ಉತ್ತರ ಭಾಗದಲ್ಲಿರುವ ಮೂರ್ತಿಗಿರಿಯೆಂಬ ಗ್ರಾಮದಲ್ಲಿ ಹಂಡೆ ಕುರುಬ ಜಾತಿಯವರು ಗೌಡಿಕೆ ಮಾಡಿಕೊಂಡು ಇದ್ದರು" ಎನ್ನಲಾಗಿದೆ. ಅಂದರೆ, ಹನುಮಪ್ಪನಾಯಕನ ಜಾತಿಯ ವಿಷಯವಾಗಿ ೧೬ನೇ ಶತಮಾನದ ಷಟ್ಸ್ಥಳ ಶಿವಾಯಣ ಗ್ರಂಥ, ೧೭ನೇ ಶತಮಾನದ ಭಟಾಂಗಿನಿ ಸಾಹಿತ್ಯ, ಸಿ.ಪಿ. ಬ್ರೌನ್‌ರ 'ವಾರ್ಸ್ ಆಫ್ ದಿ ರಾಜಾಸ್' ಹಾಗೆಯೇ ಅನಂತಪುರ ಕೈಫಿಯತ್ತು, ಬುಕ್ಕರಾಯಚರಿತ್ರೆ, ಬುಕ್ಕರಾಯಸಮುದ್ರ-ಅನಂತಸಾಗರ ಗ್ರಾಮಗಳ ಕೆರೆಯ ಕೈಫಿಯತ್ತು ಮುಂತಾದ ಗ್ರಂಥಗಳಲ್ಲಿ ಇವರನ್ನು ವೀರಶೈವ ಲಿಂಗಾಯತರೆಂದು ಉಲ್ಲೇಖಗಳಿವೆ. ೧೮೧೦ರಲ್ಲಿ ರಚನೆಯಾದ ಬಳ್ಳಾರಿ ಕೈಫಿಯತ್ತು, ಕುರುಗೋಡು ಕೈಫಿಯತ್ತಿನಲ್ಲಿ ಮಾತ್ರ ಇವರ ಜಾತಿಯ ಕುರಿತು ಮೇಲಿನಂತೆ ಉಲ್ಲೇಖಗೊಂಡಿದೆ. ಪ್ರಾಚೀನವಾದ ದಾಖಲೆಗಳನ್ನು ನಾವು ಇಲ್ಲಿ ಮುಖ್ಯವಾಗಿ ಪರಿಗಣಿಸಬೇಕಾಗುತ್ತದೆ. ಅಲ್ಲದೆ ಇವರು ೧೬ನೇ ಶತಮಾನದಲ್ಲಿ ಶ್ರೀಶೈಲ ನಿಡುಮಾಮಿಡಿ ಮಠದ ಜಗದ್ಗುರುಗಳನ್ನು, ಬಳ್ಳಾರಿಯ ಶ್ರೀ ಕೊಟ್ಟೂರುಮಠದ ಜಗದ್ಗುರುಗಳನ್ನು ಹಾಗೆಯೇ ಗದಗ-ಡಂಬಳದ ಶ್ರೀ ತೋಂಟದಾರ್ಯ ಜಗದ್ಗುರುಗಳನ್ನು ತಮ್ಮ ರಾಜಗುರುಗಳನ್ನಾಗಿ ಸ್ವೀಕರಿಸಿ ಅನೇಕ ದಾನದತ್ತಿಗಳನ್ನು ಹನುಮಪ್ಪನಾಯಕನು ನೀಡಿರುವುದು ಈಗಲೂ ಮಠಗಳ ದಾಖಲೆಗಳಲ್ಲಿ ಇದೆ.

೨. ಪೃಷ್ಠದಲ್ಲಿ ಗೇಣುದ್ದ ಬಾಲವಿರುವ ಪ್ರಸ್ತಾಪ : "ಯೀ ಹನುಮಪ್ಪನಾಯಕಗೆ ಬಾಲಹನುಮಪ್ಪನಾಯಕಯೆಂದು ಹೆಸರಿಗೆ ಕಾರಣವೆಂತೆಂದರೆ; ಯೀತನ ಪೃಷ್ಟದಲ್ಲು ಗೇಣು ಬಾಲಯಿದ್ದದರಿಂದ ಬಾಲಹನುಮಪ್ಪನಾಯಕಯಂದು ಹೆಸರು ಈತಗೆ" ಎಂಬ ಮಾತು ಕುರುಗೋಡು ಕೈಫಿಯತ್ತಿನಲ್ಲಿದೆ. ಕ್ರಿ.ಶ. ೧೮೧೦ರಲ್ಲಿ ಬರೆಯಿಸಿದ ಈ ಕೈಫಿಯತ್ತಿನಲ್ಲಿ ಹನುಮಪ್ಪನಾಯಕನಿಗೆ ಗೇಣುದ್ದ ಬಾಲವಿದ್ದುದನ್ನು ಯಾರೂ ನಂಬಲು ಸಾಧ್ಯವಿಲ್ಲ. ಕೆಲವು ಇಂತಹ ಅಸಂಗತವಾದ ವಿವರಗಳು ಕೈಫಿಯತ್ತುಗಳಲ್ಲಿ ಬಂದಿದ್ದು, ಅವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಚರ್ಚಿಸಬೇಕಾಗುತ್ತದೆ. ಬಾಲದ ಹನುಮಪ್ಪನಾಯಕ ಎಂಬ ಹೆಸರು ಬರಲು ಕಾರಣ- ಬಾಲಗುಡ್ಡದ ಕಾರಣವಾಗಿ ಅಲ್ಲಿ ಹನುಮಪ್ಪನಾಯಕನು ಕೋಟೆ ಗೋಡೆಯನ್ನು ನಿರ್ಮಿಸಿದ ಕಾರಣವಾಗಿ ಬಾಲಗುಡ್ಡದ ಹನುಮಪ್ಪನಾಯಕ ಎಂದು ಮುಂದೆ ಬರುಬರುತ್ತಾ ಗುಡ್ಡ ಶಬ್ದ ಹೋಗಿ ಬಾಲಹನುಮಪ್ಪನಾಯಕನೆಂದು ಹೆಸರು ಬಂದಿರುವ ಕುರಿತು ಹಲವಾರು ಜನ ವಿದ್ವಾಂಸರು ಅಭಿಪ್ರಾಯ ಪಟ್ಟಿರುವುದು ನಿಜವೆನಿಸುತ್ತದೆ. ಅಲ್ಲದೇ ಶಾಸನ ಮತ್ತು ತೆಲುಗಿನ ಕೈಫಿಯತ್ತು ಹಾಗೂ ಅನೇಕ ಸಾಹಿತ್ಯ ಕೃತಿಗಳಲ್ಲಿ ಹನುಮಪ್ಪನಾಯಕನೆಂದೇ ಕರೆಯಲಾಗಿದೆ. ಹೀಗಾಗಿ ಹನುಮಪ್ಪನಾಯಕನೆಂಬ ಹೆಸರು ಹೆಚ್ಚು ಸೂಕ್ತವಾದುದಾಗಿದೆ.

೩. ಆರಾಧ್ಯಗುರು ಸೊನ್ನಲಾಪುರದ ಶ್ರೀ ಸಿದ್ಧರಾಮೇಶ್ವರ : ಹನುಮಪ್ಪನಾಯಕನಿಗೆ ಪೂರ್ವದಿಂದಲೂ ಅವನ ಆರಾಧ್ಯದೈವವಾಗಿ ಸೊನ್ನಲಾಪುರದ (ಸೊಲ್ಲಾಪುರ) ಶ್ರೀ ಸಿದ್ಧರಾಮೇಶ್ವರರನ್ನು ಆರಾಧಿಸುತ್ತಾ ಬಂದಿರುವುದು ಅನೇಕ ದಾಖಲೆಗಳು ಮತ್ತು ಅವನು ನೀಡಿದ ದಾನಪತ್ರಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಗಳಿರುವುದನ್ನು ಕಾಣಬಹುದು. ಮುತ್ತಗಿಯಲ್ಲಿಯೂ ಸಹ ಹಂಡೆಯವರ ತೋಟದಲ್ಲಿ ಹನುಮಪ್ಪ ನಾಯಕನು ನಡೆದುಕೊಂಡು ಬಂದಿರುವ ಶ್ರೀ ಸಿದ್ಧರಾಮೇಶ್ವರರ ದೇವಸ್ಥಾನ, ಬಾವಿಗಳಿರುವುದನ್ನು ಈಗಲೂ ಗುರುತಿಸಬಹುದು. ೧೭ನೆಯ ಶತಮಾನದ ಭಟಾಂಗಿನಿ ಸಾಹಿತ್ಯದಲ್ಲಿ ಹನುಮಪ್ಪನಾಯಕನ ಮನೆಯ ದೇವರಾದ ಸೊನ್ನಲಾಪುರದ ಶ್ರೀ ಸಿದ್ಧರಾಮೇಶ್ವರರ ಕುರಿತು ವಿವರವಾದ ಮಾಹಿತಿಗಳಿರುವುದನ್ನು ಕಾಣಬಹುದು.

೪. ಮಕ್ಕಳ ಕುರಿತು : ಹನುಮಪ್ಪನಾಯಕನಿಗೆ ಐದು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಮಗಳು ಇರುವುದರ ಬಗೆಗೆ ದಾಖಲೆಗಳು ವಿವರಗಳನ್ನು ನೀಡುತ್ತವೆ. ಭಟಾಂಗಿನಿ ಸಾಹಿತ್ಯವು ಹಂಡೆ ಅರಸರ ಕುರಿತು ಪ್ರಾಚೀನವಾದ ಕಾವ್ಯವಾಗಿದ್ದು, ಇದರಲ್ಲಿ ಹನುಮಪ್ಪನಾಯಕನ ಮಕ್ಕಳನ್ನು "ಧರಿಗೆ ಧರ್ಮಜನಂಕುಶ ಪರಬಲದೊಳ್ ಬೀಮದೇವ ಅರ್ಜುನ ರಾಮ? ಧುರಧೀರನು ನಕುಲ ಮಲ್ಕನು ನೆರೆಗಲೆ ಸಹದೇವ ಚಿಕ್ಕಮಲ್ಕವಜೀರಾ॥" ಎಂದು ಐದು ಜನ ಮಕ್ಕಳನ್ನು ಮಹಾಭಾರತದ ಪಾಂಡವರಿಗೆ ಹೋಲಿಸಿರುವುದು ಪ್ರಮುಖವಾಗಿ ಕಂಡುಬರುತ್ತದೆ. ಅಲ್ಲದೆ ಭಟಾಂಗಿನಿ ಸಾಹಿತ್ಯದಲ್ಲಿಯೇ ಐದು ಜನ ಮಕ್ಕಳನ್ನು ಬಿಜಾಪುರದ ಬಾದುಷಹಾನ ಆಸ್ಥಾನಕ್ಕೆ ಕರೆದುಕೊಂಡು ಹೋಗಿರುವುದು, ಅಲ್ಲಿ ನಡೆದ ಘಟನೆಯ ವಿವರ ಅನೇಕ ಕೈಫಿಯತ್ತುಗಳಲ್ಲಿ ದಾಖಲಾಗಿರುವುದನ್ನು ಮೇಲಿನ ವಿವೇಚನೆಯಲ್ಲಿ ಗಮನಿಸಬಹುದು. ಅನಂತಪುರ ಕೈಫಿಯತ್ತಿನಲ್ಲಿ ಒಬ್ಬ ಮಗನಿಗೆ ನಾಲ್ಕು ಜನ ಮೊಮ್ಮಕ್ಕಳಿರುವುದನ್ನು ಉಲ್ಲೇಖಿಸುತ್ತದೆ. ಐದು ಜನ ಮಕ್ಕಳಿರುವ ಪ್ರಾಚೀನ ಉಲ್ಲೇಖಗಳು, ಅನೇಕ ಘಟನೆಗಳು ನಮಗೆ ಸ್ಪಷ್ಟವಾದ ಮಾಹಿತಿಯನ್ನು ನೀಡುವುದರಿಂದ ಐದು ಜನ ಮಕ್ಕಳೆಂದು ಸ್ಪಷ್ಟವಾಗಿ ಉಲ್ಲೇಖಿಸಬಹುದಾಗಿದೆ. ಅಳಿಯ ರಾಮರಾಯನು ಹನುಮಪ್ಪನಾಯಕನಿಗೆ ಐದು ಜನ ಮಕ್ಕಳಿರುವುದನ್ನು ಗುರುತಿಸಿ ಐದು ಭಾಗದಲ್ಲಿ ಉಂಬಳಿಯನ್ನು ಹಾಕಿಕೊಟ್ಟ ವಿವರಗಳು ಕೈಫಿಯತ್ತಿನಲ್ಲಿ ದಾಖಲಾಗಿವೆ.

೫. ರಾಜಗುರುಗಳು : ಹನುಮಪ್ಪನಾಯಕನಿಗೆ ಆಂಧ್ರಪ್ರದೇಶದಲ್ಲಿ ಶ್ರೀಶೈಲ ನಿಡುಮಾಮಿಡಿ ಜಗದ್ಗುರು ಪೀಠದ ಸ್ವಾಮೀಜಿಯವರು, ಬಳ್ಳಾರಿಯಲ್ಲಿ ಜಗದ್ಗುರು ಹೇಮಕೂಟ ಕೊಟ್ಟೂರೇಶ್ವರ ಸ್ವಾಮೀಜಿಯವರು ಹಾಗೂ ಬಂಕಾಪುರ ಪ್ರದೇಶದಲ್ಲಿ ಗದಗ–ಡಂಬಳದ ಸಂತೆ ತೋಂಟೇಂದ್ರ ಮಹಾಸ್ವಾಮಿಗಳನ್ನು ತನ್ನ ರಾಜಗುರುಗಳನ್ನಾಗಿ ಮಾಡಿಕೊಂಡು ಅನೇಕ ದಾನ–ದತ್ತಿಗಳನ್ನು ಈ ಮಠಗಳಿಗೆ ನೀಡಿದ ವಿವರಗಳು ಇಂದಿಗೂ ಮಠಗಳಲ್ಲಿ ಕಾಣಬಹುದು. ೧೬ನೆಯ ಶತಮಾನದಲ್ಲಿ ಹೀಗೆ ವೀರಶೈವ ಲಿಂಗಾಯತ ಜಗದ್ಗುರುಗಳ ಮಾರ್ಗದರ್ಶನದಲ್ಲಿ ರಾಜ್ಯಭಾರ ಮಾಡಿರುವ ವಿವರವು ಮಠದ ಕಡತಗಳಲ್ಲಿ ಉಲ್ಲೇಖಗೊಂಡಿರುವುದನ್ನು ಗುರುತಿಸಬಹುದಾಗಿದೆ.

೬. ವಜೀರ ಬಿರುದು : ಬಿಜಾಪುರದ ಅಲಿಆದಿಲ್‌ಶಾಹಿ ಅರಸರಿಂದ ರಾಜಮನ್ನಣೆ ಪಡೆದು "ವಜೀರ" ಎಂಬ ಬಿರುದನ್ನು ಪಡೆದಿರುವುದು ಮೇಲಿನ ಕೈಫಿಯತ್ತು, ಶಾಸನಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡಿರುವುದನ್ನು ಗಮನಿಸಬಹುದಾಗಿದೆ. 'ವಜೀರ' ಎಂಬ ಬಿರುದು ಮುಂದೆ ಇವನ ಇಬ್ಬರು ಮಕ್ಕಳಿಗೆ ಮಲಕಪ್ಪನಾಯಕ ಮತ್ತು ಚಿಕ್ಕಮಲಕಪ್ಪನಾಯಕನಿಗೂ ಮುಸ್ಲೀಮ್ ಅರಸರು ಬಿರುದು ನೀಡಿರುವುದನ್ನು ದಾಖಲೆಗಳು ದೃಢಪಡಿಸುತ್ತವೆ.

೭. ಕೊನೆಯ ದಿನಗಳು : ಹನುಮಪ್ಪನಾಯಕನು ದೀರ್ಘಾಯುಷಿಯಾಗಿ ಬದುಕಿರುವುದು ಕೆಲವು ಪ್ರಮುಖ ಆಧಾರಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಇವನು ಮೊದಲು ಬಳ್ಳಾರಿಯ ಜಗದ್ಗುರು ಹೇಮಕೂಟ ಮಠದ ಶ್ರೀ ಕಪ್ಪಿನ ಚನ್ನಬಸವಸ್ವಾಮಿಗಳಿಗೆ ಶಾ.ಶ. ೧೪೪೯ (ಕ್ರಿ.ಶ. ೧೫೧೭)ರಲ್ಲಿ ನಾಲ್ಕು ಸಲ ದಾನ ನೀಡಿರುವ ವಿವರವಳನ್ನು ಮಠದ ದಾಖಲೆಗಳಲ್ಲಿ ಕಾಣಬಹುದು. ಇವನು ಬಳ್ಳಾರಿಗೆ ಬರುವ ಪೂರ್ವದಲ್ಲಿ ಸುಮಾರು ೨೫ ರಿಂದ ೩೦ ವರ್ಷಗಳಾದರೂ ಆಗಿರುವ ಸಾಧ್ಯತೆಯಿದೆ. ಐದು ಜನ ಮಕ್ಕಳಿರುವ ಪ್ರಸ್ತಾಪವು ಕೈಫಿಯತ್ತುಗಳಲ್ಲಿ ದಾಖಲಾಗಿದೆ. ಹೀಗಾಗಿ ಹನುಮಪ್ಪನಾಯಕನ ಜನನದ ಕಾಲವನ್ನು ಕ್ರಿ.ಶ. ಸುಮಾರು ೧೪೮೭ ಎಂದು ಅಂದಾಜಿಸಲಾಗಿದೆ. ಹಾಗೆಯೇ ಅವನು ಮರಣ ಹೊಂದಿದ ಕುರಿತು ಕೈಫಿಯತ್ತುಗಳಲ್ಲಿ ಕ್ರಿ.ಶ. ೧೫೮೩ ಎಂದು ಇದೆ. ಆದರೆ, ಈಗ ಹನುಮಪ್ಪನಾಯಕನ ಕುರಿತಾದ ಶಾಸನವೊಂದು ಉಪಲಬ್ಧವಾಗಿದ್ದು, ಕ್ರಿ.ಶ. ೧೫೮೮ರ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಮರಳಿ ಶಾಸನವು ಅವನ ಉಲ್ಲೇಖದ ಕೊನೆಯ ಶಾಸನವಾಗಿದ್ದು, ಈತನ ಜೀವಿತಾವಧಿ ಕಾಲವನ್ನು ಕ್ರಿ.ಶ. ೧೫೮೮ರವರೆಗೆ ಎಂದು ಗುರುತಿಸಲಾಗಿದೆ. ಶಾಸನ ಅಂಶವು ಕೈಫಿಯತ್ತಿನಲ್ಲಿರುವ ತೇದಿಗಿಂತ ಭಿನ್ನವಾಗಿದ್ದು, ಈ ಹೊಸ ವಿಷಯವು ಬೆಳಕಿಗೆ ಬಂದಿರುತ್ತದೆ.

ಈ ಮೇಲಿನ ಅಂಶಗಳು ಹನುಮಪ್ಪನಾಯಕನ ಕುರಿತಾದ ಕೈಫಿಯತ್ತುಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಇಲ್ಲಿ ಅವನ ಕುರಿತಾದ ಹಲವಾರು ಊಹಾಪೋಹಗಳಿಗೆ ತೆರೆ ಎಳೆದು ವಾಸ್ತವಾಂಶದತ್ತ ಗಮನ ಹರಿಸಲಾಗಿದೆ.

ಆಕರಗ್ರಂಥಗಳು

೧. ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಜ.ಚ.ನಿ. (ಸಂ.), ಶ್ರೀಶೈಲಪೀಠ ದರ್ಶನ, ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ಬೆಂಗಳೂರು.

೩. ಪಾಟೀಲ ಎಸ್.ಸಿ. (ಸಂ.), ೨೦೦೨, ಬುಕ್ಕರಾಯಚರಿತ್ರೆ (ಹಂಡೆ ಅರಸು ಮನೆತನದ ವಂಶಾವಳಿ), ಶ್ರೀ ಸಿದ್ಧರಾಮೇಶ್ವರ ಪ್ರಕಾಶನ, ವಿಜಯಪುರ.

– ೨೦೧೪, ಹಂಡೆ ಪಾಳೆಯಗಾರರ ಕುರಿತ ಕೈಫಿಯತ್ತುಗಳು, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

– ೨೦೧೫, ಟಿ.ಎಚ್.ಎಂ. ಸದಾಶಿವಯ್ಯನವರ ಕರ್ನಾಟಕದ ಗಡಿಗೆರೆಗಳು, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

– ೨೦೧೫, ಹಂಡೆ ಪಾಳೆಯಗಾರರ ಇತಿಹಾಸ ಮತ್ತು ಪರಂಪರೆ, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

– ೨೦೧೬, ಭಟಾಂಗನಿ ಸಾಹಿತ್ಯ, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

– ೨೦೨೧, ಹಂಡೆ ಸಂಸ್ಕೃತಿ, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

– ೨೦೨೨, ಬಳ್ಳಾರಿ–ಅನಂತಪುರದ ಅರಸ ಹಂಡೆ ಹನುಮಪ್ಪನಾಯಕ, ಹಂಡೆ ಸಂಸ್ಕೃತಿ ಪ್ರತಿಷ್ಠಾನ, ಧಾರವಾಡ.

೪. ನೇತಿ ರಘುರಾಮ (ಅನು), ೨೦೨೨, ಬುಕ್ಕರಾಯಸಮುದ್ರಂ–ಅನಂತಸಾಗರ ಗ್ರಾಮಗಳ ಕೆರೆಯ ಕೈಫಿಯತ್ತು, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಕಲಬುರಗಿ.

೫. ದೇವರಕೊಂಡಾರೆಡ್ಡಿ (ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೭, ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೨೦.


◆◆

೮೬

ಕಾರ್ತಿಕ ಕಾಮಣ್ಣ

ಗಳಗನಾಥ ಗಳಗೇಶ್ವರ ದೇವಸ್ಥಾನ ಒಂದು ಅಭಿಯಾಂತ್ರಿಕ ವಿಶ್ಲೇಷಣೆ


ಹಾವೇರಿ ಜಿಲ್ಲೆ, ಹಾವೇರಿ ತಾಲೂಕಿನ ತುಂಗಭದ್ರಾ ಮತ್ತು ವರದಾ ನದಿಗಳ ಸಂಗಮ ಕ್ಷೇತ್ರ ಗಳಗನಾಥ. ಈ ಗ್ರಾಮದಲ್ಲಿ ೧೧ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರಿಂದ ನಿರ್ಮಿತವಾದ ಶ್ರೀ ಗಳಗೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನದ ನಿರ್ಮಾಣಕ್ಕೂ ಮುಂಚೆ ಶಾಸನಗಳಲ್ಲಿ ಈ ಸ್ಥಳವನ್ನು ಪುಲ್ಲುನಿ ಅಥವಾ ಹುಲ್ಲುನಿ ಎಂದು ಕರೆಯಲಾಗಿದೆ (SII Vol XVIII, No. 88). ಗಳಗನಾಥ ಗ್ರಾಮವು ತುಂಗಾ, ಭದ್ರಾ ಮತ್ತು ಕುಮುದ್ವತೀ ನದಿಗಳ ಸಂಗಮದಿಂದ ಹರಿದುಬರುವ ತುಂಗಭದ್ರಾ ಹಾಗೂ ವರದಾ ಮತ್ತು ಧರ್ಮಾನದಿಗಳ ಸಂಗಮದಿಂದ ಹರಿದುಬರುವ ವರದಾ ನದಿಗಳ ಪವಿತ್ರ ಸಂಗಮ ಕ್ಷೇತ್ರವಾಗಿದ್ದು, 'ಪಂಚನದಿ ಸಂಗಮ ಕ್ಷೇತ್ರ' ಎಂದು ಕರೆಸಿಕೊಳ್ಳುತ್ತದೆ. ಇಷ್ಟೇ ಅಲ್ಲದೆ, ಮೋಕ್ಷ ಪ್ರದಾಯಕ ಕಾಶಿ ಕ್ಷೇತ್ರದಲ್ಲಿ ದೇವನದಿ ಗಂಗೆಯು ಉತ್ತರ ದಿಕ್ಕಿನ ಕಡೆಗೆ ಹರಿಯುವಂತೆಯೇ ಈ ಸ್ಥಳದಲ್ಲಿ ತುಂಗಭದ್ರಾ ನದಿಯು ಉತ್ತರಪಥ ಗಾಮಿನಿಯಾಗಿದ್ದು ಪುಣ್ಯದ ಕ್ಷೇತ್ರ ಎಂದು ಸ್ಥಳೀಯರಲ್ಲಿ ನಂಬುಗೆ ಯಿದೆ. (ಚಿತ್ರ ೧)



ಚಿತ್ರ ೧ – ಹಾವೇರಿ ಜಿಲ್ಲೆಯ ಹೈಡ್ರೋಗ್ರಾಫ್ ನಕ್ಷೆ

ಗಳಗೇಶ್ವರ ದೇವಸ್ಥಾನದ ಹೊರಮೈ ಆಕಾರವು ಭಾರತದ ಉಪಖಂಡದಲ್ಲಿಯೇ ಅತಿ ವೈಶಿಷ್ಟ್ಯವಾಗಿ ಕಂಡುಬರುವಂಥದ್ದು. ಪೂರ್ವಾಭಿಮುಖವಾಗಿ ತುಂಗಭದ್ರೆಯನ್ನು ಎದುರು ನೋಡುತ್ತಿರುವ ಔತ್ತರೇಯ ದ್ರಾವಿಡ ಶೈಲಿಯ ದೇವಸ್ಥಾನವು ಪೂರ್ವ, ಉತ್ತರ ಮತ್ತು ದಕ್ಷಿಣದ ದಿಕ್ಕುಗಳಲ್ಲಿ ಸೋಪಾನಗಳನ್ನು ಹೊಂದಿದ್ದು, ತಲಚ್ಛಂದ ವಿನ್ಯಾಸದಲ್ಲಿ ಮುಖಮಂಟಪ,

ಎ-೬೦೩
ಆರ್ಜ್ ಅರ್ಬನ್ ಬ್ಲೂಮ್ ವಸತಿ
ಸಂಕೀರ್ಣ, ಗೊರಗುಂಟೆಪಾಳ್ಯ
ಬೆಂಗಳೂರು-೫೬೦೦೨೨
ಮೊ: ೯೬೬೩೩ ೫೭೦೦೫




ಚಿತ್ರ ೨ – ಗಳಗೇಶ್ವರ ದೇವಸ್ಥಾನ, ಗಳಗನಾಥ ಗ್ರಾಮ, ಹಾವೇರಿ ಜಿಲ್ಲೆ

ನವರಂಗ ಅಂತರಾಳ ಮತ್ತು ಗರ್ಭಗೃಹಗಳನ್ನು ಒಳಗೊಂಡಿದೆ. (ಚಿತ್ರ ೨). ದೇವಸ್ಥಾನದ ಶಿಖರದ ಭಾಗಗಳು ಮೇಲಿನಿಂದ ಕೆಳಕ್ಕೆ ಇಂತಿವೆ – ಕಲಶ, ಘಂಟಾ, ವೇದಿ, ಶಿಖರ, ಜಂಘಾ ಮತ್ತು ಪೀಠ. ಔತ್ತರೇಯ ದ್ರಾವಿಡ ಶೈಲಿಯ ಈ ದೇವಸ್ಥಾನದ ಶಿಖರವು ಚತುರ್ಭೂಮಿ ರಚನೆಯಾಗಿದ್ದು, ಭದ್ರ ಭಾಗದಲ್ಲಿ ಶಾಲಾ, ಪ್ರತಿಭದ್ರ ಭಾಗದಲ್ಲಿ ಪಂಜರಗಳು ಮತ್ತು ಕರ್ಣ ಭಾಗದಲ್ಲಿ ಕೂಟಗಳನ್ನು ಕಾಣಬಹುದಾಗಿದೆ. (ಚಿತ್ರ ೩)

* ಈ ಶಿಖರದ ಮೊದಲನೇ ವೈಶಿಷ್ಟ್ಯ – ನಮಗೆ ಕಾಣಸಿಗುವ ಪುನರ್ಜಂಘಾ ಭಾಗವು ಮೊದಲನೇ ಭೂಮಿಗೆ ಜಂಘಾ ಭಾಗವಾಗಿ ಸುಸ್ಪಷ್ಟವಾಗಿ ಗೋಚರಿಸುತ್ತದೆ. ಎರಡನೇ ಮತ್ತು ಅತಿ ಮುಖ್ಯ ವೈಶಿಷ್ಟ್ಯ – ಪುನರ್ಜಂಘಾ ಭಾಗದಿಂದ ಕೆಳಗೆ ಮೆಟ್ಟಿಲು ಮೆಟ್ಟಿಲಾಗಿ ಕಾಣಿಸಿರುವ "ಹೆಚ್ಚುವರಿ ಇಂಬು".

ಈ ಸಂಶೋಧನಾ ಪ್ರಬಂಧವು ಈ ಇಂಬಿನ ಅವಶ್ಯಕತೆ ಮತ್ತು ಅದರ ಅಭಿಯಂತ್ರಿಕ ವಿಶ್ಲೇಷಣೆಗಳ ಮೇಲೆ ಬೆಳಕು ಚೆಲ್ಲುವ ಒಂದು ಪ್ರಯತ್ನ. ಈ ಹೆಚ್ಚುವರಿ ಇಂಬು ಇದೇ ಪರಿಸರದಲ್ಲಿ ಅನತಿ ದೂರದಲ್ಲಿ ಹರಡಿಕೊಂಡಿರುವ ಹರಳಹಳ್ಳಿ ಸೋಮೇಶ್ವರ ದೇವಸ್ಥಾನ, ಕುರುವತ್ತಿಯ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ಚೌಡಯ್ಯದಾನಪುರದ ಮುಕ್ತಿನಾಥೇಶ್ವರ ದೇವಸ್ಥಾನಗಳಲ್ಲಿ




ಚಿತ್ರ ೩ – ಗಳಗೇಶ್ವರ ದೇವಸ್ಥಾನದ ಶಿಖರದ ಅಂಗಗಳು ಮತ್ತು ಹೆಚ್ಚುವರಿ ಇಂಬು

HAVERI DISTRICT SOIL TYPES



ಚಿತ್ರ ೪ – ಹಾವೇರಿ ಜಿಲ್ಲೆಯ ಮಣ್ಣಿನ ಪರಿಸರಗಳು



ಚಿತ್ರ ೫ – ಕರ್ನಾಟಕದ ಮಣ್ಣುಗಳು (ಯುರೋಪಿಯನ್ ಸಾಯಿಲ್ ರಿಸರ್ಚ್ ಫೌಂಡೇಶನ್)

ಮಣ್ಣಿನ ಸಂಖ್ಯೆ	ಮಣ್ಣಿನ ಲಕ್ಷ್ಯ ಲಕ್ಷಣ
೧೩	Moderately shallow, welldrained, gravelly clay soils on gently sloping interfluves, with slight erosion; *associated with:* Moderately shallow, welldrained, gravelly clay soils, moderately eroded.
೪೮	Very deep, moderately welldrained, calcareous, cracking clay soils on gently sloping interfluves and valleys, with slight erosion; *associated with:* Deep, welldrained, calcareous, clayey soils.
೫೦	Deep, moderately welldrained, cracking clay soils on gently sloping interfluves, with severe erosion; *associated with:* Deep, moderately welldrained, calcareous, cracking clay soils.

ಅಂಕಣ ೧ – ಹಾವೇರಿ ಪರಿಸರದ ಮಣ್ಣುಗಳ ಲಕ್ಷ್ಯ ಲಕ್ಷಣಗಳು

ಯಾಕೆ ಕೊಟ್ಟಿಲ್ಲ ಎನ್ನುವುದು ನಮ್ಮನ್ನು ಜಿಜ್ಞಾಸೆಗೆ ದೂಡುತ್ತದೆ. ಸರ್ಕಾರಿ ಕಡತಗಳ ಹಾಗೂ ಮಳೆ ಅಧ್ಯಯನ ಸಂಶೋಧನೆಗಳ ಪ್ರಕಾರ ಪ್ರಸ್ತುತ ಹಾವೇರಿ ಜಿಲ್ಲೆಯ ಗಳಗನಾಥ, ಚೌಡಯ್ಯದಾನಪುರ ಹಾಗೂ ಚಿಕ್ಕ ಕುರುವತ್ತಿ ಗ್ರಾಮಗಳಲ್ಲಿ ಪ್ರತಿ ವರ್ಷವೂ ನೆರೆಹಾವಳಿಯನ್ನು ಅಂದಾಜಿಸಲಾಗುತ್ತದೆ. ತುಂಗಭದ್ರೆಯ ನೆರೆಯಿಂದ ದೇವಸ್ಥಾನವನ್ನು ರಕ್ಷಿಸಲು ಈ ಇಂಬನ್ನು ನೀಡಿರುವುದೇ ಆದರೆ, ದೇವಸ್ಥಾನ ಮುಖ ಮಾಡಿರುವ ಎಡೆಯಲ್ಲಿ ರಕ್ಷಣೆಗಾಗಿ ಒಂದು ತಡೆಗೋಡೆಯನ್ನು ಯಾಕೆ ನಿರ್ಮಿಸಲಿಲ್ಲ ಎನ್ನುವ ತಾರ್ಕಿಕ ಪ್ರಶ್ನೆ ಉದ್ಭವಿಸುತ್ತದೆ.

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನಾವು ಗಳಗನಾಥ ಪರಿಸರದ ಮಣ್ಣನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಗಳಗನಾಥ ಪರಿಸರದಲ್ಲಿ ಎರಡು ರೀತಿಯ ಕರಿಮಣ್ಣು ಮತ್ತು ಒಂದು ರೀತಿಯ ಆವೆ ಮಣ್ಣಿನ ಪದರಗಳು ಗೋಚರವಾಗುತ್ತದೆ. ಅದರಲ್ಲಿಯೂ ಈ ಪರಿಸರದ ಮಣ್ಣು ಕರಿ ಮಣ್ಣು ಮತ್ತು ಆವೆ ಮಣ್ಣುಗಳ ಸ್ಥಿತ್ಯಂತರದ ಎಡೆಗಳಲ್ಲಿದ್ದು, ಹೆಚ್ಚಿನ ಅಂಶ ಆವೆಮಣ್ಣಿನಿಂದ ಕೂಡಿದ್ದು, ಆಳವಾದ ಪದರವನ್ನು ಒಳಗೊಂಡಿದೆ. (ಚಿತ್ರ ೪)

ಯುರೋಪಿಯನ್ ಸಾಯಿಲ್ ರಿಸರ್ಚ್ ಫೌಂಡೇಶನ್ ಸಂಶೋಧನೆಯ ಪ್ರಕಾರ (ಚಿತ್ರ ೫) ಗಳಗನಾಥ ಮತ್ತು ಚಿಕ್ಕ ಕುರುವತ್ತಿ ಗ್ರಾಮಗಳು ೪೮ನೇ ಸಂಖ್ಯೆಯ ಮಣ್ಣಿನ ಪದರವನ್ನು ಒಳಗೊಂಡಿದ್ದರೆ, ಹರಳಹಳ್ಳಿ ೧೩ನೇ ಸಂಖ್ಯೆ ಮತ್ತು ಚೌಡಯ್ಯದಾನಪುರ ೫೦ನೇ ಸಂಖ್ಯೆಯ ಮಣ್ಣನ್ನು ಒಳಗೊಂಡಿದೆ. ಈ ಕೆಳಗಿನ ಅಂಕಣದಲ್ಲಿ ಈ ಸಂಖ್ಯೆಗಳಿಗೆ ಅನುಗುಣವಾಗುವಂತೆ ಮಣ್ಣುಗಳ ಲಕ್ಷ್ಯ ಮತ್ತು ಲಕ್ಷಣಗಳನ್ನು ತಿಳಿಸಲಾಗಿದೆ.


ಮೇಲಿನ ಅಂಕಣದಿಂದ ನಮಗೆ ತಿಳಿದುಬರುವುದು ಗಳಗನಾಥ ಪರಿಸರದಲ್ಲಿನ ಮಣ್ಣು ಆವೆ ಮಣ್ಣಿನಿಂದ ಕೂಡಿದ್ದು, ಆಳವಾದ ಪದರವನ್ನು ಹೊಂದಿದೆ. ಆವೆ ಮಣ್ಣು ಗಾಳಿಯಲ್ಲಿನ ತೇವಾಂಶವನ್ನು ಅಥವಾ ಮಳೆಯ ನೀರನ್ನು ಹೀರಿಕೊಂಡು ಚಳಿಗಾಲ–ಮಳೆಗಾಲಗಳಲ್ಲಿ ಉಬ್ಬುತ್ತದೆ. ಹಾಗೆಯೇ, ಬೇಸಿಗೆಯಲ್ಲಿ ಹಿಡಿದಿಟ್ಟುಕೊಂಡಿರುವಂಥ ನೀರನ್ನು ಒಮ್ಮೆಲೇ ಬಿಟ್ಟು ಕುಗ್ಗುತ್ತದೆ. ಈ ಪ್ರಕ್ರಿಯೆಯಿಂದ ಮೇಲ್ಕಟ್ಟಡಗಳ ಸಮಗ್ರತೆಗೆ ಭಂಗ ಉಂಟಾಗುತ್ತದೆ. ಇದರಿಂದ ಮೇಲ್ಕಟ್ಟಡ ಗಳಲ್ಲಿ ಕುಸಿಯುವಿಕೆ ಉಂಟಾಗಿ ಕೆಲವು ಸಂದರ್ಭಗಳಲ್ಲಿ ಕಟ್ಟಡವೇ ಮುರಿದು ಬೀಳಬಹುದು.

ಇದಲ್ಲದೆ, ಮಣ್ಣಿನ ಪದರದ ಆಳ ಯಾಕೆ ಇಲ್ಲಿ ಮುಖ್ಯವಾಗುತ್ತದೆ ಎಂದರೆ ಮೇಲ್ಕಟ್ಟಡದ ಭಾರದ ಪರಿಮಾಣಕ್ಕೂ ಮಣ್ಣಿನ ಧಾರಣಾ ಸಾಮರ್ಥ್ಯಕ್ಕೂ ನೇರವಾದ


ನಂಟಿದ್ದು, ಇವೆರಡೂ ಸೇರಿ ಮೇಲ್ಕಟ್ಟಡದ ಸಮಗ್ರತೆಗೆ ನೇರಾನೇರ ಕೊಂಡಿಯನ್ನು ಹೊಂದಿವೆ.

೧. ಮೇಲ್ಕಟ್ಟಡದ ಭಾರದ ಪರಿಮಾಣ ಮಣ್ಣಿನ ಧಾರಣಾ ಸಾಮರ್ಥ್ಯವನ್ನು ಮೀರದೆ ಹೋದರೆ ಕಟ್ಟಡವು ಸುಸ್ಥಿರವಾಗಿರುತ್ತದೆ.


೨. ಮೇಲ್ಕಟ್ಟಡದ ಭಾರದ ಪರಿಣಾಮ ಪರಿಮಾಣ ಮಣ್ಣಿನ ಧಾರಣಾ ಸಾಮರ್ಥ್ಯವನ್ನು ಮೀರಿದರೆ ಕಟ್ಟಡವು ಕುಸಿಯಲು ಪ್ರಾರಂಭಿಸುತ್ತದೆ. ಇದರಲ್ಲಿ ಎರಡು ವಿಧಗಳು.
೧. ಮೇಲ್ಕಟ್ಟಡದ ಭಾರದ ಪರಿಮಾಣ ಮತ್ತು ಮಣ್ಣಿನ ಧಾರಣಾ ಸಾಮರ್ಥ್ಯವು ಎರಡೂ ಆಸುಪಾಸಿನಲ್ಲಿದ್ದರೆ ಕಟ್ಟಡ ಸಮಾನವಾಗಿ ಕುಸಿಯುತ್ತದೆ. ೨. ಮೇಲ್ಕಟ್ಟಡದ ಭಾರದ ಪರಿಮಾಣ ಒಂದು ಮೂಲೆಯಲ್ಲಿ ಹೆಚ್ಚಿದ್ದು ಇನ್ನೊಂದು ಮೂಲೆಯಲ್ಲಿ ಕಡಿಮೆ ಇದ್ದು ಮಣ್ಣಿನ ಧಾರಣಾ ಸಾಮರ್ಥ್ಯವನ್ನು ಅದು ಮೀರುವಂತಿದ್ದರೆ, ಕಟ್ಟಡವು ಅಸಮಾನವಾಗಿ ಕುಸಿದು ತನ್ನ ಸಮಗ್ರತೆಯನ್ನು ಕಳೆದುಕೊಳ್ಳುತ್ತದೆ. (ಚಿತ್ರ ೫ – ೬)'



ಚಿತ್ರ ೫ – ಸುಸ್ಥಿರ ಮೇಲ್ಕಟ್ಟಡ



ಚಿತ್ರ ೬ – ಮೇಲ್ಕಟ್ಟಡದ ಸಮಾನ ಕುಸಿಯುವಿಕೆ



ಚಿತ್ರ ೬ – ಮೇಲ್ಕಟ್ಟಡದ ಅಸಮಾನ ಕುಸಿಯುವಿಕೆ

ಈಗ ಈ ಅಂಶಗಳನ್ನು ನಾವು ಗಳಗನಾಥ ದೇವಸ್ಥಾನಕ್ಕೆ ಅನ್ವಯಿಸಿ ನೋಡುವುದಾದರೆ ಮುಖಮಂಟಪದ ಅಗಲ ಉತ್ತರ–ದಕ್ಷಿಣ ದಿಕ್ಕಿನಲ್ಲಿ, ಸೋಪಾನದಿಂದ ಸೋಪಾನದ ವರೆಗೆ ೧೪ ಮೀಟರ್ ಇದ್ದು, ದೇವಸ್ಥಾನದ ಉದ್ದ ಮುಖ ಮಂಟಪದಲ್ಲಿ ೨೦ ಮೀಟರುಗಳಷ್ಟಿದೆ. ಇಲ್ಲಿ ಹಲವು ಸ್ತಂಭ ಗಳಲ್ಲದೆ ಕಕ್ಷಾಸನವೂ ಇದ್ದು ಮೇಲ್ಕಟ್ಟಡದ ಭಾರದ ಪರಿಮಾಣವು ಮಣ್ಣಿನಲ್ಲಿ ಉಂಟುಮಾಡುವ ಪೀಡನೆ ವಿಸ್ತಾರ ಗೊಂಡಿದ್ದು ಮುಖಮಂಟಪದ ಭಾಗಕ್ಕೆ ಅಷ್ಟೇನೂ ಭಂಗವನ್ನು ತರುವುದಿಲ್ಲ. ಆದರೆ ಶಿಖರದ ಭಾಗದಲ್ಲಿ ಅಂತರಾಳದ ಭಾಗವನ್ನು ತೆಗೆದು ೮ ಮೀಟರ್ ಉದ್ದ ಮತ್ತು ೮ ಮೀಟರ್ ಅಗಲ ಇರುವೆಡೆ ಕೇವಲ ಮೂರು ಗೋಡೆಗಳ ಮೂಲಕ ಇಡೀ ಶಿಖರದ ಭಾರವು ಮಣ್ಣಿಗೆ ಸೇರುತ್ತದೆ. ಇಷ್ಟು ಚಿಕ್ಕ ಜಾಗದಲ್ಲಿ ಅಷ್ಟು ದೊಡ್ಡ ಪರಿಮಾಣದ ಭಾರವು ಇಳಿಯುವುದರಿಂದ ಮಣ್ಣಿನಲ್ಲಿನ ಪೀಡನೆ ಹೆಚ್ಚಾಗಿರುತ್ತದೆ. ಇದರ ಜೊತೆಗೆ ಇಲ್ಲಿನ ಮಣ್ಣು ಆವೆ ಮಣ್ಣಾಗಿರುವುದರಿಂದ ಹಾಗೂ ಅದರ ಪದರ ರಚನೆ ತೀರ ಆಳವಾದದ್ದಾಗಿರುವುದರಿಂದ, ಶಿಖರದ ಭಾಗದಲ್ಲಿ ಹೆಚ್ಚಿನ ಭಾರ ಹೆಚ್ಚಿನ ಪೀಡನೆಯಿಂದ ಅದು ಅಸಮಾನವಾಗಿ ಕುಸಿಯಲು ಪ್ರಾರಂಭಿಸಿ ಶಿಖರ ಮತ್ತು ಮುಖಮಂಟಪದ ನಡುವಿನ ಅಂತರಾಳದ ಸ್ಥಳದಲ್ಲಿ ಕಟ್ಟಡದ ಸಮಗ್ರತೆಗೆ ಭಂಗ ಬರುವ ಸಾಧ್ಯತೆಗಳು ಹೆಚ್ಚು. ಈ ಕಾರಣದಿಂದಾಗಿ ಶಿಖರದ ಭಾಗದಲ್ಲಿನ ಭಾರದ ಪರಿಮಾಣವನ್ನು ಹೆಚ್ಚಿನ ವಿಸ್ತಾರದ ಭೂಮಿಯಲ್ಲಿ ಪಸರಿಸಲು ಈ ಹೆಚ್ಚುವರಿ ಇಂಬನ್ನು ಮೆಟ್ಟಿಲು ಮೆಟ್ಟಿಲಾಗಿ ಕೊಟ್ಟು ದೇವಾಲಯದ ಸಮಗ್ರತೆಗೂ ಭಂಗ ತರದಂತೆ ಮತ್ತು ಅದರ ಸೌಂದರ್ಯಕ್ಕೂ ಚ್ಯುತಿ ಬಾರದಂತೆ ನಿಗಾ ವಹಿಸಲಾಗಿದೆ. ಅಂದಿನ ಸ್ಥಪತಿಗಳಿಗೆ ಈ ವಿಚಾರದ ಅರಿವಿದ್ದೆ ಆ ಹೆಚ್ಚುವರಿ ಇಂಬನ್ನು ಮೂಲ ದೇವಸ್ಥಾನದೊಂದಿಗೆ ನಿರ್ಮಿಸಬಹುದು ಎಂದು ಸುಲಭವಾಗಿ ಅಂದಾಜಿಸಬಹುದು. ಇದರಿಂದ ಗಳಗನಾಥ ದೇವಾಲಯದ ಅಪರೂಪದ ಸ್ವರೂಪಕ್ಕೆ ಎಡೆ ಮಾಡಿಕೊಟ್ಟಿರುವುದು ತುಂಗಭದ್ರೆಯ ನೆರೆಯಲ್ಲ ಬದಲಾಗಿ ಆ ಪರಿಸರದಲ್ಲಿ ಇರುವ ಮಣ್ಣಿನ ಲಕ್ಷ್ಯ ಮತ್ತು ಲಕ್ಷಣಗಳು.

◆◆

೮೭

ಜಯಣ್ಣ ಬಿ.ಆರ್.

ತಮಿಳುನಾಡಿನ ಗಡಿಭಾಗದ ವೀರಶೈವ ಮಠಗಳು

ಕರ್ನಾಟಕದ ಚಾಮರಾಜನಗರ ಪ್ರದೇಶದ ಕೆಲ ಗ್ರಾಮಗಳು ರಾಜ್ಯ ವಿಭಜನೆಯ ನಂತರ ತಮಿಳುನಾಡಿನ ತಳವಾಡಿ ತಾಲೂಕಿಗೆ ಸೇರಿವೆ. ಈ ಗ್ರಾಮಗಳಲ್ಲಿ ಕೆಲವು ವೀರಶೈವ ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸಾಂಸ್ಕೃತಿಕ ಕೊಡುಗೆಗಳ ವಿಷಯಗಳನ್ನು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೧. ಕರಳವಾಡಿ–ಸೋಮಹಳ್ಳಿ ಶಾಖಾಮಠ (ದಾಸೋಹಮಠ)

೨. ತಿಗಣಾರೆ–ಭಿಕ್ಷದ ಮಠ–ಸೋಮಹಳ್ಳಿ ಶಾಖಾಮಠ

೩. ಇಗ್ಗಲೂರು–ಭಿಕ್ಷದ ಮಠ (ದಾಸೋಹದಮಠ)

೪. ಚಿಕ್ಕಹಳ್ಳಿ–ದಾಸೋಹ (ಭಿಕ್ಷದ ಮಠ)

೫. ಗುಂಟಾಪುರ–ಭಿಕ್ಷದ ಮಠ (ದಾಸೋಹ ಮಠ)

೬. ಹೊಂಗಲವಾಡಿ–ದಾಸೋಹದ (ಭಿಕ್ಷದಮಠ)

೭. ಪಾಳ್ಯಂ–ಸೋಮಹಳ್ಳಿ ಶಾಖಾಮಠ ತಾಳವಾಡಿ

೧. ಕರಳವಾಡಿ–ಸೋಮಹಳ್ಳಿ ಶಾಖಾಮಠ: ಈ ಮಠವು ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿ ವೀರಸಿಂಹಾಸನ ಶಿಲಾಮಠದ ಶಾಖಾ ಮಠವಾಗಿದೆ. ಈ ಮಠವು ದಿನಾಂಕ ೨–೦೬–೧೯೬೬ರಲ್ಲಿ ಸ್ಥಾಪನೆಯಾಗಿದೆ. ಈಗ ಈ ಗ್ರಾಮ ತಾಳವಾಡಿ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಶ್ರೀ ಮಠವನ್ನು ಸಿದ್ದಮಲ್ಲಸ್ವಾಮಿಗಳು ಸ್ಥಾಪಿಸಿದ್ದಾರೆ. ಇವರು ಅಂದು ಶ್ರೀ ಮಠದ ವತಿಯಿಂದ ಕಾರ್ತಿಕ, ಅಮಾವಾಸ್ಯೆ, ಶಿವರಾತ್ರಿಪೂಜೆ, ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇವರ ನಂತರ ಇಗ್ಗಲೂರು ಮಹಾಂತಸ್ವಾಮಿಗಳು, ಯಾಕನೂರು ಸ್ವಾಮೀಜಿಗಳು (ಬಸವಣ್ಣ ದೇವರು), ಕಾಯಕ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಸಹ ತಮ್ಮ ಹಿಂದಿನ ಗುರುಗಳ ಕಾಯಕ ಸೇವೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರ ನಂತರ ಕೊಂಗಳ್ಳಿಯ ರಾಜೇಂದ್ರಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡು ಸುಮಾರು ೧೫ ವರ್ಷಗಳಿಂದ ತಮ್ಮ ಕಾಯಕವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷ ಇವರು ತಮ್ಮ ಹಿಂದಿನ ಗುರುಗಳ ಸ್ಮರಣಾರ್ಥ ಆರಾಧನೆಯ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಮಠದಲ್ಲಿ ಪ್ರತಿದಿನ ಕಂತೆಭಿಕ್ಷಾದ ಮೂಲಕ ಮಠಕ್ಕೆ ಬರುವ ಎಲ್ಲಾ ಭಕ್ತರಿಗೆ ದಾಸೋಹ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಈಗಿನ ಶ್ರೀಗಳೂ ತಮ್ಮ ಕಾಯಕ

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸರ್ಕಾರಿ ಮಹಿಳಾ ಪ್ರಥಮ ದರ್ಜೆ
ಕಾಲೇಜು, ಚಾಮರಾಜನಗರ-೫೭೧೩೧೩
ಮೊ: ೯೪೪೯೩ ೨೨೬೩೦

ಸೇವೆಯನ್ನು ಮುಂದುವರಿಸುತ್ತಾ ಕಾರ್ತಿಕ, ಶಿವರಾತ್ರಿ, ಧನುರ್ಮಾಸ, ಬಸವಜಯಂತಿ, ಆರಾಧನಾ ಮಹೋತ್ಸವ, ವಿವಾಹ, ಗೃಹಪ್ರವೇಶ, ಇನ್ನೂ ಮುಂತಾದ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀಗಳು ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ಮಠದ ಅಭಿವೃದ್ಧಿಗೆ ಸ್ಥಳೀಯರಾದ ಶಿವಣ್ಣ ಮತ್ತು ಬಸವರಾಜಪ್ಪನವರು ಅನೇಕ ಸಹಾಯವನ್ನು ಮಾಡಿದ್ದಾರೆ. ಗಾಜನೂರಿನ ಪುಟ್ಟಸ್ವಾಮಿ ಗೌಡರು ಶ್ರೀ ಮಠದ ಅಭಿವೃದ್ಧಿಗಾಗಿ ೨ ಎಕರೆ ಜಮೀನನ್ನು ನೀಡಿದ್ದಾರೆ. ಇಂದು ಶ್ರೀಗಳು ಬಸವತತ್ವ ಪ್ರಚಾರ ಲಿಂಗದೀಕ್ಷೆ, ಶರಣರ ತತ್ವಗಳ ಬಗ್ಗೆ ಜನಸಾಮಾನ್ಯರಿಗೆ ಪ್ರಚಾರ ಮಾಡುತ್ತಿದ್ದಾರೆ. ಊರಿನ ಜನರ ಸಹಕಾರದೊಂದಿಗೆ ಶ್ರೀ ಮಠವನ್ನು ಅಭಿವೃದ್ಧಿಯತ್ತಾ ಕೊಂಡ್ಯಯುತ್ತಿದ್ದಾರೆ. (ಸೋಮಸಿರಿ–೨೪.ಪ್ರೊ.ಮ.ಗು)


ಕರಳವಾಡಿ–ಸೋಮಹಳ್ಳಿ ಶಾಖಾಮಠ

೨. ತಿಗಣಾರೆ–ಸೋಮಹಳ್ಳಿ ಶಾಖಾಮಠ: ಶ್ರೀ ಮಠವು ಸೋಮಹಳ್ಳಿ ಶಿಲಾಮಠದ ಶಾಖಾ ಮಠವಾಗಿದೆ. ಈ ಮಠವನ್ನು ಸೋಮಹಳ್ಳಿ ಮಠದ ಸಿದ್ದಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಕಾಲದಲ್ಲಿ ಸ್ಥಾಪಿಸಲಾಯಿತು. ಇವರ ಅವಧಿಯಲ್ಲಿ ಶ್ರೀಮಠದಲ್ಲಿ ಕಾರ್ತಿಕ, ಶಿವರಾತ್ರಿ, ಅಮಾವಾಸ್ಯೆ, ಧನುರ್ಮಾಸಪೂಜೆ, ಮುಂತಾದ ಧಾರ್ಮಿಕ ಕಾರ್ಯಗಳು ನಡೆದುಕೊಂಡು ಬಂದಿವೆ. ಇವರ ನಂತರ ಶ್ರೀ ಬಸಪ್ಪದೇವರು ಶ್ರೀ ಮಠದ ಭಿಕ್ಷದ ಶ್ರೀಗಳಾಗಿ ಸೇವೆಸಲ್ಲಿಸಿದರು. ಇವರು ಸಹ ತಮ್ಮ ಹಿಂದಿನ ಗುರುಗಳ ಕಾಯಕ ಸೇವೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ, ನಂತರ ಕಮರವಾಡಿಯ ಗುರುಲಿಂಗಸ್ವಾಮಿಗಳು ೧೨ ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ದಾಸೋಹ, ಕಾಯಕ, ಬಸವ ತತ್ವಪ್ರಸಾರ, ಶರಣತತ್ವ ಪ್ರಸಾರ, ಶಿವರಾತ್ರಿ ಪೂಜೆ ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ.


ತಿಗಣಾರೆ–ಸೋಮಹಳ್ಳಿ ಶಾಖಾಮಠ

ತಮ್ಮ ಹಿಂದಿನ ಗುರುಗಳ ಆರಾಧನಾ ಕಾರ್ಯಕ್ರಮಕ್ಕೆ ಸುತ್ತಮುತ್ತಲ ಎಲ್ಲಾ ಭಕ್ತರನ್ನು ಆಹ್ವಾನಿಸುತ್ತಿದ್ದರು. ಅಲ್ಲದೆ ಅನೇಕ ಭಾಗದ ಸ್ವಾಮೀಜಿಗಳು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಿದ್ದರು. ಇದಲ್ಲದೆ ಕಂತೆ ಭಿಕ್ಷಾದ ಮೂಲಕ ಮಠಕ್ಕೆ ಬರುವ ಎಲ್ಲಾ ಭಕ್ತರಿಗೂ ಉಚಿತ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಇವರ ನಂತರ ಸ್ಥಳೀಯ ಗ್ರಾಮಸ್ಥರ ಪ್ರಕಾರ ಗುರುಮಲ್ಲೇದೇವರು ಶ್ರೀಮಠದ ಗುರುಗಳಾಗಿ ಬಂದರು. ಇವರು ಸಹ ತಮ್ಮ ಹಿಂದಿನ ಗುರುಗಳ ಕಾಯಕವನ್ನು ಹಾಗೆಯೇ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಈಗ ಶ್ರೀಮಠದಲ್ಲಿ ಯಾವ ಸ್ವಾಮೀಜಿಯು ಇಲ್ಲದಿರುವುದರಿಂದ ಗ್ರಾಮದವರೇ ಶ್ರೀಮಠದ ಕಾರ್ಯಗಳನ್ನು ನಡೆಸುತ್ತಿದ್ದಾರೆ.

(೩) ಇಗ್ಗಲೂರು ದಾಸೋಹಮಠ: ಈ ಮಠವನ್ನು ದೇವನೂರಿನ ಶ್ರೀಗಳು ಸ್ಥಾಪಿಸಿದ್ದಾರೆ ಎಂಬ ನಂಬಿಕೆ. ಈ ಮಠದ ಮೊದಲ ಗುರುವಾಗಿ ಮಹಾಂತಸ್ವಾಮಿಗಳು ಕಾಯಕ ನಿರ್ವಹಿಸಿದ್ದಾರೆ ಎಂಬ ನಂಬಿಕೆ ಇದೆ. ಗ್ರಾಮಸ್ಥರ ಪ್ರಕಾರ ಶ್ರೀ ಮಠದಲ್ಲಿ ಕಾರ್ತಿಕ, ಅಮಾವಾಸ್ಯೆ, ಶಿವರಾತ್ರಿ, ಬಸವಜಯಂತಿ ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಊರಿನ ಜನರೆಲ್ಲರೂ ಒಟ್ಟಾಗಿ ಶ್ರೀಮಠದಲ್ಲಿ ಸೇರಿ ಹಬ್ಬವನ್ನು ಆಚರಿಸುತ್ತಿದ್ದರು. ಇದಾದ ನಂತರ ಬಸವಪ್ಪಸ್ವಾಮಿಗಳು, ಶ್ರೀ ಷಣ್ಮುಖಸ್ವಾಮಿಗಳು, ಕಾಯಕ ಸೇವೆಯನ್ನು ಮಾಡಿದ್ದಾರೆ. ಇವರ ನಂತರ ಪ್ರಸ್ತುತ ಶಂಭುದೇವರು ಮಠದ ಕಾಯಕವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಗಲೂ ತಮ್ಮ ಹಿಂದಿನ ಗುರುಗಳ ಆರಾಧನೆ ಕಾರ್ತೀಕ, ಶಿವರಾತ್ರಿ, ಅಮಾವಾಸ್ಯೆಪೂಜೆ ಮುಂತಾದ ಸಾಮಾಜಿಕ ಕಾರ್ಯಗಳನ್ನು ಭಕ್ತರ ಅನುಕೂಲಕ್ಕಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇವರ ನಂತರ ಈಗ ಮಹಾದೇವಪ್ಪ ಸ್ವಾಮಿಗಳು ಕಾಯಕ ಮಾಡುತ್ತಿದ್ದಾರೆ.



ಇಗ್ಗಲೂರು-ದಾಸೋಹಮಠ



ಚಿಕ್ಕಹಳ್ಳಿ-ದಾಸೋಹಮಠ



ಗುಂಟಾಪುರ-ದಾಸೋಹಮಠ

೪. ಚಿಕ್ಕಹಳ್ಳಿ ದಾಸೋಹಮಠ: ಈ ಮಠವು ದೇವನೂರು ಮಠದ ಶಾಖಾ ಮಠವಾಗಿದೆ. ಒಂದು ನಂಬಿಕೆಯ ಪ್ರಕಾರ ಈ ಮಠವನ್ನು ಸುಮಾರು ೮೦ ವರ್ಷಗಳ ಹಿಂದೆ ಸ್ಥಾಪಿತವಾಗಿದೆ. ಈ ಮಠವನ್ನು ದೇವನೂರು ಶ್ರೀಗಳು ಸ್ಥಾಪಿಸಿದ್ದಾರೆ. ಈ ಮಠದ ಮೊದಲ ಸ್ವಾಮಿಜಿಯಾಗಿ ಚನ್ನಬಸಪ್ಪಸ್ವಾಮಿಗಳು ಸುಮಾರು ೧೫ ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಊರಿನವರ ಸಹಕಾರದಿಂದ ಶ್ರೀ ಮಠದಲ್ಲಿ ಕಾರ್ತಿಕ, ಧನುರ್ಮಾಸ, ಶ್ರಾವಣ, ಶಿವರಾತ್ರಿ, ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ನಂತರ ಮಲ್ಲದೇವರು ಕಾಯಕ ಕೈಗೊಂಡಿದ್ದರು. ನಂತರ ಪ್ರಸ್ತುತ ಮಹಾದೇವಸ್ವಾಮಿಗಳು ಮಠದಲ್ಲಿ ಕಾಯಕ ಸೇವೆಯನ್ನು ಕೈಗೊಂಡಿದ್ದರು. ತಮ್ಮ ಹಿಂದಿನ ಗುರುಗಳ ಕಾಯಕವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಈಗ ಯಾರು ಸ್ವಾಮಿಗಳೂ ಇರುವುದಿಲ್ಲ.

೫. ಗುಂಟಾಪುರ ದಾಸೋಹಮಠ: ಈ ಮಠವು ದೇವನೂರು ಶಾಖೆ ಮಠವಾಗಿದೆ. ಈ ಮಠವನ್ನು ದೇವನೂರು ಶ್ರೀಗಳು ೧೦/೦೩/೧೯೯೩ ರಲ್ಲಿ ಸ್ಥಾಪಿಸಿದ್ದಾರೆ. ಈ ಊರಿನ ಜನರ ನಂಬಿಕೆಗೆ ಮೆಚ್ಚಿ ದೇವನೂರು ಶ್ರೀಗಳು ಮಠವನ್ನು ಸ್ಥಾಪಿಸಿದ್ದಾರೆ. ಈ ಮಠದ ಮೊದಲ ಗುರುವಾಗಿ ಇಗ್ಗಲೂರು ಸ್ವಾಮೀಜಿಯವರು ಶ್ರೀಮಠದ ಕಾಯಕವನ್ನು ನಡೆಸಿಕೊಂಡು ಬಂದಿದ್ದಾರೆ. ಇವರ ಕಾಲದಲ್ಲಿ ಆರಾಧನೆ, ಶಿವರಾತ್ರಿ, ಧನುರ್ಮಾಸ, ಕಾರ್ತಿಕ, ಮುಂತಾದ ಧಾರ್ಮಿಕ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇವರ ನಂತರ ಬಿಸಲವಾಡಿ ಪ್ರಶಾಂತಸ್ವಾಮಿಗಳು ಶ್ರೀಮಠದ ಕಾಯವನ್ನು ನಡೆಸಿಕೊಂಡು ಬಂದಿದ್ದಾರೆ. ಇವರು ಸಹ ತಮ್ಮ ಹಿಂದಿನ ಗುರುಗಳ ಕಾಯಕವನ್ನು ನಡೆಸಿಕೊಂಡು ಬಂದಿದ್ದಾರೆ. ಪ್ರಸ್ತುತ ವೀರಭದ್ರಸ್ವಾಮಿಗಳು ಮಠದ ಅಧಿಕಾರವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ಸುಮಾರು ೨೩ ವರ್ಷಗಳಿಂದ ಮಠದ ಕಾಯಕವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಗಲೂ ಶ್ರೀಮಠದಲ್ಲಿ ಇವರ ನೇತೃತ್ವದಲ್ಲಿ ಕಾರ್ತಿಕ, ಬಸವಜಯಂತಿ, ಶಿವರಾತ್ರಿ, ಧನುರ್ಮಾಸಪೂಜೆ, ಇವುಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಮಠದಲ್ಲಿ ವಿವಾಹ ಕಾರ್ಯಗಳನ್ನು ಗುರುಗಳ ಅಧ್ಯಕ್ಷತೆಯಲ್ಲಿಯೇ ನಡೆಸಲಾಗುತ್ತದೆ. ಪ್ರತಿದಿನ ಶ್ರೀಮಠಕ್ಕೆ ಬರುವ ಎಲ್ಲಾ ಭಕ್ತರಿಗೂ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಊರಿನವರ ಸಹಕಾರದೊಂದಿಗೆ ಪ್ರಸ್ತುತ ಶ್ರೀಗಳು ಶ್ರೀಮಠವನ್ನು ಸಾಕಷ್ಟು ಅಭಿವೃಧಿಯನ್ನು ಮಾಡುತ್ತಿದ್ದಾರೆ.

೬. ಹೊಂಗಲವಾಡಿ ದಾಸೋಹಮಠ: ಈ ಮಠ ದೇವನೂರು ಶಾಖಾಮಠವಾಗಿದೆ. ಒಂದು ನಂಬಿಕೆಯ ಪ್ರಕಾರ ಶ್ರೀ ಮಠವನ್ನು ದೇವನೂರು ಶ್ರೀಗಳು ಸ್ಥಾಪಿಸಿದ್ದಾರೆ ಎಂದೂ ತಿಳಿದುಬರುತ್ತದೆ. ಊರಿನ ಗ್ರಾಮಸ್ಥರ ಸಹಕಾರದೊಂದಿಗೆ ಶ್ರೀ ಮಠದಲ್ಲಿ ಬಸವಜಯಂತಿ, ಶಿವರಾತ್ರಿಪೂಜೆ, ಕಾರ್ತಿಕ, ಧನುರ್ಮಾಸ ಪೂಜೆ, ಮುಂತಾದ ಧಾರ್ಮಿಕ ಕಾರ್ಯಗಳನ್ನು ಶ್ರೀ ಮಠದಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಪ್ರಸ್ತುತ ಶ್ರೀಮಹಾದೇವಸ್ವಾಮಿಗಳು ಸುಮಾರು ೨೫/೩೦ ವರ್ಷಗಳಿಂದ ಶ್ರೀಮಠದಲ್ಲಿ ಕಾಯಕ ನಡೆಸಿಕೊಂಡು ಬರುತ್ತಿದ್ದಾರೆ. ಇವರು ತಮ್ಮ ಹಿಂದಿನ ಗುರುಗಳ ಕಾಯಕವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಶ್ರೀ ಮಠದಲ್ಲಿ ವಿವಾಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಜೊತೆಗೆ ದೇವನೂರು





ಹೊಂಗಲವಾಡಿ ದಾಸೋಹಮಠ ಮತ್ತು ಸ್ವಾಮೀಜಿ ಹಾಗೂ ಗ್ರಾಮಸ್ಥರೊಂದಿಗೆ

ಶ್ರೀಗಳ ಆರಾಧನೆಯನ್ನು ಆಚರಿಸಲಾಗುತ್ತದೆ. ಪ್ರತಿವರ್ಷ ನಡೆಯುವ ಈ ಆರಾಧನೆಯಲ್ಲಿ ಸುತ್ತಮುತ್ತಲಿನ ಗ್ರಾಮದ ಭಕ್ತರು ಭಾಗವಹಿಸುತ್ತಾರೆ. ಎಲ್ಲರಿಗೂ ಶ್ರೀಮಠದ ವತಿಯಿಂದ ಪ್ರಸಾದದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಶ್ರೀಮಠದ ಅಭಿವೃದ್ಧಿಗೆ ಗ್ರಾಮಸ್ಥರ ಸಹಕಾರ ಉತ್ತಮವಾಗಿದೆ. ಹಬ್ಬಹರಿದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಶ್ರೀಮಠದಲ್ಲಿ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಮುಂತಾದ ಹಬ್ಬಗಳ ಸಂದರ್ಭಗಳಲ್ಲಿ ಶ್ರೀ ಮಠದಲ್ಲಿ ವಿಶೇಷ ಪೂಜೆಗಳನ್ನು ನಡೆಸಲಾಗುತ್ತಿತ್ತು. ಒಟ್ಟಾರೆ ಪ್ರಸ್ತುತ ಶ್ರೀಗಳು ಗ್ರಾಮಸ್ಥರ ನೆರವಿನೊಂದಿಗೆ ಶ್ರೀ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

೭. ಪಾಳ್ಯಂ–ಸೋಮಹಳ್ಳಿ ಶಾಖಾಮಠ: ಈ ಊರಿನಲ್ಲಿ ಕಂಡುಬರುವ ಪ್ರಮುಖ ಮಠವೆಂದರೆ ಸೋಮಹಳ್ಳಿ ಶಾಖಾ ಮಠ. ಈ ಮಠವನ್ನು ಒಂದು ನಂಬಿಕೆಯ ಪ್ರಕಾರ ಸುಮಾರು ೨೫ ವರ್ಷಗಳ ಹಿಂದೆಯೆ ಸ್ಥಾಪಿತವಾಗಿದೆ. ಅಂದರೆ ೧೯೯೨ರಲ್ಲಿ ಶ್ರೀಮಠವು ಸ್ಥಾಪನೆಯಾಗಿದೆ ಎಂದೂ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಹರಗುರುಚರಮೂರ್ತಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಶ್ರೀ ಮಠದ ಮೊದಲ ಗುರುಗಳಾಗಿ ದಾವಣಗೆರೆಯ ಕಡೆಯಿಂದ ಬಂದ ಶ್ರೀ ಮಹಾಂತಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದಿದ್ದರು. ಇವರ ಅವಧಿಯಲ್ಲಿ ಶ್ರೀ ಮಠದಲ್ಲಿ ಕಾರ್ತಿಕಪೂಜೆ, ಶಿವರಾತ್ರಿಪೂಜೆ, ಆರಾಧನೆ, ಅಮಾವಾಸ್ಯೆಪೂಜೆ ಇನ್ನೂ ಮುಂತಾದ ಹಲವಾರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇದಲ್ಲದೆ ಯುಗಾದಿ, ಸಂಕ್ರಾಂತಿ, ಹಬ್ಬಗಳೆಂದು ಶ್ರೀಮಠದಲ್ಲಿ ವಿಶೇಷ ಪೂಜೆಯುನ್ನು ಮಾಡಲಾಗುತ್ತಿತ್ತು. ಇದಕ್ಕೆಲ್ಲ ಉರಿನವರ ಸಹಕಾರ ತುಂಬಾ ಚನ್ನಾಗಿತ್ತು. ಅಲ್ಲದೆ ಹಲವಾರು ಗ್ರಾಮಗಳಲ್ಲಿ ಭಕ್ತರನ್ನು ಹೊಂದಿದ್ದರು. ಪ್ರತಿದಿನ ಶ್ರೀಮಠಕ್ಕೆ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಿದ್ದರು. ನಂತರ ಇದೇ ಗ್ರಾಮದವರಾದ ನಂದೀಶಸ್ವಾಮಿಗಳು ಶ್ರೀಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಸಹ ತಮ್ಮ ಹಿಂದಿನ ಗುರುಗಳ ಕಾಯಕವನ್ನು ಮುಂದುವರಿಸಿಕೊಂಡು ಬಂದಿದ್ದರು. ಆದರೆ ಈಗ ಶ್ರೀ ಮಠದಲ್ಲಿ ಯಾರೂ ಸ್ವಾಮೀಜಿಗಳು ಇರುವುದಿಲ್ಲ. ಗ್ರಾಮಸ್ಥರೇ ಶ್ರೀ ಮಠದಲ್ಲಿ ಪೂಜೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.



ಪಾಳ್ಯಂ–ಸೋಮಹಳ್ಳಿ ಶಾಖಾಮಠ

◆◆

ಐರಣಿ ಹನುಮಂತಪ್ಪ

ಕೂಲಹಳ್ಳಿ ಶರಣ ಗೋಣಿಬಸಪ್ಪ

ಹನ್ನೆರಡನೇ ಶತಮಾನದ ದಲಿತೋದ್ಧಾರ ಚಳುವಳಿಯು ನವದಿಗಂತ ದಿಕ್ಸೂಚಿಯಾಗಿ ಮಾನವರೆಲ್ಲರ ಮನಸೆಳೆದ ಮಾನವತೆಯ ಜ್ಯೋತಿ ಬೆಳಕಲ್ಲಿ ಅನೇಕರು ತಮ್ಮನ್ನೇ ತಾವು ಗುರ್ತಿಸಿಕೊಂಡರು. ೧೫–೧೬ನೇ ಶತಮಾನದಲ್ಲಿ ಶರಣಧರ್ಮದ ಮೌಲ್ಯವೆತ್ತಿ ಹಿಡಿದ ದಲಿತರು ತಮ್ಮನ್ನು ತಾವು ಅರ್ಪಿಸಿಕೊಂಡು ತಮ್ಮ ವ್ಯಕ್ತಿತ್ವದ ಬೆಳಕನ್ನು ಬೀರಿ ಮುಂದಿನ ಸಂತತಿಗೆ ದೈವವಾಗಿ ಇಂದಿಗೂ ಆರಾಧನೆಗೊಳ್ಳುತ್ತಲಿದ್ದಾರೆ. ಅವರಲ್ಲಿ ಕೊಟ್ಟೂರು ಬಸವ ಮತ್ತು ಅವರ ನೆರಳಾಗಿ ಬಾಳಿದ ಗೋಣಿಬಸಪ್ಪ 'ಶರಣ ಚಳುವಳಿ'ಯ ಜ್ಞಾನದ ಬೆಳಕಲ್ಲಿ ಕೆಳಜಾತಿಗಳು ತಮ್ಮ ಅರಿವನ್ನು ಕಂಡುಕೊಂಡವು. ಮಧ್ಯಕರ್ನಾಟಕದಲ್ಲಿ ಜನಸಾಮಾನ್ಯರಲ್ಲಿ ಬೆರೆತು ಅವರ ಮನಗೆದ್ದು ಅವಧೂತ ಹುಚ್ಚ ಮರುಳ ಕೊಟ್ಟೂರ ಬಸವ ಹಾಗೂ ಆತನ ಮಾರ್ಗದರ್ಶನದಲ್ಲಿ ಅನೇಕ ಸಾಧನೆಗಳನ್ನು ಮಾಡಿ ಸಿದ್ಧಿಪುರುಷನಾಗಿ ಜನರ ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳನ್ನು ಬಿಡಿಸಿ ಶರಣನಂತೆ ಬಾಳು ಬೆಳಗಿದವನು ಗೋಣಿಬಸಪ್ಪ. ತಮ್ಮದೇ ಆದ ಪ್ರತ್ಯೇಕ ಪಂಥ ಪರಂಪರೆ ಹುಟ್ಟಿಗೆ ಕಾರಣನಾಗಿ ಚೈತನ್ಯ ಗದ್ದುಗೆಗಳ ರೂಪದಲ್ಲಿ ಭಕ್ತರ ಕಾಮನೆಗಳನ್ನು ನೆರವೇರಿಸುತ್ತಾ ಜನಪದರ ಅಧಿದೈವವಾಗಿ ನಂಬಿದ ಭಕ್ತರ ಕ್ಲೇಶ ಸಂಕಟಗಳನ್ನು ಪರಿಹರಿಸುವ ಕುಲದೈವವಾಗಿ ಆರಾಧಿಸಲ್ಪಡುತ್ತಿದ್ದಾರೆ.

೧೬ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವು ಪತನವಾದ ನಂತರ ಬಾಗಳಿಯಲ್ಲಿ ಪಾಳ್ಯಪಟ್ಟು ಸ್ಥಾಪಿಸಿದ ದಾದಯ್ಯನಾಯಕ (ಕ್ರಿ.ಶ.೧೫೫೬ ರಿಂದ ೧೫೯೨) ಮತ್ತು ಕೊಟ್ಟೂರು ಬಸವ ಮತ್ತು ಸ್ವಲ್ಪ ಕಿರಿಯ ವಯಸ್ಕಳಾಗಿದ್ದ ದೇವದಾಸಿ ಕನಕವ್ವ ಸಮಕಾಲೀನರು. ಬಾಗಳಿ ಆಡಳಿತ ಕೇಂದ್ರಸ್ಥಾನ ಹೊಂದಿದ್ದರೂ ಪುರಾತನ ಕಾಲದಿಂದಲೂ ಅರಮನೆ ಮತ್ತು ಕಾವಲುಗಾರರ ವಸತಿ, ಪರಿವಾರದ ವಾಸ ಮತ್ತು ಸೈನಿಕರ ವಾಸ ಕೂಲಹಳ್ಳಿಯಲ್ಲಿ. ಕನಕವ್ವ ಕೂಲಹಳ್ಳಿಯಲ್ಲಿ ವಾಸವಾಗಿದ್ದವಳು. ಮಾಹಿತಿ ಕೊರತೆಯಿಂದ ಹುಟ್ಟು ತಂದೆತಾಯಿ, ಬಂಧುಬಳಗ ಲಭ್ಯವಿಲ್ಲ. ಆದರೆ, ಕನಕೇಶ್ವರಿ ಹೆಸರು ಹೊಂದಿದ್ದರೂ ಬಡಬೇಡ ಜನಾಂಗದ ಕುಟುಂಬದಲ್ಲಿ ಜನಿಸಿ ಬಡತನವನ್ನೇ ತಿಂದುಂಡು ಬೆಳೆದವರು (ಗೋಣಿಬಸಪ್ಪನ ಕಾವ್ಯ ಪು. ೯೫). ಬಾಲ್ಯದಿಂದಲೂ ವೈಭೋಗದಿಂದ ಮೆರೆಯುತ್ತಿದ್ದ ಕಲ್ಲೇಶ್ವರನನ್ನು ಕಂಡು ಭಕ್ತಿಯಿಂದ ನೆನೆಯುತ್ತಾ ಬಂದವಳಾಗಿ ತನ್ನನ್ನೇ ಕಲ್ಲೇಶ್ವರದಿಂದ ಅರ್ಪಿಸಿಕೊಂಡ ನೀಳ ನಿಲುವಿನ ಸುಂದರ ಸದ್ಗುಣಿ, ಸದಾಚಾರ ಸಂಪನ್ನೆ ಹೆಣ್ಣು ಮಗಳಾಗಿದ್ದಳು. ಕಲ್ಲೇಶ್ವರ ದೇವಾಲಯದ ಅರ್ಚಕ ಜಂಗಮ ಕೋರಿ ಈರಯ್ಯ ಎಕ್ಕೋಟಿ ಮುನೀಂದ್ರ ಸಂಪ್ರದಾಯದ

ವಕೀಲರು
೩೦೦, ದೇವರಾಜ ಅರಸ್ ಬಡಾವಣೆ
'ಬಿ' ಬ್ಲಾಕ್, ೧೦ನೇ ಕ್ರಾಸ್
ದಾವಣಗೆರೆ–೫೭೭೦೦೬
ಮೊ: ೯೪೪೮೭ ೦೫೪೩೫

ಸ್ಥಾನಾಚಾರ್ಯರ ಪಳಿಯುಳಿಕೆ ಭಾವದವರು, ಕನಕವ್ವಳಿಗೆ ದೇವದಾಸಿ ಸಂಸ್ಕಾರ ನಡೆಸುವುದರೊಂದಿಗೆ ತಾನೇ ಹೆಣ್ಣುಮಾಡಿ ದೈಹಿಕ ಸಂಪರ್ಕ ಬೆಳೆಸಿ ಅವಳ ಗರ್ಭಧಾರಣೆಗೆ ಕಾರಣನಾದ.

ಕನಕವ್ವಳ ಹುಟ್ಟಿನ ಕುರಿತು ಮೂರು ಐತಿಹ್ಯಗಳು ಕೇಳಿಬರುತ್ತವೆ

೧. ಮೊದಲನೆಯದು ಹರಪನಹಳ್ಳಿ ಪಾಳೆಗಾರ ಬಸವಂತನಾಯಕ (ಕ್ರಿ.ಶ. ೧೬೮೭, ೧೭೦೫), ಚಿಗಟೇರಿ ಸಾಮಂತ ಶಿವಪ್ಪನಾಯಕನ ಅಕ್ಕ ಕನಕವ್ವ.

೨. ಹರಪನಹಳ್ಳಿ ಪಾಳೆಗಾರ ಸೋಮಶೇಖರನಾಯಕ (ಕ್ರಿ.ಶ. ೧೭೪೫-೧೭೫೬) ಮಗಳು ಎಂಬುದು ಇವೆರಡೂ ಸತ್ಯಕ್ಕೆ ದೂರವಾದ ಹಾಗೂ ಆಧಾರರಹಿತ ಐತಿಹ್ಯಗಳು.

೩. ಕೊಟ್ಟೂರು ಬಸವರನ್ನು ದಾದ್ಯಾನಾಯಕ (ಕ್ರಿ.ಶ. ೧೫೫೬ ರಿಂದ ೧೫೯೨) ತನ್ನ ಕುಲದೈವದಂತೆ ಆರಾಧಿಸುವುದನ್ನು ಮಾಹಿತಿ ನೀಡುತ್ತದೆ. ಕೊಟ್ಟೂರು ಬಸವ ಕನಕವ್ವಳ ಬಾಲಕ ಗೋಣಿಬಸಪ್ಪನಿಗೆ ಗುರುವಾಗಿ ತನ್ನ ಅರ್ಜಿತ ಸಿದ್ಧಿಸಾಧನೆಗಳನ್ನು ಧಾರೆ ಎರೆದು ಆತನನ್ನು ಶರಣಮಾರ್ಗಕ್ಕೆ ತಂದು ನಿಲ್ಲಿಸಿ ಆತನಿಗೆ ಬಂದೊದಗಿದ ಸಂಕಷ್ಟಗಳನ್ನು ನಿವಾರಿಸಿ ಗೋಣಿಬಸಪ್ಪನ ಚರಿತ್ರೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುತ್ತಾನೆ. ಕೊಟ್ಟೂರು ಬಸವ, ದಾದ್ಯಾನಾಯಕ, ಕನಕವ್ವ ಮತ್ತು ಗೋಣಿಬಸಪ್ಪ ಈ ನಾಲ್ವರೂ ಹಿರಿಕಿರಿಯ ಸಮಕಾಲೀನರು. ದಾದ್ಯಾನಾಯಕನ ಮರಣಾನಂತರ ಪಟ್ಟಕ್ಕೆ ಬಂದ ಆತನ ಮಗ ರಂಗನಾಯಕ (ಕ್ರಿ.ಶ. ೧೫೯೨ರಿಂದ ೧೬೧೬) ಸಹ ಕೊಟ್ಟೂರು ಬಸವರ ಸಮಾಧಿಮಠ ಮತ್ತು ಹಿರೇಮಠ ಕೊಟ್ಟೂರಲ್ಲಿ ಕಟ್ಟಿಸಿದ ಸಂಗತಿ ಹರಪನಹಳ್ಳಿ ಪಾಳೆಗಾರರ ಇತಿಹಾಸದಲ್ಲಿ ಉಲ್ಲೇಖಿತಗೊಂಡಿದೆ. (ಹರಪನಹಳ್ಳಿ ಪಾಳೆಗಾರರು ಪುಟ-೧೫).

ದಾದ್ಯಾನಾಯಕನ ನಂತರ ಆಳ್ವಿಕೆಯನ್ನು ನಡೆಸಿದ ಆತನ ವಂಶಜರೆಲ್ಲಾ ಕೊಟ್ಟೂರು ಬಸವರನ್ನು ಗೋಣಿ ಬಸವರನ್ನು ತಮ್ಮ ಮನೆತನದ ಅಧಿದೈವದಂತೆ ಆರಾಧಿಸುತ್ತಾ ಅನೇಕ ದಾನ ದತ್ತಿಗಳನ್ನು ನೀಡಿದಂತಹ ಉಲ್ಲೇಖಗಳು ಇವೆ. ತಮ್ಮ ಸಂತತಿಗೆ ಕೊಟ್ಟೂರಪ್ಪ, ಕೊಟ್ಟೂರು ಬಸಪ್ಪ, ಕೊಟ್ರಪ್ಪ, ಕೊಟ್ಟೂರಪ್ಪ ಗೋಣೆಪ್ಪ, ಗೋಣಿಬಸಪ್ಪ ಎಂಬ ಹೆಸರುಗಳನ್ನು ಇಟ್ಟು ಕರೆದಿರುವುದು ಚರಿತ್ರೆಯಲ್ಲಿ ಕಂಡುಬರುತ್ತದೆ. ಅಲ್ಲದೇ ಗೋಣಿಬಸಪ್ಪನ ಜನಪದ ಕಾವ್ಯ ಪ್ರಚಾರಕ್ಕೆ ಬಂದಿರುವುದು ೨೦ನೇ ಶತಮಾನದಲ್ಲಿ. ಹರಪನಹಳ್ಳಿ ಪಾಳೆಗಾರಿಕೆಯು ಕ್ರಿ.ಶ. ೧೮೦೦ಕ್ಕೆ ನಾಶವಾಯಿತು.

ಪಂಚಗಣಾಧೀಶರು : ಗೋಣಿಬಸಪ್ಪನ ಹುಟ್ಟಿಗೆ ಸಂಬಂಧಿಸಿದಂತೆ ಸೃಜಿಸಿದ ಕಾಲ್ಪನಿಕ ಕಥೆ 'ಪಂಚಗಣಾಧೀಶರು'. ಇದು ಶುದ್ಧಾಂಗವಾಗಿ ಜನಪದರ ಕಲ್ಪನೆಯಲ್ಲ. ಗೋಣಿಬಸಪ್ಪನ ಹುಟ್ಟು ಪುರಾಣಪುರುಷರಂತೆ ಚಿತ್ರಿತವಾಗಿದೆ. ಕೊಟ್ಟೂರು ಬಸವ, ತಿಪ್ಪೇರುದ್ರ ಇವರು ಅವಧೂತರು. ಚಾರಿತ್ರಿಕ ವ್ಯಕ್ತಿಗಳು. ಮದ್ಧಾನಸ್ವಾಮಿ, ಕೋಲಶಾಂತಯ್ಯ, ಕೆಂಪಯ್ಯ ಇವರು ಚಾರಿತ್ರಿಕ ವ್ಯಕ್ತಿಗಳು ಎಂಬುದಕ್ಕೆ ಸದೃಢ ಆಧಾರಗಳಿಲ್ಲ. ವೀರಶೈವ ಸಾಹಿತ್ಯದಲ್ಲಿ ಅಲ್ಲಲ್ಲಿ ಅವರ ಹೆಸರುಗಳು ಉಲ್ಲೇಖಗೊಂಡಿರುವುದನ್ನು ಬಿಟ್ಟರೆ ಗಟ್ಟಿಯಾಧಾರಗಳು ಲಭ್ಯವಿಲ್ಲ. ೧೬ನೇ ಶತಮಾನದಲ್ಲಿ ಕರ್ನಾಟಕದ ತಳಜಾತಿಗಳಲ್ಲಿ ಅನೇಕ ಮಹಾನುಭವಿ ಶರಣರು, ಅವಧೂತರು ಸಿದ್ಧರು ಆಗಿಹೋಗಿದ್ದಾರೆ. ಅವರಲ್ಲಿ ಶರಣಗೋಣಿಬಸಪ್ಪ ಅವಧೂತ ಕೊಟ್ಟೂರು ಬಸವ ಮತ್ತು ನಾಯಕನಹಟ್ಟಿ ತಿಪ್ಪೇರುದ್ರರು ಚಾರಿತ್ರಿಕ ಜಾನಪದರ ಜಾತ್ಯಾತೀತ ನಡೆಯುಳ್ಳವರು. ಇವರನ್ನು ಸೇರಿಸಿಕೊಂಡು ಜನಪದರ ದೈವಗಳಲ್ಲದ ಇಂದಿಗೂ ಆ ಮಠಗಳಲ್ಲಿ ಅಂದರೆ ಹರಪನಹಳ್ಳಿ ಕೆಂಪಯ್ಯ, ಅರಸೀಕೆರೆ ಕೋಲಶಾಂತಯ್ಯ ಮಠಗಳಲ್ಲಿ ಕಪ್ಪುವಳಿ ಜನರಿಗೆ ಪ್ರವೇಶವಿಲ್ಲ. ಅಂತಹವರನ್ನು ಸೇರಿಸಿಕೊಂಡು ಈ ಐವರೂ ಸಾಮೂಹಿಕ ಕಾರ್ಯಾಚರಣೆ ನಡೆಸಿದ ಉದಾಹರಣೆಗಳಿಲ್ಲ ಮತ್ತು ಬೇರೆಬೇರೆ ಕಾಲದಲ್ಲಿ ಜೀವಿಸಿದವರು. ಅವರನ್ನು ಒಟ್ಟಿಗೆ ಸೇರಿಸಿ ಪೌರಾಣಿಕ ಪುರುಷರಂತೆ ಚಿತ್ರಿತ ಪಂಚಗಣಾಧೀಶ್ವರರ ಕಾಲ್ಪನಿಕ ಕಥೆ ಬೆಳಕಿಗೆ ಬಂದಿದೆ. ಕಾಲ್ಪನಿಕ ಗೋಣಿಬಸಪ್ಪನ ಹುಟ್ಟಿಗೆ ಸಂಬಂಧಿಸಿದಂತೆ ೨೦ನೇ ಶತಮಾನದಲ್ಲಿ ಪ್ರಚಾರಕ್ಕೆ ಬಂದು ಚಾರಿತ್ರಿಕ ವ್ಯಕ್ತಿಗಳಾದ ಕೊಟ್ಟೂರು ಬಸವ, ನಾಯಕನಹಟ್ಟಿ ತಿಪ್ಪೇರುದ್ರ ಇವರೊಂದಿಗೆ ಮದ್ಧಾನಸ್ವಾಮಿ, ಕೆಂಪಯ್ಯ, ಕೋಲಶಾಂತಯ್ಯ ಇವರನ್ನು ಸೇರಿ ಐವರೂ ಶಿವಲೋಕ ಕೈಲಾಸದಲ್ಲಿ ಶಿವಪಾರ್ವತಿ ವಿವಾಹ ಸಂಭ್ರಮದಲ್ಲಿ ಭಾಗಿಯಾಗಿದ್ದು, ಸಿಹಿಯೂಟ ಅಡಿಗೆಗೆ ಸಕ್ಕರೆ ಉಪಯೋಗ ಮಾಡುತ್ತಿರುವಾಗ ಕೊಡವಿದ ಸಕ್ಕರೆ ಚೀಲದಿಂದ ಒಂದು ಗಂಡು ಶಿಶು ಕೆಳಗೆ ಬೀಳುತ್ತದೆ. ಆ ಶಿಶುವನ್ನು ವಿವಾಹ ಮಂಟಪದಲ್ಲಿದ್ದ ಶಿವಪಾರ್ವತಿಯರ ಕೈಯಲ್ಲಿಟ್ಟಾಗ ಅವರು ಗೋಣಿಬಸಪ್ಪನೆಂದು ನಾಮಕರಣ ಮಾಡಿ ಅಲ್ಲಿದ್ದ ಐದೂ ಜನ ಗಣಂಗಳಿಗೆ ಒಪ್ಪಿಸಿ ಈ ಕೂಸನ್ನು ಪಾಲನೆ ಮಾಡಿರೆಂದು ಆಶೀರ್ವದಿಸಿ ಭೂಲೋಕಕ್ಕೆ ಕಳುಹಿಸಿರುತ್ತಾರೆ. ಗಣಂಗಳು ಕೈಲಾಸದಿಂದ ಕಲ್ಯಾಣಕ್ಕೆ ಬಂದು ಅಲ್ಲಿಂದ ಸಂಚರಿಸುತ್ತಾ ಕುಪ್ಪಿನಕೆರೆ ಗ್ರಾಮಕ್ಕೆ ಬಂದು ಭವಿಯಾಗಿದ್ದ ಹನುಮಪ್ಪ

ದೇವನಿಗೆ ಲಿಂಗದೀಕ್ಷೆ ಮಾಡಿ ಮುಂಜಾನೆ ಎದ್ದು, ಗಣಂಗರೈವರೂ ಮಗುವಿನೊಂದಿಗೆ ಬಾಗಳಿ ಕಲ್ಲೇಶ್ವರ ದೇವಾಲಯಕ್ಕೆ ಬಂದು ಉಳಿದುಕೊಂಡಿರುತ್ತಾರೆ. ಮುಂಜಾನೆ ಎದ್ದು, ಮದ್ದಾನಸ್ವಾಮಿಗೆ ಹೂವು/ಮಜ್ಜಿಗೆ ತರಲು ಕಳುಹಿಸಿದಾಗ ಮದ್ದಾನಸ್ವಾಮಿ ದೇವದಾಸಿ ಕನಕವ್ವಳು ಎದುರಾದಾಗ ಪರಸ್ಪರರ ದೃಷ್ಟಿ ಏಕಾಗ್ರತೆಗೊಂಡು ಕೈಲಾಸದಿಂದ ಬಂದ ಮಗು ಅದೇ ಅವಕಾಶ ಪಡೆದು ಕನಕವ್ವಳ ಗರ್ಭ ಸೇರಿಕೊಳ್ಳುತ್ತದೆ. ಇದನ್ನು ತಿಳಿದ ಉಳಿದ ನಾಲ್ವರೂ ಕೂಲಹಳ್ಳಿ ಬಿಟ್ಟು ತಮ್ಮ-ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡು ಸಮಾಧಿಯಾದ ಸ್ಥಳದಲ್ಲಿ ಕೊಟ್ಟೂರು ಬಸವ ಕೊಟ್ಟೂರಿನಲ್ಲಿ, ತಿಪ್ಪೇರುದ್ರ ನಾಯಕನಹಟ್ಟಿಯಲ್ಲಿ, ಕೆಂಪಯ್ಯ ಹರಪನಹಳ್ಳಿಯಲ್ಲಿ, ಕೋಲಶಾಂತಯ್ಯ ಅರಸೀಕೆರೆ ಗ್ರಾಮಗಳಲ್ಲಿ ಅಂತ್ಯಕಂಡು ಸಮಾಧಿಗದ್ದಿಗೆಗಳಲ್ಲಿ ಆರಾಧಿಸಲ್ಪಡುತ್ತಾರೆ.

ಇನ್ನೊಂದು (ಪ್ರಾದೇಶಿಕವಾಗಿ ತುಮಕೂರು, ಚಿತ್ರದುರ್ಗ, ಕೆಲವು ಕಡೆಗಳಲ್ಲಿ ಪಂಚಗಣಾಧೀಶರಲ್ಲಿ ಮದ್ದಾನಸ್ವಾಮಿ ಕೈಬಿಟ್ಟು ಗುಬ್ಬಿ ಚನ್ನಬಸವೇಶ್ವರನನ್ನು ಸೇರಿಸಿಕೊಂಡ ಕಥೆಯು ಪ್ರಚಾರದಲ್ಲಿದೆ), ಮದ್ದಾನಸ್ವಾಮಿ ಕೆಲವು ದಿನಗಳ ನಂತರ ಮತ್ತೆ ಎತ್ತಲೋ ಸಂಚಾರ ಮಾಡಿದ್ದಾರೆಂದು ಪಂಚಗಣಾಧೀಶರ ಕಥೆ ಹೇಳುತ್ತದೆ. ಪಂಚಗಣಾಧೀಶರ ಕಥೆಯು ಆಧಾರವಾಗಿಟ್ಟುಕೊಂಡು ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಅನೇಕರು ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಆದರೆ ವಾಸ್ತವಾಂಶಗಳನ್ನು ಬೆಳಕಿಗೆ ತರದೇ ಇರುವುದು ಅವರ ಆತ್ಮಸಾಕ್ಷಿಗೆ ಬಿಟ್ಟ ವಿಷಯ. ಕೊಟ್ಟೂರು ಬಸವ, ನಾಯಕನಹಟ್ಟಿ ತಿಪ್ಪೇರುದ್ರ ಇವರು ಅವಧೂತರು. ಆತ್ಮಲಿಂಗವೇ ಸಾಕೆಂಬ ೧೨ನೇ ಶತಮಾನದ ಶರಣ ಚಳುವಳಿಯ ಆಶಯಗಳ ನೆರವೇರುವಿಕೆಗಾಗಿ ಬದ್ಧತೆ ಹೊಂದಿ ತಮ್ಮ ಜೀವಿತ ಅವಧಿಯನ್ನೇ ಸವೆಸಿದವರು. ಗೋಣಿಬಸಪ್ಪ ಕೊಟ್ಟೂರು ಬಸವರ ಪ್ರಭಾವದ ಪ್ರೇರಣೆಯಿಂದ ಜಾತ್ಯಾತೀತವಾಗೊ ಆತನೇ ಅಧಿದೈವ ಪಂಥರ ರಚನೆಗಾಗಿ ಕೆಳಜಾತಿಗಳಲ್ಲಿ ಶರಣರ ತತ್ವಾದರ್ಶಗಳನ್ನು ನಿರೂಪಿಸುತ್ತಾ ವೈದಿಕ ಮತ್ತು ಆಗಮಿಕ ನಂಬಿಕೆ ಆಚಾರ್ಯರನ್ನು ಬಿಟ್ಟರೆ ಗೋಣಿಬಸಪ್ಪನ ಶರಣಪಂಥಗಳಲ್ಲಿ ಮೈಲಾರಲಿಂಗನ ಭಕ್ತರಿಗೆ ಮೈಲಾರನು ಹೇಗೆ ಪರಮದೈವವೋ ಗೋಣಿಬಸಪ್ಪನ ಭಕ್ತರಿಗೆ ಜಾತ್ಯಾತೀತವಾಗಿ ಅಧಿದೈವ (ಮನೆದೇವರು) ಪಾರಂಪರಿಕ ಪಂಥಪರಂಪರೆ ಬೆಳೆಯುತ್ತಲೇ ನಡೆದಿದೆ. ಕರ್ನಾಟಕದಲ್ಲಿ ಪ್ರಸಿದ್ಧ ಜಾತ್ರೋತ್ಸವಗಳಲ್ಲಿ ಈ ಮೂವರ ಜಾತ್ರೆ ಅತಿದೊಡ್ಡವೆಂದು ಪರಿಗಣಿಸಲ್ಪಟ್ಟಿವೆ. ಹರಪನಹಳ್ಳಿ ಕೆಂಪಯ್ಯನಮಠವು ಹಾಳು ಬಿದ್ದಿವೆ. ಯಾವ ಉತ್ಸವಗಳೂ ನಡೆಯುವುದಿಲ್ಲ. ಅದರಂತೆ ಅರಸೀಕೆರೆ ಕೋಲಶಾಂತಯ್ಯನ ಉತ್ಸವ, ಜಾತ್ರೆಗಿಂತ ಹರಿಜನ ಕೇರಿಯಲ್ಲಿರುವ ದಲಿತ ಪೂಜಾರಿ ಹೊಂದಿರುವ ದಂಡಿನ ದುರುಗಮ್ಮ ಜಾತ್ರೆ ಜಾತ್ಯಾತೀತವಾಗಿ ನಾಡಿನಲ್ಲಿ ಪ್ರಸಿದ್ಧಿ ಪಡೆದ ಜಾತ್ರೆಗಳಲ್ಲಿ ಒಂದಾಗಿದೆ. ದೇವಿಯನ್ನು ತಲೆಯ ಮೇಲೆ ಹೊತ್ತ ಪೂಜಾರಿ ಉತ್ಸವದಲ್ಲಿ ಸಾಲಾಗಿ ಕಿಲೋಮೀಟರ್ ಉದ್ದ ಮಲಗಿರುವ ಭಕ್ತರನ್ನು ದಾಟಿ ಹೋಗುವ ಪರಿ ವಿಶಿಷ್ಟವಾದುದು.

ಕೊಟ್ಟೂರು ಬಸವ : ಕೊಟ್ಟೂರು ಬಸವ ತಮಿಳುನಾಡಿನಲ್ಲಿ ಹುಟ್ಟಿದವ, ಹುಟ್ಟುವಾಗಲೇ ಸಿದ್ಧಿಪುರುಷನ ಸಾಧನೆಗಳನ್ನು ಗೈದವ. ಸನ್ಯಾಸಿ ಸತ್ಯಕಾಮ ಅವಧೂತನಾಗಿ ವಿಶಾಲಲೋಕವೇ ಗುರುವೆಂದು ನಂಬಿದವ. ಸೃಷ್ಟಿಯೇ ಲಿಂಗ, ಲಿಂಗವಿಲ್ಲದೇ ಎಡೆಯಿಲ್ಲ, ಲಿಂಗಮೂರ್ತವಲ್ಲದೇ ಬೇರಿಲ್ಲ. ಒಂದೆಡೆ ನೆಲೆಯಾಗದೇ ಮಳೆ-ಬಿಸಿಲಿಗಂಜದೇ ಮನೆಮನೆ ಮುದ್ದೆ, ಮಾರಿಗುಡಿ ನಿದ್ದೆ ಸಿಕ್ಕಿದರೂ ಸರಿ, ಸಿಗದಿದ್ದರೂ ಸಂಕಟವಿಲ್ಲ. ವಿರಾಗಿಯಾಗಿ, ಲೋಕಾನುರಾಗಿಯಾಗಿ ಹುಟ್ಟಿದ ನೆಲೆಬಿಟ್ಟು ದೇಶದಾದ್ಯಂತ ಚಿತ್ತಬಂದತ್ತ ಹರಕುಬಟ್ಟೆ, ಜಡೆಗಟ್ಟಿದ ಕೂದಲು, ಇಳಿಬಿದ್ದ ಜಿಡ್ಡುಗಟ್ಟಿದ ಗಡ್ಡಮೀಸೆ, ಕೂದಲಲ್ಲಿ ಹುದುಗಿಹೋಗಿದ್ದ ಕಾಣದಂತಹ ಹೊಳಪುಳ್ಳ ಕಣ್ಣುಗಳು, ತೆಳುವಾದ ದೇಹ, ತೊಡರುಹೆಜ್ಜೆ ಹಾಕುತ್ತಾ ಪುರಾತನ ವೈಭವಯುತ ದೇವಾಲಯ ಬಾಗಳಿ ಕಲ್ಲೇಶ್ವರಕ್ಕೆ ಬಂದಾಗ ೫೦-೫೫ ವಯದ ಹುಚ್ಚು ಮರುಳನನ್ನು ದೇವಾಲಯದ ಪರಿಸರದಲ್ಲಿ ಬಿಟ್ಟುಕೊಳ್ಳದಿದ್ದಾಗ ಹತ್ತಿರವಿದ್ದ ಕೂಲಹಳ್ಳಿ ಹಾಳು ಅರಮನೆಗೆ ಬಂದು ನೆಲೆಯಾಗುತ್ತಾನೆ. ಪಾಳುಬಿದ್ದ ಕೂಲಹಳ್ಳಿ ಹಾಳು ಬಿದ್ದ ವಸತಿಗಳು ಉದ್ಯೋಗವಿಲ್ಲದ ನಿರ್ಗತಿಕರ ವಾಸದಿಂದ ಗ್ರಾಮವು ಬಿಕೋ ಎನ್ನುತ್ತಿತ್ತು. ಅಲ್ಲಿಯ ದಾರುಣ ಸ್ಥಿತಿಯನ್ನು ಕಂಡು ಅವರೊಂದಿಗೆ ತಾನೊಬ್ಬನಾಗಿ ಉಳಿಯಲು ಬಯಸಿ ಹಾಳು ಅರಮನೆಯನ್ನು ತನ್ನ ನೆಲೆಯನ್ನಾಗಿ ಮಾಡಿಕೊಂಡು ದುಃಖತಪ್ತ ಜೀವಿಗಳೊಂದಿಗೆ ಸ್ಪಂದಿಸುತ್ತಾ ನಿಂತಾಗ ಬಡತನದ ದೀನಸ್ಥಿತಿಯಲ್ಲಿದ್ದ ಕನಕವ್ವ ಹಾಗೂ ಗೋಣಿಬಸಪ್ಪ ಹುಚ್ಚನ ದೃಷ್ಟಿಗೆ ಬೀಳುತ್ತಾರೆ. ಹುಚ್ಚ ಕೊಟ್ಟೂರ ಬಸವ ಗೋಣಿಬಸಪ್ಪನು ತದೇಕಚಿತ್ತದಿಂದ ನೋಡಿದಾಗ ಮಗುವಿನಲ್ಲಿ ಏನೋ ಒಂಥರ ಪುಳಕಿತ ಭಾವವು ಉಂಟಾಗಿವೆ. ಆತ್ಮೀಯ ಭಾವದಿಂದ ಬಂದು ಅಪ್ಪಿಕೊಳ್ಳುತ್ತದೆ. ಮೊದಲೇ ಲೋಕದ ಅರಿವನ್ನು ಉಂಡ ಕೊಟ್ಟೂರ ಬಸವ ಮಗುವಿನೊಂದಿಗೆ ಮಗುವಾಗಿ ಆಟವಾಡುತ್ತಾ ಕ್ರಮೇಣ ತನ್ನ ಪ್ರಭಾವ ಬೀರುತ್ತಾ ಸಾಧನೆಗೆ ಪ್ರೇರೇಪಿಸುತ್ತಾರೆ. ತನ್ನಲ್ಲಿದ್ದ ಸಿದ್ಧಿಸಾಧನೆಗಳನ್ನು ಒಂದೊಂದಾಗಿ ಶಿಷ್ಯನಿಗೆ ಕಲಿಸುತ್ತಾರೆ. ಬಸವರ ಬಾಹ್ಯ ಚಲನೆ ಕಂಡ ಸಾಮಾನ್ಯರು ಹುಚ್ಚನೆಂದು ದೂರ ನಿಂತಿದ್ದ ಜನ ಹುಚ್ಚನ ಅಂತರಂಗ ಅರಿತು ನಂತರ ಆತನೊಂದಿಗೆ ಬೆರೆತು ಮಹಿಮೆನರಿತು ಆತನನ್ನು ಆರಾಧಿಸಲಾರಂಭಿಸಿದರು. ಸಿದ್ಧಿಸಾಧನೆಗಳಿಂದ ಗೋಣಿಬಸಪ್ಪನು ಪ್ರವರ್ಧಮಾನಕ್ಕೆ ಬಂದಾಗ

ಕೊಟ್ಟೂರುಬಸವರಿಗೆ ತಾನು ಬಂದ ಕೆಲಸ ಮುಗಿಯಿತೆಂದು ಕ್ರಿ.ಶ. ಸುಮಾರು ೧೫೮೫ರ ಸುಮಾರಿನಲ್ಲಿ ಕೂಲಹಳ್ಳಿಯಿಂದ ಸಂಚಾರ ಮುಂದುವರೆಸುತ್ತಾರೆ.

ಗೋಣಿಬಸಪ್ಪನಿಗೆ ಶರಣರು ತೋರಿದ ಶರಣರ ನಡೆ ಬೆಳಕಾಗಿ ಕಂಡು ಶರಣತತ್ವಗಳಿಗೆ ತನ್ನನ್ನೇ ತಾನು ಅರ್ಪಿಸಿಕೊಂಡ. ಅನುಭಾವ ಮಾರ್ಗದಲ್ಲಿ ಕಾವಿ ಉಡುಪು, ಕೊರಳಲ್ಲಿ ರುದ್ರಾಕ್ಷಿಸರ, ಹೆಗಲ ಮೇಲೊಂದು ಕರಿಕಂಬಳಿ ಗೋಣಿಧಾರಿಯಾಗಿ ಕೋರ ಧಾನ್ಯದ ಭಿಕ್ಷೆ ಜೋಳಿಗೆಯೊಂದಿಗೆ ಊರೂರು, ಕೇರಿ–ಕೇರಿ ಭಿಕ್ಷೆ ಬೇಡಿ ತಂದು ಬಡ ನಿಶಕ್ತರಿಗೆ ದಾಸೋಹ ಪ್ರಾರಂಭಿಸಿದ. ಕೊಟ್ಟೂರು ಬಸವರಿಗೆ ಅಶ್ರಯವಾಗಿದ್ದ ಹಾಳು ಅರಮನೆ ಗೋಣಿಬಸಪ್ಪನಿಗೆ ಕಾರ್ಯಕ್ಷೇತ್ರವಾಗಿತ್ತು. ದಾಸೋಹದಲ್ಲಿ ಜಾತಿ ತಾರತಮ್ಯವಿಲ್ಲ. ಶಕ್ತಿಯಿದ್ದವರೆಲ್ಲಾ ತನ್ನ ತನ್ನ ದುಡಿಮೆಗೆ ತಕ್ಕಂತೆ ಗಳಿಸಿದ ಪರಿಕರಗಳನ್ನು ದಾಸೋಹಕ್ಕೆ ತಂದು ಅರ್ಪಿಸಿ ಸಾಲಾಗಿ ಕುಳಿತು ಉಣಲಾರಂಭಿಸಿದರು. ಹೀಗೆ ಶರಣತತ್ವಗಳ ಆಚಾರ ಹಾಗೂ ಆಚರಣೆಯು ಜಾರಿಗೆ ಬಂದಿತು. ಸರಳ ಬದುಕು, ಆತ್ಮೀಯತೆ ನಡೆಯನ್ನು ಕಂಡ ಭಕ್ತರು ಸಾಮಾಜಿಕ ಕಾರ್ಯಗಳಲ್ಲಿ ಕಾಯಾ ವಾಚಾ ಮನಸಾ ಸಹಕರಿಸುತ್ತಾರೆ. ಆತನಿಗೆ ಬೆಂಬಲಿಗರಾಗಿ ನಿಂತಿದ್ದನ್ನು ಕಂಡು ಪಟ್ಟಭದ್ರ ಸನಾತನಿಗಳು ದ್ವೇಷ ಅಸೂಯೆಗಳಿಂದ ಕೂಡಿ ಗೋಣಿಬಸಪ್ಪನನ್ನು ವಿರೋಧಿಸಿ ಪ್ರಭುತ್ವದವರೆಗೂ ದೂರು ಸಲ್ಲಿಸುತ್ತಾರೆ. ಕೊಟ್ಟೂರು ಬಸವರ ಪರಮಭಕ್ತರಾಗಿದ್ದ ಹರಪನಹಳ್ಳಿ ದಾದಾನಾಯಕ ಮತ್ತು ಆತನ ಸಂತತಿಯವರು ದೂರುಗಳನ್ನು ಕೇಳಿ ಅಲಕ್ಷಿಸಿರುವುದು ಕಂಡುಬರುತ್ತದೆ. ಮುಂದೆ ಆ ಸನಾತನಿಗಳು ಸಹ ಪಶ್ಚಾತ್ತಾಪಗೊಂಡು ಗೋಣಿಬಸಪ್ಪನಲ್ಲಿ ಭಕ್ತರಾಗಿ ಒಳಗೊಳ್ಳುತ್ತಾರೆ.

೧೨ನೇ ಶತಮಾನದ ಕಲ್ಯಾಣ ಶರಣ ಚಳುವಳಿಯ ವ್ಯಾಪಕತೆ ೧೬ನೇ ಶತಮಾನದ ಉತ್ತರಾರ್ಧದಲ್ಲಿ ಮಧ್ಯಕರ್ನಾಟಕದಲ್ಲಿ ಪ್ರಾದೇಶಿಕವಾಗಿರದೇ ವ್ಯಾಪಕವಾಗಿ ಹರಡಿರುವುದು ಕಂಡುಬರುತ್ತದೆ. ಆದರೆ ಅದು ಚಳುವಳಿಯ ರೂಪ ಪಡೆಯದೇ ಕುಲಸಂಕರಣ ಮತ್ತು ಸಮೀಕರಣಗೊಂಡು ಆಚರಣಾತ್ಮಕ ನೆಲೆಯಲ್ಲಿ ಒಗ್ಗೂಡಿಸುವುದನ್ನು ಕಾಣಬಹುದಾಗಿದೆ. ಗೋಣಿಬಸಪ್ಪ, ಕನಕವ್ವಳೆಂಬ ಬೇಡ ಜನಾಂಗದ ದೇವದಾಸಿ, ಜಂಗಮ ಜನಾಂಗದ ಕೋರಿ ಈರಯ್ಯ ಸಮ್ಮಿಲನವಾಗಿ ಜಯಿಸಿದವ, ಮುಂದೆ ಆತ ಕೃಷಿ ಸಂಸ್ಕೃತಿ ಕಾಯಕದೊಂದಿಗೆ ಪ್ರಾಬಲ್ಯಕ್ಕೆ ಬಂದಾಗ ಪಶು ಸಂಗೋಪನಾ ಸಂಸ್ಕೃತಿಯ ಜಿಟ್ಟಿನಕಟ್ಟೆ ಹಾಲುಮತದ ಕುರುಬ ಸಂತತಿಯ ವಡ್ಡಟ್ಟವ್ವ ಎಂಬುವವಳನ್ನು ಮದುವೆಯಾಗಿ ಜಾತಿ ಸಂಕರಣ ಕ್ರಿಯೆಯಲ್ಲಿ ಒಳಗೊಳ್ಳುತ್ತಾನೆ ಮತ್ತು ಕೆಳಜಾತಿಗಳ ಕುಲಕಸುಬುಗಳಲ್ಲಿ ಮಾದಿಗ ಜನಾಂಗದ ಜಂಬಾರದಯ್ಯ, ಶರಣ ಪರಮಾಪ್ತ, ಆತನಿಗೆ ಬಾಲಬಸವ ದೀಕ್ಷೆ ನೀಡಿ ಕಾಲಜ್ಞಾನ ಕಲ್ಪಿಸಿ ಆ ಜನಾಂಗದ ಗುರುಸ್ಥಾನ ನೀಡಿ ಆಶೀರ್ವದಿಸಿ ಮಠಕ್ಕೆ ಬರುವ ಆದಾಯದ ಭಾಗ ಲಭಿಸುವಂತೆ ವ್ಯವಸ್ಥೆ ಮಾಡುತ್ತಾನೆ. ಗೋಣಿಬಸಪ್ಪನ ಮಹಿಮೆ ಅರಿಯದೇ ತನ್ನ ಮನೆಯಲ್ಲಿ ಸಂಬಳಕ್ಕೆ ಇಟ್ಟುಕೊಂಡು ದುಡಿಸಿಕೊಂಡ ತಪ್ಪಿಗಾಗಿ ಪಶಾತ್ತಾಪದಿಂದ ನೊಂದ ಚಿಕ್ಕಳ್ಳಿಯ ಲಿಂಗಾಯಿತ ಬಣಕಾರ ಹಾಗೂ ಮಹಿಮೆಯಿಂದ ಪ್ರಭಾವಿತ ಅನೇಕ ಜನಾಂಗಗಳು ಗೋಣಿಬಸಪ್ಪನ ಪಂಥದಲ್ಲಿ ಒಳಗೊಂಡಿವೆ. ವೈದಿಕ, ಶೈವ, ಆಗಮಿಕರನ್ನು ಹೊರತುಪಡಿಸಿ ಎಲ್ಲಾ ಜಾತಿ ಜನಾಂಗದವರು ಗೋಣಿಬಸಪ್ಪನ ಶರಣಪಂಥದಲ್ಲಿ ಒಳಗೊಂಡಿದ್ದಾರೆ.

ಗೋಣಿಬಸಪ್ಪನ ಮಠಗಳು : ಮಧ್ಯಕರ್ನಾಟಕದಲ್ಲಿ ಮಾತ್ರವಲ್ಲದೇ ಉತ್ತರ ಕರ್ನಾಟಕದ ಗದಗ, ಹಾವೇರಿ, ಧಾರವಾಡ, ಕೊಪ್ಪಳ, ರಾಯಚೂರು, ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ, ಜಿಲ್ಲಾವ್ಯಾಪ್ತಿಯಲ್ಲಿ ವ್ಯಾಪಕವಾಗಿ ಆರಾಧನಾ ಸ್ಥಳಗಳು ಕಂಡುಬರುತ್ತವೆ. ತನ್ನ ಕ್ಷೇತ್ರವ್ಯಾಪ್ತಿಯಲ್ಲದೇ ವಿಸ್ತರಣೆಯ ಉತ್ತರ ಕರ್ನಾಟಕದ ಗದಗ ಜಿಲ್ಲಾ ಮುಂಡರಗಿ ತಾಲ್ಲೂಕ್, ಗುಂಬಗೋಳ, ತುಂಗಭದ್ರಾ ನದಿ ದಂಡೆಯಲ್ಲಿ ಕ್ರಿ.ಶ. ಸುಮಾರು ೧೬೪೦ರಲ್ಲಿ ಐಕ್ಯನಾಗಿರಬಹುದಾಗಿದ್ದು, ಆತನ ಭಕ್ತ ಹಮ್ಮಿಗೆ ದೇಸಾಯಿ ಬಹುದೊಡ್ಡ ಸಮಾಧಿ ಕಟ್ಟಿಸಿ ನಿತ್ಯಪೂಜೆ, ವಿಶೇಷ ದಿನಗಳಲ್ಲಿ ಉತ್ಸವಜಾತ್ರೆಯು ನಡೆಯುವಂತೆ ಮಾಡಿದ್ದಾನೆ.

ಗೋಣಿಬಸಪ್ಪನ ರಥೋತ್ಸವ : ಗೋಣಿಬಸಪ್ಪನ ಅಸ್ತಿತ್ವವು ಆತನ ಜಾತ್ರೆ, ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಕೇತಿಸುತ್ತವೆ. ವಿವಿಧ ಗ್ರಾಮಗಳ, ಜಾತಿ, ಜನಾಂಗಗಳು ಒಟ್ಟಾಗಿ ಸಾಮೂಹಿಕವಾಗಿ ರಥೋತ್ಸವ ನಡೆಸುತ್ತಾರೆ. ಹರಪನಹಳ್ಳಿ ಗ್ರಾಮದ ಉಪ್ಪಾರ ಜನಾಂಗದವರು ತಾವೇ ತಮ್ಮ ಸೇವೆಯೆಂದು ಭಕ್ತಿಯಿಂದ ಮಠಗಳಿಗೆ ಸುಣ್ಣ ಬಳಿಯುತ್ತಾರೆ. ಈ ಮೊದಲು ಗೋಣಿಬಸಪ್ಪನಿಗೆ ಕಷ್ಟ ಕೊಟ್ಟು ಪ್ರಾಣಹತ್ಯೆ ಸಂಚಿನಲ್ಲಿ ಭಾಗಿಯಾಗಿದ್ದ ಪ್ರಾಯಶ್ಚಿತ್ತದ ಪ್ರತಿಯಾಗಿ ಆತನ ಸೇವೆಗೆ ನಿಲ್ಲುತ್ತಾರೆ. ಕಸ ಗುಡಿಸುವ ಪರಿಕರಗಳೊಂದಿಗೆ ಬಂದು ಕಸಬರಿಕೆ, ಬುಟ್ಟಿ, ವಗೈರೆ ತಂದು ಸೇವೆ ಸಲ್ಲಿಸುವವರು ಮೇದಾರ ಜನಾಂಗದವರು. ಜಾತ್ರೆಯಲ್ಲಿ ಪೂಜಾ ಕಾರ್ಯಕ್ರಮಗಳಿಗೆ ಬೇಕಾಗುವಷ್ಟು ತೆಂಗಿನಕಾಯಿ ತಂದೊಪ್ಪಿಸುವವರು ಹಡಗಲಿ ತಾಲ್ಲೂಕಿನ ಚಿಕ್ಕಕೊಳಚಿ ಗ್ರಾಮದವರು. ಹಂದರ ಹಾಕಲು ತೆಂಗಿನಗರಿ ತಂದೊಪ್ಪಿಸುವವರು ಜಿತ್ತಿನಕಟ್ಟೆ ಗ್ರಾಮದವರು. ಹಿಲಾಲು ಹಿಡಿಯುವವರು ಮಡಿವಾಳ ಜನಾಂಗದವರು. ಪಾಲಕಿ ಹೊರುವವರು ಚಿಕ್ಕಳ್ಳಿ ಗ್ರಾಮದವರು.

ರಥೋತ್ಸವ ಶೃಂಗರಿಸುವವರು ಬಾಗಳಿ ಗ್ರಾಮದ ಬಡಿಗರು. ಮಡಿ ಹಾಸುವವರು ಮಡಿವಾಳರು. ಜಾತ್ರೆಯಲ್ಲಿ ಬಂದ ಜನರಿಗೆ ಪ್ರಸಾದ ಹಾಗೂ ದಾಸೋಹ ಅಡುಗೆ ತಯಾರಿಸಲು ಮಣ್ಣಿನ ಪಡಗ, ಮುಚ್ಚಳ ಗಡಿಗೆ, ಮಡಿಕೆ ಪೂರೈಸುವವರು ಅಡವಿಹಳ್ಳಿ ಕುಂಬಾರರು.

ಕೂಲಹಳ್ಳಿಯ ಗೋಣಿಬಸಪ್ಪನ ಜಾತ್ರೆ ಎಂದು ಪ್ರಸಿದ್ಧಿ ಪಡೆದಿದ್ದರೂ ರಥೋತ್ಸವದಲ್ಲಿ ಪೀಠಾಸೀನಗೊಳ್ಳುವುದು ಕೊಟ್ಟೂರು ಬಸವರ ಉತ್ಸವಮೂರ್ತಿ. ಗೋಣಿಬಸಪ್ಪನ ಸಂಕೇತಗಳಾದ ಕುಡುಗೋಲು ಹಾಗೂ ಕೊಡಲಿ ಮಾತ್ರ ಆರಾಧನೆಗೊಳ್ಳುತ್ತದೆ. ಕೊಟ್ಟೂರು ಬಸವ ಹಾಗೂ ಗೋಣಿಬಸಪ್ಪನ ಮಠದ ಪೂಜಾರರು ಲಿಂಗವಂತರು. ಗೋಣಿಬಸಪ್ಪನ ಮಠದ ಎದುರಿಗೆ ಬಂಬಾರದಯ್ಯನ ಮಠವಿದೆ. ಈತ ಗೋಣಿಬಸಪ್ಪನ ಶಿಷ್ಯ ಬಾಲಬಸವ. ಈ ಮಠದ ಪೂಜಾರರು ಹರಿಜನರು. ಈ ಬಾಲಬಸವನಿಗೆ ಲಿಂಗದೀಕ್ಷೆಗೊಳಗಾಗುತ್ತಾರೆ.

ಗೋಣಿಬಸಪ್ಪನ ಜಾತ್ರೆ ಜಾನಪದ ಜಾತ್ರೆಯೆಂದು ಪ್ರಸಿದ್ಧಿ ಪಡೆದಿದೆ. ಮುಖ್ಯವಾಗಿ ಕೃಷಿಕ ಪಶುಪಾಲಕ ಮತ್ತು ಗ್ರಾಮಾಂತರ ಕಸುಬುದಾರರು ಕೂಲಹಳ್ಳಿಗೆ ಬಂದು ತಾವು ತಯಾರಿಸಿದ ಪರಿಕರಗಳ ಮಾರಾಟ ಮಾಡುತ್ತಾರೆ. ಈ ಜಾತ್ರೆಗೆ ವಾರಗಟ್ಟಲೆ ಕುಟುಂಬ ಸಮೇತ ಎತ್ತು, ಚಕ್ಕಡಿ, ಟ್ರ್ಯಾಕ್ಟರ್ ಮೋಟಾರು ವಾಹನಗಳೊಂದಿಗೆ ಬಂದು ವಾಸ್ತವ್ಯ ಹೂಡಿ ಜಾತ್ರಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ತಮಗೆ ಬೇಕಾದ ಕೃಷಿ ಉಪಯೋಗಿ ಸಾಮಗ್ರಿ ಖರೀದಿಸಿ ಸ್ಥಳೀಯರನ್ನು ಒಯ್ಯುತ್ತಾರೆ. ಇಲ್ಲಿ ತಯಾರಿಸಿದ ಭಸ್ಮ ಅವರಿಗೆ ಔಷಧಿ. ಅಷ್ಟು ಗಾಢವಾದ ನಂಬಿಕೆ. ಭಕ್ತರಿಗೆ ಗೋಣಿಬಸಪ್ಪನೇ ಅಧಿದೈವ. ಸ್ಥಳೀಯರನ್ನು ನಿಮ್ಮ ಮನೆದೈವ ಯಾರೆಂಬುದನ್ನು ಪ್ರಶ್ನಿಸಿದರೆ ಗೋಣಿಬಸಪ್ಪನೇ ನನ್ನ ಮನೆದೈವವೆಂದು ಹೇಳುವರು. ಆ ಮಟ್ಟಿಗೆ ಗೋಣಿಬಸಪ್ಪನ ಪ್ರಭಾವವಿದೆ.

ಆಕರಗ್ರಂಥಗಳು

೧. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ಹರಪನಹಳ್ಳಿ, ಪುಟ ೪೫೩ ರಿಂದ ೬೩೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ವೆಂಕಟೇಶ ಇಂದ್ವಾಡಿ (ಸಂ.), ಗೋಣಿಬಸಪ್ಪನ ಕಾವ್ಯ, ಪುಟ ೯೫.

೩. ಅದೇ, ಪುಟ ೮೦.

◆◆

ರಘು ಆರ್.

ಗಂಟೆಬಟ್ಲು ಹಾಗೂ ನಾಡುದೇಶ ಮುದ್ರೆ ಆಚರಣೆಗಳು

ಛಲವಾದಿಗಳಲ್ಲಿ ಆದಿಕರ್ನಾಟಕ (ಆದಿದ್ರಾವಿಡ) ಮತ್ತು ಆದಿಜಾಂಭವವೆಂಬ ಪಂಗಡವಿದ್ದು, ಗ್ರಾಮಗಳ ನೈರ್ಮಲ್ಯವನ್ನು ಕಾಪಾಡಿಕೊಂಡು ಬಂದವರು ಮತ್ತು ಸಂದೇಶಕಾರರಾಗಿ ಕಾರ್ಯಕ್ರಮ ನಿರ್ವಹಿಸುತ್ತಿದ್ದರೆಂದು ಮಾನ್ಯತೆ ಪಡೆದಿದ್ದಾರೆ. ಇವರನ್ನು ಕುಳವಾಡಿಗಳೆಂದು ಮತ್ತು ಚಕ್ರರೆಂದು ಕರೆಯುತ್ತಿದ್ದರು. ಇವರಿಗೆ ಚಕ್ರರ ಕೊಡುಗೆ ಎಂದು ಜಮೀನನ್ನು ಬಿಟ್ಟಿರುವ ಸಂಗತಿ ಶಾಸನಗಳಿಂದಲೂ ತಿಳಿದುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಛಲವಾದಿ ಗಂಟೆಬಟ್ಲುಗೆ ವಿಶೇಷ ಗೌರವ ಮರ್ಯಾದೆ ಇರುವುದನ್ನು ಕಾಣಬಹುದು.

ಗ್ರಾಮದೇವತೆಯ ಆಚರಣೆಗಳಲ್ಲಿ, ಮಾರಿ ಹಬ್ಬಗಳಲ್ಲಿ ಹಿಂಡಿ ಮಾರಮ್ಮ, ದಂಡಿನ ಮಾರಮ್ಮ, ಕೆಸ್ತೂರು ಮಾರಮ್ಮ, ಸಿಡಿಹಬ್ಬ ಜಾತ್ರೆ ಕಾರ್ಯಕ್ರಮಗಳಲ್ಲಿ 'ಗಂಟೆಬಟ್ಲು' ಮಾನ್ಯತೆ ಪಡೆದಿರುತ್ತದೆ. ಹಾಗೆಯೇ ಕುಳವಾಡಿಗಳಿಗೂ, ಛಲವಾದಿಗಳಿಗೂ ವಿಶೇಷ ಗೌರವ ಸ್ಥಾನಮಾನ ನೀಡುತ್ತಾ ಬರುತ್ತಿದ್ದಾರೆ.

'ಹೊಲೆಯನು ಪಂಥವನಾಡಲು ಆತನಿಗೆ ಮೆಚ್ಚಿ ಬಿರುದಿನ ಮುದ್ರೆಯ ಸಟ್ಟುಗವನ್ನು ಕೊಟ್ಟನು' ಎಂದು ದೇವಚಂದ್ರನ ರಾಜಾವಳಿ ಕಥಾಸಾರ ಕೃತಿಯಲ್ಲಿ ದಾಖಲಾಗಿದೆ. ಮೈಸೂರು ಸಂಸ್ಥಾನದ ಆಡಳಿತದಲ್ಲಿ ಗಂಟೆಬಟ್ಲು ನಾಡುದೇಶದ ಮುದ್ರೆಯನ್ನು ಪಂಚಾಚಾರ್ಯರ ಅನುಗ್ರಹದಿಂದ ೫ ಪೀಠಗಳ ಮಠಗಳಲ್ಲಿ ೩ ಪೀಠಗಳಲ್ಲಿ ಮಾತ್ರ ಗಂಟೆಬಟ್ಲುವಿನ ಮಾಹಿತಿ ಸಿಗುತ್ತದೆ, ಬಾಳೆಹೊನ್ನೂರು, ಶ್ರೀಶೈಲ, ಉಜ್ಜೈನಿ ಶಾಖೆ ಪರಂಪರೆಯಲ್ಲಿ ಮಠಾಧೀಶ ಗುರುಪರಂಪರೆಯಲ್ಲಿ ಆಶೀರ್ವಾದ ಪಡೆದ ಗಂಟೆಬಟ್ಲು ಮತ್ತು ನಾಡುದೇಶದ ಮುದ್ರೆಯು ಬಣಜಿಗರ ಸಂಸ್ಕೃತಿಯಲ್ಲಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಹಲವಾರು ಗ್ರಾಮಗಳ ಸಮಾಜದ ಕೂಟಗಳಲ್ಲಿ ಒಪ್ಪಿಕೊಂಡ ೧೮ ಜಾತಿಯವರು ಗಂಟೆಬಟ್ಲನ್ನು ಮಾಡಿಸಿಕೊಂಡಿರುವ ದಾಖಲೆಗಳಿವೆ. ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಅಗರ ಮಾಂಬಳ್ಳಿ ಗ್ರಾಮದ ಹಿಂಡಿಮಾರಮ್ಮ ಜಾತ್ರೆಯಲ್ಲಿ ದೀಪಾವಳಿ ಹಬ್ಬದ ಮುಂಚೆ, ಮೈಸೂರು ದಸರಾ ಆದ ನಂತರ ೭ ಹಳ್ಳಿಗಳ ಸಮಾಜದವರು ಕೂಟ ಸೇರಿ, ಕರಾರಿನಂತೆ ಯಾವ ಯಾವ ಕೋಮಿನವರಿಗೆ ಹಂಚಿಕೆಯಾದ ಕರ್ತವ್ಯವನ್ನು ಸೂತ್ರದಂತೆ ನಿಯಮವನ್ನು ಮೀರದೆ ನಡೆದುಕೊಳ್ಳಲು, ಕರಾರಿನಂತೆ ಕಟ್ಟು ಕಟ್ಟಳೆಯನ್ನು ನಿರ್ಧರಿಸಿ ಗೌರವ ವಿಶ್ವಾಸದಿಂದ ಪ್ರತಿವರ್ಷ ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆ, ಭಕ್ತರು ಹಿಂಡಿಮಾರಮ್ಮನ ಕೃಪೆಗೆ ಪಾತ್ರರಾಗಿರುತ್ತಾರೆ.

ಚಿತ್ರಕಲಾ ಶಿಕ್ಷಕರು
೨೯೯-೫, ಚಿತ್ರಭಾವಡಿ ಬೀದಿ
ಕೊಳ್ಳೇಗಾಲ-೫೭೧೪೪೦
ಮೊ: ೯೩೬೧೩ ೧೪೮೨೨

ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಗಂಟೆಬಟ್ಲು ಸಂಸ್ಕೃತಿಯ ಆಚರಣೆಯು ನಾಡುದೇಶದ ಗೌಡ್ರು ಮತ್ತು ನಾಡುದೇಶದ ಶೆಟ್ರು ಮತ್ತು ಚಕ್ರರು ಅಥವ ಕುಳವಾಡಿಗಳ ಸಹಕಾರದಿಂದ ಮಾರಮ್ಮನ ಜಾತ್ರೆ, ದೀಪಾವಳಿ ಸಂದರ್ಭದಲ್ಲಿಯೂ ಕಸಬಾ ಮಳವಳ್ಳಿ ದಂಡಿನಮಾರಿ ಸಿಡಿಹಬ್ಬ ಜಾತ್ರೆಯಲ್ಲಿ ಮತ್ತು ನಂಜನಗೂಡು ತಾಲ್ಲೂಕು ಹುಸುಗೂರು ಗ್ರಾಮದಲ್ಲಿ ಗಡಿ ಭೈರವನ ಜಾತ್ರೆಯಲ್ಲಿ ಗಂಟೆಬಟ್ಲು, ನಾಡುದೇಶದ ಮುದ್ರೆ (೫) ಐದು ಗಡಿಗಳಿಂದ ಬರುತ್ತದೆ. ಸಂಪ್ರದಾಯದಂತೆ ಮಾನ್ಯತೆ ಪಡೆಯುತ್ತಾರೆ. ಚಕ್ರರು ಅಥವ ಕುಳವಾಡಿಗಳು ನಾಡುದೇಶದ ಮುದ್ರೆಯನ್ನು ಹೊತ್ತು ದೇವರ ಉತ್ಸವ ಮತ್ತು ರಥದ ಮುಂದೆ ಸಾಗುತ್ತಾ ಮೆರೆಯುತ್ತಾರೆ. ಹೀಗೆ ನಾಡುದೇಶದ ಶೆಟ್ರು ಮತ್ತು ಕುಳವಾಡಿ ಇಬ್ಬರಿಗೂ ವೀಳ್ಯ-ಕಾಣಿಕೆ ಸಲ್ಲುತ್ತದೆ. ನಾಡುದೇಶದ ಮುದ್ರೆಯು ಜಾತ್ರೆ, ಹಬ್ಬ-ಹರಿದಿನ, ಮದುವೆ ಮುಂತಾದ ಕಾರ್ಯಕ್ರಮಗಳು ಮುಗಿದ ನಂತರ ನಾಡುದೇಶದ ಶೆಟ್ರು ಮನೆಯಲ್ಲಿ ಕುಳವಾಡಿ ತೆಗೆದುಕೊಂಡು ಹೋಗಿ ಇಡುತ್ತಾರೆ. ಉತ್ತರ ಕರ್ನಾಟಕದಲ್ಲಿ ಛಲವಾದಿಗಳು ಗಂಟೆಬಟ್ಲು ಅಥವಾ ನಾಡುದೇಶದ ಮುದ್ರೆಯನ್ನು ಅವರ ಮನೆಗಳಲ್ಲಿ ಪೂಜಿಸಿಕೊಂಡು ಬರುವ ಸಂಪ್ರದಾಯವಿರುತ್ತದೆ. ಹಾಗೂ ಗಂಟೆಬಟ್ಲನ್ನು ಶವ ಸಂಸ್ಕಾರಕ್ಕೂ ಉಪಯೋಗಿಸುವ ಪದ್ಧತಿಯಿರುತ್ತದೆ.

ಕೊಪ್ಪಳ, ಬೆಂಗಳೂರು, ಬಳ್ಳಾರಿ, ದಾವಣಗೆರೆ, ಹಾಸನ, ರಾಯಚೂರು, ತುಮಕೂರು, ರಾಮನಗರ, ಹಾವೇರಿ ಜಿಲ್ಲೆಯ ಬಂಕಾಪುರ ಗ್ರಾಮದಲ್ಲಿ ಮತ್ತು ಆಂಧ್ರಪ್ರದೇಶದ ರಾಯದುರ್ಗ ಮತ್ತು ತಮಿಳುನಾಡಿನ ತಾಳವಾಡಿ ಗ್ರಾಮದಲ್ಲಿ ಸಂಸ್ಕೃತಿ ಕಂಡುಬರುತ್ತದೆ. ಈ ಪ್ರದೇಶದ ಸುತ್ತಮುತ್ತಲ ಗ್ರಾಮಗಳಲ್ಲಿ ಗಂಟೆಬಟ್ಲು ನಾಡುದೇಶದ ಮುದ್ರೆಯನ್ನು ಮದುವೆ ಸಂದರ್ಭಗಳಲ್ಲಿ ೧೮ ಜಾತಿಯು ಭಾಗವಹಿಸಿದ ಸಂಕೇತವಾಗಿಯು ಬಳಸುವ, ಗೌರವಿಸುವ ಸಂಪ್ರದಾಯ ವಾಗಿರುತ್ತದೆ. ಉಪ್ಪಾರ, ಮಡಿವಾಳರು, ಕುಂಬಾರರು, ನಯನಜ ಕ್ಷತ್ರಿಯ, ಹಂದಿ ಜೋಗಿಗಳು ಮುಂತಾದವರು ಮದುವೆ ಸಂದರ್ಭ ತೆಗೆದುಕೊಂಡು ಪೂಜಿಸುವ ಸಂಪ್ರದಾಯವಿದೆ.

ರಾಜಾ ಪ್ರತ್ಯಕ್ಷ ದೇವತೆ : ರಾಜನು ಬಹುಪತ್ನಿ ವಲ್ಲಭ ಇಚ್ಚೆಪಟ್ಟ ಕನ್ಯೆಯನ್ನು ಕೆಲವು ವಿಧಿಗಳಿಂದ ಮದುವೆಯಾಗು ತ್ತಿದ್ದನು. ಕ್ಷತ್ರಿಯ ಕುಲದಲ್ಲಿ ತನ್ನ ಮಗನಿಗೆ ರಾಜಪಟ್ಟವನ್ನು ಮತ್ತು ಅನ್ಯರಲ್ಲಿ ಹುಟ್ಟಿದ ಗಂಡು ಮಗುವಾದಲ್ಲಿ ಕುಲಮಗನೆಂದು, ಹೆಣ್ಣು ಮಗುವಾದಲ್ಲಿ ತಾಯಿ ಕುಲಕ್ಕೆ ಸೇರಿಸುವ ಸಂಪ್ರದಾಯವಿತ್ತು. ಅನ್ಯರ ಮಗ ಬುದ್ಧಿವಂತ



ದೇಸಿ ಸೌಟ್, ಕಳಲೆಗ್ರಾಮ



ನಾಡುದೇಶದ ಮುದ್ರೆ, ದುದ್ದ ಗ್ರಾಮ



ನಾಡುದೇಶದ ಮುದ್ರೆ, ಗುಂಡ್ಲುಪೇಟೆ



ನಾಡುದೇಶದ ಮುದ್ರೆ, ಅಜ್ಜಿಪುರ



ನಾಡುದೇಶದ ಮುದ್ರೆ, ಕೌದಳ್ಳಿ

ನಾದಲ್ಲಿ ಮಂತ್ರಿ ಪದವಿಯನ್ನು, ಬಲಶಾಲಿಯಾದಲ್ಲಿ ದಂಡನಾಯಕನಾಗಿ ಹಾಗೂ ವ್ಯಾಪಾರದಲ್ಲಿ ಚತುರನಾದಲ್ಲಿ ವರ್ತಕ ಸಂಘಕ್ಕೆ ಅಧ್ಯಕ್ಷನಾಗಿ ಮಾಡುತ್ತಿದ್ದನು. ಈ ಸಂಸ್ಕೃತಿಯು ಕ್ಷತ್ರಿಯ ಪರಂಪರೆಯಲ್ಲಿ ರೂಢಿಯಲ್ಲಿತ್ತು ಎಂದು ಶಾಸನಗಳಿಂದ ತಿಳಿಯುತ್ತದೆ. ಹೀಗೆ ಹಲವು ಜಾತಿಗಳು ಹುಟ್ಟುತ್ತವೆ.

ಕಾಳಿಂಗರಾಯನ ಆಸ್ಥಾನದಲ್ಲಿ ಕ್ರಯ ವಿಕ್ರಯಕ್ಕೆ ಸಂಘದ ಮುಖ್ಯಸ್ಥನನ್ನಾಗಿ ಮಾಡಿ ಬಣಜನೆಂದು ಕರೆದು ಅಧ್ಯಕ್ಷನನ್ನಾಗಿ ಮಾಡಲಾಯಿತು. ಈ ಬಣಜಿಗನ ಮಗಳು ಪಂಚಾಳನ ಮಗನಾದ ಶಾಂಭಯ್ಯನನ್ನು ಪ್ರೀತಿಸಿ ಸುಖಿಸುತ್ತಿದ್ದಳು. ಈ ವಿಷಯ ತಿಳಿದ ಬಣಜಿಗನು ತನ್ನ ಮಗಳನ್ನು ಮನೆಯಿಂದ ತೊರೆಯುತ್ತಾನೆ.

ಪಂಚಾಳನು ಕನ್ಯೆಯನ್ನು ತನ್ನ ವಶದಲ್ಲಿರಿಸಿಕೊಂಡು ಸಂಸಾರಿಯಾಗಿರುತ್ತಾನೆ. ಕಾಲಘಟ್ಟದಲ್ಲಿ ತನ್ನ ಕುಲ ಸ್ತ್ರೀಯಲ್ಲಿ ಹುಟ್ಟಿದ ಮಗನಿಗೆ ಶಾಂಭಯ್ಯನು ಮದುವೆ ಮಾಡುವ ಸಂದರ್ಭದಲ್ಲಿ ಪಂಚಾಳರು, ಬೇಡರು (ತೊರೆಯರು), ಮಾದಿಗರು ಕೂಟ ಸೇರಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ದಾಸಿಯ ಪುತ್ರನನ್ನು ಜನರು ಪ್ರೇರೇಪಿಸಿದರು. ನಿಮ್ಮ ತಂದೆ ಶಾಂಭಯ್ಯನು ನಿನ್ನ ಅಣ್ಣನಿಗೆ ಮದುವೆ ಮಾಡುತ್ತಿದ್ದಾನೆ. ಆದ್ದರಿಂದ ನನಗೂ ಮದುವೆ ಮಾಡಿಕೊಡು ಎಂದು ಕೇಳು ಎಂದು ಪ್ರಶ್ನೆಯನ್ನು ಹುಟ್ಟುಹಾಕುತ್ತಾರೆ. ಅದರಂತೆ ದಾಸಿ ಮಗನು ತಂದೆಯನ್ನು ಶಾಂಭಯ್ಯ(ಪಂಚಾಳದ)ನನ್ನು ಕೇಳಿ ಕೋಪಕ್ಕೆ ತುತ್ತಾಗುತ್ತಾನೆ. ಕೆರಳಿದ ತಂದೆಯು ಸಟ್ಟುಗದಿಂದ ಹೊಡೆಯುತ್ತಾನೆ. ಆಗ ಕೋಪಗೊಂಡ ಮಗನು ಮದುವೆ ಚಪ್ಪರದಲ್ಲಿ ನೆಟ್ಟಿದ ಮುಹೂರ್ತದ ೧೨ ಕಂಬಗಳಲ್ಲಿ ೧ ಕಂಬವನ್ನು ಮತ್ತು ಸಟ್ಟುಗವನ್ನು ಎತ್ತಿಕೊಂಡು ಓಡಿಬಂದು ನಮ್ಮ ತಂದೆ ಗುರುತಿಗಾಗಿ ಕೊಟ್ಟಿದ್ದಾನೆ ಎಂದು ಬಹಿರಂಗವಾಗಿ ಸಾರಿದನು. ಹೀಗೆ ಶಾಂಭಯ್ಯನ ದಾಸಿ ಮಗನನ್ನು ಲಿಂಗಾಯತ ಆಚಾರಿ ಎಂದು ಸಂಪ್ರದಾಯದಲ್ಲಿ ಕರೆಸಿಕೊಂಡಿದ್ದಾರೆ. ವಿಷಯವನ್ನು ಪಾಂಚಾಳರು ಸಹ ಒಪ್ಪಿಕೊಂಡಿರುತ್ತಾರೆ, ಈಗಲೂ ಲಿಂಗಾಯತ ಆಚಾರಿಗಳು ಬೇರೆಯಾಗಿಯೇ ಇದ್ದಾರೆ.

ರಾಜನ ಕಾಲಘಟ್ಟದಲ್ಲಿ ಶೈವ ಸಂಪ್ರದಾಯದಲ್ಲಿ ಲಿಂಗಾಯತ ಧರ್ಮದ ಶ್ರೇಷ್ಠತೆಯನ್ನು ವೀರ ಬಸವಶೆಟ್ಟಿಯು ೧೮ ವೃತ್ತಿಗಳಿಗೆ ಬಣ್ಣ ಕಲ್ಪಿಸಿ, ಜಾತಿಗಳೆಂದು ನಿರ್ಧರಿಸಿದ ವೃತ್ತಿ ಸಂಕೇತವನ್ನು ನೀಡಿದನು. ತೆರಿಗೆಯಾಗಿ ಸುಂಕದ ಆರನೇ ಒಂದು ಭಾಗವನ್ನು ಪಡೆಯುತ್ತಿದ್ದು, ಅಧಿಕಾರವನ್ನು ಮಾಡುತ್ತಿದ್ದನು. ಇತರರಿಗೆ ಲಿಂಗಾಯತ ಧರ್ಮವನ್ನು ಸ್ವೀಕರಿಸಲು, ಎಡಗೈ ಗುಂಪಿಗೆ (ಪಣಕ್ಕೆ) ಒತ್ತಾಯಿಸುತ್ತಾನೆ. ಆಗ ಬೇಡರು (ತೊರೆಯರು), ಪಂಚಾಳರು, ಮಾದಿಗರು ತಿರಸ್ಕರಿಸುತ್ತಾರೆ. ಇವರನ್ನು ಅಂದು ಶಿಕ್ಷಿಸಲಾಯಿತು, ಎಂದು ರಾಜಾವಳಿ ಕಥಾಸಾರದಲ್ಲಿ ಎಂಟನೇ ಅಧಿಕಾರದಲ್ಲಿ ಬರೆಯಲಾಗಿದೆ.

ಈ ಸಮಯದಲ್ಲಿ ಹೊಲೆಯನು ಪಂಥವನಾಡಲು ಆತನಿಗೆ ಮೆಚ್ಚಿ ಬಿರುದಿನ ಮುದ್ರೆಯ ಸಟ್ಟುಗವನ್ನು ಕೊಟ್ಟನು. ಪಂಚಾಳ ಮೊದಲಾದವರ ಬಣ್ಣ ಕೀಳೆಂದು ಗದ್ದುಗೆಯನ್ನು ಕಳೆದವರು, ಬ್ರಾಹ್ಮಣರಲ್ಲಿ ವಾದಿಸಿ ವೇದವನ್ನು ನಾಯಕುನ್ನಿಗಿತ್ತರು, ಅದು ಕೂಗಲು ಓದಿಸಿದೆವೆಂದೂ, ವ್ಯಾಸನ ಬಾಹುವನ್ನು ತರಿದೆವೆಂದೂ, ನಂದಿ ಧ್ವಜದಲ್ಲಿ ಕಟ್ಟಿದರು ಎಂಬುದನ್ನು ದೇವಚಂದ್ರನು ರಾಜಾವಳಿ ಕಥಾಸಾರ ಎಂಬ ಪುಸ್ತಕದಲ್ಲಿದೆ.


ಬ್ರಿಟಿಷರ ಆಡಳಿತದಲ್ಲಿ ವೇದ ಉಪನಿಷತ್ತನ್ನು ಕಲಿತ ಬ್ರಾಹ್ಮಣರು ಪುರೋಹಿತ ವೃತ್ತಿಯನ್ನು ಮಾಡುತ್ತಿರುತ್ತಾರೆ. ಆಂಧ್ರಪ್ರದೇಶದ ಚಿತ್ತೂರು ಗ್ರಾಮದಲ್ಲಿ ಪಾಂಚಾಳರು ಕೂಡ ಪುರೋಹಿತ ವೃತ್ತಿಯನ್ನು ಮಾಡುತ್ತಿರುವಾಗ, ಬ್ರಾಹ್ಮಣರು ಬಂದು ತಡೆದು ಗಲಾಟೆ ಮಾಡುತ್ತಾರೆ. ಈ ಜಗಳ ತಕರಾರು ಬ್ರಿಟೀಷ್ ಸರ್ಕಾರದ ಕೋರ್ಟ್ ಹತ್ತುತ್ತದೆ. ಬ್ರಾಹ್ಮಣರು ಮತ್ತು ಪಾಂಚಾಳರು ವಾದ-ವಿವಾದದಲ್ಲಿ ವೇದ ವ್ಯಾಸನನ್ನು ಕುರಿತು ಪ್ರಶ್ನಿಸಿದರು ವೇದಗಳ ಸತ್ಯ ಸಂಸ್ಕೃತಿ ವಾಸ್ತವವನ್ನು ಅರಿತ ನ್ಯಾಯಾಧೀಶರು ಪಂಚಾಳರ ಪರವಾಗಿ ನ್ಯಾಯ ಕೊಟ್ಟರು. ಬ್ರಾಹ್ಮಣರ ತಕರಾರಿಗೆ ದಂಡವನ್ನು ವಿಧಿಸಿದರು. ಇದು ಕ್ರಿ.ಶ. ೧೮೧೮ರಲ್ಲಿ ಚಿತ್ತೂರು ಜಿಲ್ಲಾ ಅದಾಲತ್ ಕೋರ್ಟ್ ತೀರ್ಪಿನಿಂದ ತಿಳಿದುಬರುತ್ತದೆ.

ಈ ವಿಷಯ ತಿಳಿದವರು ಕಾಯಕವೇ ಕೈಲಾಸವೆಂಬ ನೀತಿಸಾರದಂತೆ ೧೮ ವೃತ್ತಿ ನಿರತ ಜಾತಿಯ ಜನರ ಸಂಕೇತವಾಗಿ ನಂದಿ ಧ್ವಜದಲ್ಲಿ ೧೮ ಬುರುಡೆಗಳನ್ನು ಮತ್ತು ವ್ಯಾಸನ ವೇದವನ್ನು ಹಾಸ್ಯಾಸ್ಪದ ಮಾಡಿದಕ್ಕಾಗಿ ವ್ಯಾಸನ ತೋಳನ್ನು ಕತ್ತರಿಸಿದೆವು ಎಂದು ನಂದಿ ಧ್ವಜದಲ್ಲಿ ಕಟ್ಟಿದರು.ಎಂಬುದಕ್ಕೆ ನಂದಿ ಧ್ವಜದ ಕೆಳಗೆ ವ್ಯಾಸನ ತೋಳನ್ನು (ಮಾಸ್ತಿ ತೋಳು) ತಾಮ್ರದಲ್ಲಿ ಮಾಡಿಸಿ ಕಟ್ಟಲಾಗುತ್ತಿತ್ತು ಶೃಂಗೇರಿಯಲ್ಲಿ ನಂದಿ ಧ್ವಜವನ್ನು ಎತ್ತಿ ಕುಣಿಯುತ್ತಿರುವಾಗ ವ್ಯಾಸನ ತೋಳಿನ ನೆರಳನ್ನು ನೋಡಿ ಭಯಭೀತರಾಗಿ ಕೆಲವು ಧರ್ಮೀಯರು ನೋಡಲು ಬರುತ್ತಿರಲಿಲ್ಲ ಇದನ್ನು ತಿಳಿದ ಮೈಸೂರು ಒಡೆಯರು ನಂದಿ ಧ್ವಜದಲ್ಲಿ ವ್ಯಾಸನ ತೋಳಿನ ಬದಲು ಹಸ್ತದ ರೀತಿಯಲ್ಲಿ ಮಾಡಿ ಭಂಡಾರಿ ಬಸವಣ್ಣನ ಐಕ್ಯವಾದ ಸಂಗಮೇಶ್ವರನ ಮಂಟಪವನ್ನು ಮತ್ತು ನಂದಿಯನ್ನು ಮುಂದುಗಡೆ ಕುಳಿತಂತೆ ನಂದಿ ಕಂಬದಲ್ಲಿ ಅಳವಡಿಸಲಾಯಿತು,


ನಂದಿ ಕಂಬದಲ್ಲಿ ಖಾವಿ ಧ್ವಜವನ್ನು ತುದಿಯಲ್ಲಿ ಕಟ್ಟಲಾಯಿತು. ಹೀಗೆ ನಂದಿ ಕಂಬವನ್ನು ಜಾತಿಗೆ ತಕ್ಕಂತೆ ಬುರುಡೆಯನ್ನು ಅಳವಡಿಸಲಾಯಿತು, ಮೈಸೂರು ಸಂಸ್ಥಾನದ ರಾಜ ಪರಂಪರೆಯಲ್ಲಿ ನಂದಿ ಕಂಬಕ್ಕೆ ಮೊದಲ ಪೂಜೆ ಎಂಬುದು ಸಂಪ್ರದಾಯವಾಗಿ ಬೆಳೆದು ಬರುತ್ತಿದೆ. ದಸರಾ ಉತ್ಸವದಲ್ಲಿ ಒಂದು ಬಾರಿಯು ನಾಡುದೇಶದ ಮುದ್ರೆ ೧೮ ಜಾತಿಯ ಸಂಕೇತವನ್ನು ಮೆರವಣಿಗೆಯಲ್ಲಿ ನೋಡಿಲ್ಲದಿರುವುದು, ಇದರ ಪ್ರಾಮುಖ್ಯತೆ ಎಷ್ಟು ಎಂದು ತಿಳಿಯುತ್ತದೆ.

ಅಗರ – ಮಾಂಬಳ್ಳಿ ಗ್ರಾಮಗಳ ನಡುವೆ ಹಿಂಡಿ ಮಾರಮ್ಮ ದೇವಾಲಯವಿದೆ. ಎರಡು ಗ್ರಾಮಗಳಲ್ಲಿ ನಾಡುದೇಶದ ಗೌಡರು ಮತ್ತು ನಾಡುದೇಶದ ಶೆಟ್ರು ಹಾಗೂ ಕುಳವಾಡಿಗಳು ಅಥವ ಚಕ್ರರಿಗೆ ಕರ್ತವ್ಯವಿರುತ್ತದೆ. ಹಿಂದೆ ಇದ್ದ ನಾಡುದೇಶದ ಮುದ್ರೆಯ ಸಟ್ಟುಗವನ್ನು ಬದಲಿಸಿ ಗ್ರಾಮದಲ್ಲಿ ವಾಸಿಸುವ ವಿವಿಧ ಜಾತಿಯ ಜನರ ವೃತ್ತಿ ಸಂಕೇತವಾದ ೧೮ ಜಾತಿಗಳ ಕಸುಬಿನ ಆಕಾರವನ್ನು ಎರಕ ಹೊಯಿಸಿ ಸುಂದರವಾದ ಗಂಟೆಬಟ್ಲನ್ನು ಸಮಾಜದ ಒಪ್ಪಿಗೆಯಿಂದ ಮಾಡಿಸಿಕೊಂಡಿದ್ದಾರೆ. ಅಂದಾಜು ೧೯೪೧ರ ಒಳಗೆ ಅಗರ ಮಾಂಬಳ್ಳಿಯ ಹಿಂಡಿ ಮಾರಮ್ಮನ ಜಾತ್ರೆ (ಸಪ್ತಮಾತೃಕೆಯರಲ್ಲಿ) ಅಗರದ ಹಿರಿಯ ಕೆರೆಯಲ್ಲಿ ಬೊಮ್ಮಪ್ಪನ ಕೇಲ್ ತರುವ ಸಂದರ್ಭದಲ್ಲೂ ಮತ್ತು ಕೊಂಡೋತ್ಸವದ ಮುನ್ನ ನಾಯಕರ ರಾಮಮಂದಿರದ ಚಾವಡಿಯಲ್ಲಿ ೭ ಹಳ್ಳಿಗಳ ಗ್ರಾಮದ ಯಜಮಾನರುಗಳಿಗೆ ವೀಳ್ಯ ಹಂಚುವಾಗ ನಾಡುದೇಶದ ಮುದ್ರೆಗೆ–ಗದ್ದಿಗೆ ಇಟ್ಟು ಪೂಜೆ ಮಾಡಿ ಕೊಂಡೋತ್ಸವ ವೀಳ್ಯ ಕಾಣಿಕೆ ಕೊಡುತ್ತಾರೆ. ಕೊಂಡೋತ್ಸವ ಆದ ಮಾರನೇ ದಿನ ಹಿಂಡಿ ಮಾರಮ್ಮನ ದೇವತೆಯ ಮೆರವಣಿಗೆಯಲ್ಲಿ ಛಲವಾದಿಗಳು ಕುಳವಾಡಿಯು ನಾಡುದೇಶದ ಮುದ್ರೆಯನ್ನು ಹೊತ್ತು ಹೊರಟಾಗ ಎಲ್ಲಾ ಕೇರಿಗಳಲ್ಲು ಪೂಜೆ ಸಲ್ಲುತ್ತದೆ. ಛಲವಾದಿಗರನ್ನು ಗೌರವಿಸು ತ್ತಾರೆ.

ಲಕ್ಷಣ : ಗಂಟೆಬಟ್ಲು ಪಂಚಲೋಹದಿಂದ ಕೂಡಿದ್ದು ೧೮ ಇಂಚು ಉದ್ದ ೫ ಇಂಚು ಅಗಲ ಇದೆ. ಬಟ್ಲು ಸುತ್ತಳತೆ ೬ ಇಂಚು ಇದೆ, ಲಿಂಗ ೫ ತಲೆ ಸರ್ಪ ಬಸವ ಗಿಳಿಯ ಆಕಾರದಿಂದ ಅಲಂಕರಿಸಲಾಗಿದೆ ೨೦ ಮನೆಗಳಲ್ಲಿ ವೃತ್ತಿಯ ಸಂಕೇತ ಆಕಾರಗಳಿವೆ ಹಿಂಡಿ ಮಾರಮ್ಮನ ಪಾದ, ಕ್ರಮವಾಗಿ ಮುತ್ತಿನ ತಕ್ಕಡಿ – ೨೪ ಮನೆ ತೆಲುಗು ಶೆಟ್ಟರು, ಒಂಟೆ – ಮುಸ್ಲಿಂ ವ್ಯಾಪಾರಿ, ಲಾಳಿಕೆ – ತೆಲುಗು ಭಾಷೆಯ ದೇವಾಂಗ, ಅಡಿಗಲ್ಲು – ತೆಲುಗು ಆಚಾರಿ, ಸುತ್ತಿಗೆ – ಕಮ್ಮಾರ, ಕತ್ತರಿ – ಕುರುಬ ಪುಟ್ಟೆಚಂದ್ರಿಕೆ – ಮೇದರ, ಈಚಲಮರ – ಈಡಿಗ, ಕಹಳೆ – ಉಪ್ಪಾರ, ತಕ್ಕಡಿ – ವರ್ತಕರು, ಬಳೆಗೊಂಚಲು – ಬಳೆಗಾರ ಶೆಟ್ಟಿ ನರಿ – ಕಣಿಯರು, ನೇಗಿಲು – ಒಕ್ಕಲಿಗರು, ಚಕ್ರ – ಕುಂಬಾರ, ಗಾಣ – ಹೆಣ್ಣೆಗಾಣಿಗ, ಬಾಚಿ ಹುಳಿ – ಮರಗೆಲಸ ಆಚಾರಿ, ಕತ್ತಿ ಕಲ್ಲು – ನಯನಜ, ಮೂಟೆ – ಅಗಸ, ಮತ್ತೊಂದು ತುದಿಯಲ್ಲಿ ಸೂರ್ಯ–



ದಂಡಿನ ಕುಂಬಾರರ ನಾಡುದೇಶದ ಮುದ್ರೆ



ದಂಡಿನ ಕುಂಬಾರರ ನಾಡುದೇಶದ ಮುದ್ರೆ



ನಾಡುದೇಶದ ಮುದ್ರೆ, ಉಮ್ಮತ್ತೂರು



ನಾಡುದೇಶದ ಮುದ್ರೆ, ಕುದೇರ್ ಗ್ರಾಮ

ಚಂದ್ರ ಸತ್ಯಮೂರ್ತಿ ಕಳಸ ತಳಗಡೆ ಚಿಕ್ಕ ನಾಲ್ಕು ಗಂಟೆಗಳು ಉದ್ದನೆಯ ಸರಪಳಿ ಮತ್ತು ದೊಡ್ಡ ಗಂಟೆ ಹಗ್ಗದಂತೆ ಸುತ್ತಲೂ ಅಲಂಕರಿಸಲಾಗಿದ್ದು ನಾಡುದೇಶದ ಮುದ್ರೆಯು ಸುಂದರವಾಗಿ ತಯಾರಿಸಲಾಗಿದೆ.

ಮೈಸೂರಿನಿಂದ ಪೆನಗೊಂಡ, ಅನಂತಪುರದವರೆಗೆ ನಾಡುದೇಶದ ಮುದ್ರೆ ಸಂಸ್ಕೃತಿಯು ಬೆಳೆದಿರುತ್ತದೆ. ಬ್ರಿಟಿಷರ ಆಡಳಿತದಲ್ಲಿ ಛಲವಾದಿಗಳ ಹೇಳಿಕೆ ಪ್ರಕಾರ, ಕಾಲ ಸುಮಾರು ೧೦೦೦ರಿಂದ ೧೫೦ ವರ್ಷ ಹಿಂದಿನದು ಎಂದು ಹೇಳಿರುತ್ತಾರೆ. ಗಂಟೆಬಟ್ಟಲುಗೆ ಸರ್ಕಾರದ ಮುದ್ರೆಯನ್ನು ಹಾಕಿರುತ್ತಾರೆ. ಇದು ಗ್ರಾಮಗಳಲ್ಲಿ ಸಂತೆ ಸೇರಿದಾಗ ಸುಂಕವನ್ನು ವಸೂಲು ಮಾಡಲು ಬಳಸುತ್ತಿದ್ದರು ಎಂದು ತಿಳಿದುಬರುತ್ತದೆ. ಹಾಗೂ ಗಂಟೆಬಟ್ಲುವಿನಿಂದ ದವಸ – ಧಾನ್ಯ ಫಲಗಳನ್ನು ತೆಗೆದುಕೊಳ್ಳುವುದು ಗುರುಮಠದ ಕಾಣಿಕೆಯಾಗಿಯು ಸಲ್ಲುತ್ತಿದ್ದುದು ಸಂಪ್ರದಾಯವಾಗಿತ್ತು ಎಂದು ತಿಳಿಯುತ್ತದೆ.

ಜಾತ್ರೆ ಉತ್ಸವದ ಮುಂದೆ ಗಂಟೆಬಟ್ಟಲು ಹೊತ್ತು ಗಂಟೆಯಿಂದ ಶಬ್ಧ ಮಾಡುತ್ತಾ ನಾಡ ಗೌಡ್ರು ಬರುತ್ತಿದ್ದಾರೆ ಎಂಬ ಸೂಚನೆಯನ್ನು ನೀಡುತ್ತಿದ್ದರು. ೧೮ ಜಾತಿಯು ಸಹ ಒಮ್ಮತದಿಂದ ಹಬ್ಬ ಉತ್ಸವವನ್ನು ಆಚರಿಸುವ ಗಂಟೆಬಟ್ಲು ಸಂಕೇತವಾಗಿದೆ. ಅಲ್ಪಸಂಖ್ಯಾತ ಸಮಾಜದವರ ಮದುವೆಗೆ ಆ ಕಾಲದಲ್ಲಿ ಜನ ಬರುತ್ತಿರಲಿಲ್ಲ, ಆಗ ನಾಡುದೇಶದ ಮುದ್ರೆಯನ್ನು ಬಣಜಿಗ ಶೆಟ್ರು ಮನೆಯಿಂದ ಕುಳವಾಡಿಗಳು ತೆಗೆದುಕೊಂಡು ಬಂದು ತಿಳಿಸಿದ ಮೇಲೆ ಭಾಗವಹಿಸುತ್ತಿದ್ದರು.

ಬೆಂಗಳೂರಿನ ಕೃಷ್ಣರಾಜಪುರ ಕೇಂದ್ರಸ್ಥಾನದಲ್ಲಿ ಲೇಟ್ ಛಲವಾದಿ ದೊಡ್ಡಮೈಸೂರಪ್ಪ ಅಲಿಯಾಸ್ ಮೈಸೂರಯ್ಯನವರ ಮೂಲಸ್ಥಾನ ಮೈಸೂರು ಆಗಿರುತ್ತದೆ. ಇದರಲ್ಲಿರುವ ಗಂಟೆಬಟ್ಲುವಿನ ಮೇಲೆ 'ಕೃಷ್ಣರಾಜಪುರ ದೇಶದವರು ದಂಡಿನ ಕುಂಬಾರನ ಮಗಳು ಮಾನಾಡಿನವವರು ಸಹ ಮಾಡಿಸಿಕೊಟ್ಟ ಛಲವಾದಿ ಬಟ್ಲು' ಎಂಬ ಶಾಸನವು ಮುದ್ರಿತವಾಗಿರುತ್ತದೆ. ಕುಂಬಾರ ಜಾತಿಯವರು ಮಾನಾಡಿನಲ್ಲಿ ಸೇರಿ ಗಂಟೆಬಟ್ಲನ್ನು ಅಧಿಕಾರಯುತವಾಗಿ ಆಡಳಿತದಲ್ಲಿ ತಂದಿರಬಹುದೆಂದು ತಿಳಿಯುತ್ತದೆ. ೧೮ ಜಾತಿಯ ವೃತ್ತಿ ಸಂಕೇತವನ್ನು ಆಕಾರಗಳಲ್ಲಿ ಸಾಕ್ಷೀಕರಿಸಲಾಗಿದೆ. ಆದ್ದರಿಂದ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೃಷ್ಣರಾಜಪುರದ ಹೆಣ್ಣುಮಗಳು ಬಂದಿರಬಹುದೆಂದು ತಿಳಿಯುತ್ತದೆ. ಹಾಗೂ ಮೈಸೂರು ರಾಜರ ಖಾಸಾ ಅರಮನೆಯಲ್ಲಿ ಕುಂಬಾರರ ಚಕ್ರ ಇರುವುದು ಕುಂಬಾರರ ಸಂತಾನವು ಮತ್ತು ಚಾಮುಂಡೇಶ್ವರಿ ಹಬ್ಬದ ವಿಜಯದಶಮಿಯಲ್ಲಿ ಆಯುಧಪೂಜೆಯ ದಿನ ಕುಂಬಾರರ ಚಕ್ರಕ್ಕೆ ಆಯುಧ ಪೂಜೆಯನ್ನು ಮಾಡುವ ಸಂಪ್ರದಾಯವಿದೆ ಎಂದು ನೋಡಿದವರು ತಿಳಿಸಿರುತ್ತಾರೆ.

ನಾಡುದೇಶದ ಮುದ್ರೆಯಲ್ಲಿ ಕುಂಬಾರರ ಚಕ್ರ ಲಕ್ಷಣವಾಗಿದ್ದು ಪ್ರಮುಖವಾಗಿ ಕಂಡುಬರುತ್ತದೆ. ಅಲಂಕಾರಿಕ ಪುಷ್ಪದ ೭ ಮನೆಗಳು ವಾರದ ೭ ದಿನಗಳಲ್ಲಿ ಜನಿಸಿದ ಮಕ್ಕಳಿಗೆ, ಎಲ್ಲಾ ಜಾತಿಯವರಿಗೂ ಗಂಟೆಬಟ್ಲುವಿನ ಆಶೀರ್ವಾದ ಸಿಗಲಿ ಎಂದು ತೋರ್ಪಡಿಸುತ್ತದೆ. ಬಟ್ಲು, ೭ ತಲೆ ಸರ್ಪ, ಲಿಂಗ, ಬಸವ, ಗದೆ, ಚಕ್ರ, ನೇಗಿಲು, ಸೂರ್ಯ–ಚಂದ್ರರ ಸಾಕ್ಷಿಯಾಗಿ ಮತ್ತು ವಿಘ್ನವಿನಾಶಕ ಗಣಪತಿ, ಅಲಂಕಾರಿಕ ಗಿಳಿ, ವ್ಯಾಳಿ, ಜೈನ್, ಕಳಸ, ಉದ್ದನೆಯ ಸರಪಳಿ, ಗಂಟೆ ಸುಂದರವಾಗಿ ಚಿತ್ರಿತವಾಗಿದೆ.

ಗಂಟೆಬಟ್ಲುನಲ್ಲಿ (ದೇಶಿ ಸೌಟ್) ವೃತ್ತಿ ಸಂಕೇತವಾಗಿ ಮತ್ತು ಧರ್ಮ ಸಂಕೇತವಾಗಿ ನಾನಾ ವಿಧಗಳಲ್ಲಿ ಶೈವ ಸಂಪ್ರದಾಯ ರೇಣುಕರದಾಗಿದ್ದು ವೈಷ್ಣವ ಸಂಪ್ರದಾಯ ಮತ್ತು ಲಿಂಗಾಯತ ಸಂಪ್ರದಾಯವು ಕಂಡುಬರುತ್ತದೆ. ದಾಸ ಬಣಜಿಗರು ವೈಷ್ಣವ ಪಂಥವ ಸ್ವೀಕರಿಸಿದ್ದರೆ ನಾಮ, ಶಂಕು, ಚಕ್ರ ದೇಶಿ ಸೌಟ್ ಮುದ್ರೆಯಲ್ಲಿರುತ್ತದೆ.

ಹಲವು ಜಿಲ್ಲೆಯ ನಾಡುದೇಶದ ಮುದ್ರೆಯಲ್ಲಿ (ದೇಶಿ ಸೌಟ್) ಗ್ರಾಮದ ವಿವಿಧ ಜಾತಿಯ ವೃತ್ತಿ ಸಂಕೇತಗಳು ಕಂಡುಬರುತ್ತದೆ. ಕಟ್ಟೆಮನೆ – ನಾಯಕರು, ತೋರಣಗಲ್ಲು – ತೊರೆಯರು, ಕಳಸ – ಗಂಗರು, ಬಿಲ್ಲು – ಬೇಡರು, ಜನಿವಾರ – ಬ್ರಾಹ್ಮಣರು, ಪಿಂಚ – ಜೈನರು, ಟಮಟೆ – ಮಾದಿಗರು, ಈಟಿ – ಉಪ್ಪಾರ, ಅರೆಯುವಕಲ್ಲು – ಪಂಡಿತ, ಸಿಂಹ – ಕ್ಷತ್ರಿಯ, ಕೀರ್ತಿಮುಖ – ರಾಜ, ಒಂಟೆ – ಮುಸ್ಲಿಂ, ನಾಲ್ಕು ಬಣ್ಣದ ಮಣಿ – ಸೂಫಿ ಸಂತ, ಸೂಜಿ – ದರ್ಜಿ, ಆರು ಮಣಿಗಳು – ಚಿತ್ರಗಾರ, ಕೊಡು (ಕೊಂಬು) – ಗೊಲ್ಲ, ಗದೆ – ಜಟ್ಟಿ, ಕಳಕೊಟ್ಟು – ಕಾಮಟಿಗರು, ಇಕ್ಕಳ – ಕಮ್ಮಾರ, ಉಗುರು – ವಿಳ್ಯದೆಲೆ, ಮೀನು (ಛಲೆ) (ಮುತ್ತು) – ಬೆಸ್ತರು, ಚರ್ಮದ ಚೀಲ – ಮೋಚಿ, ಏಣಿ – ಕೊರಚ, ಸುತ್ತಿಗೆ – ವಡ್ಡ, ಕುದುರೆ – ಆಡಳಿತಗಾರ, ರಾಜ, ಪಾಳೆಗಾರ, ದೇವರ ಪಾದ – ಸ್ತ್ರೀ ಮತ್ತು ಪುರುಷ ದೇವರು, ಶ್ರಮಣರು, ನಾಗಸರ್ಪ – ಗುಣ ಮತ್ತು ಕುಲ, ಸಿಂಹಮುಖ – ರಾಜ ಲಾಂಛನ, ನಗಾರಿ – ಹರಿಜನ, ಮಂಟಪ – ಸಂಗಮ ಬಸವಣ್ಣ, ಚಕ್ರ – ಗರುಡನ ಗಿರಿ, ಕಳಸ – ಸ್ತ್ರೀ ದೇವತೆ, ಪುಷ್ಪ – ಹೆಣ್ಣು, ಹಸು – ಕಾಮಧೇನು, ತ್ರಿಶೂಲ – ಸಸ್ತ್ರ ಮೂರ್ತಿ, ನವಗ್ರಹ ಕುಂಡಲಿ – ಜನನದ ಲೆಕ್ಕಚಾರ, ಮೇಕೆ, ಎತ್ತು, ಗಣೇಶ, ಲಕ್ಷ್ಮಿ, ಆನೆ, ಸಿಂಹ, ನವಿಲು, ಗಿಳಿ,

ನಾಯಿ, ವ್ಯಾಳಿ, ಶರಭ, ಹುಲಿ, ಹಂಸಪಕ್ಷಿ, ಆಡು, ಪದ್ಮ, ನಂದಿ, ತ್ರಿಶೂಲ, ಶೂಲ, ಗಂಡುಭೇರುಂಡ ವ್ಯಾಳಿ, ಎಲೆಜಂಗು, ಗೆಜ್ಜೆ, ಛತ್ರಿಛಾಮರ, ಸೂರ್ಯಪಾನ ಇವುಗಳು ಬಿರುದುಗಳಾಗಿ, ಅಲಂಕಾರಿಕವಾಗಿ ಗಂಟೆಬಟ್ಟುವಿನಲ್ಲಿ ಚಿತ್ರಿತವಾಗಿದೆ ಹಾಗೂ ಶಾಸನಗಳಲ್ಲಿ ಲಿಖಿತವಾಗಿದೆ. ನಾಡುದೇಶದ ಮುದ್ರೆ ದೇಶಿ ಸೌಟ್ ಎಂದು ಗೆಜೆಟಿಯರ್‌ನಲ್ಲಿ ದಾಖಲಿಸಲಾಗಿದೆ.

ಚಾಮರಾಜನಗರ ಜಿಲ್ಲೆಯ ಕೌದಳ್ಳಿ, ಅಜ್ಜಿಪುರ, ಕೊಳ್ಳೇಗಾಲ, ಅಗರ ಮಾಂಬಳ್ಳಿ, ಕೆಸ್ತೂರು, ಯಳಂದೂರುನಲ್ಲಿ ಶೈವ ಸಂಪ್ರದಾಯದ ದೇಶಿ ಸೌಟ್ ಸಂಪ್ರದಾಯವಿದೆ. ದಾಸ ಬಣಜಿಗರ ವೈಷ್ಣವ ದೇಶಿ ಸೌಟ್ ಚಾಮರಾಜನಗರ ಟೌನ್, ಕುದೇರು ಲಿಂಗಾಯತ ಶೆಟ್ರು, ಬಣಜಿಗ ಶೆಟ್ರು, ವೆಂಕಟಯ್ಯನ ಛತ್ರ, ಹರದನ ಹಳ್ಳಿ, ಹೊಂಗನೂರು, ತಮಿಳುನಾಡಿನ ತಾಳವಾಡಿ, ಮೈಸೂರು ಜಿಲ್ಲೆ, ಉಮ್ಮತ್ತೂರಿನ ನಾಡುದೇಶದ ಮುದ್ರೆಯಲ್ಲಿ ಕುಂಬಾರರದ್ದು "ರಾಜವೀರಸಿಂಹಾಸನ" ಕಟ್ಟೆಮನೆ ಎಂದು ನಮೂದಿಸಿದೆ. ನಂಜನಗೂಡು ತಾಲ್ಲೂಕಿನ ಕಳಲೆ ಗ್ರಾಮದಲ್ಲಿ ಪಂಚಾಚಾರ್ಯರ ಶೈವ ಸಂಪ್ರದಾಯದ ನಾಡುದೇಶದ ಮುದ್ರೆಯಲ್ಲಿ (ದೇಶಿ ಸೌಟ್) ೧೮ ಜಾತಿಗಳ ವೃತ್ತಿ ಸಂಕೇತಗಳಿರುವುದಿಲ್ಲ. ಬಟ್ಟಲು, ಲಿಂಗ, ಸರ್ಪ, ಬಸವ (ನಂದಿ) ಇವುಗಳು ಮಾತ್ರ ಗಂಟೆಬಟ್ಟಲಿನಲ್ಲಿ ಇರುತ್ತದೆ. ಹೀಗೆ ಮೂರು ಧರ್ಮಿಯರ ನಾಡುದೇಶದ ಮುದ್ರೆ ಬಿರುದು ಗಂಟೆಬಟ್ಟಲನ್ನು ಹೊತ್ತು ಮೆರೆಯುವ ಹಕ್ಕು ಛಲವಾದಿಗಳಿಗೆ ಇರುತ್ತದೆ ಎಂದು ಕೋರ್ಟ್ ತೀರ್ಪು ನೀಡಿರುತ್ತದೆ.

ಆಕರಗ್ರಂಥಗಳು

೧. ಮಾಳವ ಮುನಿರಾಜು ಕೆ., ನಂಜುಂಡ ಸ್ವಾಮಿ ಎಂ., ಕರ್ನಾಟಕದ ಛಲವಾದಿ ಗಂಟೆಬಟ್ಟಲುಗಳ ಅಧ್ಯಯನ, ಬೆಂಗಳೂರು.

೨. ಸಣ್ಣಯ್ಯ, ದೇವಚಂದ್ರನ ರಾಜಾವಳಿ ಕಥಾಸಾರ, ಶ್ರೀ ಕನಕ ಗಿರಿ ಪ್ರಕಾಶನ, ಚಾಮರಾಜನಗರ

೩. ತೈಲೂರು ವೆಂಕಟಕೃಷ್ಣ, ದುದ್ದ ಗ್ರಾಮದರ್ಶನ ನಾಡುದೇಶದ ಮುದ್ರೆ ಲಕ್ಷಣ, ಮಂಡ್ಯ.

೪. ವಿಜಯಶ್ರೀ ಇಟ್ಟಣ್ಣವರ್, ೧೮ ಜಾತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ನೀಲಕಂಠ ಸ್ವಾಮಿ, ಹಿಂಡಿಮಾರಮ್ಮ ವೃತ್ತಾಂತ, ಅಗರ, ಮಾಂಬಳ್ಳಿ.

೬ ನಿರ್ಮಲ ರಾಜು, ಉಮ್ಮತ್ತೂರು ಅರಸರು: ಒಂದು ಅಧ್ಯಯನ.

೭. ಶ್ರೀನಿವಾಸಮೂರ್ತಿ ಎಸ್.ಎಲ್., ಶಾಸನ ಪಿತಾಮಹ: ಬಿ.ಎಲ್. ರೈಸ್.

ಆದಪ್ಪ ಪಾಸೋಡಿ

ದೇವರಾಯಪಟ್ಟಣದ ಪಾಳೆಯಗಾರರು

ತುಮಕೂರಿನ ಸಿದ್ಧಗಂಗಾ ಬೆಟ್ಟದ ಸಮೀಪದ ದೇವರಾಯಪಟ್ಟಣದಲ್ಲಿ ವಿಜಯನಗರ ಕಾಲದ ಕಾವಲುಗೋಪುರಗಳು, ಹರಿಹರೇಶ್ವರ, ವೀರಮಾಸ್ತಮ್ಮ ದೇವಾಲಯಗಳು, ವೀರರ ಗುಡಿಗಳು ಹಾಗೂ ವೀರಗಲ್ಲುಗಳಿವೆ. ಆಳ್ವಿಕೆ ನಡೆಸಿದ ದೇವರಾಯಪಟ್ಟಣದ ಪಾಳೆಗಾರರ ಶಾಸನಗಳು ಈ ಪ್ರದೇಶದ ಸುತ್ತಮುತ್ತ ಲಭ್ಯವಾಗಿವೆ. ದೇವರಾಯಪಟ್ಟಣದಲ್ಲಿ 'ಒಂದು ಸುತ್ತಿನ ಕೋಟೆ, ಒಂದೇ ಪಾಳೆಪಟ್ಟು' ಇತ್ತು ಎಂಬ ಮಾತನ್ನು ಸ್ಥಳೀಯರು ಹೇಳುತ್ತಾರೆ.

'ಸಿದ್ಧಗಂಗಾ ಶ್ರೀ' ಗ್ರಂಥದ ಸಂಪಾದಕರಾದ ಚನ್ನಪ್ಪ ಎರೆಸೀಮೆ, ಟಿ.ಆರ್. ಮಹದೇವಯ್ಯನವರು, 'ದೇವರಾಯಪಟ್ಟಣದಲ್ಲಿ ಚೋಳರ ಕಾಲದ ಒಂದು ಶಿವಾಲಯ, ಒಂದು ಪ್ರಾಚೀನ ವೀರಶೈವ ಮಠವೂ ಇದ್ದು, ಇದೊಂದು ಚಿಕ್ಕ ಪಾಳೆಯಪಟ್ಟಾಗಿತ್ತು'[೧] ಎಂದಿದ್ದಾರೆ. ಇತಿಹಾಸ ಸಂಶೋಧಕ ಬಿ.ರಾಜಶೇಖರಪ್ಪ ಅವರು 'ಕರ್ನಾಟಕದ ಅಜ್ಞಾತ ಪಾಳೆಯಪಟ್ಟುಗಳಲ್ಲಿ ದೇವರಾಯಪಟ್ಟಣ ಪಾಳೆಯಪಟ್ಟು ಕೂಡ ಒಂದು; ಇದು ಪ್ರಾಯಶಃ ತುಂಬ ಚಿಕ್ಕ ಪಾಳೆಯಪಟ್ಟಾಗಿದ್ದು, ಬಹುಕಾಲ ಪ್ರತ್ಯೇಕ ಪಾಳೆಪಟ್ಟಾಗಿ ಉಳಿಯದೆ, ಬೇರೊಂದು ಪಾಳೆಯಪಟ್ಟಿನಲ್ಲಿ ವಿಲೀನವಾಗಿ ಇದರ ಚರಿತ್ರೆ ಮಸಕಾಗಿ ಹೋಗಿರಬೇಕು'[೨] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬೆಂ.ಶಾ.ಶಾಮಲ ರತ್ನಕುಮಾರಿ ಅವರು – 'ದೇವರಾಯಪಟ್ಟಣದ ಆಡಳಿತಕ್ಕಾಗಿ ಮತ್ತು ರಕ್ಷಣೆಗಾಗಿ ಸಂಗಮ ವಂಶದ ದೊರೆಗಳು ಈ ದೇವರಾಯಪಟ್ಟಣದ ನಾಯಕರನ್ನು ಅಮರನಾಯಕರನ್ನಾಗಿ ನೇಮಿಸಿದ್ದರು. ಇವರಿಗೆ ಯಿಳಕಲ್ಲುಬೆಟ್ಟದ ರಾಮೇಶ್ವರದೇವರು ಆರಾಧ್ಯ ದೈವವಾಗಿದ್ದಿತು. ಕೋಟೆ ಬಂಡೆಯ ಮೇಲೆ ದೇವರಾಯಪಟ್ಟಣದ ನಾಯಕರ ಮನೆತನದ ಗಂಗ, ರಾಮನರಸಯ್ಯರ ಮನೆಗಳಿವೆ. ಕೋಟೆಗೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಎರಡು ದ್ವಾರಗಳಿದ್ದವು. ಮಾರನಾಯಕನಪಾಳ್ಯದ ಮಾರನಾಯಕ ಮತ್ತು ದೇವರಾಯಪಟ್ಟಣದ ಹುಚ್ಚನಾಯಕ – ಇವರು ಒಂದೇ ಮನೆತನಕ್ಕೆ ಸೇರಿದ ದಾಯಾದಿಗಳು'[೩] ಎಂಬ ತಮ್ಮ ಕ್ಷೇತ್ರಕಾರ್ಯ ಆಧಾರಿತ ಮಾಹಿತಿ ತಿಳಿಸಿದ್ದಾರೆ.

ತುಮಕೂರು ತಾಲ್ಲೂಕಿನ ದೇವರಾಯಪಟ್ಟಣವನ್ನೊಳಗೊಂಡು, ಕರ್ನಾಟಕದ ಅರಸೀಕೆರೆ ತಾಲ್ಲೂಕಿನ ಬಿ.ದೇವರಾಯಪಟ್ಟಣ, ಹಾಸನ ತಾಲ್ಲೂಕಿನ ದೇವರಾಯಪಟ್ಟಣ, ಪಾಂಡವಪುರ ತಾಲ್ಲೂಕಿನ ದೇವರಾಯಪಟ್ಟಣ ಹಾಗೂ ಮಂಡ್ಯ ತಾಲ್ಲೂಕಿನ ದೇವರಾಯಪಟ್ಣ– ಎಂಬ ಎಡೆಗಳ ಕ್ಷೇತ್ರಕಾರ್ಯ ಮಾಡಿದಾಗ ತುಮಕೂರು ತಾಲ್ಲೂಕಿನ ದೇವರಾಯಪಟ್ಟಣವೇ ಚಾರಿತ್ರಿಕ ಹಿನ್ನೆಲೆಯುಳ್ಳದ್ದೆಂದು ಸ್ಪಷ್ಟವಾಗುತ್ತದೆ. ವಿಜಯನಗರ ಸಂಗಮ ಮನೆತನದ ಇಮ್ಮಡಿ ದೇವರಾಯ (ಸಾ.ಶ. ೧೪೨೫–೪೬)ನ ಶಾಸನಗಳು

೧೫೯, ಶಿವಗಂಗಾ
ಕರ್ಣಶ್ರೀ ೩ನೇ ಹಂತ
ಮೇಡಹಳ್ಳಿ
ಬೆಂಗಳೂರು–೫೬೦೦೪೯
ಮೊ: ೯೮೮೦೮ ೬೦೧೩೫

ತುಮಕೂರು ತಾಲ್ಲೂಕಿನಲ್ಲಿ ಕಂಡುಬರುವುದರಿಂದ ದೇವರಾಯಪಟ್ಟಣವು ಇವನ ಹೆಸರಿನಲ್ಲಿ ಸ್ಥಾಪನೆಯಾದ ಗ್ರಾಮವಾಗಿರಬೇಕು. ಸಂಗಮ ಮನೆತನದ ಇಮ್ಮಡಿ ಪ್ರೌಢದೇವರಾಯನ ಪ್ರಧಾನಿ ಮತ್ತು ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶ (ಸಾ.ಶ. ೧೩೯೮–೧೪೬೩)ನ 'ಶಿವತತ್ವ ಚಿಂತಾಮಣಿ' ಕೃತಿಯಲ್ಲಿ ಉಲ್ಲೇಖಗೊಂಡ ಸೂಜಿಕಾಯಕ(ದರ್ಜಿ)ದ ರಸಿಕ ಪುಟ್ಟಯ್ಯನು ಹೊಸದೇವರಾಯ ಪಟ್ಟಣದಲ್ಲಿ ರಂಜಿಸುತ್ತಿದ್ದನು. ಅದರಂತೆ ಸಾ.ಶ. ೧೪೪೦ರ ಬೆಂಗಳೂರು–೮ನೆಯ ಶಾಸನದ 'ಪಟ್ಟಣದ ರಾಯಂಣಂಗಳು', ಸಾ.ಶ. ೧೪೮೦ರ ಕುಣಿಗಿಲು–೯ನೆಯ ಶಾಸನದಲ್ಲಿರುವ ತೋಂಟದ ಸಿದ್ದಲಿಂಗೇಶ್ವರರ ಒಂಭತ್ತು ಜನ ಶಿಷ್ಯರಲ್ಲೊಬ್ಬನಾದ ಪಟ್ಟಣದೇವರು ಹಾಗೂ ಸಾ.ಶ. ೧೪೯೬ರ ಮಧುಗಿರಿ–೩೫ನೆಯ ಶಾಸನದ 'ಅಯಿವಾಳಿ ಮುಖ್ಯರಾದ ಭಜನಸುಧ ಸಿವಾಚಾರ ಸಂಪನ್ನರಾದ ದೇವರಾಯಪಟ್ಟಣದ ಉದಂಡಸೆಟ್ಟಿ[೪]' ಎಂಬ ವಾಕ್ಯಾಂಗಗಳಲ್ಲಿರುವ ರಾಯಂಣ್ಣ, ಪಟ್ಟಣದೇವ ಮತ್ತು ಉದಂಡಸೆಟ್ಟಿ ಎಂಬ ವ್ಯಕ್ತಿನಾಮಗಳು ದೇವರಾಯಪಟ್ಟಣದ ಗಣ್ಯರ ಬಗ್ಗೆ ಸೂಚನೆ ಕೊಡುತ್ತವೆ. ಅದರಂತೆ ಸಾ.ಶ. ೧೫೮೦ರಲ್ಲಿ ದೇವರಾಯಪಟ್ಟಣದೊಳಗಿದ್ದ ಶಂಕರದೇವನು ಶಿವಶರಣರು ಹಾಗೂ ಅಷ್ಟಾವರಣಗಳಿಗೆ ಸಂಬಂಧಿಸಿದ ೨೪ ರಗಳೆಗಳು; ವೃತ್ತ, ಕಂದ, ದಂಡಕ, ಷಟ್ಪದಿ, ಸ್ವರವಚನ ಎಂಬ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯಗಳನ್ನು ರಚಿಸಿದ್ದಾನೆ.[೫]

ದೇವರಾಯಪಟ್ಟಣದ ತಿಮ್ಮಣ್ಣವೊಡೆಯ[೬]

ಹಿರಿಯ ವರದರಾಜಯ್ಯ[೭] | ವರದರಾಜದೇವ (ಕಿರಿಯ ವರದರಾಜಯ್ಯ) | ಕೆಂಚಸೋಮಣ್ಣ ಒಡೆಯ

ಪುತ್ರ ಹಾಗೂ ದಾಯಾದಿಗಳಿದ್ದು, ಅವರ ಹೆಸರು ಪ್ರಸ್ತಾಪವಾಗಿಲ್ಲ[೮]

ದೇವರಾಯಪಟ್ಟಣದ ತಿಮ್ಮಣ್ಣವೊಡೆಯ: ತಿಂಮಣನಾಯಕ, ದೇವರಾಯಪಟ್ಟಣದ ತಿಮ್ಮಣನಾಯ್ಕ ದೇವರಾಯಪಠಣದ ತಿಂಮಣೊಡೆಯ, ದೇವರಾಯಪಟ್ಟಣದ ತಿಂಮವೊಡೆಯ ಹಾಗೂ ಪಟ್ಟಣ ತಿಂಮಣಯ್ಯ ಎಂದು ಶಾಸನೋಕ್ತನಾದ ಇವನು ದೇವರಾಯಪಟ್ಟಣದಲ್ಲಿ ಪಾಳೆಪಟ್ಟು ಸ್ಥಾಪಿಸಿ, ಆಡಳಿತ ನಡೆಸಿದ ಮೊದಲಿಗನಾಗಿದ್ದಾನೆ. ಇವನೇ ಹಾಕಿಸಿದ ಶಿಲಾಶಾಸನಗಳು ಲಭ್ಯವಿಲ್ಲವಾದರೂ, ಇವನ ಮೂರು ಜನ ಮಕ್ಕಳ ಶಾಸನಗಳು ಈ ಮನೆತನದ ವ್ಯಕ್ತಿನಾಮಗಳೊಟ್ಟಿಗೆ, 'ದೇವರಾಯಪಟ್ಟಣ' ವೆಂಬ ಸ್ಥಳನಾಮದ ಕೀರ್ತಿಯನ್ನು ಹೆಚ್ಚಿಸಿವೆ. ದೇವರಾಯಪಟ್ಟಣದಿಂದ ನಡೆದ ಇವನ ಮನೆತನದ ಆಳ್ವಿಕೆ ಇವನ ಮಕ್ಕಳ ಕಾಲಕ್ಕೆ ಚನ್ನಪಟ್ಟಣ, ಮಾಗಡಿ ತಾಲ್ಲೂಕಿನ ಕಲ್ಯ ಮತ್ತು ಸೋಲೂರುನವರೆಗೂ ಮುಂದುವರೆಯುತ್ತದೆ. ಶಾಸನಗಳಲ್ಲಿ ಇವರು ತಮ್ಮನ್ನು ದೇವರಾಯಪಟ್ಟಣದವರೆಂದೇ ಹೇಳಿಕೊಂಡಿರುತ್ತಾರೆ. ಎ.ಕ.೯ರ ಅನುಬಂಧ, ನೆಲಮಂಗಲ–೧೩೪ನೆಯ ಶಾಸನದ 'ತಿಂಮರಾಜ' ನೇ ದೇವರಾಯಪಟ್ಟಣದ ತಿಮ್ಮಣೊಡೆಯನೆಂದು ಊಹಿಸಬಹುದು. ಇನ್ನು ಸಾ.ಶ.೧೪ನೆಯ ಶತಮಾನದ ಹೆಗ್ಗಡದೇವನಕೋಟೆ–೧೫, ಕ್ಯಾತನಹಳ್ಳಿ ಶಾಸನದಲ್ಲಿ ಮೂವರು ರಾಯರಗಂಡ ಶ್ರೀಮತ್ ತಿಂಮಣನಾಯ್ಕ, ಸಾ.ಶ.೧೫೨೩ರ ಚಾಮರಾಜನಗರ ೨೫೮, ಕೊಟಗನಹಳ್ಳಿ ಶಾಸನದ ಸಾಳುವ ಗೋವಿಂದರಾಜವೊಡೆಯರ ಕಾರ್ಯ್ಯಕ್ಕೆ ಕರ್ತರಾದ ತಿಂಮಣನಾಯಕ ಹಾಗೂ ಸಾ.ಶ.೧೫೨೪ರ ಮಾಗಡಿ ೬ನೆಯ ಶಾಸನದಲ್ಲಿ ತಿಂಮಣ ದನ್ನಾಯಕರು ಉಲ್ಲೇಖಗೊಂಡಿದ್ದಾರೆ. ಇದೇ ವ್ಯಕ್ತಿನಾಮ ಕರ್ನಾಟಕದ ಅನೇಕ ಸಮಕಾಲೀನ ಶಾಸನಗಳಲ್ಲಿ ಬಂದಿದ್ದರೂ, ಎಲ್ಲಿಯೂ ದೇವರಾಯಪಟ್ಟಣವೆಂಬ ಪೂರ್ವಪದದ ಬಳಕೆ ಇಲ್ಲದಿರುವುದರಿಂದ, ಇವರೆಲ್ಲರೂ ದೇವರಾಯಪಟ್ಟಣ ಪಾಳೆಯಗಾರರ ಮನೆತನಕ್ಕೆ ಸಂಬಂಧಿಸಿದವರೋ, ಅಲ್ಲವೋ ಎಂಬುದರ ಬಗ್ಗೆ ಹೆಚ್ಚಿನ ಅಧ್ಯಯನವಾಗಬೇಕಿದೆ.

ಹಿರಿ ಅಯ್ಯ ವರದರಾಜಯ್ಯ/ಹಿರಿಯ ವರದರಾಜಯ್ಯ (ಸಾ.ಶ. ೧೫೨೪): ಪಟ್ಟಣ ತಿಂಮಣಯ್ಯನವರ ಮಗ ಹಿರಿಯ ವರದರಾಜಯ್ಯನು ಪ್ರತಿಷ್ಠಿತ ವ್ಯಕ್ತಿಯಾಗಿದ್ದು, ಕೃಷ್ಣದೇವರಾಯನ ಕಾಲದಲ್ಲಿ ಸಿಂಗಾಪುರದಲ್ಲಿರುವ ದೇವರ (ಸಿಂಗಾಪುರದ ತಿರುವೆಂಗಳನಾಥ) ಅಮೃತಪಡಿ ನೈವೇದ್ಯಕ್ಕೆ, ರಾಮಾನುಜಕೂಟಕ್ಕೆ ಸಿಂಗಪ್ಪನಾಯಕನಿಂದ ಚಿಕ್ಕಬೆಟ್ಟಹಳ್ಳಿಯನ್ನು ಧರ್ಮವಾಗಿ ಪಡೆಯುತ್ತಾನೆ. ಸಿಂಗಾಪುರದಿಂದ ಮೂರು ಕಿ.ಮೀ. ದೂರದಲ್ಲಿ ಚಿಕ್ಕಬೆಟ್ಟಹಳ್ಳಿಯಿದ್ದು, ಈ ಶಾಸನದ ಸಿಂಗಾಪುರದ ದೇವರು ತಿರುವೆಂಗಳನಾಥ, ರಾಮಾನುಜಕೂಟ ಹಾಗೂ ಸಿಂಗಪ್ಪನಾಯಕ– ಈ ಅಂಶಗಳು ಇಲ್ಲಿ ಚರ್ಚಾರ್ಹವಾಗಿವೆ. ಇಂದಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕುವೆಂಪುನಗರ ವಾರ್ಡಿಗೊಳಪಡುವ ಸಿಂಗಾಪುರದಲ್ಲಿ ಪುರಾತನ ವರದರಾಜಸ್ವಾಮಿ ದೇವಾಲಯವಿದ್ದು, ಇದುವೇ ಶಾಸನೋಕ್ತ 'ಸಿಂಗಾಪುರದ ದೇವರು'



ತಿರುವೆಂಗಳನಾಥನ ಕ್ಷೇತ್ರವಾಗಿದೆ. ಸಿಂಗಾಪುರವಲ್ಲದೆ ಬೆಂಗಳೂರು ಜಿಲ್ಲೆಯ ಮಣ್ಣೆ, ಮುಗಬಾಳ, ಕೆಂಪೋಹಳ್ಳಿ, ದಾಸನಪುರ, ಚಿಕ್ಕಮಾರನಹಳ್ಳಿ, ತಿರುಮಲೆ, ಹಾರೋಹಳ್ಳಿ, ಅಂಬಲಗೆರೆ, ಮಲ್ಲಸಂದ್ರ, ವೊಂಭತ್ತನಕುಂಟೆ, ಸೋಲೂರು ಹಾಗೂ ಐಗಂಡಪುರ ಶಾಸನಗಳಲ್ಲೂ ಶ್ರೀವೈಷ್ಣವದೈವ ತಿರುವೆಂಗಳನಾಥನು ತಿರುಮಲೆದೇವ, ತಿರುವೆಗಂಬಮ್ ಉದ್ಯೆಯಾರ್ ತಿರುವೆಂಡನಾಥ, ತಿರುವೆಂಗಳೇಶ್ವರ, ತಿರುವೆಂಗಡನಾಥ, ತಿರುವೆಂಗಳ, ತಿರುವೆಂಗಳರಾಯನೆಂಬ ಹೆಸರುಗಳಿಂದ ಆರಾಧಿಸಲ್ಪಟ್ಟಿರುವುದು ತಿಳಿದುಬರುತ್ತದೆ. ಅದರಂತೆ ವೆಂಗನಾಡು ವೆಂಗಳೂರು ಮತ್ತು ವೆಂಗಯ್ಯನಕೆರೆ ಎಂಬ ಪದಗಳು ಕೂಡ ಇಂದಿನ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಪ್ರದೇಶಗಳು ವೆಂಗಳನ ಪ್ರಭಾವಲಯದಲ್ಲಿರುವುದನ್ನು ಸ್ಪಷ್ಟಪಡಿಸುತ್ತವೆ.

ಸಿಂಗಾಪುರದ ತಿರುವೆಂಗಳನಾಥದೇವರ ಅಮೃತಪಡಿ ನೈವೇದ್ಯದೊಟ್ಟಿಗೆ ಅಲ್ಲಿರುವ ರಾಮಾನುಜಕೂಟದ ನಿರ್ವಹಣೆಗಾಗಿ ಚಿಕ್ಕಬೆಟ್ಟಹಳ್ಳಿಯ ಆದಾಯ ಬಳಕೆಯ ಹಕ್ಕನ್ನು ಹಿರಿಯ ವರದರಾಜಯ್ಯನು ಹೊಂದಿದ್ದನು. ಇವನಿಗೆ ಈ ದೇವಾಲಯ ಮತ್ತು ರಾಮಾನುಜಕೂಟದ ನಿರ್ವಹಣೆಗೆ ದತ್ತಿ ಸ್ವೀಕಾರ, ದೇವಾಲಯಕ್ಕೆ ಬರುವ ದಾನದ ಭೂಮಿಗಳ ಗುತ್ತಿಗೆ, ಆದಾಯ ಸಂಗ್ರಹ, ದೇವಾಲಯದ ಆಸ್ತಿಪಾಸ್ತಿಗಳ ಉತ್ತರದಾಯಿತ್ವವೂ ಸೇರಿತ್ತು. ಹಾಗಾಗಿ ರಾಮಾನುಜಕೂಟದಲ್ಲಿ ತಂಗಿರುತ್ತಿದ್ದ, ಬಂದುಹೋಗುತ್ತಿದ್ದ ಸನ್ಯಾಸಿಗಳು, ಆಚಾರ್ಯರು, ದಾಸರು, ತತ್ವವೇತ್ತರು, ಆಗಮ ಪಂಡಿತರುಗಳ ಯೋಗಕ್ಷೇಮ ವಿಚಾರಿಸುವುದಲ್ಲದೆ, ದೇವಾಲಯಗಳಲ್ಲಿ ಅವರ ಗೋಷ್ಠಿಗಳನ್ನು ಏರ್ಪಡಿಸಿ, ಅವರಿಗೆ ತಕ್ಕ ಗೌರವ ಸಮರ್ಪಿಸುವುದು; ವೇದ ಪಠಣ, ದೇವರ ಭಜನೆ, ಪ್ರವಚನ, ಸಂಗೀತ ಪ್ರದರ್ಶನಕ್ಕಾಗಿ ವೇದಿಕೆ ಸಿದ್ಧಪಡಿಸುವಂತಹ ಧಾರ್ಮಿಕ ಚಟುವಟಿಕೆಗಳು ಸಿಂಗಾಪುರ ರಾಮಾನುಜಕೂಟದ ಅಧಿಕಾರಿಯಾಗಿದ್ದ ಹಿರಿಯ ವರದರಾಜಯ್ಯನ ನೇತೃತ್ವದಲ್ಲಿ ನಡೆಯುತ್ತಿದ್ದವೆಂದು ತಿಳಿದುಬರುತ್ತದೆ.

ಕುಕ್ಕಲನಾಡಿನ ಜಂಕಿಯಂಣನಾಯ್ಕನು ದಾಸಯ್ಯನೊಬ್ಬನಿಗೆ ನಗರೂರುಪುರ (ಈಗಿನ ನಗರೂರು ನೆಲಮಂಗಲ ತಾಲ್ಲೂಕು)ದ ಗದ್ದೆ–ಬೆದ್ದಲು, ತೋಟ–ತುಡಿಕೆ, ಆಣೆ–ಅಚ್ಚುಕಟ್ಟು, ಸಿದಾಯಗಳನ್ನು ರಾಮಾನುಜಕೂಟದ ದಾಸೋಹಕ್ಕಾಗಿ ಕೊಡುತ್ತಾನೆ. ಇಲ್ಲಿ ಹಿರಿಯ ವರದರಾಜಯ್ಯನಂತೆ ದಾಸಯ್ಯನೂ ಕೂಡ ರಾಮಾನುಜಕೂಟದ ಒಬ್ಬ ಅಧಿಕಾರಿಯಾಗಿದ್ದನೆಂದು ಇದರಿಂದ ಸ್ಪಷ್ಟವಾಗುತ್ತದೆ. ದಾಸನಪುರದ ಈ ಶಾಸನವು ರಾಮಾನುಜಕೂಟದ ದಾಸೋಹವನ್ನು 'ರಾಮಾನುಜಪುರ ದಾಸೋಹ'ವೆಂದು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ[೧೦]. ದಾಸೋಹದ ಆಹಾರ ತಯಾರಿಸಲು ಬೇಕಾದ ಧಾನ್ಯಗಳನ್ನು ರಾಮಾನುಜಕೂಟಗಳಿಗೆ ದಾನ ನೀಡಿದ ಭೂಮಿಯಿಂದ ಬೆಳೆದ ಬೆಳೆಗಳನ್ನೇ ಉಪಯೋಗಿಸುತ್ತಿದ್ದರು. ಅಡುಗೆಗೆ ಗಂಧಶಾಲಿ ಭತ್ತ, ಗೋಧಿ, ಶ್ಯಾಮಕ, ಕಂಗು, ನೀವಾರ, ಕಡಲೆ, ಹೆಸರು, ತೊಗರಿ, ಉದ್ದು, ಶುಂಠಿ, ಹುಣಸೆ, ಮೆಣಸು, ಜೀರಿಗೆ, ಸಕ್ಕರೆ, ಹಾಲು, ಮೊಸರು, ಸೈಂದವ ಲವಣ, ತುಪ್ಪವನ್ನು ಬಳಸಿ ಪಾಯಸ, ಪುಳಿಯೋಗರೆ, ಕದಂಬ, ಅನ್ನ–ಬೇಳೆ ಸಾರು, ರಸಂ ತಯಾರಿಸಲಾಗುತ್ತಿತ್ತೆಂದು ಸಮಕಾಲೀನ ಸಾಹಿತ್ಯ ಗ್ರಂಥಗಳು ತಿಳಿಸುತ್ತವೆ[೧೧].

ಹಿರಿಯ ವರದರಾಜಯ್ಯನಿಗೆ ಚಿಕ್ಕಬೆಟ್ಟಹಳ್ಳಿಯನ್ನು ದಾನ ನೀಡಿದ ಸಿಂಗಪ್ಪನಾಯಕನು ದೇವರಾಯಪಟ್ಟಣದ ಹಿರಿಯ ವರದರಾಜಯ್ಯನಿಗಿಂತಲೂ ಉನ್ನತ ಸ್ಥಾನದಲ್ಲಿದ್ದನು. ಈತನನ್ನು ಶ್ರೀ ಕೃಷ್ಣದೇವರಾಯನ ಪ್ರಿಯ ಕುಮಾರನಂತೆಯೂ, ಮತ್ತೊಮ್ಮೆ ಮೊಮ್ಮಗನಂತೆಯೂ ಶಾಸನಗಳು ಬಣ್ಣಿಸುತ್ತವೆ. ಹೀಗಾಗಿ ಕೃಷ್ಣದೇವರಾಯ–ಸಿಂಗಪ್ಪನಾಯಕ ಇವರಿಬ್ಬರ ಸಂಬಂಧಗಳ ಹಿನ್ನೆಲೆಯಲ್ಲಿ ಶಾಸನಗಳ ಹೆಚ್ಚಿನ ಅಧ್ಯಯನ–ಸಂಶೋಧನೆ ಅಗತ್ಯವಿದೆ. ಎ.ಕ.೯ರ ಅನುಬಂಧ, ನೆಲಮಂಗಲ–೧೩೪ನೆಯ ಶಾಸನದಲ್ಲಿ ಉಕ್ತನಾದ 'ವರದ ಅಯ'ನೇ ಹಿರಿ ಅಯ್ಯ ವರದರಾಜಯನೆಂದು ಊಹಿಸಬಹುದಾಗಿದೆ.

ವರದರಾಜದೇವ (ಕಿರಿಯ ವರದರಾಜಯ್ಯ) (ಸಾ.ಶ. ೧೪೯೦–೧೫೦೦): 'ಪಟ್ಟಣ ತಿಂಮಣಯ್ಯನವರ ಮಗ ಹಿರಿಯ ವರದರಾಜಯ್ಯ' ನೆಂಬ ಚಿಕ್ಕಬೆಟ್ಟಹಳ್ಳಿ ಶಾಸನದ ಸಾಲನ್ನು ಅವಲೋಕಿಸಿದಾಗ, ದೇವರಾಯಪಟ್ಟಣದ ತಿಮ್ಮಣಯ್ಯನಿಗೆ ಕಿರಿಯ ವರದರಾಜಯ್ಯನೆಂಬ ಇನ್ನೊಬ್ಬ ಮಗನಿದ್ದುದು ತಿಳಿದುಬರುತ್ತದೆ. ಚನ್ನಪಟ್ಟಣ–೧೫೮ನೆಯ ಚಕ್ಕಲೂರು ಶಾಸನದಲ್ಲಿ ಬರುವ ವರದರಾಜದೇವನೇ ಕಿರಿಯ ವರದರಾಜಯ್ಯನಾಗಿರುತ್ತಾನೆ. ಏಕೆಂದರೆ ಈ ಅವಧಿಯಲ್ಲಿ ವರದರಾಜದೇವನನ್ನು

ಹೊರತುಪಡಿಸಿ ಇದೇ ಹೆಸರಿನ ಬೇರೆ ವ್ಯಕ್ತಿಗಳು ಕಂಡುಬರುವುದಿಲ್ಲ. ಹಾಗಾಗಿ ಪಟ್ಟಣ/ದೇವರಾಯಪಟ್ಟಣದ ತಿಂಮಣಯ್ಯನಿಗೆ ವರದರಾಜಯ್ಯ, ವರದರಾಜದೇವ ಎಂಬ ಒಂದೇ ಹೆಸರಿನ ಇಬ್ಬರು ಮಕ್ಕಳಿದ್ದುದು ಮತ್ತು ಶಾಸನಗಳೇ ಅವರನ್ನು ಹಿರಿಯ ವರದರಾಜಯ್ಯ, ವರದರಾಜದೇವ ಎಂದು ಗುರುತಿಸಿರುವುದು ಸ್ಪಷ್ಟವಾಗುತ್ತದೆ.

ವರದರಾಜದೇವನು ತನ್ನ ನಾಯಕತನಕ್ಕೆ ಸಲ್ಲುವ . . . . . ಚಾವಡಿಗೆ ಸೇರಿದ ಚಕ್ಕಲೂರು ಗ್ರಾಮವನ್ನು ಗೌಡಹಳ್ಳಿ (ಗೌಡಗೆರೆ?)ಯ ಮುದಿರಾಜ ಒಡೆಯರ ಮಗ ದೊಡ್ಡಯ್ಯ ಒಡೆಯನಿಗೆ ಪುರಮಠವಾಗಿ ಕೊಟ್ಟು, ಚಕ್ಕಲೂರಿನ ಗದ್ದೆ-ಬೆದ್ದಲು, ತೋಟ-ತುಡಿಕೆ, ಆಣೆ-ಅಚ್ಚುಕಟ್ಟು, ಗೂಳಿಗುಯ್ಯಲು-ಕಿರುಕುಳ, ಸುವರ್ಣಾದಾಯ ಸುಂಕಗಳ ಸರ್ವಸ್ವಾಮ್ಯವನ್ನು ಅನುಭವಿಸಲು ತಿಳಿಸುತ್ತಾನೆ. ವರದರಾಜದೇವನು ತನ್ನ ಸ್ತ್ರೀ(ಪತ್ನಿ), ಪುತ್ರಗ್ನಾತಿ, ದಾಯಾದಾನುಮತ (ಸಹೋದರರ ಅನುಮತಿ)ದಿಂದ ಈ ಪುರಧರ್ಮವನ್ನು ಇಷ್ಟದೈವ ವರದರಾಜದೇವರ (ಚಕ್ಕಲೂರು ವರದರಾಜ ದೇವಾಲಯ/ಚನ್ನಪಟ್ಟಣ ಕೋಟೆ ಪ್ರದೇಶದಲ್ಲಿರುವ ವರದರಾಜ ದೇವಾಲಯ?) ಮುಂದಿಟ್ಟು, ಮಹಾಮಂಡಲೇಶ್ವರ, ಮೇದಿನಿ ಮೀಸೆಯರ ಗಂಡ ಕಠಾರಿ ಸಾಳುವ ನರಸಿಂಗರಾಜವೊಡೆಯರಿಗೆ ಧರ್ಮವಾಗಬೇಕೆಂದು ಪ್ರಾರ್ಥಿಸಿದಾನೆ[೧೨]. ಈ ಶಾಸನದಲ್ಲಿ ತಿಳಿಸಿದ ಈ ರಾಜ ಚೂಡಾಮಣಿ ಕಠಾರಿ ಸಾಳುವ ನರಸಿಂಗರಾಜ ಒಡೆಯ (ಸಾ.ಶ. ೧೪೮೬-೧೪೯೩)ರು ಗುಂಡಾಜು-ಮಲ್ಲಾಂಬರ ಮಗನಾಗಿದ್ದು, 'ರಾಮಾಭ್ಯುದಯ' ಕಾವ್ಯದ ಕರ್ತೃ ಆಗಿದ್ದರು. ಪ್ರಸ್ತುತ ಚಕ್ಕಲೂರು ಶಾಸನದ ಕಾಲಮಾನವನ್ನು ಬಿ.ಎಲ್. ರೈಸ್ ಅವರು ಸಾ.ಶ. ೧೪೭೮ ಎಂದು ತಿಳಿಸಿ ಪ್ರಶ್ನಾರ್ಥಕ ಚಿಹ್ನೆಯನ್ನು ಇಟ್ಟಿದ್ದಾರೆ. ಶಾಸನದಲ್ಲಿ ಕಠಾರಿ ಸಾಳುವ ನರಸಿಂಗರಾಜವೊಡೆಯರ ಪ್ರಸ್ತಾಪವಿರುವುದರಿಂದ ಈ ಶಾಸನದ ಕಾಲಮಾನವನ್ನು ಸುಮಾರು ೧೪೯೦-೧೫೦೦ ಎಂದು ಊಹಿಸಬಹುದು. ಪುರಮಠವಾಗಿ ಕೊಟ್ಟ ಚಕ್ಕಲೂರು ಗ್ರಾಮವು ಚೇಲೂರು ಚಾವಡಿ,[೧೩] ಚನ್ನಪಟ್ಟಣ ಚಾವಡಿ[೧೪]-ಇವೆರಡರಲ್ಲಿ ಯಾವ ಚಾವಡಿಯ ವ್ಯಾಪ್ತಿಗೊಳಪಟ್ಟಿತ್ತೆಂದು ಸ್ಪಷ್ಟವಾಗುವುದಿಲ್ಲ. ಡಾ. ಎಂ.ಕೆ. ಮಂಜುನಾಥ ಅವರು ಚನ್ನಪಟ್ಟಣ ಚಾವಡಿಗೆ ಸಲ್ಲುವ ಚಕ್ಕಲೂರು ಮತ್ತು ಸಾಮಂತ ದೊರೆ/ಪಾಳೆಗಾರ ವರದರಾಜದೇವ ಎಂಬ ಮಾಹಿತಿ ಪೂರೈಸಿದ್ದಾರೆ[೧೫]. ವರದರಾಜದೇವನು ತನ್ನ ಪತ್ನಿ, ಪುತ್ರ ಮತ್ತು ದಾಯಾದಿಗಳ ಅನುಮತಿಯೊಂದಿಗೆ ಈ ಪುರಧರ್ಮದಾನವನ್ನು ಕೊಡುತ್ತಾನೆ. ಆದರೆ ಅವರ ಹೆಸರುಗಳನ್ನು ಶಾಸನದಲ್ಲಿ ಉಲ್ಲೇಖಿಸಿರುವುದಿಲ್ಲ. ಪಟ್ಟಣ ತಿಮ್ಮಣ್ಣೊಡೆಯನ ಜೇಷ್ಠಪುತ್ರ ಹಿರಿಯ ವರದರಾಜಯ್ಯನಿಗೆ ಸಿಂಗಾಪುರದ ತಿರುವೆಂಗಳನಾಥ, ಎರಡನೆಯ ಮಗ ವರದರಾಜದೇವ (ಕಿರಿಯ ವರದರಾಜಯ್ಯ)ನಿಗೆ ಚನ್ನಪಟ್ಟಣದ ವರದರಾಜದೇವರು ಇಷ್ಟದೈವವಾಗಿದ್ದರು. ವರದರಾಜದೇವನು ಸಾಮಂತ ಅಥವಾ ಪಾಳೆಗಾರನಾಗಿದ್ದುದು ಚನ್ನಪಟ್ಟಣ ಚಾವಡಿಗೆ; ಇಲ್ಲಿ 'ಚಾವಡಿ' ಎಂಬುದು ಒಂದು ಆಡಳಿತ ವಿಭಾಗವಾಗಿದೆ. ಅಂತೆಯೇ 'ಮುಳುವಾಯ ಚಾವಡೆಯ ಮಂನೆಯ ಶ್ರೀ ಮನ್ಮಹಾನಾಯಂಕಾಚಾರ್ಯರ ಮಗ,[೧೬] 'ನಮ್ಮ ಚಾವಡಿ ಬುದ್ಧಿವಂತರು ಸೂರಪ್ಪ ಸೇನಬೋರ ಮುಖಾಂತರ'[೧೭] - ಎಂಬ ಬೇರೆ ಬೇರೆ ಶಾಸನಗಳ ಉಲ್ಲೇಖಗಳೂ ಕೂಡ ಚಾವಡಿಯನ್ನು ಒಂದು ಆಡಳಿತ ವಿಭಾಗವೆಂದು ದೃಢಪಡಿಸುತ್ತವೆ. ಈ ಪೂರ್ವದಲ್ಲಿ 'ಚಾವಡಿ'ಯು ಮೂಲತಃ ಒಂದು ಪ್ರದೇಶದ ಕಂದಾಯವನ್ನು ಸಲ್ಲಿಸಲ್ಪಡುವ ಕಚೇರಿ ಎಂಬ ಗ್ರಹಿಕೆಯಿತ್ತು.

ಕೆಂಚಸೋಮಣ್ಣನಾಯಕ (ಸಾ.ಶ. ೧೪೯೭-೧೫೩೩): ಕೆಂಚಸೋಮಣ್ಣನಾಯಕ[೧೮], ಕಂಚಸೋಮಣ್ಣನಾಯ್ಕ, ಮುರುತಾಪುರ ದಂಡ-ಪರದಳ ಭಯಂಕರ-ತುರುಕದಳ ವಿಭಾಡ ತಿಂಮಣನಾಯಕರ ಕೊಮಾರ ಕೆಂಚ ಸೋಮಣನಾಯಕ, ಮಹಾಮಂಡಲೇಶ್ವರ ಕಠಾರಿ ಸಾಳುವ ಶ್ರೀ ಕೃಷ್ಣರಾಯರ ಭುಜಬಲಪ್ರತಾಪ ದೇವರಾಯಪಟ್ಟಣದ ತಿಮ್ಮಣನಾಯ್ಕರ ಮಗ ಕೆಂಚಸೋಮಣ್ಣನಾಯ್ಕ, ದೇವರಾಯಪಠಣದ ತಿಂಮಣೊಡೆಯರ ಮಕ್ಕಳು ಕೆಂಚಸೋಮಣ್ಣವೊಡೆಯ, ದೇವರಾಯಪಟ್ಟಣದ ತಿಂಮವೊಡೆಯರ ಮಕ್ಕಳು ಕೆಂಚಸೋಮಣನಾಯಕ ಕೆಶಾ ಸೋಮೆನಾಯಕ, ಕಲಿಪಿನ ಚೋಳರಾಯ ಕೆಂಚಶೋಮ ಎಂಬ ಬಿರುದು ಮತ್ತು ಹೆಸರುಗಳಿಂದ ಕರೆಯಲ್ಪಟ್ಟ ಕೆಂಚಸೋಮಣ್ಣನಾಯಕನು ದೇವರಾಯಪಟ್ಟಣ ಮತ್ತು ಚನ್ನಪಟ್ಟಣ ಪಾಳೆಪಟ್ಟುಗಳಿಂದ ಆಡಳಿತ ನಡೆಸಿರುತ್ತಾನೆ.

ಸಾ.ಶ. ೧೪೯೭ರ ಪಂಕಜನಹಳ್ಳಿ ಶಾಸನವು ಕೆಂಚಸೋಮಣ್ಣನಾಯಕನನ್ನು ಮಹಾಮಂಡಲೇಶ್ವರ, ಕಟಾರಿ ಸಾಳುವ ನರಸಿಂಗರಾಯ ಮಹಾರಾಯರ ಕುಮಾರ ನರಸನಾಯಕ (ಇಮ್ಮಡಿ ನರಸಿಂಗರಾಯ - ೧೪೯೩-೧೫೦೫) ನಿಗೆ ಭುಜಪ್ರತಾಪನಾಗಿದ್ದನೆಂದು ಬಣ್ಣಿಸುತ್ತದೆ. ಇಂದಿನ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪಂಕಜನಹಳ್ಳಿಯು ದೇವರಾಯಪಟ್ಟಣ ಪಾಳೆಪಟ್ಟಿನ ವ್ಯಾಪ್ತಿಗೊಳಪಟ್ಟಿದ್ದರಿಂದಲೇ 'ಭುಜ ಪ್ರತಾಪ ಕೆಂಚ . . . .' ಎಂಬ ಶಾಸನೋಲ್ಲೇಖವಿದೆ.

ದೇವರಾಯಪಟ್ಟಣದಿಂದ ಉತ್ತರಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಅರಮನೆ ಕಲ್ಲುಗುಡ್ಡದಲ್ಲಿ ಕೋಟೆ ಬುರುಜು, ಸಿಲಿಂಡರಾಕಾರದ ಶಿಲಾನಿರ್ಮಿತಿಗಳಿವೆ. ಈ ಪ್ರದೇಶದಲ್ಲಿ ಕೆಂಚಸೋಮಣ್ಣನಾಯಕನ ಅರಮನೆಯಿತ್ತೇ? ಅರಮನೆ

ಇದ್ದಿರುವ ಕಾರಣಕ್ಕೆ ಅರಮನೆ ಕಲ್ಲುಗುಡ್ಡ ಎಂದು ಕರೆಯಲ್ಪಡುತ್ತಿದೆಯೇ? ಈ ಬಗ್ಗೆ ಹೆಚ್ಚಿನ ಅಧ್ಯಯನವಾಗಬೇಕಿದೆ.



ಕೆಂಚಸೋಮಣ್ಣನ ಶೈವ-ವೈಷ್ಣವ ಸಮನ್ವಯತೆ: ಶ್ರೀ ನಂದಿನಾಥ, ಶ್ರೀ ವೀರಭದ್ರದೇವರು ಮುಖ್ಯವಾದ ಸಜನಶುದ್ಧ ಶಿವಾಚಾರಸಂಪನ್ನರಾದ ದೇವಮತಿ ಮಹಮಹತ್ತಿನೊಳಗಿನ ಸಿದ್ಧರಾಮೇಶ್ವರ ದೇವರಿಗೆ ಕೆಂಚಸೋಮಣ್ಣನಾಯಕನು ದೇವಗೊಂಡನಹಳ್ಳಿಯನ್ನು ಪುರವಾಗಿ ಕೊಡುತ್ತಾನೆ. ಅದರಂತೆ ಶ್ರೀ ಮಹಾದೇವತೆ ಪಾಪ್ರತಿ (ಪಾರ್ವತಿ) ಮಹಮಹತ್ತಿನ ಗುಜರಾತಿ ಶಾಂತದೇವರಿಗೆ ಶಾಂತಪುರವನ್ನು ದಾನವಾಗಿ ಕೊಡುತ್ತಾನೆ[೧೯]. ದೇವಮತಿ ಮಹಮಹತ್ತಿನ ಸಿದ್ಧರಾಮೇಶ್ವರ ಮತ್ತು ಪಾರ್ವತಿ ಮಹಮಹತ್ತಿನ ಗುಜರಾತಿ ಶಾಂತದೇವರುಗಳು ವೀರಶೈವ ಯತಿಗಳಾಗಿದ್ದಾರೆ. ಇವರಿಬ್ಬರಿಗೂ ವೀರಶೈವ ಮಹಮಹತ್ತಿನ ದೇವಸ್ಥಾನಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸ್ವಾಮಿಗಳಾಗಿ ಕೆಂಚಸೋಮಣ್ಣನಾಯಕನಿಂದ ದೇವಗೊಂಡನಹಳ್ಳಿ (ದೇವಗಾನಹಳ್ಳಿ, ನೆಲಮಂಗಲ ತಾಲ್ಲೂಕು) ಶಾಂತಪುರ (ತಿಪಟೂರು ತಾಲ್ಲೂಕಿನ ಶಾಂತನಹಳ್ಳಿ ಅಥವಾ ಶರಣಕವಿ ಶಂಕರದೇವನ ಸ್ವರವಚನದಲ್ಲಿ ಬರುವ ಶಾಂತಿಗ್ರಾಮ?) ಗ್ರಾಮಗಳನ್ನು ದಾನವಾಗಿ ಸ್ವೀಕರಿಸಿದ್ದಾರೆ.

ಕೆಂಚಸೋಮಣ್ಣನಾಯಕನು ತನ್ನ ತಂದೆಯಲ್ಲಿ ಹತ್ತು, ತಾಯಿಯಲ್ಲಿ ಹನ್ನೊಂದು ಹೀಗೆ ಒಟ್ಟು ಇಪ್ಪತ್ತೊಂದು ಮಾತಾಪಿತೃಗಳು ಕೃತಾರ್ಥರಾಗಬೇಕೆಂದು ಈ(ಇ)ಳೆಕಲ್ಲಬೆಟ್ಟದ ರಾಮೇಶ್ವರ ದೇವರ ಅಂಗರಂಗ ವೈಭೋಗಕ್ಕಾಗಿ ಸಲ್ಲಬೇಕೆಂದು ಬಟ್ವಾಡಿ (ಬಟವಾಡೆ, ತುಮಕೂರು ತಾಲ್ಲೂಕು) ಗ್ರಾಮವನ್ನು ಪುರವರ್ಗವಾಗಿ ಬಿಟ್ಟಿದ್ದಾನೆ[೨೦].

ಕೆಂಚಸೋಮಣ್ಣನಿಂದ ಅನ್ನದಾಸೋಹ: ಸುಮಾರು ೧೫೨೮-೨೯ರ ಶಿವಗಂಗೆ ಬೆಟ್ಟದ ಬಂಡೆಶಾಸನವೊಂದು ಕಲಿಯುಗ ಚೋಳರಾಯ ಕೆಂಚಸೋಮನಧೀನದಲ್ಲಿ ಗಂಗಾಧರ ದೇವಾಲಯದಲ್ಲಿ ೧೨೦೦೦ ಒಡೆಯರಿಗೆ ಅನ್ನದಾಸೋಹ ನಡೆಯಿತೆಂದು ಉಲ್ಲೇಖಿಸುತ್ತದೆ[೨೧]. ಶೈವಧರ್ಮವನ್ನು ಪಾಲಿಸುತ್ತಿದ್ದ ಚೋಳದೊರೆಗಳ ಶೈವನಿಷ್ಠೆ ಅಖಂಡವಾದುದು. ತಮಿಳುನಾಡಿನಲ್ಲಿ ಶೈವಧರ್ಮಪ್ರಸಾರಕ್ಕೆ ರಾಜಶಕ್ತಿಯ ಬೆಂಬಲ ನೀಡಿದವರು ಚೋಳ ಚಕ್ರವರ್ತಿಗಳು. ಕನ್ನಡನಾಡಿನ ಶಾಸನಗಳೂ ಕೂಡ ಚೋಳ ಅರಸರನ್ನು ಶರಣರೊಂದಿಗೆ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಆದರೆ ಶಿವಗಂಗೆ ಶಾಸನದಲ್ಲಿ ದೇವರಾಯಪಟ್ಟಣದ ಪಾಳೆಗಾರ ಕೆಂಚಸೋಮಣ್ಣನಾಯಕನನ್ನು ಚೋಳ ದೊರೆಗಳಿಗೆ ಹೋಲಿಕೆ ಮಾಡಿ ಶೈವಾರಾಧಕನಂತೆ ಕಲಿಯುಗದ ಚೋಳರಾಯ' ಎಂದು ಹೇಳುವ ಶಾಸನೋಲ್ಲೇಖ ಗಮನೀಯವಾಗಿದೆ. ಗಿರಿಗೆ ಹೋಗುವ ಒನಕೆಕಿಂಡಿ ಅರೆಬಂಡೆಮೇಲಿನ ಈ ಶಾಸನದಲ್ಲಿ ಕೆಂಚಸೋಮನ ಹೆಸರು ಬಿಟ್ಟಜಡೆಯ ನಂಜೆದೇವನ ಹೆಸರಿನೊಟ್ಟಿಗೆ ಇದ್ದು, ಕೆಂಚಸೋಮನು ಬಿಟ್ಟಜಡೆಯ ನಂಜೆದೇವನ ಶಿಷ್ಯನಾಗಿರಬೇಕು.

ಪಟ್ಟಣದ ತಿಮ್ಮಣ್ಣೊಡೆಯ ಮತ್ತು ಅವನ ಇಬ್ಬರು ಮಕ್ಕಳಾದ ಹಿರಿಯ ವರದರಾಜಯ್ಯ, ಕಿರಿಯ ವರದರಾಜಯ್ಯ (ವರದರಾಜದೇವ)ನವರು ಸಿಂಗಾಪುರದ ತಿರುವೆಂಗಳನಾಥ ದೇವರು, ರಾಮಾನುಜಕೂಟ, ಚನ್ನಪಟ್ಟಣದ ವರದರಾಜದೇವರುಗಳಿಗೆ ದಾನ ನೀಡಿರುವುದು ಅವರು ವೈಷ್ಣವ ಮತಾವಲಂಬಿಗಳಾಗಿದ್ದರೆಂಬುದನ್ನು ಸೂಚಿಸುತ್ತದೆ. ತಿಮ್ಮಣ್ಣೊಡೆಯನ ಮೂರನೆಯ ಮಗನಾದ ಕೆಂಚಸೋಮಣ್ಣನಾಯಕನೂ ಕೂಡ ತನ್ನ ತಂದೆ ಮತ್ತು ಸಹೋದರರಂತೆ ಮೊದಲು ಚಿನಗದ ತಿರುಮಲೆದೇವರು, ಭೈರಾಪಟ್ಟಣದ ಜನಾರ್ಧನದೇವರ ಪೂಜೆ-ನೈವೇದ್ಯಗಳಿಗೆ ದತ್ತಿಗಳನ್ನು ಕೊಟ್ಟಿದ್ದಾನೆ. ಆ ನಂತರದಲ್ಲಿ ದೇವಮತಿ-ಪಾರ್ವತಿ ಮಹಾಮಹತ್ತು, ಈಳೇಕಲ್ಲಬೆಟ್ಟದ ರಾಮೇಶ್ವರ, ಶಿವಗಂಗೆ, ಗಂಗಾಧರ ದೇವರು ಮತ್ತು ಅಲ್ಲಿ ನಡೆಸಿದ ಅನ್ನದಾಸೋಹದ ಕಾರ್ಯಕ್ರಮಗಳು ಕೆಂಚಸೋಮಣ್ಣನಾಯಕನ ವೀರಶೈವ/ಲಿಂಗಾಯತ ಧರ್ಮದ ಕಡೆಗಿನ ಒಲವು ತೋರಿಸುತ್ತವೆ. ಬಹುಕಾಲ ವೈಷ್ಣವ ಪಾಲನೆ ಮಾಡುತ್ತಿದ್ದ ಇವನು ಕೊನೆಯಲ್ಲಿ ಸ್ವಲ್ಪಕಾಲ ವೀರಶೈವ ಪ್ರಭಾವಕ್ಕೊಳಗಾಗಿರಬೇಕೆಂದು ತೋರುತ್ತದೆ.

ಕೆರೆ ಅಭಿವೃದ್ಧಿ: ದೇವರಾಯಪತಣದ ತಿಂಮಣೊಡೆಯರ ಮಗ ಕೆಂಚಸೋಮಣವೊಡೆಯನು ಸಾ.ಶ. ೧೫೧೩ರಲ್ಲಿ ತಾನೇ ಹಾಕಿಸಿದ ಹೊಟ್ಟೆಗನಹೊಸಹಳ್ಳಿ ಶಾಸನದಲ್ಲಿ 'ನಂಮ್ಮ ಸ್ವಾಮಿ ಕೃಷ್ಣರಾಯ ಮಹಾರಾಯರು ನಮಗೆ ನಾಯಕತನಕ್ಕೆ ಪಾಲಿಸಿದ ಚಂನಪಟ್ಟಣದ ಸೀಮೆ' ಎಂದು ಹೇಳಿಕೊಂಡಿರುವುದರಿಂದ, ಸಾ.ಶ. ೧೪೯೭ರಿಂದ ೧೫೧೨ರವರೆಗೆ ತುಮಕೂರಿನ

ದೇವರಾಯಪಟ್ಟಣದಲ್ಲಿ ಪಾಳೆಗಾರಿಕೆ ನಡೆಸಿದ ಇವನು, ಚನ್ನಪಟ್ಟಣಸೀಮೆಗೆ ಸ್ಥಳಾಂತರವಾಗಿರುವುದನ್ನು ಸ್ಪಷ್ಟಪಡಿಸುತ್ತಾನೆ. ಚನ್ನಪಟ್ಟಣ ಸೀಮೆಯೊಳಗಿನ ಕೂಡ್ಲೂರ ಹಿರಿಯಕೆರೆ ಖಿಲ(ಹಾಳು)ವಾಗಿರಲು, ಕೂಡಲೂರು ಸ್ಥಳದ ಮೇಲಣಿ ಹೊಸಹಳ್ಳಿ ಗ್ರಾಮವನ್ನು ಧಾರೆಯೆರೆದು, ಈ ಗ್ರಾಮದ ಚತುಸ್ಸೀಮೆಯನ್ನು ಆಗುಮಾಡಿ, ಬರುವ ಆದಾಯದಲ್ಲಿ ಕೂಡಲೂರು ಕೆರೆಗೆ ನಾಲ್ಕು ಬಂಡಿ, ಮೊಗೇಹಳ್ಳಿ ಕೆರೆಗೆ ಎರಡು ಬಂಡಿ–ಹೀಗೆ ಒಟ್ಟು ಆರು ಬಂಡಿಗಳನ್ನು ನಿಗದಿಮಾಡಿ, ವರ್ಷಂಪ್ರತಿ ಕೆರೆಗಳಿಗೆ ಮಣ್ಣುಹಾಕಿಸುವ ವ್ಯವಸ್ಥೆ ಮಾಡುತ್ತಾನೆ. ತನ್ನ ಸ್ವಾಮಿ ಕೃಷ್ಣದೇವರಾಯನಿಗೆ ಧರ್ಮವಾಗಬೇಕೆಂದು ಮಂಗಲೇಶ್ವರ ಸನ್ನಿಧಿಯಲ್ಲಿ ಪ್ರಾರ್ಥಿಸಿ ಹಾಕಿಸಿರುವ ಶಾಸನ ಇದಾಗಿದೆ.

ಕೆಂಚಸೋಮಣ್ಣವೊಡೆಯನು ಎರಡು ಬಂಡಿಗಳಿಂದ ಮಣ್ಣುಹಾಕಿಸಿದ ಮೊಗೇಹಳ್ಳಿ ಕೆರೆಯು ಗಂಗದೊರೆ ನೀತಿಮಾರ್ಗಪೆರ್ಮನಡಿಗಳ ಕಾಲದಲ್ಲಿ ಉಕ್ತಗೊಂಡ ಹಿರಿಯಕೆರೆ, ಕಿರುಕೆರೆಗಳಲ್ಲಿ ಒಂದಾಗಿದ್ದು ಈ ಹಿಂದೆ ಗಂಗರಿಂದ ನಿರ್ಮಿಸಲ್ಪಟ್ಟ ಕೆರೆ ಏರಿಗೆ ಮಣ್ಣು ಹಾಕಿಸುವ ಮೂಲಕ ಕೆಂಚಸೋಮಣ್ಣನಾಯಕನು ಕೆರೆಗಳ ಜೀರ್ಣೋದ್ಧಾರದಂತಹ ಜಲಮೂಲದ ಸಮಾಜಮುಖಿ ಕಾರ್ಯ ಕೈಗೊಂಡಿದ್ದಾನೆ. ಸಾ.ಶ.೧೩೮೭ರಲ್ಲಿ 'ಚನ್ನಪಟ್ಟಣರಾಜ್ಯ' ವೆನಿಸಿದ್ದ ಪ್ರದೇಶವು ವಿಜಯನಗರ ಶ್ರೀ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಕೆಂಚಸೋಮಣ್ಣನಾಯಕನಿಗೆ ಪಾಲಿಸಲ್ಪಟ್ಟ 'ಚನ್ನಪಟ್ಟಣಸೀಮೆ'ಯೆಂಬ ಒಂದು ಆಡಳಿತ ಘಟಕವಾಗಿತ್ತು. ಈ ಸೀಮೆಯಲ್ಲಿ ಕೂಡ್ಲೂರು, ಸಂತೆಮೋಗೇನಹಳ್ಳಿ, ಆಣಿಗೆರೆ, ಭೈರವಪಟ್ಟಣ, ಕೋಡಂಬಳ್ಳಿ, ಚಕ್ಕಲೂರು, ಹೊಂಗನೂರು, ಹೊಸಹಳ್ಳಿ, ಅತ್ತಿಕುಪ್ಪೆ, ಮಳೂರು ಮತ್ತಿತರ ಗ್ರಾಮಗಳು ಅಂತರ್ಗತವಾಗಿದ್ದವು. ಸಾ.ಶ. ೧೬೪೭ರವರೆಗೂ ಚನ್ನಪಟ್ಟಣವು ಸೀಮೆಯ ಕೇಂದ್ರಸ್ಥಳವೇ ಆಗಿತ್ತು. ೧೬೬೦ ರಲ್ಲಿ ಅದು 'ಚಂನಪಟ್ಟಣ ಸ್ಥಳ'ವಾಗಿರುವುದಕ್ಕೆ ಶಾಸನಾಧಾರಗಳಿವೆ. ಚಂದಪಟ್ಟಣವೆಂಬ ಸ್ಥಳನಾಮವೇ ಚನ್ನಪಟ್ಟಣವಾಗಿದೆಯೆಂದೂ ಹೇಳಲಾಗುತ್ತದೆ.

ಕಲ್ಲೆಹ ಅರಮನೆಯಿಂದ ಹೊರಡಿಸಲಾದ ಆಜ್ಞೆಗಳು: ಶಾಸನತಜ್ಞ ಬಿ.ಎಲ್. ರೈಸ್ ಅವರು ಮಾಗಡಿ ೨೩ ಮತ್ತು ೨೭ನೆಯ ಕಲ್ಯ ಶಾಸನಗಳ ಕಾಲಮಾನವನ್ನು ಸಾ.ಶ.೧೬೪೯ ಎಂದು ಹೇಳಿ ಪ್ರಶ್ನಾರ್ಥಕ ಚಿಹ್ನೆ ಇಟ್ಟಿರುತ್ತಾರೆ. ಈ ಎರಡೂ ಶಾಸನಗಳು ಕೆಂಚಸೋಮಣ್ಣನಾಯಕನು ಹಾಕಿಸಿದ ಸುಮಾರು ಸಾ.ಶ.೧೫೨೮ರ ಅರಮನೆಯ ಆಜ್ಞೆಗಳಾಗಿರುತ್ತವೆ. ಮಾಗಡಿ–೨೭ನೆಯ ಶಾಸನದಂತೆ, ಸೋಲೂರು ಸೀಮೆಗೆ ಸೇರಿದ ದೇವನಕೆರೆ ಮತ್ತು ಕೂಳಿಗಟ್ಟೆ (ಹುಲಿಕಟ್ಟೆ) ಗ್ರಾಮಗಳ ಹೊಲಗದ್ದೆ ಕೊಡಗಿ ಮತ್ತು ಇಪ್ಪತ್ತು ಬಂಗಾರಗಳನ್ನು ಕೆಂಚಸೋಮಣ್ಣನಾಯಕನು ಕಲ್ಲೆಹದ ಕಲ್ಲೇದೇವರಿಗೆ ಸಲ್ಲಿಸುತ್ತಾನೆ. ಈ ಧರ್ಮವನ್ನು ತಡೆದವರು ಅರಮನೆಗೆ ೧೨೦ ಹೊನ್ನನು ದಂಡವಾಗಿ ತೆರಬೇಕಾಗುತ್ತದೆಂದು ಆಜ್ಞೆ ವಿಧಿಸುತ್ತಾನೆ. ಕಲ್ಲೇಶ್ವರ ದೇವರ ಅಮೃತಪಡಿಗೆಂದು ಅದುವರೆವಿಗೂ ಇದ್ದ ದೇವನಕೆರೆ, ಹುಲಿಕುಂಟೆ ಗ್ರಾಮಗಳ ಹೊಲ–ಗದ್ದೆಗಳನ್ನು ಅಡವು ಇಟ್ಟಿದ್ದುದನ್ನು ಗಮನಿಸಿದ ಕೆಂಚಸೋಮಣ್ಣನಾಯಕನು ಹಿಂದಿನ ಆಜ್ಞೆಗೆ ಹೆಚ್ಚುವರಿ ಷರತ್ತುಗಳನ್ನು ವಿಧಿಸಿ ಪುನಃ ಶಾಸನ ಹಾಕಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಅದೇನೆಂದರೆ ಕಲ್ಲೆಹದ ಕಲ್ಲೇಶ್ವರ ದೇವರ ಅಮೃತಪಡಿಗೆ ಸಲ್ಲುವ ದೇವನಕೆರೆ–ಹುಲಿಕಟ್ಟೆಗಳ ಅಡವಿಟ್ಟ ಹೊಲಗದ್ದೆಗಳನ್ನು ಬಿಡಿಸಿಕೊಡುವುದರ ಮೂಲಕ ದೇವತಾಕಾರ್ಯಗಳು ಸಾಂಗವಾಗಿ ನಡೆಯುವಂತೆ ಮಾಡುತ್ತಾನೆ. ದೇವರಿಗೆ ಸಲ್ಲುವ ಹೊಲ–ಗದ್ದೆಗಳನ್ನು ಪುನಃ ಅಡವಿಟ್ಟುಕೊಂಡರೆ, ಅರಮನೆಗೆ ೧೨೦ ಹೊನ್ನ ದಂಡವಾಗಿ ತೆರಬೇಕಾಗುತ್ತದೆ. ಅಡವಿಟ್ಟವ ರೊಂದಿಗೆ ಹೆತ್ತವರೂ ಸಹ ದೇವಲೋಕ–ಮರ್ತ್ಯಲೋಕಕ್ಕೆ ಹೊರಗು ಎಂಬ ಶಾಪಾಶಯ ಇಲ್ಲಿ ಗಮನೀಯವಾಗಿದೆ. ಮಾಗಡಿ–೨೩ನೆಯ ಶಾಸನದ 'ಕೆಶಾ ಸೋಮನಾಯಕ' ಎಂಬುದನ್ನು ಸುಂಕಂ ಗೋವರ್ಧನ ಅವರು ತಮ್ಮ 'ಮಾಗಡಿ ತಾಲ್ಲೂಕಿನ ಶಾಸನಗಳು–ಹೊಸ ಹೊಳಹುಗಳು' ಎಂಬ ಪುಸ್ತಕದಲ್ಲಿ 'ಕೆಂಚಸೋಮನಾಯಕ' ಇರಬಹುದೆಂದು ಹೇಳುತ್ತ ಇವನನ್ನು ಇಮ್ಮಡಿ ಕೆಂಪೇಗೌಡನ ಸಮಕಾಲೀನ ಮತ್ತು ಕಲ್ಯ ಭಾಗದಲ್ಲಿ ಪ್ರಬಲ ಮತ್ತು ಸ್ಥಳೀಯ ಅರಸ ನಾಗಿದ್ದನೆಂದು ಸ್ಪಷ್ಟಪಡಿಸಿದ್ದಾರೆ. ಕೆಂಚಸೋಮಣ್ಣನಾಯಕನ ಕಲ್ಯದ ಮೇಲ್ಕಂಡ ಎರಡು ಶಾಸನಗಳಲ್ಲಿ ಅರಮನೆಯ ಉಲ್ಲೇಖವಿದೆ. ಕಲ್ಯದ ಈ ಅರಮನೆಯು ಗುಡ್ಡವಿಳಿದು ಉತ್ತರಕ್ಕೆ ಸಾಗುವಲ್ಲಿ 'ಅರಮನೆ ತುಂಡು' ಎಂದು ಕರೆಯ ಲಾಗುವ ವಿಶಾಲವಾದ ಹೊಲದಲ್ಲಿದೆಯೆಂದು ಇತಿಹಾಸ ತಜ್ಞರಾದ ಡಾ. ಎಂ.ಜಿ. ನಾಗರಾಜ್ ಅವರು ಗುರುತಿಸಿ, ಇದು ಕಲ್ಯದ ಪ್ರಭು ರಾಮರಾಜಯ್ಯದೇವನ ಸಾ.ಶ. ೧೫೬೨ರ ಕಾಲದ ಅರಮನೆ ಜಾಗವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ರಾಮರಾಜಯ್ಯನ ಶಾಸನದಲ್ಲಿ ಅರಮನೆಯ ಪ್ರಸ್ತಾಪವಿರುವುದಿಲ್ಲ. ರಾಮರಾಜಯ್ಯನಿಗಿಂತ ಪೂರ್ವದಲ್ಲಿ ಆಳ್ವಿಕೆ ನಡೆಸಿದ ಕೆಂಚಸೋಮಣ್ಣನಾಯಕನ ಮಾಗಡಿ ೨೩, ೨೭ನೆಯ ಶಾಸನಗಳಲ್ಲಿ ಸ್ಪಷ್ಟವಾಗಿ ಅರಮನೆಯ ಉಲ್ಲೇಖವಿರುವುದರಿಂದ, ಇದು ಕೆಂಚಸೋಮಣ್ಣನಾಯಕನ ಅರಮನೆಯೆಂದು ನಿರ್ಧರಿಸಬೇಕಾಗುತ್ತದೆ. ಇನ್ನು ಕೆಂಚಸೋಮಣ್ಣನಾಯಕನಿಂದ ಆರಾಧಿಸಲ್ಪಟ್ಟ ಕಲ್ಲೇಶ್ವರ ದೇವರು ಮಾಗಡಿ ತಾಲ್ಲೂಕಿನ ಕಲ್ಯ ಗ್ರಾಮದಲ್ಲಿದ್ದು ಈ ಸ್ಥಳನಾಮವು ಶಾಸನಗಳಲ್ಲಿ ಕಲ್ಲೆಹ ಕಲ್ಲೆಹದ ಪಟ್ಟಣ, ಕಲ್ಲಯಸ್ಥಲ ಹಾಗೂ ಕಲ್ಲೆಯ[೨೩] ಎಂದು ದಾಖಲಾಗಿದೆ. ಕಲವಟಪಟ್ಟಣ

ಎಂಬ ಬೌದ್ಧಕೇಂದ್ರವೂ ಇದಾಗಿತ್ತು. ಸಾ.ಶ. ೧೩೮೨ರ ಬೇಲೂರು ತಾಮ್ರಶಾಸನವೊಂದು ಕಲ್ಲೆಯವನ್ನೊಳಗೊಂಡು ಒಟ್ಟು ೨೭ ಸ್ಥಳಗಳ ಸಂತೆಪೇಟೆಗಳ ಹಲವರು, ನಖರ ಪರಿವಾರದವರು, ಮುಮ್ಮರಿ ದಂಡಗಳೆಲ್ಲರೂ ಸೇರಿ ತಮ್ಮ ಸರಕುಗಳ ವ್ಯಾಪಾರದ ಲಾಭಾಂಶವನ್ನು ಮಹಾಪ್ರಧಾನ ಮುದಯ ದಣ್ಣಾಯಕನಿಗೆ ಸಲ್ಲಿಸಿ ಅವನಿಗೆ ಪೃಥ್ವೀಶಟ್ಟಿತನದ ಬಿರುದು ನೀಡಿ ಗೌರವಿಸಿ ರುವುದನ್ನು ಉಲ್ಲೇಖಿಸುತ್ತದೆ. ಅದರಂತೆ ಕಲ್ಲೆಹದ ನಾಡಿನಲ್ಲಿ ಧರಣಿಶೆಟ್ಟಿ, ನಾಗಿಶೆಟ್ಟಿ, ರಾಮಿ ಸೆಟ್ಟಿಯ ಕೇತಿಶೆಟ್ಟಿ ಎಂಬ ಶರಣರಿದ್ದರು ಬಹುಶಃ ಇವರು ವ್ಯಾಪಾರ-ವಹಿವಾಟನೊಂದಿಗೆ ಶರಣತತ್ವಗಳನ್ನು ಪರಿಪಾಲಿಸುತ್ತಿದ್ದರೆಂದು ತೋರುತ್ತದೆ. ಕಲ್ಯ ಗ್ರಾಮದ ಪಶ್ಚಿಮಕ್ಕೆ ಗುಡ್ಡದ ಮಾರ್ಗದಲ್ಲಿ ಕಲ್ಲೇಶ್ವರ ಮಠವಿರುವುದನ್ನು ಕಾಣುತ್ತೇವೆ. ಗುಹೆಯ ಆಶ್ರಯದಲ್ಲಿ ಕಲಿದೇವ ದೇವಾಲಯವಿದೆ. ಶಾಸನೋಕ್ತ ಕಲ್ಲೇಶ್ವರ ದೇವಾಲಯವೇ ಕಲಿದೇವ ದೇವಾಲಯವಾಗಿದೆ. ನೆಲಮಂಗಲ ತಾಲ್ಲೂಕಿನ ಹಳೆನಿಜಗಲ್ಲು ಗ್ರಾಮದ ತೇದಿರಹಿತ ತ್ರುಟಿತ ಶಾಸನವು 'ಕೆಂಚಸೋಮನ . . . . ಬಿಟ್ಟಿಹನು' ಎಂದು ಉಲ್ಲೇಖಿಸುತ್ತದೆ. 'ವಿರುಪಣ' ವ್ಯಕ್ತಿನಾಮವೂ ಇದರಲ್ಲಿದೆ. ಅದರಂತೆ ಕುಲವನಹಳ್ಳಿ ಶಾಸನವು 'ಕೆಂಚಸೋಮಣ ನಾಯಕನಿಗೆ ಧರ್ಮವಾಗಬೇಕೆಂದು ಗಲುಡಪ್ರಜೆಗಳು ನವರಾತ್ರಿ ಪುಣ್ಯಕಾಲದಲ್ಲಿ ಕೊಟ್ಟ ಮಾನ್ಯವನ್ನು ದಾಖಲಿಸುತ್ತದೆ.



ಕೆಂಚಸೋಮಣ್ಣನಾಯಕನ ಕಾರ್ಯಕರ್ತ ದೇವಪ್ಪಸೆಟ್ಟಿ: ಕೆಂಚಸೋಮಣ್ಣನಾಯಕನ ಕಾರ್ಯಕರ್ತ ದೇವಪ್ಪಸೆಟ್ಟಿಯ ಸಮ್ಮುಖದಲ್ಲಿ ಶಿವನಸೊಡೆಯರ ವೀರಯವೊಡೆಯರು ಜಂಗಮಗಳ ಮಲ್ಲಯ್ಯನ ಮಗ ಚೆನ್ನಮಲ್ಲಯ್ಯನಿಗೆ ಕ್ರಯಕ್ಕೆ ಕೊಟ್ಟ ಹೊಲಗದ್ದೆಯ ವಿವರಗಳು ಸ್ವಭಾನು ಸಂವತ್ಸರದಲ್ಲಿ ದಾಖಲಾಗಿರುತ್ತವೆ. ದೇವಪ್ಪಸೆಟ್ಟಿ ಎಂಬ ಅಧಿಕಾರಿಯು ೧೫೨೩-೨೪ರ ಅವಧಿಯಲ್ಲಿ ಕೆಂಚಸೋಮಣ್ಣನಾಯಕನ ಕಾರ್ಯಕರ್ತನಾಗಿ ಅಂದರೆ ಇಂದಿನ ಉಪನೋಂದಣಾಧಿಕಾರಿಯಂತೆ ಕರ್ತವ್ಯ ನಿರ್ವಹಿಸಿರುವುದು ತಿಳಿದುಬರುತ್ತದೆ.

ಕೆಂಚಸೋಮಣ್ಣನ ತರುವಾಯದ ದೇವರಾಯಪಟ್ಟಣ: ಪಟ್ಟಣದ ತಿಮ್ಮಣ್ಣೊಡೆಯನಿಂದ ಸುಮಾರು ಸಾ.ಶ. ೧೪೭೦-೭೫ರ ಹೊತ್ತಿಗೆ ಅಸ್ತಿತ್ವಕ್ಕೆ ಬಂದ ದೇವರಾಯಪಟ್ಟಣ ಪಾಳೆಪಟ್ಟು ವಿಜಯನಗರ ಸಾಮ್ರಾಜ್ಯವನ್ನು ಬೆಂಬಲಿಸಿ, ರಕ್ಷಿಸಿ ಸ್ಥಳೀಯ ಆಡಳಿತ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ. ಪಟ್ಟಣದ ತಿಮ್ಮಣ್ಣೊಡೆಯ ಹಿರಿಯ ವರದರಾಜಯ್ಯ ಮತ್ತು ಕೆಂಚಸೋಮಣ್ಣನಾಯಕರು ದೇವರಾಯಪಟ್ಟಣವನ್ನು ಪಾಳೆಪಟ್ಟಿನ ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿರುವುದನ್ನು ಚಿಕ್ಕಬೆಟ್ಟಹಳ್ಳಿ, ಪಂಕಜನಹಳ್ಳಿ, ದೇವಗಾನಹಳ್ಳಿ, ಶಿರಾಗೇಟ್, ಬಟವಾಡಿ, ಕೆಂಚನಪಾಳ್ಯ, ಚಿನಗ, ಶಿವಗಂಗೆಬೆಟ್ಟ ಮತ್ತು ಕಲ್ಯದ ಶಾಸನಗಳಿಂದ ತಿಳಿಯುತ್ತೇವೆ. ಇದು ಪ್ರಾಯಶಃ ತುಂಬ ಚಿಕ್ಕ ಪಾಳೆಯಪಟ್ಟಾಗಿದ್ದು, ಬಹುಕಾಲ ಪ್ರತ್ಯೇಕ ಪಾಳೆಪಟ್ಟಾಗಿ ಉಳಿಯದೆ ಹತ್ತಿರದ ಪಾಳೆಪಟ್ಟುಗಳಾದ ಕೋರಾ, ಹೆಬ್ಬೂರು, ದೇವರಾಯನದುರ್ಗ, ಗೂಳೂರು, ಆನೆಬಿದ್ದಜರಿ/ಕರಿಗಿರಿದುರ್ಗ/ಜಟತನದುರ್ಗ-ಇವುಗಳಲ್ಲಿ ಯಾವುದಾದರೊಂದು ಪಾಳೆಪಟ್ಟಿನಲ್ಲಿ ವಿಲೀನವಾದಂತೆ ತೋರುತ್ತದೆ.

ದೇವರಾಯಪಟ್ಟಣದ ಅನುಭವಿ ಪಾಳೆಗಾರನಾಗಿದ್ದ ಕೆಂಚಸೋಮಣ್ಣನಾಯಕನ ಪ್ರತಿಭೆ ಮತ್ತು ಪ್ರಾಬಲ್ಯಗಳನ್ನು ಪರಿಗಣಿಸಿದ ವಿಜಯನಗರ ದೊರೆ ಕೃಷ್ಣದೇವರಾಯನು ಸಾ.ಶ. ೧೫೧೩ರಲ್ಲಿ ಇವನಿಗೆ ಚನ್ನಪಟ್ಟಣಸೀಮೆಯ ನಾಯಕತನವನ್ನು ಪಾಲಿಸುತ್ತಾನೆ. ತನಗೆ ಚನ್ನಪಟ್ಟಣಸೀಮೆಯ ನಾಯಕತನವಿದ್ದಾಗಲೂ ಕೂಡ ಕೆಂಚಸೋಮಣ್ಣನು ತನ್ನ ಮೂಲ ಅಂದರೆ ದೇವರಾಯಪಟ್ಟಣದ ತಿಮ್ಮಣೊಡೆಯನ ಮಗನೆಂದು ಹೇಳಿಕೊಂಡಿರುವುದನ್ನು ಚನ್ನಪಟ್ಟಣ ಸೀಮೆಯ ಹೊಟ್ಟಿಗನಹೊಸಹಳ್ಳಿ, ಆಣಿಗೆರೆ ಶಾಸನಗಳು ಸ್ಪಷ್ಟಪಡಿಸುತ್ತವೆ. ಕೆಂಚಸೋಮಣ್ಣ ನಾಯಕನಂತೆ ವರದರಾಜದೇವ (ಕಿರಿಯ ವರದ ರಾಜಯ್ಯ)ನೂ ಕೂಡ ಚನ್ನಪಟ್ಟಣ ಭಾಗದಲ್ಲಿ ಆಡಳಿತ ನಿರ್ವಹಿಸಿದ್ದನ್ನು ಚಕ್ಕಲೂರ ಶಾಸನದಿಂದ ತಿಳಿಯುತ್ತೇವೆ. ಇವನಿಗೆ ಪತ್ನಿ ಹಾಗೂ ಮಕ್ಕಳಿರುವುದು ಈ ಶಾಸನವು ತಿಳಿಸುತ್ತದಾದರೂ ಅವರ ವ್ಯಕ್ತಿನಾಮಗಳನ್ನು ಪ್ರಸ್ತಾಪಿಸುವುದಿಲ್ಲ. ಅದರಂತೆ ಹಿರಿಯ



ವರದರಾಜಯ್ಯ, ಕೆಂಚ ಸೋಮಣ್ಣನಾಯಕರ ಪುತ್ರಪೌತ್ರರ ಮಾಹಿತಿಗಳೂ ಅಲಭ್ಯವಾಗುತ್ತವೆ. ಬಹುಶಃ ೧೫೨೮-೩೩ರ ಸುಮಾರಿಗೆ ದೇವರಾಯಪಟ್ಟಣ ತಿಮ್ಮಣ್ಣೊಡೆಯನ ಮಗ ಕೆಂಚಸೋಮಣ್ಣ ನಾಯಕನ ಪ್ರಭಾವ ಇಲ್ಲಿ ಕುಂಠಿತವಾಗುತ್ತದೆ. ಇದಕ್ಕೆ ವಿಜಯನಗರ ದೊರೆಗಳಿಂದ ಪಾಳೆಯಪಟ್ಟುಗಳ ವಿಲೀನ ಪ್ರಕ್ರಿಯೆ ಅಥವಾ ಸ್ಥಳೀಯ ಪಾಳೆಯಗಾರರಲ್ಲಿದ್ದ ಪರಸ್ಪರ ದ್ವೇಷಾಸೂಯೆ, ಅಧಿಕಾರ ಲಾಲಸೆ, ವಿಸ್ತರಣಾಕಾಂಕ್ಷೆಗಳು ಕಾರಣವಾಗಿರಬಹುದು. ಮುಂದಿನ ದಿನಗಳಲ್ಲಿ ರಣದುಲ್ಲಾಖಾನನ ದಕ್ಷಿಣದ ದಂಡಯಾತ್ರೆಯ ಪರಿಣಾಮವಾಗಿ ಸಿಕ್ಕ ಹಳ್ಳಿ-ಪಟ್ಟಣಗಳನ್ನು ಲೂಟಿ ಮಾಡಿದನು. ಇದರ ಪರಿಣಾಮವಾಗಿ ದೊಡ್ಡಬಳ್ಳಾಪುರ, ಶಿರಾ, ತುಮಕೂರು, ಕುಣಿಗಲ್, ಚಿಕ್ಕನಾಯಕನಹಳ್ಳಿ ಮತ್ತು ರಾಮಗಿರಿದುರ್ಗಗಳು ಷಹಜಿಯ ಆಡಳಿತಕ್ಕೊಳಪಟ್ಟವು. ಈ ಘಟನೆಯನ್ನು ವಿವರಿಸುವ ಗೋವಿಂದವೈದ್ಯ ಕೃತ 'ಕಂಠೀರವ ನರಸರಾಜ ವಿಜಯ' ಕಾವ್ಯದ ಸಾಲುಗಳಲ್ಲಿ ದಾಖಲಿಸಿರುವುದನ್ನು ಕಾಣಬಹುದು.[೨೩]

ಅಡಿಟಿಪ್ಪಣಿಗಳು

೧. ೧೯೮೧, ಸಿದ್ಧಗಂಗಾ ಶ್ರೀ, ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು ಜಿಲ್ಲೆ, ಪುಟ ೬.
೨. ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ; ಮೈಸೂರು, ಪು. ೨೫.
೩. ಅದೇ, ಪು. ೩೨೩, ೩೨೪.
೪. ರೈಸ್ ಬಿ.ಎಲ್., ೧೯೦೪, ಎಪಿಗ್ರಾಫಿಯಾ ಕರ್ಣಾಟಿಕಾ-೧೨, ತುಮಕೂರು ಜಿಲ್ಲೆ, ಮಧುಗಿರಿ-೩೫, ಹುಲಿಕುಂಟೆ, ಸಾ.ಶ. ೧೪೯೬.
೫. ನಾಗಭೂಷಣ ಸಿ., ೨೦೦೨, ತುಮಕೂರು ಜಿಲ್ಲೆಯ ಸಾಹಿತ್ಯ ಪರಂಪರೆ, ಜಯಮಂಗಲ, ಅಖಿಲ ಭಾರತ ೬೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ತುಮಕೂರು, ಪುಟ ೬೯.
೬ ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ಣಾಟಿಕಾ, ಸಂ. ೯, ಬೆಂಗಳೂರು ಜಿಲ್ಲೆ, ಚನ್ನಪಟ್ಟಣ-೧೫೬, ಹೊಟ್ಟೆಗನ ಹೊಸಹಳ್ಳಿ.
೭. ಅದೇ, ಬೆಂಗಳೂರು-೧೯, ಚಿಕ್ಕಬೆಟ್ಟಹಳ್ಳಿ, ಸಾ.ಶ. ೧೫೨೪.
೮. ಅದೇ, ಚನ್ನಪಟ್ಟಣ-೧೫೮, ಚಕ್ಕಲೂರು, ಸಾ.ಶ. ೧೪೭೮?
೯. ಬೆಂಗಳೂರು ಪೂರ್ವ ತಾಲ್ಲೂಕು ಕೇಂದ್ರವಾದ ಕೃಷ್ಣರಾಜಪುರದ ಈಶಾನ್ಯಕ್ಕೆ ಮಹಾಬಲೇಶ್ವರ ದೇವಾಲಯ ಸಮುಚ್ಚಯದ ಪಕ್ಕದಲ್ಲಿರುವ ಕೆರೆಯನ್ನು 'ವೆಂಗಯ್ಯನಕೆರೆ' ಎಂದು ಹೇಳಲಾಗುತ್ತದೆ.
೧೦. ಎ.ಕ. ೯ (ಸಪ್ಲಿಮೆಂಟರಿ), ನೆಲಮಂಗಲ ೧೮೫.
೧೧. ಬೆಂಗಳೂರು ಇತಿಹಾಸ ವೈಭವ-ಸಿಂಗಾಪುರ; ಸಂಚಿಕೆ-೧, ನವೆಂಬರ್ ೨೦೨೧, ದಿ ಮಿಥಿಕ್ ಸೊಸೈಟಿ ಬೆಂಗಳೂರು, ಪುಟ ೪೭.
೧೨. ಎ.ಕ. ೯, ಚನ್ನಪಟ್ಟಣ-೧೫೮, ಚಕ್ಕಲೂರು, ಸಾ.ಶಿ.(೧೪೭೮?) ೧೪೯೦-೧೫೦೦.
೧೩. ಚೀಲೂರು (ಕನಕಪುರ ತಾಲ್ಲೂಕು) ಗ್ರಾಮದಲ್ಲಿ ಎಮ್ಮೆಸಂದಿಯ ಬೀರಪ್ಪಯ್ಯನೆಂಬ ಶರಣನಿದ್ದನೆಂದು ಶಿವತತ್ವ ಚಿಂತಾಮಣಿಯ ೧೧೭ನೆಯ ಪದ್ಯದಲ್ಲಿ ಉಲ್ಲೇಖಿಸಲಾಗಿದೆ.
೧೪. ಚನ್ನಪಟ್ಟಣದಲ್ಲಿ ಮಲ್ಲಣ್ಣನೆಂಬ ಶರಣನಿದ್ದುದನ್ನು ಶಿವತತ್ವ ಚಿಂತಾಮಣಿಯ ೭೧ನೆಯ ಪದ್ಯದಲ್ಲಿ ಹೇಳಲಾಗಿದೆ.
೧೫. ಮಂಜುನಾಥ ಎಂ.ಕೆ., ಚನ್ನಪಟ್ಟಣ ತಾಲ್ಲೂಕಿನ ಶಾಸನಗಳು, ಎಸ್.ಎಲ್.ಎನ್. ಪಬ್ಲಿಕೇಷನ್, ಬನಶಂಕರಿ ೨ನೆಯ ಹಂತ, ಬೆಂಗಳೂರು, ಪುಟ-೧೨೪-೧೨೫.
೧೬. ರೈಸ್ ಬಿ.ಎಲ್., ೧೯೦೫, ಎಪಿಗ್ರಾಫಿಯಾ ಕರ್ಣಾಟಿಕಾ-೧೦, ಕೋಲಾರ ಜಿಲ್ಲೆ, ಚಿಂತಾಮಣಿ-೩೯, ಉಳುವಾಡಿ, ಸಾ.ಶ.೧೪೦೭.
೧೭. ಎಪಿಗ್ರಾಫಿಯಾ ಕರ್ಣಾಟಿಕಾ-೧೧, ಚಿಕ್ಕಮಗಳೂರು ಜಿಲ್ಲೆ, ಮೈಸೂರು ವಿ.ವಿ., ೧೯೭೮, ಮೂಡಗೆರೆ-೪೮, ಕಳಸ, ಸಾ.ಶ. ೧೫೧೬.
೧೮. ಎ.ಕ. ೯ (ಸಪ್ಲಿಮೆಂಟರಿ), ನೆಲಮಂಗಲ ೧೮೨, ಕುಲವನಹಳ್ಳಿ, ಸಾ.ಶ. ೧೫೦೫?
೧೯. ರಾಜಶೇಖರಪ್ಪ ಬಿ., ೨೦೦೯, ತುಮಕೂರು ಜಿಲ್ಲೆಯ ಕೆಲವು ಹೊಸ ಶಾಸನಗಳು, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಶಿರಾ ಗೇಟ್, ಸಾ.ಶ. ೧೫೧೨, ಪು. ೨೧-೨೨.
೨೦. ಅದೇ, ಬಟವಾಡಿ ಸಾ.ಶ.೧೫೧೩, ಪುಟ-೨೪-೨೫. ಸಾ.ಶ.೧೬೨೮ರ ಯತಿ ಬಸವಲಿಂಗೇಶನ ತೋಂಟದ ಸಿದ್ದೇಶ್ವರ ಸಾಂಗತ್ಯದಲ್ಲಿ ರಾಮೇಶ್ವರ ದೇವಾಲಯವನ್ನು 'ಸಿಡಿಕಲ್ಲು ಬೆಟ್ಟದ ರಾಮೇಶ್ವರನ ಗುಡಿ' ಎನ್ನಲಾಗಿದೆ.
೨೧. ರೈಸ್ ಬಿ.ಎಲ್., ೧೯೦೫, ಎ.ಕ. ೯, ನೆಲಮಂಗಲ-೮೮, ಶಿವಗಂಗೆ ಬೆಟ್ಟ, ಸಾ.ಶ.೧೧೨೦. ಈ ಶಾಸನವು ಕೆಂಚಸೋಮಣ್ಣನದಾಗಿದ್ದು, ಇದರ ಸರಿಯಾದ ಕಾಲಮಾನ ಸಾ.ಶ. ೧೫೨೮-೨೯ ಎಂಬುದನ್ನು ಗಮನಿಸಬೇಕಾಗಿದೆ.
೨೨. ವಿದ್ಯಾಶಂಕರ ಎಸ್., ರಾಜಪ್ಪ ಆರ್., (ಸಂ.), ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರ ಪುರಾಣ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಸಂಧಿ-೧೪, ಪು. ೩೨೫, ೩೨೬.
೨೩. ಶಾಮಶಾಸ್ತ್ರಿ ಆರ್., (ಸಂ.), ೧೯೭೧, ಗೋವಿಂದವೈದ್ಯ ಕೃತ ಕಂಠೀರವ ನರಸರಾಜವಿಜಯ, ಮೈಸೂರು ವಿಶ್ವವಿದ್ಯಾನಿಲಯ, ಪು. ೨೦೮.

◆◆

೬೧

ಪ್ರಸನ್ನಕುಮಾರ್ ಎಸ್.ಆರ್.

ಗುಬ್ಬಿ ತಾಲ್ಲೂಕಿನ ಬಿಡಿಶಿಲ್ಪಗಳು

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಪ್ರಮುಖ ಐತಿಹಾಸಿಕ ಹಾಗೂ ವ್ಯಾಪಾರಿ ಕೇಂದ್ರವಾಗಿದೆ. ಈ ತಾಲ್ಲೂಕು ಹಲವು ಐತಿಹಾಸಿಕ ಸ್ಮಾರಕಗಳು ಹಾಗು ಶಿಲ್ಪಗಳ ನೆಲೆನಾಡಾಗಿದೆ. ಈ ಪ್ರದೇಶದಲ್ಲಿ ಇದುವರೆಗೆ ನಡೆಸಿರುವ ಕ್ಷೇತ್ರಕಾರ್ಯದಲ್ಲಿ ಹಲವಾರು ಬಿಡಿಶಿಲ್ಪಗಳು ಪತ್ತೆಯಾಗಿವೆ. ಈ ಶಿಲ್ಪಗಳು ಪ್ರಸ್ತುತ ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸವನ್ನು ಶ್ರೀಮಂತಗೊಳಿಸಲು ನೆರವಾಗುತ್ತಿವೆ. ಈ ಬಿಡಿಶಿಲ್ಪಗಳನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ದಕ್ಷಿಣ ಕರ್ನಾಟಕದ ಪ್ರಾಚೀನ ಆಡಳಿತ ಕೇಂದ್ರಗಳಲ್ಲೊಂದಾದ ಮಗರೆ-೩೦೦ ಪ್ರಮುಖ ನಾಡಾಗಿತ್ತು. ಈ ನಾಡಿನ ವ್ಯಾಪ್ತಿಯ ಐತಿಹಾಸಿಕ ಸ್ಥಳಗಳಲ್ಲಿ ಇಂದಿಗೂ ಹಲವಾರು ಪ್ರಾಚ್ಯಕುರುಹುಗಳು ದೊರೆಯುತ್ತಿದ್ದು ಅವುಗಳಲ್ಲಿ ಬಿಡಿಶಿಲ್ಪಗಳು ಗಣನೀಯವಾಗಿವೆ. ಸ್ಥಳೀಯ ಚಾರಿತ್ರಿಕ ಅಧ್ಯಯನಕ್ಕೆ ಇವುಗಳು ಪ್ರಮುಖ ಆಕರಗಳಾಗಿವೆ. ಪ್ರಾಚೀನ ಆಡಳಿತ ವಿಭಾಗಗಳಾದ ಮಗರೆ-೩೦೦ ನಾಡನ್ನೂ ಒಳಗೊಂಡಂತೆ ಸೀರೆನಾಡು, ಹೆರುಹೆ ನಾಡಿನ ಭಾಗವಾದ ಇಂದಿನ ಗುಬ್ಬಿತಾಲ್ಲೂಕಿನಲ್ಲಿ ನವಶೋಧನೆಯ ಮೂಲಕ ಕಂಡುಬಂದಿರುವ ಮುಕ್ತಶಿಲ್ಪಗಳ ಮೂಲಕ ಆ ಪ್ರದೇಶದ ಸಾಂಸ್ಕೃತಿಕ ಮಹತ್ವ ತಿಳಿಯಬೇಕಿದೆ.

ಈ ಲೇಖನದಲ್ಲಿ ಚರ್ಚೆಗೆ ಒಳಪಡಿಸಿರುವ ಶಿಲ್ಪಗಳು ಯಾವುದೇ ದೇವಾಲಯ ಅಥವಾ ಇನ್ನಾವುದೇ ಬಗೆಯ ಸ್ಮಾರಕದೊಂದಿಗೆ ಕಂಡುಬಂದಿಲ್ಲ. ಸ್ವತಂತ್ರವಾಗಿ ಅಲ್ಲಲ್ಲಿ ಕಂಡುಬಂದಿರುವ ಈ ಶಿಲ್ಪಗಳು ಹಾಗೂ ಧಾರ್ಮಿಕ ಸಾಂಕೇತಿಕ ಕುರುಹುಗಳು ಒಂದು ಕಾಲದಲ್ಲಿ ದೇವಾಲಯದ ಭಾಗಗಳಾಗಿದ್ದವು ಎನ್ನುವುದು ಮೇಲುನೋಟಕ್ಕೇ ತಿಳಿದುಬರುತ್ತದೆ. ಆಶ್ಚರ್ಯವೆಂದರೆ, ಈ ಶಿಲ್ಪಗಳು ಕಂಡುಬಂದಿರುವ ಸ್ಥಳಗಳಲ್ಲಿ ಯಾವುದೇ ದೇವಾಲಯ ಇದ್ದ ಕುರುಹು ದೊರಕುವುದಿಲ್ಲ.

ಗುಬ್ಬಿ ತಾಲೂಕಿನ ಐತಿಹಾಸಿಕ ಪ್ರದೇಶಗಳಲ್ಲಿ ಸಂಶೋಧನೆಯನ್ನು ಕೈಗೊಂಡ ನಂತರ ೪೨ ಬಿಡಿಶಿಲ್ಪಗಳನ್ನು ಪತ್ತೆಹಚ್ಚಲಾಗಿದೆ. ಇವು ಕ್ರಿ.ಶ. ೧೦ನೇ ಶತಮಾನದಿಂದ ೧೮ನೇ ಶತಮಾನದವರೆಗಿನ ವಿವಿಧ ಕಾಲಘಟ್ಟಕ್ಕೆ ಸೇರಿದ್ದಾಗಿವೆ ಎನ್ನುವುದನ್ನು ಅವುಗಳ ಸ್ವರೂಪ, ರಚನೆ ಮೊದಲಾದ ಬಾಹ್ಯ ಆಧಾರಗಳಿಂದ ಗುರುತಿಸಬಹುದಾಗಿದೆ. ಇದರೊಂದಿಗೆ ಕಂಡುಬಂದಿರುವ ಕಲ್ಮನೆಯೊಂದು ಬೃಹತ್‌ಶಿಲಾಯುಗದ ಕಾಲದ್ದಾಗಿದ್ದು, ಈ ಪ್ರದೇಶದಲ್ಲಿನ ಜನವಸತಿಯು ಎಷ್ಟು ಪ್ರಾಚೀನ ಕಾಲದಿಂದ ಇತ್ತು ಎನ್ನುವುದಕ್ಕೆ ಇದು ಪ್ರಮುಖ ಆಧಾರವಾಗಿದೆ. ಕ್ಷೇತ್ರಕಾರ್ಯದಲ್ಲಿ ಗಮನಿಸಲಾದ ಶಿಲ್ಪಗಳ ವಿಚಾರವು ಈ ಕೆಳಗಿನಂತಿದ್ದು, ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಲೇಖನದ ಪರಿಮಿತಿಯೊಳಗೆ ಚರ್ಚಿಸಲಾಗಿದೆ.

ಐ.ಸಿ.ಹೆಚ್.ಆರ್.
ಪೋಸ್ಟ್ ಡಾಕ್ಟರಲ್ ಫೆಲೊ
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ಮತ್ತು
ಸಂಶೋಧನಾ ವಿಭಾಗ
ತುಮಕೂರು
ಮೊ: ೯೦೩೬೭ ೨೨೪೯೧



ಅಂಕಲಕೊಪ್ಪ ಸಂತನ ಶಿಲ್ಪ



ಉದ್ದೆಹೊಸಕೆರೆಯ ಸಪ್ತಮಾತೃಕೆಯರು

ಬೆಲವತ್ತದ ಸೂರ್ಯ, ಅಳಿಲುಘಟ್ಟದಲ್ಲಿ ದೊರಕಿದ ವಿಷ್ಣುಶಿಲ್ಪ, ಅಂಕಲಕೊಪ್ಪದಲ್ಲಿ ಕಂಡುಬಂದ ಕಾಳಮುಖ ಸಂತ, ಅಂಕಸಂದ್ರದ ವಿಶೇಷ ಮಂಡಲಶಿಲ್ಪ, ವಿಷ್ಣುದೇವಾಲಯದ ಅವಶೇಷವಾದ ವೈಷ್ಣವ ದ್ವಾರಪಾಲಕರು, ಬೆಲವತ್ತದ ಗ್ರಾಮದೇವತೆ ಬಿಸಿಲು ಮಾರಮ್ಮ, ಕೆ. ರಾಂಪುರದಲ್ಲಿನ ಪುರುಷ ಮತ್ತು ಸರ್ಪಶಿಲ್ಪ, ಕೊಣನಕಲ್ಲಿನ ವಿಷ್ಣುಶಿಲ್ಪ, ಇದೇ ಊರಿನಲ್ಲಿ ದೇವಾಲಯಕ್ಕೆ ನೀಡಿದ ಭೂದಾನದ ಮೇರೆ ತಿಳಿಸುವ ವಾಮನಮುದ್ರೆಕಲ್ಲು, ಇಲ್ಲಿ ಶಿವಾಲಯವೂ ಇತ್ತೆಂದು ತಿಳಿಸುವ ಶಿವಲಿಂಗ, ಮಾವಿನಹಳ್ಳಿಯ ಮಹಿಷಾಸುರ ಮರ್ದಿನಿ ವಿಗ್ರಹ, ಪೆದ್ದನಹಳ್ಳಿಯಲ್ಲಿ ದೊರಕಿರುವ ಪಂಚಶಿವಲಿಂಗ ಪೀಠಗಳು, ಪಿನ್ನೇನಹಳ್ಳಿಯಲ್ಲಿಯೂ ವೈಷ್ಣವ ದೇವಾಲಯವಿತ್ತೆನ್ನುವ ಕುರುಹನ್ನು ತಿಳಿಸುವ ವಾಮನಮುದ್ರೆಕಲ್ಲು, ಪುರದಲ್ಲಿನ ಪ್ರಾಚೀನ ಶಿವ ದೇವಾಲಯದ ಕುರುಹಾಗಿ ಶಿವಲಿಂಗ, ನಂದಿ, ಸೋಪನಹಳ್ಳಿಯಲ್ಲಿ ಶಿವಾಲಯಕ್ಕೆ ದಾನ ನೀಡಿರುವ ಕುರುಹಾಗಿ ಲಿಂಗಮುದ್ರೆ ಕಲ್ಲು, ಇದೇ ರೀತಿ ಉಂಗ್ರ ಕೋಣನಕಲ್ಲುಗಳಲ್ಲಿಯೂ ಪ್ರಾಚೀನ ಶಿವಾಲಯಗಳಿತ್ತು ಎನ್ನುವುದನ್ನು ಸಾರುತ್ತಿರುವ ನಂದಿ ಸ್ಥಂಭಗಳಳನ್ನು ಕಾಣಬಹುದು. ಹಾಗಲವಾಡಿಯೂ ಕೂಡ ಶೈವ ಆರಾಧನಾ ಕೇಂದ್ರವಾಗಿತ್ತೆನ್ನುವುದಕ್ಕೆ ಅಲ್ಲಿ ದೊರಕಿರುವ ನಂದಿ, ಗಣಪತಿ, ಶಿವಲಿಂಗ, ವೀರಭದ್ರಶಿಲ್ಪಗಳು ತಿಳಿಸುತ್ತವೆ. ಬಿದಿರೆಯು ಒಂದು ಕಾಲದ ಸರ್ವಧರ್ಮ ಸಮನ್ವಯ ಕೇಂದ್ರವಾಗಿತ್ತೆನ್ನುವುದಕ್ಕೆ ನಂದಿ, ಸಪ್ತಮಾತೃಕಾಶಿಲ್ಪ, ಗಣೇಶಮೂರ್ತಿ, ತ್ರಿಮೂರ್ತಿ ಶಿಲ್ಪ, ಜೊತೆಗೆ ಜೈನ ಪಾರ್ಶ್ವನಾಥ ಶಿಲ್ಪವೂ ದೊರೆಕಿದೆ. ಸೋಮಲಾಪುರದಲ್ಲಿ ಸೂರ್ಯ ಆರಾಧನೆ ಇತ್ತು ಎನ್ನುವುದನ್ನು ತಿಳಿಸುವ ಸೂರ್ಯನ ಶಿಲ್ಪ, ಉದ್ದೇಹೊಸಕೆರೆ ಪ್ರಾಚೀನ ಶಾಕ್ತ ಆರಾಧನಾ ಕೇಂದ್ರವಾಗಿದ್ದಿರ ಸಂಕೇತಿಕವಾಗಿ ಸಪ್ತಮಾತೃಕಶಿಲ್ಪ. ಇವುಗಳಲ್ಲದೆ ಕೊಡಿಯಾಲದಲ್ಲಿ ದೊರೆತಿರುವ ವಿಶೇಷ ಸ್ತ್ರೀಶಿಲ್ಪವನ್ನು ಕುರಿತು ಹಿಂದೆ ಇತಿಹಾಸ ಅಕಾದೆಮಿಯಲ್ಲಿ ಪ್ರತ್ಯೇಕ ಪತ್ರಿಕೆಯಲ್ಲಿ ಚರ್ಚಿಸಲಾಗಿದ್ದನ್ನೂ ಇಲ್ಲಿ ಸೇರಿಸಬಹುದಾಗಿದೆ. ಇವುಗಳೊಂದಿಗೆ ಈ ಪಟ್ಟಿಯಲ್ಲಿ ಸೇರಿಸಿಲ್ಲದ ಹಲವು ಭಗ್ನಗೊಂಡಿರುವ ಶಿಲ್ಪಗಳು, ಅರ್ಥೈಸಲಾಗದ ಶಿಲ್ಪಗಳು, ವಿಶೇಷವಾಗಿ ಚರ್ಚೆಗೆ ಒಳಪಡಿಸಬೇಕಾದ ಶಿಲ್ಪಗಳಿವೆ. ಅವುಗಳಲ್ಲಿ ಒಂದೆರಡು ಶಿಲ್ಪಗಳ ವಿಶೇಷ ವಿಚಾರಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಬಿದರೆ ಮಹಾಗಣಪತಿ: ಬಿದರೆಯ ಕಲ್ಲೇಶ್ವರ ದೇವಾಲಯದಲ್ಲಿರುವ ಗಣಪತಿ ಶಿಲ್ಪವು ಶಿಲ್ಪಶಾಸ್ತ್ರದಲ್ಲಿ ಉಲ್ಲೇಖಿಸಿರುವ ರಚನೆಯ ಆಧಾರದ ಮೇಲೆ ಮಹಾಗಣಪತಿ ಶಿಲ್ಪವೆಂದು ಗುರ್ತಿಸಲಾಗಿದೆ. ಈ ಶಿಲ್ಪವು ಗ್ರಾಮದ ಖಾಸಗಿ ಜಮೀನಿನಲ್ಲಿ ಪಾಯ ತೆಗೆಯುತ್ತಿದ್ದಾಗ ಪತ್ತೆಯಾಗಿದ್ದು ಪ್ರಸ್ತುತ ದೇವಾಲಯದಲ್ಲಿ ಸುರಕ್ಷಿತವಾಗಿದೆ. ಈ ಶಿಲ್ಪವು ೨೮ ಇಂಚು ಎತ್ತರ ಹಾಗು ೨೦ ಇಂಚು ಅಗಲವಾಗಿದ್ದು ಬಸಾಲ್ಟ್ ಕಲ್ಲಿನಿಂದ ಮಾಡಲಾಗಿದೆ. ಶಿಲ್ಪದ ಪ್ರಮುಖ ಲಕ್ಷಣಗಳೆಂದರೆ, ಹತ್ತು ಕೈಗಳನ್ನು ಹೊಂದಿದ್ದು ಎಡತೊಡೆಯ ಮೇಲೆ ಶಕ್ತಿಯು ಆಸೀನಳಾಗಿದ್ದು ಕೈಯಲ್ಲಿ ಕಮಲವನ್ನು ಹಿಡಿದಿರುತ್ತಾಳೆ. ಶಿಲ್ಪವು ಪ್ರಭಾವಳಿ ಹಾಗೂ ಕೀರ್ತಿಮುಖಗಳಿಂದ ಕೂಡಿದ್ದು ಪುಷ್ಪಾಲಂಕಾರಗಳೊಂದಿಗೆ ರಚಿಸಲ್ಪಟ್ಟಿದೆ. ರಚನಾಶೈಲಿಯಿಂದ ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿರಬಹುದೆಂದು ಊಹಿಸಲಾಗಿದೆ.

ಬಿದರೆ ದೇವತೆ ಮತ್ತು ಸಪ್ತಮಾತೃಕ ಶಿಲ್ಪಗಳು: ಬಿದರೆ ಗ್ರಾಮದ ಕೆರೆ ಏರಿಯಲ್ಲಿದ್ದ ಪುರಾತನ ಗ್ರಾಮದೇವತೆಯ ದೇವಾಲಯವು ಶಿಥಿಲವಾಗಿದ್ದರಿಂದ ಗ್ರಾಮಸ್ಥರು ಅಲ್ಲಿ ಹೊಸ ದೇವಾಲಯ ನಿರ್ಮಿಸಲು ಶಿಥಿಲವಾಗಿದ್ದ ದೇವಾಲಯದ ಅವಶೇಷಗಳನ್ನು ತೆರವುಗೊಳಿಸುತ್ತಿದ್ದಾಗ, ಒಂದು ತ್ರಿಮೂರ್ತಿಗಳನ್ನೊಳಗೊಂಡ ದೇವಿಯ ಶಿಲ್ಪ ಹಾಗು ಸಪ್ತಮಾತೃಕೆಯರ

ಶಿಲ್ಪದ ಪಟ್ಟಿಕೆ ದೊರೆತಿದೆ. ಇದು ೩೧ ಇಂಚು ಅಗಲ, ೩೩ ಇಂಚು ಎತ್ತರ ಹಾಗು ೩ ಇಂಚು ದಪ್ಪವಾಗಿದೆ. ಈ ಶಿಲ್ಪವು ಮೂರು ಸ್ಥರಗಳಿಂದ ಕೂಡಿದ್ದು ಕೆಳಗಿನ ಸ್ಥರದಲ್ಲಿ ದೇವಿಯು ಆಸನದ ಮೇಲೆ ಕುಳಿತಿದ್ದು, ಅವಳ ಇಕ್ಕೆಲಗಳಲ್ಲಿ ತಲಾ ಮೂವರು ಚಾಮರಧಾರಿಣಿಯರನ್ನು ಕೆತ್ತಲಾಗಿದೆ. ದೇವಿಯು ಕೈಯಲ್ಲಿ ಕಮಲ ಹಾಗು ಕಳಶ ಹಿಡಿದಿದ್ದಾಳೆ. ಮಧ್ಯದ ಸ್ಥರದಲ್ಲಿ ತ್ರಿಮೂರ್ತಿಗಳ ಶಿಲ್ಪ ಬಿಡಿಸಲಾಗಿದ್ದು, ವಿಷ್ಣುವು ಗೋಪಾಲ ಕೃಷ್ಣನ ರೂಪದಲ್ಲು, ಶಿವ-ಪಾರ್ವತಿಯರು ನಂದಿಯ ಮೇಲೆ ಆಸೀನರಾಗಿರುವಂತೆ ಹಾಗೂ ಬ್ರಹ್ಮ-ಸರಸ್ವತಿಯು ಹಂಸದ ಮೇಲೆ ಕುಳಿತಿರುವಂತೆ ರಚಿಸಲಾಗಿದೆ. ಇದರ ಮೇಲಿನ ಸ್ಥರದಲ್ಲಿ ಕೀರ್ತಿಮುಖ, ಶಿವಲಿಂಗ ಹಾಗು ನಂದಿಯನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ರಚನಾ ಶೈಲಿಯು ಹೊಯ್ಸಳ ಕಾಲಕ್ಕೆ ಸೇರುತ್ತದೆ. ಇದೇ ಸಂದರ್ಭದಲ್ಲಿ ಪತ್ತೆಯಾದ ಸಪ್ತಮಾತೃಕೆಯರ ಶಿಲ್ಪವು ಕಣಶಿಲೆಯಿಂದ ತಯಾರಿಸಲ್ಪಟ್ಟಿದ್ದು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟಕ್ಕೆ ಸೇರಿರುವ ಸಾಧ್ಯತೆ ಇದೆ. ಈ ಶಿಲ್ಪವು ೭೪ ಇಂಚು ಅಗಲ, ೧೯ ಇಂಚು ಎತ್ತರ, ಹಾಗು ೭ ಇಂಚು ದಪ್ಪವಾಗಿದ್ದು, ಮಾತೃಕೆಯರ ರೂಪವನ್ನು ಗುರುತಿಸುವುದು ಕಷ್ಟಸಾಧ್ಯವಾಗಿದೆ.



ಬಿದರೆ ಮಹಾಗಣಪತಿ

ನಂದಿ ಶಿಲ್ಪ: ತಾಲ್ಲೋಕಿನ ಕೊಡಿಯಾಲಗ್ರಾಮದ ಈಶ್ವರದೇವಾಲಯದ ಆವರಣದಲ್ಲಿರುವ ನಂದಿ ಶಿಲ್ಪವು ಲಕ್ಷಣದ ಆಧಾರದ ಮೇಲೆ ೧೫ನೇ ಶತಮಾನದ್ದಾಗಿರ ಬಹುದು. ಜೊತೆಗೆ ಇಲ್ಲಿ ಪತ್ತೆಯಾಗಿರುವ ಒಂದನೆಯ ದೇವರಾಯನ ಕಾಲದ ಶಾಸನವು ಇದಕ್ಕೆ ಪುಷ್ಠಿಯನ್ನು ನೀಡುತ್ತದೆ. ಈ ಶಿಲ್ಪವು ಎರಡೂವರೆ ಅಡಿ ಎತ್ತರ ಹಾಗೂ ಮೂರೂವರೆ ಅಡಿ ಉದ್ದವಾಗಿದ್ದು, ಕಪ್ಪುಶಿಲೆಯಲ್ಲಿ ಅತ್ಯಂತ ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತಗೊಂಡಿದೆ. ಇಲ್ಲಿ ದೊರೆತಿರುವ ಶಿಲ್ಪಗಳು ಹಿಂದೊಮ್ಮೆ ಈ ಪ್ರದೇಶದಲ್ಲಿ ಹಲವಾರು ದೇವಾಲಯಗಳು ಇದ್ದುದರ ಕುರುಹನ್ನು ತಿಳಿಸುತ್ತವೆ. ಇಂದಿಗೆ ನಷ್ಟವಾಗಿರುವ ಆ ದೇವಾಲಯಗಳ ಸಮಗ್ರ ಮಾಹಿತಿ ದೊರಕದಿದ್ದರೂ, ಒಂದೊಮ್ಮೆ ಸಾಂಸ್ಕೃತಿಕ ಹೆಮ್ಮೆಯಿಂದ ಮೆರೆದ ನಾಡಾಗಿದ್ದುದರ ಪಳೆಯುಳಿಕೆಯಾಗಿ ಈ ಬಿಡಿಶಿಲ್ಪಗಳು ಅಲ್ಲಲ್ಲಿ ಚದುರಿ ಹಲವಾರು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯೋ ಎಂಬಂತೆ ಕಂಡುಬರುತ್ತವೆ. ಈ ಶಿಲ್ಪಗಳನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿ ಪ್ರತಿಯೊಂದನ್ನು ದೀರ್ಘವಾಗಿ ವಿಶ್ಲೇಷಿಸುವ ಅಗತ್ಯವಿದೆ.

ಆಕರಗ್ರಂಥಗಳು

೧. ಕಿನ್ಸ್ಲೆ ಡಿ., ೧೯೮೮, ಹಿಂದೂ ಗಾಡೆಸಸ್: ವಿಷನ್ಆಫ್ ದಿ ಡಿವೈನ್ ಫೆಮೈನ್ ಇನ್ ದಿ ಹಿಂದೂ ರಿಲಿಜಿಯಸ್ ಟ್ರೆಡಿಷನ್, ಲಂಡನ್ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯ ಪ್ರೆಸ್.

೨. ಗುಪ್ತೆ ಆರ್.ಎಸ್., ೧೯೭೨, ಐಕನೊಗ್ರಫಿ ಆಫ್ ದಿ ಹಿಂದೂಸ್, ಬುದ್ದಿಸ್ಟ್ಸ್, ಜೈನ್ಸ್, ಬಾಂಬೆ: ಡಿ.ಬಿ. ತರಪೊರೆವಾಲ ಸನ್ಸ್ & ಕೊ. ಪ್ರೈ.ಲಿ.

೩. ಹ್ಯಾವೆಲ್ ಇ.ಬಿ., ೧೮೬೮, ಐಡಿಯಲ್ಸ್ ಆಫ್ ಇಂಡಿಯನ್ ಆರ್ಟ್, ನ್ಯೂಯಾರ್ಕ್: ಇ ಪಿ ಡುಟ್ಟೋನ್& ಕಂಪನಿ.

೪. ಪಾವಟೆ ಸಿ., ೧೯೯೪, ಮಹಾನಾಡ ಪ್ರಭುಗಳು, ಸಾರಂಗ ಶ್ರೀ ವೀರಶೈವ ಅರಸುಮನೆತನಗಳ ಅಧ್ಯಯನ, ಸಿಂದಗಿ, ೧೩೪-೧೩೯.

೫. ರಾವ್ ಟಿ.ಎ.ಜಿ., ೧೯೧೪, ಎಲಿಮೆಂಟ್ಸ್ ಆಫ್ ಹಿಂದೂ ಐಕನೊಗ್ರಫಿ ವಾಲ್ಯೂಂ-೧, ಪಾರ್ಟ್-೧, ಮದ್ರಾಸ್: ದಿ ಲಾ ಪ್ರಿಂಟಿಂಗ್ ಹೌಸ್.

೬ ಅದೇ., ೧೯೧೬, ವಾಲ್ಯೂಂ-೨.

೭. ಪ್ರಸನ್ನಕುಮಾರ್ ಎಸ್.ಆರ್., ೨೦೨೦, ಎ ಸ್ಟಡಿ ಆಫ್ ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಗುಬ್ಬಿ ತಾಲ್ಲೋಕ್: ತುಮಕೂರು ವಿಶ್ವವಿದ್ಯಾಲಯದ ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ.

◆◆

ಕೆಳದಿ ವೆಂಕಟೇಶ್ ಜೋಯಿಸ್

ಚಿತ್ರಕಲಾವಿದ ಸಾಗರ ಕವಿ ಲಿಂಗಣ್ಣಯ್ಯ

ಸಾಗರ ಕವಿ ಲಿಂಗಣ್ಣಯ್ಯ ಕುರಿತು ೧೯೨೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಆರ್. ಶಾಮಾಶಾಸ್ತ್ರಿ ಸಂಪಾದಿತ ಕೆಳದಿ ನೃಪವಿಜಯದಲ್ಲಿ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು ಉಪೋದ್ಘಾತದಲ್ಲಿ ಉಲ್ಲೇಖಿಸಿದ್ದಾರೆ. ಕೆಳದಿ ಅರಸರ ಆಸ್ಥಾನ ಚರಿತ್ರೆಗಾರ ಲಿಂಗಣ್ಣ ಕವಿಯ ಪೀಳಿಗೆಗೆ ಸೇರಿದ ಕವಿ ಕೃಷ್ಣಪ್ಪನವರಿಂದ ೧೯೧೮-೧೯ರಲ್ಲಿ ಮಲೆನಾಡು ಸಮಾಚಾರ ಪತ್ರಿಕೆ[೧]ಯಲ್ಲಿ 'ಕೆಳದಿ ಸಂಸ್ಥಾನದ ಚರಿತ್ರೆ' ಪ್ರಕಟವಾಗಿದ್ದುದನ್ನು ತಿಳಿಸಿದ್ದಾರೆ. ಸಾಗರ ಕವಿ ಲಿಂಗಣ್ಣಯ್ಯನವರು ಈ ವಂಶಕ್ಕೆ ಸೇರಿದುದನ್ನು ಪ್ರಸ್ತಾಪಿಸಿ ಇವರಲ್ಲಿದ್ದ ಓಲೆಗರಿ ಹಸ್ತಪ್ರತಿಗಳನ್ನು ತಾವು ನೋಡಿದ್ದು ಈಶ್ವರ ಕವಿ ವಿರಚಿತ ಜಿಹ್ವಾಬಂಧನಂ, ಶಬ್ದಮಣಿದರ್ಪಣ, ಪಾರ್ವತೀವಲ್ಲಭ ಶತಕ, ನರಹರಿ ವಿಜಯ,[೨] ಶಿವಕಲ್ಯಾಣ ಯಕ್ಷಗಾನ ಮುಂತಾದ ಕೃತಿಗಳು ಬೆಂಗಳೂರಿನ ವಿಶ್ವೇಶ್ವರಪುರದಲ್ಲಿರುವ ಅವರ ಮನೆಯಲ್ಲಿ ಅವಲೋಕಿಸಿದ್ದಾರೆ. ಎ.ಆರ್.ಕೃ. ಲಿಂಗಣ್ಣಯ್ಯನವರ ನಿಕಟವರ್ತಿಗಳೂ ಆಗಿದ್ದರು. ನಮ್ಮ ತಂದೆ ಡಾ. ಗುಂಡಾಜೋಯಿಸ್‌ರ ವಿದ್ಯಾಭ್ಯಾಸವು ಅವರ ತಾತಂದಿರು ಬೆಂಗಳೂರಿನ ಲಿಂಗಣ್ಣಯ್ಯನವರ ಮನೆಯಲ್ಲಿ ಜರುಗಿತು. ಬೆಂಗಳೂರು ಕೋಟೆ ಪ್ರೌಢಶಾಲೆಯಲ್ಲಿ ಅವರ ವ್ಯಾಸಂಗ ಜರುಗಿತು. ಇಲ್ಲಿದ್ದ ಜ್ಞಾನಭಂಡಾರಗಳು, ಭೂಪಟಗಳು, ಅಟ್ಲಾಸ್, ಗ್ಲೋಬ್, ಅಪೂರ್ವ ಚಿತ್ರಪಲ್ಲಟಗಳು ಹಾಗೂ ಸಂಪುಟಗಳು ಅವರ ಕಣ್ಣಿಗೆ ಗೋಚರಿಸಿತು. ಲಿಂಗಣ್ಣಯ್ಯನವರ ಮಗ ಹಾಗೂ ನಮ್ಮ ತಂದೆಯ ಮಾವ ಎಸ್.ಕೆ. ರಾಮರಾವ್‌ಗೆ ತಂದೆಯವರ ಸಾಧನೆ ಬಗ್ಗೆ ಅಪಾರ ಗೌರವವಿತ್ತು. ಇವುಗಳನ್ನು ಹೇಗಾದರೂ ರಕ್ಷಿಸಲು ಕೆಳದಿಯಲ್ಲಿರುವ ಅವರ ಅಕ್ಕನ ಮನೆಗೆ ಸೇರುವಂತೆ ಮಾಡಿದರು. ಇದರಿಂದ ನಮ್ಮ ತಂದೆಯವರಿಗೆ ಮೂಲ ಸಾಮಗ್ರಿಗಳಿರುವ ಲಿಂಗಣ್ಣಯ್ಯನವರ ಕಲಾಕೃತಿಗಳು ಹಾಗೂ ಹಸ್ತಪ್ರತಿಗಳ ಅಧ್ಯಯನಾದಿಗಳಿಗೆ ದಾರಿದೀಪವಾಯಿತು.[೩]

ಸಾಗರ ಕವಿ ಲಿಂಗಣ್ಣಯ್ಯ

ಕವಿ ಕೃಷ್ಣಪ್ಪನವರಿಗೆ ಮೂರು ಜನ ಗಂಡು ಮಕ್ಕಳೂ ಇಬ್ಬರು ಪುತ್ರಿಯರೂ ಇದ್ದರು. ರಾಮಣ್ಣ, ವೆಂಕಣ್ಣ, ಲಿಂಗಣ್ಣಯ್ಯ ಪುತ್ರರು, ಪುತ್ರಿಯರು ಗಂಗಮ್ಮ ಮತ್ತು ತುಂಗಮ್ಮ. ಗಂಗಮ್ಮನನ್ನು ಕೆಳದಿ ಕೃಷ್ಣ ಜೋಯಿಸರಿಗೂ, ತುಂಗಮ್ಮನನ್ನು ಕೆಳದಿ ಇತಿಹಾಸದ ಪೆರ್ಬೈಯಲು (ಈಗಿನ ಹೆಬ್ಬೈಲು) ದೇವಪ್ಪನವರಿಗಿತ್ತು ವಿವಾಹವಾಯಿತು. ಕೃಷ್ಣಜೋಯಿಸರು ಆನೆಗೊಂದಿಯಲ್ಲಿ ವಿಜಯನಗರ ಅಚ್ಯುತದೇವರಾಯನ ಪುರೋಹಿತರಾಗಿದ್ದ ವೆಂಕಟಾದ್ರಿ ಯಜಮಾನರ ಪೀಳಿಗೆಯವರು. ಕೆಳದಿ ಇತಿಹಾಸದ

ಪ್ರಾಚ್ಯವಸ್ತು ಸಂಗ್ರಹಾಲಯ
ಕೆಳದಿ-೫೭೭೪೦೧
ಸಾಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ
ಮೊ: ೯೪೪೮೮ ೫೯೭೫೯

ಮೂಲಸ್ಥಾಪನೆಯಲ್ಲಿ ವೆಂಕಟಾದ್ರಿ ಯಜಮಾನರು ಪಾಲುದಾರರಾಗಿದ್ದು ಎಂ.ಎ.ಆರ್. ೧೯೨೮ರ ಶಾಸನವು ವ್ಯಕ್ತಪಡಿಸುತ್ತದೆ. ಹೆಬ್ಬೈಲು ದೇವಪ್ಪನವರು ಮೈಸೂರು ಸರಕಾರದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದುದು ಕಂಡುಬರುತ್ತದೆ. ಕವಿ ಕೃಷ್ಣಪ್ಪನವರ ಹಿರೇಮಗ ರಾಮಣ್ಣ ವಿರಚಿತ ಹಸ್ತಪ್ರತಿಯೊಂದು ಕಂಡುಬರುತ್ತದೆ.[೪]



ಎಸ್.ಕೆ. ಲಿಂಗಣ್ಣಯ್ಯ

೧೮೯೯ರಲ್ಲಿ ಸಾಗರದಲ್ಲಿ ಲಿಂಗಣ್ಣಯ್ಯನವರ ಜನನವಾಯಿತು. ಇವರ ಪ್ರಾಥಮಿಕ ವಿದ್ಯಾಭ್ಯಾಸವು ಇವರ ಭಾವ ಕೆಳದಿಯಲ್ಲಿ ಕೃಷ್ಣ ಜೋಯಿಸರ ಮನೆಯಲ್ಲಿ ಕಳೆಯಿತು. ಇಲ್ಲಿ ರಚಿಸಿದ ವಿನಾಯಕ ವರ್ಣ ಕಲಾಚಿತ್ರ ಕೆಳದಿ ವಸ್ತುಸಂಗ್ರಹಾಲಯದಲ್ಲಿದೆ. ಪ್ರೌಢ ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ ಲಿಂಗಣ್ಣಯ್ಯನವರಿಗೆ ಬಹು ಕಷ್ಟದಿಂದ ಸಾಗಿತು. ವಾರಾನ್ನ ಹಾಗೂ ಬೀದಿ ದೀಪಗಳ ಬೆಳಕಿನಲ್ಲಿ ತುಂಬ ಕಷ್ಟಪಟ್ಟು ಮೆಟ್ರಿಕ್ ತರಗತಿಯಲ್ಲಿ ತೇರ್ಗಡೆಯಾದರು. ಮುಂದಿನ ವ್ಯಾಸಂಗಕ್ಕೆ ಬೆಂಗಳೂರಿಗೆ ಹೋಗಬೇಕಾಗಿತ್ತು. ತುಂಬ ಬಡತನದಲ್ಲಿ ತಂದೆಯವರು ನೀಡಿದ ೨೫/- ರೂ.ನಲ್ಲಿ ಹೇಗೋ ಬೆಂಗಳೂರಿಗೆ ಸೇರಿ ಸೀಗೇಬೇಲಿ ಎಂಬ ಅಗ್ರಹಾರದಲ್ಲಿ ಇದು ಸಿಟಿ ಮಾರ್ಕೆಟ್‌ನಲ್ಲಿದ್ದು (ಈಗ ಕಣ್ಮರೆಯಾಗಿದೆ.) ವಾರಾನ್ನ ಮತ್ತು ಹುಡುಗರಿಗೆ ಪಾಠ ಹೇಳುವಲ್ಲಿ ಲಭಿಸಿದ ಹಣದಲ್ಲಿ ಬಹು ಕಷ್ಟದಿಂದ ಇಂಟರ್‌ಮೀಡಿಯೇಟ್ ಮುಗಿಸಿದರು. ಇದೇ ಸಮಯದಲ್ಲಿ ಅಮಲ್ದಾರ್ ಆಗಿದ್ದ ಪ್ರಧಾನಿ ವೆಂಕಟರಮಣಯ್ಯನವರ ಕಣ್ಣಿಗೆ ಬಿದ್ದರು. ಇವರ ಸಹಾಯದಿಂದ ಮುಂದಿನ ವಿದ್ಯಾಭ್ಯಾಸ ಮದರಾಸಿನಲ್ಲಿ ಕೈಗೊಂಡು ೧೯೪೮ರಲ್ಲಿ ಬಿ.ಎ. ಪದವಿ ಪಡೆದರು.

ದಿವಾನ್ ವೆಂಕಪ್ಪಯ್ಯನವರ ಪೀಳಿಗೆಯಲ್ಲಿ ಅಮಲ್ದಾರ್ ವೆಂಕಟರಮಣಯ್ಯ

ಕರ್ನಾಟಕ ಚರಿತ್ರೆಯಲ್ಲಿ ಯಾರ ಗಮನಕ್ಕೂ ಬಾರದ ಪ್ರಧಾನಿ (ದಿವಾನ್) ವೆಂಕಪ್ಪಯ್ಯ ಕುರಿತ ಇತಿಹಾಸ ಖ್ಯಾತ ವಿದ್ವಾಂಸರೂ, ವಿಧಾನ ಪರಿಷತ್ ಸದಸ್ಯರೂ ಆಗಿದ್ದ ದಿವಂಗತ ಎಂ.ಪಿ.ಎಲ್. ಶಾಸ್ತ್ರಿಗಳು, ವಿದ್ವಾಂಸ ದಿವಂಗತ ವಿ. ಸೀತಾರಾಮಯ್ಯನವರೊಂದಿಗೆ ನಮ್ಮ ಮನೆಗೆ ಭೇಟಿಯಿತ್ತು QSMS, Vol .31, P. 36-52 ರಲ್ಲಿ ಪ್ರಕಟವಾದ Pradhana Venkappaiya, Poet and Playright ತಮ್ಮ ಲೇಖನ ಕೈಗಿತ್ತರು. ಕೆಳದಿ ಇತಿಹಾಸದಲ್ಲಿ ಇದೊಂದು ರೋಚಕ ಅಧ್ಯಾಯ. ಭಾರತ ಚರಿತ್ರೆಯಲ್ಲಿ ಕೆಳದಿ ಸಂಸ್ಥಾನದ ಇತಿಹಾಸ ಪ್ರಮುಖವಾಗಿದ್ದು ದುಃಖಾಂತ್ಯವಾದುದು ದುರಂತ, ಪೂರ್ವಾಗ್ರಹವಿಲ್ಲದ ವಿದೇಶಿ ವಿದ್ವಾಂಸರುಗಳು ಇದನ್ನು ಸಾಧಾರವಾಗಿ ಚಿತ್ರಿಸಿದ್ದಾರೆ. ಕ್ರಿ.ಶ. ೧೭೬೩ರಲ್ಲಿ ನವಾಬ್ ಹೈದರನು ಮೋಸದಿಂದ ಕೆಳದಿ ರಾಜ್ಯದ ಪತನಕ್ಕೆ ಕಾರಣನಾದಾಗ ಮೈಸೂರಿನಲ್ಲಿ ದಿವಾನನಾಗಿದ್ದ ಪ್ರಧಾನಿ ವೆಂಕಪ್ಪಯ್ಯನು ಕೆಳದಿ ರಾಣಿ ವೀರಮ್ಮಾಜಿ ಮತ್ತು ಹೈದರನಿಗೆ ಸಂಧಾನಕಾರನಾಗಿ ಪಾತ್ರವಹಿಸಿ ವಿಫಲನಾದನು[೫]. ಈ ಕೆಳಕಂಡಂತೆ ದಿವಾನರುಗಳಲ್ಲಿ ಪ್ರಧಾನ ವೆಂಕಪ್ಪಯ್ಯನೂ ಇದ್ದನು. ಈತನಿಗೆ ವೆಂಕಾಮಾತ್ಯನೆಂದೂ ನಾಮಾಂಕಿತವಿದ್ದುದು ಡಾ. ಸಾ.ಶಿ. ಮರುಳಯ್ಯನವರ ಸಂಶೋಧನೆಯಲ್ಲಿ ವ್ಯಕ್ತಪಡುತ್ತವೆ.

೧. ದಿವಾನ್ ವೆಂಕಟಪತಯ್ಯ (ದಿಂಡಿಗಲ್)

೨. ದಿವಾನ್ ಇವರ ಅಳಿಯ ಚನ್ನಪ್ಪಯ್ಯ

೩. ದಿವಾನ್ ಹಫೀಜುಲ್ಲಾಖಾನ್

೪. ದಿವಾನ್ ಪ್ರಧಾನಿ ವೆಂಕಪ್ಪಯ್ಯ (ನಗರ ದಿವಾನ್)

೫. ದಿವಾನ್ ಪೂರ್ಣಯ್ಯ

ಪ್ರಧಾನಿ ವೆಂಕಪ್ಪಯ್ಯನ ಜನನ ೧೭೨೮; ದಿವಾನ್ ಪೂರ್ಣಯ್ಯ ೧೭೪೬ರಲ್ಲಿ ಜನಿಸಿದರು. ವೆಂಕಪ್ಪಯ್ಯನು ಟಿಪ್ಪು ಜೊತೆಗೂಡಿ ಮೈಸೂರು–ಮರಾಠಾ ಕದನದಲ್ಲಿ ಹೋರಾಡಿದ ಸಂಗತಿಯಿದೆ. ಇವನ ಜೊತೆಯಲ್ಲಿ ಭಕ್ಷಿ ಉಜ್ಜಪ್ಪ ಮತ್ತು ರಾಮರಾಯನೂ ಸೇರಿದ್ದನು. ಕೆಳದಿ ರಾಜ್ಯದಲ್ಲಿದ್ದ ಗಂಜೀ ಕೇಂದ್ರಗಳು ಪೂರ್ಣಯ್ಯನ ಛತ್ರಗಳಲ್ಲವೆಂದು ದಕ್ಷಿಣ ಕನ್ನಡದ ವಿದ್ವಾಂಸ ಐಗಳ್ ಪ್ರತಿಪಾದಿಸಿದ್ದಾರೆ. ಮೈಸೂರು ಸಂಸ್ಥಾನದ ಇನಾಂ ಭೂದಾಖಲೆಗಳನ್ನು ಪೂರ್ಣಯ್ಯನೇ ಸಿದ್ಧಪಡಿಸಿದ ದಾಖಲೆಗಳ ಸಂಪುಟದಲ್ಲಿರುವ ಮಾಹಿತಿಯೊಂದು ಕಂಡುಬರುತ್ತದೆ.[೬] ಹೈದರ್‌ನಾಮೆಯ ಉಲ್ಲೇಖದಂತೆ ಪ್ರಧಾನಿ ವೆಂಕಪ್ಪಯ್ಯನಿಗೆ ದ್ವಿತೀಯ ವಿವಾಹವಾಯಿತು. ೧೭೮೯ರಲ್ಲಿ ೧೦೦೦ ರೂ. ಮಾಸಾಶನದೊಂದಿಗೆ ಈತನಿಗೆ ನಿವೃತ್ತಿಯಾಯಿತು. ಪ್ರಸಿದ್ಧ ಕವಿಯೂ ಆಗಿದ್ದ ಈತನನ್ನು ಕುರಿತು–

Venkappaiya was a minister of Mysore serving nominally under the Mysore kings Krishnaraja Wodeyar-II Nangaraja Wodeyar and Bettada Chamaraja Wodeyar but actually Hyder Ali from about 1763-1780 AD, His activities however were not confired matters of administration and court politics only. He was an eminent scholar in Sanskrit and Kannada and the works that he has written been evidence to abilities as a writer of wide interest and catholic outlook. He was also interested in Music and Painting.

ಡಾ. ಎಂ.ಪಿ.ಎಲ್. ಶಾಸ್ತ್ರಿಗಳು ಈ ರೀತಿ ಶ್ಲಾಘಿಸಿದ್ದಾರೆ. ದಿವಾನ್ ಪ್ರಧಾನಿ ವೆಂಕಪ್ಪಯ್ಯನ ಧರ್ಮಕಾರ್ಯಗಳು ಹಾಗೂ ಸಾಹಿತ್ಯ ಕೃತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಮಲ್ದಾರ್ ಪ್ರಧಾನಿ ವೆಂಕಟರಮಣಯ್ಯನವರು ದಿವಾನ್ ವೆಂಕಪ್ಪಯ್ಯನವರ ಪೀಳಿಗೆಗೆ ಸೇರಿದ್ದು, ಸಾ.ಕ. ಲಿಂಗಣ್ಣಯ್ಯನವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ ಅವರ ಮಗಳು ಜಾನಕಮ್ಮನನ್ನು ವಿವಾಹವಾಗಿತ್ತರು. ಈ ಜಾನಕಮ್ಮನ ಮೊಮ್ಮಗನೇ ಇತಿಹಾಸ ಸಂಶೋಧಕ ಕೆಳದಿ ಗುಂಡಾಜೋಯಿಸ್. ಇದು ಕಾಕತಾಳೀಯ ನ್ಯಾಯವೇನೋ? ದಿವಾನ್ ಪ್ರಧಾನಿ ವೆಂಕಪ್ಪಯ್ಯ ಉಲ್ಲೇಖದ ಅಪ್ರಕಟಿತ ಓಲೆಗರಿ ಹಸ್ತಪ್ರತಿ ಲಭಿಸಿದ್ದು ಪರಿಚಯಿಸಲಾಗಿದೆ.[೭]

ಕಾಂತರಾಜಾ ಕ್ರೋಮೋ ಲಿಥೋ ಪ್ರೆಸ್ ಹಾಗೂ ಲಿಂಗಣ್ಣಯ್ಯ

ಸಾ.ಕ. ಲಿಂಗಣ್ಣಯ್ಯನವರು ಸೊರಬ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಗಿದ್ದು, ಇವರ ಸಹಪಾಠಿಗಳಾಗಿದ್ದ ದಿವಾನ್ ಕಾಂತರಾಜಾ ಅರಸರಲ್ಲಿ ಕಾಲಕ್ರಮೇಣ ಅಠಾರಾ ಕಚೇರಿಯಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಲಿಂಗಣ್ಣಯ್ಯನವರ ಚಿತ್ರಕಲಾ ಪ್ರತಿಭೆಯನ್ನು ಮನಗಂಡ ದಿವಾನ್ ಕಾಂತರಾಜಾ ಅರಸರು ಇಂಗ್ಲೆಂಡಿನಿಂದ ಲಿಥೋ ಮುದ್ರಣದ ಪರಿಕರಗಳನ್ನು ಕೊಂಡು ದೊರಕಿಸಿಕೊಟ್ಟರು. ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ಕಾರ್ಯಾರಂಭವಾಯಿತು. ಇವರ ವರ್ಗಾವಣೆಯಾದಾಗ ದಿವಾನರೇ ಖುದ್ದು ಇದನ್ನು ತಪ್ಪಿಸಿ ಬೆಂಗಳೂರಿನಲ್ಲಿ ತಮ್ಮ ಸನಿಹದಲ್ಲಿಯೇ ಉಳಿಸಿಕೊಂಡರು. ಪ್ರಸಿದ್ಧ ಸಾಹಿತಿ ಅ.ನ. ಕೃಷ್ಣರಾಯರ ಮನೆ ಸಮೀಪದಲ್ಲಿಯೇ ಇದ್ದ ಇವರ ಮುದ್ರಣಾಲಯಕ್ಕೆ ನಿಟ್ಟೂರು ಶ್ರೀನಿವಾಸರಾಯರು, ಡಿ.ವಿ. ಗುಂಡಪ್ಪನವರು, ಎ.ಆರ್. ಕೃಷ್ಣಶಾಸ್ತ್ರಿ, ಶಿವಮೂರ್ತಿಶಾಸ್ತ್ರಿ, ಯಳಂದೂರು ದಿವಾನ್ ಜಹಗೀರುದಾರರು, ಜಾಮ್ ನಗರ ಹಾಗೂ ತಿರುವಾಂಕೂರು ಮಹಾರಾಜರು, ಕೇರಳ ರಾಜಾ ರವಿವರ್ಮ, ಜಿ. ಮಾಧವರಾವ್ (ಮುಖ್ಯ ಕಾರ್ಯದರ್ಶಿ ಜಿ.ವಿ.ಕೆ. ರಾಯರ ಮಾವಂದಿರು) ಮುಂತಾದ ಪ್ರಮುಖರೆಲ್ಲರೂ ಸದಾ ಕಲೆಯುತ್ತಿದ್ದರು.

ಸರಕಾರಕ್ಕೆ ಭೂಪಟಗಳು, ಚಿತ್ರಪಟಗಳ ಸರಬರಾಜು

ಸಾ.ಕ. ಲಿಂಗಣ್ಣಯ್ಯನವರು ಸ್ವಾತಂತ್ರ್ಯಪೂರ್ವದಲ್ಲಿ ಸರಕಾರದ ಆದೇಶದ ಮೇರೆಗೆ ಭೂಪಟಗಳು, ಗ್ಲೋಬ್‌ಗಳು ವಿದ್ಯಾ ಇಲಾಖೆಗೂ, ನ್ಯಾಯಾಲಯ, ವಿವಿಧ ಇಲಾಖೆಗಳಿಗೆ ಕಲ್ಲಚ್ಚಿನಲ್ಲಿ ಮುದ್ರಿಸಿ ಸರಬರಾಜು ಮಾಡುತ್ತಿದ್ದರು. ಚಿತ್ರಕಲೆಯಲ್ಲಿ ಪರಿಣತರಾದ ಇವರ ಭಗವದ್ಗೀತೆ (೧೮ ಅಧ್ಯಾಯ ನಾಗರೀಲಿಪಿಯಲ್ಲಿದೆ) ಈಗಲೂ ವಿಧಾನಸೌಧದಲ್ಲಿ ನೋಡಬಹುದು. ಏಷ್ಯಾ ಖಂಡ ಆರಂಭಿಸಿ ಜಿಲ್ಲಾಮಟ್ಟದವರೆಗೆ ದೇಶೀಯ ಸಾಮಗ್ರಿಗಳ ಮೂಲಕ ವೈಜ್ಞಾನಿಕವಾಗಿ ರಚಿಸಲ್ಪಟ್ಟ ಇವರ ಭೂಪಟಗಳಿಗೆ ವಿಪುಲ ಬೇಡಿಕೆ ಲಭಿಸಿತು. ಮದರಾಸ್, ಕೇರಳ, ಹೈದರಾಬಾದ್, ಬೊಂಬಾಯಿ, ಆಂಧ್ರ ರಾಜ್ಯಗಳಲ್ಲೂ ಭೂಪಟಗಳು ಸರಬರಾಜುಗೊಂಡು ಪ್ರಸಿದ್ಧಿ ಹೊಂದಿತು. ಈಗ ರಾಜ್ಯ ಪತ್ರಾಗಾರಕ್ಕೂ ಲಭಿಸದಂತಾಗಿರುವುದು ದುರ್ದೈವ! ಲಿಂಗಣ್ಣಯ್ಯನವರು ರಚಿಸಿದ ಸಚಿತ್ರ ರಾಮಾಯಣ ಆರು ಕಾಂಡ ಸಂಪುಟಗಳೂ ಅಲಭ್ಯವಾಗಿದ್ದು ಕೆಳದಿ ಮ್ಯೂಜಿಯಂನಲ್ಲಿ ಜೀರ್ಣ ಪ್ರತಿ ರಕ್ಷಿಸಲ್ಪಟ್ಟಿದೆ. ಹಳೆಯ ವಿದ್ಯಾಶಾಲೆಗಳಲ್ಲಿ ಸಮೀಕ್ಷೆ ಕೈಗೊಂಡಲ್ಲಿ ಲಭಿಸಬಲ್ಲದೇನೋ? ಲಿಂಗಣ್ಣಯ್ಯನವರನ್ನು ಕುರಿತು ಇಂಗ್ಲೀಷು ಮತ್ತು ಕನ್ನಡದಲ್ಲಿ ಪ್ರಕಟವಾಗಿದ್ದು, ಇವರ ಭೂಪಟ ಚಿತ್ರಕಲಾಗಳ ಕ್ಯಾಟಲಾಗ್ ಅನುಬಂಧದಲ್ಲಿ ನೀಡಲಾಗಿದೆ.

ಸೂರ್ಯಮುಳುಗದ ಬ್ರಿಟಿಷ್‌ಸಾಮ್ರಾಜ್ಯದ ಕಲಾಕೃತಿ

ಒಂದು ಕಾಲದಲ್ಲಿ ವಿಶ್ವದ ದೊಡ್ಡಣ್ಣನೆನಿಸಿಕೊಳ್ಳುತ್ತಿರುವ ಅಮೇರಿಕಾ ಹಾಗೂ ಇತರ ಪ್ರದೇಶಗಳು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿತ್ತು. ಕಾಲಕ್ರಮೇಣ ಸ್ವತಂತ್ರವಾದುವು. ಸೂರ್ಯಮುಳುಗದ ಬ್ರಿಟಿಷ್ ಸಾಮ್ರಾಜ್ಯವೆಂದು ಬಿಂಬಿಸಿದ್ದ ಚಿತ್ರ ಕಲಾಕೃತಿಯು ಬ್ರಿಟಿಷ್ ಪ್ರಾಂತ್ಯಗಳು ಕಲಾವಿದನ ಜಾಣ್ಮೆಯಲ್ಲಿ ಪ್ರತಿಬಿಂಬಿಸಿದ್ದು ದೇಶ ವಿದೇಶಗಳ ಪ್ರವಾಸಿಗಳನ್ನು ಕೆಳದಿಗೆ ಆಕರ್ಷಿಸುತ್ತಿದೆ. ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿ ಇದನ್ನು ರಕ್ಷಿಸಿ ಪ್ರದರ್ಶಿಸಲ್ಪಡುತ್ತಿದೆ. ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಆಡಳಿತದಲ್ಲಿ ಸಾಗರ ಕವಿ ಲಿಂಗಣ್ಣಯ್ಯ ಇದನ್ನು ಚಿತ್ರಿಸಿದ್ದಾರೆ. ಮುಖ್ಯಮಂತ್ರಿ ದೇವರಾಜ ಅರಸರೊಂದಿಗೆ ಕೆಳದಿಗೆ ಭೇಟಿ ನೀಡಿದ ಭಾರತಾದ್ಯಂತ ಪತ್ರಿಕಾ ಸಂಪಾದಕರುಗಳು ಇದನ್ನು ವೀಕ್ಷಿಸಿ ಸಖೇದಾಶ್ಚರ್ಯ ಪಟ್ಟು ವಿವಿಧ ಮಾಧ್ಯಮಗಳಲ್ಲಿ ಪ್ರಕಟಿಸಿ ಪ್ರವಾಸಿಗಳನ್ನು ಸೆಳೆದಿದ್ದಾರೆ. ಇಂಗ್ಲೆಂಡಿನ ಹಾಗೂ ನಯಾಗರಾ ಫಾಲ್ಸ್‌ನ ವಸ್ತುಸಂಗ್ರಹಾಲಯ ನಿರ್ದೇಶಕರು ವಿಪುಲ ಮೌಲ್ಯ ನೀಡಲೂ ಮುಂದಾಗಿದ್ದರು.

ಬ್ರಿಟಿಷ್‌ರಾಣಿಯ ಹೃದಯಭಾಗದಲ್ಲಿ ಭಾರತ ನಕ್ಷೆ

ಹೂವಿನ ರಸಗಳಿಂದ ತಯಾರಿಸಲಾದ ಬಣ್ಣಗಳಿಂದ ರಚಿಸಲಾದ ಈ ಕಲಾಕೃತಿಯಲ್ಲಿ ಬ್ರಿಟಿಷ್ ಸಾಮ್ರಾಜ್ಞಿ ವಿಕ್ಟೋರಿಯಾ ರಾಣಿಯ ಹೃದಯಭಾಗದಲ್ಲಿರುವ ಭಾರತ ನಕ್ಷೆಯು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಸುಮಾರು ೬೦ x೪೦-೧೮ ಸೆ.ಮೀ. ಪ್ರಮಾಣವುಳ್ಳ ಈ ಕಲಾಕೃತಿಯಲ್ಲಿ ಸಮಗ್ರ ಪೆಸಿಫಿಕ್ ಸಾಗರದ ಒಡೆತನದೊಂದಿಗೆ ದೇಹದ ವಿವಿಧ ಭಾಗಗಳಲ್ಲಿ ಬ್ರಿಟಿಷರ ಪ್ರದೇಶಗಳ ನಕ್ಷೆಗಳು ಇತಿಹಾಸಜ್ಞರಿಗೆ ಆಸಕ್ತಿಯುಂಟು ಮಾಡುತ್ತದೆ, ರಾಣಿಯ ಎಡಪಾರ್ಶ್ವದ ಹಸ್ತದಲ್ಲಿ ಆಸ್ಟ್ರೇಲಿಯಾ, ಬಲಭಾಗದಲ್ಲಿ ಆಫ್ರಿಕಾ, ಬರ್ಮಾ, ಸಿಲೋನ್, ನೇಪಾಳ, ಭೂತಾನ್, ಈಗಿನ ಪಾಕಿಸ್ತಾನವನ್ನೊಳಗೊಂಡ ಭಾರತವನ್ನು ರಾಣಿಯ ಹೃದಯ ಭಾಗದಲ್ಲಿ ಕಲಾವಿದನು ತೋರಿಸಿದ್ದಾನೆ. ರಾಣಿಯ ಮುಕುಟದಲ್ಲಿ ಹೂ ಮುಡಿದಂತೆ ಇರುವುದೇ ಐರ್ಲೆಂಡ್, ಶಿರೋಭಾಗದಲ್ಲಿ ಸ್ಕಾಟ್ಲೆಂಡ್ ರಾಣಿಯ ಮುಖಭಾಗವು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಇಂಗ್ಲೆಂಡ್ ಸನಿಹದಲ್ಲಿ ಸೂರ್ಯರಶ್ಮಿ; ವರ್ತುಲಾಕಾರದ ಸೂರ್ಯನ ಕಿರಣ ರೇಖೆಗಳಲ್ಲಿ ಈ ಕೆಳಕಂಡ ವಿಭಾಗಗಳಿವೆ.



ರಾಣಿ ವಿಕ್ಟೋರಿಯಾ

೧) ಲ್ಯಾಬ್ರಿಡಾರ್, ೨) ಕೆನಡಾ, ೩) ನುಬಿಯಾ, ೪) ಆಂಗ್ಲೋ ಈಜಿಪ್ಸಿಯನ್, ೫) ಸೂಡಾನ್, ೬) ಉಗಾಂಡಾ, ೭) ಪೂರ್ವ ಆಫ್ರಿಕಾ, ೮) ಸೋಮಾಲಿ ಲ್ಯಾಂಡ್, ೯) ರ್‍ಹೊಡೀಷಿಯಾ, ೧೦) ಬೆಚುನಲ್ಯಾಂಡ್, ೧೧) ಕೇಪ್ ಕಾಲೋನಿ, ೧೨) ಆಸ್ಟ್ರೇಲಿಯಾ, ೧೩) ನೈಜೀರಿಯಾ, ೧೪) ಸಿಲೋನ್, ೧೫) ಭಾರತದ ಪ್ರಾಂತ್ಯ, ೧೬) ಲೆಬನಾನ್, ೧೭) ನ್ಯೂಜಿನಿಯಾ, ೧೮) ಐರ್ಲೆಂಡ್, ೧೯) ಸ್ಕಾಟ್ಲೆಂಡ್, ೨೦) ನ್ಯೂ ಪೌಂಡ್ಲೆಂಡ್, ೨೧) ಬರ್ಮಾ, ೨೨) ರಂಗೂನ್, ೨೩) ಈಗಿನ ಪಾಕಿಸ್ತಾನ ಪ್ರದೇಶಗಳು, ೨೪) ಬಾಂಗ್ಲಾ, ೨೫) ನೇಪಾಳ, ೨೬) ಭೂತಾನ, ೨೭) ಸಿಕ್ಕಿಂ, ೨೮) ಮಲಯಾ, ೨೯) ಹಿಮಾಲಯ, ೩೦) ಬಹ್ರೇನ್, ೩೧) ಕೊರಿಯಾ ಮರಿಯಾ, ೩೨) ಪೆರಿಮ್ ಆಡೆಮ್, ೩೩) ಲಕಡೀವ್ಸ್, ೩೪) ಮಾಲ್ಡೀವ್ಸ್, ೩೫) ಮಾರಿಷಸ್, ೩೬) ಜಾಂಜಿಬಾರ್, ೩೭) ಸೈಪ್ರೆಸ್, ೩೮) ಮಾಲ್ಟಗೋಜೋ, ೩೯) ಜಿಬ್ರಾಲ್ಟರ್, ೪೦) ೧೨ರಿಂದ ೧೭ರವರೆಗೆ ಲಿಪಿ ಅಸ್ಪಷ್ಟ, ೪೧) ಬಾರ್ಬಡೋಸ್, ೪೨) ತ್ರಿನಿಡಾಡ್, ೪೩) ೨೦ರಿಂದ ೩೦ರವರೆಗೆ ಲಿಪಿ ಅಸ್ಪಷ್ಟ, ೪೪) ಸಾಲೋಮನ್, ೪೫) ಸಾಂತಾಕ್ರೂಜ್, ೪೬) ನ್ಯೂಹೈಬ್ರಿಡ್ಸ್, ೪೭) ೩೫ರಿಂದ ೪೧ರವರೆಗೆ ಲಿಪಿ ಅಸ್ಪಷ್ಟ, ೪೮) ಹಾಂಕಾಂಗ್, ೪೯) ಅಂಡಮಾನ್, ೫೦) ನಿಕೋಬಾರ್ಸ್.



ಭಾಗವದ್ಗೀತಾ ಚಿತ್ರ



ಭಾಗವದ್ಗೀತಾ ಬಾವುಟ ಹಿಡಿದಿರುವ ಆಂಜನೇಯ

೧೯೧೬ರಲ್ಲಿ ಅಠಾರಾ ಕಚೇರಿಯ ಉನ್ನತಾಧಿಕಾರಿಗಳು ಸಿಮ್ಲಾದಲ್ಲಿದ್ದ ಭಾರತದ ವೈಸ್‌ರಾಯಿಗೆ ತೋರಿಸಿದ್ದು ಸರಕಾರದ ಪ್ರಮುಖ ಇಲಾಖೆಗಳಿಗೆ ಸರಬರಾಜು ಮಾಡಲು ದಿವಾನ್ ಕಾಂತರಾಜ ಅರಸರಿಗೆ ಸೂಚಿಸಿದ್ದರಂತೆ.

ಅಭಿಲೇಖಾ ಸಂಗ್ರಹಗಳು

ವಿಶ್ವೇಶ್ವರಪುರದ ಲಿಂಗಣ್ಣಯ್ಯನವರ ಮನೆಯಲ್ಲಿ ಅಪೂರ್ವ ಗ್ರಂಥ ಭಂಡಾರವಿತ್ತು. ರಾಜಾ ರವಿವರ್ಮನ ಕಲಾಕೃತಿಗಳು, ಜಾಂನಗರ ಹಾಗೂ ತಿರುವಾಂಕೂರು ಮಹಾರಾಜರು ನೀಡಿದ ಗ್ರಂಥಗಳ ಕೊಡುಗೆಗಳು, ದಿವಾನರ ಕೊಡುಗೆಯ ಗ್ರಂಥಗಳು, ಪೂರ್ಣಯ್ಯನ ಸಂಗ್ರಹದಲ್ಲಿದ್ದುದನ್ನು ಯಳಂದೂರು ಜಹಗೀರುದಾರ ಶ್ರೀಮಂತ ನಾರಾಯಣ ರಾಯರಿತ್ತ ಕೊಡುಗೆಗಳು[೮] The Book of Knowledge Travel of Buchanan, ರಾಜಾ ರವಿರ್ಮರಿತ್ತ Coxlour and Colour Printing, Litho Printing ಇತ್ಯಾದಿ ವೈವಿಧ್ಯಮಯ ಸಂಪುಟಗಳಿದ್ದುವು.

ಉಪಸಂಹಾರ

ಪ ಕವಿಃ ಕಥ್ಯತೇ ಸೃಷ್ಟಾ
ರಮತೇ ಯತ್ರ ಭಾರತೀ ।
ರಸಭಾವ ಗುಣೀ ಭೂತೈಃ
ಅಲಂಕಾರೈಃ ಗುಣೋದಯೈಃ ॥

ಎಂಬಂತೆ ಸ್ವಾತಂತ್ರ್ಯಪೂರ್ವದಲ್ಲಿ ಕವಿ, ಚಿತ್ರಕಲಾವಿದ ಹಾಗೂ ಸಾಹಿತಿಗಳಾಗಿದ್ದ ಲಿಂಗಣ್ಣಯ್ಯನವರಿಂದ ರಚಿತವಾದ ಕೃತಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಖ್ಯಾತ ಚಿತ್ರಕಲಾವಿದ, ಕವಿ, ಸಾಹಿತಿಗಳೂ ಆಗಿ ಸರಕಾರಿ ಉನ್ನತ ಉದ್ಯೋಗದಲ್ಲಿದ್ದ ಸಾಗರ ಕವಿ ಲಿಂಗಣ್ಣಯ್ಯನವರ ಕೃತಿಗಳು ಅನುಬಂಧದಲ್ಲಿ ಕಂಡಂತೆ ಕಣ್ಮರೆಯಾಗುತ್ತಿದ್ದು ಅಧ್ಯಯನಾದಿಗಳಿಗೆ ಮುಂದಿನ ಪೀಳಿಗೆಗೆ ರಕ್ಷಣೆಯ ಅಗತ್ಯವಿದೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಅಠಾರಾ ಕಚೇರಿಯಲ್ಲಿದ್ದು ವಿರಚಿಸಿದ ಅವರ ಚಿತ್ರ ರಾಮಾಯಣ ೬ ಕಾಂಡಗಳು, ಚಿತ್ರಭಾಗವತ, ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪ್ರಕಟವಾಗಿರುವುದು ಅಲಭ್ಯ. U.S.A. ನಲ್ಲಿ ಲಿಂಗಣ್ಣಯ್ಯ ಕುರಿತು ಅಲ್ಲಿಯ ವಿಶ್ವವಿದ್ಯಾಲಯಕ್ಕೆ Ph.D. ಪ್ರಬಂಧ ಸಾದರಪಡಿಸಿರುವುದು ಕಂಡುಬರುತ್ತದೆ. DTP ಇತ್ಯಾದಿ ಮುದ್ರಣ ಸೌಕರ್ಯವಿಲ್ಲದ ಕಾಲದಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿದ ಇವರ ಅಳಿದುಳಿದ ಸಾಮಗ್ರಿಗಳನ್ನು ಕೆಳದಿ ಸಂಶೋಧನಾಲಯದಲ್ಲಿ ಶೇಖರಿಸಿ ರಕ್ಷಿಸಲಾಗಿದೆ. ಹಳೆಯ ಶಾಲಾ ಕಾಲೇಜುಗಳು, ಅಠಾರಾ ಕಚೇರಿ, ನ್ಯಾಯಾಲಯಗಳಲ್ಲಿ ಇವರ ಭೂಪಟಗಳನ್ನು ಪರಿಶೋಧಿಸುವುದು ಅಗತ್ಯ. ತಸ್ವೀರಿನಲ್ಲಿಯೂ (Photography) ತಜ್ಞರಾಗಿ ರಚಿಸಿದ ತಸ್ವೀರು ತೆಗೆಯುವ ಕ್ರಮ, ತಸ್ವೀರು ಚಮತ್ಕಾರಗಳು, ಚಿತ್ರಪಠಗಳನ್ನು ಬರೆಯುವ ಕ್ರಮ, ವೀಣಾಭ್ಯಾಸ ಕ್ರಮ, ವೈದಿಕ ಧರ್ಮದ ಶಾಸ್ತ್ರೀಯ ವಿಚಾರ್ ಮುಂತಾದ ಕೃತಿಗಳೂ ಅಲಭ್ಯವಾಗಿವೆ.

ಖ್ಯಾತ ವಿದ್ವಾಂಸರೊಬ್ಬರು ಸಾ.ಕ. ಲಿಂಗಣ್ಣಯ್ಯನವರಲ್ಲಿ ಚಿತ್ರರಾಮಾಯಣ ಪ್ರತಿಗಳು ಖರ್ಚಾಗದಿರುವುದನ್ನು ಪ್ರಸ್ತಾಪಿಸಿದಾಗ–ಖರ್ಚಾಗದಿದ್ದರೇನಾಯಿತು? ಸದಾ ಶ್ರೀರಾಮನಾಮ ಸ್ಮರಣೆಯಲ್ಲಿರುವ ತಮಗೆ ಸನಿಹದಲ್ಲಿರುವುದರಿಂದ, ಶ್ರೀರಾಮಚಂದ್ರನೇ ಹತ್ತಿರವಿದ್ದಷ್ಟು ಆನಂದವು ಹೆಚ್ಚುತ್ತಿದೆ ಎಂದರು. ಅಯೋಧ್ಯೆಯಲ್ಲಿ ಪ್ರತಿಷ್ಠಾಪಿತ ಶ್ರೀರಾಮಚಂದ್ರನ ವೈಭವದ ಸಂದರ್ಭದಲ್ಲಿ ಕನ್ನಡಿಗರಿಗೆ ಈ ಪ್ರಕಟಣೆ ಉಪಯುಕ್ತ. ವಿಶ್ವವಿದ್ಯಾನಿಲಯದ ಅಧ್ಯಯನಶೀಲರು ಸಾ.ಕ. ಲಿಂಗಣ್ಣಯ್ಯ ಕುರಿತು ಅಧ್ಯಯನ ಕೈಗೊಂಡಲ್ಲಿ ಮುಂದಿನ ಪೀಳಿಗೆಗೆ ಉಪಕೃತವಾಗುತ್ತದೆ.

ಅಡಿಟಿಪ್ಪಣಿಗಳು

೧. ಪ್ರಸಿದ್ಧ ಸಂಶೋಧಕ ನಾ.ಶ್ರೀ. ರಾಜಪುರೋಹಿತರು ೫೭ ಮೃತ ಪತ್ರಿಕೆಗಳನ್ನು ಉಲ್ಲೇಖಿಸಿದ್ದು, ೪೭ನೆಯದಾಗಿ ಮಲೆನಾಡು ಸಮಾಚಾರವೂ ಸೇರಿದೆ. ನಾ.ಶ್ರೀ. ರಾಜಪುರೋಹಿತರ ಸಂಶೋಧನ ಲೇಖನಗಳು ಪುಟ ೪೮೬–೪೮೭. ಈ ಪತ್ರಿಕೆ ಕುರಿತ ಸರ್ವೇಕ್ಷಣೆಯೂ ನಿಷ್ಫಲವಾಗಿದೆ.

೨. ಪಾರ್ವತೀ ವಲ್ಲಭ ಶತಕ, ನರಹರಿ ವಿಜಯ ಕೆಳದಿ ಸಂಶೋಧನಾಲಯದಿಂದ ಪ್ರಕಟವಾಗಿದೆ. ಶಬ್ದಮಣಿ ದರ್ಪಣದ ಓಲೆಗರಿ ಹಸ್ತಪ್ರತಿಯೊಂದು ಬನಾರಸ್ ಜಂಗಮವಾಡಿ ಮಠದಲ್ಲಿರುವುದನ್ನು ನಾನು ನೋಡಿದ್ದೇನೆ. ಡಾ. ಸಾ.ಶಿ. ಮರುಳಯ್ಯನವರು ಅವರ Ph.D. ಅಧ್ಯಯನಕ್ಕಾಗಿ ಇಲ್ಲಿಂದ ತೆಗೆದುಕೊಂಡು ಹೋಗಿದ್ದ ಶಿವಕಲ್ಯಾಣ ಯಕ್ಷಗಾನ ಓಲೆಗರಿ ಹಸ್ತಪ್ರತಿ ಹಿಂದಿರುಗಿಸಿಲ್ಲ. ವೆಂಕಣ್ಣ ಕವಿಯ ಕೀರ್ತನೆಗಳನ್ನೊಳಗೊಂಡ ಓಲೆಗರಿ ಹಸ್ತಪ್ರತಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ.

೩. ಎ.ಆರ್. ಕೃ.ರವರಿಗೆ ಅಲಭ್ಯವಾದ ಕೆಳದಿ ನೃಪ ವಿಜಯದ ಪೀಠಿಕೆ ಕವಿಜಿಹ್ವಾಬಂಧನಂ ಕೃತಿಯ ಓಲೆಗರಿ ಹಸ್ತಪ್ರತಿ ಕಟ್ಟಿನಲ್ಲಿ ಕಂಡುಬಂದಿದ್ದು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕೆಳದಿ ನೃಪವಿಜಯ ಗದ್ಯಾನುವಾದದ ಉಪೋದ್ಘಾತದಲ್ಲಿ ಪ್ರಕಟವಾಗಿದೆ. ಪುಟ ೮, ಇದೇ ಸಂಗ್ರಹದಲ್ಲಿ ಲಭಿಸಿದ ದಕ್ಷಾಧ್ವರ ವಿಜಯ, ಪಾರ್ವತೀ ಪರಿಣಯ ಕೆಳದಿ ಸಂಶೋಧನಾ ಕೇಂದ್ರದಿಂದ ಪ್ರಕಟವಾಗಿದೆ.

೪. ಕೆಳದಿ ಇತಿಹಾಸ ಕಾಲದ ಅನೇಕ ಹಸ್ತಪ್ರತಿಗಳು ಇದ್ದುದನ್ನು ಕೆಳದಿಯಲ್ಲಿದ್ದ ಇವರ ಮಕ್ಕಳು ಶ್ರೀಕಂಠಯ್ಯನವರು ತುಂಬ ಬಡತನದಲ್ಲಿದ್ದು ಅವುಗಳನ್ನು ಶಾನುಭೋಗರಲ್ಲಿ ಅಡವಿಟ್ಟು ಹಣ ಪಡೆದಿದ್ದರಂತೆ. ಶ್ರೀಕಂಠಯ್ಯನವರ ಪತ್ನಿ ಶಿವಮೊಗ್ಗದಲ್ಲಿ ಅಡಕೆ ವರ್ತಕರಾಗಿದ್ದ ಸರ್ಜಾ ಚಂದ್ರಶೇಖರಯ್ಯನವರ ಚಿಕ್ಕಮ್ಮಂದಿರು, ಕೆಳದಿ ಅರಸರ ಕಾಲದಲ್ಲಿದ್ದ ಸರ್ಜಾ ನಾಗಪ್ಪಯ್ಯನು ಬರೆದ ಶುಕ ಸಪ್ತತಿ ಓಲೆಗರಿ ಹಸ್ತಪ್ರತಿ ಕಂಡುಬಂದಿದ್ದು ಸಾ.ಶಿ.ಮ. ಉಲ್ಲೇಖಿಸಿದ್ದಾರೆ. ಈ ಪೀಳಿಗೆಗೆ ಶಿವಮೊಗ್ಗ ಡಾ. ಸರ್ಜಾ ಚಂದ್ರಶೇಖರ್ ಸೇರಿದ್ದು ಈ ಹಸ್ತಪ್ರತಿಯು ಇವರಿಂದ ಲಭಿಸಿದೆ. ಈ ಮನೆತನದವರು ಈಗಲೂ ಇದ್ದಾರೆ. (Studies in Keladi History; Prof. G.S. Dixit; Mythic Society 1981, Bangalore P. 113 and 118 ನೋಡಿರಿ.)

೫. ಸ್ವಾಮಿ ಲ.ನ., ಭಾರತಿ ಬಿ.ಆರ್., ೨೦೦೭, ಮೈಸೂರು ಸಂಸ್ಥಾನದ ಪ್ರಧಾನಿ ವೆಂಕಪ್ಪಯ್ಯನವರು, ಪು. ೧೪.

೬ ಸ್ವಾತಂತ್ರ್ಯ ಪೂರ್ವದ ಕನ್ನಡ ಮೋಡಿ ಲಿಪಿಯ ಇನಾಂ ಭೂದಾಖಲೆಗಳು, ೨೦೧೯, ಪು. ೧೭೨ ಮತ್ತು ೧೮೧.

೭. ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೮೬. (ವೆಂಕಟೇಶ್ ಜೋಯಿಸ್–೨೦೦೪).

೮. Indian Myth and Legend ಕೆಳದಿ ಮ್ಯೂಜಿಯಂನಲ್ಲಿದೆ. The Book of Knowledge ಬೆಂಗಳೂರಿನಲ್ಲಿ ಲಿಂಗಣ್ಣಯ್ಯನವರ ಮರಿಮಗನಲ್ಲಿದೆ.

೯. ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿ ದಿ॥ ಜಿ.ವಿ.ಕೆ. ರಾಯರ ಮಾವ ದಿ॥ ಜಿ. ಮಾಧವರಾಯರು ಕೊಂಡೊಯ್ದಿದ್ದು ಅಲಭ್ಯವಾಗಿದೆ. ಇತಿಹಾಸ ತಜ್ಞ.ಡಾ. ಗುಂಡಾ ಜೋಯಿಸ್‌ರ ಪೂರ್ವಿಕರ ಪೀಳಿಗೆಯಲ್ಲಿ ವಿಜಯನಗರ (ಆನೆಗೊಂದಿ) ಅಚ್ಯುತದೇವರಾಯನ ಪುರೋಹಿತ ಹಾಗೂ ಕೆಳದಿ ರಾಜ್ಯ ಸಂಸ್ಥಾಪಕರೂ ಆದ ವೆಂಕಟಾದ್ರಿ ಯಜಮಾನರು ಮೈಸೂರು ಹಾಗೂ ನಗರ ದಿವಾನ್ ವೆಂಕಪ್ಪಯ್ಯ, ಕೆಳದಿ ಆಸ್ಥಾನ ಚರಿತ್ರೆಕಾರ ಲಿಂಗಣ್ಣಯ್ಯ ತಲೆಮಾರಿಗೆ ಸಾಗರ ಕವಿ ಲಿಂಗಣ್ಣಯ್ಯ ಸೇರಿದ್ದು ಕೆಳದಿ ಗುಂಡಾ ಜೋಯಿಸ್‌ರು ಇವರ ಮೊಮ್ಮಗನೂ ಆಗಿದ್ದಾನೆ.

ಅನುಬಂಧ

ಪ್ರಧಾನಿ ವೆಂಕಪ್ಪಯ್ಯನವರ ಧರ್ಮಕಾರ್ಯಗಳು

೧. ಶ್ರೀರಂಗಪಟ್ಟಣದ ಕೋಟೆ ವೆಂಕಟರಮಣಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಆಂಜನೇಯ ವಿಗ್ರಹ ಸ್ಥಾಪಿಸಿ ಭೂದಾನ ದತ್ತಿ ನೀಡಿದ್ದಾರೆ.

೨. ಕೆಳದಿ ರಾಜಧಾನಿ ಬಿದನೂರಿನಲ್ಲಿ (ಈಗ ಹಳೇ ನಗರ) ಶ್ರೀ ವೆಂಕಟರಮಣಸ್ವಾಮಿ ಮತ್ತು ಶ್ರೀ ಪಂಚಮುಖಿ ಆಂಜನೇಯ ದೇವಾಲಯ ನಿರ್ಮಾಣ.

೩. ಸೋದೆ ವೆಂಕಟರಮಣ, ಶ್ರೀ ಆಂಜನೇಯ, ಶಿವಲಿಂಗ ದೇವಾಲಯ ಇದರ ಪೂಜಾದಿ ಕೈಂಕರ್ಯಗಳಿಗೆ ಶಾಸನ.

೪. ತುಮಕೂರು ತಾಲ್ಲೂಕು ಶೆಟ್ಟಿಹಳ್ಳಿ ಶ್ರೀ ಆಂಜನೇಯ ದೇವಾಲಯ ಜೀರ್ಣೋದ್ಧಾರ.

೫. ಕೊರಟಗೆರೆ ತಾಲ್ಲೂಕಿನ ಅಕ್ಕಿರಾಮಪುರದ ವೆಂಕಟರಮಣ ದೇವಾಲಯ, ಬೆಳಧರದ ಕಾಮಾಕ್ಷಮ್ಮನ ಅಗ್ರಹಾರದಲ್ಲಿ ಕಾಶಿ ವಿಶ್ವೇಶ್ವರ ದೇವಾಲಯ ನಿರ್ಮಾಣ ಮತ್ತು ಶಾಸನ, ಗಂಗಾಧರೇಶ್ವರಸ್ವಾಮಿ ಬೆಟ್ಟದಲ್ಲಿ ಹುಚ್ಚಾವಧೂತರ ಬೃಂದಾವನ ನಿರ್ಮಾಣ.

೬ ನಗರ ತಾಲ್ಲೂಕಿನ ಲಕ್ಷ್ಮೀಪುರ ಅಗ್ರಹಾರ ನಿರ್ಮಾಣ.

೭. ದ.ಕ. ಜಿಲ್ಲೆಯಲ್ಲಿ ಕೋಟೇಶ್ವರ ದೇವಾಲಯ ಮತ್ತು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯ ಪೂಜಾದಿಗಳಿಗೆ ಶಾಸನ.

೮. ೧೭೮೦ರಲ್ಲಿ ಮಧುಗಿರಿ ಶ್ರೀ ರಾಘವೇಂದ್ರ ಮಠದ ಆವರಣದಲ್ಲಿ ಶ್ರೀ ಆಂಜನೇಯ ವಿಗ್ರಹ ಸ್ಥಾಪನೆ.

೯. ಕೆಳದಿ ಶ್ರೀರಾಮೇಶ್ವರ ದೇವರಿಗೆ ಶಾಸನಾದಿಗಳು ಅಪ್ರಕಟಿತ ಓಲೆಗರಿ ಹಸ್ತಪ್ರತಿ. ಇದರ ಪ್ರಕಟಣೆಗೆ ಭಾರತ ಸರಕಾರದ NMMನಿಂದ ಆರ್ಥಿಕ ಸೌಲಭ್ಯ ಮಂಜೂರಾಗಿತ್ತು.

ಸಾಹಿತ್ಯ ಸೇವೆಗಳು

೧. ಕಾಮವಿಲಾಸ ಬಾಣ (ಸಂಸ್ಕೃತ)

೨. ಕುಕ್ಷಿಂಭರ ಪ್ರಹಸನ (ಸಂಸ್ಕೃತ)

೩. ಮಹೇಂದ್ರ ವಿಜಯ ಮಹಿಮೆ (ಸಂಸ್ಕೃತ)

೪. ವೀರರಾಘವ ವ್ಯಾಯೋಗ (ಸಂಸ್ಕೃತ)

೫. ಲಕ್ಷ್ಮೀ ಸ್ವಯಂವರ ಸಮವತಾರ (ಸಂಸ್ಕೃತ)

೬ ವಿಬುಧ ದಾನವ ಸಮವಾಕಾರ (ಸಂಸ್ಕೃತ)

೭. ಸೀತಾ ಕಲ್ಯಾಣ ವಿಧಿ (ಸಂಸ್ಕೃತ)

೮. ರುಕ್ಮಿಣೀ ಮಾಧವನಾಮಾಂಕ (ಸಂಸ್ಕೃತ)

೯. ಊರ್ವಶೀ ಸಾರ್ವಭೌಮೇಹಾ ಮೃಗ (ಸಂಸ್ಕೃತ)

೧೦. ಸುಧಾಝುರಿ

೧೧. ಕುಶಲವ ಚಂಪೂ

೧೨. ಅಲಂಕಾರ ಮಣಿ ದರ್ಪಣಂ

೧೩. ಜಗನ್ನಾಥ ವಿಜಯ ಕಾವ್ಯಮ್, ಭಾರತ ಸರಕಾರದ NMMನವದೆಹಲಿಯಲ್ಲಿ ಪ್ರಕಟವಾಗಿದೆ.

೧೪. ಕರ್ಣಾಟ ರಾಮಾಯಣ GOML, Madras 1982ರ Catalogue ಮೇರೆಗೆ.

a) Aranya Kandam Ramayanam No. 63, 1957, Price Rs. 2-25, Pages 1-88.

b) Ayodhya Kandam, No. 36, P. 286; 1954, Rs 6-50.

c) Balakandam, No. 52, P. 305; 1956, Rs. 5-50.

d) Kiskindha Kandam No. 43, P. 152; 1955, Rs. 3-63.

e) Sundara Kandam, No. 20; P. 194; 1952, Rs. 4.00. ಇವುಗಳು ಈಗ ಅಲಭ್ಯ.

೧೫. ಇಂದಿರಾಭ್ಯುದಯ ಅಥವಾ ರಾಮಾಭ್ಯುದಯ (ಕನ್ನಡ).

೧೬. ಹನುಮದ್ವಿಲಾಸ (ಕನ್ನಡ).

೧೭. ಹನುಮತ್ ಶತಕಮ್ (ಸಂಸ್ಕೃತ).

೧೮. ಸೂರ್ಯ ಶತಕಮ್ (ಸಂಸ್ಕೃತ).

ನಂ. ೧೩–೧೪ ಬಿಟ್ಟರೆ ಉಳಿದೆಲ್ಲವೂ ಅಪ್ರಕಟಿತ. ಪ್ರಧಾನಿ ವೆಂಕಪ್ಪಯ್ಯನ ಸಾಹಿತ್ಯಾದಿ ಸೇವೆಗಳನ್ನು Pradhani Venkappaiah was man of **Varied** parts. It is no easy distinction for a man to be at once, a successful chief minister, a warrior of consideralole enterprise, a man of great culture and an **erudite** scholar Venkappaiah had this unique invalualle combination of qualities, and if for no other reason at least for this his works deserve our respecful attention. Indeed his works may not represent the best in our literature, but they have the impress of quality and of dignified case, and they are pleasant reading, It would be gratifying to see his works in print. ಈ ರೀತಿ M.P.L. ಶಾಸ್ತ್ರಿಗಳು ಉಲ್ಲೇಖಿಸಿದ್ದಾರೆ.

◆◆

ಲಲಿತಾಂಬ ಎನ್.ಆರ್.

ಧಾರ್ಮಿಕ ಶ್ರದ್ಧಾಕೇಂದ್ರಗಳ ರಕ್ಷಣಾ ವ್ಯವಸ್ಥೆ ಮತ್ತು ನಿಶಸ್ತ್ರೀಕರಣ ಕಾಯಿದೆ

ಪ್ರಾಚೀನ ಕಾಲದಿಂದಲೂ ಭಾರತವು ಲೌಕಿಕ ಮತ್ತು ಆಧ್ಯಾತ್ಮಿಕ ಸಂಪತ್ತಿನ ಆಗರಗಳಾದ ಮಠಮಾನ್ಯಗಳು, ದೇವಾಲಯಗಳು ಮತ್ತು ಶ್ರದ್ಧಾಕೇಂದ್ರಗಳನ್ನು ಅಪಾರವಾಗಿ ಹೊಂದಿದೆ. ಪ್ರತಿಯೊಂದು ಧರ್ಮವೂ ಅಧಿಕಾರ ಮತ್ತು ಸಂಪತ್ತುಗಳನ್ನು ಲೌಕಿಕವೆಂದು ಪರಿಗಣಿಸಿ ಅವುಗಳು ನಶ್ವರವೆಂದು ಸಾರುತ್ತ ಬಂದಿದ್ದರೂ, ಧಾರ್ಮಿಕ ಶ್ರದ್ಧಾಕೇಂದ್ರಗಳು ಆಳರಸರು, ಅಧಿಕಾರಿವರ್ಗ, ಭಕ್ತಾದಿಗಳು ನೀಡುವ ದಾನ-ದತ್ತಿಗಳು, ಕಾಣಿಕೆಗಳ ಮೂಲಕ ಅಪಾರವಾದ ಸಂಪತ್ತನ್ನೂ ಸಹ ಹೊಂದಿರುವುದನ್ನು ನಮ್ಮ ದಾಖಲೆಗಳು ಸಾಬೀತು ಮಾಡುತ್ತವೆ. ಇವು ಪ್ರಭುತ್ವ ಮತ್ತು ಜನಸಮುದಾಯಗಳ ಮಧ್ಯದ ಕೊಂಡಿಗಳಂತೆ ಸಮಾಜದ ನಿಯಂತ್ರಣದ ನಿಯೋಗವನ್ನು ಸಮಾಜ ಕಲ್ಯಾಣಕಾರಿ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿವೆ.

ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದ ರಾಜಕೀಯ ನಿಯಮ ನಿಬಂಧನೆಗಳಿಗೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಮಠ ಮಾನ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿವೆ. ಈ ರೀತಿ ಕ್ರೋಢೀಕೃತವಾದ ತನ್ನ ಸಂಪತ್ತನ್ನು, ಮತ್ತು ತನ್ನ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ಅನ್ಯ ಧರ್ಮ ಮತ್ತು ಅನ್ಯ ಪ್ರಭುತ್ವಗಳಿಂದ ಕಾಪಾಡಿಕೊಳ್ಳುವ ಅವಶ್ಯಕತೆ ಹೊಣೆಗಾರಿಕೆ ಈ ಎಲ್ಲಾ ಧಾರ್ಮಿಕ ಕೇಂದ್ರಗಳಿಗೂ ಇತ್ತು. ಧಾರ್ಮಿಕ ಪ್ರಭುತ್ವವು ರಾಜಕೀಯ ಪ್ರಭುತ್ವಕ್ಕೆ ಸಮಾನಾಂತರವಾಗಿ ತನ್ನ ಹಿಡಿತವನ್ನು ಸಮುದಾಯಗಳ ಮೇಲೆ ಹೊಂದಿರುತ್ತದೆಯಾದ್ದರಿಂದ ಯಾವುದೇ ಪ್ರಭುತ್ವ ಅವುಗಳನ್ನು ಅಲಕ್ಷಿಸಲು ಸಾಧ್ಯವಾಗುವುದಿಲ್ಲ. ಅವುಗಳನ್ನು ಪ್ರೋತ್ಸಾಹಿಸುವ ರಕ್ಷಿಸುವ ಕರ್ತವ್ಯವನ್ನು ನಿಭಾಯಿಸಬೇಕಾಗುತ್ತದೆ.

ಇಂಥ ಶ್ರದ್ಧಾಕೇಂದ್ರಗಳು ಯಾವುದೇ ಒಂದು ಧರ್ಮಕ್ಕೆ ಅವಶ್ಯಕ ಮತ್ತು ಅನಿವಾರ್ಯವಾಗಿರುತ್ತವೆಯಾದ್ದರಿಂದ ಪ್ರತಿ ಧರ್ಮವೂ ತನ್ನ ಶ್ರದ್ಧಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ರಕ್ಷಿಸುವ ಕಾರ್ಯದಲ್ಲಿ ತೊಡಗಿಕೊಳ್ಳುವುದು ಸಹಜವೇ ಆಗಿರುತ್ತದೆ.

ತನ್ನ ಧರ್ಮವನ್ನು ಕಾಪಾಡಿಕೊಳ್ಳುವ ಸಲುವಾಗಿ ಇಂಥ ಶ್ರದ್ಧಾಕೇಂದ್ರಗಳೂ ಕಾರ್ಯಪ್ರವೃತ್ತವಾಗಿರುತ್ತವೆ. ಹೊರಗಿನ ಆಕ್ರಮಣಗಳು, ಧರ್ಮ ಧರ್ಮಗಳ ಮೇಲಾಟಗಳು ಕರ್ನಾಟಕದಲ್ಲಿ ಹೆಚ್ಚಾಗುತ್ತ ಬಂದಂತೆ , ರಕ್ಷಣೆ ಬಹಳ ಮುಖ್ಯವಾಯಿತು. ಅದಕ್ಕಾಗಿ ಕಾವಲು ಭಟರನ್ನು, ದೇವರ ಅಂಗರಕ್ಷಕವೀರರ ವರ್ಗವನ್ನು ಅಥವಾ ತಮ್ಮದೇ ಆದ ವಿಶಿಷ್ಟ ರಕ್ಷಕ ದಳವನ್ನು ಹೊಂದಿತ್ತೇ? ಹಾಗಿದ್ದರೆ ಅವುಗಳ ಸ್ವರೂಪ

ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು
ಸಂಶೋಧನಾ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಂಪಿ ನಗರ ವಾರ್ಡ್
ಬೆಂಗಳೂರು-೫೬೦೦೪೦
ಮೊ: ೯೮೪೫೪ ೨೭೫೮೧

ಎಂತಹುದು ಮತ್ತು ಅಂತಹ ಸಶಸ್ತ್ರ ಪಡೆಗಳನ್ನು ಕುರಿತು ರಾಜಕೀಯ ಪ್ರಭುತ್ವ, ಸ್ಥಳೀಯ ಆಡಳಿತ ವ್ಯವಸ್ಥೆಗಳು ಯಾವರೀತಿ ಪ್ರತಿಕ್ರಿಯಿಸುತ್ತಿದ್ದವು ಎಂಬುದನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗುವುದು.

ಬದಲಾದ ಸನ್ನಿವೇಶಗಳಲ್ಲಿ ವಸಾಹತುಶಾಹಿ ಆಡಳಿತದಲ್ಲಿ ಜಾರಿಯಾದ ನಿಶಸ್ತ್ರೀಕರಣ ಕಾಯಿದೆಯು, ಸ್ಥಳೀಯವಾದ ಪಾಳೇಗಾರರನ್ನು, ವೀರಪಡೆಗಳನ್ನು, ಹೋರಾಟದ ಬಣಗಳನ್ನೂ ತೀವ್ರವಾಗಿ ಜರ್ಜರಿತಗೊಳಿಸಿತ್ತೆಂಬುದು ತಿಳಿದ ವಿಚಾರವೇ. ಈ ಕಾಯಿದೆಯ ವಿರುದ್ಧವಾಗಿ ಸ್ಥಳೀಯರು ತಮ್ಮದೇ ಆದ ಸೈನ್ಯ, ನಾಯಕರುಗಳು ಹಲಗಲಿಯ ಬೇಡರಂತಹ ಆಯುಧ ಜೀವಿಗಳು, ವೃತ್ತಿವೀರರು ತಿರುಗಿಬಿದ್ದು ತಮ್ಮ ಪ್ರತಿರೋಧವನ್ನು ಅಭಿವ್ಯಕ್ತಿಸಿದರು, ಅದರ ಫಲವಾಗಿ ಪ್ರಾಣವನ್ನು ಕಳೆದುಕೊಂಡರು. ೧೮೫೭ರ ಶ್ರೇಣಿಯಲ್ಲಿನ ಹೋರಾಟ ಕರ್ನಾಟಕದಲ್ಲಿ ಮೊದಲು ಸಂಭವಿಸಿದ್ದು, ನವೆಂಬರ್‌ನಲ್ಲಿ, ಮುಧೋಳ ಸಮೀಪದ ಹಲಗಲಿಯಲ್ಲಿ. ಬ್ರಿಟಿಷ್ ಸರ್ಕಾರದ ಶಸ್ತ್ರಾಸ್ತ್ರ ಅಧಿನಿಯಮದಡಿ, ತಮ್ಮ ಎಲ್ಲ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸುವ ಅನಿವಾರ್ಯತೆ ಎದುರಾಯಿತು. ಮರಾಠಾ ಸೈನಿಕ ಬಾಬಾಜಿ ನಿಂಬಾಳಕರ ಹಲಗಲಿಯ ಬೇಡರಿಗೆ ಬ್ರಿಟಿಷರ ವಿರುದ್ಧ ದಂಗೆ ಏಳುವಂತೆ ಪ್ರೋತ್ಸಾಹಿಸಿದ. ಬ್ರಿಟಿಷ್ ಸೈನ್ಯ ಹಲಗಲಿಯ ಬೇಡರ ಹೆಡೆಮುರಿ ಕಟ್ಟಲು ಮುಧೋಳ್ ಸುತ್ತುವರೆಯಿತು. ಈ ಯುದ್ಧದಲ್ಲಿ ನಿಂಬಾಳಕರ ಹತನಾಗುತ್ತಾರೆ. ೨೯೦ ಬೇಡರನ್ನು ಸೆರೆ ಹಿಡಿದ ಬ್ರಿಟಿಷರು, ೧೯ ಜನರನ್ನು ಗಲ್ಲಿಗೇರಿಸಿದರು. ಜಡಗ್ಯಾ–ಬಾಳ್ಯಾ ಎಂಬ ಬೇಡರ ಮುಖಂಡರನ್ನೂ ಸಹ ಗಲ್ಲಿಗೇರಿಸಿದರು.

ಹುಲಕುಂದದ ಲಾವಣಿಕಾರ / ಹಲಗಲಿಯ ಬೇಡರ ಬಗ್ಗೆ ಹೀಗೆ ಬರೆದಿದ್ದಾರೆ

ಕುಂಪಣಿಯವರು ಮಾಡ್ಯಾರ ಸಂಪಾರ
ನಾಡಮೇಗಿನ ಜನಾ ಮರುಗಿತೋ ಮರಮರಾ
ಸರಕಾರ ಬಂದು ಕೆಡವಿದ ಮೇಲೆ ಯಾರಿಲ್ಲ ಈ ಧರಾ
ಕಳಸ ಇಲ್ಲದಾ ತೇರಿನ ಗತಿ ಬದಾಮಿ ಶೃಂಗಾರಾ
ಕರ್ನಾಟಕ ಪ್ರಾಂತಕ್ಕ ಆಧಾರ ಇತ್ತ ಈ ಗಡಾ
ಬಡಕೊಂಡು ಹೋದರೂ ಕೇಳವರ್ಯಾರಿಲ್ಲ ನಾಡಾ..

ಈ ಹಿನ್ನೆಲೆಯಲ್ಲಿ 'ನಿಶಸ್ತ್ರೀಕರಣ ಕಾಯಿದೆಯ ಪ್ರಭಾವ– ಪರಿಣಾಮಗಳು ಪ್ರಸ್ತುತ ಸ್ಥಳೀಯ ಶ್ರದ್ಧಾ ಕೇಂದ್ರಗಳಾದ ದೇವಾಲಯ ಮಠಮಾನ್ಯಗಳ ಮೇಲೆ ಯಾವ ಬಗೆಯಲ್ಲಿತ್ತು, ಈ ಕಾಯಿದೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ವಸಾಹತು ನಿಲುವು ಈ ಶ್ರದ್ಧಾಕೇಂದ್ರಗಳನ್ನು ಕುರಿತು ಹೇಗಿತ್ತು ಎಂಬುದನ್ನೂ ಅರಿಯಬೇಕಾಗುತ್ತದೆ. ಅದಕ್ಕಾಗಿ ಆ ಕಾಲದ ದಾಖಲೆಗಳು ಬರಹಗಳು ಮುಖ್ಯ ಆಕರವಾಗುತ್ತವೆ. ಈ ಅಧ್ಯಯನಕ್ಕೆ ಮುಖ್ಯ ಆಕರಗಳಾಗಿ ಕೆಲವು ಶಾಸನಗಳು ಮತ್ತು ಮುಖ್ಯವಾಗಿ ಕರ್ನಾಟಕದ ಮಠಮಾನ್ಯಗಳಲ್ಲಿ ಉಳಿದುಬಂದಿರುವ ಅನೇಕ ಕಡತಗಳ ದಾಖಲೆಗಳನ್ನು, ಪತ್ರಾಗಾರ ಇಲಾಖೆಯಲ್ಲಿನ ದಾಖಲೆಗಳನ್ನು ಪರಿಶೀಲಸುವುದು ಅವಶ್ಯಕವಾಗುತ್ತದೆ.

ಪ್ರಾಚೀನ ಕಾಲದಿಂದಲೂ ದೇವಾಲಯಗಳ ರಕ್ಷಣೆಗಾಗಿ ದೇವಾಲಯಗಳಿಗೆ ಅಂಗಭೋಗ ರಂಗಭೋಗಗಳಿಗೆ ಬಿಡುತ್ತಿದ್ದ ದಾನ ದತ್ತಿಗಳ ಸಂದರ್ಭದಲ್ಲಿ ಅಲ್ಲಿನ ದೇವಾಲಯಗಳ ರಕ್ಷಣೆಗಾಗಿ ಕಾವಲು ಬಂಟರನ್ನು ಅಂಗರಕ್ಷಕರನ್ನೂ ಸಹ ನೇಮಿಸುತ್ತಿದ್ದರು ಎಂಬುದಕ್ಕೆ ಅನೇಕ ಶಾಸನಗಳ ಉಲ್ಲೇಖಗಳನ್ನು ನೀಡಬಹುದು ಚೆನ್ನರಾಯಪಟ್ಟಣ ಅಗ್ರಹಾರ ಬೆಳಗಲಿ ಶಾಸನ[೧] ಅಲ್ಲಿನ ಕೇಶವೇಶ್ವರ ದೇವರ ಕಾವಲು ವೀರರಿಗಾಗಿ ಗದ್ದೆ ಬೆದ್ದಲುಗಳನ್ನು ನೀಡಲಾಗಿದೆ. ಮತ್ತೊಂದು ಶಾಸನದಲ್ಲಿ[೨] ಅಂಗರಿಕರ ಆಳು ೯ ಕ್ಕೆ ಗ ೩೬ ಅವರ ನಾಯಕನಿಗೆ ಗ ೧೦ ಮತ್ತು ಹೊಳೆಯ ನರಸಿಂಘೇಶ್ವರ ದೇವರ ಅಂಗರಕ್ಷಕ ಆಳುಗಳಿಗೆ ೪ ಗದ್ಯಾಣಗಳಂತೆ ೩ ಜನರಿಗೆ ೧೨ ಗದ್ಯಾಣಗಳನ್ನು ನೀಡಿರುವ ಉಲ್ಲೇಖವಿದೆ.[೩] ಕೆಲವು ರಾಜಮಾನ್ಯವನ್ನು ಹೊಂದಿದ್ದ ಮಠಗಳಂತೂ ಆಳರಸರಿಂದ ಅಪಾರವಾದ ಮನ್ನಣೆಯನ್ನು ಪಡೆದು, ಚತ್ರ ಚಾಮರ, ಬಿರುದು ಬಾವಲಿ ಮುಂತಾದ ಗೌರವಗಳನ್ನು ಕೊಟ್ಟು ಮಾನ್ಯಮಾಡಿದ್ದವು.

ಬ್ರಿಟೀಷರು ಇಂಡಿಯಾದಲ್ಲಿ ಅವರು ಆಡಳಿತಾತ್ಮಕವಾಗಿ ತೆಗೆದುಕೊಳ್ಳುತ್ತಿದ್ದ ,ಅನೇಕ ನಿಲುವುಗಳು ದೇಸೀ ಜನರ ಸಂಘರ್ಷಗಳಿಗೆ ಕಾರಣವಾಯಿತು. ಈ ಸಂದರ್ಭದಲ್ಲಿ ನಮ್ಮ ಮಠಮಾನ್ಯಗಳಿಗೆ ಬ್ರಿಟೀಷರ ನಿಶಸ್ತ್ರೀಕರಣ ಕಾಯಿದೆಯು ಅನ್ವಯವಾಗಿತ್ತೇ ಎಂಬುದನ್ನು ಪರಿಶೀಲಿಸೋಣ.

ನಿಶಸ್ತ್ರೀಕರಣ ಕಾಯಿದೆಗೆ ಮೊದಲಿನ ಅನೇಕ ಕಡತಗಳ ರಹದಾರಿಪತ್ರಗಳಲ್ಲಿ ಸಂಬಂಧಿತ ಜಿಲ್ಲೆಗಳ, ಕಲೆಕ್ಟರುಗಳಿಂದ ಮಠಮಾನ್ಯಗಳ ಸ್ವಾಮೀಜಿಗಳ ಪ್ರವಾಸ ಪ್ರಯಾಣಗಳ ಸಂದರ್ಭದಲ್ಲಿ, ತಮ್ಮ ಪ್ರಯಾಣ ರಹದಾರಿ ಪತ್ರವನ್ನು ಪಡೆಯಬೇಕಾಗಿತ್ತು,

ಇದು ಕೌಟಿಲ್ಯನ ಕಾಲದಿಂದಲೂ ರಹದಾರಿ ಪತ್ರಗಳಿದ್ದು, ಆ ಪತ್ರಗಳಲ್ಲಿ ನೀಡಿರುವ ಮಾಹಿತಿಗಳು ಕುತೂಹಲಕರವಾದ ಅನೇಕ ವಿಚಾರಗಳನ್ನು ಒಳಗೊಂಡಿವೆ.

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಹಾಗೂ ವೈದಿಕ ಮಠಗಳ ಅಪೂರ್ವವಾದ ದಾಖಲೆಗಳು ಬಹುಮುಖೀ ಆಯಾಮಗಳನ್ನು ಹೊಂದಿದ್ದು ಈ ನಿಟ್ಟಿನಲ್ಲಿ ಬೆಳಕು ಚೆಲ್ಲುತ್ತದೆ.

ಕ್ರಿಸ್ತಶಕ ೧೯೧೪ ಜನವರಿ ೧೫ರಂದು ಗದುಗಿನ ತೋಂಟದ ಸ್ವಾಮಿಗಳು ಗುರು-ಶಿಷ್ಯ ವಂಶ ಕ್ರಮದಿಂದ ಯಡಿಯೂರು ಸಿದ್ದಲಿಂಗೇಶ್ವರ ವಂಶಸ್ಥರಾಗಿದ್ದರು. ಹೀಗಾಗಿ ಇವರು ಎಡೆಯೂರು ಗದ್ದುಗೆ ದರ್ಶನಕ್ಕಾಗಿ ಹೋಗುತ್ತಿದ್ದು ಮೈಸೂರು ಪ್ರದೇಶದ ಪ್ರವಾಸದಲ್ಲಿ ಜಗದ್ಗುರುಗಳಿಗೆ ರಕ್ಷಣೆ ಗೌರವ ನೀಡಲು ದಿವಾನರಾದ ಎಂ. ವಿಶ್ವೇಶ್ವರಯ್ಯ ಅವರಿಗೆ ಬರೆದ ಅರ್ಜಿ ಪತ್ರ ಇದಾಗಿದೆ. ಈ ದಾಖಲೆ ಅಧ್ಯಯನ ಬಹಳ ಆಯಾಮಗಳಿಂದ ಕೂಡಿದ್ದು ಕುತೂಹಲಕರವಾದ ಅನೇಕ ಮಾಹಿತಿಗಳನ್ನು ಬಿಟ್ಟುಕೊಡುತ್ತದೆ.

ಶ್ರೀ ನಿರಂಜನ ತೋಂಟದಾರ್ಯ ಮಠದ ಗುರು ತೋಂಟದ ಸ್ವಾಮಿ ಸಂಸ್ಥಾನಮಠ ಡಂಬಳ ಮತ್ತು ಗದಗ ಇವರು ಕಾಯ್ದೆ ಪ್ರಕಾರ ಏಜೆಂಟರ್ ಆದ ಗುರು ಪಟ್ಟದ ಸ್ವಾಮಿ ಗದಗ ಇವರನ್ನು ನೇಮಿಸಿಕೊಂಡಿದ್ದರು. ಅವರ ಮುಖಾಂತರ ಇಂತಹ ಪ್ರವಾಸಕ್ಕೆ ಸಂಬಂಧಿಸಿದ ಅನುಮತಿ ಕೋರಿ ಪತ್ರಗಳನ್ನು ಬರೆಯುವುದು ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಅರ್ಜಿಯೊಂದಿಗೆ ಒದಗಿಸಿಕೊಡುವುದು ಇಂತಹ ಕಾರ್ಯಗಳನ್ನು ನೆರವೇರಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ರಾಮಚಂದ್ರಾಪುರಮಠ, ಶೃಂಗೇರಿಮಠ ಇತ್ಯಾದಿಗಳಲ್ಲಿ ಪಾರುಪತ್ತೆಗಾರರು ಈ ಕಾರ್ಯವನ್ನು ಮಾಡಿರುವುದು ಕಂಡುಬರುತ್ತದೆ. ಈ ಮಠದ ಚರಿತ್ರೆಯನ್ನು ಅರ್ಜಿಯಲ್ಲಿ ಬರೆದಿರುವುದು ವಿಶೇಷವಾಗಿದೆ. ಈ ಮಠದ ಶಾಖಾಮಠಗಳ ವಿಚಾರಗಳನ್ನು ಸಹ ಇಲ್ಲಿ ತಿಳಿಸಲಾಗಿದೆ. ಅಲ್ಲದೆ ಮದ್ರಾಸ್ ಮತ್ತು ಮುಂಬೈ ಇಲಾಖೆಯಲ್ಲಿ ಸಹ ಅವರ ಮಠಗಳಿರುವ ವಿಚಾರ ತಿಳಿದುಬರುತ್ತದೆ. ಸ್ವಾಮಿಗಳು ವಿಶೇಷವಾಗಿ ವಿದ್ಯಾವಂತರಾಗಿದ್ದರೂ ಮತ್ತು ಲಿಂಗಾಯತ ವಂಶದವರಿಂದ ಮರ್ಯಾದೆ ಪೂಜಾದಿಗಳಿಗೆ ಪಾತ್ರರಾಗಿದ್ದರು ಎಂಬ ವಿಚಾರವು ಉಲ್ಲೇಖಗೊಂಡಿದೆ. ಆ ಮಠಗಳಿಗೆ ಬ್ರಿಟಿಷ್ ಇಂಡಿಯಾದ ಒಳಗಡೆ ಅಂದರೆ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಅನೇಕ ಇನಾಂಭೂಮಿಗಳು ಇರುವ ವಿಚಾರ ಸಹ ಉಲ್ಲೇಖವಾಗಿದೆ. ಈ ಮಟ್ಟಕ್ಕೆ ಇರುವ ಮರ್ಯಾದೆ ಅಡ್ಡಪಲ್ಲಕ್ಕಿ ಇತರ ಸವಲತ್ತುಗಳು, ಬಿರುದುಗಳು, ಹಕ್ಕುಗಳು ಇರುವುದು ಪತ್ರದಲ್ಲಿ ಉಲ್ಲೇಖವಾಗಿದೆ. ಈ ಪತ್ರಗಳ ವಿಶೇಷವೆಂದರೆ ಮಠಕ್ಕೆ ಇರುವ ಎಲ್ಲ ಬಗೆಯ ಸವಲತ್ತುಗಳು, ಪರಂಪರೆ, ಚರಿತ್ರೆ, ಸಮಾಜದಲ್ಲಿ ಮಠಕ್ಕೆ ಇರುವ ಸ್ಥಾನಮಾನ ಇತ್ಯಾದಿ ಎಲ್ಲ ವಿವರಗಳನ್ನು ನೀಡಿರುವುದರ ಜೊತೆಗೆ ಅದಕ್ಕೆ ಅತ್ಯಗತ್ಯವಾದ ಅಂತಹ ದಾಖಲೆಗಳನ್ನು ಸಹ ಜೊತೆಗೆ ಉಲ್ಲೇಖಿಸಿರುವುದು ಬಹಳ ವಿಶೇಷವಾಗಿದೆ.[೪]

ಅಗತ್ಯವಾದ ಬ್ರಿಟಿಷ್ ಆಡಳಿತದ ಕಮಿಷನ್ ಮುಂಬೈ ಇಲಾಖೆಯ ಸ.ದಿ.ಕಮಿಷನರ್ ಹುಕುಂ, ಕಮಿಷನರ್ ಹುಕುಂಗಳ ದಾಖಲಾತಿಗಳ ರೆಫರೆನ್ಸ್ ನೀಡಲಾಗಿದೆ.

ಇದಲ್ಲದೇ ಬ್ರಿಟಿಷ್ ಇಂಡಿಯಾದಲ್ಲಿ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಅನೇಕ ಬಗೆಯ ವಿಶೇಷ ಸವಲತ್ತುಗಳು ಮತ್ತು ವಿನಾಯಿತಿಗಳು ಮಠಗಳಿಗೆ ನೀಡಲಾಗಿತ್ತು ಎಂಬುದು ಸಹ ತಿಳಿದುಬರುತ್ತದೆ. ಉದಾಹರಣೆಗೆ ನೋಡುವುದಾದರೆ ಯಾವುದೇ ಮಠದ ಸ್ವಾಮೀಜಿಗಳು ಸವಾರಿ ಹೊರಟ ಸಂದರ್ಭದಲ್ಲಿ ಜೊತೆಗೆ ಕರೆದೊಯ್ಯುತ್ತಿದ್ದ ಅಂತಹ ರಕ್ಷಣಾದಳದ ಜೊತೆಗೆ ಶಸ್ತ್ರಾಸ್ತ್ರಗಳನ್ನು ಹೊಂದುವ ಸಂಬಂಧಿತವಾಗಿ ಬ್ರಿಟಿಷ್ ಆಡಳಿತವು ಯಾವುದೇ ಬಗೆಯಲ್ಲಿ ಅಡ್ಡಿ-ಆತಂಕಗಳನ್ನು ಒಡ್ಡದೆ, ನಿಶ್ಯಸ್ತ್ರೀಕರಣ ಕಾಯಿದೆ ಇದ್ದಾಗಲೂ ಸಹ ಅದರಿಂದ ವಿನಾಯಿತಿ ನೀಡಿತ್ತು ಎಂಬುದು ತಿಳಿದುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಸ್ವಾಮಿಗಳು ಸಿವಿಲ್ ಕೋರ್ಟ್‌ನಲ್ಲಿ ಹಾಜರಾಗುವ ಅವಶ್ಯಕತೆಯಿಂದ ಮುಕ್ತ ಮಾಡಲ್ಪಟ್ಟಿದ್ದರು ಎಂಬುದು ಸಹ ತಿಳಿದುಬರುತ್ತದೆ[೫] ವಸಾಹತುಶಾಹಿಯ ನಿಶಸ್ತ್ರೀಕರಣ ಕಾಯ್ದೆಯಿಂದ ಆರ್ಮ್ಸ್ ಆಕ್ಟ್ ವಿನಾಯತಿ ನೀಡಲಾಗಿದೆ. [ಇಂಡಿಯನ್ ಆನ್ಸರ್ ೨೭ನೇ ಕಲಮಿನಲ್ಲಿ ಕಾಣಿಸಿದಂತೆ ೧೩ ೧೪ ೧೫ ೧೬ ಗಳಲ್ಲಿ ಇರುವ ನಿರ್ಬಂಧಗಳ ಪ್ರತಿಬಂಧಗಳಲ್ಲಿ ಹಾಜರಿರುವ ಅವಶ್ಯಕತೆ ಇಂದ ಮುಕ್ತ ಮಾಡಲ್ಪಟ್ಟವರಿಗೆ ಲಾಗು ಇಲ್ಲ ಅನ್ನುವುದನ್ನು ಮಾಡತಕ್ಕದ್ದು].

ಈ ಹಿಂದೆ ೧೯೦೮ರಲ್ಲಿ ಈ ಸ್ವಾಮಿಗಳ ಕೆಲವು ಸ್ವಂತ ಶಿಷ್ಯರಿಗೆ ಯಡಿಯೂರು ಮತ್ತು ಮೈಸೂರಿಗೆ ಹೋಗಿದ್ದ ಸಂದರ್ಭದಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳ ಸಹಾಯವು ದೊರೆತಿತ್ತು ಎಂಬ ವಿಚಾರವೂ ತಿಳಿದುಬರುತ್ತದೆ. ಗದಗಿನಿಂದ ಎಡೆಯೂರಿಗೆ ಹೋಗುವ ದಾರಿಯನ್ನು ಜಿಲ್ಲೆ ತಾಲೂಕು ಮತ್ತು ಹಾದಿಯಲ್ಲಿ ಬರುವ ಗ್ರಾಮಗಳು ಒಳಗಿನಿಂದ ಕಾಯಬೇಕಾಗಿತ್ತು. ತಮ್ಮ ಮರ್ಯಾದೆಗೆ ತಕ್ಕಂತೆ ತಮ್ಮ ಪ್ರಯಾಣದ ಸಕಲ ಜನ ಮತ್ತು ವಸ್ತು ವಾಹನಾದಿ ವಿವರಗಳನ್ನೆಲ್ಲ

ಸುರಕ್ಷಿತವಾಗಿ ಬರೆಯಬೇಕಾಗಿರುವ ವಿಚಾರಗಳು ಸಹ ಈ ಪತ್ರದಲ್ಲಿ ದಾಖಲೆಯಾಗಿವೆ. ನಮ್ಮ ಜಿಂದಗಿ ಅಂದರೆ ಸಾಮಾನು ಸರಂಜಾಮು ಮತ್ತು ಅಮೂಲ್ಯ ಚಿನ್ನ ಬೆಳ್ಳಿ ಒಡವೆ ಇವುಗಳ ಸಂರಕ್ಷಣೆಗಾಗಿಯೂ, ಶಾಂತತೆಯನ್ನು ಕಾಪಾಡುವುದಕ್ಕಾಗಿಯೂ ಕಾಯ್ದುಕೊಳ್ಳುವುದಕ್ಕಾಗಿಯೂ ತಮ್ಮನ್ನು ತಮ್ಮ ಪರಿವಾರವನ್ನು ಹಿಂಬಾಲಿಸುವುದಕ್ಕಾಗಿ ೧೨ ಜನ ಪೊಲೀಸರ ಸಹಾಯವನ್ನು ಕೊಟ್ಟು ಸಹಾಯ ಮಾಡಬೇಕೆಂಬ ಬೇಡಿಕೆಯನ್ನು ಇಡಲಾಗಿದೆ. ಇಲ್ಲಿ ಮಠದ ರಕ್ಷಣೆಗಾಗಿ ಅಂಗರಕ್ಷಕರು ಇದ್ದರೂ ಸಹ ಈ ಬೇಡಿಕೆ ಇಡಲಾಗಿದೆ.

ದಾರಿಯಲ್ಲಿ ಭಕ್ತಾದಿಗಳು ಸಹ ಇಂತಹ ಏರ್ಪಾಟುಗಳನ್ನು ಮಾಡುವ ಸಾಧ್ಯತೆಯು ಸಹ ಇತ್ತು ಎಂಬುದು ತಿಳಿದುಬರುತ್ತದೆ. ಈ ಕಾಳುಕಡ್ಡಿ ಮೇವು ಇವುಗಳು ಯೋಗ್ಯ ಬೆಲೆಯಲ್ಲಿ ಒದಗಿಸುವ ಜವಾಬ್ದಾರಿ ಸ್ಥಳೀಯ ಅಧಿಕಾರಿಗಳದೇ ಆಗಿರುತ್ತಿತ್ತು ಎಂಬುದು ತಿಳಿದುಬರುತ್ತದೆ.

ಈ ಪ್ರಯಾಣವು ಎರಡು ಜಿಲ್ಲೆಗಳ ಪ್ರಯಾಣವನ್ನು ಒಳಗೊಂಡಿರುವುದರಿಂದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆ ಡೆಪ್ಯೂಟಿ ಕಮಿಷನರ್ ಇಂದ ರಹದಾರಿ ನೀಡುವ ಮೆಹರುಬಾನಿಗೆ ಆಗಬೇಕು ಎಂಬ ಬೇಡಿಕೆ ಇರುವುದನ್ನು ಗಮನಿಸಬಹುದು ಪ್ರತಿ ಜಿಲ್ಲೆಯ ಡೆಪ್ಯೂಟಿ ಕಮಿಷನರ್‌ಗಳ ಅನುಮತಿ ಅವಶ್ಯಕತೆ ಇರುತ್ತಿತ್ತು ಎಂಬುದು ಅವರಿಗೆ ದಿವಾನರು ಆಜ್ಞೆ ಮಾಡಬೇಕಾಗಿತ್ತು ಎಂಬುದು ಈ ಪತ್ರದ ಒಕ್ಕಣೆಯಿಂದ. ತಿಳಿದುಬರುತ್ತದೆ. ಸವಾರಿ ಕಾಲಕ್ಕೆ ಪೊಲೀಸರ ಕಾವಲು ಮೇಲೆ ಕಾಣಿಸಿದ ಹತ್ತಿಯಾರ್ಗಳನ್ನು ಒಯ್ಯುವುದಕ್ಕೆ ಮಕ್ಕಳಿಗೆ ಚಿತ್ರಕಲ್ಲುದುರ್ಗ ತುಮಕೂರು ಜಿಲ್ಲೆಗಳಲ್ಲಿ ಅಮಲದಾರರಿಗೆ ಹಾಗೂ ಸಾಮಾನುಗಳನ್ನು ಪೂರೈಸುವ ವಿಷಯದಲ್ಲಿ ಸಹಾಯ ಮಾಡುವುದಕ್ಕೆ ರಹದಾರಿ ಕೊಡಬೇಕು" ಎಂಬ ಬೇಡಿಕೆ ಇರುವುದು ತಿಳಿದುಬರುತ್ತದೆ. ಒಟ್ಟಿನಲ್ಲಿ ಬ್ರಿಟೀಷರು ನಿಶಸ್ತ್ರೀಕರಣ ಕಾಯಿದೆಯನ್ನು ಭಾರತೀಯ ಆಳರಸರು, ವೀರಪಡೆಗಳು, ಪಾಳೇಗಾರರು ಮುಂತಾದವರ ಮೇಲೆ ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದರೂ ಸಹ ಇಲ್ಲಿನ ಧಾರ್ಮಿಕ ಕೇಂದ್ರಗಳನ್ನು, ಗುರುಪೀಠಗಳನ್ನು ಕಾಯಿದೆಯಡಿಗೆ ತರುವ ಧೈರ್ಯವನ್ನು ಬ್ರಿಟೀಷರು ಮಾಡಿರಲಿಲ್ಲವೆಂಬುದು ತಿಳಿದುಬರುತ್ತದೆ. ಸ್ಥಳೀಯ ಕಲೆಕ್ಟರರುಗಳು ಮಠಗಳಿಗೆ ಬರೆದಿರುವ ವಿವಿಧ ಪತ್ರಗಳ ಒಕ್ಕಣೆಗಳನ್ನು ಗಮನಿಸಿದಾಗ, ವಿಶೇಷ ಗೌರವಾದರಗಳಿಂದ ಸ್ವಾಮೀಜಿಗಳನ್ನು ಸಂಬೋಧಿಸಿರುವುದನ್ನು, ವಿನಯಪೂರ್ವಕ ಒಕ್ಕಣೆಗಳನ್ನೂ ಗೌರವ ಪೂರ್ವಕ ಆರಂಭ, ಮುಕ್ತಾಯಗಳನ್ನು ಗಮನಿಸಬಹುದು.

ಅಡಿಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂ. ೧೦, ಸಂಖ್ಯೆ ೯೨, ಕ್ರಿ.ಶ. ೧೨೫೦.

೨. ಎ.ಕ. ಸಂ. ೩, ತಿರುಮಕೂಡಲು ನರಸೀಪುರ, ೧೨೭೬.

೩. ಎ.ಕ. ಸಂ. ೩, ಮಂಡ್ಯ, ಕ್ರಿ.ಶ. ೧೨೩೭.

೪. ನಂಬರ್ ಪಿ/೪೧೫-೯೧೦ರ ತಾ: ೧-೨೬, ೫-೯೧೦.

೫. ಬಾಂಬೆ ಗೌರ್ನಮೆಂಟ್ ರೆಸೊಲ್ಯೂಷನ್ ೩೦ x ೮೪ ತಾರೀಖ್ ೧೫ನೇ ಜೂನ್, ೯೦೪ ಜ.ಡಿ. ಶಿಯಲ್ಲಿ ಡಿ-೧.

◆◆


೬೪

ಮಲ್ಲಿಕಾರ್ಜುನ ಸಿ. ಬಾಗೋಡಿ

ರಸ್ತಾಪುರ ಮನೆಯಲ್ಲಿನ ಭಿತ್ತಿ ಚಿತ್ರಗಳು

ಪ್ರಸ್ತುತ ರಸ್ತಾಪುರ ಮನೆ ರಾಯಚೂರು ನಗರದ ಸೋಮವಾರಪೇಟೆಯಲ್ಲಿನ ಗೀತಾ ಮಂದಿರ ಸಮೀಪದಲ್ಲಿದೆ. ಮನೆಯವರು ಹೇಳುವ ಪ್ರಕಾರ ಪ್ರಸ್ತುತ ಮನೆ ಐದು ತಲೆಮಾರುಗಳ ಹಿರಿತನದು. ೧೯೦೩ರ ಸುಮಾರಿಗೆ ಹಳೆಯ ಮನೆಯನ್ನು ವಿಸ್ತರಿಸಿ ಕಟ್ಟಲಾಗಿದೆ. ಈ ಮನೆಯ ಹಿರಿಯರು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ರಸ್ತಾಪುರ ಮೂಲದವರೆಂದು ಹೇಳಲಾಗುತ್ತಿದ್ದು, ನೂರೈವತ್ತು ವರ್ಷಗಳ ಹಿಂದೆ ಈ ಮನೆತನದವರು ರಾಯಚೂರು ಪಟ್ಟಣಕ್ಕೆ ಬಂದು ನೆಲೆಸಿದ್ದಾರೆ. ಕೃಷಿ ಕಾಯಕದೊಂದಿಗೆ ಕಾಳುಕಡ್ಡಿ ವ್ಯಾಪಾರ ಮಾಡಿಕೊಂಡು ಬಂದಿರುವ ಈ ಮನೆತನದ ಮೂಲಪುರುಷರು ತಿಮ್ಮಪ್ಪ ಎನ್ನಲಾಗುತ್ತಿದ್ದರೂ ಮುನಿಯಪ್ಪ ಎನ್ನುವವರಿಂದ ಹೆಚ್ಚಿನ ಮಾಹಿತಿ ಲಭ್ಯವಾಗುತ್ತದೆ. ಮುನಿಯಪ್ಪನವರ ಕಾಲಕ್ಕೆ ಪ್ರಸ್ತುತ ಮನೆಯನ್ನು ವಿಸ್ತರಿಸಿ ಕಟ್ಟಿಸಲಾಗಿದೆ ಎಂದು ಮನೆಯವರು ಹೇಳುತ್ತಾರೆ.

ಕಟ್ಟಡ ವಿಸ್ತರಿಸುವ ಸಂದರ್ಭದಲ್ಲೇ ಮನೆಯ ಮೇಲಂತಸ್ತಿನ ಹಜಾರದ ಗೋಡೆಗಳ ಮೇಲೆ ಚಿತ್ರಗಳನ್ನು ಬರೆಯಲಾಗಿದೆ. ಅಂದರೆ ಮನೆಯಲ್ಲಿ ಬರೆದ ಚಿತ್ರಗಳು ನೂರು ವರ್ಷಗಳಷ್ಟು ಹಳೆಯವು. ರಸ್ತಾಪುರ ಮನೆ ಸಮೀಪವೇ ಖಾಜನಗೌಡರ ಮೂರಂತಸ್ತಿನ ಭವ್ಯವಾದ ದೌಲತ್ ಮಹಲಿದೆ. ರಸ್ತಾಪುರ ಮನೆಯಲ್ಲಿನ ಚಿತ್ರಗಳಿಗೂ ಖಾಜನಗೌಡರ ಮನೆಯಲ್ಲಿನ ಚಿತ್ರಗಳಿಗೂ ಸಾಕಷ್ಟು ಹೋಲಿಕೆಯಿದೆ. ಕೆಲ ರಚನೆಗಳಂತೂ ಖಾಜನಗೌಡರ



ಭಿತ್ತಿಚಿತ್ರವುಳ್ಳ ಮನೆಯ ಒಳಾವರಣ

ಅಧ್ಯಾಪಕರು
ದೃಶ್ಯಕಲಾ ಅಧ್ಯಯನ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ
ಮೊ: ೯೪೪೮೭ ೫೨೧೫೭

ಮನೆಯಲ್ಲಿನ ಚಿತ್ರಗಳ ಪ್ರತಿರೂಪದಂತೆಯೇ ಇವೆ. ಬಹುಶಃ ಈ ಚಿತ್ರಗಳನ್ನು ಖಾಜನಗೌಡರ ಮನೆಯಲ್ಲಿ ಬರೆದ ಚಿತ್ರಕಲಾವಿದರೇ ಬರೆದಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಗೋಡೆಗಳ ಮೇಲೆ ಬರೆದ ಚಿತ್ರಗಳು ಮಾತ್ರವಲ್ಲ ಮೇಲಂತಸ್ತಿನ ಹಜಾರದ ಒಂದೆಡೆ ಜೋಡಿಸಿರುವ ಸೂಕ್ಷ್ಮ ಕುಸುರಿ ಕೆತ್ತನೆವುಳ್ಳ ಕಾಷ್ಠ ರಚನೆಯೂ ಮನೆಯ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ. ಸಾಗುವಾನಿ ಮರದ ಕಟ್ಟಿಗೆ ಬಳಸಿದ್ದರಿಂದ ಕುಸುರಿ ಕೆತ್ತನೆ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ. ಮನೆಯ ಯಜಮಾನ ಮಲಗುವ ಕೋಣೆಯಲ್ಲಿ ಇರುವ ವಿಶಿಷ್ಟ ಕೆತ್ತನೆವುಳ್ಳ ಮಂಚ ಮತ್ತು ಸುತ್ತಲೂ ಮಾಡಲಾಗಿರುವ ಗಾಜಿನ ಅಲಂಕರಣೆ ಮನೆಯ ಯಜಮಾನನಿಗಿರುವ ಕಲಾಪ್ರೇಮವನ್ನು ತೋರಿಸುತ್ತದೆ. ಕುಸುರಿ ಕೆತ್ತನೆ, ವರ್ಣಚಿತ್ರಗಳು ಸೇರಿದಂತೆ ವಾಸ್ತುವಿನ್ಯಾಸದಿಂದಾಗಿ ಈ ಮನೆ ಕಲಾತ್ಮಕವೆನಿಸಿದೆ. ಈ ಕಾರಣಕ್ಕೆ ಕೆಲವರು ಈ ಮನೆಯನ್ನು ಸಿರಿಮನೆ ಎಂತಲೂ ಕರೆಯುತ್ತಾರೆ. ಬಹಳ ಹಿಂದಿನಿಂದಲೂ ಬೇರೆ ಬೇರೆ ಸಂದರ್ಭಗಳಲ್ಲಿ ಈ ಸಿರಿಮನೆಯಲ್ಲಿ ಕಾರ್ಯಕ್ರಮಗಳಾಗಲಿ, ಧಾರ್ಮಿಕ ವಿಧಿ-ವಿಧಾನಗಳಾಗಲಿ ನಡೆದುಕೊಂಡು ಬಂದಿವೆಯಾದರೂ ಚಿತ್ರಿತ ಗೋಡೆಗಳ ಮೇಲೆ ಸುಣ್ಣ-ಬಣ್ಣ ಬಳಿಯಲಾಗಿಲ್ಲ. ಆದರೆ, ಚಿತ್ರಿತ ಗೋಡೆಗಳಿಗೆ ಅಲ್ಲಲ್ಲಿ ಸಣ್ಣಪುಟ್ಟ ರಿಪೇರಿ ಮಾಡಲಾಗಿರುವುದರಿಂದ ಚಿತ್ರಗಳು ಅಳಿಸಿ ಹೋಗಿವೆ.

ರಸ್ತಾಪುರ ಮನೆಗೆ ಕ್ಷೇತ್ರಕಾರ್ಯ ಕೈಗೊಂಡಿದ್ದ ವೇಳೆ ಮನೆಯ ವಾರಸುದಾರ ಉಮಾಪತಿ ಅವರೊಂದಿಗೆ ಮನೆ ಮತ್ತು ಚಿತ್ತಾರಗಳ ಬಗ್ಗೆ ಮಾಹಿತಿ ಪಡೆದುಕೊಂಡೆ. ಆಗವರು ಮನೆಯ ಸುಣ್ಣ-ಬಣ್ಣ ಕೆಲಸದಲ್ಲಿ ತೊಡಗಿದ್ದರು. ಚಿತ್ರಗಳಿರುವ ಗೋಡೆಗಳಲ್ಲಿ ಅಲ್ಲಲ್ಲಿ ಬಿರುಕು ಕಾಣಿಸಿಕೊಂಡಿದ್ದರಿಂದ ಮೇಲಿನ ಗಾರೆಯನ್ನು ತೆಗೆದು ಸಿಮೆಂಟ್‌ನಿಂದ ಪ್ಲಾಸ್ಟರ್ ಮಾಡುತ್ತಿದ್ದೇವೆ ಎಂದು ಹೇಳಿದರು. ಬಹುಶಃ ಆ ದಿನದ ಬದಲು ಮರುದಿನ ನಾನು ಅವರ ಮನೆಗೆ ಹೋಗಿದ್ದಿದ್ದರೆ ಈ ಚಿತ್ತಾರಗಳು ಉಳಿಯುತ್ತಿದ್ದವೋ ಗೊತ್ತಿಲ್ಲ. ಒಂದೆರಡು ಗಂಟೆಗಳ ಕಾಲ ಮನೆಯ ವಾರಸುದಾರರೊಂದಿಗೆ ಮಾತನಾಡುತ್ತ, ಚಿತ್ರಗಳ ಮಹತ್ವ ಕುರಿತು ತಿಳಿಹೇಳಿದಾಗ, ಅವರು ಚಿತ್ರಿತ ಗೋಡೆಯೊಂದನ್ನು ಹಾಗೆಯೇ ಬಿಟ್ಟು ಉಳಿದದ್ದು ರಿಪೇರಿ ಮಾಡುವ ಆಲೋಚನೆ ಮಾಡಿದರು. ಆದಾಗ್ಯೂ ಅವರ ಮನದಾಲೋಚನೆ ಬದಲಾಗಬಹುದಾದ ಸಾಧ್ಯತೆಗಳ ಹಿನ್ನೆಲೆಯಲ್ಲಿ ಪ್ರಸ್ತುತ ಕಲಾತ್ಮಕ ಮನೆ ಮತ್ತು ಅದರೊಳಗಣ ಇರುವ ಭಿತ್ತಿಚಿತ್ರಗಳನ್ನು ನನ್ನ ಕ್ಯಾಮೆರಾದಲ್ಲಿ ದಾಖಲಿಸಿಕೊಂಡೆ. ಶತಮಾನ ಕಂಡ ಭಿತ್ತಿಚಿತ್ರಗಳನ್ನು ಒಂದೆಡೆ ದಾಖಲಿಸುವ ಆಶಯ ಹೊಂದಿ ಅಕಾದೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿರುವುದು ಸಮಯೋಚಿತ ಎನಿಸುತ್ತಿದೆ.


ಚಿತ್ರಗಳ ವಿವರ: ಮೇಲಂತಸ್ತಿನ ಹಜಾರ ೧೫ ಅಡಿ ಅಗಲ ಮತ್ತು ೨೦ ಅಡಿ ಉದ್ದ ವಿಸ್ತೀರ್ಣದಲ್ಲಿದೆ. ಮೂರು ಬದಿಯಲ್ಲಿ ಗೋಡೆಗಳಿದ್ದು, ಮಧ್ಯದಲ್ಲಿ ಕಮಾನು ಮಾದರಿಯ ಕಿಟಕಿಗಳನ್ನು ಬಿಡಲಾಗಿದೆ. ಮನೆಯವರೇ ಹೇಳುವಂತೆ ಮೂರೂ ಬದಿಯ ಗೋಡೆಗಳಲ್ಲಿನ ಕಮಾನು ಮಾದರಿಯ ಕಿಟಕಿಗಳ ಸುತ್ತಲೂ ಹೂಬಳ್ಳಿ ಮತ್ತು ಅಲಂಕಾರಿಕ ನಮೂನೆಗಳನ್ನು ಬರೆಯಲಾಗಿತ್ತಾದರೂ ಸದ್ಯ ಎರಡು ಬದಿಯ ಗೋಡೆಯಲ್ಲಿ ಮಾತ್ರ ಅವುಗಳನ್ನು ಉಳಿಸಿಕೊಂಡಿದೆ.




ಹೂಕುಂಡದಲ್ಲಿ ಕುಳಿತ ಗಿಳಿಗಳು



ಮಾವಿನ ಮರದಲ್ಲಿ ಹಣ್ಣು ತಿನ್ನುತ್ತಿರುವ ಮಂಗಗಳು



ಹೂಕುಂಡದಲ್ಲಿ ಕುಳಿತ ಗಿಳಿಗಳು



ಕಮಾನು ಸುತ್ತಲಿನ ಸುಳುವಿನ ವಿನ್ಯಾಸ



ಕಿನ್ನರ ರೂಪದ ಸ್ತ್ರೀ ಆಕೃತಿಗಳು



ನವಿಲ ಬೇಟೆ ನಿರತ ಮಹಿಳೆ

ಉತ್ತರಾಭಿಮುಖ ಗೋಡೆಯ ಮೇಲಿನ ಚಿತ್ರಗಳು ಬಹುಪಾಲು ನಶಿಸಿಹೋಗಿವೆ. ಪೂರ್ವಾಭಿಮುಖ ಗೋಡೆಯ ಮಧ್ಯೆ ಕಮಾನು ಮಾದರಿಯಲ್ಲಿ ಮೂರು ಕಿಟಕಿಗಳನ್ನು ಬಿಡಲಾಗಿದೆ. ಈ ಕಿಟಕಿಗಳ ಸುತ್ತಲೂ ನೀಲಿ ಮತ್ತು ಹಳದಿ ವರ್ಣಗಳಲ್ಲಿ ಹೂಬಳ್ಳಿಯ ವಿನ್ಯಾಸ ಬರೆಯಲಾಗಿದೆ. ಮಧ್ಯದ ಕಿಟಕಿಯ ಎರಡೂ ಬದಿಗಳಲ್ಲಿ ಹೂಕುಂಡಗಳನ್ನು ಚಿತ್ರಿಸಿದ್ದು, ಎಡಬದಿಯ ಹೂಕುಂಡದ ಇಕ್ಕೆಲಗಳಲ್ಲಿ ಕಾಮಧೇನುವನ್ನು ಅತ್ಯಂತ ಚಿಕ್ಕದಾಗಿ ಚಿತ್ರಿಸಿದರೆ, ಬಲಬದಿಯ ಹೂಕುಂಡದ ಇಕ್ಕೆಲಗಳಲ್ಲಿ ನವಿಲನ್ನು ಕಿರಿದಾಗಿ ಚಿತ್ರಿಸಿದೆ. ಈ ರಚನೆಯ ಕೆಳಬದಿಯಲ್ಲೂ ಹೂಬಳ್ಳಿಯ ವಿನ್ಯಾಸವನ್ನು ಬರೆಯಲಾಗಿದ್ದು, ಗಿಳಿಗಳೆರಡನ್ನು ಅತ್ಯಂತ ಸುಂದರವಾಗಿ ತೋರಿಸಿದೆ. ಹೂಬಳ್ಳಿ ವಿನ್ಯಾಸದ ತೀರ ಮೇಲ್ಭಾಗದಲ್ಲಿ ಸಾಂಪ್ರದಾಯಿಕ ಚಿತ್ರಗಳಲ್ಲಿ ತೋರಿಸುವ ಕಿನ್ನರ ರೂಪದ ಎರಡು ಸ್ತ್ರೀ ಆಕೃತಿಗಳನ್ನು ಚಿತ್ರಿಸಿದೆ. ಸ್ತ್ರೀ ಆಕೃತಿಗಳ ದಿರಿಸು ಐರೋಪ್ಯ ಮಾದರಿಯಲ್ಲಿ ತೋರಿಸಿರುವುದನ್ನು ಗಮನಿಸಿದರೆ ಮನೆಯ ಯಜಮಾನನು ಕಲಾವಿದರಿಗಿಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಿರುವುದು ಅರ್ಥವಾಗುತ್ತದೆ. ಎಡಬದಿಯಲ್ಲಿ ಬಿಲ್ಲನ್ನು ಹಿಡಿದು ನಿಂತಿರುವ ಮಹಿಳೆಯನ್ನು ಚಿತ್ರಿಸಿದೆ. ಮಹಿಳೆ ಧರಿಸಿರುವ ಸೀರೆ ದಟ್ಟ ಹಸಿರು ವರ್ಣದಲ್ಲಿದ್ದು, ಆಕೆಯ ಮೈಬಣ್ಣ ಗೌರವರ್ಣದ ಬದಲಾಗಿ ಹಳದಿ ವರ್ಣದಲ್ಲಿ ತೋರಿಸಿದೆ. ಸ್ವಲ್ಪ ಕೆಳಭಾಗದಲ್ಲಿ ನವಿಲೊಂದನ್ನು ಚಿತ್ರಿಸಿರುವುದರಿಂದ ಮಹಿಳೆ ನವಿಲಿಗೆ ಗುರಿ ಇಟ್ಟಂತೆ ಭಾಸವಾಗುತ್ತದೆ. ನವಿಲಿನ ಅರ್ಧಭಾಗ ಅಳಿಸಿಹೋಗಿದ್ದರೆ, ಮಹಿಳೆ ಚಿತ್ರದಲ್ಲೂ ಬಣ್ಣಗಳು ಉದುರಿಹೋಗಿವೆ. ಈ ಗೋಡೆಯ ಬಲಬದಿಯ ತೀರ ಮೇಲ್ಭಾಗದಲ್ಲಿ, ಮಾವಿನ ಮರವೊಂದನ್ನು ಅತ್ಯಂತ ಸುಂದರವಾಗಿ ಚಿತ್ರಿಸಿದೆ. ದಟ್ಟ ಹಸಿರು ವರ್ಣದಲ್ಲಿ ಎಲೆಗಳನ್ನು, ಹಳದಿ ಬಣ್ಣದಲ್ಲಿ ಮಾವಿನಹಣ್ಣುಗಳನ್ನು ಕಲಾವಿದ ಬಹುಸುಂದರವಾಗಿ ತೋರ್ಪಡಿಸಿದ್ದಾನೆ. ಮಾವಿನ ಮರದಲ್ಲಿ ಮಂಗಗಳು ಹಣ್ಣು ತಿನ್ನುತ್ತ ಕುಳಿತಿರುವುದನ್ನು ಕಾಣಬಹುದು. ಇದೇ ತೆರನಾದ ಚಿತ್ರಗಳು ಖಾಜನಗೌಡರ ಮನೆಯಲ್ಲಿ ಕಾಣಸಿಗುತ್ತವೆ. ಯಾದಗಿರಿಯ ಲಿಂಗೇರಿ ಕೋನಪ್ಪನವರ ಮನೆಯಲ್ಲೂ ಇಂಥದೇ ಚಿತ್ರವೊಂದನ್ನು ನನ್ನ ಇತ್ತೀಚಿನ ಸಂಶೋಧನೆಯಲ್ಲಿ ಬೆಳಕಿಗೆ ತರಲಾಗಿದೆ. ಖಾಜನಗೌಡರ ಮನೆಯಂತೆಯೇ ಇಲ್ಲೂ ಸಹ ಚಿತ್ರದ ಹಿನ್ನೆಲೆಯಾಗಿ ಜಿಲೋಟಿನ್ ವರ್ಣದ ವಿನ್ಯಾಸ ಮಾಡಲಾಗಿದ್ದರಿಂದ ಚಿತ್ರಗಳಿಗೆ ಒಂದು ರೀತಿಯ ಮೆರಗನ್ನು ನೀಡಲು ಕಲಾವಿದ ಪ್ರಯತ್ನಿಸಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಉತ್ತರಾಭಿಮುಖ ಗೋಡೆಯಲ್ಲೂ ಕಮಾನು ಮಾದರಿಯ ಕಿಟಕಿಗಳನ್ನು ಮಾಡಲಾಗಿದೆ. ಪೂರ್ವಾಭಿಮುಖ ಗೋಡೆಯಂತೆಯೇ ಇಲ್ಲೂ ಸಹ ಚಿತ್ತಾರಗಳನ್ನು ಬರೆಯಲಾಗಿತ್ತಾದರೂ ತೀರ ಮೇಲ್ಭಾಗದಲ್ಲಿ ಜಿಲೋಟಿನ್ ಮಾದರಿಯ ವಿನ್ಯಾಸ ಮತ್ತು ಮಾಡಿನ ಸುತ್ತಲೂ ಇರುವ ಹೂಬಳ್ಳಿಯ ವಿನ್ಯಾಸಗಳನ್ನು ಹೊರತುಪಡಿಸಿ ಹೆಚ್ಚಿನ ಚಿತ್ರಗಳು ಉಳಿದಿಲ್ಲ. ಈ ಮನೆಯ ಮೇಲಂತಸ್ತಿನ ಕೋಣೆಯೊಂದರ ಗೋಡೆಯ ಮೇಲೆ ರಾಸಾಯನಿಕ ವರ್ಣಲೇಪನ ಮಾಡಲಾಗಿದ್ದು, ಹಿಂಬದಿಯ ಮೂಲ ಗೋಡೆಯ ಮೇಲೆ ದಟ್ಟ ಹಸಿರು ವರ್ಣದಲ್ಲಿ ಗಿಳಿಗಳನ್ನು ಕೆಂಪು, ಹಳದಿ, ನೀಲಿ ವರ್ಣಗಳಲ್ಲಿ ಹೂ-ಬಳ್ಳಿಯ ವಿನ್ಯಾಸವಿದೆ. ಚಿತ್ರ ರಚನೆಗೂ ಮುನ್ನ ಗೋಡೆಯ ಮೇಲ್ಮೈಯನ್ನು ಸಂಸ್ಕರಿಸಿದ ಭಿತ್ತಿಯಿಂದ ನುಣುಪಾಗಿಸಿದೆ. ಭಿತ್ತಿ ಸಿದ್ಧತೆಗೆಂದು ಮಾಡಿಕೊಳ್ಳಲಾದ ಪರಿಕರಗಳಲ್ಲಿ ಸುಣ್ಣವನ್ನು ಪ್ರಧಾನವಾಗಿ ಬಳಸಿದೆಯಾದರೂ ಪೂರಕವಾಗಿ ಮರಳು, ಬೆಲ್ಲ, ಅಂಟು ಮತ್ತಿತರ ಸಾಮಗ್ರಿಗಳನ್ನು ಬಳಸಿದೆ. ಕಾಲಮಾನ ದೃಷ್ಟಿಗಿಂತಲೂ ಮನೆಯವರಿಗೆ ಚಿತ್ರಸಂಸ್ಕೃತಿಯ ಬಗ್ಗೆ ಹೆಚ್ಚಿನ ಅರಿವು ಇಲ್ಲದೇ ಇರುವುದರಿಂದ ಚಿತ್ರಗಳು ನಶಿಸಿವೆ ಎನ್ನಬಹುದು. ಆದರೂ ಪ್ರಸ್ತುತ ರಸ್ತಾಪುರ ಮನೆಯನ್ನು ಪ್ರಾಚೀನ ಭಿತ್ತಿಚಿತ್ರವುಳ್ಳ ನೆಲೆಗಳಿಗೆ ಸೇರಿಸಲು ತುಂಬಾ ಹೆಮ್ಮೆಯೆನಿಸುತ್ತದೆ.

◆◆

ಬೋರೇಗೌಡ ಎಸ್.ಬಿ.

ಮೈಸೂರು ಸ್ಟೇಟ್ ಕಾಂಗ್ರೆಸ್ ಮತ್ತು ಮಿರ್ಜಾ ಇಸ್ಮಾಯಿಲ್

ಮೈಸೂರು ಸಂಸ್ಥಾನ ಬ್ರಿಟಿಷರ ಪ್ರಭಾವದ ಆಡಳಿತಕ್ಕೆ ಒಳಪಟ್ಟ ರಾಜಪ್ರಭುತ್ವದ ಸರ್ಕಾರವಾಗಿತ್ತು. ಪರಿಣಾಮವಾಗಿ ವಸಾಹತುಶಾಹಿ ಮತ್ತು ರಾಷ್ಟ್ರೀಯ ಚಳುವಳಿ ಪ್ರಕ್ರಿಯೆಗಳಿಗೆ ಮೈಸೂರು ಭಿನ್ನವಾಗಿತ್ತು. ಇಂತಹ 'ಏಕವ್ಯಕ್ತಿ' ಆಡಳಿತಕ್ಕೆ ಬ್ರಿಟಿಷರು ಪ್ರೋತ್ಸಾಹಿಸಿದ್ದರು. ಒಂದು 'ಮಾದರಿ ಭಾರತೀಯ ರಾಜ್ಯ' ಎಂಬ ತೆರೆಯ ಮರೆಯಲ್ಲಿ ತನ್ನ ಸ್ಥಳೀಯ ವಿರೋಧಿಗಳನ್ನು ಸರ್ಕಾರ ತಿರಸ್ಕಾರದ ಮೂಲಕ ಸರ್ವಾಧಿಕಾರಿ ಧೋರಣೆಯ ಆಡಳಿತ ನಡೆಸುತ್ತಿತ್ತು. ರಾಜನಿಷ್ಠರಾದ ಜನ ವಸಾಹತುಶಾಹಿ ಶೋಷಣೆ, ದಬ್ಬಾಳಿಕೆ ಮುಂತಾದವುಗಳ ವಿರುದ್ಧ ಹೋರಾಡುವ ಮನೋಭಾವನೆ ಬೆಳಸಿಕೊಂಡಿರಲಿಲ್ಲ. ಗಾಂಧೀಜಿ ಮೈಸೂರಿಗೆ ಆಗಮಿಸುವವರೆಗೂ ಕಾಂಗ್ರೆಸ್ ಒಂದು ಪ್ರಬಲ ವಸಾಹತು ವಿರೋಧಿ ನಿಲುವನ್ನು ಮೈಸೂರಿನಲ್ಲಿ ತಾಳಿರಲಿಲ್ಲ.

ಮಿರ್ಜಾ ಇಸ್ಮಾಯಿಲ್ ದಿವಾನರಾದ ನಂತರ ಪ್ರಾರಂಭದಲ್ಲಿ ಅನೇಕ ಸಮಸ್ಯೆಗಳು ಕಂಡುಬಂದವು. ಮಹಾರಾಜರ ನಿರಂಕುಶ ಆಡಳಿತದಲ್ಲಿ ಮಿರ್ಜಾ ಇಸ್ಮಾಯಿಲ್ ನಂಬಿಕೆ ಹೊಂದಿದ್ದರು. ಈ ನಿರಂಕುಶ ಪ್ರಭುತ್ವಪೂರ್ಣವಾಗಿ ಜನವಿರೋಧಿಯಾಗಿರಲಿಲ್ಲ, ಇದು ಜನತಂತ್ರ ವಿರೋಧಿಯಾಗಿತ್ತು. ಜನರಲ್ಲಿ ಬೆಳೆಯುತ್ತಿದ್ದ ಜನತಾಂತ್ರಿಕ ಆಶಯಗಳ ಬಗ್ಗೆ ಮಿರ್ಜಾ ಇಸ್ಮಾಯಿಲ್ ಸಹಾನುಭೂತಿ ಹೊಂದಿರಲಿಲ್ಲ. ಅಂದರೆ ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಲಿಲ್ಲ ಎಂದು ಊಹಿಸಬಹುದು. ಪರಿಣಾಮವಾಗಿ ರಾಷ್ಟ್ರಮಟ್ಟದಲ್ಲಿ ಜನಜಾಗೃತಿ ಉಂಟಾಗಿದೆ ಎಂದು ಇವರು ಕೊನೆಯವರೆಗೂ ನಂಬಲಿಲ್ಲ. ಹೀಗಾಗಿ ಜನಜಾಗೃತಿಯನ್ನು 'ಗೂಂಡಾಗಿರಿ' ಎಂದು ಅವರು ಕರೆದರು. ರಾಜರ ಮತ್ತು ಇವರ ಆಡಳಿತವನ್ನು ಪ್ರಶ್ನಿಸುವವರನ್ನು ಇವರು ವಿರೋಧಿಸುತ್ತಿದ್ದರು. ಮಿರ್ಜಾ ಇಸ್ಮಾಯಿಲ್ ಸ್ಥಳೀಯ ಕಾಂಗ್ರೆಸ್ ನಾಯಕರನ್ನು ನಂಬಲಿಲ್ಲ. ಇದರಿಂದ ಇವರು ಇಬ್ಬಗೆ ನೀತಿ ಅನುಸರಿಸುವಂತಾಯಿತು.

ರಾಷ್ಟ್ರೀಯ ಕಾಂಗ್ರೆಸ್‌ನ ಎಡಪಂಥೀಯ ನಾಯಕರಾದ ಜವಹರ್‌ಲಾಲ್ ನೆಹರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೇಲೆ ದೇಶಿಯ ಸಂಸ್ಥಾನಗಳಲ್ಲಿನ ನಿರಂಕುಶ ಪ್ರಭುತ್ವದ ಆಳ್ವಿಕೆಯನ್ನು ವಿರೋಧಿಸಿದರು. ಇದು ಸಂಸ್ಥಾನದ ಶಕ್ತಿ ಹೆಚ್ಚಿಸಿತು. ಆಗ ಸಂಸ್ಥಾನದಲ್ಲಿನ ರಾಷ್ಟ್ರೀಯ ಹೋರಾಟದ ಮುನ್ನಡೆಯಲ್ಲಿ ತಗಡೂರು ರಾಮಚಂದ್ರರಾಯರು, ಎಂ. ವೆಂಕಟಕೃಷ್ಣಯ್ಯ, ಡಿ.ವಿ. ಗುಂಡಪ್ಪ, ಸಂಪಿಗೆ ವೆಂಕಟಪತಯ್ಯ, ಸೀತಾರಾಮಶಾಸ್ತ್ರಿ, ಜಿ. ನಾರಾಯಣ ಅಯ್ಯಂಗಾರ್, ಎಚ್.ಕೆ. ವೀರಣ್ಣಗೌಡ ಮೊದಲಾದವರು ಇದ್ದರು.

ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬
ಹೊಸಪೇಟೆ ತಾಲ್ಲೂಕು
ವಿಜಯನಗರ ಜಿಲ್ಲೆ
ಮೊ: ೯೮೪೪೧ ೭೩೯೯೭

ಇದು ನಿಧಾನವಾಗಿ ಮೈಸೂರು ಸರ್ಕಾರದ ವಿರುದ್ಧ ಹೋರಾಡುವ ಪ್ರವೃತ್ತಿ ಬೆಳಸಿಕೊಳ್ಳಲು ಸಾಧ್ಯವಾಯಿತು. ಈ ಸಮಯದ ೧೯೨೯-೩೧ ರ ಅವಧಿಯಲ್ಲಿನ ಜಾಗತಿಕ ಆರ್ಥಿಕ ಮುಗ್ಗಟ್ಟು ರಾಷ್ಟ್ರ ಮತ್ತು ಸಂಸ್ಥಾನದ ಆರ್ಥಿಕ ಪರಿಸ್ಥಿತಿಯ ಮೇಲೆ ತನ್ನ ಪ್ರಭಾವ ಬೀರಿತು. ಈ ಸಂದರ್ಭದಲ್ಲಿ ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸಿತು.

ಸಂಸ್ಥಾನದ ಮುಖಂಡರು ಜನಪ್ರತಿನಿಧಿಗಳ ಸರ್ಕಾರ ಇದ್ದಿದ್ದರೆ ನಮಗೆ ಅವರು ಸ್ಪಂದಿಸುತ್ತಿದ್ದರೆಂದು ಭಾವಿಸಿದರು. ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಬಲಗೊಳಿಸುತ್ತಾ ಬಂದಂತೆ ಸಂಸ್ಥಾನದ ನಾಯಕರು ಹೋರಾಡಲು ನಿರ್ಧರಿಸಿದರು. ಮುಖಂಡರು ೧೯೩೭ ರಲ್ಲಿ 'ಕೌನ್ಸಿಲ್ ಆಫ್ ಆಕ್ಷನ್'ನ್ನು ರಚಿಸಿಕೊಂಡು ಸಂಸ್ಥಾನದಲ್ಲೆಡೆ ಸಂಚರಿಸಿ ಜನರಲ್ಲಿ ಜಾಗೃತಿ ಉಂಟುಮಾಡಿದರು. ಸಂಸ್ಥಾನದಲ್ಲಿನ ವಿದ್ಯಾವಂತರು ಮತ್ತು ವಿಚಾರವಂತರು ಸಂಸ್ಥಾನದ ಜನತೆಯ ರಾಷ್ಟ್ರೀಯ ಸಮಸ್ಯೆಯನ್ನು ಅರ್ಥಮಾಡಿಕೊಂಡು ಶಾಸನಸಭೆಗೆ ಹೆಚ್ಚಿನ ಅಧಿಕಾರ ದೊರಕಿಸಿಕೊಡಬೇಕೆಂದು ತಿಳಿಸಿ ದಿವಾನರ ಅಧಿಕಾರವನ್ನು ಮೊಟಕುಗೊಳಿಸುವ ಕಾರ್ಯದಲ್ಲಿ ನಿರತರಾದರು. ಇವರ ಚಳವಳಿಯನ್ನು ಸರ್ಕಾರ ನಿಯಂತ್ರಿಸಲು ಪ್ರಯತ್ನಿಸಿತು. ಇದು ಮುಂದೆ 'ಮೈಸೂರು ಸ್ಟೇಟ್ ಕಾಂಗ್ರೆಸ್‌ನ' ಸ್ಥಾಪನೆಗೆ ದಾರಿಯಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಕಾಂಗ್ರೆಸ್ಸಿನ ಹೆಸರಿನಲ್ಲಿ ಸಂಸ್ಥಾನಗಳಲ್ಲಿ ರಾಜಕೀಯ ಚಟುವಟಿಕೆಗಳನ್ನು ನಡೆಸುವುದನ್ನು ನಿಷೇಧಿಸಿದರು. ಹೀಗಾಗಿ ಮೈಸೂರಿನ ಕಾಂಗ್ರೆಸ್ಸಿನವರು ಗಾಂಧೀಜಿಯ ರಚನಾತ್ಮಕ ಕಾರ್ಯಗಳನ್ನು ನಡೆಸಲು ತೀರ್ಮಾನಿಸಿ ಒಂದು ಪ್ರತ್ಯೇಕ ಪಕ್ಷವನ್ನು 'ಮೈಸೂರು ಸ್ಟೇಟ್ ಕಾಂಗ್ರೆಸ್' ಎಂಬ ಹೆಸರಿನಲ್ಲಿ ೧೯೩೮ ರ ಫೆಬ್ರವರಿ ೨೮ ರಂದು ಸ್ಥಾಪಿಸಿಕೊಂಡರು. ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಇದರ ಗುರಿಯಾಗಿತ್ತು. ಇವರು ಕಾಂಗ್ರೆಸ್ಸಿನ ಧ್ವಜವನ್ನು ತಮ್ಮ ಧ್ವಜವಾಗಿ ಬಳಸಿಕೊಂಡರು. ಇದರ ಅಧ್ಯಕ್ಷರಾಗಿ ಟಿ.ಸಿದ್ದಲಿಂಗಯ್ಯ, ಕಾರ್ಯದರ್ಶಿಯಾಗಿ ವಿ.ಎಸ್. ನಾರಾಯಣರಾವ್ ಆಯ್ಕೆಯಾದರು. ಹೀಗೆ ಸ್ಥಾಪನೆಗೊಂಡ ಮೈಸೂರು ಸ್ಟೇಟ್ ಕಾಂಗ್ರೆಸ್ ಅನೇಕ ಷರತ್ತುಗಳನ್ನು ಸರ್ಕಾರಕ್ಕೆ ನೀಡಿತು. ಅವುಗಳು ಯಾವುವೆಂದರೆ ೧) 'ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಸಮ್ಮತಿಸುವುದು. ೨) ಮೈಸೂರು ಕಾಂಗ್ರೆಸ್‌ಗೆ ಮಾನ್ಯತೆ ನೀಡುವುದು. ೩) ಪ್ರಜೆಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವುದು. ೪) ಗಾಂಧೀಜಿಯ ಸಲಹೆಗಳನ್ನು ಒಪ್ಪಿಕೊಳ್ಳುವುದು'. ಈ ಷರತ್ತುಗಳನ್ನು ಸರ್ಕಾರ ತಿರಸ್ಕರಿಸಿತು. ಹೀಗಾಗಿ ಸರ್ಕಾರದೊಡನೆ ಸಹಕರಿಸುವುದು ಸರಿಯಲ್ಲವೆಂದು ಮೈಸೂರು ಕಾಂಗ್ರೆಸ್ ತೀರ್ಮಾನಿಸಿ ಸರ್ಕಾರದ ವಿರುದ್ಧ ಪ್ರತಿಭಟನೆ ಮತ್ತು ಹೋರಾಟಗಳನ್ನು ಮುಂದುವರಿಸಲು ನಿರ್ಧರಿಸಿತು.

ಅ. ಶಿವಪುರ ಧ್ವಜ ಸತ್ಯಾಗ್ರಹ

ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಯಾದ ತರವಾಯ ಸರ್ಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಲು ಮತ್ತು ಕಾಂಗ್ರೆಸ್ಸಿನ ಧ್ಯೇಯ ಮತ್ತು ಗುರಿಯನ್ನು ತಿಳಿಸಿ ಜನಬೆಂಬಲ ಗಳಿಸಿ ತನ್ಮೂಲಕ ಹೋರಾಟದಲ್ಲಿ ಜನಸಾಮಾನ್ಯರನ್ನು ಸಂಘಟಿಸುವ ಸಲುವಾಗಿ ಮೈಸೂರು ಜಿಲ್ಲೆಯ (ಇಂದು ಮಂಡ್ಯ ಜಿಲ್ಲೆಯ) ಮದ್ದೂರು ಬಳಿಯ ಶಿವಪುರದಲ್ಲಿ ೧೯೩೮ರ ಏಪ್ರಿಲ್ ೧೦, ೧೧ ಮತ್ತು ೧೨ ರಂದು ತನ್ನ ಪ್ರಥಮ ಮಹಾಧಿವೇಶನ ನಡೆಸಿತು. ಸರ್ಕಾರವು ಇದರ ಸವಾಲನ್ನು ಎದುರಿಸಲು ನಿರ್ಧರಿಸಿ ಇದನ್ನು ನಿಷೇಧಿಸಿತು. ನಿರೀಕ್ಷೆಯಂತೆ ಮುಂಚೂಣಿಯಲ್ಲಿದ್ದ ನಾಯಕರು ಮತ್ತು ಈ ಸಮ್ಮೇಳನದ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯ, ಎಂ.ಎನ್. ಜೋಯಿಸ್, ಎಚ್.ಸಿ. ದಾಸಪ್ಪ, ವಿ.ವೆಂಕಟಪ್ಪ, ಕೆ.ಟಿ. ಭಾಷ್ಯಂ, ಪಾಲಹಳ್ಳಿಯ ಸೀತಾರಾಮಯ್ಯ ಮೊದಲಾದ ನಾಯಕರೊಂದಿಗೆ ಇಂದಿರಾ ಕೃಷ್ಣಮೂರ್ತಿ, ಸುನಂದ ಅಯ್ಯಂಗಾರ್, ಪಾಲಹಳ್ಳಿ ವೆಂಕಮ್ಮ, ಸುಬ್ಬಮ್ಮ ಜೋಯಿಸ, ಬಳ್ಳಾರಿ ಸಿದ್ದಮ್ಮ, ಯಶೋಧರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ದಲಿಂಗಯ್ಯ ಮುಂತಾದ ಮಹಿಳಾ ಮುಖಂಡರು ಭಾಗವಹಿಸಿದ್ದರು.

ಈ ಸತ್ಯಾಗ್ರಹವನ್ನು ಹಿರಿಯ ಪತ್ರಕರ್ತರಾದ ಪಾಲಹಳ್ಳಿಯ ರಾಮಯ್ಯ 'ತಾಯಿನಾಡು' ಪತ್ರಿಕೆಯ ಮೂಲಕ ಬೆಂಬಲಿಸಿದರು. ಸಂಯುಕ್ತ ಕರ್ನಾಟಕ, ವಿಶ್ವಕರ್ಣಾಟಕ, ಸಾಧ್ವಿ, ನವಜೀವನ, ದಿ ಹಿಂದು, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯ, ಅಸೋಸಿಯೇಟೆಡ್ ಮೊದಲಾದ ಪತ್ರಿಕೆಗಳ ಪ್ರತಿನಿಧಿಗಳಿದ್ದರು. ಸಮ್ಮೇಳನದ ಸ್ವಾಗತ ಸಮಿತಿ ಕಚೇರಿಯನ್ನು ತಿರುಮಲೇಗೌಡರ ಮನೆಯಲ್ಲಿ ಸ್ಥಾಪಿಸಲಾಯಿತು. ಧ್ವಜ ಸತ್ಯಾಗ್ರಹಕ್ಕೆ 'ರಾಷ್ಟ್ರಕೂಟ' ಎಂಬ ಹೆಸರು ನೀಡಲಾಗಿತ್ತು. ರಾಷ್ಟ್ರೀಯ ಧ್ವಜವನ್ನು ಹಾರಿಸುವುದನ್ನು ನಿಷೇಧಿಸಿದ್ದರು ಮತ್ತು ೧೪೪ನೇ ಸೆಕ್ಷನ್ ಘೋಷಿಸಲಾಗಿದ್ದರೂ, ೩೦,೦೦೦ ಕ್ಕೂ ಹೆಚ್ಚು ಜನ, ಅದರಲ್ಲೂ ಹೆಚ್ಚಾಗಿ ಮಹಿಳೆಯರು ಸಂಸ್ಥಾನದ ವಿವಿಧ ಮೂಲೆ ಮೂಲೆಗಳಿಂದ ಆಗಮಿಸಿದ್ದರು. ಈ ಅಧಿವೇಶನಕ್ಕೆ ಸಂಸ್ಥಾನದ ವಿವಿಧ ಭಾಗಗಳಿಂದ ಹಣ ಸಂಗ್ರಹಿಸಲಾಗಿತ್ತು. ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರ ಎತ್ತಿನಗಾಡಿ

ಬಹಳ ಶೃಂಗಾರಗೊಂಡಿದ್ದು ಇದರೊಂದಿಗೆ ಸುಮಾರು ೧೦೧ ಎತ್ತಿನಗಾಡಿಗಳು ಮದ್ದೂರಿನ ಪ್ರವಾಸಿ ಮಂದಿರದಿಂದ ಜಯಘೋಷ ಮಾಡುತ್ತ ಮೆರವಣಿಗೆ ಹೊರಟರು. ಸತ್ಯಾಗ್ರಹ ನಡೆಯುವ ಸ್ಥಳದವರೆಗೂ ಸಾವಿರಾರು ಜನರು 'ಏನೇ ಬರಲಿ ಒಗ್ಗಟ್ಟಿರಲಿ' ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಬಹುತೇಕ ಮುಖಂಡರ ಮಕ್ಕಳು ಸ್ವಯಂ ಸೇವಕರಾಗಿ ಇದರಲ್ಲಿ ಕಾರ್ಯ ನಿರ್ವಹಿಸಿದರು. ಪಿ. ತಿರುಮಲೇಗೌಡ ತಮ್ಮ ೮ ಎಕರೆ ಜಮೀನನ್ನು ಧ್ವಜಾರೋಹಣ ನಡೆಯುವ ಜಾಗಕ್ಕೆ ದಾನ ಮಾಡಿದ್ದರು. ಈ ಸಮ್ಮೇಳನದಲ್ಲಿ ತಿಲಕ್, ಭಗತ್ ಸಿಂಗ್ ಮತ್ತು ಪಟೇಲ್ ಎಂಬ ಸ್ವಯಂ ಸೇವಕರ ದಸ್ತ್ನ ಗುಂಪನ್ನು ರಚಿಸಲಾಗಿತ್ತು. ಈ ಸಮಾರಂಭದಲ್ಲಿ ಮದ್ದೂರಿನ ಸುತ್ತಮುತ್ತಲಿನ ಸ್ಥಳೀಯ ಮುಖಂಡರು ಸ್ವಯಂ ಸೇವಕರಾಗಿ ದುಡಿದರು. ಈ ವೇಳೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿ.ಎಂ. ಮೇಕ್ರಿಯವರು ಮದ್ದೂರು ಸುತ್ತಳತೆ ೩ ಮೈಲಿ ದೂರ ೧ ತಿಂಗಳ ಕಾಲ ಮೆರವಣಿಗೆ ಮತ್ತು ಸಭೆ ಹಾಗೂ ಧ್ವಜಾರೋಹಣ ಮಾಡಬಾರದೆಂದು ನಿಷೇಧಾಜ್ಞೆ ಹೊರಡಿಸಿದ್ದರು. 'ನಾವು ಧ್ವಜಾರೋಹಣ ಮಾಡುತ್ತಿರುವ ಸ್ಥಳ ಖಾಸಗಿಯದಾಗಿದ್ದು ನಮ್ಮ ಹಕ್ಕನ್ನು ಕಸಿದುಕೊಳ್ಳುತ್ತಿರುವ ಸರ್ಕಾರವನ್ನು ಖಂಡಿಸುವ ಮೂಲಕ ನಮ್ಮ ನಿಗದಿತ ಕಾರ್ಯವನ್ನು ನಾವು ಮಾಡುತ್ತೇವೆ' ಎಂಬ ದೃಢ ನಿರ್ಧಾರವನ್ನು ಸರ್ಕಾರಕ್ಕೆ ತಿಳಿಸಿದರು. ೧೯೩೮ರ ಏಪ್ರಿಲ್ ೧೧ರಂದು ಕಾರ್ಯಕ್ರಮದ ಅಧ್ಯಕ್ಷರಾಗಿದ್ದ ಟಿ. ಸಿದ್ದಲಿಂಗಯ್ಯನವರು ಮೊದಲೇ ನಿಗದಿತವಾಗಿದ್ದ ೮ ಗಂಟೆಗೆ ಧ್ವಜಾರೋಹಣ ಮಾಡುವ ಮುನ್ನ ಒಂದು ಭಾಷಣ ಮಾಡಿದರು. ವೇದಿಕೆಯಲ್ಲಿ ೬೦ ಅಡಿ ಎತ್ತರದ ಧ್ವಜ ಸ್ಥಂಭವನ್ನು ನಿರ್ಮಿಸಲಾಗಿತ್ತು. ಇದನ್ನು ಖಾದಿ ಬಟ್ಟೆಯಿಂದ ಸಿಂಗರಿಸಲಾಗಿತ್ತು. ವೇದಿಕೆಯ ಮುಂದೆ ಸುಮಾರು ೪೦,೦೦೦ ದಷ್ಟು ಜನರು ಭಾಗವಹಿಸಿದ್ದರು. ಅಲ್ಲದೆ ಈ ವೇದಿಕೆಯನ್ನು ಸರ್ಪಗಾವಲಿನಂತೆ ಪೋಲೀಸರು ಆವರಿಸಿದ್ದರು.

ಸರ್ಕಾರದ ನಿಷೇಧಾಜ್ಞೆ ಉಲ್ಲಂಘಿಸಿ ಅಧ್ಯಕ್ಷರು ಧ್ವಜಾರೋಹಣ ಮಾಡಿದರು. ಈ ಸಮಯದಲ್ಲಿ ಟಿ. ಸುನಂದಮ್ಮ 'ವಂದೇಮಾತರಂ' ಗೀತೆಯನ್ನು ಹಾಡಿದರು. ಈ ಸಮಯದಲ್ಲಿ ಆಜ್ಞೆ ಉಲ್ಲಂಘನೆಯಾಗಿದೆಯೆಂದು ಅಧ್ಯಕ್ಷರನ್ನು ದಸ್ತಗಿರಿ ಮಾಡಲಾಯಿತು. ನಂತರ ಎಂ.ಎನ್. ಜೋಯಿಸರು ನಾನು ಸಹಾ ಆಜ್ಞೆಯನ್ನು ತಿರಸ್ಕರಿಸುತ್ತೇನೆಂದು ಹೇಳಿ ದಸ್ತಗಿರಿಯಾದರು. ಪ್ರತಿ ನಾಯಕರ ಬಂಧನದ ವೇಳೆಯಲ್ಲಿ ಜನರು ಉದ್ವೇಗಕ್ಕೆ ಒಳಗಾಗದೆ ಜಯಕಾರ ಮತ್ತು ಕರತಾಡನ ಮಾಡುತ್ತಿದ್ದರು. ಈ ಧ್ವಜ ಸತ್ಯಾಗ್ರಹದಲ್ಲಿದ್ದ ಪ್ರಮುಖ ನಾಯಕರುಗಳನ್ನು ಬಂಧಿಸಿ ಪೊಲೀಸರು ಧ್ವಜ ವೇದಿಕೆಯನ್ನು ನಾಶ ಮಾಡುತ್ತಾರೆಂದು ಅದರ ರಕ್ಷಣೆಗೆ ೩ ದಿನಗಳ ಕಾಲ ಸ್ತ್ರೀಯರು ಉರಿಯುವ ಬಿಸಿಲನ್ನು ಲೆಕ್ಕಿಸದೆ ಕಾದು ತಮ್ಮ ರಾಷ್ಟ್ರಾಭಿಮಾನ ಪ್ರಕಟಿಸಿದರು. ಪ್ರತಿ ದಿನವೂ ವೇದಿಕೆಯಲ್ಲಿರುತ್ತಿದ್ದ ಮುಖಂಡರನ್ನು ಸರದಿಯಂತೆ ಬಂಧಿಸಲಾಯಿತು. ಇಷ್ಟಾದರೂ ಮುಖಂಡರು ಜನಸಮುದಾಯವನ್ನು ಕುರಿತು ಭಾಷಣಗಳು ನಡೆಸುವುದರ ಮೂಲಕ ತಮ್ಮ ಮುಂದಿನ ಗುರಿ ಉದ್ದೇಶಗಳನ್ನು ತಿಳಿಸಿ ಸರ್ಕಾರದ ನೀತಿಯನ್ನು ಖಂಡಿಸುತ್ತಿದ್ದರು.

ಶಿವಪುರದ ಕಾಂಗ್ರೆಸ್ ಕೂಟ ಮೈಸೂರಿನಲ್ಲಿ ಜವಾಬ್ದಾರಿಯುತ ಸರ್ಕಾರದ ರಚನೆ ಸೇರಿದಂತೆ ಒಟ್ಟು ೧೮ ನಿರ್ಣಯಗಳನ್ನು ಅಂಗೀಕರಿಸಿ ತನ್ನ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಿತು. ಈ ಸತ್ಯಾಗ್ರಹ ಯಾವುದೇ ಅಹಿತಕರ ಘಟನೆ ನಡೆಯದಂತೆ ಶಾಂತಿಯುತವಾಗಿ ಮುಕ್ತಾಯವಾಯಿತು. ಶಿವಪುರದ ಸತ್ಯಾಗ್ರಹ ಮೈಸೂರಿನಲ್ಲಿ ಆರಂಭಗೊಂಡ ಚಳವಳಿಗಳಿಗೆ ಉಗ್ರರೂಪ ತಾಳಲು ವೇದಿಕೆಯಾಯಿತು. ಇಲ್ಲಿಯವರೆಗೂ ಮೈಸೂರು ಸಂಸ್ಥಾನದಲ್ಲಿ ನಡೆದಿದ್ದಂತಹ ಚಳವಳಿಗಳು ಗಣನೀಯವಾಗಿರಲಿಲ್ಲ ಮತ್ತು ಜನಪ್ರಿಯವಾಗಿರಲಿಲ್ಲ ಹಾಗು ಪ್ರಭಾವಶಾಲಿಯಾಗಿರಲಿಲ್ಲ ಅದು ಜನಸಮೂಹದಾಗಿರಲಿಲ್ಲ. ಈ ಮೂಲಕ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಇದು ನಾಂದಿ ಹಾಡಿತು.

ಶಿವಪುರದ ಅಧಿವೇಶನದ ಪ್ರಭಾವ ಸಂಸ್ಥಾನದಲ್ಲೆಲ್ಲಾ ಹರಡಿತು. ಇಲ್ಲಿ ಏಪ್ರಿಲ್ ೧೮ರಂದು ಸಂಸ್ಥಾನದಾದ್ಯಂತ ಹರತಾಳ ನಡೆಯಬೇಕೆಂದು ಕರೆಕೊಟ್ಟಿತು. ಅದರಂತೆ ಬೆಂಗಳೂರಿನಲ್ಲಿ ೧೯೩೮ ರ ಏಪ್ರಿಲ್ ೧೭ರಂದು ಪಾರ್ಥನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ, ಅದೇ ದಿನ ಕಡೂರು ಜಿಲ್ಲೆಯ ಚಿಕ್ಕಮಗಳೂರಿನಲ್ಲಿ ರಾಘವೇಂದ್ರರಾವ್ ನಾಯಕತ್ವದಲ್ಲಿ, ಶಿವಮೊಗ್ಗದಲ್ಲಿ ಮಾಧವರಾವ್ ಕೆ.ಆರ್. ರ ನೇತೃತ್ವದಲ್ಲಿ, ತುಮಕೂರು ಜಿಲ್ಲೆಯ ಕುಣಿಗಲ್, ಕೊರಟಗೆರೆ, ಹಾಸನ ಜಿಲ್ಲೆಯ ಬೇರೂರು, ಹೊಳೆನರಸೀಪುರ, ಚನ್ನರಾಯಪಟ್ಟಣ, ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ, ಮೈಸೂರು ನಗರ, ದಾವಣಗೆರೆ, ಚಿತ್ರದುರ್ಗ, ಮಂಡ್ಯ ಮತ್ತು ಗೌರಿಬಿದನೂರು ಮುಂತಾದ ಭಾಗಗಳಲ್ಲಿ ಸರ್ಕಾರದ ವಿರುದ್ಧ ಅದೇ ದಿನ ಧ್ವಜ ದಿನಾಚರಣೆಯನ್ನು ಕಾಂಗ್ರೆಸ್ ನಡೆಸಿತು.

ಆ. ವಿದುರಾಶ್ವತ್ಥ ದುರಂತ

ಸಂಸ್ಥಾನದ ವಿರುದ್ಧ ಮೈಸೂರು ಸ್ಟೇಟ್ ಕಾಂಗ್ರೆಸ್ ಪ್ರತಿಭಟನೆ ಮತ್ತು ಹೋರಾಟಗಳನ್ನು ಮುಂದುವರೆಸಿತು. ಶಿವಪುರದ ಅಧಿವೇಶನದ ತರುವಾಯ ಕಾಂಗ್ರೆಸ್ ನಾಯಕರು ಸ್ಫೂರ್ತಿಗೊಂಡು ಸಂಸ್ಥಾನದ ವಿವಿಧ ಭಾಗಗಳಲ್ಲಿ ಧ್ವಜ ಸತ್ಯಾಗ್ರಹ ಹಮ್ಮಿಕೊಳ್ಳುವುದರ ಮೂಲಕ ಹೋರಾಟಕ್ಕೆ ಒಂದು ರೂಪುನೀಡಲು ಮುಂದಾದರು. ಈ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರತಿಭಟನೆಗಳು ನಡೆದು ಮುಖಂಡರುಗಳನ್ನು ಬಂಧಿಸಲಾಯಿತು. ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ೧೯೩೮ರ ಏಪ್ರಿಲ್ ೨೫ರಂದು ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಸತ್ಯಾಗ್ರಹ ನಡೆಯಿತು.

ಈ ಸಭೆಯನ್ನು ಹತ್ತಿಕ್ಕಲು ಸರ್ಕಾರ ೧೯೩೮ರ ಏಪ್ರಿಲ್ ೧೫ರಂದು ಮೀಸಲು ಪಡೆಗಳನ್ನು ರವಾನಿಸಿತು. ಸ್ಥಳೀಯ ಮುಖಂಡರು ಸರ್ಕಾರದ ಈ ಸವಾಲನ್ನು ಉತ್ಸುಕದಿಂದ ಸ್ವೀಕರಿಸಿ ಅದರ ಆಜ್ಞೆಯನ್ನು ಧಿಕ್ಕರಿಸಲು ಮುಂದಾದರು. ೧೯೩೮ರ ಏಪ್ರಿಲ್ ೨೨ರಂದು ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಿದ ಸ್ಥಳೀಯ ಮುಖಂಡರಾದ ಎನ್.ಸಿ. ನಾಗಯ್ಯರೆಡ್ಡಿ, ಪಾಲಯ್ಯ, ರಾಮಸ್ವಾಮಿ, ವೆಂಕಟಸ್ವಾಮಿ, ಸೂರ್ಯನಾರಾಯಣರಾವ್, ನಾರಾಯಣಪ್ಪ ಮುಂತಾದ ಕಾಂಗ್ರೆಸ್ ಮುಖಂಡರು ಬಂಧನಕ್ಕೆ ಗುರಿಯಾದರು. ಸರ್ಕಾರದ ದಾಖಲೆಯನ್ವಯ ಈ ದುರಂತದಲ್ಲಿ ೧೦ ಮಂದಿ ಗುಂಡಿಗೆ ಬಲಿಯಾದರು. ಆದರೆ ಈ ಘಟನೆಯಲ್ಲಿ ಸುಮಾರು ೩೨ ಮಂದಿ ಬಲಿಯಾದರೆಂದು ೪೨ ಮಂದಿ ಗಾಯಗೊಂಡರೆಂದು ಒಂದು ಪತ್ರಿಕೆ ವರದಿ ಮಾಡಿತು. ಇದರಲ್ಲಿ ದೇವರ ಪೂಜೆಗೆ ಬಂದಿದ್ದ ಗರ್ಭಿಣಿ ಗೌರಮ್ಮ ನತದೃಷ್ಟೆ.

ಪ್ರತಿಭಟನೆಗಳು ಜಿಲ್ಲಾಯಾದ್ಯಂತ ನಡೆದವು. ಶಾಲಾ-ಕಾಲೇಜುಗಳು ಮುಚ್ಚಲ್ಪಟ್ಟವು. ಪ್ರತಿಭಟನೆಕಾರನನ್ನು ಪೊಲೀಸರು ಬಂಧಿಸಿದರು. ಈ ದುರಂತವನ್ನು ಖಂಡಿಸಿ ಬೆಂಗಳೂರು ಸೇರಿದಂತೆ ಕೆಲವು ಸ್ಥಳಗಳಲ್ಲಿ ಸಭೆಗಳು ನಡೆದವು. ಈ ಘಟನೆಯ ನೈಜತೆಯನ್ನು ಜನರಿಗೆ ತಿಳಿಸದೆ ಭಯಗೊಂಡ ಸರ್ಕಾರ ಘಟನೆಯ ಬಗ್ಗೆ ಸುದ್ದಿ ಮಾಡುತ್ತಿವೆ ಎಂದು ವಿಶ್ವ ಕರ್ನಾಟಕ, ತಾಯಿನಾಡು ಮತ್ತು ಜನವಾಣಿ ಪತ್ರಿಕೆಗಳ ಪ್ರಕಟಣೆಯನ್ನು ಪ್ರತಿಬಂಧಿಸಿತು. ಸಂಸ್ಥಾನದ ಈ ಘಟನೆ ಇಡೀ ಭಾರತದಲ್ಲೇ ಸುದ್ಧಿಯಾಯಿತು. ಲಂಡನ್ನಿನ ಬಿಬಿಸಿ ವಿದುರಾಶ್ವತ್ಥದಲ್ಲಿ ೩೨ ಜನ ಸತ್ತು, ೪೮ ಜನ ಗಾಯಗೊಂಡರೆಂದು ತಿಳಿಸಿ ಸರ್ಕಾರದ ಪೈಶಾಚಿಕ ಕೃತ್ಯವನ್ನು ಖಂಡಿಸಿ ವರದಿ ಬಿತ್ತರಿಸಿತು.

ವಿದುರಾಶ್ವತ್ಥ ದುರಂತ ರಾಷ್ಟ್ರದ ಮತ್ತು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ವರದಿಯಾದ ನಂತರ ಸರ್ಕಾರ ಮದ್ರಾಸ್‌ನ ನಿವೃತ್ತ ನ್ಯಾಯಾಧೀಶರಾದ ವೇಪಾ ರಮೇಶಂ, ಮೈಸೂರಿನ ನಿವೃತ್ತ ನ್ಯಾಯಾಧೀಶರಾದ ಎ.ಆರ್. ನಾಗೇಶ್ವರ ಅಯ್ಯರ್ ಮತ್ತು ವಿ.ಎಸ್. ಡಿಸೋಜರನ್ನು ಒಳಗೊಂಡಂತೆ ಈ ಘಟನೆಯ ಬಗ್ಗೆ ವರದಿ ನೀಡಲು ಒಂದು ಸಮಿತಿ ನೇಮಿಸಿತು. ಈ ಸಮಿತಿ 'ದುರಂತಕ್ಕೆ ಕಾಂಗ್ರೆಸ್ಸಿನ ವರ್ತನೆ ಮುಖ್ಯ ಕಾರಣವೆಂದು, ವಿದುರಾಶ್ವತ್ಥದಲ್ಲಿ ಸರ್ಕಾರ ನಿಷೇಧಾಜ್ಞೆಯನ್ನು ಜಾರಿಗೆ ತಂದಿದ್ದರು ಅದನ್ನು ಉಲ್ಲಂಘಿಸಿ ಅಧ್ಯಕ್ಷರಾದ ಟಿ. ರಾಮಚಾರ್ ಮತ್ತಿತರರು ರಾಷ್ಟ್ರಧ್ವಜ ಹಾರಿಸುವಂತೆ ಪ್ರಚೋದನೆ ನೀಡಿದುದರ ಪರಿಣಾಮವಾಗಿ ಗಲಭೆ ನಡೆದು ಅನಿವಾರ್ಯವಾಗಿ ಪೊಲೀಸರು ಗುಂಡು ಹಾರಿಸಬೇಕಾಯಿತೆಂದು, ಇದರಲ್ಲಿ ಕೆಲವು ಮರಣ ಹೊಂದಿದರು, ಹಲವರು ಗಾಯಗೊಂಡರೆಂದು' ವರದಿ ತಿಳಿಸಿತು. ಮಿರ್ಜಾ ಇಸ್ಮಾಯಿಲ್ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದೇ ಈ ಚಳವಳಿಯ ಉದ್ದೇಶವೆಂದು ಅದು ಅಭಿಪ್ರಾಯಪಟ್ಟಿತು.

ವಿದುರಾಶ್ವತ್ಥದ ಘಟನೆ ಕುರಿತು ಪತ್ರಿಕೆಗಳಲ್ಲಿನ ವರದಿಗಳ ನಂತರ ಗಾಂಧೀಜಿ ಘಟನೆಯ ನೈಜತೆ ಅರಿಯಲು ವಲ್ಲಭಭಾಯಿ ಪಟೇಲ್ ಮತ್ತು ಆಚಾರ್ಯ ಕೃಪಾಲಾನಿಯವರನ್ನು ಕಳುಹಿಸಿ ಕೊಟ್ಟರು. ಇವರು ೧೯೩೮ ಮೇ ೬ಕ್ಕೆ ಬೆಂಗಳೂರಿಗೆ ಬಂದು ಜೈಲಿನಲ್ಲಿದ್ದ ಮುಖಂಡರನ್ನು ಭೇಟಿಯಾಗಿ ನಂತರ ವಿದುರಾಶ್ವತ್ಥಕ್ಕೆ ತೆರಳಿದರು. ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಕೃಪಲಾನಿ ಹಾಗೂ ಮಿರ್ಜಾ ಇಸ್ಮಾಯಿಲ್ ನಡುವೆ ಮಾತುಕತೆ ನಡೆಯಿತು. ಇದನ್ನು 'ಪಟೇಲ್-ಮಿರ್ಜಾ' ಒಪ್ಪಂದ ಎಂದು ಕರೆಯಲಾಗಿದೆ. ಇದರ ಮುಖ್ಯಾಂಶವೆಂದರೆ:

೧) 'ಮೈಸೂರು ಕಾಂಗ್ರೆಸ್ಸನ್ನು ಶಾಸನಬದ್ಧ ರಾಜಕೀಯ ಪಕ್ಷವೆಂದು ಸರ್ಕಾರ ಅಂಗೀಕರಿಸಬೇಕು. ೨) ಸರ್ಕಾರ ರಚಿಸಿದ್ದ ರಾಜಕೀಯ ಸುಧಾರಣಾ ಸಮಿತಿಯಲ್ಲಿ ೭ ಮಂದಿ ಕಾಂಗ್ರೆಸ್ಸಿಗರಿಗೆ ಸ್ಥಾನ ನೀಡಬೇಕು. ೩) ಈ ಸಮಿತಿಗೆ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಬಗ್ಗೆ ಶಿಫಾರಸ್ಸು ಮಾಡಲು ಅಧಿಕಾರವಿರಬೇಕು. ೪) ಸಾರ್ವಜನಿಕ ಸಮಾರಂಭಗಳಲ್ಲಿ ಮೈಸೂರು ಧ್ವಜದ ಜೊತೆಗೆ ರಾಷ್ಟ್ರ ಧ್ವಜವನ್ನು ಹಾರಿಸಲು ಯಾವ ನಿರ್ಬಂಧ ಇರಬಾರದು. ೫) ಸರ್ಕಾರ ಎಲ್ಲಾ

ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು. ೬) ಪ್ರತಿಬಂಧಕಾಜ್ಞೆ ಮತ್ತು ಮೊಕದ್ದಮೆಗಳನ್ನು ವಾಪಸ್ಸು ತೆಗೆದು ಕೊಳ್ಳಬೇಕು'.

'ಪಟೇಲ್– ಮಿರ್ಜಾ' ಒಪ್ಪಂದವನ್ನು ಸರ್ಕಾರ ಮನಪೂರ್ವಕವಾಗಿ ಒಪ್ಪಲಿಲ್ಲ. ಬಂಧಿತರನ್ನು ತಕ್ಷಣ ಬಿಡುಗಡೆ ಮಾಡದೆ ಯುವರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ ವಿವಾಹದ ವೇಳೆ ಸರ್ಕಾರ ಬಿಡುಗಡೆ ಮಾಡಿತು. ಇದಕ್ಕೆ ಕಾರಣ ಒಪ್ಪಂದವಲ್ಲ ಜನಸಾಮಾನ್ಯರನ್ನು ಮೆಚ್ಚಿಸುವ ದೃಷ್ಟಿ. ವಜಾ ಮಾಡಲಾದ ಶ್ಯಾನುಭಾಗ ಮತ್ತು ಉಪಾಧ್ಯಾಯರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಲಿಲ್ಲ. ಅಲ್ಲದೆ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ಹಿಂದೇಟು ಹಾಕಿತು. ನಂತರ ಇವರನ್ನು ಬಿಡುಗಡೆ ಮಾಡಿ ಅವರಿಗೆ ಪ್ರಜಾಪ್ರತಿನಿಧಿಸಭೆಗೆ ನಿಲ್ಲಲ್ಲು ಅವಕಾಶ ನೀಡಲಿಲ್ಲ.

ಇದು ೧೯೩೮ ರ ಅಕ್ಟೋಬರ್‌ನಲ್ಲಿ ನಡೆದ ಪ್ರತಿನಿಧಿಸಭೆಯಲ್ಲಿ ಚರ್ಚೆಯ ವಿಷಯವಾಯಿತು. ಈ ವೇಳೆಯಲ್ಲಿ ಮುಖಂಡರು 'ಉಳಿದ ಬ್ರಿಟಿಷ್ ಪ್ರಾಂತ್ಯಗಳಲ್ಲಿ ರಾಜಕೀಯ ಅಪರಾಧಕ್ಕೆ ಶಿಕ್ಷೆಗೊಳಗಾದವರು ಚುನಾವಣೆಗೆ ನಿಲ್ಲುವುದು ಮಾತ್ರವಲ್ಲದೆ ಮಂತ್ರಿಗಳು ಆಗುತ್ತಾರೆ' ಎಂದು ಸರ್ಕಾರದ ನಡೆಯನ್ನು ವಿರೋಧಿಸಿದರು. ಆದರೆ ಸರ್ಕಾರ ರಾಜಕೀಯ ಅಪರಾಧಕ್ಕೆ ಶಿಕ್ಷೆಗೊಳಗಾದ ವ್ಯಕ್ತಿಯು ಅಗತ್ಯವಾಗಿ ಆಡಳಿತಗಾರ ಮತ್ತು ಆಳುವವರ ನಡುವೆ ಕಂದಕ ಸೃಷ್ಟಿಯಾಗುತ್ತದೆ, ಇದು ಸಂಸ್ಥಾನದಲ್ಲಿ ಅಶಾಂತಿಯನ್ನು ಸೃಷ್ಟಿಸುತ್ತದೆ ಎಂದು ತಿಳಿಸಿತು. ಹೀಗಾಗಿ ಸಂಸ್ಥಾನದಿಂದ ಗಡಿ ಪಾರಾಗಿದ್ದ ಬಿ.ಎನ್. ಗುಪ್ತಾ ಮತ್ತು ಸಿ.ಬಿ. ಮೊನ್ನಯ್ಯನವರ ನಿಷೇಧಾಜ್ಞೆಯನ್ನು ತೆರವುಗೊಳಸಲಿಲ್ಲ. ಇದು 'ಮಿರ್ಜಾ ಇಸ್ಮಾಯಿಲ್ ಕಾಂಗ್ರೆಸ್‌ನ್ನು ಮಟ್ಟ ಹಾಕಲು ಮಾಡಿದ ತಂತ್ರವಾಗಿತ್ತು ಮತ್ತು ಅವರ ವಿಚಿತ್ರ ಧೋರಣೆಗೆ ಸಾಕ್ಷಿಯಾಗಿದೆ'. ಈ ಘಟನೆಯನ್ನು ಕುರಿತು 'ವಿದುರಾಶ್ವತ್ಥದಲ್ಲಿ ನಡೆದ ದುರಂತವು ಸ್ವಾತಂತ್ರ್ಯ ಸಾಧನೆಯ ಮಹೋದ್ಯಮದಲ್ಲಿ ಸಂಸ್ಥಾನದ ಪ್ರಜೆಗಳಿಗೆ ಶೀಲ, ಶೌರ್ಯ ಮತ್ತು ದೃಢಸಂಕಲ್ಪಶಕ್ತಿಯನ್ನು ಗಳಿಸಿಕೊಟ್ಟಿತು. ಈ ದುರಂತ ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ. ಈ ಘಟನೆಯಿಂದ ಕಾಂಗ್ರೆಸ್ಸಿಗೆ ಒಂದು ಶತಮಾನದಲ್ಲಿ ಬರಬೇಕಾಗಿದ್ದ ಶಕ್ತಿಯು ಅಲ್ಪ ಕಾಲದಲ್ಲಿಯೇ ಬಂದಿತು' ಎಂದು ಕೆ. ವೀರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಶಿವಪುರ ಧ್ವಜ ಸತ್ಯಾಗ್ರಹ ಮತ್ತು ವಿದುರಾಶ್ವತ್ಥ ಘಟನೆಗಳು ಗಾಂಧಿಯವರ ಮೇಲೆ ವಿಶೇಷ ಪ್ರಭಾವ ಉಂಟು ಮಾಡಿತು. ಇಲ್ಲಿಯವರೆವಿಗೂ ಅವರಲ್ಲಿದ್ದ ಮಿರ್ಜಾ ಇಸ್ಮಾಯಿಲ್‌ರ ಬಗ್ಗೆ ಪ್ರೀತಿ ವಿಶ್ವಾಸ ಕುಗ್ಗಿ ಹೋಯಿತು. 'ಮೈಸೂರಿನಲ್ಲಿ ವ್ಯಕ್ತಿ ಸ್ವಾತಂತ್ರ್ಯವಿಲ್ಲ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಲ್ಲ' ಎಂಬ ಮಾಹಿತಿಗಳು ರಾಷ್ಟ್ರೀಯ ಮುಖಂಡರನ್ನು ತಲುಪುತಿತ್ತು. ಇನ್ನೂ ಹಲವರು ಮಿರ್ಜಾ ಇಸ್ಮಾಯಿಲ್ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆಂದು ದೂರು ನೀಡುತ್ತಿದ್ದರು. ಹೀಗಾಗಿ ಮಿರ್ಜಾ ಇಸ್ಮಾಯಿಲ್ ಮತ್ತು ಸಂಸ್ಥಾನದಲ್ಲಿನ ಕಾಂಗ್ರೆಸ್ ಮುಖಂಡರಲ್ಲಿ ಇದ್ದ ವಿಶ್ವಾಸ ಮತ್ತು ನಂಬಿಕೆ ಕಡಿಮೆಯಾಗತೊಡಗಿತು. ಮೈಸೂರಿನ ಜನತೆಗೆ ಇವು ಸ್ವಾತಂತ್ರ್ಯದ ಜ್ಯೋತಿಯಾಗಿ ಪರಿಗಣಿಸಿತು. 'ಮೈಸೂರು ಸಂಸ್ಥಾನದಲ್ಲಿ ಜನಜಾಗೃತಿಯಾಗಿದೆ. ಕೂಡಲೇ ಜನತೆಗೆ ಅಧಿಕಾರ ಹಸ್ತಾಂತರಿಸುವುದೇ ಲೇಸು' ಎಂದು ಗಾಂಧೀಜಿ ಈ ಘಟನೆಯ ನಂತರ ಮಿರ್ಜಾ ಇಸ್ಮಾಯಿಲ್‌ಗೆ ತಿಳಿಸಿರುವುದು ಈ ಘಟನೆಗಳ ಮಹತ್ವವನ್ನು ಎತ್ತಿ ಹಿಡಿದಿದೆ.

ಶಿವಪುರದ ಧ್ವಜ ಸತ್ಯಾಗ್ರಹ ಮತ್ತು ವಿದುರಾಶ್ವತ್ಥ ಮಾದರಿಯಲ್ಲಿ ಮೈಸೂರು ಕಾಂಗ್ರೆಸ್ಸಿನ ವಾರ್ಷಿಕ ಮಹಾಧಿವೇಶನಗಳು ಚನ್ನಪಟ್ಟಣದ ತಿಟ್ಟಮಾರನಹಳ್ಳಿ, ಶಿವಮೊಗ್ಗದ ಅಜಾದನಗರ, ಹರಿಹರದ ಅರಳಾಪುರಗಳಲ್ಲಿ ಸಂಘಟನೆಯಾದವು. ಇಲ್ಲಿ ಮೆರವಣಿಗೆ, ವಸ್ತುಪ್ರದರ್ಶನ ಮತ್ತು ಧ್ವಜಾರೋಹಣ ಮುಂತಾದ ಕಾರ್ಯಕ್ರಮಗಳು ಅತ್ಯಂತ ವಿಜೃಂಭಣೆಯಿಂದ ನಡೆದವು. ಈ ಸಮ್ಮೇಳನಗಳಲ್ಲಿ ಸರ್ಕಾರದ ನೀತಿಯನ್ನು ಖಂಡಿಸುವ ಜೊತೆಗೆ ಜವಾಬ್ದಾರಿ ಸರ್ಕಾರಕ್ಕೆ ಒತ್ತಾಯ ಮಾಡಲಾಯಿತು.

ಶಿವಪುರ ಧ್ವಜ ಸತ್ಯಾಗ್ರಹ ಮತ್ತು ವಿದುರಾಶ್ವತ್ಥ ದುರಂತಗಳು ಹಿಂದೆಂದೂ ನಡೆಯದ ಘಟನೆಗಳಾದವು. ಇವುಗಳು ಮೈಸೂರು ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಯಶಸ್ವಿಯಾದವು. ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ದುರಂತ ಪ್ರಕರಣಗಳನ್ನು ಲಾವಣಿಕಾರರು ಆಕರ್ಷವಾಗಿ ಹೆಣೆದು ಕಣ್ಣಿಗೆ ಕಟ್ಟುವಂತೆ ಜನರ ಮುಂದೆ ಸುಶ್ರಾವ್ಯವಾಗಿ ಹಾಡಲು ಪ್ರಾರಂಭಿಸಿದರು. ಪರಿಣಾಮವಾಗಿ ಮೈಸೂರು ಸ್ಟೇಟ್ ಕಾಂಗ್ರೆಸ್ ಜವಾಬ್ದಾರಿ ಸರ್ಕಾರದ ಬೇಡಿಕೆಗೆ ಒತ್ತಾಯ ಮುಂದಿಟ್ಟು ಒಂದು ಹೋರಾಟಕ್ಕೆ ವೇದಿಕೆಯನ್ನು ರೂಪಿಸಿಕೊಂಡಿತು. ಈ ಎರಡು ಘಟನೆಯ ತರುವಾಯ ಮಿರ್ಜಾ ಇಸ್ಮಾಯಿಲ್ ಕೋಲಾರ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಸರ್ಕಾರದ ಸುಧಾರಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಆದರೂ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಬೇಡಿಕೆಯನ್ನು ತಳಮಟ್ಟಕ್ಕೆ ಕೊಂಡೊಯ್ಯಲಾಯಿತು.

ಇ. ಹ್ಯಾಮಿಲ್ಟನ್ ಕಟ್ಟಡ ಸತ್ಯಾಗ್ರಹ, ಮೈಸೂರು

ಸರ್ಕಾರ ಮೈಸೂರು ಕಾಂಗ್ರೆಸ್ಸಿನ ಹೋರಾಟವನ್ನು ದಮನ ಮಾಡುವ ಯತ್ನದಲ್ಲಿ ತೊಡಗಿದ್ದ ಸಮಯದಲ್ಲೇ ಮೈಸೂರಿನಲ್ಲಿ ಹ್ಯಾಮಿಲ್ಟನ್ ಕಟ್ಟಡ ಸತ್ಯಾಗ್ರಹ ನಡೆಯಿತು. ಕಾಂಗ್ರೆಸ್ಸಿನ ಹೋರಾಟಗಳನ್ನು ಹತ್ತಿಕ್ಕುತ್ತಿದ್ದ ದಬ್ಬಾಳಿಕೆ ಮತ್ತು ಕ್ರೂರಿ ಬ್ರಿಟಿಷ್ ಅಧಿಕಾರಿಯಾದ ಹ್ಯಾಮಿಲ್ಟನ್‌ನ ಹೆಸರನ್ನು ಮೈಸೂರಿನ ದೊಡ್ಡ ಪೇಟೆಯಲ್ಲಿ ಹೊಸದಾಗಿ ನಿರ್ಮಿಸಲಾದ ಪೊಲೀಸ್ ಠಾಣೆಗೆ ಸರ್ಕಾರ ನಾಮಕರಣ ಮಾಡಲು ನಿರ್ಧರಿಸಿತು. ಇವನು ಸರ್ಕಾರದ ವಿರುದ್ಧ ನಡೆಯುವ ಹೋರಾಟವನ್ನು ಕ್ರೂರವಾಗಿ ನಿಯಂತ್ರಿಸುವುದರ ಜೊತೆಗೆ ಅಮಾಯಕರನ್ನು ಶಿಕ್ಷೆಗೆ ಗುರಿ ಮಾಡುತ್ತಿದ್ದನು. ಇವನ ಹೆಸರಿಡುವುದು ಸಾರ್ವಜನಿಕರ ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು. ಮತ್ತು ವಿದೇಶಿಯರ ಹೆಸರಿಡುವುದು ರಾಷ್ಟ್ರ ಪ್ರೇಮಕ್ಕೆ ವಿರುದ್ಧವಾಗಿತ್ತು. ಇದರ ವಿರುದ್ಧ ಕಾಂಗ್ರೆಸ್ ೧೯೩೯ರ ಫೆಬ್ರವರಿಯಲ್ಲಿ ಹೋರಾಟಕ್ಕೆ ಕರೆ ನೀಡಿತು. ಕಾಂಗ್ರೆಸ್ಸಿನ ಕರೆಗೆ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಮೈಸೂರಿಗೆ ಆಗಮಿಸಿದರು. ಈ ಹೋರಾಟದಲ್ಲಿ ತಗಡೂರು ರಾಮಚಂದ್ರರಾಯ, ಎ.ಎನ್. ಸೂರ್ಯನಾರಾಯಣ ರಾವ್, ಎಂ.ಎನ್. ಜೋಯಿಸ, ಸುಬ್ಬರಾವ್, ಉಪಾಧ್ಯಾಯ, ಅರಕೆರೆ ಕೆಂಚಯ್ಯ ಮುಂತಾದವರು ಭಾಗವಹಿಸಿದ್ದರು.

ಈ ಸತ್ಯಾಗ್ರಹ ೧೯೩೯ರ ಫೆಬ್ರವರಿ ೧೫ರಿಂದ ಮಾರ್ಚ್ ೩೧ರವರೆಗೆ ನಡೆಯಿತು. ಸರ್ಕಾರ ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ ಸುಬ್ಬರಾವ್ ಉಪಾಧ್ಯಾಯ, ಎಂ. ಶ್ಯಾಮರಾವ್, ಎಂ.ಎನ್. ವೆಂಕಟಪ್ಪ, ನಾಗಮಂಗಲದ ತಿಮ್ಮೇಗೌಡ, ಚನ್ನಪಟ್ಟಣದ ಸಿ. ಲಿಂಗೇಗೌಡ, ಪಿ.ಎನ್.ಜವರಪ್ಪಗೌಡ ಮೊದಲಾದ ೭೦ಕ್ಕೂ ಹೆಚ್ಚು ಮುಖಂಡರು ಮತ್ತು ಕಾರ್ಯಕರ್ತರನ್ನು ಬಂಧಿಸಿತು. ಸತ್ಯಾಗ್ರಹಿಗಳು ಕುಚುಮಟ್ಟೆ (ಸುಣ್ಣ ಬಳೆಯುವ ಪೊರೆಕೆ) ಹಿಡಿದು ಸರ್ಕಾರದ ಭವನದ ಹೆಸರನ್ನು ಅಳಿಸುವುದು ಇವರ ಉದ್ದೇಶವಾಗಿತ್ತು. ಹೀಗೆ ಜನಜಾಗೃತಿ ಹೆಚ್ಚಾಗಿ ಸರ್ಕಾರವನ್ನು ವಿರೋಧಿಸುತ್ತಿದ್ದ ವೇಳೆಯಲ್ಲಿ ಮಿರ್ಜಾ ಇಸ್ಮಾಯಿಲ್ ಕಾಂಗ್ರೆಸ್ಸಿನ ಮುಖಂಡರನ್ನು ದ್ವೇಷ ಮತ್ತು ಅಸೂಯೆಯಿಂದ ಕಾಣತೊಡಗಿದರು. ಈ ಅಸೂಯೆ ಕಾಂಗ್ರೆಸ್ಸಿನ ಎಲ್ಲಾ ಚಟುವಟಿಕೆಗಳನ್ನು ಸಾಧ್ಯವಾದಷ್ಟು ಹತ್ತಿಕ್ಕುವಂತೆ ಮಾಡಿತು. ಹೋರಾಟ ನಡೆಸುತ್ತಿದ್ದ ಮುಖಂಡರನ್ನು 'ಕ್ರಿಮಿನಲ್ ಲಾ' ಎಂಬ ಕಾನೂನಿನಲ್ಲಿ ಗುಮಾನಿಯ ಮೇಲೆ ಬಂಧಿಸಲಾಗುತಿತ್ತು. ಹೀಗೆ ಬಂಧಿಸಿದವರನ್ನು ವಿಚಾರಣೆಗೆ ಒಳಪಡಿಸದೆ ಜೈಲಿನಲ್ಲಿಡಬಹುದಾಗಿತ್ತು.

ಈ. ಚಿನ್ನದ ಗಣಿ ಸತ್ಯಾಗ್ರಹ, ಕೋಲಾರ

ಮೈಸೂರು ಸ್ಟೇಟ್ ಕಾಂಗ್ರೆಸ್ಸಿನ ರಾಜಕೀಯ ಚಟುವಟಿಕೆಗಳು ಸಂಸ್ಥಾನದ ವಿವಿಧ ಸ್ಥಳಗಳಲ್ಲಿ ಆರಂಭಗೊಂಡಂತೆ ಕೆಜಿಎಫ್‌ನಲ್ಲಿ ಪ್ರಾರಂಭವಾಯಿತು. ೧೯೩೯ರಲ್ಲಿ ಕೆಜಿಎಫ್‌ಗೆ ಗಾಂಧೀಜಿ ಆಗಮಿಸಿದ ತರುವಾಯ ಸರ್ಕಾರ ಕಾಂಗ್ರೆಸ್ ಸದಸ್ಯರ ಪ್ರವೇಶದ ಮೇಲೆ ನಿರ್ಬಂಧ ಹೇರಿತು. ಇಲ್ಲಿ ಬ್ರಿಟಿಷ್ ಕಾಯ್ದೆಯಂತೆ ಗುಮಾನಿ ಬಂದ ವ್ಯಕ್ತಿಯನ್ನು ೨೪ ಗಂಟೆಯೊಳಗೆ ಗಡಿಪಾರು ಮಾಡುವ ಅಧಿಕಾರ ಸ್ಥಳೀಯ ಆಡಳಿತ ಹೊಂದಿತ್ತು. ಈ ಸಮಯದಲ್ಲಿ ಮೈಸೂರ್ ಕಾಂಗ್ರೆಸ್ ಹೋರಾಟ ತನ್ನ ಪ್ರಭಾವವನ್ನು ಇಲ್ಲಿನ ಕಾರ್ಮಿಕರ ಮೇಲೆ ಹರಡಿತು.

ಮೈಸೂರ್ ಕಾಂಗ್ರೆಸ್ ೧೯೩೮ರ ಆಗಸ್ಟ್ ೧೪ರಂದು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಸಭೆ ನಡೆಸಲು ತೀರ್ಮಾನಿಸಿತು. ಇದನ್ನು ವಿರೋಧಿಸುವ ನಿಟ್ಟಿನಲ್ಲಿ ಸರ್ಕಾರ ಪೋಲೀಸ್ ಕಾಯ್ದೆ ಸೆಕ್ಷನ್ ೩೯ರನ್ವಯ ರಾಬರ್ಟ್‌ಸನ್ ಪೇಟೆಯ ೫ ಮೈಲಿ ದೂರ ಯಾವುದೇ ಸಭೆ ನಡೆಯದಂತೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಿ ೨೫ ಗ್ರಾಮಗಳಿಗೆ ಕಾಂಗ್ರೆಸ್ಸಿನ ಸದಸ್ಯರು ಬರದಂತೆ ಆಜ್ಞೆ ಹೊರಡಿಸಿತು. ತಡೆಯಾಜ್ಞೆ ಇದ್ದರೂ ಕಾಂಗ್ರೆಸ್ಸಿನ ಮುಖಂಡರು ಗಡಿಯನ್ನು ಪ್ರವೇಶಿಸುವ ಮೂಲಕ ನಿರ್ಬಂಧವನ್ನು ಮುರಿದು ಬಂಧನವಾದರು ಹೋರಾಟ ಮುಂದುವರೆಯಿತು. ಸತ್ಯಾಗ್ರಹಿಗಳು ಗ್ರಾಮದಿಂದ ಗ್ರಾಮಕ್ಕೆ ಮಾರುವೇಷದಲ್ಲಿ ಹೋಗಿ ಜನತೆಯಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಹೋರಾಟ ನಡೆಸಿದರು. ಸತ್ಯಾಗ್ರಹದಲ್ಲಿ ಬಂಧಿಸಿದ ಮುಖಂಡರನ್ನು ಸರ್ಕಾರ ವಿಚಾರಣೆ ನಡೆಸಿ ಕಠಿಣ ಶಿಕ್ಷೆಗೆ ಗುರಿ ಪಡಿಸಿತು. ಕಾಂಗ್ರೆಸ್ಸಿನ ಹೋರಾಟವನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡ ಕ್ರಮವನ್ನು ದೇಶದ ಒಳಗೂ ಮತ್ತು ಹೊರಗೂ ಟೀಕಿಸಲಾಯಿತು. ಆದರೂ ಸರ್ಕಾರ ತನ್ನ ನೀತಿಯನ್ನು ಬದಲಾಯಿಸಿಕೊಳ್ಳಲಿಲ್ಲ.

ಟಿ. ಸಿದ್ದಲಿಂಗಯ್ಯ ೧೯೩೯ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ಬನಪ್ಪ ಪಾರ್ಕ್‌ನಲ್ಲಿನ ಸಭೆಯಲ್ಲಿ 'ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಕಾಂಗ್ರೆಸ್ಸಿನ ಧ್ಯೇಯವಾಗಿದೆ. ಈ ಕಾರ್ಯದಲ್ಲಿ ಸರ್ಕಾರ ಎಷ್ಟೇ ಉಗ್ರಕ್ರಮ ಕೈಗೊಂಡರು ಅವರ ಆಜ್ಞೆಯನ್ನು ಉಲ್ಲಂಘನೆ ಮಾಡುವುದು ನಮ್ಮ ಗುರಿಯಾಗಬೇಕು' ಎಂದು ಕರೆ ಕೊಟ್ಟರು. ಇದರಲ್ಲಿ ನನ್ನನ್ನು ಬಂಧಿಸಿದರೂ ನಂತರದಲ್ಲಿ ಮುಖಂಡರು ಈ ಕಾರ್ಯದಲ್ಲಿ ನಿರಂತರ ಮುಂದುವರಿದು ಗುರಿ ಮುಟ್ಟಬೇಕೆಂದು ಘೋಷಣೆ ಮಾಡಿದರು.

ಇದು ಕಾಂಗ್ರೆಸ್ಸಿಗರಲ್ಲಿ ಹೊಸ ಶಕ್ತಿ ತುಂಬಿತು. ಸರ್ಕಾರ ಮುಖಂಡರನ್ನು ಬಂಧಿಸಿ ರಾತ್ರಿ ವೇಳೆಯಲ್ಲಿ ದೂರದ ಊರಿಗೆ ಬಿಡುವ ಮೂಲಕ ಅವರ ಹೋರಾಟವನ್ನು ಹತ್ತಿಕ್ಕಲು ಕ್ರಮ ಕೈಗೊಂಡಿತು. ಚಳುವಳಿಯನ್ನು ಹತ್ತಿಕ್ಕುವ ದೃಷ್ಟಿಯಿಂದ ಊರುಗಳ ಮೇಲೆ ತೆರಿಗೆ ವಿಧಿಸಲಾಯಿತು. ೧೯೩೯ರ ಡಿಸೆಂಬರ್ ೨೧ರಂದು ಚನ್ನಪಟ್ಟಣದ ಬೈರಾಪಟ್ಟಣದ ಜನತೆಯ ಮೇಲೆ ತಲಾ ೧೨೨ ರೂ.ಗಳ ಪುಂಡು ಕಂದಾಯ ಹೇರಲಾಯಿತು.

ಕೋಷ್ಟಕದ ಸಂಖ್ಯೆ- ೧

೧೯೪೦ ರ ವೇಳೆಯಲ್ಲಿ ಸಂಸ್ಥಾನದಲ್ಲಿ ಬಂಧಿತರಾದ ಸತ್ಯಾಗ್ರಹಿಗಳ ಜಿಲ್ಲಾವಾರು ಮಾಹಿತಿ

ಕ್ರ.ಸಂ.	ಜಿಲ್ಲೆ	ದಸ್ತಗಿರಿ	ಶಿಕ್ಷೆಗೆ ಗುರಿಯಾದವರು	ಬಂಧಿತರಾದವರು
೧	ಕೋಲಾರ	೬೩೧	೩೭೩	೨೫೮
೨	ಬೆಂಗಳೂರು	೩೭೦	೧೬೦	೧೫೫
೩	ಮೈಸೂರು	೧೯೮	೧೬೮	೨೩
೪	ತುಮಕೂರು	೩೫೨	೨೮೦	೭೨
೫	ಚಿತ್ರದುರ್ಗ	೨೬೪	೧೬೬	೯೮
೬	ಶಿವಮೊಗ್ಗ	೧೩೯	೧೧೮	೨೧
೭	ಕಡೂರು	೨೦	೨೦	–
೮	ಹಾಸನ	೧೫	೧೫	೧
ಒಟ್ಟು		೧೯೮೯	೧೩೦೦	೬೨೮

(ಮಾಹಿತಿ-ಮೈಸೂರು ಕಾಂಗ್ರೆಸ್ ವರದಿ-೧೯೪೦ರ ಏಪ್ರಿಲ್)

ಆಕರಗ್ರಂಥಗಳು

೧. ಚಂದ್ರಶೇಖರ್ ಎಸ್., ೨೦೦೬, ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪು. ೨೯೯.

೨. ಚಂದ್ರಶೇಖರ್ ಎಸ್., ೨೦೦೨, ಆಧುನಿಕ ಕರ್ನಾಟಕದ ಅಂದೋಲನಗಳು, ನಮ್ಮ ಪ್ರಕಾಶನ, ತಿಪಟೂರು. ಪು. ೬೪.

೩. ಸುಂದರರಾವ್ ಬ.ನ., ೧೯೮೫, ಬೆಂಗಳೂರಿನ ಇತಿಹಾಸ, ಅಂಕಿತ ಪುಸ್ತಕ, ಬೆಂಗಳೂರು. ಪು. ೫೫೦-೫೧.

೪. ಚಂದ್ರಶೇಖರ್ ಎಸ್., ೧೯೮೫, ಡೈಮೆನ್ಷನ್ ಆಫ್ ಸೋಶಿಯೋ-ಪೊಲಿಟಿಕಲ್ ಚೇಂಜ್ ಇನ್ ಮೈಸೂರು (೧೯೧೮-೪೦) ಅನಿಸ್ ಪಬ್ಲಿಕೇಷನ್, ಡೆಲ್ಲಿ. ಪು. ೧೫೫.

೫. ಲಿಂಗಯ್ಯ ಡಿ., ೧೯೭೯, ಶಿವಪುರದ ಧ್ವಜಸತ್ಯಾಗ್ರಹ, ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ, ಗೋಧೂಳಿ, ಪ್ರಕಾಶನ, ಬೆಂಗಳೂರು, ಪು. ೧೦೦-೧೦೧.

೬ ನೀಲಾ ಮಂಜುನಾಥ, (ಮು.ಸಂ.), ೨೦೧೨, ಜ್ಯೂಯಲ್ಸ್ ಆಫ್ ಆಡ್ಮಿನಿಸ್ಟ್ರೇಷನ್, ಕರ್ನಾಟಕ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ಪು. ೩೪೪.

೭. ಪಾರ್ಥಸಾರಥಿ ಟಿ.ಎ., ೨೦೦೩, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮಂಡ್ಯ ಜಿಲ್ಲೆ, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು ಪು. ೧೧೭.

೮. ವೀರಣ್ಣಗೌಡ ಎಚ್.ಕೆ., ೧೯೭೪, ಬದುಕು ಮೆಲಕು, ಎಚ್.ಕೆ. ವೀರಣ್ಣಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ಪು. ೧೫೪.

೯. ಚಿತ್ತರಂಜನ್, ೨೦೦೫, ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು ಪು.ಸಂ ಪು. ೧೨೪.

೧೦. ದೊರೆಸ್ವಾಮಿ ಎಚ್.ಎಸ್., ೧೯೭೨, ಯೋಧರ ಮೇಳದ ಪ್ರಕಟಣೆ, ಬೆಂಗಳೂರು, ಪು. ೩೫.

೧೧. ನಾರಾಯಣ ರಾವ್ ವಿ.ಎಸ್., ೧೯೭೫ ಮಿರ್ಜಾ ಇಸ್ಮಾಯಿಲ್ ಜೀವನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ಪು. ೬೮.

◆◆

ಕೃಷ್ಣಪ್ಪ ಎಚ್.ಜಿ.

ಉತ್ತರಾದಿ ಸಂಗೀತಕ್ಕೆ ಮೈಸೂರು ನಗರ ಮತ್ತು ಮೈಸೂರು ಅರಮನೆಯ ಕೊಡುಗೆ

ರಾಜಾ ಒಡೆಯರು ೧೬೧೦ರಲ್ಲಿ ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿದರು. ಪ್ರಪ್ರಥಮವಾಗಿ ದಸರಾ ಆಚರಣೆಯನ್ನು ಜಾರಿಗೆ ತಂದರು. ೧೭೯೯ರಲ್ಲಿ ಟಿಪ್ಪು ಪತನ ನಂತರ ಮೈಸೂರು ಬ್ರಿಟಿಷ್ ಅಧಿಪತ್ಯಕ್ಕೆ ಒಳಪಟ್ಟ ಒಂದು ದೇಶೀಯ ಸಂಸ್ಥಾನವಾಯಿತು. ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮತ್ತೆ ಮೈಸೂರಿಗೆ ವರ್ಗಾಯಿಸಿದರು. ಬಾಲಕರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು. ರಾಜಮಾತೆ ಲಕ್ಷ್ಮಮ್ಮಣ್ಣಿಯವರು ರೆಸಿಡೆಂಟ್ ಬ್ಯಾರಿಕ್ಲೋಸ್ ಮತ್ತು ದಿವಾನ್ ಪೂರ್ಣಯ್ಯನವರನ್ನೊಳಗೊಂಡ ಒಂದು ರಾಜಪ್ರತಿನಿಧಿ ಸಭೆಯನ್ನು ರಚಿಸಲಾಯಿತು. ಸಂಗೀತ, ನೃತ್ಯ, ನಾಟಕ, ಚಿತ್ರ ಕಲೆಗಳು ಮೈಸೂರು ಅರಮನೆಯ ಆಡಳಿತದಲ್ಲಿ ಅನಾವರಣಗೊಂಡವು. ಈ ಕಲಾ ಪ್ರಕಾರಗಳಲ್ಲಿ ಉತ್ತರಾದಿ ಸಂಗೀತದ ಹೆಜ್ಜೆ ಗುರುತುಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ.

೧೯೯೩ರಲ್ಲಿ ಕರ್ನಾಟಕ ಸರಕಾರದ ಮೈಸೂರಿನ ವಿಭಾಗೀಯ ಪತ್ರಾಗಾರ ಇಲಾಖೆಯವರು "ಸೆಲೆಕ್ಷನ್ ಫ್ರಮ್ ದಿ ರೆಕಾರ್ಡ್ಸ್ ಆಫ್ ದಿ ಮೈಸೂರು ಪ್ಯಾಲೇಸ್ – ಮ್ಯೂಜಿಸಿಯನ್ಸ್ ಆಕ್ಟರ್ಸ್ ಅಂಡ್ ಆರ್ಟಿಸ್ಟ್ಸ್" ಎಂಬ ಶಿರೋನಾಮೆಯ ಅಡಿಯಲ್ಲಿ ೧ನೇ ಸಂಪುಟವನ್ನು ಹೊರತಂದರು. ಇದೇ ರೀತಿ "ಮೈಸೂರಿನ ಪಾರಂಪರಿಕ ಕಟ್ಟಡಗಳ ಬಗ್ಗೆ ಮತ್ತು ಮೈಸೂರು ದಸರಾ ಆಚರಣೆಯ ಬಗ್ಗೆ ಕ್ರಮವಾಗಿ ೨ ಮತ್ತು ೩ನೇ ಸಂಪುಟಗಳನ್ನು ಹೊರತಂದಿದ್ದಾರೆ. ಈ ಕ್ಷೇತ್ರಗಳ ಬಗ್ಗೆ ಮೈಸೂರು ಅರಮನೆಯಲ್ಲಿ ಸಿಕ್ಕ "ಪತ್ರಗಳ"ನ್ನು ಹೇಗಿರುವವೋ ಹಾಗೆಯೇ ಪ್ರಕಟಿಸಿರುವುದು ಈ ಸಂಪುಟಗಳ ವಿಶೇಷ. ಈ ಕ್ಷೇತ್ರದ ಅಧ್ಯಯನಶೀಲರಿಗೆ ಇವು ಮೂಲ ಆಕರಗಳು. ಡಾ. ಎಂ ಗೋವಿಂದಪ್ಪನವರು ಕಾಲಮಿತಿಯ ಚೌಕಟ್ಟನ್ನು ಹಾಕಿಕೊಂಡು ಲಭ್ಯ ಪತ್ರಗಳ ಮಾಹಿತಿಯನ್ನು ಆಧರಿಸಿ ಸಂಗೀತ ಕ್ಷೇತ್ರದ ಸ್ಥಿತಿಗತಿಗಳನ್ನು ದಾಖಲಿಸಿದ್ದಾರೆ. ಕ್ವಚಿತ್ತಾಗಿ ಉತ್ತರಾದಿ ಸಂಗೀತವನ್ನು ಪ್ರಸ್ತಾಪಿಸಿ ಮುಂದಕ್ಕೆ ಹೋಗುತ್ತಾರೆ. ಇವರ ಲೇಖನ ಸಂಪೂರ್ಣವಾಗಿ ಮೈಸೂರು ಅರಮನೆಯು ಸಂಗೀತ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹ ಮತ್ತು ಸಂಗೀತ ಕಲಾವಿದರ ಕೌಟುಂಬಿಕ ಕಷ್ಟಕಾರ್ಪಣ್ಯಗಳಿಗೆ ಸಂಬಂಧಿಸಿದ ಪತ್ರವ್ಯವಹಾರಗಳಿಗೆ ಮಾತ್ರ ಸೀಮಿತವಾಗಿದೆ. ಮೈಸೂರು ನಗರ ಹಾಗೂ ಸುತ್ತಮುತ್ತಲ ಶ್ರೀರಂಗಪಟ್ಟಣ, ನಂಜನಗೂಡು, ತಿರುಮಕೂಡಲು ನರಸೀಪುರ ಮುಂತಾದ ಸ್ಥಳೀಯ ಸಾಂಸ್ಕೃತಿಕ ಕೇಂದ್ರಗಳಿಗೆ ಸೇರಿದ ಖಾಸಗಿ ಕ್ಷೇತ್ರದ ಶ್ರೀಮಂತರು, ವರ್ತಕರು,

೧೯೫/ಎಸ್, 'ಕಡೆಮನೆ'
೧ನೇ 'ಬಿ' ಅಡ್ಡರಸ್ತೆ
೪ನೇ ಮುಖ್ಯರಸ್ತೆ
'ಐ' ಬ್ಲಾಕ್, ರಾಮಕೃಷ್ಣನಗರ
ಮೈಸೂರು–೫೭೦೦೨೨
ಮೊ: ೯೪೪೮೯ ೪೨೭೩೪

ವಾಣಿಜ್ಯೋದ್ಯಮಿಗಳು ಮೈಸೂರು ಅರಮನೆಯಷ್ಟೇ ಪ್ರೋತ್ಸಾಹವನ್ನು ಸಂಗೀತ, ನಾಟಕ, ನೃತ್ಯ ಮತ್ತು ಕುಸ್ತಿ ಕಲೆಗೆ ಕೊಟ್ಟಿದ್ದಾರೆ.

ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರು ಬರೆದಿರುವ ತಮ್ಮ ಆತ್ಮಕಥನ 'ನನ್ನ ರಸಯಾತ್ರೆ' ಎಂಬ ಕೃತಿಯಲ್ಲಿ ಧಾರವಾಡದ ಉತ್ತರಾದಿ ಸಂಗೀತದ ಪರಿಸರ ಹೇಗಿತ್ತು ಎಂಬುದರ ಬಗ್ಗೆ ಬರೆಯುತ್ತಾ, ವಿಜಯನಗರ ಪತನ ನಂತರ ಸಾಮ್ರಾಜ್ಯದಲ್ಲಿದ್ದ ಸಂಗೀತ, ನೃತ್ಯ ಕಲಾವಿದರು ತಂಜಾವೂರು ಮತ್ತು ಮೈಸೂರು ಅರಸರ ಆಶ್ರಯಕ್ಕೆ ಬಂದರು ಎಂಬುದು ಒಂದು ವಾಡಿಕೆಯ ಮಾತು. ಕೃಷ್ಣದೇವರಾಯನ ರಾಣಿ ತಿರುಮಲಾಂಬ ಮೈಸೂರು ಸಂಸ್ಥಾನಕ್ಕೆ ಸೇರಿದ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿ ತಿರುಮಲರಾಯನ ಮಗಳು ಎಂಬುದಾಗಿ ಡೊಮಿಂಗೊ ಪಿಯಾಸ್ ಹೇಳುತ್ತಾನೆ. ಅದೇನೆ ಇರಲಿ ಮೈಸೂರು ಅರಸರು ತಾವು ಆಚರಿಸಿಕೊಂಡು ಬಂದಿದ್ದ ಈಗಲೂ ಆಚರಿಸುತ್ತಿರುವ ಪ್ರಸಿದ್ಧ ಮೈಸೂರು ದಸರಾ ವಿಜಯನಗರದ ಅರಸರು ಆಚರಿಸಿಕೊಂಡು ಬಂದಿದ್ದ ದಸರಾದ ತದ್ವತ್ ರೂಪಾಂತರ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗಾಗಿ ಮೈಸೂರು ಅರಮನೆಯ ಒಡೆಯರು ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಕುಸ್ತಿ ಕಲೆಗಳನ್ನು ಬಹಳ ಜತನದಿಂದ ಕಾಪಾಡಿಕೊಂಡು ಬಂದರು. ಈ ಬಗ್ಗೆ ಮೈಸೂರು ನಗರದಲ್ಲಿ ಇಂದಿಗೂ ಈ ಪರಂಪರೆ ಮುಂದುವರಿದಿರುವುದನ್ನು ಕಾಣಬಹುದು. ಈ ಪರಂಪರೆಯನ್ನು ಚಿಕ್ಕದೇವರಾಜ ಒಡೆಯರು ಮುಮ್ಮಡಿ ಕೃಷ್ಣರಾಜ ಒಡೆಯರು, ಹತ್ತನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜ ಒಡೆಯರ್ ಬಹಳ ಜತನದಿಂದ ಕಾಪಾಡಿದರು.

ಮುಮ್ಮಡಿ ಕೃಷ್ಣರಾಜ ಒಡೆಯರು ಕಲಾಭಿಜ್ಞರೂ, ಸಂಗೀತ ಪ್ರಿಯರೂ ವಿದ್ವಾಂಸರ ಆಶ್ರಯದಾತರೂ ಆಗಿದ್ದರು. ಇವರ ಆಸ್ಥಾನದಲ್ಲಿ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳಿದ್ದರು. ಸದಾಶಿವರಾವ್, ವೀಣೆ ವೆಂಕಟಸುಬ್ಬಯ್ಯ ಮುಂತಾದ ಹೆಸರಾಂತ ಸಂಗೀತಗಾರರಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರು ದಕ್ಷ ಆಡಳಿತಕ್ಕೆ ಹೆಸರುವಾಸಿಯಾಗಿದ್ದಂತೆ ಲಲಿತಕಲೆಗಳ ಪೋಷಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಅವರ ೪೭ ವರ್ಷಗಳ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನವು ಕಲೆಗಳ ಬೀಡಾಗಿದ್ದು ಸಂಗೀತ, ನೃತ್ಯ, ನಾಟಕ ಮೊದಲಾದ ಲಲಿತಕಲೆಗಳು ದಕ್ಷಿಣ ಭಾರತದಲ್ಲೆಲ್ಲೂ ಕಾಣದಂತಹ ಉನ್ನತ ಮಟ್ಟವನ್ನು ಮುಟ್ಟಿದವು. ತಮ್ಮ ಹಿರಿಯರಂತೆ ನಾಲ್ವಡಿಯವರು ಈ ಕಲೆಗಳನ್ನು ಪೋಷಿಸಿ ಬೆಳೆಸಿ ನಾಡಿನ ಸರ್ವತೋಮುಖವಾದ ಬೆಳವಣಿಗೆಗೆ ಕಾರಣರಾದರು. ಈ ದೊರೆಗಳು ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ ಮತ್ತು ಪಾಶ್ಚಿಮಾತ್ಯ ಸಂಗೀತಕ್ಕೆ ಸಮಾನ ಅವಕಾಶ ಕಲ್ಪಿಸಿದ್ದರು. ಈ ಮೂರು ಪದ್ಧತಿಯಲ್ಲಿ ನಾಲ್ವಡಿಯವರು ಸಮಾನವಾದ ಪರಿಣತಿಯನ್ನು ಪಡೆದಿದ್ದರು. ನಾಲ್ವಡಿಯವರು ಗಾಯನವಲ್ಲದೆ, ವೀಣೆ, ಕೊಳಲು, ಪಿಟೀಲು, ಮೃದಂಗ, ನಾಗಸ್ವರ, ಸಿತಾರ್, ಪಿಯಾನೋ ಮತ್ತು ಸ್ಯಾಕ್ಸೋಫೋನ್– ಈ ಎಂಟೂ ವಾದ್ಯಗಳನ್ನು ಸುಶ್ರಾವ್ಯವಾಗಿ ನುಡಿಸುತ್ತಿದ್ದರು.

ಅರಮನೆಯ ಚಂದ್ರಶಾಲೆಯ ತೊಟ್ಟಿಯಲ್ಲಿ ಸಂಗೀತ ಶಾಲೆಯನ್ನು ಸ್ಥಾಪಿಸಿ ಆಸಕ್ತಿಯುಳ್ಳ ಸಾರ್ವಜನಿಕರು ಸಂಗೀತವನ್ನು ಕಲಿಯಲು ಅವಕಾಶ ಮಾಡಿಕೊಟ್ಟಿದ್ದರು. ಅರಮನೆಯ ಅಂಬಾವಿಲಾಸದಲ್ಲಿ ದೊರೆಗಳ ಮತ್ತು ರಾಜಕುಟುಂಬದವರ ಸಂಗೀತಶಾಲೆಯಿತ್ತು. ಮೈಸೂರು ಅರಮನೆಯ ಆಸ್ಥಾನ ಸಂಗೀತ ವಿದ್ವಾಂಸರ ಕೆಲವು ಹೆಸರುಗಳನ್ನು ಇಲ್ಲಿ ದಾಖಲಿಸಬಹುದು. ಮೈಸೂರು ವಾಸುದೇವಾಚಾರ್ಯ, ವೀಣೆ ಶೇಷಣ್ಣ, ವೀಣೆ ವೆಂಕಟಗಿರಿಯಪ್ಪ, ವೀಣೆ ಸುಬ್ಬಣ್ಣ, ಶಿವರಾಮಯ್ಯ, ಬಿಡಾರಂ ಕೃಷ್ಣಪ್ಪ, ಭೈರವಿ ಕೆಂಪೇಗೌಡ, ಲಕ್ಷ್ಮೀನಾರಾಯಣಪ್ಪ, ತಿಬ್ಬೆ ನಾರಾಯಣಯ್ಯಂಗಾರ್ ತಿಬ್ಬೆ ಕೃಷ್ಣಯ್ಯಂಗಾರ್, ಚಿಕ್ಕರಾಮರಾಯರು, ಪಿಟೀಲು ಚೌಡಯ್ಯ, ಪಿಟೀಲು ಶಿವರುದ್ರಪ್ಪ, ದೇವೇಂದ್ರಪ್ಪ, ವೆಂಕಟಗಿರಿಯಪ್ಪ, ದೊರೆಸ್ವಾಮಿ ಅಯ್ಯಂಗಾರ್, ಮೃದಂಗದ ಮುತ್ತುತೇವರ್, ಪುಟ್ಟಸ್ವಾಮಯ್ಯ, ಆರ್.ಎಸ್. ಕೇಶವಮೂರ್ತಿ, ವೆಂಕಟನಾರಾಯಣರಾವ್ ಬೆಂಗಳೂರು ನಾಗರತ್ನಮ್ಮ ಮುಂತಾದವರು.

ಮೈಸೂರು ಅರಸರು ಅರಮನೆಯ ಆಡಳಿತದಲ್ಲಿ ಕರ್ನಾಟಕ ಸಂಗೀತಕ್ಕೆ ಪ್ರೊತ್ಸಾಹ ಕೊಟ್ಟಂತೆ ಉತ್ತರಾದಿ ಸಂಗೀತಕ್ಕೂ ಪ್ರೊತ್ಸಾಹ ಕೊಟ್ಟಿದ್ದರು. ಅನೇಕ ಶ್ರೇಷ್ಠ ಹಿಂದೂಸ್ಥಾನಿ ಸಂಗೀತ ಕಲಾವಿದರನ್ನು ಆಸ್ಥಾನ ವಿದ್ವಾನರುಗಳನ್ನಾಗಿ ನೇಮಿಸಿಕೊಂಡಿದ್ದರು. ಅನೇಕ ಸುಪ್ರಸಿದ್ಧ ಸಂಗೀತಗಾರರು ಇಲ್ಲಿ ಆಶ್ರಯ ಪಡೆದಿದ್ದರು. ಆಗ್ರಾ ಘರಾನೆಯ ನಿಸ್ಸಾರ್ ಹುಸೇನ್ ಖಾನ್ ಅವರು ನಾಲ್ವಡಿಯವರ ಆಸ್ಥಾನದಲ್ಲಿ ಬಂದು ನೆಲಸಿ ಸಂಗೀತ ಸೇವೆಯಲ್ಲಿಯೇ ತಮ್ಮ ಜೀವಿತದ ಕಾಲವನೆಲ್ಲ ಕಳೆದರು. ಫಯಾಜ್ ಹುಸೇನ್ ಖಾನ್ ಅವರು ಇಲ್ಲೆ ನೆಲೆನಿಂತು ಹಿಂದೂಸ್ಥಾನಿ ಸಂಗೀತಕ್ಕೆ ಅಮೂಲ್ಯ ಕೊಡುಗೆ ನೀಡಿದರು. ಇವರಿಗೆ ದೊರೆಗಳು 'ಆಫ್ತಾಬ್–ಇ–ಮುಜಿಕಿ' (ಸಂಗೀತ ಭಾಸ್ಕರ) ಎಂಬ ಬಿರುದನ್ನು ನೀಡಿ ಗೌರವಿಸಿದರು. ಶ್ರೇಷ್ಠ ಸಿತಾರ್‌ವಾದಕ ಅಫೀಜ್ ಖಾನರಿಗೆ 'ಆಫ್ತಾಬ್–ಇ–ಸಿತಾರ್' ಎಂಬ ಬಿರುದನ್ನು ನೀಡಿ ಗೌರವಿಸಿದರು.

ನಾಲ್ವಡಿಯವರ ಆಸ್ಥಾನದಲ್ಲಿ ಉತ್ತರಾದಿ ಸಂಗೀತದ ದಿಗ್ಗಜರುಗಳು ತಮ್ಮ ಕಲೆಯನ್ನು ಪ್ರದರ್ಶಿಸಿ ಮನ್ನಣೆಯನ್ನು ಪಡೆದುಕೊಂಡರು. ಇವರಲ್ಲಿ ಜೈಪುರದ ರಹಮತ್ ಹುಸೇನ್ ಖಾನ್, ಷಂಸುದ್ದೀನ್ ಖಾನ್, ಇಂದೋರ್‌ನ ಜಮಾಲ್‌ಖಾನ್, ಇನಾಯತ್‌ಖಾನ್, ಹಸನ್‌ಖಾನ್, ಬೊಂಬಾಯಿಯ ಕೃಷ್ಣಾಬಾಯಿ ಮತ್ತು ಅಬ್ದುಲ್ ಕರೀಂ ಖಾನ್, ದೆಹಲಿಯ ಮಹಮದ್‌ಖಾನ್, ಬರೋಡಾದ ಜಮಾಲುದ್ದೀನ್ ಮೊದಲಾದವರು ಮುಖ್ಯರು. ಠುಮರಿ ಗಾಯನದಲ್ಲಿ ಪರಿಣತರಾಗಿದ್ದ ಗೋಹರ್ ಜಾನ್ ಮತ್ತು ರಜೂಲನ್ ಬಾಯಿ ನಾಲ್ವಡಿಯವರ ಆಸ್ಥಾನದಲ್ಲಿ ಹಾಡಿ ಬೆಳಗಿದ ಶ್ರೇಷ್ಠ ಕಲಾವಿದರು. ಗೋಹರ್ ಜಾನ್ ಅವರಿಗೆ ಆಸ್ಥಾನ ಗಾಯಕಿಯಾಗಿ ಅತಿಹೆಚ್ಚು ವೇತನವನ್ನು ನೀಡುವುದರ ಜೊತೆಗೆ ಉಚಿತವಾಗಿ ವಾಸಮಾಡುವುದಕ್ಕೆ 'ದಿಲ್‌ಖುಷ್' ಎಂಬ ಮನೆಯನ್ನು ನೀಡಲಾಗಿತ್ತು. ಈಕೆ ಮಿಸ್ ಜೋಹರ್ ಜಾನ್ ಆಗಿದ್ದರಿಂದ ಸದಾ ಈಕೆಯ ಜೊತೆಗಿದ್ದು ಯೋಗಕ್ಷೇಮ ನೋಡಿಕೊಳ್ಳುವುದಕ್ಕೆಂದು ನಾಲ್ಕು ಜನ ಸಿಬ್ಬಂದಿಯನ್ನು ಕೊಡಲಾಗಿತ್ತು. ಪ್ರೊ. ಬರ್ಕತುಲ್ಲಾ ಖಾನ್ ಅವರು ಶ್ರೇಷ್ಠ ಸಿತಾರ್ ವಾದಕರಾಗಿ ಆಸ್ಥಾನವನ್ನು ಅಲಂಕರಿಸಿದ್ದರು. ಪ್ರೊ. ಫಯಾಜ್ ಖಾನ್ ಅವರು ಅತಿಹೆಚ್ಚು ಸಂಭಾವನೆಯನ್ನು ಪಡೆಯುತ್ತಿದ್ದರು. ಹಾರ್ಮೋನಿಯಂ ನುಡಿಸುವ ಸಾರಂಗಿ ವಾದಕರಾಗಿ ಕರೀಂ ಭಕ್ಷ್ ಇದ್ದರು.

ಅರಮನೆಯ ಸಂಗೀತ ಶಾಲೆಯಲ್ಲಿ ೧೬ ಹಿರಿಯ ಹಾಗೂ ಕಿರಿಯ ವಿದ್ವಾಂಸರು ಹಾಗೂ ೨೧ ವಿದ್ಯಾರ್ಥಿಗಳಿದ್ದರು. ಈ ಶಾಲೆ ಸಂಜೆ ೫ ರಿಂದ ೭ರವರೆಗೆ ನಡೆಯುತ್ತಿತ್ತು. ಆರಂಭದ ಒಂದು ಘಂಟೆ ಮಹಾರಾಜರಿಂದ ಆಯ್ಕೆಗೊಂಡ ಕಿರಿಯ ವಿದ್ವಾನರು ಕರ್ನಾಟಕ, ಹಿಂದೂಸ್ಥಾನಿ ಮತ್ತು ಪಾಶ್ಚಿಮಾತ್ಯ ಪ್ರಕಾರದ ರಾಗ, ಸ್ವರಗಳನ್ನು ಅಭ್ಯಸಿಸಬೇಕಿತ್ತು. ಆಸ್ಥಾನ ವಿದ್ವಾನ್ ಬಿಡಾರಂ ಕೃಷ್ಣಪ್ಪನವರ ಶಿಷ್ಯ ಶ್ರೇಷ್ಠ ಪಿಟೀಲು ವಾದಕ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು ಮಹಾರಾಜರಿಗೆ ಬರೆದ ಪತ್ರದ ಒಕ್ಕಣೆಯೊಂದು ಹೀಗಿದೆ.

ಮಹಾಸ್ವಾಮಿ,

ಕೀರ್ತಿಶೇಷರಾದ ಶ್ರೀಮತ್ ಚಿಕ್ಕದೇವರಾಜ ಒಡೆಯರವರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು, ಶ್ರೀಮತ್ ಚಾಮರಾಜ ಒಡೆಯರ್‌ರವರು ನಮ್ಮ ಕರ್ಣಾಟಕದಲ್ಲಿ ಸಂಗೀತ ಸಾಹಿತ್ಯಗಳಿಗೆ ಉದಾರಾಶ್ರಯವನ್ನು ಅನುಗ್ರಹಿಸಿ ಕಾಪಾಡಿಕೊಂಡು ಬಂದುದಕ್ಕಿಂತಲೂ ಮಹಾಪ್ರಭುಗಳವರು ಶತಾಧಿಕವಾಗಿ ಪ್ರೋತ್ಸಾಹವನ್ನಿತ್ತು ನಮ್ಮ ಸಂಸ್ಥಾನವನ್ನೇ ಗಂಧರ್ವಲೋಕವಾಗಿ ಮಾರ್ಪಡಿಸಿರುವುದು ನಮ್ಮ ಭಾಗ್ಯ ವಿಶೇಷದಿಂದ ಲಭ್ಯವಾದ ಶ್ರೀಚಾಮುಂಡೇಶ್ವರಿ ಕೃಪಾಕಟಾಕ್ಷವೇ ಸರಿ ಮಹಾಸ್ವಾಮಿ.

ಸ್ಥಳ ಪರಸ್ಥಳಗಳ ವಿದ್ವನ್ಮಣಿಗಳು ಸಂಗೀತ ಕಲೆಗೆ ರಂಗಭೂಮಿಯಾದ ನಮ್ಮ ರಾಜಧಾನಿಯಲ್ಲಿ ಕಲೆತು ಹಿಂದೂಸ್ಥಾನೀ ದಕ್ಷಿಣಾದಿ ಸಂಗೀತಗಳ ಸಾಮರಸ್ಯಗಳನ್ನು ಆಂಗ್ಲೇಯ ಗಾಯನ ಕಲೆಗೂ ದೇಶೀಯ ಕಲೆಗೂ ಇರುವ ವೈಲಕ್ಷಣವನ್ನು ವಿಮರ್ಶಿಸಿ ಸಾಮರಸ್ಯವನ್ನುಂಟು ಮಾಡಲು ಉಚಿತವಾದ ನಿರ್ಣಯಗಳನ್ನು ಮಾಡಿ ಆಚರಣೆಗೆ ತರಲು ಮುಖ್ಯ ಸಾಧಕವಾದ ಈ ಸಮ್ಮೇಳನಕ್ಕೆ ಮಹಾಪ್ರಭುಗಳವರು ಆಶೀರ್ವಾದಪೂರ್ವಕವಾದ ಆಶ್ರಯವನ್ನು ಅನುಗ್ರಹಿಸಬೇಕೆಂದು ಅತ್ಯಂತ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇನೆ ಮಹಾಸ್ವಾಮಿ.

ಸಹಿ (ಟಿ. ಚೌಡಯ್ಯ)

ಹೀಗೆ ಮೈಸೂರು ಅರಮನೆ ಹಿಂದೂಸ್ಥಾನಿ ಕರ್ನಾಟಕ ಸಂಗೀತ ಮತ್ತು ಪಾಶ್ಚಿಮಾತ್ಯ ಸಂಗೀತಗಳ ತೌಲನಿಕ ಅಧ್ಯಯನದ ಪ್ರಯೋಗಶಾಲೆಯಾಗಿತ್ತು. ನಾಲ್ವಡಿಯವರು ಇದರ ಪ್ರೇರಕ ಶಕ್ತಿಯಾಗಿದ್ದರು. ಹೀಗೆ ಮೈಸೂರು ಅರಸರು ಉದಾರವಾಗಿ ಸಂಗೀತಗಾರರನ್ನು ಪೋಷಿಸಿದ್ದರಿಂದ ಭಾರತದ ವಿವಿಧ ಭಾಗದಿಂದ ಸಂಗೀತಗಾರರು ಮೈಸೂರಿನತ್ತ ಬಂದರು. ನಾಲ್ವಡಿಯವರು ಉತ್ತರ ಮತ್ತು ದಕ್ಷಿಣ ಸಂಗೀತ ಪ್ರಕಾರಗಳನ್ನು ಮೈಸೂರಿನ ಸಂಗೀತಗಾರರು ಸಮನ್ವಯ ಮಾಡಿಕೊಳ್ಳುವಂತೆ ಮಾಡಿದರು.

ಉತ್ತರಾದಿ ಸಂಗೀತದ ಪುನರುಜ್ಜೀವನದಲ್ಲಿ ಸಪ್ತಸ್ವರ ಬಳಗ ಟ್ರಸ್ಟ್ (ರಿ): ಮೈಸೂರು ಅರಮನೆ ಆಸ್ಥಾನದಲ್ಲಿದ್ದ ಉತ್ತರಾದಿ ಸಂಗೀತದ ವಿದ್ವಾನರುಗಳು ಬಹುತೇಕ ಕಲ್ಕತ್ತಾ, ದೆಹಲಿ, ಉತ್ತರಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶಗಳಿಗೆ ಸೇರಿದವರಾಗಿದ್ದರು. ಇವರ ವಂಶವಾಹಿನಿ ಮತ್ತು ಪರಂಪರೆಯ ಬೇರು ಬಿಳಲುಗಳು ಮೈಸೂರಿನಲ್ಲಿ ಇಳಿಯಲಿಲ್ಲ. ೧೯೪೭ರ ನಂತರ ಈ ಪರಂಪರೆಯ ಕೊಂಡಿ ಸಾಂಸ್ಕೃತಿಕ ನಗರಿ ಮೈಸೂರಿನಿಂದ ಕಳಚಿತ್ತು. ಕಳಚಿದ ಈ ಕೊಂಡಿಯನ್ನು

ಬೆಸೆಯುವಲ್ಲಿ ಮೈಸೂರಿನ ಸಪ್ತಸ್ವರ ಬಳಗ ಟ್ರಸ್ಟ್ ನಿರ್ಣಾಯಕ ಪಾತ್ರವಹಿಸಿತು. ಸುಮಾರು ೪೫ ವರ್ಷಗಳ ಹಿಂದಿನ ಸಂದರ್ಭ. ಮೈಸೂರಿನ ಸರಸ್ವತಿಪುರದ ಪ್ರೊ. ಬಿ. ಸೋಮಶೇಖರಪ್ಪ ಅವರ ವಾಸದ ಮನೆಯಲ್ಲಿ ಉತ್ತರಾದಿ ಸಂಗೀತದ 'ಖಾಸಾ ಬೈಠಕ್' ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸುಮಾರು ೩೦ರಿಂದ ೪೦ ಜನ ಸಂಗೀತ ರಸಿಕರು ಸೇರುತ್ತಿದ್ದರು. ಡಾ. ಎಸ್.ಎಲ್. ಭೈರಪ್ಪ, ಪ್ರೊ. ಕೆ.ಬಿ. ಪ್ರಭುಪ್ರಸಾದ್, ಡಾ. ಯು.ಆರ್. ಅನಂತಮೂರ್ತಿ, ರಂಗಾಸಕ್ತರಾದ ಪ್ರೊ. ವಿಶ್ವನಾಥ ಮಿರ್ಲೆ, ಪ್ರೊ. ಸಿಂಧುವಳ್ಳಿ ಅನಂತಮೂರ್ತಿ, ಶ್ರೀಮತಿ ರಾಮೇಶ್ವರಿ ವರ್ಮ, ಶ್ರೀ ಜಿ.ಟಿ. ನಾರಾಯಣರಾವ್, ಡಾ. ಪ್ರಭುಶಂಕರ, ಎಸ್.ಬಿ. ಹುನಗುಂದ್, ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯಲ್ಲಿ ನಿರ್ದೇಶಕರಾಗಿದ್ದ ಕೆ.ಎಂ. ಬಾದ್ರಿ ಮುಂತಾದವರು ಭಾಗವಹಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿದ್ದ ಬಹುತೇಕ ಎಲ್ಲ ಉತ್ತರಾದಿ ಸಂಗೀತದ ಕಲಾವಿದರನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದೆವು. ಆರಂಭದಲ್ಲಿ ಪಂ. ಭೀಮಸೇನ ಜೋಷಿ, ವಿದುಷಿ ಗಂಗೂಬಾಯಿ ಹಾನಗಲ್ಲ, ಪಂ. ಬಸವರಾಜ ರಾಜಗುರು ಸಪ್ತಸ್ವರ ಬಳಗಕ್ಕೆ ಭೇಟಿಕೊಟ್ಟು ಪ್ರೋತ್ಸಾಹಿಸಿದರು. ಪಂ. ಬಸವರಾಜ ರಾಜಗುರು ಅವರು ಆಗಾಗ ಪತ್ನಿಸಮೇತರಾಗಿ ಬಂದು ಪ್ರೊ. ಬಿ. ಸೋಮಶೇಖರ್ ಅವರ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದರು. ಪಂ. ಮಾಧವ ಗುಡಿ, ಪಂ. ಸೋಮನಾಥ ಮರಡೂರ, ಪಂ. ವಿನಾಯಕ ತೊರವಿ, ಪಂ. ಗಣಪತಿ ಭಟ್ ಹಾಸಣಿ, ಪಂ. ರಾಜಶೇಖರ ಮನ್ಸೂರ್, ಪಂ. ಪಂಚಾಕ್ಷರಿಸ್ವಾಮಿ ಮತಿಗಟ್ಟಿ, ಉಸ್ತಾದ್ ಫಯಾಜ್‌ಖಾನ್, ಕುಮಾರಗಂಧರ್ವ ಅವರ ಮಗಳು ಕಲಾಪಿಣಿ ಕೋಂಕಾಳಿ ಸಪ್ತಸ್ವರವನ್ನು ಸದಾ ಪ್ರೋತ್ಸಾಹಿಸುತ್ತಾ ಬಂದರು.

ಮೈಸೂರು ನಗರದಲ್ಲಿ ಉತ್ತರಾದಿ ಸಂಗೀತವು ನಿಧಾನವಾಗಿ ಅರಳುತ್ತಾ ಬಂದಿತು. ಇದನ್ನು ಗ್ರಹಿಸಿದ ಕೆಲವು ಶ್ರೋತೃಗಳು ಉತ್ತರಾದಿ ಸಂಗೀತವನ್ನು ಕೇಳುವುದೇನೋ ಆಯಿತು; ಕಲಿಯುವ ಆಸಕ್ತರಿಗೆ ಕಲಿಕೆಯ ಅವಕಾಶವನ್ನು ಯಾಕೆ ಮಾಡಬಾರದು? ಎಂಬ ಸಲಹೆಯನ್ನು ಕೊಟ್ಟರು. ಸಪ್ತಸ್ವರ ಹಿಂದೂಸ್ಥಾನಿ ಸಂಗೀತ ವಿದ್ಯಾಲಯವನ್ನು ಆರಂಭಿಸಿದೆವು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪುಟ್ಟರಾಜ ಗವಾಯಿಗಳನ್ನು ಸಂಪರ್ಕಿಸಿ ಸೂಕ್ತ ಶಿಕ್ಷಕರನ್ನು ಕಳುಹಿಸಿಕೊಡಲು ವಿನಂತಿಸಿದೆವು. ಶ್ರೀ ವೀರಭದ್ರಯ್ಯ ಹಿರೇಮಠ ಅವರನ್ನು ಹಾಡುಗಾರಿಕೆ ಮತ್ತು ಶ್ರೀ ಶರಣಪ್ಪ ಗುತ್ತರಗಿಯವರನ್ನು ತಬಲ ಶಿಕ್ಷಕರನ್ನಾಗಿ ಕಳುಹಿಸಿ ಪ್ರೋತ್ಸಾಹಿಸಿದರು. ಶಾಲೆ ಆರಂಭವಾಯಿತು. ಚೆನ್ನಾಗಿಯೇ ನಡೆಯುತ್ತ ಬಂದಿತು. ಸಪ್ತಸ್ವರ ಹಿಂದೂಸ್ಥಾನಿ ಸಂಗೀತ ಶಾಲೆಯ ಉದ್ಘಾಟನೆಗೆ ಗದುಗಿನ ಪುಟ್ಟರಾಜ ಗವಾಯಿಗಳು ಸ್ವತಃ ತಮ್ಮ ಬಹುದೊಡ್ಡ ತಂಡದೊಂದಿಗೆ ಬಂದು ಸಂಗೀತ ಕಾರ್ಯಕ್ರಮ ನಡೆಸುವುದರ ಜೊತೆಗೆ ಪ್ರೋತ್ಸಾಹದಾಯಕ ಮಾತುಗಳೊಂದಿಗೆ ಆಶೀರ್ವಾದ ಮಾಡಿದರು. ಪ್ರಥಮ ಬಾರಿಗೆ ಸಂಸ್ಥೆಯೊಂದನ್ನು ಸ್ಥಾಪಿಸಿ ಇದರಡಿಯಲ್ಲಿ ಕಲಿಕೆಗೆ ಶಾಲೆ ಆರಂಭಿಸಿದ್ದು, ಸಪ್ತಸ್ವರ ಬಳಗ ಟ್ರಸ್ಟ್ ಮತ್ತು ಸಪ್ತಸ್ವರ ಹಿಂದೂಸ್ಥಾನಿ ಸಂಗೀತ ವಿದ್ಯಾನಿಲಯದ ಕೊಡುಗೆಯಾಗಿದ್ದು ಮೈಸೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ ದಾಖಲಿಸಬಹುದಾಗಿದೆ. ಹಾಗೆಯೇ, 'ಪಂಚಾಕ್ಷರ ಗವಾಯಿಗಳ ಪುಣ್ಯಸ್ಮರಣೆಯ ಸಂಗೀತೋತ್ಸವ'ದಲ್ಲಿ ಅನೇಕ ಕಲಾವಿದರನ್ನು ಸೇರಿಸಿ ಶ್ರೇಷ್ಠ ಗುಣಮಟ್ಟದ ಕರ್ನಾಟಕ ಸಂಗೀತವನ್ನು ಪ್ರತಿವರ್ಷ ನಡೆಸುತ್ತಾ ಬಂದಿದೆ.

ಪಂ. ಇಂದೂಧರ ನಿರೋಡಿಯವರು ಮೈಸೂರಿಗೆ ಬಂದರು: ಪರಿಪಕ್ವ ಮನಃಸ್ಥಿತಿಯ ಋಷಿಸದೃಶ ವ್ಯಕ್ತಿತ್ವದ ನಿರೋಡಿಯವರನ್ನು ಮೈಸೂರಿನ ಸಂಗೀತ ಜಗತ್ತು ಆತ್ಮೀಯವಾಗಿ ಬರಮಾಡಿಕೊಂಡಿತು. ಇವರು ಮೈಸೂರಿಗೆ ಬಂದ ತಕ್ಷಣ ಸಪ್ತಸ್ವರ ಬಳಗವು ಇವರ ಸಂಗೀತವನ್ನು ಏರ್ಪಡಿಸಿ ಮೈಸೂರಿಗೆ ಪ್ರಪ್ರಥಮವಾಗಿ ಪರಿಚಯಿಸಿತು. ಅಂದಿನಿಂದ ಇಂದಿನವರೆಗೂ ಸಪ್ತಸ್ವರ ಬಳಗದ ಮುಖ್ಯ ಭಾಗವಾಗಿ ಆತ್ಮೀಯವಾಗಿ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ೧೨.೦೭.೨೦೦೮ರಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ "ಕರ್ನಾಟಕೀ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ತೌಲನಿಕ ಅಧ್ಯಯನ ಶಿಬಿರ"ವನ್ನು ಸಪ್ತಸ್ವರ ಬಳಗವು ಏರ್ಪಡಿಸಿತು. ಇದರ ನೇತೃತ್ವವನ್ನು ಉತ್ತರಾದಿ ಸಂಗೀತ ದಿಗ್ಗಜ ಪಂ. ಇಂದೂಧರ ನಿರೋಡಿಯವರು ಮತ್ತು ಕರ್ನಾಟಕ ಸಂಗೀತ ದಿಗ್ಗಜ ವಿದುಷಿ ಡಾ. ಸುಕನ್ಯಾ ಪ್ರಭಾಕರ್ ವಹಿಸಿದ್ದರು. ಎರಡೂ ಪದ್ಧತಿಯ ವಿದ್ವಾಂಸರು ಮತ್ತು ಮೈಸೂರಿನ ಸಂಗೀತ ರಸಿಕರು ಭಾಗವಹಿಸಿದ್ದರು. ಬೆಳಿಗ್ಗೆ ೧೦ರಿಂದ ರಾತ್ರಿ ೯ ರವರೆಗೆ ಕಾರ್ಯಕ್ರಮ ನಡೆಯಿತು. ಮೈಸೂರಿಗೆ ಪರಿಚಿತವಲ್ಲದ ಅಹೋರಾತ್ರಿ ಸಂಗೀತವನ್ನು ಸಪ್ತಸ್ವರ ಬಳಗವೂ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಏರ್ಪಡಿಸಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜು: ಮೈಸೂರು ವಿ.ವಿ.ಯು 'ಲಲಿತ ಕಲೆಗಳ ಕಾಲೇಜನ್ನು' ಆರಂಭ ಮಾಡಿತು. ಮೈಸೂರು ಅರಮನೆಯ ಸಂಗೀತ ಪರಂಪರೆ ಇದಕ್ಕೆ ಪ್ರೇರಣೆ ನೀಡಿತ್ತು. ಮೈಸೂರು ಅರಮನೆಯ ಸಂಗೀತ ಶಾಲೆಯ ಸಂಗೀತವಾದ್ಯಗಳನ್ನು ಇಲ್ಲಿಗೆ ಕೊಟ್ಟರು ಎಂಬ ಮಾತಿದೆ. ಈ ಕಾಲೇಜಿನ ಒಳ ಆವರಣದಲ್ಲಿ ಬಯಲು ರಂಗಮಂದಿರವಿದೆ. ಈ ಕಾಲೇಜಿಗೆ ಹೊಂದಿಕೊಂಡಂತೆ ಭವ್ಯವಾದ ಸುಸಜ್ಜಿತವಾದ ಆಧುನಿಕ ತಂತ್ರಜ್ಞಾನದ ಕಲಾಪ್ರಕಾರಗಳನ್ನು

ಪ್ರದರ್ಶಿಸುವ ಆಡಿಟೋರಿಯಂ ಇದೆ. ನಾಟಕ, ಹಾಡುಗಾರಿಕೆ, ವೀಣೆ, ಕೊಳಲು, ಪಿಟೀಲು, ಮೃದಂಗ, ಭರತನಾಟ್ಯ ಕಲಿಸುವ ಶಿಕ್ಷಣ ವ್ಯವಸ್ಥೆ ಇದೆ. ಮೈಸೂರು ಒಡೆಯರ್ ವಂಶದ 'ಶ್ರೀಜಯಚಾಮರಾಜೇಂದ್ರ ಕಲ್ಚರಲ್ ಅಕಾಡೆಮಿ' ಮತ್ತು ಮೈಸೂರು ವಿಶ್ವವಿದ್ಯಾನಿಲಯ ಜಂಟಿಯಾಗಿ ತಮ್ಮ ಲಲಿತಕಲೆಗಳ ಕಾಲೇಜಿನ ಮೂಲಕ ಶ್ರೇಷ್ಠ ಗುಣಮಟ್ಟದ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ರಾಷ್ಟ್ರದ ಉದ್ದಗಲಗಳಲ್ಲಿದ್ದ ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿಯನ್ನು ಹೊಂದಿದ್ದ ಶ್ರೇಷ್ಠ ಉತ್ತರಾದಿ ಸಂಗೀತದ ಕಲಾವಿದರುಗಳನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಮೈಸೂರು ಅರಮನೆಯ ಪೂರ್ವಪರಂಪರೆಯ ದರ್ಬಾರ್ ಹಾಲ್ ಸಂಗೀತ ಪರಂಪರೆಯ ಎತ್ತರಕ್ಕೆ ಈ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮೈಸೂರು ನಿವಾಸಿಗಳಿಗೆ ಇದು ಸಂಭ್ರಮವನ್ನು ತಂದುಕೊಟ್ಟಿತ್ತು.

ಗಾನವಿಶಾರದ ಆಸ್ಥಾನ ವಿದ್ವಾನ್ ಬಿಡಾರಂ ಕೃಷ್ಣಪ್ಪ ರಾಮಮಂದಿರ – ಶ್ರೀ ಪ್ರಸನ್ನ ಸೀತಾರಾಮ ಮಂದಿರ: ಇದರ ಅಧಿಕೃತ ಹೆಸರು ಶ್ರೀ ಪ್ರಸನ್ನ ಸೀತಾರಾಮ ಮಂದಿರ. ಮೈಸೂರಿಗರಲ್ಲಿ ಬಿಡಾರಂ ಕೃಷ್ಣಪ್ಪ ರಾಮಮಂದಿರವೆಂದೇ ಪ್ರಚಲಿತ. ಈ ಸಂಸ್ಥೆಗೆ ೧೦೦ ವರ್ಷಗಳ ಭವ್ಯವಾದ ಇತಿಹಾಸವಿದೆ. ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ದೇವರಾಜ ಅರಸು ರಸ್ತೆಗೆ ಹೊಂದಿಕೊಂಡಿದೆ. ಇದರ ರೂವಾರಿ ಗಾನವಿಶಾರದ ಆಸ್ಥಾನ ವಿದ್ವಾನ್ ಬಿಡಾರಂ ಕೃಷ್ಣಪ್ಪನವರು. ಇದರ ಭವ್ಯ ಇತಿಹಾಸವನ್ನು ಹಲವು ಸಂಪುಟಗಳಲ್ಲಿ ಬರೆಯಬಹುದು.

ಸಂಗೀತ ಕಲಾಭಿವರ್ಧಿನಿ ಸಭಾ: ಮೈಸೂರು ಅರಮನೆಯ ಆಸ್ಥಾನ ವಿದ್ವಾನ್ ಮೈಸೂರು ವಾಸುದೇವಾಚಾರ್ ಇದರ ಕೇಂದ್ರ ಬಿಂದು. ಕರ್ನಾಟಕ ಸಂಗೀತದ ಶ್ರೇಷ್ಠ ವಾಗ್ಗೇಯಕಾರರು, ಪ್ರಾತಃಸ್ಮರಣೀಯರು. ಇವರು ಕಟ್ಟಿದ ಈ ಸಂಸ್ಥೆ ಸುದೀರ್ಘಕಾಲ ನಡೆಯಿತು. ಈ ನಡುವೆ ಸ್ಥಗಿತಗೊಂಡಿತು. ಇವರ ವಾಸದ ಮನೆ ಮೈಸೂರಿನ ಅರಮನೆ ಸಮೀಪವಿದ್ದು ಮೈಸೂರಿನ ಹೃದಯ ಭಾಗದಲ್ಲಿದೆ. ಈ ಮನೆಯ ಪೂರ್ವಪರಂಪರೆಯನ್ನು ಎತ್ತಿ ಹಿಡಿಯುವ ಸಲುವಾಗಿ ಇಲ್ಲಿ ನ್ಯಾಷನಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರೊಬ್ಬರು ತಿಂಗಳಿಗೆ ಒಂದರಂತೆ ಸಂಗೀತ ಕಛೇರಿ ಏರ್ಪಡಿಸುತ್ತ ಬಂದಿದ್ದಾರೆ.

ನಾದಬ್ರಹ್ಮ ಸಂಗೀತ ಸಭಾ: ೭೬ ಸಂವತ್ಸರಗಳನ್ನು ದಾಟಿರುವ ಗಟ್ಟಿ ತಳಹದಿಯ ಮೇಲೆ ನಿಂತಿರುವ ಮೈಸೂರಿನ ಹಿರಿಯ ಸಂಗೀತ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ. ಮೈಸೂರಿನ ಹೃದಯಭಾಗದಲ್ಲಿ ಸ್ವಂತ ಸುಸಜ್ಜಿತವಾದ ಭವನವನ್ನು ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ ಹೆಸರಿನಲ್ಲಿ ನಿರ್ಮಿಸಿದ್ದಾರೆ. ದೇಶದ ಉದ್ದಗಲಗಳಲ್ಲಿರುವ ಶ್ರೇಷ್ಠ ಕರ್ನಾಟಕ ಸಂಗೀತ ಕಲಾವಿದರ ಸಂಗೀತವನ್ನು ಇಲ್ಲಿ ಏರ್ಪಡಿಸಿದ್ದಾರೆ. ಅದೇ ರೀತಿ ಉತ್ತರಾದಿ ಸಂಗೀತ, ಭಾರತೀಯ ನೃತ್ಯ ಪದ್ಧತಿಯ ಎಲ್ಲ ಶ್ರೇಷ್ಠ ಕಲಾವಿದರಿಗೆ ಇಲ್ಲಿ ಅವಕಾಶ ಕಲ್ಪಿಸಿದ್ದಾರೆ. ಈ ಸಂಸ್ಥೆಯು ಪ್ರದರ್ಶಿಸಿದ ಎಲ್ಲ ಕಲೆಗಳ ಇತಿಹಾಸವನ್ನು ಹಲವು ಸಂಪುಟಗಳಲ್ಲಿ ಪ್ರಕಟಿಸಬಹುದು. ಗಟ್ಟಿಯಾದ ಆರ್ಥಿಕ ತಳಹದಿಯನ್ನು ಹೊಂದಿದೆ.

ಜೆ.ಎಸ್.ಎಸ್. ಸಂಗೀತ ಸಭಾ: ಜಗದ್ಗುರು ಸುತ್ತೂರು ಶ್ರೀ ಶಿವರಾತ್ರೀಶ್ವರ ಸಂಗೀತ ಸಭಾ, ಮೈಸೂರು ಇದು ಕರ್ನಾಟಕದ ಅತ್ಯಂತ ಪ್ರಮುಖ ಮಠಗಳಲ್ಲೊಂದಾದ ಜೆ.ಎಸ್.ಎಸ್. ಮಠದ ಆಡಳಿತದ ಅಡಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವ ಸಂಗೀತ ಸಂಸ್ಥೆ. ಇದಕ್ಕೊಂದು ಪ್ರತ್ಯೇಕ ಟ್ರಸ್ಟ್ ಸ್ಥಾಪಿಸಿದ್ದಾರೆ. "ಬೆಳದಿಂಗಳ ಸಂಗೀತ" ಪ್ರತಿ ತಿಂಗಳ ಸ್ಥಾಯಿ ಕಾರ್ಯಕ್ರಮ. ರಾಷ್ಟ್ರದ ಉದ್ದಗಲಗಳಲ್ಲಿರುವ ಶ್ರೇಷ್ಠ ಗುಣಮಟ್ಟದ ಕರ್ನಾಟಕೀ ಮತ್ತು ಉತ್ತರಾದಿ ಸಂಗೀತದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿರುವ ಹಿರಿಯ ಸಂಸ್ಥೆ. ಶ್ರೀ ಮಠದ ಗಟ್ಟಿಯಾದ ತಳಹದಿ ಇದೆ. ಕಳೆದ ೫೦ ವರ್ಷಗಳಿಂದ ಈ ಸಂಸ್ಥೆಯ ಚಟುವಟಿಕೆಗಳನ್ನು ಸಮೀಪದಿಂದ ನೋಡಿದ್ದೇನೆ. ಇದರ ಚಾಲಕರು ಪಿಟೀಲು ವಾದಕರಾದ ಮೈಸೂರು ಮಹದೇವಪ್ಪನವರು. ಇವರ ಮಕ್ಕಳು ಮೈಸೂರು ಎಂ. ನಾಗರಾಜು ಮತ್ತು ಮಾಸ್ಟರ್ ಮಂಜುನಾಥ್ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರು.

ಅರಳಿಕಟ್ಟೆ ರಾಮಮಂದಿರ ಸಂಗೀತ ಸಭಾ: ಮೈಸೂರಿನ ಹೃದಯ ಭಾಗದಲ್ಲಿರುವ ಹುತಾತ್ಮ ರಾಮಸ್ವಾಮಿ ಸರ್ಕಲ್‌ನಿಂದ ಕೋರ್ಟ್ ಕಡೆ ಹೋಗುವ ರಸ್ತೆ ಮಧ್ಯದಲ್ಲಿದೆ. ಸುಮಾರು ಇಪ್ಪತ್ತು ವರ್ಷಗಳ ಕಾಲ ಶ್ರೇಷ್ಠ ಗುಣಮಟ್ಟದ ಶಾಸ್ತ್ರೀಯ ಸಂಗೀತ ಕಛೇರಿಗಳು ಇಲ್ಲಿ ನಡೆಯುತ್ತಿದ್ದವು. ಬಹು ಸಂಖ್ಯೆಯ ಜನರು ಇಲ್ಲಿ ಸೇರುತ್ತಿದ್ದರು. ಸಂಗೀತ ಕಛೇರಿಗಳು ಈಗ ಸ್ಥಗಿತಗೊಂಡಿವೆ.

ಪಿಟೀಲು ಟಿ. ಚೌಡಯ್ಯ ಸ್ಮಾರಕ ಸಂಗೀತ ಸಭಾ: ಶ್ರೀಕಂಠಯ್ಯ ಎಂಬ ಮೈಸೂರಿನ ಹಿರಿಯ ವಕೀಲರು ಸಾರ್ವಜನಿಕರ ಸಹಕಾರದಿಂದ ಈ ಸಂಗೀತ ಸಭಾವನ್ನು ಕಟ್ಟಿದ್ದರು. ಸುಮಾರು ಇಪ್ಪತ್ತು ವರ್ಷಗಳು ಶ್ರೇಷ್ಠ ಗುಣಮಟ್ಟದ ಸಂಗೀತ

ಕಛೇರಿಗಳು ಇಲ್ಲಿ ನಡೆಯುತ್ತಿದ್ದವು. ಅರಳಿಕಟ್ಟೆ ರಾಮಮಂದಿರದ ಎದುರು ವಿಶಾಲವಾದ ಜಾಗದಲ್ಲಿ ವೇದಿಕೆ ನಿರ್ಮಾಣ ಮಾಡಿ ಬಹುಸಂಖ್ಯೆಯ ಜನರು ಕುಳಿತು ಕೇಳುವುದಕ್ಕೆ ಅವಕಾಶ ಕಲ್ಪಿಸಿದ್ದರು. ಕುಳಿತುಕೊಳ್ಳಲು ಜಾಗ ಸಾಲದೆ ಒಂದು ಫರ್ಲಾಂಗ್ ದೂರದ ರಾಮಸ್ವಾಮಿ ಸರ್ಕಲ್‌ವರೆಗೆ ಜನ ನಿಂತೇ ಕೇಳುತ್ತಿದ್ದರು. ಪ್ರಸಿದ್ಧ ಸಂಗಿತ ಕಲಾವಿದರನ್ನು ಆಹ್ವಾನಿಸುತ್ತಿದ್ದುದು ಇದಕ್ಕೆ ಕಾರಣವಾಗಿತ್ತು. ಈಗ ಇದು ಸ್ಥಗಿತಗೊಂಡಿದೆ.

ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ರಿ): ಮೈಸೂರಿಗರ ನಾಲಗೆಯಲ್ಲಿ "ವಿ.ವಿ. ಪುರಂ ೮ನೇ ಕ್ರಾಸ್ ಸಂಗೀತ" ಎಂದೇ ಚಿರಪರಿಚಿತ. ಮೈಸೂರಿನ ವಾಣಿವಿಲಾಸಪುರಂ (ಒಂಟಿಕೊಪ್ಪಲು) ೮ನೇ ಕ್ರಾಸಿನಲ್ಲಿ ಕಳೆದ ೬೦ ವರ್ಷಗಳಿಂದ ಪ್ರತಿವರ್ಷ ಸತತವಾಗಿ ಗಣಪತಿ ಹಬ್ಬದ ಸಂದರ್ಭದಲ್ಲಿ ೧೫ ರಿಂದ ೩೦ ದಿವಸ ಶ್ರೇಷ್ಠ ಗುಣಮಟ್ಟದ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತ ಬಂದಿದ್ದಾರೆ. ಮೈಸೂರು ಅರಮನೆ ದರ್ಬಾರ್ ಹಾಲ್ ಸಂಗೀತದ ಗುಣಮಟ್ಟವನ್ನು ಕಾಯ್ದುಕೊಂಡಿದ್ದಾರೆ. ದೇಶದ ಉದ್ದಗಲಗಳಿಂದ ಬಂದ ಶ್ರೇಷ್ಠ ಉತ್ತರಾದಿ ಮತ್ತು ದಕ್ಷಿಣಾದಿ ಕಲಾವಿದರು ಇಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಗಾನಭಾರತಿ, ಕುವೆಂಪು ನಗರ: ವಿಶಾಲವಾದ ಸ್ವಂತ ಜಾಗದಲ್ಲಿ ಸುಸಜ್ಜಿತ ಆಡಿಟೋರಿಯಂ ಹೊಂದಿದ್ದು, ಸಂಗೀತಶಾಲೆ ನಡೆಸುವುದಕ್ಕೆ ಅಗತ್ಯ ಕಟ್ಟಡ ಹೊಂದಿದೆ. ಕಳೆದ ೪೦ ವರುಷಗಳಿಂದ ವ್ಯವಸ್ಥಿತವಾಗಿ ಸಂಗೀತ ಕಛೇರಿಗಳನ್ನು ಸಂಗೀತ ಶಾಲೆಯನ್ನು ನಡೆಸಿಕೊಂಡು ಬಂದಿದ್ದಾರೆ. ಪ್ರಧಾನವಾಗಿ ಕರ್ನಾಟಕ ಸಂಗೀತಕ್ಕೆ ಅವಕಾಶ ಕೊಟ್ಟಿದ್ದರೂ ಉತ್ತರಾದಿ ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ನಾಡಿನ ಉದಯೋನ್ಮುಖ ಕಲಾವಿದರೂ ಸೇರಿದಂತೆ ಹಿರಿಯ ಕಲಾವಿದರಿಗೂ ಅವಕಾಶ ಕಲ್ಪಿಸಿದ್ದಾರೆ. ಭದ್ರವಾದ ಆರ್ಥಿಕ ತಳಹದಿಯನ್ನು ಹೊಂದಿದೆ. ಆರಂಭದಲ್ಲಿ ವಿಜ್ಞಾನ ಲೇಖಕ ಜಿ.ಟಿ. ನಾರಾಯಣರಾಯರು ಬಹಳ ಶ್ರದ್ಧೆಯಿಂದ ಈ ಸಂಸ್ಥೆಗೆ ದುಡಿದರು. ಡಾ. ಸಿ.ಜೆ. ನರಸಿಂಹನ್ ಅವರ ಸೇವೆಯೂ ದಾಖಲಿಸುವಂತಹದ್ದು.

ತ್ಯಾಗರಾಜ ಸಂಗೀತ ಸಭಾ: ಕರ್ನಾಟಕ ಸಂಗೀತದ ಘನ ವಿದ್ವಾಂಸರಾದ ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿ ಇದರ ರೂವಾರಿ. ಮೈಸೂರಲ್ಲಿದ್ದ ಬಹುತೇಕ ಸಂಗೀತ ಸಂಸ್ಥೆಗಳು ಹೆಚ್ಚಿನ ಸಂದರ್ಭಗಳಲ್ಲಿ ಹೊರಗಿನವರಿಗೆ ವೇದಿಕೆಯಲ್ಲಿ ಅವಕಾಶ ಕೊಡುತ್ತಿದ್ದುದರಿಂದ ಸ್ಥಳೀಯ ಕಲಾವಿದರಿಗೆ ಅಸಮಾಧಾನವುಂಟಾಯಿತು. ಹಾಗಾಗಿ ಸ್ಥಳೀಯ ಕಲಾವಿದರಿಗೆ ಮಾತ್ರವೇ ಅವಕಾಶ ನೀಡುವ ಉದ್ದೇಶದಿಂದ ಈ ಸಂಸ್ಥೆ ಆರಂಭಗೊಂಡಿದೆ. ಕಳೆದ ೩೫ ವರ್ಷಗಳಿಂದ ಉತ್ತಮ ಗುಣಮಟ್ಟದ ಶಾಸ್ತ್ರೀಯ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತ ಬಂದಿದ್ದಾರೆ.

ಸ್ವರಸಂಕುಲ: ಉತ್ತರಾದಿ ಸಂಗೀತಕ್ಕೆಂದೇ ಮೀಸಲಿರುವ ಸಂಸ್ಥೆ. ಇದರ ರೂವಾರಿಗಳು ಡಾ. ಎಂ.ಎಸ್. ಭಾಸ್ಕರ್ ಮತ್ತು ಪಂ. ವೀರಭದ್ರಯ್ಯ ಹಿರೇಮಠ. ಡಾ. ಎಂ.ಎಸ್. ಭಾಸ್ಕರ್ ಅವರು ಮೈಸೂರು ನಗರದ ಪ್ರಸಿದ್ಧ ನರರೋಗ ತಜ್ಞರು. ಸ್ವತಃ ಉತ್ತರಾದಿ ಸಂಗೀತದ ಗಾಯಕರು. ವಿವಿಧ ವೇದಿಕೆಗಳಲ್ಲಿ ಕಳೆದ ೩೦ ವರ್ಷ ಹಾಡುತ್ತಾ ಬಂದಿದ್ದಾರೆ. ಪಂ. ವೀರಭದ್ರಯ್ಯ ಹಿರೇಮಠ ಉತ್ತಮ ಸಂಗೀತ ಶಿಕ್ಷಕರು, ಹಾಡುಗಾರರು, ಹಾರ್ಮೋನಿಯಂ ನುಡಿಸುತ್ತಾರೆ. ಸ್ವರಸಂಕುಲದ ಮೂಲಕ ಪ್ರಸಿದ್ಧ ಗಾಯಕರ ಉತ್ತರಾದಿ ಸಂಗೀತದ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಬಹುದೊಡ್ಡ ಕಲಾವಿದರ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿದ್ದಾರೆ.

ಶ್ರೀಗುರು ಕವಿ ಡಾ. ಪುಟ್ಟರಾಜ ಗವಾಯಿ ಸಂಗೀತ ಸಭಾ: ಇದರ ಸ್ಥಾಪಕರು ಪಂ. ಭೀಮಾಶಂಕರ ಬಿದನೂರು ಪ್ರತಿಭಾವಂತ ತಬಲವಾದಕ, ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿರುವ ಉತ್ತಮ ಸಂಘಟಕ. ಮೈಸೂರಿಗೆ ಬರುವ ಅನೇಕ ಪ್ರಸಿದ್ಧ ಗಾಯಕರಿಗೆ ತಬಲ ಸಾಥ್ ನೀಡಿದ್ದಾರೆ. ಶ್ರೀಗುರು ಪುಟ್ಟರಾಜ ಗವಾಯಿಗಳ ಹೆಸರಿನಡಿಯಲ್ಲಿ ಶಾಲೆ ಆರಂಭಿಸಿ 'ತಬಲ'ದಲ್ಲಿ ಶಿಕ್ಷಣ ನೀಡುತ್ತಿದ್ದಾರೆ. ಮೈಸೂರು ನಗರದ ಉತ್ತರಾದಿ ಸಂಗೀತದ ಬೆಳವಣಿಗೆಗೆ ಇವರ ಕೊಡುಗೆ ಅಪಾರ.

ಶ್ರೀಗುರು ರಾಘವೇಂದ್ರ ಆರಾಧನಾ ಸಮಿತಿ: ಆನಂದರಾವ್ ದೇಶಪಾಂಡೆ ಮತ್ತು ಮುರಳಿಧರ ದೇಶಪಾಂಡೆ ಸಹೋದರರು ಇದರ ರೂವಾರಿಗಳು. ಉತ್ತರ ಕರ್ನಾಟಕದಿಂದ ಮೈಸೂರಿಗೆ ಬಂದು ನೆಲೆಸಿದವರು. ಸುಮಾರು ೪೦ ವರ್ಷಗಳ ಹಿಂದೆ ಶ್ರೀ ಗುರು ರಾಘವೇಂದ್ರ ಆರಾಧನಾ ಸಮಿತಿ ಎಂಬ ಹೆಸರಿನಡಿಯಲ್ಲಿ ಪ್ರತಿವರ್ಷ ತಪ್ಪದೇ ರಾಯರ ಆರಾಧನೆಯ ಸಮಯದಲ್ಲಿ ಮೂರು ದಿವಸ ಉತ್ತಮ ಗುಣಮಟ್ಟದ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಪ್ರಧಾನವಾಗಿ ಉತ್ತರಾದಿ ಸಂಗೀತ, ಜೊತೆಜೊತೆಗೆ ಕರ್ನಾಟಕ ಸಂಗೀತವನ್ನು ಏರ್ಪಡಿಸುತ್ತ ಬಂದಿದ್ದಾರೆ. ಮೈಸೂರು ನಗರದ ಉತ್ತರಾದಿ ಸಂಗೀತಕ್ಕೆ ಇವರ ಕೊಡುಗೆ ಇದೆ.

ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ

ಮೈಸೂರು ನಗರ ಮತ್ತು ಅರಮನೆಯ ಸಂಗೀತ ಪಯಣದ ಸುದೀರ್ಘ ಇತಿಹಾಸದಲ್ಲಿ ಇದು ಇತ್ತೀಚಿನ ಬೆಳವಣಿಗೆ. ೨೦೦೮-೦೯ರಲ್ಲಿ ಸ್ಥಾಪಿತವಾದ ಈ ವಿಶ್ವವಿದ್ಯಾಲಯ ತನ್ನದೆ ಏಳುಬೀಳುಗಳ ನಡುವೆ ನಡೆಯುತ್ತ ಬಂದಿದೆ. ಮೈಸೂರು ನಗರದ ಹೃದಯ ಭಾಗದ ಲಕ್ಷ್ಮೀಪುರಂ ಬಡಾವಣೆಯಲ್ಲಿ ನೆಲೆಗೊಂಡಿದೆ. ಉತ್ತರಾದಿ ಸಂಗೀತ, ದಕ್ಷಿಣಾದಿ ಸಂಗೀತ, ನೃತ್ಯ, ರಂಗಭೂಮಿ, ಯೋಗ, ಎರಡೂ ಪದ್ಧತಿಯ ವಾದ್ಯಗಳ ಕುರಿತ ಅಧ್ಯಯನ, ಸಂಶೋಧನೆ, ಪ್ರದರ್ಶನ ಇದರ ಮೂಲ ಉದ್ದೇಶವಾಗಿದೆ.

ಲಯವಿದ್ಯಾ ಪ್ರತಿಷ್ಠಾನ: ಇದರ ಸ್ಥಾಪಕರು ವಿದ್ವಾನ್ ಶಿವಶಂಕರ ಸ್ವಾಮಿ. ದಕ್ಷಿಣಾದಿ ತಾಳವಾದ್ಯ ಮೃದಂಗ ಇತ್ಯಾದಿಗಳಿಗೆ ಸಂಬಂಧಿಸಿದ ಸಂಸ್ಥೆ. ಇವರೂ ಸಹ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ.

ಸುರಭಿ ಗಾನ ಕಲಾಮಂದಿರ: ಡಾ. ಸುಕನ್ಯಾ ಪ್ರಭಾಕರ್ ಇದರ ಸ್ಥಾಪಕರು. ಪ್ರತಿಭಾವಂತ ಕಲಾವಿದೆ. ದಕ್ಷಿಣಾದಿ ಸಂಗೀತದ ಸುದೀರ್ಘ ಇತಿಹಾಸದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವ ಸಾಧನೆ ಮತ್ತು ಸಿದ್ಧಿಯನ್ನು ಪಡೆದಿದ್ದಾರೆ. ನಿರ್ಲಿಪ್ತ ನಿರಪೇಕ್ಷ ಭಾವದಲ್ಲಿ ಸಂಗೀತ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ಮಕ್ಕಳಿಗೆ/ಆಸಕ್ತರಿಗೆ ಸಂಗೀತ ಕಲಿಸುತ್ತಾ ಬಂದಿದ್ದಾರೆ.

ಶ್ರುತಿಮಂಜರಿ, ಕುವೆಂಪುನಗರ: ಕರ್ನಾಟಕ ಸಂಗೀತದ ಪ್ರತಿಭಾವಂತ ಕಲಾವಿದೆ ಆರ್.ಎನ್. ಶ್ರೀಲತಾ ಇದರ ಸ್ಥಾಪಕರು. ಕರ್ನಾಟಕ ಸಂಗೀತಕ್ಕೆ ಹಲವು ಆಯಾಮಗಳಲ್ಲಿ ಕೊಡುಗೆ ನೀಡುತ್ತಾ ಬಂದಿದ್ದಾರೆ. ಹೆಸರಾಂತ ಸಂಗೀತ ಹಿನ್ನೆಲೆಯ ರುದ್ರಪಟ್ಟಣಂ ಸಹೋದರರ ಕುಟುಂಬದಿಂದ ಬಂದವರು. ಮೈಸೂರು ವಿ.ವಿ.ಯ ಲಲಿತಕಲೆಗಳ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಗೋಕುಲಂ ಕೃಷ್ಣಗಾನ ಸಭಾ: ಮೈಸೂರಿನ ಗೋಕುಲ ಬಡಾವಣೆಯಲ್ಲಿದೆ. ಈ ಸಂಗೀತ ಸಂಸ್ಥೆಯ ರೂವಾರಿ ಶ್ರೀಧರ ರಾಜೇ ಅರಸ್ ಅವರು. ಸಾರ್ವಜನಿಕರನ್ನು ಸಂಘಟಿಸಿ ಶಿಸ್ತುಬದ್ಧವಾಗಿ ನಿರಂತರ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ನಾದಮಯ ಮೈಸೂರಿಗೆ ಈ ಸಂಸ್ಥೆಯ ಕೊಡುಗೆ ಇದೆ.

ಎನ್.ಆರ್. ಮೊಹಲ್ಲ ಸಂಗೀತಸಭಾ: ಮೈಸೂರಿನ ನರಸಿಂಹರಾಜ ಮೊಹಲ್ಲದಲ್ಲಿರುವ ಸಂಗೀತ ಸಂಸ್ಥೆ. ಮುಸ್ಲಿಂ ಬಂಧುಗಳು ಹೆಚ್ಚು ನೆಲೆಸಿರುವ ಬಡಾವಣೆ ಎಂಬ ಪ್ರತೀತಿ ಈ ಬಡಾವಣೆಗಿದೆ. ಇದರ ರೂವಾರಿಗಳು ಶ್ರೀಧರ್. ಸಾರ್ವಜನಿಕರನ್ನು ಸಂಘಟಿಸಿ ಸಂಗೀತ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸುತ್ತಾ ಬಂದಿದ್ದಾರೆ.

ಉತ್ತರಾದಿ ಸಂಗೀತದ 'ಗಾಯನ ಸಭಾ': ಮೈಸೂರು ನಗರದ ಸುದೀರ್ಘ ಸಂಗೀತ ಇತಿಹಾಸದ ಪಯಣದಲ್ಲಿ ಬರುವ ಎಲ್ಲ ಸಂಘಸಂಸ್ಥೆಗಳ ಸಂಘಟಕರ ಇತಿಹಾಸ ಒಂದು ರೀತಿ ಇದ್ದರೆ 'ಗಾಯನ ಸಭಾ'ದ ಇತಿಹಾಸ ಬೇರೆ ರೀತಿಯೇ ಇದೆ. ಸಾಮಾನ್ಯವಾಗಿ ಸಾರ್ವಜನಿಕರ ಸಹಕಾರದೊಂದಿಗೆ ಏಕವ್ಯಕ್ತಿ ಇಲ್ಲವೆ ಕೆಲವು ವ್ಯಕ್ತಿಗಳು ಸೇರಿ ಎಲ್ಲ ರೀತಿಯ ಸಹಾಯ ಪಡೆದು ಸಂಗೀತ ಸಂಸ್ಥೆಗಳನ್ನು ನಡೆಸುತ್ತಾರೆ. ಆದರೆ ಇಲ್ಲಿ ಒಬ್ಬ ವ್ಯಕ್ತಿ ಯಾವುದೇ ಸಹಾಯ ಪಡೆಯದೆ ಸ್ವಂತ ಶಕ್ತಿಯ ಬಲದಿಂದಲೇ ಈ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇದರ ಕೇಂದ್ರಬಿಂದು ಶ್ರೀ ಹರ್ಷ ಅವರು. ಉದ್ಯೋಗ ನಿಮಿತ್ತ ನಿಡುಗಾಲ ಹೊರದೇಶದಲ್ಲಿದ್ದು, ಅಲ್ಲಿಂದ ಮೈಸೂರಿಗೆ ಬಂದು ನೆಲೆಸಿದ್ದಾರೆ. 'ಗಾಯನ ಸಭಾ' ಎಂಬ ಸಂಸ್ಥೆಯ ಮೂಲಕ ಅಚ್ಚುಕಟ್ಟಾದ ವೈವಿಧ್ಯಮಯ ಉತ್ತರಾದಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ.

ವಸುಂಧರಾ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್: ಮೈಸೂರು ಅರಮನೆಯಲ್ಲಿ ಸಂಗೀತಕ್ಕೆ ಕೊಟ್ಟ ಪ್ರೋತ್ಸಾಹದಂತೆ ಸಂಗೀತದ ತಳಹದಿಯ ನೃತ್ಯಕ್ಕೂ ಅದೇ ರೀತಿ ಪ್ರೋತ್ಸಾಹ ನೀಡಿದ್ದರು. ಅನೇಕ ಪ್ರತಿಭಾವಂತ ನೃತ್ಯ ಕಲಾವಿದೆಯರು ಮೈಸೂರು ಅರಮನೆಯ ಪ್ರೋತ್ಸಾಹದಲ್ಲಿದ್ದರು. ನಾಲ್ವಡಿಯವರು ಪ್ರಗತಿಪರರಾಗಿದ್ದರು. ಮುಜರಾಯಿ ದೇವಸ್ಥಾನದಲ್ಲಿ ಆಚರಣೆಯಲ್ಲಿದ್ದ ಗೆಜ್ಜೆಪೂಜೆ ಆಚರಣೆಯನ್ನು ನಿಷೇಧಿಸಿದರು. ಅರಮನೆಯ ಆಸ್ಥಾನದಲ್ಲಿ ನೃತ್ಯಕಲೆಯನ್ನು ಪ್ರೋತ್ಸಾಹಿಸಿದರು. ಅರಮನೆಯ ರಾಜವಂಶಸ್ಥರ ಹುಟ್ಟುಹಬ್ಬದ ಆಚರಣೆ, ಮದುವೆ, ದಸರಾ ಸಂದರ್ಭದಲ್ಲಿ ಪ್ರಸಿದ್ಧ ಆಸ್ಥಾನ ನರ್ತಕಿಯರಿಂದ ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಖಾಸಗಿಯಾಗಿ ಶ್ರೀಮಂತರು ಸಹ ತಮ್ಮ ಮನೆಗಳಲ್ಲಿ ನೃತ್ಯ ಏರ್ಪಡಿಸುತ್ತಿರುವುದು ದೊಡ್ಡಸ್ತಿಕೆಯಾಗಿತ್ತು. ಗುಲಾಬ್‌ಜಾನ್, ಜಯಲಕ್ಷ್ಮೀಸಾನಿ, ಪುಟ್ಟಸಾನಿ, ಆದಿಲಕ್ಷ್ಮೀ, ರಾಜರತ್ನಸಾನಿ, ತಿರುಮಕೂಡಲು ಮೀನಾಕ್ಷಿ ಪ್ರಸಿದ್ಧರು.









ಮೈಸೂರು ಅರಮನೆಯಲ್ಲಿದ್ದ ಸಂಗೀತ ವಾದ್ಯಗಳು





ಜಗನ್ಮೋಹನ ಅರಮನೆಯ ಆರ್ಟ್ ಗ್ಯಾಲರಿಯಲ್ಲಿರುವ ಸಂಗೀತ ವಾದ್ಯಗಳು

ಅಂತರಾಷ್ಟ್ರೀಯ ಖ್ಯಾತಿಯ ಪ್ರತಿಭಾವಂತ ಭರತನಾಟ್ಯ ಕಲಾವಿದೆ ಡಾ. ವಸುಂಧರಾ ದೊರೆಸ್ವಾಮಿಯವರು ೧೯೮೬ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಕಳೆದ ೩೬ ವರ್ಷಗಳಿಂದ ಮೈಸೂರು ನಗರದಲ್ಲಿ ವೈವಿಧ್ಯಮಯ ನೃತ್ಯ ಕಲಾಪ್ರಕಾರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಉತ್ತರಾದಿ ಸಂಗೀತಕ್ಕೆ ಅಮೋಘ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಪಾರಂಗೋತ್ಸವ, ಪಲ್ಲವೋತ್ಸವ, ನಟರಾಜೋತ್ಸವ, ವಸುಂಧರೋತ್ಸವ, ಚಿಗುರು – ಎಂಬ ಐದು ಬಗೆಯ ಉತ್ಸವಗಳನ್ನು ಪ್ರತಿವರ್ಷದಲ್ಲಿ ನಿರಂತರವಾಗಿ ಆಯೋಜಿಸುತ್ತಾ ಬಂದಿದ್ದಾರೆ. ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕಾರಗಳಾದ ಭರತನಾಟ್ಯ, ಕೂಚುಪುಡಿ, ಕಥಕ್ಕಳಿ, ಮೋಹಿನಿ ಅಟ್ಟಂ, ಒಡಿಸ್ಸಿ, ಮಣಿಪುರಿ, ಕಥಕ್, ಶಾಸ್ತ್ರೀಯ – ಈ ಎಲ್ಲ ಶೈಲಿಯ ನೃತ್ಯ ಪ್ರಕಾರಗಳ ಪ್ರದರ್ಶನಗಳನ್ನು ಮೈಸೂರು ನಗರದಲ್ಲಿ ಸತತ ೩೬ ವರ್ಷಗಳಿಂದ ಏರ್ಪಡಿಸುತ್ತಾ ಬಂದಿದ್ದಾರೆ. ಈ ನೃತ್ಯ ಪ್ರಕಾರಗಳಲ್ಲಿ ದಕ್ಷಿಣಾದಿ, ಉತ್ತರಾದಿ ಸಂಗೀತಗಳು ಮುಖ್ಯಪಾತ್ರ ವಹಿಸುತ್ತವೆ.

ಕಥಕ್ ನೃತ್ಯ ಸಂಸ್ಥೆ, ಮೈಸೂರು: ಮೈಸೂರಿನ ಅತ್ಯಂತ ಹಳೆಯ ಕಾಲದ ಪ್ರೀಮಿಯರ್ ಫಿಲಂ ಸ್ಟುಡಿಯೋ ಮಾಲೀಕರ ಮಕ್ಕಳಾದ ಎಂ.ಬಿ. ನಾಗರಾಜ್ ಇದರ ಸ್ಥಾಪಕರು. ಸ್ವತಃ ಪ್ರತಿಭಾವಂತ ಕಥಕ್ ನೃತ್ಯ ಕಲಾವಿದರು. ಉತ್ತರಾದಿ ಸಂಗೀತದ ತಳಹದಿಯನ್ನು ಹೊಂದಿರುವ 'ಕಥಕ್' ನೃತ್ಯವನ್ನು ಆರಾಧನೆಯ ನೆಲೆಯಲ್ಲಿ ಸ್ವೀಕರಿಸಿ ಅತ್ಯುತ್ತಮ ಗುಣಮಟ್ಟದ ನೃತ್ಯ ಪ್ರದರ್ಶನಗಳನ್ನು ಮೈಸೂರು ನಗರದಲ್ಲಿ ನೀಡುವುದರ ಜೊತೆಗೆ ದೇಶದ ಉದ್ದಗಲಗಳಲ್ಲಿ ಹಾಗೂ ಬೇರೆಬೇರೆ ದೇಶಗಳಲ್ಲಿಯೂ ನೀಡುತ್ತಾ ಬಂದಿದ್ದಾರೆ. ಮೈಸೂರಿನಲ್ಲಿ ಉತ್ತರಾದಿ ಸಂಗೀತಕ್ಕೆ ಸ್ಥಾಪಿತವಾದ ಸಪ್ತಸ್ವರ ಬಳಗದ ಸ್ಥಾಪಕ ಕಾರ್ಯದರ್ಶಿಗಳಾಗಿದ್ದರು. ಈಗ ಧರ್ಮದರ್ಶಿಗಳಾಗಿದ್ದಾರೆ. ಉತ್ತರಾದಿ ಸಂಗೀತಕ್ಕೆ ಈ ಸಂಸ್ಥೆಯ ಕೊಡುಗೆ ಬಹಳ ಇದೆ.

ಸುಗಮ ಸಂಗೀತ ಅಕಾಡೆಮಿ, ಮೈಸೂರು: ಸುಮಾರು ೮೦ ವರ್ಷಗಳ ಹಿಂದೆ ಸುಗಮ ಸಂಗೀತದ ಸೀಮಾಪುರದ ಪಿ. ಕಾಳಿಂಗರಾವ್ ಅವರು ಸುದೀರ್ಘ ಕಾಲ ಮೈಸೂರಿನಲ್ಲಿ ನೆಲೆಸಿದ್ದರು. ಆ ಕಾಲದಿಂದಲೂ ಶ್ರೀಮತಿ ಎಚ್.ಆರ್. ಲೀಲಾವತಿಯವರು ಮೈಸೂರು ನಗರದಲ್ಲಿ ನೆಲೆಸಿ ಸುಗಮ ಸಂಗೀತ ಕ್ಷೇತ್ರಕ್ಕೆ ಗಟ್ಟಿಯಾದ ತಳಹದಿಯನ್ನು ಹಾಕಿಕೊಟ್ಟಿದ್ದಾರೆ. ಈಗ ಸಂಸ್ಥೆ ಬೆಳೆದು ಹೆಮ್ಮರವಾಗಿದೆ. ಅಪಾರ ಶಿಷ್ಯರನ್ನು ತಯಾರು ಮಾಡಿದ್ದಾರೆ. ಇವಲ್ಲದೆ, ನೂಪುರ ಕಲಾವಿದರ ಸಾಂಸ್ಕೃತಿಕ ಸಂಸ್ಥೆ, ಬ್ರಹ್ಮ ವಿದ್ಯಾ, ನೃತ್ಯಗಿರಿ, ನಾದ ವಿದ್ಯಾಲಯ ಅಕಾಡೆಮಿ, ದೇವಗೀತಾ ಟ್ರಸ್ಟ್, ರಾಸವೃಂದ, ತರಂಗ ಅಕಾಡೆಮಿ ಮುಂತಾದವು ಉತ್ತರಾದಿ ಸಂಗೀತ ಕ್ಷೇತ್ರಕ್ಕೆ ತನ್ನದೇ ಕೊಡುಗೆಯನ್ನು ನೀಡುತ್ತಾ ಬಂದಿವೆ.

ಆಕರಗ್ರಂಥಗಳು

೧. ಮೈಸೂರು ವಿಭಾಗೀಯ ಪತ್ರಾಗಾರದ ಲೇಖನಗಳು.

೨. ಸೆಲೆಕ್ಷನ್ಸ್ ಫ್ರಮ್ ದಿ ರೆಕಾರ್ಡ್ಸ್ ಆಫ್ ದಿ ಮೈಸೂರು ಪ್ಯಾಲೇಸ್ ಸಂಪುಟ–೧, ಮ್ಯೂಜಿಸಿಯನ್ಸ್ ಆಕ್ಟರ್ಸ್ ಅಂಡ್ ಆರ್ಟಿಸ್ಟ್ಸ್. ಪ್ರಕಟಣೆ– ಸಂಪಾದಕರು ಜೆ.ವಿ. ಗಾಯತ್ರಿ ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು–೧೯೯೩.

೩. ನಾಲ್ವಡಿ ಕೃಷ್ಣರಾಜ ಒಡೆಯರ್ – ಒಂದು ದರ್ಶನ– ೧೯೯೬ ಸಂ. ಪಿ.ವಿ. ನಂಜರಾಜ ಅರಸ್, ಪ್ರೊ. ಚಂದ್ರರಾಜ ಅರಸ್, ಅಖಿಲ ಕರ್ನಾಟಕ ಅರಸು ಪರಿಷತ್, ಮೈಸೂರು–೯.

೪. ಅನಿತಾ ಎಂ.ಎಸ್., ೨೦೧೨, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು– ೨೬.

೫. ಗೋವಿಂದಪ್ಪ ಎಂ., ೨೦೧೨, ಮೈಸೂರು ಸಂಸ್ಥಾನದಲ್ಲಿ ಸಂಗೀತಗಾರರ ಸ್ಥಿತಿ ಮತ್ತು ಪಾತ್ರ, ಒಂದು ಅಧ್ಯಯನ (೧೭೯೯–೧೯೪೭) ಪ್ರಕಟಣೆ– ಇತಿಹಾಸ ದರ್ಶನ ಸಂ. ೨೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೬ ನನ್ನ ರಸಯಾತ್ರೆ, ಮಲ್ಲಿಕಾರ್ಜುನ ಮನ್ಸೂರ್, ೧೯೮೩, ನಿವೇದಿತ ಪ್ರಕಾಶನ, ಮೈಸೂರು.

೭. ಸಪ್ತಸ್ವರ ಬಳಗ ಟ್ರಸ್ಟ್ ಡೀಡ್, ಮೈಸೂರು.

◆◆

೬೭

ಬಸವರಾಜ ಟಿ.ಹೆಚ್.ಎಂ.

ವಚನಗಳ ಭಾಷಾಂತರ ಇತಿಹಾಸ

ವಚನ ಸಾಹಿತ್ಯದ ಅನುವಾದಕ್ಕೆ ಸುದೀರ್ಘವಾದ ಇತಿಹಾಸವಿದೆ. ೧೫ನೇ ಶತಮಾನದ ಮೊಗ್ಗೆಯ ಮಾಯಿದೇವರು ಅಲ್ಲಮಪ್ರಭುವಿನ ಷಟ್‌ಸ್ಥಲ ವಚನಗಳನ್ನು 'ಪ್ರಭುಗೀತಾ' ಹೆಸರಿನಲ್ಲಿ 'ಸಂಸ್ಕೃತ'ಕ್ಕೆ ಅನುವಾದಿಸಿದ್ದಾರೆ. ಇದನ್ನು ಬಿಟ್ಟರೆ 'ಬಸವಣ್ಣನವರ ವಚನಗಳು' ಪಾಲ್ಕುರಿಕೆ ಸೋಮನಾಥನ 'ತೆಲುಗು ಬಸವಪುರಾಣಮು' ಎಂಬುದರಲ್ಲಿ ಆಗಾಗ ಭಾವಾನುರೂಪದಲ್ಲಿ ಕಾಣಿಸಿಕೊಂಡಿವೆ. ಈ ರೀತಿಯಾಗಿ ಅನುವಾದಕಾರ್ಯ ಯಾವ ರೀತಿಯಲ್ಲಿ ಬೆಳವಣಿಗೆ ಹೊಂದಿದೆ ಎಂಬುದನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ವಚನಗಳನ್ನು ಮೊಟ್ಟಮೊದಲಿಗೆ ಅನುವಾದಿಸಿದ ಕೀರ್ತಿ ಇ.ಪಿ. ರೈಸ್ ಅವರಿಗೆ ಸಲ್ಲುತ್ತದೆ. History of Kanarese literature ಕೃತಿಯಲ್ಲಿ ಬಸವಣ್ಣನ ಮೂರು ವಚನಗಳು, ಅಕ್ಕಮಹಾದೇವಿ, ಉರಿಲಿಂಗಪೆದ್ದಿ ಹಾಗೂ ಸ್ವತಂತ್ರ ಸಿದ್ಧಲಿಂಗೇಶ್ವರ ಇವರ ತಲಾ ಒಂದೊಂದು ವಚನಗಳನ್ನು ೧೯೧೫ರಲ್ಲಿ ಅನುವಾದಿಸಿ ಪ್ರಕಟಿಸಿದ ಮೊದಲ ವಿದೇಶಿಗರಾಗಿದ್ದಾರೆ. ಇವರ ನಂತರದಲ್ಲಿ ವಚನ ಸಾಹಿತ್ಯದ ಶೋಧ, ಪರಿಷ್ಕರಣ, ಪ್ರಕಟಣ ಕಾರ್ಯಗಳಿಗೆ ಹೆಚ್ಚಿನ ಗಮನ ಹರಿಸಿದವರು ಫ.ಗು. ಹಳಕಟ್ಟಿಯವರು. ತಾವು ವಕೀಲವೃತ್ತಿಯಲ್ಲಿದ್ದರೂ ಅದನ್ನು ಪರಿಗಣಿಸದೇ ತಮ್ಮ ಇಡೀ ಬದುಕನ್ನು ವಚನ ಸಾಹಿತ್ಯ, ಸಂಗ್ರಹ, ಪ್ರಕಟಣೆ, ಪ್ರಸರಣಕ್ಕೆ ಮುಡಿಪಾಗಿಟ್ಟರು. ಆದ್ದರಿಂದ ಇವರನ್ನು 'ವಚನ ಪಿತಾಮಹ' ಎಂದು ಕರೆಯುತ್ತಾರೆ. ಇವರು ಸಂಪಾದಿಸಿದ ವಚನಗಳನ್ನು ಮೊದಲ ಸಲ ಅಚ್ಚು ಹಾಕಿಸಲು ಅವರು ಪಟ್ಟ ಶ್ರಮ ಹೇಳತೀರದು. ಅವರೇ ಹೇಳಿರುವಂತೆ "ಸುಂದರವಾಗಿ ಅಚ್ಚು ಹಾಕಿಸಬೇಕೆಂದು ಮಂಗಳೂರು ಬಾಸೆಲ್ ಮಿಶನ್ ಪ್ರೆಸ್ಸಿಗೆ ಕಳಿಸಿಕೊಟ್ಟಿದ್ದಲ್ಲದೆ ಅವರು ತಿಳಿಸಿದಂತೆ ಈ ಕಾರ್ಯಕ್ಕೋಸ್ಕರ ೫೦೦ ರೂಪಾಯಿಗಳನ್ನು ಸಹ ಮುಂಗಡವಾಗಿ ಅವರಿಗೆ ಕಳುಹಿಸಿಕೊಟ್ಟೆನು. ಆದರೆ ಆಶ್ಚರ್ಯದ ಸಂಗತಿಯೇನೆಂದರೆ ಮಿಶನ್ ಪ್ರೆಸ್ಸಿನವರು ಪರಧರ್ಮದ ಗ್ರಂಥಗಳನ್ನು ನಾವು ಅಚ್ಚು ಹಾಕುವುದಿಲ್ಲ ಮತ್ತು ನಿಮ್ಮ ಗ್ರಂಥದಲ್ಲಿ ಪರಮಾತ್ಮನ ಸಂಬಂಧವಾಗಿ ಇರುವ ವಿಚಾರಗಳನ್ನು ಪ್ರಕಾಶಪಡಿಸಲು ನಾವು ಇಷ್ಟಪಡುವುದಿಲ್ಲ. ಅವು ನಮ್ಮ ಕ್ರಿಶ್ಚಿಯನ್ ಧರ್ಮತತ್ವಗಳನ್ನು ಹೋಲುತ್ತವೆ. ಇಂಥ ಧಾರ್ಮಿಕ ಗ್ರಂಥಗಳನ್ನು ಅಚ್ಚು ಹಾಕುವುದರಿಂದ ನಮ್ಮ ಮಿಶನ್ನಿನ ಉದ್ದೇಶಕ್ಕೆ ಭಂಗ ಬರುತ್ತದೆ ಎಂಬ ಕಾರಣವನ್ನು ತೋರಿಸಿ ನಾನು ಕಳಿಸಿದ ಹಸ್ತಲಿಖಿತ ಗ್ರಂಥವನ್ನು, ೫೦೦ ರೂ. ಮುಂಗಡ ಹಣವನ್ನು ನನಗೆ ತಿರುಗಿ ಕಳುಹಿಸಿದರು." ಇಂತಹ ಸಂದರ್ಭದಲ್ಲಿ ಎದೆಗುಂದದೇ ೧೯೨೫ರಲ್ಲಿ ಅವರೇ ಸ್ವತಃ ಹಿತಚಿಂತಕ ಮುದ್ರಣಯಂತ್ರ ಸ್ಥಾಪಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಿದರು. ಇಷ್ಟಕ್ಕೆ ಬಿಡದೆ

೩೬/೨೫, ವಿದ್ಯಾಗಿರಿ
ಅಗ್ನಿಶಾಮಕದಳದ ಹಿಂಭಾಗ
ಬಳ್ಳಾರಿ ಕ್ಲಬ್ ಹತ್ತಿರ
ಬಳ್ಳಾರಿ-೫೮೩೧೦೪
ಮೊ: ೯೮೮೦೦ ೫೯೪೪೨

ಅವರ ವಚನ ಸಾಹಿತ್ಯದ ಬಗೆಗಿನ ಆಸಕ್ತಿ ಅವರನ್ನು 'ಅನುವಾದ' ಕಾರ್ಯದತ್ತ ಕೊಂಡ್ಯೊಯಿತು. ಆ ಸಂದರ್ಭದಲ್ಲಿ ವಿದೇಶಿ ವಿದ್ವಾಂಸರಾದ ಜಿ.ಎಸ್. ಷರಕ್ವಾರ್ ಅವರ ಸಹಾಯದಿಂದ ೧೯೧೫ರಿಂದ ೧೯೧೬ರಲ್ಲಿ Vachanas Attributed to Basava ಎಂಬ ಶೀರ್ಷಿಕೆಯಡಿ ೧೩೯ ವಚನಗಳನ್ನು ಅನುವಾದಿಸಿದರು. ಅದನ್ನು ಅಂದಿನ ಪ್ರಮುಖ ಇಂಗ್ಲಿಷ್ ಪತ್ರಿಕೆಯಾದ The Indian Antiquary Vol.LI (೧೯೨೨)ರಲ್ಲಿ ಪ್ರಕಟಿಸಿದರು. ಇದನ್ನು ೨೦೦೩ರಲ್ಲಿ ಡಾ. ಯರವಿನತೆಲಿಮಠ ಅವರು ಪುಸ್ತಕ ರೂಪದಲ್ಲಿ ಹೊರತಂದರು. ಹೀಗೆ ಪ್ರಾರಂಭಗೊಂಡ ವಚನ ಅನುವಾದ ಸಾಹಿತ್ಯ ತೀವ್ರವಾಗಿ ಬೆಳವಣಿಗೆಯಾಗತೊಡಗಿತು. ಸಣ್ಣಕತೆಗಳ ಜನಕರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು 'Sayings of Basavanna' ಎಂಬ ಕೃತಿಯನ್ನು ೧೯೩೪ರಲ್ಲಿ ಗದುಗಿನ ವೀರಶೈವ ತರುಣ ಸಂಘದ ಪ್ರಕಾಶನದಿಂದ ಪ್ರಕಟಿಸಿದರು. ಈ ಕೃತಿಯಲ್ಲಿ ೧೦೧ ವಚನಗಳನ್ನು ಕನ್ನಡ ಹಾಗೂ ಇಂಗ್ಲಿಷ್ ಅನುವಾದಗಳಲ್ಲಿ ಪ್ರಕಟಿಸಿದ್ದಾರೆ. ೧೯೮೩ರಲ್ಲಿ ಅದೇ ಹೆಸರಿನಲ್ಲಿ ೧೦೧ ವಚನಗಳ ಜೊತೆಗೆ ೩೩೦ ವಚನಗಳನ್ನು ಅನುವಾದಿಸಿದಲ್ಲದೇ ಶೀರ್ಷಿಕೆಯಡಿಯಲ್ಲಿ ವಚನಗಳನ್ನು ವಿಂಗಡಿಸಿಕೊಟ್ಟಿದ್ದಾರೆ.

ಆಂಧ್ರಪ್ರದೇಶದ ಕರ್ನೂಲಿನಲ್ಲಿ ನ್ಯಾಯಾಧೀಶರಾಗಿದ್ದ ಟಿ.ಎಚ್.ಎಮ್. ಸದಾಶಿವಯ್ಯನವರು ೧೯೩೫ರಲ್ಲಿ ಬಸವೇಶ್ವರನ ೨೫ ವಚನಗಳನ್ನು ಆಯ್ದು `Gleanings into the Sayings of Basaveshwara' ಎಂದು ಪ್ರಕಟಿಸಿರುವುದು ತಿಳಿದುಬರುತ್ತದೆ. ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದ ಎನ್.ಕೆ. ಸಂಗನಾಳಮಠರು Thoughts of Basava : A Book meant to revolutionize the world of religion ಎಂಬ ಅನುವಾದ ಕೃತಿಯಲ್ಲಿ ಬಸವಣ್ಣನ ೭೨ ವಚನಗಳನ್ನು ೧೯೩೯ರಲ್ಲಿ ಪ್ರಕಟಿಸಿದ್ದಾರೆ. ಹರ್ಡೇಕರ್ ಮಂಜಪ್ಪ ಅವರು 'ವಚನಕಾರರ ಸಮಾಜರಚನೆ' ಎಂಬ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ಇದರಲ್ಲಿ ಆರ್.ಆರ್. ದಿವಾಕರ, ಎಮ್.ಆರ್. ಶ್ರೀನಿವಾಸಮೂರ್ತಿ, ಟಿ.ಎಸ್. ವೆಂಕಣ್ಣಯ್ಯ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರರ ೧೨ ಲೇಖನಗಳಿವೆ. ಇದನ್ನು ಎಸ್.ಬಿ. ಬೇಂದಾಡೆ ಅವರು Social structure of the Veereshaiva saints ಶೀರ್ಷಿಕೆಯೊಂದಿಗೆ ಅನುವಾದಿಸಿ ಪ್ರಕಟಿಸಿದ್ದಾರೆ. ಎಸ್.ಎಸ್. ಬಸವನಾಳ ಹಾಗೂ ಕೆ.ಆರ್. ಶ್ರೀನಿವಾಸ ಅಯ್ಯಂಗಾರ ಅವರು Musings of Basava- A free Rendering ಎಂಬ ಕೃತಿಯನ್ನು ೧೯೪೦ರಲ್ಲಿ ಬಾಸೆಲ್ ಮಿಷನ್ ಪ್ರೆಸ್ಸಿನಿಂದ ಪ್ರಕಟಿಸಿದರು. ಇದರಲ್ಲಿ ೮೦ ಬಸವಣ್ಣನ ವಚನಗಳು ಮತ್ತು ೬ ಅಕ್ಕಮಹಾದೇವಿಯ ವಚನಗಳಿವೆ. ೩೮ ಪುಟಗಳ ಸುದೀರ್ಘ ಮುನ್ನುಡಿಯಲ್ಲಿ ವಚನಗಳ ಪ್ರಸ್ತುತತೆ, ಅನುಭವ ಸಾಹಿತ್ಯ, ಅದರ ಮಹತ್ವ, ಜೊತೆಗೆ ಜಗತ್ತಿನ ಉಳಿದ ಸಾಹಿತ್ಯ ಪ್ರಕಾರಗಳ ಜೊತೆ ಹೋಲಿಕೆ ಇತ್ಯಾದಿಗಳನ್ನು ಕೊಟ್ಟಿದ್ದಾರೆ. ಸಿ.ಎಸ್. ಬಾಗಿಯವರ Selected Sayings of Basava ಒಟ್ಟು ೨೨೬ ವಚನಗಳನ್ನು ಒಳಗೊಂಡ ಅನುವಾದ ಕೃತಿಯಾಗಿದ್ದು ಇದು ೧೯೫೭ರಲ್ಲಿ ವಚನ ಮಂಟಪ ಬೆಳಗಾವಿಯಿಂದ ಪ್ರಕಟವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಡಾ. ಪಾವಟೆಯವರು ಕುಲಪತಿಯಾಗಿದ್ದ ಸಂದರ್ಭದಲ್ಲಿ ಶೂನ್ಯಸಂಪಾದನೆಯ ಅನುವಾದ ಯೋಜನೆಯು ಅಸ್ತಿತ್ವಕ್ಕೆ ಬಂದಿತು. ಶೂನ್ಯಸಂಪಾದನೆಯ ಅನುವಾದದ ಮಹತ್ವವನ್ನು ಸೂಚಿಸಿದ ಧಾರವಾಡದ ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮೀಜಿಯವರು ನೇತೃತ್ವ ವಹಿಸಿದ್ದರು. ಈ ಯೋಜನೆಯ ಎಸ್.ಸಿ. ನಂದೀಮಠ, ಅರ್ಮ್ಯಾಂಡೊ ಮೆನೆಜೆಸ್ ಮತ್ತು ಆರ್.ಸಿ. ಹಿರೇಮಠ ಅವರ ಸಂಪಾದನೆಯಲ್ಲಿ ಮೊದಲ ಸಂಪುಟ ೧೯೬೫ರಲ್ಲಿ, ೨ನೇ ಸಂಪುಟ ೧೯೬೮ರಲ್ಲಿ, ೩ನೇ ಸಂಪುಟ ೧೯೬೯ರಲ್ಲಿ, ೪ನೇ ಸಂಪುಟ ೧೯೭೦ರಲ್ಲಿ ಹಾಗೂ ಐದನೇ ಸಂಪುಟ ೧೯೭೨ರಲ್ಲಿ ಪ್ರಕಟಗೊಂಡವು. ಈ ಎಲ್ಲಾ ಸಂಪುಟಗಳು ೨೦೦೭ರಲ್ಲಿ ಮತ್ತೆ ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರಿನಿಂದ ಮರು ಪ್ರಕಟಗೊಂಡವು.

ಇದೇ ಶೂನ್ಯಸಂಪಾದನೆಯನ್ನು ಕುರಿತಂತೆ ಅನುವಾದ ಕಾರ್ಯ ಕೈಗೊಂಡವರಲ್ಲಿ ಡಿ.ಎ. ಶಂಕರ್ ಅವರು ಒಬ್ಬರಾಗಿದ್ದಾರೆ. ಇವರು ಶಿವಗಣಪ್ರಸಾದಿ ಮಹಾದೇವಯ್ಯನ Shoonya sampadane Volume No-1 ಅನ್ನು ೨೦೦೧ರಲ್ಲಿ, Shoonyasam padane Volume No-2ನ್ನು ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟ ಮಾಡಿದ್ದಾರೆ. ಮೊದಲ ಸಂಪುಟದಲ್ಲಿ ಪ್ರಭುದೇವ, ಅನಿಮಿತ್ತದೇವ, ಮುಕ್ತಾಯಕ್ಕ, ಸಿದ್ಧರಾಮ, ಬಸವರಾಜದೇವ ಮತ್ತು ಮರುಳಶಂಕರ ದೇವ ಸಂಪಾದನೆಗಳು ಇವೆ. ಹಾಗೆಯೇ ಎರಡನೇ ಸಂಪುಟದಲ್ಲಿ ಚೆನ್ನಬಸವನ ಸಂಪಾದನೆ, ಮಹಾದೇವಿಯಕ್ಕನ ಸಂಪಾದನೆ, ಪ್ರಭುದೇವರ ನಿರ್ಗಮನ, ಪ್ರಭುದೇವರ ಮರು ಆಗಮನ ಹಾಗೂ ಸಿಂಹಾಸನಾರೋಹಣಗಳ ಎಲ್ಲ ಅಧ್ಯಾಯಗಳಲ್ಲಿ ಬರುವ ವಚನಗಳನ್ನು ಅನುವಾದಿಸಿದ್ದಾರೆ. ಡಿ.ಎ. ಶಂಕರ್ ಅವರು 'Forever saints: Selected Vachanas of Basavanna, Allama Prabhu a nd Akkamahadavi' ಎಂಬ ಕೃತಿಯನ್ನು ೨೦೦೬ರಲ್ಲಿ ಮೈಸೂರಿನ

ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಬಸವಣ್ಣನ ೧೪೧, ಅಲ್ಲಮಪ್ರಭುವಿನ ೧೧೮, ಹಾಗೆಯೇ ಅಕ್ಕ ಮಹಾದೇವಿಯ ೭೧, ಹೀಗೆ ಒಟ್ಟು ೩೩೦ ವಚನಗಳನ್ನು ಅನುವಾದಿಸಿದ್ದಾರೆ.

`Veerashaiva Vachanas and Vachanakaras' ಎಂಬ ಕೃತಿಯು ಪಿ.ಶಾಮರಾವ್ ಅವರಿಂದ ಅನುವಾದಿತವಾದ ಕೃತಿಯಾಗಿದೆ. ವೈ.ನಾಗೇಶಶಾಸ್ತ್ರಿಗಳು 'ಬಳ್ಳಾರಿ ಸಾಹಿತ್ಯ ಅಕಾಡೆಮಿ'ಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ೧೯೬೬ರಂದು ಬಿಡುಗಡೆಗೊಂಡ ಕೃತಿಯಾಗಿದೆ. ಇದರಲ್ಲಿ ಅಕ್ಕಮಹಾದೇವಿ ೫೭, ಅಲ್ಲಮಪ್ರಭು ೮೨, ಅಂಬಿಗರ ಚೌಡಯ್ಯ ೫, ಅರಿವಿನ ಮಾರಿತಂದೆ ೧, ಆದಯ್ಯ ೫, ಬಸವಣ್ಣ ೧೬೬, ಬೊಂತಾದೇವಿ ೧, ಬೊಮ್ಮಣ್ಣ ೧, ಚಂದಿಮರಸ ೨, ಚಂದಿಮರೆಪ್ಪ ೧, ಚೆನ್ನಬಸವಣ್ಣ ೩೦, ಜೇಡರ ದಾಸಿಮಯ್ಯ ೨೨, ಕಾಡಸಿದ್ಧೇಶ್ವರ ೨, ಲಕ್ಕಮ್ಮನ ೩, ಮರೆಯ್ಯ ಪುಣ್ಯಸ್ತ್ರೀ ಮಹಾದೇವಿ ೨, ಮೋಳಿಗೆಯ ಮಾರಯ್ಯ ೪, ನಗೆಮಾರಿ ತಂದೆ ೧, ನೀಲಲೋಚನೆ ೨, ನೀಲಾಂಬಿಕೆ ೧, ನುಲಿಯ ಚೆಂದಯ್ಯ ೧, ಪುರದ ನಾಗಣ್ಣ ೧, ಸಕಲೇಶ ಮಾದರಸ ೭, ಸತ್ಯಕ್ಕ ೧, ಸ್ವತಂತ್ರ ಸಿದ್ಧಲಿಂಗೇಶ್ವರನ ೯, ಷಣ್ಮುಖ ಸ್ವಾಮಿಯ ೭, ಸಿದ್ಧರಾಮನ ೨೯, ಶಿವಲೆಂಕ ಮಂಚಣ್ಣ ೨, ತೋಂಟದ ಮಹಾಲಿಂಗ ಯತಿಗಳ ೧ ಮತ್ತು ತೋಂಟದ ಸಿದ್ಧಲಿಂಗ ಯತಿಗಳ ೫ ಹೀಗೆ ಒಟ್ಟು ೨೯ ವಚನಕಾರರ ೪೬೧ ವಚನಗಳ ಅನುವಾದ ಕಾರ್ಯ ಇಲ್ಲಿ ಕಂಡುಬರುತ್ತದೆ. ಅನುವಾದದ ಜೊತೆಗೆ ಈ ಕೃತಿಯ ಮುನ್ನುಡಿಯಲ್ಲಿ ಈ ವಚನಕಾರರ ಜೀವನಚರಿತ್ರೆಯನ್ನು ನೀಡಿದ್ದಾರೆ.

೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಿಂದ ಪ್ರಕಟವಾದ ಪಿ.ಬಿ. ದೇಸಾಯಿ ಅವರು Basaveshwara and his times ಎಂಬ ಕೃತಿಯಲ್ಲಿ ೩೫ ವಚನಗಳನ್ನು ಅನುವಾದಿಸಿದ್ದಾರೆ.

ಅಮೆರಿಕ ವಾಸಿಯಾದ ಎ.ಕೆ. ರಾಮಾನುಜನ್ ಅವರು ದಕ್ಷಿಣ ಭಾರತೀಯ ಭಾಷೆಗಳ ತಜ್ಞರು. ಇವರ ಪ್ರಸಿದ್ಧ ಅನುವಾದಿತ ಕೃತಿ `Speeking of Shiva' ಈ ಕೃತಿಯು ಪೆಂಗ್ವಿನ್ ಪ್ರಕಾಶನದ ಮೂಲಕ ಪ್ರಕಟಗೊಂಡಿದೆ. ಇದರಲ್ಲಿ ಬಸವಣ್ಣನ ೪೨, ಜೇಡರ ದಾಸಿಮಯ್ಯನ ೨೮, ಅಕ್ಕಮಹಾದೇವಿಯ ೪೭ ಮತ್ತು ಅಲ್ಲಮಪ್ರಭುವಿನ ೩೮ ಒಟ್ಟು ೧೫೫ ವಚನಗಳನ್ನು ಅನುವಾದಿಸಿದ್ದಾರೆ. ಜೊತೆಗೆ ಪರಿಚಯಾತ್ಮಕ ವಿವರಣೆಯನ್ನು ನೀಡುವುದರ ಜೊತೆಗೆ ವಚನ ಸಾಹಿತ್ಯ ಹಾಗೂ ಷಟ್‌ಸ್ಥಲ ಸಿದ್ಧಾಂತದ ಕುರಿತಂತೆ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಅರ್ಮ್ಯಾಂಡೊ ಮೆನೆಜಿಸ್ ಮತ್ತು ಎಸ್.ಎಮ್. ಅಂಗಡಿಯವರು ೧೯೬೭ರಲ್ಲಿ ಅಣ್ಣನ ಬಳಗ ಸಿರಿಗೆರೆಯಿಂದ `Vacanas of Basavanna: A Selection' ಎಂಬ ಕೃತಿಯನ್ನು ಹೊರತಂದಿದ್ದಾರೆ. ನಂತರ ಇವರಿಬ್ಬರು ೧೯೭೩ರಲ್ಲಿ Vacanas of Akkamahadavi ಎಂಬ ಕೃತಿಯಲ್ಲಿ ೩೧೫ ವಚನಗಳನ್ನು ಅನುವಾದಿಸಿದ್ದಾರೆ. ಈ ಕೃತಿಯು ಧಾರವಾಡದ ಮನೋಹರ ಅಪ್ಪಾಸಾಹೇಬ ಅಡಕೆ ಅವರು ತಮ್ಮ ತಾಯಿಯ ಸ್ಮರಣಾರ್ಥವಾಗಿ ಪ್ರಕಟಿಸಿರುವ ಕೃತಿಯಾಗಿದೆ. ೧೯೭೮ರಲ್ಲಿ ಇವರಿಬ್ಬರು ಸೇರಿ Vacanas of Siddharama ಎಂಬ ಕೃತಿಯನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಹೊರತಂದರು. ಇದರಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ಅಂಕಿತವಿರುವ ೧೩೭೮ ವಚನಗಳು, ಯೋಗಿನಾಥ ಎಂಬ ಅಂಕಿತವಿರುವ ೩೮೯ ರಚನೆಗಳು ಅನುವಾದಗೊಂಡಿವೆ.

ಬಿ.ಎ. ಪಾಟೀಲ ಅವರು Akka Mahadavi, the Divine cuckoo : English Rendering of Akka's 50 Vacanas ಎಂಬ ಕೃತಿಯನ್ನು ೧೯೭೫ರಲ್ಲಿ ಗುಲ್ಬರ್ಗಾದ ಸಿದ್ಧವಾಗೀಶ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಪಿ.ಉಮಾಶಂಕರ್ ಅವರು ೧೬೫ ವಚನಗಳನ್ನು 'A Garland of Pearls of Basavamala' ಎಂಬ ಕೃತಿಯಲ್ಲಿ ಅನುವಾದಿಸಿದ್ದಾರೆ. ಇದು ೧೯೭೮ರಲ್ಲಿ ಮೂರು ಸಾವಿರಮಠ ಹುಬ್ಬಳ್ಳಿಯವರಿಂದ ಪ್ರಕಟಗೊಂಡಿದೆ. ಡಿ. ಶೇಷಗಿರಿರಾವ್ ಅವರು ಅಕ್ಕನ ಕೆಲವು ವಚನಗಳನ್ನು At the Lards fect ಕೃತಿಯಲ್ಲಿ ಅನುವಾದಿಸಿ ೧೯೮೧ರಲ್ಲಿ ಬೆಂಗಳೂರಿನ ಪ್ರಜಾಪಿತ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಸರೋಜಿನಿ ಶಿಂತ್ರಿ ಅವರು Akka Mahadavi ಹೆಸರಿನ ಕೃತಿಯನ್ನು ಅಣ್ಣನ ಬಳಗ ಸಿರಿಗೆರೆಯಿಂದ ೧೯೮೩ರಲ್ಲಿ ಪ್ರಕಟಿಸಿದ್ದಾರೆ. ಇದು ಅಕ್ಕಮಹಾದೇವಿಯ ಜೀವನಚರಿತ್ರೆ ಒಳಗೊಂಡಂತೆ ಆಶಯ ಮತ್ತು ೬೨ ವಚನಗಳನ್ನು ಅನುವಾದಿಸಿ ಕೊಟ್ಟಿದ್ದಾರೆ.

ನೆದರ್‌ಲ್ಯಾಂಡ್ Kamil V. Zavlebil ಅವರು ಯುನೆಸ್ಕೋದ ಪ್ರಾಯೋಜಕತ್ವದಲ್ಲಿ `Lord of the Meeting Rivery : Devotional Poems of Basavanna' ಎಂಬ ಕೃತಿಯನ್ನು ೧೯೮೪ರಲ್ಲಿ ದೆಹಲಿಯ ಮೋತಿಲಾಲ ಬನಾರಸಿದಾಸ್ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಇದರಲ್ಲಿ ಬಸವಣ್ಣನವರ ೧೨೬ ವಚನಗಳನ್ನು ಅನುವಾದಿಸಿದ್ದಾರೆ. ತಮಗೆ ಮೂಲ ಪ್ರೇರಣೆ ಎ.ಕೆ. ರಾಮಾನುಜನ್ ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಸಿ.ಆರ್. ಯರವಿನತೆಲಿಮಠ ಅವರ The Caste Eradication vacanas of Sri Basaveshwara ಕೃತಿಯು ೧೯೮೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಶ್ರೀ ಬಸವೇಶ್ವರ ಪೀಠದ ಆಶ್ರಯದಲ್ಲಿ ವೀರಶೈವ ಸಾಹಿತ್ಯದ ಅನುವಾದ ಮಾಲಿಕೆಯ ೩ನೆಯ ಪ್ರಕಟವಾಗಿದೆ. ಇದರಲ್ಲಿ ಜಾತಿ ನಿರ್ಮೂಲನಕ್ಕೆ ಸಂಬಂಧಿಸಿದ ಬಸವಣ್ಣನ ೬೨ ವಚನಗಳಿವೆ. 'Meeffled Voices' ಎಂಬ ಕೃತಿಯಲ್ಲಿ ಸರೋಜಿನಿ ಶಿಂತ್ರಿ, ಸಿ.ಆರ್. ಯರವಿನತೆಲಿಮಠ ಮತ್ತು ಜಿ.ಬಿ. ಸಜ್ಜನ ಅವರು ೩೨ ಶರಣರ ೨೧೬ ವಚನಗಳನ್ನು ಅನುವಾದಿಸಿದ್ದಾರೆ. ಇದು ಸಿರಿಗೆರೆಯ ತರಳುಬಾಳು ಬೃಹನ್ಮಠದಿಂದ ೧೯೯೪ರಲ್ಲಿ ಪ್ರಕಟಗೊಂಡ ಕೃತಿಯಾಗಿದೆ. ಇಲ್ಲಿ ಆಯ್ಕೆ ಮಾಡಿಕೊಂಡ ಶರಣರ ಜೀವನ, ಅವರ ಬರವಣಿಗೆ ಬಗ್ಗೆ ವಿವರ ನೀಡುತ್ತ ಅನುವಾದಕಾರ್ಯವನ್ನು ಮಾಡಿದ್ದಾರೆ.

ಸಮಗ್ರ ಜನಪ್ರಿಯ ಆವೃತ್ತಿಯ ವಚನ ಸಂಪುಟದಲ್ಲಿ 'ಶಿವಶರಣೆಯರ ವಚನ ಸಂಪುಟ'ವನ್ನು `Vacanas of Women Saints' ಹೆಸರಿನಲ್ಲಿ ಸಿ.ಆರ್. ಯರವಿನತೆಲಿಮಠ ಅವರು ೨೦೦೬ರಲ್ಲಿ ಬಸವ ಸಮಿತಿಯ ಮೂಲಕ ಪ್ರಕಟಿಸಿದ್ದಾರೆ. ಇದರಲ್ಲಿ ೩೩ ವಚನಕಾರ್ತಿಯರ ಒಟ್ಟು ೧೧೦೪ ವಚನಗಳನ್ನು ಅನುವಾದಿಸಿದ್ದಾರೆ.

ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಿ ಮೂರುಸಾವಿರ ಮಠ ಹುಬ್ಬಳ್ಳಿ ಇವರಿಂದ ೧೯೮೮ರಲ್ಲಿ ಎಸ್. ಅನಂತನಾರಾಯಣರ Thus sang the veerasaiva mycties ಮಾಲಿಕೆಯಲ್ಲಿ ೫ ಸಂಚಿಕೆಗಳು ಬಂದಿವೆ. ೧೯೮೮ರಲ್ಲಿ ಅಲ್ಲಮಪ್ರಭು ಮತ್ತು ಬಸವಣ್ಣ, ೧೯೯೦ರಲ್ಲಿ ಅಕ್ಕಮಹಾದೇವಿ, ಸಿದ್ಧರಾಮ ಮತ್ತು ಚೆನ್ನಬಸವಣ್ಣ ಇವರ ೬೩ ವಚನಗಳು ಅನುವಾದಗೊಂಡಿವೆ. ಹಿರೇಮಲ್ಲೂರು ಈಶ್ವರನ್ ಅವರ 'Speaking of Basava, Lingayat Religion and Culture in South Asia' ಎನ್ನುವ ವಚನಗಳ ಅನುವಾದ ಕೃತಿಯು ೧೯೯೨ರಲ್ಲಿ ಕೊಲರ್‍ಯಾಡೊದ ವೆಸ್ಟ್‌ವಿವ್ ಪ್ರೆಸ್ಸಿನಿಂದ ಪ್ರಕಟಗೊಂಡಿದೆ. ಇದರಲ್ಲಿ ಬಸವಣ್ಣನ ೯೨, ಅಕ್ಕಮಹಾದೇವಿಯ ೨೧, ಅಲ್ಲಮನ ೫೮, ಸಿದ್ಧರಾಮನ ೨೯, ಚೆನ್ನಬಸವಣ್ಣನ ೪೪ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

'Vacanas of Devara Dasimayya' ಎಂಬ ಕೃತಿಯನ್ನು ೧೯೯೬ರಲ್ಲಿ ಚಂದ್ರಶೇಖರಯ್ಯ ಅವರು ಮೈಸೂರು ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟಿಸಿದ್ದಾರೆ. ಇದರಲ್ಲಿ ದೇವರದಾಸಿಮಯ್ಯನವರ ಪರಿಚಯದೊಂದಿಗೆ ಅವರ ೧೫೬ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. 'Divinity and Deviance, Women in Veerashaivism' ಎಂಬ ಕೃತಿಯನ್ನು 'ವಿಜಯ ರಾಮಸ್ವಾಮಿ' ಅವರು ೧೯೯೬ರಲ್ಲಿ ಪ್ರಕಟಿಸಿದ್ದಾರೆ. "ಇದು ಮಹಿಳಾ ವಚನಕಾರ್ತಿಯರ ವಚನಗಳ ಕುರಿತ ಸಂಶೋಧನಾತ್ಮಕ ಪ್ರಬಂಧದ ಪುಸ್ತಕವಾಗಿದೆ. ಎ.ಕೆ. ರಾಮಾನುಜನ್, ಕೆ. ಈಶ್ವರನ್, ಜೈಲೆಬಿಲ್, ಮೆನೆಜಿಸ್ ಮತ್ತು ಭೂಸನೂರಮಠ ಅವರ ವಚನಗಳ ಅನುವಾದಗಳನ್ನು ಸಂದರ್ಭಕ್ಕನುಸಾರವಾಗಿ ಮತ್ತು ವ್ಯಾಪಕವಾಗಿ ಬಳಸುವುದಲ್ಲದೆ ಶಿವಶರಣೆಯರ ೭೬ ವಚನಗಳನ್ನು ವಿಜಯಾ ರಾಮಸ್ವಾಮಿ ಅವರು ತಾವೇ ಅನುವಾದ ಮಾಡಿದ್ದಾರೆ."

ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು 'Basavas Thirst Divine Grace'ನಲ್ಲಿ ೭೫ ವಚನಗಳನ್ನು ಅನುವಾದಿಸಿದ್ದಾರೆ. ಇದನ್ನು ೧೯೯೨ರಲ್ಲಿ ಮೈಸೂರಿನ ಸಂವಹನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇದೇ ಕೃತಿಯು `Devotional Sayings of Basaveshwara' ಹೆಸರಿನಲ್ಲಿ ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ೧೯೯೫ರಲ್ಲಿ ಮರುಮುದ್ರಣಗೊಂಡಿದೆ. ಹಾಗೆಯೇ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ 'ಸಿದ್ಧರಾಮೇಶ್ವರ ವಚನ ಪ್ರವಚನ' ಕನ್ನಡ ಕೃತಿಯನ್ನು ಜಿ.ಟಿ. ಸಜ್ಜನ ಅವರು 'Commentaries on selected vachanas of Siddharameshwara' ಎಂದು ಅನುವಾದಿಸಿದ್ದಾರೆ. ಈ ಕೃತಿಯನ್ನು ೧೯೯೮ರಲ್ಲಿ ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯು ಪ್ರಕಟಿಸಿದೆ. ಹಾಗೆಯೇ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು `God world and Soul : Reflections of saintly saying' ಎಂಬ ಕೃತಿಯನ್ನು ೨೦೧೧ರಲ್ಲಿ ಜ್ಞಾನಯೋಗಾಶ್ರಮ ವಿಜಾಪುರದಿಂದ ಪ್ರಕಟಿಸಿದ್ದಾರೆ. ಹೀಗೆ ಒಟ್ಟು ೮೧ ವಚನಗಳನ್ನು ಕನ್ನಡದ ಮೂಲರೂಪದ ಜೊತೆಗೆ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಪ್ರಭುಶಂಕರ ಮತ್ತು ದಕ್ಷಿಣ ಅಮೆರಿಕದ ವೆನೆಝುವೆಲ್ಲಾದ ರೊವೆನಾ ಹಿಲ್ಲ ಅವರು 'Naming the Nameless' ಎಂಬ ಅನುವಾದ ಕೃತಿಯನ್ನು ಹೊರತಂದಿದ್ದಾರೆ. ಇದು ೨೦೦೧ರಲ್ಲಿ ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟಗೊಂಡಿದೆ. "ಇದು ಪ್ರಭುಶಂಕರ ಅವರ 'ಶರಣರ ನೂರೊಂದು ವಚನಗಳು' ಎಂಬ ಕನ್ನಡ ಕೃತಿಯ ಇಂಗ್ಲಿಷ್ ಅವತರಣಿಕೆಯಾಗಿದೆ. ಇದರಲ್ಲಿ ಅಕ್ಕನ ೨೭, ಅಲ್ಲಮಪ್ರಭುವಿನ ೨೭, ಬಸವಣ್ಣನ ೨೬ ಮತ್ತು ಇತರ

ವಚನಕಾರರ ೨೧ ವಚನಗಳಿವೆ. Rowena Hill ಅವರು ಇವೇ ವಚನಗಳನ್ನು ಸ್ಪ್ಯಾನಿಷ್‌ನಲ್ಲೂ ಅನುವಾದಿಸಿದ್ದಾರೆ. ಇದು ಹಿಂದಿ, ಬೆಂಗಾಲಿ, ಒರಿಯಾ ಮಲಯಾಳಂ ಮತ್ತು ಪಂಜಾಬಿ ಭಾಷೆಗಳಿಗೆ ಅನುವಾದಗೊಂಡಿದೆ ಎಂದು ಮುನ್ನುಡಿಯಲ್ಲಿ ತಿಳಿಸಿರುವರು."

ಬೆಲ್ಜಿಯಂ ದೇಶದ Jean Letschert ಅವರು ಮಾತೆ ಮಹಾದೇವಿ ಅವರೊಂದಿಗೆ Gems of Basaveshwara ಎಂಬ ಕೃತಿಯನ್ನು ೨೦೦೧ರಲ್ಲಿ ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್ ಪ್ರಕಟಿಸಿದೆ. ಇದರಲ್ಲಿ ೩೨ ವಚನಗಳು ಅನುವಾದಗೊಂಡಿವೆ.

ಜಿ.ಬಿ. ಸಜ್ಜನ ಅವರು 'ಸಿದ್ಧಯ್ಯ ಪುರಾಣಿಕ' ಅವರ 'ಅಕ್ಕಮಹಾದೇವಿ' ಕನ್ನಡ ಕೃತಿಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದ್ದಾರೆ. ಜಿ.ಬಿ. ಸಜ್ಜನ ಅವರು ಈ ಕೃತಿಯಲ್ಲಿನ ೩೫ ವಚನಗಳನ್ನು ಹಾಗೂ ಡೋಣೂರ್‌ಮಠ ಅವರು ಬಸವಣ್ಣನ ೩೨ ವಚನಗಳನ್ನು ಜೋಡಿಸಿ Encorenter with Divinity ಕೃತಿಯನ್ನು ೨೦೦೬ರಲ್ಲಿ ಪ್ರಕಟಿಸುತ್ತಾರೆ. "ಜಿ.ಬಿ. ಸಜ್ಜನ ಅವರು ಅನುವಾದದ ಪ್ರಸ್ತುತತೆಯನ್ನು ಕುರಿತು We are aware of the Fact that ours is not a pioneering effort in translation. Statarts have, before us, turned their hand to this Evangelical work of Spreading the sweetness and light availabale in one language to others ಎಂದು ಪ್ರಾಮಾಣಿಕವಾಗಿ ಹೇಳಿದುದನ್ನು ಗಮನಿಸಬಹುದು" 'Allama Prabhu: A Study in philosophy with translations of poems' ಎಂಬ ಕೃತಿಯನ್ನು ಬಸರೂರು ಸುಬ್ಬರಾವ್ ಅವರು ೨೦೦೭ರಲ್ಲಿ ಬೆಂಗಳೂರಿನ ಮಂಗೇಶ ಪ್ರಕಾಶನದಡಿ ಪ್ರಕಟಿಸಿದ್ದಾರೆ. ಇದರಲ್ಲಿ ಅಲ್ಲಮನ ೨೨೨, ಬಸವಣ್ಣ ೨೨ ಮತ್ತು ಇತರ ಶರಣರ ೩೬ ವಚನಗಳನ್ನು ಅನುವಾದಿಸಿದ್ದಾರೆ. ಓ.ಎಲ್.ನಾಗಭೂಷಣಸ್ವಾಮಿ ಅವರ ಸಂಪಾದಕತ್ವದ 'The sign: Vachanas of 12th Century' ಎಂಬ ಕೃತಿಯು ೨೦೦೭ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಭಾಷಾಂತರ ವಿಭಾಗದಿಂದ `Classical Kannada texts in translation series'ನಲ್ಲಿ ಪ್ರಕಟಗೊಂಡ ಕೃತಿಯಾಗಿದೆ. ಇದರಲ್ಲಿ ೬೦ ವಚನಕಾರರ ೪೬೮ ವಚನಗಳಿದ್ದು ಓ.ಎಲ್. ನಾಗಭೂಷಣಸ್ವಾಮಿ, ಲಕ್ಷ್ಮೀ ಚಂದ್ರಶೇಖರ್ ಮತ್ತು ವಿಜಯಾ ಗುತ್ತಲ ಅವರು ಅನುವಾದಿಸಿದ್ದಾರೆ.

ವೆಂಕಟರೆಡ್ಡಿ ದೇಸಾಯಿ ಅವರು 'Three critical Essays and a few vachanas of Basavanna and Akkamahadevi' ಕೃತಿಯನ್ನು ೨೦೦೯ರಲ್ಲಿ ಪ್ರಕಟಿಸಿದರು. ಇದರಲ್ಲಿ ೧೯ ಬಸವಣ್ಣನ ಮತ್ತು ೫ ಅಕ್ಕಮಹಾದೇವಿಯ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ೧೯೮೬ರಂದು ಫ್ರೆಂಚ್‌ನಲ್ಲಿ ಪ್ರಕಟಿಸಿದ 'Parole de Basava' ಕೃತಿಯ ೧೦೧ ವಚನಗಳನ್ನು ಆಚಾರ್ಯ ಅವರು ಮತ್ತೆ ಪರಿಷ್ಕರಿಸಿ ೨೦೦೯ರಲ್ಲಿ ಕನ್ನಡದ ವಚನಗಳೊಂದಿಗೆ ಇಂಗ್ಲಿಷ್ ಭಾಷೆಯಲ್ಲಿ ಅನುವಾದಿಸಿದ್ದಾರೆ.

ಜಿ.ಎಸ್.ಆಮೂರ ಅವರು ೨೦೦೮ರಲ್ಲಿ 'Saints and Poets' ಕೃತಿಯನ್ನು ಕಲ್ಕತ್ತದ ರಾಯ್ಟರ್ಸ್ ವರ್ಕ್‌ಶಾಪ್ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇದರಲ್ಲಿ ೧೫ ಬಸವಣ್ಣನ, ೫ ಅಲ್ಲಮಪ್ರಭುವಿನ, ೧ ಅಕ್ಕಮಹಾದೇವಿಯ ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ.

ಬಸವ ಸಮಿತಿಯಿಂದ ಹಲವಾರು ಅನುವಾದ ಕೃತಿಗಳು ಹೊರಬಂದಿವೆ. ಅವುಗಳನ್ನು ಈ ಕೆಳಗಿನಂತೆ ನೋಡಲಾಗಿದೆ. ಸುಂದರರಾಜ್ ಥಿಯೋಡೋರ್ ಮತ್ತು ದೇವೇಂದ್ರಕುಮಾರ್ ಹಕಾರಿಯವರು ೧೦೮ ವಚನಗಳನ್ನು `Thus speak Basava : English Renderings of Basava's vachanas' ಎಂದು ಅನುವಾದ ಮಾಡಿದ್ದಾರೆ. ಬಿ. ವಿರೂಪಾಕ್ಷಪ್ಪನವರು 'Allama prabhu, His life and Message' ಎಂಬ ಇಂಗ್ಲಿಷ್ ಅನುವಾದಿತ ಕೃತಿಯನ್ನು ೨೦೦೩ರಲ್ಲಿ ಬೆಂಗಳೂರಿನ ಬಸವ ಸಮಿತಿಯಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಅಲ್ಲಮಪ್ರಭುವಿನ ೧೦೮ ವಚನಗಳ ಜೊತೆಗೆ ಅವರ ಜೀವನವನ್ನು ಚಿತ್ರಿಸಿದ್ದಾರೆ. ಬಸವರಾಜು ಮೂರುಶಿಳ್ಳಿನವರ 'Select vachanas of Basavanna' ಎಂಬ ಕೃತಿಯನ್ನು ೨೦೦೫ರಲ್ಲಿ ಗದುಗಿನ ತೋಂಟದಾರ್ಯ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಇದರಲ್ಲಿ ೧೫೮ ಕನ್ನಡ ವಚನಗಳ ಜೊತೆಗೆ ಇಂಗ್ಲಿಷ್ ಅನುವಾದ ಮಾಡಿದ್ದಾರೆ. ಬಿ. ವಿರೂಪಾಕ್ಷಪ್ಪನವರು ೨೦೦೫ರಲ್ಲಿ 'Selected vachanas of Basavanna' and 'Basavanna The light of the world' ಬೆಂಗಳೂರಿನ ಬಸವ ಸಮಿತಿಯಿಂದ ಪ್ರಕಟಿಸಿದ್ದಾರೆ. ಮೊದಲ ಕೃತಿಯಲ್ಲಿ ೧೦೮ ವಚನಗಳ ಅನುವಾದವಿದೆ. ಎರಡನೇ ಕೃತಿಯಲ್ಲಿ ೫೬ ವಚನಗಳನ್ನು ಅನುವಾದಿಸುವುದರ ಜೊತೆಗೆ ಬಸವಣ್ಣನವರ ಜೀವನ ಚರಿತ್ರೆಯನ್ನು ನೀಡಿದ್ದಾರೆ. ಹೆಚ್.ಎಸ್. ಶಿವಪ್ರಕಾಶ ಮತ್ತು ಓ.ಎಲ್. ನಾಗಭೂಷಣ ಸ್ವಾಮಿಯವರ Selected vachanas of Saranas ಎಂಬ ಅನುವಾದಿತ ಕೃತಿಯನ್ನು ೨೦೦೫ರಲ್ಲಿ ಬೆಂಗಳೂರಿನ ಬಸವ ಸಮಿತಿಯಿಂದ ಪ್ರಕಟಿಸಿದ್ದಾರೆ. ವಿಜಯಾ ಸುಬ್ಬರಾಜ್ ಅವರ ೧೦೮ Selected Vachanas of Akkamahadevi ಎಂಬ ಕೃತಿಯು ೨೦೦೬ರಲ್ಲಿ ಬಸವ ಸಮಿತಿಯಿಂದ ಪ್ರಕಟಗೊಂಡಿದೆ. "ಅದೇ ವರ್ಷ ಜಿ.ವ್ಹಿ. ಜಯರಾಜಶೇಖರ ಅವರು ಆಯ್ಕೆ ಮಾಡಿದ ಅಕ್ಕಮಹಾದೇವಿಯ

ವಚನಗಳನ್ನು ವಿಜಯಾ ಸುಬ್ಬರಾಜ್ ಅವರು ಇಂಗ್ಲಿಷ್‌ಗೆ Akka Mahadavi ಹೆಸರಿನಿಂದ ಅನುವಾದಿಸಿದರು. ಮಕ್ಕಳಿಗಾಗಿ ಪ್ರಕಟಿಸಿದ ಶರಣ ಕಥಾಮಂಜರಿ ಮಾಲಿಕೆಯ ಅಕ್ಕನ ಜೀವನಚರಿತ್ರೆಯ ಜೊತೆಗೆ ೫೨ ವಚನಗಳನ್ನು ಅನುವಾದಿಸಿದ್ದು ವಿಶೇಷವಾಗಿದೆ" ಎಂದು ವಚನಗಳನ್ನು ಅನುವಾದಕ್ಕೆ ಆಯ್ಕೆ ಮಾಡಿದ ಬಗೆಯನ್ನು ಹೇಳಿರುವುದನ್ನು ಗಮನಿಸಬಹುದು. ಶ್ರೀಮತಿ ಉಷಾ ಫಾಲಾಕ್ಷಪ್ಪ ಅವರು ೧೦೮ Gems of Basaveshwara Vachanas ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ಬೆಂಗಳೂರಿನ ಬಸವ ಸಮಿತಿಯಿಂದ ೨೦೦೭ರಲ್ಲಿ ಪ್ರಕಟಗೊಂಡರೆ ಇದರಲ್ಲಿ "ಪೂರ್ವದೇಶಗಳಲ್ಲಿ ನೆಲೆಸಿದ ಕನ್ನಡಿಗರು, ಹಿಂದಿ ಭಾಷಿಕರು, ತಮಿಳರು ಮತ್ತು ಇಂಗ್ಲಿಷ್ ಬಲ್ಲವರಿಗಾಗಿ ವಚನಗಳನ್ನು ಆಯಾ ಭಾಷೆಗಳಲ್ಲಿ ಲಿಪ್ಯಂತರ (Transliteration)ಗೊಳಿಸಿ ಕೊನೆಯಲ್ಲಿ ಇಂಗ್ಲಿಷ್‌ನಲ್ಲಿ ಅನುವಾದ ನೀಡಿದ್ದಾರೆ."

ಇತ್ತೀಚೆಗೆ ಅಂದರೆ ೨೦೧೦ರಲ್ಲಿ ಪಾಟೀಲ ಶಿವಲಿಂಗಪ್ಪ ಶಿವಮೂರ್ತೆಪ್ಪ ಅವರು ವಚನಗಳ ಇಂಗ್ಲಿಷ್ ಅನುವಾದ: ಒಂದು ಅಧ್ಯಯನ (ಬಸವಣ್ಣನವರ ವಚನಗಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವು ಬಂದಿದೆ. ಇದು ಇದುವರೆಗೆ ಬಸವಣ್ಣನವರ ವಚನಗಳನ್ನು ಅನುವಾದ ಮಾಡಿದ ಇತಿಹಾಸವನ್ನು ಕುರಿತು ಮಾಡಿದ ಅಧ್ಯಯನವಾಗಿದೆ.

ವಚನ ಅನುವಾದ ಕಾರ್ಯ ಗಮನಿಸಿದಾಗ ಸಾಕಷ್ಟು ಅನುವಾದಗಳು ಬಸವಣ್ಣನ ವಚನಗಳನ್ನು ಕುರಿತು ಆಗಿವೆ. ಅತಿ ಹೆಚ್ಚಿನ ವಚನಗಳ ಅನುವಾದ ಕಾರ್ಯ ಇಂಗ್ಲೀಷ್ ಭಾಷೆಯಲ್ಲಿ ಆಗಿದೆ. ಆದರೆ ಪ್ರಸ್ತುತ ಎಂ.ಎಂ. ಕಲಬುರ್ಗಿ ಅವರ 'ವಚನ' ಎಂಬ ಕೃತಿಯು ಬಸವಯುಗ-ಬಸವೋತ್ತರ ಯುಗದ ೧೨೯ ಶರಣರ, ೩೧ ಶರಣೆಯರ ಹಾಗೂ ೧೩ ಅಜ್ಞಾತ ಶರಣರ ವಚನಗಳನ್ನು ೨೩ ಭಾಷೆಗಳಿಗೆ ಅನುವಾದ ಮಾಡಿರುವುದು ಒಂದು ವೈಶಿಷ್ಟ್ಯತೆಯೆನ್ನಬಹುದು. ಭಾಷಾಂತರ ಯೋಜನೆಯನ್ನು ರೂಪಿಸಿದವರು, ಅನುಷ್ಠಾನಗೊಳಿಸಿದವರು, ಮೂಲ ಪಠ್ಯದ ಸಂಪಾದಕರಾಗಿ ವಚನಗಳನ್ನು ವಿವಿಧ ಆಶಯದ ಹಿನ್ನೆಲೆಯಲ್ಲಿ ಪಠ್ಯ ಸಿದ್ಧಪಡಿಸಿದವರು ಎಂ.ಎಂ. ಕಲಬುರ್ಗಿ ಅವರೇ ಆಗಿದ್ದಾರೆ. ಅವರ ವಚನ ಸಾಹಿತ್ಯದ ಅನೇಕ ಯೋಜನೆಗಳ ಸಾಲಿನಲ್ಲಿ ವಚನ ಭಾಷಾಂತರ ಯೋಜನೆಯನ್ನು ಗುರುತಿಸುವುದು ಪ್ರಮುಖವಾಗಿದೆ.

◆◆

೯೮

ನಾಗರಾಜ ಸಿ.ಎಸ್.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕಗಳ ಬೆಳವಣಿಗೆ

ಸಾರಿಗೆ ಮತ್ತು ಸಂಪರ್ಕ ದೇಶದ ಆರ್ಥಿಕ ಬೆಳವಣಿಗೆಗೆ ಪೂರಕವಾದುದು. ಪ್ರಾಚೀನ ಕಾಲದಿಂದಲೂ ರಾಜ್ಯದಲ್ಲಿ ರಸ್ತೆ ಸಾರಿಗೆ ಜಾಲಗಳು ಇದ್ದುದು ಅಧ್ಯಯನ ಗಳಿಂದ ತಿಳಿದುಬರುತ್ತದೆ. ವ್ಯಾಪಾರ, ಸೈನಿಕ ಹಾಗೂ ಆಡಳಿತ ಉದ್ದೇಶಗಳ ಸಲುವಾಗಿ ಆಯಾ ಕಾಲಗಳಲ್ಲಿ ರಾಜರು ರಸ್ತೆಗಳ ನಿರ್ಮಾಣ ಕಾರ್ಯ ಮಾಡುತ್ತಿದ್ದರು. ರಾಜಪಥ, ರಾಜವೀದಿ, ರಾಜಮಾರ್ಗ, ಹೆದ್ದಾರಿ, ಹಿರಿಯ ಹೆದ್ದಾರಿ, ಹೆಬ್ಬಟ್ಟೆ ಮುಂತಾದ ಹೆಸರಿನ ರಸ್ತೆಗಳು ನಿರ್ಮಿಸಲಾಗುತ್ತಿತ್ತು. ಸರಕುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಲೆಯ ಮೇಲೆ ಹೊತ್ತು, ಭುಜದ ಮೇಲೆ ಹಾಕಿಕೊಳ್ಳುವ ಹಸಿಬೆಗಳಿಂದ, ಅಡ್ಡ ಕಾವಡಿಗಳಿಂದ, ಮತ್ತು ಹೇರು ಪ್ರಾಣಿಗಳಾದ ಎತ್ತುಗಳು, ಕೋಣಗಳು ಮತ್ತು ಕತ್ತೆಗಳ ಮೇಲೆ ಹೇರಿ ಸಾಗಿಸುತ್ತಿದ್ದರು. ರಸ್ತೆಗಳು ಇರುವ ಕಡೆಗಳಲ್ಲಿ ಪ್ರಾಣಿಗಳಿಂದ ಎಳೆಯಲ್ಪಡುವ ಒರಟಾದ ಬಂಡಿಗಳ ಮೂಲಕ ಸರಕುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯ ಬಯಲುಸೀಮೆ ಭಾಗಗಳಲ್ಲಿ ಎತ್ತಿನ ಬಂಡಿಗಳನ್ನು ಸರಕು ಸಾಗಾಣೆಗೆ ಬಳಸುತ್ತಿದ್ದರು. ಮಲೆನಾಡಿನ ಭಾಗಗಳಲ್ಲಿ ಪಶ್ಚಿಮ ಘಟ್ಟಗಳಿಂದಾಗಿ ರಸ್ತೆಗಳು ಕಡಿದಾಗಿ, ಕಿರುದಾಗಿದ್ದವು.

ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಆಳ್ವಿಕೆ ಕಾಲದಲ್ಲಿ ರಸ್ತೆ ಸಾರಿಗೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಯಿತು. ಟಿಪ್ಪುಸುಲ್ತಾನ್ ತನ್ನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಿಂದ ತಾನು ಗೆದ್ದ ಎಲ್ಲಾ ಪ್ರದೇಶಗಳಿಗೆ ಒಳ್ಳೆಯ ಸುವ್ಯವಸ್ಥಿತ ರಸ್ತೆಗಳನ್ನು ನಿರ್ಮಿಸಿದನು. ಇದರಿಂದಾಗಿ ಜಿಲ್ಲೆಯ ವಾಣಿಜ್ಯ ಬೆಳೆಗಳನ್ನು ರಾಜ್ಯದ ವಿವಿಧ ಭಾಗಗಳಿಗೆ ಮತ್ತು ಕರಾವಳಿಯ ಬಂದರುಗಳಿಗೆ ಶೀಘ್ರವಾಗಿ ತಲುಪಿಸಲು ಸಾಧ್ಯವಾಯಿತು. ೧೮೦೦ರ ಅವಧಿಯಲ್ಲಿ ವಸ್ತುಗಳನ್ನು ಮಾರುಕಟ್ಟೆಗಳಿಗೆ ಸಾಗಿಸಲು ಎತ್ತಿನಗಾಡಿಗಳನ್ನು, ತಳ್ಳುಗಾಡಿಗಳನ್ನು ಮತ್ತು ಜನರು ತಮ್ಮ ತಲೆಯ ಮೇಲೆ ಹೊತ್ತು ಸಾಗಿಸುತ್ತಿದ್ದರು. ಈ ಅವಧಿಯಲ್ಲಿ ವಸ್ತುಗಳ ಬೆಲೆ ಕಡಿಮೆ ಇದ್ದು, ಸಾಗಾಟ ಬಹಳ ಕಷ್ಟದಾಯಕ ಮತ್ತು ನಿಧಾನಗತಿಯಲ್ಲಿತ್ತು. ಪೇಟೆಗಳಂತಹ ಸ್ಥಳಗಳು ಮತ್ತು ಕೆಲವು ದೊಡ್ಡ ಗ್ರಾಮಗಳಲ್ಲಿ ವಾರದ ಸಂತೆಗಳು ನಡೆಯುತ್ತಿದ್ದವು. "ಮಾರುಕಟ್ಟೆಗೆ ಸಾಗಿಸುವ ವಸ್ತುಗಳನ್ನು ರಸ್ತೆಯ ಮೂಲಕ ಸಾಗಿಸುವಾಗ ವ್ಯಾಪಾರಿಗಳಿಗೆ ಅಥವಾ ರೈತರಿಗೆ ಯಾವುದೇ ರೀತಿಯ ಕಳ್ಳತನದ ಅಥವಾ ದರೋಡೆಕೋರರ ಭಯವಿರಲಿಲ್ಲ" ಎಂಬ ವಿಷ್ಟರ್ ಹೇಳಿಕೆ ಎಲ್ಲ ಸಂದರ್ಭಗಳಲ್ಲಿಯೂ, ಎಲ್ಲರ ಅನುಭವದ ಮಾತು ಆಗಿರಲಿಲ್ಲ. ಫ್ರಾನ್ಸಿಸ್ ಬುಕನನ್

ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ
ಕೋಣಾಜೆ-೫೭೪೧೯೯
ಮೊ: ೯೪೪೮೧೪ ೩೭೬೭೭೪

ಹೇಳುವಂತೆ "ವಸ್ತುಗಳನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಮತ್ತು ಒಂದು ಊರಿನಿಂದ ಇನ್ನೊಂದು ಊರಿಗೆ ಸಾಗಿಸುವಾಗ ಸುಂಕ ಕೇಂದ್ರಗಳಲ್ಲಿ ಸಾಗಾಟ ಸುಂಕಗಳನ್ನು (ಸಾಯರ್) ವಿಧಿಸಲಾಗುತ್ತಿತ್ತು. ಅಷ್ಟೆ ಅಲ್ಲದೆ ಮಾರ್ಗಗಳಲ್ಲಿ ವ್ಯಾಪಾರಿ ಸರಕುಗಳನ್ನು ದೋಚುವುದು ಅಥವಾ ಕಳ್ಳತನ ಮಾಡುವುದು ಕಂಡುಬರುತ್ತಿತ್ತು"

ಬ್ರಿಟಿಷ್ ವಸಾಹತುಶಾಹಿ ಆಡಳಿತಾವಧಿಯಲ್ಲಿ ಸಾರಿಗೆ ಸಂಪರ್ಕಗಳ ಬೆಳವಣಿಗೆಗೆ ಹೆಚ್ಚಿನ ಗಮನ ನೀಡಲಾಯಿತು. ಇದು ಬ್ರಿಟಿಷ್ ಹಿತಾಸಕ್ತಿಗೆ ಪೂರಕವಾಗಿದ್ದರೂ, ಜಿಲ್ಲೆಯ ಅಭಿವೃದ್ಧಿಗೆ ಪರೋಕ್ಷವಾಗಿ ಸಹಾಯಕವಾಯಿತು. ಜಿಲ್ಲೆಯಲ್ಲಿ ೧೮೫೦ರ ನಂತರದ ಅವಧಿಯಲ್ಲಿ ಕೃಷಿ ಬೆಳೆಗಳಲ್ಲಿ ಮಾರ್ಪಾಡುಗಳು ಕಂಡುಬಂದು, ಆಹಾರ ಧಾನ್ಯ ಜೊತೆಗೆ ವಾಣಿಜ್ಯ ಬೆಳೆಗಳಾದ ವೀಳ್ಯದೆಲೆ, ಏಲಕ್ಕಿ, ಕಾಳುಮೆಣಸು, ಅಡಿಕೆ, ಕಾಫಿ ಮುಂತಾದ ಬೆಳೆಗಳನ್ನು ಬೆಳೆಯಲು ಪ್ರಾಮುಖ್ಯತೆಯನ್ನು ನೀಡಲಾಯಿತು. ಮಾರ್ಕ್ ಕಬ್ಬನ್ ತನ್ನ ಆಡಳಿತಾವಧಿಯಲ್ಲಿ (೧೮೩೪–೧೮೬೧) ಸಾರಿಗೆ–ಸಂಪರ್ಕಗಳ ಸುಧಾರಣೆಗೆ ಹೆಚ್ಚು ಮಹತ್ವ ನೀಡಿದನು. ರಸ್ತೆ ಸಾರಿಗೆ ಮತ್ತು ರೈಲ್ವೆ ಸಾರಿಗೆಯ ಅಭಿವೃದ್ಧಿಗೆ ಪ್ರಯತ್ನಿಸಿದನು. ರಸ್ತೆಗಳನ್ನು ಸಾಮ್ರಾಜ್ಯದ ರಸ್ತೆಗಳು, ಪ್ರಾಂತೀಯ ರಸ್ತೆಗಳು ಹಾಗೂ ಗ್ರಾಮೀಣ ರಸ್ತೆಗಳಾಗಿ ವರ್ಗೀಕರಿಸಲಾಯಿತು. ಇವನ ಕಾಲದಲ್ಲಿ ನಾಲ್ಕು ಘಾಟಿರಸ್ತೆಗಳನ್ನು ನಿರ್ಮಿಸುವುದರ ಮೂಲಕ ಪಶ್ಚಿಮ ಕರಾವಳಿ ಪ್ರದೇಶಗಳಿಗೆ ಸಂಪರ್ಕ ಏರ್ಪಡಿಸಲಾಯಿತು. ಅವುಗಳೆಂದರೆ ಆಗುಂಬೆ ಘಾಟ್, ಬೂಂದ್ ಘಾಟ್, ಸಂಪಿಗೆ ಘಾಟ್ ಮತ್ತು ಪೆರಿಯಂಬಡಿ ಘಾಟ್. ೧೮೩೧ರಿಂದ ೧೮೫೬ರ ಅವಧಿಯಲ್ಲಿ ಬೆಂಗಳೂರಿನಿಂದ ಜಿಲ್ಲಾ ಕೇಂದ್ರಗಳಿಗೆ ಸಂಪರ್ಕಿಸುವ ರಸ್ತೆಗಳನ್ನು ನಿರ್ಮಿಸಲಾಯಿತು. ಮೂಡಿಗೆರೆಯಿಂದ 'ಒಂಭತ್ತು ಮರಡಿ' ಘಾಟಿನ ಮೂಲಕ ಪಶ್ಚಿಮ ಕರಾವಳಿಗೆ ಸಂಪರ್ಕಿಸಲು ರಸ್ತೆ ನಿರ್ಮಿಸಲಾಯಿತು. ಹೊಸದಾಗಿ ನಿರ್ಮಿಸಿದ ರಸ್ತೆಗೆ 'ಬೂಂದ್ ಘಾಟ್' ಅಥವಾ 'ಕೊಡೇಕಲ್' ಎಂಬ ಹೆಸರಿತ್ತು. ಈ ರಸ್ತೆ ಮತ್ತು ಶಿರಾಡಿ ಘಾಟ್ ರಸ್ತೆಗಳು ನಿರ್ಮಾಣವಾದುದು ಮಂಜರಾಬಾದ್ ಪ್ರದೇಶ ಕಾಫಿ ಪ್ಲಾಂಟರುಗಳ ಕೇಂದ್ರವಾದ ನಂತರ. ೧೮೬೦ಕ್ಕೆ ಮೊದಲು ಇದ್ದದ್ದು ಕೇವಲ ಬಿಸ್ಲೆ ಘಾಟ್ ಮಾತ್ರ. ಈ ಮಾರ್ಗದ ಮೂಲಕ ಜಿಲ್ಲೆಯ ಸಾಮಗ್ರಿಗಳನ್ನು ಕರಾವಳಿ ಪ್ರದೇಶಕ್ಕೆ ಕೊಂಡೊಯ್ದು ಅಲ್ಲಿಂದ ಮಂಗಳೂರು ಬಂದರಿನ ಮೂಲಕ ವಿದೇಶಕ್ಕೆ ರಫ್ತು ಮಾಡಲಾಗುತ್ತಿತ್ತು. ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿಗೆ ಪ್ರಾರಂಭದಲ್ಲಿ ತರೀಕೆರೆಯಿಂದ ನರಸಿಂಹರಾಜಪುರ, ತಡಸ ಹಾಗೂ ಹೆಬ್ಬೆಗೆ ಟ್ರಾಂವೆ ಸಂಪರ್ಕವಿತ್ತು. ಇದು ಕ್ರಿ.ಶ. ೧೯೧೫ರಲ್ಲಿಯೇ ಪ್ರಾರಂಭವಾಗಿತ್ತು. ಈ ತಾಲ್ಲೂಕಿನಲ್ಲಿ ರೈಲ್ವೆ ಸಂಪರ್ಕವಿರಲಿಲ್ಲ. ಈ ತಾಲ್ಲೂಕಿಗೆ ಪ್ರಮುಖ ಸಾರಿಗೆ ಸಂಪರ್ಕ ಮಾರ್ಗವೆಂದರೆ ರಸ್ತೆ ಮಾತ್ರ. ರಾಜ್ಯ ಹೆದ್ದಾರಿ ಕಾಮಗಾರಿಗಳು ೧೮೯೦ರ ವೇಳೆಗೆ ಪ್ರಾರಂಭವಾದವು. ಕಡೂರು ಮತ್ತು ಮಂಗಳೂರು ನಡುವೆ ರಸ್ತೆ ಕಾಮಗಾರಿ, ಹಾಸನ ಮತ್ತು ಚಿಕ್ಕಮಗಳೂರು ನಡುವೆ ರಸ್ತೆ ಕಾಮಗಾರಿಗಳಿಗಾಗಿ ರಾಜ್ಯ ಬಜೆಟ್‌ನಲ್ಲಿ ಮುಂಗಡ ಹಣ ತೆಗೆದಿರಿಸಲಾಯಿತು. ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ಕಾಫಿಯನ್ನು ಸೂಕ್ತ ಮಾರುಕಟ್ಟೆಗೆ ತಲುಪಿಸಲು ರಸ್ತೆ ಸಾರಿಗೆಯ ಅಭಿವೃದ್ಧಿಗೆ ಪ್ರಯತ್ನಿಸಲಾಯಿತು.

ಮಲೆನಾಡು ಭಾಗಗಳಾದ ಕೊಪ್ಪದ ಮೇಗುಂದದಿಂದ ಹೊರನಾಡು ಮೂಲಕ ಕಳಸದವರೆಗೆ, ನಂತರ ಬಂಗಾಡಿವರೆಗೆ ರಸ್ತೆ ನಿರ್ಮಾಣವಾಯಿತು. ಅಷ್ಟೇ ಅಲ್ಲದೆ ಚಿಕ್ಕಮಗಳೂರು–ಯಡೆಹಳ್ಳಿ ಮತ್ತು ಕಳಸ–ಕೊಟ್ಟಿಗೆಹಾರ ರಸ್ತೆ ಅಭಿವೃದ್ಧಿಗಾಗಿ ನಿಧಿಯನ್ನು ನಿಗದಿಪಡಿಸಲಾಯಿತು. ಬಾಬಾಬುಡನ್ ಭಾಗದ ರಸ್ತೆಯನ್ನು ಲಿಂಗದಹಳ್ಳಿಗೆ ಸೇರಿಸಲಾಯಿತು. ಇದರ ಮೂಲಕ ಸಾಂತಾವೇರಿ ರಸ್ತೆಯು ಕೆಂಚಾಪುರದ ಬಳಿ ನಂದಿಬಟ್ಟಲುವರೆಗೆ ವಿಸ್ತರಣೆಯಾಗಿ ಪ್ರಯಾಣಕ್ಕೆ ಸಹಾಯಕವಾಯಿತು. ಅಜ್ಜಂಪುರದಿಂದ ಚನ್ನಗಿರಿಗೆ ರಸ್ತೆ ನಿರ್ಮಾಣ ಕಾರ್ಯವು ೧೮೭೭–೭೮ರಲ್ಲಿ ಆರಂಭವಾಯಿತು. ಬೇಲೂರು–ಮೂಡಿಗೆರೆ ರಸ್ತೆಯನ್ನು ದುರಸ್ತಿಗೊಳಿಸಿ ಮೂಡಿಗೆರೆಯಿಂದ ಬೇಲೂರಿನ ನಡುವೆ ಸೇತುವೆ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸಲಾಯಿತು. ಮಲೆನಾಡಿನ ವಾಣಿಜ್ಯ ಬೆಳೆಗಳನ್ನು ಕರಾವಳಿಯ ಬಂದರು ಪ್ರದೇಶಗಳಿಗೆ ಸಾಗಿಸುವ ಸಲುವಾಗಿ ಕೊಪ್ಪ–ಮೇಗುಂದದಿಂದ ಕಳಸ–ಸಂಸೆಯ ಮೂಲಕ ಸಂಪರ್ಕವನ್ನು ಪೂರ್ಣಗೊಳಿಸಲಾಯಿತು. ಇದರಿಂದಾಗಿ ಚಿಕ್ಕಮಗಳೂರು ಜಿಲ್ಲೆಯ ನಾನಾ ಭಾಗಗಳಿಂದ ಕರಾವಳಿಗೆ ಮತ್ತು ಜಿಲ್ಲೆಯ ವಿವಿಧ ತಾಲ್ಲೂಕುಗಳ ನಡುವೆ ಸಂಪರ್ಕ ರಸ್ತೆಗಳನ್ನು ನಿರ್ಮಾಣ ಮಾಡಲಾಯಿತು. ಈ ಮೂಲಕ ರಾಜ್ಯದ ಕೇಂದ್ರಸ್ಥಾನವಾದ ಬೆಂಗಳೂರಿಗೆ ರೈಲ್ವೆ ಸಂಪರ್ಕ ಮತ್ತು ರಸ್ತೆ ಸಂಪರ್ಕಕ್ಕಾಗಿ ಪ್ರಯತ್ನಗಳು ನಡೆದವು. ಇದರಿಂದಾಗಿ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ಯಶಸ್ಸನ್ನು ಸಾಧಿಸಲಾಯಿತು.

೧೮೯೫–೯೬ರ ವೇಳೆಗೆ ಜಿಲ್ಲೆಯಲ್ಲಿ ಹಾದುಹೋಗುವ ಪ್ರಮುಖ ರಾಜ್ಯ ಹೆದ್ದಾರಿ ಮತ್ತು ಜಿಲ್ಲೆ ಹೆದ್ದಾರಿಗಳು ನಿರ್ಮಾಣ ಮತ್ತು ಅದರ ವೆಚ್ಚವನ್ನು ಈ ಕೆಳಗಿನ ಪಟ್ಟಿಯಲ್ಲಿ ನೋಡಬಹುದು.

ಜಿಲ್ಲೆಯಲ್ಲಿ ಹಾದುಹೋಗುವ ರಾಜ್ಯ ಹೆದ್ದಾರಿಗಳು ಮತ್ತು ದುರಸ್ಥಿ ಕಾಮಗಾರಿಗಳ ವಿವರ

ಹೆದ್ದಾರಿ	ಮೈಲುಗಳು	ಖರ್ಚು (ರೂಪಾಯಿಗಳಲ್ಲಿ)
ಬೆಂಗಳೂರು–ಹೊನ್ನಾವರ ರಸ್ತೆ	೩೭	೫,೫೦೦
ಕಡೂರು–ಮಂಗಳೂರು ರಸ್ತೆ	೬೨	೧೨,೪೦೦
ವಸ್ತಾರೆ–ಕೊಪ್ಪ ರಸ್ತೆ	೪೯	೯,೮೦೦
ಮೂಡಿಗೆರೆ–ಬೇಲೂರು ರಸ್ತೆ	೧೧	೧,೫೭೫
ತರೀಕೆರೆ–ಮಂಗಳೂರು ರಸ್ತೆ	೫೩	೭,೯೫೦
ಹಾಸನ–ಚಿಕ್ಕಮಗಳೂರು ರಸ್ತೆ	೭	೭೦೦
ಒಟ್ಟು ಮೈಲುಗಳು	೨೧೯	೩೭,೯೨೫

ಮೂಲ: ಬಿ.ಎಲ್. ರೈಸ್, ಕಡೂರ್ ಡಿಸ್ಟ್ರಿಕ್ಟ್, ಕರ್ನಾಟಕ ಗೆಜೆಟಿಯರ್, ಸಂಪುಟ ೨, ಪುಟ ೩೮೬.

ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ ಕಾಲದಲ್ಲಿ ರೈಲ್ವೆ ಸಾರಿಗೆ ಅಭಿವೃದ್ಧಿಗೆ ಮಹತ್ವ ನೀಡಲಾಯಿತು. ದಕ್ಷಿಣ ಮರಾಠ ರೈಲ್ವೆ ಬೆಂಗಳೂರು–ಪೂನ ನಡುವಿನ ರೈಲ್ವೆ ಸಂಪರ್ಕದ ಪರಿಣಾಮವಾಗಿ ಜಿಲ್ಲೆಯ ಪೂರ್ವ ಭಾಗದಲ್ಲಿನ ದೇವನೂರು, ಕಡೂರು, ಅಜ್ಜಂಪುರ ಮತ್ತು ಶಿವನಿವರೆಗಿನ ೪೦ ಮೈಲು ಉದ್ದದ ರೈಲ್ವೆ ಸಂಪರ್ಕ ಹೊಂದಲು ಸಾಧ್ಯವಾಯಿತು. ಬೀರೂರು–ಶಿವಮೊಗ್ಗ ನಡುವಿನ ೯೯ ಕಿ.ಮೀ. ದೂರದ ರೈಲ್ವೆ ನಿರ್ಮಾಣ ೨೪ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿ, ೧೮೯೯ರ ಡಿಸೆಂಬರ್ ೧ರಂದು ರೈಲು ಸಂಚಾರವನ್ನು ಆರಂಭಿಸಲಾಯಿತು. ಬಾಣಾವರ, ಕಡೂರು, ಬೀರೂರು, ತರೀಕೆರೆಗಳ ನಡುವೆ ೧೮೯೦ರಲ್ಲಿ ರೈಲ್ವೆ ಸಂಪರ್ಕ ಸಾಧ್ಯವಾಯಿತು. ಕಡೂರಿನಿಂದ ಚಿಕ್ಕಮಗಳೂರು–ಬೇಲೂರು ಮಾರ್ಗವಾಗಿ ಹಾಸನ ಅಥವಾ ಸಕಲೇಶಪುರಕ್ಕೆ ರೈಲ್ವೆ ನಿರ್ಮಾಣಕ್ಕೆ ಬೇಡಿಕೆ ಮತ್ತು ಪ್ರಯತ್ನಗಳು ಮಾಡಲಾಯಿತು. ಈ ರೈಲ್ವೆ ನಿರ್ಮಾಣದ ಮೂಲಕ ಕೃಷಿ ಮತ್ತು ತೋಟಗಾರಿಕೆಯ ಉತ್ಪನ್ನಗಳನ್ನು ಸುಲಭವಾಗಿ ರಾಜ್ಯದ ಕೇಂದ್ರ ಸ್ಥಳವಾದ ಬೆಂಗಳೂರಿನಿಂದ ಸಕಲೇಶಪುರ ಮಾರ್ಗದ ಮೂಲಕ ಮಂಗಳೂರಿಗೆ ಸಂಪರ್ಕ ಏರ್ಪಡಿಸುವುದು ಆರ್ಥಿಕವಾಗಿ ಲಾಭದಾಯಕವೆಂಬ ವಾದವಿದ್ದರೂ ಅದು ಈಡೇರಲಿಲ್ಲ. ಆದ್ದರಿಂದ ರೈಲ್ವೆ ಸಂಪರ್ಕಗಳ ಬೆಳವಣಿಗೆ ಜಿಲ್ಲೆಯ ಮಲೆನಾಡು ಭಾಗಗಳಲ್ಲಿ ಹಿಂದುಳಿಯಲು ಕಾರಣವಾಯಿತು.

ಮೈಸೂರು ಒಡೆಯರು ಮತ್ತು ಬ್ರಿಟಿಷ್ ಕಮಿಷನರ್‌ಗಳ ಆಳ್ವಿಕೆ ಕಾಲದಲ್ಲಿ ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕ ಬೆಳೆದುಬಂದಿತು. ರಸ್ತೆ ಸಾರಿಗೆಯಲ್ಲಿ ಸಾಕಷ್ಟು ಪ್ರಗತಿ ಕಂಡುಬಂದರೂ, ರೈಲ್ವೆ ಸಾರಿಗೆ ಜಿಲ್ಲೆಯ ಬಯಲುಸೀಮೆ ಪ್ರದೇಶಗಳಿಗೆ ಸೀಮಿತವಾಯಿತು. ಮಲೆನಾಡು ಪ್ರದೇಶಗಳು ರೈಲ್ವೆ ಸಾರಿಗೆಯಿಂದ ವಂಚಿತವಾಗಿದ್ದವು. ಸಾರಿಗೆ ಸಂಪರ್ಕದ ಬೆಳವಣಿಗೆ ಜಿಲ್ಲೆಯ ಕೃಷಿ ಉತ್ಪನ್ನಗಳಿಗೆ, ತೋಟಗಾರಿಕಾ ಬೆಳೆಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸಿತು. ತಾಲ್ಲೂಕು ಕೇಂದ್ರಗಳು ವ್ಯಾಪಾರಿ ಕೇಂದ್ರಗಳಾಗಿ ಬೆಳೆಯಲು ಸಹಾಯಕವಾಯಿತು. ಇದರ ಪರಿಣಾಮದಿಂದ ವ್ಯಾಪಾರಿಗಳಿಗೆ, ಶ್ರೀಮಂತ ಭೂ ಒಡೆಯರಿಗೆ ಮತ್ತು ರಾಜ್ಯದ ಬೊಕ್ಕಸಕ್ಕೆ ಲಾಭ ತಂದುಕೊಟ್ಟಿತೆ ವಿನಃ ಸಾಮಾನ್ಯ ರೈತನಿಗೆ ಯಾವುದೇ ಅನುಕೂಲಗಳು ಲಭ್ಯವಾಗಲಿಲ್ಲವೆಂದು ಹೇಳಬಹುದು. ಅವನು ಆರ್ಥಿಕವಾಗಿ ಹಿಂದುಳಿದಿದ್ದನು. ಅವನ ಜೀವನಮಟ್ಟದಲ್ಲಿ ಸುಧಾರಣೆಗಳು ಈ ಅವಧಿಯಲ್ಲಿ ಕಂಡುಬರಲಿಲ್ಲ. ೧೯ನೇ ಮತ್ತು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ಬಡತನದ ಜೀವನ ಸಾಗಿಸುತ್ತಿದ್ದರು.

ಆಕರಗ್ರಂಥಗಳು

೧. ನಾಗೇಗೌಡ ಎಚ್.ಎಲ್., ೧೯೭೮, ಬೆಟ್ಟದಿಂದ ಬಟ್ಟಲಿಗೆ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು.

೨. ಸೂರ್ಯನಾಥ್ ಕಾಮತ್, ೧೯೮೧, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.

೩. ಪ್ರೊಸ್ಸಿಡಿಂಗ್ಸ್ ಆಫ್ ಗವರ್ನಮೆಂಟ್ ಆಫ್ ಮಹಾರಾಜ ಆಫ್ ಮೈಸೂರು ಮೇ, ಸೆಪ್ಟೆಂಬರ್, ೧೮೯೩.

೪. ಬೆಂಜಮಿನ್ ಲೂಯಿಸ್ ರೈಸ್, ೧೮೯೭, ಮೈಸೂರು ಗೆಜೆಟಿಯರ್, ಸಂಪುಟ ೧, ಬೆಂಗಳೂರು.

೫. ರವಿರಾಜ್ ಬಿ.ವಿ., ಚಿಕ್ಕಮಗಳೂರು ಜಿಲ್ಲೆಯಲ್ಲಿ ತೋಟಗಾರಿಕೆ ಮತ್ತು ಸಮಾಜೋ–ಆರ್ಥಿಕ ಬದಲಾವಣೆಗಳು – ಒಂದು ಅಧ್ಯಯನ ೧೮೭೪–೧೯೪೭, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ.

೬ ಅಮೃತಪುರ ಎಸ್., ೧೯೮೬, ನರಸಿಂಹರಾಜಪುರ ತಾಲ್ಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

◆◆

೯೯

ಸ್ಮಿತಾ ಸುರೇಬಾನಕರ

ಬೆಳಗಾವಿಯಲ್ಲಿ ವ್ಯಾಕ್ಸಿನ್ ಡಿಪೋ ಇನ್‌ಸ್ಟಿಟ್ಯೂಟ್

೧೮೧೮ ರಲ್ಲಿ ಬೆಳಗಾವಿಯಲ್ಲಿ ಬ್ರಿಟೀಷರ ಆಳ್ವಿಕೆ ಪ್ರಾರಂಭವಾದಾಗಿನಿಂದ ಈ ಪ್ರದೇಶದಲ್ಲಿ ಬ್ರಿಟೀಷರ ಆಳ್ವಿಕೆಯ ಅನೇಕ ಅವಶೇಷಗಳನ್ನು ಸ್ಮಾರಕಗಳ ರೂಪದಲ್ಲಿ ನೋಡಬಹುದು. ಉದಾಹರಣೆಗೆ ಆಸ್ಪತ್ರೆ, ಕಲೆಕ್ಟರ್ ಕಚೇರಿ, ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಜಿಲ್ಲಾ ನ್ಯಾಯಾಲಯ, ಚರ್ಚ್, ಶಾಲಾ ಕಾಲೇಜುಗಳು, ಅಂಚೆ ಕಚೇರಿ ಇವೇ ಮುಂತಾದವುಗಳು. ಇಂತಹ ಬ್ರಿಟೀಷ ಸ್ಮಾರಕಗಳಲ್ಲಿ ವ್ಯಾಕ್ಸಿನ ಡಿಪೋ ಕೂಡ ಒಂದು.

೧೯೦೪ ರಲ್ಲಿ ಕ್ಯಾಪ್ಟನ್ FHG ಹಚ್ಚಿನ್‌ಸನ್ ಎಂಬ ಬ್ರಿಟೀಷ ಅಧಿಕಾರಿಯಿಂದ ಬೆಳಗಾವಿಯಲ್ಲಿ ಪ್ರಾರಂಭಿಸಲ್ಪಟ್ಟ ವ್ಯಾಕ್ಸಿನ್ ಡಿಪೋ ಆಗ ಬಾಂಬೆ ಸರಕಾರದ ಅಧೀನದಲ್ಲಿತ್ತು. ೨೫೬ ಎಕರೆ ವಿಸ್ತಾರವಾದ ಹಚ್ಚ ಹಸಿರಿನಿಂದ ಆವೃತವಾದ ಸುಂದರವಾದ ವಾತಾವರಣ ಮತ್ತು ಅನುಕೂಲಕರ ಹವಾಗುಣವುಳ್ಳ ಬೆಳಗಾವಿಯಲ್ಲಿ ೧೯೦೯ ರಷ್ಟರಲ್ಲಿ ಕಟ್ಟಡ ಪೂರ್ಣಗೊಂಡು ಸಿಡುಬಿನ ರೋಗಕ್ಕೆ ಲಸಿಕೆ ಉತ್ಪಾದನಾ ಕೇಂದ್ರ ಪ್ರಾರಂಭಿಸಲಾಯಿತು. ಶೀತಲೀಕರಿಸಿದ ೪೦ ವಿಲಿಯನ್ ಲಸಿಕೆಗಳನ್ನು ಶೇಖರಿಸಿಡಲು ಪ್ರಾರಂಭಿಸಿತು. ಅಷ್ಟೇ ಅಲ್ಲದೇ ಈ ಲಸಿಕೆಗಳನ್ನು ಹೊರಗಿನ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ೧೯೫೪ರಲ್ಲಿ ಮೊದಲು ಆಕಳು ಕರುವಿನ ಮಾಂಸ ತದನಂತರ ಎಮ್ಮೆಯ ಮಾಂಸವನ್ನು ಬಳಸಿ ಲಸಿಕೆ ತಯಾರಿಸಲಾಗುತ್ತಿತ್ತು. ಭಾಷಾವಾರು ಪ್ರಾಂತಗಳ ರಚನೆಯ ನಂತರ ಮೈಸೂರು ಸರಕಾರದ ಅಧೀನಕ್ಕೆ ಸಂಸ್ಥೆಯನ್ನು ವರ್ಗಾಯಿಸಲಾಯಿತು.

ಬ್ರಿಟೀಷರು ಬೆಳಗಾವಿಯನ್ನು ಲಸಿಕೆ ತಯಾರಿಕೆಗಾಗಿ ಆಯ್ದುಕೊಳ್ಳಲು ಮುಖ್ಯ ಕಾರಣವೆಂದರೆ ಇಲ್ಲಿರುವ ಸಮತಟ್ಟಾದ ವಿಶಾಲ ಭೂಪ್ರದೇಶ ಮತ್ತು ಉತ್ತಮವಾದ ತಂಪು ಮಿಶ್ರಿತ ಹವಾಗುಣ. ೧೯೭೭-೭೮ರಲ್ಲಿ ಸಿಡುಬಿನ ಮಹಾಮಾರಿಯ ನಿರ್ಮೂಲನೆಯ ನಂತರ anti-rabies ಲಸಿಕೆ ಮತ್ತು tectanus toxoid ಮತ್ತು ಡಿಫ್ತಿರಿಯಾಗೆ ೧೯೮೫ರ ವರೆಗೂ ಇಲ್ಲಿ ಲಸಿಕೆ ತಯಾರಿಸಲಾಗುತ್ತಿತ್ತು. ಕೋವಿಡ್-೧೯ ಮಹಾಮಾರಿಯ ಸಂದರ್ಭದಲ್ಲಿ ಇಲ್ಲಿ ಸುಮಾರು ೪೦ ಲಕ್ಷದಷ್ಟು ಕೋವಿಡ್-೧೯ ಲಸಿಕೆಗಳನ್ನು ಶೇಖರಿಸಿಡಲಾಗುತ್ತಿದೆ. ಸದ್ಯಕ್ಕೆ ವ್ಯಾಕ್ಸಿನ್ ಡಿಪೋ ಕಟ್ಟಡದಲ್ಲಿ ಜಿಲ್ಲಾ ಆರೋಗ್ಯ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ.

ಬೆಳಗಾವಿ ನಗರದ ಹೃದಯ ಸ್ಥಾನದಲ್ಲಿರುವ ವ್ಯಾಕ್ಸಿನ್ ಡಿಪೋ ವಿಸ್ತಾರವಾದ ಹಚ್ಚ ಹಸಿರಿನಿಂದಾವೃತವಾದ ಪ್ರದೇಶದಲ್ಲಿ ಕಲ್ಲಿನಿಂದ ನಿರ್ಮಿತವಾದ utilitarian ವಾಸ್ತುಶಿಲ್ಪದ ಸರಳಮಾದರಿಯ ಈ ಕಟ್ಟಡ ಸಸ್ಯರಾಶಿಯಿಂದ ಆವೃತವಾಗಿದೆ. ಸುಮಾರು

ಪ್ಲಾಟ್ ನಂ. ೬೯೦
'ಶ್ರೀನಿವಾಸ', ೫ನೇ ಅಡ್ಡರಸ್ತೆ
ಭಾಗ್ಯನಗರ
ಬೆಳಗಾವಿ-೫೯೦೦೦೬
ಮೊ: ೯೪೮೧೬ ೫೫೬೪೧



ವ್ಯಾಕ್ಸಿನ್ ಡಿಪೋ, ಬೆಳಗಾವಿ



ವ್ಯಾಕ್ಸಿನ್ ತಯಾರಿಕಾ ಘಟಕ

೩೭೦೦ ವೈವಿಧ್ಯಮಯ ಔಷಧಿಯುಕ್ತ ವನಸ್ಪತಿಗಳಿಂದ ಕೂಡಿದ್ದು, ಇದು ಬೆಳಗಾವಿ ನಗರ ಪರಿಸರದ ಕಿರುಕಾಡು ಎನಿಸಿದೆ. ಎರಡಂತಸ್ತಿನ ವಿಶಾಲವಾದ ಇಂಡೊ-ಬ್ರಿಟೀಷ ಶೈಲಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕರಿ ಬೆಣಚುಗಲ್ಲಿನ ನಿರ್ಮಿತಿ ವ್ಯಾಕ್ಸಿನ್ ಡಿಪೋ ಕಟ್ಟಡ. ಇದರ ಬಾಗಿಲು ಮತ್ತು ಕಿಟಕಿಗಳಿಗೆ ಬೆಲ್ಜಿಯಂ ಗಾಜನ್ನು ಅಳವಡಿಸಲಾಗಿದೆ. ಇದು ಶತಮಾನದ ಹಿಂದಿನ ನಿರ್ಮಾಣ ಕೌಶಲ್ಯ ಮತ್ತು ಗುಣವತ್ತತೆಗೆ ಹಿಡಿದ ಕೈಗನ್ನಡಿಯಂತಿದೆ. ವ್ಯಾಕ್ಸಿನ್ ಡಿಪೋ ಆವರಣದಲ್ಲಿ ಸುಮಾರು ೬೬ಕ್ಕೂ ಹೆಚ್ಚಿನ ಕಲ್ಲಿನ ನಿರ್ಮಿತಿಯ ಕಟ್ಟಡಗಳಿದ್ದು ನಿರ್ವಹಣೆಯ ಕೊರತೆಯಿಂದಾಗಿ ಶಿಥಿಲಾವಸ್ಥೆಯಲ್ಲಿವೆ. ಇದು ನಿಸರ್ಗರಮಣೀಯ ಸುಂದರ ಪಾರಂಪರಿಕ ಕಟ್ಟಡ.

ಸ್ಮಾರ್ಟ್ ಸಿಟಿ ಹಣೆಪಟ್ಟಿ ಹೊತ್ತ ಬೆಳಗಾವಿ ಕಾಂಕ್ರೀಟ್ ಬಂಗಲೆ ಆಗುವ ಧಾವಂತದಲ್ಲಿ ತನ್ನ ಹಸಿರು ಕವಚ (Green cover) ಕಳೆದುಕೊಳ್ಳುವ ಸಂದರ್ಭದಲ್ಲಿ ವ್ಯಾಕ್ಸಿನ್ ಡಿಪೋ ಪರಿಸರ ನಗರಕ್ಕೆ lung space ಒದಗಿಸುತ್ತಿದೆ. ಬೆಳಗಾವಿ ಮಹಾನಗರ ಸಭೆ ಈ ಪ್ರದೇಶವನ್ನು 'ಪಾರಂಪರಿಕ ಆವರಣ' ಎಂದು ಗುರುತಿಸಿದೆ.

ಕಳೆದೊಂದು ಶತಮಾನದಿಂದ ಸಾವಿರಾರು ಜನರ ಜೀವ ಉಳಿಸುವಲ್ಲಿ ನಿರತವಾದ ವ್ಯಾಕ್ಸಿನ್ ಡಿಪೋ ಇಂದು ಅವಸಾನದ ಅಂಚಿನಲ್ಲಿದೆ. ೨೦೦೭ರಲ್ಲಿ ಬೆಳಗಾವಿಯಲ್ಲಿ ವಿಧಾನಸೌಧದ ಕಟ್ಟಡ ನಿರ್ಮಾಣಕ್ಕಾಗಿ ವ್ಯಾಕ್ಸಿನ್ ಡಿಪೋ ಆವರಣವನ್ನು ಸರಕಾರ ನಿಗದಿಪಡಿಸಿದಾಗ heritage activists ಇದಕ್ಕೆ ಕಡುವಿರೋಧ ವ್ಯಕ್ತಪಡಿಸಿ 'Save Vaccine Depot' ಚಳುವಳಿ ಆರಂಭಿಸಿ ಸರಕಾರದ ಮನವೊಲಿಸುವಲ್ಲಿ ಸಫಲರಾದರು. ತತ್ಪರಿಣಾಮವಾಗಿ ಬೆಳಗಾವಿಯಿಂದ ೧೦ ಕಿ.ಮೀ. ದೂರದ ಹಲಗಾದಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣಗೊಂಡಿತು.

ಬೆಳಗಾವಿಯಲ್ಲಿ ಬ್ರಿಟೀಷ ಆಳ್ವಿಕೆಯ ಮತ್ತು ಅದರ ಆರೋಗ್ಯ ವ್ಯವಸ್ಥೆಯ ಮಹತ್ವದ ಸ್ಮಾರಕಗಳಲ್ಲೊಂದಾದ ವ್ಯಾಕ್ಸಿನ್ ಡಿಪೋ ಬೆಳಗಾವಿಯ ಇತಿಹಾಸ ಪುಟದಲ್ಲಿ ವಿಶೇಷ ಸ್ಥಾನ ಹೊಂದಿದೆ. ಇದನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಿಡುವುದು ಸಾಮಾಜಿಕ ಜವಾಬ್ದಾರಿಯಾಗಿದೆ. ಕರೋನಾ ಲಸಿಕೆ ಸದ್ಯ ಸುದ್ದಿಯಲ್ಲಿರುವಾಗಲೇ ಅಪರೂಪದ ಲಸಿಕಾ ತಯಾರಿಕಾ ಕೇಂದ್ರವೇ ಬೆಳಗಾವಿಯಾಗಿತ್ತೆಂಬುದು ಹೆಮ್ಮೆಯ ಸಂಗತಿಯಾಗಿದೆ.

◆◆

೧೦೦

ವೀಣಾ ಪಿ.

ಮಾಧವ ಮಂತ್ರಿ ಅಣೆಕಟ್ಟು : ಒಂದು ಚಾರಿತ್ರಿಕ ಅವಲೋಕನ

ಕರ್ನಾಟಕದಲ್ಲಿ ಕಾವೇರಿ ಹಾಗೂ ಅದರ ಉಪನದಿಗಳಿಗೆ ಆಯಾ ಕಾಲೀನ ಲಭ್ಯ ತಂತ್ರಜ್ಞಾನಗಳನ್ವಯ ಒಡ್ಡುಗಳನ್ನು, ಕಾಲುವೆ, ಜೊತೆಗೆ ವಿವಿಧ ಗಾತ್ರದ ಆಣೆಕಟ್ಟುಗಳನ್ನು, ಜಲಾಶಯಗಳನ್ನು ನಿರ್ಮಿಸಿ ನೀರಾವರಿ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿರುವುದನ್ನು ಕಾಣಬಹುದು. ಅಂತಹ ನೀರಾವರಿ ಕಾಮಗಾರಿಗಳಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿದ "ಮಾಧವ ಮಂತ್ರಿ ಅಣೆಕಟ್ಟು" ಕರ್ನಾಟಕದ ಚರಿತ್ರೆಯನ್ನು ಪ್ರಭಾವಿಸಿದ ವಿಶಿಷ್ಟ ನಿರ್ಮಿತಿಯಾಗಿದ್ದು, ಆ ಮಹತ್ವದ ಚಾರಿತ್ರಿಕ ವಿವರಗಳನ್ನು ಈ ಪ್ರಬಂಧದಲ್ಲಿ ನಿರೂಪಿಸಲಾಗಿದೆ.

ಮಾಧವ ಮಂತ್ರಿ ಅಣೆಕಟ್ಟು – ಸ್ಥಳ ನಿರ್ದೇಶನ ಮತ್ತು ಐತಿಹ್ಯ

'ಮಾಧವ ಮಂತ್ರಿ ಅಣೆಕಟ್ಟು' ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ತಲಕಾಡಿನಿಂದ ೪ ಕಿ.ಮೀ. ದೂರದಲ್ಲಿರುವ ಹೊಸ ಹೆಮ್ಮಿಗೆಯಲ್ಲಿದೆ. ಇದು ಕರ್ನಾಟಕ ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿತವಾದ ಅಣೆಕಟ್ಟುಗಳಲ್ಲಿ ಅತ್ಯಂತ ಹಳೆಯ ಅಣೆಕಟ್ಟು ರಚನೆಯಾಗಿದ್ದು, ಇಡೀ ಭಾರತದ ಪರಿಗಣನೆಯಲ್ಲಿ ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ ಕರಿಕಾಲ ಚೋಳನಿಂದ ನಿರ್ಮಿತ ಗ್ರ್ಯಾಂಡ್ ಅಣೆಕಟ್ಟೆಯ ನಂತರದ ಎರಡನೇ ಹಳೆಯ ಅಣೆಕಟ್ಟೆಯಾಗಿದೆ. 'ಕಟ್ಟೆ ತಾಳು' ಎಂದೂ ಕರೆಯಲಾಗುವ ಈ ಅಣೆಕಟ್ಟು ನೀರಿನ ಸಂಗ್ರಹಕ್ಕಾಗಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಕಲ್ಲಿನ ಬೃಹತ್ ಒಡ್ಡು. ತಲಕಾಡು, ಮುಡುಕುತೊರೆ, ಮೊಳೆ, ತಿರುಮಕೂಡಲು ನರಸೀಪುರ ಹಾಗೂ ಸುತ್ತಲಿನ ಗ್ರಾಮಗಳ ಜನರ ಕೃಷಿಗೆ ಈ ನದಿಯೇ ಆಧಾರವಾಗಿದೆ. ಈ ಭಾಗದಲ್ಲಿ ನದಿ ಪಾತ್ರ ಸಮತಟ್ಟಾಗಿರುವುದರಿಂದ ಸಾಕಷ್ಟು ನೀರಿನ ಸಂಗ್ರಹಕ್ಕೆ ಅನುಕೂಲಕರವಾಗಿದ್ದು, ಅಣೆಕಟ್ಟು ನಿರ್ಮಾಣಕ್ಕೆ ಈ ಸ್ಥಳ ಆಯ್ಕೆಯು ನಿರ್ಮಾತೃಗಳ ತಂತ್ರಜ್ಞತೆಗೆ ಸಾಕ್ಷಿಯಾಗಿದೆ.

ತಲಕಾಡು ಭಾಗದಲ್ಲಿ ಪಶ್ಚಿಮವಾಹಿನಿಯಾಗಿ ಹರಿಯುವ ಕಾವೇರಿ ನದಿ ತೀರದ ಹೆಮ್ಮಿಗೆ ಗ್ರಾಮವು ಗಂಗರು, ಹೊಯ್ಸಳರು ಮತ್ತು ವಿಜಯನಗರದ ಅರಸರ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಅದನ್ನು ವಿಜಯನಗರದ ಅರಸು ಇಮ್ಮಡಿ ಹರಿಹರರಾಯ, ಅಲಳಾಳ ದೀಕ್ಷಿತರ ಮಗ ವರದಭಟ್ಟ ಎಂಬಾತನಿಗೆ ದಾನವಾಗಿ ಕೊಟ್ಟಿದ್ದ. ಅದರಂತೆ ಗ್ರಾಮದ ಹೆಸರು 'ಹರಿಹರ ರಾಜೇಂದ್ರಪುರ' ಎಂದಾಗಿತ್ತು. ಕಾಲಾನಂತರ ಹೆಮ್ಮಿಗೆ

ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ–೫೭೭೪೫೧
ಶಿವಮೊಗ್ಗ ಜಿಲ್ಲೆ
ಮೊ: ೯೮೮೬೦ ೨೩೬೧೮



ವಿವಿಧ ಪಾರ್ಶ್ವಗಳಿಂದ ಮಾಧವ ಮಂತ್ರಿ ಅಣೆಕಟ್ಟೆ ದೃಶ್ಯಗಳು

ಎಂದು ಹೆಸರಾಯಿತು ಎಂಬುದಾಗಿ ಮಾಧವಮಂತ್ರಿ ಅಣೆಕಟ್ಟು ಸ್ಥಿತ ಹೆಮ್ಮಿಗೆಯ ಕುರಿತಾಗಿ ದಾಖಲೆಗಳಿವೆ. ಹೆಮ್ಮಿಗೆಗೆ ಅತೀ ಸಮೀಪದ ತಲಕಾಡು ಗಂಗವಾಡಿಯ ಒಂದು ಭಾಗವಾಗಿ, ಗಂಗರ ರಾಜಧಾನಿಯಾಗಿತ್ತು. ನಂತರ ಚೋಳರ ಆಳ್ವಿಕೆಗೊಳಪಟ್ಟು 'ರಾಜರಾಜಪುರ'ವೆಂದು ಕರೆಯಲ್ಪಟ್ಟಿತು. ಹೆಮ್ಮಿಗೆಯಲ್ಲಿರುವ ಕೆಲವು ತಮಿಳು ಲಿಪಿಯ ಶಾಸನಗಳು ಹೆಮ್ಮಿಗೆ ಗಂಗರ ತರುವಾಯ ಚೋಳರ ಅಧೀನ ಪ್ರದೇಶವಾಗಿದ್ದುದಕ್ಕೆ ಸಾಕ್ಷಿಯಾಗಿವೆ.

ಮಾಧವ ಮಂತ್ರಿ ಅಣೆಕಟ್ಟೆಯ ನಿರ್ಮಾಣದ ಕಾಲ ಮತ್ತು ಕರ್ತೃ

'ಮಾಧವ ಮಂತ್ರಿ ಅಣೆಕಟ್ಟು' ಸಾ.ಶ. ೧೪ನೇ ಶತಮಾನದಲ್ಲಿ ವಿಜಯನಗರದ ಬುಕ್ಕರಾಯ I (ಸಾ.ಶ. ೧೩೫೬–೧೩೭೭) ಆಳ್ವಿಕೆಯ ಅವಧಿಯ ಕಾಲದಲ್ಲಿ ಪ್ರಖ್ಯಾತ ಮಂತ್ರಿ ಮತ್ತು ಪ್ರಾಂತ್ಯಾಧಿಕಾರಿಯಾಗಿದ್ದ ಮಾಧವ ಮಂತ್ರಿ ಅಥವಾ ಹರದನಹಳ್ಳಿಯ ಮಾಧವ ದಂಡನಾಯಕನಿಂದ ನಡೆದಿದೆ. ಆತನು ಬಹುಮನಿ ರಾಜರಿಂದ ೧೩೬೯ರಲ್ಲಿ ಗೋವಾವನ್ನು ವಶಪಡಿಸಿಕೊಳ್ಳಲು ನಿಯೋಜಿಸಲ್ಪಟ್ಟು, ಆ ಕಾರ್ಯದಲ್ಲಿ ಯಶಸ್ವಿಯಾದ ತರುವಾಯ ಮೈಸೂರು ಪ್ರಾಂತ್ಯದ ಮೇಲ್ವಿಚಾರಣೆಗೆ ನಿಯೋಜಿತನಾದನು. ಈ ಅವಧಿಯಲ್ಲಿ ಸುತ್ತಲಿನ ಗ್ರಾಮಗಳ ನೀರಾವರಿ ಸೌಲಭ್ಯದ ಉದ್ದೇಶಕ್ಕಾಗಿ ತಲಕಾಡಿನ ಬಳಿಯ ಹೆಮ್ಮಿಗೆ ಗ್ರಾಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಪ್ರಥಮ ಅಣೆಕಟ್ಟಾಗಿ ನಿರ್ಮಿಸಿದ್ದಾಗಿ ನಂಬಲಾಗಿದ್ದು. ಅವನ ಕೊಡುಗೆಯ ಜ್ಞಾಪಕಾರ್ಥವಾಗಿ ಅವನ ಹೆಸರನ್ನೇ ಹೊಂದಿದೆ ಎಂದು ಉಲ್ಲೇಖಗಳಿವೆ. ಇದು ವಿಜಯನಗರ ಕಾಲೀನ ಅಣೆಕಟ್ಟುಗಳಲ್ಲಿ ಮಹತ್ವದ್ದಾಗಿದೆ. (ಮಾಧವಮಂತ್ರಿ ಅಣೆಕಟ್ಟಿನ ಸ್ಥಳದಲ್ಲಿ ಕರ್ನಾಟಕ ಸರ್ಕಾರ ಘೋಷಿತ ಮಾಹಿತಿ ಫಲಕದಲ್ಲಿ ಅಣೆಕಟ್ಟಿನ ನಿರ್ಮಾಣ ಕಾಲ ಸಾ.ಶ. ೧೧೪೦ ಎಂದು ನಮೂದಾಗಿದೆ. ಈ ಅಣೆಕಟ್ಟು ೧೨ನೇ ಶತಮಾನಕ್ಕೆ ಸೇರಿದ್ದು ಎಂಬ ವಾದಗಳೂ ಇವೆ.) ಮಧ್ಯಕಾಲೀನ 'ಕರ್ನಾಟಕದ ಸಾಮ್ರಾಜ್ಯ'ವೆಂದೇ ಖ್ಯಾತಿ ಪಡೆದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವಿಪುಲ ನೀರಾವರಿ ಕಾರ್ಯಗಳು ನೆರವೇರಿದ್ದು, ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದ ಹರವಿನಾದ್ಯಂತ ಯಾವುದೇ ಭಾಷಿಕ ಹಾಗೂ ಪ್ರಾಂತೀಯ ತಾರತಮ್ಯವಿಲ್ಲದೇ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷಿಕ ಪ್ರಾಂತ್ಯಗಳಾದ್ಯಂತ ಕೃಷ್ಣಾ, ತುಂಗಭದ್ರಾ, ಕಾವೇರಿ ನದಿಗಳುದ್ದಕ್ಕೂ ಪ್ರಜೆಗಳಿಗೆ ನೀರಾವರಿ ಸೌಕರ್ಯಗಳನ್ನೊದಗಿಸುವ

ಕಾರ್ಯವನ್ನು ಮಾಡಿದ್ದಾರೆ. ತಲಕಾಡು ಸೇರಿದಂತೆ ದಕ್ಷಿಣ ಕರ್ನಾಟಕದ ಹಲವು ಪ್ರಾಂತ್ಯಗಳು ವಿಜಯನಗರದ ಅರಸರ ಆಳ್ವಿಕೆಗೆ ಸೇರಿದ್ದ ಕಾಲದಲ್ಲಿ ಕಾವೇರಿ ಜಲಾನಯನದ ಭಾಗವಾದ ತಲಕಾಡು ಭಾಗಕ್ಕೆ ಒದಗಿದ ನೀರಾವರಿ ಪ್ರಯೋಜನಗಳಲ್ಲಿ 'ಮಾಧವ ಮಂತ್ರಿ ಅಣೆಕಟ್ಟು' ಒಂದಾಗಿದೆ. ಬಿ.ಎಲ್. ರೈಸ್‌ರವರ ಸಂಪಾದಕತ್ವದಲ್ಲಿ ರಚಿತವಾದ ಮೈಸೂರು ಪ್ರಾಂತ್ಯದ ಗೆಜೆಟಿಯರ್‌ನಲ್ಲಿ 'ಮಾಧವಮಂತ್ರಿ ಅಣೆಕಟ್ಟಿನ ಮಾಧವಮಂತ್ರಿ ಕಾಲುವೆ ೧೮ ಮೈಲಿ ಉದ್ದವಿದ್ದು, ೨,೯೫೯ ಎಕರೆ ಜಮೀನಿಗೆ ನೀರಾವರಿ ಅನುಕೂಲವನ್ನೇರ್ಪಡಿಸಿದ್ದು, ೧೮೯೦ರಲ್ಲಿ ಇದರಿಂದ ಬೊಕ್ಕಸಕ್ಕೆ ವಾರ್ಷಿಕ ೧೩,೬೭೭ ರೂಪಾಯಿ ಕಂದಾಯ ಸಂಗ್ರಹವಾಗುತ್ತಿದ್ದ ಬಗ್ಗೆ ವಿವರವಿದೆ.'[೧]

ಈ ಮಾಧವ ಮಂತ್ರಿ ಅಣೆಕಟ್ಟು ದೊಡ್ಡ–ದೊಡ್ಡ ಕಾಡು ಬಂಡೆಗಲ್ಲುಗಳಿಂದ ನದಿಯ ಹರಿವಿನ ಪಾತ್ರಕ್ಕೆ ತದ್ವಿರುದ್ಧವಾಗಿ ಗಾರೆಯಿಂದ ತಡೆ ಗೋಡೆ ನಿರ್ಮಿಸಿ ರಚಿತವಾಗಿದ್ದು, ೧೦೭೬ ಮೀಟರ್ ಉದ್ದವಿದೆ. ಈ ಅಣೆಕಟ್ಟೆಗೆ ಹೊಂದಿಕೊಂಡು ನಿರ್ಮಿತವಾದ ೧೮ ಮೈಲಿ (೨೯.೧೦ ಕಿ.ಮೀ.) ಉದ್ದ, ೧೭೦ ಕ್ಯೂಸೆಕ್ಸ್ ಸಾಮರ್ಥ್ಯದ ಮಾಧವ ಮಂತ್ರಿ ನಾಲೆಯು ೫,೮೨೮ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿಯನ್ನೊದಗಿಸುತ್ತಿದೆ.[೨]

ಮಾಧವಮಂತ್ರಿ ಅಣೆಕಟ್ಟು ನಿರ್ಮಿತಿಯ ಪರಿಣಾಮ ಹಾಗೂ ಅಲಮೇಲಮ್ಮನ ಶಾಪ

ತಲಕಾಡಿಗೆ ಸಂಬಂಧಿಸಿದ ಭೂತಕಾಲದ ಕೆಲವು ಜಿಜ್ಞಾಸೆಯ ವಿಷಯಗಳು ವಿಶೇಷವಾಗಿ ಮೈಸೂರಿನ ಹಿಂದಿನ ದೊರೆಗಳಾದ ಒಡೆಯರುಗಳಿಗೆ ಸಂಬಂಧಿಸಿದ ತಲಕಾಡಿನ ಅಲಮೇಲಮ್ಮನ ಪ್ರಸಿದ್ಧ ಶಾಪ ಹಾಗೂ ಮಾಧವಮಂತ್ರಿ ಅಣೆಕಟ್ಟಿನ ನಿರ್ಮಾಣದ ಪರಿಣಾಮಗಳ ಅಂಶಗಳು ಪರಸ್ಪರ ತಳಕು ಹಾಕಿಕೊಂಡಿರುವ ನೆಲೆಯಲ್ಲಿ ಅಧ್ಯಯನ ನಡೆಸಬೇಕಾಗಿದೆ.

ಸುಮಾರು ೧೬ನೇ ಶತಮಾನಕ್ಕೆ ಪೂರ್ವದಲ್ಲಿ ಯಾವುದೇ ಮರಳಿನ ದಿಬ್ಬಗಳಿರದಿದ್ದ ತಲಕಾಡಿನಲ್ಲಿ ಆ ತರುವಾಯ ಮರಳಿನ ದಿಬ್ಬಗಳು ರೂಪುಗೊಂಡ ಅಂಶದ ಹಿನ್ನೆಲೆಯಲ್ಲಿ ಅದಕ್ಕೆ ಕಾರಣವೆಂದು ಜನಪದೀಯವಾಗಿ ನಂಬಲಾಗಿರುವ ಅಲಮೇಲಮ್ಮನವರ ಶಾಪವು ನೇರವಾಗಿ ಮೈಸೂರು ಒಡೆಯರ್ ಮನೆತನದ ಆರಂಭಿಕ ಶ್ರೇಷ್ಠ ಅರಸರಲ್ಲೊಬ್ಬರಾದ ರಾಜ ಒಡೆಯರ್–Iರಿಗೆ ಸಂಬಂಧಿಸಿದೆ. ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಸಾಮಂತ ರಾಜರಾಗಿ ಮೈಸೂರಿನಲ್ಲಿ ರಾಜ ಒಡೆಯರ್–I (೧೫೭೮–೧೬೧೭) ಮತ್ತು ಶ್ರೀರಂಗಪಟ್ಟಣದಲ್ಲಿ ತಿರುಮಲರಾಯ ಆಳ್ವಿಕೆ ಮಾಡುತ್ತಿದ್ದ ಅವಧಿಯಲ್ಲಿನ ರಾಜ ಒಡೆಯರ್‌ಗೂ ತಿರುಮಲರಾಯನಿಗೂ ವೈರತತ್ವವಿತ್ತೆಂದು ಚಿಕ್ಕದೇವರಾಜ ವಂಶಾವಳಿ ತಿಳಿಸುತ್ತದೆ. ಪೆನುಕೊಂಡೆಯಲ್ಲಿ ಆಳುತ್ತಿದ್ದ ವಿಜಯನಗರ ದೊರೆ ವೆಂಕಟಪತಿರಾಯನ ಬೆಂಬಲ ರಾಜ ಒಡೆಯರ್–Iರಿಗಿದ್ದು, ಶ್ರೀರಂಗಪಟ್ಟಣವನ್ನಾಳುತ್ತಿದ್ದ ತಿರುಮಲರಾಯ ಗುಣಪಡಿಸಲಸಾಧ್ಯವಾದ (ಬೆನ್ನುಪಣಿ) ರೋಗದಿಂದ ಬಳಲುತ್ತಿದ್ದು, ತಲಕಾಡಿನ ಬಳಿಯ ಮಾಲಿಂಗಿಗೆ ತೆರಳಿದ ಕಾರಣದಿಂದ ಸಾ.ಶ. ೧೬೧೦ರಲ್ಲಿ ವೆಂಕಟಪತಿರಾಯನ ಔಪಚಾರಿಕ ಒಪ್ಪಿಗೆ ಮೇರೆಗೆ ರಾಜ ಒಡೆಯರ್ ಶ್ರೀರಂಗಪಟ್ಟಣದ ಪ್ರಭುತ್ವವನ್ನು ಸಾಧಿಸಿದ. ನಂತರ ತಲಕಾಡು ರಾಜ ಒಡೆಯರ್ ಅವರ ವಶವಾಯಿತು ಎಂಬುದಾಗಿ ಬಿ.ಎಲ್. ರೈಸ್‌ರವರು 'ಮೈಸೂರು ಗೆಜೆಟಿಯರ್'ನಲ್ಲಿ ಉಲ್ಲೇಖಿಸಿದ್ದಾರೆ:

ಅಲಮೇಲಮ್ಮನ ಶಾಪದ ಮೂರು ಭಾಗಗಳಲ್ಲಿ ಮೊದಲೆರಡು ಭಾಗಗಳಾದ – 'ತಲಕಾಡು ಮರಳಾಗಲಿ' ಮತ್ತು 'ಮಾಲಿಂಗಿ ಮಡುವಾಗಲಿ'– ಎಂಬ ಅಂಶಗಳು ಮಾತ್ರ ಮಾಧವ ಮಂತ್ರಿ ಅಣೆಕಟ್ಟೆಯ ಪರಿಣಾಮಗಳೊಂದಿಗೆ ಸಂಬಂಧಿಸಿದ್ದು, ಮೂರನೇ ಭಾಗವಾದ– 'ಮೈಸೂರು ದೊರೆಗಳಿಗೆ ಮಕ್ಕಳಾಗದಿರಲಿ' – ಎಂಬ ಸಂಗತಿಯು ಮಾಧವಮಂತ್ರಿ ಅಣೆಕಟ್ಟಿನ ನಿರ್ಮಾಣದ ಪರಿಣಾಮದ ಅಂಶಗಳೊಂದಿಗೆ ನೇರವಾಗಿ ಸಂಬಂಧಿಸಿಲ್ಲವಾದ್ದರಿಂದ ಮೂರನೇ ಭಾಗದ ಐತಿಹಾಸಿಕ ಸಿಂಧುತ್ವ ಮತ್ತು ತಾರ್ಕಿಕತೆಯ ಪ್ರಶ್ನೆಯನ್ನು ಹೊರತುಪಡಿಸಿ ಅಲಮೇಲಮ್ಮನ ಶಾಪದ ಮೊದಲೆರಡು ಭಾಗಗಳ ಮೇಲೆ ಮಾಧವಮಂತ್ರಿ ಅಣೆಕಟ್ಟು ನಿರ್ಮಿತಿಯ ಪರಿಣಾಮದ ಸಂಬಂಧವನ್ನು ಇಲ್ಲಿ ವಿಶ್ಲೇಷಣಾತ್ಮಕವಾಗಿ ಮಂಡಿಸಲಾಗಿದೆ.

ಮಾಧವ ಮಂತ್ರಿ ಅಣೆಕಟ್ಟು ನಿರ್ಮಾಣದ ಪರಿಣಾಮಗಳ ವಿಶ್ಲೇಷಣೆ

ಭೂವಿಜ್ಞಾನಿಗಳು ಮತ್ತು ಪುರಾತತ್ವಶಾಸ್ತ್ರಜ್ಞರು ೧೬೦೦ರ ದಶಕದ ಆರಂಭದಲ್ಲಿ ತಲಕಾಡಿನಲ್ಲಿ ಮರಳು ದಿಬ್ಬಗಳ ರಚನೆ ಮತ್ತು ಮಾಲಿಂಗಿಯ ಸುಳಿಗಳ ರಚನೆಗೆ ಅಲಮೇಲಮ್ಮನ ಶಾಪ ಕಾರಣವೆಂಬ ಕಾಕತಾಳೀಯವೆಂಬಂತಿರುವ ಅಂಶವನ್ನು ಗೊಂದಲ ಮತ್ತು ತಿಳುವಳಿಕೆಗೆ ಕಷ್ಟಕರವೆಂದು ತಳ್ಳಿಹಾಕುತ್ತಾರೆ. ಹಾಗೂ ಇದನ್ನು ಭೌಗೋಳಿಕ ವಿದ್ಯಮಾನವೆಂದು ನಿರೂಪಿಸಿ ಹೆಚ್ಚು ವಿಶ್ವಾಸಾರ್ಹ ಕಾರಣಗಳನ್ನು ತರ್ಕಿಸುತ್ತಾರೆ.[೩]

ಮರಳಿನ ರಾಶಿಯಲ್ಲಿ ಹುದುಗಿರುವ ತಲಕಾಡಿನ ಪ್ರಾಚೀನ ನಿವೇಶನದ ರಹಸ್ಯವನ್ನು ಭೇದಿಸುವ ನಿಟ್ಟಿನಲ್ಲಿ 'ಮೈಸೂರು ಸರ್ಕಾರದ ಪ್ರಾಕ್ತನಶಾಸ್ತ್ರ ಇಲಾಖೆಯು ಶ್ರೀ ಎಂ. ಹನುಮಂತ ರಾವ್ ಅವರ ನೇತೃತ್ವದಲ್ಲಿ ಕಾವೇರಿ ನದಿಯ ದಡದಲ್ಲಿ, ಟಿ. ನರಸೀಪುರ ೧೧ ಕಿ.ಮೀ. ಕೆಳಗೆ ಸ್ಥಿತ ಹೆಮ್ಮಿಗೆಯಲ್ಲಿ ಉತ್ಖನನವನ್ನು ಐದು ವಿಭಾಗಗಳಲ್ಲಿ – ಎರಡು ಹೆಮ್ಮಿಗೆಯ ಪಕ್ಕದಲ್ಲಿರುವ ಪ್ರದೇಶದಲ್ಲಿ ಮತ್ತು ಮೂರು ಸುಮಾರು ೪೦೦ ಮೀಟರ್ ದೂರದ ಮೇಲು ಹರಿವಿನಲ್ಲಿ ಮಾಧವಮಂತ್ರಿ ಅಣೆಕಟ್ಟೆಯ ಹಿಂದೆ ಒಂದು ಸಣ್ಣ ದ್ವೀಪದಲ್ಲಿ ನಡೆಸಿದರು.[೪] ಈ ಉತ್ಖನನವು ಹೆಮ್ಮಿಗೆ ಗ್ರಾಮದ ಬಳಿಯ ವಿಭಾಗದಲ್ಲಿ ವೃತ್ತಿಯ ಎರಡು ಅವಧಿಗಳನ್ನು ಹಾಗೂ ದ್ವೀಪ ಭಾಗದಲ್ಲಿ ಏಕ-ಉದ್ಯೋಗ ವೃತ್ತಿಯ ಚಾಲ್ಕೋಲಿಥಿಕ್ ಅವಧಿಗೆ ಸಂಬಂಧಿಸಿದ ಮಡಕೆ, ಆಯುಧ ಹಾಗೂ ಉಪಕರಣಗಳನ್ನೊಳಗೊಂಡಿದೆ. ಗಾಳಿಯಿಂದ ಹರಡುವ ಮರಳಿನ ನಿಕ್ಷೇಪಗಳಿಂದ ಪ್ರತಿನಿಧಿಸಲ್ಪಟ್ಟ ದೀರ್ಘಾವಧಿಯ ತೊರೆಯುವಿಕೆಯ ನಂತರ, ಈ ನಿವೇಶನವು ಆರಂಭಿಕ ಐತಿಹಾಸಿಕ ಅವಧಿಯಲ್ಲಿ ಪುನಃ ಆಕ್ರಮಿಸಲ್ಪಟ್ಟಿತು' – ಎಂಬುದಾಗಿ ನಿರೂಪಿಸಿದೆ.[೫]

೧೯೯೩-೯೪ರ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯ, ನಿರ್ದೇಶನಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಗಳು ಒಗ್ಗೂಡಿ ನಡೆಸಿದ ತಲಕಾಡಿನ ಪ್ರಾಚ್ಯ ಉತ್ಖನನದ ವರದಿಯನ್ವಯ, 'ತಲಕಾಡಿನಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಅವಶೇಷಗಳು, ಮಡಿಕೆಗಳು, ಆದಿ ಚಾರಿತ್ರಿಕ ಕಾಲದ ಮಡಿಕೆಗಳು, ವಿಧ ವಿಧವಾದ ಐಹಿಕ ವಸ್ತುಗಳು, ಕುಲುಮೆಯ ಕಾರ್ಯಾಗಾರ, ರೋಮನ್ ನಾಣ್ಯಮುದ್ರೆ, ಗಂಗರ ಕಾಲದ ಸಮಾಧಿಗಳು, ಗಂಗ ರಾಜ ನಿವಾಸ ಪ್ರಾಕಾರ, ಜೈನ ಬಸದಿ, ವಿಜಯನಗರ ಕಾಲದ ಬಳೆ ಬಾವಿಗಳು, ಇತ್ಯಾದಿ ವೈವಿಧ್ಯಮಯವಾದ ಅನೇಕ ವಸ್ತು ವಿಷಯಗಳು ಪತ್ತೆಯಾಗಿವೆ. ಅಲ್ಲದೆ ಉತ್ಖನನದಿಂದ ತಿಳಿದು ಬರುವ ಮತ್ತೊಂದು ಬಹಳ ಮುಖ್ಯವಾದ ಅಂಶವೆಂದರೆ ತಲಕಾಡಿನಲ್ಲಿ ಮರಳು ರಾಶಿ ರಚನೆಗೊಂಡ ಕಾಲ. ಉತ್ಖನನದ ಗುಂಡಿಗಳು ಕೆಲವೆಡೆ ೨೦ ಅಡಿ ಆಳದಷ್ಟು ತಲುಪಿವೆ. ಆದರೆ ಈ ಗುಂಡಿಗಳ ಯಾವುದೇ ಪದರದಲ್ಲಿ ತಲಕಾಡಿನ ವಿಶಿಷ್ಟ ರೀತಿಯ ನುಣ್ಣನೆಯ ಮರಳು ದೊರೆತಿಲ್ಲ. ಈ ಮರಳು ದೊರೆಯುವುದು ಕೇವಲ ವಿಜಯನಗರದ ಕಾಲದ ಪದರಗಳಲ್ಲಿ ಮಾತ್ರ. ಆದ್ದರಿಂದ ತಲಕಾಡಿನ ಪರಂಪರೆಯಲ್ಲಿ ಇರುವ ಸಾಧ್ವಿ ಅಲಮೇಲಮ್ಮನ ಘಟನೆ ೧೬-೧೭ನೇ ಶತಮಾನದಲ್ಲಿ ಪ್ರಾರಂಭವಾದ ಊರಿನ ಮೇಲೆ ಮರಳು ಮುಚ್ಚಿಕೊಳ್ಳುವ ವಿಚಿತ್ರ ವಾತಾವರಣ ವೈಪರೀತ್ಯದ ಸತ್ಯ ಸಂಗತಿಯನ್ನು ಹೇಳುವ ದಂತಕಥೆ ಎನ್ನಬಹುದು.[೬] – ಎಂಬುದಾಗಿ ತರ್ಕಿಸಲಾಗಿದೆ.

ಜೊತೆಗೆ ಗಂಗ, ಚೋಳ, ಹೊಯ್ಸಳ ಹಾಗೂ ಆರಂಭಿಕ ವಿಜಯನಗರದ ಅರಸರ ಕಾಲದಲ್ಲಿ ತಲಕಾಡಿನಲ್ಲಿ ನಿರ್ಮಿತ ಹಲವು ದೇಗುಲಗಳು ತಲಕಾಡು ಆ ಅವಧಿಯಲ್ಲಿ ಮರಳಿನಿಂದ ಆವೃತವಾಗಿದ್ದಿರಲಿಲ್ಲವೆಂಬುದಕ್ಕೆ ಸ್ಪಷ್ಟ ಸಾಕ್ಷಿಯಾಗಿವೆ. ಕಾವೇರಿ ನದಿ ತೀರದ ತಲಕಾಡು ಸಾಕಷ್ಟು ಪುರಾತತ್ವಶಾಸ್ತ್ರೀಯ ಆಧಾರಗಳನ್ನು ಹೊಂದಿರುವ ಸುಮಾರು ೩೦ ದೇವಾಲಯಗಳ ಹಾಗೂ ಹಲವು ಜೈನ ಬಸದಿಗಳ, ಕೊಳ, ಬಾವಿ, ಮನೆಗಳುಳ್ಳ ನಾಗರಿಕತೆಯ ಪ್ರಮುಖ ಇತಿಹಾಸದ ವಿವರಗಳನ್ನು ಮರಳಿನ ಅಡಿಯಲ್ಲಿ ಹುದುಗಿಸಿದ್ದ ಆಸಕ್ತಿದಾಯಕ ಪಟ್ಟಣವಾಗಿದ್ದು, ಉತ್ಖನನ ಮಾಡಿದ ಇಡೀ ದೇವಾಲಯಗಳ ಸುತ್ತಲಿನ ಆವರಣದ ವೀಕ್ಷಣೆಯಿಂದ ಮರಳಿನ ದಿಬ್ಬಗಳ ಗಾತ್ರವನ್ನು ಊಹಿಸಬಹುದಾಗಿದೆ. ತಲಕಾಡಿನ ಭಾಗದಲ್ಲಿರುವ ದೇವಾಲಯಗಳು ೧೪ನೇ ಶತಮಾನದ ನಂತರ ಆಗಾಗ ಮರಳಿನಲ್ಲಿ ಹೂತುಹೋಗಿದ್ದು, ಅನೇಕ ಬಾರಿ ಮರಳನ್ನು ತೆಗೆದು ಅಲ್ಲಿನ ದೇವಾಲಯಗಳನ್ನು ಪುನರುಜ್ಜೀವನ ಮಾಡಲಾಗಿದೆ. ಮರಳು ದಿಬ್ಬಗಳ ಜಾರುವ ಮುಖ ಪೂರ್ವಕ್ಕಿರುವುದರಿಂದ ಈ ಬಗೆಯ ಮರಳಿನ ಅತಿಕ್ರಮ ಆಗಾಗ ಆಗುತ್ತಿರುತ್ತದೆ. ಈ ದೇವಾಲಯಗಳು ಇದಕ್ಕೆ ಮೂಕ ಸಾಕ್ಷಿಗಳಾಗಿವೆ. ಕಾವೇರಿ ನದಿ ತನ್ನ ಪಾತ್ರದಲ್ಲಿ ಬೇರೆಲ್ಲಿಯೂ ಈ ಪ್ರಮಾಣದ ಮರಳು ದಿಬ್ಬಗಳನ್ನು ಸೃಷ್ಟಿಸದೆ ತಲಕಾಡಿನ ಬಳಿಯೇ ಸೃಷ್ಟಿಸಿರುವುದು ವೈಜ್ಞಾನಿಕವಾಗಿಯೂ ಕುತೂಹಲಕಾರಿಯಾಗಿದೆ. ಮಾಧವಮಂತ್ರಿ ಅಣೆಕಟ್ಟಿನ ಒಂದು ನಾಲೆ ತಲಕಾಡಿನ ಮೂಲಕವೇ ಹರಿದು ಹೋಗುತ್ತದೆ. ತಲಕಾಡು ಸೇರಿದಂತೆ ಸುಮಾರು ಎರಡೂವರೆ ಚದರ ಕಿಲೋ ಮೀಟರ್ ವಿಸ್ತರಿಸಿರುವ ಮರಳಿನ ಗುಡ್ಡೆಗಳು ಕೆಲವೆಡೆ ೨೦ ಮೀಟರುಗಳಷ್ಟು ಎತ್ತರವಾಗಿದ್ದು, ಈ ಭಾಗದ ಆಶ್ಚರ್ಯಕರ ಸಂಗತಿಯಾಗಿವೆ. ಮತ್ತೊಂದು ವಿಶೇಷ ಸಂಗತಿಯೆಂದರೆ, ಕಾವೇರಿ ನದಿ ಜಲಾನಯನ ಪ್ರದೇಶವಾದ್ದರಿಂದ ಈ ಮರಳಿನ ದಿಬ್ಬಗಳಿರುವ ಸುತ್ತಲಿನ ಭಾಗವು ಬಂಜರಾಗಿಲ್ಲ. ಬದಲಿಗೆ ಮಾಧವ ಮಂತ್ರಿ ಅಣೆಕಟ್ಟೆ ಮತ್ತು ಕಾಲುವೆಯಿಂದ ಪಡೆದ ಸಮೃದ್ಧ ಆರ್ದ್ರ ಕೃಷಿ ಭೂಮಿಯಿದಾಗಿದೆ. ಹೀಗೆ ಫಲವತ್ತಾದ ನದಿ ಕಣಿವೆಯ ಮಧ್ಯೆ ಮರುಭೂಮಿಯ ವಿಸ್ತಾರಗಳ ರಹಸ್ಯವನ್ನು ಅರಿಯಲು ಮರಳಿನ ದಿಬ್ಬದ ರಚನೆಗೆ ಕಾರಣವಾದ ತಲಕಾಡಿನ ಸುತ್ತಣ ಭಾಗದ ಭೂಮೇಲ್ಮೈ ಲಕ್ಷಣಗಳು, ನದಿಪಾತ್ರ, ಇಲ್ಲಿನ ನೆಲದಲ್ಲಿರುವ ಶಿಲೆಗಳು ಮುಂತಾದ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

ತಲಕಾಡು ಭಾಗದ ಮರಳಿನ ನಿಗೂಢತೆಗೆ ಕಾವೇರಿಯ ತಿರುವಿನಿಂದ ಕೂಡಿದ ಹರಿವಿನ ಸ್ವರೂಪ ಸ್ಪಷ್ಟ ಉತ್ತರವನ್ನೊದಗಿಸುತ್ತದೆ. ಕಾವೇರಿ ತನ್ನ ಉಗಮ ಸ್ಥಳ ತಲಕಾವೇರಿಯಿಂದಲೂ ಅಂಕುಡೊಂಕಾದ ಹರಿವನ್ನು ಹೊಂದಿದ್ದು, ಮುಡುಕುತೊರೆ ಬೆಟ್ಟದ ಉದ್ದಕ್ಕೂ ತನ್ನ ಮಾರ್ಗದಲ್ಲಿ ತೀಕ್ಷ್ಣವಾದ ತಿರುವನ್ನು ತೆಗೆದುಕೊಳ್ಳುತ್ತದೆ. ನದಿಯು ತಿರುವುಗಳನ್ನು ರೂಪಿಸಿದಾಗ ಮತ್ತು ಅದರ ಹಾದಿಯಲ್ಲಿ ಹಿಂತಿರುಗಿದಾಗ, ನದಿಯ ಹೊರ ದಡಗಳು ನದಿಯ ನೀರಿನಿಂದ ನಿಸ್ಸಂಶಯವಾಗಿ ಕೊರೆತಕ್ಕೊಳಗಾಗುತ್ತದೆ. ನದಿಯ ಪ್ರವಾಹವು ತೀವ್ರವಾಗಿದ್ದು, ನದಿ ಪಾತ್ರದಲ್ಲಿ ನದಿ ಹೊತ್ತು ತಂದು ಸಂಚಯಿಸಿದ್ದ ಮರಳು ಮತ್ತು ಕೆಸರುಗಳ ನಿಕ್ಷೇಪಗಳ ಒಳ ಭಾಗಗಳು ಮರಳು ದಡದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಸಂಗ್ರಹವಾಗಲು ಕಾರಣವಾಗಿದೆ. ಶೇಖರಣೆಯಾದ ಮರಳು ಗಾಳಿಯ ಹೊಡೆತದಲ್ಲಿ ಸಾಗಣೆಯಾಗಿ ತಲಕಾಡಿನಲ್ಲಿ ಎತ್ತರದ ದೇವಾಲಯದ ರಚನೆಗಳಿಗೆ ನಿಕಟವಾಗಿ ಸುತ್ತುವರೆಯುತ್ತಾ, ಕ್ರಮೇಣ ಇಡೀ ಪ್ರದೇಶದ ಮೇಲೆ ಸಂಗ್ರಹಗೊಳ್ಳಲು ಪ್ರಾರಂಭಿಸಿ, ಮರಳಿನ ದಿಬ್ಬಗಳೇರ್ಪಡಲು ಅನುವು ಮಾಡಿಕೊಟ್ಟಿದೆ.

ತಲಕಾಡಿನಲ್ಲಿ ವಿಶೇಷವಾಗಿ ನೈಋುತ್ಯ ಮಾನ್ಸೂನ್ ಸಮಯದಲ್ಲಿ ಮತ್ತು ಅವು ಮೂರು ಬದಿಗಳಲ್ಲಿ ಒತ್ತಲ್ಪಟ್ಟಾಗ, ಮರಳಿನ ಬೆಟ್ಟಗಳು ವರ್ಷಕ್ಕೆ ೯ ಅಥವಾ ೧೦ ಅಡಿಗಳ ದರದಲ್ಲಿ ತೇಲಿ ಬರುತ್ತವೆ.[೭] ತಲಕಾಡು ಪ್ರದೇಶ ದಕ್ಷಿಣ ಕರ್ನಾಟಕದ ಮೈಸೂರು ಪ್ರಸ್ಥಭೂಮಿಯ ಒಂದು ಭಾಗ. ಇದು ಮೈದಾನವೆಂದು ಸಾಮಾನ್ಯವಾಗಿ ಹೇಳಲಾದರೂ ಅಲ್ಲಲ್ಲೇ ಸಾಕಷ್ಟು ಛಿದ್ರವಾಗಿದೆ ಹಾಗೂ ಮೇಲೆತ್ತಲ್ಪಟ್ಟಿದೆ. ಜೊತೆಗೆ ಬಿಡಿಬಿಡಿಯಾದ ಕೆಲವು ಗುಡ್ಡಗಳೂ ಸುತ್ತಮುತ್ತ ಮೈದಳೆದಿವೆ. ಉತ್ತರದಲ್ಲಿ ಬೆಟ್ಟದಳ್ಳಿ, ದಕ್ಷಿಣದಲ್ಲಿ ಕುಂತೂರುಬೆಟ್ಟ, ಆಗ್ನೇಯ, ಪೂರ್ವ ಹಾಗೂ ಈಶಾನ್ಯಕ್ಕೆ ಬಿಳಿಗಿರಿರಂಗನ ಬೆಟ್ಟದಿಂದ ಆವೃತವಾಗಿದೆ. ತಲಕಾಡಿನ ಆಗ್ನೇಯ ದಿಕ್ಕಿನಲ್ಲಿ ಕೊಳ್ಳೇಗಾಲದ ಬೆಟ್ಟ ಸಾಲಿನಲ್ಲಿ ತೆರಪಿರುವುದರಿಂದ ಹಾಗೂ ಈಶಾನ್ಯ ದಿಕ್ಕಿನಲ್ಲಿಯೂ ಬೆಟ್ಟಗಳು ದೊಡ್ಡದಾಗಿಲ್ಲವಾದ್ದರಿಂದ ಯಾವುದೇ ಮೇಲ್ಮೈ ಏರಿಳಿತವಾಗಲಿ ಕಂಡು ಬರುವುದಿಲ್ಲವಾದ್ದರಿಂದ ಅಡೆತಡೆಗಳಿಲ್ಲದೇ ಗಾಳಿ ಬೀಸಿ ಭಾರಿ ಮರಳುಗುಡ್ಡೆಗಳನ್ನು ಸಂಚಯಿಸುತ್ತದೆ.

ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ತಲಕಾಡಿನ ಪುರಾತತ್ವಶಾಸ್ತ್ರೀಯ ಪರಿಶೋಧನಾಧ್ಯಯನ ಕೈಗೊಂಡ ಎಂ.ಬಿ. ರಜನಿ ಸೇರಿದಂತೆ ವಿಜ್ಞಾನಿಗಳ ತಂಡದ ತಲಕಾಡಿನಲ್ಲಿನ ಇತ್ತೀಚಿನ ಪರಿಶೋಧನೆಗಳು ಚಿತ್ರಗಳ ವ್ಯಾಖ್ಯಾನದ ಆಧಾರದ ಮೇಲೆ, ನೆಲದ ಸತ್ಯತೆಯೊಂದಿಗೆ, ಹಲವಾರು ಆಸಕ್ತಿದಾಯಕ ವೈಶಿಷ್ಟ್ಯಗಳನ್ನು ಗುರುತಿಸಲು ಸಾಧ್ಯವಾಗಿವೆ. ಅವುಗಳಲ್ಲಿ ಮಾಧವಮಂತ್ರಿ ಅಣೆಕಟ್ಟಿನಿಂದ ಹಳೆಯ ತಲಕಾಡಿನವರೆಗೆ ವಿಸ್ತರಿಸಿರುವ ಸಸ್ಯವರ್ಗದ ರೇಖೀಯ ಮಾದರಿಯಿದ್ದುದನ್ನು ಗುರುತಿಸಲಾಗಿದೆ. ಅಂತಹ ಮಾದರಿಯು ಬೆಳೆ ಗುರುತನ್ನು ಸೂಚಿಸುತ್ತದೆ: ಹೂಳಲಾದ ಪುರಾತತ್ವ ಶಾಸ್ತ್ರದ ಲಕ್ಷಣಗಳಾದ ಹಳ್ಳಗಳು ಅಥವಾ ಕಾಲುವೆಗಳ ಕಾರಣದಿಂದಾಗಿ ಮೇಲ್ಮೈಯಲ್ಲಿ ಹೆಚ್ಚಿನ ತೇವಾಂಶವು ಸಸ್ಯವರ್ಗದ ಮಾದರಿಯಂತೆ ಗೋಚರಿಸುತ್ತದೆ. ಆದ್ದರಿಂದ ಸಸ್ಯವರ್ಗದ ರೇಖೆಯು ಅಣೆಕಟ್ಟಿನಿಂದ ಹಳೆಯ ತಲಕಾಡು ಪಟ್ಟಣದವರೆಗೆ ಹರಿಯುವ ಕಾಲುವೆಯ ಅವಶೇಷಕ್ಕೆ ಅನುರೂಪವಾಗಿದ್ದು, ಅದು ಈಗ ಸಂಪೂರ್ಣವಾಗಿ ಮರಳಿನ ಅಡಿಯಲ್ಲಿ ಹೂಳಲಾಗಿದೆ – ಎಂದು ಅವರು ಪ್ರತಿಪಾದಿಸುತ್ತಾರೆ, ಇದೇ ರೀತಿಯ ವಿಶ್ಲೇಷಣೆಗಳನ್ನು ಬಳಸಿಕೊಂಡು ಅವರು ಹಳೆಯ ಕಾಲುವೆಯ ಹಾದಿಯಲ್ಲಿ ಕಂಡುಕೊಂಡ ಒಂದು ದೊಡ್ಡ ಆಯತಾಕಾರದ ವೈಶಿಷ್ಟ್ಯವನ್ನು ಜಲಾಶಯವಾಗಿರಬಹುದು ಎಂದು ಊಹಿಸುತ್ತಾರೆ.[೮]

ಹೀಗೆ ಮಾಧವ ಮಂತ್ರಿ ಅಣೆಕಟ್ಟೆ ನಿರ್ಮಾಣದ ಪರಿಣಾಮವಾಗಿ ಪಶ್ಚಿಮ ದಿಕ್ಕಿಗೆ ಕಾವೇರಿಯ ಪಲ್ಲಟವು ಆ ಭಾಗದ ಒಳ ದಡಗಳನ್ನು ಬಹಿರಂಗಪಡಿಸಿದ ಮತ್ತು ಚರ್ಚಿತ ತತ್ಪೂರಕವಾದ ಎಲ್ಲಾ ಕಾರಣಾಂಶಗಳು ತಲಕಾಡು ಮರಳಾಗಲು ಕಾರಣವಾದರೆ, ಮಾಲಿಂಗಿಯಲ್ಲಿ ಹೊರ ದಡಗಳನ್ನು ಸವೆಸಲು ಕಾರಣವಾಗಿ, ಇದೇ ಬಹುಶಃ ಮಾಲಿಂಗಿ ಭಯಾನಕ ಸುಂಟರಗಾಳಿಯಾಗುವುದರ ಅರ್ಥವಾಗಿದೆ ಎಂಬುದಾಗಿ ಅಲಮೇಲಮ್ಮನ ಶಾಪದ ಮೊದಲೆರಡು ಭಾಗವನ್ನು ಭೂ-ವೈಜ್ಞಾನಿಕಾಧಾರಿತ ಪರಿಸರ ಮಾರ್ಪಾಡಿನ ವಿದ್ಯಮಾನವಾಗಿದೆಯೆಂಬ ತರ್ಕದೊಂದಿಗೆ ಖಚಿತವಾಗಿ ಮಂಡಿಸಬಹುದಾಗಿದೆ.

ಮರಳುರಾಶಿ ಮತ್ತಷ್ಟು ಮುನ್ನುಗ್ಗುವುದನ್ನು ತಡೆಯಲು ಅರಣ್ಯ ಇಲಾಖೆಯು ಮರಳಿನಲ್ಲಿ ಚೆನ್ನಾಗಿ ಬೆಳೆಯುವ ಹಾಗೂ ಮರಳನ್ನು ಸೂಕ್ತವಾಗಿ ಬಂಧಿಸುವ ಕ್ಯಾಸುರಿನಾ, ಗೇರು ಹಾಗೂ ನೀಲಗಿರಿ ಸಸ್ಯಗಳನ್ನು ನೆಡುವ ಮೂಲಕ ಮರಗಳ ತೋಪುಗಳನ್ನು ನಿರ್ಮಿಸಲೆತ್ನಿಸಿದೆ. ತಲಕಾಡಿನ ನೈಸರ್ಗಿಕ ಮರಳರಾಶಿಯನ್ನು ಕಟ್ಟಡ ನಿರ್ಮಾಣಗಳಿಗೆ ಬಳಸುವ ಉದ್ದೇಶದಿಂದ ಖಾಸಗಿ ಗುತ್ತಿಗೆದಾರರು ಸಾಗಿಸಲೆತ್ನಿಸಿದಾಗ ಸ್ಥಳೀಯರು, ಪರಿಸರ ಪ್ರೇಮಿಗಳು, ಇತಿಹಾಸ ಪ್ರಜ್ಞೆಯುಳ್ಳವರು ಅದನ್ನು ವಿರೋಧಿಸಿದ್ದರಿಂದಾಗಿ ನಿಸರ್ಗದ ಈ ಅನುಪಮ ಸೃಷ್ಟಿ ಕಣ್ಮರೆಯಾಗುವುದು ತಪ್ಪಿದೆ. ತಲಕಾಡಿನ

ಮರಳರಾಶಿ ಒಂದು ಅಪೂರ್ವ ರಚನೆಯಾಗಿದ್ದು, ವಿಶಿಷ್ಟ ಐತಿಹಾಸಿಕ ಪ್ರಾಮುಖ್ಯತೆಯ ಸಾಕ್ಷೀಭೂತ ಆಧಾರವಾದ ಇದನ್ನು ಸಂರಕ್ಷಿಸುವ ಅಗತ್ಯವಿದೆ.

ಮಾಧವ ಮಂತ್ರಿ ಅಣೆಕಟ್ಟಿನಲ್ಲಿ ಭಗ್ನ ಚೋಳ ಶಾಸನ

ಈ ಮಾಧವ ಮಂತ್ರಿ ಅಣೆಕಟ್ಟು ಹೊಂದಿರುವ ಮಹತ್ವದ ಚಾರಿತ್ರಿಕ ಅಂಶಗಳಲ್ಲಿ ಮತ್ತೊಂದು ಮಹತ್ವದ ಅಂಶವೆಂದರೆ, ಅದರೊಳಗೆ ಜೋಡಿಸಲ್ಪಟ್ಟಿರುವ ಚೋಳ ದೊರೆ ರಾಜಾಧಿರಾಜ ಚೋಳ I (ಸಾ.ಶ. ೧೦೪೪-೧೦೫೨)ನ ಭಗ್ನ ಸ್ಥಿತಿಯಲ್ಲಿರುವ ಶಾಸನ. ತಮಿಳು ಭಾಷೆ ಮತ್ತು ತಮಿಳು ಲಿಪಿಯಲ್ಲಿರುವ ಈ ಶಾಸನದ ಶಿಲೆಯನ್ನು ತಲಕಾಡು ದೇವಾಲಯದಿಂದ ತೆಗೆದುಕೊಳ್ಳಲಾಗಿದೆ ಎಂದು ತೋರುತ್ತದೆಂದು ಅಂದಾಜಿಸಲಾಗಿದೆ. ಶಾಸನವು ಆರಂಭಿಕ ಭಾಗವನ್ನು ಹೊಂದಿಲ್ಲ. ಮೇಕೀರ್ತಿ ಭಾಗದಿಂದ ಶಾಸನವು ರಾಜಾಧಿರಾಜನ ಆಳ್ವಿಕೆಗೆ ಸೇರಿದೆ ಎಂದು ಸುಲಭವಾಗಿ ಊಹಿಸಬಹುದಾಗಿದೆ. ('ಮೇಕೀರ್ತಿ' ಅಥವಾ ಮೇಯಿಕೀರ್ತಿಯು – 'ನಿಜವಾದ ಖ್ಯಾತಿ' ಎಂಬ ಪದಶಃ ಅರ್ಥವುಳ್ಳ ತಮಿಳು ಪದವಾಗಿದೆ. ದಕ್ಷಿಣ ಭಾರತದ ತಮಿಳು ರಾಜರು ಹೊರಡಿಸಿದ ಅನುದಾನದ ತಮಿಳು ಶಾಸನಗಳ ಮೊದಲ ವಿಭಾಗವಿದಾಗಿದೆ. ಓರ್ವ ರಾಜನ ಮೇಕೀರ್ತಿಯ ಪ್ರಾರಂಭ ಅವನ ಎಲ್ಲಾ ಶಾಸನಗಳಲ್ಲೂ ಸ್ಥಿರವಾಗಿದ್ದು, ನಂತರದ ವಿಷಯದಲ್ಲಿ ಬದಲಾವಣೆಗಳಿರುತ್ತವೆ.) ಈ ಶಾಸನದಲ್ಲಿ ರಾಜಾಧಿರಾಜನ ಆಳ್ವಿಕೆಯ ಕಾಲದಲ್ಲಿ ತಲಕಾಡು ಅಥವಾ ರಾಜಾಪುರಂನಲ್ಲಿ ದೇವರಿಗೆ ಮಾಡಿದ ದೇಣಿಗೆಗಳನ್ನು ಉಲ್ಲೇಖಿಸಲಾಗಿದೆ. ದುರದೃಷ್ಟವಶಾತ್ ಶಾಸನವನ್ನು ವಿರೂಪಗೊಳಿಸಿ ಅಣೆಕಟ್ಟು ರಚನೆಗೆ ತೆಗೆದುಕೊಳ್ಳಲಾಗಿದೆ. ಶಾಸನವನ್ನು ಮೈಸೂರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಬಿ.ಎಲ್. ರೈಸ್‌ರವರ ಭಾರತದ ಹಳೇ ಮೈಸೂರು ಪ್ರದೇಶದ ಶಾಸನಗಳನ್ನು ಕುರಿತಾದ "ಎಪಿಗ್ರಾಫಿಯಾ ಕರ್ನಾಟಿಕಾ"ದ ಸಂಪುಟ-IIIರಲ್ಲಿ NJ ೪೮ ಸಂಖ್ಯೆಯೊಂದಿಗೆ ಪ್ರಕಟಿಸಲಾಗಿದೆ.[೯]

ಮಾಧವ ಮಂತ್ರಿ ಅಣೆಕಟ್ಟಿನ ಪುನರ್ರಚನೆ ಯೋಜನೆ

೨೦೧೩ರ ಮಳೆಗಾಲದಲ್ಲಿ ನದಿಯಲ್ಲಿ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಾಗ ಅಣೆಕಟ್ಟಿನ ಒಂದು ಪಾರ್ಶ್ವದಲ್ಲಿ ಬಿರುಕು ಕಾಣಿಸಿಕೊಂಡು ಅದರ ಕಲ್ಲುಗಳು ಸಡಿಲಗೊಂಡಿದ್ದವು. ೬೦ ಮೀ. ನಷ್ಟು ಕಟ್ಟೆ ಒಡೆದು ಅಪಾರ ಪ್ರಮಾಣದ ನೀರು ಹರಿದು ಹೋಗುತ್ತಿತ್ತು. ಹಾಗಾಗಿ ನದಿ ಪಾತ್ರದ ಸುತ್ತಮುತ್ತಲಿನ ಬೆಳೆಗೆ ಹಾನಿಯಾಗಿದ್ದಿತು. ಕೆ.ಆರ್.ಎಸ್.ನಿಂದ ಹೆಚ್ಚಿನ ನೀರು ಬಿಡುವ ಸಂದರ್ಭದಲ್ಲಿ ಈ ಅಣೆಕಟ್ಟಿಗೆ ಧಕ್ಕೆಯಾಗಿರಬಹುದಾದ ಸಾಧ್ಯತೆಯಿದ್ದು, ಸುಮಾರು ಈಗ್ಗೆ ೬೮೦ ವರ್ಷಗಳಷ್ಟು ಹಿಂದಿನ ಈ ಅಣೆಕಟ್ಟು ತಾಳಿಕೆಯ ಸಮಸ್ಯೆಯಿಂದಲೂ ಹೀಗಾಗಿದ್ದಿರಬಹುದು. ಸುತ್ತಲಿನ ಪ್ರದೇಶಗಳಲ್ಲಿನ ಕಾವೇರಿ ನದಿಯೊಡಲಿನ ಮರಳು ಗಣಿಗಾರಿಕೆಯಿಂದಲೂ ಅಣೆಕಟ್ಟಿಗೆ ಸಾಕಷ್ಟು ಹಾನಿಯಾಗಿದ್ದು, ಸಮರೋಪಾದಿಯಲ್ಲಿ ದುರಸ್ತಿ ಕಾರ್ಯಗಳನ್ನು ಕೈಗೊಂಡರೂ ಪೂರ್ಣ ಸಮಸ್ಯೆಗೆ ಪರಿಹಾರವೊದಗದ ಹಿನ್ನೆಲೆಯಲ್ಲಿ ಅದಕ್ಕೊಂದು ಶಾಶ್ವತ



ಮಾಧವ ಮಂತ್ರಿ ಅಣೆಕಟ್ಟಿನ ಪುನರ್ರಚನೆ ಕಾಮಗಾರಿ

ಪರಿಹಾರವಾಗಿ ಪ್ರಸ್ತುತ ಶಿಥಿಲ ಸ್ಥಿತಿಯಲ್ಲಿರುವ ಈ ಅಣೆಕಟ್ಟೆಯ ಪುನರ್ರಚನೆಗೆ ಕರ್ನಾಟಕ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆಯನ್ನು ಹಾಗೂ ೬೭ ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದ್ದು, ಈ ಯೋಜನೆಯನ್ವಯ, ಒಟ್ಟು ೫೨೭ ಮೀಟರ್ ಉದ್ದದ ಹೊಸ ಸಿಮೆಂಟ್ ಕಾಂಕ್ರೀಟ್ ಡ್ಯಾಮ್ ನಿರ್ಮಾಣ ಕಾಮಗಾರಿ ಜಾರಿಯಲ್ಲಿರುವುದರಿಂದ ಐತಿಹಾಸಿಕ ಮಾಧವಮಂತ್ರಿ ಅಣೆಕಟ್ಟು ಇತಿಹಾಸದ ಪುಟಗಳಲ್ಲಿ ಮಾತ್ರ ಉಳಿಯುವಂತಾಗಲಿದೆ.[೧೦] ಅಣೆಕಟ್ಟೆಯ ಮತ್ತೊಂದು ಬದಿಯಲ್ಲಿ ಜಲ ವಿದ್ಯುತ್ ಉತ್ಪಾದನೆ ನಡೆಯುತ್ತಿದೆ.

ಒಟ್ಟಾರೆ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕರ್ನಾಟಕದ ಕಾವೇರಿ ಜಲಾನಯನ ಭಾಗದಲ್ಲಿ ಪ್ರಮುಖ ನೀರಾವರಿ ಸೌಲಭ್ಯವನ್ನೊದಗಿಸಿದ್ದ, ಪ್ರಸ್ತುತ ಶಿಥಿಲಾವಸ್ಥೆಯಲಿರುವ, ಅಣೆಕಟ್ಟೆಯ ಪುನರ್ರಚನೆಗೆ ಕರ್ನಾಟಕ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ. 'ಮಾಧವ ಮಂತ್ರಿ ಅಣೆಕಟ್ಟು' ಕುರಿತ ಚಾರಿತ್ರಿಕ ಅವಲೋಕನ ಅಗತ್ಯವಿದೆ. ಅಣೆಕಟ್ಟೆಯ ಪಾತ್ರ ಪ್ರಾಧಾನ್ಯ ಹಾಗೂ ಅದರ ಪರಿಣಾಮದ ಸುತ್ತಲೂ ಹರಡಿರುವ ಕಥೆಯ ಕೌತುಕದ ಅಂಶಗಳ ವೈಜ್ಞಾನಿಕ ಹಾಗೂ ವಿಶ್ಲೇಷಣಾತ್ಮಕ ವಿಮರ್ಶೆ ಮಾಡಬೇಕಿದ್ದು, ದಂತಕಥೆಗಳು, ಸ್ಥಳಪುರಾಣಗಳು ಇತಿಹಾಸವನ್ನು ಗೊಂದಲಕ್ಕೀಡು ಮಾಡುವುದರಿಂದ ಪ್ರಾಕ್ತನಾಶಾಸ್ತ್ರಜ್ಞರು ನೀಡುವ ವರದಿಯನ್ನು ಆಧರಿಸಿ ಅಧ್ಯಯನವನ್ನು ನಡೆಸುವುದು ಸೂಕ್ತ.

ಅಡಿಟಿಪ್ಪಣಿಗಳು

೧. Lewis Rice B., "Mysore" Gazetteer compiled for Government, Revised Edition. Vol. II, Mysore, by districts, Westminister, London, p. 208.

೨. ಮಾಧವ ಮಂತ್ರಿ ಅಣೆಕಟ್ಟು ಮತ್ತು ಮಾಧವ ಮಂತ್ರಿ ನಾಲೆ ಕುರಿತ ವರದಿಗಳು, ಕರ್ನಾಟಕ ಸರ್ಕಾರ, ಕಾವೇರಿ ನೀರಾವರಿ ನಿಗಮ ನಿಯಮಿತ, ೨೦೧೬.

೩. Ed. Ghosh A., "Indian Archaeology 1963-64 – A Review", Archarological Survey of India, Government of India, New Delhi, 1967, p. 26.

೪. ಕೃಷ್ಣಮೂರ್ತಿ ಎಂ.ಎಸ್., ೧೯೯೪, ತಲಕಾಡಿನಲ್ಲಿ ಪ್ರಾಕ್ತನ ಉತ್ಖನನ–ಒಂದು ಸಂಕ್ಷಿಪ್ತ ವರದಿ, ಇತಿಹಾಸ ದರ್ಶನ, ಸಂ. ೯, ಪು. ೧೪.

೫. Lewis Rice B., 'Mysore' Gazetteer compiled for Government, Revised Edition. Vol. II, Mysore, by districts, Westminister, London, p. 309.

೬ Rajani M.B., 2020, 'Patterns in Past Settlements: Geospatial Analysis of Imprints of Cultural Heritage on Landscapes', ISSN:981-15-7466-5, Springer Publications, Singapoer, pp 125-129.

೭. Sankara Narayanan, 'Inscription of Rajadhiraja I from Madhavamantri Dam, Karnataka', 3 Janauary 2016.

೮. "Madhava mantri dam to enter the pages of history", Star of Mysore, (Daily News paper of the city of Mysore) 21 March 2018.

೯. Hanumantha Rao M., & Nagaraju S., 1964, 'Excavations at Hemmige', Directorate of Archaeology & Museums in Karnataka, Mysore.

೧೦. Roy A.B., and Sethuramadhav M.S., July 2014, 'The 'mystic' sand dune-covered temples of Talakad, Mysore District, Karnataka: Evidence', Current Science.

◆◆

ಶಿವರಾಮು ಎಸ್.

ಇರ್ವಿನ್‌ನಾಲಾ ಬಯಲು ಪ್ರದೇಶದಲ್ಲಿ ಮಲೇರಿಯಾ ಅಂಟುಜಾಡ್ಯಗಳು

ಕೃಷ್ಣರಾಜ ಸಾಗರ ನಿರ್ಮಾಣದಿಂದ ನೀರಾವರಿ ಅಭಿವೃದ್ಧಿ, ಕೈಗಾರಿಕಾ ಪ್ರಗತಿ, ಜಲವಿದ್ಯುತ್ ಯೋಜನೆಗಳ ವಿಸ್ತರಣೆ ಮುಂತಾದವು ನಡೆದವು; ಒಂದಿಷ್ಟು ಭೂಮಿ ಮುಳುಗಿ ನಷ್ಟವಾದರೂ ಇರ್ವಿನ್‌ನಾಲಾ ಬಯಲು ಪ್ರದೇಶದಲ್ಲಿ ಹೊಸದಾಗಿ ೧,೨೦,೦೦೦ ಎಕರೆ ಭೂಮಿಗೆ ನೀರುಣಿಸುವಂಥಾದ್ದು, ಮಂಡ್ಯ ಜಿಲ್ಲೆಯ ಚಿತ್ರಣವೇ ಬದಲಾಗಲು ಕಾರಣವಾಯಿತು. ಭತ್ತ ಮತ್ತು ಕಬ್ಬು ಮುಖ್ಯ ಬೆಳೆಗಳಾದವು, ಇದು ಮಂಡ್ಯ ಜಿಲ್ಲೆಯಾದ್ಯಂತ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯನ್ನು ತಂದಿತು. ಬಡತನದಿಂದ ಖಿನ್ನವಾಗಿದ್ದ ಮುಖಗಳಲ್ಲಿ ಸಿರಿವಂತಿಕೆಯ ಸಸಿ ಚಿಗುರೊಡೆದು ನಗುವಿನ ಸೆಲೆಯೊಡೆಯಿತು. ಮಂಡ್ಯ ಅನಾಥನಂತಿದ್ದುದ್ದು ಇದ್ದಕ್ಕಿದಂತೆಯೇ ಸಿರಿವಂತಿಕೆಯ ಹೊಸ ಯುಗಕ್ಕೆ ಕಾಲಿಟ್ಟಿತು; ಪಟ್ಟಣದ ರೂಪವೇ ಬದಲಾಯಿತು[೧]. ಮಂಡ್ಯ ಜಿಲ್ಲೆಯ ಬಹುಭಾಗವೆಲ್ಲಾ ನೀರಾವರಿ ವ್ಯಾಪ್ತಿಗೊಳಪಟ್ಟು ಸಾಗುವಳಿ ಹೆಚ್ಚಾದುದರಿಂದ ಇಲ್ಲಿನ ಜನರ ಆರೋಗ್ಯ ಸ್ಥಿತಿಗೆ ಸಂಬಂಧಿಸಿದಂತೆ ಅನೇಕ ಖಾಯಿಲೆಗಳು ಉಲ್ಬಣಿಸಿದವು. ಅದರಲ್ಲೂ ಮಲೇರಿಯಾ ರೋಗ ಇರ್ವಿನ್‌ನಾಲಾ ಬಯಲಿನ ಜನರನ್ನು ಸಾಕಷ್ಟು ಬಾಧಿಸಿತ್ತು.

ನೀರಾವರಿ ಮತ್ತು ಮಲೇರಿಯಾ ಒಂದಕ್ಕೊಂದು ಅಂತರಸಂಬಂಧವನ್ನು ಹೊಂದಿವೆ. ನೀರಾವರಿ ಬಹಳಷ್ಟು ಉದ್ಯೋಗಾವಕಾಶಗಳನ್ನು ವಿಸ್ತೃತವಾಗಿ ನೀಡುತ್ತದೆ. ಅಷ್ಟೇ ಪ್ರಮಾಣದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣಿಸುತ್ತದೆ. ಇರ್ವಿನ್‌ನಾಲಾ ಬಯಲಿನ ನೀರಾವರಿ ಯೋಜನೆಯನ್ನು ಮೂರು ವಿಭಿನ್ನ ಯೋಜನೆಗಳನ್ನಾಗಿ ವಿಂಗಡಿಸಬಹುದು. ಮೊದಲನೆಯದಾಗಿ ಕಿರುನೀರಾವರಿ ಯೋಜನೆ; ಇದು ಕೆಲವು ಎಕರೆ ಪ್ರದೇಶದಲ್ಲಿ ವಿಸ್ತಾರವಾದ ಮಳೆಯಾಧಾರಿತ ಸಣ್ಣ ಕೆರೆಗಳ ಮೂಲಕ ನೀರೊದಗಿಸುತ್ತದೆ. ಎರಡನೆಯದಾಗಿ ಬೃಹತ್ ನೀರಾವರಿ ಯೋಜನೆಯು ಯಾವಾಗಲೂ ಒಣಗದೆ ವಿಸ್ತಾರವಾದ ಕೆರೆಗಳ ಮೂಲಕ, ಇಲ್ಲವೇ ಸಣ್ಣ ಕಾಲುವೆಗಳ ಮೂಲಕ ನೀರನ್ನೊದಗಿಸುತ್ತದೆ. ಮೂರನೆಯದಾಗಿ ವಿಸ್ತೃತವಾದ ನದಿ ನೀರಾವರಿ ಯೋಜನೆಯದು. ಹೆಚ್ಚೆಚ್ಚು ಎಕರೆ ಭೂಮಿಗೆ ನಿರಂತರವಾಗಿ ಮುಖ್ಯ ಕಾಲುವೆಗಳ ಹಾಗೂ ಕಿರುಕಾಲುವೆಗಳ ಮೂಲಕ ಮೈಲಿಗಳಷ್ಟು ದೂರ ನೀರಾವರಿಯನ್ನೊದಗಿಸುತ್ತದೆ. ಮೊದಲನೆಯ ನೀರಾವರಿ ಯೋಜನೆ ಸಣ್ಣ ಪ್ರಮಾಣದ ಮಲೇರಿಯಾ ರೋಗವನ್ನು

ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ)
ಮಂಡ್ಯ-೫೭೧೪೦೧
ಮೊ: ೯೮೪೫೯ ೯೮೮೮೯

ಹರಡಿದರೆ, ಎರಡನೆಯದು ಪದೇ ಪದೇ ಮಲೇರಿಯಾವನ್ನು ತಂದೊಡ್ಡುತ್ತದೆ. ಮೂರನೆಯದು, ನಿರ್ವಿಕಾರವಾದ ಮಲೇರಿಯಾವನ್ನುಂಟು ಮಾಡುತ್ತದೆ.

ವಸಾಹತು ಮೈಸೂರಿನಲ್ಲಿ ಮಲೇರಿಯಾ

ಮೈಸೂರು ಸಂಸ್ಥಾನದಲ್ಲಿ ಮಲೇರಿಯಾ ರೋಗವು ಮೊಟ್ಟಮೊದಲಿಗೆ ಗೋಚರಿಸಿದ್ದು, ೧೯೨೦ರಲ್ಲಿ ಇದು ತೀವ್ರವಾಗಿ ಹೆಚ್ಚಿ ಜನರನ್ನು ಬಾಧಿಸಿತ್ತು. ಮೈಸೂರು ಸಾರ್ವಜನಿಕ ಆರೋಗ್ಯ ಇಲಾಖೆ ರೋಗ ನಿರೋಧಿಸುವಲ್ಲಿ ಬಹು ಪ್ರಧಾನವಾದ ಪಾತ್ರ ವಹಿಸಿತ್ತು. ನಗರ, ಗ್ರಾಮೀಣ, ಪಟ್ಟಣ ಮತ್ತು ಜಿಲ್ಲಾ ಆರೋಗ್ಯ ಘಟಕಗಳಲ್ಲಿ ಸಹಾಯಕ ಕಮೀಷನರರನ್ನು ನೇಮಿಸಿದಲ್ಲದೆ, ಆರೋಗ್ಯಾಧಿಕಾರಿಗಳು ಹಾಗೂ ಸಹಾಯಕ ಶಸ್ತ್ರಚಿಕಿತ್ಸಕರನ್ನೂ ನೇಮಿಸಲಾಗಿತ್ತು.[೨] ಮೈಸೂರು ರಾಜ್ಯದಲ್ಲಿ ಮಲೇರಿಯಾ ಪದೇ ಪದೇ ಹರಡಿ ಜನರ ಆರೋಗ್ಯದ ಮೇಲೆ ಪ್ರಹಾರ ನಡೆಸಿತ್ತು. ತೋಟ ಮತ್ತು ಭತ್ತದ ಬಯಲಿನಲ್ಲಿ ದುಡಿಯುವ ಕೃಷಿ ಕಾರ್ಮಿಕರಲ್ಲಿನ ಅನಾರೋಗ್ಯಕರ ವಾತಾವರಣ, ಮಳೆ ಹೆಚ್ಚಾದದ್ದು ಹಾಗೂ ನೈರ್ಮಲ್ಯ ಸಂಬಂಧವಾದ ಸೌಲಭ್ಯಗಳ ಕೊರತೆ ಕಾರಣವಾಗಿದ್ದವು. ಮೈಸೂರು ರಾಜ್ಯವು ಅಮೇರಿಕಾದ ಅಂತಾರಾಷ್ಟ್ರೀಯ ಆರೋಗ್ಯ ಸಂಸ್ಥೆ ರಾಕ್‌ಫೆಲರ್ ಫೌಂಡೇಶನ್ ಮಲೇರಿಯಾ ಸರ್ವೆಸಮೀಕ್ಷಾ ಕಾರ್ಯವನ್ನು ೧೯೨೭ರಲ್ಲಿ ಈ ಸಂಸ್ಥೆಯ ಡಾ. ಸ್ವೆಟ್ ಅವರ ಸೇವೆಯನ್ನು ಬಳಸಿಕೊಂಡು ನಡೆಸಿತ್ತು.[೩] ಪ್ರತ್ಯೇಕ ಆರೋಗ್ಯ ಶಿಬಿರಗಳನ್ನು ಕೈಗೊಂಡು ವಿಶೇಷ ಆರೋಗ್ಯಾಧಿಕಾರಿಗಳು ಮತ್ತು ಪ್ರಯೋಗಾಲಯಗಳನ್ನು ಒದಗಿಸಿತ್ತು.[೪]

ರಾಕ್‌ಫೆಲರ್ ಫೌಂಡೇಶನ್ ಸಮೀಕ್ಷೆ ನಡೆಸಿ ಸಂಸ್ಥಾನಕ್ಕೆ ಕೆಲವೊಂದು ಶಿಫಾರಸ್ಸುಗಳನ್ನು ಮಾಡಿತು. i. ಗ್ರಾಮೀಣ ಆರೋಗ್ಯ ಘಟಕಗಳನ್ನು ಸ್ಥಾಪಿಸುವುದು, ii. ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳ ಕುರಿತು ಅಧ್ಯಯನ ಮಾಡಲು ಸಂಶೋಧನಾ ಕೇಂದ್ರಗಳನ್ನು ತೆರೆಯುವುದು, iii. ಪ್ರತ್ಯೇಕ ಆರೋಗ್ಯ ಇಲಾಖೆಯನ್ನು ಪ್ರಾರಂಭಿಸುವುದು. ಈ ಎಲ್ಲಾ ಶಿಫಾರಸ್ಸುಗಳಂತೆ ವೈದ್ಯಕೀಯ ಇಲಾಖೆಯಿಂದ ನೈರ್ಮಲ್ಯ ಇಲಾಖೆಯನ್ನು ಪ್ರತ್ಯೇಕಿಸಲಾಯಿತು. ನಂತರ ಈ ಇಲಾಖೆಯು ಸ್ವತಂತ್ರ ಘಟಕವಾಗಿ ಆರೋಗ್ಯ ಇಲಾಖೆಯೆಂದು ಹೆಸರು ಪಡೆಯಿತು. ಈ ಇಲಾಖೆಯನ್ನು ನಿರ್ದೇಶಕರು ಸಾರ್ವಜನಿಕ ಆರೋಗ್ಯ ಇಲಾಖೆಯ ನಿಯಂತ್ರಣಕ್ಕೆ ಒಳಪಡಿಸಲಾಯಿತು. ೧೯೨೯ರಲ್ಲಿ ಆರೋಗ್ಯ ವಿಷಯಗಳಲ್ಲಿ ಸಲಹೆ ನೀಡಲು 'ಆರೋಗ್ಯ ಸಲಹಾ ಮಂಡಳಿ'ಯನ್ನು ಸ್ಥಾಪಿಸಲಾಯಿತು. ಅನಂತರ, ಡಾ. ಸ್ವೆಟ್ ಅವರ ಸಲಹೆಯಂತೆ ಮೈಸೂರು, ನಾಗೇನಹಳ್ಳಿ, ಹಿರಿಯೂರುಗಳಲ್ಲಿ ಸರ್ಕಾರವು ಮಲೇರಿಯಾ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸಿತು. ಈ ಕೇಂದ್ರಗಳು ಮಲೇರಿಯಾ ರೋಗವು ಹೆಚ್ಚಿನ ರೀತಿಯಲ್ಲಿ ಹರಡದಂತೆ ತಡೆಗಟ್ಟುವಲ್ಲಿ ಬಹಳಷ್ಟು ಯಶಸ್ವಿಯಾಗಿದ್ದವು.

ಇದೇ ವೇಳೆಯಲ್ಲಿ ಮೈಸೂರು ಸಂಸ್ಥಾನದ ಹಲವಾರು ಪ್ರದೇಶಗಳಲ್ಲಿ ಮಕ್ಕಳಿಗೆ ಕೊಕ್ಕೆಹುಳು ರೋಗವು ಸಹ ಕಾಣಿಸಿಕೊಂಡಿತು. ಇದನ್ನು ಮನಗಂಡ ಸರ್ಕಾರವು ಕೊಕ್ಕೆಹುಳು ರೋಗ ಮತ್ತು ಮಲೇರಿಯಾ ರೋಗಗಳೆರಡರ ವಿಷಯದಲ್ಲಿ ಸಮೀಕ್ಷೆಯೊಂದನ್ನು ನಡೆಸಿತು. ಅನಂತರ ಸರ್ಕಾರ ಮಂಡ್ಯದಲ್ಲಿ ಗ್ರಾಮೀಣ ಆರೋಗ್ಯ ಸಂಸ್ಥೆ ಎಂಬ ಶಾಖೆಯೊಂದನ್ನು ಪ್ರಾರಂಭಿಸಿತು. ಈ ಸಂಸ್ಥೆಯು ಕೇವಲ ೨ ವರ್ಷಗಳ ಅವಧಿಯಲ್ಲಿ ೧೪,೦೦೦ ಮಕ್ಕಳನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿ ಅವರಿಗೆ ಉಂಟಾಗಿದ್ದ ಕೊಕ್ಕೆಹುಳು ರೋಗವನ್ನು ಗುಣಪಡಿಸಿತು.[೫] ಹಾಗೆಯೇ ಅಂದು ಜನರಿಗೆ ಹರಡಿದ್ದ ಇನ್ನಿತರ ರೋಗಗಳಾದ ಕಾಲರಾ, ಪ್ಲೇಗುಗಳ ಬಗ್ಗೆಯೂ ಮಂಡ್ಯ ಗ್ರಾಮೀಣ ಆರೋಗ್ಯ ಸಂಸ್ಥೆಯವರು ಪರೀಕ್ಷೆ ನಡೆಸಿದರು. ಆ ಪ್ರಕಾರ ಕಾಲರಾ ರೋಗವನ್ನು ತಡೆಗಟ್ಟಲು ೧೫,೦೦೦ ಜನರಿಗೆ ಪ್ಲೇಗು ರೋಗವನ್ನು ತಡೆಗಟ್ಟಲು ೧೦,೦೦೦ ಜನರಿಗೆ ಈ ಸಂಸ್ಥೆಯವರು ಚಿಕಿತ್ಸೆಯನ್ನು ನೀಡಿದ್ದರು. ಇರ್ವಿನ್ ನಾಲಾಬಯಲಿನ ಕಾಲುವೆಗಳಲ್ಲಿ ಯಥೇಚ್ಛವಾಗಿ ನೀರು ಸರಬರಾಜಾಗಿದ್ದರಿಂದ ಮತ್ತು ನೀರಾವರಿ ಇಂಜಿನಿಯರರು ಹೆಚ್ಚುವರಿ ನೀರು ಗುಂಡಿಗಳಲ್ಲಿ ನಿಲ್ಲದೆ ಸರಾಗವಾಗಿ ಹರಿಯುವಂತೆ ಮಾಡಲು ಚರಂಡಿ ವ್ಯವಸ್ಥೆ ಮಾಡಿರಲಿಲ್ಲ. ಪರಿಣಾಮವಾಗಿ ೧೯೩೩ನೇ ವರ್ಷದಲ್ಲಿ ಮಲೇರಿಯಾ ಸಾಂಕ್ರಾಮಿಕ ರೋಗವಾಗಿ ಕಾಣಿಸಲಾರಂಭಿಸಿತು. ಈ ಮಲೇರಿಯಾ ರೋಗವು ಹೊಸದಾಗಿ ನೀರಾವರಿ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ಕಾಣಿಸಿಕೊಂಡಿದ್ದಲ್ಲದೇ, ಹಲವು ರೋಗಿಗಳು ಸಾವನ್ನಪ್ಪಿದ್ದು ವರದಿಯಾದವು. ಈ ಮುಂದಿನ ಕೋಷ್ಟಕವು ೧೯೩೦ರಿಂದ ೧೯೩೫ರ ಅವಧಿಯಲ್ಲಿ ಇರ್ವಿನ್ ನಾಲಾಬಯಲಿನಲ್ಲಿ ಈ ರೋಗದಿಂದ ಮರಣ ಹೊಂದಿದ್ದವರ ವಿವರವನ್ನು ನೀಡುತ್ತದೆ. ನದಿ ನೀರಾವರಿ ಸಂಬಂಧದಿಂದ ಮೈಸೂರು ಭಾಗದ ನಾಲ್ಕು ಗ್ರಾಮೀಣ ಪ್ರದೇಶಗಳಲ್ಲಿ ವರ್ಷವಾರು ವರದಿಯಾದ ಸಾವಿನ ಸಂಖ್ಯೆಗಳು:[೬]

ಕೋಷ್ಟಕ

ಪ್ರದೇಶ	೧೯೩೦	೧೯೩೧	೧೯೩೨	೧೯೩೩	೧೯೩೪	೧೯೩೫
ಕಸಬಾ ಹೋಬಳಿ ಶೇ. ೯೫%ರಷ್ಟು ಹಳ್ಳಿಗಳು ನೀರಾವರಿ ವ್ಯಾಪ್ತಿಗೊಳಪಟ್ಟ ಪ್ರದೇಶ	೧೨೨	೧೧೮	೨೮೦	೨೦೯	೨೭೧	೩೭೮
ದುದ್ದ ಮತ್ತು ಕೊತ್ತತ್ತಿ ಹೋಬಳಿ ಶೇ. ೬೦%ರಷ್ಟು ಹಳ್ಳಿಗಳು ನೀರಾವರಿ ವ್ಯಾಪ್ತಿಗೊಳಪಟ್ಟ ಪ್ರದೇಶಗಳು	೨೬೮	೨೫೬	೩೭೫	೩೭೯	೪೮೭	೩೦೮
ಬಸರಾಳು ಹೋಬಳಿ ಶೇ. ೫% ಹಳ್ಳಿಗಳು ನೀರಾವರಿ ವ್ಯಾಪ್ತಿಗೊಳಪಟ್ಟ ಪ್ರದೇಶಗಳು	೯೬	೯೯	೯೯	೯೦	೧೧೦	೬೭

* Source: W.C. Sweet - Irrigation and Malaria, Vol. IV, No. 2, June 16, 1938, p. 187.

ಮರಣದ ಪ್ರಮಾಣದ ಅಂಕಿಅಂಶಗಳು ಹೋಬಳಿಯಿಂದ ಹೋಬಳಿಗೆ ಬದಲಾಗಿರುವುದು ಆಗಿಯೇ ಮರಣದ ವರದಿಯ ಪ್ರಮಾಣವು ೧೯೩೨ನೇ ವರ್ಷದಿಂದ ಹೆಚ್ಚಾಗಿ ವರದಿಯಾಗಿರುವುದು ಗೋಚರಿಸುತ್ತದೆ. ಹೆಚ್ಚು ನೀರಾವರಿ ಪ್ರದೇಶಗಳಲ್ಲಿ ಮಲೇರಿಯಾ ರೋಗದ ಪ್ರಮಾಣವು ಗಣನೀಯವಾಗಿ ಹೆಚ್ಚಾಗುತ್ತಾ ಬಂದಿರುವುದು ವರದಿಯಾಗಿದೆ. ಕಡಿಮೆ ಪ್ರಮಾಣದ ನೀರಾವರಿಗೊಳಪಟ್ಟ ಪ್ರದೇಶಗಳಲ್ಲಿ ಉದಾಹರಣೆಗೆ ಕಸಬಾ ಹೋಬಳಿ ಮತ್ತು ಬಸರಾಳು ಹೋಬಳಿಯ ಶೇ. ೫% ಹಳ್ಳಿಗಳಲ್ಲಿ ವರ್ಷವಾರು ಮಲೇರಿಯಾ ರೋಗಗಳ ವರದಿಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಉಳಿದ ಭಾಗದಲ್ಲಿ ೧೯೩೨ರ ನಂತರ ಅಂದರೆ ನಾಲೆ ನೀರು ಹರಿದುಬಂದಿದ್ದರಿಂದ ಮರಣದ ಪ್ರಮಾಣದ ವರದಿಯು ಏರಿಕೆಯಾಗಿರುವುದು ಕಂಡುಬಂದಿದೆ.

ರೂರಲ್ ಹೆಲ್ತ್ ಯೂನಿಟ್, ಮಂಡ್ಯ

ರಾಕ್‌ಫೆಲರ್ ಫೌಂಡೇಶನ್ ಅವರ ಶಿಫಾರಸ್ಸಿನಂತೆ ಪ್ರಥಮ ಪ್ರಯೋಗವಾಗಿ ೧೯೨೮ರಲ್ಲಿ ಮಂಡ್ಯದಲ್ಲಿ 'ಗ್ರಾಮೀಣ ಆರೋಗ್ಯ ಘಟಕ'ವನ್ನು ಸ್ಥಾಪಿಸಿತು. ಮಲೇರಿಯಾ ರೋಗ ನಿಯಂತ್ರಣಗೊಳಿಸುವ ಸಂಬಂಧ ಹಾಗೂ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳಲು ಈ ಘಟಕವನ್ನು ಸ್ಥಾಪಿಸಲಾಯಿತು. ಮಲೇರಿಯಾ ವಿರೋಧಿ ಕಾರ್ಯಾಚರಣೆಯನ್ನು ೧೯೩೨ರಲ್ಲಿ ಕೈಗೊಳ್ಳಲಾಯಿತು. ಮಂಡ್ಯ ತಾಲ್ಲೂಕಿನಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ನೀರಿನ ಸರಬರಾಜಿನ ಕೆರೆ, ಬಾವಿಗಳನ್ನು ಶುದ್ಧೀಕರಿಸುವ ಕೆಲಸದಲ್ಲಿ ಆರೋಗ್ಯ ಇಲಾಖೆ ತೊಡಗಿಸಿಕೊಂಡಿತು. ಮಲೇರಿಯಾ, ಕಾಲರಾ, ಪ್ಲೇಗು ಮತ್ತು ಇನ್ನಿತರ ಸಾಂಕ್ರಾಮಿಕ ರೋಗಗಳು ಕಂಡುಬರುವ ಪ್ರದೇಶಗಳಿಗೆ ಆರೋಗ್ಯಾಧಿಕಾರಿಗಳು ಭೇಟಿ ಕೊಟ್ಟು ಸ್ಥಳದಲ್ಲಿಯೇ ಜನರಿಗೆ ಚಿಕಿತ್ಸೆ ನೀಡುತ್ತಿದ್ದರಲ್ಲದೆ ಅದಕ್ಕೆ ಸಂಬಂಧಿಸಿದಂತೆ ೧೯೩೨ರಲ್ಲಿ ಇರ್ವಿನ್ ಕಾಲುವೆ ವ್ಯಾಪ್ತಿಗಳಲ್ಲಿ ಕ್ವಿನೈನ್ ಮಾತ್ರೆಗಳನ್ನು ಶಾಲಾ ಮಕ್ಕಳಿಗೆ ಉಚಿತವಾಗಿ ನೀಡಲಾಯಿತು. ಇದಕ್ಕಾಗಿ ಇರ್ವಿನ್ ಕಾಲುವೆ ಪ್ರದೇಶಕ್ಕೆ ವಿಶೇಷವಾಗಿ ೧೫,೦೦೦ ರೂಪಾಯಿಗಳಷ್ಟು ಉಚಿತ ಕ್ವಿನೈನ್ ಮತ್ತು ಇತರೆ ಪರಿಹಾರ ಕ್ರಮಗಳನ್ನು ಕೈಗೊಂಡಿತು.[7] ಅದಕ್ಕೆ ಸಂಬಂಧಿಸಿದ ಮಾತ್ರೆಗಳನ್ನು ಅಲ್ಲಿನ ಪಟೇಲರು, ಶಾನುಭೋಗರು, ಪಂಚಾಯಿತಿ ಅಧ್ಯಕ್ಷರು ಮತ್ತು ಶಾಲಾ ಮುಖ್ಯೋಪಾಧ್ಯಾಯರುಗಳಿಗೆ ನೀಡಿ ಅವುಗಳನ್ನು ಸಂಬಂಧಪಟ್ಟ ಕಾಯಿಲೆಯ ವ್ಯಕ್ತಿಗೆ ನೀಡುವಂತೆ ವ್ಯವಸ್ಥೆ ಮಾಡಿದ್ದರು.[8] ಸಾರ್ವತ್ರಿಕವಾಗಿ ರಾಸಾಯನಿಕ ಸೋಂಕುಗಳೆತವನ್ನು ಸಾಗಿಸಲಾಯಿತು ಮತ್ತು ಪ್ರಾಯೋಗಿಕವಾಗಿ ನಿರ್ಜಲೀಕರಣ ಸೋಂಕುಗಳೆತವನ್ನು ಪರಿಚಯಿಸಲಾಯಿತು. ಮಲ್ಟಿ ವಿಟಮಿನ್ ಮಾತ್ರೆಗಳನ್ನು ವಿತರಿಸಲು ವ್ಯವಸ್ಥೆ ಮಾಡಲಾಯಿತು. ಮಲೇರಿಯಾ ಸಾಂಕ್ರಾಮಿಕತೆಯನ್ನು ಶೀಘ್ರವಾಗಿ ಶಮನಗೊಳಿಸಲು ಆಗಾಗ್ಗೆ ರೋಗ ಹೆಚ್ಚಾಗಿ ಹರಡುವ ಪ್ರದೇಶಗಳಲ್ಲಿ ಸಂಚಾರ ಕೈಗೊಳ್ಳಲು ವಿಶೇಷ ಆರೋಗ್ಯಾಧಿಕಾರಿಗಳನ್ನೊಳಗೊಂಡ ೩೦ ವೈದ್ಯಕೀಯ ಘಟಕಗಳನ್ನು ನಿಯೋಜಿಸಲಾಯಿತು.[9] ಮುಂದಿನ ಮುಂಜಾಗ್ರತಾ ಕ್ರಮವಾಗಿ ಸೋಂಕಿತ ಪ್ರದೇಶಗಳಲ್ಲಿ ಬೇವಿನ ಎಲೆಗಳ ಹೊಗೆಯನ್ನು ಕೊಡುವ ಕಾರ್ಯವನ್ನು ಕೈಗೊಳ್ಳಲಾಯಿತು.[10]

ಪ್ರತಿಯೊಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಕುಡಿಯುವ ನೀರಿನ ಬಾವಿಗಳಿಗೆ ಕ್ರಿಮಿನಾಶಕಗಳನ್ನು ಹಾಕುವುದರ ಮೂಲಕ ನೀರನ್ನು ಪರಿಶುದ್ಧಗೊಳಿಸಲಾಗುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಕೊಳಚೆಯ ನೀರಿನಿಂದ ಪ್ರತಿಯೊಂದು ಮನೆಯ ಮುಂದೆ ಸೊಳ್ಳೆಗಳ ಸಂತಾನೋತ್ಪತ್ತಿ ಉಂಟಾಗಿ ಆ ಪ್ರದೇಶವನ್ನು ಅನಾರೋಗ್ಯಕರವನ್ನಾಗಿ ಮಾಡುವುದನ್ನು ತಪ್ಪಿಸಲು ಎಲ್ಲಾ ಗ್ರಾಮಗಳಲ್ಲಿಯೂ ಸೋಕ್‌ಪಿಟ್ (ಮರಳು ಮತ್ತು ಜಲ್ಲಿಕಲ್ಲಿನ ಮಿಶ್ರಿತ ಗುಂಡಿ)ಗಳನ್ನು ನಿರ್ಮಿಸಲಾಗುತ್ತಿತ್ತು. ಗ್ರಾಮಗಳಲ್ಲಿನ ಗೊಬ್ಬರದ ಗುಂಡಿಗಳನ್ನು ಸ್ವಲ್ಪ ದೂರದಲ್ಲಿ ನಿರ್ಮಿಸಿಕೊಳ್ಳುವಂತೆ ಜನರಿಗೆ ತಿಳುವಳಿಕೆ

ನೀಡಲಾಗಿತ್ತು. ಅಷ್ಟೇ ಅಲ್ಲದೆ, ಪ್ರತಿಯೊಂದು ಗ್ರಾಮಗಳ ಮನೆಗಳಿಗೂ ಸ್ವತಃ ಆರೋಗ್ಯಾಧಿಕಾರಿಗಳು ಭೇಟಿ ಕೊಟ್ಟು ಅಲ್ಲಿನ ಹಿರಿಯರಿಗೆ ತಮ್ಮ ಮನೆಯನ್ನು ಆರೋಗ್ಯಕರ ವಾತಾವರಣದಲ್ಲಿರಿಸಿಕೊಳ್ಳಲು ಬೇಕಾದ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಬಾವಿಗಳಿಗೆ ರಾಜ್ಯ ಆರೋಗ್ಯ ಇಲಾಖೆ ಸರಬರಾಜು ಮಾಡಿದ ಲಾರ್ವಿಸೈಡಲ್ ಮೀನುಗಳನ್ನು ಬಿಡಲಾಯಿತು.[೧೧]

ಸಾಂಕ್ರಾಮಿಕ ರೋಗಗಳ ಬ್ಯೂರೋ ಒಂದು ವಿಶೇಷ ಸಮೀಕ್ಷೆಯೊಂದನ್ನು ರಾಜ್ಯದಲ್ಲಿ ಕೈಗೊಂಡಿತು. ಇದರ ಅನ್ವಯ ೧,೭೧೭ ಮಕ್ಕಳನ್ನು ಪರೀಕ್ಷಿಸಿ ೬೭ ಪ್ರಕರಣಗಳನ್ನು ಪ್ರದರ್ಶಿಸಿದರು. ೧೯೩೨ನೇ ವರ್ಷದಲ್ಲಿ ಮಲೇರಿಯಾ ಸಮೀಕ್ಷೆಯನ್ನು ಶಿವನಸಮುದ್ರ, ಅಕ್ಕಿಹೆಬ್ಬಾಳು, ಚಿಟ್ಟನಹಳ್ಳಿ, ಹೊಸಕೋಟೆ, ಭದ್ರಾವತಿ, ಟಿ. ನರಸೀಪುರ ಮತ್ತು ಇರ್ವಿನ್ ನಾಲಾ ಪ್ರದೇಶದಲ್ಲಿ ಕೈಗೊಂಡಿತು.[೧೨] ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾದರಿಯನ್ನು ಸರ್ಕಾರಿ ಕೈಗಾರಿಕಾ ಮತ್ತು ಪರೀಕ್ಷಾ ಪ್ರಯೋಗಾಲಯದಲ್ಲಿ ಸಿದ್ಧಪಡಿಸಿ ನೋಡಿದಾಗ ಸಾಕಷ್ಟು ತೃಪ್ತಿ ಕಂಡುಬಂದಿತು. ವಿಶೇಷ ಮಲೇರಿಯಾ ಸರ್ವೆ ಮತ್ತು ಮಲೇರಿಯಾ ನಿಯಂತ್ರಣ ಕಾರ್ಯ ಮತ್ತು ಸಾಮಾನ್ಯ ಸೊಳ್ಳೆಗಳ ನಿಯಂತ್ರಣ ಕಾರ್ಯಾಚರಣೆ ೫೭ ಹಳ್ಳಿಗಳಲ್ಲಿ ಮುಂದುವರಿಸಲಾಯಿತು. ೫,೨೫೪ ಬಾವಿಗಳನ್ನು ಗ್ಯಾಂಬುಸಿಯಾ ಮೀನಿನ ಜೊತೆ ಮರುಸ್ಥಾಪಿಸಲಾಯಿತು. ರಾಕ್‌ಫೆಲರ್ ಫೌಂಡೇಶನ್‌ನ ಲಂಡನ್ನಿನ ಸ್ಕೂಲ್ ಆಫ್ ಟ್ರೊಫಿಕಲ್ ಮೆಡಿಸನ್‌ನ ಪ್ರೊ. ಬಾಕ್ಸ್‌ಟನ್ ಮತ್ತು ಮಿ. ಡೈಯರ್, ಈ ಇಬ್ಬರು ನೈರ್ಮಲ್ಯ ಇಂಜಿನಿಯರರು ಮಲೇರಿಯಾ ನಿಯಂತ್ರಣದ ಬಗ್ಗೆ ಮೈಸೂರು, ಮಂಡ್ಯ, ನಾಗೇನಹಳ್ಳಿ ಮತ್ತು ಹಿರಿಯೂರುಗಳಲ್ಲಿ ಕ್ಷೇತ್ರ ಅಧ್ಯಯನ ಪ್ರವಾಸ ಕೈಗೊಂಡರು.

ಆ ವೇಳೆಯಲ್ಲೇ ಇರ್ವಿನ್‌ನಾಲಾ ಬಯಲಿನ ಮದ್ದೂರು ಶಾಖೆಗೆ ನೀರು ಬಿಡಲಾಯಿತು. ನೀರು ಹರಿದು ಬಂದ ನಂತರ ಮಲೇರಿಯಾ ಮುಕ್ತ ಪ್ರದೇಶವಾಗಿದ್ದ ಇದು ಹೆಚ್ಚು ಸಂಖ್ಯೆಯಲ್ಲಿ ಸೊಳ್ಳೆಗಳು ಉತ್ಪತ್ತಿಯಾಗಿ ಮಲೇರಿಯಾದ ಆವಾಸಸ್ಥಾನವಾಗಿ ಮಾರ್ಪಟ್ಟಿತು. ಏಪ್ರಿಲ್ ೧೯೩೩ರಲ್ಲಿ ಸಾಂಕ್ರಾಮಿಕ ರೋಗದ ಅನುಪಾತಗಳು ಹೆಚ್ಚಾದವು.[೧೩] ರೂರಲ್ ಹೆಲ್ತ್ ಯೂನಿಟ್, ಮಂಡ್ಯ ಸಂಸ್ಥೆಯ ಕಾರ್ಯವೈಖರಿಯನ್ನು ಮರುಪರಿಶೀಲಿಸುವ ಸಲುವಾಗಿ ಸಿಬ್ಬಂದಿಯವರು ಹದಿನೈದು ದಿನಗಳು ಸಮ್ಮೇಳನಗಳನ್ನು ಪ್ರಾರಂಭಿಸಿದರು. ಆರು ಅಂತಹ ಸಮ್ಮೇಳನಗಳನ್ನು ನಡೆಸಿದರು. ಮಂಡ್ಯ ನಗರದ ಪುರಸಭೆಯವರು ಮಲೇರಿಯಾ ನಿಯಂತ್ರಣದ ಬಗ್ಗೆ ಕೈಗೊಂಡ ಕಾರ್ಯಗಳನ್ನು ಯೂನಿಟ್‌ನ ಸಿಬ್ಬಂದಿಗಳು ಮೇಲ್ವಿಚಾರಣೆ ನಡೆಸಿದರು. ೧೦೪ ಸೋಕ್‌ಪಿಟ್ (ನೆನೆಸಿ ಹೊಂಡ)ಗಳನ್ನು ಕಟ್ಟಿಸಿದರು.[೧೪] ಇರ್ವಿನ್ ನಾಲೆಯ ವಿಶಾಲ ಪ್ರದೇಶದಲ್ಲಿ ಕೆಲವೊಂದು ಅಗತ್ಯ ಕ್ರಮಗಳನ್ನು ಮಲೇರಿಯಾ ಹರಡುವುದರ ಬಗ್ಗೆ ಅಳವಡಿಸಿಕೊಳ್ಳುವುದಕ್ಕಾಗಿ ಮಂಡ್ಯ ಕೆರೆಯ ನೀರನ್ನು ಬರಿದು ಮಾಡಲಾಗಿತ್ತು. ನಗರ ಆರೋಗ್ಯದ ದೃಷ್ಟಿಯಿಂದ ಕೆರೆ ಬಳಕೆಯ ಉಲ್ಲಂಘನೆ ಕಾನೂನನ್ನು ಮಂಜೂರುಗೊಳಿಸಲಾಯಿತು. ಮಲೇರಿಯಾ ವಿರೋಧಿ ಕ್ರಮದ ಅನ್ವಯದಂತೆ ಮದ್ದೂರು, ವೈದ್ಯನಾಥಪುರ ನಾಲೆಯನ್ನು ಮುಚ್ಚಲಾಗಿತ್ತು. ಮದ್ದೂರು ನಗರದಲ್ಲಿ ಹೊಸದಾಗಿ ನಿರ್ಮಿಸುವ ಪ್ರವಾಸಿ ಮಂದಿರದ ಬಳಿ ೧೬೦ ಎಕರೆ ತರಿಭೂಮಿ ಸುತ್ತಳತೆ ಹೊಂದಿದ್ದು, ಇಲ್ಲೊಂದು ಆರೋಗ್ಯ ಘಟಕವನ್ನು ಸ್ಥಾಪಿಸಿ ಸೊಳ್ಳೆಗಳ ಸಂತಾನೋತ್ಪತ್ತಿ ಉಂಟಾಗದಂತೆ ಪರೀಕ್ಷಿಸಲಾಯಿತು. ೧೬೦ ಎಕರೆ ಭೂಮಿಯನ್ನು ಒಣಭೂಮಿಯಾಗಿಸಿ ಪ್ರವಾಸಿ ಮಂದಿರದ ಬಳಿ ಶುಚಿಗೊಳಿಸಲಾಯಿತು. ಈ ಮೂಲಕ ಮಲೇರಿಯಾ ನಿಯಂತ್ರಣವು ಈ ಸುತ್ತಲಿನ ಹಳ್ಳಿಗಳಲ್ಲಿ ಹರಡದಂತೆ ಪರೀಕ್ಷಿಸಲಾಯಿತು.[೧೫]

ಆರೋಗ್ಯ ಶಿಕ್ಷಣ ಇಲಾಖೆ ವತಿಯಿಂದ ೧೯೩೨ರಲ್ಲಿ ಸಿಡುಬು, ಪ್ಲೇಗ್, ಮಲೇರಿಯಾ ಸಂಬಂಧಿಸಿದಂತೆ ಕರಪತ್ರ, ಭಿತ್ತಿಪತ್ರಗಳನ್ನು ಕನ್ನಡ, ಉರ್ದು, ಇಂಗ್ಲಿಷ್ ಭಾಷೆಗಳಲ್ಲಿ ಸಿದ್ಧಪಡಿಸಿ ಪ್ರಕಟಿಸಲಾಯಿತು. ಇಲಾಖೆಯಿಂದ 'ಮೈಸೂರು ಆರೋಗ್ಯ' ಎಂಬ ನಿಯತಕಾಲಿಕವನ್ನು ೧೯೩೩ರಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸಲಾಯಿತು. ಅದೇ ವರ್ಷ ಸಾಕ್ಷ್ಯಚಿತ್ರವನ್ನು ಈ ವಿಷಯದಲ್ಲಿ ಬೆಳಕು ಚೆಲ್ಲುವ ವಿಷಯದಲ್ಲಿ ಸಿದ್ಧಪಡಿಸಿ ಜನರಿಗೆ ತಿಳುವಳಿಕೆ ನೀಡಲು ಪ್ರದರ್ಶಿಸಲಾಯಿತು. ೧೯೩೪-೧೯೩೫ರಲ್ಲಿ ಐದು ಲಕ್ಷ ಕರಪತ್ರಗಳನ್ನು ಮತ್ತು ಭಿತ್ತಿಪತ್ರಗಳನ್ನು ಪ್ರಕಟಿಸಿ ಹಂಚಲಾಯಿತು. ಮೈಸೂರು ಆರೋಗ್ಯದ ೧೫,೦೦೦ ಪ್ರತಿಗಳನ್ನು ಹಂಚಲಾಯಿತು ಮತ್ತು ೧೨೦ ಸಿನಿಮಾಗಳನ್ನು ಪ್ರದರ್ಶಿಸಲಾಯಿತು.[೧೬] ಆರೋಗ್ಯ ಇಲಾಖೆಯಿಂದ ೧೯೩೫-೧೯೩೬ರಲ್ಲಿ ಆರೋಗ್ಯದ ಅರಿವು ಮೂಡಿಸುವ ೧೨೮ ಸಿನಿಮಾಗಳನ್ನು ಪ್ರದರ್ಶಿಸಲಾಯಿತು. ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಪ್ರಸೂತಿ, ಮಕ್ಕಳ ಕಲ್ಯಾಣ, ಸಾಂಕ್ರಾಮಿಕ ರೋಗಗಳ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ೧೯ ಲೇಖನಗಳನ್ನು ಬರೆಯಿಸಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ದಸರಾ ವಸ್ತುಪ್ರದರ್ಶನದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ನೀಡುವ ಕ್ರಮವನ್ನು

ಕಟ್ಟುನಿಟ್ಟಾಗಿ ಜಾರಿಗೆ ತರಲಾಯಿತು. ಅಲ್ಲದೆ, ೫,೦೦೦ ಕರಪತ್ರಗಳು, ಪುಸ್ತಿಕೆಗಳು, ಭಿತ್ತಿಪತ್ರಗಳನ್ನು ಹಂಚಲಾಯಿತು.[೧೭]

ಇರ್ವಿನ್‌ನಾಲಾ ಬಯಲಿನಲ್ಲಿ ಉಲ್ಬಣಿಸಿದ ಮಲೇರಿಯಾ ರೋಗ ನಿರ್ಮೂಲನೆಯಲ್ಲಿ ಮಂಡ್ಯ ಭಾಗದ ಜನಪ್ರತಿನಿಧಿಗಳು ಸರ್ಕಾರವನ್ನು ಎಚ್ಚರಿಸುವಲ್ಲಿ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸಿದ್ದರು. ಮದ್ದೂರು ಭಾಗದ ಜನಪ್ರತಿನಿಧಿಗಳಾದ ಎಸ್.ಸಿ. ಮಲ್ಲಯ್ಯ ಮತ್ತು ಅವರ ಆಪ್ತರಾಗಿದ್ದ ಎಂ.ಸಿ. ಲಿಂಗೇಗೌಡ, ಹೆಚ್.ಕೆ. ವೀರಣ್ಣಗೌಡ ಮೊದಲಾದವರು ಶಾಸನ ಸಭೆಯಲ್ಲಿ ರೋಗದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರು. ಆರೋಗ್ಯ ಸಮಸ್ಯೆಯತ್ತ ಮಲ್ಲಯ್ಯನವರು ತೀವ್ರ ಗಮನ ಹರಿಸಿದ್ದರು. ಮೊದಲೇ ತಿಳಿಸಿರುವಂತೆ ಬೆಂಗಾಡಾಗಿದ್ದ ಮಂಡ್ಯ ಅನೇಕ ರೌರವ ಖಾಯಿಲೆಗಳಿಗೆ ಆವಾಸಸ್ಥಾನವಾಗಿತ್ತು. ಆ ನೆಲ ಸೊಳ್ಳೆಗಳಿಗೆ ಬೀಡಾಗಿತ್ತು. ಮುಖ್ಯವಾಗಿ ಮಲೇರಿಯಾವು ದುಃಸ್ವಪ್ನದಂತೆ ಕಾಡುತ್ತಿತ್ತು. ಆಗಲೇ ಎಂ.ಸಿ. ಲಿಂಗೇಗೌಡರ ಜೊತೆಗೂಡಿ ಮಲ್ಲಯ್ಯನವರು ಜನತೆಯ ಆರೋಗ್ಯ ಸುಧಾರಣೆಯತ್ತ ಹೆಜ್ಜೆ ಇರಿಸಿದರು. ಅವರ ನೆರವಿಗೆ ಬಂದವರು ಆಗಷ್ಟೇ ಮದ್ದೂರಿಗೆ ಬಂದಿದ್ದ ಚುಚ್ಚುಮದ್ದಿನ ವೈದ್ಯಾಧಿಕಾರಿ ನಾರಾಯಣಸ್ವಾಮಿ ಮೊದಲಿಯಾರ್. ಅವರನ್ನು ಮುಂದಿಟ್ಟುಕೊಂಡು ಈ ಇಬ್ಬರು ಧುರೀಣರು ಮಲೇರಿಯಾ ನಿರ್ಮೂಲನಾ ಕಾರ್ಯಕ್ಕೆ ಕ್ರಮಕೈಗೊಂಡರು. ಕ್ರಮೇಣ ಮದ್ದೂರು ಮಲೇರಿಯಾ ಮುಕ್ತವೂ ಆಯಿತು. ವೈಯಕ್ತಿಕ ನೆಲೆಯಲ್ಲಿ ತಮ್ಮ ಯತ್ನಗಳನ್ನು ಮಾಡುತ್ತಿದ್ದ ಮಲ್ಲಯ್ಯನವರು ಈ ನಿಟ್ಟಿನಲ್ಲಿ ಸರ್ಕಾರದ ಗಮನವನ್ನು ಸೆಳೆಯುವುದರಲ್ಲೂ ಹಿಂದೆ ಬೀಳಲಿಲ್ಲ. ಅದರಲ್ಲೂ ಮುಖ್ಯವಾಗಿ ಹೆಚ್.ಕೆ. ವೀರಣ್ಣಗೌಡರ ನೇತೃತ್ವದಲ್ಲಿ ಇರ್ವಿನ್‌ನಾಲೆಗಾಗಿ ಹೋರಾಟ ನಡೆದು, ನಾಲೆಯಾದ ನಂತರ ಮತ್ತೆ ಸೊಳ್ಳೆಗಳ ದಾಳಿ ಹೆಚ್ಚಾಗಿ ಆ ಪ್ರದೇಶ ಮೇಲಿಂದ ಮೇಲೆ ಮಲೇರಿಯಾದ ತೆಕ್ಕೆಗೆ ಬೀಳುತ್ತಿತ್ತು. ಇರ್ವಿನ್‌ನಾಲೆ ಮಾಡಿದ ನಂತರ ನೀರು ನಿಲ್ಲುವಿಕೆ ಹೆಚ್ಚಾಗಿರುವುದರ ಜೊತೆಗೆ ಸರ್ಕಾರದ ಕಡೆಯಿಂದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯವಾಗಿರುವುದರಿಂದ ಈ ನಾಲಾ ನಿರ್ಮಾಣ ಆ ಪ್ರದೇಶದ ಜನರಿಗೆ ವರದಾನವಾಗುವ ಬದಲು ಶಾಪವಾಗಿ ಪರಿಣಮಿಸಿದೆ ಎಂದಿದ್ದಾರೆ. ಇಲ್ಲಿ ನಾಲೆ ನಿರ್ಮಿಸಬಾರದಿತ್ತು ಎಂಬರ್ಥಕ್ಕಿಂತ ನಿರ್ಮಿಸಿದ ಮೇಲೆ ಜನರಿಗೆ ತೊಂದರೆಯಾಗದಂತೆ ವ್ಯವಸ್ಥೆ ಕಲ್ಪಿಸಬೇಕಿತ್ತು ಎಂಬ ಒಳದನಿ ಇರುವುದನ್ನು ಯಾರಾದರೂ ಗುರುತಿಸಬಹುದು. ಈ ರೀತಿ ಹೆಚ್.ಕೆ. ವೀರಣ್ಣಗೌಡ ಅವರು ಈ ಸಂಬಂಧ ಜಿಲ್ಲೆಯ ಹಲವು ಪ್ರಮುಖ ವ್ಯಕ್ತಿಗಳಿಗೆ ಪತ್ರ ಬರೆದು ಸಲಹೆ ಸೂಚನೆಗಳನ್ನು ಹಾಗೂ ಮಲೇರಿಯಾ ಖಾಯಿಲೆಯ ನಿಯಂತ್ರಣದ ಬಗ್ಗೆ ವಿಚಾರಿಸುತ್ತಿದ್ದರು. ಈ ಸಂಬಂಧ ಆಲಕೆರೆ ಇನಾಂದಾರ್ ಬಿ.ವಿ. ವೆಂಕಟಾಚಾರ್ಯರಿಗೆ ೩ ಸೆಪ್ಟೆಂಬರ್ ೧೯೪೧ರಂದು ಪತ್ರ ಬರೆದು ಇರ್ವಿನ್‌ನಾಲಾ ಬಯಲಿನ ಜನರಲ್ಲಿ ಹರಡಿದ್ದ ಮಲೇರಿಯಾ ಖಾಯಿಲೆಯ ಬಗ್ಗೆ ವೆಂಕಟಾಚಾರ್ಯರಿಂದ ಹಲವು ಪರಿಹಾರೋಪಾಯಗಳನ್ನು ಪಡೆದಿದ್ದರು.[೧೮]

ದಿನಾಂಕ ೨೦-೧೨-೧೯೪೩ರಂದು ಅಂದಿನ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಮಂಡ್ಯಕ್ಕೆ ಭೇಟಿ ನೀಡಿದ್ದರು. ಈ ಸಮಯದಲ್ಲಿ ಅಲ್ಲಿನ ಪೌರಸಭೆಯವರೂ ಮಂಡ್ಯ ಜಿಲ್ಲಾ ಬೋರ್ಡಿನವರೂ ಸೇರಿ ಮಹಾರಾಜರಿಗೆ ಭಿನ್ನವತ್ತಳೆಯೊಂದನ್ನು ಅರ್ಪಿಸಿದರು. ಅನಂತರ ಮಹಾರಾಜರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು. "ಮಂಡ್ಯ ಜಿಲ್ಲೆಯ ಬಹುಭಾಗವೆಲ್ಲಾ ನೀರಾವರಿಗೆ ಒಳಪಟ್ಟು ಸಾಗುವಳಿ ಹೆಚ್ಚಾದುದರಿಂದ ಇಲ್ಲಿನ ಜನರ ಆರೋಗ್ಯ ಸ್ಥಿತಿಗೆ ಸಂಬಂಧಿಸಿದಂತೆ ಅನೇಕ ಖಾಯಿಲೆಗಳು ಉದ್ಭವಿಸುತ್ತಿವೆ. ಅದರಲ್ಲೂ ಈ ಪ್ರದೇಶದಲ್ಲಿ ಸದ್ಯದಲ್ಲಿ ತಲೆದೋರಿರುವ ಮಲೇರಿಯಾ ರೋಗದ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೆ ತಮ್ಮ ಸರ್ಕಾರ ಸಾಧ್ಯವಾದಷ್ಟು ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದ್ದರು. ಅಷ್ಟೇ ಅಲ್ಲದೇ, ಮಂಡ್ಯ ನಗರದ ಅಭಿವೃದ್ಧಿಗೋಸ್ಕರ ಮತ್ತು ಅಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಉತ್ತಮ ರೀತಿಯ ಬಡಾವಣೆಗಳನ್ನು ನಿರ್ಮಿಸುವಂತೆ ಅಲ್ಲಿನ ಪೌರಸಭೆಯವರಿಗೆ ಮಹಾರಾಜರು ಕರೆಯಿತ್ತರು. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರವು ಸಾಧ್ಯವಿದ್ದಷ್ಟು ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ಶ್ರೀ ಜಯಚಾಮರಾಜ ಒಡೆಯರು ಈ ಸಭೆಯಲ್ಲಿ ಭರವಸೆಯಿತ್ತರು.[೧೯]

ಇರ್ವಿನ್‌ನಾಲೆ ನಿರ್ಮಾಣದ ನಂತರ ರೋಗಗಳು ಉಲ್ಬಣಗೊಂಡವು. ಆದರೆ ವೈದ್ಯಕೀಯ ಪರಿಹಾರಗಳು ಸಮರ್ಪಕವಾಗಿರಲಿಲ್ಲ. ಉದಾಹರಣೆಗೆ ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ಇರ್ವಿನ್‌ನಾಲಾ ನಿರ್ಮಾಣಕ್ಕೂ ಮುನ್ನ ಇದ್ದ ಮಲೇರಿಯಾ ರೋಗಿಗಳ ಸಂಖ್ಯೆ ೧,೨೦೦. ಆದರೆ, ೬,೮೦೦ ರೋಗಿಗಳು ವೈದ್ಯಕೀಯ ಸೌಲಭ್ಯಗಳಿಗಾಗಿ ದಾಖಲುಗೊಂಡಿದ್ದಾರೆ. ಆದರೆ ಆಸ್ಪತ್ರೆಗೆ ಹೋಗಲಾಗದೆ ವೈದ್ಯಕೀಯ ಸೌಲಭ್ಯಗಳಿಲ್ಲದೆ ನೂರಕ್ಕಿಂತ ಹೆಚ್ಚು ರೋಗಿಗಳು ಬಳಲುತ್ತಿದ್ದಾರೆ. ಏಕೆಂದರೆ ಆ ಜಾಗದಲ್ಲಿ ವೈದ್ಯಕೀಯ ಸೌಲಭ್ಯಗಳಿರಲಿಲ್ಲ. ಉದಾಹರಣೆಗೆ, ಮದ್ದೂರಿಗೆ ೭ ಮೈಲಿಗಳಷ್ಟು ದೂರದಲ್ಲಿರುವ ಅರಸನಕೆರೆ ಎಂಬ ಹಳ್ಳಿಯು ಸುತ್ತಮುತ್ತಲಿನ ಕುಗ್ರಾಮಗಳಲ್ಲಿನ ಹಳ್ಳಿಗಳನ್ನೊಳಗೊಂಡಂತೆ ೩,೦೦೦ ಜನಸಂಖ್ಯೆಯನ್ನು ಒಳಗೊಂಡಿದ್ದು, ಸ್ಥಳೀಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವಂತೆ ಒತ್ತಾಯಿಸಿದರು. ರಸ್ತೆಗಳು

ಮತ್ತು ಒಳಚರಂಡಿಗಳನ್ನು ಒದಗಿಸುವಂತೆ ಮನವಿಯನ್ನು ಮಾಡಿದ್ದರು.[೨೦] ಮತ್ತೆ ೧೯೩೭ರಲ್ಲಿ ಇದೇ ವಿಚಾರ ಪ್ರಸ್ತಾಪಿಸಿ, ಆರೋಗ್ಯ ಇಲಾಖೆಯ ಪರಿಹಾರ ಕ್ರಮಗಳು ಸಂತ್ರಸ್ಥ ಜನರನ್ನು ತಲುಪುತ್ತಿಲ್ಲ, ಕ್ವಿನೈನ್ ಅನ್ನು ತೊಂದರೆಗೀಡಾದ ಹಳ್ಳಿಗಳಿಗೆ ಪೂರೈಸಬೇಕೆಂದು ಮನವಿ ಮಾಡಿಕೊಂಡಿದ್ದರು.[೨೧] ಆದರೆ ಈ ಮಲೇರಿಯಾ ಹಾವಳಿ ೧೯೪೦ರ ದಶಕದ ಮಧ್ಯಭಾಗದವರೆಗೂ ನಿರ್ಮೂಲನವಾಗದೇ ಇರುವುದು ಎಸ್.ಸಿ. ಮಲ್ಲಯ್ಯ ಅವರ ೧೯೪೫ರ ಭಾಷಣದಲ್ಲಿ ಪುನಃ ವ್ಯಕ್ತವಾಗಿದೆ.

"ಇರ್ವಿನ್ ನಾಲಾಪ್ರದೇಶದಲ್ಲಿ ಮಲೇರಿಯಾ ಹಾವಳಿಯನ್ನು ತಡೆಗಟ್ಟುವ ವಿಚಾರದಲ್ಲಿ ತರೀ ಜಮೀನನ್ನು ಖುಷ್ಕಿಯನ್ನಾಗಿ ಪರಿವರ್ತನೆ ಮಾಡಬೇಕೆಂದು ಹುಕುಂ ಮಾಡಿದ್ದೀರಿ. ಇದು ಒಂದು ವಿಧಾನ. ಹೀಗೆ ಮಾಡಿ ಊರಿನ ಸುತ್ತಲೂ ಡ್ರೈಬೆಲ್ಟ್ ಏರ್ಪಡಿಸಬೇಕೆಂದು ಹುಕುಂ ಮಾಡಿದಿರಿ. ಇದು ಆಗಿ ಈಗಾಗಲೇ ೩-೪ ವರ್ಷಗಳಾಗಿರಬೇಕು. ಆದರೆ ಈ ವಿಚಾರದಲ್ಲಿ ಇದುವರೆಗೂ ಯಾವುದೊಂದು ಕಾರ್ಯಕ್ರಮವೂ ಆಗದಿರುವುದು ವಿಷಾದಕರ. ಈ ಮಲೇರಿಯಾ ನಿಲ್ಲಬೇಕಾದರೆ ಕೊಳೆತ ನೀರು ನಿಲ್ಲದಂತೆ ಮಾಡಿ ಕೂಡಲೆ ಈ ಡ್ರೈಬೆಲ್ಟ್‌ಗಳನ್ನು ಏರ್ಪಡಿಸಬೇಕು. ಇದು ಹೋಗಿ ಈಗ ಅನೇಕ ಗ್ರಾಮಗಳು ದ್ವೀಪಗಳಾಗಿ ಪರಿಣಮಿಸಿವೆ. ಸುತ್ತಲೂ ಜೌಗು ಆವರಿಸಿ ಕಷ್ಟ ಪರಿಸ್ಥಿತಿ ಒದಗಿದೆ. ಹೀಗೆ ನೀರು ತಪ್ಪಿಸುವ ಏರ್ಪಾಡನ್ನು ಮಾಡದೆ ಇತರ ವಿಚಾರಗಳಿಗೆ ತಾವು ಎಷ್ಟು ಖರ್ಚು ಮಾಡಿದರೂ ವ್ಯರ್ಥ. ಆರೋಗ್ಯ ಶಾಖೆಯವರೇನೂ ಸೊಳ್ಳೆಗಳ ನಿವಾರಣೆಗೆ ಸಾಕಷ್ಟು ಏರ್ಪಾಡು ಮಾಡಿದ್ದಾರೆ. ಮೊದಲು ೪ ದಿನಕ್ಕೆ ಒಂದಾವರ್ತಿ ಆ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದರು. ಈಗ ವಾರಕ್ಕೊಂದಾವರ್ತಿ ಮಾಡುತ್ತಿದ್ದಾರೆ. ಆ ಔಷಧಿಯನ್ನು ಬೆಳಗ್ಗೆ ಹಾಕಿದರೆ ಕೊಂಚ ಹೊತ್ತು ಕಡಿಮೆಯಾಗಿ ಪುನಃ ಸಾಯಂಕಾಲದ ವೇಳೆಗೆ ಹೊಸ ಸೊಳ್ಳೆಗಳು ಹುಟ್ಟುತ್ತವೆ. ಈ ಸೊಳ್ಳೆಗಳಿಂದಲೇ ಜ್ವರ ಜಾಸ್ತಿಯಾಗುತ್ತದೆ. ಈ ಮಲೇರಿಯಾ ಹಾವಳಿಯನ್ನು ತಡೆಗಟ್ಟಿ ಪ್ರಜೆಗಳಿಗೆ ಅನುಕೂಲ ಮಾಡಿಕೊಡಬೇಕಾದುದು ಅಗತ್ಯ. ಈ ದೃಷ್ಟಿಯಿಂದಲೇ ತಾವು ಬ್ಲಾಕ್ ಸಿಸ್ಟಂ ಏರ್ಪಡಿಸಿದಿರಿ. ಆದರೆ ಜನರಲ್ಲಿ ಆರೋಗ್ಯವೇ ಇಲ್ಲದಿರುವಾಗ, ಅವರು ಖಾಯಿಲೆಯಿಂದ ನರಳುತ್ತಿರುವಾಗ ವ್ಯವಸಾಯ ಹೇಗೆ ಮುಂದುವರಿಯುತ್ತದೆ. ನಿಮ್ಮ ಯೋಜನೆಗಳೆಲ್ಲಾ ಎಷ್ಟು ಹಿಂದಕ್ಕೆ ಹೋಗುತ್ತದೆಂಬುದನ್ನು ನೋಡಬೇಕು. ತಮ್ಮ ಯೋಜನೆಯು ತಯಾರಾಗಿ ಒಂದು ವರ್ಷವಾಗಿದ್ದರೂ ಈ ರೋಗವನ್ನು ತಡೆಗಟ್ಟುವ ಯೋಚನೆ ಮಾಡಿಲ್ಲ. ಗ್ರಾಮಗಳಿಗೆ ಹೋಗಿ ನೋಡಿದರೆ ಅಲ್ಲಿ ನೋಡಲು ಸಂಕಟವಾಗುತ್ತದೆ. ಕೆಲವು ಗ್ರಾಮಗಳಲ್ಲಿ ನೋಡಿದರೆ ಗಂಡಸರೇ ಇಲ್ಲವೆಂದು ಗೊತ್ತಾಗುತ್ತದೆ. ಅಲ್ಲಿ ಹುಟ್ಟಿದ ಮತ್ತು ಸತ್ತವರ ಮಾಹಿತಿ ರಿಜಿಸ್ಟರುಗಳನ್ನು ನೋಡಿದರೆ ಬಹಳ ಶೋಚನೀಯವಾಗಿದೆ. ಕೂಡಲೇ ಸರ್ಕಾರದವರು ಈ ಖಾಯಿಲೆಯನ್ನು ನಿರ್ಮೂಲ ಮಾಡುವುದು ಅತ್ಯವಶ್ಯಕ. ತಾವೇ ಬೇಕಾದರೆ ಇತರ ಕಾರ್ಯಗಳನ್ನು ಕೈಗೊಳ್ಳುವಂತೆ ಜರೂರಾತಿ ಕಾನೂನನ್ನಾದರೂ ಮಾಡಿ ಈ ಕಾರ್ಯವನ್ನು ಕೈಕೊಳ್ಳಿ. ಇತರ ವಿಚಾರಗಳಿಗೆ ಹೇಗೆ ಜಾಗೃತಿ ಜರೂರಾತಿ ಕಾನೂನು ಮಾಡುತ್ತೀರೊ ಹಾಗೆಯೇ ಇದಕ್ಕೂ ಕಾರ್ಯಕ್ರಮ ಕೈಗೊಳ್ಳುವುದು ಅತ್ಯವಶ್ಯಕ. ಏಕೆ ಹಾಗೆ ಮಾಡಿಲ್ಲವೊ ನನಗೆ ಅರ್ಥವಾಗುವುದಿಲ್ಲ. ಇನ್ನಾದರೂ ಕಾಲ ವಿಳಂಬ ಮಾಡದೆ ಜನರಿಗೆ ಆರೋಗ್ಯ ಲಾಭವನ್ನು ಒದಗಿಸಿಕೊಡುತ್ತೀರೆಂದು ನಂಬಿದ್ದೇನೆ.[೨೨]

ಮಲೇರಿಯಾ ಹಾಗೂ ವ್ಯವಸಾಯ ಸುಧಾರಣೆಯಲ್ಲಿ ಡಾ. ಲೆಸ್ಲಿ ಸಿ. ಕೋಲ್‌ಮನ್

ಹೀಗೆ ಹಲವರ ಪ್ರಯತ್ನದಿಂದ ಸಾಂಕ್ರಾಮಿಕ ರೋಗ ಕ್ರಮೇಣ ಕಡಿಮೆ ಆಗಲಾರಂಭಿಸಿದರೂ, ಮಲೇರಿಯಾ ಹರಡಿದ ಮಂಡ್ಯ ಜಿಲ್ಲೆಯಲ್ಲಿ ಹಲವು ಸಾವುಗಳು ಸಂಭವಿಸಲು ನಾಲಾ ನೀರು ಮತ್ತು ಹೊಸ ಬೆಳೆಗಳೇ ಕಾರಣವೆಂದು ಜನರು ನಂಬಲಾರಂಭಿಸಿದರು. ಇದನ್ನು ಗಮನಿಸಿದ ಅಂದಿನ ಮೈಸೂರು ವ್ಯವಸಾಯ ಇಲಾಖೆಯ ನಿರ್ದೇಶಕರಾಗಿದ್ದ ಡಾ. ಲೆಸ್ಲಿ ಸಿ. ಕೋಲ್‌ಮನ್ ತಾವೇ ಖುದ್ದಾಗಿ ಹಳ್ಳಿಹಳ್ಳಿಗೆ ಹೋಗಿ ಜನರಲ್ಲಿದ್ದ ಭಯವನ್ನು ಹೋಗಲಾಡಿಸಿ ಜಿಲ್ಲೆಯಲ್ಲಿ ಹಣ ಗಳಿಸುವಂತಹ ಕೃಷಿಯಾಧಾರಿತ ಬೆಳೆ ಎಂದರೆ ಕಬ್ಬಿನ ಬೆಳೆ. ಈ ಬೆಳೆಯನ್ನು ಜಿಲ್ಲೆಯಾದ್ಯಂತ ಬೆಳೆಸುವುದೆಂದೂ, ಅಲ್ಲದೆ ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಬೇಕೆಂದೂ ನಿರ್ಧರಿಸಿ ದಿವಾನರ ಆಪ್ತರಾಗಿದ್ದ ಇಂಡುವಾಳು ಹೆಚ್. ಹೊನ್ನಯ್ಯ ಹಾಗೂ ಅಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಎಸ್.ಸಿ. ಮಲ್ಲಯ್ಯ ಮುಂತಾದವರೊಡನೆ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸುತ್ತಾಡಿ ಮಲೇರಿಯಾ ರೋಗಕ್ಕೂ ಬೆಳೆಗಳಿಗೂ ಯಾವ ಸಂಬಂಧವಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು.

ಕಬ್ಬು, ಭತ್ತ ಬೇಸಾಯ ಹೊಸದು. ಉಳುಮೆ, ಗೊಬ್ಬರ, ಬಿತ್ತನೆ ಇವುಗಳಿಗೆಲ್ಲಾ ಹಣ ಎಲ್ಲಿಂದ ತರುವುದು. ಬಿಳಿ ಸಕ್ಕರೆ ನಮಗೇಕೆ, ಈ ಬೇಸಾಯದ ಬದುಕೇ ಸಾಕೆನಿಸಿ ರೈತಾಪಿ ವರ್ಗ ಪರಿತಪಿಸುತ್ತಿದ್ದ ಸಂದಿಗ್ಧ ಕಾಲದಲ್ಲಿ ಕೋಲ್‌ಮನ್

ಅವರು ಕೃಷಿ ಅಭಿವೃದ್ಧಿಯಲ್ಲಿ ಅದರಲ್ಲೂ ವ್ಯವಸಾಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನೇ ಉಂಟುಮಾಡಿದರು. ಇವರು ಕೃಷಿ ಕ್ಷೇತ್ರದಲ್ಲಿ ಅಂದು ಮನೆಮಾಡಿಕೊಂಡಿದ್ದ ಕೀಟಬಾಧೆ, ಸುಧಾರಿತ ಬಿತ್ತನೆ ಬೀಜಗಳ ಸಂಶೋಧನೆ, ಮಾರ್ಪಡಿಸಿದ ನೇಗಿಲುಗಳು, ಮಣ್ಣು ರಸಾಯನ ವಿಜ್ಞಾನ, ಕೃಷಿಯಲ್ಲಿ ಹೆಚ್ಚಿನ ಸಂಶೋಧನೆಗಾಗಿ ಕೃಷಿ ಪಾಠಶಾಲೆ, ವಿ.ಸಿ. ಫಾರಂ ಸ್ಥಾಪಿಸಿ, ಕಬ್ಬಿನ ಉತ್ಪಾದನೆಯಿಂದ ಕೃಷಿಯಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸಹಕರಿಸಿದರು. ತಾವು ಕಂಡುಕೊಂಡ ಕೃಷಿ ಸಂಶೋಧನೆಯನ್ನು ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ತಿಳಿಸಿದರು. ಅಲ್ಲದೆ ಸಂದಿಗ್ಧ ಕಾಲದಲ್ಲಿ ಮೊದಲೆ ಮಲೇರಿಯಾ ರೋಗದಿಂದ ಬಳಲುತ್ತಿದ್ದ ರೈತರ ಬಳಿಯಲ್ಲಿ ಹೊಸ ಬೇಸಾಯಕ್ಕೆ ಹಣದ ಕೊರತೆಯುಂಟಾದಾಗ ಸರ್ಕಾರದಿಂದ ಬೆಳೆಯ ಮೇಲೆ ಮುಂಗಡ ಹಣವನ್ನು ಸಾಲವಾಗಿ ಕೊಡಿಸಿದರು. ಕೃಷಿ ಇಲಾಖೆಯಿಂದ ಪ್ರಾತ್ಯಕ್ಷಿಕ ತಾಕುಗಳನ್ನು ಮಾಡಿಸಿ ಕಬ್ಬಿನ ಬೇಸಾಯ ಕ್ರಮ ತೋರಿಸುವುದರ ಜೊತೆಗೆ ಹಳ್ಳಿಹಳ್ಳಿಗೂ ತಮ್ಮ ಸಿಬ್ಬಂದಿಯನ್ನು ಕಳುಹಿಸಿದರು. ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ಸಾಕಷ್ಟು ಪ್ರಚಾರಕ್ಕೆ ವ್ಯವಸ್ಥೆ ಮಾಡಿದರು. ಮಲೇರಿಯಾ ರೋಗ ಹರಡುವುದಕ್ಕೂ ನಾಲಾ ನೀರಿನ ವ್ಯವಸಾಯಕ್ಕೂ ಹಾಗೂ ಬೆಳೆಗಳಿಗೂ ಯಾವುದೇ ಸಂಬಂಧವಿಲ್ಲ ಎಂಬ ವಿಷಯವನ್ನು ಇರ್ವಿನ್‌ನಾಲಾ ಬಯಲಿನ ಜನರಿಗೆ ಮನಮುಟ್ಟುವಂತೆ ತಿಳಿಸಿದರು.[೨೩]

ಹೀಗೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಇರ್ವಿನ್ ನಾಲಾಬಯಲಿನ ಜನರನ್ನು ಕಾಡಿದ್ದ ಮಲೇರಿಯಾ ರೋಗವು ಹೆಚ್ಚು ಬಾಧಿಸಿತ್ತು. ಮೈಸೂರು ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳಿಂದ ಇದೊಂದು ಸಾಂಕ್ರಾಮಿಕ ರೋಗವಾದರೂ ಹರಡುವುದನ್ನು ತಡೆಗಟ್ಟಿತು. ಜನರಲ್ಲಿ ರೋಗದ ಬಗ್ಗೆ ಅರಿವು ಮೂಡಿಸುವುದರಲ್ಲಿ ಯಶಸ್ವಿಯಾಯಿತು. ಪರಿಣಾಮವಾಗಿ ಆಗಬಹುದಾದ ಅನಾಹುತದ ಪ್ರಮಾಣವು ಕಡಿಮೆಯಾಯಿತು.

ಅಡಿಟಿಪ್ಪಣಿಗಳು

೧. ಶಿವರಾಮು ಎಸ್., ೨೦೧೫, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಮಂಡ್ಯ ಜಿಲ್ಲೆ, ಮಂಡ್ಯ, ಪು. ೧೫.

೨. Mysore Gazetteer, Vol. III, p. 1454.

೩. The International Health Division of the Rockefeller Foundation, p. 122 to 124.

೪. Shama Rao, Modern Mysore, Vol. II, p. 233.

೫. ಶ್ರೀನಿವಾಸರಾವ್ ಕೆ.ಆರ್., ಮೈಸೂರು ಕೈಪಿಡಿ, ಪು. ೫೮.

೬. ೧೯೩೨ರ ಜೂನ್‌ನಲ್ಲಿ ಇರ್ವಿನ್ ನಾಲೆಯಲ್ಲಿ ನೀರು ಹರಿದು ಬಂದಿತು.

೭. Report on the Administrative of Mysore for the year 1932, p. 140.

೮. ಸಾಧ್ವಿ ಪತ್ರಿಕೆ, ದಿನಾಂಕ: ೮-೮-೧೯೩೨.

೯. Report on the Administrative of Mysore for the year 1940, p. 21.

೧೦. Ibid, 1947, p. 142.

೧೧. Report on the Administrative of Mysore for the year 1932, p. 139.

೧೨. Ibid, p. 139.

೧೩. Ibid, p. 140.

೧೪. Ibid, 1937-1938, p. 119.

೧೫. Ibid, 1939-40, p. 121.

೧೬. Ibid, 1934-1935, p. 137.

೧೭. Triveni - Measures to Combat Malaria in Colonial Mysore, JSRP, Vol. 4, Issue 3, March 2014, p. 3.

೧೮. ಹೆಚ್.ಕೆ. ವೀರಣ್ಣಗೌಡರು ಆಲಕೆರೆ ಇನಾಂದಾರ್ ಬಿ.ವಿ. ವೆಂಕಟಾಚಾರ್ಯರಿಗೆ ಬರೆದ ಪತ್ರ, ದಿನಾಂಕ: ೦೩-೦೯-೧೯೪೧, ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

೧೯. ಸಾಧ್ವಿ ಪತ್ರಿಕೆ, ದಿನಾಂಕ: ೨೧-೧೨-೧೯೪೩.

೨೦. ಮೈಸೂರು ವಿಧಾನ ಪರಿಷತ್ತು ನಡಾವಳಿಗಳು, ಬಜೆಟ್ ಚರ್ಚೆ, ದಿನಾಂಕ: ೨೫-೦೬-೧೯೩೬.

೨೧. ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಡಾವಳಿಗಳು, ಬಜೆಟ್ ಚರ್ಚೆ, ದಿನಾಂಕ: ೧೫-೦೬-೧೯೩೭.

೨೨. ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಡಾವಳಿಗಳು, ದಿನಾಂಕ: ೧೩-೧೦-೧೯೪೫.

೨೩. ಶಿವರಾಮು ಎಸ್., ಮೈಸೂರು ಸಂಸ್ಥಾನದ ವ್ಯವಸಾಯ ಅಭಿವೃದ್ಧಿಯಲ್ಲಿ ಡಾ. ಲೆಸ್ಲಿ ಸಿ. ಕೋಲ್‌ಮನ್‌ರ ಪಾತ್ರ, JSS CWM Quest Journal, Vol. 7, Issue 2, September 2019, p. 21.

◆◆

ಹಳ್ಳಿಕೇರಿ ಎಫ್.ಟಿ.

ಎಂ.ಎನ್. ಲಿಂಗಪ್ಪ : ಹಾಲುಮತ ಸಮಾಜ ಸಂಸ್ಕೃತಿ ಚಿಂತಕ

ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದವರೆಗೆ ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಹೋರಾಟ, ಸಮಾಜ ಸಂಘಟನೆಗಳಾಗಲಿಕ್ಕೆ ನಾಡಿನಾದ್ಯಂತ ಅನೇಕ ಕಾರ್ಯಕ್ರಮಗಳು ನಡೆದವು. ಹಾಲುಮತ ಸಮಾಜದ ಸಂಘಟನೆಗಾಗಿ, ಶೈಕ್ಷಣಿಕ ಬೆಳವಣಿಗೆಗಾಗಿ ಅನೇಕ ಮಹನೀಯರು ಕಾಯಾವಾಚಾ ಮನಸಾಪೂರ್ವಕವಾಗಿ ದುಡಿದಿದ್ದಾರೆ. ನೀಲಪ್ಪ ಹಳವಳ್ಳಿ(೧೯೧೦), ವಿ.ಆರ್. ಹನುಮಂತಯ್ಯ(೧೯೨೬), ಕರಿಯಪ್ಪ ಹುಚ್ಚಣ್ಣವರ (೧೯೩೬), ಯಲ್ಲನಗೌಡ ಅತ್ತಿಕೊಳ್ಳ (೧೯೪೭) ಮೊದಲಾದವರು ಹಾಲುಮತ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕೆನ್ನುವ ದೃಷ್ಟಿಯಿಂದ ಗ್ರಂಥ ರಚನೆ ಹಾಗೂ ಪತ್ರಿಕೆಗಳನ್ನು ಹೊರತಂದಿದ್ದಾರೆ. ಆ ಪ್ರಮುಖರ ಸಾಲಿಗೆ ಸೇರ್ಪಡೆಯಾಗಬಹುದಾದ ಮತ್ತೊಬ್ಬ ಮಹನೀಯರೆಂದರೆ ಎಂ.ಎನ್.ಲಿಂಗಪ್ಪ. ಪತ್ರಿಕಾ ಸಂಪಾದಕರಾಗಿ, ಮುದ್ರಣಾಲಯದ ಮಾಲೀಕರಾಗಿ, ಗ್ರಂಥಕರ್ತೃರಾಗಿ, ಅನುವಾದಕರಾಗಿ, ಬಹುಭಾಷಾ ಪ್ರವೀಣರಾಗಿ ಹಾಲುಮತ ಸಮುದಾಯದ ಜನಜಾಗೃತಿಗಾಗಿ ಎಂ.ಎನ್. ಲಿಂಗಪ್ಪನವರು ಮಾಡಿದ ಕಾರ್ಯಗಳು ಸ್ಮರಣಾರ್ಹವಾಗಿವೆ.

ವಿಪರ್ಯಾಸದ ಸಂಗತಿಯೆಂದರೆ ಎಂ.ಎನ್.ಲಿಂಗಪ್ಪನವರ ಹುಟ್ಟಿದ ಊರು, ಪಡೆದ ಶಿಕ್ಷಣ, ಕೌಟುಂಬಿಕ ವಿವರ, ಈಗ ಅವರ ವಂಶಸ್ಥರು ಯಾರು? ಅವರು ಎಲ್ಲಿದ್ದಾರೆ ? ಎಂಬ ಸಂಗತಿಗಳು ತಿಳಿದುಬರುತ್ತಿಲ್ಲ. ನಾನು ಕಳೆದ ಇಪ್ಪತ್ತು ವರ್ಷಗಳಿಂದ ಲಿಂಗಪ್ಪನವರ ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಇರುವ ಬಗ್ಗೆ ತಿಳಿಯಲು ಸಾಕಷ್ಟು ಪ್ರಯತ್ನಪಡುತ್ತಿದ್ದೇನೆ. ಸ್ಪಷ್ಟವಾಗಿ ಈವರೆಗೂ ಗೊತ್ತಾಗುತ್ತಿಲ್ಲ. ಆದರೆ ಅವರ ಲೆಟರ್ ಹೆಡನಲ್ಲಿ "ಆರ್ಯ ಕ್ಷತ್ರಿಯ ನೃಪಲಲಾಮರ ಸಂತತಿಯವರಾದ ಧನಗರ್ ಜಗತ್ಪಾವನ ಆಫೀಸ್, ಬೆಂಗಳೂರು ಸಿಟಿ" ಎಂದಿದೆ. ಇದನ್ನು ನೋಡಿದರೆ ಅವರು ಬೆಂಗಳೂರು ನಗರವಾಸಿಗಳಾಗಿದ್ದರು ಎಂದು ಹೇಳಬಹುದು. ಮೇಲಾಗಿ ಮಲ್ಹಾರಿರಾವ್ ಹೋಳ್ಕರ್ ಪ್ರೆಸ್, ಪ್ರಿಂಟರ್, ಪಬ್ಲಿಷರ್ಸ್‌ರಾಗಿ ಪ್ರಸಿದ್ಧರಾಗಿದ್ದರು. ಅಲ್ಲದೇ ಇವರನ್ನು ಕುಲಚಿಂತಾಮಣಿ ಎಂದು ಸಮಾಜವು ಗೌರವಿಸಿದೆ.

ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
ವಿಜಯನಗರ ಜಿಲ್ಲೆ
ಮೊ: ೯೪೪೮೧ ೪೮೦೨೨

ಇವರು ರಚನೆ ಮಾಡಿದ ಗ್ರಂಥಗಳು

೧. ಕುರುಬರ ಕೈಪಿಡಿ – ೧ – ೧೯೧೭

೨. ಕುರುಬರ ಕೈಪಿಡಿ – ೨ ೩. ಆಚಾರ ಕಲಾನಿಧಿ – ೧೯೧೭

೪. ಕುರುಕುಲ ಪ್ರಭ ೫. ಕುರುಕುಲ ದರ್ಪಣ

ಪತ್ರಿಕೆಗಳು

೧. ಕುರುವಿಜಯ – ೧೯೧೪, ೨. ಕುರುಬರ ಜಗತ್ಪಾವನ – ೧೯೨೬, ೩. ಕುರುಬರ ಕುಲಕೀರ್ತಿ

ಕುರುಬ ಸಮುದಾಯ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು ಎಂಬ ಸದಾಶಯವನ್ನು ಸದಾ ಹೊಂದಿದ್ದರು ಎಂಬುದು ಅವರು ಪ್ರಕಟಿಸಿದ ಪತ್ರಿಕೆಗಳಿಂದ ತಿಳಿದು ಬರುವ ಸಂಗತಿ. ಈಗ ನನಗೆ ದೊರೆತ ಕುರುಬರ ಕೈಪಿಡಿ ಗ್ರಂಥ ಮತ್ತು ಜಗತ್ಪಾವನ ಪತ್ರಿಕೆಯ ಕೆಲವು ಸಂಚಿಕೆಗಳ ಆಧಾರದಿಂದ ಲಿಂಗಪ್ಪನವರು ಸಮುದಾಯದ ಇತಿಹಾಸವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂಬ ಕಳಕಳಿಯನ್ನು ಮೇಲಿಂದ ಮೇಲೆ ವ್ಯಕ್ತಪಡಿಸಿದ್ದನ್ನು ಕಾಣುತ್ತೇವೆ.

ಕುರುಬರ ಕೈಪಿಡಿ (೧೯೧೭)

ಟುಂಕೂರು(ತುಮಕೂರು) ಡಿಸ್ಟ್ರಿಕ್ಟು ಕುಣಿಗಲ್ ತಾಲ್ಲುಕು ಅಮೃತೂರು ಸಮ್ಮತು ಹೊಸಕೆರೆ ಗ್ರಾಮದ ಈಶ್ವರದೇವರ ಸನ್ನಿಧಾನದಲ್ಲಿ ಕುಣಿಗಲ್ಲು ಮತ್ತು ನಾಗಮಂಗ್ಲ ತಾಲ್ಲೂಕಿನ ಒಕ್ಕಲಿಗರೆಲ್ಲರೂ ೧೯೧೨ ಜುಲೈ ೧೧ರಂದು ಸಭೆ ಸೇರಿದರು. ಈ ಸಭೆಯಲ್ಲಿ ಒಟ್ಟು ಆರು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಅದರಲ್ಲಿ ೫ನೆಯ ನಿರ್ಣಯ ಹೀಗಿದೆ : "ನಮ್ಮ ಕೆಲಸಗಳಿಗಾಗಿ ಬರುವ ಅಗಸ ಹಜಾಂ ಕುರುಬ, ಕುಂಬಾರ ಬೆಸ್ತ ಬೇಡ ಮುಂತಾದ ವಿಲೋಮ ಜಾತಿ ಜನರಿಗೆ ಅನ್ನೋದಕ(ಆಹಾರ–ನೀರು)ಗಳನ್ನು ಕೊಟ್ಟರೆ ಅವರ ಎಂಜಲು ಮೈಲಿಗೆಗಳ ಸಂಪರ್ಕವಾಗದಂತೆ ಇರಬೇಕು. ಈ ನಿರ್ಣಯಗಳನ್ನು ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟಿಸಿದಾಗ ಬೆಂಗಳೂರು ಮತ್ತು ಮೈಸೂರು ಭಾಗದ ಕುರುಬರು ವಿರೋಧಿಸಿ, ಮುಖಂಡರಾದ ಬೋಜಪ್ಪ ಮತ್ತು ಲಕ್ಕಣ್ಣನವರ ಬೆಂಗಳೂರು ಸಿಟಿಯಲ್ಲಿರುವ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ದಾವೆಯನ್ನು ಹೂಡುತ್ತಾರೆ. ಕುರುಬರಿಗೂ ಒಕ್ಕಲಿಗರಿಗೂ ಮತಸಂಬಂಧವಾದ ವ್ಯಾಜ್ಯವು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಜರುಗಿ ಗ್ರಂಥಗಳನ್ನು ಪರಿಶೀಲಿಸಿ ಘನವುಳ್ಳ ಮ್ಯಾಜಿಸ್ಟ್ರೇಟ್‌ರವರು ೧೯೧೪ ನವಂಬರ ೨೦ರಂದು "ತಪ್ಪಿತಸ್ಥರು ನೂರು ರೂಪಾಯಿ ಕೊಡಬೇಕು. ತಪ್ಪಿದರೆ ಒಂದು ತಿಂಗಳು ಶಿಕ್ಷೆ ಅನುಭವಿಸಬೇಕು" ತೀರ್ಮಾನ ನೀಡಿದರು. ಈ ತೀರ್ಮಾನದ ವಿವರಗಳನ್ನು ಲಿಂಗಪ್ಪನವರು ಪಂಡಿತರ ಸಹಾಯದಿಂದ ಇಂಗ್ಲಿಷನಿಂದ ಕನ್ನಡಕ್ಕೆ ಅನುವಾದ ಮಾಡಿಸಿ ೧೯೧೭ರಲ್ಲಿ ಕುರುಬರ ಕೈಪಿಡಿ ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಕುರುಬರ ಜಗತ್ಪಾವನ ಪತ್ರಿಕೆ

ಲಿಂಗಪ್ಪನವರು ಬಹಳ ಕಷ್ಟಪಟ್ಟು ಪ್ರಕಟಿಸುತ್ತಿದ್ದ ಪತ್ರಿಕೆ ಇದಾಗಿದೆ. "ಎರಡು ರೂಪಾಯಿ ನಾಲ್ಕು ಆಣೆಗಳ ಉದಾರತೆ ಇಲ್ಲದೆ ಹೋದ ಬಳಿಕ ಕುರುಬರ ವೀರಯ್ಕೆ ಅಗೌರವ ಬರುತ್ತದಲ್ಲವೇ" ಎಂದು ಹೇಳುವುದರ ಮೂಲಕ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದರು ಎಂಬುದು ಪತ್ರಿಕೆಯಿಂದ ಮನದಟ್ಟಾಗುತ್ತದೆ. ಇನ್ನೂ ಮುಂದುವರೆದು "ಈ ನಮ್ಮ ಜಗತ್ಪಾವನಕ್ಕೆ ಸಹಾಯಕರಾದರೆ ತಮ್ಮಂತಹ ಸಾವಿರಾರು ಜನ ಉದಾರಚರಿತರ ಸಹಾಯದಿಂದ ಈ ಪತ್ರಿಕೆಯು ಲಕ್ಷೋಪಲಕ್ಷ ನಮ್ಮ ಜನರನ್ನು ಉಚ್ಛ್ರಾಯ ಸ್ಥಿತಿಗೆ ತರುವುದರಲ್ಲಿ ಅಡ್ಡಿಯಿಲ್ಲ. ಇದಕ್ಕಾಗಿ ತಾವು ಸಹಾಯ ಮಾಡುವುದಲ್ಲದೆ, ತಮ್ಮ ಪ್ರಾಂತದಲ್ಲಿರುವ ಮತಾಭಿಮಾನಿಗಳನ್ನೂ ಇದಕ್ಕೆ ಸಹಾಯಕರಾಗುವಂತೆ ಪ್ರೋತ್ಸಾಹಿಸಲು ಬೇಡುವೆವು. ಈ ಪತ್ರಿಕೆಗಾಗಿ ತಾವು ಕೊಡುವ ವರ್ಷದ ಚಂದಾ ೨ ರೂ. ೪ ಆಣೆ ಎಂಬುದು ತಮ್ಮ ಮನೆಯ ಒಂದೇ ಒಂದು ದಿನದ ಖರ್ಚಿನ ಮೊಬಲಗಾಗಲಾರದು. ಇಷ್ಟು ಅಲ್ಪ ಹಣದ ವೆಚ್ಚದಿಂದ ಲಕ್ಷೋಪಲಕ್ಷ ನಮ್ಮ ಜನರನ್ನು ಸನ್ಮಾರ್ಗಾವಲಂಬಿಗಳನ್ನಾಗಿ ಮಾಡುವ ಧರ್ಮಕಾರ್ಯಕ್ಕಿಂತ ಅತಿಶಯವಾದ್ದೇನಿದೆ? ಏಳಿರಿ, ತಾಮಸ ಮಾಡದೆ ಈ ಪತ್ರಿಕೆಯ ಚಂದಾ ಹಣವನ್ನು ಒಂದು ವಾರದೊಳಗಾಗಿ ಮನಿಯಾರ್ಡರ ಮಾಡಿರಿ" ಎಂಬ ಮಾತುಗಳಲ್ಲಿ ಲಿಂಗಪ್ಪನವರ ಸಾಹಿತ್ಯ ಸಮಾಜ ಸಂಸ್ಕೃತಿಯ ಬಗೆಗಿನ ಚಿಂತನೆ, ಕಳಕಳಿ ಎಷ್ಟೊಂದು ಗಾಢವಾಗಿತ್ತು ಎಂಬುದು ಗೊತ್ತಾಗುತ್ತದೆ.

ಸಮಾಜದಲ್ಲಿ ಸಾಮರಸ್ಯ, ಶಿಕ್ಷಣ, ಆರ್ಥಿಕ –ಹೀಗೆ ಎಲ್ಲ ನೆಲೆಗಳಿಂದ ಸಬಲತೆ ಹೊಂದಬೇಕು ಎಂಬುದು ಅವರ ಆಶಯವಾಗಿತ್ತು. "ಸ್ವದೇಶಾಭಿಮಾನ, ಸ್ವಜನಾಭಿಮಾನ, ಐಕ್ಯಮತ, ಪರಸ್ಪರ ಮೈತ್ರಿ ಎಂಬ ಗುಣಗಳು ಅಸಾಧಾರಣ ವಾದವುಗಳು. ಇವನ್ನು ಆಚರಣೆಯಲ್ಲಿ ತರಬೇಕಾದರೆ ಜನಾಂಗವೆಲ್ಲವೂ ಒಂದೇ ಮನೆಯೆಂಬ ಭಾವನೆ ಹುಟ್ಟಬೇಕು" ಎಂಬ ಅಭಿಪ್ರಾಯ ಅವರದಾಗಿತ್ತು. ಕುರುಬರು ಆರ್ಯರಲ್ಲವೇ?, ಪಲ್ಲವರೇ ಕುರುಬರು, ಆಂಧ್ರರಾಜರು ಅಂದೇ ಕುರುಬರಲ್ಲವೇ?,

ಉಪ್ಪಾರರ ಚರಿತ್ರೆ, ಬಿಜ್ಜಳನು ಜೈನನಲ್ಲ? ಬಾಲ್ಯವಿವಾಹ ಖಂಡನೆ, ಮಹಾಭಾರತವೂ ಕರ್ಣನು, ಚೋಳರು ಕುರುಬರಲ್ಲವೇ? –ಹೀಗೆ ಅನೇಕ ಲೇಖನಗಳನ್ನು ಲಿಂಗಪ್ಪನವರು ಪ್ರಕಟಿಸಿದ್ದಾರೆ.

ಉದಾಹರಣೆಗಾಗಿ, 'ದ್ರೋಣಾಶ್ವತ್ಥಾಮರೂ, ಮಹಾಭಾರತವೂ' (೬–೩, ೧೯೩೧ ಡಿಸೆಂಬರ್ ಸಂಚಿಕೆ) ಎಂಬ ಲೇಖನವನ್ನು ಸ್ಥೂಲವಾಗಿ ಅವಲೋಕಿಸಿದಾಗ, ಲಿಂಗಪ್ಪನವರ ಚಿಂತನ ಕ್ರಮ ಹೇಗಿತ್ತು ಎಂಬುದು ತಿಳಿದುಬರುತ್ತದೆ. ಈ ಲೇಖನದ ಆರಂಭದಲ್ಲಿ ಅವರು ಕಲಚೂರಿ ವಂಶಸ್ಥನಾದ ಬಿಜ್ಜಳನು ಜೈನನೋ? ವೀರಶೈವನೋ? ಎಂಬ ಜಿಜ್ಞಾಸೆ ಇರುವುದನ್ನು ಗುರುತಿಸಿದ್ದಾರೆ. ಇದಕ್ಕಾಗಿ ವೆಂಕಟಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಆಂದ್ರ ಬಸವಪುರಾಣವನ್ನು ಸಂಪಾದಿಸಿದ ವೇಟೂರು ಪ್ರಭಾಕರಶಾಸ್ತ್ರೀ ಅವರ ಪೀಠಿಕಾ ಭಾಗದ ಹೇಳಿಕೆಗಳು, ಜೊತೆಗೆ ಅನೇಕ ಶಾಸನ, ಶಿವಶರಣರ ವಚನಗಳನ್ನು ಉಲ್ಲೇಖಿಸುತ್ತಾರೆ. ಇವೆಲ್ಲವುಗಳನ್ನು ಗಮನಿಸಿದ ಲಿಂಗಪ್ಪನವರು ಬಿಜ್ಜಳನು ಜೈನನಲ್ಲೆಂಬ ಸಿದ್ಧಾಂತವನ್ನು ಮಂಡಿಸಿದ್ದಾರೆ. ಮುಂದುವರೆದು, ಮಹಾಭಾರತ, ಭಾಗವತ, ರಾಮಾಯಣ ಮೊದಲಾದ ಗ್ರಂಥಗಳಲ್ಲಿ ಅಲ್ಲದ ಸಲ್ಲದ, ಕಾಣದ ಕೇಳದ ಜರಗದ ಸುಳ್ಳು ವಿಷಯಗಳೇ ತುಂಬಿ ತುಳುಕುತ್ತಿವೆ. ಅಂಥ ಎಲ್ಲ ತಪ್ಪುಗಳನ್ನು ಸರಿಪಡಿಸಬೇಕಾದ ಅಗತ್ಯವಿದೆ. ವಿವಿಧ ದಾಖಲೆಗಳಿಂದ ದ್ರೋಣ ಅಶ್ವತ್ಥಾಮರು ಕ್ಷತ್ರಿಯರು, ಮೇಲಾಗಿ ಪಲ್ಲವ ವಂಶದವರು. ಆ ಪಲ್ಲವರೇ ಕುರುಬರು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಈ ಬಗ್ಗೆ ಇನ್ನೂ ಚರ್ಚೆಗಳು ನಡೆಯುತ್ತಲೇ ಇವೆ. ಸಂಶೋಧನೆ ಎಂದರೆ ಕಲಬುರ್ಗಿಯವರು ಹೇಳುವಂತೆ 'ಅಲ್ಪ ವಿರಾಮದಿಂದ ಅರ್ಧ ವಿರಾಮ, ಅರ್ಧ ವಿರಾಮದಿಂದ ಪೂರ್ಣ ವಿರಾಮದತ್ತ ಸಾಗುವ ಕ್ರಿಯೆಯಾಗಿದೆ'. ಈ ಹಿನ್ನೆಲೆಯಲ್ಲಿ ಇಂಥ ವಿಷಯಗಳ ಬಗ್ಗೆ ಇನ್ನೂ ನಾವು ಯಾವುದೇ ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ ಎಂದು ಮಾತ್ರ ಈಗ ಹೇಳಬಹುದು.

ಇಂಥ ಎಲ್ಲ ಲೇಖನಗಳನ್ನು ಬರೆಯುವಾಗ ಲಿಂಗಪ್ಪನವರು ವಿವಿಧ ಮೂಲಗಳಿಂದ ಆಕರ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆ. ಶಿಲಾಲಿಪಿಗಳು, ತಾಮ್ರಶಾಸನಗಳು, ದಾಖಲೆಗಳು, ಸಾಹಿತ್ಯಕ ಆಧಾರಗಳನ್ನು ಬಳಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಪತ್ರಿಕೆಯನ್ನು ಓದಿದ ಅನೇಕ ಅಂದಿನ ಮಹನೀಯರು ಹರ್ಷಪಟ್ಟು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಪತ್ರದ ಮುಖೇನ ದಾಖಲಿಸಿದ್ದಾರೆ. ಅಂಥ ಪತ್ರಗಳಲ್ಲಿ ಕೆಲವನ್ನಾಯ್ದು ಲಿಂಗಪ್ಪನವರು ಜಗತ್ಪಾವನ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ(೧೯೨೬ ಡಿಸೆಂಬರ ಸಂಚಿಕೆ, ಪುಟ ೩೧). ಅವುಗಳಲ್ಲಿ ಕೆಲವನ್ನು ಈಗ ಗಮನಿಸಬಹುದು.

೧. ಚಿತ್ರದುರ್ಗದ ಪಾಳೆ ಮದಕರಿನಾಯಕರು, ಶಂಕರಕಲ್ಲ, ೧.೧.೧೯೨೭

"ತಮ್ಮ ಜಗತ್ಪಾವನವನ್ನು ಓದಿದೆನು. ಸತ್ಯಸನಾತನಗಳಾಗಿ, ದೈವಭಕ್ತಿ, ರಾಜಭಕ್ತಿ, ವಿದ್ಯಾಪ್ರಸಾರ ಮುಂತಾದ ವಿಷಯಗಳು ಅಡಕವಾಗಿವೆ. ಅಜ್ಞಾನಾಂಧಕಾರರಾಗಿರುವ ಭಾರತೀಯರಿಗೆ ಸತ್ಯಾಸತ್ಯ ವಿವೇಕೋದಯವನ್ನು, ಸಮರ್ಥವಾದ ಇದನ್ನು ಚಿರಂಜೀವಿಯಾಗುವಂತೆ ಭಗವಂತನು ಅನುಗ್ರಹಿಸಲಿ. ಇದರ ಪೋಷಣೆಗೆ ನಾವೂ ಧನಸಹಾಯ ಮಾಡಲಿಚ್ಚಿಸುತ್ತೇವೆ."

೨. ಕರ್ನಾಟಕ ಬ್ರಾಹ್ಮಣ ಚಲುವಯ್ಯನವರು

"ತಮ್ಮ ಜಗತ್ಪಾವನವು ಇಂಡಿಯ ದೇಶಿಯರ ಘೋರನಿದ್ರೆಯನ್ನು ತಪ್ಪಿಸಿ ಜಾಗ್ರತಗೊಳಿಸುವುದು. ಇಂತಹ ಪತ್ರಿಕೆಯು ಚಿರಾಯುವಾಗಿರಲು ನಾವು ೨೫ ರೂ. ಕಳುಹಿಸಿದ್ದೇವೆ"

೩. ಪಾಳ್ಯ ಮುನಿಯಪ್ಪಗೌಡರು. ೨೯.೧೨.೧೯೨೬

"ನಮ್ಮ ಒಕ್ಕಲಿಗ ಜಾತಿಯವರು ಜಗದಾದಿ ಕಾಲದಲ್ಲಿ ಯಾರೆಂಬುದನ್ನು ತಿಳಿಯಲು ಕುತೂಹಲಿಯಾಗಿ ನಮ್ಮ ಒಕ್ಕಲಿಗರ ಪತ್ರಿಕೆಯನ್ನು ಓದುತ್ತಿದ್ದೇವೆ. ಅದರಲ್ಲಿ ಈ ವಿಷಯವೇ ಬರಲಿಲ್ಲ. ತಾವಾದರೂ ತಮ್ಮ ಜಗತ್ಪಾವನದಲ್ಲಿ ಪ್ರಕಟಿಸಿ, ನನ್ನಂತಹ ಜಿಜ್ಞಾಸುಗಳಿಗೆ ಉಪಕಾರ ಮಾಡಲು ಬೇಡುತ್ತೇವೆ. ಇದನ್ನು ನನಗೆ ವಿ.ಪಿ. ಮಾಡಿರಿ." ಮೇಲಿನ ಉಲ್ಲೇಖಗಳನ್ನು ಗಮನಿಸಿದರೆ ಲಿಂಗಪ್ಪನವರನ್ನು, ಅವರ ಸಮಾಜ–ಸಾಹಿತ್ಯ–ಸಂಸ್ಕೃತಿ ಬಗೆಗಿನ ಕಾರ್ಯಗಳನ್ನು ಎಲ್ಲರೂ ಮೆಚ್ಚುತ್ತಿದ್ದರು. ಮತ್ತು ಅವರಿಗೆ ಸಲಹೆ–ಸಹಕಾರ–ಸಹಾಯಗಳನ್ನು ಮಾಡುತ್ತಲಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಆಚಾರ ಕಲಾನಿಧಿ (೧೯೧೭)

ಕುರುಬರ ಜಾತಿಯ ವಿಷಯದಲ್ಲಿ ನಿಸ್ಪೃಹರಾದ ಸಿವಿಲಿಯನ್ ಆಫೀಸರುಗಳು ಶಿಲಾಲಿಪಿ, ತಾಮ್ರಶಾಸನ, ಹಳೇನಾಣ್ಯ





ಮುಂತಾದ ಆಕರಗಳ ಶೋಧನೆಯಿಂದ ಆಚಾರ ಕಲಾನಿಧಿ ಎಂಬ ಗ್ರಂಥವು ರಚನೆಗೊಂಡಿದೆ. ಅಲ್ಲದೇ ಶೃತಿ, ಸ್ಮೃತಿ ಪುರಾಣ, ಇತಿಹಾಸಗಳ ದಾಖಲೆಯಿಂದಲೂ ಕುರುಬರ ಕುಲ ಎಂತಹುದು? ಇದರ ಮೂಲ ಪಿತೃಗಳ ಚರಿತ್ರೆ ಏನು? ಈ ಜನಸಮುದಾಯದ ಪುರೊಭಿವೃದ್ಧಿಗೆ ಸಾಧಕಗಳಾದ ಧರ್ಮಗಳಾವುವು? ಎಂಬಿತ್ಯಾದಿ ಅಮೂಲ್ಯವಾದ ವಿಷಯಗಳು ಇಲ್ಲಿವೆ.

ಹೀಗೆ ಎಂ.ಎನ್. ಲಿಂಗಪ್ಪ ಅವರು ಹಾಲುಮತ ಸಮಾಜದ ಜಾಗೃತೆಗಾಗಿ ಹಗಲಿರುಳು ದುಡಿದಿದ್ದಾರೆ. ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿ ಕುರುಬರ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಅರಿತುಕೊಳ್ಳಬೇಕು. ಪ್ರಚಾರ ಮಾಡಬೇಕು ಎಂಬ ಕಳಕಳಿ ಅವರದಾಗಿತ್ತು. ಲಿಂಗಪ್ಪನವರು ಪ್ರಕಟಿಸಿದ ಗ್ರಂಥಗಳಲ್ಲಿ ಕುರುಬರ ಕೈಪಿಡಿ ಗ್ರಂಥ ಮಾತ್ರ ಲಭ್ಯವಾಗಿದೆ. ಇನ್ನುಳಿದ ಗ್ರಂಥಗಳನ್ನು ಶೋಧನೆ ಮಾಡಬೇಕಾದ ಅಗತ್ಯವಿವೆ. ಜಗತ್ಪಾವನ ಪತ್ರಿಕೆಯ ಕೆಲವು ಸಂಚಿಕೆಗಳು ಮಾತ್ರ ನನಗೆ ದೊರೆತಿವೆ. ಇನ್ನುಳಿದವುಗಳನ್ನು ನಾವು ಸಂಗ್ರಹಿಸುವ ಪ್ರಯತ್ನ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಯುವ ಸಂಶೋಧಕರು ಗಮನಹರಿಸಬೇಕಾದ ಅಗತ್ಯವಿದೆ.

◆◆

೧೦೩

ಸೀತಾರಾಮ ಪಿ.

೧೮೬೭ರ ಇಂಡಿಯ ಮತ್ತು ಅನ್ಯ ದೇಶದ ವಾರ್ತಿಕ ಪತ್ರಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲಿಗೆ ಕ್ರಿ.ಶ. ೧೮೪೩ರಲ್ಲಿ ಹರ್ಮನ್ ಮೊಗ್ಲಿಂಗ್‌ನಿಂದ ಕಲ್ಲಚ್ಚಿನಲ್ಲಿ ಅಚ್ಚಾದ 'ಮಂಗಳೂರು ಸಮಾಚಾರ' ಕನ್ನಡ ಪತ್ರಿಕೆ ಹೊರಬರುತ್ತದೆ.[೧] ಮುಂದೆ ೧೮೬೭ರಲ್ಲಿ ಕಾಣಿಸಿಕೊಳ್ಳುವ ಇಂಡಿಯ ಮತ್ತು ಅನ್ಯ ದೇಶದ ವಾರ್ತಿಕ ಪತ್ರಿಕೆ ಪ್ರಮುಖ ಸುದ್ದಿಪತ್ರಿಕೆಯಾಗಿ ಹೊರಹೊಮ್ಮಿತು. ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡದಲ್ಲಿ ಪತ್ರಿಕೆಗಳನ್ನು ಹೊರತರುವ ನೆಲೆಯಲ್ಲಿ ಎರಡು ಸ್ವರೂಪವನ್ನು ಗುರುತಿಸಬಹುದಾಗಿದೆ. ರಾಷ್ಟ್ರಮಟ್ಟದಲ್ಲಿ ನಡೆದಂತೆ, ಇಲ್ಲಿಯೂ ಮೊದಲಿಗೆ ಬಾಸೆಲ್ ಮಿಷನ್‌ನಿಂದ ಬೇರೆ ಬೇರೆ ಉದ್ದೇಶಗಳೊಂದಿಗೆ ಬೇರೆ ಬೇರೆ ಸ್ವರೂಪದ ಪತ್ರಿಕೆಗಳು ವಿದೇಶಿಗರಿಂದಲೇ ಆರಂಭಗೊಳ್ಳುತ್ತವೆ. ನಂತರದಲ್ಲಿ ದೇಶಿಗರಿಂದ ೧೯ನೇ ಶತಮಾನದ ಉತ್ತರಾರ್ಧದಿಂದ ವಿಭಿನ್ನ ಉದ್ದೇಶದ ನೆಲೆಯಲ್ಲಿ ಪತ್ರಿಕೆಗಳು ಕಾಣಿಸಿಕೊಳ್ಳುತ್ತವೆ.

೧೮೬೭ರಲ್ಲಿ ಜೆ. ಹುಂಜಿಕರ್ ನೇತೃತ್ವದಲ್ಲಿ, ಬಂದಿರುವ ಇಂಡಿಯ ಮತ್ತು ಅನ್ಯ ದೇಶದ ವಾರ್ತಿಕ ಪತ್ರಿಕೆಯು ತಿಂಗಳಿಗೆ ಎರಡರಂತೆ ಪ್ರಕಟಗೊಳ್ಳುತ್ತದೆ.[೨] ಈ ಪತ್ರಿಕೆಯಲ್ಲಿ 'ಕಂನಡ ವಾರ್ತಿಕ' ಎಂಬ ಶೀರ್ಷಿಕೆಯಡಿಯಲ್ಲಿ 'ಇದುವರೆಗೆ ನಮ್ಮ ಪತ್ರಿಕೆಯಲ್ಲಿ ಚರಿತ್ರ ಸಂಗ್ರಹ ಇತ್ಯಾದಿ ವಿಷಯಗಳನ್ನು ಕುರಿತು ಮುಖ್ಯವಾಗಿ ಪ್ರಕಟಿಸಿದೆವು. ಮುಂದೆ ಸರ್ವರಿಗೂ ಪ್ರಯೋಜನ ಉಂಟಾಗಬೇಕೆಂಬುವುದು ನಮ್ಮ ಅಪೇಕ್ಷ ಇರುವವರಿಂದ ಬರುವ ಸಂಚಿಕೆಗಳಲ್ಲಿ ಹೆಚ್ಚು ವರ್ತಮಾನವನ್ನು ಪ್ರಕಟಿಸಲಾಗುವುದು'[೩] ಎಂಬುದಾಗಿ ಪ್ರಕಟಿಸುತ್ತಾರೆ. ಈ ಪತ್ರಿಕೆಯಲ್ಲಿ 'ಮಂಗಳೂರು ಸಮಾಚಾರ' ವಿಭಾಗದಲ್ಲಿ ಸ್ಥಳೀಯ ಸುದ್ದಿಗಳನ್ನು, ಹಾಗೆಯೇ 'ಇಂಡಿಯಾ ನ್ಯೂಸ್' ವಿಭಾಗದಲ್ಲಿ ರಾಷ್ಟ್ರೀಯ ಸುದ್ದಿಗಳನ್ನು ಕೊಡುತ್ತಿತ್ತು.

ಸೆಪ್ಟೆಂಬರ್ ೧೩, ೧೮೬೭ರಲ್ಲಿ ಇಂಡಿಯ ಮತ್ತು ಅನ್ಯದೇಶದ ವಾರ್ತಿಕ[೪] ಎಂಬ ಪತ್ರಿಕೆಯು ಮುಖ್ಯವಾಗಿ ಚರಿತ್ರಾ ಮಾಹಿತಿಯನ್ನು ನೀಡುವ ಜತೆಗೆ ಸಮಕಾಲೀನ ಸ್ಥಳೀಯ ಮತ್ತು ಜಾಗತಿಕ ವಿಷಯಗಳನ್ನು ಪ್ರಕಟ ಮಾಡುತ್ತಿತ್ತು. ಈ ಪತ್ರಿಕೆಯು ಜಾಗತಿಕ ವಿಚಾರಗಳನ್ನು ಪ್ರಕಟಿಸಲು ಇನ್ನಿತರ ಪತ್ರಿಕೆಗಳನ್ನು ಅವಲಂಬಿಸಿತ್ತು. ಉದಾಹರಣೆಗೆ, ಅಮೆರಿಕಾದಲ್ಲಿ ನಡೆಯುತ್ತಿದ್ದ ಯುದ್ಧದ ಕುರಿತಂತೆ ಮಾಹಿತಿಯನ್ನು ಹೋಮ್ ನ್ಯೂಸ್ ಎಂಬ ಪತ್ರಿಕೆಯಿಂದ ತೆಗೆದು ಪ್ರಕಟಿಸುತ್ತಿತ್ತು.[೫] ಪತ್ರಿಕೆಯು ಓದುಗರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟಿತ್ತು. ಈ ಕುರಿತಂತೆ

ಪಲ್ಲೋಡಿ ಮನೆ
ಐವತ್ತೊಕ್ಲು ಗ್ರಾಮ-೫೭೪೨೩೨
ಪಂಜ ಅಂಚೆ, ಸುಳ್ಯ ತಾಲ್ಲೂಕು
ದಕ್ಷಿಣ ಕನ್ನಡ ಜಿಲ್ಲೆ
ಮೊ: ೯೪೮೩೨ ೦೧೭೮೫

'ಯಾರಾದರೂ ದಯಮಾಡಿ ಉಪಯೋಗದ ಮತ್ತು ಸತ್ಯವಾದ ವಿಷಯಗಳನ್ನು ಕುರಿತು ಬರೆದರೆ ದೊಡ್ಡ ಉಪಕಾರವೆಂದೆಣಿಸಲಾದೀತು'[೬] ಎಂಬುದಾಗಿ ಪ್ರಕಟಣೆ ನೀಡಿತ್ತು. ದಕ್ಷಿಣ ಕನ್ನಡದ ಅಥವಾ ಸೌತ್ ಕೆನರಾದ ಪತ್ರಿಕೆಗಳಲ್ಲಿ ಓದುಗರ ಅಭಿಪ್ರಾಯಗಳನ್ನು ಸಂಗ್ರಹಿಸುವ ಮತ್ತು ಪ್ರಕಟಿಸುವ ಪ್ರಕ್ರಿಯೆಗೆ ಜೆ. ಹುಂಜಿಕರ್‌ರವರ ಇಂಡಿಯ ಮತ್ತು ಅನ್ಯದೇಶದ ವಾರ್ತಿಕ ಪತ್ರಿಕೆ ಚಾಲನೆ ಕೊಟ್ಟಿತ್ತು. ಆದರೆ ಪತ್ರಿಕೆಗೆ ಪತ್ರಗಳನ್ನು ಬರೆಯುವಂತವರು ತಮ್ಮ ಹೆಸರುಗಳನ್ನು ಎಡಿಟರ್‌ರವರಿಗೆ ತಿಳಿಸಬೇಕು ಮತ್ತು ತಿಳಿಸದಿದ್ದಲ್ಲಿ ಅಂಥ ಪತ್ರವನ್ನು ಪ್ರಕಟಿಸುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಹೇಳಿತ್ತು. ಆದರೆ ಹೆಸರು ಗೋಪ್ಯವಾಗಿಡಬೇಕು ಎಂದು ಯಾರಾದರೂ ಬಯಸಿದರೆ ಆ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತದೆ. ಈ ಮೂಲಕ ಓದುಗನ ಬಗ್ಗೆ ಪತ್ರಿಕೆಗೆ ಇರುವ ಕಾಳಜಿಯನ್ನು ನಾವಿಲ್ಲಿ ಗುರುತಿಸಬಹುದು.

ಈಗಾಗಲೇ ಸಾಮಾಜಿಕ ಧಾರ್ಮಿಕ ವಿಷಯಗಳಲ್ಲಿ ವಿವಿಧ ಸಂಘಗಳ ಮುಖಾಂತರ ಸುಧಾರಣೆಗಳ ಪ್ರಕ್ರಿಯೆ ಆರಂಭದಿಂದ, ಆಧುನಿಕ ಶಿಕ್ಷಣದ ಪ್ರಭಾವದಿಂದ ಸಮಾಜದಲ್ಲಿ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮುಕ್ತ ಚರ್ಚೆಗಳು ಆರಂಭವಾಗಿದ್ದು ಪತ್ರಿಕೆಗಳಲ್ಲೂ ಇದು ವ್ಯಕ್ತವಾಗಲಾರಂಭಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯು ಸಾಮಾಜಿಕವಾಗಿ ಕೆಲವೊಂದು ನ್ಯೂನತೆಗಳನ್ನು ಹೊಂದಿದ್ದು, ಧಾರ್ಮಿಕವಾಗಿ ಅಂಧಶ್ರದ್ಧೆಗಳನ್ನು ಅನುಕರಿಸುತಿತ್ತು ಮತ್ತು ಅನಾವಶ್ಯಕ ವೆಚ್ಚಗಳನ್ನು ಮಾಡುತಿತ್ತು.[೭] ಇಂತಹ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನವು ಪ್ರಕಟಗೊಂಡಾಗ ಸಕಾರಾತ್ಮಕ ಚರ್ಚೆಯನ್ನು ಮಾಡುತ್ತಿದ್ದರು. ಇಂಡಿಯ ಮತ್ತು ಅನ್ಯದೇಶದ ವಾರ್ತಿಕ ಪತ್ರಿಕೆಯು ಸಾಮಾಜಿಕ ಸುಧಾರಣೆಗಳ ಬಗ್ಗೆಯೂ ಒಲವನ್ನು ಹೊಂದಿದ್ದನ್ನು ತಿಳಿಯಬಹುದು. ಆ ಕಾಲಘಟ್ಟದಲ್ಲಿ ಸಾಮಾಜಿಕ ಸುಧಾರಣ ಚಳುವಳಿಗಳು ಆಗುತ್ತಿರುವಂತಹ ಸಂದರ್ಭದಲ್ಲಿ, ಇದರ ಹರಡುವಿಕೆಗೆ ಇದು ಸಹಾಯ ಮಾಡುತ್ತದೆ. ಉದಾಹರಣೆಗೆ ಸತಾರದಲ್ಲಿ ಬ್ರಾಹ್ಮಣರು ೮ ವರುಷ ಪ್ರಾಯದ ಹುಡುಗಿಯ ಮತ್ತು ೧೬ ವರುಷ ಕೆಳಗಿನ ಪ್ರಾಯದ ಹುಡುಗನ ಮದುವೆಗೆ ಹೋಗಬಾರದೆಂಬ ನಿರ್ಣಯವನ್ನು ಕೈಗೊಂಡಿದ್ದರು. ಇದನ್ನು ಪತ್ರಿಕೆಯು ಪ್ರಕಟಿಸುತ್ತದೆ[೮] ಹಾಗೆಯೇ ಸ್ತ್ರೀ ಸುಧಾರಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತಹ ಘಟನಾವಳಿಗಳನ್ನು ಸ್ತ್ರೀ ಸುಧಾರಣೆಗೆ ಪೂರಕವಾಗಿ ಪ್ರಕಟಿಸುತ್ತದೆ. ಕಾಶಿಯಲ್ಲಿ ಸ್ತ್ರೀ ವಿದ್ಯಾಪುಸ್ತಕ ಸಭೆ ಸ್ತ್ರೀಯರ ಶಿಕ್ಷಣದ ನೆಲೆಯಲ್ಲಿ ಸ್ಥಾಪಿಸಲ್ಪಡುತ್ತದೆ. ಮತ್ತು ಕಾಶಿಯಲ್ಲಿ ವಿದ್ಯೆ ಕಲಿಯುವವರ ಸಂಖ್ಯೆ ಹೆಚ್ಚಾಗಿರುವುದನ್ನು ಉಲ್ಲೇಖಿಸಿರುವ ಈ ಲೇಖನದಲ್ಲಿ, ಪತ್ರಿಕೆಯು 'ಸ್ತ್ರೀಯರಿಗೆ ವಿದ್ಯೆ ಕಲಿಸುವ ಹಾಗೆ ನಮ್ಮ ಕನ್ನಡ ಜಿಲ್ಲೆಯ ಜನರು ಸಹ ಪ್ರಯತ್ನಿಸಿದರೆ ಎಷ್ಟೋ ಒಳ್ಳೆದಾಗುವದು'[೯] ಎಂಬುದಾಗಿ ಬರೆದು ಶಿಕ್ಷಣದ ಹರಡುವಿಕೆಗೆ ಬೆಂಬಲವನ್ನು ಕೊಡುತ್ತದೆ.

ಪತ್ರಿಕೆಯು, ಕಲ್ಕತ್ತಾದಲ್ಲಿ ಒಬ್ಬ ಗೃಹಸ್ಥನ ಮನೆಯಲ್ಲಿ ಸಭೆ ನಡೆದು ವಿಧವೆಯರ ಪುನರ್ವಿವಾಹದ ಕುರಿತಂತೆ ಚರ್ಚಿಸಿತು. ಈ ಹೇಳಿಕೆಗೆ ಎಲ್ಲರೂ ವಿಧವಾ ಪುನರ್ವಿವಾಹ ಆಗಬೇಕೆಂದು ಬೆಂಬಲಿಸುವವರು ಸಹಿ ಮಾಡಬೇಕೆಂದು ಹೇಳಿದಾಗ, ಒಬ್ಬನ ಹಿಂದೆ ಒಬ್ಬನು ಪ್ರತ್ಯುತ್ತರ ಕೊಡದೆ ಸಭೆ ಬಿಟ್ಟು ಹೋಗುವ ಘಟನೆಯನ್ನು ಉಲ್ಲೇಖಿಸಿ, ಪತ್ರಿಕೆಯು ಈ ಘಟನೆಯ ಕುರಿತಂತೆ, 'ಈ ಶುಭಕಾರ್ಯಕ್ರಮವನ್ನು ಮಾಡಲಿಕ್ಕೆ ಅವರಿಗೆ ಮನಸ್ಸು ಇದ್ದರೂ ಧೈರ್ಯವಿರಲಿಲ್ಲ. ಆದ್ದರಿಂದ ಧೈರ್ಯವಿಲ್ಲದಿದ್ದರೆ ಎಲ್ಲಾ ಸುಮ್ಮನೆ ಎಂತ ಹೇಳಬೇಕು'[೧೦] ಎಂಬುದಾಗಿ ಬರೆದು ಸುಧಾರಣಾ ಕಾರ್ಯವನ್ನು ಗಟ್ಟಿತನದಿಂದ ಕೈಗೊಳ್ಳಬೇಕೆಂಬ ಮನೋಭಾವವನ್ನು ಪತ್ರಿಕೆಯು ವ್ಯಕ್ತಪಡಿಸಿದೆ.

ಪತ್ರಿಕೆಯು ಮಂಗಳೂರಿನಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳ ಆಡಂಬರ ಅದಕ್ಕಾಗಿ ಅನಾವಶ್ಯಕ ಖರ್ಚುವೆಚ್ಚಗಳನ್ನು ಮಾಡುವುದನ್ನು ಟೀಕಿಸಿದೆ. ೧೮೬೨, ನವೆಂಬರ್ ೨೭ನೇ ತಾರೀಕು ಗುರುವಾರ ಕುಡುಪುನಲ್ಲಿ ಷಷ್ಠಿ ರಥೋತ್ಸಹ ನಡೆಯುತ್ತದೆ. ಇದರ ಕುರಿತಂತೆ ೬ ಬಾರಿ ಅಟ್ಟಹಾಸದಿಂದ ಷಷ್ಠಿ ರಥೋತ್ಸವವಾಯಿತು ಎಂದು ವ್ಯಂಗ್ಯವಾಗಿ ಬರೆದು ಅಲ್ಲಿ ಬಹಳ ಜನರು ಹೋಗಿ ದೇವಸ್ಥಾನದಲ್ಲಿಯ ವಿಗ್ರಹಕ್ಕೆ ಕಾಣಿಕೆಯಾಗಿ ಡಬ್ಬಿಯಲ್ಲಿ ಹಣ ಹಾಕಿದರ ಬಗ್ಗೆ ಮತ್ತು ರಥೋತ್ಸವದ ಬಗ್ಗೆ ಇದರ ಪ್ರಯೋಜನವೇನು? ಎಂಬುದಾಗಿ ಪ್ರಶ್ನಿಸುತ್ತದೆ.[೧೧] ಹಾಗೆಯೇ ಮುಲ್ಕಿಯಲ್ಲಿ ಕೊಂಕಣಿ ವೆಂಕಟರಮಣ ದೇವಸ್ಥಾನದಲ್ಲಿನ ಉತ್ಸವಕ್ಕೆ ಮಂಗಳೂರಿನ ಜನರು ಹೋಗಿ ಕಾಣಿಕೆ ಹಾಕಿದುದರ ಕುರಿತಂತೆ, 'ಜನರು ಅಲ್ಲಿಗೆ ಹೋಗಿ, ದಣಿದು, ವಿಗ್ರಹಕ್ಕೆ ಕಾಣಿಕೆ ಹಾಕಿದರಿಂದ ಅವರ ಪಾಪ ವಿಮೋಚನೆ ಆಯಿತೋ?' ಎಂಬುದಾಗಿ ಪ್ರಶ್ನಿಸುತ್ತದೆ.[೧೨] ಈ ಮುಖಾಂತರ ಪತ್ರಿಕೆಯು ಹಿಂದೂ ಧಾರ್ಮಿಕ ಆಚರಣೆಗಳ ಬಗ್ಗೆ ಅನಾದರಣೆ ತಳೆದಿರುವುದನ್ನು ಕಾಣುತ್ತೇವೆ. ಆದರೆ ಇದೇ ಸಂಚಿಕೆಯಲ್ಲಿ[೧೩], ಬಲ್ಮಠದಲ್ಲಿ ೧೮೬೨ ಡಿಸೆಂಬರ್ ೧೧ರಂದು ಉದ್ಘಾಟನೆಗೊಂಡ ಕ್ರೈಸ್ತ ದೇವಾಲಯದ ಬಗ್ಗೆ ಯಾವುದೇ ಟೀಕೆಯನ್ನು ಮಾಡದೇ ಬಲ್ಮಠದಲ್ಲಿ ಕ್ರೈಸ್ತರಿಗಾಗಿ ಒಂದು ದೇವಾಲಯವನ್ನು ಸುಮಾರು ಎರಡು ವರುಷದಿಂದ ಕಟ್ಟಿಸುತ್ತಿದ್ದರು. ಅದರ ಕೆಲಸವು ಈಗ ತೀರಿತು. ತಾರೀಕು ೧೧ನೇ ಗುರುವಾರ ದಿವಸ ಆ ದೇವಾಲಯದ ಪ್ರವೇಶ ಮಾಡಿದರು ಎಂಬುದಷ್ಟೇ ಬ ರೆಯುತ್ತದೆ.[೧೪] ಇದರಿಂದ ಈ ಪತ್ರಿಕೆಯು ಕ್ರೈಸ್ತ ಧಾರ್ಮಿಕ ಆಚರಣೆಗಳ ಕುರಿತಂತೆ

ಮೌನವಾಗಿದ್ದು, ಹಿಂದೂ ಧಾರ್ಮಿಕ ಆಚರಣೆಗಳ ಕುರಿತಂತೆ ಮಾತ್ರ ಪ್ರಶ್ನಿಸುತ್ತದೆ. ಈ ಕುರಿತಂತೆ ಪತ್ರಿಕೆಯು ದ್ವಂದ್ವಾತ್ಮಕ ನಿಲುವನ್ನು ಒಳಗೊಂಡಿರುವುದು ತಿಳಿಯುತ್ತದೆ.

ಎಲಿಚ್‌ಪೂರ ಎಂಬಲ್ಲಿ, ನಾಗರ ಪಂಚಮಿಯನ್ನು ವರ್ಷದಲ್ಲಿ ಎರಡು ಬಾರಿ ಆಚರಿಸಿದ ವಿವರವಿದೆ. ಮೊದಲ ಸಲ ಮಾಡಿದ ನಾಗರಪಂಚಮಿ ಅಪೂರ್ಣವಾಗಿದೆಯೆಂದು ಎರಡನೇ ಸಲ ಆಚರಿಸುತ್ತಾರೆ. ಹಬ್ಬ ಮುಗಿದ ನಂತರ ಒಳ್ಳೇ ಮಳೆಯಾಗುತ್ತದೆ. ಪತ್ರಿಕೆಯು ಈ ಕುರಿತಂತೆ 'ಮೂಢರಾದ ಆ ಜನರು ನಾಗರ ದಯೆಯಿಂದ ಮಳೆ ಬಂತು ಎಂತ ಹೇಳುತ್ತಾರೆ ಎಂಬುದಾಗಿ ಬರೆದು ಜನರು ಮೂಢರು ಎಂದು ಬರೆದು ಇಂತಹ ಆಚರಣೆಗಳನ್ನು ಪತ್ರಿಕೆ ಖಂಡಿಸಿದೆ.[೧೫] ಆದರೆ ಇದೇ ಪತ್ರಿಕೆಯಲ್ಲಿ, ೧೩ ನವೆಂಬರ್ ೧೮೬೮ರಲ್ಲಿ ಪ್ರಕಟವಾದ ಪತ್ರಿಕೆಯ ಕೊನೆಯ ಪುಟದಲ್ಲಿ ಕರ್ತನ ಪ್ರಾರ್ಥನೆ ಎಂಬ ಶೀರ್ಷಿಕೆಯಡಿಯಲ್ಲಿ 'ಪರಲೋಕದಲ್ಲಿರುವ ನಮ್ಮ ತಂದೆಯೇ... ನಮ್ಮ ಪಾಪಗಳನ್ನು ಮನ್ನಿಸು. ಯಾಕೆಂದರೆ ನಾವು ನಮ್ಮ ಸಾಲಗಾರೆಲ್ಲರಿಗೆ ಮನ್ನಿಸುತ್ತೇವೆ. ನಮ್ಮನ್ನು ಶೋಧನೆಯಲ್ಲಿ ಸೇರಿಸದೆ ಕೇಡಿಗೆ ನಮ್ಮನ್ನು ತಪ್ಪಿಸು" ಎಂಬುದಾಗಿ ಪ್ರಾರ್ಥಿಸಿರುವುದು[೧೬] ಅತ್ಯಂತ ವಿಡಂಬನಾತ್ಮಕವಾಗಿರುವುದನ್ನು ನಾವು ಗುರುತಿಸಬಹುದು. ಈ ರೀತಿಯಾಗಿ ದೇವರು/ಧರ್ಮವನ್ನು ತಮ್ಮ ಅನುಕೂಲಕ್ಕೆ ಸಂದರ್ಭೋಚಿತವಾಗಿ ಬಳಕೆ ಮಾಡಿರುವುದನ್ನು ನಾವಿಲ್ಲಿ ಗುರುತಿಸಬಹುದು.

ಈ ಪತ್ರಿಕೆಯು ಅಕ್ಷರ ದೋಷಗಳನ್ನು ಒಳಗೊಂಡಿರುವ ಪತ್ರಿಕೆ ಆಗಿರುತ್ತದೆ. ಈಗಾಗಲೇ ಉಲ್ಲೇಖಿಸಿದಂತೆ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸುದ್ದಿಗಳನ್ನು ಪ್ರಕಟಿಸಲು, ಬೇರೆ ಪತ್ರಿಕೆಗಳನ್ನು ಅವಲಂಬಿಸಿರುವುದನ್ನು ನಾವಿಲ್ಲಿ ಗುರುತಿಸಬಹುದು. ಇದು ಬಾಂಬೆ ಗಾರ್ಡಿಯನ್ ಪತ್ರಿಕೆ, ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ ಪತ್ರಿಕೆಗಳನ್ನು ರಾಷ್ಟ್ರೀಯ ಸುದ್ದಿಗಳನ್ನು ಪ್ರಕಟಿಸಲು ಅವಲಂಬಿಸಿಕೊಂಡಿತ್ತು.[೧೭] ಹಾಗೆಯೇ ಬೇರೆ ಪತ್ರಿಕೆ ಪ್ರಕಟಣೆಗೊಂಡಾಗ ಅದರ ಕುರಿತು ಮಾಹಿತಿಯನ್ನು ಕೊಡುತ್ತಿತ್ತು.[೧೮]

ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ ಪತ್ರಿಕೆಯು ಓದುಗರ ಪತ್ರಕ್ಕೂ ಅವಕಾಶವನ್ನು ನೀಡಿರುತ್ತದೆ. ದಕ್ಷಿಣ ಕನ್ನಡದಲ್ಲಿ ಓದುಗರ ಪತ್ರಕ್ಕೆ ಅವಕಾಶ ಮಾಡಿಕೊಟ್ಟ ಮೊದಲ ಪತ್ರಿಕೆ ಇದಾಗಿರುತ್ತದೆ. ಪತ್ರಿಕೆಯು ಸರ್ಕಾರಿ ನೌಕರರ ಕಾರ್ಯಕ್ಷಮತೆಯನ್ನು ಗಮನಿಸುವುದರ ಜೊತೆಗೆ ಓದುಗರು ಕೂಡ ನೌಕರನ ಕಾರ್ಯಕ್ಷಮತೆಯನ್ನು ಗಮನಿಸುತ್ತಾರೆ. ಒಂದು ಪತ್ರದಲ್ಲಿ 'T.G' ಅನ್ನೋ ಓದುಗ, ಮಂಗಳೂರು ತಾಲೂಕು ತಹಶೀಲ್ದಾರ ನಾರಾಯಣರಾಯರ ನೇಮಕ ಮತ್ತು ಅವರ ಹಿಂದಿನ ನಿಷ್ಠಾವಂತ ಕಾರ್ಯದ ಬಗ್ಗೆ ಬರೆದು, ಕೆಲವರಿಗೆ ಅವರು ಉಡ್ಪಿ ತಾಲೂಕ್ ತಹಶೀಲ್ದಾರರಾಗಬೇಕೆಂತ ಅನೇಕರ ಮನಸ್ಸಿನಲ್ಲಿ ಇಲ್ಲದಿದ್ದರೂ, ನ್ಯಾಯೋಚಿತವಾಗಿ ಪ್ರಮೋಷನ್ ಆಗಿದೆ[೧೯] ಎಂಬುದಾಗಿ ಬರೆಯುತ್ತಾರೆ. ಬಹುಶಃ ನಾರಾಯಣರಾಯರು ಹಿಂದೆ ರೇವಣಿ ಇಲಾಖೆಗೆ ಸಂಬಂಧಿಸಿದ ಕೋರ್ಟ್‌ನಲ್ಲಿ ಶಿರಸ್ತೆದಾರರಾಗಿ ಪ್ರಾಮಾಣಿಕ ಅಧಿಕಾರವನ್ನು ನಡೆಸಿದ್ದು ಹಲವರ ಅವಕೃಪೆಗೆ ಪಾತ್ರರಾಗಿರಬಹುದು. ಹಾಗಾಗಿ ಹಲವರು ಅವರ ಬಡ್ತಿಗೆ ವಿರೋಧವನ್ನು ವ್ಯಕ್ತಪಡಿಸಿರಬಹುದು. ಇದನ್ನು ಈ ಪತ್ರವೇ ಸಾಬೀತು ಪಡಿಸುತ್ತದೆ. ಈ ಪತ್ರದಲ್ಲಿ "ಆ ನಾರಾಯಣರಾಯರು ತಮ್ಮ ಮಿಶನ್ ಇಂಗ್ಲೀಷ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವರಾಗಿದ್ದಾರೆ. ಆದ್ದರಿಂದ ಅವರ ಗುಣ ನಡತೆಗಳ ವಿಷಯ ನನ್ನಷ್ಟೇ ತಮಗೂ ತಿಳಿದು ಉಂಟು. ಆದ ಕಾರಣ ಅವರ ವಿಷಯ ಹೆಚ್ಚು ಹೇಳುವುದು ಅವಶ್ಯವಿಲ್ಲ. ಲಂಚ ತಕ್ಕಾಂಡು ನ್ಯಾಯ ಅನ್ಯಾಯವೆಂದೂ, ಅನ್ಯಾಯ ನ್ಯಾಯವೆಂದೂ ತೋರಿಸುವವರು ಎಂದೆಂದಿಗೂ ಸುಖ ಪಡಲಾರರು. ಅವರ ತಲೆಯ ಮೇಲೆ ದೇವರ ಶಾಪವು ಸರ್ವದಾ ಇರುತ್ತದೆ."[೨೦] ಎಂಬುದಾಗಿ ಅನ್ಯಾಯಕ್ಕೆ ದೊರೆತ ಶಾಪವನ್ನೂ, ನ್ಯಾಯಕ್ಕೆ ಸಿಕ್ಕ ಒಳ್ಳೆಯ ಪ್ರತಿಫಲದ ಬಗ್ಗೆ ಬರೆದಿದ್ದಾರೆ.

೧೮೫೭ರ ಘಟನೆಯ ನಂತರ ಭಾರತದ ಆಡಳಿತ ವ್ಯವಸ್ಥೆ ಬ್ರಿಟನ್ ರಾಣಿಯ ನೇರ ನಿರ್ದೇಶನದಲ್ಲಿ ನಡೆಸಲ್ಪಡುತ್ತದೆ.[೨೧] ಮತ್ತು ಇಂಗ್ಲೆಂಡ್‌ನ ರಾಜಕೀಯ ಸಿದ್ಧಾಂತ ಹಾಗೂ ಆಡಳಿತಾತ್ಮಕ ತತ್ವದ ನೆಲೆಯಲ್ಲಿ ಆಡಳಿತ ವ್ಯವಸ್ಥೆ ರಚನೆಗೊಳ್ಳುವುದರೊಂದಿಗೆ ಪ್ರಸ್ತುತಗೊಳ್ಳುತ್ತದೆ. ಇದರೊಂದಿಗೆ ಕೆಲವೊಂದು ಸ್ಥಳೀಯ ಬ್ರಿಟಿಷ್ ವ್ಯಕ್ತಿಗಳು ಪ್ರಭಾವ ಬೀರುತ್ತಿದ್ದರು.[೨೨] ೧೮೩೩ರ ಚಾರ್ಟರ್ ಆ್ಯಕ್ಟ್ ಉನ್ನತ ಹುದ್ದೆಗಳು ಸೇರಿದಂತೆ ಆಡಳಿತ ವ್ಯವಸ್ಥೆಗೆ ಭಾರತೀಯರ ನೇಮಕವನ್ನು ಕಾನೂನು ಬದ್ಧಗೊಳಿಸಿತು.[೨೩] ಇದರಂತೆ ಪೋಲೀಸ್ ಇಲಾಖೆ ರಚಿಸಿ ಭಾರತೀಯರನ್ನು ನೇಮಿಸಿಕೊಳ್ಳುವಾಗ, ದಕ್ಷಿಣ ಕನ್ನಡದಲ್ಲಿ ಇದರ ಪ್ರಭಾವ ಮತ್ತು ಪರಿಣಾಮದ ಕುರಿತಂತೆ, ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ ಪತ್ರಿಕೆಯು ಸರಕಾರದ ಮುಖವಾಣಿಯಂತೆ ಕಾರ್ಯನಿರ್ವಹಿಸುತ್ತಾ ಈ ಕುರಿತಂತೆ ಬೆಳಕು ಚೆಲ್ಲಿದೆ. ಹಾಗೆಯೇ ಪತ್ರಿಕೆಯು ಸರ್ಕಾರದ ಕಾರ್ಯ ಕಾರ್ಯಗತವಾಗದೇ ಇರೋದಕ್ಕೆ ಕನ್ನಡ ಜಿಲ್ಲೆಯ ಸಂಕುಚಿತ ಮನೋಭಾವವೇ ಕಾರಣವೆಂದು ಎಂಬುದನ್ನಾಗಿ ಪತ್ರಿಕೆಯಲ್ಲಿ ಬರೆದಿದೆ. ಪೊಲೀಸ್ ಇಲಾಖೆಯನ್ನು ಸರಕಾರ ಸ್ಥಾಪಿಸಿದಾಗ ಜನರು ಅದು ಒಂದು ದೊಡ್ಡ ಮೋಸ, ಅನ್ಯ ರಾಜ್ಯಗಳಲ್ಲಿ ಯುದ್ಧ

ಮಾಡಲಿಕ್ಕೆ ಕಳುಹಿಸುತ್ತಾರೆಂದು ಜನರು ಸುದ್ದಿ ಹಬ್ಬಿಸಿದರು. ಈ ಇಲಾಖೆಗೆ ಸೇರುವುದಕ್ಕಿಂತ ಮನೆ ಮನೆ ಬೇಡಿ ತಿನ್ನುವುದು ಒಳ್ಳೆದು ಎಂದು ಹೇಳಿದರು. ಇದರ ಕುರಿತಂತೆ ಪತ್ರಿಕೆ 'ಮೊದಲು ಆ ಇಲಾಖೆಗೆ ಸೇರಿದವರಲ್ಲಿ ಅನೇಕರು ಬಡವರೇ ತರುವಾಯ ಹಲವಾರು ಅದರಿಂದ ತಮಗೆ ಆಗುವ ಒಳ್ಳೇದನ್ನು ತಳುಕಾಂಡು, ಜನರಿಗೆ ಅದರಿಂದ ಸ್ವಲ್ಪಹಿತ ಉಂಟು, ಆದರೆ ಅಷ್ಟು ಖರ್ಚು ಮಾಡಿ ಅದು ಸ್ಥಾಪಿಸುವಂಥಾದ್ದು ಅವಸ್ಯವಿದ್ದಿಲ್ಲ ಎಂತ ಹೇಳತೊಡಗಿದರು... ತರುವಾಯ ಮೊದಲು ಪೊಲೀಸ್ ಇಲಾಖೆ ಕೆಟ್ಟದ್ದು ಎಂದು ಹೇಳದವರಲ್ಲಿಯೇ ಅನೇಕರು ಬಂದು ಕೂಡಿದರು.. ಈಗ ನಮ್ಮ ಕನ್ನಡ ಜಿಲ್ಲೆ ಪೊಲೀಸ್‌ನಲ್ಲಿ ಮಾನಸ್ಥರಲ್ಲಿಯೂ, ಐಶ್ವರ್ಯವಂತರಲ್ಲಿಯೂ ಅನೇಕರರು ಇದ್ದಾರೆ. ಪೋಲಿಸ್ ಇಲಾಖೆಯಿಂದ ಅನೇಕರಿಗೆ ಅನ್ನವಾಯಿತು... ಇದು ಓದಿ ತಿಳುಕಾಂಡು ಈಗ ಪೊಲೀಸಿಗೆ ಎಲ್ಲರೂ ಮೆಚ್ಚುತ್ತಾರೋ? ಎಂದು ಕೇಳಿದರೆ, ಮೆಚ್ಚದೆ ಇರುವವರು ಈಗ ಬರೇ ಸ್ವಲ್ಪ ಮಂದಿ ಎಂತ ಹೇಳಬಹುದು' ಎಂದು ಬರೆಯುತ್ತಾ '...ಇಲ್ಲಿಯ ಜನರು ಒಂದು ವಿಷಯವನ್ನು ಚಂದಾಗಿ ಪರೀಕ್ಷಿಸಿ ನೋಡದೆ ಅದು ಕೆಟ್ಟದ್ದೂ ನಿಷ್ಪ್ರಯೋಜಕವಾದ್ದೂ ಎಂದು ನಿಶ್ಚೈಸಿ ಬಿಡುತ್ತಾರೆ... ಯಾವ ವಿಷಯವನ್ನಾದರೂ ಮೊದಲು ಆಲೋಚಿಸಿ, ಮತ್ತೆ ನಿಮಗೆ ಕಂಡ ಹಾಗೆ ಹೇಳಿರಿ ನಿಮ್ಮ ಹಳೇ ಸ್ವಭಾವವನ್ನು ಬಿಟ್ಟು, ವೃದ್ಧಿಯಾಗ ಪ್ರಯತ್ನಿಸಿರಿ, ಹಾಗೆ ಮಾಡುವವರಿಂದ ನಿಮ್ಮ ದೇಶಕ್ಕೆ ಶುಭವಾಗುವದು'[೪] ಎಂಬುದಾಗಿ ಬರೆದಿದೆ.

ಉಪಸಂಹಾರ

ಈ ಮಿಷನರಿ ಪತ್ರಿಕೆಗಳನ್ನು ಗಮನಿಸಿದಾಗ, ಬ್ರಿಟಿಷರ ಪ್ರಾರಂಭದ ಧೋರಣೆಯಂತೆ ಭಾರತೀಯರು ಅಜ್ಞಾನಿಗಳು, ನಾವು ಅವರನ್ನು ಸುಧಾರಿಸಲು ಬಂದವರು ಎಂಬ ಅಭಿಪ್ರಾಯವನ್ನು ಸ್ಥಳೀಯ ಪತ್ರಿಕೆಗಳು ಕೂಡ ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಮಂಗಳೂರು ಸಮಾಚಾರ ಪತ್ರಿಕೆಯಲ್ಲಿ ಮೊದಲಿನ ಸಂಚಿಕೆಯಲ್ಲಿ ಜನರು ಸುಳ್ಳು ಸುದ್ದಿಗಳನ್ನು ಹಬ್ಬಿಸುವುದನ್ನು ತಪ್ಪಿಸುವುದಕ್ಕೋಸ್ಕರ ಪತ್ರಿಕೆ ಪ್ರಾರಂಭ ಮಾಡಿದ್ದು ಅಂತ ಉಲ್ಲೇಖ ಮಾಡುತ್ತಾರೆ. ಹಾಗೆಯೇ ಇಂಡಿಯಾ ಮತ್ತು ಅನ್ಯದೇಶ ವಾರ್ತಿಕ ಪತ್ರಿಕೆಯಲ್ಲಿ "ನಮ್ಮ ಕನ್ನಡ ಜಿಲ್ಲೆಯ ಜನರಲ್ಲಿ ಅನೇಕರು ಪೂರ್ವರತ್ಯದಿಂದ ನಡೆದು ಬಂದ ಸಂಪ್ರದಾಯಗಳನ್ನೇ ಹೆಚ್ಚಾಗಿ ಮಾನಿಸಿ ಕಂಡು, ಸರಕಾರದವರು ಜನರು ಕ್ಷೇಮಕ್ಕಾಗಿಯೂ ವೃದ್ಧಿಗಾಗಿಯೂ ಯಾವುದಾದರು ಒಂದು ಉಪಾಯವನ್ನು ರಚಿಸಿದರೆ ಅಂಥದನ್ನು ಒಂದು ಹಾಸ ಮರ್ಯಾದೆ ಎಂದು ಎಣಿಸಿ, ವ್ಯರ್ಥವಾಗಿ ಹಣ ಖರ್ಚು ಮಾಡುವ ಬಗ್ಗೆ ಒಂದು ಯುಕ್ತಿ ತೆಗೆದಿದ್ದಾರೆ ಎಂತ ಹೇಳಿ ಅದನ್ನು ಅಸಡ್ಡೆ ಮಾಡುವರು ಸಾಧಾರಣವಾಗಿ ಅದೇ"[೫] ಎಂಬುದಾಗಿ ಬರೆದು ಜನರ ಮೌಢ್ಯವನ್ನು ಟೀಕಿಸುತ್ತಾರೆ. ಈ ಎಲ್ಲಾ ಟೀಕೆಗಳು ಸತ್ಯವನ್ನು ಪ್ರತಿಬಿಂಬಿಸುತ್ತಿತ್ತು. ಇವತ್ತು ಕೂಡ ದೇವರ ಭಕ್ತಿಯ ನೆಪದಲ್ಲಿ ಅನಾವಶ್ಯಕ ಆಡಂಬರದಲ್ಲಿ ದುಂದುವೆಚ್ಚವನ್ನು ಮಾಡುವುದನ್ನು ಮತ್ತು ಇದು ಅನಾವಶ್ಯಕ ಎಂದಾಗ ಜನರು ಅದರ ಕುರಿತು ಪರಾಮರ್ಶನೆ ಮಾಡದೇ ಇರುವುದನ್ನು ಗಮನಿಸುತ್ತೇವೆ. ಈ ಪತ್ರಿಕೆಗಳು ಮತ ಪ್ರಚಾರಕ್ಕಿಂತ, ಸಮಕಾಲೀನ ವಿಷಯ, ಸುದ್ದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿರುತ್ತದೆ. ಆದರೆ ಇದರೊಂದಿಗೆ ಕ್ರೈಸ್ತೇತರ ಧರ್ಮದ ಕೊರತೆಗಳನ್ನು ಗುರುತಿಸುವುದು ಇದರ ಕಾರ್ಯವಾಗಿರುತ್ತದೆ. ಇಲ್ಲಿ ಕ್ರೈಸ್ತ ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಆಶಯವನ್ನು ಗುರುತಿಸಬಹುದು. ಹಾಗೆಯೇ ಬ್ರಿಟಿಷ್ ಸರ್ಕಾರ ಪರವಾದ ಪ್ರತಿಪಾದನೆಗಳನ್ನು ಈ ಪತ್ರಿಕೆಗಳಲ್ಲಿ ಗುರುತಿಸಬಹುದು.

ಅಡಿಟಿಪ್ಪಣಿಗಳು

೧. ಹರ್ಮನ್ ಮೋಗ್ಲಿಂಗ್, ಮಂಗಳೂರು ಸಮಾಚಾರ, ಬಾಸೆಲ್ ಮಿಷನ್ ಪ್ರೆಸ್, ೧ನೇ ಪುಸ್ತಕ, ೧ನೇ ಅಂಕೆ, ೧೮೪೩, ಪು. ೧.

೨. ಇಂಡಿಯಾ ಮತ್ತು ಅನ್ಯದೇಶದ ವಾರ್‌ತಿಕ, ಅಂಕೆ ೧, ಪುಸ್ತಕ ೧, ಮಂಗಳೂರು, ೧೩ ಸಪ್ಟೆಂಬರ್ ೧೮೬೨, ಪು. ೧.

೩. ...ಅದೇ., ಪು. ೨.

೪, ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ, ಅಂಕೆ ೧, ಪುಸ್ತಕ ೧, ಮಂಗಳೂರು, ೧೩ ಸೆಪ್ಟೆಂಬರ್ ೧೮೬೨, ಬಾಸೆಲ್ ಮಿಷನ್ ಪ್ರೆಸ್, ಮಂಗಳೂರು, ಪು. ೧.

೫. ...ಅದೇ., ಅಂಕೆ ೨, ೨೩ ಸೆಪ್ಟಂಬರ್ ೧೮೬೨, ಪು. ೧.

೬ ...ಅದೇ., ಪು. ೭.

೭. ಇಂಡಿಯಾ ಮತ್ತು ಅನ್ಯ ದೇಶದ ವಾರ್ತಿಕ, ಪುಸ್ತಕ ೧, ಅಂಕೆ ೫, ಮಂಗಳೂರು, ೧೩ ನವಂಬರ್ ೧೮೬೨, ಪು. ೧೮.

೮. ಅದೇ.,

೯. ಅದೇ., ಪುಸ್ತಕ ೧, ಅಂಕೆ ೬, ಮಂಗಳೂರು ೧೭ ನವೆಂಬರ್ ೧೮೬೨, ಪು. ೨೨.

೧೦. ಅದೇ., ಪುಸ್ತಕ ೧, ಅಂಕೆ ೭, ಮಂಗಳೂರು, ೧೫ ದಶಂಬರ ೧೮೬೨, ಪು. ೨೬.

೧೧. ...ಅದೇ...

೧೨. ...ಅದೇ...

೧೩. ಸ್ಮರಣ ಸಂಚಿಕೆ, ಶಾಂತಿ ಮಹಾದೇವಾಲಯ ಬಲ್ಮಠ, ಮಂಗಳೂರು ೧೩೩ನೇ ವಾರ್ಷಿಕೋತ್ಸವ ಹಾಗೂ ದೇವಾಲಯ ಪುನರ್ ಪ್ರತಿಷ್ಠಾಪನಾ 'ಸ್ಮರಣ ಸಂಚಿಕೆ', ೧೦-೧೨-೧೯೯೭, ಪು. ೧೩.

೧೪. ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕ, ಅಂಕೆ ೭, ಪುಸ್ತಕ ೧, ಮಂಗಳೂರು, ೧೫ ದಶಂಬರ ೧೮೬೨, ಪು. ೨೬.

೧೫. ...ಅದೇ., ಪುಸ್ತಕ. ೧, ಅಂಕೆ. ೩, ಮಂಗಳೂರು ೧೩ ಒಕ್ಟೋಬರ್ ೧೮೬೨, ಪು. ೧೧.

೧೬. ...ಅದೇ., ಪುಸ್ತಕ. ೧, ಅಂಕೆ. ೫, ಮಂಗಳೂರು ೨೭ ನವೆಂಬರ್ ೧೮೬೨.

೧೭. ಪುಸ್ತಕ.೧, ಅಂಕೆ. ೩, ಮಂಗಳೂರು ೧೩ ಒಕ್ತಾಂಬರ್ ೧೮೬೨, ಪು. ೧೧ ಮತ್ತು ಅಂಕೆ.೬, ಪುಸ್ತಕ.೧, ೨೩ ನವೆಂವರ್ ೧೮೬೨, ಪು. ೩೩.

೧೮. ...ಅದೇ., ಅಂಕೆ.೬, ಮಂಗಳೂರು, ೨೩ ನವಂಬರ್ ೧೮೬೨, ಪು. ೩೩.

೧೯. ಅದೇ., ಅಂಕೆ-೭, ಮಂಗಳೂರು, ೧೫ ದಶಂಬರ ೧೮೬೨, ಪು. ೨೬.

೨೦. ...ಅದೇ...

೨೧. ಜಗದೀಶ್ ಸರನ್ ಶರ್ಮ (ಸಂ.), ಇಂಡಿಯ'ಸ್ ಸ್ಟ್ರಗಲ್ ಫಾರ್ ಫ್ರೀಡಮ್, ಸಂಪುಟ ೨, ಎಸ್. ಚಂದ್ ಆಂಡ್ ಕೋಂ, ದಿಲ್ಲಿ, ೧೯೬೫, ಪು. ೮೧.

೨೨. ಮಜುಂದಾರ್ ಆರ್.ಸಿ., ರಾಯ್ ಚೌಧುರಿ ಹೆಚ್.ಸಿ., ಕಾಲಿಕಿಂಕರ್ ದತ್ತ, ಆನ್ ಅಡ್‌ವಾನ್ಸ್‌ಡ್ ಹಿಸ್ಟರಿ ಆಫ್ ಇಂಡಿಯ, ರಾಜೀವ್ ಬೆರಿ ಮೆಕೆಲಿಯನ್ ಇಂಡಿಯ ಲಿಮಿಟೆಡ್, ಮದ್ರಾಸ್, ೧೯೭೮, ಪು. ೮೪೭.

೨೩. ....ಅದೇ...ಪು. ೮೪೮.

೨೪. ಇಂಡಿಯಾ ಮತ್ತು ಅನ್ಯದೇಶದ ವಾರ್ತಿಕಾ, ಪುಸ್ತಕ. ೧, ಅಂಕೆ. ೩, ಮಂಗಳೂರು ೧೩ ಒಕ್ಟೋಬರ್ ೧೮೬೨, ಪು. ೧೮.

೨೫. ...ಅದೇ., ಪು. ೧೮.

♦♦

ನದಾಫ ಎಸ್.ಆರ್.

ಅಂದಾನಪ್ಪ ದೊಡ್ಡಮೇಟಿಯವರ ಶೈಕ್ಷಣಿಕ ಚರ್ಚೆಗಳು

(ಮುಂಬೈ ಶಾಸನಸಭೆಯ ದಾಖಲೆಗಳನ್ನು ಅನುಲಕ್ಷಿಸಿ)

ಅಂದಾನಪ್ಪ ದೊಡ್ಡಮೇಟಿಯವರು ತಮ್ಮ ಬಾಲ್ಯದಿಂದಲೂ ಶಿಕ್ಷಣದ ಮಹತ್ವಾಕಾಂಕ್ಷಿಯಾಗಿದ್ದರು. ರೈತಾಪಿ ಕುಟುಂಬದ ಜ್ಞಾನಪ್ಪ ಬಸಮ್ಮ ದಂಪತಿಗಳ ದ್ವಿತೀಯ ಸುಪುತ್ರನಾಗಿ ಮಾರ್ಚ್ ೧೨ ೧೯೦೮ರಲ್ಲಿ ಜನಿಸಿದವರು. ಇವರ ತಾಯಿಯ ತವರು ಮನೆಯಾದ ಸುರಕೋಡ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯನ್ನೂ ಪಡೆದವರು. ಬಾಲ್ಯದಲ್ಲಿಯೇ ಶಿಕ್ಷಣದ ಬಗ್ಗೆ ಉತ್ಸುಕರಾಗಿದ್ದು, ಉತ್ತಮ ಭಾಷಣ ಕಲೆ, ಕನ್ನಡ ಜ್ಞಾನಪಾಂಡಿತ್ಯ ಇವರಲ್ಲಿ ಕರಗತವಾಗಿತ್ತು. ಆದರೆ ತಂದೆಯ ಅತಿಯಾದ ಪ್ರೀತಿ, ವಾತ್ಸಲ್ಯದಿಂದಾಗಿ ಅದರಿಂದ ವಂಚಿತರನ್ನಾಗಿಸಿತು. ಉನ್ನತ ಶಿಕ್ಷಣದ ಬಗೆಗಿನ ಈ ಪ್ರೀತಿ ಮುಂಬೈ ಶಾಸನಸಭೆ ಮತ್ತು ಮೈಸೂರು ವಿಧಾನಸಭೆಯಲ್ಲಿ ಮಹತ್ತರವಾದ ಶೈಕ್ಷಣಿಕ ವಿಚಾರಗಳನ್ನು ಚರ್ಚಿಸಲು ಪ್ರೇರಣೆಯಾಯಿತು.

ಧಾರವಾಡ ಜಿಲ್ಲಾ ಪ್ರದೇಶವು ೧೮೧೮ರಲ್ಲಿ ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟಿತು. ಇದರಿಂದಾಗಿ ಈ ಪ್ರದೇಶದಲ್ಲಿ ಅನೇಕ ರಾಜಕೀಯ ಮತ್ತು ಸಾಂಸ್ಕೃತಿಕ ಪಲ್ಲಟಗಳಾದವು. ಮುಂಬೈ ಕರ್ನಾಟಕವನ್ನಾಳಿದ ಮರಾಠಾ ಪೇಶ್ವೆಗಳು ಸ್ವಭಾಷೆಯ ಅಭಿಮಾನಿಗಳಾಗಿದ್ದರು. ಅಲ್ಲದೇ ತಮ್ಮ ಅಧೀನ ಕ್ಷೇತ್ರದಲ್ಲಿ ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ವಿಸ್ತರಿಸುವ ಆಕಾಂಕ್ಷೆಯನ್ನು ಹೊಂದಿದ್ದರು. ಇದರಿಂದಾಗಿ ಇಲ್ಲಿ ಮರಾಠಿ ಭಾಷೆ ತನ್ನ ಪ್ರಾಬಲ್ಯ ಸಾಧಿಸಿತು. ಇತ್ತ ಮದ್ರಾಸ್ ಕರ್ನಾಟಕದಲ್ಲಿ ತಮಿಳು, ಹೈದ್ರಾಬಾದ್ ಕರ್ನಾಟಕದಲ್ಲಿ ಉರ್ದು ಭಾಷೆಗಳ ಒತ್ತಡಗಳಿದ್ದು ಇದರಿಂದ ಕನ್ನಡ ನುಡಿ ಮತ್ತು ಸಂಸ್ಕೃತಿಯು ಕಣ್ಮರೆಯಾಗತೊಡಗಿತು. ಇದೇ ಕಾಲಕ್ಕೆ ಬ್ರಿಟಿಷರು ತಮ್ಮ ಆಡಳಿತದ ಅನುಕೂಲತೆಗಾಗಿ ಮತ್ತು ಭಾರತೀಯರ ಓಲೈಕೆಯ ರಾಜಕಾರಣಕ್ಕೆ ಮುಂದಾದರು. ಈ ದಿಶೆಯಲ್ಲಿ ಹಲವಾರು ಆಡಳಿತಾತ್ಮಕ ಸುಧಾರಣೆಗಳನ್ನು ಮಾಡಿದರು. ಅವುಗಳಲ್ಲಿ ಶೈಕ್ಷಣಿಕ ಸುಧಾರಣೆಯೂ ಒಂದಾಗಿದೆ. ಈ ಅವಧಿಯಲ್ಲಿ ಭಾರತವನ್ನು ಪ್ರವೇಶಿಸಿದ ಮಿಶನರಿಗಳು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದವು. ಮುಂಬೈ ಮತ್ತು ಪುಣೆ ಪಟ್ಟಣಗಳು ಮುಂಬೈ ಕರ್ನಾಟಕದಲ್ಲಿ ಅಂದಿನ ಪ್ರಮುಖ ವಿದ್ಯಾಕೇಂದ್ರಗಳಾಗಿದ್ದವು. ಮರಾಠಿ ಭಾಷೆ ಅಲ್ಲಿಯ ಶಿಕ್ಷಣ ಮಾಧ್ಯಮವಾಗಿದ್ದರಿಂದ ಅನೇಕ ಕನ್ನಡಿಗರು ಶಿಕ್ಷಣದಿಂದ ವಂಚಿತರಾಗಿದ್ದರು.

ಔದ್ಯೋಗಿಕ ಕೇಂದ್ರವಾಗಿ ಸೊಲ್ಲಾಪುರದ ಕಡೆಗೆ ಉದ್ಯೋಗವನ್ನು ಅರಸಿ ಬಂದ ಜನರ ಪಾಡು ಹೇಳತೀರದಾಗಿತ್ತು. ಮುಂಬೈಗೆ ಬಂದ ಸ್ಥಿತಿ ಸೊಲ್ಲಾಪುರಕ್ಕೂ

ಸಂಶೋಧನಾ ವಿದ್ಯಾರ್ಥಿ
ಡಾ. ಆ.ನೇ. ಉಪಾಧ್ಯೆ ವಿಸ್ತರಣ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಭರತೇಶ ಶಿಕ್ಷಣ ಸಂಸ್ಥೆ
ಬೆಳಗಾವಿ-೫೯೦೦೧೬
ಮೊ: ೯೯೦೨೩ ೦೦೫೦೪

ಬಂದೊದಗಿತು. ಕಾರಣ ಕನ್ನಡಿಗರೊಂದಿಗೆ ಅಲ್ಲಿ ಮರಾಠಿ ಮತ್ತು ಗುಜರಾತಿಗರು ವಾಸವಾಗಿದ್ದನ್ನು ಕಾಣಬಹುದು. ೧೮೯೫ರ ಹೊತ್ತಿಗೆ ಸೊಲ್ಲಾಪುರದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಆರಂಭಗೊಂಡವು. ಅದರಲ್ಲಿ ಪ್ರಮುಖವಾಗಿ ಭಾಷಾ ವೈವಿಧ್ಯತೆಯು ಶೈಕ್ಷಣಿಕ ಕಾರ್ಯಕ್ಕೆ ಅಡೆತಡೆಯಾಗಿರುವಂತೆ ತೋರುತ್ತದೆ. ಅದಕ್ಕಾಗಿಯೇ ಅಂದಾನಪ್ಪ ದೊಡ್ಡಮೇಟಿಯವರು ಮುಂಬೈ ಶಾಸನ ಸಭೆಯಲ್ಲಿ ಸೊಲ್ಲಾಪುರ ನಗರದಲ್ಲಿಯ ಕಾರ್ಮಿಕರ ಸಾಕ್ಷರತೆಯ ಬಗ್ಗೆ ಈ ಕೆಳಗಿನಂತೆ ಚರ್ಚಿಸುತ್ತಾರೆ.

ಸೊಲ್ಲಾಪುರ ನಗರದಲ್ಲಿ ಕನ್ನಡ, ಮರಾಠಿ, ತೆಲುಗು, ಹಿಂದಿ, ಉರ್ದು ಭಾಷೆಯನ್ನು ಆಡುವ ಕಾರ್ಮಿಕರಿದ್ದಾರೆ. ಈ ಕಾರ್ಮಿಕರಿಗಾಗಿ ವಿವಿಧ ಭಾಷೆಯಲ್ಲಿ ಸಾಕ್ಷರತಾ ವರ್ಗಗಳನ್ನು ನಡೆಸಲಾಗುತ್ತಿದೆ. ಅಲ್ಲಿರುವ ಪ್ರತಿಯೊಂದು ಭಾಷೆಯನ್ನಾಡುವ ಜನಸಂಖ್ಯೆ ಎಷ್ಟಿದೆ? ಎಂದು ಪ್ರಶ್ನಿಸಿಸುತ್ತಾರೆ. ಜೊತೆಗೆ ಅವರಲ್ಲಿ ಕನ್ನಡ ಭಾಷೆಯಲ್ಲಿ ಕಲಿಯುವವರ ಸಂಖ್ಯೆ ಅಧಿಕವಿದ್ದು, ಮರಾಠಿ ಭಾಷಾ ಕಲಿಕೆ ಎರಡನೇ ಸ್ಥಾನದಲ್ಲಿದೆ ಎಂದು ತಿಳಿದುಬರುವುದನ್ನು ಉಲ್ಲೇಖಿಸುತ್ತಾರೆ. ಅಲ್ಲಿಯ ಶೈಕ್ಷಣಿಕ ಮೇಲ್ವಿಚಾರಣೆಯ ಅಧಿಕಾರಿಗಳಿಗೆ ಕನ್ನಡ ಭಾಷಾಜ್ಞಾನವಿರದ ಕಾರಣ ಜವಳಿ ಕಾರ್ಮಿಕರಲ್ಲಿ ಕನ್ನಡ ಭಾಷಾ ಕಲಿಕೆ ಇಳಿಮುಖವಾಗುತ್ತಿದೆ ಎಂಬ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಅಲ್ಲದೇ ಇದನ್ನು ಸರಿಪಡಿಸಲು ಮುಂಬೈ ಪ್ರಾಂತೀಯ ಸರಕಾರ ಕೈಗೊಂಡ ಕ್ರಮಗಳೇನು? ಎಂದು ಪ್ರಶ್ನಿಸುತ್ತಾರೆ. ಆಗ ಕಾರ್ಮಿಕರ ಕಲ್ಯಾಣ ಇಲಾಖೆ ಸಚಿವರಾದ ಗುಲ್ಜರಿಲಾಲ್ ನಂದಾ ಅವರು ಈ ಭಾಗದಲ್ಲಿ ೧೯೪೮-೪೯ರಲ್ಲಿ ೨೧೦ ವರ್ಗಗಳು ಪ್ರಾರಂಭವಾಗಿವೆ. ಅವುಗಳಲ್ಲಿ ಕನ್ನಡ-೬೮, ಮರಾಠಿ-೧೨೩, ತೆಲುಗು-೧೩, ಉರ್ದು-೩, ಹಿಂದಿ-೩ ವರ್ಗಗಳು ನಡೆದಿವೆ. ಕಾರ್ಮಿಕರ ಸಾಹಿತ್ಯ ಮಂಡಳಿ ಇದರ ಜವಾಬ್ದಾರಿ ಹೊತ್ತಿದ್ದು, ಇದರಲ್ಲಿ ಎಲ್ಲ ಭಾಷಿಕರು ಮುಂದಾಳತ್ವ ವಹಿಸಿಕೊಂಡಿರುವುದಾಗಿ ತಿಳಿಸಿದರು.[೧] ನಂತರ ಸೊಲ್ಲಾಪುರ ನಗರದಲ್ಲಿ ಅಧಿಕ ಸಂಖ್ಯೆಯಲ್ಲಿ ಕನ್ನಡಿಗರಿದ್ದರು ಕೂಡ ಅಲ್ಲಿ ಮರಾಠಿ ಶಾಲೆಗಳ ಸಂಖ್ಯೆ ಅಧಿಕವಾಗಿರುತ್ತದೆ. ಇದು ಒಂದು ರೀತಿಯಲ್ಲಿ ಮರಾಠಿ ಆಡಳಿತ ವ್ಯವಸ್ಥೆಯು ತಮ್ಮ ಭಾಷೆಯ ಪ್ರಾಬಲ್ಯವನ್ನು ಇತರ ಭಾಷಿಕರ ಮೇಲೆ ಹೇರಿರುವದು ಸ್ಪಷ್ಟವಾಗುತ್ತದೆ. ಆದ್ದರಿಂದ ದೊಡ್ಡಮೇಟಿಯವರು ಕನ್ನಡಿಗರ ಬಗ್ಗೆ ವಿವರಣೆಯನ್ನು ಅಂಕಿ ಸಂಖ್ಯೆಗಳ ಮೂಲಕ ತಿಳಿಯಲಿಚ್ಚಿಸುತ್ತಾರೆ.

ಸೊಲ್ಲಾಪುರ ನಗರದಲ್ಲಿದ್ದ ಕಾರ್ಮಿಕರ ಶಿಕ್ಷಣದ ಬಗ್ಗೆ ಚರ್ಚೆಯ ನಂತರ, ಅವರ ಮೂಲಭೂತ ಸೌಕರ್ಯಗಳ ಬಗ್ಗೆ ವಿಚಾರಿಸುತ್ತಾರೆ. ಇಲ್ಲಿ ಕನ್ನಡ ಮಾತನಾಡುವ ಜವಳಿ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ, ಇವರಿಗೆ ದೊರೆಯಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಸರಕಾರದಿಂದ ಒದಗಿಸುವ ಉದ್ದೇಶದಿಂದ ಅಂಕಿ-ಸಂಖ್ಯೆಗಳ ಆಧಾರಿತವಾಗಿ ಮುಂಬೈ ಶಾಸನಸಭೆಯಲ್ಲಿ ಈ ಕೆಳಗಿನಂತೆ ಚರ್ಚಿಸುತ್ತಾರೆ. ಸೊಲ್ಲಾಪುರದಲ್ಲಿ ಜವಳಿ ಕಾರ್ಮಿಕರ ಸಂಖ್ಯೆ ಮೂವತ್ತು ಸಾವಿರ ಇದೆ. ಅದರಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಇಪ್ಪತ್ತು ಸಾವಿರ ಇರುತ್ತದೆ. ಆ ಜವಳಿ ಕಾರ್ಮಿಕರಿಗೆ ಕಾರ್ಮಿಕರ ಕಲ್ಯಾಣ ನಿಧಿಯಿಂದ ಸೌಲಭ್ಯಗಳನ್ನು ಒದಗಿಸಲು ಸರಕಾರ ಕೈಗೊಂಡ ಕ್ರಮಗಳೇನು? ಎಂದು ಪ್ರಶ್ನಿಸಿದರು. ಅದಕ್ಕೆ ವೈಕುಂಠನಾಥ ಎಲ್. ಮೆಹ್ತಾ ಅವರು ಕನ್ನಡ ಮಾತನಾಡುವ ಕಾರ್ಮಿಕರ ಸಂಖ್ಯೆ ಬಗ್ಗೆ ನಿಖರವಾದ ಮಾಹಿತಿ ಇಲ್ಲ, ಸುಮಾರು ಹತ್ತು ಸಾವಿರ ಇರಬಹುದು. ಜವಳಿ ಕಾರ್ಮಿಕರಿಗಾಗಿ ೯ ಕಾರ್ಮಿಕ ಕಲ್ಯಾಣ ನಿಧಿಗಳು ಒಂದೊಂದು ಪ್ರದೇಶದಲ್ಲಿವೆ. ಅವುಗಳಿಂದ ಅನೇಕ ಕಾರ್ಮಿಕರು ಸೌಕರ್ಯಗಳನ್ನು ಪಡೆಯುತ್ತಿದ್ದಾರೆ. ಜಾಗತಿಕ ಯುದ್ಧದ ನಂತರದ ಪುನರಾಭಿವೃದ್ಧಿ ಯೋಜನೆಯ ಅಡಿ ಗ್ರಂಥಾಲಯ ನಿರ್ಮಿಸಿ ಪುಸ್ತಕ ಮತ್ತು ನಿಯತಕಾಲಿಕೆಗಳನ್ನು ಒದಗಿಸಲಾಗಿದೆ. ೧೯೪೮-೪೯ರಲ್ಲಿ ಕನ್ನಡ ಭಾಷಿಕ ಜವಳಿ ಕಾರ್ಮಿಕರಿಗೆ ೬೮ ಸಾಕ್ಷಾರತಾ ತರಗತಿಗಳು ಸೊಲ್ಲಾಪುರದಲ್ಲಿವೆ ಎಂದು ತಿಳಿಸುತ್ತಾರೆ.[೨]

ವಯಸ್ಕರ ಶಿಕ್ಷಣ: ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ಪ್ರದೇಶಗಳಿಂದ ಕೂಡಿದ ಮುಂಬೈ ಪ್ರಾಂತದಲ್ಲಿ ವಿವಿಧ ಭಾಷೆಗಳ ಶೈಕ್ಷಣಿಕ ಕಾರ್ಯಗಳಲ್ಲಿ ಮಹತ್ವದ ಸುಧಾರಣೆಗಳನ್ನು ಮಾಡಲಾಗುತ್ತಿದೆ. ಅದರಲ್ಲಿ ವಯಸ್ಕರ ಶಿಕ್ಷಣ ವ್ಯವಸ್ಥೆಯು ಒಂದಾಗಿರುತ್ತದೆ. ವಯಸ್ಕರ ಶಿಕ್ಷಣದ ಚಿಂತಕರಾದ ಅಂದಾನಪ್ಪ ದೊಡ್ಡಮೇಟಿಯವರು ಇದಕ್ಕೆ ಸರಕಾರವು ೧೯೪೮-೪೯, ೧೯೪೯-೫೦, ೧೯೫೦-೫೧ರಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ಪ್ರದೇಶಗಳಲ್ಲಿ ಎಷ್ಟು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ ಮತ್ತು ಎಷ್ಟು ಹಣ ಖರ್ಚು ಮಾಡಿದೆ. ಅದರಿಂದ ಪ್ರತಿ ವರ್ಷ ಎಷ್ಟು ಜನ ಸಾಕ್ಷರರಾಗಿದ್ದಾರೆ. ಈ ವಯಸ್ಕರ ಶಿಕ್ಷಣದ ಜವಾಬ್ದಾರಿಯನ್ನು ಪ್ರಾಥಮಿಕ ಶಿಕ್ಷಕರಿಗೆ ವಹಿಸಲಾಗಿದೆ. ಅವರನ್ನು ನಿಯೋಜನೆ ಮಾಡಿರುವದು ಸರಕಾರದ ಕಡ್ಡಾಯ ನೀತಿಯೇ ಅಥವಾ ಈ ಕೆಲಸಕ್ಕೆ ಅವರೇ ಸ್ವಯಂ ಪ್ರೇರಿತರಾಗಿದ್ದಾರೆಯೇ? ಈ ಕ್ಷೇತ್ರದಲ್ಲಿ ಎಷ್ಟು ಜನ ಶಿಕ್ಷಕರು ಕಾರ್ಯನಿರತರಾಗಿದ್ದಾರೆ ಎಂಬ ವಿಚಾರದ ಬಗ್ಗೆ ಸ್ಪಷ್ಟೀಕರಣ ಕೇಳಿದರು. ಈ ಶಿಕ್ಷಣಕ್ಕಾಗಿ ಮುಂಬೈ ಕರ್ನಾಟಕದ ಪ್ರದೇಶದಲ್ಲಿ ಎಷ್ಟು ತರಗತಿಗಳು ನಡೆದಿವೆ; ಸಾರ್ವಜನಿಕರಿಗೆ ಶಿಕ್ಷಣವನ್ನು ನೀಡಲು

ರಾಜ್ಯದಲ್ಲಿ ಯಾವುದಾದರೂ ವಿಶೇಷವಾದ ಸಂಸ್ಥೆ ಇದೆಯೇ; ಇದ್ದರೇ ಅದು ಎಲ್ಲಿದೆ, ಅದರ ಹೆಸರೇನು ಎಂದು ಪ್ರಶ್ನಿಸುತ್ತಾರೆ. ಮುಂದುವರೆದು ವಯಸ್ಕರು ಸಾಕ್ಷರರಾದ ನಂತರ ಅವರ ಶಿಕ್ಷಣವನ್ನು ಉತ್ತೇಜಿಸಲು ಆದರ್ಶ ಕನ್ನಡ ಸಾಹಿತ್ಯವನ್ನು ಪ್ರಕಟಿಸಬೇಕು ಎಂಬ ಸರಕಾರದ ಯೋಜನೆ ಇದೆ. ಈ ಕಾರ್ಯಕ್ಕೆ ಮುಂಬೈ ಪ್ರಾಂತ್ಯದಲ್ಲಿ ಯಾವ ಸಂಘಟನೆ ಇದೆ. ಅದು ಯಾವ ರೀತಿಯ ಸಾಹಿತ್ಯವನ್ನು ಎಷ್ಟು ಪ್ರಮಾಣದಲ್ಲಿ ಪ್ರಕಟಿಸಿ ವಿತರಿಸಿದೆ. ಹೀಗೆ ಮೊದಲಾದ ವಿಷಯಗಳ ಕುರಿತು ಮುಂಬೈ ಶಾಸನ ಸಭೆಯಲ್ಲಿ ಚರ್ಚೆಗೆ ಮುಂದಾಗುತ್ತಾರೆ. ಇದರಲ್ಲಿ ವಯಸ್ಕರ ಶಿಕ್ಷಣಕ್ಕೆ ಸರಕಾರ ಒದಗಿಸಿದ ಅನುದಾನವು ಸೂಕ್ತವಾಗಿ ಬಳಕೆಯಾಗಬೇಕು. ಇದು ಅನಕ್ಷರಸ್ಥರಿಗೆ ಶಿಕ್ಷಣ ದೊರೆಯಬೇಕು ಎಂಬ ಕಾಳಜಿಯ ಪೂರ್ವಕವಾಗಿ ವಿಚಾರಿಸಿದರು.

ಆಗ ಲೋಕೋಪಯೋಗಿ ಸಚಿವರಾದ ಡಾ. ದಿನಕರರಾವ್ ಎನ್. ದೇಸಾಯಿ ಅವರು ಮುಂಬೈ ಪ್ರಾಂತದ ಮಹಾರಾಷ್ಟ್ರ, ಗುಜರಾತ್, ಕರ್ನಾಟಕ ಪ್ರದೇಶಗಳಲ್ಲಿ ೧೯೪೮-೧೯೪೯, ೧೯೪೯-೫೦, ೧೯೫೦-೧೯೫೧, ೧೯೫೧-೧೯೫೨ರ ಅವಧಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಮಾಡಿದ ಖರ್ಚು ವೆಚ್ಚದ ಕುರಿತಾದ ಮಾಹಿತಿಯನ್ನು, ಸಾಕ್ಷರತೆಯ ವಿವರವನ್ನು ಅಂಕಿ-ಅಂಶಗಳ ಆಧಾರಿತವಾಗಿ ನೀಡಿರುತ್ತಾರೆ. ಅದು ಈ ಕೆಳಗಿನಂತೆ ಇರುತ್ತದೆ.

ಕ್ರಸಂ.	ಪ್ರದೇಶಗಳ ಹೆಸರು	ವರ್ಷವಾರು ಮಾಡಲಾದ ವೆಚ್ಚದ ವಿವರ			
		೧೯೪೮-೪೯	೧೯೪೯-೫೦	೧೯೫೦-೫೧	೧೯೫೧-೫೨
೧	ಮಹಾರಾಷ್ಟ್ರ ಪ್ರದೇಶ	೨,೪೪,೩೨೯	೫,೧೩,೨೬೯	೫,೫೦,೭೩೩	೨,೭೪,೮೫೦
೨	ಗುಜರಾತ್ ಪ್ರದೇಶ	೧,೯೯,೭೪೫	೨,೫೮,೨೬೩	೩,೦೨,೦೮೧	೧,೩೮,೪೬೧
೩	ಕರ್ನಾಟಕ ಪ್ರದೇಶ	೧,೬೮,೪೩೮	೨,೭೭,೮೬೩	೨,೫೧,೯೯೪	೯೪,೭೮೪
	ಒಟ್ಟು	೬,೧೨,೫೧೨	೧೦,೪೯,೩೯೫	೧೧,೦೪,೮೦೮	೫,೦೮,೦೯೫

ಕ್ರಸಂ.	ಪ್ರದೇಶಗಳ ಹೆಸರು	ವರ್ಷವಾರು ಸಾಕ್ಷರತರ ವಿವರ			
		೧೯೪೮-೪೯	೧೯೪೯-೫೦	೧೯೫೦-೫೧	೧೯೫೧-೫೨
೧	ಮಹಾರಾಷ್ಟ್ರ ಪ್ರದೇಶ	೩೫,೯೬೫	೪೯,೨೮೨	೫೬,೩೭೦	೫೧,೫೩೧
೨	ಗುಜರಾತ್ ಪ್ರದೇಶ	೧೭,೪೧೦	೨೮,೧೫೮	೨೨,೯೮೦	೨೧,೯೧೧
೩	ಕರ್ನಾಟಕ ಪ್ರದೇಶ	೨೪,೯೦೧	೨೯,೬೦೨	೩೫,೨೪೦	೧೬,೩೨೯
	ಒಟ್ಟು	೭೮,೨೮೫	೧,೦೭,೦೪೨	೧,೧೪,೫೯೦	೮೯,೭೬೧

ಸಾಮಾಜಿಕ ಶಿಕ್ಷಣದಲ್ಲಿ ಆಸಕ್ತಿ ಹೊಂದಿದ ಪ್ರಾಥಮಿಕ ಶಿಕ್ಷಕರು ಈ ಕೆಲಸವನ್ನು ಸ್ವಯಂಪ್ರೇರಿತ ಆಧಾರದ ಮೇಲೆ ತೆಗೆದುಕೊಳ್ಳಬಹುದಾಗಿದೆ. ಇಲ್ಲಿಯವರೆಗೆ ತರಗತಿ ನಡೆಸಿದ ಶಿಕ್ಷಕರ ಸಂಖ್ಯೆಯ ಬಗ್ಗೆ ತಿಳಿದಿಲ್ಲ. ಆದರು ಅಂದಾಜು ಪಟ್ಟಿಯನ್ನು ನೀಡಲಾಗಿದೆ.

		ಸಾಮಾಜಿಕ ಶಿಕ್ಷಣದ ತರಗತಿಗಳ ವಿವರ				ಪ್ರಾಥಮಿಕ ಶಿಕ್ಷಕರ ತರಗತಿಗಳ ವಿವರ			
ಕ್ರ ಸಂ	ಪ್ರದೇಶಗಳ ಹೆಸರು	೧೯೪೮-೪೯	೧೯೪೯-೫೦	೧೯೫೦-೫೧	೧೯೫೧-೫೨	೧೯೪೮-೪೯	೧೯೪೯-೫೦	೧೯೫೦-೫೧	೧೯೫೧-೫೨
೧	ಮಹಾರಾಷ್ಟ್ರ ಪ್ರದೇಶ	೬೦೨	೫೫೫೭	೬೩೨೯	೮೪೬೫	೨೫೨೧	೩೪೯೨	೪೪೩೮	೪೫೨೫
೨	ಗುಜರಾತ್ ಪ್ರದೇಶ	೧೭೫೦	೧೯೩೧	೨೦೫೦	೨೬೭೩	೧೨೨೫	೧೩೫೧	೧೪೩೫	೧೮೩೬
೩	ಕರ್ನಾಟಕ ಪ್ರದೇಶ	೨೦೩೦	೩೦೫೩	೩೨೨೩	೨೫೪೭	೧೪೨೧	೨೧೩೫	೨೩೫೪	೧೭೮೩
	ಒಟ್ಟು	೭೩೮೨	೧೦,೫೪೧	೧೧,೬೧೨	೧೩,೬೩೫	೫೧೬೭	೭೩೭೮	೮೨೨೭	೮೧೪೪

ಈ ಕಾರ್ಯ ಸಾಧನೆಗೆ ವಯಸ್ಕರ ಶಿಕ್ಷಣದಲ್ಲಿ ಆಸಕ್ತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರು ಈ ಕೆಲಸವನ್ನು

ಸ್ವಯಂಪ್ರೇರಿತವಾಗಿ ಕೆಲಸ ಮಾಡುತ್ತಾರೆ. ಅದರ ಅಂದಾಜು ಪಟ್ಟಿಯನ್ನು ನೀಡುತ್ತಾರೆ. ೧೯೪೮-೪೯ ರಲ್ಲಿ ೬,೧೨,೫೧೨ ರೂ ವೆಚ್ಚ ಮಾಡಲಾಗುತ್ತದೆ. ಇದಕ್ಕೆ ೭೩೮೨ ತರಗತಿಗಳು ನಡೆದಿದ್ದು, ೫೧೬೭ ಶಿಕ್ಷಕರು ಕಾರ್ಯನಿರ್ವಹಿಸುತ್ತಾರೆ. ಇದರಿಂದ ಒಟ್ಟು ೭೮,೨೮೫ ಜನ ಸಾಕ್ಷರರಾಗುತ್ತಾರೆ. ೧೯೪೯-೫೦ರಲ್ಲಿ ೧೦,೪೯,೩೯೫ ರೂ ವೆಚ್ಚ ಮಾಡಲಾಗುತ್ತದೆ. ಇದಕ್ಕೆ ೧೦,೫೪೧ ತರಗತಿಗಳು ನಡೆದಿದ್ದು, ೭೩೭೮ ಶಿಕ್ಷಕರು ಕಾರ್ಯನಿರ್ವಹಿಸುತ್ತಾರೆ. ಇದರಿಂದ ಒಟ್ಟು ೧,೧೭,೦೪೨ ಜನ ಸಾಕ್ಷರರಾಗುತ್ತಾರೆ. ೧೯೫೦-೫೧ರಲ್ಲಿ ೧೧,೦೪,೮೦೮ ರೂ ವೆಚ್ಚ ಮಾಡಲಾಗುತ್ತದೆ. ಇದಕ್ಕೆ ೧೧,೬೧೨ ತರಗತಿಗಳು ನಡೆದಿದ್ದು, ೮೨೨೭ ಶಿಕ್ಷಕರು ಕಾರ್ಯನಿರ್ವಹಿಸುತ್ತಾರೆ. ಇದರಿಂದ ಒಟ್ಟು ೧,೧೪,೫೯೦ ಜನ ಸಾಕ್ಷರರಾಗಿರುತ್ತಾರೆ. ೧೯೫೧-೫೨ ರಲ್ಲಿ ೫,೦೮,೯೫ ರೂ ವೆಚ್ಚ ಮಾಡಲಾಗುತ್ತದೆ. ಇದಕ್ಕೆ ೧೩,೬೩೫ ತರಗತಿಗಳು ನಡೆದಿದ್ದು, ೮೧೪೪ ಶಿಕ್ಷಕರು ಕಾರ್ಯನಿರ್ವಹಿಸುತ್ತಾರೆ. ಇದರಿಂದ ಒಟ್ಟು ೪೯,೭೬೧ ಜನ ಸಾಕ್ಷರರಾಗುತ್ತಾರೆ.

ಈ ವಯಸ್ಕರ ಶಿಕ್ಷಣ ಪ್ರಕ್ರಿಯೆಗೆ ಕರ್ನಾಟಕ ಪ್ರದೇಶದಲ್ಲಿ ಸ್ವಯಂ ಪ್ರೇರಿತವಾಗಿ ಸಾಮಾಜಿಕ ಶಿಕ್ಷಣ ತರಗತಿಗಳ ಸಂಖ್ಯೆ ೧ ಏಪ್ರಿಲ್ ೧೯೫೨ರ ಪಟ್ಟಿ ಈ ಕೆಳಗಿನಂತಿದೆ.

ಕ್ರ.ಸಂ.	ಜಿಲ್ಲೆಗಳ ಹೆಸರು	ಸಾಮಾಜಿಕ ಶಿಕ್ಷಣ ಸಂಸ್ಥೆಗಳು
೧.	ಧಾರವಾಡ ಜಿಲ್ಲೆ	೫೨೧
೨.	ಬೆಳಗಾವಿ ಜಿಲ್ಲೆ	೪೩೨
೩.	ಬಿಜಾಪೂರ ಜಿಲ್ಲೆ	೪೯೮
೪.	ಕಾರವಾರ ಜಿಲ್ಲೆ	೩೮೫
ಒಟ್ಟು		೨೨೩೬

ಕಾರ್ಯನಿರತ ಸಾಮಾಜಿಕ ಶಿಕ್ಷಣ ಸಂಸ್ಥೆಗಳು

೧. ಆಜಾದ್ ಹಿಂದ್ ಸೇವಾ ಸಂಘ, ಗದಗ, ೨. ಲೋಕಸೇವಾ ಸಮಿತಿ, ಧಾರವಾಡ, ೩. ಸೈದಾಪುರ ಲೋಕಸೇವಾ ಸಮಿತಿ, ಸೈದಾಪುರ. ಧಾರವಾಡ ಜಿಲ್ಲೆ, ೪. ಮೊರಬ ಸಾಮಾಜಿಕ ಶಿಕ್ಷಣ ಸಮಿತಿ, ಮೊರಬ, ಧಾರವಾಡ ಜಿಲ್ಲೆ, ೫. ಬೆಳಗಾವಿ ಲೋಕಶಿಕ್ಷಣ ಸಮಿತಿ, ಬೆಳಗಾವಿ, ೬. ಬೋಲೆಗಾವ್ ಸಮಾಜಸೇವಾ ಸಮಿತಿ ಬೋಲೆಗಾವ, ಬಿಜಾಪುರ ಜಿಲ್ಲೆ.

ಪ್ರಾದೇಶಿಕ ಸಾಮಾಜಿಕ ಶಿಕ್ಷಣ ಸಮಿತಿ ಕರ್ನಾಟಕದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿ ಸಾಮಾಜಿಕ ಶಿಕ್ಷಣದ ಮೇಲೆ ಸಾಹಿತ್ಯವನ್ನು ರಚಿಸಲಾಗುತ್ತಿದೆ. ಅವು ಈ ಕೆಳಗಿನಂತಿವೆ.

೧. ಪ್ರಕಟಣಾ ಪತ್ರ- ಘೋಷಣೆಗಳನ್ನು (ಐದು ಪ್ರಕಟಣಾ ಪತ್ರಗಳು).

೨. ವರ್ಣಮಾಲೆಗಳ ಪಟ್ಟಿಯಲ್ಲಿ ಚಿತ್ರಗಳು ಮತ್ತು ಕನ್ನಡದಲ್ಲಿ ಅವುಗಳ ಹೆಸರು.

೩. ಕಿರುಪುಸ್ತಕಗಳು-ಗ್ರಾಮಧರ-ಫಲಗಳು, ಆತ್ಮೋಧ್ಧಾರ-ಏಕ ಪಾತ್ರಾಭಿನಯ ಮತ್ತು ಲಾವಣಿಗಳ ಸಂಗ್ರಹ.

೪. ಕರಪತ್ರಗಳು-ನಾಗರೀಕರ ಪುಸ್ತಕಗಳು.

೫. ಸುತ್ತೋಲೆಗಳು-ನಮ್ಮ ಗ್ರಾಮ, ನಮ್ಮ ಪಟ್ಟಣ, ನಮ್ಮ ಭಾರತ, ಪ್ರಯಾಣದ ಯೋಚನೆಗಳು,

ಹೇಗೆ ಮನುಷ್ಯನು ವೇಗವಾಗಿ ಪ್ರಯಾಣಿಸಲು ಕಲಿಯುತ್ತಾನೆ, ಹೊಸ ಪ್ರಪಂಚದ ಕಟ್ಟಡ.

ಈ ಎಲ್ಲಾ ಕಲಿಕಾ ಸಾಮಗ್ರಿಗಳನ್ನು ಅಧಿಕಾರಿಗಳ ಮೂಲಕ ಪರಿಶೀಲಿಸಿದೆ. ಸಮಿತಿಯು ಮಾಸಿಕ ನಿಯತಕಾಲಿಕೆ 'ಪ್ರಕಾಶ'ವನ್ನು ಪ್ರಕಟಿಸುತ್ತಿದೆ. ಇದರಲ್ಲಿ ಕಥೆಗಳು, ಉಪನ್ಯಾಸಗಳು, ವಿವಿಧ ವಿಷಯದ ಮೇಲೆ ಪ್ರಬಂಧಗಳು ಮತ್ತು ಹಳ್ಳಿಗಳ ಆಸಕ್ತಿಯ ವಿಷಯಗಳನ್ನು ಪ್ರಕಟಿಸುತ್ತಿದೆ. ಅಂದು ಆ ನಿಯತಕಾಲಿಕೆಯ ಪರಿಚಲನೆಯು ೧೫೦೦ ಪ್ರತಿಗಳಲ್ಲಿದೆ. ಬಹುತೇಕ ಚಂದಾದಾರರು ಗ್ರಾಮ ಪಂಚಾಯತಿಗಳು, ಸಾಮಾಜಿಕ ಶಿಕ್ಷಣ ಕೇಂದ್ರಗಳು ಮತ್ತು ಗ್ರಾಮ ಗ್ರಂಥಾಲಯಗಳು ಆಗಿರುತ್ತವೆ ಎಂದು ತಿಳಿಸುತ್ತಾರೆ.[೩]

ಅಂದಾನಪ್ಪ ದೊಡ್ಡಮೇಟಿಯವರ ಸ್ವಗ್ರಾಮವಾದ ಜಕ್ಕಲಿ ಗ್ರಾಮದಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ ನಿಧಿಯನ್ನು ಸಂಗ್ರಹಿಸಲಾಗಿತ್ತು. ಆದರೆ ಶಾಲಾಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಲಿಲ್ಲ. ನಿರ್ಮಾಣ ಕಾರ್ಯ ವಿಳಂಬಕ್ಕೆ ಕಾರಣಗಳೇನು ಎಂಬುದರ ಸ್ಪಷ್ಟೀಕರಣಕ್ಕಾಗಿ ಮುಂಬೈ ಸರಕಾರದ ಶಾಸನಸಭೆಯಲ್ಲಿ ಈ ಕೆಳಗಿನಂತೆ ಚರ್ಚಿಸುತ್ತಾರೆ.

ರೋಣ ತಾಲೂಕಿನ ಜಕ್ಕಲಿ ಗ್ರಾಮದಲ್ಲಿ ೧೯೦೬ರಲ್ಲಿ ಶಾಲಾ ಕಟ್ಟಡ ನಿಧಿಯನ್ನು ಸಂಗ್ರಹಿಸಲಾಗಿದೆ. ಅದನ್ನು ಧಾರವಾಡದ ಜಿಲ್ಲಾ ಸ್ಥಳೀಯ ಮಂಡಳಿಯಲ್ಲಿ ಜಮಾ ಮಾಡಲಾಗಿದೆ. ಆ ಹಣದಿಂದ ಯುದ್ಧದ ಬಾಂಡ್‌ಗಳನ್ನು ಖರೀದಿಸಲಾಗಿರುತ್ತದೆ. ಜಕ್ಕಲಿ ಗ್ರಾಮಸ್ಥರು ಮತ್ತು ಪಂಚಾಯಿತ್ ಸದಸ್ಯರು ಜಿಲ್ಲಾಧಿಕಾರಿಗಳನ್ನು ಜೊತೆಗೆ ಶಾಲಾ ಮಂಡಳಿಯನ್ನು ಶಾಲಾ ಕಟ್ಟಡ ನಿರ್ಮಾಣಕ್ಕೆ ಒತ್ತಾಯಿಸುತ್ತಾರೆ. ಆದರೂ ಸರಕಾರ ಶಾಲಾ ಕಟ್ಟಡ ನಿರ್ಮಾಣಕ್ಕೆ ಭೂಮಿಯನ್ನು ಪಡೆಯದೆ, ಕಟ್ಟಡ ಕೆಲಸ ಪ್ರಾರಂಭಿಸದೆ ನಿಷ್ಕಾಳಜಿ ತೋರುತ್ತದೆ. ಇದಕ್ಕಾಗಿ ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಎಂದು ಅಂದಾನಪ್ಪ ಮುಂಬೈ ಶಾಸನಸಭೆಯಲ್ಲಿ ವಿಚಾರಿಸುತ್ತಾರೆ. ಆಗ ಬಿ. ಜಿ. ಖೇರ್‌ರವರು ಸಂಗ್ರಹಿಸಿದ ಹಣವನ್ನು ಅಂಚೆ ಇಲಾಖೆಯ ಉಳಿತಾಯ ಖಾತೆಯಲ್ಲಿ ಇಡಲಾಗಿತ್ತು. ಅದನ್ನು ಧಾರವಾಡ ಜಿಲ್ಲಾ ಸ್ಥಳೀಯ ಮಂಡಳಿಯ 'ಪ್ರಾಥಮಿಕ ಶಿಕ್ಷಣ ನಿಧಿ'ಗೆ ೮೧೨.೫ ರೂಪಾಯಿಗಳನ್ನು ೨೮ನೇ ಮೇ ೧೯೨೬ರಂದು ಜಮಾ ಮಾಡಲಾಗಿದೆ. ಧಾರವಾಡ ಜಿಲ್ಲಾ ಕಟ್ಟಡ ಕಮೀಟಿಯು ಕಟ್ಟಡ ನಿರ್ಮಾಣಕ್ಕೆ ಭೂಮಿ ಸ್ವಾಧೀನಕ್ಕೆ ಮುಂದಾಗಿದೆ ಎಂದು ತಿಳಿಸುತ್ತಾರೆ. ಅದಕ್ಕೆ ಅಂದಾನಪ್ಪನವರು ಶಾಲಾ ಕಟ್ಟಡಕ್ಕೆ ಬೇಕಾದ ಭೂಮಿಯನ್ನು ತುರ್ತು ಷರತ್ತಿನ ಅನ್ವಯ ಸ್ವಾಧೀನಕ್ಕೆ ಪ್ರಯತ್ನಿಸಬೇಕು ಮತ್ತು ಶಾಲಾ ಕಟ್ಟಡ ನಿರ್ಮಾಣಕ್ಕೆ ಸೂಚಿಸಬೇಕು ಎಂದು ಆಗ್ರಹಿಸಿದರು.[೪]

ಮುಂದುವರೆದು, ಈ ಸುಮಾರು ಇಪ್ಪತು ವರ್ಷದಿಂದ ಈ ವಿಷಯ ನೆನೆಗುದಿಗೆ ಬಿದ್ದಿರುವುದಕ್ಕೆ ಜಿಲ್ಲಾ ಸ್ಥಳೀಯ ಮಂಡಳಿಯ ನಿರ್ಲಕ್ಷ್ಯವೇ ಕಾರಣವಾಗಿರುತ್ತದೆ. ಗ್ರಾಮಸ್ಥರು ಶಾಲಾ ಕಟ್ಟಡಕ್ಕಾಗಿ ಹಣ ಕೊಟ್ಟು ಭೂಮಿ ಖರೀದಿಸಿ ಕೊಟ್ಟಿದ್ದಾಗಿ ತಿಳಿದುಬರುತ್ತದೆ. ಅಲ್ಲದೇ ರೂ. ೮೧೨.೫ಗಳಲ್ಲಿ ಕಟ್ಟಡ ನಿರ್ಮಾಣ ಸಾಧ್ಯವಿಲ್ಲ. ಖೇರರವರು ಸದ್ಯದ ಪರಿಸ್ಥಿತಿಯಲ್ಲಿ ನಿರ್ಮಾಣದ ವೆಚ್ಚ ಅಧಿಕಗೊಂಡಿದ್ದು ಅದರಂತೆ ಸಂಗ್ರಹಿತ ಹಣದ ಬಡ್ಡಿಯು ಸಹ ಸಾವಿರ ಪಟ್ಟು ಅಧಿಕವಾಗಿದೆ, ಈ ಹಣದ ಜೊತೆಗೆ ಉಳಿದ ಹೆಚ್ಚುವರಿ ಹಣವನ್ನು ಸರಕಾರ ಭರಿಸಲಿದೆ ಎಂದು ಉತ್ತರಿಸಿದರು. ಎಂ. ಸಿ. ವಕೀಲರವರು ಪ್ರಸ್ತುತ ವರ್ಷ ಅಂದರೆ ೧೯೪೮ರ ಬಜೆಟ್‌ನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ನಲವತ್ತೇಳು ಲಕ್ಷ ರೂಪಾಯಿ ನೀಡಲಾಗಿದೆ. ಆದರೆ ಜಿಲ್ಲಾವಾರು ಹಂಚಿಕೆ ಮಾಡಿಲ್ಲ. ಧಾರವಾಡ ಜಿಲ್ಲಾ ಕಟ್ಟಡ ಸಮಿತಿಗೆ ಕೂಡಲೇ ಕಟ್ಟಡ ನಿರ್ಮಿಸಬೇಕೆಂದು ತಿಳಿಸಲಾಗಿರುತ್ತದೆ.[೫] ಈ ರೀತಿ ನಿರಂತರ ಒತ್ತಾಯಗಳಿಂದಾಗಿ ಕೊನೆಗೆ ರೋಣ ನಗರದ ಗುತ್ತಿಗೆದಾರರಾದ ಬಸರಿಗಿಡದ ಇವರು ೧೯೫೦ರಲ್ಲಿ ಶಾಲಾ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಾರೆ. ಈ ಕಾರ್ಯ ೧೯೫೫ ಫೆಬ್ರವರಿ ೬ರಂದು ಪೂರ್ಣಗೊಂಡಿತು. ಆಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ ಉಪಕುಲಪತಿ ಡಿ.ಸಿ. ಪಾವಟೆಯವರಿಂದ ಉದ್ಘಾಟಿಸಲಾಗುತ್ತದೆ. ಈ ಸುಸಜ್ಜಿತವಾದ ಕಟ್ಟಡದ ಮಧ್ಯದಲ್ಲಿ ಗಾಂಧೀಜಿ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಗುತ್ತದೆ.[೬]

ಧಾರವಾಡದಲ್ಲಿ ಕರ್ನಾಟಕ ಸಾರ್ವಜನಿಕ ಕರ್ನಾಟಕ ಕೃಷಿ ಕಾಲೇಜು ಸ್ಥಾಪನೆಯ ಕುರಿತು ಅಂದಾನಪ್ಪನವರು ಮುಂಬೈ ಶಾಸನಸಭೆಯಲ್ಲಿ ವಿಚಾರಿಸುತ್ತಾರೆ. ಧಾರವಾಡದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಕಾಲೇಜು ಪ್ರಾರಂಭಿಸುವ ಯೋಜನೆ ಸರಕಾರದ ಪರಿಗಣನೆಯಲ್ಲಿದೆ ಎಂದು ಅರಣ್ಯ ಮತ್ತು ಕೃಷಿ ಸಚಿವರಾದ ಎಂ.ಪಿ. ಪಾಟೀಲ ಉತ್ತರಿಸುತ್ತಾರೆ.[೭] ಅದೇ ರೀತಿಯಾಗಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್‌ಗೆ ಸದಸ್ಯರ ನಾಮಕರಣ ಕುರಿತ ಚರ್ಚೆಯಲ್ಲಿ–ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯು ಧಾರವಾಡ, ಬೆಳಗಾವಿ, ಬಿಜಾಪೂರ, ಉತ್ತರ ಕನ್ನಡ ನಾಲ್ಕು ಜಿಲ್ಲೆಗಳಲ್ಲಿ ವಿಸ್ತರಿಸಿದೆ. ೧೯೪೯ರ ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ ಅಡಿಯಲ್ಲಿ ೧೦ ಸದಸ್ಯರನ್ನು ವಿಶ್ವವಿದ್ಯಾಲಯದ ಆಡಳಿತ ವಿಧ್ವಂಸಕ ಮಂಡಳಿಗೆ ನಾಮನಿರ್ದೇಶನ ಮಾಡಲಾಗಿದೆ. ನಾಮನಿರ್ದೇಶನಗೊಂಡ ವ್ಯಕ್ತಿಗಳು ಯಾರು ಮತ್ತು ಪ್ರತಿ ಜಿಲ್ಲೆಯಿಂದ ಎಷ್ಟು ಜನರಿದ್ದಾರೆ, ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ, ಅದರಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಯಾರು ಆಯ್ಕೆಗೊಂಡಿರುವದಿಲ್ಲ ಅದಕ್ಕೆ ಕಾರಣವೇನು ಎಂದು ಕೇಳಿದರು. ಆಗ ಬಿ.ಜಿ. ಖೇರ್ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿ ನಾಲ್ಕು ಜಿಲ್ಲೆಗಳನ್ನು ಒಳಗೊಂಡಿದ್ದು, ವಿಶ್ವವಿದ್ಯಾಲಯ ಕಾಯ್ದೆ ಪ್ರಕಾರ ಸದಸ್ಯರನ್ನು ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆಗೊಂಡ ಸದಸ್ಯರೆಂದರೆ–

೧. ಆರ್.ಎಸ್. ಹುಕ್ಕೇರಿಕರ, ಎಂ.ಎ, ವಿಧಾನಸಭೆಯ ಸದಸ್ಯರು,ಧಾರವಾಡ.

೨. ವ್ಹಿ.ಕೆ.ಗೋಕಾಕ, ಎಂ.ಎ, ಬಿ.ಎ, ಪ್ರಾಚಾರ್ಯರು ರಾಜಾರಾಮ ಕಾಲೇಜ್, ಕೊಲ್ಲಾಪೂರ.

೩. ಶ್ರೀಮತಿ ಪದ್ಮಾವತಿದೇವಿ.ಎಸ್.ಅಂಗಡಿ, ಬಿ.ಎ, ಎಲ್.ಎಲ್.ಬಿ, ತಿಳಕವಾಡಿ, ಬೆಳಗಾವಿ.

೪. ಎ.ಬಿ.ಲ್ಯಾಥೆ, ಎಂ.ಎ, ಎಲ್.ಎಲ್.ಬಿ, ತಿಳಕವಾಡಿ, ಬೆಳಗಾವಿ.

೫. ಪ್ರೋ. ವಿ.ಎಂ.ದೀಕ್ಷಿತ್ ಪಟವರ್ಧನ, ಎಂ.ಎಸ್ಸಿ, ಪ್ರಿಂರೋಸ್ ವಿಲ್ಲಾ, ಧಾರವಾಡ.

೬. ಎ.ಎ.ಕಿತ್ತೂರು, ಬಿ.ಎ, ಎಲ್.ಎಲ್.ಬಿ, ವಿಧಾನಸಭೆಯ ಸದಸ್ಯರು, ಲೈನ್ ಬಜಾರ, ಧಾರವಾಡ.

೭. ಕುಮಾರಿ ಯಮುನಾಬಾಯಿ, ಇಂಗಳಗಿ, ಬಿ.ಎ, ಬಿ.ಟಿ, ಮಹಿಳಾ ತರಬೇತಿ ಕಾಲೇಜ್, ಹುಬ್ಬಳ್ಳಿ.

೮. ಆರ್.ಎಸ್.ಪಂಚಮುಖಿ, ಎಂ.ಎ, ನಿರ್ದೇಶಕರು. ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ.

೯. ಬಿ.ವಿ.ಭೂಮರಡ್ಡಿ, ತೈಲ ವ್ಯಾಪಾರಸ್ಥರು, ನ್ಯೂ ಚಿಂಚ ಬಂಡರ್, ಬಾಂಬೆ-೧೧೮.

೧೦. ಜಗದ್ಗುರು ಗುರುಸಿದ್ಧರಾಜಯೋಗಿಂದ್ರ ಮಹಾಸ್ವಾಮಿಗಳು, ಮೂರುಸಾವಿರಮಠ. ಹುಬ್ಬಳ್ಳಿ.

ಉಪಕುಲಪತಿಗಳ ಸಲಹೆ ಮೇರೆಗೆ ಕುಲಪತಿಗಳು ನಾಮನಿರ್ದೇಶನ ಮಾಡಿದ ಸದಸ್ಯರಲ್ಲಿ ಶಿಕ್ಷಣ ತಜ್ಞರು, ಮಹಿಳೆಯರು, ಭಾಷಾ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರು ಮತ್ತು ಇತರೆ ವಿಶೇಷ ಹಿತಾಸಕ್ತಿಗಳ ಪ್ರತಿನಿಧಿಗಳು ಸೇರಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯವರಿಲ್ಲದ ಕಾರಣ ಜಿಲ್ಲಾವಾರು ನಾಮನಿರ್ದೇಶನ ಮಾಡಿಲ್ಲ ಎಂದು ತಿಳಿಸುತ್ತಾರೆ.[೯]

ಹೀಗೆ ಕನ್ನಡ ಪ್ರದೇಶದ ಜನಪ್ರತಿನಿಧಿಯಾಗಿ ಮುಂಬೈ ಶಾಸನಸಭೆಯಲ್ಲಿ ಕನ್ನಡಿಗರ ಶೈಕ್ಷಣಿಕ ಚಿಂತನೆಗಳ ಬಗ್ಗೆ ಕಾಳಜಿಪೂರ್ವಕವಾಗಿ ಚರ್ಚಿಸಿರುತ್ತಾರೆ. ಕನ್ನಡಿಗರು ಉನ್ನತ ಶಿಕ್ಷಣಕ್ಕಾಗಿ ಮಹಾರಾಷ್ಟ್ರದ ವಿವಿಧ ಪಟ್ಟಣಗಳಿಗೆ ಹೋಗುವ ಪರಿಪಾಟಿದ್ದು, ಅದಕ್ಕೆ ಕಾರಣ ಕರ್ನಾಟಕದಲ್ಲಿ ಶೈಕ್ಷಣಿಕ ಸೌಲಭ್ಯಗಳ ಕೊರತೆ ಕಾರಣವಾಗಿರುತ್ತದೆ. ಕನ್ನಡಿಗರ ಶಿಕ್ಷಣದ ಬಗ್ಗೆ ಮುಂಬೈ ಶಾಸನಸಭೆಯಲ್ಲಿ ಸದಸ್ಯರಾಗಿದ್ದ ಕಾಲದಲ್ಲಿಯೇ ಅನೇಕ ಬಾರಿ ಚರ್ಚಿಸಿದಂತೆ ಮೈಸೂರು ವಿಧಾನಸಭೆಯ ಸದಸ್ಯರಾದ ನಂತರ ಈ ಸಮಸ್ಯೆಗಳ ಬಗ್ಗೆ ಚರ್ಚೆ ಮುಂದುವರೆಸಿದ್ದು ವಿಶೇಷ. ೧೯೫೭-೫೮ರ ಕಾಲಘಟ್ಟದಲ್ಲಿ ಕರ್ನಾಟಕದ ಚಿತ್ರಕಲೆಯ ಶಿಕ್ಷಣ ಪಡೆಯುತ್ತಿದ್ದವರು ಉನ್ನತ ಶಿಕ್ಷಣಕ್ಕೆ ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದರು. ಅಂದಾನಪ್ಪ ದೊಡ್ಡಮೇಟಿಯವರು ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ ಸರ್ವ ಕ್ಷೇತ್ರದಲ್ಲಿಯೂ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುತ್ತೇವೆ ಎಂದು ಮುಂಬೈ ಶಾಸನಸಭೆಯಲ್ಲಿ ಅನೇಕ ಸಾರಿ ಹೆಮ್ಮೆಯಿಂದ ಹೇಳಿಕೊಂಡಿದ್ದರು. ಆದರೆ ಕನ್ನಡಿಗರು ನೆರೆಯ ರಾಜ್ಯಗಳಿಗೆ ಅಧ್ಯಯನಕ್ಕಾಗಿ ಹೋಗುತ್ತಿರುವದನ್ನು ಕಂಡು ಬೇಸರವನ್ನು ವ್ಯಕ್ತಪಡಿಸುತ್ತಾರೆ. ಅಲ್ಲದೇ ಏಕೀಕೃತ ನವ ಮೈಸೂರು ವಿಧಾನಸಭೆಯಲ್ಲಿ ಕೂಡ ಶೈಕ್ಷಣಿಕ ವಿಚಾರಗಳನ್ನು ಅಂದಾನಪ್ಪ ದೊಡ್ಡಮೇಟಿ ಚರ್ಚಿಸುತ್ತಾರೆ.

ಅಡಿಟಿಪ್ಪಣಿಗಳು

೧. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೊಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೩೫೦೦೩, ಸಪ್ಟೆಂಬರ್ ೧೯೪೯, ಪು. ೩೪೪.

೨. ಅದೇ. ಪು. ೧೬೯೫.

೩. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೋಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೨೪೯೭೪/೧, ಜುಲೈ ೧೯೫೨, ಪು. ೧೨೬೭.

೪. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೊಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೨೪೯೫೮, ಸೆಪ್ಟೆಂಬರ್ ೧೯೪೮, ಪು. ೪೪೬.

೫. ಅದೇ. ಪು. ೪೪೬

೬ ಜಕ್ಕಲಿ ಪ್ರಾಥಮಿಕ ಶಾಲೆಯ ಉದ್ಘಾಟನಾ ಶಿಲಾಫಲಕದ ಮಾಹಿತಿ.

೭. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೊಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೧೬೭೭೨/ಎ, ಜೂನ್ ೧೯೪೬, ಪು. ೪೨೪.

೮. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೊಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೨೪೯೬೫/೧, ಏಪ್ರಿಲ್ ೧೯೫೦, ಪು. ೨೭೭೩.

೯. ಮುಂಬೈ ಅಸೆಂಬ್ಲಿ ಡಿಬೇಟ್ಸ್, ಪೊಲಿಟಿಕಲ್ ಸೆಕ್ಷನ್ ಪಬ್ಲಿಕೇಷನ್, ರಾಜ್ಯ ಪತ್ರಾಗಾರ ಇಲಾಖೆ, ಮಹಾರಾಷ್ಟ್ರ ಸರಕಾರ, ಆರ್-೧೨೫೭೩/೧, ಏಪ್ರಿಲ್ ೧೯೩೮, ಪು. ೧೭೦೪.

◆◆

೧೦೫

ಮಹಾಂತೇಶ ಕುತನಿ

ಸ್ಕೌಟ್ ಮತ್ತು ಗೈಡ್ಸ್ ಚಳವಳಿಯ ಬೆಳವಣಿಗೆಯಲ್ಲಿ ಮೈಸೂರು ಒಡೆಯರ ಪಾತ್ರ

೨೦ನೇ ಶತಮಾನದಲ್ಲಿ ಮಾನವನ ಏಳಿಗೆಗಾಗಿ ಜಾಗತಿಕವಾಗಿ ಅನೇಕ ಸಂಘ ಸಂಸ್ಥೆ ಸಂಘಟನೆಗಳು ಸ್ಥಾಪನೆಯಾದವು ಅವುಗಳಲ್ಲಿ ಯುವ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ಸ್ಥಾಪನೆಯಾದ ಸಂಘಟನೆಯೆಂದರೆ ಸ್ಕೌಟಿಂಗ್ ಸಂಘಟನೆ ವಿಶೇಷವಾಗಿ ೫ ರಿಂದ ೨೧ ವರ್ಷದ ಗಂಡು ಮತ್ತು ಹೆಣ್ಣು ಮಕ್ಕಳ ಸರ್ವ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ವೇದಿಕೆಯಾಗಿದೆ ಅಲ್ಲದೇ ಉತ್ತಮ ಚಾರಿತ್ರ್ಯ ಸಮಾಜದ ಪರಿವರ್ತನೆಗೆ ಕಾರಣವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. 'ಭಾರತದ ಪ್ರತಿಯೊಂದು ಮನೆಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳಂತಹ ಮಕ್ಕಳಿರಬೇಕೆಂದು ನಾನು ಅಪೇಕ್ಷಿಸುತ್ತೇನೆ'. ಈ ಅಭಿಪ್ರಾಯವು ಸ್ಕೌಟ್ ಮತ್ತು ಗೈಡ್‌ನ ಮಹತ್ವವನ್ನು ವಿವರಿಸುತ್ತದೆ.

ಸ್ಕೌಟ್ ಚಳುವಳಿಯ ಆರಂಭ: ಈ ಸಂಘಟನೆ ಸ್ಥಾಪನೆಯಾಗಿದ್ದು ಬ್ರಿಟೀಷ್ ಸೈನ್ಯಾಧಿಕಾರಿ ಬೇಡನ್ ಪೊವೆಲ್‌ರವರಿಂದ ೧೯೦೭ ರಲ್ಲಿ ಇಂಗ್ಲೀಷ್ ಕಡಲ್ಗಾಲುವೆಯ ಬದಿಯಲ್ಲಿರುವ ಬ್ರೌನ್ಸಿ ದ್ವೀಪದಲ್ಲಿ ೨೦ ಬಾಲಕರ ತಂಡವನ್ನು ಕರೆದೊಯ್ದು ಮೊದಲನೇ ಬಾಯ್ಸ್ ಸ್ಕೌಟ್ ಶಿಬಿರವನ್ನು ಯಶಸ್ವಿಯಾಗಿ ನಡೆಸಿದರು. ತದನಂತರ ೧೯೦೮ ರಲ್ಲಿ ೬ ಕಂತಿನಲ್ಲಿ ಸ್ಕೌಟಿಂಗ್ ಫಾರ್ ಬಾಯ್ಸ್ ಶೀರ್ಷಿಕೆಯಡಿಯಲ್ಲಿ ಲೇಖನಗಳನ್ನು ಪ್ರಕಟಿಸಿದರು. ಅನಂತರ ಲೇಖನಗಳನ್ನು ಪರಿಷ್ಕರಿಸಿ ೧ನೇ ಮೇ ೧೯೦೮ ರಲ್ಲಿ ಸ್ಕೌಟಿಂಗ್ ಫಾರ್ ಬಾಯ್ಸ್ ಎಂಬ ಪುಸ್ತಕದ ರೂಪದಲ್ಲಿ ಪ್ರಕಟಿಸಿದರು. ಕೆಲವೇ ದಿನಗಳಲ್ಲಿ ಈ ಪುಸ್ತಕದ ಕುರಿತು ಪ್ರಶಂಸೆಯ ಪತ್ರಗಳು ಮತ್ತು ಮಾರ್ಗದರ್ಶನಕ್ಕಾಗಿ ಬೇಡನ್ ಪೊವೆಲ್‌ರಿಗೆ ತಲುಪಿದವು. ಇದರಿಂದ ಸ್ಫೂರ್ತಿಗೊಂಡು ಲಂಡನ್ನಿನ ಕ್ರಿಸ್ಟಲ್ ಪ್ಯಾಲೆಸ್‌ನಲ್ಲಿ ಪ್ರಥಮ ಸ್ಕೌಟ್ ಮೇಳವನ್ನು ಯಶಸ್ವಿಯಾಗಿ ನಡೆಸಿದರು.[೧]

ಈ ಸ್ಕೌಟ್ ಮೇಳದಲ್ಲಿ ೧೧,೦೦೦ ಬಾಲಕರು ೭ ಬಾಲಕಿಯರು ಭಾಗವಹಿಸಿದ್ದರು. ತಮ್ಮ ಸಹೋದರಿ ಆಗ್ನೇಸ್ ಬೇಡನ್ ಪೊವೆಲ್‌ರ ಅಪೇಕ್ಷೆಯಂತೆ ಬಾಲಕಿಯರಿಗಾಗಿ ಗೈಡ್ಸ್ ವಿಭಾಗ ಆರಂಭಿಸಿದರು[೨]. ಈ ರೀತಿಯಾಗಿ ೧೯೦೮ರಲ್ಲಿ ಸ್ಕೌಟ್ ಮತ್ತು ಗೈಡ್ಸ್ ಸಂಘಟನೆ ಲಂಡನ್ನಿನಲ್ಲಿ ಆರಂಭವಾಯಿತು. ಕ್ರಮೇಣವಾಗಿ ಜಗತ್ತಿನಾದ್ಯಂತ ಈ ಸಂಘಟನೆ ಚಳುವಳಿಯ ರೂಪದಲ್ಲಿ ಬೆಳೆಯುತ್ತಾ ಸಾಗಿತು.

ಇತಿಹಾಸ ಉಪನ್ಯಾಸಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಕೊಪ್ಪ, ಮದ್ದೂರು ತಾಲ್ಲೂಕು
ಮಂಡ್ಯ ಜಿಲ್ಲೆ
ಮೊ: ೯೯೧೬೧ ೧೩೩೮೫

ಭಾರತಕ್ಕೆ ಸ್ಕೌಟ್‌ಗೈಡ್ ಚಳವಳಿಯ ಪ್ರವೇಶ: ಸ್ಕೌಟ್ ಚಳವಳಿ ಭಾರತದಲ್ಲಿ ಮೊದಲ ಬಾರಿಗೆ ಆರಂಭವಾದದ್ದು ಕರ್ನಾಟಕದ ಬೆಂಗಳೂರಿನ ಬಿಷಪ್‌ಕಾಟನ್ ಶಾಲೆಯಲ್ಲಿ ಟಿಎಸ್ ಬೇಕರ್ ಪ್ರಾರಂಭಿಸಿದರು. ಅದೇ ಸಂದರ್ಭದಲ್ಲಿ ಲೆಪ್ಟಿನಂಟ್ ಕರ್ನಲ್ ಪಕೆನ್ಹಮ್ ವಾಲ್ಪ್ ಎಂಬುವರಿಂದ ಜಬಲಪುರದಲ್ಲೂ ಕ್ಯಾಪ್ಟನ್ ಟಾಡ್ ರವರಿಂದ ಮಹಾರಾಷ್ಟ್ರದ ಪುಣೆಯ ಬಳಿಯ ಕರ್ಕಿಯಲ್ಲೂ ಸ್ಕೌಟ್ ತಂಡಗಳು ಆರಂಭವಾದವು. ಆರಂಭದಲ್ಲಿ ಈ ತಂಡಗಳಲ್ಲಿ ಯುರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ ಮಕ್ಕಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿತ್ತು. ತದನಂತರ ಭಾರತೀಯರಿಗೂ ಅವಕಾಶ ನೀಡಲಾಯಿತು[೩]. ಈ ಚಳುವಳಿ ಭಾರತದಲ್ಲಿ ಪ್ರಥಮವಾಗಿ ಮೈಸೂರು ಸಂಸ್ಥಾನದ ಅಧೀನದಲ್ಲಿದ್ದ ಬೆಂಗಳೂರಿನಲ್ಲಿ ಆರಂಭವಾಗಿದ್ದು ಮೈಸೂರ ಸಂಸ್ಥಾನದ ಮುಂದೆ ಮೈಸೂರು ಒಡೆಯರ ಪ್ರೋತ್ಸಾಹದಿಂದ ಸಂಸ್ಥಾನಾದಾದ್ಯಂತ ವಿಸ್ತರಿಸಿತು.

ಸ್ಕೌಟ್ ಚಳವಳಿಗೆ ಮೈಸೂರು ಒಡೆಯರ ಕೊಡುಗೆಗಳು: ಮೈಸೂರು ಸಂಸ್ಥಾನದಲ್ಲಿ ಸ್ಕೌಟ್ ಚಳವಳಿ ವಿಸ್ತಾರವಾಗಿ ಹರಡುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಜಯಚಾಮರಾಜೇಂದ್ರ ಒಡೆಯರ ಕೊಡುಗೆ ಮಹತ್ವದ್ದಾಗಿದೆ. ಆರಂಭದ ಸಂದರ್ಭದಲ್ಲಿ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ೧೯೧೭ ಅಕ್ಟೋಬರ್ ೩ರಂದು ಎಲ್ಲ ಶಾಲೆಗಳಲ್ಲಿ ಸ್ಕೌಟ್ ಚಟುವಟಿಕೆ ಸ್ಥಾಪನೆಗೆ ರಾಜಾಜ್ಞೆ ಮಾಡಿದರು. ಈ ರೀತಿಯಾಗಿ ೧೯೧೭ರಲ್ಲಿ ಮೈಸೂರು ಸರಕಾರವೇ ಆದೇಶ ಹೊರಡಿಸಿ ಸ್ಕೌಟ್ ಮತ್ತು ಗೈಡ್ ಪ್ರಾರಂಭಿಸುವ ಮೂಲಕ ಸಂಸ್ಥಾನದ ಬಾಲಕ ಬಾಲಕಿಯರಲ್ಲಿ ರಾಷ್ಟ್ರಪ್ರೇಮ, ಪರಸ್ಪರ ಗೌರವ, ದೇಶ ನಿಷ್ಠೆ, ಶಿಸ್ತು, ಸಮಯ ಪ್ರಜ್ಞೆ ಬೆಳೆಸಲು ಪ್ರೇರಣೆ ನೀಡಿತು. ಈ ಮೂಲಕ ಪ್ರ–ಪ್ರಥಮ ಸ್ಕೌಟ್ ತಂಡ ಈ ಆದೇಶದ ನಂತರ ಸ್ಕೌಟ್ ತಂಡಗಳು ಆರಂಭವಾದವು[೪].

ಇದಕ್ಕೆ ಪೂರಕವಾಗಿ ಮಹಾರಾಜರು ದಿ ಬಾಯ್ ಸ್ಕೌಟ್ ಆಫ್ ಮೈಸೂರದ ಮಹಾ ಪೋಷಕರು. ಯುವರಾಜ ಕಂಠೀರವ ನರಸರಾಜ ಒಡೆಯರು ಪ್ರಧಾನ ಸ್ಕೌಟ್ ಆಗಿದ್ದರು. ಅಂದು ನಡೆಯುತ್ತಿದ್ದ ಪ್ರತಿಯೊಂದು ಸ್ಕೌಟ್ ಸಮಾರಂಭದಲ್ಲಿ ಹಾಜರಾಗಿ ಸ್ಕೌಟ್‌ನ್ನು ಪ್ರೋತ್ಸಾಹಿಸುತ್ತಿದ್ದರು. ೧೯೨೭ರಲ್ಲಿ ಯುವರಾಣಿಯವರು ದಿ ಗರ್ಲ್ ಗೈಡ್ ಆಫ್ ಮೈಸೂರ ಸ್ಥಾಪಿಸಿ, ಅದರ ಮುಖ್ಯಗೈಡ್ ಆಗಿದ್ದರು. ಬಾಲಕ ಜಯಚಾಮರಾಜೇಂದ್ರ ಒಡೆಯರ ಮುಖ್ಯ ಕಬ್ ಆಗಿದ್ದರು[೫]. ನಂತರ ನಾಲ್ವಡಿ ಕೃಷ್ಣರಾಜರ ಆಸಕ್ತಿಯಿಂದ ಕೆನಡಾದ ಫ್ರಾಂಕ್ ಇರ್ವಿನ್‌ರವರಿಗೆ ಸ್ಕೌಟ್ ಚಟುವಟಿಕೆಗಳನ್ನು ಬೆಳೆಸಲು ಆಹ್ವಾನ ನೀಡಿದರು. ಈ ಮೂಲಕ ಮೈಸೂರ್ ಬಾಯ್ಸ್‌ನ ಚಟುವಟಿಕೆಗಳು ನಿರಂತರವಾಗಿ ಸಾಗಿದವು. ೧೯೧೮ರ ಏಪ್ರಿಲ್–ಮೇ ನಲ್ಲಿ ಪ್ರಥಮ ಸ್ಕೌಟ್ ತರಬೇತಿ ಶಿಬಿರವನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ೧೨ ಸ್ಕೌಟ್ ತಂಡಗಳು ತರಬೇತಿಯನ್ನು ಪಡೆದುಕೊಂಡಿದ್ದವು, ವರ್ಷಾಂತ್ಯಕ್ಕೆ ಇರ್ವಿನ್ ವರದಿಯಂತೆ ೮೫ ತಂಡಗಳು ತರಬೇತಿಯನ್ನು ಪೂರ್ಣಗೊಳಿಸಿದ್ದವು. ಇರ್ವಿನ್‌ರ ನಂತರ ಸಂಜೀವ ಕಾಮತ್‌ರವರು ೧೯೧೯ರಿಂದ ೧೯೨೨ ರವರೆಗೆ ಸ್ಕೌಟ್ ಚಳವಳಿ ವೃದ್ಧಿಯಾಗಲು ಶ್ರಮಿಸಿದರು. ತದನಂತರ ಸುಬ್ಬುರಾವ್ ಅವರು ಸ್ಕೌಟ್ ಚಳವಳಿಯನ್ನು ಮುಂದುವರೆಸಿದರು. ೧೯೨೧ರಲ್ಲಿ ಮೈಸೂರ ರಾಜ್ಯದ ನಂದಿದುರ್ಗದಲ್ಲಿ ಪ್ರಪ್ರಥಮ ಆಲ್‌ಇಂಡಿಯಾ ರ್‍ಯಾಲಿ ಯಶಸ್ವಿಯಾಗಿ ನಡೆಯಿತು[೬]. ೧೯೨೭ರಲ್ಲಿ ಬಾಯ್ ಸ್ಕೌಟ್ ಆಫ್ ಮೈಸೂರು ವತಿಯಿಂದ ಸಮಗ್ರ ಭಾರತದ ಸ್ಕೌಟ್ ಚಟುವಟಿಕೆಗಳ ವಿವರವಾದ ವರದಿಯನ್ನು ಒಳಗೊಂಡ ಸ್ಕೌಟ್ ಇಯರ್ ಬುಕ್‌ನ್ನು ಪ್ರಕಟಿಸಲಾಯಿತು[೭].

೧೯೨೮ರಲ್ಲಿ ಮೈಸೂರು ಸಂಸ್ಥಾನದ ಚನ್ನಪಟ್ಟಣದಲ್ಲಿ ಪ್ರಥಮ ಚಿಕಿತ್ಸೆಗಳ ಸಮಾವೇಶ ನಡೆಯಿತು. ಇದು ಭಾರತದಲ್ಲಿ ನಡೆದ ಎರಡನೇ ಸಮಾವೇಶವಾಗಿತ್ತು. ಈ ಸಮಾವೇಶದ ಅಧ್ಯಕ್ಷತೆಯನ್ನು ಯುವರಾಜರು ವಹಿಸಿಕೊಂಡಿದ್ದರು. ತದನಂತರ ದಸರಾ ಸ್ಕೌಟ್ ಮೇಳದಲ್ಲಿ ಭಾಗವಹಿಸಿದ ಸ್ಕೌಟ್ ತಂಡಗಳಿಗೆ ಯುವರಾಜರು ವಿಶೇಷ ಧ್ವಜವನ್ನು ನೀಡಿ ಗೌರವಿಸಿದರು. ನಂತರ ಸ್ಕೌಟ್ ಸಂದೇಶವನ್ನು ನೀಡಿದರು[೮]. ೧೯೩೦ರಲ್ಲಿ ಮೈಸೂರು ನಗರ ಸ್ಕೌಟ್ ಜಿಲ್ಲಾ ಸಂಸ್ಥೆ ಆರಂಭವಾಯಿತು. ತದನಂತರ ಸಂಸ್ಥಾನದ ಉಳಿದ ಜಿಲ್ಲೆಗಳಲ್ಲಿ ಸ್ಕೌಟ್ ಜಿಲ್ಲಾ ಸಂಸ್ಥೆಗಳು ಪ್ರಾರಂಭವಾಗಿ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗಳು ಕಾರ್ಯರೂಪಕ್ಕೆ ಬರತೊಡಗಿದವು. ೧೯೩೧ರಲ್ಲಿ ಭಾರತದ ಮೊಟ್ಟ ಮೊದಲಿನ ವುಡ್ ಬ್ಯಾಡ್ಜ್ ಶಿಬಿರವು ಬೆಂಗಳೂರ ದಕ್ಷಿಣ ಭಾಗದಲ್ಲಿರುವ ಸಾರಕ್ಕಿ ಬಂಡೆಯಲ್ಲಿ ನಡೆಯಿತು. ೧೯೩೩ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೌನ್ಸಿಲ್‌ಗಳ ಸಮ್ಮೇಳನ ಮೈಸೂರಿನಲ್ಲಿ ಯಶಸ್ವಿಯಾಗಿ ಜರುಗಿತು. ಈ ಮೂಲಕ ರಾಜಧಾನಿಯಿಂದ ಆರಂಭವಾದ ಸ್ಕೌಟ್ ಗೈಡ್ ಚಟುವಟಿಕೆಗಳು ಜಿಲ್ಲೆ, ತಾಲೂಕು, ಗ್ರಾಮಗಳಿಗೆ ಪಸರಿಸಿತು[೯]. ೧೯೩೭ರಲ್ಲಿ ಆಲ್ ಇಂಡಿಯಾ ಜಾಂಬೂರಿಯು ದೆಹಲಿಯಲ್ಲಿ ನಡೆಯಿತು. ಈ ಸ್ಕೌಟ್ ಮೇಳದಲ್ಲಿ ಶ್ರೀ ಚಾಮುಂಡಿ ಸ್ಕೌಟ್ ದಳ ಭಾಗವಹಿಸಿ ಮೈಸೂರ ಸಂಸ್ಥಾನಕ್ಕೆ ಹೆಸರನ್ನು ತಂದಿತು. ೧೯೩೬–೩೭ರಲ್ಲಿ ಗ್ರಾಮೀಣ ಸ್ಕೌಟಿಂಗ್‌ನ್ನು ಭಾರತದಲ್ಲೇ ಪ್ರಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಅಂದಿನ ರಾಜ್ಯ ಮುಖ್ಯ ಆಯುಕ್ತರಾಗಿದ್ದ ಜಿ.ಬಿ. ಮಲ್ಲಾರಾಧ್ಯರವರು ಗ್ರಾಮೀಣ ಸ್ಕೌಟಿಂಗ್‌ನ್ನು, ರೋವರಿಂಗ್ ವಿಭಾಗವನ್ನು

ಚುರುಕುಗೊಳಿಸಿದರು. ಗ್ರಾಮೀಣ ಯುವಕರನ್ನು ಆಕರ್ಷಿಸಿ ಸಮಾಜ ಸೇವೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮೂಲಕ ಸ್ಕೌಟ್ ಗೈಡ್ ಚಟುವಟಿಕೆಗಳಿಗೆ ಹೊಸ ಆಯಾಮವನ್ನು ತೋರಿಸಿಕೊಟ್ಟರು. ೧೯೩೯ ಮಾರ್ಚ್ ೧ರಂದು ದೇಶದಲ್ಲಿ ಪ್ರಪ್ರಥಮವಾಗಿ ವಿಸ್ತಾರವಾದ ಸುಸಜ್ಜಿತವಾದ ತರಬೇತಿ ಕೇಂದ್ರವನ್ನು ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಿದರು. ಇದಕ್ಕೆ ಅನಿಬೆಸೆಂಟ್ ಪಾರ್ಕ್ ಎಂದು ನಾಮಕರಣ ಮಾಡಿದರು[೧೦].

ಸ್ಕೌಟ್ ಮತ್ತು ಗೈಡ್ ಸಮಾವೇಶಗಳನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾಂಬೂರಿ ಎಂದು ಕರೆಯಲಾಗುತ್ತದೆ ಅದೇ ರೀತಿ ರಾಜ್ಯಮಟ್ಟದಲ್ಲಿ ಜಾಂಬೋರೇಟ್ ಎನ್ನಲಾಗುತ್ತದೆ. ರಾಜ್ಯಮಟ್ಟದಲ್ಲಿ ನಡೆಯುವ ಜಾಂಬೋರೇಟ್‌ನ ಉದ್ದೇಶ ಗುಡಾರದಲ್ಲಿ ವಾಸ, ನಿಸರ್ಗ ಸಂಚಾರ, ಪಥ ಸಂಚಲನ, ಜಾನಪದ ಹಬ್ಬ, ಸಾಹಸಮಯ ಚಟುವಟಿಕೆ, ಮೋಜು ಮಜಾದ ಜಾತ್ರೆ, ದೃಶ್ಯ ಮೆರವಣಿಗೆ ಕೌಶಲ ಪ್ರದರ್ಶನ, ವಿಶೇಷ ಶಿಬಿರಾಗ್ನಿ ಕಾರ್ಯಕ್ರಮಗಳ ವೇದಿಕೆಯಾಗಿರುತ್ತದೆ ಇಂತಹ ರಾಜ್ಯಮಟ್ಟದ ಜಾಂಬೋರೇಟ್ ಕಾರ್ಯಕ್ರಮವು ಮೈಸೂರು ಸಂಸ್ಥಾನದಲ್ಲಿ ಸ್ವತಂತ್ರ ಪೂರ್ವದಲ್ಲಿ ಮೈಸೂರು ಮಹಾರಾಜರ ಪ್ರೋತ್ಸಾಹದಿಂದ ೧೯೧೮ರಲ್ಲಿ ಚಿಕ್ಕಮಂಗಳೂರಿನಲ್ಲಿ ನಡೆಯಿತು. ತದನಂತರ ೧೯೨೦ರಲ್ಲಿ ಕೋಲಾರ, ೧೯೨೨ರಲ್ಲಿ ನಂದಿಗ್ರಾಮದಲ್ಲಿ, ೧೯೨೬ರಲ್ಲಿ ಶಿವಮೊಗ್ಗ, ೧೯೨೯ರಲ್ಲಿ ತುಮಕೂರಲ್ಲಿ ನಡೆಯಿತು. ೧೯೩೧ರಲ್ಲಿ ಮೈಸೂರು ಸಂಸ್ಥಾನದ ಕೇಂದ್ರ ಭಾಗವಾದ ಮೈಸೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಇದಾದ ನಂತರ ೧೯೩೩ರಲ್ಲಿ ಹಾಸನ, ೧೯೩೮ ರಲ್ಲಿ ಚಿತ್ರದುರ್ಗದಲ್ಲಿ ಯಶಸ್ವಿಯಾಗಿ ನಡೆದವು. ಈ ಮೂಲಕ ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ಸ್ಕೌಟ್‌ಗೈಡ್ ಚಳುವಳಿ ಸಾಕ್ಷಿಯಾಗಿದೆ[೧೧].

೧೯೪೦-೪೧ನೇ ಸಾಲಿನ ಮೈಸೂರ ಆಡಳಿತಾತ್ಮಕ ವರದಿ ಪ್ರಕಾರ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೧೯,೮೬೫ ಆಗಿತ್ತು. ಮೈಸೂರ ಸಂಸ್ಥಾನವು ಈ ಚಳವಳಿಗಾಗಿ ೩೦,೦೦೦ದಿಂದ ೩೫,೦೦೦ ರೂಪಾಯಿಗಳಿಗೆ ತನ್ನ ಅನುದಾನ ಹೆಚ್ಚಳ ಮಾಡಿತು. ಈ ಸಂದರ್ಭದಲ್ಲಿಯೇ ಪ್ರತಿ ಜಿಲ್ಲೆಯಲ್ಲಿ ಗೈಡ್ ಚಳವಳಿಯನ್ನು ಆರಂಭಿಸಲಾಯಿತು. ೧೯೪೦ರಲ್ಲಿ ಬೆಂಗಳೂರಲ್ಲಿ ಸ್ಕೌಟ್ ಜಾಂಬೋರೇಟ್‌ನ್ನು ಯಶಸ್ವಿಯಾಗಿ ನಡೆಸಲಾಯಿತು[೧೨]. ೧೯೪೧-೪೨ನೇ ಸಾಲಿನ ಸ್ಕೌಟ್ ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೨೧,೫೫೪ಕ್ಕೆ ಏರಿತು. ಅನುದಾನವನ್ನು ೩೫,೦೦೦ ದಿಂದ ೪೦,೯೫೦ ರೂಪಾಯಿಗೆ ಏರಿಸಲಾಯಿತು[೧೩]. ೧೯೪೨-೪೩ನೇ ಸಾಲಿನ ಸ್ಕೌಟ್ ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೨೪,೫೯೮ಕ್ಕೆ ಏರಿತು. ಅನುದಾನವನ್ನು ೪೦,೯೫೦ ರೂಪಾಯಿಗಳನ್ನೆ ಮುಂದುವರೆಸಲಾಯಿತು[೧೪].

೧೯೪೩-೪೪ನೇ ಸಾಲಿನ ಸ್ಕೌಟ್ ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೨೬,೪೧೨ ಕ್ಕೆ ಏರಿತು. ಅನುದಾನವನ್ನು ೪೦,೯೫೦ ರೂಪಾಯಿಗಳನ್ನೆ ಮುಂದುವರೆಸಲಾಯಿತು[೧೫]. ೧೯೪೪-೪೫ನೇ ಸಾಲಿನ ಸ್ಕೌಟ್ ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೩೧,೦೧೫ಕ್ಕೆ ಏರಿತು[೧೬]. ೧೯೪೫-೪೬ನೇ ಸಾಲಿನ ಸ್ಕೌಟ್‌ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೩೬,೨೩೮ಕ್ಕೆ ಏರಿತು. ಈ ಸಂದರ್ಭದಲ್ಲಿ ಚಿತ್ತೂರಿನಲ್ಲಿ ನಡೆದ ರಾಷ್ಟ್ರಮಟ್ಟದ ತರಬೇತಿಯಲ್ಲಿ ಮೈಸೂರ ಸಂಸ್ಥಾನದಿಂದ ೬ ಸ್ಕೌಟ್ ಪ್ರತಿನಿಧಿಗಳು ಭಾಗವಹಿಸಿದ್ದರು[೧೭].

೧೯೪೬-೪೭ನೇ ಸಾಲಿನ ಸ್ಕೌಟ್ ಗಣತಿ ವರದಿಯಂತೆ ಮೈಸೂರು ರಾಜ್ಯದ ಸ್ಕೌಟ್‌ಗಳ ಸಂಖ್ಯೆ ೩೬,೧೧೩ ಆಗಿತ್ತು. ೧೨,೦೦೦ ರೂಪಾಯಿಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಯಿತು. ೧೯೪೬ ಅಕ್ಟೋಬರ್ ೧೧ರಂದು ಮೈಸೂರು ನಗರದಲ್ಲಿ ಜಯಚಾಮರಾಜೇಂದ್ರ ಸ್ಕೌಟ್‌ಗೈಡ್ ಭವನಕ್ಕೆ ಮಹಾರಾಜಾ ಜಯಚಾಮರಾಜ ಒಡೆಯರು ಶಿಲಾನ್ಯಾಸ ಮಾಡಿದರು[೧೮]. ಈ ಸ್ಕೌಟ್‌ಗೈಡ್ ದಳಗಳಿಗೆ ಮೈಸೂರು ಸಂಸ್ಥಾನದಿಂದ ಅನೇಕ ಪ್ರಶಸ್ತಿಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿತ್ತು. ಅಂತ ಪ್ರಶಸ್ತಿಗಳಲ್ಲಿ ಪ್ರಮುಖವಾಗಿ ಯುವರಾಜ ಪ್ರಥಮ ಚಿಕಿತ್ಸೆ ಪ್ರಶಸ್ತಿ, ಶ್ರೀ ಕೃಷ್ಣರಾಜ ಒಡೆಯರ ಪ್ರಥಮ ಚಿಕಿತ್ಸೆ ಬೆಳ್ಳಿದಂಡ ಪ್ರಶಸ್ತಿ. ಮಹಾರಾಜಾಧ್ವಜ ಪ್ರಶಸ್ತಿ ನೀಡಲಾಗುತ್ತಿತ್ತು[೧೯].

ಮೈಸೂರು ಸಂಸ್ಥಾನದಲ್ಲಿ ಸ್ಕೌಟ್‌ಗೈಡ್ ಚಟುವಟಿಕೆಗಳ ಯಶಸ್ವಿ ರೂವಾರಿಯೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಜಯಚಾಮರಾಜ ಒಡೆಯರ ಇವರೊಂದಿಗೆ ಅರ್ಪಣಾ ಭಾವದ ನೇತಾರರೆಂದರೆ ಕೆನಡಾದ ಸಿ. ಇರ್ವಿನ್ (೧೯೧೮-೧೯೧೯), ಸಂಜೀವ ಕಾಮತ್ (೧೯೨೦-೧೯೨೨) ಸ್ಕೌಟ್ ಗೈಡ್ ಸಂಸ್ಥೆಯ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದು. ತದನಂತರ ಕೆ.ಶಂಕರನಾರಾಯಣರಾವ್ (೧೯೨೨-೧೯೪೩ ರವರೆಗೆ), ವೈ.ವಿ.ಕೆ.ಮೂರ್ತಿ (೧೯೪೩-೧೯೪೯) ಮುಖ್ಯ ಸ್ಕೌಟ್ ಆಯುಕ್ತರಾಗಿ ಕಾರ್ಯ ನಿರ್ವಹಿಸಿದರು[೨೦].

ಈ ರೀತಿಯಾಗಿ ಮೈಸೂರು ಸಂಸ್ಥಾನದ ರಾಜ್ಯಾಶ್ರಯದಲ್ಲಿ ಬೆಳೆದ ಸ್ಕೌಟಿಂಗ್ ಚಳವಳಿ ಮೈಸೂರು-ಬೆಂಗಳೂರು ನಗರ ಕೇಂದ್ರ ಸ್ಥಾನಗಳಾಗಿದ್ದವು. ಅಲ್ಲದೇ ಚಳವಳಿಯು ಅಂದಿನ ಮೈಸೂರು ರಾಜ್ಯದ ೯ ಜಿಲ್ಲೆಗಳಾದ ಮಂಡ್ಯ, ಮೈಸೂರು, ಬೆಂಗಳೂರು, ಹಾಸನ, ಚಿಕ್ಕಮಗಳೂರು, ಕೋಲಾರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗದಲ್ಲಿ ಸ್ಕೌಟ್ ಗೈಡ್ ಚಟುವಟಿಕೆಗಳು ಯಶಸ್ವಿಯಾಗಿ ನಡೆಯುತ್ತಿದ್ದವು.

ಅಡಿಟಿಪ್ಪಣಿಗಳು

೧. ಚಂದ್ರಶೇಖರನ್ ರಾ., ೨೦೧೬, ಬಾಲಕರಿಗಾಗಿ ಸ್ಕೌಟಿಂಗ್, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ಪು. ೩೦೭.

೨. ಗರ್ಲ್‌ಗೈಡ್, ೨೦೧೦, ಮಾರ್ಗದರ್ಶಿ ಪ್ರಕಾಶಕರು, ಭಾರತ ಸ್ಕೌಟ್ ಮತ್ತು ಗೈಡ್ಸ್, ಬೆಂಗಳೂರು, ಪು. ೮.

೩. ೨೦೦೭, ಭಾರತ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕ ಮಾಹಿತಿ ಪತ್ರಿಕೆ, ಭಾರತ ಸ್ಕೌಟ್ ಮತ್ತು ಗೈಡ್ಸ್ ಬೆಂಗಳೂರು, ಪು. ೨.

೪. ಸುಂದರರಾವ ಬ.ನ., ೧೯೮೫, ಬೆಂಗಳೂರಿನ ಇತಿಹಾಸ. ವಸಂತ ಸಾಹಿತ್ಯಗ್ರಂಥ ಮಾಲಾ, ಪು. ೫೧೨.

೫. ೨೦೧೨, ಮೈಸೂರು ದರ್ಶನ, ಸಂಪುಟ ೪, ಕೆ ಎಸ್ ಒ ಯು ಮೈಸೂರು, ಪು. ೧೪೩.

೬. ೨೦೦೫, ಬೆಂಗಳೂರು ದರ್ಶನ, ಸಂಪುಟ ೨, ಉದಯಭಾನು ಕಲಾ ಸಂಘ, ಪು. ೧೪೪.

೭. ಚಂದ್ರಶೇಖರನ್ ರಾ., ೨೦೧೩, ಸ್ಕೌಟಿಂಗ ಪರಿಚಯ, ಪ್ರಕಾಶಕರು, ಭಾರತ ಸ್ಕೌಟ್ ಮತ್ತು ಗೈಡ್ಸ್ ಬೆಂಗಳೂರು, ಪು. ೪೮.

೮. ಬೆಂಗಳೂರು ದರ್ಶನ, ಅದೇ, ಪು. ೧೪೪.

೯. ಮೈಸೂರು ದರ್ಶನ, ಅದೇ ಪು. ೧೪೩.

೧೦. ಬೆಂಗಳೂರು ದರ್ಶನ, ಅದೇ ಪು. ೧೪೪.

೧೧. ಚನ್ನಬಸಪ್ಪ ಗೊ.ರು. (ಸಂ), ೨೦೧೧, ಸಾಹಸ ಸ್ಮರಣ ಸಂಚಿಕೆ ೨೬ನೇ ಕರ್ನಾಟಕ ರಾಜ್ಯ ಜಾಂಬೋರೇಟ್ ಪ್ರಕಾಶಕರು, ಭಾರತ ಸ್ಕೌಟ್ ಮತ್ತು ಗೈಡ್ಸ್, ಬೆಂಗಳೂರು.

೧೨. ರಿಪೋರ್ಟ ಅನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೪೦-೪೧, ಪು. ೧೪೪.

೧೩. ಅದೇ, ೧೯೪೧-೪೨ ಪು. ೯೭.

೧೪. ಅದೇ, ೧೯೪೨-೪೩ ಪು. ೧೪೦.

೧೫. ಅದೇ, ೧೯೪೩-೪೪ ಪು. ೧೭೨.

೧೬. ಅದೇ, ೧೯೪೪-೪೫ ಪು. ೧೫೬.

೧೭. ಅದೇ, ೧೯೪೫-೪೬ ಪು. ೧೫೬.

೧೮. ಅದೇ, ೧೯೪೬-೪೭ ಪು. ೧೫೪.

೧೯. ಬೆಂಗಳೂರ ದರ್ಶನ, ಅದೇ ಪು. ೧೪೫.

೨೦. ಭಾರತ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕ ಮಾಹಿತಿ ಪತ್ರಿಕೆ, ಪು. ೦೪.

♦♦

೧೦೬

ನಿಥಿನ್ ಜಿ. ಒಲಿಕಾರ

ಜೋಸಯಾ ವೆಬ್ಬ್ ಸ್ಮಾರಕ ಕಂಬದ ಸಾಗಣೆ ಬಂಡಿ

ನಮ್ಮ ಸುತ್ತಲೂ ಅನೇಕ ವಾಸ್ತು ನಿರ್ಮಾಣಗಳ ವಿಸ್ಮಯ ಇದೆ. ಪ್ರಾಚೀನ ಕಾಲದಲ್ಲಿ ಅಧುನಿಕ ತಂತ್ರಜ್ಞಾನ ಇಲ್ಲದೇ ದೂರದಿಂದ ಕಲ್ಲುಗಳನ್ನು ಹೇಗೆ ಸಾಗಿಸಿದರು ಎಂಬ ವಿಷಯ ಇನ್ನೂ ಸ್ಪಷ್ಟವಾಗಿಲ್ಲ. ಸುಮಾರು ೨೦೦ ವರ್ಷಗಳ ಹಿಂದೆ ಸುಮಾರು ೭೩ ಅಡಿ ಉದ್ದ ಮತ್ತು ೬ ಅಡಿ ಅಗಲದ ಒಂದು ಅಖಂಡ ಕಲ್ಲಿನ ತುಂಡನ್ನು ಸಾಗಿಸಿದ ಮರದ ಬಂಡಿಯ ರೇಖಾ ನಕ್ಷೆ ೧೮೦೫ ರಲ್ಲಿ ತಯಾರಾಗಿದೆ. ಈ ಕಲ್ಲನ್ನು ನಂತರ ನಯಗೊಳಿಸಿ ಶ್ರೀರಂಗಪಟ್ಟಣದ ಬಳಿಯ ಸೋಮವಾರ ಪೇಟೆಯಲ್ಲಿ ಜೋಸಯಾ ವೆಬ್ಬ್ ಸ್ಮಾರಕ ಕಂಬ ಅಥವಾ ರಣಗಂಬ ಎಂಬ ಹೆಸರಿನಿಂದ ಇಂದಿಗೂ ನಿಂತಿದೆ.


ಬ್ರಿಟೀಷರಿಗೆ ಭಾರತೀಯರ ತಂತ್ರಜ್ಞಾನ ಕಡಿಮೆ ಮಟ್ಟದ್ದಾಗಿತ್ತು. ಇಂತಹ ಸಂದರ್ಭದಲ್ಲಿ ಹೇಗೆ ಅಷ್ಟು ದೊಡ್ಡ ಕಲ್ಲನ್ನು ಸಾಗಿಸಿ ನಿಲ್ಲಿಸಿದರು ಎಂಬ ಕುತೂಹಲ ಇತ್ತು. ಏಕೆಂದರೆ ಯುರೋಪಿನಲ್ಲಿ ಅಂತಹ ತಂತ್ರಜ್ಞಾನ ಇನ್ನೂ ಬಂದಿರಲಿಲ್ಲ. ಈ ಕಾರಣಕ್ಕಾಗಿ ಜೋಸಯಾ ವೆಬ್ಬ್ ಸ್ಮಾರಕ ಕಂಬದ ಸಾಗಣೆ ಬಂಡಿಯ ರೇಖಾ ಚಿತ್ರ ತಯಾರಿಸಿದರು ಮತ್ತು ಈ ಬಗ್ಗೆ ಒಂದು ಲೇಖನವನ್ನು ಅಲೆಕ್ಸಾಂಡರ್ ಕೆನ್ನಡಿ ಎಂಬವರು ಎಡಿನ್‌ಬರೋ ಜರ್ನಲ್‌ನಲ್ಲಿ ೧೮೨೧ರಲ್ಲಿ ಪ್ರಕಟಿಸಿದರು. ಈ ಲೇಖನದಲ್ಲಿ ಕಲ್ಲನ್ನು ಕಡೆದು ನಯಗೊಳಿಸಿ ನಿಲ್ಲಿಸಿದ ವಿವರಗಳಿದೆಯೇ ಹೊರತು ಸಾಗಣೆ ಬಂಡಿಯ ಕುರಿತು ಹೆಚ್ಚಿನ ಮಾಹಿತಿ ಇರುವುದಿಲ್ಲ.

ಲಂಡನ್ ಬ್ರಿಟೀಷ್ ಲೈಬ್ರರಿಯಲ್ಲಿ ನನಗೆ ಜೋಸಯಾ ವೆಬ್ಬ್ ಸ್ಮಾರಕ ಕಂಬವನ್ನು ಸಾಗಿಸಿದ ಬಂಡಿಯ ರೇಖಾ ನಕ್ಷೆಯ ವಿವರಗಳು ದೊರಕಿತು. ನಮಗೆ ರಾಯಚೂರು ಕೋಟೆ ಮತ್ತು ಮಲಯಬಾದ್ ಕೋಟೆಯ ಗೋಡೆಯ ಮೇಲೆ ಕಲ್ಲು ಸಾಗಣೆ ಬಂಡಿಯನ್ನು ಕೋಣಗಳು ಎಳೆಯುತ್ತಿರುವ ರೇಖಾ ಚಿತ್ರ ಕಾಣಸಿಗುತ್ತವೆ. ಲಂಡನ್ ಬ್ರಿಟೀಷ್ ಲೈಬ್ರರಿಯಲ್ಲಿ ಸಾಗಣೆ ಬಂಡಿಯ ಮೂರು ನೋಟಗಳ (ಪ್ಲಾನ್, ಎದಿರು ನೋಟೆ ಮತ್ತು ಮುಂಭಾಗದ ನೋಟ) ರೇಖಾಚಿತ್ರ ಅಳತೆಯ ವಿವರಗಳೊಂದಿಗೆ ಇದೆ. ಡಾ ಜಗದೀಶ (ಅಗಸಿಬಾಗಿಲ) ಇವರ ಸಹಾಯದಿಂದ ರೇಖಾಚಿತ್ರವನ್ನು ಮರು ರೇಖೆಗೊಳಿಸಲಾಯಿತು. ಈ ಬಂಡಿಯಲ್ಲಿ ನಾಲ್ಕು ಅಚ್ಚುಗಳಿವೆ, ಎರಡು ಅಚ್ಚುಗಳಲ್ಲಿ ನಾಲ್ಕು ಹೊರಗಾಲಿಗಳು ಮತ್ತು ಇನ್ನೆರಡು ಅಚ್ಚುಗಳಲ್ಲಿ ನಾಲ್ಕು ಒಳ ಗಾಲಿಗಳಿವೆ. ಒಳಗಾಲಿಗಳು ಉರುಳೆಗಳ ಕಾರ್ಯ ನಿರ್ವಹಿಸುತ್ತವೆ. ಅಚ್ಚುಗಳ ಮೇಲೆ ನಿಂತ ಎರಡು ಉದ್ದ ಪಟ್ಟಿಗಳನ್ನು ಅಲ್ಲಲ್ಲಿ ಅಡ್ಡ ಪಟ್ಟಿಗಳಿಂದ ಸೂಕ್ತವಾಗಿ ಬಂಧಿಸಲಾಗಿದೆ. ಸಾಗಣೆ ಬಂಡಿಯಲ್ಲಿ ನಿಜ ಗಾಲಿಗಳು ಮತ್ತು ಉರುಳೆಗಳ ಸಂಯುಕ್ತ ವಿನ್ಯಾಸ


ಒಲಿಕಾರ ಟ್ರಾಕ್ಟರ್ಸ್
ಶಂಕರಮಠ ರಸ್ತೆ
ಶಿವಮೊಗ್ಗ-೫೭೭೨೦೧
ಮೊ: ೯೮೪೫೯ ೨೪೭೨೫



ರಣಗಂಬ – ಜೋಸಯಾ ವೆಬ್ಬ್ ಸ್ಮಾರಕ ಕಂಬ




ಸಾಗಣೆ ಬಂಡಿ ರಾಯಚೂರು ಕೋಟೆ



ಮರು ರೇಖಿಸಿದ ರೇಖಾಚಿತ್ರ



೧೮೨೧ರಲ್ಲಿ ಪ್ರಕಟವಾದ ಸ್ಮಾರಕ ಕಂಬ



೧೮೦೭ರಲ್ಲಿ ಹೆನ್ರಿ ಹ್ಯಾಮಿಲ್‌ಟನ್ ರಚಿಸಿದ ಸಾಗಣೆ ಬಂಡಿ ರೇಖಾಚಿತ್ರ

ಅಂದಿನ ಕಾಲಕ್ಕೆ ಬಹಳ ಮುಂದುವರಿದ ತಂತ್ರಜ್ಞಾನ ಆಗಿತ್ತು. ಉರಳಗೆಳು ಸಾಗಣೆ ಬಂಡಿಯು ತಗ್ಗಿನ ನೆಲಕ್ಕೆ ಕುಸಿಯದಂತೆ ತಡೆಯುತ್ತಿದ್ದವು. ಉದ್ದ ಪಟ್ಟಿಯಲ್ಲಿ ಅಲ್ಲಲ್ಲಿ ಕಬ್ಬಿಣದ ಬಳೆಗಳನ್ನು ಅಳವಡಿಸಲಾಗಿತ್ತು ಮತ್ತು ಇದಕ್ಕೆ ಹಗ್ಗಗಳನ್ನು ಕಟ್ಟಿ ಬಂಡಿಯನ್ನು ಜನರು ಎಳೆದರು ಎಂದು ಹೇಳಲಾಗಿದೆ. ಗಮನಿಸಬೇಕಾದ ಅಂಶ ಎಂದರೆ ಬಂಡಿಯನ್ನು ಎಳೆಯಲು ಪ್ರಾಣಿಗಳನ್ನು ಇಲ್ಲಿ ಬಳಸಿಲ್ಲ. ಕಲ್ಲುಗಳು ಮತ್ತು ಉಬ್ಬು ತಗ್ಗುಗಳಿಂದ ಕೂಡಿದ ಕಚ್ಚಾ ರಸ್ತೆಯಲ್ಲಿ ಸುಮಾರು ೨ ಮೈಲು ದೂರಕ್ಕೆ ಕಲ್ಲನ್ನು ಸಾಗಿಸಲಾಗಿದೆ. ಐರೋಪ್ಯ ತಂತ್ರಜ್ಞಾನಕ್ಕೆ ಸರಿ ಸಮನಾದ ತಂತ್ರಜ್ಞಾನವನ್ನು ಭಾರತೀಯರು ತಮ್ಮದೇ ಆದ ರೀತಿಯಲ್ಲಿ ಕಂಡುಕೊಂಡಿದ್ದರು ಮತ್ತು ಸಫಲವಾಗಿ ದಕ್ಷತೆಯಿಂದ ಬಳಸಿದ್ದರು.

ಆಕರಗ್ರಂಥಗಳು

೧. The Edinburgh Philosophical Journal, 1821, Alexander Kennedy.

೨. ಲಂಡನ್ ಬ್ರಿಟೀಷ್ ಲೈಬ್ರರಿಯಲ್ಲಿ ಹೆನ್ರಿ ಹ್ಯಾಮಿಲ್‌ಟನ್ ರಚಿಸಿದ ರೇಖಾ ಚಿತ್ರ. ೧೮೦೭ (WD 839).

◆◆

ಕೃಷ್ಣಯ್ಯ ಎಸ್.ಎ.

ಗೊಂಬೆರಾಮ ವಂಶಸ್ಥರಿಗೆ ಸಂಬಂಧಿಸಿದ 'ಹದ್ದುಬಸ್ತಿನಕಲ್ಲು'

ಕರ್ನಾಟಕದಲ್ಲಿ ತೊಗಲುಗೊಂಬೆಯಾಟದ ಸಂಚಾರಿ ಬುಡಕಟ್ಟು ಸಮುದಾಯದವರು, ಗುಹ–ವಂಶಸ್ಥರು, ನಾಗಮಂಗಲ, ಹಾಸನ, ರಾಮನಗರ ಈ ಭಾಗಗಳಲ್ಲಿ ಗೊಂಬೆರಾಮ ಕಲಾಕಾರರಿದ್ದು ಇವರನ್ನು ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳಲ್ಲಿ 'ಚಿತ್ರಕಾರರು', ಒರಿಸ್ಸಾದಲ್ಲಿ 'ರಾವಣಛಾಯಾ ಕಲಾಕಾರರು', ಮಹಾರಾಷ್ಟ್ರದಲ್ಲಿ 'ಅರೆಮರಾಠಿ ಕ್ಷತ್ರಿಯರು ಕುಡಿವಾಡಿ ಕಲಾಕಾರರು' ಎಂದು ಗುರುತಿಸಿದ್ದಾರೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಿಗುವ ಚನ್ನಪಟ್ಟಣದ ಕೆಲಿಗೆರೆ ಗ್ರಾಮದಲ್ಲಿ ಗೊಂಬೆರಾಮರ (ಬುಡಕಟ್ಟು ಕಲಾವಿದರ) ಶಿಲಾಶಾಸನ–'ಹದ್ದುಬಸ್ತಿನಕಲ್ಲು' ಗೊಂಬೆ ರಂಗಭೂಮಿಯ ಇತಿಹಾಸದಲ್ಲಿ ಅಪೂರ್ವವಾದದ್ದು. ಮೈಸೂರು ವಿ.ವಿ. ಜಾನಪದ ಹಾಗೂ ಶಾಸನ ಅಧ್ಯಯನದ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಎಸ್.ಎ. ಕೃಷ್ಣಯ್ಯ ಇವರು ಶೋಧಿಸಿ ಬೆಳಕಿಗೆ ತಂದಿದ್ದರು. ಸುಮಾರು ಕ್ರಿ.ಶ. ೧೮೫೦ರಿಂದ ೧೯೧೦ರ ಕಾಲದಲ್ಲಿ ಈ 'ಹದ್ದುಬಸ್ತಿನಕಲ್ಲು' ಶಿಲಾಲಿಪಿಯನ್ನು ಮಾಡಿಸಲಾಗಿದೆ. ಗೊಂಬೆಯಾಟಕಾರರು ಇಂತಿಷ್ಟೇ ಹಳ್ಳಿಗಳಲ್ಲಿ ಪ್ರದರ್ಶನ ನೀಡಿ 'ಆಯ' (ಧಾರ್ಮಿಕ ಪಡಿ–ಕಾಣಿಕೆ) ಪಡೆಯಬೇಕೆಂಬುದು ಪರಂಪರೆಯ ಬುಡಕಟ್ಟು ನಿಯಮ. ಈ ಕಟ್ಟಲೆಗಳನ್ನು ಮೀರಿ (ಎಸ್.ಎ. ಕೃಷ್ಣಯ್ಯ ೧೯೮೮) ಗೊಂಬೆಯಾಟ, ನಾಟಕ ಪ್ರದರ್ಶಿಸಿದರೆ ಅಪರಾಧ, ಬುಡಕಟ್ಟು ನ್ಯಾಯದಂತೆ ದಂಡಾರ್ಹರು. ಬುಡಕಟ್ಟು ಸಮುದಾಯದ ಈ ಕಲಾಕಾರರು ತಮಗೆ ದೊರಕಿದ ಗ್ರಾಮಗಳ ಅಂತಿಮ ಗಡಿ ರೇಖೆಯನ್ನು ಗುರುತಿಸಿಕೊಳ್ಳಲು 'ಹದ್ದುಬಸ್ತಿನಕಲ್ಲ'ನ್ನು ನೆಡುವುದು ಅಪರೂಪ. ಇದನ್ನು 'ಎಲ್ಲೆಕಲ್ಲು', 'ಗೊಂಬೆರಾಮರಕಲ್ಲು' ಎಂಬುದಾಗಿ ಕರೆದಿರುವರು. ಚಿತ್ರದಲ್ಲಿ ತೋರಿಸಿರುವ 'ಹದ್ದುಬಸ್ತಿನಕಲ್ಲು' ದೇವಲಾಪುರ (ನಾಗಮಂಗಲ ತಾ.) ಸಂಜೀವಯ್ಯನ ವಂಶಕ್ಕೆ ಒಳಪಟ್ಟಿದೆ. ಚರಾಸ್ತಿಯ ಒಳನಿಯಮದಂತೆ ನೆಟ್ಟಿರುವ ಈ ಕಲ್ಲು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಮಳೂರು ಹೋಬಳಿ, 'ಕೆಲಿಗೆರೆ' ಗ್ರಾಮದಲ್ಲಿದೆ, ಚನ್ನಪಟ್ಟಣದಿಂದ ೧೬ ಕಿ.ಮೀ. ಅಂತರದಲ್ಲಿರುವ ಕೆಲಿಗೆರೆ ಗ್ರಾಮದ ಆಂಜನೇಯ ದೇವಾಲಯದ ಆವರಣದಲ್ಲಿದ್ದು ಈಗ ಮಣ್ಣಿನ ಅಡಿಯಲ್ಲಿ ಕಣ್ಮರೆಯಾಗುತ್ತಿದೆ.

ಟಿಪ್ಪಣಿ : ಗೊಂಬೆಯಾಟದ ಹನುಮಮ್ಮ ಎಂಬಾಕೆ ಮತ್ತು ಕುಟುಂಬದವರು ಸುಮಾರು ೧೯೪೧ರಲ್ಲಿ ಈ ಕಲ್ಲನ್ನು ಹುಯ್ಯಿಸಿದರು (ಸ್ಥಾಪಿಸಿದರು). ಪೂರ್ವದಲ್ಲಿದ್ದ ಶಿಲಾಲಿಪಿಯ ಕಲ್ಲು ಕ್ರಿ.ಶ. ೧೮೫೦–೧೯೧೦ರ ಒಳಗೆ ನೆಟ್ಟಿರಬೇಕು ಎನ್ನುವುದು

ಪ್ರಾಚ್ಯ ಸಂಚಯ ಸಂಶೋಧನ ಕೇಂದ್ರ
ಉಡುಪಿ
ಮೊ: ೯೭೪೧೧೫ ೦೩೫೦೯

ಶ್ಯಾನುಭೋಗ ಲಕ್ಷ್ಮಣಯ್ಯ ಅವರ ಅಭಿಪ್ರಾಯವಾಗಿತ್ತು. ಶ್ಯಾನಭೋಗರವರು ಹನುಮಮ್ಮ ಕಲಾಕಾರ್ತಿಯನ್ನು ನೋಡಿದಾಗ ಆಕೆಗೆ ಸುಮಾರು ೬೫ರ ಪ್ರಾಯ ಇರಬಹುದೆಂದು ತಿಳಿಸಿದ್ದರು. ಸುಮಾರು ಕ್ರಿ.ಶ. ೧೮೮೫ರಲ್ಲಿ ಹನುಮಮ್ಮ ಗೊಂಬೆಯಾಟಕಾರರ ಎರಡನೇ ಪೀಳಿಗೆಯಿಂದ ಈ ಕಾರ್ಯ ನಡೆದಿದೆ ಎಂದು ತಿಳಿಯಲಾಗಿದೆ.

ಹೆಚ್ಚಿನ ವಿವರಗಳನ್ನು ಪಡೆಯಲು ಖುದ್ದಾಗಿ ದೇವಲಾಪುರಕ್ಕೆ (ನಾಗಮಂಗಲ) ತೆರಳಿ ಕ್ಷೇತ್ರಕಾರ್ಯ ಮಾಡಿದ ನನಗೆ ತಿಳಿದ ವಿಚಾರವೇನೆಂದರೆ ಸಂಜೀವಯ್ಯ ಮೂಲಕ ೧೯೭೧ರ ದಶಕದಲ್ಲಿ ಗೊಂಬೆಯಾಟವನ್ನು ಹದ್ಬಸ್ತಿನಕಲ್ಲನ್ನು ಈಗ ಇರುವ ಜಾಗದಲ್ಲಿ ಸ್ಥಾಪನೆ ಮಾಡಿದ್ದಾಗಿಯೂ ಕೆಲವು ರಂಗಶಾಂತಿ ಆಚರಣೆಯನ್ನು ವಿಧಿಬದ್ಧವಾಗಿ ನಡೆಸಿಕೊಟ್ಟಿರುವುದನ್ನು ನೆನಪಿಸಿಕೊಂಡಿರುವರು.

ಶಾಸನ ಪಾಠ

ಮೊದಲನೆಯ ಸಾಲು : ದೆವಲಪುರ (ದೇವಲಾಪುರ)

ಎರಡನೆಯ ಸಾಲು : ಸಂಜಿವಯ್ಯ (ಸಂಜೀವಯ್ಯ)

ಕೆಳಗಿನ ಭಾಗ : ಕಿ(ಸಿ)ಳ್ಳೆಕ್ಯಾತನ ಚಿತ್ರ

ಉದ್ದ: ೩೫ ಸೆಂ.ಮೀ., ಅಗಲ: ೨೫ ಸೆಂ.ಮೀ., ದಪ್ಪ ೯ ಸೆಂ.ಮೀ. ಕಿ(ಸಿಳ್ಳೆಕ್ಯಾತನ ಚಿತ್ರ ಎಂದು ತಿಳಿಯಲು ಜುಟ್ಟು ಹಾಗೂ ಕಿವಿಯಲ್ಲಿ ತೋರಿಸಿದ ಕುಂಡಲ, ಅಡ್ಡ ಜನಿವಾರ ಕೆತ್ತಲಾಗಿದೆ.



ಹದ್ಬಸ್ತಿನಕಲ್ಲು ಶಾಸನ

೨೦೨೧ರ ಪುನರ್ ಅಧ್ಯಯನ

ನಾಲ್ಕು ದಶಕಗಳ ನಂತರ (೨೨-೯-೨೦೨೧) ಗೊಂಬೆರಾಮರ ಶಿಲಾಲಿಪಿ 'ಹದ್ಬಸ್ತಿನಕಲ್ಲು' ನೋಡಿ ವಾಸ್ತವ ಸ್ಥಿತಿ ಹೇಗಿರಬಹುದೆಂದು ಪುನರಪಿ ಇತಿಹಾಸದ ಅನ್ವೇಷಣೆಗೆ ಹೋದಾಗ ನಿರಾಸೆ ಆಯಿತು. ಹಿರಿಯ ಗ್ರಾಮಸ್ಥರನ್ನು ಕೇಳಿದಾಗ ಅದು 'ನಾಟಕದವರ ಕಲ್ಲು' ಎಂದರು. ದಶಕಗಳಿಂದ ಗೊಂಬೆರಾಮರು ಈ ಊರಿಗೆ ಬಂದಿಲ್ಲ. ಸಹಜವಾಗಿ ಹೊಸ ಕಟ್ಟಡಗಳು, ರಸ್ತೆ-ಅಗಲೀಕರಣದ ನೆಪದಲ್ಲಿ ಈ ಶಾಸನದ ಕಲ್ಲು ಭೂಗತಗೊಂಡಿರುವ ಸಾಧ್ಯತೆಯೇ ಹೆಚ್ಚೆಂದು ಗ್ರಾಮದ ಮುಖಂಡರಾದ ಶ್ರೀ ಕೆ.ಟಿ. ಶಿವಣ್ಣನವರು ತಿಳಿಸಿದರು.



ಕರೋಕಲ್ಲು

ಪ್ರಸ್ತುತ ಶಾಸನವಿದ್ದ ಸ್ಥಳದಲ್ಲಿ ಆಂಜನೇಯ ದೇವಸ್ಥಾನ ನಿರ್ಮಾಣವಾಗಿದೆ. ಎದಿರು ಭಾಗದಲ್ಲಿ ಮಾರಮ್ಮನ ದೇವಳದ ಭಾಗವಾಗಿ 'ಕರೋಕಲ್ಲು' ನೆಡಲಾಗಿದೆ. ಇತಿಹಾಸದ ನಿಖರತೆಯುನ್ನು ತಿಳಿಯುಲು 'ಕೆಲಿಗೆರೆ' ಗ್ರಾಮುಕ್ಕೆ (ವಿಶ್ವಗೊಂಬೆಯಾಟ ದಿನದಂದು) ತೆರಳಿದ ನಮಗೆ ಊರಿನವರು ಸಹಕರಿಸಲು ಮುಂದಾದರು. ಗುದ್ದಲಿ-ಪಿಕಾಸಿಯಿಂದ ಅಗೆದು ನೋಡಬೇಕೆಂಬ ನಮ್ಮ ಮನವಿಗೆ ಶ್ರೀ ಲಕ್ಷ್ಮಣ ಎನ್ನುವವರು ಕೂಡಲೇ ಕಾರ್ಯಪ್ರವೃತ್ತರಾದರು. ಪರಂಪರೆ ಉಳಿಸಿ ಎಂದು ಹೇಳುವ ನಮಗೆ ಗೊಂಬೆರಾಮರ 'ಹದ್ಬಸ್ತಿನಕಲ್ಲು' ಶಿಲಾಶಾಸನ ಕಣ್ಮರೆಯಾಗಿದ್ದು ನಮ್ಮೆಲ್ಲರ ಅಜಾಗರೂಕತೆಯಿಂದ.

◆◆

೧೦೮

ಬಸವರಾಜ್ ಮಠ


ವಿಜಯಪುರ ಅಜಾದ್ ಹಿಂದ್ ಫೌಜ

ಪ್ರಪಂಚದ ಎರಡನೆಯ ಮಹಾಯುದ್ಧದ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಗಾರರು ಒಳಗಿನ ಹೋರಾಟವಲ್ಲದೆ, ಹೊರದೇಶಗಳಲ್ಲಿ ಸಂಚರಿಸಿ, ಸಂಘಟನೆಗಳನ್ನು ಮಾಡಿ, ಹೋರಾಡುವ ಶಕ್ತಿಯನ್ನು ಹುರುಪುಗೊಳಿಸಿದರು. ಇದೇ ಪರಿಸ್ಥಿತಿಯಲ್ಲಿ, ಸುಭಾಷ್‌ಚಂದ್ರ ಬೋಸ್ ಭಾರತದಿಂದ ತೆರಳಿ ಜರ್ಮನಿ ಹಾಗೂ ಜಪಾನ್‌ಗಳೊಡನೆ ಸಂಪರ್ಕ ಬೆಳೆಸಿದರು. ೧೯೪೨ರಲ್ಲಿ ಬ್ರಿಟಿಷ್ ಇಂಡಿಯಾ ಆರ್ಮಿಯು ಸಿಂಗಾಪುರದ ಮಲಾಯಾ (ಮಲೇಷಿಯಾ) ಆರ್ಮಿಯ ನೆಲೆಯಾಗಿತ್ತು. ಜನವರಿ ೧೪, ೧೯೪೧ರಂದು ಹೊರದೇಶಕ್ಕೆ ಪಲಾಯನ ಮಾಡಿದ ನೇತಾಜಿ ೨೮ ಜನವರಿ ಯಂದು ಬರ್ಲಿನ್‌ಗೆ ಬಂದು ಹಿಟ್ಲರ್ ಹಾಗೂ ಮುಸಲೋನಿಯನ್ನು ಭೇಟಿ ಮಾಡಿದರು. ರೇಡಿಯೋ ಮುಖಾಂತರ ಭಾರತೀಯರಿಗೆ ದೇಶ ಭಕ್ತಿಯ ಜಾಗೃತಿಯನ್ನು ಮೂಡಿಸಿ, 'ನನಗೆ ನೀವು ರಕ್ತ ಕೊಟ್ಟರೆ ನಿಮಗೆ ನಾನು ಸ್ವಾತಂತ್ರವನ್ನು ಕೊಡಿಸುತ್ತೇನೆ' ಎಂದು ಹುರಿದುಂಬಿಸಿದರು.


ಸುಭಾಸಚಂದ್ರ ಬೋಸರಿಗೆ ಜರ್ಮನಿ ಬೆಂಬಲ ನೀಡಿತು. ಬೋಸರು ಹಿಟ್ಲರನ ಜೊತೆ ಮಾತುಕತೆ ಮುಖಾಂತರ ಜಲಾಂತರಗಾಮಿ ನೌಕೆಯನ್ನು ಸಿದ್ಧಪಡಿಸಲು ಮುಂದಾದರು. ಈ ವ್ಯವಸ್ಥೆಗಾಗಿ ಜಪಾನಿನ ಜಲಾಂತರಗಾಮಿ ಸಹಾಯ ಪಡೆಯಲು ಆಲೋಚಿಸಿ, ಅಲ್ಲಿಗೆ ತೆರಳಿದರು. ಅದೇ ವೇಳೆಗೆ ಬ್ರಿಟೀಶ್ ಸೈನ್ಯ ಸೇರಿದ್ದ ಕೆಲವು ಭಾರತೀಯ ಯೋಧರು, ಜಪಾನ್ ವಿರುದ್ಧ ಯುದ್ಧದಲ್ಲಿ ಸೋತು ಅವರ ಯುದ್ಧದ ಖೈದಿಗಳಾಗಿದ್ದರು. ರಾಸ್ ಬಿಹಾರಿ ಘೋಷ್ ಮತ್ತು ಮೋಹನಸಿಂಗ್ ಅವರು ಜಪಾನಿನ ಮುಖಂಡರೊಡನೆ ಒಡಂಬಡಿಕೆ ಮಾಡಿಕೊಂಡು ಈ ಭಾರತೀಯ ಸೈನ್ಯವನ್ನು 'ಇಂಡಿಯನ್ ನ್ಯಾಷನಲ್ ಆರ್ಮಿ' ಹೆಸರಿನಲ್ಲಿ ಸಂಘಟಿಸಿ, ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸಿದ್ದರು. ಆದರೆ, ಡಿಸೆಂಬರ್ ೧೯೪೨ರಲ್ಲಿ ಈ ಸೈನ್ಯವನ್ನು ಬ್ರಿಟಿಷರು ಚದುರಿಸಿದರೂ ತಂತ್ರ ಫಲಿಸದಾಯಿತು. ಅದೇ ವೇಳೆಗೆ ಸುಭಾಷ್ ಚಂದ್ರ ಬೋಸ್‌ರವರು ಸಿಂಗಾಪುರಕ್ಕೆ ಬಂದರು. ಬೋಸ್‌ರವರು ಪ್ರಯತ್ನದಿಂದ ಪುನಃ ಅರ್ಜಿ-ಹುಕುಮತ್-ಇ-ಅಜಾದ್-ಹಿಂದ್ ಎಂಬ ಸೈನ್ಯವನ್ನು ಕಟ್ಟಲು ಆರಂಭಿಸಿದರು. ಯುದ್ಧ ಖೈದಿಗಳು ಮತ್ತು ರಾಷ್ಟ್ರವಾದಿಗಳು ಈ ಸಂಘಟನೆಗೆ ಕೈ ಜೋಡಿಸಿದರು. ಈ ಸೈನ್ಯದಲ್ಲಿ ಸೇರಿ 'ವಿಜಯಪುರದ ಅಜಾದ್ ಹಿಂದ್ ಫೌಜ್‌ದ ಸೈನಿಕ' ಎನಿಸಿದ ದೇಶಭಕ್ತನಾಗಿ ಗುರುತಿಸಲ್ಪಟ್ಟವರು ದತ್ತು ಅಪ್ಪಾಜಿ ಶಿಂಧೆ.

ದತ್ತು ಅಪ್ಪಾಜಿ ಶಿಂಧೆ: ೧೯೧೫ರಲ್ಲಿ ವಿಜಯಪುರದ ಜೋರಾಪುರದಲ್ಲಿ ಜನಿಸಿದರು. ತಂದೆ ಅಪ್ಪಾಜಿ ಶಿಂಧೆ, ತಾಯಿ ಗಂಗೂಬಾಯಿ ಶಿಂಧೆ. ತನ್ನ ಪ್ರಾಥಮಿಕ ಶಿಕ್ಷಣವನ್ನು


ಎಸ್.ವ್ಹಿ.ಎಮ್. ಪದವಿ ಮಹಾವಿದ್ಯಾಲಯ
ಇಲಕಲ್ಲು
ಬಾಗಲಕೋಟೆ ಜಿಲ್ಲೆ
ಮೊ: ೯೯೦೨೩ ೭೨೭೭೭



ಸೇವಾ ಪುಸ್ತಕದ ಪ್ರತಿ



ಸ್ವಾತಂತ್ರ್ಯ ಸೈನಿಕ ಪುರಸ್ಕಾರದ ಫಲಕ



ದತ್ತು ಅಪ್ಪಾಜಿ ಶಿಂಥೆ

ಪೂರೈಸಿಕೊಂಡು, ೨೫ನೇ ವಯಸ್ಸಿನಲ್ಲಿ 'ಅಜಾದ್ ಹಿಂದ್ ಫೌಜ್ ಸೇನೆ' ಸೇರಿದರು. ಭಾರತೀಯ ಬ್ರಿಟಿಷ್ ಸರ್ಕಾರ ಅವನನ್ನು ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಜಪಾನಿನ ವಿರುದ್ಧ ಹೋರಾಡಲು ಮಲೇಷಿಯಾಕ್ಕೆ ಕಳುಹಿಸಲಾಯಿತು. ಇವನ ಜೊತೆ ಬಿ.ಎಸ್. ಬಗಲಿ, ಬೆಳಗಲಿ ಮತ್ತು ಬಾಬುಸಾಬ್ ಮುಲ್ಲಾ ಎಲ್ಲರೂ ಜಪಾನಿನ ವಿರುದ್ಧ ಹೋರಾಡಲು ಹೋದರು. ಜಪಾನಿನ ವಿರುದ್ಧ ಬ್ರಿಟಿಷ್ ಭಾರತೀಯ ಸೈನ್ಯ ಸೋತಿತು. ಸೋತ ಖೈದಿಗಳನ್ನೆಲ್ಲಾ ಜಪಾನ್ ಸೈನ್ಯವು ತನ್ನ ವಶಕ್ಕೆ ಪಡೆದುಕೊಂಡಿತು. ಸೆರೆಯಾದ ಭಾರತೀಯ ಸೈನ್ಯವನ್ನು ಸೇರಿಸಿಕೊಂಡು ಜಪಾನಿನಲ್ಲಿ 'ಭಾರತೀಯ ರಾಷ್ಟ್ರವಾದಿ'ಗಳ ಗುಂಪು ಅಜಾದ್-ಹಿಂದ್-ಫೌಜ್ ಅನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಸುಭಾಷ್‌ಚಂದ್ರ ಬೋಸ್‌ರ ನೇತೃತ್ವದಲ್ಲಿ ಸಿದ್ಧಗೊಳಿಸಲಾಯಿತು. ಆದರೆ, ಬ್ರಿಟಿಷರು ಇವರನ್ನು ಬಂಧಿಸಿ ಭಾರತಕ್ಕೆ ತಂದರು. ನಂತರ ಇವರನ್ನು ಕಲ್ಕತ್ತಾ ಜೈಲಿನಲ್ಲಿ ಇರಿಸಿದರು. ಇವರೆಲ್ಲರನ್ನು ದೇಶದ್ರೋಹಿಗಳೆಂದು ಮೂರು ದಿನ ಉಪ್ಪನ್ನು ತಿನ್ನಿಸಿ ಮೊಳಕೈಯಿಂದ ಮಣ್ಣನ್ನು ಕೆದರಲಿಕ್ಕೆ ಹಚ್ಚಿಸಿ ಶಿಕ್ಷೆ ಕೊಟ್ಟರು. ದತ್ತು ಅಪ್ಪಾಜಿ ಶಿಂಥೆಯು ಜೈಲಿನಿಂದ ತಪ್ಪಿಸಿಕೊಂಡು ೧೯೪೬ರಲ್ಲಿ ವಿಜಯಪುರಕ್ಕೆ ಬಂದರು. ಈ ವೇಳೆಗೆ, ದತ್ತಾಜಿ ಶಿಂಥೆ ಪರಿಪೂರ್ಣ ಜೀಪಿನ ಚಾಲಕನಾಗಿದ್ದರು. ಜೊತೆಗೆ, ಸರ್ಕಾರದಿಂದ ಚಾಲಕರ ಚಾಲಕ ಅನುಮತಿ ಪತ್ರವನ್ನು ಮೊದಲೇ ಪಡೆದಿದ್ದರು. ೧೯೪೭ರಲ್ಲಿ ಮುಂಬೈ ಸರ್ಕಾರವು ಡೆವಿಡನನ್ನು ವಿಜಾಪುರ ಜಿಲ್ಲೆಗೆ ಡಿ.ಎಸ್.ಪಿ ಎಂದು ನೇಮಿಸಿತು. ಡಿ.ಎಸ್.ಪಿ ಸರ್ಕಾರದ (ಜೀಪ್) ವಾಹನಕ್ಕೆ ಚಾಲಕನು ಯಾರೂ ಇರಲಿಲ್ಲವಾದ ಕಾರಣ, ವಿಜಯಪುರದ ಪೊಲೀಸ್ ಸೆಟಲ್‌ಮೆಂಟ್ ಕಚೇರಿಯಲ್ಲಿ ಜಮಾದಾರನಾಗಿದ್ದ ಗಂಗರಾಮ ಜಾದವ ಶಿಂಥೆಯನ್ನು ಕಚೇರಿಗೆ ಕರೆಯಿಸಿ, ಚಾಲಕನೆಂದು ನೇಮಿಸಲಾಯಿತು. ಬ್ರಿಟಿಷರ ಖೈದಿಯಾಗಿದ್ದ ದತ್ತಾಜಿ ಶಿಂಥೆ ಆನಂತರ ಚಾಲಕನಾದರು. ಆದರೆ, ಡಿ.ಎಸ್.ಪಿಗೆ ಈತ ಖೈದಿ ಎನ್ನುವುದು ಗೊತ್ತಿರಲಿಲ್ಲ. ಚಾಲಕನ ಅವಶ್ಯಕತೆ ತುರ್ತಾಗಿ ಇದ್ದುದರಿಂದ, ಇವನನ್ನು ಯಾವುದೇ ರೀತಿಯಿಂದ ಪರೀಕ್ಷೆ ಮಾಡದೆ ಚಾಲಕನೆಂದು ನೇಮಿಸಿದರು. ದತ್ತಾಜಿಗೆ ಭಯ ಕಾಡುತ್ತಿತ್ತು. ಈತನಿಗೆ ತಾನು 'ತಪ್ಪಿಸಿಕೊಂಡು ಬಂದಿದ್ದ ಬ್ರಿಟೀಶ್ ಖೈದಿ' ಎಂಬ ಅಳುಕು ಇತ್ತು. ಆದರೆ, ಅದನ್ನು ಹೊರಗೆ ತೋರಗೊಡಲಿಲ್ಲ. ಡಿ.ಎಸ್.ಪಿ ವರ್ಗಾವಣೆ ಆದ ಮೇಲೆ ಈತ ಖೈದಿಯಾಗಿದ್ದ ಎಂಬುದು ತಿಳಿಯಿತು. ಆ ವೇಳೆಗೆ ಭಾರತಕ್ಕೆ ಸ್ವಾತಂತ್ರ್ಯ ದೊರೆತಿತ್ತು. ಜೊತೆಗೆ, ಬ್ರಿಟಿಷರು ಎಲ್ಲಾ ಭಾರತೀಯ ಖೈದಿಗಳನ್ನು ಬಿಡುಗಡೆಗೊಳಿಸಿದ್ದರು. ದತ್ತಾಜಿ ಶಿಂಥೆ ಜಿಲ್ಲೆಯ ಪ್ರಥಮ ಸರ್ಕಾರಿ ಚಾಲಕ ಎಂಬ ಶ್ಲಾಘನೆಗೆ ಪಾತ್ರನಾಗಿ, ನಂತರ ಸರ್ಕಾರಿ ಬಸ್‌ನ ಚಾಲಕನಾಗಿ ನಿವೃತ್ತಿ ಹೊಂದಿದರು. ಅಜಾದ್ ಹಿಂದ್ ಫೌಜ್‌ನ ಸೈನಿಕನಾಗಿದ್ದ ದತ್ತಾಜಿ ಶಿಂಥೆ ಸ್ವತಂತ್ರ ಭಾರತ ಸರ್ಕಾರದ ಪ್ರಧಾನಮಂತ್ರಿಯಿಂದ ಸನ್ಮಾನ ಹಾಗೂ ಪ್ರಮಾಣಪತ್ರ ಪಡೆದರು.

---

* ಪ್ರಬಂಧಕ್ಕೆ ಸಹಾಯ ಮಾಡಿದ ದತ್ತಾಜಿ ಅಪ್ಪಾಜಿ ಶಿಂಥೆಯ ಅವರ ಪತ್ನಿ ಗಂಗೂಬಾಯಿ ಶಿಂಥೆ ಅವರಿಗೆ ಕೃತಜ್ಞತೆಗಳು.

◆◆

ಸೈಯ್ಯದ್ ಜಲಾಲುದ್ದೀನ್

ಅಣ್ಣಿಗೇರಿಯ ತಲೆಬುರುಡೆಗಳು ಹಾಗೂ ರೇಡಿಯೋ ಕಾರ್ಬನ್ ಡೇಟಿಂಗ್

ಧಾರವಾಡ ಜಿಲ್ಲೆ, ನವಲಗುಂದ ತಾಲ್ಲೂಕಿನ ಅಣ್ಣಿಗೇರಿಯಲ್ಲಿ ಕಾಣಿಸಿಕೊಂಡ ಮಾನವ ಅವಶೇಷಗಳು ದೇಶಾದ್ಯಂತ ಚಕಿತಗೊಳಿಸಿದಲ್ಲದೆ ವಿಶ್ವದ ಗಮನವನ್ನು ಸೆಳೆದಿದೆ. ಸೆಪ್ಟೆಂಬರ್ ತಿಂಗಳು ೨೦೧೦ರಲ್ಲಿ ಚರಂಡಿ ಕೆಲಸದಲ್ಲಿ ತೊಡಗಿದ ಮುನ್ಸಿಪಲ್ ಕಾರ್ಯಕರ್ತರಿಗೆ ಈ ಅವಶೇಷಗಳು ಬೃಹತ್ ಪ್ರಮಾಣದಲ್ಲಿ ಆಕಸ್ಮಿಕವಾಗಿ ಸಿಕ್ಕಿವೆ. ವಾಸ್ತವಿಕ ವಿಷಯವೆಂದರೆ, ಈ ಉಳಿವುಗಳು ನಮ್ಮ ಅಜ್ಞಾತಚರಿತ್ರೆಯ ಹಿನ್ನೆಲೆಯಲ್ಲಿ ತೇಲುವ ಮಂಜುಗಡ್ಡೆಯ ಒಂದು ಬಾಹ್ಯರೂಪವಾಗಿವೆ. ಕರ್ನಾಟಕ-ಮಹಾರಾಷ್ಟ್ರ ಗಡಿವಿವಾದಕ್ಕೆ ಸಂಬಂಧಿಸಿದಂತೆ ಮೈಸೂರು ಚರಿತ್ರೆಯ ಮರೆಯಾದ ಪುಟಗಳನ್ನು ಹುಡುಕುತ್ತಿದ್ದೇವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ಚರಿತ್ರೆಯ ಸರಣಿಲೋಪ ದಾಖಲೆಗಳನ್ನು ಲಂಡನ್ ಆರ್ಚಿವ್ಸ್‌ನಿಂದ ವಶಪಡಿಸಿಕೊಳ್ಳುವ ಯತ್ನವು ಅದೇ ವರ್ಷ ೨೦೧೦ರಲ್ಲಿ ವಿಫಲವಾಗಿದೆ.

ಅಣ್ಣಿಗೇರಿಯಲ್ಲಿ ಹೊರಬಿದ್ದ ಮಾನವ ಅವಶೇಷಗಳು ಬ್ರಿಟಿಷರ ಆಡಳಿತದಲ್ಲಿ ನಡೆದ, ಭ್ರಷ್ಟಾಚಾರಗಳ ಮೂಲವಾದ ನಮ್ಮ ಚರಿತ್ರೆಯ ಭ್ರಷ್ಟಾಚಾರವನ್ನು ಬಹಿರಂಗಗೊಳಿಸಿವೆ. ಮೂಳೆಗಳು ಅಮೆರಿಕದ ವೈಜ್ಞಾನಿಕ ಪರೀಕ್ಷೆಗೆ ಒಳಪಟ್ಟಿವೆ. 'ಬೀಟಾ ಅನಾಲಿಟಿಕ್-ರೇಡಿಯೋ ಕಾರ್ಬನ್ ಡೇಟಿಂಗ್' ಕಂಪನಿಯು ತನ್ನ ವರದಿಯನ್ನು ನೀಡಿದೆ. ಆತಂಕದ ವಿಷಯವೆಂದರೆ, ಯಜ್ಞಪಶುಗಳಾದ ಇವರು ೪ನೇ ಮೈಸೂರು ಯುದ್ಧದಲ್ಲಿ ಇತರರಂತೆ ಶರಣಾಗತರಾಗಿ ತಮ್ಮ ಜೀವವನ್ನು ಉಳಿಸಿಕೊಳ್ಳುವ ಬದಲು, ರಕ್ತದ ಕೊನೆಯ ತೊಟ್ಟಿನವರೆಗೂ ಬ್ರಿಟಿಷರ ವಿರುದ್ಧ ಹೋರಾಡಿದ ಹುತಾತ್ಮರು. ೧೭ನೇ ಶತಮಾನದಲ್ಲಿ ಮೈಸೂರು ಕೃಷ್ಣರಾಜ ಒಡೆಯರ್-೨ ಅವರ ಕಾಲದಲ್ಲಿ ಆಸ್ಥಾನದ ಒಂದು ಸಾವಿರ ಶಕ್ತಿಯ ವಿಶೇಷ ರಕ್ಷಕ ದಳದ ಸದಸ್ಯರುಗಳಾಗಿದ್ದ ಇವರನ್ನು 'ಮಲ್ಲರು' ಎಂದು ಹೇಳಲಾಗಿದೆ. ರಣರಂಗದಲ್ಲಿ ಒಬ್ಬರು ಹತ್ತು ಯೋಧರಿಗೆ ಸಮಾನರಿದ್ದರು.

ಕ್ರಿ.ಶ. ೧೭೬೪ರ ಒಡೆಯರ್ ಸಂತತಿಯ ಬಿಕ್ಕಟ್ಟಿನಿಂದ ಉಂಟಾದ ಮೈಸೂರು ಆಳ್ವಿಕೆಯ ಪ್ರಕ್ಷುಬ್ಧ ಸ್ಥಿತಿಯಲ್ಲಿ ರಾಜ್ಯದ ಕಡಿವಾಣವನ್ನು ಅವರ ಚಿರಋಣಿ ಸೇನಾಧಿಪತಿಯಾದ ಹೈದರಾಲಿಗೆ ಅರ್ಪಿಸಲಾಯಿತು. ಅರಮನೆಯ ಚಿಂತನ ಸಭೆಯ ಆಚಾರದ ಅಂಗವಾಗಿ ಮಲ್ಲರುಗಳಿಂದ ಪಡೆದ ಪ್ರಮಾಣ ವಚನ ಮತ್ತು ಶಪಥವು ಈ ಘಟನೆಗೆ ಮುಖ್ಯ ಕಾರಣವಾಗಿದೆ. "ರಾಜ್ಯದ ರಕ್ಷಣೆಗೆ ಹೈದರಾಲಿಯ ಭುಜಬಲಗಳಾಗಿ

೨೧/ಬಿ, ರತ್ನಸಿಂಗ್ ರಸ್ತೆ
ಫ್ರೇಜರ್ ಟೌನ್
ಬೆಂಗಳೂರು-೫೬೦ ೦೦೫.
ಮೊ: ೯೯೮೬೭ ೩೪೨೦೨

ಅವರು ಮೈಸೂರು ಸೈನ್ಯವನ್ನು ಮತ್ತಷ್ಟು ಬಲಪಡಿಸುವುದು. ಇದಕ್ಕಾಗಿ ಯಾವ ತ್ಯಾಗಕ್ಕೂ ಮುಂದಾಗಿರುವುದು. ಅವಶ್ಯವಿದ್ದಲ್ಲಿ, ಮೈಸೂರು ರಾಜ್ಯದ ರಕ್ಷಣೆಗೆ ತಮ್ಮ ಪ್ರಾಣಬಲಿಗೂ ಸದಾ ಸಿದ್ಧರಿದ್ದೇವೆ." ಇದು ಮೈಸೂರು ಮಲ್ಲರ ಶಪಥವಾಗಿತ್ತು.

ಅಂತೆಯೇ, ಸದರಿಗಳವರು ಹೈದರ್‌ಅಲಿ ಖಾನ್ ಮತ್ತು ಟಿಪ್ಪುಸುಲ್ತಾನ್ ಅವರ ಕಾಲದಲ್ಲಿ ಅವರ ಸೈನ್ಯದ ಪ್ರಚಂಡಶಕ್ತಿಯ ಬೆನ್ನುಮೂಳೆಯಾಗಿದ್ದು, ಹಿಂದಿನ ಕಾಳಗಗಳಲ್ಲಿ ರಾಜ್ಯಕ್ಕೆ ಜಯಭೇರಿ ತಂದವರು. ಕಾಲಕ್ರಮೇಣ ಒಗ್ಗಟ್ಟಿನ ಈ ರಹಸ್ಯವನ್ನರಿತ ಈಸ್ಟ್ ಇಂಡಿಯಾ ಕಂಪನಿಯವರು ಸಂಚು ಹೂಡಿ ೧೭೯೯ ಮೇ ತಿಂಗಳು ೪ರ ಶ್ರೀರಂಗಪಟ್ಟಣದ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಸೈನ್ಯವನ್ನು ವಿಂಗಡಿಸಿ ಪ್ರತ್ಯೇಕವಾಗಿ ಇವರನ್ನು ಸಂಹರಿಸಿದ್ದಾರೆ. ಟಿಪ್ಪುಸುಲ್ತಾನರ ಸೆರೆಯಾಳಾಗಿದ್ದ ಅವರ ಇನ್ನೂರು ಬ್ರಿಟಿಷ್ ಅಧಿಕಾರಿಗಳ ಸೇಡನ್ನು ಯುದ್ಧದ ನಂತರ ಅಣ್ಣಿಗೇರಿ ಪ್ರಕರಣದಲ್ಲಿ ತೀರಿಸಿಕೊಂಡಿದ್ದಾರೆ. ಅವರ ಸೇಡಿನ ತೀವ್ರತೆಯು ಅಣ್ಣಿಗೇರಿಯಲ್ಲಿ ತಲೆಗಳನ್ನು ಜೋಡಿಸಿರುವ ವಿಧದಲ್ಲಿಯೇ ವ್ಯಕ್ತವಾಗುತ್ತಿದೆ. ದೀರ್ಘಕಾಲ ಸಮರಶ್ರೇಷ್ಠ ಮೈಸೂರು ಮಲ್ಲರ ಮೇಲಿದ್ದ ಅವರ ಕಣ್ಣು, ಆರಿಸಿಕೊಂಡ ಸಾವಿರ ತಲೆಗಳ ಗಾತ್ರವೇ ಹೇಳುತ್ತದೆ (ಶೇ. ೩೦ರಷ್ಟು ಕಳುವಾಗಿವೆ). ಯುದ್ಧದ ನಂತರ ಮೈಸೂರು ಪ್ರಮುಖ ಯೋಧರ ಕಳೇಬರಗಳನ್ನು ಆರಿಸಿ ಸುಮಾರು ಆರು ತಿಂಗಳು ಅವಧಿಯವರೆಗೆ ಶ್ರೀರಂಗಪಟ್ಟಣದ ಟಿಪ್ಪು-ಡನ್‌ಜನ್‌ನಲ್ಲಿ ಇಡಲಾಗಿತ್ತು. ಈ ಅವಧಿಯಲ್ಲಿ ಕೀಲುಗಳಿಂದ ಮೂಳೆಗಳು ಬೇರ್ಪಟ್ಟಿವೆ. ನಂತರ ರುಂಡಗಳಿಂದ ಬೇರ್ಪಟ್ಟಿರುವ ಒಂದು ಸಾವಿರ ಮುಂಡಗಳನ್ನು ಆರಿಸಿ ಅವರ ಬೃಹತ್ ವಿಜಯ ಸಮಾವೇಶಕ್ಕೆಂದು ಅಣ್ಣಿಗೇರಿಗೆ ಸಾಗಿಸಲಾಗಿದೆ. ಈ ಕಾರ್ಯಕ್ಕಾಗಿ ಆದಿವಾಸಿ ಹೆಂಗಸರು, ಮಕ್ಕಳು ಮತ್ತು ಗುತ್ತಿಗೆದಾರರನ್ನು ಬಳಸಿಕೊಂಡಿದ್ದು, ಕೊನೆಗೆ ಅವರನ್ನೂ ನಾಶ ಮಾಡಿ ತಲೆಗಳ ರಾಶಿಗೆ ಸೇರಿಸಿರುವುದು ವ್ಯಕ್ತವಾಗಿದೆ.

ಭಾರತದ ಮೇಲೆ ಸಂಪೂರ್ಣ ಜಯ ಸಾಧಿಸಲು ಆಂಗ್ಲರಿಗೆ ತಿಳಿದಂತೆ ಶ್ರೀರಂಗಪಟ್ಟಣವು ಕೊನೆಯ ಹಾಗೂ ಕಠಿಣ ಅಡ್ಡಿಯಾಗಿತ್ತು. ಅಣ್ಣಿಗೇರಿಯ ಅವರ ಈ ಒಂದು ಪ್ರಥಮ ಹಾಗೂ ವಿಶೇಷ ವಿಜಯ ಸಮಾವೇಶಕ್ಕಾಗಿ ಬ್ರಿಟನ್‌ನಿಂದ ಹೈಕಮಾಂಡ್‌ಗಳ ಆಗಮನವನ್ನು ಕಾಯಬೇಕಾಗಿದ್ದಿತು. ಇದರಲ್ಲಿ ಲಂಡನ್‌ನಿಂದ ಆಗಿನ ಹಡಗು ಯಾನವೇ ಮೂರು ತಿಂಗಳದಾಗಿತ್ತು. ಈ ಸಂದರ್ಭದಲ್ಲಿ ಶವಗಳನ್ನು ಟಿಪ್ಪು-ಡನ್‌ಜನ್‌ನಲ್ಲಿ ಆರು ತಿಂಗಳು ಬಿಟ್ಟಿರುವ ಕಾರಣವೂ ನಮಗೆ ಸ್ಫುಟವಾಗಿ ಕಂಡುಬರುತ್ತಿದೆ. ಈ ನಡುವೆ ಅವರ ಒಳಚಟುವಟಿಕೆಗಳಲ್ಲಿ ತಲ್ಲೀನರಾದ ಅವರು, ಮೊಟ್ಟಮೊದಲಿಗೆ ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಮುಖ್ಯ ದಾಖಲೆಗಳನ್ನು ನಾಶ ಮಾಡಿದ್ದಾರೆ. ಉಳಿದ ದಾಖಲೆಗಳನ್ನು ಅನೇಕ ಅಮೂಲ್ಯ ವಸ್ತು ಹಾಗೂ ಶ್ರೀರಂಗಪಟ್ಟಣ ಬೊಕ್ಕಸದ ಸಂಪತ್ತನ್ನು ಒಳಗೂಡಿ, ಲಂಡನಿಗೆ ಸಾಗಿಸಲಾಗಿದೆ. (ಮೈಸೂರು ಚರಿತ್ರೆಯ ಬ್ರಿಟಿಷ್ ಉಲ್ಲೇಖಗಳು ಇಂದಿಗೂ ಲಂಡನ್ ಆರ್ಚಿವ್ಸ್‌ನಲ್ಲಿ ಇದೆ. ಇದಕ್ಕಾಗಿ ನಮ್ಮ ಹಳೆಯ ಪುಸ್ತಕ ಭಂಡಾರಗಳಲ್ಲಿ ವಿದೇಶಿಯರು ಹುಡುಕುವುದು ಸಹಜವಾಗಿದೆ.)

ಕಳೇಬರಗಳನ್ನು 'ಸಂದರ್ಭತೆರೆ'ಯನ್ನಾಗಿ ಅಳವಡಿಸಿಕೊಂಡಿದ್ದು, ಅವುಗಳ ಹಿನ್ನೆಲೆಯಲ್ಲಿ ಗುಪ್ತವ್ಯವಹಾರ ಮತ್ತು ಅವರ ಇಚ್ಛಾನುಸಾರ ಕಾರ್ಯಗತಗಳಾಗಿವೆ. ಉಂಟಾದ ಪರಿಸ್ಥಿತಿಗೆ ವೈಜ್ಞಾನಿಕ ಸಂಶೋಧನೆಯ ಕಾರಣವನ್ನು ಕೊಡಲಾಯಿತು. ಜೀವರಹಸ್ಯದ ಸುಳಿವಿನ ಶೋಧನೆಗೆಂದು ಲಂಡನ್‌ನಿಂದ ವೈಜ್ಞಾನಿಕತಂಡವನ್ನು ನಿರೀಕ್ಷಿಸುತ್ತಿರುವುದಾಗಿ, ಊರಿನ ಜನತೆಯನ್ನು ಆರೋಗ್ಯದ ದೃಷ್ಟಿಯಿಂದ ತಾತ್ಕಾಲಿಕವಾಗಿ ಅಲ್ಲಿಂದ ದೂರವಿರುವಂತೆ ಮತ್ತು ಅವರವರ ಮನೆಯೊಳಗೆ ಇರುವಂತೆ ಆದೇಶ ನೀಡಲಾಯಿತು. ಸುಡುವ ಗಂಧದ ಸಾಮಾಗ್ರಿಗಳ ಬೇಡಿಕೆಯು ಹೆಚ್ಚಾಯಿತು. ಕೊಳಚೆ ಕಾರ್ಯಕ್ಕೆಂದು, ಬಡವರ ಬೆಂಬಲಕ್ಕೆ ಶ್ರೀರಂಗಪಟ್ಟಣದ ಬೊಕ್ಕಸದಿಂದ ದುಡ್ಡನ್ನು ಎಸೆಯಲಾಯಿತು. ಕೋಟೆಯ ಸುತ್ತ, ಕಾವೇರಿ ನದಿಯಲ್ಲಿ ಟಿಪ್ಪುಸುಲ್ತಾನ್ ಕಾಲದ ನಾಣ್ಯಗಳು ಇಂದಿಗೂ ಸಿಗುತ್ತಿವೆ. ಅಣ್ಣಿಗೇರಿ ಪ್ರಕರಣವು ಬಾಹ್ಯ ಸಂಸ್ಕೃತಿಗೆ ಒಳಗಾಗಿದ್ದು ನಮ್ಮ ಎಲ್ಲಾ ಶೋಧನೆಗಳ ಮಿತಿಯನ್ನು ಮೀರಿದೆ. ಛೇದಿಸಿದ ವೈರಿಯ ತಲೆಗಳನ್ನು ರಣವಿಜಯ ಸಮಾರಂಭಗಳಲ್ಲಿ 'ಸೇಡಿನ ಉಡುಗೊರೆ'ಯಾಗಿ ಬಳಸುವ ಪದ್ಧತಿಯು ೧೬-೧೭ನೇ ಶತಮಾನದ ಯುರೋಪಿನ ಸಾಮ್ರಾಟರಾದ ಹೆನ್ರಿ ಸಂತತಿಯಲ್ಲಿ ಕಂಡುಬಂದಿದೆ. ಅತಿಕೌತುಕ ವಿಷಯವೆಂದರೆ, ಈ ಪ್ರಕರಣವನ್ನು ಆಗಿನ ನಮ್ಮ ದೇಶದ ಪರಿಸ್ಥಿತಿಗಳಿಗೆ ಹೊಂದಿರುವಂತೆ ಈಡೇರಿಸಲಾಗಿದೆ. ನಮ್ಮ ಚರಿತ್ರೆಕಾರರ ಮತ್ತು ಪ್ರಾಚ್ಯವಸ್ತು ಸಂಶೋಧಕರ ದಿಕ್ಕನ್ನು ಬದಲಾಯಿಸಿರುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. 'ಈಸ್ಟ್ ಇಂಡಿಯ ಕಂಪನಿಯವರನ್ನು ಎಂದಿಗೂ ನಂಬಬಾರದು' ಎನ್ನುತ್ತಿದ್ದ ಗಾಂಧೀಜಿಯವರ ಮರುಮಾತುಗಳು ನಮಗೆ ಇಂದಿಗೂ ಅನ್ವಯಿಸುತ್ತಿವೆ. ಹದಿನೇಳನೆಯ ಶತಮಾನದ ಅಂತ್ಯದ ಬ್ರಿಟನ್ನಿನ ಇತಿಹಾಸದಲ್ಲಿ ಚಿನ್ನದ ಅಕ್ಷರಗಳಲ್ಲಿ ಬರೆಯಲ್ಪಟ್ಟ ವಿಜಯದ ಈ ಸಮಾರಂಭವು ಅವರ ಹೈಕಮಾಂಡ್ ಸನ್ನಿಧಿಯಲ್ಲಿ ನೆರವೇರಿದೆ. ಅಣ್ಣಿಗೇರಿಯ ಕಾರ್ಯಕ್ರಮಗಳಲ್ಲಿ ಆಂಗ್ಲ ಧ್ವಜಾರೋಹಣ, ಬ್ರಿಟನ್ನಿನ ಸಾಮ್ರಾಟ ಕಿಂಗ್ ಜಾರ್ಜ್ ದೀರ್ಘಾಯುಸ್ಸಿಗೆ


ವಾದ್ಯವೃಂದಗಳ ಕೂಡಿ ಗುಣಗಾನ, ಕೊನೆಯದಾಗಿ ತಲೆಗಳನ್ನು ನಿಟ್ಟಿಸಿ ಫಿರಂಗಿಗಳ ಸ್ಫೋಟ, ಬಲಿಯಾದ ತಲೆಗಳು ಪುಡಿಯಾಗಿ ಅದೇ ಜಾಗದಲ್ಲಿ ಬಿಡಿ ಮೂಳೆಗಳ ರಾಶಿಗೆ ಸೇರಿವೆ. ಶಸ್ತ್ರಪಡೆಯಿಂದ ಗುಂಡುಹಾರಿಸಿ ರಣಶತ್ರುಗಳಾದ ಮೈಸೂರು ಮಲ್ಲರ ತಲೆಗಳ ವಿನಾಶವು ವಿಶೇಷ ಘಟನೆಯಾಗಿರುತ್ತದೆ. ವಿಜಯಹರ್ಷದ ಏಕಕಂಠ ಧ್ವನಿಯಲ್ಲಿ ಕೂಗಿ ಗುಂಡು ಹಾರಿಸಿದ ಶಸ್ತ್ರಪಡೆಯಲ್ಲಿ, ಆಗಿನ ಭಾರತದ ಗವರ್ನರ್ ಜನರಲ್ ಬೆಂಟಿಂಕ್ ಸ್ವತಃ ಮುಂದಾಗಿದ್ದು, ಯುದ್ಧದ ರಣವೀರ ಪದಕ ಗಳಿಸಿದ ಆಂಗ್ಲ ಸೇನಾಧಿಪತಿಗಳು ಇರುತ್ತಾರೆ. ಮುಖ್ಯ ಅತಿಥಿಗಳಲ್ಲಿ, ಟಿಪ್ಪು-ಡನ್‌ಜನ್‌ನಲ್ಲಿ ಸೆರೆಯಿದ್ದ ಅವರ ಇನ್ನೂರು ಮಂದಿ ಅಧಿಕಾರಿಗಳ ಕೆಲವು ಕುಟುಂಬದವರು ಮತ್ತು ಸಂಬಂಧಿಕರು ಇರುತ್ತಾರೆ. ಹದಿನೇಳನೆಯ ಶತಮಾನದ ಫ್ರೆಂಚ್ ತುಪಾಕಿಯನ್ನು ಮತ್ತು ಪಿಸ್ತೂಲನ್ನು ಆಹ್ವಾನಿತ ಅತಿಥಿಯು ಬಳಸಿರುವುದನ್ನು ಬಲಿಯಾದ ತಲೆಗಳ ಛಾಯಾಚಿತ್ರಗಳಿಂದಲೇ ಕಾಣಬರುತ್ತದೆ. ಅನೇಕರು ಖಡ್ಗ ಮತ್ತು ಲೋಹಾಯುಧಗಳನ್ನು ಉಪಯೋಗಿಸಿದ್ದಾರೆ. ನಮೂದಿತ ಕಾರಣಾಂತರವಾಗಿ ಬ್ರಿಟನ್ನಿನ ಸಮಾರಂಭ ಹಾಗೂ ನಂತರದ ಅವರ ಭಾರತದ ವಿಶೇಷ ಸಮಾವೇಶಕ್ಕೆ ಸುಮಾರು ಎಂಟು ಒಂಬತ್ತು ತಿಂಗಳ ಅಂತರವಿರುತ್ತದೆ. ಕ್ರಿ.ಶ. ೧೭೯೯ರಲ್ಲಿ ಶ್ರೀರಂಗಪಟ್ಟಣದ ಆಕ್ರಮಣದ ವರ್ಷವೇ ಬ್ರಿಟನ್ ತನ್ನ ಗೆಲುವನ್ನು ಲಂಡನ್‌ನಲ್ಲಿ ಆಚರಿಸಿದ್ದರೆ, ಭಾರತದಲ್ಲಿ ಅವರ ವಿಜಯೋತ್ಸವವು ವಿಶೇಷವಾಗಿ ೧೮೦೦ರಲ್ಲಿ, ಗುಪ್ತವಾಗಿ ಆಗಿನ ನಿರ್ಜನ ಹಾಗೂ ದೂರದ ಪ್ರದೇಶವೆನಿಸಿದ ಅಣ್ಣಿಗೇರಿಯಲ್ಲಿ ಜರುಗಿದೆ.

ಅಣ್ಣಿಗೇರಿ ಪ್ರಕರಣವು ಆಂಗ್ಲರ ಅಟ್ಟಹಾಸದ ರಣವಿಜಯ ಸಮಾವೇಶವಾಗಿದೆ. ಭಾರತದ ಇತಿಹಾಸದಲ್ಲಿ ಇದು ಕಾನೂನು ಉಲ್ಲಂಘಿತ ಯುದ್ಧದ ಮಹಾಪರಾಧದ ಕುರುಹು ಎಂದು ಪರಿಗಣಿಸುತ್ತದೆ. ಅಪರಾಧಿಯು ಕೆಲವು ಅಪರಾಧದ ಎಡೆಯಲ್ಲಿ ಬಿಟ್ಟಿರುತ್ತಾನೆ. ತಲೆಗಳಲ್ಲಿ ಗುಂಡಿನ ತೂತುಗಳು ಒಂದಾದರೆ, ಭೂಮಿಯ ಮಟ್ಟಕ್ಕೆ ಜೋಡಿಸಿದ ತಲೆಗಳನ್ನು ಅರ್ಧನಾಶಕ್ಕೆ ಬಿಟ್ಟಿರುವುದು ಮತ್ತೊಂದು ಆತುರದ ಕೆಲಸಕ್ಕೆ ಕಾರಣ: ಸಮಾರಂಭದ ಕೊನೆಯ ಗಳಿಗೆಯಲ್ಲಾದ ಸಿಡಿಮದ್ದು ಸ್ಫೋಟಗಳ ಪ್ರದರ್ಶನದಲ್ಲಿ ಉಂಟಾದ ಆಕಸ್ಮಿಕ ಬೆಂಕಿಗೆ ಅವರ ಪಲಾಯನ. ತಲೆಗಳ ಭಸ್ಮಕ್ಕೆಂದು ತಂದಿರುವ ಅವರ ಎಲ್ಲಾ ಸಿಡಿಮದ್ದುಗಳು ಸ್ಫೋಟಗೊಂಡು, ಬೃಹತ್ ಪ್ರಮಾಣದ ನಾಶವಾಗಿದೆ. ಫಿರಂಗಿಗಳ ಸ್ಫೋಟದಲ್ಲಿ ಅವುಗಳನ್ನು ಸಂಪೂರ್ಣ ಪುಡಿ ಮಾಡಿ ಮಣ್ಣು ಸೇರಿಸುವ ಅವರ ಗುರಿಯು ಈಡೇರದಾಗಿದೆ. ಇದಕ್ಕೆ ಬೆಂಕಿ ಅನಾಹುತ ಮತ್ತು ಅನಿರೀಕ್ಷಿತ ಮಳೆ ಮಾರುತವು ಕಾರಣವಾಗಿರುತ್ತದೆ. ಬೆಂಕಿಯ ಶಾಖಕ್ಕೆ ಸಿಲುಕಿದ ತಲೆಗಳು ಪೆಡಸಾಗಿವೆ (brittle). ನೀರಿನ ಪ್ರಭಾವದಲ್ಲಿದ್ದ ಅದೇ ರಾಶಿಯ ತಲೆಗಳು ಗಡುಸಾಗಿ ಮತ್ತು ಹೊಸದಾಗಿ ಕಂಡುಬರುತ್ತಿವೆ. ಈ ವಿಷಯವು ಕಿಮ್ಸ್ ವೈದ್ಯಕೀಯ ವಿಜ್ಞಾನಕೇಂದ್ರ, ಹುಬ್ಬಳ್ಳಿ, ಇವರು ಕಳುಹಿಸಿರುವ ಪರೀಕ್ಷೆಯ ವರದಿಯಿಂದ ತಿಳಿದುಬಂದಿದೆ.

ಸಕಲ ಚದುರಂಗ ಓಟಗಳ ಕಾರಾವಾನ್ ಸಹಿತ ಗವರ್ನರ್ ಜನರಲ್‌ಗಳ ತುರ್ತು ನಿರ್ಗಮನದ ಮರುಕ್ಷಣವೇ ಅಲ್ಲಿ ಹುಚ್ಚು ಅಧಿಕಾರಿಗಳ ತಾಂಡವ ನೃತ್ಯ ನಡೆದಿದೆ. ಸೂರ್ಯಾಸ್ತಮಾನದ ಬಳಿಕ ಆಗಿರುವ ಬೆಂಕಿ, ಗಾಳಿ, ಮಳೆ ಮತ್ತು ಉಸಿರು ಕಟ್ಟುವ ಹೊಗೆ, ಚಟಪಟ ಕಾಡ್ಗಿಚ್ಚು ಮಿಂಚುಗಳ ಅನಿರ್ದಿಷ್ಟ ಬೆಳಕು. ಈ ನಡುವೆ ಸುಟ್ಟ ಮಾಂಸ ಭಕ್ಷಣೆ ಮತ್ತು ಮಿತವಲ್ಲದ ಕುಡಿತಗಳ ನಂತರ ಓಟಕಿತ್ತ ಅವರು ವಿಕೃತರಾಗಿ ಬಡ ಆದಿವಾಸಿ ಕಾರ್ಮಿಕರ ಮತ್ತು ಮಕ್ಕಳ ಬಲಿ ತೆಗೆದಿದ್ದಾರೆ. ಅಂದಿನ ಆದಿವಾಸಿ ಹೆಂಗಸರು, ಮಕ್ಕಳ ತಾಜಾ ಶವಗಳನ್ನು ಜೋಡಿಸಿರುವ ಹಳೆಯ ತಲೆಗಳ ಮೇಲೆ ಅಡ್ಡಾದಿಡ್ಡಿಯಾಗಿ ಎಸೆದಿರುವುದು, ಅವರ ಅಮಾನುಶ ಕೃತ್ಯಗಳ 'ಸಾಕ್ಷಾತ್ ಸಂದರ್ಭಸೂಚಿ' (prima facie evidence) ಯಾಗಿದೆ. ಮೂರು ನಾಲ್ಕು ಕಲ್ಲು ಬಂಡೆಗಳಲ್ಲಿ ಜೋಡಿಸಲ್ಪಟ್ಟ ಒಲೆಗಳು ಮತ್ತು ಪ್ರಾಣಿ ಮೂಳೆಗಳು ಈ ಜಾಗದಲ್ಲಿ ಸಿಕ್ಕಿವೆ. ಬಹಳ ಕಾಲದಿಂದ ಅಲ್ಲಿ ತಂಗಿದ್ದ ಕಾರ್ಮಿಕರು ಗಂಜಿ ಬೇಯಿಸಿ ಕುಡಿಯುತ್ತಿದ್ದ ಮಣ್ಣಿನ ಪಾತ್ರೆಗಳ ಬಿಡಿಗಳು ಕೂಡಾ ಬಹಳಷ್ಟಿವೆ.

ಶೋಧನೆಯ ಆಕರ್ಷಿತ ದೃಶ್ಯವೆಂದರೆ, ತಲೆಗಳ ಮಧ್ಯೆ ಉದ್ದವಾದ ಯುವಕನ ಸಂಪೂರ್ಣ ಅಸ್ಥಿ. ಇವನ ತಲೆ, ಬಾಯಿ ದವಡೆಗಳನ್ನು ಸತತ ಗುಂಡುಗಳಿಂದ ಒಡೆಯಲಾಗಿದೆ. ತುಪಾಕಿ ಬಂದೂಕುಗಳನ್ನು ಈತನ ದವಡೆ ಮತ್ತು ತಲೆಯ ಮೇಲೆ ಒಟ್ಟಿಗೆ ಒತ್ತಿಟ್ಟು ಪ್ರಯೋಗಿಸಿದ ಐದಾರು ಆಂಗ್ಲ ಅಧಿಕಾರಿಗಳು ಸಾಯಿಸಿದ ನಂತರ ಅವನ ತಲೆ, ದವಡೆ ಹೊಡೆದಿರುವುದು ತೀರ ದ್ವೇಷದ ಕೃತ್ಯವಾಗಿದೆ. ಕಾರ್ಮಿಕ ವರ್ಗದ ನಾಯಕ ಹಾಗೂ ಅಣ್ಣಿಗೇರಿಯ ಚಾಕರಿಗೆ ಆದಿವಾಸಿ ಹೆಂಗಸರು, ಮಕ್ಕಳನ್ನು ಒಟ್ಟುಗೂಡಿಸಿದ ಈತ ಗುತ್ತಿಗೆದಾರನಂತಿದೆ. ಆಂಗ್ಲರ ವಿಷಯ ಅಲ್ಪಕಾಲದಲ್ಲಿ ಬಹಳಷ್ಟು ತಿಳಿದುಕೊಂಡವನು, ಸಂಗಡಿಗರ ಪರವಾಗಿ ಅವರ ಶ್ರಮದ ನ್ಯಾಯಭತ್ಯೆಗಾಗಿ, ಹಕ್ಕುದಾಯಕವಾಗಿ ಬಾಯಿಬಿಟ್ಟ ಧೈರ್ಯದ ಪರಿಣಾಮವಾಗಿದೆ. ನಂತರ ಸಾಯಿಸಿದ ಆದಿವಾಸಿ ಹೆಂಗಸರು, ಮಕ್ಕಳನ್ನು ಅದೇ ತಲೆಗಳ ರಾಶಿಗೆ ಹಾಕಿದ್ದಾರೆ.

ಒಪ್ಪಂದದ 'ಟ್ರೀಟಿ'ಯನ್ನು ಉಲ್ಲಂಘಿಸಿ ತಮ್ಮ ಜಯ ಎನಿಸಿಕೊಂಡವರು, ಪತನವನ್ನು 'ಶ್ರೀರಂಗಪಟ್ಟಣದ ಬಿಡುಗಡೆ'


(The Liberation of Srirangapattana) ಎಂದು ಘೋಷಿಸಿದ್ದಾರೆ. ಕಾರಣಾಂತರವಾಗಿ ಅವರ ವಿಜಯ ಸಮಾವೇಶವನ್ನು ಮೈಸೂರು ಕನ್ನಡಿಗರ ಕಣ್ಮರೆಯಿಸಿ ಐನೂರು ಕಿ.ಮೀ. ದೂರದ ಅಣ್ಣಿಗೇರಿಯಲ್ಲಿ ಅವರ ಸರ್ಪಕಾವಲಿನ ಮಧ್ಯೆ ಆಚರಿಸಲಾಗಿದೆ. ತಲೆಗಳ ಗುಪ್ತ ಸಾಗಾಣಿಕೆಯಲ್ಲಿ ದಕ್ಷಿಣ ಆಫ್ರಿಕಾದ ಗಡುಗಲಿಗಳನ್ನು (ಇಂದಿನ ಸಿದ್ಧಿಗಳು) ಬಳಸಲಾಗಿದೆ. ಶ್ರೀರಂಗಪಟ್ಟಣದ ಆಕ್ರಮಣದಲ್ಲಿ ಮುಂದಾಳು ಮಾಹಿತಿದಾರರಾಗಿದ್ದ ಮರಾಠರನ್ನೂ ಅವರು ವಂಚಿಸಿದ್ದಾರೆ.

ಕಾಲಾನುಸಾರವಾಗಿ ಸಿದ್ಧಿಗಳು ಇಂದು ಉತ್ತರ ಕರ್ನಾಟಕದಲ್ಲಿ ಕೇಂದ್ರೀಕೃತವಾಗಿರುವುದು ಅಲ್ಲದೆ, ಮಹಾರಾಷ್ಟ್ರ ಗಡಿಯೊಳಗೆ ಕನ್ನಡಿಗರಾಗಿ ಹರಡಿದ್ದಾರೆ. ಸಾಂಗ್ಲಿ, ಅಕ್ಕಲಕೋಟೆ, ಶೋಲಾಪುರ ಮತ್ತು ಕೊಲ್ಲಾಪುರಗಳಲ್ಲಿ ಇವರು ನೆಲೆಸಿರುವುದನ್ನು ಕಾಣಬಹುದು. ಕಾರಣವಿಲ್ಲದೆ ಮೈಸೂರು ಕಡೆ ಸುಳಿಯದೆ ಇದ್ದವರಲ್ಲಿ, ಈ ಒಂದು ಬೆಳವಣಿಗೆ ಕಂಡುಬರುವುದು ಮತ್ತು ಅವರು ರಾಜಕೀಯಕ್ಕೆ ಇಳಿಯುವುದು ನಮಗೆ ಒಂದು ಮಹತ್ವದ ವಿಷಯವಾಗಿದೆ. ಮಾನವ ಹಕ್ಕು ಉಲ್ಲಂಘನೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾಶಮಾಡಿರುವ ಪ್ರಕರಣಗಳು, ಬ್ರಿಟಿಷರು ನೆಲೆಸಿದ್ದ ಪ್ರಪಂಚದ ಎಲ್ಲಾ ಕಡೆಯಿಂದ, ಇತ್ತೀಚಿನವರೆವಿಗೂ ಬೆಳಕಿಗೆ ಬಂದಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ ೨೦೧೨ರಲ್ಲಿ ಲಂಡನ್ ಹೈಕೋರ್ಟಿನಲ್ಲಿ ೧೯೫೦–೬೦ರ ಅತ್ಯಾಚಾರಗಳ ಮೇಲೆ ದಕ್ಷಿಣ ಆಫ್ರಿಕದ ಕೀನ್ಯಾದ ಪರವಾಗಿ ಕೊಟ್ಟಿರುವ ತೀರ್ಮಾನವು ಸಾಕ್ಷಿಯಾಗಿದೆ. ರಾಜ್ಯದ ಗಡಿವಿವಾದದಲ್ಲಿ ಸಿಲುಕಿ ಬಳಲಿ ಬೇಸತ್ತ ಬೆಳಗಾವಿ ಜನತೆಗೆ ಈ ಅಶರೀರ ಬೆಂಬಲವು ಸಮಯಕ್ಕೆ ಎಟುಕಿದ ಸಂಜೀವಿನಿಯಾಗಿದೆ. ನಮ್ಮ ಚರಿತ್ರೆಯ ದಾಖಲೆಗಳು ಪರದೇಶದಿಂದ ನಮಗೆ ಈಗ ಅವಶ್ಯವಿಲ್ಲದಾಗಿದೆ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ವಲಯ ಎನ್ನುವುದಕ್ಕೆ ಈ ಅವಶೇಷಗಳು ಸಾಕ್ಷಿಯಾಗಿವೆ. ಅಮೇರಿಕದ ವೈಜ್ಞಾನಿಕ ಕಾಲ ಸಮಯದ ಫಲಿತಾಂಶ, ಜೀವಶಾಸ್ತ್ರ ವಿಶ್ಲೇಷಣೆ, ಚರಿತ್ರೆಯ ಹಿನ್ನೆಲೆ ಅಂದಿನ ರಾಜಕೀಯ ಪರಿಸ್ಥಿತಿ ಇತ್ಯಾದಿ, ಯಾವುದೇ ಮೂಲದಿಂದ ಪರಿಶೀಲಿಸಿದರೂ, ಅಣ್ಣಿಗೇರಿ ಮಾನವ ಅವಶೇಷಗಳು ಶ್ರೀರಂಗಪಟ್ಟಣದ ನಾಲ್ಕನೆಯ ಮೈಸೂರು ಯುದ್ಧವನ್ನು ದೃಢೀಕೃತವಾಗಿ ಸೂಚಿಸುತ್ತವೆ. ನಾಡಿನ ಏಳಿಗೆಗೆ ಅಣ್ಣಿಗೇರಿ ವಿಶೇಷ ಪ್ರಾಚ್ಯ ಉಳಿವುಗಳಿಗೆ ರಾಷ್ಟ್ರೀಯ ಮಹತ್ವ ದೃಷ್ಟಿಯಿಂದ ಯೋಜನಾ ಸ್ಥಾನ ಕೊಟ್ಟು ಕೇಂದ್ರ ಸರ್ಕಾರದ ಮಾನ್ಯತೆಯ ಅವಶ್ಯಕತೆಯಿದೆ.

[ಧಾರವಾಡ ಜಿಲ್ಲೆಯ ಅಣ್ಣಿಗೇರಿಯ ತಲೆಬುರುಡೆ ಬಗ್ಗೆ ಈಗಾಗಲೇ ವಿದ್ವಾಂಸರುಗಳು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ವೃತ್ತಪತ್ರಿಕೆಗಳಲ್ಲಿ ಬಂದಿದೆ. ಈ ತಲೆಬುರುಡೆಗಳನ್ನು ಕ್ರಮವಾಗಿ ಜೋಡಿಸಿರುವ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ತಲೆಬುರುಡೆಗಳ ಕಾರ್ಬನ್ ಡೇಟಿಂಗ್ ಕೂಡ ವ್ಯತ್ಯಯವಾಗಿದ್ದು ಕ್ರಿ.ಶ. ೧೬–೧೮ನೇ ಶತಮಾನವನ್ನು ತಿಳಿಸುತ್ತದೆ. ಈ ಪ್ರಬಂಧದ ಲೇಖಕರಾದ ಶ್ರೀ ಜಲಾಲುದ್ದೀನ್ ಅವರ ಒಟ್ಟಾರೆ ಅಭಿಪ್ರಾಯವೂ ಭಿನ್ನವಾಗಿದೆ. ಅಂತಿಮ ತೀರ್ಮಾನವಾಗಿಲ್ಲ. ಮುಂದಿನ ಹೆಚ್ಚಿನ ಅಧ್ಯಯನಕ್ಕೆ ಸಹಕಾರಿ ಆಗಬಹುದೆಂದು ಇದನ್ನು ಪ್ರಕಟಿಸಿದೆ. ಈ ಪ್ರಬಂಧದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯವೇ ಹೊರತು ಸಂಪಾದಕರ ಅಭಿಪ್ರಾಯವಲ್ಲ. –ಸಂಪಾದಕರು.]

◆◆

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಬಿ.ಎಂ.ಶ್ರೀ ಪ್ರತಿಷ್ಠಾನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು – ೫೬೦ ೦೧೯

karnatakaitihasaacademy25@gmail.com | www.karnatakaitihasaacademy.org

೨೦೨೧–೨೨ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೩೬ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ಹೊರನಾಡಿನ ಶ್ರೀ ಅನ್ನಪೂರ್ಣೇಶ್ವರಿ ಸನ್ನಿಧಾನದ ಶ್ರೀ ಮಾಂಗಲ್ಯ ಮಂಟಪ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಸುಮಾರು ಮೂರೂವರೆ ದಶಕಗಳಿಂದ ಆಕಾದೆಮಿಯ ಎಲ್ಲ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಪರೋಕ್ಷವಾಗಿ ಪಾಲ್ಗೊಂಡು ನಿರಂತರ ಸಹಕಾರ ನೀಡುತ್ತಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೩೫ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞತಾ ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತದೆ.

ಐತಿಹಾಸಿಕ ಪರಂಪರೆ ಉಳಿಸಿ ೨೦೨೨

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಅರಿಯಲು ಕೈಗನ್ನಡಿಯಂತಿರುವ ಸ್ಮಾರಕಗಳನ್ನು ರಕ್ಷಿಸುವ ಸಲುವಾಗಿ ನಡೆಸಿಕೊಂಡು ಬರುತ್ತಿರುವ ಒಂದು ಅಭಿಯಾನವಾಗಿದೆ. ಪಾರಂಪರಿಕ ತಾಣಗಳ ಕುರಿತು ಸಾರ್ವಜನಿಕರಲ್ಲಿ ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಪ್ರತಿ ವರ್ಷವೂ ವಿವಿಧ ವಿನ್ಯಾಸಗಳಲ್ಲಿ ಭಿತ್ತಿಪತ್ರಗಳನ್ನು ಹೊರತಂದು, ಉದ್ಘಾಟನೆ ಮಾಡಿ ಆ ಮೂಲಕ ಅಕಾದೆಮಿಯ ಸದಸ್ಯರು ವರ್ಷಪೂರ್ತಿ ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಸುವ ಇಂತಹ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಪರಂಪರೆಯನ್ನು ಅಕಾದೆಮಿಯು ಅವ್ಯಾಹತವಾಗಿ ನಡೆಸಿಕೊಂಡು ಬರುತ್ತಿದೆ.

ಈ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ನಾಗಮಂಗಲದ ಆದಿಚುಂಚನಗಿರಿ ಕಾಲೇಜಿನಲ್ಲಿ ದಿನಾಂಕ ೧೪–೯–೨೦೨೨ರಂದು ಬೆಳಗ್ಗೆ ಹನ್ನೊಂದು ಗಂಟೆಗೆ ಹಮ್ಮಿಕೊಳ್ಳಲಾಗಿತ್ತು. ಕಾಲೇಜು ವಿದ್ಯಾರ್ಥಿಗಳು ನಡೆಸಿಕೊಟ್ಟ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಅಕಾದೆಮಿಯ ಸದಸ್ಯರೂ, ನಾಗಮಂಗಲ ತಾಲೂಕಿನವರೂ ಆದ ಶ್ರೀ ಮಹಮ್ಮದ್ ಕಲೀಂಉಲ್ಲಾ ಅವರು ಸ್ವಾಗತ ಕೋರಿದರು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಪ್ರಾಸ್ತಾವಿಕ ನುಡಿಯಲ್ಲಿ ಅಕಾದೆಮಿಯ ಧ್ಯೇಯೋದ್ದೇಶಗಳನ್ನು ನೆರೆದಿದ್ದ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಭಿಕರಿಗೆ ತಿಳಿಸಿಕೊಟ್ಟರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್.ಎಸ್. ರವೀಂದ್ರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಇತಿಹಾಸ, ಪರಂಪರೆ ಹಾಗೂ ಸ್ಮಾರಕಗಳ ರಕ್ಷಣೆಯ ಅಗತ್ಯವನ್ನು ಕುರಿತು ಮಾತನಾಡಿದರು. ಆದಿಚುಂಚನಗಿರಿ ಕಾಲೇಜಿನ ನಿವೃತ್ತ ಇತಿಹಾಸ ಪ್ರಾಧ್ಯಾಪಕರೂ ಆದ ಪ್ರೊ. ಕೆ. ಪುಟ್ಟರಂಗಪ್ಪನವರು ವೇದಿಕೆಯ ಮೇಲೆ ಈ ಸಾಲಿನ ಭಿತ್ತಿಪತ್ರವನ್ನು ಬಿಡುಗಡೆಗೊಳಿಸಿದರು. ಇದರೊಂದಿಗೆ ಈ ವರ್ಷ ನಾಗಮಂಗಲದ ಐತಿಹಾಸಿಕ ಹಿನ್ನೆಲೆ, ಸ್ಥಳೀಯ ಪ್ರಸಿದ್ಧ ದೇವಾಲಯದ ವಿವರಣೆಗಳನ್ನೂ ಒಳಗೊಂಡಂತೆ, ದೇವಾಲಯದ ವಾಸ್ತು, ತಳವಿನ್ಯಾಸದ ನಕ್ಷೆ, ಮೊದಲಾದ ಸಂಗ್ರಹ ಯೋಗ್ಯವಾದ ಹಾಗೂ ಅಗತ್ಯವಾಗಿ ತಿಳಿದುಕೊಳ್ಳಲೇಬೇಕಾದ ನಾಗಮಂಗಲದ ಸಾಂಸ್ಕೃತಿಕ, ಐತಿಹಾಸಿಕ ಮಾಹಿತಿಗಳನ್ನೊಳಗೊಂಡ ಕೈಪಿಡಿಯನ್ನು (brochure) ಅಕಾದೆಮಿಯ ವತಿಯಿಂದ ಅಚ್ಚು ಮಾಡಿಸಿ, ಬಿಡುಗಡೆಗೊಳಿಸಲಾಯಿತು. ಕೈಪಿಡಿಗಾಗಿ ಮಾಹಿತಿಯನ್ನು ಶ್ರೀ ಎಂ.ಎನ್. ಪ್ರಭಾಕರ್ ಅವರು ಸಿದ್ಧಪಡಿಸಿಕೊಟ್ಟಿರುತ್ತಾರೆ ಹಾಗೂ ಅಗತ್ಯ ಫೋಟೋಗಳನ್ನು ಶ್ರೀ ಮಹಮ್ಮದ್ ಕಲೀಂಉಲ್ಲ ಅವರು ಒದಗಿಸಿಕೊಟ್ಟಿದ್ದಾರೆ. ಹಾಗೂ ಇದನ್ನು ನಾಗಮಂಗಲದ ಅನಂತ ವಿಜಯ ಮತ್ತು ಕೆ. ನರಸಿಂಹ ಪ್ರಸಾದ್, ಪ್ರೌಢಶಾಲಾ ಶಿಕ್ಷಕರು, ನಾಗಮಂಗಲ ಅವರು ವಿನ್ಯಾಸಗೊಳಿಸಿರುತ್ತಾರೆ. ಇವರಿಗೆ ಅಕಾದೆಮಿಯು ಧನ್ಯವಾದಗಳನ್ನು ಅರ್ಪಿಸುತ್ತದೆ.

ಐತಿಹಾಸಿಕ ಸ್ಮಾರಕಗಳ ಶೋಧನೆ ಹಾಗೂ ಸಂರಕ್ಷಣಾ ಕಾರ್ಯಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರೊ. ಕೆ.ಆರ್. ನರಸಿಂಹನ್, ನಿವೃತ್ತ ಪ್ರಾಂಶುಪಾಲರು, ಯಲಹಂಕ ಇವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಐತಿಹಾಸಿಕ ಸ್ಮಾರಕಗಳ ಬಗ್ಗೆ ವಿಶೇಷ ಕಾಳಜಿ, ಒಲವು ಹೊಂದಿರುವ ಪ್ರೊ. ಕೆ.ಆರ್. ನರಸಿಂಹನ್ ಅವರು ಹಲವಾರು ಅಪ್ರಕಟಿತ ಶಾಸನಗಳನ್ನು ಶೋಧಿಸಿದ್ದಾರೆ. ಹಲವಾರು ಸ್ಮಾರಕಗಳನ್ನು ಸ್ಥಳೀಯರ ಸಹಾಯದೊಡನೆ ಸಂರಕ್ಷಿಸಿದ್ದಾರೆ. ಸ್ಥಳೀಯರಿಗೆ, ಶಾಲಾ–ಕಾಲೇಜು ಮಕ್ಕಳಿಗೆ ಸ್ಥಳೀಯ ಇತಿಹಾಸ, ಪರಂಪರೆಗಳ ರಕ್ಷಣೆಯ ಮಹತ್ವ ಮೊದಲಾದವುಗಳನ್ನು ತಿಳಿಸಲು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದಾರೆ. ಅಲ್ಲದೆ, ತಮ್ಮ ಹಾದಿಯಲ್ಲಿ ಇನ್ನೂ ಹೆಚ್ಚಿನ ಕಾರ್ಯಗಳನ್ನು ನಡೆಸಲು ಹಲವು ಯುವ ಸಂಶೋಧಕರನ್ನು ಬೆಳೆಸುತ್ತಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ದೇವಾಲಯದ ಆವರಣದಲ್ಲಿ ಕಾಲೇಜು ಮಕ್ಕಳಿಗಾಗಿ ವಾಸ್ತುಶಿಲ್ಪದ ಕುರಿತಾಗಿ ಪ್ರಾತ್ಯಕ್ಷಿಕೆ ನಡೆಸಿಕೊಡಲಾಯಿತು. ಇದನ್ನು ದೇವಾಲಯ ವಾಸ್ತುತಜ್ಞರಾದ ಶ್ರೀ ಎಂ.ಎನ್. ಪ್ರಭಾಕರ್ ಅವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಇತಿಹಾಸದಲ್ಲಿ ಪ್ರಕೃತಿಗೆ ಹೆಚ್ಚಿನ ಮಹತ್ವ ನೀಡಿದ ಕೆಲವು ಶಾಸನೋಕ್ತ ಮಹಿಳೆಯರ ವಿಚಾರಗಳನ್ನು ತಿಳಿಸಿ, ಸಾವಿರ ವರ್ಷಗಳ ಹಿಂದೆ ನಮ್ಮ ನಾಡಿನಲ್ಲಿದ್ದ ಸಿರಿದೇವಿಯಕ್ಕ, ಮೋಚಬ್ಬರಸಿ ಮೊದಲಾದವರ ಕಾರ್ಯಗಳನ್ನು ಇಂದು ನಾವು ಗುರುತಿಸುವುದು ಶಾಸನಗಳ ಮೂಲಕ ಎಂಬ ವಿಚಾರವನ್ನು ಎತ್ತಿ ಹಿಡಿದು, ಸ್ಮಾರಕಗಳನ್ನು, ನಮ್ಮ ಹಿರಿಯರಿಂದ ಕೊಡುಗೆಯಾಗಿ ಬಂದ ಪರಂಪರೆಯನ್ನು ಉಳಿಸಿ, ಬೆಳೆಸಬೇಕಾಗಿರುವ ಅವಶ್ಯಕತೆಯ ಕುರಿತಾಗಿ ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಎಚ್.ಆರ್. ತ್ರಿವೇಣಿ, ಸಹಾಯಕ ಪ್ರಾಧ್ಯಾಪಕರು ವಾಣಿಜ್ಯ ವಿಭಾಗ ಇವರು ನಡೆಸಿಕೊಟ್ಟರು. ಶ್ರೀಮತಿ ಎ.ಬಿ. ಪವಿತ್ರ, ಮುಖ್ಯಸ್ಥರು, ಇತಿಹಾಸ ವಿಭಾಗ, ಇವರು ವಂದನಾರ್ಪಣೆ ಮಾಡಿದರು. ಕಾಲೇಜಿನ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿವೃಂದ ಅತ್ಯುತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಕಾರ್ಯಕ್ರಮಕ್ಕೆ ಮೈಸೂರಿನಿಂದ ಡಾ. ಎಚ್.ಎಸ್. ಉಷಾರಾಣಿ, ಬೆಂಗಳೂರಿನಿಂದ ಶ್ರೀ ಕೆ.ಎಲ್. ರಾಜಶೇಖರ್, ಡಾ. ನಳಿನಿ, ಸೀತಾಲಕ್ಷ್ಮೀ ರಾವ್, ಡಾ. ಸಂಧ್ಯಾ, ಶ್ರೀ ಕೆ. ಧನಪಾಲ್, ಮೊದಲಾದ ಅಕಾದೆಮಿಯ ಸದಸ್ಯರು ಭಾಗವಹಿಸಿದ್ದರು.

ಅಕಾದೆಮಿಯ ಸದಸ್ಯರು ನಡೆಸಿದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು

ದಿನಾಂಕ ೧೮–೪–೨೦೨೨ ಜಾಲ ಹೋಬಳಿ

ವಿಶ್ವಪರಂಪರಾ ದಿನಾಚರಣೆಯ ಅಂಗವಾಗಿ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾದ ಶ್ರೀ ಕೆ. ಧನಪಾಲ್ ಅವರ ನೇತೃತ್ವದಲ್ಲಿ ಯಲಹಂಕ ತಾಲ್ಲೂಕು ಜಾಲ ಹೋಬಳಿಯ ಬಂಡೆಕೊಡಿಗೆಹಳ್ಳಿ ಗ್ರಾಮದಲ್ಲಿ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರಿನ ದಯಾನಂದ ಸಾಗರ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಬಂಡೆಕೊಡಿಗೆಹಳ್ಳಿ ಗ್ರಾಮಸ್ಥರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ, ಬಂಡೆಕೊಡಿಗೆಹಳ್ಳಿ ಗ್ರಾಮದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಶಾಸನವೊಂದನ್ನು ಸಂರಕ್ಷಿಸಿ, ಅದರ ಸಾರಾಂಶದ ಬೋರ್ಡ್ ಅಳವಡಿಸಲಾಯಿತು. ಕ್ರಿ.ಶ.೧೩೩೮ಕ್ಕೆ ಸೇರಿದ ಹೊಯ್ಸಳ ಸಾಮ್ರಾಜ್ಯದ ವೀರಬಲ್ಲಾಳನ ಶಾಸನದ ವಿಷಯವನ್ನು ಕುರಿತು ಹಾಗೂ ಅದರ ಸಂರಕ್ಷಣೆಯ ವಿಷಯವನ್ನು ನೆರೆದಿದ್ದ ವಿದ್ಯಾರ್ಥಿಗಳಿಗೆ ಹಾಗೂ ಸ್ಥಳೀಯರಿಗೆ ಮನವರಿಕೆ ಮಾಡಿಕೊಡಲಾಯಿತು. ಕಾಲೇಜಿನ ಉಪನ್ಯಾಸಕರೂ ಹಾಗೂ ಅಕಾದೆಮಿಯ ಕಾರ್ಯದರ್ಶಿಗಳು ಆದ ಡಾ. ವಿ. ಸಂಧ್ಯಾ ಹಾಗೂ ಸದಸ್ಯರುಗಳಾದ ಶ್ರೀಮತಿ ಎಸ್.ವೈ. ನಿರ್ಮಲಾ ಹಾಗೂ ಶ್ರೀ ವಿಜಯಕುಮಾರ್ ಹಾಗೂ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಮತ್ತು ಉಪನಿರ್ದೇಶಕರಾದ ಶ್ರೀಮತಿ ಕಾವ್ಯಶ್ರೀ ಹಾಗೂ ಗ್ರಾಮದ ಪ್ರಮುಖರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.





ಅಕಾದೆಮಿಯ ಸದಸ್ಯರಾದ ಶ್ರೀ ಮಹಮ್ಮದ್ ಕಲೀಂಉಲ್ಲ ಅವರು ನಾಗಮಂಗಲದ ಬಾಲಕಿಯರ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳಿಗೆ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಡಿಯಲ್ಲಿ ಪ್ರಾತ್ಯಕ್ಷಿಕೆಯ ಮೂಲಕ ಸಂರಕ್ಷಣೆಯ ಬಗ್ಗೆ ಉಪನ್ಯಾಸ ನಡೆಸಿಕೊಟ್ಟರು.





ಬಾಬುರಾಯನ ಕೊಪ್ಪಲಿನ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಡಿಯಲ್ಲಿ ಕಾಲ್ನಡಿಗೆಯಲ್ಲಿ ಶ್ರೀರಂಗಪಟ್ಟಣ ದರ್ಶನ ಮಾಡಿಸಿ, ಶ್ರೀರಂಗಪಟ್ಟಣ ತಾಲೂಕಿನ ಶ್ರೀರಂಗಪಟ್ಟಣದ ಸ್ಮಾರಕಗಳ ಪರಿಚಯ ಮಾಡಿಕೊಟ್ಟು, ಅವುಗಳ ಪ್ರಾಮುಖ್ಯತೆ ಮತ್ತು ಸಂರಕ್ಷಣೆಯ ಕುರಿತು ತಿಳಿಸಿಕೊಟ್ಟರು.

ದಿನಾಂಕ ೨೧-೦೫-೨೨, ಗೋಪಾಲಪುರ

ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾದ ಶ್ರೀ ಕೆ. ಧನಪಾಲ್ ಅವರು ಪ್ರೊ. ಕೆ.ಆರ್. ನರಸಿಂಹನ್ ಅವರ ಮಾರ್ಗದರ್ಶನದಲ್ಲಿ ದಿನಾಂಕ ೨೧-೦೫-೨೨ರಂದು ಜಾಲ ಹೋಬಳಿಯ ಗೋಪಾಲಪುರ ಗ್ರಾಮದಲ್ಲಿ ರಾಷ್ಟ್ರಕೂಟ ಮೂರನೇ ಕೃಷ್ಣನ ಕಾಲದ ಶಾಸನವನ್ನು ಸಂಶೋಧಿಸಿ, ಶಾಸನದ ಮಹತ್ವವನ್ನು ಗ್ರಾಮಸ್ಥರಿಗೆ ತಿಳಿಸಿಕೊಡುವ ಸಲುವಾಗಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.







ದಿನಾಂಕ ೨೪-೦೬-೨೨, ರಾಮಮೂರ್ತಿನಗರ

ಅಕಾದೆಮಿಯ ಸದಸ್ಯರಾದ ಶ್ರೀ ಆದಪ್ಪ ಪಾಸೋಡಿ ಅವರು ದಿನಾಂಕ ೨೪ನೆಯ ಜೂನ್ ೨೦೨೨ ಶುಕ್ರವಾರದಂದು ಬೆಂಗಳೂರಿನ ರಾಮಮೂರ್ತಿ ನಗರದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವಕಾಲೇಜಿನ ಸಹಯೋಗದಲ್ಲಿ "ಇತಿಹಾಸ ಪರಂಪರೆ ಉಳಿಸಿ" ಕಾರ್ಯಕ್ರಮ ಆಯೋಜಿಸಿ ಕಾರ್ಯಕ್ರಮ ನಡೆಸಿಕೊಟ್ಟರು. ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀಮತಿ ಭಾರತಿ ಬಿ.ವಿ ಅವರು ವಿದ್ಯಾರ್ಥಿಗಳಿಗೆ ಚರಿತ್ರೆ ರಚನೆಗೆ ಆಯಾ ಕಾಲಮಾನದ ವಿವರಗಳನ್ನೂ, ನಿಖರವಾದ ಮಾಹಿತಿಯನ್ನು ನೀಡುವ ಆಕರಗಳು ಬಹಳ ಮುಖ್ಯ ಸಾಹಿತ್ಯ, ಶಾಸನ, ನಾಣ್ಯ, ಸ್ಮಾರಕಗಳು, ಕೋಟೆ, ಮಡಿಕೆ-ಕುಡಿಕೆ ಮತ್ತಿತರ ಪಳಿಯುಳಿಕೆಗಳು ಇತಿಹಾಸ ಕಟ್ಟುವಲ್ಲಿ ಸಹಕಾರಿಯಾಗುತ್ತವೆ ಎಂದು ವಿವರಿಸಿದರು. ಬೆಂಗಳೂರು ಪೂರ್ವ ತಾಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಪರಮೇಶಯ್ಯ ಬಿ.ವಿ ಅವರು ಭಾರತದ ಬಹುಮುಖಿ ಪರಂಪರೆಯನ್ನು ಅರ್ಥೈಸಿಕೊಳ್ಳಲು ಮೌಖಿಕ ಆಕರಗಳಾಗಿ ಹಾಡು, ಕಾವ್ಯ, ಲಾವಣಿ, ಸ್ಥಳಪುರಾಣಗಳೂ ಮಹತ್ವದ ಪಾತ್ರ ವಹಿಸುತ್ತವೆ ಎಂದು ವಿವರಿಸಿದರು. ದೈಹಿಕ ಶಿಕ್ಷಣ ಅಧ್ಯಾಪಕ ಶ್ರೀ ಎನ್.ವಿ. ಹರಿ ಅವರು ಸ್ತೂಪ, ಬಸದಿ, ಅರಮನೆಗಳು ನಮ್ಮ ಪ್ರಾಚೀನ ಸಂಸ್ಕೃತಿ, ತಂತ್ರಜ್ಞಾನ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ತಿಳಿಯಲು ಸಹಾಯಕವಾಗಿವೆ ಎಂದರು.





ಶ್ರೀ ಆದಪ್ಪ ಪಾಸೋಡಿ ಅವರು ಕರ್ನಾಟಕ ಇತಿಹಾಸ ಅಕಾದೆಮಿಯ 'ಐತಿಹಾಸಿಕ ಪರಂಪರೆ ಉಳಿಸಿ ಭಿತ್ತಿಪತ್ರ'ಗಳನ್ನು ವಿವರಿಸುತ್ತ ವಿದ್ಯಾರ್ಥಿಗಳು ತಾವು ಅಲ್ಲಲ್ಲಿ ನೋಡುವ ಪ್ರಾಚೀನ ಶಿಲಾಶಾಸನಗಳು, ಕಲಾಕೃತಿಗಳು, ಸ್ಮಾರಕ ಶಿಲೆಗಳು, ಕೆರೆಗಳು, ತಾಳೇಗರಿಗಳನ್ನು ದಾಖಲಿಸುವ ಪರಿಯನ್ನು ತಿಳಿಸಿಕೊಟ್ಟು, ಅವುಗಳ ಮೂಲಕ ತಿಳಿದು ಬರುವ ಇತಿಹಾಸ, ಪರಂಪರೆಯನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸುವ ಬಗೆಯನ್ನು ತಿಳಿಸಿದರು. ಮಕ್ಕಳಿಂದ ಲಾವಣಿ ಹಾಗೂ ಇತಿಹಾಸ ಪರ ಘೋಷಣೆಗಳನ್ನು ಹೇಳಿಸಿ, ವಂದನಾರ್ಪಣೆಯೊಂದಿಗೆ ಸಮಾರೋಪಗೊಳಿಸಲಾಯಿತು.

ದಿನಾಂಕ ೧೬-೦೯-೨೨, ವಜ್ಜಲ



ಇತಿಹಾಸ ಅಕಾದೆಮಿಯ ಸದಸ್ಯರಾದ ಶ್ರೀ ನಿಂಗನಗೌಡ ದೇಸಾಯಿ ಅವರು ಸರಕಾರಿ ಪ್ರೌಢಶಾಲೆ ವಜ್ಜಲದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ದಿನಾಂಕ ೧೬-೯-೨೨ರಂದು ಏರ್ಪಡಿಸಿದ್ದರು. ಕುಮಾರಿ ಶೃತಿ ಹಾಗೂ ಸಂಗಡಿಗರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಶಿಕ್ಷಕರಾದ ಶ್ರೀ ಮಹಾಂತೇಶ್ ಅವರು ಸ್ವಾಗತಿಸಿದರು. ಶಿಕ್ಷಕರಾದ ಶ್ರೀ ಗುರುನಾಥ ನಾವದಗಿ ಅವರು ಪ್ರಾಸ್ತಾವಿಕ ನುಡಿ ನಡೆಸಿಕೊಟ್ಟರು. ಮುಖ್ಯ ಉಪನ್ಯಾಸಕರಾಗಿ ಕಾರ್ಯಕ್ರಮದ ಉದ್ದೇಶವನ್ನು ಕುರಿತು ಮಾತನಾಡಿದ ಶ್ರೀ ನಿಂಗನಗೌಡ ದೇಸಾಯಿ ಅವರು ಮಕ್ಕಳಿಗೆ ಸ್ಥಳೀಯ ಇತಿಹಾಸದ ಮಹತ್ವವನ್ನು ತಿಳಿಸುತ್ತಾ ವಜ್ಜಲದ ಜಲಬುಗ್ಗೆಗಳು, ಸಂಗಮೇಶ್ವರ ಮತ್ತು ಶ್ರೀ ರಾಮಲಿಂಗ ದೇವಾಲಯಗಳ ಸಾಂಸ್ಕೃತಿಕ ಇತಿಹಾಸ, ತಿಳಿಸಿಕೊಟ್ಟು, ನಮ್ಮ ಪರಂಪರೆಯ ಕುರುಹುಗಳಾದ ಹಾಗೂ ಇತಿಹಾಸಕ್ಕೆ ಆಧಾರಗಳಾಗಿರುವ ಶಾಸನಗಳು, ಶಿಲ್ಪಗಳು, ನಾಣ್ಯಗಳು, ದೇವಾಲಯಗಳು, ಕೋಟೆಗಳು ಇವುಗಳನ್ನು ರಕ್ಷಿಸುವ ಹೊಣೆಗಾರಿಕೆಯ ಅರಿವನ್ನು ಮೂಡಿಸಿದರು. ನಿವೃತ್ತ ಉಪನ್ಯಾಸಕರಾದ ಶ್ರೀ ಆರ್.ಎಲ್. ಸುಣಗಾರ ಅವರು ಅತಿಥಿಗಳಾಗಿ ಆಗಮಿಸಿದ್ದರು. ಗುರುಗಳಾದ ಶ್ರೀ ಯಲ್ಲಪ್ಪ ಚಂದನಕೇರಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಹಸನ್ ಅಲಿ, ಪ್ರಕಾಶ ಪಾಟೀಲ, ಗೌಡಪ್ಪಗೌಡ, ಕೆ.ಎಸ್. ಪಟೇಲ ಉಪಸ್ಥಿತರಿದ್ದರು. ಶಿಕ್ಷಕರಾದ ಶ್ರೀ ಎನ್.ಡಿ. ಅವರು ನಿರೂಪಣೆ ಮಾಡಿದರು. ಶ್ರೀ ಯಲ್ಲಣ್ಣ ಗೋನಾಳ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.



ಮೈಸೂರು

ಮೈಸೂರಿನ 'ಸೋದರಿ ನಿವೇದಿತಾ' ಸಂಸ್ಥೆಯವರು ಮೇಲುಕೋಟೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 'ಕಲ್ಲು ಕಥೆ' ಎಂಬ ಕಾರ್ಯಕ್ರಮದಲ್ಲಿ ಅಕಾದೆಮಿಯ ಸದಸ್ಯರಾದ ಶ್ರೀ ಮಹಮ್ಮದ್ ಕಲೀಂಉಲ್ಲಾ ಅವರು ವಿದ್ಯಾರ್ಥಿಗಳಿಗೆ ಶಾಸನಗಳ ಸ್ವರೂಪ ಅವುಗಳ ಪ್ರಾಮುಖ್ಯತೆಗಳ ಬಗ್ಗೆ ತಿಳಿಸಿಕೊಟ್ಟರು. ಮೇಲುಕೋಟೆಯ ಜೀಯರ್ ದೇವಸ್ಥಾನದ ಜಗುಲಿಯ ಗೋಡೆಯ ಮೇಲಿರುವ ಕ್ರಿ.ಶ.೧೪೫೮ರ ಶಾಸನದ ಪ್ರಾತ್ಯಕ್ಷಿಕ ಪರಿಚಯ ಮಾಡಿಸಲಾಯಿತು.

ದಿನಾಂಕ ೧೦-೦೮-೨೨, ದ್ಯಾವರಹಳ್ಳಿ

ಅಕಾದೆಮಿಯ ಸದಸ್ಯರಾದ ಕೆ. ಧನಪಾಲ್‌ರವರು ಗೌರಿಬಿದನೂರು ತಾಲ್ಲೂಕು ದ್ಯಾವರಹಳ್ಳಿ ಗ್ರಾಮದಲ್ಲಿ ಇತಿಹಾಸ ಅಕಾದೆಮಿಯ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಸ್ಥಳೀಯ ಶಾಸನವನ್ನು ಕುರಿತಂತೆ ಹಾಗೂ ಅದೇ ಗ್ರಾಮದಲ್ಲಿರುವ ಕೋಟೆ ಕೊತ್ತಲಗಳ ಬಗ್ಗೆ ಗ್ರಾಮಸ್ಥರಿಗೆ ತಿಳಿಸಿಕೊಡುವ ಮುಖಾಂತರ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.






ದಿನಾಂಕ ೨೪-೦೯-೨೦೨೨, ಕೆಂಬಾವಿ



ಇತಿಹಾಸ ಅಕಾದೆಮಿಯ ಸದಸ್ಯರಾದ ನಿಂಗನಗೌಡ ದೇಸಾಯಿ ಅವರು ದಿನಾಂಕ ೨೪-೯-೨೨ರಂದು ಸರಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ 'ಇತಿಹಾಸ ಕ್ಲಬ್' ಸಹಯೋಗದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಕೆಂಭಾವಿಯಲ್ಲಿರುವ ವಿಭಿನ್ನ ಕಾಲಕ್ಕೆ ಸೇರಿರುವ ಹಲವಾರು ದೇವಾಲಯಗಳು, ಗ್ರಾಮದ ಪ್ರಾಚೀನ ಶಿಲ್ಪಗಳು, ಸ್ಥಳೀಯ ಶಾಸನಗಳು, ದೊರೆತಿರುವ ಕೆಲವು ಜೈನ ವಿಗ್ರಹಗಳು ಜೊತೆಗೆ ಪ್ರಾಚೀನ ಜಚ್ಚಾ ಮಾಸಾಬಿ ದರ್ಗಾ ಮತ್ತು ಆದಿಲಷಾಹಿಗಳ ಕಾಲದ ಗುಮ್ಮಟಗಳು ಕೆಂಭಾವಿಗೆ ಐತಿಹಾಸಿಕವಾಗಿ ಬಹಳ ಮಹತ್ವವನ್ನು ತಂದುಕೊಟ್ಟಿದೆ ಎಂದು ತಿಳಿಸಿವರು. ಮುಖ್ಯೋಪಾಧ್ಯಾಯರಾದ ಅನಿಲಕುಮಾರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ಶ್ರೀಮತಿ ನಾಗರತ್ನ ಓಂಕಾರ, ಶಾಂತಾ ಹಾಗೂ ಶಿಕ್ಷಕರಾದ ಪ್ರಭಾಕರ, ಯಮನೇಶ, ಸುಭಾಶ್ಚಂದ್ರ ಮತ್ತು ಕು. ಸೀಮಾ. ಮಲ್ಲಿಕಾರ್ಜುನ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಇತಿಹಾಸದ ಮಹತ್ವ ಸಾರುವ ಭಿತ್ತಿಪತ್ರಗಳನ್ನು ಮಕ್ಕಳ ಸಮ್ಮುಖದಲ್ಲಿ ಅನಾವರಣಗೊಳಿಸಲಾಯಿತು. ಕಾರ್ಯಕ್ರಮವನ್ನು ನಡೆಸಿಕೊಟ್ಟ ಶಿಕ್ಷಕ ಯಮುನೇಶ ಯಾಳಗಿ ವಂದನಾರ್ಪಣೆಯನ್ನೂ ನಡೆಸಿಕೊಟ್ಟರು.

ದಿನಾಂಕ ೨೪-೯-೨೨, ಕೆಂಬಾವಿ



ಅಕಾದೆಮಿಯ ಸದಸ್ಯರಾದ ಶ್ರೀ ನಿಂಗನಗೌಡ ದೇಸಾಯಿ ಅವರು ಕೆಂಭಾವಿ ಗುರುಕಾಂತೇಶ್ವರ ಹಿರೇಮಠದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಕ್ಕಾಗಿ ಅಕಾದೆಮಿಯು ವಿನ್ಯಾಸಗೊಳಿಸಿದ ಭಿತ್ತಿಪತ್ರವನ್ನು ಹಿರೇಮಠದ ಪೂಜ್ಯರಾದ ವೇ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯರ ಸಮ್ಮುಖದಲ್ಲಿ ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ನೆರೆದಿದ್ದ ಸಭಿಕರಿಗೆ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಕುರಿತಾಗಿ ಮನವರಿಕೆ ಮಾಡಿಕೊಡುವುದರೊಂದಿಗೆ ಸ್ಥಳೀಯವಾಗಿ ದೊರೆತಿರುವ ವೀರಗಲ್ಲುಗಳು, ಶಿಲ್ಪಗಳು ಮೊದಲಾದ ಐತಿಹಾಸಿಕ ಮಹತ್ವ ಉಳ್ಳ ಸ್ಮಾರಕಗಳನ್ನು ರಕ್ಷಿಸಲು ಅಲ್ಲಿ ವಸ್ತುಸಂಗ್ರಹಾಲಯದ ಅವಶ್ಯಕತೆ ಇರುವುದರ ಕುರಿತಾಗಿ ಗಮನ ಸೆಳೆದರು. ಸಾಹಿತಿ ಡಾ. ಯಂಕನಗೌಡ ಪೋ. ಪಾಟೀಲ ಮಾಲಹಳ್ಳಿ ಅವರು ಅತಿಥಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ಎಂ.ಬಿ. ಪಾಟೀಲ, ಹಾಗೂ ಶ್ರೀ ಗುರುರಾಜ ಕುಲಕರ್ಣಿ. ಶ್ರೀ ಮಹದೇವಪ್ಪ, ಶ್ರೀ ಮಲ್ಲಿಕಾರ್ಜುನ ಕುಂಬಾರ ಶಿಕ್ಷಕರು ಉಪಸ್ಥಿತರಿದ್ದರು.

ದಿನಾಂಕ ೨೭-೯-೨೨, ಪಾಂಡವಪುರ

ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಅಂಗವಾಗಿ ಪಾಂಡವಪುರ ತಾಲೂಕಿನಲ್ಲಿ ಕೃಷ್ಣರಾಜಸಾಗರದ ಹಿನ್ನೀರಿನ ಪ್ರದೇಶಕ್ಕೆ ಸ್ಥಳಾಂತರಗೊಂಡಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಏರ್ಪಡಿಸಲಾದ ಕಾರ್ಯಕ್ರಮದಲ್ಲಿ

ಅಕಾದೆಮಿಯ ಸದಸ್ಯರಾದ ಕಲೀಂಉಲ್ಲಾ ಅವರು ಸುಮಾರು ೨೦೦ ಜನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸ್ಮಾರಕಗಳ ರಕ್ಷಣೆಯ ಮಹತ್ವವನ್ನು ಕುರಿತು ಮಾತನಾಡಿ, ಪರಂಪರೆ, ಸಂಸ್ಕೃತಿಯನ್ನು ಉಳಿಸಿಕೊಂಡರೆ ಪ್ರವಾಸೋದ್ಯಮವನ್ನು ಗಟ್ಟಿಗೊಳಿಸಲು ಸಾಧ್ಯ ಎನ್ನುವುದನ್ನು ತಿಳಿಸಿ ಹೇಳಿದರು. ಹಲವಾರು ಸ್ಮಾರಕಗಳನ್ನು ರಕ್ಷಿಸಿರುವ ಹಿನ್ನೆಲೆಯಲ್ಲಿ ಶ್ರೀಯುತರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಅಕಾದೆಮಿಯ ಸದಸ್ಯರಾದ ಶ್ರೀ ಮಹಮ್ಮದ್ ಕಲೀಂಉಲ್ಲಾ ಅವರು ನೇತೃತ್ವವಹಿಸಿ, ಮದ್ದೂರಿನ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಗಾಗಿ ಆತಕೂರಿನಲ್ಲಿ ಪರಂಪರೆ ಉಳಿಸಿ ಕಾರ್ಯಕ್ರಮ ನಡೆಸಿಕೊಟ್ಟರು. ವಿದ್ಯಾರ್ಥಿಗಳಿಂದ ಆತಕೂರಿನ ಚೆಲ್ಲೇಶ್ವರ ಸ್ವಾಮಿ ದೇವಾಲಯದ ಸ್ವಚ್ಛತಾ ಕಾರ್ಯ ನಡೆಸಿ, ಸ್ಮಾರಕಗಳ ಸಂರಕ್ಷಣೆ ಕುರಿತು ಪ್ರತ್ಯಕ್ಷಿಕೆ ನಡೆಸಿಕೊಟ್ಟರು.

ಅಕಾದೆಮಿಯ ಸದಸ್ಯರಾದ ಶ್ರೀ ಮಹಮ್ಮದ್ ಕಲೀಂಉಲ್ಲಾ ಅವರು ಆರಣಿ ಗ್ರಾಮದಲ್ಲಿ ಬಾವಿಯಲ್ಲಿ ಬಿದ್ದಿದ್ದ ಹೊಯ್ಸಳರ ಕಾಲದ ಶಾಸನವನ್ನು ಎನ್.ಎಸ್.ಎಸ್. ವಿದ್ಯಾರ್ಥಿಗಳ ಸಹಕಾರದಿಂದ ಮೇಲೆ ತೆಗೆಸಿ, ಅದೇ ಗ್ರಾಮದ ಸೂಕ್ತ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಿಸಿ, ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಅರ್ಥವತ್ತಾಗಿ ಆಚರಿಸಿ ತೋರಿಸಿಕೊಟ್ಟಿದ್ದಾರೆ.

ದಿನಾಂಕ ೨೮-೯-೨೨, ರಾಜನಕೋಳೂರು



ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾದ ನಿಂಗನಗೌಡ ದೇಸಾಯಿ ಪರಸನಹಳ್ಳಿ ಅವರು ಕೋಡೆಕಲ್‌ನ ರಾಜನಕೋಳೂರಿನ ಸರಕಾರಿ ಪ್ರೌಢಶಾಲೆಯಲ್ಲಿ ದಿನಾಂಕ ೨೮-೯-೨೨ರಂದು 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ರು.ಕು. ಭವಾನಿ ಸಂಗಡಿಗರ ಪ್ರಾರ್ಥನೆಯ ನಂತರ ಶ್ರೀ ಹುಲಗಪ್ಪ ನಾಗರಬೆಟ್ಟ ಅವರು ಸಭಿಕರನ್ನು ಸ್ವಾಗತಿಸಿದರು. ಶಿಕ್ಷಕರಾದ ನಿಂಗಪ್ಪ ಕುಳಿಗೇರಿ ಪ್ರಾಸ್ತಾವಿಕ ನುಡಿ ನುಡಿದರು. ವಿಶೇಷ ಉಪನ್ಯಾಸಕರಾಗಿ, ನಿಂಗನಗೌಡ ದೇಸಾಯಿ ಅವರು ಉಪನ್ಯಾಸ ನೀಡುತ್ತಾ, ದೇಶಕ್ಕೆ ಸ್ವತಂತ್ರ ದೊರೆತರೂ ಹೈದ್ರಾಬಾದ್ ಪ್ರದೇಶಕ್ಕೆ ಸೇರಿದ್ದ ಈ ಪ್ರದೇಶಕ್ಕೆ ಸ್ವಾತಂತ್ರ ಸಿಗದಿದ್ದಾಗ ನಿಜಾಮನ ಹಾಗೂ ರಜಾಕರರ ವಿರುದ್ಧ ಹೋರಾಟ ನಡೆಸಿದ ನಾಯಕರಾದ ವಿರುಪಾಕ್ಷಪ್ಪ ಗೌಡ ಪಾಟೀಲರು ಪ್ರಮುಖರು ಜೊತೆಗೆ ವೆಂಕನಗೌಡ ಪಾಟೀಲ, ಹಗರಟಗಿಯ ಮಹಾಂತಗೌಡ, ಕೋಡೆಕಲ್‌ನ ಸಂಗಪ್ಪ ಮಂಟೆಯವರ ಧೀರ ಸಾಹಸಗಳನ್ನು ಮಕ್ಕಳಿಗೆ ತಿಳಿಹೇಳಿದರು. ಜೊತೆಗೆ ಸ್ಥಳೀಯರು 'ಬುಡ್ಡರ ಮನೆಗಳು' ಎಂದು ಕರೆಯುವ ಬೃಹತ್ ಶಿಲಾಯುಗದ ಸಮಾಧಿಗಳ ಪ್ರಾಗೈತಿಹಾಸಿಕ ವಿಚಾರ ತಿಳಿಸಿಕೊಟ್ಟರು. ಹಾಗೂ ಐತಿಹಾಸಿಕ ದೇವಾಲಯಗಳು ಗ್ರಾಮದ ಐತಿಹಾಸಿಕ ಹಿರಿಮೆಗೆ ಸಾಕ್ಷಿಯಾಗಿವೆ ಎಂದರು. ಸಂಶೋಧಕ ಶಿವಪ್ಪ ನೀರಲಗಿಯವರು ಭಿತ್ತಿಪತ್ರ ಅನಾವರಣಗೊಳಿಸಿದರು. ಪ್ರಭಾರಿ ಮು.ಗು. ಶ್ರೀ ವಿ.ಜಿ. ಹಂಡಗಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಶಿಕ್ಷಕರಾದ ಸಂಗನಬಸಯ್ಯ ಹಿರೇಮಠ, ಪಿ.ಬಿ. ಕಂಠಿಮಠ, ತಮ್ಮಣ್ಣ ಗುಡಿಹಾಳ, ಎಲ್.ಎಂ. ಖಾಜಿ ಮತ್ತು ಶಿಕ್ಷಕಿ ಶ್ರೀಮತಿ ವಿಜಯಲಕ್ಷ್ಮಿ ಉಪಸ್ಥಿತರಿದ್ದರು. ಶಿಕ್ಷಕರಾದ ಶ್ರೀ ಎಸ್.ಎಸ್. ಮಾರನಾಳ ಕಾರ್ಯಕ್ರಮದ ನಿರೂಪಣೆ ಹಾಗೂ ಬಸವರಾಜ ಮಂಟೆ ವಂದನಾರ್ಪಣೆ ನಡೆಸಿಕೊಟ್ಟರು.


ದಿನಾಂಕ ೨೮-೯-೨೨, ಕೋಡೆಕಲ್




ಕೋಡೆಕಲ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಅಕಾದೆಮಿಯ ಸದಸ್ಯರಾದ ನಿಂಗನಗೌಡ ದೇಸಾಯಿಯವರ ನೇತೃತ್ವದಲ್ಲಿ ಏರ್ಪಡಿಸಲಾಗಿದ್ದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ಭಿತ್ತಿಪತ್ರ ಅನಾವರಣಗೊಳಿಸಿ ಇತಿಹಾಸದ ಮಹತ್ವವನ್ನು ಕುರಿತು ಹಾಗೂ ಕೋಡೆಕಲ್‌ನ ಸ್ಥಳೀಯ ಇತಿಹಾಸವನ್ನು ಕುರಿತು ಮಕ್ಕಳಿಗೆ ತಿಳಿಸಿಕೊಡಲಾಯಿತು.

ದಿನಾಂಕ ೧೦-೧೦-೨೨, ಆನೆಗೊಂದಿ

ಗಂಗಾವತಿಯ ಚಾರಣ ಬಳಗ, ಪರಿಸರ ಸೇವಾ ಟ್ರಸ್ಟ್ ಹಾಗೂ ಕಲ್ಮಠ ಮಹಿಳಾ ಕಾಲೇಜುಗಳ ಸಂಯುಕ್ತ ಆಶ್ರಯದಲ್ಲಿ ಆನೆಗೊಂದಿಯ ಚಂಚಲಕೋಟೆಯಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಖ್ಯಾತ ಹಾಸ್ಯಸಾಹಿತಿ, ಭಾಷಣಕಾರ ಬಿ.ಪ್ರಾಣೇಶ್ ಅವರು ಆಗಮಿಸಿದ್ದರು. ಭಾರತದ ಭವ್ಯಪರಂಪರೆಯನ್ನು



ಪ್ರತಿಬಿಂಬಿಸುವ ದೇವಾಲಯಗಳು, ಶಿಲ್ಪಗಳು, ನಾಣ್ಯಗಳು, ಹಸ್ತಪ್ರತಿಗಳು ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿದ್ದು, ಅವುಗಳ ರಕ್ಷಣೆ ತುಂಬಾ ಅಗತ್ಯವಾದ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟ ಅವರು ಗಂಗಾವತಿ ಪ್ರದೇಶ ನೂರಾರು ಪ್ರಾಚೀನ ಸ್ಮಾರಕಗಳ ನೆಲೆಯಾಗಿದೆ. ಇಲ್ಲಿಯ ಆನೆಗೊಂದಿ, ಹಿರೇಬೆಣಕಲ್, ಕುಮ್ಮಟದುರ್ಗ, ಕನಕಗಿರಿಗಳಲ್ಲಿ ಹಲವು ಅಪರೂಪದ ಸ್ಮಾರಕಗಳಿವೆ. ಅವುಗಳ ರಕ್ಷಣೆ ಬಗೆಗೆ ಚಾರಣ ಬಳಗ ಜನರಲ್ಲಿ ಅರಿವನ್ನು ಮೂಡಿಸುತ್ತಿರುವುದನ್ನು ಶ್ಲಾಘಿಸಿ, ಹಾರೈಸಿದರು.



ಅಕಾದೆಮಿಯ ಕಾರ್ಯಕಾರಿ ಸದಸ್ಯ ಡಾ. ಶರಣಬಸಪ್ಪ ಕೋಲ್ಕಾರ ಪ್ರಾಸ್ತಾವಿಕವಾಗಿ ಮಾತನಾಡಿ ಅಕಾದೆಮಿಯು ರಾಜ್ಯದಾದ್ಯಂತ ಪರಂಪರೆ ಉಳಿಸಿ ಕಾರ್ಯಕ್ರಮ ಹಮ್ಮಿಕೊಂಡು ಪ್ರಾಚೀನ ವಸ್ತುಗಳನ್ನು, ಸ್ಮಾರಕಗಳನ್ನು ನಾಶಪಡಿಸದಂತೆ ಹಾಗೂ ಅವುಗಳನ್ನು ಸಂರಕ್ಷಿಸಲು ಸೂಕ್ತ ಕೈಗೊಳ್ಳಲು ಜನರಲ್ಲಿ ಅರಿವನ್ನು ಮೂಡಿಸುವ ಕೆಲಸ ಮಾಡುತ್ತಿದೆ ಹಾಗೂ ಚಂಚಲ ಕೋಟೆಯ ಇತಿಹಾಸದ ಬಗ್ಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಮಂಜುನಾಥ ಗುಡ್ಲಾನೂರ ಅವರ ಸಂಪಾದಕತ್ವದ ಕಿಷ್ಕಿಂಧಾ ವಾಣಿ ಪತ್ರಿಕೆ ಹೊರತಂದ 'ಹಿರೇಬೆಣಕಲ್ ಮೋರೆರ್ ಗುಡ್ಡ' ಕುರಿತ ವಿಶೇಷ ಪುರವಣಿಯನ್ನು ಹಿರಿಯ ವಕೀಲರಾದ ಮಹಾಬಳೇಶ ಹಾಸಿನಾಳ ಅವರು ಬಿಡುಗಡೆಗೊಳಿಸಿದರು. ಚಾರಣ ಬಳಗದ ಸದಸ್ಯರು ಹಾಗೂ ಇತಿಹಾಸ ಆಸಕ್ತರಿಗೆ ಚಂಚಲ ಕೋಟೆಯ ಹಾಗೂ ಅಲ್ಲಿಯ ನಾಗನಾಥ ದೇವಾಲಯದ ವೀಕ್ಷಣೆ ಮಾಡಿಸಲಾಯಿತು. ಪ್ರಾಚೀನ ಕೆರೆ, ಪುಷ್ಕರಣಿಗಳ ಪುನರುಜ್ಜೀವನ ಯೋಜನೆ ಕೈಗೊಳ್ಳುತ್ತಿರುವ ಕಾರಟಗಿ ತಾಲೂಕಾ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಮೋಹನ್, ಚಲನಚಿತ್ರ ನಟ ಅವಿನಾಶ್, ಜಾನಪದ ಗಾಯಕ ಗಾಳಿ ದುರುಗಪ್ಪ, ಆನೆಗೊಂದಿಯ ಚರಿತ್ರೆ, ಸಂಸ್ಕೃತಿಯ ಕಾಳಜಿಯ ಸುದರ್ಶನ್‌ವರ್ಮ, ಬೈಕರ್ ಭಾರತಿ ಇವರನ್ನು ಚಾರಣ ಬಳಗದ ಸಂಘಟಕ ಡಾ. ಶಿವಕುಮಾರ ಮಾಲೀಪಾಟೀಲರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಸಂಚಾಲಕ ಮಂಜುನಾಥ ಗುಡ್ಲಾನೂರ ಅವರು ವಂದನಾರ್ಪಣೆ ನಡೆಸಿಕೊಟ್ಟರು. ಕವಿ ಶರಣಪ್ಪ ಮೇತ್ರಿ, ಟಿ. ಆಂಜನೇಯ, ಡಾ. ಬದರಿಪ್ರಸಾದ, ಮೈಲಾರಪ್ಪ ಬೂದಿಹಾಳ, ಮಹಾಲಕ್ಷ್ಮಿ ಕೇಸರಹಟ್ಟಿ ಮುಂತಾದವರು ಉಪಸ್ಥಿತರಿದ್ದರು.

ದಿನಾಂಕ ೧೨-೧೦-೨೨, ಗಂಗಾವತಿ

ಗಂಗಾವತಿಯ ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಆಚರಿಸಲಾಯಿತು. ಡಾ. ಶರಣಬಸಪ್ಪ ಕೋಲ್ಕಾರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೊಸಪೇಟೆಯ ಥಿಯಾಸಾಫಿಕಲ್ ಮಹಿಳಾ ಕಾಲೇಜಿನ ಉಪನ್ಯಾಸಕ ಮಲ್ಲಿಕಾರ್ಜುನ ಅವರು ಮಾತನಾಡುತ್ತಾ

ಪರಂಪರೆ ಎಂದರೆ ಕೇವಲ ಭೌತಿಕ ಸ್ಮಾರಕಗಳಲ್ಲ. ಅವುಗಳ ಜೊತೆಗೆ ಬದುಕಿನ ಎಲ್ಲ ಮೌಲ್ಯಗಳು ಕೂಡಾ ಪರಂಪರೆ ಎನಿಸಿಕೊಳ್ಳುತ್ತವೆ. ಚಾರಿತ್ರಿಕ ಮಹನೀಯರ ಬದುಕಿನ ಮೌಲ್ಯಗಳ ಅನುಸರಣೆ ಮಾಡಬೇಕು ಅಂದಾಗ ಮಾತ್ರ ಬದುಕು ಸುಂದರಗೊಳ್ಳಲು ಸಾಧ್ಯ. ಒಂದು ವೇಳೆ ಪರಂಪರೆಯನ್ನು ನಾವು ಮರೆತರೇ ನಮ್ಮ ಬದುಕು ದುರ್ಬಲಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಹಾಗೂ ಅಕಾದೆಮಿ ಕಾರ್ಯಕಾರಿ ಸದಸ್ಯ ಡಾ. ಶರಣಬಸಪ್ಪ ಕೋಲ್ಕಾರ ಮಾತನಾಡಿ ಪ್ರಾಚೀನ ಸ್ಮಾರಕ, ಶಾಸನ, ಶಿಲ್ಪ, ನಾಣ್ಯ, ಜಾನಪದ ಗೀತೆ, ನಂಬಿಕೆ ಆಚರಣೆಗಳು ನಮ್ಮ ಸಾಂಸ್ಕೃತಿಕ ಬದುಕಿನ ಪ್ರತೀಕಗಳು ಅವುಗಳನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲೂ ಇದೆ. ಇತಿಹಾಸ ವಿಭಾಗದ ಅಧ್ಯಾಪಕಿ ಡಾ. ಶಾರದಾ ಪಾಟೀಲ ಪ್ರಾಸ್ತವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿ.ಹೆಚ್.ಎನ್. ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಜಿ. ಬಸವರಾಜ ಅಯೋಧ್ಯ ಪರಂಪರೆ ಉಳಿಸಿ ಅಭಿಯಾನದ ಪೋಸ್ಟರ್ ಬಿಡುಗಡೆ ಮಾಡಿದರು. ಉಪನ್ಯಾಸಕರಾದ ಡಾ. ಅರ್ಚನಾ ಹಿರೇಮಠ, ಕೆ.ಎಂ. ಬಸವರಾಜ, ನಂದಿನಿ, ಸುಮಲತಾ, ಜಗದೀಶ, ವಿಜಯಲಕ್ಷ್ಮಿ, ಶಾಂತಮ್ಮ ಉಪಸ್ಥಿತರಿದ್ದರು.



ಕನ್ನಡ ಗ್ರಾಮ ಕಾಸರಗೋಡು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ

ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ.), ಕನ್ನಡ ಗ್ರಾಮ, ಕಾಸರಗೋಡು ಇದರ ಆಶ್ರಯದಲ್ಲಿ ನಿರಂತರವಾಗಿ ಪ್ರತಿ ವರ್ಷ ಏರ್ಪಡಿಸುವ "ಕಾಸರಗೋಡು ಜಿಲ್ಲಾ ಐತಿಹಾಸಿಕ ಪರಂಪರೆ ಉಳಿಸಿ ದಿನಾಚರಣೆ" ಕಾರ್ಯಕ್ರಮವನ್ನು ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ಇದರ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು (ರಿ.), ಕೇರಳ ರಾಜ್ಯ ಘಟಕ, ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿ (ರಿ.), ರಾಮನಗರ, ಕೋಟೆಕಣಿ, ಕಾಸರಗೋಡು, ಕೆ. ಪುರುಷೋತ್ತಮ ಮಾಸ್ತರ್ ಸ್ಮಾರಕ ಗ್ರಂಥಾಲಯ, ಕನ್ನಡ ಗ್ರಾಮ, ಕಾಸರಗೋಡು ಇದರ ಸಹಕಾರದಲ್ಲಿ ಕಾಸರಗೋಡು ಮಾಪುಗುರಿ – ಪಾರೆಕಟ್ಟೆಯ ಕನ್ನಡ ಗ್ರಾಮದಲ್ಲಿ ಪ್ರಸಕ್ತ ಸಾಲಿನ ಐತಿಹಾಸಿಕ ಪರಂಪರೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ನಗರಸಭೆಯ ಕೌನ್ಸಿಲರ್ ಶ್ರೀಮತಿ ಶಾರದಾ ಬಿ. ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅಧ್ಯಕ್ಷತೆ ವಹಿಸಿದ್ದರು. ನಗರಸಭೆಯ ಕೌನ್ಸಿಲರ್ ಕೆ. ವರಪ್ರಸಾದ ಕೋಟೆಕಣಿ, ಕವಿ ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಪ್ರೊ. ಎ. ಶ್ರೀನಾಥ ಕಾಸರಗೋಡು, ವಿಷ್ಣು ಕೆ. ಶ್ಯಾನುಭೋಗ್ ಕೂಡ್ಲು, ಕೆ. ನಿರಂಜನ ಕೊರಕ್ಕೋಡು, ವೆಂಕಟ್ ಭಟ್ ಎಡನೀರು, ವಿ.ಬಿ. ಕುಳಮರ್ವ ನೀರ್ಚಾಲು, ಬಿ. ಸತೀಶ ಕೂಡ್ಲು, ದಿವಾಕರ ಪಿ. ಅಶೋಕನಗರ, ಯು.ಆರ್. ಶೆಟ್ಟಿ ಮಂಗಳೂರು, ಕುಶಲ ಕುಮಾರ ಕೆ., ಹರೀಶ ಪಾರೆಕಟ್ಟೆ, ಪ್ರಜ್ಞೇಶ್ ಕಾಸರಗೋಡು, ಕಾವ್ಯಕುಶಲ, ರಾಧಾ, ಸವಿತಾ, ಕಿಶೋರ್ ಕುಮಾರ್ ಕೆ. ಕನ್ನಡ ಗ್ರಾಮ, ಕೆ. ಚಂದ್ರಶೇಖರ, ಕೆ.

ಮುರಳೀಧರ ಪಾರೆಕಟ್ಟೆ ಕಾರ್ಯಕ್ರಮದಲ್ಲಿ ಐತಿಹಾಸಿಕ ಪರಂಪರೆ ಉಳಿಸುವ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಪ್ರತಿಜ್ಞೆಯನ್ನು ದಿವಾಕರ ಪಿ. ಅಶೋಕನಗರ ಬೋಧಿಸಿದರು.

ಈ ಸಂದರ್ಭದಲ್ಲಿ ಕಾಸರಗೋಡು ಜಿಲ್ಲಾ ೬ನೇ ಚುಟುಕು ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ನಿಯುಕ್ತರಾಗಿರುವ ವೆಂಕಟ್ ಭಟ್ ಎಡನೀರು ಅವರನ್ನು ಗೌರವಿಸಲಾಯಿತು. ಕಾಸರಗೋಡು ಕರ್ನಾಟಕ ಪರಿಷತ್ತು ಅಧ್ಯಕ್ಷ ಎಸ್.ಎಲ್. ಭಾರದ್ವಾಜ್ ಬೇಕಲ್ ಅಭಿನಂದಿಸಿದರು. ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿಯ ಪ್ರಧಾನ ಸಂಚಾಲಕ ಕೆ. ಗುರುಪ್ರಸಾದ್ ಕೋಟೆಕಣಿ ಸ್ವಾಗತಿಸಿದರು, ಮಾಧ್ಯಮ ಛಾಯಾಗ್ರಾಹಕ ಪತ್ರಕರ್ತ ಶ್ರೀಕಾಂತ ಕಾಸರಗೋಡು ಧನ್ಯವಾದವಿತ್ತರು.

ಗದಗ ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆ





ಗದಗ ಹಾಗೂ ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆ ಇವುಗಳ ಸಂಯಕ್ತ ಆಶ್ರಯದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ' ಹಮ್ಮಿಕೊಳ್ಳಲಾಗಿತ್ತು. ಸರ್ಕಾರಿ ಪ.ಪೂ. ಕಾಲೇಜು ಕುರ್ತಕೋಟಿಯ ಇತಿಹಾಸ ಉಪನ್ಯಾಸಕರು ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾದ ಡಾ. ವಾಯ್.ಆರ್. ಬೇಲೇರಿ ಅವರು ದೇವಾಲಯ, ಶಾಸನಗಳು, ಅರಮನೆಗಳು, ದರ್ಗಾಗಳು, ಮುಂತಾದ ಐತಿಹಾಸಿಕ ಸ್ಮಾರಕಗಳು ಪ್ರಾಚೀನ ಕಾಲದ ಧರ್ಮ, ಸಾಹಿತ್ಯ ಕಲೆ ಮತ್ತು ಸಂಸ್ಕೃತಿಯನ್ನು ತಿಳಿಸಿಕೊಡುತ್ತವೆ. ಅವುಗಳ ಸಂರಕ್ಷಣೆಗೆ ಪಣ ತೊಡಬೇಕೆಂದು ಹೇಳಿದರು.

ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎಸ್.ಜಿ. ಕೋಲ್ಕಿ ಐತಿಹಾಸಿಕ ಪರಂಪರೆ ಸಂರಕ್ಷಣೆ ಜಾಗೃತಿ ಕುರಿತಾದ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಅಸಂಖ್ಯಾತ ದೇವಾಲಯ, ಶಿಲ್ಪಕಲೆ, ಶಾಸನಗಳು, ಸಂರಕ್ಷಣೆ ಇಲ್ಲದೇ ಖಾಸಗಿ ವ್ಯಕ್ತಿಗಳ ಉಪಯೋಗ ಮತ್ತು ನಿರ್ಲಕ್ಷ್ಯಕ್ಕೆ ಒಳಪಟ್ಟಿವೆ. ಇಂತಹ ಸ್ಮಾರಕಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ. ಕೆ.ಎಂ. ಗರಗ ಮಾತನಾಡಿ ಕರ್ನಾಟಕ ಇತಿಹಾಸ ಅಕಾದೆಮಿ ರಾಜ್ಯದಾದ್ಯಂತ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಮೂಲಕ ಸ್ಮಾರಕಗಳ ಸಂರಕ್ಷಣೆ, ಜಾಗೃತಿ ಕಾರ್ಯ ಕೈಗೊಂಡಿದ್ದು, ವಿಶೇಷವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಹೇಳಿದರು.

ವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಶಿಕ್ಷಕರಾದ ಕೆ.ಆಯ್. ಪಾಟೀಲ ಅವರು ಸ್ವಾಗತಿಸಿದರು. ಕರ್ನಾಟಕ ಇತಿಹಾಸ ಅಕಾದೆಮಿಯ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಪ್ರೊ. ಶಕುಂತಲಾ ಸಿಂಧೂರ ಐತಿಹಾಸಿಕ ಪರಂಪರೆ ಉಳಿಸಿ ಆಚರಣೆಯ ಮಹತ್ವ ತಿಳಿಸಿ ಪ್ರಾಸ್ತಾವಿಕ ಮಾತನಾಡಿದರು. ಆಯ್.ಎಸ್. ಗೌಡರ ಅವರು ನಿರೂಪಣೆ ಹಾಗೂ ವಂದನಾರ್ಪಣೆ ನಡೆಸಿಕೊಟ್ಟರು. ಇತಿಹಾಸ ಅಕಾದೆಮಿಯ ಸದಸ್ಯರಾದ ಡಾ. ದತ್ತಪ್ರಸನ್ನ ಪಾಟೀಲ ಹಾಗೂ ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆಯ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬಳ್ಳಾರಿ ಬಸವೇಶ್ವರ ಪ್ರೌಢಶಾಲೆ





ಕರ್ನಾಟಕ ಇತಿಹಾಸ ಅಕಾದೆಮಿ ಬಳ್ಳಾರಿ ಜಿಲ್ಲಾ ಘಟಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಬಳ್ಳಾರಿ ತಾಲೂಕಿನ ಸಂಗನಕಲ್ಲು ಗ್ರಾಮದ ಜೈಭೀಮ್ ವಿದ್ಯಾಸಂಸ್ಥೆಯ ಬಸವೇಶ್ವರ ಪ್ರೌಢಶಾಲೆಯಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಅಕಾದೆಮಿಯ ಸದಸ್ಯರೂ ಹಾಗೂ ಜಿಲ್ಲಾಘಟಕದ ಅಧ್ಯಕ್ಷರೂ ಆದ ಟಿ.ಎಚ್.ಎಮ್. ಬಸವರಾಜು ಅವರು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿಕೊಟ್ಟು, ಶಾಸನಗಳಲ್ಲಿ ಉಲ್ಲೇಖವಾಗಿರುವ, ಹಲವಾರು ಮಹತ್ವದ ಸಂಗತಿಗಳನ್ನು ಮಕ್ಕಳಿಗೆ ತಿಳಿಸಿ ಹೇಳಿದರು. ಜೈಭೀಮ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮುಂಡರಗಿ ನಾಗರಾಜ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಳ್ಳಾರಿ ಜಿಲ್ಲೆಯ ಶಿಲಾಯುಗಕ್ಕೆ ಸಂಬಂಧಿಸಿದ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಅವುಗಳನ್ನು ಕುರಿತಂತೆ ಕೆ.ಲಿಂಗಣ್ಣ ಅವರು ಮಾತನಾಡಿದರು. ಎ. ಎರಿಸ್ವಾಮಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಿದ್ದು ಹಳ್ಳೇಗೌಡ, ಶಾಲೆಯ ಮುಖ್ಯೋಪಾಧ್ಯಾಯರಾದ ಜಿ. ವೆಂಕಟೇಶ್, ವಕೀಲ ಹುಸೇನ್ ಬಾಷಾ, ಚಂದ್ರಶೇಖರ ಆಚಾರ್, ಶಾಲೆಯ ಅಧ್ಯಾಪಕವರ್ಗದವರು ಉಪಸ್ಥಿತರಿದ್ದರು.

ಅಕಾದೆಮಿಯ ಕನ್ನಡ ಲಿಪಿ ವಿಕಾಸ ಕಲಿಕಾ ತರಗತಿ



ಕಳೆದ ಸುಮಾರು ವರ್ಷಗಳಿಂದ ಲಿಪಿ ಕಲಿಕಾ ಆಸಕ್ತರು online ಮೂಲಕ ಲಿಪಿ ಕಲಿಸಿ ಕೊಡಲು ಅಕಾದೆಮಿಯಲ್ಲಿ ಬೇಡಿಕೆ ಇಡುತ್ತಿದ್ದರು. ಇವರ ಬೇಡಿಕೆಗೆ ಸ್ಪಂದಿಸಿದ ಇತಿಹಾಸ ಅಕಾದೆಮಿಯ ಅಧ್ಯಕ್ಷರು ಲಿಪಿ ವಿಕಾಸ ತರಗತಿಯನ್ನು online ಮೂಲಕ ಹಮ್ಮಿಕೊಳ್ಳಲು ಯೋಜನೆ ರೂಪಿಸಿದರು. ಉಪನ್ಯಾಸಕರಾದ ಪ್ರೊ. ದೇವರಾಜಸ್ವಾಮಿ, ಡಾ. ಸ್ಮಿತಾ ಅವರೊಂದಿಗೆ ಸಮಾಲೋಚನೆ ನಡೆಸಿ, ಪಠ್ಯಕ್ರಮವನ್ನು ಸಿದ್ಧಪಡಿಸಿ, ವಾರದಲ್ಲಿ ಎರಡು ದಿನ online ಮೂಲಕ ಅಶೋಕನ ಬ್ರಾಹ್ಮಿಲಿಪಿ, ಶಾತವಾಹನರ ಕಾಲದ ಲಿಪಿ, ನಂತರದಲ್ಲಿ ಕ್ರಮವಾಗಿ ಕದಂಬ, ಬದಾಮಿ ಚಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರ ಹಾಗೂ ಮೈಸೂರು ಅರಸರ ಕಾಲದಲ್ಲಿ ಬೆಳೆದು ಬಂದ ಕನ್ನಡ ಲಿಪಿಯನ್ನು ಬೋಧಿಸಲಾಯಿತು. ಲಿಪಿಯೊಂದಿಗೆ ಶಾಸನ ಪಠ್ಯವನ್ನು ಡಾ. ಕೆ.ಆರ್. ಗಣೇಶ್ ಮತ್ತು ಡಾ. ಸಂಧ್ಯಾ ಅವರು ನಡೆಸಿಕೊಟ್ಟರು.

ಜುಲೈ ೧೬, ೨೦೨೧ ರಂದು ಆರಂಭವಾದ ಮೊದಲನೆಯ ಃಚಿಣಛಿ ಹಾಗೂ ಜನವರಿ ೨೧, ೨೦೨೨ ಎರಡನೆಯ Batch ಕಲಿಕೆ ಮುಕ್ತಾಯವಾಗಿದೆ. ಇದೀಗ ಆಗಸ್ಟ್ ೧೫, ೨೦೨೨ರಂದು ಆರಂಭವಾದ ಮೂರನೆಯ ತಂಡದ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ತರಗತಿಯ ಠಿಟಿಟುಟಿಜ ಪ್ರಸಾರದ ಹಾಗೂ ಡಿಜಭಿಂಡಿಜುಟಿಂ ಮತ್ತಿತರ ತಾಂತ್ರಿಕ ಸಂಪೂರ್ಣ ಜವಾಬ್ದಾರಿಯನ್ನು ಶ್ರೀಮತಿ ಸೀತಾಲಕ್ಷ್ಮಿ ರಾವ್ ಅವರು ವಹಿಸಿಕೊಂಡು ನಡೆಸುತ್ತಿದ್ದಾರೆ.

ವಾರ್ಷಿಕ ಸಮ್ಮೇಳನ (೨೦೨೧) – ದಿನಾಂಕ ೧೯-೦೨-೨೦೨೨

ಕಳೆದ ಎರಡು ವರ್ಷಗಳಲ್ಲಿ ಕರೋನ ಅಂಟುಜಾಡ್ಯದ ಭೀತಿ ಹಾಗೂ ಅದಕ್ಕೆ ಸಂಬಂಧಿಸಿದ ಸರ್ಕಾರದ ಕಾನೂನು ಸೂಚನೆಗಳಿಗೆ ಅನುಗುಣವಾಗಿ ವಾರ್ಷಿಕ ಸಮ್ಮೇಳನಗಳಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಯಿತು. ಸಮ್ಮೇಳನದ ಬಹು ಮುಖ್ಯ ಕಾರ್ಯಕ್ರಮವಾದ ಸದಸ್ಯರ ಸಂಶೋಧನಾ ಪತ್ರಿಕಾ ಮಂಡನೆಯನ್ನು Online ಮುಖಾಂತರ ನಡೆಸಲಾಯಿತು. ದಿನಾಂಕ ೧೯-೨-೨೦೨೨ ರಂದು ಬಿ.ಎಂ.ಶ್ರೀ ಪ್ರತಿಷ್ಠಾನದ ಕಲಾಭವನದಲ್ಲಿ ೩೬ನೆಯ ವಾರ್ಷಿಕ ಸಮ್ಮೇಳನದ ಸಂಶೋಧನಾ ಪ್ರಬಂಧಗಳ ಮಂಡನೆಗೆ ಚಾಲನೆ ನೀಡಲು ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ ೧೦ ಗಂಟೆಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಶ್ರೀ ಸಿ.ಬಿ. ಪಾಟೀಲ್ ಅವರು ಉದ್ಘಾಟನೆಯನ್ನು ನೆರವೇರಿಸಿದರು. ಡಾ. ಜೆಂ.ಶಾ. ಶಾಮಲಾ ರತ್ನಕುಮಾರಿ ಅವರು ವಾರ್ಷಿಕ ಸಂಚಿಕೆ 'ಇತಿಹಾಸ ದರ್ಶನ' ಸಂಪುಟ ೩೬ವನ್ನು ಬಿಡುಗಡೆ

ಮಾಡಿದರು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು, ಮೂರು ದಿನಗಳು ನಡೆಯುವ ಪ್ರಬಂಧ ಮಂಡನೆಗೆ ಚಾಲನೆ ನೀಡಿದರು. ದಿನಾಂಕ ೧೯,೨೦,೨೧ ಫೆಬ್ರವರಿ ೨೦೨೨ ಮೂರು ದಿನಗಳಂದು ನಡೆದ ಈ online ಪ್ರಬಂಧ ಮಂಡನಾ ಕಾರ್ಯಕ್ರಮದಲ್ಲಿ ಅಕಾದೆಮಿಯ ಸದಸ್ಯರ ಸುಮಾರು ೧೨೦ಕ್ಕೂ ಹೆಚ್ಚು ಪ್ರಬಂಧಗಳು ಒಟ್ಟು ೧೫ ಗೋಷ್ಠಿಗಳಲ್ಲಿ ಮಂಡಿತವಾಗಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಪ್ರಶಸ್ತಿ ಪ್ರದಾನ ಸಮಾರಂಭ (೨೦೨೦-೨೦೨೧), ದಿನಾಂಕ ೧೫-೪-೨೦೨೨

ಇತಿಹಾಸ ಅಕಾದೆಮಿಯು ಪ್ರತಿ ವರ್ಷ ವಾರ್ಷಿಕ ಸಮ್ಮೇಳನದಲ್ಲಿ ಕರ್ನಾಟಕದ ಇತಿಹಾಸ, ಸಂಸ್ಕೃತಿ, ಪುರಾತತ್ವಗಳ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ವಾಂಸರನ್ನು ಗುರುತಿಸಿ, ಸನ್ಮಾನ ಮಾಡಿ ಪ್ರಶಸ್ತಿಯನ್ನು ಪ್ರದಾನ ಮಾಡುವ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ೩೪ ಹಾಗೂ ೩೫ನೆಯ ಸಾಲಿನ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ಕರೋನಾ ಅಂಟುಜಾಡ್ಯದ ಕಾರಣದಿಂದ ಬಹಿರಂಗವಾಗಿ ಸಮ್ಮೇಳನ ನಡೆಸಲು ಅವಕಾಶವಿರದ ಕಾರಣ, ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಗಿರಲಿಲ್ಲ. ಕರೋನ ಕಂಟಕ ಕಳೆದು ಸಾಮಾಜಿಕ ಕಾರ್ಯಕಲಾಪಗಳು ಯಥಾಸ್ಥಿತಿಗೆ ಮರಳಿದ ಸಂದರ್ಭದಲ್ಲಿ ಈ ಎರಡೂ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ ೧೫-೪-೨೦೨೨ರಂದು ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಆರ್. ಗೋಪಾಲ್, ನಿರ್ದೇಶಕರು, ಕರ್ನಾಟಕರಾಜ್ಯ ಪ್ರಾಚ್ಯವಸ್ತು ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇವರು ನಡೆಸಿಕೊಟ್ಟರು. ಡಾ. ಕೆ.ಆರ್. ಗಣೇಶ್ ಅವರು ಇತಿಹಾಸ ದರ್ಶನ ಸಂಚಿಕೆ ೩೬ರನ್ನು ಲೋಕಾರ್ಪಣೆ ಮಾಡಿದರು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಂಸ್ಕೃತಿ ಚಿಂತಕರೂ, ಇತಿಹಾಸಕಾರರೂ ಆದ ಡಾ. ಗುರುಮೂರ್ತಿ ಪೆಂಡಕೂರು ಅವರು ಹಾಗೂ ಮುಖ್ಯ ಅತಿಥಿಗಳಾಗಿ ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ವಿ. ನಾಗರಾಜ್ ಅವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿದರು.

ಪ್ರದಾನ ಮಾಡಲಾದ ಪ್ರಶಸ್ತಿಗಳು

೧. ಇತಿಹಾಸ ಸಂಸ್ಕೃತಿ ಶ್ರೀ ಪ್ರಶಸ್ತಿ - ಡಾ. ರಾಜಾರಾಮ ಹೆಗಡೆ (೨೦೨೦), ಡಾ. ಪಿ.ವಿ. ಕೃಷ್ಣಮೂರ್ತಿ (೨೦೨೧)
೨. ಡಾ. ಬಾ.ರಾ. ಗೋಪಾಲ ಶಾಸನ ಪ್ರಶಸ್ತಿ - ಡಾ. ಜಿ.ಎನ್. ಉಪಾಧ್ಯ (೨೦೨೦), ಡಾ. ಕೃಷ್ಣವೇಣಿ (೨೦೨೧)
೩. ಸಂಶೋಧನಶ್ರೀ ಪ್ರಶಸ್ತಿ - ಡಾ. ಕೆ. ರವೀಂದ್ರನಾಥ (೨೦೨೦), ಡಾ. ಮೀನಾಕ್ಷಿ ಎಂ.ಎಂ. (೨೦೦೧)
೪. ನಾಯಕಶ್ರೀ ಪ್ರಶಸ್ತಿ - ಡಾ. ಮೀರಾಸಾಬಿಹಳ್ಳಿ ಶಿವಣ್ಣ (೨೦೨೦), ಡಾ. ಅಮರೇಶ ಯತಗಲ್ (೨೦೨೧)
೫. ನೊಳಂಬಶ್ರೀ ಪ್ರಶಸ್ತಿ - ಡಾ. ಎಚ್.ಎಸ್. ಗೋವರ್ಧನ (೨೦೨೦), ಡಾ. ನಂದೀಶ್ವರ ಎನ್. (೨೦೨೧)
೬. ಡಾ. ಶ್ರೀನಿವಾಸ ಹಾವನೂರ ಸ್ಮರಣಾರ್ಥ ಪ್ರಶಸ್ತಿ-ಡಾ. ಕೂ.ಸ. ಅಪರ್ಣ (೨೦೨೦), ಡಾ. ಎಸ್.ಕೆ. ಅರುಣಿ (೨೦೨೧)
೭ ಶ್ರೀಮತಿ ಸುಮಂಗಲ ಪಾಟೀಲ್ ಪ್ರಶಸ್ತಿ - ಡಾ. ಎಚ್.ಎಸ್. ಉಷಾರಾಣಿ (೨೦೨೦), ಡಾ. ವಿ. ಶೋಭಾ (೨೦೨೧)
೮. ಸೂರ್ಯಕೀರ್ತಿ ಪ್ರಶಸ್ತಿ - ಶ್ರೀ ಎಸ್. ರಾಜೇಂದ್ರಪ್ಪ (೨೦೦೦), ಶ್ರೀ ಎಂ. ನಿತ್ಯಾನಂದ ಪೈ (೨೦೨೧)
೯. ಡಾ. ಪ್ರತಿಭಾ ಚೆಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿ - ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಗುಲ್ಬರ್ಗ (೨೦೦೧)
೧೦. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್ - ಶ್ರೀ ರೇಣುಕಸ್ವಾಮಿ ಒಡೆಯರ್ ಬಿ.ಇ. ಕನ್ನಡ ವಿ.ವಿ. ಹಂಪಿ (೨೦೨೦)
೧೧. ಹುಲ್ಲೂರು ಶ್ರೀನಿವಾಸ ಜೋಯಿಸ್ ಸ್ಮರಣ ಪ್ರಶಸ್ತಿ
ಡಾ. ಎಸ್. ಗುರುಮೂರ್ತಿ (೨೦೨೦) ಡಾ. ಗಂಗಾಂಬಿಕೆ ಎಸ್. (೨೦೨೧)

ಇತಿಹಾಸ ಅಕಾದೆಮಿಯ ೩೫ನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರ ಪದವಿಯ ಗೌರವಕ್ಕೆ ಪಾತ್ರರಾದ ಡಾ. ಗುರುಮೂರ್ತಿ ಪೆಂಡಕೂರು, ಕನ್ನಡ-ತೆಲುಗು ದ್ವಿಭಾಷಾ ಪಂಡಿತರು, ಇವರ ಕಿರುಪರಿಚಯ ಸಭೆಗೆ ಮಾಡಿಕೊಡಲಾಯಿತು. ಸನ್ಮಾನ ಗೌರವವನ್ನು ಸ್ವೀಕರಿಸಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಸಂಶೋಧನೆಯಾದ ಹಲವಾರು ವಿಷಯಗಳ ಅಧ್ಯಯನ ಮತ್ತು ಪುನರ್ ಅಧ್ಯಯನಗಳ ಬಗ್ಗೆ ತಮ್ಮ ಭಾಷಣದಲ್ಲಿ ಬೆಳಕು ಚೆಲ್ಲಿದರು. ೩೫ನೆಯ ವಾರ್ಷಿಕ ಸಮ್ಮೇಳನ ಸರ್ವಾಧ್ಯಕ್ಷರನ್ನಾಗಿ ಮಾಡಿದ ಇತಿಹಾಸ ಅಕಾದೆಮಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು. ಕಾರ್ಯಕ್ರಮವನ್ನು ಡಾ. ಸ್ಮಿತಾ ರೆಡ್ಡಿ ಅವರು ನಿರ್ವಹಿಸಿದರು.

ಅಕಾದೆಮಿಯ ಸದಸ್ಯರುಗಳು ಹಿಂದಿನ ಎರಡು ಶೈಕ್ಷಣಿಕ ಸಾಲಿನಲ್ಲಿ ಪಿಎಚ್.ಡಿ./ಡಿ.ಲಿಟ್. ಪದವಿ ಪಡೆದು ಗೌರವಕ್ಕೆ ಪಾತ್ರರಾದ ಸದಸ್ಯಗಣ್ಯರಿಗೆ, ಆಗಮಿಸಿದ ಗಣ್ಯ ಅತಿಥಿಗಳು ಸನ್ಮಾನಿಸಿದರು. ಸನ್ಮಾನಕ್ಕೆ ಪಾತ್ರರಾದ ಪ್ರತಿ ಅಭ್ಯರ್ಥಿಗೂ ತಲಾ ರೂ.೫೦೦/–ವನ್ನು ನೀಡಿ ಪ್ರಶಸ್ತಿ ಫಲಕದೊಂದಿಗೆ ಗೌರವಿಸಲಾಯಿತು. ಇದಕ್ಕಾಗಿ ತುಮಕೂರಿನ ಶ್ರೀ ರಾಜನ್ ಅವರು ಅಕಾದೆಮಿಯ ಮೇಲಿನ ಪ್ರೀತಿಯಿಂದ ಅಕಾದೆಮಿಯಲ್ಲಿ ಮುದುವಟ್ಟನ್ನು ಸ್ಥಾಪಿಸಿರುವುದನ್ನು ಶ್ಲಾಘಿಸಬಹುದಾಗಿದೆ.

ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಅತಿಥಿಗಳಿಗೆ ಹಾಗೂ ಎಲ್ಲರಿಗೂ ಡಾ. ಕೆ. ರವೀಂದ್ರನಾಥ್, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರು ವಂದನಾರ್ಪಣೆ ಮಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವೆಬ್‌ಸೈಟ್: ಅಕಾದೆಮಿಯ ವೆಬ್‌ಸೈಟ್ ನಿರ್ವಹಣೆಯನ್ನು ಶ್ರೀಮತಿ ಸೀತಾಲಕ್ಷ್ಮೀ ರಾವ್ ಅವರು ನಿರ್ವಹಿಸುತ್ತಿದ್ದಾರೆ. ಕಾರಣ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಷಯ ತಲುಪಿಸುವ ಸಲುವಾಗಿ ವಿಶೇಷ ವಿನ್ಯಾಸದಲ್ಲಿ ರೂಪಿಸಿದೆ. ಇತಿಹಾಸ ದರ್ಶನದ ಈವರೆಗೆ ೩೪ ಸಂಪುಟಗಳ ಎಲ್ಲಾ ಲೇಖನಗಳನ್ನು ವೆಬ್‌ಸೈಟ್‌ನಲ್ಲಿ ಹಾಕಿದೆ. ಹೆಸರು, ಊರು, ಹಾಗೂ ವಿಷಯಾಧಾರಿತವಾಗಿ ಹುಡುಕಬಹುದಾಗಿದೆ. ಹಲವಾರು ವಿಷಯ, ಛಾಯಾಚಿತ್ರದಿಂದ ಒಳಗೊಂಡಿದೆ. ಸಂಸ್ಕೃತಿ ಸಂಶೋಧಕರಿಗೆ ಆಕರಗಳು ಪ್ರಮುಖವಾಗಿ ದೊರೆಯುತ್ತಿದ್ದು, ವಿದ್ವಾಂಸರಿಂದ ಪ್ರಶಂಸೆಗೆ ಪಾತ್ರವಾಗಿದೆ.

ವೆಬ್‌ಸೈಟ್‌ನ್ನು ಬದಲಾವಣೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲುಪಿಸುವ ಹೆಚ್ಚಿನ ಯೋಜನೆಯ ಕೆಲಸಗಳು ನಡೆಯುತ್ತಿದೆ. ಈ ವೆಬ್‌ಸೈಟ್‌ಗಾಗಿ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯು ಅಕಾದೆಮಿಯಲ್ಲಿ ರೂ.೧,೧೦,೦೦೦/– ಗಳ ದತ್ತಿಯನ್ನು ಇಟ್ಟಿದೆ. ಇದರಿಂದ ಬರುವ ಬಡ್ಡಿಯಿಂದ ವೆಬ್‌ಸೈಟ್ ನಿರ್ವಹಣೆ ಮಾಡಲಾಗುತ್ತಿದೆ.

ಪಿಎಚ್.ಡಿ. ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ.ಸಂ.	ಹೆಸರು	ವಿಷಯ	ಮಾರ್ಗದರ್ಶಕರು / ವಿಶ್ವವಿದ್ಯಾಲಯ	ವರ್ಷ
೧	ವಿಜಯಶಂಕರ ಭರಮಪ್ಪ	ಡಿ.ಎಲ್. ನರಸಿಂಹಾಚಾರ್ ಅವರ ಸಮಗ್ರ ಸಾಹಿತ್ಯ	ಡಾ. ಎಸ್.ಎಸ್. ಅಂಗಡಿ ಕನ್ನಡ ವಿಶ್ವವಿದ್ಯಾಲಯ	೨೦೧೮
೨	ದೇವರಾಜ್ ಎಸ್.ಎಂ.	ಮಧ್ಯಕಾಲೀನ ಕರ್ನಾಟಕದ ಗೋಸಾಸಗಳು ಒಂದು ಸಮಗ್ರ ಅಧ್ಯಯನ (ರಾಷ್ಟ್ರಕೂಟರಿಂದ ಹೊಯ್ಸಳ ಕಾಲದವರೆಗೆ)	ಡಾ. ಕೆಳದಿ ವೆಂಕಟೇಶ್ ಜೋಯಿಸ್ ಕುವೆಂಪು ವಿಶ್ವವಿದ್ಯಾಲಯ	೨೦೧೯
೩	ರಾಜಾರಾಮ್ ಜಿ.ಸಿ.	ಪರಂಪರೆ ಪ್ರವಾಸೋದ್ಯಮದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ಪಾತ್ರ (ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಇಲಾಖೆಯ ವಸ್ತುಸಂಗ್ರಹಾಲಯಗಳ ಅಧ್ಯಯನ)	ಡಾ. ಕೆಳದಿ ವೆಂಕಟೇಶ್ ಜೋಯಿಸ್ ಕುವೆಂಪು ವಿಶ್ವವಿದ್ಯಾಲಯ	೨೦೧೯
೪	ನೆಲ್ಕುದ್ರಿ ಸದಾನಂದಪ್ಪ	ಉಚ್ಚಂಗಿ ಪಾಂಡ್ಯರು: ಇತಿಹಾಸ ಮತ್ತು ಸಂಸ್ಕೃತಿ	ಡಾ. ಎಸ್.ವೈ. ಸೋಮಶೇಖರ್ ಕನ್ನಡ ವಿಶ್ವವಿದ್ಯಾಲಯ	೨೦೧೯
೫	ಮಮತ ರಾಣಿ	ಅವಿಭಜಿತ ಬೆಂಗಳೂರು ಜಿಲ್ಲೆಯ ವೀರಭದ್ರ ಆರಾಧನೆ: ಒಂದು ಅಧ್ಯಯನ	ಡಾ. ಜಯಲಲಿತ ದ್ರಾವಿಡ ವಿಶ್ವವಿದ್ಯಾಲಯ	೨೦೧೯
೬	ಮಂಜುಳ ಎ.ಸಿ.	ಮಹಿಳಾ ಚಿಂತನಾ ನೆಲೆಗಳಲ್ಲಿ ಎಂ.ಆರ್. ಲಕ್ಷ್ಮಮ್ಮ	ಡಾ. ಎಸ್. ಶಿವರಾಮು ಕನ್ನಡ ವಿಶ್ವವಿದ್ಯಾಲಯ	೨೦೨೦
೭	ಸ್ಮಿತಾ ಡಿ.	ಜಯರೇಖೆಗಳು: ಸಾಂಸ್ಕೃತಿಕ ಸಂಕಥನ	ಡಾ. ಕಲವೀರ ಮನ್ವಾಚಾರ್ ಕನ್ನಡ ವಿಶ್ವವಿದ್ಯಾಲಯ	೨೦೨೦
೮	ಶಶಿಕಾಂತ ಅಮಲಪ್ಪ ಬಿಲ್ಲವ	ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಪ್ರವಾಸಿ ತಾಣಗಳು: ಒಂದು ಐತಿಹಾಸಿಕ ಅಧ್ಯಯನ	ಡಾ. ಶಂಭುಲಿಂಗಪ್ಪ ಎಸ್. ವಾಣಿ ಗುಲ್ಬರ್ಗ ವಿಶ್ವವಿದ್ಯಾಲಯ	೨೦೨೦
೯	ಹೊನ್ನೂರಸ್ವಾಮಿ ಹೆಚ್.	ದಾವಣಗೆರೆ ಜಿಲ್ಲೆಯ ಸ್ಮಾರಕ ಶಿಲ್ಪಗಳು	ಡಾ. ರಮೇಶ ನಾಯಕ ಕನ್ನಡ ವಿಶ್ವವಿದ್ಯಾಲಯ	೨೦೨೦
೧೦	ಸುಪ್ರೀತ ಕೆ.ಎನ್.	ಕಳಸ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ	ಡಾ. ಸಿ. ಮಹದೇವ ಕನ್ನಡ ವಿಶ್ವವಿದ್ಯಾಲಯ	೨೦೨೦

೧೧	ಸೀತಾರಾಮ ಪಿ.	ದಕ್ಷಿಣ ಕನ್ನಡದಲ್ಲಿ ರಾಜಕೀಯ ಪತ್ರಿಕೋದ್ಯಮ: ಆಯಾಮಗಳು ಮತ್ತು ಪ್ರಭಾವ (೧೮೪೦–೧೯೫೬) – ಒಂದು ಅಧ್ಯಯನ	ಪ್ರೊ.ಎಂ. ಲೋಕೇಶ್ ಕೆ.ಎಂ. ಮಂಗಳೂರು ವಿಶ್ವವಿದ್ಯಾಲಯ	೨೦೨೦
೧೨	ನಿರ್ಮಲ ಎಂ.	ವಿಜಯನಗರೋತ್ತರ ಕಾಲದ ಆರ್ಥಿಕತೆ ಮತ್ತು ವಾಣಿಜ್ಯ: ಚಾರಿತ್ರಿಕ ಅಧ್ಯಯನ (ಕ್ರಿ.ಶ.೧೫೬೫–೧೮೦೦)	ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಕನ್ನಡ ವಿಶ್ವವಿದ್ಯಾಲಯ	೨೦೨೦
೧೩	ಶಿವರಾಜ ಜಿ.ಓ.	ಚಿತ್ರದುರ್ಗ ನಾಯಕರ ಆಳ್ವಿಕೆಯಲ್ಲಿ ಕೃಷಿ ಹಾಗೂ ವ್ಯಾಪಾರ ಸಂಬಂಧಗಳು	ಡಾ. ಕೆ. ಮೋಹನ್ ಕೃಷ್ಣ ರೈ ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೨೦
೧೪	ಎಚ್.ಎಸ್. ಗೋವರ್ಧನ	ಕರ್ನಾಟಕ ಶಾಸನಗಳಲ್ಲಿ ವಾಗ್ವಾದಗಳು: ವಿಮರ್ಶಾತ್ಮಕ ಅಧ್ಯಯನ	ಡಾ. ಡಿ.ವಿ. ಪರಮಶಿವಮೂರ್ತಿ ತುಮಕೂರು ವಿಶ್ವವಿದ್ಯಾಲಯ	೨೦೨೧
೧೫	ಗಂಗಾಂಬಿಕೆ ಎಸ್.	ಸ್ಥಳೀಯ ಸಾಹಿತ್ಯ–ಸಂಸ್ಕೃತಿ ಸಂವರ್ಧನೆ ಮತ್ತು ಹೊಯ್ಸಳ ಮಹಾಮಂಡಳೇಶ್ವರರು	ಡಾ. ಡಿ.ವಿ. ಪರಮಶಿವಮೂರ್ತಿ ತುಮಕೂರು ವಿಶ್ವವಿದ್ಯಾಲಯ	೨೦೨೧
೧೬	ಪ್ರಸನ್ನಕುಮಾರ್ಎಸ್.ಆರ್.	ಗುಬ್ಬಿ ತಾಲೂಕಿನ ಕಲೆ ಮತ್ತು ವಾಸ್ತುಶಿಲ್ಪ ಅಧ್ಯಯನ	ಡಾ. ಪ್ರಿಯಾ ಠಾಕೂರ್ ತುಮಕೂರು ವಿಶ್ವವಿದ್ಯಾಲಯ	೨೦೨೧
೧೭	ಮಹೇಶ ಬ. ಅಂಗಡಿ	ಬೆಳಗಾವಿ ಜಿಲ್ಲೆಯ ಸಂಸ್ಥಾನಗಳ ಸಾಂಸ್ಕೃತಿಕ ಅಧ್ಯಯನ	ಡಾ. ಎಚ್.ಐ. ತಿಮ್ಮಾಪುರ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ	೨೦೨೧
೧೮	ರಂಜಿತಾ ಆರ್.	ಕನ್ನಡ ಶಾಸನಗಳಲ್ಲಿ ಕೃಷಿ (ಕ್ರಿ.ಪೂ.೩ನೇ ಶತಮಾನದಿಂದ–೧೮ನೇ ಶತಮಾನದವರೆಗೆ)	ಡಾ. ಕಲವೀರ ಮನ್ವಾಚಾರ್ ಕನ್ನಡ ವಿಶ್ವವಿದ್ಯಾಲಯ	೨೦೨೧
೧೯	ಯುವರಾಜ್ ಆರ್.	ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ	ಡಾ. ಬಸವರಾಜ ಕಲ್ಗುಡಿ ಬೆಂಗಳೂರು ವಿಶ್ವವಿದ್ಯಾಲಯ	೨೦೨೧
೨೦	ಉದಯಕುಮಾರ್ ಎಸ್.	ಹೊನ್ನಾಳಿ ತಾಲೂಕಿನ ಸ್ಥಳನಾಮಗಳ ಭಾಷಾ ವೈಜ್ಞಾನಿಕ ಅಧ್ಯಯನ	ಪ್ರೊ. ಡಿ.ಬಿ. ನಾಯಕ ಕರ್ನಾಟಕ–ಜಾನಪದ ವಿಶ್ವವಿದ್ಯಾಲಯ	೨೦೨೧
೨೧	ಪಾರ್ವತಮ್ಮ ಎಂ.	ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಮಹಿಳೆಯರು ಒಂದು ಅಧ್ಯಯನ (ಕ್ರಿ.ಶ.೫ನೇ ಶತಮಾನ–೧೮ನೇ ಶತಮಾನ)	ಡಾ. ರಾಜಾರಾಮ ಹೆಗಡೆ ಕುವೆಂಪು ವಿಶ್ವವಿದ್ಯಾಲಯ	೨೦೨೧
೨೨	ತಿಪ್ಪೇಶ ಎಚ್.ಎಂ.	ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಪರಿಸರದ ಬೃಹತ್ ಶಿಲಾಯುಗದ ನೆಲೆಗಳು	ಡಾ. ರಮೇಶ್ ನಾಯಕ ಕನ್ನಡ ವಿಶ್ವವಿದ್ಯಾಲಯ	೨೦೨೧
೨೩	ಮೊರಬ ರಮೇಶ ಮಾರುತಿ	ಬಾಗಲಕೋಟೆ ಜಿಲ್ಲೆಯ ಪ್ರವಾಸೋದ್ಯಮ	ಡಾ. ಎಸ್.ಕೆ. ಮೇಲಕಾರ ಕನ್ನಡ ವಿಶ್ವವಿದ್ಯಾಲಯ	೨೦೨೧ ೨೦೨೧
೨೪	ಆರ್. ಶೇಜೇಶ್ವರ	ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೋಗೋಳ: ಒಂದು ಅಧ್ಯಯನ	ಡಾ. ಹನುಮನಾಯಕ ಮಂಗಳೂರು ವಿಶ್ವವಿದ್ಯಾಲಯ	
೨೫	ವೇದಾವತಿ ಎಸ್.	ಬಾದಾಮಿ ಮತ್ತು ಹಂಪೆ: ಏಳು–ಬೀಳು	ಪ್ರೊ. ಮಹಾದೇವಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ	೨೦೨೧
೨೬	ಓಜರಾಬಿ ಶರೀಫಸಾಬ ನದಾಫ	ಹುನುಗುಂದ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು	ಡಾ. ಅಮರೇಶ್ ಯತಗಲ್, ಕನ್ನಡ ವಿಶ್ವವಿದ್ಯಾಲಯ	೨೦೨೧
೨೭	ಮಂಜುನಾಥ ಕೆ.	ಚಿತ್ರದುರ್ಗ ಕೋಟೆ ಪರಿಸರದಲ್ಲಿ ಮಳೆಕೊಯ್ಲು ವ್ಯವಸ್ಥೆ – ಚಾರಿತ್ರಿಕ ಅಧ್ಯಯನ	ಡಾ. ಎಸ್.ವೈ. ಸೋಮಶೇಖರ್ ಕನ್ನಡ ವಿಶ್ವವಿದ್ಯಾಲಯ	೨೦೨೨
೨೮	ವಿಜಯಕುಮಾರ್ ಎಸ್.	ಕೋಲಾರ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ (ಶಾಸನಗಳನ್ನು ಅನುಲಕ್ಷಿಸಿ)	ಡಾ. ಕೆ. ಕೃಷ್ಣಪ್ಪ ಬೆಂಗಳೂರು ವಿಶ್ವವಿದ್ಯಾಲಯ	೨೦೨೨
೨೯	ಹಂ.ಗು.ರಾಜೇಶ್	ದಕ್ಷಿಣ ಕರ್ನಾಟಕದಲ್ಲಿ ನಾಡಪ್ರಭುಗಳು : ವಿಶೇಷವಾಗಿ ಯಲಹಂಕ ನಾಡಪ್ರಭುಗಳನ್ನು ಅನುಲಕ್ಷಿಸಿ ಒಂದು ಚಾರಿತ್ರಿಕ ಅಧ್ಯಯನ (೧೫೧೦–೧೭೨೮)	ಡಾ. ಅಶ್ವತ್ಥನಾರಾಯಣ ಮೈಸೂರು ವಿಶ್ವವಿದ್ಯಾಲಯ	೨೦೨೧

ಅಕಾದೆಮಿಯ ೨೦೨೦-೨೦೨೧ನೇ ಸಾಲಿನ ಸರ್ವಸದಸ್ಯರ ಸಭೆಯ ನಡಾವಳಿಗಳು
ದಿನಾಂಕ ೨೧-೨-೨೦೨೨, ಬೆಂಗಳೂರು (Virtual Meeting)

ಅಕಾದೆಮಿಯ ೩೫ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ ೨೧-೦೨-೨೦೨೨ ಸೋಮವಾರ ಸಂಜೆ ೫.೩೦ ಗಂಟೆಗೆ, ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ನರಸಿಂಹರಾಜ ಕಾಲೋನಿ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಜಾಲತಾಣ (Virtual Meeting) ಮೂಲಕ ಆಯೋಜಿಸಿದ್ದ ಸಭೆಯು, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅಕಾದೆಮಿಯ ಕೆಲವು ಸದಸ್ಯರು ಖುದ್ದು ಹಾಜರಿದ್ದು ಸಭೆಯ ಕಲಾಪದಲ್ಲಿ ಭಾಗವಹಿಸಿದ್ದರು. ಅಕಾದೆಮಿಯ ಸದಸ್ಯರೆಲ್ಲರಿಗೂ ದಿನಾಂಕ ೧೫ನೇ ಜನವರಿ ೨೦೨೨ರ ಸುತ್ತೋಲೆಯ ಮುಖಾಂತರ, ೩೫ನೇ ಸರ್ವಸದಸ್ಯರ ಸಭೆಯ ಸೂಚನೆಯನ್ನು ನೀಡಲಾಗಿತ್ತು ಮತ್ತು ಸದಸ್ಯರೆಲ್ಲರೂ, ಜಾಲತಾಣದ ಮೂಲಕ (Virtual Meeting) ಸಕ್ರಿಯವಾಗಿ ಭಾಗವಹಿಸಲು ವಿನಂತಿಸಲಾಗಿತ್ತು. ಈ ಸಭೆಯಲ್ಲಿ ೫೧ ಸದಸ್ಯರು ಖುದ್ದು ಹಾಜರಿದ್ದರು ಹಾಗೂ ಜಾಲತಾಣದ ಮೂಲಕ ೭೧ ಸದಸ್ಯರು ಭಾಗವಹಿಸಿದ್ದರು. ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರು ೧೨೧. ಡಾ. ಎನ್.ಆರ್. ಲಲಿತಾಂಬ ಅವರ ದೇವತಾ ಪ್ರಾರ್ಥನೆಯೊಂದಿಗೆ, ಸಭೆಯು ಪ್ರಾರಂಭಗೊಂಡಿತು.

ಪ್ರಧಾನ ಕಾರ್ಯದರ್ಶಿ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಸಭೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ, ಸಭೆಯಲ್ಲಿ ಸಕ್ರಿಯವಾಗಿ ಎಲ್ಲರೂ ಪಾಲ್ಗೊಳ್ಳಬೇಕೆಂದು ವಿನಂತಿಸಿದರು.

ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ

೨೦೨೧-೨೨ನೇ ಸಾಲಿನಲ್ಲಿ ಕೆಳಕಂಡ ಗೌರವಾನ್ವಿತ ಸದಸ್ಯರು ಹಾಗೂ ನಾಡಿನ ಗಣ್ಯವ್ಯಕ್ತಿಗಳು ಮೃತರಾಗಿದ್ದು, ಅವರ ಆತ್ಮಕ್ಕೆ ಶಾಂತಿ ಕೋರಿ, ಒಂದು ನಿಮಿಷದ ಮೌನಾಚರಣೆಯೊಂದಿಗೆ ಅಗಲಿದವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಅಗಲಿದ ಸದಸ್ಯರು ಮತ್ತು ಗಣ್ಯವ್ಯಕ್ತಿಗಳು

೧) ಶ್ರೀ ಗಿರಿಜಾಪತಿ, ಹಿರಿಯೂರು.
೨) ಶ್ರೀಮತಿ ಅಕ್ಷತ ಯಾದವ್. ಡಿ.ಎಸ್. ನಾಯಕನಹಟ್ಟಿ
೩) ಡಾ. ರೇಖಾ ಕೆ.ಜಿ. ಬೆಂಗಳೂರು
೪) ಡಾ. ಮುತ್ತುರಾಜ್, ಬೆಂಗಳೂರು
೫) ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು
೬) ಡಾ. ಕೋ.ವೆಂ. ರಾಮಕೃಷ್ಣೇಗೌಡ, ಬೆಂಗಳೂರು
೭) ಶ್ರೀ ಪ್ರಕಾಶ್ ಸಿದ್ದಲಿಂಗಪ್ಪ, ನಿಲೋಗಲ್- ಕೊಪ್ಪಳ
೮) ಶ್ರೀ ತ್ರಿಲೋಕಿಕರ್ ಕೊಟ್ಟೂರು, ಬಳ್ಳಾರಿ.
೯) ಡಾ. ಕಲವೀರ ಮನ್ವಾಚಾರ್, ಹಂಪಿ
೧೦) ಡಾ. ಗೋವಿಂದರಾಜ್, ಹಂಪಿ.
೧೧) ಡಾ. ಎಸ್.ಕೆ. ಜೋಷಿ, ಧಾರವಾಡ
೧೨) ಶ್ರೀ ವಸಂತ ಕುಷ್ಟಗಿ, ಗುಲ್ಬರ್ಗ

ಗಣ್ಯರುಗಳು

೧) ಶ್ರೀ ಪುನೀತ್ ರಾಜ್‌ಕುಮಾರ್, ನಟ
೨) ಡಾ. ಲತಾ ಮಂಗೇಶ್ಕರ್, ಗಾಯಕಿ
೩) ಡಾ. ಚೆನ್ನವೀರ ಕಣವಿ, ಸಾಹಿತಿ
೪) ಶ್ರೀಮತಿ ಜಯಂತಿ, ನಟಿ
೫) ಡಾ. ನಾರಾಯಣಾಚಾರ್ಯ, ಸಂಸ್ಕೃತಿ ಚಿಂತಕರು
೬) ಡಾ. ಎಸ್.ಪಿ. ಬಾಲಸುಬ್ರಮಣ್ಯಂ, ಗಾಯಕರು
೭) ಡಾ. ಬನ್ನಂಜೆ ಗೋವಿಂದಾಚಾರ್ಯ, ಸಂಸ್ಕೃತಿ ಚಿಂತಕರು

೧. ಸಭೆಯ ನೋಟೀಸನ್ನು ಓದಿ ರೆಕಾರ್ಡ್ ಮಾಡುವುದು

ಪ್ರಧಾನ ಕಾರ್ಯದರ್ಶಿಗಳು ದಿನಾಂಕ ೧೫ ಜನವರಿ ೨೦೨೨ರ ಸಭೆಯ ತಿಳುವಳಿಕೆ ಪತ್ರವನ್ನು ಸಭೆಯಲ್ಲಿ ವಾಚನ ಮಾಡಿದರು. ಅದನ್ನು ದಾಖಲು ಮಾಡಲಾಯಿತು.

೨. ೨೦೨೦–೨೧ನೆಯ ಸಾಲಿನ ಸರ್ವಸದಸ್ಯರ ವಾರ್ಷಿಕ ವರದಿಯ ವಾಚನ ಮತ್ತು ಅಂಗೀಕಾರ

ಪ್ರಧಾನ ಕಾರ್ಯದರ್ಶಿಯವರು ಅಕಾದೆಮಿಯು ೨೦೨೦–೨೧ನೇ ಸಾಲಿನಲ್ಲಿ ಕೈಗೊಂಡ ಎಲ್ಲಾ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳನ್ನು ಕುರಿತಂತೆ ಸುದೀರ್ಘವಾದ ವರದಿಯನ್ನು ಸಿದ್ಧಪಡಿಸಿದ್ದು, ಅದನ್ನು ಜಾಲತಾಣದ ಮುಖೇನ ಸದಸ್ಯರಿಗೆ ಈಗಾಗಲೇ ಕಳಿಸಿದ್ದು, ಹಾಜರಿದ್ದ ಸದಸ್ಯರೆಲ್ಲರಿಗೂ ಪ್ರತಿಯೊಂದನ್ನು ನೀಡಲಾಗಿತ್ತು. ಪರಂಪರೆ ಉಳಿಸಿ ಕಾರ್ಯಕ್ರಮದ ಅಂಗವಾಗಿ ರಾಜ್ಯದ ವಿವಿಧೆಡೆ, ನಮ್ಮ ಸದಸ್ಯರು ಕೋಲಾರ, ಹರಳೂರು, ಅಷ್ಟೇಗೌಡನಹಳ್ಳಿ, ಆರಕುಂದ, ನಗರಗೆರೆ, ಮುಂತಾದ ಕಡೆ ಕರೋನಾ ಪರಿಸ್ಥಿತಿಯಲ್ಲಿಯೂ ಸ್ಮಾರಕಗಳನ್ನು ರಕ್ಷಿಸುವ ಮತ್ತು ಶಾಸನ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ವಿಷಯದ ಬಗ್ಗೆ ತಿಳಿಸಿದರು.

ಇತಿಹಾಸ ನಿರ್ಮಾತೃಗಳು: ಆನ್‌ಲೈನ್ ಉಪನ್ಯಾಸ ಮಾಲಿಕೆ

ಕರ್ನಾಟಕ ರಾಜ್ಯಾದ್ಯಂತ ಇತಿಹಾಸ ಕಟ್ಟಿದ ಮತ್ತು ಇತಿಹಾಸ ನಿರ್ಮಿಸುವಲ್ಲಿ ಮಹತ್ತರ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸಿಕೊಳ್ಳುವ ಮತ್ತು ಗೌರವ ಸೂಚಿಸುವ ಉಪನ್ಯಾಸ ಮಾಲಿಕೆಯನ್ನು ಅಕಾದೆಮಿಯು ಪ್ರಾರಂಭಿಸಿತು. ಜುಲೈ ೨೦೨೦ ರಿಂದ ಪ್ರಾರಂಭಗೊಂಡು, ಪ್ರತೀ ಸೋಮವಾರ ಸಂಜೆ ನಿರಂತರವಾಗಿ ನವೆಂಬರ್ ೨೦೨೧ ರವರೆಗೂ ೭೦ ಉಪನ್ಯಾಸ ಮಾಲಿಕೆಗಳನ್ನು ನಡೆಸಿ ದಾಖಲೆ ನಿರ್ಮಿಸಿದೆ. ಈ ಕಾರ್ಯಕ್ರಮದ ಸಂಕ್ಷಿಪ್ತ ವರದಿ ನೀಡಿ, ಭಾಗವಹಿಸಿದ ವಿದ್ವಾಂಸರನ್ನು ಶ್ಲಾಘಿಸಿದರು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟ ಡಾ. ವಿ. ಸಂಧ್ಯಾ, ಶ್ರೀಮತಿ ಸೀತಾಲಕ್ಷ್ಮಿ ಮತ್ತು ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಿದ ಇತರರಿಗೂ ಧನ್ಯವಾದ ತಿಳಿಸಿದರು. ದಿನಾಂಕ ೨೬–೧೨–೨೦೨೦ರಂದು ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಯನ್ನು ಡಾ. ಕೆ.ಆರ್. ಗಣೇಶ್, ಡಾ. ವಸಂತಲಕ್ಷ್ಮಿ ಅವರ ಅನುಮೋದನೆಯೊಂದಿಗೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ದಾಖಲು ಮಾಡಲಾಯಿತು.

೩. ೨೦೨೦–೨೧ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ: ಶ್ರೀ ಬಿ.ಎಸ್. ಗುರುಪ್ರಸಾದ್, ಕೋಶಾಧಿಕಾರಿ ಅವರಿಂದ

೩.೧ ಸನ್ನದ್ದು ಲೆಕ್ಕ ಪರಿಶೋಧಕರಾದ ಜಿ.ಬಿ.ಎ. ಅಂಡ್ ಅಸೋಸಿಯೇಟ್ಸ್ ಸಂಸ್ಥೆಯ ಶ್ರೀ ಗಣೇಶ್ ಶೆಟ್ಟಿ ಮತ್ತು ಶ್ರೀ ಸುಖೇಶ್ ಶೆಟ್ಟಿ, ಇವರುಗಳು ಲೆಕ್ಕ ಪರಿಶೋಧನೆ ಕಾರ್ಯವನ್ನು ಪೂರ್ಣಗೊಳಿಸಿ, ದಿನಾಂಕ ೧೮–೧೨–೨೦೨೧ರಂದು ಪರಿಶೋಧಿತ ಲೆಕ್ಕಪತ್ರಗಳನ್ನು ತಮ್ಮ ಪ್ರಮಾಣಪತ್ರದೊಂದಿಗೆ ಅಕಾದೆಮಿಗೆ ಸಲ್ಲಿಸಿರುತ್ತಾರೆ ಎಂದು ಕೋಶಾಧಿಕಾರಿಗಳಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಸಭೆಗೆ ತಿಳಿಸಿದರು. ಅಕಾದೆಮಿಯ ೨೦೨೦–೨೧ ಸಾಲಿನ ಮುಂಗಡಪತ್ರವು ನಿರೀಕ್ಷೆಯಂತೆ ಬಂದಿರುವುದಿಲ್ಲ. ಕೋವಿಡ್ ಪಿಡುಗಿನ ಕಾರಣದಿಂದ ಕಾರ್ಯಕ್ರಮಗಳು ಬಹಳ ಸರಳರೀತಿಯಲ್ಲಿ ಜರುಗಿದ್ದು, ಉತ್ಪತ್ತಿಯೂ ಇಲ್ಲದೆ, ಖರ್ಚು ವೆಚ್ಚವೇ ಜಾಸ್ತಿಯಾಗಿತ್ತು. ಮೂಲನಿಧಿಗೆ ಬಂದ ಹಣದಿಂದ, ಖಾಯಂ ಠೇವಣಿ ಮೇಲಿನ ಬಡ್ಡಿಯಿಂದ ಮತ್ತು ಪ್ರತಿನಿಧಿ ಶುಲ್ಕ ಮತ್ತಿನ್ನಿತರ ಆದಾಯಗಳಿಗಿಂತ ಖರ್ಚು ವೆಚ್ಚವು ಆದಾಯಕ್ಕಿಂತ ರೂ ೧೧,೦೮೦/– ಹೆಚ್ಚಾಗಿದ್ದ ಅಂಶವನ್ನು ವಿವರಿಸಿದರು. ಅದೃಷ್ಟವಶಾತ್, ದಿ ಮಿಥಿಕ್ ಸೊಸೈಟಿಯು ಸ್ವಯಂಪ್ರೇರಿತವಾಗಿ ಮುಂದೆ ಬಂದು ಇತಿಹಾಸ ದರ್ಶನ ಸಂಪುಟ ಮೂವತ್ತೈದರ ಸಂಪೂರ್ಣ ವೆಚ್ಚವನ್ನು ತಾವೇ ಬರಿಸಿ, (ರೂ.೨,೬೧,೦೮೩/–) ಅಕಾದೆಮಿಯ ದೊಡ್ಡ ಹೊರೆಯನ್ನು ಇಳಿಸಿದರು. ಈ ನಿಟ್ಟಿನಲ್ಲಿ ದಿ ಮಿಥಿಕ್ ಸೊಸೈಟಿಯು ಅಕಾದೆಮಿಯ ಒಂದು ಸೋದರ ಸಂಸ್ಥೆಯೆಂದು ಈ ವರ್ಷವೂ ಪ್ರಚುರ ಪಡಿಸಿದೆ. ಅಕಾದೆಮಿಯು ದಿ ಮಿಥಿಕ್ ಸೊಸೈಟಿ ಸಹಾಯಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತದೆ ಎಂದು ಹೇಳಿದರು.

೩.೨ ಕರ್ನಾಟಕ ಸರ್ಕಾರದಿಂದ ಕಳೆದ ನಾಲ್ಕು ವರ್ಷಗಳಿಂದಲೂ ಅನುದಾನ ಬಿಡುಗಡೆಯಾಗದೆ ಬಹಳ ಆರ್ಥಿಕ ಸಂಕಷ್ಟವನ್ನೆದುರಿಸಬೇಕಾದ ಸಂದರ್ಭವನ್ನು ವಿವರಿಸಿದರು. ಅಕಾದೆಮಿಯು ಆದಾಯವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ, ಅನ್ಯ ಮಾರ್ಗಗಳ ಅನ್ವೇಷಣೆಯಲ್ಲಿ ತೊಡಗಿದ್ದು, ಮುಂದಿನ ವರ್ಷದಲ್ಲಿ ಕೆಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಚಿಂತನೆಯನ್ನು ನಡೆಸುತ್ತಿರುವುದಾಗಿಯೂ ತಿಳಿಸಿದರು. ನಂತರ ೨೦೨೦–೨೧ನೇ ಸಾಲಿನ ಖರ್ಚು ವೆಚ್ಚದ ವಿವರಗಳನ್ನು ನೀಡಿದರು.

೩.೩ ಸದರಿ ಲೆಕ್ಕಪತ್ರಗಳನ್ನು ಮತ್ತು ಲೆಕ್ಕ ಪರಿಶೋಧನೆ ಬಗ್ಗೆ ಚರ್ಚಿಸಿ, ಲೆಕ್ಕ ಪರಿಶೋಧನಾ ವರದಿಯನ್ನು ಶ್ರೀ ವಿಜಯಕುಮಾರ್ ಮತ್ತು ಡಾ. ನಳಿನಿ ವೆಂಕಟೇಶ್ ಅವರ ಸೂಚನೆ ಮತ್ತು ಅನುಮೋದನೆಯೊಂದಿಗೆ, ಸರ್ವಾನುಮತದಿಂದ ಅಂಗೀಕರಿಸಲಾಯಿತು.

೪. ೨೦೨೧-೨೨ ನೇ ಸಾಲಿನ ಮುಂಗಡ ಲೆಕ್ಕಪತ್ರ ಮಂಡನೆ ಮತ್ತು ಅಂಗೀಕಾರ

೪.೧ ಸರ್ಕಾರದಿಂದ ಬರಬೇಕಾಗಿರುವ ಅನುದಾನಕ್ಕಾಗಿ ಶ್ರಮವಹಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಿರುವ ವಿಷಯವನ್ನು ಪ್ರಸ್ತಾಪಿಸಿ, ಅನುದಾನ ರೂ. ೬,೦೦,೦೦೦/- ಈಗಾಗಲೇ ಬಂದಿರುವುದಾಗಿ ತಿಳಿಸಿದರು.

೪.೨ ಅಕಾದೆಮಿಯ ಲಿಪಿ ತಜ್ಞರು ಮತ್ತು ವಿದ್ವಾಂಸರುಗಳಿಂದ "ಪ್ರಾಚೀನ ಲಿಪಿ ಕಲಿಕಾ ತರಗತಿ"ಯು ಆನ್‌ಲೈನ್‌ನಲ್ಲಿ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ಮತ್ತು ಪ್ರೋತ್ಸಾಹ ವ್ಯಕ್ತವಾಗಿದ್ದು, ಅಕಾದೆಮಿಗೆ ಸ್ವಲ್ಪ ಮಟ್ಟಿನ ಆದಾಯ ತರುವುದಾಗಿ ತಿಳಿಸಿದರು. ಅಕಾದೆಮಿಯು ಈಗಾಗಲೇ ಮೊದಲ ತಂಡದ ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ತರಗತಿಗಳನ್ನು ನಡೆಸಿದ್ದು, ಕೆಲವು ತಾಂತ್ರಿಕ ಉಪಕರಣವನ್ನೂ ಖರೀದಿಸಿರುವುದಾಗಿ ತಿಳಿಸಿ, ಎರಡನೇ ತಂಡದ ವಿದ್ಯಾರ್ಥಿಗಳಿಗೆ ತರಗತಿ ಆರಂಭವಾಗಿರುವ ವಿಷಯವನ್ನು ತಿಳಿಸಿದರು. ಈ ಸಂಗತಿಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ತಾವು ಮಂಡಿಸಿರುವ ೨೦೨೧-೨೨ ಮುಂಗಡ ಪತ್ರ ಖರ್ಚಿಗಿಂತ ಹೆಚ್ಚಿನ ಆದಾಯ ತರುವುದಾಗಿ ಆಶಯ ವ್ಯಕ್ತಪಡಿಸಿದರು. ಇದಲ್ಲದೆ ವಿವಿಧ ದತ್ತಿನಿಧಿಗಳ ವತಿಯಿಂದ ನೀಡಬೇಕಾಗಿರುವ ಎರಡು ವರ್ಷಗಳ ಪ್ರಶಸ್ತಿಗಳಿಗೆ (೨೦೨೦ ಮತ್ತು ೨೦೨೧) ಹಣ ಬೇಕಾಗಿರುವ ಬಗ್ಗೆ ತಿಳಿಸಿದರು.

೪.೩ ಈಗ ಮಂಡಿಸಿರುವ ೨೦೨೧-೨೨ ಅಂದಾಜು ಮುಂಗಡಪತ್ರವನ್ನು ಡಾ. ಕೆ. ರವೀಂದ್ರನಾಥ್ ಅವರು ಸೂಚಿಸಿದರು ಮತ್ತು ಡಾ. ಶರಣ ಬಸಪ್ಪ ಕೋಲ್ಕಾರ್ ಅವರು ಅನುಮೋದಿಸಿದರು. ನಂತರ ೨೦೨೧-೨೨ ಅಂದಾಜು ಮುಂಗಡಪತ್ರ ಸರ್ವಾನುಮತದಿಂದ ಅಂಗೀಕಾರವಾಯಿತು.

೫.೨೦೨೧-೨೨ ನೇ ಸಾಲಿಗೆ ಲೆಕ್ಕಪತ್ರ ಪರಿಶೋಧಕರ (ಆಡಿಟರ್) ನೇಮಕ, ಅವರ ಸಂಭಾವನೆ ನಿರ್ಧಾರ

೫.೧ ಪ್ರಸ್ತುತ ಸೇವೆ ನೀಡುತ್ತಿರುವ ಜಿ.ಬಿ.ಎ. ಅಂಡ್ ಅಸೋಸಿಯೇಟ್ಸ್ ತ್ಯಾಗರಾಜನಗರ ಮುಖ್ಯರಸ್ತೆ, ತ್ಯಾಗರಾಜನಗರ, ಬೆಂಗಳೂರು, ಇವರ ಸೇವೆಯನ್ನು ಮುಂದುವರೆಸಬಹುದೆಂಬ ಸಲಹೆಯನ್ನು ಕೋಶಾಧಿಕಾರಿಗಳಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಸಭೆಗೆ ನೀಡಿ, ಅವರ ಸೇವೆಯನ್ನು ಆದಾಯ ತೆರಿಗೆ ೮೦ಜಿ ಸೌಲಭ್ಯ ಪಡೆಯಲು ಸಹ ಮುಂದುವರೆಸಬಹುದೆಂದು ತಮ್ಮ ಅನಿಸಿಕೆಯನ್ನು ಸಭೆಗೆ ಮಂಡಿಸಿ, ಸಭೆಯ ಅಭಿಪ್ರಾಯದಂತೆ ತಾವು ಮುಂದುವರೆಯುವುದಾಗಿ ತಿಳಿಸಿದರು. ಈಗಿರುವ ಲೆಕ್ಕ ಪರಿಶೋಧಕರನ್ನು ಮುಂದುವರೆಸುವುದು ಹಾಗೂ ರೂ. ೧೬,೦೦೦/- ಸಂಭಾವನೆ ನೀಡುವುದೆಂದು ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಯಿತು. ಇದನ್ನು ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿಯವರು ಸರ್ವಸದಸ್ಯರ ಸಭೆಯ ಪರವಾಗಿ ಸೂಚಿಸಿದರು. ಧಾರವಾಡದ ಡಾ. ಮೇಲಕಾರ ಅವರು ಈ ಸಲಹೆಯನ್ನು ಅನುಮೋದಿಸಿದರು.

೬.ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೆ ಬಂದ ಇತರ ವಿಷಯಗಳು/ ಸಲಹೆ ಸೂಚನೆಗಳು

ಅಕಾದೆಮಿಯ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯರ ಸಲಹೆಗಳು

೬.೧ (ಅ) ಕೊಟ್ಟೂರು ಮಠದ ಪೂಜ್ಯ ಶ್ರೀ ಸಂಗನಬಸವ ಮಹಾಸ್ವಾಮಿಗಳು ರಾಜ್ಯದ ಐತಿಹಾಸಿಕ ಸ್ಥಳಗಳ ಸಮೀಪ, ಆಯಾ ಸ್ಥಳಗಳ ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವಗಳನ್ನು ಬಿಂಬಿಸುವ ಫಲಕಗಳನ್ನು ನಿಲ್ಲಿಸಿದರೆ, ವಿದ್ಯಾರ್ಥಿಗಳಿಗೆ, ಮತ್ತು ಪ್ರವಾಸಿಗಳಿಗೆ ಬಹಳ ಅನುಕೂಲವಾಗಲಿದ್ದು, ಐತಿಹಾಸಿಕ ಸ್ಮಾರಕಗಳಿಗೂ ಸೂಕ್ತ ರಕ್ಷಣೆ ಒದಗಿಸಿದಂತಾಗುತ್ತದೆ. ಈ ಕಾರ್ಯವನ್ನು ಕರ್ನಾಟಕ ಇತಿಹಾಸ ಅಕಾದೆಮಿ ವತಿಯಿಂದ ಮಾಡುವ ಯೋಜನೆಗೆ ತಮ್ಮ ಮಠದ ವತಿಯಿಂದ ಆರ್ಥಿಕ ಸಹಾಯ ಮಾಡುವುದಾಗಿ ಬದಾಮಿ ಸಮ್ಮೇಳನದಲ್ಲಿ ತಿಳಿಸಿದ್ದನ್ನು ಡಾ. ದೇವರಕೊಂಡಾರೆಡ್ಡಿಯವರು ಸ್ಮರಿಸಿ, ಅಕಾದೆಮಿಯು ಈ ನಿಟ್ಟಿನಲ್ಲಿ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿ, ಈಗಿನ ಮಠಾಧಿಪತಿಗಳಿಗೆ ಸಲ್ಲಿಸುವ ಚಿಂತನೆಯನ್ನು ಹೊರಹಾಕಿದರು.

(ಆ) **"ಇತಿಹಾಸ ನಿರ್ಮಾತೃಗಳು"** – ಉಪನ್ಯಾಸ ಮಾಲಿಕೆ ಬಹಳ ಯಶಸ್ಸು ಕಂಡದ್ದನ್ನು ಎಲ್ಲರೂ ಒಪ್ಪಿರುತ್ತಾರೆ. ಈ ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿಸಿದ ವಿದ್ವಾಂಸರೆಲ್ಲರೂ ಸೂಕ್ತವಾದ ಲೇಖನಗಳನ್ನು ಬರೆದುಕೊಟ್ಟಲ್ಲಿ, ಅಕಾದೆಮಿಯು ಅದರ ಪ್ರಕಟನೆಯನ್ನು ಕೈಗೊಂಡು, ಆದಾಯದ ಬಗ್ಗೆ ಗಮನಹರಿಸಬಹುದೆಂದು ಶ್ರೀ ಕೆ.ಎಲ್. ರಾಜಶೇಖರ್ ಅವರು ಸಲಹೆ ನೀಡಿದರು.

೬.೨ ಅಕಾದೆಮಿಯಲ್ಲಿ ಈಗಾಗಲೇ ೧೪ ಪ್ರಶಸ್ತಿಗಳನ್ನು ನಿಭಾಯಿಸುತ್ತಿದೆ. ಬ್ಯಾಂಕ್ ಬಡ್ಡಿದರಗಳು ಮುಂದಿನ ದಿನಗಳಲ್ಲಿ ಹೆಚ್ಚಾಗಬಹುದೆಂಬ ನಿರೀಕ್ಷೆ ಸರಿಯಲ್ಲ. ಅಕಾದೆಮಿಯಲ್ಲಿ ಸಿಬ್ಬಂದಿ ವ್ಯವಸ್ಥೆಯಿಲ್ಲದಿರುವುದರಿಂದ, ಈಗಿರುವ ದತ್ತಿನಿಧಿಗಳ ನಿರ್ವಹಣೆಯನ್ನು ಮುಂದುವರೆಸಿಕೊಂಡು ಹೋಗಬಹುದು. ಅಕಾದೆಮಿಯಲ್ಲಿ ದತ್ತಿಯನ್ನು ಸ್ಥಾಪಿಸಲು

ಮುಂದೆ ಬರುವವರಿಗೆ, ಕೇವಲ ಉಪನ್ಯಾಸಗಳನ್ನು ನಡೆಸುವ ಸಲುವಾಗಿ ದತ್ತಿಗಳನ್ನು ಸ್ವೀಕರಿಸಲಾಗುವುದೆಂದು ತಿಳಿಸುವುದು ಸೂಕ್ತವೆಂಬ ಅಭಿಪ್ರಾಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಂ.ಎನ್. ಪ್ರಭಾಕರ್ ವ್ಯಕ್ತಪಡಿಸಿದರು. ಈ ವಿಷಯವನ್ನು ಡಾ. ಮೇಲಕಾರ, ಧಾರವಾಡ, ಅವರು ಈ ಸಲಹೆಯನ್ನು ಅನುಮೋದಿಸಿದರು.

೬.೩ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಲ್. ರಾಜಶೇಖರ್ ಅವರು ಅಕಾದೆಮಿಯಲ್ಲಿ ದತ್ತಿನಿಧಿ ಸ್ಥಾಪಿಸುವುದನ್ನು ನಿಲ್ಲಿಸಬಾರದು. ಇತಿಹಾಸಕರ್ತರನ್ನು, ಲೇಖಕರನ್ನು ಮತ್ತು ಯುವ ಸಂಶೋಧಕರನ್ನು ಗುರುತಿಸಿ ಸನ್ಮಾನ ಮಾಡುವುದೊಂದು ಉತ್ತಮ ಕಾರ್ಯ ಎಂದು ಅಂತಹವರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ದತ್ತಿನಿಧಿಗಳನ್ನು ಸ್ಥಾಪಿಸಲು ಅಕಾದೆಮಿಗೆ ಬರುವವರ ಸಂಖ್ಯೆ ಹೆಚ್ಚಾಗುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

೬.೪ ಡಾ. ಕೆ.ಆರ್. ಗಣೇಶ್, ಬೆಂಗಳೂರು, ರವರು ದತ್ತಿನಿಧಿಯ ಮೂಲ ಕನಿಷ್ಠ ಮೊತ್ತವನ್ನು ಹೆಚ್ಚಿಸಬೇಕಾದ ಅವಶ್ಯಕತೆ ಬಗ್ಗೆ ಸಲಹೆ ನೀಡಿದರು.

೬.೫ ಡಾ. ಎಂ.ಜಿ. ನಾಗರಾಜ್, ಉಪಾಧ್ಯಕ್ಷರು, ರವರು ಅಕಾದೆಮಿಯ ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ಬಗ್ಗೆ ಬಹಳ ಮೆಚ್ಚಿರುವುದಾಗಿ ಸಂತಸ ವ್ಯಕ್ತಪಡಿಸಿದರು.

೬.೬ ತಾ.ನಂ. ಕುಮಾರಸ್ವಾಮಿ, ಸದಸ್ಯರು, ಆನೇಕಲ್, ರವರು ಹಣಕಾಸಿನ ಅಡಚಣೆಯ ಕಾರಣದಿಂದ ಅಕಾದೆಮಿಯು ವಿಭಿನ್ನ ಸಂಸ್ಥೆಗಳ ಜೊತೆ ಕೈ ಜೋಡಿಸಿ ಕಾರ್ಯನಿರ್ವಹಿಸುವುದು ಅಕಾದೆಮಿಯ ಧ್ಯೇಯಕ್ಕೆ ಕುಂದು ಬರಬಹುದೆಂದು ತಮ್ಮ ಸಲಹೆಯನ್ನು ನೀಡಿದರು. ಮುಂದಿನ ೩೬ನೇ ವಾರ್ಷಿಕ ಸಮ್ಮೇಳನವನ್ನು ಆನೇಕಲ್‌ನಲ್ಲಿ ನಡೆಸಬೇಕೆಂದು ಕೋರಿ ಮನವಿ ಸಲ್ಲಿಸಿರುವುದಾಗಿ ಸಭೆಗೆ ತಿಳಿಸಿದರು.

೬.೭ ರಾಜ್ಯ ಪುರಾತತ್ವ ಇಲಾಖೆಯ ಡಾ. ಆರ್. ಗೋಪಾಲ್ ಅವರ ಸಮಯಪ್ರಜ್ಞೆಯನ್ನು ಹೊಗಳಿ ಅವರ ಅಕಾದೆಮಿಯ ಮೇಲಿನ ಅಭಿಮಾನವನ್ನು ಎಲ್ಲರೊಂದಿಗೆ ಹಂಚಿಕೊಂಡರು.

೬.೮ ಕಳೆದ ಎರಡು ವರ್ಷಗಳಿಂದಲೂ ಶ್ರೀ ಧನಪಾಲ್, ಶ್ರೀ ಕೆ.ಆರ್. ನರಸಿಂಹನ್ ಅವರ ತಂಡ ಹಾಗೂ ಇತರೆ ಸದಸ್ಯರುಗಳು ಶಾಸನಗಳ ಶೋಧನೆ, ಅವುಗಳ ಸಂರಕ್ಷಣಾ ಕಾರ್ಯಗಳನ್ನು ಸ್ಥಳೀಯರೊಂದಿಗೆ ಕೈಗೊಳ್ಳುವ ಕಾರ್ಯವನ್ನು ಅಕಾದೆಮಿ ಗಮನಿಸುತ್ತಿದೆ. ಐತಿಹಾಸಿಕ ಪರಂಪರೆಯನ್ನು ಉಳಿಸಲು ಶ್ರಮಪಡುತ್ತಿರುವ ಈ ತಂಡಕ್ಕೆ, ಅಕಾದೆಮಿಯು ಸಹಾಯ ಹಸ್ತವನ್ನು ವಿಸ್ತರಿಸುವ ಬಗ್ಗೆ ಚಿಂತನೆ ನಡೆಸಿರುವುದಾಗಿ ತಿಳಿಸಿದರು.

೬.೯ ಕಳಸದ ಸದಸ್ಯರಾದ ಶ್ರೀ ಎಚ್.ಆರ್. ಪಾಂಡುರಂಗರವರು ೨೦೨೧ ನೇ ಸಮ್ಮೇಳನ ಚಿಕ್ಕಮಗಳೂರು ಜಿಲ್ಲೆಯ ಹೊರನಾಡಿನಲ್ಲಿ ನಡೆಯಲು ಸಕಲ ಪೂರ್ವ ತಯಾರಿ ನಡೆದಿರುವ ವಿಷಯ, ಎಲ್ಲರಿಗೂ ವೇದ್ಯವಾಗಿರುವ ವಿಷಯವೇ. ಕೋವಿಡ್‌ನ ಪರಿಣಾಮದಿಂದ ಮತ್ತು ಸರ್ಕಾರದ ಸೂಚನೆಯ ಮೇರೆಗೆ ಎರಡು ಬಾರಿ ಮುಂದೂಡಬೇಕಾದ ಪರಿಸ್ಥಿತಿ ಎದುರಾಯ್ತು. ಫೆಬ್ರವರಿ ೨೦೨೨ರಲ್ಲಿ ಸಮ್ಮೇಳನ ಹೊರನಾಡಿನಲ್ಲಿ ನಡೆಯುವುದೆಂಬ ಆಶಯವಿತ್ತು. ಆದ ಕಾರಣ ಹೊರನಾಡಿನ ಶ್ರೀ ಅನ್ನಪೂರ್ಣೇಶ್ವರಿ ಶ್ರೀ ಕ್ಷೇತ್ರದವರ ಆಹ್ವಾನ ಮುಂದಿನ ವರ್ಷದಲ್ಲೂ ಅನ್ವಯಿಸುತ್ತದೆ. ಆದ್ದರಿಂದ ೨೦೨೨ರ ೩೬ನೇ ವಾರ್ಷಿಕ ಸಮ್ಮೇಳನವನ್ನು ಹೊರನಾಡಿನಲ್ಲೇ ನಡೆಸಲು ಮನವಿ ಮಾಡಿದರು.

೭. ಡಾ. ಎಸ್. ಮೇಲಕಾರ್, ಧಾರವಾಡ, ರವರು ೨೦೨೨ ರಲ್ಲಿ ನಡೆಯಬೇಕಾಗಿರುವ ೩೬ನೇ ಸಮ್ಮೇಳನವನ್ನು ಧಾರವಾಡದಲ್ಲಿ ಆಯೋಜಿಸುವ ಬಗ್ಗೆ, ಪತ್ರವೊಂದನ್ನು ಕಳಿಸುವುದಾಗಿ ಸಭೆಗೆ ತಿಳಿಸಿದರು. ಅಕಾದೆಮಿಯ ಅಸ್ಮಿತೆ ಮತ್ತು ಕಾರ್ಯ ಚಟುವಟಿಕೆಗಳನ್ನು ಕೆಲವು ಜಿಲ್ಲೆಗಳಲ್ಲಿ ವಿಸ್ತರಿಸಬೇಕಾದ ಅವಶ್ಯಕತೆ ಕುರಿತು ಚಿಂತನೆ ನಡೆದಿರುವುದಾಗಿ ತಿಳಿಸಿದರು.

೮. ಅಧ್ಯಕ್ಷೀಯ ಭಾಷಣ:– ಡಾ. ದೇವರಕೊಂಡಾರೆಡ್ಡಿ

ಜಾಲತಾಣ ಗೋಷ್ಠಿ ಮುಖೇನ ೩೫ನೇ ವಾರ್ಷಿಕ ಸಮ್ಮೇಳನದ ಮೂರು ದಿನಗಳ ವಿದ್ವತ್ ಗೋಷ್ಠಿಗಳನ್ನು ಬಹಳ ಅಚ್ಚುಕಟ್ಟಾಗಿ ಮತ್ತು ಯಶಸ್ವಿಯಾಗಿ ನಿರ್ವಹಿಸಿದ ಅಕಾದೆಮಿಯ ವೆಬ್ ಸೈಟ್ ಅಡಿಮಿಸ್ಟ್ರೇಟರ್ ಶ್ರೀಮತಿ ಸೀತಾಲಕ್ಷ್ಮೀಯವರನ್ನು ಮತ್ತು ಅವರೊಂದಿಗೆ ಸಹಕರಿಸಿದ ತಂಡದ ಸದಸ್ಯರಾದ ಡಾ. ವಿ. ಸಂಧ್ಯಾ, ಶ್ರೀ ಧನುಷ್, ಶ್ರೀ ರೇಣುಕಸ್ವಾಮಿ ಒಡೆಯರ್, ಶ್ರೀ ಎಂ.ಎನ್. ಪ್ರಭಾಕರ್, ಡಾ. ನಳಿನಿ ವೆಂಕಟೇಶ್, ಶ್ರೀಮತಿ ಭಾರತಿ, ಶ್ರೀಮತಿ ಎಸ್.ವೈ. ನಿರ್ಮಲಾ ಅವರುಗಳಿಗೆ ಅಭಿನಂದಿಸಿದ್ದಲ್ಲದೆ ಇತರೆ ಸದಸ್ಯರಿಗೂ ವಂದನೆ ಸಲ್ಲಿಸಿದರು.

ಕಳೆದ ಸಾಲಿನಲ್ಲಿ ಇತಿಹಾಸ ದರ್ಶನದ ಸಂಪೂರ್ಣ ಮುದ್ರಣದ ವೆಚ್ಚವನ್ನು ನೀಡಿದ ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

೯. ವಂದನಾರ್ಪಣೆ

ಪ್ರಧಾನ ಕಾರ್ಯದರ್ಶಿಯವರು ಸಮ್ಮೇಳನದ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಅವರ ಸಹಾಯವನ್ನೂ ಸ್ಮರಿಸಿಕೊಂಡು ಎಲ್ಲರಿಗೂ ವಂದನೆ ಸಲ್ಲಿಸುವುದರೊಂದಿಗೆ ೩೬ನೇ ವಾರ್ಷಿಕ ಸಮ್ಮೇಳನದ ವಿಚಾರ ಸಂಕಿರಣವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕಾರ್ಯಕಾರಿ ಸಮಿತಿ ಸಭೆಗಳು

೨೦೨೦-೨೧ನೇ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿ ಸಭೆಗಳು ಒಟ್ಟು ೩ ಬಾರಿ ನಡೆದಿದೆ. ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಖುದ್ದು ಹಾಜರಿದ್ದು ಮತ್ತು ಕೆಲವರು online ಮೂಲಕ ಹಾಜರಾಗಿರುತ್ತಾರೆ. ಸಭೆಯಲ್ಲಿ ಒಪ್ಪಿಗೆ, ಸಲಹೆ ಸೂಚನೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಕಾರಣರಾಗಿದ್ದಾರೆ. ಅವರಿಗೆಲ್ಲಾ ಧನ್ಯವಾದಗಳು.

ಅಕಾದೆಮಿಯ ಸದಸ್ಯ ಬಲ: ಸಮ್ಮೇಳನದ ಆರಂಭದ ವೇಳೆಗೆ, ಕರ್ನಾಟಕ ಇತಿಹಾಸ ಅಕಾದೆಮಿಯ ಆಜೀವ ಸದಸ್ಯತ್ವ ಹೊಂದಿರುವವರು ಒಟ್ಟು ೨,೨೦೦.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ; ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ; ಶ್ರೀ ಬೈಸಾನಿ ರುಕ್ಮಿಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ್ ಕುಮಾರ್; ವಾಗ್ದೇವಿ ಮುದ್ರಣಾಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿವರ್ಗ: ಬಾ.ರಾ. ಗೋಪಾಲ್ ಕುಟುಂಬ ವರ್ಗ **ಸಮ್ಮೇಳನಾಧ್ಯಕ್ಷರಿಗೆ ಗೌರವ ಸ್ಮರಣ ಫಲಕ**ವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟಂಬವರ್ಗ: **'ಇತಿಹಾಸ ಸಂಸ್ಕೃತಿಶ್ರೀ'** ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಷಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟ್‌ನವರಿಗೆ; **ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣ ಫಲಕ**ವನ್ನು ಪ್ರಾಯೋಜಿಸುತ್ತಿರುವ ಶ್ರೀ ವೇಮಗಲ್ ಸೋಮಶೇಖರ್, ಪಿಎಚ್.ಡಿ. ಪದವೀಧರರಿಗೆ ಉತ್ತೇಜನ ನೀಡುವ ಸಲುವಾಗಿ ದತ್ತಿ ಸ್ಥಾಪಿಸಿರುವ **ಶ್ರೀ ರಾಜನ್**, ತುಮಕೂರು; **'ವೆಬ್‌ಸೈಟ್ ನಿರ್ವಹಣೆ'** ಮಾಡಲು ದತ್ತಿ ಸ್ಥಾಪಿಸಿರುವ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಗೆ; ಡಾ. ಸೂರ್ಯನಾಥ್ ಕಾಮತ್ ನೆನಪಿನ **'ಸೂರ್ಯಕೀರ್ತಿ'** ಪ್ರಶಸ್ತಿಗೆ ದತ್ತಿ ಸ್ಥಾಪಿಸಿರುವ ಶ್ರೀಮತಿ ಅರ್ಚನ ಎಸ್.ರಾವ್ ಅವರಿಗೆ; ಶ್ರೀಮತಿ ಎ. ಗೌರಮ್ಮ ಗಂಗಾಧರಯ್ಯ ಅವರ ನೆನಪಿನ **'ಸಂಶೋಧನಶ್ರೀ'** ಪ್ರಶಸ್ತಿಗಾಗಿ ದತ್ತಿ ನೀಡಿದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ, ಡಾ. ಎಂ.ಜಿ. ಚಂದ್ರಕಾಂತ್ ಅವರುಗಳಿಗೆ ಪ್ರಾಗೈತಿಹಾಸಿಕ ಲೇಖನಕ್ಕೆ **'ಡಾ. ಎಂ.ಎಚ್. ಕೃಷ್ಣ ಮೆರಿಟ್'** ಅವಾರ್ಡ್‌ಗಾಗಿ ದತ್ತಿ ನೀಡಿರುವ ಪ್ರೊ. ಕೆ. ಪದ್ದಯ್ಯ, ಪುಣೆ ಅವರಿಗೆ; **'ನಾಯಕಶ್ರೀ'** ಪ್ರಶಸ್ತಿಗೆ ಹಾಗೂ ಹುಲ್ಲೂರು ಶ್ರೀನಿವಾಸ ಜೋಯಿಸ್ **'ಸ್ಮಾರಕ ಗ್ರಂಥ ಪ್ರಶಸ್ತಿ'**ಗೆ ದತ್ತಿ ನೀಡಿರುವ ಪ್ರೊ. ಲಕ್ಷ್ಮಣ್ ತೆಲಗಾವಿ; ಧಾರವಾಡ ಅವರಿಗೆ **'ಡಾ. ಶ್ರೀನಿವಾಸ ಹಾವನೂರ ನೆನಪಿನ ಪ್ರಶಸ್ತಿ'**ಗಾಗಿ ದತ್ತಿ ನೀಡಿರುವ ಡಾ. ಸಿ.ಆರ್. ಶ್ಯಾಮಲ ಅವರಿಗೆ; ಬಿ.ಸಿ. ಪಾಟೀಲ್ ಟ್ರಸ್ಟ್ ಕೊಪ್ಪಳ ಇವರು ಸ್ಥಾಪಿಸಿರುವ **'ಸುಮಂಗಲಾ ಪಾಟೀಲ್'** ಅವರ ಹೆಸರಿನಲ್ಲಿ ಮಹಿಳೆಯರಿಗಾಗಿ ಕೊಡುವ ಪ್ರಶಸ್ತಿಗೆ ದತ್ತಿ ನೀಡಿರುವ ಶ್ರೀ ಸಿ.ಬಿ. ಪಾಟೀಲ್ ಅವರಿಗೆ; **'ಡಾ. ಪ್ರತಿಭಾ ಚಿನ್ನಪ್ಪ ಸ್ಮರಣಾರ್ಥ ಪ್ರಶಸ್ತಿ'** ಹಾಗೂ **'ಜಿ.ಎಸ್. ದೀಕ್ಷಿತ್ ಸ್ಮರಣಾರ್ಥ'** ಪ್ರಶಸ್ತಿ ಸ್ಥಾಪಿಸಿರುವ ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರಿಗೆ, ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದ ಪೂರ್ವಕವಾಗಿ ಪ್ರತಿವರ್ಷದಂತೆ ಈ ವರ್ಷವೂ (೨೦೨೧-೨೨) ರೂ. ೫೦,೦೦೦/- (ಐವತ್ತು ಸಾವಿರ) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ. ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ನಮಸ್ಕಾರಗಳು. ಹಿಂದಿನಂತೆ ಈ ವರ್ಷವೂ ಒಂದು ಲಕ್ಷ ರೂ.ಗಳನ್ನು ಆಶೀರ್ವಾದಪೂರ್ವಕವಾಗಿ ನೀಡಿದ ಪೂಜ್ಯ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ಕೊಟ್ಟೂರು ಇವರಿಗೆ ನಮಸ್ಕಾರಗಳು.

ಇತಿಹಾಸ ದರ್ಶನ ಸಂಚಿಕೆಯ ೩೬ನೆಯ ಸಂಪುಟವನ್ನು ಸಂಪಾದಿಸಿ ಕೊಟ್ಟಿರುವ ಸಂಪಾದಕರಾದ ಶ್ರೀ ಕೆ.ಎಲ್. ರಾಜಶೇಖರ್ ಹಾಗೂ ಡಾ. ಸಂಧ್ಯಾ ವಿ. ಅವರಿಗೆ, ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಎಸ್. ಮಂಜು ಹಾಗೂ ಸಿಬ್ಬಂದಿ ವರ್ಗದವರಿಗೆ, ಇತಿಹಾಸ ದರ್ಶನ ಪ್ರಾರಂಭದಿಂದಲೂ ಅಂದವಾಗಿ ಡಿ.ಟಿ.ಪಿ. ಮಾಡುತ್ತಿರುವ ಪಿ.ಎಸ್. ಸುಬ್ರಮಣಿ ಬಾಬು ಅವರಿಗೆ ಹಾಗೂ ಶ್ರೀಮತಿ ಎಂ. ಮಾಲಾ ಮತ್ತು

ವಿ.ಎಸ್. ಪ್ರಸನ್ನಕುಮಾರ್, ಲಕ್ಷ್ಮೀ ಮುದ್ರಣಾಲಯ ಅವರಿಗೆ, ಇತಿಹಾಸ ದರ್ಶನದ ಮುಖಪುಟವನ್ನು ರಚಿಸಿಕೊಟ್ಟ ಶ್ರೀನಿವಾಸ್ ಟಿ. ಅವರಿಗೆ, ಅಕಾದೆಮಿಯ ಕೆಲಸಗಳಲ್ಲಿ ಸಹಾಯ ಮಾಡುತ್ತಿರುವ ಪ್ರೊ. ಜಿ.ಕೆ. ದೇವರಾಜಸ್ವಾಮಿ, ಶ್ರೀ ಗುರುಪ್ರಸಾದ್ ಬಿ.ಎಸ್., ಶ್ರೀಮತಿ ಸೀತಾಲಕ್ಷ್ಮಿ ರಾವ್, ಶ್ರೀ ರೇಣುಕಸ್ವಾಮಿ ಒಡೆಯರ್ ಬಿ.ಈ., ಶ್ರೀಮತಿ ಎಸ್.ವೈ. ನಿರ್ಮಲಾ, ಡಾ. ನಳಿನಿ ವೆಂಕಟೇಶ್, ಶ್ರೀಮತಿ ಭಾರತಿ ಹಾಗೂ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಕಾಡೆಮಿಯು ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಎಂ.ಜಿ. ನಾಗರಾಜ್
ಲಕ್ಷ್ಮಣ್ ತೆಲಗಾವಿ
ಉಪಾಧ್ಯಕ್ಷರುಗಳು

ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಗುರುಪ್ರಸಾದ್ ಬಿ.ಎಸ್.
ಕೋಶಾಧಿಕಾರಿ

ಶ್ರೀ ಕೆ.ಎಲ್. ರಾಜಶೇಖರ್
ಡಾ. ಸಂಧ್ಯಾ ವಿ.
ಕಾರ್ಯದರ್ಶಿಗಳು

ಕಾರ್ಯಕಾರಿ ಸಮಿತಿ ಸದಸ್ಯರು

ಡಾ. ಎಂ. ಕೊಟ್ರೇಶ್, ತುಮಕೂರು

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಡಾ. ಕೆ. ರವೀಂದ್ರನಾಥ್, ಹಂಪಿ

ಡಾ. ಅಮರೇಶ್ ಯತಗಲ್, ಹಂಪಿ

ಡಾ. ಲಿಂಗರಾಜು, ಮಂಡ್ಯ

ಪ್ರೊ. ಮುರುಗೇಶಿ ಟಿ., ಉಡುಪಿ

ಡಾ. ಎಸ್.ಕೆ. ಮೇಲಾಕಾರ, ಧಾರವಾಡ

ಶ್ರೀ ನಿಂಗನಗೌಡ ಹ. ದೇಸಾಯಿ, ಯಾದಗಿರಿ

ಡಾ. ಕೆಳದಿ ವೆಂಕಟೇಶ್ ಜೋಯಿಸ್, ಶಿವಮೊಗ್ಗ

ಡಾ. ಶರಣಬಸಪ್ಪ ಕೋಲ್ಕಾರ್, ಗಂಗಾವತಿ

ಪ್ರೊ. ಶಕುಂತಲ ಸಿ. ಸಿಂಧೂರ, ಗದಗ

ಶ್ರೀಮತಿ ಸೀತಾಲಕ್ಷ್ಮೀ ರಾವ್, ಬೆಂಗಳೂರು

ಡಾ. ಪಿ.ವಿ. ಕೃಷ್ಣಮೂರ್ತಿ, ಬೆಂಗಳೂರು

ಡಾ. ಸಿ.ಬಿ. ಪಾಟೀಲ, ಕೊಪ್ಪಳ

ಶ್ರೀ ಬಸವರಾಜ್ ಟಿ.ಎಚ್.ಎಂ. ಬಳ್ಳಾರಿ

ಡಾ. ಶಕುಂತಲ ಎನ್., ದಾವಣಗೆರೆ

ಶ್ರೀ ಬಸವರಾಜ ಸಂಗಯ್ಯಮಠ, ವಿಜಯಪುರ

ಶ್ರೀ ಇಷ್ಟಲಿಂಗ ಶಿರಸಿ, ಬಾದಾಮಿ

ಅಕಾದೆಮಿಯಲ್ಲಿ ಸ್ಥಾಪಿಸಿರುವ ದತ್ತಿಗಳ ವಿವರ


ಕ್ರ.ಸಂ.	ದತ್ತಿ ನಿಧಿಯ ವಿವರ	ಮೊತ್ತ	ದತ್ತಿ ಸ್ಥಾಪಿಸಿದ ವರ್ಷ
1.	ಡಾ. ಅಭಿಶಂಕರ್ ಅವರ ನೆನಪಿನಲ್ಲಿ ನೀಡುತ್ತಿರುವ ಸಮ್ಮೇಳನಾಧ್ಯಕ್ಷರ ಸ್ಮರಣಿಕೆ ಮತ್ತು ಸನ್ಮಾನ	30,000	1998
2.	ಡಾ. ಬಾ.ರಾ.ಗೋಪಾಲ್ ನೆನಪಿನ ದತ್ತಿ ನಿಧಿ–ಶಾಸನ ತಜ್ಞರಿಗೆ	1,20,000	2001
3.	ಶ್ರೀ ಕೆ. ರಾಜನ್, ತುಮಕೂರು– ಪಿಎಚ್.ಡಿ ಪಡೆದ ವಿದ್ಯಾರ್ಥಿಗಳಿಗೆ ಉತ್ತೇಜನವಾಗಿ ನೀಡುವ ನಗದು ಬಹುಮಾನ	1,06,000	2014
4.	ಅರಸೀಕೆರೆಯ ಮೇಲಣ ಮಠದ ಲಿಂ. ಎಸ್. ಸಿದ್ದಣ್ಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ ನೀಡುವ "ನೊಳಂಬ ಶ್ರೀ" ಪ್ರಶಸ್ತಿ, ದತ್ತಿಯ ದಾನಿಗಳು ಶ್ರೀ ಪರಮಶಿವಮೂರ್ತಿ ಎಸ್.	2,00,000	2015
5.	ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯವರು ನೀಡಿರುವ ದತ್ತಿ (ವೆಬ್‌ಸೈಟ್‌ನ ವಾರ್ಷಿಕ ನಿರ್ವಹಣಾ ವೆಚ್ಚ ಬರಿಸಲು)	1,10,000	2016
6.	ಶ್ರೀಮತಿ ಅರ್ಚನ. ಎಸ್. ರಾವ್ ಅವರು ನೀಡಿರುವ ದಿ॥ ಡಾ. ಸೂರ್ಯನಾಥ್ ಕಾಮತ್ ಅವರ ನೆನಪಿನ 'ಸೂರ್ಯಕೀರ್ತಿ' ದತ್ತಿ ನಿಧಿ ಪ್ರಶಸ್ತಿ	1,28,000	2016
7.	ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಅವರುಗಳು ಸ್ಥಾಪಿಸಿರುವ "ಸಂಶೋಧನ ಶ್ರೀ" ಪ್ರಶಸ್ತಿ (ಶ್ರೇಷ್ಠ ಸಂಶೋಧಕರಿಗೆ ನೀಡುವ ಪ್ರಶಸ್ತಿ)	3,05,000	2016
8.	ಡಾ. ಕೆ. ಪದ್ದಯ್ಯ, ಪುಣೆ, 30ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು ಇವರು ಸ್ಥಾಪಿಸಿರುವ 'ಡಾ. ಎಂ.ಎಚ್. ಕೃಷ್ಣ' ಮೆರಿಟ್ ಅವಾರ್ಡ್ ನಗದು ದತ್ತಿ ಪ್ರಶಸ್ತಿ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)	30,000	2016
9.	ಬಿ.ಸಿ. ಪಾಟೀಲ ಟ್ರಸ್ಟ್ ಕೊಪ್ಪಳ, ಇವರು ಸ್ಥಾಪಿಸಿರುವ 'ಶ್ರೀಮತಿ ಸುಮಂಗಳಾ ಪಾಟೀಲ' ದತ್ತಿ ನಿಧಿ ಪ್ರಶಸ್ತಿ (ಮಹಿಳಾ ಸಂಶೋಧಕರಿಗಾಗಿ)	1,26,000	2017
10.	ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ 'ನಾಯಕ ಶ್ರೀ' ದತ್ತಿ ನಿಧಿ ಪ್ರಶಸ್ತಿ	2,00,000	2017
11.	ಡಾ. ಸಿ.ಆರ್., ಶ್ಯಾಮಲ ಅವರು ಸ್ಥಾಪಿಸಿರುವ 'ಡಾ. ಶ್ರೀನಿವಾಸ ಹಾವನೂರ' ಸ್ಮರಣಾರ್ಥ ದತ್ತಿ ಪ್ರಶಸ್ತಿ	1,62,000	2018
12.	ಡಾ. ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿದ ಡಾ. ಜಿ.ಎಸ್. ದೀಕ್ಷಿತ್ ಅವರ ನೆನಪಿನ ದತ್ತಿ	2,00,000	2020
13.	ಡಾ. ಶ್ಯಾಮಲಾ ರತ್ನಕುಮಾರಿ ಅವರು ಸ್ಥಾಪಿಸಿದ ಡಾ. ಪ್ರತಿಭಾ ಚಿನ್ನಪ್ಪ ಅವರ ನೆನಪಿನ ದತ್ತಿ	2,00,000	2020
14.	ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಸ್ಥಾಪಿಸಿರುವ ಸಂಶೋಧಕ ಪ್ರಸಕ್ತ ಹುಲ್ಲೂರು ಶ್ರೀನಿವಾಸ ಜೋಯಿಸ್ ಸ್ಮಾರಕ ಅತ್ಯುತ್ತಮ ಇತಿಹಾಸ ಕೃತಿಗೆ ದತ್ತಿ	1,00,000	2021
	(ನವೆಂಬರ್ 2022ರವರೆಗೆ) ಒಟ್ಟು	**20,17,000**	

ದಾನಿಗಳ ಪಟ್ಟಿ

ಕ್ರಸಂ.	ದಾನಿಗಳು	ಮೊತ್ತ ರೂ.
೧.	ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಪೀಠ (೫-೧೧-೨೨)	೨೫,೦೦೦/-
೨.	ಅಧ್ಯಕ್ಷರು, ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ ಬಳ್ಳಾರಿ (೫-೧೧-೨೨)	೧,೦೦,೦೦೦/-
೩.	ಡಾ. ಕೆ. ರವೀಂದ್ರನಾಥ್, ಹಂಪಿ, (೫-೧೧-೨೨)	೫,೦೦೦/-
೪.	ಶ್ರೀ ಕೆ. ಮಾಧವ ಕಿಣಿ (೧೪-೯-೨೨)	೫,೦೦೦/-
೫.	ಶ್ರೀಮತಿ ಭಾರತಿ, ಬೆಂಗಳೂರು (೨೧-೨-೨೨)	೨೦,೦೦೦/-
೬.	ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ (೨೧-೨-೨೨)	೨,೦೦೦/-
	ಒಟ್ಟು	೧,೫೭,೦೦೦/-

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ೨೦೨೨, ನಾಗಮಂಗಲ





ದಿನಾಂಕ: 14-09-2022ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ನಾಗಮಂಗಲದ ಆದಿಚುಂಚನಗಿರಿ ವಿದ್ಯಾರ್ಥಿಗಳಿಂದ ನಾಗಮಂಗಲದ ಸೌಮ್ಯಕೇಶವ ದೇವಾಲಯದಲ್ಲಿ ಹಮ್ಮಿಕೊಳ್ಳಲಾಯಿತು. ದೇವಾಲಯದ ಐತಿಹಾಸಿಕತೆ, ವಾಸ್ತುವಿನ್ಯಾಸ, ಶಿಲ್ಪಲಕ್ಷಣ ಕುರಿತಂತೆ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಹಾಗೂ ಸ್ಥಳೀಯರಿಗೆ ಪ್ರಾತ್ಯೇಕ್ಷಿಕೆಯಾಗಿ ವಾಸ್ತು ತಜ್ಞರಾದ ಶ್ರೀ ಎಂ.ಎನ್. ಪ್ರಭಾಕರ್ ಅವರು ವಿವರಿಸಿದರು. ಈ ಕಾರ್ಯದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯದ ಇಲಾಖೆಯೂ ಅಕಾದೆಮಿಯೊಂದಿಗೆ ಕೈಜೋಡಿಸಿದ್ದು ಯಶಸ್ವಿಯಾಗಿ ಜರುಗಿತು. 'ನಾಗಮಂಗಲ'ವೆಂಬ ಕಿರುಕೈಪಿಡಿಯನ್ನು ಶ್ರೀ ಎಂ.ಎನ್. ಪ್ರಭಾಕರ್ ಅವರು ರಚಿಸಿದ್ದು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ, ಕಾರ್ಯದರ್ಶಿ, ಕೆ.ಎಲ್. ರಾಜಶೇಖರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಚ್.ಎಸ್. ಉಷಾರಾಣಿ ಹಾಗೂ ಸ್ಥಳೀಯರಾದ ಶ್ರೀ ಮಹಮ್ಮದ್ ಕಲೀಂಉಲ್ಲಾ, ಕಾಲೇಜಿನ ಅಧ್ಯಾಪಕರು ಭಾಗವಹಿಸಿದ್ದರು.

ಕರ್ನಾಟಕ ಇತಿಹಾಸ ಅಕಾದೆಮಿ(ರಿ.) ಬೆಂಗಳೂರು

ಸಹಯೋಗ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಐತಿಹಾಸಿಕ ಪರಂಪರೆ ಉಳಿಸಿ



www.karnatakaitihasaacademy.org
karnatakaitihasaacademy25@gmail.com
youtube.com/c/karnatakaitihasaacademy
karnatakaitihasaacademy

ISBN: 978-81-950402-0-9